KANNADIGA

WEEKLY

YEAR 1. Nos. 1-48.

FROM 25-3-1925
TO 13-9-1926.

ಕನ್ನಡಿಗ

ವಾರಪತ್ರಿಕೆ

ವರ್ಷ 1. ನಂಬರ 1ಂದ48

25-3-1925 ಂದ 13-9-1926

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವೇಶವಾಗಿದೆ)

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ ॥ — ಮನು

ಸಂಪಾದಕರು — ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಬುಧವಾರ ಮಿತಿ ಚೈತ್ರ ಶುದ್ಧ ೧ ಶಕೆ ೧೮೪೭. ತಾ|| ೨೫-೩-೧೯೨೫. | ಸಂಚಿಕೆ ೧

ಸಂಪಾದಕರ ಭೂಮಿ.

ಎದ್ದರೆ ಕನ್ನಡ ಕುಳಿತರೆ ಕನ್ನಡ ನುಡಿದರೆ ಕನ್ನಡವು ।
ಹೃದ್ಯವು ಕನ್ನಡ ಉದ್ಯಮ ಕನ್ನಡ-ಕನ್ನಡ-ಕನ್ನಡವು ।
ಕನಸು ಮನಸಿನೊಳು ಕನ್ನಡ ಕನ್ನಡ ನಿದ್ರೆಯು ಕನ್ನಡವು ।
ತಿಳಿವು ಕನ್ನಡವು ಜೀವಿತ ಕನ್ನಡ ಎಲ್ಲವು ಕನ್ನಡವು ॥

ಲೇಖಗಳು.

ವೃತ್ತಪತ್ರಿಕೆಗಳು ಪ್ರಾಯಶಃ ... ಸಂಚಿಕೆಯಲ್ಲಿಯೂ ಅಗ್ರ ... ಲೇಖಗಳನ್ನು ಪ್ರಸಿದ್ಧಿಸುವ ರೂಢಿಯು ಎಲ್ಲಕಡೆಗೂ ಹರಡಿದೆ. ಆದರೆ ಅಗ್ರಲೇಖಗಳಿಗಿಂತ ಸ್ಫುಟವಿಷಯಗಳನ್ನವಲೋಕಿಸಿ ತಮ್ಮ ತಮ್ಮ ಅಭಿರುಚಿಗೆ ಅನುರೂಪವಾಗುವ ವಿಷಯಗಳನ್ನು ಮಾತ್ರ ಓದಿಕೊಂಡು, ‘ ಇದೇನಯ್ಯಾ, ಇಷ್ಟೊಂದು ಉದ್ದವಾದ ಅಗ್ರಲೇಖವನ್ನಾರು ಓದಬೇಕೆಂದು, ’ ಅಗ್ರಲೇಖಗಳನ್ನೋದದ ಜನರೇ ಬಹಳ. ಆದುದರಿಂದ ನಾವು ಅಗ್ರಲೇಖಗಳನ್ನು ‘ ಕನ್ನಡಿಗ ’ ನಲ್ಲಿ ಪ್ರಸಿದ್ಧಿಸಬಾರದಾಗಿ ನಿಶ್ಚಯಿಸಿರುವೆವು ಆ ಬದಲು ಕರ್ನಾಟಕವು ಜಾಗ್ರತವಾಗಲು ಅವಶ್ಯವಿದ್ದ ಮನನೀಯವಾದ ವಿಷಯಗಳು ಪ್ರತಿವಾರದಲ್ಲಿಯೂ ಪ್ರಸಿದ್ಧಿಸಲ್ಪಡುವವು. ಸಂಪಾದಕರು ಸೂಚಿಸತಕ್ಕ ವಿಷಯಗಳೆಲ್ಲ ‘ ಸ್ಫುಟವಿಚಾರಗಳ ’ ಮುಖಾಂತರವಾಗಿ ಸೂಚಿಸಲ್ಪಡುವವು.—‘ ಬಾರಕೋಲಿನ ’ ಲೇಖವು ಮಾತ್ರ ಪ್ರತಿವಾರದಲ್ಲಿಯೂ ಬರುವದು. ಆದರೆ ನಮ್ಮ ಮಿತ್ರರಾದ-ಅಲ್ಲ ನಮ್ಮ ಹಿರಿಯರ ಸಮಾನರಾದ ಈ ವಯೋವೃದ್ಧ ‘ಚೇಳಿನ ಕೊಂಡೆಪ್ಪ ’ ನವರು ನಮ್ಮನ್ನು ದಯವಿಟ್ಟು ದುರ್ಲಕ್ಷಿಸಬಾರದೆಂದೂ ಅವರು ಇನ್ನು ಮೇಲೆ ತಮ್ಮ ‘ ಸಂದೇಹ ’ ರಾಯನ ವೃತ್ತಿಯನ್ನು ಬಿಡಬೇಕೆಂದೂ ಸವಿನಯವಾಗಿ ಸಾರ್ವಜನಿಕ ರೀತಿಯಿಂದ ಪುನಃ ಬೇಡಿಕೊಳ್ಳುತ್ತೇವೆ. ಇದೇ ಸಂಚಿಕೆಯಲ್ಲಿ ಪ್ರಸಿದ್ಧವಾದ ‘ ಬಾರುಕೋಲಿನ ’ ಲೇಖವನ್ನೋದಿದಮೇಲೆ ವಾಚಕರಿಗೆ ಚೇಳಿನಕೊಂಡೆಪ್ಪನವರ ಬಗ್ಗೆ ಎಲ್ಲವೂ ತಾನೇ ಗೊತ್ತಾಗುವದು. ಇರಲಿ. ಸಂಪಾದಕರು ಸ್ಫುಟವಿಚಾರಗಳ ಸಲುವಾಗಿಟ್ಟಕೊಂಡ ಸ್ಥಳವು ಈಸಾರೆ ‘ಸ್ವವಿಷಯ ’ ದಿಂದ ಆಕ್ರಮಿಸಲ್ಪಟ್ಟಿದೆ. ಮುಂದಿನಸಾರೆಯಿಂದ ಸ್ಫುಟವಿಚಾರಗಳು ಅರ್ಥಾತ್ ಹೆಚ್ಚಿಸಲ್ಪಡುವವು.

ಕರ್ನಾಟಕದ ಏಕೀಕರಣವೂ,

ಕ. ಪ್ರಾಂ. ಕಾಂ. ಕಮಿಟಿಯೂ.

ಮೊನ್ನೆ ಮೊನ್ನೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧಿವೇಶನವು ಮಂಗಳೂರಿನಲ್ಲಿ ನೆರವೇರಬೇಕೆಂದು ಅಧ್ಯಕ್ಷರು ಗೊತ್ತುಪಡಿಸಿದಾಗ್ಗೆ, ಉತ್ತರ ಕರ್ನಾಟಕದವರು ಅಲ್ಲಿಗೆ ಹೋಗದ್ದರಿಂದ ಅವರ ಪಾಲಿಗೆ ಒಂದು ಅಪವಾದವು ಸಿದ್ಧವಾಗಿದೆ ಇತ್ತ ಕರ್ನಾಟಕದ ಏಕೀಕರಣದ ಬಗ್ಗೆ ಮಾತನಾಡುವದೂ, ಅತ್ತ ಕೃತಿಯಲ್ಲಿ ಅದನ್ನು ತರದಿರುವದೂ,—ಏಕೀಕರಣದ ವಿಷಯಕ್ಕೆ ಬಾಧೆಯನ್ನು ತರುವದೆಂಬದೇ ಉತ್ತರ ಕರ್ನಾಟಕದವರಿಗೆ ಬಂದ ಆ ಅಪವಾದವು. ಮಂಗಳೂರಿನವರು ಉತ್ತರ ಕರ್ನಾಟಕದವರ ಮೇಲೆ ಈ ಬಗ್ಗೆ ಮುನಿದುಕೊಂಡಿರುವರು. ಉತ್ತರ ಕರ್ನಾಟಕದವರು ಅಲ್ಲಿಗ ಹೋಗಲಿಲ್ಲವೆಂಬದಿಷ್ಟೇ ಕಾರಣದಿಂದ ಈ ವಿಷಯವು ಇಷ್ಟೊಂದು ದೀರ್ಘಕ್ಕೆ ಹೋಗುತ್ತಿರಲಿಲ್ಲ. ಆದರೆ ಸಂಯುಕ್ತ ಕರ್ನಾಟಕದ ದೃಷ್ಟಿಯು ಪ್ರಾಂತಿಕ ಕಾಂಗ್ರೆಸ ಕಮಿಟಿಯಲ್ಲಿಯ ಉತ್ತರ ಕರ್ನಾಟಕದ ಹಲಕೆಲವು ಪ್ರತಿಷ್ಠಿತ ಸಭಾಸದರುಗಳಲ್ಲಿ ಇಲ್ಲದಿರುವದೇ ಇದಕ್ಕೆ ಮೂಲಕಾರಣವು. ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವು ದೊರೆಯುವಾಗ್ಗೆ ಸಹ ಈ ಪಂಡಿತರುಗಳು ಈ ವಿಚಾರಕ್ಕೆ ವಿರೋಧಿಸಿದರು. ಅದು ದೊರೆತಂದಿನಿಂದ ಈಹೊತ್ತಿನವರೆಗೂ ... ಸಂಯುಕ್ತ ಕರ್ನಾಟಕದ ... ಬಗ್ಗೆ ... ಲ್ಲದು. ಇವರಿಂದ ಅವರು ಪ್ರತ್ಯಕ್ಷ ರೀತಿಯಿಂದಿಲ್ಲದಿದ್ದರೂ, ಅಪ್ರತ್ಯಕ್ಷ ರೀತಿಯಿಂದ ಕರ್ನಾಟಕ ಏಕೀಕರಣದ ಭಾವನೆಯು ಹಬ್ಬಲಿಕ್ಕೆ ಆತಂಕವನ್ನುಂಟುಮಾಡುತ್ತಲಿರುವರು. ಇಂಥಜನರ ಕೃತಿಯಿಂದ ಅನೇಕ ಕರ್ನಾಟಕಸ್ಥರ ಹೃದಯವು ನೊಂದುತ್ತ ಬಂದಿದೆ. ಈ ಪ್ರಕಾರವಾಗಿ ನೊಂದಲ್ಪಟ್ಟ ಜನರು ಮಂಗಳೂರಿನಕಡೆಗೂ ಇರುವರು. ನೊಂದು, ಬೆಂದು, ಹಿಂದಕ್ಕೆ ಒತ್ತಲ್ಪಟ್ಟಂಥ ಈ ಜನರ ಭಾವನೆಗಳಿಗೆ ಈಗ್ಗೆ ಹೊರಬರಲು ಆಸ್ಪದ ದೊರೆತದ್ದರಿಂದ ಅವು ಹೀಗೆ ಪ್ರಕಟವಾಗಿವೆ. ಉತ್ತರ ಕರ್ನಾಟಕಸ್ಥರ ಹಲಕೆಲವು ಸಭಾಸದರ ಹಿಂದಿನ ಅನಾದರಣೀಯ ನಡತೆಯು ಫಲವಿದು. ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಹಲಕೆಲ ಸಭಾಸದರಲ್ಲಿ ಕರ್ನಾಟಕ ಏಕೀಕರಣದ ವಿಷಯದ ಬಗ್ಗೆ ಕಳಕಳಿಯೇ ಇಲ್ಲ. ಅದ್ದರಿಂದಲೇ ಇಂಥ ಪ್ರಮಾದಗಳಾಗುತ್ತವೆ. ಮಂಗಳೂರಿನ ನಮ್ಮ ಬಾಂಧವರು ವ್ಯಕ್ತಿವಿಷಯಕವಾದ ಮತಗಳ ಕಡೆಗೆ ಲಕ್ಷ್ಯ ಕೊಡದೇ ಏಕೀಕರಣದ ತತ್ವಕ್ಕನೇ ಗಮನ ಕೊಡಬೇಕಾಗಿ ಸೂಚಿಸುತ್ತೇವೆ.

ಯುರೋಪಿಯನ್ ಪೇನ್ ಶನ್ ದಾರರು- ಹಿಂದುಸ್ಥಾನದಲ್ಲಿ ಕೆಲಸ ಮಾಡಿ ಪೆನ್ಶನ್ ಹೊಂದಿ ವಿಲಾಯತಿಯಲ್ಲಿ ಸುಖವಾಗಿದ್ದುಕೊಂಡವರಿಗೆ ಅವರ ಪೆನ್ಶನ್ ಹಣವು ಈವಾಗಿನ ತುಟ್ಟಿಯ ದಿನಗಳಲ್ಲಿ, ಹೊಟ್ಟೆಗೆ ಸಾಕಾಗುವದಿಲ್ಲವಂತ ಅವರ ಪೆನ್ಶನ್ ರೂಪವಾದ ವೇತನವು ಹೆಚ್ಚಿಸಲ್ಪಡಬೇಕೆಂದು ನಿರ್ಣಯವಾಗಿದೆ. ಸಾಲದ ಮೇಲೆ ಸಾಲವೆಂದಮೇಲೆ ಹಿಂದುಸ್ಥಾನದಲ್ಲಿ ದುಡ್ಡಿನ ಕೊರತೆಯಿಲ್ಲ! ಹಿಂದುಸ್ಥಾನದಲ್ಲಿ ಕೆಲಸ ಮಾಡುವ ಸಣ್ಣ ಸಣ್ಣ ಪಗಾರದ ಕಾರಕೂನರು ತುಟ್ಟಿಯ ದಿನದಲ್ಲಿ ಹೊಟ್ಟೆ ತುಂಬುವದಿಲ್ಲ; ಸಂಬಳವನ್ನೇರಿಸಿ ಅಂದರೆ, ಸರಕಾರದ ಬೊಕ್ಕಸದಲ್ಲಿ ಹಣವಿಲ್ಲ ಮೇಲಾಗಿ ಈಗ್ಗೆ ಸಾಮಾನಗಳ ಧಾರಣೆಯು ಇಳಿಯುತ್ತ ನಡೆದಿದೆ; ನೀವೇನು ಅಂಜಬೇಡಿ, ಎಂಬದಾಗಿ ಸಮಾಧಾನ ಕೊಟ್ಟು ನೌಕರಶಾಹಿಯು ನೋರೆಯ ಮೇಲೆ ಕೈ ಎಳೆಯುತ್ತದೆ. ಹಿಂದುಸ್ಥಾನದಲ್ಲಿಯ ಪೆನ್ಶನ್ ದಾರರ ಹಿತದಲ್ಲಿಯಂತೂ ಸರಕಾರಕ್ಕೆ ಇಷ್ಟೊಂದು ಮನಸ್ಸಿಲ್ಲ. ಆದರೆ ವಿಲಾಯತಿಯಲ್ಲಿಯ ಪೆನ್ಶನ್ ದಾರರ ಬಗ್ಗೆ ಅತಿಶಯವಾದ ಕಳಕಳಿಯಿದೆ. ಬೊಕ್ಕಸದಲ್ಲಿ ಸಾಲವಾಗಿ ಯೋಗ್ಯಗಲೊಳ್ಳದು ಹಣವೂ ದೊರೆಯುತ್ತಿದೆ. ಮತ್ತು ಸಾಮಾನುಗಳ ಬೆಲೆಯು ಇಳಿಯ ಹತ್ತಿದ ಸಂಗತಿಯು ಜ್ಞಾಪಕಕ್ಕೇ ಬರುವದಿಲ್ಲ. ಇದೇನೇ ಶತಮಾನದ ನ್ಯಾಯುವಿದು!

ಸೂಚನೆಯು.

'ಕನ್ನಡಿಗ' ನು ಪ್ರತಿವಾರದಲ್ಲಿ ಶುಕ್ರವಾರ ದಿವಸ ಪ್ರಸಿದ್ಧನಾಗುವನು. ಆದರೆ ಈ ಸಾರೆ ಯುಗಾದಿ ಪ್ರತಿಪದೆಯ ಶುಭಮುಹೂರ್ತದ ಶುಭಫಲಲಾಭವನ್ನು ಪಡೆಯುವದಕ್ಕಾಗಿ ಬುಧವಾರ ಉದಯನಾಗಿರುವನು. ಆದ್ದರಿಂದ ಎರಡನೇ ಸಂಚಿಕೆಯು ಶುಕ್ರವಾರ ಚೈತ್ರ ಶುದ್ಧ ೧೦ (ತಾ॥ ೩-೪-೨೫) ದಿವಸ ಪ್ರಸಿದ್ಧವಾಗುವದು.

ವ್ಯವಸ್ಥಾಪಕ.

ಸ್ವವಿಷಯ.

ಕನ್ನಡನಾಡ್ನುಡಿಸಂಸ್ಕೃತಿ । ಗುರ್ಜ್ಜರಿತರು, ಕನ್ನಡಿಗರು, ಸಿರಿದಿನ
ಕನ್ನಡಿಗ ಪಾಲಿಸಲಿ । ಸಕ್ರತ ಪ್ರೀತ್ಯನ್ನವಿಗೆ [illegible] ॥

ಗದುಗಿನ ಶ್ರೀಯುತ ಕರೋಡಿ ಸುಬ್ಬರಾವ್.

ನಾವು ಮೊದಲು ತೆಗೆದ ಪ್ರಕಟಣೆಯು ಹೀಗಿದೆ.—

ವಾರ್ಷಿಕ ಚಂದಾ ಒಂದೇ ರೂಪಾಯಿ! ಅಂಚೆ ವೆಚ್ಚ ೧೨ ಆಣೆ ಮಾತ್ರ!

"ಕನ್ನಡಿಗ"

ಎಂಬ ವಾರಪತ್ರಿಕೆಯು.

(ಇದರಲ್ಲಿ ಕನ್ನಡ ನವಜೀವನವು ಲೀನವಾಗಿದೆ.)

ಕನ್ನಡನಾಡು, ಕನ್ನಡನುಡಿ, ಕನ್ನಡ ಸಂಸ್ಕೃತಿ, ಇವುಗಳ ಪುನರುಜ್ಜೀವನಕ್ಕಾಗಿ ಪ್ರಯತ್ನಿಸುವದೇ ಇದರ ಧ್ಯೇಯವು. ಕರ್ನಾಟಕಕ್ಕೆ ಸ್ವತಂತ್ರವಾದ ಪ್ರಾಂತಿಕ ಸರಕಾರವು ದೊರೆಯುವಂತೆ ಈ ಪತ್ರಿಕೆಯು ಯತ್ನಿಸುವದು. ಕರ್ನಾಟಕತ್ವದ ಲೋಕಸಂಗ್ರಹದ ಹೊರತಾಗಿ ಹಿಂದುಸ್ಥಾನದಲ್ಲಿ ನಡೆದ ಎಲ್ಲ ಸಮಾಚಾರವೂ, ಜಗತ್ತಿನೊಳಗಿನ ಮಹತ್ವದ ಸಂಗತಿಗಳೂ, ರಾಷ್ಟ್ರಕ್ಕೆ ಅವಶ್ಯವಿದ್ದ ರಾಜಕೀಯ, ಸಾಮಾಜಿಕ, ವಾಙ್ಮಯಾತ್ಮಕ, ಐತಿಹಾಸಿಕ, ಇವೇ ಮೊದಲಾದ ವಿಷಯಗಳೂ, ಇದರಲ್ಲಿ ವಿವೇಚಿಸಲ್ಪಡುವವು. 'ಯಂಗ ಇಂಡಿಯಾ' 'ನವಜೀವನಗಳ' ಭಾಷಾಂತರವೂ ಇದರಲ್ಲಿ ವಾರವಾರಕ್ಕೆ ಪ್ರಸಿದ್ಧಪಡಿಸಲ್ಪಡುವದು. ಯುಗಾದೀ ಪ್ರತಿಪದೆಯ ಶುಭ ಮುಹೂರ್ತದಲ್ಲಿ ಈ ಪತ್ರಿಕೆಯು ಉದಯವಾಗುವದು ನಿಶ್ಚಿತ. ಚಂದಾದಾರರಾಗಲಿಚ್ಛಿಸುವರು ತ್ವರೆಮಾಡಬೇಕು.

ಜಾಹೀರಾತು ಕೊಡಲಿಚ್ಛಿಸುವವರೂ, ಏಜೆಂಟರಾಗಲಿಚ್ಛಿಸುವವರೂ, ಕೆಳಗಿನ ವಿಳಾಸಕ್ಕೆ ಬರೆಯಬೇಕು. ಪತ್ರಿಕೆಯ ಆಕಾರವು ಫುಲಸ್ಕ್ಯಾಪ. ೮ ಪುಟಗಳುಳ್ಳದ್ದು. ಪ್ರಾರಂಭದಿಂದಲೇ ಈ ಪತ್ರಿಕೆಯ ೨೦೦೦ ಪ್ರತಿಗಳು ಪ್ರಸಿದ್ಧಪಡಿಸಲ್ಪಡುವವು.

ವ್ಯವಸ್ಥಾಪಕ,

"ಕನ್ನಡಿಗ" ಬಾಗಲಕೋಟೆ.

ಈ ಮೊದಲೇ ಹೀಗೆ ಪ್ರಸಿದ್ಧಪಡಿಸಿದಂತೆ, ವರ್ಷಪ್ರತಿಪದೆಯ ಈ ಶುಭಮುಹೂರ್ತದಲ್ಲಿ ಕನ್ನಡಿಗರ ಸೇವೆಗಾಗಿ **ಕನ್ನಡಿಗ**ನು ಉದಯನಾಗಿರುವನು. ಕನ್ನಡನುಡಿ, ಕನ್ನಡನಾಡು, ಕನ್ನಡ ಸಂಸ್ಕೃತಿಗಳ ಪುನರುಜ್ಜೀವನದ ಮತ್ತು ಕರ್ನಾಟಕ ಪ್ರಾಂತದ ಏಕೀಕರಣದ ಕಾರ್ಯವು ಅತಿಶಯಮಹತ್ವವಾದದ್ದು. ಇಂಥ ಮಹಾಕಾರ್ಯವನ್ನು ಕೈಕೊಳ್ಳಲು ನಾವು ಸರ್ವಥಾ ಅಸಮರ್ಥರೆಂಬುದು ನಮಗೆ ಗೊತ್ತಿದೆ. **ಅಕರಣಾನ್ಮಂದಕರಣಂ ಶ್ರೇಯಃ** ಎಂಬ ನ್ಯಾಯದಂತೆ ನಮ್ಮ ಅಳಿಲೀ ಭಕ್ತಿಗೊಪ್ಪುವಂತೆ ಕರ್ನಾಟಕದ ಸೇವೆಮಾಡಬೇಕೆಂಬ ಲಾಲಸೆಯಿಂದ, ಈ ಕಠಿಣ ಕೆಲಸಕ್ಕೆ ನಾವು ಪ್ರವೃತ್ತರಾಗಿರುವೆವು. ಈ ಕಾರ್ಯದಲ್ಲಿ ನಮಗೆ ಯಶಸ್ಸನ್ನು ಕೊಡುವದು ಆ ಪರಮಾತ್ಮನನ್ನೇ ಕೂಡಿದೆ.

ಕರ್ನಾಟಕದಲ್ಲಿ ಅನೇಕ ಜಾತಿಗಳಿವೆ. ಅವರಲ್ಲಿ ಅನೇಕರು ಭಿನ್ನವಿಚಾರಗಳವರು. ರಾಜಕೀಯ ವಿಷಯದಲ್ಲಿಯೂ ಭಿನ್ನಮತದವರಿರುವರು. ರಾಜಕೀಯ ವಿಷಯದಲ್ಲಿ ಕನ್ನಡಿಗನು ಕಾಂಗ್ರೆಸ ಪಕ್ಷಕ್ಕೆ ಸೇರಿದವನೆಂಬುವದನ್ನು ಬೇರೆ ಹೇಳಲಿಕ್ಕೆ ಬೇಡ. ಜಾತಿಜಾತಿಗಳ ವಿಷಯದಲ್ಲಿ ಯಾವಾಗಲೂ ಕನ್ನಡಿಗನು ತನ್ನ ಸಾತ್ವಿಕ ವಿಚಾರದಿಂದ ಸತ್ಯ ಮತವನ್ನೇ ಅವಲಂಬಿಸುವನು. ಪ್ರತಿಯೊಂದುವಿಷಯವೂ ಅಖಂಡ ಕರ್ನಾಟಕ ದೃಷ್ಟಿಯಿಂದ ಮಾತ್ರ ವಿವೇಚಿಸಲ್ಪಡುವದು. ಈ ಕರ್ನಾಟಕ ಸೇವಾಕಾರ್ಯದಲ್ಲಿ ಕನ್ನಡಿಗನಿಗೆ ಸಹಾಯ ಮಾಡಬೇಕೆಂಬುದಾಗಿ ಕರ್ನಾಟಕ ಮಾತೆಯಿಂದ ಪ್ರೇರಿಸಲ್ಪಟ್ಟ ಕರ್ನಾಟಕಾಭಿಮಾನಿಗಳೆಲ್ಲರೂ, ತಮ್ಮ ಸ್ವತಂತ್ರ ವಿಚಾರದ ಲೇಖಗಳಿಂದ ಕನ್ನಡಿಗನಿಗೆ ಸಹಾಯ ಮಾಡಬೇಕಾಗಿ ಪ್ರಾರ್ಥನೆಯದೆ.

ಕರ್ನಾಟಕದಲ್ಲಿ ಲೇಖನ ವ್ಯವಸಾಯಕ್ಕೆ ಇಷ್ಟೊಂದು ಮನ್ನಣೆಯಿಲ್ಲ. ಗ್ರಂಥಗಳನ್ನಾಗಲೀ, ಲೇಖಗಳನ್ನಾಗಲೀ, ಬರೆದು ಈ ಪವಿತ್ರ ವೃತ್ತಿಯಿಂದಲೇ ಉಪಜೀವಿಸಬೇಕೆಂಬ ಬಯಕೆ ಇದ್ದವರೆಷ್ಟಿದ್ದರೂ ಇಂಥವರಿಗೆ ತಕ್ಕ ಆಸ್ಪದವಿಲ್ಲ. ಇಂದುಕಾಲಕ್ಕೆ ಲಲಿತಕಲೆಗಳ ತವರುಮನೆಯಾಗಿದ್ದ ಕನ್ನಡನಾಡಿನಲ್ಲಿ ಈ ಕೊರತೆಯು ಇಲ್ಲದಂತಾಗುವದು ಅತ್ಯಾವಶ್ಯ. ಆದುದರಿಂದ ಸ್ವತಂತ್ರ ವಿಚಾರದಿಂದ ಕರ್ನಾಟಕಕ್ಕೆ ಸಂಬಂಧಿಸಿದ್ದ ವಿಷಯಗಳನ್ನು ಕನ್ನಡದಲ್ಲಿ ಪ್ರಸಿದ್ಧಪಡಿಸುವದಕ್ಕಾಗಿ ಕಳಿಸುವ ಲೇಖಕರಿಗೆ [illegible] ದರೂ ಇಂದಿನಿಂದಾಗ್ಗೆ ವೇತನವನ್ನು ಕೊಟ್ಟು ಈ [illegible] ಪದ್ಧತಿಯನ್ನು ಕನ್ನಡನಾಡಿನಲ್ಲಿ ರೂಢವಾಗಬೇಕೆಂಬುದಾಗಿ ನಾವು ನಿರ್ಧರಿಸಿರುವೆವು. ವಿದ್ವನ್ಮಣಿಗಳಿಗೆ ತಕ್ಕಂಥ ಮನ್ನಣೆಯನ್ನು ಮಾಡುವ ಶಕ್ತಿಯು ನಮ್ಮಲ್ಲಿಲ್ಲದ [illegible] ನಮ್ಮ ಶಕ್ತ್ಯನುಸಾರವಾಗಿ ವೇತನವನ್ನು ಕೊಡುವೆವು. ಪಂಚ ಚಿಂತಾವಾರರಿಲ್ಲದವರಿಂದ ಕನ್ನಡಿಗನ ಆರ್ಥಿಕ ಬಲವು ಬೆಳೆದಂತೆ ಈ ನಮ್ಮ ಲೇಖಕರಿಗೂ ವೇತನ ರೂಪವಾದ ಪ್ರೋತ್ಸಾಹವು ಹೆಚ್ಚಾಗಿ ಮಾಡಲ್ಪಡುವದು. ಏನೇ ಆಗಲಿ ಕರ್ನಾಟಕದಲ್ಲಿ ಇದೊಂದು ಪದ್ಧತಿಯನ್ನು ರೂಢಮಾಡಬೇಕೆಂದು **ಕನ್ನಡಿಗನ** ಮನೀಷೆಯಿದೆ. ಆದುದರಿಂದ ಕರ್ನಾಟಕದ ಸಲುವಾಗಿ ಕಳಕಳಿಯುಳ್ಳಂಥ ಲೇಖಕರೆಲ್ಲ ಈ ಹೊಸ ಪದ್ಧತಿಯ ಲಾಭವನ್ನು ಪಡೆಯಬೇಕಾಗಿ ವಿನಯ ಪ್ರಾರ್ಥನೆಯಿದೆ. ಇನ್ನು ಹಲಕೆಲ ಲೇಖಕರು ವೇತನವನ್ನು ಸರ್ವಥಾ ಸ್ವೀಕರಿಸರೆಂಬುದು ನಮಗೆ ಗೊತ್ತಿದೆ. ಯಾಕಂದರೆ ಅವರು ವೇತನವಿಲ್ಲದೆ ಕನ್ನಡನಾಡಿನ ಸೇವೆ ಮಾಡುವಂಥ ಭಾಗ್ಯಶಾಲಿಗಳಿರುವರು. ಇಂಥ ಪುಣ್ಯವಂತರ ಲೇಖಕರನ್ನು **ಕನ್ನಡಿಗ**ನು ಬಹು ಆದರದಿಂದ ಸ್ವೀಕರಿಸುವನೆಂಬದನ್ನಂತೂ ಬೇರೆ ಹೇಳಲಿಕ್ಕೆ ಬೇಡ.

"ದೇವತೆಗಳು ಯಾವ ಸ್ಥಳದಲ್ಲಿ ಹೆಜ್ಜೆಯನ್ನಿಡಲು ಸಹ ಅಂಜುವರೋ ಅಂಥ ಸ್ಥಳದಲ್ಲಿ ಮೂರ್ಖರು ಗಮ್ಮನ್ನೇ ಧುಮ್ಮಿಕ್ಕುವರೆಂಬುದಾಗಿ (Fools rush in where Angels fear to tread.) ಇಂಗ್ಲೀಷಿನಲ್ಲಿ ಒಂದು ಗಾದೆಯದೆ. ನಮ್ಮ ಸ್ಥಿತಿಯು ಇದೇ ಪ್ರಕಾರವಾಗಿದೆ. ಕನ್ನಡನುಡಿ, ಕನ್ನಡ ನಾಡು, ಕನ್ನಡ ಸಂಸ್ಕೃತಿ, ಕನ್ನಡಿಗರ ಏಕೀಕರಣದಂಥ ಮಹತ್ವದ ವಿಷಯಗಳೇನು? ಅವುಗಳ ಮುಖಾಂತರವಾಗಿ ನಮ್ಮಂಥವರು ಕರ್ನಾಟಕದ ಸೇವೆಮಾಡುವದೆಂದರೇನು? ಫೂಲಸ್ಕ್ಯಾಪ ಎಂಟು ಪುಟಗಳುಳ್ಳ ವಾರಪತ್ರಿಕೆಯೇನು? ವಾರ್ಷಿಕ ಚಂದಾ ಒಂದೇ ಒಂದು ರೂಪಾಯಿಯಲ್ಲಿ ಅದನ್ನು ಕೊಡುವದೆಂದರೇನು? ಅದರಲ್ಲಿಯೂ ಲೇಖಕರಿಗೆ ವೇತನರೂಪವಾದ ಪ್ರೋತ್ಸಾಹನವನ್ನು ಈ ಕರ್ನಾಟಕದಲ್ಲಿ ಕೊಡುವದೆಂದರೇನು? ಎಲ್ಲವೂ ಅವಿಶ್ವಾಸಕ್ಕೆ ತಕ್ಕಂಥ ಸಂಗತಿಗಳೇ! ಕನ್ನಡನಾಡಿನಲ್ಲಿ ಬಾಗೆ ಮಾಡುವೆವು ಹೀಗೆ ಮಾಡುವೆವೆಂಬದಾಗಿ ಜಾಹೀರಾತನ್ನು ತೆಗೆದು, ದೊರೆತಷ್ಟು ಹಣವನ್ನು ಸೆಳೆದುಕೊಂಡು, ಪತ್ರಿಕೆಗಳನ್ನು ನಿಲ್ಲಿಸಿಬಿಡುವಂಥ ಕೋಟಿಯೊಳಗಿನ ಪತ್ರಿಕೆಯೇ ಇದೊಂದು ಎಂಬದಾಗಿ ಪಲವರು ಆಕ್ಷೇಪಿಸಬಹುದು. ಆದರೆ ನಮ್ಮ ವಿಷಯದಲ್ಲಿಯಂತೂ ಹೀಗೆ ಆಕ್ಷೇಪಿಸಲು ಮಾರ್ಗವಿಲ್ಲ. ಹಿಂದಕ್ಕೆ "ಕನ್ನಡ ನವಜೀವನ"ವನ್ನು ನಿಲ್ಲಿಸಿದಾಗ್ಗೆ ನಮಗೆ ಎಷ್ಟು ಹಾನಿತಟ್ಟಿದ್ದರೂ ನಾವು ಯಾರ ಹಣವನ್ನೂ ಮುಳುಗಿಸಿಲ್ಲವೆಂಬದು ಅಖಂಡ ಕರ್ನಾ

ಟಕಕ್ಕೆ ಗೊತ್ತಿದೆ. ಚಂದಾದಾರರಿಗೆ ಸಲ್ಲತಕ್ಕ ಹಣವೆಲ್ಲ ಅವರವರಿಗೆ ಮನಿಯಾರ್ಡರ ದ್ವಾರದಿಂದ ತತ್ಕ್ಷಣದಲ್ಲಿಯೇ ಕಳಿಸಿದೆಂಬುದನ್ನು ಎಲ್ಲರೂ ಬಲ್ಲರು. ಕನ್ನಡಿಗನು ಬರಿಯ ಸುಲಭ ಬೆಲೆಗೆ ಜನರ ಕೈಸೇರಬೇಕೆಂದೊಂದು ನನ್ನ ಪ್ರಬಲವಾದ ಇಚ್ಛೆಯಿದೆ. ಹೊರತು ಸಾವಿರ ಜನ ಚಂದಾದಾರರಾದರೆ ಕನ್ನಡಿಗನು ತನ್ನ ವೆಚ್ಚವನ್ನು ತಾನೇ ಸಾಗಿಸಿಕೊಂಡು [illegible] ಸೇವೆಯನ್ನು ನಿರಂತರವಾಗಿ [illegible]. [illegible] ರೂಪಾಯಿಗಳನ್ನು ಕೊಟ್ಟು ಪತ್ರಿಕೆಗಳನ್ನು ಕೊಳ್ಳ [illegible] ಕನ್ನಡ ದನಾಡಿನಲ್ಲಿಲ್ಲವೆಂತಲೂ, ವಾರ್ಷಿಕ ಚಂದಾ [illegible] ಯಾಗಿದ್ದರೆ ಜ್ಞಾನಾಭಿವೃದ್ಧಿಗಳಾದ [illegible] ಪತ್ರಿಕೆಗಳನ್ನು ಕೊಳ್ಳಬಹುದೆಂತಲೂ ಅನೇಕರು ಅನ್ನುತ್ತಿರುವರು. ಇದನ್ನು ಕರ್ನಾಟಕದಲ್ಲಿ ಪರೀಕ್ಷಿಸಿ ನೋಡುವ ಸಮಯವು ಬಂದಿದೆ. ಎಷ್ಟು ಜನ ಕನ್ನಡಿಗರು ಈ ಪರೀಕ್ಷೆಯಲ್ಲಿ ನಿಲ್ಲುವರೋ ನೋಡುವ. ನಾವಂತೂ ಈ ಕಾರ್ಯದಲ್ಲಿ ನಮಗೆ ಹಾನಿ ತಟ್ಟಿದರೂ ಸಹ ಒಂದು ವರ್ಷದವರೆಗೆ ಕನ್ನಡಿಗನನ್ನು ನಡೆಯಿಸುವ ಸಿದ್ಧತೆಯನ್ನು ಮಾಡಿರುವೆವು. ಈ ಅವಧಿಯ ನಂತರ ನಮಗೆ ಯಾವ ಬಗೆಯ ಆರ್ಥಿಕ [illegible] ಕೊಡದೇ ತನ್ನ ವೆಚ್ಚವನ್ನು ತಾನೇ ಕನ್ನಡಿಗನು ಮುಂದೆ ಸಾಗಿಸಿಕೊಂಡುಹೋದರೆ ನಾವು ಸಂತುಷ್ಟರಾಗುವೆವು. ಮುಂದೆ ಒಂದು ವರ್ಷದನಂತರದಲ್ಲಿಯೂ ಕನ್ನಡಿಗನನ್ನು ನಡೆಸುವೆವು. ಇನ್ನು ಹಾಗೆ ಆಗದೇ ಇದ್ದ ಪಕ್ಷದಲ್ಲಿ ಒಂದು ವರ್ಷದ ಕೊನೆಗೆ 'ಕನ್ನಡಿಗ'ನು ತನ್ನ ಅವತಾರವನ್ನು ಸಮಾಪ್ತಿಗೊಳಿಸಲು ಹಿಂದುಮುಂದೆ ನೋಡನು. ಆದರೆ ಒಂದು ವರ್ಷದವರೆಗೆ ಮಾತ್ರ 'ಕನ್ನಡಿಗ'ನು ಎಷ್ಟು ಹಾನಿ ತಟ್ಟಿದರೂ ಹಿಂದಕ್ಕೆ ಸರಿಯಲಾರನೆಂಬುದನ್ನು ಮರೆಯಕೂಡದು.

ಕರ್ನಾಟಕದಲ್ಲಿಯ ಶ್ರೀಮಂತರೂ ವಾಚನಾಲಯಗಳೂ ಇತರ ಸಾರ್ವಜನಿಕ ಸಂಸ್ಥೆಗಳೂ ಪೋಷಕರಾಗಿಯಾಗಲಿ (ವಾರ್ಷಿಕ ಚಂದಾ ೫ರೂ) ಉಪಕಾರ ಕರ್ತರಾಗಿಯಾಗಲಿ (ವಾರ್ಷಿಕ ಚಂದಾ ೧೦ ರೂ.) ಆಶ್ರಯದಾತರಾಗಿಯಾಗಲಿ (ಒಮ್ಮೆಲೇ ೫೦ ರೂ. ಕೊಡುವವರು) ಪ್ರೋತ್ಸಾಹಿಸಬೇಕಾಗಿಯೂ ಬಡವರು ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿಯೂ 'ಕನ್ನಡಿಗ'ನ ವಿನಂತಿಯಿದೆ.

ವಾರ್ಷಿಕ ಚಂದಾ ಒಂದು ರೂಪಾಯಿಯನ್ನು ಸಹ ಕೊಡಲು ಯೋಗ್ಯತೆ ಇಲ್ಲದವರು, ಅಥವಾ [illegible] ಸಂಪೂರ್ಣ ಭಕ್ತಿಯುಳ್ಳವರು, ವರ್ಷಕ್ಕೆ [illegible] ೧೬೦೦೦ ಯಾರ್ಡ ನೂಲನ್ನು, ಸ್ತ್ರೀಯರು [illegible] ೮೦೦೦ ಯಾರ್ಡ ನೂಲನ್ನು ಚಂದಾರೂಪವಾಗಿ ಮುಂಗಡ ಕಳಿಸಬಹುದು. ಈ ನೂಲಿನ ಚಂದಾ ಹಣವನ್ನು ನಾವು ಹೆಚ್ಚು ಆದರ ಭಾವದಿಂದ ಸ್ವೀಕರಿಸುವೆವು.

ಮೇಲಿನ ಸಂಗತಿಗಳನ್ನು ಓದಿ, ಕನ್ನಡಿಗನಲ್ಲಿ ಕೆಲವು ವೈಶಿಷ್ಟ್ಯಗಳವೆಂಬುದನ್ನು ವಾಚಕರು ಅರಿತುಕೊಂಡಿರಬಹುದು. ಅವಾವೆಂದರೆ:—

(೧) ಕನ್ನಡನಾಡಿನ ಸೇವೆಯನ್ನು ಎಲ್ಲ ಪತ್ರಿಕೆಗಳಂತೆ ಮಾಡುವದಲ್ಲದೇ ಕನ್ನಡ ಸಂಸ್ಕೃತಿ ಕರ್ನಾಟಕ [illegible] ವಿಷಯಗಳಿಗೆ ಕನ್ನಡಿಗನು ಮುಖಪತ್ರನಾಗಿರುವದು.

(೨) ವರ್ಷದಲ್ಲಿ ಕೆಲ ಸಂಚಿಕೆಗಳನ್ನು ಕೊಟ್ಟು ವಾರ್ಷಿಕ ಚಂದಾರೂಪದಿಂದ ಒಂದೇ ಒಂದು ರೂಪಾಯಿಯನ್ನು ತೆಗೆದುಕೊಂಡು ಕನ್ನಡನಾಡಿನಲ್ಲಿ ಬಡವರಿಗೆ ಸಹ ವೃತ್ತಪತ್ರಿಕೆಗಳನ್ನೋದಲು ಅವಕಾಶವನ್ನು [illegible], ಕನ್ನಡನಾಡಿನಲ್ಲಿ ವಾಚನಾಭಿರುಚಿಯು ಹೆಚ್ಚುವಂತೆ ಅನುಕೂಲ ಮಾಡುವದು.

(೩) ವಾರ್ಷಿಕ ಚಂದಾ ಒಂದೇ ರೂ. ಇದ್ದರೂ [illegible] ಪುಟಗಳುಳ್ಳ ಪತ್ರಿಕೆಯನ್ನು ಕನ್ನಡಿಗನು [illegible] ಇದ್ದು. ಇದರಲ್ಲಿ ಎಲ್ಲ ಪುಟಗಳಲ್ಲಿಯೂ ಜಾಹಿರಾತುಗಳನ್ನು ತುಂಬದೆ (ನಾವು ಯಾವಾಗಲೂ ಅರ್ಧಪುಟಕ್ಕೆ ಕಡಿಮೆಯಿಲ್ಲದಷ್ಟು ವಿಷಯಗಳನ್ನು ವಾಚಕರಿಗೆ ಕೊಡುವೆವು) ಕರ್ನಾಟಕದಲ್ಲಿ ಇರುವ ಸಾಹಿತ್ಯಸೃಷ್ಟಿ ಅನುಕೂಲವಾಗುವಂತಹ ಉತ್ತಮ [illegible] ಗಳಿಗೆ [illegible] ಮಾಡಿದ್ದು.

(೪) ಕನ್ನಡ [illegible] ಲೇಖಕರಿಗೆ ವೇತನ [illegible].

(೫) [illegible] ಕನ್ನಡಿಗನನ್ನು ನಡೆಯಿಸಿ ಕನ್ನಡನಾಡಿನ ಸೇವೆಗೆ ಕಂಕಣಬದ್ಧನಾದದ್ದು.

(೬) ಕೈನೂಲನ್ನು ಸಹ ಚಂದಾರೂಪದಿಂದ ಸ್ವೀಕಾರ ಮಾಡುವ ಯೋಜನೆ ಮಾಡಿದ್ದು. ಕರ್ನಾಟಕದಲ್ಲಿ, ಅಲ್ಲದೆ ಹಿಂದುಸ್ಥಾನದಲ್ಲಿ ಸಹ, ಈ ಯೋಜನೆ ಮಾಡಿದವನೆಂದರೆ ಕನ್ನಡಿಗನೊಬ್ಬನೇ.

ಈ ವೈಶಿಷ್ಟ್ಯಗಳನ್ನೆಲ್ಲ ಲಕ್ಷ್ಯದಲ್ಲಿ ತಂದು ಕನ್ನಡನಾಡಿನ ಸದಭಿಮಾನಿಗಳಾದ ನಮ್ಮ ಬಾಂಧವರೆಲ್ಲರೂ ಚಂದಾದಾರರಾಗಿ ಕನ್ನಡಿಗನ ಉರ್ಜಿತಾವಸ್ಥೆಗೆ ಅತ್ಯಾವಶ್ಯವಾಗಿ ನೆರವಾಗುವರೆಂದು ನಂಬಿರುವೆವು.

ಜಯ ಕರ್ನಾಟಕ!!

ಕನ್ನಡಿಗನ ಕನ್ನಡತನ.

(ಶ್ರೀ. [illegible])

ಕನ್ನಡ ಮಾತಾಡುವವನು ಕನ್ನಡಿಗನು; ಕನ್ನಡ ಸಂಸ್ಕೃತಿಯುಳ್ಳವನು ಕನ್ನಡಿಗನು; ಕನ್ನಡ ನಾಡಿನಲ್ಲಿ ಹುಟ್ಟಿದವನು ಕನ್ನಡಿಗನು; ಕನ್ನಡ ನಾಡಿನಲ್ಲಿ ಜೀವಿಸುವವನು ಕನ್ನಡಿಗನು; ಕನ್ನಡ ನಾಡಿನ ಉನ್ನತಿಯನ್ನು ಬಯಸುವವನು ಕನ್ನಡಿಗನು; ಇಂಥ ಕನ್ನಡಿಗನು ಮಾಡತಕ್ಕ ಎಲ್ಲಕ್ಕೂ ಮೊದಲಿನ ಕೆಲಸವೆಂದರೆ ತನ್ನ ಕನ್ನಡತನವನ್ನು ಉಳಿಸಿಕೊಳ್ಳುವದು. ಕನ್ನಡತನ ಎಂದರೇನು? ಕನ್ನಡಭಾಷೆ ಕನ್ನಡ ಇತಿಹಾಸ ಕನ್ನಡ [illegible] ಕನ್ನಡ ಸಂಸ್ಕೃತಿ ಇವುಗಳ ಅಭಿಮಾನವೇ ಕನ್ನಡತನವು. ನಾನು ಕನ್ನಡಿಗನೆಂದು ಹೇಳಿಕೊಳ್ಳುವದು, ಕನ್ನಡ ಭಾಷೆಯನ್ನು [illegible] ಸುವದು; ನಾನು ಕನ್ನಡಿಗನೆಂದು ಹೇಳಿಕೊಳ್ಳುವದು [illegible] ಹಾಸವನ್ನು [illegible], ನಾನು ಕನ್ನಡಿಗನು [illegible] ಹೇಳುವದು ಕನ್ನಡ [illegible] ಅಭಿಮಾನ [illegible]. ಇದು ಕನ್ನಡತನ [illegible]. ಆದರೆ [illegible], ಎಲ್ಲ ಕನ್ನಡತನವನ್ನು [illegible] ಕಾಣ ಬರುತ್ತಾರೆ. ಕನ್ನಡಿಗರೇ, ವಿಚಾರಮಾಡಿ 'ಹೇಳಿರಿ! ಕನ್ನಡಿಗರಲ್ಲಿ ಎಷ್ಟು ಜನರು ತಮ್ಮ ಭಾಷೆಯನ್ನು ಕಲಿಯುತ್ತಾರೆ? ಎಷ್ಟು ಕನ್ನಡಿಗರು ಕನ್ನಡ ವೃತ್ತಪತ್ರ ಪುಸ್ತಕಗಳನ್ನು ತರಿಸುತ್ತಾರೆ! ಬರೆಯುವವರು ತಂದ ಬೇಕು ತಾವು ಓದಬೇಕು ಎಂಬ ಭಾವನೆಯೇ ಎಲ್ಲಕಡೆಯಲ್ಲಿ ಕಾಣಬರುತ್ತದೆ. ನಮ್ಮ ಕನ್ನಡಿಗರಿಗೆ ಬಾದಾಮಿಯೂ ಕಾಣುವದಿಲ್ಲ. ಹಂಪಿಯೂ ಕಾಣುವದಿಲ್ಲ. ಅವರಿಗೆ ಸಿಂಹಗಡವು ಕಾಣುವದಲ್ಲದೆ, ರಜಪೂತರು [illegible]! ನಮ್ಮ ಕನ್ನಡಿಗರು ಪುಲಕೇಶಿ [illegible] ಹೆಸರು ಕೇಳಿಲ್ಲ; ಶಿವಾಜಿ [illegible] ಹೆಸರು ಕೇಳಿರುತ್ತಾರೆ. ಇನ್ನಿಲ್ಲ [illegible]! ಕನ್ನಡಿಗರು ಕನ್ನಡತನವನ್ನು ಕಳೆದುಕೊಂಡದ್ದರ [illegible]? ಕನ್ನಡಿಗರು [illegible] ಕನ್ನಡ ಹೆಸರುಗಳು [illegible] ನೋಡ [illegible]. [illegible] ಕನ್ನಡ [illegible]. [illegible] ಕನ್ನಡ [illegible]. ಅಲ್ಲಿಯವರೆಗೆ ಇಲ್ಲ.

ಆದರ್ಶಭೂತರಾದ ಕನ್ನಡಿಗರು.

(ಸೂಚನೆ—' ಆದರ್ಶಭೂತರಾದ ಕನ್ನಡಿಗರು ' ಎಂಬ ಶಿರೋಲ್ಲೇಖದ ಕೆಳಗೆ ನಾವು ಮೇಲಿಂದ ಮೇಲೆ ಜೀವಂತ ಕನ್ನಡಿಗರ ಸಂಕ್ಷಿಪ್ತ ಚರಿತ್ರೆಯನ್ನು ಕೊಡುವೆವು —ಸಂಪಾದಕ)

ಕನ್ನಡಿಗರ ಏಕೀಕರಣದ ಆದ್ಯಪ್ರವರ್ತಕರಾದ

ಆಲೂರ ವೆಂಕಟರಾಯರು (ಧಾರವಾಡ)

ಕನ್ನಡಿಗರ "ಏಕೀಕರಣದ" ಮುಖಪತ್ರವಾದ 'ಕನ್ನಡಿಗ' ನ ಮೊದಲನೆಯ ಸಂಚಿಕೆಯಲ್ಲಿ ಈ ಏಕೀಕರಣದ ಕಲ್ಪನೆಯ ಆದ್ಯಪ್ರವರ್ತಕರಾದ ಆಲೂರ ವೆಂಕಟರಾಯರ ಚರಿತ್ರೆಯನ್ನು ಕೊಡುವದು ಅಪ್ರಸ್ತುತವಾಗದು. ಏಕೀಕರಣದ ಪ್ರಶ್ನವು ಈಗ ವ್ಯವಹಾರ್ಯದ ವಿಷಯವಾಗಿರುವದಾದರೂ, ನಾಲ್ಕೈದು ವರ್ಷಗಳ ಹಿಂದೆ ವೃತ್ತಪತ್ರಗಳಲ್ಲಿ ಇಲ್ಲವೆ ಸಾರ್ವಜನಿಕ ಸಭೆಗಳಲ್ಲಿ ಈ ವಿಷಯವನ್ನೆತ್ತಿದರೆ, ಜನರು ನಗುತ್ತಿದ್ದರು. ಕನ್ನಡ ಭಾಷೆಯ ಪುನರುಜ್ಜೀವನಕ್ಕಾಗಿ, ಧಾರವಾಡದ "ವಿದ್ಯಾವರ್ಧಕ ಸಂಘವು" ಸ್ಥಾಪನವಾಗುವ ಮೊದಲು ಮೂರು-ನಾಲ್ಕು ವರ್ಷಗಳಿಂದ ಕೈ. ವಾ. ರಾಮರಾವ ವಿಠ್ಠಲ ಕೈಕಿಣಿಯವರೂ, ದೇಶಪಾಂಡೆ ರಾಮಚಂದ್ರರಾಯರೂ, ಬೇರೆ ಭಾಷಾಭಿಮಾನಿಗಳೂ ಹೆಣಗುತ್ತಿದ್ದದ್ದು ಪ್ರಖ್ಯಾತವಿದೆ; ಆದರೆ ಭಾಷೋನ್ನತಿಯ ಪ್ರಯತ್ನಗಳಿಗೆ ಸಾಕಷ್ಟು ಯಶಸ್ಸು ದೊರೆಯದರ ಕಾರಣಗಳನ್ನು ಸೂಕ್ಷ್ಮರೀತಿಯಿಂದ ಪರೀಕ್ಷಿಸಿ, ಏಕೀಕರಣದ ಅಭಾವವೇ ಈ ತರದ ಅನಾಸ್ಥೆಯ ಮೂಲಕಾರಣವೆಂದು ನಿರ್ಧರಿಸಿ, ಆ ಅನಾಸ್ಥೆಯನ್ನು ತೊಲಗಿಸಲು ಕನ್ನಡಿಗರು ಏಕೀಕರಣದ ಪ್ರಯತ್ನವನ್ನು ನಿಶ್ಚಯಪೂರ್ವಕವಾಗಿ ಕೈಕೊಳ್ಳಬೇಕೆಂದು ಮೊದಲಿಗೆ ಹೇಳಿದವರು ಆಲೂರ ವೆಂಕಟರಾಯರು. ಡಿ. ವ್ಹಿ. ಗುಂಡಪ್ಪನವರು ಬೆಂಗಳೂರಲ್ಲಿ ಹೊರಡಿಸುತ್ತಿದ್ದ 'ಕರ್ನಾಟಕ' ವೆಂಬ ಹೆಸರಿನ ಇಂಗ್ಲೀಷ ವೃತ್ತಪತ್ರದ ಮೊದಲನೆಯ ವರ್ಷದ ೧ ನೇ ಸಂಚಿಕೆಯಲ್ಲಿ "ಕನ್ನಡಿಗರ ಏಕೀಕರಣ" ವೆಂಬ ಶಿರೋಲ್ಲೇಖದಲ್ಲಿ ವೆಂಕಟರಾಯರು ಈ ವಿಷಯವನ್ನು ಪ್ರತಿಪಾದಿಸಿ ಕನ್ನಡ ನುಡಿಯ, ಸಂಸ್ಕೃತಿಯ ಮತ್ತು ಇತಿಹಾಸದ ಉನ್ನತಿಯಾಗಲಿಕ್ಕೆ ಕನ್ನಡಿಗರ ಏಕೀಕರಣಕ್ಕಿಂತ ಹೆಚ್ಚಿನ ಉಪಾಯವಿಲ್ಲೆಂದು ಆಧಾರಸಹಿತವಾಗಿ ತೋರಿಸಿಕೊಟ್ಟರು. ಆ ಲೇಖವು ಪ್ರಸಿದ್ಧವಾದುದರಿಂದ ಈ ವಿಷಯದ ಕಡೆಗೆ ಸುಶಿಕ್ಷಿತರಾದ ಕನ್ನಡಿಗರ ಲಕ್ಷ್ಯವು ಹತ್ತಿ, ಸಾವಕಾಶವಾಗಿ ಏಕೀಕರಣದ ಪ್ರಶ್ನವು ಪ್ರಚಾರದಲ್ಲಿ ಬರಹತ್ತಿತು. ಧಾರವಾಡದ ವಿದ್ಯಾವರ್ಧಕ ಸಂಘದ ವಾರ್ಷಿಕ ಸಭೆಗಾಗಿ, ಮೈಸೂರು ಸರಕಾರದವರಿಂದ ನಿಯಮಿತರಾದ ಇಬ್ಬರು ಪಂಡಿತರು ಧಾರವಾಡಕ್ಕೆ ಪ್ರತಿವರ್ಷ ಬಂದು, ಒಂದು ರೀತಿಯಿಂದ ಧಾರವಾಡ ಮತ್ತು ಮೈಸೂರು ಪ್ರಾಂತಗಳಲ್ಲಿ ಬಳಿಕೆಯನ್ನು ಬೆಳೆಸಲಿಕ್ಕೆ ನೆರವಾಗುತ್ತಿದ್ದರೂ, ದೊಡ್ಡ ಪ್ರಮಾಣದ ಮೇಲೆ ಪ್ರಾಂತ ಪ್ರಾಂತಗಳಲ್ಲಿ ಬಳಿಕೆಯು ಹೆಚ್ಚಾಗಿದ್ದಿಲ್ಲ. ಕೈ. ವಾ. ಎಸ್. ಜಿ. ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ೧೯೦೭ ನೇ ಇಸವಿಯಲ್ಲಿ ನೆರೆದ ಗ್ರಂಥಕರ್ತರ ಸಮ್ಮೇಲನದಿಂದ ಪ್ರಾಂತ ಪ್ರಾಂತಗಳಲ್ಲಿಯ ಬಳಿಕೆಯು ಮೊದಲು ಆರಂಭವಾಯಿತು. ಸಮ್ಮೇಲನದ ಕಾರ್ಯದರ್ಶಿಗಳಲ್ಲಿ ಆಲೂರ ವೆಂಕಟರಾಯರು ಒಬ್ಬರಾಗಿದ್ದರು. ನರಸಿಂಹಾಚಾರ್ಯರಂಥ ಘನಪಂಡಿತರ ಮತ್ತು ಉತ್ಕಟ ಭಾಷಾಭಿಮಾನಿಗಳ ಅಧ್ಯಕ್ಷತೆಯಲ್ಲಿ ಈ ಸಭೆಯು ಒಳ್ಳೇ ಯಶಸ್ವಿಯಾಯಿತು. ಎರಡನೆಯ ಸಭೆಯಾದರೂ ಧಾರವಾಡದಲ್ಲಿಯೇ ನೆರೆಯಿತು. ಸಮ್ಮೇಲನದ ಎರಡೂ ಸಭೆಗಳು ಧಾರವಾಡದಲ್ಲಿಯೇ ನೆರೆದಿದ್ದರಿಂದ, ಮೂರನೆಯ ಸಭೆಯು ಮೈಸೂರ ಪ್ರಾಂತದಲ್ಲಿ ನೆರೆದಿದ್ದರೆ ಯೋಗ್ಯವಾಗುತ್ತಿತ್ತು; ಆದರೆ ಮೈಸೂರವರು, ಅನಾಸ್ಥೆಯ ಮೂಲಕವೋ ಬೇರೆ ಅನಾನುಕೂಲತೆಗಳ ಮೂಲಕವೋ ಮೂರನೆಯ ಸಭೆಯನ್ನು ತಮ್ಮಲ್ಲಿಗೆ ಬರಮಾಡಕೊಳ್ಳಲಿಲ್ಲ. ಅವರಲ್ಲಿಯ ಅನಾಸ್ಥೆಯನ್ನು ತೊಲಗಿಸಿ, ಅವರನ್ನು ಪ್ರೋತ್ಸಾಹಗೊಳಿಸಲು ಯಾರೂ ಮುಂದೆ ಬರಲಿಲ್ಲ. ಎಸ್. ಜಿ. ನರಸಿಂಹಾಚಾರ್ಯರ ಮರಣದಿಂದ ಮೈಸೂರಲ್ಲಿಯ ಭಾಷಾಭಿಮಾನಿಗಳ ಮುಂದಾಳುಗಳು ಇಲ್ಲದಂತಾದರು; ಬೇರೆಯವರು ಈ ವಿಷಯದಲ್ಲಿ ಸಾಕಷ್ಟು ಉತ್ಸಾಹ ವಹಿಸಲಿಲ್ಲ. ಇಂಥ ಪ್ರತಿಕೂಲ ಪರಿಸ್ಥಿತಿಯಲ್ಲಿ ಸಮ್ಮೇಲನವು ನಿಂತು ಹೋಗುವ ಪ್ರಸಂಗವೇ ಬಂದೊದಗಿತು; ಅಕಸ್ಮಾತ ಆಗ ಸಮ್ಮೇಲನವು ನಿಂತು ಹೋಗಿದ್ದರೆ, ಕನ್ನಡಿಗರ ಏಕೀಕರಣವು ತಿರುಕನ ಕನಸಿನಂತೆ ಅಸಂಭವನೀಯ ಮಾತಾಗಿ ಹೋಗುತ್ತಿತ್ತು. ಈ ಪರಿಸ್ಥಿತಿಯಲ್ಲಿ ತಕ್ಕ ಪ್ರಯತ್ನಗಳನ್ನು ಮಾಡದಿದ್ದರೆ, ಕನ್ನಡಿಗರ ಉತ್ಕರ್ಷಕ್ಕೇ ಕೊಡಲಿ ಹಾಕಿದಂತಾಗುವದೆಂದು ತಮ್ಮ ದೂರದೃಷ್ಟಿಯಿಂದ ಅರಿತುಕೊಂಡು, ಆಲೂರ ವೆಂಕಟರಾಯರು ಗ್ರಂಥಕರ್ತರ ಸಮ್ಮೇಲನವನ್ನು ಪುನರುಜ್ಜೀವನಗೊಳಿಸಲು ಮೈಸೂರು ಸರಕಾರದವರ ಸಂಗಡ ಪತ್ರವ್ಯವಹಾರ ನಡಿಸಿದರು. ೨-೩ ವರ್ಷ ಪತ್ರವ್ಯವಹಾರ ನಡೆದರೂ ಫಲಿತಾಂಶವಾಗಲಿಲ್ಲ. ಆದ್ದರಿಂದ ಶ್ರೀ ವೆಂಕಟರಾಯರು ಸ್ವತಃ ಬೆಂಗಳೂರಿಗೆ ಹೋಗಿ ಆಗಿನ ದಿವಾಣರಾದ ಶ್ರೀ ವಿಶ್ವೇಶ್ವರಯ್ಯನವರಿಗೆ ಭೆಟ್ಟಿಯಾದರು. ಅದರಿಂದಲೂ ಕೆಲಸವು ಸಾಧ್ಯವಾಗಲಿಲ್ಲ-ಆದ್ದರಿಂದ ಫಾಟಕ ಗುರುನಾಥರಾಯರನ್ನು ಕರೆದುಕೊಂಡು ಡಾಯರೆಕ್ಟರ ವಿಯರ ಸಾಹೇಬರನ್ನು ಭೆಟ್ಟಿಯಾದರು. ಅವರೊಡನೆ ಎರಡು ಮೂರು ತಾಸುಗಳ ವರೆಗೆ ಭಾಷಣವಾಯಿತು. ಅವರು ಉತ್ಸಾಹಜನಕವಾದ ಮಾತುಗಳನ್ನು ಆಡಿದರು. ಮುಂದೆ ೧೯೧೧ ರಲ್ಲಿ ರಾಜಸಭಾ ಭೂಷಣ ಕರ್ಪೂರ ಶ್ರೀನಿವಾಸರಾಯರ ಭೆಟ್ಟಿಯು ಪದ್ಮಸರೋವರದಲ್ಲಿ ಆಗಿತ್ತು. ಆಗ ಅವರೊಡನೆ ಸಮ್ಮೇಲನದ ಸಂಬಂಧದಿಂದ ಮಾತನಾಡಿದರು. ೧೯೧೨ ರಲ್ಲಿ ಪುನಃ ಬೆಂಗಳೂರಿಗೆ ಹೋಗಿ ಬಂದರು. ಆಮೇಲೆ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಆಗಿನ ಡಾಯರೆಕ್ಟರಾದ ಶ್ರೀಯುತ ರಾಮರಾಯರು ಬಂದಿದ್ದರು. ಅವರ ಕೂಡ ಸಹ ಸಮ್ಮೇಲನದ ವಿಷಯವಾಗಿ ಮಾತನಾಡಿದರು. ಅವರೂ ಕರ್ಪೂರ ಶ್ರೀನಿವಾಸರಾಯರೂ, ಈ ವಿಷಯದಲ್ಲಿ ಚನ್ನಾಗಿ ಮನಸ್ಸು ಹಾಕಿ ಸಾಹಿತ್ಯ ಪರಿಷತ್ತನ್ನು ಕೂಡಿಸಬೇಕೆಂಬುದಕ್ಕೆ ಮೂರ್ತ ಸ್ವರೂಪವನ್ನು ಕೊಟ್ಟರು. ಇವರೇ ಸಮ್ಮೇಲನದ ಮುಖ್ಯ ಪ್ರವರ್ತಕರು. ಕೊನೆಗೆ ದಿವಾಣರಾದ ಸರ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಆಶ್ರಿತದಲ್ಲಿ ಸಾಹಿತ್ಯ ಪರಿಷತ್ತಿನ ಉಪಕ್ರಮವಾಗಿ, ಮೊದಲನೆಯ ಸಭೆಯು ಬೆಂಗಳೂರಲ್ಲಿ ವಿದ್ವನ್ಮಣಿಗಳಾದ ಎಚ್. ನಂಜುಂಡಯ್ಯನವರ ಪ್ರಮುಖತೆಯಲ್ಲಿ ನೆರೆಯಿತು. ಅಂದಿನಿಂದ ಪ್ರತಿವರ್ಷ ಪರಿಷತ್ತು ತಪ್ಪದೆ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ನೆರೆದು, ಭಾಷೆಯ ವಿಷಯದಲ್ಲಿ ಏಕೀಕರಣವನ್ನುಂಟು ಮಾಡಲು ಪ್ರಬಲವಾದ ಸಾಧನವಾಗಿದೆ.

ಕೇವಲ ಭಾಷೋನ್ನತಿಯ ಪ್ರಯತ್ನಗಳಿಂದ ಕನ್ನಡಿಗರಲ್ಲಿ ಸಾಕಷ್ಟು ಚೈತನ್ಯ ಉಂಟಾಗಲಾರದೆಂದು, ಪೂರ್ವಜರ ಉಜ್ವಲ ಚರಿತ್ರೆಯ ಅಂಜನವನ್ನು ಕನ್ನಡಿಗರ ಕಣ್ಣಲ್ಲಿ ಹಾಕಿ, ಕನ್ನಡಿಗರನ್ನು ಹುರಿದುಂಬಿಸುವದು ಅವಶ್ಯವೆಂದರಿತು ಆಲೂರ ವೆಂಕಟರಾಯರು ಕರ್ನಾಟಕ ಇತಿಹಾಸ ಮಂಡಲವನ್ನು ಸ್ಥಾಪಿಸಿದರು. ಈ ಮಂಡಲಕ್ಕೆ ಅವರು ಸಾರ್ವಜನಿಕ ಸ್ವರೂಪವನ್ನು ಮುದ್ದಾಂ ಕೊಡದೇ ಇತಿಹಾಸ ಸಂಶೋಧನದಲ್ಲಿ ಅಭಿರುಚಿಯಿದ್ದ ತಮ್ಮ ಮಿತ್ರರನ್ನೇ ಮಾತ್ರ ಸೇರಿಸಿಕೊಂಡಿರುವರು. ಈ ಮಂಡಲವು ಸಂಶೋಧನದ ಕಾರ್ಯದಲ್ಲಿ ಸಾಕಷ್ಟು ಯಶಸ್ವಿಯಾಗಿರದಿದ್ದರೂ, ಮಂಡಲದ ಸ್ಫೂರ್ತಿಯಿಂದ ವೆಂಕಟರಾಯರು ಬರೆದ "ಗತವೈಭವ" ವು ಅನೇಕ ಬಗೆಯಿಂದ ಕನ್ನಡಿಗರಿಗೆ ಪ್ರಮಾಣ ಗ್ರಂಥವಾಗಿದೆಯೆಂದು ಬೆಂಗಳೂರಿನ ರಾವಬಹಾದ್ದೂರ ಆರ್. ನರಸಿಂಹಾಚಾರ್ಯರಂಥ ಶ್ರೇಷ್ಠ ಸಂಶೋಧಕರು ಹೇಳಿದ್ದಾರೆ. "ಗತವೈಭವ" ವು ಪ್ರಾಚೀನ ಕರ್ನಾಟಕ

ನಿರ್ಮಲ ಕನ್ನಡಿ ಯಿರುವದಲ್ಲದೆ, ಭಾವೀ ಕರ್ನಾಟಕದಲ್ಲಿ ಕಾರ್ಯಕರ್ತರಾಗುವಂಥ ತರುಣಕನ್ನಡಿಗರನ್ನು ಸ್ಫೂರ್ತಿಗೊಳಿಸುವ ಉಜ್ವಲ ಸಾಧನವಾಗಿದೆ. "ಗತವೈಭವ" ದಲ್ಲಿ ಕನ್ನಡಿಗರ ಭಾಷೆಯ, ಇತಿಹಾಸದ, ಕಲಾಕೌಶಲ್ಯದ ಮತ್ತು ಸಂಸ್ಕೃತಿಯ ರೂಪರೇಷೆಯು ಹೊರಟಿದೆ. ಪ್ರಾಚೀನ ಪರಂಪರೆಯನ್ನನುಸರಿಸಿ ಮುಂದಿನ ಮಾರ್ಗಕ್ರಮಣವನ್ನು ಹೇಗೆ ಮಾಡಬೇಕೆಂದೂ ಅದರಲ್ಲಿ ದಿಗ್ದರ್ಶಿತವಾಗಿದೆ.

ರಾಜಕೀಯ ಪ್ರಗತಿಯಿಲ್ಲದೆ, ಭಾಷೋನ್ನತಿಯ ಮತ್ತು ಇತಿಹಾಸ ಪ್ರಸಾರದ ಪ್ರಯತ್ನಗಳೆಷ್ಟೇ ಜನತೆಯ ಹೆಜ್ಜೆಯು ಮುಂದೆ ಬೀಳಲಿಕ್ಕೆ ಸಾಕಷ್ಟು ಫಲಕಾರಿಯಾಗಲಾರವೆಂಬುದು ಅನುಭವದ ಮಾತಾಗಿದೆ. ಈ ಮಾತಿನ ವಿಚಾರವನ್ನು ಮಾಡಿ, ಅಖಿಲ ಕರ್ನಾಟಕದ ರಾಜಕೀಯ ಪರಿಷತ್ತನ್ನು ಕೂಡಿಸುವ ವಿಷಯವಾಗಿ ಬ್ರಿಟಿಶ್ ಕರ್ನಾಟಕದ ಮುಂದಾಳುಗಳ ಸಂಗಡ ಆಲೋಚನೆ ಮಾಡಿ, ಆಲೂರ ವೆಂಕಟರಾಯರು ಬೇರೆ ಉತ್ಸಾಹಿಗಳಾದ ಸಹಕಾರಿಗಳೊಂದಿಗೆ ಪರಿಷತ್ತಿನ ಉಪಕ್ರಮವನ್ನು ಮಾಡಿದರು. ಪರಿಷತ್ತಿನ ಉಪಕ್ರಮವಾದಾಗ, ಸದ್ಯಕ್ಕೆ ಕರ್ನಾಟಕದ ಮುಂದಾಳುಗಳೆಂದು ಹೇಳಿಕೊಳ್ಳುವ ಕೆಲವು ಸದ್ಗೃಹಸ್ಥರು ಪರಿಷತ್ತಿನ ಕಲ್ಪನೆಗೆ ಸಾಕಷ್ಟು ಉತ್ತೇಜನ ಕೊಡಲಿಲ್ಲ. ಪರಿಷತ್ತಿನ ಮೊದಲನೆಯ ಸಭೆಯು ಎರಡು ಮೂರು ಹಿಂದೀ ಸಂಸ್ಥಾನಗಳ ದಿವಾಣಗಿರಿಯನ್ನು ಮಾಡಿ, ನಾಮಾಂಕಿತ ಮುತ್ಸದ್ದಿಗಳೆಂದು ಹೆಸರು ಪಡೆದ ವ್ಹಿ. ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ಒಳ್ಳೇ ಯಶಸ್ವಿಯಾಯಿತು; ಅಲ್ಲದೆ ಕನ್ನಡಿಗರ ತರುಣ ಮುಂದಾಳುಗಳಾದ ದೇಶಪಾಂಡೆ ಜಯರಾಯರ, ಕಡಪಾ ರಾಘವೇಂದ್ರರಾಯರ ಮತ್ತು ಬೇರೆ ಅಭಿಮಾನಿಗಳ ಪ್ರಯತ್ನದಿಂದ ಕನ್ನಡಿಗರ ರಾಜಕೀಯ ಆಕಾಂಕ್ಷೆಗಳಿಗೆ ವಿಶೇಷ ಮಹತ್ವವು ಬರಹತ್ತಿತು. ಇತ್ತ ಸರಕಾರೀ ರಾಜ್ಯಕಾರಭಾರದಲ್ಲಿ ಕರ್ನಾಟಕವು ನಾಲ್ಕೈದು ಕಡೆಗೆ ಹರಿದು ಹಂಚಿ ಹೋಗಿದ್ದಿತು, ಅತ್ತ ಕಾಂಗ್ರೆಸ್ಸಿನ ಆಡಳಿತೆಯಲ್ಲಿಯೂ ಕರ್ನಾಟಕಕ್ಕೆ ಸ್ವತಂತ್ರ ಅಸ್ತಿತ್ವವಿರಲಿಲ್ಲ. ಆದರೆ ರಾಜಕೀಯ ಪರಿಷತ್ತಿನ ಸಭೆಯಾದಂದಿನಿಂದ ಕಾಂಗ್ರೆಸ್ಸಿನಿಂದಾದರೂ ಸ್ವತಂತ್ರ ಪ್ರಾಂತದ ಅಸ್ತಿತ್ವಕ್ಕೆ ಮಾನ್ಯತೆಯನ್ನು ಹೊಂದಬೇಕೆಂಬ ಕಲ್ಪನೆಯು ಕನ್ನಡಿಗರಲ್ಲಿ ತಲೆದೋರಹತ್ತಿತು. ಕಡಪಾ ರಾಘವೇಂದ್ರರಾಯರು ಕರ್ನಾಟಕ ದೇಶದತುಂಬೆಲ್ಲ ಸಂಚಾರ ಮಾಡಿ, ಭಾಷಾತತ್ತ್ವಕ್ಕನುಸಾರವಾಗಿ ಪ್ರಾಂತರಚನೆಯಾಗಬೇಕೆಂಬ ವಿಷಯದಲ್ಲಿ ಕಾಂಗ್ರೆಸ್ಸಿನ ಮುಂದಾಳುಗಳ ಬೆಂಬಲವ ಪಡೆದರು. ೧೯೨೦ ನೇ ಇಸವಿಯಲ್ಲಿ ನಾಗಪೂರದಲ್ಲಾದ ಕಾಂಗ್ರೆಸ್ಸಿನಲ್ಲಿ ಮಹಾತ್ಮಾಗಾಂಧಿಯವರೇ ಸೂತ್ರಧಾರಿಗಳಾಗಿದ್ದರಿಂದ ಈ ವಿಷಯಕ್ಕೆ ತಾನೇ ಮಾನ್ಯತೆ ದೊರೆತು, ಕರ್ನಾಟಕವು ಸ್ವತಂತ್ರ ಪ್ರಾಂತವಾಯಿತು. ಸ್ವಾತಂತ್ರ್ಯದ ವಾತಾವರಣದಿಂದ ಕನ್ನಡಿಗರಲ್ಲಿ ವಿಲಕ್ಷಣ ರಾಜಕೀಯ ಜಾಗ್ರತಿಯುಂಟಾಗಿದ್ದರಿಂದಲೇ ೩ ೪ ವರ್ಷಗಳ ಸ್ವಲ್ಪಾವಧಿಯಲ್ಲಿ ಸಹ ಒಳ್ಳೇ ಯಶಸ್ವಿಯಾದ ಬೆಳಗಾಂವಿಯ ಕಾಂಗ್ರೆಸ್ಸನ್ನು ಕರ್ನಾಟಕದಲ್ಲಿಯೇ ಮಹಾತ್ಮರಂಥ ತಪೋಧನರ ಅಧ್ಯಕ್ಷತೆಯಲ್ಲಿ ನೆರೆಯಿಸುವ ಭಾಗ್ಯವು ಕನ್ನಡಿಗರಿಗೆ ಒದಗಿತು.

ಈ ಬಗೆಯಾಗಿ ರಾಷ್ಟ್ರೀಯ ಜೀವನದ ಮುಖ್ಯ ಅಂಗಗಳಾದ ಭಾಷೆ, ಇತಿಹಾಸ, ಮತ್ತು ರಾಜಕಾರಣಗಳಲ್ಲಿ ಕನ್ನಡಿಗರನ್ನು ಕಾರ್ಯಕ್ಷಮರನ್ನಾಗಿ ಮಾಡಲಿಕ್ಕೆ ಆಲೂರ ವೆಂಕಟರಾಯರ ಸತತ ಪ್ರಯತ್ನಗಳು ಪ್ರತ್ಯಕ್ಷವಾಗಿಯೂ, ಅಪ್ರತ್ಯಕ್ಷವಾಗಿಯೂ ಕಾರಣೀಭೂತವಾದವು. ಅವರು ಹೊರಡಿಸುತ್ತಿದ್ದ "ಜಯಕರ್ನಾಟಕ"ವೂ ಅವರ ಅಭಿಮಾನ ಪ್ರೇರಿತವಾದ ಪ್ರಯತ್ನಗಳಿಗೆ ಸಾಕ್ಷಿಯಾಗಿದೆ. ಭಾಷಾ ಪಾಂಡಿತ್ಯದಲ್ಲಿ ವೆಂಕಟರಾಯರಿಗಿಂತ ಮಿಗಿಲಾದವರು ಕರ್ನಾಟಕದಲ್ಲಿ ಅನೇಕರು ದೊರೆಯ ಬಹುದು; ಇತಿಹಾಸ ಸಂಶೋಧನದಲ್ಲಿ ಆಲೂರರವರಿಗಿಂತ ಶ್ರೇಷ್ಠ ಸಂಶೋಧಕರು ಹಲವರಿರುವರು; ರಾಜಕಾರಣದಲ್ಲಂತೂ ಅವರಿಗಿಂತ ಎಷ್ಟೋ ಪಾಲು ಪ್ರಖ್ಯಾತರಾದ ಮುಂದಾಳುಗಳ ಹೆಸರನ್ನು ನಾವೆಲ್ಲ ಮೇಲಿಂದ ಮೇಲೆ ಕೇಳುತ್ತೇವೆ. ಆದರೆ ಭಾಷೆ, ಇತಿಹಾಸ, ರಾಜಕಾರಣ ಮೊದಲಾದ ವಿವಿಧಗಳನ್ನೆಲ್ಲ ಒಟ್ಟುಗೂಡಿಸಿ, ಆ ಸಂಗಮದಿಂದುಂಟಾದ ಪ್ರವಾಹವನ್ನು ಕರ್ನಾಟಕದ ರಾಷ್ಟ್ರಪುನರುಜ್ಜೀವನದ ಭೂಮಿಯಲ್ಲಿ ವಿಪುಲವಾಗಿ ಹರಿಯುವಂತೆ ಮಾಡಿ, ತೇಜಸ್ವಿಗಳಾದ ಕನ್ನಡಿಗರು ಆ ಫಲದ್ರೂಪವಾದ ಭೂಮಿಯೊಳಗಿಂದ ಉದಯ ಹೊಂದುವಂತೆ ಮಾಡುವದೇ ಆಲೂರ ವೆಂಕಟರಾಯರ ವಿಶಿಷ್ಟ ಕಾರ್ಯವು. ಅಂತೇ ಏಕೀಕರಣದ ಆದ್ಯ ಪ್ರವರ್ತಕರೆಂದು ಈ ಲೇಖದ ಆರಂಭದಲ್ಲಿ ಅವರಿಗೆ ಸಂಬೋಧಿಸಿದ್ದು.

—ವಾದಿರಾಜಸುತ.

ವ್ಯವಸ್ಥಾಪಕರ ಕಥೆಯು.

ಸಂಪಾದಕರ ಸ್ವವಿಷಯವಾಯಿತು! ಜೋಳಿಗೆ ಹೊಂದಪ್ಪನವರ ಆತ್ಮನಿವೇದನವಾಯಿತು! ಈಗ್ಗೆ ವ್ಯವಸ್ಥಾಪಕರು ತಮ್ಮ ಕಥೆಯನ್ನು ಹೇಳಬಾರದೇಕೆ? ಸಂಪಾದಕರು ಅನೇಕವಿಷಯಗಳನ್ನ ನನ್ನ ಕಡೆಗೆ ಕೊಟ್ಟಿರುವರು. ಆದರೆ 'ಸ್ವವಿಷಯ' 'ಆದರ್ಶಭೂತರಾದ ಕನ್ನಡಿಗರು' ಈ ವಿಷಯಗಳು ದೊಡ್ಡವಾಗಿದ್ದದರಿಂದಲೂ, ಅವುಗಳನ್ನು ಎರಡು ಭಾಗಗಳನ್ನಾಗಿ ಮಾಡಿ ಮುಂದಿನ ಸಂಚಿಕೆಯಲ್ಲಿ ಎರಡನೇ ಭಾಗವನ್ನು ಕೊಟ್ಟರೆ ಅಯೋಗ್ಯವಾಗುವದರಿಂದಲೂ, ಉಳಿದ ವಿಷಯಗಳು ಹಾಗೇ ಉಳಿದಿವೆ. ಉಳಿದವುಗಳಲ್ಲಿ ಶ್ರೀ ಹರ್ಡೇಕರ ಮಂಜಪ್ಪನವರ, ಊಳಿಗದವರ ಲೇಖಗಳೂ ಸತ್ಯಾಗ್ರಹಿಯಲ್ಲಿ ಪ್ರಸಿದ್ಧವಾದ ಕರ್ನಾಟಕದ ಏಕೀಕರಣವೂ ಅವೆ. ಇದನ್ನು ಮುಂದಿನಸಾರೆ ಕೊಡುವೆವು. ಯಂಗ ಇಂಡಿಯಾ ಗುಜರಾಥೀ ನವಜೀವನಗಳಿಗೆ ಸಹ ಸ್ಥಳವು ದೊರೆಯಲಿಲ್ಲ. ಅವೂ ಮುಂದಿನಸಾರೆ. ಪರಿಮಿತ ಜಾಹೀರಾತುಗಳೂ ಹಾಗೇ ಉಳಿದವೆ. ನಾವು ೬ ಪುಟಗಳನ್ನು ವಿಷಯಗಳಿಗೂ ೨ ಪುಟಗಳನ್ನು ಜಾಹೀರಾತುಗಳಿಗೂ ಕಾದಿಟ್ಟಿರುವೆವು. ಈ ಸಾರೆ ನಾವು ಮೊದಲು ಪ್ರಸಿದ್ಧಿಸಿದಂತೆ ೨೦೦೦ ಪ್ರತಿಗಳನ್ನು ಮಾತ್ರ ತೆಗೆಯತಕ್ಕದ್ದಿತ್ತು. ಆದರೆ ಶ್ರೀ ಪಾಂಡುರಂಗನ ಕೃಪೆಯಿಂದ ೪೦೦೦ ಪ್ರತಿಗಳು ಹೊರಟಿವೆ! ಹೆಚ್ಚಿನ ಪ್ರತಿಗಳನ್ನು ಮಾದರಿ ಸಂಚಿಕೆಯೆಂದು ಅನೇಕರಿಗೆ ಕಳಿಸಿರುವೆವು.

ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫ ರೂ. ಉಪಕಾರಕರ್ತರಿಗೆ ವಾ. ೧೦ ರೂ. ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ	೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆಯಾಗದಂಥ ೯೦೦ ಯಾರ್ಡ ಕೈನೂಲು
ಪರಸ್ಥಳದ ,,	ಮನಿಯಾರ್ಡರದಿಂದ ೧-೧೩-೦ ವಿ. ಪಿ. ಯಿಂದ ೨-೦-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦ ಯಾರ್ಡ ಕೈನೂಲು.
ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ-	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೩-೦ ,, ವಿ. ಪಿ. ಯಿಂದ ೩-೦-೦
ಸರಕಾರ, ಮುನಸೀಪಾಲಿಟಿ ಲೋಕಲ್ ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦ ವಿ. ಪಿ.ಯಿಂದ ೫-೦-೦

ಬಿಡಿ ಸಂಚಿಗೆ ೯ ಪೈ. ಹಿಂದಿನ ಸಂಚಿಕೆಯೊಂದಕ್ಕೆ ೨ ಆಣೆ. ಧರ್ಮಾರ್ಥವಾಗಿಯಾಗಲೀ, ವರ್ಷದ ಕಡಿಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ.

ಟೀಪು- ಈ ಸಾರೆ ೪೦೦೦ ಪ್ರತಿಗಳು ಮುದ್ರಿತವಾಗಿವೆ. ಜಾಹೀರಾತು ಕೊಡಲಿಚ್ಛಿಸುವವರು ತ್ವರೆಮಾಡಬೇಕು.

ವ್ಯವಸ್ಥಾಪಕ.

ಬಾರುಕೋಲು.

ಇದು ನೋಡಿ. ಕನ್ನಡಿಗನ ಸಂಪಾದಕರು ನನಗೆ ಇದೊಂದು ಹೊಸ ಪ್ರಯಾಸದ ಕೆಲಸವನ್ನು ಹಚ್ಚಿದ್ದಾರೆ. ನಾನು ಮುಪ್ಪಿನವನು ಮುದುಕ. ಪೆನ್ಶನ್ ತೆಗೆದುಕೊಂಡು ೧೦ ವರ್ಷಗಳಾದವು! ಸ್ವಸ್ಥವಾಗಿ ನನ್ನಷ್ಟಕ್ಕೆ ನಾನು ರಾಮಭಜನೆ ಮಾಡುತ್ತ ದಿನಗಳನ್ನು ಕಳೆಯುವ ಹೊರತೆ ಇಲ್ಲದ ಕೆಲಸವು ನನ್ನಮೇಲೆ ಬಿದ್ದಿದೆ. ನಾನಿರುವದೊಂದು ಕುಗ್ರಾಮವು. ಕನ್ನಡಿಗನ ಸಂಪಾದಕರು ಒಂದುದಿನ ಫಕ್ಕನೆ ನನ್ನ ಹಳ್ಳಿಗೆ ಬಂದರು! ೪-೬ ವರ್ಷಗಳಿಂದ ಇವರ ದರ್ಶನವಿರದ್ದರಿಂದ, ಅವರನ್ನು ಕಂಡಾಕ್ಷಣವೇ ಆನಂದವಾಯಿತು. ಆದರೆ ಈ ಲೇಖವನ್ನು ಬರೆಯುವಾಗ್ಗೆ ಮಾತ್ರ ಆ ದಿನ ಸಂಪಾದಕರು ಬಂದು ಇದಕ್ಕೀಡುಮಾಡಿದರಪ್ಪಾ? ಎಂಬುದಾಗಿ ಕ್ಷಣಕ್ಷಣಕ್ಕೆ ಉಸುಗರೆಯುತ್ತಿರುವೆನು. ಅವರು ನನ್ನ ಹಳ್ಳಿಗೆ ಬಂದಮೇಲೆ ಕುಶಲ ಮಾತುಗಳನ್ನು ಮುಗಿಸಿದನಂತರದಲ್ಲಿ, ನನ್ನ ಕುಗ್ರಾಮಕ್ಕೆ ಅವರು ಬಂದ ಕಾರಣವನ್ನು ಕೇಳಲು, ಅವರು ಆ ಕಾರಣವನ್ನು ಹೇಳದೇ ಬೇರೆ ಮಾತು ತೆಗೆದು, ಏನೋ ಒಂದು ಪ್ರಸಂಗವನ್ನುಂಟುಮಾಡಿ ಯುಕ್ತಿಯಿಂದ ನನ್ನಿಂದ ಒಂದು ವಚನವನ್ನು ಪಡೆದುಕೊಂಡರು. ಇಂಥ ಕೆಲಸವನ್ನು ನಾನು ಮಾಡಬೇಕೆಂದು ಆ ವಚನವಲ್ಲ. ಆದರೆ ಸಂಪಾದಕರು ಮುಂದೆ ಹೇಳುವಂಥ ಒಂದು ಕೆಲಸವನ್ನು ನಾನು ಮಾಡಬೇಕಾಗಿ ಸಂದಿಗ್ಧ ವಚನವನ್ನು ತೆಗೆದುಕೊಂಡರು. ಆ ಸಂದಿಗ್ಧ ವಚನವೇ ನನ್ನನ್ನು ಈಗ ಸಂಕಟದಲ್ಲಿ ಕೆಡವಿರುವದು.

ಸ್ವಾಮೀ ವಾಚಕರೇ, ನೀವು ಸಹ ಈಗ್ಗೆ ಸಂದಿಗ್ಧದಲ್ಲಿರಬಹುದು. ಅದ್ದರಿಂದ ಆ ವಚನವಾವದೆಂಬದನ್ನು ಅರುಹುವೆನು. ಈಗಿನ ಸಮಾಜದ — ವಿಶೇಷತಃ ಕರ್ನಾಟಕ ಸಮಾಜದಲ್ಲಿ — ನೆಲೆಗೊಂಡಿರುವ ದೋಷಗಳನ್ನು "ಬಾರುಕೋಲು" ಎಂಬ ಲೇಖನಾಂಕಗಳ ಮುಖಾಂತರವಾಗಿ ಕರ್ನಾಟಕಸ್ಥರ ನಿದರ್ಶನಕ್ಕೆ ತಂದುಕೊಡಬೇಕಂತೆ! ಸಹಜವಾಗಿ ಮನಸ್ಸಿಗೆ ಹೊಳೆದಷ್ಟನ್ನೇ ಲೇಖರೂಪದಿಂದ ಬರೆದರೆ ತೀರದಂತೆ! ಲೇಖನದ ಗತಿಯು ಬಾರುಕೋಲಿನದಿರಬೇಕಂತೆ! ಈ ಲೇಖಗಳನ್ನೋದಿದರೆ ಸಮಾಜದೊಳಗಿನ ಕೊರತೆ ಕುಂದುಗಳು ತಟಸ್ಥವಾಗದಂತೆ ಓದುಗರ ಮನಸ್ಸಿನಮೇಲೆ ಪರಿಣಾಮವಾಗಬೇಕಂತೆ! ಇತ್ತ ವ್ಯಕ್ತಿವಿಷಯಕ ದೋಷಗಳಾಗಲೂ ಇರಕೂಡದಂತೆ! ಯಾವ ವ್ಯಕ್ತಿಗೂ ಅವು ಸಂಬಂಧಪಟ್ಟವುಗಳಿರದೇ ಸಮಾಜದೊಳಗೆ ಸರ್ವಸಾಧಾರಣವಾಗಿ ಕಂಡು ಬರುವ ದೋಷಗಳನ್ನೇ ಆರಿಸಬೇಕಂತೆ! ಅಪ್ಪಪ್ಪಾ! ಇಂಥ ಇಲ್ಲದ ಜವಾಬ್ದಾರಿಯ ಕೆಲಸದ ಭಾರವನ್ನು ವಹಿಸುವದಕ್ಕಿಂತ, ಒಂದು ಕಲ್ಲಿನ ಬಂಡೆಯ ಭಾರವನ್ನು ಹೊತ್ತುಕೊಂಡು ಸುಮ್ಮನೇ ನಿಲ್ಲಲಿಕ್ಕೆ ಯಾಕೆ ಹೇಳಲಿಲ್ಲ, ಸ್ವಾಮೀ? ಎಂದು ಸಂಪಾದಕರಿಗೆ ಕೇಳಿ 'ಇಂಥ ಕೆಲಸವು ಸರ್ವಥಾ ನನ್ನಿಂದಾಗದೆಂ'ಬದಾಗಿ ಸ್ಪಷ್ಟವಾಗಿ ಹೇಳಿದೆನು. ಆದರೆ ಸಂಪಾದಕರ ಎದೆಯು ಉಕ್ಕಿನದಿದ್ದಂತೆ ತೋರಿತು. ಮುಪ್ಪಿನ ಮುದುಕನಾದ ನನಗೆ ಇಂಥ ಜವಾಬ್ದಾರಿಯ ಕೆಲಸವನ್ನು ಹೇಳಿ, ವಚನ ತೆಗೆದುಕೊಂಡಿರುವಿರೆಂದು ನನ್ನನ್ನು ಪೀಡಿಸಬೇಡಿ ಎಂಬದಾಗಿ ಬಹಳ ಕಳಕಳಿಯಿಂದ ಹೇಳಿದರೂ ಅವರೇನೂ ನನ್ನ ಮಾತನ್ನು ಕೇಳಲಿಲ್ಲ. ವಚನಕೊಟ್ಟಿರುವಿರೆಂದ ಮೇಲೆ ಈ ಕೆಲಸವನ್ನು ಮಾಡಲೇಬೇಕೆಂಬದಾಗಿ ಹಟಹಿಡಿದರು. ನಾನು ವಚನ ಪಾಲಿಸುವೆನೆಂದು ಹೇಳದೇ ಹೋದರೆ ಊಟಕ್ಕೆ ಸಹ ಏಳೆನೆಂದು ಹಟಹಿಡಿಯಬೇಕೇ? ಇಂಥ ಅತಿಥಿಯು ಉಪವಾಸಕ್ಕೆ ಬಂದದ್ದರಿಂದ ನಿರಾಶೆಗೊಳಿಸುವದು ಯೋಗ್ಯವಲ್ಲವೆಂದು ವಚನದಂತೆ ನಡೆಯುವೆನೆಂದು ಹೇಳಿದೆನು. ಆದರೆ ನಾನು ನನ್ನ ಎರಡು ಕರಾರುಗಳನ್ನು ಹಾಕಿದೆನು. ನಾನೇ ಈ ಲೇಖನಾಂಕಗಳನ್ನು ಬರೆಯುತ್ತಿರುವೆನೆಂದು ಯಾವ ಕಾರಣದಿಂದಲೂ ಯಾರಿಗೂ ಹೇಳಕೂಡದು. ಇದನ್ನು ಸಂಪಾದಕರು ಬಹು ಗುಪ್ತವಾಗಿಡಬೇಕು. ನಾನು ಕಳುಹಿಸಿದ ಲೇಖಗಳನ್ನು ಹಾಗೆಯೇ ಕಂಪಾಜಿಟರುಗಳಿಗೆ ಕೊಡದೇ ಅವನ್ನು ಸಂಪಾದಕರು ತಮ್ಮ ಕೈಯಿಂದಲೇ ಪುನಃ ಬರೆದು ಕೊಡಬೇಕು. ಯಾಕಾದರೆ ನನ್ನ ಹಸ್ತಾಕ್ಷರಗಳಿಂದ ಯಾರಾದರೂ ನಾನೇ ಈ ಲೇಖನಾಂಕಗಳನ್ನು ಬರೆಯುತ್ತಿರುವೆನೆಂಬದಾಗಿ ಗೊತ್ತುಹಚ್ಚಬಹುದೆಂಬ ಅಂಜಿಕೆಯು. ಹೀಗೆ ಗೌಪ್ಯದಸಲುವಾಗಿ ಮೊದಲನೇ ಕರಾರು. ನಾನು ೧೪ ಲೇಖಗಳನ್ನು ಬರೆದುಕೊಡುವೆನು. ಅವುಗಳನ್ನಂತೂ ಪ್ರಸಿದ್ಧಿಸಿ. ಇವು ಕನ್ನಡಿಗರ ಆದರಕ್ಕೆ ಪಾತ್ರವಾದರೇನೇ ನಾನು ಮುಂದೆ ಬರೆಯುವೆನು. ಇಲ್ಲದಿದ್ದರೆ ನಾನೇ "ಬಾರುಕೋಲಿನಿಂದ" ಹೊಡಿಸಿಕೊಂಡು ಸುಮ್ಮನೇ ಮನೆಯಲ್ಲಿ ಕೂಡ್ರುವೆನೆಂದು ಹೇಳಿದ್ದು ಎರಡನೇ ಕರಾರು. ಮೊದಲನೇ ಕರಾರಿಗೆ ಸಂಪಾದಕರು ಬೇಗನೆ ಸಮ್ಮತಿಸಿದರು. ಆದರೆ ಎರಡನೇದ್ದಕ್ಕೆ ಮಾತ್ರ ತುಟಿ ತೆಗೆದರು. ಆದರೆ ನಾನೂ ಹಟಮಾರಿಯಾಗಲು ಅದಕ್ಕೆ ಬಹು ಪ್ರಯಾಸದಿಂದ ಸಂಪಾದಕರು ಸಮ್ಮತಿಸಿದರು. ನನ್ನ ಭಾರವು ಹಗುರಾದಂತಾಯಿತು. ಯಾಕೆಂದರೆ ನನ್ನ ಲೇಖಗಳು ಕರ್ನಾಟಕಸಮಾಜಕ್ಕೆ "ಬಾರುಕೋಲು"ಗಳಾಗದೇ ನಾನೇ ೧೪ ಲೇಖಗಳ ಅವಧಿಯು ಮುಗಿಯುವ ಪೂರ್ವದಲ್ಲಿ ಕರ್ನಾಟಕಸ್ಥರಿಂದ "ಬಾರುಕೋಲ"ನ ಪೆಟ್ಟು ತಿಂದು, ಮನೆಯಲ್ಲಿ ಪುನಃ ಮೊದಲಿನಂತೆ ಸ್ವಸ್ಥವಾಗಿ ಕುಳಿತುಕೊಳ್ಳಲು ಅವಕಾಶದೊರೆಯುವದೆಂದು ನನ್ನ ವಿಶ್ವಾಸವಿದೆ. ಸಂಪಾದಕರು ಸುಮ್ಮನೇ ನನ್ನನ್ನು ವಚನಕ್ಕೀಡುಮಾಡಿ ನಾನು ಈ ಲೇಖ ಬರೆಯಲೇ ಬೇಕೆಂದು ಒತ್ತಾಯ ಪಡಿಸಿದರು. ನನ್ನಲ್ಲಿ ನಿಜವಾಗಿಯೂ "ಬಾರುಕೋಲ"ನ ಲೇಖಗಳನ್ನು ಬರೆಯುವ ಯೋಗ್ಯತೆಯಿಲ್ಲ. ಇರಲಿ. ಮುದುಕನ ಹಟವು ಮುಂದೆ!

ನಾನು ನನ್ನ ಹೆಸರನ್ನು ಗೌಪ್ಯವಾಗಿಡಬೇಕಾಗಿದ್ದರಿಂದ, ಆ ಯಾವ ನಾಂವ ತಕ್ಕ ಪದವಿಟ್ಟುಕೊಳ್ಳಬೇಕೆಂಬ ಮಾತನ್ನು ತೆಗೆದ ಕೂಡಲೇ 'ಚೇಳಿನಕೊಂಡಪ್ಪ' ಎಂಬದಾಗಿರತಕ್ಕದ್ದೆಂದು ಸಂಪಾದಕರು ಕೂಡಲೇ ಅಜ್ಞಾಪಿಸಿದರು. 'ಬಾರುಕೋಲು' 'ಚೇಳಿನಕೊಂಡಪ್ಪ' ಈ ಎರಡೂ ಹೆಸರುಗಳನ್ನು ಅವರು ಮೊದಲೇ ಯೋಚಿಸಿಕೊಂಡು ಬಂದಿದ್ದರು. ನಾನು ಅದಕ್ಕೆ ವಿರೋಧಿಸಲಿಲ್ಲ. ಬಾರುಕೋಲು! ಮೇಲೆ ಚೇಳಿನಕೊಂಡಿ!! ಎರಡೂ ಹೊಡೆತಗಳೇ, ಒಂದಕ್ಕಿಂತೊಂದು ಹೆಚ್ಚಿನವು. ಆದರೆ ಕರ್ನಾಟಕ ಸಮಾಜಕ್ಕೆ ಇಂಥಹೊಡೆತಗಳನ್ನು ಕೊಟ್ಟು, ಸಮಾಜವನ್ನೆಬ್ಬಿಸುವ ಸಾಮರ್ಥ್ಯವು ನನ್ನಲ್ಲಿಲ್ಲವಾದ್ದರಿಂದ ನಾನು ಚಿಂತಾಕ್ರಾಂತನಾಗಿರುವೆನು. ಈ ಜವಾಬ್ದಾರಿಯನ್ನು ನನ್ನ ಕರ್ನಾಟಕ ಬಾಂಧವರಲ್ಲಿ ಯಾರಾದರೂ ತಮ್ಮ ಮೈಮೇಲೆ ತೆಗೆದುಕೊಂಡು ನನ್ನನ್ನು ಈ ಜವಾಬ್ದಾರಿಯಿಂದ ಮುಕ್ತಮಾಡಿದರೆ ನಾನು ಅವರಿಗೆ ತುಂಬಾ ಉಪಕೃತನಾಗುವೆನು. ಮುಪ್ಪಿನ ಮುದುಕನ ಸಂಪೂರ್ಣ ಆಶೀರ್ವಾದವು ಅವರಪಾಲಿಗೆ ಬರುವದು.

* * * *

ಇರಲಿ. ಸಂಪಾದಕರಿಗೆ ಮೊದಲನೇ ಸಂಚಿಕೆಯಲ್ಲಿ ಆತ್ಮಗತವನ್ನು ಬರೆಯುವ ಅಧಿಕಾರವಿದ್ದಂತೆ, 'ಬಾರುಕೋಲ'ನ ಸಂಪಾದಕನಾದ (?) ನಾನು ನನ್ನ ಆತ್ಮಗತವನ್ನು ಬರೆದಿರುವೆನು. ಆ ನನಗೆ ಕೊಡಲ್ಪಟ್ಟ ಕನ್ನಡಿಗನಲ್ಲಿಯ ಸ್ಥಳವನ್ನು ಆತ್ಮಗತದಲ್ಲಿಯೇ ವ್ಯಯಿಸಿದೆನು. ಪ್ರತಿಸಾರೆಯೂ ಎರಡು ಅಂಕಣಗಳಿಗಿಂತ (ಕಾಲಮ್ಸ್) ಹೆಚ್ಚು ಸ್ಥಳವನ್ನು ನಾನು ತೆಗೆದುಕೊಳ್ಳಬಾರದೆಂದು ಸಂಪಾದಕರ ಅಪ್ಪಣೆಯಿದೆ. ಆದ್ದರಿಂದ ಈ ಸಾರೆ 'ಬಾರುಕೋಲಿ'ನ ಹೊಡೆತಕ್ಕೆ ಮಾರ್ಗವಿಲ್ಲ. ಹೋಗಿಬರುವೆನು. ಮುಂದಿನಸಾರೆ ನಿಮ್ಮ ಭೆಟ್ಟಿ.

ಕರ್ನಾಟಕ ಸಮಾಜದ ಕುಂದು ಕೊರತೆಗಳ ವಿರೋಧಿಯಾದ

ತಮ್ಮ

ಚೇಳಿನಕೊಂಡಪ್ಪ.

ವರ್ತಮಾನಸಾರ.

ಇಹವೃತ್ತ

ಚೈತ್ರಮಾಸಾರಂಭವೆಂದರೆ ವ್ಯಾಪಾರದ ಪಡಿಪೂಳಿಯಾದ ಈ ಬಾಗಲಕೋಟೆಯ ಪೇಟೆಯಲ್ಲಿ ಉಸುರಾಡಿಸಲು ಸಹ ಅವಕಾಶ ವಿರದಂತೆ ವ್ಯವಹಾರಗಳು ನಡೆಬರಬೇಕು. ಆದರೆ ಈ ವರುಷವೂ ಮಳೆಯ ಅಭಾವದ ಮೂಲಕ ವ್ಯಾಪಾರದಲ್ಲಿ ಉತ್ಸಾಹವೇಯಿಲ್ಲ. ಈ ಊರಲ್ಲಿ ರೋಗಾದಿಕೆಸೂ ಇಲ್ಲ.

ವೇ. ನಾಗಸಂಪಿಗೆ ರಾಮಾಚಾರ್ಯರು ಮಾಡಿದ ಸೋಮ ಯಾಗವು ಬಹು ವಿಜೃಂಭಣೆಯಿಂದ ಫಾಲ್ಗುಣ ವದ್ಯ ೧೪ ದಿನ ಕೊನೆಗಂಡಿತು. ದಿನಾಲು ೧೪ ೬ ಸಾವಿರ ಜನರ ಭೋಜನ ನಡೆಯುತ್ತಿತ್ತು. ಅವಭೃಥಸ್ನಾನದ ದಿನ ಊರಲ್ಲಿಯ ಮೆರವಣಿಗೆಯು ಮತ್ತು ನದಿಯಲ್ಲಿಯ ಸ್ನಾನದ ನೋಟಗಳು ನೋಡುವಂತಿದ್ದವು!

ವಿಜಾಪೂರ ಜಿಲ್ಹಾ ಪಂಚಾಯತಿಗೆ ಈ ಸಾರೆ ಗುಲಗಲಿಯ ಉತ್ಸಾಹೀ ತರುಣರು ತಮ್ಮಲ್ಲಿ ನರೆವೇಲನವೆ ಕೆಂದು ಮಾಡಿದ್ದಾರೆ. ಹಳ್ಳಿಯ ಊರಾದರೂ, ಅಲ್ಲಿಯ ಸುತ್ತುವಣ ಸ್ಥಳಗಳಲ್ಲಿ ೧೦೦೦ ಜನ ನೂಲುವ ಸದಸ್ಯರನ್ನು ಕೂಡಿಸಿ ಕೊಡುವೆವೆಂದೂ, ಇದಕ್ಕೆ ಪ್ರತಿಫಲವೆಂದು ಮಹಾತ್ಮಾ ಗಾಂಧಿ ಯವರು ಈ ಪಂಚಾಯತಿಗೆ ಬರಬೇಕೆಂದೂ ಗುಲಗಲಿಯ ಜನರ ಆಗ್ರಹವಿದೆ. ೧೦೦೦ ಜನ ನೂಲುವ ಸದಸ್ಯರು ದೊರೆತದ್ದಾದರೆ ಮಹಾತ್ಮರು ತಾವು ಅವಶ್ಯವಾಗಿ ಬರುವೆವೆಂಬರ್ಥದ ಪತ್ರವನ್ನು ಬರೆದಿದ್ದಾರೆ. ಸಂತೋಷದ ಸುದ್ದಿಯು!

ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳು ಇಲ್ಲಿಗೆ ಸಾಗಿದ ತೃತೀಯಾ ದಿನ ಬರತಕ್ಕವರಿದ್ದಾರೆ. ಬಾಗಲಕೋಟೆಯು ಮೈಸ್ನವಜ್ರಾಸ್ತನಾರ ಗಂಡುಮೆಟ್ಟಿನ ಸ್ಥಳವು. ಮಠದ ಕಲಹಗಳಂತೂ ಮಠ ಮಠಗಳಲ್ಲಿ ನಡೆಗೇಯಿವೆ. ಬಾಗಲಕೋಟೆಯಲ್ಲಿ ಯಾವ ಕಾಲಕ್ಕೆ ಎಂಥ ದುಮೆಂದ್ರಿಗಳು ಬಿಡಲ್ಪಡುವವೊ ನೋಡಬೇಕು. ಶಿಷ್ಯರಿಗೆಲ್ಲ ಆದರ್ಶಭೂತರಾಗಿರುವ ಎರಡು ಮಠಾಧಿಪರು ತಮ್ಮ ತಮ್ಮಲ್ಲಿಯೇ, ಅಶಿಕ್ಷಿತ ಜನಸಾಮಾನ್ಯರಂತೆ ಜಗಳಾಡುವದನ್ನು ಬಿಡದಿದ್ದರೆ, ಬರ ಬರುತ್ತ ಶಿಷ್ಯವೃಂದದ ಆದರಭಾವವು ಕಡಿಮೆಯಾಗುತ್ತ ಹೋಗುವದೆಂಬದು ಜ್ಞಾನವಂತರಾದ ಎಲ್ಲ ಮಠಗಳ ಶ್ರೀಗಳವರಿಗೆ ತಿಳಿಯದಿರುವದು ಸೋಜಿಗವು! ಕಲಿಯುಗದ ಮಹಾತ್ಮೆಯೆಂದೆನ್ನಬೇಕು!!

ಇಲ್ಲಿ ಈಗ್ಗೆ ೧॥ ತಿಂಗಳದಿಂದ ನಾಟಕಗಳನ್ನಾಡುತ್ತಿದ್ದ ದತ್ತಾತ್ರೇಯ ನಾಟಕ ಮಂಡಳಿದವರು ಮೊನ್ನಿನ ಸೋಮವಾರದಿನ ಬೆಳಗಾವಿಗೆ ಹೋದರು. ಕಂಪನಿಯು ಇಲ್ಲಿ ಅತಿಶಯ ಲೋಕಪ್ರಿಯವಾಗಿತ್ತು. ಹೊರಡುವ ಮುನ್ನಾದಿನ, ಅತಿಶಯ ಒತ್ತಾಯದಿಂದ ಇಲ್ಲಿಯ ರಸಿಕರು ಪುನಃ ಪಟ್ಟಾಭಿಷೇಕ ನಾಟಕವನ್ನು ಆಡಿಸಿಕೊಂಡರು! ಕರ್ನಾಟಕದಲ್ಲಿ ಹೋದಹೋದಲ್ಲಿ ಹೀಗೇ ಲೋಕಪ್ರಿಯವನ್ನು ಹೊಂದಲಿ!

ಕರ್ನಾಟಕ.

ಮುಂಬೈ ಕರ್ನಾಟಕ

ಇನಾಮುದಾರರು ಅಸಹಕಾರ ಚಳವಳಿಯಲ್ಲಿ ಭಾಗವಹಿಸಿದರೆಂಬ ಅಪರಾಧದಿಂದ ಮುಂಬೈ ಸರಕಾರದವರು ನಾಲ್ಕು ಜನ ಇನಾಮುದಾರರ ಇನಾಮುಗಳನ್ನು ರದ್ದ ಮಾಡಿರುವರು. ಮುಂಬೈ ಇಲಾಖೆಯಲ್ಲಿಯ ನಾಲ್ಕು ಜನರಲ್ಲಿ ಸಾತಾರೆಯ ಶ್ರೀಪಾದ ವಿಷ್ಣು ಪಂಡಿತ ಇವರನ್ನು ಬಿಟ್ಟು ಉಳಿದ ಮೂವರು ಕನ್ನಡಿಗರೆ! ಇದು ಕನ್ನಡಿಗರಿಗೆ ಅಭಿಮಾನದ ಸಂಗತಿ. ಆ ಮೂವರಾರೆಂದರೆ; (೧)ರಂಗರಾವ ತಿಳಗೂಳ ವಿಜಾಪೂರ. (೨)ನರಸಿಂಗರಾವ ದೇಸಾಯಿ ಹುನಗುಂದ (೩)ವಿಶ್ವಂಭರರಾವ ದೇಶಪಾಂಡೇ, ಬೆಳಗಾಂವಿ

ಮುಂಬೈ ಲೆಜಿಸ್ಲೇಟೀವ್ಹ ಕೌನ್ಸಿಲ್ಲಿನಲ್ಲಿ ಶ್ರೀ ಜಂಬಳೀಯವರು ಕರ್ನಾಟಕಕ್ಕೆ ಸ್ವತಂತ್ರವಾದ ಪ್ರಾಂತಿಕ ಸರಕಾರವಿರಬೇಕೆಂಬ ಠರಾವನ್ನು, ಕಾರವಾರದ ಬದಲು ಹುಬ್ಬಳ್ಳಿಯಲ್ಲಿಯೇ ಜಿಲ್ಹಾ ಕೋರ್ಟ ಇರಬೇಕೆಂಬದಾಗಿಯೂ ಠರಾವು ತರತಕ್ಕವರಿದ್ದಾರೆ.

ಕಾನಡಾ ಜಿಲ್ಲೆಯ ಜನಗಳ ಕಷ್ಟನಿವಾರಣೆಗಾಗಿ ಒಂದು ಚರ್ಚಾ ಮಂಡಳವನ್ನು ಮುಂಬಯಿ ಸರಕಾರದವರು ನೇಮಿಸಿರುವರಷ್ಟೆ? ಅದರಲ್ಲೊಬ್ಬ ಸಭಾಸದರಾದ ಶ್ರೀ ಕರ್ನಾಡ ಸದಾಶಿವರಾಯರು ಜಿಲ್ಹೆಯಲ್ಲಿಯ ಎಲ್ಲ ತಾಲೂಕು ಮತ್ತು ಪೇಟೆಗಳ ಜನರು ತಮ್ಮ ತಮ್ಮ ಸ್ಥಳಗಳಲ್ಲಿ ಸಭೆ ಸೇರಿ ಕುಂದುಕೊರತೆಗಳ ಪಟ್ಟಿಯನ್ನು ತಯಾರಿಸಿ ಅದರ ಒಂದು ಪ್ರತಿಯನ್ನು ಮಂಡಳದ ಅಧ್ಯಕ್ಷರಿಗೆ ಕಳಿಸಲು ವಿನಂತಿ ಮಾಡಿದ್ದಾರೆ ಅದರಂತೆ ಆ ಆ ತಾಲೂಕಿನ ಪ್ರಮುಖರು ಯಾದಿಯನ್ನಂತೂ ಕಳಿಸಬೇಕು ಮುಂದೆ ಇದರ ಚರ್ಚೆಯಿಂದ ಯಾವ ಪ್ರಯೋಜನವಾಗುವದೆಂಬುವದು ತಾನೇ ಗೊತ್ತಾಗುವದು!

ಮದ್ರಾಸ ಕರ್ನಾಟಕ.

ಉಡುಪಿಯ ಸತ್ಯಾಗ್ರಹೀ ಪತ್ರಿಕೆಯವರು ಈ ವರುಷದಿಂದ ಜಾಹೀರಾತುಗಳನ್ನು ಪ್ರಸಿದ್ಧಪಡಿಸುವದನ್ನು ನಿಲ್ಲಿಸಿದ್ದಾರೆ ಕೇವಲ ವಾಚಕರ ಉದಾರ ಆಶ್ರಯದ ಮೇಲೆಯೇ ಅದರ ಅವಲಂಬ. ಕನ್ನಡಿಗರು ಇದನ್ನು ಲಕ್ಷ್ಯದಲ್ಲಿಟ್ಟು, ಕೂಡಲೇ ಅದಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಬೇಕು

ನಿಜಾಂ ಕರ್ನಾಟಕ

ಈ ತಿಂಗಳ ಪ್ರಾರಂಭದಲ್ಲಿ ಗುಲ್ಬರ್ಗಾದೊಳಗೆ ಪುನಃ ಹಿಂದು ಮುಸಲ್ಮಾನರ ದಂಗೆಯಾಯಿತು. ನೂರಾರು ಜನರು ಗಾಯಗೊಂಡರು. ಮನೆ ಮಠಗಳು ಸುಡಲ್ಪಟ್ಟವು. ಸರಕಾರದವರು ದೊಂಬಿಯ ಕಾರಣವನ್ನು ವಿಚಾರಿಸಲು ಕಮೀಟಿಯನ್ನು ನೇಮಿಸಿದ್ದಾರೆ. ಮುಸಲ್ಮಾನರು ಗುಡಿಯನ್ನು ನಾಶಗೊಳಿಸಿದರೆಂದು, ಈ ಕಾರಣಕ್ಕಾಗಿ ಕೆಲವು ಜನ ಹಿಂದುಗಳು ಬಂದಿಯಲ್ಲಿರಿಸಲ್ಪಟ್ಟಿರುವರೆಂದೂ, ಸುದ್ದಿಯು ಮರಾಠಾ ಪತ್ರದಲ್ಲಿ ಪ್ರಸಿದ್ಧವಾಗಿದೆ.

ಮೈಸೂರ ಕರ್ನಾಟಕ

ಬೆಂಗಳೂರಿನಲ್ಲಿ ವಿಶ್ರಾಂತಿಯನ್ನು ಪಡೆಯುತ್ತಲಿದ್ದ ಶ್ರೀ ಶ್ರೀನಿವಾಸಶಾಸ್ತ್ರಿಗಳ ಆರೋಗ್ಯವು ಸುಧಾರಿಸಿದ್ದು ಈಗ್ಗೆ ಬೇಸಿಗೆಯ ನಿಮಿತ್ತವಾಗಿ ಅಲ್ಲಿಂದ ಮದ್ರಾಸಕ್ಕೆ ೨೧ ನೇ ತಾ ದಿನ ಹೋದರು.

ಬೆಂಗಳೂರಿನಲ್ಲಿ ಇದೇ ತಿಂಗಳ ೧೪ ನೇ ತಾರೀಖಿನಲ್ಲಿ ಆಯುರ್ವೇದೀಯ ವೈದ್ಯಕೀಯ ಪರಿಷತ್ತು ನೆರವೇರಿತು ೩೦೦೦ ಜನರು ಸಭೆಗೆ ಬಂದಿದ್ದರು, ಶ್ರೀಯುತ ಸಿ. ರಾಜಗೋಪಾಲಾಚಾರಿಯವರು ಅಧ್ಯಕ್ಷರಾಗಿದ್ದರು ಮಹಾರಾಜರ ಸ್ವಾಗತದ ಭಾಷಣವಾದ ಮೇಲೆ, ಪರಿಷತ್ತಿನ ಅಧ್ಯಕ್ಷರಾದ ಶ್ರೀ ಮುರುಗಪ್ಪನವರು ಬಂಗಾರದ ಗೋಪುರದ ಬೆಳ್ಳಿಯ ಕರಂಡಕವನ್ನು ಮಹಾರಾಜರಿಗೆ ಅರ್ಪಿಸಿದರು

ಕೊಡಗು ಕರ್ನಾಟಕ

ಅನೇಕ ತಾ॥ ಬುಧವಾರ ವೀರರಾಜಪೇಟೆಯಲ್ಲಿ ಶ್ರೀ ಚಿದ್ದಂಡ ಗೋಪಯ್ಯನವರು ಒಂದು ಖಾದೀಭಂಡಾರವನ್ನು ತೆರೆದರು.

ಹಿಂದುಸ್ಥಾನ.

ಪಂಜಾಬಿನ ಲೋಕಲ್ ಬೋರ್ಡಿನಿಂದ ಸ್ಥಾಪಿತವಾದ ಡಿಸ್ಟ್ರಿಕ್ಟ ಬೋರ್ಡಿನಲ್ಲಿ ೧೨ ಜನರೊಳಗೆ ೧೦ ಜನರು ರಾಷ್ಟ್ರೀಯ ಪಕ್ಷದವರೇ ಚುನಾಯಿಸಲ್ಪಟ್ಟಿದ್ದಾರೆ. ಸರಕಾರ ಪಕ್ಷದವರು ಎಷ್ಟು ಪ್ರಯತ್ನ ಪಟ್ಟರೂ ಚುನಾಯಿಸಲ್ಪಡಲಿಲ್ಲ

ಬರುವ ರಾಷ್ಟ್ರೀಯ ವಾರದೊಳಗೆ ಮುಂಬೈ ಪಟ್ಟಣದಲ್ಲಿ ಅಖಿಲ ಕಾಂಗ್ರೆಸ ಕಮೀಟಿಯ ಸಭೆಯು ರಾಷ್ಟ್ರೀಯ ಔದ್ಯೋಗಿಕ ಮತ್ತು ಲಲಿತಕಲೆಗಳ ಪ್ರದರ್ಶನವು ನೆರೆಯುವದಿದೆ

ಉಪ್ಪಿನ ಮೇಲಿನ ಕರವನ್ನು ಮಣಕ್ಕೆ ೧—೪—೦ ಇರುವದನ್ನು ೧—೦—೦ ಕ್ಕೆ ಮಾಡಬೇಕಾಗಿ ದಿಲ್ಲಿಯ ಲೆಜಿಸ್ಲೇಟೀವ್ಹ ಅಸೆಂಬ್ಲಿಯಲ್ಲಿ ಸ್ವರಾಜ್ಯಪಕ್ಷದವರಿಂದ ತಂದ ಠರಾವು ೬೦ ಮತದಿಂದ ಪಾಸಾಗಿದೆ

ಮುಂಬಯಿಯ ಚೀಫ ಜಸ್ಟಿಸ್ ಶ್ರೀ ಸರ್ ನಾರಾಯಣ ಚಂದಾವರಕರ ಅವರ ಮೇಲಿನ ಸರಕಾರದವರು ತಮ್ಮ ಪಕ್ಷದ ಪುಸ್ತಕಗಳನ್ನು ಜಪ್ತ ಮಾಡಿದ್ದಾರೆ. ಅದರ ಪುಸ್ತಕವು ಇದ್ದಾಗ್ಯೂ ಅದರಲ್ಲಿ ಆಕ್ಷೇಪಾರ್ಹವಾದದ್ದೇನೂ ಇಲ್ಲವೆಂದು ಅಭಿಪ್ರಾಯ ಕೊಟ್ಟಿದ್ದಾರೆ.

ಶಿಕ್ಷೆಯು ಪುನಃಸಿದ್ಧಾರ್ಥಿಯು ಚುನಾವಣೆಗಳಾದವು ಆದರೆ ಅಲ್ಲಿ ಹಂಗಡಗಳಿದ್ದದರಿಂದ ಜಗಳಬಿಟ್ಟಾಗಿ ಕಡಿಗೆ ಒಂದು ಪಕ್ಷದವರು ಇನ್ನೊಂದು ಪಕ್ಷದವರನ್ನು ಬಡಿಗೆಯಿಂದ ಬಡಿದರಂತೆ! ಅನೇಕರು ಗಾಯ ಹೊಂದಿದ್ದಾರೆ. ಇದೆಲ್ಲೇ ಸ್ಥಾನಿಕ ಸ್ವರಾಜ್ಯವಯ್ಯಾ! ಬಾಗಲಕೋಟೆಯಲ್ಲಿ ಹೀಗೇನು ಆಗಲಿಕ್ಕಿಲ್ಲವಷ್ಟೇ?

ಮಹಾತ್ಮಾ ಗಾಂಧಿಯವರು ಕನ್ಯಾಕುಮಾರಿಗೆ ಹೋದಾಗ್ಗೆ ಅಲ್ಲಿಯ ಸುಪ್ರಸಿದ್ಧ ದೇವಾಲಯಕ್ಕೆ ಹೋಗಬೇಕೆಂದಿದ್ದರು ಆದರೆ ಪರದೇಶಕ್ಕೆ ಹೋಗಿಬಂದಂಥ ಜನರಿಗೆ ದೇವಾಲಯದಲ್ಲಿ ಪ್ರವೇಶವಿಲ್ಲವೆಂದು ಕೇಳಿದು ಬಂದುಕೊಡಲೇ ನಾನು ಅಲ್ಲಿಗೆ ಹೋಗುವದಿಲ್ಲವೆಂದು ಆದರಪೂರ್ವಕವಾಗಿ ಹೇಳಿ ಅಲ್ಲಿಯ ಹಿಂದೂಜನರ ಕಟ್ಟಳೆಗೆ ಮನ್ನಣೆಯನ್ನಿತ್ತರು!

ಪರದೇಶ.

ಉತ್ತರ ಅಮೇರಿಕದ ಕಾನಡಾ ರಾಜ್ಯದ ಜಮೀನದಾರರು ಜೇನು ನೊಣಗಳನ್ನು ಸಾಕುವ ವೃತ್ತಿಯನ್ನು ಉಪಜೀವನಕ್ಕಾಗಿ ಇಟ್ಟುಕೊಂಡಿರುವರು. ೧೯೨೪ ನೆ ಇಸವಿಯಲ್ಲಿ ಇವರು ೫,೧೭,೧೩೮ ಪೌಂಡುಗಳಷ್ಟು ಜೇನು ತುಪ್ಪವನ್ನು ಯುರೋಪ ಖಂಡಕ್ಕೆ ರವಾನಿಸಿದ್ದರು. ಈಗ ಇದರ ವ್ಯವಸಾಯವು ಇನ್ನೂ ಅಭಿವೃದ್ಧಿಯಾಗುತ್ತಿರುವದು. ಈ ವರ್ಷ ಒಂದರಲ್ಲೇ ಕಾನಡಾ ರೈತರು ಒಂದುವರೆ ಕೋಟಿ ಪೌಂಡುಗಳಷ್ಟು ಜೇನುತುಪ್ಪಗಳನ್ನು ಮಾಡಿ ಅವರಲ್ಲಿ ಸುಮಾರು ೯೦ ಲಕ್ಷ ಪೌಂಡುಗಳಷ್ಟು ತುಪ್ಪವನ್ನು ಯುರೋಪಿಗೆ ರಫ್ತು ಮಾಡುವರೆಂದು ಅಂದಾಜಾಗಿದೆ.

ಕಳೆದ ಘೋರ ಯುದ್ಧವು ಮುಕ್ತಾಯವಾದ ಮೇಲೆ ಜರ್ಮನಿಯವರು ಉಳಿದ ಯುದ್ಧಸಾಮಗ್ರಿಗಳನ್ನೆಲ್ಲ ಸಂಪೂರ್ಣವಾಗಿ ನಾಶಪಡಿಸಬೇಕೆಂದು ಗೊತ್ತಾಗಿತ್ತು. ಅದರಂತೆ ಜರ್ಮನಿಯವರು ಎಲ್ಲವನ್ನು ನಿಶ್ಶೇಷವಾಗಿ ನಾಶಮಾಡಿರುವ ವಿಚಾರದಲ್ಲಿ ಮಿತ್ರಮಂಡಲಿಯವರಲ್ಲಿ ಅಗಿನಿಂದಲೂ ಸಂದೇಹವಿದ್ದಿತು. ಇದಕ್ಕನುಸಾರವಾಗಿ ಬರ್ಲಿನ ಬಳಿ ನೆಲದಲ್ಲಿ ೧೨,೦೦೦ ಟನ್ನುಗಳಷ್ಟು ವಿಷವಾಯುವನ್ನು ಬಚ್ಚಿಟ್ಟದು ಈಗತಾನೇ ಹೊರಬಿದ್ದಿದೆ. ಈ ವಿಚಾರವನ್ನು ಮಿತ್ರಮಂಡಲಿಯವರು ಜರ್ಮನ್ ಸರಕಾರದವರ ಅವಗಾಹನಕ್ಕೆ ತಂದು ಬಚ್ಚಿಟ್ಟ ಅಪರಾಧಿಗಳನ್ನು ಶಿಕ್ಷಿಸಬೇಕೆಂದು ಕೇಳಿರುವರು.

ಕಳೆದ ವರ್ಷ ಇಂಗ್ಲಂಡಿನಲ್ಲಿ ನಡೆದ ಬ್ರಿಟಿಷ ಚಕ್ರಾಧಿಪತ್ಯದ ಪ್ರದರ್ಶನದಲ್ಲಿ ಅಸ್ಟ್ರೇಲಿಯಾದಲ್ಲಿ ತಯಾರಾಗುವ ಒಣಹಣ್ಣುಗಳಿಗೆ ಗಿರಾಕಿ ಹೆಚ್ಚಾಗಿದ್ದನ್ನು ನೋಡಿ ಅಸ್ಟ್ರೇಲಿಯಾ ಸರಕಾರದವರು ಹಣ್ಣುಗಳ ಬೆಳೆಯನ್ನು ಇನ್ನೂ ಅಭಿವೃದ್ಧಿಪಡಿಸಬೇಕೆಂದು ಸುಮಾರು ೫೦೦೦ ಮಂದಿ ಜಮೀನದಾರರಿಗೆ ೩೦ ಲಕ್ಷ ರೂಪಾಯಿಗಳ ಸಹಾಯವನ್ನು ಮಾಡುವವರಾಗಿರುವರು. ತಯಾರಾದ ಒಣಹಣ್ಣಿನಲ್ಲಿ ಸುಮಾರು ಕಾಲುಭಾಗವನ್ನು ಆ ದೇಶದ ಉಪಯೋಗಕ್ಕೆ ಇಟ್ಟುಕೊಂಡು ಉಳಿದುದನ್ನು ಸರಕಾರದವರು ಮುಖಾಂತರ ಮಾರಬೇಕಾಗುವದು. ಬಂದ ಹಣದಲ್ಲಿ ಸರಕಾರದವರು ತಮ್ಮ ಮುಂಗಡ ಹಣ ಮುರಿಕೊಂಡು ಉಳಿದ ಹಣವನ್ನು ರೈತರಿಗೆ ಕೊಡುವರು.

ಸೋಜಿಗದ ಸುದ್ದಿಗಳು.

ಮೋಟಾರುಗಳು ದನಗಳಂತೆ ನಡೆಯುವಿಕೆ.

ಮೋಟಾರ್ ಗಾಡಿಗಳ ಚಕ್ರಗಳಿಗೆ ಬದಲಾಗಿ ಪಶುಪ್ರಾಣಿಗಳಂತೆ ಕಾಲುಗಳನ್ನು ಜೋಡಿಸಿರುವದು ಹೊಸ ವಿಶೇಷವಾಗಿದೆ. ಕಾಲುಗಳು ತಲಾ ೧೦ ಅಡಿ ಉದ್ದವಿದ್ದು, ೧೦ ಟನ್‌ಗಳಷ್ಟು ಹೊರೆಯನ್ನಾದರೂ ವೇಗವಾಗಿ ಸಾಗಿಸಲು ಅನುಕೂಲವಿರುವದೆಂದು ಪ್ರಕಟವಾಗಿದೆ.

ಸೋಜಿಗದ ಗಿಡವು

ದಕ್ಷಿಣ ಅಮೇರಿಕದ ಈಕ್ವೆಡೇಶದಲ್ಲಿ ಒಂದು ಬಗೆಯ ಗಿಡವು ಕಂಡುಹಿಡಿಯಲ್ಪಟ್ಟಿದೆ ಇದರ ಎಲೆಗಳಿಂದ ಸಕ್ಕರೆಗೆ ೩೦೦ ರಷ್ಟು ಅಧಿಕವಾದ ಸಿಹಿ ಜಿನ್ನಸು ದೊರೆಯುವದೆಂದು ಗೊತ್ತಾಗುತ್ತದೆ. ಎಲೆಗಳನ್ನು ಒಣಗಿಸಿ, ಪುಡಿಮಾಡಿ, ಸಿಹಿ ಮಾಡಬೇಕಾದ ಪದಾರ್ಥಗಳಿಗೆ ಉಪಯೋಗಿಸಬಹುದು. ಹಸೀ ಎಲೆಗಳನ್ನು ನೀರಿನಲ್ಲಿ ತೊಯಿಸಿದರೆ, ನೀರು ಸಿಹಿಯಾಗುವದು. ಇದರಿಂದ ಆದ ಸಿಹಿ ಪದಾರ್ಥಗಳು ಎಷ್ಟು ದಿನಗಳಿಟ್ಟರೂ ಹುಳಿ ಬರುವದಿಲ್ಲವಂತೆ! ಇದನ್ನು ಮಧುಮೇಹ ವ್ಯಾಧಿ ಇರುವವರು ಸ್ವೀಕರಿಸುವದರಿಂದ ಉಪಯೋಗವಾಗಬಹುದೆಂದು ಅಮೇರಿಕದ ಒಂದು ಪತ್ರದಲ್ಲಿ ಪ್ರಕಟವಾಗಿದೆ.

ಜಗತ್ತಿನಲ್ಲಿಯ ಅತಿ ದೊಡ್ಡ ಗಡಿಯಾರವು.

ಸೆಂಟ ಥೋಮಸ ಫ್ಯಾಕ್ಟರಿಯಿಂದ ಇದೇ ಒಂದು ಅತಿಶಯ ದೊಡ್ಡ ಗಡಿಯಾರವು ಹೊರಬಿದ್ದಿದೆ. ಇದು ಜರಸೀ ಪಟ್ಟಣದಲ್ಲಿರುವ ಕೋಲಗೇಟ ಗಡಿಯಾರದ ಸ್ಥಾನವನ್ನು ಆಕ್ರಮಿಸಿದೆ. ಈ ಗಡಿಯಾರದ ವ್ಯಾಸವು ೫೦ ಫೂಟ ಇದೆ. ಮಿನಿಟಿನ ಮುಳ್ಳು ೨೦ ಫೂಟ ೩ ಇಂಚು ಉದ್ದವಾಗಿದೆ. ಉದ್ದಳತೆಯು ಸರ್ವಸಾಧಾರಣ ಪಟ್ಟಣದರಸ್ತೆಗೆ ಸರಿಯಾಗಿದೆ. ಇದರ ಮಧ್ಯಭಾಗದ ಗಡ್ಡೆಯು ೩ ಫೂಟ ೬ ಇಂಚು ಅಗಲಾಗಿದೆ. ಇದರಿಂದ ಮುಳ್ಳಿಗೆ ಸರಿದಾಡುವ ೫೩ ಚದರ ಫೂಟ ಸ್ಥಳವು ಸಿಕ್ಕಿರುವದು. ರಾತ್ರಿಯಲ್ಲಿ ಕೂಡಬಹುದೂರದಿಂದ ಕಾಣಿಸುವಂತೆ, ಇದರ ಹೊರಬಾಜುವಿನಲ್ಲಿ ೧೫೦ ವಿದ್ಯುಚ್ಛಕ್ತಿಯ ಬಲ್ಬುಗಳು ಇರುತ್ತವೆ.

ಬೀಜಬಿತ್ತಿದ ಮಾರುದಿನವೇ ಫಲವು.

ಡಾಕ್ಟರ ಅರ್ನೆಸ್ಟ ಫೊಲಸ್ಕಿ ಇವರು ಅನ್ನುವದೇನಂದರೆ, ಭೂಮಿಗೆ ರಕ್ತಮಿಶ್ರಿತವಾದ ರಸಲೇಪನದಿಂದ, ಅನುಕೂಲಪರಿಸ್ಥಿತಿಯಲ್ಲಿ, ೪೮ ತಾಸುಗಳಲ್ಲಿಯೇ, ೫ ಇಂಚಿನಷ್ಟು ಉದ್ದವಾದ ಮೊಳಕೆಯನ್ನು ನಾನು ಸ್ವತಃ ನೋಡಿದ್ದೆ.

ರಸಮಿಶ್ರಿತವಾದ ನೆಲದಲ್ಲಿ ಮುಂಜಾವಿನಲ್ಲಿ ಬಿತ್ತಿದ ಬೀಜವು ಅದೇ ರಾತ್ರಿಯಲ್ಲಿಯೇ ಪುಷ್ಪಪರಿಷ್ಕೃತವಾದ ಬಳ್ಳಿಗಳಾಗುವವು. ಅದೇ ಬಳ್ಳಿಗಳಲ್ಲಿ ಆ ಮಾರುದಿನವೇ ಹಣ್ಣಾದ ಫಲಗಳು ದೃಗ್ಗೋಚರವಾಗುವವು. ಆದರೆ ಜಾದುಗಾರರಿಗೆ ಈ ವಿಷಯವು ಆಶ್ಚರ್ಯವಾದದ್ದಲ್ಲ ಹಿಂದೀ ಜಾದುಗಾರನು ಒಂದೇ ತಾಸಿನಲ್ಲಿ ಯಾವತರಹದ ರಸದ ಸಹಾಯವಿಲ್ಲದೇ ಗಿಡವನ್ನು ಹುಟ್ಟಿಸಿ ಹಣ್ಣಾದ ಮಾವುಗಳನ್ನು ಕೊಡಬಲ್ಲನು.

ಆದರೆ ಡಾಕ್ಟರ ಫೊಲಸ್ಕಿ ಇವರ ರಸದಲ್ಲಿ ಈ ಜಾದುಗಾರರಕಿಂತ ಎಷ್ಟೋ ತಥ್ಯಾಂಶವಿದೆ. ಈ ರಸಮಿಶ್ರಣದಿಂದ ಬೆಳೆಗಳ ಬೆಳವಣಿಗೆಯಲ್ಲಿ ಎಷ್ಟೋ ಸುಧಾರಣೆಯಾಗಬಹುದು. ಆದರೆ ಡಾಕ್ಟರರವರು ಇದಕ್ಕೂ ಮುಂದೆ ಹೋಗಿದ್ದಾರೆ ಅವರು ಭಾವಿಸುವದೇನಂದರೆ— ಒಕ್ಕಲಿಗನು ಈ ದಿನ ಬೀಜವನ್ನು ಬಿತ್ತಿ ಮಾರುದಿನವೇ ಬೆಳೆಯನ್ನು ತೆಗೆದುಕೊಳ್ಳಬಹುದು. ಸೇವಕನು ಒಂದು ಸಣ್ಣ ಕುದುರೆಯನ್ನು ಈ ರಸದಿಂದ ಲೇಪಿಸಿ ಮಾರುದಿನವೇ ಅವನ್ನು ನೇಗಿಲಕ್ಕೆ ಹೂಡಬಹುದು. ಹಾಗೂ ಮನೆಯ ಯಜಮಾನಗಿತ್ತಿಯು ಬೆಳಗಾದದಲ್ಲಿ ಒಂದು ತತ್ತಿಯನ್ನು ಕೊಂಡು ಅದನ್ನು ಈ ರಸದಿಂದ ಲೇಪಿಸಿ, ಒಂದು ರಾತ್ರಿಯಲ್ಲಿಟ್ಟು ಆ ಮಾರುದಿನವೇ ತಯಾರಾದ ಆ ಮೀನವನ್ನು ಮುಂಜಾವಿನ ಫಳಾರಕ್ಕೆ ನೀಡಬಹುದು ಇತ್ಯಾದಿ. ಮಾನವರಿಗೆ ಈ ರಸಲೇಪನದಿಂದಾಗುವ ಪರಿಣಾಮವನ್ನು ಕುರಿತು ನಮೂದಿಸಿದ ಪ್ರೊಫೆಸರರು ಬರೆದಿಲ್ಲ. ಆದರೆ ಮನುಷ್ಯರಿಗೆ ಇದರ ಪ್ರಯೋಜನವಾದರೆ ಹುಡುಗರು ಪಾಲಕರ ಹಾಗು ಗುರುಗಳ ಕಾಟದಿಂದ ಮುಕ್ತರಾಗಲು ಒಳ್ಳೇಸಂಧಿಯು ದೊರೆಕಿತೆಂದೆನ್ನಬಹುದು! ಆ ದಿನವು ಬರಬಹುದೇ?

ಬಾಗಲಕೋಟೆಯ ಪೇಟೆಯ ಧಾರಣೆ.

ತಾ॥ ೨೪-೩-೨೫.

ಮುಂಗಾರಿಜೋಳ	೯॥	ಬಿಳಿಜೋಳ	೧೦
ಸಜ್ಜೆ	೧೦	ನವಣಿ	೧೦
ಹುರಳಿ	೧೨	ಗೋದಿ	[illegible]
ಕುಸಬಿ	೧೧	ಅಗಸಿ	[illegible]
ಹೆಸರು	೬॥; ೭	ತೊಗರಿ (ಜವಾರಿ)	೯॥; ೧೦
ಕಡ್ಲಿ	೮	ಕಡ್ಲಿಬ್ಯಾಳಿ	೬॥; ೭
ಅಲಸಂದಿ	೭	ಶಾವೆಕ್ಕಿ	೭
ಯಳ್ಳು	೫॥	ಜವಾರಿ ಹತ್ತಿ ೮ ಮಣಕ್ಕೆ	[illegible]
ಮೊಣಿಶಿವನಾಯ ೮ ಮಣಕ್ಕೆ	೪೮; ೫೦	ಹೆಂಟಿಬೆಲ್ಲ ೫ ಮಣಕ್ಕೆ	[illegible]
ಅರಳೆ (ಜೇನು)	೧೬೫	ಅರಳೆ (ಹಾಲಿಂದು)	೧೬೦
ಅಷ್ಲಾದ ಹತ್ತಿ	೩೪; ೩೫॥	ಹತ್ತಿ	೩೪

ಅಕ್ಕಿ ೪॥ ಯಿಂದ ೫॥ ವರೆಗೆ ಈ ಪ್ರ[illegible]ಇರುತ್ತದೆ.

ತಮ್ಮಣ್ಣಪ್ಪಾ ತಿಮ್ಮಣ್ಣಪ್ಪಾ ವಿಜಾಪೂರ ಇವರಿಂದ.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು. ಪ್ರತಿ ೪೦೦೦.

ಕನ್ನಡ ಕೇಸರಿ.

([illegible])

सर्वं परवशं दुःखं सर्वमात्मवशं सुखम् । — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ } ಬಾಗಲಕೋಟೆ ಶುಕ್ರವಾರ ಮಿತಿ ಚೈತ್ರ ಶುದ್ಧ ೧೦ ಶಕೆ ೧೮೪೭. ತಾ॥ ೩-೪-೧೯೨೫. { ಸಂಚಿಕೆ ೨

ಸಂಪಾದಕರ ಭೂಮಿ.

ಎದ್ದರೆ ಕನ್ನಡ ಕುಳಿತರೆ ಕನ್ನಡ ನುಡಿದರೆ ಕನ್ನಡವು ।
ಹೃದಯವು ಕನ್ನಡ ಉದಯವು ಕನ್ನಡ- ಕನ್ನಡ- ಕನ್ನಡವು ।
ಕನಸು ಮನಸಿನೊಳು ಕನ್ನಡ ಕನ್ನಡ ಸಿದ್ಧಿಯು ಕನ್ನಡವು ।
ತನುವು ಕನ್ನಡವು ಜೀವವು ಕನ್ನಡ ಎಲ್ಲವು ಕನ್ನಡವು ।

— [illegible] ಕೃತಿ

ರಾಮನಾಮ।— ಉತ್ಕಟವಾದ ಭಕ್ತಿ ಭಾವನೆಯಿಂದ ರಾಮ 'ರಾಮ'ವೆಂದು ರಾಮ ಭಜನೆಯಲ್ಲಿ ನಿಮಗ್ನನಾದ ಭಕ್ತನಿಗೆ ಮಾತ್ರ ಆ ನಾಮದ ಮಹಾತ್ಮೆಯು ಗೊತ್ತು! ಭಕ್ತನನ್ನು ಆನಂದ ಸಮುದ್ರದಲ್ಲಿ ಮುಳುಗಿಸಿದಂಥ ಆ ರಾಮನಾಮದ ಸ್ವಾರಸ್ಯವನ್ನು ನಾಸ್ತಿಕನೆಂತು ತಿಳಿಯಬಲ್ಲನು ? ಭಕ್ತನಿಗೆ ಏನು ನೋಡಿದರೂ ಎಲ್ಲಿ ನೋಡಿದರೂ ರಾಮನು! ಏನು ಮಾಡಿದರೂ ರಾಮನಿಗೋಸ್ಕರ! ಆದರೆ ಈ ಭಕ್ತನ ಅಂತರಂಗವನ್ನರಿಯದೇ ಶುಷ್ಕ ದೃಷ್ಟಿಯಿಂದ ಹೊರಗಿನಿಂದ ನೋಡುವ ಆ ನಾಸ್ತಿಕನಿಗೆ ಭಕ್ತನ ಕೃತಿಗಳೆಲ್ಲ ವಿಚಿತ್ರವಾಗಿಯೂ ಹಾಸ್ಯಾಸ್ಪದವಾಗಿಯೂ ಕಾಣುವವು. ಆಸ್ತಿಕನಿಗೆ ಮಾತ್ರ ಅದನ್ನು ನೋಡುವದರಿಂದ ಅವನ ಭಕ್ತಿಯು ಇಮ್ಮಡಿಯಾಗುವದು. ಇನ್ನು ಆಸ್ತಿಕ್ಯ ನಾಸ್ತಿಕ್ಯಗಳನ್ನರಿಯದ ಮನುಷ್ಯನೋರ್ವನು ಈ ಭಕ್ತನನ್ನು ಕಂಡರೆ ಹೀಗೆ ರಾಮಭಜನೆ ಮಾಡುವದರಲ್ಲಿ ಏನಾದರೂ ಸಾರಸ್ಯವಿರಬೇಕೆಂಬದನ್ನು ಆ ಭಕ್ತನ ಆಚರಣೆಯಿಂದ ತಿಳಿದುಕೊಂಡು ತಾನೂ ಆ ಮಹತ್ವವನ್ನರಿತುಕೊಳ್ಳಲು ಪ್ರಯತ್ನಿಸುವನು. ಜಿಜ್ಞಾಸಾ ವೃತ್ತಿಯು ಪ್ರಬಲವಾಗಿದ್ದವನು ಹಾಗೆ ಮಾಡದೆ ಎಂದಿಗೂ ಬಿಡನು. ಈ ಮಹತ್ವವನ್ನರಿತ ಮೇಲೆ ರಾಮಭಜನೆಯಲ್ಲಿ ಅವನ ಮನಸ್ಸು ತಾನಾಗಿಯೇ ಎರಕವಾಗುವದು. ಹೀಗೆ ಒಬ್ಬ ಭಕ್ತನಿದ್ದಲ್ಲಿ ಇಬ್ಬರಾದರು. ಇಬ್ಬರ ಸ್ಥಳದಲ್ಲಿ ನಾಲ್ವರು. ನಾಲ್ವರ ಸ್ಥಳದಲ್ಲಿ ಮತ್ತೆ ನಾಲ್ವರು. ಇದೇ ಪ್ರಕಾರವಾಗಿ ಭಕ್ತರ ಸಂಖ್ಯೆಯು ಬೆಳೆಯುವದು. ಮೊದಲಿನ ಭಕ್ತನು ಆರ ಸಲುವಾಗಿಯೂ ರಾಮ ಭಜನೆ ಮಾಡಿದವನಲ್ಲ. ಆರೂ ಅವನಿಗೆ ಹೀಗೆ ಮಾಡೆಂದು ಆಗ್ರಹ ಮಾಡಿರಲಿಲ್ಲ. ಆದರೆ ರಾಮನಲ್ಲಿರುವ ತನ್ನ ಅನನ್ಯ ಭಕ್ತಿ ವಿಶ್ವಾಸಗಳಿಗಾಗಿ ಅವನು ರಾಮನನ್ನು ಭಜಿಸಿದ್ದು ಅವನ ಭಕ್ತಿಯುಕ್ತವಾದ ಭಜನೆಯು ನಾಸ್ತಿಕನಿಗೆ ಮೌಜಿನದಾಗಿ ತೋರಿತು! ಆಸ್ತಿಕನಿಗೆ ದೇವರಲ್ಲಿಯ ವಿಶ್ವಾಸವು ದೃಢವಾಗಲು ಮಾರ್ಗವಾಯಿತು. ಆಸ್ತಿಕ ನಾಸ್ತಿಕ ಭಾವನೆಗಳಿಲ್ಲದವನಲ್ಲಿ ಆಸ್ತಿಕ್ಯ ಭಾವನೆಯನ್ನು ನೆಲೆಗೊಳಿಸಿತು.

ಕನ್ನಡನಾಮ—ರಾಮನಾಮವು ಎರಡಕ್ಷರಗಳಿಂದ ಕೂಡಿದ್ದರೆ, ಕನ್ನಡ! ನಾಮವು ಮೂರಕ್ಷರಗಳಿಂದ ಕೂಡಿದ್ದು. ದ್ವ್ಯಕ್ಷರ ಮಂತ್ರದಿಂದ ಮಾರುತಿಯು ರಾಮನನ್ನು ಸಾಕ್ಷಾತ್ಕರಿಸಿಕೊಂಡಂತೆ ಈ ತ್ರ್ಯಕ್ಷರ ಮಂತ್ರದಿಂದ ಕನ್ನಡಿಗರೆಲ್ಲ ಕನ್ನಡ ತಾಯಿಯನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ಒಂದು ಕಾಲದಲ್ಲಿ ಎಲ್ಲಿ ನೋಡಿದಲ್ಲಿ ಕನ್ನಡಕ್ಕೆ ಅನಾದರ, ಎಲ್ಲಿ ನೋಡಿದಲ್ಲಿ ಕನ್ನಡಕ್ಕೆ ನಿರ್ಭರ್ತ್ಸನ, ಎಲ್ಲಿ ನೋಡಿದಲ್ಲಿ ಕನ್ನಡದ ನಿಂದೆ! ಹೀಗೆ ಪರಿಸ್ಥಿತಿಯುಂಟಾಗಿತ್ತು! ಯಾವಾಗ್ಗೆ ಯಾವ ಜನರು ಅನಾದರದಿಂದಲೂ ನಿರ್ಭರ್ತ್ಸನೆಯಿಂದಲೂ ಕನ್ನಡವನ್ನು ತುಚ್ಛಿಸುತ್ತಿದ್ದರೋ, ಅದೇ ಜನರು ತಮಗೆ ಕನ್ನಡದ ಅಭಿಮಾನವಿದೆಯೆಂದು ಈಗ್ಗೆ ಹೇಳುತ್ತಿರುವರು! ಇದು ಯಾತರ ಮಹಿಮೆ! ಆ ಶಾಂತ ಕವಿಗಳು ಹಾಡಿ ತೋರಿಸಿದ ಕನ್ನಡ ಮಂತ್ರವನ್ನು ಕನ್ನಡನಾಡಿನ ಯುವಕರು ಒಂದೇ ಸಮನಾಗಿ ಭಜಿಸುತ್ತ ಬಂದದ್ದರ ಫಲವಲ್ಲವೇ! ಸಂಪೂರ್ಣ ಫಲವು ಇನ್ನೂ ನಮಗೆ ದೊರೆತಿಲ್ಲವಾದರೂ ಆ ಸಂಪೂರ್ಣ ಫಲವನ್ನು ನಾವು ತಿಂದೇ ತೀರುವೆವೆಂಬದು ನಮಗೆ ನಿಶ್ಚಿತವಾಗಿದೆ! ಎದ್ದರೆ ಕನ್ನಡ, ಕುಳಿತರೆ ಕನ್ನಡ. ನುಡಿದರೆ ಕನ್ನಡವು! ಅಹುದು! ಅಹುದಹುದು!! ರೋಮ ರೋಮಾಂಚಗಳಲ್ಲಿ ಕೂಡ ಕನ್ನಡವು ಕನ್ನಡದಲ್ಲಿ ಅಂಥದೊಂದು ಅಸಾಮಾನ್ಯವಾದ ಶಕ್ತಿಯಿದೆಂಬದು ಯಾರಿಗೆ ಗೊತ್ತಿಲ್ಲವೋ! ಅವರು ಅವಶ್ಯವಾಗಿ ಎದ್ದರೆ ಕನ್ನಡ ಕುಳಿತರೆ ಕನ್ನಡವೆಂಬ ಪದ್ಯವನ್ನು ಯಾವಾಗಲೂ ಪಠಿಸುತ್ತಿರಲಿ! ಪಠಿಸಬೇಕೆಂದರೆ ಗಿಳಿಯಂತೆ ಪಠಿಸುವದಲ್ಲ! ರಾಮನಾಮದಂತೆ ಪಠಿಸಬೇಕು. ಕನ್ನಡ ತಾಯಿಯನ್ನು ಸಾಕ್ಷಾತ್ಕರಿಸುವ ಇಚ್ಛೆಯಿದ್ದರೆ. ಇದನ್ನು ಭಜಿಸಲೇಬೇಕು. ಅದ್ದರಿಂದಲೇ ಎದ್ದರೆ ಕನ್ನಡ ಕುಳಿತರೆ ಕನ್ನಡ ಪದ್ಯಕ್ಕೆ ಮೇಲೆ ಮಹತ್ವದ ಸ್ಥಳವು ದೊರೆತಿದೆ.

ಆದರೆ ರಸವೆಲ್ಲಿ?— " ಮೇಲಿನ ಪದ್ಯದಲ್ಲಿ ಸ್ವಲ್ಪವಾದರೂ ರಸವಿದೆಯೋ? ನಾಲ್ಕಾರು ಶಬ್ದಗಳನ್ನು ಜೋಡಿಸಿದರೆ ಅದು ಪದ್ಯವಾಯಿತೆ? ಎದ್ದರೆ ಕನ್ನಡ ಕುಳಿತರೆ ಕನ್ನಡ, ಪದ್ಯವಂತೂ ನೀರಸವಾದದ್ದು! ಸಂಪೂರ್ಣವಾಗಿ ನೀರಸವಾದದ್ದು!! ಅದರಲ್ಲಿಯ ಶಬ್ದಗಳಲ್ಲಿ ರಸವಿಲ್ಲ! ಪದ್ಯಗಳ ರಚನೆಯಲ್ಲಿ ಕವಿತ್ವವಿಲ್ಲ. ಇಂಥ ಪದ್ಯದ ಪಠಣದಿಂದ ಕನ್ನಡ ತಾಯಿಯನ್ನು ಸಾಕ್ಷಾತ್ಕರಿಸುವದೆಂತು? " ಎಂಬದಾಗಿ ಒಬ್ಬರ ಆಕ್ಷೇಪಣೆ! ರಾಮ ನಾಮದಲ್ಲಿ ಯಾವ ರಸವಿದೆ? ಆದರೂ ರಾಮ ರಾಮ ಎಂಬದಾಗಿ ನಾವೆಲ್ಲ ಪಠಿಸುತ್ತಿರುವದು ಯಾಕೆ? ಅದರಿಂದ ಯಾವ ಕಾರ್ಯವಾಗುವದು? ರಾಮನಲ್ಲಿ ವಿಶ್ವಾಸವಿದ್ದರೆ ರಾಮನಾಮವು ರಸಭರಿತವಾದುದು. ಇಲ್ಲವಾದರೆ ನೀರಸವೆಂಬುದರಲ್ಲಿ ಸಂಶಯವಿಲ್ಲ! ಅದೇ ಪ್ರಕಾರವಾಗಿ ಕನ್ನಡದಲ್ಲಿ ವಿಶ್ವಾಸವಿದ್ದರೆ ಕನ್ನಡದ ಬಗ್ಗೆ ಅಭಿಮಾನವಿದ್ದರೆ ಎದ್ದರೆ ಕನ್ನಡ, ಕುಳಿತರೆ ಕನ್ನಡ. ಪದ್ಯದಲ್ಲಿ ರಸಭರಿತವಾದ ಭಾವನೆಗಳು ತುಂಬಿವೆಂಬದು ತಾನೇ ಗೊತ್ತಾಗುವದು. ಆದರೆ ಅಭಿಮಾನ ವಿಶ್ವಾಸಗಳಿರಬಿದ್ದರ ನಿಶ್ಚಯವಾಗಿ ನೀರಸವು! ಯಾವ ಕನ್ನಡದಲ್ಲಿ ಮಹಾ ಮಹಾ ಕವಿಗಳು ಜನಿಸುತ್ತಿರುವರೋ, ಯಾವ ಕನ್ನಡದಲ್ಲಿ ಅನ್ಯ ಭಾಷೆಯ ಸಾಹ್ಯವಿಲ್ಲದೆ ಯದೇ ಇದ್ದಂಥ ವೈದ್ಯಶಾಸ್ತ್ರ ಅಶ್ವಶಾಸ್ತ್ರ ಮೊದಲಾದ ಶಾಸ್ತ್ರೀಯ ಗ್ರಂಥಗಳು ಕೂಡ ನಾಪರಾರು ವರ್ಷಗಳ ಹಿಂದೆಯೇ [illegible]

[illegible] ವ ಕನ್ನಡವನ್ನು ಕೃತ್ರಿಮ ಮೀರದು ನವ ತಮ್ಮ ವಿಸ್ತೃತ ಬಸ್ಸಿನಿಂದ ವೃದ್ಧಿಗೊಳಿಸುವರೋ, ಯಾವ ಕನ್ನಡದ-ಕನ್ನಡ [illegible] ರಂಗದ-ಲಲಿತ ಕಲಾ ಕೌಶಲ್ಯಗಳು ಈಗ್ಗೆಯೂ ಪ್ರಬಂಧ ವೇದಿಕೆ [illegible] ಕರ್ನಾಟಕ ಸಂಗೀತದಲ್ಲಿಯೂ, ಒಂದು ಕಾಣುತ್ತಿರವವೋ [illegible] ವ ಕನ್ನಡದ ಕನ್ನಡ ದೇಶದ-ಧರ್ಮ ಸ್ಥಾಪಕರ ಮತಗಳು [illegible] ಗ [illegible] ಕನ್ನಡ ನಾಡಿನಲ್ಲಿಲ್ಲದು, ಅಖಂಡ ಭರತ ಖಂಡದಲ್ಲಿ ಸತು [illegible] ಇಂಥ ಕನ್ನಡವು ಸಿದ್ಧವೆ !

ಡಾ ಕಾಮುಲ ಸುಬ್ಬು — ಹಿಂದಕ್ಕೆ ಬಂತು ಕವಳಿ ದಾಕಾಮು [illegible] ತ [illegible] ಪ್ರಸಿದ್ಧ ನಮ್ಮ ದೇಶಂದು [illegible] ಗೊತ್ತಿದ್ದ ಮಾತು. [illegible] ಗಳ ಸನ್ಮಾನಿಸಲ್ಪಡುತ್ತಲೇ ಪ್ರತಿಯೊಬ್ಬ ರಾಷ್ಟ್ರಾಭಿಮಾನಿಯ ಆನಂದದ ಉಕ್ಕಿ ಬರುತ್ತಿದೆ. ಆದರೆ ಆ ಆನಂದದ ಹಿಂದೆಯೇ "ಇಂಥ ಶ್ರೇಷ್ಠನಿಂದ ಮೆರೆದ ಭಾರತಖಂಡದ ತೇಜಸ್ಸು ಈಗಿಲ್ಲವಲ್ಲ! ಡಾ ಕಾಮುಲ ಸುಬ್ಬುಗಳು ಇಗ್ಗೆ ನಮ್ಮಲ್ಲಿ ಹುಟ್ಟುವದಿಲ್ಲವಲ್ಲ!" ಎಂಬ ಭಾವನೆಗಳು ಉದಿತ ಹೊಂದಿ ವಿಷಾದವು ಪ್ರತಿಯೊಬ್ಬ ಮನುಜನ ಹೃದಯವನ್ನು ಕ್ರಮಿಸುತ್ತಲಿದ್ದಾತು. ಆದರೆ ಇಗ್ಗೆ ಅಂಥ ಮಲಮಲಗಳನ್ನು ಪುನಃ ಸಿದ್ಧಪಡಿಸುವದು ಶಕ್ಯವಿದೆಂಬ ಸುಚಿಹ್ನಗಳು ತೋರಹತ್ತಿವೆ. ನಮ್ಮ ವಿಷಾದಕ್ಕೂ ಅಂತವಿದೆಂಬುದು ಭಾಸವಾಗಹತ್ತಿದೆ! ಗೋದಾವರೀ ಜಿಲ್ಲೆಯ ಪದು ಪಟ್ಟಣದ ಶ್ರೀ ಸೋಮಯ್ಯನವರು ೬೦೦ ನಂಬರಿ ಕೈನೂಲನ್ನು ತೆಗೆಯುತ್ತಿರುವರೆಂಬದಾಗಿ ಪ್ರಸಿದ್ಧವಾಗಿದೆ. ಈ ನೂಲನ್ನು ಅಖಿಲ ಭಾರತೀಯ ಖಾದೀ ಮಂಡಲದವರಿಗೆ ತೀವ್ರವೇ ಕಳಿಸುವರು. ಈ ಬಗ್ಗೆ ಮಂಡಲದವರ ವರದಿಯು ಪ್ರಸಿದ್ಧವಾಯಿತೆಂದರೆ ನಮಗೆ ಹೆಚ್ಚು ವಿಚಾರಿಸಲು ಅನುವಾಗುವದು. ನಮ್ಮ ಆಂಧ್ರ ಬಾಂಧವರು ಇಂಥ ಬೆಸುಗಾದ ಕೈನೂಲನ್ನು ತೆಗೆದು ಭರತಖಂಡದಲ್ಲಿ ಖಾದೀಮಹಾತ್ಮೆಯನ್ನು ದಿನೇ ದಿನೇ ಹೆಚ್ಚಿಸಲಿ! ಆದರೆ ಕನ್ನಡಿಗರು ಮಾತ್ರ ಸ್ವಸ್ಥವಾಗಿ ಮಲಗಿರಲಿ!!

ಕನ್ನಡಿಗರಾರೂ ಇಲ್ಲವೇ?—ಮುಂಬೈ ಇಲಾಖೆಯ ದಕ್ಷಿಣ ಭಾಗದಲ್ಲಿ ಕನ್ನಡಪ್ರಾಧಾನ್ಯವೆ ಹೆಚ್ಚು. ದಕ್ಷಿಣ ಭಾಗದ ೬ ಜಿಲ್ಲೆಗಳಲ್ಲಿ ೪ ಜಿಲ್ಲೆಗಳು ಕನ್ನಡ ನಾಡಿಗೆ ಸೇರಿವೆ. ಆದುದರಿಂದ ಈ ಭಾಗದಲ್ಲಿರತಕ್ಕ ಅಧಿಕಾರಿಗಳೆಲ್ಲ ಹುಟ್ಟು ಕನ್ನಡಿಗರಿರುವದು ನ್ಯಾಯ. ಆದರೆ ಸರಕಾರದವರು ಈ ಕಡೆಗೆ ವಿಶೇಷ ಲಕ್ಷ್ಯವನ್ನು ಕೊಡದಿರುವದು ಆಶ್ಚರ್ಯವಾಗಿದೆ. ಧಾರವಾಡದಲ್ಲಿ ವಿದ್ಯಾಖಾತೆಯ ಇನಸ್ಪೆಕ್ಟರರ ಸ್ಥಳಕ್ಕೆ ಈಗ್ಗೆ ಶ್ರೀ ಸಂದರಾಂಗಾನಿ ಎಂಬ ಸಿಂಧಿಯವರು ನಿಯೋಜಿತರಾಗಿದ್ದಾರೆ. ಯಾಕೆ ಕನ್ನಡಿಗರಾರೂ ಇಲ್ಲವೇ? ವಿದ್ಯಾಖಾತೆಯ ಇನಸ್ಪೆಕ್ಟರರ ಸ್ಥಳವು ಮಹತ್ವವಾದುದು. ಈ ಸ್ಥಳದಲ್ಲಿ ಅಚ್ಚಗನ್ನಡಿಗನು ಯಾವಾಗಲೂ ಇರಬೇಕಾದದ್ದು ವಿಹಿತ. ಕನ್ನಡ ಜಿಲ್ಲೆಗಳ ಹಳ್ಳಿಗಳಲ್ಲಿ ಕನ್ನಡ ಶಾಲೆಗಳಿರುವೆ, ಮರಾಠಿ ಶಾಲೆಗಳಿರುವದು, ಕನ್ನಡಯುವಕರಲ್ಲಿ ಅಭಿಮಾನವನ್ನು ಹೆಚ್ಚಿಸಲು ಕನ್ನಡ ಬಹಿಷ್ಕಾರ [illegible] ಕನ್ನಡಭಾಗದಲ್ಲಿಯ ಶಾಲೆಗಳಲ್ಲಿಯೂ ಕರ್ನಾಟಕದಲ್ಲಿಯ ಕಾಲೇಜುಗಳಲ್ಲಿಯೂ ಇರದೇ ಇರುವದು ನಿಸರ್ಗಕ್ಕೆ ವಿರುದ್ಧವಾದ್ದು. ಈ ಪರಿಸ್ಥಿತಿಯು ಹೋಗಬೇಕಾದರೆ ಶುದ್ಧ ಕನ್ನಡಿಗರೇ ಎಲ್ಲ ಅಧಿಕಾರದ ಸ್ಥಳಗಳಲ್ಲಿರುವದು ಆವಶ್ಯಕ. ಆದರೆ ನಮ್ಮ ಆವಶ್ಯಕತೆ ಅನಾವಶ್ಯಕತೆಗಳನ್ನು ಸರಕಾರವು ಲಕ್ಷ್ಯಕ್ಕೆ ತಂದು ಕೈಗೆ ಬೊಂತೆಯನ್ನು ಒಂದು ಸ್ಥಳದಲ್ಲಿ ಇರಿಸಿದರಾಯಿತು! 'ಎಸ್ ಫ್ಲ ಯೆಸ್ಸ' ಆದೇಶಿಂದಿದೆಯಲ್ಲ!

'ಪರ್ಸ ಫಂಡುಗಳು' – ಆ ಫಂಡು! ಈ ಫಂಡ ಇದು ಮುಗಿಯುವದರಲ್ಲಿ ಇನ್ನೂ ಒಂದು ಫಂಡು! ಅನಂತರದಲ್ಲಿ ಮತ್ತೂ ಒಂದು ಫಂಡು! ಈ ಪ್ರಕಾರವಾಗಿ ಫಂಡಿನ ಮೇಲೆ ಫಂಡುಗಳ ಸುಳಿದಾಟ! ಇದರಿಂದ ಜನರೆಲ್ಲ ಬೇಸತ್ತಿರುವರು! ಹಿಂದುಸ್ತಾನದ ದಾರಿದ್ರ್ಯವು ಅಪರಿಮಿತವಾಗಿ ಹೆಚ್ಚಿದಂಬುದರಲ್ಲಿ ಸಂಶಯವಿಲ್ಲ ಬಡವರಲ್ಲಿ ಹಣವಿಲ್ಲವೆಂಬುದನ್ನು ಕೇಳಬೇಕೇ! ಇತ್ತ ಶ್ರೀಮಂತರು [illegible] ದವರಾಗಲಿಚ್ಛಿಸುವದಿಲ್ಲ! ಇಂಥ ಪರಿಸ್ಥಿತಿಯಲ್ಲಿ ಫಂಡಿನ ಹಣವನ್ನೆತ್ತುವದು ಕಠಿಣ ಈ ಪರಿಸ್ಥಿತಿಯನ್ನರಿತು, ಸಾರ್ವಜನಿಕ ಕೆಲಸದಲ್ಲಿ ನಿಮಗ್ನರಾದವರು ತಮ್ಮ ಉದರಪೋಷಣೆಯ ಭಾರವನ್ನು ಪರರ ಮೇಲೆ ಹಾಕದೇ ತಾವೇ ವಹಿಸಿಕೊಳ್ಳುವದು ಉತ್ತಮವಲ್ಲವೆ. ಮೊದಲಿನ ತೇಜಸ್ವೀ ಬ್ರಾಹ್ಮಣರು, ಪ್ರಪಂಚದಲ್ಲಿಯ ಶ್ರೇಷ್ಠ ಭಾಗವನ್ನೆಲ್ಲ ದುರ್ಲಕ್ಷಿಸಿ, ಸಾದಾವೃತ್ತಿಯಿಂದ ಆನಂದದಿಂದ ಮನೆಗಳಲ್ಲಿದ್ದುಕೊಂಡು ಸಮಾಜದ ಸೇವೆಯನ್ನು ಮಾಡುತ್ತಿರುವಂತೆ, ಸಾರ್ವಜನಿಕ ಸೇವೆಯಲ್ಲಿ ಜೀವಮಾನವನ್ನೆಲ್ಲ ಕಳೆಯಲು ಯೋಚಿಸಿದ ಈಗಿನ ವ್ಯಕ್ತಿಗಳೆಲ್ಲ ನಿಸ್ಸೀಮವಾದ ಸ್ವಾರ್ಥತ್ಯಾಗದ ಬಲದಿಂದ ತಮ್ಮನ್ನು ಉದ್ಧರಿಸದೇ ಮೇಲಾದ ಮಾರ್ಗ. ಇನ್ನು ಹಾಗೆ ಮಾಡಲು ಸಾಕಷ್ಟು ಜ್ಞಾನದ ಬಲವಿಲ್ಲದವರು ತಮ್ಮ ಆಪ್ತ ಮಿತ್ರರಿಂದ ಧನ ಸಹಾಯ ಪಡೆದು ಸಾರ್ವಜನಿಕ ಕೆಲಸವನ್ನು ಸಾಗಿಸಬೇಕು. ಜನರು ಫಂಡಿನ ಬಗ್ಗೆ ಬೇಸತ್ತಾಗ, ಮತ್ತು ಸಾರ್ವಜನಿಕ ವಿನಂತಿಗಳಿಗೆ ಅಷ್ಟೊಂದು ಮಹತ್ವವನ್ನು ಕೊಡದಿರುವಾಗ, ಸಾರ್ವಜನಿಕ ವಿನಂತಿಗಳಿಂದ ಧನ ಸಹಾಯ ಬೇಡಿದರೆ, ಅದು ಫಲಕಾರಿಯಾಗದು ಇರಲಿ. ಪ್ರಸ್ತುತದಲ್ಲಿ ಶ್ರೀ ದಾಬಡೇ ಅನಂತ ನಾಯಕರಿಗೆ ಪರ್ಸ ಫಂಡ ಕೊಡುವ ಶ್ರೀ ಗಂಗಾಧರರಾವ ದೇಶಪಾಂಡೆ ಮೊದಲಾದವರ ಸಹಿಯಿಂದ ಒಂದು ವಿನಂತಿ ಪತ್ರಿಕೆಯು ಪ್ರಸಿದ್ಧವಾಗಿದೆ. ದಾಬಡೆಯವರ ಹೆಸರನ್ನೂ ಕಾರ್ಯವನ್ನೂ ಕರ್ನಾಟಕದಲ್ಲಿ ಎಲ್ಲರೂ ಬಲ್ಲರು. ಇವರ ಸಾರ್ವಜನಿಕ ಕೆಲಸಗಳ ಬಗ್ಗೆ ನಾವು ಬರೆಯುವದು ಅನಾವಶ್ಯಕ, ಅವರ ಬಗ್ಗೆ ಸಹಾನುಭೂತಿಯುಳ್ಳಂಥ ಜನರು ಅವರಿಗೆ ಕೊಡಬೇಕೆಂದಿದ್ದ 'ಪರ್ಸ ಫಂಡಿ'ಗೆ ಸಹಾಯ ಮಾಡಬೇಕು. ಶ್ರೀ ಗಂಗಾಧರರಾಯರಂಥವರ ಸಹಿಯಿಂದ ಪ್ರಸಿದ್ಧವಾದ ಪ್ರಕಟನೆಯಲ್ಲಿ ಶ್ರೀ ದಾಬಡೆಯವರು 'ಲೋಕಮಾನ್ಯರ ಪಟ್ಟಶಿಷ್ಯರು' ಎಂಬದಾಗಿ ಹೇಗೆ ಸೇರಿತೋ ನಮಗೆ ತಿಳಿಯದು ಅಥವಾ ಪ್ರಕಟನೆಯಲ್ಲಿ ಬರೆದದ್ದನ್ನು ಓದಿಸಿಕೊಳ್ಳದೇ ಶ್ರೀ ದಾಬಡೆಯವರ ಸಂಬಂಧವಾಗಿದ್ದ ಪ್ರಕಟನೆಯೆಂಬದನ್ನರಿತು "ಕಾಯ ಪರಕತ ನಾಹಿ ಘಾಲಾ ಮಾಝೀ ಏಕ ಸಹಿ" ಎಂಬದಾಗಿ ಹೇಳಿರಬಹುದೋ?

ಪಂಚಮ ಜಾರ್ಜ ಸಾಮ್ರಾಟರವರು- ಶರದ್ ಋತುವಿನಲ್ಲಿ ಹಿಂದುಸ್ಥಾನಕ್ಕೆ ಬರುವರೆಂದೂ, ಆಗ್ಗೆ ದಿಲ್ಲಿಯ ಹೊಸ ಕಟ್ಟಡಗಳು ತೆರೆಯಲ್ಪಡುವವೆಂದೂ ಈಗ ತಾನೇ ಸುದ್ದಿ ಬಂದಿದೆ. ಒಳಗಿನ ಕಾರಣವು ಇನ್ನೂ ಗೊತ್ತಾಗಿಲ್ಲ. ಹಿಂದಕ್ಕೆ ಸ್ವದೇಶೀ ಚಳವಳಿಯು ಶಾಂತವಾದಮೇಲೆ ೧೯೧೧ರಲ್ಲಿ ಪಂಚಮ ಜಾರ್ಜರವರನ್ನು ಹಿಂದುಸ್ಥಾನಕ್ಕೆ ಕರೆತಂದು, ಪಟ್ಟಾಭಿಷೇಕದ ನೆವದಿಂದ ಸರಕಾರದವರು ತಾವು ಹಿಂದಕ್ಕೆ ಮಾಡಿದ ರಾಜಕೀಯ ತಪ್ಪುಗಳನ್ನು ತಿದ್ದಿಕೊಂಡು ಇಬ್ಭಾಗ ಮಾಡಿದ ಬಂಗಾಲವನ್ನು ತಿದ್ದಿ ಜತಿಸಿದರು. ರಾಜಕೀಯ ದೃಷ್ಟಿಮಾನವನ್ನು ಕಿಂಚಿತ್ತು ಬದಲಿಸಿದರು. ಪಂಜಾಬ ಪ್ರಕರಣದಲ್ಲಿಯೂ ಅಸಹಕಾರ ಚಳವಳಿಯಲ್ಲಿಯೂ ಸರಕಾರದವರು ಮಾಡಿದ ತಪ್ಪುಗಳು ಈಗ್ಗೆ ಪುನಃ ತಿದ್ದಿಕೊಳ್ಳುವದಕ್ಕಾಗಿ ಈ ಉಪಾಯವನ್ನು ಹುಡುಕಿಕೊಂಡಿರುವರೋ?

ಲೋಕ ಮಾನ್ಯರ ದಹನ ಸ್ಥಾನವು.

ಮುಂಬೈಯಲ್ಲಿ ಲೋಕ ಮಾನ್ಯರ ದಹನ ಸ್ಥಾನದ ಸುತ್ತಲೂ ಕಟಾಂಜನಗಳನ್ನು ಹಚ್ಚುವದಕ್ಕಾಗಿ ೬೦೦ ರೂ ವೆಚ್ಚ ಬರುವದೆಂದೂ ಈ ಹಣವನ್ನು ಮುಂಬೈ ಮುನಸೀಪಾಲಿಟಿಯವರು ತಮಗೆ ಕೊಡಬೇಕೆಂದೂ ಸರಕಾರದವರು ಕೇಳಿದ್ದಾರೆ. ಲೋಕಮಾನ್ಯರಂಥ ವಿಭೂತಿಗಳ ದಹನಸ್ಥಾನವನ್ನು ರಕ್ಷಿಸಲು ೬೦೦ ರೂ ಗಳು ಸಾಕ್ಷು ಮತ್ತು ಆ ಬಗ್ಗೆ ವೆಚ್ಚ ಮಾಡಲು ಸರಕಾರದ ಬೊಕ್ಕಸದಲ್ಲಿ ಹಣದೊರೆಯದಷ್ಟು! ಮುನಸಿಪಾಲ್ಟಿಯ ಸಹಾಯ ಬೇಕು ಸರಿಯದೆ. ಲೋಕಮಾನ್ಯರು ಗೌರವಾಯದವರಲ್ಲವಲ್ಲ!

ಕನ್ನಡಿಗನ ಕಳವಳ.

ಕನ್ನಡಿಗನು ಹಿಂದಕ್ಕೆ ಬಹು ಹೆಸರುವಾಸಿಯಾಗಿದ್ದನು. ಆತನ ಹೆಸರನ್ನು ಕೇಳದವರೇ ಇರಲಿಲ್ಲ. ಆದರೆ ಈಗ ಈತನ ಹೆಸರನ್ನೆತ್ತುವವರೇ ಇಲ್ಲ! ಕನ್ನಡಿಗನು ಕಾದುವುದರಲ್ಲಿ ಕೆಚ್ಚೆದೆಯವನಾಗಿದ್ದನು. ಓದಿನಲ್ಲಾದರೋ ಬಲು ಮುಂದಿದ್ದನು. ಆದರೆ ಈಗ ಓಡಿಹೋಗುವದರಲ್ಲಿ ಮುಂದಾಗಿದ್ದಾನೆ! ಕನ್ನಡಿಗನು ಮುಂಚೆ ಬಗೆಬಗೆಯ ಕಸಬುಗಳಲ್ಲಿ ಬಹು ಬಲ್ಲಿದನಾಗಿದನು. ದೂರ ದೂರದ ನಾಡುಗಳಿಗೆ ತನ್ನ ಸರಕುಗಳನ್ನು ಕಳುಹಿಸಿ ಬೇಕಾದಷ್ಟು ಹಣ ಕಾಸು ಕೂಡಿಟ್ಟು ಕೊಂಡು ಹೊಟ್ಟೆ ಬಟ್ಟೆಗಳಿಗೆ ಕೊರತೆಯಿಲ್ಲದೆ ನೆಮ್ಮದಿಯಿಂದ ಕಾಲ ಕಳೆಯುತ್ತಿದ್ದನು. ಆದರೆ ಈಗ ತನ್ನ ಎಲ್ಲಾ ಕಸಬುಗಳನ್ನೂ ಬಿಟ್ಟು ತನ್ನ ಮೈಯನ್ನು ಮುಚ್ಚಿಕೊಳ್ಳುವುದಕ್ಕೆ ಬೇಕಾಗುವ ಹೋಟುದ್ದ ಬಟ್ಟೆಯನ್ನು ಕೂಡಾ ಪರ ನಾಡುಗಳಿಂದ ತರಿಸಿಕೊಳ್ಳುತ್ತ, ಕೂಡಿಟ್ಟ ಹಣ ಕಾಸುಗಳನ್ನೂ, ಮೂಳಿಟ್ಟ ನಗ ನಾಣ್ಯಗಳನ್ನು ಉದರ ಪಾಲು ಮಾಡಿ ತಾನು ಬರಿಗೈಯವನಾಗಿ ತಿಂದೇನೆಂದರೆ ಹೊಟ್ಟೆಗಿಲ್ಲಾ; ಉಟ್ಟೇನೆಂದರೆ ಮೈಯಿಗಿಲ್ಲಾ; ಈ ಪ್ರಕಾರ ಈಗ ಪೇಚಾಡುತ್ತಿದ್ದಾನೆ!

ಕನ್ನಡಿಗನು ಮೊದಲು ತನ್ನ ತಾಯಿಯ ನುಡಿಯಲ್ಲಿ ಬಹು ಅಕ್ಕರವುಳ್ಳವನಾಗಿದ್ದನು. ತಾನು ತಾಯಿಯ ತೊಡೆಯ ಮೇಲೆ ಮಲಗಿಕೊಂಡು ಕಲಿತ ನುಡಿಯಲ್ಲಿಯೇ ಓದಿ. ಅದರಲ್ಲಿಯೇ ಬರೆದು ಅದರಿಂದಲೇ ಹೇಳಿ ಎಲ್ಲರೂ ತನ್ನ ಬಾಯಿಯನ್ನೇ ನೋಡುವಂತೆ ಮಾಡಿಕೊಂಡಿದ್ದನು. ಆದರೆ ಈಗ ತಾಯ್ನುಡಿಯನ್ನು ಬಿಟ್ಟು ಪರ ನುಡಿಯಲ್ಲಿಯೇ ಓದು ಬರಹಗಳನ್ನು ಕಲಿತುದರಿಂದ ತಾನು ಪರರ ಬಾಯಿಯನ್ನು ನೋಡಬೇಕಾಗಿದೆ! ಕನ್ನಡಿಗನು ಮುಂಚೆ ಗಟ್ಟಿಮುಟ್ಟಾಗಿದ್ದನು. ಕೈ ಕಾಲುಗಳು ಆತನ ಹತೋಟಿಯಲ್ಲಿದ್ದವು. ಆದಕಾರಣ ಯಾವಾಗ ಏನು ಮಾಡಬೇಕೆಂದರೂ ಒಂದೇ ಮನಸ್ಸಿನಿಂದ ಕೂಡಲೇ ಮಾಡಿ ಬಿಡುತ್ತಿದ್ದನು. ಆದರೆ ಈಗ ಆತನ ರುಂಡ ಮುಂಡಗಳೇ ಬೇರೆಯಾಗಿವೆ! ಕೈ ಕಾಲುಗಳೂ ಕಳಚಿ ಹೋಗಿವೆ. ಮದ್ರಾಸ, ಮೈಸೂರು, ಹೈದ್ರಾಬಾದ, ಬೊಂಬಾಯಿ ಈ ನಾಲ್ಕು ಭಾಗಗಳೂ ಈ ಕನ್ನಡಿಗನನ್ನು ತುಂಡು ತುಂಡು ಮಾಡಿ ತೆಗೆದುಕೊಂಡು ಬಿಟ್ಟಿವೆ! ಅಕಟಕಟಾ! ಈ ನನ್ನ ಕನ್ನಡಿಗನ ಗೋಳೆಷ್ಟೆಂದು ಹೇಳಬೇಕು?

ಕೈಯಲ್ಲಿ ಹಣವಿದ್ದರೆ ಕೆಲವರು ಮನ್ನಣೆ ಮಾಡುತ್ತಾರೆ. ಮೈಯಲ್ಲಿ ನೆಣವಿದ್ದರೆ ಹಲವರು ಅದರಿಸುತ್ತಾರೆ. ಇವೆರಡಿರದಿದ್ದರೂ ಗುಣವೊಂದಿದ್ದರೆ ಎಲ್ಲರೂ ಕೊಂಡಾಡುತ್ತಾರೆ. ಆದರೆ ಈಗ ಕನ್ನಡಿಗನಲ್ಲಿ ಹಣವಿಲ್ಲ. ನೆಣವಿಲ್ಲ; ಗುಣವಂತೂ ಇಲ್ಲವೇ ಇಲ್ಲ. ಹೀಗಾಗಿ ಕನ್ನಡಿಗನು ಈಗ ಬಹು ಕಳವಳ ಪಡುತ್ತಿದ್ದಾನೆ.

ಈತನ ಕಷ್ಟದ ಕಡೆಗೆ ಕಣ್ಣೆತ್ತಿ ನೋಡಬಾರದೇ? ಈತನು ಮರುಗುವುದನ್ನು ಕಿವಿಗೊಟ್ಟು ಕೇಳಬಾರದೇ? ಈತನು ಕೈಯಲ್ಲಿ ಕಾಸಿಲ್ಲದೆ ಮೈ ಮೇಲೆ ಬಟ್ಟೆಯಿಲ್ಲದೆ ಹೊಟ್ಟೆಗೆ ರೊಟ್ಟಿಯಿಲ್ಲದೆ ಓದಲು ಬರವಿಲ್ಲದೆ ದಿಕ್ಕಿಲ್ಲದವನಾಗಿರುವುದನ್ನು ಮನವಿಟ್ಟು ತಿಳಿದುಕೊಳ್ಳಬಾರದೇ? ಅಕಟಾ! ಕನ್ನಡಿಗನ ಈ ಕಳವಳವನ್ನು ನೋಡಿ ಕಣ್ಣೀರು ದುರಿಸಿದರೆ ಆತನ ಕಷ್ಟವು ಕಡಿಮೆಯಾಗುವುದೇ? ಇದಕ್ಕಾಗಿ ನಾವೆಲ್ಲರೂ ಒಮ್ಮನಸ್ಸಿನಿಂದ ಹೆಣಗಾಡಬೇಕು. ನಮ್ಮ ಕೆಲಸಗಳು ಹಸಿಯ ಗೋಡೆಯ ಮೇಲೆ ಹಳ್ಳನಿಟ್ಟಂತೆ ಕನ್ನಡಿಗನ ಮನಸ್ಸಿನಲ್ಲಿ ಮೂಡಬೇಕು. ಪೊಳ್ಳು ಮಾತುಗಳಾಗಲಿ, ಜೊಳ್ಳು ಒಪ್ಪಿಗೆಗಳಾಗಲಿ ಕನ್ನಡಿಗನ ಕಳವಳವನ್ನು ಕಳೆಯುವುದಿಲ್ಲ. ತೋರಿಕೆಗಾಗಿ ಮಾಡುವ ಮಾಟಗಳೆಲ್ಲಾ ಹೊಳೆಯಲ್ಲಿ ಹುಣಿಸೆಯ ಹಣ್ಣನ್ನು ತೊಳೆದಂತೆಯೇ ಸರಿ. ಈಗಲಾದರೂ ಒಮ್ಮನಸ್ಸಿನಿಂದ ಒಂದೊಂದು ಕೆಲಸವನ್ನೂ ಗಟ್ಟಿಮುಟ್ಟಿಯಾಗಿ ಕಡೆಯತನಕ ಮಾಡಿದರೆ ಕನ್ನಡಿಗನ ಕಳವಳವು ಎಷ್ಟೋ ಕಡಿಮೆಯಾಗುವುದು. ಕನ್ನಡಿಗನ ಹೆಚ್ಚಳವೇ ನಮ್ಮ ಹೆಚ್ಚಳ ಕನ್ನಡಿಗನು ಬೇರೆಯಲ್ಲ; ನಾವು ಬೇರೆಯಲ್ಲ. ಕನ್ನಡಿಗನೇ ನಾನು, ನಾನೇ ಕನ್ನಡಿಗನೆಂಬ ಭಾವ ಬಲಿದು ಎಲ್ಲರೂ ಕನ್ನಡಿಗನ ಏಳಿಗೆಗಾಗಿ ಹೆಣಗುವ ಒಳ್ಳೆಯ ಕಾಲ ಕೂಡಲೇ ಬರಲಿ!

ಸತ್ಯಾಗ್ರಹಾಶ್ರಮ.
ಹರಿಹರ } **ಹರ್ಡೇಕರ ಮಂಜಪ್ಪ**

ಶ್ರೀ ರಾಮ ನವಮಿ ಉತ್ಸವ.

ಧರ್ಮವಾಗುವದು ಆರ್ಯಾವರ್ತದ ತಾಯಿಂದಿರು ಪರ್ವತಗಳ ಮೇಲೆ ಕುಳಿತು ಮಾಡುತ್ತಿರುವ ತಪಸ್ಸು ಪೂರ್ಣಯಶಸ್ವಿಯಾಗಿ ಫಲಿಸುವದು. ಮತ್ತು ಪತಿವ್ರತಾಯ ಹಾಗು ಪಿತೃಭಕ್ತಿಸಂಪನ್ನರಾದ ಬಾಲಕರು ದೇಶದಲ್ಲಿ ಜನಿಸುವರು. ಪುನಃ ಧರ್ಮದ ಜಾಗೃತಿಯಾಗುವದು. ಮತ್ತು ಪರಮಾತ್ಮನು ಸ್ವತಃ ಅವತಾರವನ್ನು ತೆಗೆದುಕೊಳ್ಳುವನು. ಪರಮಾತ್ಮನ ಅವತಾರವಾಯಿತೆಂದು ತಿಳಿಯುವ ಬಗೆ ಹೇಗೆಂದು ಪೃಥ್ವಿಯು ಪ್ರಶ್ನೆ ಮಾಡಲು ಬ್ರಹ್ಮದೇವರು ಅಂದದ್ದು ... ಯಾವಾಗ್ಗೆ ಹಿಂದಕ್ಕೆ [illegible]. ಯಾವಾಗ್ಗೆ ಗೃಹಸ್ಥರು [illegible]. ಯಾವಾಗ್ಗೆ ವಿದ್ಯಾರ್ಥಿಗಳು ಧರ್ಮ ರಕ್ಷಕರಾದ ಗುರುಗಳಿಗೆ [illegible]. ಯಾವಾಗ್ಗೆ ತಾಯಿ ತಂದೆಗಳು [illegible] ತಮ್ಮ ಪುತ್ರರನ್ನು [illegible] (ಯಜ್ಞ) ರಕ್ಷಣೆಗಾಗಿ [illegible]. ಯಾವಾಗ್ಗೆ ಅಣ್ಣ ತಮ್ಮಂದಿರು ಅಪೂರ್ವ ಪ್ರೇಮದಿಂದ ವರ್ತಿಸುವರೋ, ಯಾವಾಗ್ಗೆ ಉಚ್ಚ ಕುಲದ ಜನರು ಪತಿತ ಸ್ತ್ರೀಯರನ್ನೂ ಕೂಡ ಉದ್ಧರಿಸುವರೋ, ಯಾವಾಗ್ಗೆ ರಾಜಪುತ್ರರು ಭಿಲ್ಲ ಮತ್ತು ಗುಹಕ ಜನರೊಂದಿಗೆ ಸಮಾನ ಭಾವದಿಂದ ಮೈತ್ರಿಯನ್ನು ಮಾಡುವರೋ, ಯಾವಾಗ್ಗೆ ಬ್ರಾಹ್ಮಣರು ತಮ್ಮ [illegible] ತ್ಯಜಿಸುವರೋ, ಯಾವಾಗ್ಗೆ ಬ್ರಹ್ಮಚರ್ಯದ ತೇಜವು ಸತ್ಯ ಮತ್ತು ಧರ್ಮಗಳ ಸೇವೆಯನ್ನು ಸ್ವೀಕರಿಸುವದೋ, ಮತ್ತು ಯಾವಾಗ್ಗೆ ಪ್ರಜೆಗಳು ಶ್ರದ್ಧೆಯು ಜಾಗ್ರತವಾಗುವದೋ, ಯಾವಾಗ್ಗೆ ಉಚ್ಚ ಕುಲದ ತರುಣರು ನಗರ ಜೀವನದ ವಿಲಾಸ ಭೋಗವನ್ನು ಬಿಟ್ಟು ಹಳ್ಳಿ ಹಳ್ಳಿಗಳಲ್ಲಿ ಸಂಚರಿಸುತ್ತ ಲೋಕ ಜಾಗೃತಿಯನ್ನು ಮಾಡುವರೋ, ಆಗ್ಗೆ ಈಶ್ವರನ ಅವತಾರವಾಗಿದೆಂದು ತಿಳಿ. "ಪೃಥ್ವಿಗೆ ಸಂತೋಷವಾಯಿತು, ಸಮಾಧಾನವು ದೊರೆತಿತು. ಮತ್ತು ಶಾಂತ ಚಿತ್ತಳಾಗಿ ಸ್ವಸ್ಥಾನಕ್ಕೆ ಬಂದಳು.

ದಶರಥ ಮಹಾರಾಜನು ತನ್ನನ್ನು [illegible] ಯನ್ನು ಪ್ರಜ್ವಲಿಸಿದನು. ಯಜ್ಞ [illegible] ಪೂರ್ಣ [illegible] ತಿತು. ಪ್ರಸಂಗಗಳು ಅನುಕೂಲವಾಗುತ್ತ ನಡೆದವು. ಗ್ರಹಗಳೂ ಉಪಗ್ರಹಗಳೂ ಪರಸ್ಪರ ಅನುಕೂಲವಾದವು. ಪಾಪದ ಕೊಡವು ತುಂಬಿತು. ಪುಣ್ಯವು ಉದಯಿಸಿತು ಮತ್ತು ರಾಮ ಜನ್ಮವು ಆಯಿತು.

ಆ ಹೊತ್ತು ಪ್ರಜೆಗಳು ಉತ್ಸವವನ್ನು ಮಾಡಿದರು. ಇನ್ನೂ ರಾವಣರಾಜ್ಯವೇನೂ ನಷ್ಟವಾಗಿದ್ದಿಲ್ಲ, ಇನ್ನೂ ತಾಟಕಿಯ ವಧೆಯಾಗಿದ್ದಿಲ್ಲ, ಇನ್ನೂ ಕಾಂಚನ ಮೃಗ ಮಾರೀಚನ ಮಾಯೆಯು ಬೈಲಾಗಿದ್ದಿಲ್ಲ, ಆದಾಗ್ಯೂ ಪ್ರಜೆಗಳು ಉತ್ಸವವನ್ನು ಮಾಡಿದರ. ಯಾಕಂದರೆ ರಾಮ ಜನ್ಮವಾಗಿತ್ತು. ಒಕ್ಕಲಿಗನು ಆಕಾಶದಲ್ಲಿಯ ಮೇಘದಲ್ಲಿ ಸಂಪೂರ್ಣ ಬೆಳೆಯನ್ನು ಹೇಗೆ ಕಾಣುವನೋ, ಹಾಗೆಯೇ ಪ್ರಜೆಗಳು ಮೇಘಶ್ಯಾಮನಾದ ಶ್ರೀರಾಮಚಂದ್ರನಲ್ಲಿ ಸ್ವಾತಂತ್ರ್ಯವನ್ನು ಕಂಡರು, ಧರ್ಮರಾಜ್ಯವನ್ನು ಕಂಡರು. ಮುಕ್ತಿಯನ್ನು ಕಂಡರು, ಅಂದಿನಿಂದ ಇಂದಿನ ವರೆಗೆ ಜನರು ಚೈತ್ರ ಶುಕ್ಲ ನವಮಿಯ ದಿವಸ ಉತ್ಸವವನ್ನು ಮಾಡುತ್ತಿರುವರು. ಯಾಕಂದರೆ ಆ ಮಹತ್ತು ಮನುಷ್ಯರಲ್ಲಿ ಸತ್ಯದ ಮೇಲಿನ [illegible] [illegible] ಪ್ರಶ್ನೆ [illegible].

[illegible]

ನಮ್ಮ ನಾಡು.

(ಅಂದು.)

ಕನ್ನಡಿಗರೆಂದರೆ ಸಾಮಾನ್ಯರಲ್ಲ ಅವರು ಪ್ರಾತಿನಿಧ್ಯವನ್ನು ವಹಿಸಿರುವ ಜನಾಂಗವೂ ಸಾಮಾನ್ಯವಾದುದಲ್ಲ ಅವರು ಕಟ್ಟಿದ ಸಾಮ್ರಾಜ್ಯವು ವಿಸ್ತಾರದಲ್ಲೂ ವೈಭವದಲ್ಲೂ ಸಮ ಕಾಲದ ದೇಶೀಯ ವಿದೇಶೀಯ ಸಾಮ್ರಾಜ್ಯಗಳಲ್ಲಾವುದಕ್ಕೂ ಕಡಿಮೆಯಾಗಿರಲಿಲ್ಲ ಇಹ ಪರ ವಿಚಾರ ಸಾಹಿತ್ಯ ಕ್ಷೇತ್ರದಲ್ಲಿ ಹುಟ್ಟಿದ ಪ್ರತಿಭಾ ಶಾಲಿಗಳಿಗೆಯಾವ ದೇಶದವರಾದರೇನು, ಯಾವ ಕಾಲದವರಾದರೇನು, ಪ್ರೇಮಾನಂದದ ಕಾಣಿಕೆಗಳನ್ನು ಅರ್ಪಿಸಲೇಬೇಕು

ಹುಟ್ಟು ಬಣ್ಣದವರೀಗನ್ನಡಿಗರು; ಕೊಟ್ಟ ಬಣ್ಣದವರಲ್ಲ ಕ್ಷಣ ಕ್ಷಣಕೆ ಬಣ್ಣ ಬದಲಿಸುವ ಬೆಡಗು ಜರ್ಯಗಳಿವರಿಗಿಲ್ಲ. ಸಂಸ್ಕೃತಿಯ ದೃಷ್ಟಿಯಿಂದಿವರ ಸ್ಥಾನವು ದಕ್ಷಿಣ ಹಿಂದುಸ್ಥಾನದಲ್ಲಿ ಪವಿತ್ರವಾದುದು; ನೆರೆ ಹೊರೆಯರಿಗೆ ಕಣ್ಬೇನೆ ಹುಟ್ಟಿಸುವಂಥಹುದು. ಆರ್ಯ ದ್ರಾವಿಡವೆಂಬೆರಡು ಸಂಸ್ಕೃತಿಗಳನ್ನು ಮೂಸೆಯಲ್ಲಿಟ್ಟು ತಮ್ಮ ವೈಯಕ್ತಿಕ ಶಕ್ತಿ ಜ್ವಾಲೆಯಿಂದ ಕರಗಿಸಿ, ಆರ್ಯ ದ್ರಾವಿಡ ನೈಸರ್ಗಿಕ ಗುಣಗಳನ್ನೆಲ್ಲ ಒಂದಾಗಿಸಿ ಸೌರಸ್ಯವನ್ನು ಉಂಟು ಮಾಡಿದವರಿವರು

' ಸೌಂದರ್ಯವೇ ಆನಂದವು
ಆನಂದವೇ ಮೋಕ್ಷವು ''

ಎಂಬ ಅಮೂಲ್ಯವಾದ ಸಂದೇಶದ ಸಾರವನ್ನು ಹೀರಿ ಅರಿತು, ನುರಿತು, ಸರ್ವರೂ ಸಾಧಿಸಿ, ಆ ಸಂದೇಶವನ್ನು ಜಗತ್ತಿಗೆ ಸಾರಿದವರೀ ಕನ್ನಡಿಗರು. ಅಜಂತ, ಎಲ್ಲೋರ, ಬಾದಾಮಿ, ಕೋಗಲಿ, ಬಾಗಲಿ, ಬೇಲೂರು, ಹಳೇಬೀಡು, ಸೋಮನಾಥಪುರ, ಶ್ರವಣ ಬೆಳ್ಗೊಳ, ಮೂಡಬಿದರೆ, ಹಂಪೆ ಮೊದಲಾದೆಡೆಗಳಲ್ಲಿ ಕನ್ನಡ ಶಿಲ್ಪಕಲಾಕೋವಿದರು- ಚತುರ್ಜಾತಿ ಪ್ರಾಸಾದ ವಿನಿರ್ಮಿತ ಸೂತ್ರ ಧಾರಿಗಳು- ಸೃಷ್ಟಿಸಿರುವ ಸೌಂದರ್ಯ ಸಾಧನಗಳನ್ನು ಕಂಡವರಿಗೆ ಈ ಸಂದೇಶದ ರಹಸ್ಯವು ಸ್ಥಿರವಾಗುತ್ತದೆ. ಆ ಸೌಂದರ್ಯದ ಬೀಡುಗಳಲ್ಲೀಗಲೂ, ಅಚ್ಚಳಿಯದೆ, ನಿಂತು ನೋಡುವವರ ಮೈಮರೆಸಿ, ತಲೆದೂಗಿಸುವ ಮೂರ್ತಿಗಳನ್ನು ಕಂಡರಿಸಿದ ರೂಪಕಾರಿಗಳ ಪ್ರತಿಭೆಯನ್ನು ಒಳಗಣ್ಣಿನಿಂದ ತಿಳಿದೆವಾದರೆ ಕನ್ನಡಿಗರು ಸೌಂದರ್ಯೋಪಾಸಕರೆಂಬಂಶವು ಸ್ಥಿರವಾಗದಿರದು. ಕನ್ನಡಿಗರು ಕಲಾ ಪ್ರಧಾನ ಜನರೆಂದು ಗೊತ್ತಾಗದಿರದು.

ಅಂಬರವ ಭೇದಿಸಿ ಆದರೊಳ ಲೋಕಕ್ಕೆ ನಮ್ಮನೆಳೆದೊಯ್ವ ಪಂಪ ರನ್ನರೇ ಮೊದಲಾದ ಪ್ರತಿಭಾ ಶಾಲಿಗಳನ್ನು ಸೃಷ್ಟಿಸಿದವರೀ ಕನ್ನಡಿಗರು. ಕವಿತಾ ಕನ್ನೆಯನೊಲಿಸಿ, ಆಕೆಗೊಂದು ಮಾಡ ಕಟ್ಟಿ ಆ ಕನ್ನೆವಾಡದ ಸುತ್ತಲೂ ಹಗಲಿರುಳು ಕೈ ಕಟ್ಟಿ, ಕಣ್ಣು ನೆಟ್ಟು ಮನವಿಟ್ಟು ಆರಾಧಿಸಿ, ಸೇವೆ ಸಲಿಸಿ, ಆಕೆಯನ್ನು ಒಲಿಸಿಕೊಂಡ ಕಬ್ಬಿಗರ ಕರುನಾಡಿದು.

ದ್ವೈತಾದ್ವೈತ ವಿಶಿಷ್ಟಾದ್ವೈತ ಶಕ್ತಿವಿಶಿಷ್ಟಾದ್ವೈತಾದಿ ಸನಾತನ ಧರ್ಮ ಸಾಮ್ರಾಜ್ಯಗಳ ಹೆದ್ದಾರಿಗಳ ಕೈಗಂಬಗಳು ನಟ್ಟನಾಡಿದು. ಬೌದ್ಧ, ಜೈನ ಧರ್ಮಾನುಯಾಯಿಗಳು ಕುರುಹಿಟ್ಟು ನೆಲೆವೀಡಾಗಿಸಿದ ನಾಡಿದು. ಭಿನ್ನ ಭಿನ್ನ ಮತಾನುಯಾಯಿಗಳ ಭೇದ ಭಾವಗಳನ್ನು ಹೋಗಲಾಡಿಸಿ ಪರ ವಸ್ತುವನರಸುವಂತೆ ಎಲ್ಲರಿಗೆ ಎಚ್ಚರಿಕೆಯಿತ್ತ ನಾಡಿದು

(ಇಂದು.)

ನಮ್ಮ ನಾಡಿಂದು ದಗ್ಧರಾಷ್ಟ್ರ! ನಮ್ಮ ಜನರಿಂದು ನಿರ್ವೀರ್ಯರು, ನಿರ್ಜೀವಿಗಳು! ನಾವು ಕನ್ನಡಿಗರೆಂಬ ಭಾವವೇ ನಮಗಿಲ್ಲ; ನಮ್ಮ ಹಿರಿಯರ ಸರ್ವತೋಮುಖವಾದ ಪ್ರತಿಭೆಯನ್ನೂ ಆ ಪ್ರತಿಭಾ ಫಲಗಳನ್ನೂ ಕಂಡು ಹಮ್ಮೆಗೊಂಡು ಮುಂದಿನ ಕೆಲಸಕ್ಕೆ ಹುರುದುಂಬಿಸಿಕೊಳ್ಳುವ ಸದ್ಬುದ್ಧಿಯು ಹುಟ್ಟಿಲ್ಲ. ಸ್ವಾತಂತ್ರ್ಯೋದ್ಯಮದಲ್ಲಿ ಆಸಕ್ತಿಯಿಲ್ಲ, ಕರ್ನಾಟಕದ ಏಕೀಕರಣ ವಿಚಾರದಲ್ಲಿ ನಂಬುಗೆಯಿಲ್ಲ; ಬಾಲಕ ಬಾಲಿಕೆಯರ ಸುಶಿಕ್ಷಣದಲ್ಲಿ ಲಕ್ಷ್ಯವಿಲ್ಲ; ಲಲಿತ ಕಲೆಗಳ ಪುನರುಜ್ಜೀವನ ಕಾರ್ಯದಲ್ಲಿ ಉತ್ಸಾಹವಿಲ್ಲ, ದೇಶಾಭಿಮಾನವಿಲ್ಲ, ಭಾಷಾಭಿಮಾನವಿಲ್ಲ, ಯಾವ ಕೆಲಸದಲ್ಲೂ ಶ್ರದ್ಧಾಭಕ್ತಿಗಳಿಲ್ಲ, ಒಟ್ಟೇನು ನಮ್ಮಲ್ಲೇ ನಮಗೆ ನಂಬುಗೆಯಿಲ್ಲ, ವಿಶ್ವಾಸವಿಲ್ಲ!

ಕರ್ನಾಟಕವು ಚೂರು ಚೂರಾಯಿತು, ಕನ್ನಡಿಗರು ದಿಕ್ಕುಪಾಲಾದರು ಪರಕೀಯ ಸಂಸ್ಕೃತಿಯ ದಾಳಿ ಹತಿಯಿಂದ ಕರ್ನಾಟಕದ ಸಂಸ್ಕೃತಿ ಸರ್ವಸ್ವವೂ ಧೂಳೆದ್ದು ಹೋಯಿತು ಪಾಶ್ಚಾತ್ಯ ನಾಗರಿಕತೆಯೆಂಬ ನೆರೆಗೆ ಸಿಕ್ಕಿ ಕನ್ನಡಿಗರ ಉಪನಾಮ ಕ್ರಿಯೆಗಳಿಗೆ ಲೋಪ ಬಂತು. ಸಮಾಜವು ಶಿಥಿಲವಾಯಿತು; ಮನೆಯು ಮುರಿಯಿತು. ದಾರಿದ್ರ್ಯವು ಹೆಚ್ಚಿತು ಸ್ವಾವಲಂಬನ ಶಕ್ತಿಯು ಮಾಯವಾಯಿತು

ಮುದುಕರಿಗೆ ಮುಂದಿನ ದಿನದ ಯೋಚನೆಯಿಲ್ಲ ಯುವಕರಿಗೆ ಇಂದಿನ ಯೋಚನೆಯೇ ತಲೆ ಬೆಳ್ಳಗೆ ಮಾಡಿದೆ ತರುಣರಿಗೆ ದಿಕ್ಕು ತೋರದಂತಾಗಿದೆ; ಹೆಂಗಸರು ಅಜ್ಞಾನಾಂಧಕಾರದಲ್ಲಿರುವರು ಶ್ರೀಮಂತರು ಸುಖಲೋಲುಪರಾಗಿರುವರು, ಅಧಿಕಾರಿಗಳು ಮದಾಂಧರಾಗಿರುವರು, ವರ್ತಕರು ದ್ರವ್ಯಾರ್ಜನೆಯಲ್ಲಿ ಮೈಮರೆತಿರುವರು

ಆಧುನಿಕ ರಾಜಕೀಯ ಸಮಾಲೋಚನೆಗಳು ನಮ್ಮ ಧಾರ್ಮಿಕ ನೈತಿಕ ತಳಹದಿಯನ್ನು ಕಿತ್ತು ಬಿಸಾಟಿದವು ಕೋಮುವಾರು ಕಿತ್ತಾಟ ಪ್ರಾರಂಭವಾಯಿತು ಪಾಶ್ಚಾತ್ಯ ಆರ್ಥಿಕ ತತ್ವಾವಲಂಬನೆಯು ದೇಶವನ್ನು ದಿವಾಳಿ ಮಾಡಿತು ಬಡವರು ಹೆಚ್ಚಿದರು ಹಲವು ಐಶ್ವರ್ಯವಂತರು ಬಡವರ ರಕ್ತವನ್ನು ಹೀರುತ್ತ ಬಂದರು. ಬಡತನವು ಹೆಚ್ಚುತ್ತ ಹೆಚ್ಚುತ್ತ ಸಮಾಜದ ನೀತಿಯು ಸಡಲಿತು; ಧರ್ಮಕ್ಕೆ ಲೋಪ ಬಂತು ಮಾನ ಮರ್ಯಾದೆಗಳಿಗೆ ಅರ್ಥವಿಲ್ಲವಾಯಿತು. ಹೆಚ್ಚೇಕೆ? ಕರುನಾಡು ಇಂದು ಕತ್ತಲೆಯ ನಾಡು. ಕನ್ನಡಿಗರಿಂದು ಕಾಸಿಗೆ ತೆರವಿಲ್ಲದವರು

(ಮುಂದು·)

ಆದರೆ ನಿರಾಶೆಯನ್ನು ಹೊಂದಲು ಕಾರಣವಿಲ್ಲ ಮುಂದಿನ ಮಂಗಳ ದಿನಗಳ ಹೊಂಬಿಸಿಲು ತಲೆದೋರುತ್ತಿದೆ. ಕನ್ನಡಿಗರು ನಿದ್ದೆಯಿಂದೇಳುತ್ತಿರುವರು. ಸುತ್ತು ಮುತ್ತಲಿನ ಸರ್ವತೋಮುಖವಾದ ಉದ್ಯಮ ಧ್ವಾನವನ್ನು ಕೇಳಿ ಕೆಲಸಕ್ಕನುವಾಗುತ್ತಿರುವರು. ಮರುಗುವ ತಾಯಿಯಲ್ಲಿ ಮಕ್ಕಳಿಗೆ ಮಮತೆ ಹುಟ್ಟಿರುವದು; ಅದು ಹೆಚ್ಚುತ್ತಿರುವುದು. ಪುಲಕೇಶಿ, ವಿಕ್ರಮಾದಿತ್ಯ, ವಿದ್ಯಾರಣ್ಯ ಪಂಪ, ರನ್ನರಂತಹ ಪ್ರತಿಭಾ ಶಾಲಿಗಳನ್ನು ಸೃಷ್ಟಿಸಬೇಕೆಂಬ ಆಶೆಯು ಕನ್ನಡನಾಡಿನ ತಾಯಿಯರಿಗೆ ಹುಟ್ಟಿದೆ. ಅಜಂತ, ಎಲ್ಲೋರ, ಬೇಲೂರ, ಹಳೆಬೀಡುಗಳಲ್ಲಿ ನಿಂತಿರುವ ಸೌಂದರ್ಯ ಸೌಧಗಳನ್ನು ಮೀರಿಸುವ ಕಲಾಫಲಗಳನ್ನು ಬೆಳೆಯಲು ತಕ್ಕ ಕೃಷಿಯನ್ನು ಮಾಡಬೇಕೆಂಬ ಉದ್ದೇಶ್ಯವು ಬಗೆಯಲ್ಲಿ ಬೇರೂರಿದೆ.

ತರುಣರ ಮನಃ ಪ್ರಪಂಚದಲ್ಲಿ ವಿಚಿತ್ರ ಪ್ರಳಯವಾಗಿದೆ. ಅವರು ಚಿತ್ತ ಭಿತ್ತಿಯಲ್ಲಿ ಚಿತ್ರಿಸಿಕೊಂಡಿರುವ ಕರ್ನಾಟಕವು ಅಖಂಡವಾದುದು. ಆನಂದದಾಯಕವಾದುದು; ಸರ್ವಾವಯವ ಶೋಭಿತವಾದುದು; ಸರ್ವ ಶಕ್ತಿಯುಳ್ಳುದು. ಸೌಂದರ್ಯ, ಸ್ವಾತಂತ್ರ್ಯ, ಶಾಂತಿ ಸಂದೇಶಗಳನ್ನು ನಲ್ದೆಸೆಗಳಿಗೆ ಎಸೆಯುವಂಥದು·

ಅಲ್ಲಿ ಕಾಣಬರುವ ವ್ಯಕ್ತಿಗಳ ಶಕ್ತಿ ಸಾಮರ್ಥ್ಯವನ್ನು ಊಹಿಸಲು ಸಾಧ್ಯವಿಲ್ಲ. ಅಲ್ಲಲ್ಲಿ ಕಾರ್ಯೋನ್ಮುಖವಾಗಿರುವ 'ಗುಂಪು" ಗಳ ಏಕಾಗ್ರತೆಯನ್ನು ಬರೆಯಲು ಸಾಧ್ಯವಿಲ್ಲ. ಸದ್ದಿಲ್ಲದೆ ಕರ್ನಾಟಕ ಮಾತೆಯ ಸೇವೆಯನ್ನು ಮಾಡುತ್ತಿರುವ ಸೇವಕರ ಸಂಖ್ಯೆಯನ್ನು

ಹೇಳಲು ಅವಕಾಶವಿಲ್ಲ. ಕನ್ನಡ ಮಾತೆಯ ಮಂಗಳದ ದಿನಗಳು ಹತ್ತಿರವಾಗುತ್ತಿವೆ. ಆಕೆಯ ಗುಣಗಾನಗಳ ಧ್ವನಿಯು ಸಮೀಪಿಸುತ್ತಿದೆ. ಆಕೆಯ ದರ್ಶನೋತ್ಸುಕರಾಗಿ ಕನ್ನಡಿಗರೆಲ್ಲರೂ ನಡುಕಟ್ಟಿ ಕರಮುಗಿದು ನಿಂತಿರುವರು. ಆಕೆಯ ಆಗಮನವನ್ನಾಗಲೇ ಮುಂದುಭಟರು ಪ್ರಚುರಿಸಿದರು. ಕನ್ನಡಿಗರು ತಾಯಿಗೆ ಎಂತಹ ಸ್ವಾಗತವನ್ನು ನೀಡುವರೋ ಎಂದು ನೋಡಲು ಉತ್ಸುಕರಾಗಿ ಆಂಧ್ರರು, ತಮಿಲರು, ಮರಾಠರು, ಎವೆಯಿಕ್ಕದೆ ನೋಡುತ್ತಿರುವರು!

---ಜಯಗದಪ.

ರಾಮನವಮಿ.

(ಗುಜರಾಥೀ ನವಜೀವನ.)

ರಾಮಜನ್ಮದ ಆನಂದವು ಅಪೂರ್ವವಾಗಿರುವದು. ರಾಮಜನ್ಮದ ಮೊದಲಿನ ಪರಿಸ್ಥಿತಿಯನ್ನು ಆದಿಕವಿ ಶ್ರೀ. ವಾಲ್ಮೀಕಿಯು ವರ್ಣಿಸಿರುವನು. ವಿಶ್ವಾಮಿತ್ರರು ಧರ್ಮದ ರಕ್ಷಣೆಗಾಗಿ ದಶರಥ ರಾಜನ ಬಳಿಯಲ್ಲಿ ಇಬ್ಬರು ವಿದ್ಯಾರ್ಥಿಗಳಿಗೋಸ್ಕರ ಯಾಚಿಸಲು ರಾಜನು ಮೋಹವಶನಾಗಿ ಮೊದಲಿಗೆ ಕೊಡುವದಕ್ಕೆ ಒಪ್ಪದಾದನು. ಆದರೆ ಕೂಡಲೇ ಕರ್ತವ್ಯದ ಎಚ್ಚರಿಕೆಯುಂಟಾಗಿ ತನ್ನ ಪ್ರಾಣಸಮಾನರಾದ ಪ್ರಿಯ ಪುತ್ರರನ್ನು ಋಷಿಗೆ ಒಪ್ಪಿಸಿದನು.

ಈಗ ರಾಮಲಕ್ಷ್ಮಣರ ಪ್ರತಿದಿನದ ಶಿಕ್ಷಣವು ನಿಂತುಹೋಯಿತು. ರಾಜಪುತ್ರರ ಶಿಕ್ಷಣವು ಬಹುವಿಧವಾಗಿರುವದು. ಅನೇಕ ವಿಷಯಗಳನ್ನು ಅವರು ಕಲಿಯಬೇಕಾಗುವದು. ಯಾವತ್ತು ಇಂದ್ರಿಯಗಳ ವಿಕಾಸವಾಗಬೇಕೆಂಬ ಹೇತುವಿನಿಂದ ಕುಲಪತಿಯಾದ ವಸಿಷ್ಠರು ರಾಮಲಕ್ಷ್ಮಣರ ಶಿಕ್ಷಣದ ಯೋಜನೆಯನ್ನು ಮಾಡಿರಲು ವಿಶ್ವಾಮಿತ್ರರ ಆಗಮನದಿಂದ ಅದೆಲ್ಲವೂ ನಿಂತುಹೋಯಿತು. ವಿಶ್ವಾಮಿತ್ರರು ಆ ರಾಜಪುತ್ರರನ್ನು ಪ್ರವಾಸಕ್ಕೆ ಕರೆದೊಯ್ದರು. ಅಲ್ಲಿ ಅವರಿಗೆ ನಿಸರ್ಗದ ಪರಿಚಯವಾಯಿತು. ದೇಶದ ಪರಿಸ್ಥಿತಿಯನ್ನು ಸ್ವಂತ ಕಣ್ಣಿನಿಂದ ನೋಡಿ ರಾಮಚಂದ್ರನು ವಿಶ್ವಾಮಿತ್ರರಿಗೆ ಪ್ರಶ್ನೆ ಮಾಡಿದನು:-

" ಈ ಪ್ರದೇಶದಲ್ಲಿ ಇಷ್ಟು ನದಿಗಳು ಹರಿಯುತ್ತಲಿವೆ, ಈ ಪರಿಯಾಗಿ ನಿಸರ್ಗವು ಸಮೃದ್ಧವಾಗಿರುವದು, ಹೀಗಿದ್ದರೂ ಜನರಿಗೆ ಸುಖಸೌಕರ್ಯಗಳೇ ಏಕಿರುವದಿಲ್ಲ? ಮತ್ತು ಎಲ್ಲಿಯಾದರೂ ಅಲ್ಪಸ್ವಲ್ಪ ಇದ್ದರೆ, ಅವಾದರೂ ಈ ಬಗೆಯ ಭಯಭೀತ ಸ್ಥಿತಿಯಲ್ಲಿಯೇಕೆ? "

ವಿಶ್ವಾಮಿತ್ರರು ಆ ಮೇಲೆ ಆ ಪ್ರದೇಶದ ಇತಿಹಾಸವನ್ನು ಹೇಳತೊಡಗಿದರು. " ಒಂದು ಕಾಲದಲ್ಲಿ ಈ ಪ್ರದೇಶವು ಸುಖಿಯಾಗಿತ್ತು, ಸಮೃದ್ಧವಾಗಿತ್ತು. ಆಮುಂದೆ ಇಲ್ಲಿ ಪ್ರಜಾಭಕ್ಷಕರಾದ ಅಸುರರ ರಾಜ್ಯವಾಯಿತು, ಅದರಿಂದ ಜನರು ಈ ದೆಶೆಗೆ ಒಳಗಾಗಿರುವರು." ಇಂತು ಹೇಳಿ ತಮ್ಮ ತೇಜಸ್ವೀನೇತ್ರಗಳಿಂದ ರಾಮಲಕ್ಷ್ಮಣರ ಮುಖ ದಿಟ್ಟಿಸಿ ನೋಡಿ ಆ ರಾಜರ್ಷಿಗಳು ಅಂದದ್ದು:- "ತರುಣರೇ, ಈ ಎಲ್ಲ ತಾಪವನ್ನು ದೂರಮಾಡುವ ಭಾರವು ನಿಮ್ಮ ತಲೆಯಮೇಲಿದೆ!" ಸಂಜೆಯಾಯಿತು. ವಿಶ್ವಾಮಿತ್ರರು ರಾಜಪುತ್ರರಿಗೆ ರಘುಕುಲದ ಉಜ್ವಲವಾದ ಕೀರ್ತಿಯನ್ನು ಕೃತಪಡಿಸಿದರು.

ಇದೇ ಯಥಾರ್ಥಸ್ಥಿತಿಯನ್ನು ಕಾವ್ಯಮಯ ಭಾಷೆಯಲ್ಲಿ ವಾಲ್ಮೀಕಿಯು ಎರಡನೇ ಕಡೆಯಲ್ಲಿ ವರ್ಣಿಸಿರುವನು. ಪ್ರಸಂಗವು ರಾಮಜನ್ಮಕ್ಕೆ ಮೊದಲಿನದಿರುವದು. ಅಸುರರು ಉನ್ಮತ್ತರಾಗಿರುವರು. ಶೂರ್ಪಣಖೆಯು ಇಡೀ ದೇಶವನ್ನು ತನ್ನ ತೀಕ್ಷ್ಣವಾದ ನಖಗಳಿಂದ ಘಾಯಗೊಳಿಸುತ್ತಿದ್ದಳು. ಖರ ಮತ್ತು ದೂಷಣರು ದೇಶದಲ್ಲೆಲ್ಲ ಅನೀತಿಯನ್ನು ಹಬ್ಬಿಸುತ್ತ ನಡೆದಿದ್ದರು. ಕುಂಭಕರ್ಣನು ಪ್ರಜೆಗಳಲ್ಲಿ ದೊಡ್ಡ ದೊಡ್ಡ ವರ್ಗದವರನ್ನು ಒಂದಿಲ್ಲೊಂದು ಬಗೆಯಿಂದ ತಿಂದೇ ಬಿಡುತ್ತಿದ್ದನು. ಸಾತ್ವಿಕಬುದ್ಧಿಯ ವಿಭೀಷಣನು ರಾವಣನ ಸಭೆಯಲ್ಲಿ ಧರ್ಮ-ಧರ್ಮವೆಂದು ಅರಣ್ಯರೋದನವನ್ನು ಮಾಡುತ್ತಿದ್ದನು. ಇವನ ಮಾತಿಗೆ ಸಾಮ್ರಾಜ್ಯಮದದಿಂದ ಉನ್ಮತ್ತರಾದ ರಾಕ್ಷಸರು "ಹಿಹಿಹಿಹಿ" ನಗುತ್ತಿದ್ದರು. ತನ್ನ ಅಣ್ಣನೊಂದಿಗೆ ಸಹಕಾರವನ್ನು ಮಾಡಬೇಕೋ ಅಸಹಕಾರವನ್ನು ಮಾಡಬೇಕೋ ಎಂಬುದರ ನಿರ್ಣಯವನ್ನು ಇವನು ಮಾಡಲಾರದವನಾಗಿದ್ದನು. ಮತ್ತು ರಾವಣನು ತನ್ನ ರಾಜ್ಯದ ದಶವಿಧ ಖಾತೆಗಳ ದ್ವಾರದಿಂದ ಏಕಮುಖಿಯಾದ ಅನಿಯಂತ್ರಿತ ಸತ್ತೆಯನ್ನು ನಡಿಸುತ್ತಲಿದ್ದನು. ನವಗ್ರಹಗಳೂ ಕೂಡ ಇವನ ಮನೆಯಲ್ಲಿಯ ದಾಸ್ಯವನ್ನು ವಹಿಸಿರಲು ನಿಸರ್ಗಶಕ್ತಿಗಳ ಪಾಡೇನು? ಜಗತ್ತಿನ ಸ್ವಾಮಿಯು ಈಶ್ವರನೋ ಅಥವಾ ರಾವಣನೋ ಎಂಬಬಗ್ಗೆ ಜನರಲ್ಲಿ ಸಂಶಯವು ಉತ್ಪನ್ನವಾಗಿತ್ತು. ತನ್ನ ನಡುಗಡ್ಡೆಯಲ್ಲಿಯೇ ನಿಂತುಕೊಂಡು ಇಡೀ ದೇಶವನ್ನು-ಸಂದಿಮೂಲೆಗಳನ್ನೂ ಬಿಡದೆ-ನೋಡಲು ಅವನಿಗೆ ಶಕ್ಯವಾಗಿತ್ತು; ರಾವಣನ ಕಣ್ಣಿಗೆ ಮರೆಯಾಗಿ ಅವ್ಯದೂ ಉಳಿಯುತ್ತಿರಲಿಲ್ಲ.

ರಾವಣನ ಅಭಿಮಾನಕ್ಕಂತೂ ಸೀಮೆಯೇ ಇರಲಿಲ್ಲ. ರಾವಣನು ತನ್ನ ಮನಸ್ಸಿನಲ್ಲಿ ಮತ್ತು ಸಾರ್ವಜನಿಕವಾಗಿ ದರಬಾರಿನಲ್ಲಿ ಕೂಡ-" ಈ ಒಬ್ಬ ಶತ್ರುವನ್ನು ಹಣ್ಣಿಗೆ ತಂದೆನು; ಈ ಹೊತ್ತೇ ಬೇರೊಬ್ಬರನ್ನು ನಿರ್ಮೂಲಗೊಳಿಸುವೆನು. ನಾನು ಎಲ್ಲರಿಗಿಂತಲೂ ಶ್ರೇಷ್ಠನು. ನಾನೇ ಸುಖೋಪಭೋಗಿಯು. ಯಾವತ್ತು ಸಿದ್ಧಿಗಳು ನನ್ನ ದಾಸಿಯರು. ನನ್ನ ಬಲವು ಎಲ್ಲರಿಗಿಂತಲೂ ಮಿಗಿಲಾಗಿರುವದು. ಎಲ್ಲರಿಗಿಂತಲೂ ಹೆಚ್ಚಿನ ಜಾತಿಯು ನನ್ನದೇ. ನನ್ನ ಸಂಸ್ಕೃತಿಯೇ ಸರ್ವಶ್ರೇಷ್ಠವಾಗಿರುವದು. ಜಗತ್ತಿನ ಕಲ್ಯಾಣ ಮಾಡುವ ಭಾರವೆಲ್ಲವು ನನ್ನ ತಲೆಯಮೇಲೆಯೇ ಇರುವದು. ನಾನೇ ಕೊಡ ಗೈದೊರೆಯಾಗಿರುವೆನು. ಸರ್ವಪ್ರಕಾರದ ಸುಖಗಳು ನನ್ನ ಗೋಸುಗನೇ ಇರುವವು " ಎಂದು ಹೇಳುತ್ತಿದ್ದನು. ಈ ಬಗೆಯ ಗರ್ವೋಕ್ತಿಗಳನ್ನಾಡುವದಷ್ಟೇ ರಾವಣನಿಗೆ ಸುಖವಾಗುತ್ತಿರಲಿಲ್ಲ. ಆದರೆ ಎಲ್ಲರ ಬಾಯಿಂದಲೂ ತನ್ನ ಈ ಗುಣಗಾನವನ್ನು ಮಾಡಿಸಿ ಸುಖಪಡುತ್ತಿದ್ದನು. ಎಲ್ಲರೂ ಇವನ ಸ್ತುತಿಪಾಠಕರೇ ಆಗಿದ್ದರು. ಪಂಡಿತ ಜನರು ಅವನ ಇಚ್ಛೆಯಂತೆ ಶಾಸ್ತ್ರಾರ್ಥವನ್ನು ಮಾಡಿ ತೋರಿಸುತ್ತಿದ್ದರು. ಪುರಾತತ್ವವಿದರು ಇವನ ಯಶಸ್ಸಿನ ಇತಿಹಾಸವನ್ನು ಭೂಗರ್ಭ ಮೊದಲಾದವುಗಳಿಂದ ಕೆದರಿ ತೆಗೆಯುತ್ತಿದ್ದರು. ಪ್ರತಿಯೊಬ್ಬ ಗುಣೀಮನುಷ್ಯನು ತನ್ನ ಶಕ್ತಿಯನ್ನೆಲ್ಲ ಇವನ ಚರಣದಲ್ಲರ್ಪಿಸುವದರಿಂದ ತನ್ನ ಜನ್ಮವು ಕೃತಕೃತ್ಯವಾಗುವದೆಂದು ತಿಳಿಯುತ್ತಿದ್ದನು. ಎಂಥ ಪಾಮರತೆಯಿದು!

ಈ ದಶೆಯಲ್ಲಿ ದೀನಹೀನಳಾದ ಪೃಥ್ವಿಯು ಬ್ರಹ್ಮದೇವರ ಬಳಿಯಲ್ಲಿ ಹೋಗಿ " ಪ್ರಭೋ! ಈ ಭಾರವು ಅಸಹ್ಯವಾಗಿರುವದು. ಮಾನವನ ಮಾಂಗಲ್ಯದ ಮೇಲಿನ ಶ್ರದ್ಧೆಯು ಹಾರುವದು. ಜನರು ತಪಸ್ಸನ್ನು ಬಿಟ್ಟುಕೊಟ್ಟು ಸುರಾಪಾನ ಮಾಡುತ್ತಿರುವರು. ಲಂಕೆಯ ರಾಷ್ಟ್ರದೇವಿಯು ದಿನಾಲು ಅಸಂಖ್ಯ ಪ್ರಾಣಿಗಳ ಬಲಿಯನ್ನು ತೆಗೆದುಕೊಳ್ಳುತ್ತಿರುವಳು. ದೇವತೆಗಳ ವ್ಯವಹಾರವೆಲ್ಲವೂ ನಿಂತುಹೋಗಿದೆ. ಈ ಸ್ಥಿತಿಯು ಎಲ್ಲಿಯವರೆಗೆ ಹೀಗೇ ಇರತಕ್ಕದು?" ಎಂದು ಹೇಳಿದಳು. ಅದಕ್ಕೆ ಬ್ರಹ್ಮದೇವರು ಹೇಳಿದ್ದೇನೆಂದರೆ-"ಹೇ ಪೃಥ್ವಿ! ನೀನು ಶ್ರದ್ಧೆಯನ್ನು ಕಳೆದುಕೊಳ್ಳಬೇಡ. ಚರಾಚರಗಳಲ್ಲಿ ವ್ಯಾಪಿಸಿರುವ ಈಶ್ವರತತ್ವಕ್ಕೆ ಶರಣುಹೋದರೆ ಎಲ್ಲ ದುಃಖಗಳ ನಿವಾರಣೆಯಾಗುವದು. ಯಾರು ಈಗ ವನ್ಯ ವಾನರರೆಂದೂ ಅಚ್ಛರೆಂದೂ ಕರೆಯಲ್ಪಡುತ್ತಿರುವರೋ, ಯಾರಿಗೆ ರಾಕ್ಷಸೀ ಸಂಸ್ಕೃತಿಯ ಸ್ಪರ್ಶವಾಗಿಲ್ಲವೋ, ಯಾರನ್ನು ಮನುಷ್ಯರು ಅಹುದೋ ಅಥವಾ ಅಲ್ಲವೋ ಎಂಬ ಸಂಶಯದಿಂದ 'ವಾ-ನರ' ಎಂದು ಜನರು ಕರೆಯುತ್ತಿರುವರೋ, ಇಂಥ ಮುಗ್ಧರಾದ ಪ್ರಜೆಗಳಲ್ಲಿ ಈ ಈಶ್ವರೀ ಶಕ್ತಿಯು ಪ್ರಕಟವಾಗುವದು. ಇವರ ಕೈಯಿಂದಲೇ ರಾವಣನ ಪರಾ

೩ ನೇ ಪುಟ ನೋಡಿ.

ಬಾರುಕೋಲು.

ಈ ಸಾರೆ ನನ್ನ ಬಾರುಕೋಲಿನ ಸ್ಫೋಟಗಳು ಪ್ರಸಿದ್ಧಿಯನ್ನು ಹೊಂದುವವೋ ಇಲ್ಲವೋ ನಾನರಿಯೆ. ಯಾಕೆಂದರೆ ಅವು ವೃತ್ತಪತ್ರಕಾರರಿಗೆ ಸಂಬಂಧಿಸಿಯೇ ಇವೆ. ಕನ್ನಡಿಗನ ಸಂಪಾದಕರು ತಮ್ಮ ವ್ಯವಸಾಯಕ್ಕೆ ಸಂಬಂಧಿಸಿದ ಈ ಲೇಖಕ್ಕೆ ಅವಕಾಶ ಕೊಡುವರೋ ಇಲ್ಲವೋ ಸಂಶಯ. ಅವಕಾಶ ಕೊಟ್ಟರೆ ಅದು ವಾಚಕರ ನಿದರ್ಶನಕ್ಕೆ ಬರುವದು. ಇಲ್ಲವಾದರೆ ಕಸದ ಬುಟ್ಟಿಯನ್ನು ಕಾಣುವದು. ಏನಾಗುವದೋ ನೋಡುವಾ.

* * * *

ನನಗೆ ಈಗ್ಗೆ ೬೩ ವರ್ಷಗಳು. ಈ ಅವಧಿಯಲ್ಲಿ ಕನ್ನಡನಾಡಿನಲ್ಲಿ ಅನೇಕ ವೃತ್ತಪತ್ರಿಕೆಗಳು ಹುಟ್ಟಿವೆ; ಸತ್ತಿವೆ; ಸ್ಥಿರವಾಗಿದ್ದುಕೊಂಡು ಊರ್ಜಿತಾವಸ್ಥೆಯಲ್ಲಿದ್ದಂಥ ಪತ್ರಿಕೆಗಳೇ ಇಲ್ಲ. ಅಖಂಡ ಕನ್ನಡನಾಡಿನಲ್ಲಿ ಎದೆ ತಟ್ಟಿ ಹೇಳುವಂತೆ ಒಂದಾದರೂ ಪತ್ರವು ಊರ್ಜಿತಾವಸ್ಥೆಯಲ್ಲಿಲ್ಲ; ಕೇಸರೀ ಪತ್ರಕ್ಕೆ ೨೫೦೦೦ ಜನ ಚಂದಾದಾರರು ಈಗ್ಗೆಯೂ ಇರುವರಂತೆ. ಹಿಂದಕ್ಕೆ ಆ ಸಂಖ್ಯೆಯು ೪೦೦೦೦ ವರೆಗೆ ಹೋಗಿತ್ತಂತೆ! ಮರಾಠೀ ಮಾತನಾಡುವ ಜನರ ಸಂಖ್ಯೆಯು ೧ ಕೋಟಿ. ೮೫೦ ಕನ್ನಡ ಮಾತನಾಡುವವರು ೧ ಕೋಟಿ ೫೦ ಲಕ್ಷ. ಆದರೆ ಕೇಸರಿಯ ಅರ್ಧಾಂಶ ಚಂದಾದಾರರು ಅಂದರೆ ೧೨೫೦೦ ಜನರು ಕನ್ನಡ ಪತ್ರಿಕೆಗಳಿಗಿರಬಾರದೇಕೆ? ಅಷ್ಟೇ! ೨೦೦೦೦ ಜನ ಚಂದಾದಾರರು ಕನ್ನಡ ನಾಡಿನಲ್ಲಿಲ್ಲವೇ? ಕಲ್ಪನೆಯಲ್ಲಿ ಈ ಸಂಖ್ಯೆ ನನ್ನ ಯೋಚಿಸಿದರೂ ಅಪಹಾಸ್ಯವಾಗಬಹುದು!! ಬೇಡಾ. ಕನ್ನಡನಾಡಿನ ವೃತ್ತಪತ್ರಿಕಾ ಕರ್ತೃಗಳೇ, ಆ ಕಲ್ಪನೆಯು ಹಾಸ್ಯಾಸ್ಪದಕ್ಕೆ ಹೋಗಬೇಡಿ!

ಯಾಕೆಂದರೆ ಇಂಗ್ಲೀಷ ಕಲಿತವರೂ ಸುಶಿಕ್ಷಿತರೂ (ನಾನೂ ಸುಶಿಕ್ಷಿತನೇ) ಆದ ನಮ್ಮ ಬಾಂಧವರ ಚಿತ್ತವೆಲ್ಲ ಇಂಗ್ಲೀಷ ಭಾಷೆಯಲ್ಲಿ ಲೀನವಾಗಿರಬೇಕು. ಆ ಭಾಷೆಯ ವೃತ್ತಪತ್ರಗಳೇ ಅವರಿಗೆ ಬೇಕು. ಸುಡುಗಾಡು ಆ ಕನ್ನಡ ಪತ್ರಗಳಲ್ಲೇನಿರುವದು? ಒಬ್ಬ ಮಹಾಶಯ ಸುಶಿಕ್ಷಿತರೇ, ಕನ್ನಡ ಭಾಷೆಯಲ್ಲೇನೂ ಇರದಿದ್ದರೆ, ಪತ್ರಿಕೆಗಳೆಲ್ಲೆಲ್ಲ ಸುಡುಗಾಡು! ಇದ್ದಷ್ಟು ನಿಜವಿದ್ದರೆ ನಿಮ್ಮ ಸುಶಿಕ್ಷಣದ ಮತ್ತು ವ್ಯಾಪಕವಾದ ಇಂಗ್ಲೀಷ ಭಾಷೆಯ ಮುಖಾಂತರವಾಗಿ ನೀವು ಸಂಪಾದಿಸಿದ ಜ್ಞಾನದ ಲಾಭವನ್ನು ಈ ಕನ್ನಡ ನಾಡಿನ ಜನಗಳಿಗೆ ನೀವು ಯಾಕೆ ಮಾಡಿಕೊಡಬಾರದು? ಮಾಡಿದರೆ ಆ ಸುಡುಗಾಡು ತಾನೇ ಸುಡುಗಾಡಿಗೆ ಎಲ್ಲಿ ಓಡಿ ಹೋಗುವದೆಂಬ ಭಯವಿರುವದೋ? ಅಥವಾ ಕನ್ನಡ ನುಡಿಯಲ್ಲಿ ಬರೆಯುವ ಯೋಗ್ಯತೆಯು ನಿಮ್ಮಲ್ಲಿಲ್ಲದ ಮೂಲಕ ವಕೀಲಿ ಪದ್ಧತಿಯಂತೆ ಏನಾದರೊಂದು ಹೇಳುತ್ತಿರುವಿರೋ?

* * * *

ಏನೋ ಬಹ ಬಡಿಸುವಿರಿ. ನಮಗೆ ನಮ್ಮ ವ್ಯವಸಾಯವಿಲ್ಲವೇ? ಅದನ್ನು ಬಿಟ್ಟು ನಾವು ಈ ಲೇಖನ ವ್ಯವಸಾಯವನ್ನು ಮಾಡಬೇಕೆಂದು ಹೇಳುವಿರಾ? ಒಳ್ಳೇ ತಮಾಷೆ!" ಎಂದು ಸುಶಿಕ್ಷಿತರನ್ನವರು ನುಡಿದದ್ದನ್ನು ನಾನು ಕೇಳಿರುವೆನು. ಸರಿ, ನಿಮ್ಮ ದುಡ್ಡುಗಳಿಸುವ ವ್ಯವಸಾಯದಲ್ಲಿ ಈ ದುಡ್ಡು ಕಳೆದುಕೊಳ್ಳುವ ಲೇಖನ ವ್ಯವಸಾಯಕ್ಕೆ ಅವಕಾಶವಿರದಿದ್ದರೆ ಬಿಡಿ. ದುಡ್ಡನ್ನು ಗಳಿಸುವವರಾದ ನೀವು ಕನ್ನಡ ಪತ್ರಿಕೆಗಳಿಗೆ ಪ್ರೋತ್ಸಾಹನವನ್ನಾದರೂ ಕೊಡಲು ಆತಂಕವೇನು? ನೀವು ಓದತಕ್ಕ ವಿಷಯಗಳು ಅಲ್ಲಿರದಿದ್ದರೂ ಅವು ನಿಮ್ಮ ಮನೆಗಾದರೂ ಬಂದು ಬೀಳಲಿ. ಕಡೆಗೆ ಸ್ವಂತವಾಗಿ ನೀವೇ ನಿಮ್ಮ ಕ್ಷೌರವನ್ನು ಮಾಡಿಕೊಳ್ಳವಾಗ್ಗೆಯಾಗಲೀ, ಧೂಮ್ರಪಾನವನ್ನು ಸೇವಿಸುವಕಾಲದಲ್ಲಿಯಾಗಲೀ, ಅಸ್ವಳದಲ್ಲಿಯೂ ಅಕಾಲದಲ್ಲಿಯೂ ನೀವು ತಿಂಡಿಯನ್ನು ಸೇವಿಸುವಾಗ್ಗೆಯಾಗಲಿ, ಅವು ಸಕಾಲವಾಗಿ ನಿಮ್ಮ ಸೇವೆಯನ್ನು ಮಾಡುವವು! ವರ್ಷದಲ್ಲಿ ನೂರಿನ್ನೂರು ರೂಪಾಯಿಗಳನ್ನು ನಿಮ್ಮ ವಿರಾಮದ ಸಲುವಾಗಿ ಕಳೆಯುವ ಬಜೆಟ್ಟಿನಲ್ಲಿ ಕಡಿಮೆ ೮-೧೦ ರೂಪಾಯಿಗಳನ್ನಾದರೂ ಕನ್ನಡ ವೃತ್ತಪತ್ರಿಕೆಗಳಿಗಾಗಿ ಎತ್ತಿಟ್ಟು, ಒಂದೆರಡು ಪತ್ರಿಕೆಗಳನ್ನಾದರೂ ತರಿಸಿರಿ. ಅದೇನೂ ನಿಮಗೆ ಭಾರವಾಗದು. ಈ ಕೆಲಸವನ್ನು ಮಾತ್ರ ನೀವು ಬೇಗನೇ ಮಾಡಬೇಕು; ಕಣ್ರೋ! ಇದು ನೋಡಿ ಈಗ ಗಾಂಧೀಯುಗವು! ಜ್ಞಾನಾರ್ಜನೆಗೆಂದು ಯಾರು ಪತ್ರಿಕೆಗಳನ್ನು ತರಿಸುವರೋ; ಅವರಿಗೆ ಮಾತ್ರ ವೃತ್ತಪತ್ರಗಳನ್ನು ಕಳಿಸಬೇಕು. "ಸ್ವಂತವಾಗಿ ಕ್ಷೌರಾದಿ ಕರ್ಮಗಳನ್ನು ಮಾಡುವ ಕಾಲಕ್ಕೆ ಸೇವೆಗಾಗಿರಲಿ?" ಎಂಬ ಉದ್ದೇಶದಿಂದ ವೃತ್ತ ಪತ್ರಿಕೆಗಳನ್ನು ತರಿಸುವವರಿಗೆ ಇನ್ನು ಮೇಲೆ ಯಾವ ಪತ್ರಿಕೆಗಳೂ ಕಳಿಸಲ್ಪಡಲಾರವೆಂಬದಾಗಿ ನಿರ್ಣಯವಾದರೆ, ಕರ್ಣಾಕರ್ಣಿಯಾದೀತಯ್ಯಾ?

* * * *

ಕೂಂಚ ಅತ್ತ ಹೋಯಿತು! ವೃತ್ತಪತ್ರಿಕೆಗಳ ಮೇಲಿಟ್ಟ ಗುರಿಯು ಸುಶಿಕ್ಷಿತರ ಮೇಲೆ ಹಾರಿಬಿತ್ತು. ಹೋಗಲಿ ಹೇಗಾದರೂ 'ಬಾರುಕೋಲಿನ' ಏಟೆಂದಾದರೂ ಸರಳ ರೀತಿಯಲ್ಲಿ ಹೋಗದೆ ಬಹುಮೋಡಣೆಯಾಗಿರಬಹುದು; ಬಹುವಾದರೂ 'ಬಾರುಕೋಲು' ಇಲ್ಲವಾದರೆ ಜೋಲಿ ಕೋಲು! ಸರಿ, ಇನ್ನು ಮೇಲೆ ನನ್ನ ಸುಶಿಕ್ಷಿತ ಕನ್ನಡಿಗರು ಬೇರೆ ಕನ್ನಡ ವೃತ್ತಪತ್ರಿಕೆಗಳನ್ನು ತರಿಸದಿದ್ದರೂ 'ಕನ್ನಡಿಗ' ನನ್ನಾದರೂ ತರಿಸುವರೆಂಬ ಬಯಕೆ! ಯಾಕೆಂದರೆ ನೋಡಿ ಈಗ್ಗೆ ಕರ್ನಾಟಕವು ಜಾಗ್ರತವಾಗಿದೆ. ಮುಖ್ಯವಾಗಿ ಕನ್ನಡಿಗರ ವಾರ್ಷಿಕ ಚಂದಾ ಒಂದೇ ಒಂದು ರೂಪಾಯಿ! ಕರ್ನಾಟಕವು ಜಾಗ್ರತವಾಗುವ ಸಮಯದಲ್ಲಿ ಅಗ್ಗದ ಪತ್ರಿಕೆಯನ್ನು ಸಹ ತರಿಸದಿದ್ದರೆ ಜನರ ಅಪವಾದವು ತಮ್ಮ ಮೇಲೆ ಬರುವದೆಂಬುದನ್ನು ಬಲ್ಲಿರಿ. ಹೊಸ ನಿಸ್ವಲ್ಲರಿದ್ದರೂ ಈ ಅಪವಾದದ ಅಂಜಿಕೆಯಿಂದಾದರೂ ತರಿಸಬಹುದು. ಯಾವ ಕನ್ನಡ ಪತ್ರಿಕೆಗಳನ್ನೂ ತರಿಸದೇ ಕನ್ನಡಿಗನನ್ನೇ ಮಾತ್ರ ತರಿಸಿದರೆ ಅಗ್ಗದ ಪತ್ರಿಕೆಯೆಂದು ಅದನ್ನು ಮೆಚ್ಚಿದನೆಂದು ಇಂಥವನು ಕನ್ನಡಿಗನಿಗೆ ಚಂದಾದಾರನಾಗಿರುವನೆಂದು 'ಚೇಳಿನ ಕೊಂಡಪ್ಪನು' ನಿಮಗೇನು ಚೇಷ್ಟೆಮಾಡನು. ಕಂಡಿರೋ? ಇನ್ನು ಹಾಗೆ ಚೇಷ್ಟೆ ಮಾಡುವೆನೆಂಬ ಭಯವು ನಿಮಗಿದ್ದರೆ ಕನ್ನಡಿಗನ ಜೊತೆಯಲ್ಲಿ ಒಂದೆರಡು ಹೆಚ್ಚು ಪತ್ರಿಕೆಗಳನ್ನು ತರಿಸಿರಿ! ಆದರೆ ಏನೂ ತರಿಸದಿದ್ದರೆ ಮಾತ್ರ ಚೇಳಿನ ಕೊಂಡೆಯು ಸಿದ್ಧವಿದೆ! ಅದು ಸಿದ್ಧವಿದ್ದರೂ, ಚೇಳಿನ ಕೊಂಡೆಯ ಬಡಿತವು ನಿಮಗೆ ತಟ್ಟಿದರೆ ನನ್ನ ಆಣೆ! ನಿಮ್ಮ ತೊಗಲು ಅಷ್ಟೊಂದು ಗಟ್ಟಿಯಾದದ್ದು; ಅಲ್ಲವೇನು? ಅಲ್ಲವಾದರೆ ಹೋಗಲಿ ಬಿಡಿ! ಇಲ್ಲದ ರಗಳೆ ಬೇಡ.

* * * *

ಆಯಿತು! ನನಗೆ ಕೊಟ್ಟ ಎರಡು ಅಂಕಣಗಳ ಸ್ಥಳವು ಮುಗಿಯಿತು. ನನ್ನ ವೃತ್ತಪತ್ರಿಕೆಗಳ ವಿಷಯವು ಮಾತ್ರ 'ಮುಗಿಯಲಿಲ್ಲ. ಅರ್ಧಕ್ಕೇ ನಿಂತಿತು! ಅದೂ ಅಸಹ್ಯಾಗಿ ನಿಂತಿತು! ಆಗಲಿ ಸಮಯವು ದೊರೆತರೆ ಮುಂದಿನ ಸಂಚಿಕೆಯಲ್ಲಿ ಬಾರುಕೋಲು! ಇತಿ

ಚೇಳಿನಕೊಂಡಪ್ಪ

ಬೆಳ್ಳಿಯ ರಥವು.

ಪುದುಕೊಟ್ಟಾ ಸಂಸ್ಥಾನದಲ್ಲಿ ಇರುವಂಥ ರಾಮಚಂದ್ರಪುರದೊಳಗೆ ತಿರುಪಲಿಯರ ಶ್ರೀಪಾಟಲಿ ಸ್ವಾರಸ್ವಾಮಿಯವರ ಸಲುವಾಗಿ ರಥೋತ್ಸವವು ಕಳೆದ ತಿಂಗಳ ೧೬ನೇ ತಾರೀಖಿನ ದಿವಸ ಜರಗಿತು. ಆ ರಥವು ಬೆಳ್ಳಿಯಿಂದ ಮಾಡಲ್ಪಟ್ಟಿದ್ದಿದ್ದು ೨ ಲಕ್ಷ ರೂ. ಬೆಲೆ ಬಾಳುವಂಥವಾಗಿದೆ. ಅಲ್ಲಿ ೧೦೦೦೦ ಜನರು ನೆರೆದಿದ್ದರು. ಆ ರಥಕ್ಕೆ ವಿದ್ಯುದ್ದೀಪಗಳನ್ನು ಹಚ್ಚಿದ್ದರಿಂದ ಅದಕ್ಕೆ ಹೆಚ್ಚು ಶೋಭೆಯುಂಟಾಗಿತ್ತು. ಕುಂಭಕೋಣದ ಜಗದ್ಗುರು ಶ್ರೀ ಶಂಕರಾಚಾರ್ಯ ಸ್ವಾಮಿಯವರು ಸಹ ಅಲ್ಲಿಗೆ ದಯಮಾಡಿಸಿದ್ದರು.

ವರ್ತಮಾನಸಾರ

ಸ್ಥಳವೃತ್ತ

ಕಳೆದ ವಾರ್ತಾಪತ್ರದಲ್ಲಿ ಅವರು ಸಾಯಂಕಾಲದಲ್ಲಿ ಹಾವಿನ ... ಯು ಕಚ್ಚಿ ಕೆಲವು ವೇಗನೆ ಕಾಂಕ್ಷಣವಾಗಿ ಅಂದಾಕೆಯು ... ಇದು ವಿಜಾಪುರ ಜಿಲ್ಲೆಯವರಿಗೆ ಅಪರೂಪದ ಸಂಗತಿಯು.

ಶ್ರೀ. ರಾಘವೇಂದ್ರ ಸ್ವಾಮಿಗಳವರ ಆಗಮನವಾಗಿದೆ ಉತ್ತರಾಧಿ ಮಠದ ವೈದಿಕ ವೃಂದವು ಅವರ ದರ್ಶನಕ್ಕೆ ಸಹ ಹೋಗಿರುವದಿಲ್ಲ. ಕೆಲವು ಪ್ರತಿಷ್ಠಿತ ಗೃಹಸ್ಥರು ಅವರ ದರ್ಶನಕ್ಕೆ ಹೋಗಿದ್ದರು ರಾಮ ನವಮಿಯ ದಿನ ಭೋಜನಕ್ಕೆ ಮಠದ ಭೇದಭಾವವಿಲ್ಲದೇ ಅನೇಕರು ಹೋಗಿದ್ದರು. ಉತ್ತರಾದಿ ಮಠದಿಂದ ಬಹಿಷ್ಕಾರವು ಬರುವದೋ? ... ಮಾಧ್ವರ ಕಲಹವು!! ವೇಯಲಕ್ಷ್ಮೀ ಕೃಷ್ಣಾಚಾರ್ಯರ ಉಪ ...ಸಗಳು ನಡೆದಿವೆ.

ಬಾಗಲಕೋಟೆಯ ತಾಲೂಕ ಕಾಂಗ್ರೆಸ ಕಮೀಟಿಯ ಸಾಧಾರಣ ಸಭೆಯು ರವಿವಾರ ೫ನೇ ತಾ॥ ದಿನ ಕಾಂಗ್ರೆಸ ಕಮೀಟಿಯಲ್ಲಿ ಸಂಜೆಯ ... ಗಂಟೆಗೆ ಸರಿಯಾಗಿ ಜರಗುವದು.

ಕರ್ನಾಟಕ.

ಮುಂಬಯಿ ಕರ್ನಾಟಕ.

ಸದರ್ನ ಮರಾಠಾ(ಎಂ.) ರೇಲ್ವೆ ಕಂಪನಿಯವರು ಅಲ್ಲಲ್ಲಿ ಮೋಟಾರು ಸರ್ವಿಸ ಇಡುವರೆಂಬ ಸುದ್ದಿ ನಿಜವೇ ಎಂದು ರಕ್ಷಕನಿ (ದೇಸಾಯಿಯವರು) ಕೇಳಿದ ಪ್ರಶ್ನೆಗೆ ಸರಕಾರದವರು ಇದು ಪೂರಾ ಸುಳ್ಳೆಂದು ಉತ್ತರ ಕೊಟ್ಟಿರುತ್ತಾರೆ.

ಕುಮಾರೀ ಬೈಂದೂರ ಇವರು ಬಿ. ಎ. ಪಾಸಾಗಿ ಧಾರವಾಡ ಹೈಸ್ಕೂಲಿನ ಶಾಲೆಯ ಶಿಕ್ಷಿಕೆಯರಾಗಿ ನೇಮಿಸಲ್ಪಟ್ಟಿದ್ದಾರೆ ಮುಂಬಯಿ ಕರ್ನಾಟಕದಿಂದ ಬಿ. ಎ. ಪಾಸಾದ ಮಹಿಳೆಯರೆಂದರೇ ಇವರೇ ಮೊದಲನೆಯವರು. ಅದಕ್ಕಾಗಿ ಇವರನ್ನು ಅಭಿನಂದಿಸುವ ಕುರಿತು ಧಾರವಾಡದಲ್ಲಿ ಸಭೆ ಕೂಡಿತೆಂತೆ! ಸ್ತುತ್ಯವು!!

ಮುಂಬಯಿ ಗವರ್ನರರಾದ ಸಾಹೇಬರು ... ತಾರೀಖಿಗೆ ಸಾಂಗಲಿಗೆ ಬರುವರು. ... ತಾರೀಖಿನ ದಿವಸ ... ನೋಡುವರು. ಈ ನೆವದಿಂದ ಸಹಜವಾಗಿ ಮಿರ... ಹೋಗುವರು.

ಮದ್ರಾಸ ಕರ್ನಾಟಕ.

ದ. ಕ. ಕನ್ನಡ ಜಿಲ್ಹೆಯ ೪ನೇ ಪರಿಷತ್ತು ಬರುವ ಮೇ ತಿಂಗಳ ಮೊದಲನೇ ವಾರದಲ್ಲಿ ಶ್ರೀ ಕಾಶಾ ಕಾಲೇಲಕರ ಇವರ ಅಧ್ಯಕ್ಷತೆಯ ಕೆಳಗೆ ನೆರೆಯುವದು ಗೊತ್ತಾಗಿದೆ.

ನೀಲಗಿರೀ ಜಿಲ್ಹೆಯ ಮುಕ್ತ ... ಸಮಾಚಾರಗಳು ಹೊಸದಾಗಿ ಕಯಾರಿಸಲ್ಪಟ್ಟು ಇವುಗಳಲ್ಲಿ ಇತ್ತೀಚಿನಾಗಿ ಹೆಚ್ಚು ... ಎಲ್ಲ ಸಂಗತಿಗಳೂ ಅಡಕವಾಗಿವೆ ಅವು ಶ್ರೀ ಪಿ. ... ಕಾರ್ಯ ಕಾಟೇಜ, ಕಂಡಾಲ ರೋಡ (ನೀಲಗಿರಿ) ಇವರಲ್ಲಿ ... ಕ್ಕೆ ದೊರೆಯುತ್ತದೆ.

ಉದಕ ಮಂಡಲದಲ್ಲಿ ಪ್ಲೇಗಿನ ಬೇನೆಯು ಪ್ರಾರಂಭವಾಗುವ ಲಕ್ಷಣಗಳಿದ್ದದರಿಂದ ಮಾರ್ಚ ೩೧ರಿಂದ ಎಪ್ರೀಲ ೩೦ರ ವರೆಗೆ ಕೂಡ ಸನ್ಯಾಸಿಗಳೂ, ಭಿಕ್ಷುಕರೂ ನೀಲಗಿರಿ ಜಿಲ್ಹೆಯಲ್ಲಿ ಪ್ರವೇಶಿಸ ಕೂಡದೆಂದು ಸರಕಾರದ ಅಪ್ಪಣೆಯಾಗಿದೆ.

ಲಾರ್ಡ ಲಿಟನ್ನರು ಇದೇ ತಿಂಗಳ ೧೬ನೇ ತಾ॥ ದಿನ ಉದಕ ಮಂಡಲಕ್ಕೆ ಹೋಗುವರು. ನೀಲಗಿರೀ ಬೆಟ್ಟಪ್ರದೇಶದಲ್ಲಿ ಇವರು ... ಯುವರಾಯರು! ಲಾರ್ಡ ಬೆಂಟಿಂಗರವರು ಮೊದಲಿಗರು.

ಬಳ್ಳಾರಿಯ ನಿವಾಸಿಗಳೂ, ಹೆಸರಾದ ಬಿ. ಎ. ಕಲೆಕ್ಟರರೂ ಆಗಿ ... ರಾ. ಬ. ನಾಗೇಶರಾಯರು ತಿರುವಾಂಕೂರ ದೇವಸ್ಥಾನದ ದಿವಾನ ಪೇಷ್ಕಾರರಾಗಿ ನೇಮಿಸಲ್ಪಟ್ಟಿರು.

ನಿಜಾಂ ಕರ್ನಾಟಕ

ಗುಲಬುರ್ಗೆಯ ವ್ಯಾಪಾರಸ್ಥರು ತಮ್ಮ ಸೌಕರ್ಯಕ್ಕಾಗಿ ತಮ್ಮ ... ಬ್ರಿಟಿಶ್ ... ಕೂಡಿಸ ... ಕಳಿಸಿದ್ದಾರೆ.

ಮೈಸೂರ ಕರ್ನಾಟಕ.

... ಮಹಾರಾಣಿಯವರೂ ... ಪರಿವಾರದೊಡನೆ ... ರಲ್ಲಿ ... ಕ್ಕೆ ... ಯವರು.

ಮಿ॥ ... ಯವರು ... ದಿನಸ ಬೆಂಗಳೂರಿಗೆ ಬಂದು ... ದ ... ದಿವಾನರವರ ... ಹೊರತಕ್ಕೊಂಡಿರೆಂದು ಕೇಳುತ್ತೇವೆ.

ಸಂಯುಕ್ತ ಪ್ರಾಂತದಲ್ಲಿ ಹಿಮಾಲಯದ ತಪ್ಪಲಿನಲ್ಲಿರುವ ನೈನಿತಾಲ ಎಂಬ ಆರೋಗ್ಯ ಸ್ಥಳಕ್ಕೆ ಶ್ರೀಮನ್ಮಹಾರಾಜರವರು ತಮ್ಮ ಪರಿವಾರದೊಡನೆ ... ನೆಯ ದಿನ ಪ್ರಯಾಣ ಮಾಡುವವರಾಗಿರುವರೆಂದೂ, ಪ್ರೈವೆಟ್ ಸೆಕ್ರೆಟರಿ ಮಿ॥ ಮಿರ್ಜಾ ಇಸ್ಮಾಯಿಲ್, ಸಿ. ಐ. ಇ. ಯವರ ಕೂಡ ಹೋಗುವರಿಲ್ಲವೆಂದೂ ಕೇಳುತ್ತೇವೆ.

ಬೆಂಗಳೂರ ಜಿಲ್ಹಾ ಕೋ ಆಪರೇಟಿವ್ ಕಾನ್ಫರೆನ್ಸಿನ ... ನೇ ತಾ॥ ದಿನ ಮಾಗಡಿಯಲ್ಲಿ ನೆರೆಯಿತು ದಿವಾನರೇ ಇದರ ಕಾರ್ಯವನ್ನು ಪ್ರಾರಂಭಿಸಿದರು.

ಹಿಂದುಸ್ಥಾನ.

ನಾಗಪೂರ ಸ್ವರಾಜ್ಯಪಕ್ಷದವರಿಂದ ಕಾಯದೇ ಕೌನ್ಸಿಲ್ಲದಲ್ಲಿ ಕೆಲವು ಮಹತ್ವದ ಠರಾವುಗಳು ಬರತಕ್ಕವಿವೆ. (೧) ಮಾಧ್ಯಮಿಕ ಶಾಲೆಗಳಲ್ಲಿ ಸರಕಾರದವರು ರಾಟಿಯಿಂದ ನೂಲುವದು ಶಿಕ್ಷಣದ ವಿಷಯವನ್ನಾಗಿ ಮಾಡಬೇಕು (೨) ಕೌನ್ಸಿಲ್ಲದಲ್ಲಿ ಪಾಸಾದ ಠರಾವುಗಳ ವಿರುದ್ಧವಾಗಿ ಸರಕಾರದವರು ಯಾವತರದ ಚಳವಳಿಯನ್ನೂ ಮಾಡಕೂಡದು (೩) ಹಾಯಸ್ಕೂಲು ಕಾಲೇಜುಗಳಲ್ಲಿ ಬೇಟೆಯಾಡುವ ಕೂಟಗಳನ್ನು ಸ್ಥಾಪಿಸುವಂತೆ ನಿಯಮಗಳಿರಬೇಕು.

ಆಂಧ್ರಪ್ರಾಂತದಲ್ಲಿ ಸೀತಾನಗರ ಎಂಬಲ್ಲಿ ಗೌತಮೀ ಆಶ್ರಮವೆಂಬ ಆಶ್ರಮವು ಸ್ಥಾಪಿತವಾಗಿದೆ. ಆಂಧ್ರಪತ್ರಿಕೆಯ ಸಂಪಾದಕರಾದ ಶ್ರೀ ನಾಗೇಶರಾಯರು ಈ ಆಶ್ರಮಕ್ಕೆ ಒಂದು ಮುದ್ರಾಲಯವನ್ನು ದಾನವಾಗಿ ಕೊಡುವೆನೆಂದು ಹೇಳಿದ್ದಾರೆ ಆ ಮೇಲೆ ಕಾಂಗ್ರೆಸ್ ಎಂಬ ವಾರ ಪತ್ರಿಕೆಯು ಅಲ್ಲಿಯೇ ಪ್ರಸಿದ್ಧವಾಗುವದು

ಈ ಸಾರೆ ಶಿವನೇರಿಯಲ್ಲಿ ಶಿವಾಜಿ ಜಯಂತ್ಯುತ್ಸವವು ಬಹು ವಿಜೃಂಭಣೆಯಿಂದ ನಡೆಯಿತು ಫಾಲ್ಗುಣ ವದ್ಯ ತೃತೀಯ ಜಯಂತಿಯ ನಿಜವಾದ ದಿನವೆಂಬದು ಹೊಸದಾಗಿ ಶೋಧಿಸಲ್ಪಟ್ಟಿದೆ ಶಿವನೇರಿ (ಶಿವನ – ಏರಿ) ಇದು ಶುದ್ಧ ಕನ್ನಡ ಶಬ್ದದ ಊರು ಮೊದಲು ಕನ್ನಡದ ಮಹಿಮೆಯು ಅಲ್ಲಿಯವರೆಗಿದ್ದಿತು

ಪರದೇಶ.

ಸ್ವೀಡನ್‌ದಲ್ಲಿಯ ಕಾಗದದ ಗಿರಣಿಗಳು ಬಂದಾಗಿವೆ ಕೂಲಿಕಾರರು ಕಟ್ಟು ಮಾಡಿದ್ದರ ಪರಿಣಾಮವಿದು. ನಾರವೇಶದಲ್ಲಿ ... ಕಾಗದಗಳ ಗಿರಣಿಗಳು ಬಂದಾಗುವವೆಂಬ ಸುದ್ದಿಯಿದೆ ಕಾಗದಗಳ ಬೆಲೆಯು ಇನ್ನೂ ಹೆಚ್ಚುವದರಲ್ಲಿ ಇದೊಂದು ಅಂಶವೇ! ಮತ್ತೆ ಬೆಲೆಯು ಏರಲಿಕ್ಕಿಲ್ಲವಷ್ಟೇ?

ಹಿಂದುಸ್ಥಾನದಲ್ಲಿ ಬಸ್ಸರೀ ... ಹಿಂದೀ ಉತ್ಪನ್ನದಲ್ಲಿಯ ಬಹು ದೊಡ್ಡ ಭಾಗವು ವ್ಯಯವಾಗುತ್ತಿದ್ದರೂ ಬ್ರಿಟಿಶರಿಗೆ ಸಮಾಧಾನವಿಲ್ಲ. ಬಸ್ಸರೀ ಜನರಿಗೆ ಮಾಮಲೆಯಲ್ಲಿ ಹೆಚ್ಚು ಸಂತೋಷಭೋಗ್ಯದ ಅಧಿಕಾರ ಕೊಡಬೇಕೆಂದು ಬ್ರಿಟಿಷ್ ಪಕ್ಷದವರು ಪಾರ್ಲಮೆಂಟಿನಲ್ಲಿ ಪ್ರಶ್ನೆ ಮಾಡಿದ್ದಕ್ಕೆ ಹಾಗೆ ವ್ಯವಸ್ಥೆ ಮಾಡುವದೆಂದು ಬರುವದೆಂದು ... ಟಿನ್ನರು ಉತ್ತರ ಕೊಟ್ಟಿರು.

ಮೆಸೋಪೋಟೆ ಮತ್ತು ಅಂಗೋರದಲ್ಲಿ ... ದೆಂದು ಗೊತ್ತಾಗಿದೆಯಷ್ಟೇ! ಇದಕ್ಕಾಗಿ ಈಗಾಗಲೇ ಇಂಗ್ಲಿಷರಿಗೆ ಭೀತಿಯುಂಟಾಗಿದೆ

ಲಾರ್ಡರ ಸಭೆಯಲ್ಲಿ ಹಿಂದುಸ್ಥಾನದ ರಾಜಕೀಯ ... ಬಗ್ಗೆ ವಾದವಿವಾದವಾಯಿತು ಬಂಗಾಲ ... ವಿರುದ್ಧದಿಂದ ಅಲ್ಲಿಯ ಜನರನ್ನು ... ಲಾರ್ಡ ... ಕಾರ್ಪಣಿಸರ ...

ಮೋಜಿನ ಸುದ್ದಿಗಳು.

[illegible] ಹಿಂದೆ [illegible] ಅಲೆಕ್ಸ್ [illegible] ಕಲ್ಪಿತ [illegible] ಗಾಂಧಿಯವರು ಗಂಡುಮಕ್ಕಳಿದ್ದರಿಂದ ಅಲೆಕ್ಸ್ ದೇವರು [illegible] ಹರಂಕೆ! ತಂದೆತೊಟ್ಟಿಲಲ್ಲಿ ಮಲಗಿದ್ದ ಇವನು ಅಲ್ಲಿ ಕರಿಯಲು ಅಲೆ [illegible] ದೇಹದ್ದು ಬಾಗಿಲಿನ ಕಡೆ [illegible] ಅವ್ಯಕ್ತ [illegible] ಯಲ್ಲಿ ಪ್ರಸಿದ್ಧವಾಗಿದೆ ತನ್ನ ಅರ್ಧಾಂಗಿಯು ಮಾಡಿದ ಅಪರಾಧ [illegible]?

ಟಾಕ್ಸ್ ಎಂಬ ಪಟ್ಟಣದ ಸಾಗರದಲ್ಲಿ ಒಂದು ಮೋಟರ್, ಗಾಡಿಯು ಒಬ್ಬ ಮನುಷ್ಯನ ಮೇಲೆ ಹಾಯಿತು [illegible] ಕಲು ಸತ್ತನೆಂದೇ ಜನರು ನಿಶ್ಚಯಿಸಿದರು. ಅಷ್ಟರಲ್ಲಿ ಅವನು ಮೆಲ್ಲಗೆ ಎದ್ದುನಿಂತು "ಸ್ವಾಮಿ! ನನ್ನಿಂದ ತಮ್ಮ ಮೋಟಾರಕ್ಕೇನಾದರೂ ಅಪಾಯವಾಯಿತೆ?" ಎಂದು ವಿನಯದಿಂದ ಕೇಳಿಕೊಂಡನಂತೆ!

ಇಂಗ್ಲಂಡಿನಲ್ಲಿ ಒಬ್ಬನು ಸಾಕಿದ ನಾಯಿಯನ್ನು ಮತ್ತೊಬ್ಬನು ವಶಪಡಿಸಿಕೊಂಡದ್ದಕ್ಕೆ ೩೦ ರೂ. ದಂಡ ವಿಧಿಸಲ್ಪಟ್ಟಿತು. ಈ ಶಾಸನದ ಪ್ರಕಾರ ಒಬ್ಬನು ತನ್ನ ನಾಯಿಯನ್ನು ಬೇರೊಬ್ಬನ ಜೊತೆ ಹತ್ತಿ ಹೋಗುತ್ತಿರಲಾಗಿ ಅವನ ಮೇಲೆ ಫಿರ್ಯಾದು ಮಾಡಿದನು. ಆ ನಾಯಿಯನ್ನು ಅವರ ಯಜಮಾನನ ಮನೆಗೆ ಎಷ್ಟು ಅಟ್ಟಿದರೂ ಅದು ತನ್ನಲ್ಲಿಗೆ ಓಡಿ ಬರುತ್ತಾದುದರಿಂದ ಅದರಲ್ಲಿ ತನ್ನ ಅಪರಾಧವೇನೂ ಇಲ್ಲವೆಂದು ಅಪರಾಧಿಯು ವಾದಿಸಿದನು. ಅವರ ಮೇಲೆ ನ್ಯಾಯಾಧೀಶನು ಆ ನಾಯಿಯನ್ನು ಹಿಡಿಸಿ ಅವರ ಯಜಮಾನನ ಮನೆಗೆ ಕಳುಹಿಸಿ ಕಟ್ಟಿ ಹಾಕಿ ಹೋಗದಂತೆ ಆಜ್ಞೆ ಮಾಡಿದನು. ಆದರೆ ಆ ನಾಯಿಯು ಅಷ್ಟು ನಿರ್ಬಂಧದಲ್ಲಿದ್ದರೂ ಸಮಯ ಸಿಕ್ಕಿದೊಡನೆ ಅಪರಾಧಿಯಲ್ಲಿಗೆ ಓಡಿಬಂದುದನ್ನು ನ್ಯಾಯಾಧೀಶನು ಕಂಡು ತನ್ನ ಪಾಲಕನಾರೆಂಬುದನ್ನು ಗೊತ್ತುಮಾಡುವ ಶಕ್ತಿಯು ನಾಯಿಗೂ ಇರುತ್ತದೆಂದು ಅಭಿಪ್ರಾಯಪಟ್ಟು ಅಪರಾಧಿಯನ್ನು ಬಿಡುಗಡೆ ಮಾಡಿದನು.

ಮನುಷ್ಯರ ಉತ್ಪತ್ತಿಯು ಹೊಟ್ಟೆಯೊಳಗೆ ಕೋತಿಗಳಿಂದಾಯಿತೆಂದು ಡಾರ್ವಿನ್ ಎಂಬ ಪ್ರಸಿದ್ಧ ಪ್ರಾಣಿಶಾಸ್ತ್ರಜ್ಞನ ಶೋಧನಾಭಿಪ್ರಾಯವಾಗಿರುತ್ತದೆ. ಅಲ್ಲದೆ ಕೆಲರು ಆ ಅಭಿಪ್ರಾಯವನ್ನು ಒಪ್ಪಿಕೊಂಡಿರುತ್ತಾರೆ. ಆದರೆ ಕೋತಿಗಳನ್ನು ಸಾಧನವಿಶೇಷದಿಂದ ಮನುಷ್ಯರನ್ನಾಗಿ ಮಾಡಬಹುದೆಂಬುದನ್ನು ಇದುವರೆಗೆ ಯಾರೂ ಕಂಡು ಹಿಡಿದಿರಲಿಲ್ಲ. ಈಗ ಒಬ್ಬ ಅಮೆರಿಕನ್ ಪ್ರಾಣಿಶಾಸ್ತ್ರವೇತ್ತನು ಒಂದು ಸಣ್ಣ ಕೋತಿಮರಿಯನ್ನು ತಂದು ಅದಕ್ಕೆ ತೀರಿಯಿಂದ ಹಾಲನ್ನು ಮಕ್ಕಳಿಗೆ ಕುಡಿಸುವ ರೀತಿಯಲ್ಲಿ ಕುಡಿಸಿ ಸಾಕಲು ಒಬ್ಬ ದಾದಿಯನ್ನು ನಿಯಮಿಸಿದನು. ದಾದಿಯು ಮಕ್ಕಳನ್ನು ಸಾಕುವಂತೆ ಆ ಮರಿಯನ್ನು ಸಾಕುತ್ತ ಅದಕ್ಕೆ ಆಟಪಾಟಗಳನ್ನು ಕಲಿಸಿದಳು. ಆ ಕೋತಿಮರಿಯು ಬೆಳೆಯುತ್ತ ಬಂದಹಾಗೆಲ್ಲಾ ಸೀಸೆಯಲ್ಲಿ ಹಾಲನ್ನು ಕುಡಿಯುವದನ್ನು ಬಿಟ್ಟು ತಾನೇ ಕೈಯಿಂದೆತ್ತಿ ಕುಡಿಯುತ್ತ ಹಣ್ಣುಹಂಪಲುಗಳನ್ನು ತಿನ್ನುತ್ತಿರುವುದಲ್ಲದೆ ಮಕ್ಕಳಂತೆ ಆಟಪಾಟಗಳಿಂದ ಕಾಲಹರಣ ಮಾಡುತ್ತಿರುವುದು. ಇದು ತನಗೆ ಆಹಾರ ಬೇಕಾದ ವೇಳೆಯಲ್ಲಿ ಗಂಟೆಯನ್ನು ಬಾರಿಸಿ ದಾದಿಯನ್ನು ಬರಮಾಡುವುದು. ವಿದ್ಯುದ್ದೀಪವನ್ನು ಸ್ವತಃ ಹೊತ್ತಿಸುವುದು ಮತ್ತು ಆರಿಸುವುದು. ಆ ಪ್ರಾಣಿಶಾಸ್ತ್ರಜ್ಞನು ಆ ಕೋತಿಮರಿಗೆ ಓದುಬರಹವನ್ನು ಕಲಿಸಲು ಪ್ರಯತ್ನಿಸಿರುವನು. ಪಾಶ್ಚಾತ್ಯ ಶಾಸ್ತ್ರಜ್ಞರ ಪರಿಶೋಧನಾಶಕ್ತಿಯು ಅದ್ಭುತವಾದುದು.

ಮಹತ್ವದ ಸೂಚನೆಯು.

ಕನ್ನಡಿಗನ ಎರಡು ಸಂಚಿಕೆಗಳು ವಾಚಕರ ಹಸ್ತಗತವಾಗಿವೆ. ಮುಂದಿನ ಸಂಚಿಕೆಯಿಂದ ವ್ಹಿ. ಪಿ. ಕಳಿಸಲು ಪ್ರಾರಂಭಿಸುವೆವು. ಕನ್ನಡಿಗನು ಯಾರಾರಿಗೆ ಅಭಿಮಾನಾಸ್ಪದನಾಗಿರುವನೋ ಅವರವರು ದಯವಿಟ್ಟು ವ್ಹಿ.ಪಿ.ಯ ಹಾದಿಯನ್ನು ನೋಡದೇ ಮನಿಯಾರ್ಡರದಿಂದ ೧-೧೩-೦ ಕೂಡಲೇ ಕಳಿಸಬೇಕು. ಯಾಕೆಂದರೆ ವ್ಹಿ.ಪಿ.ಯಿಂದ ರಜಿಸ್ಟರದ ವೆಚ್ಚವು ವಿನಾಕಾರಣವಾಗಿ ವಾಚಕರಿಗೆ ತಗಲುವದು. ನಮಗೂ ತೊಂದರೆಯನ್ನೂ ಹಾನಿಯನ್ನೂ (ನಿರಾಕರಿಸಿದರೆ) ಉಂಟುಮಾಡುವದು. ಇನ್ನು ಅನೇಕ 'ಕನ್ನಡಿಗ'ನ ಭಕ್ತಿ [illegible] ಇನ್ನು [illegible] ಹೀಗೆ [illegible] ಸಂಚಿಕೆ [illegible] ಹಾಗೆ ಸರ್ಕಾರಕ್ಕೆ [illegible] ಉಪಕೃತರಾಗುವೆವು. ಕನ್ನಡ ನಾಡಿನಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸುವ ಸಲುವಾಗಿ ನಾವು ಬೇಕಂತಲೇ ವಾರ್ಷಿಕ ಚಂದಾ ಒಂದೇ ಒಂದು ರೂಪಾಯಿ ಇಟ್ಟಿರುವೆವು. ಆದುದರಿಂದ ಅಭಿಮಾನಶಾಲಿಗಳಾದ ಎಲ್ಲ ಕನ್ನಡಿಗರೂ ದಯವಿಟ್ಟು ನಮಗೆ ಈ ಕಾರ್ಯದಲ್ಲಿ ಚಂದಾದಾರರಾಗಿ ಸಹಾಯ ಮಾಡೇ ಮಾಡುವರೆಂದು ನಂಬಿದ್ದೇವೆ. ಇನ್ನು ಚಂದಾದಾರರಾಗಿ ಸಹಾಯ ಮಾಡಲಿಚ್ಛೆಯಿಲ್ಲದವರು ಬಿಡಿ ಸಂಚಿಕೆಯನ್ನು ನಿರಾಕರಿಸಿ ಹಾಗೆ ತಿಳಿಸಬೇಕು. ಅರ್ಧ ಆಣೆಯನ್ನು ವೆಚ್ಚಮಾಡಿ ಒಂದು ಕಾರ್ಡನ್ನು ಬರೆದರೂ ಉತ್ತಮ. ಅದೂ ಇಲ್ಲದೇ ಬಿಡಿ ಸಂಚಿಕೆಯನ್ನು ಸ್ವೀಕಾರ ಮಾಡಿ ಮನಿಯಾರ್ಡರ ಕಳಿಸದೇ ವ್ಹಿ. ಪಿ. ತರಿಸಿಕೊಂಡು ಅದನ್ನು ಆ ಮೇಲೆ ನಿರಾಕರಿಸಿ ನಮಗೆ ೩ ಆಣೆಗಳ ಹಾನಿಗೆ ಪಾತ್ರರಾಗುವಂತೆ ಮಾತ್ರ ಸಹಾಯ ಮಾಡಬಾರದಾಗಿ ಬಿನ್ನಹ!

ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫ ರೂ. ಉಪಕಾರಕರ್ತರುಗಳಿಗೆ ವಾ ೧೦ ರೂ. ಇನ್ಮೇಲೆ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ	೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆಯಾಗದಂಥ ೪೦೦೦ ಯಾರ್ಡ ಕೈನೂಲು
ಪರಸ್ಥಳದ ,,	ಮನಿಯಾರ್ಡರದಿಂದ ೧-೧೩-೦ ವ್ಹಿ. ಪಿ. ಯಿಂದ ೨-೦-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦೦ಯಾರ್ಡ ಕೈನೂಲು.
ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೩-೦ ,, ವ್ಹಿ. ಪಿ. ಯಿಂದ ೩-೦-೦
ಸರಕಾರ, ಮುನಸಿಪಾಲಿಟಿ ಲೋಕಲ್‌ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦ ವ್ಹಿ. ಪಿ.ಯಿಂದ ೫-೦-೦

ಬಿಡಿ ಸಂಚಿಗೆ ೯ ಪೈ. ಹಿಂದಿನಸಂಚಿಕೆಯೊಂದಕ್ಕೆ ೨ ಆಣೆ. ಧರ್ಮಾರ್ಥವಾಗಿಯಾಗಲೀ, ವರ್ಷದ ಕಡಿಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ.

ಟೀಪು- ಈ ಸಾರೆ ೪೦೦೦ ಪ್ರತಿಗಳು ಮುದ್ರಿತವಾಗಿವೆ. ಜಾಹೀರಾತು ಕೊಡಲಿಚ್ಛಿಸುವವರು ತ್ವರೆಮಾಡಬೇಕು.

ವ್ಯವಸ್ಥಾಪಕ.

ಬಾಗಲಕೋಟೆಯ ಪೇಟೆಯ ಧಾರಣೆ.

ತಾ॥ ೩-೪ ೨೫.

ಮುಂಗಾರಿಜೋಳ [illegible]	[illegible]		ಹಿಂಗಾರಿಜೋಳ	[illegible]
ಸಜ್ಜೆ	[illegible]		ನವಣೆ	[illegible]
ತೊಗರಿ [illegible]	೧೨		ಗೋದಿ	[illegible]
ಕುಸುಬಿ ೧೦[illegible]	೧೧		ಅಗಸಿ	[illegible]
ಹೆಸರು	[illegible]		ತೊಗರಿ (ಜವಾರಿ)	[illegible]
ಕಡ್ಲಿ	[illegible]		ಕಡ್ಲಿಬ್ಯಾಳಿ	[illegible]
ಅಲಸಂದಿ	[illegible]		ಕಾರೆಳ್ಳು	[illegible]
ಯಳ್ಳು	[illegible]	ಜವಾರಿ ಹತ್ತಿ ೮ ಮಣಕ್ಕೆ		[illegible]
ಮೆಣಸಿನಕಾಯಿ ೮ ಮಣಕ್ಕೆ [illegible]		ಶೇಂಗಬೀಜ ೮ ಮಣಕ್ಕೆ [illegible]		
ಅರಳೆ (ಜೀನು) ೧[illegible]			ಅರಳೆ (ಕಾರಿಂಡು)	೧[illegible]
ಅಷ್ಟಂದ ಹತ್ತಿ [illegible]			ಕುಮಟಾ ಹತ್ತಿ	[illegible]
ಅಕ್ಕಿ ೪॥ ಯಿಂದ [illegible] ವರೆಗೆ		ಈ ಪ್ರಕಾರ ಧಾರಣೆ ಇರುತ್ತದೆ.		

ತಮ್ಮಣ್ಣಾ ತಿಮ್ಮಣ್ಣಾ ವಿದ್ಯಾಪೂರ ಇವರಿಂದ.

ಈ ಪತ್ರಿಕೆಯು ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು. ಪ್ರತಿ ೪೦೦೦.

R. NO. B. 1947

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವೇಶವಾಗಿದೆ)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು:— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ } ಬಾಗಲಕೋಟೆ ಶುಕ್ರವಾರ ಮಿತಿ ಚೈತ್ರ ವ॥ ೧ ಶಕೆ ೧೮೪೭. ತಾ॥ ೧೦-೪-೧೯೨೫. { ಸಂಚಿಕೆ ೪

ಸಂಪಾದಕರ ಭೂಮಿ.

ಎದ್ದರೆ ಕನ್ನಡ ಕುಳಿತರೆ ಕನ್ನಡ ನುಡಿದರೆ ಕನ್ನಡವು ।
ಹೃದ್ಯವು ಕನ್ನಡ ಉದ್ಯಮ ಕನ್ನಡ- ಕನ್ನಡ- ಕನ್ನಡವು ।
ಕನಸು ಮನಸಿನೊಳು ಕನ್ನಡ ಕನ್ನಡ ನಿದ್ದೆಯು ಕನ್ನಡವು।
ತಿನಸು ಕನ್ನಡವು ಜೀವಿತ ಕನ್ನಡ ಎಲ್ಲವು ಕನ್ನಡವು ॥
— ಆಂಟಿಕಾಶನರು ದತ್ತ

ಅನುಕರಣೀಯ ಪೆನಶನ್‌ದಾರರೂ, ಮುನಸಿಪಾಲಿಟಿಯೂ:— ಈಸಲ ಮಹಾ ಸಭೆಯು ಕರ್ನಾಟಕದಲ್ಲಿ ಸೇರಿದ್ದರಿಂದ ಕನ್ನಡಿಗರಲ್ಲಿ ವಿಶೇಷ ಜಾಗೃತಿಯು ಹುಟ್ಟ ಹತ್ತಿರುವದು. ಇದು ಒಳ್ಳೇ ಅಭಿಮಾನಾಸ್ಪದ ಸಂಗತಿಯು. ಮೈಸೂರ ಶ್ರೀ ಮನ್ಮಹಾರಾಜರವರು ಕೈನೂಲಿಗೆ ಹಾಗೂ ಸ್ವದೇಶೀ ವಸ್ತ್ರಗಳಿಗೆ ಒಳ್ಳೇ ಪ್ರೋತ್ಸಾಹವನ್ನು ಕೊಡ ಹತ್ತಿದ್ದಾರೆ. ಹಾಗೂ ಮಹಾರಾಜರವರ ಪ್ರೀತಿ ಪಾತ್ರರಾಗಿ ಬಹುಕಾಲ ಅವರ ಸನ್ನಿಧಿಯಲ್ಲಿ ಕೆಲಸ ಮಾಡಿ ಪೆನಶನ್ ಪಡೆದಿದ್ದ ರಾವಬಹಾದೂರ **ಎಮ್ ಶಾಮರಾವ** ಹಾಗೂ **ಚಂಗಯ್ಯ ಶೆಟ್ಟಿ** ಇವರು ರಾಟಿಯಿಂದ ಕೈನೂಲನ್ನು ತೆಗೆಯಹತ್ತಿರುವರು. ಇವರು ವಯೋವೃದ್ಧರೂ ಜ್ಞಾನವೃದ್ಧರೂ ಇರುವರೆಂಬದನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಇಳಿ ವಯಸ್ಸಿನಲ್ಲಿ ಕೂಡ ರಾಟಿ ತಿರುವುದನ್ನು ಕೇಳಿ ಯಾವ ತರುಣರ ಹೃದಯವು ಹರ್ಷೋದ್ರೇಕಗಳಿಂದ ತುಂಬಿ ಬರಲಿಕ್ಕಿಲ್ಲ! ಇನ್ನು ಕೆಲವರಿಗೆ ಖಾದೀ ಮಹತ್ವವು ತಿಳಿದಿದ್ದರೂ, ಕೈಯಿಂದ ನೂಲುವದು ತಮ್ಮಿಂದಾಗುವದಿಲ್ಲೆಂದು ಕೂಗ್ಯಾಟವನ್ನೆಬ್ಬಿಸಿದ್ದಾರೆ. ಅಂಥ ಮಹನೀಯರು ಮೇಲ ನಮೂದಿಸಿದ ವಯೋ ವೃದ್ಧ ಪುರುಷಿನ ತರುಣರನ್ನು! ಅನುಕರಿಸಬೇಕು. ಈ ಪ್ರಕಾರ ಎಲ್ಲ ತರುಣರಿಗೂ ವಿಶೇಷತ: ಪೆನಶನ ತೆಗೆದುಕೊಂಡು ವ್ಯರ್ಥವಾಗಿ ಕಾಲಹರಣ ಮಾಡತಕ್ಕಂಥ ಮಹನಿಯರುಗಳಿಗೂ, ಮೇಲು ಪಂಕ್ತಿಯನ್ನು ಹಾಕಿ ಕೊಟ್ಟದ್ದಕ್ಕಾಗಿ ನಾವು ಎಮ್ ಶಾಮರಾವ ಹಾಗೂ ಚಂಗಯ್ಯ ಶೆಟ್ಟಿ ಇವರನ್ನು ಮನಃ ಪೂರ್ವಕವಾಗಿ ಅಭಿನಂದಿಸುವೆವು. ಇದರಂತೆಯೇ ಬೆಂಗಳೂರ ಮುನಸಿಪಾಲಿಟಿಯಲ್ಲಿ ಖಾದೀ ಪ್ರವೇಶವಾದದ್ದು ವಿಶೇಷ ಅಭಿಮಾನಾಸ್ಪದವು ಯಾವ ಸಮಯದಲ್ಲಿ ಬ್ರಿಟಿಶ ಕರ್ನಾಟಕದಲ್ಲಿಯ ಸ್ಥಾನಿಕ ಸ್ವರಾಜ್ಯಗಳು (ಅವುಗಳಿಗೆ ಸಂಸ್ಥಾನಗಳಲ್ಲಿಯ ಮುನಸಿಪಾಲಿಟಿಗಳಿಗಿಂತ ವಿಶೇಷ ಅಧಿಕಾರಗಳು ಇದ್ದರೂ) ಇನ್ನೂ ನಿದ್ರಾವಸ್ಥೆಯಲ್ಲಿರುವವೋ, ಅಂಥ ಕಾಲಕ್ಕೆ ಬೆಂಗಳೂರಿನ ಬಾಂಧವರು ಖಾದೀ ಮಹತ್ವವನ್ನರಿತು ಕಾರ್ಯಪ್ರವೃತ್ತರಾದದ್ದಕ್ಕಾಗಿ ನಾವು ಬೆಂಗಳೂರಿನ ಬಾಂಧವರನ್ನು ತುಂಬಾ ಅಭಿನಂದಿಸುತ್ತೇವೆ. ಅದೇ ಪ್ರಕಾರವಾಗಿ ಬ್ರಿಟಿಶ ಕರ್ನಾಟಕದ ಹಾಗೂ ನಿ. ಕರ್ನಾಟಕದ ಎಲ್ಲ ಸ್ಥಾನಿಕ ಸ್ವರಾಜ್ಯಗಳು ಬೆಂಗಳೂರಿನ ಕೀರ್ತಿಯನ್ನು ತೀಡಬೇಕೆಂದು ನಾವು ಹೇಳದೇ ಇರಲಾರೆವು. ಕೈ ನೂಲನ್ನು ತೆಗೆಯುವದರಿಂದ ಯಾವ ರಾಜ ದ್ರೋಹಾತ್ಮಕ ಚಳವಳಿಯನ್ನು ಮಾಡಿದಂತಾಗುವದಿಲ್ಲ. ಹಾಗಾದ ಪಕ್ಷದಲ್ಲಿ ಒಕ್ಕಲತನವನ್ನು ಮಾಡಿದರೂ ರಾಜದ್ರೋಹ ಮಾಡಿದಂತಾಗಬಹುದು ಯಾಕಂದರೆ ಕೃಷಿದಿಂದ ನಮ್ಮ ಹೊಟ್ಟೆಗೆ ಅನ್ನ ದೊರೆಯುವದು; ನೂಲುವದರಿಂದ ಮೈಗೆ ಬಟ್ಟೆ ದೊರೆಯುವದು. ಇದೇ ಕಾರಣಕ್ಕಾಗಿ ಎಷ್ಟೋ ಸನ್ಮಾನ್ಯ ಗೃಹಸ್ಥರು ರಾವಬಹಾದ್ದೂರ ದಿವಾನ ಬಹಾದ್ದೂರ ಮುಂತಾದ ಪದವೀಧರರು ರಾಟಿಯನ್ನು ತಿರುಗಿಸಹತ್ತಿದ್ದಾರೆ. ಇದೇ ಪ್ರಕಾರ ಎಲ್ಲ ಸ್ಥಾನಿಕ ಸ್ವರಾಜ್ಯಗಳಲ್ಲಿ ಖಾದೀ ಪ್ರವೇಶವಾದ ಸುದಿನವು ತೀವ್ರವೇ ಬರುವದೆಂದು ನಾವು ಆಶಿಸುತ್ತೇವೆ.

ಕನ್ನಡಿಗನಿಗೊಂದು ನುಡಿ:- 'ಕನ್ನಡಿಗ'ನ ಮುಖ್ಯ ಧ್ಯೇಯವು ಕನ್ನಡಿಗರಲ್ಲಿ ಕನ್ನಡತ್ವವನ್ನು ಹುಟ್ಟಿಸಿ ತುಂಡು ತುಂಡಾದ ಕನ್ನಡ ನಾಡನ್ನು ಅಖಂಡವಾಗಿ ಮಾಡುವದೇ ಆಗಿರುವದೆಂಬುದು 'ಕನ್ನಡಿಗ'ನ ವಾಚಕರಿಗೆ ವಿದಿತವಾಗಿರಲು ಸಾಕು. ಅದಕ್ಕಾಗಿಯೇ ನಾವು ಸಂಪಾದಕರ ಭೂಮಿಯ ಶಿರೋ ಭಾಗದಲ್ಲಿ "ಎದ್ದರೆ ಕನ್ನಡ ಕುಳಿತರೆ ಕನ್ನಡ ನುಡಿದರೆ ಕನ್ನಡವು' ಇತ್ಯಾದಿ ಪದ್ಯವನ್ನು ಹಾಕಿರುವೆವು ಇದೇ ಪ್ರಕಾರವಾಗಿ ಕನ್ನಡಿಗನು" "ಎದ್ದರ ಖದ್ದರ ಕುಳಿತರೆ ಖದ್ದರ, ನುಡಿದರೆ ಖದ್ದರವು." ಎಂದು ನುಡಿಯದಿರಲಾರನು.

ಮಹಾತ್ಮಾಜೀಯವರು ಮದ್ರಾಸಿಗೆ ದಯಮಾಡಿಸಿದಾಗ್ಯೆ ಸ್ವರಾಜ್ಯ ಪತ್ರಿಕೆಯ ಸಂಪಾದಕರಾದ ಶ್ರೀ ಪ್ರಕಾಶಂರು ಅವರಿಗೆ ಖಾದಿಯಲ್ಲಿ ಮಾನ ಪತ್ರವನ್ನು ಅರ್ಪಿಸಿದರಷ್ಟೇ? ಮಹಾತ್ಮಾಜೀಯವರು ತಿರುಗಿ ಉತ್ತರ ಕೊಡುವಾಗ್ಗೆ ಸಬಂಧ ಹಿಂದುಸ್ಥಾನವು ಖಾದೀಮಯವಾದರೇನೇ ತಮಗೆ ಅತ್ಯಂತ ಆನಂದವಾಗುವದೆಂತಲೂ, ಎಲ್ಲ ಪತ್ರಿಕಾ ಕರ್ತರು ಖಾದಿಯ ಮಹತ್ವದ ಬಗ್ಗೆಯೇ ಬರೆಯಬೇಕೆಂತಲೂ ಹೇಳಿದ್ದಾರೆ. ಪತ್ರಿಕಾ ಕರ್ತರು ಮಹಾತ್ಮಾಜೀಯವರ ಈ ಉದ್ಗಾರಗಳನ್ನು ನೆನಪಿನಲ್ಲಿಡತಕ್ಕದ್ದು. 'ಕನ್ನಡಿಗನು' ಮಾತ್ರ ಈ ನುಡಿಯನ್ನು ಮೇಲಿಂದ ಮೇಲೆ ನುಡಿಯದಿರಲಾರನು.

ಅಂಜುವದೇಕೆ? ಶ್ರೀ ಚಿತ್ತರಂಜನ ದಾಸರಿಗೆ ಗೌರ ಕಾಯದವರಲ್ಲಿ ಅನೇಕ ಜನ ಮಿತ್ರರಿರುವರು. ಅವರ ಸಂಗಡ ಇತ್ತಿತ್ತಲಾಗಿ ಮಾತಾಡುವಾಗೆಲ್ಲ 'ಹಿಂದುಸ್ಥಾನದಿಂದ ಬ್ರಿಟಿಶರನ್ನು ಓಡಿಸಬೇಕೆಂಬದಾಗಿ ಗೌಪ್ಯವಾಗಿ ನಡೆದಿರುವ ರಾಜ ದ್ರೋಹಾತ್ಮಕ ಚಳವಳಿಯಲ್ಲಿ ಶ್ರೀ ದಾಸರವೂ. ಅವರ ಸ್ವರಾಜ್ಯ ಪಕ್ಷದವರದೂ ಅಂಗವಿದೆಂಬದಾಗಿ " ಅಭಿಪ್ರಾಯ ಪಡುತ್ತಿರುವಂತೆ. ಅದ್ದರಿಂದ ಶ್ರೀ

ಜಗದ ಸುದ್ದಿಗಳು.

[illegible] ಶಸ್ತ್ರಚಿಕಿತ್ಸಕರು [illegible] ಅಲ್ಲಿ ಕರೆಯಲು ಅಲ [illegible] ಪ್ರಸಿದ್ಧವಾಗಿದೆ ತನ್ನ ಅರ್ಧಾಂಗಿಯು ಮಾಡಿದ ಅಸಾಧಾ [illegible]

ಬಾರ್ಥ್ ಎಂಬ ಪಟ್ಟಣದ ಸೂಗೇಸಲ್ಲಿ ಒಂದು ಮೋಟರ್, ಗಾಡಿಯು ಒಬ್ಬ ಮನುಷ್ಯನ ಮೇಲೆ ಹಾಯಿತು. ಮನುಷ್ಯನು [illegible] ಸತ್ತನೆಂದೇ ಜನರು ನಿಶ್ಚಯಿಸಿದರು. ಅಷ್ಟರಲ್ಲಿ ಅವನು ಮೆಲ್ಲಗೆ ಎದ್ದು ನಿಂತು “ಸ್ವಾಮಿ! ನನ್ನಿಂದ ತಮ್ಮ ಮೋಟಾರಕ್ಕೇನಾದರೂ ಅಪಾಯವಾಯಿತೆ?” ಎಂದು ವಿನಯದಿಂದ ಕೇಳಿಕೊಂಡನಂತೆ!

ಇಂಗ್ಲಂಡದಲ್ಲಿ ಒಬ್ಬನು ಸಾಕಿದ ನಾಯಿಯನ್ನು ಮತ್ತೊಬ್ಬನು ಕಳವು ಮಾಡಿಕೊಂಡದ್ದಕ್ಕೆ ೩೦ ರೂ. ದಂಡ ವಿಧಿಸಲ್ಪಡುವದು. ಈ ಶಾಸನದ ಪ್ರಕಾರ ಒಬ್ಬನು ತನ್ನ ನಾಯಿಯನ್ನು ಬೇರೊಬ್ಬನ ಬೆನ್ನು ಹತ್ತಿ ಹೋಗುತ್ತಿರಲಾಗಿ ಅವನ ಮೇಲೆ ಫಿರ್ಯಾದು ಮಾಡಿದನು. ಆ ನಾಯಿಯನ್ನು ಅದರ ಯಜಮಾನನ ಮನೆಗೆ ಎಷ್ಟು ಅಟ್ಟಿದರೂ ಅದು ತನ್ನಲ್ಲಿಗೆ ಓಡಿ ಬರುತ್ತಿರುವದರಿಂದ ಅದರಲ್ಲಿ ತನ್ನ ಅಪರಾಧವೇನೂ ಇಲ್ಲವೆಂದು ಅಪರಾಧಿಯು ವಾದಿಸಿದನು. ಅದರ ಮೇಲೆ ನ್ಯಾಯಾಧೀಶನು ಆ ನಾಯಿಯನ್ನು ಒಯ್ದು ಅದರ ಯಜಮಾನನ ಮನೆಗೆ ಕಳುಹಿಸಿ ಕಟ್ಟಿ ಹಾಕಿ ಹೋಗುವಂತೆ ಆಜ್ಞೆ ಮಾಡಿದನು. ಆದರೆ ಆ ನಾಯಿಯು ಅಷ್ಟು ಸಂಬಂಧಪಟ್ಟಿದ್ದರೂ ಸಮಯ ಸಿಕ್ಕಿದೊಡನೆ ಅಪರಾಧಿಯಲ್ಲಿಗೆ ಓಡಿಬರುವದನ್ನು ನ್ಯಾಯಾಧೀಶನು ಕಂಡು ತನ್ನ ಪಾಲಕನಾರೆಂಬುದನ್ನು ಗೊತ್ತುಮಾಡುವ ಶಕ್ತಿಯು ನಾಯಿಗೂ ಇರುತ್ತದೆಂದು ಅಭಿಪ್ರಾಯಪಟ್ಟು ಅಪರಾಧಿಯನ್ನು ದೋಷಮುಕ್ತನನ್ನಾಗಿ ಮಾಡಿದನು.

ಮನುಷ್ಯರ ಜನ್ಮೋತ್ಪತ್ತಿಯು ಹೊಟ್ಟೆಯೊಳಗಿನ ಕೋತಿಗಳಿಂದಾಯಿತೆಂದು ಡಾರ್ವಿನ್ ಎಂಬ ಪ್ರಸಿದ್ಧ ಪ್ರಾಣಿಶಾಸ್ತ್ರಜ್ಞನ ಶೋಧನಾಭಿಪ್ರಾಯವಾಗಿರುತ್ತದೆ. ಅಲ್ಲದೆ ಕೆಲರು ಆ ಅಭಿಪ್ರಾಯವನ್ನು ಪುಷ್ಟೀಕರಿಸುತ್ತಾರೆ. ಆದರೆ ಕೋತಿಗಳನ್ನು ಸಾಧನವಿಶೇಷದಿಂದ ಮನುಷ್ಯರನ್ನಾಗಿ ಮಾಡಬಹುದೆಂಬುದನ್ನು ಇದುವರೆಗೆ ಯಾರೂ ಕಂಡು ಹಿಡಿದಿರಲಿಲ್ಲ. ಈಗ ಒಬ್ಬ ಅಮೆರಿಕೆಯ ಪ್ರಾಣಿಶಾಸ್ತ್ರವೇತ್ತನು ಒಂದು ಸಣ್ಣ ಕೋತಿಮರಿಯನ್ನು ತಂದು ಅದಕ್ಕೆ ಶೀಶೆಯಿಂದ ಹಾಲನ್ನು ಮಕ್ಕಳಿಗೆ ಕುಡಿಸುವ ರೀತಿಯಲ್ಲಿ ಕುಡಿಸಿ ಸಾಕಲು ಒಬ್ಬ ದಾದಿಯನ್ನು ನಿಯಮಿಸಿದನು. ದಾದಿಯು ಮಕ್ಕಳನ್ನು ಸಾಕುವಂತೆ ಆ ಮರಿಯನ್ನು ಸಾಕುತ್ತ ಅದಕ್ಕೆ ಆಟಪಾಟಗಳನ್ನು ಕಲಿಸಿದಳು. ಆ ಕೋತಿಮರಿಯು ಬೆಳೆಯುತ್ತ ಬಂದಹಾಗೆಲ್ಲಾ ಶೀಸೆಯಲ್ಲಿ ಹಾಲನ್ನು ಕುಡಿಯುವದನ್ನು ಬಿಟ್ಟು ತಾನೇ ಕೈಯಿಂದೆತ್ತಿ ಕುಡಿಯುತ್ತ ಹಣ್ಣುಹಂಪಲಗಳನ್ನು ತಿನ್ನುತ್ತಿರುವುದಲ್ಲದೆ ಮಕ್ಕಳಂತೆ ಆಟಪಾಟಗಳಿಂದ ಕಾಲಹರಣಮಾಡುತ್ತಿರುವುದು. ಇದು ತನಗೆ ಆಹಾರ ಬೇಕಾದ ವೇಳೆಯಲ್ಲಿ ಗಂಟೆಯನ್ನು ಬಾರಿಸಿ ದಾದಿಯನ್ನು ಬರಮಾಡುವುದು ವಿದ್ಯುದ್ದೀಪವನ್ನು ಸ್ವತಃ ಹೊತ್ತಿಸುವುದು ಮತ್ತು ಆರಿಸುವುದು. ಆ ಪ್ರಾಣಿಶಾಸ್ತ್ರಜ್ಞನು ಆ ಕೋತಿಮರಿಗೆ ಓದುಬರಹವನ್ನು ಕಲಿಸಲು ಪ್ರಯತ್ನಿಸಿರುವನು. ಪಾಶ್ಚಾತ್ಯ ಶಾಸ್ತ್ರಜ್ಞರ ಪರಿಶೋಧನಾಶಕ್ತಿಯು ಅದ್ಭುತವಾದುದು.

ಮಹತ್ವದ ಸೂಚನೆಯು.

ಕನ್ನಡಿಗನ ಎರಡು ಸಂಚಿಕೆಗಳು ವಾಚಕರ ಹಸ್ತಗತವಾಗಿವೆ. ಮುಂದಿನ ಸಂಚಿಕೆಯಿಂದ ವ್ಹಿ, ಪಿ. ಕಳಿಸಲು ಪ್ರಾರಂಭಿಸುವೆವು. ಕನ್ನಡಿಗನು ಯಾರಾರಿಗೆ ಅಭಿಮಾನಾಸ್ಪದನಾಗಿರುವನೋ ಅವರವರು ದಯವಿಟ್ಟು ವ್ಹಿ.ಪಿಯ ಹಾದಿಯನ್ನು ನೋಡದೇ ಮನಿಯಾರ್ಡರದಿಂದ ೧-೧೪-೦ ಕೂಡಲೇ ಕಳಿಸಬೇಕು. ಯಾಕೆಂದರೆ ವ್ಹಿಪಿಯಿಂದ ರಜಿಸ್ಟ್ರದ ವೆಚ್ಚವು ವಿನಾಕಾರಣವಾಗಿ ವಾಚಕರಿಗೆ ತಗಲುವದು. ನಮಗೂ ತೊಂದರೆಯನ್ನೂ ಹಾನಿಯನ್ನೂ (ನಿರಾಕರಿಸಿದರೆ) ಉಂಟು ಮಾಡುವದು. ಇನ್ನು ಆಗ 'ಕನ್ನಡಿಗನ' ಭೆಟ್ಟಿ [illegible] ಹಂಗ [illegible], ನಾವು [illegible] ಉಪಕೃತರಾಗುವೆವು. ಕನ್ನಡ ನಾಡಿನಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸುವ ಸಲುವಾಗಿ ನಾವು ಬೇಕೆಂತಲೇ ವಾರ್ಷಿಕ ವರ್ಗಣಿ ಒಂದೇ ಒಂದು ರೂಪಾಯಿ ಇಟ್ಟಿರುವೆವು. ಆದುದರಿಂದ ಅಭಿಮಾನ ಶಾಲಿಗಳಾದ ಎಲ್ಲ ಕನ್ನಡಿಗರೂ ದಯವಿಟ್ಟು ನಮಗೆ ಈ ಕಾರ್ಯದಲ್ಲಿ ವರ್ಗಣೀದಾರರಾಗಿ ಸಹಾಯ ಮಾಡೇ ಮಾಡುವರೆಂದು ನಂಬಿದ್ದೇವೆ. ಇನ್ನು ವರ್ಗಣೀದಾರರಾಗಿ ಸಹಾಯ ಮಾಡಲಿಚ್ಛೆಯಿಲ್ಲದವರು ಬಿಡಿ ಸಂಚಿಕೆಯನ್ನು ನಿರಾಕರಿಸಿದಾಗಿ ತಿಳಿಸಬೇಕು. ಅರ್ಧಆಣೆಯನ್ನು ವೆಚ್ಚ ಮಾಡಿ ಒಂದು ಕಾರ್ಡನ್ನು ಬರೆದರೂ ಉತ್ತಮ. ಅದೂ ಇಲ್ಲದೇ ಬಿಡಿ ಸಂಚಿಕೆಯನ್ನು ಸ್ವೀಕಾರ ಮಾಡಿ ಮನಿಯಾರ್ಡರ ಕಳಿಸದೇ ವ್ಹಿ.ಪಿ. ತರಿಸಿಕೊಂಡು ಅದನ್ನು ಆ ಮೇಲೆ ನಿರಾಕರಿಸಿ ನಮಗೆ ೩ ಆಣೆಗಳ ಹಾನಿಗೆ ಪಾತ್ರರಾಗುವಂತೆ ಮಾತ್ರ ಸಹಾಯ ಮಾಡಬಾರದಾಗಿ ಬಿನ್ನಹ!

ವಾರ್ಷಿಕ ವರ್ಗಣಿ ನಿರ್ಣಯ.

ಪೋಷಕರಿಗೆ ವಾ. ೫ ರೂ. ಉಪಕಾರಕರ್ತರಿಗೆ ವಾ ೧೦ ರೂ. ಇನ್ನು ಮೇಲೆ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ವರ್ಗಣೀದಾರರಿಗೆ	೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆಯಾಗದಂಥ ೧೦೦೦ ಯಾರ್ಡ ಕೈನೂಲು
ಪರಸ್ಥಳದ ,,	ಮನಿಯಾರ್ಡರದಿಂದ ೧-೧೪-೦ ವಿ. ಪಿ. ಯಿಂದ ೨-೦-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦ಯಾರ್ಡ ಕೈನೂಲು.
ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ-	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೪-೦ ,, ವಿ. ಪಿ. ಯಿಂದ ೩-೦-೦
ಸರಕಾರ, ಮುನಸೀಪಾಲಿಟಿ ಲೋಕಲ್‌ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೪-೦ ವಿ. ಪಿ.ಯಿಂದ ೫-೦-೦

ಬಿಡಿ ಸಂಚಿಗೆ ೯ ಪೈ. ಹಿಂದಿನಸಂಚಿಕೆಯೊಂದಕ್ಕೆ ೨ ಆಣೆ. ಧರ್ಮಾರ್ಥವಾಗಿಯಾಗಲೀ, ವರ್ಗದ ಕಡಿಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ.

ಟೀಪು- ಈ ಸಾರೆ ೪೦೦೦ ಪ್ರತಿಗಳು ಮುದ್ರಿತವಾಗಿವೆ. ಜಾಹೀರಾತು ಕೊಡಲಿಚ್ಛಿಸುವವರು ತ್ವರೆಮಾಡಬೇಕು.

ವ್ಯವಸ್ಥಾಪಕ.

ಬಾಗಲಕೋಟೆಯ ಪೇಟೆಯ ಧಾರಣೆ.

ತಾ|| ೩-೪ ೨೫.

ಮುಂಗಾರಿಜೋಳ	[illegible]		ಹಿಂಗಾರಿಜೋಳ	[illegible]
ಸಜ್ಜೆ	[illegible]		ಗೋದಿ	[illegible]
ಹುರಳಿ	[illegible]	೧೨	ತೊಗರಿ	[illegible]
ಕುಸಬಿ	೧೦||	೧೧	ಅಗಸಿ	[illegible]
ಹೆಸರು	[illegible]		ತೊಗರಿ (ಜವಾರಿ)	
ಕಡ್ಲಿ	[illegible]		ಕಡ್ಲಿಬ್ಯಾಳಿ	[illegible]
ಅಲಸಂದಿ	[illegible]		ಶಾರೆಳ್ಳು	[illegible]
ಯಳ್ಳು	[illegible]		ಜವಾರಿ ಹತ್ತಿ ೮ ಮಣಕ್ಕೆ	[illegible]

ಮೊಗಲಿನವಾಯಿ ೮ ಮಣಕ್ಕೆ [illegible] ಹಂಡಿಬಿಲ್ಲ ೮ ಮಣಕ್ಕೆ [illegible]
ಅರಳಿ (ಜೀನು) [illegible] ಅರಳಿ (ಕಾರಿಂಜು) [illegible]
ಅಪ್ಲಂಡ ಹತ್ತಿ [illegible] ಕೆವ್ಹೋಡಿ ಹತ್ತಿ [illegible]
ಅಕ್ಕಿ [illegible] ಯಿಂದ [illegible] ವರೆಗೆ ಈ ಪ್ರಕಾರ ಧಾರಣೆ ಇರುತ್ತದೆ.

ತಮ್ಮಣ್ಣಾ ತಿಮ್ಮಣ್ಣಾ ಪಿಚ್ಚಾಪುರ ಇವರಿಂದ.

ಈ ಪತ್ರಿಕೆಯು ಮಂಗಳವೇಢೇ ರಾಘವೇಂದ್ರರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು. ಪ್ರತಿ ೪೦೦೦

R. NO. B. 1947.

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವೇಶವಾಗಿದೆ)

ಯದ್ಯತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಮ್ ॥ — ಮನು

ಸಂಪಾದಕರು— ಮಂಗಳವೇಢೇ ರಾಚೋರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ } ಬಾಗಲಕೋಟೆ ಶುಕ್ರವಾರ ಮಿತಿ ಚೈತ್ರ ವ|| ೧ ಶಕೆ ೧೮೪೭. ತಾ|| ೧೦-೪-೧೯೨೫. { ಸಂಚಿಕೆ ೩

ಸಂಪಾದಕರ ಭೂಮಿ.

ಎದ್ದರೆ ಕನ್ನಡ ಕುಳಿತರೆ ಕನ್ನಡ ನುಡಿದರೆ ಕನ್ನಡವು ।
ಹೃದ್ಯವು ಕನ್ನಡ ಉದ್ಯವು ಕನ್ನಡ- ಕನ್ನಡ- ಕನ್ನಡವು ।
ಕನಸು ಮನಸಿನೊಳು ಕನ್ನಡ ಕನ್ನಡ ನಿದ್ದೆಯು ಕನ್ನಡವು।
ತಿನಸು ಕನ್ನಡವು ಜೀವಿತ ಕನ್ನಡ ಎಲ್ಲವು ಕನ್ನಡವು ॥
—ಅಂಬಿಕಾತನಯ ದತ್ತ

ಅನುಕರಣೀಯ ಪೆನಶನ್‌ದಾರರೂ, ಮುನಸಿಪಾಲಿಟಿಯೂ:— ಈಸಲ ಮಹಾ ಸಭೆಯು ಕರ್ನಾಟಕದಲ್ಲಿ ಸೇರಿದ್ದರಿಂದ ಕನ್ನಡಿಗರಲ್ಲಿ ವಿಶೇಷ ಜಾಗೃತಿಯು ಹುಟ್ಟ ಹತ್ತಿರುವದು. ಇದು ಒಳ್ಳೇ ಅಭಿಮಾನಾಸ್ಪದ ಸಂಗತಿಯು. ಮೈಸೂರ ಶ್ರೀ ಮನ್ಮಹಾರಾಜರವರು ಕೈನೂಲಿಗೆ ಹಾಗೂ ಸ್ವದೇಶೀ ವಸ್ತ್ರಗಳಿಗೆ ಒಳ್ಳೇ ಪ್ರೋತ್ಸಾಹವನ್ನು ಕೊಡ ಹತ್ತಿದ್ದಾರೆ. ಹಾಗೂ ಮಹಾರಾಜರವರ ಪ್ರೀತಿ ಪಾತ್ರರಾಗಿ ಬಹುಕಾಲ ಅವರ ಸನ್ನಿಧಿಯಲ್ಲಿ ಕೆಲಸ ಮಾಡಿ ಪೆನಶನ್ ಪಡೆದಿದ್ದ ರಾವಬಹಾದೂರ **ಎಮ್ ಶಾಮರಾವ** ಹಾಗೂ **ಚಂಗಯ್ಯ ಶೆಟ್ಟಿ** ಇವರು ರಾಟಿಯಿಂದ ಕೈನೂಲನ್ನು ತೆಗೆಯಹತ್ತಿರುವರು. ಇವರು ವಯೋವೃದ್ಧರೂ ಜ್ಞಾನವೃದ್ಧರೂ ಇರುವರೆಂಬದನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಇಳಿ ವಯಸ್ಸಿನಲ್ಲಿ ಕೂಡ ರಾಟಿ ತಿರುವುದನ್ನು ಕೇಳಿ ಯಾವ ತರುಣರ ಹೃದಯವು ಹರ್ಷೋದ್ರೇಕಗಳಿಂದ ತುಂಬಿ ಬರಲಿಕ್ಕಿಲ್ಲ! ಇನ್ನು ಕೆಲವರಿಗೆ ಖಾದೀ ಮಹತ್ವವು ತಿಳಿದಿದ್ದರೂ, ಕೈಯಿಂದ ನೂಲುವದು ತಮ್ಮಿಂದಾಗುವದಿಲ್ಲೆಂದು ಕೂಗ್ಯಾಟವನ್ನೆಬ್ಬಿಸಿದ್ದಾರೆ. ಅಂಥ ಮಹನೀಯರು ಮೇಲ ನಮೂದಿಸಿದ ವಯೋ ವೃದ್ಧ ಹುರುಪಿನ ತರುಣರನ್ನು! ಅನುಕರಿಸಬೇಕು. ಈ ಪ್ರಕಾರ ಎಲ್ಲ ತರುಣರಿಗೂ ವಿಶೇಷತಃ ಪೆನಶನ ತೆಗೆದುಕೊಂಡು ವ್ಯರ್ಥವಾಗಿ ಕಾಲಹರಣ ಮಾಡತಕ್ಕಂಥ ಮಹನಿಯರುಗಳಿಗೂ, ಮೇಲು ಪಂಕ್ತಿಯನ್ನು ಹಾಕಿ ಕೊಟ್ಟದ್ದಕ್ಕಾಗಿ ನಾವು ಎಮ್ ಶಾಮರಾವ ಹಾಗೂ ಚಂಗಯ್ಯ ಶೆಟ್ಟಿ ಇವರನ್ನು ಮನಃ ಪೂರ್ವಕವಾಗಿ ಅಭಿನಂದಿಸುವೆವು. ಅದರಂತೆಯೇ ಬೆಂಗಳೂರ ಮುನಸಿಪಾಲಿಟಿಯಲ್ಲಿ ಖಾದೀ ಪ್ರವೇಶವಾದದ್ದು ವಿಶೇಷ ಅಭಿಮಾನಾಸ್ಪದವು ಯಾವ ಸಮಯದಲ್ಲಿ ಬ್ರಿಟಿಶ ಕರ್ನಾಟಕದಲ್ಲಿಯ ಸ್ಥಾನಿಕ ಸ್ವರಾಜ್ಯಗಳು (ಅವುಗಳಿಗೆ ಸಂಸ್ಥಾನಗಳಲ್ಲಿಯ ಮುನಸಿಪಾಲಿಟಿಗಳಿಗಿಂತ ವಿಶೇಷ ಅಧಿಕಾರಗಳು ಇದ್ದರೂ) ಇನ್ನೂ ನಿದ್ರಾವಸ್ಥೆಯಲ್ಲಿರುವವೋ, ಅಂಥ ಕಾಲಕ್ಕೆ ಬೆಂಗಳೂರಿನ ಬಾಂಧವರು ಖಾದೀ ಮಹತ್ವವನ್ನರಿತು ಕಾರ್ಯಪ್ರವೃತ್ತರಾದದ್ದಕ್ಕಾಗಿ ನಾವು ಬೆಂಗಳೂರಿನ ಬಾಂಧವರನ್ನು ತುಂಬಾ ಅಭಿನಂದಿಸುತ್ತೇವೆ. ಅದೇ ಪ್ರಕಾರವಾಗಿ ಬ್ರಿಟಿಶ ಕರ್ನಾಟಕದ ಹಾಗೂ ನಿಜಾಂ ಕರ್ನಾಟಕದ ಎಲ್ಲ ಸ್ಥಾನಿಕ ಸ್ವರಾಜ್ಯಗಳು ಬೆಂಗಳೂರಿನ ಕೀರ್ತಿಯನ್ನು ತೀರಬೇಕೆಂದು ನಾವು ಹೇಳದೇ ಇರಲಾರೆವು. ಕೈ ನೂಲನ್ನು ತೆಗೆಯುವದರಿಂದ ಯಾವ ರಾಜ ದ್ರೋಹಾತ್ಮಕ ಚಳವಳಿಯನ್ನು ಮಾಡಿದಂತಾಗುವದಿಲ್ಲ. ಹಾಗಾದ ಪಕ್ಷದಲ್ಲಿ ಒಕ್ಕಲತನವನ್ನು ಮಾಡಿದರೂ ರಾಜದ್ರೋಹ ಮಾಡಿದಂತಾಗಬಹುದು ಯಾಕಂದರೆ ಕೃಷದಿಂದ ನಮ್ಮ ಹೊಟ್ಟೆಗೆ ಅನ್ನ ದೊರೆಯುವದು; ನೂಲುವದರಿಂದ ಮೈಗೆ ಬಟ್ಟೆ ದೊರೆಯುವದು. ಇದೇ ಕಾರಣಕ್ಕಾಗಿ ಎಷ್ಟೋ ಸನ್ಮಾನ್ಯ ಗೃಹಸ್ಥರು ರಾವಬಹಾದ್ದೂರ ದಿವಾನ ಬಹಾದ್ದೂರ ಮುಂತಾದ ಪದವೀಧರರು ರಾಟಿಯನ್ನು ತಿರುಗಿಸಹತ್ತಿದ್ದಾರೆ. ಇದೇ ಪ್ರಕಾರ ಎಲ್ಲ ಸ್ಥಾನಿಕ ಸ್ವರಾಜ್ಯಗಳಲ್ಲಿ ಖಾದೀ ಪ್ರವೇಶವಾದ ಸುದಿನವು ತೀವ್ರವೇ ಬರುವದೆಂದು ನಾವು ಆಶಿಸುತ್ತೇವೆ.

ಕನ್ನಡಿಗನಿಕ್ಕೊಂದು ನುಡಿ:— ' ಕನ್ನಡಿಗ 'ನ ಮುಖ್ಯ ಧ್ಯೇಯವು ಕನ್ನಡಿಗರಲ್ಲಿ ಕನ್ನಡತ್ವವನ್ನು ಹುಟ್ಟಿಸಿ ತುಂಡು ತುಂಡಾದ ಕನ್ನಡ ನಾಡನ್ನು ಅಖಂಡವಾಗಿ ಮಾಡುವದೇ ಆಗಿರುವದೆಂಬುದು ' ಕನ್ನಡಿಗ' ನ ವಾಚಕರಿಗೆ ವಿದಿತವಾಗಿರಲು ಸಾಕು. ಆದಕ್ಕಾಗಿಯೇ ನಾವು ಸಂಪಾದಕರ ಭೂಮಿಯ ಶಿರೋ ಭಾಗದಲ್ಲಿ "ಎದ್ದರೆ ಕನ್ನಡ ಕುಳಿತರೆ ಕನ್ನಡ ನುಡಿದರೆ ಕನ್ನಡವು' ಇತ್ಯಾದಿ ಪದ್ಯವನ್ನು ಹಾಕಿರುವೆವು ಇದೇ ಪ್ರಕಾರವಾಗಿ ಕನ್ನಡಿಗನು " " ಎದ್ದರೆ ಖದ್ದರ ಕುಳಿತರೆ ಖದ್ದರ, ನುಡಿದರೆ ಖದ್ದರವು." ಎಂದು ನುಡಿಯದಿರಲಾರನು.

ಮಹಾತ್ಮಾ ಜೀಯವರು ಮದ್ರಾಸಿಗೆ ದಯಪಾಲಿಸಿದಾಗ್ಯೆ ಸ್ವರಾಜ್ಯ ಪತ್ರಿಕೆಯ ಸಂಪಾದಕರಾದ ಶ್ರೀ ಪ್ರಕಾಶಂರು ಅವರಿಗೆ ಖಾದಿಯಲ್ಲಿ ಮಾನ ಪತ್ರವನ್ನು ಅರ್ಪಿಸಿದರಷ್ಟೇ? ಮಹಾತ್ಮಾಜೀಯವರು ತಿರುಗಿ ಉತ್ತರ ಕೊಡುವಾಗ್ಗೆ ಸಬಂಧ ಹಿಂದುಸ್ಥಾನವು ಖಾದೀಮಯವಾದರೇನೇ ತಮಗೆ ಅತ್ಯಂತ ಆನಂದವಾಗುವದೆಂತಲೂ, ಎಲ್ಲ ಪತ್ರಿಕಾ ಕರ್ತರು ಖಾದಿಯ ಮಹತ್ವದ ಬಗ್ಗೆಯೇ ಬರೆಯಬೇಕೆಂತಲೂ ಹೇಳಿದ್ದಾರೆ. ಪತ್ರಿಕಾ ಕರ್ತರು ಮಹಾತ್ಮಾಜೀಯವರ ಈ ಉದ್ಗಾರಗಳನ್ನು ನೆನಪಿನಲ್ಲಿಡತಕ್ಕದ್ದು. ' ಕನ್ನಡಿಗನು'ಮಾತ್ರ ಈ ನುಡಿಯನ್ನು ಮೇಲಿಂದ ಮೇಲೆ ನುಡಿಯದಿರಲಾರನು.

ಅಂಜುವದೇಕೆ? ಶ್ರೀ ಚಿತ್ತರಂಜನ ದಾಸರಿಗೆ ಗೌರ ಕಾಯದವರಲ್ಲಿ ಅನೇಕ ಜನ ಮಿತ್ರರಿರುವರು. ಅವರ ಸಂಗಡ ಇತ್ತಿತ್ತಲಾಗಿ ಮಾತಾಡುವಾಗೆಲ್ಲ 'ಹಿಂದುಸ್ಥಾನದಿಂದ ಬ್ರಿಟಿಶರನ್ನು ಓಡಿಸಬೇಕೆಂಬದಾಗಿ ಗೌಪ್ಯವಾಗಿ ನಡೆದಿರುವ ರಾಜ ದ್ರೋಹಾತ್ಮಕ ಚಳವಳಿಯಲ್ಲಿ ಶ್ರೀ ದಾಸರವೂ, ಅವರ ಸ್ವರಾಜ್ಯ ಪಕ್ಷದವರದೂ ಅಂಗವಿದೆಂಬದಾಗಿ " ಅಭಿಪ್ರಾಯ ಪಡುತ್ತಲಿರುವಂತೆ. ಆದ್ದರಿಂದ ಶ್ರೀ .

ಹೊರಜಗದ ಸುದ್ದಿಗಳು.

[illegible] ಪತ್ರಿಕೆಯಲ್ಲಿ ಪ್ರಸಿದ್ಧವಾಗಿದೆ [illegible]

ಬಾಫ್ ಎಂಬ ಪಟ್ಟಣದ ನಗರದಲ್ಲಿ ಒಂದು ಮೋಟರ್, ಗಾಡಿಯು ಒಬ್ಬ ಮನುಷ್ಯನ ಮೇಲೆ ಹಾಯಿತು. ಮನುಷ್ಯನು [illegible] ಸತ್ತನೆಂದೇ ಜನರು ನಿಶ್ಚಯಿಸಿದರು. ಅಷ್ಟರಲ್ಲಿ ಅವನು ಮೆಲ್ಲಗೆ ಎದ್ದುನಿಂತು "ಸ್ವಾಮಿ! ನನ್ನಿಂದ ತಮ್ಮ ಮೋಟಾರಿಗೇನಾದರೂ ಅಪಾಯವಾಯಿತೆ?" ಎಂದು ವಿನಯದಿಂದ ಕೇಳಿಕೊಂಡನಂತೆ!

ಇಂಗ್ಲಂಡಿನಲ್ಲಿ ಒಬ್ಬನು ಸಾಕಿದ ನಾಯಿಯನ್ನು ಮತ್ತೊಬ್ಬನು ವಶಪಡಿಸಿಕೊಂಡದ್ದಕ್ಕೆ ೩೦ ರೂ. ದಂಡ ವಿಧಿಸಲ್ಪಡುವನು. ಈ ಶಾಸನದ ಪ್ರಕಾರ ಒಬ್ಬನು ತನ್ನ ನಾಯಿಯನ್ನು ಬೇರೊಬ್ಬನ ಬೆನ್ನು ಹತ್ತಿ ಹೋಗುತ್ತಿರಲಾಗಿ ಅವನ ಮೇಲೆ ಫಿರ್ಯಾದು ಮಾಡಿದನು. ಆ ನಾಯಿಯನ್ನು ಅವರ ಯಜಮಾನನ ಮನೆಗೆ ಎಷ್ಟು ಅಟ್ಟಿದರೂ ಅದು ತನ್ನ ಬಳಿಗೆ ಓಡಿ ಬರುತ್ತಿರುವದರಿಂದ ಅದರಲ್ಲಿ ತನ್ನ ಅಪರಾಧವೇನೂ ಇಲ್ಲವೆಂದು ಅಪರಾಧಿಯು ವಾದಿಸಿದನು. ಅದರ ಮೇಲೆ ನ್ಯಾಯಾಧೀಶನು ಆ ನಾಯಿಯನ್ನು ಒಡಿಸಿ ಅದರ ಯಜಮಾನನ ಮನೆಗೆ ಕಳುಹಿಸಿ ಕಟ್ಟಿ ಹಾಕಿ ಹೋಗುವಂತೆ ಆಜ್ಞೆ ಮಾಡಿದನು. ಆದರೆ ಆ ನಾಯಿಯು ಅಷ್ಟು ಬಂಧನದಲ್ಲಿದ್ದರೂ ಸಮಯ ಸಿಕ್ಕಿದಾಗ ಅಪರಾಧಿಯ ಬಳಿಗೆ ಓಡಿಬರುವದನ್ನು ನ್ಯಾಯಾಧೀಶನು ಕಂಡು ತನ್ನ ಪಾಲಕನಾರೆಂಬುದನ್ನು ಗೊತ್ತುಮಾಡುವ ಶಕ್ತಿಯು ನಾಯಿಗೂ ಇರುತ್ತದೆಂದು ಅಭಿಪ್ರಾಯಪಟ್ಟು ಅಪರಾಧಿಯನ್ನು [illegible] ಮಾಡಿದನು.

ಮನುಷ್ಯರ ಉತ್ಪತ್ತಿಯು ಮೊಟ್ಟಮೊದಲು ಕೋತಿಗಳಿಂದಾಯಿತೆಂದು ಡಾರ್ವಿನ್ ಎಂಬ ಪ್ರಸಿದ್ಧ ಪ್ರಾಣಿಶಾಸ್ತ್ರಜ್ಞನ ಶೋಧನಾಭಿಪ್ರಾಯವಾಗಿರುತ್ತದೆ, ಅಲ್ಲದೆ ಕೆಲರು ಆ ಅಭಿಪ್ರಾಯವನ್ನು ಅಂಗೀಕರಿಸಿರುತ್ತಾರೆ. ಆದರೆ ಕೋತಿಗಳನ್ನು ಸಾಧನಬೋಧನದಿಂದ ಮನುಷ್ಯರನ್ನಾಗಿ ಮಾಡಬಹುದೆಂಬುದನ್ನು ಈವರೆಗೆ ಯಾರೂ ಕಂಡು ಹಿಡಿದಿರಲಿಲ್ಲ. ಈಗ ಒಬ್ಬ ಜರ್ಮನಿಯ ಪ್ರಾಣಿಶಾಸ್ತ್ರವೇತ್ತನು ಒಂದು ಸಣ್ಣ ಕೋತಿಮರಿಯನ್ನು ತಂದು ಅದಕ್ಕೆ [illegible] ಮಕ್ಕಳಿಗೆ ಮಾಡುವ ರೀತಿಯಲ್ಲಿ ಮಾಡಿಸಿ ನೋಡಲು ಒಬ್ಬ ದಾದಿಯನ್ನು ನಿಯಮಿಸಿದನು. ದಾದಿಯು ಮಕ್ಕಳನ್ನು ಸಾಕುವಂತೆ ಆ ಮರಿಯನ್ನು ಸಾಕುತ್ತ ಅದಕ್ಕೆ ಆಟಪಾಟಗಳನ್ನು ಕಲಿಸಿದಳು. ಆ ಕೋತಿಮರಿಯು ಬೆಳೆಯುತ್ತ ಬಂದಹಾಗೆಲ್ಲಾ ಸೀಸೆಯಲ್ಲಿ ಹಾಲನ್ನು ಕುಡಿಯುವದನ್ನು ಬಿಟ್ಟು ತಾನೇ ಕೈಯಿಂದ ಎತ್ತಿ ಕುಡಿಯುತ್ತ ಹಣ್ಣುಹಂಪಲುಗಳನ್ನು ತಿನ್ನುತ್ತಿರುವುದಲ್ಲದೆ ಮಕ್ಕಳಂತೆ ಆಟಪಾಟಗಳಿಂದ ಕಾಲಹರಣ ಮಾಡುತ್ತಿರುವುದು. ಇದು ತನಗೆ ಆಹಾರ ಬೇಕಾದ ವೇಳೆಯಲ್ಲಿ ಗಂಟೆಯನ್ನು ಬಾರಿಸಿ ದಾದಿಯನ್ನು ಬರಮಾಡುವುದು, ವಿದ್ಯುದ್ದೀಪವನ್ನು ಸ್ವತಃ ಹೊತ್ತಿಸುವುದು ಮತ್ತು ಆರಿಸುವುದು. ಆ ಪ್ರಾಣಿಶಾಸ್ತ್ರಜ್ಞನು ಆ ಕೋತಿಮರಿಗೆ ಓದುಬರಹವನ್ನು ಕಲಿಸಲು ಪ್ರಯತ್ನಿಸಿರುವನು. ಪಾಶ್ಚಾತ್ಯ ಶಾಸ್ತ್ರಜ್ಞರ ಪರಿಶೋಧನಾಶಕ್ತಿಯು ಅದ್ಭುತವಾದುದು.

ಮಹತ್ವದ ಸೂಚನೆಯು.

ಕನ್ನಡಿಗನ ಎರಡು ಸಂಚಿಕೆಗಳು ವಾಚಕರ ಹಸ್ತಗತವಾಗಿವೆ. ಮುಂದಿನ ಸಂಚಿಕೆಯಿಂದ ವ್ಹಿ. ಪಿ. ಕಳಿಸಲು ಪ್ರಾರಂಭಿಸುವೆವು. ಕನ್ನಡಿಗನು ಯಾರಾರಿಗೆ ಅಭಿಮಾನಾಸ್ಪದನಾಗಿರುವನೋ ಅವರವರು ದಯವಿಟ್ಟು ವ್ಹಿ.ಪಿ.ಯ ಹಾದಿಯನ್ನು ನೋಡದೇ ಮನಿಯಾರ್ಡರದಿಂದ ೧-೧೪-೦ ಕೂಡಲೇ ಕಳಿಸಬೇಕು. ಯಾಕಂದರೆ ವ್ಹಿ.ಪಿ.ಯಿಂದ ರಜಿಸ್ಟರದ ವೆಚ್ಚ ವಿನಾಕಾರಣವಾಗಿ ವಾಚಕರಿಗೆ ತಗಲುವದು. ನಮಗೂ ತೊಂದರೆಯನ್ನೂ ಹಾನಿಯನ್ನೂ (ನಿರಾಕರಿಸಿದರೆ) ಉಂಟು ಮಾಡುವದು. ಇನ್ನು ಈಗ 'ಕನ್ನಡಿಗ' [illegible] ಒದಗುವ ಹಾಗೆ [illegible] ಉಪಕೃತರಾಗುವೆವು. ಕನ್ನಡ ನಾಡಿನಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸುವ ಸಲುವಾಗಿ ನಾವು ಬೇಕಂತಲೇ ವಾರ್ಷಿಕ ಚಂದಾ ಒಂದೇ ಒಂದು ರೂಪಾಯಿ ಇಟ್ಟಿರುವೆವು. ಆದುದರಿಂದ ಅಭಿಮಾನ ಶಾಲಿಗಳಾದ ಎಲ್ಲ ಕನ್ನಡಿಗರೂ ದಯವಿಟ್ಟು ನಮಗೆ ಈ ಕಾರ್ಯದಲ್ಲಿ ಚಂದಾದಾರರಾಗಿ ಸಹಾಯ ಮಾಡೇ ಮಾಡುವರೆಂದು ನಂಬಿದ್ದೇವೆ. ಇನ್ನು ಚಂದಾದಾರರಾಗಿ ಸಹಾಯ ಮಾಡಲಿಚ್ಛೆಯಿಲ್ಲದವರು ಬಿಡಿ ಸಂಚಿಕೆಯನ್ನು ನಿರಾಕರಿಸಿಯಾಗಿ ತಿಳಿಸಬೇಕು. ಅರ್ಧ ಆಣೆಯನ್ನು ವೆಚ್ಚ ಮಾಡಿ ಒಂದು ಕಾರ್ಡನ್ನು ಬರೆದರೂ ಉತ್ತಮ. ಅದೂ ಇಲ್ಲದೇ ಬಿಡಿ ಸಂಚಿಕೆಯನ್ನು ಸ್ವೀಕಾರ ಮಾಡಿ ಮನಿಯಾರ್ಡರ ಕಳಿಸದೇ ವ್ಹಿ.ಪಿ. ತರಿಸಿಕೊಂಡು ಅದನ್ನು ಆ ಮೇಲೆ ನಿರಾಕರಿಸಿ ನಮಗೆ ೩ ಆಣೆಗಳ ಹಾನಿಗೆ ಪಾತ್ರರಾಗುವಂತೆ ಮಾತ್ರ ಸಹಾಯ ಮಾಡಬಾರದಾಗಿ ಬಿನ್ನಹ!

ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫ ರೂ. ಉಪಕಾರಕರ್ತರಿಗೆ ವಾ. ೧೦ ರೂ. ಐವತ್ತು ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ	೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆಯಾಗದಂಥ ೧೦೦೦ ಯಾರ್ಡ ಕೈನೂಲು
ಪರಸ್ಥಳದ ,,	ಮನಿಯಾರ್ಡರದಿಂದ ೧-೧೪-೦ ವಿ. ಪಿ. ಯಿಂದ ೨-೦-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦ ಯಾರ್ಡ ಕೈನೂಲು.
ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೪-೦ ,, ವಿ. ಪಿ. ಯಿಂದ ೩-೦-೦
ಸರಕಾರ, ಮುನಸಿಪಾಲಿಟಿ ಲೋಕಲ್ ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೪-೦ ವಿ. ಪಿ. ಯಿಂದ ೫-೦-೦

ಬಿಡಿ ಸಂಚಿಗೆ ೯ ಪೈ. ಹಿಂದಿನ ಸಂಚಿಕೆಯೊಂದಕ್ಕೆ ೨ ಆಣೆ. ಧರ್ಮಾರ್ಥವಾಗಿಯಾಗಲೀ, ವರ್ಷದ ಕಡಿಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ.

ಟೀಪು - ಈ ಸಾರೆ ೪೦೦೦ ಪ್ರತಿಗಳು ಮುದ್ರಿತವಾಗಿವೆ. ಜಾಹೀರಾತು ಕೊಡಲಿಚ್ಛಿಸುವವರು ತ್ವರೆಮಾಡಬೇಕು.

ವ್ಯವಸ್ಥಾಪಕ.

ಬಾಗಲಕೋಟೆಯ ಪೇಟೆಯ ಧಾರಣೆ.

ತಾ॥ [illegible]

ಮುಂಗಾರಿಜೋಳ	[illegible]	ಹಿಂಗಾರಿಜೋಳ	[illegible]
ಸಜ್ಜಿ	[illegible]	ಗೋಧಿ	[illegible]
ಹುರಳಿ	[illegible]	[illegible]	[illegible]
ಕುಸುಬಿ	[illegible]	ಅಗಸಿ	[illegible]
ಹೆಸರು	[illegible]	ತೊಗರಿ (ಜವಾರಿ)	[illegible]
ಕಡ್ಲಿ	[illegible]	[illegible]	[illegible]
ಅಲಸಂದಿ	[illegible]	[illegible]	[illegible]
ಯಳ್ಳು	[illegible]	[illegible] ಹತ್ತಿ ೧ ಮಣಕ್ಕೆ	[illegible]
ಮೆಣಸಿನಕಾಯಿ ೧ ಮಣಕ್ಕೆ	[illegible]	[illegible] ೧ ಮಣಕ್ಕೆ	[illegible]
ಅರಳೆ (ಬೀಜ)	[illegible]	ಅರಳೆ ([illegible])	[illegible]
[illegible] ಹತ್ತಿ	[illegible]	[illegible] ಹತ್ತಿ	[illegible]

[illegible] ವರೆಗೆ ಈ ಪ್ರಕಾರ ಧಾರಣೆ ಇರುತ್ತದೆ.

ತಮ್ಮಣ್ಣಾ ತಿಮ್ಮಣ್ಣಾ ಪಿಚ್ಚಾಪೂರ ಇವರಿಂದ.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು. ಪ್ರತಿ ೪೦೦೦

R. NO. B. 1947

ಕನ್ನಡಿಗ

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವೇಶವಾಗಿದೆ)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು — ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ಚೈತ್ರ ವ್ಯ ೧ ಶಕೆ ೧೮೪೭. ತಾ॥ ೧೦-೪-೧೯೨೫. | ಸಂಚಿಕೆ ●

ಸಂಪಾದಕರ ಭೂಮಿ.

ಎದ್ದರೆ ಕನ್ನಡ ಕುಳಿತರೆ ಕನ್ನಡ ನುಡಿದರೆ ಕನ್ನಡವು ।
ಹೃದ್ಯವು ಕನ್ನಡ ಉದ್ಯಮ ಕನ್ನಡ-ಕನ್ನಡ-ಕನ್ನಡವು ।
ಕನಸು ಮನಸಿನೊಳು ಕನ್ನಡ ಕನ್ನಡ ನಿದ್ದೆಯು ಕನ್ನಡವು।
ತಿನಸು ಕನ್ನಡವು ಜೀವಿತ ಕನ್ನಡ ಎಲ್ಲವು ಕನ್ನಡವು ॥
— ಅಂಬಿಕಾತನಯ ದತ್ತ

ಅನುಕರಣೀಯ ಪೆನಶನ್‌ದಾರರೂ, ಮುನಸಿಪಾಲಿಟಿಯು:— ಈಸಲ ಮಹಾ ಸಭೆಯು ಕರ್ನಾಟಕದಲ್ಲಿ ಸೇರಿದ್ದರಿಂದ ಕನ್ನಡಿಗರಲ್ಲಿ ವಿಶೇಷ ಜಾಗೃತಿಯು ಹುಟ್ಟ ಹತ್ತಿರುವದು. ಇದು ಒಳ್ಳೇ ಅಭಿಮಾನಾಸ್ಪದ ಸಂಗತಿಯು. ಮೈಸೂರ ಶ್ರೀ ಮನ್ಮಹಾರಾಜರವರು **ಕೈನೂಲಿಗೆ** ಹಾಗೂ ಸ್ವದೇಶೀ ವಸ್ತ್ರಗಳಿಗೆ ಒಳ್ಳೇ **ಪ್ರೋತ್ಸಾಹವನ್ನು ಕೊಡ** ಹತ್ತಿದ್ದಾರೆ. ಹಾಗೂ ಮಹಾರಾಜರವರ ಪ್ರೀತಿ ಪಾತ್ರರಾಗಿ ಬಹುಕಾಲ ಅವರ ಸನ್ನಿಧಿಯಲ್ಲಿ ಕೆಲಸ ಮಾಡಿ ಪೆನಶನ್ ಪಡೆದಿದ್ದ ರಾವಬಹಾದೂರ **ಎಮ್ ಶಾಮರಾವ** ಹಾಗೂ **ಜಂಗಯ್ಯ ಶೆಟ್ಟಿ** ಇವರು ರಾಟೆಯಿಂದ **ಕೈನೂಲನ್ನು ತೆಗೆಯ**ಹತ್ತಿರುವರು. ಇವರು ವಯೋವೃದ್ಧರೂ ಜ್ಞಾನವೃದ್ಧರೂ ಇರುವರೆಂಬದನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಇಳಿ ವಯಸ್ಸಿನಲ್ಲಿ **ಕೂಡ** ರಾಟೆ ತಿರುವುದನ್ನು ಕೇಳಿ ಯಾವ ತರುಣರ ಹೃದಯವು ಹರ್ಷೋದ್ರೇಕಗಳಿಂದ ತುಂಬಿ ಬರಲಿಕ್ಕಿಲ್ಲ! ಇನ್ನು ಕೆಲವರಿಗೆ ಖಾದೀ ಮಹತ್ವವು ತಿಳಿದಿದ್ದರೂ, ಕೈಯಿಂದ ನೂಲುವದು ತಮ್ಮಿಂದಾಗುವದಿಲ್ಲೆಂದು **ಕೂಗ್ಯಾಟವನ್ನೆಬ್ಬಿಸಿದ್ದಾರೆ.** ಅಂಥ ಮಹನೀಯರು ಮೇಲ ನಮೂದಿಸಿದ ವಯೋ ವೃದ್ಧ ಹುರುಪಿನ ತರುಣರನ್ನು! ಅನುಕರಿಸಬೇಕು. ಈ ಪ್ರಕಾರ ಎಲ್ಲ ತರುಣರಿಗೂ ವಿಶೇಷತ: ಪೆನಶನ ತೆಗೆದು ಕೊಂಡು ವ್ಯರ್ಥವಾಗಿ ಕಾಲಹರಣ ಮಾಡತಕ್ಕಂಥ ಮಹನಿಯರುಗಳಿಗೂ, ಮೇಲು ಪಂಕ್ತಿಯನ್ನು ಹಾಕಿ ಕೊಟ್ಟದ್ದಕ್ಕಾಗಿ ನಾವು ಎಮ್ ಶಾಮರಾವ ಹಾಗೂ ಜಂಗಯ್ಯ ಶೆಟ್ಟಿ ಇವರನ್ನು ಮನಃ ಪೂರ್ವಕವಾಗಿ ಅಭಿನಂದಿಸುವೆವು. ಅದರಂತೆಯೇ ಬೆಂಗಳೂರ ಮುನಸಿಪಾಲಿಟಿಯಲ್ಲಿ ಖಾದೀ ಪ್ರವೇಶವಾದದ್ದು ವಿಶೇಷ ಅಭಿಮಾನಾಸ್ಪದವು ಯಾವ ಸಮಯದಲ್ಲಿ ಬ್ರಿಟಿಶ ಕರ್ನಾಟಕದಲ್ಲಿಯ ಸ್ಥಾನಿಕ ಸ್ವರಾಜ್ಯಗಳು (ಅವುಗಳಿಗೆ ಸಂಸ್ಥಾನಗಳಲ್ಲಿಯ ಮುನಸಿಪಾಲಿಟಿಗಳಿಗಿಂತ ವಿಶೇಷ ಅಧಿಕಾರಗಳು ಇದ್ದರೂ) ಇನ್ನೂ ನಿದ್ರಾವಸ್ಥೆಯಲ್ಲಿರುವವೋ, ಅಂಥ ಕಾಲಕ್ಕೆ ಬೆಂಗಳೂರಿನ ಬಾಂಧವರು ಖಾದೀ ಮಹತ್ವವನ್ನರಿತು **ಕಾರ್ಯಪ್ರವೃತ್ತರಾದದ್ದಕ್ಕಾಗಿ** ನಾವು ಬೆಂಗಳೂರಿನ ಬಾಂಧವರನ್ನು **ತುಂಬಾ** ಅಭಿನಂದಿಸುತ್ತೇವೆ. ಅದೇ **ಪ್ರಕಾರವಾಗಿ ಬ್ರಿಟಿಶ** ಕರ್ನಾಟಕರ ಹಾಗೂ ನಿ... ಕರ್ನಾಟಕದ ಎಲ್ಲ ಸ್ಥಾನಿಕ ಸ್ವರಾಜ್ಯಗಳು ಬೆಂಗಳೂರಿನ ಕಿತ್ತಿಯನ್ನು ತಿಡಬೇಕೆಂದು ನಾವು ಹೇಳದೇ ಇರಲಾರೆವು. ಕೈ ನೂಲನ್ನು ತೆಗೆಯುವದರಿಂದ ಯಾವರಾಜ ದ್ರೋಹಾತ್ಮಕ ಚಳವಳಿಯನ್ನು ಮಾಡಿದಂತಾಗುವದಿಲ್ಲ. ಹಾಗಾದ ಪಕ್ಷದಲ್ಲಿ ಒಕ್ಕಲತನವನ್ನು ಮಾಡಿದರೂ ರಾಜದ್ರೋಹ ಮಾಡಿದಂತಾಗಬಹುದು ಯಾಕಂದರೆ ಕೃಷಿಯಿಂದ ನಮ್ಮ ಹೊಟ್ಟೆಗೆ ಅನ್ನ ದೊರೆಯುವದು; ನೂಲುವದರಿಂದ ಮೈಗೆ ಬಟ್ಟೆ ದೊರೆಯುವದು. ಇದೇ ಕಾರಣಕ್ಕಾಗಿ ಎಷ್ಟೋ ಸನ್ಮಾನ್ಯ ಗೃಹಸ್ಥರು ರಾವಬಹಾದ್ದೂರ ದಿವಾನ ಬಹಾದ್ದೂರ ಮುಂತಾದ ಪದವೀಧರರು **ರಾಟೆ**ಯನ್ನು ತಿರುಗಿಸಹತ್ತಿದ್ದಾರೆ. ಇದೇ ಪ್ರಕಾರ ಎಲ್ಲ ಸ್ಥಾನಿಕ ಸ್ವರಾಜ್ಯಗಳಲ್ಲಿ ಖಾದೀ ಪ್ರವೇಶವಾದ ಸುದಿನವು ತೀವ್ರವೇ ಬರುವದೆಂದು ನಾವು ಆಶಿಸುತ್ತೇವೆ.

ಕನ್ನಡಿಗನಿನ್ನೊಂದು ನುಡಿ:- 'ಕನ್ನಡಿಗ'ನ ಮುಖ್ಯ ಧ್ಯೇಯವು ಕನ್ನಡಿಗರಲ್ಲಿ ಕನ್ನಡತ್ವವನ್ನು ಹುಟ್ಟಿಸಿ ತುಂಡು ತುಂಡಾದ ಕನ್ನಡ ನಾಡನ್ನು ಅಖಂಡವಾಗಿ ಮಾಡುವದೇ ಆಗಿರುವದೆಂಬುದು 'ಕನ್ನಡಿಗ'ನ ವಾಚಕರಿಗೆ ವಿದಿತವಾಗಿರಲು ಸಾಕು. ಅದಕ್ಕಾಗಿಯೇ ನಾವು ಸಂಪಾದಕರ ಭೂಮಿಯ ಶಿರೋ ಭಾಗದಲ್ಲಿ "ಎದ್ದರೆ ಕನ್ನಡ ಕುಳಿತರೆ ಕನ್ನಡ ನುಡಿದರೆ ಕನ್ನಡವು' ಇತ್ಯಾದಿ ಪದ್ಯವನ್ನು ಹಾಕಿರುವೆವು ಇದೇ ಪ್ರಕಾರವಾಗಿ ಕನ್ನಡಿಗನು" "ಎದ್ದರ ಖದ್ದರ ಕುಳಿತರೆ ಖದ್ದರ, ನುಡಿದರೆ ಖದ್ದರವು." ಎಂದು ನುಡಿಯದಿರಲಾರನು.

ಮಹಾತ್ಮಾಜೀಯವರು ಮದ್ರಾಸಿಗೆ ದಯಮಾಡಿಸಿದಾಗ್ಗೆ ಸ್ವರಾಜ್ಯ ಪತ್ರಿಕೆಯ ಸಂಪಾದಕರಾದ ಶ್ರೀ ಪ್ರಕಾಶಂರು ಅವರಿಗೆ ಖಾದಿಯಲ್ಲಿ ಮಾನ ಪತ್ರವನ್ನು ಅರ್ಪಿಸಿದರಷ್ಟೇ? ಮಹಾತ್ಮಾಜೀಯವರು ತಿರುಗಿ ಉತ್ತರ ಕೊಡುವಾಗ್ಗೆ ಸಮಂಥ ಹಿಂದುಸ್ಥಾನವು ಖಾದೀಮಯವಾದರೇನೇ ತಮಗೆ ಅತ್ಯಂತ ಆನಂದವಾಗುವದೆಂತಲೂ, ಎಲ್ಲ ಪತ್ರಿಕಾ ಕರ್ತರು ಖಾದಿಯ ಮಹತ್ವದ ಬಗ್ಗೆಯೇ ಬರೆಯಬೇಕೆಂತಲೂ ಹೇಳಿದ್ದಾರೆ. ಪತ್ರಿಕಾ ಕರ್ತರು ಮಹಾತ್ಮಾಜೀಯವರ ಈ ಉದ್ಗಾರಗಳನ್ನು ನೆನಪಿನಲ್ಲಿಡತಕ್ಕದ್ದು. 'ಕನ್ನಡಿಗನು' ಮಾತ್ರ ಈ ನುಡಿಯನ್ನು ಮೇಲಿಂದ ಮೇಲೆ ನುಡಿಯದಿರಲಾರನು.

ಅಂಜುವದೇಕೆ? ಶ್ರೀ ಚಿತ್ತರಂಜನ ದಾಸರಿಗೆ ಗೌರ ಕಾಯದವರಲ್ಲಿ ಅನೇಕ ಜನ ಮಿತ್ರರಿರುವರು. ಅವರ ಸಂಗಡ ಇತ್ತಿತ್ತಲಾಗಿ ಮಾತಾಡುವಾಗೆಲ್ಲ 'ಹಿಂದುಸ್ಥಾನದಿಂದ ಬ್ರಿಟಿಶರನ್ನು ಓಡಿಸಬೇಕೆಂಬದಾಗಿ ಗೌಪ್ಯವಾಗಿ ನಡೆದಿರುವ ರಾಜ ದ್ರೋಹಾತ್ಮಕ ಚಳವಳಿಯಲ್ಲಿ ಶ್ರೀ ದಾಸರನೂ, ಅವರ ಸ್ವರಾಜ್ಯ ಪಕ್ಷದವರದೂ ಅಂಗವಿದೆಂಬದಾಗಿ" ಅಭಿಪ್ರಾಯ ಪಡುತ್ತಲಿರುವಂತೆ. ಆದ್ದರಿಂದ ಶ್ರೀ .

ಕರ್ನಾಟಕದ ನಾಣ್ಯಗಳು-

(ಲೇ: ಶ್ರೀ. ಶ್ರೀನಿವಾಸ ರಾಜೇರಾವ ಮಂಗಳವೇಢೆ.)

ಸಾಮಾನ್ಯ ಸಂಗತಿಗಳು:— ನಾಣ್ಯಮುದ್ರಣಕಲೆಯು ಹಿಂದುಸ್ಥಾನದಲ್ಲಿ ಅತಿ ಪ್ರಾಚೀನಕಾಲದಿಂದಲೂ ರೂಢಿಯಲ್ಲಿದೆ. ಪರದೇಶೀಯರು ಹಿಂದುಸ್ಥಾನಕ್ಕೆ ಬರುವದಕ್ಕಿಂತ ಪೂರ್ವದಲ್ಲಿಯೇ ಒಂದು ವಿಶಿಷ್ಟ ತರದ ಮುದ್ರಣ ಕಲೆಯು ಇಲ್ಲಿ ಇದ್ದಿತೆನ್ನುವದಕ್ಕೆ ಅನೇಕ ಆಧಾರಗಳುಂಟು. ಅತೀಯ ಪ್ರಾಚೀನ ಕಾಲದವೆಂದರೆ ಕ್ರಿ. ಶ. ಪೂ. ದ ೪ ನೇ ಶತಮಾನದ ನಾಣ್ಯಗಳು ಇತಿಹಾಸ ಸಂಶೋಧಕರಿಗೆ ಸಧ್ಯಕ್ಕೆ ದೊರೆತಿರುತ್ತವೆ. ಕ್ರಿ. ಶ. ಪೂ. ದ ೪ ನೇ ಶತಮಾನದಿಂದ ಕ್ರಿ. ಶ. ಪೂ. ದ ೨ ಶತಮಾನದ ಅಂತರದಲ್ಲಿ ಮುದ್ರಿಸಲ್ಪಟ್ಟ ಹಿಂದುಸ್ಥಾನದ ನಾಣ್ಯಗಳಲ್ಲಿ ಪರದೇಶಿಯರ ನಾಣ್ಯಗಳ ಹೋಲಿಕೆಯು ಎಳ್ಳಷ್ಟಾದರೂ ಕಂಡು ಬರುವದಿಲ್ಲ. ಆದರೆ ಕ್ರಿ. ಶ. ಪೂ ೨ ನೇ ಶತಮಾನದಿಂದೀಚೆಗೆ ತಯಾರಿಸಲ್ಪಟ್ಟ ನಾಣ್ಯಗಳು ಮಾತ್ರ ಪರದೇಶೀಯರ ನಾಣ್ಯಗಳನ್ನು ಕೆಲವು ಅಂಶಗಳಿಂದ ಹೋಲುತ್ತವೆ. ಈತರದ ಅನುಕರಣವನ್ನು ಮಾಡುವ ಪ್ರಸಂಗವು ಉತ್ತರ ಹಿಂದುಸ್ಥಾನದವರಿಗೇ ವಿಶೇಷವಾಗಿ ಬಂದಿದ್ದು, ಅದು ಕರ್ನಾಟಕದವರಿಗೆ ಬಂದಿರುವದಿಲ್ಲ; ಅಥವಾ ಕರ್ನಾಟಕದವರು ಅಂಥಪ್ರಸಂಗವು ಬರಲಿಕ್ಕೆ ಇಂಬುಗೊಡಲಿಲ್ಲವೆನ್ನಬಹುದು. ಸಿಥಿಯನ್, ಪಾರ್ಥಿಯನ್, ಪರ್ಶಿಯನ್, ಮೊದಲಾದ ಅನೇಕ ಪರದೇಶೀಯರು ಮೊದಲು ಉತ್ತರ ಹಿಂದುಸ್ಥಾನಕ್ಕೆ ಬಂದು, ಅಲ್ಲಲ್ಲಿಗೆ ಹರಡಿ ಆಯಾ ಪ್ರಾಂತಗಳನ್ನು ಆಕ್ರಮಿಸಿದ್ದರಿಂದ ಅಲ್ಲಲ್ಲಿಯ ನಾಣ್ಯಗಳಲ್ಲಿ ಈ ಪರದೇಶೀಯರ ನಾಣ್ಯಗಳ ಅನುಕರಣವು, ಕೆಲವು ಅಂಶಗಳಲ್ಲಿ ಆಗಲೇ ಬೇಕಾಯಿತು. ಕರ್ನಾಟಕಕ್ಕಾದರೋ ಇಜಿಪ್ತ, ರೋಮ, ಗ್ರೀಕ, ಪೋರ್ತುಗಾಲ, ಮುಂತಾದ ಪರದೇಶೀಯರು ಬಂದಿದ್ದರೂ ಅವರು ಇಲ್ಲಿಯ ದೇಶವನ್ನು ಆಕ್ರಮಿಸಲಿಲ್ಲ; ಅಥವಾ ಆಕ್ರಮಿಸಲು ಮಾರ್ಗವಿದ್ದಿಲ್ಲವೆನ್ನಬಹುದು. ಈ ಜನರು ಇಲ್ಲಿಯ ಆಗಿನ ಕಾಲದ ರಾಜರುಗಳ ಸಂಗಡ ವ್ಯಾಪಾರವನ್ನು ಮಾತ್ರ ಮಾಡುತ್ತಿದ್ದರು. ಈ ರಾಜರುಗಳು ಬಲಿಷ್ಠರಿದ್ದದರಿಂದ ಈ ಜನರಿಗೆ ಇಲ್ಲಿಯ ದೇಶವನ್ನು ಆಕ್ರಮಿಸಲು ಮಾರ್ಗವಿದ್ದಿಲ್ಲವೋ ಅಥವಾ ಅವರಿಗೆ ಹಾಗೆ ಮಾಡುವ ಇಚ್ಛೆಯೇ ಇದ್ದಿಲ್ಲವೋ ಎನ್ನುವದನ್ನು ವಿಚಾರ ಮಾಡುವದು ಪ್ರಸ್ತುತ ಲೇಖಕ್ಕೆ ಸಂಬಂಧ ಪಟ್ಟದ್ದಲ್ಲದ್ದರಿಂದ ಇಲ್ಲಿಗೇ ಈ ಪ್ರಶ್ನೆಯನ್ನು ಬಿಡಬೇಕಾಗಿರುವದು. ರೋಮದವರ ಬಂಗಾರದ ನಾಣ್ಯಗಳು ಕರ್ನಾಟಕದಲ್ಲಿ ಪ್ರಾಚೀನ ಕಾಲದೊಳಗೆ ಉಪಯೋಗಿಸಲ್ಪಡುತ್ತಿದ್ದರೂ ಅವುಗಳ ಅನುಕರಣವನ್ನೇನೂ ಕನ್ನಡಿಗರು ಮಾಡಿರುವದಿಲ್ಲ. ಕರ್ನಾಟಕದ ನಾಣ್ಯಗಳ ಅನುಕರಣವನ್ನೇ ಕರ್ನಾಟಕವನ್ನು ಬಿಟ್ಟು ದೂರದಲ್ಲಿರುವ ಕಾಶ್ಮೀರದವರು ಮಾತ್ರ ಮಾಡಿರುವರೆನ್ನುವದು ಮುಂದಿನ ಸಂಗತಿಗಳಿಂದ ತಾನೇ ಗೊತ್ತಾಗುತ್ತದೆ.

ನಾಣ್ಯಗಳ ಆಕಾರ ಮತ್ತು ಅವುಗಳನ್ನು ಮುದ್ರಿಸುವ ಪದ್ಧತಿ:— ನಾಣ್ಯಗಳ ಆಕಾರಗಳು ಮೂರು ತರದ್ದಾಗಿವೆ:- ೧ ಚೌಕ; ೨ ಕೋಳೀತತ್ತಿಯ ಆಕಾರ; ೩ ದುಂಡಗೆ. ಕರ್ನಾಟಕದ ನಾಣ್ಯಗಳಲ್ಲಿ ಚೌಕಾಕಾರದ ನಾಣ್ಯಗಳು ತೀರ ಅಪರೂಪ. ಇಂಥ ನಾಣ್ಯಗಳು ಸಾಗರ ಜಿಲ್ಹೆಯಲ್ಲಿ ಮಾತ್ರ ದೊರಕಿರುತ್ತವೆ. ದುಂಡಗಿನ ನಾಣ್ಯಗಳೇ ನಮ್ಮಲ್ಲಿ ಬಹಳ. ಬಾದಾಮಿಯ ಚಾಲುಕ್ಯ, ಪಲ್ಲವ, ವಿಜಯನಗರ ಮುಂತಾದವರ ನಾಣ್ಯಗಳೆಲ್ಲ ದುಂಡಗಿರುತ್ತವೆ. ಕದಂಬರ ನಾಣ್ಯಗಳು ಕೊಂಚ ಕೋಳೀ ತತ್ತಿಯ ಆಕಾರವನ್ನು ಹೋಲುತ್ತವೆ. ಕೊಡಗಿನವರ ನಾಣ್ಯಗಳು ಇದೇ ಆಕಾರದಲ್ಲಿವೆ ಎನ್ನಬಹುದು. ಕಲ್ಯಾಣ ಚಾಲುಕ್ಯರ ನಾಣ್ಯಗಳೆಲ್ಲ ಈ ಆಕಾರದವೇ ಇರುತ್ತವೆ. ನಾಣ್ಯಗಳನ್ನು ಅಚ್ಚು ಹಾಕುವ ಪದ್ಧತಿಯು ಪ್ರಾಚೀನ ಕಾಲದಲ್ಲಿ ನಾಲ್ಕು ತರದ್ದಾಗಿದ್ದಿತು.

೧ ನೇದು:— ಬೆಳ್ಳಿಯ ತಗಡನ್ನಾಗಲೀ, ತಾಮ್ರದ ಅಥವಾ ಬಂಗಾರದ ಪಟ್ಟಿಯನ್ನಾಗಲೀ ತೆಗೆದುಕೊಂಡು, ಪ್ರತಿಯೊಂದು ವಂಶದವರು ತಮ್ಮ ರಾಜ್ಯದಲ್ಲಿದ್ದಂಥ ನಿಯಮಗಳಿಗೆ ಅನುಸಾರವಾಗಿ ವಿಶಿಷ್ಟ ತೂಕದ ತುಂಡಗಳನ್ನು ತಮ್ಮ ರಾಜ್ಯದಲ್ಲಿ ರೂಢವಾಗಿದ್ದ ಆಕಾರದಲ್ಲಿ ಮಾಡಿಸುತ್ತಿದ್ದರು. ಈ ತುಂಡಗಳ ಮೇಲೆ ಆಯಾ ವಂಶಕ್ಕೆ ಸಲ್ಲಬಹುದಾದ ರಾಜ ಚಿಹ್ನಗಳನ್ನೊಡಗೊಂಡಂಥ ಮೊಹರುಗಳನ್ನು ಮೂಡಿಸುತ್ತಿದ್ದರು. ಇದಕ್ಕೆ 'ಮೊಹರಿನ ಪದ್ಧತಿ' ಎಂಬ ಹೆಸರುಂಟು. ಇದು ಕರ್ನಾಟಕದಲ್ಲಿಯೇ ಬಹು ರೂಢವಾಗಿದ್ದಿತು.

೨ ನೇದು:— ಲೋಹವನ್ನು (ವಿಶೇಷತಃ ತಾಮ್ರವನ್ನೇ) ಕರಗಿಸಿ ಅದನ್ನು ಪಡಿಯಚ್ಚಿನಲ್ಲಿ ಹೊಯ್ದು ಕೆಲವು ನಾಣ್ಯಗಳನ್ನು ತಯಾರಿಸುತ್ತಿದ್ದರು. ಇದಕ್ಕೆ 'ಪಡಿಯಚ್ಚಿನ-ಪದ್ಧತಿ' ಎಂಬ ಸಂಜ್ಞೆ. ಈ ಪದ್ಧತಿಯಿಂದ ಸಿದ್ಧವಾದ ಎಲ್ಲ ನಾಣ್ಯಗಳ ಮೇಲೂ ಹಳೇ ತರದ ಲಿಪಿಯೂ ಅಂದವಾದ ನಕ್ಷೆಗಳೂ ಇರುತ್ತವೆ. ಈ ಪದ್ಧತಿಯು ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿಯೂ ರೂಢವಾಗಿದ್ದಿತು.

೩ ನೇದು: - ೧ ನೇದರಲ್ಲಿ ಹೇಳಿದಂತೆ ಲೋಹಗಳ ತುಂಡುಗಳನ್ನು ತಯಾರಿಸಿ ಅವನ್ನು ಬೆಂಕಿಯಲ್ಲಿ ಚನ್ನಾಗಿ ಕಾಸುತ್ತಿದ್ದರು. ಅವು ಅರೆ ಕರಗುವ ಸ್ಥಿತಿಯಲ್ಲಿದ್ದಾಗ ಅವುಗಳ ಮೇಲೆ ಮುದ್ರೆಯನ್ನು ಒತ್ತುತ್ತಿದ್ದರು. ಇದು 'ಆರ್ದ್ರ-ಮುದ್ರಾ-ಪದ್ಧತಿ' ಎಂದು ಪ್ರಸಿದ್ಧವಾಗಿದೆ. ಮೊದಮೊದಲು ಒಂದೇ ಕಡೆಗೆ ಮುದ್ರೆಯನ್ನು ಹಾಕುತ್ತಿದ್ದರು; ಮುಂದೆ ಎರಡೂ ಮಗ್ಗಲಿಗೂ ಹಾಕ ಹತ್ತಿದರು. ಈ ಪದ್ಧತಿಯು ತಕ್ಷಿಲ, ಪಾಂಚಾಲಗಳಲ್ಲಿಯೇ ಬಹು ಪ್ರಚಾರವಾಗಿತ್ತು. ಇದೇ ಪದ್ಧತಿಯನ್ನು ಗ್ರೀಕರು ಅನುಕರಣ ಮಾಡಿರುತ್ತಾರೆ. ಈ ತರದ ನಾಣ್ಯಗಳು ಚೌಕಾಕಾರದಲ್ಲಿವೆ. ಗ್ರೀಕರ ನಾಣ್ಯಗಳೂ ಇದೇ ಆಕಾರದಲ್ಲಿವೆ.

೪ ನೇದು - ತೆಳ್ಳಗಿನ ಬಂಗಾರದ ತಗಡಿನ ತುಂಡನ್ನು ತೆಗೆದುಕೊಂಡು ಕೆಲವು ಉಪಕರಣಗಳ ಸಹಾಯದಿಂದ ಆ ತುಂಡಿನ ಹಿಂಭಾಗದಲ್ಲಿ ಬಡಿದು ಮುಂಭಾಗದಲ್ಲಿ ಅಂದವಾದ ನಕ್ಷೆಗಳನ್ನು ಮೂಡಿಸುತ್ತಿದ್ದರು. ಈ ರೀತಿಯಿಂದ ನಾಣ್ಯಗಳನ್ನು ಸಿದ್ಧ ಮಾಡುವ ಕ್ರಮಕ್ಕೆ 'ಚಿತ್ರ-ಮುದ್ರಾ-ಪದ್ಧತಿ' ಎಂಬ ಹೆಸರು ಬಂದಿದೆ. ಈ ತರದ ನಾಣ್ಯಗಳನ್ನು ಬಾದಾಮಿಯ ಚಾಲುಕ್ಯರೇ ತಯಾರಿಸುತ್ತಿದ್ದರು. ಚೋಳರಾಜರು ಈ ಪದ್ಧತಿಯನ್ನು ಅನುಕರಣ ಮಾಡಿರುತ್ತಾರೆ. ಇದು ಕರ್ನಾಟಕದ ವಿಶಿಷ್ಟ ಪದ್ಧತಿಯಾಗಿದೆ. ಯಾಕೆಂದರೆ ಈ ತರದ ಪದ್ಧತಿಯು ಹಿಂದುಸ್ಥಾನದ ಉಳಿದ ಭಾಗಗಳಲ್ಲಿ ಎಲ್ಲಿಯೂ ಕಂಡು ಬರುವದಿಲ್ಲ.

ಕರ್ನಾಟಕದ ಬೇರೆ ಬೇರೆ ವಂಶಗಳ ನಾಣ್ಯಗಳು·

ನಹಪಾನ:— ಮಹಾರಾಷ್ಟ್ರ (ಅಂದರೆ ದೊಡ್ಡ = ಕರ್ನಾಟಕ) ಉತ್ತರ ಕೊಂಕಣ, ಗುಜರಾಥದ ಕೆಲವು ಭಾಗ ಕಾಠೇವಾಡ ಮತ್ತು ಕಛ್, ಇಷ್ಟು ಪ್ರಾಂತಗಳ ಮೇಲೆ ನಹಪಾನನೆಂಬುವನು ರಾಜ್ಯವಾಳುತ್ತಿದ್ದನು. ಇವನ ಬಸರಿನ ಕೆಲವು ನಾಣ್ಯಗಳು ದೊರೆತವೆ. ಇವನು ಯಾವ ಶತಮಾನದವನು; ಯಾವ ರಾಜವಂಶದವನು ಎಂಬ ಸಂಗತಿಗಳು ಗೊತ್ತಾಗಿಲ್ಲ. ಇವನ ನಾಣ್ಯಗಳಲ್ಲಿ ಬ್ರಾಹ್ಮೀ ಲಿಪಿಯ ಅಕ್ಷರಗಳಿವೆ. ಕನ್ನಡ ಲಿಪಿಯು ಈ ಬ್ರಾಹ್ಮೀ ಲಿಪಿಯಿಂದ ಬಂದದ್ದೆಂದು ಒಂದು ವಿಧಾನವದೆ. ಆದ್ದರಿಂದ ಕನ್ನಡಿಗರಿಗೆ ಇವನ ಸಂಬಂಧವು ಯಾವ ಬಗೆಯಿಂದ ಇರುತ್ತದೆಂಬದನ್ನು ಸಂಶೋಧಿಸುವದು ಅಗತ್ಯವಿದೆ. ಇವನು ಯಾವ ಶತಮಾನದವನೆಂಬದನ್ನು ಗೊತ್ತು ಹಚ್ಚಿದರೆ ಅನೇಕ ಮಹತ್ವದ ಸಂಗತಿಗಳು ಮುಂದೆ ಗೊತ್ತಾಗುವಂತಿವೆ. ಇವನ ರಾಜ್ಯವನ್ನು ಆಂಧ್ರರು ಗೆದ್ದು ತಮ್ಮ ಒಡೆತನವನ್ನು ಇವನ ರಾಜ್ಯದಲ್ಲಿ ಹರಡಿದರೆಂಬುದು ನಿರ್ಧರಿಸಲ್ಪಟ್ಟದ್ದರಿಂದ ನಹಪಾನನು ಕ್ರಿ. ಶ. ೭೮ ನೇ ವರ್ಷಕ್ಕಿಂತ ಹಿಂದಿನವನೆಂಬದನ್ನು ಮಾತ್ರ ಹೇಳಬಹುದು.

ಮುಂದೆ ಸಾಗುವದು.

ಕನ್ನಡ ನುಡಿ.

(ಲೇ. ಲಿಂಗು ಚಡಚಣ)

ಕನ್ನಡ ನುಡಿಯು, ಸುತ್ತಲಿನ ಪರಿಸ್ಥಿತಿಯಿಂದಲೂ, ಮುತ್ತಿದ ಕಾಲದಿಂದಲೂ ಅಂದಗೇಡಿಯಾಗಿ ಕಾಣುತ್ತಿದ್ದರೂ, ತಾಯಿಯ ಕಲಂಕವನ್ನು ತೊಳೆದು, ಹೊಳಪು ಹೊಳೆಯುವಂತೆ ಮಾಡುವುದು, ಮಕ್ಕಳ ಕೆಲಸವು. ಈ ಕೆಲಸವನ್ನು ಕೈಕೊಂಡವನೇ-ಕನ್ನಡಿಗ! ಈಗ ನಾವು ನಿರ್ವಾಹವಿಲ್ಲುದಕ್ಕಾಗಿ ಕನ್ನಡ ಮಾತಾಡುವವರೆಲ್ಲರಿಗೂ ಕನ್ನಡಿಗರೆಂದನ್ನಬೇಕಾಗಿದೆ. ಇಂಥವರಾದರೂ ಇರದಿದ್ದರೆ, ಇಲ್ಲಿಯವರೆಗೆ ಕನ್ನಡನುಡಿಯು ಹೇಳ ಹೆಸರಿಲ್ಲದೆ ಹೋಗುತ್ತಲಿದ್ದಿತು.

ಕನ್ನಡವು ಎಲ್ಲಿದೆ?:- ಕನ್ನಡದ ಶಬ್ದಭಂಡಾರವೂ, ನಡವಳಿಯೂ, ಹಳ್ಳಿಗರಲ್ಲಿಯೂ, ಹೆಣ್ಣುಮಕ್ಕಳಲ್ಲಿಯೂ ಇರುತ್ತವೆಂದು ಹೇಳಬಹುದು, ಇವರು-ಅಶಿಕ್ಷಿತರು! ಅಬಲೆಯರು! ಕಾರ್ಯಾಲಯದಲ್ಲಿ ಕೆಲಸ ಮಾಡುವಾಗಲೂ, ವ್ಯವಹಾರದ ಉಳಿದ ಸಂದರ್ಭಗಳಲ್ಲಿಯೂ, ಉಳಿದ ಭಾಷೆಗಳ ಪ್ರಭಾವದಿಂದ ಅವುಗಳನ್ನೇ ಉಪಯೋಗಿಸಿ ಮನೆಗೆ ಬರಲು ಆಳುಗಳೊಂದಿಗೂ, ಹೆಂಡಿರು ಮಕ್ಕಳೊಡನೆಯೂ ಮಾತಾಡುವಾಗ ಮಾತ್ರ ಕನ್ನಡವನ್ನು ನೆನಪುಮಾಡಿಕೊಳ್ಳಬೇಕಾಗುತ್ತದೆ. ಆಳೂ ಮಕ್ಕಳೂ ಅಶಿಕ್ಷಿತರಾದರೂ, ಹೆಂಡತಿಯು ಅಬಲೆಯಾದರೂ ನಮ್ಮ ತಾಯ್ನುಡಿಯ ಜೀವವನ್ನುಳಿಸುವ ಕೆಲಸಕ್ಕೆ ಅಮೂರ್ತ ಸ್ವರೂಪಿಗಳಾದ ಕಾರ್ಯಕಾರಿಯರಲ್ಲವೇ? 'ಕನ್ನಡವು ಅಡಿಗೆಯ ಮನೆಯಲ್ಲಿ ಮಾತ್ರ' ವೆಂಬದನ್ನರಿತ ಈಗಿನ ಕರ್ನಾಟವಾಸೀಯರಿಗೆ ಕನ್ನಡಿಗರೆಂದು ಹೇಗೆನ್ನಬೇಕು?

ನಮ್ಮ ತಾಯಿಯು ಅಪರೂಪವಾಗಿರುವಳೆಂದು ಇನ್ನೊಬ್ಬರಿಗೆ ತಾಯಿಯೆನ್ನಬಹುದೋ? ಮುಪ್ಪಿನ ತಾಯಿಯನ್ನು ನಿಶ್ಚಳವಾದ ಸುಖದಿಂದಿರಿಸುವದು, ತರುಣನಾದ ಕನ್ನಡಿಗನ ಕರ್ತವ್ಯವಲ್ಲವೇ? ಚಿಕ್ಕವರಿರುವಾಗ ತಾಯಿಯ ಮೊಲೆಹಾಲುಗುಡಿದು ಬೆಳೆದು ಬಳಿಕ ಸುರಾಪಾನದ ಶೂರರಾಗಿ ತಾಯಿಯನ್ನು ಜರೆಯಬಹುದೋ? ಕನ್ನಡಿಗ' ನೆಂದರೆ—ಏನೋ-ಎಂದೆನ್ನಿಸಿಕೊಳ್ಳುವ ಹೊತ್ತು ಬಂದಿದೆ-'ಮನೆಗೆದ್ದು ಮಾರುಗೆಲ್ಲುವವರು' ಬಹಳ ಕಡಿಮೆ. ತನ್ನ ವೃತ್ತಾಂತವನ್ನು ಅರಿಯದೆ, ಇನ್ನವರ ಇತಿಹಾಸಗಳನ್ನು ತಲೆಯಲ್ಲಿ ತುಂಬಿಕೊಳ್ಳುವ ಕನ್ನಡಿಗರನ್ನು ನೋಡಿ, ಯಾವ ಕನ್ನಡಾಭಿಮಾನಿಗೆ ವ್ಯಸನವಾಗದು? ಈಗಿನ ಕನ್ನಡ ಮುಲಕೀ ಪರೀಕ್ಷೆ ಪಾಸಾದ ವಿದ್ಯಾರ್ಥಿಗಳು ನೌಕರಿಗಾಗಿ ಹೊಂಬಡಾಕಿ ಅಲ್ಲಲ್ಲಿ ತಿರುಗಾಡುವವರು! ಇದನ್ನು ಎಲ್ಲರೂ ಕಂಡಿರಬಹುದು. ಇವರನ್ನು ಕುರಿತು-ಇಷ್ಟು ಕನ್ನಡ ಕಲಿಯುವದಕ್ಕಿಂತ ನಾಲ್ಕೇ ಇಯತ್ತೆ ಮರಾಠಿ ಕಲಿತಿದ್ದರೆ ಯಾವನೊಬ್ಬ ಸಾವುಕಾರನು, ನೌಕರಿ ಕೊಡುತ್ತಿದ್ದನು" ಅನ್ನುವ ಪ್ರಭೃತಿಗಳನ್ನು ಅಲ್ಲಲ್ಲಿ ಕಾಣಬಹುದು. ಇವರ ಕಡೆಗೆ ಏನು ತಪ್ಪು? ಕಾಲವೂ ಪರಿಸ್ಥಿತಿಯೂ ಹೀಗೆ ಇದೆ.

ಈಗಿನ ಕನ್ನಡ ತರುಣರು ಮುಖ್ಯವಾಗಿ ಇಂಗ್ಲೀಷ ಪದವೀಧರರು, " ಕನ್ನಡದಲ್ಲಿ ಕೊರತೆ ಬಹಳ. ಇಂಗ್ಲೀಷ ವಾಙ್ಮಯದಷ್ಟು ವಿಸ್ತಾರವಾದುದಲ್ಲ. ಏನೊಂದನ್ನು ಕನ್ನಡಿಸಬೇಕೆಂದರೂ ಸಮಾಧಾನಕಾರಕ ಶಬ್ದಗಳೇ ಸಿಕ್ಕಲಾರವು " ಎಂದನ್ನುವದನ್ನು ಕೇಳಬಹುದು. ಕೊರತೆಯಿದ್ದ ಕನ್ನಡ ನುಡಿಯು, ಎಂದಿನಿಂದಲೂ ಪ್ರೌಢವಾಗಿಯೂ, ವ್ಯಾಪ್ತಿಯಾಗಿಯೂ ಇರುತ್ತಿರಲಿಲ್ಲ. ಅನೇಕ ಹಳೆಯ ಗ್ರಂಥಗಳನ್ನು ಶೋಧಿಸಿ, ಹುಡುಕಿದರೆ ಎಷ್ಟೋ ಹೊಸ ಶಬ್ದಗಳು ಸಿಕ್ಕುವವು. ಶಬ್ದ ಭಾಂಡಾರದ ಬಲವನ್ನೇ ಹೆಚ್ಚಿಸಬಹುದು. ಪದವೀಧರರು ತಮ್ಮ ಕಣ್ಣಿಗೆ ಒಂದಿರುವ ಬಣ್ಣದ ಕನ್ನಡಕವನ್ನು ತೆಗೆದು ನೋಡಬೇಕು ಕನ್ನಡಕದ ಉಪಯೋಗವು ಕನ್ನಡದ ನುಡಿಗೇನು ಬೇಡ.

ಕನ್ನಡನಾಡಿನಲ್ಲಿ ಎಲ್ಲೆಲ್ಲಿಯೂ ಕನ್ನಡಿಗರನ್ನಾಗಿ ಮಾಡುವುದಕ್ಕೆ ಈ 'ಕನ್ನಡಿಗ'ನ ಹುಟ್ಟು ಕನ್ನಡಿಗನು ತನ್ನ ಆಟದ ಅಂಗಳವನ್ನು ಹಸನಿಸಲಿ! ಕನ್ನಡಿಗನು ನುಡಿವೆಣ್ಣು-ದೇಗುಲದ ಜೀರ್ಣೋದ್ಧಾರಗೊಳಿಸುವ ಚತುರ ಶಿಲ್ಪಿಯಾಗಲಿ! 'ಕನ್ನಡಿಗ'ನು ಕರ್ನಾಟಕದ ಹಾಡನ್ನು ಹಾಡಲಿ!

ಕಂದ॥

ಎನ್ನಯ ಮಾನಸ-ಕಾನನ ।
ವಿನ್ನೆಂದಾಗುವುದೊ ನುಡಿಯ ನಂದನವನವು ॥
ಕನ್ನಡ ನುಡಿವೆಣ್ಣಾಡುವ ।
ಬಣ್ಣದ ಅಂಗಳವು ಆಗಲೆನ್ನಯ " ಮುದ್ದು " ॥ ೧ ॥

ಕನ್ನಡಿಗನ ಕರ್ತವ್ಯ.

ಲೇಖಕರು, ಸಂಗಪ್ಪ ಸಾಸನೂರ, ಬಾಗಲಕೋಟೆ.

ಕನ್ನಡ ನುಡಿಯಮೇಲೆ ಅನಿವಾರದ ಪ್ರೇಮವನ್ನಿಡುವದು ಪ್ರತಿಯೊಬ್ಬ ಕನ್ನಡಿಗನ ಆದ್ಯ ಕರ್ತವ್ಯವಾಗಿದೆ. ನಾವು ಬ್ರಾಹ್ಮಣರು ಲಿಂಗಾಯಿತರು, ಜೈನರು ಎಂಬ ಭೇದ-ಭಾವವನ್ನು ತಳೆಯದೆ ನಾವು ಕನ್ನಡಿಗರು ಕನ್ನಡ ನುಡಿಯ ಸೇವಕರು ಎಂಬ ಬಂಧು-ಭಾವವನ್ನು ತಳೆಯಬೇಕು ಅಂದರೇ ನಮ್ಮಲ್ಲಿ ಪ್ರೇಮ ಐಕ್ಯತೆಗಳು ಬೆಳೆದು ಕನ್ನಡ ನುಡಿಯ ಬೆಡಗು ಹೆಚ್ಚುವದು.

ಭಾಷಾ-ಸೇವೆಯಂಥ ಪವಿತ್ರವಾದ ಕಾರ್ಯವು ಮತ್ತೊಂದಿಲ್ಲ ಇದನ್ನರಿಯದ ಕೆಲವರು ಕನ್ನಡವು ಬಿರಸು, ಕಾಡು ಜನರ ಕಗ್ಗ ನುಡಿಯು ಎಂದು ಹೀಯಾಳಿಸುವರು. ಇದು ಸರಿಯಾದದ್ದಲ್ಲ. ಕನ್ನಡವು ಸರಸವೂ ಸುರಸವೂ ಆದ ನುಡಿಯಾಗಿದೆ. ಕನ್ನಡವು ಕನ್ನಡಿಯಂತಿದೆ. ಕನ್ನಡ ನುಡಿಯು ಬೆಡಗನ್ನರಿತ ಒಬ್ಬ ಕವಿಯು ಕನ್ನಡವನ್ನು ಸುಲಿದ ಬಾಳೆಯ ಹಣ್ಣಿಗೂ ಕಳೆದ ಸಿಬರಿನ ಕಬ್ಬಿಗೂ ಹೋಲಿಸಿರುವನು.

ನಮ್ಮಲ್ಲಿ ಓದುವ ರುಚಿಯು ಬಹು ಕಡಿಮೆ. ಅದರಲ್ಲಿಯೂ ಕನ್ನಡ ಓದುವದೆಂದರೆ ಮೈಗೆ ಮುಳ್ಳೇ ಬಂದಂತಾಗುವದೆಂದನ್ನುವವರೇ ಬಹಳ ಜನರು. ಆದ್ದರಿಂದ ನಮ್ಮಲ್ಲಿ ಉತ್ತಮವಾದ ಗ್ರಂಥಗಳು ಹೆಚ್ಚಾಗಲೊಲ್ಲವು. ಗಿರಾಕಿಗಳು ಹೆಚ್ಚಿದ್ದಂತೆ ಅಂಗಡಿಗಳು ಹೆಚ್ಚಾಗುವವು ಇದ್ದ ವರ್ತಮಾನಪತ್ರಗಳೂ ಮಾಸಿಕ ಪುಸ್ತಕಗಳೂ ನೆಟ್ಟಗೆ ನಡೆಯಲೊಲ್ಲವು ಇದು ವಿಷಾದಪಡತಕ್ಕಂಥ ಸಂಗತಿಯು. ಬಣಜಿಗರ ಬಸಪ್ಪನು ಬಂದ ವರ್ತಮಾನಪತ್ರದ ಕಡೆಗೆ ಸ್ವಲ್ಪು ಕೂಡ ದೃಷ್ಟಿಯನ್ನು ಚಲ್ಲದೆ ಅದನ್ನು ಹರಿದು ಜೀರಿಗೆ ಸಾಸಿವೆಗಳನ್ನು ಕಟ್ಟಿ ಗಿರಾಕಿಗಳಿಗೆ ಕೊಡುತ್ತಾನೆ. ವಕೀಲ ಶ್ಯಾಮರಾಯರು ದೊಡ್ಡದೊಡ್ಡ ಕಾಯಿದೆ ಪುಸ್ತಕಗಳಿಗೆ ಪತ್ರಗಳನ್ನು ಹೊದ್ದಿಕೆಯಾಗಿ ಮಾಡುತ್ತಾನೆ. ಇದರ ವಿಷಯದಲ್ಲಿ ಬಣಜಿಗರ ಬಸಪ್ಪನನ್ನು ಕೇಳದರೆ 'ಅದನ್ನು ಓದಿ ಯಾನ್ ಮಾಡಾದು ನಮ್ಮ ಯಾಪಾರಾಂತು ವೃದ್ಯಮಾತು ' ಎಂದೆನ್ನುವನು. ಇನ್ನು ವಕೀಲ ಶ್ಯಾಮರಾಯರನ್ನು ವಿಚಾರಿಸಿದರೆ ಆವರು useless, what is there in it, nothing' ಎಂದು ಹೀಯಾಳಿಸುವರು ಹೀಗಾಗಿ ಕನ್ನಡ ನುಡಿಯ ಅಭಾವವಾಗಿರುವದು.

ಲೇಖಕರಿಗೆ ಧನಸಹಾಯವಿಲ್ಲ ಉತ್ತೇಜನವಿಲ್ಲ ಹೀಗಾಗಿ ಲೇಖಕರು ಬರೆಯುವ ಹವ್ಯಾಸವನ್ನೇ ಬಿಟ್ಟುಬಿಡುವರು. ಆದ್ದರಿಂದ ಮೇಲಿನ ಕೊರತೆಗಳನ್ನು ಹೋಗಲಾಡಿಸಲು ಅಲ್ಲಲ್ಲಿ ಸಂಘಗಳನ್ನು ಸ್ಥಾಪಿಸುವದು ಕನ್ನಡಿಗರ ಕರ್ತವ್ಯವಾಗಿರುವದು.

ಬಾರುಕೋಲು.

ನನ್ನ ವಯಸ್ಸಿಗೆ ಸಮಾನವಾದ ವಯಸ್ಸುಳ್ಳ ಒಂದಾದರೂ ಪತ್ರಿಕೆಯು ಕನ್ನಡ ನಾಡಿನಲ್ಲಿಲ್ಲವೆಂಬದು ನಿರ್ವಿವಾದವಾದದ್ದು. ೬೩ ವರ್ಷಗಳುಳ್ಳ ಪತ್ರಿಕೆಯು ಕನ್ನಡ ನಾಡಿನಲ್ಲಿಯೇ? ಒಳ್ಳೇ ಸೋಜಿಗದ ಪ್ರಶ್ನೆಯಿದು! ಅದುಹೋಗಲಿ! ಅದರ ಅರ್ಧವಯಸ್ಸುಳ್ಳ ಪತ್ರಿಕೆಗಳನ್ನು ಕಾಣಬಹುದಲ್ಲವೆ? ೩೦-೩೧ ವರ್ಷಗಳಿಂದ ಕೆಲವು ಪತ್ರಿಕೆಗಳು ಜೀವಿಸುತ್ತಿರುವದು ನಿಜ. ಆದರೆ ಸಧ್ಯಕ್ಕೆ ಅವುಗಳ ಸ್ಥಿತಿಯು ಚನ್ನಾಗಿದ್ದ ಬಗ್ಗೆ ಕೇಳಬೇಡಿ? ಸಾಂಪತ್ತಿಕ ಸ್ಥಿತಿಯನ್ನು ವಿಚಾರಿಸುವದೇ ಬೇಡ! ಹಾಗೆಮಾಡಿದರೆ ಮೈಗೆ ಮುಳ್ಳು ಏರಬಹುದಯ್ಯಾ ಮುಳ್ಳು!

ಒಳ್ಳೇದು ಹೀಗಾಗಲು ಕಾರಣವೇನೆಂದು ಕೇಳುವಿರೋ? ನಾನೇನು ಅದಕ್ಕೆ ಸಮರ್ಪಕವಾದ ಉತ್ತರವನ್ನು ಕೊಡಲಾರೆ. ನನ್ನ ವ್ಯವಸಾಯವು ಬೇರೆ. ಈ ವೃತ್ತಪತ್ರಿಕೆಗಳ ಒಳಗಿನ ಗೊಂದಲವನ್ನು ನಾನೇನು! ಹೊರಗಿನಿಂದಲೇ ನಿರೀಕ್ಷಿಸುವ ನನಗೆ ಒಂದು ಮಾತು ಮಾತ್ರ ಗೊತ್ತಿದೆ. ಪತ್ರಿಕೆಗಳು ಹಿಂದಿನಷ್ಟಂತೆ ಚಂದಾದಾರರ ಸಂಖ್ಯೆಯು ಏಟವೂ ಹಿಂದಕ್ಕೆಂಬದು! ಬಹಳ ದಿನಗಳಿಂದಲೂ ಜೀವಿಸಿದ್ದ ಪತ್ರಿಕೆಗಳಿಗಿಂತ ಹೊಸದಾಗಿ ಹೊರಟ ಪತ್ರಿಕೆಗಳು ಜನಗಳಆದರಕ್ಕೆ ಹೆಚ್ಚು ಪಾತ್ರವಾಗಿವೆ ಇದಂಗದಳೆಯುವ ವ್ಯಾಸವೃತಮ್ಮ ಗಳಂತೆ ಈ ವ್ಯವಸಾಯದಲ್ಲಿ ತ್ಯಾಜ್ಯವೆಂಬದೂ, ಹೊಸ ಹುರುಪಿಗೆ ಆದರವುದೊರೆಯುತ್ತದೆಂಬದೂ ಧ್ವನಿತವಾಗುವದು ನಾನುನನ್ನ ನೌಕರಿಯಲ್ಲಿರುವಾಗ್ಗೆ ಅನೇಕರು ಕನ್ನಡದಲ್ಲಿ ಪತ್ರಿಕೆಗಳನ್ನು ತೆಗೆದರು. ಆದರೆ ಅವುಗಳ ಆಗಿನ ಸಂಪಾದಕರ ಕಲ್ಪನೆಗಳನ್ನು ಕೇಳಿದರೆ ತಾವುಗಳೆಲ್ಲ ನಗಬಹುದು. ಮಂದಬುದ್ಧಿಯ ಮೂಲಕ ಯಾವ ವ್ಯವಸಾಯಕ್ಕೂ ಮಾರ್ಗವಿಲ್ಲದಿದ್ದರೆ, ಅತ್ತಿತ್ತ ನೌಕರಿಗಾಗಿಅಷ್ಟಾಗಿ ಅದೂ ದೊರಿಯದೆ ಹೋದರೆ, ಬೇಸರಗೊಂಡು “ ಹೋಗಲಿ ಬಿಡು. ಕಡೆಗೆ ಒಂದು ವೃತ್ತಪತ್ರಿಕೆಯನ್ನಾದರೂ ತೆಗೆದರಾಯಿತು. ಗಂಡಹೆಂಡರ ನೋಟೀಸುಗಳೂ ಜಾಹೀರಾತುಗಳೂ ದೊರೆತೇ ದೊರೆಯುತ್ತವೆ. ಸಾಕು, ಹೊಟ್ಟೆಯೊಂದು ಹೇಗಾದರೂ ತುಂಬುತ್ತದೆ ” ಎಂಬದಾಗಿ ನಿರ್ಧರಿಸಿಕೊಂಡು ಸಂಪಾದಕರಾದಂಥ ಜನರನ್ನು ನಾನುಬಲ್ಲೆನು. ಹೇಗಿದೆ ಸ್ವಾಮಿ? ಸಂಪಾದಕರ ಕಲ್ಪನೆ! ನಗೆಬರುವದೋ? ಇಂಥ ಕಲ್ಪನೆಯ ಸಂಪಾದಕರು(?) ಕೇಳುವಿಯಂತೆ ೫೦-೬೦ ಸಾವಿರ ಜನ ಚಂದಾದಾರರನ್ನು ದೊರಕಿಸುವದು ಶಕ್ಯವೆ ?

* * * *

ಎಲ್ಲ ನಿಯಮಗಳಿಗೂ ಅಪವಾದಗಳಿರುವವು. ಇಲ್ಲಿಯೂ ಅವನ್ನು ಕಾಣಬಹುದು. ಹಳೆಯ ಜನರಲ್ಲಿ ಮೈಸೂರ ಸಾಧ್ವೀ ಪತ್ರಿಕೆಯ ಸಂಪಾದಕರಾದ ಶ್ರೀ ವೆಂಕಟಕೃಷ್ಣ ಯ್ಯನವರೂ, ಧಾರವಾಡದ “ ಕರ್ನಾಟಕ ವೃತ್ತ ”ದ ಶ್ರೀಯುತರುಗಳಾದ ಮುದವೇಡಕರ್ ಕೃಷ್ಣರಾಯರೂ ಒಳ್ಳೇ ಧ್ಯೇಯವನ್ನಿಟ್ಟುಕೊಂಡು ಪತ್ರಿಕೆಗಳನ್ನು ಪ್ರಾರಂಭಿಸಿದವರು! ಇವರು ಗಂಡ ಹೆಂಡಿರ ನೋಟೀಸಿನಸಲುವಾಗಿ ಪತ್ರಿಕೆಗಳನ್ನು ತೆಗೆದವರಲ್ಲ. ಆದರೆ ಸಾಧ್ವೀ ಪತ್ರಿಕೆಯು ಸಾಂಪತ್ತಿಕ ದೃಷ್ಟಿಯಿಂದ ಒಳಿತಾಗಿರುವಂತೆ ಕರ್ನಾಟಕ ವೃತ್ತವು ಇಲ್ಲದಿರುವದು ಶೋಚನೀಯವು!! ಹೀಗಾಗಲು ಕಾರಣ? ಅಸ್ತು ಎಲ್ಲ ಪತ್ರಿಕೆಗಳ ವಿಮರ್ಶೆಯು ಮುಂದೆ ಬಂದೇ ಬರುವದು. ಕಾರಣವೂ ಗೊತ್ತಾಗುವದು. ಅಖಂಡ ಕರ್ನಾಟಕಕ್ಕೆಲ್ಲ ಆದರಣೀಯವಾದ ಪತ್ರಿಕೆಯು ಒಂದಾದರೂ ಕರ್ನಾಟಕದಲ್ಲಿ ಇಲ್ಲದಿರುವ ಕಾರಣವೇನು! ಮೈಸೂರ ಪತ್ರಿಕೆಗಳನ್ನು ಮೊದಲು ವಿಚಾರಿಸುವಾ. ಯಾಕೆಂದರೆ ಕನ್ನಡನಾಡಿಗೆಲ್ಲ ಮೈಸೂರು ಅಭಿಮಾನಾಸ್ಪದವಾದ ಸಂಸ್ಥಾನವು! ಇದೇ ಅಭಿಮಾನದಿಂದ ನಾನು ಮೈಸೂರಿನ ಎಲ್ಲ ಕನ್ನಡ ಪತ್ರಿಕೆಗಳನ್ನು ಬಹು ಕಾಲಕ್ಕೆ ತರಿಸುತ್ತಿದ್ದೆನು. ಕಡೆಗೆ ಬೇಸತ್ತು ಎಲ್ಲ ಪತ್ರಿಕೆಗಳನ್ನು ನಿಲ್ಲಿಸಿದೆನು. ಆ ‘ ಮದ್ದಮ್ಮ ’ ಸಾಹೇಬರ ಭಾಷೆಯನ್ನು ಕನ್ನಡ ನುಡಿಯಲ್ಲಿ ಹೆಚ್ಚಾಗಿ ಸೇರಿಸಿ ಕನ್ನಡ ವೃತ್ತ ಪತ್ರಿಕೆಗಳನ್ನು ಓದಲು ಸಹ ಹೇಸಿಕೆ ಬರುವಂತೆ ಮಾಡುವ ರೂಢಿಯೊಂದು ಅಲ್ಲಿದೆ. ಹಿಂದೂಸ್ಥಾನವಂತೆ! ಗರುಡನ ಮೂಗಿನಂತೆ ‘ದ’ಕ್ಕೆ ‘ಊ’ಕಾರವೇಕೋ? ಹಿಂದುಸ್ಥಾನವೆಂದರೆ ಸಾಕಾಗದೇ? ಅದು ಸಾಕಾಗದಿದ್ದರೆ, ಇಂಡಿಯಾದೇಶವಂತೆ! ವಾಹವ್ವಾ! ಆ ಮೇಲೆ ಗೌರ್ನಮೆಂಟು! ಕಾರಪೊರೇಷನ್! ಪೌಂಡನ್ನ!! ಭಪ್ಪರೇ! ಅವನ್ನೆಲ್ಲ ಇಲ್ಲಿ ಬರೆಯುತ್ತ ಹೋದರೆ ವಾಚಕರು ತೂಕಡಿಸಬಹುದು! ಅಂಕಿಗಳು ಸಹ ಇಂಗ್ಲೀಷಿನಲ್ಲಿರಬೇಕು! ಕನ್ನಡ ಪತ್ರಿಕೆಗಳ ಹೆಸರು ಕೂಡಾ ಇಂಗ್ಲೀಷಿನಲ್ಲಿಯೇ! ಮೈಸೂರ ಸ್ಟಾರ್! ಮೈಸೂರ ಕ್ರಾನಿಕಲ್! ದೀ ಟ್ರೂಥ್!! ಧೀ ಆಲ್ ಇಂಡಿಯಾ ಎಡ್ವರ್ಟಾಯಿಜರ್!!! ಅಯ್ಯಯ್ಯೋ!! ಎಂಥೆಂಥ ಶಬ್ದಗಳಪ್ಪಾ! ಸಾಕು! ಸಾಕು ! ಒಂದಕ್ಕಿಂತ ಒಂದರ ತಾನು ಹೆಚ್ಚಿನದು! ಕನ್ನಡದಲ್ಲಿ ಶುದ್ಧವಾದ ಹೆಸರುಗಳು ಇವರಿಗೆ ದೊರೆಯುವದಿಲ್ಲವಾಗಿ ತೋರುತ್ತೇ? ದೊರೆಯದೇನು! ‘ ಮದ್ದಮ್ಮ ’ ಆ ಮಹಿಮೆಯಂಥದು! ಮೇಲಾಗಿ ಮೈಸೂರು ದೇಶದ ಸುದ್ದಿಗಳ ಹೊರತಾಗಿ ಉಳಿದ ಕರ್ನಾಟಕ ಭಾಗಗಳ ಬಗ್ಗೆ ಯಾವ ಬಗೆಯ ಉಲ್ಲೇಖವೂ ಇರುವದಿಲ್ಲ. ಉಳಿದ ಭಾಗಗಳ ಕಷ್ಟಸುಖಗಳನ್ನು ಯೋಚಿಸುವ ಹವ್ಯಾಸಕ್ಕೂ ಸಂಪಾದಕರು ಹೋಗುವದಿಲ್ಲ! ಈಗಲಾದರೂ ಈ ಪದ್ಧತಿಗಳನ್ನು ತ್ಯಜಿಸಿ ಅಖಂಡ ಕರ್ನಾಟಕದ ಅಭಿಮಾನ ಹಿಡಿದು, ತಮ್ಮ ಪತ್ರಿಕೆಗಳಲ್ಲಿ ಈಗಿನ ಹೊಸಯುಗದ ಸ್ವದೇಶಾಭಿಮಾನಕ್ಕೆ ತಕ್ಕಂತೆ, ಏನಾದರೂ ಏರ್ಪಾಡು ಮಾಡಿದರೆ ಮೈಸೂರು ಪತ್ರಿಕೆಗಳು ನಿಜವಾಗಿಯೂ ಕರ್ನಾಟಕದ ಎಲ್ಲ ಭಾಗಗಳಲ್ಲಿ ಮಾನ್ಯತೆಯನ್ನು ಪಡಿಯದೇ ಇರಲಾರವು. ಆದರೆ ಈ ಬಗ್ಗೆ ವಿಚಾರಿಸುವರಾರು ಹರ!

* * * *

ಇತ್ತ ಉತ್ತರ ಕರ್ನಾಟಕದ ಪತ್ರಿಕೆಗಳನ್ನು ಕೇಳಬೇಕೆ? ಓದಲಿಕ್ಕೆ ಬಾರದ ಹಾಗೆ-ಬಹಳವಾದರೆ ಓದಲಿಕ್ಕೆ ಕೊಂಚಕೊಂದರೆ ಯಾದರೂ ಓದಲಿಕ್ಕೆ ಹೇಗಾದರೂ ಬರುವಂತೆ ಮುದ್ರಣವಾಗಿದ್ದರೆ ನಮ್ಮ ಪುಣ್ಯ!—ವೃತ್ತಪತ್ರಿಕೆಗಳನ್ನು ಮುದ್ರಿಸಬೇಕೆಂದು ಇವರೆಲ್ಲ ಹೊಸದು ಇಟ್ಟುಕೊಂಡ ಧ್ಯೇಯ! ಬಹುದಿನಗಳಿಂದ ನಡೆದು ಒಂದರೂ ‘ ಕರ್ನಾಟಕ ವೈಭವ ’ ವು ಇನ್ನೇತರಲ್ಲಿರದಿದ್ದರೂ, ೩೦ ವರ್ಷಗಳಿಂದ ಒಂದೇ ಹಾದರಿಯ ಮುದ್ರಣವನ್ನು ಕರ್ನಾಟಕಕ್ಕೆ ಅರ್ಪಿಸುವದರಲ್ಲಿ ತನ್ನ ವೈಶಿಷ್ಟವನ್ನು ಕಾದುಕೊಂಡಿದೆ. ಅಬ್ಬಾ ಅದೇನು ಮುದ್ರಣವಯ್ಯಾ! ಅದನ್ನು ಬಾಯಿಂದ ನುಡಿಯಲಾಗದು! “ವೈಭವದಂಥ ಮುದ್ರಣವು ವಿಜಾಪೂರ ಜಿಲ್ಲೆಯ ವೈಶಿಷ್ಟ್ಯವಲ್ಲವೆ ”ಎಂಬದನ್ನು ತನ್ನ ಚೊಕ್ಕಟವಾದ ಮುದ್ರಣದಿಂದ ಸಿದ್ಧಪಡಿಸಿದ್ದರೂ, ೩೦ ವರ್ಷಗಳಿಂದ ಸಂಸಾರ ಮಾಡುತ್ತ ಒಂದು ಕೈ॥ ಜಯರಾವ ದೇಶಪಾಂಡೇಯವರ ಕಾಲಕ್ಕೆ ಅತಿಶಯ ವೈಭವಕ್ಕೇರಿ, ಈಗ್ಗೆ “ವೈಧವ್ಯ”ವನ್ನು ಪಡೆದ ವೈಭವದ ವಿಷಾದಕರವಾದ “ ವೈಧವ್ಯ” ವನ್ನು ನವ ಸಭಾರತ ತರುಣಿಯು ಚಕ್ಕನಳಾದರೂ ಇಷ್ಟು ಬೇಗನೇ ವಹಿಸಿದ್ದು ದುಃಖದಾಯಕವಾಗಿದೆ! ವಿಜಾಪೂರ ಜಿಲ್ಹೆಯಲ್ಲಿ ಹೊಸದಾಗಿ ಹುಟ್ಟಿಬಂದ ಹೊರಟ “ಕನ್ನಡಿಗ”ನು ಈಗ ತಾನೇ ಕಣ್ತೆರೆದಿರುವನು ಆದ್ದರಿಂದ ಆತನ ಬಗ್ಗೆ ವಿಶೇಷವಾಗಿ ಬರೆಯುವದು ಶಕ್ಯವಿಲ್ಲವಿದ್ದರೂ, ಮುದಿಕನಾದವನಿಗೆ ಆತನಉತ್ಕರ್ಷೆಯ ಬಗ್ಗೆ ಏಕೋ ಸಂಶಯವಿದೆ! ಇರಲಿ. ಹೊಸ ಉತ್ಸಾಹದ ಪರಿಣಾಮವನ್ನು ನೋಡುವಾ! ಇನ್ನು ಧಾರವಾಡದ ಪತ್ರಿಕೆಗಳಲ್ಲಿ ಹಳೇಯವೆಂದರೆ, ‘ ಲೋಕಬಂಧು’ ‘ ಕರ್ನಾಟಕವೃತ್ತ’ಗಳು. ಮೊದಲಿನದು ಲೋಕಕ್ಕೆ ಬಂಧುವಾಗಿರುವದಕ್ಕಿಂತ ಅನಿಯಮಿತತನ, ವಿಷಯ ವೈಚಿತ್ರ್ಯಗಳಿಗೆ ಹೆಚ್ಚಾಗಿ ಬಂಧುವಾಗಿದೆ. ಕರ್ನಾಟಕ ವೃತ್ತವು ಮೊದಲಿಗೆ ೨-೩ ಸಾವಿರ ಜನ ಚಂದಾದಾರರನ್ನು ದೊರಕಿಸಿಕೊಂಡಿತ್ತು! ಇದು ನನಗೆ ಗೊತ್ತಿದ್ದ ಮಾತು. ಆದರೆ ಈಗ್ಗೆ ಅದರ ಸಾಂಪತ್ತಿಕ ಸ್ಥಿತಿಯು ಚನ್ನಾಗಿಲ್ಲವಂತೆ! “ ನುಡಿಯಂತೆ ನಡೆ ” ಎಂಬ ಅಡಿಗೆಯನ್ನು ಅಡಿಗಡಿಗೆ ತನ್ನ

ಬೆಡಗಿನ ಚಂದಾದಾರರಿಗೆ ಬಡಿಸದಿದ್ದದ್ದೇ ಅದರ ಸುಡಗಾಡುಸ್ಥಿತಿಗೆ ಬೀಡಾಗಿದೆ! ಇದೇ ನನ್ನ ಮುಮುಕನ ಅನುಭವವು! ಅಸ್ತು ಇದು ನೋಡಿ "ಕರ್ನಾಟಕ ಟಾಯಿಮ್ಸ್" ವಂತೆ! ಅಬ್ಬಬ್ಬಾ!! ಕನ್ನಡ ಸಂಸ್ಕೃತ ಶಬ್ದಗಳು ಇವರಿಗೆದೊರೆಯಲಿಲ್ಲವಾಗಿಕಾಣುತ್ತೆ! ಮೈಸೂರ ಸ್ಟಾರ್! ಆದ್ದರಿಂದ ಇವರು "ಟಾಯಿಮ್ಸ್" ವೆಂಬದಾಗಿ ಆರಿಸಿರ ಬಹುದೇ? ಹಿರಿಯಕ್ಕನಚಾಳಿ ಮನೆಯವರಿಗೆಲ್ಲ! ವೀರಶೈವರನಿಜವಾದ ಶುದ್ಧರಕ್ತವು ಇವರಲ್ಲಿದ್ದದ್ದಾಗಿದ್ದರೆ, ಯಾವ ವೀರಶೈವರು ತಮ್ಮ ಅಪ್ರತಿಮವಾದ ಮಮತೆಯಿಂದಲೂ ಸೇವೆಯಿಂದಲೂ ಕನ್ನಡಸಾಮ್ರಾಜ್ಯದ ಇತಿಹಾಸದಲ್ಲಿ "ವೀರಶೈವರ ಕಾಲ" ವನ್ನು ದೊರಕಿಸಿರುವರೋ ಅಂಥ ವೀರಶೈವರಬಗ್ಗೆ ನಿಜವಾದ ನಿಸ್ಸೀಮವಾದ ಭಕ್ತಿಯು ಇವರಲ್ಲಿದ್ದದ್ದು ನಿಜವಾಗಿದ್ದರೆ ಆ ಸಂಸ್ಕೃತಿಗೆ ಒಪ್ಪುವಂತಹ ಕನ್ನಡ ಶಬ್ದವನ್ನೇ ಇವರು ಆರಿಸತಕ್ಕದ್ದಿತ್ತು! ಈಗಾದರೂ ಹೀಗೇಕೆ ಮಾಡಬಾರದು? ಇರಲಿ. "ಕರ್ಮವೀರ" ನಲ್ಲಿಯ ನಿಜವಾದ ಪುಷ್ಪದ ಸುಗಂಧವು ಕರ್ನಾಟಕಕ್ಕೆ ಅದು ಹುಟ್ಟಿದಂದಿನಿಂದಲೂ ಅವ್ಯಾಹತವಾಗಿ ದೊರೆತಿಲ್ಲ. ಪುಷ್ಪವು ಮೇಲಿಂದಮೇಲೆ—ಅದರಲ್ಲಿಯ ಸುಗಂಧದ ವಾಸನೆಗಾಗಿ ನಮ್ಮ ಸರಕಾರದವರಿಂದ ತೆಗೆದುಕೊಂಡುಹೋಗಲ್ಪಟ್ಟಿದ್ದರಿಂದ ಕನ್ನಡಿಗರ ಪಾಲಿಗೆ ಪುಷ್ಪದ ಸುಗಂಧವೇಯಿಲ್ಲ! ಅದರ ಬದಲು ಪುಷ್ಪದಸುಗಂಧವನ್ನು ಹೀರಿ ಆನಂದಹೊಂದಿದ ಭ್ರಮರಗಳು ಕರ್ಮವೀರನನ್ನು ಆಶ್ರಯಿಸಿವೆ! ಆದ್ದರಿಂದ ಭ್ರಮರಗಳ ಗುಂಯ್ ಗುಂಯ್ ಸಪ್ಪಳವೂ, ಭ್ರಮರಗಳ ಕರೇಬಣ್ಣವೂ ಮಾತ್ರ ನನ್ನ ಕಣ್ಣಿಗೆ ಕಾಣುತ್ತಿವೆ!

ಇನ್ನು ಳಿದವು ಧಾರವಾಡ ಜಿಲ್ಹೆಯಲ್ಲಿಯ ವಿಜಯ ರಾಜಹಂಸ ಲೋಕಮತ ಬಸವರಾಜರು ಮತ್ತು ಉತ್ತರದಕ್ಷಿಣ ಕನ್ನಡ ಜಿಲ್ಹೆಗಳಲ್ಲಿಯ ಪತ್ರಿಕೆಗಳು ಇವುಗಳ ಬಗ್ಗೆ ಬರೆಯಲು ಸ್ಥಳಾವಕಾಶವಿಲ್ಲ ಮತ್ತೂ ಈಗ್ಗೆ ೩-೪ ವಾರಗಳಿಂದಲೂ ಇದೇ ವಿಷಯವೇ ನಡೆದದ್ದರಿಂದ ಸಧ್ಯಕ್ಕೆ ವೃತ್ತಪತ್ರಕಾರರ ವಿಷಯವನ್ನು ಬಿಟ್ಟು ಉಳಿದ ವಿಷಯಗಳಿಗೆ ಗಮನಕೊಡುವ.

ಚೇಳಿನಕೊಂಡೆಪ್ಪಾ.

ವರ್ತಮಾನಸಾರ

ಇಹವೃತ್ತ

ಇಲ್ಲಿಯ ಕನ್ನಡ ೪ ನೇನಂಬರ ಶಾಲೆಯ ಇನಾಮಿನ ಸಮಾರಂಭವು ತಾ॥ ೧—೪—೨೫ನೇ ದಿವಸ ಬಹು ವೈಭವದಿಂದ ನೆರವೇರಿತು ಮಾಮಲೇದಾರರಾದ ಮೆ॥ ಡಿ. ಬಿ. ದೇಶಪಾಂಡೆ ಇವರು ಅಧ್ಯಕ್ಷರಾಗಿದ್ದರು ವಿದ್ಯಾರ್ಥಿಗಳಿಗೆ ಉತ್ತೇಜನಕೊಡುವಂಥ ಯೋಗನನ್ನು ಒದಗಿಸಿದವರು ಸ್ತುತಿಗೆ ಪಾತ್ರರಿದ್ದಾರೆ

ಕರ್ನಾಟಕ.

ಮುಂಬಯಿ ಕರ್ನಾಟಕ.

ಬೆಳಗಾವಿಯಲ್ಲಿ ಜರುಗಿದ ಗೋಪರಿಷತ್ತಿಗೆ ಸಹಾಯ ಮಾಡಿದ್ದಕ್ಕಾಗಿ ಮರಡೀಮಠ ಶಾಲೆಯಲಿಯ ರಾ॥ಗಡ್ಡದ ಎಂಬುವ ಶಿಕ್ಷಕರನ್ನು ಕೆಲಸದಿಂದ ತೆಗೆದಿದ್ದರೆಂದು ತಿಳಿದು ಬರುತ್ತದೆ

ಕರ್ನಾಟಕ ಸಾಹಿತ್ಯ ಸಮ್ಮೇಲನದ ೧೧ ನೆ ಅಧಿವೇಶನವು ಮೇ ೯—೧೦—೧೧ ನೇ ತಾರೀಖುಗಳಲ್ಲಿ ಬೆಳಗಾಂವಿಯಲ್ಲಿ ನೆರೆಯುವದು ಗೊತ್ತಾಗಿದೆ ಇದರಬಗ್ಗೆ ಕಾರ್ಯಕಾರೀ ಮಂಡಳವು ಸ್ಥಾಪಿತವಾಗಿದೆ.

ಮದ್ರಾಸ ಕರ್ನಾಟಕ.

ಮದ್ರಾಸದ ಅಡವ್ಹೋಕೇಟರಾದ ಶ್ರೀ ಎಸ್ ಶ್ರೀನಿವಾಸಯ್ಯಂಗಾರರು ಶ್ರೀ ಹೊಸಕೊಪ್ಪ ಕೃಷ್ಣರಾಯರೊಡನೆ ಕೂಡಿ ಮಂಗಳೂರಿಗೆ ದಯಮಾಡಿಸಿದ್ದರು ಅಗ್ಗೆ ಅಲ್ಲಿಯ ರಾಷ್ಟ್ರೀಯ ಕನ್ಯಾ ಶಾಲೆಯನ್ನು ನೋಡಿ ತಮ್ಮ ಆನಂದಪ್ರದರ್ಶನವನ್ನು ವ್ಯಕ್ತಗೊಳಿಸಿದರು. ಅಲ್ಲದೆ ರಾಷ್ಟ್ರೀಯ ಕಾರ್ಯದಲ್ಲಿ ಅತಿಕಳಕಳಿಯಿಂದ ಕೆಲಸಮಾಡಿ ಎಲ್ಲರಿಗೂ ಕೀಲ್ಪಂಕ್ತಿಯನ್ನು ಹಾಕಿಕೊಟ್ಟ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ದೇಶಭಕ್ತ ಕಾರ್ನಾಡಸದಾಶಿವರಾಯರನ್ನು ಅಭಿನಂದಿಸುವದರಲ್ಲಿಯೂ ಬಂದಿತು. ಇದಲ್ಲದೆ ಶ್ರೀನಿವಾಸಯ್ಯಂಗಾರರು ಮುಖ್ಯ ಮುಖ್ಯ ಸಂಸ್ಥೆಗಳನ್ನು ಸಂದರ್ಶಿಸಿದರು.

ವಿಜಯನಗರದಲ್ಲಿ ಆಂಧ್ರದೇಶದ ಸಕಲ ವಿದ್ಯಾನಿಲಯವನ್ನು ಇಡಬೇಕೆಂದು ಚರ್ಚೆಯು ನಡೆಯುತ್ತಿರುವದು. ಎಲ್ಲ ಜಿಲ್ಹೆಯವರೂ ಒಂದೊಂದು ಜಿಲ್ಹೆಗೂ ಒಂದೊಂದು ವಿಶ್ವವಿದ್ಯಾನಿಲಯ ಬೇಕೆಂದು ಕೇಳಲುಪಕ್ರಮಿಸಿದರು.

ಉಡುಪಿ ತಾಲೂಕ ಲೋಕಲ ಬೋರ್ಡಿನ ಚುನಾವಣೆಯಾಗಿ ಕೆಳಗೆ ಬರೆದ ಮಹನೀಯರು ಆರಿಸಿ ಬಂದರು. ಶ್ರೀ. ರಾಜಗೋಪಾಲ ಕೃಷ್ಣರಾವ ರಾಮನಾಥಯ್ಯ, ನರಸಿಂಹಯ್ಯ, ಒಟ್ಟಿಗೆ ೧೩೩೦ ಮತದಾರರ ಪೈಕಿ ಕೇವಲ ೯೦೮ ಜನರು ಚುನಾವಣೆಯಲ್ಲಿ ಭಾಗ ತೆಗೆದುಕೊಂಡರಂತೆ!

ಮೈಸೂರ ಕರ್ನಾಟಕ.

ದೇಶೀಯರಿಗೆ ನಮ್ಮ ದೇಶದ ಔಷಧಿಗಳು ವಿಶೇಷವಾಗಿ ಒಪ್ಪುವವೆಂದೂ ನಮ್ಮ ದೇಶದ ಆಹಾರ ವಿಹಾರಗಳಿಗೆ ನಮ್ಮ ದೇಶದ ಔಷಧಗಳಿಂದಾಗುವಷ್ಟು ಪ್ರಯೋಜನವು ಪರದೇಶದ ಔಷಧಗಳಿಂದಾಗುವದಿಲ್ಲವೆಂದೂ ಡಾ॥ ಲಕ್ಷ್ಮೀಪತಿಯವರು ಬೆಂಗಳೂರಲ್ಲಿ ನುಡಿದರು.

ಮೈಸೂರಮಹಾರಾಣೀಹಾಯಸ್ಕೂಲಮುಖ್ಯ ಶಿಕ್ಷಕಿಯರಾದಶ್ರೀಮತೀ ಕೆಸುಬ್ಬಮ್ಮಾ ಇವರು ದೈವಾಧೀನರಾದರೆಂದುತಿಳಿಸಲು ನಮಗೆ ಅತ್ಯಂತ ವಿಷಾದವೆನಿಸುತ್ತದೆ. ಇವರು ಒಳ್ಳೇ ಶಿಕ್ಷಣಾಭಿಮಾನಿಗಳಿದ್ದು ಮದ್ರಾಸ ವಿಶ್ವವಿದ್ಯಾಲಯದ ಪದವೀಧರರಾಗಿದ್ದರು ಇವರು ತಮ್ಮ ಆಸ್ತಿಯಪೈಕಿ ೨೦ ಸಾವಿರ ರೂಪಾಯಿಗಳನ್ನು ಮೈಸೂರ ಯುನಿವರ್ಸಿಟಿಗೆ ಉಂಬಳಿಯಾಗಿ ಕೊಡಬೇಕೆಂದು ದಿವಾಣಸಾಹೇಬರಿಗೆ ಒಂದು ಪತ್ರವನ್ನು ಬರೆದಿರುತ್ತಾರಂತೆ. ಇದು ಒಳ್ಳೇ ಸ್ತುತ್ಯ ಕೆಲಸವು.

ಮೈಸೂರ ಮಹಾರಾಜರವರು ಮೊನ್ನಿನ ಯುಗಾದಿಯ ಪ್ರತಿಪದೆಯ ದಿವಸ, ಕವನ ಸಂಪ್ರದಾಯವನ್ನು ಏರ್ಪಡಿಸಿದ್ದರು. ಕನ್ನಡಹಾಗು ಸಂಸ್ಕೃತ ಕವನಗಳನ್ನು ಮಾಡಿದ ಕನ್ನಡ ಕವಿಗಳಿಗೆ ೩ ಇನಾಮುಗಳನ್ನು ಸಂಸ್ಕೃತ ಕವಿಗಳಿಗೆ ೪ ಇನಾಮುಗಳನ್ನು ಕೊಡುವದರಲ್ಲಿ ಬಂದಿತು. ಈ ಪ್ರಕಾರ ತಾಯ್ನುಡಿ ಏಳಿಗಾಗಿ ಒಳ್ಳೇ ಪ್ರಯತ್ನಮಾಡುವಂಥ ಶ್ರೀಮನ್ಮಹಾರಾಜರನ್ನು ನಾವು ತುಂಬಾ ಅಭಿನಂದಿಸುತ್ತೇವೆ.

ಹಿಂದುಸ್ಥಾನ.

ನೇಕ ನಾಮದಾರ ಶ್ರೀನಿವಾಸ ಶಾಸ್ತ್ರಿಗಳು ೩ನೇ ಎಪ್ರಿಲ ದಿವಸ ತಮ್ಮ ಪಳ್ಳಿಯಿಂದ ಹೊರಟು ಕುಂಭಕೋಣಕ್ಕೆ ಬಂದರು. ತಮ್ಮ ಮೈಯಲ್ಲಿ ಕಾಯಿಲೆ ಇದ್ದದರಿಂದ ಊರೊಳಗಿನ ಎಲ್ಲ ಪ್ರಮುಖರಿಗೆ ಭೆಟ್ಟಿಯಾಗುವದಿಲ್ಲೆಂದು ಬರೆಯುತ ತಮ್ಮ ವಿಷಾದವನ್ನು ವ್ಯಕ್ತಪಡಿಸಿದ್ದಾರೆ.

ಕಲಕತ್ತಾ ಕಾರ್ಪೋರೇಶನದವರು ತಮ್ಮ ಕಾರ್ಪೋರೇಶನದ ಹದ್ದಿನೊಳಗೆ ಅಫೀಮು ಗಾಂಜಾ ಮೊದಲಾದ ಯಾವತರದ ಅಮಲಿ ಪದಾರ್ಥಗಳನ್ನೂ ಮಾರಾಟ ಮಾಡಕೂಡದೆಂದು ನಿರ್ಧರಿಸಿರುವರು ಆವರೆ ಮುಂಬಯಿ ಕಾರ್ಪೋರೇಶನದವರು?

ಪರದೇಶ.

ಲಾರ್ಡ ಮಿಕಲಟನ್, ಓಲಿವ್ಹರ, ಚೇಮ್ಸಫರ್ಡ, ಹಾರ್ಡಿಂಜ್, ವ್ಹಿಲಿಂಗಡನ್, ಲ್ಯಾಂಪಫಿಲ ಹ್ಯಾರಿಸ ಇಸಲ್ಪಿಂಗ್ಟನ್‌ರು, ಸೌಥ ಬರೋ ಮತ್ತು ಲಾರ್ಡ ಮೈಸ್ಟನ ಮುಂತಾದ ಮಹನೀಯರದೊಂದು ಮಂಡಳವು ಹಿಂದುಸ್ಥಾನದ ಜಾಯಿಂಟ ಕಮಿಟಿಯಲ್ಲಿ ಕೇರಿವೆ ಇವರೆಲ್ಲರೂ ಹಿಂದುಸ್ಥಾನದ ಸಂಬಂಧ ವಿಶೇಷ ಜ್ಞಾನವಿದ್ದವರೂ ಇಲ್ಲಿ ಕೆಲಸಮಾಡಿದವರೂ ಇರುವದರಿಂದ ಈ ಕಮಿಟಿಯಿಂದ ಹಿಂದೂ ದೇಶಕ್ಕೆ ಸುಖವಾಗಬಹುದೆಂದು ಪೂರ್ಣ ರೀತಿಯಿಂದ ಹೇಳಲಿಕ್ಕೆ ಬರುವದಿಲ್ಲೆಂದು ಟೈಮ್ಸಆಫಇಂಡಿಯಾದವರು ತಮ್ಮ ಪತ್ರದಲ್ಲಿ ಉದ್ಗಾರಗಳನ್ನು ತೆಗೆದಿರುವರು.

ಸೈಋತ್ಯ ಆಫ್ರಿಕಾದಲ್ಲಿಯ ರಿಪೋಫ ಜನಾಂಗದವರು ಹಲವು ಕಾಯಿದೆಗಳನ್ನು ಮಾನ್ಯ ಮಾಡಲು ಸಮ್ಮತಿಸಲಿಲ್ಲ ಆದ್ದರಿಂದ ಆ ಭಾಗದ ಮುಖ್ಯಸ್ಥರಾದ ಹೊಸಮೋಯರರವರು, ಮೂರು ವಿಮಾನ ಹಾಗೂ ಪೋಲಿಸರೊಡನೆ ಹೋಗಿರುತ್ತಾರೆ. ರಿಪೋಫ ಜನಾಂಗದವರು ಶಸ್ತ್ರಧಾರಿಗಳಾಗಿ ಕಡೆಯ ಸ್ವರದಲ್ಲಿ ಆಡ್ಡಾಡುತ್ತಾರೆ ಅವರೂ ವಿಶೇಷ ಭಯಾನಕ ಪ್ರಸಂಗವೇನೂ ತೋರುವದಿಲ್ಲ. ಲೀಗ ಅಫನೇಶನ್ಸ ದವರಿಗೆ ಮಧ್ಯಸ್ಥಿಕೆ ವಹಿಸಲು ಅವರು ಕೇಳಿಕೊಂಡಿರುತ್ತಾರೆ.

ಪರಾಜೀ ಮಂತ್ರಿ ಪ್ರಧಾನರಾದ ಹರಿಯೊತರವರು ಪ್ರಜಾಸತ್ತೆ ಪ್ರಧಾನರಾಗಿ ಆರಿಸಲ್ಪಟ್ಟಿದ್ದಾರೆ.

ನೂರು ಯಾರ್ಡುವರೆಗೆ ಹಬ್ಬಿದ ಬರ್ಫಿನ ಹಡಗವು ಇರ್ಕುಟಸ್ಕ ಪಟ್ಟಣದ ಹತ್ತರ ಉಗಿಬಂಡೆಯ ಮಾರ್ಗಕ್ಕೆ ತಗಲಿ ಬಹಳಹಾನಿಯು ಸ್ಟಂಟುಮಾಡಿದೆ. ೧೬ ಜನರು ಸತ್ತರು ಮತ್ತು ೩೦ ಜನರಿಗೆ ವಿಶೇಷ ಹಾನಿ ತಗಲಿದೆ. ಇದಲ್ಲದೆ ಇಂಜಿನದ ಬೋಯಿಲರ ಒಡೆದು ಆ ನೋಟ ವನ್ನು ವಿಶೇಷ ಭಯಾನಕವಾಗಿ ಮಾಡಿದೆಯೆಂದು ಗೊತ್ತಾಗಿದೆ.

ಡಾಕ್ಟರ ಮೊಸ್ಸರವರು ಪ್ರಶ್ಯಿಯನ್ ಪ್ರಧಾ ಪದಕ್ಕೆ ತಮ್ಮ ಅನು ಮತಿಯನ್ನು ಕೊಡಲಿಲ್ಲ. ಮಂತ್ರಿಮಂಡಳದಲ್ಲಿ ಪ್ರಶಿಯನ್ ಹಿತಚಿಂತ ಕರ ಬಹುಮತವಾಗದಿರುವದೇ ಇದರ ಕಾರಣವೆಂದು ತಿಳಿಯುತ್ತದೆ

ಮಾದಕ ಪದಾರ್ಥ ಸೇವಿಸುವ ಜನರ ಸಂಖ್ಯೆಯು ಬೆಳೆಯ ಹತ್ತಿದ್ದರಿಂದ, ಇಜಿಪ್ತ ಸರಕಾರದವರು ಮಾದಕ ಪದಾರ್ಥಗಳನ್ನು ವ್ಯಾಪಾರ ಮಾಡುವದಕ್ಕೆ ಪ್ರತಿಬಂಧಪರ ಕಾಯದೆಯನ್ನು ಮಾಡಿದ್ದಾರೆ.

ಜರ್ಮನಿಗೆ ವಿದ್ಯಾಸಂಪಾದನಾರ್ಥವಾಗಿ ಅಫಗಾಣ ಸರಕಾರದ ಖರ್ಚಿನಿಂದ ಹೋಗಿದ್ದ ಒಬ್ಬ ವಿದ್ಯಾರ್ಥಿಯ ಹತ್ತರ ೧೨ ಪಿಸ್ತೂಲೂ ೫೦೦ ಕಾಡತೂಸುಗಳು ಇದ್ದವೆಂದು ಅವನಿಗೆ ೯ ತಿಂಗಳ ಸಕ್ತ ಮಜೂರಿ ಶಿಕ್ಷೆಯನ್ನು ವಿಧಿಸುವದರಲ್ಲಿ ಬಂದಿದೆ.

ಸೋಜಿಗದ ಸುದ್ದಿಗಳು.

ದಕ್ಷಿಣ ಅಮೇರಿಕದ ಪಾರಗ್ವೆ ದೇಶದಲ್ಲಿ ಒಂದು ಬಗೆಯ ಗಿಡವು ಕಂಡು ಹಿಡಿಯಲ್ಪಟ್ಟಿದೆ. ಇದರ ಎಲೆಗಳಿಂದ ಸಕ್ಕರೆಗೆ ೨೦೦ ರಷ್ಟು ಅಧಿಕವಾದ ಸಿಹಿ ವಸ್ತುವು ದೊರೆಯುವುದೆಂದು ಗೊತ್ತಾಗುತ್ತದೆ ಎಲೆಗ ಳನ್ನು ಒಣಗಿಸಿ ಪುಡಿ ಮಾಡಿ, ಸಿಹಿ ಮಾಡಬೇಕೆಂಬ ಪದಾರ್ಥಗಳಿಗೆ ಉಪಯೋಗಿಸಬಹುದು. ಹಸೀ ಎಲೆಗಳನ್ನು ನೀರಿನಲ್ಲಿ ತೋಯಿಸಿದರೆ ನೀರು ಸಿಹಿಯಾಗುವುದು. ಇದರಿಂದ ಆದ ಸಿಹಿ ಪದಾರ್ಥಗಳು ಎಷ್ಟು ದಿನಗಳಿಟ್ಟರೂ ಹುಳಿ ಬರುವದಿಲ್ಲವಂತೆ! ಇದನ್ನು ಮೂತ್ರ ವ್ಯಾಧಿ ಇ ರುವವರು. ಕ್ಷೇಮದಿಂದ ಉಪಯೋಗಿಸಬಹುದೆಂದು ಅಮೇರಿಕದ ಒಂ ದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ವಾಶಿಂಗ್ಟನ್ ಪಟ್ಟಣದಲ್ಲಿ ೧೮-೫೮ ಗಂಟೆಗೆ ಪ್ರೆಸಿಡೆಂಟ ಕೂಲಿಜ ಸಾಹೇಬರ ಚಿತ್ರವನ್ನು ತೆಗೆದು ಅದನ್ನು ೨ ಗಂಟೆಗೆ ಹೊರಡುವ ಪತ್ರ ದಲ್ಲಿ ಪ್ರಸಿದ್ಧಮಾಡುವದರಲ್ಲಿ ಬಂದಿತು. ಅಂದರೆ ಯಾವಪ್ರಕಾರ ಟೆಲಿ ಫೋನದಿಂದ ಸುದ್ದಿಗಳನ್ನು ಕೇಳುವರೋ ಅದೇಪ್ರಕಾರ ಎಷ್ಟೋ ದೂರ ಪ್ರದೇಶದಲ್ಲಿ ಸಂಭವಿಸಿದ ನೋಟಗಳ ಚಿತ್ರಗಳನ್ನು ಕೂಡಲೇ ಪ್ರಸಿದ್ಧ ಮಾಡುವ ವಿಚಾರದು, ಅಮೇರಿಕೆಯಲ್ಲಿಯ ಪತ್ರಿಕಾ ಕರ್ತರು ಮಾಡಿರು ದು. ಇದರಲ್ಲಿ ತಾರಾಯಂತ್ರದೂ, ಟೆಲಿಫೋನದದೂ ಸಹಾಯವು ಏಕಕಾಲದಲ್ಲಿಯೇ ಶಿಕ್ಕಂತಾಗುವದು. ಇದೊಳ್ಳೆ ಸೋಜಿಗರವಾದ ಹಾಗು ಅತ್ಯುಪಯುಕ್ತವಾದ ಯೋಜನೆಯು!!

ಮಹತ್ವದ ಸೂಚನೆಯು.

ಕನ್ನಡಿಗನ ಮೂರು ಸಂಚಿಕೆಗಳು ವಾಚಕರ ಹಸ್ತಗತವಾ ಗಿವೆ. ಮುಂದಿನ ಸಂಚಿಕೆಯಿಂದ ವ್ಹಿ. ಪಿ. ಕಳಿಸಲು ಪ್ರಾರಂಭಿಸು ವೆವು. ಕನ್ನಡಿಗನು ಯಾರಾರಿಗೆ ಅಭಿಮಾನಸ್ಪದನಾಗಿರುವನೋ ಅವ ರಿವರು ದಯವಿಟ್ಟು ವ್ಹಿಪಿಯ ಹಾದಿಯನ್ನು ನೋಡದೇ ಮನಿಯಾರ್ಡ ರದಿಂದ ೧-೧೪-೦ ಕೂಡಲೇ ಕಳಿಸಬೇಕು. ಯಾಕಂದರೆ ವ್ಹಿಪಿ ಯಿಂದ ರಜಿಷ್ಟರದ ವೆಚ್ಚವು ವಿನಾಕಾರಣವಾಗಿ ವಾಚಕರಿಗೆ ತಗಲು ವದು. ನಮಗೂ ತೊಂದರೆಯನ್ನೂ ಹಾನಿಯನ್ನೂ (ನಿರಾಕರಿ ಸಿದರೆ) ಉಂಟು ಮಾಡುವದು. ಇನ್ನು ಜರಿಗೆ 'ಕನ್ನಡಿಗನ' ಭೆಟ್ಟಿ ಯ ಅವಶ್ಯಕತೆಯಿಲ್ಲವೋ ಅವರು ತಮ್ಮ ಕಡಿಗೆ ಬಂದ ಸಂಚಿಕೆಯನ್ನು ಒಡೆಯದೆ ಹಾಗೆ ನಮ್ಮಡೆಗೆ ನಿರಾಕರಿಸಿ ಕಳಿಸಿದರೆ ನಾವು ಅವ ರಿಗೂ ಉಪಕೃತರಾಗುವೆವು. ಕನ್ನಡ ನಾಡಿನಲ್ಲಿ ವಾಚನಾಭಿರುಚಿ ಯನ್ನು ಹುಟ್ಟಿಸುವ ಸಲುವಾಗಿ ನಾವು ಜೆ. ಕಂತಲೇ ವಾರ್ಷಿಕ ಚಂದಾ ಒಂದೇ ಒಂದು ರೂಪಾಯಿ ಇಟ್ಟಿರುವೆವು. ಆದುದರಿಂದ ಅಭಿಮಾನ ಶಾಲಿಗಳಾದ ಎಲ್ಲ ಕನ್ನಡಿಗರೂ ದಯವಿಟ್ಟು ನಮಗೆ ಈ ಕಾರ್ಯ ದಲ್ಲಿ ಚಂದಾದಾರರಾಗಿ ಸಹಾಯ ಮಾಡೇ ಮಾಡುವರೆಂದು ನಂಬಿ ದ್ದೇವೆ. ಇನ್ನು ಚಂದಾದಾರರಾಗಿ ಸಹಾಯ ಮಾಡಲಿಚ್ಛೆಯಿಲ್ಲದ ವರು ಬಿಡಿ ಸಂಚಿಕೆಯನ್ನು ನಿರಾಕರಿಸಿ ಹಾಗೆ ತಿಳಿಸಬೇಕು. ಅರ್ಧ ಆಣೆಯನ್ನು ವೆಚ್ಚ ಮಾಡಿ ಒಂದು ಕಾರ್ಡನ್ನು ಬರೆದರೂ ಉತ್ತಮ ಅದೂ ಇಲ್ಲದೇ ಬಿಡಿ ಸಂಚಿಕೆಯನ್ನು ಸ್ವೀಕಾರ ಮಾಡಿ ಮನಿಯಾರ್ಡರ ಕಳಿಸದೇ ವ್ಹಿ.ಪಿ. ತರಿಸಿಕೊಂಡು ಅದನ್ನು ಆ ಮೇಲೆ ನಿರಾಕರಿಸಿ. ನಮಗೆ ೩ ಆಣೆಗಳ ಹಾನಿಗೆ ಪಾತ್ರರಾಗುವಂತೆ ಮಾತ್ರ ಸಹಾಯ ಮಾಡಬಾರದಾಗಿ ಬಿನ್ನಹ!

ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೨೫ ರೂ. ಉಪಕಾರಕರ್ತೃಗಳಿಗೆ ವಾ ೧೦ ರೂ. ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ	೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆ ಯಾಗದಂಥ ೯೦೦೦ ಯಾರ್ಡ ಕೈನೂಲು
ಪರಸ್ಥಳದ ,,	ಮನಿಯಾರ್ಡರದಿಂದ ೧-೧೪-೦ ವಿ. ಪಿ. ಯಿಂದ ೨-೦-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦೦ಯಾರ್ಡ ಕೈನೂಲು.
ವಾಚನಾಲಯ ಸಭೆ, ಸ ಮ್ಮಿತಿ ಇತ್ಯಾದಿ ಸಾರ್ವ ಜನಿಕ ಸಂಸ್ಥೆಗಳಿಗೆ-	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೪-೦ ,, ವಿ. ಪಿ. ಯಿಂದ ೩-೦-೦
ಸರಕಾರ, ಮುನಸಿಪಾ ಲಿಟಿ ಲೋಕಲ್ ಬೋ ರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೪-೦ ವಿ. ಪಿ.ಯಿಂದ ೫-೦-೦

ಬಿಡಿ ಸಂಚಿಗೆ ೯ ಪೈ. ಹಿಂದಿನಸಂಚಿಕೆಯೊಂದಕ್ಕೆ ೨ ಆಣೆ. ಧರ್ಮಾರ್ಥವಾಗಿಯಾಗಲೀ, ವರ್ಷದ ಕಡಿಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ.

ಟೀಪು– ಈ ಸಾರೆ ೪೦೦೦ ಪ್ರತಿಗಳು ಮುದ್ರಿತವಾಗಿವೆ. ಜಾಹೀ ರಾತು ಕೊಡಲಿಚ್ಛಿಸುವವರು ತ್ವರೆಮಾಡಬೇಕು.

ವ್ಯವಸ್ಥಾಪಕ.

ಬಾಗಲಕೋಟೆಯ ಪೇಟೆಯ ಧಾರಣೆ.

ತಾ|. ೧೦-೪ ೨೫.

ಮುಗಾಂಜೋಳ	೯	ಬಿಳಿಜೋಳ	೮॥
ಸಜ್ಜಿ	೯॥ ೯॥	ನವಣಿ	೧೦
ಹುರಳಿ	೧೨	ಗೋದಿ	೫; ೪೫
ಕುಸಿಬಿ	೧೦॥	ಅಗಸಿ	೫।=
ಹೆಸರು	೬॥	ತೊಗರಿ (ಜವಾರಿ)	೯।
ಕಡ್ಲಿ	೮।।	ಕಡ್ಲಿಬ್ಯಾಳಿ	೬॥; ೭
ಅಲಸಂದಿ	೬॥	ಕಾರೆಳ್ಳು	೭
ಯಳ್ಳು	೫॥	ಜವಾರಿ ಹತ್ತಿ ೮ ಮಣಕ್ಕೆ	೩೧
ಮೆಣಶಿನಕಾಯಿ ೮ ಮಣಕ್ಕೆ	೯೮; ೫೦	ಪೆಂಟಬೆಲ್ಲ ೮ ಮಣಕ್ಕೆ	೨೭; ೨೮
ಅರಳೆ (ಜೀನು)	೧೬೪	ಅರಳೆ (ಕಾಲಿಂದು)	೧೬೦
ಅಪ್ಲಂಡ ಹತ್ತಿ	೩೮; ೩೮॥	ಕಮ್ಪೋಡಿ ಹತ್ತಿ	೩೮
ಅಕ್ಕಿ ೪॥ ಯಿಂದ ೫।= ವರೆಗೆ		ಈ ಪ್ರಕಾರಾ ಧಾರಣ ಇರುತ್ತದೆ.	

ತಮ್ಮಪ್ಪಾ ತಿಮ್ಮಪ್ಪಾ ವಿಜ್ಯಾಪೂರ ಇವರಿಂದ.

ಈ ಪತ್ರಿಕೆಯು ವೆಂಗೋವೇಂಧ್ರೋ ರಾಜೋರಾಯರ ಮಕ್ಕಳಾದ ಶ್ರೀನಿವಾಸರಾಯರು ಬಾಗಲಕೋಟೆಯಲ್ಲಿಯ
ವಿದ್ಯಾ... ಮುದ್ರಿತವಾಗಿ ... ಪ್ರಸಿದ್ಧಿಸಲ್ಪಟ್ಟಿತು. ಪ್ರತಿ ೪೦೦೦

೮. ಬಿ, ೧೯೪೭ ವಾ. ಚಂದಾ ೧—೧೩—೦ ಮಾತ್ರ!

ಕನ್ನಡಿಗ

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವೇಶವಾಗಿದೆ)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು—ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ } ಬಾಗಲಕೋಟೆ ಬುಧವಾರ ಮಿತಿ ಚೈತ್ರ ವದ್ಯ ೯ ಶಕೆ ೧೮೫೭. ತಾ|| ೧೭-೪-೧೯೩೫. { ಸಂಚಿಕೆ ೪

ಸಂಪಾದಕರ ಭೂಮಿ.

ಎದ್ದರೆ ಕನ್ನಡ ಕುಳಿತರೆ ಕನ್ನಡ ನುಡಿದರೆ ಕನ್ನಡವು ।
ಹೃದ್ಯವು ಕನ್ನಡ ಉದ್ಯಮ ಕನ್ನಡ-ಕನ್ನಡ-ಕನ್ನಡವು ।
ಕನಸು ಮನಸಿನೊಳು ಕನ್ನಡ ಕನ್ನಡ ಸಿದ್ಧಿಯು ಕನ್ನಡವು।
ಕಿನಸು ಕನ್ನಡವು ಜೀವಿತ ಕನ್ನಡ ಎಲ್ಲವು ಕನ್ನಡವು ॥
—ಅಂದಾನಪ್ಪ ದತ್ತ

ಕರ್ನಾಟಕ ಏಕೀಕರಣ ಸಭೆಯ ವ್ಯವಸ್ಥಾಪಕ ಮಂಡಳಿಯಲ್ಲಿ ಕೆಳಗೆ ಕಾಣಿಸಿದ ಠರಾವುಗಳು ಪಾಸಾದವು.

(೧) ಮುಂಬೈ ಮದ್ರಾಸ ಇಲಾಖೆಗಳಲ್ಲಿಯ ಜಿಲ್ಲೆಗಳಲ್ಲಿಯೂ ಹೈದರಾಬಾದ ಸಂಸ್ಥಾನದಲ್ಲಿಯೂ, ಕನ್ನಡ ಮಾತನಾಡುವ ಹಳ್ಳಿ ತಾಲೂಕಗಳು ಯಾವವೆಂಬುದನ್ನು ಗೊತ್ತು ಹಚ್ಚಬೇಕು. ಮುಂಬೈ ಸರಕಾರದಿಂದ ಈ ಬಗ್ಗೆ ದೊರಕಿಸಬಹುದಾದ ಎಲ್ಲ ಸಂಗತಿಗಳನ್ನು ಶ್ರೀ ಕಂಬಳೀ ಮತ್ತು ಜೋಗ ಇವರು ದೊರಕಿಸಬೇಕು. ಮದ್ರಾಸ ಕೌನ್ಸಿಲ್ಲಿನಿಂದ ದೊರಕಿಸಬಹುದಾದ ಎಲ್ಲ ಸಂಗತಿಗಳನ್ನು ದೊರಕಿಸಲು ಮದ್ರಾಸದ ಲೆಜಿಸ್ಲೇಟಿವ್ಹ ಕೌನ್ಸಿಲದಾರರಿಗೆ ಈ ಮಂಡಳಿಯು ಪ್ರಾರ್ಥಿಸುತ್ತದೆ. ಸರಕಾರದ ಸಹಾಯವಿಲ್ಲದೆ ದೊರಕಿಸಬಹುದಾದ ಸಂಗತಿಗಳನ್ನು ಕಾರ್ಯದರ್ಶಿಗಳು ದೊರಕಿಸಬೇಕು.

(೨) ಈ ಸಭೆಯ ಕೆಲಸಕ್ಕೆ ಬೇಕಾಗುವ ದ್ರವ್ಯವನ್ನು ಕೂಡಿಸಲು ಕೆಳಗಿನ ಸದ್ಗೃಹಸ್ಥರ ಜಿಲ್ಹಾ ಕಮಿಟಿಗಳನ್ನು ಸ್ಥಾಪಿಸಿದೆ.

ಮದ್ರಾಸ-(೧) ವಾ. ಯೂ. ರಾಮರಾವ ಎಮ್. ಎಲ್ ಸಿ.

ಮುಂಬಯಿ— (೧) ಆರ್. ವಿ. ಜಹಗಿರದಾರ ಎಮ್. ಎ. ಎಲ್. ಎಲ್ ಬಿ.

ಧಾರವಾಡ(೧) ಶ್ರೀ ಕಂಬಳೀ ಎಮ್ ಎಲ್ ಸಿ. (೨) ಶ್ರೀ ಜೋಗ ಎಮ್ ಎಲ್ ಸಿ (೩) ರಾ. ಬಾ. ಪಾಟೀಲ ಬಿ.ಎ. ಎಲ್.ಎಲ್ ಬಿ (೪) ಶ್ರೀ ಕಾಪಾ ರಾಘವೇಂದ್ರರಾವ (೫) ಶ್ರೀಹಿರೇಮಠ ಎಸ್ ಬಿ,

ಬೆಳಗಾವಿ (೧) ಶ್ರೀನಿವಾಸರಾವ ಕೌಜಲಗಿ (೨) ರಾ. ಸಾ. ವಳಕಟ್ಟಿ (೩) ಶ್ರೀಕಂಠ ನಿಂಗಪ್ಪಾ ಸರದೇಸಾಯಿ ರಕ್ಕಸಗಿ. ಎಮ್ ಎಲ್ (೪)ಶ್ರೀನಿವಾಸ ರಾಜೇರಾವ ಮಂಗಳವೇಢೆ.

ಕಾರವಾರ—(೧) ಮಂಜುನಾಥ ಭಟ್ಟಿಕರ್ತಿ ಎಮ್, ಎಲ್ ಸಿ (೨) ಶ್ರೀ ಪಾಟೀಲ ಎಮ್ ಎಲ್ (೩) ಆರ್ ಎಸ್ ಕಲ್ಯಾಣಪೂರಕರ (೪) ಗಣೇಶ ರಾಮ ದೇಸಾಯಿ ಹಿಂದ ದಕ ಕಾನಡಾ ಧುರೀಣ

ವಿಜಾಪುರ— (೧) ರಾ. ಬಾ. ಚನ್ನಪ್ಪಾವೇ ಬಾಬಾಜೇ ಲಕ್ಷ್ಮೀ. (೨) ಪಂಡಿತಪ್ಪಾ ಚಿಕ್ಕೋಡಿ (೩) ಎಸ್ ಎಸ್ ಅಂಗಡಿ ಎಮ್ ಎಲ್ ಸಿ. (೪) ವಾ. ಸವನೂರ ಹಣಮಂತರಾವ (೫) ಆರ್ ಬಿ. ಕುಲಕರ್ಣಿ.

ಬಳ್ಳಾರಿ- (೧) ಪಿ. ಧಿ ಮರಾವ ಬಿ. ಎಲ್ (೨) ಕೇ. ಗುರುರಾಜರಾವ ಬಿ. ಎ. ಬಿ. ಎಲ್.

ಮಂಗಳೂರು- (೧) ಎಸ್ ರಾಜಗೋಪಾಳ ಕೃಷ್ಣರಾವ ಉಡುಪಿ (೨) ಬಿ. ವಿಠ್ಠಲರಾವ ಸಂಪಾದಕರು ಕಂಠೀರವ. (೩) ಎ. ಬಿ. ಶೆಟ್ಟೀ ಸಂಪಾದಕ ನವಯುಗ.

ಬೆಂಗಳೂರು- (೧) ಡಾ. ಸೀ. ಬಿ. ರಾಮರಾವ (೨) ಶ್ರೀ ಎಸ್ ಎಸ್. ಸೆಟ್ಲೂರ (೩) [illegible]ೀ. ಶರ್ಮಾ.

ಅವಶ್ಯವಿದ್ದಲ್ಲಿ ಇನ್ನೂ ಹೆಚ್ಚಾಗಿ ಸದಸ್ಯರನ್ನು ಸೇರಿಸಿಕೊಳ್ಳಲು ಈ ಕಮೀಟಿಗಳಿಗೆ ಅಧಿಕಾರವಿದೆ.

(೩) ಈ ಸಭೆಯ ಬಗ್ಗೆ ಕಳಕಳಿಯುಳ್ಳವರೆಲ್ಲ ಆದಷ್ಟು ಬೇಗನೇ, ತಮ್ಮ ಯೋಗ್ಯತೆಯ ಪ್ರಕಾರ ದ್ರವ್ಯ ಸಹಾಯವನ್ನು ಬೇಡಲು ಯಾರಾದರೂ ತಮ್ಮ ಕಡೆಗೆ ಬರಬೇಕಾಗಿ ಹಾದಿ ನೋಡದೆ ಈ ಸಭೆಯ ಕಾರ್ಯದರ್ಶಿಗಳಾದ ಶಿವಮೂರ್ತಿ ಸ್ವಾಮಿ ಹಿರೇಮಠ ಬಿ ಎ ಎಲ್ ಎಲ್ ಬಿ, ವಕೀಲ ಹಾವೇರಿ ಇವರ ಕಡೆಗಾಗಲಿ, ಶ್ರೀ ಶ್ರೀನಿವಾಸ ರಾಜೇರಾವ ಮಂಗಳವೇಢೆ, ಸಂಪಾದಕ 'ಕನ್ನಡಿಗ' ಬಾಗಲಕೋಟೆ ಇವರ ಕಡೆಗಾಗಲೀ ಕಳಿಸಬೇಕೆಂದು ಎಲ್ಲ ಕನ್ನಡ ವೃತ್ತಪತ್ರಿಕೆಗಳಲ್ಲಿಯೂ ಒಂದು ವಿನಂತಿ ಪತ್ರವನ್ನು ಕಾರ್ಯದರ್ಶಿಗಳು ಪ್ರಸಿದ್ಧಿಸಬೇಕು.

(೪) ಶ್ರೀ. ವಾಮನ ರಾವ ಹಾವನೂರ ಪಾಟೀಲ, ಶ್ರೀ ಹಿರೇಮಠ ಮತ್ತು ಮಂಗಳವೇಢೇಯವರು ಕರ್ನಾಟಕದಲ್ಲೆಲ್ಲ ಸಂಚರಿಸಿ ಏಕೀಕರಣದ ಬಗ್ಗೆ ಜನರಲ್ಲಿ ಜಾಗೃತಿಯನ್ನುಂಟು ಮಾಡುತ್ತ ಸಭಾಸದರನ್ನು ಹೆಚ್ಚಿಸಬೇಕು. ಮತ್ತು ಹಣವನ್ನು ಕೂಡಿಸಬೇಕಾಗಿ ವಿನಂತಿಸುವದು, ಈ ಕಾರ್ಯದಲ್ಲಿ ತಮಗೆಲ್ಲ ಸಹಾಯ ಮಾಡಲು ಈ ಕಮೀಟಿಯವರು ಶ್ರೀ ಮುದವೇಡಕರ ಕೃಷ್ಣರಾಯರಿಗೆ ಪ್ರಾರ್ಥಿಸಬೇಕು.

(೫) ಈ ಸಭೆಯ ವ್ಯವಸ್ಥಾಪಕ ಮಂಡಳಿಯೂ, ಸ್ಟ್ಯಾಂಡಿಂಗ ಕಮೀಟಿಯೂ ಮೇ ತಿಂಗಳ ೯ ೧೦ ೧೧ ತಾರೀಖುಗಳಲ್ಲಿ ಬೆಳಗಾವಿಯಲ್ಲಿ ಜರಗುವ ಸಾಹಿತ್ಯ ಸಮ್ಮೇಲನದ ಕಾಲಕ್ಕೆ ಬೆಳಗಾವಿಯಲ್ಲಿಯೇ ಕೂಡಬೇಕು.

ಕನ್ನಡಿಗರಿಗೆ ಇದು ಭೂಷಣವಲ್ಲ-ಕೆಳದಿ ಬಸವರಾಜನು **ಕಾರವಾರ ಜಿಲ್ಹೆಯಲ್ಲಿ ೧೬೯೭ ರಿಂದ ೧೭೧೪ರ ವರೆಗೆ ರಾಜ್ಯವಾಳಿದನು. ಇವನು ಪ್ರಖ್ಯಾತ ರಾಜನಾಗಿದ್ದನಲ್ಲದೆ ಅಪ್ರತಿಮ ಪಂಡಿತ**

ನಾಗಿದ್ದನು. ಇವನು ಸ್ವತಃ ದೊಡ್ಡ ಕವಿಯು. ೧೫೦೦೦ ಇಸ್ವಿಯಲ್ಲಿ ಸಂಸ್ಕೃತದಲ್ಲಿ "ಶಿವತತ್ವರತ್ನಾಕರ"ವೆಂಬದೊಂದು ಕಾವ್ಯವನ್ನು ರಚಿಸಿರುವನು. ಇದರಲ್ಲಿ ೧೫೦೦೦ ಶ್ಲೋಕಗಳಿವೆ. ಇದೊಂದು ದೊಡ್ಡ ವಿಶ್ವಕೋಶವೆಂಬುದನ್ನು ಕೇಳಿ ಕನ್ನಡಿಗರು ಆಶ್ಚರ್ಯಚಕಿತರಾಗಬಹುದು! ಧರ್ಮ, ತತ್ವಜ್ಞಾನ, ಇತಿಹಾಸ, ವಾಙ್ಮಯ, ಶಾಸ್ತ್ರೀಯ ವಿಷಯ, ಲಲಿತಕಲೆ, ಇವೇ ಮೊದಲಾದ ವಿಷಯಗಳು ಈ ಕಾವ್ಯದಲ್ಲಿ ಅಡಕವಾಗಿವೆ. ಪೌರ್ವಾತ್ಯ ಸಂಸ್ಕೃತಿಯ ಕೋಶವೇ ಇದು! ಇಂಥ ಅಸಾಮಾನ್ಯ ಬುದ್ಧಿ ಸಾಮರ್ಥ್ಯವುಳ್ಳ ಕನ್ನಡರಾಜನು ಬರೆದ ಕಾವ್ಯವು ಒಂದು ಮೂಲೆಗುಂಪಾಗಿತ್ತು. ಈಗ್ಗೆ ಮದ್ರಾಸಿನ ನಮ್ಮ ಕನ್ನಡ ಭಕ್ತರಾದ ಶ್ರೀ. ವಿ. ರಾಮಶಾಸ್ತ್ರಿ ಬಹು ಪರಿಶ್ರಮಪಟ್ಟು ಈ 'ಶಿವತತ್ವ ರತ್ನಾಕರ' ಗ್ರಂಥವನ್ನು ಮೂರು ಭಾಗಗಳಲ್ಲಿ ಸಿದ್ಧ ಪಡಿಸಿರುವರು. ಇನ್ನೊಂದು ಭಾಗವು ಕೂಡಲೇ ಪ್ರಕಟಿಸಲ್ಪಡುವದು. ಆದರೆ-ನೋಡಿ ಆದರೆ ಏನಾಯಿತು! ಈ ಪರಿಶ್ರಮಕ್ಕೆ ಪ್ರೋತ್ಸಾಹವಿಲ್ಲ! ಕನ್ನಡಿಗರು ಇನ್ನೂ ನಿದ್ರೆಯಲ್ಲಿಯೇ ಇರುವರು! ಇದು ಕನ್ನಡಿಗರಿಗೆ ಭೂಷಣವಲ್ಲ.

ವೀರಶೈವರಿಗಂತೂ ಮೊದಲು ಭೂಷಣವಲ್ಲ'- ವಿ ಎಸ್. ನಾಥ ಮತ್ತು ಕೆಂಪನಿ ಚೆನ್ನ ಮದರಾಸ ಇವರು ಈ 'ಶಿವತತ್ವ ರತ್ನಾಕರ' ಗ್ರಂಥವನ್ನು ಪ್ರಸಿದ್ಧ ಪಡಿಸಿರುವರು. ೧೦೦೦ರೂ.ಗಳನ್ನು ವೆಚ್ಚ ಮಾಡಿದರೆ ಈ ಮಹಾ ಗ್ರಂಥದ ಎಲ್ಲ ಭಾಗಗಳೂ ಕನ್ನಡಿಗರ ಕೈಸೇರುವವು; ಕನ್ನಡಿಗರಾದ ಜನಸಾಮಾನ್ಯರು ಇನ್ನೂ ನಿದ್ರೆಯಲ್ಲಿದ್ದರೂ ಈ ಕಾರ್ಯದಲ್ಲಿ ವೀರಶೈವ ಕನ್ನಡಿಗರು ಮುಂದುವರಿದು ಉಳಿದ ಕನ್ನಡಿಗರನ್ನು ಜಾಗೃತೆಯಿಂದ ಎಚ್ಚರಿಸಿ ಈ ಗ್ರಂಥಗಳನ್ನು ಪ್ರಸಿದ್ಧಪಡಿಸಿದವರಿಗೆ ಮೊದಲು ಸಹಾಯ ಮಾಡಬೇಕು. ಪ್ರತಿಯೊಬ್ಬ ವೀರಶೈವನಂತೂ ಈ ಗ್ರಂಥವನ್ನು ಸಂಗ್ರಹಿಸಲೇಬೇಕು. ರಾಜನೂ, ಅಪ್ರತಿಮ ಪಂಡಿತನೂ ಆದ ಬಸವರಾಜನು ವೀರಶೈವನು ಅನ್ಯಮತೀಯರನ್ನು ದೂಷಿಸುವ ವಿಷಯದ ಕಲ್ಪನೆ ಕೂಡ ಇದರಲ್ಲಿ ಇಲ್ಲ. ಈ ವೀರಶೈವನ ಗ್ರಂಥಕ್ಕೆ ಮೊದಲು ವೀರಶೈವರೇ ಆದರಭಾವವನ್ನು ತೋರ್ಪಡಿಸದಿದ್ದರೆ. ಅದು ಈಗಿನ ವೀರಶೈವರ ಹೊಸ ಜಾಗ್ರತೆಗೆ ಭೂಷಣವಲ್ಲ. ಈ ಗ್ರಂಥದ ೫೦೦ ಪ್ರತಿಗಳು ಮಾತ್ರ ಮುದ್ರಿಸಲ್ಪಟ್ಟಿವೆ. ೪೦ಲಕ್ಷ ವೀರಶೈವರಲ್ಲಿಯೂ,೧ ಕೋಟಿ ಕನ್ನಡಿಗರಲ್ಲಿಯೂ ಈ ಗ್ರಂಥವನ್ನು ಕೊಳ್ಳುವಂಥ ೫೦೦ ಜನರು ಸಹ ಸಿದ್ಧರಾಗಬಾರದೆಂದರೆ ಕನ್ನಡಿಗರಿಗೂ ವೀರಶೈವರಿಗೂ ಕೂಡಿಯೇ ಲಾಂಛನಾಸ್ಪದವು!

ಕರ್ನಾಟಕದ ಕುರುಬರಸಂಘದ ಕಾರ್ಯದರ್ಶಿಗಳು ತಮ್ಮ ಸಂಘದ ಪ್ರಗತಿಯ ಬಗ್ಗೆ ಒಂದು ವರದಿಯನ್ನು ನಮ್ಮ ಕಡೆಗೆ ಕಳಿಸಿರುವರು. ಈ ಸಂಘಕ್ಕಾಗಿ ಈಗ್ಗೆ ಒಟ್ಟು ೫೦೦೦ ರೂ ಗಳು ಕೂಡಿವೆ. ಈ ಹಣವನ್ನು ಗದಗಿನ ಸೊಸಾಯಿಟಿಯಲ್ಲಿಟ್ಟಿರುವರು. ಶ್ರೀ ಧವಾಪೂರ ಡಿ.ಪಿ ಕಲಿಕ್ಟರ ಇವರು ಈ ಸಂಘಕ್ಕೆ ಸಹಾಯ ಮಾಡಿರುವರು. ರೋಣ ತಾಲೂಕಿನಲ್ಲಿ ಈ ಸಂಘದವರು, ಕುಲಕರ್ಣಿ ತಲಾಠೀ ಜನರ ಸಲುವಾಗಿ ಒಂದು ವರ್ಗವನ್ನು ಬೇಗನೆ ತಗೆಯುವವರಿದ್ದಾರೆ. ಈ ಸಂಘದಿಂದ ಸಹಾಯ ಪಡೆದವರಲ್ಲಿ ೫೦-೬೦ ಜನರು ಇಂಗ್ಲೀಷ ಶಾಲೆಯಲ್ಲಿದ್ದಾರೆ. ೭-೮ ಜನ ವಿದ್ಯಾರ್ಥಿಗಳು ಮ್ಯಾಟ್ರಿಕ್ ಪರೀಕ್ಷೆಗೆ ಹೋಗಿರುವರು ಒಬ್ಬರು ಬಿ ಎ. ಪರೀಕ್ಷೆಗೆ ಕೂತಿದ್ದಾರೆ. ವಿದ್ಯಾರ್ಜನೆಯ ಬಗ್ಗೆ ಸ್ತುತ್ಯ ಪ್ರಯತ್ನಗಳು ನಡೆದಿವೆ. ಈ ವಿದ್ಯಾರ್ಜನೆಯ ಪ್ರಯತ್ನಗಳ ಜೊತೆಗೆ, ಕುರುಬರ ಹಿಂದಿನ ಇತಿಹಾಸ, ಸಂಸ್ಕೃತಿ. ಹಿಂದಿನ ಸಮಾಜದ ಸ್ಥಿತಿ ಈಗಿನ ಸಮಾಜದ ಸ್ಥಿತಿ ಇವುಗಳ ಬಗ್ಗೆ ಗ್ರಂಥಗಳನ್ನು ಪ್ರಸಿದ್ಧಿಸಿ ಸಂಘದ ಕಾರ್ಯವನ್ನು ವಿಸ್ತರಿಸುತ್ತ ಹೋಗಬೇಕಾಗಿ ಈ ಸಂಘದವರಿಗೆ ಆಗ್ರಹಪೂರ್ವಕವಾಗಿ ಸೂಚಿಸುತ್ತೇವೆ. ಕರ್ನಾಟಕದ ಪ್ರತಿಯೊಬ್ಬ ಕುರುಬನು ಈ ಸಂಘದ ಸಭಾಸದನಾಗಿ, ಇದಕ್ಕೆ ಎಲ್ಲರೀತಿಯಿಂದಲೂ ಸಹಾಯ ಮಾಡಬೇಕು

ಹೊಸಪೇಟೆಮೊದಲಾದ ತಾಲೂಕಗಳಲ್ಲಿ ಸರಕಾರದವರು ಭೂಮಿಯ ತೆರಿಗೆಯನ್ನು ಹೆಚ್ಚಿಸಬೇಕೆಂದಿರುವರು. ೩-೪ ವರ್ಷಗಳಿಂದ ಮಳೆ ಯಿರದ್ದರಿಂದಲೂ, ರೈತರು ಬಹು ತೊಂದರೆಯಲ್ಲಿರುವದರಿಂದಲೂ, ಈಗಿದ್ದ ತೆರಿಗೆಯೇ ಹೆಚ್ಚಾಗಿದ್ದರಿಂದಲೂ ಇನ್ನು ಮೇಲೆ ಅದನ್ನು ಹೆಚ್ಚಿಸಬಾರದೆಂದು ಹೊಸಪೇಟೆಯ ತಾಲೂಕಿನ ಜನರದೊಂದು ಸಭೆಯಾಗಿ ಸರಕಾರದವರಿಗೆ ಅಪ್ರಕಾರದ ಠರಾವುಗಳು ಕಳಿಸಲ್ಪಟ್ಟಿವೆ. ಸಾಲಗಾರ ಸರಕಾರಕ್ಕೆ ಎಷ್ಟು ಹಣವಾದರೂ ಸಾಲದು! ಕಂದಾಯದ ಹಣ ಹೆಚ್ಚಾಗಬೇಕು, ಆಸ್ತಿಯಮೇಲಿನ ಕರವು ಹೆಚ್ಚಾಗಬೇಕು, ಜೋಲಿನ ಉತ್ಪನ್ನ ಹೆಚ್ಚಬೇಕು, ಸೆರೆ ಕುಡಿಯುವವರು ಹೆಚ್ಚಾಗಬೇಕು ಎಲ್ಲ ತೆರಿಗೆಯೂ ಹೆಚ್ಚಾಗಬೇಕು. ಏಕೇ ಬಗಲಿ ಸರಕಾರಕ್ಕೊಂದು ಉತ್ಪನ್ನ ಬೆಳೆದರಾಯಿತು! ಪ್ರಜೆಗಳಿದ್ದರೇನು? ಉಪವಾಸಬಿದ್ದು ಸತ್ತರೇನು? ಇದು ಈಗಿನ ರಾಜರ ಲಕ್ಷಣವು!

ಚಿತ್ತರಂಜನ ದಾಸರವರ ತೆಗೆದ ಜಾಹೀರ ಪತ್ರಿಕೆಯು ಇಷ್ಟೊಂದು ಮಹತ್ವದ್ದೆಂಬುದು ಮೊದಲು ತಿಳಿದಿರಲಿಲ್ಲ. ನಾವು ಕಳೆದವಾರದಲ್ಲಿ ಪ್ರಕಟಿಸಿದ ಶ್ರೀ ದಾಸರವರ ಪತ್ರವು ಪ್ರಕಟವಾದ ಕೂಡಲೇ ಇಲ್ಲಿಯ ಸರಕಾರೀ ಪಕ್ಷದ ಗೌರಕಾಯದ ವೃತ್ತಪತ್ರಕಾರರು ದಾಸಬಾಬೂರವರನ್ನು ಕೊಂಡಾಡಿರುವರು! ಅತ್ತ ವಿಲಾಯತಿಯಲ್ಲಿ, ಹಿಂದುಸ್ಥಾನದ ಮಂತ್ರಿಗಳಾದ ಬರ್ಕನ್ ಹೆಡ್ಡರವರಿಗಾನಂದವಾಗಿದೆ. ಕಾರ್ಪೊರೇಶನ ಸಭಾಸದರು ದಾಸಬಾಬೂರವರಿಗೂ ಮಹಾತ್ಮಾ ಗಾಂಧಿಯವರಿಗೂ ವಿಲಾಯತಿಗೆ ಬರಲು ಆಮಂತ್ರಣ ಕೊಡಬೇಕೆಂಬುವಾಗಿ ಕೇಳಿದ್ದಾರೆ. ಇತ್ತ ಲಾರ್ಡ ರೀಡಿಂಗ ವಾಯಿಸರಾಯರು ಹಿಂದುಸ್ಥಾನದ ರಾಜಕೀಯ ಪ್ರಶ್ನೆಗಳನ್ನು ವಿಚಾರಿಸುವದಕ್ಕಾಗಿ ವಿಲಾಯತಿಗೆ ಹೊರಟಿದ್ದಾರೆ. ಪಂಚಮ ಜಾರ್ಜರು ಹಿಂದುಸ್ಥಾನಕ್ಕೆ ಬರುವರೆಂಬ ಸುದ್ದಿ. ಹೀಗಾಗಿ ರಾಜಕೀಯ ವಾತಾವರಣದಲ್ಲಿ ಒಮ್ಮಿಂದೊಮ್ಮೆ ಗೊಂದಲವೆದ್ದಿದೆ. ಒಳಗಿನ ತಂತ್ರಗಳೇನಿದ್ದರೂ ಸರಿ ಸರಕಾರವು ಹಿಂದುಸ್ಥಾನಕ್ಕೆ ಮತ್ತೆ ಕೆಲವು ಸುಧಾರಣೆ(?)ಗಳನ್ನು ಕೊಡುವವರಿದ್ದರೆ, ಒಂದು ಮಾತನ್ನು ಲಕ್ಷ್ಯದಲ್ಲಿಡಬೇಕು. ನಾಯಿಗೆ ತುಣುಕು ರೊಟ್ಟಿಯನ್ನು ಒಗೆದು ಸಮಾಧಾನ ಮಾಡುವಂತೆ, ನಮ್ಮ ರಾಜಕೀಯ ಆಕಾಂಕ್ಷೆಗಳನ್ನು ಕೇವಲ ಸುಧಾರಣೆಯ ತುಣುಕಗಳಿಂದ ಪೂರೈಸುವದಿದ್ದರೆ, ಎಷ್ಟತ್ತ ಹಿಂದುಸ್ಥಾನವು ಎಂದಿಗೂ ಸಮಾಧಾನ ಹೊಂದದು. ಸಂಪೂರ್ಣ ಸ್ವರಾಜ್ಯವೊಂದೇ ರಾಜಮಾರ್ಗವು.

ಕರ್ನಾಟಕ ಸಾಹಿತ್ಯಸಮ್ಮೇಲನವು ಈ ಸಾರೆ ಬೆಳಗಾವಿಯಲ್ಲಿ ನೆರೆಯುವದು. ಬೆಳಗಾವಿ ಬಳ್ಳಾರಿಗಳಂಥ ಗಡಿನಾಡುಗಳಲ್ಲಿ ಸಮ್ಮೇಲನವು ಕೂಡುವದು ಅವಶ್ಯಕ. ಇದರಿಂದ ಅಲ್ಲಿಯ ಜನರಲ್ಲಿ ಜಾಗ್ರತೆಯಾಗಲು ಮಾರ್ಗವಾಗುತ್ತದೆ. ಬೆಳಗಾವಿಯಲ್ಲಿ ಕನ್ನಡ ಭಕುತರು ಕಡಿಮೆ. ಮರಾಟಿಯ ಕಡೆಗೆ ಜನರ ಒಲವು ಹೆಚ್ಚಾಗಿದೆ. ಆದ್ದರಿಂದ ಈ ಸಾರೆಯ ಸಮ್ಮೇಲನವನ್ನು ಅತಿ ವೈಭವದಿಂದ ಜರುಗಿಸಿ ಮರಾಟಿಗರಲ್ಲಿ ಕನ್ನಡದ ಬಗ್ಗೆ ಇದ್ದ ತಿರಸ್ಕಾರ ಭಾವವು ಅಳಿದು ಹೋಗುವಂತೆ ಏರ್ಪಾಡು ಮಾಡಬೇಕೆಂಬುದನ್ನು ಬೆಳಗಾಂವಿಯ ಕನ್ನಡದ ಅಭಿಮಾನಿಗಳು ಚನ್ನಾಗಿ ಅರಿತಂತೆ ಕಾಣುತ್ತದೆ. ಅಂತೆಯೇ ಎಲ್ಲ ರೀತಿಯಿಂದಲೂ ಯಶಸ್ವಿಯಾಗುವಂತೆ ಉತ್ಸಾಹದಿಂದ ಕೆಲಸ ನಡಿಸಿರುವರು. ಸಂತೋಷ! ಆದರೆ ಉತ್ತರ ಕರ್ನಾಟಕದ ರಾಜಕೀಯ ಮುಖಂಡರಿಗೆ ಈ ಸಂತೋಷದ ವಿಷಯವು ಗೊತ್ತಾಗುವದೋ ಅಥವಾ ರಾಜಕಾರಣ ಪಟುಗಳಾದ ನಮಗೆ ಭಾಷೆಯ ವಿಚಾರವೇಕೆಂದು ಔದಾಸೀನ್ಯವನ್ನು ತೋರ್ಪಡಿಸುವರೋ ನೋಡಬೇಕು. ಲೋಕಮಾನ್ಯರೂ, ಮಹಾತ್ಮರೂ' ರಾಜಕಾರಣ ಪಟುಗಳ ಅಗ್ರೇಸರರು ಭಾಷೆಯು ರಾಷ್ಟ್ರದ ಜೀವಾಳವೆಂಬುದಕ್ಕೆ ಇವರು ಅನುಭೂತಿಗಳು ಅನ್ಯಾಸ ಪ್ರಕಾರವಾಗಿ ತಮ್ಮ ಮಾತೃಭಾಷೆಯ ಪೋಷಕರಾಗಿರುವರೆಂಬುದನ್ನು ಅವರ ಅನುಯಾಯಿಗಳಾದ ನಮ್ಮ ಉತ್ತರ ಕರ್ನಾಟಕದ ರಾಜಕೀಯ ಮುಖಂಡರು ಲಕ್ಷ್ಯದಲ್ಲಿಡಬೇಕು.

ಏಕೀಕರಣವೇ ನಮ್ಮ ಜೀವನವು.

(ಲೇಖಕ ಪೋತದಾರ ಹಣಮಂತರಾಯರು.)

ಪರಮಾತ್ಮನ ವ್ಯಕ್ತಸ್ವರೂಪವೇ ಈಸೃಷ್ಟಿಯು. ಈಸೃಷ್ಟಿಯು ಪುನಃ ಪರಮಾತ್ಮನಲ್ಲಿ ಲೀನವಾಗುವದೇ ಈ ಸೃಷ್ಟಿಯ ಅಂತಿಮ ಧ್ಯೇಯವು. ಪರಮಾತ್ಮನ ಕಡೆಗೆ ಸಾಗಿ ಹೋಗುವ ಮಾರ್ಗವನ್ನು ತೋರಿಸಿ ಆ ಮಾರ್ಗವನ್ನು ಸುಗಮವಾಗಿ ಮಾಡುವಂಥವು ಆ ಚಾರ ವಿಚಾರಗಳೂ ನಡೆನುಡಿಗಳೂ ಕರ್ಮಗಳೂ ಶ್ರೇಷ್ಠ ವಾದವುಗಳು ಮನುಷ್ಯನು ಮೊದಲಿನ ಜನ್ಮದಲ್ಲಿ ಮಾಡಿದ ಕೆಲಸವನ್ನು ಎರಡನೇ ಜನ್ಮದಲ್ಲಿ ಮುಂದೆ ಸಾಗಿಸುತ್ತಾನೆ ಅವನ ಆಚಾರ ವಿಚಾರಗಳೂ ಅವನ ಕರ್ಮವೂ ಅವನ ಸೂಕ್ಷ್ಮ ಶರೀರದ ಕೂಡ ಮರು ಜನ್ಮದಲ್ಲಿ ಸೇರುತ್ತವೆ. ಅವನ ಮನೋ ಒಲವು ಹಿಂದಿನ ಜನ್ಮದ ಸಂಸ್ಕೃತಿಯನ್ನು ಬಿಟ್ಟು, ಅತ್ತಿತ್ತ ಹರಿದಾಡುವ ದಿಲ್ಲ. ಅದ್ದರಿಂದ ಕೆಲವು ವಿಶಿಷ್ಟ ಗುಣಗಳು ಮನುಷ್ಯನ ಮುಕ್ತಿ ಯಾಗುವ ವರೆಗೆ ಅವನ ಬೆನ್ನು ಹತ್ತಿರುತ್ತವೆ. ವ್ಯಕ್ತಿಗೆ ಕರ್ಮ ನೆಂಬ ವಿಶಿಷ್ಟ ಸಂಸ್ಕೃತಿಯು ಅಂಟಿಕೊಂಡಿರುವಂತೆ, ಪ್ರತಿಯೊಂದು ರಾಷ್ಟ್ರಕಕ್ಕೆಗಳಿಗೆ, ಪ್ರಾಂತಕಕ್ಕೆಗಳಿಗೆ, ಒಂದು ವಿಶಿಷ್ಟವಾದ ಸಂಸ್ಕೃತಿಯು ಇರುತ್ತದೆ. ಕರ್ಮವನ್ನು ಮಾಡುತ್ತಲೆ, ಕರ್ಮ ಬಂಧನ ದಿಂದ ಮನುಷ್ಯನು ಮುಕ್ತನಾಗುತ್ತಾನೆ. ಅದರಂತೆ ರಾಷ್ಟ್ರವು ತನ್ನ ಸಂಸ್ಕೃತಿಯನ್ನು ಬಲಪಡಿಸುತ್ತಲೇ ಆಧ್ಯಾತ್ಮಿಕ ಸ್ಥಿತಿಯನ್ನು ಮುಟ್ಟುತ್ತದೆ. ಜಗತ್ತಿನಲ್ಲಿಯ ಎಲ್ಲ ರಾಷ್ಟ್ರಗಳು ತಮ್ಮ ತಮ್ಮ ಸಂಸ್ಕೃತಿಯನ್ನು ಬೆಳೆಸಿಕೊಂಡು ಆಧ್ಯಾತ್ಮಿಕ ಸ್ಥಿತಿಯನ್ನು ಎಂದು ಮುಟ್ಟುವವೋ ಅಂದೇ ಈ ಜಗತ್ತಿನಲ್ಲಿ ಆಧ್ಯಾತ್ಮಿಕ ಸುಖ ಸಾಮ್ರಾಜ್ಯವು ನೆಲೆಗೊಳ್ಳುವದು. ಆ ಯುಗಕ್ಕೆ ನಮ್ಮ ಪುರಾಣಗಳಲ್ಲಿ ಸತ್ಯಯುಗವೆಂಬ ಹೆಸರು. ಈ ಸತ್ಯ ಯುಗವನ್ನು ಸ್ಥಾಪಿಸಲಿಕ್ಕೆ ನಮ್ಮ ರಾಷ್ಟ್ರವೊಂದೇ ಯೋಗ್ಯವಾದದ್ದು. ಈಗ ಭರತ ಖಂಡದಲ್ಲಿ ಪರಮಾತ್ಮನು ಸತ್ಯ ಯುಗವನ್ನು ನಮ್ಮ ರಾಷ್ಟ್ರದ ಮುಖಾಂತರವಾಗಿ ಸ್ಥಾಪಿಸುತ್ತಾನೆಂಬುದರಲ್ಲಿ ನಮ್ಮ ವಿಶ್ವಾಸವಿದೆ. ಈ ಕಾರ್ಯವನ್ನು ನೆರವೇರಿಸುವದಕ್ಕೆ ಸ್ವಾತಂತ್ರ್ಯವು ಅವಶ್ಯವಾದದ್ದು. ಅದ್ದರಿಂದ ಈ ಸ್ವಾತಂತ್ರ್ಯಕ್ಕಾಗಿ ಹೆಣಗಾಡುವದರಿಂದ ಪರಮಾತ್ಮನ ಕಾರ್ಯಕ್ಕೆ ಸಹಾಯಮಾಡಿದಂತಾಗುತ್ತದೆಂಬುದು ಒಡೆದು ಕಾಣುತ್ತದೆ. ನಮ್ಮ ದೇಶವು ಸ್ವತಂತ್ರವಾಗ ಬೇಕಾದರೆ ನಮ್ಮ ಸಂಸ್ಕೃತಿಯು ಉದ್ಧಾರವಾಗಲಿಕ್ಕೇ ಬೇಕು. ಹಿಂದೀ ರಾಷ್ಟ್ರದ ಸಂಸ್ಕೃತಿಯೆಂದರೆ ಹಿಂದುಸ್ಥಾನದಲ್ಲಿಯ ಪ್ರಾಂತಗಳ ಭಿನ್ನ ಭಿನ್ನ ಸಂಸ್ಕೃತಿಯ ಸಾರವು. ಆಯಾ ಪ್ರಾಂತಗಳ ಸಂಸ್ಕೃತಿಯನ್ನು ಕಾಯ್ದು ಅದನ್ನು ಪೋಷಿಸುವದರಿಂದಲೇ ಹಿಂದೀ ಸಂಸ್ಕೃತಿಗೆ ಬಲ ಬರುತ್ತದೆ. ಶರೀರದಲ್ಲಿ ಯಾವದಾದರೊಂದು ಅಂಗವು ವ್ಯಂಗವಾಯಿತೆಂದರೆ ಶರೀರದ ಶಕ್ತಿಯು ಹೇಗೆ ಕುಂಠಿತವಾಗುತ್ತದೋ ಅದರಂತೆ ನಮ್ಮ ಕರ್ನಾಟಕ ಸಂಸ್ಕೃತಿಯನ್ನು ನಾವು ತಾತ್ಸಾರ ಮಾಡಿದರೆ ಹಿಂದೀ ಸಂಸ್ಕೃತಿಯು ಕ್ಷೀಣವಾಗುವದು. ಆದ್ದರಿಂದ ನಮ್ಮ ಕರ್ನಾಟಕ ಸಂಸ್ಕೃತಿಯನ್ನು ಉದ್ಧಾರ ಮಾಡಬೇಕಾದರೆ ಒಡೆದು ಹೋಳು ಹೋಳಾದ ನಮ್ಮ ಪ್ರಾಂತವನ್ನು ಏಕೀಕರಣ ಮಾಡುವದು ಅವಶ್ಯಕ. ಈ ಎಲ್ಲ ವಿಚಾರಗಳನ್ನು ಲಕ್ಷ್ಯದಲ್ಲಿ ತಂದು ನೋಡಿದರೆ ಏಕೀಕರಣದ ಮಹತ್ವವು ವಾಚಕರಿಗೆ ಚನ್ನಾಗಿ ತಿಳಿಯುವದು.

ಪೂರ್ವ ಕಾಲದಲ್ಲಿ ನಮ್ಮ ಜನರು ಸಂಸ್ಕೃತಿಯ ಮಹತ್ವವನ್ನು ಅರಿತು ಅದು ನಾಶಗೊಳ್ಳದಂತೆ ಎಚ್ಚರ ವಹಿಸುತ್ತಿದ್ದರು. ಪರ ಸಂಸ್ಕೃತಿಯ ಆಘಾತವು ನಮ್ಮ ಸಂಸ್ಕೃತಿಗೆ ತಗಲಿದ್ದರಿಂದ ನಮ್ಮ ಘೋರ ಗತಿಯಾಗಿರುತ್ತದೆ. ಆದ್ದರಿಂದ ನಮ್ಮ ಸಂಸ್ಕೃತಿಯ ಉದ್ಧಾರ ಮಾಡಿಕೊಳ್ಳತಕ್ಕದ್ದು. ಸಂಸ್ಕೃತಿಯ ಉದ್ಧಾರಕ್ಕೆ ನಮ್ಮ ಏಕೀಕರಣವೇ ತಳಹದಿಯು. ಅದೇ ನಮ್ಮ ಪ್ರಾಣವು, ಅದೇ ನಮ್ಮ ಜೀವನವು.

—[illegible]

(೬ ನೇ ಪುಟದಿಂದ ಮುಂದೆ ಸಾಗಿದ್ದು)

'ಇಲ್ಲ. ನಾನು ನಿಮ್ಮಂಥವರ ಸಲುವಾಗಿ ರಾಟಿಯು ಜೀವಿತಾರ್ಥವು ಸಾಧ್ಯವೆಂದು ತಿಳಿದಿಲ್ಲ. ನಿಮ್ಮ ಸಲುವಾಗಿ ರಾಟಿಯು ಯಜ್ಞರೂಪವಾಗಿರುವದು.''

'ಹಾಗಾದರೆ ನಾನೇನು ಮಾಡಬೇಕು?'

'ನಿಮ್ಮ ಮನಸ್ಸಿನಲ್ಲಿ ಬರುವಂತೆ ತಿಳಿಸಿಕೊಡಲು ನನಗೆ ಶಕ್ಯವಿದ್ದರೆ ನೀವು ಅರಳೆಯನ್ನು ಹಿಂಜುವ ಇಲ್ಲವೆ ನೇಯುವ ಉದ್ಯೋಗವನ್ನು ಕುಟುಂಬದ ಪೋಷಣೆಯ ಸಲುವಾಗಿ ಕೈಕೊಳ್ಳಬಹುದೆಂದು ಹೇಳದೇ ಇರಲಾರೆನು. ಈ ಉದ್ಯೋಗಗಳನ್ನು ಆಯಾಸವಿಲ್ಲದೆ ಕಲಿಯಬಹುದು?'

'ಆದರೆ ಅದರಿಂದ ನಾನು ಕುಟುಂಬ ನಿರ್ವಾಹವನ್ನು ಮಾಡಬಲ್ಲೆನೋ?'

'ಮಾಡಬಲ್ಲಿರಿ ಆದರೆ ಕುಟುಂಬದ ಜನರೆಲ್ಲರೂ ಈ ಕಾರ್ಯದಲ್ಲಿ ತೊಡಗಿಕೊಂಡಿರಬೇಕಾಗುವದು'

'ಈಮಾತು ನನ್ನಂಥ ಕುಟುಂಬದವರಿಗೆ ಅಶಕ್ಯವಾಗಿರುವದು. ನಾನು ಖಾದಿಯನ್ನು ಧರಿಸುತ್ತಿರುವದನ್ನು ತಾವು ನೋಡುತ್ತಿರುವಿರಿ ಮನೆಯಲ್ಲಿ ನೂತೂ ನೂಲುವೆನು. ನನಗೆ ಅದರಲ್ಲಿ ವಿಶ್ವಾಸವುಂಟು ಆದರೆ ನನ್ನ ಕುಟುಂಬದ ಜನರಲ್ಲಿ ವಿಶ್ವಾಸವನ್ನಂತು ಹುಟ್ಟಿಸಬೇಕು? ಒಂದು ವೇಳೆ ವಿಶ್ವಾಸವು ಹುಟ್ಟಿದರೂ ಅವರು ಕೆಲಸವನ್ನು ಮಾಡಲು ಸಿದ್ಧರಾಗರು'

'ನಿಮ್ಮ ಕಷ್ಟವನ್ನು ನಾನು ಚನ್ನಾಗಿ ತಿಳಿಯಬಲ್ಲೆ. ಆದರೂ ನಿಮ್ಮಂಥವರನೇಕರು ತಮ್ಮ ಸಂಸಾರದಲ್ಲಿ ಎಷ್ಟೋ ಬದಲಾವಣೆಯನ್ನು ಮಾಡುವದವಶ್ಯವು ಇಲ್ಲದಿದ್ದರೆ ನಮ್ಮ ದೇಶದ ಏಳು ಲಕ್ಷ ಹಳ್ಳಿಗಳ ಪಾಲಿಗೆ ನಿರಾಶೆಯ ಹೊರ್ತು ಬೇರೆ ಮಾತೇ ಇಲ್ಲ'

'ಈ ಮಾತನ್ನು ನಾನು ಒಪ್ಪೆನು. ಆದರೆ ಅದನ್ನು ಸ್ವೀಕರಿಸುವ ಶಕ್ತಿಯು ನನಗಿಂದಿಲ್ಲ. ಆ ಶಕ್ತಿಯು ನನ್ನಲ್ಲಿ ಬರಲೆಂದು ತಾವು ಆಶೀರ್ವದಿಸಬೇಕಾಗಿ ಬೇಡಿಕೊಳ್ಳುತ್ತೇನೆ. ಆದರೆಆ ಶಕ್ತಿಯು ಬರುವ ವರೆಗೆ ನಾನೇನು ಮಾಡಬೇಕು''

'ಇದನ್ನು ಶೋಧಿಸುವದು ನಿಮ್ಮ ಹಾಗೂ ನಿಮ್ಮ ಹಿರಿಯರ ಕಾರ್ಯವಾಗಿದೆ ಯಾವುದು ಆದರ್ಶವೆಂದು ನಾನು ತಿಳಿದಿರುವೆನೋ ಅದನ್ನು ಮಾತ್ರ ನಿಮಗೆ ತಿಳಿಸಿರುವೆನು'

'ನಾನು ಪಾಟಿಬಿ (ಕುಂಬಾರಿಕೆ) ಮುಂತಾದ್ದನ್ನು ಕಲಿತರೆ ಹೇಗೆ?'

'ಇಂಥ ಉದ್ಯೋಗಗಳು ನಿಜವಾಗಿ ಉಪಯೋಗವುಳ್ಳವು ಅವುಗಳಿಂದ ನಿಮ್ಮ ಜೀವಿತಾರ್ಥವು ನಡೆಯುವದಲ್ಲದೆ, ಕೆಲ ಹುಟ್ಟಿಗೆ ದುಡ್ಡಾದರೂ ಕೂಡಿ ಬೀಳುವದು. ಮತ್ತು ಅದರಿಂದ ಕಾರಖಾನೆಯನ್ನು ತೆಗೆದರೆ ಸ್ವಲ್ಪ ಜನರಿಗೆ ಜೀವಿತಾರ್ಥವನ್ನು ಕಲ್ಪಿಸಿಕೊಡಬಲ್ಲಿರಿ ಆದರೆ ಈ ಕಾರ್ಯದಲ್ಲಿ ಎಷ್ಟೋ ಕೂಲಿಕಾರರನ್ನು ದುರುಪಯೋಗಿಸಿಕೊಳ್ಳಬೇಕಾಗುವದೆಂಬ ಮಾತನ್ನು ನೀವು ಒಪ್ಪಬೇಕಾಗುತ್ತದೆ. ಯಾಕೆಂದರೆ ಅವರಿಗೆ ಅಲ್ಪ ದಿನಗೂಲಿಯನ್ನು ಕೊಟ್ಟು ದ್ರವ್ಯದ ಬಹು ಭಾಗವನ್ನು ನೀವು ಸ್ವತಃ ಇಟ್ಟು ಕೊಳ್ಳುವಿರಿ?

'ಈ ಮಾತು ನಿಜ. ಆದರೆ ಪಟ್ಟಣದಲ್ಲಿ ಇರುತ್ತಿರುವವನಾದ ನಾನು ಎರಡನೇ ಯಾವುದನ್ನಾದರೂ ಮಾಡಲು ಅವಕಾಶವಿಲ್ಲ. ಅದಾಗ್ಯೂ ನಾನು ತಮ್ಮ ಮಾತುಗಳನ್ನು ಎಂದಿಗೂ ಮರೆಯೆನು. ತಮ್ಮ ಆಶೀರ್ವಾದವು ನನಗೆ ಇರುವದಲ್ಲವೆ?

'ಪ್ರತಿಯೊಂದು ಇಂಥ ಕಾರ್ಯದಲ್ಲಿ ಪ್ರತಿಯೊಬ್ಬ ಪ್ರಾರ್ಥಿಗೆ ನನ್ನ ಆಶೀರ್ವಾದವು ಇದ್ದೇ ಇರುವದು'

ಆದರ್ಶ ಭೂತರಾದ ಕನ್ನಡಿಗರು.

ಶ್ರೀಮತ್ಕೃಷ್ಣರಾಜ ಒಡೆಯರವರು.

"ಪ್ರತಿಯೊಂದು ಅವನತಿಯೂ ಮುಂದೆ
ಬರುವ ಉನ್ನತಿಗೆ ಕಾರಣವೆನಿಸುತ್ತದೆ.
ಅಧೋಗತಿಯ ಅವಧಿಯು ಕಳೆದು
ಹೋದೊಡನೆಯೇ ಉತ್ಕರ್ಷದ
ಅವಧಿಯು ಬಂದೇ ತೀರಬೇಕು. "

ಎಂಬದಾಗಿ ಶ್ರವಣ ಬೆಳ್ಗೊಳದಲ್ಲಿ ಕಳೆದ ತಿಂಗಳು ನೆರೆದ ಅಖಿಲ ಭಾರತ ದಿಗಂಬರ ಜೈನ ಪಂಚತ್ತಿನ ಪ್ರಾರಂಭೋತ್ಸವ ಕಾಲದಲ್ಲಿ ಕರ್ನಾಟಕ ರತ್ನ ಸಿಂಹಾಸನಾಧೀಶ್ವರರಾದ ಮೈಸೂರು ಶ್ರೀಮನ್ ಮಹಾರಾಜರವರು ಅಪ್ಪಣೆ ಕೊಡಿಸಿದರು. ಯಾದವ ಕುಲಾಂಬರ ದ್ಯುಮಣಿಯಂತಿರುವ ಮಹಾರಾಜರ ದೇಶ ಭಕ್ತಿಯು ಉಜ್ವಲವಾದುದು. ಸನಾತನ ಧರ್ಮದಲ್ಲಿ ಇವರ ಶ್ರದ್ಧಾ ಭಕ್ತಿಗಳು ಅಪಾರವಾದುವು. ಕೆಲವು ತಿಂಗಳ ಹಿಂದೆ ಮೈಸೂರಿಗೆ ಬಂದಿದ್ದ ಶ್ರೀ ರಾಜಾ ಶಿವಪ್ರಸಾದರು ಮಹಾರಾಜರನ್ನು ಕುರಿತು ಹೀಗೆ ಹೇಳಿದರು.

"ಪುರಾತನದ ರಾಜವಂಶದ ಗಂಭೀರವಾದ ಕಳೆಯೂ ಉತ್ತಮ ಗುಣಗಳೂ, ಪ್ರಾಚೀನ ಚಿಹ್ನೆಗಳ ವ್ಯಕ್ತಿತ್ವ ಸೇರಿ ಹೊಳೆಯುವವರನ್ನು ನೋಡುವುದರಿಂದ ತಾನೇ ಆನಂದವೂ ಹೆಮ್ಮೆಯೂ ಉಂಟಾಗುವುದು. ಮೈಸೂರು ಮಹಾರಾಜರು ಈ ಸದ್ಗುಣ ಚಿಹ್ನೆಗಳಿಂದ ಬೆಳಗುತ್ತಿದ್ದಾರೆ. ನೋಡುವುದಕ್ಕೆ ಸುಂದರ ಪುರುಷರು. ಉದಾತ್ತ ಧಾರ್ಮಿಕ ... ಮುಳ್ಳವರು. ಸಡೆನುಡಿ, ಉಡಿಗೆ ತೊಡಿಗೆ, ಊಟ ಉಪಚಾರ ... ಸಾತ್ವಿಕರು. ಈ ಕಾಲದ ಹಲವು ರಾಜ ಮನೆತನಗಳಲ್ಲಿ ... ಗೆ ಕಳಂಕವನ್ನುಂಟು ಮಾಡಿರುವ ದುರ್ನಡತೆ, ದುರಾಚಾರ, ... ಗಳಾವುವೂ ಈ ಮಹಾರಾಜರಲ್ಲಿಲ್ಲ. ಇವರ ಭಕ್ತಿ, ಸದಾಚಾರ ಶೀಲವರ್ತನೆ, ಅನ್ಯಮತ ಗೌರವ, ವಿದ್ಯಾಪಕ್ಷಪಾತಿತ್ವ, ಪ್ರಜೆಗಳ ಸೌಕರ್ಯಗಳನ್ನು ಹೆಚ್ಚಿಸುವುದರಲ್ಲಿ ಅವರಿಗಿರುವ ಆಸಕ್ತಿ, ಈ ಗುಣಗಳಿಂದ ಪ್ರಜೆಗಳೆಲ್ಲರಿಂದಲೂ ಇವರು ಗೌರವಿಸಲ್ಪಡುವರು. ಹೆಚ್ಚೇಕೆ? ಹಿಂದುಸ್ಥಾನದ ರಾಜವರ್ಗಕ್ಕೆ ಸೇರಿದವರಲ್ಲೆಲ್ಲ ಇವರೇ ಜ್ಯೇಷ್ಠರೂ, ಶ್ರೇಷ್ಠರೂ, ಎಂದು ಹೇಳಬೇಕಾಗುತ್ತದೆ."

ಇವರು ಕ್ರಿಸ್ತಶಕ ೧೮೮೪ ನೆಯ ಜೂನ್ ೪ ನೇಯ ತಾರೀಖಿನ ದಿನ ಉದಯಿಸಿದರು. ಇವರ ಬಾಲಲೀಲೆ, ವಿದ್ಯಾಭ್ಯಾಸ ಮುಂತಾದುವುಗಳನ್ನು ವಿವರಿಸಲು ಈಗ ಅವಕಾಶವಿಲ್ಲ. ಆ ವಯಸ್ಸಿನಲ್ಲಿ ಮಹಾರಾಜರ ಸಹಪಾಠಿಗಳಾಗಿ ಓದಿದರನೇಕರು ಇಂದಿಗೂ ಅವರ ಸರಳತೆಯನ್ನೂ ಔದಾರ್ಯವನ್ನೂ, ಆಕರ್ಷಣ ಶಕ್ತಿಯನ್ನೂ ಕುರಿತು ಕೊಂಡಾಡುತ್ತಾರೆ.

ಹತ್ತನೆಯ ವಯಸ್ಸಿನಲ್ಲಿಯೇ ಇವರಿಗೆ ಪಿತೃವಿಯೋಗವಾಯಿತು. ಕಿ. ಶ. ೧೮೯೫ ರಲ್ಲಿ ಸಿಂಹಾಸನವನ್ನು ಏರಿದರೂ ಇವರ ಮಾತುಶ್ರೀಯವರಾದ ವಾಣೀವಿಲಾಸ ಸನ್ನಿಧಾನದವರೇ ರೀಜಂಟರಾಗಿದ್ದುಕೊಂಡು ರಾಜ್ಯಾಡಳಿತವನ್ನು ನಡೆಸಿದರು. ಮಹಾರಾಜರು ಪ್ರಾಪ್ತವಯಸ್ಕರಾಗಲು ಕ್ರಿ. ಶ. ೧೯೦೨ರಲ್ಲಿ ಲಾರ್ಡ ಕರ್ಜನ್ ವೈಸರಾಯರೇ ಮೈಸೂರಿಗೆ ಬಂದು ರಾಜ್ಯಾಂಗ ಸೂತ್ರಗಳನ್ನು ಶ್ರೀಮನ್ಮಹಾರಾಜರಿಗೆ ಒಪ್ಪಿಸಿದರು. ಅಂದಿನಿಂದಲೂ ಅವರೇ ೬೦ ಲಕ್ಷ ಪ್ರಜೆಗಳ ಸುಖದುಃಖಗಳ ಜವಾಬದಾರಿಯನ್ನು ವಹಿಸಿಕೊಂಡು ಬಂದಿರುವರು. ದಿನದಿನಕ್ಕೂ ಪ್ರಜೆಗಳಿಗೆ ಮಹಾರಾಜರಲ್ಲಿ ಭಕ್ತಿಯೂ, ವಿಶ್ವಾಸವೂ, ಗೌರವವೂ ಹೆಚ್ಚುತ್ತಲಿದೆ. ರಾಜ್ಯಾಡಳಿತ ... ಸಿನಾದದ್ದನ್ನೂ, ದೇಶದ ಸಂಪತ್ತು ಹೆಚ್ಚುವುದಕ್ಕೂ ಪ್ರಜ್ಞಾಶಾಲಿಗಳಾದ ಮಂತ್ರಿಗಳು ಅತ್ಯಾವಶ್ಯಕರೆಂದು ತಿಳಿದು ಇವರು ತಮ್ಮ ದಿವಾನರನ್ನು ಆರಿಸುವುದರಲ್ಲಿ ಹೆಚ್ಚು ನಯಶಾಸ್ತ್ರಜ್ಞಾನವನ್ನು ತೋರಪಡಿಸುವರು. ಇವರು ತಮ್ಮಾಗಿ ಆರಿಸಿದ ಸರಕಾರದ ಮುಖ್ಯ ಅಧಿಕಾರಿಯೇ, ಇಲ್ಲ ಪ್ರಜೆಗಳಿಗೆ ರಾಜ್ಯಾಡಳಿತದಲ್ಲಿ ಹೆಚ್ಚು ಹೆಚ್ಚು ಅವಕಾಶವನ್ನೂ, ಜವಾಬದಾರಿಯನ್ನೂ ಕೊಡುವುದರಲ್ಲಿ ಇವರು ಸದಾ ಆತುರರಾಗಿರುವರು. ನಿಷ್ಪಕ್ಷಪಾತದಿಂದ ಪ್ರಭುತ್ವ ಮಾಡುವುದೇ ಪರಮ ಧರ್ಮವೆಂಬ ಸೂಕ್ಷ್ಮವನ್ನು ಅರಿತಿರುವ ಇವರು ೧೯೧೮ ನೆಯ ಇಸವಿ ಜೂನ ೨೪ ನೆಯ ತಾರೀಖಿನ ದಿನ ಬ್ರಾಹ್ಮಣೇತರ ಡೆಪ್ಯುಟೇಶನ್ನಿಗೆ (ಆದಮನೆಯ ಕಚೇರಿಯಲ್ಲಿ ತೋಟದಲ್ಲಿ ಬಂದಿತ್ತು.) ಕೊಟ್ಟ ಪ್ರತ್ಯುತ್ತರವನ್ನು ಎಲ್ಲರೂ ಓದಬೇಕು.

ಆ ಭಾಷಣದ ಒಂದು ಭಾಗವನ್ನು ಮಾತ್ರ ವಾಚಕರ ಅವಗಾಹನೆಗಾಗಿ ಎತ್ತಿ ಬರೆಯುವೆವು.

"ನಾವು ನಿಮ್ಮ ಮನೋಭಾವವನ್ನು ಸಂಪೂರ್ಣವಾಗಿ ಗ್ರಹಿಸಿಕೊಂಡಿದ್ದೇವೆ. ನಿಮ್ಮ ತೊಂದರೆಗಳನ್ನು ಬಾಗಿಲೂ ಕಳೆಯಿಂದಲೂ, ಸಹಾನುಭೂತಿಯಿಂದಲೂ ಕಾವೇರಿ ವಿವೇಚನೆ ಮಾಡಿ, ಸಾಧ್ಯವಾದಷ್ಟು ಪರಿಹರಿಸಿ ಕೊಡುವಂತೆ ನಾವು ಮಾಡುವೆವು. ನಮ್ಮ ಪ್ರಜೆಗಳಲ್ಲಿ ಪ್ರತಿಯೊಂದು ಪಂಗಡದವರು ಯೋಗ್ಯತಾನುಗುಣವಾದ ಸಂಖ್ಯೆಯ ಪ್ರಮಾಣದಲ್ಲಿ ಸರಕಾರಿ ಕೆಲಸಗಳಲ್ಲಿ ಇರುವದನ್ನು ನೋಡಲು ನಮಗೆ ಸದಾ ಆಸಕ್ತಿಯುಂಟು. ಸರಕಾರಿ ಉದ್ಯೋಗಗಳಲ್ಲಿ ಬ್ರಾಹ್ಮಣರ ಸಂಖ್ಯಾ ಪ್ರಾಬಲ್ಯವು ಅಪರಿಹಾರ್ಯವಾದ ಕಾರಣಗಳಿಂದುಂಟಾಗಿದೆ. ನೀವು ಅಪೇಕ್ಷಿಸುತ್ತಿರುವ ಹೆಚ್ಚಿನ ಕೆಲಸವು ವಿದ್ಯಾಭಿವೃದ್ಧಿಯಿಂದಲೂ ಜ್ಞಾನ ಪ್ರಚಾರದಿಂದಲೂ ಕಾಲಕ್ರಮದಲ್ಲಿ ನಾತವ ಗುತ್ತವೆಯೆಂದು ನಮಗೆ ನಿರ್ಧಾರವಿದೆ. ಒಂದು ಪಂಗಡದ ಸ್ವಂತ ಕಷ್ಟಪಟ್ಟು ಕೆಲಸ ಮಾಡಿ ಪ್ರಜಾವರ್ಗಗಳಿಗೆಲ್ಲಾ ಸಮಾನವಾಗಿರುವ ಅಭಿವೃದ್ಧಿ ಅವಕಾಶಗಳನ್ನು ತಾನೊಂದೇ ಸಂಪೂರ್ಣವಾಗಿ ಉಪಯೋಗಿಸಿಕೊಂಡು ಮುಂದೆ ಬಂದಿರುವುದರಿಂದ ಅವರ ಜಾತಿಯನ್ನು ನೋಡಿ ಅದು ದಂಡ್ಯವೆಂದು ಎಣಿಸುವುದು ನಮ್ಮ ಮನೋರಭಕ್ಕೆ ಬಹು ದೂರವೆಂಬುದನ್ನು ಸಹ ನಾವು ನಿಮಗೆ ತಿಳಿಯ ಪಡಿಸಬೇಕು. ಏಕೆಂದರೆ, ಬ್ರಾಹ್ಮಣ ಸಮುದಾಯದಲ್ಲಿ ಇತರ ಸಮುದಾಯಗಳಲ್ಲಿರುವಂತೆಯೆ, ರಾಜಭಕ್ತಿಯುಳ್ಳ ಪ್ರಜೆಗಳಿರುವರೆಂದು ನಂಬುತ್ತೇವೆ. ಪ್ರತಿಭಾ ಶಾಲಿಯಾದ ಆ ಸಮುದಾಯದ ಪ್ರತಿನಿಧಿಗಳು ನಮ್ಮ ಮನೆತನಕ್ಕೂ, ನಮ್ಮ ಸಂಸ್ಥಾನಕ್ಕೂ ಹಿಂದೆ ಮಾಡಿರುವ, ಮತ್ತು ಈಗಲೂ ಮಾಡುತ್ತಿರುವ ಶ್ರೇಷ್ಠವಾದ ಉಪಕಾರಗಳನ್ನು ಒಂದು ಕ್ಷಣ ಕೂಡ ನಾವು ಮರೆಯಲಾರೆವು. ಯಾವ ಪಂಗಡವನ್ನು ವಿರೋಧಿಸಿ ಮೇಲೆತ್ತದೆಯೂ, ಮಿತಿಮೀರಿ ಕೆಳಕ್ಕೆ ತಳ್ಳದೆಯೂ ನಮ್ಮ ಸಂಸ್ಥಾನದಲ್ಲಿರುವ ನಾನಾ ಜಾತಿಗಳಿಗೂ ಪಂಗಡಗಳಿಗೂ ಮಧ್ಯಸ್ಥಭಾವವನ್ನು ವಹಿಸಿ ಸಂಸ್ಥಾನಕ್ಕೆ ಶಾಶ್ವತವಾದ ಅಭ್ಯುದಯವುಂಟಾಗುವುದಕ್ಕೋಸ್ಕರ ಸಕಲರನ್ನು ಏಕ ರೀತಿಯಲ್ಲಿ ಉದ್ಧರಿಸಬೇಕೆಂಬ ಧರ್ಮಯುಕ್ತವಾದ ರಾಜನೀತಿಯನ್ನು ಅನುಸರಿಸಬೇಕೆಂಬುದೇ ನಮ್ಮ ಕಾಂಕ್ಷೆಯಾಗಿದೆ"

ಕ್ರಿ. ಶ. ೧೯೧೯ ನೆಯ ಇಸವಿ ಜನವರಿ ೧೭ ನೇ ತಾರೀಖಿನ ದಿನ ವಾರಣಾಸಿಯ ಹಿಂದೂ ವಿಶ್ವ ವಿದ್ಯಾನಿಲಯದ ಮೊದಲನೆಯ ವಿದ್ವತ್ಪರಿಷತ್ತು (Convocation) ಯಲ್ಲಿ ಶ್ರೀಮನ್ಮಹಾರಾಜರು ಮಾಡಿದ ಭಾಷಣವನ್ನು ಓದಿದವರಿಗೆ ಅವರ ದೇಶ ಭಕ್ತಿಯೂ, ಅವರ ಸರ್ವತೋಮುಖವಾದ ಪ್ರತಿಭೆಯೂ, ಸೇವೆಯಲ್ಲಿ ಅವರಿಗಿರುವ ಆದರವೂ ಸ್ಪಷ್ಟವಾಗದಿರದು.

ವಿದ್ಯಾವಂತರಿಗೂ, ಅಧಿಕಾರಿಗಳಿಗೂ ಬುದ್ಧಿಗಲಿಸುವದರಲ್ಲಿ ಮಹಾರಾಜರು ಅತಿ ಚತುರರು. ಒಮ್ಮೆ ಸಂಸ್ಥಾನದ ದೊಡ್ಡ ಅಧಿಕಾರಿಗಳೊಬ್ಬರು "ನನ್ನ ಇಲಾಖೆಯಲ್ಲಿ ನಾನು ಸ್ವತಂತ್ರವಾಗಿ ಕೆಲಸ ಮಾಡಲು ಸರಕಾರವು ಪ್ರತಿಬಂಧಕವಾಗಿದೆ. ಸರಕಾರವು ಈ ಬಗೆಯಾಗಿ ನನ್ನ ಕೆಲಸಕ್ಕೆ ಅಡ್ಡಿಯಾಗುವದಾದರೆ ನಾನು ಕೆಲಸವನ್ನು ಬಿಟ್ಟುಬಿಡಬೇಕಾದೀತು." ಎಂಬದಾಗಿ ಮಹಾರಾಜರೊಡನೆ ಹೇಳಿದರು. ಮಹಾರಾಜರು ಆ ಮಾತನ್ನು ಕೇಳಿ, ತಲೆದೂಗಿ "ಈ ವಿಷಯವನ್ನು ನೀವು ಪತ್ರಮುಖೇನ ತಿಳಿಸಿ" ಎಂಬದಾಗಿ ಹೇಳಿದರು. ಮಹಾರಾಜ

ರನ್ನು ಒಳಗೆ ಹಾಕಿಕೊಂಡನೆಂದು ಹಿಗ್ಗುತ್ತಿದ್ದ ಆ ಅಧಿಕಾರಿಯು ಮಹಾರಾಜರ ಇಚ್ಛೆಯಂತೆ ಪತ್ರ ಬರೆದನು. ಮಾರನೆಯ ದಿವಸವೇ ಆ ಅಧಿಕಾರಿಗೆ "ನೀವು ಕೆಲಸವನ್ನು ಬಿಡಬಹುದು' ಎಂಬದಾಗಿ ಉತ್ತರವೂ ಬಂದಿತು. ಕೂಡಲೇ ಅಪ್ಪಣೆ ಚೀಟಿಯೂ ಸಿಕ್ಕಿತು.

ಇನ್ನೊಬ್ಬ ಅಧಿಕಾರಿಗಳು ಸದಾ ಹ್ಯಾಟನ್ನೇ(ಸಾಹೇಬರ ಟೊಪ್ಪಿಯು ಟೊಪ್ಪಿಗೆ) ಹಾಕುತ್ತಿದ್ದರು ಇವರು ಮಹಾರಾಜರ ಭೆಟ್ಟಿಗಾಗಿ ಒಮ್ಮೆ ಅರಮನೆಗೆ ಹೋದರು ಆಗ ಮಹಾರಾಜರು ತಟ್ಟೆಯಲ್ಲಿ ಎರಡು ರುಮಾಲುಗಳನ್ನು (ಸುಂದಾಸು) ಇಟ್ಟು ಆ ಅಧಿಕಾರಿಗಳಿಗೆ ಬಹುಮಾನ ಮಾಡಿದರು ಅಂದಿನಿಂದ ಆ ಅಧಿಕಾರಿಗಳು ಹ್ಯಾಟಿಗೆ ಸಲಾಮುಹಾಕಿ ರುಮಾಲನ್ನೇ ಕಟ್ಟುತ್ತಬಂದರು

ಬೆಳಗಾವಿ ಕಾಂಗ್ರೆಸಿನ ಕಾಲದಲ್ಲಿ ಸಂಗೀತಸಮ್ಮೇಲನವಾಯಿತಷ್ಟೇ. ಆ ಸಮ್ಮೇಳನಕ್ಕೆ ಮಹಾರಾಜರು ತಮ್ಮ ಆಸ್ಥಾನ ವಿದ್ವಾಂಸರೆಲ್ಲರನ್ನೂ ಕಳುಹಿದ್ದರು ಲಲಿತಕಲೆಗಳಲ್ಲಿ ಇವರಿಗೆ ಅಭಿರುಚಿ ಹೆಚ್ಚು ಅನೇಕ ವಾದ್ಯಗಳನ್ನೂ ಸ್ವತಃ ಬಾರಿಸುವರು. ಸಂಗೀತ. ಶಾಸ್ತ್ರಜ್ಞಾನದಲ್ಲಿ ಅದ್ವಿತೀಯರು. ಕರ್ನಾಟಕ ದೇಶದಲ್ಲಿ ಲಲಿತಕಲೆಗಳನ್ನೂ ಜೀವಂತವಾಗಿದ್ದರೆ ಅದು ಶ್ರೀಮನ್ಮಹಾರಾಜರ ಆಸ್ಥಾನದಲ್ಲಿ

ಇತ್ತೀಚೆಗಾಗಿ ಶ್ರೀಮನ್ಮಹಾರಾಜರವರು ಪ್ರತಿ ದಿನವೂ ಅರ್ಧಗಂಟೆಯು ಹರಿಗೆ ದಾಟಿಯು ಹಾಡಿ ನೋಡುತ್ತಿರುವರು ಇದರಿಂದ ಜನಜನರಲ್ಲಿರುವ ಇವರ ಪ್ರೇಮವು ವ್ಯಕ್ತವಾಗುತ್ತದೆ ಇದಲ್ಲದೇ ಕನ್ನಡ ಭಾಷೆಗೂ ಉತ್ತೇಜನ ಕೊಡುತ್ತಿರುವರು ಪ್ರಜಾಪ್ರತಿನಿಧಿ ಸಭೆಯ ಚರ್ಚೆಗಳು ಕನ್ನಡದಲ್ಲಿಯೇ ನಡೆಯಬೇಕು, ಪ್ರಸಿದ್ಧವಾಗುವಂತೆ ಅಪ್ಪಣೆ ಮಾಡಿದ್ದು ಇವರ ಕನ್ನಡ ಅಭಿಮಾನವನ್ನು ತೋರ್ಪಡಿಸುತ್ತದೆ ಇನ್ನು ಮೇಲೆ ಮೈಸೂರ ವಿಶ್ವವಿದ್ಯಾಲಯದಲ್ಲಿಯೂ ಸಂಸ್ಕೃತ ... ಭಾಷೆಗಳಲ್ಲಿಯ ... ಕನ್ನಡಕ್ಕೆ ಪ್ರಾಧಾನ್ಯ ದೊರೆಯುವಂತೆ ಅಪ್ಪಣೆ ಕೊಡುವರೆಂದು ... ವು.

ಕಾಶೀ ... ರಾಜ ಪುತ್ರಿ ... ಪ್ರತಾಪ ಕುಮಾರಿ ಬಾಯಿಯವರನ್ನು ಮಹಾರಾಜರು ಧರ್ಮ ... ಪತ್ನಿಯನ್ನಾಗಿ ಸ್ವೀಕರಿಸಿರುವರು ಸತಿಪತಿಗಳಿಬ್ಬರೂ ದೇವ ... ಪೂಜಾ ನಿರತರು ಈಶ್ವರನವರಿಗೆ ಯಾವ ವಿಧದಲ್ಲಿಯೂ ... ಕೊರತೆಯನ್ನುಂಟು ಮಾಡಿಲ್ಲ. ಆದರೂ ಅವರಿಗೆ ಸಂತಾನವಾಗಲಿಲ್ಲವೆಂಬುದು ಮಾತ್ರ ಪ್ರಜೆಗಳೆಲ್ಲರಿಗೂ ಚಿಂತೆಗೆ ಕಾರಣವಾಗಿದೆ. ಆ ಚಿಂತೆಯನ್ನೂ ಈಶ್ವರನು ಮನಸ್ಸು ಮಾಡಿದರೆ ಬಹು ಬೇಗ ತೊಲಗಿಸಬಹುದು.

— ಊಳಿಗದವ.

ಎರಡು ಸಂವಾದಗಳು.

(ಲೇಖಕ — ವಿದ್ಯಾರ್ಥಿ ಸರ ...)

ಅನೇಕ ವಿದ್ಯಾರ್ಥಿಗಳು ಅನೇಕ ಮಾತುಗಳನ್ನು ನನಗೆ ಕೇಳುವರು. ಕೆಲವರು ನನ್ನನ್ನು ಬಹು ಸಮಯವಾಗಿ ಹಿಡಿಸುತ್ತಾರೆ. ಕೆಲವರು ಶಾಂತತನದಿಂದ ಸ್ವಲ್ಪ ಕೇಳಿ ಹೊರಟು ಹೋಗುತ್ತಾರೆ ಈ ಎರಡೂ ಬಗೆಯ ಸಂವಾದಗಳು ಸ್ವಲ್ಪ ದಿವಸಗಳ ಹಿಂದ ನಡೆದವು ಅವು ಜನರಿಗೆ ತಿಳಿಸಲು ಯೋಗ್ಯವಾದವುಗಳಾದ್ದರಿಂದ ಅವುಗಳನ್ನು ಇದರಡಿಯಲ್ಲಿ ಕೊಡುತ್ತೇನೆ

ಮೊದಲನೆ, ಸಂವಾದವು.

ಮದ್ರಾಸಿನಿಂದ ತಿರುಗಿ ಬರುವಾಗ್ಗೆ ಗಾಡಿಯಲ್ಲಿ ನಾನು ಹಣಿದು ಕುಳಿತಿದ್ದೆನು. ಬಹುದಿನ ... ಪ್ರಯಾಣ ಮಾಡುವದಿದ್ದ ಕಾರಣ ಅದನ್ನು ಬರೆಯುತ್ತಲಿದ್ದೆನು ... ದಲ್ಲಿ ಒಂದು ಸ್ಟೇಶನ್ ದಲ್ಲಿ ಗಾಡಿಯು ಬಂದು ನಿಂತಿತು. ಸ್ವಲ್ಪ ... ತ್ತಿನಲ್ಲಿ ಒಬ್ಬ ವಿದ್ಯಾರ್ಥಿಯು ಅಪ್ಪಣೆಯನ್ನು ಪಡೆದುಕೊಂಡು ... ಡಬ್ಬಿಯಲ್ಲಿ ಬಂದು ಕುಳಿತು, ನನಗೆ ಪ್ರಶ್ನೆ ಮಾಡತೊಡಗಿದನು.

'ತಾವು ವಾಯಕೋಮದಿಂದ ಬಂದಿರುವಿರಲ್ಲವೇ?'

'ಹೌದು?'

'ವಾಯಕೋಮದಲ್ಲಿ ಏನಾಯಿತು?'

ನನಗೆ ಪ್ರಶ್ನವು ಯೋಗ್ಯ ಕಾಣಲಿಲ್ಲವಾದ್ದರಿಂದ, 'ನೀವು ಎಲ್ಲಿಯವರು?' ಎಂದು ಕೇಳಿದೆನು.

'ನಾನು ಮಲಬಾರದವನು'

ಅವನ ಕೈಯ್ಯಲ್ಲಿ ಎರಡು ವೃತ್ತ ಪತ್ರಗಳಿದ್ದವು ನಾನು ಕೇಳಿದ್ದು—'ನೀವು ವೃತ್ತ ಪತ್ರಗಳನ್ನು ಓದುತ್ತಿರುವಿರೋ?'

'ನಾನಂತೂ ಒಂದೇ ಸಮನೇ ಪ್ರವಾಸದಲ್ಲಿರುತ್ತೇನೆ. ಆದ್ದರಿಂದ ಓದಲೆಂತು?

'ನಿಮ್ಮ ಕೈಯಲ್ಲಿ 'ಹಿಂದೂ' ಕಂಡು ಬರುತ್ತದೆ. ಅದರಲ್ಲಿ ನಿಮಗೆ ವಾಯಕೋಮದ ವೃತ್ತಾಂತವು ದೊರೆಯುವದು.'

'ಆದರೆ ನಾನು ತಮ್ಮ ಮುಖದಿಂದಲೇ ತಿಳಿದು ಕೊಳ್ಳಲೆಚ್ಛಿಸುತ್ತೇನೆ.'

'ನಿಮ್ಮಂಥವರೆಲ್ಲರೂ ಈ ಬಗೆಯಾಗಿ ನನಗೆ ಕೇಳಿದರೆ, ಹಾಗೆ ನಾನು ಅವರೆಲ್ಲರಿಗೆ ಉತ್ತರ ಕೊಡಲು ಮನಸ್ಸು ಮಾಡಿದರೆ, ನನಗೆ ಎರಡನೇ ಕೆಲಸವನ್ನು ಮಾಡಲು ವೇಳೆಯೇ ದೊರೆಯದು. ವಿಚಾರವನ್ನು ಮಾಡಿರುವಿರೋ?'

'ಆದರೆ ತಾವು ನನಗೆ ಸುದ್ದಿಯನ್ನು ಹೇಳಬಲ್ಲಿರಲ್ಲವೇ?

'ನೀವು 'ಯಂಗ ಇಂಡಿಯಾ' ಓದುವಿರೋ?'

'ಇಲ್ಲ, ನನಗಂತು ಓದಲು ಸಮಯವೇ ದೊರೆಯುವದಿಲ್ಲ ನಾನು 'ಟಾಯಿಮ್ಸ' ಪತ್ರವನ್ನು ಮಾತ್ರ ಅದು ನನಗೆ ದೊರೆಯುತ್ತದಾದ್ದರಿಂದ ಓದುತ್ತಿರುತ್ತೇನೆ'

'ಹೀಗಿದ್ದರೆ ನಾನು ನನ್ನ ವೇಳೆಯನ್ನು ಕೊಡಲಾರೆನು ನೀವು 'ಹಿಂದೂ' ಓದುವದಿಲ್ಲ. 'ಯಂಗ ಇಂಡಿಯಾ' ಓದುವದಿಲ್ಲ. ಇಂಥವರಿಗೆ ಆಕಸ್ಮಾತ್ತಾಗಿ ದೊರೆತ ಹತ್ತು ಮಿನಿಟುಗಳಲ್ಲಿ ನಾನು ವೃತ್ತಾಂತವನ್ನು ತಿಳಿಸುವ ಬಗೆಯೆಂತು? ನನ್ನನ್ನು ಕ್ಷಮಿಸಿರಿ'

'ನೀವು ನನಗೆ ಸುದ್ದಿಯನ್ನು ಹೇಳುವದಿಲ್ಲವೋ?

'ಕ್ಷಮೆ ಮಾಡಿರಿ; ನೀವು ಖಾದಿಯನ್ನು ಕೂಡಾ ತೊಟ್ಟುಕೊಂಡಿರುವದಿಲ್ಲ ಮತ್ತು ವ್ಯರ್ಥವಾಗಿ ನನ್ನನ್ನು ಪೀಡಿಸುತ್ತೀರಿ

'ಆದರೆ ನನಗೆ ಸುದ್ದಿಯನ್ನು ಹೇಳುವದು ತಮ್ಮ ಕರ್ತವ್ಯವಾಗಿದೆ.'

'ಖಾದಿಯನ್ನು ತೊಟ್ಟು ಕೊಳ್ಳುವದು ನಿಮ್ಮ ಕರ್ತವ್ಯವಾಗಿದೆ?'

'ನನ್ನ ಬಳಿಯಲ್ಲಿ ಹಣವಿಲ್ಲ'

'ನೀವು ಬಂಗಾರದ ಗುಂಡಿಗಳನ್ನು ಧರಿಸಿರುವಿರಿ ಅವುಗಳನ್ನು ನನಗೆ ಕೊಡಿರಿ ನಾನು ನಿಮಗೆ ಖಾದಿಯನ್ನು ಪೂರೈಸುವೆನು.

'ಈ ಗುಂಡಿಗಳನ್ನು ನನ್ನ ಮನಸ್ಸಂತೋಷಕ್ಕಾಗಿ (For Pleasures' sake,) ಹಾಕಿಕೊಂಡಿರುವೆನು. ಅವುಗಳನ್ನು ಹೇಗೆ ಕೊಡಲಿ?'

'ಹಾಗಿದ್ದರೆ ನೀವು ನನ್ನನ್ನು ಕ್ಷಮಿಸಿರಿ.'

'ಹೀಗೆ ಮಾಡಿ ನಾನು ಖಾದಿಯನ್ನು ತೊಡದಿದ್ದರೆ ತಾವು ನನಗೆ ಸುದ್ದಿಯನ್ನು ಹೇಳುವದಿಲ್ಲವೋ?

'ಹಾಗೆ ನೀವು ತಿಳಿಯಬಹುದು. ಇನ್ನು ನನ್ನನ್ನು ಬಿಡಿರಿ'

'ತಾವು ನನಗೆ ಸುದ್ದಿಯನ್ನು ಹೇಳುವದಿಲ್ಲೆಂದು ಅನ್ನುವಿರಲ್ಲವೋ?'

'ಹಾಗೆ ನೀವು ತಿಳಿಯಬಹುದು.'

'ಆ? ಹಾಗಾದರೆ ತಮ್ಮ ಈ ವರ್ತನವನ್ನು ಖಾಹೀ

ಪಡಿಸುವೆನು.’

‘ ಸುಖವಾಗಿ ಹಾಗೆ ಮಾಡಬಹುದು. ಆದರೆ ಇನ್ನು ನನಗೆ ನನ್ನ ಕೆಲಸವನ್ನು ಮಾಡಗೊಡಬೇಕು’

‘ ನಾನು ನನ್ನ ಕೈಯಿಂದಾದಷ್ಟು ಸಹಾಯ ಮಾಡುತ್ತಿರುವೆನು. ನಾನು ಮಲಬಾರ ಫಂಡಿಗಾಗಿ ನೂರಾರು ರೂಪಾಯಿಗಳನ್ನು ಕೂಡಿಸಿರುವೆನು’

‘ ಹೀಗಿದ್ದರೂ ನಿಮಗೆ ಬಡ ಜನರು ನೇಯ್ದ ಖಾದಿಯನ್ನು ಧರಿಸಲು ಮನಸ್ಸಾಗಲೊಲ್ಲದಲ್ಲವೆ?

‘ ಅಲ್ಲಿಯ ಜನರು ಅನ್ನವಿಲ್ಲದೆ ಸಾಯುತ್ತಿರುವರಾದ್ದರಿಂದ ತಮಗೆ ನೂಲುವ ಮಾತು ತೋಚಿತಲ್ಲವೋ?

‘ ಈ ಮಾತಿನ ಚರ್ಚೆಯನ್ನು ನಾವು ಮಾಡುವದು ಬೇಡ’

‘ ಹಾಗಾದರೆ ನಾನು ಹೋಗಲೋ ?’

‘ ಅವಶ್ಯವಾಗಿ ಹೋಗಬಹುದು.’’

ಯಾವ ಮಾತನ್ನು ಈ ಮಿತ್ರನು ಸಹಜವಾಗಿ ವೃತ್ತಪತ್ರಗಳನ್ನೋದಿ ತಿಳಿದು ಕೊಳ್ಳಬಹುದಾಗಿತ್ತೊ, ಅದನ್ನು ನನಗೆ ಕೇಳಿ ನನ್ನ ಅಂದರೆ ಜನತೆಯ ಸಮಯವನ್ನು ತೆಗೆದುಕೊಳ್ಳಬಾರದಾಗಿತ್ತೆಂಬುದನ್ನು ಅವನಿಗೆ ನಾನು ತಿಳಿಸಲಾರದೆ ಹೋದೆನೆಂದು ನನಗೆ ಅನಿಸುತ್ತದೆ. ಅವನೊಡನೆ ಗಂಭೀರನಾಗದೆ ವಿನೋದಪ್ರಿಯನಾಗಿದ್ದರೆ ಅವನಮನಸ್ಸನ್ನು ರಂಜಿಸಲು ನನಗೆ ಬರುತ್ತಿತ್ತೆಂದು ಅವನು ಹೋದ ಮೇಲೆ ನನಗೆ ಅನಿಸಿತು. ನನ್ನ ವೇಳೆಯು ಬಹಳವಾಗಿ ಹೋಗುತ್ತಿತ್ತೆಂಬುದೇನೋ ನಿಜ; ಆದರೆ ನನ್ನ ಗಾಂಭೀರ್ಯದಿಂದಲೂ ಅದರಿಂದ ಉತ್ಪನ್ನವಾದ ತೀಕ್ಷ್ಣತನದಿಂದಲೂ ಒಬ್ಬ ಹಿಂದುಸ್ಥಾನಸೇವಕನನ್ನು ಕಳೆದು ಕೊಂಡೆನೆಂದು ಬಹು ಹಳಹಳಿಯಾಯಿತು. ಅಹಹ! ಅಹಿಂಸಾಧರ್ಮವು ಎಷ್ಟು ಕಠಿಣವಾಗಿರುತ್ತದಲ್ಲ ಬೇಕಾದಂಥ ಕೆಲಸವಿರುವದಲ್ಲದೇಕೆ, ಮನುಷ್ಯನು ಸಾವಧಾನನಾಗಿರತಕ್ಕದ್ದು. ನಮ್ಮನ್ನು ತಿಳಿದು ಕೊಳ್ಳಲು ಇಲ್ಲವೆ ನೋಡಬೇಕೆಂಬುವವರ ಅಂತಃಕರಣದಲ್ಲಿ ಪ್ರವೇಶಿಸಲು ಪ್ರತಿಕ್ಷಣದಲ್ಲಿಯೂ ನಾವು ಯತ್ನಿಸಬೇಕು. ಅಹಿಂಸಾಧರ್ಮವನ್ನು ಪಾಲಿಸುವವನಿಗೆ ವೇಳೆಯ ಬೆಲೆಯೇನು? ವೇಳೆಯು ಇದ್ದರೇನು ಇಲ್ಲದಿದ್ದರೇನು, ಅಹಿಂಸಾವಾದಿಯು ದಾಸನಾಗಿರುವನು ಸೇವಕನಾಗಿರುವನು, ಜಗತ್ತಿನ ಸೇವೆಗಾಗಿ ತನ್ನನ್ನು ಮಾರಿಕೊಂಡಿರುವನು. ನಾನು ನನ್ನ ವೇಳೆಯನ್ನು ಉಳಿಸಿಕೊಂಡೆನು, ನನ್ನ ಅನುಕೂಲತೆಯನ್ನು ನೋಡಿಕೊಂಡೆನು, ಶಿಕ್ಷಕನಾಗಬೇಕೆಂದೆನು, ಶಿಕ್ಷಣವನ್ನು ಕೊಡಹೋಗಿ ಶಿಷ್ಯನನ್ನು ಕಳಕೊಂಡೆನು! ನಾನೆಂಥ ಶಿಕ್ಷಕನು? ವಿವೇಕವಿಲ್ಲದ ಮನುಷ್ಯನು ಪಶುವಿಗೆ ಸಮಾನನೆಂದು ತುಲಸೀದಾಸರು ಮತ್ತು ಎಲ್ಲ ಸಾಧುಗಳು ಹೇಳಿರುವರು.

ಎರಡನೇ ಸಂವಾದವು.

ಯಾವನ ಶಿಕ್ಷಕನು ನಾನಾಗಬೇಕೆಂದಿದ್ದೆನೊ, ಅವನೇ ನನ್ನ ಶಿಕ್ಷಕನಾದನು. ಆದರಿಂದ ಎಚ್ಚರಿಕೆಯುಳ್ಳವನಾಗಿ ಎರಡನೇ ಸೇವಕನನ್ನು ಕಳೆದುಕೊಳ್ಳಲು ನಾನು ಮನಸ್ಸು ಮಾಡಲಿಲ್ಲ. ಅದ್ದರಿಂದ ನಾನು ಸಾವಧಾನಿಯಾಗಿದ್ದೆನು ಈ ಸಾರೆಯ ವಿದ್ಯಾರ್ಥಿಯು ಪಂಜಾಬಿಯಾಗಿದನು. ನನ್ನನ್ನು ಕಾಣಬಂಥ ಪಂಜಾಬಿಗಳೆಲ್ಲರೂ ವಿನಯ ಉಳ್ಳವರೇ ಆಗಿರುವರು! ಈ ವಿದ್ಯಾರ್ಥಿಯ ವಿನಯಕ್ಕೆಂದೂ ಸೀಮೆಯೇ ಇರಲಿಲ್ಲ. ಅದ್ದರಿಂದ ನನ್ನ ಸಾವಧಾನತೆಯನ್ನು ಉಪಯೋಗಿಸಿಕೊಳ್ಳುವ ಪ್ರಸಂಗವೇ ಬರಲಿಲ್ಲ.

‘ ನಾನು ತಮ್ಮ ದರ್ಶನವನ್ನು ತೆಗೆದುಕೊಳ್ಳಬೇಕೆಂದು ಬಹು ವರ್ಷಗಳಿಂದ ಹಾತೊರೆಯುತ್ತಲಿದ್ದೆನು ಈ ಹೊತ್ತು ನನ್ನ ಇಷ್ಟೆಯು ಕೈಗೂಡಿತು’

‘ ಇನ್ನು ತಡವಿ ನಿಮಗೇನಾದರೂ ನನ್ನನ್ನು ಕೇಳಬೇಕೆಂಬ ಇಚ್ಛೆಯಿದೆಯೋ? ’

‘ ತಮ್ಮ ಅಪ್ಪಣೆಯಿದ್ದರೆ ನನ್ನ ಅಭ್ಯಾಸದ ಬಗ್ಗೆ ಒಂದೆರಡು ಮಾತು ಕೇಳಬೇಕೆಂದಿರುವೆನು! ’

‘ ಸುಖವಾಗಿ ಕೇಳಿಕೊಳ್ಳಬಹುದು ’

‘ ರಾಟಿಯಿಂದ ನಾನು ನನ್ನ ಚರಿತಾರ್ಥವನ್ನು ಸಾಗಿಸಬಲ್ಲೆನೆಂದು ತಮ್ಮ ಅಭಿಪ್ರಾಯವಿರುವದಲ್ಲವೇ ? ’

ಕ. ನೇ. ಪುಟಹಳ್ಳಿ ನೀಡಿ.

ಬಾರುಕೋಲು.

‘ ಕನ್ನಡಿಗನ’ ಸಂಪಾದಕರು ಕರ್ನಾಟಕ ಪರೀಕ್ಷಣರದ ಚಳವಳಿಗೆ ಕಂಕಣವನ್ನು ಕಟ್ಟಿಕೊಂಡಿರುವರು. ಈ ತಮ್ಮ ಯಾಜಮಾನ್ಯದಲ್ಲಿ ಆಗುವ ಮಹತ್ವದ ರಾಜಕಾರ್ಯಕ್ಕೆ ಎಲ್ಲರನ್ನೂ ಎಲ್ಲರನ್ನು ಸಿದ್ಧಗೊಳಿಸಲು ನನ್ನ ಕೈಗೆ ಬಾರುಕೋಲನ್ನು ಕೊಟ್ಟಿರುವಂತೆ ಕಾಣಬರುತ್ತದೆ. (ಧಾರವಾಡದ ಸೀಮೆಯಲ್ಲಿ ಎತ್ತುಗಳನ್ನು ಹೊಡೆಯುವುದನ್ನು ಕಾಣದ ದಕ್ಷಿಣ ಕರ್ನಾಟಕದವರಿಗೆ ಬಾರುಕೋಲೆಂದರೆ ಕೇವಲ ಬಾರುದ್ದ-ಕೋಲೆಂದು ತೋರಬಹುದು. ಕೋರದ ಅಂದರೆ ಅವರ ಕಣ್ಣುಮುಂದ ಸರಿಯಾದ ಚಿತ್ರವು ಬಂದು ನಿಲ್ಲುತ್ತದೆ.) ಹಿಂದಣಕಾಲದಲ್ಲಿ ದೇಶಾಟನೆಗಾಗಿ ಕುದುರೆಯನ್ನು ಅಟ್ಟಿಬಿಟ್ಟು, ಅದರಹಿಂದೆ ಬಾರುಕೋಲನ್ನು ಹಿಡಿದ ಸೇವಕನು ಇದ್ದೇ ಇದ್ದನೆಂದು ಕಾಣುತ್ತದೆ. ಈ ಸಿಕ್ಕ ಕರಣದ ಅಶ್ವವನ್ನು ಎಲ್ಲಕಡೆಗಳಲ್ಲಿ ಹಿಡಿಸಿ, ಅದಕ್ಕೆ ಸನ್ಮಾನವು ದೊರೆಯುವಂತೆ ನೋಡಿಕೊಳ್ಳಲು ಬಾರುಕೋಲು ಅವಶ್ಯಕವಾದ ಆಯುಧವೇ ಸರಿ. ಅಶ್ವವನ್ನು ಓಡಿಸುವುದಕ್ಕೂ ಬಾರುಕೋಲು ಬೇಕು. ಅದನ್ನು ಅಲಕ್ಷ್ಯಮಾಡಿ ಅಲ್ಲಗಳೆಯುವವರ ಬೆನ್ನು ಸಿಪ್ಪೆಯನ್ನು ಸುಲಿಯಲಿಕ್ಕೂ ಬಾರುಕೋಲು ಬೇಕು. ಕುದುರೆಯನ್ನು ಮುಂದಿಟ್ಟುಕೊಂಡು ಬಾಗಲಕೋಟೆಯಿಂದ ಮೈಸೂರು ಸೀಮೆಗೆ ನಾನು ಹೋದೆನೆಂದು ಭಾವಿಸೋಣ. ಆ ಗಡಿಯಿಂದೊಳಕ್ಕೆ ನನ್ನನು ಬಿಡುವರೋ ಇಲ್ಲವೋ ಎಂಬುದು ಮೊದಲನೆಯ ಸಂಶಯ. ದಾವಣಗೆರೆಯನ್ನು ಸೇರಿದ ಕೂಡಲೆ ಅಲ್ಲಿನ ಪತ್ರಿಕೆಯ ಪತ್ರಕರು ತಮ್ಮ ಪತ್ರಿಕೆಯನ್ನು ಕೈಗೆ ಕೊಟ್ಟು ಮುಂಬಯಿಗೂ, ಪರದೇಶಗಳಿಗೂ ಶೀಘ್ರವಾಗಿ ಸಾಗಿಸುವುದಕ್ಕಾಗಿ ಈ ಅಶ್ವವನ್ನು ಉಪಯೋಗಿಸಬೇಕೆಂದು ಕೇಳಬಹುದೆಂಬುದು ಎರಡನೆಯ ಸಂಶಯ. ಮೋಟಾರುಗಾಡಿಗಳಲ್ಲಿ ಕುಳಿತು ಪ್ರಯಾಣಮಾಡುತ್ತ ಸಿನಿಮಾದ ವಿದ್ಯುದ್ದೀಪಗಳಲ್ಲಿ ಮೆರೆಯುವ ನಾಗರಿಕರಾದ ಮೈಸೂರಿನವರು ಹಿರಿಯರಾಯಸರ ವಾಹನವಾದ ಈ ಕುದುರೆಯನ್ನು ಕಂಡು [illegible] ಮೂರನೆಯ ಸಂಶಯ [illegible] ಭಾಗಗಳಲ್ಲಿಯೂ ನನ್ನ ಸಾರಥ್ಯವು ನಿಷ್ಫಲವಾಗಬಹುದೋ ಏನೋ! ಉತ್ತರ ಕರ್ನಾಟಕ ಮತ್ತು ಬಳ್ಳಾರಿ ಸೀಮೆಯ ದೊಡ್ಡ ಪಟ್ಟಣಗಳ ಪೇಟೆಗಳಲ್ಲಿ ಈ ಕರ್ನಾಟಕದ ಕುದುರೆಯನ್ನು ಕಂಡು ಅವರಿಂದ ಅದನ್ನು ಬಲಮಾಡಿಕೊಳ್ಳದೆ ಹೆಸರಕತ್ತೆಯೆಂದು ಅದನ್ನು ಅಟ್ಟಿಬಿಡುವರೆಂಬ ಭಯವುಂಟು! ಏಕೆಂದರೆ ಅವರು [illegible] ಕನ್ನಡ ದೇಶದ ಕುದುರೆಯ ವ್ಯಾಪಾರವನ್ನೇ [illegible], ಅಲ್ಲಿ ಕನ್ನಡ ದೇಶದ ಕುದುರೆಯ ಹುಟ್ಟನ್ನೇ ಅರಿಯದ [illegible]ರು. ಮನೆಯ ವ್ಯವಹಾರಕ್ಕಾಗಿ ಮನೆಯ ಎತ್ತುಗಳನ್ನೂ, ಗುಂಡು ಹಸುಗಳನ್ನೂ ಕಟ್ಟಿಕೊಂಡಿರುವ ಇವರಿಗೆ ಹಾಲುಗರೆ-ನೂ ಕೊಡದ ನಿಷ್ಪ್ರಯೋಜಕವಾದ ಈ ಕರ್ನಾಟಕದ ಕುದುರೆಯಮೇಲೆ ಅಭಿಮಾನ ಹುಟ್ಟಬೇಕೆಂದರೆ ಹೇಗೆ ತಾನೆ ಆದೀತು!

ಈ ಅಶ್ವಮೇಧದ ಕುದುರೆಯು ಬಸವಳಿದಂತಾಗಿ ಬೆಳೆಯುತ್ತಲ್ಲವೆ? ಅದಕ್ಕೆ ನಾನೇನುಮಾಡಲಿ? ನಮ್ಮ ಯಜಮಾನರು ಅಷ್ಟಣೆ ಮಾಡಿದ ಸಾರಥ್ಯದಲ್ಲಿ ಎಷ್ಟೊಂದು ಕಷ್ಟಗಳವೆ. ಅಶ್ವಮೇಧವೆಂದರೆ ಬಾಯಿಮಾತಲ್ಲ, ಏಕೀಕರಣವೆಂದರೂ ಬಾಯಿಮಾತಲ್ಲ; ನಾನು ಈಗ ಊಹೆಯ ಪ್ರಪಂಚದಲ್ಲಿ ಮಾಡಿದ ಸಾರಥ್ಯವನ್ನು ಪ್ರತ್ಯಕ್ಷವಾಗಿ ಅಖಿಲ ಕರ್ನಾಟಕವು ನೆರೆದ ಬೆಳಗಾಂವಿಯ ಕಾಂಗ್ರೆಸ್ಸಿನಲ್ಲಿ ಕುದುರೆಯನ್ನು ಹತ್ತಿ ಸಾರಥ್ಯವನ್ನು ಮಾಡಿದ ಶ್ರೀಯುತ ಗಂಗಾಧರರಾಯರನ್ನು ಬೇಕಾದರೆ ಕೇಳಿನೋಡಾಗಲಿ, ಅದರಲ್ಲಿರುವ ಕಷ್ಟಸುಖಗಳನ್ನು.

ಹಾಗೂ ಬೆಳಗಾಂವಿಯ ಕಾಂಗ್ರೆಸಿನ ಸುಸಂಘಟನವು ಎಂತಹುದು ನೋಡಿ—ಕೇವಲ ಜನಕಮಹಾರಾಯನಂತೆ ಕರ್ಮ ತಪೋನಿಷ್ಠರಾದ ಮಹಾತ್ಮಾಗಾಂಧಿಯವರ ಯಾಜಮಾನ್ಯ ಈ ಸುಯೋಗದಲ್ಲಿ; ಒಂದೇ ಕ್ಷೇತ್ರದಲ್ಲಿ, ಕೂಡಿ, ಕರ್ನಾಟಕದೇವಿಯ ದರ್ಶನಮಾಡಿ ಮನೆಗೆ ಹೋದ ಕರ್ನಾಟಕ ಪ್ರತಿನಿಧಿಗಳಲ್ಲಿಯೇ ಮೂರುತಿಂಗಳೊಳಗಾಗಿ ಭಿನ್ನಾಭಿಮಾನವೂ, ವೃತ್ತಪತ್ರಗಳಲ್ಲಿ ವೈಷಮ್ಯದಿಂದ ಬರೆದ ಲೇಖಗಳೂ ಹುಟ್ಟಿದರೆ ಈ ಏಕೀಕರಣವು ಸುಲಭ ವಾಯಿತೇನು? ಅಬ್ಬಬ್ಬ! ಬರೀಮಾತಿನಲ್ಲಿ ಇಂತಹ ಕೆಲಸಗಳು ಪೂರೈಸುವದಾದರೆ ಈ ವೇಳೆಗೆ ನಮಗೆಷ್ಟುಸಾರೆ ಬಂದಿರ ಬೇಕೋ ಸ್ವರಾಜ್ಯ! ಎಷ್ಟು ದಿನಗಳ ಮುಂಚೆಯೇ ಆಗಿರಬೇಕೊ; ಪರದೇಶೀವಸ್ತ್ರಗಳ ಬಹಿಷ್ಕಾರ ಇದು ಸುಲಭವಲ್ಲ.

ಪ್ರಿಯ ಗೆಳೆಯ! ತರುಣ ಸಂಪಾದಕ! ಈ ನಿನ್ನ ಮಹಾಯಾಗಕ್ಕೆ ಭಂಗವನ್ನುಂಟು ಮಾಡಲು ಎಷ್ಟೋ ಮಂದಿ ಇರುವರು. ಜೋಕೆ!

ಆದರೆ ಚಿಂತೆಯಿಲ್ಲ? ಒದರುವವರು ಬೇಗ ಬೆದರುವರು; ಬಿದ್ದವರು ಎದ್ದೇಳುವರು. ಹಿಂದಿನವರು ಮುಂದಾಗುವರು

ತುಂಟರ ಚಿಕ್ಕಿ

ವರ್ತಮಾನಸಾರ

ಇಹವೃತ್ತ

ಸಂಗಮ ಜಾತ್ರೆಯು ಕಳಸದ ಮೆರವಣಿಗೆಯು ನಿರ್ವಿಘ್ನತೆಯಿಂದ ನಡೆಯಿತು. ಪದ್ಧತಿಯ ಪ್ರಕಾರ ಮಸೀದೆಗಳ ಮುಂದೆಯೂ ನಾದ ಬಾರಿಸಿದರು. ಪೋಲೀಸ ಸಾಹೇಬರು ಸ್ವತಃ ಮಸೀದೆಯ ಮುಂದೆ ತಮ್ಮ ಪೋಲೀಸ ಸೇನೆಯೊಂದಿಗೆ ನಿಂತಿದ್ದರು. ದಂಗೆಯ ಲಕ್ಷಣಗಳು ಸಹ ಈ ಸಾರೆ ಇರಲಿಲ್ಲ ಸ್ವಸ್ತಿ!

ರಾಘವೇಂದ್ರ ಸ್ವಾಮಿಗಳು ನಿನ್ನಿನ ದಿವಸ ಬಾಗಲಕೋಟೆಯಿಂದ ಹುಬ್ಬಳ್ಳಿ ಸಾಗಿದರು.

೧೨ನೇ ತಾರೀಖಿನ ಹಾರ್ಡಿಂಜ ಲಾಯಬ್ರರಿಯಲ್ಲಿ ಕಲೆಕ್ಟರ ಸಾಹೇಬರ ವ್ಯಾಖ್ಯಾನ(?)ವಾಯಿತು- ಖುರ್ಚಿಯ ಮೇಲೆ ಕುಳಿತುಕೊಂಡೇ ಬರೆದು ತಂದದ್ದನ್ನು ಓದಿದರು. ಹಿಂದುಸ್ಥಾನದ ಸದ್ಯದ ರಾಜಕೀಯ ಪದ್ಧತಿಯ ವಿಷಯ. ಈ ವಿಷಯದಮೇಲೆ ನೌಕರಶಾಹಿಗೆ ಸೇರಿದ ಸಾಹೇಬರು ಏನು ಹೇಳಬೇಕೊ ಅದನ್ನು ಹೇಳಿದರು. ಹಿಂದೂ ಮುಸಲ್ಮಾನರ ಬಡಿದಾಟ ಅಶಿಕ್ಷಣ, ಅಸ್ಪೃಶ್ಯತೆ ಇವೇ ಮೊದಲಾದ ದೋಷಗಳನ್ನು ತೆಗೆದು ಹಾಕಲಿಕ್ಕೆ ದುರ್ಬಲರಾದ ಭಾರತೀಯರು ಸ್ವರಾಜ್ಯಕ್ಕೆ ಅಪಾತ್ರರೆಂದೇ ಅವರು ಹೇಳಿದ್ದು. ಈಗ್ಗೆ ಇಂಗ್ಲೀಷರು ಹಿಂದುಸ್ಥಾನವನ್ನು ಬಿಟ್ಟು ತೆರಳಿದರೆ ದೇಶದ ತುಂಬೆಲ್ಲ ಅರಾಜಕತೆ ಉಂಟಾಗುವದಂತೆ! ಸಿ. ಐ. ಡಿ. ಯವರ್ ಇವರು ಹಿಂದುಸ್ಥಾನಕ್ಕೆ ವಾಣಿಜ್ಯ ಅವಶ್ಯಕನಾದ ಕಲ್ಯಾಣವನ್ನು ಇಂಗ್ಲಂಡಿನ ಹಸ್ತದಲ್ಲಿಯೂ ಕಾಣುವದು ತಕ್ಕದಿಲ್ಲವಂತೆ!

ಬಹು ಯೋಗ್ಯ? ಈ ಯೋಗ್ಯ ವಿಧಾನಗಳಿಗೆ ಉತ್ತರ ಕೊಡಬೇಕೆಂದರೆ ಕಾರ್ಯದರ್ಶಿಗಳು ಸಮ್ಮತಿಸಲಿಲ್ಲ! ಒಳಗಿನ ಕಾರಣವನ್ನು ಯಾರು ಬಲ್ಲರು! ವಾಚನಾಲಯದಲ್ಲಿ ರಾಜಕೀಯ ವಿಷಯಗಳ ಉಪನ್ಯಾಸಗಳಾಗಬಾರದೆಂಬ ನಿಯಮವಿದೆ. ಆದರೆ ಕಾರ್ಯದರ್ಶಿಗಳು ಈ ನಿಯಮವನ್ನು ಉಲ್ಲಂಘಿಸಬೇಕೆ? ಕಲೆಕ್ಟರ ಸಾಹೇಬರು ಪ್ರಜೆಗಳ ಸಂಗಡ ಕಲೆತು ಅವರ ವಿಚಾರಗಳನ್ನು ತಿಳಿದುಕೊಳ್ಳಲು ಹಾತೊರೆಯುತ್ತಿರುವೆವೆಂದು ಸ್ವತಃ ತಾವೇ ಹೇಳುತ್ತಿರಲು, ಕಾರ್ಯದರ್ಶಿಗಳು ಇತರರಿಗೆ ಮಾತನಾಡಲು ಅವಕಾಶ ಕೊಡದಿದ್ದದ್ದು ಆಶ್ಚರ್ಯ! ಇದು ಕಲೆಕ್ಟರ ಸಾಹೇಬರ ಮನಸ್ಸಿಗಾದರೂ ಬರುವದೋ?

ಕರ್ನಾಟಕ.

ಮುಂಬಯಿ ಕರ್ನಾಟಕ.

ಹೊಸಪೇಟೆಯ ಜ್ಯೋತಿರ್ವಿದ್ವಾಂಸರವರು ಈ ವರ್ಷದ ಭವಿಷ್ಯದಲ್ಲಿ ಕರ್ನಾಟಕದಲ್ಲಿ ಮಳೆಯು ಸಮಾಧಾನಕರವಾಗುವದಿಲ್ಲವೆಂದೂ ಈ ವರ್ಷ ಆಗಸ್ಟದಿಂದ ಸಪ್ಟಂಬರ ಕೊನೆಯ ವರೆಗೆ ವೃತ್ತಪತ್ರಕಾರರಿಗೆ ಅನೇಕ ಸಂಕಟಗಳು ಒದಗುವವೆಂದೂ ಹೇಳಿದ್ದಾರೆ.

ಮುಧೋಳ ಸಂಸ್ಥಾನದ ಮಹಾರಾಜರು ೧೭ ನೇ ಮರಾಠಾ ಶಿಕ್ಷಣ ಪರಿಷತ್ತಿನ ಅಧ್ಯಕ್ಷರಾಗಿದ್ದು, ಆ ಕೆಲಸಕ್ಕಾಗಿ ಸಾತಾರೆಗೆ ಹೋಗಿದ್ದಾರೆ.

ಗವರ್ನರ ಸಾಹೇಬರು ಸಾಂಗಲಿಗೆ ಬಂದು ಹೋದರು. ಬಂದರು-ಹೋದರು!!

ಮದ್ರಾಸ ಕರ್ನಾಟಕ.

ಬಳ್ಳಾರೀ ಜಿಲ್ಲೆಯ ಕೆಲವು ಭಾಗಗಳನ್ನು ಅನಂತಪುರ ಜಿಲ್ಲೆಗೆ ಸೇರಿಸಬೇಕೆಂದು ಮದ್ರಾಸ ಸರಕಾರದ ವಿಚಾರವಿದೆ.

ನೀಲಗಿರಿ ಜಿಲ್ಲೆಯ ಕೂನೂರದಲ್ಲಿ ಶ್ರೀ ನಾರಾಯಣನ್ ವಕೀಲ ಇವರು ಅಶೋಕ ಸಾಮ್ರಾಜ್ಯ ವಿಷಯದಮೇಲೆ ಐತಿಹಾಸಿಕ ಉಪನ್ಯಾಸವನ್ನು ಕೊಟ್ಟರು. ಈ ಬಲಕದಂಜಿಯ ರಾಜರು ತಮ್ಮ ಪತ್ನಿಯರೊಂದಿಗೆ ಸಭೆಗೆ ದಯಮಾಡಿಸಿದ್ದರು ಅವರು ಆ ಸಮಯದಲ್ಲಿ ಭಾಷಣಮಾಡಿದರು

ಶ್ರೀ ಕರ್ನಾಡ ಸದಾಶಿವರಾಯರು ಸ್ವರಾಜ್ಯ ಪಕ್ಷವನ್ನು ಸ್ವೀಕರಿಸುವರೆಂಬುದಾಗಿ ವಾರ್ತೆ.

ಮೈಸೂರ ಕರ್ನಾಟಕ.

ಮೈಸೂರ ಅರಮನೆಯ ವೀಣಾವಿದ್ವಾಂಸರಾದ ಶ್ರೀ ವೆಂಕಟಗಿರಿಯಪ್ಪನವರು ನಿನ್ನೆ ಮುಂಬಯಿಗೆ ಹೋಗಿದ್ದರು. ಅಗ್ಗೆ ರವೀಂದ್ರನಾಥ ರವೀಂದ್ರರು ಅವರ ವೀಣಾವಾದನವನ್ನು ಕೇಳಿ, ಈ ಕರ್ನಾಟಕ ಪದ್ಧತಿಯ, ವೀಣಾವಾದನವು ನನ್ನ ಮನಸ್ಸನ್ನು ಆನಂದ ಸಾಗರದಲ್ಲಿ ಮುಳುಗಿಸಿದೆ ಎಂದು ಹೇಳಿದರಂತೆ. ಇನ್ನಮೇಲೆ ತಮ್ಮ ವಿಶ್ವಭಾರತಿ ವಿದ್ಯಾಲಯದಲ್ಲಿ ವೀಣಾಪದವಿಯನ್ನೊಂದು ಇಡುವೆನೆಂದು ಹೇಳಿದರಂತೆ! ಮೈಸೂರಿನಿಂದಲೇ ಓರ್ವ ಶಿಕ್ಷಕರನ್ನು ಶಾಂತಿನಿಕೇತನಕ್ಕೆ ಬರಮಾಡಿಕೊಳ್ಳುವ ವಿಚಾರವಿದೆ! ಕನ್ನಡಿಗರಿಗೆ ಆನಂದದ ಸುದ್ದಿ. ವೆಂಕಟಗಿರಿಯಪ್ಪನವರು ಉಪಯೋಗಿಸುವ ವೀಣೆಯು ೩೦೦ ವರ್ಷಗಳಿಂದಲೂ ಅವರ ಮನೆತನದಲ್ಲಿದೆ.

ನಿಜಾಮ ಕರ್ನಾಟಕ

ಕರವೀರ ಪೀಠದ ಶಂಕರಾಚಾರ್ಯರೂ, ಶ್ರೀ ಕೌಜಲಗಿ ಶ್ರೀನಿವಾಸರಾಯರೂ ಹೈದರಾಬಾದಿನಲ್ಲಿ ಕರ್ನಾಟಕ ಸಂಘದಲ್ಲಿ ವ್ಯಾಖ್ಯಾನ ಕೊಟ್ಟರು. ದೇಶ ಧರ್ಮ ಭಾಷೆಗಳಲ್ಲಿ ಶ್ರದ್ಧೆಯಿರಬೇಕೆಂದು ಒಳ್ಳೇ ಕಳಕಳಿಯಿಂದ ಕನ್ನಡದಲ್ಲಿಯೇ ಮಾತನಾಡಿದರು.

ಹಿಂದುಸ್ಥಾನ.

ಶ್ರೀ. ದಾಸಬಾಬುರವರು ಅಸ್ವಸ್ಥತೆಯ ಮೂಲಕ ವಿಲಾಯತಿಗೆ ಹೋಗುವವರಿದ್ದಾರೆ.

ಲಾರ್ಡ ರೀಡಿಂಗರವರು ವಿಲಾಯತಿಗೆ ಹೋದರು

ಕಲಕತ್ತೆ ಮತ್ತು ಹಿಂದೂಮಹಾಸಭೆಯ ಮತ್ತು ಪರಿಷತ್ತಿನಲ್ಲಿ ಅಖಿಲ ಭಾರತೀಯ ಪರಿಷತ್ತಿನ ಅಧಿವೇಶನಗಳು ನಡೆದವು.

ಪರದೇಶ.

ಅಫಗಾಣಿಸ್ಥಾನದಿಂದ ಹಿಂದುಸ್ಥಾನಕ್ಕೆ ಪ್ರೋಕ್ಷ ಮಾರ್ಗವಾಗಿ ಬರಬಲ್ಲ ಬಲೂಚಿಸ್ಥಾನವು ಬ್ರಿಟಿಶ ಸ್ವಾಧೀನವಾಗಬೇಕು ... ... ಇದರ ವಿಷಯ ಚರ್ಚೆ ನಡೆಯುತ್ತಿದೆ

ವಿನಂತಿಯು.

"ಕನ್ನಡಿಗ" ನ ೪ ಸಂಚಿಕೆಗಳು ವಾಚಕರ ಹಸ್ತಗತವಾಗಿವೆ. ೪೦೦೦ ಪ್ರತಿಗಳನ್ನು ಅಂಚೆಗೆ ಕಳಿಸಲು ಪ್ರತಿವಾರದಲ್ಲಿಯೂ ೬೨ ರೂಪಾಯಿ ಮೊದಲು ಅಂಚೆಯ ವೆಚ್ಚ ತಗಲುವದು! ಉಳಿದ ವೆಚ್ಚಗಳು ಬೇರೆ. ಇದನ್ನು ಲಕ್ಷ್ಯದಲ್ಲಿ ತಂದು ವಾಚಕರು ಈ ಸಂಚಿಕೆಯು ಕೈ ಸೇರಿದ ಕೂಡಲೇ ಚಂದಾ ಹಣವನ್ನು ಮನಿಯಾರ್ಡರ ಮಾಡಿ ಕಳಿಸಬೇಕಾಗಿ ಸವಿನಯ ಪ್ರಾರ್ಥನೆ. ಕೆಲವು ಸಾರೆ ಚಂದಾದಾರರು ಇತ್ತ ಕಡಿಗೆ ಮನಿಯಾರ್ಡರ ಕಳಿಸುವದೂ, ನಾವೂ ಅತ್ತ ಕಡಿಗೆ ವಿ. ಪಿ. ಕಳಿಸುವದೂ, ಏಕ ಕಾಲಕ್ಕೆ ಒದಗಿ, ತೊಂದರೆಯಾಗುತ್ತದೆ. ಆದ್ದರಿಂದ ನಾವು ೬ ನೇ ಸಂಚಿಕೆಯ ವರೆಗೆ ಮನಿಯಾರ್ಡರದ ಮಾರ್ಗ ಕಾಯ್ದು (ಅಂದರೆ ಚಂದಾದಾರರು ಈ ಸಂಚಿಕೆ ಮುಟ್ಟಿದ ಕ್ಷಣದಲ್ಲಿಯೇ ಮನಿಯಾರ್ಡರ ಕಳಿಸುವರೆಂದು ನಂಬಿ, ಅದು ನಮಗೆ ಬಂದು ತಲ್ಪುವದಕ್ಕೆ ಸಾಕಷ್ಟು ಅವಕಾಶ ಕೊಟ್ಟು) ಮುಂದೆ ೬ ನೇ ಸಂಚಿಕೆಯನ್ನು ವಿ. ಪಿ ಯಿಂದ ಕಳಿಸುವೆವು. ಇನ್ನು ಯಾರಿಗೆ 'ಕನ್ನಡಿಗ' ನ ಭೆಟ್ಟಿಯ ಆವಶ್ಯಕತೆಯಿಲ್ಲವೋ ಅವರು ಮಾತ್ರ ಕೂಡಲೇ ನಮಗೆ ಹಾಗೆ ದಯವಿಟ್ಟು, ಬರೆದು, ನಮ್ಮ ಮೇಲೆ ಉಪಕಾರ ಮಾಡಬೇಕಾಗಿ ಪ್ರಾರ್ಥನೆ.

ವ್ಯವಸ್ಥಾಪಕ ಕನ್ನಡಿಗ ಬಾಗಲಕೋಟೆ.

ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫ ರೂ. ಉಪಕಾರಕರ್ತೃಗಳಿಗೆ ವಾ ೧೦ ರೂ. ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ	೧ ರೂ. ಇಲ್ಲವೆ, ೧೫ ನಂಬರಿಗೆ ಕಡಿಮೆ ಯಾಗದಂಥ ೪೦೦೦ ಯಾರ್ಡ ಕೈನೂಲು
ಪರಸ್ಥಳದ	ಮನಿಯಾರ್ಡರದಿಂದ ೧-೧೩-೦ ವಿ. ಪಿ. ಯಿಂದ ೨-೦-೦ ಇಲ್ಲವೆ ೧೫ ನಂಬರಿಗೆ ಕಡಿಮೆಯಾಗದ ೧೬೦೦೦ಯಾರ್ಡ ಕೈನೂಲು.
ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೩-೦ ,, ವಿ. ಪಿ. ಯಿಂದ ೩-೦-೦
ಸರಕಾರ, ಮುನಸಿಪಾಲಿಟಿ ಲೋಕಲ್ ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦ ವಿ. ಪಿ. ಯಿಂದ ೫-೦-೦

ಬಿಡಿ ಸಂಚಿಗೆ ೯ ಪೈ. ಹಿಂದಿನಸಂಚಿಕೆಯೊಂದಕ್ಕೆ ೨ ಆಣೆ. ಧರ್ಮಾರ್ಥವಾಗಿಯಾಗಲೀ, ವರ್ಷದ ಕಡಿಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ.

ಟಿಪ್ಪ— ಈ ಸಾರೆಯೂ ೪೦೦೦ ಪ್ರತಿಗಳು ಮುದ್ರಿತವಾಗಿವೆ. ಜಾಹೀರಾತು ಕೊಡಲಿಚ್ಛಿಸುವವರು ತ್ವರೆಮಾಡಬೇಕು.

ವ್ಯವಸ್ಥಾಪಕ.

ಪತ್ರವ್ಯವಹಾರ.

ಕನ್ನಡಿಗನಲ್ಲಿ ನಾವು ಪ್ರಸಿದ್ಧಿಸುವದಕ್ಕಾಗಿ ಅನೇಕ ಪತ್ರಗಳು ಬಂದಿವೆ. ಓದುವ ವಿಷಯಗಳನ್ನು ಹೆಚ್ಚಾಗಿ ಕೊಡುತ್ತಿರುವದರಿಂದ ಪತ್ರವ್ಯವಹಾರಕ್ಕೆ ಅಷ್ಟೊಂದು ಸ್ಥಳವಿಲ್ಲ ಆದರೂ ಮಹತ್ವದ ವಿಷಯಗಳಿದ್ದಲ್ಲಿ ಪ್ರಸಿದ್ಧಿಸುವೆವು. ವಾಚಕರು ಮಾತ್ರ ಮಹತ್ವದ ಸಂಗತಿಗಳನ್ನು ಸ್ವಲ್ಪದರಲ್ಲಿ ಬರೆಯಬೇಕಾಗಿ ಪ್ರಾರ್ಥನೆ. ಇಲ್ಲದ ರಗಳೆಯನ್ನು ಬರೆಯಬಾರದು. ಸದ್ಯದಲ್ಲಿ ಬಂದ ಪತ್ರವ್ಯವಹಾರ ಲೇಖಗಳನ್ನು ಮುಂದಿನಸಾರೆ ಸಂಕ್ಷಿಪ್ತ ರೀತಿಯಲ್ಲಿ ಕೊಡುವೆವು. ನಿರಾಕರಿಸಲ್ಪಟ್ಟ ಪರಸ್ಥಳದ ಲೇಖಗಳು ಮರಳಿ ಬೇಕಾಗಿದ್ದರೆ ಅಂಚೆ ಚೀಟಿ ಹಚ್ಚಿ, ವಿಳಾಸ ಬರೆದ ಲಕೋಟೆಯನ್ನು ಲೇಖದ ಜೊತೆಗೆ ಕಳಿಸಬೇಕು.

"ಕನ್ನಡಿಗ"ನ ಸಂಪಾದಕರು.

ಲೋಕಬಂಧು

ಈ ವಾರಪತ್ರವು ಧಾರವಾಡದಲ್ಲಿ ಲಕ್ಷ್ಮಣ ರಾಮಚಂದ್ರ ಪಾಣಿ ಇವರ ಸಂಪಾದಕತ್ವದ ಕೆಳಗೆ ಪ್ರತಿ ರವಿವಾರ ಹೊರಡುತ್ತದೆ. ಇದರಲ್ಲಿ ರಾಜಕೀಯ, ಸಾಮಾಜಿಕ, ಔದ್ಯೋಗಿಕ, ಶೈಕ್ಷಣಿಕ ಮುಂತಾದ ವಿಷಯಗಳು ಚನ್ನಾಗಿ ಪ್ರತಿಪಾದಿಸಲ್ಪಡುವವಲ್ಲದೆ ಎಲ್ಲ ಪ್ರಚಲಿತ ಸಂಗತಿಗಳು ಸುಲಭ ಭಾಷೆಯಲ್ಲಿ ಬರೆಯಲ್ಪಡುವವು.

ವಾರ್ಷಿಕ ವರ್ಗಣಿ ಮುಂಗಡ ೩-೮-೦ } ಮ್ಯಾನೇಜರ. ಲೋಕಬಂಧು ಆಫೀಸ, ಧಾರವಾಡ

ಈ ಪತ್ರಿಕೆಯು ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು. ಪ್ರತಿ ೪೦೦೦

ರ. ನಂ. ಬಿ. ೧೯೪೭ ವಾ. ಚಂದಾ ೧-೧೪-೦ ಮಾತ್ರ!

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವೇಶವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ವೈಶಾಖ ಶುದ್ಧ ೧ ಶಕೆ ೧೮೪೭. ತಾ|| ೨೪-೪-೧೯೨೫. | ಸಂಚಿಕೆ ೫

ಸಂಪಾದಕರ ಭೂಮಿ.

ಎದ್ದರೆ ಕನ್ನಡ ಕುಳಿತರೆ ಕನ್ನಡ ನುಡಿದರೆ ಕನ್ನಡವು ।
ಹೃದ್ಯವು ಕನ್ನಡ ಉದ್ಯಮ ಕನ್ನಡ- ಕನ್ನಡ- ಕನ್ನಡವು ।
ಕನಸು ಮನಸಿನೊಳು ಕನ್ನಡ ಕನ್ನಡ ನಿದ್ದೆಯು ಕನ್ನಡವು।
ತಿನಸು ಕನ್ನಡವು ಜೀವಿತ ಕನ್ನಡ ಎಲ್ಲವು ಕನ್ನಡವು ॥
—ಕೈ. ನಗರ ಕವಿ

ಕನ್ನಡಿಗನ ಬಗ್ಗೆ ಅನೇಕರು ಅನೇಕ ಬಗೆಯ ಸೂಚನೆಗಳನ್ನು ಕಳುಹಿಸುತ್ತಿರುವರು. ಅವುಗಳಲ್ಲಿ ಮುದ್ರಣವು ಮುದ್ದಾಗಿರಬೇಕೆಂಬುದು ಎಲ್ಲಕ್ಕೂ ಮೊದಲನೇಯದು ಈ ಸೂಚನೆಯನ್ನು ಕೃತಿಯಲ್ಲಿ ತರಲು ನಾವು ಈಗಾಗಲೇ ಜಾಗ್ರತರಾಗಿರುವೆವು. ಪ್ರತಿ ವಾರದಲ್ಲಿ ೪೦೦೦ ಪ್ರತಿಗಳನ್ನು ಮುದ್ರಿಸಲಿಕ್ಕೆ ಅನೇಕ ಬಗೆಯ ಸೌಕರ್ಯಗಳು ಬೇಕಾಗುತ್ತವೆ. ಈ ಬಗ್ಗೆ ಅವಶ್ಯವಿದ್ದ ಉಪಕರಣಗಳನ್ನು ನಾವು ಸಿದ್ಧಪಡಿಸುತ್ತಲಿರುವೆವು. ಇನ್ನು ೫-೬ ವಾರಗಳಲ್ಲಿ ಮುದ್ರಣವು ಮುದ್ದಾಗುವಂತೆ ಏರ್ಪಾಡಾಗುವದೆಂದು ಹೇಳಬಲ್ಲೆವು. ನುಣುಪಿನ (ಗ್ಲೇಜ್ಡ) ಕಾಗದಗಳನ್ನು ನಾವು ಉಪಯೋಗಿಸಬೇಕೆಂದೂ ವಾ. ಚಂದಾ ರೂ. ೧ ದಲ್ಲಿ ಹಾಗೆ ಮಾಡುವದು ಶಕ್ಯವಿಲ್ಲದಿದ್ದರೆ ನುಣುಪು ಕಾಗದಗಳ ಸಂಚಿಕೆಯನ್ನು ಬೇರೆ ಮುದ್ರಿಸಿ, ನುಣುಪು ಕಾಗದಗಳ ಅವಶ್ಯಕತೆಯಿದ್ದವರಿಂದ ಇನ್ನೂ ಹೆಚ್ಚು ಚಂದಾ ಹಣ ತೆಗೆದುಕೊಳ್ಳಬಹುದೆಂದೂ, ಎರಡನೆಯ ಸೂಚನೆ. ಒಂದೇ ರೂ. ದಲ್ಲಿ ನುಣುಪು ಕಾಗದಗಳನ್ನು ಪೂರೈಸುವದು ಶಕ್ಯವಿಲ್ಲ ಆದ್ದರಿಂದ ನಾವು ಪ್ರಸಿದ್ಧ ಪಡಿಸಿದ ದರಗಳಕ್ಕಿಂತ ಅರ್ಧ ರೂಪಾಯಿ ಹೆಚ್ಚಾಗಿ ಕೊಡುವಂತಹ ಕನಿಷ್ಟ ೧೦೦ ಜನರಾದರೂ ಸಿದ್ಧರಾದರೆ ಈ ಸೂಚನೆಯನ್ನು ಸ್ವೀಕರಿಸುವೆವು. ಸುದ್ದಿಗಳನ್ನು ಹೆಚ್ಚಿಸಬೇಕೆಂದು ಕೆಲವರೂ, ಸುದ್ದಿಗಳಿಗೆ 'ಕನ್ನಡಿಗ'ನಲ್ಲಿ ಸ್ಥಳ ಕೊಡದೇ, ಸುದ್ದಿಯ ಸ್ಥಳದಲ್ಲಿಯೂ, ವಿಷಯಗಳನ್ನೇ ಸೇರಿಸಬೇಕೆಂದು ಬೇರೆ ಕೆಲವರೂ ಸೂಚಿಸಿರುವರು. ಕನಿಷ್ಟ ಎರಡು ಪುಟಗಳನ್ನು ಜಾಹೀರಾತುಗಳಿಗೆ ಕಾದಿಡಬೇಕೆಂದು ನಮ್ಮ ಹಿತಚಿಂತಕರು ಇತ್ತ ಆಗ್ರಹ ಪಡುತ್ತಿದ್ದಾರೆ ಕನ್ನಡಿಗನಲ್ಲಿ ಒಂದಾದರೂ ಜಾಹೀರಾತು, ಪ್ರಕಟವಾಗಕೂಡದೆಂದು ಅತ್ತ ಕೆಲವರು ಅಪ್ಪಣೆ ಕೊಟ್ಟಿದ್ದಾರೆ. 'ಜಾರುಕೋಲಿನ' ಸಲುವಾಗಿಯೇ 'ಕನ್ನಡಿಗ' ನನ್ನು ಓದಹತ್ತಿ ಕೊಳ್ಳುತ್ತಿರುವೆವಾದ್ದರಿಂದ ಜಾರಕೋಲಿನ ಪುಟವನ್ನು ಹೆಚ್ಚಿಸಬೇಕೆಂದು ಜಾರಕೋಲಿನಲ್ಲಿ ಪ್ರೀತಿಯುಳ್ಳವರ ಅಭಿಪ್ರಾಯ. ನಾವು ಪತ್ರ ವ್ಯವಹಾರಗಳನ್ನು ಮುದ್ರಿಸುವದಿಲ್ಲವೆಂದು ಹಲವರು ಕೋಪ ಕೊಂಡಿರುವರು. " ಮಹಾತ್ಮಾ ಗಾಂಧೀಯಂಥಹ ರಾಷ್ಟ್ರಪುರುಷನು ಸ್ವರಾಜ್ಯಕ್ಕೆ ಟೊಂಕ ಕಟ್ಟಿರಲು ' ಕನ್ನಡ ಕನ್ನಡ ' ಎಂದೂ ಕರ್ನಾಟಕ ಎಂದೂ ಕೂಗುವ ನೀನು ನನ್ನ ಭೆಟ್ಟಿಗೆ ಬರಬೇಡ " ವೆಂಬದಾಗಿ ಓರ್ವನು ಗದ್ದರಿಸಿರುವನು. ಇನ್ನೂ ಅನೇಕ ಬಗೆಯ ಸೂಚನೆಗಳಿವೆ. ಅವನ್ನೆಲ್ಲ ಇಲ್ಲಿ ಹೇಳುವದಕ್ಕೂ, ಮೇಲೆ ಹೇಳಿದಂಥವುಗಳಿಗೆಲ್ಲ ವಿಸ್ತಾರವಾಗಿ ಉತ್ತರ ಕೊಡುವದಕ್ಕೂ ಅವಕಾಶವಿಲ್ಲ. ಈಗ್ಗೆ ನಾವು ನಿಶ್ಚಯಿಸಿಕೊಂಡಿರುವ ಪದ್ಧತಿಯನ್ನೇ ಅನುಕರಿಸುವೆವು. ಆ ಪದ್ಧತಿಯಲ್ಲಿ ವ್ಯತ್ಯಾಸ ಮಾಡುವದು ಇಷ್ಟವಲ್ಲ. ಇಷ್ಟೇ ಉತ್ತರ. ಜಾರುಕೋಲನ್ನು ಮಾತ್ರ ಅನೇಕರು ಹಿಡಿಯಲಿಕ್ಕೆ ಆತುರರಾದದ್ದು ಆನಂದದ ಸಂಗತಿ. ಓರ್ವ ಒಕ್ಕಲಿಗನು ಸ್ವಯಂಸ್ಫೂರ್ತಿಯಿಂದ ತಾನೇ ಜಾರುಕೋಲನ್ನು ಹಿಡಿದಿರುವನು ಜಾರುಕೋಲಿನ ಅವನ ಲೇಖಗಳು ಮುಂದಿನ ವಾರದಿಂದ ಪ್ರಸಿದ್ಧವಾಗುವವು. ಅವನು ಈ ಬಗೆಯಾಗಿ ಬರೆಯುವನೆಂಬ ಕಲ್ಪನೆ ಕೂಡ ನಮಗಿದ್ದಿಲ್ಲ. 'ತುಂಟರಚಿಳ್ಳಿ' ' ಆಗಂತುಕ ' ಮೊದಲಾದವರೂ, ಜಾರುಕೋಲಿನ ಲೇಖವನ್ನು ಕಳಿಸುತ್ತಿರುವರು. ಜಾರುಕೋಲನ್ನು ಹಿಡಿಯಲು ಒಬ್ಬನಾದರೂ ಸಿದ್ಧನಾಗುವನೊ ಇಲ್ಲವೋ ಎಂಬ ಚಿಂತೆಯಿದ್ದಾಗ್ಗೆ ಕರ್ನಾಟಕದಲ್ಲಿ ಈ ಸ್ವಲ್ಪಾವಧಿಯಲ್ಲಿ ನಾಲ್ಕಾರು ಜನರು ಸಿದ್ಧರಾದದ್ದು ಸಂತೋಷದ ಸುದ್ದಿ. ಇದೇ ಪ್ರಕಾರವಾಗಿ ಜಾರುಕೋಲನ್ನು ಹಿಡಿಯಲು ಯೋಗ್ಯತೆಯಿದ್ದಂಥ ಜನರೆಲ್ಲ ಹೊರಗೆ ಬಂದರೆ ನಮಗೆ ಹೆಚ್ಚು ಸಂತೋಷವಾಗುವದು.

ಬೆಳಗಾವಿಯು ದಕ್ಷಿಣ ಮಹಾರಾಷ್ಟ್ರದ ಕೇಂದ್ರಸ್ಥಾನವೆಂದೂ, ಆದ್ದರಿಂದ ಪುಣೆಯಂತೆ ಅಲ್ಲಿಯೂ ವಸಂತ ವ್ಯಾಖ್ಯಾನಗಳನ್ನು ಅಲ್ಲಿಯ ಮುಖಂಡರು ಪ್ರಾರಂಭಿಸಬೇಕೆಂದೂ, ' ನವಾಕಾಳ'ಎಂಬ ಮರಾಟೀ ವೃತ್ತ ಪತ್ರದಲ್ಲಿ ಓರ್ವ ' ಗೋಮಾಜೀ ಕಾಪ್ಸೇ'ನು ಪತ್ರ ಬರೆದಿರುವನು. ಕೇಂದ್ರಸ್ಥಾನದ ಅರ್ಥವೇ ಇವನಿಗೆ ತಿಳಿಯದು. ಕೇಂದ್ರವೆಂದ ಮೇಲೆ ಬೆಳಗಾವಿಯ ಸುತ್ತಲಿನ ಸ್ಥಳವೆಲ್ಲ ಮರಾಠಿ ಮಯವಾಗಿರಬೇಕು. ಆದರೆ ಬೆಳಗಾವಿಯ ಹೊರಗೆ ೪-೬ ಮೈಲುಗಳಲ್ಲಿ ಅಚ್ಚ ಕನ್ನಡ ಮಾತನಾಡುವ ಹಳ್ಳಿಗಳೇ ಕಣ್ಣಿಗೆ ಬೀಳುತ್ತವೆಂಬದೂ, ಬೆಳಗಾವಿಯು ದಕ್ಷಿಣ ಮಹಾರಾಷ್ಟ್ರವೆಂಬ ಅಪದ್ಧವಾದ ಹೆಸರು ಹಾಳಾಗಿದೆಂಬದೂ, ಕರ್ನಾಟಕದಲ್ಲಿರುವ ಸಂಸ್ಥಾನಗಳು ಸಹ ದಕ್ಷಿಣ ಮಹಾರಾಷ್ಟ್ರವಾಗದೇ ಉತ್ತರ ಕರ್ನಾಟಕವಾಗಿರುವವೆಂಬದೂ ಈ ಮರಾಟಿಗನಿಗೆ ಇನ್ನೂ ತಿಳಿದಿ

ಕನ್ನಡಿಗರ ಸೇವೆಯಲ್ಲಿಯೇ ನಿರತನಾದ " ಕನ್ನಡಿಗ " ನನ್ನು ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕು!

ತೆ ಕಾಣುವದಿಲ್ಲ ಆಗಲಿ, ಬೇಗನೇ ತಾನೇ ಗೊತ್ತಾಗುವದು. ನಮ್ಮ ಬೆಳಗಾವಿಯ ಬಂಧುಗಳು ಎಚ್ಚತ್ತಿರುವರು ಅಲ್ಲಿಯ ವೀರಶೈವರಲ್ಲಿಯೂ, ಜೈನರಲ್ಲಿಯೂ, ಕನ್ನಡದ ಬಗ್ಗೆ ಜಾಗ್ರತಿಯಾಗಿರುವದು. ಇಂಥಹ ಕುಹಕರು ಏನೆಂದರೇನು? ವಸಂತ ವ್ಯಾಖ್ಯಾನಗಳನ್ನು ಅವಶ್ಯವಾಗಿ ಪ್ರಾರಂಭಿಸಬಹುದು. ಅದಕ್ಕೆ ದಕ್ಷಿಣ ಮಹಾರಾಷ್ಟ್ರವೇ ಏಕೆ ಬೇಕು? ಉತ್ತರ ಕರ್ನಾಟಕವಾದರೆ ವಸಂತ ವ್ಯಾಖ್ಯಾನಗಳಿಗೆ ಅಯೋಗ್ಯವೋ? ಉತ್ತರ ಕರ್ನಾಟಕದಲ್ಲಿ ಕನ್ನಡ ವ್ಯಾಖ್ಯಾನಗಳಿಗೆ ಮಾತ್ರ ಪ್ರಾಧಾನ್ಯವಿರತಕ್ಕದ್ದು ಇಷ್ಟೇ! ಬೆಳಗಾವಿಯಲ್ಲಿ ಮೊನ್ನೆ ಕರ್ನಾಟಕ ಕಾಂಗ್ರೆಸ್ಸ ಆದದ್ದು, ಈಗ್ಗೆ ಕರ್ನಾಟಕ ಸಾಹಿತ್ಯ ಸಮ್ಮೇಲನವಾಗುವದೂ ಈ ಗೋಮಾಜೀ ಸಂತನಿಗೆ ಭಯವನ್ನು ಹುಟ್ಟಿಸಿದಂತೆ ಕಾಣುತ್ತದೆ.

ಕಟ್ಟಡಗಳಲ್ಲಿ ಹಿಂದೀ ಶಿಲ್ಪ ಶಾಸ್ತ್ರಕ್ಕೆ ಈಗಿನ ದಿನಗಳಲ್ಲಿ ಮಾನವಿಲ್ಲ. ಪಾಶ್ಚಾತ್ಯ ಪದ್ಧತಿಯ ಮೇಲ ಸಾರ್ವಜನಿಕ ಕಟ್ಟಡಗಳೂ ಇರುವ ಮನೆಗಳೂ ಕಟ್ಟಲ್ಪಡುವದು ನಮ್ಮ ಹಿಂದೀ ಸಂಸ್ಕೃತಿಗೆ ಒಪ್ಪುವಂಥವಲ್ಲವೆಂಬುದನ್ನು ಮುಂಬೈಯಿಯ ಶಿಲ್ಪ ಶಾಸ್ತ್ರ ಸಂಸ್ಥೆಯವರು (Indian Architecture Association Bombay) ಕಂಡು ಹಿಡಿದು ಸರಕಾರ ಮುನಸೀ ಪಾಲಟಿ, ಲೋಕಲ್ ಬೋರ್ಡ ಮೊದಲಾದ ಸಂಸ್ಥೆಗಳಿಗೆ ಒಂದು ಪತ್ರ ಬರೆದಿರುವರು. ಹಿಂದೀ ಸಂಸ್ಕೃತಿಗೆ ಒಪ್ಪುವಂತೆ ಅಂದವಾದ ಕಟ್ಟಡಗಳನ್ನು ಹಿಂದೀ ಶಿಲ್ಪ ಶಾಸ್ತ್ರಕ್ಕನುಸರಿಸಿ ನಿರ್ಮಿಸುವದು ಹೆಚ್ಚು ಶ್ರೇಯಸ್ಕರವಾಗಿದೆಯೆಂದೂ ಹಿಂದೀ ಶಿಲ್ಪ ಕಲೆಯ ಕಟ್ಟಡಗಳನ್ನು ಪಾಶ್ಚಾತ್ಯ ಕಲೆಯಗಿಂತ ಸುಂದರವಾಗುವಂತೆ ಕಟ್ಟಲು ಬರುವದೆಂದೂ ಆ ಪ್ರಕಾರವಾಗಿ ನಕಾಶೆಗಳನ್ನು ತೆಗೆದುಕೊಡಲು ತಾವು ಸಿದ್ಧರಿರುವರೆಂದೂ ಈಸಂಸ್ಥೆಯವರು ಪ್ರಸಿದ್ಧ ಪಡಿಸಿರುವರು. ಕರ್ನಾಟಕವು ಶಿಲ್ಪ ಕಲೆಯಲ್ಲಿ ಹೆಸರಾಗಿದೆ. ಈ ಕೀರ್ತಿಯನ್ನು ಕರ್ನಾಟಕವು ಕಳೆದುಕೊಳ್ಳಬಾರದು. ಆದ್ದರಿಂದ ಕರ್ನಾಟಕದಲ್ಲಿಯ ಜನರೂ ಸರಕಾರ ಮುನಸೀಪಾಲಿಟಿ ಲೋಕಲ್ ಬೋರ್ಡಗಳೂ ಹೊಸ ಕಟ್ಟಡಗಳನ್ನು ಕಟ್ಟಿಸುವಾಗ್ಗೆ ಈ ವಿಷಯದಲ್ಲಿ ಮೇಲಿನ ಸಂಸ್ಥೆಯನ್ನು ಸಂಪೂರ್ಣವಾಗಿ ವಿಚಾರಿಸಬೇಕು.

ಹಿಂದೂ ಮಹಾಸಭೆಯ ಕಾರ್ಯವು ಕಲಕತ್ತೆಯಲ್ಲಿ ಮುಗಿಯಿತು. ಈ ಸಾರೆಯ ಮಹಾ ಸಭೆಯ ವೈಶಿಷ್ಟ್ಯವೆದಂರೆ, ಇನ್ನು ಮೇಲೆ ಮಹಾ ಸಭೆಯವರು ಲೋಕ ಜಾಗೃತೆಯ ಕೆಲಸವನ್ನು ಒಳ್ಳೇಕಸುವಿನಿಂದ ಸಾಗಿಸುವಂತೆ ವಿಚಾರಿಸಿ ೫ ಲಕ್ಷ ರೂಪಾಯಿ ನಿಧಿಯನ್ನು ಕೂಡಿಸಲು ನಿಶ್ಚಯಿಸಿದ್ದು. ಸನಾತನಧರ್ಮೀಯರು ಈಅಧಿವೇಶನದಲ್ಲಿ ಹಿಂದೂ ಮಹಾ ಸಭೆಯನ್ನು, ಅಸ್ಪೃಶ್ಯತಾ ನಿವಾರಣೆ, ಮತ್ತು ಹಿಂದೂ ಧರ್ಮಕ್ಕೆ ಅನ್ಯರನ್ನು ಸೇರಿಕೊಳ್ಳುವದು, ಈ ವಿಷಯಗಳಲ್ಲಿ ವಿರೋಧಿಸಿದರು. ಹಿಂದೂ ಧರ್ಮದಲ್ಲಿದ್ದವರು ಬೇರೆ ಧರ್ಮವನ್ನು ಸ್ವೀಕರಿಸಿ ಈಗ್ಗೆ ಪಶ್ಚಾತ್ತಾಪ ಪಡುತ್ತಲಿದ್ದರೂ ಸಹ ಅವರನ್ನು ಹಿಂದೂ ಧರ್ಮದಲ್ಲಿ ಸೇರಿಸಿಕೊಳ್ಳುವದು ಸನಾತನ ಧರ್ಮಕ್ಕೆ ವಿರುದ್ಧವಾಗಿದೆಯೆಂದು ಇವರ ಮತ. ಆ ಜನರು ತಮ್ಮ ಕರ್ಮಕ್ಕಾಗಿ ಪಶ್ಚಾತ್ತಾಪ ಪಡುತ್ತಿದ್ದರೆ ಮುಂದಿನ ಜನ್ಮದಲ್ಲಿ ಪುನಃ ಹಿಂದೂಧರ್ಮದಲ್ಲಿ ಹುಟ್ಟಬಹುದು. ಆದರೆ,ಭ್ರಷ್ಟರಾದವರನ್ನು ಮರಳಿ ಹಿಂದೂ ಧರ್ಮದಲ್ಲಿ ಸೇರಿಸಿಕೊಳ್ಳುವದು ಸನಾತನ ಧರ್ಮಕ್ಕೆ ವಿರುದ್ಧವಾಗಿದೆಂಬದಾಗಿ ಅವರು ವಿಧಾನಿಸಿದರು. ಮಹಾ ಸಭೆಯವರು ಈ ಎರಡೂ ವಿಷಯಗಳನ್ನು ತಮ್ಮ ಕಾರ್ಯಕ್ರಮದಿಂದ ತೆಗೆದು ಹಾಕದಿದ್ದರೆ, ಸನಾತಧರ್ಮೀಯರಾದ ನಾವು ಮಹಾ ಸಭೆಯ ವಿರುದ್ಧ ಚಳವಳಿಯನ್ನು ಮಾಡುವೆವೆಂದು ಸಾರಿ ಹೇಳಿದರು. ಚಳವಳಿಯು ಹೇಗಾದರೂ ಸಾಗಲಿ. ಕೊಳೆತು ಹೋದ ಹಿಂದೂ ಧರ್ಮದ ವಿಷಯವಾಗಿ ಜನರು ಇಷ್ಟೊಂದು ಉತ್ಸಾಹದಿಂದ ವಿಚಾರ ಮಾಡಹತ್ತಿರುವದು. ಶುಭಚಿನ್ಹವು.

ವಿಜಾಪುರ ಜಿಲ್ಲೆಯ ಬರಗಾಲದ ಬಗ್ಗೆ ಅನೇಕರು ಅನೇಕ ಸಾರೆ ಬರೆದಿರುವರು; ಮಾತನಾಡಿರುವರು. ಮುನಸಿಪಾಲಿಟಿ ಲೋಕಲಬೋರ್ಡುಗಳು ಈ ಬಗ್ಗೆ ವರಿಷ್ಟ ಅಧಿಕಾರಿಗಳಿಗೆ ಮಾನಪತ್ರ ಕೊಟ್ಟಿರುವರು. ಕೌನ್ಸಿಲದಲ್ಲಿ ಪ್ರಶ್ನೋತ್ತರಗಳಾದವು. ಆದರೆ ಒಂದು ಪಾತ್ರ ಆಗಿಲ್ಲ. ನಮ್ಮ ಜಿಲ್ಲೆಯ ಬಡಜನರ ಬರಗಾಲದ ಭವಣೆಯ ಕಷ್ಟಗಳು ನಮ್ಮ ದಯಾಳು—ಬಹು ದಯಾಳು— ಸರಕಾರದ ಅಂತಃಕರಣಕ್ಕೆ ತಗಲಿರುವದೇ ಇಲ್ಲ.

ಮೈಸೂರ ಕರ್ನಾಟಕದಲ್ಲಿ ಖಾದಿಯ ಬಗ್ಗೆ ಹೆಚ್ಚು ಹೆಚ್ಚು ಪ್ರೇಮವು ಹುಟ್ಟಹತ್ತಿದಂತೆಕಾಣುತ್ತದೆ. ಮೈಸೂರಕಾಯದೇ ಮಂಡಲದಲ್ಲಿ ಸಹ ಖಾದಿಯ ಠರಾವು ಬರತಕ್ಕದ್ದಿದೆ. ಅಲ್ಲಿಯ ವಕೀಲರು ಮೊನ್ನೆ ಮೊನ್ನೆ ತಮ್ಮ ವಕೀಲರ ಪರಿಷತ್ತಿನಲ್ಲಿ ಎಲ್ಲ ವಕೀಲರೂ ಖಾದಿಯನ್ನು ಉಪಯೋಗಿಸಬೇಕೆಂದು ಗೊತ್ತು ಮಾಡಿಕೊಂಡಿರುವರು. ಖಾದೀ ಸಹಕಾರಿ ಸಂಘಗಳನ್ನು ಏರ್ಪಡಿಸಬೇಕೆಂಬ ಪ್ರಯತ್ನಗಳು ನಡೆದಿವೆ. ಸ್ತುತ್ಯ! ಇನ್ನೂ ಬೂಟುಗಳನ್ನು ಹಾಕಿ ಪರದೇಶದ ಉಡುಪುಗಳಿಂದ ಮೆರೆಯುತ್ತಿರುವ ವಕೀಲರು ಈ ಠರಾವನ್ನು ಕೃತಿಯಲ್ಲಿ ತರುವರೊ, ಅಥವಾ ಪರಿಷತ್ತಿನಲ್ಲಿ ಠರಾವು ಪಾಸಾಗಿದೆಂದು ಅಷ್ಟರಿಂದಲೇ ಆನಂದ ಪಡುತ್ತ ಕಾಲಕಳೆಯುವರೋ ನೋಡಬೇಕು!

ಬಾಗಲಕೋಟೆಯ ತರುಣರಲ್ಲಿ ವಿನಂತಿ,

ಗೆಳೆಯರೇ,

ಬಾಗಲಕೋಟೆಯಲ್ಲಿ ಉಚ್ಚ ತರದ ಶಿಕ್ಷಣ ಹೊಂದಿದ ಅನೇಕ ತರುಣರು ಇದ್ದು, ಇವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿರುವದು ಆನಂದದ ಸಂಗತಿಯಲ್ಲವೇ? ಆದರೆ ಇಂಥ ತರುಣರಾದ ನಾವೆಲ್ಲ ಒಂದೆಡೆಯಲ್ಲಿ ಸೇರಿ, ಸಾಮಾಜಿಕ, ವಾಙ್ಮಯಾತ್ಮಕ, ಪುರವಿಷಯಕ, ಮೊದಲಾದ ಸಂಗತಿಗಳನ್ನು ವಿಚಾರಿಸಿ ನಮ್ಮ ಜ್ಞಾನತೃಷೆಯನ್ನು ಸಂತುಷ್ಟಗೊಳಿಸಿಕೊಳ್ಳುವಂಥ ಪ್ರಸಂಗಗಳೇ ಇಲ್ಲದ್ದು ವಿಷಾದಕರವಾದದ್ದು; ಇಂಥ ಕೊರತೆಯನ್ನು ಹೋಗಲಾಡಿಸಿ ಬಾಗಲಕೋಟೆಯ ತರುಣರೆಲ್ಲ ದಿನಾಲು ಅಥವಾ ವಾರದ ಮೇಲೆ ಒಂದೆಡೆಗೆ ಸೇರಿ ಮೇಲಿನ ಉದ್ದೇಶಗಳು ಸಫಲವಾಗಲಿಕ್ಕೆ ಏನು ಮಾಡಬೇಕೆಂಬದನ್ನು ವಿಚಾರಿಸುವದಕ್ಕಾಗಿ ನಾಳಿನ ಶನಿವಾರ ತಾ|| ೨೫ನೇ ದಿನ ಮುಂಜಾನೆ **ಸರಿಯಾಗಿ ೮|| ಗಂಟೆಗೆ** ತರುಣರ ಸಭೆ ಕೂಡಬೇಕೆಂದು ಇಚ್ಛಿಸುತ್ತೇವೆ. ಪೇಟೆಯಲ್ಲಿಯ ಹಳೇ ಮುನಸಿಪಾಲಟೀ ಕಚೇರಿಯಲ್ಲಿ ಅಂದರೆ ಈಗ್ಗೆ ಶ್ರೀ ಪಾಟೀಲ ವಕೀಲರು ಇರುವ ಅಟ್ಟದ ಮೇಲೆ ಎಲ್ಲರೂ ನೆರೆಯುವ ಏರ್ಪಾಡು ಮಾಡಿದೆ. ಬಾಗಲಕೋಟೆಯ ಪ್ರತಿಯೊಬ್ಬ ಸುಶಿಕ್ಷಿತ ಮತ್ತು ವಾಙ್ಮಯ ಅಭಿರುಚಿಯುಳ್ಳ ತರುಣರೂ ಅಲ್ಲಿಗೆ ಸರಿಯಾಗಿ ೮|| ಗಂಟೆಗೆ ಬರಬೇಕಾಗಿ ಸವಿನಯ ವಿನಂತಿಯಿದೆ. ಇತಿ ತಾ|| ೨೪—೪—೩೬.

ತಮ್ಮ ವಿಧೇಯರಾದ,

೧ ಗುರುಬಾಸುರ ಜೋಶಿ. ೨ ಶಂಕರಗೌಡಾ ಪಾಟೀಲ

೩ ಶೇಷಗಿರಿರಾವ ಕೊಪ್ಪಳಪಟ್ಟೆ ೪ ಗುರುರಾವ ಜೋಶಾಪುರ.

೫ ಪಾಂಡುರಂಗರಾವ ಕಿಲ್ಲೆ. ೬ ಶ್ರೀನಿವಾಸ ರಾಜಾರಾವ ಮುನವಳ್ಳಿ

ಕಿರಣಗಳು. •

(ಶ್ರೀರಾಮನು ಬರೆದುದು.)

यद्यत्परवशं दुःखम् । यद्यदात्मवशं सुखम् ॥

ಭಾರತೀಯರು ಈ ಶ್ಲೋಕವನ್ನು ಈಗ್ಗೆ ಎಷ್ಟು ಸಾರೆ ಪಠನ ಮಾಡಿದರೂ ಕಡಿಮೆಯೇ. ಆತ್ಮವಶವಾದಂಥ ವಸ್ತುವು ಈಗ್ಗೆ ಹಿಂದುಸ್ಥಾನದಲ್ಲಾವುದೂ ಇಲ್ಲ. ಆವುದನ್ನು ನೋಡಿದರೂ ಪರವಶವೇ. ಉಳಿದ ವಿಷಯಗಳು ಹೋಗಲಿ. ನಮ್ಮ ಆತ್ಮವನ್ನೇ ನೋಡಲು ನೋಡಿಕೊಳ್ಳುವ. ತನ್ನ ಆತ್ಮವನ್ನು ವಶದಲ್ಲಿಟ್ಟುಕೊಂಡಂಥ ಮಹಾನುಭಾವನನ್ನು ಕಾಣುವದು ಈಗ್ಗೆ ಕಠಿಣ. ಇನ್ನು ಕಾಣುವ ಇಚ್ಛೆಯಿದ್ದರೆ ಒಂದು ವೇಳೆ ಕಾಣಬಹುದು. ಆದರೆ ಆ ಇಚ್ಛೆಯೇ ಮೊದಲು ಇಲ್ಲ. ಆತ್ಮವಶ, ಪರವಶ, ಮೊದಲಾದ ಹಿಂದೂ ಸಂಸ್ಕೃತಿಯ ವಿಚಾರಗಳೇ ಜನರಿಗೆ ಬೇಡ. ಪಾಶ್ಚಾತ್ಯ ಸಂಸ್ಕೃತಿಯ ಅತಿ ಭೌತಿಕ ವಿಚಾರಗಳಿಗೆ ಮರುಳಾದ ಯೋಪಕರು 'ಇಂಥ ಎಟ್ಟಿತನದ ಹಿಂದೂ ಸಂಸ್ಕೃತಿಯ ವಿಚಾರಗಳನ್ನು ತೆಗೆದುಕೊಂಡು ನಾವೇನು ಮಾಡಬೇಕೆಂದು' ಸುಗರಿದು ಅವನ್ನೆಲ್ಲ ತ್ಯಾಗ ಮಾಡಿರುವರು. ಮನಸ್ಸಿಗೆ ಬಂದಂತೆ ಅಕಾಲದಲ್ಲಿಯೂ ಸಕಾಲದಲ್ಲಿಯೂ ಶಿಥಿಲ ವೃತ್ತಿಯಿಂದ ನಡೆಯುವದಕ್ಕೆ ಅವಕಾಶವೊಂದಿದ್ದರೆ ಸಾಕಿದೆ. ಉಳಿದ ವಿಷಯಗಳೇ ಬೇಡ. ಇದೇ ಈಗಿನ ಸಮಾಜದಲ್ಲಿ ಮಾನ್ಯವಾದ ಆಚರಣೆಯಾಗಿದೆ. ಅಂತೆಯೇ ಹಿಂದುಸ್ಥಾನದ ಅವನತಿಯು. ಈ ಶಿಥಿಲವೃತ್ತಿಯಿಂದ ಸ್ವಭಾಷೆ, ಸ್ವದೇಶ, ಸ್ವಧರ್ಮ, ಇನ್ನೇ ಮೊದಲಾದ ಉಚ್ಚತರದ ಭಾವನೆಗಳಿಗೆ ಮನದಲ್ಲಿ ತಳವೂರಿ ನಿಲ್ಲುವಷ್ಟು ಅವಕಾಶವೇ ದೊರೆಯುವದಿಲ್ಲ. ಇದಕ್ಕೆ ಮೂಲ ಕಾರಣವೆಂದರೆ ನಮ್ಮ ಆರ್ಯ ಸಂಸ್ಕೃತಿಯ ಬೀಜಗಳು ನಮ್ಮ ಆರ್ಯರ ರಕ್ತದೊಳಗಿಂದ ಹೊರಬಿದ್ದು, ನಾಶವಾಗ ಹತ್ತಿ ಪಾಶ್ಚಾತ್ಯ ಸಂಸ್ಕೃತಿಯ ಬೆಡಗಿನ ಅದಿ ಭೌತಿಕ ವಿಚಾರಗಳು ಸಂಪೂರ್ಣವಾಗಿ ಖಗ್ರಾಸ ಗ್ರಹಣದಂತೆ ನಮ್ಮನ್ನಾಕ್ರಮಿಸಿದ್ದು. ಆದುದರಿಂದಲೇ **यद्यत्परवशं दुःखम् । यद्यदात्मवशं सुखम् ॥**

ಆತ್ಮದ ವಿಚಾರವಿರಲಿ. ಹೆಚ್ಚಾಗಿ ಬರೆದರೆ ವಾಚಕರು ಬೇಸರಗೊಳ್ಳಬಹುದು. ಈಗ್ಗೆ ದೇಹದ ವಿಚಾರವನ್ನು ಮಾಡುವ. ಪ್ರತಿಯೊಬ್ಬ ಭಾರತೀಯನು ತನ್ನ ದೇಹದ ಕಡೆಗೆ ನೋಡಿಕೊಂಡು ವಿಚಾರ ಮಾಡಿದರೆ ಅದು ಸಹ 'ಪರವಶಂ' ಎಂಬದು ಗೊತ್ತಾಗದೇ ಇರದು. ದೂರ ಬೇಡ. ಈಗ್ಗೆ ಮೂವತ್ತು ನಾಲ್ವತ್ತು ವರ್ಷಗಳ ಹಿಂದಿನ ಜನರ ದೇಹವನ್ನು ನೋಡಿ! ಇತ್ತ ಈಗಿನ ಸಮಾಜದಲ್ಲಿಯ ಯುವಕರ ದೇಹವನ್ನು ನೋಡಿ! ದಾರ್ಢ್ಯತೆಯಲ್ಲಿ ಅದೆಂಥ ವಿಲಕ್ಷಣವಾದ ಭೇದವು! ದಿನಾಲು ೧೦ ಹರದಾರಿ ನಡೆದರೂ ಅವರು ದಣಿಯುತ್ತಿರಲಿಲ್ಲ. ಈಗ್ಗೆ ೧೦ 'ಫರ್ಲಾಂಗ' 'ವಾಕಿಂಗ'ಕ್ಕಾಗಿ ಹೋದರೆ ಸಾಕು ಸಾಕಾಗುವದು. ಅವರಿಗೆ ಇಡೀ ಆಯುಷ್ಯದಲ್ಲಿ ವೈದ್ಯರನ್ನು ಕಾಣುವ ಪ್ರಸಂಗಗಳು ಬಂದರೆ ಒಂದೆರಡು ಮಾತ್ರ! ಆದರೆ ಈಗ್ಗೆ ಪ್ರತಿ ದಿನವೂ ಒಂದೆರಡು ಸಾರೆ ವೈದ್ಯರನ್ನು ಕಾಣಲೇಬೇಕು. ಇಲ್ಲವಾದರೆ 'ಪೇಟೆಂಟ ಮೆಡಿಸಿನ್ನಾದರೂ ಮನೆಯಲ್ಲಿ ಸಿದ್ಧವಾಗಿರಬೇಕು. ಅವರು ದಿನಾಲು ಎರಡು ಊಟಗಳನ್ನುಂಡು ಸುಖಿಯಾಗಿದ್ದರು. ಆದರೆ ಈಗ್ಗೆ ದಿನಾಲು ಪ್ರಾತಃಕಾಲದಿಂದ ಮಲಗುವ ವರೆಗೆ ತಿಂಡಿ ತಿನಸುಗಳು ನಡದೇ ಇದ್ದರೂ ಸುಖವಿಲ್ಲ. ಇದಕ್ಕೆ ಕಾರಣ? ಪರವಶಂ ದುಃಖಂ ನಮ್ಮ ಮನಸ್ಸು ನಮ್ಮ ವಶದಲ್ಲಿ ಇಲ್ಲವಷ್ಟೇ ಕಾರಣ! ದೇಹದ ಉಡುಪನ್ನು ನೋಡಿದರೂ ಹಾಗೆಯೇ ನಾವು ತೊಟ್ಟಿರುವ ಪ್ರತಿಯೊಂದು ಉಡುಗೆಯಲ್ಲಿಯೂ ಪರದೇಶದ ಅಂಶವಿದ್ದೇ ಇರುವದು. ಪರದೇಶೀ ಬಟ್ಟೆಗಳನ್ನಾಗಲೀ, ಇಲ್ಲಿಯ ದೇಶೀ ಗಿರಣಿಗಳ ಬಟ್ಟೆಗಳನ್ನಾಗಲಿ ತೊಡುವ ಜನರ ವಿಚಾರವನ್ನು ಬಿಡಿ ತನ್ನ ಕೈಯಿಂದ ನೂಲು ತೆಗೆದು ತಾನೇ ಬಟ್ಟೆಯನ್ನು ನೇಯ್ದವನ ಸಮಾಚಾರವು ಸಹ ಹಾಗೇ ಇದೆ. ಬೇಕಾದರೆ ಅವನನ್ನು ನಖಶಿಖಾಂತವಾಗಿ ನೋಡಿ ಪಾದದಲ್ಲಿರುವ ಮೋಜೆ ಕೆರವುಗಳಿಂದಾರಂಭಿಸಿರಿ! (ಬೂಟಿನ ವಿಷಯವು ಬೇಡ.!) ಅವಕ್ಕೆ ಬೇಕಾಗುವ ತೊಗಲಾಗಲೀ, ತೊಗಲನ್ನು ಹದ ಮಾಡುವ ಅಥವಾ ಹೊಲಿಯುವ ಉಪಕರಣಗಳಾಗಲೀ ಎಲ್ಲಿಯವು? ಪರದೇಶದವು! ಆ ಮೇಲೆ ಖಾದೀ ಬಟ್ಟೆಯನ್ನು ಧರಿಸುವವನು, ಪರದೇಶದ ಪದ್ಧತಿಯ ಯಾವ ಉಡುಗೆಯನ್ನು ತೊಡದೇ, ಧೋತರವನ್ನು ಮಾತ್ರ ಉಟ್ಟಿರುವನೆಂದೂ. ಅದನ್ನೇ ಹೊತ್ತಿರುವನೆಂದೂ ಇಟ್ಟುಕೊಳ್ಳಿ. ಇವನು ಸಹ ತಾನು ನೂಲು ತೆಗೆಯುವಾಗ್ಗೆ ಉಪಯೋಗಿಸಿದ ಕದರುಗಳಿಗೆ ಬೇಕಾಗುವ ಉಕ್ಕು, ಅಥವಾ ಅವನಿಗೆ ರಾಟೆಯನ್ನು ತಯಾರಿಸುವ ಬಡಿಗನು ಉಪಯೋಗಿಸಿದ ಉಪಕರಣಗಳು ಎಲ್ಲಿಯವು? ಪರದೇಶದವು. ಇನ್ನು ಶಿಖೆಯೊಂದುಳಿಯಿತು ತಲೆಯಲ್ಲಿ ಏನೂ ಧರಿಸದೇ ಕೂದಲುಗಳನ್ನೆಲ್ಲ ಬೋಳಿಸಿಕೊಳ್ಳುವವನು ಸಹ ಬೋಳಿಸುಕೊಳ್ಳುವಾಗ್ಗೆ ನಾವಲಿಗನು ಉಪಯೋಗಿಸುವ ಉಪಕರಣಗಳೆಲ್ಲಿಯವು? ಪರದೇಶದವು. ಹಾಯ್! ಹಾಯ್!! ಮುಳ್ಳು! ಎಲ್ಲಿ ನೋಡಿದರೂ ಪರದೇಶದ ಮುಳ್ಳು! ಮುಳ್ಳಿನ ಜಾಲವು! ಕಾರಣವೇನು? **यद्यत्परवशं दुःखम् । यद्यदात्मवशं सुखम् ।**

ದೇಹದ ವಿಚಾರವಾಯಿತು. ಗೇಹದ ವಿಚಾರವಾಗಲಿ ಇದಕ್ಕಂತೂ ದೂರವೇ ಬೇಡ ಮನೆಯನ್ನು ಕಟ್ಟುವಾಗ್ಗೆ ಪರದೇಶದ ಉಪಕರಣಗಳನ್ನು ಬಳಸದಿದ್ದರೆ ಮನೆಯನ್ನು ಕಟ್ಟುವದೇ ಅಸಾಧ್ಯವು. ಮೊಳೆ, ತಂತಿ, ಕಬ್ಬಿಣ, ಬುಟ್ಟಿ, ಸಲಿಕೆ, ಗುದ್ದಲಿ, ಮೊದಲು ಮಾಡಿಕೊಂಡು ಎಲ್ಲ ಸಾಮಗ್ರಿಗಳು ಎಲ್ಲಿಯವು? ಪರದೇಶದವು! ಮೊದಲು ನಮ್ಮಲ್ಲಿ ಕಬ್ಬಿಣ ಸಾಮಾನಗಳು ತಯಾರಾಗುತ್ತಿರಲಿಲ್ಲವೋ? ನಿಜವಾಗಿ ಆಗುತ್ತಿದ್ದವು. ಆದರೆ ಈಗಲ್ಲ! ಹಾಳಾದವು. ಯಾಕೆ? ಪರವಶಂ ದುಃಖಂ. ಹೋಗಲಿ ಮನೆಯೊಳಗಿನ ಅತಿ ಮಹತ್ವವಾದ ಅಡಿಗೆಯ ಸಾಮಾನಗಳೂ, ಅದಕ್ಕೂ ಮಹತ್ವವಾದ ದೇವರ ಸಾಮಾನಗಳೂ, ಅದೇಕೆ ದೇವರ ಸಾಕ್ಷಾತ್ ಮೂರ್ತಿಯೇ ಎಲ್ಲಿಯವು? ಅವನ್ನು ಯಾರು ಸಿದ್ಧ ಪಡಿಸಿದರು? ಎಲ್ಲಿಯ ಉಪಕರಣಗಳಿಂದ ಸಿದ್ಧ ಪಡಿಸಿದರು? ಪರದೇಶದ ಉಪಕರಣಗಳಿಂದ. ಅಯ್ಯೋ, ಇದೇನು? ನಾವು ತಿನ್ನುವ, ಪೂಜಿಸುವ ಸಾಮಾನುಗಳಿಂದ ಸಹ ನಮ್ಮ ಹಣವು ಪರದೇಶಕ್ಕೆ ಹೋಗುವದೇ? ಏನಿದು? ಎಂಥ ಕಠಿಣ ಮುಳ್ಳಿನ ಜಾಲವಿದು? ಎಲ್ಲಿ ಹೋಗಲಿ? ಏನು ಮಾಡಲಿ? ಏನೂ ಮಾಡಬೇಡ. ಪಠಿಸು, ಮಂತ್ರವನ್ನು ಪಠಿಸು.

यद्यत्परवशं दुःखम् । यद्यदात्मवशं सुखम् ।

ಮುಂದೆ ಸಾಗುವದು

ವಾಚಕರು ಈ ಲೇಖನವನ್ನು ದಯವಿಟ್ಟು ಸಂಪೂರ್ಣವಾಗಿ ಓದಬೇಕು. ಏನೋ ಲೇಖವೊಂದು ವಾಚನಕ ಮಾಡಬಾರದು. ವಿಷಯವು ಮಹತ್ವವಾಗಿದೆ. "ಕಿರಣಗಳ"ನ್ನು ನೋಲಿಂದ ಮೇಲೆ ಪ್ರಸಿದ್ಧಿಸುವೆವು.

—ಸಂಪಾದಕ.

ವಚನಗಳು.

ನಡೆ ನುಡಿ ಸಿದ್ಧಾಂತವಾದಲ್ಲಿ ಕುಲ ಹೊಲೆಯುಂಟು. ನುಡಿಲೇಸು ನಡೆಯಧಮವಾದಕ್ಕೆ ಅದೇ ಬಿಡುಗಡೆ. ಆಚಾರವೇ ಕುಲ ಅನಾಚಾರವೇ ಹೊಲೆ.

ಕೊಲ್ಲುವವನೇ ಮಾದಿಗನು, ಹೊಲಸು ತಿಂಬುವವನೇ ಹೊಲೆಯನು, ಸಕಲ ಜೀವಾತ್ಮರಿಗೆ ಲೇಸು ಬಯಸುವವರು ಕುಲಜರು.

—ಶರಣ ಸತ್ಯಾಗ್ರಹ ಆಶ್ರಮದವರಿಂದ

ತ್ವರೆ ಮಾಡಿರಿ! 'ಕನ್ನಡಿಗ'ನನ್ನು ಈ ದಿನವೇ ಪ್ರೋತ್ಸಾಹಿಸಿರಿ! ೧—೧೪—೦ ಮನಿಯಾರ್ಡರ ಮಾಡಿರಿ!

ಕನ್ನಡಿಗರೇ! ನಿಮಗೋಸ್ಕರ ಹುಟ್ಟಿದ 'ಕನ್ನಡಿಗ'ನನ್ನು ಬೇಗನೇ ಸ್ವೀಕರಿಸಿರಿ. ವಾ.

ಕರ್ನಾಟಕದ ನಾಣ್ಯಗಳು.

(೨ ನೇ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಲೆ.ಬಿ.ಕೆ. ಶ್ರೀನಿವಾಸ ಬಾಳಕೃಷ್ಣ ಮಂಗಳವೇಢೆ.

ಕದಂಬರು:— ಈ ವಂಶದ ನಾಣ್ಯಗಳಲ್ಲಿ ಬಂಗಾರದ ನಾಣ್ಯಗಳೇ ಬಹಳವಾಗಿ ದೊರೆತಿವೆ. ಇವರ ನಾಣ್ಯಗಳ ಮಧ್ಯದಲ್ಲಿ ಒಂದು ಪದ್ಮವಿದ್ದು ಇದರ ಸುತ್ತಲೂ ರಾಜಚಿನ್ಹಗಳು ಬಹುಕ್ರಮ ದಿಂದ ಮುದ್ದಾಗಿ ಕೆತ್ತಲ್ಪಟ್ಟಿವೆ. ಮೊಹರಿನ ಪದ್ಧತಿಯನ್ನು ಇವರು ವಿಶೇಷವಾಗಿ ಉಪಯೋಗ ಮಾಡುತ್ತಿದ್ದರು.

ಪಲ್ಲವರು:- ಕರ್ನಾಟಕದ ಪ್ರಾಚೀನ ಇತಿಹಾಸದಲ್ಲಿ ಇವರ ಸಂಬಂಧವಾಗಿ ಅನೇಕ ಸಂಗತಿಗಳು ಇನ್ನೂ ಹೇಗೆ ಬೈಲಿಗೆ ಬಂದಿರುವದಿಲ್ಲವೋ ಅದೇ ಪ್ರಕಾರವಾಗಿ ನಾಣ್ಯಗಳ ಇತಿಹಾಸದ್ದೂ ಅವಸ್ಥೆಯಾಗಿದೆ. ಇವರ ನಾಣ್ಯಗಳು ಎರಡು ಮಾದರಿಯವಿರುತ್ತವೆ. ತಾಮ್ರದ ನಾಣ್ಯಗಳು 'ಕುರುಂಬ'* ರಂತೆ ಇದ್ದು ಬೆಳ್ಳಿ ಬಂಗಾರದ ನಾಣ್ಯಗಳು ಬೇರೆ ಬೇರೆ ತರದವಿರುತ್ತವೆ. ಇವರ ಎಲ್ಲ ನಾಣ್ಯಗಳ ಮುಖದ ಮೇಲೆ ಆಯಾಲವುಳ್ಳ ಸಿಂಹವಿದ್ದು, ಹಿಂದಣ ಮಗ್ಗಲಿಗೆ ಒಂದು ಗದ್ದುಗೆಯೂ, ಅದರ ಮೇಲೆ ಒಂದು ಕಲಶವೂ, ಈ ಕಲಶದ ಎಡಬಲಗಳಲ್ಲಿ ಎರಡು ಗೊಂಚಿಗಳೂ ಮತ್ತು ಇವೆಲ್ಲವುಗಳ ಸುತ್ತಲೂ ಕನ್ನಡ ಸಂಸ್ಕೃತ ಅಕ್ಷರಗಳೂ ಇರುತ್ತವೆ. ಕೆಲವು ನಾಣ್ಯಗಳ ಹಿಂದಣಮಗ್ಗಲಿಗ ಮಾತ್ರ ಒಂದು ಹಡಗದ ಚಿತ್ರವಿರುತ್ತದೆ. ಈ ಚಿತ್ರದಿಂದ ಪರದೇಶದವರ ಸಂಗಡ ಇವರ ವ್ಯಾಪಾರವು ಹೇರಳವಾಗಿ ಇದ್ದಿತೆಂಬದು ಒಡೆದು ಕಾಣುತ್ತದೆ.

ಬಾದಾಮಿಯ ಚಾಲುಕ್ಯರು:— ಹಿತ್ತಾಳಿಗೆ ಬೇರೆ ಧಾತುಗಳ ಮಿಶ್ರಣಮಾಡಿ ಮುದ್ರಿಸಿದಂಥ ಈ ವಂಶದ ಕೆಲವು ನಾಣ್ಯಗಳು ವಿಝಗಪಟಂ ಜಿಲ್ಹೆಯಲ್ಲಿಯ 'ಎಲ್ಲಮ್ಮನ ಚೆಳಿ' ಎಂಬ ಊರಿನಲ್ಲಿ ಮೊನ್ನೆ ಮೊನ್ನೆ ಸಿಕ್ಕಿವೆ ಈ ನಾಣ್ಯಗಳ ಮೇಲೆ 'ವಿಷಮ-ಸಿದ್ಧಿ' ಎಂಬ ಹೆಸರು ಇರುತ್ತದೆ. ವಿಷಮಸಿದ್ಧಿಯೆಂಬದು ಈ ವಂಶದ ಅರಸನಾದ ವಿಷ್ಣುವರ್ಧನನ (೬೬೩-೬೩೨) ಬಿರುದು. ಈ ಚಲುಕ್ಯರ ಎಲ್ಲ ನಾಣ್ಯಗಳ ಮೇಲೂ ಅವರ ರಾಜಚಿನ್ಹವಾದ ಹಂದಿಯ ಚಿತ್ರವಿದ್ದು ಅವುಗಳ ಮೇಲೆ ಅಚ್ಚುಕಟ್ಟಾದ ಅಕ್ಷರಗಳು ಕೊರೆಯಲ್ಪಟ್ಟಿವೆ. 'ಚಿತ್ರ-ಮುದ್ರಾ- ಪದ್ಧತಿಯ' ಇವರ ಅನೇಕ ನಾಣ್ಯಗಳು ಆರಾಕಾನದ ಆಚೆಯಲ್ಲಿರುವ ಚೇದುಬ ನಡುಗಡ್ಡೆಯಲ್ಲಿ ದೊರಕಿದ್ದು ಅಪೂರ್ವ ಸಂಗತಿಯೇ ಸರಿ. ಚೇದುಬ ನಡುಗಡ್ಡೆಯಲ್ಲಿಯ ಜನರ ಕೂಡ ಇವರ ವ್ಯಾಪಾರವೇ ಹೇರಳವಾಗಿದ್ದಿತೋ ಅಥವಾ ಅಲ್ಲಿ ಇವರ ವಸಾಹತಿಯೇ ಇದ್ದಿತೋ ಎಂಬದನ್ನು ಶೋಧಿಸಿ ತೆಗೆಯುವದು ಕನ್ನಡಿಗರಿಗೆ ಅವಶ್ಯವಾಗಿದೆ. 'ಚಿತ್ರ ಮುದ್ರಾಪದ್ಧತಿ'ಯ ಕಲ್ಪನೆಯು ಇವರದೇ.

ರಾಷ್ಟ್ರಕೂಟರು:— ಕರ್ನಾಟಕದಲ್ಲಿ ಬಹು ವೈಭವದಿಂದ ರಾಜ್ಯವಾಳಿ ಅತಿಶಯ ಪ್ರಸಿದ್ಧರಾಗಿದ್ದ ರಾಷ್ಟ್ರಕೂಟರ ನಾಣ್ಯಗಳು ಏನೂ ಇನ್ನೂ ವರೆಗೆ ದೊರೆತಿಲ್ಲವೆಂಬದು ಕನ್ನಡಿಗರಿಗೆ ಖೇದವನ್ನು ಹುಟ್ಟಿಸದೇ ಬಿಡದು. ಕೆಲವು ಬೆಳ್ಳಿಯ ನಾಣ್ಯಗಳು ಇವರವೆಂದು ಗೊತ್ತುಹಚ್ಚಲ್ಪಟ್ಟಿವೆ. ಆದರೆ ಇವು ಸೌರಾಷ್ಟ್ರದ ಕ್ಷಾತ್ರಪರ ನಾಣ್ಯಗಳನ್ನೇ ಹೋಲುತ್ತಿದ್ದದರಿಂದಲೂ, ಕರ್ನಾಟಕದ ಬೇರೆ ರಾಜವಂಶಗಳಲ್ಲಿ ಇದ್ದಂಥ ಒಂದು ವಿಶಿಷ್ಟತರದ ಯಾವ ಗೌರವವೂ ಈ ನಾಣ್ಯಗಳಲ್ಲಿ ಕಂಡು ಬಾರದ್ದರಿಂದಲೂ ಈ ಬೆಳ್ಳೀ ನಾಣ್ಯಗಳು ರಾಷ್ಟ್ರಕೂಟರವು ಅಲ್ಲವೆಂದು ಊಹಿಸಬಹುದಾಗಿದೆ.

ಪಶ್ಚಿಮಗುಪ್ತರ ಅನುಕರಣನ್ನು ಮಾಡಿದ ಕೆಲವು ನಾಣ್ಯಗಳು ನಾಶೀಕ ಜಿಲ್ಹೆಯಲ್ಲಿ ದೊರೆತಿವೆ. ಇವು ಕೃಷ್ಣರಾಜನೆಂಬ ಅರಸನವೆಂಬದು ಅವುಗಳ ಮೇಲಿದ್ದ ಸಂಸ್ಕೃತ ಶ್ಲೋಕದಿಂದ ಗೊತ್ತಾಗುತ್ತದೆ. ಇವು ರಾಷ್ಟ್ರಕೂಟರ ನಾಣ್ಯಗಳೆಂದು ಹಲವರ ಮತವಿದೆ. ಈ ನಾಣ್ಯಗಳು ೪ ನೇ ಶತಮಾನದಲ್ಲಿ ಮುದ್ರಿಸಲ್ಪಟ್ಟಿವೆ. ಎಂದು ಸಂಶೋಧಕರು ಗೊತ್ತುಹಚಿದ್ದಾರೆ. ವೇರೂಳಿನಲ್ಲಿ ಕೈಲಾಸಪರ್ವತವನ್ನು ಕಟ್ಟಿಸಿ ಜಗತ್ತಿನಲ್ಲಿ ಪ್ರಸಿದ್ಧವಾದ ರಾಷ್ಟ್ರಕೂಟರ ಕೃಷ್ಣರಾಜನು ೮ ನೇ ಶತಮಾನದವನಾದದ್ದರಿಂದ ಈ ನಾಣ್ಯಗಳು ಈ ರಾಷ್ಟ್ರಕೂಟ ಕೃಷ್ಣರಾಜನವು ಅಲ್ಲವೆಂದು ಸಿದ್ಧವಾಗುತ್ತದೆ. ಇದರ ಬಗ್ಗೆ ಹೆಚ್ಚಿನ ಸಂಗತಿಗಳನ್ನು ಯಾರಾದರೂ ಸಂಶೋಧಿಸುವವರೆಗೆ ಇದರ ಸಂಬಂಧವಾಗಿ ಏನೂ ಬರೆಯುವಂತಿಲ್ಲ.

ಕಲ್ಯಾಣದ ಚಾಲುಕ್ಯರು- ಇವರ ನಾಣ್ಯಗಳಲ್ಲಿ ಬಂಗಾರದ ನಾಣ್ಯಗಳೇ ಬಹಳ ಇವರು ಯಾವಾಗಲೂ ದಪ್ಪಾದ ತಗಡಿನ ಬಂಗಾರವನ್ನೇ ಉಪಯೋಗಿಸುತ್ತಿದ್ದರು. ಇವರ ನಾಣ್ಯಗಳ ಮೇಲೂ ಇವರ ರಾಜಚಿನ್ಹವಾದ ಹಂದಿಯ ಚಿತ್ರವಿರುತ್ತದೆ. ಇವರು ತಮ್ಮ ನಾಣ್ಯಗಳ ಆಕಾರದಲ್ಲಿ ಕದಂಬರನ್ನೇ ಅನುಕರಣಮಾಡಿದ್ದರೆಂಬು ಇಲಿಯಟ್ ಸಾಹೇಬರ ಮತವಿದೆ. ಕದಂಬರ ನಾಣ್ಯಗಳು ಕೋಳಿ ತತ್ತಿಯ ಆಕಾರದವು.

ಈ ಎರಡೂ ಚಾಲುಕ್ಯರ ವಂಶದವರ ನಾಣ್ಯಗಳ ಬಗ್ಗೆ ರ್‍ಯಾಪ್ಸನ್ ಸಾಹೇಬರು ಅನ್ನುವದೇನಂದರೆ:-

"The gold coins of both branches bear the Chalukya emblem, a boar, and are *remarkable* as showing *a particular application of the Indian method of punch-marking....*"

ರ್‍ಯಾಪ್ಸನ್ ಸಾಹೇಬರು ಭಾರತೀಯರಲ್ಲ; ಪರದೇಶದವರಾಗಿದ್ದರಿಂದ ಹಿಂದುಸ್ಥಾನದ ಯಾವದೇ ಒಂದು ವಿಶಿಷ್ಟಪ್ರಾಂತದಲ್ಲಿ ಏನಾದರೂ ಸೋಜಿಗವಾದ ಸಂಗತಿಯು ದೊರಕಿದರೆ ಅದು ಹಿಂದುಸ್ಥಾನದ್ದು ಎಂಬದಾಗಿ ಹೇಳಿ ಪರದೇಶಿಯರಿಗೆ ಹಿಂದುಸ್ಥಾನದ ಬಗ್ಗೆ ಕೌತುಕವನ್ನು ತಾಳಲು ಹೇಳುವದು ಯೋಗ್ಯವಾದದ್ದೇ. ಅದ್ದರಿಂದ ಮೇಲೆ ಹೇಳಿದ 'punch-marking' (ಅಂದರೆ 'ಮೊಹರಿನ ಪದ್ಧತಿ') ಪದ್ಧತಿಗೆ ಹಿಂದುಸ್ಥಾನದ ಪದ್ಧತಿ 'Indian method' ಎಂದದ್ದು ವಿಹಿತವೇ ಸರಿ. ಆದರೆ 'Indian method' ಎಂಬದು 'Karnatak method' 'ಕನ್ನಡಿಗರ ಪದ್ಧತಿ' ಎಂಬದನ್ನು ಕನ್ನಡಿಗರು ಮರೆಯ ಕೂಡದು. ಈ ತರದ 'ಮೊಹರಿನ ಪದ್ಧತಿ' ಯನ್ನು ಹುಡುಕಿ ಹಿಂದುಸ್ಥಾನಕ್ಕೆ ಮಾನವನ್ನು ತಂದು ಕೊಟ್ಟದ್ದು ಕರ್ನಾಟಕಕ್ಕೆ ಗೌರವವಾದ ಸಂಗತಿಯಲ್ಲವೆ?

ಕೊಡಗಿನ ರಾಜರು:— ಈ ವಂಶದ ಬಂಗಾರದ ಮತ್ತು ತಾಮ್ರದ ಕೆಲವು ನಾಣ್ಯಗಳು ದೊರೆತಿವೆ. ಇವುಗಳ ಮುಖದ ಮೇಲೆ ಆನೆಯಿದ್ದು ಹಿಮ್ಮಗ್ಗಲಿಗೆ ಒಂದು ಬಿಲ್ಲೂ ಕೆಲವು ರಾಜಚಿನ್ಹಗಳೂ ಚೊಕ್ಕಟ್ಟವಾಗಿ ಕೆತ್ತಲ್ಪಟ್ಟಿವೆ. ಇವು ಯಾವ ಸಂವತ್ಸ

+ ಈ ಕುರುಂಬರು ಆಂಧ್ರರೆಂದು ಅನೇಕ ಜನರಿಯ ಮತವಿದೆ. ಆದರೆ ಸ್ಟೈ. ವೆಂಕಟ ರಂಗೋ ಕಟ್ಟೀಯವರು ಇವರು ಕನ್ನಡಿಗರೆಂದು ಅಭಿಪ್ರಾಯ ಕಟ್ಟಿದ್ದಾರೆ.

ಚಂದಾ, ಅಂಚೆ ಸಹಿತ ೧॥— ಮಾತ್ರ! ಈ ಅಗ್ಗದ ಚಂದಾ ನಿಮಗೆ ಭಾರವಾಗದು!!

ರದವೆಂಬರನ್ನು ನಿರ್ಧರಿಸಲಿಕ್ಕೆ ಬರುವಂತಿಲ್ಲದಿದ್ದರೂ ೧೦೯೦ ನೇ ಇಸ್ವಿಯ ಮೊದಲಿನವೆಂಬದು ನಿಃಸಂದೇಹವಾದದ್ದು. ಯಾಕಂದರೆ ೧೦೯೦ ರಲ್ಲಿ ಕಾಶ್ಮೀರದೊಳಗೆ ಆಳುತ್ತಿದ್ದ ಹರ್ಷವರ್ಧನನು ಈ ಕೊಡಗಿನ ನಾಣ್ಯಗಳಂತೆಯೇ ತನ್ನ ರಾಜದಲ್ಲಿಯ ನಾಣ್ಯಗಳನ್ನು ಮಾಡಿಸಿದನೆಂಬದನ್ನು ಕಲ್ಹಣಕವಿಯು ತನ್ನ 'ರಾಜತರಂಗಿಣಿ'ಯ ೭ ನೇ ಅಧ್ಯಾಯದ ೯೨೬ ನೇ ಶ್ಲೋಕದಲ್ಲಿ ಸ್ಪಷ್ಟವಾಗಿ ಬರೆದಿದ್ದಾನೆ:—

दाक्षिणात्याभवद्भङ्गी: प्रिया तस्य विलासिनः ।
कर्णाटानुगुणष्टङ्कस्ततस्तेन प्रवर्तितः ॥

ಕೊಡಗಿನ ನಾಣ್ಯಗಳು ಪ್ರಾಚೀನಕಾಲದಲ್ಲಿ ಕಾಶ್ಮೀರದಂಥ ಬಹು ದೂರದ ದೇಶದ ವರೆಗೆ ಹೋಗಿದ್ದವೆಂದ ಮೇಲೆ ಕನ್ನಡಿಗರ ವ್ಯಾಪಾರವಾಗಲೀ ಬೇರೆತರದ ವರ್ಚಸ್ಸಾಗಲೀ ಕಾಶ್ಮೀರದ ವರೆಗೆ ಹಬ್ಬಿಲಿರಕ್ಕೆ ಸಾಕು.

ಕೆಳಗೆ ಬರೆದವರ ಸಂಬಂಧವಾಗಿದ್ದ ಮಹತ್ವದ ಸಂಗತಿಗಳು ಇನ್ನು ಪ್ರಸ್ತುತ ಲೇಖಕನಿಗೆ ಗೊತ್ತಾಗಿರುವದಿಲ್ಲ; ಕಾರವಾರದ ನಂದರು; ಕಲ್ಯಾಣಪುರದ ಕಲಚೂರ್ಯರು; ದೇವಗಿರಿಯ ಯಾದವರು: ದ್ವಾರ ಸಮುದ್ರದ ಯಾದವರು; ವಾರಂಗಳದ ಕಾಕತೀಯರು ಇತ್ಯಾದಿ.

ವಿಜಯನಗರದ ರಾಯರು:—ಹಿಂದುಸ್ಥಾನದ ಇತಿಹಾಸದಲ್ಲಿ ಈ ರಾಯರ ಮಹತ್ವವು ಎಷ್ಟಿರುತ್ತದೋ ಅಷ್ಟೇ ಮಹತ್ವವು ನಾಣ್ಯಗಳ ಇತಿಹಾಸದಲ್ಲಿಯೂ ಈರಾಯರಿಗೆ ಉಂಟೆಂದು ರ್‍ಯಾಪ್ಸನ್ ಸಾಹೇಬರು ತಮ್ಮ ಗ್ರಂಥದ (Indian Coins) ೩೮ನೇ ಪಾನಿನಲ್ಲಿ ಹೇಳಿರುವರು. ಹಿಂದುಸ್ಥಾನದಲ್ಲಿ ೧೪ನೇ ಶತಮಾನದೊಳಗೆ ಮುಸಲ್ಮಾನರು ಎಲ್ಲ ಕಡೆಗೂ ಪ್ರಬಲರಾಗಿದ್ದರಿಂದ ಇಲ್ಲಿಯ ಬೇರೆ ಬೇರೆ ಪ್ರಾಂತದಲ್ಲಿ ಆಳುತ್ತಿದ್ದ ಎಲ್ಲ ರಾಜರೂ ತಮ್ಮ ತಮ್ಮ ನಾಣ್ಯಗಳಲ್ಲಿ ಮುಸಲ್ಮಾನರ ನಾಣ್ಯಗಳ ಅನುಕರಣವನ್ನೇ ಮಾಡುತ್ತಿದ್ದರು. ಆದರೆ ವಿಜಯನಗರದ ರಾಯರು ಹಾಗೆ ಅನುಕರಣಮಾಡದೇ ಕರ್ನಾಟಕದ ವಿಶಿಷ್ಟ ಪದ್ಧತಿಯನ್ನು ಶುದ್ಧವಾಗಿಟ್ಟು ಜೋಕೆಯಿಂದ ಕಾಯ್ದು ಮುಸಲ್ಮಾನ ಅಥವಾ ಪೋರ್ತುಗಾಲರ ಅನುಕರಣೆಯನ್ನು ಎಳ್ಳಷ್ಟಾದರೂ ಮಾಡದೇ ಕರ್ನಾಟಕ ಪದ್ಧತಿಯಿಂದಲೇ ತಮ್ಮ ನಾಣ್ಯಗಳನ್ನು ಮುದ್ರಿಸಿ ಭರತಖಂಡದ ವಿಶಿಷ್ಟ ಸಂಸ್ಕೃತಿಯು ನಾಣ್ಯಕಲೆಯಲ್ಲಿಯಾದರೂ ತನ್ನ ಗೌರವವನ್ನು ಕಳೆದುಕೊಳ್ಳದಂತೆ ಅನುವು ಮಾಡಿಕೊಟ್ಟದ್ದು ಕನ್ನಡಿಗರಾದ ನಮಗೆ ಅಭಿಮಾನಾಸ್ಪದವಾದ ಸಂಗತಿಯಲ್ಲವೆ?

ಕೊನೆಯ ಕೋರಿಕೆ:—ಈ ಪುರಾತನ ನಾಣ್ಯಗಳಿಂದ ನಮ್ಮ ಇತಿಹಾಸದ ಬಹಳ ಮಹತ್ವದ ಸಂಗತಿಗಳು ಹೊರಬೀಳುತ್ತವೆ ಇಂಥ ನಾಣ್ಯಗಳನ್ನು ಕರ್ನಾಟಕದಲ್ಲಿ ಅನೇಕರು ಅನೇಕ ಸಲ ಕಂಡಿರಬಹುದು. ಆದರೆ ಇವುಗಳ ಉಪಯೋಗವು ಸಂಶೋಧಕರ ಹೊರ್ತು ಉಳಿದವರಿಗೆ ಏನೂ ಆಗುವಂತಿಲ್ಲ. ಆದ್ದರಿಂದ ಕರ್ನಾಟಕದ ಇತಿಹಾಸದ ಮಮತೆಯಿಂದ ಪುರಾತನ ನಾಣ್ಯಗಳು ಯಾರ ಹತ್ತರದಲ್ಲಿರುವವೋ ಅವರು ಅಥವಾ ಅದನ್ನು ನೋಡಿದವರು ಅವುಗಳ ಯಜಮಾನರಿಂದ ಅವನ್ನು ಸಂಪಾದಿಸಿ, ಅಥವಾ ಅವನ್ನು ಕೊಡಲಿಕ್ಕೆ ಈ ಯಜಮಾನರು ಒಪ್ಪದಿದ್ದರೆ ಕಟ್ಟಕಡೆಗೆ ಅವರ ಹೆಸರು ವಿಳಾಸಗಳನ್ನಾದರೂ, ಧಾರವಾಡದ ಕರ್ನಾಟಕ ಇತಿಹಾಸ ಮಂಡಲದವರ ಕಡೆಗಾಗಲೀ ಪ್ರಸ್ತುತ ಲೇಖಕನ ಕಡೆಗಾಗಲೀ, ಕಳಿಸಿದರೆ ಕರ್ನಾಟಕದ ಮೇಲೆ ದೊಡ್ಡ ಉಪಕಾರಮಾಡಿದಂತಾಗುತ್ತದೆ.

ಟೀಪು:— ಈ ಲೇಖವು ೧೯೨೯ ನೇ ಇಸ್ವಿಯಲ್ಲಿ ದಕ್ಷಿಣ ವಿದ್ಯಾಲಯ ತ್ರೈಮಾಸಿಕದಲ್ಲಿ ಪ್ರಸಿದ್ಧವಾಗಿದೆ.

ಕರ್ನಾಟಕದ ಆಧುನಿಕ ಕ್ಷೇತ್ರಗಳು.

ಸೂಚನೆ:— ಧರ್ಮ, ಸಂಸ್ಕೃತಿ, ಶಿಕ್ಷಣ, ವ್ಯಾಪಾರ, ವಾಙ್ಮಯ, ರಾಜಕಾರಣ, ಮುಂತಾದವುಗಳ ದೃಷ್ಟಿಯಿಂದ ಈಗ್ಗೆ ಕರ್ನಾಟಕದಲ್ಲಿ ಹಲಕೆಲವು ಆಧುನಿಕ ಕ್ಷೇತ್ರಗಳು ಉತ್ಪನ್ನವಾಗಿವೆ. ಆದರೆ ಇವು ಅಖಂಡ ಕರ್ನಾಟಕಕ್ಕೆ ಗೊತ್ತಿಲ್ಲ. ಆದುದರಿಂದ ಆ ಆ ಕ್ಷೇತ್ರಗಳನ್ನು ಬಲ್ಲಂಥ ಕರ್ನಾಟಕದೊಳಗಿನ ಬೇರೆ ಬೇರೆ ಮಹನೀಯರು ತಮಗೆ ಅಭಿಮಾನಾಸ್ಪದವಾದ ಆಧುನಿಕ ಕ್ಷೇತ್ರಗಳ ಬಗ್ಗೆ 'ಕನ್ನಡಿಗ'ನ ಈ ಮಾಲೆಗಳಲ್ಲಿ ಲೇಖಗಳನ್ನು ಬರೆದು ಆ ಆ ಕ್ಷೇತ್ರಗಳ ಪರಿಚಯವನ್ನು ಅಖಂಡ ಕರ್ನಾಟಕ ಜನಾಂಗಕ್ಕೆ ಮಾಡಿಕೊಡಬೇಕಾಗಿ ಪ್ರಾರ್ಥನೆ.

ಸಂಪಾದಕ 'ಕನ್ನಡಿಗ.

ಶಿವಯೋಗ ಮಂದಿರ.

"ಅಡವಿ ಹೋಗಿ ಆಶ್ರಮವಾದ ಉದಾಹರಣೆಯು ನಮ್ಮ ದೇಶದಲ್ಲಿ ಇದೇ ಮೊದಲನೆಯದು. ಕರ್ನಾಟಕದ ನಾಟಕೋಟಿಗಳಾದ ವೀರಶೈವರಿಗೆ ಇದೊಂದು ಭೂಷಣಾಸ್ಪದವು

—ಶ್ರೀಯುತ ಆಲೂರ ವೆಂಕಟರಾಯರು.

ಶಿವಯೋಗ ಮಂದಿರವು ಶ್ರೀಮದ್ವೀರಶೈವರ ಸಂಸ್ಥೆಯೆಂದೂ ಶಿವಯೋಗ ಸಾಧಕರ ಸದನವೆಂದೂ ಓದುಗರಿಗೆ ಗೊತ್ತಿದೆ.

ಇಪ್ಪತ್ತನೆಯ ಶತಮಾನವು ವೀರಶೈವರ ವಿಚಾರ ಕ್ರಾಂತಿಗೆ ಕಾರಣವಾಯಿತೆಂದು ಹೇಳಬಹುದು. ವೀರಶೈವರಲ್ಲಿ ಧರ್ಮದ ವಿಚಾರಣೆಯಾಗಬೇಕು; ಅದಕ್ಕನುಸರಿಸಿ ಕರ್ಮಗಳ ಆಚರಣೆಯಾಗಬೇಕು ಎಂಬದೊಂದು ವಿಚಾರವು ಆಗಿನ ವೀರಶೈವ ಮುಂದಾಳುಗಳಲ್ಲಿ ಮುಂದರೆದಿತ್ತು. ವೀರಶೈವರಲ್ಲಿ ಅಯ್ಯನವರು, ಅಣ್ಣನವರು ಎಂದು ಎರಡು ವರ್ಗಗಳನ್ನಾಗಿ ಮಾಡಬಹುದು. ಅಯ್ಯನವರು ಧರ್ಮ ಬೋಧಕರು; ಅಣ್ಣನವರು ಕರ್ಮನಿರತರು ಅಯ್ಯನವರಿಗೆ ಧರ್ಮ ವಿಚಾರಣೆಯೇ ಇರಲಿಲ್ಲವೆಂದ ಮೇಲೆ ಅಣ್ಣನವರು ಕರ್ಮನಿರತರಾಗುವರೆಂತು? ಅಯ್ಯನವರು ಸವಿಯೂಟಗಳಲ್ಲಿಯೇ ಧರ್ಮವಿದೆಯೆಂದು ತಿಳಿದಿದ್ದರು. ಭಿಕ್ಷೆಯಲ್ಲಿಯೇ ಅಧಿಕಾರವಿದೆಯೆಂದು ತಿಳಿದಿದ್ದರು. ಆದ್ದರಿಂದ ಅಯ್ಯನವರನ್ನು ಪ್ರತ್ಯಕ್ಷವಾಗಿ ತಿದ್ದಿದರೆ ಅಣ್ಣನವರು ಅಪ್ರತ್ಯಕ್ಷವಾಗಿ ತಿದ್ದ ಹತ್ತುವರು. ಇಂಥ ಅಯ್ಯನವರನ್ನು ತಿದ್ದಲು ಒಂದು ಸಂಸ್ಥೆಯನ್ನು ಏರ್ಪಡಿಸಬೇಕು. ಇವೇ ಮೊದಲಾದ ವಿಚಾರಗಳು ತಲೆದೋರ ಹತ್ತಿದ್ದವು. ಅಂಥ ವಿಚಾರ ಕ್ರಾಂತಿಯನ್ನು ಹುಟ್ಟಿಸಿದವರಲ್ಲಿ ಬಾಗಲಕೋಟೆಯ ಮಲ್ಲಾಪುರಾಚಾರ್ಯರು ಒಬ್ಬರಾಗಿದ್ದರು.

ಇವರು ಧರ್ಮಬೋಧಕರು; ವಿರಕ್ತ ವೈರಾಗಿಗಳು 'ವೀರಶೈವರಲ್ಲಿ ಬಸವನಂಥ ವೀರರು ಹುಟ್ಟದ್ದಕ್ಕೆ ನಮ್ಮಲ್ಲಿಯ ಶಿವಯೋಗ ಸಾಧನೆಯ ಅಭಾವವೇ ಕಾರಣವೆಂತಲೂ, ಅಂಥ ಶಿವಯೋಗ ಸಾಧನೆಗೆ ಒಂದು ಸಂಸ್ಥೆಯನ್ನು ಸ್ಥಾಪಿಸಬೇಕೆಂತಲೂ, ಅದರ ಸಲುವಾಗಿ ದುಡ್ಡು ಕೂಡಿಸುತ್ತೇನೆಂತಲೂ ಇವರು ಪ್ರತಿಜ್ಞೆಯನ್ನು ಮಾಡಿದ್ದರು. ಆದರೆ ಈ ಶಿವಯೋಗಿಗಳು ಅಕಾಲದಲ್ಲಿ ಶಿವಾಧೀನರಾದ್ದರಿಂದ ಅಂಥ ಸುಸಂಧಿಯು ಒದಗಿ ಬರಲಿಲ್ಲ.

ಶಿವಾಧೀನರಾದ ಶಿವಯೋಗಿಗಳ ಶರೀರವು ನಾಶವಾದರೂ ಅವರ ಸತ್ಕಲ್ಪನೆಯು ನಾಶವಾಗಲಿಲ್ಲ. ಬಾಗಲಕೋಟೆಯಲ್ಲಿಯೇ

೧೯೦೮ ಇಸ್ವಿಯಲ್ಲಿ ನೆರೆದಂಥ ಶ್ರೀಮದ್ವೀರಶೈವ ಸಾಲ್ಕಸೆಯ ಮಹಾ ಸಭೆಯಲ್ಲಿ ಅವರ ಸತ್ಸಂಕಲ್ಪನೆಯು ವಾಗ್ವಾದ ರೂಪದಿಂದ ಹೊರ ಬಿದ್ದು ಕಡೆಗೆ ಶಿವಯೋಗ ಮಂದಿರವೆಂಬ ಸಂಸ್ಥೆಯನ್ನು ಸ್ಥಾಪಿಸ ಬೇಕೆಂದು ನಿರ್ಣಯವಾಯಿತು. ಈ ವಿಚಾರಣೆಯ ಬಗ್ಗೆ ಶ್ರೀಮಂತ ಮಲ್ಲಪ್ಪ ಬಸಪ್ಪ ವಾರದ ಊರ್ಫ ಅಪ್ಪಾಸಾಹೇಬ ಇವರ ಅಧ್ಯಕ್ಷತೆಯ ಕೆಳಗೆ ಒಂದು ಆಲೋಚನಾ ಸಭೆಯು ನೆರೆಯಿತು. ಈ ಸಂಸ್ಥೆಯ ವಿಷಯವಾಗಿ ವಿಚಾರವಾದನಂತರ ಸ್ಥಳದ ಬಗ್ಗೆಯೂ ವಿಚಾರ ನಡೆಯಿತು. ಕಡೆಗೆ ಪರಮ ಪೂಜ್ಯರೂ ಶಿವಯೋಗ ಸಾಧಕರೂ ಆದ ಶ್ರೀ ಇಲಕಲ್ಲ ಮಹಾಂತ ಸ್ವಾಮಿಗಳವರ ಅಪ್ಪಣೆಯಾದಲ್ಲಿ ಶಿವ ಮಂದಿರವನ್ನು ಸ್ಥಾಪಿಸಬೇಕೆಂದು ನಿರ್ಣಯವಾಯಿತು. ಆ ಮೇರೆಗೆ ಶ್ರೀಗಳವರು ಸರ್ವ ಸ್ಥಳದಲ್ಲಿ ಸಂಚರಿಸಿ ಕಡೆಗೆ ವಿಜಾಪೂರ ಜಿಲ್ಲೆಯ ಬದಾಮಿ ತಾಲೂಕಿನ ಮಹಾಕೂಟ ಕ್ಷೇತ್ರದ ಆಗ್ನೇಯ ದಿಕ್ಕಿಗೆ ಮಲಾಪಹಾರೀ ನದೀ ತೀರದಲ್ಲಿ ಸ್ಥಾಪಿಸಬೇಕೆಂದು ಅಪ್ಪಣೆ ಮಾಡಿದರು.

ಅದರಂತೆ ೧೮೩೦ ಕೀಲಕನಾಮ ಸಂವತ್ಸರದ ಮಾಘ ಬ.೭ ಅಂದರೆ ತಾರೀಖು ೩.ನೇ ಫೆಬ್ರುವರಿ ೧೯೦೯ನೇ ದಿವಸ ಅಲ್ಲಿ ಶಿವಯೋಗ ಮಂದಿರವು ಸ್ಥಾಪಿತವಾಯಿತು.

ಈ ಸಂಸ್ಥೆಯ ಸ್ಥಾಪನೆಯಾಗಿ ಹದಿನಾರು ವರ್ಷಗಳು ಮುಗಿದವು. ಇನ್ನು ಇಲ್ಲಿಯ ಕಾರ್ಯ ಕ್ರಮ ಸದ್ಯಸ್ಥಿತಿಗಳನ್ನು ಓದುಗರಿಗೆ ಮಾಡಿಕೊಡುವ.

ಶ್ರೀ ಶಿವಯೋಗಮಂದಿರದಲ್ಲಿಯ ವಿದ್ಯಾರ್ಥಿಗಳ ಮತ್ತು ಸಾಧಕರ ವೇಳಾಪತ್ರಿಕೆಯು.

ಶ್ರೀ ಶಿವಯೋಗ ಸಾಧಕರಬಾಬತು.	ವಟುಗಳ ಬಾಬತು.
(ಬೆಳಿಗ್ಗೆ)	(ಬೆಳಿಗ್ಗೆ)
ಘಂಟೆ ಕಾರ್ಯಕ್ರಮ	ಘಂಟೆ ಕಾರ್ಯಕ್ರಮ
೪-೪|| ಏಳುವದು ಭಜನಾ	೫ ಏಳುವದು, ಸ್ತೋತ್ರ,
೪||, ೫|| ಅಭ್ಯಾಸ,	೫-೬ ಅಭ್ಯಾಸ
೫||-೬|| ನಿತ್ಯಕರ್ಮ	೬೮|| ನಿತ್ಯಕರ್ಮ, ಸ್ನಾನ,
೬' ೮|| ಅಭ್ಯಾಸ	ಸಾಧನ, ಉಪಹಾರ
೮|| ೧೧|| ಸ್ನಾನ, ಸಾಧನ ಪೂಜಾ, ಸಾಮಿಕಾರ್ಯಗಳು.	೮||-೧೨ ಅಭ್ಯಾಸ.
(ಸಾಯಂಕಾಲ)	(ಸಾಯಂಕಾಲ)
೧೧||-೧೨|| ವಿಶ್ರಾಂತಿ, ಧರ್ಮ ಗ್ರಂಥಾವಲೋಕನ	೧೨-೧ ಭೋಜನ,
	೧-೨ ವಿಶ್ರಾಂತಿ
೧೨||-೪ ಅಭ್ಯಾಸ	೨-೫ ಅಭ್ಯಾಸ
೪-೫ ಪುರಾಣ	೫-೬ ವಿಶ್ರಾಂತಿ
೫-೬ ವಿಶ್ರಾಂತಿ	೬-೮ ಭೋಜನ ಮತ್ತು ಅಭ್ಯಾಸ,
೬-೮ ಸ್ನಾನ ಪೂಜಾದಿ ನಿತ್ಯ ಕರ್ಮಗಳು.	೮-೯ ವಿಶ್ರಾಂತಿ ರೂಪ ನೈತಿಕ ಶಿಕ್ಷಣ
೮-೯ ವಿಶ್ರಾಂತಿ	

ಹತ್ತು ಗಂಟೆಗೆ ಎಲ್ಲರೂ ಮಲಗುವದು.

ಶಿವಯೋಗವನ್ನು ಸಾಧಿಸುವ ವಿದ್ಯಾರ್ಥಿಗಳಿಗೆ ಇಲ್ಲಿ ಆಶ್ರಯ ದೊರೆಯುವದು. ಅಂಥವರು ಬಾಲ ಬ್ರಹ್ಮಚಾರಿಗಳಿರಬೇಕು. ಇಲ್ಲಿ ಶಿವಯೋಗ ಅಭ್ಯಾಸವನ್ನು ಮಾಡಿಸುವದೇ ಇವರ ಉದ್ದೇಶವಾಗಿರುವದು. ಮತ್ತು ಶಿವ ಕೀರ್ತನಕಾರರ ಮೂಲಕ ಶಿವಜ್ಞಾನ ಮಾಡಿಕೊಡುವದು, ಉಪನ್ಯಾಸದ ಮೂಲಕ ವೀರಶೈವರಲ್ಲ ಧರ್ಮ ಜಾಗ್ರತೆ ಮಾಡುವದೂ ಶಿವ ಪುರಾಣಗಳನ್ನು ಹೇಳಿಸಿ, ಶಿವಾಚಾರವನ್ನು ಬೆಳೆಸುವದೂ, ಧರ್ಮ ಗ್ರಂಥಗಳನ್ನು ಸಂಗ್ರಹಿಸಿಡುವದೂ, ಅವುಗಳ ಅಭ್ಯಾಸಕ್ಕೆ ಉತ್ತೇಜನ ಕೊಡುವದೂ, ಶಿವಪದಗಳನ್ನು ಹಾಡಿಸಿ ಶಿವಸಂಗತಿಗಳನ್ನು ತಿಳಿಸಿಕೊಡುವದೂ ಇವೇ ಮೊದಲಾದವುಗಳಾಗಿವೆ.

ಈ ಉದ್ದೇಶಗಳನ್ನಿಟ್ಟುಕೊಂಡು ಸಂಸ್ಥೆಯು ಯಾವ ಯಾವ ಕಾರ್ಯಗಳನ್ನು ಮಾಡಿರುವದೆಂಬದನ್ನು ಇದರಡಿಯಲ್ಲಿ ಕೊಡುವೆನು ಇಲ್ಲಿ ಒಂದು ಧರ್ಮಗ್ರಂಥದ ಭಾಂಡಾರವಿದೆ. ಗೋಶಾಲೆಯಿದೆ. ಲಿಂಗ ವಿಭೂತಿಗಳನ್ನು ಶುದ್ಧಮಾಡುವ ಶಾಲೆಯಿದೆ. ಇಲ್ಲಿ ಪ್ರತಿ ವರ್ಷವೂ ಶಿವರಾತ್ರಿ ಸಮಾರಂಭವು ನೆರೆಯುವದು. 'ವೀರಶೈವ ಧರ್ಮತರಂಗಿಣಿ' ಎಂಬ ಮಾಸಿಕ ಪುಸ್ತಕವು ಧಾರವಾಡದಲ್ಲಿ ಹೊರಡುತ್ತಿದ್ದರೂ ಈ ಸಂಸ್ಥೆಯೇ ಅದರ ಜನಕ. ಪ್ರತಿವರುಷ ಈ ಸಂಸ್ಥೆಯಿಂದ ಅದಕ್ಕೆ ದ್ರವ್ಯದ ಸಹಾಯ ದೊರೆಯುತ್ತದೆ. ಇಲ್ಲಿ ಶಿವಕೀರ್ತನೆ, ಶಿವಭಜನೆ ಶಿವಪೂಜೆ, ಶಿವಪುರಾಣ, ಶಿವಜಪ, ಶಿವ ತಪಇವೇ ಮೊದಲಾದವುಗಳು ನಡೆಯುತ್ತವೆ.

ಈ ಸಂಸ್ಥೆಯು ವೀರಶೈವ ಸಮಾಜದಲ್ಲಿ ಕೆಳಗೆ ಕಾಣಿಸಿದ ಪ್ರಕಾರ ಧರ್ಮ ಜಾಗ್ರತೆಯನ್ನು ಮಾಡಿದೆ. ಇಲ್ಲಿ ಶಿಕ್ಷಣ ಪಡೆದ ಶಿವಕೀರ್ತನಕಾರರು ಶಿವಕೀರ್ತನೆಯನ್ನು ಮಾಡಿ ಎಲ್ಲಕಡೆಯಲ್ಲಿಯೂ ಶಿವಜ್ಞಾನವನ್ನು ಮಾಡಿಕೊಡುವರು. ಇಲ್ಲಿ ಶಿಕ್ಷಣ ಹೊಂದಿದಂಥ ವ್ಯಾಖ್ಯಾನಕಾರರು ಧರ್ಮದ ವಿಷಯದ ಮೇಲೆ ವ್ಯಾಖ್ಯಾನ ಕೊಟ್ಟು ಧರ್ಮ ಜಾಗ್ರತೆಯನ್ನು ಮಾಡುವರು. ಇಲ್ಲಿ ಶಿಕ್ಷಣ ಪಡೆದಂತೆ ಶಿವಪುರಾಣಿಕರು ಸರ್ವ ಸ್ಥಳದಲ್ಲಿಯೂ ಸಂಚರಿಸಿ ಶಿವಸಂಗತಿಯನ್ನು ಅರುಹುವರು. ಇಲ್ಲಿ ಶಿಕ್ಷಣ ಪಡೆದಂಥ ಶಿವಯೋಗಿಗಳನ್ನು ಮಠಸ್ಥರು ಮರಿಗಳನ್ನಾಗಿ ಮಾಡುವದರಿಂದ ಮುಂದೆ ಇವರು ಮಠಾಧಿಕಾರಿಗಳಾದಮೇಲೆ ಭಕ್ತರಲ್ಲಿ ಸುಧಾರಣೆಯಾಗದಿರದು. ಇಂಥ ಮರಿಗಳು ಈಗಾಗಲೆ ಹಲಕೆಲವು ಕಡೆಯಲ್ಲಿ ಮಠಾಧಿಕಾರಿಗಳಾಗಿದ್ದು, ಅವರಿಂದ ಧರ್ಮಜಾಗ್ರತೆಯ ಕೆಲಸವು ಒಳ್ಳೇ ರೀತಿಯಲ್ಲಿ ನಡೆದದೆ.

ಯಾವ ಅಡವಿಯು ಕಳ್ಳಕಾಕರ ವಾಸಸ್ಥಳವಾಗಿತ್ತೋ, ಇದೀಗ ಶಿವಯೋಗಿಗಳ ಸ್ಥಾನವಾಗಿದೆ. ಯಾವ ಅಡವಿಯಲ್ಲಿ ಹುಲಿಗಳ ಗರ್ಜನೆಯು ಕೇಳಬರುತ್ತಿತ್ತೋ ಇದೀಗಲ್ಲಿ ಶಿವಕೀರ್ತನೆ ಶಿವಪುರಾಣಗಳೇ ಕೇಳಬರುತ್ತವೆ. ಯಾವ ಅಡಿವಿಯನ್ನು ದಾಟಲು ಜನರು ಅಂಜುತ್ತಿದ್ದರೋ ಅದೀಗ ಶಿವಯೋಗಿಗಳ ಧರ್ಮ ಕ್ಷೇತ್ರವಾಗಿದೆ. ಈ ಸುಯೋಗವನ್ನು ಒದಗಿಸಿಕೊಟ್ಟವರು ಶ್ರೀ ಮನ್ನಿರಂಜನ ಹಾನಗಲ್ಲ ಕುಮಾರಸ್ವಾಮಿಗಳೇ ಎಂಬದನ್ನು ಓದುಗರಿಗೆ ಹೇಳಬೇಕಾಗಿಲ್ಲ.

ಈ ಸಂಸ್ಥೆಯ ಆಧಾರಭೂತರಾದ ಶ್ರೀ ಮನ್ನಿರಂಜನ ಹಾನಗಲ್ಲ ಕುಮಾರಸ್ವಾಮಿಗಳವರು ಊರೂರಿಗೆ ಅಲೆದಾಡಿ ದುಡ್ಡು ಕೂಡಿಸುತ್ತಾರೆ. ಇವರ ಅವಿಶ್ರಾಂತ ಶ್ರಮದಿಂದ ಸಂಸ್ಥೆಯ ಪೋಷಣೆಯಾಗುತ್ತದೆ. ಈ ಸಂಸ್ಥೆಯ ಉಪಯುಕ್ತತೆಯನ್ನು ಕಂಡು ಯಾರು ಧನ ಧಾನ್ಯಗಳಿಂದ, ಯಾರು ಭೂಮಿ ಕಾಣಿಕೆಗಳಿಂದ, ಯಾರು ವರ್ಷಾಸನಗಳಿಂದ ಹೀಗೆಯೇ ಅನೇಕ ಮಾರ್ಗಗಳಿಂದ ಸಹಾಯ ಮಾಡಿರುವರು. ಪ್ರತಿ ವರುಷವೂ ಸುಮಾರು ೧೨ ಸಾವಿರ ರೂಪಾಯದಷ್ಟು ಕಾಯಮವಾದ ಉತ್ಪನ್ನವು ಈ ಸಂಸ್ಥೆಗಿದೆ. ಮತ್ತು ಬಾಗಲಕೋಟೆಯಲ್ಲಿಯ ಶಿವಾನಂದ 'ಜಿನಿಂಗ ಫ್ಯಾಕ್ಟರಿ ಸ್ಟೋರ್ಸ' ಗಳಿಂದಾಗುವ ಉತ್ಪನ್ನವೂ ಈ ಸಂಸ್ಥೆಯದೇ ಈ ಸಂಸ್ಥೆಗೆ ಸಹಾಯ 'ಕಾಂದಿರ ಸು ಸಸ್ತ್ರ ವೀರಶೈವ ಸಾಹಾಬದ ಮಾತ್ರೈದು ಲಪ್ಪೆ ಬಿನ್ನಲ್ಲಿ ಒಬ್ಬನು ಸಹ ಇಲ್ಲವೆನ್ನುವದಕ್ಕೆ ಈ ಸಂಸ್ಥೆ

ಯಿಂದ ಹೊರಟ ರಿಪೋರ್ಟುಗಳೇ ಸಾಕ್ಷಿಯಾಗಿವೆ.

ಪ್ರತಿಯೊಬ್ಬನು ಈ ಸಂಸ್ಥೆಯ ವಿಷಯವಾಗಿ ಸದಭಿಪ್ರಾಯಗಳನ್ನು ವ್ಯಕ್ತಗೊಳಿಸಿದ್ದಾನೆ. ' ಈ ಶಿವಯೋಗಮಂದಿರವು ಪೂರ್ವಕಾಲದಲ್ಲಿಯ ತಪೋವನವನ್ನು ಹೋಲುತ್ತದೆಂತಲೂ ವೀರಶೈವ ಸಮಾಜದಲ್ಲಿ ಇದೊಂದು ಹೊಸದಾದ ವಿಚಾರ ಕ್ರಾಂತಿಯನ್ನು ಮಾಡಬಹುದೆಂತಲೂ, ವೀರಶೈವರೂ ಅನ್ಯ ಮತೀಯರೂ ಕೂಡಿಯೇ ಹೊಗಳಿರುವರು. ಈಗೀಗ ಕೆಲವು ಕುಹಕರು ಈ ಸಂಸ್ಥೆಯ ಬಗ್ಗೆ ಏನೇನೋ ಹೇಳುತ್ತಿರುವರು. ಇದಕ್ಕೆ ಕಾರಣವು ಈಗೀಗ ವೀರಶೈವಸಮಾಜದಲ್ಲಿ ಹುಟ್ಟಿದ ಒಡಕು. ಸದ್ಯಃಸ್ಥಿತಿಯು ಶೋಚನೀಯವಾಗಿದೆ. ಸ್ವಾರ್ಥವು ಮನೆ ಮಾಡಿಕೊಂಡಿದೆ. ಶಿವಯೋಗ ಮಂದಿರವೆಂಬ ರಾಜ್ಯಕ್ಕೆ ರಾಜಧಾನಿಯಂತಿದ್ದ ಬಾಗಲಕೋಟೆಯು ಇಂದು

ಹಿಗ್ಗುವದೆಂದು ಜಗ್ಗಬಾರದು. ಜಗ್ಗಿದರೆ ಎರಡು ತುಂಡುಗಳಾಗುವವು. ಹಿಗ್ಗುವದನ್ನು ನೋಡಿದರೆ ಕೆಲವರು ಹಿಗ್ಗುವರು. ಆದರೆ ಇದು ಸರಿಯಾದದ್ದಲ್ಲ ಹಿಗ್ಗುವದನ್ನು ನೋಡಿ ಕುಗ್ಗತಕ್ಕದ್ದು. ' ಮನೆಯೊಳಗಿನ ಕಿಚ್ಚು ಮನೆಯ ಸುಟ್ಟಲ್ಲದೆ, ನೆರೆಮನೆಯ ಸುಡದೆಂಬ ಬಸವೇಶ್ವರ ದೇವರ ವಚನವು ಲಕ್ಷ್ಯದಲ್ಲಿರಲಿ. '

ಪ್ರತಿಯೊಬ್ಬ ವೀರಶೈವನು ಈ ಸಂಸ್ಥೆಗೆ ದುಡ್ಡು ಕೊಟ್ಟಿರುವನು. ಆ ದುಡ್ಡಿನ ಸದುಪಯೋಗವಾಗುವದೋ ಇಲ್ಲವೋ ಎಂಬುವದನ್ನು ನೋಡುವದು ಆತನ ಕರ್ತವ್ಯವಾಗಿದೆ ರಲಿ.

ಸದ್ಯದಲ್ಲಿ ಒಡಕು ಕಂಡು ಬಂದರೂ ಶಿವಯೋಗ ಮಂದಿರವು ಶಿವಕೃಪೆಗೆ ಪಾತ್ರವಾಗುವದು. ಶಿವಯೋಗ ಮಂದಿರವು ಅಭಿವೃದ್ಧಿಯನ್ನು ಹೊಂದುವದು. ಶಿವಯೋಗಮಂದಿರವು ಕನ್ನಡಿಗರಿಗೆ ಕೈಕನ್ನಡಿಯಾಗುವದು. ಶಿವಯೋಗ ಮಂದಿರವು ಭರತಖಂಡಕ್ಕೆ ಒಂದು ಆದರ್ಶಭೂತವಾದ ಸಂಸ್ಥೆಯಾಗುವದು. ಇದರಲ್ಲಿ ಸಂದೇಹವಿಲ್ಲ,

—ಸಂಗಪ್ಪ ಸಾಸನೂರ, ಬಾಗಲಕೋಟೆ.

ವೆಂಕಟರಾಯರೂ ತಿರುಮಲೆ ತಾತಾಚಾರ್ಯ ಶರ್ಮರವರೂ ಮಂಗಳೂರ ಕಡೆಗೆ ಹೋಗಿರುವರು.

ಮೈಸೂರ ಕರ್ನಾಟಕ.

ಎಲ್ಲ ಸರಕಾರೀ ಶಾಲೆಗಳಲ್ಲಿ ರಾಟಿಯಿಂದ ನೂಲುವದನ್ನು ಕಲಿಸಲು ಪ್ರಾರಂಭಿಸಬೇಕೆಂದು ಮೈಸೂರಲ್ಲಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಶ್ರೀ ಹೊಸಕೊಪ್ಪ ಕೃಷ್ಣರಾಯರು ಒಂದು ಠರಾವನ್ನು ತರುವರು. ಕರ್ನಾಟಕದ ಹೆಜ್ಜೆಯು ದಿನದಿನಕ್ಕೆ ಹೀಗೆಯೇ ಮುಂದಾಗಲಿ!

ಮೈಸೂರ ಸರಕಾರದ ಕಾರ್ಯಕಾರೀ ಮಂಡಲದಲ್ಲಿ ಒಬ್ಬನಾದರೂ ಬಿನ್ ಸರಕಾರೀ ಸದಸ್ಯನಿರಬೇಕೆಂಬ ಠರಾವು ಕಡೆಗೆ ಕಾಯದೇ ಮಂಡಲದಲ್ಲಿ ಪಾಸಾಯಿತು.

ಅಂಚೆ ಮತ್ತು ತಂತಿಗಳ ಕಚೇರಿಗಳು ಮೈಸೂರ ಸಂಸ್ಥಾನದಲ್ಲಿ, ಸಾಕಷ್ಟು ಪ್ರಮಾಣದಲ್ಲಿ ಇರುವದಿಲ್ಲವಾದ್ದರಿಂದ, ೪೦೦ ಜನಸಂಖೆಗೆ ಮೀರಿದ ಪ್ರತಿಯೊಂದು ಹಳ್ಳಿಯಲ್ಲಿ ಅಂಚೆಕಚೇರಿಯೂ, ತಾಲೂಕಿನ ಪ್ರತಿಯೊಂದು ಉಪಭಾಗದಲ್ಲಿ ತಂತಿಯ ಕಚೇರಿಯೂ ಇರುವಂತೆ ಮೈಸೂರ ಸರಕಾರದವರು ಪ್ರಯತ್ನಿಸಬೇಕೆಂದು ಅಲ್ಲಿಯ ಕಾಯದೇ ಮಂಡಲದಲ್ಲಿ ಒಂದು ಠರಾವು ಪಾಸಾಗಿದೆ.

ನಿಝಾಂ ಕರ್ನಾಟಕ

ಶ್ರೀಮತ್ ಶಂಕರ ಭಗವತ್ಪಾದಾಚಾರ್ಯರ ಜನನ ಮಹೋತ್ಸವವು (ಗುಲಬುರ್ಗಾ ಜಿಲ್ಲಾ) ಸುರಪುರ ನಗರದಲ್ಲಿ ವೈಶಾಖದ ಕೃ ಪಂಚಮಿ ದಿವಸ ಪ್ರತಿವರ್ಷ ಬಹು ವಿಜೃಂಭಣೆಯಿಂದ ನೆರವೇರುತ್ತದೆ- ಆಕಾರಣ ವೈದಿಕ ಲೌಕಿಕ ಮಹಾಜನರು ಈ ಮಹೋತ್ಸವಕ್ಕೆ ಬಂದು ಸೇವಾ ಪ್ರಸಾದವನ್ನು ಸ್ವೀಕರಿಸಬೇಕೆಂದು ಕಾರ್ಯದರ್ಶಿಯವರ ಆಗ್ರಹದ ಪ್ರಾರ್ಥನೆಯಿದೆ.

ಹೈದರಾಬಾದದಲ್ಲಿ ಶ್ರೀ ಜಯರಾಮಾಚಾರ್ಯರ ಸ್ಫೂರ್ತಿದಾಯಕ ಕನ್ನಡ ಕೀರ್ತನಗಳು ನಡೆದಿವೆ. ಕನ್ನಡಿಗರಲ್ಲಿ ಹೊಸ ಚಳವಳಿಯುಂಟಾಗಿದೆ.

ಕೊಡಗು ಕರ್ನಾಟಕ,

ಕೊಡಗು ಜಮೀನುದಾರರ ವಾರ್ಷಿಕ ಮಹಾಸಭೆಯು ಇದೇ ತಿಂಗಳು ೧೧ ೧೩ ೧೪ ರಲ್ಲಿ ಮರ್ಕಾರಾದಿನಲ್ಲಿ ಮ. ರಾ. ರಾ. ಅಬಕಲ್ ಗಫೂರ್ ಖಾನ್ ಕೈಶ್ಗಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂಘದ ವಾರ್ಷಿಕ ಮಹಾಸಭೆಗೆ ಮಹಮ್ಮದೀಯರು ಅಧ್ಯಕ್ಷರಾದದ್ದು ಇದೇ ಮೊದಲು

ಕೊಡಗಿನ ಜಮ್ಮಾ ಪಂಚ್ಯಾಟಗಳು ಇದೇ ತಿಂಗಳು ಮೂರನೇ ವಾರದಲ್ಲಿ ಮಡಕೇರಿಯಲ್ಲಿ ನಡೆದವು.

ನಿಮಗೆ "ಕನ್ನಡಿಗ" ನಭೆಟ್ಟಿಯು ಅನಾವಶ್ಯಕವಿದ್ದರೆ ಸಂಚಿಕೆಗಳನ್ನು ಸ್ವೀಕರಿಸದೆ ಅವನ್ನು ನಮಗೆ ಮರಳಿ ಕಳಿಸಬೇಕಾಗಿ ಬಿನ್ನಹ. ಕಾರ್ಡ ಬರೆದು ನಿಮ್ಮ ಅರ್ಧ ಆಣೆ ವೆಚ್ಚ ಮಾಡುವದೂ ಅವಶ್ಯವಿಲ್ಲ.

ವರ್ತಮಾನಸಾರ

ಇಹವೃತ್ತ

ಬಾಗಲಕೋಟೆಯಲ್ಲಿ ೨೨ ಜನ ಕಾಂಗ್ರೆಸ ಸಭಾಸದರಾಗಿರುವರು ಅವರಲ್ಲಿ ೧೧ ಜನರು ಸ್ವತಃ ನೂಲು ತೆಗೆಯುವವರು.

ಕರ್ನಾಟಕ.

ಮುಂಬಯಿ ಕರ್ನಾಟಕ.

ದೇಶಭಕ್ತ ಕೌಜಲಗಿ ಶ್ರೀನಿವಾಸರಾಯರು ಕಾರ್ಕಳ ಪರಿಷತ್ತಿಗಾಗಿ ಬೇಗನೇ ವಿಜಾಪೂರದಿಂದ ಹೊರಡತಕ್ಕವರಿದ್ದಾರೆ-

ಕಾರವಾರದಲ್ಲಿ ೪೨ ಜನ ಕಾಂಗ್ರೆಸ ಸಭಾಸದರಾಗಿರುವರು

ಮದ್ರಾಸಿನ ಸುಪ್ರಸಿದ್ಧ ಕನ್ನಡ ಅಭಿಮಾನಿಗಳಾದ ಶ್ರೀ ಬಿ. ರಾಮರಾಯರು ಈ ಸಾರೆಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆರಿಸಲ್ಪಡುವ ಚಿನ್ಹಗಳಿವೆ.

ಮದ್ರಾಸ ಕರ್ನಾಟಕ.

ನೀಲಗಿರಿ ಬೆಟ್ಟವನ್ನೇರುವ ರೇಲ್ವೆಯನ್ನು ವಿದ್ಯುತ್ ಶಕ್ತಿಯಿಂದ ನಡಿಸಬೇಕೆಂಬ ವಿಚಾರಗಳು ನಡೆದಿವೆ.

ಬಳ್ಳಾರಿಯಲ್ಲಿ ೨೫ ಜನರು ಕಾಂಗ್ರೆಸ ಸಭಾಸದರಾಗಿರುವರು,

ಕರ್ನಾಟಕ ಸಾಹಿತ್ಯ ಪರಿಷತ್ತಿನ ಪ್ರಚಾರಕ್ಕಾಗಿ ಶ್ರೀ ಆಲೂರ

ಹಿಂದುಸ್ಥಾನ.

ಸಿಲೋನದಲ್ಲಿ ಜೈಲಾನಗರದ ಹತ್ತರ ಒಕ್ಕಲಿಗರು ನೆಲವನ್ನು ಅಗೆಯುವಾಗ್ಗೆ ಗಂಧದ ಒಂದು ಮೂರ್ತಿಯು ದೊರೆತಿದೆ. ಇದು ಯಾವ ಧಾತುವಿನಿಂದ ಮಾಡಲ್ಪಟ್ಟಿದೆಯೋ ತಿಳಿಯದು ಬಂಗಾರ ಅಥವಾ ಬೆಳ್ಳಿಯು ಇದರಲ್ಲಿ ಮಿಶ್ರವಾಗಿರಬೇಕೆಂಬ ತರ್ಕವಿದೆ. ಬುದ್ಧ ಭಗವಾನನ ಅವಶೇಷಗಳು ಅದರಲ್ಲಿವೆಂದು ಊಹಿಸಿದ್ದಾರೆ.

ಪರದೇಶ.

ಇಂಗ್ಲಂಡಿನಲ್ಲಿ ೪೦ ಲಕ್ಷ ಕುಮಾರಿಕೆಯರಿದ್ದು, ಅವರಿಗೆ ವಿವಾಹವಾಗಬೇಕೆಂದರೆ ಕುಮಾರರೇ ದೊರೆಯರು ಸ್ತ್ರೀಯರಲ್ಲಿ ೧೦೦ಕ್ಕೆ ೮೦ ಜನರು ಅವಿವಾಹಿತರಾಗಿದ್ದಾರೆ ಅಮೇರಿಕಾ (ಕಾನಡಾ) ದಲ್ಲಿ ಕುಮಾರರೇ ಅನೇಕರಿದ್ದು ಕುಮಾರಿಕೆಯರು ಇಲ್ಲದ್ದರಿಂದ ಇಂಗ್ಲಂಡದ ಕುಮಾರಿಕೆಯರ ಸೇನಾತಂಡಗಳಿಂದ ಕಾನಡಾ ದೇಶವನ್ನು ಮುತ್ತುವ ವಿಚಾರಗಳು ನಡೆದಿವೆ!

ಕನ್ನಡ ನಾಡಿನ ಕಳವಳವಿದ್ದವರು ಕನ್ನಡಿಗನನ್ನು ಸ್ವೀಕರಿಸಬೇಕು ಅವನನ್ನು ಪ್ರೋತ್ಸಾಹಿಸಲೇಬೇಕು!

ಕರ್ನಾಟಕಸ್ಥರಾದ ಯಾವತ್ತೂ ಮಹಾಶಯರಿಗೆ ಸವಿನಯ ಪ್ರಾರ್ಥನೆ.

ಸ್ವಾಭಿಮಾನವು ಮನುಷ್ಯಪ್ರಾಣಿಗೂ ಇತರಪ್ರಾಣಿಗಳಿಗೂ ತಾರತಮ್ಯವನ್ನು ತೋರಿಸುವ ಉಜ್ವಲ ಗುಣವಾಗಿದೆ. ಈ ಸ್ವಾಭಿಮಾನದಲ್ಲಿ ಸದ್ಧರ್ಮಯುಕ್ತವಾದ ದೇಶಾಭಿಮಾನವು ಪ್ರಾಧಾನ್ಯವು. ಯಾವನಲ್ಲಿ ದೇಶಾಭಿಮಾನವು ತೋರುವದಿಲ್ಲವೋ ಅವನು ಮನುಷ್ಯತ್ವಕ್ಕೆ ಹೊರಗೆಯೇ ಸರಿ. ಯಾವ ಎಡೆಯಲ್ಲಿ ಈ ಅಸಾಧಾರಣ ಗುಣವು ಪ್ರಜ್ವಲಿಸುತ್ತಿರುವದೋ ಆ ದೇಶವು ಸುಖಸಂಪತ್ತುಗಳ ತವರಮನೆಯು. ಇಂಥ ಸುಖಸಂಪತ್ತುಗಳಿಗೆ ಅಖಂಡ ರಾಷ್ಟ್ರೀಯತ್ವವು ಮೂಲ ಕಾರಣವು. ಆದರೆ ಹಂಚಿಹೋದ ಕರ್ನಾಟಕದಲ್ಲಿ ನಮ್ಮ ದುರ್ದೈವದಿಂದ ಅಖಂಡ ರಾಷ್ಟ್ರೀಯತ್ವದ ಕಲ್ಪನೆಗೆ ಅನುಕೂಲ ಪರಿಸ್ಥಿತಿಗಳಿಲ್ಲ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಒಂದು ಭಾಷೆಯನ್ನಾಡುವ ದೇಶಗಳು ಪ್ರಸಂಗವಶಾತ್ ವಿಭಾಗವಾದಾಗ ಅವುಗಳ ಅಖಂಡತ್ವಕ್ಕಾಗಿ ಯಾರು ತನುವನ್ನೇ ಧಾರೆಯೆರೆದಿರುವರು. ಯಾರು ಸರ್ವಸ್ವವನ್ನು ಅರ್ಪಿಸಿರುವರು. ನಮ್ಮ ಭರತಖಂಡದಲ್ಲಿ ಸಹ ವಂಗಭಂಗವಾದಾಗ್ಗೆ ನಮ್ಮ ಬಂಗಾಲ ದೇಶಬಾಂಧವರು ಎಷ್ಟು ಘನಘೋರಸಂಗ್ರಾಮವನ್ನು ಹೂಡಿದ್ದರೆಂಬುದು ಸರ್ವ ಶ್ರುತವದೆ. ಈಗಲಾದರೂ ಒರಿಸಾದೇಶಿಯರು ಆಂಧ್ರದೇಶದವರು ಭಾಷಾನ್ವಯ ಪ್ರಾಂತರಚನೆಯಿಂದ ಒದಗುವ ದೇಶಾಭ್ಯುದಯಕ್ಕಾಗಿ ಶಕ್ತಿಮೀರಿ ಕಾದುತ್ತಿರುವರು. ಈ ಎಲ್ಲದೇಶಗಳು ಕಾಲವಶಾತ್ ಒಂದೆರಡು ತುಂಡುಗಳಾಗಿ ವಿಭಾಗಿಸಲ್ಪಟ್ಟಿದ್ದರೆ ದುರ್ದೈವದಿಂದ ನಮ್ಮ ಕರ್ನಾಟಕವು ೧೧ ತುಣುಕುಗಳಾಗಿ ಕತ್ತರಿಸಲ್ಪಟ್ಟಿದೆ. ಇದರಿಂದ ಕರ್ನಾಟಕದ ಸರ್ವಸಾಮಾನ್ಯ ಪ್ರಗತಿಯು ಬಹುಪರಿಯಿಂದ ಕುಂಠಿತವಾಗಿದೆ. ಕರ್ನಾಟಕ ಭಾಷಾಪ್ರಸಾರ ಸಂಪದಭಿವೃದ್ಧಿ ಸಾಮಾನ್ಯ ಜ್ಞಾನಪ್ರಾಪ್ತಿ ಮೊದಲಾದವುಗಳಿಗೆ ಈ ಪ್ರತಿಕೂಲ ಪರಿಸ್ಥಿತಿಯು ಬಹು ಆತಂಕವಾಗಿದೆಂಬುದು ಇತ್ತೀಚೆಗೆ ಅನೇಕ ಕರ್ನಾಟಕ ಮಹಾಶಯರಿಗೆ ಹೊಳೆದು ಬ್ರಿಟಿಶ ಆಡಳಿತೆಯಲ್ಲಿದ್ದ ಸೊಲ್ಲಾಪೂರ ವಿಜಾಪೂರ ಬೆಳಗಾವ, ಧಾರವಾಡ, ಕಾರವಾರ, ಬಳ್ಳಾರಿ, ನೀಲಗಿರಿ ಸೇಲಂ, ಕೋಯಿಮುತ್ತೂರ, ಅನಂತಪೂರ, ಕೊಡಗು ಮಂಗಳೂರ, ಮೊದಲಾದ ವಿಭಾಗಗಳಿಂದ ಭಿನ್ನ ಭಿನ್ನ ಅಧಿಕಾರಿಗಳಿಗಾಗಿ, ಅನ್ಯಭಾಷೆಗಳ ದಾಳಿಗಳಿಗೆ ಈಡಾಗಿ ಕಷ್ಟಪಡುತ್ತಿರುವ ಕರ್ನಾಟಕವನ್ನು ಒಂದುಗೂಡಿಸಿ, ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತಿಕ ಸರಕಾರವನ್ನು ದೊರಕಿಸಿ, ಅದಕ್ಕೆ ಸ್ವತಂತ್ರ ವಿಶ್ವವಿದ್ಯಾಲಯ ಬಂದರ, ಉಚ್ಚನ್ಯಾಯ ಸಭೆ (ಹಾಯಕೋರ್ಟ) ಮೊದಲಾದವುಗಳನ್ನು ಒದಗಿಸಿಕೊಟ್ಟು ಕರ್ನಾಟಕ ದೇಶವನ್ನು ಉದ್ಧರಿಸುವ ಸದಿಚ್ಛೆಯಿಂದ ಕಳೆದ ಡಿಸೆಂಬರ ತಿಂಗಳಲ್ಲಿ ಬೆಳಗಾವಿಯಲ್ಲಿ ಶ್ರೀ ಕಂಬಳಿಯವರ ಅಧ್ಯಕ್ಷತೆಯಲ್ಲಿ **ಅಖಿಲ ಕರ್ನಾಟಕ ಏಕೀಕರಣ ಸಭೆಯು** ಸೇರಿ ಅಲ್ಲಿ **ಕರ್ನಾಟಕ ಏಕೀಕರಣ ಸಭೆಯೆಂಬ** ಹೆಸರಿನ ಸಂಘವು ಸ್ಥಾಪಿಸಲ್ಪಟ್ಟಿತು. ಆ ಕಾಲಕ್ಕೆ ನಿಯಮಿಸಿದ ಕಾರ್ಯನಿರ್ವಾಹಕ ಮಂಡಲವು ಇದೇ ಎಪ್ರಿಲ ೫ನೇ ತಾರೀಖಿನ ದಿನ ಹುಬ್ಬಳ್ಳಿಯಲ್ಲಿ ಕೂಡಿದಾಗ ಸಂಘದ ಉದ್ದೇಶಗಳು ಈಡೇರಬೇಕಾದರೆ ದೊಡ್ಡಪ್ರಮಾಣದಿಂದ ಚಲನೆಯನ್ನು ನಡಿಸಲಿಕ್ಕೂ, ಅಲ್ಲಲ್ಲಿ ಕರ್ನಾಟಕ ದೇಶೀಯರನ್ನು ಜಾಗೃತಗೊಳಿಸಲಿಕ್ಕೂ, ಒಂದು ಧನರಾಶಿಯನ್ನು ಕೂಡಿಸಬೇಕೆಂದು ನಿರ್ಧರಿಸಲ್ಪಟ್ಟಿತು. ಈ ಸಂಘದ ಧ್ಯೇಯವು ಎಷ್ಟು ಉದಾತ್ತವಾಗಿರುತ್ತದೆಂಬದನ್ನು ಹೇಳುವದು ಪುನರುಕ್ತಿಯಾಗುವದು. ಇದರಲ್ಲಿ ಯಾವ ಜಾತಿಮತ ಪಂಥಗಳ ಪ್ರಶ್ನೆಯಿರದೆ ಕರ್ನಾಟಕದಲ್ಲಿ ವಾಸಮಾಡುವ ಸಮಗ್ರ ದೇಶಿಯರಿಗೂ ಸಂಬಂಧಪಾದದ್ದಾಗಿರುವದು. ಈ ಕಾರಣದಿಂದ ಯಾವತ್ತು ಕರ್ನಾಟಕಸ್ಥರು ಈ ಸಂಘದ ಉಚ್ಚಧ್ಯೇಯ್ಯದಕಡೆಗೆ ಗಮನಿಸಿ ಸ್ವವಸ್ತ್ರ ಪರವಸ್ತ್ರಗಳಿಂದ ಶಕ್ತಿಮೀರಿ ಸಹಾಯಮಾಡಿ ತಮ್ಮ ಉಜ್ವಲ ದೇಶಾಭಿಮಾನವನ್ನು ವ್ಯಕ್ತಪಡಿಸಬೇಕೆಂದು ಸವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಈ ಸಭೆಯ ಧ್ಯೇಯಕ್ಕೆ ಒಪ್ಪಿ ಪ್ರತಿವರ್ಷದಲ್ಲಿಯೂ ೧ರೂ- ಚಂದಾಹಣವನ್ನು ಕೊಡತಕ್ಕವರು, ಈ ಸಭೆಗೆ ಸಭಾಸದರಾಗಿ ಸೇರಬಹುದು. ಹೀಗೆ ಸಭಾಸದರಾಗಿಯೂ ಶ್ರೀಮಂತರು ತಮ್ಮ ಶ್ರೀಮಂತಿಕೆಗೆ ಶೋಭಿಸುವಂತೆ ಧನಸಹಾಯಮಾಡಿಯೂ ಈ ಸಂಸ್ಥೆಯನ್ನು ಅಭಿವೃದ್ಧಿಗೊಳಿಸಬೇಕೆಂದು ಬೇಡಿಕೆಯಿದೆ

ಟೀಪು ಈ ಸಭೆಗೆ ಕಳಿಸುವ ಹಣವನ್ನೆಲ್ಲ ಕಾರ್ಯದರ್ಶಿಯರ ಕಡೆಗೆ ಕಳಿಸಬೇಕು.

(೧) ಶಿವಮೂರ್ತಿಸ್ವಾಮಿ ಶಿವಮಠ ಬಿ. ಎ. ಎಲ್. ಎಲ್. ಬಿ ಹಾವೇರಿ.
(೨) ಶ್ರೀನಿವಾಸ ರಂಗರಾವ ಮಂಗಳವೇಢೆ ಸಂಪಾದಕ ಕನ್ನಡಿಗ ಬಾಗಲಕೋಟೆ.
} ಕಾರ್ಯದರ್ಶಿಗಳು.
ತಾ|| ೨೦-೪-೨೫

ಎಸ್. ಟೀ. ಕಂಬಳೀ.
ಅಧ್ಯಕ್ಷ.

ವಿನಂತಿಯು.

"ಕನ್ನಡಿಗ"ನ ೫ ಸಂಚಿಕೆಗಳು ವಾಚಕರ ಹಸ್ತಗತವಾಗಿವೆ. ೪೦೦೦ ಪ್ರತಿಗಳನ್ನು ಅಂಚೆಗೆ ಕಳಿಸಲು ಪ್ರತಿವಾರದಲ್ಲಿಯೂ ೬೨ ರೂಪಾಯಿ ಮೊದಲು ಅಂಚೆಯ ವೆಚ್ಚ ತಗಲುವದು! ಉಳಿದ ವೆಚ್ಚಗಳು ಬೇರೆ ಇದನ್ನು ಲಕ್ಷ್ಯದಲ್ಲಿ ತಂದು ವಾಚಕರು ಈ ಸಂಚಿಕೆಯು ಕೈ ಸೇರಿದ ಕೂಡಲೇ ಚಂದಾ ಹಣವನ್ನು ಮನಿಯಾರ್ಡರ ಮಾಡಿ ಕಳಿಸಬೇಕಾಗಿ ಸವಿನಯ ಪ್ರಾರ್ಥನೆ. ಕೆಲವು ಸಾರೆ ಚಂದಾದಾರರು ಇತ್ತ ಕಡೆಗೆ ಮನಿಯಾರ್ಡರ ಕಳಿಸುವದೂ, ನಾವೂ ಅತ್ತ ಕಡೆಗೆ ವಿ. ಪಿ. ಕಳಿಸುವದೂ, ಏಕ ಕಾಲಕ್ಕೆ ಒದಗಿ, ತೊಂದರೆಯಾಗುತ್ತದೆ. ಆದ್ದರಿಂದ ನಾವು ೬ ನೆ, ಸಂಚಿಕೆಯ ವರೆಗೆ ಮನಿಯಾರ್ಡರದ ಮಾರ್ಗ ಕಾಯ್ದು (ಅಂದರೆ ಚಂದಾದಾರರು ಈ ಸಂಚಿಕೆ ಮುಟ್ಟಿದ ಕ್ಷಣದಲ್ಲಿಯೇ; ಮನಿಯಾರ್ಡರ ಕಳಿಸುವರೆಂದು ನಂಬಿ, ಅದು ನಮಗೆ ಬಂದು ತಲ್ಪುವದಕ್ಕೆ ಸಾಕಷ್ಟು ಅವಕಾಶ ಕೊಟ್ಟು) ಮುಂದಿನ ೭ ನೆ, ಸಂಚಿಕೆಯನ್ನು ವಿ. ಪಿ ಯಿಂದ ಕಳಿಸುವೆವು. ಇನ್ನು ಯಾರಿಗೆ 'ಕನ್ನಡಿಗ'ನ ಭೆಟ್ಟಿಯ ಆವಶ್ಯಕತೆಯಿಲ್ಲವೋ, ಅವರು ಪತ್ರ ಕೂಡಲೇ ನಮಗೆ ಹಾಗೆ ದಯವಿಟ್ಟು, ಬರೆದು, ನಮ್ಮ ಮೇಲೆ ಉಪಕಾರ ಮಾಡಬೇಕಾಗಿ ಪ್ರಾರ್ಥನೆ

ವ್ಯವಸ್ಥಾಪಕ ಕನ್ನಡಿಗ ಬಾಗಲಕೋಟೆ.

ಈ ಪತ್ರಿಕೆಯು ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ
ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು. ಪ್ರತಿ ೪೦೦೦

ರಿ. ನಂ. ಬಿ. ೧೯೪೭ ವಾ. ಚಂದಾ ೧—೮—೦ ಮಾತ್ರ!

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವೇಶವಾಗಿದೆ)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ ನೆ | ಬಾಗಲಕೋಟೆ ಶುಕ್ರವಾರ ಮಿತಿ ವೈಶಾಖ ಶುದ್ಧ ೮ ಶಕೆ ೧೮೪೭. ತಾ॥ ೧ ೫-೧೯೨೫. | ಸಂಚಿಕೆ ೬

ಸಂಪಾದಕರ ಭೂಮಿ.

ಎಷ್ಟರೆ ಕನ್ನಡ ಕೇಳಿದರೆ ಕನ್ನಡ ನುಡಿದರೆ ಕನ್ನಡವು ।
ಹೃದಯವು ಕನ್ನಡ ಉದ್ಯಮ ಕನ್ನಡ- ಕನ್ನಡ-ಕನ್ನಡವು ।
ಕನಸಿನ ಮನಸಿನೊಳು ಕನ್ನಡ ಕನ್ನಡ ನಿದ್ದೆಯು ಕನ್ನಡವು ।
ತಿನಸು ಕನ್ನಡವು ಜೀವಿತ ಕನ್ನಡ ಎಲ್ಲವು ಕನ್ನಡವು ॥
—ಕೈ. ನಗರ ಕವಿ

ಕನ್ನಡಿಗನ ಇದೇ ಸಂಚಿಕೆಯಲ್ಲಿ ಕರ್ನಾಟಕದ ರೇಲ್ವೆ ವಿಷಯವನ್ನು ಆ ಬಗ್ಗೆ “ಕನ್ನಡಿಗ”ನ ಒಂದು ಯೋಜನೆಯನ್ನೂ ಪ್ರಸಿದ್ಧ ಪಡಿಸಿರುವೆವು ಅದನ್ನು ದಯವಿಟ್ಟು ಎಲ್ಲರೂ ಓದಬೇಕು. ಮತ್ತು ಮುಂಬೈ ಕರ್ನಾಟಕ, ಮೈಸೂರ ಕರ್ನಾಟಕ, ಮದ್ರಾಸ ಕರ್ನಾಟಕ, ನಿಜಾಮ ಕರ್ನಾಟಕ, ಕೊಡಗು ಕರ್ನಾಟಕಗಳೆಲ್ಲ ಒಂದರಲ್ಲಿಯ ಆ ಯೋಜನೆಯಿಂದ ಲಾಭ ಹೊಂದುವವೆಂಬದನ್ನು ಲಕ್ಷಿಸಿಕೊಳ್ಳಬೇಕು. ಈ ಎಲ್ಲ ಕರ್ನಾಟಕದ ಭಾಗಗಳಲ್ಲಿಯ ಪ್ರತಿಯೊಬ್ಬ ಕರ್ನಾಟಕಾಭಿಮಾನಿಯು ಈ ವಿಷಯದಲ್ಲಿ ಕೂಡಲೇ ಮನಸ್ಸು ಹಾಕಬೇಕು. ಅವನು ಬ್ರಿಟಿಶ ಅಧಿಕಾರದಲ್ಲಿದ್ದರೂ, ಸರಿ ಸಂಸ್ಥಾನಗಳಲ್ಲಿದ್ದರೂ ಸರಿ. ಈ ರೇಲ್ವೇ ವಿಷಯವು ಎಲ್ಲರಿಗೂ ಬೇಕಾದ ಸಂಗತಿ. ಮೈಸೂರ ಮಹಾರಾಜರು ಹೈದರಾಬಾದದ ನಿಜಾಮರು, ಸಣ್ಣ ಸಂಸ್ಥಾನಗಳ ಒಡೆಯರು, ತಮ್ಮ ಮೇಲೆ ಸಿಟ್ಟಾಗುವರೆಂದು ಸಂಸ್ಥಾನಗಳ ಪ್ರಜಾ ಜನರು ಇಲ್ಲಿ ಅಂಜುವ ಕಾರಣವಿಲ್ಲ. ಯಾಕೆಂದರೆ, ಈ ವಿಷಯವು ಸಂಸ್ಥಾನಾಧಿಪತಿಗಳಿಗೂ ಬೇಕಾದದ್ದು. ಈ ಸಂಸ್ಥಾನಗಳಲ್ಲಿ ರೇಲ್ವೆಗಳಾದರೆ, ಅವರಿಗೂ ಲಾಭ. ಇನ್ನು ಬ್ರಿಟಿಶ ಅಧಿಪತ್ಯದಲ್ಲಿರುವ, ರಾಜನಿಷ್ಠರು ಸಹ ಕಲೆಕ್ಟರ ಸಾಹೇಬರ ಬೇಮರ್ಜಿಯಾಗುವದೆಂದೂ ಬೆದರುವ ಕಾರಣವಿಲ್ಲ. ರೇಲ್ವೇದಂಥ ವಿಷಯದಲ್ಲಿ ಮನಸ್ಸು ಹಾಕಿದರೆ ಅವರೂ ಕೋಪಿತರಾಗುವ ಕಾರಣವಿಲ್ಲ. ಇದೇನು ರಾಜಕೀಯ ವಿಷಯವಲ್ಲ.

ಒಟ್ಟಿನ ಮೇಲೆ ಹೇಳುವದೆಂದರೆ, ಕರ್ನಾಟಕದಲ್ಲಿಯ ಪ್ರತಿಯೊಬ್ಬ ಮನುಷ್ಯನೂ ಇದರಲ್ಲಿ ಅವಶ್ಯವಾಗಿ ಭಾಗ ತೆಗೆದುಕೊಳ್ಳುವ ಅವಶ್ಯವಿದೆ. ಆದುದರಿಂದ ‘ಕನ್ನಡಿಗನ’ ಪ್ರತಿಯೊಬ್ಬ ಓದುಗನೂ ಇದು ತನ್ನ ಕರ್ತವ್ಯವೆಂಬದನ್ನರಿತು, ಈ ಸಂಚಿಕೆಯಲ್ಲಿ ತೋರಿಸಿದ ನಮೂನೆಯಂತೆ ಒಂದು ಪ್ರತಿಯನ್ನು ಸಿದ್ಧ ಮಾಡಿ ಶ್ರೀಯ ಮೇಲೆ, ತನ್ನ ಆಪ್ತರಲ್ಲಿಯೂ ಮಿತ್ರರಲ್ಲಿಯೂ ಅಡ್ಡಾಡಿ, ೫೦ ಸಹಿಗಳನ್ನು ತೆಗೆದುಕೊಂಡು, ಅದನ್ನು ನಮ್ಮ ಕಡೆಗೆ ಕೂಡಲೇ ಕಳಿಸಬೇಕಾಗಿ ಪ್ರಾರ್ಥನೆಯಿದೆ. ಜಾಗ್ರತವಾದ ಕರ್ನಾಟಕದಲ್ಲಿ ಈ ರೇಲ್ವೇ ವಿಷಯದಿಂದ ದೊಡ್ಡದೊಂದು ಚಳವಳಿಯು ಏಳುವದೆಂಬುದನ್ನು ಕೂಡಲೇ ಕಂಡು ಹಿಡಿದು, ಕನ್ನಡಿಗರು ಈ ನಮ್ಮ ಪ್ರಾರ್ಥನೆಯನ್ನು ಮನ್ನಿಸಿ, ಉತ್ಸಾಹದಿಂದ ಈ ಕೆಲಸದಲ್ಲಿ ತೊಡಗುವರೆಂಬ ನಂಬುಗೆಯಿದೆ.

ಕರ್ನಾಟಕದಲ್ಲಿಯ ವೃತ್ತಪತ್ರಿಕಾ ಸಂಪಾದಕರ ಸಮ್ಮೇಲನವನ್ನು ಮಾಡಬೇಕೆಂಬ ವಿಚಾರವು ಕನ್ನಡಿಗರಲ್ಲಿ ಅನೇಕ ವರ್ಷಗಳಿಂದಿದ್ದರೂ ಅದಕ್ಕೆ ಈವರೆಗೂ ಮೂರ್ತಸ್ವರೂಪವು ಬಂದಿಲ್ಲ. ಕರ್ನಾಟಕದಲ್ಲಿ ಅನೇಕ ತುಂಡುಗಳಾದ್ದರಿಂದ, ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಪರಿಸ್ಥಿತಿಯಿದೆ. ಮೇಲಾಗಿ ಪ್ರತಿಯೊಂದು ಭಾಗದಲ್ಲಿ ಕನ್ನಡ ಭಾಷೆಯ ಶೈಲಿಯೂ, ಶಬ್ದ ಪ್ರಚಾರವೂ ಬೇರೆಯಾಗಿದೆ. ಈ ಪರಿಸ್ಥಿತಿಯು ಬದಲಾಗಿ, ಸಂಯುಕ್ತ ಕರ್ನಾಟಕದ ಭಾವನೆಯು ಎಲ್ಲ ಭಾಗಗಳಲ್ಲಿಯೂ ಹರಡುವಂತೆ ಪ್ರಯತ್ನಿಸುವ ಕಾರ್ಯದಲ್ಲಿ ಪತ್ರಿಕಾ ಕರ್ತರು ಪ್ರಮುಖ ಭಾಗವನ್ನು ತೆಗೆದುಕೊಳ್ಳುವದು ಅವರ ಆದ್ಯಕರ್ತವ್ಯವಾಗಿದೆ. ಈ ಕರ್ತವ್ಯವನ್ನು ಆಚರಿಸಲು “ಅಖಿಲ ಕರ್ನಾಟಕ ಸಂಪಾದಕರ ಸಂಘವು” ಅತ್ಯವಶ್ಯವಾದದ್ದು. ಆದ್ದರಿಂದ ಈಸಾರೆಯ ಬೆಳಗಾವಿಯ ಕರ್ನಾಟಕ ಸಾಹಿತ್ಯ ಸಮ್ಮೇಲನದವರು ಕನ್ನಡನಾಡಿನ ಸಂಪಾದಕರಿಗೆಲ್ಲ ಪ್ರಾರ್ಥಿಸಿದಂತೆ, ಅವರ ಪ್ರಾರ್ಥನೆಗೆ ಮನ್ನಣೆಯನ್ನಿತ್ತು, ಎಲ್ಲರೂ ಅವಶ್ಯವಾಗಿ ಬೆಳಗಾವಿಗೆ ಬಂದು, ಈ ಸಂಪಾದಕರ ಸಂಘದ ಬಗ್ಗೆ ವಿಚಾರಿಸಬೇಕಾಗಿ ನಾವು ಆಗ್ರಹಪೂರ್ವಕವಾಗಿ, ಎಲ್ಲ ಸಂಪಾದಕರಲ್ಲಿಯೂ ಬೇಡಿಕೊಳ್ಳುತ್ತೇವೆ.

“ಕನ್ನಡಿಗ” ನನ್ನು ಎಪ್ರೇಲ ೨೫ ನೇ ತಾರೀಖಿನಿಂದ ತಂತಿಯ ಸೌಕರ್ಯಗಳಿಗಾಗಿ ರಜಿಸ್ಟರ ಮಾಡಿದೆ. ಇನ್ನು ಮೇಲೆ ಕರ್ನಾಟಕದ ಯಾವ ಭಾಗದಲ್ಲಿಯಾದರೂ ಮಹತ್ವದ ಸಂಗತಿಗಳು ಒದಗಿದರೆ, ಅವನ್ನು ಕೂಡಲೇ ತಂತಿಯಿಂದ ನಮಗೆ ಕಳಿಸಲು ವಾಚಕರಿಗೆ ಅನುಕೂಲವಾಗುವದು. ರಜಿಸ್ಟರ ಮಾಡಲ್ಪಟ್ಟ ಪತ್ರಿಕೆಗಳಿಗೆ ತಂತಿಕಳಿಸಲು, ಮೊದಲಿನ ೪೦ ಶಬ್ದಗಳಿಗೆ ೮ ಆಣೆ ಮಾತ್ರ ಮುಂದಿನ ಪ್ರತಿ ೬ ಶಬ್ದಗಳಿಗೆ ಒಂದು ಆಣೆ ದರಗಳು ಇಷ್ಟು ಅಗ್ಗವಾಗಿದ್ದರಿಂದ, ಮಹತ್ವದ ಸಂಗತಿಗಳು ಆದೇ ವಾರದ “ಕನ್ನಡಿಗ”ನ ಸಂಚಿಕೆಯಲ್ಲಿ ಪ್ರಸಿದ್ಧವಾಗಬೇಕೆಂಬ ಇಚ್ಛೆಯುಳ್ಳವರೆಲ್ಲ ಈ ಅಗ್ಗದ ದರಗಳ ಲಾಭವನ್ನು ಹೊಂದಬಹುದು. ‘ಕನ್ನಡಿಗ’ನು

ಪ್ರತಿ ಶುಕ್ರವಾರ ಪ್ರಸಿದ್ಧನಾಗುವನಷ್ಟೇ? ಆದುದರಿಂದ ತಂತಿಯಿಂದ ಕಳುಹಿಸಿದ ಎಲ್ಲ ಸಂಗತಿಗಳೂ ಗುರುವಾರ ಮಧ್ಯಾಹ್ನದೊಳಗಾಗಿ ನಮ್ಮ ಕೈ ಸೇರುವಂತೆ ಕಳಿಸಬೇಕು. ತಂತಿಯ ವಿಳಾಸವು "ಕನ್ನಡಿಗ ಬಾಗಲಕೋಟಿ" ಯೆಂಬದಾಗಿದೆ.

ಗದಗ ಹುಟಗಿ ರೇಲ್ವೆ ಭಾಗದಲ್ಲಿ ಪ್ರವಾಸಕರಿಗೆ ಯಾವ ಬಗೆಯ ಅಮೌಲ್ಯವಾದ—ಯಾಕಂದರೆ ಬೇರೆ ಭಾಗದಲ್ಲಿ ಈ 'ಅಮೌಲ್ಯವು' ದೊರೆಯದು—ಕಷ್ಟಗಳೂ, ಅನಾನುಕೂಲತೆಗಳೂ ಒದಗುತ್ತವೆಂಬದು ಎಲ್ಲರಿಗೂ ಗೊತ್ತಿದ್ದ ಮಾತಾಗಿದೆ. ಈ 'ಅಮೌಲ್ಯವಾದ' ಸೌಕರ್ಯಗಳು ನಮಗೆ ಬೇಡ, ಸರ್ವ ಸಾಧಾರಣವಾದ ಸೌಕರ್ಯಗಳು ಎಲ್ಲ ಭಾಗಗಳಲ್ಲಿರುವವಂತೆ ಇಲ್ಲಿಯೂ ಇದ್ದರೆ ಸದ್ಯಕ್ಕೆ ಸಾಕೆಂಬದಾಗಿ ಪ್ರಯತ್ನಿಸಿ, ಈ ಭಾಗದಲ್ಲಿಯ ಕಷ್ಟಗಳನ್ನು ದೂರಮಾಡಲಿಕ್ಕೆ "ಕನ್ನಡಿಗ" ನು ಟೊಂಕ ಕಟ್ಟಿರುವನು. ಈ ಬಗ್ಗೆ ವಿಶದವಾದ ಸಂಗತಿಗಳನ್ನು ಮುಂದಿನ ಸಾರೆ ಪ್ರಸಿದ್ಧ ಮಾಡುವಂಥ ಸುಪ್ರಸಂಗವು ಬರಬಹುದಾಗಿ ತೋರುತ್ತದೆ.

ನಿಝಾಂ ಕರ್ನಾಟಕದಲ್ಲಿಯ ಕನ್ನಡಿಗನ ಚಂದಾದಾರರಿಗೆ ಬ್ರಿಟಿಶ್ ವಿ. ಪಿ. ಗಳು ನಡೆಯುವವಿಲ್ಲವಾದ್ದರಿಂದ "ಕನ್ನಡಿಗನ" ಸಂಚಿಕೆಗಳನ್ನು ಅವರಿಗೆ ವಿ. ಪಿ. ಯಿಂದ ಕಳಿಸಲು ಅವಕಾಶವಿಲ್ಲ. ಎಲ್ಲೆಲ್ಲಿ ಬ್ರಿಟಿಶ್ ಪೋಸ್ಟುಗಳಿವೆಯೋ ಅಲ್ಲಲ್ಲಿಯ ಚಂದಾದಾರರೆಲ್ಲ ದಯವಿಟ್ಟು ಮನಿಯಾರ್ಡರದಿಂದ ತಾವೇ ತಮ್ಮ ಚಂದಾ ಹಣವನ್ನು ನಮಗೆ ಕಳಿಸಬೇಕು. ಇನ್ನು ಎಲ್ಲಿ ಬ್ರಿಟಿಶ್ ಪೋಸ್ಟಗಳಿಲ್ಲವೋ ಅಲ್ಲಿಯ ಚಂದಾದಾರರು, ತಮ್ಮ ಚಂದಾ ಹಣವನ್ನು "ಚಿಮ್ಮಲಗೀಕರ ಬಂಧುಗಳು ಪೋ. ಟೋ. ಆರ್ಟಿಸ್ಟ್ಸ್. ಅಫಜಲಗಂಡ ದಕ್ಷಿಣ ಹೈದರಾಬಾದ" ಈ ವಿಳಾಸಕ್ಕೆ ಕಳಿಸಬೇಕು. ಆ ಹಣವು ಸುರಕ್ಷಿತವಾಗಿ ಬಂದು ನಮ್ಮ ಕೈಸೇರುವದು. ನಿಝಾಂ ಕರ್ನಾಟಕದಲ್ಲಿಯ ಕನ್ನಡಿಗರಿಗೆ ಅನುಕೂಲ ಮಾಡಿಕೊಡಬೇಕೆಂಬ ಸದಿಚ್ಛೆಯಿಂದ ಶ್ರೀ ಚಿಮ್ಮಲಗಿಕರ ಬಂಧುಗಳು ಸ್ವಸಂತೋಷದಿಂದ ತಾವಾಗಿಯೇ ಈ ಜವಾಬ್ದಾರಿಯನ್ನು ತಮ್ಮ ಮೈಮೇಲೆ ತೆಗೆದುಕೊಂಡದ್ದಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತೇವೆ. ನಿಝಾಂ ಕರ್ನಾಟಕಸ್ಥರು ಈ ಸುಸಂಧಿಯ ಲಾಭವನ್ನು ಸಂಪೂರ್ಣವಾಗಿ ಪಡೆಯಬೇಕು.

ಕಾನಡಾ ಧುರೀಣಕಾರರು ಕರ್ನಾಟಕ ಏಕೀಕರಣ ಸಭೆಯ ಬಗ್ಗೆ ಹಲವು ಆಕ್ಷೇಪಗಳನ್ನು ಎತ್ತಿರುವರು. ಕರ್ನಾಟಕದ ಅಂತರ್ಭಾಗದಲ್ಲಿ ಮೊದಲು ಚಳವಳಿಯನ್ನು ಮಾಡುವದನ್ನು ಬಿಟ್ಟು ಗಡಿನಾಡುಗಳಲ್ಲಿಯ ಸಂಗತಿಗಳಿಗೂ, ಆಯವ್ಯಯ ವಿಷಯಕ್ಕೂ ಈ ಸಭೆಯವರು ಆತುರರಾಗಿರುವದೇಕೆ ಯೆಂಬದಾಗಿ ಟೀಕಿಸುವರು. ಆದರೆ ಹೀಗೆ ಟೀಕೆ ಮಾಡುವ ಮೊದಲು ಕಾರ್ಯನಿರ್ವಾಹಕ ಮಂಡಳಿಯ ಸವಿಸ್ತಾರ ಕಾರ್ಯಗಳನ್ನೆಲ್ಲ ತಿಳಿದುಕೊಂಡು ಏನಾದರೂ ಬರೆದಿದ್ದರೆ ಒಳಿತಾಗುತಿತ್ತೆಂದ ನಮ್ರವಾಗಿ ಧುರೀಣಕಾರರಿಗೆ ಸೂಚಿಸುತ್ತೇವೆ. ಯಾಕಂದರೆ ಕರ್ನಾಟಕದ ಎಲ್ಲ ಭಾಗಗಳಲ್ಲಿ ಶ್ರೀ ದಾವಟೇ, ರಾ. ಬಾ. ಪಾಟೀಲ ಶ್ರೀ ಮುದವೇಡಕರ ಕೃಷ್ಣರಾವ ಮೊದಲಾದವರು ಸಂಚರಿಸಿ, ಈ ಬಗ್ಗೆ ಜಾಗ್ರತೆಯನ್ನು ಮಾಡಬೇಕೆಂಬದು ಅನೇಕ ತರಾವಿನಿಂದ ಸ್ಪಷ್ಟವಾಗುತ್ತದೆ. ಇನ್ನು ಗಡಿನಾಡುಗಳಲ್ಲಿಯ ಸಂಗತಿಗಳೂ, ಆಯವ್ಯಯವೂ ಸಹ ಮಹತ್ವದ್ದಾಗಿವೆಂಬದನ್ನು ಯಾರೂ ಮರೆಯಬಾರದು. ಲೋಕಸಂಗ್ರಹದ ಕೆಲಸ ಮಾಡುವಾಗ್ಗೆ, ಅಲ್ಲಲ್ಲಿ "ಕರ್ನಾಟಕ ಪ್ರಾಂತದಲ್ಲಿ ಯಾವ ಯಾವ ಊರುಗಳಿವೆ? ಕರ್ನಾಟಕ ಜನಸಂಖ್ಯೆ, ಕ್ಷೇತ್ರಗಳೆಷ್ಟು? ಕರ್ನಾಟಕವು ಹೊಸ ಪ್ರಾಂತವಾದರೆ ಅದರ ಆದಾಯ ವೆಚ್ಚಗಳು ಯಾವ ಪ್ರಮಾಣದವಾಗುವವು? ಸ್ವತಂತ್ರ ಪ್ರಾಂತಕ್ಕೆ ವೆಚ್ಚವು ಬಹಳ ಹತ್ತುತ್ತದೆ ಅದನ್ನೆಲ್ಲ ನಾವು ಹೊತ್ತುಕೊಳ್ಳುವದು ಶಕ್ಯವಿದೆಯೋ ಹೇಗೆ? ಕರ್ನಾಟಕದ ನಿಶ್ಚಿತ ಭೌಗೋಲಿಕ ಸ್ವರೂಪವಾದರೂ ಎಷ್ಟಿದೆ?" ಇವೇ ಮೊದಲಾದ ಪ್ರಶ್ನೆಗಳನ್ನು ಏಕೀಕರಣದ ವಿಷಯವು ಹೊರಟಕೂಡಲೇ ಸುಶಿಕ್ಷಿತರೂ ಪ್ರತಿಷ್ಠಿತರೂ ಆದ ಕರ್ನಾಟಕದ ಒಳ ಪ್ರದೇಶದವರು ಕೇಳುತ್ತಿರುವರು. ಸುಶಿಕ್ಷಿತರಲ್ಲಿ ನಾವು ಮೊದಲು ಈ ಏಕೀಕರಣದ ಕಲ್ಪನೆಯನ್ನು ಬೀರಬೇಕೆಂದು ಧುರೀಣಕಾರರು ಇತ್ತ ಹೇಳುವದೂ, ಅತ್ತ ಅವರ ಸಂಶಯಗಳನ್ನು ದೂರಮಾಡಲು ಬೇಕಾದ ಸಂಗತಿಗಳನ್ನು ದೊರಕಿಸುವ ವಿಚಾರವನ್ನು ಟೀಕಿಸುವದೂ ಒಂದಕ್ಕೊಂದು ವಿರೋಧವಾದ ಸಂಗತಿಗಳು. ಇನ್ನೊಂದು ಸಂಗತಿಯನ್ನು ಧುರೀಣಕಾರರು ಲಕ್ಷ್ಯದಲ್ಲಿಡಬೇಕು. ಕರ್ನಾಟಕದ ಒಳಗಿನ ಭಾಗಗಳಲ್ಲಿಯ ಜನರಿಗೆ ಈ ವಿಷಯವು ಸ್ವಲ್ಪಮಟ್ಟಿಗಾದರೂ ಗೊತ್ತಿದೆ. ಬಹುಜನ ಸಮಾಜಕ್ಕೆ ಸಹ ಇದು ಗೊತ್ತಾಗುವಂತೆ ಪ್ರಯತ್ನಿಸಿದರೆ, ಅದು ಕಷ್ಟವಾಗಿದ್ದರೂ, ಸಾಧ್ಯವಾಗಿದೆ. ಇದನ್ನು ಸಾಧ್ಯಮಾಡುವ ಕೆಲಸಗಳೂ ನಡೆದಿವೆ, ಆದರೆ ಗಡಿನಾಡುಗಳಲ್ಲಿಯ ಜನರಿಗೆ ಮೊದಲು ತಾವು ಕನ್ನಡಿಗರೆಂಬದೇ ಗೊತ್ತಿಲ್ಲ. ಮೇಲಾಗಿ ನೀವು ಕರ್ನಾಟಕದ ಅಭಿಮಾನ ಹಿಡಿಯಬೇಕೆಂಬದಾಗಿ ಹೇಳಿದರೆ ನಗುವರು ಕೆಲವು ಪ್ರಸಂಗಗಳಲ್ಲಿ ನಾವು ಹೀಗೆ ಹೇಳುತ್ತಿರುವದೊಂದು 'ಅಂತಃಸ್ಫೋಟ' ಗಳಂತಿದ್ದು ಈ ಗಡಿನಾಡಿನಲ್ಲಿಯ ಜನರು ಬೆಂಕೆಂತಲೂ ಕರ್ನಾಟಕದ ವಿರುದ್ಧವಾಗಿ ಪ್ರಯತ್ನಿಸುವರು. ಸ್ವತಂತ್ರ ಪ್ರಾಂತ ಕಲ್ಪನೆಗೆ ಎಲ್ಲರಿಗಿಂತ ಗಡಿನಾಡಿನಲ್ಲಿಯ ಜನರ ವಿರೋಧವೇ ಹೆಚ್ಚು. ಇದು ಅನುಭವದ ಮಾತಾಗಿದೆ ಅನಂತಪೂರ, ಕೋಲಾರ, ಕೊಯಿಮುತ್ತೂರ, ನೀಲಗಿರಿ ದಕ್ಷಿಣ ಮಹಾರಾಷ್ಟ್ರ(?) ಸಂಸ್ಥಾನಗಳಲ್ಲಿಯ ಗಡಿನಾಡಿನ ಪ್ರದೇಶಗಳಲ್ಲಿಯ ಕನ್ನಡಿಗರ ಪರಿಸ್ಥಿತಿಯು ಹೀಗೆಯೇ ಇದೆ. ಆದರೆ ಇವರನ್ನು ಬಿಟ್ಟರೆ ನಮ್ಮ ಕಾರ್ಯವಾಗುವದು. ಆದುದರಿಂದ ಈ ಗಡಿನಾಡಿನಲ್ಲಿ ಚಳವಳಿಯನ್ನು ಮಾಡುವದೂ ಅವಶ್ಯವಿದೆ. ಹೀಗೆ ಚಳವಳಿಯನ್ನು ಪ್ರಾರಂಭಿಸುವ ಮೊದಲು ಈ ಗಡಿನಾಡಿನಲ್ಲಿಯ ಕನ್ನಡಭಾಗವು ಯಾವದೆಂಬದನ್ನು ಗೊತ್ತು ಹಚ್ಚುವದು ಅವಶ್ಯವಾಗಿದೆ. ಇಷ್ಟೆಲ್ಲ ಮಹತ್ವನ್ನರಿಯದೇ ಸುಮ್ಮನೇ ಟೀಕೆ ಮಾಡಿ ಇದೇ ಹೊಸದಾಗಿ ಕಾರ್ಯ ಮಾಡಲು ಪ್ರಾರಂಭಿಸಿದ ಏಕೀಕರಣ ಸಭೆಯ ಬಗ್ಗೆ ಜನರಲ್ಲಿ ಇಲ್ಲದ ಕಲ್ಪನೆಗಳನ್ನು ತುಂಬಬಾರದಾಗಿ ಧುರೀಣಕಾರರಿಗೆ ನಾವು ಪ್ರಾರ್ಥಿಸುತ್ತೇವೆ

ಶ್ರೀಮದ್ಬಸವ ಜಯಂತ್ಯುತ್ಸವವು ಈ ಸಾರೆ ಕರ್ನಾಟಕದೊಳಗೆ ಅಲ್ಲಲ್ಲಿ ವೈಭವದಿಂದ ನಡೆದದ್ದು, ಸಂತೋಷದ ಚಿನ್ಹವು. ಈ ಉತ್ಸವವು ಪ್ರತಿವರ್ಷವೂ ಹೆಚ್ಚೆಚ್ಚು ವೈಭವದಿಂದ ನಡೆಯುವದೆಂದು ಆಶಿಸುತ್ತೇವೆ ಬಸವಣ್ಣನವರು ವೀರಶೈವರಾಗಿದ್ದರೂ, ಕರ್ನಾಟಕದಲ್ಲಿಯ ಪ್ರಖ್ಯಾತ ಸಮಾಜ ಸುಧಾರಕರು. ಕರ್ನಾಟಕದ ರಾಷ್ಟ್ರಪುರುಷರು, ಇದನ್ನು ಉಳಿದ ಮತೀಯರೂ ಲಕ್ಷ್ಯದಲ್ಲಿ ತಂದು, ಮುಂದಿನ ವರ್ಷದಿಂದ ಅವರು ಸಹ ನಮ್ಮ ವೀರಶೈವ ಬಾಂಧವರೊಡನೆ ಈ ಉತ್ಸವದಲ್ಲಿ ಭಾಗತೆಗೆದುಕೊಂಡು, ಇದರ ಮಹತ್ವವನ್ನು ಬೆಳಿಸಬೇಕು. ವೀರಶೈವರು ಸಹ ಉಳಿದ ಮತಸ್ಥರು ಈ ಉತ್ಸವದಲ್ಲಿ ಭಾಗತೆಗೆದುಕೊಳ್ಳುವ ಅವಶ್ಯಕತೆಯನ್ನು ಅವರಿಗೆ ತಿಳಿಸಿ ಹೇಳಿ, ಅವರನ್ನೂ ಇಂಥ ಪ್ರಸಂಗಗಳಲ್ಲಿ ಕೂಡಿಸಿಕೊಳ್ಳಬೇಕು.

ಸೂಚನೆ— ಕನ್ನಡಿಗನ ಬಗ್ಗೆ ಪತ್ರವ್ಯವಹಾರ ಮಾಡುವಾಗ್ಗೆ ಯಾರೂ ಸಂಪಾದಕರ ಸ್ವಂತ ಹೆಸರನ್ನು ಬರೆಯಬಾರದು ಹಾಗೆ ಮಾಡಿದರೆ, ಸಂಪಾದಕರ ಖಾಸಗೀ ಪತ್ರಗಳ ಸಂಗಡ ಅವು ಸೇರಿ, ಕಾರ್ಯಾಲಯದಲ್ಲಿ ಗೊಂದಲವಾಗುತ್ತದೆ

ಕನ್ನಡಿಗರೆ! ಕನ್ನಡಿಗರಾದ ನೀವೇ ಅಭಿಮಾನದಿಂದ 'ಕನ್ನಡಿಗ' ನನ್ನು ಆದರಿಸಬೇಕು!

ಬಸವಣ್ಣನವರ ವಚನ.

ಬಸವಣ್ಣನವರ ಉತ್ಸವಕಾರ್ಯಗಳಿಂದ ಕನ್ನಡಿಗರಿಗೆ ಈಗ್ಗೆ ಬಸವಣ್ಣನವರ ಸ್ಮರಣೆಯಾಗಿದೆ. ಈ ಸಮಯದಲ್ಲಿ ಅವರ ಕೆಲವು ವಚನಗಳ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಡುವದು ಅವಶ್ಯ.

ಕನ್ನಡ ಹೆಣ್ಣಿಗೆ ಮೂಗಿನಲ್ಲಿ ಮೂಗುತಿ ಇರಲಿಲ್ಲ; ಅದನ್ನಿಡಗಿಸಿದವರು ಶ್ರೀ ಮದ್ಬಸವಣ್ಣನವರು.

ಈಮಾತು ಮುಚ್ಚುಮರೆಯಲ್ಲ. ಅದು ಕೆಳಗೆ ಕಾಣಿಸಿದ ಕೆಲವು ಕಾರಣಗಳಿಂದ ಕಂಡು ಬರುವದು.

ಬಸವ ಭಾಸ್ಕರನು ಬೆಳಗುವ ಬಾನಾದಿಯಲ್ಲಿ ಕನ್ನಡಿಗರಲ್ಲಿ ಕವಿಗಳು ಕಡಿಮೆಯಾಗಿರಲಿಲ್ಲ, ಆದರೆ ವಚನಕಾರರು ಮಾತ್ರ ಒಬ್ಬರೂ ಆಗಿರಲಿಲ್ಲ. ಕಂಡಕಂಡಲ್ಲಿ ಕನ್ನಡ ಕೋಗಿಲೆಗಳು, ಹೀಗೆ ಹಾಡುವ ಹಕ್ಕಿಗಳಿಗೆ ಹೊಸ ಹಾದಿಯನ್ನು ಹಿಡಿಸಿದವರು ಶ್ರೀ ಮದ್ಬಸವಣ್ಣನವರು. ಅಂದರೆ ಅವರು ಕವಿತೆಗಳ ಮೂಲಕ ತತ್ವ ವಿವೇಚನೆಯನ್ನು ಮಾಡಲಿಲ್ಲ; ವಚನಗಳ ಮೂಲಕ ಮಾಡಿದರು. ಆದ್ದರಿಂದ ಇವರಿಗೆ ಆದ್ಯವಚನಕರ್ತೃಗಳೆಂದು ನಿರ್ವಿವಾದವಾಗಿ ನಿವೇದಿಸಬಹುದು. ಇವರ ಕೀರ್ತಿಯನ್ನು ಕೆಲವು ಕನ್ನಡಿಗರು ತೀಡಿದರು. ಇಂಥ ವಚನಕಾರರು ರಚಿಸಿದ ವಚನಗಳು ಕನ್ನಡ ಸಾಹಿತ್ಯದಲ್ಲಿ ಈಗ್ಗೆ ಅಗ್ರಸ್ಥಾನವನ್ನು ಹೊಂದಿವೆ. ವಚನಗಳಲ್ಲಿ ತತ್ವವಿವೇಚನೆಯು ಬಸವಣ್ಣನವರಿಂದ ಸ್ವತಂತ್ರರೀತಿಯಿಂದ ಮಾಡಲ್ಪಟ್ಟಿವೆ. ಸಂಸ್ಕೃತ ಸಾಹಿತ್ಯವು ಕನ್ನಡಿಸಲ್ಪಡಲಿಲ್ಲ." ಯಾವನು ತನ್ನ ದೇಶಭಾಷೆಯನ್ನು ಪ್ರೀತಿಸುವವನಿಲ್ಲವೋ ಅವನು ದೇಶಸೇವೆಗೆ "ಅನರ್ಹನು" ಎಂಬ ತತ್ವವನ್ನು ಸಾವಿರ ವರ್ಷಗಳ ಹಿಂದೆಯೇ ಬಸವಣ್ಣನವರು ತಮ್ಮ ಕೃತಿಯಲ್ಲಿ ತಂದು ಎಲ್ಲರಿಗೂ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿರುವರು. ಆದರೆ ಈಗಿನ ದೇಶಭಕ್ತರಿಗೆ ಕನ್ನಡನುಡಿಯ ಇಂಪಾದಸ್ವರವು "ಕೂಗು" ಎಂಬದಾಗಿ ತೋರುತ್ತದೆ.

ಇವರ ವಚನಗಳು ಹಳ್ಳಿಗಾಡಿಗೂ ತಿಳಿಯುವಂತಿವೆ. ಇವರ ಕನ್ನಡನಾಡಿನ ಬೆಡಗನ್ನರಿತವರೆಂದು ಆ ವಚನಗಳ ರಚನೆಯೇ ಹೇಳುವಂತಿವೆ. ಓದುಗರಿಗೆ ಕೆಲವು ವಚನಗಳನ್ನು ಉದಹರಿಸುತ್ತೇನೆ.

ಕೂಡಲಸಂಗಮದೇವರ ಮೇಲಿನ ಬಸವಣ್ಣನವರ ಭಕ್ತಿಯು ಎಷ್ಟಿತ್ತೆಂಬುದು ಈ ವಚನದಲ್ಲಿ ಒಡೆದು ಕಾಣಿಸುತ್ತದೆ.

(೧) ಎಡದ ಪಾದವನೊದ್ದರೆ, ಬಲದ ಪಾದವ ಹಿಡಿವೆ ಬಲದ ಪಾದವನೊದ್ದರೆ, ಎಡದ ಪಾದವ ಹಿಡಿವೆ. ತ್ರಾಹಿ, ತ್ರಾಹಿ ತಪ್ಪೆನ್ನದು, ಕ್ಷಮಿ ನಿಮ್ಮದು ಕೂಡಲಸಂಗಮ ದೇವ ನಿಮ್ಮ ಕರಣ ಕಂದ ನಾನು.

(೨) ದೇವನೊಬ್ಬ ನಾಮ ಹಲವು, ಪರಮ ಪತಿವ್ರತೆಗೆ ಗಂಡನೊಬ್ಬ. ಮತ್ತೊಂದಕ್ಕೆರಗಿದಡೆ ಕಿವಿ ಮೂಗು ಕೊಯ್ಯುವನು ಹಲವು ದೈವದ ಎಂಜಲ ತಿಂಬವರನೇನೆಂಬೆನಯ್ಯಾ, ಕೂಡಲ ಸಂಗಮದೇವಾ?

(೩) ಪುಣ್ಯ ಪಾಪಗಳೆಂಬವು ತಮ್ಮ ಇಷ್ಟವು. ಕಂಡಿರಯ್ಯಾ! "ಅಯ್ಯಾ" ಎಂದಡೆ ಸ್ವರ್ಗ. 'ಎಲವೋ' ಎಂದಡೆ ನರಕ. "ದೇವ ಭಕ್ತ, ಜಯ ಜಯ" ಎಂಬ ನುಡಿಯೊಳಗೆ ಕೈಲಾಸವೈದುದು ಕೂಡಲಸಂಗಮ ದೇವ.

(೪) ಹಾವ ಹಾದಿಗಂಜೆ, ಉರಿಯ ನಾಲಿಗೆಗಂಜೆ, ಸುರಿಗೆಯ ಮೊನೆಗಂಜೆ, ಒಂದಕ್ಕಂಜುವೆ ನೊಂದಕ್ಕಳುಕುವೆ. ಪರಸ್ತ್ರೀಎಂಬ ಜೂಜಿಗಂಜುವೆ. ಮುನ್ನಂಜದ ರಾವಣನೇ ಏನಾದನೆಂಬುದು ಇದನಷ್ಟು ಕೂಡಲ ಸಂಗಮದೇವ.

(೫) ಕಳಬೇಡ. ಕೊಲಬೇಡ. ಹುಸಿಯ ನುಡಿಯಲುಬೇಡ. ಮುನಿಯಬೇಡ. ಅನ್ಯರಿಗೆ ಅಸಹ್ಯವ ನುಡಿಯಲು ಬೇಡ. ತನ್ನ ಬಣ್ಣಿಸಬೇಡ. ಇದಿರ ಹಳಿಯಲುಬೇಡ. ಇದೇ ಅಂತರಂಗದ ಶುದ್ಧಿ. ಇದೇ ಬಹಿರಂಗದ ಶುದ್ಧಿ. ಇದೇ ನಮ್ಮ ಕೂಡಲ ಸಂಗಮದೇವರ ನೊಲಿಸುವ ಪರಿ.

(೬) ಹೊಯಿದವರನ್ನು ಹೊರೆದವರೆಂಬೆ. ಬೈದವರನ್ನು ಬಂಧುಗಳೆಂಬೆನು. ನಿಂದಿಸಿದವರೆನ್ನ ತಾಯಿ ತಂದೆಗಳೆಂಬೆ. ಆಳಿಗೊಂಡವರು ಆಳ್ದರೆಂಬೆ. ಜರಿದವರನ್ನು ಜನ್ಮ ಬಂಧುಗಳೆಂಬೆ.

(೭) ದಯವಿಲ್ಲದ ಧರ್ಮವಾವುದಯ್ಯಾ? ದಯವಿರಬೇಕು ಸಕಲ ಪ್ರಾಣಿಗಳಲ್ಲಿ. ದಯವೇ ಧರ್ಮದಮೂಲವಯ್ಯ ಕೂಡಲ ಸಂಗಮ ದೇವರಂತಲ್ಲ ದೊಲ್ಲನಯ್ಯ.

ಮೇಲ್ಕಾಣಿಸಿದ ವಚನಗಳೆಂಬ ತರಂಗಗಳಲ್ಲಿ ಯಾವಕನ್ನಡಿಗನು ಓಲಾಡುವದಿಲ್ಲ? ಕಡೆಯಲ್ಲಿ ಜಗತಿಂದ ಬಸವಣ್ಣನವರ ಚರಿತ್ರೆಯನ್ನು ಬರೆದು, ಹೊಳಪಾಗಿ ಮಾಡಿದ ಶ್ರೀಯುತ ಮಂಜಪ್ಪ ಹರ್ಡೇಕರವರನ್ನೂ, ಜೇಡಗಟ್ಟಿ ಮೂಲೆಗುಂಪಾಗಿದ್ದ ವಚನಗಳನ್ನು ಪ್ರಕಾಶಕ್ಕೆ ತಂದ ರಾ. ಸಾ. ಹಳಕಟ್ಟಿಯವರನ್ನೂ ಎಷ್ಟು ಮನ್ನಿಸಿದರೂ ಕನ್ನಡಿಗರು ಅವರ ಋಣದಲ್ಲಿರುವರು.

ಸಂಗಪ್ಪ ನಾಗನೂರ ಬಾಗಲಕೋಟೆ.

ಸಭಾರ ಸ್ವೀಕಾರ.

ಕ್ಯಾಲೆಂಡರ. ದಾವಣಗೆರೆಯ ಪ್ರಾಣಿದಯಾ ಜ್ಞಾನಪ್ರಸಾರಕ ಸಂಘದವರು ಮನೋಹರವಾದ ಕ್ಯಾಲೆಂಡರಗಳನ್ನು ಪ್ರಸಿದ್ಧಿಸಿದ್ದು, ಅವರಲ್ಲಿ ಗೋರಕ್ಷಣದ ಬಗ್ಗೆ ಮಹನೀಯರು ನುಡಿದ ವಾಕ್ಯಗಳನ್ನು ಹಾಕಿರುವರು. ಇದು ಎಲ್ಲಿಗೂ ಉಚಿತವಾಗಿ ದೊರೆಯುತ್ತದೆ.

ಹುಬ್ಬಳ್ಳಿಯ. ಶಂಕರಾಚಾರ್ಯೋತ್ಸವದ ಕಾರ್ಯಕ್ರಮವು ನಮ್ಮ ಕಡೆಗೆ ಬಂದಿದೆ. ಈ ಕಾರ್ಯಕ್ರಮವೇನೋ ಚನ್ನಾಗಿದೆ. ಆದರೆ 'ಎಲ್ಲಮ್ಮನ ಗುಡ್ಡದಲ್ಲಿ ಮುಲ್ಲಾನದೇನಿದೆ' ಎಂಬಂತೆ ಕರ್ನಾಟಕದಲ್ಲಿ, ಅದೂ ಹುಬ್ಬಳ್ಳಿಯಲ್ಲಿ, ಮಾಡುವ ಉತ್ಸವದ ಕಾರ್ಯಕ್ರಮವು ಮರಾಠಿಯಲ್ಲೇಕೆ? ಕನ್ನಡಿಗರಿಗೆ ಇದು ತಿಳಿಯಬಾರದೆಂಬದೇ ಕಾರ್ಯದರ್ಶಿಗಳ ಉದ್ದೇಶವೋ? ಹಾಗಿದ್ದರೆ ನಮಸ್ಕಾರ!

ಕೆಳಗೆ ಬರೆದ ಗ್ರಂಥಗಳನ್ನು ನಮ್ಮ ಕಡೆಗೆ ಅಭಿಪ್ರಾಯರ್ಥವಾಗಿ ಕಳಿಸಿರುವರು. ನಾವು ಅವನ್ನು ಸಭಾರವಾಗಿ ಸ್ವೀಕಾರಮಾಡುತ್ತೇವೆ. ಗ್ರಂಥಾವಲೋಕನ ಮುಗಿದ ಹಾಗೆ ಅವುಗಳ ವಿಮರ್ಶೆಯು ಬರುವದು:—

೧ ಲೀಲೆ; ಮತ್ತು ರಾಷ್ಟ್ರಗೀತಾ ರತ್ನಾಕರ- ಕುಂದೂರ ಲಕ್ಷ್ಮೀ ನಾರಾಯಣ ಪುಣಿಂಚತ್ತಾಯ.

೨ ಹಿಂದಿ ಸ್ವರಾಜ್ಯ ಮತ್ತು ಅಸಹಕಾರದ ಪತ್ರಗಳು. ದಾತ್ತಾತ್ರೇಯ ಕೃಷ್ಣ ಭಾರದ್ವಾಜ.

೩ ಯೋಗವಾಶಿಷ್ಠ; ಪರಶುರಾಮ ರಾಮಾಯಣ; ಮತ್ತು ಶ್ರೀ ಮದನಂತನ ಕಥಾ— ಧಾರೇಶ್ವರದ ಕರ್ನಾಟಕ ಸುಕಾವ್ಯ ರತ್ನಮಾಲೆ.

೪ ಶ್ರೀ ರಾಮಾವತಾರ ಮತ್ತು ಶ್ರೀ ಕೃಷ್ಣಾವತಾರ-ಸುಬೋಧ ಮುದ್ರಣಾಲಯ ಬೆಂಗಳೂರ ಸಿಟಿ.

೫ ಸರ್ವಮಾನ್ಯ ಕಥೆಗಳು- ಅಡಿಪ್ಪಾಡಿ ಸೋಮನಾಥರಾಯರು.

೬ ಭಾರತೀಯ ಶ್ರೇಷ್ಠತ್ವ; ಶ್ರೀರಾಮಹೃದಯ; ಹಿಂದ್ಯಾಚಲ ವಿದ್ಯಾರಣ್ಯ ಗ್ರಂಥಮಾಲೆ ಅಗಡಿ

೭ ರಾಷ್ಟ್ರೀಯ ಪದ್ಯಾವಲಿ. ಉಡುಪಿ.

ತ್ವರೆ ಮಾಡಿರಿ! 'ಕನ್ನಡಿಗ'ವನ್ನು 'ಈ ದಿನವೇ' ಪ್ರೋತ್ಸಾಹಿಸಿರಿ! ೧—೧೪—೦ ಮನಿಯಾರ್ಡರ ಮಾಡಿರಿ!

ಕನ್ನಡಿಗರೇ! ನಿಮಗೋಸ್ಕರ ಹುಟ್ಟಿದ 'ಕನ್ನಡಿಗ'ನನ್ನು ಬೇಗನೇ ಸ್ವೀಕರಿಸಿರಿ· ವಾ.

ಕರ್ನಾಟಕದ ರೇಲ್ವೇಗಳು·

ಕನ್ನಡನಾಡಿನಲ್ಲಿ ಎಲ್ಲ ಕಡೆಗೂ ರೇಲ್ವೇಗಳಿಲ್ಲದಿರುವದು ಕರ್ನಾಟಕದ ಏಕೀಕರಣಕ್ಕೆ ದೊಡ್ಡದೊಂದು ಆತಂಕ. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿಯ ಜನರು ಮೇಲಿಂದಮೇಲೆ ಒಂದೆಡೆಗೆ ಸೇರುವದಕ್ಕೆ ರೇಲ್ವೆಗಳಿಲ್ಲದ್ದರಿಂದ ಬಹು ಪ್ರಯಾಸವಾಗುತ್ತದೆ. ಹಣವೂ ನಷ್ಟವಾಗುತ್ತದೆ. ರಾಜಕೀಯ ವಿಷಯಗಳಲ್ಲಿಯಾಗಲಿ, ವ್ಯಾಪಾರದ ವಿಷಯಗಳಲ್ಲಿಯಾಗಲಿ, ಧರ್ಮಕ್ಷೇತ್ರಗಳಿಗೆ ಹೋಗುವ ವಿಷಯಗಳಲ್ಲಾಗಲಿ; ಮದುವೆ ಮುಂಜವೆಗಳ ವಿಷಯದಲ್ಲಾಗಲಿ; ಒಂದು ಕರ್ನಾಟಕದ ಭಾಗದಿಂದ ಇನ್ನೊಂದು ಭಾಗಕ್ಕೆ ಮೇಲಿಂದ ಮೇಲೆ ಹೋಗುವದೆಂದರೆ ಅಶಕ್ಯದ ಮಾತಾಗಿದೆ. ನೂರಾರು ಮೈಲುಗಳವರೆಗೂ ಕೆಲಕಡೆಗೆ ರೇಲ್ವೇಗಳೇ ಇಲ್ಲ. ಕೆಲಕಡೆಗೆ ಇದ್ದರೆ ಸರಳ ರೇಷೆಗಳಲ್ಲಿರದೇ ಸುತ್ತುಮುತ್ತಾಗಿದ್ದು ಸಮೀಪವಿದ್ದ ಸ್ಥಳಗಳು ಸಹ ದೂರಾಗಿವೆ. ಬಾಗಲಕೋಟೆಯಿಂದ ಬೆಳಗಾವಿಯು ಕಾಲು ಹಾದಿಯಿಂದ೭೭ ಮೈಲು; ಆದರೆ ರೇಲ್ವೇದಿಂದ ೧೬೨ ಮೈಲು; ಧಾರವಾಡದಿಂದ ಬೆಳಗಾವಿಯು ಕಾಲು ಹಾದಿಯಿಂದ ಅಜಮಾಸು ೪೫ ಮೈಲು; ಆದರೆ ರೇಲ್ವೇದಿಂದ ೭೭ ಮೈಲು; ಹೀಗಾಗಿ ಗುಡ್ಡವನ್ನು ಸುತ್ತಿ ಮೈಲಾರಕ್ಕೆ ಹೋದಂತೆ ಆಗುತ್ತದೆ. ಇದರಿಂದ ಕರ್ನಾಟಕಕ್ಕೆ ಅನೇಕರೀತಿಯಿಂದ ಹಾನಿಯಾಗುತ್ತಲಿದೆ. ಕರ್ನಾಟಕದ ಏಕಿಗೆಯು ಸಹ ಇದರಿಂದ ಕುಗ್ಗಿದೆ. ಅಖಂಡ ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವಿಲ್ಲದಿರುವದೇ ಇದಕ್ಕೆ ಮೂಲ ಕಾರಣ. ಸರಕಾರದವರು ತಮ್ಮ ಸೌಕರ್ಯಕ್ಕಾಗಿ ಈ ರೇಲ್ವೇಗಳನ್ನು ಹಾಕಿರುವರು. ಕರ್ನಾಟಕ ಪ್ರಾಂತದವರಿಗೆ ಒದಗುವ ಅನಾನುಕೂಲತೆಗಳ ವಿಚಾರಣೆ ಅವರಿಗೆ ಬೇಕಾಗಿಲ್ಲ.

ಆದುದರಿಂದ ಬೇರೆ ಬೇರೆ ಕರ್ನಾಟಕದ ಭಾಗಗಳನ್ನು ರೇಲ್ವೆಗಳಿಂದ ಕೂಡಿಸುವದು ಸಹ, ಏಕೀಕರಣ, ಒಂದರ ಮೊದಲಾದ ಪ್ರಶ್ನೆಗಳಂತೆ ಮಹತ್ವದ್ದಾಗಿದೆ. ಆದ್ದರಿಂದಲೇ ಈ ವಿಷಯವನ್ನು 'ಕನ್ನಡಿಗ'ನು ತನ್ನ ಕೈಯಲ್ಲಿ ತೆಗೆದುಕೊಳ್ಳಲಿಚ್ಛಿಸುತ್ತಾನೆ. ಕರ್ನಾಟಕದ ಪ್ರತಿಯೊಬ್ಬ ಮನುಷ್ಯನು ಅಖಂಡ ಕರ್ನಾಟಕದ ದೃಷ್ಟಿಯಿಂದ ವಿಚಾರಿಸಿ ಈ ಕಾರ್ಯದಲ್ಲಿ ಸಹಾಯ ಮಾಡಬೇಕಾಗಿ ವಿನಂತಿ.

ಕರ್ನಾಟಕದ ತುಂಬೆಲ್ಲ ರೇಲ್ವೆಗಳಾಗಬೇಕು; ಹುಬ್ಬಳ್ಳಿಯಿಂದ ಕಾರವಾರ, ಕಾರವಾರದಿಂದ ಸಮುದ್ರ ದಂಡೆಗುಂಟ ಮಂಗಳೂರಿಗೆ ರೇಲ್ವೇ ಪ್ರಾರಂಭಿಸಲು ನಾವು ಪ್ರಯತ್ನಿಸಬೇಕು. ಅಖಂಡ ಕರ್ನಾಟಕ ದೃಷ್ಟಿಯಿಂದ ಇದನ್ನು ಪೂರ್ತಿಗೊಳಿಸುವದು ಅವಶ್ಯವಾಗಿದೆ. ಕಾರವಾರ ಜಿಲ್ಲೆಯು ಕರ್ನಾಟಕದ ಪ್ರತಿಯೊಂದು ಸ್ಥಳದಿಂದಲೂ, ಅದೇಕೆ ಹಿಂದುಸ್ಥಾನದ ಎಲ್ಲ ಭಾಗಗಳಿಂದಲೂ, ಗೋಕರ್ಣಕ್ಷೇತ್ರಕ್ಕಾಗಿ ಲಕ್ಷಾವಧಿ ಜನರನ್ನು ತನ್ನಲ್ಲಿಗೆ ಸೂಜಿಗಲ್ಲಿನಂತೆ ಆಕರ್ಷಿಸಿಗೊಳ್ಳುತ್ತದೆ. ಉಳುವಿಯು ವೀರಶೈವರನ್ನು ಆಕರ್ಷಿಸುತ್ತದೆ. ಮಂಗಳೂರ ಜಿಲ್ಲೆಯಲ್ಲಿಯ ಉಡುಪಿಯು ಪ್ರತಿಯೊಬ್ಬ ಮಾಧ್ವನನ್ನು ಆಕರ್ಷಿಸುತ್ತದೆ. ಮೂಡಬಿದರೆ, ಕಾರ್ಕಳಗಳು ಪ್ರತಿಯೊಬ್ಬ ಜೈನನ ಹೃದಯವನ್ನು ಎಳೆಯುತ್ತವೆ. ಮಂಗಳೂರಂತು ಕ್ರಿಸ್ತರ ಮುಖ್ಯ ನಿವಾಸಸ್ಥಾನವು. ಹೀಗಿದ್ದರೂ ರೇಲ್ವೆ ಸೌಕರ್ಯಗಳಿಲ್ಲ. ಕಾರವಾರ ಮಂಗಳೂರ ಜಿಲ್ಲೆಗಳಲ್ಲಿ ರೇಲ್ವೇಗಳಾಗುವದರಿಂದ ವ್ಯಾಪಾರ ಉದ್ಯೋಗಗಳು ಹೆಚ್ಚಾಗುವವು. ಆ ಜಿಲ್ಲೆಗಳಲ್ಲಿಯ ಕಾನನಗಳಿಂದಲೂ, ಉಪವನಗಳಿಂದಲೂ, ಸಾವಿರಾರು ಹೊಸ ಹೊಸ ಉದ್ದಿಮೆಗಳು ಉತ್ಪನ್ನವಾಗಿ, ಕರ್ನಾಟಕದ ಸಂಪದಭಿವೃದ್ಧಿಯಾಗುವದು. ಮುಂದೆ ಕರ್ನಾಟಕಕ್ಕೆ ಸ್ವತಂತ್ರ ಬಂದರವೂ ಆಗುವದು. ಇದರಿಂದಂತೂ ಕರ್ನಾಟಕದ ಏಳ್ಗೆಯು ಬಹು ಪರಿಯಿಂದ ಹೆಚ್ಚಾಗುವದು. ಕರ್ನಾಟಕದ ಸಮುದ್ರದಂಡೆಗುಂಟ ರೇಲ್ವೇಯೂ, ಒಂದು ಬಂದರವೂ ಆದರೆ, ಕರ್ನಾಟಕದ ಯಾವ ಭಾಗದ ಜನರಿಗೂ ಮುಂಬೈ ಮದ್ರಾಸಗಳಿಗೆ ವ್ಯಾಪಾರಕ್ಕೆ ಹೋಗುವ ಪ್ರಸಂಗಗಳು ಬಾರವು. ಇದರಿಂದ ಕರ್ನಾಟಕದ ಹಣವು ಕರ್ನಾಟಕದಲ್ಲಿಯೇ ಉಳಿಯುವದಲ್ಲದೇ, ಕರ್ನಾಟಕದ ಹೊರಗಿನ ಹಣವು ಸಹ ಇಲ್ಲಿ ಸಂಚಯವಾಗುವದು. ಅರ್ಥಾತ್ ಕರ್ನಾಟಕದಲ್ಲಿ ಅಪಾರವಾದ ಸಂಪತ್ತು ಬೆಳೆದು ಕರ್ನಾಟಕದ ಏಳ್ಗೆಯ ದಿನಗಳು ಸಮೀಪಿಸುವವು. ಇದೇನೋ ಹಲವರಿಗೆ ಕನಸಾಗಿ ತೋರಬಹುದು. ಆದರೆ ಪ್ರಯತ್ನಿಸಿದರೆ ಈ ಕಲ್ಪನೆಗೆ ಮೂರ್ತಸ್ವರೂಪವು ಬಂದೇ ಬರುವದು.

"ಕನ್ನಡಿಗ"ನ ಯೋಜನೆಯು.

ಈ ರೇಲ್ವೆಗಳ ವಿಷಯದಲ್ಲಿ ಕನ್ನಡಿಗರ ಸಲುವಾಗಿ "ಕನ್ನಡಿಗ" ನು ಒಂದು ಯೋಜನೆಯನ್ನು ಕಲ್ಪಿಸಿರುವನು

ಶಿವಮೊಗ್ಗೆಯಿಂದ ಮುಸಗುಂದದವರೆಗೂ, ಹುಬ್ಬಳ್ಳಿಯಿಂದ ಬೆಳಗಾವಿಗೂ, ಗದಗಿನಿಂದ (ಶಿರಹಟ್ಟಿಯ ಮಾರ್ಗವಾಗಿ) ವಾಡಿ, ರಾಯಚೂರಗಳಿಗೂ, ಬಿಜಾಪುರದಿಂದ ಕೊಟ್ಟೂರಿಗೂ, ಸಂಜನಗುಡ್ಡ ಸತ್ಯಮಂಗಳಗಳ ವರೆಗೂ ರೇಲ್ವೇ ಹಾಕಬೇಕೆಂದು ಸರಕಾರದವರಿಂದ ಅನುಮತಿ ದೊರೆತು ಅನೇಕ ವರ್ಷಗಳಾದವು. ಇವು ಹಾಗೆಯೇ ಉಳಿದವೆ. ಆದ್ದರಿಂದ ಇವೆಲ್ಲವುಗಳನ್ನು ಬೇಗನೇ ಪೂರ್ತಿಗೊಳಿಸಬೇಕೆಂದೂ, ಹುಬ್ಬಳ್ಳಿ-ಕಾರವಾರ-ಮಂಗಳೂರ ರೇಲ್ವೆಗೂ, ಮೈಸೂರ-ಮಡಿಕೇರಿ ರೇಲ್ವೆಗೂ ಬೇಗನೇ ಅನುಮತಿ ಕೊಟ್ಟು ಅವನ್ನೂ ಇವೆಲ್ಲವುಗಳ ಸಂಗಡಲೇ ಮುಗಿಸಬೇಕೆಂತಲೂ ಆಗ್ರಹಪಡಿಸುವಂತೆ ರೇಲ್ವೇ ಬೋರ್ಡಿನವರಿಗೆ ಒಂದು ಅರ್ಜಿಯನ್ನು ಕಳಿಸಿ, ಇವೆಲ್ಲ ರೇಲ್ವೇಗಳ ಯೋಜನೆಯನ್ನು ಕೃತಿಯಲ್ಲಿ ತರುವ ಬಗ್ಗೆ ಪ್ರಯತ್ನಿಸಬೇಕು. ಆದರಿಂದ ಈಗ್ಗೆ ಉದ್ಭವಿಸುವ ಜನಕವಾದ ಯಾವ ಬಗೆಯ ಕಾರ್ಯಕ್ರಮವಿಲ್ಲದ ಕರ್ನಾಟಕದಲ್ಲಿ ನವಚೈತನ್ಯವುಂಟಾಗಿ ಅಖಂಡ ಕರ್ನಾಟಕದ ಪುಷ್ಟಿಯು ಮುಂದಾಗುವದು. ಇದರಲ್ಲಿ ಕೂಡಲೇ ಬಹುವು ದೊರೆಯಲಿಕ್ಕಿಲ್ಲ. ಯಾಕೆಂದರೆ ಬೇರೆ ಬೇರೆ ಸರಕಾರಗಳ ಒಪ್ಪಿಗೆಯನ್ನು ದೊರಕಿಸುವದೂ, ದೊಡ್ಡ ಬಂಡವಲವನ್ನು ಕರ್ನಾಟಕದಲ್ಲಿಯ ರೇಲ್ವೇಗಳಿಗಾಗಿ ಸುರುವಿರೆಂದು ರೇಲ್ವೇ ಕಂಪನಿಗಳಿಗೆ ಹೇಳಿ, ಆ ಪ್ರಕಾರ ಅವರ ಅನುಮತಿಯನ್ನು ಪಡೆಯುವದೂ ಪ್ರಯಾಸದ ಕೆಲಸಗಳು. ಆದ್ದರಿಂದಲೇ ಕರ್ನಾಟಕದಲ್ಲಿಯ ಪ್ರತಿಯೊಬ್ಬ ಮನುಷ್ಯನು ಈ ರೇಲ್ವೇಗಳ ಬಗ್ಗೆ ಒಂದು ದೊಡ್ಡ ಚಳವಳಿಯನ್ನೆಬ್ಬಿಸಲು ನಮಗೆ ಸಹಾಯ ಮಾಡಬೇಕು. ಇದನ್ನು ಮೊದಲು ಉಪಕ್ರಮಿಸಲು ಸಿಮುಲಾದಲ್ಲಿಯ ರೇಲ್ವೇ ಬೋರ್ಡಿಗೆ ನಮ್ಮ ಕರ್ನಾಟಕದಲ್ಲಿ ರೇಲ್ವೇಗಳನ್ನು ಪ್ರಾರಂಭಿಸಲು ನಾವು ದೊಡ್ಡದೊಂದು ಅರ್ಜಿಯನ್ನು ಕಳಿಸಬೇಕು. ಆಮೇಲೆ (೧) ಮೈಸೂರ ಮಹಾರಾಜ (೨) ಹೈದರಾಬಾದ ನಿಜಾಂ ಸಾಹೇಬ (೩) ಮುಂಬೈ (೪) ಮದ್ರಾಸಗಳ ಗವರ್ನರ (೫) ವ್ಹಾಯಿಸರಾಯ (೬) ಕೊಡಗಿನ ರಸಿಡೆಂಟ (೭) ವಿಲಾಯತಿಯಲ್ಲಿರುವ ಭಾರತ ಮಂತ್ರಿ ಇವರೆಲ್ಲರ ಕಡೆಗೂ ಆ ಅರ್ಜಿಯ ನಕಲನ್ನು ಕಳಿಸ

ಚಂದಾ, ಅಂಚೆ ಸಹಿತ ೧॥— ಮಾತ್ರ! ಈ ಅಗ್ಗದ ಚಂದಾ ನಿಮಗೆ ಭಾರವಾಗದು!!

ಬೇಕು. ಕರ್ನಾಟಕವು ಬೇರೆ ಬೇರೆ ಆಡಳಿತದಲ್ಲಿ ಹಂಚಲ್ಪಟ್ಟಿದ್ದರಿಂದ ಹೀಗೆ ಎಲ್ಲ ಭಾಗಗಳ ಮುಖ್ಯಾಧಿಕಾರಿಗಳಿಗೆ ಅರ್ಜಿಯ ನಮೂನೆಗಳನ್ನು ಕಳಿಸುವದು ಅವಶ್ಯವಿದೆ. ಕನ್ನಡಿಗನ ೪೦೦೦ ಪ್ರತಿಗಳನ್ನು ತರಿಸುವವರೆಲ್ಲರೂ ಈ ಸಂಚಿಕೆಯ ಕಡೆಯ ಪುಟದಲ್ಲಿ ಪ್ರಕಟಿಸಿದ ನಮೂನೆಯ ಪ್ರಕಾರ ಒಂದು ಪ್ರತಿಯನ್ನು ಮಾಡಿ, ಒಂದು ಫೂಲ್ ಸ್ಕೇಪ್ ಅರ್ಧ ಕಾಗದದ ಎರಡೂ ಮಗ್ಗುಲಿಗೆ ತಮ್ಮ ಪರಿಚಯಸ್ಥರ ಸಹಿ ತೆಗೆದುಕೊಂಡು, ಅದನ್ನು ನಮಗೆ ಕಳುಹಿಸಬೇಕು. ಒಂದು ಅರ್ಧ ಕಾಗದದ ಎರಡೂ ಮಗ್ಗುಲಿನಲ್ಲಿ ಅಜಮಾಸ ೩೦ ಹೆಸರುಗಳನ್ನು ಬರೆಯಬಹುದು. 'ಕನ್ನಡಿಗನ' ಪ್ರತಿಯೊಬ್ಬ ಚಂದಾದಾರನು, ಅಂದರೆ ೪೦೦೦ ಜನರು ತಲೆಗೆ ೩೦ ರಂತೆ ಸಹಿಗಳನ್ನು ದೊರಕಿಸಿಕೊಟ್ಟರೆ, ಒಂದು ಲಕ್ಷ ಇಪ್ಪತ್ತು ಸಾವಿರ ಜನರ ಸಹಿಯುಳ್ಳಂಥ ದೊಡ್ಡದೊಂದು ಅರ್ಜಿಯು ಸಿದ್ಧವಾಗುವದು. ಅದನ್ನು ಮೇಲೆ ಹೇಳಿದಂತೆ ರೇಲ್ವೇಬೋರ್ಡಿಗೆ ಕಳುಹಿಸಿ, ಅದರ ಪ್ರತಿಗಳನ್ನು ಏಳು ಜನರ ಕಡೆಗೆ ಕಳುಹಿಸುವೆವು. ಹೀಗೆ ಏಕ ಕಾಲಕ್ಕೆ ಒಂದೇ ಅರ್ಜಿಯು ಎಲ್ಲ ಕಡೆಗೂ ಕಳಿಸಲ್ಪಟ್ಟಿತೆಂದರೆ, ಚಳವಳಿಯು ತಾನೇ ಪ್ರಾರಂಭವಾಗುವದು. ಕರ್ನಾಟಕದಲ್ಲಿಯ ಒಂದು ಲಕ್ಷ ಇಪ್ಪತ್ತು ಸಾವಿರ ಜನರ ಪ್ರಚಂಡ ಮತವು ಒಂದೇ ರೇಲ್ವೆಯ ಪ್ರಶ್ನೆಗಾಗಿ ದೊರೆತರೆ ಅದೊಂದು ಕರ್ನಾಟಕದಲ್ಲಿ ಚಿರಸ್ಮರಣೀಯವಾದ ಸಂಗತಿಯಾಗುವದು! ಅರ್ಜಿಯನ್ನು ಕಳಿಸಿದ ಕೂಡಲೇ ಮೈಸೂರ, ಕೊಡಗು, ಮುಂಬೈ, ಮದ್ರಾಸ, ದಿಲ್ಲಿ ಕಾಯದೇ ಮಂಡಲಗಳಲ್ಲಿ ಪ್ರಶ್ನೆ ಮಾಲಿಕೆಗಳನ್ನು ಹಾಕುವದೂ, ಠರಾವುಗಳನ್ನು ತರುವದೂ, ಪ್ರಾರಂಭವಾಗಿ ಕರ್ನಾಟಕದಲ್ಲಿ ದೊಡ್ಡದೊಂದು ಆಂದೋಲನವು ಉತ್ಪನ್ನವಾಗುವದು. ಕಾಯದೇ ಮಂಡಲಗಳಲ್ಲಿ ಪ್ರಶ್ನೆ ಹೊರಟ ಕೂಡಲೇ, ಪ್ರತಿಯೊಂದು ಭಾಗದಲ್ಲಿಯೂ ಸಾರ್ವಜನಿಕ ಸಭೆಗೂಡಿಸಿ, ಆ ಠರಾವುಗಳಿಗೆ ಒಪ್ಪಿಗೆಯನ್ನು ಕಳಿಸುವ ಉದ್ಯೋಗದಲ್ಲಿ ಕರ್ನಾಟಕವು ಬೀಳಬೇಕಾಗುವದು. ಅದ್ದರಿಂದ ಅಖಂಡ ಕರ್ನಾಟಕದಲ್ಲೆಲ್ಲ ಪ್ರಚಂಡ ಚಳವಳಿಯಾಗಿ, ಅಖಂಡ ಕರ್ನಾಟಕದ ಭಾವನೆಯು ಪ್ರತಿಯೊಬ್ಬ ಕನ್ನಡಿಗನಲ್ಲಿ ಬೇಗನೇ ನೆಲೆಗೊಳ್ಳುವದು. ಈ ಬಗೆಯ ಭಾವನೆಯು ಕನ್ನಡಿಗರಲ್ಲಿ ಇಲ್ಲದಿರುವದೇ ಮುಖ್ಯವಾದ ಕೊರತೆಯು. ಇದೊಂದು ಕೊರತೆಯು ದೂರವಾದರೆ, ಕರ್ನಾಟಕದಲ್ಲಿ ಹೊಸ ತೇಜಸ್ಸು ಬಂದು, ಬೇಕಾದ ಕಾರ್ಯವಾಗುವದು. ಈ ರೇಲ್ವೆ ವಿಷಯವೇನು ರಾಜಕೀಯ ಪ್ರಶ್ನೆಯುಳ್ಳ; ಇಲ್ಲಿ ಮತಭೇದವಿಲ್ಲ. ಇದು ಯಾವ ಜಾತಿಗೂ ಸಂಬಂಧಿಸಿದ್ದಲ್ಲ. ಆದುದರಿಂದ ಕರ್ನಾಟಕದ ಉನ್ನತಿಯ ಬಗ್ಗೆ ತಳಮಳಿಸುತ್ತಿರುವ ಪ್ರತಿಯೊಬ್ಬ ಕನ್ನಡಿಗನೂ, ಇದರಲ್ಲಿ ಉತ್ಸಾಹದಿಂದ ಭಾಗವಹಿಸಿಕೊಳ್ಳಬೇಕು. ಈ ಸಂಚಿಕೆಯು ಕೈ ಸೇರಿದ ಕೂಡಲೇ ಏನೂ ವಿಳಂಬ ಮಾಡದೇ ಸಹಿಗಳನ್ನು ದೊರಕಿಸಲು ಪ್ರಾರಂಭಿಸಬೇಕು. ಸಹಿ ಮಾಡಲಿಕ್ಕೆ ಬಾರದವರಂಥ ಜನರ ಹೆಬ್ಬೆಟ್ಟಿನ ಗುರ್ತನ್ನು ತೆಗೆದುಕೊಳ್ಳಬೇಕು, ಆದರೆ ಈ ಕಾರ್ಯದಲ್ಲಿ ಯಾರೂ ಯಾರಿಗೂ ಒತ್ತಾಯವನ್ನು ಮಾಡಕೂಡದು. ಎಲ್ಲರಿಗೂ ಈ ವಿಷಯವನ್ನು ತಿಳಿಸಿಹೇಳಬೇಕು. ಅವರು ಇದಕ್ಕೆ ಒಪ್ಪಿದರೆ ಮಾತ್ರ ಅವರ ಸಹಿಯನ್ನಾಗಲಿ, ಹೆಬ್ಬೆಟ್ಟಿನ ಗುರ್ತನ್ನಾಗಲಿ, ತೆಗೆದುಕೊಳ್ಳಬೇಕು. ಕರ್ನಾಟಕದ ಏಳ್ಗೆಯ ಸಲುವಾಗಿ ಇದೂ ಒಂದು ಸಾಧನವು. ಅದ್ದರಿಂದ ಕರ್ನಾಟಕದ ಅಭಿಮಾನಿಗಳೆಲ್ಲರೂ, ಈ ವಿಷಯವನ್ನು ಅತ್ಯ ಕೂಡಲೇ ಕೈಯಲ್ಲಿ ತೆಗೆದುಕೊಂಡರೆ "ಕನ್ನಡಿಗ" ನು ಇತ್ತ ಅವರ ಸೇವೆಗೆ ಕಂಕಣ ಬದ್ಧನಾಗಿ ನಿಂತಿರುವನೆಂಬುದನ್ನು ಲಕ್ಷ್ಯದಲ್ಲಿಡಬೇಕು.

ಕರ್ನಾಟಕ ಏಕೀಕರಣದ ಸಭೆಯ

ಸ್ಥಾಯಿಕ ಮಂಡಲದ ಸಭಾಸದರಿಗೆ—

ಬೆಳಗಾವಿಯಲ್ಲಿ ಕಳೆದ ದಿಸೆಂಬರ ತಿಂಗಳಲ್ಲಿ ಸ್ಥಾಪಿತವಾದ **ಕರ್ನಾಟಕ ಏಕೀಕರಣ ಸಭೆಯ ಸ್ಥಾಯಿಕ ಮಂಡಲದ** (Standing Committee) ಮೀಟಿಂಗನ್ನು ಮೇ ೯-೧೦-೧೧ ತಾರೀಖುಗಳಲ್ಲಿ ಬೆಳಗಾವಿಯಲ್ಲಿ ಕೂಡುವ ಕರ್ನಾಟಕ ಸಾಹಿತ್ಯ ಪರಿಷತ್ತಿನ ಸಮಯದಲ್ಲಿ ಕೂಡಿಸಬೇಕೆಂದು ಈ ಸಭೆಯ ವ್ಯವಸ್ಥಾಪಕ (Executive Council) ಸಂಘದವರು ನಿಶ್ಚಯಿಸಿದ್ದಾರೆ. ಈ ಪ್ರಕಾರ ಈ ಮಂಡಲದ ಸಭಾಸದರಾದ ತಾವು ದಯವಿಟ್ಟು ಬೆಳಗಾವಿಗೆ ಆ ಸಮಯದಲ್ಲಿ ಬಂದು, ಈ ಸಭೆಯು ಮುಂದೆ ಮಾಡತಕ್ಕ ಕೆಲಸಗಳ ರೂಪರೇಷೆಯನ್ನು ಗೊತ್ತು ಪಡಿಸಿ, ಈ ಸಭೆಯು ಈ ವರ್ಷದಲ್ಲಿ ಅಖಂಡ ಕರ್ನಾಟಕದಲ್ಲೆಲ್ಲ ಏಕೀಕರಣದ ಬಗ್ಗೆ ಪ್ರಚಂಡವಾದ ಆಂದೋಲನವನ್ನು ಹೂಡುವಂತೆ ಪೂರ್ವಸಿದ್ಧತೆಯನ್ನು ಮಾಡಬೇಕಾಗಿ ಪ್ರಾರ್ಥಿಸುತ್ತೇವೆ. ಬೆಳಗಾವಿಯಲ್ಲಿ ಈ ಸಭೆಯು ಸ್ಥಾಪಿತವಾದ ಮೇಲೆ ಈ ಸ್ಥಾಯಿಕ ಮಂಡಲವು ಕೂಡುವದೆಂದರೆ ಇದೇ ಮೊದಲನೆಯ ಸಾರೆ. ಆದ್ದರಿಂದ ತಾವೆಲ್ಲರೂ ಈ ಸಲ ಅವಶ್ಯವಾಗಿ ಬರಬೇಕು. ಇಂಥ ಸಮಯದಲ್ಲಿ ತಮ್ಮ ಸಹಾಯವು ದೊರೆಯದೇ ಹೋದರೆ ಸಭೆಯ ಕಾರ್ಯವು ಸಫಲವಾಗುವದು ಅಸಾಧ್ಯ. ಆದುದರಿಂದ ತಾವು ಈ ಸಾರೆ ಬರಲೇಬೇಕೆಂದು ಆಗ್ರಹ ಪೂರ್ವಕವಾಗಿ ಪುನಃ ಪ್ರಾರ್ಥಿಸುತ್ತೇವೆ.

ಸಭೆಯ ನಿಶ್ಚಿತ ಕಾಲವೂ ಸ್ಥಳವೂ, ವೃತ್ತಪತ್ರಗಳಲ್ಲಿ ಮುಂದುಗಡೆಗೆ ಪ್ರಸಿದ್ಧಿಸಲ್ಪಡುವವು. ಸಾಹಿತ್ಯ ಸಮ್ಮೇಲನದ ವಾರದಲ್ಲಿ ಅವಶ್ಯ ಅದು ಮುಗಿದ ನಂತರ ೧೨-೧೩ ತಾರೀಖಿನ ದಿನ ಸಭೆಯು ನೆರೆಯುವದು. ಆದುದರಿಂದ, ತಾವು ೯ ನೇ ತಾರೀಖಿಗೆ ಬೆಳಗಾವಿಗೆ ಬಂದರೆ ಎರಡೂ ಕೆಲಸಗಳಾಗುವವು. ಕರ್ನಾಟಕ ಸಾಹಿತ್ಯ ಸಮ್ಮೇಲನದವರೆ ಎಲ್ಲರ ಊಟದ ಸುತ್ತು ಇರುವ ವ್ಯವಸ್ಥೆ ಮಾಡಲಿಕ್ಕೆ ಅನುಕೂಲವಾಗುವದು. ತಾವು ಬೆಳಗಾವಿಗೆ ಎಂದು ಯಾವ ಗಾಡಿಯಿಂದ ಹೋಗತಕ್ಕವರೆಂಬುದನ್ನು ಮುಂಚಿತವಾಗಿ ಸಾಹಿತ್ಯ ಸಮ್ಮೇಲನದ ಕಾರ್ಯದರ್ಶಿಗಳಿಗೆ ತಿಳುಹಿಸಬೇಕು.

೧ ಶಿವಮೂರ್ತಿಸ್ವಾಮಿ [illegible] ಬಿ.ಎ. ಎಲ್.ಎಲ್.ಬಿ. [illegible] ೨ [illegible] ಕರ್ನಾಟಕ [illegible] ೪ [illegible] [illegible] ಕಾರ್ಯದರ್ಶಿಗಳು.	ಇತಿ ತಮ್ಮ, **ಎಸ್. ಟಿ. ಕಂಬಳಿ.** ಎಮ್. ಎಲ್. ಸಿ. ಅಧ್ಯಕ್ಷರು.

ಟೀಪು:- ಈ ಸಭೆಯ ಘಟನಾ ನಿಯಮಗಳ ಪ್ರಕಾರ ಕರ್ನಾಟಕದ ಬೇರೆ ಬೇರೆ ಕಾಯದೇ ಮಂಡಲಗಳ (ಅಂದರೆ ಮುಂಬೈ ಮದ್ರಾಸ, ಮೈಸೂರ, ಕೊಡಗು ಭಾಗಗಳ ಲೆಜಿಸ್ಲೇಟಿವ್ಹ ಕೌನ್ಸಿಲುಗಳ) ಸಭಾಸದರೆಲ್ಲ ಈ ಕರ್ನಾಟಕ ಏಕೀಕರಣ ಸಭೆಗೆ [illegible] ([illegible]) ಮೆಂಬರರಾಗಿ ಸೇರುತ್ತಾರೆ. ಆದುದರಿಂದ ಈ ವಿನಂತಿ ಪತ್ರಿಕೆಯು ಸಾಧಾರಣ ಸಭಾಸದರ ಹೊರತಾಗಿ ಕಾಯದೇ ಮಂಡಲಗಳ ಎಲ್ಲ ಸಭಾಸದರಿಗೂ ಕಳಿಸಲ್ಪಟ್ಟಿದೆ.

ಈ ಹೊಸ ಸಭೆಯ ಕೆಲಸವು ಇದೇ ಪ್ರಾರಂಭವಾದ್ದರಿಂದ, ಸ್ಥಾಯಿಕ ಮಂಡಲದಲ್ಲಿ ಬೆಳಗಾವಿಯ ರಾಷ್ಟ್ರೀಯ ಸಭೆಯ ಗಡಿಬಿಡಿಯಲ್ಲಿ ಆರಿಸಲ್ಪಟ್ಟಂಥ ಹಲಕೆಲವು ಸಭಾಸದರ ವಿಳಾಸಗಳು ಸರಿಯಾಗಿ ಗೊತ್ತಾಗಿಲ್ಲ. ಆದ್ದರಿಂದ ಈ ವಿನಂತಿ ಪತ್ರಿಕೆಯು ಟಪಾಲಿನಿಂದ ಬಂದು ಇಂಥಹ ಹಲಕೆಲವು ಸಭಾಸದರ ಹಸ್ತಗತವಾಗದಿದ್ದರೆ, ಅದು ಕಡೆಗೆ ವಿಶೇಷವಾಗಿ ಲಕ್ಷ್ಯಕೊಡದೇ ಅವರೆಲ್ಲ ಸಾರೆ ದಯವಿಟ್ಟು ಸಭೆಗೆ ಬರಬೇಕಾಗಿ ವಿನ್ನಹ.

ಬಾರುಕೋಲು.

ಬೇಳಿನ ಕೊಂಡೆಪ್ಪಾ ನಿನಗೂ ಬಾರುಕೋಲಿಗೂ ಸಂಬಂಧವೇನಿದೆ? ನಿನಗಿಂತ ನನಗೇ ಬಾರಕೋಲು ಒಪ್ಪುವದು. ಬಾರುಕೋಲು ನಿನ್ನದಲ್ಲ. ಒಕ್ಕಲಿಗನಾದ ನನ್ನದು. ಅದನ್ನು ಹಿಡಿಯುವ ಅಧಿಕಾರವು ನನಗೆ ಮಾತ್ರ. ರಂಟೆ ಹೊಡೆದು ಹೊಲ ಸಾಗುಮಾಡುವಾಗ ಅಡ್ಡ ತಿಡ್ಡ ಹೋಗುವ ದನಗಳನ್ನು ಹಾದಿಗೆ ಹಚ್ಚಲು ಬಾರುಕೋಲಿನ ಹೊಡತಗಳನ್ನು ಹಾಕುವದು ನನ್ನ ಪವಿತ್ರವಾದ ಧರ್ಮವಾಗಿದೆ. ಬಾರುಕೋಲೆಂದರೆ ಏನೆಂದು ತಿಳಿದಿರುವಿ? ಬಾರುಕೋಲು ಅನಾಥನಲ್ಲ. ಆತನಿಗೆ ಲೆಕ್ಕಣಿಕೆ, ತಕ್ಕಡಿ, ಶಸ್ತ್ರ ಎಂಬ ಮೂವರು ಬಲಿಷ್ಠ ತಮ್ಮಂದಿರಿದ್ದಾರೆ. ಎಲ್ಲರಲ್ಲಿ ನಾನೇ ಹಿರಿಯವನು. ನನ್ನ ಕಡೆಗೆ ರಟ್ಟೆಯ ಬಲದಿಂದ ದುಡಿದು ತಂದು ಹಾಕುವದು; ಲೆಕ್ಕಣಿಕೆಯ ಕಡೆಗೆ ಬುದ್ಧಿಗಲಿಸುವದು; ತಕ್ಕಡಿಯ ಕಡೆಗೆ ನ್ಯಾಯದಿಂದ ಪಣಕೂಡಿಸುವದು; ಮತ್ತು ಶಸ್ತ್ರದ ಕಡೆಗೆ ಮೂವರನ್ನು ರಕ್ಷಿಸುವದು. ಈ ಬಗೆಯ ವ್ಯವಸ್ಥೆಯಿದೆ. ಇಲ್ಲಿಯ ವರೆಗೆ ನಮ್ಮಲ್ಲಿ ಬಂಧುಪ್ರೇಮವಿದ್ದಿತು. ಆನಂದದಿಂದ ಪ್ರಪಂಚ ಮಾಡಿದೆವು. ತಮ್ಮ ಬೇಳೆ ಬೇಯಿಸಿಕೊಳ್ಳಲು ಬಂದ ಪರದೇಶದ ತಕ್ಕಡಿಗಾರರ ಸವಿಮಾತುಗಳು ನಮ್ಮ ನಮ್ಮೊಳಗೆ ಜಗಳ ಹಚ್ಚಿ, ಬಂಗಾರದಂಥ ನಮ್ಮ ಮನೆ ಮುರಿದು ಬೇರೆ ಬೇರೆ ಒಲೆ ಹೂಡಿಸಿವೆ. ಈಗ ಒಬ್ಬರನ್ನೊಬ್ಬರು ಶತ್ರುವಿನಂತೆ ನೋಡಹೊದಗಿರುವೆವು. ಈಗ್ಗೆ ಮನೆಯ ಬಾಳುವೆಯು ಹಾಳಾಗಿದೆ. ಈ ಹೀನ ಪರಿಸ್ಥಿತಿಗೆ ಲೆಕ್ಕಣಿಕೆಯೇ‡ ಕಾರಣ. ಆ ಕುಲಗೇಡಿ ಲೆಕ್ಕಣಿಕೆಯು ಬುದ್ಧಿಗೆಡಿಸುವದನ್ನು ಬಿಟ್ಟಿದ್ದರೂ ತನ್ನ ಮೋಟೀ ಮೇಲು ಮಾಡುವದನ್ನು ನೋಡಿ, ಯಾರಿಗಾದರೂ ನಗೆ ಬಾರದೇ ಇರದು. ಮೊದಲಿನ ಲೆಕ್ಕಣಿಕೆಯ ಮಾತು ಬೇರೆ; ಈಗಿನ ಲೆಕ್ಕಣಿಕೆಯ ಮಾತು ಬೇರೆ; ಮೊದಲಿನ ಲೆಕ್ಕಣಿಕೆಯು ಋಷಿಗಳ ಕೈಯಲ್ಲಿದ್ದಾಗ ವೇದಶಾಸ್ತ್ರ ಪುರಾಣಗಳನ್ನು ಹೇಳಿತು. ತನ್ನ ತಮ್ಮಂದಿರಿಂದ ಸಾಬ್ಬ ಗೆಲಿಸಿತು. ಧನ ಕೂಡಿಸಿತು, ಉಪ್ಪರಿಗೆ ಕಟ್ಟಿಸಿತು, ದೇವರ ಪೂಜಿಸಿತು, ಪರಪದ ಕೊಡಿಸಿತು. ಈಗ ಅದೇ ಲೆಕ್ಕಣಿಕೆಯು, ಸ್ವಾರ್ಥಕ್ಕಾಗಿ, ಅಲಿಬುರುಕತನಕ್ಕೆ ಬಿದ್ದು, ತನ್ನ ಹೆಂಡರು ಮಕ್ಕಳ ಶೃಂಗಾರ ಮಾಡುವದಕ್ಕೂ ತನ್ನ ಸುಖ ಸೌಕರ್ಯಗಳಿಗೂ ಬೇಕಾಗುವ ಮುದ್ದಿನ ಲಕಿಗೆ, ಮಾಡಬಾರದವರ ಸೇವೆ ಮಾಡಲಿಕ್ಕೆ ಸಿದ್ಧವಾಗಿ ಮಲಿನವಾಗಿದೆ. ಆ ಲೆಕ್ಕಣಿಕೆಯು ಅಸತ್ಯವು ತಾರಕವೆಂದೂ, ಸತ್ಯವು ಮಾರಕವೆಂದೂ ಸಜ್ಜನರ ಸೇವೆಯು ಪಾಪವೆಂದೂ ದುರ್ಜನರ ಸೇವೆಯು ಪುಣ್ಯವೆಂದೂ, ಗರತಿಯು ಅಮಂಗಳೆ ಎಂದೂ ಹಾದರಗಿತ್ತಿಯು ಮಂಗಳೆಯೆಂದೂ ಬೋಧಿಸುತ್ತಿರುವದು. ಈ ಬೋಧದಿಂದ ಧರ್ಮ ಹೋಯಿತು! ರಾಜ್ಯ ಹೋಯಿತು! ಉಪ್ಪರಿಗೆಯು ತಿಪ್ಪೆಯಾಯಿತು! ಹೊಟ್ಟೆಗೆ ಕೂಳಿಲ್ಲದಾಯಿತು! ಮಣ್ಣು ಮುಕ್ಕುವ ವೇಳೆ ಬಂದಿತು. ಸುರಾಪಾನ ಮಾಡುವ ಪೋಲರ ಬಾಯಿಯಲ್ಲಿ ಸೀಸು ಕಾಸಿ, ಸುರುವಬೇಕೆಂದು ಹೇಳುತ್ತಿದ್ದ ಲೆಕ್ಕಣಿಕೆಯು ಶರೆ ಕುಡಿಯಬೇಡೆಂದು ಹೇಳುವವರನ್ನು ತುರಂಗಳಿಗೆ ಕಳಿಸುತ್ತಿರುವದು. ಆ ಪವಿತ್ರವಾದ ವಿದ್ಯಾಖಾತೆಯ ಪೋಷಣೆಯು ಸಹ ಅಬಕಾರೀ ಖಾತೆಯ ಮೇಲೆ ಅವಲಂಬಿಸಿರುವಂತೆ ಏರ್ಪಾಡು ಮಾಡಿ ಇಟ್ಟಿರುವದು.

ನನ್ನ ತಮ್ಮನೇನು ಮೊದಲಿನಿಂದ ನೀಚನಲ್ಲ. ದುಷ್ಟಾನ್ನ ಸೇವನದಿಂದ ಅವನ ಬುದ್ಧಿಯು ಮಸಣಿಸಿದೆ. ನನ್ನ ತಮ್ಮನು ಆ ದುಷ್ಟಾನ್ನವನ್ನು ಕಾಲಿನಿಂದೊದ್ದು ಹೊರಗೆ ಸ್ವತಂತ್ರನಾಗಿ ಬಂದ ದಿವಸವೇ ನಮ್ಮ ರಾಷ್ಟ್ರವು ಸುಧಾರಿಸುವದು. ಆದರೆ ಅಂಥ ಲಕ್ಷಣವೇ ಇಲ್ಲವಲ್ಲ! ನಾಯಿಯಂತೆ ಅನ್ಯರ ಮನೆ ಬಾಗಿಲ ಕಾಯುತ್ತ, ಅದಕ್ಕೆ ಪ್ರತಿಫಲವಾಗಿ ಒಗೆಯುತ್ತಿರುವ ಭಕ್ಕರಿಯ ತುಣಕಗಳನ್ನು ತಿಂದು ಮೆರೆಯುವದೇ ಜಗತ್ತಿನಲ್ಲಿ ದೊಡ್ಡಸ್ತಿಕೆಯೆಂದು ಆತನ ಅಭಿಪ್ರಾಯವಾಗಿದೆ. ಇಂಥ ಹೀನಸ್ಥಿತಿಯಲ್ಲಿದ್ದರೂ ಆ ಲೆಕ್ಕಣಿಕೆಯ ಸೊಕ್ಕು ತಗ್ಗಿಲ್ಲ. ನಾನೊಂದು ದಿನ ನನ್ನ ಸುಖದುಃಖಗಳನ್ನು ತೋಡಿ ಕೊಳ್ಳಲಿಕ್ಕೆ ನನ್ನ ಧನಿಯಾದ ಜಮೀನದಾರನ ಮನೆಗೆ ಹೋಗಿದ್ದೆನು. ಅಲ್ಲಿ ನನ್ನ ತಮ್ಮನು (ಲೆಕ್ಕಣಿಕೆಯು) ಲೋಡಿಗೆ ಆತುಕೊಂಡು ಕುಳಿತಿದ್ದನು. ಹಿರಿಯನಾದ ನನಗೆ ಪ್ರೀತಿಯ ನಾಲ್ಕು ಮಾತುಗಳನ್ನಾಡುವದಂತೂ ಇರಲಿ, ನನ್ನ ಕಡೆಗೆ ಕಣ್ಣೆತ್ತಿ ಸಹ ನೋಡಲಿಲ್ಲ. 'ಕೃಷಿಯಂಥ ಹೊಲಸು ಕಸಬಿಲ್ಲ. ನೌಕರಿಯೇ ಉತ್ತಮ ಕಸುಬು' ಎಂದು ಹಂಟುಬಣೆಯುತ್ತ ಕುಳಿತಿದ್ದನು. ಇದಲ್ಲದೆ ಆತನು "ರಾಯರೇ, ನಮ್ಮ ಬ್ರಾಹ್ಮಣಸಮಾಜವು ತೀರ ಕೆಟ್ಟು ಹೋಗಿದೆ. ಅದು ಸುಧಾರಿಸಬೇಕಾದರೆ ಈಶ್ವರನನ್ನು ಭಕ್ತಿ ವಿಶ್ವಾಸಗಳಿಂದ ಭಜಿಸಬೇಕೆಂದೂ ಗಾಯತ್ರೀ ಎಂಬ ಮಹಾ ಮಂತ್ರದ ಪುರಶ್ಚರಣ ಮಾಡಬೇಕೆಂದೂ ಆಚಾರ್ಯರು ಹೇಳುತ್ತಾರೆ. ಕಾರಣ ನಮ್ಮಂಥ ನಾಲ್ಕಾರು ಜನರು ಕೂಡಿ ಒಬ್ಬಿಬ್ಬ ಬ್ರಾಹ್ಮಣರಿಗೆ ಸಂಬಳ ಕೊಟ್ಟು, ದೇವರ ಭಜನೆ ಮಾಡಲಿಕ್ಕೂ ಗಾಯತ್ರೀ ಪುರಶ್ಚರಣ ಮಾಡಲಿಕ್ಕೂ ಹಚ್ಚಬೇಕು. ಅದರಿಂದ ಅವರು ತಮ್ಮ ಹೆಂಡರು ಮಕ್ಕಳ ಹೊಟ್ಟೆ ಬಟ್ಟೆಗಳ ವಿಚಾರ ಮಾಡದೆ, ಗಾಯತ್ರೀ ಪುರಶ್ಚರಣ ಮಾಡಿ, ಅದರ ಮಹಿಮೆಯಿಂದ ನಮ್ಮ ಸಮಾಜವನ್ನು ಮುಂದಕ್ಕೆ ತರುವರು!!!" ಹೇಗಿದೆ? ದೇವರನ್ನು ಭಜಿಸಲಿಕ್ಕೂ ಗಾಯತ್ರೀ ಪುರಶ್ಚರಣ ಮಾಡಲಿಕ್ಕೂ ಸ್ವೈಪಿಕಾರಿಗ ಸಂಬಳವು ಬೇಕು! ಕೈಯಲ್ಲಿ ಪುಟ್ಟಿಯನ್ನು, ತಲೆಯ ಮೇಲೆ ಕ್ರಾಪ್ ಬಿಟ್ಟವನನ್ನು, ಧರಿಸಿದ ಇಂಥ ವಿಪ್ರನ ಮೂರು ಲ ಪ್ರತಿಬಿಂಬವನ್ನು ಕೋಳೀಸಬೇಕು!!

ಆ ಕುಲಗೇಡಿ ಲೆಕ್ಕಣಿಕೆಯ ಬರಡು ಮಾತು ನನಗೆ ಸರಿಬರಲಿಲ್ಲ. ನಾನೇ ಧನಿ ಯಜಮಾನರಿಗೆ ಮುಂದಿನಂತೆ ಹೇಳಿದೆ "ಸ್ವಾಮಿಯೇ, ಗಾಯತ್ರೀ ಪುರಶ್ಚರಣ ಮಾಡುವವರಿಗೆ ಯಾವ ಸಹಾಯವೂ ಬೇಡಾ. ಕೃಷಿವೃತ್ತಿಯಲ್ಲಿರುವವರ ಸಹಾಯವೇನಾಗಬೇಕಾಗಿದೆ. ಅವರಲ್ಲಿ ನಿಮ್ಮಂಥ ನಾಲ್ಕಾರು ಜನರಿದ್ದರೆ, ಜಗತ್ತನ್ನೇ ರಕ್ಷಿಸುವಷ್ಟು ಸಾಮರ್ಥ್ಯವು ಇರುತ್ತದೆ. ಅಂಥ ಬ್ರಾಹ್ಮಣರು ಹೊನ್ನಿನಾಶೆ, ಹೆಣ್ಣಿನಾಶೆ, ಮಣ್ಣಿನಾಶೆ, ಅನ್ಯರಾಶ್ರಯದಾಶೆ ಕೂಡ ಮಾಡದೆ ಗಾಯತ್ರಿಯನ್ನೊಲಿಸಿ ಕ್ಷುದ್ರ ಸಂಪತ್ತನ್ನೇಕೆ ಮೋಕ್ಷ ಪಡೆದು ಸುಖದಿಂದ ಇರುವರು. ಈ ನೀಚ ಲೆಕ್ಕಣಿಕೆಯಂಥ ದುರ್ನೀತಿಯು ನಮ್ಮ ಸಮಾಜದಲ್ಲಿ ಸಾತ್ವಿಕ ಲೆಕ್ಕಣಿಕೆಯನ್ನು ಮೂಡಿ, ಪ್ರಬಲಿಸಿ ಬಂದಿರುವದರಿಂದಲೇ ನಮ್ಮ ದೇಶದ ಸಂಪತ್ತೆಲ್ಲ ಹಾಳಾಯಿತು. ತಲೆಗೆ ಕರಿಬಿಳಿ ಕಟ್ಟಿಕೊಂಡು (ಕ್ರಾಪ್ ಬಿಟ್ಟುಕೊಂಡು) ಭಿಕ್ಷೆ ಬೇಡುವ ಪ್ರಸಂಗವು ಬಂದೊದಗಿರುವದು. ಸಮಾಜವಾಗಲಿ, ದೇಶವಾಗಲಿ, ಮುಂದೆ ಬರಬೇಕಾದರೆ ಧರ್ಮವೂ ಸತ್ಯವೂ ಬಂಧುಪ್ರೀತಿಯೂ ಇರಬೇಕು. ಧರ್ಮವಿದ್ದಲ್ಲಿಯೇ ಲಕ್ಷ್ಮೀ ಸರಸ್ವತಿಯರು ಒಟ್ಟಾಗಿ ಇರುವರು. ಈಗಿನವರಲ್ಲಿ ಎಲ್ಲಿಯ ಸ

‡ ಲೆಕ್ಕಣಿಕೆಯ ಸಾಮರ್ಥ್ಯದಿಂದ ಧರ್ಮವನ್ನು ರಕ್ಷಿಸಿ, ಸಮಾಜವನ್ನು ಒಳ್ಳೇ ಸ್ಥಿತಿಯಲ್ಲಿಡತಕ್ಕವರು ಬ್ರಾಹ್ಮಣರು ಆದರೆ ಈಗ್ಗೆ ಅವರೆಲ್ಲ ನೌಕರಿಯಲ್ಲಿ ಸೇರಿ, ತಮ್ಮದೇ ಹೊಟ್ಟೆಗೆ ಹಿತವಾದ ವಕೀಲೀ ಮೊದಲಾದ ಧಂದೆಗಳಲ್ಲಿ ಬಿದ್ದು ರಾಷ್ಟ್ರವನ್ನು ಅಧೋಗತಿಗೆ ತಂದಿರುವರೆಂಬುದು 'ಒಕ್ಕಲಿಗ'ನ ಮತ. "ಲೆಕ್ಕಣಿಕೆ"ಯೆಂಬಲ್ಲೆಲ್ಲ ಈ ತರದ ಬ್ರಾಹ್ಮಣರೆಂಬುದಾಗಿ ವಾಚಕರು ತಿಳಿದುಕೊಳ್ಳುವದು.

ಸಂ. ಕ.

ಕನ್ನಡದ ಅಭಿಮಾನಿಗಳೇ! 'ಕನ್ನಡಿಗ'ನಲ್ಲಿಯ ಮೇಲ್ತರದ ಲೇಖಗಳನ್ನೋದಿರಿ! ಸ್ವಾಗತ ಮಾಡಿರಿ.

ತ್ತಿಕೆ, ಎಲ್ಲಿಯ ಧರ್ಮ, ಎಲ್ಲಿಯ ಬಂಧುಪ್ರೀತಿ ? ದುಡ್ಡಿನಾಶೆಗೆ ಸುಳ್ಳು ಸಾಕ್ಷಿಗಳನ್ನು ಹೇಳುವ, ಬಂಧುಗಳ ಗೋಣು ಮುರಿಯುವ ನೀಚರು ನೋಡಿದಲ್ಲೆಲ್ಲ ತುಂಬಿರುವದರಿಂದ ದೇಶದ ವೈಭವವೆಲ್ಲ ಹಾಳಾಗಿ, ಅದಕ್ಕೆ ಸ್ಮಶಾನದ ಸ್ವರೂಪವು ಬಂದಿದೆ. ದೇಶಾಭಿಮಾನಿಗಳು ಈ ಕುಲಗೇಡಿ ಲೆಕ್ಕಣಿಕೆಯ ಕಡೆಗೆ ನೋಡದೆ, ಧರ್ಮ ರಕ್ಷಣೆಗಾಗಿ ಅವಿಶ್ರಾಂತ ಶ್ರಮಬಟ್ಟ, ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯರಾದ ವಿದ್ಯಾರಣ್ಯರ ಪವಿತ್ರ ಲೆಕ್ಕಣಿಕೆಯ ಕಡೆಗೆ ನೋಡಬೇಕು. ರಾಜ್ಯಪದಕ್ಕಿಂತ ಬ್ರಮ್ಹ ಪದವು ಹೆಚ್ಚಿನದೆಂದು ತಿಳಿದೇ ವಿಶ್ವಾಮಿತ್ರನು ರಾಜ್ಯಲಕ್ಷ್ಮಿಯನ್ನೊದ್ದು ಕಾಡಿಗೆ ತಪಸ್ಸಿಗಾಗಿ ಹೊರಟನು ಎಂದು ಹೇಳುತ್ತಿದ್ದ ಲೆಕ್ಕಣಿಕೆಯು ಈಗ ಭ್ರಷ್ಟವಾಗಿದೆ. ಅದಕ್ಕೆ ಬಾರುಕೋಲಿನ ಹೊಡತಗಳು ಬೇಕು ” ಎನ್ನಲು ಆ ಕುಲಗೇಡಿ ಲೆಕ್ಕಣಿಕೆಯು ವಿಚಾರದಲ್ಲಿ ಬಿದ್ದಿತು. ನಮ್ಮ ದೊರೆಯು ‘ ಎಲಾ ನೀನು ಕಗ್ಗ ಒಕ್ಕಲಿಗನಲ್ಲ. ಹೃದಯ ವೆಂಬ ಭೂಮಿಯನ್ನು ಸಾಗು ಮಾಡಿ ಅಲ್ಲಿ ಜ್ಞಾನರೂಪಿ ಬೀಜ ಬಿತ್ತಲು ಬಂದ ಮೇಲಾದ ಒಕ್ಕಲಿಗನು. ಶಾರದೆಯ ಭಕ್ತನಾದ ಕನ್ನಡಿಗನು ಕಾಣುತ್ತೀ ’ ಎಂದನು. ಇರಲಿ. ಈಗ್ಗೆ ಲೆಕ್ಕಣಿಕೆಯ ಪ್ರತಾಪವು ಮುಗಿದಿಲ್ಲ. ಇನ್ನು, ಮುಂದಿನ ಪ್ರಸಂಗದಲ್ಲಿ ನೋಡುವಾ. ಲೆಕ್ಕಣಿಕೆಯಂತೆ ತಕ್ಕಡಿಯೂ ಅಡ್ಡಹಾದಿಗೆ ಬಿದ್ದಿದೆ. ಅದಕ್ಕಿಷ್ಟು ಬಾರುಕೋಲು ಬೇಕಾಗಿದೆ. ಇಂದು ಬೇಡಾ.

ಕನ್ನಡಿಗರ ದಾಸಾನುದಾಸ

ಒಕ್ಕಲಿಗ.

ಯಾದ ಲೀಲಾವತಿಬಾಯೀಸಾಹೇಬರು ಪುಣೆಯಲ್ಲಿ ಬುಧವಾರ (ತಾ. ೨೨—೪—೩೫ ರಾತ್ರಿ ಗಂಡುಮಗನನ್ನು ಹೆತ್ತರು. ಈ ಆನಂದದ ಸಮಯದಲ್ಲಿ ಎಲ್ಲಿ ನೋಡಿದರೂ ಸಭೆಗಳು! ದರ್ಬಾರಗಳು! ಕಿರಿಯರೊಳಗೆ ಕನ್ನ ಸಹ ಬಿಟ್ಟರು ಊರಲ್ಲೆಲ್ಲ ವಾದ್ಯಗಳೂ, ಸಕ್ಕರೆ ಹಂಚುವದೂ ನಡೆದವು.

ನೀರ್ ನೀರೆಂದು ಬಾಯಿಬಿಡುವ ಇಲ್ಲಿಯ ಜನರಿಗೆ ನಿರಂತರ ನೀರನ್ನು ಹೇಗೆ ಪೂರೈಸ ಬಹುದು, ಅದಕ್ಕೆಷ್ಟು ಹಣ ಖರ್ಚಾಗಬಹುದೆಂಬ ವಿಚಾರಣೆಯನ್ನು ಮಾಡುವದಕ್ಕಾಗಿ ನೀರಿನ ತಜ್ಞನೊಬ್ಬನು (Expert) ಇಲ್ಲಿಗೆ ಶೀಘ್ರವೇ ಬರುವನೆಂಬ ಸುದ್ದಿ ಊರಲ್ಲೆಲ್ಲ ಹಬ್ಬಿದೆ.

ಇಲ್ಲಿಯ ಇಂಗ್ಲಿಷ ಶಾಲೆಯ ಸದ್ಯದ ಮತ್ತು ಹಿಂದಿನ ವಿದ್ಯಾರ್ಥಿಗಳ ಸಮ್ಮೇಲನವು ಆಯಿತು. ಆಟನೋಟ ಪಾರಿತೋಷಕ ನಾಟಕಗಳೂ ಆಗಿ ಸಮ್ಮೇಲನವು ಯಶಸ್ವಿಯಾಯಿತು.

ಇಲ್ಲಿಯ “ ರಮಾಬಾಯಿ ಸಾಹೇಬ ವಾಚನಾಲಯ ” ಎಂಬ ವಾಚನಾಲಯದಲ್ಲಿ, ಜಯಕರ್ನಾಟಕ ಮತ್ತು ಕರ್ನಾಟಕ ವೈಭವವೆಂಬ ಮಾಸಿಕ ಮತ್ತು ಸಾಪ್ತಾಹಿಕಗಳು ಬರುತ್ತವೆ. ಇವು ಬೇಕಾದಾಗ್ಗೆ ನೋಡಿದರೂ ಅದೇ ಮುದ್ರಿಸಿಕೆಗೆದವುಗಳಂತೆ ಮಾಸದೇ ಹಾಗೆ ಇರುವವು ಆದರೆ ಅವೇ ಮರಾಠಿ ಪತ್ರಗಳನ್ನು ನೋಡಿ! ಹೊಸವು ಬರುವದರೊಳಗೆ ಹಳೆಯವು ಚೂರ ಚೂರಾಗಿ ಓದಲಿಕ್ಕೆ ಬಾರದಹಾಗಾಗಿರುವವು! ಕನ್ನಡ ಮರಾಠಿ ಪತ್ರಗಳು ಒಂದೇ ಮೇಜಿನ ಆಶ್ರಯವನ್ನು ಹೊಂದಿದ್ದರೂ, ಜನರು ಮರಾಠೀ ಪತ್ರಗಳನ್ನೇ ಓದುವದರಿಂದ ಅವು ಹಾಗಾಗುವವು

ಕರ್ನಾಟಕದ ಈ ಸಂಸ್ಥಾನದ ಜನರಿಗೆ ಕನ್ನಡದ ಅಭಿಮಾನವು ಇಲ್ಲೆಂಬದನ್ನು ಕೇಳಿ, ಕನ್ನಡದ ಸಲುವಾಗಿ ಜನ್ಮಿಸಿದ ‘ ಕನ್ನಡಿಗನಿಗೆ ’ ಕಳವಳವೆನಿಸದಿರಲಾರದು. (ವೇಣೂಸುತ)

ನಿಮಗೆ “ ಕನ್ನಡಿಗ ” ನ ಭೆಟ್ಟಿಯು ಅನಾವಶ್ಯಕವಿದ್ದರೆ ಸಂಚಿಕೆಗಳನ್ನು ಸ್ವೀಕರಿಸದೆ ಅವನ್ನು ನಮಗೆ ಮರಳಿ ಕಳಿಸಬೇಕಾಗಿ ಬಿನ್ನಹ. ಕಾರ್ಡ ಬರೆದು ನಿಮ್ಮ ಅರ್ಧ ಆಣೆ ವೆಚ್ಚ ಮಾಡುವದೂ ಅವಶ್ಯವಿಲ್ಲ.

ವರ್ತಮಾನಸಾರ

ಇಹವೃತ್ತ

ಕಳೆದವಾರದಲ್ಲಿ ಬಾಗಲಕೋಟೆಯಲ್ಲಿ ಎಲ್ಲಿನೋಡಿದರೂ ಸಾರ್ವಜನಿಕ ಉತ್ಸವ, ಮೆರವಣಿಗೆ, ಕೀರ್ತನೆ ವ್ಯಾಖ್ಯಾನ, ಮತ್ತು ಸಭೆ ಇವೇ ಮೊದಲಾದ ಚಟುವಟಿಕೆಗಳು ಕಂಡು ಬಂದವು.

ಶ್ರೀ ಬಸವಜಯಂತ್ಯುತ್ಸವವೂ. ಶಿವಾಜಿಯ ಉತ್ಸವವೂ ಬಹು ವೈಭವದಿಂದ ಜರುಗಿದವು

ಕರ್ನಾಟಕ ಸಾಹಿತ್ಯ ಸಮ್ಮೇಲನಕ್ಕೆ ಪ್ರತಿನಿಧಿಗಳನ್ನಾರಿಸುವದಕ್ಕಾಗಿ ಸಾರ್ವಜನಿಕ ಸಭೆ ಸೇರಿ, ಕೌಜಲಗಿ ಶ್ರೀನಿವಾಸರಾವ, ಭಟ್ಟಿ ಗೋವಿಂದರಾವ, ಮುರಗಯ್ಯಸ್ವಾಮಿ ಜಂಗಿನ ಮೊದಲಾದ ೧೫ ಜನರು ಪ್ರತಿನಿಧಿಗಳಾಗಿ ಆರಿಸಲ್ಪಟ್ಟರು ಇನ್ನು ಹೆಚ್ಚಾಗಿ ಯಾರಾದರೂ ಪ್ರತಿನಿಧಿಗಳಾಗಿ ಹೋಗುವವರಿದ್ದರೆ, ಅವರನ್ನು ಆರಿಸಿ ಕಳಿಸುವ ಅಧಿಕಾರವು [illegible] ಶ್ರೀನಿವಾಸರಾಯರಿಗೆ ಕೊಡಲ್ಪಟ್ಟಿದೆ.

[illegible]ಕೋಟೆ ತರುಣ ಸಂಘ ” ವೆಂಬದೊಂದು ಹೊಸ ಸಂಸ್ಥೆ [illegible]ಲ್ಪಟ್ಟಿತು ಶ್ರೀ ಪುರೋಹಿತ ಕರುಣಾಚಾರ್ಯರು [illegible]ರೂ, ಜೋರಾಪೂರ ನಾರಾಯಣರಾಯರೂ, ಪಾಟೀಲ [illegible], ಕಾರ್ಯದರ್ಶಿಗಳಾಗಿಯೂ, ನೇಮಿಸಲ್ಪಟ್ಟರು.

[illegible] ಮಹಾತ್ಮಾ ಗಾಂಧೀಯವರಿಗೆ ವೆ! ಬುರ್ಡಿ ಶ್ರೀನಿವಾಸಾಚಾರ್ಯರು [illegible]ಕೆಯ ಬಗ್ಗೆ ಒಂದು ಪತ್ರವನ್ನು ಬರೆದಿರುವರು.

ಕರ್ನಾಟಕ.

ಮುಂಬೈ ಕರ್ನಾಟಕ

ಹೊನ್ನಾವರ ಶಹರದಲ್ಲಿ ೬೦ ಜನರು ಕಾಂಗ್ರೆಸ ಸಭಾಸದರಾಗಿರುವರು ಹೊನ್ನಾವರವೇ! ಶಹಬಾಸ್.

“ ಜಮಖಂಡಿಯ ಪತ್ರವು ”:—

ಇಲ್ಲಿಯ ಯುವರಾಜರಾದ ಶ್ರೀ ಅಪ್ಪಾಸಾಹೇಬ ಇವರ ಪತ್ನಿ

ಮದ್ರಾಸ ಕರ್ನಾಟಕ

ಕೊಯಿಮತ್ತೂರ ಮಿಲ್ಲಿನವರು ದೀಕ್ಷಾ ೨೦ ರಂತೆ ಕೂಲಿಕಾರರ ಪಗಾರ ಕಡಿಮೆ ಮಾಡಿರುವದರಿಂದ, ೪೦೦ ಜನ ಕೂಲಿಕಾರರು ತಮ್ಮ ಮಾರ್ಚತಿಂಗಳ ಪಗಾರ ಸ್ವೀಕರಿಸಿಲ್ಲ ನಗರ ಮಂದಿರದಲ್ಲಿ ಸಭೆಯೂ ಆಯಿತು ಮಿಲ್ಲಿನವರು ಮಣಿಯದಿದ್ದರೆ, ಊರೊಳಗಿನ ಎಲ್ಲ ಕೂಲಿಯವರು, ಕಟ್ಟು ಮಾಡಲು ನಿಶ್ಚಯಿಸಿದ್ದಾರೆ

ಉದಕ ಮಂಡಲ ಮುನಸಿಪಾಲಿಟಿಯವರು ಸೇವಕರ ತಲೆಪಟ್ಟಿಯನ್ನು ತೆಗೆದು ಹಾಕಬೇಕೆಂದು ಕಡೆಗೆ ಗೊತ್ತು ಮಾಡಿದರು. ಈ ಸಾರೆ ಸರಕಾರದವರು ಯಾವ ಬಗೆಯ ಕರಾರುಗಳನ್ನು ಹಾಕಿಲ್ಲ.

ಹಿಂದೂ ಧಾರ್ಮಿಕ ಉಂಬಳಿಗಳಬಗ್ಗೆ ಇರೋಡಿನಲ್ಲಿ ಒಂದು ಸಭೆಯಾಯಿತು,

“ ಕರ್ನಾಟಕ ಸ್ವರಾಜ್ಯ ಸಂಘವು ” ಮಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟಿದೆ

ಮೈಸೂರ ಕರ್ನಾಟಕ.

ಬ[illegible]ದ ಮಹಾರಾಜರು ಬೆಂಗಳೂರಿಗೆ ಅರಮನೆಯ ಅತಿಥಿಗಳಾಗಿ ಬಂದಿದ್ದಾರೆ

ಮೈಸೂರಿನಲ್ಲಿಯ ಮುಖ್ಯ ನ್ಯಾಯಾಧೀಶರಾದ ಮಿ. ಸುಬ್ಬಣ್ಣನವರು ಪೆನಶನ್ ತೆಗೆದುಕೊಳ್ಳುವದನ್ನು ನಿಶ್ಚಯಿಸಿದ್ದಾರೆ

ಭರತಖಂಡದ ಉಗ್ರಾಣ ಖಾತೆಯವರು [illegible] ಬೆಲೆಯ ಕಂಬಳಿಗಳನ್ನು ಹಿಂದುಸ್ಥಾನದಲ್ಲಿ ಕೊಳ್ಳಬೇಕಾಗಿದೆ ಅದರಲ್ಲಿ ೩ ಲಕ್ಷ ರೂ ಬೆಲೆಯ ಕಂಬಳಿಗಳನ್ನು ‘ ಬೆಂಗಳೂರ ವುಲನ್ ’ ಕಂಪನಿಯಿಂದ ಕೊಳ್ಳುವರು ಅಂತೂ ಕರ್ನಾಟಕವು ಹಿಂದುಸ್ಥಾನಕ್ಕೆ ಬೇಕಾಗುವ ಸರಕುಗಳನ್ನು ಪೂರೈಸುತ್ತಿರುವದು ಸಂತೋಷ!

ನಿಜಾಮ ಕರ್ನಾಟಕ

ನಿಜಾಮ ಇಲಾಖೆಯ [illegible] ಶ್ರೀ [illegible] ಧರ್ಮೋದ್ಧಾರಿಣೀ ಸಭೆಯು, ಮೈ ೫ ರಿಂದ ೭ ರ ವರೆಗೆ ಗುಲಬರ್ಗದಲ್ಲಿ ನಡೆಯುವದು ಹೈದರಾಬಾದಿನ ನಾಗಭೂಷಣರಾವ ವಕೀಲರು ಬಾರ್ ಅಟ್. ಲಾ ಇವರು ಅಧ್ಯಕ್ಷಸ್ಥಾನವನ್ನು ವಹಿಸುವರು

ಕನ್ನಡ ನಾಡಿನ ಕನ್ನಡಿಗರೆಲ್ಲರು ‘ ಕನ್ನಡಿಗ ’ ನನ್ನು ಸ್ವೀಕರಿಸುವರು ಅವನನ್ನು ಪ್ರೋತ್ಸಾಹಿಸಲೇಬೇಕು!

ರೇಲ್ವೇ ಬೋರ್ಡ ಸಿಮ್ಲಾ ಇವರಿಗೆ.

ಮಹಾಶಯರೇ !

ಕೆಳಗೆ ಸಹಿ ಮಾಡಿದಂಥ ಕರ್ನಾಟಕದೊಳಗಿನ ಬೇರೆ ಬೇರೆ ಭಾಗಗಳ ನಿವಾಸಿಗಳಾದ ನಾವುಗಳೆಲ್ಲ ತಮಗೆ ಅರಿಕೆಮಾಡಿಕೊಳ್ಳುವದೇನೆಂದರೆ, ಸಂಯುಕ್ತ ಕರ್ನಾಟಕ ಪ್ರಾಂತದಲ್ಲಿರುವ ನಮಗೆ ನಮ್ಮ ಕರ್ನಾಟಕ ನಾಡಿನಲ್ಲಿ ರೇಲ್ವೆ ಸೌಕರ್ಯಗಳು ಸಮಾಧಾನಕರವಾಗಿರುವದಿಲ್ಲ. ಸಾವಿರಾರು ಊರುಗಳಲ್ಲಿ ರೇಲ್ವೆಗಳಿರುವದಿಲ್ಲ. ಇದರಿಂದ ನಮ್ಮ ಪ್ರಾಂತದ ಜನರ ಪ್ರವಾಸಗಳೆಲ್ಲ ಬಹು ಕಷ್ಟವಾಗಿವೆ. ನಮ್ಮಲ್ಲಿಯ ವ್ಯಾಪಾರ ಉದ್ದಿಮೆಗಳಿಗೆ ಇದರಿಂದ ಬಹು ಆತಂಕವಾಗಿದೆ. ಇಷ್ಟು ದಿನಗಳ ವರೆಗೆ ಇವೆಲ್ಲ ಕಷ್ಟಗಳನ್ನು ನಾವು ಸೋಸುತ್ತಿದ್ದರೂ ಸಹ ನಮಗೆ ಸುಖಕರವಾಗುವಂಥ ಹೊಸ ರೇಲ್ವೇಗಳು ಈವರಿಗೂ ಆಗಲೊಲ್ಲವು. ಆದುದರಿಂದ ಈಗ್ಗೆ **ರೇಲ್ವೆ ಬೋರ್ಡಿನವರು** ಅನುಮತಿಯನ್ನು ಕೊಟ್ಟಂಥ ಕೆಳಗಿನ ರೇಲ್ವೇಗಳನ್ನು ಬೇಗನೇ ಪ್ರಾರಂಭಿಸುವಂತೆ ಏರ್ಪಾಟ ಮಾಡಬೇಕಾಗಿ ಆಗ್ರಹ ಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

(೧) ನಿಪ್ಪಾಣಿ ಹುನಗುಂದ .... (ಸದರ್ನ ಮರಾಠಾ ರೇಲ್ವೆ.)
(೨) ಬೆಳಗಾವಿ ಹುಬ್ಬಳ್ಳಿ (ಸವದತ್ತಿ ಮಾರ್ಗವಾಗಿ) .... ,,
(೩) ಹಾವೇರಿ ಹಾವನೂರ .... ,,
(೪) ಹರಿಹರ- ಕೊಟ್ಟೂರ .... ,,
(೫) ಗದಗ-ವಾಡಿ-ರಾಯಚೂರ.... .... (ನಿಝಾಂ ರೇಲ್ವೆ)
(೬) ನಂಜನಗುಡ್ಡ ಮೆಟ್ಟುಪಾಲಿಯಮ್ .... (ಮೈಸೂರ ರೇಲ್ವೆ)

ಈ ಆರು ಹಳಿ, ಯೋಜನೆಗಳ ಹೊರ್ತಾಗಿ.

(೧) ಹುಬ್ಬಳ್ಳಿ—ಕಾರವಾರ—ಮಂಗಳೂರಿಗೂ ....
(೨) ಮೈಸೂರ ಮಡಿಕೇರಿಗೂ. ....

ಹೊಸದಾಗಿ ರೇಲ್ವೆ ಲಾಯಿನಗಳನ್ನು ಹಾಕಬೇಕಾಗಿ ನಮ್ಮೆಲ್ಲರ ಅತಿಶಯ ಕಳಕಳಿಯ ಮತ್ತು ಆತುರದ ಪ್ರಾರ್ಥನೆಯಿದೆ. ಪೂರ್ವ ಸಮುದ್ರದ ದಂಡೆಯ ಗುಂಟ ರೇಲ್ವೇ ಕಂಪನಿಯವರು ರೇಲ್ವೇ ಲಾಯಿನಗಳನ್ನು ಹಾಕಿ ಅನೇಕ ವರ್ಷಗಳಾದವು ಆದರೆ ಪಶ್ಚಿಮ ಸಮುದ್ರದಂಡೆಯ ಕಡೆಗೆ ಸಹ ನಾವು ಹೊಸ ಲಾಯಿನ್ಸಗಳನ್ನು ಹಾಕಿದರೆ, ಇತ್ತ ಕಡೆಯ ಜನರಿಗೂ ಪ್ರವಾಸಕ್ಕಾಗಿ ಬಹು ಅನುಕೂಲವಾಗುವದಲ್ಲದೇ ಕಾರವಾರ, ಮಂಗಳೂರ ಬಂದರುಗಳ ಹಾಗೂ ಉಪವನಗಳ ಲಾಭವನ್ನೂ ಇಲ್ಲಿಯ ಜನರೆಲ್ಲ ತೆಗೆದುಕೊಂಡು, ಕಾಗದ, ಕಟ್ಟಿಗೆ ಮೊದಲಾದ ಹೊಸ ಗಿರಣಿಗಳನ್ನೂ ಬೇರೆ ವ್ಯವಸಾಯಗಳನ್ನೂ ಪ್ರಾರಂಭಿಸಲು ಅನುವಾಗುವದು. ಮುಂದೆ ಪಶ್ಚಿಮ ದಂಡೆಯಲ್ಲಿ ಒಂದು ಬಂದರವನ್ನು ತೆಗೆಯಲು ಅನುಕೂಲವಾಗಿ ಅದರಿಂದ ನಮ್ಮ ಕರ್ನಾಟಕ ಪ್ರಾಂತದ ಸಂಪದಭಿವೃದ್ಧಿಯು ತಾನೇ ಆಗುವದು.

ಭಾಷಾವಾರ ಪ್ರಾಂತರಚನೆಯನ್ನು ಮಾಡುವದಕ್ಕೆ ಸರಕಾರದ ಒಪ್ಪಿಗೆಯಿದೆ. ಅದು ಕೃತಿಯಲ್ಲಿಯೂ ಕ್ರಮೇಣ ಬರಹತ್ತಿದೆ. ಕರ್ನಾಟಕಕ್ಕೆ ಒಂದಿಲ್ಲೊಂದು ದಿವಸ ಸ್ವತಂತ್ರ ಪ್ರಾಂತವು ದೊರೆಯುವದು. ನಾವು ಈಗ್ಗೆ ಸೂಚಿಸಿದ ರೇಲ್ವೆಗಳಾದರೆ ನಮ್ಮ ಕರ್ನಾಟಕ ಪ್ರಾಂತರಚನೆಯ ಕಾರ್ಯಕ್ಕೆ ಬಹು ಅನುಕೂಲವಾಗುವದು.

ಆದುದರಿಂದ ತಾವು ಇವೆಲ್ಲ ಲಕ್ಷ್ಯದಲ್ಲಿ ತಂದು, ನಮ್ಮ ಪ್ರಾರ್ಥನೆಯನ್ನು ಬೇಗನೇ ಮನ್ನಿಸಬೇಕಾಗಿ ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇವೆ. ಇತಿ. ತಮ್ಮ ವಿಧೇಯರಾದ.

ಸಂಖ್ಯೆ.	ಪೂರ್ಣ ಹೆಸರು ಮತ್ತು ವಿಳಾಸ.	ಉದ್ಯೋಗ.	ಸಹಿ.
೧			
೨			
೩			

ವಿನಂತಿಯು.

ಈ ಮೊದಲೇ ಪ್ರಾರ್ಥಿಸಿದಂತೆ ೬ ನೇ ಸಂಚಿಕೆಯು ವ್ಹಿ. ಪಿ. ಯಿಂದ ಕಳಿಸಲ್ಪಟ್ಟಿದೆ ಈವಾರದಲ್ಲಿ ೧೦೦೦ ಜನ್ನರಿಗೆ ಮಾತ್ರ ವ್ಹಿ. ಪಿ. ಕಳಿಸಿರುವೆವು ಈ ವರೆಗೆ ಯಾರು ಸಂಚಿಕೆಗಳನ್ನು ಸ್ವೀಕರಿಸಿರುವರೋ ಯಾರು ತಮಗೆ ಸಂಚಿಕೆಗಳು ಬೇಡವೆಂಬದಾಗಿ ಏನೂ ತಿಳಿಸಲಿಲ್ಲವೋ ಅಂಥವರಿಗೆಲ್ಲ ವ್ಹಿ. ಪಿ. ಕಳಿಸಲ್ಪಟ್ಟಿವೆ. ವ್ಹಿ.ಪಿ. ತರಿಸಿಕೊಂಡು ಸ್ವೀಕರಿಸಿ ನಮಗೆ ಹಾನಿಗೆ ಗುರಿ ಮಾಡಬಾರದಾಗಿ ಪ್ರಾರ್ಥನೆ. ಈಗಲಾದರೂ "ಕನ್ನಡಿಗನ" ದರ್ಶನದ ಅವಶ್ಯಕತೆಯಿಲ್ಲದವರು ದಯವಿಟ್ಟು ತಮ್ಮ ಕಡೆಗೆ ಬರುವ ಸಂಚಿಕೆಗಳನ್ನು ನಿರಾಕರಿಸಿದರೆ, ನಾವು ಅವರಿಗೆಲ್ಲ ಉಪಕೃತರಾಗುವೆವು.

ವ್ಯವಸ್ಥಾಪಕ ಕನ್ನಡಿಗ ಬಾಗಲಕೋಟೆ.

ಈ ಪತ್ರಿಕೆಯು ಮುದ್ರಕ ಪ್ರಕಾಶಕ ... ಬಾಗಲಕೋಟೆ ... ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿದೆ. ಪ್ರತಿ ೨೦೦೦

ರ. ನಂ. ಬಿ. ೯೯೬೨ | ವಾ॥ ಚಂದಾ ೧—೮—೦ ಮಾತ್ರ!

ಜಯ ಕರ್ನಾಟಕ

(ಇದರಲ್ಲಿ ಕನ್ನಡ ಸಮಾಚಾರಗಳು ಪ್ರಕಟವಾಗುತ್ತವೆ)

ಪ್ರತಿ [illegible] ಪ್ರಕಟವಾಗುವ ಪತ್ರಿಕೆ — [illegible]

ಸಂಪಾದಕರು.— ಮಂಗಳೂರು ರಾಜಾ ರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಮಂಗಳೂರು, [illegible] ವೈಶಾಖ ಶುದ್ಧ ೧ ಶಕೆ ೧೮೪೭. ತಾ॥ ೮-೫-೧೯೨೫. | ಸಂಚಿಕೆ ೭

ಸಂಪಾದಕರ ಭೂಮಿ.

ಎಷ್ಟರೆ ಕನ್ನಡ ಕಾಳಿತರೆ ಕನ್ನಡ ನುಡಿದರೆ ಕನ್ನಡವು ।
ಕೃದ್ಯವು ಕನ್ನಡ ಉದ್ಯಮ ಕನ್ನಡ-ಕನ್ನಡ-ಕನ್ನಡವು ।
ಕನಸು ಮನಸಿನೊಳು ಕನ್ನಡ ಕನ್ನಡ ಸಿದ್ಧಿಯು ಕನ್ನಡವು।
ಕನಸು ಕನ್ನಡವು ಜೀವಿತ ಕನ್ನಡ ಎಲ್ಲವು ಕನ್ನಡವು ॥
—ಕೈ. ಸಗರ ಕವಿ

ಬೆಳಗಾವಿಯ ಜಿಲ್ಲಾ ಲೋಕಲ್ ಬೋರ್ಡಿನವರು, ಬಾವಿ, ಕೆರೆ, ಧರ್ಮಶಾಲೆ ಮೊದಲಾದ್ದನ್ನಗಳಲ್ಲಿ ಜಾತಿಭೇದವನ್ನು ಮತ ಜಾತಿಗಳ ಭೇದಭಾವವಿಲ್ಲದೇ ಉಪಯೋಗಿಸುವುದೆಂಬದಾಗಿ ಹಿಂದಕ್ಕೆ ಒಂದು ಠರಾವನ್ನು ಮಾಡಿರುವರು ಅದು ಎಲ್ಲರಿಗೂ ತಿಳಿಯುವದಕ್ಕಾಗಿ, ಎಲ್ಲ ಕಡೆಗೂ ಹಲಿಗೆಗಳನ್ನು ಹಚ್ಚಬೇಕಾಗಿ ಈಗ್ಗೆ ನಿರ್ಧರಿಸಿರುವರು. ಹಳ್ಳಿ ಹಳ್ಳಿಯ ಜನರಿಗೆಲ್ಲರಿಗೂ ಈ ವಿಷಯವು ಗೊತ್ತಾಗಬೇಕೆಂಬ ಸದಿಚ್ಛೆಯಿದ್ದರೆ, ಇವರು ಎಲ್ಲ ಹಲಿಗೆಗಳನ್ನು ಕನ್ನಡದಲ್ಲಿಯೇ ಬರಿಸಬೇಕು. ಇಲ್ಲವಿದ್ದರೆ ಮರಾಟಿಯಂತೂ ಸಿದ್ಧವಿದೆ!

ಉದಕಮಂಡಲದಲ್ಲಿ ರಥೋತ್ಸವ ನಡೆಯುವ ಸಮಯದೊಳಗೆ ರಥದ ಶಿಖರವು ಎತ್ತರವಾಗಿದ್ದರಿಂದ, ಹಾದಿಯಲ್ಲಿ ಅದನ್ನು ಎಳೆಯುವಾಗ್ಗೆ ವಿದ್ಯುತ್ ತಂತಿಗಳು ಅಡ್ಡ ಬರುತ್ತವೆ. ಇದಕ್ಕಾಗಿ ಒಂದು ದಿನದ ಮಟ್ಟಿಗೆ ತಂತಿಗಳನ್ನು ತೆಗೆದು ವಿದ್ಯುತ್ ದೀಪಗಳನ್ನು ನಿಲ್ಲಿಸುವ ರೂಢಿಯೊಂದಲ್ಲಿದೆ. ಆದರೆ ರಥೋತ್ಸವದ ಸಲುವಾಗಿ ದೀಪಗಳನ್ನು ಸ್ಥಗಿತಗೊಳಿಸುವದಕ್ಕಿಂತ, ರಥದ ಶಿಖರವನ್ನೇ ಯಾಕೆ ಕಡಿಮೆ ಮಾಡಬಾರದಾಗಿ ಅಲ್ಲಿಯ ಸಾಹೇಬರ ತಂಟೆ! ಅಧಿಕಾರಿಗಳು ಎಷ್ಟು ಪ್ರಯತ್ನಿಸಿದರೂ, ಗುಡಿಯ ಚಾಲಕರರು ಶಿಖರವನ್ನು ಕಡಿಮೆ ಮಾಡಲು ಒಪ್ಪಲಿಲ್ಲ. ಬಹು ದಿನಗಳಿಂದ ನಡೆದು ಬಂದ ಪದ್ಧತಿಯಲ್ಲಿಯೂ ಹಳೆಯದಾದ ಶಿಖರದಲ್ಲಿಯೂ ಏನೂ, ವ್ಯತ್ಯಾಸವಾಗಲಾರದೆಂಬ ಗಂಡು ಉತ್ತರವು ನೀಲಗಿರಿಯ ಕನ್ನಡಿಗರಿಂದ ಬಂದಿತು. ಆ ಮೇಲೆ ಕಂಬಗಳನ್ನೇ ಏರಿಸಿ ತಂತಿಗಳನ್ನು ಮೇಲಕ್ಕೇರಿಸಬೇಕೆಂದು ನಿರ್ಧರವಾಯಿತು. ಧರ್ಮದ ವಿಷಯದಲ್ಲಿ ಯಾರಿಗೂ ಅತ್ಯಾಚಾರ ಸಲ್ಲಬಾರದೆಂಬುದನ್ನು ಮೊದಲೇ ಅರಿತುಕೊಂಡು, ಹೀಗೆ ಗೊತ್ತು ಮಾಡಿದ್ದರೆ ಎಷ್ಟು ಒಳಿತಾಗುತ್ತಿತ್ತು! ಆದರೆ ಅಧಿಕಾರ ಬಲಪ್ರಯೋಗವೆಂಬುದಿಲ್ಲ! ಅದನ್ನೂ ಪರೀಕ್ಷಿಸಿ ನೋಡಲಾಯಿತು. ನೀಲಗಿರಿ ಜಿಲ್ಲೆಯ ಕೆಳಗಿನ ಜನರು ಹೀಗೆ ಇದರಲ್ಲಿ ಧೈರ್ಯದಿಂದ, ಸರಳವೂ, ನ್ಯಾಯಯುಕ್ತವೂ ಆದ ಉತ್ತರವನ್ನು ಕೊಟ್ಟಿದ್ದಕ್ಕಾಗಿ ನಾವು ನೀಲಗಿರಿಯ ಕನ್ನಡಿಗರನ್ನು

ಅಭಿನಂದಿಸುತ್ತೇವೆ

"**ಮದ್ಯಪಾನದ ಬಗ್ಗೆ** ಒಂದು ಸರಕಾರಿ ಸಂಘವನ್ನು ರಜಿಸ್ಟರ ಮಾಡಬೇಕಾಗಿ ಮೈಸೂರ ನಗರದ ಹಲವು ಪ್ರಜೆಗಳು, ರಜಿಸ್ಟರ ಸಾಹೇಬರಿಗೆ ಕೇಳಿಕೊಳ್ಳಲು, ಅವರು ಅದಕ್ಕೆ ಅಪ್ಪಣೆಯನ್ನು ಕೊಡಲಿಲ್ಲ. ಇದು ನಿಜವೋ ಹೇಗೆಂಬುದನ್ನು 'ಮೈಸೂರ ಕ್ರಾನಿಕಲ್' ಪತ್ರದ ಸಂಪಾದಕರು ರಜಿಸ್ಟರರಿಗೆ ಪತ್ರ ಬರೆದು ಕೇಳಿದಾಗ್ಗೆ ಸಾಹೇಬರವರು - ರೀತಿ ಸಾಹೇಬರು—ಒಂದು ಮಜಾದ ಉತ್ತರವನ್ನು ಕೊಟ್ಟರು. ಮೊದಲು ಪ್ರಜೆಗಳು ವ್ಯಸನ ರಾಗಬೇಕಂತೆ! ಆ ಮೇಲೆ ಸಾಹೇಬರವರು ಔಷಧದ ಚಿಕಿತ್ಸೆ ಮಾಡುವರಂತೆ! ಸ್ವಾರ್ಥತ್ಯಾಗದಿಂದ ಜನರು ಬಾರಿ ವ್ಯಾಪಾರವನ್ನು ಹೆಚ್ಚಿಸಿ, ಅದು ನಿಜವಾಗಿಯೂ ಬಾಧಕರವಾಗಿದೆಂಬುದು [illegible]ಸಿದ್ಧ ಪಡಿಸಿದರೆ, ಆ ಸಂಸ್ಥೆಯು ರಜಿಸ್ಟರ ಮಾಡಲ್ಪಡುವದಂತೆ! 'ಅನ್ನವು ಹಸಿದವನಿಗೋ ಉಂಡು ಉಬ್ಬಿದವನಿಗೋ' ಎಂಬದಾಗಿ 'ಮೈಸೂರ ಕ್ರಾನಿಕಲ್' ಸಾಹೇಬರಿಗೆ ಪ್ರಶ್ನೆ ಹಾಕಿದೆ. ಸಾಹೇಬರು ಇದಕ್ಕೆ ಉತ್ತರ ಕೊಡುವರೋ?

ಕರ್ನಾಟಕದಲ್ಲಿಯೂ ಸ್ವರಾಜ್ಯ ಪಕ್ಷೀಯರದೊಂದು ಸಂಸ್ಥೆಯಿರಬೇಕೆಂದು ಯೋಚಿಸಿ ನಮ್ಮ ಮಂಗಳೂರಿನ ಬಂಧುಗಳು "ಕರ್ನಾಟಕ ಸ್ವರಾಜ್ಯ ಮಂಡಳಿ" ಯನ್ನು ಅಲ್ಲಿ ಸ್ಥಾಪಿಸಿರುವರು. ಸದ್ಯಕ್ಕೆ ಇದು ತಾತ್ಪೂರ್ತಿಕವಾಗಿದೆ. ಯಾಕೆಂದರೆ ಅಖಿಲ ಕರ್ನಾಟಕ ಜನರು ಸೇರಿ ಈ ಸ್ವರಾಜ್ಯ ಮಂಡಳಿಗೆ ಶಾಶ್ವತವಾದ ಮೂರ್ತಸ್ವರೂಪವನ್ನು ಇನ್ನು ಕೊಟ್ಟಿರುವದಿಲ್ಲ. ಈ ಬಗ್ಗೆ ಅಖಿಲ ಕರ್ನಾಟಕದವರ ಸಭೆಯನ್ನು ಬೇಗನೆ ಕರೆಯಬೇಕಾಗಿ ಸೂಚಿಸುತ್ತೇವೆ. ಕಾಯದೆ ಮಂಡಲಗಳ ಮುಖಾಂತರವಾಗಿ ಸರಕಾರದವರ ವಿರುದ್ಧ ಒಡಿದಾಡುವದರಲ್ಲಿ ವಿಶ್ವಾಸವಿದ್ದವರೆಲ್ಲರೂ ಒಂದೇ ಸಂಸ್ಥೆಯ ಮುಖಾಂತರವಾಗಿ ಒಡಿದಾಡುವದು ಅವಶ್ಯವಾದದ್ದು. ಸ್ವರಾಜ್ಯ ಪಕ್ಷೀಯರು ಕಾಂಗ್ರೆಸ್ಸಿನೊಳಗಿನವರು. ಆದುದರಿಂದ ಕರ್ನಾಟಕದಲ್ಲಿಯ ಕಾಂಗ್ರೆಸ್ ಸಮಿತಿಗಳ ಜನರು ಕಾಯದೇ ಮಂಡಳಗಳಲ್ಲಿ ಏಕತ್ರವಾಗಿ ಸರಕಾರದ ವಿರುದ್ಧ ಒಡಿದಾಡಲು ಈಗ್ಗೆ ಅವಸರದ ಮಾಡಿ ಕೊಟ್ಟಿದ್ದಕ್ಕಾಗಿ ನಾವು ಮಂಗಳೂರಿನ ಬಾಂಧವರನ್ನು ಅಭಿನಂದಿಸುತ್ತೇವೆ. ಮತ್ತು ಇದಕ್ಕೆ ಬೇಗನೇ ಮೂರ್ತಸ್ವರೂಪವನ್ನು ಕೊಡುವರೆಂದೂ ಆಶಿಸುತ್ತೇವೆ. ಆದರೆ ಕರ್ನಾಟಕದಲ್ಲಿಯ ಸ್ವರಾಜ್ಯ ಪಕ್ಷೀಯರು ಒಂದು ಸಂಗತಿಯನ್ನು ಲಕ್ಷ್ಯದಲ್ಲಿ ಡಬೇಕು. ಕರ್ನಾಟಕದಲ್ಲಿ ಅನೇಕ ಬಗೆಯ ಕುಂದು ಕೊರತೆಗಳಿವೆ, ಅವು ಕರ್ನಾಟಕದ ವಿಶಿಷ್ಟ ಪ್ರಶ್ನೆಗಳಾಗಿವೆ. ಅವನ್ನು ಕರ್ನಾಟಕದ ಜನರೇ ನಿವಾರಿಸಿ ಬಿಡಿಸಬೇಕೇ ಹೊರತಾಗಿ ಉಳಿದವರಿಂದ ಆಗಾಗದು ಆದಾಗಿಯೂ. (೧) ಅಖಂಡ ಕರ್ನಾಟಕ ಪ್ರಾಂತವಲ್ಲಿ

ರೇಲ್ವೇ ಬೋರ್ಡ ಸಿಮ್ಲಾ ಇವರಿಗೆ.

ಮಹಾಶಯರೇ !

ಕೆಳಗೆ ಸಹಿ ಮಾಡಿದಂಥ ಕರ್ನಾಟಕದೊಳಗಿನ ಬೇರೆ ಬೇರೆ ಭಾಗಗಳ ನಿವಾಸಿಗಳಾದ ನಾವುಗಳೆಲ್ಲ ತಮಗೆ ಅರಿಕೆಮಾಡಿಕೊಳ್ಳುವದೇನಂದರೆ, ಸಂಯುಕ್ತ ಕರ್ನಾಟಕ ಪ್ರಾಂತದಲ್ಲಿರುವ ನಮಗೆ ನಮ್ಮ ಕರ್ನಾಟಕ ನಾಡಿನಲ್ಲಿ ರೇಲ್ವೆ ಸೌಕರ್ಯಗಳು ಸಮಾಧಾನಕರವಾಗಿರುವದಿಲ್ಲ. ಸಾವಿರಾರು ಊರುಗಳಲ್ಲಿ ರೇಲ್ವೆಗಳಿರುವದಿಲ್ಲ. ಇದರಿಂದ ನಮ್ಮ ಪ್ರಾಂತದ ಜನರ ಪ್ರವಾಸಗಳೆಲ್ಲ ಬಹು ಕಷ್ಟವಾಗಿವೆ. ನಮ್ಮಲ್ಲಿಯ ವ್ಯಾಪಾರ ಉದ್ದಿಮೆಗಳಿಗೆ ಇದರಿಂದ ಬಹು ಆತಂಕವಾಗಿದೆ. ಇಷ್ಟು ದಿನಗಳ ವರೆಗೆ ಇವೆಲ್ಲ ಕಷ್ಟಗಳನ್ನು ನಾವು ಸೋಸುತ್ತಿದ್ದರೂ ಸಹ ನಮಗೆ ಸುಖಕರವಾಗುವಂಥ ಹೊಸ ರೇಲ್ವೇಗಳು ಈವರೆಗೂ ಆಗಲೊಲ್ಲವು. ಆದುದರಿಂದ ಈಗ್ಗೆ ರೇಲ್ವೆ ಬೋರ್ಡಿನವರು ಅನುಮತಿಯನ್ನು ಕೊಟ್ಟಂಥ ಕೆಳಗಿನ ರೇಲ್ವೇಗಳನ್ನು ಬೇಗನೇ ಪ್ರಾರಂಭಿಸುವಂತೆ ಏರ್ಪಾಟ ಮಾಡಬೇಕಾಗಿ ಆಗ್ರಹ ಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

(೧) ನಿಪ್ಪಾಣಿ ಹುನಗುಂದ .... (ಸದರ್ನ ಮರಾಠಾ ರೇಲ್ವೆ.)
(೨) ಬೆಳಗಾವಿ ಹುಬ್ಬಳ್ಳಿ (ಸವದತ್ತಿ ಮಾರ್ಗವಾಗಿ) .... ,,
(೩) ಹಾವೇರಿ ಹಾವನೂರ .... ,,
(೪) ಹರಿಹರ- ಕೊಟ್ಟೂರ .... ,,
(೫) ಗದಗ-ವಾಡಿ-ರಾಯಚೂರ.... .... (ನಿಝಾಂ ರೇಲ್ವೆ)
(೬) ನಂಜನಗುಡ್ಡ ವೆಟ್ಟ್ಯಾಪಾಲಿಯಮ್ .... (ಮೈಸೂರ ರೇಲ್ವೆ)

ಈ ಆರು ಹಳೆ, ಯೋಜನೆಗಳ ಹೊರ್ತಾಗಿ.

(೧) ಹುಬ್ಬಳ್ಳಿ—ಕಾರವಾರ—ಮಂಗಳೂರಿಗೂ ....
(೨) ಮೈಸೂರ ಮಡಿಕೇರಿಗೂ. ....

ಹೊಸದಾಗಿ ರೇಲ್ವೆ ಲಾಯಿನಗಳನ್ನು ಹಾಕಬೇಕಾಗಿ ನಮ್ಮೆಲ್ಲರ ಅತಿಶಯ ಕಳಕಳಿಯ ಮತ್ತು ಆತುರದ ಪ್ರಾರ್ಥನೆಯಿದೆ. ಪೂರ್ವ ಸಮುದ್ರದ ದಂಡೆಯ ಗುಂಟ ರೇಲ್ವೇ ಕಂಪನಿಯವರು ರೇಲ್ವೇ ಲಾಯಿನಗಳನ್ನು ಹಾಕಿ ಅನೇಕ ವರ್ಷಗಳಾದವು ಆದರೆ ಪಶ್ಚಿಮ ಸಮುದ್ರದಂಡೆಯ ಕಡೆಗೆ ಸಹ ನಾವು ಹೊಸ ಲಾಯಿನ್ಸಗಳನ್ನು ಹಾಕಿದರೆ, ಇತ್ತ ಕಡೆಯ ಜನರಿಗೂ ಪ್ರವಾಸಕ್ಕಾಗಿ ಬಹು ಅನುಕೂಲವಾಗುವದಲ್ಲದೇ ಕಾರವಾರ, ಮಂಗಳೂರ ಬಂದರಗಳ [illegible] ಉಪವನಗಳ ಲಾಭವನ್ನೂ ಇಲ್ಲಿಯ ಜನವೆಲ್ಲ ತೆಗೆದುಕೊಂಡು, ಕಾಗದ ಕಟ್ಟಿಗೆ ಮೊದಲಾದ ಹೊಸ ಗಿರಣಿಗಳನ್ನೂ ಬೇರೆ ವ್ಯವಸಾಯಗಳನ್ನೂ ಪ್ರಾರಂಭಿಸಲು ಅನುವಾಗುವದು. ಮುಂದೆ ಪಶ್ಚಿಮ ದಂಡೆಯ ಬಂದರು ಬಂದರುಗಳನ್ನು ತೆಗೆಯಲು ಅನುಕೂಲವಾಗಿ ಅದರಿಂದ ನಮ್ಮ ಕರ್ನಾಟಕ ಪ್ರಾಂತದ ಸಂಪದಭಿವೃದ್ಧಿಯು ತಾನೇ ಆಗುವದು.

ಭಾಷಾವಾರು ಪ್ರಾಂತರಚನೆಯನ್ನು ಮಾಡುವದಕ್ಕೆ ಸರಕಾರದ ಒಪ್ಪಿಗೆಯಿದೆ. ಅದು ಕೃತಿಯಲ್ಲಿಯೂ ಕ್ರಮೇಣ ಬರಹತ್ತಿದೆ. ಕರ್ನಾಟಕಕ್ಕಾದರೂ ಸ್ವತಂತ್ರ ಪ್ರಾಂತವು ದೊರೆಯುವದು. ನಾವು ಈಗ್ಗೆ ಸೂಚಿಸಿದ ರೇಲ್ವೆಗಳಾದರೆ ನಮ್ಮ ಕರ್ನಾಟಕ ಪ್ರಾಂತರಚನೆಯ ಕಾರ್ಯಕ್ಕೆ ಬಹು ಅನುಕೂಲವಾಗುವದು.

ಆದುದರಿಂದ ತಾವು ಇವೆಲ್ಲ ಲಕ್ಷ್ಯದಲ್ಲಿ ತಂದು, ನಮ್ಮ ಪ್ರಾರ್ಥನೆಯನ್ನು ಬೇಗನೇ ಮನ್ನಿಸಬೇಕಾಗಿ ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇವೆ.

ಇತಿ. ತಮ್ಮ ವಿಧೇಯರಾದ.

ನಂಬರ.	ಪೂರ್ಣ ಹೆಸರು ಮತ್ತು ವಿಳಾಸ.	ಉದ್ಯೋಗ.	ಸಹಿ.
೧			
೨			
೩			

ವಿನಂತಿಯು.

ಈ ಮೊದಲೇ ಪ್ರಾರ್ಥಿಸಿದಂತೆ ೬ ನೇ ಸಂಚಿಕೆಯು ವ್ಹಿ. ಪಿ. ಯಿಂದ ಕಳಿಸಲ್ಪಟ್ಟಿದೆ ಈವಾರದಲ್ಲಿ ೧೦೦೦ ಜನರಿಗೆ ಮಾತ್ರ ವ್ಹಿ. ಪಿ. ಕಳಿಸಿರುವೆವು ಈ ವರೆಗೆ ಯಾರು ಸಂಚಿಕೆಗಳನ್ನು ಸ್ವೀಕರಿಸಿರುವರೋ ಯಾರು ತಮಗೆ ಸಂಚಿಕೆಗಳು ಬೇಡವೆಂಬುದಾಗಿ ಏನೂ ತಿಳಿಸಲಿಲ್ಲವೋ ಅಂಥವರಿಗೆಲ್ಲ ವ್ಹಿ. ಪಿ. ಕಳಿಸಲ್ಪಟ್ಟಿವೆ. ವ್ಹಿ. ಪಿ. ತರಿಸಿಕೊಂಡು ನಿರಾಕರಿಸಿ ನಮಗೆ ಹಾನಿಗೆ ಗುರಿ ಮಾಡಬಾರದಾಗಿ ಪ್ರಾರ್ಥನೆ. ಈಗಲಾದರೂ "ಕನ್ನಡಿಗನ" ದರ್ಶನದ ಆವಶ್ಯಕತೆಯಿಲ್ಲದವರು ದಯವಿಟ್ಟು ತಮ್ಮ ಕಡೆಗೆ ಎರುವ ಸಂಚಿಕೆಗಳನ್ನು ನಿರಾಕರಿಸಿದರೆ, ನಾವು ಅವರಿಗೆಲ್ಲ ಕೃತಜ್ಞರಾಗುವೆವು.

ವ್ಯವಸ್ಥಾಪಕ ಕನ್ನಡಿಗ ಬಾಗಲಕೋಟೆ.

ಈ ಪತ್ರಿಕೆಯು ಮಂಗಳವೇಡೆ ರಾಘವೇಂದ್ರರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿ [illegible] ... ಮುದ್ರಣಾಲಯದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿದೆ. ಪ್ರತಿ ೨೦೦೦

ರ. ನಂ. ಬಿ. ೧೯೪೩

ವಾ॥ ಚಂದಾ ೧—೩—೦ ಮಾತ್ರ!

ಕನ್ನಡಿಗ.

ಜಯಕರ್ನಾಟಕ

(ಇದರಲ್ಲಿ ಕನ್ನಡ ಸಾಹಿತ್ಯದ ಸಂಪದವು ನಲಿದಾಡುತಿದೆ)

ವಾ॥ (ಪ್ರತಿ ...) — ...

ಸಂಪಾದಕರು— ಮಂಗಳೂರು ... ರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಮಂಗಳೂರು ... ವೈಶಾಖ ಶುದ್ಧ ... ತಾ॥ ... | ಸಂಚಿಕೆ ೭

ಸಂಪಾದಕರ ಧ್ವನಿ.

ಎದ್ದರೆ ಕನ್ನಡ ಕುಳಿತರೆ ಕನ್ನಡ ನುಡಿದರೆ ಕನ್ನಡವು।
ಹೃದಯವು ಕನ್ನಡ ಉದಯವು ಕನ್ನಡ-ಕನ್ನಡ-ಕನ್ನಡವು।
ಕನಸು ಕೊನಸಿನೊಳು ಕನ್ನಡ ಕನ್ನಡ ನಿದ್ದೆಯು ಕನ್ನಡವು।
ತಿನಸು ಕನ್ನಡವು ಜೀವಿತ ಕನ್ನಡ ಎಲ್ಲವು ಕನ್ನಡವು॥
—ಕೈ. ನಗರ ಕವಿ

ಬೆಳಗಾವಿಯ ಜಿಲ್ಲಾ ಲೋಕಲ್ ಬೋರ್ಡಿನವರು, ಭಾವಿ, ಕೆರೆ, ಧರ್ಮಶಾಲೆ ಮೊದಲಾದವುಗಳಲ್ಲಿ ಬೇಕಾದವರು ಮತ ಜಾತಿಗಳ ಭೇದಭಾವವಿಲ್ಲದೇ ಉಪಯೋಗಿಸುವುದೆಂಬುದಾಗಿ ಒಂದಕ್ಕೆ ಒಂದು ಠರಾವನ್ನು ಮಾಡಿರುವರು. ಅದು ಎಲ್ಲರಿಗೂ ತಿಳಿಯುವದಕ್ಕಾಗಿ, ಎಲ್ಲ ಕಡೆಗೂ ಹಲಿಗೆಗಳನ್ನು ಹಚ್ಚಬೇಕಾಗಿ ಈಗ್ಗೆ ನಿರ್ಧರಿಸಿರುವರು. ಹಳ್ಳಿಹಳ್ಳಿಯ ಜನರಿಗೆಲ್ಲರಿಗೂ ಈ ವಿಷಯವು ಗೊತ್ತಾಗಬೇಕೆಂಬ ಸದಿಚ್ಛೆಯಿದ್ದರೆ, ಇವರು ಎಲ್ಲ ಹಲಿಗೆಗಳನ್ನು ಕನ್ನಡದಲ್ಲಿಯೇ ಬರಿಸಬೇಕು. ಇಲ್ಲವಿದ್ದರೆ ಮರಾಟೆಯಂತೂ ಸಿದ್ಧವಿದೆ!

ಉದಕಮಂಡಲದಲ್ಲಿ ರಥೋತ್ಸವ ನಡೆಯುವ ಸಮಯದೊಳಗೆ ರಥದ ಶಿಖರವು ಎತ್ತರವಾಗಿದ್ದುದರಿಂದ, ಹಾದಿಯಲ್ಲಿ ಅದನ್ನು ಎಳೆಯುವಾಗ್ಗೆ ವಿದ್ಯುತ್ ತಂತಿಗಳು ಅಡ್ಡ ಬರುತ್ತವೆ. ಇದಕ್ಕಾಗಿ ಒಂದು ದಿನದ ಮಟ್ಟಿಗೆ ತಂತಿಗಳನ್ನು ತೆಗೆದು ವಿದ್ಯುತ್ ದೀಪಗಳನ್ನು ನಿಲ್ಲಿಸುವ ರೂಢಿಯೊಂದಲ್ಲಿದೆ. ಆದರೆ ರಥೋತ್ಸವದ ಸಲುವಾಗಿ ದೀಪಗಳನ್ನು ಸ್ಥಗಿತಗೊಳಿಸುವದಕ್ಕಿಂತ, ರಥದ ಶಿಖರವನ್ನೇ ಯಾಕೆ ಕಡಿಮೆ ಮಾಡಬಾರದಾಗಿ ಅಲ್ಲಿಯ ಸಾಹೇಬರ ತಂಟೆ! ಅಧಿಕಾರಿಗಳು ಎಷ್ಟು ಪ್ರಯತ್ನಿಸಿದರೂ, ಗುಡಿಯ ಪಾಲಕರು ಶಿಖರವನ್ನು ಕಡಿಮೆ ಮಾಡಲು ಒಪ್ಪಲಿಲ್ಲ. ಬಹು ದಿನಗಳಿಂದ ನಡೆದು ಬಂದ ಪದ್ಧತಿಯಲ್ಲಿಯೂ ಪವಿತ್ರವಾದ ಶಿಖರದಲ್ಲಿಯೂ ಏನೂ ವ್ಯತ್ಯಾಸವಾಗಲಾರದೆಂಬ ಗಂಡು ಉತ್ತರವು ನೀಲಗಿರಿಯ ಕನ್ನಡಿಗರಿಂದ ಬಂದಿತು. ಆ ಮೇಲೆ ಕಂಬಗಳನ್ನೇ ಏರಿಸಿ ತಂತಿಗಳನ್ನು ಮೇಲಕ್ಕೇರಿಸಬೇಕೆಂದು ನಿರ್ಧರವಾಯಿತು. ಧರ್ಮದ ವಿಷಯದಲ್ಲಿ ಯಾರಿಗೂ ಬಗ್ಗುವುದಿಲ್ಲವೆಂಬುದನ್ನು ಮೊದಲೇ ಅರಿತುಕೊಂಡು, ಹೀಗೆ ಮಾಡಿದ್ದರೆ ಎಷ್ಟು ಒಳಿತಾಗುತ್ತಿತ್ತು! ಆದರೆ ಅಧಿಕಾರ ಬಲವೆಂದು ಏನಿಲ್ಲ! ಅದನ್ನು ಪರೀಕ್ಷಿಸಿ ದಂತಾಯಿತು. ನೀಲಗಿರಿ ಜಿಲ್ಲೆಯ ಕನ್ನಡ ಜನರು ಹೀಗೆ ಇದರಲ್ಲಿರು— ಧೈರ್ಯದಿಂದ, ಸರಳವೂ, ನ್ಯಾಯಯುಕ್ತವೂ ಆದ ಉತ್ತರವನ್ನು ಕೊಟ್ಟದ್ದಕ್ಕಾಗಿ ನಾವು ನೀಲಗಿರಿಯ ಕನ್ನಡಿಗರನ್ನು ಅಭಿನಂದಿಸುತ್ತೇವೆ.

"ಕುದುರೆಯ ಬಗ್ಗೆ ಒಂದು ಸಹಕಾರಿ ಸಂಘವನ್ನು ರಜಿಸ್ಟರ ಮಾಡಬೇಕಾಗಿ ಮೈಸೂರ ನಗರದ ಹಲವು ಪ್ರಜೆಗಳು, ರಜಿಸ್ಟರ ಸಾಹೇಬರಿಗೆ ಕೇಳಿಕೊಂಡರು, ಅವರು ಅದಕ್ಕೆ ಅಪ್ಪಣೆಯನ್ನು ಕೊಡಲಿಲ್ಲ. ಏಕೆ ನಿರಾಕರಿಸಿದರೆಂಬುದನ್ನು 'ಮೈಸೂರ ಕ್ರಾನಿಕಲ್' ಪತ್ರದ ಸಂಪಾದಕರು ರಜಿಸ್ಟರರಿಗೆ ಪತ್ರ ಬರೆದು ಕೇಳಿದಾಗ್ಗೆ ಸಾಹೇಬರವರು— ರಿಜಿಸ್ಟ್ರಾರ ಸಾಹೇಬರು—ಒಂದು ವಿಚಿತ್ರ ಉತ್ತರವನ್ನು ಕೊಟ್ಟರು. ಮೊದಲು ಪ್ರಜೆಗಳು ಪುಷ್ಟರಾಗಬೇಕಂತೆ! ಆ ಮೇಲೆ ಸಾಹೇಬರವರು ಔಷಧದ ಚಿಕಿತ್ಸೆ ಮಾಡುವರಂತೆ! ಸ್ವಾರ್ಥತ್ಯಾಗದಿಂದ ಜನರು ಈ ವ್ಯಾಪಾರವನ್ನು ಬೆಳೆಸಿ, ಅದು ನಿಜವಾಗಿಯೂ ಬಾಧಕರವಾಗಿದೆಂಬುದನ್ನು ಸಿದ್ಧಪಡಿಸಿದರೆ, ಆ ಸಂಸ್ಥೆಯು ರಜಿಸ್ಟರ ಮಾಡಲ್ಪಡುವದಂತೆ! 'ಅನ್ನವು ಹಸಿದವನಿಗೋ ಉಂಡು ಉಬ್ಬಿದವನಿಗೋ' ಎಂಬುದಾಗಿ 'ಮೈಸೂರ ಕ್ರಾನಿಕಲ್' ಸಾಹೇಬರಿಗೆ ಪ್ರಶ್ನೆ ಹಾಕಿದೆ. ಸಾಹೇಬರು ಇದಕ್ಕೆ ಉತ್ತರ ಕೊಡುವರೋ?"

ಕರ್ನಾಟಕದಲ್ಲಿಯೂ ಸ್ವರಾಜ್ಯ ಪಕ್ಷೀಯರದೊಂದು ಸಂಸ್ಥೆಯಿರಬೇಕೆಂದು ಯೋಚಿಸಿ ನಮ್ಮ ಮಂಗಳೂರಿನ ಬಂಧುಗಳು "ಕರ್ನಾಟಕ ಸ್ವರಾಜ್ಯ ಮಂಡಳಿ" ಯನ್ನು ಅಲ್ಲಿ ಸ್ಥಾಪಿಸಿರುವರು. ಸದ್ಯಕ್ಕೆ ಇದು ತಾತ್ಪೂರ್ತಿಕವಾಗಿದೆ. ಯಾಕೆಂದರೆ ಅಖಿಲ ಕರ್ನಾಟಕ ಜನರು ಸೇರಿ ಈ ಸ್ವರಾಜ್ಯ ಮಂಡಳಿಗೆ ಶಾಶ್ವತವಾದ ಮೂರ್ತಸ್ವರೂಪವನ್ನು ಇನ್ನು ಕೊಟ್ಟಿರುವದಿಲ್ಲ. ಈ ಬಗ್ಗೆ ಅಖಿಲ ಕರ್ನಾಟಕದವರ ಸಭೆಯನ್ನು ಬೇಗನೆ ಕರೆಯಬೇಕಾಗಿ ಸೂಚಿಸುತ್ತೇವೆ. ಕಾಯದೆ ಮಂಡಲಗಳ ಮುಖಾಂತರವಾಗಿ ಸರಕಾರದವರ ವಿರುದ್ಧ ಹಿಡಿದಾಡುವದರಲ್ಲಿ ವಿಶ್ವಾಸವಿದ್ದವರೆಲ್ಲರೂ ಒಂದೇ ಸಂಸ್ಥೆಯ ಮುಖಾಂತರವಾಗಿ ಹಿಡಿದಾಡುವದು ಅವಶ್ಯವಾದದ್ದು. ಸ್ವರಾಜ್ಯ ಪಕ್ಷೀಯರು ಕಾಂಗ್ರೆಸ್ಸಿನೊಳಗಿನವರು. ಆದುದರಿಂದ ಕರ್ನಾಟಕದಲ್ಲಿಯ ಕಾಂಗ್ರೆಸ್ ಸಮಿತಿಗಳ ಜನರು ಕಾಯದೆ ಮಂಡಳಗಳಲ್ಲಿ ಏಕತ್ರವಾಗಿ ಸರಕಾರದ ವಿರುದ್ಧ ಹಿಡಿದಾಡಲು ಈಗ್ಗೆ ಅಸ್ಪದ ಮಾಡಿ ಕೊಟ್ಟದ್ದಕ್ಕಾಗಿ ನಾವು ಮಂಗಳೂರಿನ ಬಾಂಧವರನ್ನು ಅಭಿನಂದಿಸುತ್ತೇವೆ. ಮತ್ತು ಇದಕ್ಕೆ ಬೇಗನೇ ಮೂರ್ತಸ್ವರೂಪವನ್ನು ಕೊಡುವರೆಂದೂ ಆಶಿಸುತ್ತೇವೆ. ಆದರೆ ಕರ್ನಾಟಕದಲ್ಲಿಯ ಸ್ವರಾಜ್ಯ ಪಕ್ಷೀಯರು ಒಂದು ಸಂಗತಿಯನ್ನು ಲಕ್ಷ್ಯದಲ್ಲಿ ಡಬೇಕು. ಕರ್ನಾಟಕದಲ್ಲಿ ಅನೇಕ ಬಗೆಯ ಕುಂದು ಕೊರತೆಗಳಿದ್ದು, ಅವು ಕರ್ನಾಟಕದ ವಿಶಿಷ್ಟ ಪ್ರಶ್ನೆಗಳಾಗಿವೆ. ಅವನ್ನು ಕರ್ನಾಟಕದ ಜನರೇ ನಿವಾರಿಸಿ ಬಿಡಿಸಬೇಕಾದ್ದು ಜರೂರಾಗಿ ಬೇಕಾದವರಿಂದ ಅವಾಗಿನ್ನ ಅರಿಯಬೇಕು. (೧) ಅಖಂಡ ಕರ್ನಾಟಕ ಪ್ರಾಂತದಲ್ಲಿ

ಎಲ್ಲ ಕಡೆಗೂ ರೈಲ್ವೇಯ ಅನಾನುಕೂಲತೆಯಿಲ್ಲದಂತೆ ಮಾಡುವದು. (೨) ಕರ್ನಾಟಕಕ್ಕೆ ಸ್ವತಂತ್ರವಾದ ಬಂದರವನ್ನು ದೊರಕಿಸುವದು. (೩) ಕರ್ನಾಟಕದ ಬೇರೆ ಬೇರೆ ಪಠ್ಯ ಪುಸ್ತಕಗಳನ್ನು ತೆಗೆದುಹಾಕಿ ಅಖಂಡ ಕರ್ನಾಟಕಕ್ಕೆಲ್ಲ ಒಂದೇ ಬಗೆಯ ಕ್ರಮಿಕ ಪುಸ್ತಕಗಳಿರುವಂತೆ ಮಾಡುವದು. (೪) ಕರ್ನಾಟಕದ ಗಡಿನಾಡುಗಳಲ್ಲಿಯ ತಾಲೂಕಗಳಲ್ಲಿ ಕನ್ನಡ ಶಾಲೆಗಳೂ, ಕೋರ್ಟಿನಲ್ಲಿ ಕನ್ನಡ ಭಾಷೆಗೆ ಮಾನವೂ ಇರದ್ದರಿಂದ ಅಲ್ಲಿಯ ಕನ್ನಡಿಗರಿಗೆ ಈ ಅನುಕೂಲತೆಗಳನ್ನು ಒದಗಿಸಿಕೊಡುವದು (೫) ಗಡಿನಾಡಿನಲ್ಲಿಯ ಕರ್ನಾಟಕಭಾಗಗಳನ್ನು ನೆರೆಹೊರೆಯ ಅನ್ಯಭಾಷೆಗಳ ವಶದಿಂದ ಮುಕ್ತ ಮಾಡಿ, ಅವನ್ನು ಕರ್ನಾಟಕದ ಭಾಗಗಳಿಗೆ ಕೂಡಲೇ ಜೋಡಿಸುವಂತೆ ಮಾಡುವದು. (೬) ಕರ್ನಾಟಕಕ್ಕೆ ಒಂದು ಸ್ವತಂತ್ರ ವಿಶ್ವವಿದ್ಯಾಲಯವು ಇರುವಂತೆ ಪ್ರಯತ್ನಿಸುವದು. ಮತ್ತು ಇವೆಲ್ಲಕ್ಕೆ ಶಿಖರಭೂತವಾಗುವಂತೆ (೭) ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತಿಕ ಸರಕಾರವನ್ನು ದೊರಕಿಸುವದಕ್ಕೆ ಕೂಡಲೇ ಚಳವಳಿಯನ್ನು ಎಬ್ಬಿಸುವದು. ಇಂತಹ ಅನೇಕ ಪ್ರಶ್ನೆಗಳನ್ನು ಕಾಯದೇ ಮಂಡಳಗಳ ಮುಖಾಂತರವಾಗಿ ಬಿಡಿಸಲು ಬರುವದು. ಆದುದರಿಂದ ಕರ್ನಾಟಕದೊಳಗಿನ ಸ್ವರಾಜ್ಯ ಪಕ್ಷೀಯರು ಈ ವಿಷಯಗಳನ್ನೆಲ್ಲ ತಮ್ಮ ಸಂಗಡದ ಪ್ರಶ್ನೆಗಳನ್ನು ಮಾಡಿಕೊಂಡರೆ ಮಾತ್ರ ಕರ್ನಾಟಕದ ನಿಜವಾದ ಮತ್ತು ಅತ್ಯವಶ್ಯವಿದ್ದ ಸೇವೆಯನ್ನು ಮಾಡಿದಂತಾಗುವದು. ಈ ಮೇಲಿನ ವಿಷಯಗಳ ಬಗ್ಗೆ ಕರ್ನಾಟಕದಲ್ಲಿ ಮತಭೇದ ಏನೂ ಕಾರಣವಿಲ್ಲ. ಇದರಿಂದ ಬ್ರಾಹ್ಮಣೇತರ ಮುಖಂಡರು ಸಹ ಕಾಯದೇ ಮಂಡಳಗಳಲ್ಲಿ ಸ್ವರಾಜ್ಯ ಪಕ್ಷೀಯರ ಸಂಗಡ ಸರಕಾರದ ವಿರುದ್ಧವಾಗಿ ಒದರಾಡಲು ಅವಕಾಶವಾಗುವದು. ಹೀಗೆ ಕರ್ನಾಟಕದ ವಿಶಿಷ್ಟ ಪ್ರಶ್ನೆಗಳ ವಿಷಯವಾಗಿ ಕರ್ನಾಟಕದ ಬೇರೆ ಬೇರೆ ರಾಜಕೀಯ ಪಂಗಡದವರೆಲ್ಲ ಕೂಡಿಕೊಂಡು ಕೆಲಸ ಮಾಡಿದರೆ, ಏಕತ್ರವಾಗಿ ಎಲ್ಲರಿಗೂ ಕೆಲಸ ಮಾಡಲು ಅನುಕೂಲವಾಗಿ, ಒಂದು ಪಕ್ಷದವರ ಬಗ್ಗೆ ಇನ್ನೊಂದು ಪಕ್ಷದವರಿಗಿದ್ದ ಮತ್ಸರವು ದೂರಾಗುವ ಪ್ರಸಂಗಗಳು ಬರುವವು. ಈಗ್ಗೆ ಬ್ರಾಹ್ಮಣೇತರ ಪಕ್ಷದವರಿಗೂ ಕಾಂಗ್ರೆಸ್ಸಿನವರಿಗೂ ಕೂಡಿ ಕೆಲಸ ಮಾಡುವ ಪ್ರಸಂಗಗಳಿಲ್ಲದ್ದರಿಂದ ಒಬ್ಬೊಬ್ಬರಲ್ಲಿ ವಿಚಾರವಿನಿಮಯಕ್ಕೆ ಸಹ ಆಸ್ಪದವಿಲ್ಲದಾಗಿದೆ. ಕರ್ನಾಟಕದ ವಿಶಿಷ್ಟ ಪ್ರಶ್ನೆಗಳನ್ನು ಎಲ್ಲರೂ ಕೂಡಿ ವಿಚಾರಿಸುವದರಿಂದ ಈ ಕೊರತೆಯೂ ಇಲ್ಲದಂತಾಗಿ, ಒಬ್ಬರ ಮನಸ್ಸನ್ನೊಬ್ಬರು ತಿಳಿಯಕೊಳ್ಳಲು ಆಸ್ಪದ ದೊರೆತು, ಈಗಿದ್ದ ಮತಭೇದಗಳು ಅಳಿಯಲು ಮಾರ್ಗವಾಗುವದು. ಆದುದರಿಂದ ಕರ್ನಾಟಕ ಸ್ವರಾಜ್ಯ ಪಕ್ಷೀಯರು ಈ ಮಹತ್ವದ ವಿಷಯವನ್ನು ಅವಶ್ಯವಾಗಿ ವಿಚಾರಿಸಿ ತಮ್ಮ ಪ್ರಾಂತಿಕ ಕಾರ್ಯಕ್ರಮವನ್ನು ಗೊತ್ತುಪಡಿಸಬೇಕು.

ಪ್ರಾಣಸಂಕಟವು

ಕಳೆದ ವಾರದಲ್ಲಿ ಪ್ರಸಿದ್ಧಪಡಿಸಿದಂತೆ ಸಂಪುಟ ೬ ನೇ ಸಂಚಿಕೆಯು ೧೦೦೦ ವಿ. ಪಿ. ಕಳಿಸಬೇಕಾಗಿತ್ತು. ಅದಕ್ಕೆ ಎಲ್ಲ ವ್ಯವಸ್ಥೆ ಮಾಡಿ, ಪೋಸ್ಟ ಆಫೀಸಿಗೆ ತಿಳಿಸಲು. ಅವರು ಬಾಗಲಕೋಟೆಯಂಥ ಸ್ಥಳದಲ್ಲಿ ೪ ಸಾವಿರ ಬಿಡಿ, ೧ ಸಾವಿರ ಪ್ರತಿಗಳನ್ನು ಏಕಕಾಲಕ್ಕೆ ವಿ. ಪಿ. ಮಾಡುವದು ಅಶಕ್ಯವೆಂದು ಹೇಳಿದರು. ಬಹಳವಾದರೆ ಪ್ರತಿದಿನಕ್ಕೆ ೩೦ ಪ್ರತಿಗಳನ್ನು ವಿ. ಪಿ. ಮಾಡುವೆವೆಂದು ವಚನಕೊಟ್ಟಿರುವರು. ಇದಾದರೂ 'ಕನ್ನಡಿಗನಿಗೆ' ಉಪಕಾರವೇನು ಮಾಡುವರು. ಯಾಕೆಂದರೆ ಚಂದಾದಾರರಿಂದ ವಿಶ್ವಾಸಪೂರ್ಣ ಗ್ರಾಹಕ ಬೇಡಿಕೆಗಳು ('Bonafide requests') ಇಲ್ಲದೆ ವಿ. ಪಿ. ಯನ್ನು ಸ್ವೀಕರಿಸುವದು ಅಥವಾ ನಿರಾಕರಿಸುವದು. ಪೋಸ್ಟ ಅಧ್ಯಕ್ಷನವರ ಅಧಿಕಾರದಲ್ಲಿದೆ. ಆದುದರಿಂದ ೪೦೦೦ ಜನರಿಗೆ ವಿ. ಪಿ. ಮಾಡಬೇಕೆಂದರೆ ೪೦೦೦ ಚಂದಾದಾರರ ಪತ್ರಗಳಿಲ್ಲವೆಂದಾಗಿ ಪ್ರಶ್ನೆ ಹೊರಡುವದು. ನಾವು ಕನ್ನಡ ನಾಡಿನ ಅಭಿಮಾನಿಶಾಲಿಗಳಾದ ಜನರ ಯಾದಿಯನ್ನು ಜಾಗರೂಕತೆಯಿಂದ ಸಿದ್ಧಪಡಿಸಿ, ಅವರಿಗೆಲ್ಲ ಸಂಚಿಕೆಗಳನ್ನು ಕಳಿಸುತ್ತಿರುವೆವೆಂಬುದನ್ನು ನಮ್ಮ ವಾಚಕರೆಲ್ಲ ಬಲ್ಲರು. ಈ ಅಭಿಮಾನಿಶಾಲಿಗಳಿಂದ ಪತ್ರಗಳ ಆಶೆಯಿಲ್ಲದೇ ನಾವು ವಿಶ್ವಾಸದಿಂದ ೧೧ ತಿಂಗಳಿಂದ ಸಂಚಿಕೆಗಳನ್ನು ಕಳುಹಿಸುತ್ತಿರುವೆವು. ಅವನ್ನು ನಮ್ಮ ವಾಚಕರು ವಾತ್ಸಲ್ಯದಿಂದ ಸ್ವೀಕರಿಸುತ್ತಿರುವರು. ಇದರ ಹೊರ್ತಾಗಿ ನಾವು ಹೆಚ್ಚಿನ ಆಧಾರವನ್ನು ಕೋರಿಸಲಾರೆವು. ಆದರೆ ಇದು ಪೋಸ್ಟಿನವರಿಗೆ ಸಮಾಧಾನಕರವಾಗದು. ಆದುದರಿಂದ ಇತ್ತಿಂದ ವಿ. ಪಿ. ಕಳಿಸುವದು ಅಸಾಧ್ಯದ ಮಾತಾಗಿದೆ. ಪ್ರತಿದಿನ ೩೦ ವಿ. ಪಿ. ಯಂತೆ ೪೦೦೦ ಪ್ರತಿಗಳನ್ನು ವಿ. ಪಿ. ಮಾಡಬೇಕಾದರೆ ಅಜಮಾಸು ೫ ೬ ತಿಂಗಳು ಬೇಕಾಗುವವು. ಹೀಗೆ ೫ ೬ ತಿಂಗಳ ವರೆಗೆ ಚಂದಾದಾರರಿಂದ ಹಣ ಬರದಿದ್ದರೆ, '**ಕನ್ನಡಿಗ**' **ನು ಪ್ರಾಣಸಂಕಟದಲ್ಲಿ ಬೀಳುವನೆಂಬದನ್ನು ವಾಚಕರು ತಿಳಿದುಕೊಂಡರಲಿಕ್ಕೆ ಸಾಕಿದೆ.** ಪ್ರತಿ ವಾರದಲ್ಲಿಯೂ ೬೨ ರೂ. ಅಂಚೆ ವೆಚ್ಚ! ೬೫ ರೂ. ಕಾಗದ! ಇದರ ಹೊರ್ತಾಗಿ, ಮುದ್ರಣ! ಲೇಖಕರಿಗೆ ವೇತನ!! ಆ ಮೇಲೆ, ಕಾರಕೂನ, ನೌಕರ ಚಾಕರ ಮೊದಲಾದ ವೆಚ್ಚಗಳು ಇವೆಲ್ಲ! ಸೇರಿ **ಪ್ರತಿವಾರಕ್ಕೆ ೧೬೦ ರೂಪಾಯಿ** ವೆಚ್ಚ. ಅಂದರೆ ಪ್ರತಿ ತಿಂಗಳಲ್ಲಿಯೂ ೬೪೦ ರೂ ವೆಚ್ಚ ತಗಲುವದು. ಈಗಾಗಲೇ ೨ ತಿಂಗಳುಗಳಾಗುತ್ತ ಬಂದವು. ಇವನ್ನೆಲ್ಲ ವಾಚಕರು ಲಕ್ಷ್ಯದಲ್ಲಿ ತಂದು, "ಕನ್ನಡಿ"ಗನು ವಾರ್ಷಿಕ ಚಂದಾ ಒಂದೇ ಒಂದು ರೂಪಾಯಿ (ಅಂಚೆ ವೆಚ್ಚ ೧೩ ಆಣೆ) ಇಟ್ಟು. ಪ್ರತಿಫಲದಾಶೆಯಿಲ್ಲದೇ, ಕನ್ನಡಿಗರ ಸೇವೆಯಲ್ಲಿಯೇ ನಿರತನಾಗಿರುವನೆಂಬದನ್ನು ಕಣ್ಣು ಮುಂದಿಟ್ಟುಕೊಂಡು, ಈ ಸಂಚಿಕೆಯು ಕೈ ಸೇರಿದೊಡನೆಯೇ, ವಿಳಂಬ ಮಾಡದೇ, ತಾವೇ, ೧ ೧೩ ೦ ಮನಿಯಾರ್ಡರ ಮಾಡಿದರೆ, ಇತ್ತ 'ಕನ್ನಡಿಗ'ನ ಪ್ರಾಣಸಂಕಟವನ್ನು ದೂರ ಮಾಡಿದ ಶ್ರೇಯಸ್ಸಿಗೆ ಪಾತ್ರರಾಗುವರು. ಅತ್ತ ವಿನಾಕಾರಣವಾಗಿ ತಮ್ಮ ಮೇಲೆ ಬರುವ ೪ ಆಣೆ ವಿ. ಪಿ. ವೆಚ್ಚವನ್ನು ಚಂದಾದಾರರು ಉಳಿಸಿಕೊಳ್ಳುವರು. ಹೀಗಾಗಿ ಇದರಲ್ಲಿ ಇಬ್ಬರಿಗೂ ಸುಖವಿದೆ. ಆದುದರಿಂದ ಇದೇ ಪದ್ಧತಿಯನ್ನೇ ಚಂದಾದಾರರು ಕೂಡಲೇ ಕೃತಿಯಲ್ಲಿ ತಂದು ನಮ್ಮ ಮೇಲೆ ಉಪಕಾರ ಮಾಡಬೇಕಾಗಿ ಸವಿನಯವಾಗಿ ಪ್ರಾರ್ಥಿಸುತ್ತೇವೆ.

ಇನ್ನು "ಕನ್ನಡಿಗ"ನ ೪೦ ಸಂಚಿಕೆಗಳನ್ನು ತೆಗೆದುಕೊಂಡು ಸಂಪೂರ್ಣ ಒಂದು ವರ್ಷದಲ್ಲಿ ೧-೧೩-೦ ಯಾರಿಗೆ ಭಾರವಾಗುವದೋ ಅಥವಾ ಯಾರಿಗೆ "ಕನ್ನಡಿಗ"ನ ಭೆಟ್ಟಿಯ ಅವಶ್ಯಕತೆಯೇ ಇಲ್ಲವೋ ಅವರು ಮಾತ್ರ ತಮ್ಮ ಕಡೆಗೆ ಬರುವಂಥ "ಕನ್ನಡಿಗ"ನ ಸಂಚಿಕೆಗಳನ್ನು ಒಡೆಯದೇ, ಅವನ್ನೆಲ್ಲ ನಿರಾಕರಿಸಿ, ನಮ್ಮ ಕಡೆಗೆ ಕಳಿಸಿದರೆ, ಅವರಿಗೂ ಸಹ ನಾವು ಉಪಕೃತರಾಗುವೆವು.

"ಕನ್ನಡ ನವಜೀವನ"ದ ಹಳೆಯ ಚಂದಾದಾರರಿಗೆ ಈಗಾಗಲೇ ವಿ. ಪಿ. ಕಳಿಸಲ್ಪಟ್ಟಿವೆ:-

ಇವರು ದಯವಿಟ್ಟು ಮನಿಯಾರ್ಡರ ಮಾಡಬಾರದು. ಉಳಿದವರೆಲ್ಲ ಬೇಗನೆ ತಮ್ಮ ಚಂದಾ ಹಣವನ್ನು ಮನಿಯಾರ್ಡರದಿಂದ ಸಲ್ಲಿಸಬೇಕಾಗಿ ಪುನಃ ಪ್ರಾರ್ಥಿಸುತ್ತೇವೆ. ಸೂಜ್ಞರೂ, ಅಭಿಮಾನಿಶಾಲಿಗಳೂ ಆದ ಕನ್ನಡಿಗರಲ್ಲಿ—ನಮ್ಮ ಮುದ್ದು ಕನ್ನಡಿಗರಲ್ಲಿ—ಬೇಗಿಕೊಳ್ಳತಕ್ಕದ್ದ ಸ್ವಲ್ಪ ಎದೆಬಿಚ್ಚಿ ಬೇಡಿಕೊಂಡಿರುವೆವು. ಪಕ್ಷದಿಂದ ಹುಸ್ಸಾಗಿ ಬರೆಯುವದೇನಿದೆ?

ಕನ್ನಡಿಗರೇ! ಕನ್ನಡಿಗರ ಜೀವವೆ, ಅಭಿಮಾನವೆಂಬ 'ಕನ್ನಡಿಗ'ನನ್ನು ಆದರಿಸಬೇಕು!

ಶ್ರೀ ಎಲ್ಲಮ್ಮನ ದೇವಸ್ಥಾನವು

ಬಸ್ತಿಯೊ? ವಿಹಾರವೋ?

ಸವದತ್ತಿಯ ಸಮೀಪದಲ್ಲಿರುವ ಶ್ರೀಎಲ್ಲಮ್ಮ ಅಥವಾ ರೇಣುಕಾಂಬೆಯ ದೇವಸ್ಥಾನವು ಉತ್ತರ ಕರ್ನಾಟಕಕ್ಕೇ ಪ್ರಖ್ಯಾತವಾಗಿದೆ. ಪ್ರತಿವರ್ಷ ಮೂರುಸಾರೆ ದೊಡ್ಡ ಜಾತ್ರೆ ಕೂಡುವದಲ್ಲದೆ ನಿತ್ಯವಲ್ಲಿಯೂ ಹಲವು ಯಾತ್ರಿಕರು ದರ್ಶನಕ್ಕೆ ಬರುತ್ತಿರುತ್ತಾರೆ. ಇಲ್ಲಿಯ ಯಾತ್ರಿಕರು ಉತ್ತರ ಕರ್ನಾಟಕದ ಅಷ್ಟು ಕಡೆಗಳವರೇ ಇರುವದರಿಂದ ಇವಳು ಉತ್ತರ ಕರ್ನಾಟಕ ದೇವಿಯೆಂದೂ ಹೇಳಬಹುದು.

ಶ್ರೀರೇಣುಕಾದೇವಿಯ ಪುಣ್ಯಪ್ರಭಾವವು ಉತ್ತರ ಕರ್ನಾಟಕದ ಏಕೀಕರಣ ಕಾರ್ಯವನ್ನು (ವಿನಾಶಕ ಕಾರಣಗಳನ್ನು ಲೆಕ್ಕಿಸದೇ) ಅವ್ಯಾಹತವಾಗಿ ನಡೆಸಿರುವದಲ್ಲದೆ, ಒಂದು ಕಾಲಕ್ಕೆ ಕರ್ನಾಟಕದ ಸಜೀವ ಅಂಗಗಳಾಗಿದ್ದ ಅದರ ನಮ್ಮ ದುರ್ದೈವದಿಂದಿಂದ ಈಗ್ಗೆ ಗಲಿತಾಂಗಗಳಂತಾಗಿರುವ, ಆಗುತ್ತಿರುವ ಕೊಲ್ಲಾಪೂರಸಾಂಗಲಿ ಸಾತಾರೆ, ಸೊಲ್ಲಾಪೂರ ಭಾಗದ ಹೆಸರ ಗನ್ನಡಿಗರನ್ನು ಎಳೆತಂದು, ಕರ್ನಾಟಕಕ್ಕಿರುವ ತಮ್ಮ ಆ ಅಭೇದ ಸಂಬಂಧನ್ನು ಅವರ ನೆನಪಿಗೆ ತಂದು ಕೊಡುತ್ತಿದ್ದ ಕಾರಣ ಶ್ರೀರೇಣುಕಾ ದೇವಿಗೆ ಕರ್ನಾಟಕ ಏಕೀಕರಣ ದೇವಿಯೆಂದು ಕರೆದರೂ ಸಲ್ಲುವದು!

ಇಂಥ ಉತ್ತರ ಕರ್ನಾಟಕದ ಜೀವಾಳದೊಡನೆ ಸಮರಸವಾಗಿ ಉತ್ತರ ಕರ್ನಾಟಕವನ್ನೇ ತನ್ನೆಡೆಗೆ ಸತತವಾಗಿ ಆಕರ್ಷಿಸುತ್ತಿರುವ ನಮ್ಮ ಎಲ್ಲ (ರ) ಅಮ್ಮನನ್ನು ಕಣ್ತುಂಬ ಕಾಣಬೇಕೆಂದಿದ್ದ ಬಯಕೆಯು ದೈವಯೋಗದಿಂದ ಚನ್ನಾಗಿ ಸಾಧಿಸಿತು.

ಇಲ್ಲಿ ತಿಳಿದ ಹಾಗೂ ತಿಳಕೊಂಡ ಮಾತುಗಳ ಬಗ್ಗೆ ನನಗೆ ಹೇಳಬೇಕಾದುದು ಬಹಳವಾಗಿದ್ದರೂ ಪ್ರಸುತದಲ್ಲಿ ಶ್ರೀರೇಣುಕಾಂಬೆಯ ದೇಗುಲದ ವಿಚಾರದಲ್ಲಿ ನನಗನಿಸುವ ಒಂದೆರಡು ಮಾತುಗಳನ್ನು ಮಾತ್ರ ಇಲ್ಲಿ ಹೇಳುವೆನು.

ದೇವಿಯ ಮಂದಿರವು ಪುರಾತನ ಕಾಲದ ದೇವಾಲಯದ ಮಾದರಿಯದಾಗಿಲ್ಲವೆಂದು ಅಲ್ಲಿ ಹೋದೊಡನೆ ನನಗೆ ಅನಿಸಿತು. ಜಕಣಾಚಾರ್ಯರ ದೇಗುಲುಗಳ ಮಾದರಿಯದಂತೂ ಇದಲ್ಲ. ನಾನು ವಾಸ್ತುಶಿಲ್ಪವನ್ನು ಬಲ್ಲವನಲ್ಲದ್ದರಿಂದ ಈ ಸಂಬಂಧದಿಂದ ಸಾಧಾರಣವಾಗಿ ವಿಶೇಷ ಸಂಗತಿಗಳನ್ನು ಹೇಳಲಿಕ್ಕೆ ಬರದಿದ್ದರೂ ನನ್ನ ಅನಸಿಕೆ (Impression) ಯನ್ನು ಮಾತ್ರ ಹೇಳಿದ್ದೇನೆ. ಬಲ್ಲವರು ಹೆಚ್ಚಿನ ಸಂಗತಿಗಳ ನಿಷ್ಕರ್ಷ ಮಾಡಬೇಕು.

ನನ್ನ ಮೇಲಿನ ಅನಸಿಕೆಗೆ ಮತ್ತೂ ಒಂದು ಕಾರಣವುಂಟು. ಸವದತ್ತಿಯಲ್ಲಿ ೧೦ ನೇ ಶತಮಾನದ ಸುಮಾರಿಗೆ ರಟ್ಟರು ಆಳಿದರು. ಇವರು ಜೈನರು. ಇವರ ಕಾಲದಲ್ಲಿ ಇವರ ರಾಜಧಾನಿಯ ನೆರೆಯಲ್ಲಿಯೇ ಇಲ್ಲಿ ಇನ್ನೊಂದು ವಿಖ್ಯಾತ ಹಿಂದೂ ದೇವಸ್ಥಾನವಿರುವ ಸಂಭವ ಕಡಿಮೆ. ಅಂದವಾದ ಕೊಳ್ಳದಲ್ಲಿ ಏಕಾಂತಸ್ಥಾನ ನೋಡಿ ಇದೊಂದು ಬಸ್ತಿಯನ್ನು ಕಟ್ಟಿರಬೇಕೆಂದು ನನ್ನ ಊಹೆ.

ಅಲ್ಲದೆ, ನನ್ನ ಈ ಸಂಶಯಕ್ಕೆ ಇನ್ನೊಂದು ಬಲವಾದ ಕಾರಣವೆಂದರೆ, ಗರ್ಭಾಗಾರದ ಮೊದಲನೆ ಬಾಗಿಲ ಮೇಲೆ ಮಧ್ಯದಲ್ಲಿ ಒಂದು ಧ್ಯಾನಸ್ಥ ಬುದ್ಧನ ಮೂರ್ತಿಯನ್ನು ಕೆತ್ತಿದ್ದು. ವೈದಿಕ ಧರ್ಮಾಭಿಮಾನಿಗಳ ದೇಗುಲಗಳಲ್ಲಿ ಬುದ್ಧನ ಮೂರ್ತಿಯಿದ್ದದು ನನ್ನ ಕೇಳಿಕೆಯಲ್ಲಿ ಅಥವಾ ನೋಡಿಕೆಯಲ್ಲಿ ಒಂದಿಲ್ಲ. ಆದದ್ದರಿಂದ ಅತಿ ಪ್ರಾಚೀನಕಾಲದಲ್ಲಿ ಕರ್ನಾಟಕದಲ್ಲಿ ಬಂದ ಮತ ಪ್ರಚಾರಕ ಬೌದ್ಧರ ವಿಹಾರವೋ ಇದು? ಎಂಬದಾಗಿ ಒಂದು ಸಂಶಯ.

ಈ ದೇವಸ್ಥಾನದ ಪೂಜಾರಿಗಳ ಬಳಿಯಲ್ಲಿ ಹಾಗೆ ಇದರ ಪ್ರಾಚೀನತ್ವದರ್ಶಕ ಕಾಗದ ಪತ್ರಗಳಂತು ಏನೂ ಇಲ್ಲ. ಯಾವ ವೈದಿಕ ಧರ್ಮಾಭಿಮಾನಿ ಅರಸರಿಂದಲೂ ಈ ದೇವಸ್ಥಾನಕ್ಕೆ ಇನಾಮು ಜಮೀನುಗಳು ಹಾಕಿಕೊಡಲ್ಪಟ್ಟಿಲ್ಲ. ಈ ಮಾತು ನನ್ನ ಸಂಶಯಕ್ಕೆ ಬಲಕೊಡುತ್ತದೆ.

ಶ್ರೀ ಮದಾದ್ಯ ಶಂಕರಾಚಾರ್ಯರ ಹೊರ ಗ್ರಾಮದಿಂದ ಉರಳಿ ದಕ್ಷಿಣಭಾಗಕ್ಕೆ ಹೊರಟಾಗ್ಗೆ ಶ್ರೀ ರೇಣುಕಾಂಬೆಯ ದರ್ಶನಕ್ಕೆ ಬಂದಿದ್ದರೆಂದೊಂದು ಆಖ್ಯಾಯಿಕೆ. ಹೂಲಿಯ ವಿದ್ವಾ ವೃದ್ಧ ವೈದ್ಯರು ಶ್ರೀ ಮತ್ ಶಂಕರಾಚಾರ್ಯರು ಆ ಕಾಲಕ್ಕೆ ದೇವಿಯ ದರ್ಶನ ತೆಗೆದುಕೊಂಡು ರಚಿಸಿದ ಸಂಸ್ಕೃತ ಶ್ಲೋಕಗಳನ್ನು ಅಂದು ತೋರಿಸಿದ್ದನ್ನು ನನಗೆ ಕೇಳಲಿಕ್ಕೆ ಸಿಕ್ಕಿತು

ಈ ಆಖ್ಯಾಯಿಕೆಯು ನಿಜವಿದ್ದುದಾದರೆ ಶ್ರೀ ಕುಮಾರಿಲಭಟ್ಟರು ಬೌದ್ಧರನ್ನು ಮುರಿದ ಬಳಿಕ ಶ್ರೀಮತ್ ಶಂಕರಾಚಾರ್ಯರ ಕಾಲದ ಸುಮಾರಿಗೆ ಆ ವಿಹಾರವು ದೇವಸ್ಥಾನದಲ್ಲಿ ರೂಪಾಂತರಿಸಲ್ಪಟ್ಟಿರಬಹುದೆಂಬುದಕ್ಕೆ ಸಂದೇಹವಿಲ್ಲ. ಯಾಕೆಂದರೆ ಇದರ ಕೇಡು ಕ್ರಿಯೆಗೆ ಪ್ರತಿಕ್ರಿಯೆ ಎಂಬಂತೆ ಗುಡಿಗಳೆದ್ದು ಮಸೀದಿಗಳಾದ ಸಂಗತಿಗಳನ್ನು ಮುಸಲ್ಮಾನರಕಾಲದಲ್ಲಿ ಕಂಡಿರುತ್ತೇವೆ.

ನನಗೆ ತೋರಿದ ಮಾತುಗಳನ್ನಿಲ್ಲಿ ಕೊಟ್ಟಿದ್ದೇನೆ. ಇನ್ನು ತಜ್ಞರೂ, ಅಧಿಕಾರಿ ಪುರುಷರೂ ಬದವರು ಈ ಮಾತಿನ ನಿರ್ಧಾರ ಮಾಡಬಹುದೆಂದು ಕೋರುತ್ತೇನೆ. ಕಿ ಶಿ ಬಾಳಕೃಷ್ಣ ಜೋಶಿ.

(ಎಲ್ಲಮ್ಮನ ದೇವಸ್ಥಾನದ ಕಟ್ಟಡವು ಪ್ರಾಚೀನ ಕಾಲದ್ದಲ್ಲವೆಂದೂ ಕಟ್ಟಡದ ಯಾವಭಾಗವೂ ಐದುನೂರು ವರ್ಷದ ಹಿಂದಿನದಲ್ಲವೆಂತಲೂ, ನಗಾರಖಾನೆಯನ್ನು ವಿಜಯನಗರದ ಕೃಷ್ಣದೇವರಾಜನ ಆಳಿಕೆಯಲ್ಲಿ ಬಾಗೀಬೊಮ್ಮ ನಾಯಕನೆಂಬವನು ಶಕ ೧೪೩೭ ರಲ್ಲಿ ಕಟ್ಟಿಸಿದನೆಂಬದಾಗಿ ಆ ನಗಾರಖಾನೆಯಲ್ಲಿಯೇ ಇರುವ ಶಿಲಾಲಿಪಿಯಿಂದ ಸ್ಪಷ್ಟವಿದೆಯೆಂದೂ, ಆ ಲಿಪಿಯಲ್ಲಿ ಎಲ್ಲಮ್ಮನಿಗೆ "ಜತ್ತಕ ಮಹಾಮಾಯಿ" ಎಂಬ ಹೆಸರು ಇರುತ್ತದೆಂದೂ, ತಜ್ಞರ ಮತವಿದೆ. ಇನ್ನು ಧ್ಯಾನಸ್ಥ ಬುದ್ಧನ ಮೂರ್ತಿಯನ್ನು, ೫೦೦ ನೂರ ವರ್ಷಗಳ ಹಿಂದೆ ಈ ಗುಡಿಯನ್ನು ಕಟ್ಟುವಾಗ್ಗೆ ಮೊದಲನೇ ಬಾಗಿಲ ಮೇಲೆ ಇಟ್ಟಿರಬಹುದು. ಇದರ ಕಾರಣವನ್ನು ಶೋಧಿಸುವದು ಮಹತ್ವದ್ದಾಗಿದ್ದರೂ, ಕಟ್ಟಡದಿಂದ ಇತಿಹಾಸಕ್ಕೆ ಮಹತ್ವವಾದ ಸಂಗತಿಗಳು ದೊರೆಯಲಾರವು. ಏಕಾಂತವಾಸದಲ್ಲಿದ್ದ ಹಿಂದೂ ಗುಡಿಗಳನ್ನು ಅನೇಕ ಕಡೆಗೆ ಕಾಣಬಹುದಾಗಿದೆ. ಆದ್ದರಿಂದ ಇದಕ್ಕೆ ಮಹತ್ವವಿಲ್ಲ. ಶ್ರೀಮತ್ ಶಂಕರಾಚಾರ್ಯರು ದೇವಿಯ ದರ್ಶನವನ್ನು ತೆಗೆದುಕೊಂಡಿರಬಹುದು. ಶ್ರೀ.ಜೋಶೀಯವರು ಉಲ್ಲೇಖಿಸಿದ ಶ್ಲೋಕವು ಮಹತ್ವದ್ದಾಗಿದೆ. ಆ ಶ್ಲೋಕವನ್ನು ಅವರು ಪ್ರಸಿದ್ಧ ಪಡಿಸಿದರೆ ನೆಟ್ಟಗಾಗುವದು ಇತಿಹಾಸಕ್ಕೂ ಉಪಯೋಗವಾಗುವದು. ಮತ್ತೆ, ದೇವತೆಗೆ "ಎಲ್ಲಮ್ಮ" "ಜತ್ತಕ" ವೆಂಬದಾಗಿ ಹೆಸರಿವೆ. ದೇವತೆಯ ಪ್ರತಿಮೆಯು ಬೇರೆ ಹಿಂದೂ ಗುಡಿಗಳಲ್ಲಿಯ ಪ್ರತಿಮೆಗಳಂತೆ ಅಷ್ಟು ಮೂರ್ತಿಯ ರೂಪವಾಗಿಲ್ಲ. ಒಂದು ಹಲಗೆಗಲ್ಲಿನ ಮೇಲೆ ಹೆಣ್ಣು ಗೊಂಬೆಯ ಆಕಾರವನ್ನು ಹುಟ್ಟಿಸಿದ್ದಾರೆ. ಈ ದೇವತೆಯ ಕೈಗಳಲ್ಲಿ ಹಿಂದೂ ದೇವತೆಗಳ ಕೈಗಳಲ್ಲಿರುವ ಆಯುಧಗಳು ಇಲ್ಲ. ಆದ್ದರಿಂದ ಇದು ದ್ರವಿಡ ದೇವತೆಯೆಂದು ಸಂಶೋಧಕರು ಅಭಿಪ್ರಾಯ ಪಟ್ಟಿದ್ದಾರೆ ಮೇಲಾಗಿ ಇದು ೨೦೦೦ ವರ್ಷಕ್ಕಿಂತ ಪುರಾತನದ್ದಾಗಿದೆಯೆಂಬ ಆಖ್ಯಾಯಿಕೆಯಿದೆ. ಆದ್ದರಿಂದ ಜೈನರ ಬಸ್ತಿಯಿಂದ ಗುಡಿಯಾಗಿರಬೇಕೆಂಬ ವಿಧಾನವು ತಪ್ಪಾಗಿರಬೇಕೆಂದು ನಮ್ಮ ಅಭಿಪ್ರಾಯ. ಆದರೂ ಶ್ರೀ. ಜೋಶೀಯವರು ಉಲ್ಲೇಖಿಸಿದಂತೆ ಪೂಜಾರಿಗಳಿಗೆ ಭೂಮಿಗಳು ಇಲ್ಲದಿರುವದೂ, ಗುಡಿಯ ಮುಂದಿರವನ್ನು ಯಾವ ಹಿಂದೂರಾಜರೂ, ಚನ್ನಾಗಿ ಕಟ್ಟಿಸದೇ ಇದ್ದದ್ದೂ, ಸಂಶೋಧಕ ತಜ್ಞ ವಿಷಯಗಳು

— ಸಂಪಾದಕ ಕನ್ನಡಿಗ.

ಕನ್ನಡಿಗರ ಸೇವೆಯಲ್ಲಿಯೇ ನಿರತನಾದ "ಕನ್ನಡಿಗ" ನನ್ನು ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕು!

ಕನ್ನಡಿಗರೇ! ನಿಮಗೋಸ್ಕರ ಹುಟ್ಟಿದ 'ಕನ್ನಡಿಗ'ನನ್ನು ಬೇಗನೇ ಸ್ವೀಕರಿಸಿರಿ ವಾ.

ನಮ್ಮ ಸಂಸ್ಕೃತಿಯ ಪುನರುಜ್ಜೀವನ

(ಗಳೆಯನಿಂದ)

ನಮ್ಮ ದೇಶದಲ್ಲೆಲ್ಲ ಈಗ ನವಜೀವನದ, ನವವಿಚಾರಗಳ ಗಾಳಿಯು ಸುಳಿಯ ಹತ್ತಿದೆ. ಅದ್ದರಿಂದ ನಮ್ಮ Renaisance, ಎಂದರೆ, ಸಂಸ್ಕೃತಿಯ ಪುನರುಜ್ಜೀವನದ ವಿಷಯವಾಗಿ ಬೇರೆ ಬೇರೆ ಜನರ ಬರಹಗಳು ಬರುತ್ತಿವೆ. ಈ ಪುನರುಜ್ಜೀವನವು ನಿಶ್ಚಿತ ಸ್ವರೂಪವು ಸಂಗತವಾದರೆ, ಅದರಿಂದ ಆಗುವ ಲಾಭವೇನೂ ಕಡಿಮೆಯಿಲ್ಲ. ಪ್ರಾಚೀನ ವಿಚಾರಗಳ ಮತ್ತು ರಾಷ್ಟ್ರೀಯ ಧ್ಯೇಯಗಳ ಸ್ವೀಕಾರವಾಗಲು ಅತ್ಯಾವಶ್ಯಕವಾಗಿ ಬಗೆದುಕೊಂಡುದರಿಂದ ಇದು ಭಾರತದ ಜನಾಳದ ವೃತ್ತಿಯಾಗಿದೆ. ಇದಲ್ಲದೆ, ಭೌತಿಕ ಸಂಪತ್ತಿಗೆ ಅನುರೂಪವಾಗಿರುವ ಆಧುನಿಕರ ವಿಚಾರ ಸರಣಿಯಿಂದ ಅತಿ ಭಿನ್ನವಾದೊಂದು ಅಪೂರ್ವ ಶಕ್ತಿಯು ಪಾಶ್ಚಾತ್ಯರ ಕಣ್ಣುಗಳು ತೆರೆಯುತ್ತಿರುವದರಿಂದ ಈ ವಿಷಯವು ಬಹಳ ಒಕ್ಕಟ್ಟಿಗೆ ಸಂಬಂಧಿಸಿದೆ. ಆದರೆ, ಈ ಎರಡು ವಿಷಯಗಳಲ್ಲಿ ನನಗ ಮೂಡುತ್ತಿರುವದರ ಬಗ್ಗೆಯೇ ವಿಳಂಬವಾಗಿದೆ. ಯಾಕೆಂದರೆ, ತನ್ನ ನವಜೀವನದ ಸಂಬಂಧವು ಇಷ್ಟಕ್ಕೆ ಎಷ್ಟರ ಮಟ್ಟಿಗೆ ತಪ್ಪುವದೆಂಬುದರ ಬಗ್ಗೆ ವಿಚಾರ ಮಾಡುವ ಮುಂಚೆ, ಸ್ವತಃ ಜನರ ಲಕ್ಷ್ಯವನ್ನು ಈಗ ಸೆಳೆಯುವದೇ ಭಾರತ ವರ್ಷಕ್ಕೆ ಅಗತ್ಯವಾದ ಮಾತಲ್ಲವೆ ?

ನಾವು ಮೊದಲು, ಕೆಳಗಿನ ಸಂಗತಿಯನ್ನು, ನಮ್ಮ ನಾಡಿನಲ್ಲಿ 'Renaisance' ಸಂಸ್ಕೃತಿಯ ಪುನರುಜ್ಜೀವನ, ಆಗುವದು ನಡೆಯೋ ! ಇಲ್ಲವೋ ! 'Renaisance' ಶಬ್ದಕ್ಕೆ ನಾವು ಕೊಡುವ ಅರ್ಥದ ಮೇಲೆಯೇ ಇದು ಹೆಚ್ಚಾಗಿ ಅವಲಂಬಿಸಿದೆ. ಯುರೋಪಿಯ ಸಂಸ್ಕೃತಿಯ ಕ್ರಾಂತಿಕಾಲದಲ್ಲಿ ಈ ಶಬ್ದವು ಮೊದಲು ಪ್ರಯೋಗಿಸಲ್ಪಟ್ಟಿತು. ಆದರೆ, ಆಗ ಪುನರುಜ್ಜೀವನವಾಗಲಿಲ್ಲ. ಸಂಸ್ಕೃತಿಯ ರೂಪವಷ್ಟೇ ಬದಲಾಯಿತು; ಜೀವವಲ್ಲ. ಕ್ರಿಸ್ತ, ಪ್ಲೇಟೋ, ಮತ್ತು ಹೋಮರ್ ಇವುಗಳವಲ್ಲ ಗ್ರೀಕ ಲಾಟಿನರ ಸಂಸ್ಕೃತಿಯು ಒಡಮೂಡಿ, ರೂಪುಗೊಂಡಿತಷ್ಟೇ ! ಇದರ ಪುನರಾವೃತ್ತಿಯಂತೂ ಭಾರತ ವರ್ಷದಲ್ಲಿ ಎಂದೆಂದಿಗೂ ಆಗದು. ಆದರೆ, ಮೊನ್ನೆ ಮೊನ್ನೆಯಿಂದ ಜನರು ತಮ್ಮ ನೈಜ ಸಂಸ್ಕೃತಿಯ ಬಗ್ಗೆ ಮಾಡುತ್ತಿರುವ ಪ್ರಯತ್ನಕ್ಕೂ ನಮ್ಮ ಪ್ರಯತ್ನಕ್ಕೂ ಎಷ್ಟೋ ಸಾಮ್ಯವಿದೆ. ಮುಳುಗಿದ್ದ ರಾಷ್ಟ್ರಪುರುಷನು ನವೀನ ಸೃಷ್ಟಿಗಾಗಿ ಆತ್ಮ ಚೈತನ್ಯವನ್ನು ಹುರಿಗೊಳಿಸುವದೇ ಆ ಸಾಮ್ಯದ ತಿರುಳು. ಪರಕೀಯರಾದ ಆಂಗ್ಲರ ಸಂಸ್ಕಾರಗಳಲ್ಲಿಯೇ ಎಷ್ಟೋ ದಿನ ಕೊಳೆತು ಕೊಳೆತು ಕೊನೆಗೊಮ್ಮೆ ಆತ್ಮಸ್ವರೂಪವನ್ನು ಗುರುತಿಸಿ, ತಮ್ಮದೇ ಆದ ನೈಜ ಸಂಸ್ಕೃತಿಯ ಹಂಬಲವನ್ನು ತಳೆದವರಾಗಲೇ ಜನರ ಪ್ರಯತ್ನವು ಆರಂಭ ಹತ್ತಿತು. ಭಾರತದಲ್ಲಿಯಾದರೂ ಇದೇ ಮಾದರಿಯ ಉದ್ಯಮವು ಕಾಣಿಸಿಕೊಳ್ಳ ಹತ್ತಿದೆ. ೧೯೦೫ ನೇ ಇಸ್ವಿಯ ರಾಜಕೀಯ ಸ್ವಾತಂತ್ರ್ಯವಾದದಿಂದಂತೂ ಹೆಚ್ಚು ನಿಚ್ಚಳವಾಗಿ ಒಡಮೂಡುತ್ತಿದೆ. ಇಷ್ಟಾದರೂ ಈ ಸಾಮ್ಯದಿಂದ ಸಂಪೂರ್ಣ ಸತ್ಯವು ಮನದಟ್ಟಾಗದು.

ಕಣ್ತೆರೆದು ನೋಡಿದರೆ, ನಮಗೇನು ತೋರಬರುವದು ? ಎತ್ತ ನೋಡಿದರೂ ಲೆಕ್ಕವಿಲ್ಲದ ಕಷ್ಟ. ಬೇರೆ ಬೇರೆ ತೆರೆಗಳು ತಾಂಡವಿಸ ಹತ್ತಿವೆ. ನಡೆನುಡಿಗೆ ಎಲ್ಲಿಯೂ ತಿಳಿಯದ ವಿಚಾರಗಳು ಘೋರವಾಗಹತ್ತಿವೆ. ಇಷ್ಟಾದರೂ ಜನರ ಬಂಗುಳಿಯಲ್ಲಿ ಹವು ನಟ್ಟಿಲ್ಲ. ಇವು ಜೀವಜಂತುಗಳು ಮಾಡುವ ಜೀವಿತದ ಸೂಚಕಗಳು. ಅತಿರಥಿಗಳ ರಣಗರ್ಜನೆಗಳು. ಧೀರಾಗ್ರಣಿಗಳ ಕೈದೀ ಪಟಗಳು. ಕಣ್ತೆರೆದವರಿಗೆ ಒಡೆದು ಕಾಣುವದೇನೆಂದರೆ, ಜಗಜಟ್ಟಿ ಯಾರೋ ಪರ್ವ ಪ್ರಚಂಡ ಶಕ್ತಿಯು—ವಿದ್ಯೆ ಹೋದವಳು—ಹೊಸ ನೊಂದು ಲೋಕದಲ್ಲಿ ಎಚ್ಚೆತ್ತು ವೈಯಲ್ಲಾ ತೊಡಕುತಡೆಗಳಿಂದ ಹಿಗ್ಗಿರುವದನ್ನು ಕಂಡು ಅವುಗಳನ್ನು ಕಡಿದೊಗೆಯಲಿಕ್ಕೆ ವಿಶ್ವಪ್ರಯತ್ನಗಳನ್ನು ಮಾಡುತ್ತಿರುವಳು. ತಾನು ಯಾರೆಂಬದನ್ನು ಸಾರಿ ಹೇಳಲಿಕ್ಕೆ, ತನ್ನ ಆತ್ಮದ ಮುದ್ರಿಕೆಯನ್ನು ವಿಶ್ವದ ಮೇಲೆ ಮೂಡಿಸಲಿಕ್ಕೆ ಎದ್ದು ನಿಂತಿರುವಳು. ಎತ್ತ ತಿರುಗಿದರೂ ಬಂಧನಗಳು ಬಾಧಿಸುವವೂ, ಕೆಲವೆಡೆಗೆ ನಡೆದು ಹೋಗುವದೂ, ಕೇಳಿ ಬರುತ್ತಿವೆ. ಆದರೆ ಸ್ವಾತಂತ್ರ್ಯವನ್ನೂ ಸಿಕ್ಕಿಲ್ಲ. ಕಣ್ಣುಗಳನ್ನೂ ತೆರೆದಿಲ್ಲ. ಆತ್ಮಕಲ್ಪನೆಯು ಪೂರಾ ಅರಳಿಲ್ಲ. ದೇವಿಯನ್ನೂ ಎಬ್ಬಿಸಿಲ್ಲ.

ನವಜಾಗ್ರದವಸ್ಥೆಯಲ್ಲಿರುವ ಭಾರತಕ್ಕೆ ಪುನರುಜ್ಜೀವನದ ಅಗತ್ಯವೇಕೆಂದು ಕೆಲವರ ಆಕ್ಷೇಪ. ಆದರೆ ಹದಿನೆಂಟನೆಯ ಶತಮಾನದ ಒತ್ತರೆಯ ಶತಮಾನಗಳಲ್ಲಿಯಾದ ನಮ್ಮ ದೇಶದ ಅಧೋಗತಿಯ ಪರಮಾವಧಿಯನ್ನು ಕಣ್ಣಾರೆ ಕಂಡ ನಾವು, ಹೀಗೆನ್ನಲಾಗದು. ಒಂದು ಕಟ್ಟಕಾಲದಲ್ಲಿ ರಾಷ್ಟ್ರದ ಜೀವಜ್ಯೋತಿಯು ನಂದಿಹೋಗಿ, ಸ್ತಂಭಗಳಲ್ಲಿ ಅಡಗಿ, ಕಟ್ಟಕಡೆಯದು ಕುಸಿದುಬೀಳುವ ನಿಮಿಷವು ಸಮೀಪಿಸಿತೆಂದು ಅನಿಸಿತ್ತು. ಅದರ ಪ್ರತಿಬಿಂಬವು ರಾಜಕೀಯ ಕ್ಷೇತ್ರದಲ್ಲಿಯೂ ಮೂಡಿತು. ಎಲ್ಲ ಕಡೆಗಳಲ್ಲಿಯೂ ಅರಾಜಕತೆಯು ಹಬ್ಬಿತು. ಯುರೋಪಿಯ ಸಾಹಸಿಗಳ ಪ್ರವೇಶಕ್ಕೆ ಇಂಬು ದೊರೆಯಿತು. ಧರ್ಮ ಕಲಾದಿಗಳಲ್ಲಿಯ ಉತ್ಪಾದಕ ಶಕ್ತಿಯು ಮುಗ್ಗಿತು. ಶಾಸ್ತ್ರೀಯ, ತಾತ್ವಿಕ ಬೌದ್ಧಿಕ ಜ್ಞಾನಗಳಂತೂ ಎಂದೋ ಒಣ ಪಾಂಡಿತ್ಯದ ಡಂಭದಲ್ಲಿ ಮುಳುಗಿದ್ದವು.—ಅಂತೂ ಹೇಗೆ ನೋಡಿದರೂ ಯುಗಾಸ್ತ ಸಮಯವು ಸಂಧಿಕಾಲವು ಬಂದಂತೆ ತೋರಿತು. ಈ ಹೊತ್ತಿಗೆ ಯುರೋಪಿಯನ ಪರಕೀಯ ಸಂಸ್ಕೃತಿಯ ದಬ್ಬಾಳಿಕೆಯು ಪ್ರಾರಂಭವಾದ್ದರಿಂದ ಪುನರುಜ್ಜೀವನವು ಪ್ರಾಪ್ತವಾಯಿತು.

ಜಗತ್ತಿನ ತಂದೆ

(ಲೇ. ಮಹಾತ್ಮಾಗಾಂಧಿ ನವಜೀವನ.)

"ಒಕ್ಕಲಿಗನೇ, ನೀನು ನಿಜವಾಗಿ ಜಗತ್ತಿನ ತಂದೆಯಾಗಿರುವಿ."

ಈ ಬಗೆಯಾಗಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಹೊಂದುತಿರುವ ಕಾಲಕ್ಕೆ ನಾವು ಕಲಿತಿರುವೆವು. ಅದರ ಅರ್ಥವೇನು. ಹಾಗು ಜಗತ್ತಿನ ತಂದೆಯ ಬಗ್ಗೆ ನಮ್ಮ ಭಕ್ತಿಯು ಎಷ್ಟು ಅಲ್ಪವಾಗಿರುವದು. ಇದರ ಸ್ಮರಣವು ಶ್ರೀ ಬಂದುಲಾಲರ ಈ ಸಂಚಿಕೆಯಲ್ಲಿ ಮುದ್ರಿಸಿದ ಲೇಖದಿಂದ ನಮಗಾಗುವದು.

ಶ್ರೀ. ಬಂದುಲಾಲರು ಒಕ್ಕಲಿಗನ ಸ್ಥಿತಿಯ ಬಗ್ಗೆ ಸ್ಪಷ್ಟದರಲ್ಲಿ ಯಾವದೂ ಪಕ್ಷಪಾತವಿಲ್ಲದಂತೆ ಬರೆದಿರುವರು ಅವರು ಕಾಠಿಯಾವಾಡದ ಒಕ್ಕಲಿಗರನ್ನುದ್ದೇಶಿಸಿ ಬರೆದಿರುವರು; ಆದರೆ ಕಾಠಿಯಾವಾಡದ ಒಕ್ಕಲಿಗರ ವಿಷಯದಲ್ಲಿ ನುಡಿದಿದ್ದ ಮಾತು ಬೇರೆ ಬೇರೆ ರೂಪವಲ್ಲ, ಸಮಗ್ರ ಹಿಂದುಸ್ಥಾನದ ಒಕ್ಕಲಿಗರ ವಿಷಯದಲ್ಲಿ ಯಾದರೂ ಅನ್ವಯಿಸುವದು. ಎಲ್ಲಿಯ ವರೆಗೆ ಒಕ್ಕಲಿಗರ ಸ್ಥಿತಿಯನ್ನು ಶಿಕ್ಷಿತ ವರ್ಗವು ವಿಚಾರಿಸುವದಿಲ್ಲವೋ, ತಿಳಿದುಕೊಂಡಿಲ್ಲವೋ ಅನುಭವಿಸುವದಿಲ್ಲವೋ ಅಲ್ಲಿಯ ವರೆಗೆ ಈ ಸ್ಥಿತಿಯಲ್ಲಿ ಸುಧಾರಣೆಯಾಗುವದು ಅಸಾಧ್ಯವು.

ಚಂದಾ, ಅಂಚೆ ಸಹಿತ ೧॥— ಮಾತ್ರ! ಈ ಅಗ್ಗದ ಚಂದಾ ನಿಮಗೆ ಭಾರವಾಗದು!!

ಒಕ್ಕಲಿಗರ ಸ್ಥಿತಿಯ ಬಗ್ಗೆ ನಮ್ಮ ಮುಂದಾಳುಗಳು ಅಲ್ಪ ಮಾಹಿತಿಯನ್ನು ದೊರಕಿಸುವರು, ಅಷ್ಟುಮಟ್ಟಿಗೆ ಬರೆದಿರುವರು. ಕೌನ್ಸಿಲುಗಳಲ್ಲಿಯೂ ಚರ್ಚಿಸಿರುವರು, ಆದಾಗ್ಯೂ ವಸ್ತು ಸ್ಥಿತಿಯ ಅನುಭವವು ಇಲ್ಲದ್ದರಿಂದ ನಿಜವಾದ ಸುಧಾರಣೆಯು ಆಗಿಲ್ಲ

ಸರಕಾರೀ ಅಮಲದಾರರು ಒಕ್ಕಲಿಗರ ಸ್ಥಿತಿಯನ್ನು ನಿಜವಾಗಿ ಬಲ್ಲರು; ಆದರೆ ಅಮಲದಾರರ ಸ್ಥಿತಿಯೇ ಮೊದಲು ಕನಿಕರವಾಗಿರುವದು. ಇವರು ಅಮಲದಾರೀ ದೃಷ್ಟಿಯಿಂದ—ಅಂದರೆ, ತೆರಿಗೆಯನ್ನು ಕೂಡಿಸುವ ದೃಷ್ಟಿಯಿಂದ- ಒಕ್ಕಲಿಗರನ್ನು ನೋಡುವರು, ಸರಕಾರಕ್ಕೆ ಹೆಚ್ಚಿಗೆ ತೆರಿಗೆಯನ್ನು ಕೂಡಿಸಿ ಕೊಡುವ ಅಮಲದಾರರು ಹೆಚ್ಚಿನ ಅಧಿಕಾರಗಳನ್ನು ಪಡೆಯುವರು, ಬಿರುದುಗಳನ್ನೂ ಹೊಂದುವರು ಮತ್ತು ಸರಕಾರದಲ್ಲಿ ಜಾಣರೆಂದು ಎಣಿಸಲ್ಪಡುವರು. ಯಾವ ವಸ್ತುವನ್ನು ನಾವು ಯಾವ ದೃಷ್ಟಿಯಿಂದ ನೋಡುತ್ತೇವೆಯೋ ಅದೇ ಬಗೆಯಾಗಿ ನಮಗದು ಕಾಣುತ್ತದೆ. ಅದ್ದರಿಂದ ಎಲ್ಲಿಯ ವರೆಗೆ ನಾವು ಒಕ್ಕಲಿಗರ ದೃಷ್ಟಿಯಿಂದ ಒಕ್ಕಲಿಗನ ಸ್ಥಿತಿಯನ್ನು ನೋಡುವದಿಲ್ಲವೋ ಅಲ್ಲಿಯ ವರೆಗೆ ಆ ಸ್ಥಿತಿಯು ನಮಗೆ ಇದ್ದಕ್ಕಿದ್ದಂತೆ ತೋರುವದಿಲ್ಲ.

ನಮಗೆ ಕೆಲವಂಶದಿಂದಾದರೂ ಒಕ್ಕಲಿಗನ ಸ್ಥಿತಿಯು ಜ್ಞಾನವಾಗಿರುವದು. ಹಿಂದುಸ್ಥಾನವು ಕಂಗಾಲವಾಗಿರುವದು. ಹಿಂದುಸ್ಥಾನದಲ್ಲಿ ಒಕ್ಕಲಧಿ ಜನರಿಗೆ ಒಪ್ಪತ್ತು ಉಂಡು ಇರಬೇಕಾಗುವದು. ಇದರ ಅರ್ಥವೇನಂದರೆ ಹಿಂದುಸ್ಥಾನದ ಒಕ್ಕಲಿಗರು ಕಂಗಾಲರಾಗಿರುವರು. ಮತ್ತು ಅವರಲ್ಲಿ ಅನೇಕರು ಒಪ್ಪತ್ತು ಉಂಡು ಜೀವಿಸಬೇಕಾಗುವದು. ಈ ಒಕ್ಕಲಿಗರಾರು? ನೂರಾರು ಕೂರಿಗೆ ಭೂಮಿಯಿದ್ದವನೂ ಒಕ್ಕಲಿಗನು; ಕೂರಿಗೆ ಅರ ಕೂರಿಗೆ ಭೂಮಿಯಿದ್ದವನೂ ಒಕ್ಕಲಿಗನು, ಮತ್ತು ತನ್ನ ಸ್ವಂತದ್ದೇನೂ ಭೂಮಿಯಿಲ್ಲದೆ ಎರಡನೇಯವರ ಭೂಮಿಯನ್ನು ಸಾಗಿಸಿ ಚೀಲ ಎರಡು ಚೀಲ ಧಾನ್ಯವನ್ನು ಸಂಪಾದಿಸುವವನೂ ಒಕ್ಕಲಿಗನು. ಚಂಪಾರಣ್ಯ ಮೊದಲಾದ ಸ್ಥಳಗಳಲ್ಲಿ ಸಾಹೇಬ ಜನರ ಹಾಗೂ ನಮ್ಮವರ ಕೇವಲ ದಾಸ್ಯವನ್ನು ವಹಿಸಿ ಇಡೀ ಜನ್ಮವನ್ನು ಗುಲಾಮಗಿರಿಯಲ್ಲಿಯೇ ಕಳೆಯುತ್ತಿರುವಂಥ ಒಕ್ಕಲಿಗರನ್ನಾದರೂ ನಾನು ನೋಡಿರುವೆನು. ಈ ಬೇರೆ ಬೇರೆ ತರದ ಒಕ್ಕಲಿಗರ ಯಥಾರ್ಥ ಸಂಖ್ಯೆಯು ನಮಗೆಂದೂ ದೊರೆಯದು. ವಸ್ತಿ ಪತ್ರಿಕೆಯನ್ನು (ಖಾನೇಸುಮಾರಿಯ ಪತ್ರಿಕೆಯನ್ನು) ತಯಾರಿಸುವದಾದರೂ ಒಂದು ರೀತಿ ಇರುವದು. ಒಕ್ಕಲಿಗರ ಸ್ಥಿತಿಯನ್ನು ಪರೀಕ್ಷಿಸುವ ಉದ್ದೇಶವನ್ನು ಹಿಡಿದು ವಸ್ತಿ ಪತ್ರಿಕೆಯನ್ನು ತಯಾರಿಸಿದರೆ ನಮ್ಮನ್ನು ಆಶ್ಚರ್ಯಗೊಳಿಸುವಂಥ ಹಾಗೂ ನಾಚಿಸುವಂಥ ವಸ್ತುಸ್ಥಿತಿಗಳು ಪ್ರಸಿದ್ಧಿಗೆ ಬರುವವು. ಒಕ್ಕಲಿಗರ ಸ್ಥಿತಿಯು ದಿನೇ ದಿನೇ ಸುಧಾರಿಸುತ್ತ ಹೋಗದೇ ಕೆಡುತ್ತ ನಡೆದಿರುವಂತೆ ನನ್ನ ಅನುಭವವಿದೆ. ದೊಡ್ಡಸ್ತನ ತವರು ಮನೆಯೆಂದೆನಿಸಲ್ಪಡುವ ಖೇಡಾ ಜಿಲ್ಹೆಯಲ್ಲಿ ಸಹ ಪೂರ್ವಜರಿಂದ ಕಟ್ಟಲ್ಪಟ್ಟಿರುವ ದೊಡ್ಡ ಮನೆಗಳಲ್ಲಿ ವಾಸಿಸುತ್ತಿರುವ ಅವರ ವಂಶಜರು ಆ ಮನೆಗಳನ್ನು ಉಡುಗಿ ಸಾರಿಸಿಕೊಂಡು ಅವುಗಳನ್ನು ಇದ್ದಕ್ಕಿದ್ದಂತೆ ಒಳ್ಳೇಸ್ಥಿತಿಯಲ್ಲಿಟ್ಟುಕೊಂಡಿರಲು ಈಗ ಶಕ್ತಿಯಿಲ್ಲದವರಾಗಿರುವರು. ಅವರ ಮೋರೆಯ ಮೇಲೆ ನನ್ನನ್ನು ಆನಂದಿತರನ್ನಾಗಿ ಮಾಡುವಂಥ ತೇಜವು ಕಂಡು ಬರುವದಿಲ್ಲ. ಅವರ ಶರೀರಗಳು ಎಷ್ಟು ಗಟ್ಟಿಯಾಗಿರಬೇಕೊ ಅಷ್ಟಿರುವದಿಲ್ಲ. ಅವರ ಮಡುಗರು ನಿರುತ್ಸಾಹಿಗಳೂ ನಿಸ್ತೇಜರೂ ಆಗಿರುವರು. ಹಳ್ಳಿಗಳಲ್ಲಿ ಸಂಕಟಗಳು ನೆಲೆಗೊಂಡಿರುವವು. ಚಿಂತೆಗಳಿಂದಲೂ ಜನರು ಪೀಡಿತರಾಗಿರುವರು. ಮೊದಲ ಶೈತಪ ಸಾಲದ ಭಾರದ ಕೆಳಗೆ ಬಗ್ಗಿ ಹೋಗಿರುವರು. ಮದ್ರಾಸ ಇಲಾಖೆಯೊಳಗಿನ ಹಳ್ಳಿಗಳ ಸ್ಥಿತಿಯಂತೂ ಹೃದಯದ್ರಾವಕವಾಗಿರುವದು. ಖೇಡಾ ಮತ್ತು ಚಂಪಾರಣ್ಯಗಳ ಬಗ್ಗೆ ಇದ್ದದಷ್ಟು ಅನುಭವವು ಮದ್ರಾಸದ ಬಗ್ಗೆ ನನಗೆ ಇಲ್ಲದಿದ್ದರೂ ಅಲ್ಲಿ ನಾನು ನೋಡಿದ ಹಳ್ಳಿಗಳ ಸ್ಥಿತಿಯ ಮೇಲಿಂದ ಮದ್ರಾಸದ ಒಕ್ಕಲಿಗರ ದೈನ್ಯಾವಸ್ಥೆಯ ಯಥಾರ್ಥ ಕಲ್ಪನೆಯು ನನಗೆ ಆಗುವಂತಿದೆ.

ಹಿಂದುಸ್ಥಾನದೊಳಗೆ ದೊಡ್ಡದರಲ್ಲಿ ದೊಡ್ಡ ಪ್ರಶ್ನೆಯೆಂದರೆ ಇದೇ. ಈ ಪ್ರಶ್ನೆಯನ್ನು ಬಿಡಿಸುವದೆಂತು? ಒಕ್ಕಲಿಗರ ಸ್ಥಿತಿಯನ್ನು ಸರಿಪಡಿಸುವದು ಹೇಗೆ? ಇದರ ವಿಚಾರವನ್ನು ಪ್ರತಿಕ್ಷಣದಲ್ಲಿಯೂ ಮಾಡುವದವಶ್ಯವು. ಹಿಂದುಸ್ಥಾನವು ಅದರಲ್ಲಿಯ ಪಟ್ಟಣಗಳಲ್ಲಿರುವದಿಲ್ಲ ಹಿಂದುಸ್ಥಾನವು ಹಳ್ಳಿಗಳಲ್ಲಿ ವಾಸವಾಗಿರುವದು. ಮುಂಬೈ, ಕಲಕತ್ತೆ, ಮದ್ರಾಸ ಮುಂತಾದ ಪಟ್ಟಣಗಳಲ್ಲಿ ವಾಸವಾಗಿರುವ ಜನರ ಸಂಖ್ಯೆಯು ಒಂದು ಕೋಟಿಯ ಒಳಗಿರುವದು. ಹಿಂದುಸ್ಥಾನದಲ್ಲಿ ಪ್ರಸಿದ್ಧವಾದ ಪಟ್ಟಣಗಳು ನೂರರ ಒಳಹೊರಗಿರುವವು. ಆದರೆ ನೂರರಿಂದ ಸಾವಿರ ಜನರ ವಸ್ತಿಯುಳ್ಳ ಹಳ್ಳಿಗಳ ಲೆಕ್ಕವಿಲ್ಲ. ಅದ್ದರಿಂದ ನಾವು ಪಟ್ಟಣಗಳನ್ನು ಎಷ್ಟೇ ಸುಸಂಪನ್ನವಾಗಿ ಮಾಡಿದರೂ, ಅವುಗಳನ್ನು ಎಷ್ಟೇ ಸುಧಾರಿಸಲೆತ್ನಿಸಿದರೂ ಹಳ್ಳಿಗಳ ಮೇಲೆ ಅದರಿಂದ ಯಾವ ಪರಿಣಾಮವೂ ಆಗದು. ನಾವು ಹಳ್ಳಿಗಳ ಜೀವನದಲ್ಲಿ ಸುಧಾರಣೆಯನ್ನುಂಟು ಮಾಡಿದರೆ, ಅದನ್ನು ವಿಕಾಸಗೊಳಿಸಿದರೆ ಉಳಿದವೆಲ್ಲವೂ ತನ್ನಿಂದ ತಾನೇ ಸರಿಯಾಗುವದು.

ಒಕ್ಕಲಿಗರ ಸ್ಥಿತಿಯೇ ನಿರಂತರವಾಗಿ “ನವಜೀವನ” ದ ದೃಷ್ಟಿಬಿಂದುವಾಗಿರುವದು. ಈ ಸ್ಥಿತಿಯನ್ನು ಹೇಗೆ ಸುಧಾರಿಸಲು ಶಕ್ಯವಾಗುವದು. ಈ ಕಾರ್ಯದಲ್ಲಿ ಸಣ್ಣವರೂ ದೊಡ್ಡವರೂ ಹೇಗೆ ಕೆಲಸ ಮಾಡಬಲ್ಲರು, ಮತ್ತು ನಮ್ಮಲ್ಲಿ ಈ ಕಾರ್ಯವನ್ನು ಕೈಕೊಳ್ಳಲು ಸ್ವಲ್ಪ ಜನರೇ ಮುಂದೆ ಬಂದರೂ ಅವರು ಕೇವಲ ಸತ್ಯವನ್ನೇ ಆಶ್ರಯಿಸಿ ತಮ್ಮ ಕರ್ತವ್ಯದಲ್ಲಿ ನಿರತರಾದರೆ ಅಲ್ಪಾವಧಿಯಲ್ಲಿ ನಾವೆಷ್ಟು ಪ್ರಗತಿಯನ್ನು ಹೊಂದಬಲ್ಲೆವು ಎಂಬೀ ಮಾತುಗಳನ್ನು ನಾವು ಇನ್ನು ಮುಂದೆ ಸಮಾಲೋಚಿಸುವಾ.

ಒಂದು ವಿನೋದದ ಕಥೆ

(ಇಸೂಫ ಕಥೆಯ ಆಧಾರ ಮೇಲಿಂದ)

ಲೇಖಕ:— ಸಂಗಪ್ಪ ನಾಕನೂರ.

ಹಾಳು ಹಂಪೆಯಲ್ಲಿ ಕನ್ನಡಿಗನೆಂಬ ಮುದುಕನಿದ್ದನು. ಅಲ್ಲ—ಅಲ್ಲ—ಹರೆಯದ ಮುದುಕನಿದ್ದನು. ಯಾಕೆಂದರೆ, ಕೆಲವು ವಿಶಿಷ್ಟ ಕೂದಲುಗಳು ಬೆಳ್ಳಗಾಗಿದ್ದರೂ, ಇನ್ನೂ ಕೆಲವು ಕಪ್ಪಾಗಿರುವವೆಂಬುವದೇ ಅವನ ಹೆಮ್ಮೆ. ಅವನಿಗೆ ಇಬ್ಬರು ಹೆಂಡರು. ಒಬ್ಬಳು ಕನ್ನಡ ದೇವಿಯೆಂಬ ಮುದುಕಿಯು; ಇನ್ನೊಬ್ಬಳು ಅನ್ಯನುಡಿದೇವಿಯೆಂಬ ಯುವತಿಯು ದಿನಾಲು ಇವರಿಬ್ಬರ ನಡುವೆ ಜಗಳ; ಅದರಿಂದ ಮುದುಕನ ಬೊಗಳೆ.

ಒಂದು ದಿವಸ ಮುದುಕನು ತನ್ನ ಹೆಂಡರೊಡನೆ ಕುಳಿತಿದ್ದನು. ಮಾತಿಗೆ ಮಾತು ಹೊರಟು, ಮುದುಕಿಯು ಬಿಳೇ ಒಡವೆಗಳು ಚಲೋ ಎಂತೆಂದೂ, ಯುವತಿಯು ಕರೇ ಒಡವೆಗಳು ಚಲೋ ಎಂತಲೂ ಹೀಗೆ ಬಾಯಿಗೆ ಬಾಯಿ ಹತ್ತಿತು. ಇನ್ನು ಮೇಲೆ ಕೈಗೆ ಕೈ ಹತ್ತುವ ಮಜಲು. ಅಷ್ಟರಲ್ಲಿ ಮುದುಕನು ಎರಡೂ ಬಣ್ಣಗಳು ಚಂದವಾಗಿರುವವೆಂದು ಹೇಳಿದನು. ನಿಮ್ಮ ಮೀಸೆಯ ಕೂದಲುಗಳಲ್ಲಿ ಕೆಲವು ಬಿಳಿಯವೂ ಕೆಲವು ಕರಿಯವೂ ಆಗಿರುವದರಿಂದ ನೀವು ಹಾಗೆ ಹೇಳುವಿರೆಂದು ಅವರು ಇಬ್ಬರೂ ಮುದುಕನ ಮೇಲೆ ಸಿಟ್ಟಾಗಿ ಅವನನ್ನು ಶಿಕ್ಷಿಸ ತೊಡಗಿದರು. ಅದರಂತೆ ಅವರ ಒಡನಾಡಕ

ನನ್ನು ಒಳಿತಾಗಿ ಹಿಡಿದು, ಮುದಕಿಯು ಕರಿಮೀಸೆಗಳನ್ನೂ ಯುವತಿಯು ಬಿಳಿಮೀಸೆಗಳನ್ನೂ ಕಿತ್ತಹತ್ತಿದರು. ಇವರಿಬ್ಬರ ಕಿತ್ತುವ ಜಲ್ಲಾಟದ ನಡುವೆ, ಮುದಕನ ಅಳುವ ಗೋಳಾಟವನ್ನು ಯಾರು ಕೇಳಬೇಕು? ಕಡೆಗೆ ಅವರಿಬ್ಬರ ಜಲ್ಲಾಟವು ಮುಗಿದ ಮೇಲೆ ಮುದುಕನು ಅವರಿಬ್ಬರನ್ನು ಹೊಡೆದೋಡಿಸುವೆನೆಂದು ಸಿಟ್ಟಿನಿಂದ ಮೀಸೆಯ ಮೇಲೆ ಕೈ ಎಳೆದನು. ಅಲ್ಲೇನಿದೆ? ಸಪಾಟು!! ಹರೆಯದ ಮುದಕನು ಹುಡುಗನಾದನು.

ಒಟ್ಟಿನ ಮೇಲೆ, ಕನ್ನಡ ನುಡಿಯು ಪರನುಡಿಯ ಸಂಪರ್ಕದಿಂದ ಹಸಗೆಟ್ಟು ಹೋಗಿದೆ. ಒಬ್ಬನು ಕನ್ನಡವು ಇಂಗ್ಲಿಷದಲ್ಲಿಯೇ ಮಾತಾಡುವದರಿಂದ ಗೌರವವೆಂತಲೂ, ಇನ್ನೊಬ್ಬನು ಮರಾಠಿಯಲ್ಲಿ ಮಾತಾಡುವದರಿಂದ ಸರಸವೆಂತಲೂ ಹೀಗೆ ಹೇಳುವರು. ಹೀಗಾಗಿ ಕನ್ನಡಿಗನಿಗೆ ಮೀಸೆಯಿಲ್ಲದಾಗಿದೆ.

ವಕೀಲರಿಗೆ ಬಾರಕೋಲು.

ಸತ್ಯನುಡಿಯುಸಿದಕೆ ಒತ್ತಿ ಹೇದರೆ ಶರಧಿ ।
ಉತ್ತಮರು ತಪ್ಪಿ ನಡೆದರೆ ಲೋಕವಿ ।
ನ್ನೆತ್ತ ಬದಕುವದು ಸರ್ವಜ್ಞ ॥ ೧ ॥

ಸತ್ಯವೇ ಮೇಲು. ಸತ್ಯಾಗ್ರಹದ ಬಲದಿಂದಲೇ ಸ್ವರಾಜವು ದೊರೆಯುವದು. ಅಸತ್ಯವಾದಿಗಳು ಇದ್ದ ದೇಶಕ್ಕೆ ಜಯವಿಲ್ಲ. ಜಯ ದೊರೆಯುವ ಆಶೆಯೂ ಇಲ್ಲ. ಆ ದೇಶವು ಕ್ರಮೇಣ ಬರಬರುತ್ತ ಅಧೋಗತಿಗೆ ಹೋಗುವದು ಖಂಡಿತವೆಂದು ಆರ್ಯರ ಪವಿತ್ರ ಗ್ರಂಥವೂ ಪಂಚಮ ವೇದವೂ ಎಂದು ಹೆಸರಾದ ಶ್ರೀ ಮಹಾಭಾರತವು ನಮಗೆ ಸಾರಿ, ಸಾರಿ, ಹೇಳುತ್ತಿರುವದು. ನಾನು ಈ ಸಾರೆ ತಕ್ಕಡಿಯ ಸಮಾಚಾರವನ್ನು ತಗೆದುಕೊಳ್ಳಬೇಕಾಗಿತ್ತು. ಆದರೆ ಅದಕ್ಕಿಂತ ಮೊದಲು ಅಸತ್ಯವಾದಿಗಳನ್ನು ಬಾರುಕೋಲಿನ ಬಾಯಿಗೆ ಕೊಡಬೇಕಾಗಿದೆ. ಸತ್ಯಕ್ಕೆ ತವರುಮನೆ ಯೆಂದು ಹೊಗಳಿಸಿಕೊಂಡ ಹಿಂದುಸ್ಥಾನದೊಳಗೆ ಸಭೆಯಲ್ಲಿ, ನ್ಯಾಯ ಸಭೆಯಲ್ಲಿ, ಶಹರದಲ್ಲಿ, ಹಳ್ಳಿಯಲ್ಲಿ, ಎಲ್ಲಿ ನೋಡಿದಲ್ಲಿ ಸುಳ್ಳರ ಸುಳಿದಾಟವೇ ದೃಷ್ಟಿಗೆ ಬೀಳುವದು. ಸುಳ್ಳಿನಂಥ ಪಾಪವಿಲ್ಲ. ಆದರೆ ಈಗ್ಗೆ ಅದೇ ಬಹುಜನ ವಕೀಲರ ಹೊಟ್ಟೆಗೆ ಹಾಕುವ ಕುಲಗುರು. ಹೀಗೆಂದೇ ಜಗತ್ತಿನಲ್ಲಿ ಹೆಚ್ಚಿನ ಅಸತ್ಯವಾದಿಗಳು ವಕೀಲರು. ಶಭ್ಯರಾದ ಒಕ್ಕಲಿಗರಿಗೆ, ಸಾಕ್ಷೀದಾರರಿಗೆ, ವಾದಿ ಪ್ರತಿವಾದಿಗಳಿಗೆ, ದಾಯಾದಿಗಳಿಗೆ ಸುಳ್ಳು ಹೇಳಲಿಕ್ಕೆ ಕಲಿಸಿ, ಆ ಸುಳ್ಳಿನ ಬಲದಿಂದಲೇ ಬಬ್ಬರ ಮನೆ ಮುರಿದು ಮತ್ತೊಬ್ಬರಿಗ ಮಾಡುವ ಹಾಗೂ ಮೇಲೆ ಸಂಭಾವಿತರಂತೆ ಸವಿ, ಸವಿ, ಮಾತನಾಡಿ ಜನರಿಗೆ ತಿಳಿಯದಂತೆ ವಂಚಿಕೆಯಿಂದ ಅವರ ಕಿಸೆ ಕತ್ತರಿಸುವ ರಾಜಗಳ್ಳರೂ ದರೋಡೆಖೋರರೂ ವಕೀಲರೇ ಇರುವರು. ಅವರ ನೆರಳಿಗೆ ನಿಲ್ಲುವದು ಸಹ ಮಹತ್ಪಾಪವೆಂದು ಮಹಾತ್ಮಾ ಗಾಂಧಿಯವರು ಹೇಳಿದ್ದು ನನ್ನ ಧ್ಯಾನದಲ್ಲಿದೆ. ನಾನದನ್ನು ಮರೆತಿಲ್ಲ. ವಕೀಲಿಯಗಿಂತ ಹೆಚ್ಚಿನ ಪಾಪವಿಲ್ಲವೆಂದೇ ಮಹಾತ್ಮರು ತಮ್ಮ 'ಬ್ಯಾರಿಸ್ಟರಿಕೆ' ಯನ್ನು ಬಿಟ್ಟುಗೊಟ್ಟು, ತಮ್ಮ ಪುರಾಕೃತ ಪಾಪವೆಲ್ಲ ತೊಳೆದು ಹೋಗಲೆಂದು ದೇವರಿಗೆ ಪ್ರಾರ್ಥಿಸಿ ಸಾಧುವೃತ್ತಿಯನ್ನವಲಂಬಿಸಿರುವರು. ಕಾಲಮಹಿಮೆಯು ಅಗಾಧವಾದದ್ದು. ಕೇವಲ ಸುಳ್ಳಿನಿಂದ ಹೊಟ್ಟೆ ಹೊರೆದುಕೊಳ್ಳುವ ವಕೀಲರಿಗೆ ಜಗತ್ತಿನಲ್ಲಿ ದೊಡ್ಡಸ್ತಿಕೆ ಬಂದಿದೆ. ಯೇಕೆ ಬಂದಿದ್ದೀತು? ಕನ್ನಡಕಗಳನ್ನು ಹಾಕಿಕೊಂಡು ಮೆರೆಯುವರೆಂದು ಬಂದಿರುವದೋ ಅಥವಾ ಕೋಟಿನಂಥ ಪೋಷಾಕು ಮನೆಯಿಂದ ಕೋರ್ಟಿಗೆ ಬರತಾರೆ, ಎಡತಾಕಿ ವ್ಯರ್ಥ ದಣಿಯುವರೆಂದು ಬಂದಿರುವದೋ, ... ! ಏನಾದರೂ ... ... ವಕೀಲಿಯಲ್ಲಿ ನಮ್ಮೂರ ಪ್ರಸಿದ್ಧ

ಕಳ್ಳನಾದ ಮಲ್ಲಪ್ಪನ ವಿರುದ್ಧ ಸಾಕ್ಷಿಯನ್ನು ಹೇಳುವ ಪ್ರಸಂಗವು ನನ್ನ ಪಾಲಿಗೆ ಬಂದಿತು. ನಾನು ಕೋರ್ಟಿನ ಸಮನ್ಸಿನ ಪ್ರಕಾರ ಜಿಲ್ಹಾ ಕೋರ್ಟಿಗೆ ಹೋದೆನು. ಅಲ್ಲಿ ಒಂದು ದೊಡ್ಡ ಖುರ್ಚಿಯ ಮೇಲೆ ಬಿಳಿಯ ಮಾರೆಯ ಸಾಹೇಬರು ಕುಳಿತಿದ್ದರು. ಕೆಂಪು ಪಗಡಿಯ ಶಿಪಾಯಿಯು ಮಗ್ಗುಲದಲ್ಲಿ ಬೀಸಣಿಕೆಯಿಂದ ಗಾಳಿ ಹಾಕುತ್ತ ನಿಂತಿದ್ದನು. ಮುಂದೆ ಕೆಳಮಗ್ಗುಲಿಗೆ ಸಾಲಾಗಿ ಇಟ್ಟ ಖುರ್ಚಿಗಳ ಮೇಲೆ ಕನ್ನಡಕಗಳನ್ನು ಹಾಕಿಕೊಂಡು ಕೈಗಳಲ್ಲಿ ದೊಡ್ಡ ದೊಡ್ಡ ಹೊತ್ತಿಗೆಗಳನ್ನು ಹಿಡಿದಿರುವರು ಕುಳಿತುಕೊಂಡಿದ್ದರು. ಬಬ್ಬ ಶಿಪಾಯಿಯು ನನ್ನನ್ನೊಯ್ದು ಕಟಾಂಜನದಲ್ಲಿ ನಿಲ್ಲಿಸಿದನು. ಕರೀ ಪಗಲಿಯ ಕನ್ನಡಿಕದವನೊಬ್ಬನು ಎದ್ದು ನಿಂತು ನನ್ನ ಕಡಿಗೆ ಕೈ ಮಾಡಿ, ಎ, ಒಕ್ಕಲಿಗಾ ದೇವರಾಣೆ ಮಾಡಿ, ಖರೇ ಹೇಳು, ನಿನ್ನೆದುರಿನಲ್ಲಿ ನಿಂತ ಮಲ್ಲಪ್ಪನು ಸರಿಗೆಯನ್ನು ಕದ್ದದ್ದು ನಿಜವೇ ಎಂದು ಕೇಳಲು, ನಾನು ಹೌದು ರಾಯರೇ ಮಲ್ಲಪ್ಪನು ಸರಿಗೆಯನ್ನು ಕದ್ದದ್ದು ಸತ್ಯವೆಂದು ಹೇಳಿದೆನು. ಆ ಮೇಲೆ ವಕೀಲನು ಇಂಗ್ಲೀಷನಲ್ಲಿ ಏನೋ "ಟಿಸ್, ಪಿಸ್" ಮಾತನಾಡಿ ಆರೋಪಿಯನ್ನು ಬಿಡಿಸಿ ಬಿಟ್ಟು, ಬಹು ವಿನಯದಿಂದ ಸಾಹೇಬರಿಗೆ ಸಲಾಮ್ ಮಾಡಿ, ನಗುತ್ತ ಹೊರಟು ಹೋದನು. ಈ ಬಗೆಯ ನ್ಯಾಯ ನಿರ್ಣಯದ ಚಮತ್ಕಾರವನ್ನು ನೋಡಿ, ದುಃಖಾತಿರೇಕದಿಂದ ನನ್ನ ಕಣ್ಣೀರು ಬಂದವು. ನನಗೆ ಆಶ್ಚರ್ಯವೂ ಆಯಿತು. ನಾನು ನಮ್ಮ ವಕೀಲರ ಹತ್ತಿರ ಹೋಗಿ, 'ವಕೀಲರೇ, ನಮ್ಮ ಖಟ್ಲೆಯು ಕೆಟ್ಟಿತೇಕೆ'ಂದು ಕೇಳಲು, "ಅವರು ನಮ್ಮ ವಿರುದ್ಧ ಪಕ್ಷದ ವಕೀಲರು ತಮ್ಮ ಮಾತಿನ ಜಾಣ್ಮೆಯಿಂದ 'ಸರಿಗೆ' ಯನ್ನು ಮಾಡಿದ್ದರಿಂದ ಹೀಗಾಯಿತು ನಾನೇನು ಮಾಡಲಿ? ನಾನು ಮಾತಾಡಿದ್ದರ ಪರಿಣಾಮವು ಸಾಹೇಬರ ಮೇಲೆ ಆಗಲೇ ಇಲ್ಲ. ಮಾಡುವದೇನು. ಕಾಲವು ಅನುಕೂಲವಿದ್ದಿಲ್ಲ. ಈಗಾದರೂ ಏನಾಯಿತು? ಇನ್ನೊಂದೆರಡು ಸಾವಿರ ರುಪಾಯಿಗಳನ್ನು ನನ್ನ ಕಡೆಗೆ ತಂದು ಕೊಡೆಂದು ನಿಮ್ಮ ಯಜಮಾನರಿಗೆ ಹೇಳು ಹಾಯ ಕೋರ್ಟಿಗೆ ಅಪೀಲು ಮಾಡೋಣವಂತೆ, ಕಾಳಜಿ ಮಾಡಬೇಡ"ವೆಂದುಹೇಳಿ, ಕಳುಹಿದರು. ಮೊಗರು ಕಟ್ಟಿಗೆಯಿಂದ ಮೊಗರು ಮುರಿಸಿದೆ. ಪಾರಾಗುವ ವಕೀಲರಿಗೆ ಹಣವಷ್ಟೇ ಕಾಣುತ್ತದಲ್ಲದೆ, ಗುಣವು ಕಾಣುವದಿಲ್ಲ. ಸುಳ್ಳು ಹೇಳಿ, ಮಂದಿಯ ಗೋಣು ಮುರಿಯುವಂಥ ವಕೀಲರು ದಿನಾ ಮನೆ ಬಂಗಾರದ 'ಸರಗೆ' ಬಿಟ್ಟು ಹಿತ್ತಾಳೀ ಸರಿಗೆ ಮಾಡುವದು ನಮ್ಮಂಥ ಮುಂಬರಿಂದ ಹೇಗಾದೀತು? ಅದಕ್ಕೆ ತಕ್ಕವರೆಂದರೆ ವಕೀಲರೇ. ದೊಡ್ಡ ದೊಡ್ಡ ಪುಸ್ತಕಗಳನ್ನು ಓದುತ್ತಾರೆಂದು ದೊಡ್ಡ, ದೊಡ್ಡ ಕೃತಿಗಳನ್ನು ಮಾಡುತ್ತಾರೆ. ಒಬ್ಬರೇ, ಇಬ್ಬರೇ, ಬಾರುಕೋಲಿನ ಶಿಪಾಯಿಯಿಂದ ಮೇಲಿನ ಫೌಜುದಾರರವರೆಗೂ ಮಲ್ಲಪ್ಪನು ಬಂಗಾರದ ಸರಿಗೆಯನ್ನು ಕದ್ದದ್ದು ಗೊತ್ತಿದ್ದಾಗ್ಯೂ ಇಂಥ ಗಾಢಬಂಗಾರವು ಹೇಗಾಯಿತು? ಆಗದೇನು ಮಾಡೀತು? ಬಂಗಾರದ ಸರಿಗೆಯು ಕಾವ್ಯದಲ್ಲಿಯೇ ಮಟಾಮಯವಾಗಿ ಅದರ ತುಂಡುಗಳು ಎಲ್ಲೆಲ್ಲಿ ಅವರವರ ಕರಗತಿಯ ಪ್ರಕಾರ ಹಂಚಿ ಹೋಗಿರಬಹುದು. ಅದಕ್ಕೆ ಪ್ರತಿಯಾಗಿ ಸರಿಗೆಯೇ ಮುಂದೆ ಬಂದಿರಬಹುದು. ಬಂಗಾರ ಸಿಕ್ಕ ಮೇಲೆ ಬಾಯಿ ಬಂದಾಗದೇನು ಮಾಡೀತು! ಆ ನೀಚ ವಕೀಲರಿಗೆ ಪಕ್ಷಕಾರರ ಹಣವು ಬಸಳೆಯಂತೆ ಸಕ ಸಕ ಮುಕ್ಕರಿಕ್ಕೆ ದೊರೆಯುತ್ತಿರುವದೆಂದೇ ಅವರ ಮನೆಗಳ ಮೇಲೆ ಅಂತಸ್ತುಗಳೆ ರುವವು. ಅವರ ಹೆಂಡರ ಮಕ್ಕಳ ಮೇಲೆ ಬಂಗಾರದೊಡವೆಗಳೇ ಇರುವವು. ವಕೀಲರ ಹೆಂಡರು ಮಕ್ಕಳ ಮೈ ಮೇಲೆ ಎಷ್ಟು ಬಂಗಾರದೊಡವೆಗಳಲ್ಲ, ಅವರ ಪಕ್ಷಕಾರರ ಹೆಂಡರ ಮಕ್ಕಳ ಮೇಲೆ ಸಹ ... ! ... ... ಹೊಟ್ಟೆಗೆ ... ಆಗುವದೆಂದು ನನಗೆ ತೋರಿತು! ಇದೆ ಸಂಗತಿಯ ...

... ಅಥವಾ ... ! 'ಕನ್ನಡಿಗ'ನಲ್ಲಿಯ ... ನೋಡಿರಿ! ... ಕೊಂಡಿರಿ!

ಪಳಪಳಿಸುತ್ತ ನನ್ನ ಹಳ್ಳಿಗೆ ಬಂದು " ಬಾಂಧವರೇ ನಿಮ್ಮ ನ್ಯಾಯಗಳನ್ನು ನಿಮ್ಮ ನಿಮ್ಮೊಳಗೆ ತೀರಿಸಿಕೊಳ್ಳಿರಿ. ಕೋರ್ಟಿಗೆ ಒಯ್ಯಬೇಡಿರಿ. ಅಲ್ಲಿ ದೊಡ್ಡ ತಲೆಯ ವಕೀಲರಿದ್ದಾರೆ. ಅವರ ಕೈಯಲ್ಲಿ ಸಿಕ್ಕರೆ, ನಿಮ್ಮ ಹೊಲ ಮನೆ ಮಾರುಗಳೆಲ್ಲ ಮಾರಿ, ಮೇಲೆ ಭಿಕ್ಷೆ ಬೇಡುವ ಪ್ರಸಂಗವು ನಿಮ್ಮ ಪಾಲಿಗೆ ಬಂದೀತು. ಅವರ ನೆರಳಿಗೆ ಹೋಗಬೇಡಿರಿ." ಎಂದು ಹೇಳಿದೆನು ಅವರೇನೂ ನನ್ನ ಮಾತು ಕೇಳಲಿಲ್ಲ. ನೇತಕ್ಕೆ ದೇಶವೇ ಪಾಶ್ಚಾತ್ಯರ ಮೋಹಜಾಲದಲ್ಲಿ ಬಿದ್ದು ಒದ್ದಾಡುವಾಗ ನನ್ನಂಥ ಬಿಪ್ಪಿ ಹಳ್ಳಿಗಾಡಿನ ಮಾತು ಯಾರು ಕೇಳಬೇಕು? ನಮ್ಮಂಥವರು ವಕೀಲರ ಪಾಲಿಗೆ ಸಿಕ್ಕಿ, ಪಿಕ್ಕಿ ಜನರಾಗಿ ಹೋಗಿರುವೆವು. ಒಟ್ಟಿನ ಮೇಲಿಂದ ಪರೀಕ್ಷೆಗಳನ್ನು ಕೊಟ್ಟು ಉತ್ತೀರ್ಣರೆನಿಸಿಕೊಳ್ಳುವ ವಕೀಲರಲ್ಲನೇಕರು ಹಾದೀ ತಪ್ಪಿ ನಡೆದು ದೇಶದಲ್ಲಿಯ ಕಳವು ದರೋಡೆ ಹಾದರಗಳ ಹೆಚ್ಚಳಿಕೆಗೆ ಕಾರಣರಾದ ಮೇಲೆ ನಗಬೇಕೋ, ಅಳಬೇಕೋ ತಿಳಿಯದಂತಾಗಿದೆ. ಏನಾದರೆ ವಕೀಲರಿಗೆ ಬುದ್ಧಿ ಬಂದೀತೋ? ಛೆ, ಎಲ್ಲಿಯ ಬುದ್ಧಿ! ಹಣದ ಹೊರ್ತು ಜಗತ್ತಿನಲ್ಲಿ ಅವರಿಗೆ ಯಾವದೂ ಕಾಣುವದಿಲ್ಲ. ಧರ್ಮವಂತೂ ಅವರ ಪಾಲಿಗೆ ಎಂದೋ ಸತ್ತು ಹೋಗಿದೆ? ದೇವಾ, ನೀನೇ ವಕೀಲರ ತಲೆಗಳನ್ನು ಸುಧಾರಿಸಿ, ಅವರನ್ನು ಮನುಷ್ಯರ ಘಟ್ಟಿಗೆ ಕೂಡಿಸು ಎಂದರೆ ದೇಶೋದ್ಧಾರವಾಗುವದು. ಇಲ್ಲವಾದರೆ ನಮ್ಮ ಧೂಳಿಪಾಟವು. ನಮ್ಮನ್ನು ರಕ್ಷಿಸು. ವಕೀಲರ ಜುಲ್ಮಾಟವು. ಎಂದು ಬಂದಾಗುವದೋ ಅಂದೇ ಸುದಿನವು. ಅಂದೇ ದೇಶೋದ್ಧಾರದ ಹೊಸ ಯುಗವು ಪ್ರಾರಂಭವಾಗುವದು.

ಕನ್ನಡಿಗರದಾಸನಾದ,

ಒಕ್ಕಲತನದಿಂದ ಜೀವಿಸುವ ಒಕ್ಕಲಿಗ.

ಹುಲಿಗಳನ್ನು ಹಿಡಿಯಲು ಯಲ್ಲಾಪೂರದ " ಚೀಫ ಕಂಝರ್ವೇಟರ " ಎಡೀಸಾಹೇಬರು ಬಹು ಸಹಾಯ ಮಾಡಿದರಂತೆ! ಗವರ್ನರರು ಸಂತುಷ್ಟರಾಗಿದ್ದಾರೆ. ಎಡೀಸಾಹೇಬರ ದೈವವು ತೆರೆಯಿತೆಂದೆನ್ನಬೇಕು ಹುಲಿಯ ಬೇಟೆಯಿಂದ, ಎಡೀಸಾಹೇಬರಿಗೆ ಹೆಚ್ಚಿನ ಪಗಾರದ ಬೇಟೆಯೂ ದೊರೆಯಬಹುದು!

ಮದ್ರಾಸ ಕರ್ನಾಟಕ

ಮಂಗಳೂರಿನಲ್ಲಿ ಸ್ವರಾಜ್ಯ ಪಕ್ಷವು ಈ ಮೊದಲೇ ಸ್ಥಾಪಿತವಾಗಿರುವದಷ್ಟೆ? ಈಗ್ಗೆ ಆ ಪಕ್ಷದ ಪ್ರಮುಖರಾದ ಡಾಕ್ಟರ ರಾಮರಾವರೇ ಮೊದಲಾದ ಎಂಟು ಜನರದೊಂದು ಪ್ರಕಟನೆಯು ಪ್ರಸಿದ್ಧವಾಗಿದೆ ಅದರಲ್ಲಿ ಅವರು " ಈ ಪಾರ್ಟಿಗೆ ಸೇರಲಪೇಕ್ಷಿಸುವವರು ಆಯಾಯ ತಾಲೂಕ ಮತ್ತು ಜಿಲ್ಲೆಗಳಲ್ಲಿ ಸ್ವರಾಜ್ಯ ಪಾರ್ಟಿಯನ್ನು ಸ್ಥಾಪಿಸಿ ನಮಗೆ ತಿಳಿಸಬೇಕಾಗಿ " ಪ್ರಾರ್ಥಿಸುತ್ತಾರೆ.

ದಕ್ಷಿಣಕನ್ನಡ ಜಿಲ್ಲೆಯ ತೃತೀಯ ಪರಿಷತ್ತು ಕಾರ್ಕಳದಲ್ಲಿ ನೆರವೇರಿತು

ಮೈಸೂರ ಕರ್ನಾಟಕ

ಒಕ್ಕಲಿಗರ ಸಂಘದ ಅಧ್ಯಕ್ಷರಾದ ಪೂರಕ್ಷನವರು ಶಿವಾಧೀನರಾದರೆಂದು ತಿಳಿಸಲು ವಿಷಾದವಾಗುತ್ತದೆ ಸಂಘದ ಕಟ್ಟಡಕ್ಕಾಗಿ ಇವರು ೩೦ ಸಾವಿರ ರೂಪಾಯಿಗಳನ್ನು ಸ್ವತಃ ತಮ್ಮ ಬೊಕ್ಕಸದಿಂದ ವೆಚ್ಚ ಮಾಡಿದ್ದರು. ಹಾಗೆಯೇ ಮೈಸೂರಿನ ಮುಖ್ಯ ನ್ಯಾಯಾಧೀಶರಾಗಿದ್ದ ದಿ ಬಾ. ಎ. ರಾಮಚಂದ್ರರಾಯರೂ ಕೈಲಾಸವಾಸಿಗಳಾದರೆಂದು ಬರೆಯಲು ವಿಷಾದವಾಗುತ್ತದೆ. ಇವರ ವಯಸ್ಸು ೭೧ ಇದ್ದಿತು. ಇವರು ಮಹಾ ಧಾರ್ಮಿಕರಿದ್ದರು. ದೇವರು ಇವರೀರ್ವರ ಆತ್ಮಕ್ಕೆ ಶಾಂತಿಯನ್ನೀಯಲಿ!

ಕೊಡಗು ಕರ್ನಾಟಕ

ಖಾದೀ ಬಟ್ಟೆಯು ಕೊಡಗಿನ ತುಂಬೆಲ್ಲ ಪ್ರಚಾರವಾಗುವದಕ್ಕೂ, ಕೊಡಗಿನಲ್ಲಿ ಸುರಾಪಾನದ ದುಷ್ಟ ವ್ಯಸನವನ್ನು ತೆಗೆದು ಹಾಕಲಿಕ್ಕೂ ಅಲ್ಲಿನ ಜಮೀನದಾರರ ಸಂಘದವರು ಎರಡು ಉಪಮಂಡಳಗಳನ್ನು

ನಿಮಗೆ " ಕನ್ನಡಿಗ " ನಭೆಟ್ಟಿಯು ಅನಾವಶ್ಯಕವಿದ್ದರೆ ಸಂಚಿಕೆಗಳನ್ನು ಸ್ವೀಕರಿಸದೆ ಅವನ್ನು ನಮಗೆ ಮರಳಿ ಕಳಿಸಬೇಕಾಗಿ ಬಿನ್ನಹ. ಕಾರ್ಡ ಬರೆದು ನಿಮ್ಮ ಅರ್ಧ ಆಣೆ ವೆಚ್ಚ ಮಾಡುವದೂ ಅವಶ್ಯವಿಲ್ಲ.

ವರ್ತಮಾನಸಾರ

ಇಹವೃತ್ತ

ಹಿಂದೂ ಮುಸಲ್ಮಾನರ ದಂಗೆಯು ದಿಲ್ಲಿಯ ಚೌಕಶಿಯು ನಡೆದಿದೆ. ಕಚೇರಿಯಲ್ಲಿ ಜನಜಾತ್ರೆ ಕೂಡುತ್ತದೆ.

ರೇಲ್ವೇ ಬೋರ್ಡಿನ ಸಾಂಘಗಳು.

ರೇಲ್ವೆ ಬೋರ್ಡಿನ ಬಗ್ಗೆ ಬಾಗಲಕೋಟೆಯ ತರುಣರಾದ ನರಗುಂದ ಶ್ರೀನಿವಾಸರಾಯರು, ಮತ್ತು ಗಂಜಿಹಾಳ ರಾಘವೇಂದ್ರರಾಯರೂ ಉತ್ಸಾಹದಿಂದ ಕೆಲಸ ಮಾಡುತ್ತಿರುವರು " ಕನ್ನಡಿಗನ " ಯೋಜನೆಗೆ ಬಾಗಲಕೋಟೆಯಲ್ಲಿಯ ಸಹಿಗಳು ೩೦೦ ರಕ್ಕೆ ಸಮೀಪಿಸಿವೆ

ಆಲೂರಿನ ಶ್ರೀ ನವಲೀ ಗೋಪಾಳರಾಯರು ೪೫ ಜನರ ಸಹಿಗಳನ್ನು ದೊರಕಿಸಿದ್ದಾರೆ. ಆಲೂರೆಂದರೆ ಒಂದು ಸಣ್ಣ ಹಳ್ಳಿ. ಹೀಗಿದ್ದರೂ, ಅಲ್ಲಿ ೪೫ ಜನರ ಸಹಿಯನ್ನು ದೊರಕಿಸಿದ್ದು ನವಲೀಯವರ ಕಾರ್ಯದಕ್ಷತೆಯನ್ನು, ಆಲೂರಿನ ಮಹಾ ಜನರ ಉತ್ಸಾಹವನ್ನು ತೋರ್ಪಡಿಸುತ್ತದೆ ಕರ್ನಾಟಕದಲ್ಲಿಯ ಎಲ್ಲ ಭಾಗಗಳ ಜನರು ಇದೇ ಬಗೆಯ ಹುರುಪಿನಿಂದ ಕೆಲಸ ಮಾಡಿದರೆ ಈ ಕಾರ್ಯವು ಕೈಗೂಡದೇ ಇರದು

ಕರ್ನಾಟಕ.

ಮುಂಬಯಿ ಕರ್ನಾಟಕ

ಮುಂಬಯಿ ಗವ್ಹರ್ನರರು ಕಾರವಾರ ಜಿಲ್ಲೆಯ ಯಲ್ಲಾಪೂರ ಕಾನನದಲ್ಲಿ ಬೇಟೆಯಾಡ ಹೋದರು. ಹುಲಿಗಳು ದೊರೆತವಂತೆ ' ಈ ಸ್ಥಾಪಿಸಿದ್ದಾರೆ ಈ ಮಂಡಳಗಳಲ್ಲಿ ಜನರನ್ನು ಹಿಡಿದು ಹಾಕಿಲ್ಲ ಆದರೆ ಆಲ್ಲಿಯ ಹುರುಪಿನ ಜನರು ತಾವಾಗಿಯೇ ಮುಂದೆ ಬಂದು ಈ ಕೆಲಸವನ್ನು ತಮ್ಮ ಮೈಮೇಲೆ ತೆಗೆದುಕೊಂಡಿದ್ದಾರೆ. ಪರಿಣಾಮವನ್ನು ನೋಡಬೇಕು.

ನಿಜಾಮ ಕರ್ನಾಟಕ.

ಶ್ರೀಮತ್ ಪೂಜ್ಯಪಾದ ಶೃಂಗೇರಿ ಮಠದ ಆದ್ಯ ಜಗದ್ಗುರುಗಳಾದ ಶ್ರೀಮತ್ ಶಂಕರಾಚಾರ್ಯರ ಜನನಮಹೋತ್ಸವವು (ಗುಲಬರ್ಗಾ ಜಿಲ್ಹಾ) ಸುರಪುರ ನಗರದಲ್ಲಿ ಜರುಗಿತು ಗಾಯನ ವ್ಯಾಖ್ಯಾನಗಳಿಂದ ಈ ಮಹೋತ್ಸವವು ಪ್ರತಿವರ್ಷಕ್ಕಿಂತಲೂ ಹೆಚ್ಚು ವಿಜೃಂಭಣೆಯಿಂದ ನೆರವೇರಿತು

ಹಿಂದುಸ್ಥಾನ

ಮಹಾತ್ಮಾಗಾಂಧಿಯವರು ನೋವಖಾಲಿ ಭಡೋಚ ಜಿಲ್ಲೆಯಲ್ಲಿ ಪ್ರವಾಸ ಮಾಡಲು ಹೊರಟಾಗ್ಗೆ ಅವರೊಡನೆ ಠಾಕೋರ ಸಾಹೇಬರೂ ಕೀರವಾಡದ ಠಾಕೋರ ಸಾಹೇಬರೂ ಅವರನ್ನು ತಮ್ಮ ಅರಮನೆಗಳಿಗೆ ಕರೆದುಕೊಂಡು ಹೋಗಿ ಅವರಿಗೆ ಆದರವನ್ನು ತೋರಿಸಿದರು ಪ್ರತಿಯೊಬ್ಬರು ೫೦೧ ರೂ. ಗಳನ್ನು ಕೊಟ್ಟರಂತೆ! ಕರ್ನಾಟಕದೊಳಗಿನ ಜಮೀನದಾರರೂ ಮಹಾತ್ಮಾಜಿಯವರ ಸಾಹೇಬರ ಮೇಲ್ಪಂಕ್ತಿಯನ್ನಿಟ್ಟುಕೊಂಡು ಖಾದಿಯ ಕಾರ್ಯದ ಬಗ್ಗೆ ತಮ್ಮ ಹಣದ ಸಹಾಯವನ್ನು ನೀಡಬಾರದೇಕೆ ?

ಶ್ರೀ ರಾಜಗೋಪಾಲಾಚಾರ್ಯರು ಒಂದು ಆಶ್ರಮವನ್ನು ತೆಗೆದಿರುವರು ಶ್ರೀ ರತ್ನಸಭಾಪತಿ ಗೌಂಡರ ಎಂಬ ಜಮೀನದಾರರೊಬ್ಬರು ಆ ಆಶ್ರಮಕ್ಕೆ ಭೂಮಿಯನ್ನು ಕೊಟ್ಟಿರುವರು ಆ ಕುಟುಂಬವೂ ಅಲ್ಲಿಯೇ ಇದ್ದು ಖಾದಿ ಕೆಲಸ ಮಾಡುವದು ಅಸ್ಪೃಶ್ಯರ ಸೇವೆ ಈ ಬಗೆಯ ಧರ್ಮವನ್ನು ನಡೆಸುವರು.

ಕರ್ನಾಟಕ ಸಾಹಿತ್ಯ ಸೇವೆಯನ್ನೆಸಗುವ "ಕನ್ನಡಿಗ"ನನ್ನು ಸ್ವೀಕರಿಸಿ, ಆತನನ್ನು ಪ್ರೋತ್ಸಾಹಿಸಲೇಬೇಕು!

ಪತ್ರವ್ಯವಹಾರ.

ಕನ್ನಡಿಗ ಸಂಪಾದಿಕರಿಗೆ:—

ಕೃತಾನೇಕ ನಮಸ್ಕಾರಗಳು ತರುವಾಯ ತಮ್ಮ ಪತ್ರದ 'ಸಂಪಾದಕರ ಭೂಮಿ' ಯ ಸ್ಥಳಕ್ಕೆ ಬರೆದ ನಾಲ್ಕು ಸಾಲುಗಳ ಬಗ್ಗೆ ಈ ನಾಲ್ಕು ಸಾಲುಗಳನ್ನು ತಮ್ಮ ಪತ್ರದಲ್ಲಿ ಪ್ರಕಟಿಸಬೇಕಾಗಿ ಬಿನ್ನವಿಸುತ್ತೇನೆ.

ಆ ನಾಲ್ಕು ಸಾಲುಗಳು ನನ್ನವಲ್ಲ. ಅವು ಒಂದುವರೆ ವರ್ಷದ ಪೂರ್ವದಲ್ಲಿ ಬರೆಯುದ ಹೊತ್ತಿಗೆದಲ್ಲಿ ಹೆಚ್ಚಿನ ಮಟ್ಟಿಗೆ ಇತ್ತು ತಿಳಿದುಕೊಂಡ "ಚಿದಂಬರ ಕೃಷ್ಣ ನಗರ" ನೆಂಬ ಗೆಳೆಯರ ಗುಂಪಿನ ಬ್ಲೂಲ್ಲ್ಸನಾಗಿದ್ದ ಗೆಳೆಯನವು. ಪ್ರಸಿದ್ಧವಾದದ್ದೆಂದರೆ ಅದೊಂದೇ ಅವನ ಕವಿತೆ. ಯಾವ ವಿಷಯೋಗದಲ್ಲಿ ಅವನ ಮೊದಲನೇ ಕವಿತೆಯು ಪ್ರಕಾಶಗೊಂಡಿತೋ ಎಂದು ನನಗೆ ನೆನಪಾದಾಗ್ಗೆ ಹುಳ್ಳಗೆನಿಸುವದು. ಯಾಕೆಂದರೆ ಶಾಂತ ಕವಿಗಳ ಪ್ರಥಮ ವರ್ಷ ಶ್ರಾದ್ಧ ನಿಮಿತ್ತವಾಗಿ ಅವರ ನೆನಪಿಗಾಗೆಂದು ವಿ. ವ. ಸಂಘದವರು 'ವಾಗ್ಭೂಷಣ' ದ ಸಂಚಿಕೆಯನ್ನು ಸಂಪಾದಿಸುವ ಕೆಲಸವನ್ನು ನನಗೊಪ್ಪಿಸಿದ್ದರು. ಆ ಸಂಚಿಕೆಯಲ್ಲಿಯೇ ಈ ಕವಿತೆಯು ಪ್ರಸಿದ್ಧವಾಗಲು ನಾನು ನಿಮಿತ್ತನಾದೆನು. ಇಷ್ಟೇ ಅಲ್ಲ. ಅದೇ ಸಂಚಿಕೆಯಲ್ಲಿ "ಶಾಂತ ಕವಿಗಳ ನೆನಪು" ಎಂಬ "ವಿದ್ಯಾರ್ಥಿ" ಕವಿಯ ಕವಿತೆಯೊಂದಿತ್ತು. ಅದು ಪ್ರಸಿದ್ಧವಾಗಲೂ ನಾನೇ ನಿಮಿತ್ತನಾದೆನು. ಆ ಕವಿತೆಯನ್ನು ಬರೆದ 'ಪ್ರಲ್ಹಾದ ವಾಡಿಪ್ಪಾಡ' ಎಂಬ ಗೆಳೆಯನೂ ತೀರಿಕೊಂಡು ವರ್ಷವಾಗುತ್ತ ಬಂತು. ಆ ಕವಿತೆಯಾದರೂ ಅವನ (ಪ್ರಸಿದ್ಧವಾದವುಗಳಲ್ಲಿ) ಕಡೆ ಮೊದಲನೆಯದೇ! ಅಂತೆಯೇ ನನ್ನ ಜೀವಕ್ಕೆ ಹುಳ್ಳ ಹುಳ್ಳಗೆನಿಸುವದೆಂದದ್ದು. ಈ ಮಾತು ಪ್ರಸ್ತುತವಿರದಿದ್ದರೂ ಪ್ರಸಂಗೋಚಿತನೆಂದು ಹೇಳಬೇಕಾಯಿತು.

ಇನ್ನು "ರಕ್ಷಿಸು ಕರ್ನಾಟಕದೇವಿ" ಎಂಬ ನಾಡ ಹಾಡನ್ನು "ಇಳಿತಿದೆ ಪಾತಾಳಕಾತಕೆ" ಎಂಬ ಹೃದ್ಯಾಪದ್ಯಾವನ್ನು ಹಾಡಿ ಹೋದ ಶಾಂತ ಕವಿಗಳ ಹೆಸರನ್ನು ಕೇಳದವರು ಸದ್ಯದ ಕನ್ನಡಿಗರಲ್ಲಿಂತೂ ಬಹಳ ಜನರಿರಲಿಕ್ಕಿಲ್ಲೆಂದು ನನ್ನ ನಂಬುಗೆ. ಅವರ ಜೀವಿತವನ್ನು ಕುರಿತ 'ಚಿದಂಬರ' ನಿಗೆ ಅವರಿಗೆ ಕನ್ನಡವು ಬಿಡಕೊಂಡಿತ್ತೋ ಏನೋ ಎಂದು ಕಂಡಂತಾಗಿ ಆ ಕನ್ನಡ ಬಡಕನ ಬಡುಕುಬಾಳುವೆಯ ಗುರುಯನ್ನು 'ಚಿದಂಬರ' ನು ಹೀಗೆ ಹಾಡಿರುವನು. (ವೃತ್ತವು ಎಂಟೆಂಟು ಮಾತ್ರೆಯ ಮೂರು ಚರಣಗಳೂ ಒಂದು ಗುರುವೂ ಒಂದು ಸಾಲಿನಲ್ಲುಳ್ಳ ಹೊಸದೊಂದು ಪ್ರಿಯವಾಗಿರುವದು.)

ಮಹಾತ್ಮಾಜಿ ಯವರು ಖಾದಿ- ಬಡಕರಾಗಿರುವಂತೆ ಕನ್ನಡ ಬಡಕರಾಗಿರುವ ತರುಣರದೊಂದು ಪೀಳಿಗೆಯು ಬಂದು ಕನ್ನಡದ ಅಚಲ ಪ್ರತಿಷ್ಠಾಪನೆಯನ್ನು ಮಾಡಲಿಕ್ಕಿಲ್ಲವೇ ಎಂದು 'ಚಿದಂಬರ' "ಪ್ರಲ್ಹಾದ ವಾಡಿಪ್ಪಾಡ" ರಂಥ ಎಳೆಯರ ಆತ್ಮಪೂರಿತ ವಾಣಿಯನ್ನು ಕೇಳಿ ಅನಿಸುವದು. 'ಅನಿಸಿದಂತೆ ಆಗಲಿ' ಎಂದೇ ಶ್ರೀ ಭುವನೇಶ್ವರಿಗೆ ಹರಿಕೆ.

ಸ್ಥಳ. ವೈ. ಸ. ಆ ನೋಸುವಾರ ಕೊಪ್ಪದ ಗಲ್ಲಿ	ಅಂಬಿಕಾತನಯ ದತ್ತ, ಸಾಕಿನ ಧಾರವಾಡ.

ಕನ್ನಡಿಗನ ಲೇಖಕರಿಗೆ ಸೂಚನೆಗಳು

(೧) ಕನ್ನಡಿಗನಲ್ಲಿಯ ಎಲ್ಲ ಲೇಖಗಳು ಕನ್ನಡನಾಡು, ಕನ್ನಡನುಡಿ, ಕನ್ನಡ ಸಂಸ್ಕೃತಿ, ಅಥವಾ ಕರ್ನಾಟಕದ ಏಕೀಕರಣ ಈ ವಿಷಯಗಳಲ್ಲಿ ಯಾವದಾದರೊಂದು ವಿಷಯಕ್ಕೆ ಸಂಬಂಧಪಟ್ಟಿರಬೇಕು. ಬೇಕಾದ ವಿಷಯವನ್ನು ತೆಗೆದುಕೊಂಡು ಲೇಖವನ್ನು ಬರೆಯಬಹುದು. ಆದರೆ ಆ ವಿಷಯವು ಮೇಲೆ ಉಲ್ಲೇಖಿಸಿದ ಸಂಗತಿಗಳಿಗೆ ಹೇಗೆ ಸಂಬಂಧಪಡುವದೆಂಬುದು ಸ್ಪಷ್ಟವಾಗಿರಬೇಕು.

(೨) ವಿಷಯಗಳೆಲ್ಲ ಜ್ಞಾನಪ್ರಧಾನವಾಗಿರಬೇಕು. ಓದುಗರ ವಿಚಾರಗಳನ್ನು ಪ್ರಜ್ವಲಿಸುವಂಥವಿರಬೇಕು. ಶುದ್ಧ ಭಾವನಾತ್ಮಕವಾದ ಲೇಖಗಳಿಗೆ ಕನ್ನಡಿಗನಲ್ಲಿ ಪ್ರವೇಶವಿಲ್ಲ. ಆದರೆ ಯಾವದಾದರೊಂದು ವಿಷಯವನ್ನು ತಾತ್ವಿಕ ರೀತಿಯಿಂದ ವಿವೇಚಿಸಿ, ಅಲ್ಲಲ್ಲಿಗೆ ಓದುಗರನ್ನು ಜಾಗೃತಗೊಳಿಸಲಿಕ್ಕೆ ಭಾವನಾತ್ಮಕವಾದ ವಾಕ್ಯಗಳನ್ನು ಪೋಣಿಸಬಹುದು.

(೩) ಪ್ರತಿಯೊಂದು ಲೇಖವು ಎರಡು ಅಂಕಣಗಳ (ಕಾಲಮ್ಸ್) ಗಿಂತ ಹೆಚ್ಚಾಗಿರಕೂಡದು. ವಿಷಯವು ಅಂಥ ದೊಡ್ಡದಿದ್ದು, ಎರಡು ಅಂಕಣಗಳಲ್ಲಿ ಅದರ ವಿವೇಚನವು ಶಕ್ಯವಿಲ್ಲದಿದ್ದರೆ, ಅದರಲ್ಲಿ ಭಾಗಗಳನ್ನು ಮಾಡಿ ಲೇಖಾಂಕಗಳ ರೂಪದಿಂದ ಕಳಿಸಬೇಕು.

(೪) ಎಲ್ಲ ಲೇಖಗಳು ಯಾವಾಗಲೂ ಹಾಳೆಯ ಒಂದೇ ಮಗ್ಗಲಿಗೆ ಸ್ಪಷ್ಟವಾದ ಅಕ್ಷರಗಳಿಂದ ಬರೆದಿದ್ದವಾಗಿರಬೇಕು.

(೫) ಲೇಖಕರು ತಮಗೆ ವೇತನವು ಬೇಕೋ ಅಥವಾ ಬೇಡವೋ ಎಂಬುದನ್ನು ಬರೆದಿರಬೇಕು. ಈ ವಿಷಯವನ್ನು ಸಂದಿಗ್ಧವಾಗಿ ಇಡಕೂಡದು.

(೬) ನಿರಾಕರಿಸಲ್ಪಟ್ಟ ಲೇಖಗಳು ಮರಳಿ ತಮಗೆ ಬೇಕಾಗಿದ್ದರೆ, ಲೇಖಗಳ ಸಂಗಡಲೇ, ತಮ್ಮ ವಿಳಾಸವನ್ನು ಬರೆದು ತಿಕೀಟ ಹಚ್ಚಿದಂಥ ಲಕೋಟೆಯನ್ನು ಕಳಿಸಿರಬೇಕು. ಹಾಗೆ ಮಾಡಿರದಿದ್ದರೆ, ನಿರಾಕರಿಸಲ್ಪಟ್ಟ ಲೇಖಗಳು ನಾಶವಾಗುವವು. ಲೇಖಗಳು ಯಾಕೆ ನಿರಾಕರಿಸಲ್ಪಟ್ಟವೆಂಬುದನ್ನು ಲೇಖಕರಿಗೆ ತಿಳಿಸಲು ಸಂಪಾದಕರು ಬಾಧ್ಯರಲ್ಲ.

— ಸಂಪಾದಕ ಕನ್ನಡಿಗ. —

ಲೋಕಬಂಧು

ಈ ವಾರಪತ್ರವು ಧಾರವಾಡದಲ್ಲಿ ಲಕ್ಷ್ಮಣ ರಾಮಚಂದ್ರ ಬರಣಿ ಇವರ ಸಂಪಾದಕತ್ವದ ಕೆಳಗೆ ಪ್ರತಿ ರವಿವಾರ ಹೊರಡುತ್ತಿದೆ. ಇದರಲ್ಲಿ ರಾಜಕೀಯ ಸಾಮಾಜಿಕ ಔದ್ಯೋಗಿಕ, ಶೈಕ್ಷಣಿಕ ಮುಂತಾದ ವಿಷಯಗಳು ಚನ್ನಾಗಿ ಪ್ರತಿಪಾದಿಸಲ್ಪಡುವವಲ್ಲದೆ ಎಲ್ಲ ಪ್ರಚಲಿತ ಸಂಗತಿಗಳು ಸುಲಭ ಭಾಷೆಯಲ್ಲಿ ಬರೆಯಲ್ಪಡುವವು.

ವಾರ್ಷಿಕ ವರ್ಗಣಿ. ಮುಂಗಡ ೩ ೮ ೦	ಮ್ಯಾನೇಜರ. ಲೋಕಬಂಧು. ಧಾರವಾಡ.

ಮೈಸೂರ ಕ್ರಾನಿಕಲ್ ಬೆಂಗಳೂರ.

ಮೈಸೂರ ದೇಶದಲ್ಲಿಯ ರಾಷ್ಟ್ರೀಯ ಪಕ್ಷದ ವಾರಪತ್ರಿಕೆಯು ದರೆ ಇದೇ ಅಖಂಡ ಕರ್ನಾಟಕದ ದೃಷ್ಟಿಯುಳ್ಳ ಮೈಸೂರಲ್ಲಿಯ ಪತ್ರಿಕೆ ಇಂದಕೆ ಇದು. ವಾ. ವ. ೩—೮—೦

ಮ್ಯಾನೇಜರ.

ಈ ಪತ್ರಿಕೆಯು ಮುಂಗ / ಸೇಥ್ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಣದಲ್ಲಿ ಮುದ್ರಿಸಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು. ಪ್ರತಿ ೧೦೦೦

ರಿ. ನಂ. ಬಿ. ೧೯೪೭ ವಾ. ಚಂದಾ ೧—೦—೩—ಮಾತ್ರ

ಕನ್ನಡಿಗ.

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವೇಶವಾಗಿದೆ)

सर्वं परवशं दुःखं । सर्वमात्मवशं सुखं ॥ — मनु

ಸಂಪಾದಕರು—ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ } ಬಾಗಲಕೋಟೆ ಶುಕ್ರವಾರ ಮಿತಿ ವೈಶಾಖ ವದ್ಯ ೮ ಶಕೆ ೧೮೪೭. ತಾ॥ ೧೫ ಮೇ-೧೯೨೫. { ಸಂಚಿಕೆ ೮

ಎದ್ದರೆ ಕನ್ನಡ ಕುಳಿತರೆ ಕನ್ನಡ ನುಡಿದರೆ ಕನ್ನಡವು ।
ಹೃದ್ಯವು ಕನ್ನಡ ಉದ್ಯಮ ಕನ್ನಡ- ಕನ್ನಡ- ಕನ್ನಡವು ।
ಕನಸು ಮನಸಿನೊಳು ಕನ್ನಡ ಕನ್ನಡ ನಿದ್ದೆಯು ಕನ್ನಡವು।
ಕಿನಸು ಕನ್ನಡವು ಜೀವಿತ ಕನ್ನಡ ಎಲ್ಲವು ಕನ್ನಡವು ॥
—ಕೈ. ಸಗರ ಕವಿ

೧೧ ನೇಯ ಕರ್ನಾಟಕ ಸಾಹಿತ್ಯ ಸಮ್ಮೇಲನವು

ಬೆಳಗಾವಿಯ ಯಶಸ್ವೀ ಅಧಿವೇಶನವು.

ಸಮ್ಮೇಲನದ ದಿನಗಳು ಸಮೀಪಿಸಿದಂತೆ ಬೆಳಗಾವಿಯ ಕನ್ನಡ ಹುರುಪಿನ ಅಭಿಮಾನ ಶಾಲಿಗಳು ಒಳ್ಳೇ ಉತ್ಸಾಹವನ್ನು ತೋರ್ಪಡಿಸುತ್ತ ಎಲ್ಲ ಏರ್ಪಾಡುಗಳನ್ನೂ ಮಾಡಹತ್ತಿದರು. ಮರಾಟಿಗರು ಮಾತ್ರ ತಮ್ಮ ದುರ್ದಶತೆಯನ್ನು ವ್ಯಕ್ತಮಾಡದೇ ಯಿರಲಿಲ್ಲವೆಂಬದನ್ನು ವ್ಯಸನದಿಂದ ಹೇಳಬೇಕಾಗುತ್ತದೆ. ಕರ್ನಾಟಕ ಸಾಹಿತ್ಯ ಸಮ್ಮೇಲನವು ರಾಜಕೀಯ ಸಂಸ್ಥೆಯೆಂದೂ ಆದ್ದರಿಂದ ಸರಕಾರದವರು ಜಾಗ್ರತರಾಗಿರತಕ್ಕದ್ದೆಂದೂ ಕುಚೇಷ್ಟೆಗಾರರು ಮುಂಬೈ ಸರಕಾರಕ್ಕೆ ಒಂದು ಪತ್ರ ಬರದಿದ್ದರು ಇದರಿಂದ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಹೋಗಲು ಸರಕಾರೀ ನೌಕರರಿಗೆ ಅಪ್ಪಣೆ ದೊರೆಯಲು ಸ್ವಲ್ಪ ವಿಲಂಬವಾಯಿತಷ್ಟೇ ಇನ್ನಾವ ಕೆಲಸಕ್ಕೂ ತೊಂದರೆಯಾಗಿರಲಿಲ್ಲ. ಆದರೆ ಈ ಬಗೆಯ ಪತ್ರಬರೆದು ಹಲವುಮರಾಟಿಗರು ಮಾತ್ರಕನ್ನಡದಬಗ್ಗೆ ತಮ್ಮಲ್ಲಿದ್ದ ದ್ವೇಷಭಾವವನ್ನು ತೋರ್ಪಡಿಸಿದರು. ಇನ್ನೂ ಈ ಜನರ ಹುಚ್ಚು ಎಂದು ಬಿಡುವದೋ ಏನೋ. ಕರ್ನಾಟಕದ ಕಾಂಗ್ರೆಸ್ಸು ಬೆಳಗಾವಿಯಲ್ಲಾಗಿ ಬೆಳಗಾವಿಯು ಕರ್ನಾಟಕಕ್ಕೆ ಸೇರಿದ್ದೆಂಬದನ್ನು ಅಖಂಡ ಜಗತ್ತಿಗೆಲ್ಲ ಸಾರಿದ್ದು ಈ ಜನರ ಮನಸ್ಸಿಗೆ ಒಳ್ಳೇ ವ್ಯಥೆಯನ್ನುಂಟು ಮಾಡಿದಂತೆ ಕಾಣುತ್ತೆ. ಮೇಲಾಗಿ ೩-೪ ತಿಂಗಳುಗಳಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಪುನಃ ಬೆಳಗಾವಿಯಲ್ಲಿಯೇ ಕೂಡಿದ್ದು ಸಹ ಹಲಕೆಲವು ಮರಾಟಿಗರಿಗೆ ರುಚಿಸದಂತೆ ಕಾಣುವದಿಲ್ಲ. ಇದೇ ಸಮಯದಲ್ಲಿ 'ಕನ್ನಡ' ನಾಡಿಗೆ ಹೆಸರುವಾಸಿಯಾದ ದತ್ತಾತ್ರೇಯ ನಾಟಕ ಮಂಡಲದವರು ಸಹ ಬೆಳಗಾವಿಯಲ್ಲಿಯೇ ತಮ್ಮ ನಾಟಕಗಳನ್ನಾಡುತ್ತ ಅಲ್ಲಿಯ ಕನ್ನಡಿಗರಲ್ಲಿ ಕನ್ನಡದ ಅಭಿಮಾನ ಮಾನವನ್ನು ಹೆಚ್ಚಿಸುತ್ತ, ಮರಾಟಿಗರಲ್ಲಿ ಸಹ ಕನ್ನಡದ ಬಗ್ಗೆ ಆದರವನ್ನು ಹುಟ್ಟಿಸಿದ್ದು, ಬೆಳಗಾವಿಯ ಕನ್ನಡ ಇತಿಹಾಸದಲ್ಲಿ ಮಹತ್ವದ್ದಾಗಿದೆ.

ಅಧ್ಯಕ್ಷರಾದ ಬೆನಗಲ್ಲ ರಾಮರಾಯರೂ, ಶ್ರೀಯುತರುಗಳಾದ ಕೃಷ್ಣಶಾಸ್ತ್ರಿಗಳೂ, ಕರ್ಪೂರ ಶ್ರೀನಿವಾಸರಾಯರೂ, ಬಳ್ಳಾರೀ ವೆಂಕಟ ನಾರಾಯಣಪ್ಪನವರೂ, ದೇಶಪಾಂಡೆ ರಾಮಚಂದ್ರರಾಯರೂ ಕರ್ನಾಟಕ ೧ ನೇಯ ವಿದ್ಯಾರ್ಥಿಗಳ ಪರಿಷತ್ತಿನ ಅಧ್ಯಕ್ಷರಾದ ಕಲಕಾ ವೆಂಕಣ್ಣಯ್ಯನವರೂ, ಇವರೇ ಮೊದಲಾದ ಕನ್ನಡ ಭಕ್ತರು ಶುಕ್ರವಾರದಿನ(ತಾ. ೮)ಮೇಲು ಗಾಡಿಯಿಂದ ಬೆಳಗಾವಿಗೆ ತಲ್ಪಿದರು. ರೇಲ್ವೇ ಬಂಡಿಯು ಸ್ಟೇಶನ್‌ದಲ್ಲಿ ಒಂದೊಡನೆ ನೆರೆದಿದ್ದ ಜಯಘೋಷವಾಗಿ, ಬಂದ ಅತಿಥಿಗಳನ್ನು, ಸ್ವಾಗತ ಮಂಡಲದ ಪರಿಯಿಂದ ಶ್ರೀ. ಚಿಕ್ಕೋಡಿ ತಮ್ಮಪ್ಪನವರೂ, ಕಾರ್ಯದರ್ಶಿಗಳಾದ ಗೆಜ್ಜೀ ಮತ್ತು ಚಿಕ್ಕೋಡಿ ಪಂಡಿತಪ್ಪನವರೂ, ಮತ್ತು ರಾ.ಸ. ವಣಕುದರೆಯವರೂ, ಪ್ರೋತವಾರ ರಂಗರಾಯರೂ ಇವರೇ ಮೊದಲಾದ ಸದ್ಗೃಹಸ್ಥರು, ಬರಮಾಡಿಕೊಂಡರು. ಕೂಡಲೇ ಮೆರವಣಿಗೆಯು ಹೊರಟಿತು. ಊರೊಳಗಿನ ಪ್ರಮುಖ ಬೀದಿಗಳಲ್ಲೆಲ್ಲ ಹಾಯ್ದು, ಹಾಯಸ್ಕೂಲ ವಸತಿಗೃಹಕ್ಕೆ ತಲ್ಪಿತು. ವೈಶಾಖ ಬಹುಳ ೧ ಶನಿವಾರ ದಿನ ಮಧ್ಯಾಹ್ನ ೩॥ ಘಂಟೆಗೆ ಅಧ್ಯಕ್ಷರೂ, ಇನ್ನುಳಿದ ಕನ್ನಡ ತಾಯ್ನುಡಿಯ ಮಕ್ಕಳೂ, ಸಕಲ ವಾದ್ಯ ವೈಭವದೊಡನೆ ಶಿವಾನಂದ ನಾಟಕ ಶಾಲೆಗೆ ದಯಮಾಡಿಸಿದರು. ಎಲ್ಲರೂ ತಮ್ಮ ತಮ್ಮ ಸ್ಥಾನಗಳನ್ನಾಕ್ರಮಿಸಿದೊಡನೆ, ಕವಿಭೂಷಣರು ರಚಿಸಿದ ಸ್ವಾಗತಪರಗೀತೆಯನ್ನು, ಬಾಲ ಬಾಲಿಕೆಯರು ಸುಸ್ವರದಿಂದ ಹಾಡಿದರು. ಇದೇ ಸಮಯದಲ್ಲಿ ಬೆಳಗಾವಿಯ ಕಲೆಕ್ಟರರಾದ ಶ್ರೀ. ಘೋಕ್ಸರವರು ಬಂದು, ಅಧ್ಯಕ್ಷ ಸ್ವಾಗತಾಧ್ಯಕ್ಷ ಮುಂತಾದ ಮಹನೀಯರುಗಳ ಹಸ್ತಾಂದೋಲನವನ್ನು ಮಾಡಿ, ಕುಳಿತರು. ಆ ಮೇಲೆ ಸ್ವಾಗತಾಧ್ಯಕ್ಷರಾದ ಶ್ರೀ. ಚಿಕ್ಕೋಡಿ ತಮ್ಮಣ್ಣಪ್ಪನವರು, ತಮ್ಮ ಭಾಷಣವನ್ನು ಒಳ್ಳೇ ಸ್ಫೂರ್ತಿಯಿಂದ ಓದಿದರು. ಇವರಭಾಷಣದ ಸಾರಾಂಶವು ಕೆಳಗೆ ಕಾಣಿಸಿದಂತಿದೆ.

"ಮಹಾಶಯರಾದ ಪ್ರತಿನಿಧಿಗಳೇ, ಪ್ರಿಯರಾದ ಕನ್ನಡನುಡಿಯ ಅಭಿಮಾನಿಗಳೇ! ಎಲ್ಲ ಕನ್ನಡಿಗರ ಹೃದಯಮಂದಿರದಲ್ಲಿ ಜ್ಞಾನ ಪ್ರಕಾಶವನ್ನುಂಟು ಮಾಡಿ, ನಮ್ಮ ಮುದ್ದು ಕನ್ನಡ ನುಡಿಯೆಂಬ ತಾಯಿಯನ್ನು ಎಲ್ಲ ಬಗೆಯಿಂದ ಏಳ್ಗೆಗೊಳಿಸುವ ಕರ್ತವ್ಯಕ್ಕೆ ಹಚ್ಚಬೇಕೆಂದು, ಅವತರಿಸಿದ ಈ ಹನ್ನೊಂದನೆಯ ಕರ್ನಾಟಕ ಸಾಹಿತ್ಯ ಸಮ್ಮೇಲನಕ್ಕೆ, ತಾವು ಮಹನೀಯರೆಲ್ಲರು ನಮ್ಮ ಬಿನ್ನಹವನ್ನು ಮನ್ನಿಸಿ ಬಂದು ಈ ಸಭೆಯನ್ನು ಅಂದಗೊಳಿಸಿರುವದನ್ನು ಕಣ್ಣು ತುಂಬ ನೋಡಿ, ನಾನು ಆನಂದಪರವಶನಾಗಿರುವೆನು. ನಾನು ಸ್ವಾಗತಮಂಡಲದ ಪರವಾಗಿ ತಮ್ಮೆಲ್ಲರ ಉಪಕಾರಗಳನ್ನು ನೆನೆಯುತ್ತೇನೆ. ತಮ್ಮಗಳ ಯೋಗ್ಯತೆಗೆ ಸರಿಯಾಗಿ ನಮ್ಮಿಂದ ಆದರಾತಿಥ್ಯವಾಗದಿದ್ದರೂ, ಭಕ್ತಪ್ರಿಯನಾದ ಸ್ವಾಮಿಯು ಕೇವಲ ಸದ್ಭಾವಕ್ಕೆ ಮೆಚ್ಚುವಂತೆ, ಕೃಷ್ಣಪರಮಾತ್ಮನು ಸುದಾಮನ ಅವಲಕ್ಕಿಯಿಂದ ತೃಪ್ತನಾದಂತೆ, ನಾವು ಅಂತಃಕರಣ

ಪತ್ರವ್ಯವಹಾರ.

ಕನ್ನಡಿಗ ಸಂಪಾದಕರಿಗೆ:—

ಕೃತಾನೇಕ ನಮಸ್ಕಾರಗಳು ತರುವಾಯ ತಮ್ಮ ಪತ್ರದ ‘ ಸಂಪಾದಕರ ಭೂಮಿ ’ ಯ ಸ್ಥಳಕ್ಕೆ ಬರೆದ ನಾಲ್ಕು ಸಾಲುಗಳ ಬಗ್ಗೆ ಈ ನಾಲ್ಕು ಸಾಲುಗಳನ್ನು ತಮ್ಮ ಪತ್ರದಲ್ಲಿ ಪ್ರಕಟಿಸಬೇಕಾಗಿ ಬಿನ್ನವಿಸುತ್ತೇನೆ.

ಆ ನಾಲ್ಕು ಸಾಲುಗಳು ನನ್ನವಲ್ಲ. ಅವು ಒಂದುವರೆ ವರ್ಷದ ಪೂರ್ವದಲ್ಲಿ ಮರೆಯದ ಹೊತ್ತಿನಲ್ಲಿ ಹೆಜ್ಜೆಯನ್ನಿಡುತ್ತಲೇ ತೀರಿಕೊಂಡ “ ಚಿದಂಬರ ಕೃಷ್ಣ ನಗರ ” ಎಂಬ ಗೆಳೆಯರ ಗುಂಪಿನ ಶ್ರೇಷ್ಠನಾಗಿದ್ದ ಗೆಳೆಯನವು. ಪ್ರಸಿದ್ಧವಾದವೆಂದರೆ ಅದೊಂದೇ ಅವನ ಕವಿತೆ. ಯಾವ ವಿಷಯೋಗದಲ್ಲಿ ಅವನ ಮೊದಲನೇ ಕವಿತೆಯು ಪ್ರಕಾಶಗೊಂಡಿತೋ ಎಂದು ನನಗೆ ನೆನಪಾದಾಗ್ಗೆ ದುಃಖಗೊಳ್ಳುವದು. ಯಾಕಂದರೆ ಶಾಂತ ಕವಿಗಳ ಪ್ರಥಮ ದರ್ಶ- ತ್ರಾದ್ದ ನಿಮಿತ್ತನಾಗಿ ಅವರ ಸ್ನೇಹಗಾರರೆಂದು ವಿ. ವ. ಸಂಘದವರು ‘ ವಾಗ್ಭೂಷಣ ’ ದ ಸಂಚಿಕೆಯನ್ನು ಸಂಪಾದಿಸುವ ಕೆಲಸವನ್ನು ನನಗೊಪ್ಪಿಸಿದ್ದರು. ಆ ಸಂಚಿಕೆಯಲ್ಲಿಯೇ ಈ ಕವಿತೆಯು ಪ್ರಸಿದ್ಧವಾಗಲು ನಾನು ನಿಮಿತ್ತನಾದೆನು. ಇಷ್ಟೇ ಅಲ್ಲ. ಅದೇ ಸಂಚಿಕೆಯಲ್ಲಿ “ ಶಾಂತ ಕವಿಗಳ ನೆನಪು ” ಎಂಬ “ ವಿದ್ಯಾರ್ಥಿ ” ಕವಿಯ ಕವಿತೆಯೊಂದಿತ್ತು. ಅದು ಪ್ರಸಿದ್ಧವಾಗಲೂ ನಾನೇ ನಿಮಿತ್ತನಾದೆನು. ಆ ಕವಿತೆಯನ್ನು ಬರೆದ ‘ ಪ್ರಜ್ಞಾದ ಪಾರಿಸ್ವಾದ ’ ಎಂಬ ಗೆಳೆಯನೂ ತೀರಿಕೊಂಡು ವರ್ಷವಾಗುತ್ತ ಬಂತು. ಆ ಕವಿತೆಯಾದರೂ ಅವನ (ಪ್ರಸಿದ್ಧವಾದವುಗಳಲ್ಲಿ) ಕಡೆ ಮೊದಲನೆಯದೇ! ಅಂತೆಯೇ ನನ್ನ ಜೀವಕ್ಕೆ ದುಃಖ ಹುಟ್ಟಿಸುವದೆಂಬದನ್ನು ಈ ಮಾತು ಪ್ರಸ್ತುತವಲ್ಲದಿದ್ದರೂ ಪ್ರಸಂಗೋಚಿತವೆಂದು ಹೇಳಬೇಕಾಯಿತು.

ಇನ್ನು “ ರಕ್ಷಿಸು ಕರ್ನಾಟಕದೇವಿ ” ಎಂಬ ನಾಡ ಹಾಡನ್ನೂ “ ಇಂತಿದೆ ಪಾತಾಳಭೂತಕೆ ” ಎಂಬ ವ್ಯಾಖ್ಯಾನವ್ಯಾಖ್ಯಾನವನ್ನೂ ಮಾಡಿ ಹೋದ ಶಾಂತ ಕವಿಗಳ ಹೆಸರನ್ನು ಕೇಳದವರು ಸದ್ಯದ ಕನ್ನಡಿಗರಲ್ಲಂತೂ ಬಹಳ ವಿರಳವಿದ್ದಾರೆಂದು ನನ್ನ ನಂಬಿಗೆ. ಅವರ ಜೀವಿತವನ್ನು ಕುರಿತ ‘ ಚಿದಂಬರ ’ ನಿಗೆ ಅವರಿಗ ಕನ್ನಡವು ಬಳಕೆಯಾಗಿತ್ತೋ ಏನೋ? ಎಂದು ಕೇಳಬೇಕಾಗಿ ಆ ಕನ್ನಡ ಬರಹದ ಬಡಕುಲಾಕುಲೆಯ ಗುರುಯನ್ನು ‘ ಚಿದಂಬರ ’ ನು ಹೀಗೆ ಹಾಡಿದನು. (ವೃತ್ತವು ಎಂಟೆಂಟು ಮಾತ್ರೆಯ ಮೂರು ಗಣಗಳೂ ಒಂದು ಗುರುವೂ ಒಂದು ಸಾಲಿನಲ್ಲುಳ್ಳ ದೋಷವೊಂದು ವೃತ್ತವು ಗಿರುವದು)

ಮಹಾತ್ಮಾ ಜಿ ಯವರು ಖಾದಿ ಭಕ್ತರಾಗಿರುವಂತೆ ಕನ್ನಡ ಭಕ್ತರಾಗಿರುವ ತರುಣರಲ್ಲೊಂದು ವಿಲೇಗಿಯೂ ಒಂದು ಕನ್ನಡದ ಅಚಲ ಪ್ರತಿಷ್ಠಾಪನೆಯನ್ನು ಮಾಡಬೇಕೆನ್ನುವೆನೇ ಎಂದು ‘ ಚಿದಂಬರ ’ “ ಸ್ತ್ರೀರತ್ನದ ಸಾವಿತ್ರಿ ” ದಂಥ ಲೇಖನ ಅಭಿಪ್ರಾಯಾಂತ ವಾಣಿಯನ್ನು ಕೇಳಲಿಸುವನು ‘ ಆಡಿದಂತೆ ಆಗಲಿ ’ ಎಂದು ಶ್ರೀ ಭುವನೇಶ್ವರಿಗೆ ಹರಕೆ.

ಸ್ಥಳ
ಶ್ರೀ. ಮ. ಬ. ಸೋಮವಾರ
ಕೆಂಪ್ರಧನ ೧೮೪೭

ಅಂಬಿಕಾತನಯದತ್ತ,
ಸಾಧನಕೇರಿ ಧಾರವಾಡ

ಕನ್ನಡಿಗನ ಲೇಖಕರಿಗೆ ಸೂಚನೆಗಳು

(೧) ಕನ್ನಡಿಗನಲ್ಲಿಯ ಎಲ್ಲ ಲೇಖಗಳು ಕನ್ನಡನಾಡು, ಕನ್ನಡನುಡಿ, ಕನ್ನಡ ಸಂಸ್ಕೃತಿ, ಅಥವಾ ಕರ್ನಾಟಕದ ಏಕೀಕರಣ ಈ ವಿಷಯಗಳಲ್ಲಿ ಯಾವದಾದರೊಂದು ವಿಷಯಕ್ಕೆ ಸಂಬಂಧಪಟ್ಟಿರಬೇಕು. ಬೇರಾದ ವಿಷಯವನ್ನು ತೆಗೆದುಕೊಂಡು ಲೇಖನವನ್ನು ಬರೆಯುವದು ಇದರೆ ಆ ವಿಷಯವು ಮೇಲೆ ಉಲ್ಲೇಖಿಸಿದ ಸಂಗತಿಗಳಿಗೆ ಹೇಗೆ ಸಂಬಂಧಪಡುವದೆಂಬುದು ಸ್ಪಷ್ಟವಾಗಿರಬೇಕು.

(೨) ವಿಷಯಗಳೆಲ್ಲ ಜ್ಞಾನಪ್ರಧಾನವಾಗಿರಬೇಕು. ಓದುಗರ ವಿಚಾರಗಳನ್ನು ಪ್ರಜ್ವಲಿಸುವಂಥವಿರಬೇಕು. ಶುದ್ಧ ಭಾವನಾತ್ಮಕವಾದ ಲೇಖಗಳಿಗೆ ಕನ್ನಡಿಗನಲ್ಲಿ ಪ್ರವೇಶವಿಲ್ಲ. ಆದರೆ ಯಾವದಾದರೊಂದು ವಿಷಯವನ್ನು ತಾತ್ವಿಕ ರೀತಿಯಿಂದ ವಿವೇಚಿಸಿ, ಕಡೆಗೆ ಓದುಗರನ್ನು ಜಾಗೃತಗೊಳಿಸಲಿಕ್ಕೆ ಭಾವನಾತ್ಮಕವಾದ ವಾಕ್ಯಗಳನ್ನು ಪ್ರಯೋಗಿಸಬಹುದು.

(೩) ಪ್ರತಿಯೊಂದು ಲೇಖವು ಎರಡು ಅಂಕಣಗಳ (ಕಾಲಮ್ಮ) ಗಿಂತ ಹೆಚ್ಚಾಗಿರಕೂಡದು. ವಿಷಯವು ಅಂಥ ದೊಡ್ಡದಿದ್ದು, ಎರಡು ಅಂಕಣಗಳಲ್ಲಿ ಅದರ ವಿವೇಚನವು ಶಕ್ಯವಿಲ್ಲದಿದ್ದರೆ, ಅದರಲ್ಲಿ ಭಾಗಗಳನ್ನು ಮಾಡಿ ಲೇಖಾಂಕಗಳ ರೂಪದಿಂದ ಕಳಿಸಬೇಕು.

(೪) ಎಲ್ಲ ಲೇಖಗಳು ಯಾವಾಗಲೂ ಒಂದೇ ಮಗ್ಗಲಿಗೆ ಸ್ಪಷ್ಟವಾದ ಅಕ್ಷರಗಳಿಂದ ಬರೆದಿದ್ದವಾಗಿರಬೇಕು.

(೫) ಲೇಖಕರು ತಮಗೆ ವೇತನವು ಬೇಕೋ ಅಥವಾ ಬೇಡವೋ ಎಂಬುದನ್ನು ಬರೆದಿರಬೇಕು. ಈ ವಿಷಯವನ್ನು ಸಂದಿಗ್ಧವಾಗಿ ಇಡಕೂಡದು.

(೬). ನಿರಾಕರಿಸಲ್ಪಟ್ಟ ಲೇಖಗಳು ಮರಳಿ ತಮಗೆ ಬೇಕಾಗಿದ್ದರೆ, ಲೇಖಗಳ ಸಂಗಡಲೇ, ತಮ್ಮ ವಿಳಾಸವನ್ನು ಬರೆದು ತಿಕೀಟು ಹಚ್ಚಿದಂಥ ಲಕೋಟೆಯನ್ನು ಕಳಿಸಿರಬೇಕು. ಹಾಗೆ ಮಾಡಿರದಿದ್ದರೆ, ನಿರಾಕರಿಸಲ್ಪಟ್ಟ ಲೇಖಗಳು ನಾಶವಾದಂಥವು. ಲೇಖಗಳು ಯಾಕೆ ನಿರಾಕರಿಸಲ್ಪಟ್ಟವೆಂಬುದನ್ನು ಲೇಖಕರಿಗೆ ತಿಳಿಸಲು ಸಂಪಾದಕರು ಬಾಧ್ಯರಲ್ಲ.

— ಸಂಪಾದಕ ಕನ್ನಡಿಗ.

ಲೋಕಬಂಧು

ಈ ವಾರಪತ್ರವು ಧಾರವಾಡದಲ್ಲಿ ಲಕ್ಷ್ಮಣ ರಾಮಚಂದ್ರ ಜಿರಲಿ ಇವರ ಸಂಪಾದಕತ್ವದ ಕೆಳಗೆ ಪ್ರತಿ ರವಿವಾರ ಹೊರಡುತ್ತದೆ. ಇದರಲ್ಲಿ ರಾಜಕೀಯ ಸಾಮಾಜಿಕ ಔದ್ಯೋಗಿಕ, ಶೈಕ್ಷಣಿಕ ಮುಂತಾದ ವಿಷಯಗಳು ಚನ್ನಾಗಿ ಪ್ರತಿಪಾದಿಸಲ್ಪಡುವವಲ್ಲದೆ ಎಲ್ಲ ಪ್ರಚಲಿತ ಸಂಗತಿಗಳು ಸುಲಭ ಭಾಷೆಯಲ್ಲಿ ಬರೆಯಲ್ಪಡುವವು.

ವಾರ್ಷಿಕ ವರ್ಗಣಿ. ಮುಂಗಡ ೩-೦-೦ | ಮ್ಯಾನೇಜರ. ಲೋಕಬಂಧು. ಧಾರವಾಡ

ಮೈಸೂರ ಕ್ರಾನಿಕಲ್ ಬೆಂಗಳೂರ.

ಮೈಸೂರ ದೇಶದಲ್ಲಿಯ ರಾಷ್ಟ್ರೀಯ ಪಕ್ಷದ ವಾರಪತ್ರಿಕೆಯು ಮತ್ತು ಅಖಂಡ ಕರ್ನಾಟಕದ ದೃಷ್ಟಿಯುಳ್ಳ ಮೈಸೂರಲ್ಲಿಯ ಪತ್ರಿಕೆ ಇದೊಂದೇ. ವಾ. ಚಂ. ೭-೮-೦

ಮ್ಯಾನೇಜರ.

ಈ ಪತ್ರಿಕೆಯು ಮುಂಗ 'ಸೇಥ್ ರಾಜಾರಾಮ ಮನ್ಮುಖರಾವ ಶ್ರೀನಿವಾಸರಾಯರಿಂದ ಬಾಗಲಕೋಟೆಯ ಕ್ಷೇಮ ವಿದ್ಯಾವರ್ಧಕ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು. ಪ್ರತಿ ೧೦೦೦

ರ ನಂ, ಬಿ. ೧೯೪೭ ವಾ. ಚಂದಾ ೧—೪—೦ ಮಾತ್ರ

ಕನ್ನಡನಾಡು.

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವೇಶವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು—ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ } ಬಾಗಲಕೋಟೆ ಶುಕ್ರವಾರ ಮಿತಿ ವೈಶಾಖ ವದ್ಯ ೮ ಶಕೆ ೧೮೪೭. ತಾ॥ ೧೫ ಮೇ-೧೯೨೫. { ಸಂಚಿಕೆ ೮

ಎದ್ದರೆ ಕನ್ನಡ ಕುಳಿತರೆ ಕನ್ನಡ ನುಡಿದರೆ ಕನ್ನಡವು ।
ಹೃದ್ಯವು ಕನ್ನಡ ಉದ್ಯಮ ಕನ್ನಡ- ಕನ್ನಡ-ಕನ್ನಡವು ।
ಕನಸು ಮನಸಿನೊಳು ಕನ್ನಡ ಕನ್ನಡ ನಿದ್ದೆಯು ಕನ್ನಡವು।
ಜಿನಸು ಕನ್ನಡವು ಜೀವಿತ ಕನ್ನಡ ಎಲ್ಲವು ಕನ್ನಡವು ॥

—ಕೈ. ನಗರ ಕವಿ

೧೧ ನೇಯ ಕರ್ನಾಟಕ ಸಾಹಿತ್ಯ ಸಮ್ಮೇಲನವು

ಬೆಳಗಾವಿಯ ಯಶಸ್ವೀ ಅಧಿವೇಶನವು.

ಸಮ್ಮೇಲನದ ದಿನಗಳು ಸಮೀಪಿಸಿದಂತೆ ಬೆಳಗಾವಿಯ ಕನ್ನಡ ಹಸುರುಸಿನ ಅಭಿಮಾನ ಶಾಲಿಗಳು ಒಳ್ಳೇ ಉತ್ಸಾಹವನ್ನು ತೋರ್ಪಡಿಸುತ್ತ ಎಲ್ಲ ವಿರ್ಪಾಡುಗಳನ್ನೂ ಮಾಡಹತ್ತಿದರು. ಮರಾಟಿಗರು ಮಾತ್ರ ತಮ್ಮ ದುರ್ದಶೆಯನ್ನು ವ್ಯಕ್ತಮಾಡದೇ ಬಿಡಲಿಲ್ಲ ವೆಂಬದನ್ನು ವ್ಯಸನದಿಂದ ಹೇಳಬೇಕಾಗುತ್ತದೆ. ಕರ್ನಾಟಕ ಸಾಹಿತ್ಯ ಸಮ್ಮೇಲನವು ರಾಜಕೀಯ ಸಂಸ್ಥೆಯೆಂದೂ ಆದ್ದರಿಂದ ಸರಕಾರದವರು ಜಾಗ್ರತರಾಗಿರತಕ್ಕದ್ದೆಂದೂ ಕುಚೇಷ್ಟೆಗಾರರು ಮುಂಬೈ ಸರಕಾರಕ್ಕೆ ಒಂದು ಪತ್ರ ಬರದಿದ್ದರು ಇದರಿಂದ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಹೋಗಲು ಸರಕಾರೀ ನೌಕರರಿಗೆ ಅಪ್ಪಣೆ ದೊರೆಯಲು ಸ್ವಲ್ಪ ವಿಲಂಬವಾಯಿತಷ್ಟೇ ಇನ್ನಾವ ಕೆಲಸಕ್ಕೂ ತೊಂದರೆಯಾಗಿರಲಿಲ್ಲ. ಆದರೆ ಈ ಬಗೆಯ ಪತ್ರಬರೆದು ಹಲವುಮರಾಟಿಗರು ಮಾತ್ರಕನ್ನಡದಬಗ್ಗೆ ತಮ್ಮಲ್ಲಿದ್ದ ದ್ವೇಷಭಾವವನ್ನು ತೋರ್ಪಡಿಸಿದರು. ಇನ್ನೂ ಈ ಜನರ ಹುಚ್ಚು ಎಂದು ಬಿಡುವದೋ ಏನೋ. ಕರ್ನಾಟಕದ ಕಾಂಗ್ರೆಸ್ಸು ಬೆಳಗಾವಿಯಲ್ಲಾಗಿ ಬೆಳಗಾವಿಯು ಕರ್ನಾಟಕಕ್ಕೆ ಸೇರಿದ್ದೆಂಬದನ್ನು ಅಖಂಡ ಜಗತ್ತಿಗೆಲ್ಲ ಸಾರಿದ್ದು ಈ ಜನರ ಮನಸ್ಸಿಗೆ ಒಳ್ಳೇ ವ್ಯಥೆಯನ್ನುಂಟು ಮಾಡಿದಂತೆ ಕಾಣುತ್ತೆ. ಮೇಲಾಗಿ ೩-೪ ತಿಂಗಳುಗಳಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಪುನಃ ಬೆಳಗಾವಿಯಲ್ಲಿಯೇ ಕೂಡಿದ್ದು ಸಹ ಹಲಕೆಲವು ಮರಾಟಿಗರಿಗೆ ರುಚಿಸದಂತೆ ಕಾಣುವದಿಲ್ಲ. ಇದೇ ಸಮಯದಲ್ಲಿ 'ಕನ್ನಡ' ನಾಡಿಗೆ ಹೆಸರುವಾಸಿಯಾದ ದತ್ತಾತ್ರೇಯ ನಾಟಕ ಮಂಡಲದವರು ಸಹ ಬೆಳಗಾವಿಯಲ್ಲಿಯೇ ತಮ್ಮ ನಾಟಕಗಳನ್ನಾಡುತ್ತ ಅಲ್ಲಿಯ ಕನ್ನಡಿಗರಲ್ಲಿ ಕನ್ನಡದ ಅಭಿಮಾನ ಮಾನವನ್ನು ಹೆಚ್ಚಿಸುತ್ತ, ಮರಾಟಿಗರಲ್ಲಿ ಸಹ ಕನ್ನಡದ ಬಗ್ಗೆ ಆದರವನ್ನು ಹುಟ್ಟಿಸಿದ್ದು, ಬೆಳಗಾವಿಯ ಕನ್ನಡ ಇತಿಹಾಸದಲ್ಲಿ ಮಹತ್ವದ್ದಾಗಿದೆ.

ಅಧ್ಯಕ್ಷರಾದ ಬೆನಗಲ್ಲ ರಾಮರಾಯರೂ, ಶ್ರೀಯುತರುಗಳಾದ ಕೃಷ್ಣಶಾಸ್ತ್ರಿಗಳೂ, ಕರ್ಪೂರ ಶ್ರೀನಿವಾಸರಾಯರೂ, ಬೆಳ್ಳಾವೇ ವೆಂಕಟನಾರಾಯಣಪ್ಪನವರೂ, ದೇಶಪಾಂಡೆ ರಾಮಚಂದ್ರರಾಯರೂ ಕರ್ನಾಟಕ ೧ ನೇಯ ವಿದ್ಯಾರ್ಥಿಗಳ ಪರಿಷತ್ತಿನ ಅಧ್ಯಕ್ಷರಾದ ತಲಕಾಡು ವೆಂಕಣ್ಣಯ್ಯನವರೂ, ಇವರೇ ಮೊದಲಾದ ಕನ್ನಡ ಭಕ್ತರು ಶುಕ್ರವಾರದಿನ(ತಾ. ೮)ಮೇಲು ಗಾಡಿಯಿಂದ ಬೆಳಗಾವಿಗೆ ತಲ್ಪಿದರು. ರೇಲ್ವೇ ಬಂಡಿಯು ಸ್ಟೇಶನ್ನದಲ್ಲಿ ಬಂದೊಡನೆಯೇ ಜಯಘೋಷವಾಗಿ, ಬಂದ ಅತಿಥಿಗಳನ್ನು, ಸ್ವಾಗತ ಮಂಡಲದ ಪತಿಯಿಂದ ಶ್ರೀ. ಚಿಕ್ಕೋಡಿ ತಮ್ಮಪ್ಪನವರೂ, ಕಾರ್ಯದರ್ಶಿಗಳಾದ ಗೆಜ್ಜೀ ಮತ್ತು ಚಿಕ್ಕೋಡಿ ಪಂಡಿತಪ್ಪನವರೂ, ಮತ್ತು ರಾ.ಸವಣೂರರವರೂ, ಪೋತದಾರ ರಂಗರಾಯರೂ ಇವರೇ ಮೊದಲಾದ ಸದ್ಗೃಹಸ್ಥರು, ಬರಮಾಡಿಕೊಂಡರು. ಕೂಡಲೇ ಮೆರವಣಿಗೆಯು ಹೊರಟಿತು. ಊರೊಳಗಿನ ಪ್ರಮುಖ ಬೀದಿಗಳಲ್ಲೆಲ್ಲ ಹಾಯ್ದು, ಹಾಯಸ್ಕೂಲ ವಸತಿಗೃಹಕ್ಕೆ ತಲ್ಪಿತು. ವೈಶಾಖ ಬಹುಳ ೧ ಶನಿವಾರ ದಿನ ಮಧ್ಯಾಹ್ನ ೩ ½ ಘಂಟೆಗೆ ಅಧ್ಯಕ್ಷರೂ, ಇನ್ನುಳಿದ ಕನ್ನಡ ತಾಯ್ನುಡಿಯ ಮಕ್ಕಳೂ, ಸಕಲ ವಾದ್ಯ ವೈಭವದೊಡನೆ ಶಿವಾನಂದ ನಾಟಕ ಶಾಲೆಗೆ ದಯಮಾಡಿಸಿದರು. ಎಲ್ಲರೂ ತಮ್ಮ ತಮ್ಮ ಸ್ಥಾನಗಳನ್ನಾಕ್ರಮಿಸಿದೊಡನೆ, ಕವಿಭೂಷಣರು ರಚಿಸಿದ ಸ್ವಾಗತಪರಗೀತೆಯನ್ನು, ಬಾಲ ಬಾಲಿಕೆಯರು ಸುಸ್ವರದಿಂದ ಹಾಡಿದರು. ಇದೇ ಸಮಯದಲ್ಲಿ ಬೆಳಗಾವಿಯ ಕಲೆಕ್ಟರರಾದ ಶ್ರೀ. ಫೋರ್ಡರವರು ಬಂದು, ಅಧ್ಯಕ್ಷ ಸ್ವಾಗತಾಧ್ಯಕ್ಷ ಮುಂತಾದ ಮಹನೀಯರುಗಳ ಹಸ್ತಾಂದೋಲನವನ್ನು ಮಾಡಿ, ಕುಳಿತರು. ಆ ಮೇಲೆ ಸ್ವಾಗತಾಧ್ಯಕ್ಷರಾದ ಶ್ರೀ. ಚಿಕ್ಕೋಡಿ ತಮ್ಮಣ್ಣಪ್ಪನವರು, ತಮ್ಮ ಭಾಷಣವನ್ನು ಒಳ್ಳೇ ಸ್ಫೂರ್ತಿಯಿಂದ ಓದಿದರು. ಇವರಭಾಷಣದ ಸಾರಾಂಶವು ಕೆಳಗೆ ಕಾಣಿಸಿದಂತಿದೆ.

"ಮಹಾಶಯರಾದ ಪ್ರತಿನಿಧಿಗಳೇ, ಪ್ರಿಯರಾದ ಕನ್ನಡನುಡಿಯ ಅಭಿಮಾನಿಗಳೇ! ಎಲ್ಲ ಕನ್ನಡಿಗರ ಹೃದಯಮಂದಿರದಲ್ಲಿ ಜ್ಞಾನ ಪ್ರಕಾಶವನ್ನುಂಟು ಮಾಡಿ, ನಮ್ಮ ಮುದ್ದು ಕನ್ನಡ ನುಡಿಯೆಂಬ ತಾಯಿಯನ್ನು ಎಲ್ಲ ಬಗೆಯಿಂದ ಏಳ್ಗೆಗೊಳಿಸುವ ಕರ್ತವ್ಯಕ್ಕೆ ಹಚ್ಚಬೇಕೆಂದು, ಅವತರಿಸಿದ ಈ ಹನ್ನೊಂದನೆಯ ಕರ್ನಾಟಕ ಸಾಹಿತ್ಯ ಸಮ್ಮೇಲನಕ್ಕೆ, ತಾವು ಮಹನೀಯರೆಲ್ಲರು ನಮ್ಮ ಬಿನ್ನಹವನ್ನು ಮನ್ನಿಸಿ ಬಂದು ಈ ಸಭೆಯನ್ನು ಅಂದಗೊಳಿಸಿರುವದನ್ನು ಕಣ್ಣು ತುಂಬ ನೋಡಿ, ನಾನು ಆನಂದಪರವಶನಾಗಿರುವೆನು. ನಾನು ಸ್ವಾಗತಮಂಡಲದ ಪರವಾಗಿ ತಮ್ಮೆಲ್ಲರ ಉಪಕಾರಗಳನ್ನು ನೆನೆಯುತ್ತೇನೆ. ತಮ್ಮಗಳ ಯೋಗ್ಯತೆಗೆ ಸರಿಯಾಗಿ ನಮ್ಮಿಂದ ಆದರಾತಿಥ್ಯವಾಗದಿದ್ದರೂ, ಭಕ್ತಪ್ರಿಯನಾದ ಸಾಂಬನು ಕೇವಲ ಸದ್ಭಾವಕ್ಕೆ ಮೆಚ್ಚುವಂತೆ, ಕೃಷ್ಣ ಪರಮಾತ್ಮನು ಸುದಾಮನ ಅವಲಕ್ಕಿಯಿಂದ ತೃಪ್ತನಾದಂತೆ, ತಾವು ಅಂತಃಕರಣ

ಪೂರ್ವಕವಾಗಿ ಮಾಡುವ ಅಲ್ಪವಾದ ಆದರಾತಿಥ್ಯವನ್ನು ತಾವೆಲ್ಲರು ಮನ್ನಿಸಿ ಸ್ವೀಕರಿಸುವಿರೆಂದು ಪೂರ್ಣವಾಗಿ ನಂಬಿದ್ದೇನೆ.

ನಮ್ಮ ಕನ್ನಡ ನಾಡಿನ ಇತಿಹಾಸದಲ್ಲಿ, ಬೆಳಗಾಂವಿಯ ಹೆಸರು ಮೊಟ್ಟ ಮೊದಲು ಹನ್ನೆರಡನೆಯ ಶತಮಾನದ ಮಧ್ಯಕಾಲದಲ್ಲಿ ಬಂದಂತೆ ಕಂಡುಬರುವದು. ಇದು ಗೋವೆಯ ಕದಂಬರಾಜರ ಆಳಿಕೆಗೆ ಒಳಗಾಗಿ, ಎಪ್ಪತ್ತು ಹಳ್ಳಿಗಳ ಹಿರಿಯೂರಾಗಿತ್ತು. ಮುಂದೆ ಸುಮಾರು ಕ್ರಿ. ಶ. ೧೨೦೮ರಲ್ಲಿ, ಈ ಊರು ವೇಣುಗ್ರಾಮ ಅಥವಾ ಬಿದಿರುಹಳ್ಳಿಯೆಂಬ ಹೆಸರಿನಿಂದ, ರಟ್ಟರಾಜರ ರಾಜಧಾನಿಯಾಯಿತು.

ಈ ಊರು ಅನುಕ್ರಮವಾಗಿ ದೇವಗಿರಿಯ ಯಾದವರು, ವಿಜಯನಗರದ ಸಮ್ರಾಟರು, ಬಾಮನಿ ಬಾದಶಹರು, ವಿಜಾಪೂರದ ಅದಿಲಶಾಹಿಯರು, ದಿಲ್ಲಿಯ ಮೊಗಲ ಬಾದಶಹರು, ಸವಣೂರಿನ ನವಾಬರು ಮತ್ತು ಪೇಶ್ವೆಯವರು—ಇವರ ಆಳಿಕೆಗೆ ಒಳಗಾಗಿ, ಕಡೆಗೆ ಕ್ರಿ. ಶ. ೧೮೧೮ ರಲ್ಲಿ, ಬ್ರಿಟಿಶ ಸರಕಾರದವರ ಕೈಸೇರಿರುವದು. ಇದರಲ್ಲಿ ನೂರು ವರ್ಷದ ಮೊದಲು ಜನಸಂಖ್ಯೆಯು ಸುಮಾರು ೮೦೦೦ ಇದ್ದು, ಈಗ ४೦೦೦೦ ಕ್ಕೆ ಮಿಕ್ಕಿ ಬೆಳಗಾಂವಿಯು ಜಿಲ್ಲೆಯ ಮುಖ್ಯ ಸ್ಥಾನವಾಗಿರುವದು.

ಶ್ರೀ. ನೃಪತುಂಗ ಭೂಪತಿಯ 'ಕವಿರಾಜಮಾರ್ಗ' ವೆಂಬ ಒಂಬತ್ತನೆಯ ಶತಮಾನದ ಗ್ರಂಥದಲ್ಲಿ:—

ಅದರೊಳಗಂ ಕಿಸುವೊಳಲಾ |
ವಿದಿತ ಮಹಾಕೊಪಣ ನಗರದಾ ಪುಲಿಗೆರೆಯಾ ||
ಸದಭಿಸ್ತುತಮಪ್ಪೊಕ್ಕುಂ- |
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ||೩೭||

ಎಂಬ ಕಂದ ಪದ್ಯದಲ್ಲಿ ಹೇಳಿದ ಕಿರುವೊಳಲು (ಪಟ್ಟದಕಲ್ಲು) ವಿಜಾಪೂರದ ಜಿಲ್ಲೆಯಲ್ಲಿರುವುದು. ಕೊಪಣವು (ಕೊಪ್ಪಳ) ನಿಜಾಮನ ರಾಜ್ಯದಲ್ಲಿರುವುದು. ಪುಲಿಗೆರೆಯು (ಲಕ್ಷ್ಮೇಶ್ವರ) ಧಾರವಾಡ ಜಿಲ್ಲೆಯೊಳಗಿರುವ ಮಿರಜ ಸಂಸ್ಥಾನದಲ್ಲಿರುವುದು. ಮತ್ತು ಒಕ್ಕುಂದವು (ಒಕ್ಕುಂದ) ಬೆಳಗಾಂವಿ ಜಿಲ್ಲೆಯಲ್ಲಿಯೇ ಇರುವುದು. ಎಂದಮೇಲೆ, ಒಂಬತ್ತನೇಯ ಶತಮಾನದಲ್ಲಿ ಈ ಬೆಳಗಾಂವಿ ಜಿಲ್ಲೆಯು ಕನ್ನಡದ ತಿರುಳಾಗಿ ಎನಿಸುತ್ತಿತ್ತು. ಈಗ ಮಹಾರಾಷ್ಟ್ರ (ಮರಾಠಿ) ಭಾಷೆಯ ಸಂಸ್ಥಾನಿಕರ ಆಳಿಕೆಯಲ್ಲಿರುವ "ಮುದವೊಳಲು" "ಜಂಬುಕಂಡಿ" "ಬೆಳುಗಲಿ" ಈ ಊರುಗಳು ಹತ್ತನೆಯ ಶತಮಾನದಲ್ಲಿ ಶುದ್ಧವಾದ ಕನ್ನಡ ನುಡಿಯ ಪ್ರಾಂತದೊಳಗೇ ಇದ್ದುವೆಂದು ಕನ್ನಡ ಮಹಾ ಕವಿಯಾದ "ರನ್ನ" ಮಹಾಶಯನ "ಗದಾಯುದ್ಧ" ವೆಂಬ ಉದ್ಗ್ರಂಥದಿಂದ ತಿಳಿದು ಬರುತ್ತಿದೆ. ಆ ರನ್ನ ಮಹಾಕವಿಯು ಈಗಿನ ಮಹಾರಾಷ್ಟ್ರ ಭಾಷೆಯ ಅರಸನ ಆಳಿಕೆಯಲ್ಲಿರುವ 'ಮುದವೊಳಲು' ಎಂಬ ಊರನ್ನು ತನ್ನ ನಿವಾಸದಿಂದ ಹೆಸರುಗೊಂಡುದನ್ನಾಗಿಯೂ ಚಿರಸ್ಮರಣೀಯವಾದುದನ್ನಾಗಿಯೂ ಮಾಡಿಬಿಟ್ಟಿದ್ದಾನೆ. ಅನೇಕ ಶತಮಾನಗಳಿಂದ ಕೊಲ್ಲಾಪೂರ ಸಂಸ್ಥಾನವೆಲ್ಲವೂ ಅಚ್ಚಗನ್ನಡ ನಾಡಾಗಿದ್ದಿತೆಂಬ ಬಗ್ಗೆ, ನೂರಾರು ಶಿಲಾಶಾಸನಗಳು ಈಗಲೂ ಉಗ್ಗಡಿಸುತ್ತಿರುವುವು. ಇಂತಹ ಅಚ್ಚಗನ್ನಡ ನುಡಿಯ ಬೆಳಗಾಂವಿ ಜಿಲ್ಲೆಯೂ, ಸಂಸ್ಥಾನಗಳೂ, ಈಗ ಯಾವ ದುರ್ದಶೆಗೆ ಈಡಾಗಿರುತ್ತವೆ. ನೋಡಿ! ನಾವು ನಮ್ಮ ನಡೆವಳಿಕೆಯ ಯೋಗಕ್ಷೇಮವನ್ನು ನೋಡಿಕೊಳ್ಳದಿರುವದರಿಂದ ಅವಳ ದುಃಖ ಸಮುದ್ರಕ್ಕೆ ನೆಲೆಯೇ ಇಲ್ಲದಾಗಿ, ಮಕ್ಕಳಿಲ್ಲದ, ಮುದುಕೆಯಂತೆ ಅವಳು ಮರಗುತಲಿರುವಳು. ಮೂವತ್ತೇ ವರ್ಷಗಳ ಮುಂಚೆ ಇದೇ ಬೆಳಗಾಂವಿಯಲ್ಲಿ ಒಂದು ಮರಾಟಿ ಶಾಲೆಯೂ ಏಳು ಕನ್ನಡ ಶಾಲೆಗಳೂ ಇದ್ದವು. ಆದರೆ ಈಗ ಇಲ್ಲಿ ಕನ್ನಡ ಶಾಲೆಗಳು (೩) ಮೂರು ಮತ್ತು ಮರಾಠಿ ಶಾಲೆಗಳೂ ಏಳು ಇರುತ್ತವೆ. ಎಷ್ಟು ವಿಪರೀತ ನೋಡಿರಿ!

ಇನ್ನು ಕನ್ನಡ ತಾಯ್ನುಡಿಯ ಸಂದೇಶವು ಹೇಗೆ ಕೊನೆಗಾಣುವುದೆಂಬುದನ್ನು ವಿಚಾರಿಸುವಾ.

"ಯಾವ ಮಾನವ ಪ್ರಾಣಿಗಾದರೂ ತನ್ನ ದೇಶವೂ ತಾನೂ ಉನ್ನತ ಸ್ಥಿತಿಯನ್ನು ಹೊಂದಬೇಕೆಂಬ ಬಯಕೆಯು ಇರಲೇಬೇಕು" ಎಂದು ಹೇಳುವ ಕಾರಣವಿಲ್ಲ. ಸಮಾಜವು ಎಲ್ಲ ಬಗೆಯಿಂದ ಏಳ್ಗೆಯನ್ನು ಹೊಂದಬೇಕಾದರೆ, ಅವರಾಡುತ್ತಿರುವ ಭಾಷೆಯಲ್ಲಿ ವಿವಿಧ ವಿಷಯಗಳ ಮೇಲೆ ಬರೆಯಲ್ಪಟ್ಟ ಸಾಹಿತ್ಯವು ಬೇಕು. ಮನಸ್ಸಿನೊಳಗಿನಂತೆ ಉಪಯುಕ್ತ ವಿಷಯಗಳನ್ನೊಳಕೊಂಡ ಗ್ರಂಥಗಳನ್ನೋದಿ, ಅವುಗಳ ರಹಸ್ಯವನ್ನು ತಿಳಿದುಕೊಂಡರೆ, ಅದರಿಂದ ಮನಸ್ಸಿನ ಮೇಲೆ ಉತ್ಕೃಷ್ಟ ಪರಿಣಾಮವಾಗಿ, ವಾಚಕನ ಬಾಳುವೆಯು ಆನಂದಮಯವಾಗುವುದು. ಇಲ್ಲವಾದರೆ ಅವನ ಬಾಳುವೆಯು ಕಾಡಮೃಗಗಳ ಬಾಳುವೆಯಂತಾಗುವದು. ಇದು ಅನುಭವದಿಂದ ಎಲ್ಲರೂ ತಿಳಿದ ಮಾತು. ನಮ್ಮ ಸಾಹಿತ್ಯದಲ್ಲಿ ಎಲ್ಲ ಜ್ಞಾನವೂ ತುಂಬಿರಬೇಕು. ಯಾವಯಾವ ತರದ ಜ್ಞಾನವನ್ನು ಪಡೆಯಬೇಕೆನ್ನುವರೋ ಅವರಿಗೆ ಆ ಜ್ಞಾನವನ್ನು ಕೊಡುವ ಗ್ರಂಥಗಳು ಸಿದ್ಧವಾಗಿರಬೇಕು. ಈ ಬಗೆಯ ಸಾಹಿತ್ಯವನ್ನೊಳಕೊಂಡ ನಾಡು ಎಲ್ಲ ಬಗೆಯಿಂದ ಏಳ್ಗೆಯನ್ನು ಹೊಂದುವುದು. ಅನುಭವಿಕರು ಹೀಗೆಯೆ ಹೇಳುತ್ತಿರುವುದರಿಂದ ಕನ್ನಡ ನುಡಿಯ ಅಭಿಮಾನವುಳ್ಳವರು ಮೇಲ್ಮೆಯ ವಾಙ್ಮಯವನ್ನು ತಮ್ಮಲ್ಲಿ ಉಂಟುಮಾಡಲಿಕ್ಕೆ ಟೊಂಕ ಕಟ್ಟಿ ನಿಲ್ಲಬೇಕಲ್ಲವೇ?

ಪ್ರತಿನಿಧಿಗಳೇ, ತಾವೆಲ್ಲರು ಸುಶಿಕ್ಷಿತರೂ, ಧನಿಕರೂ ಆಗಿದ್ದು ವಾಚನಾಭಿರುಚಿಯುಳ್ಳವರೂ ಆಗಿದ್ದೀರಿ. ನಿಮ್ಮ ಕನ್ನಡ ನುಡಿಗೆ ಪೂರ್ಣವಾಗಿ ಆಶ್ರಯಕೊಟ್ಟು ಮನ್ನಿಸಿರಿ. ಎಂದು ಅಂಗಲಾಚಿ ಬೇಡಿಕೊಳ್ಳುವೆನು ಒಟ್ಟಾರೆಯಲ್ಲಿ, ನನ್ನ ಅಭಿಪ್ರಾಯವನ್ನು ಸಂಕ್ಷೇಪವಾಗಿ ತಮ್ಮ ಮುಂದೆ ಹೇಳಿಕೊಳ್ಳುವೆನು.

೧ ಪದವೀಧರರು ತಾವು ಯಾವದೊಂದು ಉದ್ಯೋಗವನ್ನು ಉದರನಿರ್ವಾಹಾರ್ಥವಾಗಿ ಮಾಡುತ್ತಿದ್ದರೂ, ಕನ್ನಡ ತಾಯ್ನುಡಿಯನ್ನು ಮರೆಯದೆ, ತಮಗೆ ಅನುಕೂಲವಿದ್ದಂತೆ ವಿಶಿಷ್ಟ ವಿಷಯದ ವ್ಯಾಸಂಗಮಾಡಿ, ಅದರ ರಹಸ್ಯವನ್ನು ಕನ್ನಡದಲ್ಲಿ ಸುಲಭಭಾಷೆಯಿಂದ ಬರೆದು, ಪ್ರಸಿದ್ಧಮಾಡಿ ಕನ್ನಡಿಗರ ಏಳಿಗೆಗೆ ಕೈಹಚ್ಚಬೇಕು. ಮತ್ತು ಅನಕೂಲವಿದ್ದ ಮಟ್ಟಿಗೆ ಕನ್ನಡ ಗ್ರಂಥಗಳಿಗೆ ಆಶ್ರಯವನ್ನು ಕೊಡಬೇಕು.

೨ ಪ್ರಾಥಮಿಕ ಶಿಕ್ಷಣವನ್ನು ಕೊಡುವ ಶಿಕ್ಷಕರು ತಮ್ಮ ಶಾಲೆಯ ಶಿಕ್ಷಕರ ಹಾಗು ಪ್ರೌಢ ವಿದ್ಯಾರ್ಥಿಗಳ ಕಡೆಯಿಂದ ಅವರ ಶಕ್ತಿಯಂತೆ ತಿಂಗಳಿಗೆ ಚಂದಾ ಹಣವನ್ನು ಎತ್ತಿ, ಅದರೊಳಗಿಂದ ಉತ್ತಮವಾದ ವರ್ತಮಾನ ಪತ್ರಗಳನ್ನೂ, ಮಾಸಿಕ ಪುಸ್ತಕಗಳನ್ನೂ, ಸುಬೋಧ ಪುಸ್ತಕಗಳನ್ನೂ ತರಿಸಿ, ವಿದ್ಯಾರ್ಥಿಗಳಿಗೆ ಓದಲಿಕ್ಕೆ ಕೊಟ್ಟು, ಅವರಲ್ಲಿ ಓದುವ ಸವಿಯನ್ನು ಹುಟ್ಟಿಸಬೇಕು.

೩ ಸರಕಾರದವರು ಮ್ಯಾಟ್ರಿಕ್ಯುಲೇಶನ, ಬೀ. ಎ. ಮತ್ತು ಎಮ್. ಎ. ಪರೀಕ್ಷೆಯ ಅಭ್ಯಾಸದಲ್ಲಿ ಕನ್ನಡವನ್ನು ಸೇರಿಸಿದ್ದಾರೆ. ಇದರಂತೆ ಕಾಲೇಜಿನೊಳಗಿನ ಫರ್ಸ್ಟ ಇಯರ್ ಎಗ್ಝಾಮಿನೇಶನ, ಮತ್ತು ಇಂಟರಮಿಜಿಯೇಟ ಪರೀಕ್ಷೆಗಳಲ್ಲಿ ಕನ್ನಡ ನುಡಿಯನ್ನು ಸೇರಿಸಬೇಕು. ಇದರಿಂದ ಕನ್ನಡ ನುಡಿಯಲ್ಲಿ ಗ್ರಾಹ್ಯತ್ವವುಂಟಾಗಿ ಕನ್ನಡ ವಾಙ್ಮಯ ವೃದ್ಧಿಗೆ ಸಹಾಯವಾಗುವದು.

೪ ಸಂಸ್ಥಾನಿಕರು ತಮ್ಮ ಕನ್ನಡ ಪ್ರಜೆಗಳಿಗೆ ಕನ್ನಡದಲ್ಲಿ ಶಿಕ್ಷಣವನ್ನು ಕೊಟ್ಟು ಕನ್ನಡವನ್ನು ರಾಜಕೀಯ ಭಾಷೆಯಾಗಿ ಮಾಡಬೇಕು.

೫ ಕನ್ನಡ ಕೋಶವೊಂದನ್ನು ಆದಷ್ಟು ಬೇಗ ಬರೆಯಿಸಬೇಕು. ಈಗ ಸ್ವಾಗತ ಮಂಡಲದವರು ಕೊಡಿಸಿದ ಅಪ್ಪಣೆಗೆ ಸರಿ

ಯಾಗಿ ನಾನು ಅಧ್ಯಕ್ಷ ಕಾರ್ಯವನ್ನು ಮುಗಿಸಿ ಮುಂದಣ ಕಾರ್ಯವನ್ನು ನೆರವೇರಿಸಬೇಕೆಂದು ವಿನಯದಿಂದ ತಮಗೆ ಬಿನ್ನವಿಸಿ ಕುಳಿತುಕೊಳ್ಳುವೆನು''

ತದನಂತರದಲ್ಲಿ ನಮ್ಮ ಪ್ರಸಿದ್ಧ ಮುಂದಾಳುಗಳಾದ ದೇಶಪಾಂಡೆ ಗಂಗಾಧರರಾಯರು ತಮ್ಮ ಪ್ರಾಸ್ತಾವಿಕ ಭಾಷಣವನ್ನು ಪ್ರಾರಂಭಿಸಿದರು. ಇವರ ಭಾಷಣವು ಒಳ್ಳೇ ಸ್ಫೂರ್ತಿದಾಯಕವೂ, ಜನರ ಮನಸ್ಸನ್ನಾಕರ್ಷಿಸುವಂತಹದೂ ಇತ್ತೆಂದು ಬೇರೆ ಹೇಳಬೇಕಾಗಿಲ್ಲ. ಇವರು ಭಾಷಣ ಮಾಡುವ ಸಮಯದಲ್ಲಿ, ಎಲ್ಲ ಜನರು ಆಶ್ಚರ್ಯ ಚಕಿತರಾಗಿ ಕುಳಿತಿದ್ದರು. ಗಂಗಾಧರರಾಯರ ಭಾಷಣದ ಪರಿಣಾಮವು ವಿಶೇಷತಃ ನಮ್ಮ ಮೈಸೂರ ಬಾಂಧವರಿಗೆ ಚನ್ನಾಗಿ ಆಯಿತು. ಇವರ ಭಾಷಣದ ಸಾರಾಂಶವನ್ನು ಕೆಳಗೆ ಕೊಡುತ್ತೇನೆ.

"ನಾನು ಕನ್ನಡ ತಾಯಿಯು ಹೆತ್ತ ಸುಪುತ್ರನಿದ್ದರೂ, ನನ್ನ ಚಿಕ್ಕ ತಾಯಿಯಾದ ಮಹಾರಾಷ್ಟ್ರ ಮಾತೆಗೆ ದತ್ತಕ ಹೋಗಿರುವೆನು. ಆದರೂ ನನಗೆ ನನ್ನ ಹೆತ್ತವ್ವನ ವಿಷಯವಾಗಿ ವಿಶೇಷ ಅಭಿಮಾನವಿದೆ. ಕರ್ನಾಟಕದಲ್ಲಿ ಬೇರೆ ಬೇರೆ ಭಾಗಗಳಾಗಿರುವದರಿಂದ, ನಮಗೆ ಇಂಥ ಹೀನ ಸ್ಥಿತಿಯು ಪ್ರಾಪ್ತವಾಗಿದೆ. ಆದರೂ ರಾಷ್ಟ್ರೀಯ ಸಭೆಯವರು, ಕರ್ನಾಟಕಕ್ಕೊಂದು ಬೇರೆ ಪ್ರಾಂತಿಕ ಮಂಡಳವನ್ನು ಕೊಟ್ಟಂದಿನಿಂದ ನಮ್ಮಲ್ಲಿ ಅಖಂಡ ಕರ್ನಾಟಕದ ಭಾವನೆಯು ಬೆಳೆಯ ಹತ್ತಿದೆ. ಕರ್ನಾಟಕದ ಏಕೀಕರಣವಾಗದ ಹೊರತು ನಮ್ಮ ಉತ್ಕರ್ಷವಾಗದೆಂದು, ಈಗ ನಾಲ್ಕು ವರ್ಷಗಳ ಅನುಭವದಿಂದ ನನಗೆ ಚನ್ನಾಗಿ ಮನವರಿಕೆಯಾಗಿದೆ.

ನಮ್ಮ ನಿಯೋಜಿತ ಅಧ್ಯಕ್ಷರು, ಕನ್ನಡ ಭಾಷೆಯಲ್ಲಿ ಒಳ್ಳೇ ಪಂಡಿತರಿದ್ದುದಲ್ಲದೆ, ತೆಲಗು ಭಾಷೆಯಲ್ಲಿಯೂ ಹೆಸರಾದ ಪಂಡಿತರಾಗಿರುವರು. ನಮ್ಮ ಮಾತೃಭಾಷೆಯನ್ನು ಚನ್ನಾಗಿ ಅಭ್ಯಾಸ ಮಾಡಿದ ಮೇಲೆ, ನಮ್ಮ ನೆರೆ ಹೊರೆ ಪ್ರಾಂತಗಳ ಭಾಷೆಗಳನ್ನು ಕಲಿತು, ಅವುಗಳಲ್ಲಿರುವ ಗುಣಗಳನ್ನು ನಾವು ಸ್ವೀಕರಿಸಿ, ನಮ್ಮಲ್ಲಿರುವ ಸಂಸ್ಕೃತಿಯ ಲಾಭವನ್ನು ಅನ್ಯರಿಗೆ ಮಾಡಿ ಕೊಡುವದಕ್ಕಾಗಿಯೇ ನಮ್ಮ ಅಧ್ಯಕ್ಷರು ತೆಲಗು ಭಾಷೆಯನ್ನು ಕಲಿತಿರಬೇಕೆಂದು ನನಗೆ ಅನಿಸುತ್ತದೆ.

ಮರಾಟಿಗರು ನಮ್ಮ ನಾಟ್ಯಶಾಸ್ತ್ರದ ಅನುಕರಣವನ್ನು ಮಾಡಿ ತಮ್ಮ ನಾಟಕಗಳನ್ನು ಬರೆದಿರುತ್ತಾರೆ. ಮರಾಟಿ ನಾಟಕದ ಆದ್ಯ ಪ್ರವರ್ತಕರಾದ ಕೈ. ವಾ. ಅಣ್ಣಾಸಾಹೇಬ ಕಿರ್ಲೋಸ್ಕರರು ಕನ್ನಡಿಗರಾಗಿದ್ದರೆಂದು ಹೇಳಲು ನನಗೆ ಅಭಿಮಾನವೆನಿಸುತ್ತದೆ. ಅವರು ನಮ್ಮ ಪಾರಿಜಾತ ನಾಟಕಗಳ ಅನುಕರಣವನ್ನು ವಿಶೇಷವಾಗಿ ಮಾಡಿದ್ದಾರೆ. ಅವರಿಗೆ ಕನ್ನಡಿಗರು ವಿಶೇಷ ಆಶ್ರಯವನ್ನು ಕೊಡದ್ದರಿಂದ, ಪುಣೆಗೆ ಹೋಗಿ ಮರಾಟೀ ನಾಟಕಗಳನ್ನು ಬರೆದರು ಇದು ನಮ್ಮ ದುರ್ಭಾಗ್ಯವು!!

ನನ್ನ ಗುರುಗಳಾದ ಲೋಕಮಾನ್ಯರು "ಕನ್ನಡ ಮಾತೆಯ ಸೇವೆ ಮಾಡಬೇಕಾದರೆ ಮೊದಲು ೨ ಭಾಷೆಯನ್ನು ಚನ್ನಾಗಿ ಅಭ್ಯಾಸ ಮಾಡಿರಿ''ೆಂದು ನನಗೆ ಉಪದೇಶಿಸಿದ್ದರು. ಆದರೆ ನಾನು ಅವರ ಉಪದೇಶವನ್ನು ಮರೆತೆನಾದ್ದರಿಂದ ಈಗ ಪಶ್ಚಾತ್ತಾಪ ಪಡುತ್ತೇನೆ. ಆದರೂ ನಾನೇನು ನನ್ನ ಮಾತೃದೇವಿಯ ಸೇವೆಯನ್ನು ಬಿಟ್ಟಿರುವದಿಲ್ಲ; ನನ್ನ ಕೈಲಾದ ಸೇವೆಯನ್ನು ಮಾಡುತ್ತಲೇ ಇರುವೆನು.

ಬೆಳಗಾಂವಿಯಲ್ಲಿ ಸಾಹಿತ್ಯ ಸಮ್ಮೇಲನವು ನೆರೆದಿದ್ದು ವಿಶೇಷ ಮಹತ್ವದ್ದು. ಇನ್ನು ಕರ್ನಾಟಕತ್ವವು ಬೆಳಗಾಂವಿಯಲ್ಲಿ ಕಾಯಂವಾಗಿ ಉಳಿಯುವಂತೆ ಬೆಳಗಾಂವಿಯವರಾದ ನಾವೆಲ್ಲರೂ ಪ್ರಯತ್ನ ಮಾಡಬೇಕು. ಇರಲಿ. ಪ್ರಕೃತ ನಮ್ಮ ನಿಯೋಜಿತ ಅಧ್ಯಕ್ಷರು, ತಮ್ಮ ಸ್ಥಾನವನ್ನು ಸ್ವೀಕರಿಸಬೇಕೆಂದು ಪುನಃ ಅವರಿಗೆ ಪ್ರಾರ್ಥಿಸುತ್ತೇನೆ.

ಅನಂತರದಲ್ಲಿ ಶ್ರೀ. ಬೆಳವಿ ದತ್ತಾತ್ರಯರಾಯರು ಇದಕ್ಕೆ ಅನುಮೋದನವನ್ನು ಕೊಡಲು ಅಧ್ಯಕ್ಷರು ತಮ್ಮ ಸ್ಥಾನವನ್ನು ಸ್ವೀಕರಿಸಿದರು.

ಆಮೇಲೆ ಕಾರ್ಯದರ್ಶಿಗಳು ಕೆಳಗೆ ಕಾಣಿಸಿದ ಮಹನೀಯರುಗಳಿಂದ ಬಂದ ಸಹಾನುಭೂತಿಪರ ತಂತಿಗಳನ್ನೋದಿದರು:- ಮೈಸೂರ ಶ್ರೀಮನ್ಮಹಾರಾಜರು, ಮೈಸೂರ ಸರಕಾರದವರು, ಶಿಕ್ಷಣ ಮಂತ್ರಿಗಳಾದ ಮಾಧವರಾಯರು, ಜಹಾಗೀರದಾರ ರಂಗಾಚಾರ್ಯರು, ಮಹಾರಾಷ್ಟ್ರಜ್ಞಾನ ಕೋಶದ ಕೇತಕರರು, ಮಡಿಕೇರಿ ಪಂಜೆ ಮಂಗೇಶರಾಯರು, ನೆಲ್ಲೂರ ಶ್ರೀನಿವಾಸಯ್ಯಂಗಾರರು, ಉ. ರಾಮರಾಯರು ಮತ್ತು ಜಯಕರ್ನಾಟಕ ಸಂಪಾದಕರು ಆ ಮೇಲೆ ಅಧ್ಯಕ್ಷರು ತಮ್ಮ ಭಾಷಣವನ್ನು ಓದಿದರು. ಅದನ್ನು ಬೇರೆಡೆಗೆ ಪ್ರಸಿದ್ಧ ಮಾಡಿದೆ. ಅನಂತರದಲ್ಲಿ ದತ್ತಾತ್ರಯ ನಾಟಕ ಮಂಡಳಿಯ ಬಾಲಬಾಲಕಿಯರು ಮತ್ತೆ ಹಾಡುಗಳನ್ನು ಹಾಡಿದರು. ಒಂದನೇ ದಿನದ ಕಾರ್ಯಕ್ರಮವು ಇಲ್ಲಿಗೆ ಮುಗಿಯಿತು.

೨ನೇ ದಿನ.

ಮುಂಜಾನೆ ವಿಷಯನಿಯಾಮಕ ಮಂಡಲವು ಸೇರಿತು. ಶ್ರೀ. ಕೌಜಲಗೀ ಶ್ರೀನಿವಾಸರಾಯರಂಥ ರಾಜಕಾರಣ ಪ್ರಟುಗಳು ಬಹು ಉತ್ಸುಕತೆಯಿಂದ ಸಾಹಿತ್ಯ ವಿಷಯಗಳಲ್ಲಿ ಮನಸ್ಸು ಹಾಕಿದ್ದು ಈಸಾರೆಯ ವೈಶಿಷ್ಟ್ಯವು. ವಿಷಯನಿಯಾಮಕ ಮಂಡಳಿಯ ಕೆಲಸವು ಮಧ್ಯಾಹ್ನದ ವರೆಗೆ ನಡೆಯಿತು. ಇದೇದಿನ ದತ್ತಾತ್ರೇಯ ನಾಟಕ ಮಂಡಳಿಯ ೫ನೇ ವಾರ್ಷಿಕ ಸಮ್ಮೇಲನವು ಇದ್ದುದರಿಂದ ಪ್ರತಿನಿಧಿಗಳಿಗೆಲ್ಲ ಆ ಸಮಾರಂಭಕ್ಕೆ ಬರಬೇಕಾಗಿ ಶ್ರೀ. ಗರುಡ ಸದಾಶಿವರಾಯರ ಆಮಂತ್ರಣ ವಿದ್ದಿತು. ಆದ್ದರಿಂದ ಮುಂಜಾನೆ ಅಲ್ಲಿಯ ಸಮಾರಂಭದ ಕಾರ್ಯವನ್ನು ನೀಗಿಸುವದಕ್ಕಾಗಿ ಪ್ರತಿನಿಧಿಗಳು ಅಲ್ಲಿಗೂ ಹೋಗಿದ್ದರು. ಬೆಳಗಾವಿಯ ಕಿಲ್ಲೆಯಲ್ಲಿರುವ ಪ್ರಾಚೀನ ಕಾಲದ ಮೇಣಬಸ್ತಿಗಳನ್ನು ನೋಡುವದಕ್ಕಾಗಿಯೂ ಶ್ರೀ. ಕೃಷ್ಣಶಾಸ್ತ್ರಿಗಳೂ ಇನ್ನುಳಿದ ಕೆಲವು ಇತಿಹಾಸಭಕ್ತರೂ ಹೋಗಿದ್ದರು. ಈ ಮೇಣಬಸ್ತಿಗಳು ಅತಿಶಯ ಸುಂದರವಾಗಿವೆ.

ಮಧ್ಯಾಹ್ನದಲ್ಲಿ ಸಮ್ಮೇಲನದ ಅಧಿವೇಶನವು ಕೂಡಿ ಗೊತ್ತುವಳಿಗಳ ವಿಚಾರವು ನಡೆಯಿತು. ಈ ಗೊತ್ತುವಳಿಗಳನ್ನು ಮುಂದಿನಸಾರೆ ಪ್ರಸಿದ್ಧಿಸುವೆವು. ಉದ್ಬುದ್ಧ ಭಾಷಣಗಳಿರದೇ, ನಡುವೆ ನಿಬಂಧ, ಲಾವಣಿ ಕೀರ್ತನಗಳು ಕಾರ್ಯಕ್ರಮದಲ್ಲಿ ಸೇರಿದ್ದರಿಂದ, ಕಾರ್ಯಕ್ರಮವು ಅತಿಶಯ ಚಿತ್ತಾಕರ್ಷಕ ವಾಗಿದ್ದಿತು. ಶಿವಯೋಗಮಂದಿರದ ಶ್ರೀ. ಪಂಡಿತ ಬಸಲಿಂಗಾರ್ಯರು ತಮ ಉತ್ತಮತರದ ಕೀರ್ತನ ಶೈಲಿಯಿಂದ ಜನರ ಮನಸನ್ನೆಲ್ಲ ಆಕರ್ಷಿಸಿದರು. ರಾತ್ರೀ ದತ್ತಾತ್ರಯ ನಾಟಕ ಮಂಡಲದವರು ತಮ್ಮ ಪಾದುಕಾ ಪಟ್ಟಾಭಿಷೇಕ ನಾಟಕವನ್ನಾಡಿದರು. ಪ್ರಯೋಗವು ಅತ್ಯಂತ ಪ್ರೇಕ್ಷಣೀಯವಾಗಿದ್ದಿತು.

೩ನೇ ದಿನ.

ಪ್ರಾತಃಕಾಲಕ್ಕೆ ಒಂದೆಡೆಗೆ ಪರಿಷತ್ತಿನ ವಾರ್ಷಿಕ ಸಭೆಯೂ, ಮತ್ತೊಂದೆಡೆಯಲ್ಲಿ ಸಮ್ಮೇಲನದ ವಿಷಯನಿಯಾಮಕ ಮಂಡಳಿಯೂ ಸೇರಿದ್ದವು. ಶ್ರೀ. ಕೌಜಲಗೀ ಶ್ರೀನಿವಾಸರಾಯರು ೧೦೦ ರೂ॥ ಕೊಟ್ಟು ಪರಿಷತ್ತಿನ ಸಹಾಯಕರಾದರು. ಪರಿಷತ್ತಿನ ಸಭಾಸದರನ್ನು ಹೆಚ್ಚಿಸುವದಕ್ಕಾಗಿ ಏಜಂಟರನ್ನು ನೇಮಿಸಬೇಕೆಂದೂ, ಸಾಮಾನ್ಯ ಸಭಾಸದರನ್ನು ದೊರಕಿಸಿಕೊಟ್ಟವರಿಗೆ ನೂರಕ್ಕೆ ೨೫ ರಂತೆಯೂ ಹೆಚ್ಚಿನ ತರಗತಿಯ ಸಭಾಸದರನು ದೊರಕಿಸಿ ಕೊಟ್ಟವರಿಗೆ ತಲೆಗೆ ೨ ರೂ. ಯಂತೆಯೂ ಏಜಂಟರಿಗೆ ವೇತನ ಕೊಡಬೇಕೆಂದೂ ಶ್ರೀ. ಕೌಜಲಗೀ ಶ್ರೀನಿವಾಸರಾಯರು ತಂದ ಠರಾವು ಸ್ವೀಕರಿಸಲ್ಪಟ್ಟಿತು. ಈಗಿನ ದಿನಗಳಲ್ಲಿ, ವೇತನವಿಲ್ಲದೇ ಸಾರ್ವಜನಿಕ ಕೆಲಸಮಾಡುವದು ಕಷ್ಟವಾಗಿದ್ದರಿಂದಲೂ, ಸಂಬಳಕೊಟ್ಟು ಜನರನ್ನು ನೇಮಿಸಲು, ಪರಿಷತ್ತಿನಲ್ಲಿ ಸಾಕಷ್ಟು ಹಣವಿರದ್ದರಿಂದಲೂ, ಈ ಕಮಿಶನ್ ರೂಪವಾದ ವೇತನದಿಂದ

(೬ ನೇ ಪುಟ ನೋಡು.)

ಕನ್ನಡಿಗರ ಸೇವೆಯಲ್ಲಿಯೇ ನಿರತನಾದ "ಕನ್ನಡಿಗ" ನನ್ನು ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕು!

ಕನ್ನಡಿಗರೇ! ನಿಮಗೋಸ್ಕರ ಹುಟ್ಟಿದ 'ಕನ್ನಡಿಗ'ನನ್ನು ಬೇಗನೇ ಸ್ವೀಕರಿಸಿರಿ. ವಾ.

ಅಧ್ಯಕ್ಷರ ಭಾಷಣದ ಸಾರಾಂಶ

ಪರಿಷತ್ತಿನ ಧ್ಯೇಯಗಳು

ದೇಶಭಾಷೆಯನ್ನುದ್ಧಾರಮಾಡುವದೇ ಪರಿಷತ್ತಿನ ಧ್ಯೇಯ. ಉದಾಸೀನಭಾವದಿಂದಿರುವ ಕನ್ನಡಿಗರಲ್ಲಿ ಭಾಷಾಭಿಮಾನವನ್ನು ಹುಟ್ಟಿಸುವುದೇ ಪರಿಷತ್ತಿನ ಧ್ಯೇಯ. ಹಳತು, ಕೊಳೆತು ನಾಶವಾಗುತ್ತಿರುವ ಗ್ರಂಥಗಳನ್ನು ಪ್ರಕಟಿಸಿ, ಕನ್ನಡಿಗರ ಮುಂದಿಟ್ಟು, ಅವರಲ್ಲಿ ವಾಚನಾಭಿರುಚಿಯನ್ನು ಹೆಚ್ಚಿಸುವುದೇ ಪರಿಷತ್ತಿನ ಧ್ಯೇಯ. ಇದಕ್ಕೆ ಅನೇಕ ಮಾರ್ಗಗಳುಂಟು. ಅವುಗಳಲ್ಲಿ ಗ್ರಂಥಪ್ರಕಟನೆ, ಗ್ರಂಥಕರ್ತರಿಗೆ ಪ್ರೋತ್ಸಾಹ, ಭಾಷಾವಿಷಯಕವಾದ ಚರ್ಚೆ, ಪರಭಾಷೆಗಳಿಂದ ಭಾಷಾಂತರ ಮಾಡಿಸುವಿಕೆ, ಮಾಸಪತ್ರಿಕೆ, ಸಾಹಿತ್ಯದಲ್ಲಿ ಸಂಶೋಧನಾಕಾರ್ಯ ಮಾಡುವವರಿಗೆ ಪ್ರೋತ್ಸಾಹ, ಮುಂತಾದುವು ಮುಖ್ಯವಾದುವು. ಅಲ್ಲದೆ ಕನ್ನಡನಾಡಿನಲ್ಲಿ ಎಲ್ಲೆಲ್ಲಿಯೂ ವಾಚನಾಲಯಗಳನ್ನೂ, ಪುಸ್ತಕಭಂಡಾರಗಳನ್ನೂ ಸ್ಥಾಪಿಸುವುದು; ಕನ್ನಡನಾಡಿನಲ್ಲೆಲ್ಲ ವ್ಯಾಖ್ಯಾನಗಳನ್ನು ಕೊಡಿಸುವುದು, ಪರೀಕ್ಷೆಗಳನ್ನಿಟ್ಟು ಉತ್ತೀರ್ಣರಾದವರಿಗೆ ತಕ್ಕ ಬಿರುದು ಬಿಲ್ಲೆಗಳನ್ನು ಕೊಡಿಸುವುದು. ಹೀಗೆಯೇ ಅನೇಕ ಮಾರ್ಗಗಳುಂಟು. ಪರಿಷತ್ತಿನವರು ಹತ್ತು ವರ್ಷದಿಂದಲೂ ಸಾಧ್ಯವಾದ ಮಟ್ಟಿಗೆ ಇವೆಲ್ಲವುಗಳಿಗೂ ಲಕ್ಷ್ಯಕೊಟ್ಟಿರುವರು. ಆದರೆ ಇದಕ್ಕಿಂತಲೂ ಹೆಚ್ಚು ಲಕ್ಷ್ಯವನ್ನು ಅವರು ಹಲವು ವಿಚಾರಗಳಿಗೆ ತೋರಿಸಬಹುದಿತ್ತೆಂದ ಮಾತ್ರಕ್ಕೆ ಅವರಮೇಲೊಂದು ಆರೋಪವನ್ನು ತಂದಂತಾಗಲಿಲ್ಲ. ಟೀಕೆ ಮಾಡುವುದು ಸುಲಭ. ಕಾರ್ಯಕ್ಷೇತ್ರವನ್ನು ಹೊಕ್ಕಾಗ ಕಷ್ಟ ಸುಖಗಳು ಗೊತ್ತಾಗುತ್ತವೆ. ಹತ್ತು ವರ್ಷಗಳಿಂದ ಪರಿಷತ್ತಿನಿಂದಾಗಿರುವ ಕೆಲಸವನ್ನು ನೋಡಿ ಪ್ರತಿಯೊಬ್ಬ ಕನ್ನಡಿಗನೂ ಹಿಗ್ಗಬೇಕಾಗುದೆ. ಇಂದು ಎಲ್ಲ ಕನ್ನಡಿಗರಲ್ಲಿ ಸೋದರಭಾವವು ಹೆಚ್ಚಿದೆ. ಇಂದು 'ಧಾರವಾಡ ಕನ್ನಡ' 'ಮೈಸೂರು ಕನ್ನಡ' 'ಮಂಗಳೂರ ಕನ್ನಡ'ವೆಂಬ ಕುಹಕದ ಮಾತುಗಳಿಲ್ಲ. ಇಂದು ನಾವೆಲ್ಲರೂ ಅಖಿಲ ಕರ್ನಾಟಕ ದೃಷ್ಟಿಯಿಂದ ನಮ್ಮ ದೇಶದ ವಿಚಾರಗಳೆಲ್ಲವನ್ನು ನೋಡುತ್ತಿದ್ದೇವೆ. ಇಂದು ನಮಗೊಂದು ಪ್ರಾಂತ ಬೇಕೆಂದು ವಾದಿಸಲು ಸಿದ್ಧರಾಗಿದ್ದೇವೆ. ಹತ್ತು ವರ್ಷಗಳ ಹಿಂದೆ ಈ ಐಕಮತ್ಯಕ್ಕೆ ಸಾಧ್ಯವಿತ್ತೆ ?

ನಾವು ಎಣಿಸಿದ್ದೆಲ್ಲವೂ, ಭಾವಿಸಿದ್ದೆಲ್ಲವೂ, ಪರಿಷತ್ತಿನಿಂದಾಗದಿರಬಹುದು. ಇದಕ್ಕಾಗಿ ಪರಿಷತ್ತನ್ನು ನಿಂದಿಸಿ ಫಲವಿಲ್ಲ. ಧನಸಹಾಯವೂ ಜನಸಹಾಯವೂ ಇಲ್ಲದೆ ಈ ಕೆಲಸವು ಯಾರಿಂದಲೂ ಸಾಧ್ಯವಿಲ್ಲ. ಆದುದರಿಂದ ಪರಿಷತ್ತಿನ ಒಂದೆರಡು ದೋಷಗಳನ್ನು ದೊಡ್ಡದು ಮಾಡಿ ನಿಂದಿಸದೆ, ಎಲ್ಲ ಕನ್ನಡಿಗರೂ ತಮ್ಮ ಸಹಾನುಭೂತಿಯನ್ನು ತೋರಿಸಿದರೆ, ಸಹಾಯವನ್ನು ಕೊಟ್ಟರೆ ನಮ್ಮೆಲ್ಲರ ಆಶಯವು ಫಲಿಸುತ್ತದೆ. ವ್ಯಕ್ತಿಗಳಿಗಿಂತಲೂ ವಿಷಯಕ್ಕೆ ಪ್ರಾಧಾನ್ಯ ಕೊಡಬೇಕೆಂದು ಎಲ್ಲರಿಗೂ ಅರಿಕೆ.

ಪರಿಷತ್ತಿನ ವಿಚಾರವಾಗಿ ಅನೇಕರಿಗೆ ತಪ್ಪು ತಿಳಿವಳಿಕೆಯಿದೆ. ಇದನ್ನು ಹೋಗಲಾಡಿಸುವುದು ಪರಿಷತ್ತಿನವರ ಕರ್ತವ್ಯ. ಇದಕ್ಕಾಗಿ ಅವರು ಹತ್ತು ವರ್ಷಗಳಿಂದಾದ ಕೆಲಸವನ್ನೂ, ಒಂದು ಕಷ್ಟಪರಂಪರೆಗಳನ್ನೂ ಎಲ್ಲವನ್ನೂ ಕುರಿತು ಒಂದು ವರದಿಯನ್ನು ಬರೆದು ಕನ್ನಡಿಗರ ಮುಂದಿಡಬೇಕು. ಆಗ ಪರಿಷತ್ತಿನ ವಿಚಾರದಲ್ಲಿ ಹಲವರಲ್ಲಿ ಬೇರೂರಿರುವ ಅನುಮಾನಗಳು ಮಾಯವಾಗುತ್ತವೆ.

ಭಾಷಾಭಿವೃದ್ಧಿ.

ಭಾಷಾಸೇವೆಗಾಗಿ ಅನೇಕರು ಮುಂದಾಳುಗಳಾಗಿರುವರು. ಅತ್ಯುತ್ತಮಗ್ರಂಥಗಳೂ, ಪ್ರತಿಭಾಶಾಲಿಗಳಾದ ಲೇಖಕರೂ ಇನ್ನೂ ಹೊರಬಿದ್ದಿಲ್ಲವಾದರೂ ಅನೇಕ ಲೇಖಕರು ಕಂಡುಬಂದಿರುವರು. ಗದ್ಯಲೇಖನವು ಹೊಸ ಹೊಸ ಹಾದಿಗಳನ್ನು ಹಿಡಿದು ರೂಪುಗೊಳ್ಳುತ್ತಲಿದೆ. ಸಣ್ಣ ಕತೆಯೆಂಬುದು ಈ ಕಾಲದ ಸೃಷ್ಟಿಯೆಂದೇ ಹೇಳಬೇಕು.

ನಾಟಕರಚನೆಯಲ್ಲಿ ನಾವು ಬಹಳ ಹಿಂದೆಬಿದ್ದಿರುವೆವು. ಹೇಳಬಹುದಾದ ನಾಟಕವೊಂದಾದರೂ ಇದುವರೆಗೆ ಹೊರಬೀಳದಿರುವುದು ನಮ್ಮ ದುರದೃಷ್ಟವೇ ಸರಿ. ಹಲವು ಜೀವನಚರಿತ್ರೆಗಳು ಬರೆಯಲ್ಪಟ್ಟವೆ. ಚರಿತ್ರೆ, ಭೂಗೋಳ ವಿಜ್ಞಾನ ಮುಂತಾದವು ಅತಿವಿರಳ. ವಿಮರ್ಶಾಗ್ರಂಥಗಳು, ಸ್ವಂತತ್ರ ಸಂಶೋಧನಾ ಗ್ರಂಥಗಳೂ ಇಲ್ಲವೇ ಇಲ್ಲ. ಕವಿತೆಯೆಂಬುದು ಅಂತರಿಕ್ಷ ಕುಸುಮವೇ ಸರಿ. ಹಳೆಗನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ. ಹೊಸಗನ್ನಡದಲ್ಲಿ, ಹೊಸಹುರುಪಿನಲ್ಲಿ, ಪ್ರತಿಭಾಯುತವಾಗಿ ಬರೆಯುವರು ಹುಟ್ಟಿಲ್ಲ; ಬರೆಯುವರೇನೋ ಬಹಳಮಂದಿರುವರು. ಆದರೆ ಅವರಿಗೆ ತಕ್ಕಸಾಧನಸಂಪತ್ತಿಯೂ, ಪ್ರತಿಭೆಯೂ, ಭಾವನಾಶಕ್ತಿಯೂ ಇಲ್ಲದಿರುವುದರಿಂದ ಅವರು ತಮ್ಮ ಬರಹಗಳಿಂದ ಕನ್ನಡಕ್ಕೊಂದು ಸೇವೆಯನ್ನು ಮಾಡುತ್ತಿರುವರೆಂದು ಹೇಳಲಾಗದು. ಗದ್ಯನಾಟಕಗಳಲ್ಲಿ ಹಲವರು ಉಪಯೋಗಿಸುತ್ತಿರುವ ವ್ಯಾವಹಾರಿಕ ಭಾಷೆಯ ವಿಚಾರದಲ್ಲು ಇದೇ ಮಾತನ್ನೇ ಹೇಳಬೇಕಾಗುತ್ತದೆ. ವ್ಯಾವಹಾರಿಕಭಾಷೆಯ ಉಪಯೋಗದಿಂದ ಭಾಷೆಯ ಏಕೀಕರಣ ಉದ್ಯಮಕ್ಕೆ ಪ್ರತಿಬಂಧಕವುಂಟಾಗುವುದರಲ್ಲಿ ಸಂದೇಹವಿಲ್ಲ. ಆಂಧ್ರದೇಶದಲ್ಲಿ ಈ ಕಷ್ಟವು ಬಂದಾಗಿದೆ. ಕಂಡುಕಂಡು ನಾವು ಆ ಗುಂಡಿಗೆ ಬೀಳಬಾರದು. ನಮ್ಮ ಭಾಷಾ ವ್ಯಕ್ತಿತ್ವಕ್ಕೆ ಯಾವ ಕಳಂಕವನ್ನು ತರಬಾರದು. ಸಂಪ್ರದಾಯಕ್ಕೆ ವಿರುದ್ಧವಾಗಿ ಹೋಗಬಾರದು.

ಇನ್ನು ನಮ್ಮ ವೃತ್ತಪತ್ರಿಕೆಗಳ ಸ್ಥಿತಿ. ಸುತ್ತಮುತ್ತಲಿನ ನಮ್ಮ ಸೋದರ ರಾಷ್ಟ್ರಗಳನ್ನು ಕಂಡರೆ ಈ ವಿಚಾರದಲ್ಲಿ ನಾವು ಶೋಚನೀಯಾವಸ್ಥೆಯಲ್ಲಿರುವೆವೆಂದೇ ಹೇಳಬೇಕು. ಹೆಸರು ಹೇಳಲು ಅಖಿಲಕರ್ನಾಟಕಕ್ಕೊಂದು ದಿನ ಪತ್ರಿಕೆಯಿಲ್ಲ! ವಾರಪತ್ರಿಕೆಗಳೇನೋ ಹಲವಿವೆ. ಆದರೇನು ಅವುಗಳದು ಶಾಪಜೀವನ! ನಿರಂತರ ಬವಣೆ! ಮಾಸಪತ್ರಿಕೆಗಳ ಅವಸ್ಥೆಯಂತೂ ಇನ್ನು ಹೇಳತೀರದು. ಪ್ರೋತ್ಸಾಹವಿಲ್ಲ. ಕನ್ನಡಿಗರಿಗೆ ಏನೂ ಬೇಕಿಲ್ಲ. ಆಂಧ್ರ, ಬಂಗಾಳ, ಮರಾಠ ದೇಶದ ಉದ್ಯಮಗಳನ್ನು ನೋಡಿದರೆ ನಾಚಿಕೆಯಾಗುತ್ತದೆ. ([illegible])

ಅಧ್ಯಕ್ಷರಾದ ಶ್ರೀ. ಬೆನಗಲ್ಲ ರಾಮರಾಯರು.

ಚಂದಾ, ಅಂಚೆ ಸಹಿತ ೧॥— ಮಾತ್ರ! ಈ ಅಗ್ಗದ ಚಂದಾ ನಿಮಗೆ ಭಾರವಾಗದು!!

"ಓಂ"

ಕನ್ನಡಿಗ.

[ಕನ್ನಡಿಗನ ಹೊಕ್ಕ ಮನದಿಂದ ಉಕ್ಕಿಬಂದ ಉತ್ಸಾಹವನ್ನೂ, ಕನ್ನಡ ಭಾಷೆಯನ್ನು ಉನ್ನತಸ್ಥಿತಿಗೊಯ್ಯಬೇಕೆಂಬ ಉತ್ಕಟೇಚ್ಛೆಯನ್ನೂ, ಕಂಡು ಆನಂದ ಹೊಂದಿ ನಲಿದು ಉಕ್ಕಿಬಂದ ಹಾಡು. ಲೇ.]

ಕನ್ನಡ ನಾಡಿಗೆ ಕನ್ನಡಿಯಾಗಿರುವಂಥಾ "ಕನ್ನಡಿಗ"।
ಕನ್ನಡ ಮಾತೆಯು ನೋಡುವದಾದರೆ ನೋಡಿರಿ "ಕನ್ನಡಿಗ" ॥ ೧ ॥
ಕನ್ನಡ ಮಾತೆಯು ಸೇವಕನೆಂದರೆ ಇವನೇ "ಕನ್ನಡಿಗ"।
ಕನ್ನಡ ಮಾತೆಯು ಪಾಲಕನೆಂದರು ಇವನೇ "ಕನ್ನಡಿಗ" ॥ ೨ ॥
ಕನ್ನಡ ಮಾತೆಯು ಕಾಯುವದಾದರೆ ಕಾಯಿರಿ "ಕನ್ನಡಿಗ"।
ಕನ್ನಡ ಮಾತೆಯು ನಡೆಸುವದಾದರೆ, ನಡೆಸಿರಿ "ಕನ್ನಡಿಗ" ॥ ೩ ॥
ಕನ್ನಡ ಮಾತೆಯು ಉನ್ನತಿಗೈಯುವ ಚನ್ನಿಗ "ಕನ್ನಡಿಗ"।
ನ್ನನು ದೇವನೆ ಕರುಣದಿಂದ ಕಾಪಾಡಲಿ "ಕನ್ನಡಿಗ" ॥ ೪ ॥

ಗೋಡೆಕಾರ ಗುರಪ್ಪ.
ಸತ್ಯಾಗ್ರಹಾಶ್ರಮ ಹರಿಹರ.

"ಓಂ."

ಸ್ವಾತಂತ್ರ್ಯ.

[ಶಾ. ಪಿ. ವ್ಹಿ.]

ಸ್ವಾತಂತ್ರ್ಯ ಪರತಂತ್ರವರ್ಥ ಗಾಂಧಿಯವರು ಹೇಳಿದ್ದು ಬೇರೆಯಾಯಿತ್ತು॥
ಸ್ವಾತಂತ್ರ್ಯ ಪರತಂತ್ರದರ್ಥ ಈ ಜನರೆಲ್ಲ ತಿಳಿದದ್ದು ಬೇರೆಯಾಯಿತ್ತು ॥೧॥
ಸರಕಾರದವನು ಕತ್ತಿ ತೆಗೆದೊಗೆದು ಸ್ವತಂತ್ರರಾಗುದೆ ಜನರ ಬಯಕೆ॥
ಪರರನಾಶ್ರಯಿಸದೆ ತನ್ನ ಸುಖ ತನ್ನಲ್ಲಿ ಕಾಣುವದೆ ಗಾಂಧಿಯರಿಕೆ ॥೨॥
ತನ್ನ ಇಂದ್ರಿಯಗಳನು ತನ್ನ ಅಧೀನದೊಳು ಇಟ್ಟು ಅವುಗಳನೆಲ್ಲ ವ- ॥
ತನ್ನ ಸುವಿಚಾರ ಮನದಿಂದ ಅವುಗಳನೆಲ್ಲ ಆಳುವದೆ "ಸ್ವಾತಂತ್ರ್ಯ" ॥೩॥

ಮಹಾತ್ಮನ
ಕೂಡಿರಿ.

ಪರಜಗದ್ವಿಖ್ಯಾತನಾದೀ।
ವರನು ಗಾಂಧಿಯು ತತ್ವದಿಂದಲೆ।
ಭರತ ಖಂಡಕೆ ಶಾಂತಿ ಮುಕ್ತಿಸ್ವಾನ ಮಾರ್ಗಿಲ್ಲ ॥ ೧ ॥
ಗಡನೆ ನಮ್ಮೀ ಭರತ ಭೂಮಿಯು।
ಪಡೆಗರದಿ ಬಿಡುಗಡೆಯ ಹೊಂದಿ।
ಪೊಡವಿಯಲಿ ನಡೆದಾಡ ಬೇಕಾದರೆ ಮಹಾತ್ಮನನು ॥ ೨ ॥
ಬಿಡದಿರಿ ಅವನೊಡನೆ ಹೋಗಿರಿ
ಕೊಡುವನವ ಸ್ವಾತಂತ್ರ್ಯ ಸುಖವನು।
ಪಡೆಯಿರೆನ್ನ "ಮಹಾತ್ಮನನು ಕೂಡಿರೋ" ಸಂತಸದಿ॥ ೩ ॥

ಸತ್ಯಾಗ್ರಹಾಶ್ರಮ. **ಗೋಡೆಕಾರ ಗುರಪ್ಪ.**
ಹರಿಹರ.

"ಓಂ."

ಸ್ಪರ್ಶ.

[ವಚನಕಾರರ ವಿಚಾರಗಳು.]

ವಿಪ್ರ ಮೊದಲು ಅಂತ್ಯಜರ ಕಡೆಯಾಗಿ ಶಿವಭಕ್ತರಾದವರನೆಲ್ಲ [illegible] ಯಾಗಿ [illegible] ಚಾಂಡಾಲನಾದರೂ ಶಿವಭಕ್ತನೇ ಕುಲಜ. ಆತನೊಡನೆ ನುಡಿಗಡಣವ ಮಾಡಬೇಕೆಂಬುದು ವೇದ. ಕುಲವ ನೋಡಲು ಬೇಡ. ಛಲವ ನೋಡಲು ಬೇಡ. ಆತನೆಲ್ಲರಿಗಿಂತಲೂ ಹಿರಿಯನು.

ಹೊಲೆಯ ಹೊಲೆಯ ಎಂದಡೆ ಹೊಲೆಯರೆಂತಪ್ಪರಯ್ಯಾ? ಹೊಲೆಯ ಹೊರಕೇರಿಯಲ್ಲಿರುವರು. ಊರೊಳಗಿಲ್ಲವಯ್ಯಾ ಹೊಲೆಯರು? ತಾಯಿಗೆ ಬೈದವನೇ ಹೊಲೆಯ. ತಂದೆಗೆ ಉತ್ತರಕೊಟ್ಟವನೇ ಹೊಲೆಯ. ಬ್ರಾಹ್ಮಣನ ಕುತ್ತಿಗೆಕೊಯ್ದವನೇ ಹೊಲೆಯ. ಹತ್ತು ಆಡಿದರೆ ಒಂದು ನಿಜವಿಲ್ಲದವನೇ ಹೊಲೆಯ. ಅರ್ಥಕ್ಕೆ ಪ್ರಾಣಹತ್ಯವ ಮಾಡುವವನೇ ಹೊಲೆಯ. ಚಿತ್ತದಲ್ಲಿ ಪರಸತಿಯ ಬಯಸಿದವನೇ ಹೊಲೆಯ. ನಿಂದೆಯಮಾಡುವವನೇ ಹೊಲೆಯ. ಧರ್ಮವ ಮಾಡದವನೇ ಹೊಲೆಯ. ಬಸವನ ಕೊಂದವನೇ ಹೊಲೆಯ. ಬಸವನ ಇರಿದವನೇ ಹೊಲೆಯ. ಇಂತಪ್ಪ ಹೊಲೆಯರು ಊರೊಳಗಿರಲಾಗಿ ಹೊರಕೇರಿಯವರಿಗೆ ಹೊಲೆಯನೆನಬಹುದೇ?

ಕರ್ನಾಟಕದ ಏಕೀಕರಣ.

[ಲೇಖಾಂಕ ೧]

ಅಖಂಡ ಕರ್ನಾಟಕ ಪ್ರಾಂತ ಪರಿಚಯ.

ಕರ್ನಾಟಕದ ಕೆಲವು ಭಾಗಗಳಿಂದ, ವಿಶೇಷವಾಗಿ ಹಳ್ಳಿಯವರಿಂದ ನಮಗೆ ಅನೇಕ ಪತ್ರಗಳು ಬರುತ್ತಲಿವೆ. ಅವುಗಳಲ್ಲಿ "ಕರ್ನಾಟಕದ ಏಕೀಕರಣವೆಂದರೇನು, ಅದು ಯಾತಕ್ಕೆ? ಅದರಿಂದಾಗುವ ಲಾಭಗಳೇನೆ"ಂಬವಾಗಿ ಅನೇಕ ಬಗೆಯ ಪ್ರಶ್ನೆಗಳಿವೆ. ಹೀಗೆ ಪ್ರಶ್ನೆ ಮಾಡುವದನ್ನು ನೋಡಿ ನಮಗೆ ನಿಜವಾಗಿಯೂ ಆನಂದವಾಗಿದೆ. ಯಾಕಂದರೆ ಜನರಲ್ಲಿ ಏಕೀಕರಣವೆಂದರೇನೆಂಬದನ್ನು ತಿಳಿದುಕೊಳ್ಳುವ ಜಿಜ್ಞಾಸೆಯು ಹುಟ್ಟಿದ್ದು ಶುಭ ಚಿನ್ಹವು. ಏಕೀಕರಣವು ಕರ್ನಾಟಕದ ವಾತಾವರಣದಲ್ಲಿ ಈಗ್ಗೆ ಹಬ್ಬಿದ್ದರೂ ಹಲಕೆಲವು ಸುಶಿಕ್ಷಿತ ನಗರವಾಸಿಗಳಿಗೆ ಮಾತ್ರ ಅದು ಗೊತ್ತಿದೆ. ಉಳಿದವರಿಗೂ, ಹಳ್ಳಿಯವರಿಗೂ ಅದರ ಗಾಳಿಯುಸೋಂಕಿಲ್ಲ. 'ಕನ್ನಡಿಗನು' ಜನ್ಮವೆತ್ತಿ ೨ ತಿಂಗಳಾದವು. ಇಷ್ಟು ಬೇಗನೇ 'ಕನ್ನಡಿಗನ' ಹಳ್ಳಿಯ ಚಂದಾದಾರರಲ್ಲಿ ಈ ವಿಷಯವನ್ನು ತಿಳಿದುಕೊಳ್ಳಲು ಇಚ್ಛೆಯಾದದ್ದು 'ಕನ್ನಡಿಗನ' ಸುದೈವವು. ಇರಲಿ. ಈ ಪ್ರಶ್ನೆಗಳಿಗೆಲ್ಲ ನಾವು ಒಂದು ರೂಪವನ್ನು ಕೊಟ್ಟು ಕೆಳಗೆ ಪ್ರಶ್ನೋತ್ತರ ರೂಪದಿಂದ ಅವನ್ನು ಬರೆದಿರುವೆವು.

— ಸಂಪಾದಕ ಕನ್ನಡಿಗ. —

ಪ್ರಶ್ನೆ:— ಕರ್ನಾಟಕ ಏಕೀಕರಣವೆಂದರೇನು? ಮೈಸೂರ, ಮಂಗಳೂರ, ಧಾರವಾಡಗಳ ಭಾಷೆಗಳಲ್ಲಿ ಭೇದಭಾವಗಳಿವೆಂಬದನ್ನು, ಅವುಗಳನ್ನು ತೆಗೆದು ಹಾಕಿ, ಎಲ್ಲ ಭಾಷೆಗಳ ಏಕೀಕರಣವಾಗಬೇಕೆಂಬದನ್ನೂ ನಾನು ಕೇಳಿರುವೆನು. ಕರ್ನಾಟಕದ ಏಕೀಕರಣವೆಂದರೆ ಅದೇ ಪ್ರಯತ್ನವಷ್ಟೇ? (ಈ ಪ್ರಶ್ನೆಯನ್ನು ಓರ್ವ ಬೀ. ಎ. ಎಲ್ ಎಲ್, ಬೀ. ಆದ ವಕೀಲರು ನಮಗೆ ಕೇಳಿದರು!)

ಉತ್ತರ:— ಅಲ್ಲ. ಕರ್ನಾಟಕದ ಏಕೀಕರಣವೆಂದರೆ ಭಾಷೆಯ ಏಕೀಕರಣವಲ್ಲ. ಭಾಷೆಯ ಏಕೀಕರಣಕ್ಕಾಗಿ, ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಪ್ರಯತ್ನಿಸುತ್ತಿರುವರು. ಕರ್ನಾಟಕದ ಏಕೀಕರಣವೆಂದರೆ, ಕರ್ನಾಟಕದಲ್ಲಿ ಭಾಗಗಳಾಗಿ ಬೇರೆ ಬೇರೆ ಆಡಳಿತಕ್ಕೆ ಒಳಗಾಗಿರುವ ಭಾಗಗಳನ್ನು, ಏಕೀಕರಿಸಿ, ಮುಂಬೈ ಪ್ರಾಂತ, ಮದ್ರಾಸ ಪ್ರಾಂತಗಳಿದ್ದಂತೆ, ಕರ್ನಾಟಕ ಪ್ರಾಂತಕ್ಕೆ [illegible] ಸ್ವತಂತ್ರವಾದ [illegible] ಇದೇ ಕರ್ನಾಟಕ ಏಕೀಕರಣ [illegible].

ಪ್ರಶ್ನೆ:— ಕರ್ನಾಟಕದಲ್ಲಿರುವ ಭಾಗಗಳಾವಾವು?

ಉತ್ತರ:— ಮುಂಬೈ ಕರ್ನಾಟಕ, ಮದ್ರಾಸ ಕರ್ನಾಟಕ, ಮೈಸೂರ ಕರ್ನಾಟಕ; ನಿಝಾಂ ಕರ್ನಾಟಕ; ಮತ್ತು ಕೊಡಗು ಕರ್ನಾಟಕವೆಂಬ ಐದು ಭಾಗಗಳಿವೆ.

ಪ್ರಶ್ನೆ:— ಈ ಭಾಗಗಳ ವಿಸ್ತಾರವನ್ನಷ್ಟು ತಿಳಿಸುವಿರಾ?

ಉತ್ತರ:— ಧಾರವಾಡ, ಬೆಳಗಾವಿ, ಕಾರವಾರ, ವಿಜಾಪೂರ ಜಿಲ್ಹೆಗಳೂ, ಸಾತಾರೆ ಜಿಲ್ಹೆಯ ತಾಸಗಾಂವ ತಾಲೂಕಿನ ಭಾಗವೂ, ಸೊಲ್ಲಾಪೂರ ಪಟ್ಟಣವೂ, ಸೊಲ್ಲಾಪೂರ ಜಿಲ್ಹೆಯೊಳಗಿನ, ಸೊಲ್ಲಾಪೂರ ತಾಲೂಕವೂ, ದಕ್ಷಿಣ ಮಹಾರಾಷ್ಟ್ರವೆಂಬದಾಗಿ, ಅಪದ್ಧ ಹೆಸರು ಪಡೆದ, ಸಂಸ್ಥಾನಗಳ ಭಾಗಗಳೂ ಮುಂಬೈ ಕರ್ನಾಟಕವು.

ಪ್ರಶ್ನೆ:— ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯ ಭಾಗಗಳಲ್ಲಿ ಯಾವು ಯಾವು ಕರ್ನಾಟಕಕ್ಕೆ ಸೇರಿವೆ?

ಉತ್ತರ:— ರಾಮದುರ್ಗ, ಮುಧೋಳ, ಜಮಖಂಡಿ, ಸವಣೂರ, ಮತ್ತು ಅಕ್ಕಲಕೋಟೆ ಸಂಸ್ಥಾನಗಳು (ಕೆಲವು ಹಳ್ಳಿಗಳಷ್ಟು ಬಿಟ್ಟು) ಸಂಪೂರ್ಣವಾಗಿ ಕನ್ನಡ ನಾಡಿನವು. ಸಾಂಗಲಿ ಸಂಸ್ಥಾನದ ದೊಡ್ಡ ಭಾಗವು ಕರ್ನಾಟಕಕ್ಕೆ ಸೇರಿದೆ. ಆ ಸಂಸ್ಥಾನದಲ್ಲಿಯ, ತೇರದಾಳ, ಶಹಾಪೂರ, ಶಿರಹಟ್ಟಿ ತಾಲೂಕುಗಳು ಸಂಪೂರ್ಣವಾಗಿಯೂ, ಮಿರಜ ಪ್ರಾಂತ, ಕೋಚಿ, ಮತ್ತು ಮಂಗಳವೇಢೇ ತಾಲೂಕಗಳ ಕೆಲವು ಭಾಗಗಳೂ ಕರ್ನಾಟಕಕ್ಕೆ ಸೇರಿವೆ. ಸಾಂಗಲೀ ಶಹರವು ಕರ್ನಾಟಕ ಮಹಾರಾಷ್ಟ್ರಗಳ ಗಡಿನಾಡಿನದು. ಮಿರ್ಜೀ ಶಹರವೂ ಹಾಗೇ. ಮಿರ್ಜೀ ಸಂಸ್ಥಾನದ ದೊಡ್ಡ ಭಾಗವು ಅಂದರೆ ಗುಡಗೇರಿ, ಲಕ್ಷ್ಮೇಶ್ವರ ಮತ್ತು ಮಿರ್ಜ ತಾಲೂಕಗಳು ಕರ್ನಾಟಕಕ್ಕೆ ಸೇರಿವೆ. ಕೊಲ್ಹಾಪೂರ ಕುರಂದವಾಡಗಳಲ್ಲಿಯ ಕೆಲವು ಭಾಗಗಳು ಮಾತ್ರ ಕನ್ನಡ ನಾಡಿನವು.

ಪ್ರಶ್ನೆ:— ಮದ್ರಾಸ ಕರ್ನಾಟಕಕ್ಕೆ ಯಾವ ಜಿಲ್ಹೆಗಳು ಸೇರಿವೆ?

ಉತ್ತರ:— ಮಂಗಳೂರ, ಬಳ್ಳಾರೀ, ನಿಲಗಿರಿ ಜಿಲ್ಹೆಗಳೂ, ಕೋಯಿಮುತ್ತೂರ, ಶೇಲಂ, ಅನಂತಪೂರ, ಕರ್ನೂಲ ಜಿಲ್ಹೆಗಳ ಕೆಲವು ಭಾಗಗಳೂ, ಸೊಂಡೂರ ಸಂಸ್ಥಾನವೂ ಕರ್ನಾಟಕಕ್ಕೆ ಸೇರಿವೆ.

ಪ್ರಶ್ನೆ:— ಕೆಲಭಾಗಗಳೆಂದರೆ ಯಾವವು?

ಉತ್ತರ:— ಕೋಯಿಮುತ್ತೂರಜಿಲ್ಹೆಯ ಕೊಳ್ಳೇಗಾಲ ತಾಲೂಕವೂ, ಮತ್ತು ಗೋಪೀಶೆಟ್ಟಿಪಾಳ್ಯ, ಭವಾನಿ ತಾಲೂಕುಗಳ ಉತ್ತರದ ಅರ್ಧ ಭಾಗವೂ; ಸೇಲಮ್ ಜಿಲ್ಹೆಯ, ಹೊಸೂರ, ಕೃಷ್ಣಗಿರಿ ತಾಲೂಕಗಳೂ ಮತ್ತು ಧರ್ಮಾಪೂರದ ಉತ್ತರದ ಅರ್ಧ ಭಾಗವೂ; ಕರ್ನೂಲ ಜಿಲ್ಹೆಯ ಪತ್ತಿಕೊಂಡ ತಾಲೂಕಿನ ಕೆಲ ಭಾಗವೂ, ಅನಂತಪೂರ ಜಿಲ್ಹೆಯ ರಾಯದುರ್ಗ, ಕಲ್ಯಾಣದುರ್ಗ, ಮಡಕಶಿರ ತಾಲೂಕುಗಳೂ, ಗುತ್ತಿ ಅನಂತಪೂರ ಧರ್ಮಾವರ ಹಿಂದಪುರಗಳ ಪಶ್ಚಿಮದ ಭಾಗಗಳೂ, ಕರ್ನಾಟಕಕ್ಕೆ ಸೇರಿವೆ

ಪ್ರಶ್ನೆ:— ಕೊಡಗು ಕರ್ನಾಟಕವೆಂದರೆ ಯಾವದು? ಅದೆಲ್ಲಿದೆ?

ಉತ್ತರ:— ಇದು ಸೋಜಿಗದ ಪ್ರಶ್ನೆಯು! ಕೊಡಗು ಎಲ್ಲಿದೆಂಬುದು ನಿಮಗ ಗೊತ್ತಿಲ್ಲವೋ? ಅದು, ಮೈಸೂರ ಸಂಸ್ಥಾನ, ಮಂಗಳೂರ ಮತ್ತು ಮಲಬಾರ ಜಿಲ್ಹೆಗಳ ಮಧ್ಯದಲ್ಲಿದೆ. ಇದರಲ್ಲಿ ೬ ತಾಲೂಕುಗಳಿವೆ. ಅದರ ಜನಸಂಖ್ಯೆ ಅಜಮಾಸು ೧ ಲಕ್ಷ ೬೦ ಸಾವಿರವಿದೆ.

ಪ್ರಶ್ನೆ:— ನೀಲಗಿರಿಯು ನಿಜವಾಗಿಯೂ ಕರ್ನಾಟಕಕ್ಕೆ ಸೇರಿದ್ದೋ?

ಉತ್ತರ:— ಅಹುದು ನಿಜವಾಗಿಯೂ ಕರ್ನಾಟಕಕ್ಕೆ ಸೇರಿದ್ದು. ಅಲ್ಲಿಯ ನಿವಾಸಿಗಳಾದ ಬಡಗರೂ, ತೋಡರೂ ಕನ್ನಡ ಮಾತನಾಡುವವರು. ಅವರ ಮಾತೃಭಾಷೆಯು ಕನ್ನಡ ನುಡಿಗೆ ಸೇರಿದ ಉಪಭಾಷೆಯು. ಈಗೀಗ ಕನ್ನಡಿಗರ ಅನಾಸ್ಥೆಯಿಂದಲೂ, ನೀಲಗಿರಿಯು ಯುರೋಪಿಯರ ವಾಸಸ್ಥಾನವಾಗಿದ್ದರಿಂದಲೂ, ತಮಿಳ ದೇಶದಿಂದ ಅನೇಕರು ಅಲ್ಲಿ ಹೋಗಿ ವಾಸಿಸಿದ್ದರಿಂದ ತಮಿಳ ಭಾಷೆಯು ಅಲ್ಲಿ ಹೆಚ್ಚುತ್ತಿರುವದು ಮಾತ್ರ! ಕರ್ನಾಟಕಕ್ಕೆ ಬೇರೆ ಪ್ರಾಂತವು ದೊರೆತರೆ ಅದು ಅನ್ಯಭಾಷೆಯವರ ವಶದಿಂದ ತಾನೇ ಮುಕ್ತವಾಗುವದು.

ಪ್ರಶ್ನೆ:— ಮೈಸೂರ ಸಂಪೂರ್ಣವಾಗಿ ಕರ್ನಾಟಕವೆಂಬದು ಗೊತ್ತಿದೆ. ಆದರೆ ನಿಝಾಂ ಕರ್ನಾಟಕವೆಂದರೆ ಯಾವದು?

ಉತ್ತರ:— ರಾಯಚೂರ, ಕಲಬುರ್ಗಿ, ಬೀದರ, ಜಿಲ್ಹೆಗಳ ಬಹು ಭಾಗಗಳೂ, ಉಸ್ಮಾನಾಬಾದ, ಮಹಬೂಬನಗರ ಜಿಲ್ಹೆಗಳಲ್ಲಿಯ ಕೆಲಭಾಗಗಳೂ, ಕೊಪ್ಪಳ, ಯಲಬುರ್ಗಿ, ಗದ್ವಾಲಿ, ಅಮತಚಿಂತಾ ಜಹಾಗೀರುಗಳೂ ಕರ್ನಾಟಕಕ್ಕೆ ಸೇರಿವೆ.

ಪ್ರಶ್ನೆ:— ಸರಿಯದೆ ಈಗ್ಗೆ ಕರ್ನಾಟಕ ಪ್ರಾಂತದ ಅಖಂಡ ಸ್ವರೂಪವು ಗೊತ್ತಾಯಿತು ಇನ್ನು ನನ್ನ ಉಳಿದ ಪ್ರಶ್ನೆಗಳಿಗೆ ಉತ್ತರ ಕೊಡುವಿರೋ?

ಉತ್ತರ:— ಅಹುದು ನಿಜವಾಗಿ ಕೊಡುವೆನು. ಆದರೆ ಮುಂದಿನ ಸಂಚಿಕೆಯಲ್ಲಿ.

(೪ ನೇ ಪಾನಿನಿಂದ ಸಾಗಿಬಂದದ್ದು.)

ಹಲವು ಸಲಹೆಗಳು.

ಇದುವರೆಗೆ ನಮ್ಮ ಪ್ರಕೃತಸ್ಥಿತಿಯನ್ನು ಕುರಿತು ಸೂಕ್ಷ್ಮವಾಗಿ ಹೇಳಿದ್ದಾಯಿತು. ಮುಂದೆ ನಾವು ಮಾಡಬೇಕಾದ ಕೆಲಸಗಳನ್ನು ಹಿಡಿಯಬಹುದಾದ ಹಾದಿಗಳನ್ನು ಕುರಿತು ಒಂದೆರಡು ಸೂಚನೆಗಳನ್ನು ಕೊಟ್ಟರೆ ಅವು ಅಪ್ರಕೃತಗಳಾಗಲಾರವು.

ಪುರಾತನ ಗ್ರಂಥ ಸಂಗ್ರಹ:— ಪ್ರತಿಯೊಂದು ಭಾಗದ ಕನ್ನಡಿಗರು ಆಯಾಯ ಸರಕಾರಕ್ಕೆ ಒತ್ತಾಯಮಾಡಿ, ಪುರಾತನ ಗ್ರಂಥಗಳನ್ನು ಸಂಗ್ರಹಿಸುವಂತೆ ಮಾಡಬೇಕು.

ಗ್ರಂಥಪ್ರಮುಖನ:— ಇದು ದುಡ್ಡಿನ ವಿಚಾರ. ಎಲ್ಲರಿಂದಲೂ, ಸಾಧ್ಯವಿಲ್ಲ. ಮೈಸೂರು ಶಿಲ್ಪಕಲಾ ಖಾತೆಯವರೂ ಪ್ರಾಚ್ಯ ಪುಸ್ತಕಾಲಯದ [illegible] ಹಲವು ಗ್ರಂಥಗಳನ್ನು ಪ್ರಕಟಿಸುತ್ತಿರುವರು. ಮೈಸೂರು ವಿಶ್ವವಿದ್ಯಾನಿಲಯದವರೂ ಕೊಂಚ ಲಕ್ಷ್ಯ ಕೊಟ್ಟಿರುವರು. ಆದರೆ ಇಷ್ಟರಿಂದಲೇ ಈ ಕೆಲಸವಾಗಲಾರದು. ಸಾಹಿತ್ಯಪರಿಷತ್ತು, ಕ[illegible] ವಿದ್ಯಾವರ್ಧಕಸಂಘಗಳು ಈ ಕೆಲಸವನ್ನು ಕೈಗೆ ತೆಗೆದು[illegible] ಮಂಗಳೂರು ಜಿಲ್ಹೆಯಲ್ಲಿ ಹಲವು ಯುವಕರು ಪ್ರಕಟಣ ಕಾರ್ಯಕ್ಕೆ ಕೈಹಾಕಿರುವರು. ಈ ಸಂದರ್ಭದಲ್ಲಿ 'ವಚನಶಾಸ್ತ್ರಸಾರ'ದ ಶ್ರೀ ಹಳಕಟ್ಟಿಯವರನ್ನೂ, 'ಸರ್ವಜ್ಞ ವಚನಗ'ಳ ಶ್ರೀ ಉತ್ತಂಗಿಯವರನ್ನು ನಾವೆಷ್ಟು ಶ್ಲಾಘಿಸಿದರೂ ಅಲ್ಪವೆ.

ಜೈನರೂ, ಲಿಂಗಾಯತರೂ, ಬ್ರಾಹ್ಮಣರೂ ಬೇರೆ ಬೇರೆ ಗುಂಪುಕೂಡಿ, ತ[illegible] ಪಂಗಡದ ಗ್ರಂಥಗಳನ್ನು ಪ್ರಕಟಿಸಲು ಪ್ರಯತ್ನ[illegible].

ಕನ್ನಡದ ಅಭಿಮಾನವಿರಲಿ! 'ಕನ್ನಡಿಗ'ನಲ್ಲಿಯ ಮೇಲ್ಬರಹದ ಲೇಖ[illegible]! ಸ್ಮರಣ ಹೊಂದಿರಿ!

ಹಿಂದುಸ್ಥಾನದಲ್ಲಿ ವಿಶ್ವವಿದ್ಯಾಲಯಗಳು ವರ್ಷೇವರ್ಷೇ ಹೆಚ್ಚುತ್ತಿವೆ. ಈಗಾಗಲೇ ೧೭ ಇವೆ. ದಕ್ಷಿಣದೇಶದಲ್ಲಿ ಆಂಧ್ರರೂ, ತಮಿಳರೂ ಕೇರಳರೂ ಪ್ರತ್ಯೇಕ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಪ್ರಯತ್ನಪಡುತ್ತಿರುವರು. ಸರಕಾರದವರೂ ಅತ್ತಕಡೆಗೆ ಲಕ್ಷ್ಯಕೊಟ್ಟಿರುವರು. ಆದರೆ ನಮ್ಮ ದೇಶದಗತಿಯೇನು? ಕರ್ನಾಟಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಯೋಚನೆಯನ್ನು ನಾವು ಮಾಡಬೇಕು.

ನಮ್ಮ ಪಂಡಿತರಿಗೆ ಈಗ ತಕ್ಕ ಗೌರವವು ಸಲ್ಲುತ್ತಿಲ್ಲ. ಇಂಗ್ಲೀಷು ಕಲಿತ ಮಾತ್ರಕ್ಕೆ ಅವರು ವಿದ್ವಾಂಸರೆಂದೆಣಿಸಬಾರದು. ಸಂಸ್ಕೃತಿ ಅಥವಾ ಕನ್ನಡದಲ್ಲಿ ಪಾಂಡಿತ್ಯ ಸಂಪಾದಿಸಿದ ಮಾತ್ರಕ್ಕೆ ಅವರನ್ನು ನಿಕೃಷ್ಟವಾಗೆಣಿಸಬಾರದು. ಈಗ ಸರಕಾರದಲ್ಲೂ ವಿಶ್ವವಿದ್ಯಾನಿಲಯಗಳಲ್ಲೂ ಇದೇ ಭಾವವೇ ಅಧಿಕವಾಗಿ ಬೇರೂರಿದೆ. ಈ ಕೊರತೆಯನ್ನು ನಾವು ಹೋಗಲಾಡಿಸಿ ಪಂಡಿತರಿಗೆ ತಕ್ಕ ಸ್ಥಾನವನ್ನು ಕಲ್ಪಿಸಿಕೊಡಬೇಕು.

ಸಂಸ್ಕೃತಭಾಷಾಭ್ಯಾಸವನ್ನು ಹೆಚ್ಚಿಸಬೇಕು. ಸಂಸ್ಕೃತಕ್ಕೆ ಬ್ರಾಹ್ಮಣಭಾಷೆಯೆಂದು ಹೆಸರಿಟ್ಟು ಅದನ್ನು ಹೂಳುವುದು ತರವಲ್ಲ. ಸಂಸ್ಕೃತವು ಬ್ರಾಹ್ಮಣ ಭಾಷೆಯಲ್ಲ! ಸಂಸ್ಕೃತವು ಆರ್ಯಸಂಸ್ಕೃತಿಯ ಭಾಷೆ! ಭರತಖಂಡದ ಮಾತೃ ಭಾಷೆ! ನಮ್ಮ ಸಂಕುಚಿತದೃಷ್ಟಿಯನ್ನು ಬಿಟ್ಟು ಸಂಸ್ಕೃತಭಾಷಾಭ್ಯಾಸಕ್ಕೆ ಮೊದಲಿಡಬೇಕು.

ವಿಶ್ವವಿದ್ಯಾನಿಲಯಗಳು ಗ್ರಂಥರಚನೆಗೆ ಪ್ರೋತ್ಸಾಹಕೊಡಬೇಕು. ಮೈಸೂರು ವಿದ್ಯಾನಿಲಯದವರು ಹಾಗೆ ಮಾಡುತ್ತಿದ್ದರು. ದ್ರವ್ಯಾಭಾವದಿಂದೀಗ ನಿಲ್ಲಿಸಿರುವರು. ಮೈಸೂರು ಶಿಕ್ಷಣ ಖಾತೆಯವರು ಈಗ ಪ್ರೋತ್ಸಾಹಕೊಡುತ್ತಿರುವರು. ಧಾರವಾಡದ ವಿದ್ಯಾವರ್ಧಕಸಂಘ, ಬೆಂಗಳೂರಿನ ಅಮೆಚೂರು ನಾಟಕಮಂಡಲಿ, ಅನಂತಪುರದ ಸರಸ್ವತೀ ಕೇತನ ಮುಂತಾದ ಸಾರ್ವಜನಿಕ ಸಂಸ್ಥೆಗಳೂ ತಕ್ಕಷ್ಟು ಗ್ರಂಥರಚನೆಗೆ ಪ್ರೋತ್ಸಾಹ ಕೊಡುತ್ತಲಿವೆ. ಮೈಸೂರು ಶ್ರೀಮನ್ಮಹಾರಾಜರವರ ಆಸ್ಥಾನದಲ್ಲಿ ಅನೇಕ ಕವಿಗಳಿರುವರು. ವಿದ್ಯಾ ಪಕ್ಷಪಾತಿಗಳಾದೀಮಹಾರಾಜರು ಕವಿಮಂಡಲಿಯನ್ನು ಸೇರಿಸಿ ಸಂಸ್ಕೃತ, ಕನ್ನಡಗಳಲ್ಲಿ ಆಶುಕವಿತ್ವವನ್ನು ಹೇಳಿಸಿ, ಈ ಸ್ಪರ್ಧೆಯಲ್ಲಿ ಜಯಶಾಲಿಗಳಾದವರಿಗೆ ಖಿಲ್ಲತ್ತುಗಳನ್ನೂ ಬಿರುದುಗಳನ್ನೂ ಕೊಟ್ಟು ಬಹುಮಾನಿಸುತ್ತಿರುವರು. ಚಿಕ್ಕ ದೇವರಾಜ ಒಡೆಯರು, ಮುಮ್ಮಡಿ ಕೃಷ್ಣರಾಜ ಒಡೆಯರಂತೆಯೇ ಈ ನಾಲ್ವಡಿ ಶ್ರೀಮತ್ಕೃಷ್ಣಭೂಪತಿಗಳೂ ಕರ್ನಾಟಕ ಭೋಜನಂತೆಯೇ ವಿರಾಜಿಸುತ್ತಿರುವರು. ಕನ್ನಡಿಗರಲ್ಲರೂ ಅವರಿಗೆಷ್ಟು ಕೃತಾರ್ಥರಾಗಿದ್ದರೂ ಸಾಲದು.

ಉಪಸಂಹಾರ.

ಸ್ಥೂಲವಾಗಿ ಕನ್ನಡನಾಡಿನ ಪರಿಸ್ಥಿತಿಯನ್ನು, ಕನ್ನಡ ವಾಙ್ಮಯದ ಸ್ಥಿತಿಯನ್ನು, ವಾಙ್ಮಯದ ಭವಿತವ್ಯವನ್ನು, ಸೂಚಿಸಿದ್ದಾಯಿತು. ಕನ್ನಡಿಗರು ದೇಶಭಾಷೆಯಲ್ಲಿ, ಮಾತೃಭಾಷೆಯಲ್ಲಿ ನಿಶ್ಚಲವಾದ ಅಭಿಮಾನವುಳ್ಳವರೇ ಆದರೆ ಅತ್ಯಲ್ಪಕಾಲದಲ್ಲೇ ಕರ್ನಾಟಕರಾಜ್ಯವನ್ನು ಪಡೆಯಬಹುದು. "ಯದ್ಭಾವಂ ತದ್ಭವತಿ" ಎಂಬುದನ್ನು ಮರೆಯಬಾರದು. ಕರ್ನಾಟಕಕ್ಕೊಂದು ಕರ್ತವ್ಯವುಂಟೆಂದು ತಿಳಿದು, ಒಂದು ಸಂದೇಶವುಂಟೆಂದು ಭಾವಿಸಿ, ಎಲ್ಲರೂ ಒಂದೇಮನಸ್ಸಿನಿಂದ ಕೆಲಸಮಾಡಿದರೆ ಕರ್ನಾಟಕವು ಇತರ ಪ್ರಾಂತಗಳಿಗೆ ಸಮಸಮಾನವಾಗಿ ನಿಲ್ಲಲಿಕ್ಕೆ ಅಡ್ಡಿಯೇ ಇಲ್ಲ.

ಕನ್ನಡಿಗರಿಗೆ ಈ ಕರ್ತವ್ಯನಿರ್ವಾಹಸಂಘದಲ್ಲಿ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಪಂತ ಕರ್ಪೂರ ಶ್ರೀನಿವಾಸರಾಯರೇ ದಾರಿತೋರಿಸಲು ಸಿದ್ಧರಾಗಿರುವರು. ಕನ್ನಡಿಗರಿಗೆ ಕರ್ನಾಟಕಮಾತೆಯಲ್ಲಿ ಅಚಂಚಲವಾದ ಆ ಮಾತೃಭಾವವು ಹುಟ್ಟಿತೆಂದರೆ ಮುಂದಿನ ಮಾರ್ಗವು ಸುಗಮವಾಗುವುದು.

—ವೈಸರಾಯ ಕ್ರಾನಿಕಲ್ಲಿನಿಂದ ಎತ್ತಿ ಬರೆದದ್ದು.

(೩ ನೇ ಪುಟದಿಂದ ಸಾಗಿಬಂದದ್ದು.)

ಪರಿಷತ್ತಿನ ಸಭಾಸದರನ್ನು ಹೆಚ್ಚಿಸುವ ಕೆಲಸವು ನಡೆಯಬೇಕೆಂದು ಗೊತ್ತಾಗಿದೆ. ಇದು ಒಂದು ವರ್ಷದವುಟ್ಟಿಗೆಯಿದ್ದು, ಈ ಅವಧಿಯಲ್ಲಿ ಇದರ ಪರಿಣಾಮವು ಹೇಗಾಗುವದೆಂಬದನ್ನು ನೋಡಬೇಕೆಂದು ಪರಿಷತ್ತಿನವರು ನಿಶ್ಚಯಿಸಿರುವರು. ಪರಿಷತ್ತಿನ ಶಾಖೆಗಳು ಕರ್ನಾಟಕದ ಎಲ್ಲಭಾಗಗಳಲ್ಲಿಯೂ ಇರುವಂತೆ ಪ್ರಯತ್ನಿಸಲು, ಶ್ರೀ. ತಲ್ಲಕ್, ಮತ್ತು ಶ್ರೀ. ಆಲೂರ ವೆಂಕಟರಾಯರು ಕರ್ನಾಟಕದ ಎಲ್ಲಭಾಗಗಳಲ್ಲಿ ತಿರುಗಾಡಬೇಕೆಂದವು, ಅವರ ವೆಚ್ಚವನ್ನು ಪರಿಷತ್ತಿನವರು ವಹಿಸಬೇಕೆಂದೂ ಗೊತ್ತಾಗಿದೆ. ಇದೇ ಸಮಯದಲ್ಲಿ ಶ್ರೀ. ಗಳಗನಾಥ, ಡೀ. ಕೆ. ಭಾರದ್ವಾಜ, ಮೊದಲಾದ ೮–೧೦ ಜನರು ಪರಿಷತ್ತಿನ ಸಭಾಸದರಾಗಿ ಆರಿಸಲ್ಪಟ್ಟರು. ಪರಿಷತ್ತಿನ ಕಾರ್ಯಕಾರೀ ಮಂಡಳಿಗೆ ಶ್ರೀ. ಕೌಜಲಗೀಯವರು ಆರಿಸಲ್ಪಟ್ಟಿದ್ದಾರೆ.

ಮಧ್ಯಾಹ್ನದಲ್ಲಿ ಫೋಟೊ ಕಾರ್ಯವಾದನಂತರ ಸಮ್ಮೇಲನದ ಅಧಿವೇಶನವು ಪ್ರಾರಂಭವಾಗಿ ರಾವು, ಲಾವಣೀ, ಶ್ರೀ. ಬೇಲೂರ ಕೇಶವದಾಸರ ಕೀರ್ತನೆಗಳು ನಡೆದವು. ಶ್ರೀ. ಕೇಶವದಾಸರ ಹೊಸ ಪದ್ಧತಿಯ ಕೀರ್ತನವನ್ನುಕೇಳಿ ಸಭಿಕರೆಲ್ಲರೂ ಸಂತೋಷಭರಿತರಾದರು. ಎರಡೂ ದಿನಗಳಲ್ಲಿ ಗೆಳೆಯರ ಗುಂಪಿನಿಂದ ಓದಲ್ಪಟ್ಟ ನಿಬಂಧನೆಗಳಿಂದ ಅನೇಕರು ಆನಂದದಲ್ಲಿ ಲೋಲಾಡಿದರು. ಆದರೆ ರಸವಿಹೀನರು ಹೊರಕ್ಕೆ ಹೋಗಿ ಆರಾಮು ಹೊಂದುತ್ತಲಿದ್ದುದೂ, ಒಳಕ್ಕಿದ್ದವರು ತೂಕಡಿಸುವದೂ ನಡೆದಿದ್ದವು! ಶ್ರೀ. ಉತ್ತಂಗಿಯವರು ಬಹುಶ್ರಮಪಟ್ಟು ಸರ್ವಜ್ಞ ಪದಗಳನ್ನು ಪ್ರಸಿದ್ಧಿಸಿದಕ್ಕಾಗಿ ಸಂತೋಷಪಟ್ಟು ಕುಣೆದಾಡಿ, ಶ್ರೀ. ಬೆಳವೀಯವರು ೧೦೦ ರೂ. ಗಳನ್ನು ಅವರಿಗೆ ಅರ್ಪಿಸಿದರು. ಹಾಗೇ ಸಾಹಿತ್ಯ ಸಮ್ಮೇಲನದವರು ಸಹ ೫೦ ರೂ. ಕೊಟ್ಟರು. ಹಾಗೂ, ದಾವಣಗೇರಿಯ ನಿರಾನೀಮಠದವರಿಗೆ, ಷಡಕ್ಷರ ಕವಿಗಳ ಸಂಸ್ಕೃತ ಗ್ರಂಥಗಳನ್ನು ಶೋಧಿಸಿ ತೆಗೆದದ್ದಕ್ಕಾಗಿ ಸಾಹಿತ್ಯ ಪರಿಷತ್ತಿನವರು ಬಂಗಾರ ಪದಕವನ್ನರ್ಪಿಸಿದರು. ಸಮ್ಮೇಲನದವರು, ಶ್ರೀ. ಗರುಡ ಸದಾಶಿವರಾಯರಿಗೆ "ನಾಟಕಾಲಂಕಾರ" ವೆಂಬ ಬಿರುದನ್ನೂ, ಸ್ವಾಗತಮಂಡಲನವರು, ಒಂದು ಸುವರ್ಣ ಪದಕವನ್ನೂ ಕೊಟ್ಟರು. ಈ ಪದಕದಲ್ಲಿ ಇಂಗ್ಲೀಷ ಅಕ್ಷರಗಳಿದ್ದವು. ಆದೇಕೆ? ಅಮೇಲೆ ಅಧ್ಯಕ್ಷರ ಉಪಸಂಹಾರ, ಸ್ವಾಗತಾಧ್ಯಕ್ಷರ ಸನ್ಮಾನಪರ ಭಾಷಣ, ಕಾರ್ಯದರ್ಶಿಗಳ ಸಂತೋಷ ಸಂಭ್ರಮ, ಶ್ರೀ. ಮುದವೀಡಕರ ಕೃಷ್ಣರಾಯರ ಆನಂದದ ಅತಿರೇಕ, ದೇ. ಭ. ದೇಶಪಾಂಡೇ ಗಂಗಾಧರರಾಯರ ಪ್ರಾಂಜಲವಾದ ಪಶ್ಚಾತ್ತಾಪ ಮತ್ತು ಮುಂದೆ ಕನ್ನಡನುಡಿಯಬಗ್ಗೆ ತಾವು ತೋರಬಹುದಾದ ಆದರ ಭಾವದ ಸ್ಫೂರ್ತಿದಾಯಕ ಭಾಷಣ ಇವೆಲ್ಲ ಸಭಿಕರ ಮನಸ್ಸನ್ನು ಆನಂದಸಾಗರದಲ್ಲಿ ಮುಳುಗಿಸಿದವು. ಕೂಡಲೆ ಬಳ್ಳಾರಿಯ ಶ್ರೀ. ಕೇ. ಗುರುರಾಜರಾಯರೆಂಬು, ಮುಂದಿನ ಅಧಿವೇಶನವನ್ನು ಬಳ್ಳಾರಿಗೆ ಕರೆದರು. ಭುವನೇಶ್ವರಿಯ ಸ್ತೋತ್ರ ಕರ್ನಾಟಕ ಮಾತೆಯ ಜಯಘೋಷಗಳೊಂದಿಗೆ ಸಭೆಯು ವಿಸರ್ಜನೆ ಯಾಯಿತು.

ಕರ್ನಾಟಕ ನಾಡಿನ ಕಾವಲವಿದ್ದ ಮರು ಕನ್ನಡಿಗನನ್ನು ಸ್ವೀಕರಿಸದೆ ಕು ಅವನನ್ನು ಪ್ರೋತ್ಸಾಹಿಸಲೇಬೇಕು!

ಪತ್ರವ್ಯವಹಾರ.

(೧) **ಸತ್ಸಂಗವು ಅವಶ್ಯವಾಗಿ ಬೇಕು:—** ಈ ಲೇಖದಲ್ಲಿ ಹೊಸ ವಿಚಾರಗಳಿಲ್ಲ. ಲೇಖಕರು ಯಾವದೊಂದು ವಿಷಯವನ್ನು ತೆಗೆದುಕೊಂಡು, ಅಭ್ಯಾಸಿಸಿ ಬರೆದರೆ ಒಳಿತಾಗುವದು, ಭಾಷೆಯು ಚನ್ನಾಗಿದೆ.

(೨) **ಓರ್ವ ಕನ್ನಡಿಗ:—** ದಾಬಡೇ ಪರ್ಸ ಫಂಡಿನ ಬಗ್ಗೆ ಕನ್ನಡಿಗ'ನು ಬರೆಯುವದನ್ನು ಬರೆದಿದ್ದಾನೆ. ಸಹಿ ಮಾಡಿದವರ ಕರ್ನಾಟಕದ ಭೂಗೋಲದ ಅಜ್ಞಾನವು ಹೊರಬೀಳುವದೂ ನಿಜ. ಈ ವಿಷಯವನ್ನು ಹೆಚ್ಚಾಗಿ ಬೆಳಿಸುವದು ಉಚಿತವಲ್ಲ.

(೩) **ಕೂದಲಿನ ಮೋಕ್ಷ:—** ವಿಷಯವು ಚನ್ನಾಗಿದೆ. ಆದರೆ ರಗಳೆ ಬಹಳ. ಪುನ್ಹ ವಿಚಾರ ಮಾಡಿ ಇದೇ ವಿಷಯವನ್ನು ಸ್ವಲ್ಪದರಲ್ಲಿ ಹೆಚ್ಚು ರುಚಿಯಾಗುವಂತೆ ಬರೆದರೆ ನಾವು ನಿಮ್ಮ ಲೇಖವನ್ನು ಪ್ರಸಿದ್ಧಿಸುವೆವು.

(೪) **ಕಲಿತವರು ಸುಶಿಕ್ಷಿತರೋ? :—** ಇದರಲ್ಲಿಯೂ ರಗಳೆ ಹೆಚ್ಚು. ಲೇಖಗಳಲ್ಲಿ ಹರಟೆ ರಗಳೆಗಳಿರಬಾರದು.

(೫) **ಮ. ವಾ. ಬುರ್ಲಿ:—** ಮೊದಲು ಬಾರುಕೋಲಿನ ಹೊಡತಗಳು ಚನ್ನಾಗಿ ಬೀಳಲಿ. ಸಮಾಜದ ದೇಹಕ್ಕೆ ಈ ಹೊಡತಗಳಿಂದ ಗಾಯವಾದರೆ 'ಮಲಮ್ಮ' ಹಚ್ಚಬಹುದು. ಆದರೆ ಈಗಿನ ಸಮಾಜದ ದೇಹದ ತೊಗಲು ಬಹು ಗಟ್ಟಿಯಾದ್ದರಿಂದ, ಬಾರುಕೋಲಿನ ಹೊಡತಗಳು ಸಹ ಅದಕ್ಕೆ ತಗಲವು. ನೀವು ಚಿಂತಿಸುವ ಕಾರಣವಿಲ್ಲ. ಡಾಕ್ಟರುಗಳ 'ಮಲಮ್ಮ' ಬೇಕಾದರೆ, ನಿಮ್ಮನ್ನು ವಿಚಾರಿಸುವೆವು.

ಮಂಜು.

ಭೂಮಿಗೆ ಹತ್ತಿ ಹರಡಿರುವ ಮೇಘಗಳೇ ಮಂಜು. ಇದು ಪ್ರಾತಃಕಾಲಕ್ಕೆ ಬೀಳುವದು. ವಾತಾವರಣದ ಕೆಳಗಿನ ಥರವು ಯಾವ ಭೂಮಿಯ ಮೇಲೆ, ಅಥವಾ ಯಾವ ನೀರಿನ ಮೇಲೆ ಇರುತ್ತದೆಯೋ, ಆ ಸ್ಥಳದ ಹನೆಗಿಂತ ಹೆಚ್ಚು ಶೀತವಾಯಿತೆಂದರೆ, ಆ ಮೇಘಗಳು ನೆಲಕ್ಕೆ ಹತ್ತಿ ಹರವುತ್ತವೆ. ಪೃಥ್ವಿಯ ಉಷ್ಣ ಪ್ರದೇಶದಲ್ಲಿ ಸೂರ್ಯನ ಎದುರಿಗೆ ಅವು ಇಲ್ಲದಂತಾಗುತ್ತವೆ. ಇಲ್ಲವೆ ಮೇಲಕ್ಕೇರಿ ಹೋಗಿ ನಿಲ್ಲುತ್ತವೆ. ಶೀತ ದೇಶಗಳಲ್ಲಿಯ ವಾಯುವಿನ ಉಷ್ಣ ಮಾನಕ್ಕಿಂತ ಸಮುದ್ರದ ಪೃಷ್ಠಭಾಗದ ಉಷ್ಣ ಮಾನವು ಹೆಚ್ಚಾಗಿರುತ್ತದೆ. ಇದಕ್ಕೆ ಕಾರಣವೇನಂದರೆ,— ನೀರಿನ ಮೇಲಿನ ಥರವು ಶೀತವಾದ ಕೂಡಲೇ, ಅದರ ಭಾರವು ಹೆಚ್ಚಾಗಿ, ಅದು ಕೆಳಗೆ ಇಳಿದು, ಉಷ್ಣವಾದ ನೀರಿನ ಥರವು ಮೇಲಕ್ಕೆ ಬರುತ್ತದೆ. ಆದರೆ ಅಟಲಾಂಟಿಕ ಮಹಾಸಾಗರದ ಭಾಗಗಳಲ್ಲಿ ಮಂಜು ಆಗಲಿಕ್ಕೆ, ಕೊಲ್ಲೆಯ ಪ್ರವಾಹದ ಬಿಸಿನೀರೇ ಕಾರಣವಾಗಿರುವದು ಆ ಬಿಸಿ ನೀರಿನಿಂದ ಆದ ಎಲ್ಲ ಭಾಷ್ಪವು, ಅದರ ಮೇಲಿನ ವಾತಾವರಣದ ಶೀತತೆಯಿಂದ ಮೇಲಕ್ಕೇರದೆ, ಅಲ್ಲಿಯೇ ನಿಲ್ಲುತ್ತದೆ.

ಉಷ್ಣ ಪ್ರದೇಶಗಳಲ್ಲಿಯೂ, ಮಳೆಯು ಕಡಿಮೆ ಯಾಗುವ ಪ್ರದೇಶಗಳಲ್ಲಿಯೂ ಮಂಜು ಬಹಳ ಬೀಳುತ್ತದೆ. ಹುಲ್ಲು, ಬಳ್ಳಿಗಳು, ಕಾಯಿಪಲ್ಲೆಗಳ ಮಡಿಗಳು ಇವುಗಳ ಮೇಲೆ ಎಷ್ಟು ಮಂಜು ಬೀಳುತ್ತದೆಯೋ ಅಷ್ಟು ಮಂಜು, ಉಸುಬಿನ ನೆಲ, ಹಾದಿ, ನೀರು, ಗರಸಿನ ಭೂಮಿ ಇವುಗಳ ಮೇಲೆ ಬೀಳುವದಿಲ್ಲ. ರಾತ್ರಿಯಲ್ಲಿ ಮೋಡಗಳಿದ್ದರೆ ಮಾತ್ರ ಮಂಜು ಬೀಳುವದಿಲ್ಲ. ಬಿದ್ದರೂ ಬಹಳ ಕಡಿಮೆ ಬೀಳುತ್ತದೆ. ಇದಕ್ಕೆ ಕಾರಣವೇನಂದರೆ-ಇಂಥ ಕಾಲದಲ್ಲಿ ಭೂಮಿಯ ಉಷ್ಣತೆಯೂ, ಅದರ ಸಮೀಪಕ್ಕಿದ್ದ ವಾತಾವರಣದ ಉಷ್ಣತೆಯೂ ಸರಿಯಾಗಿರುತ್ತವೆ. ಇದರಿಂದ ಭೂಮಿಯಿಂದ ಹೊರಡುವ ಉಷ್ಣತೆಯು, ಮಧ್ಯದಲ್ಲಿ ಮೋಡಗಳಿರುವದರಿಂದ. ತಿರುಗಿ ಭೂಮಿಯ ಕಡೆಗೆ ಬರುತ್ತದೆ. ಮೋಡಗಳಿಲ್ಲದಿದ್ದರೆ ಮಾತ್ರ ಆ ಉಷ್ಣತೆಯು ಅಡ್ಡಿಯಿಲ್ಲದೆ, ಮೇಲಕ್ಕೆ ಹೋಗುವದರಿಂದ, ಭೂಮಿಯು ತೀವ್ರ ತಂಣಗಾಗಿ ಮಂಜು ಬೀಳುತ್ತಿತ್ತು.

ಹಣಮಂತ ರಾಮಚಂದ್ರ ಕುಲಕರ್ಣಿ ಸೀಗನಾಳ.

ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫ ರೂ. ಉಪಕಾರಕರ್ತೃಗಳಿಗೆ ವಾ ೧೦ ರೂ. ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ.	೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆಯಾಗದಂಥ ೯೦೦೦ ಯಾರ್ಡ ಕೈ ನೂಲು
ಪರಸ್ಥಳದ ,,	ಮನಿಯಾರ್ಡರದಿಂದ ೧-೧೩-೦ ವಿ. ಪಿ. ಯಿಂದ ೨-೮-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦೦ಯಾರ್ಡ ಕೈನೂಲು.
ವಾಚನಾಲಯ ಸಭೆ, ಸಮ್ಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ-	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ೨-೧೩-೦ ,, ವಿ. ಪಿ. ಯಿಂದ ೩-೦-೦
ಸರಕಾರ, ಮುನಸೀಪಾಲಿಟಿ ಲೋಕಲ್‌ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦ ವಿ. ಪಿ.ಯಿಂದ ೫-೦-೦

ಬಿಡಿ ಸಂಚಿಗೆ ೮ ಪೈ. ಹಿಂದಿನಸಂಚಿಕೆಯೊಂದಕ್ಕೆ ೨ ಆಣೆ. ಧರ್ಮಾರ್ಥವಾಗಿಯಾಗಲೀ ವರ್ಷದ ಕಡಿಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ.

ವ್ಯವಸ್ಥಾಪಕ.

ಕರ್ಮವೀರ.

ಕರ್ನಾಟಕದಲ್ಲಿಯ ಎಲ್ಲಕ್ಕೂ ಶ್ರೇಷ್ಠವಾದ ಪತ್ರಿಕೆಂದರೆ ಇದೆ. ಕರ್ಮವೀರನೆಂದರೆ ಸ್ವಾರ್ಥತ್ಯಾಗದ ಮೂರ್ತಿಯು. ವಾ. ವ. ರೂ. ೩—೮—೦

ವ್ಯವಸ್ಥಾಪಕ ಕರ್ಮವೀರ.
ಧಾರವಾಡ.

ಲೋಕಮತ.

ಕರ್ನಾಟಕದಲ್ಲಿ ನವ ಚೈತನ್ಯವನ್ನು ಹುಟ್ಟಿಸಿ ಅಹಿಂಸೇ, ಖಾದಿ, ಸತ್ಯಾಗ್ರಹ ಇವೇ ಮೊದಲಾದ ವಿಷಯಗಳನ್ನು ಪ್ರತಿಪಾದಿಸಿ ಲೋಕಮತವನ್ನು ಜಾಗ್ರತ ಪಡಿಸುವದೇ ಈ ವಾರಪತ್ರಿಕೆಯ ಉದ್ದೇಶ ವಾ. ವ. ರೂ. ೩—೫—೦

ವ್ಯವಸ್ಥಾಪಕ ಲೋಕಮತ ಹುಬ್ಬಳ್ಳಿ.

ಕರ್ನಾಟಕವೃತ್ತ ಧಾರವಾಡ.

೩೦ ವರ್ಷಗಳಿಂದ ಕನ್ನಡನಾಡಿನ ಸೇವೆ ಮಾಡುತ್ತ ಬಂದಿರುವ ಈ ವಾರ ಪತ್ರಿಕೆಯಲ್ಲಿ, ಕರ್ನಾಟಕ ವೈಶಿಷ್ಟ್ಯವನ್ನು ಪ್ರತಿ ವಾರದಲ್ಲಿಯೂ, ಕಾಣಬಹುದು. ವಾ. ವ. ರೂ. ೩—೫—೦

ವ್ಯವಸ್ಥಾಪಕ.

ಈ ಪತ್ರಿಕೆಯು ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು. ಪ್ರತಿ ೪೦೦೦

.ರ ನಂ, ಬಿ. ೧೯೪೭ ವಾ. ಚಂದಾ ೧—೯—೦ ಮಾತ್ರ

(ಇದು ಕನ್ನಡ ನವಜೀವನವನ್ನು ಸಮರ್ಪಿಸುತ್ತದೆ)

ಯತ್ರ ಪ್ರಜ್ಞಾ ... — ಅತ್ರ

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ವೈಶಾಖ ವದ್ಯ ೩೦ ಶಕ ೧೮೪೬. ತಾ|| ೨೯ ೫-೧೯೨೫. | ಸಂಚಿಕೆ ೯

ಸಂಪಾದಕರ ಭೂಮಿ:.

ಎದ್ದರೆ ಕನ್ನಡ ಕುಳಿತರೆ ಕನ್ನಡ ನುಡಿದರೆ ಕನ್ನಡವು ।
ಹೃದ್ಯವು ಕನ್ನಡ ಉದ್ಯಮ ಕನ್ನಡ- ಕನ್ನಡ- ಕನ್ನಡವು ।
ಕನಸು ಮನಸಿನೊಳು ಕನ್ನಡ ಕನ್ನಡ ನಿದ್ದೆಯು ಕನ್ನಡವು।
ತಿನಸು ಕನ್ನಡವು ಜೀವಿತ ಕನ್ನಡ ಎಲ್ಲವು ಕನ್ನಡವು ॥
—ಕೈ. ನಗರ ಕವಿ

ಕರ್ನಾಟಕ ಸಾಹಿತ್ಯ ಸಮ್ಮೇಲನವು ಈ ಸಾರೆ ಯಶಸ್ವೀಯಾಯಿತೆಂದು ನಾವು ಕಳೆದ ವಾರದಲ್ಲಿ ಪ್ರಸಿದ್ಧ ಪಡಿಸಿರುವೆವಷ್ಟೇ? ೧೧ ನೇಯ ಸಮ್ಮೇಲನವು ಯಶಸ್ವಿಯಾಯಿತೆನ್ನಲಿಕ್ಕೆ ಹಲವು ಕಾರಣಗಳುಂಟು. ಬೆಳಗಾವಿಯಂಥ ಗಡಿನಾಡಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಲನವು ನೆರೆದು ಅಲ್ಲಿಯ ಕುಲಗೆಟ್ಟ ಮತ್ತು ಕುಲಗೆಡುವಂಥ ಕನ್ನಡಿಗರಲ್ಲಿ ಕನ್ನಡ ಸಾಹಿತ್ಯದ ಬಗ್ಗೆ ಅಭಿಮಾನವನ್ನು ಹುಟ್ಟಿಸಿದ್ದು ೧ ನೇ ಕಾರಣವು. ಬೆಳಗಾವಿಯಲ್ಲಿ ಕನ್ನಡದ ಚಳವಳಿಗಳು ನಡೆದರೆ ಅವಕ್ಕೆ ಮೊದಮೊದಲು ವಿರೋಧಿಸುತ್ತಿದ್ದ ಬೆಳಗಾಂವಿಯ ಮರಾಟಿಗರು ಈ ಸಾರೆಯು ಕನ್ನಡ ಸಾಹಿತ್ಯದ ಬಗ್ಗೆ ವಿರೋಧಿಸದೇ ಇದ್ದುದು ೨ ನೇ ಕಾರಣವು. 'ಚಿಕಿತ್ಸಕ'ದಂಥ ಮರಾಟೀ ಅಭಿಮಾನಿಯಾದ ಪತ್ರಿಕೆಯು ಕೊಂಚ ಸಾಲುಗಳನ್ನಾದರೂ, ಕನ್ನಡ ಸಾಹಿತ್ಯದ ಬಗ್ಗೆ ತಮ್ಮ ಪತ್ರಿಕೆಯಲ್ಲಿ ಬರೆದದ್ದು ೩ ನೇ ಕಾರಣವು. ದೇಶಭಕ್ತ ದೇಶಪಾಂಡೇ ಗಂಗಾಧರರಾಯರಂಥ ರಾಜಕಾರಣ ಪಟುಗಳು ಕನ್ನಡ ಸಾಹಿತ್ಯ ಸಮ್ಮೇಲನಕ್ಕೆ ದಯಮಾಡಿಸಿದ್ದು ೪ ನೇ ಕಾರಣವು. ಕರ್ನಾಟಕ ಭೂಷಣ ಕೌಜಲಗೀ ಶ್ರೀನಿವಾಸರಾಯರು ಪರಿಷತ್ತಿಗೆ ೧೦೦ ರೂ. ಕೊಟ್ಟು ಸಹಾಯಕರಾಗಿ, ಪರಿಷತ್ತು ಮತ್ತು ಸಮ್ಮೇಲನಗಳ ಕಾರ್ಯಗಳಲ್ಲಿ ಉತ್ಸಾಹದಿಂದ ಪ್ರಮುಖ ಭಾಗ ತೆಗೆದುಕೊಂಡದ್ದು ೫ ನೇ ಕಾರಣವು. ಹಿಂದಿನ ಸಮ್ಮೇಲನಗಳಲ್ಲಿ, ಮಹತ್ವಕೊಡದೇ ಯಿರುವಂಥ (ಧಾರವಾಡದ ಸಮ್ಮೇಲನದ ಹೊರ್ತಾಗಿ) ಲಾವಣಿ ಕೀರ್ತನಗಳಿಗೆ ಸಹ ನಿಬಂಧಗಳಿಗೆ ಕೊಟ್ಟಂತೆ ಮಹತ್ವ ಕೊಟ್ಟದ್ದು ೬ ನೇ ಕಾರಣವು. ಉತ್ತರದ ಗಡಿನಾಡಾದ ಬೆಳಗಾಂವಿಯಲ್ಲಿ ಸಮ್ಮೇಲನವು ಯಶಸ್ವಿಯಾದದ್ದನ್ನು ಕಂಡು ಉತ್ಸಾಹಗೊಂಡು ಪೂರ್ವದ ಗಡಿನಾಡಿನ ಬಳ್ಳಾರಿಯು ಸಹ ತನ್ನೆಡೆಗೆ ಮುಂದಿನ ಸಮ್ಮೇಲನವನ್ನು ಬರಮಾಡಿಕೊಂಡದ್ದು ೭ ನೇ ಕಾರಣವು.

ವಿದ್ಯಾರ್ಥಿಗಳ ೧ನೇ ಪರಿಷತ್ತು ತಲ್ಲೂರ್ ವೆಂಕಣ್ಣಯ್ಯನವರ ಅಧ್ಯಕ್ಷತೆಯು ಕೆಳಗೆ ಶಿವಾನಂದ ನಾಟಕ ಶಾಲೆಯಲ್ಲಿ ತಾ|| ೯ ನೇ ದಿನ ಪ್ರಾರಂಭವಾಯಿತು. ಇದೇ ಮೊದಲನೇ ಅಧಿವೇಶನವಾದ್ದರಿಂದ ವಿದ್ಯಾರ್ಥಿಗಳ ಸಂಖ್ಯೆಯು ಅಧಿಕವಾಗಿಲ್ಲದ್ದು ಸ್ವಾಭಾವಿಕ. ಅದರಲ್ಲಿಯೂ ಈ ಸಮ್ಮೇಲನದ ವಿಷಯದಲ್ಲಿ ಎಲ್ಲ ಪ್ರಸಿದ್ಧ ಪತ್ರಿಕೆಗಳು ಕನ್ನಡ ನುಡಿಯಲ್ಲಿಯೇ ಪ್ರಸಿದ್ಧಪಟ್ಟಿದ್ದರಿಂದಲೂ, ಈ ಸಮ್ಮೇಲನದ ಚಾಲಕರು ಕನ್ನಡ ನುಡಿಗೆ ಹೆಚ್ಚಾಗಿ ಆದರವನ್ನು ತೋರ್ಪಡಿಸಿದ್ದರಿಂದಲೂ, ಬೆಳಗಾಂವಿಯ ವಿದ್ಯಾರ್ಥಿಗಳಿಗೆ— ಮರಾಟಿ ಭಾಷೆಗೆ ಮನಸೋತ ವಿದ್ಯಾರ್ಥಿಗಳಿಗೆ – ಈ ಸಮ್ಮೇಲನಕ್ಕೆ ಬರಲು ಮನಸ್ಸಾದಂತೆ ತೋರಲಿಲ್ಲ. ಕರ್ನಾಟಕದಲ್ಲಿ ನಿವಾಸಿವಾಗಿದ್ದು, ಕರ್ನಾಟಕದಲ್ಲಿ ಮನೆಮಾರುಗಳನ್ನು ಕೊಂಡಿದ್ದು, ಕರ್ನಾಟಕದ ಉಪ್ಪನ್ನುಣ್ಣುವ ಈ ವಿದ್ಯಾರ್ಥಿಗಳಿಗೆ ಕರ್ನಾಟಕ ವಿದ್ಯಾರ್ಥಿ ಸಮ್ಮೇಲನಕ್ಕೆ ಬರಲು ನಾಚಿಕೆ ಬರುತ್ತದೆಯೊ? ಅಥವಾ ಕನ್ನಡನುಡಿಗೆ ಪ್ರಾಧಾನ್ಯವನ್ನು ಕೊಟ್ಟು ಸಮ್ಮೇಲಕ್ಕೆ ಹೋಗಬಾರದೆಂಬ ಹಟಮಾರಿತನವು ಇವರಲ್ಲಿ ನೆಲೆಗೊಂಡಿರುವದೋ ತಿಳಿಯದು. ಇರಲಿ. ಸ್ವಾಗತಾಧ್ಯಕ್ಷರಾದ ಶ್ರೀ ಬೆಳವೀಯವರ ಭಾಷಣವು ಇಂಗ್ಲೀಷ-ಕನ್ನಡದಲ್ಲಿ ಮುದ್ರಿತವಾಗಿದ್ದಿತು. ಸ್ವಲ್ಪದರಲ್ಲಿ ಕನ್ನಡನಾಡಿನ ವಿದ್ಯಾರ್ಥಿಗಳ ಕೊರತೆಗಳನ್ನು ಬಹು ಚನ್ನಾಗಿ ಬಣ್ಣಿಸಿದ್ದರು. ಅದನ್ನು ಓದಿದ ನಂತರ, ಅಧ್ಯಕ್ಷರಾದ ರಾದ ಬೆಂಗಳೂರಿನ ಶ್ರೀ ತಲ್ಲೂರ್ ವೆಂಕಣ್ಣಯ್ಯನವರ ಭಾಷಣವಾಯಿತು. ವಿದ್ಯಾರ್ಥಿಗಳಲ್ಲಿರುವ ಅವರ ಪ್ರೇಮವನ್ನು ಸಭಿಕರು ಅವರ ಭಾಷಣದಿಂದ ಚನ್ನಾಗಿ ಕಂಡು ಹಿಡಿದರು. ಬಳಿಕ ೭ ಠರಾವುಗಳು ಸ್ವೀಕರಿಸಲ್ಪಟ್ಟವು. ಅವನ್ನು ಬೇರೆ ಕಡೆಗೆ ಕೊಟ್ಟಿರುವೆವು.

ಕಾಂಗ್ರೇಸ ಸ್ವಾಗತ ಮಂಡಲದ ಸಭೆಯು ತಾ|| ೧೨ ನೇ ದಿನ ಸಾಯಂಕಾಲಕ್ಕೆ ಬೆಳಗಾಂವ ಜಿಲ್ಹೆ ಕಾಂಗ್ರೆಸ ಕಮಿಟಿಯ ಕಾರ್ಯಾಲಯದಲ್ಲಿ ಸೇರಿದ್ದಿತು. ಒಟ್ಟು ೪೦ ಸಾವಿರ ರೂಪಾಯಿಗಳು ಉಳಿದಿವೆ. ಅವುಗಳಲ್ಲಿ ಕಾಂಗ್ರೆಸದ ಸ್ಮಾರಕವೆಂದು ಪಂಪಾಸರೋವರವನ್ನು ಕಾಯಂವಾಗಿ ಬೆಳಗಾಂವಿಯಲ್ಲಿಡುವದಕ್ಕಾಗಿ ಬೆಳಗಾಂವಿ ಮುನಸೀಪಾಲಿಟಿಗೆ ೫ ಸಾವಿರ ರೂಪಾಯಿ, ಕಾಂಗ್ರೆಸದಲ್ಲಿ ಕೆಲಸ ಮಾಡಿದವರಿಗೆ ಚಿಲ್ಲರ ವೇತನಗಳನ್ನು ಕೊಡುವದಕ್ಕಾಗಿ ೧೦೦೦ ರೂಪಾಯಿಗಳೂ, ಕರ್ನಾಟಕ ಆಯುರ್ವೇದ ಮಂಡಳಕ್ಕೆ ೨೦೦ ರೂಪಾಯಿಗಳೂ ಕೊಡಲ್ಪಟ್ಟವು. ಉಳಿದ ಎಲ್ಲ ಹಣವನ್ನು ಕರ್ನಾಟಕ ಕಾಂಗ್ರೆಸ ಕಮಿಟಿಗೆ ಅರ್ಪಿಸಿದರು.

ಸಾತಾರೆಯ ಪರಿಷತ್ತಿನ ಅಧ್ಯಕ್ಷರಾದ ಶ್ರೀಯುತ ರಾಮರಾವ ದೇಶಮುಖ ಇವರ ಭಾಷಣವನ್ನು ಓದಿದವರಿಗೆಲ್ಲ ಅವರ ಜಾಣತೆಯ ವಿಷಯಕ್ಕೂ ಸಮಯೋಚಿತ್ಯದ ವಿಷಯಕ್ಕೂ ತುಂಬಾ ಸಂಶಯಬರುತ್ತದೆ. ಫರೀದಪೂರ ಪರಿಷತ್ತಿನಲ್ಲಿ ದೇಶಬಂಧು ದಾಸರಿಗೆ ಮಹಾತ್ಮಾಜಿಯವರು ನಿರ್ಮಲಾಂತಃಕರಣದಿಂದ ತಮ್ಮ ಬೆಂಬಲವನ್ನಿತ್ತ ಮೇಲೆ ಬೇರೆ ಬೇರೆ ದಿಕ್ಕಿನಿಂದ ಹರಿದು ಬರುತ್ತಿರುವ ಗಂಗಾ ಯಮುನೆಗಳಂತೆ ಸಂಗಮದಲ್ಲಿ ಅಭಿರಾಮ

ವಾಗಿ ತೋರಿ ಏಕವಿಶಿಯಿಂದ ಸ್ವರಾಜ್ಯದ ಕಡೆಗೆ ಭೋರ್ಗರೆದು ಹರೆಯುತ್ತಿರುವಾಗ ಸಾತಾರೆಯ ಕೋಳಿಯೊಂದು ಅಪಸ್ವರದಿಂದ ಕೂಗ ತೊಡಗಿದೆ. ಕೈನೂಲಿನ ಮಹತ್ವವನ್ನರಿತು ಅದಕ್ಕೆ ಪ್ರಚಾರವನ್ನು ಒಳ್ಳೆ ಹುರುಪಿನಿಂದ ಮಾಡುವದಕ್ಕೆ ಫರೀದಪುರಕ್ಕೆ ಬಂದ ಜನರೆಲ್ಲ ಒಪ್ಪಿರುವಾಗ, ದೇಶಬಂಧು ದಾಸರು ವಿಧಾಯಕ ಕಾರ್ಯಕ್ರಮವನ್ನು ಜೋರಿನಿಂದ ಪ್ರತಿಪಾದಿಸುತ್ತಿರುವಾಗ, ಎಲ್ಲ ಕಡೆಗೆ ಒಮ್ಮನಸಿನಿಂದ ಕೆಲಸ ಮಾಡುವ ವಾತಾವರಣವನ್ನು ಬೆಳೆಯಿಸುವದನ್ನು ಬಿಟ್ಟು, ಅಹಂಕಾರ ಬುದ್ಧಿಯಿಂದಲೂ ಅಹಂಮನ್ಯತೆಯಿಂದಲೂ ಇವರು ತಮ್ಮದೊಂದು ಬಂಡಿನ ತುತೂರಿಯನ್ನೂದಿರುವರು. ಗಾಂಧಿಯವರು ತಮ್ಮ ಶಾಂತಿಮಯ ಅಸಹಕಾರಿತೆಯಿಂದ ಜನರಲ್ಲಿ ಹುಟ್ಟಿಸಿದ ಜಾಗ್ರತಿಯೂ, ಸೆರೆಮನೆಯನ್ನು ಅರಮನೆಯೋಪಾದಿಯಲ್ಲಿ ಸೇರುವಂಥ ಧೈರ್ಯೋತ್ಸಾಹಗಳೂ, ಮಹಾತ್ಮಾಜಿಯವರ ಹೊಸ ಅಸ್ತ್ರಗಳು ಇವಕ್ಕೆ ಬೆದರಿ ಕನಸು ಮನಸಿನಲ್ಲಿಯೂ ಕೂಡ ಶಾಂತಿಯಿಲ್ಲದೆ ಹೌಹಾರಿ ಎದೆಯೊಡೆಕೊಂಡಿದ್ದ ನೌಕರ ಶಾಹಿಯ ಕೈನ್ಯಾವಸ್ಥೆಯು ದೇಶಮುಖರವರ ಸ್ಮೃತಿ ಪಟಲದಿಂದ ಹಾರಿಹೋಗಿದೆ. ಬ್ರಹ್ಮಾಸ್ತ್ರವನ್ನು ಬಿಡುವ ಶಕ್ತಿಯಿದ್ದಂತೆ ಅದನ್ನು ತಿರುಗಿ ತಕ್ಕೊಳ್ಳುವ ಶಕ್ತಿಯನ್ನೂ ಗಾಂಧಿಜಿಯವರು ತೋರಿಸಿರುವರು. ರಾಜಕೀಯ ಆಂದೋಲನಗಳಲ್ಲಿ ಏಳಿಳಿತಗಳಿದ್ದದ್ದು ಪ್ರತಿಯೊಬ್ಬ ಜಾಣಾಕ್ಷನು ತಿಳಿಯತಕ್ಕದ್ದು. ತರುಣ ಇಟಾಲಿಗೆ ಜೀವ ಕಳೆತುಂಬಿದ ಮ್ಯಾಝಿನಿಯ ಚರಿತ್ರವನ್ನು ಓದಿದವರಿಗೆಲ್ಲ ಕೆಲವು ವೇಳೆ ಸ್ತಬ್ಧತೆಯೂ ಕೂಡ ಚಳವಳಿಯ ಸ್ವರೂಪವೆಂಬ ಮನವರಿಕೆಯಾಗುವದು. ಈಗ ರಾಜಕೀಯ ವಾತಾವರಣದಲ್ಲಿ ಗಡದ್ದು ಹಾಕಿದಂತಾಗಿ ಎಲ್ಲ ಕಡೆಗೆ ಸ್ತಬ್ಧತೆಯುಂಟಾಗಿದೆಯೆಂದೂ, ಅದರ ದೋಷವನ್ನು ಗಾಂಧಿಜಿಯವರ ತಲೆಯಲ್ಲಿ ಹಾಕಬೇಕೆಂದೂ ದೇಶಮುಖರು ಎಣಿಸಿರತಕ್ಕದ್ದು. ಆದರೆ ಕುರುಪಾಂಡವರ ಯುದ್ಧಕ್ಕೆ ನಾರುವತಾದ್ಯಸ್ತ್ರಗಳನ್ನಾಹ್ವಾನಿಸಲು ತಪಶ್ಚರ್ಯವನ್ನು ಕೈಕೊಂಡ ಅರ್ಜುನನ ಸ್ತಬ್ಧತೆಯಂತೆಯೇ ಮಹಾತ್ಮಾಜಿಯವರ ಈಗಿನ ರಾಜಕೀಯ ಸ್ತಬ್ಧತೆಯು. ಕಲ್ಲಿನಲ್ಲಿ ವಾತ್ಸಲ್ಯವನ್ನು ತೋರಿಸಿ ತಮ್ಮ ವಿಶ್ವಾಸಕ್ಕೆ ತಕ್ಕಂತೆ ಕೊನೆಗಾಣಿಸಿಕೊಳ್ಳತಕ್ಕದ್ದನ್ನೆಲ್ಲ ಕೊನೆಗಾಣಿಸಿಕೊಳ್ಳಲು ಸ್ವರಾಜ್ಯಪಕ್ಷದವರಿಗೆ ಅವಕಾಶವನ್ನು ಕೊಟ್ಟು, ವಿಶೇಷ ಜೋಬ್ದಾರಿಯಿಲ್ಲದ ಅಂತರ್ಬಲವನ್ನು ಬೆಳೆಸಿ ಪ್ರಸಂಗಾನುರೋಧವಾಗಿ ನೌಕರಶಾಹಿಯನ್ನು ಹಣ್ಣಿಗೆ ತರಲಿಕ್ಕೆ ಪೂರ್ವ ತಯಾರಿಯದೆ ವಿಧಾಯಕ ಕಾರ್ಯಕ್ರಮವನ್ನು ಮಹಾತ್ಮಾಜಿಯವರು ನಡೆಸಿರುವರು. ಲೋಕಮಾನ್ಯರು ಒಂದೇ ರಾತ್ರಿಯಲ್ಲಿ ಹಿಂದೂಮುಸಲ್ಮಾನರ ಐಕ್ಯವನ್ನು ಮಾಡಿದರೆಂದೂ ಅದು ಮಹಾತ್ಮಾಜಿಯವರಿಗೆ ಪ್ರತೋಪವಾಸಗಳಿಂದಲೂ ಐದು ವರ್ಷದ ಕಳಕಳಿಯ ತಳಮಳಿಯಿಂದಲೂ ಸಾಧ್ಯವಾಗಲಿಲ್ಲವೆಂದು ಹೇಳಿ ಮಹಾತ್ಮಾಜಿಯವರ ನೀತಿ ನಿಪುಣತೆಯನ್ನು ಅಲ್ಲಗಳೆಯಲು ಪ್ರಯತ್ನಿಸಿದ್ದಾರೆ. ಇತ್ತ ಮೂರು ಸಂಜೆಯಲ್ಲಿ ಹಿಂದೂ ಮುಸಲ್ಮಾನರ ದಣಿದಣಿಸುವ ರಣಕಲ್ಲೋಲ, ಅತ್ತ ನಸುಕಾಗುತ್ತಲೇ ಕೈಯಲ್ಲಿ ಕೈಹಿಡಿದು ಪ್ರೀತಿಯಿಂದ ಕುಣಿದಾಡುವ ಹಿಂದೂ ಮುಸಲ್ಮಾನರ ಐಕ್ಯ! ಎಂಥ ಸಂಮೋಹನಾಸ್ತ್ರವಿದು!! ಏನು ಜಾದುಗಾರನ ಕೈಚಳಕ ವಿದಿದು ಎಂದು ಕುಣಿದಾಡಿರುವರು!! ಕೈಚಳಕವಿಯ ಚಮತ್ಕೃತಿಯಂತೆ ಕ್ಷಣಿಕ ಹಿಂದೂ ಮುಸಲ್ಮಾನರೈಕ್ಯವು (Lucknow pact) ಲಖನೌದ ಒಡಂಬಡಿಕೆಯಿಂದ ತೋರಿಬಂತು, ಹೊರತಾಗಿ ಅದು ಶಾಶ್ವತವಾಗಲಿಲ್ಲ. ಆದರೆ ಜಾದೂಗಾರನ ಕೈ ಚಳಕದ ರಾಜಕೀಯ ಕೈ ಚಳಕವಿರುವಲ್ಲಿಯೇ ವಿಶ್ವಾಸವಿದ್ದ ನಮ್ಮ ಮಹಾರಾಷ್ಟ್ರೀಯ ಸ್ವರಾಜ್ಯ ಪಕ್ಷಕಕ್ಕೂ ಆದರ ಈ ವರ್ಷದ ಮುಂಭಟ್ಟಗೂ ಅದು ಶಾಶ್ವತವಾಗಿ ಭ್ರಮೆ ಬಿಂಬಿಸ್ಸಿದ್ದು ಆಶ್ಚರ್ಯವಲ್ಲ! ಆದರೆ ಕಣ್ಣು ಮುಂದಿನ ರಾಜಕೀಯ ಪರಿಸ್ಥಿತಿಯನ್ನವಲೋಕಿಸಿದರೂ ಕೂಡ ಆ ಭ್ರಮೆನಿರಸನವಾಗಲಿಲ್ಲವೆಂಬದನ್ನು ನೋಡಿ, ದೇಶಮುಖರ ರಾಜಕಾರಣ ಪಟುತ್ವದ ವಿಷಯಕ್ಕೆ ಸಂಶಯವುಂಟಾಗಿದೆ. "ಉಂಡುಂಡು ಸ್ವರ್ಗ ಕೈಯಲ್ಲಿ ಆದರೇನು ರಂಡೆಯಾಳುವಳೆ ಕರ್ಜ" ಪ್ರೀತಿಯು ಬೆಳೆಯದೆ, ಭಾವೈಕ್ಯ ಧ್ಯೇಯವು ಉಂಟಾಗದೆ, ಮನಸ್ಸಿನೊಳಗಿನ ಕಲ್ಮಷವು ಅಡಗಿ ಹೋಗದೆ, ಮುಸಲ್ಮಾನ ಬಂಧುಗಳೇ ಒಂದು ವೇಳೆ ಹೆಚ್ಚು ಸವಲತ್ತುಗಳನ್ನನುಭೋಗಿಸಲೆಂಬ ನಿಸ್ವಾರ್ಥ ಬುದ್ಧಿಯನ್ನು ಬೆಳೆಸದೆ, ಬರೇ ಕರಾರು ನಾಮೆಗಳಿಂದ ಐಕ್ಯವನ್ನು ಹುಟ್ಟಿಸಲು ಪ್ರಯತ್ನಿಸಿದ "Lacknow pact" ಲಖನೌ ಒಡಂಬಡಿಕೆಯೆತ್ತ! ವಾಙ್ಮನಃಕಾಯಗಳಿಂದ ವಿಶ್ವಾಸವಿಟ್ಟ ವಿಷಯದಲ್ಲಿ ಆತ್ಮಾಹುತಿಯನ್ನು ಗೈಯಲು ಸಿದ್ಧರಾಗಿಯೂ ಕ್ರಿಸ್ತನಂತೆ ತಾವೇ ದಂಡನೆಯನ್ನು ಧರಿಸಿ ಭೇದ ಭಾವದ ಪಾಪವನ್ನು ಹೊಟ್ಟೆಯಲ್ಲಿ ಹಾಕಿಕೊಳ್ಳಲಿಕ್ಕೆ ಕಠಿಣೋಪವಾಸ ವ್ರತಸ್ಥರಾಗಿಯೂ ಅಂತಃಕರಣ ರಸೈಕ್ಯವನ್ನು ಹುಟ್ಟಿಸಲು ಮಾಡುವ ಗಾಂಧಿಜಿಯವರ ಪ್ರಯತ್ನವೆತ್ತ! ಸಂಪೂರ್ಣೈಕ್ಯವು ಈಗ ತೋರಿಬರದಿದ್ದರೂ ಮುಂದಿನಲ್ಲಿ ಬೆಳೆದ ಜ್ಞಾನಪೂರ್ವಕ ಪ್ರೇಮವು "ತ್ವಾಪ ಹಾರದ" ಐಕ್ಯಕ್ಕಿಂತ ಎಷ್ಟೋ ಪಟ್ಟು ದೃಢತರವಿರುವದೆಂದು ನಾವು ಎದೆ ತಟ್ಟಿ ಹೇಳುತ್ತೇವೆ. ನಮ್ಮ ಧ್ಯೇಯವು ಸಫಲವಾಗದಿದ್ದರೂ ಕೆಲಸಕಟು ಮಹಾರಾಷ್ಟ್ರಕ್ಕೆ ಇದರ ಒಳಗಿನ ಗುಟ್ಟು ತಿಳಿಯದ.. ದೇಶಮುಖರ ಭಾಷಣವೆಲ್ಲ ದೋಷೈಕ ದೃಷ್ಟಿಯುಳ್ಳದ್ದು. ಸಾತಾರೆಯಲ್ಲಿ ಆದ ಠರಾವುಗಳ ಕಿಡಿಗೇಡಿ ಮಂದ ಹುಡುಗನಂತೆ ಆದದ್ದನ್ನು ಕೆಡಿಸುವದರಲ್ಲಿಯೇ ಆನಂದಪಡುವ ಒಂದು ತರದ ರಾಕ್ಷಸೀ ಮನಃಪ್ರವೃತ್ತಿ ದ್ಯೋತಕವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಹಿಂದುಸ್ತಾನದ ರೋಗದ ನಿದಾನವನ್ನು ಮಹಾರಾಷ್ಟ್ರವು ತಪ್ಪಾಗಿ ಮಾಡಿದೆ. ಅವರ ಉಪಾಯಗಳೂ ತಪ್ಪಾಗಿವೆ! ಸ್ವಮುಖದ ಕೆಲಸವನ್ನು ಬರೇ ಭಾಷಣಗಳ ಜೋರಿನಿಂದ ಮಾತ್ರ. ಹೊರಗೆ ಜನತೆಯನ್ನು ಜಾಗ್ರತಿ ಗೊಳಿಸಿ ಸ್ವರಾಜ್ಯ ವಿಷಯಕ್ಕೆ ಜನರಲ್ಲಿ ತಳಮಳಿಯನ್ನು ಹುಟ್ಟಿಸದೆ, ಕೌನ್ಸಿಲದಲ್ಲಿಯೇ ಯುಕ್ತಿ ಪ್ರಯುಕ್ತಿಗಳನ್ನೇ ನಡಿಸಿ ಸ್ವರಾಜ್ಯಗಳಿಸುವೆವೆಂದು ಹೇಳಿದ್ದಾರೆ. ಅವರ ಸ್ವರಾಜ್ಯ ಕಾರ್ಯಕ್ರಮವೆಂದರೆ ಇದಕ್ಕೂ ಹೆಚ್ಚಿಗೇನೂ ಇಲ್ಲ. ಬೊಗಳು ಹುಸರೊಂದು ಮಾತ್ರ! ಆದರ ಹಿಂದೆ ವಿಚಾರಗಳಿಲ್ಲ! ಕಡಿಮೆಲ್ಲಿ ತುರುಕಿಕೊಳ್ಳುವ ಕ್ಷಣಿಕ ಧೋರಣದ(Opportunist policy) ಹೊರತು ದೂರದರ್ಶಿತ್ವದ ಧೋರಣವಿಲ್ಲ ಕಾಂಗ್ರೆಸದ ಸಭಾಸದರಾಗಲಿಕ್ಕೆ ನೂಲಿನ ಶರ್ತಿನಿಂದಲಾಭವಾಗುವಷ್ಟು ನಾಲಾಯಕಿಯುಂಟಾಗಲಾರದೆಂಬದು, ರಶಿಯದ ಚಳವಳಿಯ ಇತಿಹಾಸವನ್ನು ಓದಿದವರಿಗೆ ತಿಳಿಯುವದು. ಕರ್ತವ್ಯೋನ್ಮುಖರಾದ ಸ್ವಲ್ಪ ಜನರು ಕೂಡ ಸಾವಿರಾರು ಆಲಸಿಗರಿಗೆ ಸರಿಯಾಗುವರು. ದೇಶಮುಖರ ಕೆಲಕೆಲವು ಉದ್ದಾಮವಾದ ಉದ್ಗಾರಗಳಲ್ಲೇನೂ ಅರ್ಥವಿಲ್ಲ. ಕೈಲಾಗದವರು ಚಿಟಕು ಮುರಿಯುವಂತೆಯೂ ಸೂರ್ಯನ ಮೇಲೆ ಉಗುಳು ತೂರಿ ತಾವೇ ಉಪಹಾಸ್ಯಕ್ಕೀಡಾಗುವಂತೆಯೂ ಕೆಲವುಕಡೆ ಮಹಾತ್ಮಾಜಿಯವರ ಮೇಲೆ ಹರಿ ಹಾಯ್ದಿರುವರು. ಇಂಥವರ ವಿಷಯಕ್ಕೆ ಹೆಚ್ಚಾಗಿ ಬರೆಯದಿರುವದು ಒಳಿತು.

ನವಲಗುಂದದ ಉತ್ಸಾಹೀಯುವಕರಾದ ಶ್ರೀ ದೇಶಪಾಂಡೆಯವರು ರೇಲ್ವೇ ಬೋರ್ಡಿಗೆ ಕಳಿಸತಕ್ಕ ಅರ್ಜಿಯ ವಿಷಯದಲ್ಲಿ ಒಂದು ಮಹತ್ವದ ಸೂಚನೆಯನ್ನು ಮಾಡಿರುವರು. ಕರ್ನಾಟಕದೊಳಗಿನ ಮುನಸಿಪಾಲಿಟಿ ಲೋಕಲ್ ಬೋರ್ಡಗಳು ರೇಲ್ವೇಗಳ ಬಗ್ಗೆ ಠರಾವುಗಳನ್ನು ಪಾಸು ಮಾಡಬೇಕೆಂದು ಅವರ ಮತವಿದೆ. ಆ ಪ್ರಕಾರವಾಗಿ ನವಲಗುಂದ ಮತ್ತು ಯಮನೂರ ಮುನಸಿಪಾಲಿಟಿಗಳಲ್ಲಿ ಈ ಬಗ್ಗೆ ಠರಾವುಗಳನ್ನು ಬೇಗನೇ ತರತಕ್ಕವರಿರುವರು. ಇದು ನಿಜವಾಗಿಯೂ ಅವಶ್ಯಕವಾದ ಸಂಗತಿಯು. ಇವೆರಡು ಮುನಸಿಪಾಲಿಟಿಗಳ ಠರಾವುಗಳು ನಮ್ಮೆಡೆಗೆ ಬಂದೊಡನೆ ನಾವು ಕರ್ನಾಟಕದ ಎಲ್ಲ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಕಡೆಗೆ ಒಂದು ವಿನಂತಿ ಪತ್ರಿಕೆಯನ್ನು ಕಳುಹಿ, ಈ ರೇಲ್ವೇ ವಿಷಯಕ್ಕೆ ನಮಗೆ ಸಹಾಯ ಮಾಡಲು ಕೇಳಿಕೊಳ್ಳುವೆವು. ಆದರೆ ಮೊದಲು "ಕನ್ನಡಿಗ" ನ ವಾಚಕರು ಮಾತ್ರ ಈ ವಿಷಯವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ೧ ಲಕ್ಷ ೨೦ ಸಾವಿರ ಜನರ ಸಹಿಯು ಕೂಡಲೇ ಕಳೆಯುವಂತೆ ಜಾಗರೂಕರಾಗಿರತಕ್ಕದ್ದು.

೧ ನೇ ಕರ್ನಾಟಕ ವಿದ್ಯಾರ್ಥಿ ಸಮ್ಮೇಲನದ ಠರಾವುಗಳು.

(೧) ಕನ್ನಡ ನಾಡಿನ ಎಲ್ಲ ಭಾಗಗಳಲ್ಲಿ ಏಕ ವಿಧವಾದ ಶಿಕ್ಷಣಕ್ರಮ ವಿರಬೇಕು. (೨) ಮಧ್ಯಮತರಗತಿಯ ಶಿಕ್ಷಣವೆಲ್ಲ ಕನ್ನಡನುಡಿಯ ಮುಖಾಂತರವಾಗಿ ನಡೆಯಬೇಕು. (೩) ಕನ್ನಡ ಸಂಸ್ಕೃತಿಯನ್ನೇ ಮುಖ್ಯಗುರಿಯನ್ನಾಗಿಟ್ಟುಕೊಂಡಿರುವಂಥ ಒಂದು ವಿಶ್ವವಿದ್ಯಾಲಯವು ಅಖಂಡಕರ್ನಾಟಕಕ್ಕೆ ಬರತಕ್ಕದ್ದು. (೪) ದಂಡಾಳುಗಳ ಶಿಕ್ಷಣವು ಒತ್ತಾಯ ವಿಷಯವಾಗಿರಬೇಕು. (೫) ಕರ್ನಾಟಕದ ಎಲ್ಲ ಭಾಗಗಳ ಕಾಲೇಜಗಳಲ್ಲಿ ಕರ್ನಾಟಕ ಸಂಘಗಳು ಸ್ಥಾಪಿಸಲ್ಪಡಬೇಕು. ಅವು ಈ ವಿದ್ಯಾರ್ಥಿ ಸಮ್ಮೇಲನದ ಹೊಣೆಯನ್ನು ಹೊರಬೇಕು (೬) ವಿದ್ಯಾರ್ಥಿಗಳು, ಚುಟ್ಟ ಚಹ ಪರದೇಶಿ ವಸ್ತ್ರ ಮೊದಲಾದ ಚಟಗಳನ್ನು ಬಿಡಬೇಕು. (೭) ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಲ್ಲಿ ಹೊಲೆಯರ ಹುಡುಗರಿಗೆ ಒರಲು ಅವಕಾಶವಿರಬೇಕು.

ಸಾಹಿತ್ಯ ಸಮ್ಮೇಲನದಲ್ಲಿ ಗೊತ್ತಾದ ಗೊತ್ತುವಳಿಗಳು.

(೧) ಚಕ್ರವರ್ತಿಗಳ ಆರೋಗ್ಯಕ್ಕಾಗಿಸಂತೋಷವನ್ನು ವ್ಯಕ್ತಪಡಿಸುವದು.

(೨) ಬೆಳಗಾವಿಹಾಗೂ ವಿಜಾಪೂರಜಿಲ್ಹೆಯ ವ್ಯಾಪಾರಸ್ಥರು ತಮ್ಮ ಎಲ್ಲ ಪತ್ರವ್ಯವಹಾರ ಹಾಗೂ ಲೆಕ್ಕ ಪತ್ರಗಳನ್ನು ಕನ್ನಡದ ಲ್ಲಿಯೇ ಇಡಬೇಕೆಂದು ಅವರಿಗೆ ವಿನಂತಿ ಮಾಡಿಕೊಳ್ಳುವದಲ್ಲದೆ ಇದರ ಬಗ್ಗೆ ಒಂದ ಮಂಡಳವನ್ನಾದರೂ ನೇಮಿಸಿರುವರು. ಇದಕ್ಕೆ ಶ್ರೀ ಸಾಖರೇಯ ವರು ಕಾರ್ಯದರ್ಶಿಗಳಿರುವರು.

(೩) ಮೈಸೂರ ಸರಕಾರದವರಂತೆ ಮುಂಬಯಿ ಮದ್ರಾಸ ಹಾಗೂ ನಿಜಾಮಸರಕಾರದವರಿಂದ ಪರಿಷತ್ತಿಗೆ ಧನಸಹಾಯ ಪಡೆಯಬೇಕಾಗಿ ಪ್ರಯತ್ನಿಸುವದು.

(೪) ಕರ್ನಾಟಕದ ಚಿಕ್ಕ ಪುಟ್ಟ ಸಂಸ್ಥಾನಗಳಲ್ಲಿಸಹ ಕನ್ನಡವೇ ಕೋರ್ಟ-ಭಾಷೆಯಾಗಿರತಕ್ಕದ್ದು.

(೫) ಮಾಗಡೀ ಕೆಂಪೆಗೌಡರ ಸ್ಮಾರಕದ ಬಗ್ಗೆ ಏನು ಮಾಡಬೇಕು.

(೬) ಲಲಿತಕಲೆಯಲ್ಲಿ ಪ್ರವೀಣರಿಗೆ ಪಾರಿತೋಷಕ ಕೊಡುವದು.

(೭) ಕರ್ನಾಟಕದಲ್ಲಿಯ ಮುನಿಸಿಪಾಲಿಟಿ ಲೋಕಲಬೋರ್ಡಗಳು ತಮ್ಮ ತಮ್ಮ ಹದ್ದಿನಲ್ಲಿ ವಾಚನಾಲಯ ಪುಸ್ತಕಾಲಯಗಳನ್ನು ಸ್ಥಾಪಿಸಿ ಸಹಾಯ ದ್ರವ್ಯವನ್ನಾದರೂ ನೋಡಬೇಕು.

(೮) "ಮದ್ರಾಸ ಸದರ್ನ ಮರಾಠಾ" ಎಂಬ ಹೆಸರು ಕಿತ್ತಿ ಹಾಕಿ "ಮದ್ರಾಸ ಕರ್ನಾಟಕ ,, ರೇಲ್ವೆ ಎಂದು ಹೆಸರಿಡಬೇಕು.

(೯) ಕರ್ನಾಟಕದಲ್ಲಿಯ ಎಲ್ಲ ಕನ್ನಡ ಹಳ್ಳಿಗಳಲ್ಲಿ ಕನ್ನಡ ಶಾಲೆಗಳನ್ನು ಸ್ಥಾಪಿಸುವದು.

(೧೦) ಕ್ರಮಿಕ ಪುಸ್ತಕಗಳು ಅಖಿಲ ಕರ್ನಾಟಕಕ್ಕೆ ಒಂದೇ ಆಗಿರಬೇಕು.

(೧೧) ಅಖಿಲಕರ್ನಾಟಕಕ್ಕೆ ಟ್ರೇನಿಂಗ ಕಾಲೇಜಕ್ಕೆ ಬದಲು ಮೈಸೂರಿನಲ್ಲಿದ್ದಂತೆ ಒಂದು ಪಂಡಿತಕಾಲೇಜ ಸ್ಥಾಪಿಸತಕದ್ದು.

(೧೨) ಕರ್ನಾಟಕಕ್ಕೊಂದು ವಿಶ್ವವಿದ್ಯಾಲಯ ವಿರಬೇಕು.

(೧೩) ಗರುಡಸದಾಶಿವರಾಯರಿಗೆ ನಾಟಕಾಲಂಕಾರ ಎಂದು ಬಿರುದು ಕೊಡಬೇಕು.

(೧೪) ಬ್ರಿಟಿಶ ಕರ್ನಾಟಕದ ಏಕೀಕರಣ ವಾಗುವಂತೆ ಸಮ್ಮೇಲನವು ಪ್ರಯತ್ನಿಸಬೇಕು.

(೧೫) ಮುಂಬಯಿ ವಿಶ್ವ ವಿದ್ಯಾಲಯದಲ್ಲಿ ಕನ್ನಡವು ಆವಶ್ಯ ಭಾಷೆಯಾಗಬೇಕಲ್ಲದೆ, ವಿಷಯಗಳನ್ನು ಕನ್ನಡದಲ್ಲಿಯೇ ಕಲಿಸಲಿಕ್ಕೆ ಯೋಗ್ಯ ಅನುಕೂಲತೆಗಳನ್ನು ಜರಗಿಸತಕ್ಕದ್ದು.

(೧೬) ಕನ್ನಡದಲ್ಲಿ ಒಂದು ವಿಶ್ವ ಕೋಶ ಹಾಗೂ ಒಂದು ನಿಘಂಟು ಇರಬೇಕು.

(೧೭) ಲಕ್ಷ್ಮೀನರಸಿಂಹಯ್ಯ ಹಾಗೂ ಕೋರಣಗಲ್ಲ ರಾಜಾರಾಯರ ಮರಣದಬಗ್ಗೆ ದುಃಖ ವ್ಯಕ್ತಮಾಡುವದು.

(೧೮) ಶಿಲಾಶಾಸನ ಮೊದಲಾದವುಗಳ ಬಗ್ಗೆ ಒಂದು ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸಬೇಕೆಂಬ ಹಿಂದಿನ ಠರಾವಿನ ಪುನರುಚ್ಚಾರಣೆ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿ.

ಕಳೆದ ವಾರದಲ್ಲಿ ಬೆಳಗಾವಿಯಲ್ಲಿ ಕೂಡಿದಾಗ್ಗೆ ಕೆಲವು ಮಹತ್ವದ ಠರಾವುಗಳು ನಿರ್ಣಯಿಸಲ್ಪಟ್ಟಿವೆ. ಆ ಠರಾವುಗಳಲ್ಲಿ ನಿರ್ಣಯಿಸಿದಂತೆ ಕರ್ನಾಟಕದಲ್ಲಿ ಖದ್ದರದ ಕಾರ್ಯವು ಇನ್ನು ಮೇಲೆ ಬಹು ಜೋಕ್ಕೆಯಾಗಿ ನಡೆಯುವದೆಂದು ನಿರ್ಧಾರವಾಗಿ ಹೇಳಬಹುದು. ಯಾವದೊಂದು ಸಾರ್ವಜನಿಕ ಕೆಲಸಕ್ಕೆ ಕಾರ್ಯವಾಹಕರು ಮತ್ತು ದುಡ್ಡು ಇವೆರಡು ಅತ್ಯವಶ್ಯವಾದ ವಿಷಯಗಳು ಅಸಹಕಾರ ಚಳವಳಿಯಿಂದ ಕರ್ನಾಟಕದಲ್ಲಿ ಅಲ್ಲಲ್ಲಿ ಕಾಂಗ್ರೆಸ ಕೆಲಸಕ್ಕೆಂದೇ ಹಲವು ಕಾರ್ಯವಾಹಕರು ಸಿದ್ಧವಾಗಿದ್ದರೂ ಅವರ ದುಡ್ಡಿನ ಕೊರತೆಯು ದೂರಾಗಿದ್ದಿಲ್ಲ. ಈಗ್ಗೆ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಬ್ರಿಟಿಶ ಕರ್ನಾಟಕದ ಏಳುಜಿಲ್ಹೆಗಳಿಗೂ ಒಬ್ಬೊಬ್ಬ ಜಿಲ್ಹಾ ಮುಖ್ಯಾಧಿಕಾರನನ್ನು ನೇಮಿಸಿ, ಅವರ ಪಗಾರವು ತಿಂಗಳೊಂದಕ್ಕೆ ೫೦ ರೂ. ಗಳವರೆಗೆ ಇರಬೇಕೆಂದೂ, ಅವರ ಪ್ರವಾಸದ ವೆಚ್ಚವು ಪ್ರತಿತಿಂಗಳಿಗೆ ೨೦ ರೂ ವರೆಗೆ ಬಂದರೂ, ಅದನ್ನು ಕೊಡುವರೆಂದೂ ನಿರ್ಧರಿಸಿದ್ದನ್ನು ಕಂಡು ಯಾರಿಗೆ ಆನಂದ ವಾಗಲಿಕ್ಕಿಲ್ಲ? ವಿಜಾಪೂರ ಜಿಲ್ಹೆಗೆ, ಶ್ರೀ ಪುರೋಹಿತರೂ, ಬೆಳಗಾವಿಗೆ ಶ್ರೀ ಮುಜಲೀಯವರೂ, ಧಾರವಾಡಕ್ಕೆ ಶ್ರೀ ಗುತ್ತಲರವರೂ, ಕಾರವಾರಕ್ಕೆ ಶ್ರೀ ಗುಳ್ವಾಡಿಯವರೂ ಬಳ್ಳಾರಿಗೆ ಶ್ರೀ ಡಿ. ಎಸ್. ಹಣಮಂತರಾವ ಮತ್ತು ವೆಂಕೋಬಾಚಾರ್ಯರೂ ನೇಮಿಸಲ್ಪಟ್ಟಿದ್ದಾರೆ ಮಂಗಳೂರಿಗೆ ಯಾರನ್ನು ನೇಮಿಸಬೇಕೆಂಬುದು ಕೂಡಲೇ ಗೊತ್ತುಮಾಡಲ್ಪಡುವದು. ಇವರ ಹೊರ್ತಾಗಿ ಅಲ್ಲಲ್ಲಿ ಪ್ರಚಾರಕರನ್ನು ನೇಮಿಸುವದೂ, ಅವರಿಗೆ ತಿಂಗಳೊಂದಕ್ಕೆ ೨೦ ರೂ ಪಗಾರವೂ ಪ್ರವಾಸಕ್ಕಾಗಿ ೫ ರೂ. ಮೇಲಾಗಿ ನೂರ ಜನ ಸಭಾಸದರನ್ನು ದೊರಕಿಸದರೆ ಪ್ರತಿನೂರಕ್ಕೆ ೫ ರೂ ಕೊಡುವರೆಂದೂ ಗೊತ್ತಾಗಿದೆ ಈ ಕಾರ್ಯವನ್ನು ಶೀಘ್ರದಲ್ಲಿಯೇ ಪ್ರಾರಂಭಿಸುವದಕ್ಕಾಗಿ ಪ್ರತಿಯೊಂದು ಜಿಲ್ಹೆಗೆ ೫೦೦ ರೂ. ಕೊಡುವರು. ಕರ್ನಾಟಕದಲ್ಲಿ ಕಾಂಗ್ರೆಸಾದ್ದರಿಂದ ಕಾಂಗ್ರೆಸ ಕೆಲಸವು ಇಲ್ಲಿ ಉಳಿದ, ಪ್ರಾಂತಗಳಿಗಿಂತ ಹೆಚ್ಚು ವ್ಯವಸ್ಥಿತ ರೀತಿಯಿಂದಲೂ, ಉತ್ಸಾಹದಿಂದಲೂ ನಡೆಯಬೇಕೆಂದು ಎಲ್ಲರ ಇಚ್ಛೆಯಿದ್ದಿತು. ಈಗ ಆ ಇಚ್ಛೆಯು ಪೂರ್ಣವಾಗುವದೆಂದು ಆಶಿಸಬಹುದಾಗಿದೆ. ಈ ಬಗ್ಗೆ ಏರ್ಪಾಟು ಮಾಡಲಿಕ್ಕೆ ಕಾಂಗ್ರೆಸ ಸ್ವಾಗತ ಸಭೆಯ ಶಿಲ್ಕು ಉಳಿದ ದ್ರವ್ಯನಿಧಿಯು ಕಾರಣವೆಂಬದು ಸ್ಪಷ್ಟವಿದೆ. ಈ ನಿಧಿಗೆ ಕರ್ನಾಟಕದ ಪ್ರತಿಯೊಂದು ಭಾಗವು ತನ್ನ ಅಂಶವನ್ನು ಕೊಟ್ಟಿರುವದು. ಹೀಗಿರಲು ಮೈಸೂರು ಕೊಡಗು, ನಿಝಾಮ ಕರ್ನಾಟಕಗಳಿಗೆ ಯಾಕೆ ಜಿಲ್ಹಾ ಪ್ರಚಾರಕರನ್ನು ನೇಮಿಸಿರುವದಿಲ್ಲವೋ ತಿಳಿಯದು ಈ ಬಗ್ಗೆ ಯಾವ ಉಲ್ಲೇಖವೂ ಇರುವದಿಲ್ಲ. ಆದ್ದರಿಂದ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿಗಳು ಈ ವಿಷಯವನ್ನು ಸ್ಪಷ್ಟಪಡಿಸಬೇಕಾಗಿ ಸೂಚಿಸುತ್ತೇವೆ.

ಬೆಳಗಾವಿಯ ಕ್ರೀಡಾಭುವನದಲ್ಲಿ ತಾ|| ೧೨-೫-೨೫ ನೇ ದಿನ ಕೂಡಿದ.

ಕರ್ನಾಟಕ ಏಕೀಕರಣ ಸಭೆಯ

ಸ್ಥಾಯಿಕ ಮಂಡಲದ ಕಾರ್ಯವಿವರವು,

(೧) ಅಧ್ಯಕ್ಷರಾದ ಶ್ರೀ ಕಂಬಳೀಯವರು ಸಭೆಗೆ ಬಾರದ್ದರಿಂದ, ಉಪಾಧ್ಯಕ್ಷರಾದ ಶ್ರೀ ಜೋಗ ವಿಶ್ವನಾಥ ರಾಯರು ಅಧ್ಯಕ್ಷಸ್ಥಾನವನ್ನಾಕ್ರಮಿಸಬೇಕಾಗಿ ಶ್ರೀ ಕಡಪಾ ರಾಘವೇಂದ್ರರಾಯರು ಸೂಚಿಸಿದರು. ಶ್ರೀ ಬೆಳವೀಯವರು ಅನುಮೋದಿಸಲು ಶ್ರೀ ಜೋಗರವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು.

(೨) ಬೆಳಗಾವಿಯಲ್ಲಿ ಡಿಶಂಬರದೊಳಗೆ ಕಾಂಗ್ರೆಸ ಸಮಯದಲ್ಲಿ ನೆರೆದ ಅಖಿಲ ಕರ್ನಾಟಕ ಜನರು ಕೂಡಿಕೊಂಡು ಸ್ಥಾಪಿಸಿದ ಕರ್ನಾಟಕ ಏಕೀಕರಣ ಸಭೆಯ ಉದ್ದೇಶ ನಿಯಮ. ಸಭಾಸದರ ಹೆಸರುಗಳನ್ನೂ, ಹುಬ್ಬಳ್ಳಿಯಲ್ಲಿ ಏಪ್ರಿಲ ೫ ನೇ ತಾ', ಸೇರಿದ ಈ ಸಭೆಯ ಕಾರ್ಯಕಾರೀ ಮಂಡಲದ ವೃತ್ತಾಂತವನ್ನೂ ಕಾರ್ಯದರ್ಶಿಗಳಾದ ಮಂಗಳವೇಢೇ ಶ್ರೀನಿವಾಸರಾಯರು ಸಭಾಸದರಿಗೆ ಓದಿ ತಿಳಿಸಿದರು.

(೩) ಈ ವರೆಗೂ ಸಭೆಯ ದ್ರವ್ಯಸ್ಥಿತಿಯು ಏರ್ಪಾಡಾಗಿರದ್ದರಿಂದ ಸಭೆಯ ಕಾರ್ಯವು ಸಾಗದಂತಾಗಿದೆ. ಈ ವರೆಗೂ ಕಾರ್ಯದರ್ಶಿಗಳಾದ ರಾ. ಮಂಗಳವೇಢೆಯವರು ೩೦-೬-೨ ರೂ. ಕೈಯಿಂದ ವೆಚ್ಚ ಮಾಡಿರುವರು. ಆದ್ದರಿಂದ ಈಗ್ಗೆ ಹಣ ಕೂಡಿಸುವ ಏರ್ಪಾಡಾಗಬೇಕೆಂದು ಚರ್ಚೆ ನಡೆಯಲು, ಶ್ರೀ ಜೋಗರವರ ೧೦ ರೂ. ಕೊಟ್ಟರು. ಕೂಡಲೇ ಕೆಳಗೆ ಕಾಣಿಸುವ ಸದ್ಗೃಹಸ್ಥರು ಅವರ ಹೆಸರಿನ ಮುಂದೆ ಕಾಣಿಸಿದಂತೆ. ಚಂದಾ ಕೊಟ್ಟರು: --

ಶ್ರೀ. ರಾಘವೇಂದ್ರರಾವ ಕಡಪಾ ೫ ರೂ. ಕೃಷ್ಣರಾವ ಮುದವೇಡಕರ ೨ ರೂ. ಹಣಮಂತಗೌಡಾ ೧ ರೂ, ಡಿ. ವಿ. ಗುಂಡಪ್ಪಾ ೨ ರೂ. ಮಮದಾಪೂರ ೧ ರೂ. ಸಾಬಳೆ ೧ ರೂ. ಬಿಜ್ಜರ ಸನ ಣೂರ ೫ ವೆಂಕಟ ನಾರಾಯಣಪ್ಪಾ ೧ ರೂ. ಮೊಹರೆ ೧ ರೂ. ಹಣಮಂತರಾವ ಕೌಜಲಗಿ ೧ ರೂ. ತಾತಾಚಾರ್ಯ ಶರ್ಮಾ ೧ ಸಂಪನ್ನರಾವ ೧ ರೂ. ಹಣಮಂತಕೃಷ್ಣ ಜಮಾದಾರ ೧ ರೂ. ರಾವಜಿ ಸೋನವಾಳಕರ ೧ ರೂ. ಗಣಪತರಾವ ಅಲಬಾಳ ೧ ರೂ ಜಿನಾಜಿ ಹಣಮಂತ ಕುಲಕರ್ಣಿ ೧ ರೂ. ಕೆ. ಗುರುರಾಜರಾವ ೫

ಇದಲ್ಲದೆ ಎಲ್ಲ ಮಂಡಲದ ಸಭಾಸದರು ೫ ರೂ. ವರ್ಗಣಿ ಕೊಡಬೇಕೆಂದು ಗೊತ್ತಾಯಿತು. ಅವರು ಈ ಹಣವನ್ನು ಒಂದು ವಾರದೊಳಗಾಗಿ ಕಾರ್ಯದರ್ಶಿಯವರಿಗೆ ಕೊಡಬೇಕು.

(೪) ಬ್ರಿಟಿಶ್ ಕರ್ನಾಟಕದ ಸ್ವತಂತ್ರವಾದ ಪ್ರಾಂತವನ್ನು ರಚಿಸಿ, ಅದಕ್ಕೆ ಶ್ರೀಮನ್ ಮಹಿಶೂರ ಮಹಾರಾಜರವರೇ ಗವ್ಹರ್ನರರಾಗಿರುವಂತೆ ಏರ್ಪಾಡಾಗಿರಬೇಕೆಂದು ಶ್ರೀ ಕೌಜಲಗಿ ಶ್ರೀನಿವಾಸರಾಯರು ಸೂಚಿಸಿದರು. ಇದರ ಮೇಲೆ ತಾಗಿ ಮುಂಬೈ ಮದ್ರಾಸ ಕೊಡಗುಗಳ ಬ್ರಿಟಿಶ ಕರ್ನಾಟಕಕ್ಕೆ ಬೇರೊಂದು ಗವ್ಹರ್ನರರ ಪ್ರಾಂತವಿರಬೇಕೆಂದೂ, ಮದ್ರಾಸದ ಮತ್ತು ಕೊಡಗಿನ ಕರ್ನಾಟಕ ಭಾಗಗಳನ್ನು ಮುಂಬೈಗೆ ಸೇರಿಸಬೇಕು ಇತ್ಯಾದಿ, ಮುಂಬೈ ಕೊಡಗು ಭಾಗಗಳನ್ನು ಮದ್ರಾಸಕ್ಕೆ ಸೇರಿಸಬೇಕೆಂದೂ, ಮೂರು ವಿಧವಾಗಿ ಸೂಚಿಸಿದರು. ಈ ಸೂಚನೆಗಳೆಲ್ಲ ವಿಚಾರಕ್ಕಾಗಿ ನೋಡಲ್ಪಟ್ಟವು. ಸಭಿಕರೆಲ್ಲ ಒಳ್ಳೇ ಉತ್ಸಾಹದಿಂದ ಈ ಸೂಚನೆಗಳನ್ನು — ವಿಶೇಷತಃ ಮೊದಲಿನ ಸೂಚನೆಯನ್ನು — ವಿವೇಚಿಸಿ ಪಾಶಿ ಕಡೆಗೆ ಕೆಳಕ್ಕೆ ಕಾಣಿಸಿದಂತೆ ನೊಂದು ಗೊತ್ತುವಳಿಯನ್ನು ಮಾಡಿದರು.

"ಹಿಂದುಸ್ಥಾನದ ರಾಜಕೀಯ ವ್ಯವಸ್ಥೆಯೊಂದನ್ನು ನಿಶ್ಚಯಿಸುವ ಯೋಜನೆಯ ಕಡೆಗೆ ಭಾರತೀಯರ ದೃಷ್ಟಿಯು ಹರಿದಿದ್ದದರಿಂದ, ಮೊಂಟೇಗೋಚೇಮ್ಸಫರ್ಡ ವರದಿಯಲ್ಲಿ ಭಾಷಾನುಗಣ್ಯವಾಗಿ, ಹಿಂದುಸ್ಥಾನದಲ್ಲಿ ಪ್ರಾಂತಗಳ ರಚನೆಯಾಗಬೇಕೆಂದು ಕಾಣಬರುವ ಸೂಚನೆಗೆ ಅನುಗುಣವಾಗಿ ಕರ್ನಾಟಕ ಪ್ರಾಂತರಚನೆಯನ್ನು ಮಾಡುವ ಉದ್ದೇಶದಿಂದ ಕರ್ನಾಟಕ ಏಕೀಕರಣ ಸಭೆಯ ಸ್ಥಾಯಿಕ ಮಂಡಳಿಯವರು ಕೆಳಗೆ ಕಂಡುಬರುವ ಸದ್ಗೃಹಸ್ಥರ ಉಪಸಭೆಯೊಂದನ್ನು ಕೂಡಿಸಿ, ಬ್ರಿಟಿಶ್ ಕರ್ನಾಟಕ ಮತ್ತು ಸಂಸ್ಥಾನಗಳ ಕರ್ನಾಟಕ ಸಂಬಂಧಗಳನ್ನು ನಿಶ್ಚಯಿಸಿ ಅಖಿಲ ಕರ್ನಾಟಕಕ್ಕೊಂದು ಉಚಿತ ರಾಜಕೀಯ ವ್ಯವಸ್ಥೆಯನ್ನು ಯೋಚಿಸಿ ಆ ವ್ಯವಸ್ಥೆಗೆ ಅನುಗುಣವಾಗಿ ಯಾವ ಯಾವ ಸರಕಾರದಲ್ಲಿ ಯಾವ ಯಾವ ಬದಲಾವಣೆಗಳಾಗಬೇಕಾಗಿರುವದೋ, ಇವೆಲ್ಲವನ್ನು ಚರ್ಚಿಸಿ, ಸವಿಸ್ತರ ಒಂದು ವರದಿಯನ್ನು ಬರೆದು ಮುಂದಿನ ಆಕ್ಟೋಬರ ತಿಂಗಳು ೩೧ ರೊಳಗಾಗಿ ಕರ್ನಾಟಕ ಏಕೀಕರಣ ಸಭೆಯ ಸ್ಥಾಯಿಕ ಮಂಡಳಿಗೆ ಒಪ್ಪಿಸತಕ್ಕದ್ದೆಂದು ಈ ಸಭೆಯು ಅಭಿಪ್ರಾಯಪಡುತ್ತದೆ.

—(**ಕಮಿಟಿಯ ಸಭಾಸದರು.**)—

(೧) ಎಸ್. ಟಿ. ಕಂಬಳಿ (೨) ಡಿ. ವಿ. ಗುಂಡಪ್ಪಾ
(೩) ಶ್ರೀನಿವಾಸರಾವ ಕೌಜಲಗಿ (೪) ಎಸ್. ಎಸ್. ಅಂಗಡಿ
(೫) ರಾವಸಾಹೇಬ ಹಲಕಟ್ಟಿ (೬) ಶ್ರೀ ಕಡಪಾ ರಾಘವೇಂದ್ರರಾವ
(೭) ರಾಜಗೋಪಾಳ ಕೃಷ್ಣರಾವ (೮) ಸಾಬಳೆ ಎಮ್. ಆರ್.
(೯) ಮಂಜನಾಥಭಟ್ಟಕರ್ಕಿ (೧೦) ಬಿ ಹೊಸಪಾಳ್ಯಪ್ಪಾ ಹರಪನಹಳ್ಳಿ.

ಮೂವರು ಸಭಾಸದರು ಬಂದರೆ ಕೋರಂ ಆಗಬೇಕು. ಸ್ಥಾಯಿಕ ಮಂಡಳದ ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ ಮಂಗಳವೇಢೇ ಇವರು ಕಮಿಟಿಯ ಕಾರ್ಯದರ್ಶಿಗಳಾಗಿರಬೇಕು.

ಸೂಚಕರು. ಡಿ. ವಿ. ಗುಂಡಪ್ಪಾ,
ಅನುಮೋದಕರು. ತಾತಾಚಾರ್ಯ ಶರ್ಮಾ.

ಸರ್ವಾನುಮತದಿಂದ ಪಾಸಾಯಿತು.

(೫) ೨ನೇ ಗೊತ್ತುವಳಿಕೆಯು:— ಈಸಭೆಯ ಉದ್ದೇಶವು, ರಾಷ್ಟ್ರೀಯ ಮಹಾ ಸಭೆಯ ಭಾಷಾ ರೀತಿಯಿಂದ ಪ್ರಾಂತಗಳ ವಿಭಜನೆ ಮಾಡಬೇಕೆಂಬ ಅಭಿಪ್ರಾಯವನ್ನು ಸಾರ್ಥಕ ಪಡಿಸತಕ್ಕದ್ದಾದ ಕಾರಣ ಕಳೆದ ರಾಷ್ಟ್ರೀಯ ಸಭೆಯ ಸಂಬಂಧದಲ್ಲಿ ಜಮಾ ಆಗಿ ಶಿಲ್ಕು ಇರುವ ಹಣದಿಂದ ಈ ಕರ್ನಾಟಕ ಏಕೀಕರಣ ಸಭೆಯ ಸ್ಥಾಯಿಕ ಮಂಡಳದ ಕಾರ್ಯಗಳ ಸದ್ಯದ ಖರ್ಚಿಗಾಗಿ ಈಗ ಕನಿಷ್ಟ ಪಕ್ಷ ೫೦೦೦ ರೂಪಾಯಿಗಳ ಮೊಬಲಗನ್ನು ದಯಮಾಡಿ ಕೊಡಬೇಕೆಂದು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯನ್ನು ಈ ಸಭೆಯು ಪ್ರಾರ್ಥಿಸುತ್ತದೆ.

ಸೂಚಕರು. ಎಸ್. ಎಸ್. ಅಂಗಡಿ,
ಅನುಮೋದಕರು. ಕಡಪಾ ರಾಘವೇಂದ್ರರಾವ.
ಸರ್ವಾನುಮತದಿಂದ ಪಾಸಾಯಿತು.

(೬) ಮುಂದಿನ ಸ್ಥಾಯಿಕ ಮಂಡಲದ ಸಭೆಯು ಶ್ರೀಮನ್ ಮಹಾರಾಜರವರ ವರ್ಧಂತ್ಯುತ್ಸವ ಸಮಯದಲ್ಲಿ ಮೈಸೂರಲ್ಲಿ ನೆರೆಯಬೇಕೆಂದು ಶ್ರೀ ಹೊಸಕೋಪ್ಪ ಕೃಷ್ಣರಾಯರು ಸಭೆಯ ಅಧ್ಯಕ್ಷರಿಗೆ ಬರೆದ ಪತ್ರದ ವಿಚಾರವಾಯಿತು. ವರ್ಧಂತ್ಯುತ್ಸವವು ಸಾಳೆ ನ ಜೂನ ೫-ರಿಂದ ಪ್ರಾರಂಭವಾಗುವದರಿಂದ ಇಷ್ಟು ಬೇಗನೆ ಈ ಸ್ಥಾಯಿಕ ಮಂಡಲವನ್ನು ಕೂಡಿಸುವದು ಶಕ್ಯವಿಲ್ಲೆಂದೂ, ಮೈಸೂರಿನಲ್ಲಿ ಸಹ ಮುಂದೆ ಪ್ರಸಂಗ ಬಂದಾಗ್ಗೆ ಸೇರುವಂತೆ ಏರ್ಪಾಡು ಮಾಡಬಹುದೆಂದೂ, ನಿರ್ಧಾರವಾಯಿತು. ಈ ಸೂಚನೆಯನ್ನು ಕಳಿಸಿದ್ದಕ್ಕಾಗಿ ಶ್ರೀ ಹೊಸಕೋಪ್ಪ ಕೃಷ್ಣರಾಯರಿಗೆ ಈ ಮಂಡಳಿಯು ವಂದನೆಗಳನ್ನು ಹೇಳುತ್ತದೆ.

(೭) ಇನ್ನೇ ಗೊತ್ತು ವಳಿಕೆಯು:—

"ಏಕೀಕರಣ ಸಭೆಯ ಉದ್ದೇಶಗಳನ್ನು ಸಫಲ ಪಡಿಸುಕೊಳ್ಳುವದಕ್ಕಾಗಿ ಸಂಬಳಕೊಟ್ಟಾಗಲಿ, ಕೊಡದಾಗಲಿ ಪ್ರಚಾರಕನ್ನು ನೇಮಿಸಿಕೊಳ್ಳುವದಕ್ಕೂ ಆ ಬಗ್ಗೆ ಅವಶ್ಯವಿದ್ದ ಹಣವನ್ನು ವೆಚ್ಚ ಮಾಡಲಿಕ್ಕೂ ಕಾರ್ಯನಿರ್ವಾಹಕ ಮಂಡಳಿಗೆ ಅಧಿಕಾರವಿದೆ.

ಸೂಚಕರು. ಗಾಣಿಲಗಿ ಶ್ರೀನಿವಾಸರಾವ.

ಅನುಮೋದಕರು. ಕಡಾ.

ಸರ್ವಾನು ಮತದಿಂದ ಪಾಸಾಯಿತು.

ಆಮೇಲೆ ಕರ್ನಾಟಕ ಸದಾಶಿವರಾಯರಿಂದಲೂ, ಪಾವಟೇ ಶಿದ್ಧರಾಮಪ್ಪನವರಿಂದಲೂ ಬಂದ ಸಹಾನುಭೂತಿಪರ ತಂತಿಗಳನ್ನು ಓದುವದರಲ್ಲಿ ಬಂದಿತ ಶ್ರೀಕರಪಾರವರು ಅಧ್ಯಕ್ಷರ ಆಭಾರ ಮನ್ನಿಸಿದರು.

ಆತ್ಮಯಜ್ಞದ ಧರ್ಮವು

[ಲೇಖಕ:— ಮ ಗಾಂಧಿ ನವಜೀವನ]

यज्ञशिष्टामृतभुजो यान्ति ब्रह्म सनातनम् ।
नायं लोकोऽस्त्ययज्ञस्य कुतोऽन्यः कुरुसत्तम ॥

— ಶ್ರೀಮದ್ ಭಗವದ್ಗೀತಾ. —

करहि जाइ तपु सैलकुमारी । नारद कहा सो सत्य बिचारी ।
मातु पितहि पुनि यह मत भावा । तपु सुखप्रद दुखदोष नसावा ॥
तप अधार सब सृष्टि भवानी । करहि जाइ तप अस जिय जानी ॥

— ಶ್ರೀ ತುಲಸೀರಾಮಾಯಣ—

ಯಜ್ಞಕ್ಕೆ ಅನೇಕ ಅರ್ಥಗಳಾಗ ಬಲ್ಲವು, ಆದರೆ ಸರ್ವ ಧರ್ಮಗಳಿಗ ಸಾಮಾನ್ಯವಾದ ಯಜ್ಞಕ್ಕೆ ಒಂದೇ ಅರ್ಥವಿರುವದು, ಮತ್ತು ಅದಾವುದೆಂದರೆ— ನಿಜವಾದ ಉನ್ನತಿಗಾಗಿ ಪ್ರಾಣಾರ್ಪಣವನ್ನು ಮಾಡುವದಕ್ಕೆ ಸಿದ್ಧನಾಗುವದು. ಪಾರ್ವತಿಗೆ ಶ್ರೀ ಶಂಕರನು ತನ್ನ ಪತಿಯಾಗಬೇಕೆಂದು ಅಭಿಲಾಷೆಯಿದ್ದಿತು. ಅದಕ್ಕಾಗಿ ಅವಳು ತಪಸ್ಸು ಮಾಡಿದಳು. ಅವಳು ಎಂಥ ಉಗ್ರವಾದ ತಪಸ್ಸು ಮಾಡಿದಳೆಂಬುದನ್ನು ತಿಳಿಯಲಪೇಕ್ಷೆಯುಳ್ಳವರು ತುಲಸೀದಾಸರ ಅಪೂರ್ವ ಗ್ರಂಥವನ್ನು ನೋಡಬಹುದು. ತಾಯಿಯು ಆತ್ಮಯಜ್ಞವನ್ನು ಮಾಡಿ ಮಗುವಿಗೆ ಜನ್ಮವನ್ನೀಯುವಳು ಮತ್ತು ಅನೇಕ ಕಷ್ಟಗಳನ್ನು ಸಹಿಸಿ ಬೆಳೆಸುವಳು. ಮೃತ್ಯುವಿನೊಳಗಿಂದ ಜನ್ಮವು ಸಂಭವಿಸುವದು. ಧಾನ್ಯದ ಕಾಳು ಭೂಮಿಯಲ್ಲಿ ಪ್ರವೇಶಿಸಿ ಒಡೆದು ಮಣ್ಣುಗೂಡಿದರೆ ಮಾತ್ರ ಮುಂದೆ ಬೆಳೆಯು ಬರುವದು. ಹರಿಶ್ಚಂದ್ರನು ಸತ್ಯವನ್ನು ಪ್ರಕಟಿಸುವದಕ್ಕೋಸ್ಕರ ಮಿತಿಮೀರಿ ದುಃಖವನ್ನು ಸಹಿಸಬೇಕಾಯಿತು. ಜನರನ್ನು ಉದ್ಧರಿಸುವದಕ್ಕಾಗಿ ಯೇಸುಕ್ರಿಸ್ತನು ಮುಳ್ಳಿನ ಮುಕುಟವನ್ನು ಧರಿಸಿದನು, ತನ್ನ ಕೈ ಕಾಲುಗಳಲ್ಲಿ ಮೊಳೆಗಳನ್ನು ಚುಚ್ಚಿಸಿಕೊಂಡನು ಮತ್ತು ಅಸಹ್ಯವಾದ ಯಾತನೆಗಳನ್ನು ಅನುಭವಿಸುತ್ತ ಪ್ರಾಣಗಳನ್ನು ಬಿಟ್ಟನು! ಈ ಬಗೆಯಾಗಿ ಯಜ್ಞವನ್ನು ಮಾಡುವದು ಅನಾದಿಕಾಲದಿಂದ ನಡೆಯುತ್ತ ಬಂದ ವಿಧಿಯಾಗಿರುವದು. ಯಜ್ಞವಿಲ್ಲದೆ ಪೃಥ್ವಿಯು ಒಂದು ಗಳಿಗೆಯಾದರೂ ತಡೆಯದು. ತುರ್ಕರು ಇಸ್ತಂಬೂಲನನ್ನು ಕೈವಶ ಮಾಡಿಕೊಳ್ಳುವ ಮೊದಲು ಅಸಂಖ್ಯ ಸೈನಿಕರ ಹೋಮವನ್ನು ಮಾಡಿದರು. ಮತ್ತು ಅವರ ಹೆಣಗಳಿಂದ ಸೇತುವೆ ಕಟ್ಟಿದರು. ಹಿಂದುಸ್ಥಾನದಲ್ಲಿ ಆತ್ಮಯಜ್ಞವು ಅನಾದಿಕಾಲದಿಂದ ನಡೆಯುತ್ತ ಬಂದಿರುವ ಅಬಾಧಿತವಾದ ಧರ್ಮವಾಗಿರುವದು.

ನಾವು ಸಂಪೂರ್ಣ ಸ್ವರಾಜ್ಯವನ್ನೇ ಇಚ್ಛಿಸುತ್ತೇವೆ. ಆದರೆ ಪ್ರಾಣಾಹುತಿಯನ್ನು ಕೊಡಲು ಬಹುಶಃ ಇಷ್ಟವಿಲ್ಲ. ಇಷ್ಟೇ ಏಕೆ! ದುಃಖ ತಂದುಕೊಳ್ಳದ ಕೂಡ ಕೆಲಸವನ್ನು ಮಾಡಲಿಕ್ಕೆ ಬಿಡುತ್ತಿದ್ದರೆ ಹೋಗಬೇಕೆನ್ನುವ ಜನರೆಲ್ಲಿ? ಅಸಹಕಾರದ ಬಗ್ಗೆ ಅನೇಕರಿಗೆ ಬಹು ಭಯವೆನಿಸುತ್ತದೆ. ನೌಕರಿಯನ್ನು ಬಿಟ್ಟುಕೊಟ್ಟರೆ ಹೊಟ್ಟೆಗಿಲ್ಲದೆ ಸಾಯುವೆನೆಂದು ಮೊದಲನೇ ಹೆದರಿಕೆ; ಮತ್ತು ಯಾರಾದರೂ ಏನಾದರೂ ತಪ್ಪಾಗಿ ಸರಕಾರದವರು ಮದ್ದು ಗುಂಡು ಹಾರಿಸಹತ್ತಿದರೆ ಸಾವಿರಾರು ಜನರು ಸಾಯಬೇಕಾಗುವದೆಂದು ಎರಡನೇ ಹೆದರಿಕೆ. ಈ ಬಗೆಯಾಗಿ ನಾವು ನಮ್ಮ ಸ್ವರಾಜ್ಯದ ಪ್ರಶ್ನವನ್ನು ಸ್ವಲ್ಪ ಸಹ ಕಷ್ಟವನ್ನನುಭವಿಸದೆ ಬಿಡಿಸಬೇಕೆಂದು ನಮ್ಮ ಆಶೆಯಿದೆ. ಅಸಹಕಾರವೊಂದು ಅತ್ಯಂತ ಸುಲಭವಾದ ಯಜ್ಞವಾಗಿರುವದು, ಮತ್ತು ಸಣ್ಣ ತಪಸ್ಸಾಗಿರುವದು; ಅದರಲ್ಲಿ ಸ್ವಲ್ಪ ಸ್ವಾರ್ಥತ್ಯಾಗವಿರುವದು. ಇಪ್ಪತ್ತು ಇಪ್ಪತ್ತೈದು ಸಾವಿರ, ಅಥವಾ ಲಕ್ಷ ಒಂದುವರೆ ಲಕ್ಷ ಜನರು, ನ್ಯಾಯವನ್ನು ದೊರೆಕಿಸುವದಕ್ಕಾಗಿ ಅನ್ಯಾಯದಲ್ಲಿ ಭಾಗ ತೆಗೆದುಕೊಳ್ಳುವದನ್ನು ನಿಲ್ಲಿಸಬೇಕಾಗಿ ತಮ್ಮ ನೌಕರಿಯನ್ನು ಬಿಟ್ಟುಕೊಟ್ಟರೆ ದುಃಖಬಡಲು ಕಾರಣವೇನು? ಸುವ್ಯವಸ್ಥಿತವಾದ ಸಂಸ್ಥೆಯು ನಡೆಯುತ್ತಿರುವಲ್ಲಿ ಇಂಥ ಪ್ರಸಂಗವು ಸ್ವಾಭಾವಿಕವಾಗಿರುವದು, ಮತ್ತು ಜನರಾದರೂ ಅದಕ್ಕಂಜಿ ಹಿಂಜರಿಯದೆ ಹರ್ಷಪೂರ್ವಕವಾಗಿ ಅದನ್ನು ಆದರಿಸುವದುಂಟು. ಸ್ವರಾಜ್ಯವನ್ನು ಸಂಪಾದಿಸುವಂಥ ಮಹತ್ಕಾರ್ಯಕ್ಕೋಸ್ಕರ ಸಾವಿರಾರು ಜನರು ನಷ್ಟಹೊಂದಿದರೆ ನಾನು ಎಳ್ಳಷ್ಟೂ ಚಿಂತಿಸೆನು. ಅದನ್ನು ನಾನು ಧರ್ಮ ಭಾವನೆಯ ಪರೀಕ್ಷೆಯೆಂದು ಗಣಿಸುವೆನು. ಈ ತರದ ಕಷ್ಟನಷ್ಟಗಳನ್ನು ಭೋಗಿಸುವ ಹೊರ್ತು ನಮಗೆ ಯಶಸ್ಸು ದೊರೆಯದೆಂದು ನನ್ನ ಮತವುಂಟು ಮತ್ತು ಈ ತರದ ಕಷ್ಟನಷ್ಟಗಳನ್ನು ಅನೇಕರು ಭೋಗಿಸಿದರೆ ಯಶಸ್ಸು ದೊರೆಯದಿರದೆಂದೂ ನನ್ನ ಮತವಿದೆ.

ಅಸಹಯೋಗವನ್ನು ಅವಲಂಬಿಸುವದರಿಂದ ಸರಕಾರವು ನಮ್ಮನ್ನು ಅನೇಕ ದುಃಖಗಳಿಗೆ ಗುರಿಮಾಡುವದೆಂಬ ಮಾತಿನಿಂದ ನನಗೆ ಕ್ಷೋಭವಾಗಲಿ ಭಯವಾಗಲಿ ಉಂಟಾಗುವದಿಲ್ಲ. ಸರಕಾರದಿಂದ ನಮಗೆ ಪೀಡೆಯು ಹೆಚ್ಚಾದಂತೆ ನಮ್ಮ ಸ್ವರಾಜ್ಯದ ಪ್ರಶ್ನವಾದರೂ ಬೇಗನೆ ಬಿಡುವದೆಂದು ನಾನು ದೃಢವಾಗಿ ನಂಬಿದ್ದೇನೆ.

ಆದರೆ ಒಂದು ಮಾತ್ರ ಭಯವಿರುವದು. ಅದೇನಂದರೆ,— ಜನರು ತಪ್ಪು ಮಾಡಿ ಅಡ್ಡಹಾದಿ ಬಿದ್ದು ಶಿಕ್ಷೆಗೆಪಾತ್ರರಾಗುವರೆಂಬುದು; ಯಾವನಾದರೂ ಸಂತಾಪದ ಭರದಲ್ಲಿ ಯಾವನೊಬ್ಬ ಅಧಿಕಾರಿಯನ್ನು ಗಾಯಗೊಳಿಸಿದರೆ ಇಲ್ಲವೆ ಕೊಂದು ಹಾಕಿದರೆ ನಮ್ಮ ಕೆಲಸವು ಮಣ್ಣುಗೂಡುವದೆಂಬುದಕ್ಕೆ ಸಂದೇಹಬೇಡ. ಹೀಗೆ ಜನರು ಉನ್ಮಾರ್ಗಿಗಳಾದರೆ ಆತ್ಮಯಜ್ಞದ ಶುದ್ಧ ಧರ್ಮಕ್ಕೆ ಹಾನಿ ತಟ್ಟುವದು ಮತ್ತು ಅಷ್ಟು ಮಟ್ಟಿಗೆ ನಮ್ಮ ಇಷ್ಟವು ಕೈಗೂಡಲೂ ಕಠಿಣವಾಗುವದು. ವಿಶುದ್ಧ ವಸ್ತುಗಳ ಆಹುತಿಯನ್ನೇ ಕೊಡತಕ್ಕದ್ದು. ಹರಿಶ್ಚಂದ್ರನಲ್ಲಿ ಸ್ವಲ್ಪಾದರೂ ಅಪವಿತ್ರತೆಯಿದ್ದುದಾಗಿದ್ದರೆ ಅವನು ರಾಜ್ಯತ್ಯಾಗ ಮಾಡಿದನೆಂಬ ಒಂದೇ ಮಾತಿನಿಂದ ನಾವು ಈಗಿನಂತೆ ಅವನ ಮಹಿಮೆಯನ್ನು ಕೊಂಡಾಡುತ್ತಿದ್ದಿಲ್ಲ. ಯೇಸುಕ್ರಿಸ್ತನಲ್ಲಿ ಸಂಪೂರ್ಣ ನಿರ್ದೋಷತೆಯನ್ನು ಕಲ್ಪಿಸಿಯೇ ಕ್ರಿಸ್ತ ಮತಾನುಯಾಯಿಗಳು ಅವನನ್ನು ಲೋಕೋದ್ಧಾರಕನೆಂದು ತಿಳಿದಿರುವರು. ಈ ಬಗೆಯಾಗಿ ನಾವು ತಿಳಿದು ನೋಡಿದರೆ ನಮ್ಮ ಕಾರ್ಯದಲ್ಲಿ ನಮ್ಮಿಂದ ತಪ್ಪಾಗದಂತೆ ನಾವು ಎಚ್ಚರಿಕೆಯಿಂದಿದ್ದ ಪಕ್ಷದಲ್ಲಿ ಅಸಹಕಾರವು ವೇಗದಿಂದ ಸಾಗುವದೆಂದು ತಿಳಿದುಬರುವದು. ಈ ಮಾತನ್ನು ಲಕ್ಷ್ಯದಲ್ಲಿಟ್ಟುಕೊಂಡು, ಆತ್ಮಯಜ್ಞವು ಹಿಂದುಸ್ಥಾನದ ಉನ್ನತಿಗಾಗಿ ಅವಶ್ಯಕವಾದ ಧರ್ಮವಾಗಿರುತ್ತದೆಂಬುದನ್ನು ತಿಳಿದುಕೊಂಡರೆ ಅಸಹಕಾರದ ಬಗ್ಗೆ ನಮಗೆ ಕಿಂಚಿತ್ತಾದರೂ ಹೆದರಿಕೆಯುಂಟಾಗಲು ಕಾರಣವಿಲ್ಲ. ಇಷ್ಟೇ ಅಲ್ಲ; ಅಸಹಕಾರ ಅಥವಾ ಇದೇ ಬಗೆಯ ಬೇರೆ ಯಾವದೊಂದು ಯಜ್ಞ ಇಲ್ಲವೆ ತಪಸ್ಸು ಮಾಡದ ಹೊರತು ಸ್ವರಾಜ್ಯವು ಸರ್ವಥಾ ನಮ್ಮ ಹಸ್ತಗತವಾಗದು.

—— ——

ಬಾರು ಕೋಲು

ಬಾರುಕೋಲಿನ ಇತಿಹಾಸವು ಎಲ್ಲರಿಗೂ ತಿಳಿದುದೇ. ಪ್ರತಿ ಜನಾಂಗದಲ್ಲಿಯೂ ಪ್ರತಿವ್ಯವಸ್ಥೆಯಲ್ಲಿಯೂ ಬಾರುಕೋಲು ಬೇಕೇ ಬೇಕು. ಸಮಾಜದ ಸಾಮಾನ್ಯಗತಿಯಲ್ಲಿ ಎರಡುವರ್ಗದವರಂತೂ ಅದನ್ನು ಹಿಡಿಯದಿದ್ದರಾಗುವದೇ ಇಲ್ಲ; ಯಾರೆಂದರೆ ಅಧ್ಯಾಪಕರು ಮತ್ತು ಪೋಲಿಸಿನವರು. ಎತ್ತಿನಬಂಡಿ, ಜಟ್ಕಾ, ತೋಜುಗಾಡಿ ಮುಂತಾದ ವಿವಿಧವಾಹನಗಳ ಸಾರಥಿಗಳು ಅದನ್ನು ಪಯೋಗಿಸುವುದುಂಟು; ಆದರೆ ಅವರೂ ಕೂಡ ಬಾರಿಸಬೇಕಾದುದು ಆನೆಯಾಗಲಿ, ಒಂಟೆಯಾಗಲಿ, ಕುದುರೆಯಾಗಲಿ, ಕತ್ತೆಯಾಗಲಿ, ಎತ್ತಾಗಲಿ ಕೋಣನಾಗಲಿ, ಮೊದಲು ಅಧ್ಯಾಪಕರಾದ್ದು ಆ ಮೇಲೆ ಪೋಲಿಸನವರ ವಿನಯ ಶಾಸ್ತ್ರವನ್ನು (ವಿನಯ = ವಿಶೇಷವಾದ ನಯ ಶಾಸ್ತ್ರ ಅಥವಾ ಪಾಲಿಟಿಸ) ಅವಲಂಬಿಸುವರು.

ಅಧ್ಯಾಪಕರನ್ನೂ ಪೋಲೀಸಿನವರನ್ನೂ ಪ್ರತ್ಯೇಕಿಸಿದಕ್ಕಾಗಿ ಕೆಲವರು ಆಕ್ಷೇಪಿಸಬಹುದು, ಅಧ್ಯಾಪಕರೆನಿಸಿಕೊಂಡವರಲ್ಲಿ ಮುಕ್ಕಾಲು ಮಂದಿ ಪೋಲೀಸ್ ಕೆಲಸವನ್ನೇ ಮಾಡುತ್ತಿರುವದೇ ಈ ಆಕ್ಷೇಪಕ್ಕೆ ಮೂಲ. ಆದರೆ ಆಕ್ಷೇಪಕ್ಕೆ ಬಲವಿಲ್ಲ. ಆಕ್ಷೇಪದ ಅರ್ಥವೇನೆಂದರೆ ಅಧ್ಯಾಪಕರ ಪದವಿಯಲ್ಲಿರುವವರಲ್ಲನೇಕರು ಪೋಲೀಸ್ ಜಮೇದಾರರೋ ದಫೇದಾರರೋ ಆಗಿರಬೇಕಾಗಿತ್ತೆಂದು ಮಾತ್ರವೇ. ಅಧ್ಯಾಪಕರನ್ನು ಪೋಲೀಸಿನವರೆಂದು ಕರೆದರೆ ಪೋಲೀಸಿನವರನ್ನು ಅಂದರೆ ಪೋಲೀಸಿನಲ್ಲಿ ನಾಲಾಯಕಾದವರನ್ನು ಅಧ್ಯಾಪಕರೆಂದು ಕರೆಯ ಬೇಕಾದೀತು!

ಇದರಿಂದ ಅಧ್ಯಾಪಕರಿಗೆ ಸಿಟ್ಟು ಬರಲಿ ಬಾರದಿರಲಿ (ಅಧ್ಯಾಪಕರ ಸಿಟ್ಟಿನ ಪ್ರತಾಪವೆಷ್ಟೋ ನಮಗೆ ಗೊತ್ತಿದೆ) ಪೋಲೀಸಿನವರಿಗೆ ಸಿಟ್ಟು ಬರುವುದು ಖಂಡಿತ ಆದ್ದರಿಂದ ನೀರುಳ್ಳಿಯನ್ನು ಬೆಂಡೇಕಾಯನ್ನೂ ಬೆರೆಸಿ ಹುಳಿ ಮಾಡೋಣ ಬೇಡ. ನಮಗದರಲ್ಲಿ ರುಚಿಯಿಲ್ಲ. ತತ್ವಜ್ಞರೂ ಮಾಂತ್ರಿಕರೂ ಇದ್ದಲ್ಲಿ ನೀರುಳ್ಳಿಯನ್ನು ಬೆಂಡೇಕಾಯನ್ನಾಗಿಯೋ ಅಥವಾ ಬೆಂಡೆಕಾಯನ್ನು ನೀರುಳ್ಳಿಯನ್ನಾಗಿಯೋ ಮಾಡಿದರೆ ಮಾಡಬಹುದು. ಈ ವಿಷಯದಲ್ಲಿ ಜಾಣರಾದ ಕನ್ನಡತವಕ್ಕಗಳೇ! ಪಂಡಿತವಕ್ಕಗಳೇ, ಹೇಳೋಣಾಗಲಿ, ಪೋಲೀಸಿನವರೆಲ್ಲರೂ ಅಧ್ಯಾಪಕರಾಗಬೇಕೇ, ಅಥವಾ ಅಧ್ಯಾಪಕರೆಲ್ಲರು ಪೋಲೀಸಿನವರಾಗಬೇಕೇ?

ಇದು ಹಾಗಿರಲಿ. ಬಾರುಕೋಲುಗಳಲ್ಲಿ ಅನೇಕ ವಿಧಗಳುಂಟಲ್ಲವೇ? ಅವುಗಳಲ್ಲೆಲ್ಲಾ ಸೊಗಸಾದದ್ದು ಕೋಚುವಾನ್ನ ಹಿಡಿಯತಕ್ಕದು; ಪಟುತ್ವವುಳ್ಳದ್ದು ನವಗ್ರಂಥಿಯೆಂದು ಬಿರುದಾಂಕಿತ ವಾದ 'Cato nine tails' ಎಂಬುದು. ಕನ್ನಡ ನಾಡಿನ ಪಂಡಿತವಕ್ಕಗಳು ಸೊಗಸನ್ನು ಹೊಸದಾಗಿ ಕಲಿಯಬೇಕಾಗಿಲ್ಲವಾದುದರಿಂದ ಮೊದಲನೆಯದು ನಮಗೇಕೆ, ನಮಗೆ ಪ್ರತಾಪವುಳ್ಳದ್ದೂ ಬೇಕು. ಆದ್ದರಿಂದ ನವಗ್ರಂಥಿಯನ್ನೇ ಆರಿಸೋಣ; ಬೇಕಾದರೆ ಇನ್ನಷ್ಟು ಗ್ರಂಥಿಗಳನ್ನು ಸೇರಿಸಿಕೊಳ್ಳೋಣ; ಇಷ್ಟೆಂದು ಕೋಲುಗಾರನು ಹೇಳಬಾರದು, ಏಕೆಂದರೆ ಗುಟ್ಟನ್ನು ಬಿಚ್ಚಿ ರಟ್ಟು ಮಾಡಿದರೆ ಅವರ ಕುಲಗೆಟ್ಟು ಹೋಗುವದು. ಮತ್ತು ಅದನ್ನು ಹೇಳುವುದ ಅನಾವಶ್ಯಕ ಪೆಟ್ಟುತಿನ್ನುವವರಿಗೆ ಬೇಡವೆಂದರೂ ತಿಳಿದೇ ತಿಳಿಯುವುದು.

ಇಂತಹ ಬಾರುಕೋಲನ್ನು ಬಾರಿಸುವದು ಯಾರ ಬೆನ್ನಿನ ಮೇಲೆ! ಪಶುಗಳ ಬೆನ್ನಿನ ಮೇಲೆ ಬಾರುಕೋಲಿನ ಚುರುಕು ತಾಕಿದಾಗ ಬಿದ್ದಿರತಕ್ಕವು ಏಳುವವು, ಎದ್ದಿರತಕ್ಕವು ಹೆಜ್ಜೆ ಹಾಕುವುವು ಮತ್ತು ಹೆಜ್ಜೆ ಹಾಕತಕ್ಕವು ಓಡುವುವು. ಹೀಗೆ ಮಲಗಿರುವುದನ್ನೆಬ್ಬಿಸಿ ಎದ್ದಿರುವುದನ್ನು ನಡೆಸಿ ನಡೆಯುತ್ತಿರುವುದನ್ನು ಓಡಿಸಿ, ವಿದ್ಯುಕ್ತಿನ ವೇಗವನ್ನುಂಟು ಮಾಡುವ ಶಕ್ತಿಯು ಬಾರುಕೋಲಿನಲ್ಲಡಗಿರುವುದು. ಆದುದರಿಂದ ಬಾರುಕೋಲನ್ನು ಮಂದಗತಿಯುಳ್ಳ ಅಥವಾ ಮಂದಮತಿಯುಳ್ಳ ಮಂದಭಾಗ್ಯರ ಬೆನ್ನಿನ ಮೇಲೆ ಪ್ರಯೋಗಿಸಿ ಅವರಲ್ಲಿ ತೀವ್ರ ಭಾಗ್ಯವನ್ನು ಕಾಣಿಸಬೇಕು.

ಬಾರುಕೋಲಿನ ಪ್ರಭಾವವನ್ನು ಕುರಿತು ಯೋಚಿಸುತ್ತ ಮೈಸೂರು ಪ್ರಾಂತದಲ್ಲಿ ಕೆಲವುಕಾಲ ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರು ಹೇಳುತ್ತಿದ್ದುದು ನೆನಪಾಯಿತು. ಸುತ್ತಮುತ್ತಲಿದ್ದ ಅಧಿಕಾರಿಗಳಿಗೆ ಅವರು ವಾಡಿಕೆಯಾಗಿ ಹೇಳುತ್ತಿದ್ದರಂತೆ "ಅಪ್ಪಾ, ಓಡಿರಪ್ಪಾ ಎಂದು ನಾನೆಂದರೆ ನೀವು ನಡೆಯುತ್ತೀರಿ, ನಡಿಯಿರಿ ಅಂದರೆ ನಿಲ್ಲುತ್ತೀರಿ, ನಿಲ್ಲಿ ಅಂದರೆ ಕೂಡುತ್ತೀರಿ, ಕೂಡಿ ಅಂದರೆ ಮಲಗುತ್ತೀರಿ, ಮಲಗಿ ವಿಶ್ರಮಿಸಿ ಅಂದರೆ ಗೊರಕೆ ಹಾಕುತ್ತೀರಿ" ಎಂದು. ಮಹಿಷಮಂಡಲವಲ್ಲವೆ! ಅಯ್ಯೋ! ಪಾಪ ಕನ್ನಡನಾಡಿನಲ್ಲಿ ಮೂರರಲ್ಲೊಂದು ಪಾಲು ಮಹಿಷಮಂಡಲವಾಯಿತು. ಅನೇಕ ವಿಷಯಗಳಲ್ಲಿ ಇಲ್ಲಿಯ ಎಮ್ಮೆಗಳು ಇತರ ಪ್ರಾಂತಗಳ ಪ್ರಾಣಿಗಳಿಗಿಂತ ಚುರುಕಂಗೆ! ಇನ್ನು ಇತರ ಭಾಗಗಳಲ್ಲಿ ಎಮ್ಮೆಗಳೂ ಉಂಟು, ಗೂಳಿಗಳೂ, ಕುದುರೆಗಳೂ ಉಂಟು. ಸರ್. ಎಂ. ವಿಶ್ವೇಶ್ವರಯ್ಯನವರ ಕಯ್ಯಲ್ಲಿ ದಿವಾನ್ಗಿರಿಯ ಅಧಿಕಾರವಿದ್ದರೂ, ಬಾರುಕೋಲಿರಲಿಲ್ಲ. ಅಥವಾ ಇದ್ದಿದ್ದರೂ ಇಂಗ್ಲೆಂಡು ಅಮೇರಿಕ ಮುಂತಾದ ದೇಶಗಳಲ್ಲಿ ಪಾಶ್ಚಾತ್ಯ ಶಿಕ್ಷಣವನ್ನು ಪಡೆದವರಾದ್ದರಿಂದ ಅವರಿಗೆ ಇಲ್ಲಿ ಬಾರುಕೋಲನ್ನು ಪ್ರಯೋಗಿಸುವ ವಿಧಾನವು ಪ್ರಾಯಶಃ ವಶವಾಗದೆ ಹೋಯಿತು.

ಅಂತೂ ಮಾಂದ್ಯವಿಲ್ಲಿದ್ದರೂ ಬಾರುಕೋಲನ್ನದರ ಮೇಲೆ ಬಾರಿಸಬೇಕು. ಸಿಪ್ಪೆ ಸುಲಿಯಬೇಕಾಗಿಲ್ಲ; ಏಕೆಂದರೆ ಸಿಪ್ಪೆಯನ್ನಾಗಲೇ ಮತ್ತೊಬ್ಬರು ಸುಲಿದು ಬಿಟ್ಟು ಅನೇಕೆಡೆಗಳಲ್ಲಿ ಬೆನ್ನು ಮೂಳೆಯನ್ನು ಮುರಿದೇ ಬಿಟ್ಟಿರುವರು. ಆದ್ದರಿಂದ ಬೆನ್ನು ಮೂಳೆಯ ರಿಪೇರಿ (ಜೀರ್ಣೋದ್ಧಾರ) ಯು ಮೊದಲಾಗಬೇಕು; ಆಮೇಲೆ ಬಾರುಕೋಲಿನ ಛುಳ್ ಎಂಬನಾದವಾಗಬೇಕು. ಆಗ ಬೆನ್ನು ಮೂಳೆಯು ನಿಂತು ಹೊಸ ಸಿಪ್ಪೆಯು ಬರುವುದು. ಆದುದರಿಂದ ಬಾರುಕೋಲಿನವರು ಸ್ವಲ್ಪ ಎಚ್ಚರಿಕೆಯನ್ನು ತಾಳಬೇಕಾದೀತು. ಆ ಎಚ್ಚರಿಕೆ ಯೆಷ್ಟಿದ್ದರಷ್ಟುತ್ತಮ; ಏಕೆಂದರೆ ಅನೇಕೆಡೆ ಬೆನ್ನು ಮೂಳೆಯಂತೆಯೇ ನೆಟ್ಟಗೆ ನಿಂತಿರುವ ಅನೇಕ ಶಿಲಾಸ್ತಂಭಗಳುಂಟು ಅವುಗಳಮೇಲೆ ಹೊರಟಾಗ ಬಾರುಕೋಲಿನ ಹಿಡಿಯು ಕಳಚಿ ಬಿದ್ದರೂ ಬೀಳಬಹುದು. ಕಲ್ಲನ್ನು ಬಿಟ್ಟು ಬಿಡುವುದು ಸದ್ಯಕ್ಕೆ ಒಳ್ಳೆಯದು. ಬಾರುಕೋಲಿನವರಿಗೆ ಅಭ್ಯಾಸದಿಂದ ಸಮಕ್ಷ ಬಂದಾಗ, ಆಗ, ಕಲ್ಲನ್ನೂ ಎಚ್ಚರಗೊಳಿಸಬಹುದು.

ಸರಿ. ಆದರೆ ಈ ಬಾರುಕೋಲನ್ನು ಹಿಡಿಯತಕ್ಕವರಾರು? ಈ ಬಾರುಕೋಲಿನ ಪೂಜೆಯಲ್ಲಿ ಪೂಜಾರಿಗಳಾಗತಕ್ಕವರಾರು? ಇದಕ್ಕೆ ಉತ್ತರ ಬೇಕಿಲ್ಲ. ಏಕೆಂದರೆ ಬಾರುಕೋಲಿನ ಸವಿಯನ್ನು ಕಾಣುವವರು ಕೋಲುಗಾರನನ್ನು ಕಂಡೇ ಕಾಣುವರು. ಆದರೆ ಕೋಲುಗಾರನಲ್ಲಿರಬೇಕಾದ ಒಂದನವನ್ನು ಮಟ್ಟಿಗೆ ಹೇಳಿ ಬಿಡುವೆನು. ಕೋಲುಗಾರನಲ್ಲಿ ದೂರ ದೃಷ್ಟಿಯೂ ಉಂಟು; ವಿಶಾಲ ದೃಷ್ಟಿಯೂ ಉಂಟು; ನಾಯಕನಲ್ಲಿರಬೇಕಾದ ದಿವ್ಯ ಲಕ್ಷಣಗಳು ಇವನೊಳಗುಂಟು, ಉರಿಯನ್ನುಂಟು ಮಾಡಿ ಪ್ರಕಾಶ ತೋರಿದರೂ ಸದಾ ಸೌಮ್ಯವು ಕಾಣುವದಿಲ್ಲ. ಆದರೆ ಕೈಗಳನ್ನು ಚನ್ನಾಗಿ ಕಲಿತು ಉಪಯೋಗಿಸತಕ್ಕವನಾದರೂ ಆಗಾಗ್ಗೆ ಹಾಡುವನು. ಕೈಯುತ್ತ ಹ//ುತ್ತ ಮಾಮಂಬಳ್ಳಿಯ್ಯುವನು.

ಕುಟಿಲ ಸಿ.

ಕನ್ನಡಿಗರ ಸೇವೆಯಲ್ಲಿಯೇ ನಿರತನಾದ "ಕನ್ನಡಿಗ" ನನ್ನು ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕು!

ವರ್ತಮಾನಸಾರ

ಇಹವೃತ್ತ

ಹಿಂದೂ—ಮುಸಲ್ಮಾನ ದಂಗೆಯ ಖಟ್ಲೆಯ ಚೌಕಶಿಯು ನಡೆದಿದೆ. ಧಾರವಾಡದಿಂದ ಶ್ರೀ ಹುಲಕೋಟೀ ವಕೀಲರು ಬಂದಿರುವರು

ಕರ್ನಾಟಕ.

ಮುಂಬೈ ಕರ್ನಾಟಕ

ಕನ್ನಡನಾಡಿನ ಹಿಂದಕ್ಕೆ ಆದರವನ್ನು ತೋರಿಸದೇ ಇದ್ದದ್ದಕ್ಕಾಗಿ ತಮಗೆ ಪಶ್ಚಾತ್ತಾಪವಾಗಿದೆಯೆಂದು ಮುಂದೆ ಹಾಗೆ ಮಾಡುವದಿಲ್ಲವೆಂದು ಮೇ ೧೩ ನೇ ದಿನ ಹೇಳಿದ ದೇಶಭಕ್ತ ದೇಶಪಾಂಡೆ ಗಂಗಾಧರರಾಯರು ಮುಂದೆ ಎರಡೇ ದಿನಗಳನಂತರ ಬೆಳಗಾವಿಯಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಕಾಂಗ್ರೆಸದ ಕಾರ್ಯನಿರ್ಧಾರಕರ ಬಗ್ಗೆ ಮಾತ್ರ ನಾಡುವಾಗ್ಗೆ ಮರಾಠಿಯಲ್ಲಿಯೇ ಮಾತನಾಡಿದರಂತೆ ಇದರ ಕಾರಣವನ್ನಿಷ್ಟು ಶ್ರೀ ಗಂಗಾಧರರಾಯರು ಕನ್ನಡಿಗರಿಗೆ ತಿಳಿಸುವರೋ?

ಹುಬ್ಬಳ್ಳಿ ಮುನಸಿಪಾಲಿಟಿಯ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಕಂಬಳೀಯವರೂ ಉಪಾಧ್ಯಕ್ಷರ ಸ್ಥಾನಕ್ಕೆ ಮಹಾಂಬ ಅಲ್ಲಿ ಖಾನರವರು ಆರಿಸಲ್ಪಟ್ಟರು.

ಮೇ ೨೧–೨೨ ರಲ್ಲಿ ವೀರಶೈವ ತರುಣರ ಸಮ್ಮೇಲನವು ಧಾರವಾಡದಲ್ಲಿ ನೆರೆಯುವದು

ಮದ್ರಾಸ ಕರ್ನಾಟಕ

ಮದ್ರಾಸ ವಿಶ್ವವಿದ್ಯಾಲಯದ ಎಮ್. ಬಿ. ಬಿ. ಎಸ್. ಪರೀಕ್ಷೆಯಲ್ಲಿ ಮಂಗಳೂರ ಜಿಲ್ಲೆಯ ಶ್ರೀ ಎಮ್ ನರಸಿಂಗಪ್ಪಯ್ಯನವರು ಮೊದಲನೇ ತರಗತಿಯಲ್ಲಿ ಮೊದಲನೆಯ ಸ್ಥಾನವನ್ನು ಹೊಂದಿದ್ದಾರೆ ಮೂರು ವಿಷಯಗಳಲ್ಲಿ ವಿಶೇಷ ಪ್ರಾವಿಣ್ಯವನ್ನು ತೋರಿಸಿದ್ದಕ್ಕಾಗಿ, ೩ ಪದಗಳನ್ನೂ; ಒಂದು ಪಾರಿತೋಷಕವನ್ನೂ ಹೊಂದಿದ್ದಾರೆ.

ಹಂಪೆಯಲ್ಲಿ ವಿದ್ಯಾರಣ್ಯರ ಪುಣ್ಯತಿಥಿಯನ್ನು ದೊಡ್ಡ ಪ್ರಮಾಣದಿಂದ ನಡೆಸುವ ವಿಚಾರವನ್ನು ಹೊಸಪೇಟೆಯ ಹಣಮಂತ ಗೌಡರು ಈ ವರೆಗೂ ನಡೆಸಿರುವರು. ಈ ಕಾರ್ಯದಲ್ಲಿ ಎಲ್ಲರೂ ಅವರಿಗೆ ಸಹಾಯ ಮಾಡಬೇಕು

ಉದಕ ಮಂಡಲದಲ್ಲಿ ನೀಲಗಿರಿ ಆದಿ ದ್ರವಿಡ ಜನರ ಸಭೆ ಸೇರಿ ಕೈ ಸರತ್ಯಾಗರಾಜ ಚೆಟ್ಟಿಯವರ ನಿಧನದ ಬಗ್ಗೆ ದುಃಖ ಪ್ರದರ್ಶಕ ಠರಾವು ಪಾಸಾಯಿತು

ಕೊಡಗು ಕರ್ನಾಟಕ

ಕೊಡಗಿನ ವಿದ್ಯಾರ್ಥಿಗಳು ಉಚ್ಚ ತರದ ಶಿಕ್ಷಣಕ್ಕಾಗಿ ಕೊಡಗಿನ ಹೊರಗೆ ಹೋಗಬೇಕಾದ್ದರಿಂದ ಅಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯುಂಟಾಗುತ್ತದೆ ಅದನ್ನು ದೂರ ಮಾಡುವದಕ್ಕಾಗಿ ಮೊದಲು ಹುಂಗಳಸರಲ್ಲಿಯಾದರೂ ಧರ್ಮಾರ್ಥವಾಗಿ ಒಂದು ಕಟ್ಟಡವನ್ನು ಕಟ್ಟಿಸಲು ಕೊಡಗಿನ ಶ್ರೀಮಂತರು ಮುಂದೆ ಬರಬೇಕಾಗಿ, ಯಂ ಎ ಕಾವೇರಪ್ಪನವರು ಸೂಚಿಸುತ್ತಾರೆ

ಮದ್ರಾಸದ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರಾದ ಶ್ರೀಸ್ವಾಮಿ ಶರ್ವಾನಂದರು ಮೇ ೩೦ ನೇ ತಾರೀಖಿನಲ್ಲಿ ಮಡಿಕೇರಿಗೆ ಬರುವರು. ಆಗ್ಗೆ ಶ್ರೀ ರಾಮಕೃಷ್ಣ ಪರಮಹಂಸರ ೯೦ ನೇ ಜಯಂತ್ಯುತ್ಸವವು ನಡೆಯುವದು.

ನಿಝಾಂ ಕರ್ನಾಟಕ.

ಹೈದರಾಬಾದಿನಲ್ಲಿ ಸ್ಥಾಪಿತವಾದ ಕರ್ನಾಟಕ ಸಂಘದ ಉಪಾಧ್ಯಕ್ಷಸ್ಥಾನವನ್ನು (ಶ್ರೀ ವ ತೀ ಸರೋಜಿನಿಯವರ ಪತ್ರಿ ಗ. ವ. ಶ್ರೀ ನಾ. ಡ. ಡೂರವರು ಅನಂದದಿಂದ ಸ್ವೀಕರಿಸಿದ್ದಾರೆ

ಮೈಸೂರ ಕರ್ನಾಟಕ

ಸರ್ ಎ ಮೋಕ್ಷಗೊಂಡ ವಿಶ್ವೇಶ್ವರಯ್ಯನವರು ಭದ್ರವತಿಯಿಂದ ೧೮ ನೇ ತಾ॥ ದಿನ ಬೆಂಗಳೂರಿಗೆ ದಯಮಾಡಿಸಿ ೧೯ ನೇ ತಾ॥ ದಿನ ಉದಕ ಮಂಡಲಿಗೆ ತೆರಳಿದರು.

ಕರ್ನಾಟಕ ಥಿಯಾಸಾಫಿಕಲ್ ಫೆಡರೇಶನ್ ೨೩ ನೇ ತಾ॥ ದಿನ ಬೆಂಗಳೂರ ಲಷ್ಕರದಲ್ಲಿ ಕೂಡುವದು.

ಹಿಂದುಸ್ಥಾನ.

ಬಡೋಚ ಜಿಲ್ಲೆಯಲ್ಲಿ ಝಾಡೆಶ್ವರ ಎಂಬ ಹಳ್ಳಿಯಲ್ಲಿ ಶ್ರೀಹರಿಭಾಯಿ ಅಮೀನ ಎಂಬೊಬ್ಬ ಶ್ರೀಮಂತರಾದ ಗೃಹಸ್ಥರಿರುವರು. ಅಸಹಕಾರದ ಚಳವಳಿಯು ಪ್ರಾರಂಭವಾದಂದಿನಿಂದ ಇವರು ಅತ್ಯಂತ ಸಾದಾವೃತ್ತಿಯಿಂದ ಇರುತ್ತಿದ್ದು ತಮ್ಮ ಹಳ್ಳಿಯಲ್ಲಿಯೂ ಅದರ ಸುತ್ತುಮುತ್ತಲೂ ಖಾದಿ ಪ್ರಚಾರದ ಕಾರ್ಯವನ್ನು ಬಳ್ಳೇ ಆಸ್ಥೆಯಿಂದ ಮಾಡುತ್ತಿರುವರು ಮೊನ್ನೆ ಮೊನ್ನೆ ಇವರ ಮನೆಯಲ್ಲಿ ಇವರ ಭ್ರಾತೃಪುತ್ರಿಯ ಲಗ್ನವಾಯಿತು. ವಧುವು ತಾನೇ ಸ್ವತಃ ನೂತು ಆ ನೂಲಿನಿಂದ ವಸ್ತ್ರಗಳನ್ನು ನೇಯಿಸಿ ಲಗ್ನದ ಕಾಲದಲ್ಲಿ ವರನಿಗೆ ಅವುಗಳನ್ನು ಉಡುಗರೆಯಾಗಿ ಬಹು ಭಕ್ತಿಯಿಂದ ಅರ್ಪಿಸಿದಳಂತೆ' ನಮ್ಮ ಕರ್ನಾಟಕದಲ್ಲಿ ಇಂಥ ಪುಣ್ಯವತಿಯರಾದ ಕನ್ಯೆಯರು ದೊರೆಯುವರೋ?

ಬಿಝವಾಡದ ಹತ್ತಿರ ಬಿರುಗಾಳಿಯಿಂದ ರೇಲ್ವೇ ಹಳಿಗಳು ಹಾರಿಹೋಗಿವೆ ಕೆಲವು ವ್ಯಾಗನ್ನುಗಳು ಸಹ ಉರುಳಿ ಬಿದ್ದವೆ ೪–೫ ದಿನಗಳಿಂದ ರೇಲ್ವೇ ಪ್ರವಾಸವು ಅಲ್ಲಿ ಬಂದಿಡಲ್ಪಟ್ಟಿದೆ.

ಮುಂಬೈ "ಪ್ರಿಸಿಡೆನ್ಸಿ" ಎಂಬ ಸಂಸ್ಥೆಯು ಮುಖಾಂತರ ಸುಳ್ಳು ಲಾಟರೀ ತಿಕೀಟುಗಳು ಮಾರಲ್ಪಡುತ್ತಿದ್ದವು ಪೋಲಿಸರು ಇವನ್ನು ಈಗ್ಗೆ ಗೊತ್ತು ಹಚ್ಚಿದ್ದಾರೆ. ಲಾಟರಿಯ ಮೋಹಕರು ವಿಚಾರಗೊಳ್ಳತಕ್ಕದ್ದು!

ತಾರಕೇಶ್ವರದ ಮಹಾಂತರು ಅತಿಶಯ ಕೆಟ್ಟರೀತಿಯಿಂದ ಅಲ್ಲಿಯ ವ್ಯವಸ್ಥೆಯನ್ನು ನಡೆಸಿದ್ದು ಸತ್ಯವೆಂದು, ಆ ಬಗ್ಗೆ ಪಿಕೇಟಿಂಗ ಮಾಡುವ ಬಗ್ಗೆ ಎಲ್ಲ ಅಧಿಕಾರವು ರಸೀದುವರಿಗೆ ಕೊಡಲ್ಪಟ್ಟಿದೆ ಮಹಾತ್ಮರು ಇನ್ನೂ ಬಂಗಾಲದಲ್ಲಿ ಸಂಚಿಸುತ್ತಿರುವರು

ಗಂಡಿಶ ಮಠದ ಮೌಲವಿಯವರು ನಿಝಾಂ ರಾಜ್ಯದಲ್ಲಿ ಕಾಲಿಡಕೂಡದೆಂದು ನಿಝಾಮರವರು ಹುಕುಂ ತೆಗೆದಿರುವರು.

ಪರದೇಶ.

ಗ್ಲಾಸ್ಗೋಪಟ್ಟಣದಲ್ಲಿರುವ ೮ ಜನ ಹಿಂದೀಯರಮೇಲೆ ಅಲ್ಲಿಯ ಹಲವು ದುಷ್ಟರು ಹರಿ ನೆರೆಹೊರೆಯ ಜನರು ಅವರ ಸಹಾಯಕ್ಕೆ ಒಂದ ಕೂಡಲೇ ಆ ದುಷ್ಟ ಜನರು ಓಡಿಹೋದರು ದರೋಡೆ ಮಾಡುವ ಉದ್ದೇಶದಿಂದ ಅವರು ಅಲ್ಲಿಗೆ ಬಂದಿದ್ದಾರೆಂದು ಸುದ್ದಿಯದೆ.

ರುಂಬಯಿಯ ಹಿಂದಿನ ಗವರ್ನರರಾಗಿದ್ದ ಸರಜಾರ್ಜ ಲಾಯಡರವರು ಇಜಿಪ್ತದ ಹಾಯ ಕಮಿಶನರರಾಗಿ ನೇಮಿಸಲ್ಪಟ್ಟಿದ್ದಾರೆ.

ರೇಲ್ವೇ ಬೋರ್ಡಿನ ಸುದ್ದಿಗಳು.

ಲಕ್ಷ್ಮೇಶ್ವರದ ೩೫ ಜನರು ಸಹಿಮಾಡಿರುವರು. ಹುಬ್ಬಳ್ಳಿಯಿಂದ ಶ್ರೀ ಗಂಗಾಧರಪ್ಪನವರೂ, ನವಲಗುಂದದಿಂದ ಶ್ರೀ ದೇಶಪಾಂಡೆಯವರೂ, ಪರಸಗಡದಿಂದ ಶ್ರೀ ಲಕಮೇಶ್ವರದರು ಕಲಾದಗಿಯಿಂದ ಶ್ರೀ ಕುಲಕರ್ಣಿಯವರೂ ಕಲಘಟಗಿಯಿಂದ ಶ್ರೀ ಹಂಪಸಾಗರದವರೂ ಒಳ್ಳೇ ಹುರುಪಿನಿಂದ ಜನರಲ್ಲಿ ಅದ್ದಾದಿ ಸಹಿಗಳನ್ನು ದೊರಕಿಸಿರುವರು. ಇದೇ ಪ್ರಕಾರವಾಗಿ ಕನ್ನಡಿಗರ ಚಂದಾದಾರರೆಲ್ಲ ತಮ್ಮ ತಮ್ಮ ಸ್ಥಳದಲ್ಲಿ ಉತ್ಸಾಹದಿಟ್ಟು ಕೆಲಸ ಮಾಡಿದರೆ, ಅಖಂಡ ಕರ್ನಾಟಕ ಭಾವನೆಯನ್ನು ವೃದ್ಧಿಗೊಳಿಸಲು ಸಹಾಯ ಮಾಡಿದಂತಾಗುವದಲ್ಲದೇ ತಮ್ಮ ನಾಡಿನಲ್ಲಿ ರೇಲ್ವೇ ಸೌಕರ್ಯವು ದೊರಕುವಂತೆ ಪ್ರಯತ್ನಿಸಿದಂತಾಗುವದು

ನಿಮಗೆ "ಕನ್ನಡಿಗ" ಪತ್ರಿಕೆಯು ಅನಾವಶ್ಯಕವಿದ್ದರೆ ಸಂಚಿಕೆಗಳನ್ನು ಸ್ವೀಕರಿಸದೆ ಅವನ್ನು ನಮಗೆ ಮರಳಿ ಕಳಿಸಬೇಕಾಗಿ ವಿನಂತಿ. ಕಾರ್ಡ ಬರೆದು ನಿಮ್ಮ ಅರ್ಧ ಆಣೆ ವೆಚ್ಚ ಮಾಡುವದೂ ಆವಶ್ಯವಿಲ್ಲ.

ಇತರ ಪತ್ರಿಕೆಗಳಿಂದ.

ಕನ್ನಡನಾಡಿನ ಪರಿಸ್ಥಿತಿ.

ಕರ್ನಾಟಕವು ಹೊಸ ಪ್ರಾಂತ್ಯ. ಕರ್ನಾಟಕವು ತುಂಡು ತುಂಡಾಗಿ ವಿಂಗಡಿಸಲ್ಪಟ್ಟಿತ್ತು. ಮಹಾತ್ಮಾಜೀಯವರು ಕರ್ನಾಟಕವನ್ನು ಒಂದುಗೂಡಿಸಿ ಪ್ರಾಂತರಚನೆಯನ್ನು ಮಾಡಿದರು. ಈ ಏಕೀಕರಣವು ನಿಜವಾದ ಏಕೀಕರಣವೆಂಬುದಕ್ಕೆ ಸಂಶಯವಿಲ್ಲ. ಸರಕಾರದ ಕೌನ್ಸಿಲುಗಳ ಕಾನೂನಿನ ಏಕೀಕರಣವಲ್ಲ. ಪ್ರಜೆಗಳ ಹೃದಯಗಳನ್ನು ಪ್ರೇಮಪಾಶದಿಂದ ಬಿಗಿದು ವಿರಚಿಸಿದ ಏಕೀಕರಣವಿದು.

ಇಂದು ಧಾರವಾಡ, ಬೆಳಗಾಂವಿಯ ಜನರ ಪರಿಚಯವನ್ನು ಮಾಡಿಕೊಳ್ಳಬೇಕೆಂದು ದಕ್ಷಿಣ ಕನ್ನಡದ ಯುವಕರು ಉತ್ಕಂಠಿತ ಇಚ್ಛೆಯುಳ್ಳವರಾದರೆ ನಾವೂ ಅವರೂ ಒಬ್ಬ ಪರದೇಶೀ ಗವರ್ನರರ ಕೈಕೆಳಗೆ ಗುಲಾಮಗಿರಿಯ ಶೃಂಖಲೆಗಳಿಂದ ಒಟ್ಟಿಗೆ ಬಿಗಿಯಲ್ಪಟ್ಟಿದ್ದೇವೆಂಬುದಕ್ಕಲ್ಲ. ಕರ್ನಾಟಕ ಮಾತೆಯ ನಿಜರೂಪವು ಇಂದು ಅವರ ಹೃದಯದಲ್ಲಿ ಹೊಳೆಯುತ್ತಿದೆ. ಯಾವ ಶೃಂಖಲೆಗಳಿಂದ ಹಿಂದುಮಾತೆಯನ್ನು ಬಿಗಿದಿರುವರೋ ಆ ಶೃಂಖಲೆಗಳನ್ನು ಕತ್ತರಿಸುವದರಲ್ಲಿ ಕರ್ನಾಟಕವು ತನ್ನ ಕರ್ತವ್ಯವನ್ನು ಪೂರೈಸಬೇಕೆಂಬ ಉತ್ಸಾಹವಿದೆ. ಆ ಕಾರ್ಯದಲ್ಲಿ ನಮಗೆ ಬರಬಹುದಾದ ಕಷ್ಟಗಳನ್ನು ಒಟ್ಟಿಗೆ ಸಹಿಸಬೇಕೆಂಬ ಆಶೆಯಿದೆ. ಅದರಲ್ಲಿ ಸಿಕ್ಕಬಹುದಾದ ಕೀರ್ತಿಯನ್ನೂ ಸುಖವನ್ನೂ ಹಂಚಿಕೊಂಡು ಅನುಭವಿಸಿ ಸಂತಸಪಡುವ ಆತುರವಿದೆ. ಇದಲ್ಲವೆ ಏಕೀಕರಣ? ಕೌನ್ಸಿಲುಗಳ ಮೂಲಕ ಬರುವ ಜಡ ಏಕೀಕರಣದಿಂದೇನು ಫಲ?

ಮೇಲೆ ವರ್ಣಿಸಿದ ನಿಜವಾದ ಏಕೀಕರಣವು ಸಂಪೂರ್ಣ ಸಾಧಿಸಲ್ಪಟ್ಟ ವಿಚಾರವೆಂದು ನಮ್ಮ ಅಂಬೋಣವಲ್ಲ. ಅಸ್ಪಷ್ಟವಾಗಿ ಆ ಭಾವವು ರೂಪಗೊಳ್ಳುತ್ತಿದೆಯಷ್ಟೆ. ಆದರೆ ನಿಶ್ಚಯವಾಗಿಯೂ ರೂಪುಗೊಳ್ಳುತ್ತಿದೆ.

ದಕ್ಷಿಣ ಕನ್ನಡದವರೂ ಧಾರವಾಡದವರೂ ಸಹೋದರರೆಂಬುದನ್ನು ತಿಳಿದುಕೊಳ್ಳಬೇಕಾದರೂ ಪರರ ನೆರೆಯನ್ನು ನೋಡಬೇಕೆ? ಅದನ್ನು ನಮಗೆ ಕೌನ್ಸಿಲುಗಳು ಹೇಳಿಕೊಡಬೇಕೇನು?

ಯಾರೋ ಬೇರೊಂದು ಪ್ರಾಂತದವರು ತಮಗೊಬ್ಬ ಯಜಮಾನನನ್ನೂ ಒಂದು ಕೌನ್ಸಿಲವನ್ನೂ ಕೊಡಬೇಕೆಂದು ಸರಕಾರವನ್ನು ಬೇಡುತ್ತಿರುವರೆಂಬ ಮಾತ್ರಕ್ಕೆ ನಾವೂ ಬೇಡಬೇಕೇನು?

ರಾಜಕೀಯ ವಿಚಾರಗಳ ಜ್ಞಾನವಿಲ್ಲದೆ ಹೀಗೆಲ್ಲ ಹೇಳುತ್ತಿದ್ದೇವೆಂದು ಬೇಕಿದ್ದರೆ ಹೇಳಿರಿ. ರಾಜಕೀಯ ದೃಷ್ಟಿಯಿಂದ ಕರ್ನಾಟಕವು ಬಹಳ ಹಿಂದೆ ಉಳಿದದೆ ಎಂದು ಬೇಕಿದ್ದರೆ ಹೇಳಿಕೊಳ್ಳಿರಿ. ಆದರೆ ನಾವಾದರೂ ನೀವು ನೋಡುತ್ತಿರುವ ರಾಜಕೀಯ ದೃಷ್ಟಿಯು ಕಲುಷಿತವಾದುದೆಂದು ಹೇಳಬಹುದಾಗಿದೆ.

ಇತರ ಪ್ರಾಂತಗಳಂತೆ ಕರ್ನಾಟಕದಲ್ಲಿ ಹೊಸ ನಾಗರೀಕತೆಯ ಪ್ರಚಾರವಾಗಿಲ್ಲವೆಂಬುದು ಸತ್ಯವಿದೆ. ಅದಕ್ಕಾಗಿ ನಾವು ದುಃಖಿಸುವ ಬದಲು ಭಗವಂತನಿಗೆ ತುಂಬ ಕೃತಜ್ಞರಿದ್ದೇವೆ.

ಕರ್ನಾಟಕ ಪ್ರಾಂತದ ಏಕೀಕರಣವು ಪೂರ್ಣ ರೂಪಗೊಳ್ಳಬೇಕಾದರೆ ಹಿಂದ ಮಾತೆಯ ಬಂಧವಿಮೋಚನೆಯ ಕಾರ್ಯವನ್ನು ಇನ್ನಷ್ಟು ಆತುರದಿಂದ ಸಾಧಿಸಬೇಕು. ಈ ಕಾರ್ಯದಲ್ಲಿ ಪರಸ್ಪರ ಸಹಾಯ ಮಾಡಬೇಕು. ಈ ಕಾರ್ಯದಲ್ಲಿ ಇನ್ನಷ್ಟು ಸಮೀಪದ ಸಂಬಂಧವು ಬೆಳೆಯಬೇಕು. ನಿಜವಾದ ಏಕೀಕರಣಕ್ಕೆ ಇದೊಂದೇ ದಾರಿ.

ಎಂದು ದೇಶದಲ್ಲಿ ಸ್ವಾತಂತ್ರ್ಯಸ್ಥಾಪನೆಯಾಗುವದೋ ಅಂದು ಕರ್ನಾಟಕವೂ ಒಂದು ರಾಷ್ಟ್ರವಾಗಿ ಹಿಂದುಮಾತೆಯ ಕೀರ್ತಿಯನ್ನು ಬೆಳಗಬೇಕೆಂಬುದು ಸಹಜವೇ ಇದೆ. ಅಂದಿನ ವರೆಗೆ ಕರ್ನಾಟಕ ಮಾತೆಗೆ ಈ ಅಜ್ಞಾತವಾಸವೇ ಲೇಸು.

ಆ ದಿನವು ಸದ್ಯದಲ್ಲೆ ಬರುವದು. ಆ ವಿಶ್ವಾಸವನ್ನು ಹಳಿದರೆ ವಾದರೆ ಪರರ ನೋರೆಯನ್ನು ನೋಡುವದು ಸಹಜವೇ ಇದೆ. ನಾವಾದರೂ ಆ ದಿನವನ್ನು ಕಣ್ಣ ಮುಂದೆ ನೋಡುತ್ತಿದ್ದೇವೆ. ಅಂದು ಕರ್ನಾಟಕವೂ ಒಂದು ರಾಷ್ಟ್ರವಾಗುವದು.

— ಸತ್ಯಾಗ್ರಹಿ. —

ನಮ್ಮ ಮುಖಂಡರು.

ಬೆಳಗಾಂವಿಯ ಕಾಂಗ್ರೆಸ್ಸು ತೀರಿ ಇದೀಗ ನಾಲ್ಕು ತಿಂಗಳು ಕಳೆದು ಹೋದವು. ಆದರೆ ಕಾಂಗ್ರೆಸ್ಸನ್ನು ನೆರೆಯಿಸುವ ಕುರಿತು ಪಟ್ಟ ದಣುವು ಇನ್ನೂ ತಣಿಯಲಿಲ್ಲವೇ? ಇನ್ನೂ ಎಷ್ಟು ಕಾಲಬೇಕು? ಶ್ರೀ. ಮಜಲಿ ಹಾಗೂ ಶ್ರೀ. ಹಣಮಂತರಾವ ಕೌಜಲಗಿ ಇವರು ಅಲ್ಲಲ್ಲಿ ತಿರುಗಿ ಪ್ರಯತ್ನಿಸಿದ್ದರಿಂದ ಕಾಂಗ್ರೆಸ್ ಮೆಂಬರರ ಸಂಖ್ಯೆಯು ೭೦೦ ಕ್ಕಾದರೂ ಹಾರಿರುವದು. ಆದರೆ ಕರ್ನಾಟಕ ಪ್ರಾಂತಿಕ ಕಮಿಟಿಯ ಅಧ್ಯಕ್ಷ ಉಪಾಧ್ಯಕ್ಷರೇ ಮೊದಲಾದ ಕರ್ನಾಟಕದ ಮುಖಂಡರೆನಿಸಿಕೊಳ್ಳುವವರು ಈ ನಾಲ್ಕು ತಿಂಗಳಲ್ಲಿ ಏನೇನು ಕೆಲಸ ನಡಿಸಿದರೆಂಬುದರ ಡಾಯರಿಯನ್ನು ಪ್ರಸಿದ್ಧ ಮಾಡುವರೋ? ಗುರುವು ಪಾಠ ಹೇಳಿಕೊಡದೆ ಶಿಷ್ಯನು ದಡ್ಡನೆನ್ನುವದು ನಗಗೇಡಲ್ಲವೇ? ತದ್ವತ್, ಮುಖಂಡರು ಅಲ್ಲಲ್ಲಿ ಸಂಚಾರ ಮಾಡಿ ಜನರಲ್ಲಿ ಜಾಗ್ರತೆಯನ್ನುಂಟು ಮಾಡಿ ಅವರನ್ನು ಕೆಲಸಕ್ಕೆ ಹಚ್ಚುವ ಬದಲು ಜನರಲ್ಲೇ ಉತ್ಸಾಹವಿಲ್ಲೆನ್ನುವದು ಸರಿಯೇ? ಜನರಲ್ಲಿ ಉತ್ಸಾಹವು ಉಕ್ಕುತ್ತಿದ್ದರೆ ಮುಖಂಡರೇಕೆ? ಕೆಲಸ ತಕ್ಕೊಳ್ಳುವದು ಜನರಿಂದ ನಿಜ. ಆದರೆ ತಕ್ಕೊಳ್ಳುವವರು ಮಾತ್ರ ಮುಖಂಡರು ಅಥವಾ ಕೆಲಸಗಾರರೆಂಬುದನ್ನು ಮರೆಯಬಾರದು.

— ಕಾನಡಾ ಧುರೀಣ. —

ನಿಜಾಮರಲೀಲೆ.

೧. ನಿಜಾಮ ಸಾಹೇಬರ ರಾಜ್ಯದಲ್ಲಿ ಒದಗುವ ಲೀಲೆಗಳನ್ನು ಕೇಳಿದರೆ, ಒಮ್ಮೆ ನಗೆ ಬರುತ್ತದೆ; ಒಮ್ಮೆ ದ್ವೇಷ ಉಂಟಾಗುತ್ತದೆ. ವರಂಗೂಳದಲ್ಲಿ ಶ್ರೀ. ಪಿಂಗಲ ರಂಗರಾವ ಎಂಬ ಹೆಸರಾದ ವಕೀಲರು ಸ್ವರ್ಗವಾಸಿ ಯಾದರು. ಇವರು ಅರಬಿ, ಫಾರ್ಸಿ, ಉರ್ದು ಮೊದಲಾದ ಭಾಷೆಗಳಲ್ಲಿ ಪ್ರವೀಣರು. ಈ ಪಾಂಡಿತ್ಯದಿಂದಲೇ ಹಿಂದೂಗಳಿದ್ದರೂ ಕೈಲಾಸವಾಸಿಗಳು ಮಹಮ್ಮದೀಯರಿರಬೇಕೆಂದು ವರಂಗೂಳದೊಳಗಿನ ಮಹಮ್ಮದೀಯರ ಗ್ರಹಿಕೆಯಾಗಿ, ಮೃತಾತ್ಮರ ದೇಹಕ್ಕೆ ಅಗ್ನಿ ಸಂಸ್ಕಾರ ಮಾಡದೆ, ಹುಗಿಯಬೇಕೆಂದು ಹಟ ಹಿಡಿದರು. ಹಿಂದೂಗಳು ಒಪ್ಪಲಿಲ್ಲ. ಪ್ರಕರಣವು ನಿಜಾಮ ಸಾಹೇಬರ ಧರ್ಮಾಚಾರ್ಯರ ಕಡೆಗೆ ಹೋಯಿತು. ಅವರು, ಮಹಮ್ಮದೀಯ ದೀಕ್ಷೆಯನ್ನು ಪಡೆದ ಭದ್ರ ಪುರಾವೆ ದೊರಕಿದ ಹೊರತು ಮೃತರಿಗೆ ದಫನ ಸಂಸ್ಕಾರದ ಬಗ್ಗೆ ಆಗ್ರಹ ಮಾಡಲಾರದೆಂದರು. ಭದ್ರ ಪುರಾವೆಯು ಏಕೆ? ಏನೂ ಪುರಾವೆಯು ದೊರಕದ್ದರಿಂದ ಕಟ್ಟಕಡೆಗೆ ಕೈ ವಾಗಳ ದೇಹವನ್ನು ಪೋಲೀಸ ಬಂದೋಬಸ್ತಿನಿಂದ ಹಿಂದೂಗಳು ಸುಡಬೇಕಾಯಿತು. ಇಷ್ಟೆಲ್ಲ ನಿರ್ಣಯವಾಗುವವರೆಗೆ ಎರಡು ದಿನಗಳು ಕಳೆದವು. ವರೆಗೆ ಶವವು ಹಾಗೆಯೇ ಇಡಬೇಕಾಯಿತು. ನಿಜಾಮ ರಾಜ್ಯದಲ್ಲಿ ಇಸ್ಲಾಮ ಧರ್ಮದ ಹುಚ್ಚು, ಬಲಾತ್ಕಾರವೂ ಎಲ್ಲಿಯ ವರೆಗೆ ಮುಟ್ಟಿರುವದೆಂಬದು ನೋಡಿರಿ. — ಕಾನಡಾವೃತ್ತ. —

ಈ ಪತ್ರಿಕೆಯು ಮಂಗಳವೇಢೇ ರಾಜೇರಾಯ ಮುಕ್ಕಳಾಪ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು. ಪ್ರತಿ ೪೦೦೦

.ರ ನಂ. ಬಿ. ೧೯೪೭ ನಾ ಚಂದಾ ೧—೪— ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವೇಶವಾಗಿದೆ)

ಯತ್ರ ಪಾವಕ ದುಃಖ । ಯಥಾತ್ಮವಶ ಸುಖಮ್ ॥ — ಮನು

ಸಂಪಾದಕರು—ಮಂಗಳವೇಢೇ ರಾಜೇರಾಯರ ಮುಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಶ್ರೀ ಜ್ಯೇಷ್ಠ ಶುದ್ಧ ೭ ಶಕೆ ೧೮೪೭. ತಾ|| ೨೯-೫ ೧೯೨೫. | ಸಂಚಿಕೆ ೧೦

ಸಂಪಾದಕರ ಧ್ವನಿ..

ಎದ್ದರೆ ಕನ್ನಡ ಕುಳಿತರೆ ಕನ್ನಡ ನುಡಿದರೆ ಕನ್ನಡವು ।
ಹೃದ್ಯವು ಕನ್ನಡ ಉದ್ಯಮ ಕನ್ನಡ- ಕನ್ನಡ- ಕನ್ನಡವು ।
ಕನಸು ಮನಸಿನೊಳು ಕನ್ನಡ ಕನ್ನಡ ನಿದ್ದೆಯು ಕನ್ನಡವು
ಕನಸು ಕನ್ನಡವು ಜೀವಿತ ಕನ್ನಡ ಎಲ್ಲವು ಕನ್ನಡವು ॥

—ಕೈ ನಗರ ಕವಿ

ಶ್ರೀ ಬೆಳವೀ ದತ್ತಾತ್ರಯರಾಯರು ಈ ಸಾರೆಯ ಸಾಹಿತ್ಯ ಸಮ್ಮೇಲನದ ಕಾರ್ಯದಲ್ಲಿ ಭಾಗತೆಗೆದುಕೊಂಡು, ಶ್ರೀ ಉತ್ತಂಗೀಯವರು ಪವಿತ್ರ ಮಾಡಿ ಸರ್ವಜ್ಞನ ಪದಗಳನ್ನು ಪ್ರಸಿದ್ಧಪಡಿಸಿದ್ದಕ್ಕಾಗಿ, ೧೦೦ ರೂ. ಬಹುಮಾನವಾಗಿ ಕೊಟ್ಟದ್ದು ವಿಶೇಷ ಮಹತ್ವದ ಸಂಗತಿಯು ಬೆಳಗಾಂವಿಯಲ್ಲಿಯ ಕನ್ನಡಿಗರಲ್ಲಿ ಕನ್ನಡದ ಬಗ್ಗೆ ಅಭಿಮಾನವೇ ಇಲ್ಲವೆಂದೂ, ಬೆಳವೀ ಯಂಥವ ಮುಖಂಡರು ಸಹ ಕನ್ನಡವನ್ನು ತಿರಸ್ಕರಿಸುವರೆಂದೂ ಜನರ ಕಲ್ಪನೆಯಿದ್ದಿತು. ಆದರೆ ಈ ಕಲ್ಪನೆಯು ತಪ್ಪಾಗಿರುವದೆಂದೂ, ಕನ್ನಡಿಗರು ಮೊದಲು ತಾವೇ ಕನ್ನಡ ಅಭಿಮಾನ ಹಿಡಿದು ಶ್ರೀ ಉತ್ತಂಗಿಯವರು ಮಾಡಿದಂಥ ಕಾರ್ಯವನ್ನು ಮಾಡಿದರೆ, ಬೆಳಗಾಂವಿಯಂಥವ ತಂಡತಂಡ ಕನ್ನಡಿಗರು ಸಹ ಆದರಿಂದ ಜಾಗ್ರುತರಾಗುವರೆಂದೂ ಶ್ರೀ ಬೆಳವೀಯವರ ಅನುಕರಣೀಯವಾದ ಕೃತಿಯಿಂದ ಸ್ಪಷ್ಟವಾಗುತ್ತದೆ. ಬೆಳಗಾಂವಿ ಮರಾಟಿಗರು ಈಗ್ಗೆ ಕನ್ನಡಿಗರನ್ನು ಹಳಿಯುವ ಲೋಕವನ್ನು ಬಿಟ್ಟು, ಕನ್ನಡ ಚಳವಳಿಗಳ ಬಗ್ಗೆ ಉದಾಶೀನರಾಗಿರುವ ಲೋಕಕ್ಕೆ ಇಳಿದಿರುವರು. ಬೆಳಗಾಂವಿಯ ಮರಾಟಿಗರ ಹೃದಯದಲ್ಲಿ ಕನ್ನಡದ ಬಗ್ಗೆ ಆದರವು ಹುಟ್ಟುವ ಪ್ರಸಂಗವು ಇನ್ನು ಮೇಲೆ ಬೇಗನೆ ಬರುವದೆಂದು ಆಶಿಸುವೆವು.

ಕೋಲಾರದಲ್ಲಿ ನೆರೆದ ಡಿಸ್ಟ್ರಿಕ್ಟ ಕಾನ್ಫರನ್ಸಿನ ವೃತ್ತಾಂತವು ನಮ್ಮ ಕಡೆಗೆ ಬಂದಿರುತ್ತದೆ. ಅದರಲ್ಲಿ ಅಧ್ಯಕ್ಷಸ್ಥಾನಾಪನ್ನರಾದ ಜಿಲ್ಹಾಧಿಕಾರಿಗಳು ಆ ಸಮ್ಮೇಳನದ ಉದ್ಘಾಟನೋತ್ಸವದ ಉಪನ್ಯಾಸದಲ್ಲಿ ಪ್ರಜೆಗಳಿಗೆ ಒದಗಿದ ಅನೇಕ ಕಷ್ಟಗಳನ್ನು ನಿಷ್ಪಕ್ಷಪಾತದಿಂದ ಮಂಡಿಸಿದ್ದಕ್ಕಾಗಿ ನಾವು ಅವರನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ.

ಹೋದವರ್ಷ ಕರ್ನಾಟಕದ ಬಹುತರ ಯಾವತ್ತು ಪ್ರದೇಶದ ಮೇಲೆ ಮೇಘರಾಜನ ಕೃಪಾಕಟಾಕ್ಷವು ಬೀಳದ್ದರಿಂದಾಗ ಒದಗಿದ ಅನೇಕ ತೊಂದರೆಗಳಿಗೆ ಕೋಲಾರ ಪ್ರಾಂತವೂ ಹೊರತುಪಡಿಸಿರಲಿಲ್ಲ. ಈ ಸಂದರ್ಭದಲ್ಲಿ ಮೈಸೂರು ಸರಕಾರವು ಜನಸಾಮಾನ್ಯಕ್ಕೆ ಶಕ್ತ್ಯನುಸಾರ ಸಹಾಯ ಮಾಡುವದೊತ್ತಟ್ಟಿಗುಳಿದು ನೀರುನೀರೆಂದು ಮೊರೆಯಿಡುವ ಪ್ರಜೆಗಳ ಗೋಳಿಗೆ ಕಿವಿಗೊಡದೆ ಅಕ್ಷಮ್ಯವಾದ ಔದಾಸೀನ್ಯವನ್ನು ತೋರಿಸಿದ್ದಕ್ಕಾಗಿ ನಾವು ಅದನ್ನು ಬಲವಾಗಿ ನಿಷೇಧಿಸದೆ ಇರಲಾರೆವು. ಅದರಂತೆ, ಬೋರ್ಡಿನ ಅಧ್ಯಕ್ಷರು ವಾರ್ಷಿಕ ವರದಿಯಲ್ಲಿ ಹೇಳಿದಂತೆ ಅಭಿವೃದ್ಧಿ (Development) ಇಲಾಖೆಗೆ ಅಂದಾಜ ಪತ್ರಿಕೆಯಲ್ಲಿ ಅಪ್ಪಣೆ ಕೊಡಿಸಿದ ಹಣದಲ್ಲಿ ಕ್ರಮೇಣ ಕಡಿಮೆ ಮಾಡುತ್ತ ಕಡೆಗೆ ಅದನ್ನು ಸಂಪೂರ್ಣ ನಿಲ್ಲಿಸಿದ್ದು ಶೋಚನೀಯವಾದ ಸಂಗತಿಯು ಕೃಷಿ ಸಹಕಾರ, ವ್ಯವಸಾಯ ಇತ್ಯಾದಿ ಪ್ರಜೋಪಕಾರಿಗಳಾದ ಇಲಾಖೆಗಳಲ್ಲಿ ಆಗ ಒದಗಿದ ಎಷ್ಟೋ ಮಹತ್ವದ ಸುಧಾರಣೆಗಳು ಹಣದ ಕೊರತೆಯ ಮೂಲಕವಾಗಿಯೇ ನಿಂತು ಹೋದದ್ದು ಪ್ರಜಾವಾತ್ಸಲ್ಯಯುತರಾದ ಶ್ರೀ ಚಾಮರಾಜೇಂದ್ರ ಒಡೆಯರ ಸರಕಾರಕ್ಕೆ ಶೋಭಿಸುವದಿಲ್ಲ. ಪ್ರಗತಿಪರ ಧೋರಣದಿಂದ ಬ್ರಿಟಿಶ ಹಿಂದುಸ್ಥಾನಕ್ಕೆ ಕೂಡ ಆದರ್ಶ ಭೂತವಾದದ್ದೂ ಇತರದೇಶೀಯ ಸಂಸ್ಥಾನಗಳಲ್ಲಿ ರಾಜಕೀಯ ಸಾಂಪತ್ತಿಕ, ವಿದ್ಯಾವಿಷಯ ಇತ್ಯಾದಿ ವಿಷಯಗಳಲ್ಲಿ ಮುಂದು ವರೆದು ಹೆಸರುವಾಸಿಯಾದದ್ದೂ, ಮೈಸೂರ ಸರಕಾರವು ಈ ತನ್ನ ಪ್ರತಿಗಾಮೀ ಪ್ರವೃತ್ತಿಯನ್ನು ತ್ಯಜಿಸಿ ಪ್ರಜೆಗಳ ಕಲ್ಯಾಣಾಭಿವೃದ್ಧಿಯ ವಿಷಯಕ್ಕೆ ಇನ್ನು ಮುಂದೆ ಹೆಚ್ಚು ಗಮನ ಕೊಡುವರೆಂದು ನಾವು ನಂಬಿದ್ದೇವೆ.

ಕರ್ನಾಟಕದಲ್ಲಿ ಕನ್ನಡಿಗರಾದವರ ಪುಣ್ಯತಿಥಿಗಳೂ, ಜಯಂತ್ಯುತ್ಸವಗಳೂ, ಈಗೀಗ ಒಳ್ಳೇ ಉತ್ಸಾಹದಿಂದ ಜರಗುತ್ತಿರುವವೆಂಬುದು ಆನಂದದ ಸಂಗತಿಯೇ ಸರಿ. ಕನ್ನಡನಾಡು, ಕನ್ನಡನುಡಿ, ಕನ್ನಡ ರಾಜರುಗಳ ಬಗ್ಗೆ ಇರಬೇಕಾದ ಅಭಿಮಾನವೂ ಆದರವೂ ನಮ್ಮ ಅಂತರಂಗದಲ್ಲಿ ಇದೀಗ ಒಡಮೂಡ ಹತ್ತಿರುವದನ್ನು, ಇದರಿಂದ ಕಾಣುವಂತಿದೆ. ಸ್ವಭಾಷಾ ವಿಷಯದಲ್ಲೂ, ಸ್ವಕೀಯರ ವಿಷಯದಲ್ಲೂ ಅವಶ್ಯವಾಗಿರಬೇಕಾದ ಸ್ವಾಭಿಮಾನವು ಭರದಿಂದ ಬೆಳೆದು ಕನ್ನಡಿಗರ ಬಗ್ಗೆ ಉಜ್ವಲವಾದ ಪ್ರೇಮವು ನಮ್ಮೆಲ್ಲರಲ್ಲಿ ಉದಯಿಸಬೇಕಾದರೆ ಇನ್ನೂ ಇಂಥ ಉತ್ಸವಗಳು ಇಮ್ಮಡಿ, ಮುಮ್ಮಡಿ ಹುರುಪಿನಿಂದ ನೆರವೇರಿಸಲ್ಪಡಬೇಕು. ವಿಜಯನಗರದ ಅರಸುಗಳಲ್ಲಿ ವೀರಾಗ್ರಣಿಯಾದ ಶ್ರೀ **ಕೃಷ್ಣದೇವರಾಯನ** ಮತ್ತು ಆ ಸಾಮ್ರಾಜ್ಯದ ಸ್ಥಾಪನಾಚಾರ್ಯರಾದ **ವಿದ್ಯಾರಣ್ಯ** ಸ್ವಾಮಿಗಳ ಪುಣ್ಯತಿಥಿಗಳನ್ನು ಇದೇ ತಿಂಗಳ ೨೯ ನೇ ತಾರೀಖಿಗೆ ಹಂಪಿಯಲ್ಲಿ ಜರಗಿಸುವದಾಗಿ ಶ್ರೀ ಹಣಮಂತಗೌಡರು ಗೊತ್ತು ಮಾಡಿರುವರು. ಈ ಬಗ್ಗೆ ನಾವು ಅವರನ್ನು ಅಭಿನಂದಿಸದೆ ಇರಲಾರೆವು. ಉತ್ಸವಕ್ಕೆ ಬರಲು ಎಲ್ಲ ಕರ್ನಾಟಕಾಭಿಮಾನಿಗಳಿಗೆ ಆಮಂತ್ರಣ ಕೊಟ್ಟಿರುವರು. ಯಾವ ಪುಣ್ಯಶ್ಲೋಕರ ಕುರಿತು ಈ ಸಮಾರಂಭವು ಜರುಗಬೇಕಾಗಿದೆಯೋ ಅವರಿಗೆ ತಕ್ಕ ಸನ್ಮಾನದಿಂದಲೂ ವೈಭವದಿಂದಲೂ, ಅದು ಸಾಂಗವಾಗಲೆಂದು ಭುವನೇಶ್ವರಿಯನ್ನು ಬೇಡಿಕೊಳ್ಳುವೆವು.

ಧಾರವಾಡ ದಲ್ಲಿ ಕಳೆದವಾರ "ಬ್ರಾಹ್ಮಣ ಸಭೆ" ಎಂಬ ಸಭೆ ಗೂಡಿತ್ತು. ಬ್ರಾಹ್ಮಣರು ಹೊಟ್ಟೆ ಹರಕೊಳ್ಳುವ ಬಗೆ ಇನ್ನು ಯಾವದೆಂಬುದೇ ಅದರ ಮುಖ್ಯ ಉದ್ದೇಶವಾಗಿತ್ತು. ಇದರ ಬಗ್ಗೆ ನಮ್ಮ ಕಡೆಗೆ ಬರೆದು ಬಂದ ಒಂದು ಸವಿಸ್ತಾರ ಲೇಖವನ್ನು ಬೇರೆಡೆಯಲ್ಲಿ ಪ್ರಸಿದ್ಧಿಸಿರುವೆವು. ಒಕ್ಕಲತನ ಕೈಗಾರಿಕೆ ಮೊದಲಾದ ಸ್ವಾವಲಂಬನದ ಮಾರ್ಗವನ್ನು ಈ ಸಭೆಯು ಸೂಚಿಸಿರುವದು. ಪರಪುಷ್ಟತೆಯ ವೃತ್ತಿಯನ್ನು ಬಿಟ್ಟು ಇಂಥ ಸ್ವಾವಲಂಬನ ಹಾಗೂ ದ್ರವ್ಯೋತ್ಪಾದಕ ವ್ಯವಸಾಯಗಳನ್ನಂಗೀಕರಿಸುವದತ್ಯವಶ್ಯವಾದದ್ದೇನು ನಿಜ. ಹೊಟ್ಟೆಯ ಚಿಂತೆಯನ್ನು ದೂರಮಾಡಿ ಧನಿಕರಾಗಬೇಕಾದ ಮಾರ್ಗವನ್ನು ತೋರಿಸಿ ಕೊಟ್ಟರೆ ಬ್ರಾಹ್ಮಣರು ತಮ್ಮ ಪೂರ್ವದ ಬ್ರಹ್ಮತೇಜವನ್ನೂ, ತಪೋಬಲವನ್ನೂ, ಪಡೆಯುವರೆಂಬ ಮೋಹ ಜಾಲದಲ್ಲಿ ಈ ಸಭೆಯವರು ಬಿದ್ದಿರುವರು. "ಆಚಾರಃ ಪ್ರಥಮೋ ಧರ್ಮಃ" ಎಂಬಂತೆ ಬ್ರಾಹ್ಮಣರು ಮೊದಲು ಶುದ್ಧಾಚರಣೆಯುಳ್ಳವರೂ, ಸತ್ಶೀಲರೂ ಆಗಿದ್ದು, ಅನಾದಿಕಾಲದಿಂದಲೂ ವೇದಪ್ರತಿಪಾದಿತವಾದ ಆರ್ಯಸಂಸ್ಕೃತಿಯನ್ನು ಕಾಯ್ದುಕೊಂಡು ಬಂದಿರುವ ತಮ್ಮ ಪೂರ್ವಜರ ಕೀರ್ತಿಯನ್ನೂ ಪರಂಪರೆಯನ್ನೂ ಕಳಕೊಳ್ಳಬಾರದೆಂದೂ, ಎಂಥ ಆಪತ್ತು ಬಂದೊದಗಿದರೂ ಅಮೂಲ್ಯವಾದ ತಮ್ಮ ಸಂಸ್ಕೃತಿಯು ಮಲಿನವಾಗದಂತೆ ವರ್ತಿಸಬೇಕೆಂದೂ, ಅದಕ್ಕನುಸರಿಸಿ "ಸರ್ವ ಭೂತಹಿತೇರತಾಃ" ಎಂಬದರ ಕಡೆಗೆ ವಿಶೇಷ ಗಮನ ಕೊಡಬೇಕೆಂದು ಸೂಚಿಸಿ, ಇಷ್ಟೆಲ್ಲ ಸಾಧ್ಯವಾಗುವಂತೆ ಈಗಿನ ಕಾಲಕ್ಕನುರೂಪವಾದ ಸಾಧನಗಳನ್ನು ನಿಶ್ಚಯಿಸಿ ಹೇಳಿ ಕೊಟ್ಟಿದ್ದರೆ ಅಖಿಲ ಬ್ರಾಹ್ಮಣ ಸಮಾಜಕ್ಕೇ ಈ ಸಭೆಗ ಳುಪಯೋಗವಾಗಬಹುದಾಗಿತ್ತು.

ಮಹಾತ್ಮಾಜಿಯ ನಿತ್ಯ ಆಚರಣೆಯು. ಮಹಾತ್ಮಾ ಗಾಂಧಿಯವರು ರಾಟಿಯನ್ನು ತಿರುವರೆಂದು ಮಂತ್ರ ಜನ್ಮಪದೇಶಿಸುತ್ತ ಈಗ ಬಂಗಾಲ ಪ್ರಾಂತದಲ್ಲಿ ಪ್ರವಾಸಮಾಡುತ್ತಿರುವರಷ್ಟೇ. ಅವರ ಸಂಗಡ ತಿರುಗಾಡುತ್ತಿರುವ 'ಫಾರವರ್ಡ' ಪತ್ರದ ಪ್ರತಿನಿಧಿಗಳೊಬ್ಬರು ಅವರ ನಿತ್ಯ ಆಚರಣೆಯ ಬಗ್ಗೆ ಒಂದು ಸಂಗತಿಗಳನ್ನು ಬರೆದಿರುವರು.

ಮಹಾತ್ಮಾಜಿಯವರು ಕೇವಲ ಶಾಕಾಹಾರಿಗಳಾಗಿರುವರು ದಿವಸದಲ್ಲಿ (ಅದು ಸೂರ್ಯಾಸ್ತಕ್ಕೆ ಮೊದಲು) ಮೂರಾವರ್ತಿ ಊಟಮಾಡುತ್ತಿರುವರು. ಪ್ರತಿಸಾರೆಯೂ ಮೂರೆ ಪದಾರ್ಥಗಳಗಿಂತ ಹೆಚ್ಚಾಗಿ ಯಾವ ತಿಂಡಿಯೂ ಇದರಲ್ಲಿ ಸೇರಿರಕೂಡದು ಸದ್ಯಕ್ಕಾತೂ ಮಂಣು ಹಂಪಗಳನ್ನೇ ಅವರ ಮುಖ್ಯಾಹಾರವಾಗಿದೆ.

ಈ ಪ್ರಕಾರ ಊಟದಲ್ಲಿ ವ್ರತವನ್ನು ಪಾಲಿಸುವ ಹಾಸ್ಯ ಅವರ ಜೊತೆಯಲ್ಲಿದ್ದ ಶ್ರೀ. ಮಹಾದೇವ ದೇಸಾಯರಿಗೂ ಒಡಕೊಂಡಿರುವದು ಆದರೆ ಅವರು ಒಂದು ಊಟದಲ್ಲಿ ಐದು ಜಿನಸುಗಳ ವರೆಗೆ ತಿನ್ನಲಿಕ್ಕಾಗಿ ಮರ್ಯಾದೆಯನ್ನಿಟ್ಟುಕೊಂಡಿರುವರು. ಅವರ ನೂಲುವ ಹುಚ್ಚು ಇದಕ್ಕೂ ಹೆಚ್ಚಿನದಾಗಿದೆ. ಸಭೆಯಲ್ಲಿ, ಮನೆಯಲ್ಲಿ, ಪ್ರವಾಸದಲ್ಲಿ, ಎಲ್ಲಿ ಹೋದಲ್ಲಿ ಒಂದಲ್ಲಿ ತನ್ನ ಕದರುಂಡಿಗೆಯ ಮೇಲೆ ಸದಾ ಸರ್ವದಾ ನೂಲುವದೇ ನೂಲುವದು. ನೋಡುವವರೆ ಬೇಸರಬೇಕೆ ಹೊರ್ತು ಅವರಿಗೇನು ನೂಲುವದಕ್ಕಾಗಿ ಬೇಸರಿಕೆ ದಣಿಕೆ ಇದ್ದವೇ ಇಲ್ಲಾ. ದೇಸಾಯಿಯಂಥ ವಿದ್ಯಾಭೂಷಿತನಾದ ತರುಣನ, ಒಂದು ನೂಲುವದಕ್ಕಾಗಿ ಸರ್ವಸ್ವವನ್ನು ತ್ಯಜಿಸಿ ಬಿಟ್ಟದ್ದು ನೋಡಿ ಯಾರಿಗೆ ಆಶ್ಚರ್ಯವಾಗುವಂತೆ ಆದರೆ ಈ ವರಿಯ ಆಚರಣೆಯು ತಾನಾಗಿಯೇ, ಜನರ ಮೇಲೆ ಪರಿಣಮಿಸಿ ಅವರಲ್ಲಿ ವಿಚಾರ ಕ್ರಾಂತಿಯನ್ನು ಹುಟ್ಟಿಗಾಂಧಿಯವರ ಪ್ರಚಾರ ಕೆಲಸದಲ್ಲಿ ಬಹು ಸಹಕಾರಿಯಾಗಿದೆ, ಎಂಬದನ್ನು ಮರೆಯಕೂಡದು.

ಮಹಾತ್ಮಾಜಿಯವರು ಪ್ರತಿ ಸೋಮವಾರ ಮೌನವ್ರತವನ್ನಾಚರಿಸುತ್ತಿರುವರು. ಇದರಂತೆ ಬುಧವಾರವಾದರೂ ಬೆಳಗಿನ ೬ ತಾಸು ಮೂಕವೃತ್ತಿಯಿಂದಲೇ ಇರುವರು. ತಮ್ಮ ಉತ್ಸಾಹ ಶಕ್ತಿಯನ್ನು ಉಳಿಸಿಕೊಳ್ಳಲಿಕ್ಕೆ ಅವರು ಈ ವ್ರತವನ್ನು ಪಾಲಿಸುತ್ತಿರುವರಂತೆ. ಸೋಮವಾರ ಇಡೀ ದಿವಸವನ್ನೆಲ್ಲ ತಮ್ಮ ವೃತ್ತಪತ್ರಕ್ಕೆ ಲೇಖನಗಳನ್ನು ಬರೆಯುವದರಲ್ಲಿ ಹಾಕಿ ಬಿಡುವರು. ಇದರ ಮೇಲಿಂದ ಇವೆರಡೂ ದಿವಸ ಅವರು ಉಪೋಷಣೆ ಮಾಡುತ್ತಾರೆಂದು ತಿಳಿಯ ಬಾರದು. ಎಲ್ಲ ವ್ಯವಹಾರಗಳೂ ಸನ್ನೆ ಸೂತ್ರಗಳಿಂದಾಗಲೀ ಬರೆದು ತಿಳಿಸುವದರಿಂದಾಗಲೀ ಸಾಗಿಸಲ್ಪಡುವವು.

ಗಾಂಧಿಯವರಿಗೆ ಗಲಭೆಯೂ, ಗಲಾಟೆಯೂ, ಎಳ್ಳಷ್ಟು ಸರಿ ಬರುವದಿಲ್ಲ ಚಿಕ್ಕ ಮಕ್ಕಳೊಡನೆ ಹಾಸ್ಯ ವಿನೋದಗಳನ್ನಾಡುವದರಲ್ಲಿ ಅವರಿಗೆ ಬಲು ಅಕ್ಕರತೆ ತಮಗೆ ಹಾಕಿದ ಹೂವಿನ ಹಾರಗಳನ್ನು ಅಲ್ಲಿಯೇ ಸಮೀಪದಲ್ಲಿದ್ದ ಕುಮಾರಿ ಕೊರಳಿಗೆ ಅತ್ಯಂತ ಅಟ್ಟಹಾಸದಿಂದ ತೊಡಕಿಸುವದೊಂದು ಅವರ ರೂಢಿ ಮೊನ್ನೆ ಒಂದು ಸಭೆಯಲ್ಲಿ ಕೋಮಲೆಯರಾರೂ ಬಂದಿರಲಿಲ್ಲ; ಅಯ್ಯಾ ಯಾರಾದರೂ ಇಲ್ಲಿ ನನ್ನ ಪ್ರೇಮ ಪಡೆಯತಕ್ಕ ಕೋಮಲೆ ಇಲ್ಲವಲ್ಲಾ! ಈ ಮಾಲೆಗಳನ್ನಿನ್ನು ಯಾರಿಗೆ ಅರ್ಪಿಸಲಿ, ಎಂದು ಉಸರಿದರಂತೆ.

ಸ್ವರಾಜ್ಯ ಪಕ್ಷದವರ ಸಮಾಪ್ತಿಯು.

ಕೆಲವು ದಿವಸಗಳ ಹಿಂದೆ ಶ್ರೀಮತಿ ಸರೋಜಿನಿದೇವಿಯವರು ಸ್ವರಾಜ್ಯ ಪಕ್ಷವನ್ನು ಕಡಿಮೆ ಮಾಡಬೇಕೆಂದು ವಿಚಾರ ಮಾಡಿದ್ದರಷ್ಟೆ? ಈಗ ಸ್ವರಾಜ್ಯ ಪಕ್ಷದ ಮುಖಂಡರರಲ್ಲೊಬ್ಬರಾದ ಶ್ರೀ ವಿಠ್ಠಲಭಾಯಿ ಪಟೇಲರವರು ಈ ವಿಚಾರಕ್ಕೆ ತಮ್ಮ ಸಮ್ಮತಿಯನ್ನು ಕೊಟ್ಟಿದ್ದಾರೆ. ಆದರೆ ಕೇವಲ ಕಾಂಗ್ರೆಸದ ಮುಖಂಡತ್ವವನ್ನು ಭದ್ರಪಡಿಸಲಿಕ್ಕೇನೇ ತಾವು ಹೀಗೆ ಮಾಡುವರೆಂತಲೂ, ಉಳಿದ ಪಕ್ಷದವರಾದರೂ ಹೀಗೆಯೇ ತಮ್ಮ ತಮ್ಮ ಹಟವನ್ನು ಬಿಡಬೇಕೆಂತಲೂ ಪ್ರತಿಪಾದಿಸಿದ್ದಾರೆ. ಈ ಬಗ್ಗೆ ಹಿಂದೂ ಮಹಾಸಭೆ, "ಮುಸ್ಲೀಮಲೀಗ" ಗಳ ನಡುವೆ ವಿಚಾರ ವಿನಿಮಯವಾದರೂ ನಡೆದಿರುವದೆಂದು ತಿಳಿದು ಬರುತ್ತದೆ. ಮುಂಬಯಿಗೆ ಶಾಸ್ತ್ರಿಯವರು ದಯಮಾಡಿಸಿದಾಗ್ಯೆ ಶ್ರೀ. ಪಟೇಲರವರು ಅವರನ್ನು ಇದೇ ಸಂದರ್ಭದಲ್ಲಿ ಸಂದರ್ಶಿಸಿದರು. ಉಳಿದ ಸ್ವರಾಜ್ಯ ಪಕ್ಷದ ಮುಖಂಡರಾದರೂ ಶಾಸ್ತ್ರೀಯವರಗೂಡ ಇದೇ ವಿಷಯದಲ್ಲಿ ಚರ್ಚಿಸುತ್ತಾರೆ. ಮಹಾತ್ಮಾ ಗಾಂಧಿ, ಪಂಡಿತ ಮಾಲವಿಯಾ, ನೇತಾ ಸಾಮಿ ದಾರ ಶಾಸ್ತ್ರಿ, ಡಾಕ್ಟರ ಬೆಸ್ಸಂಟ, ಬ್ಯಾರಿಸ್ಟರ ಜಿನ್ನಾ ಮುಂತಾದ ಮುಖಂಡರದೊಂದು ಪರಿಷತ್ತಾದರೂ ಸ್ವಲ್ಪ ದಿನಗಳಲ್ಲಿಯೇ ಕೂಡಬಹುದೆಂದು ತೋರುತ್ತದೆ. ಈ ಪರಿಷತ್ತು ಸ್ವರಾಜ್ಯ ಪಕ್ಷವು ಅಸ್ತವಾಗುವದರಲ್ಲಿ ಪರಿಣಮಿಸುವದೋ?

ಕನ್ನಡದ ಅಭಿಮಾನ ಇರಲಿ! 'ಕನ್ನಡಿಗ'ನಲ್ಲಿಯ ಮೇಲ್ತರದ ಲೇಖಗಳನ್ನೋದಿರಿ! ಸ್ಫೂರ್ತಿ ಹೊಂದಿರಿ!

ಕಿ ರ ಣ ಗ ಳು.

(ಶ್ರೀನಿವಾಸ ಬರೆದದ್ದು.)

(೫ ನೇ ಸಂಚಿಕೆಯ ೩ ನೇ ಪುಟದಿಂದ ಮುಂದೆ ಸಾಗಿದ್ದು.)

ದೇವಗೇಹಗಳಾದವು ಮನೆಯ ಹೊಸ್ತಿಲದ ಹೊರಗೆ ಹೋದರೆ, ನಾನು ನಿಂತದ್ದೆಲ್ಲಿ? ವಿದ್ಯುದ್ದೀಪವಲ್ಲ! ಆ ದೀಪವನ್ನು ಸಿದ್ಧಪಡಿಸಿದ್ದು ಹೇಗೆ? 'ಪರದೇಶದ 'ಎಂಜಿನ'' ಸಹಾಯದಿಂದ ಹಾಗಾದರೆ ಬೀದಿಯನ್ನು ಬೆಳಗಿ ಎದುರಿಗೆ ಕಾಣುವ ಸಣ್ಣ ಸಂಖ್ಯೆಯು ಹೇಗೆ ಸಿದ್ಧವಾಗಿದೆ? ಆ 'ಎಂಜಿನ' ಹೋಗಿರಲಾರದು, ಉಳಿದ ಉಪಕರಣಗಳಿಂದ? ಅವು ಒಳ್ಳೆಯವು 'ಮತ್ತೆ ಅದೇ ಭೂತವು!' ಪರದೇಶದ ಉಪಕರಣಗಳು ಆ ಪರದೇಶದವೇ ಹಾಗಾದರೆ ಇಲ್ಲಿ ನಿಲ್ಲಲು ಸಮಾಧಾನವಾಗದು. ಮುಂದಕ್ಕೆ ಹೋಗುವಾ ಅಲ್ಲಿ **ಕೊಂಚ ಗೋಣನ್ನು** ಮೇಲೆತ್ತುತ್ತಿದ್ದರೆ, ಬೀದಿಯಲ್ಲಿಯ ದೀಪಸ್ತಂಭವು **ಕಣ್ಣಿಗೆ** ಬಿದ್ದಿತು. ಅದೇನು? ಅದನ್ನಂತೂ ಕೇಳುವದೇ ಬೇಡ. ಕಣ್ಣಿಗೆ ಗ್ಯಾಸಬತ್ತಿಯು ಎಷ್ಟು ಸುಂದರವೋ ಅದರ ೧೦ ರಷ್ಟು ಹೆಚ್ಚು ವೇದನವು ಮನದಲ್ಲಿ! ಯಾಕಂದರೆ ಅದು ಸಂಪೂರ್ಣವಾಗಿ ನಮ್ಮ ಹಣವನ್ನೆಲ್ಲ ಪರದೇಶಕ್ಕೆ ಒಳೆದೊಯ್ಯುವದು. ಆ ಸಂದಿಯಲ್ಲಿದ್ದ ಸಣ್ಣ ಟೀಪಸ್ತಂಭದಲ್ಲಿ ಸಹ ಪರದೇಶದ ಲಂಪವು! ಇಲ್ಲಿಯೂ ಸಮಾಧಾನವಿಲ್ಲ. ಮುಂದೆ ಸಾಗಿದರೆ ವಿದ್ಯುದ್ದೀಪಗಳುಳ್ಳ ಸಿನೆಮಾ! ಇಲ್ಲಿಯಂತೂ ನೂರಾರು ಜೇಳುಗಳು! ಅಂಗಡಿಗಳಲ್ಲಿ ಸಹಸ್ರಾವಧಿ ಸಾಮಾನುಗಳು ತುಂಬಿವೆ. ಇನ್ನು ಮುಂದಕ್ಕೆ ಹೋದರೆ ಎರಡೂ ಬದಿಯಲ್ಲಿರುವ ಅಂಗಡಿಗಳು ಅಂತೆಯೇ ಇಲ್ಲಿ ಸಹಸ್ರಾವಧಿ ಜೇಳುಗಳು!! ಬಟ್ಟೆಗಳಂತೂ! ಪ್ರತಿಯೊಂದು ಅಂಗಡಿಯಲ್ಲಿಯೂ ಸಹಸ್ರಾವಧಿ ತೊಲಗಳು!!! ಛೆ! ಸಹಿಸೆನು! ಸಹಿಸೆನು! ಈ ವೇದನವನ್ನು ಸಹಿಸೆನು!! ಸಹಿಸದಿದ್ದರೆ. ಸಹಿಸು ಮಂತ್ರವನ್ನು ಪಠಿಸು. ನಿಶ್ಚಯವಾಗಿ ಸಮಾಧಾನವಾಗುವದು.

सर्वं परवशं दुःखम् । सर्वमात्मवशं सुखम् ॥

ಚಿತ್ತದಲ್ಲಿ ಶಾಂತಿಯಿಲ್ಲ. ದೇಹದಲ್ಲಿ ಶಾಂತಿಯಿಲ್ಲ. ಮನೆಯಲ್ಲಿ ಶಾಂತಿಯಿಲ್ಲ. ಮನೆಯ ಹೊರಗೆ ಶಾಂತಿಯಿಲ್ಲ!! ಅಯ್ಯೋ ಇದೆಂಥ ಸ್ಥಿತಿಯು? ನನ್ನ ಮನೆಯಲ್ಲಿ ನನ್ನ ಊರಲ್ಲಿ ನನಗೆ ಶಾಂತಿಯಿಲ್ಲ! ಈಗೇನು ಮಾಡಲಿ? ಹೇಗೆ ಸಮಾಧಾನವಾದೀತು? ತೀರ್ಥಯಾತ್ರೆಗಳಿಗಾದರೂ ಹೋಗುವಾ. ಅಲ್ಲಿ ದೇವರು ಸಮಾಧಾನ ಕೊಡುವನು. ಇಲ್ಲಿಂದ ಸ್ಟೇಶನ್ ದೂರಿದೆ! ೧ ಮೈಲಿದೆ!! ನಡೆದು ಹೋಗುವದು ಹೇಗೆ? ಅದೋ ಟಾಂಗೆಯು (ಝಟಕಾ) ಬಂದಿತು. ಮನೆಗಾದರೂ ಏತಕ್ಕೆ ಹೋಗುವದು? ಹೀಗೇ ಸಂಚಾರಕ್ಕೆ ಹೊರಡುವಾ. ಟಾಂಗೆಯಲ್ಲಿ ಕುಳಿತೆನು! ಅದೋ ಜೇಳು! ಇಲ್ಲಿಯೂ ಜೇಳು! ನಾನು ಕುಳಿತಿದ್ದ ಗಾಡಿಯ ಅರಿವೆಯಲ್ಲಿಯದು? ಆ ಕುದುರೆಯ ಸಾಮಾನುಗಳು ಎಲ್ಲಿಯವು? ಇದೇನು ರಬ್ಬರ ಟಾಯರ ಅದೆಯಲ್ಲ! ಅದೆಲ್ಲಿಯದು? ಏನಿದೂ ಎಂಥವ ಕಠೋರ ವೇದನೆಯಿದು? ಎಲ್ಲಿ ನಿಂತರೂ, ಕುಳಿತರೂ ಅಡಿಗಡಿಗೆ ಈ ಭೂತವು ನನ್ನನ್ನು ಬಿಡಲೊಲ್ಲದು! ಇರಲಿ ಮನಸ್ಸನ್ನು ಗಟ್ಟಿ ಹಿಡಿದು ಸ್ಟೇಶನಕ್ಕೆ ಹೋಗುವ ಅದೋ! ಅಲ್ಲಿ ಚಹದ ಅಂಗಡಿ ಇಲ್ಲಿ ಬಿ.ಶಾಪು! ಮತ್ತು ಆ ಪರಿ ಪರದೇಶದ ಸಾಮಾನುಗಳೇ! ಉಗಿಬಂಡಿಯಲ್ಲಿ ಕುಳಿತೇನು. ಸಂಪೂರ್ಣ ವೇದನೆಯು! ಇಲ್ಲಿ ಹೇಳಿದ ಪ್ರಸಂಗವಿಲ್ಲ! ಹಾಸಿನ ಹೊದಕವು! ಏನು ರೇಲ್ವೆಯ ಪ್ರಭಾವವಿದು! ಇರಲಿ. ನನ್ನ ಸುತ್ತಲೂ ಕುಳಿತ ನನ್ನ ಬಾಂಧವರನ್ನು ಕಂಡಾದರೂ ಸಂತೋಷ ಪಡಬೇಕೆಂದು ಕಲ್ಪಿಸಿದರೆ, ಆ ಕಲ್ಪನಾ ಚದುರೆಯು ಕೂಡ ದೂರಕ್ಕೆ ಓಡುತ್ತ ನನ್ನನ್ನು ಹಂಗಿಸಿ, ಘಾಟಸರ್ಪದಂತೆ ವಿಷಕಾರುತ್ತಿರುವಳು! ಏನು ನನ್ನ ಬಾಂಧವರು! ಏನು ಅವರ ವೇಷ! ಇವರ ರಕ್ತದಿಂದ ಹುಟ್ಟಿದವರೇ ಇವರು! ಇದೋ ನೋಡಿ. ನನ್ನ ಮುಂದಿನಲ್ಲಿ ಕುಳಿತವನು ಹಿಂದೂ ದೇಶಭಕ್ತರಂತೆ! ಹಿಂದುಸ್ಥಾನದ ಉದ್ಧಾರ ಮಾಡುವ ಮಹಾತ್ಮಾ ಬ್ರಾಹ್ಮಣರಂತೆ ಸ್ವದೇಶದಲ್ಲಿ ಆ ಹರಿ ಅಂಗಿಯಲ್ಲಿ ಹಸ ಕುಡಿಸು ಬಂದು. ಅಗ್ಗಿ ಕೈಯಲ್ಲಿ ಕಡ್ಡಿಯನ್ನು ಹಿಡಿದು, ತನ್ನ ಜೊತೆಗಾರನಾದ ಓರ್ವ ಬಂಧುವನ್ನು ಹಳಿಯುತ್ತ, ತನ್ನ ಮಿತ್ರರ ಸಂಗಡ ದೇಶ ಸುಧಾರಿಸಬೇಕಾದ ಪರಟೆ ಬಡಿಯುತ್ತಿರುವನು! ಇಂಥ ಶಿಥಿಲ ಸ್ವಭಾವದವರಿಗೆ ಪಾಪಾತ್ಮನಾದವನು ದೇಶೋದ್ಧಾರಕನು! ಮುಂದಾಳು ಮೇಲಾಗಿ ಬ್ರಾಹ್ಮಣನು!! ಇವನ ಸುತ್ತಲು ಗಾಡಿಯಲ್ಲಿ ಕುಳಿತವರು ಈ ಮುಂದಾಳುವಿನ ಕೃತಿಗೆ ಮನಸೋತು, ಇವನ ಅನುಯಾಯಿಗಳಾಗಬೇಕು ಎಂದು; ಅವರೂ ಈ ಮುಂದಾಳುಗಳ ವ್ಯಾಖ್ಯಾನಗಳನ್ನು ಕೇಳುತ್ತ, ಪರದೇಶಿಯ ವಸ್ತ್ರಗಳನ್ನು ಧರಿಸುತ್ತ ಶಿಥಿಲ ವೃತ್ತಿಗೆ ಆಸ್ಪದವನ್ನು ಹೆಚ್ಚಿಸುತ್ತ ದೇಶಸೇವೆಯ ಹಿಡಿಯುತ್ತಿರುವರು! ನೋಡಿ ನಮ್ಮ ಬಾಂಧವರ ಮೇಲೆ ದೇಶಭಕ್ತರ ಪರಿಣಾಮವೆಷ್ಟಾಗಿದೆ? ಮಹಾತ್ಮರ ಅಸಹಕಾರ ಚಳವಳಿಯು ಪ್ರಾರಂಭವಾದ ಈ ಪರವಶವಾಗಿದ್ದ ಭರತ ಖಂಡವು ಈ ದೇಶಭಕ್ತರ ಪ್ರಯತ್ನಗಳಿಂದ ನಿಶ್ಚಯವಾಗಿ ಉದ್ಧಾರ ಮಾರ್ಗವನ್ನು ಹಿಡಿಯುವದೆಂದು ನಾನು ನಂಬಿದೆನು. ಆದರೆ ಪರವಶಂ ದುಃಖಂ! ದೇಶಭಕ್ತರೇ 'ಪರವಶಂ' ಆಗಿರಲು, 'ಪರವಶಂ ದುಃಖಂ' **ಭೂತವು** ಅದು ಹೇಗೆ, ನನ್ನನ್ನು ಬಿಟ್ಟೀತು? ಬಿಡುವದಿಲ್ಲ. ಈ **ಭೂತವು** ನನ್ನನ್ನು ಕೂಡಲೇ ಬಿಡುವಂತೆ ಕಾಣುವದಿಲ್ಲ. ಪಠಿಸುವೆನು. ಕಣ್ಣು ಮುಚ್ಚಿ ಮಂತ್ರವನ್ನು ಪಠಿಸುವೆನು ಅದರಲ್ಲಿಯ ಅರ್ಥವನ್ನು ತತ್ತ್ವವನ್ನು ತಿಳಿದುಕೊಳ್ಳಲು ಪ್ರಯತ್ನಿಸುವೆನು

सर्वं परवशं दुःखम् । सर्वमात्मवशं सुखम् ॥

(ಮುಂದೆ ಸಾಗುವದು)

ಕಾರವಾರವು ಕರ್ನಾಟಕದ ರಾಜಧಾನಿಯಾಗಿದ್ದರೆ!

'ದಾಕೆ' ಮುಂಬೈ ಇಲ್ಲವೇನಿಗ ನಮ್ಮ ರಾಜಧಾನಿ? ಎಂದು ಉತ್ತರ ಕರ್ನಾಟಕದವರೂ, 'ಮದ್ರಾಸ ಇಲ್ಲವೇನು ಮುಖ್ಯ ಪಟ್ಟಣ!' ಎಂದುಳಿದ ಭಾಗದವರೂ ಕೆಲವರು ಕೇಳ ಬಹುದಲ್ಲವೇ?

ನಾವು ಕನ್ನಡಿಗರು ಬಹು ಉದಾರಕರು. ನಮ್ಮ ಉದಾರ ಪರೋಪಕಾರದ ಕಲ್ಪನೆಗಳಿಗೆ ಸಾಟಿ ಬೇರೆ ಕಡೆಯಲ್ಲೆಲ್ಲೂ ದೊರೆಯುವುದೇ ಅಸಂಭವ. ತನ್ನ ಮಕ್ಕಳ ಪರಿವೆಯಿಲ್ಲದಿದ್ದರೂ ಮಂದಿ ಮಕ್ಕಳಲ್ಲಿ ಬಲುಜೀವ! ಇದೇನು ದುರ್ಗುಣವೇ? ಪರಾರ್ಥ ಮಾಡುವ ಮುಪ್ಪಿನಲ್ಲಿ ಬಿದ್ದಿರುವ ನಮ್ಮವರಿವೆ ಸ್ವಂತದ ಮನೆಯ ಚಿಂತೆ ತಪ್ಪಿ ಬಿಟ್ಟಿದೆ. ಇಂತು ಕನ್ನಡಿಗರು ನಿಶ್ಚಿಂತಪುರುಷರಾಗಿ ತಣ್ಣಗೆ ಕುಳಿತಿರುವಾಗ ಅವರೆದುರಿಗೀಗ **ಕಾರವಾರವು ಕರ್ನಾಟಕದ ರಾಜಧಾನಿಯಾಗಿದ್ದರೆ?** ಎಂಬ ನಿರರ್ಥಕ ವಿಚಾರವನ್ನು ತಂದರೆ ಯಾವ ಕನ್ನಡಿಗನಿಗೆ ತನ್ನ ಶಾಂತಿಭಂಗ ಮಾಡಿದ ಬಗ್ಗೆ ಸಿಟ್ಟು ಉಂಟಾಗಲಿಕ್ಕಿಲ್ಲ?

ಕಾರವಾರವೆಂದರೆ ಕಾರವಾರವೇ ಅಲ್ಲ ಬೇರೆ ಯಾವ ಕರ್ನಾಟಕದ ಒಳ್ಳೇ ಬಂದರವಾಗಲೀ ನಮ್ಮ ರಾಜಧಾನಿಯಾಗಿಲ್ಲ! ಒಂದು

(೬ ನೇ ಪುಟದ ಮೇಲೆ ನೋಡು.)

ಕನ್ನಡ ನಾಡಿನ ಕಳಕಳಿಯಿದ್ದವರು 'ಕನ್ನಡಿಗ'ನನ್ನು ಸ್ವೀಕರಿಸಬೇಕು ಅವನನ್ನು ಪ್ರೋತ್ಸಾಹಿಸಲೇಬೇಕು !

"ಕನ್ನಡಿಗ"

ಅಂಗನಾಮಣಿಯು ಮೇಣ್ ಶೃಂಗಾರಭೂಷಿತೆಯು
ಮಂಗಳಾಂಗಿಯು ಕೇಳ್ ಕರ್ನಾಟಕಾಂಬೆಯು
ಶೃಂಗಾರ ಮಾಗಿರುವ ಕೋಟೆಕೊತ್ತಲದಿಂದ ಪೇಟೆಗಳ ಸಾಲ್ಗಳಿಂದಾ
ಕಂಗೊಳಿಪ ಬಾಗಲಕೋಟೆಯೊಳು ನವವರುಷ
ದಾಗ ಚೈತ್ರಮಾಸ ಬುಧವಾರ ಪಾಡ್ಯದೊಳು
ಬಂಗಾರದಂತೆಸೆವ ಸೋರ್ವ ಸುತನಂಪೆತ್ತಳ್ಪರ ಯುಗಾದಿಯ ದಿನ ದೊಳು ೧

ಕನ್ನಡಿಗರೇ! ಕೇಳಿ ಕನ್ನಡಾಂಬೆಯು ಇಂದು
ಕನ್ನಡಿಗನೆಂಬೊರ್ವ ಸುತನನ್ನು ಪಡೆದಿಹಳು
ಸನ್ನುತ ಗುಣೋದಯಂ ದಿನದಿನಂಪೋಲುತಿಹ ನನುಪಮನು ಕನ್ನಡಿಗನೂ .
ಕನ್ನಡಾಂಬೆಯ ಸುತರೊಳತಿ ಮುದ್ದುಮಗನಿವನು
ಹುಣ್ಣಿಮಾರುತಿಯ ನಾನೆತ್ತಿ ಬೆಳಗುವೆನಿವಗೆ
ಇನ್ನು ತಡವೇಕೆ ಸ್ವಾಗತವೀಯುಲತಿಜವದಿ ಬನ್ನಿರೈ ಕನ್ನಡಿಗರೇ ೨.

ಚೆಲ್ವಶಿಶು 'ಕನ್ನಡಿಗ' ಕಮಲಲೋಚನನೀತ !
ಪಲ್ಲವಂತಿಹವಧರನಸುಗೆಂಪಿನಂತಿಹುದು
ಬಿಲ್ಲಪೋಲುವ ಹುಬ್ಬು ನಗೆ ಮುಖವು ಹುಣ್ಣಿಮೆಯ ಪೂರ್ಣಚಂದ್ರಂಗೆ ಮಿಗಿಲೂ .
ಗಲ್ಲವದು ಬಹುರಮ್ಯ ಮೊಗ್ಗೆ ಸಂಪಿಗೆ ಮೂಗು
ಚೆಲ್ವಹಣೆ ಮೆಲ್ಲ ಬಾಯ ತೊದಲ್ನುಡಿಗಳಿಂದ
ಎಲ್ಲರನೆ ರಂಜಿಸಲು ಪುಟ್ಟಿರುವ ಬಾಲಶಿವ ಚಿರಕಾಲ ಮೆರೆದೆಸಗಲಿ ೩

ಟಿ. ಎ. ಕೃ[illegible]

ಕರ್ನಾಟಕ ಏಕೀಕರಣ.

ಇದರ ವಿಚಾರವು ಉತ್ತರ ಕರ್ನಾಟಕದ ಮುಂಬಯಿಯವರ ದೃಕ್ಪಥದಲ್ಲಿ [illegible] ೨೦-ವರ್ಷಗಳಿಗೆ ಹಿಂದೆಯೇ ಬಿತ್ತೆಂದು ಹೇಳಬಹುದು. ಒಂದೇ ಭಾಷೆಯನ್ನಾಡುವುದರಿಂದ ಭಾರತೀಯರಲ್ಲಿ ಕರ್ನಾಟಕದವರೊಂದು ಉಪಜಾಂಗದವರು. ಆದರೆ ಈ ಧ್ಯೇಯವು ಕೇವಲ ಭಾವನಾಪ್ರಪಂಚಕ್ಕೆ ಸೇರಿದುದಾಗಿತ್ತು. ರಾಜಕೀಯ ದೃಷ್ಟಿಯಿಂದ ಭಾಷೆಗಳಿಗನುಸಾರವಾಗಿ ಪ್ರಾಂತಗಳ ವಿಭಾಗವಾಗಬೇಕೆಂಬ ಮತವು ಒರಿಸಾ ಮತ್ತು ಆಂಧ್ರರ ಪ್ರಯತ್ನಗಳಿಂದ ಅನುಷ್ಠಾನದಲ್ಲಿಯೂ ಬರುವ ಪ್ರಸಂಗ ಬಂದೊದಗಿತು. ಮಾಂಟ್ಫರ್ಡ್ ವರದಿಯಲ್ಲಿ ಈ ಮತವು ಸ್ವೀಕರಿಸಲ್ಪಟ್ಟಿತು. ಒರಿಯಾ ಪ್ರಾಂತರಚನೆ ವಿಚಾರವಾಗಿ ಸರಕಾರದವರೇ ಪ್ರಯತ್ನಗಳು ನಡೆಸಿದ್ದಾರೆ. ಆಂಧ್ರರಿಗೆ ಒಂದು ಸ್ವತಂತ್ರ ವಿಶ್ವವಿದ್ಯಾಲಯವೂ [illegible] ಪಟ್ಟಣವೂ ಸ್ವಲ್ಪಕಾಲದಲ್ಲಿಯೇ ಒದಗುವಂತಿದೆ. ಆದರೆ ನಮ್ಮ ಕರ್ನಾಟಕ ಪ್ರಾಂತದ ವಿಚಾರಮಾತ್ರ ಇನ್ನೂ ಭಾವನಾಪ್ರಪಂಚದಲ್ಲಿಯೇ ಉಳಿದಿರುವುದೆಂದು ಹೇಳಬೇಕಾಗಿದೆ.

ಬೆಳಗಾಂವಿ ಕಾಂಗ್ರೆಸ್ ಸಮಯದಲ್ಲಿ ಕರ್ನಾಟಕ ಏಕೀಕರಣ ಸಭೆಯೊಂದನ್ನು ಸ್ಥಾಪಿಸಿದ್ದು ಈ ಪ್ರಯತ್ನಕ್ಕೆ ದೊಡ್ಡ ಹಗ್ಗುರುತಾಗಿದೆ. ಮತ್ತೆ ಬೆಳಗಾಂವಿಯಲ್ಲಿಯೇ ಸಾಹಿತ್ಯ ಸಮ್ಮೇಲನದ ವೇಳೆಗೆ ಈ ಸಭೆಯು ಕಾರ್ಯಕಾರೀ ಮಂಡಲದ ಅಧಿವೇಶನದಲ್ಲಿ ಪ್ರಾಂತರಚನೆಯ ಸಲುವಾಗಿ ಎಲ್ಲ ವಿಚಾರಗಳನ್ನು ಪರಿಶೀಲಿಸಿ ಒಂದು ವರದಿಯನ್ನು ೩೧ ನೇ ಅಕ್ಟೋಬರ ತಿಂಗಳೊಳಗಾಗಿ ಸಿದ್ಧಪಡಿಸಲು ಸಮರ್ಥರಾದ ಸದಸ್ಯರನ್ನೊಳಗೊಂಡ ಒಂದು ಉಪಸಭೆಯನ್ನು ನಿರ್ಮಿಸಿದ್ದು ಏಕೀಕರಣದ ಕಡೆಗೆ ಒಂದು ಹೆಜ್ಜೆಯನ್ನಿಟ್ಟಂತೆಯೇ ಸರಿ.

ರಾಜಕೀಯ ದೃಷ್ಟಿಯಿಂದ ಕರ್ನಾಟಕದ ಏಕೀಕರಣವಾಗಬೇಕಾದರೆ ಬಹಳ ಪ್ರತಿಬಂಧಕಗಳಿವೆ. ಈಗ ಕ. ಏ. ಸಭೆಯವರು ಕೈಕೊಂಡಿರುವ ಕೆಲಸವು ಬಹು ಪ್ರಯಾಸವಾದುದು. ಭಿನ್ನವಾಗಿ ಬೇರೆ ಬ್ರಿಟಿಷ್ ಆಡಳಿತಕ್ಕೊಳಪಟ್ಟಿರುವ ನಾಡುಗಳನ್ನೊಟ್ಟುಗೂಡಿಸುವುದಷ್ಟೇನು ಕಷ್ಟವಲ್ಲ. ಆದರೆ ನಮ್ಮ ಭಾವೀ ಕರ್ನಾಟಕ ಪ್ರಾಂತದಲ್ಲಿ ಸೇರುವ ದೇಶೀಯ ಸಂಸ್ಥಾನಗಳನ್ನೂ ಕರ್ನಾಟಕಕ್ಕೆ ಸೇರಿಸುವ ಪ್ರಶ್ನೆಯು ಕಠಿಣವಾದದ್ದು. ಈ ಸಂಸ್ಥಾನಗಳಲ್ಲಿ ಮೈಸೂರಿನಂತೆ ಕೆಲವು ಸಂಪೂರ್ಣವಾಗಿ ಕರ್ನಾಟಕವಾಗಿರುವುವು. ಕೆಲವು ಹೈದರಾಬಾದಾ, ಸಾಂಗ್ಲಿ, ಕೊಲ್ಹಾಪುರದಂತೆ ಕನ್ನಡಪ್ರಜೆಗಳಿರುವ ನಾಡನ್ನು ಆಕ್ರಮಿಸಿದ ಸಂಸ್ಥಾನಗಳೂ ಉಂಟು. ಸೊಂಡೂರಂತೆ ಅಚ್ಚಕನ್ನಡನಾಡಿನಲ್ಲಿಯೇ ಮರಾಠಿ ಪ್ರಭುಗಳ ಆಡಳಿತಕ್ಕೆ ಒಳಪಟ್ಟನಾಡುಗಳೂ ಉಂಟು. ಇದಲ್ಲದೆ ಸ್ವಾತಂತ್ರ್ಯವನ್ನನುಭವಿಸುತ್ತ ಬಂದಿರುವ ಹೈದರಾಬಾದ್, ಮೈಸೂರು ಸಂಸ್ಥಾನಗಳನ್ನು ಕರ್ನಾಟಕ ಪ್ರಾಂತದಲ್ಲಿ ಸೇರಿಸುವುದು ಹೇಗೆಂಬ ದೊಡ್ಡ ಪ್ರಶ್ನೆಯೂ ಇರುವುದು.

ಆದರೆ ಇಷ್ಟು ರಾಜಕೀಯ ಸಿಕ್ಕುಗಳನ್ನು ಬಿಡಿಸುವ ಪ್ರಯತ್ನವೇತಕ್ಕೆ. ಈಗಿರುವಂತೆಯೇ ಸಂಸ್ಥಾನಗಳು ತಮ್ಮ ತಮ್ಮ ಸರಕಾರದ ವ್ಯವಸ್ಥೆಯನ್ನು ಮಾಡುತ್ತ ಹೋಗಲಿ. ಬ್ರಿಟಿಷ್ ಕರ್ನಾಟಕವನ್ನು ಮಾತ್ರ ಒಟ್ಟುಗೂಡಿಸುವ ಆಲೋಚನೆಯನ್ನು ಮಾಡಿದರೆ ಸಾಕೆಂದು ಕೆಲವರು ಆಕ್ಷೇಪಿಸಬಹುದು. ಆದರೆ ದೇಶೀಯ ಸಂಸ್ಥಾನಗಳನ್ನು ಬಿಟ್ಟುಬಿಡುವುದು ಸಮರ್ಪಕವಾದದ್ದಲ್ಲ. ಇದಕ್ಕೆ ಎರಡು ಕಾರಣಗಳುಂಟು. ಮೊದಲನೆಯ ಕಾರಣವೇನೆಂದರೆ, ಕರ್ನಾಟಕದಲ್ಲಿ ದೇಶೀಯ ಸಂಸ್ಥಾನಗಳನ್ನು ಬಿಟ್ಟರೆ ಒಂದರಲ್ಲಿ ಸುಮಾರು ಅರ್ಧ ಭಾಗವನ್ನು ಬಿಟ್ಟಂತೆ ಆಗುವುದು. ಜನಜೀವನದಲ್ಲಿ ಅಂದರೆ ನಿತ್ಯ ವ್ಯವಹಾರದಲ್ಲಿ ಎಲ್ಲ ಕರ್ನಾಟಕದಲ್ಲೂ ಒಂದೇ ಬಗೆಯ ಜೀವನವಾಗಲಿ, ವ್ಯವಹಾರವಾಗಲಿ ಉಂಟಾಗಲಿಲ್ಲ. ಅಂದರೆ ವ್ಯಾಪಾರ, ವಾಣಿಜ್ಯವ್ಯಾಪನ, ಪ್ರವಾಸಸೌಕರ್ಯ, ಸಂಪದಭಿವೃದ್ಧಿ, ಶಿಕ್ಷಣಪ್ರಸಾರ ಇತ್ಯಾದಿ ವಿಚಾರಗಳಲ್ಲೆಲ್ಲ ಭಿನ್ನತೆಯೇ ಉಳಿಯುತ್ತಿದ್ದರೆ ಕರ್ನಾಟಕದ ಏಕೀಕರಣಕ್ಕೆ ಅರ್ಥವಿಲ್ಲ

ಇದಿಷ್ಟು ಕೇವಲ ವ್ಯವಹಾರ ದೃಷ್ಟಿಯ ಮಾತಾಯಿತು. ಇದ್ದಕ್ಕಿಂತಲೂ ಅಮೂಲ್ಯವಾದ ವಾಙ್ಮಯ, ಲಲಿತಕಲೆ ಇತ್ಯಾದಿ ಸಂಸ್ಕೃತಿಯ ದೃಷ್ಟಿಯಿಂದಲೂ ಈ ಭಿನ್ನತೆಯು ಕರ್ನಾಟಕದ "ಏಕದೇಹನ್ಯಾಯ" ವೆಂಬ ಆದರ್ಶಕ್ಕೆ ಭಂಗವನ್ನುಂಟುಮಾಡುತ್ತದೆ.

ಬ್ರಿಟಿಷ್ ಮತ್ತು ಸಂಸ್ಥಾನ ಕರ್ನಾಟಕಗಳನ್ನು ಒಂದುಗೂಡಿಸುವೆವೆಂದ ಮಾತ್ರಕ್ಕೆ ಕರ್ನಾಟಕದ ಒಂದೊಂದು ಅಂಗಗಳಾಗಿ ಇರುವ ಈ ಭಾಗಗಳ ವೈಶಿಷ್ಟ್ಯಗಳಾವುದಕ್ಕೂ ಕುಂದು ವುಂಟಾಗಬೇಕಾಗಿಲ್ಲ. ಸಂಸ್ಥಾನ ಕರ್ನಾಟಕಗಳ ಸ್ವಾತಂತ್ರ್ಯವಾಗಲಿ, ಆ ಸಂಸ್ಥಾನಾಧಿಪತಿಗಳು ಅನುಭವಿಸುತ್ತಿರುವ ಹಕ್ಕುಬಾಧ್ಯತೆ, ಯಶಸ್ಸುಗೌರವವು ಇವುಗಳಾಗಲಿ ಯಾವುದೂ ಕಡಮೆಯಾಗಬೇಕಾಗಿಲ್ಲ. ಈಗಿರುವಂತೆಯೇ ಸಂಸ್ಥಾನಗಳ ವ್ಯಕ್ತಿತ್ವವನ್ನೂ, ಸ್ವಾತಂತ್ರ್ಯವನ್ನೂ ಉಳಿಸಿ, ಅಖಿಲ ಕರ್ನಾಟಕವನ್ನು ಏಕದೇಹಿಯನ್ನಾಗಿ ಮಾಡಿ ಅದನ್ನು ಯಶಸ್ವಿಯನ್ನಾಗಿ ಮಾಡುವದು ಅಶಕ್ಯವಾದ ಪ್ರಶ್ನೆಯಲ್ಲ. ಇದುವರೆಗೂ ಎಲ್ಲರೂ ಭಾವಪ್ರಪಂಚದಲ್ಲಿ ನಾವಿದ್ದು, ಸವಿಕನಸನ್ನು ಮಾತ್ರ ಕಾಣುತ್ತಿರುವರು

ಚಂದಾ, ಅಂಚೆ ಸಹಿತ ೧॥— ಮಾತ್ರ! ಈ ಅಗ್ಗದ ಚಂದಾ ನಿಮಗೆ ಭಾರವಾಗದು!!

ಈಗ ಆ ಕನಸಿಗೆ ಅನುಗುಣವಾಗಿ ಕನ್ನಡಿಗರು ಕಾರ್ಯಕ್ಷೇತ್ರವನ್ನು ಹೊಕ್ಕು ಕರ್ನಾಟಕಕ್ಕೆ ಒಂದು ರೂಪವನ್ನು ಕೊಡಲು ಪ್ರಯತ್ನ ಮಾಡಬೇಕು

ಭಾಷಾದೃಷ್ಟಿಯಿಂದಲೇ ಭರತಖಂಡದಲ್ಲೆಲ್ಲಾ ಪ್ರಾಂತರಚನೆಯಾಗಬೇಕೆಂಬ ತತ್ವವು ಎಲ್ಲರಿಂದಲೂ ಅಂಗೀಕೃತವಾಗಿದೆ. ಕರ್ನಾಟಕದ ಏಕೀಕರಣ ಉದ್ಯಮದಲ್ಲಿ ರಾಜಕೀಯ ದೃಷ್ಟಿಯಿಂದ ಪ್ರಾಂತರಚನೆಯು ಎಷ್ಟು ಕಷ್ಟತರವಾದುದೆಂಬದನ್ನು ಸೂಚಿಸಿರುವೆವು. ಇಂತಹ ಕಷ್ಟಗಳನ್ನೆಲ್ಲ ಗೆದ್ದು, ಸಮಸ್ಯೆಗಳನ್ನೆಲ್ಲ ಸಮರ್ಪಕವಾಗಿ ಪೂರ್ತಿಮಾಡಿ, ಉಪಸಭೆಯವರು ಸಮರ್ಪಕವಾದ ಅನುಕರಣಕ್ಕೆ ಅನುಕೂಲವಾದ ಒಂದು ವರದಿಯನ್ನು ಒಪ್ಪಿಸಿದ್ದೇ ಆದರೆ ಕರ್ನಾಟಕಕ್ಕೆ ಮಾತ್ರವೇ ಅಲ್ಲ ಅಖಿಲ ಭರತಖಂಡಕ್ಕೆ ಒಂದು ಸೇವೆ ಮಾಡಿದಂತಾಯಿತೆಂದು ನಮ್ಮ ಭಾವನೆ. ವೈಕುಂಠ ಕ್ರಾನಿಕಲ್.

ಧಾರವಾಡ ಜಿಲ್ಲೆಯ ಬ್ರಾಹ್ಮಣಸಭೆ

[ಬರೆದು ಬಂದದ್ದು.]

ಧಾರವಾಡದಲ್ಲಿ ಜರಗಿದ ಬ್ರಾಹ್ಮಣ ಸಮಾಜದ ಪ್ರಥಮ ಅಧಿವೇಶನವು ಅಪೂರ್ವವಾದದ್ದಾದರೂ ಸಕಾಲಿಕವೆಂದು ಹೇಳಬಹುದು. ಯಾಕೆಂದರೆ ಬ್ರಾಹ್ಮಣ ಸಮಾಜದ ಅವನತಿಯು ಸರ್ವತೋಮುಖವಾಗಿ ಆಗುತ್ತಿದ್ದದ್ದು ನಿರ್ವಿವಾದ ವಾದಮಾತು; ಕ್ರಮಕ್ರಮವಾಗಿ ಆಗುತ್ತಿರುವ ಈ ಬ್ರಾಹ್ಮಣ ಸಮಾಜದ ಅಧಃಪತನದಿಂದ ಕೇವಲ ಬ್ರಾಹ್ಮಣ ಸಮಾಜಕ್ಕೇ ಏಕೆ. ಅಖಿಲ ಹಿಂದೂ ಸಮಾಜಕ್ಕೆ ಸಹಿತ ತುಂಬ ಹಾನಿಯುಂಟಾಗ ಹತ್ತಿರುತ್ತದೆ, ಇದರಿಂದ ದೇಶದಲ್ಲಿ ಅಂತಃಕಲಹವೂ ಅಸಂತೋಷವೂ ಪಸರಿಸ ಹತ್ತಿದ್ದು ಸಮಾಜಪುರುಷನ ಸರ್ವಾಂಗಗಳೆಲ್ಲ ಬಿಲವಾಗ ಹತ್ತಿರುತ್ತವೆ. ಹಿಂದೂ ಜನರಿಗೆ ರೋಗದಂತೆ ಅಂಟಿಕೊಂಡಿರುವ ಜಾತಿ ಜಾತಿಗಳಲ್ಲಿರುವ ವೈಮನಸ್ಸನ್ನು ದೂರಮಾಡಿ ಸರ್ವಾಂಗ ಪರಿಪೂರ್ಣವಾದ ಸಮಾಜವನ್ನುಂಟು ಮಾಡುವದು ಮುಂದುವರೆದವರೆನಿಸಿಕೊಳ್ಳುವ ಬ್ರಾಹ್ಮಣರ ಆದ್ಯಕರ್ತವ್ಯವಾಗಿರುತ್ತದೆ. ಇಷ್ಟೆಲ್ಲ ಒಳ್ಳೇದಾಯಿತು. ಆದರೆ ಸ್ವತಃ ಸುಶಿಕ್ಷಿತರೆನಿಸಿಕೊಳ್ಳುವ ಬ್ರಾಹ್ಮಣರಲ್ಲಿ ಪರಸ್ಪರ ಸಹಕಾರವೂ ಐಕ್ಯವೂ ಎಲ್ಲಿ ಅದೆ! ಆದುದರಿಂದ ಕೀರ್ತಿಶೇಷರಾದ ತ್ಯಾಗರಾಜ ಚಟ್ಟಿಯವರು ಅನ್ನುವಂತೆ ತಾವು ಸುಧಾರಿಸಿದವರೆಂದು ಜಂಬ ಬಡಿಯುವ ಬ್ರಾಹ್ಮಣರಲ್ಲಿ ಬ್ರಾಹ್ಮಣೇತರ ಸಮಾಜಕ್ಕಿಂತ ಸುಧಾರಣೆಯು ಹೆಚ್ಚು ಅವಶ್ಯವಿರುತ್ತದೆ. ಒಂದು ರೀತಿ ನೋಡಿದರೆ, ಸರಕಾರದ ಚಾಕರಿಯೆಂಬ ಮೋಹಜಾಲದಲ್ಲಿ ಸಿಲ್ಕಿ ಕರ್ತವ್ಯ ಪರಾಙ್ಮುಖರಾದ ಬ್ರಾಹ್ಮಣರನ್ನು ಎಚ್ಚರಗೊಳಿಸಿ ಜಾಗೃತರನ್ನಾಗ ಮಾಡಿದ ಶ್ರೇಯಸ್ಸು ಬ್ರಾಹ್ಮಣೇತರ ಸಮಾಜಕ್ಕೆ ಸಲ್ಲತಕ್ಕದ್ದು. ಆದುದರಿಂದ ತಮ್ಮ ಕುಂದು ಕೊರತೆಗಳನ್ನು ಗೊತ್ತು ಹಚ್ಚಿ ಅವುಗಳನ್ನು ಹೊಗಲಾಡಿಸುವದಕ್ಕೆ ತದನಂತರ ಸಮಾಜದ ಪುರೋವೃದ್ಧಿಗೆ ಉಪಾಯಗಳನ್ನು ಯೋಜಿಸುವದಕ್ಕೆ ಧಾರವಾಡದ ಬ್ರಾಹ್ಮಣವೃಂದವು ಸಕಾಲವಾಗಿ ಸಭೆಗೂಡಿಸಿದ್ದು ಉತ್ತಮವಾದದ್ದೆಂದು ನಮಗಂತೂ ತೋರುತ್ತದೆ.

ಇನ್ನು ಧಾರವಾಡ ಬ್ರಾಹ್ಮಣ ಸಮಾಜದ ವಯೋವೃದ್ಧ ನಾಯಕರಾದ ಶ್ರೀಮನ್ ದೊಡ್ಡ ಶ್ರೀನಿವಾಸರಾಯರು ತಮ್ಮ ಸ್ವಾಗತ ಪರಭಾಷಣದಲ್ಲಿ ಹೇಳಿದಂತೆ ಬ್ರಾಹ್ಮಣ ಸಮಾಜವು ಸ್ವಾವಲಂಬನದ ಮಾರ್ಗವನ್ನು ಅವಶ್ಯವಾಗಿ ಹಿಡಿಯತಕ್ಕದ್ದು. ಈ ಸ್ವಾವಲಂಬನರೂಪವಾದ ಬಲವಾದ ಅಸ್ತಿವಾರದ ಮೇಲೆ ಕಟ್ಟಿದರೆ ಮಾತ್ರ ನಾಲ್ಕು ದಿವಸ ಸ್ಥಿರವಾಗಿ ಬ್ರಾಹ್ಮಣ ಸಮಾಜ ಮಂದಿರವು ನಿಲ್ಲಲಿಕ್ಕೆ ಮಾರ್ಗವಾಗುತ್ತದೆ. ಯಾಕೆಂದರೆ ಅರ್ವಾಚೀನ ಕಾಲದ ಬ್ರಾಹ್ಮಣರೆಂದರೆ ಪರಪುಷ್ಟರು ಮತ್ತು ಪರವಿತ್ತಾಪಹಾರ ಜೀವಿಗಳು ಎಂದು ಬಲವಾದ ಮತ್ತು ಬಹ್ವಂಶದಿಂದ ಸತ್ಯವಾದ ಅಪವಾದವು ಅವರ ಮೇಲೆ ಹೊರಿಸಲ್ಪಟ್ಟಿದೆ. ಈ ಅಪವಾದವು ಹೋಗಬೇಕಾದರೆ ಸ್ವಾವಲಂಬನವು ಅತ್ಯವಶ್ಯವೆಂದು ಬೇರೆ ಹೇಳಬೇಕಾಗಿಲ್ಲ.

ಬ್ರಾಹ್ಮಣರ ಆರ್ಥಿಕ ಸ್ಥಿತಿಯು ಸಮಾಧಾನಕಾರಕವಿದ್ದು ಅವರು ಆರ್ಥಿಕ ಉನ್ನತಿ ಮಾಡಿಕೊಳ್ಳುವದಾದರೆ ತಮ್ಮ ಸ್ವಾರ್ಥಪರಾಯಣತೆಯ ಗುಣವನ್ನು ಹೆಚ್ಚಿಸುವದೇ ಹೊರತು ಬೇರೆ ಏನೂ ಅಲ್ಲ, ಎಂದು ಕೆಲವರ ಆಕ್ಷೇಪಣೆ. ಇದು ಮತ್ಸರ ಗ್ರಸ್ತವಾದ ಪೊಳ್ಳು ಆರೋಪವು. ಬ್ರಾಹ್ಮಣರಿಗೆ ಸರಕಾರದ ಉದ್ಯೋಗದಲ್ಲಿ ಪ್ರವೇಶವಿರಬಾರದು, ಅವರು ಒಕ್ಕಲತನ, ವ್ಯಾಪಾರ ಇತ್ಯಾದಿ ಸ್ವಾವಲಂಬನ ಮಾರ್ಗವನ್ನು ಮಾಡಕೂಡದು, ಅಂದರೆ ಅವರ ಅಸ್ತಿತ್ವವೇ ಬೇಡೆನ್ನುವ ಹಾಗಾಗುತ್ತದೆ. ಪ್ರತಿಗ್ರಹ ಇತ್ಯಾದಿ ಸ್ವೀಕರಿಸಿ ಪರ ಪುಷ್ಟಜೀವಿಗಳೂ ಆಗಬಾರದು. 'ತಾಯಿಯು ಊಟಕ್ಕೆ ಹಾಕುವದಿಲ್ಲ. ತಂದೆಯನ್ನು ಬೇಡಗೊಡುವದಿಲ್ಲ' ಎಂದು ಮಹಾರಾಷ್ಟ್ರ ಭಾಷೆಯ ಗಾದೆಯ ವಿಷಯವಾದ ಮಗನ ಸ್ಥಿತಿಯು ಬ್ರಾಹ್ಮಣ ಸಮಾಜಕ್ಕೆ ಬರಬಹುದಲ್ಲವೇ? ಅವರ ಅಸ್ತಿತ್ವವೂ ಬೇಕು. ಅಂದರೆ ಈ ಪ್ರಶ್ನವನ್ನು ಬಿಡಿಸಲಿಕ್ಕೆ ದೈತ್ಯವೀರ ಹಿರಣ್ಯಕಶಿಪುವನ್ನು ಸಂಹರಿಸಿದ ಭಗವಾನ ನಾರಸಿಂಹನನ್ನು ನಾವು ಶರಣು ಹೋಗಬೇಕು. ಇದಲ್ಲದೆ ಸಮಾಜವು ಮಲಿತ ನೀರಿನಂತೆ ನಿಲ್ಲದೆ ಕಾಲಾನುಸಾರವಾಗಿ ಹೆಚ್ಚು ಕಡಿಮೆಯನ್ನು ಹೊಂದುವದು. ಅದರ ಸ್ವಾಭಾವಿಕ ಧರ್ಮವಾಗಿದೆ. ಈ ಬದಲಿದ ಪರಿಸ್ಥಿತಿಗನುಸಾರವಾಗಿ ಬ್ರಾಹ್ಮಣರು ತಮ್ಮ ಮೊದಲಿನ ಉಚ್ಚ ಧ್ಯೇಯಗಳನ್ನು ಇಟ್ಟುಕೊಂಡರೂ ಅವರು ತಮ್ಮ ವೃತ್ತಿಯನ್ನು ಮಾತ್ರ ಬದಲಿಸಲಿಕ್ಕೆಬೇಕು. ಈ ರೀತಿಯಿಂದಲಾದರೂ ಬ್ರಾಹ್ಮಣರು ಸ್ವಾವಲಂಬನ ಮಾರ್ಗವನ್ನು ಸ್ವೀಕರಿಸಿ ಆರ್ಥಿಕ ಉನ್ನತಿಗೆ ಲಕ್ಷ್ಯಕೊಟ್ಟು ಸಮಾಜದಲ್ಲಿ ಬೆಳೆದಿರುವ ತರುಣ ವರ್ಗದ ಉದ್ಯೋಗ ಹೀನತೆ (unemployment) 'ಆಲಸ್ಯ ಐಷಆರಾಮ' ಇತ್ಯಾದಿ ಹೊಡದೋಡಿಸಲಿಕ್ಕೆ ಬೇಕು.

ಆದರೆ ಬ್ರಾಹ್ಮಣರ ಸ್ವಾಭಾವಿಕ ಧರ್ಮವಾದ ಬ್ರಹ್ಮಚಿಂತನೆ, ಬೌದ್ಧಿಕ ವಿಚಾರಗಳ ಉನ್ನತಿ, ಲೋಕಹಿತಚಿಂತನೆ, ("ಸರ್ವೇ ಜನಾಃ ಸುಖಿನೋ ಭವಂತು".) ಇತ್ಯಾದಿ ತ್ರಿಕಾಲಾಬಾಧಿತ ಉಚ್ಚ ಧ್ಯೇಯಗಳನ್ನು ಸರ್ವದಾ ತಮ್ಮ ಮುಂದೆ ಇಟ್ಟುಕೊಂಡು ಅವಕ್ಕನುಗುಣವಾಗಿ ತಮ್ಮ ಆಚರಣೆ ಮಾಡಿ ಅಖಿಲ ಹಿಂದೂ ಸಮಾಜಕ್ಕೆ ಅಲಂಕಾರ ಪ್ರಿಯರಾಗಬೇಕು. ಕೇವಲ ಸ್ವಾವಲಂಬನ ಮಾರ್ಗದಿಂದ ಆರ್ಥಿಕ ಉನ್ನತಿಯನ್ನಷ್ಟೇ ಮಾಡಿಕೊಂಡು ಆತ್ಮೋನ್ನತಿಯನ್ನು ದುರ್ಲಕ್ಷಿಸಿದರೆ, ಬ್ರಾಹ್ಮಣರ ಬ್ರಾಹ್ಮಣ್ಯವೆಂಬ ವೈಶಿಷ್ಟ್ಯವು ಹೋಗಿ ಅವರು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುವದಲ್ಲದೆ ಹಿಂದೂ ಸಮಾಜವು ರುಂಡವನ್ನು ಕಳಕೊಂಡ ದೇಹದಂತಾಗುತ್ತದೆಂಬದನ್ನು ಅವರು ಲಕ್ಷ್ಯದಲ್ಲಿಡತಕ್ಕದ್ದು. ಆರ್ಯ ಸಂಸ್ಕೃತಿಯೆಂಬ ಅಮೂಲ್ಯವಾದ ಕೋಶಕ್ಕೆ ಪಾಲಕರಾದ ಅವರು ಅದನ್ನು ಕಸವಿಲ್ಲ ಕೂಡಿಸ ಕೂಡದೆಂಬದಿಷ್ಟೇ ನಮ್ಮ ಆಗ್ರಹದ ವಿನಂತಿ. ಆರ್ಥಿಕ ಉನ್ನತಿಯು ಆತ್ಮೋನ್ನತಿಯ ಮೆಟ್ಟಲು ಆಗಿರಬೇಕಲ್ಲದೆ ಅಂತಿಮ ಧ್ಯೇಯವಾಗಿರಕೂಡದೆಂದು ನಾವು ಸಾರಿ ಸಾರಿ ಹೇಳುತ್ತೇವೆ. ಹೊಟ್ಟೆನ ಮೇಲೆ ಮೊದಲೇ ದಾರಿದ್ರ್ಯದಿಂದ ಬಳಲುವ ಉಳಿದ ಸಮಾಜಗಳಿಗೆ ಭಾರ ಹಾಕದೆ, ಸ್ವಾವಲಂಬನದಿಂದ ತಮ್ಮ ಹೊಟ್ಟೆಯ ವಿಚಾರವನ್ನು ತಾವು ನೋಡಿಕೊಂಡು ಬ್ರಹ್ಮ ಚಿಂತನೆಯನ್ನು ಮಾಡಿ ನಿಸ್ವಾರ್ಥತೆಯಿಂದ ಲೋಕಹಿತ ಚಿಂತನೆಯಲ್ಲಿ ಅವರ ಆಯುಷ್ಯವು ವೆಚ್ಚವಾಗಬೇಕು ಎಂದು ಹೇಳಿ ಈ ಲೇಖನವನ್ನು ಮುಗಿಸುತ್ತೇನೆ.

(೩ ನೇ ಪಾನಿನಿಂದ ಮುಂದೇ ಸಾಗಿದ್ದು)

ಸ್ವತಂತ್ರ ಪ್ರಾಂತವಾದ ಮಾತ್ರಕ್ಕೆ ಒಮ್ಮೆಲೇ ಕರ್ನಾಟಕದ ಉದ್ಧಾರವಾಗಿ ಹೋಗುತ್ತಿತ್ತೆಂದು ಹೇಳುವುದು ಹುಚ್ಚುತನವೆಂದು ಆಕ್ಷೇಪಿಸುವಿರಾ? ಕೇಳಿ. ಕರ್ನಾಟಕವು ಸ್ವತಂತ್ರ ಪ್ರಾಂತ ವಿದ್ದರೆ ನಮ್ಮ ಭಾಷೆಯು ಇಳಿತರಕ್ಕೆಂದೂ ಬರುತ್ತಿದ್ದಿಲ್ಲ. ಈವಾಗ ದಕ್ಷಿಣಕನ್ನಡ, ಕೊಡಗು, ಬಳ್ಳಾರಿ ಧಾರವಾಡ ಪ್ರಾಂತಗಳಲ್ಲಿ ಭಾಷಾ-ರೀತಿಗಳು ಬೇರೆಯಾಗಿರುವದರಿಂದಲೂ ರಾಜಕೀಯ ಹಿತಸಂಬಂಧಗಳು ಭಿನ್ನವಾಗಿರುವದರಿಂದಲೂ ಒಂದು ಭಾಗದ ಪತ್ರಿಕೆಗಳೂ, ಪುಸ್ತಕಗಳೂ, ಮತ್ತೊಂದು ಭಾಗದಲ್ಲಿ ಸಾಕಷ್ಟು ಮಾರುವದಿಲ್ಲ. ಇದರಿಂದ ಕನ್ನಡ ಪತ್ರಿಕೆಗಳಿಗೆ, ಪುಸ್ತಕಗಳಿಗೆ ಇಡೀ ಕರ್ನಾಟಕವೇ ಗಿರಾಕಿಯಾಗದೆ ಆಯಾ ಭಾಗದವರೇ ಆಗಿ ಗ್ರಾಹಕರ ಸಂಖ್ಯೆ ಸಂಕುಚಿತವಾಗಿದೆ. ಲೇಖಕರಿಗೆ ಪ್ರೋತ್ಸಾಹನೆ ಸಿಗಲೊಲ್ಲದು. ಕನ್ನಡ ಭಾಷೆ ಭರದಿಂದ ಬೆಳೆಯಲೊಲ್ಲದು.

ಮನುಷ್ಯನಿಗೆ ಅನ್ನವಿಲ್ಲದೆ ಕೆಲಕಾಲ ಸಾಗಬಹುದು. ಭಾಷೆಯಿಲ್ಲದೆ ಒಂದು ಕ್ಷಣ ವ್ಯವಹಾರವೂ ನಡೆಯದು. ಭಾಷೆಯೇ ಜನಗಳ ಜೀವನ. ನುಡಿಯೇ ನಾಡಿನ ಪ್ರಾಣ. ಆ ಪ್ರಾಣಗಳೇ ಹೇಗೆ ಪರಭಾಷೆಯ ಸುಳಿಗಾಳಿಯಿಂದ ಬಾಡಿದ ಬಳಿಕ ನಾಡಿನ ನಾಡಿಗಳಲ್ಲಿ ಜೀವಕಳೆಯು ಮಂದವಾಗದಿದ್ದೀತೇ?

ಆದರೆ ಕರ್ನಾಟಕವು ಒಂದು ಪ್ರಾಂತವಾಗಿದ್ದರೆ? ಭಾಷಾಜ್ಯೋತಿಯು ಅಂದರೆ ಜೀವನ ಪ್ರಭೆಯು ಕಾಂತಿಯಿಂದ ಹೊಳೆಗಿ ಬೆಳಗುತ್ತಿದ್ದಿಲ್ಲವೇ? ಕರ್ನಾಟಕದಲ್ಲಿ ಚೈತನ್ಯ ವುಂಟಾಗುತ್ತಿರಲಿಲ್ಲವೇ?

ಈಗ ಅಖಿಲ ಕರ್ನಾಟಕಕ್ಕೆ ಯಾವದೊಂದು ಸಂದೇಶವನ್ನು ಕಳುಹಬೇಕೆಂದರೆ ಎಷ್ಟು ಕಷ್ಟ!! ಹತ್ತಿಪ್ಪತ್ತು ಪತ್ರಿಕೆಗಳಲ್ಲಿ ಪ್ರಕಟವಾದರೂ ಅದು ಕರ್ನಾಟಕಕ್ಕೆಲ್ಲ ಮುಟ್ಟಿತೆಂದು ಹೇಳಲಿಕ್ಕಾಗುವದಿಲ್ಲ. ಹೀಗೆ ಸ್ಥಿತಿಯಿದ್ದರೆ ಯಾವ ಚಳವಳಿಯೂ ಕರ್ನಾಟಕದಲ್ಲಿ ಫಲಕಾರಿಯಾಗಲಾರದು. ಕರ್ನಾಟಕದಲ್ಲಿ ಅಸಹಕಾರವೂ ಅದರ ಹಿಂದಿನ ಸ್ವದೇಶಿ ಚಳವಳಿಯೂ ಒಳಿತಾಗಿ ಬೇರು ಹಿಡಿಯದಿರಲಿಕ್ಕೆ ಕರ್ನಾಟಕದ ಭಗ್ನಹೃದಯವೇ ಕಾರಣವು.

ಕರ್ನಾಟಕವು ಒಂದು ಪ್ರಾಂತವಾಗಿದ್ದರೆ ಒಂದು ಸ್ಥಾನದಲ್ಲಿ ರಾಜಧಾನಿಯಿಂದ ಎಲ್ಲೆಡೆಗಳಲ್ಲಿಯೂ ಸಂದೇಶವು ಪಸರಿಸಿ ಫಲಕಾರಿಯಾಗಲು ಅನುಕೂಲಿಸುತ್ತಿತ್ತಲ್ಲವೇ?

ಕರ್ನಾಟಕವು ಒಂದು ಪ್ರಾಂತವಾಗಿದ್ದರೆ ಈಗಿನಂತೆ ರೈಲುಗಳು ಕರ್ನಾಟಕದ ಜೀವನ ನಾಶಕ್ಕೇ ಕಾರಣವಾಗುವಂತೆ ಹಾಕಲ್ಪಡುವುದು ಎಂದೂ ಸಂಭವವಿದ್ದಿಲ್ಲ. ಈಗಣ ರೈಲಿನ ರಚನೆಯಿಂದ ಪರಪ್ರಾಂತಗಳು ನೆರೆಮನೆಗಳಾಗಿದ್ದು ನೆರೆಮನೆಯವರೂ ನೆರೆಯೂರವರೂ ಆದ ಕನ್ನಡಿಗರು ದೂರವಾಗಿದ್ದಾರೆ ಕರ್ನಾಟಕದಲ್ಲಿ ವಿಚಾರಪ್ರವಾಹರೂಪ ರಕ್ತಾಭಿಸರಣಕ್ಕೆ ಬಹು ದೊಡ್ಡ ಆತಂಕವಾಗಿದೆ. ರಕ್ತಾಭಿಸರಣವು ಚನ್ನಾಗಿ ನಡೆಯದ ಮನುಷ್ಯನು ಬದುಕುವುದು ದುಸ್ತರವೆಂದು ವೈದ್ಯಶಾಸ್ತ್ರವು ಸಾರುತ್ತಿದೆ.

ಕರ್ನಾಟಕವು ಒಂದೇ ಪ್ರಾಂತವಾಗಿದ್ದರೆ ಈ ಹಾನಿಗೆ ನಾವು ಒಳಗಾಗ ಬಹುದಾಗಿತ್ತೆ? ಛೀ ಎಂದೂ ಇಲ್ಲ.

ಈ ಒಣ ಮಾತುಗಳನ್ನು ಬಿಡಿ. ವ್ಯಾಪಾರದ ಬಾಯಿಗೆ ನೀರು ಬಿಡಿಸುವ-ಹಸಿಮಾತು ತಕ್ಕೊಂಡೂ ವಿಚಾರಿಸಿರಿ. ಕಾರವಾರ ಮಂಗಳೂರುಗಳು ಬಂದರಗಳಾಗಿದ್ದರೆ ಕರ್ನಾಟಕದ ಸಂಪತ್ತು ಈಗಿನ ಎಷ್ಟೋ ಪಟ್ಟಿಗಳಿಂದ ಹೆಚ್ಚುತ್ತಿತ್ತೆಂದು ಮುಂಬೈ, ಮದ್ರಾಸ ನೋಡಿದವರಿಗೆ ಬೇರೆ ಹೇಳುವಕಾರಣವೇ ಇಲ್ಲ. ಅತಿಪ್ರಾಚೀನ ಕಾಲದಿಂದ ವೀರಶೈವರೂ, ಕೋಮಟಿಗರೂ ಕರ್ನಾಟಕದಲ್ಲಿ ವ್ಯಾಪಾರಕ್ಕೆ ಪ್ರಖ್ಯಾತರು. ಇವರು ಈಜಿಪ್ತ ಮುಂತಾದ ಪರದೇಶಗಳೊಡನೆ ವ್ಯಾಪಾರ ಮಾಡುತ್ತಿದ್ದರೆಂದು ಇತಿಹಾಸವು ಹೇಳುತ್ತಿದೆ. ಇದೇ ವರ್ತಕರ ವಂಶಜರು ಇಂದು ಮುಂಬೈ ಮದ್ರಾಸದ ಪಾರ್ಸಿ, ಗುಜರಾಥಿ ದಲಾಲರ ಕೈಕೆಳಗಿನ ಅಂಗಡಿಕಾರರಾಗಿ ಅವರು ಹೇಳಿದ ದರದಂತೆ ವ್ಯಾಪಾರಮಾಡುವ ಪರಾವಲಂಬನದ ನಾಚಿಕೆಗೇಡು ಮಾಡುವ ಹೀನಸ್ಥಿತಿಗೆ ಬಂದಿರುವರು.

ಕರ್ನಾಟಕವು ಸ್ವತಂತ್ರ ಪ್ರಾಂತವಿದ್ದು ನಮ್ಮ ಬಂದರಗಳಿದ್ದರೆ ನಮ್ಮಲ್ಲಿ ವ್ಯಾಪಾರಾಭಿವೃದ್ಧಿಯಾಗುತ್ತಿತ್ತು. ದಲಾಲಿಯು ಕೆನೆಯು ಪಾರ್ಸಿ ಗುಜರಾಥಿಗಳಿಗೆ ಹೋಗದೆ ಕನ್ನಡಿಗರಿಗೇ ಬಹುತರೆಲ್ಲ ಸಿಕ್ಕುತ್ತಿತ್ತು.

ಸ್ವತಂತ್ರ ಪ್ರಾಂತವಿದ್ದರೆ ಕನ್ನಡಿಗರು ಪ್ರಾಂತಿಕ ಕಚೇರಿಗಳಲ್ಲಿ ಹೆಚ್ಚಾಗಿ ಸೇರುತ್ತಿದ್ದರು. ಕನ್ನಡಿಗರ ತಂತ್ರದಿಂದ ಕರ್ನಾಟಕದ ಎಷ್ಟೋ ಕಾರಭಾರಗಳು ನಡೆದು ಕರ್ನಾಟಕದ ಹಿತವು ಈಗಿನಿಂದಲೂ ಎಷ್ಟೋ ಪಟ್ಟು ಹೆಚ್ಚಾಗುತ್ತಿತ್ತು. ಈಗಲಾದರೋ! ಆ ಪುಣೆ ಮುಂಬೈ ಗುಜರಾತ ತಮಿಳ ತೆಲಗು ನಾಡುಗಳಿಂದ ಬಂದ ಅಧಿಕಾರಿಗಳ ಕೈಕೆಳಗೆ ಕರ್ನಾಟಕವು ಸಣ್ಣಾಗಿ ನಡಕೊಳ್ಳಬೇಕಾಗಿದೆ. ಕನ್ನಡಿಗರಿಗೆ ಬೆಳೆಯಲಿಕ್ಕೆ ಆಸ್ಪದವಿಲ್ಲದಾಗಿದೆ. ಈಗಿನ ರಾಜಧಾನಿಗಳು ಮುಂಬಯಿ, ಮದ್ರಾಸ ಇವುಗಳ ಸಮೀಪದ ಪ್ರಾಂತಗಳು ಮರಾಠಿ, ತೆಲಗು, ತಮಿಳ. ಆದ್ದರಿಂದ ರಾಜಧಾನಿಯ ಮುಖ್ಯ ಕಚೇರಿಗಳಲ್ಲಿ ಅಲ್ಲಿಯವರದೇ ಪ್ರಾಬಲ್ಯವು. ಮನುಷ್ಯಸ್ವಭಾವಕ್ಕನುಸರಿಸಿ ಈ ಮರಾಠಿ ತೆಲಗು ತಮಿಳರು ತಮ್ಮ ಜ್ಞಾತಿಬಾಂಧವರನ್ನೇ ಕರ್ನಾಟಕದ ಅಧಿಕಾರಿಗಳನ್ನಾಗಿ ಅಟ್ಟುತ್ತಿರುವರೆಂಬುದು ಅನುಭವದ ಸಂಗತಿಯು. ಉದಾಹರಣೆಗಾಗಿ ಉತ್ತರಕರ್ನಾಟಕದ ಒಂದು ಶಿಕ್ಷಣಖಾತೆಯನ್ನೇ ತಕ್ಕೊಳ್ಳಿ. ಈವರೆಗೆ ಕನ್ನಡ ಶಬ್ದವನ್ನು ಇಡೀ ಆಯುಷ್ಯದಲ್ಲಿ ಒಮ್ಮೆಯಾದರೂ ನುಡಿದು ನಾಲಿಗೆಯನ್ನು ಪವಿತ್ರ ಮಾಡಿಕೊಳ್ಳದ ಹಲವು ಎಜ್ಯುಕೇಶನಲ್ ಇನಸ್ಪೆಕ್ಟರರು ಆದರು. ಇಂದಿನ ಮಿತಿಗೂ ಅಂಥವರೇ ಇಬ್ಬರು ಅಧಿಕಾರಾರೂಢರಾಗಿದ್ದಾರೆ!! ಕನ್ನಡದ ಸಪೂರ್ಣ ಅಜ್ಞಾನಿಗಳಾದ ಅಧಿಕಾರಿಗಳಿಂದ ಕನ್ನಡಭಾಷೆ ಮುಂತಾದ್ದರ ಬೆಳವಣಿಗೆ ಆಗುವ ಸಂಭವವು ಹೇಗೆ?

ಇರಲಿ ಮೂಲಮಾತು ಹೀಗೆ: ನಮ್ಮ ಸ್ವತಂತ್ರ ಪ್ರಾಂತವಿಲ್ಲದ್ದರಿಂದ ನಮ್ಮಲ್ಲಿಯವರಿಗೆ ಪ್ರಾಂತಿಕ ಕಚೇರಿಗಳೊಳಗಿನ ಯಾವ ವರಿಷ್ಠ ಸ್ಥಾನಗಳೂ ಈ ವರೆಗೆ ಯೋಗ್ಯಪ್ರಮಾಣದಲ್ಲಿ ದೊರೆತಿಲ್ಲ.

ಎಷ್ಟು ವೀರಶೈವರು, ಜೈನರು, ಬಂಟರು, ಹವಿಕ ದೇಶಸ್ಥ ಬ್ರಾಹ್ಮಣರು ಜಡ್ಜಿಗಳಾದುದು. ಈವರೆಗೆ ಸೆಕ್ರೆಟರಿಯೇಟಿನಲ್ಲಿ ಅಥವಾ ಬೇರೆ ಖಾತೆಗಳಲ್ಲಿ ಪ್ರಮುಖಾಧಿಕಾರಿಗಳಾದುದು ಕನ್ನಡಿಗರೆಷ್ಟು? ಕಮಾನು ತಾನು ಅಧಿಕಾರ ಬಹುವಾಗ ಪಟೀಲ ಅಥವಾ ಕಮಾನಿಗೆ ಪಟ್ಟವಾಗುವಂತೆ ಏರ್ಪಾಡು ಮಾಡುವನು. 'ಕರಿಯ'ಕಾರ ಅಥವಾ ಪಂಡಿತರಿಗೆ ಕೈಕೊಟ್ಟು ಮೇಲೆತ್ತುವರು. ಅಂತೂ ಕನ್ನಡಿಗರ ಹಣೆಬರಹಕ್ಕೆ ಹಿಂದೆ ಬೀಳುವುದು ತಪ್ಪಿಲ್ಲ.

ಇದು ತಪ್ಪಬೇಕಿದ್ದರೆ ಸ್ವತಂತ್ರ ಪ್ರಾಂತಮಾಡಿಕೊಳ್ಳುವುದೊಂದೇ ಒಂದು ಉಪಾಯವೆಂದು ಮೇಲ್ಕಾಣಿಸಿದ ಮಾತುಗಳನ್ನು ಶಾಂತ ಚಿತ್ತದಿಂದೋದಿ ವಿಚಾರಿಸುವ ಪ್ರತಿಯೊಬ್ಬ ವಿವೇಕಿಗೂ ಹೊಳೆಯದಿರಲಾರದು.

ಧಾರವಾಡ. { ಕೆ. ಬಾ. ಜೋಶಿ.

ಕನ್ನಡಿಗರೇ! ಕನ್ನಡಿಗರಾದ ನೀವು, ಅಭಿಮಾನದಿಂದ 'ಕನ್ನಡಿಗ'ನನ್ನು ಆದರಿಸಬೇಕು!

ವರ್ತಮಾನಸಾರ

ಇಹವೃತ್ತ

ಹಿಂದೂ ಮುಸಲ್ಮಾನರ ದಂಗೆಯ ವಿಚಾರಣೆಯಾಗಿ ೧೬ ಜನ ಹಿಂದುಗಳ ಮೇಲೆಯೂ ೧೮ ಜನ ಮುಸಲ್ಮಾನರ ಮೇಲೆಯೂ ಚಾರ್ಜ ಇಡಲ್ಪಟ್ಟಿವೆ.

ಕರ್ನಾಟಕ.

ಮುಂಬೈ ಕರ್ನಾಟಕ

ಮಾಳಕವಡಿ (ತಾ॥ ಸೊಲ್ಲಾಪೂರ) ಯಲ್ಲಿ ಕುರುಬರ ಜಾಹೀರ ಸಭೆಯು ಸೇರಿತ್ತು ಈ ಸಭೆಗೆ ಕುರುಬರ ಪ್ರಮುಖ ಜನರೆಲ್ಲರೂ ಹಾಜರಿದ್ದರು. ಕುರುಬರ ೪ ನೇ ಪರಿಷತ್ತನ್ನು ವಿಜಾಪೂರದಲ್ಲಿ ಕೂಡಿಸಬೇಕೆಂದು ಠರಾವು ಪಾಸಾಯಿತು. ಇದೇ ಪ್ರಕಾರ ವಿಜಾಪೂರದಲ್ಲಿ ಜಾಹೀರ ಸಭೆಯು ಕೂಡಿ ತಮ್ಮಲ್ಲಿ ಕುರುಬರ ೪ನೇ ಪರಿಷತ್ತನ್ನು ಕೂಡಿಸಬೇಕೆಂದು ಠರಾವು ಪಾಸಾಯಿತು.

ಈ ಸಲ ಎಮ್. ಎ. ಪರೀಕ್ಷೆಯಲ್ಲಿ ಕನ್ನಡವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡು ಮೂವರು ವಿದ್ಯಾರ್ಥಿಗಳು ಪಾಸಾಗಿರುವರು. ಇದರಲ್ಲಿ ಶ್ರೀ ಪಂಚಮುಖಿ ಹಾಗೂ ಕುಲಕರ್ಣಿ ಇವರು ೨ ನೇ ವರ್ಗದಲ್ಲಿ ಪಾಸಾಗಿದ್ದಾರೆ.

ಬ್ರಹ್ಮಸೂತ್ರಭಾಷ್ಯ, ತತ್ವಪ್ರಕಾಶಿಕಾದಿ ಗ್ರಂಥಗಳಲ್ಲಿ ಸುಗಮ ಪ್ರವೇಶ ದೊರೆಯಬೇಕಾಗಿ, "ಸೂತ್ರಾರ್ಥ ರತ್ನಾವಲೀ" ಎಂಬ ಗ್ರಂಥವು ಮುದ್ರಿತವಾಗುವದಿದೆ. ಇದಕ್ಕಾಗಿ ಗ್ರಾಹಕರು ಜಾಗ್ರತ ಹೆಸರು ನೊಂದಾಯಿಸಬೇಕಾಗಿ ಜಿ. ಆರ್. ಸವಣೂರ ಮುಬ್ಬಳ್ಳಿ ಇವರು ಜಾಹೀರ ಪ್ರಕಟನೆ ತೆಗೆದಿರುತ್ತಾರೆ.

ಅಗಸ್ಟ ತಿಂಗಳಲ್ಲಿ ಮಹಾತ್ಮಾಜಿಯವರ ಅಧ್ಯಕ್ಷತೆಯ ಕೆಳಗೆ ಮೈಸೂರ ಸ್ವರಾಜ್ಯ ಪಕ್ಷದ ವತಿಯಿಂದ ರಾಜಕೀಯ ಪರಿಷತ್ತು ನೆರೆಯುವದಿದೆ.

ಮೈಸೂರ ಸೀಮೆಯಲ್ಲಿ ಅಪರಾಧಿಗಳನ್ನು ಗಲ್ಲಿಗೆ ಹಾಕುವದನ್ನು ತಪ್ಪಿಸಿ ಬಿಡಬೇಕೆಂದು ಬಿ. ಎ. ವೆಂಕಟ ಕೃಷ್ಣಯ್ಯನವರು ನ್ಯಾಯ ವಿಧಾಯಕ ಸಭೆಯಲ್ಲಿ ಠರಾವು ಕೊಟ್ಟು ಚರ್ಚಿಸುತ್ತಾರೆಂದು ಪ್ರಕಟವಾಗಿದೆ.

ನಿಝಾಂಕರ್ನಾಟಕ.

ಪಂಡಿತ ಮಾಲವಿಯವರಿಗೆ ನಿಜಾಂ ಸರಕಾರದವರು ತಮ್ಮ ರಾಜ್ಯದಲ್ಲಿ ಬರಕೂಡದೆಂಬ ನಿರ್ಬಂಧ ಹಾಕಿದ್ದಕ್ಕಾಗಿ ಅಖಿಲ ಹಿಂದೂ ಸಭೆಯವರು ಅವರ ಈ ಕೃತ್ಯವನ್ನು ನಿಷೇಧಿಸಿದ್ದಾರೆ. ಅದರಂತೆಯೇ ಕಾನಪೂರದ ಮಹಾರಾಜನರಾದರೂ ಲಾಲಾಜಿಯವರ ಅಧ್ಯಕ್ಷತೆಯಲ್ಲಿ ಸಭೆಸೇರಿ ತಮ್ಮ ವಿಷಾದವನ್ನು ವ್ಯಕ್ತ ಪಡಿಸಿದ್ದಾರೆ.

ಹಿಂದುಸ್ಥಾನ.

ಜೋಧಪೂರ ಸಿಪಾಯಿಗಳೂ ಮೂವರು ಮುಹಸೀಲರನ್ನು, ಅನ್ಯಾಯವಾಗಿ ಮಾರವಾಡದಿಂದ ಹೊರಗೆ ಹಾಕಿದ್ದಕ್ಕಾಗಿ ಕಲಕತ್ತೆಯ ಮಾರವಾಡಿಗಳು ಒಂದು ಸಭೆಗೂಡಿಸಿ, ಜೋಧಪೂರ ಸಂಸ್ಥಾನದ ಈ ಕೃತಿಯನ್ನು ನಿಷೇಧಿಸಿದರು.

ಉತ್ತರ ಸರಕಾರದಲ್ಲಿ ಭಯಂಕರ ತುಫಾನೆ ಎದ್ದು ಬಹಳ ಹಾವಳಿಯಾಗಿದೆ. ಕೆಲವು ರೈಲು ಗಾಡಿಗಳು ಪಟ್ಟಿಗಳಿಂದ ಮಗುಚಿ ಬಿದ್ದು ಗಾಡಿಗಳು ನಡೆಯಲಿಕ್ಕೆ ಬಹಳೇ ವಿಘ್ನವುಂಟಾಗಿದೆ.

ಗ್ವಾಲೀರಮಹಾರಾಜರಿಗೆ ಕಾಯಿಲೆಯಾಗಿದ್ದು ಅವರು ಪ್ಯಾರಿಸ ಪಟ್ಟಣದಲ್ಲಿಯೇ ಇರುವರು.

ಪುಣೆಯಲ್ಲಿ ಎಲ್. ಜಿ. ಆಪಟೆಯವರ ಅಧ್ಯಕ್ಷತೆಯ ಕೆಳಗೆ ಸಾರ್ವಜನಿಕ ಸಭೆಗೂಡಿ ಗಾಂಧಿಯವರು ಕಾಂಗ್ರೆಸ ಬಿಟ್ಟು ಹೋಗದೇ

ನಿಮಗೆ "ಕನ್ನಡಿಗ" ನಭೆಟ್ಟಿಯು ಅನಾವಶ್ಯಕವಿದ್ದರೆ ಸಂಚಿಕೆಗಳನ್ನು ಸ್ವೀಕರಿಸದೆ ಅವನ್ನು ನಮಗೆ ಮರಳಿ ಕಳಿಸಬೇಕಾಗಿ ಬಿನ್ನಹ. ಕಾರ್ಡ ಬರೆದು ನಿಮ್ಮ ಆರ್ಧ ಆಣೆ ವೆಚ್ಚ ಮಾಡುವದೂ ಅವಶ್ಯವಿಲ್ಲ.

ಮದ್ರಾಸ ಕರ್ನಾಟಕ

ಉಡಪಿ ಶ್ರೀಕೃಷ್ಣ ದೇವಾಲಯದಲ್ಲಿ ವಿದ್ಯುಚ್ಛಕ್ತಿಯ ದೀಪವನ್ನು ಉಪಯೋಗಿಸಲು ಆರಂಭವಾಗಿದೆ.

ಓಟಕ ಮಂಡದ ಕ್ಯಾಂಟೋನಮೆಂಟದಲ್ಲಿ ವಿದ್ಯುದ್ದೀಪವನ್ನು ಹಚ್ಚಬೇಕಾಗಿ ಲಷ್ಕರೀ ಖಾತೆಯು ಸರಕಾರದವರಿಗೆ ಸಾಲಕೊಡಬೇಕಾಗಿ ನಿರ್ಧರಿಸಿದೆ.

ಮೈಸೂರ ಕರ್ನಾಟಕ

ಬೆಂಗಳೂರ ಪಟ್ಟಣ ಸ್ಥಾಪಕರಾದ ಕೆಂಪೇಗೌಡರ ಸ್ಮಾರಕವೆಂದು "ಅವೆನ್ಯೂರೋಡ" ದ ಬದಲಾಗಿ "ಕೆಂಪೇಗೌಡರ ಬೀದಿ" ಎಂಬದಾಗಿ ಕರೆಯಬೇಕೆಂಬರ್ಥದ ಠರಾವು ಬೆಂಗಳೂರ ಮುನಸಿಪಾಲಿಟಿಯ ಮುಂದೆ ಬರತಕ್ಕದ್ದಿದೆ. ಇದಕ್ಕಾದರೂ ವಿರೋಧಿಸಲಿಕ್ಕಿಲ್ಲವಷ್ಟೇ?

ಶ್ರೀ ಕೆ. ಶಾಮಣ್ಣನವರು ಮತ್ತು ಕಟಿಯವರು ಜೊತೆ ಬಳ್ಳಾಪೂರಕ್ಕೆ ಹೋಗಿ ವ್ಯಾಖ್ಯಾನಗಳನ್ನು ಮಾಡಿ ಖಾದಿ ಪ್ರಚಾರವನ್ನು ಮಾಡಿದರು. ಹೊಲೆಯರ ಹಾಳ್ಯಕ್ಕೆ ಹೋಗಿ ಸಹಾಯವನ್ನು ಜನರಿಗೆ ಕಲಿಸಿದರು.

ಬೆಂಗಳೂರಿನ ಮಾಜಿ ಡಿ. ಕಮೀಶನರರಾದ ಶ್ರೀ ನಾರಾಯಣ ಅಯ್ಯಂಗಾರರವರು ಬೆಂಗಳೂರಿನ ಒಂದು ವಿವೇಕಾನಂದಾಶ್ರಮವನ್ನು ತೆಗೆದು ತಮ್ಮ ಉತ್ಪನ್ನದ ಹೆಚ್ಚಿನ ಭಾಗವನ್ನು ಸಂಸ್ಥೆಗೆ ಸಮರ್ಪಿಸಿ ತಾವು ಸನ್ಯಾಸ ಗ್ರಹಣ ಮಾಡಬೇಕೆಂದು ನಿರ್ಧರಿಸಿರುವರು.

ಮೈಸೂರ ಮಹಾರಾಜರವರು ಕಾಲು ನಡಿಗೆಯಿಂದ ಸೈನಿಕಾಲಯದಿಂದ ಬದರಿಕಾಶ್ರಮಕ್ಕೆ ಹೋಗಿ ಬಂದರು.

ಪಂಜಾಬದಲ್ಲಿ ಕಾಂಗ್ರೆಸದ ಕಾರ್ಯವನ್ನು ಮುಂದರಿಸುವದಕ್ಕೆ ಕ್ರಾಂತದ ಮಹಾಜನರು ೫೦,೦೦೦ ರೂ. ಕೊಡಬೇಕೆಂದು ದೇಶಭಕ್ತ ಲಾಲಾಜಿಯವರು ವಿನಂತಿ ಮಾಡಿಕೊಂಡಿದ್ದಾರೆ.

ಕೆಲವು ದೇಶಮುಖರ ಉದ್ಗಾರವನ್ನು ನಿಷೇಧಿಸುವದಕ್ಕೆ ಬಂದಿರುವ ಈ ಸಭೆಯ ಹಸ್ತಪತ್ರಿಕೆಗೆ ೬೫೦ ಪ್ರಮುಖರ ಸಹಿಗಳಿದ್ದವು.

ಪರದೇಶ.

ಗ್ಲಾಸ್ಗೋನಗರದಲ್ಲಿ ಭಾರತೀಯ ಯುವಕರು ತಿರುಗಾಡುತ್ತಿದ್ದಾಗ ಕೆಲವರು ಆಂಗ್ಲೇಯ ಪುಂಡರು ನುಗ್ಗಿ ಆ ಹಿಂದೀ ಯುವಕರಿಗೆ ಬಹಳ ಘಾಯಗಳನ್ನು ಮಾಡಿದರು. ಅವರಲ್ಲಿ ಒಬ್ಬನು ಸತ್ತು ಹೋದನು. ಯಾವ ವಿಧದಲ್ಲಿಯೂ ಭಾರತೀಯರು ತಪ್ಪು ಮಾಡಿಲ್ಲೆಂದು ನೆರೆಹೊರೆಯವರು ತಿಳಿಸಿರುತ್ತಾರೆ.

ಲಂಡನದಲ್ಲಿ ಪೆಟ್ರಿಕ್ ಡೆಲಿ ಎಂಬವನ ಹೆಂಡತಿಯು ಒಂದೇ ಸಲ ೪ ಕೂಸು ಹೆತ್ತಿರುವಳು. ಇವುಗಳಲ್ಲಿ ಎರಡು ಜೀವಂತವಾಗಿವೆ. ಈ ಸ್ತ್ರೀಯು ತಾಯಿಯು ಒಂದೇ ಕಾಲಕ್ಕೆ ೩ ಕೂಸುಗಳನ್ನು ಹೆತ್ತಿದ್ದಳು. ಅವರುಗಳಲ್ಲಿ ಒಬ್ಬಳು ಈ ನಾಲ್ಕು ಕೂಸು ಹೆತ್ತವಳಾಗಿರುವಳು.

ಮಾರ್ಸಿಲ್ಸ ಶಹರದಲ್ಲಿ ಮುನಸಿಪಾಲಿಟಿಯ ಚುನಾವಣೆಯ ಕಾಲಕ್ಕೆ ವಿಶೇಷ ಗಡಿಬಿಡಿಯಾಗಿ ಹಲವು ಜನರು ಮಡಿದ್ದಾರೆ. ದಂಗೆ ಮಾಡುವವರು ಪೋಲೀಸರ ಮೇಲೆ ಸಹ ಎರಗಿದರು.

ಜಪಾನದಲ್ಲಿ ಭಯಂಕರ ಭೂಕಂಪಗಳಾಗಿ ೩೦೦ ಜನರು ಮರಣ ಹೊಂದಿದರು. ರೈಲು ಗಾಡಿಗಳಿಗಾದರೂ ವಿಶೇಷ ಹಾನಿ ತಗಲಿದೆ. ಎಷ್ಟೋ ನಿರಾಶ್ರಿತರ ಸಲುವಾಗಿ ಗುಡಿಸಲುಗಳನ್ನು ಕಟ್ಟುವದು ನಡೆದದೆ. ಇದರಿಂದ ದೇಶಿಯ ವ್ಯಾಪಾರವೂ ಸ್ವಲ್ಪ ಮಂದವಾಗಿದೆ.

ಸರ್. ಜೋನ ಬೇರ್ಡರವರು ಆಸ್ಟ್ರೇಲಿಯಾದ ಗವರ್ನರ ಜನರಲ ರಾಗುವ ಪೂರ್ವದಲ್ಲಿ "ವ್ಯಾರನ" ಪದವಿಗೆ ಏರಿಸಲ್ಪಟ್ಟಿರು.

ಕನ್ನಡಿಗರ ಸೇವೆಯಲ್ಲಿಯೇ ನಿರತನಾದ "ಕನ್ನಡಿಗ" ನನ್ನು ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕು!

ಒಪ್ಪಿಗೆ

(೧) **ಅನುಕರಣೀಯ ವಿದ್ಯಾರ್ಥಿ ಲೇಖಕ**:— ಬಾಳ ಕೃಷ್ಣ ದೇವಣಭಟ್ಟ ಜೋಶಿ.

(೨) **ಪ್ರಾಣಿದಯಾ ಜ್ಞಾನಪ್ರಸಾರಕಸಂಘ ದಾವಣಗೇರಿ.** ಪುಸ್ತಗಳು. (೧) ಗೋವುಗಳ ಗೋಳು, (೨) ಜಾಣ ಪ್ಪನಜಾಣತನ (೩) ಜೀವದಯಾ ಪ್ರಬೋಧೆ (೪) ಪಶುಪಕ್ಷಿಗಳ ವಿಜ್ಞಾಪನೆ ಚಂದ್ರಿಕೆ, (೫) ಗ್ರಾಮಜಾತ್ರೆಗಳು (೬) ಗೋಸಂರಕ್ಷಣೆ (೭) ಗೋಮಾತೆ, ಇವುಗಳಲ್ಲದೆ ಕೆಲವು ಜಾಹೀರಾತುಗಳು ಬಂದು ತಲ್ಪಿವೆ.

ಬಸವರಾಜನ ಬಸವಜಯಂತಿಯ ಹೆಚ್ಚಿನ ಸಂಚಿಕೆಯು ಇದರಲ್ಲಿ ಕನ್ನಡಿಗನ ಕನಸುಗಳು, ಬಸವಾವತಾರ ಕರ್ನಾಟಕದ ಅಭ್ಯುದಯ ಮಾರ್ಗ ಮುಂತಾದ ವಿಷಯಗಳು ವಾಚನೀಯವಾಗಿವೆ. ಮುದ್ರಣವು ಮುದ್ದಾಗಿದೆ. ಇದರಂತೆಯೇ ಪ್ರತಿವರ್ಷ ಹೆಚ್ಚಿನ ಸಂಚಿಕೆಯನ್ನು ಹೊರಡಿಸಿ, ಬಸವೇಶ್ವರನ ವಿಷಯವಾಗಿ ಜನರಲ್ಲಿ ತಿಳುವಳಿಕೆಯನ್ನು ಹುಟ್ಟಿಸಬೇಕಾಗಿ, "ಬಸವರಾಜನ" ಸಂಪಾದಕರಲ್ಲಿ ವಿಜ್ಞಾಪನೆ.

(೪) ಲಘುಕಾವ್ಯಮಾಲಾ— ಪುಷ್ಪ ೧ ಲೇಖಕ ಮತ್ತು ಸಂಪಾದಕ ನಾರಾಯಣ ವ್ಯಾಸರಾವ ಕುಲಕರ್ಣಿ. ಇದರಲ್ಲಿ ನರಗುಂದ ಸಾವಿತ್ರಿಬಾಯಿಯವರ ಚರಿತ್ರೆಯಿರುವದು. ಭಾಷೆಯು ಸರಳ. ಆದರೆ ಕರ್ನಾಟಕ ಅಂಗನಾಮಣಿಯಾದ ಸಾವಿತ್ರಿಬಾಯಿಯ ಚರಿತ್ರ ನಿವೇದನವು ವಿಶದವಾಗಿರುವದಿಲ್ಲ. ಇವರ ವಿಷಯಕ್ಕೆ ಇದಕ್ಕೂ ಹೆಚ್ಚಿಗೆ ಬರೆದಿದ್ದರೆ ಚನ್ನಾಗಿ ಆಗುತ್ತಿತ್ತು. ಈ ಮಾಲೆಯ ಉದ್ದೇಶವು ಸ್ತುತ್ಯವಿದೆ. ಈ ಮಾಲಗೆ ತಕ್ಕ ಪ್ರೋತ್ಸಾಹನೆಯನ್ನು ಕೊಡಬೇಕು.

(೫) ಕರ್ನಾಟಕ ಮಹಾ ವಿದ್ಯಾಲಯ ಧಾರವಾಡ ಚತುರ್ಥ ವಾರ್ಷಿಕ ವೃತ್ತಾಂತ ಈ ಶಾಲೆಯ ಉದ್ದೇಶವು ಸ್ತುತ್ಯವಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ, ಇದಕ್ಕೆ ಜನತೆಯು ತನು ಮನ ಧನದಿಂದ ಸಹಾಯ ಮಾಡಬೇಕಾಗಿ ಪ್ರಾರ್ಥನೆ.

(೬) ವಾದಿರಾಜ ಸ್ವಾಮಿಗಳ ಚರಿತ್ರೆ. ಇದು ಮಾಧ್ವಗುರು ಪುಷ್ಪಮಾಲೆಯ ತೃತೀಯ ಪುಷ್ಪವು. ಲೇಖಕರು ಶ್ರೀ ನಾಮಶೇವಿಗುಂದಾಚಾರ್ಯ, ಈ ಮಾಲೆಯ ಉದ್ದೇಶವು ವೈಷ್ಣವ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯರ ಚರಿತ್ರೆಗಳನ್ನು ಮುದ್ರಿಸುವದೇ ಆಗಿರುತ್ತದೆ. ಇದಕ್ಕೆ ಎಲ್ಲ ಜನರು ಸಹಾಯ ಮಾಡಬೇಕಾಗಿ ವಿನಂತಿ. ಇದರ ಬೆಲೆ. ೦—೩—೦

ತ್ವರೆ ಮಾಡಿರಿ! ಶಿಕ್ಷಕರು ಬೇಕು!! ತ್ವರೆ ಮಾಡಿರಿ!!!

ಜಾಹೀರ ನೋಟೀಸ

ಗದಗ-ಬೆಟಗೇರಿ ನೋಫತ ಶಿಕ್ಷಣ ಸಂಸ್ಥೆಯಿಂದ ಸ್ಥಾಪಿಸಲ್ಪಟ್ಟ ಪ್ರಾಥಮಿಕ ಶಾಳೆಗಳಲ್ಲಿ ಕೆಲಸ ಮಾಡಲಿಕ್ಕೆ ಮುಲ್ಕೀ ಪರೀಕ್ಷೆ ಪಾಸಾದ ಅನುಭವಿಕ ೩ ಜನ ಶಿಕ್ಷಕರು ಬೇಕಾಗಿದ್ದಾರೆ. ಅಪೇಕ್ಷೆಯುಳ್ಳವರು ತಾರೀಖು ೧—೬—೨೫ ರ ಒಳಗಾಗಿ ಕೆಳಗೆ ಬರೆದ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳಬೇಕು. ವಿಶೇಷ ಮಾಹಿತಿ ಬೇಕಾಗಿದ್ದಲ್ಲಿ ಪತ್ರ ವ್ಯವಹಾರದಿಂದಾಗಲಿ, ಸಮಕ್ಷಮಾ ಭೆಟ್ಟಿಯಾಗಿಯಾಗಲಿ, ತಿಳಕೊಳ್ಳಬೇಕು.

ಗದಗ
ತಾ. ೧೨-೫-೨೫

ಪತ್ತೆ:—
ಗು. ಶಿ. ಶಿರೊಳಕರ.
ಕಾರ್ಯದರ್ಶಿ.
ನೋಫತ ಶಿಕ್ಷಣ ಸಂಸ್ಥೆ ಗದಗ ಬೆಟಗೇರಿ
ಕಾಂಗ್ರೇಸ ಕಮಿಟಿ ಗದಗ.

ಕನ್ನಡಿಗನ ಲೇಖಕರಿಗೆ ಸೂಚನೆಗಳು.

(೧) ಕನ್ನಡಿಗನಲ್ಲಿಯ ಎಲ್ಲ ಲೇಖಗಳು ಕನ್ನಡನಾಡು, ಕನ್ನಡನುಡಿ, ಕನ್ನಡ ಸಂಸ್ಕೃತಿ, ಅಥವಾ ಕರ್ನಾಟಕದ ಏಕೀಕರಣ ಈ ವಿಷಯಗಳಲ್ಲಿ ಯಾವದಾದರೊಂದು ವಿಷಯಕ್ಕೆ ಸಂಬಂಧ ಪಟ್ಟಿರಬೇಕು. ಬೇಕಾದ ವಿಷಯವನ್ನು ತೆಗೆದುಕೊಂಡು ಲೇಖವನ್ನು ಬರೆಯಬಹುದು. ಆದರೆ ಆ ವಿಷಯವು ಮೇಲೆ ಉಲ್ಲೇಖಿಸಿದ ಸಂಗತಿಗಳಿಗೆ ಹೇಗೆ ಸಂಬಂಧಪಡುವದೆಂಬದು ಸ್ಪಷ್ಟವಾಗಿರಬೇಕು.

(೨) ತತ್ವಜ್ಞಾನ, ವಿಜ್ಞಾನಗಳ ವಿಷಯವಾಗಿ ಬರೆಯುವಾಗ್ಗೆ ೧ನೇ ನಿಯಮವನ್ನು ಅನುಸರಿಸಲು ಶಕ್ಯವಿದ್ದರೆ ಅನುಸರಿಸಬೇಕು. ಇಲ್ಲವಾದರೆ ಅಪವಾದವೆಂದು ಅದನ್ನು ಉಲ್ಲಂಘಿಸಿದರೂ ಆತಂಕವಿಲ್ಲ.

(೩) ವಿಷಯಗಳೆಲ್ಲ ಜ್ಞಾನಪ್ರಗಳಾಗಿರಬೇಕು. ಓದುಗರ ವಿಚಾರಗಳನ್ನು ಪ್ರಜ್ವಲಿಸುವಂಥವಿರಬೇಕು. ಶುದ್ಧ ಭಾವನಾತ್ಮಕವಾದ ಲೇಖಗಳಿಗೆ ಕನ್ನಡಿಗನಲ್ಲಿ ಪ್ರವೇಶವಿಲ್ಲ. ಆದರೆ ಯಾವದಾದರೊಂದು ವಿಷಯವನ್ನು ತಾತ್ವಿಕ ರೀತಿಯಿಂದ ವಿವೇಚಿಸಿ, ಅಲ್ಲಲ್ಲಿಗೆ ಓದುಗರನ್ನು ಜಾಗೃತಗೊಳಿಸಲಿಕ್ಕೆ ಭಾವನಾತ್ಮಕವಾದ ವಾಕ್ಯಗಳನ್ನು ಪೋಣಿಸಬಹುದು.

(೪) ಪ್ರತಿಯೊಂದು ಲೇಖವು ಎರಡು ಅಂಕಣಗಳ (ಕಾಲಮ್ಮ) ಗಿಂತ ಹೆಚ್ಚಾಗಿರಕೂಡದು. ವಿಷಯವು ಅಂಥ ದೊಡ್ಡದಿದ್ದು, ಎರಡು ಅಂಕಣಗಳಲ್ಲಿ ಅದರ ವಿವೇಚನವು ಶಕ್ಯವಿಲ್ಲದಿದ್ದರೆ, ಅದರಲ್ಲಿ ಭಾಗಗಳನ್ನು ಮಾಡಿ ಲೇಖಾಂಕಗಳ ರೂಪದಿಂದ ಕಳಿಸಬೇಕು.

(೫) ಎಲ್ಲ ಲೇಖಗಳು ಯಾವಾಗಲೂ ಒಂದೇ ಮಗ್ಗಲಿಗೆ ಸ್ಪಷ್ಟವಾದ ಅಕ್ಷರಗಳಿಂದ ಬರೆದಿದ್ದವಾಗಿರಬೇಕು.

(೬) ಲೇಖಕರು ತಮಗೆ ವೇತನವು ಬೇಕೋ ಅಥವಾ ಬೇಡವೋ ಎಂಬದನ್ನು ಬರೆದಿರಬೇಕು. ಈ ವಿಷಯವನ್ನು ಸಂದಿಗ್ಧವಾಗಿಡಕೂಡದು.

(೭) ನಿರಾಕರಿಸಲ್ಪಟ್ಟ ಲೇಖಗಳು ಮರಳಿ ತಮಗೆ ಬೇಕಾಗಿದ್ದರೆ, ಲೇಖಗಳ ಸಂಗಡಲೇ, ತಮ್ಮ ವಿಳಾಸವನ್ನು ಬರೆದು ತಿಕೀಟ ಹಚ್ಚಿದಂಥ ಲಕೋಟೆಯನ್ನು ಕಳಿಸಿರಬೇಕು. ಹಾಗೆ ಮಾಡಿರದಿದ್ದರೆ, ನಿರಾಕರಿಸಲ್ಪಟ್ಟ ಲೇಖಗಳು ನಾಶವೊಂದುವವು. ಲೇಖಗಳು ಯಾಕೆ ನಿರಾಕರಿಸಲ್ಪಟ್ಟವೆಂಬದನ್ನು ಲೇಖಕರಿಗೆ ತಿಳಿಸಲು ಸಂಪಾದಕರು ಬಾಧ್ಯರಲ್ಲ.

— ಸಂಪಾದಕ ಕನ್ನಡಿಗ. —

ಲೋಕಬಂಧು

ಈ ವಾರಪತ್ರವು ಧಾರವಾಡದಲ್ಲಿ ಲಕ್ಷ್ಮಣ ರಾಮಚಂದ್ರ ಐರಣಿ ಇವರ ಸಂಪಾದಕತ್ವದ ಕೆಳಗೆ ಪ್ರತಿ ರವಿವಾರ ಹೊರಡುತ್ತಿದೆ. ಇದರಲ್ಲಿ ರಾಜಕೀಯ ಸಾಮಾಜಿಕ ಔದ್ಯೋಗಿಗ, ಶೈಕ್ಷಣಿಕ ಮುಂತಾದ ವಿಷಯಗಳು ಚನ್ನಾಗಿ ಪ್ರತಿಪಾದಿಸಲ್ಪಡುವವಲ್ಲದೆ ಎಲ್ಲ ಪ್ರಚಲಿತ ಸಂಗತಿಗಳು ಸುಲಭ ಭಾಷೆಯಲ್ಲಿ ಬರೆಯಲ್ಪಡುವವು.

ವಾರ್ಷಿಕ ವರ್ಗಣಿ. ಮುಂಗಡ
೩-೮-೦

ಮ್ಯಾನೇಜರ.
ಲೋಕಬಂಧು ಆ. ಧಾರವಾಡ.

ಮೈಸೂರ ಕ್ರಾನಿಕಲ್ ಬೆಂಗಳೂರ.

ಮೈಸೂರ ದೇಶದಲ್ಲಿಯ ರಾಷ್ಟ್ರೀಯ ಪಕ್ಷದ ವಾರಪತ್ರಿಕೆಯೆಂದರೆ ಇದೇ ಅಖಂಡ ಕರ್ನಾಟಕದ ದೃಷ್ಟಿಯುಳ್ಳ ಮೈಸೂರಲ್ಲಿಯ ಪ್ರತಿಕೆಯೆಂದರೆ ಇದೇ. ವಾ. ವಂ. ೨—೮—೦

ಮ್ಯಾನೇಜರ.

ಈ ಪತ್ರಿಕೆಯು ಸಂಗನಬಸಪ್ಪ ರಾಮರಾವ ಮುಕ್ತಳಾವ ಶ್ರೀನಿವಾಸರಾವ ಇವರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು ಪ್ರತಿ ೪೦೦೦.

ರ. ನಂ. ಬಿ. ೧೯೪೭ ನಾ ಬೆಲೆ ೧—೪—ಪ್ರತಿ

ಕನ್ನಡಿಗ.

ಜಯ ಕರ್ನಾಟಕ

ಇದು ಕನ್ನಡ ಸಾಹಿತ್ಯ ಸಮಾಜ ಜೀವನದ ಪತ್ರಿಕೆ

ವಾರ್ಷಿಕ ವರ್ಗಣಿ ೩-೦ | ಷಣ್ಮಾಸಿಕ ವರ್ಗಣಿ ೧-೮

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿ|| ಜ್ಯೇಷ್ಠ ಶುದ್ಧ ೧೩ ಶಕೆ ೧೮೫೭. ತಾ|| ೧೪ ೬ ೧೯೩೫. | ಸಂಚಿಕೆ ೧೧

ಸಂಪಾದಕರ ಭೂಮಿ.

ಎದ್ದರೆ ಕನ್ನಡ ಕುಳಿತರೆ ಕನ್ನಡ ನುಡಿದರೆ ಕನ್ನಡವು ।
ಹೃದ್ಯವು ಕನ್ನಡ ಉದ್ಯಮ ಕನ್ನಡ- ಕನ್ನಡ- ಕನ್ನಡವು ।
ಕನಸು ಮನಸಿನೊಳು ಕನ್ನಡ ಕನ್ನಡ ನಿದ್ದೆಯು ಕನ್ನಡವು ।
ಕಿನಿಸು ಕನ್ನಡವು ಜೀವಿತ ಕನ್ನಡ ಎಲ್ಲವು ಕನ್ನಡವು ॥

—ಕೈ. ನಗರ ಕವಿ

"**ಕನ್ನಡಿಗನ ಕುತ್ಸಿತ ಟೀಕೆ**" ಎಂಬ ಶಿರೋಲೇಖದ ಕೆಳಗೆ ಕರ್ನಾಟಕ ಟಾಯಿಮ್ಸದಲ್ಲಿ ಒಂದು ಲೇಖವು ಪ್ರಸಿದ್ಧವಾಗಿದೆ. ಬಾಗಲಕೋಟೆಯ 'ಓರ್ವ ಸಮಾಜ ಸೇವಕನು' ಅದನ್ನು ಬರೆದಿರುವನು. ಕುತ್ಸಿತ ಟೀಕೆಯ ಕಲ್ಪನೆಯು ಕೂಡ "ಕನ್ನಡಿಗ" ನಿಗಿಲ್ಲವಾದ್ದರಿಂದ ನಮ್ಮ ಮೇಲೆ ಕುತ್ಸಿತತನವನ್ನು ಹೊರಿಸಿದ್ದನ್ನು ಕಂಡು ನಮಗೆ ಕೌತುಕವೆನಿಸುತ್ತದೆ. ಬಾಗಲಕೋಟೆಯಲ್ಲಿ ವೀರಶೈವ ಸಮಾಜದೊಳಗೆ ಎರಡು ಪಂಗಡಗಳಿವೆ. ಪ್ರಮುಖ ಪಂಗಡಗಳವೆಂಬದನ್ನು ಬಾಗಲಕೋಟೆಯ ಜನರಲ್ಲದೇ ಹೊರಗಿನ ಅಖಂಡ ವೀರಶೈವ ಸಮಾಜವೇ ಬಲ್ಲದು. ಆ ಬಗ್ಗೆ ನಾವೇನು ಹೇಳಬೇಕಾಗಿಲ್ಲ. ಈ ಪಂಗಡಗಳ ವೈಮನಸ್ಸಿನಿಂದ ಇಲ್ಲಿ ಪ್ರತಿಯೊಂದು ಸಾರ್ವಜನಿಕ ವಿಷಯದಲ್ಲಿಯೂ ತೊಂದರೆಯುಂಟಾಗುತ್ತಿರುವದು ಎಲ್ಲರಿಗೂ ಗೊತ್ತಿದ್ದ ಮಾತು. ಅದು ಬಸವೇಶ್ವರ ಹಾಯಸ್ಕೂಲದಲ್ಲಿ ಸಹ ಸೇರಿದೆಂಬದಾಗಿ ನಮ್ಮ ಕಲ್ಪನೆಯಿದೆ. ಆದರೆ ಓರ್ವ ಸಮಾಜ ಸೇವಕನು ಅದು ಬಸವೇಶ್ವರ ಹಾಯಸ್ಕೂಲಿನಲ್ಲಿ ಇರುವದಿಲ್ಲವೆಂಬದಾಗಿ ಉಗ್ರ ಕರ್ನಾಟಕ ಟಾಯಿಮ್ಸದಲ್ಲಿ ಬರೆದಿರುವನು. ನಾವು ಈ ಬಗ್ಗೆ ಏನೂ ಆಕ್ಷೇಪ ತೆಗೆದುಕೊಳ್ಳದೇ ಈ ವಿಧಾನವನ್ನು ಅತ್ಯಾನಂದದಿಂದ ಸ್ವೀಕರಿಸಿ, ಬಸವೇಶ್ವರ ಹಾಯಸ್ಕೂಲಿನಲ್ಲಿ ಐಕ್ಯಯಿದೆ ಎಂಬದಾಗಿ ನಡೆಯುವೆವು. ಆದರೆ ಬಸವೇಶ್ವರ ಶಾಲೆಯ ಅಂತರ್ವ್ಯವಸ್ಥೆಯು ಉತ್ತಮವಾಗಿದೆಂಬದಾಗಿ ಮಾಡಿದ ವಿಧಾನಕ್ಕೆ ಸಮ್ಮತಿಸಲಾರೆವು. ಬಸವೇಶ್ವರ ಹಾಯಸ್ಕೂಲಿಗೆ ಕಾಯಂ ಶಿಕ್ಷಕರೆಷ್ಟು ಜನರಿರುವರು? ಬೇರೆ ಸ್ಥಳಗಳಲ್ಲಿಯ ಶಿಕ್ಷಣ ಸಂಸ್ಥೆಗಳಿಗೆ ಆಜೀವ ಸಭಾಸದರಾದ ಶಿಕ್ಷಕರು ಇರುವಂತೆ ಬಸವೇಶ್ವರ ಹಾಯಸ್ಕೂಲಿಗೆ ಒಬ್ಬರಾದರೂ ಇರುವರೊ? ಪದವೀಧರರು ಸಹಾಯಕ ಶಿಕ್ಷಕರಾಗಿಯೂ ಪದವೀಧರರಲ್ಲದಿದ್ದವರು ಹೆಡ್‌ಮಾಸ್ತರ ಅಥವಾ ಪ್ರಿನ್ಸಿಪಾಲರಾಗಿಯೂ ಇರುವದು ಬಸವೇಶ್ವರ ಹಾಯಸ್ಕೂಲಿನ ಹೊರತಾಗಿ ಮತ್ತೆಲ್ಲಿಯಾದರೂ ಕಾಣಬರುವದೋ? ಮೇಲಿಂದ ಮೇಲೆ ಶಿಕ್ಷಕರು ಅದಲು ಬದಲಾಗುತ್ತಿರುವ ಕಾರಣವೇನು? ಶಿಕ್ಷಕರು ಮೇಲಿಂದ ಮೇಲೆ ಬದಲಾಗುವದು ಶಿಕ್ಷಣ ದೃಷ್ಟಿಯಿಂದ ಸರಿಯೋ? ಶಾಲೆಯ ವಿಚಾರಣೆಗಾಗಿ ಬಂದ ಇನಸ್ಪೆಕ್ಟರರು ಈ ಬಗ್ಗೆ ಶಾಲೆಯ ಪುಸ್ತಕಗಳಲ್ಲಿ ಏನು ಅಭಿಪ್ರಾಯ ಬರೆದಿರುವರೆಂಬದನ್ನು ಯಾರೂ ಮರೆಯಕೂಡದು. ಶಿಕ್ಷಕರಿಗೆ ಪ್ರತಿ ತಿಂಗಳ ಪಗಾರವನ್ನು ೧ನೇ ತಾ|| ಕೊಡುವದನ್ನು ಬಿಟ್ಟು ಅವರಿಗೆ ಅತ್ತಿಂದಿತ್ತ ಇತ್ತಿಂದತ್ತ ಓಡಾಡಿಸಿ ೧ನೇ ತಾ|| ಕೊಡುವ ಪಗಾರವನ್ನು ತಿಂಗಳ ಕೊನೆಗೆ ಕೊಡುವ ಪದ್ಧತಿಯು ಎಲ್ಲಿಯದೋ? ವರ್ಗಗಳಲ್ಲಿ ವಿದ್ಯಾರ್ಥಿಗಳ ಸಮಕ್ಷಮವಾಗಿ ಹೆಡ್ ಮಾಸ್ತರರು ಉಳಿದ ಶಿಕ್ಷಕರಿಗೆ ಏನಾದರೂ ಒದರಾಡುವದು ಯಾವ ಶಿಸ್ತು? ಬಸವೇಶ್ವರ ಹಾಯಸ್ಕೂಲು ಹೊರಟಾಗಿನಿಂದ ಎಷ್ಟು ಜನ ಶಿಕ್ಷಕರು ಶಾಲೆಗೆ ಬಂದರು, ಅವರಲ್ಲಿ ಅಭಿಮಾನದಿಂದ ಈ ವರೆಗೆ ಎಷ್ಟು ಜನರಿರುವರು, ಅವರು ಇರದಿದ್ದರೆ ಹೀಗೆ ಬಿಟ್ಟು ಹೋದ ಕಾರಣವೇನು? ಇವನ್ನೆಲ್ಲ ಓರ್ವ ಸಮಾಜ ಸೇವಕನು ನಮಗೆ ತಿಳಿಸಿ ಹೇಳಬೇಕಾಗಿ ವಿನಂತಿಯಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಮೊದಲು ಶಿಕ್ಷಕರು ಸಂತುಷ್ಟರಾಗಿದ್ದು, ಆ ಸಂಸ್ಥೆಯ ಬಗ್ಗೆ ಅಭಿಮಾನ ಹಿಡಿದವರಾಗಬೇಕು. ಅಂದರೆ ಆ ಸಂಸ್ಥೆಯು ಊರ್ಜಿತಾವಸ್ಥೆಯನ್ನು ಹೊಂದುವದು. ಈ ಸಂಗತಿಯನ್ನು ಬಸವೇಶ್ವರ ಹಾಯಸ್ಕೂಲಿನವರು ದುರ್ಲಕ್ಷಿಸಿದ್ದರಿಂದ ಅಲ್ಲಿಯ ಶಿಕ್ಷಣ ಕ್ರಮಕ್ಕೆ ಕುಂದು ಉಂಟಾಗಿದೆ. ಆದ್ದರಿಂದಲೇ ಬಸವೇಶ್ವರ ಹಾಯಸ್ಕೂಲಿಗೆ ಪಾಲಕರು ತಮ್ಮ ಮಕ್ಕಳನ್ನು ಕಳುಹಿಸಲು ಹಿಂದು ಮುಂದು ನೋಡುವರು. ಬಸವೇಶ್ವರ ಹಾಯಸ್ಕೂಲು ಲಿಂಗಾಯತರದಾಗಿರುವದರಿಂದ ನಾವು ಹೀಗೆ ಬರೆದಿರುವೆವೆಂದೂ ಓರ್ವ ಸಮಾಜ ಸೇವಕನು ಅಂದರೆ ಅದು ಸರಿಯಾಗಿಲ್ಲ. ಲಿಂಗಾಯತರ ಹಾಯಸ್ಕೂಲವೆಂಬ ಇಷ್ಟೇ ಕಾರಣದಿಂದ ನಾವು ಎಂದಿಗೂ ಆ ಬಗ್ಗೆ ಆಕ್ಷೇಪವನ್ನು ತೆಗೆದು ಕೊಳ್ಳಲಾರೆವು. ಬಾಗಲಕೋಟೆಯಲ್ಲಿ ವೀರಶೈವರು ಹಾಯಸ್ಕೂಲನ್ನು ಮಾಡಿದ್ದಕ್ಕಾಗಿ ನಮಗೆ ಸಂತೋಷವಿದೆ. ಆದರೆ ಅದು ಯೋಗ್ಯ ಶಿಸ್ತಿನಿಂದ ನಡೆಯಬೇಕಾಗಿ ನಮ್ಮ ಇಚ್ಛೆಯಿದೆ. ಇನ್ನು ಮುನಸಿಪಾಲಿಟಿ ಹಾಯಸ್ಕೂಲ ಬ್ರಾಹ್ಮಣರದಿದ್ದದರಿಂದ ಅಲ್ಲಿಯ ದೋಷಗಳನ್ನು ನಾವು ಹೊರಕ್ಕೆ ಎಳೆಯುವದಿಲ್ಲವೆಂಬದು ಅಸತ್ಯವಾದುದು. "ಕನ್ನಡಿಗನಿಗೆ" ಬ್ರಾಹ್ಮಣ ಬ್ರಾಹ್ಮಣೇತರ ಪಕ್ಷದ ಹೊಲಸು ಬಡಿದಾಟ ಬೇಕಾಗಿಲ್ಲ. ಎಲ್ಲಿ ಕುಂದು ಕೊರತೆಗಳಿವೆಯೋ ಅವು ಪ್ರಸಂಗಾನುಸಾರವಾಗಿ ಹೊರಗೆಳೆಯಲ್ಪಡುವವು. ಮುನಸೀಪಾಲಿಟಿಯ ಶಾಲೆಯು ೩೦ ವರ್ಷಗಳಿಂದ ನಡೆದು ಬಂದಿದ್ದರೂ, ಅವರು ಈ ವರೆಗೆ ಅದನ್ನು ಹಾಯಸ್ಕೂಲ ಮಾಡಿರದಿದ್ದದ್ದು ಅಕ್ಷಮ್ಯವಾದ ಅಪರಾಧವು ಅದು ಹಿಂದಕ್ಕೇ ಹಾಯಸ್ಕೂಲು ಆಗಿರಬೇಕಿದ್ದಿತು. ಆದರೆ ಹಿಂದೆ ಆಗಿ ಹೋದ ಸಭಾಸದರ ಅಲಕ್ಷ್ಯದ ಬಗ್ಗೆ ಈ ದಿನ ಬರೆದು ಮಾಡುವದೇನಿದೆ? ಮುನಸಿಪಾಲಿಟಿಯಲ್ಲಿ ಬ್ರಾಹ್ಮಣರು ಅಧಿಕಾರಾರೂಢರಾಗಿದ್ದುದೂ ಹಲಕೆಲವು ಲಿಂಗಾಯತರನ್ನು ಅಧಿಕಾರವಾಕಿ ತೋರಿಸಿ ತಮ್ಮ ಕಡೆಗೆ ಎಳೆದುಕೊಂಡರೆಂಬದೂ ಅವರು

ಬಸವೇಶ್ವರ ಶಾಲೆಯ ಹೆಚ್ಚಳವನ್ನು ಸಹಿಸದೇ ಬೇರೊಂದು ಹಾಯ ಸ್ಕೂಲನ್ನು ತೆಗೆದರೆಂಬದೂ, ಹಿಂದಕ್ಕೆ ಇಲ್ಲಿ ತೆರೆಯಲ್ಪಟ್ಟ ರಾಷ್ಟ್ರೀಯ ಶಾಲೆಯು ಬಂದಾಗಿದ್ದರಿಂದ ಬ್ರಾಹ್ಮಣರ ಮೇಲೆ ಬ್ರಹ್ಮಾಸ್ತ್ರವನ್ನು ಬಿಟ್ಟದ್ದೂ, "ಓರ್ವ ಸಮಾಜ ಸೇವಕನ" ಮನದಲ್ಲಿಯೇ ಇರಲಿ. ಅವು ಈ ವಿಷಯಕ್ಕೆ ಸಂಬಂಧಪಟ್ಟವಲ್ಲ. ಆದುದರಿಂದ ನಾವು ಅವನ್ನು ಎತ್ತಲು ಇಚ್ಛಿಸುವದಿಲ್ಲ. ಮುಂದೆ ಪ್ರಸಂಗ ಬಂದಾಗ ನೋಡುವಾ. ಸಾರ್ವಜನಿಕ ರೀತಿಯಿಂದ ಯಾವದಾದರೊಂದು ವಿಷಯವನ್ನು ವೃತ್ತಪತ್ರದಲ್ಲಿ ವೇಚಿಸುವದಾದರೆ, ಶಾಂತತನದಿಂದ, ವಿಷಯದ ಕಡೆಗೆ ಲಕ್ಷ್ಯವಿಟ್ಟು, ಅನ್ಯ ಸಂಗತಿಗಳನ್ನು ವಿನಾಕಾರಣವಾಗಿ ಹಳಿಯದೇ, ಸಾತ್ವಿಕ ವೃತ್ತಿಯಿಂದ ಟೀಕಿಸುವದು ಉತ್ತಮಪಕ್ಷ ಆದುದರಿಂದ 'ಸಮಾಜ ಸೇವಕನು ಇತ್ತ ಕಡೆಗೆ ಗಮನ ಕೊಡಬೇಕಾಗಿ ಸೂಚಿಸುತ್ತೇವೆ. ಆದರೆ ಬಾಯಿ ಸಡಿಲ ಬಿಟ್ಟು, ಮನಬಂದಂತೆ ಬೈಯ್ಯುವದೇ ಉತ್ತಮಪಕ್ಷವೆಂದು 'ಸಮಾಜ ಸೇವಕನು' ಅಭಿಪ್ರಾಯ ಪಟ್ಟರೆ, ಅವನು ಆ ತಪ್ಪು ದಾರಿಯನ್ನು ಬೇಗನೇ ಬದಲಿಸಬೇಕಾಗಿ ಪರಮೇಶ್ವರನಲ್ಲಿ ಪ್ರಾರ್ಥಿಸುತ್ತೇವೆ. ಇನ್ನು ಹೊಸದಾಗಿ ಹೊರಟ ಹಾಯಸ್ಕೂಲು ಬ್ರಾಹ್ಮಣರದಿದ್ದದರಿಂದ ನಾವು ಅದರ ದೋಷಗಳನ್ನು ಮುಚ್ಚುವವೆಂದೂ, ಆ ಹಾಯಸ್ಕೂಲು ಒಳ್ಳೇ ಊರ್ಜಿತಾವಸ್ಥೆಯಲ್ಲಿರದೇ ಯಿದ್ದರೂ ಅದು ಊರ್ಜಿತಾವಸ್ಥೆಯಲ್ಲಿದೆ ಎಂದು ನಾವು ವಿಧಾನ ಮಾಡುವೆವೆಂದೂ ಸಮಾಜ ಸೇವಕನು ತಿಳಿದಿದ್ದರೆ ಅದು ಶುದ್ಧವಾಗಿ ತಪ್ಪು. ಇಂಥದೊಂದು ಸಂಸ್ಥೆಯು ಬ್ರಾಹ್ಮಣರದಾದ್ದರಿಂದ ಬ್ರಾಹ್ಮಣ ವರ್ಗಕ್ಕೆ ಸೇರಿದ ನಾವು ಆಬಗ್ಗೆ ಪಕ್ಷಪಾತ ದೃಷ್ಟಿಯಿಂದ ನೋಡುವೆವೆಂಬದು ಅಸತ್ಯವು. "ಕನ್ನಡಿಗನ" ಹಿಂದಿನ ಸಂಚಿಕೆಗಳನ್ನು ತೆಗೆದು ನೋಡಿದರೆ ಬ್ರಾಹ್ಮಣರಲ್ಲಿಯ ದೋಷಗಳನ್ನು ನಾವು ಹೊರಗೆ ಹಾಕಿರುವೆವೋ ಇಲ್ಲವೋ ತಾನೇ ತಿಳಿಯುವದು. ಸ್ವಲ್ಪದರಲ್ಲಿ ಹೇಳಬೇಕಾದರೆ "ಕನ್ನಡಿಗನು" ನ್ಯಾಯವಿದ್ದುದಕ್ಕೆ ನ್ಯಾಯವೆಂದೂ ಅನ್ಯಾಯಕ್ಕೆ ಅನ್ಯಾಯವೆಂದೂ, ಜಾತಿ ಮತಗಳ ಕ್ಷುದ್ರ ಅಭಿಮಾನ ಹಿಡಿಯದೇ, ಹೇಳದೇ ಬಿಡನು.

ಇಷ್ಟು **ದಿನಗಳ ವರೆಗೆ ಕೊಳೆಯುತ್ತ ಬಿದ್ದ** ವರ್ತಕರ '**ರಿಫಂಡ**' ಅರ್ಜಿಗಳ ನಿಕಾಲೆಯು ಇದೇ ೩ ನೇ ತಾ|| ದಿವಸ ಕೂಡಿದ ಮ್ಯುನಸಿಪಾಲಿಟಿ ಜನರಲ್ ಮೀಟಿಂಗದಲ್ಲಿ ಆಯಿತು. ಇಲ್ಲಿಯ ವ್ಯಾಪಾರಸ್ಥರು ಬೇರೆ ಬೇರೆ ಸ್ಥಳಗಳಿಂದ ಸರಕುಗಳನ್ನು ವ್ಯಾಪಾರಕ್ಕಾಗಿ ಇಲ್ಲಿಗೆ ತರಿಸುವಾಗ ಮುನಸಿಪಾಲಿಟಿಗೆ ಜಕಾತಿಯನ್ನು ಕೊಡಬೇಕಾಗುವದು. ಆದರೆ ಆ ಸರಕುಗಳನ್ನು ಇಲ್ಲಿಯೇ ಮಾರದೆ ಬೇರೆ ಕಡೆಗೆ ಮಾರಾಟಕ್ಕೆ ಕಳಿಸಿದರೆ ಆ ಸರುಕಗಳ ಮೇಲೆ ಕೊಟ್ಟ ಜಕಾತಿಯ ಹಣವನ್ನು ಮುನಸಿಪಾಲಿಟಿಯವರು ಮರಳಿ ಕೊಡಬೇಕಾಗುವದು. ಈ ಹಣಕ್ಕೆ 'ರಿಫಂಡ' ಅನ್ನುವರು ಆದರೆ ಇತ್ತಿತ್ತಲಾಗಿ ಹಳ್ಳಿಯ ಜನರು ಇಲ್ಲಿಯ ಅಂಗಡಿಗಳಲ್ಲಿ ಸರಕುಗಳನ್ನು ಕೊಂಡು ತಮ್ಮೂರಿಗೆ ಗಾಡಿಗಳಲ್ಲಿ ತೆಗೆದುಕೊಂಡು ಹೋಗುವಾಗ, ಇಲ್ಲಿಯ ವ್ಯಾಪಾರಸ್ಥರು ಆ ಸರಕುಗಳ ಮೇಲೆ ಕೊಟ್ಟ ಜಕಾತಿಯನ್ನು ತಮಗೆ ಮರಳಿ ಕೊಡಬೇಕೆಂದು ಕೇಳಿಕೊಂಡಿದ್ದರು. ನಿಜವಾಗಿ ಆ 'ರಿಫಂಡಿ' ನ ಹಣವು ಹಳ್ಳಿಯ ಜನರಿಗೆ ಮುಟ್ಟತಕ್ಕದ್ದು, ಯಾಕಂದರೆ ಇಲ್ಲಿಯ ವರ್ತಕರು ಸರಕುಗಳ ಮೇಲೆ ಕೊಟ್ಟ ಜಕಾತಿಯನ್ನೂ ತಮ್ಮ ಲಾಭವನ್ನೂ ಸೇರಿಸಿಯೇ ಆ ಸರಕುಗಳನ್ನು ಹಳ್ಳಿಯವರಿಗೆ ಮಾರುತ್ತಿರುವರು. ಹೀಗಿದ್ದು 'ರಿಫಂಡಿನ' ಹಣವನ್ನು ಇಲ್ಲಿಯ ವ್ಯಾಪಾರಸ್ಥರು ಬೇಡುವದು ಅನ್ಯಾಯವಾದದ್ದು, ಕಾಯದೆಗೆ ವಿರುದ್ಧ ವಾದದ್ದು. ಹೀಗಿದ್ದರೂ ಬುಧವಾರ ದಿವಸ ಮು|| ಜನರಲ್ ಮೀಟಿಂಗದಲ್ಲಿ ವರ್ತಕರ ಲೆಕ್ಕವನ್ನು ನೋಡದೆ ಅವರು ಬೇಡಿದ 'ರಿಫಂಡಿ' ನ ಹಣದಲ್ಲಿ ರೂಪಾಯಿಲ್ಲಿಗೆ ೧೪ ಆಣೆಗಳನ್ನು ಕೊಡಬೇಕೆಂದು ಗೊತ್ತುಮಾಡಿರುವರು. ಇದು ತೀರ ಅನ್ಯಾಯವು ಕಾಯದೆಗೆ ವಿರುದ್ಧವು. ಆ ಸಭೆಯಲ್ಲಿ ಇದಕ್ಕಾಗಿ ಅನುಕೂಲ ಮತಕೊಟ್ಟ ಸಭಾಸದರೇ ಈ ನಿರ್ಣಯಕ್ಕೆ ಜಬಾಬದಾರರು ಅವರ ಮೇಲೆ ಮುನಸಿಪಾಲಿಟಿ ಹಣವನ್ನು ಅಪವ್ಯಯ ಮಾಡಿದ್ದಕ್ಕಾಗಿ ಮುನಶಿಪಾಲಿಟಿಗೆ ತೆರಿಗೆ ಕೊಡುವವರು ದಿವಾಣಿ ಕೋರ್ಟಿನಲ್ಲಿ ದಾವೆಯನ್ನು ತಂದರೆ ನಡೆಯುವಂತಿದೆ. ಆದ್ದರಿಂದ ಇಲ್ಲಿಯ ತೆರಿಗೆ ಕೊಡುವವರು ಹಾಗೆ ಮಾಡಿ ಮುನಸಿಪಾಲಿಟಿಯ ಹಣವನ್ನು ಉಳಿಸಿಕೊಳ್ಳಬೇಕೆಂದು ನಾವು ಅವರಿಗೆ ಆಗ್ರಹಪೂರ್ವಕವಾಗಿ ಸೂಚಿಸುತ್ತೇವೆ.

|| ಓಂ ||

"ಕಾರಹುಣ್ಣಿವೆಯ ಕರಿ."

ಅಥವಾ

ಬೇಟೆಯಾಟ.

ಲೇ:— ಗುರು.

[ವಾ. ದೀ. ದ್ವಿ]

ಕಾರಹುಣ್ಣಿವೆಯಾಣೆ ಮಾರನೇ ದಿವಸಕ್ಕೆ ಮೂರಿಮೃಗಗಳಿಗೆ ಜನರು ॥
ಕರ್ರನವನು ತೋರಿ ಘೋರ ದುಃಖವ ಕೊಟ್ಟು ಕೊಲ್ಲುವರು ಮೃಗ
ಕೆ ಜನರು ॥ ೧ ॥
ಮೃಗಗಳಂದದಿ ನಿಮಗೆ ಕೋಡಿಯುಹಚ್ಚಿದ ಮೇಲೆ ಹೇಗೆ ಆಗುವದು
ವ ನಮ್ಮ ?
ಹಾಗೆಯೇ ಬಗರಿ ಮೊಲ ಮುಂತಾದ ಪ್ರಾಣಿಗಳ ಬಡಿಯೊ ! ಮರಗು
ವದು ಮನವು ॥ ೨ ॥
ಬೇಟೆಯೆಂದರೆ ಪ್ರಾಣಿಗಳನು ಕೊಲ್ಲುವದಲ್ಲ ಸಿಟ್ಟನ್ನು ಕೊಲ್ಲಬೇಕು ॥
ಕಾಟವಾಗಿರುವಂಥ ಕಾಮವಾಸನೆಯನ್ನು ಕೈಯಲ್ಲಿ ಕಟ್ಟಬೇಕು ॥ ೩ ॥
ದುಷ್ಟ ಮೃಗವಾಗಿರುವ ಕೆಟ್ಟಗುಣವನು ಹಿಡಿದು ಕಟ್ಟಿ ಬಡಿಬಡಿದು
ಕೊಂದು ॥
ಶಿಷ್ಟ ಜನರೆಲ್ಲ ನೋಡುವ ಹಾಗೆ ಮೆರೆಸಿರಿ ಊರೊಳಗೆ ನೀವು ಬಂದು
॥ ೪ ॥

"ಅಹಿಂಸೆ"

ತನ್ನಂತೆ ಸರ್ವಪ್ರಾಣಿಗ— ।
ಳನ್ನು ತಿಳಿದು ಜೀವಹಿಂಸೆ ಮಾಡದೆ ನೀನು ॥
ಸನ್ನಿಯ ಮಾರ್ಗದಿ ನಡೆದು ।
ಉನ್ನತ ಪದವಿಯನು ಪಡೆ ಅಹಿಂಸಾ ವ್ರತದಿ ॥ ೧ ॥

'ಕನ್ನಡಿಗ'ನ ಶ್ರೇಯಃ ಪ್ರಾರ್ಥನೆ

— ಕಂದಂ —

ಕನ್ನಡ ಕನ್ನಡ ಕಂದಂ ।
"ಕನ್ನಡಿಗಂ" ಪಂಬಲಿಸುಕೆ ಸಂತತವೊಲವಿಂ ॥
ಚೆನ್ನಹ ಕನ್ನಡದಾ ನುಡಿ ।
ವೆಣ್ಣಿಂ ನಲಿವುದನಿನಿಂದೆ ಲಂಕೆಯು ಪ್ಪೊಲ್ ॥ ೧ ॥

ಹರಿ ಹರಿ ಯುಕ್ತವಗೆಯ್ಯು ।
ತ್ತಿರುವಂ, ಮೇಣ್ ಕನ್ನಡಿಗರ ಕರೆ ಕರೆದೆಸಗಂ ॥
ಕರಗೊಡಿರೆಂದೊರೆವಂ, ಸಿರಿ ।
ಪರನೊಲವಿಂದಾವರಿಸುಗೆ ಸಜ್ಜನರವನಂ ॥ ೨ ॥

ಕನ್ನಡದ ಅಭಿಮಾನ ವಿರಲಿ ! 'ಕನ್ನಡಿಗ'ನಲ್ಲಿಯ ಮೌಲ್ಯದ ಲೇಖನಗಳನ್ನೋದಿರಿ ! ಸ್ವರ್ಣ ಗೊಂಡಿರಿ !

ದೇಶೀ ರಾಜ್ಯಗಳು

[ಲೇ. ಮ ಗಾಂಧಿ. ನವಜೀವನ]

" ನಾವು ದೇಶೀ ರಾಜ್ಯಗಳ (ಸಂಸ್ಥಾನಗಳ) ಅಸ್ತಿತ್ವವನ್ನಿಚ್ಛಿಸುತ್ತೀರಿ. ಆದರೆ, ನಿಜವಾಗಿ ನೋಡಿದರೆ, ಏಕತಂತ್ರ ಸತ್ತೆಯಿಂದ ಪ್ರಜಾಪಾಲನೆಯು ಉಂಟಾಗುತ್ತದೆ. ಸತ್ತೆಯು ಮಧ್ಯವಂಶ ಮೂಲಕವಾಗಿ ಬರುವದು. ಯಾವನಾದರೊಬ್ಬ ಅರಸನು ಸಜ್ಜನನಾಗಿದ್ದರೆ ಆತನ ಮಕ್ಕಳು ದುಷ್ಟರಾಗಿರುವರು. ಇದೇ ಅರಸನೇ ಬಹಳ ದಿನ ಒಳ್ಳೆಯವನಾಗಿದ್ದರೆ ಮತ್ತೊಂದು ದಿನ ಕೆಟ್ಟವನಾಗಿರುವನು. ಇಂಥ ಅರಸರ ಅಸ್ತಿತ್ವವು ಇಚ್ಛಿಸಲು ಯೋಗ್ಯವಾಗಿರುವದೋ ? "

ಈ ಪ್ರಶ್ನವನ್ನು ಒಬ್ಬ ಗೃಹಸ್ಥರು ಮಾಡಿರುವರು. ಲೇಖಕನ ಬರಹದಲ್ಲಿ ಎಷ್ಟೋ ಸತ್ಯವಿರುವದು, ಆದರೆ ಈ ಪ್ರಶ್ನಕ್ಕೆ ಎರಡನೇ ಪಕ್ಷವೂ ಇರುವದು. ಯಾವ ಪ್ರಜೆಗಳಲ್ಲಿ ಸತ್ವವಿರುವದೊ ಆ ಪ್ರಜೆಗಳ ಅರಸನು ಅನ್ಯಾಯಿ ಯಾಗಲರಿಯನು. ಸತ್ವಹೀನರಾದ ಪ್ರಜೆಗಳಿಗೆ ಅರಸನಿದ್ದರೇನು ಪ್ರಜಾಸತ್ತೆಯಿದ್ದರೇನು ? ಆದ್ದರಿಂದಲೇ ಹೇಗೆ ಪ್ರಜಗಳೋ ಹಾಗೆ ಅರಸನು ಎಂದು ನಾನು ಅನೇಕ ಸಾರೆ ಹೇಳಿದ್ದೇನೆ. ನಾನು ಎಲ್ಲೆಲ್ಲಿ ಅನ್ಯಾಯದ ಉದಾಹರಣೆಗಳನ್ನು ನೋಡಿರುವೆನೊ ಅಲ್ಲಲ್ಲಿ ಪ್ರಜೆಗಳ ದೋಷವನ್ನು ಅಂದರೆ ದುರ್ಬಲತೆಯನ್ನು ನೋಡಿರುವೆನು. ಪ್ರಜಾಸತ್ತಾತ್ಮಕ ರಾಜ್ಯಗಳಲ್ಲಿಯೂ ಅನ್ಯಾಯವಾಗುತ್ತಿರುವದನ್ನು ನೋಡಿದ್ದೇನೆ. ಎಲ್ಲಿ ಸಂಪೂರ್ಣವಾಗಿ ಅಂಧಾದುಂಧಿಯು (ಸ್ವೇಚ್ಛಾಚಾರವು) ನಡೆದಿರುತ್ತದೆಯೊ ಮತ್ತು ಎಲ್ಲಿ ಪ್ರತಿಯೊಬ್ಬ ಅಧಿಕಾರಿಯು ಸ್ವತಂತ್ರ ಅರಸಾಗಿರುವನೋ ಇಂಥ ಪ್ರಜಾಸತ್ತಾತ್ಮಕ ರಾಜ್ಯಗಳು ಭೂಮಿಯ ಮೇಲೆ ಅನೇಕವಾಗಿರುವವು.

ನಾನು ನಿರಂಕುಶ ರಾಜ್ಯದ ಅಸ್ತಿತ್ವವನ್ನಿಚ್ಛಿಸುವದಿಲ್ಲ. ಅಂಕುಶವು ಹೇಗಿರಬೇಕು ಮತ್ತು ಎಷ್ಟಿರಬೇಕೆಂಬುದನ್ನು ರಾಜರೂ ಪ್ರಜೆಗಳೂ ತಮ್ಮೊಳಗೆ ವಿಚಾರ ಮಾಡಿಕೊಳ್ಳತಕ್ಕದ್ದು. ಎಲ್ಲಿ ಪ್ರಜೆಗಳು ಜಾಗೃತರಾಗಿರುವರೋ ಅಲ್ಲಿ ಅನ್ಯಾಯವಾಗುವದು ಅಸಂಭವವು. ಎಲ್ಲಿ ಪ್ರಜೆಗಳು ನಿದ್ರಾವಶರಾಗಿರುವರೋ ಅಲ್ಲಿ ಬೇಕಾದ ರಾಜ್ಯತಂತ್ರವಿದ್ದರೂ ಅನ್ಯಾಯವಿದ್ದೇ ತೀರುವದು. ದೇಶೀ ರಾಜ್ಯಗಳು (ಸಂಸ್ಥಾನಗಳು) ನಿರ್ಮಲವಾಗಿಯೂ ಸಂಪೂರ್ಣ ನ್ಯಾಯವುಳ್ಳವುಗಳಾಗಿಯೂ ಆಗಬಲ್ಲವು. ಈ ಮಾತಿಗೆ ರಾಮರಾಜ್ಯವು ಸಾಕ್ಷಿಯಾಗಿರುವದು. ಈಗಿನ ದೇಶೀ ರಾಜ್ಯಗಳಲ್ಲಿ ಕಂಡು ಬರುವ ಅಪೂರ್ಣತೆಗೆ ಒತ್ತಟ್ಟಿಗೆ ಪ್ರಜೆಗಳ ಅಪೂರ್ಣತೆಯು ಮತ್ತೊತ್ತಟ್ಟಿಗೆ ಇಂಗ್ಲಿಶ್ ರಾಜ್ಯತಂತ್ರದ ಅಪೂರ್ಣತೆಯು ಕಾರಣವಾಗಿರುವದು. ಹೀಗಿರಲು ದೇಶೀ ರಾಜ್ಯಗಳಲ್ಲಿ ಕಂಡು ಬರುವ ಅಂಧಾದುಂಧಿಯ ಬಗ್ಗೆ ಆಶ್ಚರ್ಯವಾಗಲು ಕಾರಣವಿಲ್ಲ. ಆದರೆ ಈ ಎರಡು ಬಗೆಯ ನ್ಯೂನತೆಯಿಂದ ಅನಿಷ್ಟವಾದ ಪರಿಣಾಮವಾಗುತ್ತಿದ್ದರೂ ಎಷ್ಟೋ ದೇಶೀ ರಾಜ್ಯಗಳ ಕಾರಭಾರವು ಆದರಣೀಯವಾಗಿರುವದೆಂಬುದು ದೇಶೀ ರಾಜ್ಯಗಳ ನೀತಿಮತ್ತಾ ಸೂಚಕವಾಗಿರುವದಿಲ್ಲವೋ ? ದೇಶೀ ರಾಜ್ಯಗಳಲ್ಲಿ ಸಂಗ್ರಹಿಸಲು ಯೋಗ್ಯವಾದದ್ದೇನೂ ಇರುವದಿಲ್ಲ ಮತ್ತು ಇವುಗಳ ನಾಶವೇ ಇಷ್ಟವಾಗಿರುವದು ಎಂಬೀ ವಿಚಾರವು ಯೋಗ್ಯವಾದದ್ದೆಂದು ಹೇಳುವದೇ ನನ್ನ ಲೇಖನ ಉದ್ದೇಶವು. ದೇಶೀ ರಾಜ್ಯಗಳಲ್ಲಿ ಸುಧಾರಣೆಗಳನ್ನು ಮಾಡಲು ಅವಕಾಶವಿರುವದು ಮತ್ತು ಸುಧಾರಣೆಗಳಾಗುವದರಿಂದಲೇನೇ ಅವುಗಳು ಆದರ್ಶ ರಾಜ್ಯಗಳಾಗಬಲ್ಲವು. ಈಗಿದ್ದ ಸ್ಥಿತಿಯಲ್ಲಿಯೇ ಅವುಗಳಿರಬೇಕೆಂದು ಹೇಳುವದು ನನ್ನ ಉದ್ದೇಶವಿರದು.

ಬಹಿಷ್ಕರಿಸಲ್ಪಟ್ಟಿರೆ ?

(ಲೇ. ಮಹಾತ್ಮಾಗಾಂಧಿ ನ ಜೀವನ)

ಒಬ್ಬ ಮಿತ್ರರು ಬರೆದಿರುವರು: -

" ಈಗ ಕೆಲಕೆಲವು ಸಮಾಜಗಳು ಅಸ್ಪೃಶ್ಯರನ್ನು ಮುಟ್ಟಿದವನನ್ನು, ಆತನು ಎಷ್ಟೇ ಸಜ್ಜನನಾಗಿದ್ದರೂ, ಜಾತಿಯು ಹೊರಗಿಡುತ್ತವೆ. ಆದರೆ ಶಾಸ್ತ್ರಗಳು ಯಾವವನ್ನು ಮಹಾ ಪಾತಕಗಳೆಂದು ಹೇಳುತ್ತವೆಯೋ ಅಂಥ ಕೃತಿಗಳನ್ನು ಮಾಡುತ್ತಿರುವ ಜನರನ್ನು ಸಮಾಜದೊಳಗಿನ ಮಹಾಜನರು ಸ್ವಲ್ಪ ಕೂಡ ಧಿಕ್ಕರಿಸುವದಿಲ್ಲ. ಉದಾಹರಣಾರ್ಥವಾಗಿ, ಕನ್ಯಾವಿಕ್ರಯವು ಶಾಸ್ತ್ರದಿಂದ ಮಹಾ ಪಾತಕಗಳಲ್ಲಿ ಗಣಿಸಲ್ಪಟ್ಟಿದೆ ಆದಾಗ್ಯೂ ಕನ್ಯಾ ವಿಕ್ರಯ ಮಾಡುವ ಜನರನ್ನು ಕೇಳುವವರೇ ಇರುವದಿಲ್ಲ ಆದರೆ ಅಸ್ಪೃಶ್ಯತೆಯನ್ನು ಮನ್ನಿಸದಿದ್ದವರನ್ನು, ಅವರಿಗೆ ಆತ್ಮಸಮರ್ಥನೆಯ ಸಂಧಿಯನ್ನು ಕೂಡ ಕೊಡದೆ, ಮಹಾಜನರು ಬಹಿಷ್ಕರಿಸುವರು. ಪಂಚರ ಮುಖಾಂತರವಾಗಿ ನ್ಯಾಯ ತೀರಿಸಿಕೊಳ್ಳೋಣವೆಂದರೆ ಮಹಾ ಜನರು ಅದಕ್ಕೊಪ್ಪುವದಿಲ್ಲ ಈ ಸ್ಥಿತಿಯಲ್ಲಿ ಈ ಜುಲುಮೆಗಾರರನ್ನು ನ್ಯಾಯ ಕೋರ್ಟಿಗೆ ಜಗ್ಗುವದು ಉಚಿತವಾಗಬಹುದೋ ? "

ನಾನಂತೂ ಇದಕ್ಕೊಂದೇ ಉತ್ತರವನ್ನು ಕೊಡಬಲ್ಲೆನು. ಮಹಾಜನರು ಎಷ್ಟೇ ಜುಲುಮೆ ಮಾಡಿದರೂ ಅವರನ್ನು ಕೋರ್ಟಿಗೆ ಒಯ್ಯ ಕೂಡದು. ಅವರು ತಮ್ಮ ಮನಸ್ಸಿಗೆ ಬಂದ ಶಿಕ್ಷೆಯನ್ನು ಮಾಡಲಿ. ಆ ಶಿಕ್ಷೆಯನ್ನು ಅನುಭವಿಸುವದರಿಂದ ಮಹಾಜನರ ದೋಷವು ದುರ್ಬಲವಾಗುವದು ಮತ್ತು ಅವರಿಗೆ ಕಾಲಾಂತರದಿಂದ ಪಶ್ಚಾತ್ತಾಪವಾಗುವದು. ಇದಲ್ಲದೆ, ಎಲ್ಲಿ ಮಹಾಜನರು ಅನ್ಯಾಯ ಮಾಡುತ್ತಿರುವರೋ ಅಲ್ಲಿ ಬಹಿಷ್ಕಾರವು ಇಷ್ಟವಾದ ಮಾತಾಗಿರುವದು. ಯಾವ ಸಮಾಜದಲ್ಲಿ ಕನ್ಯಾವಿಕ್ರಯದ ಅತ್ಯಾಚಾರವು ನಡೆಯುವದೋ, ಯಾವ ಸಮಾಜದಲ್ಲಿ ದಂಭಕ್ಕೆ ಪ್ರತಿ ಬಂಧವಿಲ್ಲವೋ, ಯಾವ ಸಮಾಜದ ಮಹಾ ಜನರು ಮದ್ಯಪಾನ, ಮಾಂಸಸೇವನ ಮೊದಲಾದ ಕೃತ್ಯಗಳನ್ನು ಸಹಿಸುವರೋ ಆ ಸಮಾಜದಲ್ಲಿ ಇರುವದರಿಂದ ಯಾವ ಲಾಭವೂ ಇಲ್ಲ. ಸಮಾಜದಲ್ಲಿದ್ದು ಮನುಷ್ಯನು ಹಲಕೆಲವು ಅನುಕೂಲತೆಗಳನ್ನು ಪಡೆಯಬಹುದು. ಆದರೆ ಯಾವ ಸಮಾಜವು ಅನೀತಿಯುಳ್ಳದ್ದಾಗಿರುವದೋ ಅದನ್ನು ಬಿಟ್ಟು ದೂರಿರುವದೇ ಇಷ್ಟವು. ಯಾವ ನ್ಯಾಯದಿಂದ ನಾವು ಸರಕಾರದೊಡನೆ ಅಸಹಕಾರವನ್ನು ಅವಲಂಬಿಸಿರುವೆವೊ ಅದೇ ನ್ಯಾಯದಿಂದ ಸಮಾಜದೊಡನೆ ಅಸಹಕಾರವನ್ನು ಮಾಡಬಲ್ಲೆವು.

ಆದರೆ ಇಲ್ಲಿ ಆ ಪ್ರಶ್ನವೇ ಉದ್ಭವಿಸುವದಿಲ್ಲ. ಇಲ್ಲಿ ಸಮಾಜವೇ ಬಹಿಷ್ಕಾರ ಶಸ್ತ್ರವನ್ನು ಎತ್ತಿದೆ. ಈ ಬಹಿಷ್ಕಾರವನ್ನು ನಾವು ಆದರ ಪೂರ್ವಕವಾಗಿ ಸ್ವೀಕರಿಸತಕ್ಕದ್ದು. ಆದರೆ ಎಲ್ಲರಿಗೂ ಅದನ್ನು ಆದರ ಪೂರ್ವಕವಾಗಿ ಸ್ವೀಕರಿಸಲು ಬರುವದಿಲ್ಲ. ಯಾರು ಧರ್ಮವನ್ನು ಪಾಲಿಸುವರೊ, ಯಾರು ಸಮಾಜದ ಸೇವೆಯಲ್ಲಿ ನಿರತರಾಗಿರುವರೊ, ಯಾರು, ಸಮಾಜದ ನೀತಿವರ್ಧಕ ಶಾಸನಗಳನ್ನು ಯಾವಾಗಲು ಮನ್ನಿಸುವರೊ, ಮತ್ತು ಯಾರು ಸಂಯಮಿಗಳಾಗಿರುವರೊ, ಇಂಥವರೇ ಬಹಿಷ್ಕಾರವನ್ನು ಆದರಪೂರ್ವಕವಾಗಿ ಸ್ವೀಕರಿಸ ಬಲ್ಲರು. ಸ್ವಚ್ಛಂದಿಗಳಿಗೆ ಬಹಿಷ್ಕಾರದಿಂದ ಪೀಡೆಯಾಗುವದು. ಆದರೆ ಅಸ್ಪೃಶ್ಯತಾ ನಿವಾರಣೆಯ ಕಾರ್ಯವು ಸ್ವಚ್ಛಂದಿಗಳಿಗೋಸ್ಕರವಲ್ಲ, ಆ ಕೆಲಸವನ್ನು ಸಂಯಮಿಗಳು ಕೈಕೊಳ್ಳತಕ್ಕದ್ದಿರುವದು. ಅಸ್ಪೃಶ್ಯತೆಯ ನಾಶವು ಭೋಗವೃದ್ಧಿಗಾಗಿಯಲ್ಲ; ಆದರೆ ಸೇವೆಯ ಪ್ರಸಂಗಗಳನ್ನು ಹೆಚ್ಚಿಸುವದಕ್ಕಾಗಿ ಇರುವದು. ಸೇವಾ ಕಾರ್ಯದಿಂದ ಯಾವನನ್ನೂ ದೂರವಾಗಿಡದಿರಲು ಅಸ್ಪೃಶ್ಯತಾ ನಿವಾರಣೆಯು ಬೇಕಾಗಿರುವದು.

ಕನ್ನಡಿಗರ ಸೇವೆಯಲ್ಲಿಯೇ ನಿರತನಾದ " ಕನ್ನಡಿಗ " ನನ್ನು ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕು !

ಕರ್ನಾಟಕದ ಏಕೀಕರಣ

ಸಮಸ್ಯೆ. ೧

ಕರ್ನಾಟಕ ದೇಶವನ್ನೆಲ್ಲ ಸ್ಥೂಲವಾಗಿ ಬ್ರಿಟಿಶ ಜಿಲ್ಲೆಗಳು ಮತ್ತು ದೇಶೀಯ ಸಂಸ್ಥಾನಗಳೆಂದು ಎರಡು ವಿಭಾಗ ಮಾಡ ಬಹುದು ಬ್ರಿಟಿಶ ಜಿಲ್ಲೆಗಳನ್ನು ಮತ್ತೆ

(೧) ಕನ್ನಡವನ್ನೇ ಮಾತೃ ಭಾಷೆಯನ್ನಾಗಿಯೂ, ವ್ಯವಹಾರ ಭಾಷೆಯನ್ನಾಗಿಯೂ, ಮಾಡುವ ಬೆಳಗಾಂವಿ, ವಿಜಾಪೂರ,, ಕಾರವಾರ, ಧಾರವಾಡ, ಬಳ್ಳಾರಿ ಯಂತಹ ಅಪ್ಪಗನ್ನಡ ಜಿಲ್ಲೆಗಳೆಂದೂ ;

(೨) ತುಳು, ಕೊಂಕಣಿ, ಕೊಡಗ, ಬಡಗ ಭಾಷೆಗಳನ್ನು ಮಾತೃ ಭಾಷೆಯನ್ನಾಗಿಯೂ, ಕನ್ನಡವನ್ನು ವ್ಯವಹಾರ ಭಾಷೆಯನ್ನಾಗಿಯೂ ಮಾಡುವ ದಕ್ಷಿಣ ಕನ್ನಡ, ಕೊಡಗ, ನೀಲಗಿರಿ ಯಂತಹ ಕನ್ನಡ ಜಿಲ್ಲೆಗಳೆಂದೂ, ವಿಭಾಗಿಸ ಬಹುದು.

ದೇಶೀಯ ಸಂಸ್ಥಾನಗಳನ್ನು

(೧) ಬ್ರಿಟಿಶ ಸಾಮ್ರಾಜ್ಯಕ್ಕೊಳಗಾಗಿ ರಾಜ್ಯಾಂತರವಿಚಾರಗಳಲ್ಲಿ ಮಾತ್ರ ಸ್ವಾತಂತ್ರ್ಯವನ್ನು ಪಡೆದಿರುವ ಹೈದರಾಬಾದು ಮೈಸೂರಂತಹ ಶ್ರೇಷ್ಠ ಸಂಸ್ಥಾನಗಳೆಂದೂ ;

(೨) ಬಿದ್ದ ಅಗ್ನಿನ ರಾಜ್ಯಗಳ ಪ್ರಾಂತಿಕ ಸರಕಾರಗಳಿಗೆ ಸಂಬಂಧಿಸಿದ ಮುಧೋಳ, ಕುರಂದವಾಡ, ಅಕ್ಕಲಕೋಟೆ, ಮುಧೋಳ, ರಾಮದುರ್ಗ, ಜಮಖಂಡಿ, ಸಂಡೂರು ಸೊಂಡೂರಂತಹ ಕನ್ನಡ ಸಂಸ್ಥಾನಗಳೆಂದೂ ; ಅಥವಾ

(೧) ಮೈಸೂರಿನಂತೆ ಕನ್ನಡ ಅರಸರಿಂದ ಆಳಲ್ಪಡುತ್ತಿರುವ ಶುದ್ಧ ಕರ್ನಾಟಕ ಸಂಸ್ಥಾನಗಳು ;

(೨) ಸೊಂಡೂರು ಉತ್ತರ ಕರ್ನಾಟಕ ಸಂಸ್ಥಾನಗಳಂತೆ ಮರಾಟಿ ಪ್ರಭುಗಳಿಂದಾಳಲ್ಪಡುತ್ತಿರುವ ಶುದ್ಧ ಕರ್ನಾಟಕ ಸಂಸ್ಥಾನಗಳು ;

(೩) ಸಾಂಗಲಿ ಕೊಲ್ಹಾಪೂರದಂತೆ ಮರಾಟಿ ಪ್ರಭುಗಳ ಆಳಿಕೆಯಲ್ಲಿರುವ ಕನ್ನಡನಾಡನ್ನು ಆಕ್ರಮಿಸಿದ ಸಂಕೀರ್ಣ ಭಾಷಾ ಸಂಸ್ಥಾನಗಳು ;

(೪) ಹೈದರಾಬಾದ, ಸವಣೂರುಗಳಂತೆ ಮುಸಲ್ಮಾನ ಪ್ರಭುಗಳ ಆಳ್ವಿಕೆಗೆ ಒಳಗಾದ ಕನ್ನಡ ಸಂಸ್ಥಾನಗಳು ;

ಎಂಬದಾಗಿ ವಿಭಾಗಿಸ ಬಹುದು.

(೧) ಕರ್ನಾಟಕ ಪ್ರಾಂತ್ಯರಚನೆಯಂತಹ ಯೋಜನೆಯು ಚಿಕ್ಕ ದೇಶೀಯ ಸಂಸ್ಥಾನಗಳ ದೆಸೆಯಿಂದ ಅತ್ಯಂತ ಕಷ್ಟವಾದ ಸಮಸ್ಯೆಯಾಗಿ ಪರಿಣಮಿಸಿದೆ. ಆದರೆ ಈ ಸಮಸ್ಯೆಯನ್ನು ಪೂರಣ ಮಾಡುವದು ಅಸಾಧ್ಯವಾದುದೇನೂ ಅಲ್ಲ. ದೇಶೀಯ ಸಂಸ್ಥಾನಗಳ ಅಂತರಸ್ವಾತಂತ್ರ್ಯ ಮತ್ತು ಆ ಸಂಸ್ಥಾನಾಧಿಪತಿಗಳ ಸ್ಥಾನ ಮಾನಗಳನ್ನು ಉಳಿಸಿ, ಬ್ರಿಟಿಷ ಕರ್ನಾಟಕದೊಡನೆ ಅವುಗಳನ್ನು ಒಂದುಗೂಡಿಸಿ, ಸಂಯುಕ್ತ ಕರ್ನಾಟಕ ಸ್ವರಾಜ್ಯವನ್ನು (United States of Karnatka) ಕಟ್ಟುವುದು ಸಾಧ್ಯ, ಆದರೆ ಈ ರಾಜ್ಯವನ್ನು ಕಟ್ಟುವದಕ್ಕೆ ಪ್ರತಿಭಾ ಸಂಪನ್ನರಾದ ಸೂತ್ರಧಾರಗಳೂ (Architects) ಕಲಾವಿದರೂ (Artists) ರೂಪಕಾರಗಳೂ (Sculptors) ಬೇಕು. ಇತರ ಕನ್ನಡಿಗರೆಲ್ಲರೂ ಅವರಿಗೆ ಬೇಕಾದ ಸಲಕರಣೆಗಳನ್ನು ಒದಗಿಸಿ ಕೊಡಲು ಸನ್ನದ್ಧರಾಗಿರಬೇಕು ಅವರು ಹೇಳಿದ ಕೆಲಸ ಮಾಡಲು ಎಲ್ಲರೂ ಸಿದ್ಧರಾಗಿರಬೇಕು

೨ ದೇಶೀಯ ಸಂಸ್ಥಾನಗಳ ಪದವಿ.

(೨) ಹಿಂದುಸ್ಥಾನದಲ್ಲಿ ಈಗ ಇರುವ ದೇಶೀಯ ಸಂಸ್ಥಾನಗಳೆಲ್ಲವೂ ಒಂದಲ್ಲ ಒಂದು ಬಗೆಯಿಂದ ಅಧೀನ ರಾಜ್ಯಗಳು. ಬ್ರಿಟಿಷ ಸಾಮ್ರಾಜ್ಯ ಸೂತ್ರಗಳಿಂದ ಬದ್ಧವಾಗಿರುವವು. ಸಂಸ್ಥಾನಾಧಿಪತಿಗಳಿಗೆ ರಾಜತ್ವದ ಪೂರ್ಣ ಅಧಿಕಾರವಾಗಲಿ, ಆಡಳಿತದಲ್ಲಿ ಸಂಪೂರ್ಣ ಸ್ವಾತಂತ್ರ್ಯವಾಗಲಿ ಇದೆಯೆಂದು ಭಾವಿಸುವುದು ತಪ್ಪು ಸಂಸ್ಥಾನಾಧಿಪತಿಗಳೂ ಬ್ರಿಟಿಷ ಪ್ರಭುಗಳೂ ಪಕ್ಷ ಬಾಧ್ಯತೆಗಳಲ್ಲಿ ಸರಿಸಮಾನರಲ್ಲ. ಇತರ ಜನಾಂಗಗಳು ದೇಶೀಯ ಸಂಸ್ಥಾನಗಳನ್ನು ಸ್ವತಂತ್ರವೆಂದೆಣಿಸಿ, ಅವುಗಳಿಗೆ ರಾಜತ್ವದ ವ್ಯಕ್ತಿತ್ವವುಂಟೆಂದು ಭಾವಿಸಿಲ್ಲ. ಅಲ್ಲದೆ ಎಲ್ಲ ಸ್ವತಂತ್ರ ದೇಶಗಳಿಗೆ ಅನ್ವಯಿಸುವ ಪರಸ್ಪರ ರಾಷ್ಟ್ರೀಯ ಧರ್ಮದ ತತ್ವಗಳು (Principles of International Law) ದೇಶೀಯ ಸಂಸ್ಥಾನಗಳಿಗೆ ಅನ್ವಯವಾಗುವದಿಲ್ಲ. ನಮ್ಮ ದೇಶದವರಿಗೆ ಇದು ಚೆನ್ನಾಗಿ ಗೊತ್ತಿರಲಿಲ್ಲ.

ಈ ರಹಸ್ಯವು ಮಣಿಪುರ ಸಂಸ್ಥಾನದ ಪ್ರಕರಣದ ಸಂಬಂಧದಲ್ಲಿ ಹಿಂದುಸ್ಥಾನದ ಗವರ್ನರ್ ಜನರಲರು ಕ್ರಿ. ಶ. ೧೮೯೧ ನೆಯ ಆಗಸ್ಟ ತಿಂಗಳಲ್ಲಿ ಪ್ರಸಿದ್ಧ ಪಡಿಸಿದ ಪ್ರಕಟಣೆಯಿಂದ ಹೊರಬಿತ್ತು. ಆ ಪ್ರಕಟಣೆಯು ಮಹತ್ವದ್ದಿರುವುದರಿಂದ ಅದನ್ನು ವಾಚಕರ ಮುಂದಿಡುತ್ತೇವೆ.

" The principles of Internatioal Law have no bearing upon the relation between the government of India as representing the QueenEmpress on the one hand, and native states under the suzeranity of Her magesty on the other. The paramount supremacy of the former presupposes and implies the subordination of the latter. In the exercise of their high prerogative the government of India have, in Manipur as inother protected states the unquestioned right to remove by adminstrative order any person whose presence in the state may seem objectionable ".

" ಪರಸ್ಪರ ರಾಷ್ಟ್ರೀಯ ಧರ್ಮದ ತತ್ವಗಳು ಸಾಮ್ರಾಜ್ಞಿಯ ಪ್ರತಿನಿಧಿಗಳಾದ ಹಿಂದುಸ್ಥಾನ ಸರಕಾರದ ಮತ್ತು ಸಾಮ್ರಾಜ್ಞಿಯ ಅಧೀನರಾದ ದೇಶೀಯ ಸಂಸ್ಥಾನಗಳ ಸಂಬಂಧದಲ್ಲಿ ಪರಸ್ಪರ ರಾಷ್ಟ್ರೀಯ ಧರ್ಮದ ತತ್ವಗಳು ಅನ್ವಯವಾಗುವುದಿಲ್ಲ. ಹಿಂದುಸ್ಥಾನ ಸರಕಾರದ ಸಾಮ್ರಾಜ್ಯ ಪ್ರಾತಿನಿಧ್ಯ ಸ್ವರೂಪದಿಂದಲೇ ದೇಶೀಯ ಸಂಸ್ಥಾನಗಳು ಅದಕ್ಕೆ ಅಧೀನವೆಂಬುದು ಸ್ಪಷ್ಟವಾಗುತ್ತದೆ. ಆ ಕಾರಣ ಹಿಂದುಸ್ಥಾನ ಸರಕಾರಕ್ಕೆ ರುವ ಮಹತ್ವದ ಅಧಿಕಾರ ಬಲದಿಂದ ಮಣಿಪುರದಲ್ಲಾಗಲಿ ಮತ್ತಾವ ರಕ್ಷಣೆಗೆ ಒಳಪಟ್ಟ ಸಂಸ್ಥಾನದಲ್ಲಾಗಲಿ, ವಿರೋಧಿಯಾವನಾದರೂ ಕಂಡು ಬಂದರೆ, ಆತನನ್ನು ಆ ಸಂಸ್ಥಾನದಿಂದ ಓಡಿಸಲು ಹಿಂದುಸ್ಥಾನ ಸರಕಾರಕ್ಕೆ ಯಾರೂ ಪ್ರತಿಪ್ರಶ್ನೆ ಮಾಡಲಾಗದಷ್ಟು ಹಕ್ಕುಂಟು "

ಇದರಿಂದ ಹಿಂದುಸ್ಥಾನದಲ್ಲಿರುವ ದೇಶೀಯ ಸಂಸ್ಥಾನಗಳೆಲ್ಲವೂ

(೧) ಬ್ರಿಟಿಷ ಸಾಮ್ರಾಜ್ಯಕ್ಕೆ ಅಧೀನ ರಾಜ್ಯಗಳು ;

(೨) ಪರಸ್ಪರ ರಾಷ್ಟ್ರೀಯ ಧರ್ಮದ ತತ್ವಗಳು ಈ ಸಂಸ್ಥಾನಗಳಿಗೆ ಅನ್ವಯಿಸುವುದಿಲ್ಲ ;

(೩) ಗವರ್ನರ್ ಜನರಲ್‌ರಿಗೆ ಸೂಕ್ತವೆಂದು ಕಂಡು ಬಂದರೆ ಯಾವ ಸಂಸ್ಥಾನಾಧಿಪತಿಯನ್ನಾದರೂ ಸಿಂಹಾಸನದ ಮೇಲಿನಿಂದ ಕೆಳಗಿಳಿಸ ಬಹುದು. ಮುಂತಾದ ಅಂಶಗಳು ಸಿದ್ಧವಾಗುತ್ತವೆ.

ಲೇಖಾಂಕ ೧ "ಕನ್ನಡಿಗನ" ೮ ನೇ ಸಂಚಿಕೆಯಲ್ಲಿ ನೋಡಿ

ಸಂಪಾದಕ ಕ.

ಕರ್ನಾಟಕ ಏಕೀಕರಣ

(ಲೇಖಾಂಕ ೨)

ಅಖಂಡ ಕರ್ನಾಟಕ ಭಾವನೆ.

ಪ್ರಶ್ನೆ: ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವು ಏತಕ್ಕೆ ಬೇಕು?

ಉ:— (೧) ಕನ್ನಡಿಗರ ಸಂಸ್ಕೃತಿ ಮತ್ತು ಕನ್ನಡಿಗರ ವೈಶಿಷ್ಟ್ಯಗಳು ಅಷ್ಟಳಿಯದೆ ಕಾಯಲ್ಪಟ್ಟು, ಅವುಗಳನ್ನು ವೃದ್ಧಿಗೊಳಿಸಿಕೊಳ್ಳುವದಕ್ಕಾಗಿ ಮೊದಲು ಕನ್ನಡಿಗರಲ್ಲಿ ಅಖಂಡ ಕರ್ನಾಟಕ ಭಾವನೆಯು ನೆಲೆಗೊಳ್ಳಬೇಕು. ಅಖಂಡ ಕರ್ನಾಟಕ ಭಾವನೆಯು ಪ್ರಾಂತ ವಿಭಜನೆಯಿಂದ ಹೆಚ್ಚು ತ್ವರೆಯಿಂದಾಗುವದು. (೨) ಕರ್ನಾಟಕವು ತನ್ನ ಅಸ್ತಿತ್ವವನ್ನು ಕಾಯ್ದುಕೊಂಡು ತನ್ನ ಗತ ವೈಭವವನ್ನು ಪುನಃ ಸಂಪಾದಿಸಲಿಕ್ಕೂ (೩) ಭಾರತ ಮಾತೆಯ ಸೇವೆಯಲ್ಲಿ ತನ್ನ ಸಾತ್ವಿಕ ಗುಣಕ್ಕೆ ತಕ್ಕಂತೆ ಯಾವಾಗಲೂ ನಿರತವಾಗಿರಲಿಕ್ಕೂ ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವು ಬೇಕು.

ಪ್ರಶ್ನೆ:— ಕಾಂಗ್ರೆಸ್ಸಿನಿಂದ ಈಗ್ಗೆ ಸ್ವತಂತ್ರ ಪ್ರಾಂತವು ಕರ್ನಾಟಕಕ್ಕೆ ದೊರೆತೇ ಇದೆ. ಅಖಂಡ ಕರ್ನಾಟಕ ಭಾವನೆಯು ಅಲ್ಲಿಲ್ಲಿ ಉಂಟಾಗಿದೆ. ಆ ಭಾವನೆಯು ಹೆಚ್ಚುತ್ತಲಿದೆ. ಆದ್ದರಿಂದ ಪುನಃ ಸರಕಾರದವರ ಪ್ರಾಂತಿಕ ಏಕೀಕರಣವನ್ನು ಏಕೆ ಬೇಡಬೇಕು?

ಉ:— ಕಾಂಗ್ರೆಸ್ಸಿನಿಂದ ಈ ಅಖಂಡ ಕರ್ನಾಟಕ ಭಾವನೆಯು ವಿಷಯದಲ್ಲಿ ಬೊಪ್ಪ ಕಾರ್ಯವಾಗಿರುವದರಲ್ಲಿ ಸಂಶಯವಿಲ್ಲ. ಆ ಕಾಂಗ್ರೆಸ್ಸಿನ ಚಳವಳಿಯು ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಹರಡಿಲ್ಲ. ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವನ್ನು ದೊರಕಿಸುವ ಚಳವಳಿಯು ಎಲ್ಲ ಕಡೆಗೆ ಹಬ್ಬಿದ್ದರೆ ಆ ಭಾವನೆಯು ಶಾಶ್ವತವಾಗಿ ಮೂರ್ತ ಸ್ವರೂಪವನ್ನು ಹೊಂದುವದು ಶಕ್ಯವಿಲ್ಲ. ಮುಖ್ಯವಾಗಿ ರಾಜಕಾರಣದಲ್ಲಿ ಕಾಂಗ್ರೆಸ ಪಕ್ಷದ ಹೊರಗಿದ್ದ ಕನ್ನಡಿಗರಲ್ಲಿಯೂ ಕಾಂಗ್ರೆಸ ಆಂದೋಲನದಲ್ಲಿ ಭಾಗವನ್ನು ತೆಗೆದುಕೊಳ್ಳಲಿಕ್ಕೆ ಅವಕಾಶವಿಲ್ಲದ ಜನರಲ್ಲಿಯೂ ಈ ಅಖಂಡ ಕರ್ನಾಟಕ ಭಾವನೆಯು ಬೇರೂರಿ ನಿಂತು ಕೊಂಡಿಲ್ಲ. ನಿಂತುಕೊಳ್ಳುವದಕ್ಕಾಗಿ ಅವಕಾಶವು ಇಲ್ಲ. ಆದ್ದರಿಂದ ಈ ಬಗೆಯ ಅವಕಾಶವಿದ್ದಂಥ ಪ್ರಾಂತಿಕ ಸರಕಾರವನ್ನು ದೊರಕಿಸುವ ಏಕೀಕರಣ ಚಳವಳಿಯು ಅಗತ್ಯವಾದುದು.

ಪ್ರಶ್ನೆ:— ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತಿಕ ಸರಕಾರವು ದೊರೆಯದಿದ್ದರೆ ಕಾಂಗ್ರೆಸ್ಸಿನ ಚಳವಳಿಯಿಂದ ಮಾತ್ರ ಅಖಂಡ ಕರ್ನಾಟಕ ಭಾವನೆಯು ಎಲ್ಲ ಭಾಗಗಳಲ್ಲಿಯೂ ಹರಡುವದು. ಶಕ್ಯವಿಲ್ಲೆಂದು ಇದೀಗ ಹೇಳಿದಿರಲ್ಲವೆ? ಅದು ಹೇಗೆ?

ಉ:— ಈಗ್ಗೆ ಕರ್ನಾಟಕಕ್ಕೆ ಸ್ವತಂತ್ರ ಕಾಂಗ್ರೆಸ ಮಂಡಲವು ದೊರೆತು ನಾಲ್ಕು ವರ್ಷಗಳಾದವಷ್ಟೆ? ಕರ್ನಾಟಕ ಏಕೀಕರಣಕ್ಕಾಗಿ ಯಾವ ಪ್ರಯತ್ನವೂ ಮಾಡಲ್ಪಟ್ಟಿಲ್ಲ. ಈ ಸಮಯದಲ್ಲಿ (ಮೈಸೂರನ್ನು ಬಿಂದು ಬಿಟ್ಟರೂ) ಹೈದರಾಬಾದ, ಅಕ್ಕಲಕೋಟಿ, ಮುದೋಳ, ರಾಮದುರ್ಗ, ಸವಣೂರ, ಸೊಂಡೂರ, ಮೊದಲಾದ ಸಂಸ್ಥಾನಗಳಲ್ಲಿಯೂ, ಸೇಲಂ, ಕೋಯಿಮತ್ತೂರ, ನೀಲಗಿರಿ, ಅನಂತಪೂರ ಮೊದಲಾದ ಬ್ರಿಟಿಶ ಕರ್ನಾಟಕ ಭಾಗದಲ್ಲಿಯೂ, ಕಾಂಗ್ರೆಸ ಚಳವಳಿಯೂ ಅದರಿಂದುಂಟಾಗುವ ಏಕ ಕರ್ನಾಟಕ ಭಾವನೆಯೂ ಬಲಿತು ಬೇರೂರಿ ಕೊಳ್ಳಲಿಕ್ಕೆ ಅವಕಾಶವಿಲ್ಲೆಂದು ಅನುಭವದ ಮಾತಲ್ಲವೋ?

ಪ್ರಶ್ನೆ:— ಅದಾವ ಅನುಭವವು?

ಉ:— ಸಂಸ್ಥಾನಗಳಲ್ಲಿ ಕಾಂಗ್ರೆಸ್ಸ ಚಳವಳಿಗೆ ಆಸ್ಪದವಿಲ್ಲ. ಮೈಸೂರಲ್ಲಿ ಏನೋ ಕೊಂಚ ಪ್ರವೇಶಕ್ಕೆ ಅವಕಾಶವಿದ್ದರೂ ಉಳಿದ ಸಂಸ್ಥಾನಗಳಲ್ಲಿ ರಾಟಿಯಂತಹ ನಿರುಪದ್ರ ಪ್ರಾಣಿಯು ಕೂಡ ಜೀವಿಸಲಿಕ್ಕೆ ಅಪ್ಪಣೆಯಿಲ್ಲ. ಕಾಂಗ್ರೆಸ್ಸದ ರಾಜಕಾರಣವಂತೂ ಸಂಸ್ಥಾನಗಳಲ್ಲಿ ಪ್ರವೇಶಿಸ ಕೂಡದೆಂದು ಕಾಂಗ್ರೆಸ್ಸು ನಿರ್ಬಂಧಿಸಿದೆ. ಇನ್ನು ಅನಂತಪುರ ಸೇಲಂ ಮೊದಲಾದ ಜಿಲ್ಲೆಗಳ ಬ್ರಿಟಿಶ ಕರ್ನಾಟಕದ ಭಾಗಗಳು ಸಹ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧಿಕಾರದಲ್ಲಿರುವದಿಲ್ಲ. ಅವುಗಳನ್ನು ತಮ್ಮ ಅಧಿಕಾರದಲ್ಲಿ ತೆಗೆದುಕೊಳ್ಳುವ ಇಚ್ಛೆಯು ಸದ್ಯದ ಪ್ರಾಂತಿಕ ಕಾಂಗ್ರೆಸ ಕಮಿಟಿಗೆ ಇದ್ದಂತೆ ಕಾಣುವದಿಲ್ಲ. ಮೇಲಾಗಿ ಪ್ರಾಂತಿಕ ಏಕೀಕರಣವು ಕಾಂಗ್ರೆಸದ ಧ್ಯೇಯವಿಲ್ಲ. ಭಾಷಾವಾರ ಪ್ರಾಂತರಚನೆಗೆ ಕಾಂಗ್ರೆಸ್ಸು ತನ್ನ ಸಮ್ಮತಿಯನ್ನಿತ್ತಿದೆ. ಆದರೆ ಪ್ರಾಂತಿಕ ಏಕೀಕರಣಕ್ಕಾಗಿ ಸರಕಾರವನ್ನು ದೊರಕಿಸುವದಕ್ಕೆ ಕಾಂಗ್ರೆಸವು ತನ್ನ ತನು ಮನ ಧನಗಳನ್ನರ್ಪಿಸಿ ಆ ವಿಷಯ ಕ್ಕೊಂದೇ ಚಳವಳಿಯನ್ನು ಮಾಡದು. ಆದುದರಿಂದ ಅಖಂಡ ಕರ್ನಾಟಕ ಭಾವನೆಯನ್ನು ಕರ್ನಾಟಕದಲ್ಲೆಲ್ಲ ಹೆಚ್ಚಿಸುತ್ತ ಬೇರೊಂದು ಪ್ರಾಂತಿಕ ಸರಕಾರವನ್ನು ದೊರಕಿಸುವ ಉದ್ದೇಶವನ್ನಿಟ್ಟುಕೊಂಡ ಸಂಸ್ಥೆಯೊಂದು ಅವಶ್ಯವೆಂಬದಾಗಿ ವಿಚಾರಿಸಿ ಕರ್ನಾಟಕ ಏಕೀಕರಣ ಸಭೆಯು ಸ್ಥಾಪಿಸಲ್ಪಟ್ಟಿದೆ.

ಪ್ರಶ್ನೆ:— ಆ ಸಭೆಯು ಸ್ಥಾಪಿಸಲ್ಪಟ್ಟದ್ದು ಸರಿಯಾಯಿತು. ಅದಿರಲಿ. ಪ್ರಾಂತಿಕ ಸರಕಾರದ ಬಗ್ಗೆ ನೀವು ಅಷ್ಟೊಂದು ಮಹತ್ವವನ್ನು ಕೊಡುವದೇಕೆ? ಆ ಜನದೇಹದಿಂದಾಗುವದೇನು?

ಉ:— ಯಾವದೊಂದು ಪ್ರಾಣಿಯ ಜೀವಿತಕ್ಕೆ ಜಡದೇಹವು ಅತ್ಯಾವಶ್ಯಕವಾದದ್ದು. ಜಡದೇಹವಿರದಿದ್ದರೆ, ಭೂಲೋಕದಲ್ಲಿ ಜೀವಿತವೇ ಇಲ್ಲ ಕಾಂಗ್ರೆಸ್ಸದಿಂದ ಕರ್ನಾಟಕಕ್ಕೆ ಜಡದೇಹ ಸ್ವರೂಪವಾದ ಪ್ರಾಂತಿಕ ಕಾಂಗ್ರೆಸ ಕಮಿಟಿಯು ದೊರಕಿದ್ದರಿಂದಲೇ ಅಖಂಡ ಕರ್ನಾಟಕ ಭಾವನೆಯು ಕೊಂಚ ಮಟ್ಟಿಗೆ ಉಂಟಾಗಿದೆ. ಗಲಿತವಾಗುತ್ತ ನಡೆದ ಕರ್ನಾಟಕದ ಜಡದೇಹಕ್ಕೆ ಕಾಂಗ್ರೆಸ್ಸಿನಿಂದ ಸ್ವಲ್ಪ ಮಟ್ಟಿಗೆ ಚಿಕಿತ್ಸೆಯಾಗಿದ್ದರಿಂದಲೇ, ಕರ್ನಾಟಕವು ಈಗ್ಗೆ ಚೇತರಿಸಿ ಕೊಳ್ಳ ಹತ್ತಿದೆ. ಜಡದೇಹದಲ್ಲಿಯ ರೋಗವನ್ನೆಲ್ಲ ನಾಶಗೊಳಿಸಿ ಕೊಂಡು ತನ್ನ ದೇಹದ ದಾರ್ಢ್ಯತೆಯನ್ನು ಮತ್ತೆ ದೊರಕಿಸಿಕೊಳ್ಳಲಿಕ್ಕೆ ಸ್ವತಂತ್ರ ಪ್ರಾಂತಿಕ ಸರಕಾರವು ಕರ್ನಾಟಕಕ್ಕೆ ಅಗತ್ಯವಾಗಿದೆ.

ಪ್ರಶ್ನೆ:— ಕರ್ನಾಟಕ ದೇವಿಯ ದೇಹದಲ್ಲಿಯ ರೋಗವು ನಾಶವಾಗಬೇಕೆಂಬದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಆದರೆ ಆ ರೋಗವು ಪ್ರಾಂತಿಕ ಸರಕಾರವನ್ನು ದೊರಕಿಸಿದ ಮಾತ್ರಕ್ಕೆ ಹೇಗೆ ನಾಶವಾಗುವದೋ ನಮಗೆ ತಿಳಿಯದು. ಹಿಂದುವಾಸಿಗಳಾದ ನಾವು ಈಗ್ಗೆ ಪರದೇಶದ ಗುಲಾಮಗಿರಿಯ ಶೃಂಖಲೆಗಳಿಂದ ಬಿಗಿಯಲ್ಪಟ್ಟಿರುವವರಾದ್ದರಿಂದ ನಮ್ಮ ಪ್ರಾಂತವೊಂದೇ ಸ್ವತಂತ್ರವಾದ ರೋಗನಿವಾರಣೆ ಮಾಡಿಕೊಳ್ಳಲು ಮಾರ್ಗವಿಲ್ಲದಾಗಿದೆ. ಮೊದಲು ನಾವು ಈ ಶೃಂಖಲೆಗಳನ್ನು ಕಡಿದುಕೊಳ್ಳಬೇಕು. ಹಿಂದುಸ್ಥಾನವು ಸ್ವತಂತ್ರವಾದರೆ ಪ್ರಾಂತಿಕ ಏಕೀಕರಣವು ತಾನೇ ಒದಗಿ ಬರುವದಿಲ್ಲವೇ?

ಉ:— ಪರದೇಶದ ಶೃಂಖಲೆಗಳನ್ನು ಕಡಿದು ಚಲ್ಲುವ ಉದ್ದೇಶದಿಂದಲೇ ಅಲ್ಲವೇ ಕಾಂಗ್ರೆಸ್ಸು ಹುಟ್ಟಿದ್ದು. ಆ ಕಾಂಗ್ರೆಸ್ಸೇ ಆ ಶೃಂಖಲೆಗಳನ್ನು ಕಡಿದು ಚಲ್ಲಲು ಸಂಪೂರ್ಣವಾಗಿ ಅನುಕೂಲವಾಗಬೇಕೆಂದೇ ಭಾಷಾನ್ವಯ ಪ್ರಾಂತರಚನೆಯನ್ನು [illegible]

ಯುವದೆಂತು? ಹಿಂದುಸ್ಥಾನಕ್ಕೆ ಬೇರೆ ಪ್ರಾಂತರೂಪಿಗಳಾದಅನೇಕ ಅಂಗಗಳಿವೆ. ಆ ಅಂಗದ ಮೇಲಿನ ಶೃಂಖಲೆಯನ್ನು ಆ ಪ್ರಾಂತವು ಸಡಿಲು ಪಡಿಸಿದ್ದಾದರೆ ಮಾತ್ರ ಒಟ್ಟಾಗಿ ಎಲ್ಲ ಭಾಗದ ಶೃಂಖಲೆಯು ಕಳಚಿ ಬೀಳುವದು ಇಲ್ಲದೆ ಹೋದರೆ ಏಕ ಕಾಲಕ್ಕೆ ಎಲ್ಲ ಅಂಗಗಳಲ್ಲಿಯ ಶೃಂಖಲೆಗಳನ್ನು ಕ್ಷಣ ಮಾತ್ರದಲ್ಲಿ ಬಿಡಿಸಿಕೊಂಡು ಹಿಂದ ಮಾತೆಯು ಮುಕ್ತಳಾಗುವದು ಹೇಗೆ?

ಪ್ರಶ್ನೆ:— ನಿಜವಿದೆ. ಭಾರತ ಮಾತೆಯ ಬೇರೆ ಬೇರೆ ಪ್ರಾಂತಗಳು ತಮ್ಮ ತಮ್ಮ ಅಂಗಗಳಲ್ಲಿಯ ಶೃಂಖಲೆಗಳನ್ನು ಹರಿದೊಗೆಯಲು ಪುಷ್ಟವಾಗಿರಲೇಬೇಕೆಂಬದರಲ್ಲಿ ಸಂಶಯವಿಲ್ಲ. ಆದರೆ ಹೀಗೆ ಪುಷ್ಟವಾಗಲು ಪ್ರಾಂತಿಕ ಸರಕಾರದ ಏಕೀಕರಣವು ಹೇಗೆ ಉಪಯೋಗವಾಗುವದೋ ತಿಳಿಯದು. ಪ್ರಜೆಗಳ ಹೃದಯಗಳನ್ನು ಪ್ರೇಮಪಾಶದಿಂದ ಬಿಗಿದು ವಿರಚಿಸಿದ ಏಕೀಕರಣವು ಬೇಕೇ ಹೊರ್ತಾಗಿ ಸರಕಾರದ ಕೌನ್ಸಿಲ್‌ಗಳ ಕಾನೂನಿನ ಏಕೀಕರಣವು ಬೇಕಾಗಿರುವದಿಲ್ಲ. ಇದು ನಿಮಗೆ ತಿಳಿಯದೋ?.

ಉ:— ಸಂತೋಷ! ಒಳ್ಳೇ ಪ್ರಶ್ನೆಯನ್ನು ಕೇಳಿದಿರಿ. ನೀವು ಹೇಳುವಂತೆ ಪ್ರತಿಯೊಂದು ಕರ್ನಾಟಕದ ಭಾಗದಲ್ಲಿಯ ಜನರ ಹೃದಯಗಳು ಪ್ರೇಮಪಾಶದಿಂದ ಬಿಗಿಯಲ್ಪಟ್ಟವೆಂದರೆ ತೀರಿ ಹೋಯಿತು. ಕರ್ನಾಟಕದ ಉದ್ಧಾರವಾಯಿತೆಂದು ತಿಳಿಯಲಿಕ್ಕೆ ಯತ್ಕಿಂಚಿತ್ತಾದರೂ ಆತಂಕವಿಲ್ಲ. ಆದರೆ ಆಬಗೆಯ ಸಾಧನಗಳು ಬೇಕಿಲ್ಲವೇ? ನಾನು ಕರ್ನಾಟಕಸ್ಥನೆಂಬ ಭಾವನೆಯು ಕೂಡ ಕರ್ನಾಟಕದ ಎಲ್ಲ ಭಾಗಗಳ ನಿವಾಸಿಗಳಲ್ಲಿಲ್ಲ. ಆ ಭಾವನೆಯನ್ನು ಉತ್ಪನ್ನ ಮಾಡಲು ಕಾಂಗ್ರೆಸ್ಸು ಭಾಷಾನ್ವಯ ಪ್ರಾಂತರಚನೆಯನ್ನು ಮಾಡಿ ಒಂದು ಸಾಧನವನ್ನುಂಟು ಮಾಡಿದೆ. ಈ ಸಾಧನದಿಂದ ಕಾಂಗ್ರೆಸ್ಸಿನಲ್ಲಿಯ ಜನರಿಗೆ ಮಾತ್ರ ಕೊಂಚ ಮಟ್ಟಿಗೆ ಅಖಂಡ ಕರ್ನಾಟಕ ಭಾವನೆಯು ಹುಟ್ಟಿ ಕರ್ನಾಟಕಕ್ಕೆ ಲಾಭವಾಗಿದೆ. ಆದರೆ ನಾವು ಹಿಂದಕ್ಕೆ ಹೇಳಿದಂತೆ ಕಾಂಗ್ರೆಸ್ಸಿನ ರಾಜಕಾರಣದ ಹೊರಗಿದ್ದ ಬೇರೆ ರಾಜಕೀಯ ಪಂಗಡಗಳಲ್ಲಿಯೂ ಕಾಂಗ್ರೆಸ್ಸಿನಲ್ಲಿ ಪ್ರತ್ಯಕ್ಷವಾಗಿ ಭಾಗ ತೆಗೆದುಕೊಳ್ಳಲು ಅವಕಾಶವಿರದೇ ಇದ್ದ ಜನರಲ್ಲಿಯೂ ಅಖಂಡ ಕರ್ನಾಟಕ ಭಾವನೆಯುಂಟಾಗಲಿಕ್ಕೆ ಬೇರೊಂದು ಸಾಧನವು ಬೇಕಲ್ಲವೇ? ಈ ಪ್ರಾಂತಿಕ ಸರಕಾರವನ್ನು ದೊರಕಿಸುವ ಚಳವಳಿಯು ಈ ಜನರಲ್ಲಿ ಅಖಂಡ ಕರ್ನಾಟಕ ಭಾವನೆಯನ್ನುಂಟು ಮಾಡಲಿಕ್ಕೆ ಸಾಧನವಾಗುವದು. ಬೇರೆ ಬೇರೆ ಕರ್ನಾಟಕದ ಭಾಗದ ಜನರ ಹೃದಯಗಳು ಪ್ರೇಮ ಪಾಶದಿಂದ ಬಿಗಿಯಲ್ಪಡಲಿಕ್ಕೆ ಈ ಕಾರ್ಯದಲ್ಲಿ ಹೆಚ್ಚಿಗೆ ಸಂಬಂಧವು ಬೆಳೆಯಲಿಕ್ಕೆ, ಪರಸ್ಪರರ ಸಹಾಯದ ಲಾಲಸೆಯು ಉತ್ಪನ್ನವಾಗಲಿಕ್ಕೆ, ಹಿಂದ ಮಾತೆಯ ಬಂಧವಿಮೋಚನೆಯ ಕಾರ್ಯವನ್ನು ಹೆಚ್ಚು ಆತುರದಿಂದ ಸಾಧಿಸಲಿಕ್ಕೆ ಈ ಪ್ರಾಂತಿಕ ಏಕೀಕರಣವು ಈಗ್ಗೆ ಒಂದು ಅವಶ್ಯವಾದ ಮತ್ತು ಮಹತ್ವದ ಸಾಧನವು. ಹಿಂದುಸ್ಥಾನದ ಬೇರೆ ಪ್ರಾಂತದವರು ಪ್ರಾಂತಿಕ ಸರಕಾರವನ್ನು ದೊರಕಿಸಿಕೊಳ್ಳದಿದ್ದರೂ ನಡೆಯಬಹುದು. ಆದರೆ ಕರ್ನಾಟಕವು ಬಹು ಅಸಡ್ಡಾಳಾಗಿ ಹಂಚಿ ಹರಿಯಲ್ಪಟ್ಟದ್ದರಿಂದ ಪ್ರಾಂತಿಕ ಸರಕಾರವು ಕರ್ನಾಟಕಕ್ಕೆ ಅವಶ್ಯವಾದದ್ದು ಎರಡನೇ ಪ್ರಾಂತದವರು ಭಾಷಾನ್ವಯ ಪ್ರಾಂತರಚನೆಯನ್ನು ಬೇಡುತ್ತಿರುವರೆಂಬ ಕಾರಣದಿಂದ ನಾವು ಬೇಡುವದಿಲ್ಲ. ಆದರೆ ಕರ್ನಾಟಕಕ್ಕೆ ಅದು ಅತ್ಯವಶ್ಯವಾದದ್ದರಿಂದಲೇ ನಾವು ಬೇಡುವೆವು.

———

ಬಾರುಕೋಲಿಗೆ ಬೆದರ ಬೇಡಿರಿ

ಕೆಲವು ಬಾರುಕೋಲಿನ ಹೊಡತಗಳನ್ನು ಸಹಿಸಲಾಗದೆಂದು ಹಲವರು ಮತ್ತಿಷ್ಟು ಬಲವಾಗಿ ಬಾರುಕೋಲಿನ ಹೊಡತಗಳು ಬೀಳಬೇಕೆಂದೂ ಮಾತನಾಡುತ್ತಿರುವರು. ಕನ್ನಡಿಗರೇ, 'ನಕ್ಕು ಹೇಳುವವನು ಕೆಡಕನ್ನು ಬೈದು ಹೇಳುವವನು ಬುದ್ಧಿಯನ್ನು ಹೇಳುತ್ತಿರುವನು' ಎಂಬ ನಾಣ್ಣುಡಿಗನುಸಾರವಾಗಿ, ಇಲ್ಲಿಯವರೆಗೆ ಅನೇಕ ದೇಶಭಕ್ತರು ಪಾಶ್ಚಾತ್ಯರ ಅನುಕರಣ ಮಾಡಬೇಡರಿ ಪುನಃ ಆರ್ಯರ ಕೀರ್ತಿಯನ್ನು ತೀಡುತ್ತ ಗತವೈಭವವನ್ನು ಹೊಂದಿರೆಂದು ಉಪದೇಶಿಸಿದರು. ಅದೆಲ್ಲ ಡಬ್ಬ ಕೊಡದ ಮೇಲೆ ನೀರೆರದಂತಾಯಿತು. ಹೊಡತಗಳಿಗೇನಾದರು ಮಣಿದು ಹಾದಿಗೆ ಬರಬಹುದೆಂದು ಒಕ್ಕಲಿಗನ ಬಾರುಕೋಲು ಮುಂದೆ ಒಂದಿದೆ. ಹೊಡತವು ಹೇಗೆ ಬಿದ್ದೀತು? ಯಾರ ಮೇಲೆ ಬಿದ್ದೀತು! ಎಲ್ಲಿ ಬಿದ್ದೀತು! ಎಂಬ ನೇಮವಿಲ್ಲ. ಬಾರುಕೋಲು ಧನಿಕರನ್ನು ಧನಹೀನರನ್ನು ಸರಿಯಾಗಿ ನಡಿಸಿಕೊಳ್ಳುವನು. ತರುಣರಿರಲಿ, ತರುಣಿಯರಿರಲಿ, ವಿದ್ವಾಂಸರಿರಲಿ, ಅವಿದ್ವಾಂಸರಿರಲಿ, ಹಿರಿಯರಿರಲಿ, ಕಿರಿಯರಿರಲಿ, ಆಸಕ್ತರಿರಲಿ, ವಿರಕ್ತರಿರಲಿ, ಯಾರು ಬೇಕಾದವರೇ ಇರಲಿ, ತಪ್ಪು ತಡಿಗಳಿದ್ದವರಲ್ಲಿ ಕರುಣ ತೋರುವದು ಬಾರುಕೋಲಿನ ಕೆಲಸವಲ್ಲ. ಹುಳಕನ್ನು ಬೈಲಿಗೆಳೆದು ಕೇವಲ ಹಾಸ್ಯ ಮಾಡಲೂ ಆತುರ ಬಡುವದಲ್ಲ. ಒಕ್ಕಲಿಗನು ದನಗಳಿಗೆ ಹೊಡೆಯುವದು ತನಗಾಗಿ ಅಲ್ಲ. ಲೋಕಕ್ಕೆ ಹೊಟ್ಟೆಬಟ್ಟೆ ಗಳನ್ನು ಪೂರೈಯಿಸಿ ಕೊಡುವ ಕೃಷಿಯನ್ನು ರಕ್ಷಿಸುವದಕ್ಕಾಗಿ. ಅವನು ವಿಚಾರ ಮಾಡದೆ ಹೊಡಿಯುವದಿಲ್ಲ. ಸಾಧು ಧನಗಳಿದ್ದರೆ ಬಾಯಬೆದರಿಕೆಯಿಂದ, ಅವಕ್ಕೂ ಸ್ವಲ್ಪ ಮಂದವಾದವುಗಳಿದ್ದರೆ ಬಾರುಕೋಲನ್ನು ಮೈಗೆ ಮುಟ್ಟಿಸಿ, ಎಟ್ಟಿ ದನಗಳಿದ್ದರೆ ಒಂದೆರಡು ಬಾರುಕೋಲಿನ ಶಿಳಕುಗಳನ್ನು ಹಾಕಿ, ಕೈ ಮೀರಿ ಎಟ್ಟ ದನಗಳಾಗಿದ್ದರೆ ನೆತ್ತರ ಚಿಮ್ಮುವವರೆಗೆ ಸಹ ಹೊಡತಗಳನ್ನು ಹಾಕಿ, ಅವುಗಳನ್ನು ಹಾದಿಗೆ ತರುವನು; ಹಾಗೂ ಪರೋಪಕಾರಕ್ಕಾಗಿ ಮೈಮುರಿ ದುಡಿಯುವನು. ಒಕ್ಕಲಿಗನು ಧಾನ್ಯಗಳನ್ನು ಒಕ್ಕುವನೆಂದೇ ಎಲ್ಲರ ಚೆಲ್ಲಾಟವು ನಡೆದಿದೆ ಅವನನ್ನು ಹಳಿದರೆ ಕೂಳು ಕಾಣದೆ ಮಣ್ಣು ಮುಕ್ಕಬೇಕಾಗುವದು. ಇದರ ಮೇಲಿಂದ ಒಕ್ಕಲಿಗನು ನಿಷ್ಕರುಣಿಯು ಎಂದು ತಿಳಿಯಲಾಗದು. ಅವನು ಮನೆಗೆ ಬಂದಮೇಲೆ ತಾನು ಸಿಟ್ಟಿನ ಭರದಲ್ಲಿ ಹೊಡದದ್ದಕ್ಕೆ ಆದ ಗಾಯಗಳನ್ನು ಕಂಡು ಮರ ಮರ ಮರುಗುವನು. ಮಲಮು ಹಚ್ಚಿ ನೋವನ್ನು ಮಾಯಿಸುವನು. ಬಾರುಕೋಲಿನ ಹೊಡತಗಳನ್ನು ಹಾಕುವ ನಿಸ್ಸು ಒಕ್ಕಲಿಗನಾದರೂ ಮುಂದೆ ಮಲಮು ಹಚ್ಚೇ ಹಚ್ಚುವನು ಆದರೆ ಸಧ್ಯಕ್ಕಿಲ್ಲ ಒಂದೆರಡು ಏಟುಗಳುಬಿದ್ದಿವೆ. ಇನ್ನೂ ಬೀಳತಕ್ಕವವೆ. ಅವೆಲ್ಲ ಮುಗಿದ ಮೇಲೆ ಅಪಾಯಕ್ಕೆ ಉಪಾಯವು ಆಗತಕ್ಕದ್ದೇ. ಬಾರುಕೋಲು ಬಂತೆಂದು ಗದಗದ ನಡಗುವ ಕಾರಣವಿಲ್ಲ. ನಕ್ಕು ಹೇಳಿದವರ ನುಡಿಗಳ ಪರಿಣಾಮವು ಪ್ರತಿಯೊಂದು ವ್ಯಕ್ತಿಯ ಮೇಲೆ ಸಮಾಜದ ಮೇಲೆ ಹಾಗೂ ರಾಷ್ಟ್ರದ ಮೇಲೆ ಆಗಿ ಕೇಡಿಗೆ ಮುಳುವಾಗಿದೆ. ಇನ್ನು ಮೇಲೆ ರಾಷ್ಟ್ರಕ್ಕೆ ಒಳಿತಾಗ ಬೇಕೆಂದೂ ಅದು ಸನ್ಮಾರ್ಗಕ್ಕೆ ಹತ್ತಬೇಕೆಂದೂ ಬಾರುಕೋಲು ಮುಂದರಿದು ಬಂದಿರುವದಲ್ಲದೆ, ಮತ್ತಾವ ಉದ್ದೇಶ್ಯದಿಂದಲೂ ಅಲ್ಲ. ಹುಚ್ಚಪ್ಪಗಳಿರಾ, ಬಾರುಕೋಲಿಗೆ ಇದುರಾಗಿ ಯುದ್ಧ ಮಾಡಬೇಡಿರಿ ಮುಯ್ಯಕ್ಕೆ ಮುಯ್ಯ ತೀರಿಸುವ ಗೋಜಿಗೂ ಹೋಗಬೇಡಿರಿ. ಹಿರಿಯರ ಸಾಮದಾನೋಪಾಯಗಳು ಸೋತವೆಂದು ದಂಡೋಪಾಯವು ಬಾರುಕೋಲಿನ ಪಾಲಿಗೆ ಬಂದಿದೆ ಬಾರುಕೋಲೆಂದರೆ ನಿದ್ರಾವಸ್ಥೆಯಲ್ಲಿದ್ದ ರಾಷ್ಟ್ರವನ್ನು ಎಬ್ಬಿಸುವ ಮಾತಿನ ಹೊಡತವಿಷ್ಟೇ ಮತ್ತೇನೂ ಅಲ್ಲ. ಬಾರುಕೋಲನ್ನು ನೋಡಿ ಬೆದರ ಬೇಡಿರಿ. ಸಧ್ಯಕ್ಕೆ ಬಾರು ಮೂಡಿಸುವ ಬಾರುಕೋಲು ಮಾರಕವಾಗಿದ್ದರೂ ಮುಂದೆ ತಾರಕವಾಗುವದು. ನಿಜ. ಈ ಸದುದ್ದೇಶ್ಯದಿಂದ (ಕೈಯೆತ್ತಿ) ಅಥವಾ (ತಲೆಯೆತ್ತಿ) ಬಾರುಕೋಲಿಗೆ ಆದರಾತಿಥ್ಯವನ್ನು ಮಾಡಿರಿ.

ಒಕ್ಕಲತನದಿಂದ ಜೀವಿಸುವ ಒಕ್ಕಲಿಗ.

ಕನ್ನಡಿಗರೇ! ಕನ್ನಡಿಗರಾದ ನೀವೇ ಅಭಿಮಾನದಿಂದ 'ಕನ್ನಡಿಗ'ನನ್ನು ಆದರಿಸಬೇಕು!

ವರ್ತಮಾನಸಾರ

ಇಡವೃತ್ತ

ಹಿಂದು ಮುಸಲ್ಮಾನರ ದಂಗೆಯ ಖಟ್ಲೆಯ ವಿಚಾರಣೆಯಾಗಿ ೧೦ ಜನ ಮುಸಲ್ಮಾನರಿಗೆ ೧ ವರ್ಷ ಕಠಿಣ ಶಿಕ್ಷೆಯೂ ಒಬ್ಬನಿಗೆ ೩ ವರ್ಷ ಕಠಿಣ ಶಿಕ್ಷೆಯೂ ವಿಧಿಸಲ್ಪಟ್ಟದೆ ಹಿಂದುಗಳ ವಿಚಾರಣೆಯು ೯ ನೇ ಜೂನಕ್ಕೆ ಇದೆ.

ಕರ್ನಾಟಕ.

ಮುಂಬೈ ಕರ್ನಾಟಕ

ಮೊನ್ನೆ ತಾರೀಖು ೧ ನೇ ಜೂನ ದಿವಸ ಧಾರವಾಡದ ಕಲೆಕ್ಟರ ಸಾಹೇಬರು ಮಾವಿನ ಹಣ್ಣಿನ ಪ್ರದರ್ಶನವನ್ನು ತೆರೆದರು ಈ ಪ್ರದರ್ಶನದಲ್ಲಿ ೫೦ ಜಾತಿಗಳ ಮಾವಿನ ಹಣ್ಣುಗಳೂ, ನೂರಾರು ಕಸಿಗಿಡಗಳೂ ಇಡಲ್ಪಟ್ಟಿದ್ದವು. ಈ ಪ್ರದರ್ಶನವನ್ನು ಏರ್ಪಾಡ ಮಾಡಿದ್ದ ಒಕ್ಕಲತನದ ಸಂಘದವರು ಸ್ತುತಿಗೆ ಪಾತ್ರರಾಗಿದ್ದಾರೆ.

ಮದ್ರಾಸ ಕರ್ನಾಟಕ

ಮಂಗಳೂರು ಪಟ್ಟಣದೊಳಗೆ ವಿದ್ಯುಚ್ಛಕ್ತಿಯ ದೀಪಗಳನ್ನಿರಿಸುವ ಬಗ್ಗೆ, "ದಿ ಮಂಗಳೂರು ಇಲೆಕ್ಟ್ರಿಕ್ ಸಪ್ಲಾಯ ಕಂಪನಿ," ಎಂಬ ಹೆಸರಿನ ಒಂದು ಕಂಪನಿಯು ಸ್ಥಾಪಿತವಾಗಿದೆ.

ಹೇಪನಹಳ್ಳಿಜೈನ ವಾಚನಾಲಯದ ತೃತೀಯ ವಾರ್ಷಿಕೋತ್ಸವವು ಎಚ್. ಎಂ ನಂಜುಂಡಯ್ಯ ಇವರ ಅಧ್ಯಕ್ಷತೆಯಲ್ಲಿ ಕೂಡಿ ವಾಙ್ಮಯದ ಮಹತ್ವ, ವಾಚನಾಲಯವೂ ಅದರ ಮಹತ್ವವು, ಕನ್ನಡಿಗರ ಕರ್ತವ್ಯ ಮುಂತಾದ ವಿಷಯಗಳ ಮೇಲೆ ವ್ಯಾಖ್ಯಾನಗಳಾದವು

ಮೈಸೂರ ಕರ್ನಾಟಕ

ಕೋರತಗೇರಿಯಲ್ಲಿ ಪಂಚಮ ಜಾತಿಯವರ ಪರಿಷತ್ತು ಕೂಡಿ ತಮ್ಮ ವಿದ್ಯಾರ್ಥಿಗಳಿಗಾಗಿ ಶಾಲೆ, ಕುಡಿಯುವ ನೀರಿನ ವ್ಯವಸ್ಥೆ, ಮುಂತಾದ್ದರ ಬಗ್ಗೆ ಠರಾವುಗಳು ಪಾಸಾದವು.

ಕೋಲಾರ ಮುನಸಿಪಾಲಿಟಿಯ, ಲೋಕನಿಯುಕ್ತ ಅಧ್ಯಕ್ಷರನ್ನು ತೆಗೆದು ಹಾಕಿ, ಅಲ್ಲಿಯ ಡೆಪ್ಯುಟಿ ಕಮಿಶನರು ಆ ಜಾಗೆಯನ್ನು ಆಕ್ರಮಿಸುವರೆಂಬದಾಗಿ ತಿಳಿದು ಬಂದದೆ

ಚಿಕ್ಕಬಳ್ಳಾಪುರದ ತಾಲೂಕಿಗೆ ಬಂಡಹಳ್ಳಿ ಮದ್ದೇನಹಳ್ಳಿ ಎಂಬ ಜೋಡೀ ಗ್ರಾಮಗಳನ್ನು ಸರಕಾರದವರು ಬೇರೆ ಬೇರೆ ಜೋಡಿ ಗ್ರಾಮಗಳಾಗಿ ವಿಂಗಡಿಸತಕ್ಕದ್ದೆಂದು, ಹುಕುಂ ಮಾಡಿದ್ದಾರೆ.

ಮೈಸೂರು ಸೀಮೆಯಿಂದ ಈಗ ಸಾವಿರಾರು ಮಂಗಗಳನ್ನು ಹಿಡಿದು ಪರದೇಶಕ್ಕೆ ಕಳಿಸುತ್ತಲಿರುವರು ಈ ಮಂಗಗಳ ಅಂಗವಿಶೇಷಗಳಿಂದ ಮುಪ್ಪನ್ನು ಗೆಲ್ಲುವ ರಸವನ್ನು ಸಿದ್ಧ ಮಾಡುವರಂತೆ

ನಿಝಾಂ ಕರ್ನಾಟಕ.

ತುರಕಸ್ಥಾನದಲ್ಲಿ ಮಹಮ್ಮದೀಯ ವಿದ್ಯಾರ್ಥಿ ವೇತನಕ್ಕಾಗಿ ಹೈದರಾಬಾದ ಸರಕಾರದವರು ಹತ್ತು ಸಹಸ್ರ ರೂಪಾಯಿಗಳನ್ನು ಕೊಟ್ಟಿರುತ್ತಾರೆ

ಹೈದರಾಬಾದಿನಲ್ಲಿ ನಾರಿಕಣಿವೆಯ ನೀರಾವರಿ ಇಲಾಖೆಯ ಎಂಜನಿಯರಾದ ಮೊಕೆಲಿ ಎಂಬಾತನು ಕಾಲುವೆಗಳಲ್ಲಿ ಮೆಕ್ಕಲನ್ನು ಬಾಚಿ ಹೊರಗೆ ಹಾಕುವ ಡ್ರೆಡ್ಜರ ಎಂಬ ದೋಣಿಯಲ್ಲಿ ಕುಳಿತು ಕಾಲುವೆಯಲ್ಲಿ ಹೋಗುತ್ತಿರುವಾಗ ಇದನ್ನು ನೋಡುವದಕ್ಕೆ ಅನೇಕರು ಹಳ್ಳಿಯವರು ಗುಂಪು ಗುಂಪಾಗಿ ಬಂದು ದಡದಲ್ಲಿ ನಿಂತುಕೊಂಡರು. ಎಂಜನಿಯರಿಗೆ ದೇಶಭಾಷೆಯು ಬಾರದ್ದರಿಂದಲೂ ಹಳ್ಳಿಯವರ ಉದ್ದೇಶವನ್ನು ತಿಳಿಯಲಾರದ್ದರಿಂದಲೂ ತನಗೆ ಏನೋ ತೊಂದರೆ ಬರುವುದೆಂದು ಯೋಚಿಸಿ ಅವರ ಮೇಲೆ ಗುಂಡು ಹೊಡೆದು ಅನೇಕರಿಗೆ ಗಾಯ ಪಡಿಸಿರುತ್ತಾನೆ.

ಹಿಂದುಸ್ಥಾನ.

ಅಹಮ್ಮದನಗರದಲ್ಲಿಯ ತೆಲಗು ಜನರು ತಮ್ಮದೊಂದು ಸಂಸ್ಥೆಯನ್ನು ಮಾಡಿ ಪ್ರಜೆಯ ಪರಿಷತ್ತಿನಲ್ಲಿ ಪಾಸಾದ ಠರಾವುಗಳನ್ನು ಅಮಲಿನಲ್ಲಿ ತರಲು ಪ್ರಯತ್ನ ಮಾಡಬೇಕೆಂದು ಗೊತ್ತು ಮಾಡಿದರು.

ಸರ ಶಂಕರ ನಾಯರರವರು ಮದ್ರಾಸ ಇಲಾಖೆಯಿಂದ ಸ್ಟೇಟ್ ಕೌನ್ಸಿಲ ಚುನಾವಣೆಗೆ ಉಮೇದವಾರರಾಗಿರುವರೆಂದು ಪ್ರಸಿದ್ಧವಾಗಿದೆ.

ಡಾಕ್ಟರ ಅನಿಬಿಸೆಂಟರವರು ಡಾರ್ಜಿಲಿಂಗಕ್ಕೆ ದಯಮಾಡಿಸಿದಾಗ್ಗೆ ದೇಶಬಂಧು ದಾಸರೊಡನೆ ಸಂಭಾಷಿಸಿದರು.

ತಾವು ತೀರ ಅಲ್ಪ ಸಂಖ್ಯಾಕರಾಗಿದ್ದು, ತಮ್ಮ ಸಮಾಜದ ಹಿತವನ್ನು ಸಾಧಿಸುವದು ಅಶಕ್ಯವೆಂದು ಭಾವಿಸಿ ಝಾಂಸಿ ಮುನಸಿಪಾಲಿಟಿಯ ಮುಸಲ್ಮಾನ ಸಭಾಸದರು ತಮ್ಮ ಜಾಗೆಗೆ ರಾಜೀನಾಮೆ ಕೊಟ್ಟಿರುವರಂತೆ.

ಶಾಂತಿನಿಕೇತನದಲ್ಲಿ ಮಹಾತ್ಮಾಗಾಂಧಿಯವರು ಕವೀಂದ್ರ ರವೀಂದ್ರರನ್ನು ಸಂದರ್ಶಿಸಿದರು.

ಮಲಬಾರದಲ್ಲಿ ಸಿಗುವಷ್ಟೇ ಸುಖ ಸೌಕರ್ಯಗಳು ಅಂದಮಾನದಲ್ಲಿ ಸಿಗುವವೆಂದೂ, ಅಲ್ಲಿಯ ಹವೆಯು ಆರೋಗ್ಯಕರವಿದೆಂದೂ ಮೋಪಲಾ ಕೈದಿಗಳು (ಈಗ ಬಿಡುಗಡೆಯಾಗಿದ್ದರೂ) ತಮ್ಮ ಹೆಂಡರು ಮಕ್ಕಳನ್ನು ಅಲ್ಲಿಗೆ ಕರಕೊಂಡು ಹೋಗಲು ಮಲಬಾರಕ್ಕೆ ಬಂದಿರುವರಂತೆ

ಮುಂಬಯಿಯಲ್ಲಿ ೧ ನೇ ತಾರೀಖಿನ ರಾತ್ರಿ ಭಯಂಕರ ಮಳೆಯಾಗಿ ಇಳುಕಲಾದ ಪ್ರದೇಶಗಳೆಲ್ಲವೂ ಜಲಮಯವಾಗಿರುತ್ತವೆ. ಬಿರುಗಾಳಿಯು ಬೀಸಿ ಎಷ್ಟೋ ಮರಗಳು ಕಿತ್ತಿ ಬಿದ್ದವೆ. ಟ್ರಾಮ್ಮು ಗಾಡಿಗಳು ಕೆಲವು ವೇಳೆ ಬಂದು ಇಡಲ್ಪಟ್ಟಿದ್ದವು.

ಪರದೇಶ.

ಚೀನದೇಶದಲ್ಲಿಯ ಬರಗಾಲದ ಸುದ್ದಿಯು ಕೇಳಲಿಕ್ಕೆ ಕೂಡ ಭೀಕರವಾಗಿದೆ. ಕಾಳಿಲ್ಲದೆ, ಹುಲ್ಲನ್ನೂ ಗಿಡದ ತೊಪ್ಪಲವನ್ನೂ ತಿನ್ನ ಹತ್ತಿರುವರಂತೆ! ಕೆಲವೆಡೆಯಲ್ಲಿ ಮನುಷ್ಯರನ್ನೇ ಹರಿದು ತಿನ್ನಹತ್ತಿದ್ದಾರೆ.

ಅಯರ್ಲಂಡದ ಇಬ್ಬರು ವಿದ್ಯಾರ್ಥಿಗಳು, ಶಾಲೆಗೆ ಹೋಗಲಾರದೆ ಬೇಸತ್ತು, ಶಾಲೆಯನ್ನು ಸುಡುವದರಿಂದಲೇ, ಈ ಕಾಟವು ತಪ್ಪುವದೆಂದು ಭಾವಿಸಿ ಶಾಲೆಗೆ ಬೆಂಕಿ ಹಚ್ಚಿದ್ದೇವೆಂದು ಪೋಲೀಸರ ಮುಂದೆ ಒಪ್ಪಿರುತ್ತಾರೆ ಇದರಿಂದ ಶಾಲೆಗೆ ಅಜಮಾಸ ೧ ಲಕ್ಷ ರೂಪಾಯಿ ಹಾನಿ ತಟ್ಟಿದೆ

ರೈಲ್ವೇ ಬೋರ್ಡಿನ ಸುದ್ದಿಗಳು.

ಧೋಂಡೋ ಎಲ್ಗೋ ಕುಲಕರ್ಣಿ ಅಕ್ಕಿಸಾಗರ ಪೇಟಾ ಮುರಗೋಡ ಇವರು ೩೦೦ ಜನರ ಸಹಿ ಕಳಿಸಿರುವಲ್ಲದೆ ತಮ್ಮ ಪೇಟೆಯಲ್ಲಿಯ ೩೩ ಹಳ್ಳಿಗಳಿಂದಲೂ ಸಹಿಗಳು ಬರುವಂತೆ ಏರ್ಪಾಡು ಮಾಡುತ್ತೇವೆಂದು ಬರೆದಿರುತ್ತಾರೆ ಇದಕ್ಕಾಗಿ ಅವರನ್ನಭಿನಂದಿಸುತ್ತೇವೆ.

ಮಂಜುನಾಥ ಗಣಪ್ಪ ಶೆಟ್ಟಿ ಮೂಡೂರು ತಾಲೂಕ ಕುಮಟಾ ಇವರು ೮೬ ಜನರ ಸಹಿಯನ್ನು ಕಳಿಸಿರುತ್ತಾರೆ.

ನಾರಾಯಣ ರಾಮಚಂದ್ರ ಜೋಶಿ ಮೊಣಶಿಗಿ ಇವರು ೩೦ ಜನರ ಸಹಿ ಮಾಡಿಸಿ ಕಳಿಸಿರುತ್ತಾರೆ.

ನಿಮಗೆ "ಕನ್ನಡಿಗ"ನ ಭೆಟ್ಟಿಯು ಅನಾವಶ್ಯಕವಿದ್ದರೆ ಸಂಚಿಕೆಗಳನ್ನು ಸ್ವೀಕರಿಸದೆ ಅವನ್ನು ನಮಗೆ ಮರಳಿ ಕಳಿಸಬೇಕಾಗಿ ಬಿನ್ನಹ. ಕಾರ್ಡ ಬರೆದು ನಿಮ್ಮ ಅರ್ಧ ಆಣೆ ವೆಚ್ಚ ಮಾಡುವದೂ ಅವಶ್ಯವಿಲ್ಲ.

ಕನ್ನಡ ನಾಡಿನ ಕಳಕಳಿಯಿದ್ದವರು "ಕನ್ನಡಿಗ"ನನ್ನು ಸ್ವೀಕರಿಸಬೇಕು ಅವನನ್ನು ಪ್ರೋತ್ಸಾಹಿಸಲೇಬೇಕು !

ಜಾಹೀರ ಪ್ರಕಟನೆಯು

ಬ್ರಹ್ಮಸೂತ್ರಗಳ ಮೇಲಿನ ಭಾಷ್ಯವೂ, ತತ್ವಪ್ರಕಾಶಿಕಾದಿ ವ್ಯಾಖ್ಯಾನಗಳೂ, ಇವುಗಳ ಸುಗಮ ಪ್ರವೇಶದ ಸಲುವಾಗಿ ಪೂರ್ವಪಕ್ಷವೂ, ಸೂತ್ರಾರ್ಥವೂ, ದ್ವೈತಸಿದ್ಧಾಂತವೂ, ಇವುಗಳ ವರ್ಣನೆಯುಳ್ಳ ಮತ್ತು ವಿದ್ವಾಂಸರಿಂದ ಪರಿಶೋಧಿಸಲ್ಪಟ್ಟ ೨೩೦ ಪುಟಗಳುಳ್ಳ ಸೂತ್ರ ರತ್ನಾವಲೀ ಎಂಬ ಗ್ರಂಥವನ್ನು ಮುದ್ರಿಸಲಿಕ್ಕೆ ಕಾರ್ಯವು ನಡೆದದೆ. ಬರುವ ಅಗಷ್ಟ ತಿಂಗಳೊಳಗಾಗಿ ಮುಂಗಡ ಹೆಸರು ರಜಿಸ್ಟರ ಮಾಡತಕ್ಕ ಗ್ರಾಹಕರಿಗೆ ಅದರ ಕ್ರಯವು ೧-೬-೦ ರೂ. ಬೀಳುವದು. ವ್ಹೀ. ಪಿ. ಚಾರ್ಜ ಬೇರೆ. ಹಿಂದಿನಿಂದ ೧-೧೨-೦ ರೂ. ಬೀಳುವದು. ಆದ್ದರಿಂದ ಗ್ರಾಹಕರು ತ್ವರೆ ಮಾಡಿ ನಮ್ಮ ವಿಳಾಸಕ್ಕೆ ಪತ್ರ ಬರೆದು ತಮ್ಮ ಹೆಸರು ರಜಿಷ್ಟರ ಮಾಡಬೇಕು.

(೨) ಶ್ರೀ ಮದ್ಭಾಗವತದ ಮೇಲಿನ ಯಾದುಪತ್ಯ ಮೊದಲಾದ ೧೧ ಟಿಪ್ಪಣಿಗಳನ್ನೂ (೩) ವಿಜಯಧ್ವಜೀ ಭಾಗವತದ ಮೂಲವನ್ನು, ಮುದ್ರಿಸುವ ಆಲೋಚನೆಯುಂಟು ಮುದ್ರಣ ಕಾರ್ಯಕ್ಕೂ, ಚಂದಾದಾರರಿಗೂ ಸೌಕರ್ಯವಾಗುವಹಾಗೆ ಮೂರು ತಿಂಗಳಿಗೊಮ್ಮೆ ಸುಂದರ ಫಾರ್ಮದಲ್ಲಿ ಸಂಚಿಕಾ ರೂಪದಿಂದ ವ್ಹಿ. ಪಿ. ಚಾರ್ಜದ ಹೊರತು ೧—೪—ರೂ. ಕ್ರಯಕ್ಕೆ ಕೊಡತಕ್ಕ ವ್ಯವಸ್ಥೆ ಮಾಡಿದೆ. ಆದರೆ ಗ್ರಾಹಕರ ಸಂಖ್ಯೆಯು ೫೦೦ ಆಗದ ಹೊರತು ಈ ಕಾರ್ಯವನ್ನು ಪ್ರಾರಂಭಿಸುವದು ಶಕ್ಯವಿಲ್ಲ. ಆದ್ದರಿಂದ ಚಂದಾದಾರರಾಗಲಿಚ್ಛಿಸುವ ಸದ್ವೈಷ್ಣವರು ತ್ವರೆಯಿಂದ ತಮ್ಮ ಹೆಸರು ನಮ್ಮ ಕಡೆಗೆ ರಜಿಸ್ಟರ ಮಾಡಿಸಿ ಈ ಸತ್ಕಾರ್ಯಕ್ಕೆ ಸಹಾಯ ಮಾಡುವರೆಂದು ತುಂಬಾ ನಂಬಿದ್ದೇವೆ.

Ganesh Peth — G. R. Savanur
Hubli Dist Dharwar — Pensioner.
15-5-1925

ಬ್ರಾಹ್ಮಣ ಸಭೆ

(ಲೇಖಕ:— ಶ್ರೀನಿವಾಸಾಚಾರ್ಯ ಬುರ್ಲಿ.)

ಈಗಿನ ಬ್ರಾಹ್ಮಣ ಸಮಾಜದ ಆರ್ಥಿಕ ಅವನತಿಯನ್ನು ಪರಿಹರಿಸಲಿಕ್ಕಾಗಿ ಧಾರವಾಡದವರು ಬ್ರಾಹ್ಮಣ ಸಭೆಯನ್ನು ನೆರೆಸಿದರು. ಬ್ರಾಹ್ಮಣ ಸಮಾಜವೇನೋ ಅವನತಿಯುಳ್ಳದ್ದದ್ದು ನಿಜ. ಆದರೆ ಆರ್ಥಿಕ ಅವನತಿಯು ಗಣನೆಗೆ ತರಲು ಯೋಗ್ಯವಲ್ಲದೇ ಆಧ್ಯಾತ್ಮಿಕ ಅವನತಿಯ ಬಗ್ಗೆ ವಿಚಾರವು ಅತ್ಯಾವಶ್ಯಕ ವಿರುವದು, ಸರಕಾರದಲ್ಲಿ ನೌಕರಿಗಳ ಆಗ್ರವಿದ್ಯಾಗ್ರೆ ಧರ್ಮ ಜಾತಿಗಳ ಎಚ್ಚರವಿಲ್ಲದೇ ಹಾದಿ ತಪ್ಪಿದ್ದಕ್ಕೆ ಸರ್ವ ರೀತಿಯಿಂದಲೂ, ಬ್ರಾಹ್ಮಣ ಸಮಾಜಕ್ಕೆ ಅವನತಿಯೇ ಅವನತಿಯು ಬಂದು ಒದಗಿತು. ಈಗ್ಗೆ ನಮ್ಮ ಸುದೈವದಿಂದ ಪ್ರಾಚೀನರ ಪೂರ್ವಪುಣ್ಯದಿಂದ ನೌಕರಿಗಳು ದುರ್ಲಭವಾಗಿರುವದಾದರೂ ಮೊದಲಿನ ಆಧ್ಯಾತ್ಮವೈಭವದ ಕಡೆಗೆ ಲಕ್ಷ್ಯ ಹೋದರೆ ಸಮಾಜದ ಉದ್ಧಾರವಾದರೂ ಆಗಬಹುದು. ಧಾರವಾಡದವರು ಪ್ರಕಟಿಸಿದ ಪ್ರಶ್ನ ಮಾಲೆಯಲ್ಲಿ ಆಧ್ಯಾತ್ಮ ಸಂಬಂಧವಾಗಿ ಒಂದಾದರೂ ಪ್ರಶ್ನ ಇಲ್ಲದ್ದನ್ನು ನೋಡಿ ಮನಸ್ಸಿಗೆ ಬಹಳ ವಿಷಾದವಾಯಿತು. ಗೋತ್ರ ಪ್ರವರ್ತಕರಾದ ಮಹರ್ಷಿಗಳ ದಿವ್ಯ ಚರಿತ್ರೆಗಳು ಸರ್ವಥಾ ಅವರ ಸ್ಮರಣೆಗೆ ಬರಲಿಲ್ಲವೇ? ಪ್ರಶಸ್ತ ವನದಲ್ಲಿ ಪವಿತ್ರ ನದೀ ತೀರಗಳಲ್ಲಿ ರಮಣೀಯವಾಗಿ ತೋರುವ ಪುಣ್ಯಾಶ್ರಮಗಳ ಕಲ್ಪನೆಗಳು ಅವರ ಹೃದಯಕ್ಕೆ ತಾಕಲಿಲ್ಲವೇ? ಜಟಾವಲ್ಕಲ ಧಾರಣ ಮಾಡಿ ತೇಜೋಮಯ ಶರೀರಗಳಾದ ಮಹರ್ಷಿ ಕುಮಾರರ ಚಿತ್ರಗಳು ಪಾಪ! ಈ ಚರ್ಮ ಚಕ್ಷುಗಳಿಗೆ ಇದುರು ನಿಲ್ಲಲಿಲ್ಲವೇ? ಇಂಥ ಅಪೂರ್ವ ವೈಭವವನ್ನು ಮರೆತ ನಾಮಧಾರಿಯಾದ ಬ್ರಾಹ್ಮಣ ಸಮಾಜಕ್ಕೆ ಬ್ರಾಹ್ಮಣ ಎಂಬ ನಾಮವು ಎಂಥ ಲಾಂಛನವನ್ನುಂಟು ಮಾಡುವದಿಲ್ಲಾ? ಅಯ್ಯೋ ಬ್ರಾಹ್ಮಣ ಸಮಾಜದವರೇ ಇನ್ನು ಮೇಲಾದರೂ ಕ್ಷುದ್ರ ವಿಷಯಗಳಿಗೆ ಮಹತ್ವವನ್ನು ಕೊಡದೆ ಆಧ್ಯಾತ್ಮತೆ ಬಗ್ಗೆಗಾಗಿ ಯತ್ನಿಸಿರಿ. ಆರ್ಥಿಕ ಅವನತಿಯು ನಿಮ್ಮ ನಿಜವಾದ ಅವನತಿಯಲ್ಲ. ಮನ್ವಾದಿ ಸ್ಮೃತಿಕಾರರು ಕುಶೀಲ ಧಾನ್ಯಕಿಂತಲೂ, ಕುಂಭಧಾನ್ಯದವನು (ಹಗೆ ತುಂಬಿಸುವನಕಿಂತಲೂ, ಗಳಿಗೆ ಕಾಳಿನವನು) ಶ್ರೇಷ್ಠನೆಂತಲೂ, ಇವನಿಗಿಂತಲೂ, ನಾಳಿಗೆ ಮಾತ್ರ ಸಾಲುವಷ್ಟು ಕಾಳಿನವ ಹೆಚ್ಚಿನವನೆಂತಲೂ, ಇವತ್ತಿಗೆ ಮಾತ್ರ ಇದ್ದವನು ಅವನಿಗೂ ಹೆಚ್ಚಿನವನೆಂತಲೂ, ಹೇಳುವ ತಾರತಮ್ಯನೋಡಿದರೆ ಆರ್ಥಿಕ ಉನ್ನತಿಯು ಹೇಗೆ ಇತ್ತೆಂಬುದು ತಾನೇ ತಿಳಿದು ಬರುವದು. ಹೀಗೆ ಏನು ವಿಚಿತ್ರವೆಂದು ಚಕಿತರಾಗ ಕೂಡದು. ನಿಸ್ಪೃಹರಾಗ ಹತ್ತಿದರೆ ಮನುಷ್ಯನು ಪರಮಾನಂದದಲ್ಲಿರುವನು. ಆಶೆ ಇದ್ದವನಿಗೆ ಮನೆಯಲ್ಲಿ ಲಕ್ಷ ರೂಪಾಯಿಗಳಿದ್ದರೂ ಸುಖವಿರುವದಿಲ್ಲ. ಬ್ರಾಹ್ಮಣನು ಈ ಇಹಲೋಕದ ವಿಷಯವನ್ನು ಲಕ್ಷಕ್ಕೆ ತರಬಾರದೆಂಬುವದೇ ಮುಖ್ಯವಾದುದು.

ಭಗವಾನ ಬಾದರಾಯಣ ದೇವರು ಮಹಾ ಭಾರತ ಶಾಂತಿ ಪರ್ವ ೩೨೧ ನೇ ಅಧ್ಯಾಯದಲ್ಲಿ

ब्राह्मण्यं बहुभिरवाप्यते तपोभिस्तल्लब्ध्वा न रतिपरेण हेलितव्यम् ॥ स्वाध्याये तपसि दमे च नित्ययुक्तः क्षेमार्थी कुशलपरः सदा यतस्व ॥ २४ ॥

(ಬ್ರಾಹ್ಮಣ ಜನ್ಮವು ಸುಲಭವಲ್ಲ. ಬಹಳ ತಪಸ್ಸು ಮಾಡಿದರೆ ಲಭ್ಯವಾಗುವದು. ಇಂಥ ದುರ್ಲಭ ಜನ್ಮವು ಒಂದಿರಲು ವ್ಯರ್ಥವಾಗಿ ವಿಷಯಲೋಲುಪನಾಗದೇ ಆಯುರ್ಹರಣ ಮಾಡದೇ ಜನ್ಮ ಸಾರ್ಥಕ ಮಾಡಿಕೊಳ್ಳಬೇಕು. ನಿಜವಾಗಿ ಪರಮ ಶ್ರೇಯಸ್ಸನ್ನು ಸಂಪಾದಿಸುವವನು ಸ್ವಾಧ್ಯಾಯದಲ್ಲಿಯೂ, ತಪಸ್ಸಿನಲ್ಲಿಯೂ, ಇಂದ್ರಿಯ ನಿಗ್ರಹದಲ್ಲಿಯೂ, ಯತ್ನಿಸುತ್ತಿರಬೇಕು. ಆದುದರಿಂದ ಇದನ್ನು ವಿಚಾರ ಮಾಡಿ ನೀನು ನಾನು ಹೇಳಿದ್ದರಲ್ಲಿ ಯತ್ನಿಸು) ಎಂದು ಪುತ್ರರಾದ ಶುಕಾಚಾರ್ಯರನ್ನು ನಿಮಿತ್ತ ಮಾಡಿ ಬ್ರಾಹ್ಮಣ ಸಮಾಜಕ್ಕೆ ಹೇಳಿದ್ದಾರೆ. ಇದನ್ನು ವಿಚಾರ ಮಾಡಲಾಗಿ ಐಹಿಕ ವಿಚಾರವನ್ನು ತೊರೆದು ಪರಮಾರ್ಥ ವಿಚಾರಗಳಲ್ಲಿ ಆಸಕ್ತನಾಗಿ ಆಧ್ಯಾತ್ಮತೇಜವನ್ನು ಸಂಪಾದಿಸಲು ಯತ್ನಿಸುವದೇ ನಮ್ಮ ಮುಖ್ಯ ಕರ್ತವ್ಯವು. ಅದಕ್ಕಾಗಿ ಸಮಾಜದ ಹಿತೈಷಿಗಳಾದ ನಮ್ಮ ಧಾರವಾಡದ ಬಂಧುಗಳು ಸಭೆಯಲ್ಲಿ ನಿರ್ಣಯಿಸಲ್ಪಟ್ಟ ಠರಾವುಗಳ ಮೇಲಿಂದಲೇ ತೃಪ್ತಿ ಪಡದೇ ಉತ್ತಮ ಮಾರ್ಗ ಹಿಡಿದು ಪೂರ್ವಕಾಲದ ಮಹರ್ಷಿಗಳ ದಿವ್ಯ ಸ್ಮರಣೆ ಬರುವಂತೆ ಯತ್ನಿಸಬೇಕೆಂದು ಸೂಚಿಸುವೆವು. ಮತ್ತು ಸುಪ್ರಸಂಗವು ತ್ವರೆಯಿಂದ ಬಂದು ದಿವ್ಯ ತೇಜಸ್ವೀ ಬ್ರಾಹ್ಮಣ ತರುಣರು ಅಲಿದಾಡಿ ಗಾಢಾಂಧನಿದ್ರಿತವಾದ ಭಾರತವನ್ನು ಎಚ್ಚರ ಗೊಳಿಸುವಂತೆ ಮಾಡಲೆಂದು ಶ್ಯಾಮ ಸುಂದರನಾದ ಭಗವಾನ್ ಶ್ರೀ ಕೃಷ್ಣನನ್ನು ಪ್ರಾರ್ಥಿಸುವೆವು

ಸಂಸ್ಕೃತ ವಿದ್ವಾಂಸರು ಬೇಕು.

ರಾಣಿಬಿನ್ನೂರಲ್ಲಿ ಉಪನಿಷತ್ತು ಶ್ರವಣ ಮಾಡಿಸೋಣ, ದಶಪ್ರಕರಣ ಪಾಠ ಹೇಳೋಣ, ಪುರಾಣ ಹೇಳೋಣ, ಇವುಗಳಿಗಾಗಿ ಒಬ್ಬ ಸಂಸ್ಕೃತ ವಿದ್ವಾಂಸರು ಅವಶ್ಯಬೇಕಾಗಿದೆ. ಪಗಾರ ತಿಂಗಳೊಂದಕ್ಕೆ ೨೦ ಅಥವಾ ೨೫ ರೂ. ಅನುಕೂಲ ಇದ್ದವರು ಕೆಳಗಿನ ಪತ್ತೆದ ಮೇಲೆ ಪತ್ರ ವ್ಯವಹಾರ ನಡೆಯಿಸ ಬಹುದು.

ರಾಣಿಬಿನ್ನೂರ — ಕೃಷ್ಣರಾವ ಹ್ಯಾತನಾಳ ಬಿ. ಎ.

ಈ ಪತ್ರಿಕೆಯು ... ರಂಗನವೇಶೀ ರಾಜೇರಾಮರ ಮಕ್ಕಳಾದ ಶ್ರೀನಿವಾಸರಾವ ... ಬಾಗಲಕೋಟೆಯಲ್ಲಿಯ
ವಿಚಕ್ಷಣ್ಯ ಮುದ್ರಣಾಲಯದಲ್ಲಿ ಮುದ್ರಿತವಾಗಿ ಪ್ರಸಿದ್ಧ ... ಪ್ರತಿ ೩೫೦೦.

ರ ನಂ. ಬಿ. ೧೯೪೭ ವಾ. ಚಂದಾ ೧—೮—೦ ಮಾತ್ರ

ಕನ್ನಡಿಗ.

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವೇಶವಾಗಿದೆ)

ಯದ್ಯತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಮ್ ॥ — ಮನು

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ } ಬಾಗಲಕೋಟೆ ಶುಕ್ರವಾರ ಮಿತಿ ಜ್ಯೇಷ್ಠ ವದ್ಯ ೧೩ ಶಕೆ ೧೮೪೭. ತಾ॥ ೧೯ ೬-೧೯೨೫. { ಸಂಚಿಕೆ ೧೨

ದೇಶಬಂಧುಗಳು ಸ್ವರ್ಗಸ್ಥರಾದರು!

ಭರತಖಂಡದ ಅಮೌಲ್ಯವಾದ ರತ್ನವು ಕಳೆದು ಹೋಯಿತು !!

ಮಂಗಳವಾರ ತಾ॥ ೧೬ ನೇ ದಿವಸ ಸಾಯಂಕಾಲದ ೫॥ ಗಂಟೆಯ ಸುಮಾರಕ್ಕೆ ದೇಶಬಂಧೂ ದಾಸರವರು ಡಾರ್ಜಲಿಂಗದಲ್ಲಿ ಮೃತರಾದರು.

ಮೊನ್ನೆ ಮೊನ್ನೆ ಮಹಾತ್ಮರು ಡಾರ್ಜಲಿಂಗಕ್ಕೆ ಹೋಗಿ ದಾಸ ಬಾಬುರವರ ಜೊತೆಯಲ್ಲಿ ೧-೨ ದಿನ ಸುಖದಿಂದ ಕಾಲಕಳೆದರು. ಹಿಂದುಸ್ಥಾನದ ಈಗಿನ ಪರಿಸ್ಥಿತಿಯಬಗ್ಗೆ ಮಹಾತ್ಮರೂ ಅವರೂ ವಿಚಾರಮಾಡಿ ಈರ್ವರ ಸಹಿಯುಳ್ಳ ಒಂದು ವಿನಂತಿ ಪತ್ರಿಕೆಯನ್ನು ಪ್ರಕಟಿಸ ಬೇಕೆಂದಿದ್ದರು.

ಡಾರ್ಜಲಿಂಗದಲ್ಲಿ ಅವರ ಕಾಯಿಲೆಯು ಹೆಚ್ಚಾದ ಸುದ್ದಿ ಯಾರಿಗೂ ಇರಲಿಲ್ಲ. ಅವರು ಮಧುಮೂತ್ರದಿಂದ ಪೀಡಿತರಾಗಿದ್ದರು. ರವಿವಾರದ ವರೆಗೂ ಅವರು ನೆಟ್ಟಗಿದ್ದರು ಆದಿನ ಪ್ರಕೃತಿಯಲ್ಲಿ ವ್ಯತ್ಯಾಸವು ಕಂಡು ಬಂದಿತು. ಜ್ವರ ಬಂದವು ಆದರೆ ಆ ಜ್ವರವು ಪ್ರಾಣಘಾತಕವಾದದ್ದೆಂಬುದಾಗಿ ಯಾರಿಗೂ ತಿಳಿಯಲಿಲ್ಲ. ಮಂಗಳವಾರ೧೨ ಗಂಟೆಯ ಸುಮಾರಕ್ಕೆ ದೇಶಬಂಧುಗಳು ತಮಗೆ ಬಹಳೇ ಅಶಕ್ತತೆಯುಂಟಾಗಿದೆಯೆಂದು ತಮ್ಮ ಪತ್ನಿಯ ಮುಂದೆ ಹೇಳಿದರು. ಕೂಡಲೇ ಅವರು ಡಾಕ್ಟರರನ್ನು ಕರೆಸಿದರು. ಎಲ್ಲವೂ ವ್ಯರ್ಥವು. ಅವರ ಅಶಕ್ತತೆಯು ಹೆಚ್ಚುತ್ತ ಸಂಜೆಯ ೫॥ ಗಂಟೆಯ ಸುಮಾರಕ್ಕೆ ಕಾಲವಶರಾದರು. ಹೃದಯ ವಿಕಾರದಿಂದ ಅವರು ಹೀಗೆ ಅಕಸ್ಮಾತ್ತಾಗಿ ಮಡಿದರೆಂದು ಡಾಕ್ಟರ ಜನರ ಅಭಿಪ್ರಾಯವಿದೆ. ದಾಸರವರ ಮರಣಕಾಲದಲ್ಲಿ ಅವರ ಪತ್ನಿಯವರೂ, ಮಗನೂ, ಡಾಕ್ಟರರೂ ಅವರ ಕೆಲವು ಸ್ನೇಹಿತರೂ ಅವರ ಹತ್ತರ ಇದ್ದರು. ಮರಣವಾರ್ತೆಯು ಊರಲ್ಲೆಲ್ಲ ಹಾಹಾ ಅನ್ನುವದರಲ್ಲಿ ಹಬ್ಬಿತು ಡಾರ್ಜಲಿಂಗದಲ್ಲಿಯ ಎಲ್ಲ ಜನರೂ ಬೆಟ್ಟದ ಮೂಲ ನಿವಾಸಿಗಳು ಸಹ ದಾಸರವರು ಇರುತ್ತಿದ್ದ ಮನೆಗೆ ಧಾವಿಸಿ ಬಂದರು.

ದಾಸ ಬಾಬೂರವರ ದೇಹವು ದಹನಕ್ಕಾಗಿ ಕಲಕತ್ತೆಗೆ ಒಯ್ಯಲ್ಪಟ್ಟಿದೆ. ಅದು ಗುರುವಾರ ಪ್ರಾತಃಕಾಲದ ೬॥ ಗಂಟೆಗೆ ಕಲಕತ್ತೆಗೆ ತಲ್ಪಿತು. ಸ್ಟೇಶನದಲ್ಲಿ ಕೂಡಿದ ಜನರ ಸಂಖೆಯು ಅಪರಿಮಿತಿಯಾಗಿದ್ದಿತು. ಮಹಾತ್ಮಾ ಗಾಂಧೀಯವರು ತಮ್ಮ ಬಂಗಾಲದ ಕಾರ್ಯವನ್ನು ನಿಲ್ಲಿಸಿ ಕೂಡಲೇ ಕಲಕತ್ತೆಗೆ ತೆರಳಿದರು.

ಗಲ್ಲಿಗೇರಿಸಿಕೊಳ್ಳಲು ಸಿದ್ಧನಾಗಿರುವೆನು.

೧೯೨೪ ನೇ ಇಸ್ವಿಯ ಅಕ್ಟೋಬರ ೨೫ ನೇ ತಾ॥ " ಬಂಗಾಲ ಆರ್ಡಿನನ್ಸ್"ದ ಬಗ್ಗೆ ಭಾಷಣಮಾಡುವಾಗ್ಗೆ ದಾಸರವರು ಹೇಳಿದ್ದು:—

" ನಾನು ನನ್ನ ರಾಷ್ಟ್ರವನ್ನು ಪ್ರೀತಿಸುತ್ತೇನೆ ಸ್ವಾತಂತ್ರ್ಯದಲ್ಲಿ ನನಗೆ ಅಭಿಲಾಷೆಯಿದೆ. ನನ್ನ ರಾಷ್ಟ್ರದ ಕಾರ್ಯವನ್ನು ನಾನೇ ನಿರ್ವಹಿಸಿಕೊಳ್ಳುವ ಅಧಿಕಾರವನ್ನು, ನನ್ನ ಜನ್ಮ ಸಿದ್ಧವಾದ ಅಧಿಕಾರವನ್ನು, ನಾನೆಂದಿಗೂ ಸಂಪಾದಿಸದೇ ಬಿಡೆನು. ಇದು ಅಪರಾಧವೆಂದು ಗಣಿಸಲ್ಪಟ್ಟರೆ ಆ ಅಪರಾಧಕ್ಕಾಗಿ ನನ್ನನ್ನು ಗಲ್ಲಿಗೇರಿಸಿಕೊಳ್ಳಲು ನಾನು ಒಂಟಿಗಾಲಿನಿಂದ ಸಿದ್ಧನಾಗಿರುವೆನು. "

ಜಾಹೀರ ಪ್ರಕಟನೆಯು

ಬ್ರಹ್ಮಸೂತ್ರಗಳ ಮೇಲಿನ ಭಾಷ್ಯವೂ, ತತ್ವಪ್ರಕಾಶಿಕಾದಿ ವ್ಯಾಖ್ಯಾನಗಳೂ, ಇವುಗಳ ಸುಗಮ ಪ್ರವೇಶದ ಸಲುವಾಗಿ ಪೂರ್ವಪಕ್ಷವೂ, ಸೂತ್ರಾರ್ಥವೂ, ದ್ವೈತಸಿದ್ಧಾಂತವೂ, ಇವುಗಳ ವರ್ಣನೆಯುಳ್ಳ ಮತ್ತು ವಿದ್ವಾಂಸರಿಂದ ಪರಿಶೋಧಿಸಲ್ಪಟ್ಟ ೬೩೦ ಪುಟಗಳುಳ್ಳ ಸೂತ್ರ ರತ್ನಾವಲೀ ಎಂಬ ಗ್ರಂಥವನ್ನು ಮುದ್ರಿಸುವಿಕ್ಕೆ ಕಾರ್ಯವು ನಡೆದದೆ. ಬರುವ ಆಗಷ್ಟ ತಿಂಗಳೊಳಗಾಗಿ ಮುಂಗಡ ಹೆಸರು ರಜಿಸ್ಟರ ಮಾಡತಕ್ಕ ಗ್ರಾಹಕರಿಗೆ ಅದರ ಕ್ರಯವು ೧-೬-೦ ರೂ. ಬೀಳುವದು. ವ್ಹೀ. ಪಿ. ಚಾರ್ಜ ಬೇರೆ. ಹಿಂದಿನಿಂದ ೧-೧೨-೦ ರೂ. ಬೀಳುವದು. ಆದ್ದರಿಂದ ಗ್ರಾಹಕರು ತ್ವರೆ ಮಾಡಿ ನಮ್ಮ ವಿಳಾಸಕ್ಕೆ ಪತ್ರ ಬರೆದು ತಮ್ಮ ಹೆಸರು ರಜಿಸ್ಟರ ಮಾಡಬೇಕು.

(೨) ಶ್ರೀ ಮದ್ಭಾಗವತದ ಮೇಲಿನ ಯಾದುಪತ್ಯ ಮೊದಲಾದ ೧೧ ಟಿಪ್ಪಣಿಗಳನ್ನೂ (೩) ವಿಜಯಧ್ವಜೀ ಭಾಗವತದ ಮೂಲವನ್ನು, ಮುದ್ರಿಸುವ ಆಲೋಚನೆಯುಂಟು ಮುದ್ರಣ ಕಾರ್ಯಕ್ಕೂ, ಚಂದಾದಾರರಿಗೂ ಸೌಕರ್ಯವಾಗುವಮಾಗೆ ಮೂರು ತಿಂಗಳಿಗೊಮ್ಮೆ ಸುಂರಾಂ ಫಾರ್ಮದಲ್ಲಿ ಸಂಚಿಕಾ ರೂಪದಿಂದ ವ್ಹಿ. ಪಿ. ಚಾರ್ಜದ ಹೊರತು ೧—೫—ರೂ. ಕ್ರಯಕ್ಕೆ ಕೊಡತಕ್ಕ ವ್ಯವಸ್ಥೆ ಮಾಡಿದೆ. ಆದರೆ ಗ್ರಾಹಕರ ಸಂಖ್ಯೆಯು ೫೦೦ ಆಗದ ಹೊರತು ಈ ಕಾರ್ಯವನ್ನು ಪ್ರಾರಂಭಿಸುವದು ಶಕ್ಯವಿಲ್ಲ. ಆದ್ದರಿಂದ ಚಂದಾದಾರರಾಗಲಿಚ್ಛಿಸುವ ಸಜ್ಜನರು ತ್ವರೆಯಿಂದ ತಮ್ಮ ಹೆಸರು ನಮ್ಮ ಕಡಿಗೆ ರಜಿಸ್ಟರ ಮಾಡಿಸಿ ಈ ಸತ್ಕಾರ್ಯಕ್ಕೆ ಸಹಾಯ ಮಾಡುವರೆಂದು ತುಂಬಾ ಸಂಜಿಸ್ತೇವೆ.

Ganesh Peth G. R. Savanur
Hubli Dist Dharwar Pensioner.
15-5-1925

ಬ್ರಾಹ್ಮಣ ಸಭೆ

(ಲೇಖಕ— ಶ್ರೀನಿವಾಸಚಾರ್ಯ ಬಾಗಿ.)

ಈಗಿನ ಬ್ರಾಹ್ಮಣ ಸಮಾಜದ ಆರ್ಥಿಕ ಅವನತಿಯನ್ನು ಪರಿಹರಿಸಬೇಕಾಗಿ ಧಾರವಾಡದವರು ಬ್ರಾಹ್ಮಣ ಸಭೆಯನ್ನು ನೆರಿಸಿದರು. ಬ್ರಾಹ್ಮಣ ಸಮಾಜದಲ್ಲಿ ಅವನತಿಯುಳ್ಳದ್ದದ್ದು ನಿಜ. ಆದರೆ ಆರ್ಥಿಕ ಅವನತಿಯು ಗಣನೆಗೆ ತರಲು ಯೋಗ್ಯವಲ್ಲದ್ದು ಆಧ್ಯಾತ್ಮಿಕ ಅವನತಿಯ ಬಗ್ಗೆ ವಿಚಾರವು ಅತ್ಯಾವಶ್ಯಕವಿರುವದು, ಸರಕಾರದಲ್ಲಿ ನೌಕರಿಗಳು ಅಗ್ಗವಿದ್ದಾಗ್ಗೆ ಧರ್ಮ ಜಾತಿಗಳ ಎಚ್ಚರವಿಲ್ಲದೇ ಪಾದ ತಪ್ಪಿದ್ದಕ್ಕೆ ಸರ್ವ ರೀತಿಯಿಂದಲೂ, ಬ್ರಾಹ್ಮಣ ಸಮಾಜಕ್ಕೆ ಅವನತಿಯೋ ಅವನತಿಯು ಬಂದು ಒದಗಿತು. ಈಗ್ಗೆ ನಮ್ಮ ಸುದೈವದಿಂದ ಪ್ರಾಚೀನರ ಪೂರ್ವಪುಣ್ಯದಿಂದ ನೌಕರಿಗಳು ದುರ್ಲಭವಾಗಿರುವದಾದರೂ ಮೊದಲಿನ ಆಧ್ಯಾತ್ಮವೈಭವದ ಕಡೆಗೆ ಲಕ್ಷ್ಯ ನೋಡಿದರೆ ಸಮಾಜದ ಉದ್ಧಾರವಾದರೂ ಆಗಬಹುದು. ಧಾರವಾಡದವರು ಪ್ರಕಟಿಸಿದ ಪ್ರಶ್ನ ಮಾಲೆಯಲ್ಲಿ ಆಧ್ಯಾತ್ಮ ಸಂಬಂಧವಾಗಿ ಒಂದಾದರೂ ಪ್ರಶ್ನ ಇಲ್ಲದ್ದನ್ನು ನೋಡಿ ಮನಸ್ಸಿಗೆ ಬಹಳ ವಿಷಾದವಾಯಿತು. ಗೋತ್ರ ಪ್ರವರ್ತಕರಾದ ಮಹರ್ಷಿಗಳ ದಿವ್ಯ ಚರಿತ್ರಗಳು ಸರ್ವಥಾ ಅವರ ಸ್ಮರಣೆಗೆ ಬರಲಿಲ್ಲವೇ? ಪ್ರಶಸ್ತ ವನದಲ್ಲಿ ಪುಣ್ಯ ನದೀ ತೀರಗಳಲ್ಲಿ ರಮಣೀಯವಾಗಿ ತೋರುವ ಪುಣ್ಯಾಶ್ರಮಗಳ ಕಲ್ಪನೆಗಳು ಅವರ ಹೃದಯಕ್ಕೆ ತಾಕಲಿಲ್ಲವೇ? ಜಟಾವಲ್ಕಲ ಧಾರಣ ಮಾಡಿ ಕೌಪೀನಮಾತ್ರಧಾರಿಗಳಾದ ಮಹರ್ಷಿ ಕುಮಾರರ ಚಿತ್ರಗಳು ಪಾಪ! ಈ ಜನರ ಚಕ್ಷುಗಳಿಗೆ ಇದುರು ನಿಲ್ಲಲಿಲ್ಲವೇ? ಇಂಥ ಅಪೂರ್ವ ವೈಭವವನ್ನು ಮರೆತ ನಾಸ್ತಿಕರಾದ ಬ್ರಾಹ್ಮಣ ಸಮಾಜಕ್ಕೆ ಬ್ರಾಹ್ಮಣ ಎಂಬ ನಾಮವು ಎಂಥ ಲಾಂಛನವನ್ನುಂಟು ಮಾಡುವದಲ್ಲ? ಅಯ್ಯೋ! ಬ್ರಾಹ್ಮಣ ಸಮಾಜದವರೇ! ಇನ್ನು ಮೇಲಾದರೂ ಕ್ಷುದ್ರ ವಿಷಯಗಳಿಗೆ ಮಹತ್ವವನ್ನು ಕೊಡದೆ ಆಧ್ಯಾತ್ಮ ತೇಜಸ್ಸಿಗಾಗಿ ಯತ್ನಿಸಿರಿ. ಆರ್ಥಿಕ ಅವನತಿಯು ನಿಮ್ಮ ನಿಜವಾದ ಅವನತಿಯಲ್ಲ. ಮನ್ವಾದಿ ಸ್ಮೃತಿಕಾರರು ಕುಶೂಲ ಧಾನ್ಯಕರಿಂತಲೂ, ಕುಂಭಧಾನ್ಯದವನು (ಹಗೆ ತುಂಬಿದವನಕಿಂತಲೂ, ಗಡಿಗಿ ತುಂಬಿದವನು) ಶ್ರೇಷ್ಠನೆಂತಲೂ, ಇವನಿಗಿಂತಲೂ, ನಾಳಿಗೆ ಮಾತ್ರ ಸಾಲುವಷ್ಟು ಕಾಳಿನವ ಹೆಚ್ಚಿನವನೆಂತಲೂ, ಇವತ್ತಿಗೆ ಮಾತ್ರ ಇದ್ದವನು ಅವನಿಗೂ ಹೆಚ್ಚಿನವನೆಂತಲೂ, ಹೇಳುವ ತಾರತಮ್ಯನೋಡಿದರೆ ಆರ್ಥಿಕ ಉನ್ನತಿಯು ಹೇಗೆ ಇತ್ತೆಂಬುದು ತಾನೇ ತಿಳಿದು ಬರುವದು. ಹೀಗೆ ಏನು ವಿಚಿತ್ರವೆಂದು ಚಕಿತರಾಗ ಕೂಡದು. ನಿಸ್ಪೃಹರಾಗ ಹತ್ತಿದರೆ ಮನುಷ್ಯನು ಪರಮಾನಂದದಲ್ಲಿರುವನು. ಆಶೆ ಇದ್ದವನಿಗೆ ಮನೆಯಲ್ಲಿ ಲಕ್ಷ ರೂಪಾಯಿಗಳಿದ್ದರೂ ಸುಖವಿರುವದಿಲ್ಲ. ಬ್ರಾಹ್ಮಣನು ಈ ಇಹಲೋಕದ ವಿಷಯವನ್ನು ಲಕ್ಷ್ಯಕ್ಕೆ ತರಬಾರದೆಂಬುವದೇ ಮುಖ್ಯವಾದುದು.

ಭಗವಾನ ಬಾದರಾಯಣ ದೇವರು ಮಹಾ ಭಾರತ ಶಾಂತಿ ಪರ್ವ ೩೨೧ ನೇ ಅಧ್ಯಾಯದಲ್ಲಿ

ब्राह्मण्यं बहुभिरवाप्यते तपोभिस्तल्लब्ध्वा न रतिपरेण हेलितव्यम् ॥ स्वाध्याये तपसि दमे च नित्ययुक्तः क्षेमार्थी कुशलपरः सदा यतस्व ॥ ३४ ॥

(ಬ್ರಾಹ್ಮಣ ಜನ್ಮವು ಸುಲಭವಲ್ಲ. ಬಹಳ ತಪಸ್ಸು ಮಾಡಿದರೆ ಲಭ್ಯವಾಗುವದು. ಇಂಥ ದುರ್ಲಭ ಜನ್ಮವು ಬಂದಿರಲು ವ್ಯರ್ಥವಾಗಿ ವಿಷಯಲೋಲುಪನಾಗದೇ ಆಯುರ್ಹರಣ ಮಾಡದೇ ಜನ್ಮ ಸಾರ್ಥಕ ಮಾಡಿಕೊಳ್ಳಬೇಕು. ನಿಜವಾಗಿ ಪರಮ ಶ್ರೇಯಸ್ಸನ್ನು ಸಂಪಾದಿಸುವವನು ಸ್ವಾಧ್ಯಾಯದಲ್ಲಿಯೂ, ತಪಸ್ಸಿನಲ್ಲಿಯೂ, ಇಂದ್ರಿಯ ನಿಗ್ರಹದಲ್ಲಿಯೂ, ಯತ್ನಿಸುತ್ತಿರಬೇಕು. ಆದುದರಿಂದ ಇದನ್ನು ವಿಚಾರ ಮಾಡಿ ನೀನು ನಾನು ಹೇಳಿದ್ದರಲ್ಲಿ ಯತ್ನಿಸು) ಎಂದು ಪತ್ರರಾದ ಶುಕಾಚಾರ್ಯರನ್ನು ನಿಮಿತ್ತ ಮಾಡಿ ಬ್ರಾಹ್ಮಣ ಸಮಾಜಕ್ಕೆ ಹೇಳಿದ್ದಾರೆ. ಇದನ್ನು ವಿಚಾರ ಮಾಡಲಾಗಿ ಐಹಿಕ ವಿಚಾರವನ್ನು ತೊರೆದು ಪರಮಾರ್ಥ ವಿಚಾರಗಳಲ್ಲಿ ಆಸಕ್ತನಾಗಿ ಆಧ್ಯಾತ್ಮ ತೇಜವನ್ನು ಸಂಪಾದಿಸಲು ಯತ್ನಿಸುವದೇ ನಮ್ಮ ಮುಖ್ಯ ಕರ್ತವ್ಯವು. ಆದಕ್ಕಾಗಿ ಸಮಾಜದ ಹಿತೈಷಿಗಳಾದ ನಮ್ಮ ಧಾರವಾಡದ ಬಂಧುಗಳು ಸಭೆಯಲ್ಲಿ ನಿರ್ಣಯಿಸಲ್ಪಟ್ಟ ಠರಾವುಗಳ ಮೇಲಿಂದಲೇ ತೃಪ್ತಿ ಪಡದೇ ಉತ್ತಮ ಮಾರ್ಗ ಹಿಡಿದು ಪೂರ್ವಕಾಲದ ಮಹರ್ಷಿಗಳ ದಿವ್ಯ ಸ್ಮರಣೆ ಬರುವಂತೆ ಯತ್ನಿಸಬೇಕೆಂದು ಸೂಚಿಸುವೆವು ಮತ್ತು ಸುಪ್ರಸಂಗವು ತ್ವರೆಯಿಂದ ಬಂದು ದಿವ್ಯ ತೇಜಸ್ವೀ ಬ್ರಾಹ್ಮಣ ತರುಣರು ಅಲಿದಾಡಿ ಗಾಢಾಂಧಸಿದ್ರಿತವಾದ ಭಾರತವನ್ನು ಎಚ್ಚರಗೊಳಿಸುವಂತೆ ಮಾಡಲೆಂದು ಶ್ಯಾಮ ಸುಂದರನಾದ ಭಗವಾನ್ ಶ್ರೀ ಕೃಷ್ಣನನ್ನು ಪ್ರಾರ್ಥಿಸುವೆವು.

ಸಂಸ್ಕೃತ ವಿದ್ವಾಂಸರು ಬೇಕು.

ರಾಣಿಬೆನ್ನೂರಲ್ಲಿ ಉಪನಿಷತ್ತು ಶ್ರವಣ ಮಾಡಿಸೋಣ, ದಶಪ್ರಕರಣ ಪಾಠ ಹೇಳೋಣ, ಪುರಾಣ ಹೇಳೋಣ, ಇವುಗಳಿಗಾಗಿ ಒಬ್ಬ ಸಂಸ್ಕೃತ ವಿದ್ವಾಂಸರು ಅವಶ್ಯಬೇಕಾಗಿದೆ. ಪಗಾರ ತಿಂಗಳೊಂದಕ್ಕೆ ೨೦ ಅಥವಾ ೨೫ ರೂ. ಅನುಕೂಲ ಇದ್ದವರು ಕೆಳಗಿನ ಪತ್ತೆದ ಮೇಲೆ ಪತ್ರ ವ್ಯವಹಾರ ನಡೆಯಿಸ ಬಹುದು.

ರಾಣೆಬೆನ್ನೂರ ಕೃಷ್ಣರಾವ್ ಜ್ಯಾತಸಾಳ ಬಿ. ಎ.

ಈ ಪತ್ರಿಕೆಯು ಬಾಗಲಕೋಟೆ ರಾಜೇಂದ್ರಪುರ ಮುಖ್ಯಸ್ಥರಾದ ಶ್ರೀನಿವಾಸರಾಂ . . . ಕೋಟೆಯಲ್ಲಿಯ
ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿತವಾಗಿ ಪ್ರಸಿದ್ಧಿಯಾ . . . ೧೯೨೫

ರ ನಂ, ಬಿ. ೧೯೪೭ — ವಾ. ಚಂದಾ ೧—೯—೦ ಮಾತ್ರ

(ಇದರಲ್ಲಿ ಕನ್ನಡ ನವಜೀವನವು ನವಾವೇಶವಾಗಿದೆ)

ಯತ್ರ ಪರವಶಂ ದುಃಖಂ । ಯದಾತ್ಮವಶಂ ಸುಖಮ್ ॥ — ಮನು

ಸಂಪಾದಕರು—ಮಂಗಳವೇಢೇ ರಾಘವೇಂದ್ರರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧. | ಬಾಗಲಕೋಟೆ ಶುಕ್ರವಾರ ಮಿತಿ ಜ್ಯೇಷ್ಠ ವದ್ಯ ೧೩ ಶಕೆ ೧೮೪೭. ತಾ॥ ೧೯ ೬ ೧೯೨೫. | ಸಂಚಿಕೆ ೧೩

ದೇಶಬಂಧುಗಳು ಸ್ವರ್ಗಸ್ಥರಾದರು!

ಭರತಖಂಡದ ಅಮೌಲ್ಯವಾದ ರತ್ನವು ಕಳೆದು ಹೋಯಿತು !!

ಮಂಗಳವಾರ ತಾ॥ ೧೬ ನೇ ದಿವಸ ಸಾಯಂಕಾಲದ ೫॥ ಗಂಟೆಯ ಸುಮಾರಕ್ಕೆ ದೇಶಬಂಧೂ ದಾಸರವರು ದಾರ್ಜಿಲಿಂಗದಲ್ಲಿ ಮೃತರಾದರು.

ಮೊನ್ನೆ ಮೊನ್ನೆ ಮಹಾತ್ಮರು ದಾರ್ಜಿಲಿಂಗಕ್ಕೆ ಹೋಗಿ ದಾಸ ಬಾಬುರವರ ಜೊತೆಯಲ್ಲಿ ೧-೨ ದಿನ ಸುಖದಿಂದ ಕಾಲಕಳೆದರು. ಹಿಂದುಸ್ಥಾನದ ಈಗಿನ ಪರಿಸ್ಥಿತಿಯಬಗ್ಗೆ ಮಹಾತ್ಮರೂ ಅವರೂ ವಿಚಾರಮಾಡಿ ಈರ್ವರ ಸಹಿಯುಳ್ಳ ಒಂದು ವಿನಂತಿ ಪತ್ರಿಕೆಯನ್ನು ಪ್ರಕಟಿಸ ಬೇಕೆಂದಿದ್ದರು

ದಾರ್ಜಿಲಿಂಗದಲ್ಲಿ ಅವರ ಕಾಯಿಲೆಯ ಪತ್ತೆ ಯಾರಿಗೂ ಇರಲಿಲ್ಲ ಅವರು ಮಧುಮೂತ್ರದಿಂದ ಪೀಡಿತರಾಗಿದ್ದರು ರವಿವಾರದ ವರೆಗೂ ಅವರು ನೆಟ್ಟಗಿದ್ದರು ಆದಿನ ಪ್ರಕೃತಿಯಲ್ಲಿ ವ್ಯತ್ಯಾಸವು ಕಂಡು ಬಂದಿತು. ಜ್ವರ ಒಂದವು ಆದರೆ ಆ ಜ್ವರವು ಪ್ರಾಣಘಾತಕವಾದದ್ದೆಂಬದಾಗಿ ಯಾರಿಗೂ ತಿಳಿಯಲಿಲ್ಲ ಮಂಗಳವಾರ ೧೨ ಗಂಟೆಯ ಸುಮಾರಕ್ಕೆ ದೇಶಬಂಧುಗಳು ತಮಗೆ ಬಹಳೇ ಅಶಕ್ತತೆಯುಂಟಾಗಿದೆಯೆಂದು ತಮ್ಮ ಪತ್ನಿಯ ಮುಂದೆ ಹೇಳಿದರು. ಕೂಡಲೇ ಅವರು ಡಾಕ್ಟರರನ್ನು ಕರೆಸಿದರು. ಎಲ್ಲವೂ ವ್ಯರ್ಥವು ಅವರ ಅಶಕ್ತತೆಯು ಹೆಚ್ಚುತ್ತ ಸಂಜೆಯ ೫॥ ಗಂಟೆಯ ಸುಮಾರಕ್ಕೆ ಕಾಲವಶರಾದರು. ಹೃದಯ ವಿಕಾರದಿಂದ ಅವರು ಹೀಗೆ ಅಕಸ್ಮಾತ್ತಾಗಿ ಮಡಿದರೆಂದು ಡಾಕ್ಟರ ಜನರ ಅಭಿಪ್ರಾಯವಿದೆ. ದಾಸರವರ ಮರಣಕಾಲದಲ್ಲಿ ಅವರ ಪತ್ನಿಯವರೂ, ಮಗನೂ, ಡಾಕ್ಟರರೂ ಅವರ ಕೆಲವು ಸ್ನೇಹಿತರೂ ಅವರ ಹತ್ತರ ಇದ್ದರು. ಮರಣವಾರ್ತೆಯು ಊರಲ್ಲೆಲ್ಲ ವ್ಯಾಪಾರಿಸ್ತವರಲ್ಲಿ ಹಬ್ಬಿತು ದಾರ್ಜಿಲಿಂಗದಲ್ಲಿಯ ಎಲ್ಲ ಜನರೂ ಬೆಟ್ಟದ ಮೂಲ ನಿವಾಸಿಗಳು ಸಹ ದಾಸರವರು ಇರುತ್ತಿದ್ದ ಮನೆಗೆ ಧಾವಿಸಿ ಬಂದರು.

ದಾಸ ಬಾಬೂರವರ ದೇಹವು ದಹನಕ್ಕಾಗಿ ಕಲಕತ್ತೆಗೆ ಒಯ್ಯಲ್ಪಟ್ಟಿದೆ. ಅದು ಗುರುವಾರ ಪ್ರಾತಃಕಾಲದ ೭॥ ಗಂಟೆಗೆ ಕಲಕತ್ತೆಗೆ ತಲ್ಪಿತು. ಸ್ಟೇಶನದಲ್ಲಿ ಕೂಡಿದ ಜನರ ಸಂಖ್ಯೆಯು ಅಪರಿಮಿತಿಯಾಗಿದ್ದಿತು. ಮಹಾತ್ಮಾ ಗಾಂಧೀಯವರು ತಮ್ಮ ಬಂಗಾಲದ ಕಾರ್ಯವನ್ನು ನಿಲ್ಲಿಸಿ ಕೂಡಲೇ ಕಲಕತ್ತೆಗೆ ತೆರಳಿದರು.

ಗಲ್ಲಿಗೇರಿಸಿಕೊಳ್ಳಲು ಸಿದ್ಧನಾಗಿರುವೆನು.

೧೯೨೪ ನೇ ಇಸ್ವಿಯ ಅಕ್ಟೋಬರ ೨೫ ನೇ ತಾ॥ "ಬಂಗಾಲ ಆರ್ಡಿನನ್ಸ್"ದ ಬಗ್ಗೆ ಮಾತನಾಡುವಾಗ್ಗೆ ದಾಸರವರು ಹೇಳಿದ್ದು:—

"ನಾನು ನನ್ನ ರಾಷ್ಟ್ರವನ್ನು ಪ್ರೀತಿಸುತ್ತೇನೆ ಸ್ವಾತಂತ್ರ್ಯದಲ್ಲಿ ನನಗೆ ಅಭಿಲಾಷೆಯಿದೆ ನನ್ನ ರಾಷ್ಟ್ರದ ಕಾರ್ಯವನ್ನು ನಾನೇ ನಿರ್ವಹಿಸಿಕೊಳ್ಳುವ ಅಧಿಕಾರವನ್ನು, ನನ್ನ ಜನ್ಮ ಸಿದ್ಧವಾದ ಅಧಿಕಾರವನ್ನು, ನಾನೆಂದಿಗೂ ಸೋಡಿಸದೇ ಬಿಡೆನು. ಇದು ಅಪರಾಧವೆಂದು ಗಣಿಸಲ್ಪಟ್ಟರೆ ಆ ಅಪರಾಧಕ್ಕಾಗಿ ನನ್ನನ್ನು ಗಲ್ಲಿಗೇರಿಸಿಕೊಳ್ಳಲು ನಾನು ಒಂದುಗಾಲಿನಿಂದ ಸಿದ್ಧನಾಗಿರುವೆನು."

ಭಕ್ತಿಯ ಅಂಜಲಿ

ಮೋಹನನ ಸವಿಗೊಳಲು।
ನೀಹ ಸುಧಿಗಳ ಕೇಳಿ॥
ಭಾವಭುವನವು ಬೆಳಗೆ॥
ಜೀವ ದೇವನು ಮೂಡೆ॥

ಕಡೆಯ ಕಣಸನು ಕಂಡು ॥
ಬಡೆದ ಬಾಲನ ಪರಿಯು॥
ನಾದ ಗುಡಿಯನು ಹಿಡಿದು।
ನೀದಿ ಸಚ್ಚಿದ ಆನುವ॥

'ಆಳಿದು ರಂಜನ ನೀನು।
ಅಳಿಯುವಲೀ ಉಳಿದಿರುವ॥
ಆದಳಾಗಿ, ಅಲರಾಗಿ।
ಸಿರಿಯು ಸೌಭಾಗ್ಯವಾಗಿ॥

—ಗೆಳೆಯ—

ಕಂಬನಿಗಳು

When there is the awakening of soul calculation ends. (ಒಳಗಿರುವ ಬೆಳಕು ಬೆಳಗತೊಡಗಲು, ಜಡದ ಜಂಜಾಲವಡಗುವದು.)

ವಿಶ್ವಮಂಡಲವನ್ನೆಲ್ಲ ತನ್ನ ಪ್ರಕಾಶದಿಂದ ಬೆಳಗಿ ಬೆಳಗಿ ಜ್ಯೋತಿ ಯೊಂದು ಅಡಗಿ ಹೋಯಿತು. ಚಿಪ್ಪನ್ನೊಡೆದು ಎಲ್ಲಿಯೋ ಮುತ್ತು ಸಿಡಿದು ಹೋಯಿತು. ಕಿಡಿಯು ಕಿಡಿಯ ಕಾವಿನ ಚಿತೆಯನ್ನು ಸೇರಿತು.

ಎಳೆನಗೆಯ ಬೀರುಗಿಸುತ ಮುದ್ದು ಮುದ್ದಾದ ಕುಡಿಗೊಂಬೆಗಳ ಕಾಂತಿಯನ್ನು ಪತ್ತುರಿಸಿ ಬಸಿಂಯ ಜಾವರ ಸುಸೂತ್ರರಲು ಮೋಹನನ ಅಂಬನ -ಅರವಿನ-ಆನಂದದ-ಗುಟ್ಟಿನ ಸುಕೋಶ ಒಳಗಿನ ಹೂವರಳಲು, ನರನಾರಾಯಣನ ಸೇವೆಗಾಗಿ ಜೀವನದ ಒಲ್ಲುಬರು ಬಿರುದುಬಳೆನು ತಳೆದ ಬಂಟನು ತೆರಳಿದನು. ಚಪಲ ಕಷ್ಟನು ಕಂಪಿಸುವ, ಸಿಡಿಲ ಕಣ್ಣನು ಕೂಡ ಕುಕ್ಕಿಸುವ, ಕೆಚ್ಚೆದೆಯ ಕಲಿಯು ಕಣ್ಮರೆಯಾದನು. ಕಾಲು ಕೆನೆಗೊಳಗಿಪ್ಪಾಂ ಕಮಲವು ಅಲಿಪ್ತವಾಗಿರುವಂತೆ ವಿಷಯ ಪ್ರಪಂಚದಲ್ಲಿ 'ಅಮೃತ' ರಾಯನಂತೆ ಅಲಿಪ್ತವಾಗಿರುವ ಜಗಜಟ್ಟಿಯು ಜೀವನ ಯಾತ್ರೆಯನ್ನು ಮುಗಿಸಿದನು. ಭಾರತೀಯರನ್ನು ಕತ್ತಲೆಯ ಕತ್ತಿನಲ್ಲಿ ನುಗಿಸಿದನ.. ಅತ್ತರೂ ಅವನು ಬಾರನ; ಕರೆದರೂ ಬಾರನು.

ಮುಗಿಲ್ಮುಂಚಿನಲ್ಲಿ ಕಡಲಿನ ಘೋರಾಟದಲ್ಲಿ ಗಿಂತೊರೆಗಳಲ್ಲಿ ಕಾಡು ಬೀಡುಗಳಲ್ಲಿ, ಪಕ್ಷಿ ಚಿಕ್ಕೆಗಳಲ್ಲಿ, ಗಾಳಿ ಧೂಳಿಗಳಲ್ಲಿ ಗಿಡಬಳ್ಳಿಗಳಲ್ಲಿ ಕುಂಜ ಕುಟೀರಗಳಲ್ಲಿ ಅವನ ಸಂದೇಶವು ಸುಳಿಯುತ್ತಿರುವದು. "ವಿಲೀನವಾತೆ ಭೌತಿಕ ಪಿಂಡದಲ್ಲಿ ಅನಾಸ್ಥೆಯುಳ್ಳವರಾಗಿರಿ. ಉದಪ್ರಕ್ಷತ್ರಿಯರಾಗಿರಿ ಕೈಲಾಗದ ಹೇಡಿಗಳಂತೆ ಅಳಬೇಡಿರಿ. ಆತ್ಮನ ಶಕ್ತಿಯನ್ನರಿತುಕೊಳ್ಳಿರಿ. ಪ್ರೇಮದ ಬೆಳಕಿನಲ್ಲಿ ನಡೆಯಿರಿ. ಜಡದ ಜಗಳಿಗೆ ನಿಮ್ಮ ಜೀವನವು ಬಲಿಯಾಗದಿರಲಿ. ಮುಕ್ತಸಾಗಲಿ. ತ್ಯಾಗವೇ ಭಕ್ತಿಯ ಮಾರ್ಗ. ತ್ಯಾಗವೇ ಭಕ್ತಿ ಮಾರ್ಗ. ತ್ಯಾಗವೇ ಮುಕ್ತಿಯ ಮಾರ್ಗ."

—ಗೆಳೆಯ

ದಾಸರವರ ಸಂಕ್ಷಿಪ್ತ ಚರಿತ್ರೆಯು

ಚಿತ್ತರಂಜನ ದಾಸರವರು ೧೭೯೨ ನೇ ಶಕೆ ಕಾರ್ತಿಕ ಮಾಸದಲ್ಲಿ (೧೮೭೦ ನೇ ಇಸ್ವಿಯಲ್ಲಿ) ಕಲಕತ್ತೆಯಲ್ಲಿ ಜನಿಸಿದರು. ಇವರ ತಂದೆಯು ಶ್ರೀ ಭುವನಮೋಹನದಾಸ. ಇವರು ಕಲಕತ್ತಾ ಹಾಯ ಕೋರ್ಟಿನಲ್ಲಿ ಪ್ರಸಿದ್ಧರೂ ಸುಪ್ರಸಿದ್ಧರೂ ಆದ ಸೊಕ್ಕೆಯಾದ ವಕೀಲರಾಗಿದ್ದರು. ಇವರು ಬ್ರಹ್ಮೋಮತವನ್ನು ಸ್ವೀಕರಿಸಿ "ಬ್ರಹ್ಮೋಮತವಾದ" ಎಂಬ ಪತ್ರದ ಸಂಪಾದಕರಾಗಿದ್ದರು. ಇವರ ಕುಟುಂಬವು ದೊಡ್ಡದು. ಮೇಲಾಗಿ ಇವರು ಅತಿಶಯ ಪರೋಪಕಾರಿಗಳು, ದಾನಧರ್ಮದಲ್ಲಿ ಕೊಡಗೈ ದೊರೆ. ಆದ್ದರಿಂದ ಆದಾಯಕ್ಕಿಂತ ವೆಚ್ಚವು ಹೆಚ್ಚು ಆಯಿತು. ಉದಾರತನಕ್ಕಾಗಿ ಋಣಿಗಳಾದರು. ಪ್ರದ್ಯಾತ್ರದಲ್ಲಿ ನಾದಾರನೆಂದು ಕೋರ್ಟಿನಿಂದ ನಿರ್ಣಯವಾಯಿತು.

ದಾಸರವರ ಬಾಲ್ಯವು ಕಲಕತ್ತೆಯಲ್ಲಿಯೇ ಆಯಿತು. ಪ್ರಾಥಮಿಕ ಶಿಕ್ಷಣವು ಕಲಕತ್ತಾ ಲಂಡನ್ ಮಿಶನರಿ ಶಾಲೆಯಲ್ಲಿ ಪ್ರಾರಂಭವಾಯಿತು. ತಮ್ಮ ೧೫ ವಯಸ್ಸಿನ ಪೂರ್ವದಲ್ಲಿಯೇ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಉತ್ತೀರ್ಣ ಹೊಂದಿದರು. ಮುಂದೆ ೧೮೯೦ ನೇ ಇಸ್ವಿಯಲ್ಲಿ ಪ್ರೆಸಿಡೆನ್ಸಿ ಕಾಲೇಜದಿಂದ ಬೀ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು ಕೂಡಲೆ ಆಯ್. ಸಿ. ಎಸ್. ಪರೀಕ್ಷೆಗಾಗಿ ವಿಲಾಯತಿಗೆ ತೆರಳಿದರು.

ಬಾಬುಗಳ ವಿದ್ಯಾಭ್ಯಾಸವು ವಿಲಾಯತಿಯಲ್ಲಿ ತೀವ್ರವಾಗಿ ಸಾಗಿ ಪೂರ್ಣವಾಗುತ್ತ ಬಂದಿತು. ಪರೀಕ್ಷೆಯ ದಿವಸಗಳು ಸಮೀಪಿಸಲು ಪರೀಕ್ಷೆಗೆ ಕುಳಿತು ಉತ್ತೀರ್ಣರಾಗಿ ಕುಳಿತಿದ್ದರು. ಪರಿಣಾಮವು ಇನ್ನೂ ಪ್ರಕಟವಾಗುವ ಕಾಲಕ್ಕೆ ಸರಿಯಾಗಿ ಭಾರತವರ್ಷದಲ್ಲಿ ಪಿತಾಮಹರೆಂದು ಹೆಸರು ಪಡೆದ ಮತ್ತು ಸ್ವರಾಜ್ಯದ ಉತ್ಪಾದಕರೂ ಮೂಲಾಧಾರರೂ ಆದ ದಾದಾಭಾಯಿ ನವರೋಜಿಯವರು ಅಲ್ಲಿಯೇ ಇದ್ದು ಪಾರ್ಲಮೆಂಟ ಸಭಾಸದರಾಗಲು ಪ್ರಯತ್ನಿಸುತ್ತಿದ್ದರು. ಆಗ ದಾಸಪ್ರಭೃತಿಗಳು ಅವರ ಸಹಾಯಕ್ಕಾಗಿ ಅಲ್ಲಲ್ಲಿ ಸುರಮ್ಯವ್ಯಾಖ್ಯಾನಗಳನ್ನು ಕೊಟ್ಟು, ಹಿಂದುಸ್ಥಾನದ ಹಿಂದುತ್ವವು ಇಂಗ್ಲಂಡಿನ ಪಾರ್ಲಮೆಂಟಿನಲ್ಲಿ ನಡೆಗೊಳ್ಳುವದಕ್ಕಾಗಿ ಹಲವು ಬಗೆಯಿಂದ ಪ್ರಯತ್ನ ಮಾಡಿದರು. ಅವರ ಪ್ರಯತ್ನಕ್ಕೆ ಫಲಪ್ರಾಪ್ತಿಯಾಯಿತು.

ಶ್ರೀ ಚಿತ್ತರಂಜನ ದಾಸರ ಪರಿಣಾಮಕಾರಕ ವ್ಯಾಖ್ಯಾನಗಳನ್ನು ಕೇಳಿ ಇಂಗ್ಲಂಡದಲ್ಲಿಯ ಬಹ್ವಂಶ ಸುಶಿಕ್ಷಿತವರ್ಗಕ್ಕೂ ಬಾಬುಗಳ ಯೋಗ್ಯತೆಯು ಗೊತ್ತಾಗದೆ ಇರಲಿಲ್ಲ. ಪೂಜ್ಯ ಪಿತಾಮಹರಾದ ದಾದಾಭಾಯಿಯವರು ತಾವು ಮನಮುಟ್ಟಿ ಮಾಡಿದ ಪ್ರಯತ್ನಕ್ಕೆ ಫಲವು ಸಿಕ್ಕಿತವೇ ಎಂದು ತೋರಿಸಲು ಉದಾಹರಣೆಯಾಗಿ ಆ ಸಾರೆಯ ಚುನಾವಣೆಯಲ್ಲಿ ಮೆಂಬರರಾಗಿ ಆರಿಸಿ ಬಂದರು. ಮುಂದೆ ಆ ಮಹನೀಯರು ಕೆಲವು ವರ್ಷಗಳವರೆಗೆ ಪಾರ್ಲಿಮೆಂಟನಲ್ಲಿ ಮೆಂಬರರಾಗಿದ್ದು ನಮ್ಮ ಹಿಂದುಸ್ಥಾನದ ಸಂಬಂಧ ಬಹು ಕಳಕಳಿಯಿಂದ ಕೆಲಸಮಾಡಿದರು.

ಕ್ರಿ. ಶ. ೧೮೯೧ ರಲ್ಲಿ ಜೇಮ್ಸ್ ಮೆಕಲೀನ್ ಎಂಬ ನಾಮಾಂಕಿತ ಪಾರ್ಲಮೆಂಟ ಸಭಾಸದರು ಹಿಂದೂ ಮುಸಲ್ಮಾನ ಎಂಬ ವಿಷಯದ ಮೇಲೆ ವ್ಯಾಖ್ಯಾನವನ್ನು ಕೊಟ್ಟರು. ಅದರಲ್ಲಿ ಅವರು ಹಿಂದುಸ್ಥಾನದಲ್ಲಿಯ ಮುಸಲ್ಮಾನರು ಗುಲಾಮರು, ಹಿಂದುಗಳು ಗುಲಾಮರ ಗುಲಾಮರ (ಕೂಲಿಕಾರರು), ಎಂದು ಅಧಿಕಾರದ ಬಲದಿಂದಲೂ ಅನುಕೂಲತೆಯ ಪ್ರಮಾಣದಿಂದಲೂ ಮನದಣಿಯ ಪಂಕ್ತಿ ನಿರಾಧಾರ ಟೀಕೆಯನ್ನು ಮಾಡಿದರು. ಈ ವ್ಯಾಖ್ಯಾನಕ್ಕೆ ನಮ್ಮ ಕಥಾನಾಯಕ ಬಾಬುಗಳೂ ಹೋಗಿದ್ದರು. ಅವರ ಮನಕೆಯು ರಕ್ತವು ಕುದಿಯಹತ್ತಿತು ಆದರೆ ಭಾರತದ ಸದಭಿಮಾನಿಯಾದ ನಮ್ಮ ವಿದ್ಯಾರ್ಥಿಗೆ ಆ ಸಭಾಸದರ ಅಸಂಬದ್ಧ ಟೀಕೆಯು ತಿಲಮಾತ್ರವೂ ಸಹನವಾಗಲಿಲ್ಲ. ಕೂಡಲೆ ಇವರು ಲಂಡನ್ನದಲ್ಲಿಯ ಎಲ್ಲ ವಿದ್ಯಾರ್ಥಿಗಳ ದೊಡ್ಡದೊಂದು ಸಭೆಯನ್ನು ಕರೆದರು. ಮತ್ತು ಆ ಸಭೆಯಲ್ಲಿ ಮೇಲಿನ ಸಾಹೇಬ ಬಹದ್ದೂರವರ ಪರಾಮರಿಕೆಯನ್ನು ಚನ್ನಾಗಿ ಮಾಡಿಬಿಟ್ಟರು ತಮ್ಮ ಸುಸಹಾಗ ಸರಳವಾದ ವಾಕ್ಚಾತುರ್ಯದಿಂದ ಸಾಧಾರವಾಗಿ ಅವರ ಮತಗಳನ್ನು ಸಂಪೂ

ರ್ಣಖಂಡಿಸಿಬಿಟ್ಟರು. ಮತ್ತು ತಮ್ಮ ಸ್ವತಂತ್ರ ಹಾಗು ನಿರ್ದಾಕ್ಷಿಣ್ಯ ಸ್ವಭಾವ ಪೂರ್ಣ ಪರಿಚಯವನ್ನು ಆಂಗ್ಲಜನರಿಗೆ ಚನ್ನಾಗಿ ಮಾಡಿಕೊಟ್ಟರು.

ಇವರು ನ್ಯಾಯ ಪ್ರಿಯರೂ ಸತ್ಯಪಕ್ಷಪಾತಿಗಳೂ ಆಗಿದ್ದರು. ಇವರು ಜನ್ಮತಾಳಿದ ವಂಶವು ಬಂಗಾಲದಲ್ಲಿ ಪ್ರಸಿದ್ಧವಾದ ವಂಶವೇನೋ ನಿಜ. ಆದರೆ ದೈವದುರ್ವಿಪಾಕದಿಂದ ಇವರ ತಂದೆಯವರು ದಿವಾಳಿಯನ್ನು ತೆಗೆಯಬೇಕಾಯಿತು. ಈ ಸಂಗತಿಯು ದಾಸರ ಮನಸ್ಸಿಗೆ ಎಷ್ಟೂ ಬರಲಿಲ್ಲ. ಸಾಲಗಾರರನ್ನು ಮುಳುಗಿಸುವದು ನ್ಯಾಯವಲ್ಲವೆಂದು ಅವರು ತಿಳಿದು ತಮ್ಮ ತಂದೆಯವರನ್ನು ಹೇಗಾದರೂ ಋಣಮುಕ್ತರನ್ನಾಗಿ ಮಾಡಬೇಕೆಂದು ಮನಸ್ಸಿನಲ್ಲಿ ಸಂಕಲ್ಪ ಮಾಡಿದ್ದರು. ಆದರೆ ಇವರ ಭಾಗ್ಯವಾದರೂ ಚನ್ನಾಗಿ ಇದ್ದಿಲ್ಲ. ಇವರು ತಂದೆಯ ಸಾಲವನ್ನು ತೀರಿಸುವದಕ್ಕಾಗಿ ಕೆಲವು ದಿವಸಗಳ ತನಕ ಸಮರ್ಥರಾಗಲಿಲ್ಲ. ಇಷ್ಟೇ ಅಲ್ಲ. ಆದರೆ ಇವರಿಗೂ ಸಹ ದಿವಾಳಿಯನ್ನು ತೆಗೆಯುವ ಪ್ರಸಂಗವು ಒದಗಿತು. ಆಗ ಅವರ ಮನಃಸ್ಥಿತಿಯು ಹೇಗಾಗಿತ್ತೆಂಬದನ್ನು ಬರೆಯುವದು ಬಹಳ ಕಠಿಣ. ಪರಮಾತ್ಮನು ಈಪರಿ ತಮ್ಮನ್ನು ಕಷ್ಟಕ್ಕೆ ಗುರಿಮಾಡಲು ಏನು ಕಾರಣ ಇರಬಹುದೆಂಬದಾಗಿ ಅವರು ವಿಚಾರ ಮಾಡಿರಬಹುದು. ಆದರೆ, ಪರಮಾತ್ಮನ ಪ್ರತಿನಿತ್ಯದ ರೂಢಿಯೇ ಇದು. ಅವನು ತನ್ನ ಭಕ್ತರನ್ನು ಪರೀಕ್ಷಿಸಬೇಕಾದರೆ, ಅವರ ಮೇಲೆ ಸಂಕಟಗಳ ರಾಶಿಯನ್ನು ಸುರುವಿ ಅವರು ಅವುಗಳನ್ನೆಲ್ಲ ಸಹಿಸಿ ಆನಂದದಿಂದ ತನ್ನ ಭಜನೆಯನ್ನು ಮಾಡುವರೋ ಇಲ್ಲವೋ ಎಂಬದನ್ನೇ ನೋಡುತ್ತಿರುವನು. ಇರಲಿ. ಆದರೂ ದಾಸರು ಎದೆಗುಂದಲಿಲ್ಲ. ಎಷ್ಟೋ ಜನರು ಇಂಥ ಪ್ರಸಂಗ ಬಂದಾಗ ಉರುಲುಹಾಕಿಕೊಂಡು ಸತ್ತಿರುವದನ್ನು ವಾಚಕರು ಕೇಳಿರಬಹುದು. ಆದರೆ ದಾಸರು ಅಸಾಮಾನ್ಯ ವಿಭೂತಿಗಳಾದ್ದರಿಂದಲೇ ಇಂಥ ಬಿಕ್ಕಟ್ಟಿನ ಪ್ರಸಂಗದಲ್ಲಿ ಕೂಡ ಧೈರ್ಯವನ್ನು ತಾಳಿ "ಇಂದಿಲ್ಲ ನಾಳೆ ಆ ಸಾಲವನ್ನೆಲ್ಲ ತೀರಿಸಿ ಬಿಡುವೆನೆಂ"ದು ಸಂಕಲ್ಪವನ್ನು ಮಾಡಿದರು. ಇಷ್ಟಾದರೂ ತೀರಲಿಲ್ಲ. ಅವರು ಬ್ಯಾರಿಸ್ಟರರಾಗಿದ್ದರೂ ಅವರಿಗೆ ಮೊದಲಿಗೆ ಅಷ್ಟೇನೂ ಹಣದೊರೆಯಲಿಲ್ಲ. ಪ್ರಪಂಚವನ್ನು ಸಾಗಿಸುವದು ಕೂಡಾ ಕೆಲವು ದಿವಸಗಳ ವರೆಗೆ ಕಷ್ಟವಾಯಿತು. ಈ ಪರಿ ಅನೇಕ ರೀತಿಯಿಂದ ತ್ರಾಸವಾದರೂ ಕೂಡ ಅವರು ಎಳ್ಳಷ್ಟೂ ಧೈರ್ಯಗುಂದಲಿಲ್ಲ. ಕಡೆಗೆ ಪರಮಾತ್ಮನ ಕೃಪಾವೃಷ್ಟಿಯು ಇವರ ಮೇಲಾಯಿತು. ಬಾಬೂ ಅರವಿಂದ ಘೋಷರವರ ಮೇಲೆ ಆಲೀಪುರ ಕೇಸಿನಲ್ಲಿ ರಾಜದ್ರೋಹದ ಆರೋಪವನ್ನು ಹೊರಿಸಿ, ಅವರ ವಿರುದ್ಧ ಸರಕಾರದವರು ಕಟ್ಟಳೆಯನ್ನು ಹೂಡಿದಾಗ ಚಿತ್ತರಂಜನರು ಅಹೋರಾತ್ರಿ ದುಡಿದು ಘೋಷರವರ ಪರವಾಗಿ ವಕೀಲಿಯನ್ನು ಮಾಡಿದರು. ಆಗ ಇವರ ಕೀರ್ತಿಯು ಎಲ್ಲ ಕಡೆಗೂ ಹಬ್ಬಿತು. ಅಂದಿನಿಂದಲೇ ಇವರ ಭಾಗ್ಯೋದಯವಾಯಿತು. ಇವರು ಸುಪ್ರಸಿದ್ಧ ವಕೀಲರಾದರು. ತಿಂಗಳಿಗೆ ೪೦,೫೦ ಸಾವಿರ ರೂಪಾಯಿಗಳವರೆಗೆ ದೊರಕಿಸುವ ಯೋಗ್ಯತೆಯು ಇವರಿಗೆ ಬಂದಿತು. ಇವರಿಗೆ ಹಣವು ಬರಹತ್ತಿದ ಕೂಡಲೇ, ಹಿಂದಕ್ಕೆ ದಿವಾಳಿಯನ್ನು ತೆಗೆದಿದ್ದರೂ ಕೂಡ ತಮ್ಮ ಹಾಗೂ ತಮ್ಮ ತಂದೆಯವರ ಸಾಲವನ್ನು ಕಾಸು ಸಹ ಬಿಡದೆ ತೀರಿಸಿದರು. ಇಂಥ ಉದಾಹರಣೆಗಳು ಎಲ್ಲಿಯಾದರೂ ದೊರಕುವವೋ? ಇದಕ್ಕನ್ನಬೇಕು ನಿಜವಾದ ನ್ಯಾಯ ಪ್ರಿಯತೆಯೆಂದು.

ಇವರ ಔದಾರ್ಯವಾದರೂ ವರ್ಣನೀಯವಾದದ್ದು. ಇವರು ಇಷ್ಟು ಹಣವನ್ನು ಗಳಿಸುತ್ತಿದ್ದರೂ ಇವರ ಹತ್ತರ ಒಂದು ಕಾಸು ಕೂಡಾ ಇದ್ದಿಲ್ಲವೆಂದ ಬಳಿಕ ಇವರ ಔದಾರ್ಯವೆಷ್ಟು ನೋಡಿರಿ! ಎಷ್ಟೋ ನಿರಾಶ್ರಿತ ಕುಟುಂಬಗಳನ್ನು ಇವರು ಪೋಷಿಸುತ್ತಿದ್ದರೆಂಬದು ಸರ್ವವಿಶ್ರುತವಾದ ಮಾತಾಗಿದೆ. ಸಾರ್ವಜನಿಕ ನಿಧಿಗಳಿಗಂತೂ ಇವರು ಶಕ್ತಿ ಮೀರಿ ಸಹಾಯಮಾಡುತ್ತಿದ್ದರು. ಹಿಂದುಸ್ಥಾನದಲ್ಲಿ ಎಷ್ಟೋ ಉದಾರರಿರುವರು. ಆದರೆ ದಾಸರಂಥ ಉದಾರರು ಸಿಗುವದು ಅತಿವಿರಲ. ತಾವು ಗಳಿಸುತ್ತಿರುವ ಹಣ ತಮ್ಮದೆಂಬ ಅಭಿಮಾನವೇ ಇದ್ದಿಲ್ಲವೆಂದ ಬಳಿಕ ಬಹಳ ಹೇಳುವದೇನು?

ಇನ್ನು ಅವರ ದೇಶಪ್ರೇಮವಾದರೋ ಅಗಾಧವಾದದ್ದು. ಇಂಥ ದೇಶಭಕ್ತರು ಹಿಂದುಸ್ಥಾನವನ್ನು ಹೊರ್ತು ಪಡಿಸಿ ಬೇರೆ ಯಾವರಾಷ್ಟ್ರಗಳಲ್ಲಿಯೂ ದೊರೆಯಲಾರರು. ಅಂತಲೇ ನಾಗಪುರದಲ್ಲಿ ಮಹಾತ್ಮಾಜಿಯವರು ದಾಸರನ್ನು ತಮ್ಮ ಪಕ್ಷಕ್ಕೆ ಸೇರಿಸಬೇಕೆಂದು ಅವಿಶ್ರಾಂತವಾಗಿ ಪ್ರಯತ್ನ ಪಟ್ಟರು. ಮತ್ತು ದಾಸರು ಮಾಡಿದ ಕೆಲವು ಸೂಚನೆಗಳನ್ನು ಮನ್ನಿಸಿ ಮಹಾತ್ಮಾಜಿಯವರು ಅಸಹಕಾರದ ಠರಾವನ್ನು ಮುಂದೆ ತಂದರು. ಆ ಕಾಲಕ್ಕೆ ಮಹಾತ್ಮಾಜಿಯವರು ದಾಸರಂಥ ಜನರು ತಮ್ಮ ಪಕ್ಷಕ್ಕೆ ಬರುತ್ತಿದ್ದರೆ ತಾವು ಕೆಲವು ಮಾತುಗಳನ್ನು ಬಿಟ್ಟುಕೊಡಲಿಕ್ಕೆ ಸಿದ್ಧರಿದ್ದೇವೆಂಬದಾಗಿ ಹಡಿಕೋರಿಸಿದರು. ಅಂದಮೇಲೆ ಮಹಾತ್ಮಾಜಿಯವರಿಗೆ ದಾಸರ ವಿಷಯವಾಗಿ ಎಷ್ಟು ಆದರಭಾವವಿತ್ತೆಂಬದು ಸ್ಪಷ್ಟವಾಗುತ್ತದೆ. ನಾಗಪುರದ ರಾಷ್ಟ್ರೀಯ ನಿರ್ಣಯವಾದ ಕೂಡಲೆ ಇವರು ತಮ್ಮ ವಕೀಲಿಯ ಉದ್ಯೋಗಕ್ಕೆ ಶರಣು ಹೊಡೆದರು. ಪ್ರತಿ ತಿಂಗಳಿಗೆ ೪೦।೫೦ ಸಾವಿರರೂಪಾಯಿಗಳು ಬರುತ್ತಿರುವಾಗ ಅವುಗಳನ್ನೆಲ್ಲ ತುಚ್ಛೀಕರಿಸಿ ದೇಶಸೇವೆಗಾಗಿ ಇವರು ಮುಂದುವರಿದು ಬಂದರು. ಇದಕ್ಕಿಂತ ಮಹತ್ವದ್ದೆಂದರೆ ಇವರು ವಕೀಲಿಯನ್ನು ಬಿಟ್ಟುಕೊಡುವಾಗ ಇವರಿಗೆ ೩ ಲಕ್ಷ ರೂಪಾಯಿಗಳ ಸಾಲವಿತ್ತು. ಇಂಥ ಪರಿಸ್ಥಿತಿಯಲ್ಲಿ ಕೂಡ ಇವರು ಏನೂ ವಿಚಾರ ಮಾಡದೆ ತಮ್ಮ ಉದ್ಯೋಗಕ್ಕೆ ಶರಣು ಹೊಡೆದರು. ಕಡೆತನಕ ಶರಣು ಹೊಡೆದರು. ಇದು ದೇಶಭಕ್ತಿಯ ಪರಮಾವಧಿಯಲ್ಲವೇ?

ಇವರ ಸ್ವಾರ್ಥತ್ಯಾಗಕ್ಕಂತೂ ಎಣೆಯೇ ಇಲ್ಲ. ಕಲಕತ್ತೆಯ ಪಿಕೆಟಿಂಗ ನಡೆದಾಗ ಇವರ ಪತ್ನಿಯವರು ಸಹ ತುರಂಗಕ್ಕೆ ಹೋಗಬೇಕಾಯಿತೆಂಬದನ್ನು ಯಾರೂ ಮರೆತಿರಲಿಕ್ಕಿಲ್ಲ. ಕೇವಲ ದ್ರವ್ಯತ್ಯಾಗವನ್ನು ಎಷ್ಟೋ ಜನರು ಮಾಡುತ್ತಿರಬಹುದು. ಆದರೆ ತಮಗೆ ಅಥವಾ ಬಾಂಧವರಿಗೆ ಕಾರಾಗೃಹವಾಸದಂಥ ಆಪತ್ತು ಬಂದರೂ ಸಹ ಅವಕ್ಕೆ ತಲೆಗೊಟ್ಟು ನಿಲ್ಲುವ ಧೈರ್ಯವು ಬಹಳಜನರಿಗೆ ಇರುವದಿಲ್ಲ. ಮಹಾತ್ಮಾಜಿಯವರ ಈ ಅಸಹಕಾರ ಚಳವಳಿಯಿಂದ ಆ ಧೈರ್ಯವಾದರೂ ಅವರಲ್ಲಿ ಅಂಕುರಿಸಿತು. ಆದರೂ ತಮ್ಮ ಪ್ರಿಯ ಪತ್ನಿಯವರೂ ಒಬ್ಬನೇ ಮಗನೂ ತುರಂಗಕ್ಕೆ ಹೋಗುವಾಗ ದಾಸರು ಏನೂ ಚಿಂತಿಸಿದೆ ದೇಶಸೇವೆಗಾಗಿ ಎಲ್ಲರೂ ಈ ರೀತಿಯಾಗಿ ವರ್ತಿಸಬೇಕೆಂದು ಅವರು ತಮ್ಮ ಪತ್ನಿ ಪುತ್ರರನ್ನು ಪ್ರೋತ್ಸಾಹಿಸಿದರೆಂದಮೇಲೆ ಇವರು ಎಷ್ಟು ಸ್ವಾರ್ಥತ್ಯಾಗಿಗಳಿರಬಹುದು! "ತಾನು ತನ್ನದು" ಎಂಬ ಅಭಿಮಾನವೇ ಅವರಲ್ಲಿ ಉಳಿದಿರುವದಿಲ್ಲ. ಕೇವಲ ಕ್ಯಾವಿಯ ಬಟ್ಟೆಗಳನ್ನುಟ್ಟರೆ ತ್ಯಾಗಿಯಾಗಲಾರದು. ನಿಜವಾದ ತ್ಯಾಗವನ್ನು ನೋಡಬೇಕಾದರೆ ದಾಸರ ಕಡೆಗೆ ದೃಷ್ಟಿಯನ್ನು ಹಚ್ಚಬೇಕಾಗುವದು.

ಓಂ ಶಾಂತಿಃ! ಶಾಂತಿಃ!! ಶಾಂತಿಃ!!!

ದೇಶಬಂಧು ದಾಸರವರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನೀಯಲಿ!!

ಭಕ್ತಿಯ ಅಂಜಲಿ

ನೋಡಸನ ಸವಿಗೊಳಲು।
ನೇಹ ಸುದಿಗಳ ಕೇಳಿ॥
ಭಾವಭುವನವು ಬೆಳಗೆ॥
ಜೀವ ದೇವನು ಮೂಡೆ॥

ಕಡೆಯ ಕಣಸನು ಕಂಡು ॥
ಜಡದ ಜಾಲವ ಹರಿದು॥
ನಾದ ಗುಡಿಯನು ಹಿಡಿದು।
ನೀಡಿ ನಚ್ಚಿನ ಆಸುವ॥

'ಅಳಿದು ರಂಜನ ನೀನು।
ಅಳಿಯುವಲೇ ಉಳಿದಿರುವೆ॥
ಅರಳಾಗಿ, ಅಲರಾಗಿ।
ಸಿರಿಯ ಸೌಭಾಗ್ಯವಾಗಿ॥

—ಗೆಳೆಯ—

ಕಾಂಬನಿಗಳು

When there is the awakening of soul calculation ends. (ಒಳಗಿರುವ ಬೆಳಕು ಬೆಳಗತೊಡಗಲು, ಜಡದ ಜಂಜಾಲವಡಗುವದು.)

ದಿಙ್ಮಂಡಲವನ್ನೆಲ್ಲ ತನ್ನ ಬೆಳ್ಪಿನಿಂದ ಬೆಳಗಿ ಬೆಳಗಿ ಜ್ಯೋತಿಯೊಂದು ಅಡಗಿ ಹೋಯಿತು. ಚಿಪ್ಪಿನೊಳಿದ್ದ ಎಲ್ಲಿಯೋ ಮುತ್ತು ಸಿಡಿದು ಹೋಯಿತು. ಕಿಡಿಯು ಕಡೆಯ ಕಾಮನ ಚಿತಾಗ್ನಿಯನ್ನು ಸೇರಿತು.

ಎಳೆಸಗೆಯ ಎಸುಗಿಸುತ ಮುದ್ದು ಮುದ್ದಾದ ಕುಡಿನೋಟಗಳ ಕಾಂತಿಯನ್ನು ಬಿತ್ತರಿಸಿ ಬಸಿಯಿಸು ಜನರ ಜೀವತ್ರಿಗಳು ನೋಡುವನ ಅರಿವಿನ -ಅರವಿನ-ಆನಂದದ-ಗುಟ್ಟಿನ ನಿಜಕೀಳಿ ಒಳಗಿನ ಹೂವರಳಲು, ನರನಾರಾಯಣನ ಸೇವೆಗಾಗಿ ಬಡತನದ ಬಿಲ್ಲೆಯ ಬಿರುದುಬಳೆಯ ಕಳೆವ ಬಂಟನು ತೆರಳಿದನು. ಬಡವ ಕಿಚ್ಚನು ಕಂಡಿಸುವ, ಸಿಡಿಲ ಕಣ್ಣನು ಕೂಡ ಕುಕ್ಕಿಸುವ, ಕೆಚ್ಚೆದೆಯ ಕಲಿಯು ಕಣ್ಮರೆಯಾದನು. ಕಾಲು ಕೆಸರನೊಳಗಿದ್ದರೂ ಕಮಲವು ಅಲಿಪ್ತವಾಗಿರುವಂತೆ ವಿಷಮ ಪ್ರಪಂಚದಲ್ಲಿ 'ಅಮೃತ' ರಾಜನಂತೆ ಅಲಿಪ್ತವಾಗಿರುವ ಜಗಜಟ್ಟಿಯು ಜೀವನ ಯಾತ್ರೆಯನ್ನು ಮುಗಿಸಿದನು. ಭಾರತೀಯರನ್ನ ಕತ್ತಲೆಯ ಕುತ್ತಿನಲ್ಲಿ ನುಗಿಸಿದನು. ಅತ್ತರೂ ಅವನು ಬಾರನೆ ; ಕರೆದರೂ ಬಾರನು.

ಮುಗಿಲ್ಮಿಂಚಿನಲ್ಲಿ ಕಡಲಿನ ಭೋರಾಟದಲ್ಲಿ ಗಿರಿಶಿಖರಗಳಲ್ಲಿ ಕಾಡು ಬೀಡುಗಳಲ್ಲಿ, ಹಕ್ಕಿ ಚಿಕ್ಕೆಗಳಲ್ಲಿ, ಗಾಳಿ ಧೂಳಿಗಳಲ್ಲಿ ಗಿಡಬಳ್ಳಿಗಳಲ್ಲಿ ಕುಂಜ ಕುಟೀರಗಳಲ್ಲಿ ಅವನ ಸಂದೇಶವು ಸುಳಿಯುತ್ತಿರುವದು. "ವಿಲೀನವಾಗುತ ಭೌತಿಕ ಪಿಂಡದಲ್ಲಿ ಅನಾಸ್ಥೆಯುಳ್ಳವರಾಗಿರಿ ಉದಗ್ರಕ್ಷತ್ರಿಯರಾಗಿರಿ ಕ್ಷಯಾಗದ ಜೇಡಗಳಂತೆ ಆಳವಾಗಿರಿ ಆತ್ಮನ ಶಕ್ತಿಯನ್ನರಿತುಕೊಳ್ಳಿರಿ. ಪ್ರೇಮದ ಬೆಳಕಿನಲ್ಲಿ ನಡೆಯಿರಿ. ಜಗದ ಜಗಲಿಗೆ ನಿಮ್ಮ ಜೀವನವು ಮೀಸಲಾಗಲಿ ಮುಡಿಪಾಗಲಿ. ತ್ಯಾಗವೇ ಭಕ್ತಿಯ ಮಾರ್ಗ. ತ್ಯಾಗವೇ ಭಕ್ತಿಯ ಮಾರ್ಗ. ತ್ಯಾಗವೇ ಮುಕ್ತಿಯ ಮಾರ್ಗ."

—ಗೆಳೆಯ

ದಾಸರವರ ಸಂಕ್ಷಿಪ್ತ ಚರಿತ್ರೆಯು

ಚಿತ್ತರಂಜನ ದಾಸರವರು ೧೮೭೦ ನೇ ಕಾರ್ತಿಕ ಮಾಸವಲ್ಲಿ (೧೮೭೦ ನೇ ಇಸ್ವಿಯಲ್ಲಿ) ಕಲಕತ್ತೆಯಲ್ಲಿ ಜನಿಸಿದರು. ಇವರ ತಂದೆಯು ದೇಶಬಂಧು ಭುವನಮೋಹನದಾಸ. ಇವರು ಕಲಕತ್ತಾ ಹಾಯ ಕೋರ್ಟಿನಲ್ಲಿ ಪ್ರಸಿದ್ಧರಾದ ನ್ಯಾಯಪ್ರಸಿದ್ಧರೂ ಆದ ವಕೀಲರಾಗಿದ್ದರು. ಇವರು ಬ್ರಹ್ಮೋಮತವನ್ನು ಸ್ವೀಕರಿಸಿ "ಬ್ರಹ್ಮೋಮತವಾದಿ" ಎಂಬ ಪತ್ರದ ಸಂಪಾದಕರಾಗಿದ್ದರು. ಇವರ ಕುಟುಂಬವು ದೊಡ್ಡದು. ಮೇಲಾಗಿ ಇವರು ಅತಿಶಯ ಪರೋಪಕಾರಿಗಳು, ದಾನಧರ್ಮದಲ್ಲಿ ಕೊಡಗೈ ದೊರೆ. ಆದ್ದರಿಂದ ಆದಾಯಕ್ಕಿಂತ ವೆಚ್ಚವು ಹೆಚ್ಚು ಆಯಿತು. ಉದಾರತನಕ್ಕಾಗಿ ಋಣಿಗಳಾದರು. ಪ್ರಪ್ರಾರಬ್ಧದಲ್ಲಿ ನಾದಾರನೆಂದು ಕೋರ್ಟಿನಿಂದ ನಿರ್ಣಯಿಸಲಾಯಿತು.

ದಾಸರವರ ಬಾಲ್ಯವು ಕಲಕತ್ತೆಯಲ್ಲಿಯೇ ಆಯಿತು. ಪ್ರಾಥಮಿಕ ಶಿಕ್ಷಣವು ಕಲಕತ್ತಾ ಲಂಡನ್ ಮಿಶನರಿ ಶಾಲೆಯಲ್ಲಿ ಪ್ರಾರಂಭವಾಯಿತು. ತಮ್ಮ ೧೬ ವಯಸ್ಸಿನ ಪೂರ್ವದಲ್ಲಿಯೇ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಉತ್ತೀರ್ಣ ಹೊಂದಿದರು. ಮುಂದೆ ೧೮೯೦ ನೇ ಇಸ್ವಿಯಲ್ಲಿ ಪ್ರೆಸಿಡೆನ್ಸಿ ಕಾಲೇಜದಿಂದ ಬೀ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು ಕೂಡಲೆ ಆಯ್. ಸಿ. ಎಸ್. ಪರೀಕ್ಷೆಗಾಗಿ ವಿಲಾಯತಿಗೆ ತೆರಳಿದರು.

ಬಾಬುಗಳ ವಿದ್ಯಾಭ್ಯಾಸವು ವಿಲಾಯತಿಯಲ್ಲಿ ಕ್ರಮವಾಗಿ ಮುನ್ನಡೆಸಿ ಪೂರ್ಣವಾಗುತ್ತಿದ್ದಿತು. ಪರೀಕ್ಷೆಯ ದಿವಸಗಳು ಬಂದೊದಗಲು ಪರೀಕ್ಷೆಗೆ ಕುಳಿತುಕೊಳ್ಳಲು ಸನ್ನದ್ಧರಾಗಿ ಕುಳಿತಿದ್ದರು. ಪರಿಣಾಮವು ಇನ್ನೂ ಅನಿಶ್ಚಿತವಾಗಿ ಕಾದಿತ್ತು. ಆ ಸಮಯದಲ್ಲಿ ಪಿತಾಮಹರೆಂದು ಹೆಸರು ಪಡೆದ ಮತ್ತು ಸ್ವರಾಜ್ಯದ ಉತ್ಪಾದಕರೂ ಸೂತ್ರಧಾರರೂ ಆದ ದಾದಾಭಾಯಿ ನವರೋಜಿಯವರು ಅಲ್ಲಿಯೇ ಇದ್ದು, ಪಾರ್ಲಮೆಂಟ ಸಭಾಸದರಾಗಲು ಪ್ರಯತ್ನಿಸುತ್ತಿದ್ದರು. ಈಗ ದಾಸಪ್ರಭೃತಿಗಳು ಅವರ ಸಹಾಯಕ್ಕಾಗಿ ಅಲ್ಲಲ್ಲಿ ಸುಶ್ರಾವ್ಯವ್ಯಾಖ್ಯಾನಗಳನ್ನು ಕೊಟ್ಟು, ಹಿಂದುಸ್ಥಾನದ ಹಿಂದುತ್ವವು ಇಂಗ್ಲಂಡಿನ ಪಾರ್ಲಮೆಂಟಿನಲ್ಲಿ ನೆಲೆಗೊಳ್ಳುವದಕ್ಕಾಗಿ ಹಲವು ಬಗೆಯಿಂದ ಪ್ರಯತ್ನ ಮಾಡಿದರು. ಇವರ ಪ್ರಯತ್ನಕ್ಕೆ ಫಲಪ್ರಾಪ್ತಿಯಾಯಿತು.

ಶ್ರೀ ಚಿತ್ತರಂಜನ ದಾಸರ ಪರಿಣಾಮಕಾರಕವ್ಯಾಖ್ಯಾನಗಳನ್ನು ಕೇಳಿ ಇಂಗ್ಲಂಡದಲ್ಲಿಯ ಬಹ್ವಂಶ ಸುಶಿಕ್ಷಿತವರ್ಗಕ್ಕೂ ಬಾಬುಗಳ ಯೋಗ್ಯತೆಯು ಗೊತ್ತಾಗದೆ ಇರಲಿಲ್ಲ. ಪೂಜ್ಯ ಪಿತಾಮಹರಾದ ದಾದಾಭಾಯಿಯವರು ತಾವು ಮನಮುಟ್ಟಿ ಮಾಡಿದ ಪ್ರಯತ್ನಕ್ಕೆ ಫಲವು ಸಿಕ್ಕಿತವೇ ಎಂದು ತೋರಿಸಲು ಉದಾಹರಣೆಯಾಗಿ ಆ ಸಾರೆಯ ಚುನಾವಣೆಯಲ್ಲಿ ಮೆಂಬರರಾಗಿ ಆರಿಸಿ ಬಂದರು. ಮುಂದೆ ಆ ಮಹನೀಯರು ಕೆಲವು ವರ್ಷಗಳವರೆಗೆ ಪಾರ್ಲಿಮೆಂಟಿನಲ್ಲಿ ಮೆಂಬರರಾಗಿದ್ದು ನಮ್ಮ ಹಿಂದುಸ್ಥಾನದ ಸಂಬಂಧ ಬಹು ಕಳಕಳಿಯಿಂದ ಕೆಲಸಮಾಡಿದರು.

ಕ್ರಿ ಶ ೧೮೯೧ ರಲ್ಲಿ ಜೇಮ್ಸ ಮೆಕ್ಲಿನ್ ಎಂಬ ನಾಮಾಂಕಿತ ಪಾರ್ಲಮೆಂಟ ಸಭಾಸದರು ಹಿಂದೂ ಮುಸಲ್ಮಾನ ಎಂಬ ವಿಷಯದ ಮೇಲೆ ವ್ಯಾಖ್ಯಾನವನ್ನು ಕೊಟ್ಟರ. ಅದರಲ್ಲಿ ಅವರು ಹಿಂದಸ್ಥಾನದಲ್ಲಿಯ ಮುಸಲ್ಮಾನರು ಗುಲಾಮರು, ಹಿಂದುಗಳು ಗುಲಾಮರ ಗುಲಾಮರು (ಕೂಲಿಕಾರರು), ಎಂದು ಅಧಿಕಾರದ ಬಲದಿಂದಲೂ ಅನುಕೂಲತೆಯ ಪ್ರಮಾಣಗಳಿಂದಲೂ ಮನದಣಿಯುವಂತೆ ನಿರಾಧಾರ ಟೀಕೆಯನ್ನು ಮಾಡಿದರು. ಈ ವ್ಯಾಖ್ಯಾನಕ್ಕೆ ನಮ್ಮ ಕಥಾನಾಯಕ ಬಾಬುಗಳೂ ಹೋಗಿದ್ದರು. ಅವರ ಟೀಕೆಯು ರಕ್ತವನ್ನು ಕುದಿಸುವಂತಿತ್ತು. ಭಾರತದ ಸವಭಿಮಾನಿಯಾದ ನಮ್ಮ ವಿದ್ಯಾರ್ಥಿಗೆ ಆ ಸಭಾಸದರ ಅಸಂಬದ್ಧ ಟೀಕೆಯು ತಿಲಮಾತ್ರವೂ ಸಹನವಾಗಲಿಲ್ಲ. ಕೂಡಲೆ ಇವರು ಲಂಡನ್ನದಲ್ಲಿಯ ಎಲ್ಲ ವಿದ್ಯಾರ್ಥಿಗಳ ದೊಡ್ಡದೊಂದು ಸಭೆಯನ್ನು ಕರೆದರು. ಮತ್ತು ಆ ಸಭೆಯಲ್ಲಿ ಮೇಲಿನ ಸಾಹೇಬ ಬಹದ್ದೂರರವರ ಪರಾಮರ್ಶೆಯನ್ನು ಚನ್ನಾಗಿ ಮಾಡಿಬಿಟ್ಟರು ತಮ್ಮ ಸುಸಹಾಗ ಸರಳವಾದ ವಾಕ್ಚಾತುರ್ಯದಿಂದ ಸಾಧಾರವಾಗಿ ಅವರ ಮತಗಳನ್ನ ಸಂಪೂ

ರ್ಣಖಂಡಿಸಿಬಿಟ್ಟರು. ಮತ್ತು ತಮ್ಮ ಸ್ವತಂತ್ರ ಹಾಗು ನಿರ್ದಾಕ್ಷಿಣ್ಯ ಸ್ವಭಾವ ಪೂರ್ಣ ಪರಿಚಯವನ್ನು ಆಂಗ್ಲಜನರಿಗೆ ಚನ್ನಾಗಿ ಮಾಡಿಕೊಟ್ಟರು.

ಇವರು ನ್ಯಾಯ ಪ್ರಿಯರೂ ಸತ್ಪಕ್ಷಪಾತಿಗಳೂ ಆಗಿದ್ದರು. ಇವರು ಜನ್ಮತಾಳಿದ ವಂಶವು ಬಂಗಾಲದಲ್ಲಿ ಪ್ರಸಿದ್ಧವಾದ ವಂಶವೇನೋ ನಿಜ. ಆದರೆ ದೈವದುರ್ವಿಪಾಕದಿಂದ ಇವರ ತಂದೆಯವರು ದಿವಾಳಿಯನ್ನು ತೆಗೆಯಬೇಕಾಯಿತು. ಈ ಸಂಗತಿಯು ದಾಸರ ಮನಸ್ಸಿಗೆ ಎಷ್ಟೂ ಬರಲಿಲ್ಲ. ಸಾಲುಗಾರರನ್ನು ಮುಳುಗಿಸುವದು ನ್ಯಾಯವಲ್ಲವೆಂದು ಅವರು ತಿಳಿದು ತಮ್ಮ ತಂದೆಯವರನ್ನು ಹೇಗಾದರೂ ಋಣಮುಕ್ತರನ್ನಾಗಿ ಮಾಡಬೇಕೆಂದು ಮನಸ್ಸಿನಲ್ಲಿ ಸಂಕಲ್ಪ ಮಾಡಿದ್ದರು. ಆದರೆ ಇವರ ಭಾಗ್ಯವಾದರೂ ಚನ್ನಾಗಿ ಇದ್ದಿಲ್ಲ; ಇವರು ತಂದೆಯ ಸಾಲವನ್ನು ತೀರಿಸುವದಕ್ಕಾಗಿ ಕೆಲವು ದಿವಸಗಳ ತನಕ ಸಮರ್ಥರಾಗಲಿಲ್ಲ. ಇಷ್ಟೇ ಅಲ್ಲ. ಆದರೆ ಇವರಿಗೂ ಸಹ ದಿವಾಳಿಯನ್ನು ತೆಗೆಯುವ ಪ್ರಸಂಗವು ಒದಗಿತು. ಆಗ ಅವರ ಮನಃಸ್ಥಿತಿಯು ಹೇಗಾಗಿತ್ತೆಂಬದನ್ನು ಬರೆಯುವದು ಬಹಳ ಕಠಿಣ. ಪರಮಾತ್ಮನು ಈಪರಿ ತಮ್ಮನ್ನು ಕಷ್ಟಕ್ಕೆ ಗುರಿಮಾಡಲು ಏನು ಕಾರಣ ಇರಬಹುದೆಂಬದಾಗಿ ಅವರು ವಿಚಾರ ಮಾಡಿರಬಹುದು. ಆದರೆ, ಪರಮಾತ್ಮನ ಪ್ರತಿನಿತ್ಯದ ರೂಢಿಯೇ ಇದು. ಅವನು ತನ್ನ ಭಕ್ತರನ್ನು ಪರೀಕ್ಷಿಸಬೇಕಾದರೆ, ಅವರ ಮೇಲೆ ಸಂಕಟಗಳ ರಾಶಿಯನ್ನು ಸುರುವಿ ಅವರು ಅವುಗಳನ್ನೆಲ್ಲ ಸಹಿಸಿ ಆನಂದದಿಂದ ತನ್ನ ಭಜನೆಯನ್ನು ಮಾಡುವರೋ ಇಲ್ಲವೋ ಎಂಬದನ್ನೇ ನೋಡುತ್ತಿರುವನು. ಇರಲಿ. ಆದರೂ ದಾಸರು ಎದೆಗುಂದಲಿಲ್ಲ. ಎಷ್ಟೋ ಜನರು ಇಂಥ ಪ್ರಸಂಗ ಬಂದಾಗ ಉರ್ಲುಹಾಕಿಕೊಂಡು ಸತ್ತಿರುವದನ್ನು ವಾಚಕರು ಕೇಳಿರಬಹುದು. ಆದರೆ ದಾಸರು ಅಸಾಮಾನ್ಯ ವಿಭೂತಿಗಳಾದ್ದರಿಂದಲೇ ಇಂಥ ಬಿಕ್ಕಟ್ಟಿನ ಪ್ರಸಂಗದಲ್ಲಿ ಕೂಡ ಧೈರ್ಯವನ್ನು ತಾಳಿ "ಇಂದಿಲ್ಲ ನಾಳೆ ಆ ಸಾಲವನ್ನೆಲ್ಲ ತೀರಿಸಿ ಬಿಡುವೆನೆಂ"ದು ಸಂಕಲ್ಪವನ್ನು ಮಾಡಿದರು. ಇಷ್ಟಾದರೂ ತೀರಲಿಲ್ಲ. ಅವರು ಬ್ಯಾರಿಸ್ಟರರಾಗಿದ್ದರೂ ಅವರಿಗೆ ಮೊದಲಿಗೆ ಅಷ್ಟೇನೂ ಹಣದೊರೆಯಲಿಲ್ಲ. ಪ್ರಪಂಚವನ್ನು ಸಾಗಿಸುವದು ಕೂಡಾ ಕೆಲವು ದಿವಸಗಳ ವರೆಗೆ ಕಷ್ಟವಾಯಿತು. ಈ ಪರಿ ಅನೇಕ ರೀತಿಯಿಂದ ತ್ರಾಸವಾದರೂ ಕೂಡ ಅವರು ಎಳ್ಳಷ್ಟೂ ಧೈರ್ಯಗುಂದಲಿಲ್ಲ. ಕಡೆಗೆ ಪರಮಾತ್ಮನ ಕೃಪಾವೃಷ್ಟಿಯು ಇವರ ಮೇಲಾಯಿತು. ಬಾಬೂ ಅರವಿಂದ ಘೋಸರವರ ಮೇಲೆ ೧೯೦೮ ನೇ ಇಸ್ವಿಯಲ್ಲಿ ರಾಜದ್ರೋಹದ ಆರೋಪವನ್ನು ಹೊರಿಸಿ, ಅವರ ವಿರುದ್ಧ ಸರಕಾರದವರು ಕಟ್ಲೆಯನ್ನು ಮಾಡಿದಾಗ ಚಿತ್ತರಂಜನರು ಅಹೋರಾತ್ರಿ ದುಡಿದು ಘೋಸರವರ ಪರಿಯಿಂದ ವಕೀಲಿಯನ್ನು ಮಾಡಿದರು. ಆಗ ಇವರ ಕೀರ್ತಿಯು ಎಲ್ಲ ಕಡೆಗೂ ಹಬ್ಬಿತು. ಅಂದಿನಿಂದಲೇ ಇವರ ಭಾಗ್ಯೋದಯವಾಯಿತು. ಇವರು ಸುಪ್ರಸಿದ್ಧ ವಕೀಲರಾದರು. ತಿಂಗಳಿಗೆ ೪೦|೫೦ ಸಾವಿರ ರೂಪಾಯಿಗಳ ವರೆಗೆ ದೊರಕಿಸುವ ಯೋಗ್ಯತೆಯು ಇವರಿಗೆ ಬಂದಿತು. ಇವರಿಗೆ ಹಣವು ಬರಹತ್ತಿದ ಕೂಡಲೇ, ಹಿಂದಕ್ಕೆ ದಿವಾಳಿಯನ್ನು ತೆಗೆದಿದ್ದರೂ ಕೂಡ ತಪ್ಪದೆ ಹಾಗೂ ತಮ್ಮ ತಂದೆಯವರ ಸಾಲವನ್ನು ಕಾಸು ಸಹ ಬಿಡದೆ ತೀರಿಸಿದರು. ಇಂಥ ಉದಾಹರಣೆಗಳು ಎಲ್ಲಿಯಾದರೂ ದೊರಕುವವೋ? ಇದಕ್ಕಿನ್ನ ಬೇಕು ನಿಜವಾದ ನ್ಯಾಯ ಪ್ರಿಯತೆಯೆಂದು.

ಇವರ ಔದಾರ್ಯವಾದರೂ ವರ್ಣನೀಯವಾದದ್ದು. ಇವರು ಇಷ್ಟು ಹಣವನ್ನು ಗಳಿಸುತ್ತಿದ್ದರೂ ಇವರ ಹತ್ತರ ಒಂದು ಕವಡಿ ಕೂಡಾ ಇದ್ದಿಲ್ಲವೆಂದ ಬಳಿಕ ಇವರ ಔದಾರ್ಯವೆಷ್ಟು ನೋಡಿರಿ! ಎಷ್ಟೋ ನಿರಾಶ್ರಿತ ಕುಟುಂಬಗಳನ್ನು ಇವರು ಪೋಷಿಸುತ್ತಿದ್ದರೆಂಬದು ಸರ್ವವಿಶ್ರುತವಾದ ಮಾತಾಗಿದೆ. ಸಾರ್ವಜನಿಕ ನಿಧಿಗಳಿಗಂತೂ ಇವರು ಶಕ್ತಿ ಮೀರಿ ಸಹಾಯಮಾಡುತ್ತಿದ್ದರು. ಹಿಂದುಸ್ಥಾನದಲ್ಲಿ ಎಷ್ಟೋ ಉದಾರರಿರುವರು. ಆದರೆ ದಾಸರಂಥ ಉದಾರರು ಸಿಗುವದು ಅತಿವಿರಲ. ತಾವು ಗಳಿಸುತ್ತಿರುವ ಹಣ ತಮ್ಮದೆಂಬ ಅಭಿಮಾನವೇ ಇದ್ದಿಲ್ಲವೆಂದ ಬಳಿಕ ಬಹಳ ಹೇಳುವದೇನು?

ಇನ್ನು ಅವರ ದೇಶಪ್ರೇಮವಾದರೋ ಅಗಾಧವಾದದ್ದು. ಇಂಥ ದೇಶಭಕ್ತರು ಹಿಂದುಸ್ಥಾನವನ್ನು ಹೊರ್ತು ಪಡಿಸಿ ಬೇರೆ ಯಾವರಾಷ್ಟ್ರಗಳಲ್ಲಿಯೂ ದೊರೆಯಲಾರರು. ಅಂತಲೇ ನಾಗಪುರದಲ್ಲಿ ಮಹಾತ್ಮಾಜಿಯವರು ದಾಸರನ್ನು ತಮ್ಮ ಪಕ್ಷಕ್ಕೆ ಸೇರಿಸಬೇಕೆಂದು ಅವಿಶ್ರಾಂತವಾಗಿ ಪ್ರಯತ್ನ ಪಟ್ಟರು. ಮತ್ತು ದಾಸರು ಮಾಡಿದ ಕೆಲವು ಸೂಚನೆಗಳನ್ನು ಮನ್ನಿಸಿ ಮಹಾತ್ಮಾಜಿಯವರು ಅಸಹಕಾರದ ಠರಾವನ್ನು ಮುಂದೆ ತಂದರು. ಆ ಕಾಲಕ್ಕೆ ಮಹಾತ್ಮಾಜಿಯವರು ದಾಸರಂಥ ಜನರು ತಮ್ಮ ಪಕ್ಷಕ್ಕೆ ಬರುತ್ತಿದ್ದರೆ ತಾವು ಕೆಲವು ಮಾತುಗಳನ್ನು ಬಿಟ್ಟುಗೊಡಲಿಕ್ಕೆ ಸಿದ್ಧರಿದ್ದೇವೆಂಬದಾಗಿ ಅಡಿಕೋರಿಸಿದರು. ಅಂದಮೇಲೆ ಮಹಾತ್ಮಾಜಿಯವರಿಗೆ ದಾಸರ ವಿಷಯವಾಗಿ ಎಷ್ಟು ಆದರಭಾವವಿತ್ತೆಂಬದು ಸ್ಪಷ್ಟವಾಗುತ್ತದೆ. ನಾಗಪುರದ ರಾಷ್ಟ್ರೀಯ ನಿರ್ಣಯವಾದ ಕೂಡಲೆ ಇವರು ತಮ್ಮ ವಕೀಲಿಯ ಉದ್ಯೋಗಕ್ಕೆ ಶರಣು ಹೊಡೆದರು. ಪ್ರತಿ ತಿಂಗಳಿಗೆ ೪೦|೫೦ ಸಾವಿರರೂಪಾಯಿಗಳು ಬರುತ್ತಿರುವಾಗ ಅವುಗಳನ್ನೆಲ್ಲ ತುಚ್ಛೀಕರಿಸಿ ದೇಶಸೇವೆಗಾಗಿ ಇವರು ಮುಂದುವರಿದು ಬಂದರು. ಇದಕ್ಕಿಂತ ಮಹತ್ವದ್ದೇನೆಂದರೆ ಇವರು ವಕೀಲಿಯನ್ನು ಬಿಟ್ಟು ಕೊಡುವಾಗ ಇವರಿಗೆ ೩ ಲಕ್ಷ ರೂಪಾಯಿಗಳ ಸಾಲವಿತ್ತು. ಇಂಥ ಪರಿಸ್ಥಿತಿಯಲ್ಲಿ ಕೂಡ ಇವರು ಏನೂ ವಿಚಾರ ಮಾಡದೆ ತಮ್ಮ ಉದ್ಯೋಗಕ್ಕೆ ಶರಣು ಹೊಡೆದರು. ಕಡೆತನಕ ಶರಣು ಹೊಡೆದರು. ಇದು ದೇಶಭಕ್ತಿಯ ಪರಮಾವಧಿಯಲ್ಲವೇ?

ಇವರ ಸ್ವಾರ್ಥತ್ಯಾಗಕ್ಕಂತೂ ಎಣೆಯೇ ಇಲ್ಲ. ಕಲಕತ್ತೆಯ ಪಿಕೆಟಿಂಗ ನಡೆದಾಗ ಇವರ ಪತ್ನಿಯವರು ಸಹ ತುರಂಗಕ್ಕೆ ಹೋಗಬೇಕಾಯಿತೆಂಬದನ್ನು ಯಾರೂ ಮರೆತಿರಕ್ಕಿಲ್ಲ. ಕೇವಲ ದ್ರವ್ಯತ್ಯಾಗವನ್ನು ಎಷ್ಟೋ ಜನರು ಮಾಡುತ್ತಿರಬಹುದು. ಆದರೆ ತಮಗೆ ಅಥವಾ ಬಾಂಧವರಿಗೆ ಕಾರಾಗೃಹವಾಸದಂಥ ಆಪತ್ತು ಬಂದರೂ ಸಹ ಅದಕ್ಕೆ ತಲೆಗೊಟ್ಟು ನಿಲ್ಲುವ ಧೈರ್ಯವು ಬಹಳ ಜನರಿಗೆ ಇರುವದಿಲ್ಲ. ಮಹಾತ್ಮಾಜಿಯವರ ಈ ಅಸಹಕಾರ ಚಳವಳಿಯಿಂದ ಆ ಧೈರ್ಯವಾದರೂ ಅವರಲ್ಲಿ ಅಂಕುರಿಸಿತು. ಆದರೂ ತನ್ನ ಪ್ರಿಯ ಪತ್ನಿಯವರೂ ಒಬ್ಬನೇ ಮಗನೂ ತುರುಂಗಕ್ಕೆ ಹೋಗುವಾಗ ದಾಸರು ಏನೂ ಚಿಂತಿಸದೆ ದೇಶಸೇವೆಗಾಗಿ ಎಲ್ಲರೂ ಈ ರೀತಿಯಾಗಿ ವರ್ತಿಸಬೇಕೆಂದು ಅವರು ತಮ್ಮ ಪತ್ನಿ ಪುತ್ರರನ್ನು ಪ್ರೋತ್ಸಾಹಿಸಿದರೆಂದಮೇಲೆ ಇವರು ಎಷ್ಟು ಸ್ವಾರ್ಥತ್ಯಾಗಿಗಳಿರಬಹುದು? "ತಾನು ತನ್ನದು" ಎಂಬ ಅಭಿಮಾನವೇ ಅವರಲ್ಲಿ ಉಳಿದಿರುವದಿಲ್ಲ. ಕೇವಲ ಕ್ಯಾವಿಯ ಬಟ್ಟೆಗಳನ್ನುಟ್ಟರೆ ತ್ಯಾಗವಾಗಲಾರದು. ನಿಜವಾದ ತ್ಯಾಗವನ್ನು ನೋಡಬೇಕಾದರೆ ದಾಸರ ಕಡೆಗೆ ದೃಷ್ಟಿಯನ್ನು ಚೆಲ್ಲಬೇಕಾಗುವದು.

ಓಂ ಶಾಂತಿ! ಶಾಂತಿ!! ಶಾಂತಿ!!!

ದೇಶಬಂಧು ದಾಸರವರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನೀಯಲಿ!!

ದೇ. ದಾಸರಮನೆ

ಫರಿದಪುರದಿಂದ ಹಿಂತಿರುಗಿ ಬಂದು ದೇಶಬಂಧು ದಾಸರ ಕ್ಷೇಮಂ ಚಿನ ಮನೆಯಲ್ಲಿ ಕೂತುಕೊಂಡು ಈ ಸಂಸ್ಮರಣೆಯನ್ನು ಬರೆಯುತ್ತಿದ್ದೇನೆ. ನಾನು ಬಂಗಾಲಕ್ಕೆ ಬಂದು ಇಂದಿಗೆ ನಾಲ್ಕು ದಿನಗಳಾದರೂ ಮೊದಲನೇ ಸಾರಿ ಈ ಮನೆಯನ್ನು ಪ್ರವೇಶಿಸಿದಾಗ ನನಗಾದ ದುಃಖವು ಇಂದಿಗೂ ನನ್ನನ್ನು ಬಿಟ್ಟಿರುವುದಿಲ್ಲ. ದಾಸರು ಈ ಮನೆಯನ್ನು ಸಾರ್ವಜನಿಕ ಕೆಲಸಗಳಿಗಾಗಿ ಕೊಟ್ಟಿರುವರೆಂದೂ ಅವರಿಗೆ ಸಾಲವಾಗಿದೆಯೆಂದೂ ನನಗೆ ಗೊತ್ತಿತ್ತು. ಆದರೆ ಅವರು ವಕೀಲತನ್ನು ಮಾಡಿದರೆ ಅಲ್ಪಸಮಯದಲ್ಲಿಯೇ ಸಾಲವನ್ನು ತೀರಿಸಿ ಮನೆಯನ್ನು ಸ್ವಾಧೀನಪಡಿಸಿಕೊಳ್ಳಬಹುದಿತ್ತೆಂದೂ ನನಗೆ ಗೊತ್ತಿತ್ತು. ಆದರೆ ಅವರಿಗೆ ವಕಾಲತು ಮಾಡುವುದು ಬೇಡವಾಗಿತ್ತು; ಅಥವಾ ಅವರು ಹಣ ತೆಗೆದುಕೊಳ್ಳದೆ ದೇಶದ ವಕಾಲತನ್ನು ಮಾಡಲಿಚ್ಛಿಸುತ್ತಾರೆಂದೂ ಹೇಳಬಹುದು. ಆದುದರಿಂದ ಈ ಭವ್ಯವಾದ ಮನೆಯನ್ನು ಟ್ರಸ್ಟಿಗಳಿಗೊಪ್ಪಿಸಿದ್ದಾರೆ. ನಾನು ಈ ಯಾತ್ರೆಯಲ್ಲಿ ಕಲ್ಕತ್ತೆಗೆ ಬಂದಾಗ ಅವರ ಮುಂಚಿನ ಮನೆಯಲ್ಲಿರಬೇಕೆಂದು ಅವರ ಇಚ್ಛೆಯಾಗಿದ್ದುದರಿಂದ ನಾನು ಇಲ್ಲಿಗೆ ಬಂದಿರುವೆನು.

ಮನೆಯನ್ನು ಪ್ರವೇಶಿಸುವಾಗ ನಾನು ಹೃದಯದಲ್ಲಿ ರೋದಿಸಿದೆನು. ಯಜಮಾನರು ಮತ್ತು ಅವರ ಪತ್ನಿಯವರಿಲ್ಲದೆ ನನಗೆ ಅದು ಕಾರಾಗೃಹದಂತೆ ಭಾಸವಾಗಿ ಇಲ್ಲಿ ವಾಸಿಸುವುದು ಕಷ್ಟವಾಯಿತು. ಈ ಭಾವನೆಯ ಪ್ರಭಾವವು ಇನ್ನೂ ನನ್ನ ಮೇಲಿದೆ. ಇದು ಮೋಹವೆಂದು ನನಗೆ ಗೊತ್ತಿದೆ. ಮನೆಯನ್ನು ಕೊಟ್ಟು ದಾಸರು ಒಂದು 'ಹೊರೆಯನ್ನು ಕಡಿಮೆಮಾಡಿಕೊಂಡಿರುವರು. ಈ ಮನೆಯಿಂದ ಅವರಿಗೆ ಯಾವ ಲಾಭ? ಮನಸ್ಸಿದ್ದರೆ ಅವರು ಒಂದು ಗುಡಿಸಲನ್ನಾದರೂ ರಾಜಮಹಾಲಾಗಿ ಮಾಡಬಲ್ಲರು. ಇಬ್ಬರೂ ಸ್ವೇಚ್ಛೆಯಿಂದ ತ್ಯಾಗಮಾಡಿರುವದರಿಂದ ಏತಕ್ಕೆ ದುಃಖಪಡಬೇಕು?

ಇದೆಲ್ಲ ಜ್ಞಾನದ ಮಾತಾಯಿತು. ಆದರೆ ದೇಹಾಧ್ಯಾಸವು ಎಲ್ಲಿಯಾದರೂ ಹೋಗುತ್ತದೋ? ಜಗತ್ತೆಲ್ಲ ದಾಸರಂತೆಯೇ ವರ್ತಿಸುತ್ತದೋ? ಮನೆಯಿದ್ದರೆ ಜಗತ್ತು ಅದನ್ನಾಶಿಸುತ್ತದೆ. ಆದರೆ ಇವರು ತ್ಯಾಗಮಾಡಿ ಧನ್ಯರಾಗಿರುವರು. ನನ್ನ ಕಣ್ಣೀರೂ ದುಃಖವೂ ಪ್ರೇಮದ್ದಾಗಿರುತ್ತವೆ; ಇದರಲ್ಲಿ ಸ್ವಾರ್ಥವಾದರೂ ಇಲ್ಲವೆಂದು ಹೇಗೆ ಹೇಳಲಿ? ದೇಶಬಂಧು ದಾಸರೊಡನೆ ನನಗೆ ಸಂಬಂಧವಿರದಿದ್ದರೆ ನನಗೆ ಈ ಆಘಾತವಾಗುತ್ತಿದ್ದಿಲ್ಲ. ದಾಸರು ಮನೆಯನ್ನು ಪರಿತ್ಯಾಗಮಾಡಿದ್ದರಿಂದ ಅವರ ಸೇವೆಯ ಬೆಲೆಯು ಮತ್ತೂ ಹೆಚ್ಚಾಗಿರುವುದು.

॥ ಸತ್ಯಾಗ್ರಹಿ ॥ ಮಹಾತ್ಮಾ ಗಾಂಧಿ

ದೇಶಬಂಧು ದಾಸರ ನಿಧನದ ಬಗ್ಗೆ ದುಃಖಪ್ರದರ್ಶನ.

ಮುಂಬಯಿ

ಮುಂಬಯಿ 'ಕಾರ್ಪೋರೇಶನ್' ದವರು, ಕಲಕತ್ತೆಯ ಮೇಯರರೂ, ಅತುಲ ಸ್ವಾರ್ಥತ್ಯಾಗಿಗಳೂ ಆದ ದೇಶಬಂಧು ಚಿತ್ತರಂಜನ ದಾಸರವರ ಆಕಾಲಿಕ ನಿಧನದ ಸಲುವಾಗಿ ದುಃಖಪ್ರದರ್ಶಕ ಠರಾವನ್ನು ಪಾಸು ಮಾಡಿ, ಅದರ ಒಂದು ಪ್ರತಿಯನ್ನು ದಾಸರವರ ಪತ್ನಿಯವರಿಗೂ ಇನ್ನೊಂದು ಪ್ರತಿಯನ್ನು ಕಲಕತ್ತೆಯ ಕಾರ್ಪೋರೇಶನಕ್ಕೂ ಕಳಿಸುವದನ್ನು ಗೊತ್ತುಮಾಡಿದ್ದಲ್ಲದೆ ಅವರ ಸ್ಮಾರಕಾರ್ಥ ಕಾರ್ಪೋರೇಶನದ ಮುಂದಿನ ಕಾರ್ಯಕ್ರಮವನ್ನು ಬಂದು ಇಟ್ಟರು. ಕಾರ್ಪೋರೇಶನ್‌ದ ಅಧ್ಯಕ್ಷರಾದ ಬ್ಯಾರಿಸ್ಟರ ಬ್ಯಾಪ್ಟಿಸ್ಟಾರವರು ದಾಸರ ದೇಶಸೇವೆಯ ವಿಷಯದಲ್ಲಿಯೂ ಅವರ ಸ್ವಾರ್ಥತ್ಯಾಗದ ಬಗ್ಗೆಯೂ ಮಾತಾಡಿ, ಅವರ ಮರಣದಿಂದ ತಮಗಾದ ದುಃಖವನ್ನು ವ್ಯಕ್ತಪಡಿಸಿದರು. ಶ್ರೀ. ಚೋಟಾಣಿ, ಶ್ರೀಮತಿ ಅವಂತಿಕಾಬಾಯಿ ಗೋಖಲೆ ಶ್ರೀ. ಮಥುರಾದಾಸ ಮುಂತಾದ ಮಹನೀಯರು ಪಟೇಲರವರು ತಂದ ದುಃಖಪ್ರದರ್ಶಕ ಠರಾವಿಗೆ ಪುಷ್ಟಿಯನ್ನಿತ್ತರು. ಆ ಮೇಲೆ ಎಲ್ಲರೂ ಬಹು ಶಾಂತತೆಯಿಂದ ಎದ್ದುನಿಂತು ಠರಾವು ಪಾಸು ಮಾಡಿದರು.

ದೇಶಬಂಧು ದಾಸರವರ ಆಕಾಲಿಕ ನಿಧನದಿಂದ ತಮಗಾದ ದುಃಖವನ್ನು ವ್ಯಕ್ತಮಾಡುವದಕ್ಕೋಸ್ಕರ, ಮುಂಬಯಿ "ಸ್ಟೂಡಂಟ್ಸ ಬ್ರದರ" ದವರು, ತಮ್ಮ ವಾಚನಾಲಯ ಹಾಗೂ ಪುಸ್ತಕಾಲಯಗಳನ್ನು ಬಂದು ಇಟ್ಟಿದ್ದರು. ಅದರಂತೆಯೇ ಮುಂಬಯಿ ಕ್ರಾನಿಕಲ ಕಚೇರಿ, ಮಾರವಾಡಿ ಔದ್ಯೋಗಿಕ ಶಾಲೆ ಹಿಂದುಸ್ತಾನೀ ನೇಟಿವ್ಹ ಮರ್ಚಂಟ್ಸ ಸಂಘ, ಮುಂತಾದವುಗಳು ಬಂದು ಇಡಲ್ಪಟ್ಟಿದ್ದವು.

ಪುಣೆ.

ದೇಶಬಂಧು ದಾಸರವರ ನಿಧನ ವಾರ್ತೆಯು ಮಂಗಳವಾರ ರಾತ್ರಿ ಗೊತ್ತಾದರೂ ಬುಧವಾರ ಪ್ರಾತಃಕಾಲಕ್ಕೆ ಊರಲ್ಲೆಲ್ಲ ಹರಡಿತು. ಮುನಸಿಪಾಲಿಟಿಯ ಎಲ್ಲ ಕಚೇರಿಗಳೂ, ಶಾಲೆಗಳೂ, ಟಿಳಕ ಮಹಾವಿದ್ಯಾಲಯ ಹಾಗೂ ಉಳಿದ ಎಲ್ಲ ರಾಷ್ಟ್ರೀಯ ಶಾಲೆಗಳು ಕೂಡಲೇ ಮುಚ್ಚಲ್ಪಟ್ಟವು. ಶ್ರೀ. ಕೇಳಕರರು ದೇಶಬಂಧುಗಳ ಆಕಾಲಿಕ ಮರಣದಿಂದ ಅಖಿಲ ಹಿಂದುಸ್ತಾನಕ್ಕೆ ಉಂಟಾದ ರಾಷ್ಟ್ರೀಯ ದುಃಖದಲ್ಲಿ ಮಹಾರಾಷ್ಟ್ರ ವಾದರೂ ಪಾಲುಗಾರ ಇರುತ್ತದೆಂಬಾಶಯದ ತಂತಿಯನ್ನು ದಾಸರವರ ಪತ್ನಿಯರಿಗೆ ಕಳಿಸಿದ್ದಾರೆ. ಅದರಂತೆಯೇ ಪುಣೆ ನಗರನಿವಾಸಿಗಳ ಪರಿಯಿಂದ ಮ್ಯುನಸಿಪಾಲಿಟಿಯ ಅಧ್ಯಕ್ಷರಾದ ಶ್ರೀ. ಆಪಟೆಯವರು ತಂತಿಯನ್ನು ಕಳಿಸಿದ್ದಾರೆ. ತಾ. ೧೮ ನೇ ದಿವಸ ದುಃಖಪ್ರದರ್ಶನ ಮಾಡುವದಕ್ಕಾಗಿ ಸಾರ್ವಜನಿಕ ಸಭೆಯಾದರೂ ನೆರೆದಿತ್ತು.

ಮಧ್ಯಪ್ರಾಂತ

ಮಧ್ಯಪ್ರಾಂತ ಲೆಜಿಸ್ಲೇಟಿವ್ಹ ಕೌನ್ಸಿಲದ ಅಧ್ಯಕ್ಷರಾದ ಶ್ರೀ. ತಾಂಬೇರವರು ಕೆಳಗಿನ ಅರ್ಥದ ತಂತಿಯನ್ನು ದಾಸರವರ ಪತ್ನಿಯವರಿಗೆ ಕಳಿಸಿದ್ದಾರೆ.

"ದಾಸರವರ ನಿಧನದಿಂದ ತಮಗುಂಟಾಗಿದ್ದ ದುಃಖವು ಅಪಾರವಾಗಿದ್ದು, ನಾನು ಹಾಗೂ ಮಧ್ಯಪ್ರಾಂತ ಲೇಜಿಸ್ಲೇಟಿವ್ಹ ಕೌನ್ಸಿಲು ಆ ದುಃಖದಲ್ಲಿ ಪಾಲುಗಾರನಿರುತ್ತದೆ. ದಾಸರವರ ನಿಧನದಿಂದ ಹಿಂದುಸ್ತಾನದ ಸರ್ವಪ್ರಕಾರದಾದ ಉನ್ನತಿಯ ಬಗ್ಗೆ ಪ್ರಯತ್ನ ಮಾಡುವ, ಅತುಲ ಸ್ವಾರ್ಥತ್ಯಾಗಿಯು, ಹಿಂದುಸ್ತಾನಕ್ಕೆ ಇಲ್ಲದಂತಾಗಿದೆ."

ಖುಲಾನಾ

ಬುಧವಾರ ೧೭ನೇ ತಾರೀಖಿನ ದಿವಸ ಮುಂಜಾನೆ ದಾಸರವರ ನಿಧನವಾರ್ತೆಯು ಬಂದುತಲ್ಪಿತು. ಕೂಡಲೇ ಪಿ. ಸಿ. ರಾಯರವರು ಮಹಾತ್ಮರಿಗೆ ಈ ಸುದ್ದಿಯನ್ನರುಪಲಿಕ್ಕೆ ಶ್ರೀ. ಮಹಾದೇವ ದೇಸಾಯಿಯವರಿಗೆ ತಂತಿ ಕೊಟ್ಟರು. ಮ. ಗಾಂಧಿಯವರು ೧೭ ನೇ ತಾರೀಖಿನ ಮಧ್ಯಾಹ್ನಕ್ಕೆ ಕಲಕತ್ತೆಗೆ ಹೊರಟರು.

ಮದ್ರಾಸ.

ದೇಶಬಂಧು ದಾಸರವರ ನಿಧನ ವಾರ್ತೆಯನ್ನು ಕೇಳಿ ಮದ್ರಾಸದ ಎಲ್ಲ ಜನರಿಗೆ ಬಹಳೇ ದುಃಖವಾಗಿದೆ. ಬುಧವಾರ ಮುಂಜಾನೆ ಹಿಂದೂ ಹಾಗು ಸ್ವದೇಶ ಮಿತ್ರಪತ್ರದವರು ಜಾದಾ ಅಂಕ್ಯಗಳನ್ನು ಹೊರಡಿಸಿದ್ದಲ್ಲದೆ ಮುಖ್ಯಮುಖ್ಯ ಜಾಗೆಗಳಲ್ಲಿ ಜಾಹೀರಾತಗಳನ್ನು ಹಚ್ಚಿದರು. ಸ್ವದೇಶಮಿತ್ರ ಪತ್ರದವರು ತಮ್ಮ ಎಲ್ಲ ಎಜಂಟರುಗಳಿಗೆ ಈ ಸುದ್ದಿಯನ್ನು ತಮ್ಮ ತಮ್ಮ ಗ್ರಾಮಗಳಲ್ಲಿ ಹರಡುವದಕ್ಕೋಸ್ಕರ ತಂತಿಯನ್ನು ಕಳಿಸಿದ್ದಾರೆ.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ
ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು ಪ್ರತಿ ೩೫೦೦.

ರಿ ನಂ. ಬಿ. ೧೯೪೭ ವಾ. ಚಂದಾ ೧-೧೪-೦ ಮಾತ್ರ

[illegible]

(ಇದರಲ್ಲಿ ಕನ್ನಡ ನವಜೀವನವು ಸಮಾವೇಶವಾಗಿದೆ)

[illegible]

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ಆಷಾಢ ಶುದ್ಧ ೫ ಶಕೆ ೧೮೪೭. ತಾ|| ೨೬-೬-೧೯೨೫. | ಸಂಚಿಕೆ ೧೩

ಸಂಪಾದಕರ ಭೂಮಿ.

ಎಲ್ಲಿಯೆ ಕನ್ನಡ ಕುಲದವರಿರೆ ಕನ್ನಡ ನಾಡವರೆ ಕನ್ನಡವು ।
ಹೃದಯವು ಕನ್ನಡ ಉದಯವು ಕನ್ನಡ- ಕನ್ನಡ- ಕನ್ನಡವು ।
ಕನಸು ಮನಸಿನೊಳು ಕನ್ನಡ ಕನ್ನಡ ಸಿದ್ಧಿಯು ಕನ್ನಡವು ।
ತನಸು ಕನ್ನಡವು ಜೀವನ ಕನ್ನಡ ಎಲ್ಲವು ಕನ್ನಡವು ॥
—ಶ್ರೀ. ಹಗರಕವಿ

ದೇಶಬಂಧು ಚಿತ್ತರಂಜನದಾಸರವರ ಅಕಾಲಮೃತ್ಯುವಿನ ದುರಣವಾರ್ತೆಯನ್ನು ಭರತಖಂಡದಲ್ಲಿ ಎಲ್ಲರೂ ಕೇಳಿದರು. ಕೂಡಲೇ ದುಃಖ ಪ್ರದರ್ಶಕ ಸಭೆಗಳಾದವು. ನಾಟಕಗಳೂ, ಸಿನೀಮಾ, ಮತ್ತು ಇತರ ವಿನೋದದ ಕಾರ್ಯಗಳೂ ಬಂದಾದವು. ಭಾಷಣ ಮಾಡಲು ಶಕ್ತಿಯಿದ್ದವರ ಉದ್ಧಾತ ಸ್ತುತಿಪರವಾದ ಭಾಷಣಗಳಾದವು. ದುಃಖ ಪ್ರದರ್ಶಕ ಸಭೆಯ ವಾರ್ತೆಯನ್ನು ತಂತಿಯಿಂದ ವೃತ್ತಪತ್ರಗಳಿಗೆ ಕಳಿಸುವದಾಯಿತು. ಶ್ರೀಮತಿ ವಸಂತಿ ದೇವಿಯವರಿಗೆ ಸಮಾಧಾನ ಹೇಳುವದಾಯಿತು. ಭರತಖಂಡದ ಮುಂದಾಳುಗಳೆಲ್ಲ ತಮ್ಮ ತಮ್ಮ ಸಂದೇಶಗಳನ್ನು ಕಳುಹಿಸುವದಾಯಿತು. ವೃತ್ತಪತ್ರಕಾರರು ವ್ಯಾಖ್ಯ ಲೇಖನಗಳನ್ನೂ ಕರೇ ಗೆರೆಗಳಿಂದ ಮುದ್ರಿತವಾದ “ ಸ್ಪೇಶಲ್ ” ಸಂಚಿಕೆಗಳನ್ನೂ ಪ್ರಸಿದ್ಧಿಸುವದಾಯಿತು. ಪ್ರತಿಯೊಬ್ಬ ಭಾರತೀಯನೂ ವ್ಯಸನ ಪಡುವದಾಯಿತು. ಪರರಾಷ್ಟ್ರಗಳಿಂದಲೂ ಸಹಾನುಭೂತಿ ಪರವಾದ ತಂತಿಗಳು ಒಂದರ ಮೇಲೊಂದು ಬಂದವು. ಲಾರ್ಡ ಲಿಟನ್, ರೀಡಿಂಗ, ಬರ್ಕನ ಹೆಡ್ ಪ್ರಭೃತಿಗಳೂ, ಕೂಡ ತಮ್ಮ ತಮ್ಮ ವಿಷಾದವನ್ನು ವ್ಯಕ್ತಪಡಿಸಿದರು. ಕಲಕತ್ತೆಯಲ್ಲಿಯಂತೂ, ನಾಲ್ಕು ಲಕ್ಷ ಜನರು ದೇಶ ಬಂಧುಗಳ ಸ್ಮಶಾನ ಯಾತ್ರೆಯ ಕಾಲಕ್ಕೆ ನೆರೆದು ಘುಕ್ಕೆಂದು ಶೋಕಿಸಿ ಅವರಲ್ಲಿದ್ದ ತಮ್ಮ ಅಪ್ರತಿಮವಾದ ಅನುರಾಗವನ್ನು ವ್ಯಕ್ತಗೊಳಿಸಿದರು. ಸ್ವಲ್ಪದರಲ್ಲಿ ಹೇಳಬೇಕೆಂದರೆ, ದೇಶಬಂಧುಗಳ ನಿಧನದಿಂದ ಭರತಖಂಡಕ್ಕೆ ಒದಗಿದ ಅಪಾರವಾದ ಹಾನಿಯನ್ನು ಪ್ರತಿಯೊಬ್ಬನೂ ವ್ಯಕ್ತಗೊಳಿಸಿದನು. ಹೊರಗೆ ಪ್ರಕಟಗೊಳಿಸುವ ಈ ಬಾಹ್ಯಸ್ವರೂಪ ಪದ್ಧತಿಯು ಚನ್ನಾಗಿ ಅನುಕರಿಸಲ್ಪಟ್ಟಿತು ನಿಜ. ಆದರೆ ಅಂತರಂಗದಲ್ಲಿ ದಾಸಬಾಬೂರವರ ಮರಣದ ಬಗ್ಗೆ ಅತಿ ನಿಜವಾದ ಮತ್ತು ಅತಿಶಯ ಕಳಕಳಿಯ ವ್ಯಸನವನ್ನು ತೋರಗೊಡಿಸುವ ಮಾರ್ಗವು ಇದಕ್ಕಿಂತಲೂ ಬೇರೆಯಾಗಿದೆ. ದಾಸ ಬಾಬೂಗಳ ಸ್ಮರಣವನ್ನು ಮಾಡಬೇಕೆಂದು ಅನೇಕ ಬಗೆಯಾಗಿ ಅನೇಕರು ಸೂಚಿಸಬಹುದು. ಯಾರು ಅಲ್ಲಲ್ಲಿ ಪುತ್ಥಳಿಗಳನ್ನು ಮಾಡಿಸಬೇಕೆಂದೂ, ಯಾರು ಅವರ ಹೆಸರಿನಿಂದ ಮಂದಿರಗಳನ್ನು ಕಟ್ಟಿಸಬೇಕೆಂದೂ, ಯಾರು ತಮ್ಮ ಪಟ್ಟಣಗಳಲ್ಲಿ ಬೀದಿಯ ಹೆಸರನ್ನು “ ದಾಸ ಬೀದಿ ” ಯೆಂಬದಾಗಿಡಬೇಕೆಂದೂ ಸೂಚಿಸಬಹುದು. ಆದರೆ ಇವು ಸಹ ಹೊರಗಿನ ಬಾಹ್ಯಸ್ವರೂಪ ಪದ್ಧತಿಯ ಮಾರ್ಗಗಳು. ಇವೂ ಅವಶ್ಯಕವಾದ ಸಂಗತಿಗಳೇ. ಆದರೆ ಇವೆಲ್ಲವುಗಳಿಂತಲೂ ಹೆಚ್ಚಿನದಾದ ಉಚ್ಚತರಗತಿಯ ಮಾರ್ಗವೆಂದರೆ, ದಾಸಬಾಬುಗಳು ಭಾರತ ಮಾತೆಯ ಸೇವೆಗಾಗಿ ಅದ್ವಿತೀಯವಾದ ಸ್ವಾರ್ಥತ್ಯಾಗವನ್ನು ಮಾಡಿ, ದೇಶದ ದಾಸರಾದಂತೆ, ಭರತಖಂಡದಲ್ಲಿ ಜನ್ಮತಾಳಿದ ಪ್ರತಿಯೊಬ್ಬ ಸುಶಿಕ್ಷಿತ ಭಾರತೀಯನು ಚಿತ್ತರಂಜನರ ಬಳಿಗಿನ ಚಿತ್ತವನ್ನು ಚಿತ್ರಿಸಿ, ತಿಳಿದುಕೊಂಡು, ಚಿತ್ತವನ್ನು ಶುದ್ಧವಾಗಿಟ್ಟುಕೊಂಡು, ದಾಸರವರ ಸ್ವಾರ್ಥತ್ಯಾಗದ ದಾರಿಯನ್ನು ಅನುಸರಿಸುವದೇ ಸರಿ. ದಾಸರವರಂತೆ ತಾವು ಪ್ರತಿ ತಿಂಗಳು ದೊರಕಿಸುವ ೪೦-೫೦ ಸಾವಿರ ರೂಪಾಯಿಗಳು ಕೇವಲ ಪದಾರ್ಥಗಳೆಂದೆನಿಸಿದವು. ಭರತಖಂಡದಲ್ಲಿಯ ಶ್ರೀಮಂತರು ಉದ್ಯಮದ ಕೆಲಸಗಳನ್ನು ಕಳಚಿಸಿದ ಮಾತ್ರಕ್ಕೆ ತಮ್ಮ ಕರ್ತವ್ಯವಾಯಿತೆಂದು ತಿಳಿಯದೇ ತಮ್ಮ ಧನದ ರಾಶಿಯನ್ನು ದೇಶಸೇವೆಗಾಗಿ ಅರ್ಪಿಸಿ, ದಾಸರಂತೆಯೇ ದಾಸರಾದರೆ ಮಾತ್ರ ದಾಸಬಾಬುಗಳ [illegible] ಶಾಂತಿ ದೊರೆಯುವದು. ದಾಸಬಾಬುಗಳು ತಮ್ಮ ಬುದ್ಧಿಶಕ್ತಿಯನ್ನೆಲ್ಲ ರಾಷ್ಟ್ರದ ಸೇವೆಗಾಗಿ ಅರ್ಪಿಸಿದಂತೆ ಪ್ರತಿಯೊಬ್ಬ ಬುದ್ಧಿವಾನ್ ಭಾರತೀಯನು ತನ್ನ ಬುದ್ಧಿ ಸರ್ವಸ್ವವನ್ನು ಭಾರತಮಾತೆಯ ಅಡಿದಾವರೆಗಳಿಗೆ ಅರ್ಪಿಸಿದರೆ ಮಾತ್ರ ದಾಸರವರ ಆತ್ಮವು ಶಾಂತಿ ಹೊಂದುವದು. ದಾಸರವರಿಂದ ನಾವು ಕಲಿಯುವದಾದ ಮುಖ್ಯ ಮಂತ್ರವೆಂದರೆ ಸ್ವಾರ್ಥತ್ಯಾಗ. ಸ್ವಾರ್ಥತ್ಯಾಗವೆಂದರೆ “ ನನ್ನ ಕೈಲಾದ ಮಟ್ಟಿಗೆ ” “ ನನಗೆ ಶಕ್ಯವಿದ್ದಷ್ಟು ” ವೆಂಬ ಒಣ ಮಾತಿನ ಸ್ವಾರ್ಥತ್ಯಾಗವಲ್ಲ. ದೇಶಬಂಧುಗಳಂತೆ ಮಿತಿಯಿಲ್ಲದ ಸ್ವಾರ್ಥತ್ಯಾಗವು ಬೇಕು. ಒಬ್ಬ ದಾಸರು ಮಡಿದರೆನ್ನುವದರಲ್ಲಿ ನೂರಾರು ಮಂದಿ ದಾಸರು ಸಿದ್ಧರಾದರೆ ದಾಸರ ಸ್ಮಾರಕವು ಅವರ ಯೋಗ್ಯತೆಗೆ ತಕ್ಕಂತೆ ತಾನೇ ಆಗುವದು.

ಮೈಸೂರ ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಕೈನೂಲಿನ ಶೃಂಗಾರಿಕೆಯನ್ನು ಒತ್ತಾಯ ಪಡಿಸಬೇಕೆಂಬದಾಗಿ ಒಂದು ಗೊತ್ತುವಳಿಯು ತರಲ್ಪಟ್ಟಿತ್ತು. ಇದನ್ನು “ ಸಭೆಯ ಮುಂದೆ ತಂದು, ಸಕಾರಣವಾಗಿ ಸೂಚನೆಯ ಗುಣನಿರೂಪಣ ಮಾಡಿದ ಶ್ರೀಯುತ ವೀರಭದ್ರಪ್ಪ ಮುಂತಾದ ಮಹನೀಯರನ್ನು ಎಷ್ಟು ವಂದಿಸಿದರೂ ಸಾಲದು. ಅನೇಕ ಸದಸ್ಯರು ಸೂಚನೆಗೆ ಅನುಮೋದನ ಕೊಟ್ಟು ಮನೆ ಕೈಗಾರಿಕೆಗಳಲ್ಲಿ ನೂಲುವುದು ಸರ್ವ ಸುಲಭವೂ, ಅಮೌಲ್ಯವೂ ಆದುದೆಂದು ಸಮರ್ಥಿಸಿದರು. ನಿರ್ಭಯವಾಗಿ ಸರ್ವಜನ ಸಮ್ಮತವಾದಂತಿದ್ದ ಈ ಸೂಚನೆ

ಯನ್ನು ಎದುರಿಸಿ "ಇದು ಕೇಸಕ್ಕೆ ಬಾರದ ಕೈಗಾರಿಕೆ" ಎಂದವರು ಶ್ರೀ ನೀಲಗಿರಿ ಸಂಜೀವಯ್ಯನವರೊಬ್ಬರು. "ಈ ಕೈಗಾರಿಕೆಯಿಂದ ಅಷ್ಟೇನೂ ವರಮಾನ ಬರುವದಿಲ್ಲ" ವೆಂದು ದಿವಾನರೆಂದಂತಿತ್ತು- ಈಗಿರುವ ನಿರುದ್ಯೋಗವ್ಯಾಧಿಗೆ ಇದು ತಕ್ಕಮಟ್ಟಿಗೆ ಚಿಕಿತ್ಸೆ ಎಂದು ಮತ್ತಾರೋ ಉತ್ತರವಿತ್ತಂತೆ ಕೇಳಬಂತು. ಅಷ್ಟರಲ್ಲಿ ಶ್ರೀ ಶೀಲರೆದ್ದರು. ಸೂಚನೆಯನ್ನು ವಿರೋಧಿಸಿದರು. ಮುಖ್ಯವಾಗಿ ಆ ಜ್ಞಾನವಿಜ್ಞಾನ ಭಂಡಾರವಂತಿರುವ ಅವರ ಅಭಿಪ್ರಾಯದಲ್ಲಿ ನೂಲುವುದು ನೇಯುವುದು ಇವೆಲ್ಲ ಕೆಲಸಕ್ಕೆಬಾರದ ಉದ್ಯೋಗಗಳು. ಕೈಯಲ್ಲಿ ನೂತ ನೂಲು ದಪ್ಪ ಒರಟು; ಆ ಬಟ್ಟೆಯೋ ರಾಮ! ರಾಮ! ದುಪ್ಪಟಿ ಕಾಡು ಜನರು ಹೊದೆಯಲು ತಕ್ಕದ್ದು ಆದುದರಿಂದ ಶೀಲರು 'ಒಂದು ಕೋಟಿ ರೂಪಾಯಿ ಈ ಕೆಲಸಕ್ಕಾಗಿ ಹಾಳುಮಾಡಿದ್ದಾಯಿತು. ಅದರಿಂದ ಫಲವೇನು?' ಎಂಬದಾಗಿ ವ್ಯಂಗ್ಯವಾಗಿ ಮಾತನಾಡಿದರು. ನೂಲುವುದನ್ನು ಶಾಲೆಗಳಲ್ಲಿ ಒತ್ತಾಯಪಡಿಸುವದು ಯುಕ್ತವಲ್ಲವೆಂದು ಹೇಳಿದರು.

"ಕೂಡಲೇ ಶ್ರೀ ಹೊಸಕೊಪ್ಪ ಕೃಷ್ಣರಾಯರು ಶೀಲರಿಗೆ ಖಾದಿಯ ಬಟ್ಟೆಯ ಅನುಭವವಿಲ್ಲೆಂದೂ, ಚರಕಸಂದೇಶದ ಅರ್ಥವನ್ನು ಅವರು ಗ್ರಹಿಸಿಲ್ಲವೆಂದೂ, ನೂಲುವುದೂ, ನೇಯುವುದೂ, ಈಗಲೀಗ ದೇಶದಲ್ಲೆಲ್ಲ ಹರಡುತ್ತಿದೆಯೆಂದೂ, ಒಂದಾನೊಂದು ಕಾಲದಲ್ಲಿ ಎಲ್ಲರೂ ನೂಲುತ್ತಿದ್ದರೆಂದೂ, ಹೇಳಿ ಶೀಲರ ಭಾಷಣವನ್ನು ಖಂಡಿಸಿದರು. ಸೂಚನೆಯು ಸಭೆಯ ಅಂಗೀಕಾರಕ್ಕೆ ಬರಲು ೫೬ ಮಂದಿ ಸೂಚನೆಯನ್ನು ಅಂಗೀಕರಿಸಿದರು. ೭೨ ಮಂದಿ ಸೂಚನೆಯನ್ನು ವಿರೋಧಿಸಿದರು." ಮೈಸೂರು ಕ್ರಾನಿಕಲ್.

ಕೊಡಗು ಕರ್ನಾಟಕದಲ್ಲಿ ಈಗ್ಗೆ ನಡೆದ ವೃತ್ತಾಂತಗಳನ್ನೋದಿದರೆ ಯಾವ ಕರ್ನಾಟಕ ಅಭಿಮಾನಿಗೂ ಆನಂದವಾಗದೇ ಇರದು. "ಕೊಡಗು" ಪತ್ರಿಕೆಯು ಜನ್ಮತಾಳಿ ನಾಲ್ಕೈದು ವರ್ಷಗಳಾಗಿದ್ದರೂ ಈ ಅವಧಿಯಲ್ಲಿ ಆ ಪತ್ರಿಕೆಯು ಕೊಡಗಿನವರನ್ನು ಜಾಗ್ರತ ಪಡಿಸಲು ಚನ್ನಾಗಿ ಪ್ರಯತ್ನ ಪಟ್ಟಿದೆ. "ಕೊಡಗು" ವಿನ ನಾಲ್ಕು ವರ್ಷದ ಹಿಂದಿನ ಭಾಷೆಯ ಶೈಲಿಗೂ ಈಗಿನ ಭಾಷೆಯ ಶೈಲಿಗೂ ಮಹದಂತರವಿದೆ. ಪ್ರಾರಂಭದಲ್ಲಿ ಅದರ ಭಾಷೆಯು ಒಂದು ವಿಚಿತ್ರ ತರದ ಪದ್ಧತಿಯದಾಗಿತ್ತು. ಈಗ್ಗೆ ಕರ್ನಾಟಕದ ಇತರ ಪತ್ರಿಕೆಗಳ ಮತ್ತು ಜನರ (ಅಲ್ಪ ಪ್ರಮಾಣದಿಂದಲಾದರೂ) ಸ್ನೇಹವೂ ಬಳಿಕೆಯೂ ಹೆಚ್ಚಾದ್ದರಿಂದ ಭಾಷೆಯಲ್ಲಿ ಚನ್ನಾಗಿ ಸುಧಾರಣೆಯಾಗಿದೆ. ಕೊಡಗು ಕರ್ನಾಟಕದಲ್ಲಿ, ಕರ್ನಾಟಕ ಕಾಂಗ್ರೆಸದಿಂದಂತೂ ಹೆಚ್ಚು ಉತ್ಸಾಹವು ಉಂಟಾದಂತೆ ಕಾಣುತ್ತದೆ. ಖಾದಿಯ ಪ್ರಚಾರವು ಹೆಚ್ಚುತ್ತಲಿದೆ. ಮದ್ಯಪಾನವನ್ನು ನಿಲ್ಲಿಸಬೇಕೆಂಬದಾಗಿ ಪ್ರಯತ್ನನಡೆದಿದೆ. ಉಳಿದ ಸ್ಥಾನಿಕ ಸಾರ್ವಜನಿಕ ಪ್ರಶ್ನೆಗಳಲ್ಲಿಯೂ ಕೂಡ ಜನರು ಮನಸ್ಸು ಹಾಕುತ್ತಿರುವದಾಗಿ ಕಂಡು ಬರುತ್ತದೆ. ಕರ್ನಾಟಕದ ಅಭಿಮಾನವು ದಿನೇ ದಿನೇ ವೃದ್ಧಿ ಹೊಂದುತ್ತಲಿರುವದು. "ಕೊಡಗು ಕರ್ನಾಟಕ" "ಕರ್ನಾಟಕ ಏಕೀಕರಣವೂ ಕೊಡಗೂ" ಎಂಬ ಲೇಖಗಳು ಇತ್ತಿತ್ತ ಪ್ರಸಿದ್ಧವಾಗಹತ್ತಿವೆ. ಕರ್ನಾಟಕ ಇತಿಹಾಸದ ಬಗ್ಗೆ ಜ್ಞಾನವು ಹೆಚ್ಚುತ್ತಲಿದೆ. "ಕೊಡಗು" ವಾರ ಪತ್ರಿಕೆಯಿಂದ ಮಾತ್ರ ಕೊಡಗಿನವರ ಭಾಷಾಸೇವೆಯು ತೃಪ್ತಿಕರವಾಗಿಲ್ಲ. ೧-೨ ಮಾಸ ಪತ್ರಿಕೆಗಳು ಹೊರಟಿವೆ. ಗ್ರಂಥ ಮಾಲೆಗಳೂ, ಇನ್ನೊಂದು ವಾರ ಪತ್ರಿಕೆಯೂ ಹೊರಡುವ ವಿಚಾರ ನಡೆದಿದೆ. ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯವರು ಎಲ್ಲ ಜಿಲ್ಲೆಗಳಿಗೂ ಪ್ರಚಾರಕರನ್ನು ನೇಮಿಸಿದ್ದು ಕೊಡಗಿಗೆ ಯಾಕೆ ನೇಮಿಸಿರುವದಿಲ್ಲವೆಂದು "ಕನ್ನಡಿಗ" ನು ಕಾರ್ಯದರ್ಶಿಗಳಿಗೆ ಕೇಳಿದ ಪ್ರಶ್ನೆಗೆ ಈ ವರೆಗೆ ಉತ್ತರ ದೊರೆತಿಲ್ಲ. "ಪರರನ್ನು ನಾವು ಕೇಳುವದೇಕೆ? "ಕನ್ನಡಿಗ" ನ ಪ್ರಶ್ನೆಗೆ ಉತ್ತರ ದೊರೆಯದಿದ್ದರೆ ಇಲ್ಲ. ನಾವೇ ಕರ್ನಾಟಕ ಸಂಘವನ್ನು ಕೊಡಗಿನಲ್ಲಿ ಸ್ಥಾಪಿಸಿ ಅದರ ಮುಖಾಂತರವಾಗಿ ನಮ್ಮ ನಾಡಿನ ಉತ್ಕರ್ಷವನ್ನು ಮಾಡಿಕೊಳ್ಳಬಾರದೇಕೆ? ಎಂಬ ವಿಚಾರವೂ ಹೊರಟಿದೆ. ಕೊಡಗು ಬಂಧುಗಳಲ್ಲಿಯ ಈ ಬಗೆಯ ಚಟುವಟಿಕೆಗಳನ್ನು ನಿರೀಕ್ಷಿಸಿದರೆ ಯಾರಿಗೆ ತಾನೇ ಆನಂದವಾಗದೆ ಇದ್ದೀತು? ಕರ್ನಾಟಕ ಮಾತೆಯ ಕೃಪಾಕಟಾಕ್ಷವು ನಮ್ಮ ಈ ವೀರರೂ ಶೂರರೂ ಆದ ಕೊಡಗಿನವರನ್ನು ಒಂದಾವರ್ತಿ ಎಚ್ಚರ ಪಡಿಸಿದರೆ, ಕರ್ನಾಟಕದಲ್ಲಿ ಮಹಾ ಕಾರ್ಯಗಳು ಆಗದೆ ಇರಲಾರವು.

ಬಳ್ಳಾರಿಯು ಮಾತ್ರ ಇನ್ನೂ ಶುದ್ಧ ಕುಂಭಕರ್ಣನಂತೆ ಚಟುವಟಿಕೆಯಿಲ್ಲದೇ ಇರುವದು. ಒಂದು ಕಾಲದಲ್ಲಿ ಕೊಡಗಿಗೆ ಹಿಂದೆ ಬಿದ್ದ ಕರ್ನಾಟಕದ ಭಾಗವೆಂತಲೂ, ಬಳ್ಳಾರಿಯು ಕೊಡಗಿನಕ್ಕಿಂತ ಮುಂದಾದದ್ದೆಂದೂ ಅನ್ನುವ ಪ್ರಸಂಗವಿತ್ತು. ಆದರೆ ಈಗ ಅದು ತಿರುವು ಮುರುವು ಆಗಿದೆ. "ಭಾರತಿ" ಎಂಬ ವಾರ ಪತ್ರಿಕೆಯು ಹಿಂದಕ್ಕೆ ಕೆಲಕಾಲದವರೆಗೆ ಬಳ್ಳಾರಿಯಲ್ಲಿ ಹೊರಟಿತ್ತು ಆದರೆ ಅಲ್ಲಿನ ಕರ್ನಾಟಕಸ್ಥರ ನಿರಭಿಮಾನದ ಮೂಲಕ ಅದು ಬಂದಾಗಿ ಹೋಯಿತು. ಪುನಃ ಬಳ್ಳಾರಿಗೆ ವಾರಪತ್ರಿಕೆಯ ಅವಶ್ಯಕತೆಯೇ ಕಂಡು ಬಂದಂತಿಲ್ಲ. ಅಲ್ಲಿ ಕರ್ನಾಟಕದ ಅಭಿಮಾನವು ಒಬ್ಬಿಬ್ಬರಲ್ಲಿದ್ದರೂ ಸರ್ವತ್ರ ಪ್ರಸಾರವಾಗಿಲ್ಲ. ಬಳ್ಳಾರಿಯ ಪಟ್ಟಣದಲ್ಲಿ ಕನ್ನಡದ ಕಸುವು ಕಡಿಮೆಯಾಗಿದ್ದರಿಂದ ಹೊಸಪೇಟೆಯವರು ತಮ್ಮಲ್ಲಿಯೇ ವಾರಪತ್ರಿಕೆಯನ್ನು ಹೊರಡಿಸಬೇಕೆಂದು ಹಿಂದಕ್ಕೆ ಪ್ರಯತ್ನಿಸಿದರು. ಆದರೆ ಈಗ್ಗೆ ಎಲ್ಲ ಕಡೆಯಲ್ಲಿಯೂ ಬಳ್ಳಾರಿ ಜಿಲ್ಲೆಯಲ್ಲಿ ಮಂದತೆಯು ಕಾಣುತ್ತದೆ. ಇದಕ್ಕೆ ಬಳ್ಳಾರಿಯ ಮುಖಂಡರು ಏನೆಂದು ಉತ್ತರ ಕೊಡುವರು?

ವಿದ್ಯಾರಣ್ಯರ **ಪುಣ್ಯತಿಥಿಯು** ಧಾರವಾಡದಲ್ಲಿ ಬಹು ವಿಜೃಂಭಣೆಯಿಂದ ನೆರವೇರಿತು. ಉಳಿದ ಕಡೆಗೆ ಎಲ್ಲಿಯೂ ಆದಂತೆ ಕಾಣದಿಲ್ಲ. ವೃತ್ತ ಪತ್ರಿಕೆಗಳಲ್ಲಿ ಮಾತ್ರ ಅಲ್ಲಲ್ಲಿ ಲೇಖಗಳು ಪ್ರಸಿದ್ಧವಾಗಿವೆ. ಬೆಳಗಾಂವಿಯವರೆಗೆ ಕಳೆದ ವರ್ಷವು ತಿಥಿಯು ನೆನಪಾಯಿತು. ಈ ವರ್ಷ ನೆನಪಾಗಲಿಲ್ಲ. (ಈ ವರ್ಷ ಕಾಂಗ್ರೆಸ್ಸು ಬೆಳಗಾವಿಯಲ್ಲಿಲ್ಲ?) ಧಾರವಾಡದ ಸಭೆಯ ವೃತ್ತಾಂತವನ್ನು "ಪ್ರವಾಸಿ" ಯು ಈ ಬಗೆಯಾಗಿ ಬರೆದಿರುವನು. **ರಾ॥ ರಾ॥ ಕನ್ನಡಿಗರಿಗೆ—**

ನಿನ್ನೆ ವಿದ್ಯಾರಣ್ಯರ ಪುಣ್ಯತಿಥಿಯ ದಿವಸ. ಕನ್ನಡಿಗರ ಐಕ್ಯವಿದ್ಯೆಯು ರಣರಣಿಸುತ್ತಿತ್ತು. ಶ್ರೀ. ಬಸವನಹಾಳ ಇವರು ಅಧ್ಯಕ್ಷರಾಗಿದ್ದರು. ಶ್ರೀ. ಗುಡಗುಂಟಿಇವರು ಗುಡಾಕೇಶನಂತೆ ಆಭಾರ ಮಾನಿಸಿದರು. ಶ್ರೀ. ಮುದವೇಡಕರ ಕೃಷ್ಣರಾಯರು ಶ್ರೀ ಬಸವನಾಳ ಶ್ರೀ. ಗುಡಗುಂಟಿಇವರ ಆಭಾರವನ್ನು ಮನ್ನಿಸಿದರು. ಆಭಾರಗಳೇ ಆಭಾರ! ಆಭಾರಗಳನ್ನು ಹೊತ್ತುಕೊಂಡು ಹೋಗುವವರು ಯಾರೂ ಸಿಗಲಿಲ್ಲ. ಯಾಕಂದರೆ ಎಲ್ಲರದೂ ಸೌಜನ್ಯ. ಎಲ್ಲರೂ ಕರ್ನಾಟಕ ಮಾತೆಯ ಸೇವೆಗಾಗಿ ನಡಕಟ್ಟಿ ಕೊಂಡು ದೀನರಾಗಿ ಕೈಜೋಡಿಸಿ ನಿಂತಿರುವರು. ಕನ್ನಡಿಗರೇ ಇವೆಲ್ಲ ಶುಭಸೂಚನೆಗಳಲ್ಲವೆ? ಕರ್ನಾಟಕ ಮಾತೆಯಂತೂ ದಿನತುಂಬಿದ ಗರ್ಭಿಣಿಯ ಹಾಗೆ ಕಾಣುವಳು. ಏನು ಹಡೆಯುವಳೋ ಯಾರುಬಲ್ಲರು? ಕನ್ನಡಿಗರೇ ಏನೇ ಆಗಲಿ. ಧಾರವಾಡದಲ್ಲಿ ಐಕ್ಯದ ಬೀಜವನ್ನು ಶ್ರೀ. ಸಿ. ಆರ್. ರಡ್ಡೀ ಇವರು ಬಿತ್ತಿಹೋದರು. ಮೊಳಕೆಯಂತೂ ನಾಟಿರುವದು. ಇದು ದೊಡ್ಡ ಮರವಾಗುವ ಹಾಗೆ ನೀರೆರೆಯುವದು ನಮ್ಮೆಲ್ಲರ ಕರ್ತವ್ಯವಲ್ಲವೆ? ಕರ್ನಾಟಕವು ಐಕ್ಯ ಬುದ್ಧಿಯಲ್ಲಿ ಎಲ್ಲರಿಂದಲೂ ಮಿಗಿಲಾದದ್ದು ಇದನ್ನು ಶ್ರೀ ರಾಜಪುರೋಹಿತರು ಸ್ಪಷ್ಟ ಮಾಡಿರುವರು.

“ಮರಾಠಿಗರಂತೆ ಕನಾ೯ಟ ಸಿಂಹಾಸನ ಸ್ಥಾಪನೆಯು ಗೋಬ್ರಾಹ್ಮಣ ಪರಿಪಾಲನಾರ್ಥವಾಗಿ ಆದದ್ದಲ್ಲ. ಆದರೆ ‘ ಗೋದೇವದ್ವಿಜ ರಕ್ಷಣಾರ್ಥಂ ’ ಆದದ್ದು. ದ್ವಿಜರೆಂದರೆ ವೀರಶೈವರಲ್ಲವೇನು ? ‘ **ಜನ್ಮನಾ ಜಾಯತೇ ಶೂದ್ರಃ । ಸಂಸ್ಕಾರಾದ್ದ್ವಿಜ ಉಚ್ಯತೇ ॥** ’ ವೀರಶೈವರು ಲಿಂಗಧಾರಣೆಯ ಸಂಸ್ಕಾರದಿಂದ ದ್ವಿಜರಾಗಲಿಲ್ಲವೆ ? ಅಸ್ಪೃಶ್ಯರಿಗೂ ಕೂಡ ಏನಾದರೂ ಸಂಸ್ಕಾರಮಾಡಿ ದ್ವಿಜರನ್ನು ಮಾಡಬೇಕು!. ಹೇಗಾದೀತು ? ಕನ್ನಡಿಗರೇ ಇಷ್ಟೇ ಐಕ್ಯದಿಂದ ನಾವು ಸಂತುಷ್ಟರಾಗತಕ್ಕದ್ದಲ್ಲ. ಹುಣ್ಣು ಮಾಯಬೇಕಲ್ಲದೆ ಕಲೆಯು ಸಹ ಕಾಣಬಾರದು. ಐಕ್ಯದಸೂಚಕವೆಂದು ಅಧ್ಯಕ್ಷರನ್ನೂ ಆಭಾರಿಗನನ್ನೂ ಬೇರೆ ಬೇರೆ ವರ್ಗದವರನ್ನು ಆರಿಸುವ ಎಲ್ಲ ಸಾರ್ವಜನಿಕ ಕಾರ್ಯಗಳಲ್ಲಿ, ಇವರು ವೀರಶೈವರು ಇವರು ಬ್ರಾಹ್ಮಣರು ಎಂಬ ಭೇದಭಾವದ ಕಲ್ಪನೆಯು ಮರೆತುಹೋಗಬೇಕೆಂದು. ತ್ರಿವರ್ಗ ಅಧಿವೇಶನದಂದದ್ದು ಯಥಾರ್ಥವಿದೆ. ಆದರೆ ಕನ್ನಡಿಗರೇ ಮಹಾರಾಷ್ಟ್ರ ಬ್ರಾಹ್ಮಣೇತರ ಸಭೆಯಲ್ಲಿ ಜಾಗಟೆಯವರ ಭಾಷಣವನ್ನು ಕೇಳಿದಿರಾ ? “ ಕೇಟಿತ್ರಪಪಾ, ಈ ಚಿತ್ರ ನೋಡಿರಿ ” ಪ್ರನಾ

ನಮ್ಮ ಹಳೆ ಆಟಗಳು

ಸ್ವಾಭಿಮಾನ್ಯರೂ ಸ್ವತಂತ್ರರಾಗಿ ಜಗತ್ತಿನ ಸರ್ವಸಂಸ್ಕೃತಿಗಳಿಗೆ ಹೊಸ ಹೊಸ ಕಾಣಿಕೆ ಕೊಟ್ಟು ನಮಗೆ ನಮ್ಮ ಹಿಂದಿನ ಇತಿಹಾಸದ ಪರಿಚಯವಾದರೂ ಎಲ್ಲಿತ್ತು, ಮೊನ್ನಿನ ವರೆಗೆ? ಇವಾಗೆಲ್ಲಿಯೋ ಕನ್ನಡಿಗನೆಚ್ಚೆತ್ತಿದ್ದಾನು! ತಾನೇನಿದ್ದೆ? ಈಗಾಗಿರುವ ಹಾದಿ ಏನು? ಎಂಬುದನ್ನರಿಯ ಬಯಸಿ ಅಪೇಕ್ಷಿಸುತ್ತಿದ್ದಾನು. ಕನ್ನಡಿಗರ ಕತೆಯನ್ನು ಕೌತುಕದಿಂದ ಕೇಳಲು ತೊಡಗುತ್ತಿರುವ ನನ್ನ ಕನ್ನಡ ಕಣ ಡಿವಿಯಾಗಿ ಕೆಳಗಣ ನಾಲ್ಕು ಸಾಲುಗಳನ್ನು ಬರೆಯುತ್ತಲಿದ್ದೇನೆ.

ಗಳಂತೂ ಈ ವರೆಗೆ ದೊರೆತಿಲ್ಲ. ಇನ್ನು ಮೇಲಾದರೂ ಈ ಸಂಬಂಧವಾಗಿ ಪ್ರೀತಿಯಿರುವ ರಸಿಕರು ನಮ್ಮ ಹಿಂದಿನ ಹಾಗೂ ಇಂದಿನ ಆಟಗಳನ್ನೆಲ್ಲ ಸಂಗ್ರಹಿಸಿ ಸಚಿತ್ರ ಗ್ರಂಥವೊಂದನ್ನು ಪ್ರಕಟಿಸುವದು ಅತ್ಯವಶ್ಯವಾಗಿದೆ.

ನನ್ನ ಅಭ್ಯಾಸಕಾಲದಲ್ಲಿ ಸಹಜ ನನ್ನ ಕಣ್ಣಿಗೆ ಬಿದ್ದ ಕೆಲ ಆಟಗಳನ್ನಿಲ್ಲಿ ಕೊಡುವನು. ನಾಗ ಆದಿಕಾವ್ಯವೆನಿಸುವ ಪಂಪಭಾರತದ ಎರಡನೆಯ ಆಶ್ವಾಸದಲ್ಲಿ ಕೌರವಪಾಂಡವರು ಈ ಆಟಗಳನ್ನು ಆಡಿದರೆಂದು ಕವಿಯು ಹೇಳಿದ್ದಾನೆ. ಒಡನಾಡಿಗಳೂ ಒಡಹೋಟಿಗಳೂ ಆದ ಆ ಬಾಲಕರು, ತಾವು ತಂಡ ಗಡೆಗಳನ್ನು (Part) ಮಾಡಿಸ್ಪರ್ಧೆಯಿಂದ ಗುಳ್ಳೆ ಹೊಟ್ಟೆ (ಗೋಲಿಗುಂಡು), ಚಟ್ಟಿಳಿಸೆಂಡು, ಪೂಸ ಸೆಂಡು ಮರಗೆರಸಿ (ಗಿಡ ಮಂಗ) ಎಂಬವುಗಳನ್ನಾಡಿದರು.

ಕುಮಾರ ವ್ಯಾಸನು ಭಾರತದಲ್ಲಿ ಕೌರವ ಪಾಂಡವರ ಆಟಗಳನ್ನು (ಈ ಎರಡಾಗ ಇದಕ್ಕಿಂತಲೂ ಹೆಚ್ಚು ಹೆಸರುಗಳನ್ನು ಹೇಳಿರುವನು. ಅವು ಯಾವವೆಂದರೆ—ಆಳಿನೇರಿಕೆ (ಆನಿಕಿ) ಹಿಡಿಗವಣೆ (ಸು ಜಿಸ) ಗುರಿಯಾಟ (ಗಂಗಾವಮುರಿಗೆ,) ಚೆಂಡಿನ ಹೊಡಕೆ, ಚಿಣಿಕೋಲಾಟ, ಗೊತ್ತಿನದಂಡೆ ಗುಡುಗು (ಹುಡುತೂತು,) ಗುರ್ರಿನ ಚೆಂಡು, ಗುದ್ದಿನ ಬಡಿವ ಕತ್ತಲೆಗುದ್ದು ಕಂಬಕೆಗಡಣೆ (ಕಂಬಕಂಬಾಟ,) ಕಣ್ಣುಮುಚ್ಚು, ಅಸಗವರಿ ಹರಿಹಲಗೆ, ನಿಡುಗವಣೆ ಕೆಯುಕುಟ್ಟಿ ಇತ್ಯಾದಿ ಇತ್ಯಾದಿ

ಗಿಡಮಂಗನ ಆಟವೆಂದು ಉತ್ತರ ಕರ್ನಾಟಕದಲ್ಲಿ ಕರೆಯಲ್ಪಡುವ ಆಟಕ್ಕೆ ಪಂಪನಕಾಲದಲ್ಲಿ ಸುಮಾರು ಸಾವಿರ ವರ್ಷಗಳ ಹಿಂದೆ ಮರಗೆರಸಿ ಎಂದು ಹೇಳುತ್ತಿದ್ದರು. ಇದರ ಹೆಸರು ಹೇಳದಿದ್ದರೂ ಕುಮಾರ ವ್ಯಾಸನು ವರ್ಣಿಸಿರುವನು. ಆದರೆ ಅದು ಪಂಪನಷ್ಟು ಸರಸವಾಗಿಲ್ಲ. ಅವಕಾಶ ಇಲ್ಲಿ ಹೇಳದೆ ಇರಲಾರೆ.

ಮುಂದಿನ ವರುಷದ ‘ ಕನ್ನಡಿಗನ ” ಚಂದಾ ಹಣವನ್ನು ಕಳುಹಿಸಿದವರಿಗೆ ಮಾತ್ರ ಸಂಚಿಕೆಗಳು ಕಳುಹಿಸಲ್ಪಡುವವು. ಚಂದಾ ಹಣ ಸಲ್ಲಿಸದೇ ಇದ್ದವರಿಗೆ ಸಹ ಸಂಚಿಕೆಗಳು ಬೇಕಾಗಿದ್ದರೆ ಅವರು ಮನಿಯಾರ್ಡರದಿಂದ ಕೂಡಲೆ ಚಂದಾ ಹಣ ಕಳಿಸಬೇಕು. ಇಲ್ಲವೆ ಪಾಳಿಯ ಪ್ರಕಾರ ವಿ.ಪಿ.ಕಳುಹಿಸುವವರೆಗೆ ದಾರಿ ನೋಡಬೇಕು. — ವ್ಯವಸ್ಥಾಪಕ —

ಯುರೋಪಿಯರ ಆಟಗಳ ಮುಂದೆ ನಮ್ಮ ಯಾವ ಆಟಗಳ ಆಟವೂ ಚನ್ನಾಗಿ ನಡೆಯುತ್ತಿಲ್ಲವೆಂಬುದು ವಿಷಾದಕರವಾಗಿದೆ. ನಮ್ಮ ಆಟಗಳು ಮುಗ್ಗಿ ಮೂಲೆ ಗುಂಪಾಗುತ್ತಲಿವೆ ಹಕ್ಕಿ ಹಿಡಿದಿವೆ. ನಾವು ಇನ್ನೂ ಎಚ್ಚರಿಯಾಗಿದ್ದರೆ ನಮ್ಮ ಆಟಗಳನ್ನು ಪುಸ್ತಕದಲ್ಲದೆ ಭೂಮಿಯ ಮೇಲೆ ಕಾಣುವದು ಕಷ್ಟವಾದೀತು. ಹಳೇ ಗ್ರಂಥಗಳಲ್ಲಿ ಉಲ್ಲೇಖಿತವಾಗಿರುವ ಹಲವು ಆಟಗಳು ಈಗಳೇ ಅದೃಶ್ಯವಾಗಿವೆ. ಇದೇ ಗತಿಯುಂಟಾದರೆ ಇನ್ನು ಜೀವ ಹಿಡಿದುಕೊಂಡಿರುವ ತಿಳ್ಳಿ, ಹುಡುತುತೂ, ಗಿಡಮಂಗ ಕಣ್ಣುಮುಚ್ಚಣಿಕೆ ಮುಂತಾದ ಆಟಗಳು ಅಳಿದು ಹೋಗದಿರಲಾರವು. ಆದಕಾರಣ ಆಟಗಾರರಿಗಳೂ, ಆರೋಗ್ಯಭಕ್ತರೂ ‘ ಅಖಿಲಕರ್ನಾಟಕದ ಸೇನಾಪಾಟ ’ ಗಳ ಏರ್ಪಾಡು ಮಾಡುವದು ಅವಶ್ಯವಾಗಿದೆ. ಬಂಗಾಳಿಗಳೂ ಮರಾಠಿಗರೂ ‘ ಆರ್ಯಕ್ರೀಡಾ ಮಂಡಳ ’ ಗಳನ್ನು ಈಗಾಗಲೆ ಸ್ಥಾಪಿಸಿ ನಮ್ಮ ಹಳೇ ಆಟಗಳಿಗೆ ಸಂಸ್ಕಾರ ಕೊಡಹತ್ತಿರುವರು. ಅವರೊಡನೆ ಸಹಕಾರಮಾಡಿ ನಮ್ಮ ಆಟಗಳ ಪುನರುದ್ಧಾರ ಮಾಡುವದೂ ಅತ್ಯವಶ್ಯಕವಾಗಿದೆ. ಸಂಸ್ಕೃತಿ ಸಂರಕ್ಷಣೆ ಸಂವರ್ಧನಾ ಕಾರ್ಯಗಳಲ್ಲಿ ಆಟಗಳೂ ಸೇರದವುಗಳಾಗಿವೆ. ತಮ್ಮಾಟಗಳನ್ನು ಮರೆತದ್ದರಿಂದಲೇ ಕನ್ನಡಿಗರ ಆಟ ನಡೆಯದಾಗಿದೆ.

ಹಿಂದಕ್ಕೆ ಕನ್ನಡ ಕಂದಮ್ಮಗಳೂ, ಹುಡುಗರೂ, ತರುಣರೂ ಯಾವ ಆಟಗಳನ್ನಾಡುತ್ತಿದ್ದರೆಂಬುದನ್ನು ತಿಳಿಯಲಿಕ್ಕೆ ಹಳೇ ಕಾವ್ಯಗ್ರಂಥಗಳಲ್ಲದೆ ಬೇರೆ ಸಾಧನವೇನೂ ತೋರುವದಿಲ್ಲ. ಅಡಿಗೆಯ ಪೊತ್ತಿಗೆಗಳಿದ್ದಂತೆ ಆಟದ ಮೇಲಿನ ಸ್ವತಂತ್ರ ಪುಸ್ತಕ

“ ಹೀಗೆ ಅವರು ಒಂದು ದಿವಸ ಮರಗೆರಸಿಯಾಟವೆಂದ. ವಿಸ್ತಾರವಾಗಿ ಹಬ್ಬಿದ ಒಂದು ಆಲದ ಮರಕ್ಕೆ ಬಂದು ಅಷ್ಟರಲ್ಲಿ ಭೀಮನಿಗೆ ಮರೆಮಾಡಿ ಕೋಲನ್ನು ಬೀಸಿ ಒಗೆದು, ಹೀಗೆ ಹಲವು ಬಾರಿ ಕಾಡಿ

“ ಎಲ್ಲರೂ ಆತುರ ಮೇಲೇರಿ ಹೋದರು. ಭೀಮನು (ಅವರಿಗೆ) ಮುಟ್ಟಲಾರದೆ ಎಲ್ಲರಿಗೂ ಕಿಡಿಕಿಡಿಯಾಗಿ ಸಿಟ್ಟಾಗಿ ಮರವನ್ನೇ ಅಲುಗಲು ಹಣ್ಣುಗಳ ಹಾಗೆ ಎಲ್ಲರೂ ಉದುರಿದರು,

“ ಹಾಗೆ ಬಿದ್ದು ಅವರ ಮೊಳಕಾಲು ಸುಲಿದವು. ಹಲ್ಲು ಕಳಚಿದವು. ಮೈಹಣ್ಣಾದವು. ಕೈಗಳು ಮುದುಡಿದವು ಈ ದೆಸೆಯಾಗಿ ಅಳುತ್ತ ಬಂದು ಅವರು ಭೀಷ್ಮ ಧೃತರಾಷ್ಟ್ರರಿಗೆ ಕಾರಣ ಹೇಳಿದರು.

ಮುದಿಗಣ್ಣುಗಳನ್ನು ಬಾರಿಸುತ್ತ “ ಇನ್ನು ಮುಂದೆ ಭೀಮನೊಡನೆ ಆಡದಿರಿ ” ಎಂದು ಅವರು ಹೇಳಿದರು.

ಈ ವರ್ಣನೆಯನ್ನೋದಿ ಸಾವಿರ ವರ್ಷಗಳ ಹಿಂದೆಯೂ ಇಂದಿನಂತೆಯೇ ಗಿಡಮಂಗ (ಮರಗೆರಸಿ) ಆಟವನ್ನಾಡುತ್ತಿದ್ದರೆಂದು ಕಂಡು ಬರದಿರಲಾರದು.

ಮೈಸೂರ ವಿದ್ಯಾಖಾತೆಯವರು ಕೆಲವು ಆಟಗಳ ಸಚಿತ್ರ ಪುಸ್ತಕವೊಂದನ್ನು ಪ್ರಕಟಿಸಿ ಒಳ್ಳೇ ಕೆಲಸಮಾಡಿದ್ದಾರೆ. ಇದು ದೊಡ್ಡ ಪ್ರಮಾಣದಲ್ಲಿ ಆಗುವದು ಅವಶ್ಯವಿದೆ. ಚಿಕ್ಕ ಹುಡುಗರ ಆಟ, ಹುಡಿಗೆಯರ ಆಟ, ದೊಡ್ಡವರ ಆಟ, ಮನೆ ಆಟ ಹೊರ ಆಟ, ಹೀಗೆ ಒಂದೊಂದು ವಿಭಾಗದ ಆದಷ್ಟು ಸಂಪೂರ್ಣ ಸಂಗ್ರಹವಾಗುವದು ಅವಶ್ಯವಾಗಿದೆ. ಜಾಗೃತೆಯಾಗಿ ಇದನ್ನು ಕೈಗೂಡಿಸಲು ಕರ್ನಾಟಕದ ಆರೋಗ್ಯವರ್ಧಕ ಸಂಸ್ಥೆಯವರಾಗಲಿ, ಬೇರೆ ಉತ್ಸಾಹಿಗಳಾಗಲಿ ಮುಂದೆ ಬರುವರೋ ?

ಧಾರವಾಡ ಜೇಷ್ಠ ವ. ೩ ೧೮೫೭— ಗೆಳೆಯ

ಕರ್ನಾಟಕದಲ್ಲಿಯ ಸಂಸ್ಥಾನಗಳ ಸಮಸ್ಯೆ.

(ಲೇಖಾಂಕ ೪) ×

ಸಂಸ್ಥಾನಾಧಿಪತಿಗಳ ಭವಿಷ್ಯತ್ತು.

"ನಾವು ಅಧೀನರು. ನಾವು ಸ್ವತಂತ್ರರಲ್ಲ. ಪರಾಧೀನರೆಂಬ ಕಳಂಕವನ್ನು ತೊಡೆದುಹಾಕಬೇಕು." ಎಂಬ ಆಶೆಯು ಹಿಂದುಗಳಲ್ಲಾಗಲಿ, ಮುಸಲ್ಮಾನರಲ್ಲಾಗಲಿ, ಶೀಕರಲ್ಲಾಗಲಿ ಎಲ್ಲ ಸಂಸ್ಥಾನಾಧಿಪತಿಗಳಲ್ಲೂ ಹುಟ್ಟಿದೆ ಸುಮಾರು ನಲವತ್ತು ವರ್ಷಗಳಿಂದ ಬ್ರಿಟಿಷ ಹಿಂದೂಸ್ಥಾನದಲ್ಲಿ ನಡೆಯುತ್ತಿರುವ ರಾಜಕೀಯ ಚಳವಳಿಯೂ ಆ ಆಶೆಯನ್ನು ಅವರಲ್ಲಿ ಹುಟ್ಟಿಸಿದೆ. ಇಂದಲ್ಲ ನಾಳೆ ಹಿಂದೂಸ್ಥಾನವು ಸ್ವರಾಜ್ಯವನ್ನು ಪಡೆಯುತ್ತದೆಂಬುದು ಅವರೆಲ್ಲರಿಗೂ ಚನ್ನಾಗಿ ಗೊತ್ತು. ಈ ದೃಷ್ಟಿಯಿಂದ ಅವರ ಭವಿಷ್ಯತ್ತಿನ ವಿಚಾರವಲ್ಲ ಅವರಿಗೆ ಯೋಚನೆಯುಂಟಾಗಿದೆ, ಭಯವುಂಟಾಗಿದೆ ಸುಮ್ಮನೆ ಇರಲು ಪರಾಧೀನದ ಸಂಕಟ, ರಾಜಕೀಯ ಚಳವಳಿಗಳ ಕಡೆಗೆ ಲಕ್ಷ್ಯಕೊಟ್ಟು ರಾಷ್ಟ್ರೀಯ ಮಹಾಸಭೆಯಂತಹ ಸಂಸ್ಥೆಗಳ ಕಡೆಗೆ ವಿಶ್ವಾಸವನ್ನು ವ್ಯಕ್ತಪಡಿಸಿದರೆ ಬ್ರಿಟಿಷರು ರಾಜ್ಯ ಪ್ರಭುಗಳನ್ನು ಪದಚ್ಯುತರನ್ನಾಗಿ ತಮ್ಮನ್ನು ಮೂಲೆಯಲ್ಲಿ ಕೂಡಿಸುವರೆಂಬ ಮಹಾ ಭಯ. ದಿನ ದಿನವೂ ಬವಲಾಯಿಸುತ್ತದೆ. ಇಂದಿದ್ದುದು ನಾಳೆಯಿಲ್ಲ. ಆದುದರಿಂದ ಸುಮ್ಮನೆ ಕುಳಿತರೆ ಮುಂದೇನು ವಿಪತ್ತು ಬರುವದೋ ಎಂಬ ಭ್ರಾಂತಿಯು ಬೇರ ಸಂಸ್ಥಾನಾಧಿಪತಿಗಳನ್ನು ಹಿಡಿಸುತ್ತದೆ.

ಈ ಮಧ್ಯ ರಾಜರಲ್ಲಿ ಉಂಟಾದ ಚಳವಳಿಗೆ ಈಗಲೀಗ ಒಂದು ರೂಪ ಬೇರೆ ಬಂದಿದೆ. ರಾಜರೆಲ್ಲರೂ ಒಂದಾಗಿ ಒಕ್ಕಟ್ಟಿನಿಂದ ತಮ್ಮ ತಮ್ಮ ಹಕ್ಕು ಬಾಧ್ಯತೆಗಳನ್ನು ಸ್ಥಿರಪಡಿಸಿಕೊಳ್ಳಬೇಕೆಂಬ ಕುತೂಹಲದಿಂದ (ರಾಜಪುತ್ರರ ಸಭೆ) (Chambér of Princes) ಎಂಬ ಸಂಸ್ಥೆಯೊಂದನ್ನು ಸ್ಥಾಪಿಸಿರುವರು. ಇಂಡಿಯಾಸರಕಾರದ ಅನುಮತಿಯಿಂದ (೧೯೨೧ ನೆಯ ಫೆಬ್ರುವರಿಯಲ್ಲಿ) ಇದರ ಸ್ಥಾಪನೆಯಾಯಿತು. ಈ ಸಂಸ್ಥೆಗೆ ಮ್ಹೈಸೂರ ಮಹಾರಾಜರೂ, ಹೈದರಾಬಾದು ನಿಜಾಮರೂ ಬರೋಡದ ಗಾಯಕವಾಡರೂ ಸೇರಿಲ್ಲ. ಚಿಕ್ಕ ಸಣ್ಣ ಪುಟ್ಟ ಸಂಸ್ಥಾನಿಕರೆಲ್ಲರೂ ಈ ಸಂಸ್ಥೆಗೆ ಸದಸ್ಯರು. ಯಾವ ಉದ್ದೇಶದಿಂದ ಹಲವು ಸಂಸ್ಥಾನಿಕರು ಈ ಸಭೆಯ ಯೋಜನೆಯನ್ನು ಮುಂದಿಟ್ಟರೋ ಆ ಉದ್ದೇಶವು ಫಲಿಸಲಿಲ್ಲವೆಂಬುವದು ಆ ಸಂಸ್ಥೆಯ ವ್ಯವಸ್ಥೆಯಿಂದಲೇ ತಿಳಿದು ಬರುತ್ತದೆ.

(೧) ಸಭೆಯು ಮಸಲತ್ತಿನದ್ದು, ಸ್ವತಂತ್ರವಲ್ಲ.
(೨) ಸಭೆಯಲ್ಲಿ ಚರ್ಚೆಗೆ ಬರತಕ್ಕ ವಿಷಯಗಳನ್ನು ವೊದಲು ವ್ಹೈಸರಾಯರು ಒಪ್ಪಬೇಕು.
(೩) ಸಭೆಗೆ ವ್ಹೈಸರಾಯರೇ ಅಧ್ಯಕ್ಷರು— ಅವರಿಲ್ಲದಾಗ ಸಂಸ್ಥಾನಿಕರೊಬ್ಬರು ಅಗ್ರಾಸನವನ್ನು ವಹಿಸಬಹುದು.
(೪) ಸಭೆಯ ಠರಾವುಗಳನ್ನು ಇಂಡಿಯಾ ಸರಕಾರದವರು ಮನ್ನಿಸಬೇಕಾದ ನಿರ್ಬಂಧವಿಲ್ಲ.

ಅಂತೂ ಈ 'ರಾಜರ ಸಭೆ' ಯಿಂದ ಸಂಸ್ಥಾನಿಕರಿಗೆ ಫಲಪ್ರಾಪ್ತಿಯೇನೂ ಆಗಲಿಲ್ಲ. ಕಿರುಕುಳವಂತೂ ಹುಟ್ಟಿತು ಈ ಅಂಶವು ರಾಜಕೋಟದ ಠಾಕೂರ ಸಾಹೇಬರ ಉದಾಹರಣೆಯಿಂದ ಸ್ಪಷ್ಟವಾಗುತ್ತದೆ. 'ರಾಜರ ಸಭೆ' ಯಂತೆ ಕಾಠೇವಾಡದ ರಾಜಪುತ್ರರೆಲ್ಲರನ್ನು ಸೇರಿಸಿ ಒಕ್ಕಟ್ಟಿನ ಕೆಲಸಕ್ಕಾಗಿಯೂ, ದೇಶಹಿತಕ್ಕಾಗಿಯೂ 'ಕಾಠೇವಾಡದ ರಾಜಪುತ್ರರ ಸಭೆ' (Kathewad Chamber of Princes & Chiefs) ಯೊಂದನ್ನು ಕೂಡಿಸುವ ಅಭಿಪ್ರಾಯದಿಂದ ೧೯೨೪ ನೇ ಜನವರಿ ೧೨ ಕ್ಕೆ ಅಧಿವೇಶನವನ್ನಿಟ್ಟು ರಾಜಕೋಟದ ಠಾಕೂರ ಸಾಹೇಬರಾದ ಶ್ರೀ ಲಾಖಾಜಿರಾಜರು ಆ ಪ್ರಾಂತದ ರಾಜ ಪ್ರಭುಗಳಿಗೆ ಆಹ್ವಾನಪತ್ರಿಕೆಗಳನ್ನು ಕಳುಹಿಸಿದರು. ಕೂಡಲೇ ಮುಂಬಯಿ ಸರಕಾರದ ಎಜಂಟರಾದ ಕರ್ನಲ್ ಲ್ಯಾಟ್ ಎಂಬುವರು 'ಕಾಠೇವಾಡದ ರಾಜಪುತ್ರರ ಸಭೆ' ಯನ್ನು ಕೂಡಿಸಲು ನೀವು ಮಾಡಿದ ಯೋಜನೆಯು ಶುದ್ಧ ತಪ್ಪು. ಸರಕಾರಕ್ಕೆ ಇದು ಅಸಮ್ಮತವಾದ ಕೆಲಸವೆಂಬದಾಗಿ ಠಾಕೂರ ಸಾಹೇಬರಿಗೆ ತಿಳಿಸಿದರು. ರಾಜಪುತ್ರರ ಪರವಾಗಿ ತಕ್ಕಂತೆ ರಾಜಕೋಟ ಸಾಹೇಬರು ಉತ್ತರಕ್ಕೆ ಉತ್ತರ ಕೊಟ್ಟು ಉದ್ಧಾರ ಪತ್ರ ಒಂದನ್ನು ರಾಜರೆಲ್ಲರೂ ಸಭೆ ಸೇರುವದನ್ನು, ಗೌರವವನ್ನು ಕಾಪಾಡಿಕೊಳ್ಳುವದು ಅನಿವಾರ್ಯವಾಗಿದೆ ಎಂಬದಾಗಿ ಮತ್ತೆ ರಾಜಪ್ರಭುಗಳಿಗೆಲ್ಲರಿಗೂ ಠಾಕೂರ ಸಾಹೇಬರು ಬರೆದರು. ಅದಕ್ಕೆ ಈ ಸಭೆಯು ನಿಷ್ಫಲವಾಯಿತು. ಈ ಉದಾಹರಣೆಯಿಂದ ಸಂಸ್ಥಾನಾಧಿಪತಿಗಳಿಗೂ ಅವ್ಯಾಹತಲಿಕ್ಕೆ ಉಸಿರೆತ್ತಲಿಕ್ಕೆ ಅವಕಾಶವಿಲ್ಲವೆಂದು ತೋರಿದಂತಾಯಿತು.

ನಾಭಾ ಸಂಸ್ಥಾನದ ವಿಷಾದಕರವಾದ ಪ್ರಕರಣದಿಂದ ಸಂಸ್ಥಾನಿಕರು ಬ್ರಿಟಿಷರ ಸೂತ್ರದ ಗೊಂಬೆಗಳೆಂಬುದೂ, ಅವರ ಇಚ್ಛೆ ವಿಗಳೆಂಬುದೂ ಜಗತ್ತಿಗೇ ವಿದಿತವಾಯಿತು.

ತಮ್ಮ ಹಕ್ಕು ಬಾಧ್ಯತೆಗಳನ್ನು ಕಾಯುವದಕ್ಕಾಗಿ ಸಂಸ್ಥಾನಾಧಿಪತಿಗಳು ಇಂಡಿಯಾ ಮತ್ತು ಬ್ರಿಟಿಷ ಸರಕಾರವನ್ನು ಆಶ್ರಯಿಸುತ್ತಿರುವ ವರೆಗೂ ಅವರಿಗೆ ಪರತಂತ್ರದಿಂದ ಮುಕ್ತಿಯಿಲ್ಲ. ತಮ್ಮ ಸಂಸ್ಥಾನಗಳ ಪ್ರಜೆಗಳ ಪ್ರೀತಿ ವಿಶ್ವಾಸಗಳನ್ನೂ ಅಖಿಲ ಭರತಖಂಡದ ಪ್ರಜೆಗಳ ಪ್ರೀತಿ ಗೌರವಗಳನ್ನೂ ಸಂಸ್ಥಾನಾಧಿಪತಿಗಳು ಪಡೆಯಲು ಪ್ರಯತ್ನಿಸಿದ್ದಲ್ಲದೆ ಅವರಿಗೆ ಗತಿ ಮೋಕ್ಷವಿಲ್ಲ.

ಸಂಸ್ಥಾನಿಕರು ತಿಳಿದಾಗಲಿ, ತಿಳಿಯದೆಯಾಗಲಿ ಸ್ವಾರ್ಥದಿಂದಾಗಲಿ, ರಾಜನೀತಿಯಿಂದಲಾಗಲಿ ಬ್ರಿಟಿಷರ ಬೆನ್ನುಹತ್ತಿ ಅವರ ಛಾಯೋಪಜೀವಿಗಳಾಗಿರುವವರೆಗೆ ಸಂಸ್ಥಾನಿಕರಿಗೂ ಸ್ವಾತಂತ್ರ್ಯವಿಲ್ಲ, ಭಾರತೀಯರಿಗೂ ಸ್ವಾತಂತ್ರ್ಯವಿಲ್ಲ. ಹಿಂದುಸ್ಥಾನವು ೧,೭೦, ೭೩, ೧೪೦ ಚದರ ಮೈಲುಗಳ ವಿಸ್ತಾರವಾದುದು. ಅದರಲ್ಲಿ ೭, ೦೯, ೫೫೫ ಚದರ ಮೈಲಿಗಳ ಪ್ರದೇಶವು ದೇಶೀಯ ಸಂಸ್ಥಾನಗಳಿಗೆ ಸೇರಿದೆ. ಭರತ ಖಂಡದ ಸುಮಾರು ೩೨ ಕೋಟಿ ಪ್ರಜೆಗಳಲ್ಲಿ ೭ ಕೋಟಿ ಪ್ರಜೆಗಳು ಸಂಸ್ಥಾನಗಳಲ್ಲಿರುವರು. ಭಾರತೀಯರ ಸ್ವಾತಂತ್ರ್ಯೋದ್ಯಮಕ್ಕೆ ದೇಶೀಯ ಸಂಸ್ಥಾನಿಕರನ್ನೇ ಅಡ್ಡನಾಗಿಟ್ಟು, ಅವರ ಮೂಲಕ ಭಾರತೀಯರ ಪಾರತಂತ್ರ್ಯವನ್ನು ಚಿರಕಾಲ ನೆಲೆಗೊಳಿಸುವದೇ ಬ್ರಿಟೀಷರು ಹಿಂದೂಸ್ಥಾನದಲ್ಲಿ ಅನುಸರಿಸುತ್ತಿರುವ ರಾಜನೀತಿಯ ಗುಟ್ಟಾಗಿದೆ.

ಲೋಕಮತ ಪ್ರಧಾನವಾದ ಈ ಕಾಲದಲ್ಲಿ ನಿರಂಕುಶ ಪ್ರವರ್ತನೆಯು ಇಂದಲ್ಲ ನಾಳೆ ನಾಶವಾಗಲೇ ಬೇಕು. ಜಗತ್ತಿನೆಲ್ಲೆಲ್ಲ ಜ್ಞಾನಭಾಸ್ಕರನ ಉದಯವಾಗಿದೆ. ಜನರೆಲ್ಲರಿಗೂ ಸ್ವಾತಂತ್ರ್ಯೇಚ್ಛೆಯು ಪ್ರಬಲವಾಗುತ್ತಿದೆ. ಈ ಇಚ್ಛಾ ಫಲವನ್ನು ಪಾಶ್ಚಾತ್ಯ ದೇಶಗಳಲ್ಲಿ (ರಶಿಯಾ, ಜರ್ಮನಿ, ತುರ್ಕಸ್ಥಾನ, ಗ್ರೀಸು) ಕಾಣಬರುತ್ತಿರುವ ನಿರಂಕುಶ ಪ್ರಭುತ್ವ ವಿಧ್ವಂಸನ ಪ್ರಕರಣಗಳಿಂದ ಸ್ಪಷ್ಟವಾಗುತ್ತಿದೆ. ಹಿಂದೂಸ್ಥಾನದಲ್ಲೂ ಜ್ಞಾನಭಾಸ್ಕರನು ಮೂಡಿದನು. ಸ್ವಾತಂತ್ರ್ಯ ನಾಯಿಕ ದೇವಿಯ ಆರಾಧನೆಯು ಪ್ರಾರಂಭವಾಗಿದೆ ಹಿಂದೂಸ್ಥಾನದ ಭವಿಷ್ಯತ್ತನ್ನು ಒಳಗಣ್ಣಿನಿಂದ ತಿಳಿದು ನೋಡಿ, ಲೋಕಮತಕ್ಕೆ ಮಾನ್ಯಕೊಟ್ಟು ಸಂಸ್ಥಾ

× ೧-೩ ಲೇಖಾಂಕಗಳು ೧೨ ನೆಯ ಸಂಚಿಕೆಯ ೪ ನೇ ಪುಟದಲ್ಲಿ ಪ್ರಕಟವಾಗಿವೆ "ಸಂಪಾದಕ ಕನ್ನಡಿಗ"

ನಿಕರೆಲ್ಲರೂ ಆ ಸ್ವಾತಂತ್ರ್ಯದೇವಿಯ ಆರಾಧನೆಯಲ್ಲಿ ನಿರತರಾದರೆ ಉಭಯತ್ರರ ಸ್ಥಾನ ಮಾನಗಳೂ ಉಳಿಯುವದರಲ್ಲಿ ಸಂದೇಹವಿಲ್ಲ. ಈ ಸಂದರ್ಭದಲ್ಲಿ ಅಲ್ವಾರ ಮಹಾರಾಜರು ೧೯೨೯ ನೆಯ ಮಾರ್ಚ ೨೯ ನೆಯ ದಿನ (ವೈಸರಾಯರು ಅಲ್ವಾರಕ್ಕೆ ಹೋಗಿದ್ದಾಗ್ಗೆ) ಮಾಡಿದ ಭಾಷಣದ ಒಂದು ಭಾಗವನ್ನು ಇಲ್ಲಿ ಎತ್ತಿ ಬರೆಯುತ್ತೇನೆ.

" My goal is the United States of India where every **Province,** and every **State,** working its own destiny in accordance with its own environment, its own tradition, history and religion, will combine together higher and imperial purposes, each subscribing its little quota of knowledge & experience in a labour of love freely given for a higher and nobler cause. "

" ಸಂಯುಕ್ತ ಭರತಖಂಡವೇ ನನ್ನ ಧ್ಯೇಯ. ಅದಕ್ಕಾಗಿ ಪ್ರತಿಯೊಂದು ಪ್ರಾಂತ್ಯವೂ ಪ್ರತಿಯೊಂದು ಸಂಸ್ಥಾನವೂ ಒಟ್ಟುಗೂಡಿ ತನ್ನ ಪರಿಸ್ಥಿತಿ, ಐತಿಹ್ಯ, ಇತಿಹಾಸ, ಮತ್ತು ಧರ್ಮವನ್ನು ಅನುಸರಿಸಿ ತನ್ನ ಬಂಧವಿಮೋಚನೆಯನ್ನು ತಾನು ಮಾಡಿಕೊಂಡು; ಶ್ರೇಷ್ಠ ಉದಯಕ್ಕಾಗಿ ಸಾಮ್ರಾಜ್ಯಕ್ಕಾಗಿ, ಪ್ರತಿ ಪ್ರಾಂತ್ಯವೂ, ಪ್ರತಿ ಸಂಸ್ಥಾನವೂ ಮನಃಪೂರ್ವಕವಾಗಿ ಮಹತ್ವದ ಕಾರ್ಯಕ್ಕಾಗಿ, ಗಾಢವಾದ ಪ್ರೀತಿಗಾಗಿ ತನ್ನ ಜ್ಞಾನವನ್ನೂ ಅನುಭವವನ್ನೂ ಸಮರ್ಪಿಸಲು ಸಿದ್ಧರಾಗಬೇಕು.

ಈ ಸದಾಶಯವೇ ಭರತಖಂಡದ ಸಂಸ್ಥಾನಾಧಿಪತಿಗಳೆಲ್ಲರಲ್ಲೂ ಹುಟ್ಟಿದೆಯೆಂದು ಭಾವಿಸೋಣ. "

— ಚಾಲುಕ್ಯ —

ಜಗತ್ತಿನ ತಂದೆ

(೨) * *

(ಲೇ:— ಮಹಾತ್ಮಾ ಗಾಂಧಿ)

ಹಿಂದಿನ ಸಂಚಿಕೆಯಲ್ಲಿ ನಾವು ಒಕ್ಕಲಿಗರ ಸ್ಥಿತಿಯ ಬಗ್ಗೆ ಸ್ವಲ್ಪ ವಿಚಾರಮಾಡಿದೆವು. ಇನ್ನು ಈ ಸ್ಥಿತಿಯು ಹೇಗೆ ಸುಧಾರಿಸಬಲ್ಲದೆಂಬುದನ್ನೇ ಆಲೋಚಿಸುವಾ.

ಲಖನೌದ ರಾಷ್ಟ್ರೀಯ ಮಹಾಸಭೆಯ ಕಾಲಕ್ಕೆ ಪ್ರಸಿದ್ಧಿಗೆ ಬಂದ ಮಿ. ಲಾಯೋನಲ್ ಕರ್ಟಸ್ ಎಂಬವರು ಒಂದೆಡೆಗೆ ಹಿಂದುಸ್ಥಾನದ ಹಳ್ಳಿಗಳ ನಿಜವಾದ ಚಿತ್ರವನ್ನೊಂದು ಕೊಟ್ಟಿರುವರು. " ಹಿಂದುಸ್ಥಾನದ ಹಳ್ಳಿಗಳು ತಿಪ್ಪೆಗಳ ಮೇಲೆ ಕಟ್ಟಲ್ಪಟ್ಟಿರುತ್ತವೆಯೋ ಏನೋ ಎಂಬುವಂತೆ ಕಾಣುತ್ತವೆ. ಮನೆಗಳು ಬೀಳಾಗಿರುತ್ತವೆ. ಜನರು ಬಲಹೀನರಾಗಿರುತ್ತಾರೆ. ದೇವಾಲಯಗಳು ಜೀರ್ಣದಲ್ಲಿರುತ್ತವೆ, ಸ್ವಚ್ಛತೆಯು ಇರತಕ್ಕದ್ದಿಲ್ಲ, ಬೀದಿಗಳಲ್ಲಿ ಅಳತೆಯಿಲ್ಲದ ಧೂಳಿಯಿರುತ್ತದೆ. ಹಳ್ಳಿಗಳ ಸುವ್ಯವಸ್ಥೆಯ ಬಗ್ಗೆ ಯಾರೂ ಜವಾಬದಾರರಿಲ್ಲವೋ ಏನೋ ಎಂಬುವಂತೆ ಸರ್ವಸಾಧಾರಣ ಸ್ಥಿತಿಯಾಗಿರುತ್ತದೆ. "

ಈ ವರ್ಣನೆಯಲ್ಲಿ ಅತಿಶಯೋಕ್ತಿಯು ಇರುವದಿಲ್ಲ. ಇನ್ನೂ ಹೆಚ್ಚಿಗೇನೇ ಕೂಡಿಸಲು ಬರುವಂತಿದೆ. ಸುವ್ಯವಸ್ಥಿತವಾದ ಹಳ್ಳಿಗಳ ರಚನೆಯಲ್ಲಿ ಕೆಲವೊಂದು ನಿಯಮವಿರತಕ್ಕದ್ದು. ಹಳ್ಳಿಗಳ ಓಣಿಗಳು ಅಡ್ಡಾತಿಡ್ಡಾಗಿರದೆ ಕೆಲವೊಂದು ಯೋಗ್ಯವಾದ ಆಕಾರದಲ್ಲಿರಬೇಕು. ಮತ್ತು ಯಾವ ಹಿಂದುಸ್ಥಾನದಲ್ಲಿ ಕೋಟ್ಯವಧಿ ಜನರು ಬರಗಾಲದಿಂದ ನಡೆದಾಡುತ್ತಾರೋ ಅಂಥಲ್ಲಿಯ ಗ್ರಾಮಗಳಲ್ಲಿ ರಸ್ತೆಗಳು ಅತ್ಯಂತ ಸ್ವಚ್ಛವಾಗಿರುವದತ್ಯವಶ್ಯವು, ರಸ್ತೆಗಳ ಮೇಲೆ ಅಡ್ಡಾಡಲೂ ಮತ್ತು ಮಲಗಲೂ ಕೂಡ ಹೇಸಿಕೆಯು ಬರದಂತೆ ಅವು ಸ್ವಚ್ಛವಾಗಿರತಕ್ಕದ್ದು. ರಸ್ತೆಗಳು ಗಟ್ಟಿಯಾಗಿ (ಪಕ್ಕಾ) ಇದ್ದು ಎಡಬಲಗಳಲ್ಲಿಯೂ ನೀರು ಹರಿದು ಹೋಗಲು ಒಳ್ಳೇದಾದ ಕಾಲುವೆಗಳು ಇರಬೇಕು. ದೇವಾಲಯಗಳೂ ಮಸೀದೆಗಳೂ ಪಡಸಾಗಿದ್ದು ನೋಡಿದಾಗೆಲ್ಲ ಅವು ಹೊಸವಿವೆಂಬಂತೆ ಕಾಣಬೇಕು. ಮತ್ತು ಅವುಗಳಲ್ಲಿ ಪ್ರವೇಶಿಸುವ ಜನರಿಗೆ ಶಾಂತಿಯು ದೊರೆತು ಅವರ ಮನಸ್ಸು ಪವಿತ್ರವೂ ಪ್ರಸನ್ನವೂ ಆಗುವಂತಿರಬೇಕು. ಊರಲ್ಲಿ ಮತ್ತು ಊರಸುತ್ತುಮುತ್ತು ಉಪಯುಕ್ತ ಗಿಡಗಳೂ ಫಲವೃಕ್ಷಗಳೂ ಇರಬೇಕು. ಊರಿಗೆ ಹೊಂದಿ ಧರ್ಮಶಾಲೆಯೂ, ವಿದ್ಯಾಲಯಗಳೂ, ರೋಗಿಯವರ ಶುಶ್ರೂಷೆಗಾಗಿ ಚಿಕ್ಕ ಔಷಧಾಲಯಗಳೂ ಇರಬೇಕು. ಶೌಚ ಮೊದಲಾದ ನಿತ್ಯದ ನೈಸರ್ಗಿಕ ಕಾರ್ಯಗಳಿಗೋಸ್ಕರ, ಹವೆ, ನೀರು ಕೆಡದಂತೆಯೂ ಬೀದಿಗಳು ಚೊಕ್ಕಟವಾಗಿ ಉಳಿಯುವಂತೆಯೂ, ಉತ್ತಮ ತರದ ವ್ಯವಸ್ಥೆ ಇರಬೇಕು. ಪ್ರತಿಯೊಂದು ಊರಿನ ಜನರಲ್ಲಿ ತಮ್ಮ ತಮ್ಮ ಅನ್ನವಸ್ತ್ರಗಳನ್ನು ಹುಟ್ಟಿಸುವ ಸಾಮರ್ಥ್ಯವು ಇರಬೇಕು. ಮತ್ತು ಕಳ್ಳರಿಂದಲೂ, ಹುಲಿ ಮೊದಲಾದ ಕ್ರೂರ ಮೃಗಗಳಿಂದಲೂ, ಆತ್ಮರಕ್ಷಣೆಯನ್ನು ಮಾಡಿಕೊಳ್ಳಲು ಬಲವಿರಬೇಕು. ಒಂದು ಕಾಲದಲ್ಲಿ ಹಿಂದುಸ್ಥಾನದ ಹಳ್ಳಿಗಳಲ್ಲಿ ಈ ಬಗೆಯ ಅನೇಕ ಸೌಕರ್ಯಗಳಿದ್ದವು. ಇನ್ನು ಒಂದೊಂದು ಸೌಕರ್ಯವಿರದಿದ್ದರೆ ಅವುಗಳ ಅವಶ್ಯಕತೆಯೇ ಅಷ್ಟು ಬಲವತ್ತರವಾಗಿ ಇರಲಿಕ್ಕಿಲ್ಲ. ಹೀಗೆ ಅವಶ್ಯಕತೆಯು ಇರಲಿ, ಅಥವಾ ಇರದಿರಲಿ, ನಾನು ಮೇಲೆ ವರ್ಣಿಸಿದಂಥ ಹಳ್ಳಿಯ ವ್ಯವಸ್ಥೆಯು ಇರಬೇಕೆಂಬ ಮಾತಿನ ಬಗ್ಗೆ ಯಾರೂ ಸಂಶಯವನ್ನು ತಳೆಯಲಾರರು. ಇಂಥ ಹಳ್ಳಿಗಳೇ ಸ್ವಾವಲಂಬಿಗಳಾಗಿರುವವೆಂದು ಹೇಳಬಹುದು. ಮತ್ತು ಎಲ್ಲ ಹಳ್ಳಿಗಳು ಹೀಗಾದರೆ ಹಿಂದುಸ್ಥಾನವನ್ನು ಪೀಡಿಸುವ ಎರಡನೇ ಉಪಾಧಿಗಳ ಸಂಖ್ಯೆಗಳು ತೀರ ಕಡಿಮೆಯಾಗುವವು.

ಇಂಥ ಸ್ಥಿತಿಯನ್ನುಂಟು ಮಾಡುವದು ಅಶಕ್ಯವಂತೂ ಇರುವದಿಲ್ಲ, ಆದರೆ ನಮಗನಿಸುವಷ್ಟು ಕಠಿಣವೂ ಇರುವದಿಲ್ಲ. ಹಿಂದುಸ್ಥಾನದಲ್ಲಿ ಏಳೂವರೆ ಲಕ್ಷ ಹಳ್ಳಿಗಳಿವೆಂದು ಹೇಳುತ್ತಾರೆ. ಸರಾಸರಿ ಒಂದು ಹಳ್ಳಿಯ ಜನಸಂಖ್ಯೆಯು ೪೦೦ ಆಗುವದು. ಅನೇಕ ಹಳ್ಳಿಗಳಲ್ಲಿ ೧೦೦ ರ ಕಿಂತಲೂ ಕಡಿಮೆಯಾದ ಜನವಸ್ತಿಯಿರುವದು. ಇಂಥ ಚಿಕ್ಕ ವಸ್ತಿಯ ಹಳ್ಳಿಗಳಲ್ಲಿ ಒಳ್ಳೇ ವ್ಯವಸ್ಥೆಯನ್ನಿಡುವದು ಬಹು ಸುಲಭವೆಂದು ನನ್ನ ಮತವಿದೆ. ಅದಕ್ಕೋಸ್ಕರ ಉದ್ದುದ್ದ ಭಾಷಣಗಳ ಇಲ್ಲವೆ ಕಾಯ್ದೆ ಕೌನ್ಸಿಲುಗಳ ಅಥವಾ ಕಾಯ್ದೆಗಳ ಅವಶ್ಯಕತೆಯಿರುವದಿಲ್ಲ. ಆದರೆ ಒಂದೇ ಒಂದು ಮಾತಿನ ಆವಶ್ಯಕತೆಯಿರುವದು. ಅದಾವದೆಂದರೆ ಶುದ್ಧ ಭಾವದಿಂದ ಲೋಕಸೇವೆಯನ್ನು ಮಾಡುವ ನಾಲ್ಕಾರು ಜನ ಸ್ತ್ರೀಪುರುಷರದು. ಅವರು ತಮ್ಮ ಆಚಾರಣದಿಂದಲೂ ಸೇವಾಭಾವದಿಂದಲೂ ಪ್ರತಿಯೊಂದು ಹಳ್ಳಿಯಲ್ಲಿ ಬೇಕಾದ ಸುಧಾರಣೆಯನ್ನು ಮಾಡಬಲ್ಲರು. ಅವರು ಪಗಾರವುಳ್ಳವರು ಇದ್ದರೆ, ಕೆಲಸದಲ್ಲಿ ನಿರತರಾಗಿರಬೇಕೆಂಬುದರ ಶಕ್ಯವೂ ಇಲ್ಲ. ಅವರು ತಮ್ಮ ಜಾತಿಧಂದೆಯ ಕೆಲಸವನ್ನು ಮಾಡುತ್ತಲೂ, ತಮ್ಮ ಹಳ್ಳಿಯಲ್ಲಿ ಮಹತ್ವದ ಸುಧಾರಣೆಯನ್ನುಂಟು ಮಾಡಬಲ್ಲರು.

ಆ ಸೇವಕರಿಗೆ ವಿಶಿಷ್ಟ ಶಿಕ್ಷಣದ ಅವಶ್ಯಕತೆಯೇನೂ ಇರುವದಿಲ್ಲ. ಸ್ವಚ್ಛತೆಯ ಅಕ್ಷರಜ್ಞಾನ ವಿಲ್ಲವಿದ್ದರೂ ಕೂಡ ಹಳ್ಳಿಗಳ ಸುಧಾರಣೆಯ ಕೆಲಸವು ನಡೆಯಬಲ್ಲದು. ಇದರಲ್ಲಿ ಸರಕಾರದವರಾಗಲಿ ದೇಶಿ ಸಂಸ್ಥಾನಗಳವರಾಗಲಿ ... ಅವರ

* * ೧ ನೇ ಲೇಖಾಂಕವು ೭ ನೇ ಸಂಚಿಕೆಯಲ್ಲಿ ಪ್ರಕಟವಾಗಿದೆ.

ಸಹಾಯವಾದರೂ ಕ್ವಚಿತ್ತಾಗಿಯೇ ಬೇಕಾಗುವದು. ಪ್ರತಿಯೊಂದು ಹಳ್ಳಿಯಲ್ಲಿ ಈ ಪ್ರಕಾರ ಸ್ವಯಂಸೇವಕರು ಮುಂದುವರಿದು ಬಂದರೆ ಸ್ವಲ್ಪಾದರೂ ಆಡಂಬರವಿಲ್ಲದೆ ವಿಶೇಷ ಚಳವಳಿಯಿಲ್ಲದೆ ಸಮಸ್ತ ಹಿಂದುಸ್ಥಾನದ ಕಾರ್ಯವು ಆಗಬಲ್ಲದು, ಮತ್ತು ಅತ್ಯಲ್ಪ ಪ್ರಯತ್ನದಿಂದ ಕಲ್ಪನಾತೀತವಾದ ಪರಿಣಾಮವು ಉಂಟಾಗಬಲ್ಲದು. ಇದಕ್ಕೆ ದ್ರವ್ಯದ ಅವಶ್ಯಕತೆಯೂ ಅಷ್ಟೊಂದಿರುವದಿಲ್ಲೆಂಬುದನ್ನು ವಾಚಕರು ಸಹಜವಾಗಿ ತಿಳಿಯಬಲ್ಲರು. ಸದಾಚಾರದ ಅಂದರೆ ಧರ್ಮವೃತ್ತಿಯ ಅವಶ್ಯಕತೆಯುಮಾತ್ರ ಇರುವದು.

ಇದು ಒಕ್ಕಲಿಗರ ಉನ್ನತಿಯ ಅತಿ ಸುಲಭವಾದ ಮಾರ್ಗವೆಂದು ನಾನು ಸ್ವಾನುಭವದಿಂದ ಕಂಡವನಾತು. ಈ ಬಗೆಯಾಗಿ ಪ್ರಯತ್ನಮಾಡಲು ಯಾವದೊಂದು ಹಳ್ಳಿಯವರಿಗೆ ಬೇರೊಂದು ಹಳ್ಳಿಯವರ ಹಾದಿನೋಡಲು ಕಾರಣವಿಲ್ಲ. ಯಾವದೊಂದಾದರೂ ಹಳ್ಳಿಯಲ್ಲಿ ಲೋಕಸೇವೆಯನ್ನು ಮಾಡಬೇಕೆಂಬ ಪವಿತ್ರವಿಚಾರವುಳ್ಳ ಸ್ವಯಂಸೇವಕನಿದ್ದನಾದರೆ ಅವನು ಜೊತೆಗನಾಗಿಯೇ ಈ ಕ್ಷಣವೇ ಈ ಕಾರ್ಯವನ್ನು ಪ್ರಾರಂಭಿಸಬಹುದು. ಇದರಿಂದ ಅವರು ಇಡೀ ಹಿಂದುಸ್ಥಾನದ ಸಂಪೂರ್ಣ ಸೇವೆಯನ್ನು ಮಾಡಿದಂತಾಗುವದು. ಹಳ್ಳಿಗಳಲ್ಲಿ ವಾಸಿಸುವ ಜನರಲ್ಲಿ ಯಾರ ಕೈಯಲ್ಲಾದರೂ "ನವಜೀವನದ" ಈ ಸಂಚಿಕೆಯು ಬಂದರೆ ನಾನು ಸೂಚಿಸಿದ ಪ್ರಯೋಗವನ್ನು ಅವರು ಆರಂಭಿಸುವರೆಂದೂ ಅಲ್ಪಸಮಯದಲ್ಲಿಯೇ ತಮ್ಮ ಪ್ರಯೋಗದ ಸುಪರಿಣಾಮವನ್ನು ದೇಶಕ್ಕೆಲ್ಲ ತೋರಿಸುವರೆಂದೂ ನಾನು ಆಶಿಸುತ್ತೇನೆ. ಈ ಪ್ರಯೋಗವನ್ನು ಪ್ರಾರಂಭಿಸುವದೆಂತೆಂಬ ಬಗ್ಗೆ ನಾನು ನನ್ನ ಕೆಲವು ಅನುಭವಗಳನ್ನು ಇನ್ನು ಮುಂದಿನ ಸಂಚಿಕೆಯಲ್ಲಿ ವಾಚಕರ ಮುಂದಿಡುವೆನು. ಆದರೆ ಯಾರಿಗಾದರೂ ಈ ಮಾತಿನ ಮಹತ್ವವು ತಿಳಿದು ಬಂದಿದ್ದರೆ ಆ ಸೇವಕರು ಮುಂದಿನ ವಾರದ ವರೆಗೆ ಹಾದಿಯನ್ನು ನೋಡದೆ ತಮ್ಮ ಕಾರ್ಯವನ್ನು ಪ್ರಾರಂಭಿಸುವರೆಂದು ನಾನು ಆಶಿಸುತ್ತೇನೆ.

ನವಜೀವನ

(ಮುಂದೆ ಸಾಗುವದು.)

ರಂಗಾಣಿಯೂ ಬೇಕು ಬಾರುಕೋಲೂ ಬೇಕು.

ನಾನೊಬ್ಬ ಇದೇ ಕನ್ನಡ ನುಡಿಯನ್ನರಿತ ಚಿಕ್ಕ ಹುಡುಗನು. ಹೊಸದೊಂದರ ನನಗೆ ಬೇಕು. ಬಾಲ್ಯಕ್ಕೆ ಸಹಜವಾದ ಮಾತಿದು. ಹೀಗಿರಲು 'ಕನ್ನಡಿಗನ' ಒಂದು ಪ್ರತಿಯು ಕೈಸೇರಿತು. ವೃತ್ತಪತ್ರಗಳ ಮೇಲೆ ಮೊದಲಿನಿಂದಲೇ ನನ್ನ ಜೀವ- ಅವುಗಳ ಸಲಹೆಯಿಂದಲೆ ನಾನು ಹುಟ್ಟಿ ಬೆಳೆದವನು. ಆದರಲ್ಲಿ 'ಕನ್ನಡಿಗ' ನೆಂದರೆ ಹೊಸಹುರಿಯ ಪತ್ರಿಕೆ ಬಿತ್ತು. ಬೇರೆ ನಾನು ಚಿಂತಿಸಬೇಕಿಲ್ಲ. ಹೆಸರನ್ನು ಓದಿದೆನು. 'ಕನ್ನಡಿ' ಯನ್ನಷ್ಟೆ ಓದುವದಾಯಿತು- ನಾನು ಬಗೆದೆನು 'ಕನ್ನಡಿ'! ಎಲಾ! ಕನ್ನಡವು ಕನ್ನಡಿಯಲ್ಲವೆ? ಈ ಕನ್ನಡಿಯಲ್ಲಿಯೇ ನಾನು ನನ್ನ ಕನ್ನಾಡಿನ ಸೌಭಾಗ್ಯಲೀಲೆಯನ್ನು ಕಂಡುಕೊಳ್ಳಬೇಕಲ್ಲವೇ?" ಹೀಗೆಂದು ನಾನು 'ಗ' ಕಾರವನ್ನು ಗಮನಿಸಲೇ ಇಲ್ಲ. ಬೇಡಿ ಬೇಡಿ ತರಿಸಿದೆನು. ಇನ್ನು ಮುಂದಾದರೂ ನನ್ನ ಕರಳು-ಸಣ್ಣ-ಕಣ್ಣುಗಳಿಗೆ 'ಕನ್ನಡಿ' ಯೊಂದೆ ಸಾಕು. 'ಗ' ವು ಬರಲೇ ಬೇಕ ಆಗ ಈ ಮಾಟ-ನನ್ನ [illegible] ಎಲ್ಲ ಗೆಳೆಯರ ಕೈಯಲ್ಲಿ ತಿರುಗಾಡಿತು. ಆವರ [illegible] ಕನ್ನಡಿಯಲ್ಲಿ [illegible] ತಮ್ಮ ತದ್ರೂಪವನ್ನು ಕಂಡವರಾಗುವರು. ಅವರಿಗೆ 'ಗ' ದ ಅಧಿಕಾರವು ಸಿಗದು.

ಸ್ವಲ್ಪ ಕೆಳಗೆ ಕಣ್ಣು ತಿರುವಿದೆನು. ನಗರ ಕವಿಯ ಕವಿತಾಕಾಮಿನಿಯು. ಅವಳಂತೆ ನಾನು ಕುಣಿದೆನು. 'ಕನ್ನಡ' ದ ಹೊರತು ಕವಿಯ ಆಹಾರ ವಿಹಾರವೇ ಇಲ್ಲ. 'ಕನ್ನಡಿಗ' ನಾದರೂ ಹೀಗೆಯೇ 'ಕನ್ನಡ' 'ಕನ್ನಡ' ಎಂದು ಕನಿಕರಿಸುವನೆಂದು ತಿಳಕೊಂಡೆನು. ನಿಜವಾಯಿತು. ನೋಡಿದಲ್ಲಿ 'ಕನ್ನಡ' ವೆ. ಚೂಡಾಮಣಿಯಾದ ಚಿತ್ರದಲ್ಲಿ ಕೂಡ 'ಒಕ್ಕಲಿಗ' ನ ಬಸವಣ್ಣ ಗೆಳೆಯನು. ಕರ್ನಾಟಕದ ಏಕೀಕರಣ, ಕನ್ನಡ ಸಾಹಿತ್ಯ ಪರಿಷತ್ತು- ಹೀಗೆ ಕನ್ನಡದ ಸೊಲ್ಲೆ. ಆನಂದವೇನೋ ಆಯಿತು. ಆದರೆ ಹೇಳಲೋ, ಬೇಡೋ, 'ಬಾರುಕೋಲು' ಬಂದಿತು. ಹೌಹಾರಿ ಬಿಟ್ಟೆನು. ನಮ್ಮಂಥ ಚಿಕ್ಕವರಿಗೆ ಹೊಡತದ ಅಂಜಿಕೆಯು ಬಹಳ. ಓದು ಹೇಳುವಾಗ ನಾವು ಸ್ವಲ್ಪ ತಪ್ಪಿದರೆ ಗುರುಗಳ ಗುರುದಂಡವು-ಕೋಲು- ಮೈಮೇಲೆ ಬಂತು. ಅಂತೂ ನಾನು ಕನ್ನಡಿಗನ ಕೈ ಬಿಟ್ಟೆನು. ಮತ್ತೋ ಒಲ್ಲೆಂದೆನು 'ಕನ್ನಡಿಗ' ನು ಬೇಡಾದರೆ, ದಯಮಾಡಿ ತಿರುಗಿ ಕಳಿಸಬೇಕೆಂದು ಬರೆದಿತ್ತು. ಇದರರ್ಥವು ಆಗ ನನಗೆ ಒಡೆ ಮಕ್ಕಳಾಯಿತು. ಆದರೂ ಓದಿದ ತಪ್ಪಿಗೆ ಹೊಡತಗಳು ತಪ್ಪವೆಂದು ನನ್ನ ತಿಳುವಳಿಕೆ. ಹುಡುಗ ಬುದ್ಧಿ. ಎನ್ನು ಹೋಗಿ ರಂಗಾಣಿಗೆ ಸಣ್ಣ ದಾರವನ್ನು ಕಟ್ಟಿ ನನ್ನದೊಂದು ಪುಟ್ಟಬಾರುಕೋಲನ್ನು ಮುಯ್ಯಿಕ್ಕೆ ಮುಯ್ಯಾಗಲೆಂದು ಸಜ್ಜುಗೊಳಿಸಿದೆನು. ಅಷ್ಟರಲ್ಲಿ ಒಕ್ಕಲಿಗನು- ಜಗತ್ತಿನ ತಾತಯ್ಯನವನು ಕೂಗುತ್ತ ಬಂದನು. ಹುಚ್ಚಪ್ಪ 'ಕನ್ನಡಿಗನ' ಬಾರುಕೋಲಿಗೆ ಇದುರಾಗಿ ಯುದ್ಧಬೇಡ. ಆ ಬಾರುಕೋಲಿನೊಂದಿಗೆ ನಿನ್ನ ರಂಗಾಣಿ ದಾರವನ್ನು ಕೂಡ ಜತೆಮಾಡು. ಆ ಹಿರಿ-ಗೋಲು ಕೈಎತ್ತಿದಲ್ಲಿ ಹೋಗಿ ನೀನು ಕೈ ತೋರಿಸು." ನನ್ನ ಕಣ್ಣುಗಳು ತೆರೆದವು. ನಾನಂದೆನು. "ಈಗ ತಿಳಿಯಿತು. ಇವರ ಬಾರುಕೋಲೆಂದರೆ ಮಾತಿನ ಹೊಡೆತವು. ಇದರಿಂದ ಕನ್ನಡಿಗರಾಗುವ ಶಕ್ತಿ ಬರುವಂತೆ ನಮ್ಮ ನ್ಯೂನತೆ ಬಿಡಿಸುವರು. ನಾನೂ ಇದೇ ಕೆಲಸಕ್ಕೆ ಹತ್ತುವೆನು." ಎಂದವನೆ ಬೇರೊಂದು ಕಾಣದ ರಂಗಾಣಿಯನ್ನು ಮಾಡಿರುವೆನು. ಏನಾಗುವದು ನೋಡೋಣವಂತೆ.

ತಮ್ಮ
ರಂಗಾಣಿ ರಂಗ

ತಪ್ಪು ತಿದ್ದುವಿಕೆ.

ಕನ್ನಡಿಗನ ೧೧ ನೇ ಸಂಚಿಕೆಯಲ್ಲಿ "ದೇಶೀ ರಾಜ್ಯಗಳು" ಎಂಬ ಲೇಖದಲ್ಲಿ ಭಯಂಕರವಾದ ಮುದ್ರಾ ದೋಷವು ಉಂಟಾಗಿದೆ. ಅದರಿಂದ ವಿಪರೀತಾರ್ಥವು ಫಲಿಸುತ್ತದೆ. ದಯವಿಟ್ಟು ೧೧ ನೇ ಸಂಚಿಕೆಯಲ್ಲಿ ವಾಚಕರು ಅದನ್ನು ಸರಿಪಡಿಸಿಕೊಳ್ಳಬೇಕು. ಆ ಲೇಖದ ಕಡೆ ಕಡೆಯ ಭಾಗದಲ್ಲಿ "ದೇಶೀ ರಾಜ್ಯಗಳಲ್ಲಿ ಸಂಗ್ರಹಿಸಲು ಯೋಗ್ಯವಾದದ್ದೇನೂ ಇರುವದಿಲ್ಲ, ಮತ್ತು ಇವುಗಳ ನಾಶವೇ ಇಷ್ಟವಾಗಿರುವದು. ಎಂಬೀ ವಿಚಾರವು ಯೋಗ್ಯವಾದದ್ದೆಂದು ಹೇಳುವದೇ ನನ್ನ ಲೇಖದ ಉದ್ದೇಶವು" ಎಂದು ಮುದ್ರಿತವಾಗಿರುವದು. "ಯೋಗ್ಯವಾದದ್ದೆಂದು" ಎಂಬುವದರ ಬದಲು "ಯೋಗ್ಯವಾದದ್ದಲ್ಲೆಂದು" ಇರಬೇಕು.

ಸಂಪಾದಕ "ಕನ್ನಡಿಗ"

ವರ್ತಮಾನಸಾರ

ಇಹವೃತ್ತ

ಬೇಲೂರ ಕೇಶವದಾಸರು ತಮ್ಮ ಸುಶ್ರಾವ್ಯವಾದ ಕೀರ್ತನೆಗಳನ್ನು ಮಾಡಿ ವಿಜಾಪೂರಕ್ಕೆ ಹೋದರು.

ಬಸವೇಶ್ವರ ಮತ್ತು ಮ್ಯುನಸಿಪಾಲಿಟಿ ಸ್ಕೂಲಿನವರು ಕೂಡಿ ಒಂದು ಪ್ರತ್ಯೇಕವಾದ ಮಂಡಲವನ್ನು ಸ್ಥಾಪಿಸಿ ಅದರ ವಶಕ್ಕೆ ೬-೭ ಈ ಯಂತ್ರಗಳನ್ನು ಕೊಡಬೇಕೆಂದು ವಿದ್ಯಾ ಖಾತೆಯ ಇನಸ್ಪೇಕ್ಟರವರಿಂದ ಬರೆದು ಬಂದದೆ.

ಮುಂಬೈ ಇಲಾಖಾ ವ್ಯಾಕ್ಸಿನೇಟರ ಸಂಘವು ಸರಕಾರದವರಿಂದ ಮಾನ್ಯ ಮಾಡಲ್ಪಟ್ಟದೆಯೆಂದೂ, ಈ ಸಂಘದ ೫ ನೇ ಪರಿಷತ್ತು ಧಾರವಾಡದಲ್ಲಿಯಾಗಲೀ ಬೆಳಗಾಂವಿಯಲ್ಲಿಯಾಗಲೀ, ದಕ್ಷಿಣ ಭಾಗದ ಪತಿಯಿಂದ ಆಗಷ್ಟ ತಿಂಗಳಿನಲ್ಲಿ ನೆರೆಯುವದೆಂದೂ, ಇಲ್ಲಿಯ ವ್ಯಾಕ್ಸಿನೇಟರ ಶ್ರೀ ಕುಂದಗೋಳಕರ ಇವರು ತಿಳಿಸುತ್ತಾರೆ.

ಹೊಂಬಳಕರ ಕರ್ನಾಟಕ ಸಂಗೀತ ಮಂಡಳಿಯು ಇಲ್ಲಿಗೆ ಬಂದಿದ್ದು ಪ್ರಯೋಗಗಳು ನಡೆದಿವೆ. “ ಕರ ” ಪ್ರತ್ಯಯವೇಕೆ?

ಕರ್ನಾಟಕ.

ಮುಂಬಯಿ ಕರ್ನಾಟಕ

ಮೈಸೂರ ಕರ್ನಾಟಕದ ಸುಪ್ರಸಿದ್ಧ ಗುಬ್ಬೀ ನಾಟಕ ಮಂಡಳಿಯವರು ಹುಬ್ಬಳ್ಳಿಗೆ ಬಂದಿರುವರು. ಈ ವರೆಗೂ ಮೈಸೂರ ಕಂಪನಿಗಳು ಉತ್ತರ ಕರ್ನಾಟಕಕ್ಕೆ ಬರುತ್ತಿರಲಿಲ್ಲ. ಉತ್ತರ-ದಕ್ಷಿಣ ಕರ್ನಾಟಕದ ಸಂಬಂಧವು ಬಿಗ್ಗಾಗುತ್ತಿರುವ ಈ ಸಮಯದಲ್ಲಿ ಈ ಮಂಡಳಿಯವರು ಇತ್ತಕಡೆಗೆ ಬಂದುದು ಸಂತೋಷವು. ಆದರೆ “ ಗುಬ್ಬೀ

ಮೈಸೂರ ಕರ್ನಾಟಕ

ಮೈಸೂರಿನ ದಿವಾಣರಾದ ಶ್ರೀ. ಬ್ಯಾನರ್ಜಿಯವರು ಗ್ವಾಲೇರದ ದಿವಾಣರಾಗುವರೆಂಬದಾಗಿ ವದಂತಿಯಿದೆ. ಅವರಿಗೆ ಅಲ್ಲಿ ಹೆಚ್ಚು ಪಗಾರದ ಏರ್ಪಾಡಾಗಿರುವದು. ಮೈಸೂರಿನ ಕಾರ್ಯಕಾರೀ ಮಂಡಲದ ಹಿರಿಯ ಸಭಾಸದರಾದ ಶ್ರೀ. ಕೇ. ಆರ್. ಶ್ರೀನಿವಾಸ ಅಯ್ಯಂಗಾರರು ಮೈಸೂರಿನ ದಿವಾಣರಾಗಬಹುದು. ಕೋಚಿನದ ದಿವಾಣರಾದ ಶ್ರೀ. ವಿಜಯರಾಘವಾಚಾರ್ಯರು ಶ್ರೀನಿವಾಸ ಅಯ್ಯಂಗಾರರ ಸ್ಥಳಕ್ಕೆ ಬರುವರು. ಇವರು ಈಗ್ಗೆ ಬೆಂಗಳೂರಿನಲ್ಲಿದ್ದಾರೆ.

ಸಿದ್ಧಗಂಗಾ ಕ್ಷೇತ್ರದಲ್ಲಿ ನೆರೆದ ವೀರಶೈವ ತರುಣರ ಪರಿಷತ್ತಿನಲ್ಲಿ ಕರ್ನಾಟಕ ಏಕೀಕರಣದ ಬಗ್ಗೆ ಠರಾವು ಪಾಸಾಗಿದೆ.

ದಾಸ ಬಾಬೂರವರ ದುಃಖಪ್ರದರ್ಶಕ ಸಭೆಯು ಬೆಂಗಳೂರಿನಲ್ಲಿ ಗಾಂಧೀ ಮೈದಾನದಲ್ಲಿ ಶ್ರೀ. ಕರ್ಪೂರ ಶ್ರೀನಿವಾಸರಾಯರ ಅಧ್ಯಕ್ಷತೆಯ ಕೆಳಗೆ ನೆರವೇರಿತು.

ಕೊಡಗು ಕರ್ನಾಟಕ

ಕೊಡಗಿನ ಶ್ರೀ. ಪೊ. ನಡಿಕೇರಿಯಂಡ ಅಪ್ಪಯ್ಯನವರು ಎಮ್. ಆರ್. ಸಿ. ಪಿ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ್ದಾರೆ. ಇವರು ಇಂಗ್ಲಂಡದಿಂದ ಬೇಗನೇ ಕೊಡಗಿಗೆ ಬರುವರು.

ಮಡಿಕೇರಿಯ ಓಂಕಾರೇಶ್ವರ ದೇವಸ್ಥಾನದ ಕೆರೆಯಲ್ಲಿಯ ಮೀನುಗಳನ್ನು ಯಾರೂ ಗೆ ಹರಾಜಮಾಡಿದರಂತೆ! “ ಹಿಂದೂ ” ವಿಗೆ ವ್ಯಸನವಾದದ್ದು ಆಶ್ಚರ್ಯವಲ್ಲ.

ಕೊಡಗಿನಲ್ಲಿ ಮಳೆಯು ಈವರೆಗೆ ಸಮಾಧಾನಕರವಾಗಿಲ್ಲ.

ಹಿಂದುಸ್ಥಾನ

ದಾಸ ಬಾಬೂಗಳ ಬಗ್ಗೆ ನಿಜವಾದ ವ್ಯಸನವು ಸರಕಾರಕ್ಕಿದ್ದರೆ, ಅವರ ಸ್ಮರಣಾರ್ಥವಾಗಿ ರಾಜಕೀಯ ಕೈದಿಗಳನ್ನೆಲ್ಲ ಬಂಧಮುಕ್ತಮಾಡಬೇಕೆಂದು ಮಹಾತ್ಮರು ಸರಕಾರಕ್ಕೆ ಸೂಚಿಸಿದ್ದಾರೆ.

ನಿಮಗೆ “ ಕನ್ನಡಿಗ ” ನಭೆಟ್ಟಿಯು ಅನಾವಶ್ಯಕವಿದ್ದರೆ ಸಂಚಿಕೆಗಳನ್ನು ಸ್ವೀಕರಿಸದೆ ಅವನ್ನು ನಮಗೆ ಮರಳಿ ಕಳಿಸಬೇಕಾಗಿ ಬಿನ್ನಹ. ಕಾರ್ಡ ಬರೆದು ನಿಮ್ಮ ಆರ್ಥ ಆಣೆ ವೆಚ್ಚ ಮಾಡುವದೂ ಅವಶ್ಯವಿಲ್ಲ.

ಥಿಯಟ್ರಿಕಲ್ ಕಂಪನಿ ” ಎಂಬದಾಗಿ ಇವರು ಸಹ ಎಲ್ಲ ಮೈಸೂರ ಜನರಂತೆ ಇಂಗ್ಲೀಷ ಹೆಸರಿಗೆ ಮೋಹಿಸಿದ್ದಾರೆ. ಕನ್ನಡ ಹೆಸರುಗಳಾವವೂ ಇವರಿಗೆ ದೊರೆಯುವದಿಲ್ಲವೇ?

ಕನ್ನಡ ಅಭಿಮಾನಿಗಳೂ, ಬೆಳಗಾವಿಯ ಸುಪ್ರಸಿದ್ಧ ವಕೀಲರೂ ಆದ ಶ್ರೀ. ಲೋಕೂರ ನಾರಾಯಣರಾಯರು ತಮಗೆ ಹೊಸದಾಗಿ ದೊರೆತ ಸೆಶನ್ ಜಜ್ಜ ಸ್ಥಳಕ್ಕೆ ನಾಶಿಕದಲ್ಲಿ ಹಾಜರಾದರು.

ಬೆಳಗಾವಿಯ ಡೇಪ್ಯೂಟೀ ಕಲೆಕ್ಟರಾದ ರಾವಬಹಾದ್ದೂರ ಪಾಲೇಕರ ಇವರ ಮಗನಾದ ಡಾ. ಜ್ಞಾನೇಶ್ವರರಾವ ಇವರ ಮದುವೆಯು ಸಿದ್ಧತೆಯಾಗಿ ಲಗ್ನದ ದಿವಸವೇ ಅಕ್ಕೀಕಾಳು ಬೀಳುವ ಪೂರ್ವದಲ್ಲಿ ಅವರು ಆತ್ಮಹತ್ಯವನ್ನು ಮಾಡಿಕೊಂಡರು!! ಕಾರಣವು ಪ್ರಸಿದ್ಧವಾಗಿಲ್ಲ.

ಮದ್ರಾಸ ಕರ್ನಾಟಕ

ಶ್ರೀ- ಬಿ. ರಾಮರಾವ, ಮದ್ರಾಸ ಇವರು ರಜೆ ತೆಗೆದುಕೊಂಡಿದ್ದಾರೆ. ಅವರ ಕೆಲಸಕ್ಕೆ ಕೇ. ಗೋಪಾಳರಾವ ಬಿ.ಎ.ಎಲ್. ಯವರು ನೇಮಿಸಲ್ಪಟ್ಟಿರುವರು.

ಹರಪನಹಳ್ಳಿಯ ಜೈನವಾಚನಾಲಯದ ವಾರ್ಷಿಕ ಉತ್ಸವವು ಉತ್ಸಾಹದಿಂದ ನೆರವೇರಿತು. ಶ್ರೀ ಚಾಕಪ್ಪ ಇಜಾರಿಯವರು ಕರ್ನಾಟಕ ಏಕೀಕರಣದ ವಿಷಯವಾಗಿ ಭಾಷಣ ಮಾಡಿದರು.

ಉದಕಮಂಡಲವು ಇಂಗ್ಲೀಷರಿಗೆ ಬಹು ಪ್ರೀತಿಯ ಸ್ಥಳವು. ಅಲ್ಲಿಯ ವಾತಾವರಣವೂ, ಸೃಷ್ಟಿಸೌಂದರ್ಯವೂ ಇಂಗ್ಲಂಡದಂತೆ ಇದೆ ಎಂದು ಅವರು ಆ ಸ್ಥಳವನ್ನು ಪ್ರೀತಿಸುವರು. ಅಲ್ಲಿ ಅನೇಕ ಬಗೆಯ ಇಂಗ್ಲಂಡಿನ ಗಿಡ, ಹಣ್ಣು, ಹೂವುಗಳನ್ನು ತಂದಿದ್ದು, ಇನ್ನು ಇಂಗ್ಲೀಷರ ಪ್ರೀತಿಯ ಪಕ್ಷಿಗಳನ್ನು ಸಹ ತರುವ ಏರ್ಪಾಡು ಮಾಡಬೇಕೆಂದು ‘ ಓರ್ವನು ’ ಎಂಬವನು ಗವರ್ನರರಿಗೆ ಸೂಚಿಸುತ್ತಾನೆ.

ನೀಲಗಿರಿ ಬೆಟ್ಟದಲ್ಲಿ ಸಾರ್ವಜನಿಕ ಟೆಲಿಫೋನುಗಳು ಪ್ರಾರಂಭವಾಗಿದ್ದು, ೩ ಮಿನಿಟುಗಳವರೆಗೆ ಮಾತನಾಡಲು ಎರಡಾಣೆ ಫೀ ತೆಗೆದುಕೊಳ್ಳುವುದು...

ವೈಕಮ್ ದೇವಸ್ಥಾನದ ಬೀದಿಯನ್ನು ಎಲ್ಲ ಜಾತಿಯವರೂ ಉಪಯೋಗಿಸಬಹುದೆಂದು ತಿರುವಾಂಕೋರಿನ ಮಹಾರಾಣಿಯವರು ಅಪ್ಪಣೆಕೊಡಿಸಿದ್ದಾರೆ. ಇದು ಅಮಲಿನಲ್ಲಿ ಈಗಾಗಲೇ ಬಂದಿದೆ. ಅಂತೂ ಸತ್ಯಾಗ್ರಹಕ್ಕೆ ಜಯವು ಬಂದಂತಾಯಿತು.

ದಾಸಬಾಬೂರವರ ಸ್ಮರಣಾರ್ಥವಾಗಿ ೧೦ ಲಕ್ಷ ರೂಪಾಯಿ ಕೂಡಿಸಿ, ಎಲ್ಲ ಜನರಿಗೂ ಪ್ರವೇಶವಿದ್ದಂಥ ಸ್ತ್ರೀಯರ ದವಾಖಾನೆಯನ್ನು ಕಲಕತ್ತೆಯಲ್ಲಿ ಸ್ಥಾಪಿಸಬೇಕೆಂದು, ಮಹಾತ್ಮಾಗಾಂಧಿ, ಲಾರ್ಡ ಸಿಂಹ, ಸುರೇಂದ್ರನಾಥ ಬ್ಯಾನರ್ಜಿ ಮೊದಲಾದವರು ಒಂದು ವಿನಂತಿ ಪತ್ರಿಕೆಯನ್ನು ಪ್ರಕಟಿಸಿದ್ದಾರೆ. ಜುಲೈ ೧ ನೇ ತಾರೀಖಿನೊಳಗಾಗಿ ಈ ಹಣವು ಜಮೆಯಾಗಬೇಕೆಂದು ಯೋಚಿಸಿದ್ದಾರೆ!

ಚೀನದಲ್ಲಿ ನಡೆದ ರಾಜಕೀಯ ಗೊಂದಲದಿಂದ, ಜಪಾನ ಚೀನ ದೇಶಗಳ ನಡುವೆ ಯುದ್ಧವಾಗುವದೆಂಬ ಊಹೆಯಿಂದ ಮುಂಬೈಯಲ್ಲಿಯ ಹಲವು ವರ್ತಕರು ಅರಿವೆಯನ್ನು ಹೆಚ್ಚಾಗಿ ಕೊಳ್ಳಹತ್ತಿದರು. ಕೂಡಲೇ ಅವಳಿಯ ಬೆಲೆ ಏರಿತು. ಗಿರಣಿಯ ಶೇರುಗಳ ಬೆಲೆಯೂ ಏರಿತು. ಈ ಊಹೆಯು ನಿರರ್ಥಕವಾದದ್ದೆಂದು ಇನ್ನು ಕೆಲ ವರ್ತಕರ ಮತವಿದೆ.

ಜಿಲ್ಲಾ ಕಾಂಗ್ರೆಸ ಕಮಿಟಿಯ ಕೆಳಗಿನ ಸಂಘ ಕಮಿಟಿಗಳನ್ನು ಅಂದರೆ ತಾಲೂಕ ಮತ್ತು ಗ್ರಾಮ ಕಮಿಟಿಗಳನ್ನು ಪಂಜಾಬ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ತೆಗೆದು ಹಾಕಿರುವರು.

ಪರದೇಶ.

ಹಾಂಕಾಂಗದಲ್ಲಿ ರಾಜಕೀಯ ಪರಿಸ್ಥಿತಿಯು ಸೂಕ್ಷ್ಮವಾಗಿದೆ. ಇಂಗ್ಲೀಷರ ಗಿರಣಿಗಳಲ್ಲಿ ಕೆಲಸ ಮಾಡುವ ಕೂಲಿಕಾರರೆಲ್ಲ ಕಟ್ಟು ಮಾಡಿರುವರು. ವಿದ್ಯಾರ್ಥಿಗಳು ಕೈಯಲ್ಲಿ ಪಿಸ್ತೂಲಗಳನ್ನು ಹಿಡಿದುಕೊಂಡು ಇಂಗ್ಲೀಷ ಜನರ ಪ್ರಾಣ ತೆಗೆದುಕೊಳ್ಳಲು ಹವಣಿಸುತ್ತಿರುವರು

ನಾನು ಯಾರು?

ಅಯ್ಯಾ ಕನ್ನಡಿಗನೇ,

ನಾನು ಯಾರು? ನಿನಗೆ ಗೊತ್ತಿರದೆ ಉಂಟೇ? ನಾನು ಯಾವ ದೇಶದವನು? ನನ್ನ ಭಾಷೆ ಯಾವದು? ನನ್ನ ವಂಶ ಯಾವದು? ನನ್ನ ಪೂರ್ವಜರು ಯಾರು? ನನ್ನ ಆಚಾರಗಳ್ಯಾವವು? ಏನು ಭ್ರಾಂತಿ! ಎಲ್ಲವೂ ಮರೆತು ಹೋದಂತಿವೆ. ನಿನ್ನ ಕೂಗು ಕೇಳಿದರೆ ಎಲ್ಲವೂ ಕನಸಾಗಿ ಪರಿಣಮಿಸುವದು. ನಾನು ನಿಜವಾಗಿಯೂ ಎಚ್ಚತ್ತಿರುವೆನೇ? ನಿದ್ರಾಂಗನೆಯು ನನ್ನನ್ನು ಬಿಟ್ಟಿರುವಳೇ? ನಿಜವಾಗಿಯೂ ... ಕನಸೇ? ಹೇಗೆಂದು ನಂಬಲಿ? ಎಲ್ಲವೂ ಸಂದೇಹವೇ? ಸೂರ್ಯನ ಕಿರಣಗಳು ನನ್ನ ಕಣ್ಣನ್ನು ಕುಕ್ಕುತ್ತಿವೆ ನಿನ್ನ ಕೂಗು ಕಿವಿಗೆ ಕೇಳಿಸುತ್ತಿದೆ. ಹಾಗಾದರೆ ನಾನು ನಿದ್ದೆಯಲ್ಲಿರುವೆನೇ? ಇಲ್ಲ! ನಿಜವಾಗಿಯೂ ಇಲ್ಲ!! ನಾನು ಎಚ್ಚತ್ತಿರುವೆನು. ಅದಕ್ಕೇನು ಸಂದೇಹವಿಲ್ಲ. ಇದು ನಿಶ್ಚಿತ.

ಏನು ಹುಚ್ಚು? ಎಚ್ಚತ್ತರೆ ಅಲ್ಲದ ಸಲ್ಲದ ಮಾತುಗಳು ಕಿವಿಗೆ ಬೀಳುವವೇ? ನನ್ನನ್ನು ಹಂಗಿಸಿ ಭಂಗಿಸುವವೇ! ಕಿವಿಗಳು ಒಮ್ಮಿಂದೊಮ್ಮೆ ಕಿವುಡಾಗುವವೇ? ತಲೆಯು ತಿರುಗಲು ಪ್ರಾರಂಭಿಸುವದೇ? ಕಣ್ಣುಗಳು ತೆರೆಯುವವೇ? ಮೂಗು ಕಟ್ಟಿ ಬರುವದೇ? ದೇಹವು ರೋಮಾಂಚನದಿಂದ ಕಂಪಿಸುವದೇ? ಏನು ವಿಚಿತ್ರ!

" ಎತ್ತರೆ ಕನ್ನಡ ಕುಳಿತರೆ ಕನ್ನಡ ನುಡಿದರೆ ಕನ್ನಡವು
ಹೃದ್ಯವು ಕನ್ನಡ ಉದ್ಯಮ ಕನ್ನಡ ಕನ್ನಡ ಕನ್ನಡವು ||
ಕನಸುಮನಸಿನೊಳು ಕನ್ನಡ ಕನ್ನಡ ನಿಶ್ಚಯ ಕನ್ನಡವು
ಕಾಣು ಕನ್ನಡವು ಜೀವಿತ ಕನ್ನಡ ಎಲ್ಲವು ಕನ್ನಡವು " ||

ಹೀಗೆ ಡ-ಡ-ಡ ಎಂಬ ಮೇಘದ ಘರ್ಜನೆಯಂತಿರುವ ಶಬ್ದಗಳು ಕೇಳುವವೇ?

ಏನು ಕಾಲಚಕ್ರದ ಮಹಿಮೆ? ಹಗಲು ರಾತ್ರಿಯಾಗುವದು. ರಾತ್ರಿ ಹಗಲಾಗುವದು. ಬ್ರಾಹ್ಮಣರು ಚಾಂಡಾಲರಾಗುವರು. ಚಾಂಡಾಲರು ಬ್ರಾಹ್ಮಣರಾಗುವರು. ದರಿದ್ರರು ಐಶ್ವರ್ಯವಂತರಾಗುವರು. ಐಶ್ವರ್ಯವಂತರು ದರಿದ್ರರಾಗುವರು ಎಲ್ಲವೂ ಕಣ್ಣುಮುಚ್ಚಿ ತೆರೆಯುವಷ್ಟರಲ್ಲಿ. ಇದೇನು ಕಲಿಯುಗದ ಮಹಾತ್ಮೆಯೋ? ಕಲಿಪುರುಷನ ಮಹಿಮೆಯೋ ಯಾರು ಬಲ್ಲ?

ನಾನು ನಿಜವಾಗಿ ಕನ್ನಡಿಗನೇ! ಜೇಳಿನ ಕೊಂಡೆಪ್ಪನ ಬಾರುಕೋಲಿನ ಪೆಟ್ಟಿನಿಂದ ನನಗೆ ತಿಳಿಯ ಬೇಕೇ? ನನ್ನ ನೆರೆಹೊರೆಯವರು ಮರಾಠಿ, ತುಳು ಮಾತನಾಡುತ್ತಿರುವರು. ನನ್ನ ಮಾತಾಪಿತೃಗಳು ಆಂಗ್ಲ ಭಾಷೆಯನ್ನಾಡುತ್ತಿರುವರು. ನನ್ನ ಮಾತೃಭಾಷೆಯು ಕನ್ನಡವಲ್ಲ ಹಳ್ಳಿಗಾಡಿನ ಶಾಲೆಯಲ್ಲಿ ಏನೋ ನಾಲ್ಕನೇ ಕ್ಲಾಸಿನ ತನಕ ಕನ್ನಡವನ್ನೋದಿದ್ದೆನು. ಅಷ್ಟುಮಾತ್ರಕ್ಕೆ ನಾನು ಕನ್ನಡಿಗನಾಗಬೇಕೆ? ಕನ್ನಡಿಗರ ರಕ್ತವು ನನ್ನ ಮೈಯ್ಯಲ್ಲಿರುವದೇ? ಆದಾದರೂ ತಿಳಿಯುವ ಬಗೆ ಹೇಗೆ? ಕನ್ನಡಿಗರ ಆಚಾರವ್ಯಾವದು? ನನ್ನ ಆಚಾರ ವ್ಯವಹಾರ ವೆಲ್ಲವೂ ಆಂಗ್ಲಮಯವಾಗಿಯೇ ತೋರುತ್ತಿದೆ. ನನ್ನ ನೆರೆಹೊರೆಯವರನೇಕರು ನನ್ನಂತೆಯೇ ಇರುವರು. ಅಲ್ಪಸ್ವಲ್ಪರು ಮರಾಟಿಗರೆಂತಲೂ, ಇನ್ನು ಕೆಲವರು ... ತಲೂ ಇರುವರು. ಹಾಗಾದರೆ ನಾನು ಕನ್ನಡಿಗನಾಗುವದು ಹೇಗೆ? ಶಾಲಾಕಾಲೇಜುಗಳಲ್ಲಿ ಎಲ್ಲವನ್ನೂ ಆಂಗ್ಲ ಭಾಷೆಯಲ್ಲೇ ಕಲಿಸುತ್ತಿರುವರು. ಕೋರ್ಟು ಕಚೇರಿಗಳಲ್ಲಿ ಉಪಯೋಗಿಸುವ ಭಾಷೆಯೇ ಆಂಗ್ಲಭಾಷೆ. ... ಪತ್ರ ವ್ಯಾಪಾರಗಳ ವ್ಯವಹಾರಿಕ ಭಾಷೆಯೇ ಆಂಗ್ಲಭಾಷೆ. ಹಾಗಾದ ಮೇಲೆ ನಮ್ಮ ನಾಡು ಕನ್ನಡ ನಾಡೆಂಬದೂ ಸಂಶಯಾಸ್ಪದವೇ?

ಇರಲಿ. ಲೈಬ್ರರಿಗೆ ಹೋಗುವ. ಅಲ್ಲಿರುವ ಹೆಚ್ಚಿನ ಪುಸ್ತಕಗಳು ಯಾವವು? ಕನ್ನಡವೇ ಅಲ್ಲ! ಅಲ್ಲ!! ಆಂಗ್ಲಭಾಷೆಯ ಪುಸ್ತಕಗಳೇ. ರೀಡಿಂಗ ರೂಮಿಗೆ ನಡೆಯುವ. ಅಲ್ಲಿರುವ ಹೆಚ್ಚಿನ ವರ್ತಮಾನ ಪತ್ರಿಕೆಗಳು ಯಾವವು? ಆಂಗ್ಲಭಾಷೆಯವುಗಳು ಅಥವಾ ಮರಾಟಿಗಳು. ಹೀಗಾದಮೇಲೆ ಕನ್ನಡಿಗನ ಕೂಗಿಗೆ ಆಸ್ಪದವೆಲ್ಲಿ?

ಕನ್ನಡಿಗನೇ! ನೀನೇ ಧನ್ಯನು! ನೀನೇ ಮಾನ್ಯನು!! ನೀನೇ ಪುಣ್ಯವಂತನು!! ಕನ್ನಡ ನಾಡಿನ ಇತರ ವರ್ತಮಾನ ಪತ್ರಗಳ ದಾರಿಯನ್ನು ಹಿಡಿಯದ ನೀನೇ ವಿರಾಜಿಸುವೆ. ಗಾಢವಾದ ನಿದ್ರೆಯಿಂದ ಮೈಮರೆತು ಬಿದ್ದಿರುವ ಕನ್ನಡಿಗರನ್ನು ಎಳಿಸುವದಕ್ಕೆ ಜೇಳಿನ ಕೊಂಡೆಪ್ಪನನ್ನು ಹಿಡಿದಿರುವಿ. ಅಬ್ಬಬ್ಬ? ಅವನ ಹೊತ, ಏನು ಉರಿಯಪ್ಪಾ!! ಯಾರು ಸಹಿಸಲಾಪರು? ನನ್ನಂತೆಯೇ ಅನೇಕರು ಬೆಚ್ಚಿರ ಬಹುದು. ಅವರಲ್ಲೂ ಆತನ ಕೈಯ ಬಾರಕೋಲನ್ನು ಕಂಡಿರುತ್ತಿ. ಆ ಅತಿ ತೀಕ್ಷ್ಣವಾದ ಬಾರಕೋಲಿನ ಹರೆಯನ್ನು ತಾಳುವವರ್ಯಾರು? ಅಯ್ಯಯ್ಯೋ, ಮಾನವ ಮಾತ್ರನು ತಾಳಲಾರನು. ಇದು ನಿಶ್ಚಿತ.

ಕನ್ನಡಿಗನೇ, ಜೇಳಿನ ಕೊಂಡೆಪ್ಪನ ಬಾರಕೋಲಿನ ಪೆಟ್ಟು ತಿಂದು ನಾನ್ಯಾರೆಂಬುದನ್ನು ತಿಳಿದೆನು. ನಾನು ಕನ್ನಡಿಗನು! ನಿಜವಾಗಿಯೂ ಕನ್ನಡಿಗನು!! ಮೂರು ಮೂರು ಮಾತಿಗೂ ಕನ್ನಡಿಗನು!!! ಆದರೆ ಮೈಮರೆತ ದುರ್ಭಾಗ್ಯ ಕನ್ನಡಿಗನು. ನನ್ನ ನಾಡು ಕನ್ನಡ ನಾಡು. ನನ್ನ ವಂಶವೇ ಆಚಾರ್ಯ ತ್ರಿಮೂರ್ತಿಗಳ ವಂಶವು. ಪರರಾಜರ ಸತ್ತೆಗೊಳಪಟ್ಟು ನಾನು ಅವರ ದೇಶಭಾಷೆಗಳಿಗೆ ಮೋಹಗೊಂಡು ಎಲ್ಲವನ್ನು ಮರೆತಿದ್ದೆನು. ನನ್ನ ಭಾಷೆಯು ಕನ್ನಡ—ತಿಳಿಕನ್ನಡ.

" ಸುಲಿದ ಬಾಳೆಯ ಹಣ್ಣಿನಂದದಿ |
ಕಳೆದ ಸಿಗುರಿನ ಕಬ್ಬಿನಂದದಿ |
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರುವ ||
ಲಲಿತವಹ ಕನ್ನಡದ ನುಡಿಯಿಂ |
ತಿಳಿದು ಕನ್ನಡಿ ತನ್ನ ಮೊಗವನ |
ಗಳಿಸಿಕೊಂಡರೆ ಸಾಲದೇ? ಸಂಸ್ಕೃತದಲಿನ್ನೇನು ||

ಕನ್ನಡ ಭಾಷೆಯ ಮರ್ಮವು ತಿಳಿಯಿತು. ರುಚಿಯು ಹತ್ತಿತು. ಇನ್ನೆಂದೂ ಬಿಡಲಾರೆನು. ಕರ್ನಾಟಕದ ಗತವೈಭವವು ನೆನಪಿಗೆ ಬರುತ್ತಿದೆ. ಹೃದಯವನ್ನು ಕರಗಿಸುತ್ತಿದೆ. ಕಂಬನಿಗಳನ್ನು ಸುರಿಸುತ್ತಿದೆ. ಪುಲಕೇಶಿ, ವಿಕ್ರಮಾದಿತ್ಯ ಕೃಷ್ಣರಾಜರ ದಿವ್ಯಜ್ಯೋತಿಮೂರ್ತಿಗಳು ನನ್ನ ಹೃದಯವನ್ನು ಆಕರ್ಷಿಸುತ್ತಿದೆ. ಅದರ ಸುವರ್ಣಾಲಂಕೃತವಾದ ನಡತೆಗಳು ನನ್ನ ಅಂತಃಕರಣ ಹೊಕ್ಕು ದೇಶ ಪ್ರೇಮವನ್ನೂ, ಭಾಷಾ ಪ್ರೇಮವನ್ನು ಉಂಟು ಮಾಡಿರುವವು. ಕನ್ನಡಿಗನೇ, ನನ್ನಲ್ಲಿ ದೇಶಪ್ರೇಮವನ್ನು, ಭಾಷಾ ಪ್ರೇಮವನ್ನು ಉಂಟು ಮಾಡಿದ ನಿನಗೆ ಮಂಗಳವಾಗಲಿ! ಜೇಳಿನ ಕೊಂಡೆಪ್ಪನು ತನ್ನ ಬಾರಕೋಲಿನ ಹೊಡೆತದಿಂದ ಕಂಗೆಡಿಸುತ್ತಿರುವ ನನ್ನ ಕನ್ನಡಿಗ ಬಾಂಧವರನ್ನು ಎಳಿಸಲಿ! ಮೈಮರೆತಿರುವ ಕನ್ನಡಿಗರು ಜೇಳಿನ ಉರಿಯಿಂದಲೂ, ಕೋಲಿನ ಹರೆಯಿಂದಲೂ ಎದ್ದು ಕಾರ್ಯದಕ್ಷರಾಗಲಿ! ದೇಶಪ್ರೇಮಿಗಳಾಗಲಿ! ಭಾಷಾಪ್ರೇಮಿಗಳಾಗಲಿ, ಕರ್ನಾಟಕದ ಗತವೈಭವವನ್ನು ತಿಳಿದು ಉದ್ಧಾರಕ್ಕಾಗಿ ಸೊಂಟಕಟ್ಟಲಿ! ಗುಲಾಮಗಿರಿಯ ಸಂತತಿಯನ್ನು ಕಡಿದು ಸ್ವಾತಂತ್ರ್ಯಗಳಾಗಲಿ! ಬೇಗನೇ ಸ್ವರಾಜ್ಯವನ್ನು ಪಡೆಯಲಿ!

—ಎಚ್ಚೆತ್ತ ಕನ್ನಡಿಗ.

ಈ ಪತ್ರಿಕೆಯು ... ಪ್ರಕಾಶಕ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು ಪ್ರತಿ ೫೦೦.

ರಿ. ನಂ. ಬಿ. ೧೯೪೭ ವಾ. ಚಂದಾ ೧-೧೩-೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವೇಶವಾಗಿದೆ)

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಂ ॥ — ಮನು

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ } ಬಾಗಲಕೋಟೆ ಶುಕ್ರವಾರ ಮಿತಿ ಆಷಾಢ ಶುದ್ಧ ೧೨ ಶಕ ೧೮೫೭. ತಾ|| ೩-೭-೧೯೩೫. { ಸಂಚಿಕೆ ೧೪

ಸಂಪಾದಕರ ಭೂಮಿ.

ಎದ್ದರೆ ಕನ್ನಡ ಕುಳಿತರೆ ಕನ್ನಡ ನುಡಿದರೆ ಕನ್ನಡವು ।
ಹೃದ್ಯವು ಕನ್ನಡ ಉನ್ನವು ಕನ್ನಡ- ಕನ್ನಡ- ಕನ್ನಡವು ।
ಕನಸು ಮನಸಿನೊಳು ಕನ್ನಡ ಕನ್ನಡ ನಿದ್ದೆಯು ಕನ್ನಡವು।
ಜಿನಸು ಕನ್ನಡವು ಜೀವಿತ ಕನ್ನಡ ಎಲ್ಲೆಲ್ಲ ಕನ್ನಡವು ॥
— ಕೈ. ಸಗರ ಕವಿ

ಕೋಲಾರ ಚಿನ್ನದ ಕಣಿಗಳಲ್ಲಿ ಜೂನ ೧೬ ನೇ ತಾರೀಖಿನ ದಿನ ಸಾಯಂಕಾಲದಲ್ಲಿ ವಿದ್ಯುತ್ ದೀಪಗಳು ಆಕಸ್ಮಿಕವಾಗಿ ಬಂದಾದವೆಂಬ ವಾರ್ತೆ ಬಂದಿದೆ. ದೇಶಬಂಧುಗಳು ಸ್ವರ್ಗಸ್ಥರಾದದು ಅದೇ ದಿನ ಡಾರ್ಜಿಲಿಂಗದಿಂದ ಆ ಹೃದಯದ್ರಾವಕ ಸುದ್ದಿಯು ಕೋಲಾರಿಗೆ ಮುಟ್ಟಿದ ಕೂಡಲೇ ಸೃಷ್ಟಿದೇವಿಗೆ ಅತಿಶಯ ದುಃಖವಾಗಿರಲಿಕ್ಕೆ, ಸಾಕು ಆದುದರಿಂದಲೇ ಹಾಗೆ ದೀಪಗಳು ಶಾಂತವಾದುವು. ಮಾನವನು ಬಹು ಅಮೌಲ್ಯವೆಂದು ಗಣಿಸುವ ಚಿನ್ನದ ಕಣಿಯಲ್ಲಿ, ದೇಶಬಂಧುಗಳ ಆಕಸ್ಮಿಕವಾದ ಮರಣದ ವ್ಯಸನದಿಂದ ಕರ್ನಾಟಕದಂಥ ಪುಣ್ಯಭೂಮಿಯಲ್ಲಿದ್ದ ಸೃಷ್ಟಿದೇವತೆಯು ಏಕಕಾಲಕ್ಕೆ ಎಲ್ಲ ದೀಪಗಳನ್ನು ನಿಲ್ಲಿಸಿದ್ದು ಆಶ್ಚರ್ಯವಲ್ಲ!

ಅರವಿಂದ ಘೋಷರವರು ಇನ್ನು ಬ್ರಿಟಿಶ್ ಹಿಂದುಸ್ಥಾನಕ್ಕೆ ಮರಳಿ ಬರಬೇಕೆಂದೂ, ದೇಶಬಂಧು ದಾಸರವರು ಪ್ರಾರಂಭಿಸಿದ ಕಾರ್ಯವನ್ನು ಪೂರ್ತಿಗೊಳಿಸಬೇಕೆಂದೂ ಮಹಾತ್ಮಾ ಗಾಂಧಿಯವರು ಅರವಿಂದ ಯೋಗಿಗಳಿಗೆ ಒಂದು ತಂತಿಯನ್ನು ಕಳುಹಿಸಿರುವರು. ಈಗಿನ ಹಿಂದುಸ್ಥಾನದ ರಾಜಕೀಯ ಪರಿಸ್ಥಿತಿಯನ್ನು ತಿಳಿದುಕೊಂಡು ಸ್ವರಾಜ್ಯಯುದ್ಧವನ್ನು ಮುಂದರಿಸುವದಕ್ಕಾಗಿ ಅರವಿಂದರಂಥ ಮಹಾ ತಪಸ್ವಿಗಳು ಮರಳಿ ಇಲ್ಲಿಗೆ ಬರುವದು ಅತ್ಯವಶ್ಯವಾದದ್ದು. ಈ ಸಮಯದಲ್ಲಿ ಹಿಂದುಸ್ಥಾನವು ಏನು ಮಾಡಬೇಕೆಂಬುದು ತಿಳಿಯದಾಗಿದೆ. ಹಿಂದೂ ಮುಸಲ್ಮಾನರ ಐಕ್ಯವು ದೊಡ್ಡ ಪ್ರಶ್ನೆಯಾಗಿದೆ. ರಾಜಕೀಯ ಪಂಗಡಗಳ ಕಾರ್ಯಕ್ರಮಗಳು ಬೇರೆ ಬೇರೆಯಾಗಿ ಬೇರೆ ಬೇರೆ ಪಕ್ಷದವರು ಬೇರೆ ಬೇರೆ ಮಾರ್ಗವನ್ನು ಹಿಡಿದಿರುವರು. ಸರಕಾರದ ಆನಂದವು ಹೆಚ್ಚಾಗಿದೆ. ಅಖಿಂಡ ಭರತಖಂಡದ ಜನರೆಲ್ಲ ಸ್ವೀಕಾರಮಾಡುವಂತಹ ಕಾರ್ಯಕ್ರಮವೂ ಬೇಕಾಗಿದೆ. ಇಂಥ ಸಮಯದಲ್ಲಿ ಅರವಿಂದರು ಮರಳಿ ಬರಬೇಕೆಂದು ತಂತಿ ಕಳಿಸಿದ್ದರಿಂದ ಮುಂಬೈ ಕ್ರೈಸ್ತ ಪತ್ರದ ಹೊಟ್ಟೆಯಲ್ಲಿ ಬೆಂಕಿ ಬಿದ್ದಿದೆ. ಅರವಿಂದ ಬಾಬುಗಳು ಬಂದದ್ದೇ ಆದರೆ ಸರಕಾರದವರು ಅವರನ್ನು ಹಿಡಿಯದೆ ಬಿಡಲೊಲ್ಲರಾಗಿಯೂ, ಅರವಿಂದರಿಗೆ ಭರತಖಂಡದಲ್ಲಿ ಒಂದೀವಾನದ ಕತ್ತಲೆ ಕೋಣೆಗಿಂತ ಪಾಂಡಿಚೇರಿಯಲ್ಲಿಯ ಏಕಾಂತವಾಸವೇ ಲೇಸಾಗಿ ತೋರಬಹುದೆಂದೂ, ಕ್ರೈಸ್ತಕಾರರ ಮತ ಹಿಂದುಸ್ಥಾನದ ಜನರು ಧರ್ಮಪ್ರಿಯರು. ಧಾರ್ಮಿಕ ತತ್ವಗಳು ಯಾವ ಚಳವಳಿಯ ಆಧಾರ ಸ್ತಂಭವಾಗಿರವೋ ಆ ಚಳವಳಿಯು ಇಲ್ಲಿ ಯಶಸ್ವಿಯಾಗದೇ ಇರದು. ಅರವಿಂದರು ಪುನಃ ರಾಜಕೀಯ ರಣರಂಗದಲ್ಲಿ ಸಿದ್ಧಗೊಂಡು ನಿಂತರೆಂದರೆ, ಧಾರ್ಮಿಕ ತತ್ವಗಳೇ ಅವರ ಕಾರ್ಯಕ್ರಮದ ತಳಹದಿಯಾಗಿ, ಆರ್ಯ ಸಂಸ್ಕೃತಿಯ ಪುನರುದ್ಧಾರದ ಕಾರ್ಯವು ಅತಿಶಯ ರಭಸದಿಂದ ಸಾಗುವದರಲ್ಲಿ ಸಂಶಯವಿಲ್ಲ. ಪಾಶ್ಚಾತ್ಯ ಸಂಸ್ಕೃತಿಯ ಬೆಡಗು ನಿರ್ನಾಮವಾಗಿ, ಆರ್ಯ ಸಂಸ್ಕೃತಿಯ ನಿಜವಾದ ಮತ್ತು ಉಳವಾದ ಸೌಂದರ್ಯದ ಸೊಬಗು ನಮ್ಮ ಹೃತ್ಪಟದಲ್ಲಿ ನಿಚ್ಚಳವಾಗಿ ಆನಂದವನ್ನು ಸೂಸಹತ್ತಿತೆಂದರೆ ಸ್ವರಾಜ್ಯವು ದೊರಕುವದು ಸುಲಭವೇ. ಅರವಿಂದರು ಬಂದರೆ ಈ ಕಾರ್ಯವು ಎಲ್ಲಿ ಕೈಗೂಡುವದೋ ಎಂಬದಾಗಿ ಕ್ರೈಸ್ತಕಾರರು ಅಂತಹ ಯೋಗಿಗಳ ಆಪ್ರಮುಕ್ತಾಗಿ ಚಿಂತಾಕ್ರಾಂತರಾಗಿರಬಹುದೋ!

ಬಾಗಲಕೋಟೆಯಲ್ಲಿ ಬೇರೊಂದು ಹಾಯ ಸ್ಕೂಲನ್ನು ಸ್ಥಾಪಿಸುವ ಉದ್ದೇಶದಿಂದ ಮೊದಲು ೭ ನೇ ಈ ಎತ್ತೆಯನ್ನು ಪ್ರಾರಂಭಿಸಿ, ಅದರ ಬಗ್ಗೆ ಏನಾದರೂ ಯೋಗ್ಯ ಏರ್ಪಾಡು ಮಾಡುವ ಉದ್ದೇಶದಿಂದ ಒಂದು ವ್ಯವಸ್ಥಾಪಕ ಮಂಡಳವು ಸ್ಥಾಪಿಸಲ್ಪಟ್ಟಿತ್ತು. ಈ ಮಂಡಲದವರು ಶಾಲೆಯ ವ್ಯವಸ್ಥೆಯನ್ನು ಯೋಗ್ಯವಾಗಿ ಮಾಡುವದನ್ನಂತೂ ಕನಸಿನಲ್ಲಿ ಸಹ ವಿಚಾರಿಸಿದಂತೆ ಕಾಣುವದಿಲ್ಲ. ಇತ್ತ ಅದರ 'ಇತಿಶ್ರೀ' ಯ ವ್ಯವಸ್ಥೆಯನ್ನಾದರೂ ಯೋಗ್ಯವಾಗಿ ಮಾಡಲೊಲ್ಲರು. ಈ ಮಂಡಲದಲ್ಲಿ ಸಣ್ಣಪುಟ್ಟ ಜನರು ಇರಲಿಲ್ಲ. ಊರಲ್ಲಿಯ ಪ್ರತಿಷ್ಠಿತರಾದ ಜನರೇ ಸಭಾಸದರು. ಹೀಗಿದ್ದರೂ, ಇವರು ಮಂಡಲದ ಸಭಾಸದರಾಗಲಿಕ್ಕೆ ಒಪ್ಪಿ, ಈಗ್ಗೆ ಶಾಲೆಯು ಬಂದಾದ ಬಗ್ಗೆ ಯಾವ ವಿಚಾರವನ್ನೂ ಮಾಡಿದಂತೆ ಕಾಣುವದಿಲ್ಲ. ಆದ್ದರಿಂದ ಈ ದೊಡ್ಡ ಜನಗಳಿಗೆ ತಮ್ಮ ಜವಾಬ್ದಾರಿಯೇ ಗೊತ್ತಾಗದೆಂಬುದು ಸ್ಪಷ್ಟವಾಗುತ್ತದೆ. ಮೊದಲು ಶಾಲೆಯನ್ನು ತೆರೆಯುವಾಗ್ಗೆ ಈ ಶಾಲೆಯ ಬಗ್ಗೆ ಯಾವ ಅಭಿಮಾನವೂ ಇರದೇ ಇದ್ದರೆ, ಸಭಾಸದರು ತಾವು ವ್ಯವಸ್ಥಾಪಕ ಮಂಡಲದಲ್ಲಿರಲು ಸಮ್ಮತಿಯನ್ನು ಕೊಟ್ಟ ಕಾರಣವನ್ನು ಹೇಳಬಲ್ಲರೋ? ವಿದ್ಯಾರ್ಥಿಗಳು ಮೊದಲಿಗೇ ಮಾರ್ಚದಲ್ಲಿ ತಮ ತಮ್ಮ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಿದ್ದರು. ಆದರೆ ಮಾರ್ಚ

ತಿಂಗಳಲ್ಲಿ ಗಡಿಬಿಡಿಯಿಂದ ಶಾಲೆಯನ್ನು ತೆಗೆದು, ಹುಡುಗರನ್ನು ಹಿಡಿದು, ಅವರಿಂದ ಫೀ ಹಣ ವಸೂಲಮಾಡಿ ಈಗ್ಗೆ ಶಾಲೆಯ ಸುದ್ದಿಯನ್ನು ಸಹ ತೆಗೆಯದೇ ವಿದ್ಯಾರ್ಥಿಗಳಿಗೆ ಅನಾನುಕೂಲತೆಗಳನ್ನು ಒದಗಿಸಿಕೊಡುವದು ಯಾವ ನ್ಯಾಯ? ಈ ಶಾಲೆಯ ಬಗ್ಗೆ ಮೊದಲು ಪ್ರಕಟನೆಯನ್ನು ತೆಗೆದ ಶ್ರೀ. ನರಗುಂದ ಜಯರಾಯರೂ, ಮುಖ್ಯ ಅಧ್ಯಾಪಕರಾದ ಶ್ರೀ. ಜೋಶೀಯವರೂ ಮಂಡಲದ ಚೇರಮನ್ನರಾದ ಶ್ರೀ. ಪಟವರ್ಧನ ದುರ್ಗೋಪಂತರೂ ಈ ಬಗ್ಗೆ ಉತ್ತರ ಕೊಡಬಲ್ಲರೋ? ಈ ವಿಷಯದ ಮೇಲೆ ನಮ್ಮ ಕಡೆಗೆ ಹಲವು ತಕರಾರುಗಳು ಬಂದಿವೆ. ಸಾರ್ವಜನಿಕ ರೀತಿಯಿಂದ ಆ ಬಗ್ಗೆ ವಿಚಾರಿಸುವ ಮೊದಲು ಈ ಕೆಳಗಿನ ಪ್ರಶ್ನೆಗಳಿಗೆ ಸಹ, ಈ ಶಾಲೆಗೆ ಮುಖ್ಯ ಜವಾಬದಾರರಾಗಿದ್ದ ಮೇಲಿನ ಮೂವರಾಗಲೀ, ವ್ಯವಸ್ಥಾಪಕ ಮಂಡಲದ ಸಭಾಸದರಾಗಲೀ ಉತ್ತರ ಕೊಡಬೇಕಾಗಿ ಸೂಚನೆಯದೆ. (೧) ವಿದ್ಯಾರ್ಥಿಗಳಿಗೆ "ನೀವು ಬೇರೆಕಡೆಗೆ ಹೋಗುವ ವಿಚಾರಮಾಡಬೇಡಿ: ಈ ಶಾಲೆಯನ್ನು ನಾವು ಕಾಯಮವಾಗಿ ಮಾಡುವೆವು" ಎಂಬದಾಗಿ ಅಭಿವಚನವನ್ನಿತ್ತವರಾರು? (೨) ಈ ಶಾಲೆಗೆ ಮೂಲ ಉತ್ಪಾದಕರಾರು? (೩) ಉತ್ಪಾದಕರು ಯಾವ ಬಗೆಯಿಂದ ವಿಚಾರಿಸಿ ಶಾಲೆ ತೆಗೆಯುವ ಜವಾಬ್ದಾರಿಯನ್ನು ಹೊತ್ತರು? (೪) ಆ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವದೇಕೆ? (೫) ಈ ಶಾಲೆಯ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವದು ಉತ್ಪಾದಕರಿಗೂ, ವ್ಯವಸ್ಥಾಪಕ ಮಂಡಲಿಗೂ, ಶಾಲೆಯ ಮುಖ್ಯ ಅಧ್ಯಾಪಕರಿಗೂ ಭೂಷಣವೇ? (೬) ಶಾಲೆಯನ್ನು ಸ್ಥಾಪಿಸುವಂಥ ಮಹಾ ಪ್ರಸಂಗವೇನಿದ್ದಿತು? (೭) ಈಗ್ಗೆ ಅಸಡ್ಡಾಳಾಗಿ ಏಕಕಾಲಕ್ಕೆ ಬಂದುಮಾಡಲು ಅಂಥ ಮಹಾ ಸಂಕಟಗಳೇನು ಉಂಟಾದವು? (೮) ಶಾಲೆಯು ಪ್ರಾರಂಭವಾದುದೆಂದು? ಮೇ ತಿಂಗಳ ಸೂಟಿನಾಗಿ ಬಂದಾದುದೆಂದು? ಈ ಅವಧಿಯಲ್ಲಿ ಎಷ್ಟು ದಿನ ವರ್ಗಗಳು ನಡೆದವು? ಆ ವರ್ಗಗಳನ್ನು ಕಲಿಸಿದವರಾರು? (೯) ಶಿಕ್ಷಕರೆಷ್ಟು ಜನರಿದ್ದರು? ಅವರಿಗೆ ಯಾವ ಯಾವ ಬಗೆಯ ಕರಾರುಗಳು ಕಲ್ಪಿಸಲ್ಪಟ್ಟಿದ್ದವು? (೧೦) ಸಂಬಳ ಪಡೆದು ಕೆಲಸಮಾಡತಕ್ಕವರೆಷ್ಟು? ಸಂಬಳವಿಲ್ಲದೇ ಕೆಲಸ ಮಾಡತಕ್ಕವರೆಷ್ಟು? (೧೧) ಯಾರ್ಯಾರಿಗೆ ಎಷ್ಟೆಷ್ಟು ಪಗಾರ ಗೊತ್ತುಮಾಡಿತ್ತು? ಯಾರು ಗೊತ್ತುಮಾಡಿದ್ದರು? (೧೨) ಒಟ್ಟಿಗೆ ಫೀ ರೂಪದಿಂದಾಗಲೀ, [illegible]ರೀತಿಯಿಂದಾಗಲೀ, ಹಣವು ವಸೂಲಾದದ್ದೆಷ್ಟು? ಅದರ ವಿನಿಯೋಗವು ಯಾವ ಬಗೆಯಿಂದಾಗಿದೆ? (೧೩) ಯಾವ ಯಾವ ಶಿಕ್ಷಕರಿಗೆ ಎಷ್ಟು ಎಷ್ಟು ಪಗಾರವು ತಲ್ಪಿದೆ? (೧೪) ವಸೂಲಾದ ಹಣವು ಯಾರ ಕಡೆಗೆ ಜಮೆಯಾಗತಕ್ಕದ್ದೆಂಬದಾಗಿ ಏನಾದರೂ ನಿರ್ಬಂಧವಿದ್ದಿತೋ? (೧೫) ಇದ್ದರೆ ಆ ನಿಯಮವು ಪಾಲಿಸಲ್ಪಟ್ಟಿರುವದೋ? ಅಥವಾ ಉಲ್ಲಂಘಿಸಲ್ಪಟ್ಟಿದೆಯೋ? ಉಲ್ಲಂಘಿಸಲ್ಪಟ್ಟಿದ್ದರೆ ಯಾಕೆ? ಅದರ ಜವಾಬ್ದಾರಿಯು ಯಾರ ಮೇಲೆ? ಇವೆ. ಈ ಪ್ರಶ್ನೆಗಳಿಗೆ ಪ್ರತಿಷ್ಠಿತ ಗೃಹಸ್ಥರಿಂದ ಉತ್ತರ ಬಂದಮೇಲೆ ಹೆಚ್ಚಾಗಿ ಬರೆಯುವೆವು.

ದಾರಿದ್ರ್ಯದ ಲಕ್ಷಣಗಳನ್ನು ತಿಳಿದುಕೊಳ್ಳುವ ಮತ್ತು ದುಷ್ಕಾಳವು ಇಂಥಲ್ಲಿ ನಿಜವಾಗಿಯೂ ಇದೆ ಎಂಬದಾಗಿ ಸಿದ್ಧಪಡಿಸುವ ಕೆಲವು ಮಾರ್ಗದರ್ಶಕ ಸಂಗತಿಗಳನ್ನು ನಮ್ಮ ದಯಾಳು ಮಾಬಾಪ ಸರಕಾರವು ಗೊತ್ತುಪಡಿಸಿಕೊಂಡಿಟ್ಟಿದೆ. ಕಳವು ಹೆಚ್ಚಾಗುವದು, ಭಿಕ್ಷುಕರ ಸಂಖ್ಯೆಯು ಬೆಳೆಯುವದು, ಜನರು ದುಷ್ಕಾಳವಿದ್ದ ಪ್ರದೇಶವನ್ನು ಬಿಟ್ಟು ಹೋಗುವದು, ಸಾಮಾನುಗಳ ಬೆಲೆ ಏರುವದು. ಇವೇ ಮೊದಲಾದ ಸಂಗತಿಗಳು ಯಾವದೊಂದು ಪ್ರದೇಶದಲ್ಲಿ ಉಂಟಾಗಿದ್ದರೆ ಅಲ್ಲಿ ರಗಾಲವಿದೆಯೆಂದು ಸರಕಾರದವರು ನಿರ್ಣಯಿಸುವರು. ಈ ಲಕ್ಷಣಗಳು ಇತ್ತಿತ್ತ ಭರತಖಂಡದ ತುಂಬೆಲ್ಲ ಹಚ್ಚಾಗಹತ್ತಿ ಬ್ಯಾಂಕಿನಲ್ಲಿಯ ನೋಟುಗಳು ಮಾಯವಾಗುವದು, ಕಿಸೆ ಕತ್ತರಿಸುವದು, ಮೊಟ್ಟೆ ಸಹ [illegible]ಮಾಡುವದು. ಕನ್ನ ಹಾಕುವದು, ಸುಶಿಕ್ಷಿತರು ಸಹ ಹೊಟ್ಟೆಗಿಲ್ಲದೆ ಭಿಕ್ಷುಕರಂತೆ ತಿರುಗಾಡುವದು ಹಳ್ಳಿಗಳಿಂದ ಪಟ್ಟಣಕ್ಕೂ ಒಂದು ಊರಿನಿಂದ ಇನ್ನೊಂದು ಊರಿಗೂ ಒಂದು ಜಿಲ್ಲೆಯಿಂದ ಬೇರೊಂದು ಜಿಲ್ಲೆಗೂ ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತಕ್ಕೂ ಹೊಟ್ಟೆ ತುಂಬಿಕೊಳ್ಳುವದಕ್ಕಾಗಿ ಓಡಾಡುವದು ಇವೇ ಮೊದಲಾದ ಕೃತಿಗಳನ್ನು ಹಿಂದುಸ್ಥಾನದಲ್ಲಿ ಹೆಚ್ಚಾಗಿ ಕಾಣಬರುವವು. ಇತ್ತಿತ್ತ ಯುರೋಪಿಯನ್ನರು ಸಹ ನೀಚ ಕೆಲಸಗಳನ್ನು ಮಾಡುವದು ಹೆಚ್ಚಾಗಿದೆ. ಕಲಕತ್ತೆಯಲ್ಲಿ ಕೆಲವು ದಿನಗಳ ಹಿಂದೆ ಯುರೋಪಿಯರು ಮನೆಗೆ ಕನ್ನಹಾಕಿದ್ದರು. ಮುಂಬಯಿಯಲ್ಲಿ ಹೊಸ ಪೋಲೀಸ ಅಧಿಕಾರಿಯು ಮೊನ್ನೆ ಮೊನ್ನೆ ಜೂಜಿನ ಬಗ್ಗೆ ಕೆಲಸ ಕಳೆದುಕೊಂಡನು. ಮದ್ರಾಸಿನಲ್ಲಿ ಓರ್ವ ಕ್ರಿಶ್ಚನ್ನನು ತನ್ನ ಅಕ್ಕನು ಮ[illegible]ದ ತನಗೆ ಹಣ ಬೇಕಾಗಿದೆಂದು ಚರ್ಚುಗಳಿಗೆ ಹೋಗಿ ಸುಳ್ಳು ಹೇಳಿ ಹಣ ಎಬ್ಬಿಸಿದನು. ಈ ಯುರೋಪಿಯನ್ನರ ವಿಷಯವನ್ನು ನಾವು ಬೇಕೆಂದೇ ಒತ್ತಿ ಹೇಳುತ್ತೇವೆ. ಯಾಕಂದರೆ ಹಿಂದುಸ್ಥಾನದವರು (ರಾಜ್ಯಕ್ರಾಂತಿಯ ವಿಷಯಗಳನ್ನು ಬಿಟ್ಟು) ಏನು ಮಾಡಿದರೂ ಸರಕಾರದ ದೃಷ್ಟಿಯು ಅತ್ತ ಹೋಗುವದಿಲ್ಲ. ಯುರೋಪಿಯನರು ಈ ಅನೀತಿ ಕೃತಿಗಳನ್ನು ಮಾಡಿದ್ದು ಸರಕಾರಕ್ಕೆ ಬೇಗನೆ ಗೊತ್ತಾಗುವದು. ಇತ್ತಿತ್ತ ಸರಕಾರೀ ಬೊಕ್ಕಸದಲ್ಲಿ ಐದು ಸಾವಿರ ರೂಪಾಯಿಗಳ ವರೆಗೆ ಹಣ ಇಲ್ಲದಿರುವದೂ, ಪೋಷ್ಟಿನಲ್ಲಿ ಯುರೋಪಿಯನು ಹಿಂದೀ ಜನರೂ ಕೂಡಿ ಎಷ್ಟೋ ಸಾವಿರ ರೂಪಾಯಿಗಳನ್ನು ಎತ್ತಿಹಾಕುವದೂ ಸರಕಾರದ ಲಕ್ಷ್ಯಕ್ಕೆ ಬಾರದಿರದು. ಖೊಟ್ಟಿ ನಾಣ್ಯ, ನೋಟುಗಳಂತೂ ಎಲ್ಲ ಕಡೆಗೂ ಉದ್ಭವಿಸಹತ್ತಿವೆ. ಇವೆಲ್ಲ ಸಂಗತಿಗಳಿಂದ ಸರಕಾರಕ್ಕೆ ಬಿಸಿ ಹತ್ತದೇ ಇರದು. ಬ್ಯಾಂಕುಗಳಲ್ಲಿ ಆಗಲಿ, ಬೇರೆ ಮನೆಗಳಲ್ಲಾಗಲೀ ಕಳವುಗಳಾದರೆ ಪೋಲೀಸರು ಇರುವರು. ನ್ಯಾಯ ಕಚೇರಿಗಳು ಇರುವವು. ಅಲ್ಲಿ ಅವುಗಳ ವಿಚಾರಣೆಯಾಗುವದು. ಅವೇನೋ ದಿನದ ವಿಷಯಗಳೆಂದು ಸರಕಾರದ ಲಕ್ಷ್ಯವು ಅತ್ತ ಹೋಗದು ದರೆ ಈಗ್ಗೆ ನಾವು ಮೇಲೆ ಉಲ್ಲೇಖಿಸಿದ ಸಂಗತಿಗಳಿಂದ [illegible]ರದ ಮನೆಯಲ್ಲಿಯೇ ಕಳವು ನಡೆದಿದೆಂಬದೂ, ಸರಕಾರದ ರಾಜ್ಯಸೂತ್ರಗಳು ಯಾರ ಕೈಯಲ್ಲಿವೆಯೋ ಅವರ ಜಾತಿಯವರೇ ಅನೀತಿಕೃತಿಗಳಲ್ಲಿ ತೊಡಕಿರುವರೆಂಬದೂ ಸ್ಪಷ್ಟವಾಗುವದು. ಇವರಿಂದಲಾದರೂ ಸರಕಾರದವರು ಕೊಂಚಮಟ್ಟಿಗೆ ಈಗ್ಗೆ ಕಳವು, ಸುಳ್ಳುಹಣ, ಖೊಟ್ಟಿನಾಣ್ಯ, ನೋಟು ಇವುಗಳು ಏಕೆ ಹೆಚ್ಚಾಗಹತ್ತಿರುವದನ್ನು ಕಂಡುಹಿಡಿಯಬಹುದಾಗಿದೆ. ಇದೇ ಸಂಗತಿಗಳಿಂದ ಇ[illegible]ದ, ಪ್ರದೇಶದಲ್ಲಿ ದುಷ್ಕಾಳವಿದೆಂಬದನ್ನು ನಿರ್ಣಯಿಸುವ ಹಿಂದುಸ್ಥಾನದ ತುಂಬೆಲ್ಲಾ ಜಾತಿಭೇದವಿಲ್ಲದೇ ಇಂಥ ಕೃತಿಗಳು ಹೆಚ್ಚಾಗಹತ್ತಿವೆಂಬದನ್ನು ತಿಳಿದುಕೊಂಡು ಹಿಂದುಸ್ಥಾನದಲ್ಲಿ ಎಲ್ಲ ಕಡೆಗೂ ಬರಗಾಲವಿದೆಯೆಂಬದನ್ನು ಸರಕಾರದವರು ತಿಳಿದುಕೊಳ್ಳಬೇಕು. ಹಿಂದುಸ್ಥಾನದಲ್ಲಿ ದಾರಿದ್ರ್ಯವು ಹೆಚ್ಚಾಗಿದೆ, ಒಪ್ಪತ್ತು ಸಹ ಬಡವರ ಹೊಟ್ಟೆಯು ತುಂಬುವದಿಲ್ಲ, ಎಂಬ ವಿಧಾನಗಳು ಸಮಂಜಸವಾಗಿಲ್ಲವೆಂದು ಬಣ್ಣದ ಮಾತುಗಳನ್ನಾಡುವ ಮಾಬಾಪ ಸರಕಾರದ ಹೃದಯವು ಎಷ್ಟಾದರೂ ಕರಗುವದಿಲ್ಲವೆಂಬದನ್ನು ನಾವು ಅರಿತಿರುವೆವು. ಆದರೂ ಹಿಂದುಸ್ಥಾನದ ದಾರಿದ್ರ್ಯ ವಿಷಯವು ಕಣ್ಮುಂದೆ ಬಂದಿತೆಂದರೆ ಏನೂ ಬರೆಯದಿರುವದು ಯಾವನಿಗೂ ಶಕ್ಯವಿಲ್ಲ. ಹಾಗೆಯೇ ಕಂಗಾಲನಿರುವ ಹಿಂದುಸ್ಥಾನಕ್ಕೆ 'ಕಾಕಾ' ಎಂಬದಾಗಿ ಒದರುವದೊಂದೇ ಮಾರ್ಗ ಉಳಿದಂತಾಗಿದೆ. ಎಂಥ ಕನಿಕರ ಸ್ಥಿತಿಯಿದ

ಪುಸ್ತಕ ಪರೀಕ್ಷಣ

ಲಘುಕಾವ್ಯ ಮಾಲೆ ೨

೧ ಸಂಪಾದಕ ನಾ. ವ್ಯಾ. ಕುಲಕರ್ಣೀ ಧಾರವಾಡ

'ತನುವಿಲ್ಲದಲ್ಲಿ ಪ್ರಾಣಪ್ರತಿಷ್ಠೆಯನ್ನು ಮಾಡುವದೇ ಈ ಕಾವ್ಯ ಮಾಲೆಯ ಉದ್ದೇಶವೆಂದು ತೋರುತ್ತದೆ. ಆದರೆ ಈ ಉದ್ದೇಶವು ಎರಡೂ ಪುಸ್ತಕಗಳಲ್ಲಿಯೂ ಈಡೇರಿಲ್ಲವೆಂದು ನಿರಾತಂಕವಾಗಿ ಹೇಳಬಹುದು. 'ಕರ್ನಾಟಕದ ಮೊದಲನೆಯ ಜೋಡಿನ'ವೆಂದೊಡನೆ ವಾಚಕರಲ್ಲಿ ಅತಿಶಯವಾದ ಕುತೂಹಲವುಂಟಾಗುವುದು ಸ್ವಾಭಾವಿಕವು. ಅದ್ಭುತವಾದ ಕಥಾವಸ್ತುವೂ, ರೋಮಾಂಚಜನಕವಾದ ವೀರಾವೇಶದ ನುಡಿಗಳೂ, ಅಸ್ರುಧಾರೆಯನ್ನು ಹರಿಯಿಸುವಂಥ ಸಂಘಟನೆಗಳೂ ಈ ಕಾವ್ಯದಲ್ಲಿ ಅಡಕವಾಗಿರಬಹುದೆಂದು ವಾಚಕರು ಊಹಿಸಬಹುದು. ಈ ಕಾವ್ಯದಲ್ಲಿ ಹೃದಯಂಗಮವಾದ ಕಥಾಸಂವಿಧಾನವೂ ಇಲ್ಲ. ರಚನಾ ಕೌಶಲ್ಯವೂ ಇಲ್ಲ. ರಸಭಾವಗಳ ಪೋಷಣೆಯಂತೂ ಬಾರದು ಓದಲು ಸಪ್ಪಗಿರುತ್ತದೆ. ಕೆಲವೆಡೆಯಲ್ಲಿ ಕಾವ್ಯದ ಗಂಧವೂ ಕೂಡ ಇಲ್ಲ. ಉದಾ: "ಹೊತ್ತು ಕಳೆದು ಪ್ರಯೋಗವೇನು." 'ಹಂಪೆಯನು ಪಟ್ಟಣದ ಬಿತ್ತುತಾಗರಗಳಿಗೆ' ಪದ-ಮಾಧುರ್ಯವಿಲ್ಲ; ಶಬ್ದ ಸೌಂದರ್ಯವಿಲ್ಲ. 'ಅತಿ' 'ಆ' ಇವುಗಳನ್ನು ಬೇಸರ ಬರುವಂತೆ ಲೇಖಕರು ಉಪಯೋಗಿಸಿದ್ದಾರೆ. ಮೊದಲನೇಯ ಪದ್ಯದಲ್ಲಿ ಸ್ವಾರಸ್ಯವೇನೂ ಇರುವದಿಲ್ಲ. 'ಮುಂಜಟದಾಕೆಯ ಮಾಡುತಲೆ' ಇದನ್ನು ಕೇವಲ ಪ್ರಾಸದ ಪ್ರಾಸಕ್ಕಾಗಿ ಜೋಡಿಸಿರುವರು. ಲೇಖಕರು ಪ್ರಾಚೀನ ಮತ್ತು ಅರ್ವಾಚೀನ ಕಾವ್ಯಗಳ ಪರಿಚಯವನ್ನು ಚೆನ್ನಾಗಿ ಮಾಡಿಕೊಂಡು ಪದ್ಯ ರಚನೆಯ ಕಾರ್ಯವನ್ನು ಕೈಕೊಳ್ಳಬೇಕು. 'ಪ್ರೇಂಪ್ರೆ' ಮತ್ತು 'ಕೃಷ್ಣಕುಮಾರಿ'ಯನ್ನು ಒಮ್ಮೆಯಾದರೂ ಲೇಖಕರು ನೋಡಬೇಕೆಂದು ಸೂಚನೆ.

—[illegible]

ಮಹಾರಾಷ್ಟ್ರದಲ್ಲಿ ಕನ್ನಡ ಹೆಸರಿನ ಊರುಗಳು

ಸಾತಾರೆ ಸೊಲಾಪೂರ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಕನ್ನಡಿಗರಿದ್ದಾರೆ. ಅವು ಕರ್ನಾಟಕದೊಳಗಿನವೇ ಇರುತ್ತವ ಆದರೆ ಕನ್ನಡದ ಗ್ರಂಥವನ್ನು ಸಹ ಅರಿಯದ ಆ ಜಿಲ್ಲೆಗಳ ಉಳಿದ ಭಾಗಗಳಲ್ಲಿಯೂ ಬೇರೆ ಜಿಲ್ಲೆಗಳಲ್ಲಿಯೂ ಇರುವ ಕೆಲವು ಊರುಗಳ ಹೆಸರುಗಳು ಕನ್ನಡಜನ್ಯವಿರುತ್ತವೆ. ಅವನ್ನು ನೋಡಿ ಮೊದಲಿನ ಕಾಲದ ಕರ್ನಾಟಕ ಸಾಮ್ರಾಜ್ಯದ ಕಲ್ಪನೆಯು ಬರುತ್ತದೆ. ಈಗ್ಗೆ ಇಂಗ್ಲೀಷ ಸಾಮ್ರಾಜ್ಯದ ಪ್ರಾಬಲ್ಯವಿದ್ದ ಕಾರಣ ಎಲ್ಲೆಲ್ಲಿಯೂ ಇಂಗ್ಲೀಷ ಹೆಸರುಗಳು ಕಂಡುಬರುವಂತೆ ಒಂದು ಕಾಲದಲ್ಲಿ ಮಹಾರಾಷ್ಟ್ರದಲ್ಲಿ ಕನ್ನಡ ಹೆಸರುಗಳನ್ನು ಊರಿಗೆ ಇಡುವ ಸಂಪ್ರದಾಯವಿದ್ದಂತೆ ತೋರುತ್ತದೆ. ಕನ್ನಡ ಹೆಸರಿನ ಊರುಗಳುಳ್ಳ ಪ್ರದೇಶದ ಮೇಲೆ ಕರ್ನಾಟಕದ ಸಾಮ್ರಾಜ್ಯವಿದ್ದೀತೆಂದು ಹೇಳಲಿಕ್ಕೆ ಬಾರದಿದ್ದರೂ ಕರ್ನಾಟಕ ಸಾಮ್ರಾಜ್ಯದ ಪ್ರಾಬಲ್ಯವು ಆ ಕಾಲಕ್ಕೆ ಇತ್ತೆಂದು ನಿರ್ಣಯವಾದ ಮಾತು.

ಊರು— ದೇವೂರ ನಾಂದೂರ (ಪುಣೆಜಿಲ್ಹಾ)
ಕಟ್ಟಿ— ಭಿಲಕಟ್ಟಿ (ಸಾತಾರಾ ಜಿಲ್ಹಾ ಫಲಟಣ ಸಂಸ್ಥಾನ)
ಬಾವಿ— ಮುಟೆಬಾವಿ (ಪುಣೆಜಿಲ್ಹಾ) ಕುರುಬಾವಿ (ಸೋಲಾಪೂರ ಜಿಲ್ಹಾ)

ಮೇಲೆ ಹೇಳಿದ ಊರುಗಳನ್ನು ನಾನು ಸ್ವತಃ ನೋಡಿದ್ದೇನೆ. ಅವುಗಳ ಹೊರತು ನಾನು ಕೇಳಿದ ಮಾತ್ರ ಕೆಲವು ಊರುಗಳಿವೆ ಪ್ರತ್ಯಕ್ಷ ಮಾಡಿದರೆ ಮತ್ತಷ್ಟು ಕೆಲವು ಗೊತ್ತಾಗಬಹುದು.

ದೌಂಡ ⎫ [illegible]
ಪುಣೇ ಜಿಲ್ಹಾ ⎭ [illegible]

(ಈಗಿನ ಮಹಾರಾಷ್ಟ್ರವು ಹಿಂದಕ್ಕೆ ಕರ್ನಾಟಕದ ಭಾಗವಾಗಿದ್ದಿತು. ಗೋದಾವರಿಯ ವರೆಗೂ ಕರ್ನಾಟಕವಿದ್ದಿತು. ಆದುದರಿಂದಲೇ ಕನ್ನಡ ಹೆಸರಿನ ಊರುಗಳು ಮಹಾರಾಷ್ಟ್ರದಲ್ಲಿ ದೊರೆಯುತ್ತವೆ ಸಂ. ಕ.)

ನಿಷ್ಪಾಪ ಜೀವನೆ

ಮತ್ತು

— ಬ್ರಾಹ್ಮಣ್ಯ —

[ಲೇಖಕ— ಲಕ್ಷ್ಮಣ ರಘುನಾಥ ಭಿಡೆ ಸತ್ಯಾಗ್ರಹಾಶ್ರಮ [illegible]]

ನಿಷ್ಪಾಪ ಜೀವನವು ಆಧ್ಯಾತ್ಮಿಕ ಉನ್ನತಿಯ ಮೊದಲನೇ ಸೋಪಾನವು. ಭಗವದ್ಗೀತೆಯಲ್ಲಿ '**ಕ್ಷೀಣಕಲ್ಮಷಾಃ**' ಎಂದು ಹೇಳಿದ ಹಾಗೆ ಜ್ಞಾನಿಜನರು ರಂಜಿಸುವಿಯುತ್ತಾರೆ ಒಕ್ಕಲತನದಂಥ ನೈಸರ್ಗಿಕ ಮತ್ತು ನಿಷ್ಪಾಪ ವ್ಯವಸಾಯವು ನಿಜವಾದ ಜ್ಞಾನಿ ಜನರಿಗೆ ಯೋಗ್ಯ ತೋರುವದರಲ್ಲಿ ಏನು ಆಶ್ಚರ್ಯ? ಈಗಿನ ವಿದ್ಯಾ ಕಲಿತವರಿಗೆ ದನಕಾಯುವದು ಕೀಳು ಕೆಲಸವೆಂದು ಕಾಣುತ್ತದೆ. ಇದೇ ಅವರು ಕಲಿತ ವಿದ್ಯೆಯ ಹೀನತೆಯ ಲಕ್ಷಣ. ಈಗಿನ ಬ್ರಾಹ್ಮಣ ಸಮಾಜದಲ್ಲಿ ನಿಷ್ಪಾಪ ಜೀವನ ನಡಿಸುವ ಬ್ರಾಹ್ಮಣರು ಅತಿ ವಿರಳರೆಂದು ಕಾಣಬರುತ್ತದೆ. ಈ ಸಮಾಜದ ಬಹು ಸಂಖ್ಯಾಕ ಜನರು ಹೀನವಾದ ನೌಕರಿ, ಮತ್ತು ದಾಸ್ಯವನ್ನು ಮಾಡುತ್ತಲಿದ್ದಾರೆ. ಇಂಥಾ ಜನರ ಕಡೆಯಿಂದ ಬ್ರಾಹ್ಮಣ್ಯದ ಅಪೇಕ್ಷೆ ಹೇಗೆ ಮಾಡಬೇಕು. ಒಕ್ಕಲತನ, ವ್ಯಾಪಾರ ಮೊದಲಾದ ಸ್ವತಂತ್ರ ಕೆಲಸ ಮಾಡುವ ಬ್ರಾಹ್ಮಣರೊಳಗೆ ಯಾರು ಧರ್ಮದಿಂದ ನಡೆಯುತ್ತಾರೆಯೋ ಅವರ ಕಡೆಯಿಂದಲೇ ಬ್ರಾಹ್ಮಣ್ಯದ ಅಪೇಕ್ಷೆ ಮಾಡಬಹುದೇ ಹೊರತು ಆಲಸ್ಯದಲ್ಲಿ ಕಾಲ ಕಳೆಯುವ ಜಮೀನದಾರರು ಮತ್ತು ಮೋಸದಿಂದ ವ್ಯವಹಾರ ನಡಿಸುವ ವ್ಯಾಪಾರಿಗಳಿಂದ ಅದು ಆಗದು. ಇದು ಗೃಹಸ್ಥ ಬ್ರಾಹ್ಮಣರ ವಿಚಾರವಾಯಿತು. ವೈದಿಕ ಬ್ರಾಹ್ಮಣರಲ್ಲಿ ಯಾರು ಧರ್ಮದ ಕೆಲಸದಲ್ಲಿಯೇ ನಿರತರಾಗಿರುವ ಸಲುವಾಗಿ ಪ್ರತಿಗ್ರಹದ ಮೇಲೆಯೇ ನಿರ್ಮಲ ಮನಸ್ಸಿನಿಂದ ಉಪಜೀವಿಸುತ್ತಾರೆಯೋ ಅವರೇ ಬ್ರಾಹ್ಮಣ್ಯ ರಕ್ಷಕರೇ ಹೊರತು ಉಪಾಧ್ಯಾಯರ ಕೆಲಸಮಾಡಿ ಊಟದ ಆಮಂತ್ರಣದ ಹಾದಿಯನ್ನೇ ನೋಡುತ್ತಿರುವ ವೈದಿಕ ಜನರ ಕಡೆಯಿಂದ ಅದು ಆಗದು.

ಧಾರವಾಡದ ಬ್ರಾಹ್ಮಣ ಸಂಸದಭಿವರ್ಧಿನಿ ಸಭೆಯ ಠರಾವುಗಳನ್ನು ನೋಡಿದರೆ ಬ್ರಾಹ್ಮಣ್ಯ ರಕ್ಷಣದ ಅವರ ಪ್ರಯತ್ನವು ಯೋಗ್ಯವೆಂದು ಹೇಳಬಹುದು. ಸೇವಾವೃತ್ತಿಯಲ್ಲಿಯೇ ಮಗ್ನರಾಗಿದ್ದ ಬಹು ಸಂಖ್ಯಾಕ ಸಮಾಜಕ್ಕೆ ಮತ್ತು ಊಟದ ಆಮಂತ್ರಣದ ದಾರೀ ನೋಡುವ ಭಿಕ್ಷುಕರಿಗೆ ಏನಾದರೂ ನಿಷ್ಪಾಪ ಉಪಜೀವನದ ಸ್ವತಂತ್ರ ಸಾಧನ ಸಿಕ್ಕರೆ ಅದು ಅವರ ಆಧ್ಯಾತ್ಮಿಕ ಉನ್ನತಿಗೆ ನಿಶ್ಚಿತವಾಗಿಯೂ ಸಹಾಯವಾಗುವದು. ಸೇವಾವೃತ್ತಿ ಮತ್ತು ಪರಾನ್ನ ವೃತ್ತಿಯಿಂದ ಸಾಮಾನ್ಯ ನೀತಿಯ ಕಲ್ಪನೆಯು ಕೂಡಾ ಅಳಿದುಹೋಗಿದೆ. ಇನ್ನು ಆಧ್ಯಾತ್ಮಿಕ, ಉನ್ನತಿಯ ಬಗ್ಗೆ ಏನು ಹೇಳಬೇಕು? ಅದಕ್ಕೆ ಪುಣ್ಯಮಯ ವ್ಯವಸಾಯವೇ ಆತ್ಮೋನ್ನತಿಯ ಮೊದಲನೇ ಸಾಧನ ಎಂಬುದನು ಮರೆಯಕೂಡದು.

ಮಹಾನುಭಾವರಾದ ಬಸವೇಶ್ವರರ ಕಾಯಕವೇ ಕೈಲಾಸ. ಉಕ್ತಿಯನಿಗೆ ಈ ವಚನದ ಸೂಕ್ಷ್ಮ ವಿಚಾರ ಮಾಡಿದರೆ

(೬ನೇ ಪುಟ ನೋಡಿರಿ)

ತಿಂಗಳಲ್ಲಿ ಗಡಿಬಿಡಿಯಿಂದ ಶಾಲೆಯನ್ನು ತೆಗೆದು, ಹುಡುಗರನ್ನು ಹಿಡಿದು, ಅವರಿಂದ ಫೀ ಹಣ ವಸೂಲಮಾಡಿ ಈಗ್ಗೆ ಶಾಲೆಯ ಸುದ್ದಿಯನ್ನು ಸಹ ತೆಗೆಯದೇ ವಿದ್ಯಾರ್ಥಿಗಳಿಗೆ ಅನಾನುಕೂಲತೆಗಳನ್ನು ಒದಗಿಸಿಕೊಡುವದು ಯಾವ ನ್ಯಾಯ? ಈ ಶಾಲೆಯ ಬಗ್ಗೆ ಮೊದಲು ಪ್ರಕಟಿಸಿಯನ್ನು ತೆಗೆದ ಶ್ರೀ. ನರಗುಂದ ಜಯರಾಯರೂ, ಮುಖ್ಯ ಅಧ್ಯಾಪಕರಾದ ಶ್ರೀ. ಜೋಶಿಯವರೂ ಮಂಡಲದ ಚೇರಮನ್ನರಾದ ಶ್ರೀ. ಪಟವರ್ಧನ ದುರ್ಗೋಪಂತರೂ ಈ ಬಗ್ಗೆ ಉತ್ತರ ಕೊಡಬಲ್ಲರೋ? ಈ ವಿಷಯದ ಮೇಲೆ ನಮ್ಮ ಕಡೆಗೆ ಹಲವು ತಕರಾರುಗಳು ಬಂದಿವೆ. ಸಾರ್ವಜನಿಕ ರೀತಿಯಿಂದ ಆ ಬಗ್ಗೆ ವಿಚಾರಿಸುವ ಮೊದಲು ಈ ಕೆಳಗಿನ ಪ್ರಶ್ನೆಗಳಿಗೆ ಸಹ, ಈ ಶಾಲೆಗೆ ಮುಖ್ಯ ಜವಾಬದಾರಿಯಾಗಿದ್ದ ಮೇಲಿನ ಮೂವರಾಗಲೀ, ವ್ಯವಸ್ಥಾಪಕ ಮಂಡಲದ ಸಭಾಸದರಾಗಲೀ ಉತ್ತರ ಕೊಡಬೇಕಾಗಿ ಸೂಚನೆಯದೆ. (೧) ವಿದ್ಯಾರ್ಥಿಗಳಿಗೆ "ನೀವು ಬೇರೆಕಡೆಗೆ ಹೋಗುವ ವಿಚಾರಮಾಡಬೇಡಿ' ಈ ಶಾಲೆಯನ್ನು ನಾವು ಕಾಯಂವಾಗಿ ಮಾಡುವೆವೆ" ಎಂಬದಾಗಿ ಅಭಿವಚನವನ್ನಿತ್ತವರಾರು? (೨) ಈ ಶಾಲೆಗೆ ಮೂಲ ಉತ್ಪಾದಕರಾರು? (೩) ಉತ್ಪಾದಕರು ಯಾವ ಬಗೆಯಿಂದ ವಿಚಾರಿಸಿ ಶಾಲೆ ತೆಗೆಯುವ ಜವಾಬ್ದಾರಿಯನ್ನು ಹೊತ್ತರು? (೪) ಆ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವದೇಕೆ? (೫) ಈ ಶಾಲೆಯ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವದು ಉತ್ಪಾದಕರಿಗೂ, ವ್ಯವಸ್ಥಾಪಕ ಮಂಡಲಿಗೂ, ಶಾಲೆಯ ಮುಖ್ಯ ಅಧ್ಯಾಪಕರಿಗೂ ಭೂಷಣವೇ? (೬) ಶಾಲೆಯನ್ನು ಸ್ಥಾಪಿಸುವಂಥ ಮಹಾ ಪ್ರಸಂಗವೇನಿದ್ದಿತು? (೭) ಈಗ್ಗೆ ಅದನ್ನು ಏಕಾಏಕಿ ಏಕಕಾಲಕ್ಕೆ ಬಂದುಮಾಡಲು ಅಂಥ ಮಹಾ ಸಂಕಟಗಳೇನು ಉಂಟಾದವು? (೮) ಶಾಲೆಯು ಪ್ರಾರಂಭವಾದುದೆಂದು? ಮೇ ತಿಂಗಳ ಸೂಟಿಗಾಗಿ ಬಂದಾದುದೆಂದು? ಈ ಅವಧಿಯಲ್ಲಿ ಎಷ್ಟು ದಿನ ವರ್ಗಗಳು ನಡೆದವು? ಆ ವರ್ಗಗಳನ್ನು ಕಲಿಸಿದವರಾರು? (೯) ಶಿಕ್ಷಕರೆಷ್ಟು ಜನರಿದ್ದರು? ಅವರಿಗೆ ಯಾವ ಯಾವ ಬಗೆಯ ಕರಾರುಗಳು ಕಲ್ಪಿಸಲ್ಪಟ್ಟಿದ್ದವು? (೧೦) ಸಂಬಳ ಪಡೆದು ಕೆಲಸಮಾಡತಕ್ಕವರೆಷ್ಟು? ಸಂಬಳವಿಲ್ಲದೇ ಕೆಲಸ ಮಾಡತಕ್ಕವರೆಷ್ಟು? (೧೧) ಯಾರ್ಯಾರಿಗೆ ಎಷ್ಟೆಷ್ಟು ಪಗಾರ ಗೊತ್ತುಮಾಡಿತ್ತು? ಯಾರು ಗೊತ್ತುಮಾಡಿದ್ದರು? (೧೨) ಒಟ್ಟಿಗೆ ಫೀ ರೂಪದಿಂದಾಗಲೀ, ಅನ್ಯರೀತಿಯಿಂದಾಗಲೀ, ಹಣವು ವಸೂಲಾದದ್ದೆಷ್ಟು? ಅದರ ವಿನಿಯೋಗವು ಯಾವ ಬಗೆಯಿಂದಾಗಿದೆ? (೧೩) ಯಾವ ಯಾವ ಶಿಕ್ಷಕರಿಗೆ ಎಷ್ಟು ಎಷ್ಟು ಪಗಾರವು ತಪ್ಪಿದೆ? (೧೪) ವಸೂಲಾದ ಹಣವು ಯಾರ ಕಡೆಗೆ ಜಮೆಯಿರತಕ್ಕದ್ದೆಂಬದಾಗಿ ಏನಾದರೂ ನಿರ್ಬಂಧವಿದ್ದಿತೋ? (೧೫) ಇದ್ದರೆ ಆ ನಿಯಮವು ಪಾಲಿಸಲ್ಪಟ್ಟಿರುವದೋ? ಅಥವಾ ಉಲ್ಲಂಘಿಸಲ್ಪಟ್ಟಿದೆಯೋ? ಉಲ್ಲಂಘಿಸಲ್ಪಟ್ಟಿದ್ದರೆ ಯಾಕೆ?-ಅದರ ಜವಾಬ್ದಾರಿಯು ಯಾರ ಮೇಲೆ? ಇವೆ. ಈ ಪ್ರಶ್ನೆಗಳಿಗೆ ಪ್ರತಿಷ್ಠಿತ ಗೃಹಸ್ಥರಿಂದ ಉತ್ತರ ಬಂದವೇಳೆ ಹೆಚ್ಚಾಗಿ ಬರೆಯುವೆವು

ದಾರಿದ್ರ್ಯದ ಲಕ್ಷಣಗಳನ್ನು ತಿಳಿದುಕೊಳ್ಳುವ ಮತ್ತು ದುಷ್ಕಾಳವು ಇಂಥಲ್ಲಿ ನಿಜವಾಗಿಯೂ ಇದೆ ಎಂಬದಾಗಿ ಸಿದ್ಧಪಡಿಸುವ ಕೆಲವು ಮಾರ್ಗದರ್ಶಕ ಸಂಗತಿಗಳನ್ನು ನಮ್ಮ ದಯಾಳು ಮಾಬಾಪ ಸರಕಾರವು ಗೊತ್ತುಪಡಿಸಿಕೊಂಡಿಟ್ಟಿದೆ. ಕಳವು ಹೆಚ್ಚಾಗುವದು, ಭಿಕ್ಷುಕರ ಸಂಖ್ಯೆಯು ಬೆಳೆಯುವದು, ಜನರು ದುಷ್ಕಾಳವಿದ್ದ ಪ್ರದೇಶವನ್ನು ಬಿಟ್ಟು ಹೋಗುವದು, ಸಾಮಾನುಗಳ ಬೆಲೆ ಏರುವದು. ಇವೇ ಮೊದಲಾದ ಸಂಗತಿಗಳು ಯಾವದೊಂದು ಪ್ರದೇಶದಲ್ಲಿ ಉಂಟಾಗಿದ್ದರೆ ಅಲ್ಲಿ ಬರಗಾಲವಿದೆಯೆಂದು ಸರಕಾರದವರು ನಿರ್ಣಯಿಸುವರು. ಈ ಲಕ್ಷಣಗಳು ಇತ್ತಿತ್ತ ಭರತಖಂಡದ ತುಂಬೆಲ್ಲ ಹೆಚ್ಚಾಗಹತ್ತಿ ಬ್ಯಾಂಕಿನಲ್ಲಿಯ ನೋಟುಗಳು ಮಾಯವಾಗುವದು, ಕಿಸೆ ಕತ್ತರಿಸುವದು, ಹೊಟ್ಟೆ ಸಹುಮಾಡುವದು. ಕನ್ನ ಹಾಕುವದು, ಸುಶಿಕ್ಷಿತರು ಸಹ ಹೊಟ್ಟೆಗಿಲ್ಲದೆ ಭಿಕ್ಷುಕರಂತೆ ತಿರುಗಾಡುವದು ಹಳ್ಳಿಗಳಿಂದ ಪಟ್ಟಣಕ್ಕೂ ಒಂದು ಊರಿನಿಂದ ಇನ್ನೊಂದು ಊರಿಗೂ ಒಂದು ಜಿಲ್ಲೆಯಿಂದ ಬೇರೊಂದು ಜಿಲ್ಲೆಗೂ ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತಕ್ಕೂ ಹೊಟ್ಟೆ ತುಂಬಿಕೊಳ್ಳುವದಕ್ಕಾಗಿ ಓಡಾಡುವದು ಇವೇ ಮೊದಲಾದ ಕೃತಿಗಳನ್ನು ಹಿಂದುಸ್ಥಾನದಲ್ಲಿ ಹೆಚ್ಚಾಗಿ ಕಾಣಬರುವವು. ಇತ್ತಿತ್ತ ಯುರೋಪಿಯನ್ನರು ಸಹ ನೀಚ ಕೆಲಸಗಳನ್ನು ಮಾಡುವದು ಹೆಚ್ಚಾಗಿದೆ. ಕಲಕತ್ತೆಯಲ್ಲಿ ಕೆಲವು ದಿವಸಗಳ ಹಿಂದೆ ಯುರೋಪಿಯರು ಮನೆಗೆ ಕನ್ನಹಾಕಿದ್ದರು. ಮುಂಬೈಯಲ್ಲಿ ಒಬ್ಬ ಪೋಲೀಸ ಅಧಿಕಾರಿಯು ಮೋಸ ಮೋಸ್ತೆ ಜೋಂಪಿನ ಬಗ್ಗೆ ಕೆಲಸ ಕಳೆದುಕೊಂಡನು. ಮದ್ರಾಸಿನಲ್ಲಿ ಓರ್ವ ಕ್ರಿಶ್ಚನ್ನನು ತನ್ನ ಅಣ್ಣನು ಮುಂಡಸ್ಸರಿಂದ ತನಗೆ ಹಣ ಬೇಕಾಗಿದೆಂದು ಜನರಿಗೆ ಹೋಗಿ ಸುಳ್ಳು ಹೇಳಿ ಹಣ ಎಬ್ಬಿಸಿದನು. ಈ ಯುರೋಪಿಯನ್ನರ ವಿಷಯವನ್ನು ನಾವು ಬೇಕೆಂದೇ ಒತ್ತಿ ಹೇಳುತ್ತೇವೆ. ಯಾಕಂದರೆ ಹಿಂದುಸ್ಥಾನದವರು (ರಾಜ್ಯಕ್ರಾಂತಿಯ ವಿಷಯಗಳನ್ನು ಬಿಟ್ಟು) ಏನು ಮಾಡಿದರೂ ಸರಕಾರದ ದೃಷ್ಟಿಯು ಅತ್ತ ಹೋಗುವದಿಲ್ಲ. ಯುರೋಪಿಯನ್ನರು ಈ ಅನೀತಿ ಕೃತಿಗಳನ್ನು ಮಾಡಿದ್ದು ಸರಕಾರಕ್ಕೆ ಬೇಗನೆ ಗೊತ್ತಾಗುವದು. ಇತ್ತಿತ್ತ ಸರಕಾರೀ ಖೊಕ್ಕಸದಲ್ಲಿ ಐದು ಸಾವಿರ ರೂಪಾಯಿಗಳ ಸರಕಾರೀ ಹಣ ಇಲ್ಲದಿರುವದೂ, ಪೋಸ್ಟಿನಲ್ಲಿ ಯುರೋಪಿಯನು ಹಿಂದೀ ಜನರೂ ಕೂಡಿ ಎರಡರಡು ಸಾವಿರ ರೂಪಾಯಿಗಳನ್ನು ಎತ್ತಿಹಾಕುವದೂ ಸರಕಾರದ ಲಕ್ಷ್ಯಕ್ಕೆ ಬಂದಿವೆ. ಖೊಟ್ಟಿ ನಾಣ್ಯ, ನೋಟುಗಳು ಎಲ್ಲ ಕಡೆಗೂ ಉದ್ಭವಿಸಹತ್ತಿವೆ. ಇವೆಲ್ಲ ಸಂಗತಿಗಳಿಂದ ಸರಕಾರಕ್ಕೆ ಬಿಸಿ ಹತ್ತದೇ ಇರದು. ಬ್ಯಾಂಕುಗಳಲ್ಲಿಯಾಗಲಿ, ಬೇರೆ ಮನೆಗಳಲ್ಲಾಗಲೀ ಕಳವುಗಳಾದರೆ ಪೋಲೀಸರು ಇರುವರು. ನ್ಯಾಯ ಕಚೇರಿಗಳು ಇರುವವು. ಅಲ್ಲಿ ಅವುಗಳ ವಿಚಾರಣೆಯಾಗುವದು. ಆದರೆ ದಿನದ ದಿನ ಹೆಚ್ಚಾಗುತ್ತಿರುವ ಸರಕಾರದ ಲಕ್ಷ್ಯವು ಅತ್ತ ಹೋಗದು ದರೆ ಈಗ್ಗೆ ನಾವು ಮೇಲೆ ಉಲ್ಲೇಖಿಸಿದ ಸಂಗತಿಗಳಿಂದ [illegible] ರದ ಮನೆಯಲ್ಲಿಯೂ ಕಳವು ನಡೆದಿದೆಂಬದೂ, ಸರಕಾರದ ರಾಜ್ಯಸೂತ್ರಗಳು ಯಾರ ಕೈಯಲ್ಲಿದೆಯೋ ಅವರ ಜಾತಿಯವರೇ ಅನೀತಿಕೃತಿಗಳಲ್ಲಿ ತೊಡಗಿರುವರೆಂಬದೂ ಸ್ಪಷ್ಟವಾಗುವದು. ಇದರಿಂದಲಾದರೂ ಸರಕಾರದವರು ಕೊಂಚಮಟ್ಟಿಗೆ ಈಗ್ಗೆ ಕಳವು, ಸುಳ್ಳುತನ, ಖೊಟ್ಟಿನಾಣ್ಯ, ನೋಟು ಇವುಗಳು ಏಕೆ ಹೆಚ್ಚಾಗಹತ್ತಿವೆಂಬದನ್ನು ಶೋಧಿಸಿದರೆ ಬರುವದಾಗಿದೆ. ಇದೇ ಸಂಗತಿಗಳಿಂದ ಇಂದಿನಿಂದ ಪ್ರದೇಶದಲ್ಲಿ ದುಷ್ಕಾಳವಿದೆಂಬದನ್ನು ನಿಶ್ಚಯಿಸುವರು. ಹಿಂದುಸ್ಥಾನದ ತುಂಬೆಲ್ಲಾ ಪ್ರತಿಬಂಧವಿಲ್ಲದೇ ಇಂಥ ಕೃತಿಗಳು ಹೆಚ್ಚಾಗಹತ್ತಿವೆಂಬದನ್ನು ತಿಳಿದುಕೊಂಡು ಹಿಂದುಸ್ಥಾನದಲ್ಲಿ ಎಲ್ಲ ಕಡೆಗೂ ಬರಗಾಲವಿದೆಂಬದನ್ನು ಸರಕಾರದವರು ತಿಳಿದುಕೊಳ್ಳಬೇಕು. ಹಿಂದುಸ್ಥಾನದಲ್ಲಿ ದಾರಿದ್ರ್ಯವು ಹೆಚ್ಚಾಗಿದೆ, ಒಪ್ಪತ್ತು ಸಹ ಬಡವರ ಹೊಟ್ಟೆಯು ತುಂಬುವದಿಲ್ಲ, ಎಂಬ ವಿಧಾನಗಳು ಸಮಂಜಸವಾಗಿಲ್ಲವೆಂದು ಬಣ್ಣದ ಮಾತುಗಳನ್ನಾಡುವ ಮಾಬಾಪ ಸರಕಾರದ ಹೃದಯವು ಏನಾದರೂ ಕರಗುವದಿಲ್ಲವೆಂಬದನ್ನು ನಾವು ಅರಿತಿರುವೆವು. ಆದರೂ ಹಿಂದುಸ್ಥಾನದ ದಾರಿದ್ರ್ಯ ವಿಷಯವು ಕಣ್ಮುಂದೆ ಬಂದಿತೆಂದರೆ ಏನೂ ಬರೆಯದಿರುವದು ಯಾವನಿಗೂ ಶಕ್ಯವಿಲ್ಲ. ಕಾಗೆಯಂತೆ ಕಂಗಾಲಾಗಿರುವ ಹಿಂದುಸ್ಥಾನಕ್ಕೆ 'ಕಾಕಾ' ಎಂಬದಾಗಿ ಒದರುವ ಹೊರತು ಮಾರ್ಗ ಉಳಿದಂತಾಗಿದೆ. ಎಂಥ ಕನಿಕರ ಸ್ಥಿತಿಯಿದ

ಪುಸ್ತಕ ಪರೀಕ್ಷಣ

ಲಘುಕಾವ್ಯ ಮಾಲೆ ೨

೧ ಸಂಪಾದಕ ನಾ. ಶ್ರೀ. ಕುಲಕರ್ಣಿ ಧಾರವಾಡ

‘ತನುವಿಲ್ಲದಲ್ಲಿ ಪ್ರಾಣಪ್ರತಿಷ್ಠೆಯನ್ನು ಮಾಡುವುದೇ ಈ ಕಾವ್ಯ ಮಾಲೆಯ ಉದ್ದೇಶವೆಂದು ತೋರುತ್ತದೆ. ಆದರೆ ಈ ಉದ್ದೇಶವು ಎರಡೂ ಪುಸ್ತಕಗಳಲ್ಲಿಯೂ ಈಡೇರಿಲ್ಲವೆಂದು ನಿರಾತಂಕವಾಗಿ ಹೇಳಬಹುದು. ‘ಕರ್ನಾಟಕದ ಮೊದಲನೆಯ ಜೋಹರ’ವೆಂಬೊಡನೆ ವಾಚಕರಲ್ಲಿ ಅತಿಶಯವಾದ ಕುತೂಹಲವುಂಟಾಗುವುದು ಸ್ವಾಭಾವಿಕವು. ಅದ್ಭುತವಾದ ಕಥಾವಸ್ತುವೂ, ರೋಮಾಂಚನಕವಾದ ವೀರಾವೇಶದ ನುಡಿಗಳೂ, ಅಸ್ಪೃಹಣೀಯತೆಯನ್ನು ಹರಿಯಿಸುವಂಥ ಸಂಘಟನೆಗಳೂ ಈ ಕಾವ್ಯದಲ್ಲಿ ಅನೇಕವಾಗಿರಬಹುದೆಂದು ವಾಚಕರು ಊಹಿಸಬಹುದು. ಈ ಕಾವ್ಯದಲ್ಲಿ ಹೃದಯಂಗಮವಾದ ಕಥಾಸಂವಿಧಾನವೂ ಇಲ್ಲ. ರಚನಾ ಕೌಶಲ್ಯವೂ ಇಲ್ಲ. ರಸಭಾವಗಳ ಹೆಸರನ್ನೆತ್ತಬಾರದು. ಓದಲು ಸಪ್ಪಗಿರುತ್ತದೆ. ಕೆಲವೆಡೆಯಲ್ಲಿ ಕಾವ್ಯದ ಗಂಧವೂ ಕೂಡ ಇಲ್ಲ. ಉದಾ: “ಹೊತ್ತು ಕಳೆದು ಪಯೋಗವೇನು.” ‘ಪಂಪೆಯಸು ಪಟ್ಟಣದ ಬಿಡುತಾಗರಗಳಿಗೆ’ ಪದ-ಪೌರ್ವಾಪರ್ಯವಿಲ್ಲ; ತಾನ ನಾಂದಯು...

ತಮ್ಮ ಸುಯೋಗವನ್ನು ಬಯಸುವ

ಬಿ. ವಿ. ರಾಮರಾವ್ ಮತ್ತು ಸಹೋದರರು

ಮತ್ತು

ಹಸೂಡಿ ಬಂಧುಗಳು

ಮಹಾರಾಷ್ಟ್ರದಲ್ಲಿ ಕನ್ನಡ ಹೆಸರಿನ ಊರುಗಳು.

ಸಾತಾರೆ ಸೊಲಾಪೂರ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಕನ್ನಡವನ್ನಾಡುತ್ತಾರೆ. ಅವು ಕರ್ನಾಟಕದೊಳಗಿನವೇ ಇರುತ್ತವೆ. ಆದರೆ ಕನ್ನಡದ ಗ್ರಂಥವನ್ನು ಸಹ ಅರಿಯದ ಆ ಜಿಲ್ಲೆಗಳ ಉಳಿದ ಭಾಗಗಳಲ್ಲಿಯೂ ಬೇರೆ ಜಿಲ್ಲೆಗಳಲ್ಲಿಯೂ ಇರುವ ಕೆಲವು ಊರುಗಳ ಹೆಸರುಗಳು ಕನ್ನಡ ಜನ್ಯವಿರುತ್ತವೆ. ಅವನ್ನು ನೋಡಿ ಮೊದಲಿನ ಕಾಲದ ಕರ್ನಾಟಕ ಸಾಮ್ರಾಜ್ಯದ ಕಲ್ಪನೆಯು ಬರುತ್ತದೆ. ಈಗ್ಗೆ ಇಂಗ್ಲೀಷ ಸಾಮ್ರಾಜ್ಯದ ಪ್ರಾಬಲ್ಯವಿದ್ದ ಕಾರಣ ಎಲ್ಲೆಲ್ಲಿಯೂ ಇಂಗ್ಲೀಷ ಹೆಸರುಗಳು ಕಂಡುಬರುವಂತೆ ಒಂದು ಕಾಲದಲ್ಲಿ ಮಹಾರಾಷ್ಟ್ರದಲ್ಲಿ ಕನ್ನಡ ಹೆಸರುಗಳನ್ನು ಊರಿಗೆ ಇಡುವ ಸಂಪ್ರದಾಯವಿದ್ದಂತೆ ತೋರುತ್ತದೆ. ಕನ್ನಡ ಹೆಸರಿನ ಊರುಗಳುಳ್ಳ ಪ್ರದೇಶದ ಮೇಲೆ ಕರ್ನಾಟಕದ ಸಾಮ್ರಾಜ್ಯವಿದ್ದಿತೆಂದು ಹೇಳಲಿಕ್ಕೆ ಬಾರದಿದ್ದರೂ ಕರ್ನಾಟಕ ಸಾಮ್ರಾಜ್ಯದ ಪ್ರಾಬಲ್ಯವು ಆ ಕಾಲಕ್ಕೆ ಇತ್ತೆಂಬುದು ನಿರ್ಣಯವಾದ ಮಾತು.

ಊರು— ದೆಪ್ಪೂರ ಸಾಂಡೂರ (ಪುಣೆ ಜಿಲ್ಲಾ)
ಕಟ್ಟಿ— ಭಿಲಕಟ್ಟಿ (ಸಾತಾರಾ ಜಿಲ್ಲಾ ಫಲಟಣ ಸಂಸ್ಥಾನ)
ಬಾವಿ— ಮಿಟಬಾವಿ (ಪುಣೆ ಜಿಲ್ಲಾ) ಕುರುಬಾವಿ (ಸೊಲಾಪೂರ ಜಿಲ್ಲಾ)

ಮೇಲೆ ಹೇಳಿದ ಊರುಗಳನ್ನು ನಾನು ಸ್ವತಃ ನೋಡಿದ್ದೇನೆ. ಅವುಗಳ ಹೊರತು ನಾನು ಕೇಳಿದ ಇನ್ನೂ ಕೆಲವು ಊರುಗಳವೆ ಪ್ರಯತ್ನ ಮಾಡಿದರೆ ಮತ್ತೂ ಕೆಲವು ಗೊತ್ತಾಗಬಹುದು.

ದೌಂಡ, ಪುಣೇ ಜಿಲ್ಲಾ — ರಾಮಸುಂದರ ನರಸಿಂಹ ಆಚಾರ್ಯ ಪುಣೆಕರ

(ಈಗಿನ ಮಹಾರಾಷ್ಟ್ರವು ಹಿಂದಕ್ಕೆ ಕರ್ನಾಟಕದ ಭಾಗವಾಗಿದ್ದಿತು. ಗೋದಾವರಿಯ ವರೆಗೂ ಕರ್ನಾಟಕವಿದ್ದಿತು. ಆದಪರಿಂದಲೇ ಕನ್ನಡ ಹೆಸರಿನ ಊರುಗಳು ಮಹಾರಾಷ್ಟ್ರದಲ್ಲಿ ದೊರೆಯುತ್ತವೆ. ಸಂ. ಕ.)

ನಿಷ್ಪಾಪ ಜೀವನ

ಮತ್ತು

— ಬ್ರಾಹ್ಮಣ್ಯ —

[ಲೇಖಕ— ಲಕ್ಷ್ಮಣ ರಘುನಾಥ ಭಿಡೆ ಸತ್ಯಾಗ್ರಹಾಶ್ರಮ ಹರಿಹರ]

ನಿಷ್ಪಾಪ ಜೀವನವು ಆಧ್ಯಾತ್ಮಿಕ ಉನ್ನತಿಯ ಮೊದಲನೇ ಸಾಧನವೆಂದು ಅಥರ್ವಣವೇದದಲ್ಲಿ ‘...’ ಎಂದು ಹೇಳಿದ ಹಾಗೆ ಜ್ಞಾನಿಜನರು ರಚಿಸಿಕೊಂಡಿರುತ್ತಾರೆ. ಒಕ್ಕಲತನದಂಥ ನೈಸರ್ಗಿಕ ಮತ್ತು ನಿಷ್ಪಾಪ ವ್ಯವಸಾಯವು ನಿಜವಾದ ಬ್ರಾಹ್ಮಣ ಜನರಿಗೆ ಯೋಗ್ಯ ತೋರಿದ್ದರೆ ಅವರಲ್ಲಿ ಏನು ಆಶ್ಚರ್ಯ? ಈಗಿನ ವಿದ್ಯಾ ಕಲಿತವರಿಗೆ ದಣಿಯುವದು ಕೀಳು ಕೆಲಸವೆಂದು ಕಾಣುತ್ತದೆ. ಇದೇ ಅವರು ಕಲಿತ ವಿದ್ಯೆಯ ಹೀನತೆಯ ಲಕ್ಷಣ. ಈಗಿನ ಬ್ರಾಹ್ಮಣ ಸಮಾಜದಲ್ಲಿ ನಿಷ್ಪಾಪ ಜೀವನ ನಡಿಸುವ ಬ್ರಾಹ್ಮಣರು ಅತಿ ವಿರಳರೆಂದು ಕಾಣಬರುತ್ತದೆ. ಈ ಸಮಾಜದ ಬಹು ಸಂಖ್ಯಾಕ ಜನರು ಹೀನವಾದ ನೌಕರಿ, ಮತ್ತು ವಾಶಪುಯ ವಕೀಲಿ ಮಾಡುತ್ತಲಿದ್ದಾರೆ. ಇಂಥಾ ಜನರ ಕಡೆಯಿಂದ ಬ್ರಾಹ್ಮಣ್ಯದ ಅಪೇಕ್ಷೆ ಹೇಗೆ ಮಾಡಬೇಕು. ಒಕ್ಕಲತನ, ವ್ಯಾಪಾರ ಮೊದಲಾದ ಸ್ವತಂತ್ರ ಕೆಲಸ ಮಾಡುವ ಬ್ರಾಹ್ಮಣರೊಳಗ ಯಾರು ಧರ್ಮದಿಂದ ನಡೆಯುತ್ತಾರೆಯೋ ಅವರ ಕಡೆಯಿಂದಲೇ ಬ್ರಾಹ್ಮಣ್ಯದ ಅಪೇಕ್ಷೆ ಮಾಡಬಹುದೇ ಹೊರತು ಆಲಸ್ಯದಲ್ಲಿ ಕಾಲ ಕಳೆಯುವ ಜಮೀನದಾರರು ಮತ್ತು ಮೋಸದಿಂದ ವ್ಯವಹಾರ ನಡಿಸುವ ವ್ಯಾಪಾರಿಗಳಿಂದ ಅದು ಆಗದು. ಇದು ಗೃಹಸ್ಥ ಬ್ರಾಹ್ಮಣರ ವಿಚಾರವಾಯಿತು. ವೈದಿಕ ಬ್ರಾಹ್ಮಣರಲ್ಲಿ ಯಾರು ಧರ್ಮದ ಕೆಲಸದಲ್ಲಿಯೇ ನಿರತರಾಗಿರುವ ಸಲ್ವವಾಗಿ ಪ್ರತಿಗ್ರಹದ ಮೇಲೆಯೇ ನಿರ್ಲೋಭದ ಮನಸ್ಸಿನಿಂದ ಉಪಜೀವಿಸುತ್ತಾರೆಯೋ ಅವರೇ ಬ್ರಾಹ್ಮಣ್ಯ ರಕ್ಷಕರೇ ಹೊರತು ಉಪಾಧ್ಯಾಯರ ಕೆಲಸಮಾಡಿ ಊಟದ ಆಮಂತ್ರಣದ ಹಾದಿಯನ್ನೇ ನೋಡುತ್ತಿರುವ ವೈದಿಕ ಜನರ ಕಡೆಯಿಂದ ಅದು ಆಗದು.

ಧಾರವಾಡದ ಬ್ರಾಹ್ಮಣ ಸಂಪದಭಿವರ್ಧಿನಿ ಸಭೆಯ ಠರಾವುಗಳನ್ನು ನೋಡಿದರೆ ಬ್ರಾಹ್ಮಣ್ಯ ರಕ್ಷಣದ ಅವರ ಪ್ರಯತ್ನವು ಯೋಗ್ಯವೆಂದು ಹೇಳಬಹುದು. ಸೇವಾವೃತ್ತಿಯಲ್ಲಿಯೇ ಮಗ್ನರಾಗಿದ್ದ ಬಹು ಸಂಖ್ಯಾಕ ಸಮಾಜಕ್ಕೆ ಮತ್ತು ಊಟದ ಆಮಂತ್ರಣದ ಹಾದಿ ನೋಡುವ ಭಿಕ್ಷುಕರಿಗೆ ಏನಾದರೂ ನಿಷ್ಪಾಪ ಉಪಜೀವನದ ಸ್ವತಂತ್ರ ಸಾಧನ ಸಿಕ್ಕರೆ ಅದು ಅವರ ಆಧ್ಯಾತ್ಮಿಕ ಉನ್ನತಿಗೆ ನಿಶ್ಚಿತವಾಗಿಯೂ ಸಹಾಯವಾಗುವದು. ಸೇವಾವೃತ್ತಿ ಮತ್ತು ಪರಾನ್ನ ಪುಷ್ಟತೆಯಿಂದ ಸಾಮಾನ್ಯ ನೀತಿಯ ಕಲ್ಪನೆಯು ಕೂಡಾ ಅಳಿದುಹೋಗಿದೆ. ಇನ್ನು ಆಧ್ಯಾತ್ಮಿಕ, ಉನ್ನತಿಯ ಬಗ್ಗೆ ಏನು ಹೇಳಬೇಕು? ಆದಕ್ಕೆ ಪುಣ್ಯಮಯ ವ್ಯವಸಾಯವೇ ಆತ್ಮೋನ್ನತಿಯ ಮೊದಲನೇ ಸಾಧನ ಎಂಬುದನ್ನು ಮರೆಯಕೂಡದು.

ಮಹಾನುಭಾವರಾದ ಬಸವೇಶ್ವರರ ಕಾಯಕವೇ ಕೈಲಾಸ. ಉತ್ತರದಿಗೆ ಈ ವಚನದ ಸೂಕ್ಷ್ಮ ವಿಚಾರ ಮಾಡಿದರೆ

(೬ನೇ ಪುಟ ನೋಡಿರಿ)

ಪೆಟ್ಟಿಗೆ ಬದಲಾಗಿವೆ.

(ನುಡಿದವರು:- ಹಾಲಕ್ಕಿ.)

ಗಾವಿಬರು ಹೇಳುವದೊಂದು ಕಥೆಯಂತು.

ಒಂದಾನೊಂದು ಸಮಯದಲ್ಲಿ ಒಬ್ಬ ದೊಡ್ಡ ಆಚಾರ್ಯರು ಒಂದೂರಿಗೆ ಹೊರಟಿದ್ದರು. ಹಾದಿಯಲ್ಲಿ ಒಂದು ಧರ್ಮಶಾಲೆಯಲ್ಲಿ ರಾತ್ರಿ ವಸತಿಯನ್ನು ಮಾಡಿದರು. ಅಲ್ಲಿಯೇ ಒಬ್ಬ ಕೆಲಸಿಗನು ಬಂದಿಳಿದು ಕೊಂಡಿದ್ದನು. ಮರುದಿನ ಬೆಳಿಗ್ಗೆ ಇಬ್ಬರೂ ಮುಂದಿನ ಕೆಲಸದ ಗಡಿಬಿಡಿಯಿಂದ ತಮ್ಮ ತಮ್ಮೂರಿಗೆ ಹೊರಟು ಹೋದರು. ಕೆಲಸಿಗನು ತನ್ನ ಕೈಚಳಕವನ್ನು ತೋರಿಸಲುತ್ಸುಕನಾಗಿ ಆತುರದಿಂದ ಪೆಟ್ಟಿಗೆ ಬಿಚ್ಚಿ ನೋಡಲು ಬೆಚ್ಚಿಬಿದ್ದನು. ಇತ್ತ ಆಚಾರ್ಯರೂ ಒಳ್ಳೆ ಭಕ್ತಿಭಾವದಿಂದ ನಿತ್ಯಪೂಜಾ ಕಾರ್ಯವನ್ನು ಸಾಂಗವಾಗಿಸಲು ಸ್ನಾನ ಸಂಧ್ಯಾದಿಗಳನ್ನು ತೀರಿಸಿಕೊಂಡ ಪೆಟ್ಟಿಗೆಯನ್ನು ಬಿಚ್ಚಿ ಒಳಗೆ ಕೈಹಾಕಿದರು. ಅದರಲ್ಲಿ ಏನೇನೋ ಆಯುಧಗಳ ಪದಾರ್ಥಗಳಿರುವವೆಂದು ಸ್ಪರ್ಶಮಾತ್ರದಿಂದ ತಿಳಿಯುತ್ತಲೆ ಶ್ರೀಹರಿ ಹೀಗೇಕೆ ಮಾಡಿಸಿದೆ? ಎಂದೆನ್ನುತ್ತ ಪೆಟ್ಟಿಗೆಯ ಮುಚ್ಚಿದರಂತೆ!

ಕಥೆ ಸಟೆಯಿರಲಿ, ದಿಟವಿರಲಿ; ಈಗ ಮಾತ್ರ ನಮ್ಮ ಪೆಟ್ಟಿಗೆಗಳು ಬದಲಾಗಿರುವದು ನಿಜ; ಏತಕ್ಕೆಂದರೆ ನಮ್ಮ ಪೆಟ್ಟಿಗೆಗಳನ್ನು ನೋಡಿದರೆ ಅದರಲ್ಲಿ ಬೇರೆ ವಿಪರೀತ ಪದಾರ್ಥಗಳೇ ತುಂಬಿಕೊಂಡಿವೆಯೆಂದು ಅನುಭವಕ್ಕೆ ಬರಹತ್ತಿದೆ. ಅವುಗಳ ಆರಾಧನೆ ಮಾಡುವದರಿಂದ ವಿಪರೀತ ಫಲಗಳೇ ಸಿಕ್ಕುತ್ತಿರುವದನ್ನು ಅಡಿಗಡಿಗೆ ಅನುಭವಿಸುತ್ತಿದ್ದೇವೆ! ಪೆಟ್ಟಿಗೆ ಬದಲಾಗಿರುವದಕ್ಕೆ ಇದಕ್ಕೂ ಮತ್ತೆ ಯಾವ ಹೆಚ್ಚಿನ ಪ್ರಮಾಣಗಳು ಬೇಕು?

ಇಂಥ ಯಾವ ಪೆಟ್ಟಿಗೆಗಳು ಬದಲಾಗಿವೆಯೆಂಬುದನ್ನು ಹೇಳಲಾ? ಕೇಳಬೇಕು, ಕೊಂಚ.

ಎಲ್ಲ ವಸ್ತು ಮಾತ್ರಗಳಿರುವಂತೆ ಧರ್ಮಕ್ಕೂ ದೇಹ, ದೇಹಿಗಳೆಂದೆರಡು ಬೇರೆ ಬೇರೆಯಾಗಿವೆ. ಆಚಾರಗಳು ದೇಹ. ಆ ಆಚಾರಗಳು ಯಾವ ತತ್ವದ ಧಾರಣೆಗಾಗಿ ಹುಟ್ಟಿವೆಯೋ ಆ ತತ್ವವೇ ದೇಹಿ. ದೇಹವು ಅನಿತ್ಯ, ದೇಹಿಯು ನಿತ್ಯ. ಕಾಲ ಸ್ಥಳ, ಪರಿಸ್ಥಿತಿಗಳಲ್ಲಿ ವ್ಯತ್ಯಾಸವಾದಂತೆ ದೇಹದ ರೂಪು, ಆಕಾರ ಬಣ್ಣ ಮೊದಲಾದವುಗಳಲ್ಲಿ ಹೆಚ್ಚು ಕಡಿಮೆಯಾಗುವದು ನಿತ್ಯ. ದೇಹಿಯು ಆತ್ಮನು ಅಮರನು. ಅವನ ಸ್ವರೂಪವು ಎಲ್ಲಿ ಯಾವಾಗಲೂ ನೋಡಿದರೂ ನಿತ್ಯ, ಸತ್ಯ, ಶುದ್ಧ, ಪವಿತ್ರವಾದುದಾಗಿ ಅನುಭವಕ್ಕೆ ಬರುತ್ತದೆ.

ಇದನ್ನು ಮರೆತು, ಪರಿಸ್ಥಿತಿಗಳಿಗಾಗಿ ಜೀವ ಹೋದಮೇಲೆ ಶವ ದೇಹಕ್ಕೆ ಕಣ್ಣೀರಿಡುತ್ತ, ಬಿಕ್ಕಿ ಬಿಕ್ಕಿ ಅತ್ತರೆ ಏನಾದರೂ ದೊರೆಯುವ ಸಂಭವವಿದೆಯೋ? ಅಥವಾ ಆ ದೇಹವು ಹಿಂದಕ್ಕೆ ಇಂಥಿಂಥ ಮಹಾ ಕಾರ್ಯಗಳನ್ನು ಮಾಡಿದೆಯೆಂದು ವಾದಿ ಹಾಡಿ ಹೇಳಿಕೊಂಡರೆ ಆ ಹೆಣವು ಇಂದು ಹೊಸ ಕೆಲಸ ಕೈಗೂಡಿಸಬಲ್ಲದೆ? ಅದಕ್ಕೆ ಶೃಂಗಾರವಾಗಲಿ ಎಂದಾದರೂ ಚೈತನ್ಯದ ಸೌಭಾಗ್ಯ ಬಂದೀತೆ?

ಹೀಗೆ ಹೆಣಕ್ಕೆ ಹೆಗಲುಗಳು ತಪ್ಪಿಕೊಂಡು ಹಾದಾಡಿ ಭೋರಾಡುತ್ತಿರುವವರಾರೆಂದು ಕೇಳುವಿರಾ? ಅದನ್ನು ಹೇಳುವೆ. ಮೊದಲು ನೀವಿಂಥವರಿಗೆ ಏನ ಅನ್ನಬಹುದು ಹೇಳಿ? ಹೊಟ್ಟೆಗಾಗಿ ಹುಚ್ಚರಾದವರು ಹೆಣ್ಣಿಗರಲ್ಲವೊ? ಹೇಡಿಗಳೆಂದೋ? ಛೀ! ಹಾಗ ಳವರಿಗಿಷ್ಟು ಕರಳು ಕೊಯ್ಯುವ ಮಾತುಗಳನ್ನಾಡಬೇಡಿರಿ, ದಯವಿಟ್ಟು ಕರಳು ಕರಗುವ ನುಡಿಗಳನ್ನಾಡಿರಿ. ಹೇಳಿರಿ ಯಾವ ದೇಹಯಂತ್ರವು ಇಷ್ಟು ದಿನಗಳ ವರೆಗೆ ಎಷ್ಟೆಷ್ಟೋ ಮಹತ್ವದ ಕಾರ್ಯಗಳನ್ನು ಮಾಡಿತೋ ಅದು ಹಳ್ಳಾಗಿಹೋಗುವಾಗ ಅದರ ಕಾರ್ಯದ ಸಿಂಹಾವಲೋಕನಮಾಡಿ ಯುಕ್ತ ಪ್ರಶಂಸಾಪರ ನುಡಿಗಳನ್ನಾಡಲು ಬೇಡವೆ? ಹೀಗೆ ಆಡದಿದ್ದರೆ ನಮ್ಮ ಪಾಲಿಗೆ ಉಪಕಾರಗೇಡಿತನದ— ಕೃತಘ್ನತನದ ಪಾಪವು ಬರುವದಿಲ್ಲವೇ?

ಕೃತಜ್ಞತಾಭಾವ ತೋರಿಸುವದಕ್ಕಿದ್ದರೂ ಕೊರಗುವದೇಕೆ? ಎಂದು ಗೊಣಗುಟ್ಟುವಿರೊ? ಇದೇನೋ ತಪ್ಪೆಂದು ಎಲ್ಲರೂ ಒಪ್ಪುವರು. ಆದರೆ ತೋರಿಸಲಿಕ್ಕೆ ಅಳುಬುರುಕತನ ಬೇಕಿಲ್ಲ.

ಮೂಢ ಸಾಂಸಾರಿಕನು ದೇಹ ಜೀವಗಳಲ್ಲಿ ಯಾವದು ಹೆಚ್ಚಿನದೆಂಬುದನ್ನರಿಯದೆ ಮರುಳನಾಗಿ ದೇಹಕ್ಕೆ ತೆಕ್ಕೆ ಬೀಳುವಂತ ಧರ್ಮ ವಿಚಾರದಲ್ಲಿಯೂ ನಮ್ಮ ಈಗಿನ ಪಾಡಾಗಿದೆ.

ಧರ್ಮದ ಜೀವವನ್ನು ತೊರೆದು, ದೇಹದ ಪೂಜೆ ನಡೆದಿದೆ. ದೇವರನ್ನು ಳಿದು ದೇಗುಲ ಪ್ರೀತಿ! ಇದೇ ಅವನತಿಯ ಲಕ್ಷಣ. ಅವನತಿಯ ಕಾರಣ. ಪೆಟ್ಟಿಗೆ ಬದಲಾಗಿದೆ!

ನಮ್ಮ ಪ್ರತಿಯೊಂದು ಆಚಾರಧರ್ಮದ ವಿಚಾರಮಾಡಿ, ಅವು ಈಗ ಸಮಾಜದಲ್ಲಿ ನಡೆದ ರೀತಿಯನ್ನು ನೋಡಿದರೆ ಜನರು ಜೀವಬಿಟ್ಟು ಬರಿ ಶರೀರಕ್ಕೆ— ಹೆಣಕ್ಕೆ ಹೀಗೆ ತೆಕ್ಕೆಬಿದ್ದು ಮುತ್ತಿಡುವರೆಂಬ ಕರುಣಾಸ್ಪದವಾದ ಚಿತ್ರವು ದೃಷ್ಟಿದುರಿಗೆ ನಿಲ್ಲುತ್ತದೆ. ಇನ್ನಾದರೂ ಪೆಟ್ಟಿಗೆ ಬದಲಾದುದನ್ನರಿತು ಬೇಗನೆ ಸರಿಪಡಿಸಿಕೊಳ್ಳುವ ಜಾಣತನವನ್ನು ತೋರಿಸುವದವಶ್ಯವಿಲ್ಲವೆ?

(ಮುಂದೆ ಸಾಗುವದು.)

ಕನ್ನಡಭಾಷೆಯ ದುರ್ಗತಿಯೂ ಅದಕ್ಕೆ ಉಪಾಯಗಳೂ

ಯಾವದೇ ಒಂದು ರಾಷ್ಟ್ರವು ಪ್ರಗತಿಯನ್ನು ಹೊಂದಬೇಕಾದರೆ ಅದಕ್ಕೆ ಉಚ್ಚ ಶಿಕ್ಷಣವು ಅವಶ್ಯವಾದದ್ದು. ಯಾವ ಶಿಕ್ಷಣದಿಂದ ಮಾನವನು ತನ್ನ ಉನ್ನತವಾದ ಕಲ್ಯಾಣವನ್ನು ಶಕ್ಯವಿದ್ದ ಮಟ್ಟಿಗೆ ಪರರ ಸಹಾಯವಿಲ್ಲದೆ ಮಾಡಿಕೊಳ್ಳಲಿಕ್ಕೆ ಸಮರ್ಥನಾಗುತ್ತಾನೋ ಅದೇ ಉಚ್ಚ ಶಿಕ್ಷಣವು. ಶಿಕ್ಷಣವು ಭಾಷೆಯ ಸಹಾಯದಿಂದಲೇ ದೊರಕಬಲ್ಲದು. ಯಾವ ಭಾಷೆಯ ದ್ವಾರದಿಂದ ವಿಚಾರದೊಳಗಿನ ಸೂಕ್ಷ್ಮತೆಗಳನ್ನು ವ್ಯಕ್ತ ಮಾಡುವದು ಸುಲಭವೋ ಅದೇ ಭಾಷೆಯು ಉಚ್ಚ ಶಿಕ್ಷಣ ಕೊಡಲಿಕ್ಕೆ ಯೋಗ್ಯವಾದದ್ದು. ಅದು ಕನ್ನಡವೇ ಆಗಲಿ, ಸಂಸ್ಕೃತವೇ ಆಗಲಿ, ಇಂಗ್ಲಿಷವೇ ಆಗಲಿ. ಅನಾದಿಯಿಂದ ಇಂದಿನ ಕಾಲಗಳಲ್ಲಿ ಉಚ್ಚ ಶಿಕ್ಷಣದ ಪ್ರಾಪ್ತಿಗಾಗಿ ಎಲ್ಲಕ್ಕೂ ಹೆಚ್ಚು ಪೂರ್ಣತೆಗೆ ಮುಟ್ಟಿದ ಭಾಷೆಯ ಅಧ್ಯಯನವನ್ನು ಜನರು ಮಾಡುತ್ತ ಬಂದರು. ಇಂಥ ಭಾಷೆಯು ಹಿಂದಿನ ಕಾಲದಲ್ಲಿ ಸಂಸ್ಕೃತವಿತ್ತು, ಈಗ ಇಂಗ್ಲಿಷವಿದೆ.

ವೇದಶಾಸ್ತ್ರ ಪುರಾಣಗಳ ಅಧ್ಯಯನ ಮಾಡುವದಕ್ಕೋಸ್ಕರವಾಗಿ ಬ್ರಾಹ್ಮಣರು ಸಂಸ್ಕೃತವನ್ನು ಕಲಿಯಬೇಕಾಗುತ್ತಿತ್ತು. ಭಾಷೆಯ ಅಧ್ಯಯನದಲ್ಲಿಯೂ ವಿಚಾರಗಳಲ್ಲಿಯೂ ಬ್ರಾಹ್ಮಣರೇ ಅಗ ಮುಂದಾಗಿದ್ದದರಿಂದ ಅವರು ಉಚ್ಚ ಶಿಕ್ಷಣವನ್ನು ಸಾಧಿಸಲಿಕ್ಕೆ ತಮಗೆ ತೋರಿದಂಥ ಒಂದು ಮಾರ್ಗವನ್ನು ಸ್ಪಷ್ಟವಾಗಿ ಹಿಡಿದರು.

ಆಗ ಸಂಸ್ಕೃತ ಕಲಿತವನು ಶಿಕ್ಷಿತನು, ಸಂಸ್ಕೃತದಲ್ಲಿ ಮಾತಾಡುವವನು ವಿದ್ವಾಂಸನು ಸಂಸ್ಕೃತದಲ್ಲಿ ಗ್ರಂಥ ಬರೆಯುವವನು ಪಂಡಿತನು, ಹೀಗೆ ಜನರ ತಿಳುವಳಿಕೆ ಇತ್ತು. ಬ್ರಾಹ್ಮಣರು ಎಲ್ಲ ಉಚ್ಚ ವಿಚಾರಗಳನ್ನು ಸಂಸ್ಕೃತದಲ್ಲಿಯೇ ಬರೆಯುತ್ತಿದ್ದರು ಇದರಿಂದ ಉಚ್ಚ ಶಿಕ್ಷಣವನ್ನು ಸಂಪಾದಿಸಲಿಕ್ಕೆ ಸಂಸ್ಕೃತದ

ಷ್ಟೇ ಕಲಿಯ ಬೇಕಾಗುತ್ತಿತು. ಈ ಕಾರಣದಿಂದ ಮುಂಚಿನ ಕನ್ನಡಿಗರಾದ ಪಂಡಿತರು ಸಂಸ್ಕೃತವನ್ನು ಪರಿಶ್ರಮದಿಂದ ಕಲಿತು ತಮ್ಮ ಗ್ರಂಥಗಳನ್ನು ಸಂಸ್ಕೃತದಲ್ಲಿಯಾಗಲಿ, ಸಂಸ್ಕೃತ ಪ್ರಚುರವಾದ ಕನ್ನಡದಲ್ಲಿಯಾಗಲಿ ಬರೆಯುತ್ತಿದ್ದರು. ಈ ತೆರದ ಪರಾವಲಂಬಿತ್ವವು ಅವರನ್ನು ಸೇರಿದ್ದರಿಂದ ಅವರ ಆದ್ಯ ಕೃತಿಗಳೆಲ್ಲ ಸಂಸ್ಕೃತಗ್ರಂಥಗಳ ಭಾಷಾಂತರಗಳಾಗಲಿ ಸಂಸ್ಕೃತಗ್ರಂಥಗಳಲ್ಲಿ ಬರೆದ ವಿಚಾರಗಳ ವಿವರ್ಧನವಾಗಲಿ ಆಗಿದ್ದುವು. ಗ್ರಂಥಕರ್ತನ ಇಲ್ಲವೆ ಕವಿಯ ಪ್ರತಿಭೆಯನ್ನು ಸ್ವತಂತ್ರವಾಗಿ ವ್ಯಕ್ತ ಮಾಡುವ ಕೃತಿಗಳು ತೀರ ಕಡಿಮೆ.

ಕನ್ನಡಿಗರಾದ ವಿದ್ವಾಂಸರು ಪರಭಾಷಾವಲಂಬಿಗಳಾದ್ದರಿಂದ ಕನ್ನಡಭಾಷೆಯು ಹೀಗೆ ದುರ್ದಶೆಯಾಯಿತು. ಇಂಗ್ಲೀಷ ಭಾಷೆಯು ಬಾಲ್ಯದಶೆಯಲ್ಲಿದ್ದಾಗ ಸಹ ಕನ್ನಡಭಾಷೆಯು ಪ್ರೌಢಾವಸ್ಥೆಯಲ್ಲಿತ್ತು. ಈಗ ಇಂಗ್ಲೀಷ ಭಾಷೆಯು ಎಲ್ಲಕ್ಕೂ ಹೆಚ್ಚಿನ ಪ್ರಗತಿಯನ್ನು ಹೊಂದಿದ್ದರೂ ಕೂಡ ಕನ್ನಡವು ಹಿಂದೇ ಉಳಿದಿದೆ. ಮೊದಲು ಸಂಸ್ಕೃತದಿಂದ ಉಚ್ಚ ಶಿಕ್ಷಣವನ್ನು ಪಡೆಯುತ್ತಿದ್ದ ಕನ್ನಡಿಗರು ಈಗ ಇಂಗ್ಲೀಷದಿಂದ ಪಡೆಯುತ್ತಿದ್ದಾರೆ. ಅಂತೂ ಪರಾವಲಂಬಿತ್ವವೇ.

ಉಳಿದ ಎಲ್ಲ ಭಾಷೆಯವರು ಪರಭಾಷಾವಲಂಬಿತ್ವವನ್ನು ಬಿಟ್ಟು ಸ್ವತಂತ್ರರಾಗ ಹತ್ತಿದ್ದಾರೆ. ಆದರೆ ಕನ್ನಡಿಗರಿಗೆ ಇನ್ನೂ ಇದು ಮನವರಿಕೆಯಾಗಿಲ್ಲ. ಕನ್ನಡಿಗರು ಬೇಗನೆ ಎಚ್ಚತ್ತು ನಮ್ಮ ಭಾಷೆಯನ್ನು ಉಚ್ಚಶಿಕ್ಷಣಕ್ಕೆ ಯೋಗ್ಯವನ್ನಾಗಿ ಮಾಡಿಕೊಳ್ಳದೆ ಇದ್ದರೆ ಅದು ಎಲ್ಲ ಭಾಷೆಗಳಲ್ಲಿ ಹಿಂದು ಬಿದ್ದು ಅನ್ಯಪ್ರಾಯವಾಗದೆ ಇರದು

ನಮ್ಮ ಪೂರ್ವಜರಾದ ವಿದ್ವಾಂಸರೆಲ್ಲ ಸಂಸ್ಕೃತಾವಲಂಬಿಗಳಾದ್ದರಿಂದ ಕನ್ನಡ ಭಾಷೆಯು ಎಷ್ಟು ಊರ್ಜಿತಾವಸ್ಥೆಗೆ ಬರತಕ್ಕದ್ದೋ ಅಷ್ಟು ಬರಲಿಲ್ಲ. ಅದು ಎಲ್ಲ ಕಡೆಯಿಂದಲೂ ಸಂಸ್ಕೃತೋಪಜೀವಿಯಾಯಿತು. ಅದರ ಸಲುವಾಗಿ ನಾವು ಈಗ ಕಣ್ತೆರೆದು ನೋಡಬೇಕಾಗಿದೆ. ಈ ದೋಷಕ್ಕೆ ಕೇವಲ ಕನ್ನಡವು ಮಾತ್ರವದೆ ಹೀಗಲ್ಲ, ಹಿಂದುಸ್ಥಾನದೊಳಗಿನ ಉಳಿದ ಎಲ್ಲ ಭಾಷೆಗಳ ಅವಸ್ಥೆಯೂ ಕೆಲವು ವರ್ಷಗಳ ಹಿಂದೆ ಹೀಗೇ ಇದ್ದಿತು. ಆ ಭಾಷೆಯವರು ಬೇಗ ಕಣ್ತೆರೆದು ತಮ್ಮ ದೋಷವನ್ನು ತಿದ್ದಿಕೊಂಡು ಈಗೀಗ ತಮ್ಮ ಕಾಲುಗಳ ಮೇಲೆ ತಾವೇ ನಿಲ್ಲಹತ್ತಿದ್ದಾರೆ

ಪರಭಾಷಾವಲಂಬಿತ್ವವನ್ನು ಬಿಡುವದು ಸುಲಭ. ಪರರ ಶಬ್ದಾವಲಂಬಿತ್ವವನ್ನು ಬಿಡುವದು ಕಠಿಣ. ಮೊದಲು ಒಂದನ್ನು ಬಿಟ್ಟು ಹಿಂದಿನಿಂದ ಮತ್ತೊಂದನ್ನು ಬಿಡಲಿಕ್ಕೆ ಪ್ರಯತ್ನ ಮಾಡತಕ್ಕದ್ದು. ಕನ್ನಡದ ಸ್ವಕೀಯ ಶಬ್ದಸಂಪತ್ತು ಹೆಚ್ಚಿದ್ದರಿಂದ ಕನ್ನಡ ಭಾಷೆಯನ್ನು ಪರಶಬ್ದರಹಿತವಾಗಿ ಈಗಲೇ ಬರೆಯಲಿಕ್ಕೆ ಬರಬಹುದು. ಆದರೆ ಮರಾಠಿಯೊಳಗಿನ ಬಹುತರ ಎಲ್ಲ ಶಬ್ದಗಳು ಪರಭಾಷೆಯವೇ ಇದ್ದದರಿಂದ ಪರಶಬ್ದರಹಿತ ಮರಾಠಿ, ಭಾಷೆಯೆಂದರೆ ಶೂನ್ಯವೇ ಸರಿ. ಇದೇ ಮಾತು ಗುಜರಾತಿಯದು, ಇದೇ ಮಾತು ಹಿಂದಿಯದು. ಇಂಗ್ಲೀಷ ಭಾಷೆಯಲ್ಲಿ ಸಹ ಪ್ರಧಿ(?) ಯುರೋಪಿನ ಎಲ್ಲ ಭಾಷೆಗಳ ಶಬ್ದಗಳ ಸಮಾವೇಶವಾಗಿದೆ. ಪರಶಬ್ದಾವಲಂಬಿತ್ವವು ಬೇಕು. ಪರಭಾಷಾವಲಂಬಿತ್ವವು ಬೇಡ. ಕರ ಧ್ಯೇಯವಾಕ್ಯದ ಸ್ವಪ್ರಯತ್ನ ಪೂರ್ವಕ ಸ್ವತಂತ್ರನಾದವನು [illegible] ಬೇಕು. ಮರಾಠಿ, ಗುಜರಾತಿ, ಹಿಂದೀ ಬಂಗಾಲಿ ಭಾಷೆಗಳಲ್ಲಿ ಎಷ್ಟು ಪ್ರಭುತ್ವದಿಂದ ಲೇಖಗಳನ್ನು ಬರೆಯಲಿಕ್ಕೆ ದೊರೆಯುತ್ತಿದೆಯೋ ಅಷ್ಟು ಕನ್ನಡದಲ್ಲಿ ಯಾಕೆ ಬರಬಾರದು ?

ಭಾಷೆಯನ್ನು ಸುಧಾರಿಸಬೇಕೆನ್ನುವವರು ಭಾಷೆಯ ಅಧ್ಯಯನ ಮಾಡುತ್ತ ವ್ಯಾಕರಣ ಕಲಿಯಬೇಕು. ಮೊದಲು ವ್ಯಾಕರಣ ಕಲಿತು ಆ ಮೇಲೆ ಭಾಷೆಯ ಅಧ್ಯಯನ ಮಾಡಬಾರದು. ಮೊದಲು ಭಾಷೆ, ಆಮೇಲೆ ವ್ಯಾಕರಣ ಇದನ್ನು ಮರೆಯಬಾರದು.

ಭಾಷೆಯು ಬೆಳೆಯುವದಕ್ಕೂ ಸುಧಾರಿಸುವದಕ್ಕೂ ಮೂರು ಮುಖ್ಯ ಸಾಧನಗಳು ಬೇಕಾಗುತ್ತವೆ. ಅವು ಯಾವವೆಂದರೆ ಭಾಷಣ, ಲೇಖನ ಮತ್ತು ಭಾಷಾಂತರ.

ಭಾಷಣದಲ್ಲಿ ಸಂಭಾಷಣ, ವಕ್ತೃತ್ವ ಹೀಗೆ ಎರಡು ಪ್ರಕಾರಗಳು. ಸಂಭಾಷಣವು ಅಕೃತ್ರಿಮವಾದದ್ದು ಮತ್ತು ಎಲ್ಲರಿಗೂ ಸಾಧ್ಯವಾದದ್ದು. ವಕ್ತೃತ್ವವು ಕೃತ್ರಿಮವಾದದ್ದು. ಮತ್ತು ಸ್ವಲ್ಪ ಜನರಿಗೆ ಸಾಧ್ಯವಾದದ್ದು. ಸಂಭಾಷಣವೂ ಒಂದು ಕಲೆಯೆಂದು ತಿಳಿಯಬೇಕು. ಸಂಭಾಷಣವು ತಳಹದಿ, ವಕ್ತೃತ್ವವು ಕಟ್ಟಡ. ಸಂಭಾಷಣೋತ್ತೇಜಕ ಸಂಘಗಳನ್ನೂ ವಕ್ತೃತ್ವೋತ್ತೇಜಕ ಸಂಘಗಳನ್ನೂ ಏರ್ಪಡಿಸಿ ಅವುಗಳಲ್ಲಿ ಎಲ್ಲರೂ ಮನಸು ಹಾಕಬೇಕು. ಪ್ರಾವೀಣ್ಯಕ್ಕೆ ತಕ್ಕಂಥ ಕ್ರಮದಿಂದ ಇನಾಮುಗಳನ್ನು ಹಂಚಬೇಕು. ಉಪಜೀವನದ ಬೇರೆ ಬೇರೆ ಶಾಖೆಯವರು ತಮಗೆ ತಕ್ಕಂಥ ಬೇರೆ ಬೇರೆ ಸಂಘಗಳನ್ನು ಮಾಡಿಕೊಳ್ಳಬೇಕು. ಪ್ರತಿನಿತ್ಯ ಮಾತಾಡುವಾಗ ಸಹ ನಮ್ಮ ಭಾಷೆಯು ಗ್ರಾಮ್ಯವಾದದ್ದೋ ಪ್ರೌಢವಾದದ್ದೋ ಅಸಡ್ಡಾಳವಾದದ್ದೋ ಚಂದವಾದದ್ದೋ ವಿಚಾರ ಮಾಡಿ ಮಾತಾಡಬೇಕು. ಮಾತಾಡುವ ಭಾಷೆಯೂ ಬರೆಯುವ ಭಾಷೆಯೂ ಒಂದೇ ಆಗುವಂತೆ ಪ್ರಯತ್ನ ಮಾಡಬೇಕು.

ಲೇಖನ ಸಂಘಗಳುಂಟಾಗಿ ಲೇಖನ ಕಲೆಯ ಅಭಿವೃದ್ಧಿಗಾಗಿ ಪ್ರಯತ್ನವಾಗಲಿಕ್ಕೆ ಬೇಕು. ವಿಚಾರಸೂಕ್ಷ್ಮತೆಯು ವ್ಯಕ್ತವಾಗುವದಕ್ಕೆ ಯೋಗ್ಯ ಶಬ್ದರಚನೆಯಾಗಲಿಕ್ಕೆ ಬೇಕು. ವ್ಯಾಕರಣದಲ್ಲಿ ತಿದ್ದುಪಡಿ ಮಾಡುವ ಸಂಘವು ಬೇಕು. ವೃತ್ತಪತ್ರಗಳಿಗೆ ಬೆಂಬಲಕೊಟ್ಟು ಲೇಖನ ಕಲೆಗೆ ಉತ್ತೇಜನ ಕೊಡಲಿಕ್ಕೆ ಬೇಕು.

ಪರಭಾಷೆಯ ಸಂಸ್ಕೃತಿಯನ್ನು ಎತ್ತುವದಕ್ಕೆ ಭಾಷಾಂತರವು ಸಮೀಪದ ಮಾರ್ಗವೆಂಬದು ನಿಜ. ಆದರೆ ಅನಧಿಕಾರಿಗಳು ಸಿಕ್ಕ ಸಿಕ್ಕ ಹಾಗೆ ಭಾಷಾಂತರ ಮಾಡುವದರಿಂದ ಭಾಷೆಗೆ ಉಪಕಾರವಾಗುವದಕ್ಕೆ ಬದಲಾಗಿ ಅಪಕಾರವೇ ಬಹಳ ಆಗುತ್ತದೆ. ಭಾಷಾಂತರದಲ್ಲಿ ಪರಭಾಷೆಯ ಛಾಯೆಯು ಉಳಿಯಬಾರದು. ಆದರೆ ಪರಭಾಷೆಯ ಉದಾತ್ತವಾದ ಪ್ರತಿಕೃತಿಯು ಮಾತ್ರ ಅದರಲ್ಲಿ ಇಳಿದಿರಬೇಕು. ಈಗ ನಾಟಕ ಕಾದಂಬರಿಗಳ ಭಾಷಾಂತರಗಳು ಬೇಕಾದಷ್ಟು ಆಗುತ್ತಿವೆ. ಹಾಗಿರಲಾಗಿ ಅವುಗಳಲ್ಲಿ ನಾವು ಕಂಡು ಒಂದೂ ವಿಚಾರಿಗಳಾದ ವಾಚಕರಿಗೆ ದೋಷವು ಕಣ್ಣು ಮರೆಯಾಗದು.

ಮಾತೃಭಾಷೆಯ (ಕನ್ನಡದ) ಮೂಲಕ ಶಿಕ್ಷಣ ಕೊಡುವದರಿಂದ ವಿಚಾರಗಳೆಲ್ಲ ಕನ್ನಡದಲ್ಲಿಯೇ ವ್ಯಕ್ತವಾಗುವ ರೂಢಿಯು ಬಿದ್ದು ಹಾಗೆ ಮಾಡುವದಕ್ಕೆ ಏನೇನು ಅನಾನುಕೂಲತೆಗಳುಂಟಾಗುತ್ತವೆಂಬದು ಕಂಡು ಬರುವದು. ಇಂಥ ಅನಾನುಕೂಲತೆಗಳ ಅರಿಕೆ ಉಂಟಾಗಿ ಅವರಲ್ಲಿ ಹೆಚ್ಚಿಗೆ ಬಿದ್ದನಂತರ ದ್ವಾರ ಯೋಗ್ಯವಾದ ದಾರಿಯನ್ನು ಕಂಡು ಹಿಡಿದೇ ಹಿಡಿಯುವರು. ಸದ್ಯಕ್ಕೆ ಹಾಯಸ್ಕೂಲ ಮತ್ತು ಕಾಲೇಜುಗಳ ವಿದ್ಯಾರ್ಥಿಗಳೂ ಶಿಕ್ಷಕರೂ ಉಳಿದ ಇಂಗ್ಲೀಷ ಪದವೀಧರರೂ, ಇಂಗ್ಲೀಷ ಮಿಶ್ರಿತ ಭಾಷೆಯನ್ನಾಡಿ ತಮಗೆ ಉಂಟಾದ ಸಂಭಾಷಣದ ಅನಾನುಕೂಲತೆಯನ್ನು ದೂರಮಾಡುತ್ತಾರೆ. ಇದು ಯೋಗ್ಯವಲ್ಲ.

ಹೀಗೆ ಮಾಡುವವರಿಂದ ಅವರು ಭಾಷೆಯನ್ನು ಕೆಡಿಸಿದ ಅಪರಾಧಕ್ಕೆ ಗುರಿಯಾಗುತ್ತಾರೆ. ವಿಚಾರ ವ್ಯಕ್ತ ಮಾಡಬೇಕಾದರೆ ಶಬ್ದಗಳು ಬಹಳ ಬೇಕು ಹೀಗೇನೂ ಅಲ್ಲ. ಶಬ್ದಗಳು ಹೆಚ್ಚಿಗೆ ಬೇಕು ಇದು ನಿಜ, ಆದರೆ ಸಾಧಾರಣವಾಗಿ ಎಷ್ಟು ಬೇಕೆಂದು ತೋರುತ್ತದೆಯೋ ಅಷ್ಟು ಬೇಡ. ಚಾತುರ್ಯಪೂರ್ವಕವಾದ ವಾಕ್ಯರಚನೆಯಿಂದ ಬೇಕಾದ ವಿಚಾರಗಳನ್ನು ಸ್ವಲ್ಪೇ ಶಬ್ದಗಳಲ್ಲಿ ವ್ಯಕ್ತ ಮಾಡಲಿಕ್ಕೆ ಬರುತ್ತದೆ. ಶಾಸ್ತ್ರೀಯ ಶೋಧಗಳಾದ ಹಾಗೆ ಹೊಸಹೊಸ ಶಬ್ದಗಳು ಬೇಕಾಗುತ್ತವೆ. ಅವಶ್ಯಕತೆ ಬಿದ್ದಂತೆ ಶಬ್ದಗಳನ್ನು ಹುಟ್ಟಿಸಲಿಕ್ಕೂ ಬಂದೀತು. ಅನ್ಯ ಭಾಷೆಯಿಂದ ತೆಗೆದುಕೊಳ್ಳಲಿಕ್ಕೂ ಬಂದೀತು.

ಶಾಮಸುಂದರ ನರಸಿಂಹಾಚಾರ್ಯ ಪುಣೇಕರ

ಬೀ. ಎ. ಜಿ.

ಚಾರುಕೋಲು

ಶ್ರೀವೈಷ್ಣವ ಹೆಂಗಸರಿಗೆ ರೇಷ್ಮೆ ಸೀರೆಗಳೆಂದರೆ ಪ್ರಾಣಕ್ಕಿಂತಲೂ ಪ್ರೀತಿ. ಸ್ಪರ್ಶೇಂದ್ರಿಯ ದಾಸ್ಯಕ್ಕೆ ಅವರು ಸ್ಪಷ್ಟ ಉದಾಹರಣೆ. ಮೊದಲು ಮೊದಲು ಹಬ್ಬ ಹುಣ್ಣಿವೆಗಳಲ್ಲಿ ಮಾತ್ರ ಉಡುತ್ತಿದ್ದವರು ಈಗ ಸದಾ ಅವನ್ನೇ ಉಡುತ್ತಿದ್ದಾರೆ. ಇದರಿಂದ ಆಗುವ ತೊಂದರೆಗಳವರಿಗೆ ತಿಳಿದಿಲ್ಲವೆಂದಲ್ಲ. ಎಷ್ಟೋ ಜನ ಮದುವೆಗಳಲ್ಲಿ ಈ ಸೀರೆಗಳ ಹಾವಳಿಯಿಂದ ಮೇಲಕ್ಕೇಳಲಾರದಂತೆ ಸಾಲದಲ್ಲಿ ಮುಳುಗಿ ಹೋಗಿದ್ದಾರೆ, ಆದರೂ ಹೆಂಗಸರು ಧೈರ್ಯ ಮಾಡಿ ಈ ಅಂಟು ರೋಗದಿಂದ ತಪ್ಪಿಸಿಕೊಳ್ಳಲು ಪ್ರಯತ್ನ ಮಾಡಿಲ್ಲ. ಸ್ತ್ರೀಯರ ಹೃದಯವು ಕೂಡ ಕಲ್ಲಾಯಿತೇ ?

ಮದುವೆಗಳಲ್ಲಿ ನೂರು ರೂಪಾಯಿಗೆ ಕಡಿಮೆಯಾದರೆ ಓದಿಸುವದಕ್ಕೆ ಯೋಗ್ಯವಲ್ಲವಂತೆ! ದಿನವೂ ಉಡಲು ರೂ, ೫೦-೬೦ಕ್ಕೆ ಕಡಿಮೆ ಯಿಲ್ಲದ ಬಣ್ಣ ಬಣ್ಣದ ಬೆಂಗಳೂರು ಅರಳೀ ಪೇಟೆಯ ಸೀರೆಗಳೂ- ಧರ್ಮವರವೋ ಆಗಬೇಕು. ಭಾಗ್ಯವಂತರಿಗೆ ಇದರ ಹಾವಳಿ ತಿಳಿಯುವದಿಲ್ಲ. ಬಡವರಿಗೆ ಮಾತ್ರ ಈ ಅಭ್ಯಾಸವು ಮೃತ್ಯು ದೇವತೆ. ಮನೆ ಮಕ್ಕಳಿಗೆಲ್ಲ ಇವನ್ನೆಲ್ಲ ತಂದು ಕೊಡಬೇಕಾದರೆ ಆ ಬಡಬ್ರಾಹ್ಮಣನ ಗತಿ...........

ಅವರಿಗೂ ಈ ಅಭ್ಯಾಸಕ್ಕೆ ಬಲವಾದ ಕಾರಣಗಳಿವೆ ರೇಷ್ಮೆಯೆಂದರೆ ಮಡಿಯಂತೆ. ಇರಬಹುದು. ಇಲ್ಲವೆನ್ನುವದಿಲ್ಲ. ಮೊದಲಿಗೆ ಮಡಿಗೆಂದೇ ಈ ಪದ್ಧತಿ ಬಂದಿರಬಹುದು. ಈಗ ಮಾತ್ರ ಅದು ಮಡಿಯೆಂದು ಯಾರೂ ಅದನ್ನು ಬಯಸುವದಿಲ್ಲ- ಮಡಿಯೆಂಬುದರ ಬಾಗಲನ್ನೇ ನೋಡದ ಎಷ್ಟೋ ಜನ ಶ್ರೀ ವೈಷ್ಣವ ಹೆಂಗಸರು ಇದನ್ನಲ್ಲದೆ ಬೇರೆ ಉಡುವದಿಲ್ಲ. ಅವರಿಗೆಲ್ಲ ಬೇರೆ ಕಾರಣವೇನಿದೆ? ಬರಿಯ ಬಿನಧು ಬಿಯ್ಯಾರ. ರೇಷ್ಮೆ ಸೀರೆಗಳಿಂದ ಮತ್ತೊಂದು ತೊಂದರೆ. ಕೆಲಸವೇನೂ ಇಲ್ಲದೆ ವಿಲಾಸಿಗಳಂತೆ ಕುರ್ಚಿಗಳ ಮೇಲೆ ಕಾಲಕಳೆಯುವ ಭಾಗ್ಯವಂತರ ಮನೆ ಹೆಂಗಸರಿಗೆ ಅಷ್ಟಿಲ್ಲ. ತಮ್ಮ ಮನೆಕೆಲಸಗಳನ್ನು ತಾವು ಮಾಡಿಕೊಳ್ಳುವ ಸಾಮಾನ್ಯ ಜನರಿಗೆ ಇದರ ತೊಂದರೆ ಅಷ್ಟಿಷ್ಟಲ್ಲ. ರೇಷ್ಮೆಯು ಬೆವರನ್ನು ಹೀರುವದಿಲ್ಲ. ಇದನ್ನುಟ್ಟು ಅಡಿಗೆ ಮಾಡುವದೆಂದರೆ ನಿಧಾನವಾದ ಆತ್ಮಹತ್ಯೆ. ಸೆಕೆಯಲ್ಲಿ ರೇಷ್ಮೆಯನ್ನುಟ್ಟುಕೊಳ್ಳುವದರಲ್ಲಿರುವ ಸುಖವು ಇದೇ ಬಹಳ ಬೆಲೆಯುಳ್ಳ ಸೀರೆಗಳಾದರೆ ಅವನ್ನು ಒಗೆಯದಿರುವದು ಮತ್ತೊಂದು ದುರಭ್ಯಾಸ ಇದಕ್ಕೆ ಕಾರಣ ಒಂದರೆ ಬಣ್ಣ ಹೋದೀತೆಂಬ ಹೆದರಿಕೆ. ಜರಿ ಹೋದೀತೆಂಬ ಹೆದರಿಕೆ. ಆ ಸೀರೆಗಳಿಂದ ಬರುವ ಬೆವರಿನ ವಾಸನೆ ಸಹಿಸಲು ಅಸಾಧ್ಯ ಅಂಥ ವಾಸನೆಯನ್ನಾದರೂ ಸಹಿಸಿ ಅದನ್ನ ಪ್ರೀತಿಸಬೇಕು. ಎಂಥಹ ಮೋಹ!

\+ \+ \+ \+

ಈ ರೋಗ ಶ್ರೀವೈಷ್ಣವರಿಗಷ್ಟೇ ಎಂದು ಹೋಗಲಿಲ್ಲ. ಇಂ[illegible]

ಬುದರ ಮೋರೆ ಕಾಣದ ಗೋತ್ರದವರೂ ರೇಷ್ಮೆ ಸೀರೆಗಳಿಂದ ಮೆರವಣಿಗೆ ಮಾಡಿಕೊಳ್ಳುತ್ತಿದ್ದಾರೆ. ಎಲ್ಲೆಲ್ಲಿಯೂ ಹರಡಿಕೊಂಡು ಬಿಟ್ಟಿದೆ! ಈ ಪ್ಲೇಗು! ಈ ರೋಗವನ್ನು ಕಳೆಯಲು ಉಪಾಯವು ಗಂಡಸಿಗಿಂತ ಹೆಂಗಸರ ಕೈಯಲ್ಲೇ ಹೆಚ್ಚಿದೆ. ಸೀತಾದೇವಿ ಒಂದು ಗಳಿಗೆಯಾದರೂ ಪೈಹಿಕ ಮನೋಹರತೆಯಿಂದ ರಾಮನನ್ನು ಸೆಳೆದಳೆಂದು ನನಗನಿಸುವದಿಲ್ಲ.

\+ \+ \+ \+

ಒಂದುಸಲ ದೊಡ್ಡ ಕೆಲಸದಲ್ಲಿದ್ದ ಹೆಂಗಸೊಬ್ಬಾಕೆಯನು ಇದೇ ಕೇಳಿದ್ದೆ. 'ರೇಷ್ಮೆಯನಯದ ದಾಸ್ಯ ಬಿಡಬಾರದೇ' ಎಂತ ಆಕೆಗೆ ಅವೇನು ಮಡಿಯಲ್ಲ. ಮನೆಯಲ್ಲಿ ಪರಿಚಾರಕರಲ್ಲದೆ ಈಕೆಗೇನು ಕೆಲಸವಿಲ್ಲ. ಆದ್ದರಿಂದ ಅದು ಆಡಂಬರವೋ ಆಚಾರವೋ ಆಗಿತ್ತೆಂದು ನನ್ನ ಊಹೆಯಿತ್ತು- ಆಕೆಯ ಉತ್ತರವೇನು ಗೊತ್ತೆ ? ' ಮಗು ' ನನ್ನ ದೇಹ ಬಹಳ ನಾಜೂಕು. ರೇಷ್ಮೆಯಲ್ಲದೆ ಬೇರೆನಾದರೂ ಉಟ್ಟರೆ ರಕ್ತ ಬರುತ್ತದೆ. ಎಂಥ ಸ್ವನಿರ್ಮಿತಾಭಿಪ್ರಾಯ! ಗಂಡಂದಿರು ಈ ಸೀರೆಗಳ ಸಲುವಾಗಿ ಸಾಲದಲ್ಲಿ ಮುಳುಮುಳುಗಿ ಎದ್ದರೂ ಈ ಕೋಮಲಾಂಗಿಯರ ಹೃದಯವು ಇಳ್ಯಾಗವಾಗದು! ಆದರೆ ದೇಹಕ್ಕೆ ರಕ್ತ ಬರುತ್ತದೆ ಎಂಥಹ ಅಭಿಮಾನವಯ್ಯಾ !! ಇದು ಎಲ್ಲಿಯೂ ಇಲ್ಲದ ಊಹೆಮಾತ್ರ ಕೆಲವು ವರ್ಷಗಳ ಕೆಳಗೆ ನನಗೂ ಹೆಚ್ಚು ಕಡಮೆ ಅದೆ ಅಭಿಪ್ರಾಯವಿತ್ತು ಈಗ ಅದನ್ನು ನೆನೆದರೆ ನನಗೇ ನಗು ಬರುತ್ತದೆ. ಅನುಭವದಿಂದ ಹೇಳಬಲ್ಲೆ. ಮನುಷ್ಯನ ಮೈ ಅಷ್ಟು ನಯವಿಲ್ಲ ಊಹೆಯುಳ್ಳವರು ಅದು ಬರಿಯ ಭ್ರಾಂತಿಯೆಂಬದನ್ನು ತಿಳಿಯಬೇಕು. ಎಂತಹ ಉಡುಪು ಖಾದಿಯೂ ನನ್ನ ಮೈಯಿಂದ ರಕ್ತ ಹೊರಡಿಸಿಲ್ಲ.

ಇಂಥವರಿಗೆ ಇದು ತಪ್ಪೆಂಬುದೇ ಅಭಿಪ್ರಾಯವಿಲ್ಲ.

ಇಂಥ ಸಂದರ್ಭಗಳು ಬಲು ಇಕ್ಕಟ್ಟಿನವು. ದುರಾಚಾರವು ಪದ್ಧತಿಯಾಗಿ ಸಾಂಪ್ರದಾಯವಾ ಬಿಟ್ಟರೆ ಅದನ್ನು ಬಿಡುವದು ಬಹಳ ಕಷ್ಟ. ಈ ರೇಷ್ಮೆಯ ಆಡಂಬರವು ತಪ್ಪೆನ್ನುವವರಿಲ್ಲವೇ ಇಲ್ಲ. ಅಷ್ಟೇಕೆ ಅದನ್ನು ಆಚಾರವೆಂದು ಸಾಧಿಸುವವರೇ ಹೆಚ್ಚು. ಬಡವರ ಪಾಲಿಗೆ ಮೃತ್ಯುವಾದುದೇ ಮಡಿಯೆಂಬುದು ಯೋಚಿಸಬೇಕಾದ ಸಂಗತಿಯೇ ಸರಿ. ವಿದ್ಯಾವತಿಯರು ಈ ದೌರ್ಬಲ್ಯವನ್ನು ಬಿಟ್ಟು ಸರಳತೆಯನ್ನು ಸ್ವೀಕರಿಸಿ ಆಡಂಬರದ ಮೋಹವನ್ನು ತಿರಸ್ಕರಿಸುವರೆಂದು ದೇಶ ದೇವರಕ್ಕೆ ತಿಳಿಸಲಿ,

ವಿಶ್ವಾಮಿತ್ರನ ಸಾಲತೀರಿಸಲಿಕ್ಕೆ ಚಂದ್ರಮತಿ ಪರಿಚಾರಿಕೆಯಾಗಿ ಕಷ್ಟಪಟ್ಟಿದ್ದಾಳೆ. ರಾಜಭೋಗಗಳಲ್ಲಿ ಮೆರೆದ ಸೀತಾ ಸಾವಿತ್ರಿಯರು ಅರಣ್ಯದಲ್ಲಿ ಕಷ್ಟಪಟ್ಟಿದ್ದಾರೆ. ನಮ್ಮವರಿಗೆ ಈಗ ಭ್ರಾಂತಿಯ ಮೋಹವನ್ನು ಬಿಡುವದಕ್ಕೆ ಎಷ್ಟೋ ಕಷ್ಟ. ಎಂಥ ಪಾತಿತ್ಯ !

ತುಂಟರ ಕಿಡಿ.

(೩ ನೇ ಪಾನಿನಿಂದ ಸಾಗಿದ್ದು.)

ಅಧ್ಯಾತ್ಮಿಕ ಜೀವನದಲ್ಲಿ ದುಷ್ಟ ವ್ಯವಸಾಯವು ಎಷ್ಟು ನುಡಿತ ವಿರುತ್ತದೆಂಬುದು ತಿಳಿದುಬರುವದು. ಪಾತಕಮಯ ವ್ಯವಸಾಯದಿಂದ ಅಥವಾ ಆಲಸ್ಯದಿಂದ ಉಪಜೀವಿಸುವವರು ಎಷ್ಟೋ ಧರ್ಮಾಚರಣೆ ಮಾಡಿದರೂ ಅದು ಹಬ್ಬ ಕೊಡದ ಮೇಲೆ ನೀರ ಸುರುವಿದಂತೆಯೇ ಸರಿ. ಈ ದೃಷ್ಟಿಯಿಂದ ವಿಚಾರಿಸಿದರೆ ಧಾರವಾಡದ ಸಂಪತ್ತಿವೃದ್ಧಿಸಿ ಸಭೆ [illegible] ಬ್ರಾಹ್ಮಣಸಮಾಜದ ಅಧ್ಯಾತ್ಮಿಕ ಉನ್ನತಿಗೆ ಕೂಡ ಪೋಷಕವೇ ಆಗಬಹುದೆಂದು ಹೇಳಬಹುದು

ವರ್ತಮಾನಸಾರ

ಇಹ ವೃತ್ತ

ನುಳಿಇಲ್ಲ. ಇನ್ನಿಲ್ಲ ಹೌಹಾರಿ ಕುಳಿತಿರುವರು ಅವಿದ್ರವು ದಾರಿ ದ್ರ್ಯವನ್ನು ಹೋಗಲಾಡಿಸಲಿಲ್ಲ.

ಹಿಂದೂ ಮುಸಲ್ಮಾನರ ದಂಗೆಯಲ್ಲಿ ೧೬ ಜನ ಹಿಂದೂಗಳು ಆ ರೋಪಿಗಳಾಗಿದ್ದರು ೫ ಜನರು ನಿರ್ದೋಷಿಗಳೆಂದು ನಿರ್ಣಯಿ ಸಲ್ಪಟ್ಟಿದ್ದು ೧೧ ಜನರಿಗೆ ಶಿಕ್ಷೆಯಾಗಿದೆ. ಮೂವರಿಗೆ ತಲಗೆ ಸಾವಿ ರ ರೂಪಾಯಿಯಂತೆ ದಂಡ ವಿಧಿಸಲ್ಪಟ್ಟಿದೆ ಅಪೀಲಾಗತಕ್ಕದ್ದೆಂಬ ಸುದ್ದಿ.

ಮುಂಬಯಿ ಕರ್ನಾಟಕ

ಸಾಂಗಲಿಯ ಸುಪ್ರಸಿದ್ಧ ಧಾವನ ಪಟುಗಳಾದ ಶ್ರೀ. ದಾತಾರ ವರು ಸಾಂಗಲಿಯಲ್ಲಿ ಉದರ ವಿಕಾರದಿಂದ ಮೃತರಾದರೆಂದು ತಿಳಿಸ ಲು ನಮಗೆ ವ್ಯಸನವಾಗುತ್ತದೆ ಪೂಣೆಯ ೨೭ ಮೈಲಿನ ಶರ್ಯತ್ತಿ ನಲ್ಲಿ ಮೊದಲನೇ ನಂಬರನ್ನು ಪಡೆದು ಹಿಂದುಸ್ಥಾನದಲ್ಲಿ ಓಡುವದ ರಲ್ಲಿ ಪ್ರಸಿದ್ಧಿಗೆ ಬಂದವರೆಂದರೆ ಇವರೇ ಮೊದಲಿನವರು. ಬೆಲ್ಜಿಯಮ್ದ ಒಲಿಂಪಿಯ ಪಂದ್ಯಾಟಕ್ಕೆ ಇವರು ಹಿಂದುಸ್ಥಾನದ ಪ್ರತಿನಿಧಿ ಗಳಾಗಿ ಹೋಗಿದ್ದರು. ಇವರು ಬಡವರು ಆದರೂ ಸಾಂಗ ಲಿಯ ರಾಜರು ಇವರಿಗೆ ತಮ್ಮ ಆಶ್ರಯ ಕೊಡದಿದ್ದದು ಶೋ ಚನೀಯವು.

ಶ್ರೀ. ರುದ್ರಗೌಡ ಪಾಟೀಲ ಘೋಗಾವಿ ಬಿ ಎ. ಟಿ. ಇವರು ಹೆಚ್ಚಿನ ತರಗತಿಯ ಶಿಕ್ಷಣಕ್ಕಾಗಿ ವಿಲಾಯತಿಗೆ ಹೋಗುವವ ರಿದ್ದಾರೆ. ಇವರ ಪತ್ನಿಯವರಾದ ಸೌ. ಕೃಷ್ಣಾಬಾಯಿ ಎಮ್. ಬಿ. ಬಿ. ಎಸ್ ಇವರು ಹೆಚ್ಚಿನ ವೈದ್ಯಕೀ ವಿದ್ಯಾಭ್ಯಾಸಕ್ಕಾಗಿ ಈಗಾಗಲೇ ವಿಲಾಯತಿಗೆ ಹೋಗಿರುವರು ಸ್ತ್ರೀಯರು ಕನ್ನಡಿಗರಲ್ಲಿಯೂ ಸಹಾಸದ ಪ್ರೀತಿಯು ಉಂಟಾಗುತ್ತಿದ್ದು ಆನಂದದ ಸಂಗತಿ. !!

ದತ್ತಾತ್ರೇಯ ನಾಟಕ ಮಂಡಲದ ಮಾಲಕರಾದ ಶ್ರೀ ಗರುಡ ಸದಾಶಿವರಾಯರು "ಕರ್ನಾಟಕ ರಂಗಭೂಮಿ" ಎಂಬ ಮಾಸ ಪತ್ರಿ ಯನ್ನು ಜಿನಕನ ಹಬ್ಬದಿಂದ ಪ್ರಾರಂಭಿಸಿದರು. ವಾ. ವ ರೂ. ೩

ಮದ್ರಾಸ ಕರ್ನಾಟಕ

ಮಂಗಳೂರ ಜಿಲ್ಲೆಯಲ್ಲಿ ಎಲ್ಲ ಕಡೆಗೂ ವಿಪರೀತವಾದ ಮಳೆಗಾ ಲವಿದೆ

ನೀಲಗಿರಿ ರೇಲ್ವೇಯವರು ದರಗಳನ್ನು ಕಡಿಮೆಮಾಡುವವರಿದ್ದಾರೆ

ನಿಝಾಮ ಕರ್ನಾಟಕ

ಶ್ರೀ ವಾಮನರಾವ ನಾಯಕ ಇವರು ೧೫೦೦ ರೂ ಪುಣೆಯ ಇತಿಹಾಸ ಸಂಶೋಧಕ ಮಂಡಳಿಗೆ ಧರ್ಮಾರ್ಥವಾಗಿ ಕೊಟ್ಟಿರುವರು.

ಮೈಸೂರ ಕರ್ನಾಟಕ

ಬೆಂಗಳೂರ ಮುನಸಿಪಾಲಿಟೀಯವರು ೩೦೦ ರೂ ನೆಕ್ಕವಾಡಿ ಲಾರಿ ಬೀದಿಯ ಮತ್ತು ಚಿಕ್ಕಪೇಟೆಯ ಪ್ರಾಥಮಿಕ ಶಾಲೆಗಳ್ಳ ... ಟಿಯಿಂದ ನೂಲುವದನ್ನು ವಿದ್ಯಾರ್ಥಿಗಳಿಗೆ ಕಲಿಸಬೇಕೆಂದು ನಿರ್ಧ ರಿಸಿರುವರು.

ಮೈಸೂರಿನ್ನಲ್ಲಿನ ಬರೋಡಾ ಸಂಸ್ಥಾನದ ಯಂತ್ರಾಲಯ ಶಿಲ್ಪ ಕಿಗಳು ಪರಿವಾರ ಸಮೇತರಾಗಿ ಬೆಂಗಳೂರಿಗೆ ಪ್ರಯಾಣ ಮಾಡಿದ್ದು ೧—೨ ತಿಂಗಳವರೆಗೆ ಅಲ್ಲಿಯೇ ಇರುವರಂತೆ

ಮೈಸೂರ ಮಹಾರಾಜರ ಸಹೋದರಿಯರಾದ ಶ್ರೀ ಚೆಲುವಾಜ ಮಣ್ಣಿಯವರು ಪುತ್ರಕಾಮೇಷ್ಟಿಯಾಗವನ್ನು ಸಮಾಪ್ತಿ ಗೊಳಿಸಿದರು ಸಾವಿರಾರು ಜನ ಬ್ರಾಹ್ಮಣಸಂತರ್ಪಣೆಯನ್ನೂ ನೂರಾರು ದಂಪತಿಗಳಿ ಗೆ ವಸ್ತ್ರದಾನವನ್ನೂ ಮಾಡಿದರು.

ಮೈಸೂರ ಬ್ಯಾಂಕಿನಲ್ಲಿ ಅನೇಕ ದಿನಗಳಿಂದ ನಡೆದ ಅವ್ಯವಸ್ಥೆಯ ದ ಗೊಂದಲವನ್ನು ಪರೀಕ್ಷಿಸಿ ರಿಪೋರ್ಟ ಮಾಡುವದಕ್ಕಾಗಿ, ಸಿ. ಬಿ. ರಾಮರಾವ, ಮುಷಿರ್ ಉಲ್ ಮುಲ್ಕಿ ಮತ್ತು ಪಶುಪತಿಯ್ಯಾ ಇವರ ದೊಂದು ಚಿಕ್ಕ ಕಮಿಟಿಯು ಸ್ಥಾಪಿಸಲ್ಪಟ್ಟಿದೆ.

ಕೊಡಗು ಕರ್ನಾಟಕ

೧೯೨೫ ನೇ ವರ್ಷದ ಕೊನೆಯೊಳಗೆ ಕೊಡಗಿನವರು ೧೦೦ ಜನ ಸ್ವಯಂಸೇವಕರನ್ನು ಕೂಡಿಸಿ ಕೊಡುವೆವೆಂದು ಡಾ. ಹರ್ಡೀಕರರಿಗೆ ಅಭಿವಚನ ಕೊಟ್ಟಿರುವರು ಸ್ತುತ್ಯ.

ಹಿಂದುಸ್ಥಾನ

ಮುಂಬೈಯಿಯ ಲಕ್ಷಾಧೀಶರಾದ ಶ್ರೀ. ಜೊಮುಸ್ಜೀ ಎಂಬ ಪಾ ರಸೀ ಗೃಹಸ್ಥರು ಫ್ರಾನ್ಸಕ್ಕೆ ಹೋಗಿದ್ದು ಅವರು ಅಲ್ಲಿ ಫ್ರೆಂಚ ಕನ್ನಿ ಕೆಯನ್ನು ಮದುವೆ ಯಾಗಿರುವರಂತೆ. ಜೊಮುಸ್ಜಿಯವರು ಸಖಿ ಬಾಂತವಾಗಿ ಮಾಡಿಯನ್ನೂ ಕನ್ಯೆಯು ಪ್ಯಾರಿಸ್ ರೇಸ್ಮಿಯ ಉಡುಪ ನ್ನೂ ಲಗ್ನದ ಕಾಲಕ್ಕೆ ಧರಿಸಿದ್ದರಂತೆ ಜೊಮುಸ್ಜಿಯವರ ವಯ ಸ್ಸು ೬೦ ಸ್ವಲ್ಪೇ.

ಆನೀಬಿಜಂಟ ಅಮ್ಮನವರು ೮ ನೇ ತಾ॥ ದಿನ ವಿಗಾಯತಿಗೆ ತೆ ರಳುವರು ಅ ಹಿಂದುಸ್ಥಾನಕ್ಕೆ ಸ್ವರಾಜ್ಯ ಸಂಪಾದನೆಯ ವಿಷಯದ ಲ್ಲಿ ಪ್ರಯತ್ನ ಬಡುವರು

ಶ್ರೀಮತಿ ವಸಂತಾ ದೇವಿಯವರು ದಾಸರವರ ದೈನಿಕ ಪತ್ರವಾ ದ ಫಾರವರ್ಡದ ಮುಖ್ಯ ಸಂಪಾದಕರಾಗುವರು

ಮಹಾತ್ಮರು ಇನ್ನೂ ಬಂಗಾಲದಲ್ಲಿ ಸಂಚರಿಸುತ್ತಿರುವರು.

ಮುದ್ರಣಕ್ಕಾಗಿ ಉಪಯೋಗಿಸುವ ಪರದೇಶೀ ಮಸಿಯು ಮೇಲೆ ೨। ರೂ. ಕರ ಹೆಚ್ಚಿಸಲ್ಪಟ್ಟಿದೆ ಅಂದರೆ ನೂರಕ್ಕೆ ೫ ರೂ. ಆಗುವದು ಹಿಂದುಸ್ಥಾನದ ಮಸಿ ಉದ್ಯಮಕ್ಕೆ ಉತ್ತೇಜನ ದೊರೆ ಯಬೇಕೆಂದು ಹೆಚ್ಚಿಸಲ್ಪಟ್ಟಿದೆ.

ಪರದೇಶ.

ಗ್ರೀಸದಲ್ಲಿ ಕ್ರಾಂತಿ ಕಾರಕರ ಚಳವಳಿಯು ಪ್ರಾರಂಭವಾಗಿದೆ.

ಬ್ರಿಟಿಶ್ ಹಿಂದುಸ್ಥಾನದ ಸಂಘದವತಿಯಿಂದ ೨೪ ನೇ ತಾ॥ ದಿನ ವಿಲಾಯತಿಯಲ್ಲಿ ಲಾರ್ಡ ರೀಡಿಂಗರಿಗೆ ಪ್ರೀತಿ ಸಮಾರಂಭವಿದ್ದಿ ತು. ಹಿಂದುಸ್ಥಾನದ ರಾಜಕೀಯ ಸುಧಾರಣೆಗಳ ಬಗ್ಗೆ ಏನೂ ಸದ್ಯ ಕ್ಕೆ ಪ್ರಕಟಿಸಲು ಬರುವಂತಿಲ್ಲವೆಂಬದಾಗಿ ಹೇಳಿದರು. ಸಪ್ರೂರ ನ ವಾಬರೂ ಈ ಪ್ರೀತಿ ಸಮಾರಂಭಕ್ಕೆ ದಯಮಾಡಿದ್ದರು.

ಜರ್ಮನಿಯಲ್ಲಿ ರೇಲ್ವೇ ಗಾಡಿಗಳಲ್ಲಿ ಟೇಲಿಫೋನುಗಳನ್ನು ಸ್ಥಾ ಪಿಸಿದ್ದು ಅವರ ಸಹಾಯದಿಂದ ಗಾಡಿಯಲ್ಲಿರುವವರು ಜರ್ಮ ನೀ ದೇಶದಲ್ಲಿಯ ಬೇರಾವ ಮನುಷ್ಯನ ಸಂಗಡ ಮಾತನಾಡಬಹುದು.

ಅಂತಿಮ ಜಾಜಾರ ಗು ಶರವಪದ್ ಬುಕಾವಿನಲ್ಲಿ ಹಿಂದುಸ್ಥಾನ ಕ್ಕೆ ಬರುವದಾಗಿ ವಿನಂತಿಯದೆ.

ರೇಲ್ವೇ ಬೋರ್ಡಿನ ಸುದ್ದಿಗಳು.

ನಾರಣ ಗೇರಿಯಿಂದ ಎಚ್. ಮುರಿಗೆ ರುದ್ರಪ್ಪನವರು ೩೦ ಜ ನರ ಸಹಿಗಳನ್ನು, ಚಿಕ್ಕೋಡಿಯಿಂದ ಶ್ರೀ ಪಾಂಡವರಂಗಿಯವರು ೩೯ ಜನರ ಅರ್ಜಿಯನ್ನು ಐಕ್ಕಿಯಿಂದ ಶ್ರೀ ಶರಣು ಬಸವೇಶ್ವರ ಸ ಮಾಜದವರು ೬೬ ಸಹಿಗಳನ್ನು ಶಿವಸಂಗಿಯಿಂದ ಲಿಂಗರಾಜರೀಯಿಂ ಗ ರಾಮಾದವರು ೩೬ ಸಹಿಗಳನ್ನು, ಕುಂದಾಪುರದಿಂದ ಶ್ರೀ ತಿಮ್ಮ ಸುಬ್ಬರಾವ ಕೃಷ್ಣರಾವ ಕೊಡಗೆ ಇವರು ೧೫೧ ಸಹಿಗಳನ್ನೂ ಕರ್ನಾ ಟಕದ ಅಭಿಮಾನದಿಂದ ಕೃತು ಬಿಟ್ಟು ಕಳುಹಿಸಿದ್ದಾರೆ ಈ ಅರ್ಜಿಗೆ ಕನಿ ಷ್ಟ ೧೦ ಸಾವಿರ ಜನರ ಸಹಿಬೇಕು. ಈಗ್ಗೆ ೧೦೦೦ ಸಹಿಗಳುದವಾತ್ರ ದೊರಕಿವೆ ಅಲ್ಲಲ್ಲಿನ ಕರ್ನಾಟಕಸ್ಥರೆಲ್ಲರೂ ವಿಲಂಬ ಮಾಡದೇ ಅ ರ್ಜಿಗಳನ್ನು ಕಳುಹಿಸ ಬೇಕಾಗಿ ಪ್ರಾರ್ಥನೆ.

ಕನ್ನಡ ನಾಡಿನ ಐಕ್ಯ

(ಲೇ ಸಾ. ಮುಕುಂದ ರಾವ್ ಬಿ. ಎ.)

ಕರ್ಜನ್ ಸಾಹೇಬರು ಬಂಗಾಳವನ್ನು ಸೀಳಬೇಕೆಂದು ನಿರ್ಧಾರ ಮಾಡಿದಂದಿನಿಂದ ನಮ್ಮ ದೇಶದಲ್ಲಿನ ರಾಜಕೀಯ ಚಳವಳಿಯು ಬಲವಾಗಿ ಬೆಳೆಯಲಾರಂಭಿಸಿತು. ಹಿಂದುಸ್ಥಾನದ ಜನರು ಹೋರಾಡಿದ ರಾಜಕೀಯ ಯುದ್ಧದಲ್ಲಿ ಮೊದಲನೆಯದು ಪ್ರಾಂತ್ಯದ ಐಕ್ಯಕ್ಕಾಯಿತು. ಹೀಗೆ ವಂಗದ ಐಕ್ಯತೆಗಾಗಿ ಸಾಧಿಸಿದವರು ಬೇರೆ ಪ್ರಾಂತ್ಯಗಳಿಗೆಲ್ಲ ಸ್ತುತ್ಯವಾದ ಮೇಲ್ಪಂಕ್ತಿಯನ್ನು ಬರೆದಿಟ್ಟರು. ಪ್ರತಿಯೊಂದು ಭಾಷೆಯ ನಾಡಿನ ಜನರು ಒಟ್ಟಾಗಿ ತಮ್ಮ ತಮ್ಮ ಪ್ರಾಂತ್ಯದ ಉನ್ನತಿಯನ್ನು ಸಾಧಿಸಿ ಅದರ ಮೂಲಕ ಇಡೀ ದೇಶದ ಒಳ್ಳಿತನ್ನು ಸಂಪಾದಿಸಬೇಕೆಂಬುದು ಖಚಿತವಾಯಿತು. ನಮ್ಮ ಮರಾಠೀ ಬಂಧುಗಳೂ ಆಂಧ್ರರೂ ಬಂಗಾಲಿಗಳ ದಾರಿಯನ್ನೇ ಹಿಡಿದು ತಮ್ಮ ಪ್ರಾಂತ್ಯದ ಅಭಿಮಾನವನ್ನು ಬಲವಾಗಿ ಬೆಳೆಸಿದರು. ನಮ್ಮ ಕನ್ನಡ ನಾಡಿನಲ್ಲಿ ಮಾತ್ರ ಇಂಥ ಅಭಿಮಾನವು ಇನ್ನೂ ಬೇಕಷ್ಟು ಹಬ್ಬಲಿಲ್ಲ. ಅಲ್ಲಲ್ಲಿ ಕೆಲವು ದೇಶ ಭಕ್ತರು ದೇಹವನ್ನು ದಣಿಸಿ ಕೆಲಸ ಮಾಡಿದ್ದರಿಂದ ಕಾಂಗ್ರೆಸಿನ ಮೂಲಕವಾಗಿಯಾದರೂ ನಮಗೊಂದು ಸ್ವತಂತ್ರ ಅಸ್ತಿತ್ವವು ಸಿಕ್ಕಿತು ಆದರೆ ಇಷ್ಟರಿಂದಲೇ ನಾವು ಸಂತೋಷ ಪಡದೆ ಇಡೀ ಕರ್ನಾಟಕವು ಒಂದೇ ಪ್ರಾಂತ್ಯವಾಗಿ ತನ್ನದೇ ಒಂದು ಪ್ರಾಂತಿಕ ಸರಕಾರವನ್ನು ನಡೆಸುವ ವರೆಗೆ ನಮ್ಮ ಪ್ರಯತ್ನಕ್ಕೆ ಕಡೆಗಟ್ಟಬಾರದು. ಮೊನ್ನೆ ಮೊನ್ನೆ ಉತ್ಕಲ ದೇಶದವರು ಮಾಡಿದ ಪ್ರಯತ್ನವೂ ಅದರ ಪ್ರತಿಫಲವೂ ನಮ್ಮ ಕಣ್ಣೆದುರಿಗೆ ಹೊಳೆಯುತ್ತಿದೆ. ಹೀಗಿರುವಾಗ ನಮ್ಮ ಧ್ಯೇಯವನ್ನು ನಾವು ಮರೆತು ಬಿಡಬಾರದು.

ಎಲ್ಲ ಪ್ರಾಂತ್ಯಗಳಿಗಿಂತ ನಮ್ಮ ಅವಸ್ಥೆಯು ಬಹಳ ಕಠಿಣವಾದದ್ದು ನಿಜ. ಬೊಂಬಾಯಿ, ಮದರಾಸು, ನಿಜಾಮ ಸರಕಾರ, ಮೈಸೂರು ಸಂಸ್ಥಾನ ಇವುಗಳಿಗೆಲ್ಲ ಹಂಚಿಹಾಕಿದ ನಮ್ಮ ಕನ್ನಡಿಯ ಚೂರುಗಳನ್ನು ಒಟ್ಟು ಮಾಡಿ ಜೋಡಿಸುವುದು ಸುಲಭವಲ್ಲವಾದರೂ ಅದನ್ನು ಮಾಡಿಯೇ ತೀರಬೇಕು. ನಮ್ಮ ನಾಡಿನ ನಿಜವಾದ ಮೇಲ್ಮೆಯು ಕೈಗೊಳ್ಳಬೇಕಾದರೆ ಪ್ರತ್ಯಕ್ಷ ಬ್ರಿಟಿಷ್ ಹಿಂದುಸ್ಥಾನಕ್ಕೆ ಸೇರಿದ ಕನ್ನಡಿಗರೆಲ್ಲ ಒಟ್ಟಾಗಬೇಕು. ಅತ್ತ ಸಂಸ್ಥಾನದಲ್ಲಿಯ ಬಂಧುಗಳೊಡನೆ ಹೆಚ್ಚಿನ ಪ್ರೇಮವನ್ನು ಬೆಳೆಸಬೇಕು. ಇಡೀ ಕನ್ನಡನಾಡು ಒಂದೇ ಕೊಡೆಯ ನೆರಳಿನಲ್ಲಿ ಸೇರಲಿಕ್ಕೆ ಇಚ್ಛಿಸುತ್ತಿದೆ ಎಂಬುದನ್ನು ಇಡೀ ದೇಶಕ್ಕೆ ವಿಶದಗೊಳಿಸಬೇಕು.

ಇದಕ್ಕೆ ಉಪಾಯವೇನು? "ಮಹಾಜನೋ ಯೇನ ಗತಃ ಸ ಪಂಥಃ" ಎಂದು ಹಿರಿಯರು ಹೇಳಿದ್ದಾರೆ. ನಮ್ಮಲ್ಲಿರುವ ಎಲ್ಲರು ಮೊದಲು ಒಕ್ಕಟ್ಟಿನಿಂದ ಕೆಲಸ ಮಾಡಬೇಕು. ಮೊದಲಾಗಿ ನಮ್ಮ ಪತ್ರಕರ್ತರು ಒಟ್ಟಾಗಬೇಕು. ನಮ್ಮ ಪ್ರಾಂತ್ಯದಲ್ಲಿ ಅಲ್ಲಲ್ಲಿ ಸುಮಾರು ನೂರ ಪತ್ರಿಕೆಗಳಿವೆ. ಅವೆಲ್ಲವೂ ತಮ್ಮ ತಮ್ಮ ಪಟ್ಟಣದ ಮತ್ತು ಜಿಲ್ಲೆಯ ಹೊರಗಿನ ಕರ್ನಾಟಕವನ್ನು ಮರೆತು ಬಿಡುತ್ತವೆ. ಉದಾಹರಣೆಗಾಗಿ ಮಂಗಳೂರಿನ ಪತ್ರಗಳಲ್ಲಿ ಹೆಚ್ಚಾಗಿ ಚರ್ಚಿಸಲ್ಪಡುವ ಸಂಗತಿಗಳು ಲೆಜಿಸ್ಲೇಟಿವ್ ಎಸಂಬ್ಲಿ ಮತ್ತು ಮದ್ರಾಸು ಲೇಜಿಸ್ಲೇಟಿವ್ ಕೌನ್ಸಿಲಿನ ಸಂಗತಿಗಳು ತಪ್ಪಿದರೆ ಮಂಗಳೂರು ಮ್ಯುನಿಸಿಪಾಲಿಟಿ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಅಲ್ಲಿಗೆ ಮುಕ್ತಾಯ. ಕರ್ನಾಟಕದ ವರ್ತಮಾನವು ಜರ್ಮನಿಯ ವರ್ತಮಾನದಷ್ಟೇ ದೂರದ್ದು. ಇಂಥ ಸ್ಥಿತಿಯು ಬಹಳ ಶೋಚನೀಯವಾದದ್ದು. ಇದನ್ನು ಹೋಗಲಾಡಿಸಲಿಕ್ಕೆ ನಮ್ಮ ಪತ್ರಕರ್ತರೆಲ್ಲ ಒಟ್ಟಾಗಿ ಒಂದು ಸಂಘವನ್ನು ಏರ್ಪಡಿಸಿ ಇಡೀ ಪ್ರಾಂತ್ಯದ ಮುಖ್ಯ ಊರುಗಳಲ್ಲೆಲ್ಲ ಸುದ್ದಿಗಾರರನ್ನು ಇಡಬೇಕು. ಹೀಗೆ ಇಡೀ ಕನ್ನಡ ನಾಡಿನ ವರ್ತಮಾನವನ್ನೆಲ್ಲ ಒಟ್ಟುಗೂಡಿಸಿ, ಕನ್ನಡನಾಡಿನ ಸುದ್ದಿಗಳಿಗೆ ಮೇಲ್ಮಣೆ ಕೊಟ್ಟು ಅವುಗಳ ವಿಷಯ ಚರ್ಚಿಸಬೇಕು. ಬೆಳಗಾಂವಿ ಮ್ಯುನಿಸಿಪಾಲಿಟಿಯ ವಿಷಯ ಮಂಗಳೂರಿನವರು, ಮಂಗಳೂರ ಡಿಸ್ಟ್ರಿಕ್ಟ್ ಬೋರ್ಡಿನ ವಿಷಯ ಮೈಸೂರಿನವರು, ಮೈಸೂರಿನ ವಿದ್ಯಾಶಾಲೆಯ ವಿಷಯ ಕಾರವಾರದವರು ಚರ್ಚಿಸಿ ಇಡೀ ಕರ್ನಾಟಕದಲ್ಲಿ ಏಕಾತ್ರತೆಯನ್ನುಂಟುಮಾಡಬೇಕು. ಇದಲ್ಲದೆ ಇನ್ನೊಂದು ವಿಧದಲ್ಲಿಯೂ ಪತ್ರಗಳು ಪ್ರಾಂತ್ಯದ ಐಕ್ಯವನ್ನು ಸಾಧಿಸಬಹುದು. ನಮ್ಮಲ್ಲಿನ ಹಲವು ಪತ್ರಗಳು ಬಹಳ ಬಡತನದಲ್ಲಿವೆಯೆಂಬುದು ಎಲ್ಲರಿಗೂ ಗೊತ್ತು. ಆದ್ದರಿಂದ ನಮ್ಮ ಪ್ರಾಂತ್ಯದ ಮತ್ತು ಹೊರಗಿನ ಭವ್ಯವಾದ ಸ್ಥಳಗಳ ಚಿತ್ರಗಳನ್ನೂ ಮಹಾಪುರುಷರ ಭಾವಚಿತ್ರಗಳನ್ನೂ ಮುದ್ರಿಸುವುದು ನಮ್ಮ ಪತ್ರಕರ್ತರಿಂದ ಸಾಧ್ಯವಾಗಿಲ್ಲ. ಹೀಗಿರುವಾಗ ಇಂಗ್ಲಂಡ್ ದೇಶದ ಪತ್ರಕರ್ತರಂತೆ ನಮ್ಮವರೂ ಸಹ ಯಾಕೆ ಒಟ್ಟಾಗಬಾರದು? ಮೊನ್ನೆ ಹಿಮಾಲಯವನ್ನು ಹತ್ತಲಿಕ್ಕೆ ಕೆಲವರು ಹೋದಾಗ ಇಂಗ್ಲಂಡಿನ ಕೆಲವು ಪತ್ರಗಳೂ, ಬೊಂಬಾಯಿಯ "ಟೈಮ್ಸ್" ಪತ್ರವೂ ಒಟ್ಟಾಗಿ ಖರ್ಚುಮಾಡಿ ಪಟಗಳನ್ನು ಸಂಪಾದಿಸಿದರು. ಹಾಗೆಯೇ ನಮ್ಮವರೂ ಸಹ ಒಗ್ಗಟ್ಟಾಗಿ ಬುದ್ಧಿವಂತರಾದವರನ್ನು ನಮ್ಮ ಪ್ರಾಂತ್ಯದ ಇತಿಹಾಸವು ನಮ್ಮ ಮಹಾಪುರುಷರ ಚರಿತ್ರೆ, ನಮ್ಮಲ್ಲಿನ ಪ್ರಾಚೀನ ಸ್ಥಳಗಳ ಪುರಾಣ ಇವೂ ಅಲ್ಲದೆ ಪ್ರತಿದಿವಸವೂ ಲೋಕದಲ್ಲಾಗುವ ಅನೇಕ ಹೊಸಶೋಧಗಳು ಇವುಗಳ ವಿಷಯ ಬರೆಯಲಿಕ್ಕೆ ಹಚ್ಚಬಹುದು. ಹೊಟ್ಟೆಗಾಗಿ ನಮ್ಮಲ್ಲಿನ ಅನೇಕರು ಗೇಯಬೇಕಾದ ಈ ಕಾಲದಲ್ಲಿ ನಮ್ಮಲ್ಲಿನ ತಜ್ಞರು ಕಾಸಿನ ಫಲವಿಲ್ಲದೆ ಕೆಲಸ ಮಾಡುವದು ಬಹಳ ಕಷ್ಟ ಹಾಗೆಂದು ಒಂದೇ ಪತ್ರಕ್ಕೆ ಬೇಕಷ್ಟು ಹಣಕೊಡುವ ಶಕ್ತಿಯಿರಲಿಕ್ಕಿಲ್ಲ. ಒಗ್ಗಟ್ಟಿನಲ್ಲಿ ಬಲವಿಲ್ಲವೇ?

ನಮ್ಮ ಉಪಾಧ್ಯಾಯರೂ ಸಹ ಈ ಕೆಲಸದಲ್ಲಿ ಸಹ ಭಾಗಿಗಳಾಗಬೇಕು. ತಮ್ಮ ಜಿಲ್ಲೆಯ ಭೂಗೋಳ ಮತ್ತು ಚರಿತ್ರೆಯೊಡನೆ ನಮ್ಮ ಕನ್ನಡನಾಡಿನ ಭೂಗೋಳ ಮತ್ತು ಚರಿತ್ರೆಯನ್ನು ಕಲಿಸುವದು, ತಮ್ಮ ಊರಿನ ವಿಷಯ ಕರ್ನಾಟಕದ ಎಲ್ಲ ಪತ್ರಗಳಿಗೆ ವರ್ತಮಾನವನ್ನು ಕಳುಹಿಸುವದು ಮತ್ತು ಬೇರೆ ಜಿಲ್ಲೆಗಳ ಉಪಾಧ್ಯಾಯರನ್ನು ಕರೆತಂದು ತಮ್ಮಲ್ಲಿನ ಉಪಾಧ್ಯಾಯರ ಕೂಟದಲ್ಲಿ ಅವರಿಗೆ ಅಗ್ರಾಸನ ಕೊಟ್ಟು ಅವರ ವ್ಯಾಖ್ಯಾನ ಕೇಳುವದು, ಹುಡುಗರ ಸಂಗಡಿಗರನ್ನು ಮಾಡಿ ಬೇರೆ ಜಿಲ್ಲೆಗಳನ್ನು ಯಾತ್ರಾರ್ಥವಾಗಿ ಸಂದರ್ಶಿಸುವುದು, ಹೀಗೆಲ್ಲ ಮಾಡಿದರೆ ನಮ್ಮಲ್ಲಿ ಐಕ್ಯಬುದ್ಧಿಯು ಬೇಗನೆ ವೃದ್ಧಿಯಾಗಲಿಕ್ಕೆ ಸಂದೇಹವಿಲ್ಲ. ನಮ್ಮಲ್ಲಿನ ಶಾಲೆಗಳನ್ನು ನಡೆಸ ತಕ್ಕವರೆಲ್ಲ ಒಟ್ಟಾಗಿ ತಮ್ಮ ಕೈಕೆಳಗಿನ ಸಂಸ್ಥೆಗಳಲ್ಲೆಲ್ಲ ಪರಸ್ಪರ ಜ್ಞಾನವೂ ಪ್ರೇಮವೂ ವೃದ್ಧಿಯಾಗುವಂತೆ ಮಾಡಬಹುದು.

ನಮ್ಮ ಪುಸ್ತಕವ್ಯಾಪಾರಿಗಳು ಮತ್ತು ಮುದ್ರಣಕಾರರು ಒಟ್ಟಾಗಿ ಒಂದು ಸಂಸ್ಥೆಯನ್ನು ಏರ್ಪಡಿಸಿ ಒಂದು ಜಿಲ್ಲೆಯಲ್ಲಿ ಪ್ರಕಟವಾದ ಗ್ರಂಥಗಳನ್ನು ಇನ್ನೊಂದು ಜಿಲ್ಲೆಯಲ್ಲಿ ಪ್ರಚಾರಕ್ಕೆ ತರಲು ಯುಕ್ತಿಸಬಹುದು.

'ನಮ್ಮಲ್ಲಿನ ಐಶ್ವರ್ಯವಂತರೆಲ್ಲ ಏಕಮತರಾದರೇ ಬೊಂಬಾಯಿ ಕರ್ನಾಟಕಕ್ಕೆ ಮದ್ರಾಸು ಕರ್ನಾಟಕಕ್ಕೂ ಸುಲಭವಾಗಿ ಹೋಗಿಬರಲಿಕ್ಕೆ ಬೇಕಾದ ಅನುಕೂಲತೆಗಳನ್ನು ಸಿದ್ಧ ಮಾಡಿಸಬಹುದು. ಮಂಗಳೂರು, ಮಲ್ಪೆ ಭಟ್ಕಳ ಮುಂತಾದ ಬಂದರಗಳಿಂದ ರೈಲ್ವೆ ಮಾರ್ಗಗಳು ಮೈಸೂರು ಸೀಮೆಗೆ ಹೋಗಿದ್ದರೆ ನಮ್ಮಲ್ಲಿ ಪರಸ್ಪರ ಪ್ರಯಾಣ, ವ್ಯಾಪಾರ ಇವೆಲ್ಲ ಹೆಚ್ಚಿದು ನಾವಿನ್ನೂ ಹತ್ತಿರ ಬರುತ್ತಿದ್ದೆವು. ಈಗ ಮಂಗಳೂರಿನವರಿಗೆ ಧಾರವಾಡಕ್ಕಿಂತ ಮದರಾಸೇ ಹತ್ತಿರವಾಗಿ ಕಾಣುತ್ತದೆ. ಇಂಥ ಅನಾನುಕೂಲವನ್ನು ನಮ್ಮ ಧನಿಕರು ಹೋಗಲಾಡಿಸಬೇಕು.

ಹೀಗೆ ಅನೇಕ ವಿಧಗಳಿಂದ ಕನ್ನಡದ ಅಂಗಗಳನ್ನು ಒಟ್ಟಿಗೆ ತಂದು ನಮ್ಮಲ್ಲಿ ಅಂತರ್ಗತ ಐಕ್ಯವನ್ನು ಬೆಳೆಸಿದರೆ ನಮ್ಮದೇ ಬೇರೊಂದು ಪ್ರಾಂತಿಕ ಸರಕಾರವನ್ನು ಬೇಗನೆ ಸ್ಥಾಪಿಸಬಹುದು. ಇದಕ್ಕಾಗಿ ಅವಿಶ್ರಾಂತ ಕೆಲಸ ಮಾಡುವವರು ಮಾತ್ರ ಮುಂದೆ ಬರಬೇಕು. ನಮ್ಮಲ್ಲಿ ಅನೇಕ ವಿದ್ಯಾವಂತರಾದ ವಕೀಲರೂ ಉಪಾಧ್ಯಾಯರೂ ತಾಲೂಕು ಬೋರ್ಡು ಮುಂತಾದ ಸಂಸ್ಥೆಗಳ ಮೆಂಬರುಗಳೂ ಇದ್ದಾರೆ. ಇವರೆಲ್ಲ ತಮ್ಮ ಸಮಯದ ಸ್ವಲ್ಪಾಂಶವನ್ನು ನಮ್ಮ ನಾಡಿನ ಐಕ್ಯಕ್ಕಾಗಿ ವಿನಿಯೋಗಿಸಿದರೆ ನಮ್ಮ ಗುರಿಯನ್ನು ಬೇಗನೆ ಮುಟ್ಟಬಹುದು.

ಈ ಪತ್ರಿಕೆಯು ಮುಂಗನವಿ ಥೆ ರಂಗೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಲಯದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ ನಂ, ಬಿ. ೧೯೪೭ ವಾ. ಚಂದಾ ೧-೮-೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವೇಶವಾಗಿದೆ)

ಯಥಾ ಧಾರಣಂ ದ್ರುತೇ । ಇತ್ಯಾಧಾರೋ ಸ್ವತಃ ॥ — ಸತ್ಯ

ಸಂಪಾದಕರು — ಮಂಗಳವೇಢೇ ರಾಜೇರಾಯರ ಮುತ್ಯಾಳದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ಆಷಾಢ ವದ್ಯ ೮ ಶಕೆ ೧೮೪೮. ತಾ॥ ೨೦-೭-೧೯೨೬. | ಸಂಚಿಕೆ ೧೫

ಸಂಪಾದಕರ ಭೂಮಿ.

ಎನ್ನ ಕಿವಿ ಕನ್ನಡ ಕೇಳತಿರೆ ಕನ್ನಡ ನುಡಿದರೆ ಕನ್ನಡವು ।
ಕಣ್ಣವು ಕನ್ನಡ ಉಣ್ಣವು ಕನ್ನಡ- ಕನ್ನಡ-ಕನ್ನಡವು ।
ಕನಸು ಮನಸಿನೊಳು ಕನ್ನಡ ಕನ್ನಡ ಸಿದ್ಧಿಯು ಕನ್ನಡವು ।
ತನಸು ಕನ್ನಡವು ಜೀವಿತ ಕನ್ನಡ ಎಲ್ಲವು ಕನ್ನಡವು ।

—ಸ್ವ. ನಗರ ಕವಿ

“ **ಕನ್ನಡ ನುಡಿಯು ಹಳೆಯದು;** ಅದರಲ್ಲಿ ಹೇಳಬಹುದಾದ ಕವಿಗಳೂ ಲೇಖಕರೂ ಆಗಿ ಹೋಗಿರುವರು; ಅವರ ಸೊಬಗು ಸೊಗಸುಗಳನ್ನು ಬಣ್ಣಿಸಲಳವಲ್ಲ. ಅದೊಂದು ಕಾಲದಲ್ಲಿ ತನ್ನ ಕತ್ತುರಿಯ ಕಂಪನ್ನೆಲ್ಲೆಡೆಯಲ್ಲಿಯೂ ಬಿತ್ತರಿಸಿತ್ತು” ಇವೇ ಮೊದಲಾದ ಹಳೆಯ ಹಾಡುಗಳನ್ನು ‘ಕೇಶವಾಯಿದಾಸನಂತೆ ನೀವು ಹಾಡುತ್ತಿರುವಿರೆಂದೇ, ಅವರ ನಿರ್ಜೀವನವ’ ನ್ನು ನಮಗುಳಿದ ಸುಮಂಗಲ ಬರಹಗಳನ್ನು ಬರೆಯುವುದರಿಂದಲೂ ಏನು ಪ್ರಯೋಜನ ಎಂಬ ಆಕ್ಷೇಪ. ‘ಹೊಸತು ಬಾಳಬೇಕೆ’ ಎಂದು ಕನ್ನಡದ ಗಾನ. ಕನ್ನಡನುಡಿಯ ಏಳ್ಗೆಯು ನಮ್ಮ ಶ್ರೇಯಸ್ಸಿಗೆಲ್ಲ ಮೂಲವಾಗಿರುವದು ನಿಜ. ನಮ್ಮ ಗುರಿಯು ದಾರಿಯು ನಿಚ್ಚಳವಾಗಿದೆ. ಆ ದಾರಿಯನ್ನು ತುಳಿಯಲು ನಾವು ಹಿಂದು ಮುಂದು ನೋಡುವದಿಲ್ಲ. ಆದರೆ ಸರ್ವತೋಮುಖವಾದ ಸೌಂದರ್ಯವು ಪ್ರಾಪ್ತವಾಗಬೇಕಾದರೆ ಕಾಲವು ಬೇಕು. ಲೇಖಕರ ಸಹಾಯವು ಬೇಕು. ಸಂಪಾದಕರೊಬ್ಬರೇ ಎಷ್ಟು ಭಾರವನ್ನು ಹೊತ್ತಾರು! ಹೀಗೆ ನುಡಿದು ನಾವು ನಮ್ಮ ಜವಾಬುದಾರಿಯನ್ನು ತಾರಿಸಿಕೊಳ್ಳುವೆವೆಂದು ಸರ್ವಥಾ ಭಾವಿಸಬಾರದು. ‘ಕನ್ನಡಿಗ’ ನ ಓದುಗರಿಗೆ ಹಳೆಗನ್ನಡ-ಹೊಸಗನ್ನಡಗಳ ಸವಿಯನ್ನುಣ್ಣಲು ಅನುಕೂಲವಾಗುವಂತೆ ನಾವು ಇನ್ನು ಮುಂದೆ ಏರ್ಪಾಡು ಮಾಡುವೆವು. ‘ಸಾಹಿತ್ಯ’ ಸೇವೆಯೇ ತಮ್ಮ ಜೀವನದ ಗುರಿಯೆಂದು ಬಗೆಯುವವರು ಈ ಕಾರ್ಯಕ್ಕೆ ಕೈಕೊಟ್ಟರೆ, ನಮ್ಮ ಭಾರವು ಹಗುರಾಗುವದು; ಅವರಿಗಾದರೂ ತಾಯ್ನುಡಿಯ ಮೇಲ್ಮೆಗಾಗಿ ದುಡಿಯುವರ ಶ್ರೇಯವು ದೊರಕುವದು. ಪ್ರೇಯಸ್ಸು ಶ್ರೇಯಸ್ಸುಗಳೆರಡೂ ಸಾಧ್ಯವಾಗಲನುಕೂಲವಿರುವ ಪ್ರಸಂಗಗಳನ್ನು ಸಾಹಿತ್ಯ-ಸೇವಕರು ನಿಷ್ಫಲವಾಗಿ ಹೋಗಗೊಡಲಿಕ್ಕಿಲ್ಲವೆಂದು ನಮ್ಮ ನಂಬುಗೆ.

ಕರ್ನಾಟಕ ಏಕೀಕರಣ ಸಭೆಯ ಶಾಖೆಯೊಂದು ವಿಜಾಪೂರ ಜಿಲ್ಹೆಯಲ್ಲಿ ಸ್ಥಾಪಿಸಲ್ಪಟ್ಟ ಸಂಗತಿಯು ಬೇರೆ ಕಡೆಗೆ ಪ್ರಸಿದ್ಧವಾಗಿದೆ. ವಿಜಾಪೂರ ಜಿಲ್ಹೆಯು ಈ ಕಾರ್ಯವನ್ನು ಬಲವತ್ತರವಾಗಿ ನೆರವೇರಿಸುವದಾಗಿ ನಮಗೆ ಪೂರಾ ನಂಬಿಗೆಯಿದೆ. ಕರ್ನಾಟಕ ಭೂಷಣ ದೌಲತಿ ಶ್ರೀನಿವಾಸರಾಯರೂ, ರಾವಸಾಹೇಬ ಹಳಕಟ್ಟಿಯವರೂ ಏಕೀಕರಣದ ಬಗ್ಗೆ ಅತಿಶಯ ಉತ್ಸುಕರಾಗಿದ್ದಾರೆ. ಆದುದರಿಂದ ಏಕೀಕರಣ ವಿಷಯದಲ್ಲಿ ವಿಜಾಪೂರ ಜಿಲ್ಹೆಯು ಮುಂದಾಗಿ ಕೆಲಸ ಮಾಡಬಲ್ಲದು. ಬೆಳಗಾವಿಯಲ್ಲಿ ಈ ಸಭೆಯು ಸ್ಥಾಪಿತವಾದಾಗ್ಗೆ ೩ ಸಾವಿರ ರೂಪಾಯು ಆದಾಯ ಪತ್ರಿಕೆಯು ಸ್ವೀಕಾರವಾಗಿದೆ ಮಾತ್ರ. ಆದರೆ ಆ ಹಣವು ಈ ವರೆಗೆ ಕೂಡಿರದಿದ್ದರೂ, ಈ ೩ ಸಾವಿರ ರೂಪಾಯಿಗಳನ್ನು ವಿಜಾಪೂರ ಜಿಲ್ಹೆಯೊಂದೇ ಕೊಟ್ಟು ಏಕೀಕರಣದ ದುಂದುಭಿಯ ನಿನಾದವನ್ನು ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಕೇಳುವಂತೆ ಪ್ರಯತ್ನ ನಡೆಸಲೆಂದು ಶ್ರೀ. ಕೌಜಲಗಿಯವರು ಸಭಿಕರಿಗೆ ಒತ್ತಿ ಹೇಳಿದ್ದಾರೆ. ಕೆಲಸ ಮಾಡಲು ೪-೭ ಜನ ಉತ್ಸಾಹೀ ಜನರು ಬೇಕಾಗಿರುವರು, ವೃದ್ಧ ಪಿತಾಮಹರಾದ ಶ್ರೀ. ಕೆಂಭಾವಿ ರಾಘವೇಂದ್ರರಾಯರು ಈ ಜಿಲ್ಹಾ ಶಾಖೆಯ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದಾರೆ. ಆದುದರಿಂದ ಈ ಶಾಖೆಯ ಕೆಲಸವು ಭರದಿಂದ ಸಾಗುವದಾಗಿ ಕೋರುತ್ತೇವೆ.

ಮುಳಶೀ ಸತ್ಯಾಗ್ರಹದ ಬಗ್ಗೆ ಮಹಾರಾಷ್ಟ್ರದಲ್ಲಿ ಒಳ್ಳೇ ಚರ್ಚೆ ನಡೆದಿದೆ. ಸೇನಾಪತಿ ಬಾಪಟರವರಿಗೆ ೭ ವರ್ಷದ ಸಜೆಯಾಗಿದ್ದು ನಿರರ್ಥಕವೆಂದು ‘ಕೇಸರೀ’ ಕಾರರು ಅಭಿಪ್ರಾಯ ಪಟ್ಟಿದ್ದರಿಂದ, ಅವರನ್ನು ಅನೇಕರು ಟೀಕಿಸಿದ್ದಾರೆ. ಅದೇನೇ ಇರಲಿ. ಈ ಮುಳಶೀ ಸತ್ಯಾಗ್ರಹದ ಪ್ರಶ್ನೆಯಿಂದ ಮಹಾರಾಷ್ಟ್ರದ ಮುತ್ಸದ್ದಿತನದ ಪರೀಕ್ಷೆಯಾಗಿದೆಂಬದರಲ್ಲಿ ಸಂಶಯವಿಲ್ಲ. ಮುಳಶೀ ಪ್ರಕರಣವನ್ನು ಪ್ರಾರಂಭದಲ್ಲಿ ಅತಿಶಯ ಮಹತ್ವದ್ದಾಗಿ ಬೆಳಿಸಿ, ಅಸಹಕಾರ ಚಳವಳಿಯು ಸರಿಕೆಯು ಝುಂಝುವಾತದ ಹೊಯ್ದಾಟದ ಸಮಯದಲ್ಲಿ ಅದು ಬಿಕ್ಕಟಿನ ಪ್ರಶ್ನೆಯಾಗಿದೆಯೆಂದೂ, ಮಹಾರಾಷ್ಟ್ರದ ಗಂಡಸುತನದ ಪರೀಕ್ಷೆಯು ಅದರಿಂದ ಆಗುವದೆಂದೂ, ಮಹಾರಾಷ್ಟ್ರವು ತನ್ನ ಕೀರ್ತಿಗೂ, ಬುದ್ಧಿಗೂ, ಸಾಮರ್ಥ್ಯಕ್ಕೂ ಎಂದೂ ಕಲಂಕ ಬಾರದಂತೆ ಅದನ್ನು ಬಿಡಿಸುವದೆಂದೂ, ಹಿಂದುಸ್ಥಾನದಲ್ಲೆಲ್ಲ ಸಾರಿದ್ದರು. ಆದರೆ ಈಗ ಆ ಬಿಕ್ಕಟ್ಟಿನ ಪ್ರಶ್ನೆಯನ್ನು ಮಹಾರಾಷ್ಟ್ರದ ಮುತ್ಸದ್ದಿಗಳು ಬಿಡಿಸುವದನ್ನು ಮರೆತು, ವ್ಯಕ್ತಿ ವಿಷಯಕವಾದ ಟೀಕೆ ಪ್ರತಿಟೀಕೆಗಳಲ್ಲಿ ಮುಳು ಮುಳುಗಿ ಏಳುವದನ್ನು ಕಂಡರೆ ಮಹಾರಾಷ್ಟ್ರದ ಶೀಲವೆಂತಹದೆಂಬುದೂ, ಮುತ್ಸದ್ದಿತನವು ಯಾವ ಬಗೆಯಾಗಿ

ದೆಂಬುದೂ ತಾನೇ ಗೊತ್ತಾಗುವದು. ಮುಳಸೀ ಪ್ರಶ್ನೆಯು ಕೇವಲ ಮಹಾರಾಷ್ಟ್ರಕ್ಕೆ ಸಂಬಂಧಿಸಿದ್ದು, ಮಹಾರಾಷ್ಟ್ರವೇ ಆ ಚಳವಳಿಯನ್ನು ಹೂಡಿದ್ದು. ಅದುದರಿಂದ ಮಹಾರಾಷ್ಟ್ರದ ವೈರಿಷ್ಟ್ಯವೂ, ಏಕಾಂಗಿಯಾದರೆ ಮಹಾರಾಷ್ಟ್ರವು ಯಾವ ಬಗೆಯಿಂದ ತನ್ನ ಕಾರ್ಯವನ್ನು ಸಾಫಲ್ಯ ಮಾಡಿಕೊಳ್ಳಬಹುದೆಂಬುದೂ ಇದರಿಂದ ಸ್ಪಷ್ಟವಾಗಿ ದೃಗ್ಗೋಚರವಾಗುತ್ತವೆ. ತನ್ನ ಅಂಗವನ್ನೂ, ಮನೆಗೆಲಸವನ್ನೂ, ನೀಟಾಗಿಯೂ ಚೊಕ್ಕಟವಾಗಿಯೂ ಮಾಡಿಕೊಳ್ಳಲು ಸಾಮರ್ಥ್ಯವಿಲ್ಲದ ಮನುಜನು ಹೊರಗಿನ ಕೆಲಸಗಳನ್ನು ಮಾಡುವದಕ್ಕೆ ಹವಣಿಸುವದು ಹಾಸ್ಯಾಸ್ಪದವಾದ ಸಿದ್ಧಾಂತವಿದ್ದಂತೆ ಈ ಸಂಗತಿಯಾಗಿದೆ. ತನ್ನಲ್ಲಿ ಸಾಮರ್ಥ್ಯವಿಲ್ಲದೇ, ಮಹಾತ್ಮಾ ಗಾಂಧಿಯವರು ಹಾಗೆ, ಹೀಗೆ, ಅವರ ಸಿದ್ಧಾಂತಗಳು ಅಪಸಿದ್ಧಾಂತವು; ಖಾದಿಯ ಚಳವಳಿಯು ನಿರರ್ಥಕವಾದುದು; ಎಂಬದಾಗಿ ಕ್ಷಣ ಕ್ಷಣಕ್ಕೆ ಇಲ್ಲದ ಸಲ್ಲದ ಟೀಕೆಗಳಿಂದ ಅನ್ಯರಿಗೆ ಹೆಸರಿಡುವ ಮಹಾರಾಷ್ಟ್ರವು ಈಗಲಾದರೂ ಕಣ್ತೆರೆಯಲಿ! ಅಪಸಿದ್ಧವಾದ ಸಿದ್ಧಾಂತಗಳಿಂದ ಮಹಾತ್ಮರು ಭರತಖಂಡದ ರಾಜಕೀಯ ಪರಿಸ್ಥಿತಿಯನ್ನು ನಿರಾಶಜನಕಗೊಳಿಸಿದ್ದಾರೆಂದು ಹಳಿಯುವ ಮಹಾರಾಷ್ಟ್ರವು, ತನ್ನ ಪರಿಶುದ್ಧವಾದ ಸಿದ್ಧಾಂತಗಳಿಂದ, ತನ್ನದೇ ಆಗಿದ್ದ, ತನ್ನ ಸಂಪೂರ್ಣ ಸತ್ತೆಯಲ್ಲಿದ್ದ ಈ ಮುಳಶೀ ಪ್ರಕರಣವನ್ನೇಕೆ ನಿರಾಶೆಗೊಳಿಸಿದ್ದಿತೆಂಬದನ್ನು ಹೇಳಲಿ!

ಆಂಧ್ರ ವಿಶ್ವವಿದ್ಯಾಲಯವು ಬೇಗನೆ ಸ್ಥಾಪಿಸಲಾಗತಕ್ಕ ವಿಷಯವನ್ನು ಎಲ್ಲರೂ ತಿಳಿದಿರುವದು. ಬೇರೆ ಬೇರೆ ಭಾಷೆಗಳನ್ನಾಡುವ ಜನಾಂಗಕ್ಕೆ ಆ ಆ ಭಾಷೆಯ ವಿಶ್ವವಿದ್ಯಾಲಯವು ಇರಬೇಕೆಂಬುದಕ್ಕೆ ಎಲ್ಲರ ಸಮ್ಮತಿಯದೆ. ಆಂಧ್ರರಿಗೆ ಈ ವಿಶ್ವವಿದ್ಯಾಲಯವು ದೊರೆತಿದ್ದು ಸಂತೋಷದ ಸಂಗತಿಯು. ಆದರೆ ತಮ್ಮ ಸಂಸ್ಕೃತಿಯನ್ನು ಬೆಳೆಸಿಕೊಳ್ಳಲಿಕ್ಕೆ ಪ್ರಯತ್ನಿಸುವ ಬದಲು ಆ ವಿಶ್ವವಿದ್ಯಾಲಯವನ್ನು ಬಳ್ಳಾರಿಯಲ್ಲಿ ಸ್ಥಾಪಿಸಬೇಕೆಂಬದಾಗಿ ಆಂಧ್ರರ ಪ್ರಯತ್ನ ನಡೆದಿದೆ. ಬಳ್ಳಾರಿಯಲ್ಲಿ ಸ್ಥಾಪಿತವಾಗುವದು ಅಶಕ್ಯವಿದ್ದರೆ ಬಳ್ಳಾರಿಯ ಸಮೀಪದಲ್ಲಿಯಾದರೂ ಅದನ್ನು ಸ್ಥಾಪಿಸಬೇಕಂತೆ! ಬಳ್ಳಾರಿ ಜಿಲ್ಹೆಯಲ್ಲಿ ⅔ ಕನ್ನಡ ಭಾಗವಿದ್ದು ⅓ ಭಾಗದಲ್ಲಿ ಮಾತ್ರ ಆಂಧ್ರರಿದೆ. ಆ ಭಾಗದಲ್ಲಿ ಸಹ ಕನ್ನಡ ಮಾತನಾಡುವವರು ಇದ್ದೇ ಇರುವರು. ಅದುದರಿಂದ ಬಳ್ಳಾರಿಯಲ್ಲಿ ಆಂಧ್ರ ವಿಶ್ವವಿದ್ಯಾಲಯವಾದರೆ, ಅಥವಾ ಬಳ್ಳಾರಿ ಜಿಲ್ಹೆಯನ್ನು ಆಂಧ್ರ ವಿಶ್ವವಿದ್ಯಾಲಯಕ್ಕೆ ಒಳಪಡಿಸಿದರೆ, ಕನ್ನಡಿಗರು ಸಹ ಆಂಧ್ರ ಭಾಷೆಯಲ್ಲಿಯೇ ಶಿಕ್ಷಣ ಪಡೆಯಬೇಕಾಗುವದು. ಯಾಕೆಂದರೆ ಆಂಧ್ರ ವಿಶ್ವವಿದ್ಯಾಲಯದಲ್ಲಿ ಎಲ್ಲ ಶಿಕ್ಷಣವು ತೆಲುಗಿನಲ್ಲಿಯೇ ನಡೆಯುವದು. ಇದರಿಂದ ಕನ್ನಡಿಗರಿಗೆ ಕನ್ನಡ ಸಂಸ್ಕೃತಿಯ ಲಾಭವು ಎಳ್ಳಷ್ಟಾದರೂ ದೊರೆಯಲಾರದೆಂಬುದು ಸ್ಪಷ್ಟವಾಗುವದು. ಆಂಧ್ರಭಾಷೆಯ ಮುಖಾಂತರ ಶಿಕ್ಷಣ ಪಡೆದು, ಆಂಧ್ರ ಸಂಸ್ಕೃತಿಗೆ ಒಪ್ಪುವಂತೆ ತಮ್ಮ ಜನಾಂಗವು ಸಿದ್ಧವಾಗಬೇಕೆಂದು ಹವಣಿಸುವ ಆಂಧ್ರವು, ತನ್ನ ಸಂಸ್ಕೃತಿಯ ಬಗ್ಗೆ ತನಗೆ ಎಷ್ಟು ಅವರ ಅಭಿಮಾನವಿರುವದೋ ಅಷ್ಟೇ ಇತರ ಅಭಿಮಾನಗಳು ಕನ್ನಡಿಗರಲ್ಲಿರುವದನ್ನು ಮರೆತು, ಇಲ್ಲದ ಮನಸ್ತಾಪವನ್ನುಂಟು ಮಾಡಲು ಪ್ರಯತ್ನಿಸುವದರಿಂದ ಸಾತ್ವಿಕರಿಗೆ ಹಾಕ್ಕೆ ತೀರ ವಿರುದ್ಧವಾದುದು. ಇದನ್ನು ಆಂಧ್ರರು ಏತಕ್ಕೆ ನೋಡಲೊಲ್ಲರು. ಕನ್ನಡಿಗರು ಈ ಕಾಲದಲ್ಲಿ ಸುಮ್ಮನೇ ಕೂಡ್ರುವದು ಅಸಹ್ಯವು. ಬಳ್ಳಾರಿಯಲ್ಲಿ [illegible] ತಾ. ಆ ನಗರದ ಜನರದೊಂದು ಸಭೆಯಾಗಿ, ಆಂಧ್ರ ವಿಶ್ವವಿದ್ಯಾಲಯಕ್ಕೆ ಬಳ್ಳಾರಿಯನ್ನು ಜೋಡಿಸಬೇಕೆಂಬ ಠರಾವು ಬಹುಮತದಿಂದ ಸ್ವೀಕಾರವಾಯಿತಂತೆ. ಅಲ್ಲಿಯ ವಕೀಲರಾದ ಶ್ರೀ. ಕೇ. ಗುರುರಾಜರಾವ ಇವರು ಈ ಠರಾವಿನ ವಿರುದ್ಧವಾಗಿ ಮಾತನಾಡಿ ಕನ್ನಡಿಗರ ಮನೋಗತವನ್ನು ವ್ಯಕ್ತಪಡಿಸಿದರು. ಆದರೆ ಬಳ್ಳಾರೀ ಪಟ್ಟಣದಲ್ಲಿ ತೆಲಗಿನ ವರ್ಚಸ್ಸು ಹೆಚ್ಚಿದ್ದರಿಂದಲೂ, ಕನ್ನಡಿಗರಲ್ಲಿ ಅಭಿಮಾನವಿರದ್ದರಿಂದಲೂ ಈ ಗೊತ್ತುವಳಿಯು ಸ್ವೀಕಾರವಾಗಿದೆ. ಆದರೆ ಹಂಪಬಂಡರಾವ ಬಳ್ಳಾರಿ ನಗರದ ಜನರು ಇದಕ್ಕೆ ಸಮ್ಮತಿಯನ್ನು ಕೊಟ್ಟರೆ, ಆ ಸಂಪೂರ್ಣ ಜಿಲ್ಹೆಯ ಜನರ ಸಮ್ಮತಿಯು ದೊರೆತಂತಾಗಲಿಲ್ಲ. ಬಳ್ಳಾರಿ ಜಿಲ್ಹೆಯಲ್ಲಿಯ ಕನ್ನಡಿಗರೆಲ್ಲ ಈಗಲಾದರೂ ಎಚ್ಚತ್ತು, ಅಲ್ಲಲ್ಲಿ ಸಭೆ ಕರೆದು ಬಳ್ಳಾರೀ ನಾಗರೀಕರ ಠರಾವನ್ನು ನಿಷೇಧಿಸಿ, ತಾವು ಆಂಧ್ರ ವಿಶ್ವವಿದ್ಯಾಲಯಕ್ಕೆ ಸೇರಿಕೊಳ್ಳಲು ಒಪ್ಪುವದಿಲ್ಲವೆಂಬುದನ್ನು ಹೊರಗೆಡಹಬೇಕು. ಬಳ್ಳಾರಿ ನಗರದಲ್ಲಿಯ ಕನ್ನಡದ ಅಭಿಮಾನಿಗಳಾದ, ಕೇ. ಶ್ರೀ. ಗುರುರಾಜರಾವ, ಬಿ. ಭೀಮರಾವ, ಡಿ. ಎಸ್ ಹಣಮಂತರಾವ ಇವರೇ ಮೊದಲಾದವರು, ಕೂಡಲೇ ತಮ್ಮ ಜಿಲ್ಹೆಯಲ್ಲಿ ತಿರುಗಾಡಿ, ಈ ಬಗ್ಗೆ ಕನ್ನಡಿಗರಿಗೆ ಮಾರ್ಗ ತೋರಿಸಬೇಕೆಂದು ಆಗ್ರಹಪೂರ್ವಕವಾಗಿ ಪ್ರಾರ್ಥಿಸುತ್ತೇವೆ. ಹೊಸಪೇಟೆ ಹರಪನಹಳ್ಳಿಗಳಲ್ಲಿ ಸುಶಿಕ್ಷಿತರೂ, ಕರ್ನಾಟಕಾಭಿಮಾನಿಗಳೂ ಅನೇಕರಿದ್ದಾರೆ. ಅವರು ಸಹ ಈಗ್ಗೆ ಉತ್ಸಾಹದಿಂದ ಮುಂದೆ ಬಂದು ಕೆಲಸ ಮಾಡಬೇಕಾಗಿ ನಮ್ಮ ವಿನ್ನಹ. ಇತ್ತ ಉತ್ತರ ಕರ್ನಾಟಕದ ಮುಂಡರು ಈ ವಿಷಯದ ಮಹತ್ವವನ್ನರಿತು ಬಳ್ಳಾರಿಯಲ್ಲಿ ಕೂಡಲೇ ಸಂಚರಿಸಬೇಕಾಗಿ ಸೂಚಿಸುತ್ತೇವೆ. ಶ್ರೀ. ಗಂಗಾಧರರಾಯರಿಗೆ ಈ ವಿಷಯವು ಗಮ್ಯವಿರಲಿಕ್ಕಿಲ್ಲ. ಶ್ರೀ. ಕಾಜಲಗಿಯವರೂ ಭಾಂಡಾರದ ಸಹಾಯಕರೂ ಕೂಡಲೇ ಬಳ್ಳಾರಿಗೆ ಧಾವಿಸಬೇಕು. ಬಳ್ಳಾರಿಯಲ್ಲಿ ವೀರಶೈವ ಸಮಾಜವು ಹೆಚ್ಚಿದೆ, ಆದ್ದರಿಂದ ಒಬ್ಬಿಬ್ಬ ವೀರಶೈವ ಮುಂದಾಳುಗಳು ಸಹ ಈಗ್ಗೆ ಬಳ್ಳಾರಿಗೆ ಹೋಗಿ ವೀರಶೈವರಲ್ಲಿಯೂ ಜಾಗ್ರತಿಯನ್ನು ಹುಟ್ಟಿಸಬೇಕು

ಬಾಗಲಕೋಟೆಯ ಹೊಸ ಶಾಲೆಯ ಬಗ್ಗೆ ನಾವು ಕಳೆದ ವಾರದಲ್ಲಿ ಬರೆದದ್ದಕ್ಕೆ ಶ್ರೀ. ಜೋಶಿಯವರು ಮಾತ್ರ ಉತ್ತರ ಕೊಟ್ಟಿರುವರು. ಸ್ಥಳಾವಕಾಶವಿಲ್ಲದ್ದರಿಂದ ಅದನ್ನು ಮುಂದಿನ ವಾರ ಪ್ರಸಿದ್ಧಿಪಡಿಸಬೇಕಾಗಿದೆ. ಅವರು ಕೊಟ್ಟ ಹಣದ ಆಯ-ವ್ಯಯ ಪತ್ರಿಕೆಯಿಂದ ಈ ಶಾಲೆಯ ಹಣವು ಅಪವ್ಯಯವಾಗಿಲ್ಲದೆಂಬದಾಗಿ ತೋರುತ್ತದೆ. ಈ ಶಾಲೆಯ 'ಇತಿಶ್ರೀ'ಯ ಬಗ್ಗೆಯೂ ಉಳಿದ ವಿಷಯಗಳ ಬಗ್ಗೆಯೂ ಅದರ ವ್ಯವಸ್ಥಾಪಕ ಮಂಡಳಿಯವರಿಗೆ ಕೇಳಿ ಶ್ರೀ. ಜೋಶಿಯವರು ಉತ್ತರ ಕೊಡುವೆವೆಂದು ತಿಳಿಸಿದ್ದಾರೆ. ಆದುದರಿಂದ ಮಂಡಲದವರು ಏನು ನಿಶ್ಚಯಿಸುವರೋ ನೋಡುವಾ.

ಲೋಕಪಾವನ ಮತ್ತು **ಕರ್ನಾಟಕ** ಎಂಬೆರಡು ಹೊಸ ಪತ್ರಿಕೆಗಳು ನಮ್ಮ ಕೈಸೇರಿವೆ. ಮೊದಲನೇಯದು ಮಡಿಕೇರಿಯಲ್ಲಿ ಹುಟ್ಟಿದ ವಾರಪತ್ರಿಕೆ. ವಾ. ಚಂ. ರೂ. ೩. ಕೊಡಗುಲೋಕವನ್ನು ಪಾವನಗೊಳಿಸುವದೇ ಅದರ ಮುಖ್ಯ ಉದ್ದೇಶ. ಆದರೆ ಈ ಕಾರ್ಯದಲ್ಲಿ ಅನ್ಯರ ಮೇಲೆ ಹಳಿಹಾಯದಂತೆ ಜಾಗರೂಕರಾಗಿರುವದು ಅವಶ್ಯಕವು. ಕೊಡಗಿನಲ್ಲಿ ಹೊಸ ಹೊಸ ಪತ್ರಿಕೆಗಳು ಹೊರಡುತ್ತಿದ್ದು, ಅಲ್ಲಿಯ ಸಾರ್ವಜನಿಕ ಚೈತನ್ಯದ ಮತ್ತು ಜಾಗ್ರತಿಯ ಲಕ್ಷಣವು. ಲೋಕಪಾವನವು ಚಿರಾಯುವಾಗಲೆಂದು ಹಾರೈಸುವೆವು. ಎರಡನೇಯದ್ದು ಬೆಂಗಳೂರಿನಲ್ಲಿ ಪ್ರಸಿದ್ಧವಾಗುವ ಇಂಗ್ಲಿಷ ಮಾಸಪತ್ರಿಕೆ. ಸುಪ್ರಸಿದ್ಧ ಲೇಖಕರೂ ಪಂಡಿತರೂ ಆದ ಶ್ರೀ. ಡೀ. ವ್ಹಿ. ಗುಂಡಪ್ಪನವರೇ ಇದರ ಸಂಪಾದಕರು. ವಾ. ಚಂ. ರೂ. ೪. ಸಂಸ್ಥಾನಗಳ ಏಳ್ಗೆಗಾಗಿ ಪ್ರಯತ್ನಿಸುವದು ಇದರ ಮುಖ್ಯ ಉದ್ದೇಶ. ಕರ್ನಾಟಕದ ವಿಷ್ಯ ಪ್ರಶ್ನೆಗಳೆಲ್ಲವೂ ಇದರಲ್ಲಿ ಚರ್ಚಿಸಲ್ಪಡುವವು. ಕರ್ನಾಟಕದ ವಿ

ಕೀಕರಣದ ಬಗ್ಗೆ ಇದರಲ್ಲಿ ಪ್ರಸಿದ್ಧವಾದ ಲೇಖವು ವಾಚನೀಯವಾಗಿದೆ. ಕರ್ನಾಟಕ ಸಂಸ್ಕೃತಿಯ ಬಗ್ಗೆ ಎಲ್ಲ ಲೇಖಗಳನ್ನು ಸಂಪಾದಕರು ಪ್ರಸಿದ್ಧಿಸುವೆವೆಂದಾಗಿ ಆಶ್ವಾಸನ ಕೊಟ್ಟಿರುವರು. ಕರ್ನಾಟಕವು ಪುನಃ ಜನ್ಮವೆತ್ತಿ ಬಂದದ್ದರಿಂದ ನಮಗೆ ಸಂತೋಷವಾಗಿದೆ. ಈ ಸಾರೆ ಇದು ಚಿರಂಜೀವಿಯಾಗಿ ಕರ್ನಾಟಕದ ವೈಭವವನ್ನು ಹಿಂದುಸ್ಥಾನದಲ್ಲೆಲ್ಲ ಪ್ರಸಿದ್ಧ ಪಡಿಸುವದಾಗಿ ಆಶಿಸುವೆವು. ಕರ್ನಾಟಕಸ್ಥರು ಈ ಎರಡೂ ಪತ್ರಗಳಿಗೆ ಪ್ರೋತ್ಸಾಹನ ಕೊಡುವದಾಗಿ ಆಶಿಸುತ್ತೇವೆ.

ಕರ್ನಾಟಕ ಏಕೀಕರಣ ಸಭೆ.

ವಿಜಾಪೂರ ಜಿಲ್ಹೆಗೂ ಒಂದು ಶಾಖೆ.

ಈ ಸಭೆಯ ಕಾರ್ಯವನ್ನು ವಿಜಾಪೂರ ಜಿಲ್ಹೆಯಲ್ಲಿ ನೀಟಾಗಿ ನಡೆಸುವದಕ್ಕಾಗಿ ವಿಜಾಪೂರ ಜಿಲ್ಹೆಯ ಪಟ್ಟಿಗೆ ಒಂದು ಜಿಲ್ಹಾ ಶಾಖೆಯು ಮೊನ್ನಿನ ೪ ನೇ ತಾ. ದಿನ ವಿಜಾಪೂರದಲ್ಲಿ ಸ್ಥಾಪಿಸಲ್ಪಟ್ಟಿತು. ಶಿಪಸ್ ಹಾಲಿನಲ್ಲಿ ಈ ಸಭೆಯು ಶ್ರೀಮಂತ ಸರದೇಸಾಯಿ ರಕ್ಕಸಗಿಯವರ ಅಧ್ಯಕ್ಷತೆಯಲ್ಲಿ ನೆರೆದಿತ್ತು. ಮೊದಲು ಕರ್ನಾಟಕ ಭೂಷಣ ಕೌಜಲಗಿ ಶ್ರೀನಿವಾಸರಾಯರು ಪ್ರಾಸ್ತಾವಿಕ ಭಾಷಣದಲ್ಲಿ ಕರ್ನಾಟಕದ ಏಕೀಕರಣದಿಂದಾಗುವ ಲಾಭಗಳನ್ನು ಚನ್ನಾಗಿ ನಿವೇದಿಸಿದರು. ಅದರಲ್ಲಿ ಬಂದರದಿಂದಲೂ, ಮುಖ್ಯ ರಾಜಧಾನಿಯಿಂದಲೂ, ಕರ್ನಾಟಕದ ವ್ಯಾಪಾರ ಉದ್ದಿಮೆಗಳು ಬೆಳೆದು, ವ್ಯಾಪಾರಸ್ಥರಿಗೆ ಮೊದಲು ಲಾಭವಾಗುವದೆಂದು, ಒತ್ತಿ ಹೇಳಿದರು. ಇವರ ಭಾಷಣವು, ಸ್ವಾಭಾವಿಕವಾದ ಅಸ್ಖಲಿತ ವಾಣಿಯಿಂದ, ಒಂದು ತಾಸಿನ ವರೆಗೆ ನಡೆಯಿತು. ಆಮೇಲೆ ಶ್ರೀ. ಬೇಲೂರ ಕೇಶವದಾಸರು ಕರ್ನಾಟಕದ ಹಿಂದಣ ವೈಭವವನ್ನೂ ಈಗಿನ ದುಃಸ್ಥಿಯನ್ನೂ ಸಭಿಕರಿಗೆ ತಿಳಿಸಿಹೇಳಿದರು. ರಾವಸಾಹೇಬ ಹಳಕಟ್ಟೀಯವರು ವಿಜಾಪೂರ ಜಿಲ್ಹೆಯಲ್ಲಿ ಕರ್ನಾಟಕ ಏಕೀಕರಣ ಸಭೆಯ ಜಿಲ್ಹಾ ಶಾಖೆಯಿರಬೇಕೆಂಬವಾಗಿ ಮೊದಲನೇ ಠರಾವನ್ನು ಸಭೆಯ ಮುಂದಿಟ್ಟು, ಏಕೀಕರಣದ ಮಹತ್ವದ ಮೇಲೆ ಮಾತನಾಡಿದರು. ಶ್ರೀ. ಕೌಜಲಗೀ ಹಣಮಂತರಾಯರು ಅದಕ್ಕೆ ಅನುಮೋದನ ಕೊಡುವಾಗ್ಗೆ ಬಹು ಚಿಕ್ಕದಾದರೂ, ರುಚಿಕಟ್ಟಾದ ಮಾತನ್ನು ಹೇಳಿದರು. ಕರ್ನಾಟಕಕ್ಕೆ ಬೇರೆ ಪ್ರಾಂತವು ದೊರೆತರೆ, ವೀರಶೈವರ ಪ್ರಾಬಲ್ಯವು ಹೆಚ್ಚಾಗುವದರಿಂದ ಅದು ತಮಗೆ ಬೇಡೆಂದು ಹಲಕೆಲವು ಬ್ರಾಹ್ಮಣರು ನುಡಿಯುವದರಲ್ಲಿ ಅರ್ಥವಿಲ್ಲವೆಂದೂ, ಬ್ರಾಹ್ಮಣರು ಇಂಥ ಕ್ಷುದ್ರ ವಿಚಾರಕ್ಕೆ ಬೆದರಬಾರದೆಂದೂ, ಅವರಲ್ಲಿ ಬ್ರಾಹ್ಮಣ್ಯದ ಶೀಲವಿರುವ ವರೆಗೆ ಯಾವ ಅಂಜಿಕೆಯೂ ಸಾಗದೆಂದೂ ಸ್ಪಷ್ಟವಾಗಿ ಹೇಳಿದರು. ಒಂದನೇ ಠರಾವು ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟಿತು. ಈ ಜಿಲ್ಹಾ ಸಭೆಗೆ ವ್ಯವಸ್ಥಾಪಕ ಮಂಡಲದಲ್ಲಿ ಯಾರಾರು ಇರಬೇಕೆಂಬ ಎರಡನೇ ಠರಾವನ್ನು ಶ್ರೀ. ಕೊಪ್ಪ ವಕೀಲರೂ, ಧನಸಹಾಯದ ಬಗ್ಗೆ ಮೂರನೇ ಠರಾವನ್ನು ಶ್ರೀ. ಪುರೋಹಿತರೂ ಸಭೆಯ ಮುಂದಿಡಲು ಅವು ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟವು. ಕಡೆಗೆ ಅಧ್ಯಕ್ಷರು ಕರ್ನಾಟಕದ ಏಕೀಕರಣದ ಮಹತ್ವವು ಎಷ್ಟೆಂಬದನ್ನೂ, ಮುಂಬಯಿ ಕೌನ್ಸಿಲದಲ್ಲಿ ಈ ಬಗ್ಗೆ ಪ್ರಯತ್ನಗಳು ನಡೆದಿವೆಂಬದನ್ನೂ ಅಭಿಮಾನಪೂರ್ವಕವಾಗಿ ಹೇಳಿದರು. ಆಮೇಲೆ ಶ್ರೀ. ಕೌಜಲಗೀ ಶ್ರೀನಿವಾಸರಾಯರು ಎಲ್ಲರ ಅಭಾರವನ್ನು ಮನ್ನಿಸಿ, ಈ ಜಿಲ್ಹೆಯ ಜನರು ಉದಾರಮನಸ್ಸಿನಿಂದ ಈ ಕೆಲಸಕ್ಕೆ ದ್ರವ್ಯಸಹಾಯವನ್ನು ಮಾಡಿ ೩ ಸಾವಿರ ರೂಪಾಯಿಗಳನ್ನು ಕೂಡಿಸಿ ಕೊಡಬೇಕೆಂದು ಒತ್ತಿ ಹೇಳಿದರು. ಸಭಿಕರ ಕರ ತಾಡನೆಯಲ್ಲಿ ಸಭೆ ವಿಸರ್ಜನೆಯಾಯಿತು. ಈ ಸಭೆಯ ಮುಖ್ಯ ಉತ್ಪಾದಕರು ರಾವಸಾಹೇಬ ಹಳಕಟ್ಟಿ ಮತ್ತು ಕರ್ನಾಟಕ ಭೂಷಣ ಕೌಜಲಗಿಯವರೇ ಇರುವದರಿಂದ ಸಭೆಯ ಉದ್ದೇಶಗಳು ಬೇಗನೇ ಸಫಲವಾಗಬಹುದಾಗಿ ನಂಬಿಗೆಯದೆ.

ಮರುದಿನವೇ ಸೋಶಲ್ ಕ್ಲಬ್ಬಿನಲ್ಲಿ ವ್ಯವಸ್ಥಾಪಕ ಮಂಡಳಿಯು ನೆರೆಯಿತು. ರಾವಬಹದ್ದೂರ ಕೆಂಭಾವಿ ರಾಘವೇಂದ್ರರಾಯರು ಈ ಮಂಡಳಿಯ ಅಧ್ಯಕ್ಷಸ್ಥಾನವನ್ನು ಈ ವರ್ಷ ಸ್ವೀಕಾರ ಮಾಡಿದರು. ಪ್ರಸಿದ್ಧ ವ್ಯಾಪಾರಸ್ಥರಾದ ಶ್ರೀ. ಧನಶೆಟ್ಟೀ ಶಂಕರಪ್ಪನವರೂ, ಉತ್ಸಾಹೀ ವಕೀಲರಾದ ದೇಶಪಾಂಡೇ ರಾಜೇರಾಯರೂ, ಕಾರ್ಯದರ್ಶಿಗಳಾಗಿದ್ದಾರೆ. ರಾವಸಾಹೇಬ ಹಳಕಟ್ಟೀ ಶ್ರೀ. ಸರದೇಸಾಯಿ ರಕ್ಕಸಗೀ, ಕ. ಭೂ. ಕೌಜಲಗೀ, ಶ್ರೀಯುತರುಗಳಾದ ಕೊಪ್ಪ, ನೀಲಕಂಠಪ್ಪಾ ಸುಗಂಧಿ ಧೊಪ್ಪೇ ಈ ಮಹನೀಯರು ಮಂಡಳದ ಸಭಾಸದರು. ಸೊಲ್ಲಾಪೂರ ಜಿಲ್ಹೆಯಲ್ಲಿರುವ ಕನ್ನಡ ಹಳ್ಳಿಗಳನ್ನು ವಿಜಾಪೂರಕ್ಕೆ ಜೋಡಿಸುವದಕ್ಕಾಗಿ ಶ್ರೀ. ಕೊಪ್ಪ ವಕೀಲರೂ, ಶ್ರೀ. ಧನಶೆಟ್ಟಿಯವರೂ ಕೂಡಿ ಪ್ರಯತ್ನಿಸಬೇಕೆಂದೂ, ಜಿಲ್ಹೆಯಲ್ಲೆಲ್ಲ ತಿರುಗಾಡಿ ಏಕೀಕರಣದ ಬಗ್ಗೆ ಜಾಗ್ರತಿಯನ್ನು ಹುಟ್ಟಿಸುವ ಕಾರ್ಯವನ್ನು ಶ್ರೀ. ಕೌಜಲಗೀ ಮತ್ತು ಹಳಕಟ್ಟಿಯವರು ಮಾಡಬೇಕೆಂದೂ, ಸಭಾಸದರನ್ನೂ ಹಣವನ್ನೂ ಕೂಡಿಸುವ ಕೆಲಸವನ್ನು ಎಲ್ಲ ಸಭಾಸದರೂ ಮಾಡಬೇಕೆಂದೂ, ಈ ಎಲ್ಲ ಕಾರ್ಯವನ್ನು ಮೂರು ತಿಂಗಳುಗಳ ವರೆಗೆ ಮಾಡಿ ತಮ್ಮ ತಮ್ಮ ಕೆಲಸದ ವರದಿಯನ್ನು ವ್ಯವಸ್ಥಾಪಕ ಮಂಡಲಿಗೆ ಒಪ್ಪಿಸಬೇಕೆಂದೂ ನಿರ್ಣಯವಾಗಿದೆ.

(೭ ನೇ ಪುಟದಿಂದ ಬಂದದ್ದು.)

ಹೇಗೂ ಹಾಗೆಯೇ ತಮ್ಮ ನಿಯೋಗದಿಂದಲೂ ತಮ್ಮ ಜನರಿಗೆ ಉಪಕಾರವನ್ನು ಮಾಡುವರು. ಈಗ ನೋಡಿ ಒಂದು ವಾರದಿಂದ ಪತ್ರಿಕೆಗಳಲ್ಲಿ ಎಲ್ಲವೂ ಇದೇ ಸುದ್ದಿ! ಸಂಪಾದಕರಿಗೆ ಚಿಂತೆಯಿಲ್ಲದೆ ಗ್ರಾಸ ಸಿಗುತ್ತಲಿರುವದು. ಮೂಲೆ ಮೂಲೆಗಳಲ್ಲಿ ಮುಸುಕು ಹಾಕಿಕೊಂಡು ತೂಕಡಿಸುತ್ತಿದ್ದ ದೇಶ ಭಕ್ತರೂ, ವೀರರೂ ಯೋಧರೂ ಎಲ್ಲರೂ ಎದ್ದು ಸಭೆಗಳಲ್ಲಿ ಉಪನ್ಯಾಸ ಪರಂಪರೆಗಳನ್ನು ಮಾಡಲು ಸನ್ನಿವೇಶವು ಕಲ್ಪಿತವಾಯಿತು. ಮಹಾಜನರಂತೂ ದುಃಖ ಸಾಗರದಲ್ಲಿ ಮುಳುಗಿ ಕಣ್ಣೀರು ಸುರಿಸುತ್ತಾ ಸಭೆಗಳಿಗೆ ಹೋಗಿ ಉಪನ್ಯಾಸಗಳನ್ನೂ ಕೇಳಲು ಸಿದ್ಧರಾಗಿರುವರು. ದಯಾಮಯರಾದವೆ ನಾವೇ ಸರಿ. ಏನು ಕರುಣ ಏನು ಪಶ್ಚಾತಾಪ. ಅಳುವುದಕ್ಕೇನೂ ಕಡಿಮೆಯೇ ಇಲ್ಲ. ಉಳಿಯುವವರು ಮಾತ್ರ ಅತಿ ವಿರಳ ಅಳುವುದರಿಂದ ಕಾರ್ಯ ಸಾಧನೆಯಾಗಬೇಕಾದರೆ ತ್ರಿಲೋಕಗಳಲ್ಲಿಯು ಭಾರತೀಯರಂತಹ ಸಾಧಕರೇ ಇಲ್ಲ. ಈ ಗೋಳಾಡುವ ಭಾರತೀಯರಿಗೆ ವಿಲಾಯತಿಯವರು ಸ್ವರಾಜ್ಯದಾನವನ್ನೂ ಮಾಡಿ ತಮ್ಮ ಕಂಕಣ ವಿಸರ್ಜನವನ್ನೂ ಮಾಡಿಕೊಂಡು ಹಡಗುಗಳಲ್ಲಿ ಹಿಂತಿರುಗ ಬಾರದೇ ? ಕಲಿಯುಗ—ಏನು ಮಾಡಬೇಕು.?

—ತುಂಟರಚಿಳ್ಳೆ—

ಗಂಗಾಸ್ವರೂಪ ವಾಸಂತೀ ದೇವಿಯವರು.

(ಲೇಖಕ ಮ. ಗಾಂಧಿ. ನವಜೀವನ)

ಕೆಲವು ವರ್ಷಗಳ ಹಿಂದೆ ನಾನು ಸ್ವರ್ಗವಾಸಿ ರಮಾಬಾಯಿ ರಾನಡೆಯವರ ದರ್ಶನದ ವರ್ಣನೆಯನ್ನು ಕೊಟ್ಟಿದ್ದೆನು. ಅವರನ್ನು ನಾನು ಆದರ್ಶವಿಧವೆಯಂತೆ ವರ್ಣಿಸಿದ್ದೆನು.

ಈ ಸಾರೆ ಒಬ್ಬ ಮಹಾವೀರನ ವಿಧವೆಯ ವೈಧವ್ಯದ ಆರಂಭದ ಚಿತ್ರವನ್ನು ಕೊಡುವದು ನನ್ನ ಪಾಲಿಗೆ ಬಂದಿದೆ.

ವಾಸಂತೀ ದೇವಿಯವರೊಂದಿಗೆ ನನ್ನ ಪರಿಚಯವು ಸನ್ ೧೯೧೯ ನೇ ಇಸ್ವಿಯಿಂದಿರುವದು. ಗಾಢ ಪರಿಚಯವು ೧೯೨೧ ರಲ್ಲಿ ಆಯಿತು. ಅವರ ಸರಳತೆ, ಅವರ ಚಾತುರ್ಯ ಮತ್ತು ಅವರ ಅತಿಥಿ ಸತ್ಕಾರ ಇವುಗಳ ಬಗ್ಗೆ ನಾನು ಬಹು ಕೇಳಿದ್ದೆನು. ಇವುಗಳ ಅನುಭವವಾದರೂ ನನಗೆ ಒಳಿತಾಗಿಯೆ ಆಯಿತು. ದಾರ್ಜಿಲಿಂಗದಲ್ಲಿ ದೇಶಬಂಧುಗಳೊಡನೆ ನನ್ನ ಸಂಬಂಧವು ಬೆಳೆದಂತೆ ವಾಸಂತೀದೇವಿಯವರೊಡನೆಯಾದರೂ ಬೆಳೆಯಿತು. ಅವರ ವೈಧವ್ಯದಲ್ಲಿಯಂತೂ ಪರಿಚಯವು ಮತ್ತೆ ಹೆಚ್ಚಿಗೆ ದೃಢವಾಗಿದೆ. ದಾರ್ಜಿಲಿಂಗದಿಂದ ದೇಶಬಂಧು ದಾಸರ ಶ್ರವವು ಕಲಕತ್ತೆಗೆ ಬಂದಾಗಿನಿಂದ ನಾನು ಅವರ ಜೊತೆಯಲ್ಲಿಯೇ ಇರುತ್ತಿರುವೆನೆಂದು ಹೇಳಬಹುದು. ವೈಧವ್ಯದನಂತರ ಮೊದಲನೆಯ ಭೆಟ್ಟಿಯ ಪ್ರಸಂಗವು ಅವರ ಅಳಿಯಂದಿರ ಮನಿಯಲ್ಲಿ ಒದಗಿತು. ಅನೇಕ ಭಗಿನಿಯರೊಂದಿಗೆ ಅವರು ಕುಳಿತಿದ್ದರು. ಪೂರ್ವಾಶ್ರಮದಲ್ಲಿ ನಾನು ಅವರ ಚಿಕ್ಕ ಮನಿಯಲ್ಲಿ (ಕೋಣೆಯಲ್ಲಿ) ಕೂಡ್ರುವದು ನಿಲ್ಲುವದು ಮಾಡುತ್ತಿದ್ದದರಿಂದ ಅವರೇ ಎದ್ದು ಬಂದು ನನ್ನನ್ನು ಕರೆದೊಯ್ಯುತ್ತಿದ್ದರು. ಈಗ ವೈಧವ್ಯದಲ್ಲಿ ನನ್ನನ್ನು ಕರೆಯುವವರಾರು? ಗೋಡೆಗಳಂತೆ ಸ್ತಬ್ಧರಾಗಿ ಕುಳಿತಿದ್ದ ಆ ಎಲ್ಲ ಭಗಿನಿಯರಲ್ಲಿ ಅವರನ್ನು ನಾನು ಕಂಡು ಹಿಡಿಯಬೇಕಾಯಿತು. ಒಂದು ಮಿನಿಟಿನವರೆಗೆ ನಾನು ಅವರನ್ನು ಹುಡುಕುತ್ತ ನಿಂತೆನು. ಬೈತಲಿನಲ್ಲಿ ಸಿಂದೂರವು, ಹಣೆಯಲ್ಲಿ ಕುಂಕುಮವು, ಬಾಯಿಯಲ್ಲಿ ವೀಳ್ಯವು, ಕೈಗಳಲ್ಲಿ ಕಂಕಣಗಳು ಮೊಗದಲ್ಲಿ ಎಳೆನಗೆಯು— ಇವುಗಳಲ್ಲಿ ಒಂದನ್ನೂ ನಾನು ನೋಡಲಿಲ್ಲ. ವಾಸಂತಿ ದೇವಿಯವರನ್ನು ಗುರುತಿಸುವದೆಂತು? ಎಲ್ಲಿ ಅವರು ಇರಬಹುದೆಂದು ನಾನು ತರ್ಕಿಸಿದೆನೋ ಅಲ್ಲಿಗೆ ಹೋಗಿ ಕುಳಿತುಕೊಂಡೆನು. ಮತ್ತು ಅವರ ಮುಖವನ್ನು ಕಂಡೆನು. ನೋಡುವದು ಅಸಹ್ಯವಾಯಿತು. ಧೈರ್ಯವನ್ನು ಗಟ್ಟಿಸಿದೆನು. ಶೋಕವನ್ನು ಕಷ್ಟದಿಂದ ತಡೆದು ಹಿಡಿದೆನು. ಎದೆಯನ್ನು ಕಲ್ಲು ಮಾಡಿ ಆಶ್ವಾಸನವನ್ನಿತ್ತು ದೂರ ಕುಳಿತೆನು

ಅವರ ಮುಖದ ಮೇಲಿನ ವಾಡಿಕೆಯ ಹಾಸ್ಯವು ಇಂದು ಎಲ್ಲಿತ್ತು? ಅವರ ಸಾಂತ್ವನವನ್ನು ಮಾಡಲು, ಅವರ ಮನಸ್ಸನ್ನು ರಂಜಿಸಲು ಅನೇಕ ಪ್ರಯತ್ನಗಳನ್ನು ಮಾಡಿದೆನು. ಎಷ್ಟೋಸಾರೆ ನನ್ನ ಪ್ರಯತ್ನಗಳು ಸಫಲವಾದವು.

ದೇವಿಯವರು ಸ್ವಲ್ಪ ನಕ್ಕರು.

ನನಗೆ ಧೈರ್ಯವು ಬಂದಿತು. ನಾನು ನುಡಿದೆನು.

" ನೀವು ಅಳಕೂಡದು. ನೀವು ಅತ್ತರೆ ಎಲ್ಲರೂ ಅಳುವರು. ನಿಮ್ಮಿಂದ ಎಷ್ಟೊ ಕೆಲಸಗಳನ್ನು ಮಾಡಿಸಿಕೊಳ್ಳಬೇಕಾಗಿದೆ. ದಯವಿಟ್ಟು ಅಳುವದನ್ನು ನಿಲ್ಲಿಸಿರಿ "

ವೀರಾಂಗನೆಯು ದೃಢತಾಪೂರ್ವಕವಾಗಿ, " ನಾನು ಅಳುವದಿಲ್ಲ. ನನಗೆ ಅಳುವು ಬರುವದೇ ಇಲ್ಲ. ಇನ್ನೇನು ? " ಎಂದು ಉತ್ತರ ಕೊಟ್ಟಳು.

ಇದರ ಮರ್ಮವನ್ನು ನಾನು ತಿಳಿದೆನು, ಸಮಾಧಾನ ಹೊಂದಿದೆನು.

ಅಳುವು ದುಃಖದ ಭಾರವನ್ನು ಹಗುರ ಮಾಡುತ್ತದೆ. ಈ ವಿಧವಾ ಭಗಿನಿಗೆ ಭಾರವನ್ನು ಹಗುರ ಮಾಡುವದಿರಲಿಲ್ಲ. ಭಾರ ಸಹಿಸಲು ನಿಶ್ಚಯಿಸಿದವರು ಅಳುವರೆಂತು? ಈ ಸ್ಥಿತಿಯಲ್ಲಿ ' ನಡಿಯಿರಿ, ನಾವೆಲ್ಲರೂ ಬಂಧುಭಗಿನಿಯರು ಕೂಡಿಕೊಂಡು ಅಳೋಣ ಹಾಗು ದುಃಖವನ್ನು ಕಳೆದುಕೊಳ್ಳೋಣ ' ಎಂದು ನಾನು ಹೇಳಲೆಂತು ?

ಹಿಂದು ವಿಧವೆಯು ದುಃಖದ ಪ್ರತಿಮೆಯಾಗಿರುವಳು. ಅವಳು ಸಂಸಾರದ ದುಃಖದ ಭಾರವನ್ನು ಸಮಾಧಾನದಿಂದ ಹೊರುತ್ತಿರುವಳು ದುಃಖವನ್ನು ಧರ್ಮವನ್ನಾಗಿ ಮಾಡಿರುವಳು.

ವಾಸಂತೀದೇವಿಯವರು ಎಲ್ಲ ಜಾತಿಯ ಅನ್ನವನ್ನು ಉಣ್ಣುತ್ತಿದ್ದರು. ೧೯೨೦ ರ ವರೆಗೆ ಅವರ ಮನಿಯಲ್ಲಿ ಐವತ್ತಾರು ಭೋಗಗಳಾಗುತ್ತಿದ್ದವು ಮತ್ತು ನೂರಾರು ಜನರು ಅದರಲ್ಲಿ ಉಣ್ಣುತ್ತಿದ್ದರು. ಅವರಿಗೆ ತಾಂಬೂಲವಿಲ್ಲದೆ ಒಂದು ಗಳಿಗೆಯಾದರೂ ನಡೆಯುತ್ತಿರಲಿಲ್ಲ. ಎಲಿಯ ಪೆಟ್ಟಿಯು ಯಾವಾಗಲೂ ಬದಿಯಲ್ಲಿ ಇದ್ದೇ ಇರುತ್ತಿತ್ತು.

ಈಗ ಆಭರಣಗಳ ತ್ಯಾಗವು, ತಾಂಬೂಲದ ತ್ಯಾಗವು, ಪಕ್ವಾನ್ನಗಳ ತ್ಯಾಗವು, ಮಾಂಸಮತ್ಸ್ಯಗಳ ತ್ಯಾಗವು, ಕೇವಲ ಪತಿಯ ಧ್ಯಾನವು; ಪರಮಾತ್ಮನ ಧ್ಯಾನವು.

ಎಷ್ಟೋ ಭಗಿನಿಯರಿಗೆ ನಿತ್ಯ ಆಭರಣಗಳಲ್ಲಿ ಸ್ವಲ್ಪ ಕಡಿಮೆ ಮಾಡಿರೆಂದು ಆಗಾಗ್ಗೆ ಬೇಡಿಕೊಂಡಿರುವೆನು. ಅವರಿಗೆ ವ್ಯಸನಗಳನ್ನು ಬಿಡಿರೆಂದು ಹೇಳಿಕೊಂಡಿರುವೆನು. ಸ್ತ್ರೀ ಜನರು ತ್ಯಾಗಮಾಡುವರು. ಆದರೆ ವಿಧವೆಯು ? ಹಿಂದು ಸ್ತ್ರೀಯಳು ವಿಧವೆಯಾದ ಕ್ಷಣವೇ ಅವಳ ವ್ಯಸನವು ಅವಳ ಸಡಗರವು ಹಾವಿನ ಪೊರೆಯಂತೆ ಕಳಚಿ ಬೀಳುವವು. ಹಾಗೆ ಮಾಡಲು ಅವಳಿಗೆ ಯಾರ ಉತ್ತೇಜನವು ಬೇಕಿಲ್ಲ. ಯಾರ ಸಹಾಯವೂ ಬೇಕಿಲ್ಲ. ರೂಢಿಯೋ, ನೀನು ಏನು ಮಾಡಲಾರೆಯೋ ?

ಈ ದುಃಖವನ್ನು ಸಹನ ಮಾಡುವದರಲ್ಲಿ ಧರ್ಮ ಇದೆಯೋ ಅಧರ್ಮವಿದೆಯೋ? ಈ ಬಗೆಯನ್ನು ಇನ್ನಾವ ಧರ್ಮದಲ್ಲಿ ನಾನು ನೋಡಿಲ್ಲ. ಹಿಂದು ಧರ್ಮಶಾಸ್ತ್ರಿಗಳು ತಪ್ಪು ಮಾಡಿರಲಿಕ್ಕಿಲ್ಲವಷ್ಟೇ ? ವಾಸಂತೀ ದೇವಿಯವರನ್ನು ನೋಡಿದಮೇಲೆ ನನಗಂತೂ ತಪ್ಪು ಕಾಣಬರುವದಿಲ್ಲ. ಧರ್ಮದ ಶುದ್ಧ ಭಾವನೆಯೇ ಕಾಣುತ್ತದೆ. ವೈಧವ್ಯವು ಹಿಂದು ಧರ್ಮದ ಅಲಂಕಾರದಂತಿರುವದು. ಧರ್ಮದ ಭೂಷಣವು ವೈರಾಗ್ಯವು, ವೈಭವವಲ್ಲ ! ಜಗತ್ತು ಬೇರೆ ಏನಾದರೂ ಹೇಳಿದರೆ ಹೇಳುತ್ತಿರಲಿ !

ಆದರೆ ಹಿಂದುಧರ್ಮಶಾಸ್ತ್ರವು ಎಂಥ ವೈಧವ್ಯವನ್ನು ಸ್ತುತಿಸಿರುವದು, ಹಾಗೂ ಆದರಿಸಿರುವದು ? ವಿವಾಹದ ಅರ್ಥವನ್ನು ಕೂಡ ಅರಿಯದ ಹದಿನೈದು ವರ್ಷಗಳೊಳಗಿನ ಬಾಲಿಕೆಯರ ವೈಧವ್ಯವನ್ನು ಅದು ಸ್ತುತಿಸಿಲ್ಲ, ಹಾಗು ಆದರಿಸಿಲ್ಲ. ಬಾಲವಿಧವೆಯರ ಬಗ್ಗೆ ವೈಧವ್ಯವು ಧರ್ಮವಲ್ಲ, ಅದು ಅಧರ್ಮವಾಗಿರುವದು. ಸಾಕ್ಷಾತ್ ಮದನನೇ ಬಂದು ವಾಸಂತೀ ದೇವಿಯವರಲ್ಲಿ ಚಾಂಚಲ್ಯವನ್ನು ಹುಟ್ಟಿಸಲು ಯತ್ನಿಸಿದರೆ ಅವನು ಭಸ್ಮನಾಗುವನು. ವಾಸಂತೀ ದೇವಿಯವರಿಗೆ ಶಿವನಂತೆ ತೃತೀಯ ನೇತ್ರವಿರುವದು. ಆದರೆ ಹದಿನೈದು ವರ್ಷದೊಳಗಿನ ಬಾಲಿಕೆಯು ವೈಧವ್ಯದ ಶೋಭೆಯನ್ನು ತಿಳಿಯುವದೆಂತು? ಅವಳ ವಿಷಯದಲ್ಲಿ ವೈಧವ್ಯವು ಅತ್ಯಾಚಾರವೇ ಸೈ ! ಬಾಲವಿಧವೆಯರ ಹೆಚ್ಚುವಿಕೆಯಲ್ಲಿ ನನಗೆ ಹಿಂದುಸ್ಥಾನದ ಅಧಃಪಾತವು ಕಾಣುತ್ತದೆ. ವಾಸಂತೀ ದೇವಿಯಂಥವರ ವೈಧವ್ಯದಲ್ಲಿ ನಾನು ಶುದ್ಧ ಧರ್ಮದ ಪೋಷಣವನ್ನು ನೋಡುತ್ತೇನೆ. ವೈಧವ್ಯವು ಸರ್ವ ಪ್ರಕಾರದಿಂದಲೂ, ಸರ್ವಸ್ಥಳದಲ್ಲಿಯೂ, ಸರ್ವಕಾಲದಲ್ಲಿಯೂ ಅನಿವಾರ್ಯವಾದ ಸಿದ್ಧಾಂತವಾಗಿರುವದಿಲ್ಲ. ವೈಧವ್ಯವ್ರತವನ್ನು ಪಾಲಿಸ ಬಲ್ಲಂಥ ಸ್ತ್ರೀಯರಿಗೇನೇ ಅದು ಧರ್ಮವಾಗಿರುವದು.

ರೂಢಿಯು ಜಲಾಶಯದಲ್ಲಿ ಈಸುವದು ಒಳ್ಳೇದು. ಅದರಲ್ಲಿ ಮುಳುಗುವದು ಆತ್ಮಹತ್ಯೆಯು.

ಸ್ತ್ರೀಯರಿಗೆ ಹೇಗೊ ಪುರುಷರಿಗಾದರೂ ಹಾಗೆಯೇ ಇರತಕ್ಕದ್ದು. ರಾಮನು ಇದನ್ನಾಚರಿಸಿ ತೋರಿಸಿರುವನು. ಸೀತೆಯ ತ್ಯಾಗವು ಅವನಿಗೆ ಬಹು ಕಷ್ಟಕರವಾಯಿತು. ತಾನೇ ಮಾಡಿದ ತ್ಯಾಗದಿಂದ ತಾನೇ ನೊಂದನು. ಸೀತಾದೇವಿಯು ಹೋದ ಕ್ಷಣದಿಂದ ರಾಮಚಂದ್ರನ ಉಲ್ಲಾಸವು ಅಡಗಿತು. ಸೀತಾದೇವಿಯ ದೇಹದ ತ್ಯಾಗವನ್ನೇನೋ ಅವನು ಮಾಡಿದನು, ಆದರೆ ಸೀತಾದೇವಿಯನ್ನು ತನ್ನ ಹೃದಯದ ಸ್ವಾಮಿನಿಯನ್ನಾಗಿ ಮಾಡಿದನು. ಅಂದಿನಿಂದ ಅವನಿಗೆ ವಿಲಾಸವು ಅಸಹ್ಯವಾಯಿತು. ಇತರ ವೈಭವವೂ ಅಸಹ್ಯವಾಯಿತು. ಕರ್ತವ್ಯವೆಂದು ತಟಸ್ಥನಾಗಿ ರಾಜ್ಯಕಾರಭಾರವನ್ನು ಮಾಡುತ್ತ ಶಾಂತನಾಗಿದ್ದುಕೊಂಡನು.

ಯಾವುದನ್ನು ಈಗ ವಾಸಂತೀದೇವಿಯು ಸಹಿಸುತ್ತಿರುವಳೋ, ಯಾತಕ್ಕೋಸ್ಕರ ಎಲ್ಲ ವಿಲಾಸಗಳನ್ನು ಅವರು ತ್ಯಜಿಸಿರುವರೋ, ಆ ಮಾತನ್ನು ಪುರುಷ ವರ್ಗವು ಮಾಡುವವರೆಗೆ ಹಿಂದು ಧರ್ಮವು ಅಪೂರ್ಣವಾಗಿರುವದು. ಒಬ್ಬರಿಗೆ ಬೆಲ್ಲ ಇನ್ನೊಬ್ಬರಿಗೆ ಬೇವು ಎಂಬ ತಿರುವು ಮುರುವು ನ್ಯಾಯವು ಈಶ್ವರನ ರಾಜ್ಯದಲ್ಲಿರಬಾರದು. ಮತ್ತು ಇಲ್ಲ. ಆದರೆ ಈಗ ಹಿಂದುಗಳಲ್ಲಿ ಪುರುಷರು ತಪ್ಪಾದ ನ್ಯಾಯವನ್ನು ಬಗೆಗೊತ್ತಿ ಸ್ತ್ರೀಯರಿಗೋಸ್ಕರ ವೈಧವ್ಯವನ್ನು ಕಾಯ್ದಿಟ್ಟು ತಮ್ಮಗೋಸ್ಕರ ಸ್ಮಶಾನಭೂಮಿಯಲ್ಲಿಯೇ ಎರಡನೇ ಲಗ್ನವನ್ನು ಯೋಜಿಸುವ ಅಧಿಕಾರವನ್ನು ಇಟ್ಟುಕೊಂಡಿರುವರು!!!

ವಾಸಂತೀದೇವಿಯರು ಈ ವರೆಗೂ ಯಾರಿದುರಿಗಾದರೂ ಕಣ್ಣೀರುಸುರಿಸಿಲ್ಲ. ಆದಾಗ್ಯೂ ಅವರ ಮುಖದಲ್ಲಿ ಉತ್ಸಾಹವು ಕಾಣುವದಿಲ್ಲ. ಬಹು ಕಾಲದ ಬೇನೆಯೊಳಗಿಂದ ಈಗ ಎದ್ದಿರುವರೋ ಏನೋ ಎಂಬಂತೆ ಅವರ ಮುಖವು ತೋರುತ್ತದೆ. ಈ ಸ್ಥಿತಿಯನ್ನು ಕಂಡು ಸ್ವಲ್ಪ ಹೊತ್ತು ಹೊರಗೆ ಹೋಗಿ ಹವೆಯನ್ನು ತಿಂದು ಬರೋಣವೆಂದು ನಾನು ಅವರಿಗೆ ಹೇಳಿಕೊಂಡೆನು. ನನ್ನೊಂದಿಗೆ ಅವರು ಮೋಟಾರಿನಲ್ಲಿ ಕುಳಿತರೇನೋ ನಿಜ. ಆದರೆ ಮಾತೆಲ್ಲಿ? ನಾನು ಅನೇಕ ಮಾತುಗಳನ್ನು ಆಡಿದೆನು. ನಾನಾಡಿದ್ದನ್ನು ಅವರು ತಿಳಕೊಳ್ಳುತ್ತಿದ್ದರು. ಆದರೆ ಶಾಂತರಾಗಿಯೇ ಅವರು ಮಾತಾಡಿದರು. ಅವರು ಹವೆ ತಿಂದದ್ದೇನೋ ನಿಜ, ಆದರೆ ನಂತರ ಅವರು ಬಹು ದಣಿದು ಬಿಟ್ಟರು. ಆ ರಾತ್ರಿ ಅವರಿಗೆ ನಿದ್ರೆ ಬರಲಿಲ್ಲ. "ಯಾವುದು ನನ್ನ ಪತಿದೇವರಿಗೆ ಅತ್ಯಂತ ಪ್ರಿಯವಾಗಿತ್ತೋ ಆ ವಸ್ತುವನ್ನು ಅಭಾಗಿನಿಯಾದ ನಾನು ಈವರೆಗೆ ಉಪಭೋಗಿಸಿದೆನಲ್ಲ!" ಎಂಬ ವಿಚಾರದಲ್ಲಿಯೇ ಅವತ್ತಿನ ರಾತ್ರಿ ಕಳೆಯಿತು. ಘೋಂಬಲ (ಅವರ ಮಗ) ನು ಈ ಸುದ್ದಿಯನ್ನು ನನಗೆ ಹೇಳಿದನು. ಆ ದಿನ ನನ್ನ ಮೌನದಿನವಾಗಿತ್ತು. ನಾನು ಒಂದು ಕಾಗದದ ಮೇಲೆ "ಮಾತಾಜೀಯವರ ಈ ಮೋಹಕವನ್ನು ಬಿಡಿಸಲಿಕ್ಕೆ ಬೇಕು. ಸತ್ತುಹೋದ ನಮ್ಮ ಅತ್ಯಂತ ಪ್ರಿಯರಾದ ಜನರಿಗೆ ಪ್ರಿಯವಾದ ಅನೇಕ ವಸ್ತುಗಳನ್ನು ಅವರ ವಿಯೋಗವಾದ ಮೇಲೂ ನಾವು ಉಪಭೋಗಿಸುವ ಹೊರತು ಅನ್ಯಗತಿಯಿಲ್ಲ. ಮಾತಾಜಿಯವರು ವಿಲಾಸಕ್ಕಾಗಿ ಮೋಟಾರಿನಲ್ಲಿ ಕೂಡಲಿಲ್ಲ, ಆದರೆ ಕೇವಲ ಆರೋಗ್ಯಕ್ಕೋಸ್ಕರ. ಅವರಿಗೆ ಸ್ವಚ್ಛ ಹವೆಯ ಅವಶ್ಯಕತೆಯು ಬಹಳಿದ್ದಿತ್ತು. ನಾವು ಅವರಿಗೆ ಮಹೋಪಕಾರವನ್ನು ಮಾಡಬೇಕಾದರೆ ಅವರ ಶರೀರವನ್ನು ಸಂರಕ್ಷಿಸಲಿಕ್ಕೆ ಬೇಕು. ನಿಮ್ಮ ತಂದೆಯವರ ಕಾರ್ಯವನ್ನು ಮುಂದುವರಿಸಿ ಅದನ್ನು ಉಜ್ವಲಗೊಳಿಸಲು ಮಾತಾಜೀಯವರ ಶರೀರದ ಅವಶ್ಯಕತೆಯು ನಮಗಿರುವದು. ಹೀಗೆ ಮಾತಾಜೀಯವರಿಗೆ ತಿಳಿಸು" ಎಂದು ಬರೆದೆನು.

'ಮಾತಾಜೀಯವರು ಈ ಸುದ್ದಿಯನ್ನು ತಮಗೆ ತಿಳಿಸಕೂಡದೆಂದು ನನಗೆ ಹೇಳಿದ್ದರು. ನನಗೆ ತಡೆಯುವದಾಗದಿದ್ದದರಿಂದ ನಾನು ತಮಗೆ ತಿಳಿಸಿದೆನು,' ಎಂದು ಘೋಂಬಲನು ನುಡಿದನು.

ಪಾಪ, ಬಡಪ್ರಾಣಿ ಘೋಂಬಲನು! ಯಾರಿಗೂ ಬಗ್ಗದ ಈ ಹುಡುಗನು ಇಂದು ಕುರಿಯಂತೆ ಮೆತ್ತಗಾಗಿರುವನು. ಅವನ ಕಲ್ಯಾಣವಾಗಲಿ!

ಆದರೆ ಈ ಸಾಧ್ವಿಯಾದ ವಿಧವೆಯು! ವೈಧವ್ಯವು ಅಪ್ರಿಯವಾಗಿರದಿದ್ದರೂ ಅಸಹ್ಯವಾಗಿರುವದು. ಸುಧನ್ವನು ಕುದಿಯುವ ಎಣ್ಣೆಯಲ್ಲಿ ಕುಣಿಯುತ್ತ ನಿಂತಿರಲು ದೂರದಲ್ಲಿ ನಿಂತು ನೋಡುವ ನನ್ನಂಥ ಮನುಷ್ಯನು ಸುಧನ್ವನ ದುಃಖವನ್ನು ಕಲ್ಪಿಸಿ ನಡುಗುತ್ತ ನಿಲ್ಲುವನು. ಸಾಧ್ವಿಗಳಾದ ಸ್ತ್ರೀಯರೇ ನಿಮ್ಮ ದುಃಖವನ್ನು ಸಹಿಸಿರಿ. ಅದು ದುಃಖವಾಗಿರದೆ ಸುಖವಾಗಿರುವದು. ನಿಮ್ಮ ಸ್ಮರಣದಿಂದ ಅನೇಕರು ಮೇಲೆದ್ದಿರುವರು; ಮತ್ತು ಏಳುವರು.

ವಾಸಂತೀ ದೇವಿಯರ ವಿಜಯವಾಗಲಿ!

ಶಿಕ್ಷಕರ ಕರ್ತವ್ಯ.

ಜ್ಞಾನದಿಂದಲೆ ಜಗದ ಸಂಸ್ಥಿತಿ।
ಜ್ಞಾನದಿಂದಲೆ ಧರ್ಮ ಸಂಸ್ಥಿತಿ।
ಜ್ಞಾನದಿಂದಲೆ ಮೋಕ್ಷಸಂಸ್ಥಿತಿ ನಿನ್ನ ನಿಲ್ಲಿಯದು॥

ಈ ಜಗತ್ತಿನಲ್ಲಿ ಮನುಷ್ಯನಿಗೆ ಅತ್ಯಾವಶ್ಯಕವಾದ ಬಹಳಗಳೆಂದರೆ ಅನ್ನ, ವಸ್ತ್ರ, ಜ್ಞಾನ ಅನ್ನವಸ್ತ್ರಗಳು ಶರೀರ ಸುಖಕ್ಕಾಗಿ. ಜ್ಞಾನವು ಆತ್ಮಸುಖಕ್ಕಾಗಿ. ಮನುಷ್ಯನು ದೇಹಸುಖವನ್ನು ಬಯಸುವದು ಆತ್ಮೋದ್ಧಾರಕ್ಕಾಗಿಯೇ. ಇದನ್ನೇ ಕವಿಕುಲತಿಲಕನು 'ಶರೀರಮಾದ್ಯಂ ಖಲು ಧರ್ಮಸಾಧನಂ' ಎಂದು ಸ್ಪಷ್ಟೀಕರಿಸಿದ್ದಾನೆ. ಜ್ಞಾನಕ್ಕೆ ಸದೃಶವಾದ ಪವಿತ್ರವಸ್ತುವು ಇಲ್ಲಿಲ್ಲವೆಂದು ಆಪ್ತನಾದ ಭಗವಂತನ ನುಡಿಯು. ಜ್ಞಾನವು ವಿದ್ಯೆಯಿಂದ ಸಾಧ್ಯವಾಗುವದು. ವಿದ್ಯೆಯು ಗುರುಮುಖವಾದುದು. ಗುರುವೇ ಜ್ಞಾನ ಭಾಂಡಾರದ ಒಡೆಯನು. ಅವನು ನೀಡಿದ ಹೊರತು ನಿಧಿಯು ಯಾರಿಗೂ ಸಿಕ್ಕಲಾರದು. ಅವನೇ ಶಿಷ್ಯರಿಗೆ ದೇವತೆಯು. 'ಆಚಾರ್ಯದೇವೋ ಭವ' ಎಂದು ಉಪನಿಷತ್ತು ಸಾರಿ ಸಾರಿ ಹೇಳುತ್ತಿದೆ.

× × ×

ಈ ದೇವತಾ ಸ್ವರೂಪಿಯಾದ ಗುರುವು ಹೇಗಿರತಕ್ಕದ್ದು ಅವನ ಕರ್ತವ್ಯಗಳಾವವು. ಈಗಿನ ಗುರುಗಳು ತಮ್ಮ ಕರ್ತವ್ಯಕ್ಕೆ ನಡೆಯುತ್ತಿರುವರೆಂಬವುಗಳನ್ನು ನಾವು ಇಲ್ಲಿ ವಿವೇಚಿಸಬೇಕಾಗಿರುವವು. ವಿದ್ಯೆಯು ಎರಡು ತೆರನಾಗಿರುವದು. ಒಂದು ಪರಾವಿದ್ಯೆ; ಇನ್ನೊಂದು ಅಪರಾವಿದ್ಯೆ ಅಪರಾವಿದ್ಯೆಯು ಪರಾವಿದ್ಯೆಗೆ ಸಾಧನವು. ನಮ್ಮ ಈಗಿನ ಶಾಲೆಯಲ್ಲಿ ಕೊಡುವ ವಿದ್ಯೆಯು ಅಪರಾವಿದ್ಯೆಯು. ಈ ಅಪರಾವಿದ್ಯೆಯು ಪರಾವಿದ್ಯೆಗೆ ಸಾಧನವಾಗುವಂತೆ ಏರ್ಪಟ್ಟಿಲ್ಲ. ಇದೇನೂ ಗುರುಗಳ ದೋಷವಲ್ಲ. ಆ ಬಗ್ಗೆ ಇದರ ವಿಷಯವನ್ನು ನಾವು ಇಲ್ಲಿ ಎತ್ತುವದಿಲ್ಲ.

ಚಿಕ್ಕಮಕ್ಕಳು ಅರಳುಮೊಗ್ಗೆಯಂತೆ. ಅವರ ಹೃದಯವು ಕೋಮಲವಾದುದು. ಅವರ ವ್ಯಕ್ತಿಯು ನಿಷ್ಕಪಟ. ಸ್ವಭಾವ ಸರಳ. ಅವರು ನೋಡಿದ್ದನ್ನೆಲ್ಲ ಥಟ್ಟನೆ ಅನುಕರಿಸುವರು. ಜಗ

ವೆಲ್ಲ ಅವರಿಗೆ ಹೊಸದು; ಆದರಿಂದ ಪ್ರತಿಯೊಂದು ಒಡವೆಯ ಜ್ಞಾನ ಮಾಡಿಕೊಳ್ಳಬೇಕೆಂಬ ಲವಲವಿಕೆ ಅವರಲ್ಲಿರುವದು. ಪರಿಸ್ಥಿತಿಯ ಸಂಸ್ಕಾರಕ್ಕಧೀನವಾದ ವಯಸ್ಸು. ಇಂಥ ದೇವದಂತಿದ್ದ ಚಿಕ್ಕ ಚಿಣ್ಣಿಗರು ತಮ್ಮ ವಶದಲ್ಲಿರಲು ಗುರುಗಳೂ ಕೂಡ ದೇವಭಾವವನ್ನು ಹೊಂದಬೇಕಲ್ಲವೇ? ಆದರೆ ಅಂತಹ ಸೌಭಾಗ್ಯ ನಮ್ಮದೆಲ್ಲಿಯದು? ಈಗಿನ 'ವಿದ್ಯಾದಾತೃ' ಗಳಿಗೆ ಗುರುಗಳೆನ್ನದೇ 'ಶಿಕ್ಷಕ' ರೆನ್ನುವದೇ ಲೇಸು- ಅಷ್ಟೋ ಶಿಕ್ಷಕರಲ್ಲಿ 'ಶೀಲ' ವಿರುವದಿಲ್ಲ; ವಿದ್ಯೆಯ ಮೇಲೆ ಪ್ರೇಮವಿರುವದಿಲ್ಲ. ಹುಡುಗರ ಹಿತದ ವಿಷಯದಲ್ಲಿ ಆದರವಿಲ್ಲ. ಶಿಕ್ಷಕ ವೃತ್ತಿಯು ಹೊಟ್ಟೆ ಹೊರಕೊಳ್ಳುವ ಉಪಾಯವೆಂದು ಬಗೆದು ಶಿಕ್ಷಕರಾದವರೇ ಬಹಳ. ಹೀಗಿದ್ದಲ್ಲಿ 'ಗುರು' ಮನೆಗಳು 'ಸೆರೆ' ಮನೆಗಳಾಗುವದೇನು ಸೋಜಿಗವು!

× × × ×

ರಾಜಕಾರಣ ಧುರಂಧರೂ, ಸಮಾಜಸುಧಾರಕರೂ, ಅರ್ಥಶಾಸ್ತ್ರಜ್ಞರೂ ಇನ್ನೂ ಹಲವರೂ ಲೋಕದ ಉದ್ಧಾರಕ್ಕಾಗಿ ಹೆಣಗುತ್ತಿರುವರು; ಮಾನವ ಕೋಟಿಯ ಶಾಶ್ವತ ಕಲ್ಯಾಣಕ್ಕಾಗಿಯೂ, ಶ್ರೇಯಕ್ಕಾಗಿಯೂ ಪ್ರಯತ್ನ ಪಡುತ್ತಲಿರುವರು; (ಪ್ರಯತ್ನ ಪಡುತ್ತಲಿರುವೆವೆಂದು ಹೇಳುವರು.) ಇವರ ಪ್ರಯತ್ನಗಳೆಲ್ಲ ಗಾಳಿ ಗೋಪುರಗಳಾಗಿಯೇ ಪರಿಣಮಿಸುವವು. ರಾಷ್ಟ್ರದ ಮನುಷ್ಯಕೋಟಿಯ ಸುಧಾರಣೆಯಾಗಬೇಕಾದರೆ, ಶಿಕ್ಷಕರು ಸುಧಾರಿಸಲಿಕ್ಕೆ ಬೇಕು- ಶಿಕ್ಷಕರೇ ನಿಜವಾದ ಲೋಕನಾಯಕರಾಗುವ ಯುಗವು ನಮಗೆ ಬೇಕಾಗಿದೆ. ಅವರು ತಮ್ಮ ಕರ್ತವ್ಯ ಜಾಗೃತೆಯಿಂದಲೂ, ಉಚ್ಚಶೀಲದಿಂದಲೂ, ಉದಾತ್ತ ಭಾವನೆಯಿಂದಲೂ, ಉಜ್ವಲವಾದ ಪಾವಿತ್ರ್ಯದಿಂದಲೂ ಜನರ ಅಂತಃಕರಣವನ್ನು ಸೆರೆ ಹಿಡಿಯಲಿಕ್ಕೆ ಬೇಕು. ಉಚ್ಚ ಧ್ಯೇಯವನ್ನು ಸಾಧ್ಯಮಾಡಿಕೊಳ್ಳಲು ಅವರು ದೀರ್ಘಪ್ರಯತ್ನ ಪಡಲಿಕ್ಕೆ ಬೇಕು. ಎಡರುಗಳಿಗೆ ಬೆಚ್ಚಿ ಬೀಳಬಾರದು ಪ್ರತಿಕೂಲ ಪರಿಸ್ಥಿತಿಯು ಪ್ರಾಪ್ತವಾಗಲು, ಅಪ್ಪುಗೈಯನ್ನು ಹಾಕಿಕೊಂಡು "ಮುಂದೇನು ಗತಿ" ಯೆಂದು ಹೌಹಾರಿ ಕೂಡತಕ್ಕದ್ದಲ್ಲ 'ಕ್ರಿಯಾಸಿದ್ಧಿಃ ಸತ್ವೇ ಭವತಿ ಮಹತಾಂ ನೋಪಕರಣೇ!" Man is not the creature of circumstances but the creator of circumstances" ಎಂಬ ಬಲ್ಲವರ-ಅನುಭವಿಕರ ನನ್ನುಡಿಗಳನ್ನು ನೆನೆದು ಕಾರ್ಯಮಾಡಬೇಕು. 'ಶಿಕ್ಷಣ' ವು ಮಾರ್ಗಬಿಟ್ಟಿತೆಂದರೆ, ಜಗತ್ತೇ ಮಾರ್ಗಗೆಡುವದು. ಶಿಕ್ಷಣವು ವಿಜ್ಞಾನದ ಮಾರ್ಗ ಹಿಡಿಯಿತೆಂದರೆ, ಜಗತ್ತೆಲ್ಲ ತೇಜೋಮಯವಾಗುವದು; ಶ್ರೇಯೋಮಯವಾಗುವದು; ಚಿನ್ಮಯವಾಗುವದು. ಆನಂದಮಯವಾಗುವದು. ಭಾವೀ ಪ್ರಪಂಚದ ಮೇಸರಾದ ಚಿಕ್ಕಮಕ್ಕಳು ವಿಜ್ಞಾನಮಯರಾಗುವರು. ತಮ್ಮ ಕರ್ತವ್ಯವನ್ನರಿತು ಸೌಜನ್ಯ ಸೌಶೀಲ್ಯಗಳನ್ನು ಪೋಷಿಸಿ, ತಪಶ್ಚರ್ಯಯುತರಾಗಿ ಶಿಕ್ಷಕರು ಕಾರ್ಯದಲ್ಲಿ ಪ್ರವೃತ್ತರಾದರೆ, ಅವರೇ ಪರೋಪಕಾರಿಗಳಾಗುವರು; ನಿಜವಾದ ಲೋಕಸಂಗ್ರಾಹಕರಾಗುವರು. ಲೋಕೋದ್ಧಾರಕರಾಗುವರು; ನೀತಿಬೋಧಕರಾಗುವರು; ಧರ್ಮೋಪದೇಶಕರಾಗುವರು. ಅವರಿಂದಲೇ ಶಕ್ತಿಯು; ಅವರಿಂದಲೇ ಭಕ್ತಿಯು ಶಾಲೆಯು, ಭಾವನೆಯ ಬೀಡೂ, ಕಲೆಗಳ ಕಾಡೂ, ನೀತಿಯ ನಂದನವನವೂ, ಪ್ರೀತಿಯ ಪುಣ್ಯಭೂಮಿಯೂ, ಧರ್ಮದ ದೇವಾಲಯವೂ, ಸ್ವಾತಂತ್ರ್ಯದ ಸರ್ವಸ್ವವೂ ಆಗತಕ್ಕದ್ದು. ಇದೇ ನಮ್ಮ ಆರ್ಯಸಂಸ್ಕೃತಿಯ ಮೂಲವು; ಮಂತ್ರವು; ರಹಸ್ಯವು; ಇದನ್ನು ಕಾಯುವದೇ ಶಿಕ್ಷಕರ ಕರ್ತವ್ಯವು.

ಬಾರುಕೋಲು

ಶ್ರೀ. ದೇಶಬಂಧುಗಳ ಮರಣದಿಂದಾದ ದುಃಖವು ಭರತಖಂಡವನ್ನೇ ಆವರಿಸಿದೆ. ನಮ್ಮ ಪ್ರಮುಖರಲ್ಲಿ ಬಾರುಕೋಲನ್ನು ದೇಶಬಂಧುಗಳು ಪ್ರಯೋಗಿಸಿದಂತೆ ಬೇರೆ ಯಾರೂ ಪ್ರಯೋಗಿಸಲಿಲ್ಲ. ಅಸಹಕಾರ ತತ್ವವನ್ನಂಗೀಕರಿಸಿ ಶಾಸನ ಸಭೆಗಳನ್ನೂ ದೇಶಬಂಧುಗಳು ತ್ಯಜಿಸಿದರು. ಆದರೆ ದೇಶಬಂಧುಗಳಲ್ಲದವರು ಆ ಸಭೆಗಳಲ್ಲಿ ಕುಳಿತು ದೇಶವೈರಿಗಳ ಸೂತ್ರಕ್ಕನುಗುಣವಾಗಿ ಕುಣಿಯುವದನ್ನು ನೋಡಿ ಸಹಿಸಲಾರದೆ ಬಾರುಕೋಲನ್ನು ಕೈಯಲ್ಲಿ ಹಿಡಿದು ದೇಶಾಭ್ಯುದಯಕ್ಕೆ ಅಡ್ಡಿ ಮಾಡುತ್ತಿರುವವರೆಲ್ಲರ ಬೆನ್ನುಗಳು ಚೇತರಿಸುವಂತೆ ಮೂರು ವರ್ಷಗಳ ಕಾಲ ಒಂದೇ ಸಮನಾಗಿ ಪ್ರಹರಿಸುತ್ತಿದ್ದುದೆಲ್ಲರಿಗೂ ತಿಳಿದ ವಿಷಯ. ಬಾರುಕೋಲೆಂದರೆ ಶ್ರೀ. ದೇಶಬಂಧುಗಳದೇ ಬಾರುಕೋಲು! ಅದನ್ನು ಬೀಸುವ ವೇಗದಲ್ಲಿ ನಮ್ಮ ದೇಶೀಯರು ಕೂಡ ಏನಿದು— ಮಹಾತ್ಮರ ಮೇಲೆಯೇ ಬೀಸುತ್ತಿರುವರಲ್ಲ ! ಎಂದು ಭ್ರಮಿಸಿದರು. ಆದರೆ ಮಹಾತ್ಮರಿಗೆ ಬಾರುಕೋಲಿನ ಏಟೊಂದಾದರೂ ಬೀಳಲಿಲ್ಲ. ದೇಶಬಂಧುಗಳ ಅಸ್ತ್ರವು ಅವರ ಮೇಲೆ ಪ್ರಯೋಗವಾಗಲೇ ಇಲ್ಲ. ಆ ಪ್ರಹಾರಗಳು ಯಾರ ಮೇಲೆ ಬಿದ್ದವೋ ಅವರನ್ನು ಕೇಳಿದರೆ ದೇಶಬಂಧುಗಳೂ ಶತ್ರುಗಳೆಂಬ ಭ್ರಾಂತಿಯಲ್ಲಿದ್ದವರಿಗೇನು ಗೊತ್ತಾಗುವದು?

ಚರಕವನ್ನು ಸುತ್ತಲು ಚೈತನ್ಯವಿಲ್ಲದ ಕೆಲವರು ದೇಶಬಂಧುಗಳ ಪಕ್ಷವನ್ನು ಸೇರಿದವರೆಂದು ಹೇಳಿಕೊಳ್ಳುತ್ತಾ ಕಾಲಹರಣ ಮಾಡುತ್ತಲಿರುವರು. (ಯೋಗ್ಯರಾದ ಸ್ವರಾಜ್ಯ ಪಕ್ಷದವರ ಮಾತು ಬೇರೆ.) ಈ ಭಕ್ತಿ ಹೀನರಿಗೆ ಬಾರುಕೋಲನ್ನೆತ್ತಿ ಯಾರನ್ನು ಹೊಡೆಯುವದೆಂಬುವದು ಗೊತ್ತಿಲ್ಲ. ಕೆಲವೆಡೆಯಲ್ಲಿ ಮಹಾತ್ಮರನ್ನೇ ಗುರಿಯಾಗಿಟ್ಟು ಕೊಳ್ಳುವರು. ಕೆಲವೆಡೆ ಮಹಾತ್ಮರು ಹೇಳುವ ಚರಕ ಸಂದೇಶದ ಮೇಲೆ ಅವರ ಕೋಪಾವೇಶವನ್ನೂ ತೋರಿಸುವರು. ಸತ್ಪ್ರವರ್ತಕರಿಗೆ ಬಾರುಕೋಲಿರುವ ಪ್ರಯೋಜನವು ದುಷ್ಟ ಶಿಕ್ಷಣ ಮಾತ್ರವೇ ಎಂಬ ತತ್ವವನ್ನಿವರರಿತವರಲ್ಲ. ಮಹಾತ್ಮರು ಶಿಷ್ಟ ಪರಿಪಾಲನವನ್ನೇ ಧ್ಯೇಯವಾಗಿಟ್ಟುಕೊಂಡು ಪ್ರವರ್ತಿಸುತ್ತಿರಲು, ದುಷ್ಕರ ಹಾವಳಿಯು ಹೆಚ್ಚಾದ್ದರಿಂದ ದುಷ್ಕರ ಶಿಕ್ಷಣ ಅತ್ಯವಶ್ಯಕವೆಂದು ಯೋಚಿಸಿ, ಮಹಾತ್ಮರಿಟ್ಟ ಕಟ್ಟಳೆಯನ್ನೂ ಸಹ ಉಲ್ಲಂಘಿಸಲು ಸಿದ್ಧರಾದ ದೇಶ ಬಂಧುಗಳಂತಹ ಬಾರುಕೋಲಿನ ಯೋಧೃಗಳೆಲ್ಲಿ! ಸಂಕುಚಿತ ಬುದ್ಧಿಯಿಂದ ಪ್ರವರ್ತಿಸಿ ಭ್ರಾತೃವರ್ಗದವರನ್ನೇ ನೋಯಿಸಲು ಸಿದ್ಧರಾಗಿ ಕಾದಿರುವ ಮೂರ್ಖ ಶಿಖಾಮಣಿಗಳೆಲ್ಲಿ!! ಮಹಾತ್ಮರವರ ಉಪದೇಶದಿಂದ ಭಾರತದೇಶವು ದುಃಖದಲ್ಲಿಯೂ ಅರಾಜಕಮಯವಾಗುವ ವಿಪರೀತ ಪರಿಣಾಮದಲ್ಲಿಯೂ ಮುಳುಗಿತೆಂದು ಕೆಲ ಪ್ರಾಜ್ಞರು ಹೇಳುವಂತೆಯೇ, ಶ್ರೀ. ದೇಶಬಂಧುಗಳ ಉದ್ಯಮಗಳಿಂದ ರಾಷ್ಟ್ರದಲ್ಲಿ ರಾಜಕೀಯ ಪಂಗಡಗಳ ವೈಷಮ್ಯವು ಹೆಚ್ಚಿತೆಂದು ಕೆಲವರ ಭಾವನೆ. ಸ್ವರಾಜ್ಯಪಕ್ಷವೆಂಬುದೊಂದು ನಿರ್ಮಿತವಾಯಿತೆಂದು ತಿಳಿದು ಸಂತೋಷಪಟ್ಟು ತಮಗೆ ಬೇಡವಿದ್ದವರು ಕೆಲವರು ಆ ಪಕ್ಷಕ್ಕೆ ಸೇರಿರುವರೆಂದು ಹಿಗ್ಗಿ ತಮ್ಮ ಛಲವನ್ನೂ ತೀರಿಸಿಕೊಳ್ಳುವ ಕಲ್ಪಿತವಾದ ನೆವನನ್ನೂ ಲಕ್ಷಿಸುವ ಅಸಹಕಾರಿಗಳೂ, ಶಾಂತವೀರರೂ ಹಲವರಿರುವರು. ಇವರೆಲ್ಲರೂ ದೇಶಬಂಧುಗಳೇನು ?

ಶ್ರೀ. ಚಿತ್ತರಂಜನರ ಮರಣದಿಂದ ಚಿತ್ತ ಭ್ರಮಣವು ಉಂಟಾಗಿದೆ. ದೇಶವು ಚೇತರಿಸಿಕೊಂಡಿದೆ ಮಹನೀಯರು ಜೀವನದಲ್ಲಿ

(೩ ನೇ ಪುಟನೋಡಿರಿ.)

ವರ್ತಮಾನಸಾರ

ಇಹವೃತ್ತ

'ಸಹಕಾರ ದಿನವು' ೪ ನೇ ತಾ॥ ದಿನ ಇಲ್ಲಿಯ ಸಹಕಾರ ಸಂಘದಲ್ಲಿ ಪಾಲಿಸಲ್ಪಟ್ಟಿತಂತೆ. 'ಲೀಗ್ರಸೀ ಡೇ' ಸಹ ಆಯಿತಂತೆ. ಊರವರಿಗೆ ಮಾತ್ರ ಗೊತ್ತಿಲ್ಲ 'ವೃತ್ತಪತ್ರಕಾರರಿಗೂ ಸುದ್ದಿ ಇದ್ದಿಲ್ಲ.

ಮಾಧ್ಯಮಿಕ ಇಂಗ್ಲೀಷ ಶಾಲೆಗೆ ತಮ್ಮ ಸಮ್ಮತಿಯಿಲ್ಲವೆಂದು ಮುನಸಿಪಾಲಿಟಿಯವರು ನಿಶ್ಚಯಿಸಿರುವರು. ಬಸವೇಶ್ವರ ಶಾಲೆಯವರು ಏನು ನಿಶ್ಚಯಿಸಿರುವರೋ ತಿಳಿಯದು. ಕಾರ್ಯದರ್ಶಿಗಳಾದ ಶ್ರೀ ಸಾಲೀಯವರಿಗೆ ಈ ಬಗ್ಗೆ ಕೇಳಿದರೆ ತಮಗೆ ಏನೂ ಗೊತ್ತಿಲ್ಲವೆಂದು ಹೇಳಿದರು. ಕಾರ್ಯದರ್ಶಿಗಳಿಗೆ ಗೊತ್ತಿಲ್ಲವೇ ಎಂಬುದಾಗಿ ಊರುಗರೆಲ್ಲ ನಮ್ಮ ಪ್ರತಿನಿಧಿಯು ಸುಮ್ಮನಾದನು.

ಶ್ರೀ ಮಂಜಪ್ಪಾ ಹರ್ಡೇಕರ ಇವರು ಈ ತಾಲೂಕಿನಲ್ಲಿ ಸಂಚರಿಸುತ್ತಿರುವರು. ಅಲ್ಲಲ್ಲಿ ವಾಚನಾಲಯಗಳನ್ನು ಸ್ಥಾಪಿಸುವದು, ಖಾದಿಯ ಬಗ್ಗೆ ಜಾಗೃತಿಯನ್ನು ಹುಟ್ಟಿಸುವದು ನಡೆದಿದೆ. ಶ್ರೀ. ಕೌಜಲಗಿ ಹಣಮಂತರಾಯರೂ, ಪುರೋಹಿತರೂ ಮೊನ್ನೆ ಅವರೊಡನೆ ಕಲಾದಗಿಯ ಕಡೆಗೆ ಹೋಗಿದ್ದಾರೆ.

ಮುಂಬೈ ಕರ್ನಾಟಕ

ಕೊಲ್ಲಾಪುರದಲ್ಲಿಯ ರೇವಣಸಿದ್ಧೇಶ್ವರ ತೀರ್ಥದ ನೀರನ್ನು ಕೀಳ್ಜಾತಿಯವರು ಉಪಯೋಗಿಸುವದನ್ನು ನಿಷೇಧಿಸುವದಕ್ಕಾಗಿ ಡಾ॥ ಕರವೀರ ಇವರ ಅಧ್ಯಕ್ಷತೆಯಲ್ಲಿ ಜಾಹೀರ ಸಭೆಯು ನೆರೆದಿತ್ತು. ಧಾರ್ಮಿಕ ತೀರ್ಥಗಳನ್ನು ಈ ಪ್ರಕಾರವಾಗಿ ಉಪಯೋಗಿಸುವದು ಅಯೋಗ್ಯವು.

ಬ್ರಾಹ್ಮಣ ಬ್ರಾಹ್ಮಣೇತರರೆಂಬ ಭೇದಭಾವವಿಲ್ಲದೇ ಧಾರವಾಡದಲ್ಲಿ ದೇಶಬಂಧುಗಳ ಸ್ಮಾರಕಕ್ಕೆ ಎಲ್ಲರೂ ಸಹಾಯ ಮಾಡುತ್ತಿರುವದು. ಕರ್ನಾಟಕದ ಭಾಗ್ಯೋದಯದ ಸುಚಿನ್ಹವು.

ಶ್ರೀ. ಆರ್. ಎ. ಕುಲಕರ್ಣಿ ಎಮ್. ಎ. ಇವರು ಸಾಂಗಲಿಯ ವಿಲಿಂಗಡನ್ ಕಾಲೇಜದ ಕನ್ನಡ ಪಂಡಿತರಾಗಿ ನೇಮಿಸಲ್ಪಟ್ಟಿದ್ದಾರೆ. ಸಾಂಗಲಿಯ ಹವೆಯು ಚನ್ನಾಗಿದೆ. ಮೇಲಾಗಿ ಸಾಂಗಲಿಯು ಕರ್ನಾಟಕ ಮಹಾರಾಷ್ಟ್ರಗಳ ಗಡಿನಾಡು. ಇಂಥ ಸ್ಥಳದಲ್ಲಿ ಕನ್ನಡಿಗರು ಹೆಚ್ಚಾಗಿ ಹೋಗಿ ಈ ಗಡಿನಾಡಿನಲ್ಲಿಯ ಜನರಲ್ಲಿ ಕನ್ನಡದ ಅಭಿಮಾನವನ್ನು ಬೆಳಸುವದು ಮಹತ್ವದ್ದಾದುದು. ಆದುದರಿಂದ ಕನ್ನಡಿಗರು ಅಲ್ಲಿಗೆ ಸಹ ಹೋಗಿ ಸಾಂಗಲೀ ಪ್ರಾಂತದಲ್ಲಿ ಕನ್ನಡವು ಸ್ಥಿರವಾಗುವಂತೆ ಪ್ರಯತ್ನಿಸುವರೆಂದು ನಂಬಿಗೆಯಿದೆ.

" ಆದಿತ್ಯವಾರ ಧಾರವಾಡ ಮಿತ್ರಮಂಡಳದಲ್ಲಿ ಬ್ರಾಹ್ಮಣ ಸಂಘಟ್ಟಣೀ ಸಭೆಯ ಸಾಧಾರಣ ಸಭಾಸದರ ಅಧಿವೇಶನವು ಕೂಡಿತ್ತು. ಗೊತ್ತು ಮಾಡಿದ ಹೊತ್ತಿಗಿಂತ ಒಂದು ತಾಸು ಹೆಚ್ಚಾದರೂ, " ಸಭಾಸದರು ಬಾರದಿದ್ದರ ಸಲುವಾಗಿ ಈ ಅಧಿವೇಶನವು ಮುಂದಿನ ಆದಿತ್ಯವಾರ ಆಗತಕ್ಕದ್ದು " ಎಂಬ ಅತಿಮಹತ್ವದ ಠರಾವು ಪಾಸಾಯಿತು. ಯಾಕೆ? ಬ್ರಾಹ್ಮಣೇತರರ ಘಟನೆ ಮಾಡಿ ಸಂಘಟನೆಯು ಆಗಿದ್ದರೆ ತಪ್ಪೇನು ಬರುತ್ತಿದ್ದಿಲ್ಲವೇ? ಬ್ರಾಹ್ಮಣರೇ ನಿಮ್ಮನ್ನೇನು ಕ್ರೀಡೆ ನಡುಗಿಸ್ಥಿತಿ ಕಳೆಯುತ್ತದೋ " ಎಂಬದಾಗಿ ಪ್ರವಾಸಿಯು ಕೇಳುತ್ತಾನೆ.

ಮದ್ರಾಸ ಕರ್ನಾಟಕ

ಆನಿಬೆಸಂಟ ಅಮ್ಮನವರು ವಿಲಾಯತಿಗೆ ಹೋಗುವಾಗ್ಗೆ ಅವರಿಗೆ ಸ್ಟೇಷನ್ನಿನ ಮೇಲೆ ಅತ್ಯಂತ ವಿಜೃಂಭಣೆಯಿಂದ ಬೀಳ್ಕೊಡುವ ಮಾನಪತ್ರವು ಸಮರ್ಪಿಸಲ್ಪಟ್ಟಿತು.

ಡಾ॥ ಸುಬ್ಬರಾಯರು ಕಾನ್ಸರ್ ಆರ್ಟ್ಸ್ ಟಿನೆಸ್ಸಿಯಾದ್ಯತ್ತ ಕವಿಯಂದ ಸುನಿತವಾಗುವರು.

ಮೈಸೂರ ಕರ್ನಾಟಕ

ಮೈಸೂರ ದಿವಾಣರಾದ ಶ್ರೀ ಬ್ಯಾನರ್ಜಿ ಇವರಿಗೆ ಖಾಟ್ವಾಸ್ಟೇಶನ್ನದಲ್ಲಿ ತನ್ನಿಂದಾದ ಅಪಮಾನಕಾರಕ ಕೃತಿಯ ಬಗ್ಗೆ ಜೇಮ್ಸ್ ಗಾರ್ಡನ್ನನೆಂಬ ಯುರೋಪಿಯನ್ನನು ಕ್ಷಮೆ ಬೇಡಿಕೊಂಡು ೫೦೦ ರೂ. ಗಳನ್ನು ಶ್ರೀ. ಬ್ಯಾನರ್ಜಿ ಅವರಿಗೆ ಅರ್ಪಿಸಿದನು. ದಿವಾಣರು ೨೫೦ ರೂ. ಅವನಿಗೆ ಮರಳಿ ಕೊಟ್ಟು ಉಳಿದ ೨೫೦ ರೂ. ಖಾಟ್ವಾದ ಕುಷ್ಠರೋಗ ನಿವಾರಣ ಸಂಸ್ಥೆಗೆ ಕೊಟ್ಟರು.

ನ್ಯಾಯಾಧೀಶರಾದ ಶ್ರೀ. ಬಿ. ಸುಬ್ಬಣ್ಣಾ ಇವರು ಪೆನಶನ್ನ ಹೊಂದಿದರು. ಆದರೂ ಪುನಃ ವಕೀಲೀ ಪ್ರಾರಂಭಿಸಿದರು.

ನಿಜಾಮಕರ್ನಾಟಕ

ಕಲಬುರ್ಗಿಯಲ್ಲಿಯ ದೇವಸ್ಥಾನಗಳ ದುರಸ್ತಿಯು ಪ್ರಾರಂಭವಾಗಿದ್ದು, ನಿಜಾಮರು ಅದಕ್ಕೆ ಧನಸಹಾಯ ಮಾಡುತ್ತಿರುವರಂತೆ.

ನಿಜಾಮ ರಾಜ್ಯದಲ್ಲಿ (ಹೇಳಿ ಕೇಳಿ ಮೊಗಲಾಯಿ) ಮುಸಲ್ಮಾನರ ಉಪದ್ರವು ಹೆಚ್ಚಾಗಿದ್ದು, ಹಿಂದೂಗಳ ಗಾಡಿಗಳನ್ನು ಬಿಟ್ಟಿ ಹಿಡಿಯುವದು, ಅಮಲದಾರರು ಸರಬರಾಯಿಯನ್ನು ಕಠೋರತನದಿಂದ ಮಾಡಿಸಿಕೊಳ್ಳುವದು, ಹೊಸ ದೇವಾಲಯಗಳನ್ನು ಕಟ್ಟಿಸಲಿಕ್ಕೆ ತೊಂದರೆಗಳನ್ನುಂಟು ಮಾಡುವದು, ಕಂಡ ಕಂಡಲ್ಲಿ ಮಸೀದೆಗಳನ್ನು ಮಾತ್ರ ಹೆಚ್ಚಿಸುವದು, ಇವೇ ಮೊದಲಾದ ಅತ್ಯಾಚಾರಗಳು ಹೆಚ್ಚಾಗಿ ನಡೆದಿವೆಂಬದಾಗಿ ಕರ್ನಾಟಕ ಟಾಯಿಮ್ಸದಿಂದ ತಿಳಿಯುತ್ತದೆ.

ಕೊಡಗು ಕರ್ನಾಟಕ

ದೇಶದಲ್ಲೆಲ್ಲಾ ಈಗ ಮಳೆಯು ಪ್ರಾರಂಭವಾಗಿರುವದರಿಂದ ಜನರಲ್ಲಿ ಶಾಂತತೆಯು ಕಂಡುಬರುತ್ತದೆ.

ದೇಶಬಂಧು ದಾಸರ ಮರಣ ವಾರ್ತೆಯು ಕೊಡಗಿನಲ್ಲಿ ಹಬ್ಬಿದೊಡನೇ ಅಲ್ಲಿನ ಮುಖ್ಯ ಪಟ್ಟಣಗಳಾದ ಮಡಿಕೇರಿ ಮತ್ತು ವೀರರಾಜೇಂದ್ರ ಪೇಟೆಗಳಲ್ಲಿ ವ್ಯಸನ ಸೂಚಕ ಸಭೆಗಳು ನಡೆದವು. ಮಡಿಕೇರಿಯ ಸಭೆಯಲ್ಲಿ ಕಲಕತ್ತೆಯಲ್ಲಿದ್ದ ಶ್ರೀಯುತ ಎ. ಯಸ್. ರಾಜಂ, ಯಂ, ಎ ಯವರೂ ಅವರ ವಿಷಯ ಸ್ಮರಣ್ಯವಾಗಿ ಭಾಷಣ ಮಾಡಿದರು. ಇದೂ ಅಲ್ಲದೆ ಜುಲೈ ಒಂದರಲ್ಲಿ ಕೊಡಗಿನ ಎಲ್ಲಾ ಪ್ರತಿನಿಧಿಗಳು ಸೇರಿ ವೀರರಾಜೇಂದ್ರ ಪೇಟೆಯ ಖಾದಿ ಭಾಂಡಾರದಲ್ಲಿ ಸಭೆಸೇರಿ ತಕ್ಕ ಠರಾವುಗಳನ್ನು ಮಂಜೂರು ಮಾಡಿದರು.

ಹಿಂದುಸ್ಥಾನ

ದಿಲ್ಲಿಯಲ್ಲಿ ಬಕರ ಇದ್ ಹಬ್ಬದ ಆಕಳ ಕೊಯ್ಯುವಿಕೆಯ ಬಗ್ಗೆ ಪೋಲೀಸರೂ, ಲಷ್ಕರೀ ಜನರೂ ಬಹು ಜಾಗರೂಕರಾಗಿದ್ದು ಎಲ್ಲಕಡೆಯಲ್ಲಿಯೂ ಕಾವಲುಗಾರನ್ನು ಇಟ್ಟು ಎಲ್ಲ ಬಗೆಯಿಂದ ಜಾಗರೂಕರಾಗಿದ್ದರಿಂದ ಯಾವ ಬಗೆಯ ದಂಗೆಯೂ ಆಗಲಿಲ್ಲ. ಕಲಕತ್ತೆಯಲ್ಲಿ ಮಾತ್ರ ದಂಗೆಯಾಯಿತು. ಉಳಿದ ನಗರಗಳಲ್ಲಿಯೂ ಯಾವ ಬಗೆಯ ಗೊಂದಲವಾಗಲಿಲ್ಲ.

ದೇಶಬಂಧುಗಳ ಬಂಗಾಲ ಸ್ಮಾರಕ ನಿಧಿಗೆ ೨೫೦,೦೦೦ ರೂ. ಗಳು ಈಗಾಗಲೇ ಜಮ್ಮೆಯಾಗಿವೆ.

ಜಿ. ಆಯ. ಪಿ. ರೇಲ್ವೇಯು ಈ ತಿಂಗಳ ೨ ನೇ ತಾ॥ ದಿಂದ ಸರಕಾರದ ವಶವಾಗಿದೆ. ಕಂಪನಿಯ ಹಕ್ಕು ಇನ್ನು ಏನೂ ಇರುವದಿಲ್ಲ.

ಪರದೇಶ.

ವಿಲಾಯತಿಯಲ್ಲಿ ಮಂತ್ರಿಗಳು ವೃತ್ತಪತ್ರಿಕೆಗಳಿಗೆ ಲೇಖಗಳನ್ನು ಬರೆದು ಪ್ರತಿಷ್ಠೆ [illegible] ಯುತ್ತಿದ್ದರು. ಈ ಪದ್ಧತಿಯನ್ನು ನಿಲ್ಲಿಸಬೇಕೆಂಬದಾಗಿ ನಿರ್ಣಯವಾಗಿದೆ.

ಚೀನದಲ್ಲಿ ಕ್ರಾಂತಿಕಾರಕರ ಚಳವಳಿಯು ಹೆಚ್ಚಾಗುತ್ತಿದೆ. ಆ ಹಿಡಿತದ ವ್ಯಕವು ಬಲವತ್ತರವಾಗಿದೆ. ರಾಷ್ಟ್ರೀಯ ಹಕ್ಕುಗಳನ್ನೆಲ್ಲ ಜನರು ಬೇಡುತ್ತಿರುವರು.

ದಕ್ಷಿಣ ಆಫ್ರಿಕೆಯಲ್ಲಿ ಏಶಿಯಾ ಜನರಿಗೆ ತೊಂದರೆ ಕೊಡುವದು ಹೆಚ್ಚಾಗಿದ್ದರಿಂದ ಮಹಾತ್ಮಾ ಗಾಂಧಿಯವರ ಮುಖ್ಯಸ್ಥರ ಶ್ರೀ ಮಣಿಲಾಲರು ಅಲ್ಲಿ ಸತ್ಯಾಗ್ರಹವನ್ನು ಪ್ರಾರಂಭಿಸಬೇಕೆಂದು ನಿಶ್ಚಯಿಸಿದ್ದಾರೆ.

ಗ್ರಂಥವಿಮರ್ಶೆಯು

ಅಭಿವೃದ್ಧಿರತ್ನಾಕರ ಲೇ. ಎಸ್ ಕೆ.

ನರಸಿಂಹಯ್ಯ, ಸಿದರಾಂ

ವಿಲಾಸ ಶಂಕರಪುರ, ಬೆಂಗಳೂರ ಸಿಟಿ.

೧೬ ಕ್ರೌವುನ್. ಪುಟ. ೧೭೭. ಕ್ರಯಂ-೧೦-೦

ಪ್ರಪಂಚದ ನವನಾಗರೀಕ ಅಭಿವೃದ್ಧಿಗೆ ಆವಶ್ಯಕವಾದ ನಡೆನುಡಿಗಳನ್ನು ಕ್ರಮಪಡಿಸಿಕೊಂಡು ಅಭಿವೃದ್ಧಿಗೆ ಬಂದು, ಅಗ್ರಗಣ್ಯರೆನಿಸಿದ ಪ್ರಜಾಶ್ರೇಷ್ಠರ ಮತ್ತು ಕವಿಪುಂಗವರ ಹಿತೋಕ್ತಿಗಳನ್ನು ಸಂಗ್ರಹಿಸಿ, ವಾಚಕರ ಮನಸ್ಸನ್ನು ಆಕರ್ಷಿಸುವಂತೆ, ಈ ಚಿಕ್ಕ ಪುಸ್ತಕವನ್ನು ಬರೆಯಲಾಗಿದೆ' ಎಂದು ಲೇಖಕರು ಉಪೋದ್ಘಾತದಲ್ಲಿ ಬರೆದಿರುವರು. ಆಂಗ್ಲಸಾಹಿತ್ಯದಲ್ಲಿಯ Plain Living and High Tninking, Smili's character, Use of life ಎಂಬ ಉಪಯುಕ್ತ ಗ್ರಂಥಗಳ ರೀತಿಯಲ್ಲಿ ಈ ಚಿಕ್ಕ ಪುಸ್ತಕವು ಬರೆಯಲಾಗಿದೆಯೆಂದು ಹೇಳಿದರೆ ತಪ್ಪಾಗದು. ಇದರಲ್ಲಿ ಮುನ್ನುಡಿ, ಐಶ್ವರ್ಯ ಪರೋಪಕಾರ ಆರೋಗ್ಯ, ಕಾರ್ಯತತ್ಪರತೆ-ದೃಢಸಂಕಲ್ಪ, ಬಡತನ ಆತ್ಮಾವಲಂಬನೆ, ಸುಗುಣ ನಡೆವಳಿ, ಅವಕಾಶ, ಕಾಲ ಪಾಲುಮಾಡಿಕೆ, ದಿಟ್ಟತನ ಕುತೂಹಲ, ಆತ್ಮಬುದ್ಧಿ ಮಿತವ್ಯಯ ವಿವೇಕ ಉಲ್ಲಾಸ, ಸ್ಮರಣೆ ಸತ್ಕಾರ, ತೇಜಸ್ಸು, ಮನೋದಾರ್ಢ್ಯ, ಅಭ್ಯಾಸ, ಸ್ವಭಾವ ಈ ಪ್ರಕಾರ ಪ್ರಕರಣಗಳಿರುತ್ತವೆ. ಲೇಖಕರು ದೃಷ್ಟಾಂತ ಉದಾಹರಣೆಗಳಿಂದ ವಿಷಯ ವಿವೇಚನೆಯನ್ನು ಮನೋಹರವಾಗಿ ಮಾಡಿದ್ದಾರೆ. ಭಾಷೆಯು. ವಿಶದವಾಗಿಯೂ, ಸರಳವಾಗಿಯೂ ಇದೆ. ನಡುನಡುವೆ ಕವಿಗಳ ನವಿನುಡಿಗಳೂ, ಗಾದೆಯ ಮಾತುಗಳೂ, ಮುತ್ತಿನಂತೆ ಹೊಳೆಯುತ್ತಿವೆ. ಕೆಲವೆಡೆಯಲ್ಲಿ ಭಾಷೆಯು ಸಹಜವಾಗಿಯೇ ಕಾವ್ಯಮಯವಾಗಿದೆ. 'ಆಕೋಶ್ತರ' 'ಆರ್ಜಿಸಿದ' ಇವೇ ಮೊದಲಾದ ಶಬ್ದಗಳನ್ನು ಉಪಯೋಗಿಸದಿದ್ದರೆ, ಚೆನ್ನಾಗುತ್ತಿತ್ತು. ಒಟ್ಟಿನ ಮೇಲೆ ಈ ಪುಸ್ತಕವು ನೀತಿಬೋಧಕವಾದ ನಿಬಂಧವಾಗಿದ್ದು ಈಗಿನ ಮ್ಯಾಟ್ರಿಕ್ ಪರೀಕ್ಷೆಯ ವಿದ್ಯಾರ್ಥಿಗಳಿಗೂ, ಕನ್ನಡ ಮುಲಕಿಯ ಪರೀಕ್ಷೆಯ ವಿದ್ಯಾರ್ಥಿಗಳಿಗೂ, ಉಪಯುಕ್ತವಾಗಿದೆ.

ಸ್ವಧರ್ಮ

ಸೆ. ಸುರೇಂದ್ರರಾವ ದೇಸಾಯಿ ಧಾರವಾಡ

ಕ್ರೋಧನ ಸಂವತ್ಸರದ ಆಷಾಢಮಾಸದ (೧೯೨೫) ಸಂಚಿಕೆಯು ತಪ್ಪದೇ ಇದರಲ್ಲಿ ಕೊಳಲ ನುಡಿಸು ಎಂಬ ಮಂಜುಲವಾದ ಹಾಡೂ, ದೈವಪೌರುಷವಾದವೂ, ಬ್ರಹ್ಮಚರ್ಯ, ಹಿಂದೂ ಸಮಾಜ, ಪ್ರಾಸಂಗಿಕ, ಟಿಪ್ಪಣೆ, ಮಾನವೀಯ ಕರ್ತವ್ಯ ಪತಿವ್ರತೆಯ ಪ್ರಭಾವ.ಶ್ರೀಕೃಷ್ಣನೂ ಕೊಳಲೂ ಎಂಬಿವೆ ಮೊದಲಾದವುಗಳು ಪ್ರಕಟವಾಗಿವೆ ಈ ಸಾರೆಯ ಸಂಚಿಕೆಯು ಬಾಹ್ಯಾಂಗ ಸುಂದರವಾಗಿರುವಂತೆ ಅಂತರಂಗದಲ್ಲಿ ಯಾದರೂ ಅಂದವಾಗಿದೆ

'ಕೊಳಲ ನುಡಿಸು ಎಂಬ ಭಾವಗೀತೆಯು ಮಧುರವೂ ರಸಭರಿತವೂ ಆಗಿದ್ದು ತಿಳಿಗನ್ನಡದ ಕಂಪು ಸೊಂಪುಗಳನ್ನು ಸೂಸುತ್ತಿದೆ. ಅದರ ಕೋಮಲ ಭಾವವನ್ನೂ ಮಾಧುರ್ಯವನ್ನೂ 'ಕನ್ನಡಿಗ'ನ ಓದುಗರು ಸವಿಯಲೆಂದು ಅದನ್ನು ಕೆಳಗೆ ಕೊಡುತ್ತೇವೆ.

ಕೊಳಲ ನುಡಿಸು ಕಿವಿದೊಳೆಸಗೆ ಚೆಲುವ ಮೋಹನಾ ||ಪಲ್ಲ||
ಕೊಳಲ ನುಡಿಸಿ ಪ್ರೇಮಸುಧೆಯ | ಮಳೆಯ ಬಗೆಯ ತಾಪ|
ಕಳೆದು ತಿಳುವಿನೊಳೆಪ್ಪಿಯ| ಬೆಳಗಿಸಿ ಬೆಳಗನ್ನ ಮನದ
|| ಅನುಪಲ್ಲ ||
ಎಳೆಯ ತನದ ಹಸುಗಳ ಜಾ | ಗಳಿಸಿ ಕಾಯುತೆಂದು ಬನಕೆ||
ಗೆಳೆಯರೊಡನೆ ಪೋಗಿ ಪೊಳೆಸು | ಮಳಲಿನಲ್ಲಿ ನಿಂತು ನುಡಿಸಿ||
ತಳಿನೀರನು ಕುಡಿಸಿ ಧೇನು | ಗಳನು ಕೇಣಿ ಚೈತನ್ಯದ|
ಕಳೆಯ ನಿಲಿಸಿ ಸ್ಥಿರಚರದಲಿ ಇಳೆಯನು ನಲಿದಾಡಿಸಿರುವ ||೧||
ಕಂಜ ಮುಖ ಸಖಿಯರ ಮನ| ಮಂಜುಳವಹ ರಾಗದಿಂದೆ ||
ರಂಜಿಸುತಾಕೆಯರ ಹೃದಯ | ಪಂಜರಶುಕನಾಗಿ ನೀನು|
ಭಂಜಿಸಿ ಭವಭಯಮಾಯದ | ಮಂಜನೆಲ್ಲ ಮರೆಮಾಡಲು|
ಸಂಜೆಯ ಸವಿಸಮಯದಲ್ಲಿ | ಕುಂಜವನದಿ ಕುಳಿತೂದಿದ ||೨||
ಭಿನ್ನ ವಿಷಯ ಕೆಳಸದಂತೆ | ಚಿನ್ನ! ನಿನ್ನ ಕೊಳಲ ನುಡಿಸಿ |
ನನ್ನ ಮನದ ಮೃಗವ ತಣಿಸಿ | ನಿನ್ನೊಳದರ ನೋಟ ನಿಲಿಸಿ ||
ತನ್ಮಯವನ್ನಾಗಿ ಮಾಡಿ | ನಿನ್ನ ನೆರೆಯಲರಿಸಿಕೊಳ್ಳೊ |
ಬನ್ನಹವೆನ್ನದು ಮನ್ನಿಸಿ | ಚಿನ್ಮಯ ಶ್ರೀ ಕೃಷ್ಣಮೂರ್ತಿ ||೩||

ಕವಿಯು ಕಳ್ಳನಿದ್ದು ನಮ್ಮ ನಿಮ್ಮ ಬಯಕೆಗಳನ್ನು ಇದರಲ್ಲಿ ವ್ಯಕ್ತ ಮಾಡಿರುವನೆಂದು ನಿಮ್ಮೆಲ್ಲರಿಗೂ ಅನಿಸುವದಿಲ್ಲವೇ ?

—ಹಿರ್ವ ತುಂಟ—

ಕರ್ನಾಟಕಕ್ಕೊಂದು ವಿಶ್ವವಿದ್ಯಾಲಯವು.

ಹಿಂದುಸ್ಥಾನದಲ್ಲಿ ಚೈತನ್ಯವು ಉದಯ ಹೊಂದುತ್ತಲೆ ಅಗ್ರಗಾಮಿಗಳಾದ ಬಂಗಾಲ, ಮಹಾರಾಷ್ಟ್ರ ಮುಂತಾದ ಪ್ರಾಂತಗಳು ಆ ಚೈತನ್ಯ ಬಲದಿಂದ ಶಕ್ಯವಿದ್ದ ಮಟ್ಟಿಗೆ ಸುಧಾರಣೆಯನ್ನು ಮಾಡಿಕೊಂಡರು. ಬಂಗಾಲದಲ್ಲಿ ಪಂ ಮದನ ಮೋಹನ ಮಾಲವೀಯರು ಅವಿಶ್ರಾಂತಶ್ರಮಪಟ್ಟು ಹಿಂದುಬನಾರಸ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದರು. ಟ್ಯಾಗೋರರವರ ಶಾಂತಿನಿಕೇತನವೂ ಇದೇ ಮಾದರಿಯ ಸಂಸ್ಥೆಯು ಅವುಗಳೆಲ್ಲೆಲ್ಲ ಪ್ರಾಂತಿಕ ಭಾಷೆಯೇ ಅಗ್ರಪದವನ್ನು ಹೊಂದಿ ಸಾಹಿತ್ಯ, ನಾಟ್ಯ ಸಂಗೀತ ಮುಂತಾದ ಮಾನಸಶಾಸ್ತ್ರಗಳೂ, ವೇದಾಂತಾದಿ ಆಧ್ಯಾತ್ಮಿಕ ಶಾಸ್ತ್ರಗಳೂ, ಬೆಳೆದಿವೆ. ಇದಕ್ಕೇನು ಕಾರಣ! ಬಂಗಾಲವು ಶಿಕ್ಷಣದಲ್ಲಿ ಸಮಗ್ರವಾಗಿ ಒಂದೇ ಅಧಿಪತ್ಯದಲ್ಲಿದೆ. ಇದೇ ರೀತಿಯಾಗಿ ಮಹಾರಾಷ್ಟ್ರವು ಸಹ ಶಿಕ್ಷಣ ವಿಷಯದಲ್ಲಿ ಕೈ. ಚಿಪಳೂಣಕರ, ಟಿಳಕ ಮುಂತಾದ ಮುಖಂಡರ ಪ್ರಭಾವದಿಂದ ರಾಜಾಶ್ರಯವಿಲ್ಲದಿದ್ದರೂ ದಿನೇ ದಿನೇ ಅಭಿವೃದ್ಧಿಯನ್ನು ಹೊಂದಿ ಈಗ ತಮಗೆ ಬೇರೆ ಒಂದು ವಿಶ್ವವಿದ್ಯಾಲಯವು ಅವಶ್ಯವಿದೆ ಎಂದು ಚಳವಳಿಯನ್ನು ಎಬ್ಬಿಸಿರುವರು. ಈಗಾದರೂ ಕರ್ನಾಟಕಸ್ಥರು ಕಣ್ದೆರದು ಕುಂದುಕೊರತೆಗಳನ್ನು ಇಷ್ಟಾನಿಷ್ಟಗಳನ್ನು ಮನಗಂಡು ತಮಗೆ ಸಾರ್ವತ್ರಿಕ ಸುಧಾರಣೆಯಾಗಬೇಕಾದರೆ ತಮಗೆ ಒಂದು ವಿಶ್ವವಿದ್ಯಾಲಯವು ಬೇಕೆಂದು ಪ್ರಯತ್ನ ಮಾಡುವದು ಅವಶ್ಯವಿದೆ. ಇಲ್ಲದಿದ್ದರೆ ಹಿಂದುಳಿದವರು ಹಿಂದೇ ಉಳಿಯುವರು. ತಮ್ಮ ಪೂರ್ವಕಾಲದ ವೈಭವವನ್ನಾದರೂ ಅರಿತು ಈ ದಿಶೆಯಲ್ಲಿ ಪ್ರಯತ್ನಪಡುವರೆಂದು ನಾವು ಆಶಿಸುತ್ತೇವೆ.

ಇನ್ನು ಕರ್ನಾಟಕಕ್ಕೆ ವಿಶ್ವವಿದ್ಯಾಲಯವು ಬೇಕು. ಅದರೆ ಅದನ್ನು ಪೋಷಿಸುವಷ್ಟು ಶಾಲೆ ಕಾಲೇಜಗಳಲ್ಲಿ ಮಹತ್ವವಾದ ಗ್ರಂಥಗಳೆಲ್ಲಿ? ಪ್ರವೀಣರಾದ ಶಿಕ್ಷಕರೆಲ್ಲಿ? ಎಂದು ಪ್ರಶ್ನೆ ಮಾಡಿದರೆ ಉತ್ತರವು ದೂರವಿಲ್ಲ. ಕರ್ನಾಟಕದಲ್ಲಿ ಸುರುವಿಗೆ ಸಾಕಷ್ಟು ಪಂಡಿತ ಪದವೀಧರರು ಶಿಕ್ಷಕರಾಗುತ್ತಾರೆಂದು ನಾವು ಮೊದಲೇ ಹೇಳುವೆವು. ಮತ್ತು ನಮ್ಮ ವಿಶ್ವವಿದ್ಯಾಲಯವೆಂದರೆ ಕೇವಲ ಮುಂಬಯಿ ಕರ್ನಾಟಕದ್ದಷ್ಟೇ ಆಗಿರಬಾರದು. ಅಖಂಡವಾದ ಕರ್ನಾಟಕವನ್ನು ಶಿಕ್ಷಣ ವಿಷಯದಲ್ಲಿ ಒಂದೇ ವಿಶ್ವವಿದ್ಯಾಲಯದ ಅಧಿಪತ್ಯಕ್ಕೆ ಕೊಟ್ಟರೆ ರಾಜಕೀಯ ಏಕೀಕರಣ ದೃಷ್ಟಿಯಿಂದಾದರೂ ಯೋಗ್ಯವಾಗುವದು. ಹೈದರಾಬಾದ (ಡೆಕ್ಕನ್), ಮೈಸೂರ ಸಂಸ್ಥಾನಗಳಲ್ಲಿದ್ದ ಶಾಲೆ ಕಾಲೇಜುಗಳೂ ಮುಂಬಯಿ ಕರ್ನಾಟಕದಲ್ಲಿಯ ಶಾಲೆ ಕಾಲೇಜಗಳೂ ಒಂದೇ ವಿಶ್ವವಿದ್ಯಾಲಯಕ್ಕೊಳಗಾದರೆ ಭಾಷಾ ದೃಷ್ಟಿಯಿಂದಾದರೂ, ಧಾರವಾಡ, ಮಂಗಳೂರ, ಮೈಸೂರ ಕನ್ನಡಗಳೆಂದು ಕಂಡು ಬರುವ ಆಭ್ಯಂತರವು ಇಲ್ಲದಂತಾಗಿ ವಿಶಿಷ್ಟ ಸುಧಾರಣೆಗೆ ಅನುವು ದೊರೆಯುತ್ತದೆ.

ಕಮಲಾಪತಿ

ಈ ಪತ್ರಿಕೆಯು ಸಂಗನಬಸವ ರಾಜೇಂದ್ರಪುರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

.ರ ನಂ, ಬಿ. ೧೯೪೭ ವಾ. ಚಂದಾ ೧—೧೪—೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವೇಶವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಯುವ ಆಷಾಢ ಬಹುಳ ೧೨ ಶಕೆ ೧೮೫೮. ತಾ॥ ೧೭-೭-೧೯೩೬ | ಸಂಚಿಕೆ ೧೭

ಸಂಪಾದಕರ ಭೂಮಿ.

ಎದ್ದರೆ ಕನ್ನಡ ಕುಳಿತರೆ ಕನ್ನಡ ನುಡಿದರೆ ಕನ್ನಡವು ।
ಹೃದ್ಯವು ಕನ್ನಡ ಉದ್ಯಮ ಕನ್ನಡ- ಕನ್ನಡ- ಕನ್ನಡವು ।
ಕನಸು ಮನಸಿನೊಳು ಕನ್ನಡ ಕನ್ನಡ ನಿದ್ದೆಯು ಕನ್ನಡವು।
ಕಿನಿಸು ಕನ್ನಡವು ಜೀವಿತ ಕನ್ನಡ ಎಲ್ಲವು ಕನ್ನಡವು ॥

—ಕೈ. ಸಗರ ಕವಿ

ಗೌರಕಾಯಿದವರಿಗೆ ಹಿಂದುಸ್ಥಾನದಲ್ಲಿಯ ಹಣವನ್ನು ಎಷ್ಟು ಹೀರಿದರೂ ಸಮಾಧಾನವಿಲ್ಲ. ಒಂದಲ್ಲ. ಎರಡಲ್ಲ; ಅನೇಕ ಬಗೆಯಿಂದ ಭರತ ಖಂಡದ ಸಿರಿಯು ವಿಲಾಯತಿಯನ್ನು ಸೇರಿರುವದು. ಕಣ್ಣು ತೆರದ ಕೂಡಲೇ ನಮ್ಮ ದೃಷ್ಟಿಗೆ ಬೀಳುವ ಬೇಕಾದ ವಸ್ತುವನ್ನು ಪರೀಕ್ಷಿಸಿರಿ; ಅದು ಪರದೇಶಿಯದಿರದೇ. ಅದರ ಮುಖಾಂತರವಾಗಿ ಎಲ್ಲ ಹಣವೂ ಪರದೇಶದ ದಾರಿ ಹಿಡಿಯುತ್ತದೆ. ದಾರಿದ್ರ್ಯವು ಮಾತ್ರ ನಮಗೆ ಪ್ರತಿಕ್ಷಣದಲ್ಲಿಯೂ ಬಡಿದುಕೊಳ್ಳುತ್ತಲಿದೆ. ಭರತ ಖಂಡದಲ್ಲಿ ಇತ್ತಿತ್ತ ದೇಶೀ ಚಿತ್ರಪಟಗಳಾಗಹತ್ತಿದ್ದರಿಂದ ಇಲ್ಲಿಯ ಜನರಿಗೆ ನಮ್ಮ ನಾಡಿನ ಪೌರಾಣಿಕ ಐತಿಹಾಸಿಕ, ಸಾಮಾಜಿಕ ಸಂಗತಿಗಳಿಂದ ಚಿತ್ರ ಪಟಗಳನ್ನು ನೋಡುವ ಅಭಿರುಚಿಯುಂಟಾದದ್ದು ಸ್ವಾಭಾವಿಕ. ಆದರೆ ಯುರೋಪಿಯರು ಇದರಿಂದ ತಮ್ಮ ಉತ್ಪನ್ನವು ಕಡಿಮೆಯಾಗುವದೆಂದೆಣಿಸಿ, ಹಿಂದುಸ್ಥಾನದಲ್ಲಿಯ ಸಿನೇಮಾ ಕಂಪನಿಗಳನ್ನು ತೆಗೆದು, ಇಲ್ಲಿಯೇ ಪೌರಾಣಿಕ ಚಿತ್ರಪಟಗಳನ್ನು ಸಿದ್ಧಪಡಿಸಿ, ಈ ಮುಖಾಂತರವಾಗಿ ಸಹ ಹಿಂದುಸ್ಥಾನದಿಂದ ಹಣ ಹೊತ್ತು ಕೊಂಡು ಹೋಗಬೇಕಾಗಿ ಹವ್ಯಾಸ ಪಡುತ್ತಲಿದ್ದಾರೆ. ಕಲಕತ್ತೆಯಲ್ಲಿ ಈ ಪ್ರಕಾರವಾಗಿ ಸಿದ್ಧಪಡಿಸಿದ ಚಿತ್ರ ಪಟಗಳನ್ನು ನೋಡಲಿಕ್ಕೆ ನಮ್ಮ ಅಭಿಮಾನ ಶೂನ್ಯ ಜನರು ಕುರಿಗಳಂತೆ ಹಿಂಡು ಕಟ್ಟಿಕೊಂಡು ಹೋಗುತ್ತಿರುವರು. ಹೀಗಾದಮೇಲೆ ನಮ್ಮ ನಾಡಿನಲ್ಲಿ ದಾರಿದ್ರ್ಯವು ಹೆಚ್ಚಾಗುವದರಲ್ಲಿ ಆಶ್ಚರ್ಯವೇನು?

ಬಕರ ಈದ್‌ಹಬ್ಬದಲ್ಲಿ ಉತ್ತರ ಹಿಂದುಸ್ಥಾನದಲ್ಲಿ ಶಾಂತತೆಯನ್ನಿಡಲಿಕ್ಕೆ ಪೋಲೀಸರೂ, ದಂಡಾಳುಗಳೂ, ಬಹು ಶ್ರಮಪಡಬೇಕಾಯಿತು. ಕೊಲ್ಲಲಿಕ್ಕೆ ಒಯ್ಯುವ ಆಕಳಗಳನ್ನು ಮೆರವಣಿಗೆಯಿಂದ ಒಯ್ಯುವ ಸಂಪ್ರದಾಯವು ಅಲ್ಲಿರುವದು. ಇದು ಹೇಗೆ ಮುಸಲ್ಮಾನರಿಗೆ ಧಾರ್ಮಿಕ ಪ್ರಶ್ನೆಯಾಗಿರುವದೋ ನಮಗೆ ತಿಳಿಯದು. ಆಕಳುಗಳನ್ನು ಕೊಲ್ಲುವದನ್ನೂ ಅವನ್ನು ವೈಭವದಿಂದ ಕೊಲ್ಲಲಿಕ್ಕೆ ಒಯ್ಯುವದನ್ನೂ, ಕಣ್ಣಾರೆ ಕಾಣುವ ದುರ್ಘಟ ಪ್ರಸಂಗವು ಹಿಂದೂ ಜನರಿಗೆ ಒದಗುತ್ತಿರುವದು ಹೃದಯದ್ರಾವಕವಾಗಿದೆ. ಯಾವ ಆಕಳವು ಹಿಂದೂ ಜನರಿಗೆ ಅತಿಶಯ ಪವಿತ್ರವಾಗಿದೆಯೋ ಅದನ್ನು ಕೊಲ್ಲಲು ಮೆರವಣಿಗೆಯಿಂದ ಸಾಗಿಸಿಕೊಂಡು ಹಿಂದೂ ಬೀದಿಗಳಲ್ಲಿಯೇ ಹಾಯಬೇಕಾಗಿ ಮುಸಲ್ಮಾನರು ಆಗ್ರಹ ಪಡುವದು ಸರ್ವಥಾ ಧರ್ಮವಾಗದು. ಇದನ್ನು ತಡೆಯುವಷ್ಟು ಶಕ್ತಿಯು ಹಿಂದೂ ಜನರಲ್ಲಿ ಇಲ್ಲದ್ದು ಹೆಚ್ಚಿನ ಕಷ್ಟ. ಮುಸಲ್ಮಾನರಲ್ಲಿ ತಮ್ಮ ಧರ್ಮದ ಬಗ್ಗೆ ಇದ್ದಷ್ಟು ಅಭಿಮಾನವು ಹಿಂದೂ ಜನರಲ್ಲಿ ಇಲ್ಲದಿರುವದೇ ಇದಕ್ಕೆ ಕಾರಣ. ಆದುದರಿಂದಲೇ ದೇ. ಭ. ಲಾಲಾ ಲಜಪತರಾಯರು ಸಹ ಹಿಂದೂ ಸಂಘಟನದ ಬಗ್ಗೆ ಆಸ್ಥೆಯಿಂದ ಕಳಕಳಗೊಳ್ಳುತ್ತಿರುವರು. ಕರ್ನಾಟಕದಲ್ಲಿ ಈ ಸಂಘಟನಗಳ ಬಗ್ಗೆ ಮುಂದೊರೆದು ಕೆಲಸ ಮಾಡುವಜನರು ಈ ವರೆಗೆ ಹುಟ್ಟಿಕೊಳ್ಳಲಿಲ್ಲವೆಂಬುದು ವಿಷಾದದ ಸಂಗತಿಯು.

ಲಾರ್ಡ ಜರ್ಲನ್ ಹೆಸ್ಟರು ಸ್ವರಾಜ್ಯವನ್ನು ಕೊಟ್ಟು ಬಿಡುವರೋ ಎಂಬವಾಗಿ ಏಳನೇ ತಾರೀಖಿನ ದಿವಸ ಪಾರ್ಲಿಮೆಂಟಿನಲ್ಲಿ ಆಗತಕ್ಕ ಅವರ ಭಾಷಣದ ದಾರಿಯನ್ನು ಎಷ್ಟೋ ಜನರು ನೋಡುತ್ತಿದ್ದರು. ಆದರೆ ಅವರ ಆಶೆಯಲ್ಲ ಅಳಿದು ಹೋಯಿತು. ಬರ್ಕನ್ ಹೆಸ್ಟರ ಉದ್ದವಾದ ಭಾಷಣವನ್ನು ಓದಿ ನೋಡಿದರೆ ಅದರಲ್ಲಿ ಏನೂ ಹುರುಳು ಇಲ್ಲವೆಂದು ಧಾರಾಳವಾಗಿ ಹೇಳಬಹುದು. ಎಲ್ಲ ಪಂಗಡದವರೂ ಸರಕಾರದ ಕೂಡ ಸಹಕಾರ ಮಾಡಿ ೧೯೧೯ ನೇ ಇಸ್ವಿಯ ಸುಧಾರಣೆಗಳ ಕಾಯಿದೆಯನ್ನು ಅಮಲಿನಲ್ಲಿ ತರುವದಕ್ಕೂ ದ್ವಿದಲ ರಾಜ್ಯ ಪದ್ಧತಿಯನ್ನು ಯಶಸ್ವಿಯಾಗಿ ಮಾಡುವದಕ್ಕೂ ಮನಮುಟ್ಟಿ ಪ್ರಯತ್ನಿಸಿದರೆ "ರಾಯಲ್ ಕಮಿಶನ್" ವನ್ನು ನೇಮಿಸುವ ವಿಚಾರ ಮಾಡುವಾ ಎಂಬದೇ ಅವರ ಭಾಷಣದ ಸಾರಾಂಶ. ಹಿಂದೀಯರು ಹಾಗೆ ಮಾಡದಿದ್ದರೆ ಅವರಿಗೆ ಏನೂ ದೊರೆಯಬಾರದೆಂಬದಾಗಿ ಅಂಜಿಕೆಯನ್ನಾದರೂ ಬರ್ಕನ್ ಹೆಸ್ಟರು ಹಾಕಿರುವರು. ಆದರೆ ಬರ್ಕನ್ ಹೆಸ್ಟರ ಅಂಜಿಕೆಗೆ ಹೆದರುವವರಾಗಲಿ ರಾಯಲ್ ಕಮೀಶನ್ನದ ಆಶೆಗೆ ಮರುಳಾಗುವವರಾಗಲಿ ಹಿಂದುಸ್ಥಾನದಲ್ಲಿ ಯಾರೂ ಇರುವದಿಲ್ಲ. ಮೇಲಾಗಿ ರಾಯಲ್ ಕಮಿಶನ್ನವನ್ನು ನೇಮಿಸುವದರಿಂದ ನಿಷ್ಕಾರಣವಾಗಿ ಹಿಂದೀಯರ ಮೇಲೆ ಹಣದ ಭಾರವು ಮಾತ್ರ ಬೀಳುವದಲ್ಲದೆ ಅದರಿಂದ ಏನೂ ಫಲಿತಾಂಶವಾಗುವದಿಲ್ಲವೆಂಬದನ್ನು ಹಿಂದೀಯರೆಲ್ಲ ಮನಗಂಡಿರುವರು. ಈಗ ಕಮಿಶನ್‌ಗಳೆಲ್ಲ ಸಾಕಾಗಿ ಹೋಗಿವೆ. ಆದ್ದರಿಂದ ಹಿಂದೀಯರು ಒಂದಾಗಿ ಖಾದಿಯ ಪ್ರಸಾರವನ್ನು ಹೆಚ್ಚಾಗಿ ಮಾಡಿ ತಮ್ಮ ಆಂತರ ಸಾಮರ್ಥ್ಯವನ್ನು ಬೆಳೆಯಿಸಿಕೊಳ್ಳಲು ಉತ್ಸಾಹದಿಂದ ಪ್ರಯತ್ನ ಮಾಡಬೇಕೆಂದು ನಾವು ಬೇಡಿಕೊಳ್ಳುತ್ತೇವೆ. ಇದರಹೊರ್ತು ಸ್ವರಾಜ್ಯ ಸಂಪಾದನೆಗೆ ಬೇರೊಂದು ಉಪಾಯವೇ ಇರುವದಿಲ್ಲ.

ಬಳ್ಳಾರಿಯಲ್ಲಿ ಆಂಧ್ರ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಕಾಲೇಜವನ್ನು ಸ್ಥಾಪಿಸುವ ಬಗ್ಗೆ ಬಳ್ಳಾರಿಯಲ್ಲಿಯ ಹಲ ಕೆಲ ಆಂಧ್ರರು ಪ್ರಯತ್ನಿಸುತ್ತಿರುವದನ್ನು 'ಕನ್ನಡಿಗ'ನು ಕಳೆದ ವಾರದಲ್ಲಿ ನಿಷೇಧಿಸಿದ್ದಾನೆ. ಧಾರವಾಡದಲ್ಲಿ ಸಾರ್ವಜನಿಕ ಸಭೆಯಾಗಿ ಈ ಬಗ್ಗೆ ನಿಷೇಧಪರ ಠರಾವು ಸ್ವೀಕಾರವಾಗಿದೆ. ಮತ್ತು ಬಳ್ಳಾರಿಯಲ್ಲಿ ಒಂದು ಕರ್ನಾಟಕ ಕಾಲೇಜವನ್ನು ಸ್ಥಾಪಿಸಿ ಅದನ್ನು ಸದ್ಯಕ್ಕೆ ಮದ್ರಾಸ ವಿಶ್ವವಿದ್ಯಾಲಯಕ್ಕೆ ಜೋಡಿಸಿ ಮುಂದೆ ಸ್ಥಾಪಿಸಲ್ಪಡುವ ಕರ್ನಾಟಕ ವಿಶ್ವವಿದ್ಯಾಲಯಕ್ಕನೇ ಅದನ್ನು ಸಂಬಂಧಿಸಬೇಕೇ ಹೊರತು ಆಂಧ್ರ ವಿಶ್ವವಿದ್ಯಾಲಯಕ್ಕೆ ಅದನ್ನು ಸೇರಿಸಿ ಕೊಡಬಾರದೆಂಬದಾಗಿಯೂ ೨ ನೇ ಠರಾವು ನಿರ್ಣಯಿಸಲ್ಪಟ್ಟಿದೆ. ಕರ್ನಾಟಕದ ಚಳವಳಿಗೆಲ್ಲ ಧಾರವಾಡವೇ ಉಗಮಸ್ಥಾನವಾಗಿದ್ದು ಈ ಚಳವಳಿಯನ್ನು ಸಹ ಅದೇ ನಗರವು ಎತ್ತಿದ್ದು ಧಾರವಾಡದ ಪರಂಪರೆಗೆ ಭೂಷಣವು. ಬೆಳಗಾಂವಿಯಲ್ಲಿಯೂ ಈ ಬಗೆಯ ಸಭೆಯು ಬೇಗನೇ ಕೂಡುವದಾಗಿ ಕೇಳುತ್ತೇವೆ. ವಿಜಾಪುರ ಬೆಂಗಳೂರ, ಮಂಗಳೂರ, ಕುಮಟಾ, ಮಡಿಕೇರಿಗಳಲ್ಲಿಯೂ ಅಲ್ಲಲ್ಲಿಯ ಕರ್ನಾಟಕಸ್ಥರು ಈ ವಿಷಯವಾಗಿ ಬೇಗನೇ ಸಭೆ ಕೂಡಿಸಬೇಕಾಗಿ ಸೂಚಿಸುತ್ತೇವೆ. ಬಳ್ಳಾರಿಯಲ್ಲಿಯ ಆಂಧ್ರರ ಚಳವಳಿಯ ಬಗ್ಗೆ ಆಂಧ್ರ ದೇಶದಲ್ಲಿಯ ಪ್ರಮುಖರ ಬೆಂಬಲವಿದೆಯೋ ಇಲ್ಲವೋ ಇನ್ನೂ ಸ್ಪಷ್ಟವಿಲ್ಲ. ೧೯೧೭ ನೇ ಇಸ್ವಿಯಲ್ಲಿ ಕಡಪಾದಲ್ಲಿ ನೆರೆದ ಆಂಧ್ರ ಮಹಾಸಭೆಯೊಳಗೆ ಬಳ್ಳಾರಿಯು ಕರ್ನಾಟಕದ ಭಾಗವಾಗಿದ್ದರಿಂದ ಅದನ್ನು ಕರ್ನಾಟಕ ಪ್ರಾಂತಕ್ಕೆ ಸೇರಿಸಲು ಆ ಮಹಾಸಭೆಯು ಅನುಮತಿಯಿದ್ದ ಬಗ್ಗೆ ಠರಾವಾಗಿದೆ. ಮೇಲಾಗಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯು ಸ್ಥಾಪನೆಯಾದ ಕೂಡಲೇ ಕಾಂಗ್ರೆಸ್ಸಿನಿಂದ ಪಂಚರು ನೇಮಿಸಲ್ಪಟ್ಟು ಅವರ ನಿರ್ಣಯದಂತೆ ಸಹ ಬಳ್ಳಾರಿಯು ಕರ್ನಾಟಕದ ಭಾಗವೆಂಬುದು ಗೊತ್ತಾಗಿದೆ. ಬಳ್ಳಾರಿಯ ಜನಸಂಖ್ಯೆ ೯ ಲಕ್ಷ ಅದರಲ್ಲಿ ಕನ್ನಡ ಮಾತನಾಡುವವರು ೬ ಲಕ್ಷ ಇವೆಲ್ಲ ಸಂಗತಿಗಳಿಂದ ಬಳ್ಳಾರಿಯು ಕರ್ನಾಟಕದ ಭಾಗವೆಂದು ಸಿದ್ಧವಾಗುತ್ತದೆ. ಹೀಗಿದ್ದು ತೆಲಗು ಭಾಷೆಯೇ ಶಿಕ್ಷಣದ ಪ್ರಮುಖ ಭಾಷೆಯೆಂಬದಾಗಿ ಕೊಂಡದ್ದು ಆಂಧ್ರ ವಿಶ್ವವಿದ್ಯಾಲಯಕ್ಕೆ ಕನ್ನಡ ಮಾತನಾಡುವ ಬಳ್ಳಾರಿಯನ್ನೂ ಜೋಡಿಸಿದರೆ, ಕನ್ನಡದ ಸರ್ವಸ್ವವೇ ಹೊರಟುಹೋಗಿ ಮೊದಲೇ ಸಣ್ಣದಾಗಿದ್ದ ಕರ್ನಾಟಕದ ಭಾಗವು ಮತ್ತಿಷ್ಟು ಕಿರಿದಾಗುವ ಈ ವಿಷಯವನ್ನು ಚನ್ನಾಗಿ ಲಕ್ಷ್ಯದಲ್ಲಿ ತಂದು ನಾವು ಕಳೆದ ವಾರದಲ್ಲಿ ಸೂಚಿಸಿದಂತೆ ಬಳ್ಳಾರಿ ಜಿಲ್ಲೆಯಲ್ಲಿ ಈ ಬಗ್ಗೆ ನಿಷೇಧಪರ ಠರಾವುಗಳನ್ನೂ ಗೊತ್ತುಮಾಡುವದಲ್ಲದೇ, ಕರ್ನಾಟಕದ ಇತರ ಭಾಗಗಳಲ್ಲಿ ಸಹ ಈ ಬಗ್ಗೆ ಸಾರ್ವಜನಿಕ ಸಭೆ ಕರೆದು ಅಲ್ಲಲ್ಲಿಯ ಪ್ರಮುಖರು ಈ ಬಗ್ಗೆ ಕನ್ನಡಿಗರನ್ನು ಜಾಗ್ರತ ಮಾಡಬೇಕಾಗಿ ಪುನಃ ಆಗ್ರಹ ಮಾಡುತ್ತೇವೆ. ಕರ್ನಾಟಕ ಸಭೆಯವರು ಈ ಬಗ್ಗೆ ಬಳ್ಳಾರಿಯಲ್ಲಿ ಚಳವಳಿ ನಡೆಸುವ ಬಗ್ಗೆ ಪ್ರಯತ್ನಿಸುತ್ತಲಿದ್ದಾರೆ. ಇದೇ ಪ್ರಕಾರವಾಗಿ ಕರ್ನಾಟಕ ಸಾಹಿತ್ಯ ಪರಿಷತ್ತಿನವರೂ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯವರೂ ಬಳ್ಳಾರಿಯಲ್ಲಿ ತಮ್ಮ ತಮ್ಮ ವ್ಯವಸ್ಥಾಪಕ ಮಂಡಳಿಗಳ ಸಭೆ ಕರೆದು ಅಲ್ಲಿಯ ಕನ್ನಡಿಗರನ್ನೂ ಜಾಗ್ರತ ಮಾಡುವದರಲ್ಲಿ ತೊಡಗಬೇಕಾಗಿ ಸೂಚಿಸುತ್ತೇವೆ. ಈ ವರ್ಷದಲ್ಲಿ ಕರ್ನಾಟಕ ಪ್ರಾಂತಿಕ ಪರಿಷತ್ತು ಈ ವರೆಗೂ ಕೂಡಿರುವದಿಲ್ಲ. ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಈ ಬಗ್ಗೆ ಜಾಗ್ರತರಾಗಿ ಅಲ್ಲಿಯೇ ಪರಿಷತ್ತನ್ನು ಕೂಡಿಸಿದರೆ, ಬಳ್ಳಾರಿಯ ಮಹಾಜನಗಳನ್ನು ಎಚ್ಚರಿಸಿದಂತಾಗುವದು. ಇದರಂತೆ ಪ್ರಾಂತಿಕ ಕಾಂಗ್ರೆಸ ಕಮಿಟಿಯಲ್ಲಿಯ ಕಾರ್ಯವಾಹಕರು ಅಷ್ಟೊಂದು ಕರ್ನಾಟಕಾಭಿಮಾನವನ್ನು ತಳೆದು ಪ್ರಯತ್ನಿಸಬೇಕಲ್ಲವೇ?

ಅಕಾಲೀ ಶೀಖರು ಇಷ್ಟು ದಿನಗಳ ವರೆಗೆ ನಡೆಸಿದ ಸತ್ಯಾಗ್ರಹಕ್ಕೆ ಸಂಪೂರ್ಣವಾಗಿ ಯಲ್ಲವಿದ್ದರೂ ವಿಜಯವು ದೊರೆತಿರುವದು. ಪಂಜಾಬದಲ್ಲಿಯ ಶೀಖರ ದೇವಸ್ಥಾನಗಳು ಗುರುದ್ವಾರಗಳು ಇಲ್ಲಿಯ ವರೆಗೆ ಮಹಾಂತರ ವಶದಲ್ಲಿರುತ್ತಿದ್ದವು. ಅವುಗಳ ಉತ್ಪನ್ನವಾದರೂ ಅವರ ಕೈಯಲ್ಲಿಯೇ ಇರುತ್ತಿದ್ದು ಅವರು ತಮ್ಮ ಮನಬಂದಂತೆ ದುರ್ವ್ಯಸನ ಮುಂತಾದವುಗಳಲ್ಲಿ ವೆಚ್ಚ ಮಾಡುತ್ತಿರುವರು. ಈ ದುರವಸ್ಥೆಯನ್ನು ದೂರ ಮಾಡುವದಕ್ಕೆ ಅಕಾಲೀ ಶೀಖರು ಟೊಂಕಕಟ್ಟಿ ನಿಂತರು. ಮಹಾಂತರ ವಶದಲ್ಲಿಯೇ ದೇವಾಲಯಗಳಿರದೆ ಶೀಖ ಜನರಿಂದ ಆರಿಸಲ್ಪಟ್ಟ ಒಂದು ಮಧ್ಯವರ್ತಿ ಸಂಸ್ಥೆಯು ಇರಬೇಕೆಂಬದೇ ಅಕಾಲಿಗಳ ಅಭಿಪ್ರಾಯ. ಹಾಗಾಗುವದರಿಂದ ಈಗ ಮಹಾಂತರು ನಡೆಸಿದ ಸ್ವೈರವೃತ್ತಿಗೆ ಅಸ್ಪದವು ದೊರೆಯುವದಿಲ್ಲ. ಈ ಸುಧಾರಣೆಯನ್ನು ಮಾಡಿಕೊಳ್ಳುವದಕ್ಕಾಗಿ ಅವರು ಶಿರೋಮಣಿ ಗುರುದ್ವಾರ ಪ್ರಬಂಧಕ ಕಮಿಟಿ ಎಂಬವೊಂದು ಮಧ್ಯವರ್ತಿ ಸಂಸ್ಥೆಯೊಂದನ್ನು ಸ್ಥಾಪಿಸಿ ಒಳ್ಳೇ ಹುರುಪಿನಿಂದ ಚಳವಳಿ ನಡಿಸಿದರು. ಅವರ ಈ ಧರ್ಮ ಜಾಗ್ರತಿಯನ್ನು ಕಂಡು ಸರಕಾರಕ್ಕೆ ಸಹನವಾಗಲಿಲ್ಲ. ಅವರು ಮಹಾಂತರ ಪಕ್ಷವನ್ನು ಹಿಡಿದರು. ಉದಾಸೀನ ಶೀಖರನ್ನು ತಮ್ಮ ಕಡೆಗೆ ಮಾಡಿಕೊಂಡರು. ಹೀಗೆ ಶೀಖರಲ್ಲಿಯೇ ಒಡಕು ಹುಟ್ಟಿಸಿ ಅಕಾಲಿಗಳಿಗೆ ಭಯಂಕರವಾದ ತೊಂದರೆಗಳನ್ನು ಕೊಡಹತ್ತಿದರು. ಸಾವಿರಾರು ಜನರನ್ನು ತುರುಂಗಕ್ಕೆ ಅಟ್ಟಿದರು. ಎಷ್ಟೋ ಜನರ ಮನೆಮಾರುಗಳನ್ನು ಸೆಳೆದುಕೊಂಡರು. ಅನೇಕ ಜನರನ್ನು ನಾನಾತರದ ಕಷ್ಟಗಳಿಗೆ ಗುರಿಮಾಡಿದರು. ಹೊಡಿಯೋಣ ಬಡಿಯೋಣ ಮುಂತಾದವುಗಳಿಗಂತೂ ಎಣಿಯೇ ಇರಲಿಲ್ಲ. ಆದರೂ ಅಕಾಲಿಗಳು ಹೆದರಲಿಲ್ಲ. ಎಂಥ ಕಷ್ಟಗಳು ಬಂದರೂ ತಮ್ಮ ಸತ್ಯಾಗ್ರಹವನ್ನು ಬಿಡುವಮಾತಿಲ್ಲ. ಕಟ್ಟಕಡೆಗೆ ಸರಕಾರಕ್ಕೆ ಹಿಂದೆ ಸರಿಯ ಬೇಕಾಯಿತು. ಹೇಗಾದರೂ ಮಾಡಿ ಈ ಅಕಾಲಿ ಜನರಲ್ಲಿ ಶಾಂತತೆಯನ್ನು ಪ್ರಸ್ಥಾಪಿಸುವದು ಅಗತ್ಯವಾಯಿತು. ಆದ್ದರಿಂದ ಅವರು ಗುರುದ್ವಾರಗಳೆಲ್ಲ ಒಂದು ಮಧ್ಯವರ್ತಿ ಸಂಸ್ಥೆಯ ಅಧೀನದಲ್ಲಿರಬೇಕೆಂಬದಕ್ಕೆ ಒಪ್ಪಿ ಶೀಖರ ಒಂದು ಕಮೀಟಿಯನ್ನು ನೇಮಿಸಿ ಗುರುದ್ವಾರಗಳ ಸುಧಾರಣೆಯ ಬಿಲ್ಲನ್ನು ಪಂಜಾಬ ಕೌನ್ಸಿಲದಲ್ಲಿ ತರಪಡಿಸಿ ತಾವು ವಿರೋಧವನ್ನು ಮಾಡದೆ ಆ ಬಿಲ್ಲನ್ನು ಪಾಸು ಮಾಡಿಸಿದರು. ಇಂದಿನ ವರೆಗೆ ಧರ್ಮಾಭಿಮಾನಕ್ಕಾಗಿ ಕಾರಾಗೃಹದಲ್ಲಿ ಕೊಳೆಯುತ್ತ ಬಿದ್ದವರಲ್ಲೆಲ್ಲ ಬಂಧಮುಕ್ತರನ್ನಾಗಿ ಮಾಡಲು ಕೂಡ ಸರಕಾರದವರು ಒಪ್ಪಿರುವರು. ಆದರೂ ಗುರುದ್ವಾರ ಬಿಲ್ಲಿಗೆ ತಮ್ಮ ಸಮ್ಮತಿಯನ್ನು ಕೊಟ್ಟು ಅದನ್ನು ಅಮಲಿನಲ್ಲಿ ತರುವದಕ್ಕೆ ಒಪ್ಪುವಂಥವರನ್ನಷ್ಟೇ ಬಂಧಮುಕ್ತ ಮಾಡುತ್ತೇವೆಂದು ಸರ್ ಮಾಲ್ಕಮ್ ಹೇಲೆ ಸಾಹೇಬರು ತಮ್ಮ ಭಾಷಣದಲ್ಲಿ ಹೇಳಿರುವರು. ಹೀಗೆ ಅಟಕಿನಲ್ಲಿಟ್ಟು ಕರಾರುಗಳನ್ನು ಒಪ್ಪುವಂತೆ ಮಾಡಿ ಬಿಲ್ಲನ್ನು ಅಮಲಿನಲ್ಲಿ ತರುವದಕ್ಕೆ ಸರಕಾರವು ಪ್ರಯತ್ನಿಸುವದು ಎಂದೂ ಯೋಗ್ಯವಾಗಲಾರದು. ಪ್ರತಿಯೊಬ್ಬ ಮನುಷ್ಯನಿಗೆ ಧರ್ಮಸ್ವಾತಂತ್ರ್ಯವು ಸಂಪೂರ್ಣವಾಗಿ ಇರಲಿಕ್ಕೆ ಬೇಕು. ಈ ಕರಾರುಗಳನ್ನು ಧರ್ಮಾಭಿಮಾನಿಗಳಾದ ಶೀಖರು ತುರುಂಗದಲ್ಲಿದ್ದರೂ ಒಪ್ಪಲಾರರೆಂದು ನಮಗೆ ತೋರುವದು. ಆದ್ದರಿಂದ ಸರಕಾರದವರು ಈ ಕರಾರುಗಳನ್ನೆಲ್ಲ ತೆಗೆದು ಹಾಕಿ ನಿಜವಾದ ಶಾಂತಿಯು ಅವರಲ್ಲಿ ನೆಲೆಸಿಕೊಳ್ಳುವಂತೆ ಮಾಡುವರೆಂದು ಆಶೆಯಿದೆ.

ಅರವಿಂದ ಘೋಷರು ಬಂಗಾಲದಲ್ಲಿ ಮರಳಿ ಬಂದು ರಾಜಕಾರಣದಲ್ಲಿ ಭಾಗ ತೆಗೆದು ಕೊಳ್ಳುವರೋ [illegible] ವೃತ್ತಪತ್ರಿಕೆಗಳಲ್ಲಿ ಚರ್ಚೆಯು ನಡೆದಿತ್ತಷ್ಟೆ. ... ಅರವಿಂದರವರ ತಮ್ಮನನ್ನು ಮುಂಬಯಿ ಕ್ರಾನಿಕಲ್ ಪತ್ರದ ಪೌಂಡಿಚೇರಿಯ ಸುದ್ದಿಗಾರನು ಭೆಟ್ಟಿಯಾಗಿ ಕೇಳಲು ಅರವಿಂದರವರು ಸದ್ಯಕ್ಕೆ ಬಂಗಾಲಕ್ಕೆ ಬರುವದಿಲ್ಲವೆಂಬವಾಗಿ ಹೇಳಿದರು. ಮಹಾತ್ಮಾಜಿಯವರು ಅರವಿಂದರವರಿಗೆ ಬಂಗಾಲಕ್ಕೆ ಬರುವದಕ್ಕೆ ತಾರು ಮಾಡಿಲ್ಲವಂತೆ. ಬಂಗಾಲದ ಮೂವರು ಸದ್ಗೃಹಸ್ಥರು ಮಾತ್ರ ತಂತಿಗಳ ಮೂಲಕ ಅರವಿಂದರವರಿಗೆ ಬಂಗಾಲಕ್ಕೆ ಕರೆಕಳಿಸಿಕೊಂಡಿರುವರು. ಆದರೆ ಸಂಪೂರ್ಣ ಬಂಗಾಲ ಪ್ರಾಂತವು ಒಮ್ಮನಸ್ಸಿನಿಂದ ಅವರಿಗೆ ಬರಲಿಕ್ಕೆ ಕೇಳಿಕೊಳ್ಳಲು ಅರವಿಂದರವರು ಜನರ ಆಗ್ರಹಕ್ಕೆ ಮನ್ನಣೆಯನ್ನು ಕೊಡಬಹುದೆಂದು ಹೇಳುವರು. ಗುಪ್ತಚರರು ಈಗ ಪಾಂಡಿಚೇರಿಯಲ್ಲಿಯ ಅರವಿಂದರವರ ಆಶ್ರಮದ ಸುತ್ತಲು ಹಗಲೆಲ್ಲ ತಿರುಗುತ್ತಿರುವರಂತೆ. ಇದರ ಕಾರಣವೇನೋ ತಿಳಿಯದು. ಇದರ ಮೇಲಿಂದ ಮುಂಬಯಿಯ "ಟಾಯಿಮ್ಸ್ ಆಫ ಇಂಡಿಯಾ" ಪತ್ರಿಕೆಯಲ್ಲಿ "ಪಾಂಡಿಚೇರಿಯ ಪೇಟ್ರಿಯಟ" ಎಂಬ ಶಿರೋಲೇಖದಲ್ಲಿ ಸೂಚಿಸಿದಂತೆ ಅರವಿಂದರವರನ್ನು ಹಿಡಿಯಲು ಸರಕಾರದವರ ಅಭಿಪ್ರಾಯ ವಿರಬಹುದೆಂಬ ಸಂಶಯವು ಬರುವದು. ಅರವಿಂದರವರು ಪಾಂಡಿಚೇರಿಗೆ ಹೋಗಿ ಈಗ ಹನ್ನೆರಡು ವರುಷಗಳಿಗಿಂತ ಹೆಚ್ಚಾಗಿ ಹೋದರೂ ಅವರು ತಮ್ಮ ಆಶ್ರಮದಲ್ಲಿ ಯೋಗಾಭ್ಯಾಸದಲ್ಲಿ ನಿರತರಾಗಿ ಆಧ್ಯಾತ್ಮಿಕ ಶಕ್ತಿಯನ್ನು ಬೆಳೆಸಲು ಪ್ರಯತ್ನಿಸುತ್ತಿರುವರಾದರೂ ರಾಜಕಾರಣದಲ್ಲಿ ಮನಃ ಸುಹಾಕಲು ಸಿದ್ಧವಿಲ್ಲದವರಾದರೂ ಅವರ ಮೇಲೆ ಸರಕಾರದ ಕೃಪಾಕಟಾಕ್ಷವು ಈ ಪರಿ! ಆಂಗ್ಲೋ ಇಂಡಿಯನ್ ವೃತ್ತಪತ್ರಗಳಲ್ಲಿ ಈಗಿನಿಂದಲೇ ಇಷ್ಟು ಬೊಬ್ಬೆ! ಅರವಿಂದರವರು ಒಂದು ವೇಳೆ ಬಂಗಾಲಕ್ಕೆ ಮರಳಿ ಬರಬೇಕೆಂದು ಮನಸ್ಸು ಮಾಡಿದ್ದರೆ ಸರಕಾರದವರು ಏನು ಮಾಡಿಯಾರು ಏನು ಮಾಡಲಿಕ್ಕಿಲ್ಲೆಂಬದನ್ನು ವಾಚಕರೇ ಊಹಿಸಲಿ! ಹೀಗಿರಲು ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಡುವದೇ ತಮ್ಮ ಅತಿ ಮುಖ್ಯ ಧ್ಯೇಯವಾಗಿರುವದೆಂದೂ, ಹಿಂದುಸ್ಥಾನವು ಇನ್ನೂ ಸ್ವರಾಜ್ಯವನ್ನು ನಡೆಸುವದಕ್ಕೆ ಸಮರ್ಥವಾಗಿರುವದಿಲ್ಲವಾದ್ದರಿಂದ ಅದಕ್ಕೆ ಯತ್ನಿಸುತ್ತಿರುವೆವೆಂದೂ ಬಣ ಹಮ್ಮೆಯನ್ನು ಬಡಿಯುತ್ತಿರುವ ಅಧಿಕಾರೀ ವರ್ಗವನ್ನು ನೋಡಿದರೆ ಪ್ರತಿಯೊಬ್ಬ ಭಾರತೀಯನಿಗೆ ನಗೆಬಾರದೆ ಇರದು. ಅರವಿಂದರವರಂಥ ತಪಸ್ವಿಗಳನ್ನು ಹೆತ್ತ ಹಿಂದೂ ಮಾತೆಯ ಉದ್ಧಾರ ಕಾಲವು ಸಮೀಪದಲ್ಲಿಯೇ ಬಂದಿರುವದೆಂಬುವದನ್ನು ಅಧಿಕಾರಿ ವರ್ಗವು ಲಕ್ಷ್ಯದಲ್ಲಿಡಲಿ!

ಈಗ ಹಿಂದೀಯರೆಲ್ಲ ಜಾಗ್ರತರಾಗ ಹತ್ತಿರುವರು. ಜಾಗ್ರತಿಯನ್ನು ಹೊಂದಿದ ರಾಷ್ಟ್ರದ ಸ್ವಾತಂತ್ರ್ಯವನ್ನು ತಡೆದು ಹಿಡಿಯಲು ಎಂಥ ಬಲಾಢ್ಯ ಸರಕಾರಕ್ಕೂ ಸಾಮರ್ಥ್ಯ ಸಾಲದೆಂಬ ತತ್ವವು ಇತಿಹಾಸದಿಂದ ಸಿದ್ಧವಾಗಿದೆ. ಈ ಸಂಗತಿಯು ನಮ್ಮ ಸರಕಾರದವರಿಗೆ ಗೊತ್ತಿಲ್ಲವೆಂತಲ್ಲ. ಆದರೂ ಕೈಯಲ್ಲಿ ಸಿಕ್ಕ ರಾಜ್ಯವನ್ನೂ ವ್ಯಾಪಾರವನ್ನೂ ಒಮ್ಮೆಲೇ ಬಿಟ್ಟು ಕೊಡುವದಕ್ಕೆ ಸಿದ್ಧವಾಗುವದು ಶಕ್ಯವಿಲ್ಲ. ಅರವಿಂದ ಯೋಗಿಗಳಂಥ ಸಾತ್ವಿಕರೂ, ಮಹಾತ್ಮಾಜಿಯವರಂಥ ಸಾಧುಗಳ ಉಗ್ರತಪಃ ಪ್ರಭಾವದಿಂದಲೇ ಸರಕಾರದಲ್ಲಿ ಸದ್ಬುದ್ಧಿಯು ನೆಲೆಸುವದರಲ್ಲಿ ಸಂದೇಹವಿಲ್ಲ? ಪರಮಾತ್ಮನು ಹಿಂದುಮಾತೆಗೆ ಇಂಥವರಿಂದ ಬೇಗನೆ ಸ್ವರಾಜ್ಯವನ್ನು ಸಂಪಾದಿಸಿ ಕೊಡಲಿ?

ದೇಶಬಂಧು ದಾಸರು ಸತ್ತಿಲ್ಲ.

ಕನ್ನಡಿಗರೇ ಏಳಿರಿ, ಯಶಸ್ಸನ್ನು ಪಡೆಯಿರಿ, ಜಾಗ್ರತಿಯಿಂದ ಹುರಿದುಂಬಿ ಹೋರಾಡಿರಿ. ಬಲವು ನಿಮ್ಮದೇ ಗೆಲುವಿನ ಬಲವು ನಿಮ್ಮ ಕಡೆಗೆ ದೇಶಭಕ್ತರಾದ ದಾಸರವರ ಆತ್ಮವು ತನ್ನ ಕಾರ್ಯವು ಕೈಗೂಡಲಿಲ್ಲವೆಂದು ತಳಮಳಿಸುವಂಥದಲ್ಲ. ತನ್ನ ಒಂದೇ ಒಂದು ಆತ್ಮದ ಬಲವು ಸಾಕಾಗದೆಂದು ಬಹುರೂಪತಾಳಿ ಪ್ರತಿಯೊಬ್ಬ ಹಿಂದುಮುಸಲ್ಮಾನರ ಹೃದಯದಲ್ಲಿ ಪ್ರವೇಶ ಮಾಡಿದೆ, ಅವರಿಂದಲೇ ತನ್ನ ಮಹತ್ಕಾರ್ಯಗಳನ್ನು ಮಾಡಿಸುವ ಪಣಮಾಡಿದೆ. ಎಂದೇ ಅವರ ಭಾವ ಚಿತ್ರವು ಪ್ರತಿಯೊಬ್ಬ ಹಿಂದು ಮುಸಲ್ಮಾನರ ಕಣ್ಣೆದುರಿಗೆ ಕಟ್ಟಿದೆ. ಸ್ವಾರ್ಥ ತ್ಯಾಗ ಮಾಡಿ ನನ್ನ ಮಹದಾಶೆಯ ಋಣಾ ತೀರಿಸಿರಿ ಎಂದು ಹೇಳುತ್ತಿದೆ. ಅವರ ಆತ್ಮವು ಅಮರವು ಅದಕ್ಕೆ ನಾಶವೆಲ್ಲಿದೆ? ನೀವು ಮುಂದರಿಯಿರಿ. ಅವರ ಆತ್ಮಜ್ಯೋತಿಯು ನಿಮಗೆ ದಾರಿಯನ್ನು ತೋರುವದು ಹಿಂಜರಿದರೆ ನಿಮ್ಮನ್ನು ಸುಟ್ಟು ಬೂದಿಮಾಡುವದು. ದುಃಖಪ್ರದರ್ಶನಮಾಡುವದು ದುಃಖಶಮನ ಮಾಡಿಕೊಳ್ಳಿರೆಂದು ಕುಟುಂಬದವರಿಗೆ ತಂತಿಯ ಕಳಿಸುವದು ಪಾಶ್ಚಿಮಾತ್ಯರ ಅನುಕರಣವು ಸಾಹಸ ಮಾಡಿ ಯಶಸ್ವಿಯಾಗುವದು ಆರ್ಯರ ಅನುಕರಣವು ಪಾಶ್ಚಿಮಾತ್ಯರ ಅನುಕರಣ ಮಾಡಲು ಹೋಗಿ ದೇಶಕ್ಕೆ ದೇಶವೇ ರಸಾತಳಕ್ಕೆ ಇಳಿಯುತ್ತಿರುವದನ್ನು ಮನಗಂಡು ಪುನಃ ಪುನಃ ಅವರನ್ನೇ ಹಿಂಬಾಲಿಸುವ ಹಿಂದು ಮುಸಲ್ಮಾನರನ್ನು ಕಂಡು ಒಮ್ಮೊಮ್ಮೆ ಅವರ ಮೂರ್ಖತನಕ್ಕೆ ನಗುವಂತೆಯೂ ಮತ್ತೊಮ್ಮೆ ಅವರ ದೈನ್ಯಾವಸ್ಥೆಗಾಗಿ ಅಳುವಂತೆ ಆಗುತ್ತದೆ. ಉಪಾಯವಿಲ್ಲ. ಬಹುದಿವಸಗಳಿಂದ ಬಂದ ಸಂಸರ್ಗ ದೋಷವು ಒಮ್ಮೆಗೇ ದೂರಾಗದು. ಊರಿಂದೂರಿಗೆ ತಂತಿಗಳನ್ನು ಕಳಿಸುವದರಿಂದ ಪೋಸ್ಟಖಾತೆಗೆ ದ್ರವ್ಯಲಾಭವು ನಮಗೆ ಧನಹಾನಿಯೂ ಅಲ್ಲದೆ ನಮಗೆ ಮತ್ತಾವ ವಿಧದ ಲಾಭವಾಗುವ ಆಶೆಯಿಲ್ಲ. ದಾಸರವರ ಸ್ಮರಣಾರ್ಥ ಕಟ್ಟಡಗಳನ್ನು ಕಟ್ಟಿಸುವದರಲ್ಲಿಯೂ ಅವರ ಶಿಲಾಪ್ರತಿಮೆಗಳನ್ನೂ ಮಾಡಿಸಿ ನಿಲ್ಲಿಸುವದರಲ್ಲಿಯೂ ಅರ್ಥವಿಲ್ಲ. ಕಟ್ಟಡಗಳಾಗಲಿ ಶಿಲಾಪ್ರತಿಮೆಗಳಾಗಲಿ ಒಂದಿಲ್ಲೊಂದು ದಿವಸ ಮಣ್ಣು ಪಾಲಾಗತಕ್ಕವುಗಳೇ! ಆಗಿನೆಯಲ್ಲ ದಾಸರವರಂಥ ಪ್ರತಿಮಾಸಂಪನ್ನರ ಸ್ಮಾರಕವು ಜನಮನಸ್ಸುಗಳಲ್ಲಿ ಅಚಲವಾಗಿರಲಿ ಜನಮನಸ್ಸುಗಳಲ್ಲಿ ಅವರ ಆತ್ಮದಂತೆ ಅಮರವಾಗಿಯೇ ಆನಂದದಿಂದ ನರ್ತನಮಾಡುತ್ತಿರಬೇಕು. ಮೇಲಾಗಿ ಅವರಿಗೆ ಬಾಹ್ಯಾಡಂಬರವು ಬೇಕಾಗಿರುವದಿಲ್ಲ. ಅವರು ನಿಜವಾದ ಸನ್ಯಾಸಿ ಗಳಾಗಿರುವರು. ಸಂಸಾರಿಕರಂತೆ ವೇಷವಷ್ಟೇ ಅವರದಿತ್ತು. ಮುಂಡ ಬೋಳಿಸಿಕೊಂಡು, ದಂಡ ಹಿಡಿದ ಸನ್ಯಾಸಿಗಳಲ್ಲಿ ದಾಸರಷ್ಟು ತ್ಯಾಗ ಬುದ್ಧಿಯು ಎಲ್ಲಿಂದ ಬಂದೀತು! ಸನ್ಯಾಸಿಯಾದರೆಂದರೆ ಸನ್ಯಾಸಿಸಂಸಾರವು ಮತ್ತಿಷ್ಟು ಹೆಚ್ಚುವದು ಅದರೊಡನೆ ದ್ರವ್ಯಲೋಭವೂ ಹೆಚ್ಚುವದು. ನಮ್ಮ ದಾಸರವರು ಸಂಸಾರಿ ಇದ್ದು ಸನ್ಯಾಸಿಯಾಗಲು ಬರುತ್ತದೆಂದು ಜಗತ್ತಿನ ನಿದರ್ಶನಕ್ಕೆ ತಂದು ಕೊಟ್ಟ ರಾಜಸನ್ಯಾಸಿಗಳು. ಕನ್ನಡಿಗರೇ, ನಿಮ್ಮ ಪ್ರೇಮವು ದಾಸರಮೇಲೆ ನಿಜವಾಗಿ ಇದ್ದರೆ, ಅವರ ಅಚಲ ದೇಶಾಭಿಮಾನದ ಮೇಲೆ ನಿಮ್ಮ ನಂಬುಗೆಯು ಇದ್ದರೆ, ಮೊದಲಿನಂತೆ ನಿಮ್ಮಿಯ ಕೋದುಂದುಭಿಯ ನಾದವು ಸ್ವರ್ಗ ಲೋಕದವರಿಗೆ ಕೇಳಬೇಕೆಂಬ ಉತ್ಕಟ ಇಚ್ಛೆ ಇದ್ದರೆ ದೇಶಕಾರ್ಯಕ್ಕೆ ಟೊಂಕ ಕಟ್ಟಿರಿ. ದಾಸರು ಅಂಥವರು ಇಂಥವರು ಅವರೆದುರಿಗೆದುರಾರಿಲ್ಲ ಎಂದು ಬಣ್ಣದ ಮಾತುಗಳನ್ನಾಡುವ ಗೋಜಿಗೆ ಹೋಗಬೇಡಿರಿ. ಈ ದೀನಾವಸ್ಥೆಯ ಕಾಲದಲ್ಲಿ ಮಾತು ಬೇಡ ಕೃತಿಯು ಬೇಕು.

---

೬ ನೇ ಪುಟದಿಂದ ಬಂದಿದ್ದು

ರವೆಂಬವೇನಾದರೂ ಇದರ ಬಾಡದಲ್ಲಿರ ಬಹುದೇನು ? ಇತ್ತ ಚೀನೀ ಸರಕಾರದವರಾದರೂ ಪರದೇಶದವರ ಈ ಕೃತ್ಯಗಳನ್ನು ಪ್ರಸಿದ್ಧರೀತಿಯಿಂದ ನಿಷೇಧಿಸಿದ್ದಲ್ಲದೆ ಅವರ ಬೆದರಿಕೆ ತಾವು ಸೊಪ್ಪು ಹಾಕುವದಿಲ್ಲೆಂದೂ ಸ್ವರಾಷ್ಟ್ರದ ಮಾನವನ್ನು ಸರ್ವ ರೀತಿಯಿಂದ ಕಾಯ್ದುಕೊಳ್ಳುವೆವೆಂದೂ ಪ್ರಸಿದ್ಧಿಸಿದ್ದಾರೆ.

ಒಟ್ಟಿನಮೇಲೆ ಪಾಶಿಫಿಕ ಮಹಾಸಾಗರವು ಭಾವೀ ಮಹಾಯುದ್ಧದ ರಂಗಭೂಮಿಯಾಗುದೆಂಬ ಭವಿಷ್ಯವು ಸುಳ್ಳಾಗಿ ನಿರರ್ಥಕವಾಗಿ ಆಗಬಹುದಾದ ರಕ್ತಪಾತವು ನಿಲ್ಲಲೆಂದು ಪರಮೇಶ್ವರನನ್ನು ಪ್ರಾರ್ಥಿಸಿ ಈ ಲೇಖವನ್ನು ಮುಗಿಸುತ್ತೇವೆ.

ಜಾಹೀರ ಬಿನ್ನಹ

ಬಳ್ಳಾರಿ ಜಿಲ್ಹೆಯು ಕನ್ನಡನಾಡಾಗಿರುತ್ತದೆ. ಜನಸಂಖ್ಯೆಯು ೯ ಲಕ್ಷ ಇದ್ದು ಅದರಲ್ಲಿ ೬ ಲಕ್ಷ ಜನರು ಕನ್ನಡಿಗರಿರುತ್ತಾರೆ. ಇದಕ್ಕೆ ಸರಕಾರದವರು ಪ್ರಸಿದ್ಧ ಮಾಡಿದ ಖಾನೇಸುಮಾರಿಯೇ ಸಾಕ್ಷಿಯು. ೧೯೨೦ ನೇ ಇಸವಿಯಲ್ಲಿ All India Congress Committee ಯವರು ಈ ಜಿಲ್ಹೆಯನ್ನು ಕನ್ನಡನಾಡಿನಲ್ಲಿ ಎಣಿಸಿ ಅದನ್ನು ಕರ್ನಾಟಕ ಪ್ರಾಂತಿಕ ಮಂಡಲದಲ್ಲಿ ಸಮಾವೇಶ ಮಾಡಿದರು. ಇದಕ್ಕೆ ಆಂಧ್ರರು ಅಸಂತುಷ್ಟರಾಗಿ ತಕರಾರ ಮಾಡಿದರು. ಆಮೇಲೆ ಈ ಪ್ರಶ್ನೆಯು ನಿರ್ಣಯಕ್ಕೋಸ್ಕರವಾಗಿ ಪಂಚರಿಗೆ ಒಪ್ಪಿಸಲ್ಪಟ್ಟಿತು. ಪಂಚರಲ್ಲಿ ಇಬ್ಬರು ತೆಲಗರಾಗಿದ್ದರು; ಇಬ್ಬರು ಕನ್ನಡಿಗರಾಗಿದ್ದರು. ಪುಣೆಯ ಶ್ರೀ ನರಸಿಂಗರಾವ ಕೇಳಕರವರು ಸರಪಂಚರಾಗಿದ್ದರು. ಈ ಪ್ರಕಾರ ನಿರ್ಮಿತವಾದ ಕೋರ್ಟ ಮೂರು ದಿವಸಗಳವರೆಗೆ ೧೯೨೧ ನೇ ಇಸವಿಯಲ್ಲಿ ಬಳ್ಳಾರಿಯಲ್ಲಿ ಈ ಮಾತಿನ ವಿಚಾರ ಮಾಡಿತು. ಉಭಯ ಪಕ್ಷದಿಂದ ಸರಕಾರಿ ಅಧಿಕಾರಸ್ಥರ, ಬಿನ್ನಸರಕಾರಿ ದೊಡ್ಡ ಮನುಷ್ಯರ ಸಾಕ್ಷಿಗಳಾದವು. ಪುರಾವೆಯ ಬಗ್ಗೆ ಖಾನೇಸುಮಾರಿ ಉತಾರಗಳೂ ಗ್ಯಾಝೆಟಿಯರ ಉತಾರಗಳೂ ಹಾಜರ ಮಾಡಲ್ಪಟ್ಟವು. ಪಂಚರು ಈ ಜಿಲ್ಹೆಯಲ್ಲಿಯ ಐದು ತಾಲೂಕಗಳು (ಬಳ್ಳಾರಿ ತಾಲೂಕ ಪಟ್ಟಣ ಸಹಿತ) ಕನ್ನಡ ನಾಡೆಂದೂ, ಆದವಾನಿ, ರಾಯದುರ್ಗ, ಆಲೂರ ಈ ಮೂರು ತಾಲೂಕಗಳು ಆಂಧ್ರದೇಶಕ್ಕೆ ಸೇರಿರುತ್ತವೆಂದು ತೀರ್ಮಾನ ಕೊಟ್ಟರು. ಅದೇ ವರುಷ ದಿಲ್ಲಿಯಲ್ಲಿ ನೆರೆದ ರಾಷ್ಟ್ರೀಯ ಸಭೆಯ ಕಮಿಟಿಯಲ್ಲಿ ಈ ತೀರ್ಮಾನವು ಸ್ಥಿರಪಡಿಸಲ್ಪಟ್ಟಿತು. ಆದುದರಿಂದ ಈ ಐದು ವರುಷ ಬಳ್ಳಾರಿಯು ಡಿಸ್ಟ್ರಿಕ್ಟ ಕಾಂಗ್ರೆಸ ಮಂಡಲಕ್ಕೆ ಒಳಪಟ್ಟು ತನ್ನ ಕಾರ್ಯವನ್ನು ಮಾಡುತ್ತಲಿದೆ.

ಇನ್ನು ಸ್ವಲ್ಪ ದಿವಸಗಳಲ್ಲಿಯೇ ಆಂಧ್ರ ವಿಶ್ವವಿದ್ಯಾಲಯವು ಸ್ಥಾಪಿಸಲ್ಪಡತಕ್ಕದ್ದದೆ. ಮುಂದಿನ ಆಗಸ್ಟ ತಿಂಗಳಲ್ಲಿ ಮದ್ರಾಸ ಕಾಯದೆ ವಿಧಾಯಕ ಮಂಡಲದಲ್ಲಿ ಈ ಬಗ್ಗೆ ಒಂದು ಬಿಲ್ಲು ಚರ್ಚೆಗಾಗಿ ಇಡಲ್ಪಡುವದು. ಸದ್ಯಕ್ಕೆ ಆಂಧ್ರದೇಶದಲ್ಲಿ ನಾಲ್ಕು ಸ್ಥಳಗಳು ವಿಶ್ವವಿದ್ಯಾಲಯದ ಮಧ್ಯವರ್ತಿ ಸ್ಥಳಗಳಾಗಿ ಮಾಡಲ್ಪಡುವವು. ಇವುಗಳಲ್ಲಿ ಈಗ ಕಾಲೇಜುಗಳು ಇದ್ದೇ ಇದ್ದು ಅವುಗಳು ಸದ್ಯಕ್ಕೆ ಆಂಧ್ರವಿಶ್ವವಿದ್ಯಾಲಯಕ್ಕೆ ಅಧೀನವಾಗಿರಬೇಕು; ಕಾಲಾಂತರದಲ್ಲಿ ಇವುಗಳೇ ಪೂರ್ಣವಾಗಿ ಸ್ವತಂತ್ರ ಯುನಿವ್ಹರ್ಸಿಟಿಗಳಾಗುವಂತೆ ಮಾಡಿ ನಿರ್ದಿಷ್ಟವಾದ ಬಿಲ್ಲಿನಲ್ಲಿ ವ್ಯವಸ್ಥೆ ಮಾಡಿರುತ್ತದೆಂದು ಈ ಯುನಿವ್ಹರ್ಸಿಟಿಯ ಕುರಿತು ಸ್ಪೆಶಲ್ ಅಧಿಕಾರಿಗಳಾದ Mr. Statham ಸಾಹೇಬರು ತಮ್ಮ ವ್ಯಾಖ್ಯಾನಗಳಲ್ಲಿ ಹೇಳಿರುತ್ತಾರೆ.

ಸದ್ಯಕ್ಕೆ ಬಳ್ಳಾರಿಯಲ್ಲಿ ಕಾಲೇಜ ಇಲ್ಲ. ಆದರೆ ನೆರೆಯ ಜಿಲ್ಹೆಯಾದ ಅನಂತಪುರದಲ್ಲಿ ಒಂದು ಕಾಲೇಜ ಇರುತ್ತದೆ. ಅದನ್ನೇ ಬಳ್ಳಾರಿಗೆ ತಂದು ಬಳ್ಳಾರಿಯನ್ನೇ ಆಂಧ್ರ ವಿಶ್ವವಿದ್ಯಾಲಯದ ಒಂದು ಮಧ್ಯವರ್ತಿ ಸ್ಥಳವಾಗಿ ಮಾಡಬೇಕೆಂದು ಬಳ್ಳಾರಿಯ ಕೆಲವು ಆಂಧ್ರಭಾಷಾಭಿಮಾನಿಗಳು ದೀರ್ಘ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಮೊನ್ನೆ ೨ ನೇಯ ತಾರೀಖಿನ ದಿವಸ ಬಳ್ಳಾರಿಯಲ್ಲಿ ಒಂದು ಸಭೆಯನ್ನು ನೆರೆಯಿಸಿ ಅದರಲ್ಲಿ ಅವರು ಬಳ್ಳಾರಿಯು ಆಂಧ್ರವಿಶ್ವವಿದ್ಯಾಲಯದ ಮಧ್ಯವರ್ತಿ ಸ್ಥಾನವಾಗುವದು ಅವಶ್ಯ ಇರುತ್ತದೆಂದು, ಹ್ಯಾಗೋ ಬಹುಮತದಿಂದ ಒಂದು ಠರಾವನ್ನು ಮಂಜೂರ ಮಾಡಿ ಕೊಂಡರು. ಈ ಠರಾವಿಗೆ ವಿಚಾರ ಬೆಂಬಲವಿಲ್ಲೆಂದೂ, ಇದು ಪೊಳ್ಳಾದ ಠರಾವೆಂದೂ ಸಾಂಗಲಿಕ್ಕೆ ಬಳ್ಳಾರಿಯಲ್ಲಿಯ ಕನ್ನಡಿಗರು ಮತ್ತೊಂದು ಸಭೆಯನ್ನು ನೆರೆಯಿಸತಕ್ಕವರಿದ್ದಾರೆ. ಬಳ್ಳಾರಿಯ ಆಂಧ್ರರ ಈ ಮನೋರಥವು ಕನ್ನಡಿಗರ ದುರ್ದೈವದಿಂದ ಕೈಗೂಡಿದರೆ, ಸಂಪೂರ್ಣ ಬಳ್ಳಾರಿ ಜಿಲ್ಹೆಯು ತೆಲಗನಾಡಾಗಿ ಹೋಗುವದು. ಮತ್ತು ಈಗ ಹಂಚಾಗಿರುವ ಕರ್ನಾಟಕದ ಭಾಗಗಳನ್ನೆಲ್ಲ ಒಟ್ಟುಗೂಡಿಸಿ ಒಂದು ಮಹಾ ಕರ್ನಾಟಕ ರಾಷ್ಟ್ರವನ್ನು ನಿರ್ಮಾಣಮಾಡುವ ನಮ್ಮ ಸಂಕಲ್ಪವು ಅಡಗಿ ಹೋಗುವದು.

ಸದ್ಯಕ್ಕೆಯೇ ಬ್ರಿಟಿಶ ಕರ್ನಾಟಕವು ಬಹು ಚಿಕ್ಕ ಪ್ರದೇಶವಿರುತ್ತದೆ. ಮುಂಬಯಿ ಇಲಾಖೆಯಲ್ಲಿ ನಾಲ್ಕು ಜಿಲ್ಹೆಗಳಿರುತ್ತವೆ. ಮದ್ರಾಸ ಇಲಾಖೆಯಲ್ಲಿ ಎರಡು ಜಿಲ್ಹೆಗಳಿರುತ್ತವೆ. ಇವೆರಡರಲ್ಲಿ ಬಳ್ಳಾರಿಯು ಒಂದಾಗಿರುತ್ತದೆ. ಪುಣೆಯ ಮರಾಟಿಗರು ಬೆಳಗಾಂವಿ ಜಿಲ್ಹೆಯನ್ನು ಮಹಾರಾಷ್ಟ್ರ ವಿಶ್ವವಿದ್ಯಾಲಯಕ್ಕೆ ಅಧೀನ ಮಾಡಬೇಕೆಂಬ ಯೋಚನೆಯಲ್ಲಿರುವರು. ಈ ಪ್ರಕಾರ ನಮಗೆ ದುಷ್ಟ ಸ್ವಪ್ನಗಳು ಬೀಳ ಹತ್ತಿವೆ. ಬಳ್ಳಾರಿಯು ನಮ್ಮ ಕೈಬಿಟ್ಟರಂತೂ, ನಮ್ಮ ಸಂಕಲ್ಪಿತ ಸ್ವತಂತ್ರವಾದ ಏಕೀಕೃತವಾದ ಕರ್ನಾಟಕವು ಜನರ ಬಲದಿಂದಲೂ, ಹಣದ ಬಲದಿಂದಲೂ, ಹೀನವಾಗಿ, ನಮ್ಮ ಆಕಾಂಕ್ಷೆಯು ನೆರವೇರಲಿಕ್ಕೆ ಈಗಿದ್ದ ತೊಡಕುಗಳಿಗೆ ಹೊರತಾಗಿ ಮತ್ತೊಂದು ತೊಡಕು ತಲೆದೋರುವದು. ಆದುದರಿಂದ ಕರ್ನಾಟಕದ ಎಲ್ಲ ಭಾಗಗಳಲ್ಲಿ ಜನರು ಎಚ್ಚತ್ತು ಚಳವಳಿಯನ್ನು ಮಾಡಿ ಬಳ್ಳಾರಿಯ ನಮ್ಮ ಕನ್ನಡ ಬಂಧುಗಳಿಗೆ ಜಂಜಡವಾಗಿ, ಭೀತಿಯನ್ನುಂಟುಮಾಡಿದ ಈ ಸಂಕಟವನ್ನು ಪರಿಹಾರ ಮಾಡಿಕೊಳ್ಳಬೇಕು.

ರಾಘವೇಂದ್ರರಾವ ಕಡಪಾ.

ನಾರಾಯಣರಾವ ದೇಶಪಾಂಡೆ

ಹಳ್ಳಿಗಳಲ್ಲಿಯ ಸಂಚಾರ

ದೇ. ಭ. ಮಂಜಪ್ಪನವರು, ವರ್ತಕರ, ಹನುಮಂತರಾವ ಕೌಜಲಗಿ ಮತ್ತು ನಾನು ಕೂಡಿ ಕಲಾದಗಿಯ ಹತ್ತರದ ಹಳ್ಳಿಗಳನ್ನು ಸಂದರ್ಶಿಸಲು ಹೋಗಿದ್ದೆವಷ್ಟೇ. ಆ ಹಳ್ಳಿಗಳಲ್ಲಿ ತಿರುಗಾಡುವದರಿಂದ ನಮಗೆ ಬಂದ ಅನುಭವಗಳನ್ನು ಕನ್ನಡಿಗನ ವಾಚಕರ ಮುಂದೆ ಇಟ್ಟು ಅವರು ಕೂಡಾ ಆ ಹಳ್ಳಿಗಳ ಜನರ ಅನುಕರಣವನ್ನು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ನಾವೆಲ್ಲರೂ ಬಾಗಲಕೋಟೆಯಿಂದ ಮಂಗಳವಾರ ಮಧ್ಯಾಹ್ನಕ್ಕೆ ಹೊರಟು ತುಳಸೀಗೇರಿಗೆ ಹೋದೆವು. ತುಳಸೀಗೇರಿಯಲ್ಲಿ ಸಂಜೆಯಮುಂದೆ ದೇ. ಭ. ಮಂಜಪ್ಪಣ್ಣನವರ ವ್ಯಾಖ್ಯಾನವಾಯಿತು. ಹಳ್ಳಿಯ ಜನರೆಲ್ಲ ಕೂಡಿದ್ದರು. ಮಂಜಪ್ಪಣ್ಣನವರು ಹಳ್ಳಿಯವರಲ್ಲಿ ನೆಲೆಗೊಳ್ಳಹತ್ತಿರುವ ಚಹಾಪಾನದ ಚಟವನ್ನೂ ಬಹಳ ವರ್ಷಗಳಿಂದ ಬೇರೂರಿದ ತಂಬಾಕದ ಚಟವನ್ನೂ ಬಿಟ್ಟು ಕೊಡುವದಕ್ಕೆ ಅವರಿಗೆ ಉಪದೇಶಮಾಡಿದರು. ಈ ಎರಡು ಚಟಗಳಿಂದ ನಮಗಾಗುವ ಅರ್ಥಹಾನಿ, ಪ್ರಾಣಹಾನಿಯನ್ನು ಮನಗಾಣುವಂತೆ ಹೇಳಿದರು.

ಆ ಮೇಲೆ ಖಾದಿಯನ್ನು ಧರಿಸುವದರಿಂದ ಆಗುವ ಲಾಭಗಳನ್ನು ತಿಳಿಸಿ ಹೇಳಿದರು. ಮರುದಿವಸ ಮುಂಜಾನೆ ನೂಲುವ ಶರ್ಯತ್ತನ್ನು ಇಟ್ಟಿತು. ಹತ್ತು ರಾಟಿಗಳು ಕೂಡಿದ್ದವು. ಒಂದು ತಾಸಿನಲ್ಲಿ ೩೭೮ ಗಜ ೧೫ ನಂಬರಿನ ನೂಲನ್ನು ಒಬ್ಬ ಹೆಣ್ಣುಮಗಳು ತೆಗೆದಳು. ಮಂಜಪ್ಪಣ್ಣನವರ ವ್ಯಾಖ್ಯಾನದಿಂದ ಇನ್ನು ಮುಂದೆ ಆ ಹಳ್ಳಿಯಲ್ಲಿ ಹೆಚ್ಚು ರಾಟಿಗಳು ಪ್ರಾರಂಭವಾಗುವ ಲಕ್ಷಣಗಳಿವೆ. ಕೆಲವು ಜನರು ತಮ್ಮ ಅಂಗಿಗಳನ್ನು ಅಲ್ಲಿಯ ದಾಸರವರಿಂದ ನೇಯಿಸಿದ ಖಾದಿಯಿಂದಲೇ ತಯಾರಿಸುತ್ತಿರುವರು. ಉಟ್ಟುಕೊಳ್ಳುವ ಧೋತರವನ್ನು ನೇಯಿಸಿ ಕೊಳ್ಳುವದಕ್ಕೆ ದಾಸರವರಲ್ಲಿ ತಕ್ಕ ಹಣಿಗೆಗಳು ಇಲ್ಲದ್ದರಿಂದ ತೊಂದರೆಯಾಗಿದೆ. ಅವರಿಗೆ ಆ ಸಾಧನಗಳನ್ನು ಪೂರೈಸುವ ವ್ಯವಸ್ಥೆಯನ್ನು ಮಾಡಿದೆ. ಸ್ವಲ್ಪ ದಿವಸಗಳಲ್ಲಿ ಧೋತರಗಳಾದರೂ ಅಲ್ಲಿಯೇ ಹುಟ್ಟುವ ಸಂಭವವಿದೆ. ಜನರಲ್ಲಿ ಉತ್ಸಾಹವು ತೋರುತ್ತಿದೆ.

ತುಳಸಿಗೇರಿಯಿಂದ ಬುಧವಾರ ಮಧ್ಯಾಹ್ನಕ್ಕೆ ಹೊರಟು ನಾವು ಬಿಷ್ಟಿಹೊಣಿಗೆ ಹೋದೆವು. ಈ ಹಳ್ಳಿಯವರಿಗೆ ಖಾದಿಯ ಚಳವಳಿಯಿಂದ ಬಹಳ ಲಾಭವಾಗಿರುವದು. ಇಲ್ಲಿಯವರು ಸುಮಾರು ೫೦೦೦ ರೂ|| ಗಳ ಬೆಲೆಯ ನೂಲನ್ನು ಒಂದು ವರ್ಷದಲ್ಲಿ ಮಾಡಿರುವರು. ಇಲ್ಲಿಯ ಜನಸಂಖ್ಯೆಯು ಸುಮಾರು ೧೩೦೦. ಇದರಿಂದ ವರ್ಷಕ್ಕೆ ಪ್ರತಿಯೊಬ್ಬನಿಗೆ ೪ ರೂ. ಗಳಿಗಿಂತ ಹೆಚ್ಚು ಉತ್ಪನ್ನವು ಬೆಳೆಯಿತು. ಖಾದಿಯ ಚಳವಳಿಯು ಇಲ್ಲವಿದ್ದರೆ ಇವರಿಗೆ ಈ ಉತ್ಪನ್ನವು ದೊರೆಯುತ್ತಿರಲಿಲ್ಲ. ವ್ಯರ್ಥವಾಗಿ ಕಳೆಯುವ ವೇಳೆಯನ್ನು ಉಪಯೋಗಿಸುವದರಿಂದ ಈ ಲಾಭವು ಅವರಿಗಾಗಿರುವದು. ಈಗ ನಾಲ್ಕು ವರ್ಷಗಳಿಂದ ನಾಕಷ್ಟು ಮಳೆಯಿಲ್ಲವಿದ್ದು ೭೫ ಸರಕಾರದ ತೆರಿಗೆಯನ್ನು ಕೊಡಲಿಕ್ಕೆ ಇಲ್ಲಿಯ ಜನರಿಗೆ ಈ ನೂಲಿನ ಉದ್ಯೋಗದಿಂದ ಸಾಮರ್ಥ್ಯವು ಬಂದಿದೆ. ಆದ್ದರಿಂದಲೇ ಮಹಾತ್ಮಾಜಿಯವರು ರಾಟಿಯು ಬರಗಾಲಕ್ಕೆ ನಿವಾರಣೋಪಾಯವು ಎಂದು ಹೇಳುವದಿಲ್ಲವೇ! ಈ ಊರಲ್ಲಿ ಸುಮಾರು ೧೫೦ ರಾಟಿಗಳು ನಡೆಯುತ್ತಿರುವವು. ಇಲ್ಲಿಯವರಾದರೂ ಅಂಗಿಗಳನ್ನು ತಮ್ಮಲ್ಲಿಯೇ ನೇಯಿಸಿದ ಖಾದಿಯಿಂದ ಮಾಡಿಸಿಕೊಳ್ಳುತ್ತಿರುವರು. ಆದರೆ ನೇಕಾರರ ತೊಂದರೆಯು ಇಲ್ಲಿಯೂ ಇರುವದು. ಒಬ್ಬ ಉತ್ತಮ ನೇಕಾರರನ್ನು ತಂದು ಕೊಟ್ಟರೆ ಅವನಿಗೆ ಇರಲಿಕ್ಕೆ ಮನೆಯನ್ನು ಕೊಡುವದಲ್ಲದೆ ಎಲ್ಲ ತರದ ಸಹಾಯವನ್ನು ಮಾಡಲು ಸಿದ್ಧರಿರುವರು. ಅದೇ ದಿವಸ ಸಾಯಂಕಾಲಕ್ಕೆ ಎಲ್ಲರೂ ಕಲಾದಗಿಗೆ ಬಂದೆವು. ಗುರುವಾರ ಕಲಾದಗಿಯ ಸಂತೆಯಾದ್ದರಿಂದ ಬೇರೆ ಬೇರೆ ಹಳ್ಳಿಯ ಜನರು ನೂಲನ್ನು ಮಾರಲಿಕ್ಕೆ ಬಂದಿದ್ದರು. ಅವರಿಗೆಲ್ಲ ನೂಲನ್ನು ಮಾರುವದರ ಬದಲು ತಮಗೆ ಬೇಕಾಗುವ ಬಟ್ಟೆಗಳಿಗೆ ಸಾಲುವಷ್ಟು ನೂಲನ್ನು ಇಟ್ಟುಕೊಳ್ಳಬೇಕೆಂಬುದಾಗಿ ಮಂಜಪ್ಪಣ್ಣನವರು ಹೇಳಿದರು. ಕಲಾದಗಿಯಲ್ಲಿಯ ಖಾದೀ ಮಗ್ಗಗಳನ್ನು ನೋಡಿ ಮಂಜಪ್ಪಣ್ಣನವರಿಗೆ ಆನಂದವಾಯಿತು. ಅಲ್ಲಿ ಇಲಕಲ್ಲ ಸೀರೆಗಳಿಗೆ ಸರಿಗಟ್ಟುವ ಖಾದಿಯ ಸೀರೆಗಳು ತಯಾರಾಗುತ್ತಿರುವವು. ಈ ಕಾರ್ಯದಲ್ಲಿ ಶ್ರೀ. ಸಂಗನಬಸಪ್ಪಾ ಮೆರಕಲ್ಲ ಇವರು ಸಂಪೂರ್ಣವಾಗಿ ಮನಸ್ಸು ಹಾಕಿರುವರು. ಸಾಯಂಕಾಲಕ್ಕೆ ಮಂಜಪ್ಪಣ್ಣನವರ ವ್ಯಾಖ್ಯಾನವಾಯಿತು. ದೇ. ಭ. ಕರ್ನಾಟದ ಸದಾಶಿವರಾಯರು ಕಲಾದಗಿಗೆ ಬರುವರೆಂಬುದಾಗಿ ತಂತಿಯು ಬಂದದ್ದರಿಂದ ನಾನು ಅವರನ್ನು ಕರೆದು ಕೊಂಡು ಬರುವದಕ್ಕಾಗಿ ಗುರುವಾರ ದಿವಸವೇ ಬಾಗಲಕೋಟೆಗೆ ಬಂದೆನು. ಅವರು ಸಂಜೆಗೆ ವಿಜಾಪುರದಿಂದ ಬಾಗಲಕೋಟೆಗೆ ಬಂದರು. ಶುಕ್ರವಾರ ದಿವಸ ನಾವಿಬ್ಬರೂ ಕಲಾದಗಿಗೆ ಹೋದೆವು. ಅವರಾದರೂ ಅಲ್ಲಿಯ ಖಾದೀ ಮಗ್ಗಗಳನ್ನು ನೋಡಿ ಸಂತುಷ್ಟರಾದರು. ಬಿಷ್ಟಿಹೊಣಿಯನ್ನು ನೋಡಬೇಕೆಂಬ ಕುತೂಹಲವು ಸದಾಶಿವರಾಯರಿಗೆ ಆದ್ದರಿಂದ ಪುನಃ ಬಿಷ್ಟಿಹೊಣಿಗೆ ಹೋದೆವು. ಅರ್ಧತಾಸಿನವರೆಗೆ ನೂಲುವ ಶರ್ಯತ್ತನ್ನು ಇಟ್ಟೆವು. ೩೧ ರಾಟಿಗಳು ಕೂಡಿದ್ದವು. ರಾಟಿಗಳ ನೋಟವನ್ನು ನೋಡಿ, ಸದಾಶಿವರಾಯರೂ ಮಂಜಪ್ಪಣ್ಣನವರೂ ಬಹು ಹರ್ಷಪಟ್ಟರು. ಇಲ್ಲಿಯ ಪ್ರಮಾಣವು ಒಂದು ತಾಸಿಗೆ ೪೪೭ ಗಜ ನೂಲಿನಂತೆ ಬಿದ್ದಿತು. ಸದಾಶಿವರಾಯರು ಶನಿವಾರ ದಿವಸ ಬೆಳಿಗ್ಗೆ ಬಾಗಲಕೋಟೆಗೆ ಮರಳಿ ಹೋದರು. ನಾವು ಬಂಟನೂರಿಗೆ ಹೋದೆವು. ಬಂಟನೂರಿನಲ್ಲಿ ಧರ್ಮಶಾಲೆಯಲ್ಲಿ ಕುಳಿತು ಒಂದು ರಾಟಿಯನ್ನು ತರಿಸಿ ನಾವೆಲ್ಲರೂ ನೂಲ ಹತ್ತಲು ಊರವರೆಲ್ಲ ನೋಡಿ ಕುತೂಹಲಪಟ್ಟರು. ಇದರಿಂದ ಅವರ ಮೇಲೆ ಬಹಳ ಪರಿಣಾಮವಾಗಿರುವದು. ಎಷ್ಟೋ ಹೆಣ್ಣುಮಕ್ಕಳು ನೂಲುವದಕ್ಕೆ ಪ್ರಾರಂಭಿಸಬೇಕೆಂದು ತಮ್ಮ ತಮ್ಮೊಳಗೆ ಮಾತಾಡುತ್ತ ಹೋದರು. ಇಲ್ಲಿ ಈಗ ಸುಮಾರು ೧೫ ರಾಟಿಗಳು ನಡೆದಿರುವವು. ಕಗಲಗೊಂಬ ಹಣಮವ್ವಾ ಎಂಬ ಒಬ್ಬ ಹೆಣ್ಣುಮಗಳು ತಾನೇ ಹಂಜಿಯನ್ನು ತಯಾರಿಸಿಕೊಂಡು ಐದು ತೊಲೆಯಲ್ಲಿ ಒಂದು ಶೇರು ಮಾಡಿರುವಳು. ಸುಮಾರು ೪೦-೪೫ ನಂಬರಿನ ನೂಲಾಗಬಹುದು. ಇನ್ನು ಮುಂದೆ ಇದಕ್ಕೂ ಹೆಚ್ಚು ಜನರು ನೂಲಬಹುದು. ಇಲ್ಲಿಯವರಾದರೂ ಕೆಲವು ಜನರು ತಮ್ಮ ಬಟ್ಟೆಗಳನ್ನು ಅಲ್ಲಿಯೇ ಸಮೀಪದಲ್ಲಿರುವ ಒದ್ದನೂರಿನಲ್ಲಿ ನೇಯಿಸಿಕೊಳ್ಳುತ್ತಿರುವರು. ತಿರುಗಿ ನಾವು ಸಂಜೆಗೆ ಕಲಾದಗಿಗೆ ಮರಳಿ ಬಂದೆವು. ಕಲಾದಗಿಯಲ್ಲಿ ಒಂದು ವೀರಶೈವ ತರುಣ ಸಂಘವನ್ನು ಮಂಜಪ್ಪಣ್ಣನವರು ಪ್ರಾರಂಭಿಸಿದರು. ಆ ಬಗ್ಗೆ ಒಂದು ವಾಚನಾಲಯವನ್ನು ಪ್ರಾರಂಭಿಸುವದಕ್ಕೆ ಮಂಜಪ್ಪಣ್ಣನವರು ಇವತ್ತಿನ ದಿವಸವೇ ಕಲಾದಗಿಗೆ ಹೋಗುವವರಿರುವರು.

ಈ ಸಂಗತಿಯನ್ನು ಬರೆಯುವಾಗ ಹಳ್ಳಿಯವರು ನಮಗೆ ಮಾಡಿದ ಆದರ ಗೌರವಗಳನ್ನು ಬೇಕಂತಲೇ ಬಿಟ್ಟುಕೊಟ್ಟಿರುವೆನು. ಅವರು ತೋರಿಸಿದ ಉತ್ಸಾಹವನ್ನು ಕಂಡು ಪಟ್ಟಣಗಳಲ್ಲಿರುವಾಗ ನಮಗಾಗುವ ನಿರುತ್ಸಾಹವೆಲ್ಲ ದೂರಾಯಿತು. ವ್ಯಾಖ್ಯಾನಗಳಿಗಿಂತ ಕಾರ್ಯ ಮಾಡುವದು ಮಹತ್ವವಾಗಿರುವದೆಂಬ ತತ್ವವನ್ನು ಈ ಹಳ್ಳಿಯ ಜನರು ಆಚರಣೆಯಲ್ಲಿ ತರುತ್ತಿರುವರು. ಇದರಿಂದ ಖಾದಿಯ ಚಳವಳಿಯು ಲಾಭದಾಯಕವಾಗಿರುವದೋ ಇಲ್ಲವೋ ಎಂಬುದನ್ನು ವಾಚಕರೇ ಊಹಿಸಲಿ. ಎಲ್ಲ ಹಳ್ಳಿಗಳಲ್ಲಿಯ ಜನರು ಈ ಕಾರ್ಯವನ್ನು ಕೈಕೊಂಡರೆ ಸ್ವಲ್ಪೇ ಅವಧಿಯಲ್ಲಿ ಖಾದಿಯ ಪ್ರಸಾರವು ಸಾರ್ವತ್ರಿಕವಾಗುವದರಲ್ಲಿ ಸಂದೇಹವಿಲ್ಲ.

ತಾ|| ೧೪-೭-೨೫ ತ. ಬಿ. ಪುರೋಹಿತ

ಚಿನವ ಪರಿಚಯ

ಭಾರತೀಯರಾದ ನಮಗೆ ಚಿನೀ ಜನರು ಚಿರಪರಿಚಯಸ್ಥರು. ಅವರ ಸುಸ್ಕೃತಿಯಾದರೂ ಬಹು ಪುರಾತನ ಕಾಲದ್ದು; ಅಂದರೆ, ಕ್ರಿಸ್ತಶಕದ ಹಿಂದೆ ಎಷ್ಟೋ ಶತಮಾನಗಳ ಪೂರ್ವದಲ್ಲಿ ಅವರ ಸುಧಾರಣೆಯು ಅತ್ಯುತ್ತಮ ಸ್ಥಿತಿಯಲ್ಲಿದ್ದಿತು. ಆಗಿನ ಕಾಲದಲ್ಲಿ ಸಹ ಅವರ ಉದ್ಯೋಗ, ವ್ಯವಸಾಯ, ಕಲಾಕೌಶಲ್ಯಾದಿಗಳು ಬಹಳ ಉಚ್ಚತರ ಸ್ಥಿತಿಯಲ್ಲಿದ್ದವೆಂದು ಇತಿಹಾಸಜ್ಞರು ಹೇಳುತ್ತಾರೆ. ಅವರಲ್ಲಿ ವಿಶೇಷವಾಗಿ ಅತ್ಯುತ್ತಮವಾದ ರೇಶಿಮೆ ವಸ್ತ್ರಗಳು ಚೀನದಲ್ಲಿಯೇ ಸಿದ್ಧವಾಗುತ್ತಿದ್ದವು. ಅದುದರಿಂದಲೇ ಗೀರ್ವಾಣಭಾಷಾ ಕೋವಿದರಾದ ಕಾಳಿದಾಸಾದಿಕ ವಿದ್ವಚ್ಛ್ರೇಷ್ಠರು ರೇಶಿಮೆ ಪರಿಧಾನಗಳಿಗೆ "ಚೀನಾಂಶುಕ" "ಚೀನಾಂಬರ" ಇತ್ಯಾದಿ ವಿಶೇಷಣಗಳನ್ನು ಇಟ್ಟಿರುವರೆಂದು ತೋರುತ್ತದೆ. ಭಾರತೀಯರಿಗೆ

ಅವರ ನಿಕಟ ಪರಿಚಯವಾಗಲಿಕ್ಕೆ ಧರ್ಮವು ಮತ್ತೊಂದು ಕಾರಣವು. ಚೀನ ದೇಶದಲ್ಲಿ ಬಹುತರ ಜನರು ಬೌದ್ಧಧರ್ಮಿಗಳು. ಹಿಂದುಸ್ಥಾನದಲ್ಲಿಯೇ ಹುಟ್ಟಿ ಬೆಳೆದು, ಅಳಿದು ಹೋದ ಆಧರ್ಮವು ಚೀನದೇಶದಲ್ಲಿ ಇನ್ನೂ ವರೆಗೆ ಪರಿಪಾಲಿಸಲ್ಪಡುತ್ತದೆಂಬುದು ಭಾರತೀಯರಿಗೆ ಅಭಿಮಾನಾಸ್ಪದವಾದ ಮಾತಾಗಿರುತ್ತದೆಂದು ಹೇಳಬಹುದು. ಆದುದರಿಂದ ಚೀನ ದೇಶದಲ್ಲಿರುವ ಈಗಿನ ಚಿಂತಾಜನಕ ಪರಿಸ್ಥಿತಿ ಸಲುವಾಗಿಯೂ, ನಮ್ಮಂತೆ ಅವರೂ 'ಏಸಿಯಾಟಿಕ್'ರಾಗಿರುವ ಕಾರಣ ಗೌರಕಾಯದವರಿಗಿರುವ ಹಲಕೆಲವು ಹಕ್ಕುಗಳನ್ನು ಉಪಭೋಗಿಸಲಿಕ್ಕೆ ಅಯೋಗ್ಯರೆಂದು ನಿರ್ಣಯಿಸಲ್ಪಟ್ಟಿರುವದರಿಂದಲೂ, ನಮ್ಮ ದುಃಖಿಗಳಾದ ಅವರನ್ನು ಸಹಾನುಭೂತಿಯಿಂದ ನೋಡುವದು ನಮ್ಮ ಸ್ವಾಭಾವಿಕ ಧರ್ಮವಾಗಿರುತ್ತದೆ. ಇರಲಿ.

ಚಿನೀ ಜನರಿಗೆ ಅವರಲ್ಲಿರುವ ಸ್ವಾಭಾವಿಕವಾದ (Instinctive) ದೂರದರ್ಶಿತ್ವ ಗುಣದಿಂದಲೋ ಮತ್ತೆಯಾವ ಕಾರಣದಿಂದಲೋ ಪರದೇಶದವರೆಂದರೆ ವಿಶೇಷವಾಗಿ ಪಾಶ್ಚಾತ್ಯರೆಂದರೆ ಸೇರಿಕೆ ಇರಲಿಲ್ಲ. ಆದುದರಿಂದ ಚೀನದೇಶದಲ್ಲಿ ಕಳೆದ ಶತಮಾನದ ವರೆಗೆ ಪರದೇಶದವರ ಪ್ರವೇಶವಿದ್ದಿಲ್ಲ. ಆದರೆ, ಸುಮಾರು ನೂರುವರ್ಷಗಳ ಪೂರ್ವದಲ್ಲಿ ನಮ್ಮನ್ನಾಳುವ ಪ್ರಭುಗಳಾದ ಆಂಗ್ಲೇಯರ, ಬೆಪ್ಪನಾರ್ವಾತ್ಯರಾದ ಚಿನೀ ಜನರು ನಿರುತ್ಸಾಹಿಗಳೂ, ಚೌತನ್ಯರ ಹಿತರೂ, ಇರುವದನ್ನು ಕಂಡು ಆಯತ್ತವಾಗಿ ಹಿಂದೂ ದೇಶದಲ್ಲಿ ಹುಟ್ಟುವ ಅಫುವಿನ ಸೇವನದಿಂದಲಾದರೂ ಈ ಜನರು ನೆಟ್ಟಗಾಗುವರೆಂಬ ಸದುದ್ದೇಶದಿಂದ ಚೀನಿ ಜನರಿಗೆ ಅಫುವನ್ನು ಕೊಳ್ಳಲು ಒತ್ತಾಯ ಮಾಡಹತ್ತಿದರು.; ಕಡೆಗೆ ಯುದ್ಧವನ್ನಾದರೂ ಮಾಡಬೇಕಾಯಿತು. ಈ ಯುದ್ಧದ ಪರಿಣಾಮವೇನಾಯಿತೆಂದರೆ ಚೀನದೇಶದ ಹಲಕೆಲವು ಬಂದರುಗಳು ಪರದೇಶದವರ ವ್ಯಾಪಾರಕ್ಕಾಗಿಯೂ ವಸಾಹತಿಗೂ ಮುಕ್ತ ದ್ವಾರಗಳಾದವು. (Treatyport) ಇದರಿಂದ ಚೀನ ದೇಶದಲ್ಲಿ ಅಫುವಿನ ಶವ್ಯಸನವು ಅತಿಶಯವಾಗಿ ಬೆಳೆದದ್ದಲ್ಲದೆ, 'ಎಳೆಸಿಕ್ಕರೆ ಹಚ್ಚಡವನ್ನೇ ನುಂಗುವರಾ'ದ ಪಾಶ್ಚಾತ್ಯರಿಗೂ ಜಪಾನದವರಿಗೂ ತಮ್ಮ ಕಾಲು ಚಾಚಲಿಕ್ಕೆ ಅನುವು ದೊರೆಯಿತು. ಧರ್ಮೋಪದೇಶಕರಾದ ಪಾದ್ರಿಸಾಹೇಬರೂ ವ್ಯಾಪಾರಸ್ಥರೂ 'ಬಂಡುವಲು'ಗಾರರೂ ಬೆನ್ನ ಹಿಂದೆಯೇ ಪ್ರವೇಶಿಸಿದರು.

ಅಂದಿನಿಂದ ವಿಶೇಷವಾಗಿ ಬಂಡುವಲು ಹಾಕಿದ ವ್ಯಾಪಾರಸ್ಥರು ದೇಶದಲ್ಲಿ ಅಗ್ಗಳಿಕೆಯಾದ ಕೂಲಿಯೂ ಕಚ್ಚಾ ಮಾಲೂ ಸಮೃದ್ಧವಾಗಿರುವದನ್ನು ಕಂಡು ತಮ್ಮ ಬಂಡವಲಿನ ಪ್ರಭಾವದಿಂದ ಕಾರಖಾನೆಗಳನ್ನು ತೆಗೆಯ ಹತ್ತಿ ದೇಶದಲ್ಲಿ ಉದ್ಯೋಗಾಭಿವೃದ್ಧಿಯನ್ನು ಮಾಡಹತ್ತಿದ್ದಾರೆ. ಬರ ಬರುತ್ತಾ ಈ ಪರದೇಶೀಯ ವ್ಯಾಪಾರಸ್ಥರು ರೇಲ್ವೇ ತಾರಾಯಂತ್ರ, ಲೋಹದ ಕಣಿಗಳು, ಮುಂತಾದವುಗಳನ್ನು ಕುಟಿಲ ರಾಜನೀತಿಯಿಂದಾಗಲಿ ಸಂಘಟಿತ ಶಕ್ತಿಯ ಪ್ರದರ್ಶನಮಾಡಿ ತದ್ದೇಶೀಯ ಜನರಲ್ಲಿ ಅಂಜಿಕೆ ಹುಟ್ಟಿಸಿಯಾದ ಆಕ್ರಮಿಸಿದ್ದಲ್ಲದೆ , ಚೀನದೇಶದ ಪರದೇಶಕ್ಕೆ ಸಂಬಂಧಿಸಲ್ಪಟ್ಟ ಖಾತೆಯಲ್ಲಿ ತಮ್ಮ ಮಾತ್ರವೇ ನಡೆಯುವಂತೆ ಮಾಡಿ, ಆಯಾತ, ನಿರ್ಗತ ಸರಕುಗಳ ಮೇಲೆ ತಮ್ಮ ಇಚ್ಛಾನುಸಾರ ಜಕಾತೀ Exce duty ಕೊಡಿಸುವಂತೆ ಮಾಡಿದ್ದಾರೆ. ಚೀನಿ ಜನರು ತಮ್ಮ ಸ್ವಂತ ದೇಶದಲ್ಲಿ ಈ ಪರದೇಶೀಯ ಬಂಡುವಲುಗಾರರ ಪ್ರತಾಪದಿಂದ ಕೂಲಿಕಾರರಂತೆ ಇರಬೇಕಾಗಿರುವದಲ್ಲದೆ, ಎಲ್ಲಿಯಾದರೂ ವಸಾಹತು ಮಾಡಲಿಕ್ಕೆ ಹೋದಲ್ಲಿ ಸಹ ಅದೇ ಮಾತು. ಗೌರಕಾಯದವರು ಉದ್ಯೋಗ ವ್ಯವಸಾಯ, ಕಲಾಕೌಶಲ್ಯಾದಿ ವಿಷಯಗಳಲ್ಲಿ ಇವರ ಕೂಡ ನ್ಯಾಯವಾಗಿ ಸ್ಪರ್ಧೆ ಮಾಡಲಿಕ್ಕೆ ಸಾಮರ್ಥ್ಯವಿಲ್ಲದೆ ಸುಳ್ಳೆ ಸುಳ್ಳೇ ಪೀತವರ್ಣದವರಾದ ಚೀನಿಜನರು, ಜಗತ್ತಿಗೆ ಒದಗಬಹುದಾದ ಬಹುದೊಡ್ಡ ಆಪತ್ತಿಗೆ (Yellow peril) ಕಾರಣರಾಗುವರೆಂದು ಶುಷ್ಕ ಕೂಗಾಟ ನಡೆಸಿದ್ದಾರೆ. ಇಲಾಚ ಇಲಾಜ, ಮತ್ತೇನು !

ಇರಲಿ, ಇದರಿಂದ ದೇಶದಲ್ಲಿ ಅಸಂತೋಷವೂ, ಅಸ್ವಾಸ್ಥ್ಯತೆಯೂ ಪಸರಿಸ ಹತ್ತಿ ಮೇಲಿಂದ ಮೇಲೆ ರಾಜ್ಯಕ್ರಾಂತಿಗಳು ಆಗಹತ್ತಿ, ಪ್ರಜೆಗಳ ವಿತ್ತಜೀವಿತಗಳಿಗೆ ಸುರಕ್ಷಿತ ಇಲ್ಲದಂತಾಗಿದೆ. ದಾರಿದ್ರ್ಯವಾದರೂ ಬೆಳೆದು, ಬರಗಳೂ ಉಗ್ರತೆಯೂ ಮೇಲಿಂದ ಮೇಲೆ ಆಗಹತ್ತಿರುತ್ತವೆ.

ಇವುಗಳದ್ಯೋತಕವೆಂದು ಚೀನದೇಶದ ಪ್ರಮುಖ ಪಟ್ಟಣಗಳಾದ ಕೆಂತಾನ, ಶಾಂಘಾಯ, ಟೀನಸ್ಟೀನ, ಪೇಕಿಂಗ, ಹಾಂಕೋ, ಇತ್ಯಾದಿನಗರಗಳಲ್ಲಿ, ಮೊನ್ನೆ ಮೊನ್ನೆ, ಚೀನೀ ಕೂಲಿಕಾರರು ಪ್ರಚಂಡವಾದ ಸಂಪುಮಾಡಿದ್ದಾರೆ. ಆದರೆ ನ್ಯಾಯವಾದ ಚಳವಳಿಯನ್ನು ಮಾಡಿ ಬಡ ಕೂಲಿಕಾರರು ಹೆಚ್ಚು ಕೂಲೀಕೇಳಿದರೆ ಅವರನ್ನು ಪ್ರತ್ಯಕ್ಷರಾಜಮಾರ್ಗದಲ್ಲಿ ಹುಚ್ಚು ನಾಯಿಗಳಂತೆ ಗುಂಡು ಹಾಕಿ ಕೊಲ್ಲುವದು ಅನ್ಯಾಯ ? ಸ್ವಾಭಿಮಾನ ಪ್ರೇರಿತರಾದ ವಿದ್ಯಾರ್ಥಿಗಳು ಸ್ವಜಾತೀಯ ಕೂಲಿಕಾರರ ವಿಷಯಕ್ಕೆ ಸಹಾನುಭೂತಿಯನ್ನು ತೋರಿಸಿದ್ದು ಕೂಡ ಒಂದು ತಪ್ಪೇ! ಅವರಲ್ಲಿಯಾದರೂ ಐವಾರು ಮಂದಿ ಗುಂಡಿನ ಬಾಯಿಗೆ ಬಿದ್ದು ತಾರುಣ್ಯದಲ್ಲಿ ಪ್ರಾಣಕ್ಕೆ ಎರವಾಗಬೇಕಾಯಿತು. ಇದರಲ್ಲಿ ನೆನಪಿನಲ್ಲಿಡತಕ್ಕ ಸಂಗತಿಯೇನಂದರೆ ಈ ಪಾಪಕೃತ್ಯ ದೋಷಗಳ ಬಹ್ವಂಶವು ಬ್ರಿಟಿಶ ಮತ್ತು ಜಪಾನದವರ ಪದರಿಗೆ ಬೀಳುತ್ತದೆಂದು ನಾವು ಖೇದದಿಂದ ಹೇಳಬೇಕಾಗಿದೆ. ಇದಕ್ಕೆ ಪ್ರತೀಕಾರವಾಗಿ ಚೀನೀ ಜನರು ಬ್ರಿಟೀಶ್ ಮತ್ತು ಚೀನಿಸರಕುಗಳ ಮೇಲೆ ತೀವ್ರವಾದ ಬಹಿಷ್ಕಾರ ಹಾಕಿದ್ದಾರೆ. ಪಾಪ! ಮಾಡುವರೇನು? ಇಷ್ಟೆಲ್ಲ ಅನರ್ಥಕ್ಕೆ ವಿದ್ಯಾರ್ಥಿಗಳನ್ನೂ ಕೂಲಿಕಾರರನ್ನೂ ಹುರಿದುಂಬಿಸಿದವರಾದ ಬೋಲ್ಶೆವಿಕರೇ ಕಾರಣರೆಂದು ಸುದ್ದಿಯನ್ನು ಪಸರಿಸಲಿಕ್ಕೆ ಪ್ರಯತ್ನಗಳು ನಡೆದಿವೆ. ಹೇಸಿಯ ಪಾಪ ಸನ್ಯಾಸಿಗೆ!

ಆದರೆ ಪರಿಸ್ಥಿತಿಯು ವಿಪರ್ಯಾಸಮಾಡಿ, ತಮ್ಮ ತಪ್ಪು ಮುಚ್ಚಿಕೊಂಡು ಅದರ ಲಾಭವನ್ನು ತೆಗೆದು ಕೊಳ್ಳಲಿಕ್ಕೆ ಜಾಣರಾದ ಬ್ರಿಟೀಶ, ಅಮೇರಿಕನ, ಜಪಾನ, ಇತ್ಯಾದಿ ಜನಾಂಗಗಳು ಸಹಜವಾಗಿ ಕೂಲಿಕಾರರು ಕೂಡಿ ಸ್ವಲ್ಪ ಗಲಭೆ ಮಾಡಿದ್ದಕ್ಕೆ ಭಯಂಕರವಾದ ಬಂಡಾಯದ ಸ್ವರೂಪವನ್ನು ಕೊಟ್ಟು ನಿರಾಪರಾಧಿಗಳಾದ ಬಡ ಪ್ರಜೆಗಳನ್ನು ಗುಂಡುಹಾಕಿ ಕೊಲ್ಲುವದು ಸುಧಾರಿಸಿದವರೆಂದು ಮೆರೆಯುವ ಮೇಲೆ ಹೇಳಿದ ಜನಾಂಗಗಳಿಗಂತೂ ಶೋಭಿಸುವದಿಲ್ಲೆಂದು ನಾವು ಸ್ಪಷ್ಟವಾಗಿ ಹೇಳುತ್ತೇವೆ. ಆದರೆ ಇದು ಇಷ್ಟಕ್ಕೆ ಹೋಗುವ ಲಕ್ಷಣ ಕಾಣುವದಿಲ್ಲ. ಈ ನೆವದಿಂದ ಚೀನದೇಶದ ಸರ್ವಸ್ವತಂತ್ರವನ್ನೇ ಹರಣ ಮಾಡಬೇಕೆಂದು, ಪರರಾಷ್ಟ್ರಗಳ ವಿಚಾರ ವಿದ್ದಂತೆ ತೋರುತ್ತದೆ ಅಂದರಕಿ ಬಾತ ರಾಮಜಾನೇ.

ಈ ಗೊಂದಲದ ಸರ್ವ ವಿಚಾರವನ್ನು ರಾಷ್ಟ್ರಸಂಘದ ಕಡೆಗೆ ಒಪ್ಪಿಸದೆ, ಆನಂತರ ರಾಷ್ಟ್ರೀಯ ಕಮೀಶನ್‌ದ ಮುಖಾಂತರ ಮಾಡಿಸಬೇಕೆಂಬುದರ ಉದ್ದೇಶವು ಇದೇ ಇರಬಹುದು. ಆದರೆ ಅಮೇರಿಕದವರು ಚೀನ ದೇಶದಲ್ಲಿ ಪರದೇಶದವರ ಅತಿಕ್ರಮಣ ವಾಗದ ಹಾಗೆ ಪ್ರಯತ್ನ ಮಾಡುವರೆಂಬ ಸಮಾಧಾನದ ಸುದ್ದಿಯಾದರೂ ಬಂದಿದೆ. ಚೀನದೇಶದಲ್ಲಿ ಜಪಾನದವರ ಪ್ರಸ್ತ ಬೆಳೆಯ ಗೊಡಬಾ

(೩ ನೇ ಪುಟ ನೋಡಿರಿ)

ವರ್ತಮಾನಸಾರ

ಇಹವೃತ್ತ

ಗದಗ ಹುಟಗೀ ರೇಲ್ವೇದಲ್ಲಿಯ ಅವ್ಯವಸ್ಥಾ ವಿಜಾಪುರದಲ್ಲಿ ನಳ ತರುವದು ಬಾಗಲಕೋಟೆ ವಿಜಾಪೂರಗಳಲ್ಲಿಯ ಪ್ಲ್ಯಾಟಫಾರ್ಮ ತಿಕೀಟಿನ ಬೆಲೆ ಇಳಿಸುವದು, ವಿಜಾಪುರ ಜಿಲ್ಲೆಯ ಬರಗಾಲದ ಕಷ್ಟನಿವಾರಣೆ, ಶಾಲೆಗಳು, ಇನಾಮದಾರ ಜನರ ಹಕ್ಕು ಇವೇ ಮೊದಲಾದ ವಿಷಯಗಳ ಬಗ್ಗೆ ಇಲ್ಲಿಯ ಶ್ರೀಮಂತ ರಕ್ಕಸಗೀ ದೇಸಾಯರು ಮುಂಬೈ ಕೌನ್ಸಿಲ್ಲಿನಲ್ಲಿ ಪ್ರಶ್ನೆ ಹಾಕಿದ್ದಾರೆ

ಶ್ರೀ ರಾಮಾಚಾರ್ಯ ಕಾಖಂಡಿಕಿ ಇವರು ಮಾಡಿಕೊಂಡ ತಿಗಳ ವಿವಾಹಕ್ಕೆ ತಮ್ಮ ಸಮ್ಮತಿ ಸರ್ವಥಾ ಇರುವದಿಲ್ಲವಾಗಿ ಶ್ರೀ ಪ. ಪೂಜ್ಯ ರಾಮಾಚಾರ್ಯ ಗಳಗಲೀ ಮತ್ತು ವೇ। ಸುಬ್ಬಾಚಾರ್ಯ ಗಳಗಲೀ ಇವರು ನಮಗೆ ಬರೆದು ತಿಳಿಸಿರುವರು.

ತಲೀಕೋಟೆಯಲ್ಲಿ ಹಿಂದೂ ಮುಸಲ್ಮಾನರಿಗೆ ಬಡಿದಾಟವು ಆಯಿತಂತೆ!

ಮುಂಬೈ ಕರ್ನಾಟಕ

ಕಾರವಾರದ ಡಿ ಪ್ರೋ: ಮು. ರಾ ವ ಬಹಾದ್ದೂರ ಗುಡೀಯವರು ಪೆನ್ಶನ್ ತೆಗೆದು ಕೊಳ್ಳುವರು

ಧಾರವಾಡದ ನಾಗರಿಕಸಭೆಯಲ್ಲಿ ೯ನೇ ತಾ॥ ದಿನ ಶ್ರೀ ಹುಲಕೋಟಿಯವರ ಅಧ್ಯಕ್ಷತೆಯಲ್ಲಿ ಕನ್ನಡ, ಒಳ್ಳಾರಿಯ ಆಂಧ್ರವಿಶ್ವವಿದ್ಯಾಲಯಕ್ಕೆ ಜೋಡಿಸುವ ವಿಚಾರವು ನಿಷೇಧಿಸಲ್ಪಟ್ಟಿತು ಲಿಂಗಾಯತ ಬ್ರಾಹ್ಮಣರ ಭೇದಭಾವವಿಲ್ಲದೇ ಎಲ್ಲರೂ ಈ ವಿಷಯದಲ್ಲಿ ಕೂಡಿಕೊಂಡೇ ಕೆಲಸಮಾಡುತ್ತಲಿರುವರು.

ಗಳಿಯಾರ ಗುಂಪಿನವರಾದ ಶ್ರೀ ನರೇಗಲ್ಲ, ಕುಲಕರ್ಣೀ ಕೃಷ್ಣರಾವ, ಶೇಷಗಿರಿರಾವ, ಮತ್ತು ಹೆಳವನವರೆಂಬ ನಾಲ್ವರು ಶಾಂತಿನಿಕೇತನದಲ್ಲಿ ಅಭ್ಯಾಸಮಾಡುವದಕ್ಕಾಗಿ ೧೦ನೇ ತಾ॥ ದಿನ ಧಾರವಾಡದಿಂದ ಪ್ರಯಾಣಬೆಳಸಿದರು ಕನ್ನಡ ಯುವಕರಲ್ಲಿ ಸಾಹಸತನವೂ ವಾಚನಾಭಿರುಚಿಯೂ ಇದೇ ಪ್ರಕಾರವಾಗಿ ಹೆಚ್ಚಲಿ?

ಶ್ರೀ ಪಾವಟೆಯವರು ವಿಲಾಯತಿಯಲ್ಲಿ ಬ್ಯಾರಿಸ್ಟರ ಪರೀಕ್ಷೆಯಲ್ಲಿ ವಿಶೇಷ ಪ್ರಶಂಶೆಯಿಂದ ಉತ್ತೀರ್ಣರಾಗಿದ್ದಾರೆ.

ಶ್ರೀಮಂತ ಪೂಜ್ಯ ಕೂರ್ಮಾಚಾರ್ಯ ಮತ್ತು ಸುಬ್ಬಾಚಾರ್ಯ ಗಲಗಲಿ ಇವರ ಸಹಿಯಿಂದ ಕರ್ಮವೀರದಲ್ಲಿ ಪ್ರಕಟವಾದ ತಿಗಳರ ಕನ್ನೆಯ ಸಂಬಂಧವನ್ನು ಮಾಡಿದಬಗ್ಗೆ ಪತ್ರದ ಉತ್ತರವೆಂದು ರಾಮಾಚಾರ್ಯ ಕಾಖಂಡಿಕೀ (ಲಗ್ನಮಾಡಿಕೊಂಡವರು) ಇವರ ಪತ್ರವು ಬಂದದೆ ದೊಡ್ಡವಿಸ್ತರಿಂದ ಸಂಪೂರ್ಣ ಪ್ರಕಟಿಸಲು ಸ್ಥಳವಿಲ್ಲ ಅದರ ಸಾರಾಂಶವು ತಿಗಳರ ಕನ್ಯ ವ್ಯವಹಾರ ಪಾಂಡಿತ್ಯ ಶ್ರೀಮದುತ್ತರಾದಿ ಮಠ ಮತ್ತು ಶ್ರೀ ರಾಘವೇಂದ್ರಸ್ವಾಮಿಗಳ ಅಪ್ಪಣೆಯಿರುತ್ತದೆ ಮೇಲಾಗಿ ಕೆಂಪಲಿ ಬಳ್ಳಾರಿ ಪ್ರಾಂತದ ಭಾಗಗಳಲ್ಲಿ ಈ ಬಗ್ಗೆ ರೂಢಿಯುಂಟು. ಇರುವದು. ಆದ್ದರಿಂದ ವಿವಾಹ ಮಾಡಿಕೊಂಡದ್ದು ಅನ್ಯಾಯವಲ್ಲ

ಧಾರವಾಡದಲ್ಲಿಯ ಸಾರ್ವಜನಿಕ ಲೋಕಮಾನ್ಯರ ಪುಣ್ಯತಿಥಿ ಉತ್ಸವ ವಿಜೃಂಭಣೆಯಿಂದ ನಡೆಯಿತು. ಸರಕಾರೀ ದಿನವು ಆಚರಿಸಲ್ಪಟ್ಟಿತು.

ಮದ್ರಾಸ ಕರ್ನಾಟಕ

ಬಳ್ಳಾರಿಯಲ್ಲಿ ಆಂಧ್ರವಿಶ್ವವಿದ್ಯಾನಿಲಯದ ಪ್ರಶ್ನೆಯು ಹೊರಗಿನಿಂದ ಕನ್ನಡಿಗರಲ್ಲಿ ಅನೇಕಬಗೆಯ ವಿಚಾರಗಳು ನಡೆದಿವೆ ಅವು ಬೇಗನೇ ಮೂರ್ತ ಸ್ವರೂಪಹೊಂದುವವು. ಎಂಬದಾಗಿ ಒಬ್ಬರು ತಿಳಿಸುತ್ತಾನೆ.

ಕಾನ್‌ಸ್ಟಾಂಟಿನೋಪಲ್‌ದಲ್ಲಿ ಕುಮಾರೀ ಯೋರ್ವಳು ೨೧ ನೇ ವಯಸಿನಲ್ಲಿ ಕುಮಾರನಾಗಿದ್ದಾಳೆ ಇದು ನಾಟಕದ ವೇಷವಲ್ಲ. ಆದರೆ ನಿಜವಾಗಿಯೂ ಕುಮಾರಿ ಇದ್ದವಳು ಗಂಡನಾಗಿರುವಳು ಡಾಕ್ಟರ ಜನರು ಸಹ ಪರೀಕ್ಷೆಮಾಡಿ ಕುಮಾರ ನೆಂದೇ ನಿರ್ಧರಿಸಿದರು. ಮೊದಲು ಕುಮಾರಿ ಯಿದ್ದಳು. ಆಕೆಯನ್ನು ಕುಮಾರರು ಪ್ರೀತಿಸುತ್ತಿದ್ದಾರೆ ಈಗ ಕನ್ನೆ ಯಾರೇ ಬೆನ್ನ ಹತ್ತಿರುವರು. ಏನಿದು ಕಲಿಯುಗದ ಮಹಾತ್ಮೆ!

ಮೈಸೂರ ಕರ್ನಾಟಕ

ಮೈಸೂರ ಮಹಾರಾಜರು ಮುಂಜಾನೆ ತಿರುಗಾಡಲಿಕ್ಕೆ ಹೋದಾಗ ಮೈಸೂರಿನ ಉದಾರ ವ್ಯಾಪಾರಸ್ಥರು ೮೦ ವರ್ಷದ ಮುಪ್ಪಿನ ಮುದುಕರೂ ಆದ ಶ್ರೀ ಶಂಕರ ಹನುಮಯ್ಯಾ ಇವರನ್ನು ಕಂಡು ಆನಂದಬಟ್ಟು ಆರು ದಿವಾಲು ಪ್ರಾರ್ಥಶಾಲದಲ್ಲಿ ಅಪ್ಪುತ್ತಿರುವದನ್ನು ತಿಳಿದು ಅವರಿಗೆ ತಮ್ಮ ಕೈಯಲ್ಲಿಯ ಉಂಗುರ ಬಡಿಗೆಯನ್ನು ಪಾರಿತೋಷಕವಾಗಿ ಕೊಟ್ಟರು

ಮಹಾರಾಜರು ಕೋಲಾರ ಬೆಂಗಳೂರ ಜಿಲ್ಹೆಗಳಲ್ಲಿ ಪ್ರವಾಸಕ್ಕೆ ಹೊರಡುವರು.

ನಿಜಾಮ ಕರ್ನಾಟಕ

೧೬ ಲಕ್ಷ ರೂ ವೆಚ್ಚಮಾಡಿ, ತುಂಗಭದ್ರಾ, ನದಿಯಿಂದ ರಾಯಚೂರ ಜಿಲ್ಹೆಕ್ಕೆ ನೀರನ್ನು ಪೂರೈಸಿ ಕೊಡಬೇಕೆಂದು ನಿಜಾಮರು ನಿರ್ಧರಿಸಿರುವರು

ಹಿಂದುಸ್ಥಾನ

ಮುಂಬೈಯಲ್ಲಿ ಖಾದೀ ವ್ಯಾಪಾರವು ಕಳೆದ ವರ್ಷ ೨,೧೬,೦೦೦ ರೂ. ಗಳ ವರೆಗೆ ಆಗಿದ್ದಿತು ಆದರೆ ಈ ವರ್ಷ ೧,೫೦,೦೦೦ ರೂ. ಆಗಿದೆ. ಇದು ಮುಂಬೈಗೆ ಭೂಷಣವಲ್ಲವೆಂಬದಾಗಿ ಮಹಾತ್ಮರು ನವಜೀವನದಲ್ಲಿ ಬರೆದಿರುವರು.

ಮಹಾತ್ಮಾ ಗಾಂಧೀಯವರು ಬಾರೀಸಾಲಿಗೆ ಹೋದಾಗ ಅವರಿಗೆ ೩೮ ಲಕ್ಷ ನಾರು ಖಾದೀ. ಅರ್ಪಣಮಾಡಿದರು

ಕರಕೊಡದಾರದಾಗಿ ಇವನ್ನು ಚಳವಳಿಯನ್ನು ಎಬ್ಬಿಸಬೇಕೆಂದು ಶ್ರೀ ವಿ ಜಾ ಪಟೇಲರು ಅಸ್ಮಾನಾಬಾದಿನಲ್ಲಿ ಭಾಷಣಮಾಡಿದರು.

ಲಾರ್ಡ ರೀಡಿಂಗ ಬರ್ಕನ್‌ಹೆಡ್ಡರವರ ಸುಧಾರಣೆ ವಿಚಾರದೆಯನ್ನು ಹಿಂದುಸ್ಥಾನದಲ್ಲಿಯ, ಶ್ರೀ ಲಾ ಲಾ ಲಜಪತರಾಯ. ಶ್ರೀನಿವಾಸ ಶಾಸ್ತ್ರೀ ನೆಹರೂ, ಕೇಳಕರ, ಜಯಕರ, ಪಾಲ, ಇವರೇ ಮೊದಲಾದ ಮುಖಂಡರೂ ಕ್ರಾನಿಕಲ್, ಸ್ವರಾಜ್ಯ, ಮರಾಠಾ, ಫಾರವರ್ಡ, ಹಿಂದೂ, ಟ್ರಿಬ್ಯೂನ ಇವೇ ಮೊದಲಾದ ಪತ್ರಿಕೆಗಳೂ, ನಿಷೇಧಿಸಿವೆ.

ಪರದೇಶ.

ಕರ್ನಾಟಕದಲ್ಲಿಯ ಸ್ತ್ರೀಯರು ಪಳಿಯ ಪದ್ಧತಿಯನ್ನು ಈಗ್ಗೆ ಅವುಗಳನ್ನು ಜನರು ತಿರಸ್ಕರಿಸ ಹತ್ತಿದ್ದಾರೆ. ಅವರೆ ಪ್ಯಾರಿಸನಲ್ಲಿ ಆಟ ಆಡುವದೇ ಆರೋಗ್ಯಕರವೆಂಬದನ್ನು ಕಂಡು ಹಿಡಿದು ಈಗೀಗ ಲಂಡನದಲ್ಲಿ ನಾಟಕಗಳನ್ನು ಬೈಲು ಪ್ರದೇಶಗಳಲ್ಲಿ ಮಾಡುತ್ತಿರುವರು.

ಆಸ್ಟ್ರೇಲಿಯಾದಲ್ಲಿ ಹಿಂದೀ ಜನರಿಗೆ ಮತ ಕೊಡಬೇಕಾಗಿ ಸರಕಾರದ ಠರಾವು ಆಗಿದೆ.

ಚೀನದಲ್ಲಿಯ ರಾಜಕೀಯ ಗೊಂದಲದಿಂದ ಜಪಾನವು ಯುದ್ಧದಲ್ಲಿ ಸೇರಬಹುದಾಗಿ ತೋರುತ್ತದೆ.

ದ್ವಿದಲ ಸ್ಥಿತಿಯು ನಷ್ಟವಾಗಕೂಡದೆಂದೂ, ಹಿಂದುಸ್ಥಾನಕ್ಕೆ ಸುಧಾರಣೆಯನ್ನು ಕೊಡುವ ವಿಚಾರವು ಆಗಲೇ ಬೇಕೆಂದೂ, ಕರ್ನಲ್ ವೆಜ್‌ವುಡ್ಡರು ಪಾರ್ಲಮೆಂಟದಲ್ಲಿ ಮಾತನಾಡಿದಾಗ್ಗೆ ಭಾರತ ಮಂತ್ರಿಗಳು ಸಮಾಧಾನಕರವಾದ ಉತ್ತರವನ್ನು ಕೊಡಲಿಲ್ಲ.

ಕನ್ನಡಿಗನ್ನು ತಾ. ತಿರಿಯಲು ಬಂದಿಹ। ತನ್ನಿರಿ ಭಿಕ್ಷೆಯನು॥
ಚಿನ್ನವನೊಲ್ಲನು ಹೊನ್ನನು ಹಿಡಿಯನು। ರನ್ನವನಿಚ್ಛಿಸನು ॥೧॥

ಚನ್ನೆಯರೆಲ್ಲರು ಕೆಳೆಯಲಿ ನೂತಿಹ। ನಲ್ಮೆಯ ನೂಲವ॥
ಉನ್ನತ ಭಾವದಿ ಬಯಸುವ ನಾಡಿನ। ಮೇಲ್ಮೆಯ ಗುಟ್ಟನ್ನು ॥೨॥

ಕರವನು ಜೋಡಿಸಿ ಹರಿಹರಿ ಬೇಡುವ। ನೆನೆಯಿರಿ ಧರ್ಮವನು॥
ನಿರುತದಿ ಮಾಡಿರಿ ಫಲದಭಿಸಂಧಿಯ। ನೆಣಿಸದೆ ಕರ್ಮವನು॥೩॥

ಭೀಮಸುತ

'ಕನ್ನಡಿಗನ' ಸಂಪಾದಕರಿಗೆ—

ಮ|| ಮ|| ಸಂಪಾದಕರ ಭೂಮಿಯಲ್ಲಿ ಅಂಕುರಿಸಿದ ಲೇಖವನ್ನೋದಿದೆನು. ಅದರಲ್ಲಿ ನಮೂದಿಸಿದ ಪ್ರಶ್ನೆಗಳಿಗೆ ಉತ್ತರವನ್ನು ನಾನೊಬ್ಬನೇ ಕೊಡುವದನುಚಿತವೆಂದು ತೋರುತ್ತದೆ. ಆದುದರಿಂದ ಅಲ್ಪಾವಧಿಯಲ್ಲಿ ಆದಷ್ಟು ಪ್ರಯತ್ನದಿಂದ ಎಲ್ಲ ಮೆಂಬರುಗಳ ಸಭೆಯೊಂದನ್ನು ಬರಮಾಡಿಕೊಂಡು, ಆ ಸಭೆಯ ಮುಖಾಂತರವಾಗಿಯೇ ತಮ್ಮ ಎಲ್ಲ ಪ್ರಶ್ನೆಗಳಿಗೆ ಉತ್ತರವನ್ನು ಕೊಡಿಸಬೇಕೆಂದು ನನ್ನ ಕೋರಿಕೆ. ಆದರೆ ಈ ಊರಲ್ಲಿ ಕೆಲವರು, ನಾನು ಊರಲ್ಲಿಲ್ಲದಿರುವ ಸಂಧಿಯನ್ನು ಸಾಧಿಸಿ "ಜೋಶಿಮಾಸ್ತರರು ಶಾಲೆಯ ವಿದ್ಯಾರ್ಥಿಗಳ ಕಡೆಯಿಂದ ೧೪೮ ರೂ. ಗಳ ವರೆಗೂ ಫೀ ವಸೂಲಿ ಮಾಡಿಕೊಂಡು ಎತ್ತಿ ಹಾಕಿರುವರೆಂದು ತಮ್ಮ ಸಹಾಧ್ಯಾಪಕರಿಗೆ ಒಂದು ಪೈ ಸಹ ಕೊಟ್ಟಿಲ್ಲವೆಂದೂ" ಎಲ್ಲ ಕಡಿಗೆ ಸುದ್ದಿಯನ್ನು ಬೀರಿ ತಮ್ಮ ಕುತ್ಸಿತ ಮನಸ್ಸನ್ನು ಸಂತೋಷಗೊಳಿಸುತ್ತಿರುವರೆಂದು ನನ್ನ ಕಿವಿಗೆ ಬಿದ್ದಿದೆ. ಸಭ್ಯ ಜನರು ಇಂತಹ ಮಾತಿಗೆ ಮನವಲಿಯಬಾರದೆಂದು ನಾನು ಸಾರ್ವಜನಿಕ ರೀತಿಯಾಗಿ ಸಾಲಿಯ ಸಂಬಂಧದ ಲೆಖ್ಖವನ್ನು ಪ್ರಸಿದ್ಧ ಪಡಿಸುತ್ತೇನೆ—

ಜಮಾ	ಖರ್ಚು
೧೪೮ ರೂ. ಫೀ ವಸೂಲಿ	೨೬ ರೂ. ಮ|| ಕೇಲೂರ ಪಾಂಡುರಂಗ ರಾಯರಿಗೆ ಕೊಟ್ಟದ್ದು.
	೧೩ ರೂ. ಮ|| ಪರ್ವತಿ ಶಾಮರಾಯರಿಗೆ ಕೊಟ್ಟದ್ದು
	೬-೮-೦ ಧಾರವಾಡಕ್ಕೆ ಇನ್‌ಸ್ಪೆಕ್ಟರರಿಗೆ ಭೆಟ್ಟಿಯಾಗಲಿಕ್ಕೆ ಹೋದ ಖರ್ಚು
	೩-೦-೦ ವಿಜಾಪುರಕ್ಕೆ ಪಿ. ಡಿ. ಜೆ. ಹಾಯಸ್ಕೂಲದ ಸೆಕ್ರೆಟರಿಯವರಿಗೆ ಭೆಟ್ಟಿಯಾಗಲಿಕ್ಕೆ ಹೋದದ್ದು
	೫-೦-೦ ಶಿಪಾಯಿಯ ಪಗಾರ
	೧೬-೦-೦ ಶಾಲೆಯ ಬಾಡಿಗಿ ರಾ|| ಕಾಶಿನಾಥರಾವ ಆನಪಟ್ಟಿಯವರಿಗೆ ಕೊಟ್ಟದ್ದು
	೪-೦-೦ ಶಾಲೆಗೆ ಪುಸ್ತಕಗಳನ್ನು ಕೊಂಡದ್ದು
	೧-೦-೦ ಕಾಗದ ಮಸಿ ವಗೈರೆ
	೧-೦-೦ ಬೆಂಚಗಳನ್ನು ಕೊರಿಸಿ ತರಿಸಿದ ಹಮಾಲಿ ಕಸಬರಿಗೆ ವಗೈರೆ
	೫-೦-೦ ಹುಬ್ಬಳ್ಳಿ ಧಾರವಾಡಕ್ಕೆ ಶಾಲೆಯ ಮಾಸ್ತರರಿಗೆ ಭೆಟ್ಟಿಯಾಗುವದಕ್ಕೆ ಹೋದಖರ್ಚು
	೮-೦-೦ ಮೋಹನಲಾಲ ಬಿಲ್ಡಿಂಗದಲ್ಲಿ ಶಾಲೆಯ ಬಾಡಿಗಿ ಸಂಬಂಧಿ ಕೊಟ್ಟದ್ದು
	೧೨-೦-೦ ಸದರ ಬಾಡಿಗಿಸಂಬಂಧಿ ಕೊಡತಕ್ಕದ್ದೆಂದು ತೆಗಿದಿಟ್ಟಿದೆ.
೧೨೦-೮-೦	೧೦೦-೮-೦
೪೭-೮-೦ ಶಿಲ್ಕು	

ಜನರ ನಮ್ರ ಕಿಂಕರ
ಗುರುರಾಜ. ಭೀ. ಜೋಶಿ.

ನಮ್ಮ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾಲಯವು ವಿಸ್ಪದಸ್ಥಾಯಿಷ್ಟವಾಗಿದ್ದರೂ ಯಾವ ರೀತಿಯಲ್ಲೂ ಜನರಿಗೆ ಮಾರ್ಗದರ್ಶಿಯಾಗಿಲ್ಲವೆಂಬದೊಂದು ನಮಗೆ ಬಲವಾದ ಚಿಂತೆ. ಬಡವರು ಭಾಗ್ಯವಂತರೆಂಬ ಭೇದವಿಲ್ಲದೆ ಎಲ್ಲರೂ ಆರ್ಥಿಕದಾರಿದ್ರ್ಯದಿಂದ ಬಳಲುತ್ತಿರುವ ಈ ವೇಳೆಯಲ್ಲಿ, ವಿಶ್ವವಿದ್ಯಾಲಯ ಶಿಕ್ಷಣ ಮೋಹವು ಅನೇಕ ಸಂಸಾರಗಳನ್ನು ಹಾಳುಮಾಡಿದೆ. ನಮ್ಮ ದೇಶದ ಬಡವರನೇಕರು ತಮಗಿದ್ದ ಆಸ್ತಿಸ್ವಾಸ್ಥ್ಯಗಳನ್ನು ಮಾರಿ, ಮಕ್ಕಳಿಗೆ ವಿದ್ಯೆ ಕಲಿಸುವ ಯತ್ನ ಮಾಡಿದ್ದಾರೆ. ಎಲ್ಲದಕ್ಕಿಂತಲೂ ಹೆಚ್ಚಾಗಿ, ವಿಶ್ವವಿದ್ಯಾಲಯವು ಬಂದುದು, ಜನರಲ್ಲಿ ಚಳವಳಿಯು, ಹೆಚ್ಚಾಗಿ ನಾಗರಿಕತೆಯೂ ಕುಶಲವಿದ್ಯೆಗಳೂ, ಆರ್ಥಿಕಸಂಪತ್ತೂ ಹೆಚ್ಚಾಗುವದಕ್ಕೆ ಪ್ರತಿಯಾಗಿ, ಎಲ್ಲದಕ್ಕೂ ವಿನಾಶಕಾಲ ಬಂದಿದೆ. ಪರದೇಶೀಯರ ಹಾವಳಿಯು ನಮ್ಮ ಕೈಗಾರಿಕೆಗಳನ್ನು ಮೂಲೆಗೊತ್ತಿದ್ದರೆ, ವಿಶ್ವವಿದ್ಯಾಲಯವು ಅವನ್ನ ನಾಮಾವಿಶೇಷವಾಗುವಂತೆ ಮಾಡುತ್ತಿದೆ. ವಂಶಪಾರಂಪರ್ಯವಾಗಿ ಬಂದ ಕಸಬುಗಳನ್ನು ಗಾಳಿಗೆ ಚಲ್ಲಿ ಕೊಟ್ಟು ಎಲ್ಲರೂ ವಿಶ್ವವಿದ್ಯಾಲಯದ ಪದವೀಧರರಾಗಬೇಕೆಂಬ ಹುಚ್ಚಿಗೆ ಮನಸ್ಸು ಕೊಟ್ಟಿದ್ದಾರೆ. ವಿದ್ಯಾವಂತರಾಗಬೇಕೆಂಬ ಆಶೆಯಿದ್ದರೆ ಬಹು ಚನ್ನಾಗಿತ್ತು. ಅದಿಲ್ಲ. ಕೇವಲ ಪದವೀಧರರಾಗಿ ಆ ಗೌರವವನ್ನು ಅಖರ ಒಣಹೆಮ್ಮೆಗಾಗಿ ಮಾತ್ರ ಪಡೆದು ಕೊಳ್ಳಬೇಕೆಂಬ ಆಶೆಗೆ ಮಾತ್ರ ಒಳಗಾಗಿ, ಇದ್ದ ಬದ್ದುದನ್ನೆಲ್ಲಾ ಕಳೆಮಕೊಂಡು ಹೊಟ್ಟೆಗಿಲ್ಲದೆ ಸಂಕಟ ಪಡುವ ಸತ್ಕಾರಂಭಿಸಿದ್ದಾರೆ. ಇಂಥಾ ಆ ಶಾಸನಗರನಿರ್ಮಾಪಕರನ್ನು ಕಂಡ ಕೂಡಲೆ ನಮಗೆ ಶ್ಲೋಕವು ಜ್ಞಾಪಕ ಬರದು, ಇದರಿಂದ ನಮ್ಮ ಸಮಾಜಕ್ಕೇನುಪಯೋಗವಾಗಬಹುದು ಎನ್ನಿಸುತ್ತದೆ. ಅಥವಾ— ದೊಡ್ಡ ದೊಡ್ಡ ಆಸ್ಥಾನಗಳಲ್ಲಿ ಮರ್ಯಾದೆಗಾಗಿ ಆನೆಗಳನ್ನು ಇಟ್ಟಿರುವಂತೆ ನಮ್ಮಲ್ಲಿ ಇಷ್ಟು ಸಾವಿರ ಜನ ಪದವೀಧರರಿರುವರೆಂದರೆ, ನಮಗೊಂದು ಮರ್ಯಾದೆ ಎಂದುಕೊಳ್ಳೋಣವೆಂದರೆ, ಮೈಸೂರಿನಲ್ಲಿ ಸೊಪ್ಪಿನ ಗಾಡಿಯನ್ನೂ ನೀರಿನಗಾಡಿಯನ್ನೂ ಎಳೆವ ಕಾಡಿನಲ್ಲಿ ತೊಲೆ ಹೊರುವ ಆನೆಗಳನ್ನ ನೋಡಿ ಮುಂದಿನ ಸ್ಥಿತಿಯನ್ನು ಊಹಿಸಲು ಭಯವಾಗುತ್ತದೆ

ತುಂಟರ ಭಟ್ಟ
ಮೈಸೂರಕ್ರಾನಿಕಲ್ಲ

ಈ ಪತ್ರಿಕೆಯು ಮಂಗಳವೇಡೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ
ವಿದ್ಯಾರಣ್ಯ ಮುಂದ್ರಾಮಂದಿರದಲ್ಲಿ ಮುದ್ರಿತವಾಗಿಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

.ರ ನಂ, ಬಿ. ೧೯೫೭ — ವಾ. ಚಂದಾ ೧-೧೨-೦ ಮಾತ್ರ

ಕನ್ನಡಿಗ.

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವೇಶವಾಗಿದೆ)

[illegible] — ಶ್ರುತಿ

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ಶ್ರಾವಣ ಶುದ್ಧ ೩ ಶಕೆ ೧೮೫೨. ತಾ|| [illegible]-೮-೧೯೩೦. | ಸಂಚಿಕೆ ೧೭.

ಸಂಪಾದಕರ ಭೂಮಿಕೆ.

ಎಷ್ಟರೆ ಕನ್ನಡ ಕುಳಿತರೆ ಕನ್ನಡ ನುಡಿದರೆ ಕನ್ನಡವು ।
ಹೃದ್ಯವು ಕನ್ನಡ ಉಸ್ಸಿನ ಕನ್ನಡ- ಕನ್ನಡ-ಕನ್ನಡವು ।
ಕನಸು ಮನಸಿನೊಳು ಕನ್ನಡ ಕನ್ನಡ ನಿದ್ದೆಯು ಕನ್ನಡವು।
ಕಿನಸು ಕನ್ನಡವು ಜೀವಿತ ಕನ್ನಡ ಎಲ್ಲವು ಕನ್ನಡವು ||

—ಕ್ಷ. ನಗರ ಕವಿ

ಪೂರಣವು ಹೊರಬಿದ್ದಂತಾಯಿತು. ರುಚಿಯು ಎಂಥಹದೆಂಬುದೂ ಗೊತ್ತಾಯಿತು. ಭಟ್ಟಿಯು ಚನ್ನಾಗಿದ್ದರೆ ಮಾತ್ರ ಕಡಬಿನ ರುಚಿ. ರಾಜಕೀಯ ವಿಷಯದಲ್ಲಿ ನಮ್ಮ ಬ್ರಿಟಿಶ ಸರಕಾರದವರಿಂದ ಭಾರತೀಯರಿಗೆ ರುಚಿಸುವಂಥಹ ಪೂರಣವು ಸಿದ್ಧವಾಗುವದು ಅಶಕ್ಯದ ಮಾತು. ಈ ಮಾತಿನ ಸತ್ಯತೆಯ ಬಗ್ಗೆ ಹಿಂದಕ್ಕೆ ಅನೇಕ ಅನುಭವಗಳುಂಟಾಗಿವೆ. ಈಗ ಪುನಃ ಬೇಕಾಗಿದ್ದರೆ ಮತ್ತೊಂದಿದೆ. ಹಿಂದುಸ್ಥಾನದ ಬೊಕ್ಕಸದಿಂದ ೬೦ ಸಾವಿರ ರೂಪಾಯಿಗಳನ್ನು ವೆಚ್ಚಮಾಡಿ ಲಾರ್ಡ ಲೀಡಿಂಗರು ವಿಲಾಯತಿಗೆ ಹೋದರು. ವಿಲಾಸದಿಂದ ಅಲ್ಲಿ ಕಾಲ ಕಳೆದರು. ಊರಗಿಂದ ಹೊರಗೆ ವೆಚ್ಚ ! ಮತ್ತೆ ಚಕ್ಕಂದದ ಮಾತು ಕಥೆ ! ವಿಲಾಯತಿಯಿಂದ ಭಾರತ ಮಂತ್ರಿಗಳನ್ನು ಇಲ್ಲಿಗೆ ಬರಮಾಡಿಕೊಳ್ಳುವದರ ಬದಲು ವ್ಹಾಯಿಸರಾಯರು ತಾವೇ ಹಿಂದುಸ್ಥಾನದ ಸುಧಾರಣೆಯ ಬಗ್ಗೆ ವಿಚಾರಿಸಲು ವಿಲಾಯತಿಗೆ ಹೋದದ್ದು ಇದೇ ಮೊದಲನೆಯ ಉದಾಹರಣೆ. ಒಳ್ಳೇದು. ಇವರು ವಿಲಾಯತಿಗೆ ಇಷ್ಟೊಂದು ವೆಚ್ಚಮಾಡಿಕೊಂಡು ಹೋಗಿ ಮಾಡಿದ ಮಹಾ ಕಾರ್ಯವಾದರೂ ಯಾವದು ? ದ್ವಿದಲ ಪದ್ಧತಿಯು ಚನ್ನಾಗಿ ನಡೆಯುವದು ಅಶಕ್ಯವಾಗಿದ್ದರೆ ಅದನ್ನು ತೆಗೆದು ಹಾಕಬಹುದಂತೆ. ಇನ್ನೂ ಈ ಮಾತಿನಲ್ಲಿ ಸರಕಾರಕ್ಕೆ ಸಂಶಯ ! ದ್ವಿದಲ ಪದ್ಧತಿಯಂತೆ. ಮಂತ್ರಿಗಳಾಗಿದ್ದ ಶ್ರೀ. ಚಿಂತಾಮಣಿ, ಪರಾಂಜಪೆ ಇವರೇ ಮೊದಲಾದವರು ಸಹ ದ್ವಿದಲ ಪದ್ಧತಿಯು ಹಾಳಾಗಿ ಹೋಗತಕ್ಕದ್ದು ಎಂದು ಹೇಳಿದಾಗ್ಯೂ ಸರಕಾರದವರಿಗೆ ಸಂದೇಹ ಬಿಡದು. ಇನ್ನು ಎರಡನೇ ವಿಷಯವೆಂದರೆ, ಸರಕಾರದ ಸಂಗಡ ಸಹಕಾರತೆಯಿಂದ ನಡೆಯುವಂತಿದ್ದರೆ ಮಾತ್ರ ಹೆಚ್ಚಿನ ಸುಧಾರಣೆಯ ವಿಚಾರಮಾಡುವರಂತೆ. ಅತ್ತ ಬ[illegible]ರವೆಂಬ ಖಡ್ಗ ಹಿಡಿದು, ಆ ಬಲಾತ್ಕಾರದ ಪ್ರಭಾವದಿಂದಲೇ ಪ್ರಜೆಗಳ ಮನಸ್ಸಿನ ವಿರುದ್ಧವಾಗಿ ರಾಜ್ಯತಂತ್ರಗಳನ್ನು ನಡೆಸುವದೂ. ಇತ್ತ ಬಾಯಿಂದ ಒಣ ಹಂಬಲ ಸಹಕಾರದ ಮಾತುಗಳನ್ನಾಡುವದೂ, ಶುದ್ಧವಾಗಿ ಹಿಂದೀಯರಿಗೆ ಮೋಸಗೊಳಿಸುವಂಥಹ ಕೃತಿಗಳೆಂಬದು ಸಹಜವಾಗಿ ತಿಳಿಯುತ್ತದೆ. ದಂಡಿನ ವೆಚ್ಚವನ್ನು ಅವ್ಯಾಹತವಾಗಿ ಬೆಳಸಿರೆಂಬದಕ್ಕೆ ಹಿಂದುಸ್ಥಾನದವರು ಸಹಕಾರ ಮಾಡಬೇಕೇ? ಅಥವಾ ಹಿಂದುಸ್ಥಾನದೊಳಗಿನ ಹಣವನ್ನು ಸೆಳೆದುಕೊಂಡು ವಿಲಾಯತಿಗೆ ಒಯ್ಯಿರೆನ್ನುವದಕ್ಕಾಗಿ ಸಹಕಾರ ಮಾಡಬೇಕೇ? ಅಥವಾ ದಾರಿದ್ರ್ಯದಿಂದ ಹಿಂದುಸ್ಥಾನವು ನೊಂದು ಹೋದರೂ ಚಿಂತೆಯಿಲ್ಲ. ಬ್ರಿಟಿಶರೇ ಹಿಂದುಸ್ಥಾನದ ಸಂಪತ್ತಿನಿಂದ ವಿಲಾಯತಿಯಲ್ಲಿ ಶ್ರೀಮಂತರಾಗಲೆಂದು ಸಹಕಾರ ಮಾಡಬೇಕೇ? ಅಥವಾ ಜಾಲಿಯನವಾಲಾಬಾಗದಲ್ಲಿ ನಮ್ಮನ್ನು ಗುಂಡಿನಿಂದ ಹೊಡೆದು ಕೊಲ್ಲಿರಿ, ಕೊಂದವರು ಮಾತ್ರ ನಮ್ಮ ದುಡ್ಡಿನಿಂದಲೇ ಪೆನ್ಶನ್ ಹೊಂದಿ ಸುಖರೂಪಿಯಾಗಿರಲಿ ಎಂಬದಕ್ಕೆ ಸಹಕಾರವನ್ನು ಮಾಡಬೇಕೇ? ಅಥವಾ ಧಾರವಾಡದ ಗೋಳಿ ಬಾರದಂಥ ಖಟ್ಲೆಯಲ್ಲಿ ನಿರ್ದೋಷಿಗಳನ್ನು ದೋಷಿಗಳೆಂದೂ, ದೋಷಿಗಳನ್ನು ನಿರ್ದೋಷಿಗಳೆಂದೂ ನಿರ್ಣಯಿಸುವದಕ್ಕಾಗಿ ಸಹಕಾರ ಮಾಡಬೇಕೇ? ಇದನ್ನು ದೆವ್ವದಿಂದ ಮಾತನಾಡುವ ಸರಕಾರವೇ ಉತ್ತರ ಕೊಡಲಿ. ಬ್ರಿಟಿಶ ಪಾರ್ಲಮೆಂಟದಲ್ಲಿ ಲಾರ್ಡ ಬರ್ಕನ್ ಹೆಡ್ಡರ ಭಾಷಣವೇನೋ ಆಯಿತು. ಸರಿ. ಆದರೆ ಅದರಿಂದ ಭರತಖಂಡಕ್ಕೆ ರಾಜಕೀಯ ದೃಷ್ಟಿಯಿಂದ ಲಾಭವಾಗಿರುವದೆಂಬ ಮಾತಿನ ಚಿಹ್ನವು ಕೂಡಾಯಿಲ್ಲ. ಬರೇ ದರ್ಪೋಕ್ತಿಗಳೇ ಸ್ವರಾಜ್ಯ ಪಕ್ಷದವರು ವಿರೋಧ ಪದ್ಧತಿಯನ್ನು ಬಿಟ್ಟು ತಮಗೆ ಯಾವಯಾವ ಸುಧಾರಣೆಗಳು ಬೇಕೆಂಬದನ್ನು ಹೇಳಬೇಕಂತೆ. ಆದರೆ ಕೇಳಪ್ಪನೆಲ್ಲಿ ? ದಿಲ್ಲಿಯ ಕಾಯದೇ ಮಂಡಲದಲ್ಲಿ ಸರ್ವ ಪಕ್ಷೀಯರ ಸಭೆಕರೆದು(Round Table conference) ಹಿಂದುಸ್ಥಾನದ ರಾಜಕೀಯ ಆಕಾಂಕ್ಷೆಗಳ ಬಗ್ಗೆ ವಿಚಾರಿಸಬೇಕೆಂದು ಠರಾವು ತಂದವರಾರು ? ಸ್ವರಾಜ್ಯ ಪಕ್ಷದವರೇ ಅಲ್ಲವೆ ? ಆಗ್ಗೆ ಸರಕಾರವು ಅದಕ್ಕೆ ಮೂಗು ಮುರಿಯಿತು. ಈಗ್ಗೆ ನಿಮ್ಮ ಬೇಡಿಕೆಗಳನ್ನು ಹೇಳವಲ್ಲಿರೆಂದು ಆಕ್ಷೇಪವು ಏಕೆ? ಕೇಳುವ ಇಚ್ಛೆಯೂ ಕೇಳಿದ್ದನ್ನು ನಡೆಸುವ ಇಚ್ಛೆಯೂ ಇದ್ದರೆ ಸ್ವರಾಜ್ಯ ಪಕ್ಷದವರು ಈ ದಿನವೇ ಒಂದು ಯೋಜನೆಯನ್ನು ಸರಕಾರದ ಮುಂದಿಡಬಲ್ಲರು. ಆದರೆ ಅಂಥಹ ಬುದ್ಧಿಯು ಸರಕಾರಕ್ಕೆಲ್ಲಿದೆ ?

ಸರಕಾರದವರಿಗೆ ಮತ್ತೊಂದು ಹೊಸ ಬೋಧವಾಗಿದೆ. ಇನಾಮದಾರರೆಲ್ಲ ಸರಕಾರಿ ನೌಕರರೆಂದೂ, ಕಾಂಗ್ರೆಸ್ಸು ಅರಾಜಕರ ಕೂಟವೆಂದೂ ಈವರೆಗೆ ಎಲ್ಲಿಯೂ ಪ್ರಕಟವಾಗಿರಲಿಲ್ಲ. ಆದರೆ ಈಗ್ಗೆ ಧಾರವಾಡದ ಜಜ್ಜಸಾಹೇಬರು ಶ್ರೀ. ಕಲ್ಲಾಪೂರ ದೇಸಾಯರ ಅಪೀಲನ್ನು ವಿಚಾರಿಸುವಾಗ್ಗೆ ಇದೊಂದು ಸಂಗತಿಯನ್ನು ಸ್ಪಷ್ಟಗೊಳಿಸಿದರು. ಶ್ರೀ. ದೇಸಾಯರು ಇನಾಮದಾರರು; ಅವರು ಅಸಹಕಾರ ಚಳವಳಿಯಲ್ಲಿ ಭಾಗ ತೆಗೆದು ಕೊಂಡವರು; ಆದುದರಿಂದ ಸರಕಾರೀ ನೌಕರರಾದ ಶ್ರೀ. ದೇಸಾಯರು ಅರಾಜಕರು. ಅವರು ಇನಾಮು ಭೂಮಿಗಳಿಗೆ ಸಲ್ಲತಕ್ಕ ಸೌಕರ್ಯಗಳನ್ನು ಪಡೆಯಲಾರರೆಂಬುದಾಗಿ ನಿರ್ಣಯ. ಸರಕಾರಕ್ಕೆ ಇದೊಂದು ಮಹಾ ಅನುಕೂಲವಾದ ನ್ಯಾಯಕೋರ್ಟಿನ ನಿರ್ಣಯವು ಲಭಿಸಿದಂತಾಯಿತು. ನ್ಯಾಯಾನ್ಯಾಯಗಳ ಸೂಕ್ಷ್ಮ ವಿಚಾರದ ಅವಶ್ಯಕತೆಯಿಲ್ಲದ ಸರಕಾರಕ್ಕೆ ಇಂಥ ಅನುಕೂಲ ನಿರ್ಣಯಗಳು ದೊರೆತರೆ ಹಾಲಿನಲ್ಲಿ ಸಕ್ಕರೆ ಹಾಕಿದಂತೆಯೇ ಸರಿ. ಇನ್ನು ಮೇಲೆ ಸರಕಾರೀ ನೌಕರರ ಹೆಂಡಂದಿರು ಸಹ ಸರಕಾರೀ ನೌಕರರೇ ಎಂಬುದಾಗಿ ಬೇರೊಂದು ನಿರ್ಣಯವು ಎಲ್ಲಿಯಾದರೂ ದೊರೆತರೆ ಸರಿಯಾಗುವದಲ್ಲವೇ?

ರೇಲ್ವೆ ಕಂಪನಿಯವರಿಗೆ ಹಿಂದುಸ್ಥಾನದಲ್ಲಿ ಹಣಗಳಿಸುವದೊಂದೇ ಬುದ್ಧಿ ಇರುವದೆಂದೂ, ಪ್ರವಾಸಿಕರ— ವಿಶೇಷತಃ ೩ ನೇ ವರ್ಗದ ಪ್ರವಾಸಿಕರ— ಸೌಕರ್ಯಗಳ ಕಡೆಗೆ ಅವರು ಗಮನ ಕೊಡುವದೇ ಇಲ್ಲವೆಂದೂ, ಬಹು ದಿನಗಳಿಂದ ರೇಲ್ವೇ ಕಂಪನಿಗಳನ್ನು ಭರತ ಖಂಡದ ಜನರೆಲ್ಲ ದೂರುತ್ತಿರುವರು. ಈ ಬಗ್ಗೆ ಕ್ಷಣಕ್ಷಣಕ್ಕೆ ಬೇಕಾದಷ್ಟು ಉದಾಹರಣೆಗಳು ದೊರೆಯುವವು. ಹೊಸ ಉದಾಹರಣೆ ಬೇಕಾಗಿದ್ದರೆ ಇದು ನೋಡಿರಿ, ಇಲ್ಲಿದೆ; ಹುಬ್ಬಳ್ಳಿಯಿಂದ ಸಂಜೆಯ ೮ ಗಂಟೆಯ ಸುಮಾರಕ್ಕೆ ಗದುಗಿನ ಕಡೆಗೆ, ಹೊರಡುವ ಗಾಡಿಯು ಒಂದು ಸಲ ಎಡದ 'ಪ್ಲ್ಯಾಟಫಾರ್ಮಿನ' ಕಡೆಗೂ ಒಂದು ಸಲ ಬಲದ 'ಪ್ಲ್ಯಾಟಫಾರ್ಮ'ನ ಕಡೆಗೂ ನಿಲ್ಲುವದು. ಶುಕ್ರವಾರ ಜುಲೈ ತಾ|| ೨೪ ನೇ ದಿನ ಎಡಕ್ಕೆ, ಮರುದಿನವೇ ಬಲಕ್ಕೆ ನಿಂತದ್ದನ್ನು ನಾವು ಕಣ್ಣಾರೆ ಕಂಡಿರುವೆವು. ಹೀಗೆ ಅದಲು ಬದಲು ಮಾಡುವದರಿಂದ ಸುಶಿಕ್ಷಿತ ಪ್ರವಾಸಿಕರಿಗೆ ಸಹ ಬಹು ತೊಂದರೆಯಾಗುತ್ತದೆ. ೩ ನೇ ವರ್ಗದ ಅಶಿಕ್ಷಿತ ಜನರ ಪಾಡುಗಳನ್ನಂತೂ ದೇವರೇ ಬಲ್ಲ. ಹುಬ್ಬಳ್ಳಿಯು ದೊಡ್ಡ ಸ್ಟೇಶನ್; ಅಲ್ಲಿ ಇಂಥಿಂಥ ಸಮಯಕ್ಕೆ ಇಂಥಿಂಥ ಗಾಡಿಗಳು ಇಂಥಿಂಥ ಪ್ಲ್ಯಾಟಫಾರ್ಮಿನಿಂದ ಹೊರಡುವವೆಂಬುದಾಗಿ ಹಲಿಗೆಗಳು ಇರುವದು ಅವಶ್ಯವಿದೆ. ಆದ್ದರಿಂದ ಸರಕಾರದವರು ಈ ಕಡೆಗೆ ಗಮನ ಕೊಟ್ಟು ಆ ಬಗ್ಗೆ ಏರ್ಪಾಡು ಮಾಡುವರೇನು?

ರೇಲ್ವೆ ವಿಷಯಗಳ ಬಗ್ಗೆ 'ಕನ್ನಡಿಗ'ನು ಬಹು ಶ್ರಮಪಡಬೇಕಾಗಿದ್ದಾನೆ. ಆದರೆ ಇದಕ್ಕೆ ಕರ್ನಾಟಕಸ್ಥರ ಬೆಂಬಲವು ಸಾಕಷ್ಟು ದೊರೆಯದಿದ್ದುದು ವ್ಯಸನಕರವಾಗಿದೆ. ಮೊದಲು ರೇಲ್ವೇ ಬೋರ್ಡಿನ ವಿಷಯವನ್ನು 'ಕನ್ನಡಿಗ'ನೆತ್ತಿರುವನು. ಆದರೆ ಅದಕ್ಕೆ ಸಾಕಷ್ಟು ಸಹಿಗಳು ಈ ವರೆಗೂ ಬರಲೊಲ್ಲವು. ಈ ವಿಷಯವನ್ನು "ಕನ್ನಡಿಗನು" ಎತ್ತಿ ೧೦ ವಾರಗಳಾದವು. ಈ ಅವಧಿಯಲ್ಲಿ ೧೨ ನೂರು ಸಹಿಗಳು ಮಾತ್ರ ಬಂದಿವೆ.! ಜನರ ಬೆಂಬಲವು ಒಂದಿದ್ದರೆ ನಾವು ಈ ವಿಷಯದಲ್ಲಿ ಕಡೆಯವರೆಗೆ ಬಡಿದಾಡಲು ಸಿದ್ಧರಿರುವೆವು. ನಮಗೆ ಕನಿಷ್ಠ ಪಕ್ಷಕ್ಕೆ ೧೦ ಸಾವಿರ ಜನರ ಸಹಿಗಳು ಬೇಕು. ಅದರಿಂದ "ಕನ್ನಡಿಗ"ನ ವಾಚಕರು ಈಗಲಾದರೂ ಎಚ್ಚತ್ತು, ಕೂಡಲೇ "ಕನ್ನಡಿಗ"ನ ಅರ್ಜಿ ನಮೂನೆಯನ್ನು ಪುನಃ ಓದಿ, ಅದರಲ್ಲಿ ಬರೆದಂತೆ ಅರ್ಜಿಯ ನಮೂನೆಗೆ ಸಹಿಗಳನ್ನು ಮಾಡಿ ಕಳುಹಿಸಿದರೆ, ಈ ಹೊಸ ರೇಲ್ವೆಗಳ ಹೊರತಾಗಿ ಈಗಿದ್ದ ರೇಲ್ವೇಗಳಲ್ಲಿಯ ಸುಧಾರಣೆಗಳ ಬಗ್ಗೆ ಸಹ ಒಂದೇ ಸವನೇ ಕನ್ನಡಿಗನಲ್ಲಿ ಪ್ರಯತ್ನ ನಡೆಸುವನೆಂಬುದಾಗಿ ವಿಶ್ವಾಸದಿಂದ ಹೇಳಬಲ್ಲೆವು.

ಬಳ್ಳಾರಿಯಲ್ಲಿ ಆಂಧ್ರರಿಂದ ಹೂಡಲ್ಪಟ್ಟ ವಿಶ್ವವಿದ್ಯಾಲಯದ ಪ್ರಶ್ನೆಯಿಂದ ಕರ್ನಾಟಕದ ಏಕೀಕರಣಕ್ಕೆ ಒಳ್ಳೇ ಮಹತ್ವ ಬಂದಿದೆ. ಈ ಸಂಗತಿಯಿಂದ ಜನರಿಗೂ ಏಕೀಕರಣದ ಅವಶ್ಯಕತೆಯು ಕಂಡು ಬರಹತ್ತಿದೆ. ಕಳೆದ ವಾರದಲ್ಲಿ ವಿಜಾಪೂರ, ಬಾಗಲಕೋಟೆ, ಹೊಸಪೇಟೆ, ಹರಪನಹಳ್ಳಿ ಇವೇ ಮೊದಲಾದ ಸ್ಥಳಗಳಲ್ಲಿ ಸಾರ್ವಜನಿಕ ಸಭೆಗಳಾಗಿ ಬಳ್ಳಾರಿಯ ಆಂಧ್ರರ ಕೃತಿಯು ನಿಷೇಧಿಸಲ್ಪಟ್ಟಿತು. ಇನ್ನು ಮೇಲೆ ಬಳ್ಳಾರಿಯಲ್ಲಿ ಸಹ ಈ ಬಗ್ಗೆ ವಿಚಾರಿಸಲು, ಕರ್ನಾಟಕ ಏಕೀಕರಣ ಸಭೆ ಮತ್ತು ಪ್ರಾಂತಿಕ ಕಾಂಗ್ರೆಸ ಕಮಿಟಿಗಳ ವ್ಯವಸ್ಥಾಪಕ ಮಂಡಳಿಗಳು ಬೇಗನೇ ಕೂಡುವವೆಂಬುದಾಗಿ ತಿಳಿಯುತ್ತದೆ. ಇದೇ ಸಮಯದಲ್ಲಿ ಬಳ್ಳಾರಿಯಲ್ಲಿ ಕರ್ನಾಟಕ ಕಾಲೇಜನ್ನು ಸ್ಥಾಪಿಸಬೇಕೆಂಬ ವಿಚಾರವು ಅನೇಕರಲ್ಲಿ ಮೂಡಿದೆ, ಆ ಬಗ್ಗೆ ಹೊಸಪೇಟೆ ಹರಪನಹಳ್ಳಿಗಳಲ್ಲಿ ಠರಾವುಗಳು ಸಹ ನಿರ್ಮಿಸಲ್ಪಟ್ಟಿವೆ. ಅದರಿಂದ ಕನ್ನಡಿಗರು ಎಚ್ಚರಿಯಲು ಇದೊಂದು ಸುಪ್ರಸಂಗವು ಒದಗಿದಂತಾಗಿದೆ. ನಮ್ಮ ಬಳ್ಳಾರಿಯ ಬಂಧುಗಳು ಈ ವಿಷಯವನ್ನು ಅಷ್ಟಕ್ಕೆ ಬಿಡಲು ಬಾರದೇ ಇದರಿಂದ ಅಲ್ಲಿಯ ಕರ್ನಾಟಕದ ಅಭಿಮಾನವನ್ನು ಹೆಚ್ಚಿಸಿಕೊಳ್ಳುವಂತೆ ವಿಶೇಷ ಪ್ರಯತ್ನ ಮಾಡಬೇಕು.

ಮುಂಬೈ ಕನ್ನಡಿಗರು ಸಹ ಈಗ ಎಚ್ಚತ್ತಿರುವರು. ಮುಂಬೈಯಲ್ಲಿ ೧೦-೧೨ ಸಾವಿರ ಜನ ಕನ್ನಡಿಗರಿದ್ದಾರೆ. ಈ ಜನರಿಗಾಗಿ ಕನ್ನಡ ಶಾಲೆಗಳಿಲ್ಲ. ಕನ್ನಡ ವಾಚನಾಲಯಗಳಿಲ್ಲ. ಆದುದರಿಂದ ಅವರು ತಮ್ಮ ಮಾತೃಭಾಷೆಯನ್ನು **ಮರೆಯುವ ಪ್ರಸಂಗವು** ಬರುತ್ತಲಿದೆ. ಈ ಪ್ರಸಂಗವನ್ನು ಹೋಗಲಾಡಿಸುವದಕ್ಕಾಗಿ ಪ್ರಯತ್ನಿಸಲು ನಾಳಿನ ಶ್ರಾವಣ ತಾ|| ದಿನ ಮುಂಬೈಯಲ್ಲಿ ಎಲ್ಲ ಕನ್ನಡಿಗರ ಸಭೆ ನೆರೆಯತಕ್ಕದ್ದಿದೆ. ಈ ಬಗ್ಗೆ ಅಲ್ಲಿ ಕನ್ನಡದ ಅಭಿಮಾನದಿಂದ ಪ್ರಯತ್ನ ನಡೆಸುತ್ತಲಿರುವ ನಮ್ಮ ಬಂಧುಗಳನ್ನು ನಾವು ಅಭಿನಂದಿಸದೇ ಇರಲಾರೆವು.

" ಐಕ್ಯಾಂಕುರವು ಎಲೆದೋರಿತು.

ಕನ್ನಡಿಗರೇ, ನಿನ್ನಿನ ದಿನವು (೧೬-೭-೨೫) ಎಂಥ ಪರ್ವಕಾಲ ವಿದ್ದಿತು! ಸ್ವದೇಶದಲ್ಲಿಯೂ [illegible]' ಎಂದು ರಾ|| ರಾ|| ಬಿ. ಎಲ್. ಪಾಟೀಲ ರಾ|| ಇವರು ನಮಗೆಲ್ಲ ವಿದ್ಯಾರ್ಥಿ ಬಂಧುಗಳಿಗೂ, ಮಂಗಳವೇಢೆ ಶ್ರೀನಿವಾಸರಾಯರಿಗೂ ಧನ್ಯವಾದವನ್ನು ಹೇಳುತ್ತ ಅನ್ನಪೂರ್ಣ ಸಾಮ್ರಾಜ್ಯಗ್ರಹದಿಂದ ಹೊರ ಹೊರಟರು. ಅಲ್ಲಿ ನಡೆದ ಸಂಗತಿಯನ್ನು ಕೇಳಬೇಕಿಲ್ಲವಷ್ಟೇ? ಕನ್ನಡಿಗರೇ ಕರ್ನಾಟಕವೆಲ್ಲ ಒಟ್ಟುಗೂಡಲಿ, ಅದಕ್ಕೆ ವಿಶ್ವವಿದ್ಯಾಲಯವು ಸಿಗಲಿ, ಅದಕ್ಕೊಂದು ಸ್ವತಂತ್ರ ಪ್ರಾಂತವಾಗಲಿ ಹೆಚ್ಚಿಗೇನು? ಅದಕ್ಕೆ ಸ್ವರಾಜ್ಯವೇ ಪ್ರಾಪ್ತವಾಗಲಿ, ಅಂದರೂ ದೊಡ್ಡ ಮಾತಲ್ಲ. ಬ್ರಾಹ್ಮಣ ಬ್ರಾಹ್ಮಣೇತರರ ಐಕ್ಯವಾಗಲಿ! ಆದ ಭೂಮಂಡಲವು ನಡುಗಲಿ! ಕನ್ನಡಿಗರೇ ಕರ್ನಾ

ಟಕದಂಥ ಫಲದ್ರೂಪವಾದ ಭೂಮಿಯಲ್ಲಿ, ರಾಷ್ಟ್ರೋನ್ನತಿಯ ಸ್ಫೈರ್ತಿಯನ್ನು ಕಕ್ಕುವ ಬಕ್ಕಲಿಗರಾದ ಸಿ. ಆರ್. ರಡ್ಡಿಯವರು ಐಕ್ಯದ ಬೀಜವನ್ನು ಬಿತ್ತಿ ಹೋದರು. ಆ ಮೇಲೆ ವಿದ್ಯಾರಣ್ಯರ ಪುಣ್ಯತಿಥಿಯಂಥ ಸುಮುಹೂರ್ತದಲ್ಲಿ ಮೊಳಕೆಯು ತೋರ ಹತ್ತಿತು. ನಿಜ್ಜ ಈ ಐಕ್ಯಾಂಕುರವು ದೊಡ್ಡದಾಗಿ ಫಲ ಪ್ರದವಾಗುವವರೆಗೆ ಇದನ್ನು ಪೋಷಿಸುವದು, ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯ ವಾಗಿರುವದು. ಕನ್ನಡಿಗರೇ ಇದನ್ನು ಬಲು ಜೋಕೆಯಿಂದ ಕಾಪಾಡಿರಿ. ಪರಕೀಯರು ಮುಂಬಿ—ಯರು ಕಾವಿ ತೋಗಲಿನ ಪದ ಕೆಡಿಸಿದ ಹಾಗೆ ಮಾಡಿ ಕಮರಿಸವದೆ, ಬಲು ಜಾಣತನದಿಂದ ಈ ಐಕ್ಯಾಂಕುರವನ್ನು ಬೆಳೆಸಿರಿ. ಅತಿವೃಷ್ಟಿಯಾದೀತು. ಅನಾವೃಷ್ಟಿಯಾದೀತು. ಜೋಕೆ! ಈ ಪುಟ್ಟ ಅಂಕುರಕ್ಕೆ ಸಾಕಷ್ಟೇ ನೀರು ಹಿಡಿಸುವಂಥ ಒಂದು ಮಾಟದ ಮಡಿಯನ್ನು ಮಾಡಿರಿ. (ಮಡಿ ಬದಿಗೆ ಬೇಲಿ ಮಾತ್ರ ಅಸ್ಪೃಶ್ಯರು ಕಳವಳ ಒಟ್ಟಾರು.) ಕನ್ನಡಿಗರೇ ಈ ಐಕ್ಯವು ವೃಕ್ಷವನ್ನು ಬೆಳೆಸಲಿಕ್ಕೆ ಇಂಗ್ಲಂಡದಿಂದ ಬಂದಂಥ Unity seed expert (ಐಕ್ಯ ಬೀಜ ತಜ್ಞರು) ಬೇಕೇನು ಮತ್ತೆ? ನೋಡಿರಿ ಹೊಸ ಹಾಕ್ಕದಸಿಗಿಂತ ಹಳೇ ರೋಗಿಯು ಬೇಕಾದಾನು.

ಅದಿರಲಿ; ಕನ್ನಡಿಗರೇ ಈ ಕರ್ನಾಟಕದ ಏಕೀಕರಣದ ಬಗ್ಗೆ ಶ್ರೀ. ಕಡಪಾ ಇವರ ಕಡಕತನಾಟವು ಐದು ವರ್ಷಗಳ ಹಿಂದೆ ಬಲು ಜೋರಿನಿಂದ ಕೇಳಬರುತ್ತಿತ್ತಲ್ಲವೇ? ಕೆಲವು "ಅಪ್ಪಗನ್ನಡಿಗ" ರಂತೂ ಆಗ ಕರ್ನಾಟಕದೊಳಗಿನ ಮರಾಠಿಗರಿಗೆ 'ಬಸ್ತ' ಆಗಿ ಹೋಗಿದ್ದರು. ಅಗ್ಗಿ ಮುಹೂರ್ತವು ನೆಟ್ಟಗಿದ್ದಿಲ್ಲವೋ ಹೇಗೆ? 'ಆದದ್ದಾಯಿತು. ಇನ್ನಾದರು ಮುಂದೆ ವಾರಿಮಿಡಿಯೊ ಪ್ರಾಣಿ'!

ಧಾರವಾಡ 'ಪ್ರವಾಸಿ'
೧೭-೭-೪೧

ಕರ್ನಾಟಕ ಏಕೀಕರಣ ಸಭೆ

ಧಾರವಾಡ ಜಿಲ್ಲೆಯ ಶಾಖೆ

ಕರ್ನಾಟಕ ಪ್ರಾಂತಿಕ ಏಕೀಕರಣದ ಕಾರ್ಯವು ಈಗ್ಗೆ ಮುಂದೆ ಮುಂದೆ ಸಾಗಹತ್ತಿದೆ. ಕಳೆದಾಚೆಯ ವಾರದಲ್ಲಿ ವಿಜಾಪೂರ ಜಿಲ್ಲೆಯಲ್ಲಿ ಒಂದು ಶಾಖೆಯು ಸ್ಥಾಪಿಸಲ್ಪಟ್ಟಿದ್ದನ್ನು "ಕನ್ನಡಿಗನ" ವಾಚಕರು ಬಲ್ಲರು. ಕಳೆದ ವಾರದಲ್ಲಿ ಧಾರವಾಡ ಜಿಲ್ಲೆಯಲ್ಲಿಯೂ ಒಂದು ಶಾಖೆಯು ಸ್ಥಾಪಿಸಲ್ಪಟ್ಟಿತು. ಗುರುವಾರ ತಾ| ೧೭ ನೇ ದಿನ ಸಾಯಂಕಾಲದ ೬ ಘಂಟೆಗೆ ಅನ್ನಪೂರ್ಣಾ ನಾಟಕ ಶಾಲೆಯಲ್ಲಿ ರಾವ ಬಹಾದ್ದೂರ ಪಾಟೀಲ ಅಧ್ಯಕ್ಷ ಧಾರವಾಡ ಮುನಸಿಪಾಲಿಟಿ ಇವರ ಅಧ್ಯಕ್ಷತೆಯಲ್ಲಿ ಸಭೆಯು ನೆರದಿತ್ತು. ಧಾರವಾಡದಲ್ಲಿ ಇತ್ತಿತ್ತಲಾಗಿ ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಭೇದ ಭಾವವಿದ್ದರೆ ಎಲ್ಲರೂ ಸೇರಿಕೊಂಡು ಕರ್ನಾಟಕ, ಕನ್ನಡ ನುಡಿಯ ವಿಷಯಗಳನ್ನು ಚರ್ಚಿಸುತ್ತಿರುವದು ಅತಿಶಯವಾದ ಆನಂದದ ಸಂಗತಿಯು. ಅದೆ ಪ್ರಕಾರವಾಗಿ ಈ ದಿನದ ಸಭೆಯಲ್ಲಿಯೂ ಯಾವ ಬಗೆಯ ಭೇದ ಭಾವವಿಲ್ಲದೆ ಬ್ರಾಹ್ಮಣ ಬ್ರಾಹ್ಮಣೇತರರು ಕೂಡಿ, ಉತ್ಸಾಹದಿಂದ ಕೆಲಸ ಮಾಡುತ್ತಿರುವದನ್ನು ಕಂಡು ಎಲ್ಲರ ಹೃದಯವು ಉಕ್ಕಿ ಬಂದಿತು. ಭವ್ಯವಾದ ನಾಟಕ ಶಾಲೆಯು ಜನರಿಂದ ತುಂಬಿದ್ದಿತು. ಮೊದಲು ಶ್ರೀ. ಕಡಪಾ ವಕೀಲರು ತಮ್ಮ ಪ್ರಸ್ತಾವಿಕ ಭಾಷಣದಲ್ಲಿ ಏಕೀಕರಣದ ಮಹತ್ವ ಮತ್ತು ಕರ್ನಾಟಕ ಪ್ರಾಂತಕ್ಕೆ ಒಂದೇ ಸರಕಾರ ವಿಲ್ಲದ್ದಕ್ಕೆ ಬಕ್ಕಾರಿಯಲ್ಲಿ ಎದ್ದಂತೆ ಅನ್ಯ ಭಾಷೆಗಳ ಆಕ್ರಮಣವನ್ನು ಕುರಿತು ವಿವೇಚನೆ ಮಾಡಿದರು. ಆ ಮೇಲೆ ಧಾರವಾಡ ಜಿಲ್ಲೆಯಲ್ಲಿ ಏಕೀಕರಣದ ಕಾರ್ಯವನ್ನು ಮುಂದೆ ಸಾಗಿಸುವದಕ್ಕಾಗಿ ಒಂದು ಜಿಲ್ಹಾ ಸಭೆಯಿರಬೇಕಾಗಿ ಶ್ರೀ. ಬಸವನಾಳರವರು ಸೂಚಿಸಿದರು. ಹಾಗೆ ವಿಶ್ವ ವಿದ್ಯಾಲಯವು ಬೇಗನೆ ಸ್ಥಾಪಿಸಲ್ಪಡುವದರಿಂದ ಕನ್ನಡಿಗರಿಗೆ ಆಗುವ ಹೊಂದಿಕೆಯ ಬಗ್ಗೆಯೂ ಆ ಕೇಂದ್ರವು ಇಲ್ಲದಂತಾಗಬೇಕಾದರೆ ಕನ್ನಡಿಗರೆಲ್ಲರೂ ಈಗಿನಿಂದಲೇ ಪ್ರಯತ್ನಿಸಬೇಕೆಂದೂ, ಏಕೀಕರಣವು ಪ್ರತಿಯೊಂದು ದೃಷ್ಟಿಯಿಂದಲೂ ಕರ್ನಾಟಕಕ್ಕೆ ಅತ್ಯವಶ್ಯಕವೆಂದೂ, ಶ್ರೀ ಬಸವನಾಳರವರ ಸರಸವಾಗಿ ಹೇಳಿದರು. ಆದನ್ನು ಶ್ರೀ ಯುತರುಗಳಾದ ಹಿರೇಮಠ (ಹಾವೇರಿ) ಒಡೆಯರ, ನರಗುಂದಕರ, ನಲವಡಿ, ಇವರು ಅನುಮೋದಿಸಲು ಅದು ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟಿತು. ಈ ಜಿಲ್ಹೆ ಸಭೆಯ ಕಾರ್ಯವನ್ನು ಅಮಲಿನಲ್ಲಿ ತರುವದಕ್ಕಾಗಿ ಒಂದು ವ್ಯವಸ್ಥಾಪಕ ಮಂಡಳಿಯಿರಬೇಕಾಗಿ ಅಧ್ಯಕ್ಷರು ಸೂಚಿಸಿದ ಗೊತ್ತುವಳಿಯು ಸಹ ಸರ್ವಾನುಮತದಿಂದ ಸಿದ್ಧಗೊಳಿಸಲ್ಪಟ್ಟಿತು. ಈ ಮಂಡಳಿಗೆ ಶ್ರೀ. ಮುಲಕೋಟಿಯವರು ಅಧ್ಯಕ್ಷರಾಗಿಯೂ, ಶ್ರೀ. ಬಸವನಾಳರು ಉಪಾಧ್ಯಕ್ಷರಾಗಿಯೂ, ಶ್ರೀಯುತರುಗಳಾದ, ಒಡೆಯರ ವಕೀಲರೂ, ಡಾ. ಕಾಮಶಾಪೂರವರೂ ಕಾರ್ಯದರ್ಶಿಗಳಾಗಿಯೂ ನೇಮಿಸಲ್ಪಟ್ಟರು. ಮತ್ತು ಕೆಳಗೆ ಕಾಣಿಸಿದ ೯ ಜನರು ಸಭಾಸದರಾಗಿರುವರು:— ಕಡಪಾ, ರಾವಬಹಾದ್ದೂರ ಪಾಟೀಲ, ರಂಗನಾಥ ದಿವಾಕರ, ಡಾ. ಶಿರಹಟ್ಟಿ, ಶಿವಲಿಂಗಶಾಸ್ತ್ರಿ, ನಲವಡಿ ಎಫ್. ಟಿ. ನಲವಡಿ ಜಿ. ಆರ್ ಕಟ್ಟೀಮನಿ ಮತ್ತು ಅಂಗಡಿ.

ಕಡೆಗೆ ಅಧ್ಯಕ್ಷರಾದ ರಾ. ಬ. ಪಾಟೀಲರೆದ್ದು ಸಮಾರೋಪಣ ಪರವಾದ ಭಾಷಣಮಾಡಿದರು. ವಿಶ್ವವಿದ್ಯಾಲಯ, ಬಂದರಗಳ ವಿಷಯವಾಗಿ ಹೇಳಿ ಈ ಏಕೀಕರಣದ ವಿಷಯವಾಗಿ ಕನ್ನಡದಲ್ಲಿ ಒಂದು ಚಿಕ್ಕ ಪುಸ್ತಕವನ್ನು ಬರೆದು ಪ್ರಸಿದ್ಧಿಸಬೇಕಾಗಿಯೂ, ಅದರ ವೆಚ್ಚಕ್ಕಾಗಿ ತಾವು ೫೦ ರೂ. ಗಳನ್ನು ಶ್ರೀ. ಶಿವಲಿಂಗಶಾಸ್ತ್ರಿಗಳ ಕಡೆಗೆ ಕೊಡುವೆನಾಗಿಯೂ ಜಾಹೀರ ಪಡಿಸಿದರು. ಶ್ರೀ ಹಿರೇಮಠರವರು ಅಧ್ಯಕ್ಷರ, ನಾಟಕಶಾಲೆಯ ಒಡೆಯರಾದ ರಾ. ಬಾ. ಗೋಪಾಳಗಿರಿ, ನಾಟಕದ ಒಡೆಯರಾದ ನವಾಶಿವರಾವ, ಮತ್ತು ಕಾರ್ಯದರ್ಶಿಗಳಾದ ಶ್ರೀ. ಮಂಗಳವೇಢೆಯವರ ಆಭಾರ ಮನ್ನಿಸಿದ ತರುವಾಯ ಸಭೆ ವಿಸರ್ಜನೆಯಾಯಿತು.

ಸುಸ್ಥಿತಿಯಾದ ಕರ್ನಾಟಕವು.

[ಲೇಖಕರು— ರಾಮಚಂದ್ರ ನರಸಿಂಹಾಚಾರ ಪುಣೇಕರ ಇವರಿಂದ]

ಕರ್ನಾಟಕ ಪ್ರಾಂತದಲ್ಲಿ ಸಾಕಷ್ಟು ಮಳೆಯೂ ವಿಪುಲವಾದ ನೀರೂ ಇದ್ದುದ್ದರಿಂದ ಬರಗಳು ಕಡಿಮೆ. ಗೋದಿ, ಕಡಲೆ, ಬತ್ತ, ಜೋಳ, ಮುಂತಾದ ಆಹಾರೋಪಯುಕ್ತವಾದ ಧಾನ್ಯಗಳು ಬೇಕಾದ ಪ್ರತಿಯಲ್ಲಿ ಹುಟ್ಟುತ್ತವೆ. ಕರ್ನಾಟಕದಲ್ಲಿ ತರತರದ ಪಕ್ಷಿಕಾಯಿಗಳೂ ಮಧುರವಾದ ಹಣ್ಣು ಹಂಪಲುಗಳೂ ಬೇಕಾದಷ್ಟು ಸಿಗುತ್ತವೆ. ಕರ್ನಾಟಕದ ಅಡವಿಗಳು ಊರುವಲವನ್ನೂ ಇಮಾರತಿಯ ಕಟ್ಟಿಗೆಯನ್ನೂ ಕೇವಲ ಇಡೀ ಕರ್ನಾಟಕಕ್ಕೆ ಪೂರೈಸಿಕೊಡುತ್ತವೆ. ಹಿಂಗಲ್ಲ, ಪರಪ್ರಾಂತಗಳಿಗೂ ಪೂರೈಸಿಕೊಡುತ್ತವೆ. ಕರ್ನಾಟಕವು ಅತ್ಯುತ್ತಮವಾದ ಹತ್ತಿಯನ್ನು ಬೆಳೆಯುತ್ತಿದ್ದು ನೆಯ್ಗೆಯ ವಿಷಯದಲ್ಲಿ ಬೇರೆ ಪ್ರಾಂತಗಳಿಗೆ ಗುರುವಾಗಬಲ್ಲದು. ಕರ್ನಾಟಕದ ಪಾತ್ರೆಗಳು ಹೆಸರಾಗಿವೆ. ಸುಗಂಧದ್ರವ್ಯಗಳು ಲೋಕಪ್ರಿಯವಾಗಿವೆ. ಬಣ್ಣಗಳು ಅಂದವಾಗಿವೆ. ಖನಿಜಗಳು ಹೇರಳವಾಗಿವೆ. ಕಾವ್ಯೋಪಾಸನೆಗಳು ಸಂಪನ್ನವಾಗಿವೆ, ಬುದ್ಧಿಯು ಅಲೌಕಿಕವಾದೆ. ಜನಸ್ತೋಮವು ಸುಂದರವಾದೆ. ಹಣವು ಸಮೃದ್ಧಿಯನ್ನು ಕೊಡುವ ಲಕ್ಷ್ಮಿಯು ಕಾಲು ಮುರಿದಿದ್ದಾಳೆ. ಕಣ್ಣು ಸುಟ್ಟಿಲ್ಲ. ಕರ್ನಾಟಕದಲ್ಲಿ ವ್ಯಾಸ ವಾಲ್ಮೀಕಿಗಳ ಸಮೃದ್ಧಿ. ಪತಿವ್ರತೆಗಳು ಅಭ್ಯಾಸವಾದವುಗಳು. ಜನರು ಉದಾರರು, ಅವರಿಗೆ ಬಾರದುದರಲ್ಲಿ "ಹಾಸ" ಏನೇ

ಹೀಗ ಸುಂದರವೂ ಸುಸ್ಥಿತಿಯೂ ಆದ ದೇಶವು ಕರ್ನಾಟಕದ ಹೊರತು ಬೇರೊಂದಿಲ್ಲ. ಇಂಥ ಸ್ವಯಂಸಂಪೂರ್ಣವಾದ ಕರ್ನಾಟಕವು ದೂರದಲ್ಲಿದ್ದ ಕನ್ನಡಿಗನ ಮನಸ್ಸನ್ನು ಸೆಳೆಯುವದು ಆಶ್ಚರ್ಯವಲ್ಲ. ಇದನ್ನಾಳಿದ ಅರಸರು ನಿಜವಾಗಿ ಧನ್ಯರು.

ಕರ್ನಾಟಕದಲ್ಲಿ ಶ್ರೀಮಂತರಿದ್ದಂತೆ ಬಡವರೂ ಇದ್ದಾರೆ, ಬುದ್ಧಿವಂತರಿದ್ದಂತೆ ದಡ್ಡರೂ ಇದ್ದಾರೆ, ಉದ್ಯೋಗಿಗಳಿದ್ದಂತೆ ಸೋಮಾರಿಗಳೂ ಇದ್ದಾರೆ, ಸಶಕ್ತರಿದ್ದಂತೆ ಅಶಕ್ತರೂ ಇದ್ದಾರೆ, ಸುಶಿಕ್ಷಿತರಿದ್ದಂತೆ ಅಶಿಕ್ಷಿತರೂ ಇದ್ದಾರೆ, ನೀತಿವಂತರಿದ್ದಂತೆ ಅನೀತಿವಂತರೂ ಇದ್ದಾರೆ. ಈ ಸ್ಥಿತಿಗೆ ಯಾವ ದೇಶವೂ ಅಪವಾದವಿಲ್ಲ. ಆದರೆ ಕರ್ನಾಟಕದ ಸುಸ್ಥಿತತ್ವವು ಪರಿಪೂರ್ಣವಿರಲ್ಲಿಲ್ಲ.

ಕರ್ನಾಟಕದಲ್ಲಿ ಇಷ್ಟೆಲ್ಲ ಸಾಧನಗಳು ಏಕತ್ರಿತವಾಗಿದ್ದರೂ ಜನರು ಸುಖಿಗಳು ಯಾಕೆ ಇಲ್ಲ? ವೈಯಕ್ತಿಕ ಶ್ರೇಷ್ಠತ್ವದಿಂದ ದೇಶವು ಮುಂದೆ ಬರುವದಿಲ್ಲ ಸುಖಿಯಾಗುವದಿಲ್ಲ; ಅದಕ್ಕೆ ಸಾರ್ವತ್ರಿಕ ಶ್ರೇಷ್ಠತ್ವವು ಬೇಕು. ಸಾರ್ವತ್ರಿಕ ಶ್ರೇಷ್ಠತ್ವವು ಪ್ರಾಪ್ತವಾಗಬೇಕಾದರೆ ವಿದ್ಯಾಭಿವೃದ್ಧಿ, ಉದ್ಯೋಗ ವ್ಯಾಪಾರಗಳ ಅಭಿವೃದ್ಧಿ ಐಕ್ಯ ಮತ್ತು ಸಂಘಶಕ್ತಿ ಇವುಗಳ ಅವಶ್ಯಕತೆಯುಂಟು. ಸುಬುದ್ಧರಾದ ಕನ್ನಡಿಗರು ಈ ದಿಸೆಯಲ್ಲಿ ಪ್ರಯತ್ನ ಮಾಡಿದರೆ ಕರ್ನಾಟಕವು ಆದರ್ಶವಾಗದೆ ಇರದು,

ವೈತರಣೀ ಕುಂಡ

(ಲೇಖಕರು— ರಾಮಚಂದ್ರ ನರಸಿಂಹಾಚಾರ ಪುಣೇಕರ ಇವರಿಂದ)

ಕೊಳಚಿನೀರಿನ ಗುಂಡಿಯೆಂದರೆ ಗುಂಗಾಡುಗಳ ತವರು ಮನೆ, ಚಿಕ್ಕಾಡುಗಳ ಜನ್ಮಸ್ಥಳ, ಸೊಣಗಳ ಉಗಮಸ್ಥಾನ, ರೋಗಜಂತುಗಳ ಆಗರ, ಹೊಲಸಿನ ಅಕ್ಷಯವಾದ ನಿಧಿ.

ಯಾವ ಊರಲ್ಲಿ ಬಚ್ಚಲನೀರು ಹರಿದು ಹೋಗುವದಕ್ಕೆ ಕಾಲವೆಗಳು (ಗಟಾರಗಳು) ಇಲ್ಲವೋ ಆ ಊರಲ್ಲಿ ಮನೆಯ ಒಳಬದಿಗೆ ಬಚ್ಚಲವಿದ್ದರೆ ಹೊರಬದಿಗೆ ನೀರಿನ ಗುಂಡಿಗಳಿರುತ್ತವೆ. ಆ ಗುಂಡಿಗಳು ಬಹುಶಃ ಕಟ್ಟಿರುವದಿಲ್ಲ; ಕಟ್ಟಿದವಿದ್ದರೂ ನೀರು ಇಂಗದಷ್ಟು ಗಟ್ಟಿಯಾಗಿ ಕಟ್ಟಿದವಿರುವದಿಲ್ಲ. ಬಚ್ಚಲದಲ್ಲಿ ಬಿದ್ದ ಎಲ್ಲ ತರದ ನೀರು ಗುಂಡಿಯಲ್ಲಿ ಸಂಗ್ರಹಿತವಾಗುತ್ತದೆ. ಅದು ಬೇಗವಿಲ್ಲದೆ ಸಾವಕಾಶವಾಗಿ ಹರಿದು ಇಂಗುತ್ತದೆ.

ಕೊಳಚಿ ನೀರಿನ ಗುಂಡಿಗಳು ವಿಶೇಷತಃ ಹೈಲುಕಿನಿಯಲ್ಲಿ ಇರುತ್ತವೆ. ಅವು ಇಲ್ಲದಲ್ಲಿ ನೀರು ಹಾಗೇ ಹರಿದು ಓಣಿಯಲ್ಲಿ ಬಿದ್ದು ಒಣಗುತ್ತದೆ. ಇಲ್ಲವೆ ಸ್ವಾಭಾವಿಕವಾದ ತಗ್ಗುಗಳಲ್ಲಿ ಹೋಗಿ ನಿಲ್ಲುತ್ತದೆ. ಮಲ್ನಾಡದಲ್ಲಿ ಬಚ್ಚಲ ನೀರು ಬೀಳುವ ಸ್ಥಳದಲ್ಲಿ ಒಂದು ಕುಣಿಯನ್ನು ಮಾಡಿ ಅದರೊಳಗೆ ಕಾವಿಯನ್ನಾಗಲಿ ಬಾಳೆಯನ್ನಾಗಲಿ ಹಚ್ಚುತ್ತಾರೆ.

ಕೊಳಚಿ ನೀರಿನ ಗುಂಡಿಗಳು ಇರುವದೆಂದರೆ ಆರೋಗ್ಯ ಶಾಸ್ತ್ರದ ಶಿಕ್ಷಣದ ಅಭಾವದ ಲಕ್ಷಣವು.

ಮುನಿಸಿಪಾಲಿಟಿಗಳಿದ್ದ ಊರುಗಳಲ್ಲಿ ಗಟಾರಗಳಿರುತ್ತವೆ. ಅವುಗಳ ವಿಷಯಕ್ಕೆ ಬೇರೊಂದು ಲೇಖದಲ್ಲಿ ಬರೆಯಬಹುದುವದು. ಸ್ಯಾನಿಟರಿ ಕಮೀಟಿಗಳಿದ್ದ ಊರುಗಳಲ್ಲಿ ಕಟ್ಟಿದ ಗುಂಡಿಗಳಿರುತ್ತವೆ. ಆ ಗುಂಡಿಗಳ ನೀರನ್ನು ಮಲಾಲಯೋರದು ಆಲಸ್ಯ ಮತ್ತು ಕರ್ತವ್ಯ ಪರಾಙ್ಮುಖತೆ, ಜನರ ದುರ್ಲಕ್ಷ ಇವುಗಳ ಮೂಲಕ ಗುಂಡಿಗಳ ನೀರು ತೆಗೆಯಲ್ಪಡುವದೇ ಇಲ್ಲ. ಅರ್ಧ ಮುಕ್ಕಾಲು ತೆಗೆಯಲ್ಪಡುತ್ತದೆ. ಅಥವಾ ತೆಗೆಯುವವರಾದ ಬಳಿಕ ಸ್ವಲ್ಪ ಕಾಲದಲ್ಲಿ ಉಳಿಯುತ್ತದೆ. ಗುಂಡಿಗಳು ತುಂಬಿ ಹೆಚ್ಚಾದ ನೀರು ಓಣಿಗೆ ಬಂದು ಮಂದು ಹತ್ತಿತೆಂದರೆ ನರಕ ಲೋಕದೊಳಗೆ ವೈತರಣೀಯೆಂಬ ನದಿಯು ಇರುತ್ತದೆಂದು ಪುರಾಣಗಳೊಳಗಿನ ವರ್ಣನೆಯೇ ನೆನಪಾಗುತ್ತದೆ. ಕಮಿಟಿಗಳು ಇಲ್ಲದ ಊರುಗಳಲ್ಲಿ ಗುಂಡಿಗಳ ಸ್ಥಿತಿಯನ್ನು ಬಣ್ಣಿಸಲಿಕ್ಕಾಗದು. ಅವ್ಯವಸ್ಥಿತ ಗುಂಡಿಗಳ ದೃಶ್ಯವನ್ನು ನಾನು ಹಿಂದಕ್ಕೆ ಬಾಗೇವಾಡಿಯಲ್ಲಿ (ಬಿ. ಪಿ. ರ.) ನೋಡಿದ್ದೆನು. ಈಗ ಗೋಂದಲದಲ್ಲಿ ನೋಡುತ್ತಾ ಇದ್ದೇನೆ.

ಕೊಳಚಿ ನೀರಿನ ಗುಂಡಿಗಳಿಂದ ಮೇಲೆ ಹೇಳಿದ ಹುಳಗಳ ಉತ್ಪತ್ತಿ ಸ್ಥಿತಿ ಅಭಿವೃದ್ಧಿಗಳಾಗಿ ರೋಗಗಳ ಪ್ರಸಾರವು ವೇಗದಿಂದ ಸಾಗುತ್ತದೆ

ಮುನಿಸಿಪಾಲಿಟಿ ಸ್ಯಾನಿಟರಿ ಕಮೀಟಿಗಳ ಮೊದಲನೇ ಕರ್ತವ್ಯವೆಂದರೆ ಊರೊಳಗಿನ ಜನರಿಗೆ ಸಾಕಾಗುವಷ್ಟು ಸ್ವಚ್ಛ ಮತ್ತು ಶುದ್ಧವಾದ ನೀರನ್ನು ಪೂರೈಸಿ ಕೊಡುವದು. ಬಳಿಕೆಯಾಗಿ ಬಿದ್ದ ನೀರನ್ನು ಇಂಗಗೊಡದೆ ದೂರಗಟ್ಟುವದು. ಇಂಥ ಯಾವ ಸಂಸ್ಥೆಯೂ ಇಲ್ಲದ ಊರುಗಳ ಜನರೂ ಆರೋಗ್ಯದ ಮಹತ್ವವನ್ನರಿತು ಬಳಿಕೆಯಾದ ನೀರಿನ ವ್ಯವಸ್ಥೆಯನ್ನು ಸಾರ್ವಜನಿಕ ಸಹಕಾರಿತೆಯಿಂದ ಮಾಡಿಕೊಳ್ಳಬೇಕು. ಊರು ಎಷ್ಟು ಚಿಕ್ಕದಿದ್ದರೂ ಈ ಕೆಲಸದಲ್ಲಿ ಅಲಕ್ಷ್ಯಮಾಡುವದು ಉಚಿತವಲ್ಲ. ಗುಂಡಿಗಳ ಮೂಲಕ ಆಗುವ ಅಪಾಯಗಳನ್ನು ಕಡಿಮೆ ಮಾಡುವ ಕೆಲಸದಲ್ಲಿ ಸಂಸ್ಥೆಗಳಿಗೆ ಊರ ಜನರ ಸಹಾಯವು ಅವಶ್ಯ ಬೇಕು. ಬಚ್ಚಲಗಳಲ್ಲಿ ಮುಸರೆಯನ್ನು ಚಲ್ಲುವದು ಹಾಗೂ ಮೂತ್ರ ವಿಸರ್ಜನ ಮಾಡುವದರಿಂದಲೂ ಗುಂಡಿಗಳ ನೀರು ಕೆಡುತ್ತದೆ ಅದನ್ನು ಎಲ್ಲರೂ ಬಿಟ್ಟರೆ ಹಿಂದ ಪಟ್ಟರೆ ಅಪಾಯವು ಕಡಿಮೆಯಾಗುವದು.

ಮನೆಯೆಂದರೆ ಮನುಷ್ಯನ ನಿವಾಸಸ್ಥಾನ. ಆತ್ಮನ ನಿವಾಸಸ್ಥಾನವು ದೇಹವಿದ್ದಂತೆ ದೇಹದ ನಿವಾಸಸ್ಥಾನವು ಮನೆ. ದೇಹವು ಹೊಲಸಾಗಿ ಇರುವದು ಹೇಗೆ ನಮಗೆ ಸೇರುವದಿಲ್ಲವೋ(?) ಹಾಗೇ ಮನೆ ಹೊಲಸಾಗಿರುವದು ನಮಗೆ ಸೇರಬಾರದು. ದೀರ್ಘಾಯುಷ್ಯವು ಆರೋಗ್ಯವಿದ್ದರೆ ಲಭಿಸುತ್ತದೆ. ಆರೋಗ್ಯವು ಸ್ವಚ್ಛತೆಯಿಂದ ಉಳಿಯುತ್ತದೆ. ನಾವು ಇರುವದು ಹೊರಗಿನಕಿಂತ ಮನೆ

ಯೊಳಗೇ ಬಹಳ ಮನೆಯು ಎಲ್ಲ ತನದಿಂದ ಸ್ವಚ್ಛವಿದ್ದರೆ ದೇಹಕ್ಕೆ ಆರೋಗ್ಯವಾಗುವದಲ್ಲದೆ ಮನಸ್ಸು ಪ್ರಸನ್ನವಿರುತ್ತದೆ. ಮನೆಯ ಹೊರಭಾಗದಲ್ಲಿದ್ದ ಗುಂಡಿಯೊಳಗಿನ ಕೊಳಚೆನೀರಿನ ದುರ್ಗಂಧವು ಗಾಳಿಯ[illegible]ಳಗೆ ಒಂದರೆ ಊಟವೂ ಹೋಗುವದಿಲ್ಲ. ಇದಕ್ಕೆ ಉಪಾಯವೆಂದರೆ ಮನೆಯೊಳಗೆ ಬಚ್ಚಲವೇ ಇರಬಾರದು. ಅಂದರೆ ಗುಂಡಿಯು ತಾನೇ ಇಲ್ಲದಾಗುತ್ತದೆ. ಸ್ನಾನಕ್ಕಾಗಿ ಬಚ್ಚಲವನ್ನು (ಶಕ್ಯವಿದ್ದವರು ಸ್ವತಂತ್ರ ಬಚ್ಚಲ ಮನೆಯನ್ನು) ಅಂಗಳದಲ್ಲಿಯಾಗಲಿ ಹಿತ್ತಲದಲ್ಲಿಯಾಗಲಿ ಮಾಡಿ ಅದರಲ್ಲಿ ಬಿದ್ದ ನೀರನ್ನು ಪಲ್ಲೆಕಾಯಿಗಳನ್ನು ಬೆಳೆಯುವದಕ್ಕೆ ಉಪಯೋಗಿಸಬೇಕು (ಅರ್ಥಾತ್ ಈ ಸೂಚನೆಯು ಅಂಗಳ ಅಥವಾ ಹಿತ್ತಲ ಇದ್ದ ಮನೆಗಳಲ್ಲಿ ವಾಸಮಾಡುವವರಿಗಾಗಿ ಇರುತ್ತದೆ.). ಮೂತ್ರಕ್ಕಾಗಿ ಸ್ವತಂತ್ರ ಸ್ಥಳಗಳನ್ನು ಕಲ್ಪಿಸಿ ಅಲ್ಲಿ ಬಿದ್ದ ಮೂತ್ರದ ಮೇಲೆ ದಿನಾಲು ಸಣ್ಣ ಒಣ ಮಣ್ಣು ಹಾಕಿ ಆ ಮಣ್ಣನ್ನು ಮೇಲಿಂದಮೇಲೆ ತೆಗೆದು ಗೊಬ್ಬರದಂತೆ ಉಪಯೋಗಿಸಬೇಕು. ಮುಸರೆಯ ನೀರನ್ನು ಕಬ್ಬಿಣದ ಬುಟ್ಟಿಗಳಲ್ಲಿ ಕೂಡಹಾಕಿ ತಿಪ್ಪೆಗೆ ಚಲ್ಲಬೇಕು. ತಿಪ್ಪೆಯನ್ನೂ ಮೇಲಿಂದ ಮೇಲೆ ಒಸಿಸುತ್ತಿರಬೇಕು. ಶಕ್ಯವಿದ್ದವರು ಶೌಚಕೂಪಗಳನ್ನು ಉಪಯೋಗಿಸಬಾರದು.

ಕೆಲವು ಊರುಗಳಲ್ಲಿ ಮನೆಗಳಿಗೆ ಹಿತ್ತಲಗಳೂ ಅಂಗಳಗಳೂ ಇರುವದಿಲ್ಲ. ಅಂಥಲ್ಲಿ ಮನೆಗೆ ಹೊಂದಿ ಬಚ್ಚಲ ಮನೆಯನ್ನು ಮಾಡಬೇಕಾಗುತ್ತದೆ. ಬಚ್ಚಲವನ್ನು ಮನೆಯೊಳಗೆ ಮಾತ್ರ ಮಾಡಬಾರದು. ಬಚ್ಚಲದಲ್ಲಿ ಸ್ನಾನವನ್ನಷ್ಟೇ ಮಾಡಿದರೆ ಗುಂಡಿಯೊಳಗಿನ ಅಥವಾ ಕುಣಿಯೊಳಗಿನ ನೀರು ಬಹಳ ಕೆಡುವದಿಲ್ಲ. ಬಡವರು ಆರೋಗ್ಯಶಾಸ್ತ್ರವನ್ನು ಬಲ್ಲವರಾದರೆ ಸ್ನಾನದ ನೀರು ಚಲ್ಲುವದನ್ನೂ ಹೊರಗೆ ಮಾಡಬೇಕಲ್ಲದೆ ಮನೆಯೊಳಗೆ ಬಚ್ಚಲವನ್ನು ಮಾಡಿ ಅದರಲ್ಲಿ ಮಾಡಬಾರದು. ಹೊರಗೆ ಬಿದ್ದ ನೀರು ಬೇಗ ಒಣಗುತ್ತದೆ.

ಮೇಲಿನ ಸೂಚನೆಗಳನ್ನು ಪಟ್ಟಣಪತಿ. ತಟ್ಟಿಯ ಬಾಡಿಗೆ ಇರುವ ಪಟ್ಟಣಗಳ ನಿವಾಸಿಗಳು ಸಂಪೂರ್ಣವಾಗಿ ಅನುಸರಿಸಲಾರರು. ಆದರೂ ಭಾಗಶಃ ಅನುಸರಿಸುವದು ಅವರಿಗೆ ಶಕ್ಯವಿದೆ.

ತಕ್ಕಡಿಗೆ ಬಾರುಕೋಲು

दानार्थी चोर ।
[illegible] अंधा ॥

—ವ್ಯಾಪಾರಿಯು ಕಳ್ಳನು – ಗಿರಾಕಿಯು ಕುರುಡನು—

ತಕ್ಕಡಿಗೆ ಬಾರುಕೋಲಿಲ್ಲ. ಪಾಪ! ಅದೇನು ಮಾಡೀತು! ಜಡವಸ್ತುವು. ತಕ್ಕಡಿಯ ಹಿಡಿದು ಜೀವಿಸುವ ವ್ಯಾಪಾರಿಗಳು ಎಚ್ಚರಾಗಬೇಕೆಂದು ಈಗ ಬಾರುಕೋಲು ಮುಂದೆ ಬಂದಿದೆ. ಜೀವಿ ಉಪ್ಪಿಕ್ಕೆಂದಲ್ಲ. ಪತ್ರರವಿದ್ದ ಪದಾರ್ಥಗಳನ್ನು ಕೊಟ್ಟು ಹಣವನ್ನಾಗಲಿ, ಬೇರೆ ಪದಾರ್ಥಗಳನ್ನಾಗಲಿ ತೆಗೆದುಕೊಳ್ಳುವದೆಂದರೆ ಅದಲು ಬದಲು ಮಾಡುವ ವ್ಯವಹಾರಕ್ಕೇನೇ ರೂಢಿಯಲ್ಲಿ ವ್ಯಾಪಾರವೆಂಬ ಹೆಸರು ಬಂದಿದೆ. ಈಗ ಅದಲು ಬದಲಿನದಲ್ಲ. ಹಗಲು ಬಗಲಿನ ವ್ಯಾಪಾರವೂ ತೀರ್ಪುಗೆಯ ವ್ಯಾಪಾರವೂ ನಡೆದಿದೆ. ಧರ್ಮಮಾರ್ಗದಿಂದ ಹಣ ಕೂಡಿಸುವ ತತ್ವವಿಯು ಮನುಷ್ಯತ್ವವನ್ನು ಹಾಗೇ ಅಲ್ಲ ಕಿಸಬರಿಗೆ ಹಚ್ಚಿ ಎಳೆಯೊಬ್ಬನ ಬೊಪ್ಪಿಗೆಯವನ(ಪಾಶ್ಚಿಮಾತ್ಯರ) ಸಂಗದ ಸ್ನೇಹ ಬೆಳೆಸಿ ಗುಣ ಹಣ ಧನಗಳನ್ನೆಲ್ಲ ಕಳೆದುಕೊಂಡು ಬಹು ಕಂಗಾಲವಾಗಿದ್ದಾನೆ. ಆದರೂ ಅವನು ತಾನು ಒಕ್ಕಿದ ವ್ಯಾಪಾರಿಯು ಎಂಬ ಗರ್ವದಿಂದ ಸೊಕ್ಕಿದ ಕೋಣನಂತೆ ತಿರುಗುವದರಲ್ಲಿ ಪುರುಷಾರ್ಥವಿದೆಯೆಂದು ತಿಳಿದುಕೊಂಡಿದ್ದಾನೆ. ನೋಡುವವರಿಗೆ ತಕ್ಕಡಿಯು ಇದ್ದಲ್ಲಿ ವೈಭವಕ್ಕೇನೂ ಕೊರತೆ ಇದ್ದಂತೆ ಕಂಡುಬರುವದಿಲ್ಲ. ಕುಳಿತುಕೊಳ್ಳಲಿಕ್ಕೆ ಬಾಕುಗಳಿವೆ. ಖುರ್ಚಿಗಳಿವೆ. ಆರಾಮ ಖುರ್ಚಿಗಳಿವೆ. ಹೊರಳಾಡಲಿಕ್ಕೆ ಗಾದಿಗಳಿವೆ. ಆತುಕೊಳ್ಳಲಿಕ್ಕೆ ದಿಂಬುಗಳಿವೆ ರಾತ್ರಿಯಲ್ಲಿಯಂತೂ ಆಕಾಶದಲ್ಲಿಯ ಮಿಂಚೇ (ವಿದ್ಯುಲ್ಲತೆಯ ದೀಪಗಳು) ಅಲ್ಲಿ ಸುಳಿದಾಡುತ್ತಿರುವದು. ಇವನ್ನೆಲ್ಲ ನೋಡಿದರೆ ದೇಶದ ತುಂಬೆಲ್ಲ ಲಕ್ಷ್ಮಿಯ ವಿಲಾಸವಿದ್ದಂತೆ ಕಂಡು ಬರುವದು. ಆದರೆ ಅದೆಲ್ಲಾ ಭ್ರಾಂತಿಯು ಲಕ್ಷ್ಮಿಯೇನೋ ಅಹುದು. ವರಮಹಾಲಕ್ಷ್ಮಿಯಲ್ಲ. ಜ್ಯೇಷ್ಠಾಲಕ್ಷ್ಮಿಯು. ನಿಜವಾಗಿ ಹೇಳಬೇಕೆಂದರೆ ತಕ್ಕಡಿಯೇ ಲಕ್ಷ್ಮಣಿಕೆಯನ್ನು ಅಸ್ತ ಹಾದಿಗೆ ಹಚ್ಚಿದವನು. ಇವರಿಬ್ಬರ ಹಾವಳಿಗೆ ದೇಶಕ್ಕೆ ದೇಶವೇ ಹಾಳು ಮಸಣವಾಗುವ ಅಂಜಿಕೆಯಿದೆ. ಆರ್ಯರು ನಮ್ಮ ಪೂರ್ವಜರು, ನಿಜವಾದ ವ್ಯಾಪಾರಿಗಳಿದ್ದರೆಂದೇ ಅವರು ಮಣ್ಣು ಹಿಡಿದರೂ ಹೊನ್ನಾಗುತ್ತಲಿತ್ತು. ಆಗ ನಮ್ಮ ದೇಶದಲ್ಲಿ ಬಂಗಾರದ ಹೊಗೆಯು ಹಾಯುತ್ತಲಿತ್ತು. ಈಗ ಒಲೆಯ ಹೊಗೆಯು ಕೂಡಾ ಹಾಯುವದು ಕಷ್ಟಾಗುವ ವೇಳೆಯು ಬಂದಿದೆ. ಯಾಕೆಂದರೆ ವ್ಯಾಪಾರಿವರ್ಗವು ನಷ್ಟವಾಗಿ ಬೊಪ್ಪಿಗೆಯವರ ಕಿಸೆತುಂಬುವದಕ್ಕೆ ಮನ ಮುಟ್ಟಿ ಕುಟಿಲತನ ಮಾಡುವ ದಲಾಲರ ಹಾಗೂ ಗಿರಾಕಿಗಳ ಅಂಗಡಿಗಳೇ ದೇಶದಲ್ಲಿ ನೋಡಿದಲ್ಲೆಲ್ಲ ದೃಷ್ಟಿಗೆ ಬೀಳುತ್ತವೆ. ಈ ಕಲ್ಮಡಿಗಳ ದುಷ್ಟತನದಿಂದ ಬೆಳ್ಳಿ ಹೋಯಿತು. ಬಂಗಾರ ಹೋಯಿತು ಮುತ್ತು ವಜ್ರಗಳು ಮಾಯವಾದವು ದನಗಳು ಪರದೇಶಿಗಳಿಗೆ ಆಹುತಿಯಾದವು. ಧಾನ್ಯಗಳು ಅನ್ಯರ ಮನೆಗೇರಿದವು. ಮನೆಯು ಬರಿದಾಯಿತು. ಒಕ್ಕಲತನವು ಹಾಳಾಯಿತು. ಹೊನ್ನು ಹಿಡಿದರೆ ಮಣ್ಣಾಯಿತು. ಹಾಕುವಾಡಿ ಹತ್ತಿ ಹತ್ತಿದ್ದಾಯಿತು. ಆ ಹತ್ತಿಯೂ ನಮ್ಮ ಪಾಲಿಗೆ ಇಲ್ಲ. ಪರರ ಪಾಲಿಗೆ. ಕಾಳುಗಳಿಲ್ಲದೆ "ಕೂಳು ಕೂಳು" ಎಂದು ಹೊಡೆದು ಕೊಳ್ಳುವ ಕಾಲ ಬಂದಿದೆ. ಅಂಗಡಿಗಳಲ್ಲಿ ತೊಗಲಿನ ಹಾಗೂ ನಿಕಲ್ ನಾಣ್ಯಗಳ ಸುಳಿದಾಟವಿದೆ. ಅದೇನೇ ಇರಲಿ. ಉತ್ತಮೋತ್ತಮ ಪದಾರ್ಥಗಳಾದರೂ ಇವೆ ಎನಬೇಕೆ ಅವೂ ಇಲ್ಲ. ಎಲ್ಲವೂ ಕೆಲಸಕ್ಕೆ ಬಾರದವೇ ಮೇಲಾಗಿ ವಿದ್ಯಕಲಿತ ಪದವಿಧರರನ್ನು ಸುಧಾರಿಸಿದ ಪದ್ಮಾಸುರನನ್ನಾಗಿ ಮಾಡಿ ಸಹಜವಾದ ಪಶ್ಚಾಪದ ಹೊಟ್ಟೆಗೆ ನೀಗಿ ಕೆಡು ಹಾಕಬೇಕೆಂಬುದನ್ನು ಅವರಿಗೆ ವ್ಯಕ್ತಿ ಕೊಟ್ಟಿಲ್ಲ. ಬಹು ನೂಗಳಾದ ಲೇಪ್ಪುರುಗಳು ಇವೆ ಬಂಗಾರದ ಪೋಷಕಗಳ ಬದಲು ತೊಗಲಿನ ಪಟ್ಟಿಗಳಿವೆ. ಒಂದು ವೇಳೆ ಇವನ್ನೆಲ್ಲ ನೋಡಿ ಬುದ್ಧಿ ಬಂದೀತು. ಬುದ್ಧಿ ಬಂದರೂ ಸಿಬ್ಬಕ್ಕಿಯನ್ನು ಮುಂದಿಟ್ಟು ಮಾತಾಡಲಿಕ್ಕೆ ಸಹ ಬಾರದಂತೆ ಬುತ್ತ ಮಾಡಲು ಬಿಟ್ಟು ಕಟ್ಟಿದ ನಾಗಗಳಿವೆ. (ಸಿಕಟುಾಯಿಗಳಿವೆ.) ಬಡುಗಾಡಗಳನ್ನು ಹೊಟ್ಟೆಗೆ ಬರುವ ಲಾಂಗೂಲ ಚಾಲನೆ ಮಾಡುವ ಮರಿಗಳ ಅಪ್ರಾಮಾಣಿಕತನವಲಿಕ್ಕೆ ಕೊಳವಪ್ಪಿಗಳಿವೆ (ಬಾಬಲಗಳಿವೆ) ದಾರಿಗೆ ಬೆಲೆಯಿಲ್ಲ. ಕಲಗಚ್ಚಿನ ನೀರನ್ನು (ಚಹಯನ್ನು) ಮಾರುವ ಮಂದಿರಗಳಿಗೆ (ಟೀಶಾಪಗಳಿಗೆ) ಹಾಗೂ ಮನುಷ್ಯರಾಗಿದ್ದು ನಾಯಿಗಳಂತೆ ತಿಪ್ಪೆಯಮೇಲೆ ಹಗಲು ರಾತ್ರಿ ಹೇಗೆ ಉರುಳಾಡಬೇಕೆಂಬುದನ್ನು ಕಲಿಸುವ ಗುರು ಮಂದಿರಗಳಿವೆ. ಎಂದರೆ ಬೀಡಿಯ ಅಂಗಡಿಗಳಿಗೆ ಬಹು ಬೆಲೆಯು. ಇದೆಂಥಾ ಸ್ಥಳಗಳಲ್ಲಿ ಲಕ್ಷ್ಮಿಯು ಕಾಲೊಳಗಿನ ಕಪ್ಪು ಚಣಗಳ ಘಣ, ಘಣ, ಎಂಬನಾದವು ಕೇಳ ಬರುವದು. ದೇವಾಲಯಗಳಲ್ಲಿ ನೀರವಲ್ಲ ಘಂಟೆಗಳಲ್ಲಿಯು ದೇವರ ಪಲ್ಲಕ್ಕಿಗಳ ಮುಂದಿನ ಘಂಟೆ ಘಣಣಿಸುವದೇ ಒಕ್ಕಿಲ್ಲ. ಪಾಪವನು ಮಾಡಿದವರು! ಧಿಕ್ಕಾರವಿಲ್ಲ, ತ್ಯಾಗವಿಲ್ಲ. ಭಕ್ತಿಯ ಪ್ರದಮ ಮಂದಿರದಲ್ಲಿ

ವಾಸಿಸುತ್ತಿದ್ದ ದೇವರಪಾಲಿಗೆ ದೀಪದ ಪೆಟ್ಟಿಗೆಗಳ ಮೇಲೆ ಹಾಗೂ ಹಲಿಗೆಗಳ ಮೇಲೆ ಕುಳಿತು ಕಾಲಹರಣ ಮಾಡುವ ಕಠಿಣ ಪ್ರಸಂಗವು ಬಂದಿದೆ. ಒಮ್ಮೊಮ್ಮೆ ಆ ದೇವರು ಉರುಳಾಡ ಬಾರದಸ್ಥಳಗಳಲ್ಲಿ ಉರುಳಾಡ ಬೇಕಾಗುತ್ತದೆ. ಹಲಿಗೆಗಳ ಮೇಲೆ ಫಳಿಗಳ ಮೇಲೆ ದೇವರು ಕುಳಿತರೂ ಕೂಡಲೊಲ್ಲರೇಕೆ? ಸುಧಾರಿಸಿದ ಹಜಾಮರು ತಮ್ಮ ವ್ಯವಹಾರ ಸದನಕ್ಕೆ ಶ್ರೀ. ಕೃಷ್ಣಆಯುಷ್ಕರ್ಮಶಾಲೆ (Hair Cutting Saloon.) ಎಂಬ ಹೆಸರಿಟ್ಟಿದ್ದಾರೆ. ಲಕ್ಷ್ಮೀಯು ತನ್ನ ಪತಿಯು ದೀಪದ ಪೆಟ್ಟಿಗೆಯ ಮೇಲೆ ಕುಳಿತು ಅದನ್ನು ಪಾವನಮಾಡಿದ ಮೇಲೆ ತನಗೇತರ ಭಯವೆಂದು ತಾನು ಬೀಡಿಯ ಅಂಗಡಿಯಲ್ಲಿ ಶಿಗರೇಟಕೇದಲಿಕ್ಕೆ ಬಂದಿದ್ದಾಳೆ. ದೇವರಾಯಿತು. ದಿಂಡರಾಯಿತು. ಪಾಖಂಡರ ಕೈಯಲ್ಲಿ ಸಿಕ್ಕು ಎಲ್ಲರೂ ಒದ್ದಾಡುತ್ತಿರುವರು. ಆವ (ಯಾವ) ಹೆಸರು ಎಂಥ ಸಂಸ್ಥೆಗೆ ಇಡಬೇಕೆಂಬ ಸಾರಾಂಶ ವಿಚಾರವೇ ನಮ್ಮವರಿಗೆ ಇಲ್ಲದಾಗಿದೆ. ಅಂಗಡಿಗಳ ಸೌಭಾಗ್ಯಗಳನ್ನು ನೋಡುತ್ತ ನಡೆದಾಗ, ದೇಶಿವೈದ್ಯರನ್ನು ಹಿಂದೆಮಾಡಿ ನಮ್ಮ ಪ್ರಾಣ ಧನಮಾನಗಳನ್ನು ಹೀರುವ ಆಂಗ್ಲ ವೈದ್ಯರ ಫಳಿಯನ್ನು ಓದಿ ಬೆರಗಾಗಿ ನಿಂತೆನು. ಈ ಸುಧಾರಿಸಿದ ವೈದ್ಯರು ನಮ್ಮ ವೈದ್ಯರ ಹಾಗಲ್ಲ. ಇವರು ಭೂಶಯಕ್ಕೆ ಹಾಕಿದ ರೋಗಿಗಳ ವ್ಹಿಜಿಟಫೀಗಳನ್ನು ವಸೂಲ ಮಾಡಲಿಕ್ಕೆ ಎದೆಯುಳ್ಳ ಕರುಣಶಾಲಿಗಳಾಗಿದ್ದರೆ. ಇವರು ಕಾಲಿಟ್ಟ ಕೂಡಲೇ ಆರ್ಯವೈದ್ಯಕೀಯು ಮಣ್ಣುಗೂಡಿತು. ಎಂಬುದಾಗಿ ಜನರಾಡುತ್ತಿರುವ ಅವರ ಕೀರ್ತಿ ಗಾನವನ್ನು ಕೇಳುವದರಲ್ಲಿ ಮಗ್ನವಾದಾಗ ಒಮ್ಮಿಂನೊಮ್ಮೆ ಶಂಖಧ್ವನಿಯು ಕೇಳಬಂದಿತು. ಬಾಯ್, ಬಾಯ್ ಬಡಿದು ಕೊಳ್ಳಲಿಕ್ಕೆ ಅಂಥದ್ದೇನಾಗಿದೆ? ಇಂದು ಆರು ಸತ್ತಿರುವರು! ಎಂಬುದನ್ನು ತಿಳಿದುಕೊಳ್ಳಲಿಕ್ಕೆ ಹಾರಾಡಿ ಎಲ್ಲ ಕಡೆಗೆ ನೋಡುತ್ತೇನೆ. ನಾಲ್ಕು ಗಾಲಿಗಳ ಬಂಡಿಯೊಂದು ಬಹು ವೇಗದಿಂದ ಬರುತ್ತಲಿತ್ತು. ಅದಕ್ಕೆ ಎತ್ತುಗಳನ್ನಾಗಲಿ ಕುದರೆಗಳನ್ನಾಗಲಿ ಹೊಡಿದ್ದಿಲ್ಲ. ಇದೆಂಥ ಚಮತ್ಕಾರವಹೂದಪ್ಪಾ! ಎಂದೆನ್ನುವದರಲ್ಲಿಯೇ ಆ ಗಾಡಿಯು (ಮೋಟರ) ನನ್ನ ಪಕ್ಕದ ಹತ್ತಿರವೇ ಇದ್ದ ಅಂಗಡಿಯ ಮುಂದೆ ಗಕ್ಕನೆ ಬಂದು ನಿಂತಿತು. ಒಳಗೆ ಕುಳಿತ ಸಾಹೇಬನು ಒಂದು ಗೇಣು ಪುಟದು ಬಿದ್ದನು. ಆದರೂ ಅವನ ನಗೆ ಮುಖದ ಕಾಂತಿಯು ಕುಂದಿದ್ದಿಲ್ಲ. ಆ ಸಾಹೇಬನು ಹೊರಗೆ ಬಂದು ನಗುತ್ತಾ ಶೆಟ್ಟರೇ ಹದಿನಾಲ್ಕು ಸಾವಿರ ಗೋದಿ ಚೀಲಗಳು ಬೇಕಾಗಿವೆ. ಉತ್ತಮ ಗೋದಿಗಳಿವೆಯೋ ಎಂದುಕೇಳಿದನು. ಅಂಗಡಿಯಲ್ಲಿ ಆರಾಮುಖುರ್ಚಿಯದೆ ಕೂಡಬೆನ್ನಿರಿ ಎಂದು ಹೇಳಿಕೊಳ್ಳುವ ಶೆಟ್ಟರ ಕಡೆಗೆ ಆ ಟೊಪ್ಪಿಗಿಯವನ ಲಕ್ಷ್ಯವೇ ಇದ್ದಿಲ್ಲ. ಅವನು ಗೋದೀಚೀಲಗಳ ಕಡೆಗೆ ಹೋಗಿ ಕಾಳುಗಳ ಪರೀಕ್ಷೆಗೆ ನಿಂತುಕೊಂಡನು. ನಾನು ಬೆಪ್ಪನಂತೆ ಆತನ ಹಾವಭಾವಗಳನ್ನು ನೋಡುತ್ತ ನಿಂತಾಗ ಅರ್ಭಟಿಯಿಂದ ಅಳುವಧ್ವನಿಯನ್ನು ಕೇಳಿ ಚಂಚಲವಾಯಿತು. ಹೊರಳಿ ನೋಡುತ್ತೇನೆ ಮೊದಲಿನಂಥದೇ ಮತ್ತೊಂದು ನಾಲ್ಕು ಗಾಲಿಗಳ ಬಂಡಿಯು ಗಕ್ಕನೆ ಬಂದು ನಿಂತಿತು. ಈ ಸಾರೆ ಒಳಗಿನವನೇನೂ ಹಾರಬೀಳಲಿಲ್ಲ. ಕೆಟ್ಟಳಿಯ ತರುಣನಿದ್ದನು. ಆತನಾದರೂ ನಗುತ್ತಾ ಹೊರಗೆ ಬಂದು, ಮುಗುಳು ನಗೆ ನಗುತ್ತಾ ಲ್ಯಾಂಬಸಾಹೇಬರೇ ಈ ಊರಲ್ಲಿ ಇದ್ದಷ್ಟು ಗೋದಿ ಕಾಳುಗಳನ್ನು ಖರೀದಿ ಮಾಡಿರಿ ವ್ಯಾಪಾರಸ್ಥರಿಗೆ. ರೂಪಾಯಿಗಳನ್ನು ಭರತಿ ಮಾಡಿ ಕೊಡಲಿಕ್ಕೆ ಚೆಕ್ಕುಗಳನ್ನು ಕಳಿಸಿ ಕೊಡುತ್ತೇವೆಂದು ಮೇಲಿನವರಿಂದ ಟೆಲಿಗ್ರಾಮ (ತಾರು) ಬಂದಿದೆ ಎಂದನು. ಲ್ಯಾಂಬಸಾಹೇಬನು ಮಾತನಾಡುವ ಪೂರ್ವದಲ್ಲಿ ಶೆಟ್ಟರು 'ಪೂಲ್ಸ ಸಾಹೇಬರೇ, ಗೋದಿಗಳೇನು ಕಡಿಮೆ ಪ್ರತಿಯೊಂದು ಚೀಲಕ್ಕೆ ಎಂಟಾಣೆಯಂತೆ ಕಮಿಶನ್ ಕೊಡಿರಿಬೇಕಾದಷ್ಟು ಗೋದಿ ಚೀಲಗಳನ್ನು ಹೇರಿ ನಿಮ್ಮ ವಖಾರಕ್ಕೆ ಕಳಿಸಿಕೊಡುತ್ತೇನೆ. ನಾನು ಹೇಳಿದ್ದು ಮನಸ್ಸಿಗೆ ಬಂತೇ' ಎನ್ನಲು ಆ ಉಭಯ ಸಾಹೇಬರು ನಗುತ್ತಾ ಆಗಬಹುದು. ಹಾಗೇ ಆಗಬಹುದು. ಶೆಟ್ಟರೇ ನಿಮ್ಮಂಥ ಬಲ್ಲಿದ ವ್ಯಾಪಾರಿಗಳಿರುವರಿಂದೇ ನಮ್ಮ ವ್ಯವಹಾರಕ್ಕೆ ತೇಜಿಯು ಇಲ್ಲದಿದ್ದರೆ ನಮ್ಮನ್ನಾರು ಮಾತಾಡಿಸುತ್ತಿದ್ದರು. ಗೋದಿ ವ್ಯಾಪಾರ ನಡೆಯಲಿ. ಇದೋ ಇಲ್ಲಿ ಐವತ್ತು ಸಾವಿರ ರುಪಾಯಿಗಳ ನೋಟುಗಳಿವೆ. ಈ ರಕಮನ್ನು ನಮ್ಮ ಕಂಪನಿಯ ಖಾತೆಗೆ ಜಮೆ ಹಚ್ಚರಿ. ಬೇಕಾದರೆ ಮತ್ತೆ ಚೆಕ್‌ಗಳನ್ನು ಕಳಿಸಿಕೊಡುತ್ತೇವೆ. ಎಂದು ಅಂದವರೇ ಶೆಟ್ಟರ ಕೈಯನ್ನು ಅಲ್ಲಾಡಿಸಿ (ಶೇಕಹ್ಯಾಂಡ ಮಾಡಿ) ತಮ್ಮ ಮೋಟರುಗಳಲ್ಲಿ ಕುಳಿತು ಒಬ್ಬನು ಶಂಖಧ್ವನಿಮಾಡುತ್ತ, ಮತ್ತೊಬ್ಬನು ಅಳುತ್ತಾ ಹೊರಟು ಹೋದರು. ಮೊದಲು ಮೊದಲು ಇವರು ಯಾರೆಂಬ ಅರವು ನನಗಾಗಲಿಲ್ಲ. ಸ್ವಲ್ಪು ಹೊತ್ತಿನ ಮೇಲೆ; ಓಹೋ! ಇವರು ಪಾಶ್ಚಿಮಾತ್ಯವ್ಯಾಪಾರಸ್ಥರು. ನಮ್ಮವರಿಗೆ ದಲಾಲಿ ಸವಿ ಹಚ್ಚಿ ಹಗಲು ಹಾಡಾ ಸೋಡ ನೋಡತಿರಲಿಕ್ಕೆ ನಮ್ಮ ದೇಶವನ್ನು ಸುಲಿದು ಕೊಳ್ಳಲಿಕ್ಕೆ ಬಂದವರು ಎಂಬದು ನನ್ನ ನೆನಪಿಗೆ ಬರಲು ನಾನು ಆ ಶೆಟ್ಟರ ಅಂಗಡಿಗೆ ಹೋಗಿ ಶೆಟ್ಟರೇ ಆ ಟೊಪ್ಪಿಗೆಯವರ ಮಾತಿಗೆ ಮರುಳಾಗಿ ಗೋದಿ ಚೀಲಗಳ ಖರೀದಿ ಮಾಡಬೇಡಿರಿ. ಅವರ ವ್ಯಾಪಾರವು ಅಂಥ ಇಂಥದಲ್ಲ. ಟೊಪ್ಪಿಗೆಯ ವ್ಯಾಪಾರವು ಆ ವ್ಯಾಪಾರವು. ಕುರಿಮರಿಯಾಗಿ ನಮ್ಮ ದೇಶದಲ್ಲಿ ಹೊಕ್ಕಿತು. ಈಗ ಅದೇ ವ್ಯಾಪಾರವು ತೋಳವಾಗಿ ಕುರಿಯಂತಿರುವ ನಮ್ಮನ್ನೆಲ್ಲ ನುಂಗಿ ನೀರು ಕುಡಿಯಲು ಬಂದಿದೆ. ಎಚ್ಚರಾಗಿರಿ, ಟೊಪ್ಪಿಗಿ ಸಾಹೇಬರಿಗೆ ಮರುಳಾಗದೆ, ಕುರಿಪಾಲು ಕುಡಿದು ಮೇಕೆ ಸೊಂಗಾನೇನ್ನು ತಿಂದು ಜೀವಿಸುವ ಖಾದೀಸಾಹೇಬರ (ಮಹಾತ್ಮಾಗಾಂಧಿಯವರ) ಮಾತು ಕೇಳಿ, ಪರದೇಶಿ ಮಾಲಿಗೆ ಬಹಿಷ್ಕಾರ ಹಾಕಿರಿ. ಎಂದು ಕಾಲಿಗೆ ಬಿದ್ದು ಹೇಳಿ ಕೊಂಡೆನು. ಶೆಟ್ಟರು ನನ್ನ ಮಾತಿಗೆ ನಕ್ಕರು. ಪುನಃ ನಾನು 'ಬಿಳಿಟೊಪ್ಪಿಗೆಯ ದುರ್ಜನ ಮಾತೇನು!' ಎಂದು ಹಾಸ್ಯ ಮಾಡಿ ನಗಬೇಡಿರಿ. ನಗಿ ಹೋಗಿ ಹೋಗಿ ಯಾವೇತು ನೀವು ವ್ಯಾಪಾರಿಗಳಲ್ಲ. ಪಾಶ್ಚಿಮಾತ್ಯರು ವ್ಯಾಪಾರಿಗಳು. ನೀವು ಅವರ ಮಾಲುಗಳನ್ನೆಲ್ಲ ಖರೀದಿ ಮಾಡಿ ಇದ್ದ ಗಂಟನ್ನೆಲ್ಲ ಕಳೆದುಕೊಳ್ಳುವ ಕುರುಡ ಗಿರಾಕಿಗಳು. ಹೀಗೆ ಯೋಗನಗುತ್ತಾ ಕುಳಿತರೆ ಟೊಪ್ಪಿಗೆಯವರು ನಿಮ್ಮನ್ನೆಲ್ಲ ಭಿಕ್ಷೆಗೆ ಹಚ್ಚುವರು ನಮ್ಮ ಪಾಲಿಗೆ "ಶಂಖಧ್ವನಿ, ರೋದನ ಧ್ವನಿಕೊಟ್ಟು ಹೋಗುವರು ತಿಳಿದಿರಲಿ. ದೇಶಕಲೆಗಳಿಗೆ ಉತ್ತೇಜನ ಕೊಡಿರಿ ದೇಶಿ ಬಂಧುಗಳಿಗೆ ಅನ್ನದಾನ ಮಾಡಿದ ಪುಣ್ಯ ಪದರಿಗೆ ಕಟ್ಟಿ ಕೊಳ್ಳಿರಿ.

ನಿಮ್ಮ ವಿಧೇಯ

ಒಕ್ಕಲತನದಿಂದ ಜೀವಿಸುವ ಒಕ್ಕಲಿಗ

ವರ್ತಮಾನಸಾರ.

ಇಹವೃತ್ತ

ಮಳೆಯು ಇಲ್ಲ ದೇವರೇ!

ಬುಧವಾರ ತಾ॥ ೨೨ ನೇ ತಾ॥ ದಿನ ಸಾಯಂಕಾಲದ ನಿಡಗುಂದೀಯವರ ನಾಟಕ ಶಾಲೆಯಲ್ಲಿ ಶ್ರೀ ಮುರಗಯ್ಯಾ ಸ್ವಾಮಿ ಜಂಗಿನ ಇವರ ಅಧ್ಯಕ್ಷತೆಯಲ್ಲಿ ಬಾಗಲಕೋಟೆಯ ಸ್ವದಶಿವಾಹಿಗಳ ಸಭೆ ನೆರೆದಿ, ಬಳ್ಳಾರಿಯಲ್ಲಿ ವಿಶ್ವವಿದ್ಯಾಸಿಲಯದ ಬಗ್ಗೆ ಆಂಧ್ರರು ನಡೆಸಿದ ಪ್ರಯತ್ನಗಳು ನಿಷೇಧಿಸಲ್ಪಟ್ಟವು. ಶ್ರೀ ಮುದವೇಡಕರ ಕೃಷ್ಣರಾಯರ ಭಾಷಣವಾಯಿತು.

ರಾಯಚೂರದಲ್ಲಿಯು ಶ್ರೀಮನ್ ಮಧ್ವಸಿದ್ಧಾಂತ ಪ್ರಕಾಶಿನೀ ಸಭೆಯು ಪ್ರತಿವರ್ಷದಂತೆ ಕಾರ್ತಿಕ ಶುದ್ಧ ೧೩-೧೪-೧೫ ದಿನಗಳಲ್ಲಿ ನೆರವೇರುವದು. ಆ ಬಗ್ಗೆ ವರ್ಗಣೀ ವಸೂಲ ಮಾಡುವದಕ್ಕಾಗಿ ಶ್ರೀ ಕೊಳ್ಳಿ ರಾಮಾಚಾರ್ಯರು ಇಲ್ಲಿಗೆ ಬಂದಿರುವರು.

ಹುನಗುಂದದ ಸಬ್ ರಜಿಸ್ಟರರಾದ ಶ್ರೀ. ಬೆಂಡಿಗೇರಿ ಶೆಟ್ಟಿಯು ಚೌಕಶಿ ಇನ್ನೂ ಪ್ರಾರಂಭವಾಗಿಲ್ಲ. ಸರಕಾರದ ಅನುಮತಿಯು ಇನ್ನೂ ದೊರೆಯಬೇಕಾಗಿದೆ ಆದ್ದರಿಂದ ಈ ಬಗ್ಗೆ ಇತರ ಸುದ್ದಿಗಳು ಸುಳ್ಳೆಂಬದನ್ನು ಜನರು ಲಕ್ಷದಲ್ಲಿಡಲಿ

ಶ್ರೀ. ಮುಂಡವಾಡೇಕರ ಕೃಷ್ಣರಾಯರು ನಿನ್ನೆ ದಿನ ಗಾಡಿಗೆ ಧಾರವಾಡಕ್ಕೆ ಹೋದರು.

ಮುಂಬಯಿ ಕರ್ನಾಟಕ

ರಾವಸಾಹೇಬ ಮಳಗಟ್ಟಿಯವರ ಅಧ್ಯಕ್ಷತೆಯ ಕೆಳಗೆ ವಿಜಾಪುರದಲ್ಲಿ ಅಲ್ಲಿಯ ನಗರವಾಸಿಗಳ ಸಭೆಯಾಗಿ ಆಂಧ್ರರು ಬಳ್ಳಾರಿಯಲ್ಲಿ ನಡೆಸಿದ ಪ್ರಯತ್ನವು ನಿಷೇಧಿಸಲ್ಪಟ್ಟಿತು. ಶ್ರೀ ಕೃಷ್ಣರಾವ ಮುಂಡವಾಡೇಕರ ಮತ್ತು ಶ್ರೀ ಕೌಜಲಗಿಯವರ ಭಾಷಣಗಳಾದವು.

ಮುಧೋಳದಲ್ಲಿ ಶ್ರೀ. ಗಂಗಾಧರರಾಯರು ಒಂದು ಆಶ್ರಮವನ್ನು ಸ್ಥಾಪಿಸಿದ್ದು, ಅಲ್ಲಿ ಜಾತಿಮತಗಳ ಭೇದವಿಲ್ಲದೇ ಅಸ್ಪೃಶ್ಯರ ಸಂಗಡ ಎಲ್ಲರೂ ಶಿಕ್ಷಣ ಹೊಂದುತ್ತಲಿರುವರಂತೆ. ಆದರೆ ಅಲ್ಲಿ ಶಿಕ್ಷಣವು ಕನ್ನಡದಲ್ಲಿ ನಡೆಯುತ್ತಿದೆಯೋ ಅಥವಾ ಮರಾಠಿಗೆ ಪ್ರಾಧಾನ್ಯ ಹಿರುವದೋ ತಿಳಿಯದು. ಶ್ರೀ ಗಂಗಾಧರರಾಯರು ಇದನ್ನು ಪ್ರಸಿದ್ಧ ಪಡಿಸುವರೋ?

ಶ್ರೀ ಕಂಟೀಯವರು ಹುಬ್ಬಳ್ಳಿಯಿಂದ ಕಾರವಾರದ ವರೆಗೆ ರೇಲ್ವೆ ಪ್ರಾರಂಭವಾಗಬೇಕಾಗಿ ಮುಂಬಯಿ ಕಾಯದೇ ಮಂಡಲದಲ್ಲಿ ಠರಾವನ್ನು ತರುವವರಿದ್ದಾರೆ

ಸಿಂಧಖೇಡದ ಮುನಸೀಪಾಲಿಟಿಯವರು ೩ ಸಾವಿರ ರೂ ವೆಚ್ಚದಿಂದ ಗವರ್ನರ ಸಾಹೇಬರಿಗೆ ಮಾನಪತ್ರ ಕೊಡಬೇಕೆಂದು ನಿಶ್ಚಯಿಸಿದ್ದಾರೆ!!

ಮದ್ರಾಸ ಕರ್ನಾಟಕ

ಹರಪನಹಳ್ಳಿಯ "ವೈಶ್ಯವಾಚನಾಲಯ" ದಲ್ಲಿ ೧೫-೭-೩೫ ರಲ್ಲಿ ಶ್ರೀ ಯುತ್ ಬಿ ಗುರುಬಸಪ್ಪ ಬಿ ಎ. ಯವರ ಅಧ್ಯಕ್ಷತೆಯಲ್ಲಿ ಜರುಗಿದ ಸಾರ್ವಜನಿಕ ಸಭೆಯಲ್ಲಿ ಈ ಕೆಳಗಿನ ಠರಾವುಗಳು ಪಾಸುಮಾಡಲ್ಪಟ್ಟಿರುವವು:—

(೧) ಬಳ್ಳಾರಿಜಿಲ್ಲಾ ನಿವಾಸಿಗಳ ತಾಯ್ನುಡಿಯು ವಿಶೇಷವಾಗಿ ಕನ್ನಡವಾಗಿದ್ದರು, ಬಳ್ಳಾರಿಪಟ್ಟಣದ ಕೆಲವರು ಆಂಧ್ರರು ಬಳ್ಳಾರಿಯನ್ನು ಆಂಧ್ರ ವಿಶ್ವವಿದ್ಯಾಲಯದ ಸಂಬಂಧದನ್ನು ಸ್ಥಾಪಿಸಬೇಕೆಂದು ಪ್ರಯತ್ನಿಸುತ್ತಿರುವರು, ಕನ್ನಡನಾಡ ಬಳ್ಳಾರಿಜಿಲ್ಲೆಗೆ ಹಾನಿಕಾರಕವಾದುದರಿಂದ, ಆ ಆಂಧ್ರರಪ್ರಯತ್ನವನ್ನು ಹರಪನಹಳ್ಳಿಯ ಪುರನಿವಾಸಿಗಳ ಈ ಸಭೆಯು ನಿಷೇಧಿಸುತ್ತದೆ:—

(೨) ಬಳ್ಳಾರಿಯಲ್ಲಿ ಜಾಗ್ರತೆಯಾಗಿಯೇ ಒಂದು ಕರ್ನಾಟಕ ಕಾಲೇಜನ್ನು ಸ್ಥಾಪಿಸಿ ಅದನ್ನು ಸದ್ಯಕ್ಕೆ ಮದ್ರಾಸು ವಿಶ್ವವಿದ್ಯಾಲಯಕ್ಕೆ ಸೇರಿಸಬೇಕೆಂದು, ಈ ಸಭೆಯು ಆಗ್ರಹ ಪೂರ್ವಕವಾದ ಅಭಿಪ್ರಾಯಪಡುತ್ತದೆ

ಹೊಸಪೇಟೆಯಲ್ಲಿಯೂ ಸಭೆಯಾಗಿ ಇದೇ ಮಾದರಿಯ ನಿರ್ಣಯಗಳಾಗಿರುತ್ತವೆ.

ಬಾಗೇಪಲ್ಲಿ ಕೃಷ್ಣಮೂರ್ತಿ ಅನಂತರಾಮಯ್ಯನವರು ಶಕೀಲಿ ಕಾಲೇಜಿನಲ್ಲಿ ಅಭ್ಯಾಸಮಾಡುವದಕ್ಕಾಗಿ ಅಪ್ಪಣೆ ಬೇಡಿದ್ದಾರೆ ಹೀಗೆ ಸ್ತ್ರೀಯರು ಅಪ್ಪಣೆ ಬೇಡಿದ್ದು ಮದ್ರಾಸದಲ್ಲಿ ೩ ನೇ ಉದಾಹರಣೆ.

ಮೈಸೂರ ಕರ್ನಾಟಕ

ಭದ್ರಾವತಿ ಕಬ್ಬಿಣ ಕಾರಖಾನೆಯ ಎಲ್ಲ ವ್ಯವಸ್ಥೆಯನ್ನು ಹೆನ್ರೀ ಫೋರ್ಡ ಕಂಪನಿಗೆ ಮೈಸೂರ ಸರಕಾರದವರು ಒಪ್ಪಿಸುವರೆಂದೂ ಫೋರ್ಡರವರು ಕಾರ್ಯಕಾರೀ ಪಾಲುಗಾರರಾಗಿ ವ್ಯವಸ್ಥೆ ಮಾಡುವರೆಂದೂ ತಿಳಿಯುತ್ತದೆ.

ಮೈಸೂರ ಕಾಯದೇ ಕೌನ್ಸಿಲ ಸಭೆಯು ೧೨ ನೇ ಆಗಸ್ಟಿಗೆ ಬೆಂಗಳೂರಲ್ಲಿ ನೆರೆಯುವದು.

ವೀರಶೈವ ಮಹಾಸಭೆಯನ್ನು ಮೈಸೂರಿನಲ್ಲಿ ಕೂಡಿಸುವ ಪ್ರಯತ್ನನಡೆದಿದೆ.

ನಿಜಾಮಕರ್ನಾಟಕ

ನಿಜಾಮ ಕರ್ನಾಟಕದ ಬಗ್ಗೆ ನಮಗೆ ಸಾಕಷ್ಟು ಸುದ್ದಿಗಳು ಪೇಕಿಂದ ಮೇಲೆ ಗೊತ್ತಾಗುವದಿಲ್ಲ, ಆದ್ದರಿಂದ ಈ ಭಾಗದ ಕರ್ನಾಟಕಸ್ಥರು ಇನ್ನು ಮೇಲೆ ತಮ್ಮಲ್ಲಿಯ ಸುದ್ದಿಗಳನ್ನು ನಮಗೆ ವಾರಂವಾರ ಮೇಲೆ ತಿಳಿಸುತ್ತಿರಬೇಕಾಗಿ ಬಿನ್ನಹ

ಕೊಡಗು ಕರ್ನಾಟಕ

ಮಡಿಕೇರಿಯಲ್ಲಿ ಮಳೆಯು ಬಹಳ ಬೀಳುತ್ತಲಿದೆ.

ವೀರಶೈವ ವಿದ್ಯಾಭಿವೃದ್ಧಿ ಸಂಘದ ಸಭೆಯು ಶ್ರೀ. ಕೆ. ಎಸ್. ಕರಿಬಸಪ್ಪನವರ ಅಧ್ಯಕ್ಷತೆಯಲ್ಲಿ, ಕೊಪ್ಪಪೇಟೆಯ ಬಸವೇಶ್ವರ ದೇವಸ್ಥಾನದಲ್ಲಿ ನಡೆದು, ಈ ಸಂಘವನ್ನು ರಜಿಸ್ಟರಮಾಡಿಸುವ ಬಗ್ಗೆ ತೀರ್ಮಾನವಾಗಿದೆ. ಮತ್ತು ಈ ಸಂಘದ ನಿಧಿಯನ್ನು ಹೆಚ್ಚಿಸುವ ಬಗ್ಗೆ ವಿಚಾರವೂ ಆಯಿತು.

ಕೊಡಗಿನಲ್ಲಿ ಎರಡು ಹಾಯಸ್ಕೂಲುಗಳು ಇದ್ದು ಅಲ್ಲಿ ಸಂಸ್ಕೃತ ಭಾಷೆಯನ್ನು ಕಲಿಸುವ ವ್ಯವಸ್ಥೆಯಿಲ್ಲದ್ದು ವಿಷಾದಕರವಾದ ಸಂಗತಿಯೆಂದೂ, ಇನ್ನು ಮೇಲಾದರೂ ಅಲ್ಲಿ ಸಂಸ್ಕೃತ ಕಲಿಸುವ ವ್ಯವಸ್ಥೆಯಾಗಬೇಕೆಂದೂ ಕೊಡಗು ಪತ್ರಿಕೆಯು ಹಿರ್ದಾ ...ವಾಗಿ ಸೂಚಿಸುವದನ್ನು ಅಲ್ಲಿಯ ಜನಗಳು ವಿಚಾರಿಸಬೇಕಾಗಿ ಸೂಚಿಸುತ್ತೇವೆ

ಹಿಂದುಸ್ಥಾನ

ಮಹಾತ್ಮಾಗಾಂಧೀಯವರು ಶ್ರೀ. ಪಂಡಿತ ನೆಹರೂ ಇವರಿಗೆ ಒಂದು ಪತ್ರ ಬರೆದಿದ್ದು, ತಾವು ಕಾಂಗ್ರೆಸದ ಎಲ್ಲ ಸೂತ್ರಗಳನ್ನು ಸ್ವರಾಜ್ಯ ಪಕ್ಷದವರಿಗೆ ಕೊಡಲು ಸಿದ್ಧರಿರುವೆವೆಂದು ತಿಳಿಸಿದ್ದಾರೆ. ಪಂಡಿತಜೀಯವರು ಮಹಾತ್ಮರ ಈ ಸೂಚನೆಗೆ ಸಮ್ಮತಿಸಿದ್ದಾರೆ.

೧೯೨೪—೨೫ ನೇ ವರ್ಷದಲ್ಲಿ ಮಧ್ಯಪ್ರಾಂತದಲ್ಲಿ ರಾಷ್ಟ್ರಕೂಟರ ಕೃಷ್ಣರಾಜನ ೬೭೫ ಪಳ್ಳಿಯ ನಾಣ್ಯಗಳು ದೊರೆತಿವೆ ವರ್ಹಾಡ ಪ್ರಾಂತದಲ್ಲಿಸಹ ಕನ್ನಡಿಗರ ಅರಸನಾದ ಈ ಕೃಷ್ಣರಾಜನ ರಾಜ್ಯವು ನೆಲೆಗೊಂಡಿತ್ತೆಂಬುದು ಸಿದ್ಧವಾಗುತ್ತದೆ. ಬೇಲೂರಲ್ಲಿಯ ಕೈಲಾಸಗುಡಿಯನ್ನು ಕಟ್ಟಿಸಿ ಕನ್ನಡಿಗರ ವೈಭವವನ್ನು ಬೆಳಗಿಸಿದವನೆಂದರೆ ಇದೇ ಕೃಷ್ಣರಾಜನು ಯಮುನಾ, ಕಾವೇರೀ, ನದಿಗಳಿಗೆ ಪುನಃ ಕಳೆದ ವರ್ಷಗಳಂತೆಯೆ ಹಿರಿನೆರೆ ಬಂದಿದೆ ಹಳ್ಳಿಗಳು ಮುಳುಗುತ್ತಿವೆ.

ಲಾರ್ಡ ಬರ್ಕನ ಹೆಡ್ಡರವರ ಭಾಷಣದ ವಿಚಾರವನ್ನು ಮಾಡುವದಕ್ಕಾಗಿ ಮುಂಬಯಿ ಕಾಯದೆ ವಿಧಾಯಕ ಸಭೆಯಲ್ಲಿ ಅಪ್ಪಣೆ ಬೇಡಲು, ಅದು ಗವರ್ನರರಿಂದ ನಿರಾಕರಿಸಲ್ಪಟ್ಟಿತು.

ಪರದೇಶ.

ಸ್ವಲ್ಪಾವಧಿಯಲ್ಲಿ ಮತ್ತೊಂದು ಮಹಾಯುದ್ಧವು ಜಗತ್ತನು ಆಕ್ರಮಿಸುವದಾಗಿ ಜೆಲ್ಲಿನ್ ರೂಸೋನವರು ಅಭಿಪ್ರಾಯ ಪಟ್ಟಿದ್ದಾರೆ.

ಚೀನದಲ್ಲಿ ಬ್ರಿಟಿಶ ಜನಸಂಖ್ಯೆ ೧೪, ೭೭೫; ಜಾಗತ್ತು ಇತರ ಯುರೋಪಿಯನ್ ಜನರ ಸಂಖ್ಯೆ ೭, ೮೯೦

ದೇಶ್ಯೆ ಬೋರ್ಡಿನವರ ಸುದ್ದಿಗಳು.

ಕಾರ್ಕಳದಿಂದ ಶ್ರೀ ಕೆ. ಪಿ ಪುರಾಣಿಕರು ಬಹಳ ಪುಟಗಳ್ಳ ೩೦೦ ಜನರ ಸಹಿಗಳನ್ನು, ಶ್ರೀ ರಾಮ ಬಾಲಪ್ಪಾ ಸೋನೋಳಕರ ಗಂಗಾವತಿಯಿಂದ ೩೦೦ ಸಹಿಗಳನ್ನು ಕಳುಹಿಸಿರುವರು ಉಳಿದ ಭಾಗದ ಕರ್ನಾಟಕಸ್ಥರು ಬೇಗನೇ ಇದೇ ಪ್ರಕಾರವಾಗಿ ಸಹಿ ಕಳುಹಬೇಕು.

ಮುಂಬಯಿ ಕಾಯದೆ ಮಂಡಲ

ಪುಣೆಯಲ್ಲಿ ಜರಗತಕ್ಕ ಮುಂಬಯಿ ಲೆಜಿಸ್ಲೇಟಿವ್ಹ ಕೌನ್ಸಿಲದ ಮುಂದೆ ಧಾರವಾಡದ ಶ್ರೀ. ಜೋಗ ಎಮ್. ಎಲ್. ಸೀ. ಇವರು ಕೆಳಗಿನ ನಿರ್ಣಯಗಳನ್ನು ತರಲಿಕ್ಕಿದ್ದಾರೆ. ಅವು ಮಹತ್ವವುಳ್ಳವಗಳಾದ್ದರಿಂದ "ಕನ್ನಡಿಗ" ದಲ್ಲಿ ಪ್ರಕಟಿಸಿರುವೆವು.

೧ ಸ್ವರಾಜ್ಯಪಕ್ಷದ ಮುಂದಾಳುಗಳಾದ **ದೇಶಬಂಧು ಚಿತ್ತರಂಜನದಾಸ**ರವರ ಆಕಸ್ಮಿಕ ಮತ್ತು ಅಕಾಲಿಕ ನಿಧನದಿಂದ ತನಗಾದ ಅಪರಿಮಿತ ದುಃಖವನ್ನು ಈ ಮಂಡಲವು ವ್ಯಕ್ತಪಡಿಸುತ್ತದೆ. ಮತ್ತು ಅವರಲ್ಲಿಯ ಉಜ್ವಲ ದೇಶಾಭಿಮಾನವನ್ನೂ, ಅಗಾಧಧೈರ್ಯವನ್ನೂ ಪ್ರಶಂಸನೀಯ ಸಂಘಟನಾಶಕ್ತಿಯನ್ನೂ, ಹಿಂದುಸ್ಥಾನದ ಉದ್ಧಾರಕ್ಕಾಗಿ ಅವರ ಅಪ್ರತಿಮ ಸ್ವಾರ್ಥತ್ಯಾಗವನ್ನೂ ಸ್ವರಾಜ್ಯ ಸಂಪಾದನೆಗಾಗಿ ಅವರು ಮಾಡಿದ ಅವಿಶ್ರಾಂತ ಪ್ರಯತ್ನಗಳನ್ನೂ ಈ ಮಂಡಲವು ಅತ್ಯಂತವಾಗಿ ಕೊಂಡಾಡುತ್ತದೆ.

೨ ಬರಗಾಲದಿಂದ ಬಳಲುತ್ತಿರುವ **ವಿಜಾಪೂರ** ಮತ್ತು ಧಾರವಾಡ ಜಿಲ್ಲೆಯ ಭಾಗಗಳಲ್ಲಿ ದೊಡ್ಡ ದೊಡ್ಡ ಕಾವಲಿಗಳನ್ನು ಅಗಿದು ನೀರಿನ ಪೂರೈಕೆಯಾಗುವಂತೆ ಮಾಡಬೇಕೆಂದು ಈ ಮಂಡಲವು ಸರಕಾರಕ್ಕೆ ಸೂಚಿಸುತ್ತದೆ. ಮತ್ತು ಆ ಬಗ್ಗೆ ಯಾವ ಯಾವ ಯೋಜನೆಗಳು ಶಕ್ಯವಾಗಿರುವವೆಂಬದನ್ನು ಗೊತ್ತುಪಡಿಸಲಿಕ್ಕೂ ಅಳತೆ ಮೊದಲಾದ ಪೂರ್ವಸಿದ್ಧತೆಯನ್ನು ಮಾಡಲಿಕ್ಕೂ ಸಾಕಷ್ಟು ಹಣವನ್ನು ಕಾದಿಡಬೇಕೆಂದೂ ಈ ಮಂಡಲದ ಸೂಚನೆಯದೆ

(ಈಗಾಗಲೇ ಘಟಪ್ರಭಾನದಿಯ ಯೋಜನೆಯೊಂದು ಸಿದ್ಧವಾಗಿ, ಅಳತೆ, ನಕಾಶೆಗಳು ಕೂಡಾ ಆಗಿರುವವು. ಆ ಯೋಜನೆಯನ್ನು ಬೇಗನೆ ಕೈಕೊಂಡರೆ ವಿಜಾಪುರ ಜಿಲ್ಲೆಯ ಬಹು ಭಾಗಕ್ಕೆ ಫಲ[illegible] ಸಂ. ಕ.)

೩ ಈ ಇಲಾಖೆಯಲ್ಲಿಯ ಒಕ್ಕಲಿಗರ ಆರ್ಥಿಕಸ್ಥಿತಿಯನ್ನು ತಿಳಿದುಕೊಂಡು ಅದನ್ನು ಸುಧಾರಿಸುವ ಬಗ್ಗೆ ಉಪಾಯಗಳನ್ನು ಸೂಚಿಸುವದಕ್ಕೆ ಈ ಮಂಡಲದಿಂದ ಒಂದು ಕಮಿಟಿಯು ಆರಿಸಲ್ಪಡಬೇಕು. ಮತ್ತು ಆ ಕಮಿಟಿಯು ತಮ್ಮ ವರದಿಯನ್ನು ಸಾದರಪಡಿಸುವವರೆಗೆ ಟ್ಯಾಕ್ಸೇಶನ್ ಕಮಿಟಿಯವರ ವಿಚಾರಣೆಯ ಮೇಲಿಂದ ಯಾವ ತರದ ತೆರಿಗೆಯ ಸಂಬಂಧದ ಕಾನೂನನ್ನು ಈ ಮಂಡಲದಲ್ಲಿ ಮುಂದರಿಸಬಾರದೆಂದು ಈ ಮಂಡಲವು ಸರಕಾರಕ್ಕೆ ಸೂಚಿಸುತ್ತದೆ.

೪ ಮುಂಬಯಿ, ಮದ್ರಾಸ, ಪ್ರಾಂತಗಳಲ್ಲಿಯೂ ಕುರ್ಗದಲ್ಲಿಯೂ ಕನ್ನಡ ಭಾಷೆಯನ್ನಾಡುವ ಬೇರೆ ಬೇರೆ ಭಾಗಗಳನ್ನು ಒಟ್ಟುಗೂಡಿಸಿ ಬೇರೊಂದು ಸ್ವತಂತ್ರ ಪ್ರಾಂತವನ್ನು ಮಾಡುವದು ಅತ್ಯವಶ್ಯವಾಗಿರುವದೆಂದು ಈ ಪ್ರಾಂತಿಕ ಸರಕಾರವು ಹಿಂದುಸ್ಥಾನ ಸರಕಾರಕ್ಕೆ ಅರುಹಬೇಕೆಂದು ಈ ಮಂಡಲದ ಸೂಚನೆಯದೆ.

೫ ಕರ್ನಾಟಕದ ಔದ್ಯೋಗಿಕ ಉನ್ನತಿಯಾಗುವದಕ್ಕೂ ಮುಂಬಯಿ ಇಲಾಖೆಯಲ್ಲಿಯ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಹೆಚ್ಚು ಸಂಬಂಧವು ಬೆಳೆಯುವದಕ್ಕೂ ಕೆಳಗೆ ಕಾಣಿಸಿದ ಹೊಸ ಹಳಿ ಕೂಟ (ರೇಲ್ವೆ ಲಾಯನ್) ಗಳನ್ನು ಪ್ರಾರಂಭಿಸುವದು ಅತ್ಯಗತ್ಯವಾಗಿರುವದೆಂದು ಈ ಪ್ರಾಂತಿಕ ಸರಕಾರದ ಅಭಿಪ್ರಾಯವಿರುತ್ತದೆಂದು ಹಿಂದುಸ್ಥಾನ ಸರಕಾರಕ್ಕೆ ತಿಳಿಸಬೇಕೆಂಬದಾಗಿ ಈ ಮಂಡಲದ ಸೂಚನೆಯದೆ.

ಹಳಿ ಕೂಟಗಳ ವಿವರ

(ಅ) ಹುಬ್ಬಳ್ಳಿಯಿಂದ ಶಿರ್ಸಿ- ಕುಮಟೆಯ ವರೆಗೆ—

(ಆ) ಹಾವನೂರಿನಿಂದ ಹಾವೇರಿಯ ಮಾರ್ಗವಾಗಿ ಶಿರ್ಸಿಯ ವರೆಗೆ

(ಇ) ಮಿರ್ಜಿಯಿಂದ ವಿಜಾಪುರ ವರೆಗೆ—

೬ ಒಕ್ಕಲತನಕ್ಕೆ ಉಪಯೋಗಿಸಲ್ಪಡುವ ಹಾಗು ಹಿಂಡುವ ದನಗಳ ಕೊಲೆಯನ್ನು ಪ್ರತಿಬಂಧಿಸುವದಕ್ಕೆ ಬೇಗನೇ ಉಪಾಯಗಳನ್ನು ಕೈಕೊಳ್ಳಬೇಕೆಂದೂ, ಈಗ ಇಲಾಖೆಯಲ್ಲಿದ್ದ ದನಗಳ ಸಂಖ್ಯೆಯು ಬೆಳೆಯುವದಕ್ಕೆ ಅವಶ್ಯವಾದ ಸಂರಕ್ಷಕ, ಹಾಗೂ ನಿರ್ಬಂಧಕ ಯೋಜನೆಗಳನ್ನು ಪ್ರಾರಂಭಿಸಬೇಕೆಂದೂ ಈ ಮಂಡಲವು ಸರಕಾರಕ್ಕೆ ಸೂಚಿಸುತ್ತದೆ.

೭ ಪಾಟೀಲರ ಸಂಬಳವು (ವೋಟಗಿ) ಕಡಿಮೆಯಿದ್ದಸ್ಥಳಗಳಲ್ಲಿ ಅದನ್ನು ಹೆಚ್ಚಿಸಬೇಕೆಂದು ಈ ಮಂಡಲವು ಸರಕಾರಕ್ಕೆ ಸೂಚಿಸುವದು.

ಕನ್ನಡ ನುಡಿಯಲ್ಲಿ

(ಹರಟೆ)

ಕನ್ನಡ ನುಡಿಯನ್ನು ಬೆಳೆಸುವ ಕುರಿತು, ಯಾವ ಭೇದವಿಲ್ಲದೆಯೂ, ತಾಯ್ನುಡಿಯ ಅಭಿಮಾನದಿಂದಲೂ ಹೆಣಗಾಡುವವರು ಎಲ್ಲ ಜಂಗುಳಿಯಲ್ಲೂ ಉಂಟು. ಆದುದರಿಂದಲೇ ಹೊಸ ಹೊಸ ಪುಸ್ತಕಗಳೂ ಮಾಸಿಕಗಳೂ ಜನರ ಕೈಯಲ್ಲಿ ನಲಿದಾಡುತ್ತಿರುವವು. ಆದರೂ ಓದುವವರು ಕಡಿಮೆಯಾಗಿ ಇದ್ದದರಿಂದ, ಒಂದು ಕಡೆಗೆ ಪ್ರಸಿದ್ಧವಾದ ಪುಸ್ತಕಗಳು ಮತ್ತೊಂದೆಡೆಗೆ ಅವುಗಳ ಹೆಸರುಗಳನ್ನೂ ಕೇಳಲರಿಯೆವು.

ಎಷ್ಟೋ ಜನರು, ಕನ್ನಡದ ಏಳ್ಗೆಗಾಗಿಯೋ ತಾವು ಪ್ರಸಿದ್ಧಿಯನ್ನು ಹೊಂದಬೇಕೆಂದೋ ಮಾಲೆಗಳನ್ನು ಹೊರಡಿಸುವರಷ್ಟೇ! ಕೆಲವರಂತೂ ತಮ್ಮ ಜನ್ಮದಲ್ಲಿ ಬರೆದ ಒಂದೇ ಒಂದು ಪುಸ್ತಕದ ಮೇಲೆ ಮಾಲೆಯೆಂದು ಬರೆಯುವರು. ಮಾಲೆಯಾಗಬೇಕಾದರೆ ಒಂದರಿಂದಲೇ ಸಾಧ್ಯವೇ? ಉದಾ:- ವಿಜಯಗ್ರಂಥಮಾಲಾ ಹಿತಚಿಂತಕ ಮಾಲಾ ಮೊದಲಾದುವು.

ಇಂಥ ದುರ್ಗಮ ಸ್ಥಿತಿಯಲ್ಲಿ ಬಾಗಲಕೋಟೆಯ ಕನ್ನಡಿಗನು ಬೆಳಚುಕ್ಕೆಯಂತೆ, ಬೆಳಗಿದ್ದು ಕಂಡು, ಉಳಿದ ಚುಕ್ಕೆಗಳೂ- (ಸ್ಟಾರ್), ಕಾಲ (ಟಾಯಿಮ್) ಗಳೂ ಅಣಕಿಸುತ್ತ ಕುಣಿಯುವವಲ್ಲವೇ? "ಕರುಬಿದ್ದುರಿಂದ ಕಾಡೊಳ್ಳಿತೆನಿಸುವಂತೆ" ಕನ್ನಡಿಗನು ವಿಜಾಪುರ ಜಿಲ್ಲೆಯಂಥ ಬರಗಾಲದಲ್ಲಿ ಉದಯವಾದನು. ಕನ್ನಡದ ಅಭಿಮಾನವನ್ನು ತೋರಿಸುವ ಪತ್ರಿಕೆಗಳು ತಮ್ಮ ಹೆಸರುಗಳಿಂದಲೇ ಕನ್ನಡಿಗರನ್ನು ಬೆದರಿಸುವವು. ವಿಭಾಕರನು, ಕರ್ನಾಟಕದ ಪಶ್ಚಿಮಭಾಗ (ಬೆಳಗಾವಿ) ದಲ್ಲಿ ಉದಯವಾಗುವನು. ಅಂದಮೇಲೆ ಕೇಳುವುದೇನು? ಪಶ್ಚಿಮವೇ ಮೂಡಣವು! ಹೆಸರು ಕನ್ನಡದಿಂದ ವಿಭಾಕರ! ಬರೆವುದೆಲ್ಲಾ ಇಂಗ್ಲಿಷ!!

ಇಂತಹ ದುಷ್ಕಾಲದಲ್ಲಿ ಅಗ್ಗದ ಪತ್ರಿಕೆಗಳನ್ನು ಕಂಡು, ಮೋಸವನ್ನು ಸಂಕಲ್ಪಿಸುವರಲ್ಲವೆ? ಒಳಗೂ, ಹೊರಗೂ, ಮೇಲೂ, ಕೆಳಗೂ, ಸುತ್ತೂ ಮುತ್ತೂ ಕನ್ನಡಿಗನಂತೆ ಕಾಣಿಸುವ ಕನ್ನಡ ಪತ್ರಿಕೆಗಳು ಇದೀಗ ಕರ್ನಾಟಕಕ್ಕೆ ಬೇಕು.

—ಹಳ್ಳಿಯ ಹುಡುಗ—

ಈ ಪತ್ರಿಕೆಯು ಮಂಗಳವೇಡ ರಾಮರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

(ಪ್ರತಿ ಕನ್ನಡ ವಾರಪತ್ರಿಕೆ)

ಮಂಗಳವೇಢೇ ರಾಜೇರಾಯರ ಪಕ್ಕದ ಓಣಿ

ವರ್ಷ ೧೯ ಸಂಚಿಕೆ ೧೮

ಸಂಪಾದಕರ ಭಾಷೆ

ಎಷ್ಟೆ ಕನ್ನಡ ಕಾಲತತಿ ಕನ್ನಡ ನುಡಿಪಡೆ-ಕನ್ನಡವು।
ಸ್ವಪ್ನವು ಕನ್ನಡ ಉದ್ಯಮ[illegible]-ಕನ್ನಡ-ಕನ್ನಡವು।
ಕನಸು ಮನಸಿನೊಳು ಕನ್ನಡ ಕ[illegible] ಸಿದ್ಧಿಯು ಕನ್ನಡವು।
ಜನನ ಕನ್ನಡವು ಜೀವಿತ ಕನ್ನಡ [illegible]ವು ಕನ್ನಡವು॥

—ಕೈ ನಗರ ಕವಿ.

ವಿಜಾಪೂರದಲ್ಲಿ ಮುನಸಿಪಾಲ್ಟಿಯ ತ್ರೈವಾರ್ಷಿಕ ಚುನಾವಣೆಯು ನಾಳಿನ ಆಗಸ್ಟ ೨೫ನೇ ತಾ|| ಇದ್ದುದರಿಂದ ವಿಜಾಪೂರ ನಗರದಲ್ಲಿ ಈ ಬಗ್ಗೆ ಭಾವನಾತ್ಮಕವಾದ ಒಂದು ವಿಚಿತ್ರ ವಾತಾವರಣವು ಉಂಟಾಗಿದೆ. ಈ ಬಗೆಯ ವೈಚಿತ್ರ್ಯವು ಚುನಾವಣೆಯ ಕಾಲಕ್ಕೆ ಎಲ್ಲ ಸ್ಥಾನಗಳಲ್ಲಿಯೂ ಕಂಡುಬರುತ್ತದೆ. ಅದ್ದರಿಂದ ವಿಜಾಪೂರವೂ ಹೀಗಾದುದು ಸ್ವಾಭಾವಿಕವೇ ಸರಿ. ಚುನಾವಣೆಯ ಸಮಯದಲ್ಲಿ ಉಮೇದವಾರರು ಉತ್ತರಕುಮಾರನಂತೆ "ನಾನು ಶೂರನು, ಧೀರನು; ಹಿಂದಕ್ಕೆ ಹಾಗೆ ಮಾಡಿದವನು; ಮುಂದೆ ಹೀಗೆ ಮಾಡತಕ್ಕವನು" ಎಂಬುದಾಗಿ ಬಣ್ಣದ ಮಾತು ಗಳನ್ನಾಡುತ್ತ, ಮತದಾರರ ಬೆನ್ನು ಹತ್ತಿ ತಿರುಗಾಡುವರು. ಈ ತಾಮಸಿಕ ಪಾಶ್ಚಾತ್ಯ ಪದ್ಧತಿಯು ನಮ್ಮ ದೇಶದಲ್ಲಿ ಚೆನ್ನಾಗಿ ನೆಲೆಗೊಂಡಿದೆ. ಈ ಕೆಟ್ಟ ಪದ್ಧತಿಯು ಅಳಿದುಹೋಗಿ, ನಮ್ಮ ಆರ್ಯರ ರೀತಿಗೆ ತಕ್ಕಂತೆ, ಸಾತ್ವಿಕರೀತಿಯಿಂದ ಪ್ರತಿನಿಧಿಗಳ ನ್ನಾರಿಸುವ ಸುಯೋಗವು ಎಂದು ಬರುವದೋ ಅದೇ ಸುದಿನವು. ಇರಲಿ. ಪ್ರಸ್ತುತ ವಿಜಾಪೂರದ ನಾಗರೀಕರು ಉಮೇದವಾರರಿಂದ ಒಂದು ವಿಷಯವನ್ನು ಸ್ಪಷ್ಟಮಾಡಿಕೊಳ್ಳಬೇಕು. ವಿಜಾಪೂರವು ಕರ್ನಾಟಕದ ಭಾಗ. ಆದುದರಿಂದ ಅಲ್ಲಿಯ ಸ್ಥಾನಿಕ ಸ್ವರಾಜ್ಯದ ಅಧಿಕಾರದಲ್ಲಿ ಕನ್ನಡನುಡಿಗೆ ಪ್ರಾಧಾನ್ಯ ದೊರಲೇಬೇಕು. ಆದರೆ ಈಗ್ಗೆ ಹಿಂದಕ್ಕೆ ಆಗಿಹೋದ ಸಭಾಸದರು ಕನ್ನಡಕ್ಕೆ ಎಷ್ಟೊಂದು ಪ್ರಾಧಾನ್ಯವನ್ನು ಕೊಟ್ಟಿದ್ದರೆಂಬುದನ್ನು ವಿಜಾಪೂರ ಪಟ್ಟಣವಾಸಿಗಳು ಲಕ್ಷದಲ್ಲಿಟ್ಟು, ಇನ್ನು ಮೇಲೆ ಯಾರಾರು ಕನ್ನಡಕ್ಕೆ ಮಾತ್ರ ಮುನಸಿಪಾಲಿಟಿಯಲ್ಲಿ ಉಚ್ಚಸ್ಥಾನವನ್ನು ಕೊಡಲು ಸಿದ್ಧರಿರುವರೋ ಅಂಥವರನ್ನೇ ಪ್ರತಿನಿಧಿಗಳನ್ನಾಗಿ ಆರಿಸಬೇಕು. ಉಮೇದವಾರರು ಈ ವಿಷಯವನ್ನು ಸ್ಪಷ್ಟವಾಗಿ ಮತದಾರರಿಗೆ ತಿಳಿಸಿದರೆ, ಅದಕ್ಕೆ ಒಪ್ಪದವರೇ ಇದ್ದರೆ, ಅಂಥ ಉಮೇದವಾರರನ್ನು ಸರ್ವಥಾ ಆರಿಸಬಾರದೆಂತ, ಮತದಾರರು [illegible].

ವೀರಶೈವರಲ್ಲಿ ನವೀನ - ಜಾಗೃತಿಯಾಗಿರುವದರಿಂದ ಅವರು ಸಾರ್ವಜನಿಕ ಸಂಸ್ಥೆಗಳಲ್ಲಿ ಹೆಚ್ಚಿನ ಭಾಗ ತೆಗೆದುಕೊಳ್ಳುತ್ತಿರುವರೆಂದು ಅದೇ ಪ್ರಕಾರವಾಗಿ ಮುನಸಿಪಾಲಿಟಿ ಲೋಕಲ್ ಬೋರ್ಡುಗಳಲ್ಲಿ ಸಹ ಅವರು ಭಾಗವಹಿಸುತ್ತಿರುವದು ಯೋಗ್ಯವೇ ಸರಿ. ಆದರೆ ವೀರಶೈವರು ಮುಖ್ಯವಾಗಿ ಮಾತೃಭಾಷೆಯ ಕಡೆಗೆ ಎಷ್ಟು ಲಕ್ಷ್ಯ ಕೊಡಬೇಕೋ ಅಷ್ಟು ಕೊಟ್ಟಿರುವದಿಲ್ಲ. ಧಾರವಾಡದಂಥ ಕರ್ನಾಟಕದ ಕೇಂದ್ರಸ್ಥಳದಲ್ಲಿ ಸಹ ವಾಚನಾಲಯದ್ವಾರ ಪಾಟೀಲರಂಥ ಕನ್ನಡ ಅಭಿಮಾನಿಗಳು ಅಧ್ಯಕ್ಷರಿದ್ದಾಗ್ಯೂ! ಮುನಸಿಪಾಲಿಟಿಯು ಹಾಗಿರಲಿ. ಓಣಿಗಳು ಮರಾಠಿಯಲ್ಲಿದೆ ಸ್ಥಾನಕ್ಕೆ ಹೋಗುವ ದಾರಿಗಳನ್ನು 'ಆಚಾರ್ಯಗಲ್ಲಿ, ಮರಾಠಿ' ಹಳಿಗೆ; ಓಣಿಗಳ ಹೆಸರು 'ಗಲ್ಲಿ' ಎಂಬುದಾಗಿ ! 'ಓಣಿ' 'ಬೀದಿ' ಗಳೆಂಬ ಶಬ್ದಗಳು ನಮ್ಮಲ್ಲಿಲ್ಲವೇ? ಇತ್ತೀಚೆಗಂತೂ ವೀರಶೈವರು ತಮ್ಮ ಹೆಸರುಗಳಿಗೆ ಸಹ ಮರಾಠಿಯ ರೂಪವನ್ನು ಕೊಡಹತ್ತಿರುವರು. ಇದೆಂಥ ವ್ಯಸನಕರವಾದ ಸಂಗತಿಯು! ಸಿದ್ಧಪ್ಪಾ ರೇವಣಪ್ಪಾ ಬಾಪೂರು ಎಂಬುದಾಗಿದ್ದ ಹೆಸರನ್ನು "ಸಿದಾಪಾ ರೇವಣಾಪಾ ಬಾಪೂರೆ" ಎಂಬುದಾಗಿ ಬರೆಯುತ್ತಿರುವರು. ಶ್ರೀ. ಬಾಪೂರಯವರು ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ ಎದ್ದುನಿಂತು ಉತ್ಸಾಹದಿಂದ ಕನ್ನಡದ ಅಭಿಮಾನವು ಪ್ರತಿಯೊಬ್ಬನಿಗೆ ಇರತಕ್ಕದ್ದೆಂಬುದಾಗಿ ನುಡಿದರು. ಆದರೆ ಅದನ್ನು ತಮ್ಮ ಕೃತಿಯಲ್ಲಿ ತಂದು ಹಲಿಗೆಯ ಮೇಲೆ ಶುದ್ಧವಾಗಿ ಕನ್ನಡವನ್ನೇಕೆ ಬರೆಯಬಾರದು? ನಿಪ್ಪಾಣಿ ಬೆಳಗಾವಿಕಡೆಯ ವೀರಶೈವರು ಈ ಮರಾಠೀ ರೂಪದ 'ಕಾಲಾಪಾ' 'ಧರಮಾಪಾ' ಹೆಸರುಗಳನ್ನು ಪವಿತ್ರವೂ ಮಂಗಲಕರವೂ ಆದ ಲಗ್ನ ಮುಹೂರ್ತಾದಿ ಶುಭಪ್ರಸಂಗದ ಪತ್ರಿಕೆಗಳಲ್ಲಿಯು ಸಹ ಉಪಯೋಗಿಸುತ್ತಲಿದ್ದಾರೆ. ಕನ್ನಡಕ್ಕೆ ಇದೆಂಥ ಅಪಮಾನಕರವಾದ ಸಂಗತಿ! ಅತ್ತ ಪೇಶ್ವೇರ ಆಳಿಕೆಯಿಂದ ಬ್ರಾಹ್ಮಣರು, ಕನ್ನಡವನ್ನು ಮರೆತು, ಮರಾಠಿಗೆ ಮೋಹಿಸುತ್ತಿರುವ ಹಳೆಯ ಪದ್ಧತಿಯನ್ನು ಬಿಡಲೇಬೇಕೆಂಬದಾಗಿ ನಾವು ಒತ್ತಿ ಸಾರುತ್ತಿರುವಾಗ್ಗೆ, ಇತ್ತ ವೀರಶೈವರು ತಾಯ್ನುಡಿಯನ್ನು ಈ ಪ್ರಕಾರವಾಗಿ ತಿರಸ್ಕರಿಸುವುದು ನಿಜವಾಗಿಯೂ ದುಃಖದ ವಿಷಯವು. ಈ ವ್ಯಾಧಿಯು ಹೆಚ್ಚಾಗಿ ಪಸರಿಸದಂತೆ, ಚಿಕ್ಕದಿರುವಾಗಲೇ ಚಿವುಟಿಬಿಡುವ ಕೆಲಸವನ್ನು ತೀವ್ರದಿಂದ ಮಾಡಬೇಕಾಗಿ, ವೀರಶೈವರಲ್ಲಿಯ ಕನ್ನಡ ಅಭಿಮಾನಿಗಳಿಗೂ ಪತ್ರಕರ್ತರಿಗೂ ಆಗ್ರಹಪೂರ್ವಕವಾಗಿ ಸೂಚಿಸದೇ ಇರಲಾರೆವು.

ದೇಶಬಂಧುಗಳ ಸ್ಮಾರಕಕ್ಕಾಗಿ ಬಂಗಾಲದಲ್ಲಿ ೫ ಲಕ್ಷ ರೂಪಾಯಿಗಳು ಈಗಾಗಲೇ ಕೂಡಿವೆ. ಆದು ಬಂಗಾಲ ಪ್ರಾಂತದ

ಸ್ಮಾರಕವು. ಇದೇ ಪ್ರಕಾರವಾಗಿ ಅಖಿಲ ಭಾರತೀಯ ಸ್ಮಾರಕವು ಒಂದಿರಬೇಕಾಗಿ ಮಹಾತ್ಮಾ ಗಾಂಧೀ, ನೆಹರೂ, ಶೌಕತಅಲ್ಲಿ ಮೊದಲಾದ ಪ್ರಮುಖರು ಒಂದು ವಿನಂತಿ ಪತ್ರಿಕೆಯನ್ನು ಪ್ರಕಟಿಸಿದ್ದಾರೆ. ಹಿಂದುಸ್ಥಾನದ ಜೀವಾಳವೆಂದರೆ ಹಳ್ಳಿಗಳು. ದೇಶಬಂಧುಗಳು ಹಳ್ಳಿಯು ಸುಸಂಸ್ಕೃತವಾಗಬೇಕೆಂದು ಬಯಸುತ್ತಿದ್ದರು. ಆದುದರಿಂದ ಅವರ ಸ್ಮಾರಕಕ್ಕಾಗಿ ದೊಡ್ಡದೊಂದು ನಿಧಿಯನ್ನು ಏರ್ಪಡಿಸಿ, ಆ ಮುಖಾಂತರ ಹಳ್ಳಿಗಳನ್ನು ಸುವ್ಯವಸ್ಥೆಯಾಗಿ ಮಾಡಬೇಕೆಂದು ಮಹಾತ್ಮರು ಪ್ರಕಟಿಸಿದ್ದಾರೆ. ಈ ಸ್ಮಾರಕವು ಸೂಚನೆಯು ದೇಶಬಂಧುಗಳ ಯೋಗ್ಯತೆಗೆ ಒಪ್ಪುವಂಥವದು. ಇದಕ್ಕೆ ಪ್ರತಿಯು ಮುದ್ರಕರು ಮಾತ್ರ ಮೂಗು ಮುರಿಯುತ್ತಾರೆ. ಲೋಕಮಾನ್ಯ ಸ್ಮಾರಕ ನಿಧಿಯು ರಾಟಿಯಂಥವ ಅನ್ಯಾಯದ ಕೆಲಸದಲ್ಲಿ ಹಾಳಾಗಿ ಹೋಯಿತಂತೆ! ಅದಕ್ಕಾಗಿ ಈ 'ಕೇಸರಿ' ಕಾರರಿಗೆ ಬಹು ವ್ಯಸನವಾಗಿದೆ. ರಾಟಿಯು ಅನ್ಯಾಯವಾದರೂ, ಅದರ ಪ್ರಚಾರಕ್ಕಾಗಿ ವ್ಯಯವಾದ ಹಣವು ನಿರರ್ಥಕವಾಗಿ ಹಾಳಾಯಿತೆಂದೂ, ಬಿಟ್ಟೀ ಲಕ್ಷವನ್ನು ಹಾಕಬೇಕೆಂದೂ ಹೇಳುವ 'ಕೇಸರಿ' ಕಾರರ ವಿಧಾನಗಳನ್ನೋದಿದರೆ ಮಹಾರಾಷ್ಟ್ರದ ಹೊರಗಿನ ಜನರಿಗೆ ನಗೆ ಬಾರದೆಯಿರದು.

ಮಹಾತ್ಮಾಜಿಯವರು 'ನೂಲಿನ ವರ್ಗಣಿ'ಯನ್ನು ತೆಗೆದು ಹಾಕಬಹುದೆಂದು ಪಂಡಿತ ಮೋತೀಲಾಲರಿಗೆ ೧೯ ನೇ ತಾರೀಖಿನ ದಿವಸ ಬರೆದ ಪತ್ರದ ಮೇಲಿಂದ ಆಶಂಕೆಗೆ ಸಂಶಯವುಂಟಾಗಿತ್ತು. ಆದರೆ ಕಳೆದ ವಾರದ "ಯಂಗ ಇಂಡಿಯಾ" ಪತ್ರದಲ್ಲಿ ಮಹಾತ್ಮಾಜಿಯವರು ಈ ವಿಷಯವಾಗಿ ಬರೆದ ಲೇಖದಿಂದ ಈ ಸಂಶಯವು ದೂರಾಗಿರುವದು. ಬೆಳಗಾವಿಯಲ್ಲಿ ರಾಷ್ಟ್ರೀಯ ಸಭೆಯಲ್ಲಿ ದೇಶಬಂಧು ದಾಸರ ಹಾಗು "ಮಹಾತ್ಮಾಜಿಯವರ ನಡುವೆ ಆದ ಒಪ್ಪಂದವು ಈಗ ತುಸು ಬದಲಾಗಿರುವದು. ಆ ನಿರ್ಣಯದ ಪ್ರಕಾರ ರಾಷ್ಟ್ರೀಯ ಸಭೆಯ ಸಭಾಸದರಾಗಬೇಕಾದರೆ ಸ್ವತಃ ತೆಗೆದ ನೂಲನ್ನಾಗಲೀ ಬೇರೆಯವರು ತೆಗೆದ ನೂಲನ್ನಾಗಲೀ ಕೊಡಬೇಕಾಗುತ್ತಿತ್ತು. ಅಂದರೆ ನೂಲನ್ನು ಕೊಡದ ಹೊರತು ಸಭಾಸದರಾಗಲು ಬರುತ್ತಿದ್ದಿಲ್ಲ. ಹೀಗಾಗಿದ್ದರಿಂದ ಎಷ್ಟೋ ಕೆಲಸಗಾರರಿಗೆ ತೊಂದರೆಯಾಯಿತು. ಎಷ್ಟೋ ಜನರು ನೂಲಿನ ಬೆಲೆಯನ್ನು ಕೊಟ್ಟು ನೂಲನ್ನು ಕೊಂಡುಕೊಳ್ಳಲಿಕ್ಕೆ ರಾಷ್ಟ್ರೀಯ ಸಭೆಯ ಕಾರ್ಯಾಲಯಕ್ಕೇ ಹೇಳುತ್ತಿದ್ದರು. ಇದು ಯೋಗ್ಯವಾಗುತ್ತಿದ್ದಿಲ್ಲ. ಇದ್ದರಿಂದ ಈ ಪದ್ಧತಿಯನ್ನು ತೆಗೆದು ಹಾಕಬೇಕೆಂದು ಎಲ್ಲ ಕಡೆಯಿಂದ ಸೂಚನೆಗಳು ಬಂದವು. ಸ್ವರಾಜ್ಯ ಪಕ್ಷದವರಾದರೂ ನೂಲಿನ ಬದಲಾಗಿ ಹಣದ ವರ್ಗಣಿಯನ್ನು ಇಡಬೇಕೆಂದು ಬಯಸುತ್ತಿದ್ದರು. ಇವೆಲ್ಲ ಪರಿಸ್ಥಿತಿಯನ್ನು ನೋಡಿ ಮಹಾತ್ಮಾಜಿಯವರು ಬೆಳಗಾವಿಯಲ್ಲಿಯ ಒಪ್ಪಂದದಿಂದ ಸ್ವರಾಜ್ಯ ಪಕ್ಷದವರನ್ನು ಮುಕ್ತ ಮಾಡಿರುವರು; ಈಗ ಎಲ್ಲರೂ ಒಪ್ಪಿಕೊಂಡ ಸೂಚನೆಗಳಿಂದರೂ ಅತ್ಯಂತ ಯೋಗ್ಯವಾಗಿರುವವು. ಈ ಸೂಚನೆಗಳಂತೆ ರಾಷ್ಟ್ರೀಯ ಸಭೆಯ ಸಭಾಸದರಾಗಬೇಕಾದರೆ ಸ್ವತಃ ತೆಗೆದ ನೂಲನ್ನು ಇಲ್ಲವೆ ಅದರ ಬೆಲೆಯಷ್ಟು ಹಣವನ್ನು ಕೊಡಬೇಕಾಗುವದು. ಎರಡನೆಯವರಿಂದ ನೂಲು ತೆಗೆಯಿಸಿಕೊಡಬೇಕೆಂಬ ನಿರ್ಬಂಧವಿಲ್ಲ. ಬೆಳಗಾವಿಯಲ್ಲಿಯ ನಿರ್ಣಯವು ಕೇವಲ ಒಂದು ವರ್ಷ ಅನುಭವವನ್ನು ತೆಗೆದುಕೊಳ್ಳಲಿಕ್ಕೆಂದು ಇದ್ದಿತ್ತು. ಆದರೆ ಇನ್ನು ಮುಂದೆ ನಿರಂತರವಾಗಿ ನೂಲಿನ ವರ್ಗಣಿಯನ್ನು ಇಡುವದಕ್ಕೆ ಎಲ್ಲರೂ ಒಪ್ಪಿರುವರು. ಇದೊಂದು ದೊಡ್ಡ ಲಾಭ. ಅದರಂತೆಯೇ ರಾಷ್ಟ್ರೀಯ ಸಭೆಯ ಸಭಾಸದರೆಲ್ಲ ಖಾದೀ ಬಟ್ಟೆಗಳನ್ನೇ ಧರಿಸಬೇಕೆಂಬುದನ್ನು ಸಹ ಎಲ್ಲರೂ ಸಮ್ಮತಿಸಿರುವರು. ಇದು ಎರಡನೆಯ ಲಾಭ. ಇದಕ್ಕಾಗಿ ಮಹಾತ್ಮಾಜಿಯವರು ರಾಷ್ಟ್ರೀಯ ಸಭೆಯ ಸೂತ್ರಗಳನ್ನು ಸ್ವರಾಜ್ಯ ಪಕ್ಷದವರಿಗೆ ಒಪ್ಪಿಸಿರುವರು. ಅಖಿಲ ಭಾರತೀಯ ನೂಲುವ ಮಂಡಲವನ್ನೊಂದು ಸ್ಥಾಪಿಸಿ ಅದನ್ನು ರಾಷ್ಟ್ರೀಯ ಸಭೆಯ ಒಂದು ಅಂಗವನ್ನಾಗಿ ಮಾಡತಕ್ಕದ್ದು. ನೂಲಿನ ವರ್ಗಣಿಯ ಹಾಗೂ ಖಾದಿಯ ಸಂಬಂಧದ ಎಲ್ಲ ವ್ಯವಸ್ಥೆಯನ್ನು ಈ ಮಂಡಲದವರು ಮಾಡಲಿಕ್ಕೆ ಸಂಪೂರ್ಣ ಸ್ವತಂತ್ರರು. ಈಗ ಸ್ವರಾಜ್ಯ ಪಕ್ಷಕ್ಕೂ ರಾಷ್ಟ್ರೀಯ ಸಭೆಗೂ ಇದ್ದ ಸಂಬಂಧ ಕಿರುಬಂದಿ ಈ ಅಖಿಲ ಹಿಂದುಸ್ಥಾನದ ನೂಲುವ ಮಂಡಲಕ್ಕೂ ರಾಷ್ಟ್ರೀಯ ಸಭೆಗೂ ಇರತಕ್ಕದ್ದು. ಇದರ ಮೇಲಿಂದ ಯೋಚಿಸಿದರೆ ಯಂಗ ಇಂಡಿಯಾ ಮುಂತಾದ ಪತ್ರಗಳಲ್ಲಿ ಬರೆದ ನೂಲಿನ ಸರ್ವಸ್ವವು ... ಸಿದ್ಧವಾಗುತ್ತದೆ.

ಧಾರವಾಡದ ಶ್ರೀ. ದತ್ತಾತ್ರಯ ... ಕನ್ನಡಿಗರ ... ಟ್ಟಿದ್ದಾರೆ ... ವಿದ್ಯಾಲಯ ... ಇತಿಹಾಸವನ್ನು ... ಸ್ವತಂತ್ರವಾಗಿ ಬರೆದು ಕಳಿಸಿದವರಿಗೆ ... ಬಹುಮಾನಗಳನ್ನು ಕೊಡುವದಾಗಿ ಪ್ರಕಟಿಸಿ ... ಇತಿಹಾಸಕ್ಕೆ (ಅಂದರೆ ಕನ್ನಡಿಗರ ...) ... ಪ್ರಾಧಾನ್ಯ ದೊರೆಯದ ... ಈ ಸ್ಪರ್ಧೆಯ ... ಭಾಗ ತೆಗೆದುಕೊಳ್ಳಬಹುದೆಂದು ... ಭಾವಿಸಿದ್ದರು. ಆದರೆ ... ಭಾಗ ತೆಗೆದುಕೊಳ್ಳಲಿಲ್ಲ ... ಕನ್ನಡಿಗರು ಈ ಸ್ಪರ್ಧೆಯಲ್ಲಿ ಭಾಗವಹಿಸದೆ ... ಗುರಿಯಾಗಿತ್ತು. ಇದರಿಂದ ಕನ್ನಡಿಗರಲ್ಲಿ ... ಅಭಿಮಾನವಿಲ್ಲವೆಂದೂ, ವಿಶ್ವವಿದ್ಯಾಲಯದಂಥ ಉಚ್ಚತರದ ಸ್ಪರ್ಧೆಗಳಲ್ಲಿ ಬಾಗವಹಿಸಿಕೊಳ್ಳಲು ಕನ್ನಡಿಗರ ಬಲವು ಇಲ್ಲವೆಂಬುದೂ, ಸಿದ್ಧವಾಗುತ್ತಿದ್ದವು. ಆದರೆ ಶ್ರೀ. ... ಕರರು ಹೀಗೆ ಸಿದ್ಧ ಮಾಡಿಕೊಡಲು ಅವಕಾಶವನ್ನು ಕೊಡಲಿಲ್ಲ. ಅವರು ಆ ಇತಿಹಾಸವನ್ನು ಬರೆದು ಕಳಿಸಿದರು. ವಿಶ್ವವಿದ್ಯಾಲಯದವರು, ಅವರ ಗುಣವನ್ನು ಕಂಡುಹಿಡಿದು, ಪಂಡಿತ ಭಗವಾನಲಾಲ ಇಂದ್ರಜೀ ಸುವರ್ಣ ಪದಕವನ್ನು, ಪಾರಿತೋಷಕವನ್ನೂ ಅವರಿಗೆ ಅರ್ಪಿಸಿದ್ದಾರೆ. ನಾವು ಶ್ರೀ. ... ಅವರನ್ನು ಅಭಿನಂದಿಸದೇ ಇರಲಾರೆವು.

... ಸರಕಾರದವರು ಅನೇಕ ರೀತಿಯಲ್ಲಿ ಬ್ರಿಟಿಶ್ ಸರಕಾರಕ್ಕೆ ಬುದ್ಧಿಗಲಿಸುತ್ತಿರುವರು. ಬ್ರಿಟಿಶ್ ಸರಕಾರವು (ಕಲಿಯುತಕ್ಕ ಅನೇಕ ವಿಷಯಗಳಲ್ಲಿ) ಈಗ ಒಂದು ವಿಷಯವನ್ನು ... ಪ್ರಜೆಗಳ ... ಗಳನ್ನು ... ಅರಿಯುವ ವಿಷಯ. ... ಸ್ತ್ರೀಯರಿಂದ ... ಅಧಿಕಾರವನ್ನು ತೆಗೆದು, ಮುನಸಿ ... ಸರಕಾರಕ್ಕೆ ... ಸರಕಾರದ ... ಪ್ರಗತಿಕರೂ ... ಆದರ ಸರಕಾರಕ್ಕೆ ... ಇಲ್ಲಿ ... ಕಲೆಕ್ಟರ ... ಈ ಅಧಿಕಾರವನ್ನು ... ಸರಕಾರಕ್ಕೆ ಬರು ... ಈ ಅಧಿಕಾರವನ್ನು ... ಎಂಗಡಿಸಿದ್ದಕ್ಕಾಗಿ ನಾವು ... ನ್ನು ಅಭಿಮಾನಪೂರ್ವಕವಾಗಿ ಅಭಿನಂದಿಸುತ್ತೇವೆ. ... ನವೊಂದು, ಪ್ರಗತಿಯ ಬುದ್ಧಿಯ ಮಾರ್ಗವನ್ನು ... ಮೇಲ್ಪಂಕ್ತಿಯನ್ನು ಹಾಕಿಕೊಟ್ಟದ್ದಕ್ಕೆ ಅನಂದಿಸುತ್ತೇವೆ.

ಕರ್ನಾಟಕ ವಿಶ್ವವಿದ್ಯಾಲಯ.

ಈಗಾಗಲೇ ಹರಿದುಹಂಚಿಹೋದ ಹರಕುಮುರುಕು ಕನ್ನಡ ನಾಡನ್ನು ಇನ್ನೂ ಹರಿದು ಹಂಚಿಕೊಳ್ಳಬೇಕೆಂದು ಹೊಂಚುಹಾಕಿದ ಹುಚ್ಚುಗಾರರ ಹಾವಳಿಯು ಎಲ್ಲರ ಕಣ್ಣಿಗೂ ಕಾಣುತ್ತಿರುವ ವಿಷಯ. ಅದಕ್ಕೆಂದೇ ‘ಕರ್ನಾಟಕಏಕೀಕರಣ’ ಮಂಡಲದವರು ಇದನ್ನು ತೀವ್ರವಾಗಿ ಪ್ರತಿರೋಧಿಸಬೇಕಾಗಿ ಬಂದಿದೆ. ಕರ್ನಾಟಕವನ್ನು ಸದ್ಯಕ್ಕೆ ಮುಟ್ಟದಿರುಬಂದ ಆಂಧ್ರರನ್ನು ನಾವೀಗ ವಿಶ್ವಾಸಿಸಬಹುದೆಂದರೆ ನಂಬುವಂತೆಯೇ ಇಲ್ಲ. ಏಕೀಕರಣದ ಹಾದಿಯಲ್ಲಿ ಮೇಲಿಂದಮೇಲೆ ಒದಗುವ ಈ ಎಡವುಗಲ್ಲುಗಳನ್ನೂ ಹಳ್ಳ-ಮುಳ್ಳುಗಳನ್ನೂ ಕಿತ್ತು ಒಗೆಯುತ್ತ ಸಾಗಬೇಕು. ಅಂದರೆ ಆ ಬಗ್ಗೆ ನಾವು ನಮ್ಮೊಳಗಿಂದ ಅಪ್ರತ್ಯಕ್ಷವಾಗಿ ಕರ್ನಾಟಕದ ಏಕೀಕರಣವನ್ನು ದೂರಗೊಳಿಸುತ್ತ ಹೋದಂತೆಯೇ ಆಗುವದು. ನಾವು ಬ್ರಿಟಿಶ ಕರ್ನಾಟಕದವರೆನ್ನದೆ, ನಾವು ಮೈಸೂರು ಕರ್ನಾಟಕದವರೆನ್ನದೆ, ನಾವು ಮಂಗಳೂರ ಕರ್ನಾಟಕದವರೆನ್ನದೆ, ನಾವು ನಿಜಾಮ ಕರ್ನಾಟಕದವರೆನ್ನದೆ, ನಾವು ಕೊಡಗು ಕರ್ನಾಟಕದವರೆನ್ನದೆ, ಎಲ್ಲರೂ ಒಮ್ಮನಸ್ಸಿನಿಂದ ಹೋರಾಡುವ ಹಾದಿ! ಆಂಧ್ರರು, ಮಹಾರಾಷ್ಟ್ರರು, ನಮ್ಮ ಬೆಣ್ಣೆ-ರೊಕ್ಕರಿಯ ಮೇಲೆ ಕಣ್ಣಿಟ್ಟ ಇನ್ನು ಯಾವಯಾವ ಮಂಗಗಳು ಸುಲಭವಾಗಿ ಓಡಿಹೋಗಬಹುದಲ್ಲವೆ? ನೋಡಿ, ನಮ್ಮೀ ಕಾಲಕಂಟಕರು ನಮ್ಮ ಏಕೀಕರಣಕ್ಕೆ ಸಹಕಾರಿಗಳಾಗಿಯೇ ಬಂದಂತಾಗಲಿಲ್ಲವೆ? ಎಲ್ಲಭಾಗದ ಕರ್ನಾಟಕಸ್ಥರನ್ನೂ ಹೊಸದು ಎಚ್ಚರಿಸಿದಂತಾಗಲಿಲ್ಲವೆ?

ಆಂಧ್ರರು ಬಳ್ಳಾರಿಯಲ್ಲಿ ತಮ್ಮ ವಿಶ್ವವಿದ್ಯಾಲಯವನ್ನು ಸ್ಥಾಪಿಸ ಬಂದಿರುವರಲ್ಲವೆ? ಬರಲಿ; ನಾವು ನಮ್ಮ ಏಕೀಕರಣದಿಂದ—ನಾವು ನಮ್ಮ ಏಕೀಕೃತ ಕರ್ತೃತ್ವ ಶಕ್ತಿಯಿಂದ ಆ ಆಂಧ್ರ ವಿಶ್ವವಿದ್ಯಾಲಯವು ಆಗಬೇಕಾದ್ದನ್ನೇ ನಾವು ಕರ್ನಾಟಕ ಮಹಾವಿದ್ಯಾಲಯವು ಆಗುವಂತೆ ರೂಪಾಂತರಗೊಳಿಸಿ ಬಿಡೋಣ!

ಸರಕಾರದವರು ಬಳ್ಳಾರಿಯಲ್ಲಿ ಕರ್ನಾಟಕ ಮಹಾವಿದ್ಯಾಲಯಕ್ಕೆ ಆಸ್ಪದಕೊಡದಿದ್ದರೂ ಆಂಧ್ರ ವಿಶ್ವವಿದ್ಯಾಲಯವನ್ನಂತೂ ನಿಲ್ಲಿಸಲು ಹೋಗಲಾರರು. ಯಾಕೆಂದರೆ ಪಾಪ! ಅವರಿಗೆ ಬಳ್ಳಾರಿಯಲ್ಲಿ ಕನ್ನಡಿಗರೇ ಬಹು ಸಂಖ್ಯಾಕರೆಂಬುವದು ಮೊದಲು ತಿಳಿದಿಲ್ಲ. “ನಾವುಕನ್ನಡಿಗರು” ಎಂಬ ನಮ್ಮ ಪಣೆಪಟ್ಟಿಯನ್ನೋದಿ ಓದಿ ಈಗ ಗೊತ್ತಾಗುತ್ತಿಲ್ಲ? ಇನ್ನುಮುಂದಾದರೂ ಸರಕಾರದವರು ಆ ಸಾಹಸಕ್ಕೆ ಹೋಗಲಾರರೆಂದೇ ನಮ್ಮ ಗ್ರಹಿಕೆ. ಅದೇಕೆ? ಹೋಗಬಾರದೆಂದೇ ಹೇಳೋಣವಲ್ಲ!

ಅದ್ದರಿಂದ ಈ ಅಭಿಪ್ರಾಯದೊಡನೆ ನಮ್ಮದೊಂದು ವಿಚಾರಪೂರ್ಣವಾದ ಸೂಚನೆಯನ್ನೂ ಮುಂದಿಡುವೆವು. ಅದೆಂದರೆ ಕರ್ನಾಟಕಕ್ಕೆ ವಿಶ್ವವಿದ್ಯಾಲಯದ ಅವಶ್ಯಕತೆಯು ಅತ್ಯಂತವಾಗಿದೆಯೆಂಬುದಂತೂ **ಸೂರ್ಯ ಚಂದ್ರರಷ್ಟು** ನಿಚ್ಚಳವಾಗಿ ಒಡೆದೊಡೆದು ಕಾಣುವಮಾತಾಗಿದೆ. ಅದ್ದರಿಂದ ಮೈಸೂರ ಸಂಸ್ಥಾನದ ವಿಶ್ವವಿದ್ಯಾಲಯವು ಈಗಾಗಲೇ ಕನ್ನಡ ವಿಶ್ವವಿದ್ಯಾಲಯವೇ ಆಗಿದೆ. ಆದರೆ ಅದು ಮೈಸೂರ ಸಂಸ್ಥಾನಿಕರಿಗೆ ಮಾತ್ರ; ಅಖಿಲಕರ್ನಾಟಕಸ್ಥರಿಗಲ್ಲ. ಅದ್ದರಿಂದ ಬ್ರಿಟಿಶ್ ಸರಕಾರದವರು ಮೈಸೂರ ಸರಕಾರದವರೊಂದಿಗೆ ಮಾತಾಡಿಕೊಂಡು ಆ ಸಂಸ್ಥಾನದ ವಿಶ್ವವಿದ್ಯಾಲಯವನ್ನೇ ಅಖಿಲ ಕರ್ನಾಟಕದ ವಿಶ್ವವಿದ್ಯಾಲಯವನ್ನಾಗಿ ಮಾರ್ಪಡಿಸಬೇಕು. ಇದು ಈಗ ಬಹು ಸುಲಭಸಾಧ್ಯವಾದ ಉಪಾಯವಾಗಿದೆ.

ಈಸಲದ “ಕನ್ನಡಿಗ”ನಲ್ಲಿಯ “ದಕ್ಷಿಣ ಕನ್ನಡದ ಮನಸ್ಸು” ಎಂಬ ಲೇಖದಲ್ಲಿ ೧೨ ನೇ ಪ್ಯಾರಾದಲ್ಲಿ ವಿವರಿಸಿದಂತೆ ತಿರುವಾಂಕೂರದ ಉದಾಹರಣೆಯಿಂದ ನಾವು ಸೂಚಿಸಿದ ಈ ಉಪಾಯವು ಸಾಧಿಸುವ ಸಂಭವವೂ ಬಹುಮಟ್ಟಿಗಿದೆ. ಅದ್ದರಿಂದ ಎಲ್ಲ ಕನ್ನಡಿಗರೂ ಇದಕ್ಕಾಗಿ ಪ್ರಯತ್ನಿಸಿ ಸರಕಾರದವರ ಕಿವಿಮುಟ್ಟುವಂತೆ ಮಾಡಬೇಕು. ಅದನ್ನು ಅವರು ಕೈಮುಟ್ಟಿ ಮಾಡುವಂತೆ ಮಾಡಬೇಕು. ಅದನ್ನು ನಾವು ಕಣ್ಮುಟ್ಟಿ ನೋಡುವಂತೆ ಮಾಡಬೇಕು. ಇಷ್ಟೇ ನಮ್ಮ ಕನ್ನಡಿಗರಲ್ಲಿ ಕನಿಕರದ ಕನವರಿಕೆ.

‘ಕನ್ನಡಿಗ’

ಭಾವೀ ಮಹಾಯುದ್ಧದ ಸಿದ್ಧತೆಯು

ಶಸ್ತ್ರಾಸ್ತ್ರಗಳ ಬಳಕೆಯನ್ನು ಪ್ರತಿಬಂಧಿಸಿ, ಜಗತ್ತಿನಲ್ಲಿ ಸ್ಥಿರವಾದ ಶಾಂತತೆಯನ್ನು ನೆಲೆಗೊಳಿಸಲೋಸುಗ ಜಿನೀವಾ ಪಟ್ಟಣದಲ್ಲಿ ರಾಷ್ಟ್ರ ಸಂಘದ ಆಶ್ರಯದಲ್ಲಿ ಒಂದು ಪರಿಷತ್ತು ನೆರೆದಿತ್ತು. ಆ ಪರಿಷತ್ತು ಜೂನ ತಿಂಗಳ ಮೂರನೇ ವಾರದಲ್ಲಿ ಪರಿಸಮಾಪ್ತಿಯಾಯಿತು. ಪರಿಷತ್ತಿಗೆ ಬರಲಿಚ್ಛಿಸಿದ ಮಿತ್ರರಾಷ್ಟ್ರದ ಪ್ರತಿನಿಧಿಗಳು “ಶಸ್ತ್ರಾಸ್ತ್ರಗಳ ಬಳಕೆ ಪ್ರತಿಬಂಧದ ಕರಾರನಾಮೆಗೆ” ತಮ್ಮ ಒಪ್ಪಿಗೆಯನ್ನಾದರೂ ಕೊಟ್ಟಿದ್ದರು. ಆದರೆ ಪರಿಷತ್ತಿನಲ್ಲಿಯ ಅವರ ದಾಂಭಿಕ ಮತ್ತು ಔಪಚಾರಿಕ ಭಾಷಣಗಳು ಜಗತ್ತಿನಲ್ಲಿ ಶಾಂತತೆಯನ್ನು ಸ್ಥಿರಪಡಿಸುವ ಧ್ಯೇಯಕ್ಕೆ ಸ್ವಲ್ಪಾದರೂ ಪುಷ್ಟಿಯನ್ನೀಯಲಿಲ್ಲ. ಜಗತ್ತಿನಲ್ಲಿ ಶಾಂತತೆಯನ್ನು ನೆಲೆಗೊಳಿಸಲು ಕಂಕಣಬದ್ಧರಾಗಿದ್ದೇವೆಂದು ಜಂಬ ಪಡೆಯುವ ಸರ್ವ ಪ್ರಬಲರಾಷ್ಟ್ರಗಳು ಮಹಾಯುದ್ಧದ ಸಿದ್ಧತೆಯನ್ನು ಬಹು ಜೋರಿನಿಂದ ನಡಿಸಿರುವರೆಂಬುದು ಮಾತ್ರ ಆ ಪರಿಷತ್ತಿನಿಂದ ವ್ಯಕ್ತವಾಯಿತೆಂದು ಚಾರ್ಲಸ್ ರೋಡೆನ್ ಬಕ್ಸಟನವರು ‘ಡೇಲಿ ಹೆರಾಲ್ಡ’ ಪತ್ರಿಕೆಯಲ್ಲಿ ಬರೆದಿದ್ದಾರೆ. ಮತ್ತು ಅಭಿಪ್ರಾಯದ ಪುಷ್ಟ್ಯರ್ಥವಾಗಿ ಕೆಳಗಿನ ಕಾರಣಗಳನ್ನಾದರೂ ಉಲ್ಲೇಖಿಸಿದ್ದಾರೆ.

(೧) ಯುರೋಪದ ಮತ್ತು ಇತರ ರಾಷ್ಟ್ರಗಳು ಭಾವೀ ಮಹಾ ಯುದ್ಧದ ಸಿದ್ಧತೆಯಲ್ಲಿ ತೊಡಗಿರುತ್ತವೆ (೨) ಸೈನಿಕರನ್ನು ಸಜ್ಜುಗೊಳಿಸಲು ಆ ದೇಶದ ಭಾಂಡವಲುಗಾರರು ಬಹು ಪ್ರಯತ್ನಿಸ ಹತ್ತಿರುತ್ತಾರೆ (ಖಾಸಗೀ ಧಂಧೆಗಾರರು ಶಸ್ತ್ರಾಸ್ತ್ರಗಳನ್ನು ತಯಾರಿಸ ಕೂಡದೆಂದು ಆ ಕರಾರನಾಮೆಯು ೮ ನೇ ಕಲಮಿನಂತೆ ವ್ಯಕ್ತಪಡಿಸುತ್ತಿದ್ದಾಗ್ಯೂ) (೩) ಸ್ವಲ್ಪಾವಧಿಯಲ್ಲಿಯೇ ಶತ್ರುಗಳಾಗಬಹುದೆಂಬ ಭೀತಿಯನ್ನು ದೂರೀಕರಿಸಿ ಇಂಗ್ಲಂಡವು ಜಗತ್ತನ್ನು ಸಶಸ್ತ್ರಗೊಳಿಸಲು ಟೊಂಕ ಕಟ್ಟಿರುತ್ತದೆ. ಅಮೇರಿಕೆಯಂತೂ ಜಗತ್ತನ್ನು ಸಶಸ್ತ್ರಗೊಳಿಸುವ ಕಾರ್ಯದಲ್ಲಿ ಪ್ರಾವೀಣ್ಯತೆಯನ್ನು ಪಡೆದಿರುತ್ತದೆ. (೪) ಸರ್ವ ಪ್ರಬಲ ರಾಷ್ಟ್ರಗಳು ಅಂತರಂಗದಲ್ಲಿಯೇ ತಮ್ಮ ಸೈನ್ಯದ ಸಿದ್ಧತೆಯನ್ನು ನಡಿಸಿರುವರೆಂದು ಸಣ್ಣ ರಾಷ್ಟ್ರಗಳ ಕಲ್ಪನೆಯಾಗಿರುತ್ತದೆ. ಅರ್ಥಾತ್ ಪ್ರಬಲ ರಾಷ್ಟ್ರಗಳು ಕರಾರನಾಮೆಯು ೮ ನೇ ಕಲಮನ್ನು ಉಲ್ಲಂಘಿಸುತ್ತಿರುವರೆಂಬುವದು ಮೇಲೆ ನಮೂದಿಸಿದ ಅವರ ಕೃತಿಗಳಿಂದ ವ್ಯಕ್ತವಾಗುತ್ತವೆ. ಚಾರ್ಲಸ್ ಬಕ್ಸಟನ್ನರ ಅಭಿಪ್ರಾಯವು ನಿಜವಾಗಿದ್ದರೆ—ಜಗತ್ತಿನಲ್ಲಿ ಅರಾಜಕತೆಯ ಕೊಳ್ಳಿಯನ್ನು ಹಚ್ಚಿದರೆಂದು ಬೋಲ್ಶೆವಿಕರನ್ನು ಆರೋಪಿಸಲಿಕ್ಕೆ ಇಂಗ್ಲ ಮತ್ತು ಇತರ ರಾಷ್ಟ್ರಗಳ ಪ್ರತಿನಿಧಿಗಳಿಗೆ ಹೇಗೆ ಬುದ್ಧಿ ಹುಟ್ಟಿತೋ ನಮಗಂತೂ ತಿಳಿಯದು.

—ಭೀಮಸುತ.

ಓಂ

ಹಿಂದುಸ್ತಾನವು

ಇಂಗ್ಲಿಷರಿಗೆ ಯಾಕೆ ಹೋಯಿತು?

(ಶ್ರೀ. ಅರವಿಂದ ಘೋಷರವರು ಹಿಂದೊಮ್ಮೆ ಬಂಗಾಲಿಯಲ್ಲಿ ಬರೆದ ಬರಹ.)

"ಕನ್ನಡಿಗ" "ತುಂಬಿ"

ಸುಮಾರು ನೂರು ವರುಷಗಳಿಂದಲೂ ಶಿಕ್ಷಿತ ಸಂಪ್ರದಾಯದಲ್ಲಿ ಪಾಶ್ಚಾತ್ಯಭಾವವು ಮನೆಮಾಡಿಕೊಂಡಿದ್ದರಿಂದ ಭಾರತೀಯರು ಆರ್ಯಜ್ಞಾನಕ್ಕೂ, ಆರ್ಯಭಾವಕ್ಕೂ, ಎರವಾದದ್ದಲ್ಲದೆ, ಶಕ್ತಿಹೀನರೂ, ಪರಾವಲಂಬಿಗಳೂ, **ಅನುಕರಣಪ್ರಿಯರೂ** ಆಗಿ ಬಿಟ್ಟರು. ಆದರೆ ಈಗೀಗ ಈ ತಮೋಭಾವವು ತೊಳೆದು ಹೋಗುತ್ತದೆ. ಇಂಥಾಗತಿ ಬಂದದ್ದೇತಕ್ಕೋ ಈಗ ಆಲೋಚಿಸಬೇಕು; ಇದೀಗ ಅತ್ಯಾವಶ್ಯಕ. ಹದಿನೆಂಟನೆಯ ಶತಮಾನದಲ್ಲಿ ತಾಮಸಿಕವಾದ ಅಜ್ಞಾನವೂ, ಘೋರ ರಾಜಸಿಕ ಪ್ರವೃತ್ತಿಯೂ ಭಾರತೀಯರನ್ನು ಮುತ್ತಿ ಮೆರೆಯುತ್ತಿದ್ದವು. ಆಗ ನಾಡತುಂಬಾ ಸಾವಿರಾರುಮಂದಿ ಸ್ವಾರ್ಥಸಾಧಕರೂ, ಕರ್ತವ್ಯಪರಾಙ್ಮುಖರೂ, ದೇಶದ್ರೋಹಿಗಳೂ ಆದ ಸಶಕ್ತ ರಾಕ್ಷಸೀ ಪ್ರಕೃತಿಯ ಜನರು ಜನ್ಮವೆತ್ತಿ, ಪರಾಧೀನತೆಗೆ ಅನುಕೂಲವಾದ ಪರಿಸ್ಥಿತಿಯನ್ನು ಉಂಟುಮಾಡಿದರು. **ಅಂಥಾ ಹೊತ್ತಿನೆ ಪರಮಾತ್ಮನ ಗೂಢೋದ್ದೇಶ್ಯ ಸಿದ್ಧಿಗಾಗಿ** ಬಹು ದೂರದಲ್ಲಿ ದ್ವೀಪಾಂತರವಾಸಿಗಳಾಗಿದ್ದ ಆಂಗ್ಲವ್ಯಾಪಾರಿಗಳು ಹಿಂದುಸ್ತಾನದಲ್ಲಿ **ಪ್ರವೇಶಿಸಿದರು !!!** ಪಾಪ ಭಾರಾರ್ತ ಭಾರತದೇಶವು ಅನಾಯಾಸವಾಗಿಯೇ ಪರದೇಶಿಗಳ ಕೈಸೇರಿತು. **ಈ ಅದ್ಭುತ ಪ್ರಸಂಗವನ್ನು ನೆನೆದು ಜಗತ್ತು ಈಗಲೂ ಸೋಜಿಗ ಬಡುತ್ತದೆ.**

ಇದರ ನಿಜವಾದ, ಸಂತೋಷಜನಕವಾದ ಕಾರಣ ನಿರ್ಣಯವನ್ನು ಇದುವರೆಗೆ ಯಾರೂ ಕಾಣದೆ, ಎಲ್ಲರೂ **ಆಂಗ್ಲಜಾತಿಯ ಗುಣವನ್ನೇ ಬಹಳವಾಗಿ ಹೊಗಳಾಡಿದರು.** ಆಂಗ್ಲಜಾತಿಗೆ ಅಪೂರ್ವ (ಒಳ್ಳೆಯ) ಗುಣಗಳುಂಟು; ಇಲ್ಲದೆ ಇದ್ದರೆ ಪೃಥ್ವಿಯಲ್ಲಿ ಶ್ರೇಷ್ಠ ವಿಜಯಿ ಜಾತಿಯಾಗುವುದೇ ಶಕ್ಯವಿರಲಿಲ್ಲ. ಆದರೆ, 'ಭಾರತೀಯರ ಕನಿಷ್ಠತೆ ಆಂಗ್ಲರ ಶ್ರೇಷ್ಠತೆ, ಭಾರತೀಯರ ಪಾಪ ಬ್ರಿಟನ್ನರ ಪುಣ್ಯ' ಇದುವೆ ಈ ಅದ್ಭುತ ಘಟನೆಗೆ ಕಾರಣವೆಂದು ಹೇಳಿದವರು, ಇಂಥವರು ಸಂಪೂರ್ಣ ಭ್ರಾಂತರಿಲ್ಲದಿದ್ದರೂ, ಜನರಲ್ಲಿ ಭ್ರಾಮಕ ಕಲ್ಪನೆಗಳು ಹಬ್ಬಲಿಕ್ಕೆ ಕಾರಣವಾಗುವರು ಹೀಗೆ. (ಇಂದಲಿ) ಈ ಬಗ್ಗೆ ಸೂಕ್ಷ್ಮದೃಷ್ಟಿಯಿಟ್ಟು ಬಗೆಯನ್ನು ಬಿಡಿಸುವುದು ಈಗ ಅಗತ್ಯ. ಹಿಂದಿನದರ ಸೂಕ್ಷ್ಮ ಅನುಸಂಧಾನದ ಹೊರತು ಮುಂದಿನ ಗತಿನಿರ್ಣಯವನ್ನು ಕಾಣುವುದು ದುಸ್ಸಾಧ್ಯ.

ಇಂಗ್ಲಿಷರ ಭಾರತ ವಿಜಯವು ಪ್ರಪಂಚದ ಚರಿತ್ರೆಯಲ್ಲಿ ಹೋಲಿಕೆಯಿಲ್ಲದ ಘಟನೆ. ಈ ದೊಡ್ಡನಾಡು ಅನಾಗರಿಕರಿಂದಲೂ, ಹೇಡಿಗಳಿಂದಲೂ, ತಿಳಿಗೇಡಿಗಳಿಂದಲೂ ತುಂಬಿದ್ದುದಾಗಿದ್ದರೆ ಇಷ್ಟೊಂದು ಹೇಳಬೇಕಾದದ್ದೇನೂ ಇರಲಿಲ್ಲ. ಆದರೆ ಭರತಖಂಡವು ರಜಪೂತ, ಮರಾಠಾ, ಶಿಖ, ಪಠಾಣ, ಮೊಗಲ ಮುಂತಾದವರ ವಾಸಭೂಮಿ. ತೀಕ್ಷ್ಣಬುದ್ಧಿಗಳಾದ ಬಂಗಾಲಿಗಳೂ, ಆಲೋಚನಾ ನಿಪುಣರಾದ ಮದ್ರಾಸಿಗಳೂ, ರಾಜನೀತಿಜ್ಞರಾದ ಮಹಾರಾಷ್ಟ್ರೀಯ ಬ್ರಾಹ್ಮಣರೂ ಈ ಭಾರತಮಾತೆಯ ಮಕ್ಕಳು. ಇಂಗ್ಲಿಷರ ವಿಜಯದ ಹೊತ್ತಿಗೆ ಇಲ್ಲಿ— ನಾನಾ ಫಡಣವೀಸನಂಥ ನ್ಯಾಯಪಟುವಾದ ರಾಜನೀತಿಜ್ಞರೂ, ಮಹಾದಜಿ ಸಿಂಧ್ಯನಂಥ ಬುದ್ಧಿಶಾಲಿಗಳಾದ ಸೇನಾಪತಿಗಳೂ, ಹೈದರಅಲಿ ಮತ್ತು ರಣಜಿತಸಿಂಗನಂಥ ತೇಜಸ್ವಿತೆಯುಳ್ಳ ಪ್ರತಾಪಶಾಲಿಗಳಾದ ರಾಜ್ಯನಿರ್ಮಾಣಕರ್ತರೂ ಎಲ್ಲೆಲ್ಲೂ ಜನ್ಮವೆತ್ತಿದ್ದರು. ಹದಿನೆಂಟನೆಯ ಶತಮಾನದಲ್ಲಿ ಭಾರತವಾಸಿಗಳು ಶೌರ್ಯ, ತೇಜ, ಬುದ್ಧಿಗಳಲ್ಲಿ ಇನ್ನಾವ ಜಾತಿಗಿಂತಲೂ ಹೀನರಾಗಿರಲಿಲ್ಲ. ಹದಿನೆಂಟನೆಯ ಶತಮಾನದ ಭರತಖಂಡವು ಸರಸ್ವತಿಯ ಮಂದಿರವೂ, ಲಕ್ಷ್ಮೀದೇವಿಯ ಭಂಡಾರವೂ, ಶಕ್ತಿಯ ಕ್ರೀಡಾಸ್ಥಾನವೂ ಆಗಿತ್ತು.

ಒಟ್ಟಿಗೂ ಯಾವದೇಶವನ್ನು ಪ್ರಬಲರೂ ಪ್ರದರ್ಶನಶೀಲರೂ ಆದ ಮುಸಲ್ಮಾನರು ನೂರಾರು ವರ್ಷಮುದ್ದಕ್ಕೂ ಪ್ರಯಾಸಪಟ್ಟು ಅತಿಕಷ್ಟದಿಂದ ಜಯಿಸಿಯೂ ಸಂಪೂರ್ಣ ತಮ್ಮದೆಂದು ಆಳಲಿಲ್ಲವೋ ಅಂಥಾ ದೇಶವೇ ಒಂದು ಐವತ್ತೈದು ವರ್ಷಗಳಲ್ಲಿ ಮುಷ್ಟಿಮಾತ್ರರಾದ ಇಂಗ್ಲಿಷರ ಆಳಿಕೆಯನ್ನೊಪ್ಪಿ, ನೂರುವರುಷಗಳಲ್ಲೇ ಅವರ ಏಕಚ್ಛತ್ರಸಾಮ್ರಾಜ್ಯದ ಕೆಳಗೆ ಎಚ್ಚರವಿಲ್ಲದೆ ಮಲಗಿಬಿಟ್ಟಿತು!!! ಐಕ್ಯವಿಲ್ಲದ್ದೇ ಇದಕ್ಕೆ **ಕಾರಣವೆಂದು** ಹೇಳಬಹುದು. ಒಪ್ಪೋಣ, ಐಕ್ಯದ ಅಭಾವವು ನಮ್ಮ ದುರ್ಗತಿಗೊಂದು ಪ್ರಧಾನಕಾರಣವೇನೋ ಹೌದು. ಆದರೆ **ಭಾರತ** ದೇಶದಲ್ಲಿ ಎಂದೂ ಐಕ್ಯವಿದ್ದಿಲ್ಲ. ಮಹಾಭಾರತದ ಕಾಲದಲ್ಲಿಯೂ ಐಕ್ಯವಿರಲಿಲ್ಲ; ಚಂದ್ರಗುಪ್ತ, ಅಶೋಕ ಚಕ್ರವರ್ತಿಗಳ ಕಾಲದಲ್ಲಿಯೂ ಇರಲಿಲ್ಲ; ಮುಸಲ್ಮಾನರ ಭಾರತವಿಜಯದ ಕಾಲದಲ್ಲಿಯೂ ಇರಲಿಲ್ಲ; ಹಾಗೇ ಹದಿನೆಂಟನೆಯ ಶತಮಾನದಲ್ಲಿಯೂ ಇದ್ದಿಲ್ಲ. ಐಕ್ಯದ ಅಭಾವವೇ ಈ ಅದ್ಭುತ ಘಟನೆಗೆ ಏಕಮಾತ್ರ ಕಾರಣವೆಂದೂ ಆಗಲಾರದು.

ಆದರೆ ಇಂಗ್ಲಿಷರ ಪುಣ್ಯವೇ ಇದಕ್ಕೆ **ಪ್ರಬಲಕಾರಣವೆಂದು ಹೇಳಲೂ ಬಹುದು.** ಆದರೆ ನಾವು ಆ ಕಾಲದ ಚರಿತ್ರೆಯನ್ನು ಓದುವಾಗ— 'ಆ ಕಾಲದ ಆಂಗ್ಲವ್ಯಾಪಾರಿಗಳು ಹಿಂದುಗಳಿಗಿಂತ ಗುಣದಲ್ಲಿಯೂ ಪುಣ್ಯದಲ್ಲಿಯೂ ಶ್ರೇಷ್ಠರಾಗಿದ್ದರೇ?' ಎಂದು ಕೇಳುತ್ತೇವೆ. ಅವರು ಹಾಗೆ ಹೇಳುವ ಸಾಹಸವನ್ನು ಮಾಡುವುದೇ? ಕ್ಲೈವ್, ವಾರನ್ ಹೇಸ್ಟಿಂಗ್ಸ್ ಮುಂತಾದ ಆಂಗ್ಲವ್ಯಾಪಾರಿಗಳೂ, ಕೈಕೆಳಗಿನವರೂ ಭಾರತಭೂಮಿಯನ್ನು ಗೆದ್ದು ಲೂಟಿಮಾಡಿ ಜಗತ್ತಿನಲ್ಲಿ ಅತುಲನೀಯವಾದ ಸಾಹಸ ಮತ್ತು ಉದ್ಯೋಗ ಹಾಗೂ ಸ್ವಾರ್ಥ ಮತ್ತು ಅತುಲನೀಯ ದುರ್ಗುಣಗಳ ದೃಷ್ಟಾಂತವನ್ನು ತೋರಿಸಿ ಹೋದರು. ಆ ನಿಷ್ಠುರರೂ, ಸ್ವಾರ್ಥಪರಾಯಣರೂ, ದ್ರವ್ಯಲೋಲುಪರೂ, ಆದ ಶಕ್ತಿವಾನ್ ಅಸುರರ ಪುಣ್ಯದ ಮಾತನ್ನು ಕೇಳಿದರೆ ಹಿಡಿಸಲಾರದ ನಗೆ ಬರುತ್ತದೆ. ಸಾಹಸ, ಉದ್ಯಮ, ಸ್ವಾರ್ಥ ಇವು ಆಸುರೀಗುಣಗಳು. ಆಸುರರ ಪುಣ್ಯವೆಂದರೆ ಇದುವೆ. ಅಂಥ ಆಸುರೀಪುಣ್ಯವು ಆ ಕ್ಲೈವ್ ಮುಂತಾದವರಲ್ಲಿತ್ತು. ಆದರೆ ಅವರ ಪಾಪವು ಹಿಂದುಗಳ ಪಾಪಕ್ಕಿಂತ ಏನೇನೂ ಕಡಿಮೆಯಾಗಿರಲಿಲ್ಲ. **ಅಂತೂ ಬ್ರಿಟಿಷರ ಪುಣ್ಯಬಲದಿಂದ ಈ ಅಘಟಿತ ಘಟನೆಯಾಗಲಿಲ್ಲ.**

ಇಂಗ್ಲಿಷರೂ ಅಸುರರಾಗಿದ್ದರು; ಭಾರತವಾಸಿಗಳೂ ಅಸುರರಾಗಿದ್ದರು. ಆಗ ದೇವಾಸುರರಲ್ಲಿ ಕಾಳಗವಾಗಲಿಲ್ಲ; ಅಸುರ—ಅಸುರರಲ್ಲಿಯೇ ಆಯಿತು. ಆದರೆ ಪಾಶ್ಚಾತ್ಯ ಅಸುರರಲ್ಲಿ ಅವರ ಬುದ್ಧಿ, ತೇಜ, ಶೌರ್ಯಗಳನ್ನು ಸಫಲಗೊಳಿಸುವಂಥ ಪ್ರಭಾವಶಾಲಿಯಾದ ಗುಣವಾವುದಿದ್ದಿತು? **ಹಾಗೂ ಭಾರತವಾಸಿಗಳಾದ** ಅಸುರರಲ್ಲಿ ಅವರ ಬುದ್ಧಿ ತೇಜ ಶೌರ್ಯಗಳನ್ನು ವಿಫಲಗೊಳಿಸುವ ಪ್ರಭಾವವುಳ್ಳ ಸಾಂಘಾತಿಕ ದೋಷವಾವುದಿದ್ದಿತು? ಮೊದಲನೆಯ

ಉತ್ತರವಿದು— ಭಾರತವಾಸಿಗಳು ಇಂಗ್ಲಿಷರಿಗೆ ಇಳಿದೆಲ್ಲ ಗುಣಗಳಲ್ಲಿ ಸಮಾನರಾಗಿದ್ದರೂ ಜಾತೀಯಭಾವವಿಲ್ಲದೆ ಇದ್ದರು; ಇಂಗ್ಲಿಷರಲ್ಲಿ ಅದು ಪೂರ್ಣವಿಕಾಸವಾಗಿದ್ದಿತು. ಆದರೆ ಇದಿಷ್ಟರಮೇಲಿಂದಲೇ ಇಂಗ್ಲಿಷರ ಸ್ವದೇಶಪ್ರೇಮಿಗಳಾಗಿದ್ದರೆಂದೂ, ಸ್ವದೇಶ **ಪ್ರೇಮದ ಪ್ರೇರಣೆಯಿಂದಲೇ ಭಾರತ ದೇಶದಲ್ಲಿ ವಿಪುಲ ಸಾಮ್ರಾಜ್ಯ ಘಟನೆ ಮಾಡಲಿಕ್ಕೆ ಸಮರ್ಥರಾದರೆಂದೂ ಮಾತ್ರ ಯಾರೂ ಭಾವಿಸಕೂಡದು. ಸ್ವದೇಶ ಪ್ರೇಮವೂ ಜಾತೀಯತೆಯೂ ಸ್ವತಂತ್ರವೃತ್ತಿಗಳು** ಸ್ವದೇಶ ಪ್ರೇಮಿಯು ಸ್ವದೇಶ ಸೇವಾಭಾವದಲ್ಲಿ ಉನ್ಮತ್ತನು; ಅವನು ಎಲ್ಲೆಲ್ಲೂ ಸ್ವದೇಶವನ್ನೇ ಕಾಣುವನು. ಎಲ್ಲ ಕಾರ್ಯಗಳನ್ನು ಸ್ವದೇಶವೇ ಇಷ್ಟದೇವತೆಯಾಗಿ ಭಾವಿಸಿ ಯಜ್ಞರೂಪವಾಗಿ (ಅವಳಿಗೇ) ಸಮರ್ಪಿಸಿ, ಸ್ವದೇಶಹಿತಕ್ಕಾಗಿಯೇ ಮಾಡುವನು. ದೇಶದ ಸ್ವಾರ್ಥದಲ್ಲಿ ತನ್ನ ಸ್ವಾರ್ಥವನ್ನು ಮುಳುಗಿಸಿ- ಬೆರಸಿ—ಬಿಡುವನು. ಹದಿನೆಂಟನೇ ಶತಮಾನದ ಇಂಗ್ಲರಲ್ಲಿ ಈ ಭಾವನೆಯಿರಲಿಲ್ಲ. ಈ ಭಾವವು ಜಡವಾದಿಯಾದ ಯಾವ ಪಾಶ್ಚಾತ್ಯ ಜಾತಿಯಲ್ಲಿಯೂ ಅಚಲವಾಗಿ ನಿಲ್ಲಲಾರದು. ಇಂಗ್ಲಿಷರು ಸ್ವದೇಶಹಿತಕ್ಕಾಗಿ ಹಿಂದುಸ್ಥಾನಕ್ಕೆ ಬರಲಿಲ್ಲ; ಸ್ವದೇಶಹಿತಕ್ಕಾಗಿ ಭಾರತವನ್ನು ಗೆಲ್ಲಲಿಲ್ಲ; ವ್ಯಾಪಾರಕ್ಕಾಗಿ— ತಂತಮ್ಮ ಅರ್ಥಲಾಭಕ್ಕಾಗಿ— ಬಂದರು; ಸ್ವದೇಶಹಿತಕ್ಕೆ ಬದಲು ತಂತಮ್ಮ ಹಿತಕ್ಕಾಗಿ— ಸ್ವಾರ್ಥಸಾಧನೆಗಾಗಿ— ಭಾರತವನ್ನು ಗೆದ್ದರು. ಆದರೆ ಸ್ವದೇಶ ಪ್ರೇಮಿಗಳಲ್ಲವಾದರೂ ಅವರು ಜಾತೀಯಭಾವನೆವುಳ್ಳವರಾಗಿದ್ದರು. (ಮುಗಿಯುವದು)

ದಕ್ಷಿಣ ಕನ್ನಡದ ಮನಸ್ಸು

(ಲೇ.— **ಮುಕುಂದರಾವ** ಬಿ. ಎ. ಮಂಗಳೂರು.)

ಕರ್ನಾಟಕದ ಏಕೀಕರಣವಾಗ ಬೇಕಾದರೆ ಪ್ರಾಂತ್ಯಕ್ಕೆ ಸೇರಿದ ಜಿಲ್ಲೆಗಳಲ್ಲಿ ಐಕ್ಯದ ಆಶೆಯು ಬಲವಾಗಿರಬೇಕು ಹೀಗಿರುತ್ತ ಕನ್ನಡನಾಡನ್ನು ಒಂದುಗೂಡಿಸುವದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಅಭಿಪ್ರಾಯವೇನು ಎಂದು ತಿಳಿಯಬೇಕಾಗಿದೆ. ಒಂದೇ ಮಾತಿನಲ್ಲಿ ಹೇಳಬೇಕಾದರೆ ನಮ್ಮ ಜಿಲ್ಲೆಯಲ್ಲಿ ಐಕ್ಯಕ್ಕಾಗಿ ಹೆಚ್ಚು ಆತುರವಿಲ್ಲ, ಎಷ್ಟು ಬೇಸರ ಕೊಡುವದಾದರೂ ಇದ್ದ ಸ್ಥಿತಿಯನ್ನು ಕಣ್ಣಿಗೆ ಅಷ್ಟು ಇಟ್ಟು ಫಲವಿಲ್ಲ. ೧೮೬೦ನೇ ಇಸ್ವಿಯಲ್ಲಿ ಕನ್ನಡ ಜಿಲ್ಲೆಯ ಉತ್ತರಭಾಗವನ್ನು ಬೊಂಬಾಯಿಗೂ ದಕ್ಷಿಣಭಾಗವನ್ನು ಮದ್ರಾಸಿಗೂ ಹಂಚುವಾಗ ನಮ್ಮಲ್ಲಿ ರಾಷ್ಟ್ರಚೈತನ್ಯ ಇಲ್ಲದರ ಫಲವನ್ನು ಈ ಹೊತ್ತು ಉಣ್ಣುತ್ತೇವೆ. ಹಳ್ಳಿಗಳಲ್ಲಿ ಹೋದರೆ ಮೈಸೂರು ರಾಜರೆಂದರೆ ತಿಳಿಯುವದಕ್ಕೆ ಒಂದು ಅವರ "ಸ್ವಜಾತಿ ಮಾನ ಪಲ್ಲಾನವನ್ನು ಕೇಳುವಂತೆ ಮೈಸೂರಿನವರು ದಕ್ಷಿಣ ಕನ್ನಡವನ್ನು ಕೇಳುವ ಸಂದರ್ಭ ಒದಗಿದರೆ ಪ್ರಾಯಶಃ ಹಳ್ಳಿಯವರ ಒಪ್ಪಿಗೆಯು ಅವರಿಗೆ ಸಿಕ್ಕಬಹುದು. ಇದಕ್ಕೆಲ್ಲ ಹೇಳಲಿಕ್ಕೆ ಕಾರಣವೇನೆಂದರೆ ನಮ್ಮಲ್ಲಿ ಕನ್ನಡನಾಡಿನ ವಿಷಯ ಗೌರವವೆಂಬುದು ಮೈಸೂರ ಅರಸರಿಗೆ ಕೊಡುವ ಗೌರವವಾಗಿ ಮಾತ್ರ ಉಳಿದಿದೆ.

ಅದೂ ಸಹ ವೃದ್ಧರಲ್ಲಿ ಮಾತ್ರ. ಈಗಿನ ಪ್ರಾಯಸ್ಥರಿಗೆ ಕನ್ನಡ ಭೂಮಿ ಎಂದರೆ ಎದೆ ಉಬ್ಬುವ ಗೌರವವಿಲ್ಲ. ಮೈಸೂರೊಂದರೆ ಬಾಕಿ ಆಶ್ರಿತ ಸಂಸ್ಥಾನಗಳಂತೆಯೇ ಒಂದು ಸಂಸ್ಥಾನ! ತರುಣರಿಗೆ ಬರೋಡೆಕ್ಕಿಂತ ಮೈಸೂರು ಬಹಳ ಹಿಂದೆ ಇದೆ ಎಂದು ಖಚಿತ! ಮೈಸೂರು ಸರಕಾರವು ತನ್ನ ಸುತ್ತಲಿದ್ದ ಕನ್ನಡಿಗರ ಮನಸ್ಸನ್ನು ಸೆಳೆಯುವ ಯಾವತರದ ಶ್ರಮವನ್ನೂ ತೆಗೆದುಕೊಳ್ಳಲಿಲ್ಲ. ಈ ನಿಮಿತ್ತ ಈಗಿನ ಜನಾಂಗ ಕನ್ನಡದ ಸಂಸ್ಥಾನದ ಮೇಲೆ ಮಮತೆಯಿಲ್ಲ. ಮೈಸೂರು ಯುನಿವರ್ಸಿಟಿಯನ್ನು ಸ್ಥಾಪಿಸುವ ಸಮಯದಲ್ಲಿ ಸಂಸ್ಥಾನದ ಹೊರಗಿನ ಜಿಲ್ಲೆಗಳ ಸಹಕಾರವನ್ನು ಕೋರಿ ಕರ್ನಾಟಕಕ್ಕೆಲ್ಲ ಒಂದು ವಿದ್ಯಾಪೀಠವನ್ನು ಕಟ್ಟಲಿಕ್ಕೆ ಮೈಸೂರು ಮುಂದರಿದಿದ್ದರೆ ಎಷ್ಟೋ ಉತ್ತಮವಾಗಿತ್ತು. "ದೈವವದು ತಾ ಬೇರೊಂದೆಣಿಸಿದು."

ಗತಕಥೆಯನ್ನು ಸ್ಮರಣ ಮಾಡಿದರೆ ಹೆಚ್ಚಿನ ಫಲವಿಲ್ಲ. ಈಗೆ ಇದ್ದ ಬ್ರಿಟಿಶ ಕರ್ನಾಟಕ (ಕಿರಿದೋಯುವ ಹೆಸರಿದು) ವನ್ನು ಒಂದೇ ಪ್ರಾಂತಿಕ ಸರಕಾರದ ಕೈಕೆಳಗೆ ತರುವುದಾದರೆ ದಕ್ಷಿಣ ಕನ್ನಡವು ಯಾಕೆ ಸಮ್ಮತಿಯನ್ನು ಕೊಡದು ಎಂಬ ಪ್ರಶ್ನೆಯು ಬರುತ್ತದೆ. ಕರ್ನಾಟಕದ ಯಾವ ಪಟ್ಟಣವನ್ನು ಮುಖ್ಯಪಟ್ಟಣವಾಗಿ ಮಾಡಿದರೂ ತತ್ಕಾಲಕ್ಕೆ ಅದು ದಕ್ಷಿಣಕನ್ನಡದವರಿಗೆ ಸುಲಭದಿಂದ ಹೋಗಿಬರಲಾಗುವಂಥ ಸ್ಥಳವಾಗುವದಿಲ್ಲ. ಎಂಬ ಒಂದು ವಾದದ ಆಕ್ಷೇಪವು ಬರುವುದು. ಮದ್ರಾಸಿಗೆ ೨೪ ತಾಸುಗಳಲ್ಲಿ ಹೋಗಿ ಅಭ್ಯಾಸವಿದ್ದವರು ಎರಡು ಮೂರುದಿವಸ ಮೋಟರ ರೈಲು ಹೊಗೆ ಹಡಗಗಳ ಮೇಲೆ ತಿರುಗಾಡಲಿಕ್ಕೆ ಒಪ್ಪುವದು ಕಷ್ಟ. ಮದ್ರಾಸಿನಲ್ಲಿ ನೆಲೆಯಾದ ದಕ್ಷಿಣಕನ್ನಡದ ವಕೀಲರು ಹಾಯಿಕೋರ್ಟು ಬೇರೆಯಾಗುವ ಸಂಗತಿಯಲ್ಲಿ ಮೂಗು ಮುರಿಯಲಿಕ್ಕೆ ಸಾಕು. ಕನ್ನಡನಾಡಿಗೆ ಒಂದು ಯುನಿವರ್ಸಿಟಿಯಿಲ್ಲದುದರಿಂದ ಮುಂದಿನಂತೆಯೇ ಬೇರೆ ಯುನಿವರ್ಸಿಟಿಗಳ ಬೆನ್ನುಹಿಡಿಯುವ ವಿದ್ಯಾಲಯದವರು ಐಕ್ಯದಲ್ಲಿ ಯಾವಪ್ರಯೋಜನವೂ ಇಲ್ಲವೆನ್ನಬಹುದು.

ಇವೆಲ್ಲ ಆಕ್ಷೇಪಗಳು ಪ್ರಬಲವಾದವು ಎಂಬುದಾಗಿ ನಾನು ಹೇಳುವುದಿಲ್ಲ. ಪ್ರೇಮವು ತನ್ನ ಪ್ರಿಯವಸ್ತುವಿಗಾಗಿ ಅನೇಕ ಕಷ್ಟಗಳನ್ನು ಸಹಿಸುತ್ತದೆ. ಆದರೆ "ಆಗದಿದ್ದ ಗಂಡನಿಗೆ ಸೊಗರಾಗೆಕಲ್ಲು" ಎಂಬಂತೆ ಐಕ್ಯದ ವಿಷಯ ಕಳಕಳಿಯುಳ್ಳದವರು ಮೇಲೆ ಹೇಳಿದ ನೆವನಗಳನ್ನು ಎತ್ತುವರು.

ಹೀಗೆ ಈಗಿನ ಸ್ಥಿತಿಯ ಕುಂದುಗಳನ್ನು ತೋರಿಸಿದವನು ಅದರಲ್ಲಿರುವ ಶುಭ ಚಿಹ್ನಗಳನ್ನು ಸಹ ಹೊಗಳಬೇಕು. ತಿರುವಾಂಕೋಡಿನ ಸರಕಾರದವರು ಒಂದು ಯುನಿವರ್ಸಿಟಿಯನ್ನು ಸ್ಥಾಪಿಸಲಿಕ್ಕಿದ್ದಾರಂತೆ. ಅದರೊಂದಿಗೆ ಕೊಚ್ಚಿಯ ಸರಕಾರವೂ ಮಲಬಾರು ಜಿಲ್ಲೆಯೂ ಸೇರಿ ಕೇರಳವಿದ್ಯಾಪೀಠವನ್ನು ಕಟ್ಟಬೇಕೆಂಬ ಪ್ರಯತ್ನ ನಡೆಯುತ್ತಿದೆ. ಹಾಗಾಗುವ ಸಂದರ್ಭದಲ್ಲಿ ಮಂಗಳೂರಿಗೆ ಮೈಸೂರಿನ ಸಹಾಯ ಬೇಡಬೇಕಾಗುವದು. ಇಲ್ಲವೆ ದೂರದ ಮದ್ರಾಸಿಗೆನೇ ಓಡಿಹೋಗಬೇಕು. ತಿರುವಾಂಕೋಡಿನ ಜೊತೆಗೆ ಸೇರಲಿಕ್ಕೆ ಮದ್ರಾಸು ಸರಕಾರವು ಮಲಬಾರಿನ ಜಿಲ್ಲೆಯನ್ನು ಹೋಗಗೊಡಿಸುತ್ತಾರೆ, ಮೈಸೂರಿನೊಂದಿಗೆ ಸೇರಲಿಕ್ಕೆ ನಮ್ಮನ್ನು ಅನುಮಾಡಲಿಕ್ಕಿಲ್ಲ. ಇಷ್ಟರಿಂದ ಶುಭಸೂಚನೆಯು ಇದೆ. ರಾಷ್ಟ್ರೀಯ ಚಳವಳಿಯು ಸುರುವಾದಂದಿನಿಂದ ಕನ್ನಡ ದೇಶದ ಮೇಲಿನ ಅಭಿಮಾನವು ಇಲ್ಲಿನ **ಕೊಂಗ್ರೆಸ್** ಭಕ್ತರಲ್ಲಿ ಹುಟ್ಟಿಯದೆ. ಅವರ ಸಂಖ್ಯೆಯು ಕಡಿಮೆಯಾದರೂ ಮುಂದೆ ಹೆಚ್ಚುತಿರುವದು ಆಶೆ.

ಆದರೆ ಈ ಹೊತ್ತಿನ ಸ್ಥಿತಿಯನ್ನು ಆಲೋಚಿಸಿದರೆ ಕರ್ನಾಟಕದ ಏಕೀಕರಣಕ್ಕೆ ನೀವು ಒಪ್ಪುವಿರೋ? ಎಂದು ಸರಕಾರದವರು ಪ್ರಶ್ನೆಮಾಡಿದರೆ ಬಹುಮತವು ಸಿಕ್ಕಲಿಕ್ಕಿಲ್ಲ. ಆದಕಾರಣ ಏಕೀಕರಣದ ಪ್ರಶ್ನೆಯನ್ನು ಈಗ ಸರಕಾರದ ಮುಂದೆ ಒತ್ತಬಾರದು. ಅದರ ಬದಲಿಗೆ ಕನ್ನಡನಾಡಿನ ಪ್ರತಿಯೊಂದು ಅಂಗದಲ್ಲಿ ಬಿಡಿಬಿಡಿ ಸಾರ್ವಜನಿಕ ಐಕ್ಯವು ಹುಟ್ಟುವಂತೆ ನಾನಾಲಿಕ್ಕೆ ಬೇಕಾದ ಎಲ್ಲಾ ಉಪಕಾರಗಳನ್ನು ಮಾಡಬೇಕು.

ಮೂರ್ಛೆಯಾದ ಈ ಪ್ರಾಂತ್ಯದಲ್ಲಿ ಹೊಸಕಳೆಯನ್ನು ತುಂಬುವದು ಹೇಗೆ ಎಂದು ವಿವರಿಸುವುದು ಕಷ್ಟ. ಇಷ್ಟರ ವರೆಗೆ ಬಂಗಾಳದಲ್ಲಿ ಏನುಮಾಡಿದರು; ಮಹಾರಾಷ್ಟ್ರದಲ್ಲಿ ಯಾವ್ಯಾವ ಹೆಸರಿನ ಸಂಸ್ಥೆಗಳಿವೆ; ಬೇರೆ ಪ್ರಾಂತ್ಯಗಳಲ್ಲಿ ಕಾಂಗ್ರೆಸು ಹೇಗೆ ಕೆಲಸ ನಡಿಸುತ್ತಿದೆ ಎಂದು ನೋಡಿ ಅವರನ್ನು ಹಿಂಬಾಲಿಸುವುದರಲ್ಲೇ ನಾವು ಹೆಚ್ಚು ಶಕ್ತಿಯನ್ನು ಕಳೆದೆವು ಹೊರತು ಕನ್ನಡನಾಡಿಗೆ ಯಾವತರದ ಔಷಧವು ಬೇಕೆಂದು ನಿರ್ಧಾರಿಸಲಿಲ್ಲ. ಬೇರೆ ಪ್ರಾಂತ್ಯದ ಇಲ್ಲವೆ ಬೇರೆ ದೇಶದ ಅನುಭವವು ತಿರಸ್ಕರಣೀಯವೆಂದು ನಾವು ಎಂದೂ ಹೇಳುವುದಿಲ್ಲ. ಬೇರೆಯವರ ಸುಗುಣಗಳನ್ನು ನಾವೂ ಅಭ್ಯಾಸಿಸಬೇಕು. ಮಾತ್ರ ಅನ್ಯರನ್ನು ಅನುಸರಿಸುವುದರಲ್ಲೇ ಕಾಲಕಳೆಯ ಬಾರದು. ಕರ್ನಾಟಕಕ್ಕೆ ಸ್ವತಂತ್ರವಾದ ವ್ಯಕ್ತಿತ್ವವಿದ್ದರೆ ನಮ್ಮ ವ್ಯಾಧಿಯ ಚಿಹ್ನಗಳು ಬೇರೆಯಾಗಿದ್ದರೆ ನಮಗೆ ಹಿತವಾಗುವ ಉಪಾಯಗಳನ್ನು ನಾವೇ ಶೋಧಿಸಿ, ಕಂಡು ಹಿಡಿಯ ಬೇಕಲ್ಲವೇ? ಅನೇಕವರ್ಷಗಳಿಂದ ಸಾರ್ವಜನಿಕ ಚಳವಳಿಯಲ್ಲಿ ಈಜಿ ನಿಪುಣರಾದವರಂತೆಯೇ ನಮ್ಮವರೂ ನಟಿಸಕೂಡದು. ಕಾಂಗ್ರೆಸಿನ ಕರ್ನಾಟಕಸ್ಥರಿಗೆ ನಮ್ಮ ಬಿನ್ನಹವೇನೆಂದರೆ ಅಖಿಲ ಭಾರತ ಸಭೆಗೆ ಬೇಕಾದ ಸಹಾಯವನ್ನು ಕೊಟ್ಟು ಅದರ ಅಜ್ಞೆಯನ್ನು ವಹಿಸಬೇಕಾಗಿದ್ದರೂ ಅಷ್ಟರಲ್ಲೆ ತೃಪ್ತರಾಗದೆ ಕರ್ನಾಟಕದ ಉಜ್ಜೀವನಕ್ಕೆ ಅಗತ್ಯವಿರುವ ಸಕಲ ಸನ್ನಾಹಗಳನ್ನು ಮಾಡಲಿಕ್ಕೆ ಅವರು ಕೈಕೊಡಬೇಕು.

ಇನ್ನೂ ಬಿಡಿಸಿ ಹೇಳಬೇಕಾದರೆ ಹೇಳುತ್ತೇನೆ, ಕರ್ನಾಟಕ ಪ್ರಾಂತಿಕ ಕಮೀಟಿಯು ಬರೇ ರಾಜಕೀಯ ಚಳವಳವನ್ನು ನಡಿಸುವ ಯಂತ್ರವಾಗದೆ ನಮ್ಮ ಪ್ರಾಂತಿಕ ಜೀವನದ ಸಕಲ ಅಂಗಗಳನ್ನೂ ಒಳಕೊಂಡಿರಬೇಕು. ಇದಕ್ಕಾಗಿ ನಮ್ಮ ಪ್ರಾಂತಿಕ ಕಮೀಟಿಯು ತನ್ನ ಆಶ್ರಯದಲ್ಲಿ ಪ್ರಾಂತ್ಯದ ಬೇರೆ ಬೇರೆ ವಿಷಯಗಳನ್ನು ಶೋಧಿಸುವ ತಜ್ಞರ ಕೂಟಗಳನ್ನು ಬೆಳಿಸಬೇಕು. ಒಂದು ಕೂಟದ ಕೆಲಸವು ಪ್ರಾಂತ್ಯದ ನದಿಗಳನ್ನು ಸಂಶೋಧಿಸಿ, ಅವುಗಳ ಸ್ಥಿತಿಯನ್ನು ಕಂಡುಕೊಂಡು ... ರಿಸಿ ಅವುಗಳ ಏಳ್ಗೆಗಾಗಿ ಬೇಕಾದ ಶಾಸ್ತ್ರೀಯ ಉಪಾಯಗಳನ್ನು ಶೋಧಿಸುವುದು, ಒಂದು ಸಂಘದ ಕೆಲಸವು ನಮ್ಮಲ್ಲಿ ... ವ್ಯಾಪಾರಕ್ಕೆ ಗಾರಿಕೆಗಳಿಗೆ ಅನುಕೂಲವಿದೆ, ಅವುಗಳು ಶಿಥಿಲವಾಗಿದ್ದರೆ ಏನು ಮಾಡಬೇಕು ಎಂಬುದನ್ನು ಕಂಡುಹಿಡಿಯುವುದು; ಇನ್ನೊಂದು ಗುಂಪಿನ ಕಾರ್ಯವು ನಮ್ಮವರ ವಿದ್ಯೆಯ ಸ್ಥಿತಿ, ಅದನ್ನು ಹೆಚ್ಚಿಸಲಿಕ್ಕೆ ಯಾವ ದಾರಿ ಸುಗಮ ಎಂದು ಯೋಚಿಸುವುದು, ಮತ್ತೊಂದರ ಉದ್ಯೋಗವು ನಮ್ಮ ಪ್ರಾಂತ್ಯದಲ್ಲಿ ನೇಯುವವರ ಸ್ಥಿತಿಯನ್ನು ಹೇಗೆ ಸುಧಾರಿಸಬೇಕು ಎಂದು ವಿಚಾರಿಸುವುದು.

ಇಂಥ ಸಂಘಗಳು ಕರ್ನಾಟಕ ಪ್ರಾಂತಿಕ ಕಾಂಗ್ರೆಸಿನ ಮುಖ್ಯ ಅಂಗವಾಗಬೇಕೆಂದು ನಾವು ಹೇಳುವುದಿಲ್ಲ. ನಾವು ಹೇಳಿದ ತರದ ಸಂಸ್ಥೆಗಳು ಹುಟ್ಟಲಿಕ್ಕೆ ಕಾಂಗ್ರೆಸ ಮುಖಂಡರು ಶ್ರಮಿಸಬೇಕು. ಮತ್ತು ಅವುಗಳಿಗೆ ಬೇಕಷ್ಟು ಸಹಾಯ ಮಾಡಬೇಕು. ಇಂಥ ಸಂಸ್ಥೆಗಳು ಕಾಂಗ್ರೆಸಿನವರ ಮಾತ್ರವಲ್ಲದೆ ಇತರರ ಸಹಾನುಭೂತಿಯನ್ನು ಪಡೆಯುವುದು ಕಷ್ಟವಲ್ಲ.

ಕಾಂಗ್ರೆಸಿಗೆ ರಾಜಕೀಯ ಕಾರ್ಯವೇ ಹೆಚ್ಚಾಗಿ ಇಂಥ ಕೆಲಸಕ್ಕೆ ಕೈಹಾಕಲಿಕ್ಕೆ ಸಮಯವಿಲ್ಲವಿದ್ದರೆ ಕರ್ನಾಟಕದ ಸುಖಕ್ಕೆ ಅಗತ್ಯವಾದಂಥ ಈ ಕಾರ್ಯವನ್ನು ಕೈಕೊಳ್ಳಲಿಕ್ಕೆ ಸ್ವತಂತ್ರವಾದ ಸೇವಾಸಂಘವನ್ನು ಸ್ಥಾಪಿಸುವುದು ಅಗತ್ಯ. ಸಮಾಜದ ಸ್ಥಿತಿಯನ್ನು ಸಕಲ ವಿಧಗಳಿಂದ ವಿಚಾರಿಸಿ ತಕ್ಕ ಸನ್ಮಾರ್ಗಗಳನ್ನು ತೋರಿಸುವುದು ಮುಖ್ಯಕೆಲಸ. ಮೊದಲಿಗೆ ಸಂಘವು ತಾನಾಗಿ ವಿದ್ಯಾಪ್ರಚಾರವೇ ಮುಂತಾದ ಕೆಲಸಗಳನ್ನು ಕೈಕೊಳ್ಳಲಿಕ್ಕೆ ಅನುಕೂಲವಿಲ್ಲ. ಆದರೆ ನಿಜಸ್ಥಿತಿಯನ್ನು ಪಕ್ಷಪಾತವಿಲ್ಲದೆ ಶಾಸ್ತ್ರೀಯ ರೀತಿಯಲ್ಲಿ ವಿಚಾರಿಸಿ ಬುದ್ಧಿವಾದ ಹೇಳುವವರು ನಮಗೆ ಅಗತ್ಯವಿದ್ದಾರೆ. ಬೇರೆಯವರ ಬಾಯಿಯಿಂದ ಬಿದ್ದ ಮಾತುಗಳನ್ನು ಹಿಡಿಸುವವರು ಅನೇಕರು; ಸ್ವಂತ ಆಲೋಚನೆ ಮಾಡುವವರು ಕಡಿಮೆ. ಇನ್ನಾದರೂ ನಮ್ಮ ಪ್ರಾಂತ್ಯದ ವಿಷಯ ಸ್ವತಂತ್ರ ವಿಚಾರಕ್ಕೆ ಎಡೆಕೊಡುವ ನಟನೆಯನ್ನು ನಿಲ್ಲಿಸುವ ಸಮಯವು ಬಂದಿದೆ.

ನಾವು ಸುರುಮಾಡಿದ ಸಂಗತಿಯಿಂದ ಬಹುದೂರ ನಡೆದೆವು, ಅದರೂ ಚಿಂತೆಯಿಲ್ಲ. ನಮ್ಮ ಹೇಳಿಕೆಯ ಕಡೆಯವರೆಗೂ ಇದೇ. ಕರ್ನಾಟಕದ ಏಕೀಕರಣದ ವಿಷಯ ನಮಗೆ ಬಲವಾದ ಆತುರ. ಆದರೆ ತತ್ಕಾಲಕ್ಕೆ ನಮ್ಮ ಇಚ್ಛೆಯು ಪೂರ್ತಿಯಾಗುತ್ತೆಂಬ ಭರವಸೆಯಿಲ್ಲ. ನಮ್ಮ ಪ್ರಾಂತ್ಯದ ಸಕಲ ಅಂಗಗಳನ್ನೂ ಚಲಕಾಯಿಸುವ ಒಂದು ಸಂಘವು ಸ್ಥಾಪನೆಯಾಗಿ ಕೆಲಸಮಾಡಿದ ವಿನಹ ಪ್ರಾಂತ್ಯದ ಐಕ್ಯವಾಗಲೀ ಬೇರೆ ಯಾವತರದ ಉನ್ನತಿಯಾಗಲೀ ಆಗುವುದು ಕಷ್ಟಸಾಧ್ಯವೆಂದೇ ನಮ್ಮ ನಂಬಿಕೆ.

ಕರ್ನಾಟಕ ಪ್ರಾಂತಿಕ ಸ್ವಯಂಸೇವಕ ಸಂಸ್ಥೆಯ ಬ್ಬಳ್ಳಿ.

ತಾ॥ ೧೬ ಜುಲೈ ೨೪ ನೇ ದಿವಸ ಹುಬ್ಬಳ್ಳಿಯಲ್ಲಿ ಕೂಡಿದ ಕರ್ನಾಟಕ ಪ್ರಾಂತಿಕ ಸ್ವಯಂಸೇವಕ ಮಂಡಳವು ಕೆಳಗೆ ಬರೆದ ಠರಾವುಗಳನ್ನು ಪಾಸು ಮಾಡಿರುತ್ತದೆ.

"ಕರ್ನಾಟಕ ವ್ಹಾಲಂಟಿಯರ ಬೋರ್ಡಿನ ನೇತೃತ್ವದ ಕೆಳಗೆ ಈ ಪ್ರಾಂತದಲ್ಲಿ ಎಷ್ಟು ಸ್ವಯಂಸೇವಕರ ದಾಣೆಗಳನ್ನು ಮಾಡಬೇಕು ಈ ಸಂಸ್ಥೆಗಳಿಂದ ರಾಷ್ಟ್ರೀಯಸಭೆಯ ಕಾರ್ಯಕ್ರಮವನ್ನು ನಾಗಿಸುವದಕ್ಕೆ ಯಾವ ಅನುಕೂಲಗಳುಂಟು, ಈ ವಿಷಯವಾಗಿ ಇಂಥ ಸಂಸ್ಥೆಗಳು ಅಥವಾ ಅವುಗಳ ಮುಖ್ಯಸ್ಥರು ಕೆಳಗೆ ಬರೆದಪ್ರಕಾರ ಬೇರೆ ಬೇರೆ ವಿಷಯಗಳ ಬಗ್ಗೆ ಬೋರ್ಡಿನ ಸೆಕ್ರೆಟರಿಗೆ ತೀವ್ರವಾಗಿಯೇ ಮಾಹಿತಿಯನ್ನು ಕೊಡುವದರ ಸಲುವಾಗಿ ವಿನಂತಿ ಮಾಡಿಕೊಳ್ಳುತ್ತದೆ.

೧ ನಿಮ್ಮ ಭಾಗದಲ್ಲಿ ಎಷ್ಟು ಜನರು ಸ್ವಯಂಸೇವಕರಿರುತ್ತಾರೆ?

೨ ಅದರಲ್ಲಿ ಎಷ್ಟು ಜನರು ಪೂರ್ಣವೇಳೆಯಲ್ಲಿ ಕೆಲ್ಸ ಮಾಡುವವರು ಮತ್ತು ಎಷ್ಟು ಅರ್ಧ ವೇಳೆ ಕೆಲಸ ಮಾಡುವವರು,

೩ ರಾಷ್ಟ್ರೀಯ ಕಾರ್ಯಕ್ಕೆ ಪೂರಾ ವೇಳೆ ಕೆಲ್ಸ ಮಾಡುವವರಿಗೆ ಸಂಬಳವನ್ನು ಕೊಡಬೇಕಾಗುತ್ತದೆಯೋ ಹ್ಯಾಗೆ?

೪ ಪೂರಾ ಕೆಲಸ ಮಾಡತಕ್ಕವರ ಹೆಸರುಗಳು ಮತ್ತು ಅವರಿಗೆ ಕೊಡಬೇಕಾಗುವ ಕಡಿಮೆ ಸಂಬಳವೆಷ್ಟು?

೫ ಅರ್ಧ ವೇಳೆ ಕೆಲಸ ಮಾಡುವವರ ಹೆಸರುಗಳು, ಅವರ ಉದ್ಯೋಗ ಮತ್ತು ಅವರಿಗೆ ಮಾಡಲಿಕ್ಕೆ ಶಕ್ಯವಿದ್ದ ಕೆಲಸ ಯಾವ ತರದ್ದು?

೬ ಹಳ್ಳಿಹಳ್ಳಿಗಳಲ್ಲಿ ಕೆಲಸ ಮಾಡಲಿಕ್ಕೆ ಸಿದ್ಧರಿದ್ದವರ ಹೆಸರುಗಳು?

೭ ಆ ಸ್ವಯಂಸೇವಕರು ಕಾಂಗ್ರೆಸಿನ ಪೂರ್ಣಕಾರ್ಯಕ್ರಮವನ್ನು ಕೈಕೊಳ್ಳಲಿಕ್ಕೆ ಸಿದ್ಧರಿರುವರೋ ಅಥವಾ ಅದರ ಭಾಗವನ್ನು ಕೈಕೊಳ್ಳಲಿಕ್ಕೆ ಸಿದ್ಧರಿದ್ದಾರೋ ಮತ್ತು ಭಾಗವಾದರೆ ಯಾವ ಭಾಗವು? ಕಾಂಗ್ರೆಸ ಕಾರ್ಯಕ್ರಮದಲ್ಲಿಯ ವಿಷಯಗಳು:— ಹಿಂದೂ ಮುಸಲ್ಮಾನರ ಐಕ್ಯವು; ಅಸ್ಪೃಶ್ಯತಾ ನಿವಾರಣೆ; ರಾಷ್ಟ್ರೀಯ ಶಿಕ್ಷಣ, ಮಿತವ್ಯಯ, ಹಳ್ಳೀ ಪಂಚಾಯತ, ಮತ್ತು ಖಾದಿ. ನಮಗೆ ಕರ್ನಾಟಕದ ಎಲ್ಲ ಜಿಲ್ಹೆಗಳಿಂದ ಮಾಹಿತಿಯು ಬೇಕಾಗಿರುತ್ತದೆ. ಸ್ವಯಂಸೇವಕ ಸಂಸ್ಥೆಗೆ ಸಂಬಂಧಿಸಿದವರು ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡಬಹುದು. ಮತ್ತು ನಮಗೆ ಬೇಕಾದ ಮಾಹಿತಿಯನ್ನು ಕೊಡಬಹುದು. ಶಕ್ಯವಿದ್ದಮಟ್ಟಿಗೆ ಸತ್ಯವಾದ ಮತ್ತು ಪೂರ್ಣ ಮಾಹಿತಿಯನ್ನು ಕೊಡಲು ಪ್ರಯತ್ನಿಸಬೇಕು. ತಮ್ಮ ಮಾಹಿತಿಗಾರರು ತಾವು ಕೊಟ್ಟ ಮಾಹಿತಿಯ ಬಗ್ಗೆ ದಾಳಿ ನೋಡುವ ಶ್ರಮವನ್ನು ಉಳಿಸುವರೆಂದು ಆಶಿಸುತ್ತೇನೆ.

ಎಸ್. ಎಸ್. ಪಾಟೀಲಕರ ಸೆಕ್ರೆಟರಿ, ಕರ್ನಾಟಕ.
ಪ್ರಾವ್ಹಿನ್ಸಿಯಲ್ ವ್ಹಾಲಂಟಿಯರ ಬೋರ್ಡ. ಹುಬ್ಬಳ್ಳಿ

ಬಾಗಲಕೋಟೆಯವರಿಗೆ ವಂದನೆಗಳು.

ಬಾಗಲಕೋಟೆಯ ಕಾಂಗ್ರೆಸ್ ಕಮಿಟಿಯು ಆಗಸ್ಟಿನಲ್ಲಿ ಸುಮಾರು ೧೫೦೦ ರೂ॥ ಬೆಲೆ ಬಾಳುವ ಖಾದಿಯ ಬೇರೆ ಬೇರೆ ನಮೂನೆಯ ರೀತಿಯ ಅಂಚಿನ ಖಣಗಳು, ಇದ್ದುದನ್ನು ನಾನು ಮತ್ತು ಶ್ರೀ. ಪುರೋಹಿತರು ಕೂಡಿ ನಾಗರ ಪಂಚಮಿಯ ನಿಮಿತ್ತವಾಗಿ ಬಾಗಲಕೋಟೆಯಲ್ಲಿ ಆ ಖಣಗಳನ್ನು ಮನೆ ಮನೆಗೆ ತೆಗೆದುಕೊಂಡು ಹೋಗಿ ಮಾರಬೇಕೆಂದು ಮಾಡಿದ್ದೆವು. ನಾಗರ ಪಂಚಮಿಗಿಂತ ಒಂದು ವಾರ ವಾದರೂ ಮೊದಲು ಈ ಕಾರ್ಯವನ್ನು ನಾವು ಪ್ರಾರಂಭ ಮಾಡಬೇಕಾಗಿತ್ತು. ಆದರೆ ಹಾಗಾಗಲಿಲ್ಲ. ೨೪ ನೇ ತಾರೀಖಿನಿಂದ ನಾವು ಮಾರಲಿಕ್ಕೆ ಪ್ರಾರಂಭಿಸಿದೆವು. ನಾಗರ ಪಂಚಮಿಯು ೨೬ ನೇ ತಾರೀಖಿನ ದಿವಸ ಇತ್ತು, ನಾವು ನಾಲ್ಕು ದಿವಸಗಳಲ್ಲಿ ಐವತ್ತು ಮನೆಗಳಿಗೆ ಹೋಗಿದ್ದೆವು. ಮುಂಜಾನೆ ೮ ಘಂಟೆಯಿಂದ ೧೧ ರವರೆಗೆ ಮಾತ್ರ ಮಾರಲಿಕ್ಕೆ ಹೋಗುವದು ಸಾಧ್ಯವಿದ್ದಿತ್ತು. ನಾಗರಪಂಚಮಿಯ ದಿವಸ ಮಧ್ಯಾಹ್ನದ ಮೇಲೆ ಹೋಗಿದ್ದೆವು. ಒಂದು ನೂರಾ ಐವತ್ತು ರೂಪಾಯಿಗಳ ಖಣಗಳನ್ನು ಮಾರಿದೆವು. ಮಾರಾಟದ ಪಟ್ಟಿ ಸ್ವಲ್ಪವಾದರೂ ಇದರ ಪರಿಣಾಮ ನಿರಾಶಾಜನಕವಲ್ಲ. ನಾವು ಹೋದ ಮನೆಗಳಲ್ಲೆಲ್ಲ ಜನರು ಆನಂದದಿಂದ ಖಣಗಳನ್ನು ತೆಗೆದುಕೊಂಡರು. ಗಂಡಸರಾಗಲಿ ಹೆಂಗಸರಾಗಲಿ ಖಾದಿಯ ಖಣಗಳನ್ನು ಕೊಂಡುಕೊಳ್ಳಲು ಆತುರರಿದ್ದರು. ಮತ್ತು ಖಾದಿಯ ಗುಳೇದಗುಡ್ಡದ ನಮೂನೆಯ ಖಣಗಳನ್ನು ನೋಡಿ ಆಶ್ಚರ್ಯ ಆನಂದ ಹೊಂದಿದರು. ಇದರಿಂದ ನಾವು ಗಂಡಸರೂ ಹೆಂಗಸರೂ ಕೂಡಿಯೇ ಬಂದರೆ ಖಣಗಳನ್ನು ಮಾರುವದು ಇದಕ್ಕಾಗಿ ಹಿಟ್ಟಿನ ಮನೆಗಳಿಗೆ ಹೋಗಲಿಕ್ಕೆ ಸಾಧ್ಯವಾಗಲಿಲ್ಲೆಂಬದೇ ನನಗೆ ವ್ಯಸನ ಹುಟ್ಟಿಸುತ್ತದೆ. ಆದರೂ ಇನ್ನುಮುಂದೆ ಖಾದಿಯ ಅಂಗಡಿಗೆ ಹೋಗಿ ಜನರು ಖಣಗಳನ್ನು ತೆಗೆದುಕೊಳ್ಳುವರೆಂದು ನನಗೆ ಸಂಪೂರ್ಣ ವಿಶ್ವಾಸವಿದೆ.

ಬಾಗಲಕೋಟೆ ೨೭-೭ ೨೫ | ಹಣಮಂತರಾವ ಕೌಜಲಗಿ.
ಕರ್ನಾಟಕ ಖಾದಿಯ ಮಂಡಲ
ಕಾರ್ಯದರ್ಶಿ

ವರ್ತಮಾನ ಸಾರ.

ಇಹವೃತ್ತ

ಈ ಸಾರೆ ಮೊಹರಮ್ಮದ ಹಬ್ಬದಲ್ಲಿ ಇತ್ತೀಚೆ ಹಿಂದೂ ಜನರು ಭಾಗತೆಗೆದುಕೊಳ್ಳಬಾರದೆಂಬುದಾಗಿ ಬೆಳಗಾವಿ ಚಳವಳ ನಡೆದಿರುವದು.

ವಾಮನರಾಯರ ವಿಶ್ವಗುಣಾದರ್ಶ ನಾಟಕದವರು ಬೇಗನೇ ಇಲ್ಲಿಗೆ ಬರುವರು ತಾಜ ನಾಟಕ ಗೃಹದಲ್ಲಿ ಪ್ರಯೋಗಗಳಾಗುವವು.

ಕರ್ನಾಟಕ

ಮುಂಬಯಿ ಕರ್ನಾಟಕ

ಮುಂಡಗೋಡಿನಲ್ಲಿ ಅಲ್ಲಿಯ ಜನರ ಸಾರ್ವಜನಿಕ ಸಭೆಯು ಶ್ರೀ ಉಸಗಾಂವಕರ ರಾಮಚಂದ್ರ ಲಕ್ಷ್ಮಣರಾಯರ ಅಧ್ಯಕ್ಷತೆಯಲ್ಲಿ ಸೇರಿತ್ತು. ಅಲ್ಲಿ ಆಂಧ್ರರು ಬಳ್ಳಾರಿಯಲ್ಲಿ ಸ್ಥಾಪಿಸಬೇಕೆಂದಿದ್ದ ಕಾಲೇಜಿನ ಚಳವಳಿಯು ನಿಷೇಧಿಸಲ್ಪಟ್ಟಿತು. ಮತ್ತು ಬಳ್ಳಾರಿಯು ಕರ್ನಾಟಕ ಭಾಗವಾದ್ದರಿಂದ ಅಲ್ಲಿ ಕರ್ನಾಟಕ ಕಾಲೇಜನ್ನು ಸ್ಥಾಪಿಸಬೇಕೆಂಬ ನಿರ್ಣಯವೂ ಆಯಿತು

ಮದ್ರಾಸ ಕರ್ನಾಟಕ

ಮದ್ರಾಸ ಹಾಯಕೋರ್ಟಿನ ಕನ್ನಡ ಭಾಷಾಂತರಕಾರರಾದ ಕುಂದಾಪುರದ ಎನ್. ವೆಂಕಪ್ಪ ನಾಯಕರು, ಸಮುದ್ರದಲ್ಲಿ ಆಕಸ್ಮಾತ ಮುಳುಗಿ ತೀರಿಕೊಂಡರು ಸಮುದ್ರದಲ್ಲಿ ಹೇಗೆ, ಬಿದ್ದರೆಂಬುದು ಗೊತ್ತಾಗಿಲ್ಲ

ಮದ್ರಾಸ ಕರ್ನಾಟಕ ಸಭೆಯು ಅಗಸ್ಟ ೯-೧೦ ತಾ॥ ಪಚ್ಚಯಪ್ಪನ ಕಾಲೇಜದಲ್ಲಿ ಸೇರುವದು

ಉಡುಪಿ ರಾಷ್ಟ್ರೀಯ ಶಿಕ್ಷಣ ಮಂಡಳದ ಕಾರ್ಯನಿರ್ವಾಹಕ ಸಭೆಯು ಇದೇ ೨೦ ೨೧ ಕ್ಕೆ ಸೇರಿತು. ನಂಬರ ೯೫೦ ನೇ ಉಡುಪಿ ಸಹಕಾರ ಸಂಘದವರು ಧರ್ಮಾರ್ಥ ಶಿಕ್ಷಣ ಪ್ರಚಾರಕ್ಕಾಗಿ ೧೦೦೦ ರೂಪಾಯಿಗಳನ್ನು ರಾಷ್ಟ್ರೀಯ ಶಿಕ್ಷಣ ಮಂಡಳಕ್ಕೆ ಕೊಡಬೇಕೆಂದು ನಿರ್ಣಯಿಸಿದ ಬಗ್ಗೆ ಅವರ ಉಪಕಾರ ಸ್ಮರಣೆಯನ್ನು ಮಾಡಲಾಯಿತು. ಪ್ರತಿ ತಿಂಗಳಲ್ಲಿಯೂ ಮಾಸಿಕ ವಂತಿಗೆಯನ್ನು ಸಂಗ್ರಹಿಸಿ ಶಾಲೆಯ ಖರ್ಚನ್ನು ನಡೆಸಬೇಕೆಂದು ನಿಶ್ಚಯವಾಯಿತು.

ಕುಂದಾಪುರದಲ್ಲಿ ಆರ್ಯ ಸಮಾಜದ ಒಂದು ಶಾಖೆಯು ಸ್ಥಾಪಿತವಾಗಿದೆ.

ಹಡಗಲಿಯಲ್ಲಿ ಸಾರ್ವಜನಿಕ ಸಭೆಯಾಗಿ ಆಂಧ್ರ ವಿಶ್ವವಿದ್ಯಾಲಯದ ಬಳ್ಳಾರಿ ಸ್ಕೀಮು ನಿಷೇಧಿಸಲ್ಪಟ್ಟಿತು.

ಹರಪನಹಳ್ಳಿ, ಹಡಗಲಿ, ಹೊಸಪೇಟೆ, ಕೂಡಲಿಗಿ ತಾಲೂಕ ಲೋಕಲ್ ಬೋರ್ಡುಗಳು ಸಹ ಈ ಬಳ್ಳಾರಿ ಆಂಧ್ರ ಕಾಲೇಜವನ್ನು ನಿಷೇಧಿಸಿದ್ದು, ಬಳ್ಳಾರಿಗೆ ಸ್ವತಂತ್ರವಾದ ಕರ್ನಾಟಕ ಕಾಲೇಜವಿರಬೇಕಾಗಿ ನಿರ್ಣಯ ಮಾಡಿವೆ. ಇದೇ ಬಗೆಯ ಠರಾವನ್ನು ಸಭೆಯ ಮುಂದೆ ತರುವದಾಗಿ ಶ್ರೀ ಅನಂತಾಚಾರ್ಯರು ಹೊಸಪೇಟೆಯ ಮುನಸಿಪಾಲ್ಟಿಗೆ ನೋಟೀಸು ಕೊಟ್ಟಿದ್ದಾರೆ.

ಆಂಧ್ರ ವಿಶ್ವವಿದ್ಯಾಲಯದ ಕಾಲೇಜ, ಬಳ್ಳಾರಿಯಲ್ಲಿರಬೇಕೆಂಬುದಾಗಿ, ಬಳ್ಳಾರಿ ಮುನಸಿಪಾಲಿಟಿಯಲ್ಲಿ, ಠರಾವು ತರುವ ವಿಚಾರದಲ್ಲಿ ಕೆಲವು ಆಂಧ್ರರು ನಡೆಸಿದ್ದಾರೆ. ಬಳ್ಳಾರಿಯಲ್ಲಿ ಆಂಧ್ರ ವಿಶ್ವವಿದ್ಯಾಲಯದ ಕಾಲೇಜು ಇರಲಾರದೆಂಬುದಕ್ಕೆ ಮತ್ತು ಕರ್ನಾಟಕದ ಕಾಲೇಜವು ಬಳ್ಳಾರಿಯಲ್ಲಿ ಸ್ಥಾಪಿಸುವದು ಶಕ್ಯವಿದೆಯೆಂಬದಕ್ಕೆ, ಸಾಪ್ತಾಹಿಕ ಪತ್ರಿಕೆಗಳಲ್ಲಿ ಕನ್ನಡಿಗರು ಕೂಡಲೇ ಲೇಖನಗಳನ್ನು ಪ್ರಸಿದ್ಧ ಮಾಡಬೇಕಾಗಿ ಎಲ್ಲರಿಗೂ ಬೇಡಿಕೆಯುಂಟು.

ಮೈಸೂರ ಕರ್ನಾಟಕ

ಮೈಸೂರ ಸಂಸ್ಥಾನದಲ್ಲಿ ಕಾಗದ ಕಾರಖಾನೆಯನ್ನು ತೆಗೆಯಬೇಕೆಂಬುದಾಗಿ ವಿಚಾರ ನಡೆದಿದೆ

ಬೆಂಗಳೂರಿನಿಂದ ಮುಂಬಯಿಗೆ ೩೦ ತಾಸಿನಲ್ಲಿ ಮುಟ್ಟುವಂತೆ ಅತಿ ವೇಗದ ರೇಲ್ವೇ ಗಾಡಿಗಳು ತೀವ್ರವಾಗಿ ಪ್ರಾರಂಭವಾಗುವವು. ತಾಸಿಗೆ ೪೫ ಮೈಲಿನಂತೆ ಅವರ ಓಟವು ಇರುವದು.

ಕೊಡಗು ಕರ್ನಾಟಕ

ಸಂಪಾಜೆಯ ಅರಂತೋಡ ಗ್ರಾಮದಲ್ಲಿ ಕನ್ನಡ ಗೌಡವಿದ್ಯಾ ಸಂಘದ ಕೆಲವು ನಿರ್ಣಯಗಳ ತಿದ್ದುಪಡಿಗಾಗಿ ಒಂದು ಸಭೆ ಸೇರುವದು.

ಹಿಂದುಸ್ಥಾನ

೬ ತಿಂಗಳಕ್ಕಿಂತ ಹೆಚ್ಚು ಶಿಕ್ಷೆಯಾದ ರಾಜಕೀಯ ಕೈದಿಗಳಿಗೆ ಕಾಯಿದೇ ಮಂಡಳಗಳಲ್ಲಿ ಸೇರಲು ಅಪ್ಪಣೆಯಿದ್ದಿಲ್ಲ ಆದರೆ ಈಗ್ಗೆ ೬ ತಿಂಗಳ ಬದಲು ೧ ವರ್ಷಕ್ಕಿಂತ ಹೆಚ್ಚು ಶಿಕ್ಷೆಯಾದವರಿಗೆ ಅಪ್ಪಣೆಯಿಲ್ಲವೆಂಬ ಸುಧಾರಣೆಯು ಹಿಂದುಸ್ಥಾನ ಸರಕಾರದಿಂದ ಮಾಡಲ್ಪಟ್ಟಿದೆ. ರಾಜಕೀಯ ಕೈದಿಯು ವ್ಹಾಯಿಸರಾಯರಿಗೆ ಅಪ್ಪಣೆ ಕೇಳಿದರೆ, ಒಂದು ವರ್ಷದ ಕರಾರನ್ನು ಸಹ ಅವುಗಳಲ್ಲಿ ತಾವರೇ, ಆತನಿಗೆ ಅಪ್ಪಣೆ ಕೊಡುವ ಅಧಿಕಾರವು ವ್ಹಾಯಿಸರಾಯರಲ್ಲಿದೆ.

ಪರದೇಶ.

ಡಾ. ಬೆಸೆಂಟ ಅಮ್ಮನವರು ಲಂಡನ್ನದಲ್ಲಿ ಜಾರ್ಜ ಬಾದಶಹರ ಮತ್ತು ಮಹಾರಾಣಿಯವರ ಭೆಟ್ಟಿಯನ್ನು ತೆಗೆದುಕೊಂಡರು ಅಮ್ಮನವರು ಒಳ್ಳೇ ಸಾಹಸಿಕರು!

ಕರ್ನಾಟಕದಲ್ಲಿಯ ಕಾಂಗ್ರೆಸ ಸದಸ್ಯರು.

ಜಿಲ್ಹಾ.	ಅ.	ಬ.	ಒಟ್ಟು.
ಬೆಳಗಾವಿ	೧೦೦	೧೯೬	೨೯೬.
ಮಂಗಳೂರ.	೮೦	೧೩೦	೨೧೦.
ಧಾರವಾಡ	೮೦	೧೦೪	೧೯೪.
ವಿಜಾಪುರ.	೩೨	೧೨೪	೧೫೬.
ಮೈಸೂರ ಸಂಸ್ಥಾನ	೫೯	೩೯	೯೮.
ಬಳ್ಳಾರಿ	೮	೪೪	೫೨.
ಕಾರವಾರ	೧೯	೨೩	೪೨.
	೩೭೮	೬೬೦	೧೦೩೮.

ಬಿನ್ನಹ.

ಈಗ್ಗೆ ನಾಲ್ಕು ತಿಂಗಳುಗಳಿಂದ "ಕನ್ನಡಿಗ"ನ ಸಂಚಿಕೆಗಳನ್ನು ಸ್ವೀಕರಿಸುತ್ತಿರುವ ಮಹನೀಯರೆಲ್ಲ, ನಮ್ಮಿಂದ ವಿ. ಪಿ. ಬರುವ ದಾರಿಯನ್ನು ನೋಡದೇ ದಯೆವಿಟ್ಟು ಕೂಡಲೇ ಮನಿಯಾರ್ಡರದಿಂದ ಚಂದಾಹಣ ನಮಗೆ ಕಳುಹಿಸಬೇಕಾಗಿ ಸವಿನಯ ಪ್ರಾರ್ಥನೆಯಿದೆ. ಬಾಗಲಕೋಟೆಯು ಸಣ್ಣ ತಾಲೂಕಿನ ಸ್ಥಳವಾದ್ದರಿಂದ ದಿನಾಲು ೨೦ ರಕಿಂತ ಹೆಚ್ಚಾಗಿ ವಿ. ಪಿ. ಗಳನ್ನು ಅಂಚೆಖಾತೆಯವರು ಹಿಡಿಯುವದಿಲ್ಲ. ದಿನಕ್ಕೆ ೨೦ ರಂತೆ ೪ ಸಾವಿರ ಜನರಿಗ ವಿ. ಪಿ., ಕಳುಹಬೇಕಾದರೆ ೬-೧೦ ತಿಂಗಳುಗಳು ಬೇಕು. ಮೇಲಾಗಿ ವಿ. ಪಿ. ಯಿಂದ ಚಂದಾದಾರರಿಗೆ ೩ ಆಣೆ ಹೆಚ್ಚು ವೆಚ್ಚ ಬರುವದು. ಇದನ್ನು ಲಕ್ಷ್ಯದಲ್ಲಿ ತಂದು ಇನ್ನೂ ಚಂದಾಹಣ ಸಲ್ಲಿಸದೇಯಿದ್ದ ಚಂದಾದಾರರೆಲ್ಲ ಕೂಡಲೇ ಮನಿಯಾರ್ಡರದಿಂದ ೧—೧೩—೦ ಕಳುಹ ಬೇಕಾಗಿ ಬಿನ್ನಹ.

ವ್ಯವಸ್ಥಾಪಕ "ಕನ್ನಡಿಗ"

OFFICE OF THE INSPECTOR-GENERAL OF EDUCATION IN MYSORE, BENGALORE.

Notification D No 2 dated 3rd July 1925.

The Devaraja Bahadur Charity Funds—Literary Section

1 Applications are invited before the 15th of January 1926 from authors who desire to submit their books and manuscripts for patronage from the Devaraja Bahadur Charity Funds—Literary section. Authors should submit their works along with their applications

2. The works submitted for patronage may be original works in Kannada or Sanskrit, translation from other languages into Kannada, critical editions of standard Kannada or Sanskrit Works The order of preference in making the award will be as follows:—

i. Original Compositions

ii. Translations

iii. Critical Editions of standard works.

The works may be either manuscripts or printed books. In the case of the latter, the date of publication should not be earlier than the 1st January 1925.

The applications should be accompanied by a Memorandum stating how far the work is original, or in the case of a translation, the original source and explaining the special claims of the work for the prize

The manuscripts should be written legibly and only on one side of the paper

3. The competition is open to all in the case of Kannada Works but shall be confined to authors or editors in the Mysore State in the case of Sanskrit Works.

4. The awards shall be made on the judgment of a Committee by the Inspector-General of Education.

5 There will be two prizes, one of Rs 500 and the other of Rs 200 to be awarded to the two best competitors.

6. The award may be in the shape of an absolute grant to the Author in the case of a printed book and in the case of manuscripts a contribution towards the printing of the work, on the author guaranteeing its publication within a year or his agreeing to hand over the copyright of the manuscript to Government.

7 In every case the decision of the Inspector-General of Education shall be final.

8. Copies of books submitted in response to this advertisement will not be returned but manuscripts so submitted will be returned to the applicants after June 1926

K. MATTHAN,

Offg. *Inspector-General of Education.*

ಈ ಪತ್ರಿಕೆಯು [illegible] ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

ರ. ನಂ. ಬಿ. ೧೯೪೭ — ಪ್ರ. ಬೆಲೆ ೧—೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ಸಾಹಿತ್ಯ ಪ್ರಕಟವಾಗುವುದು)

ಯಥಾ ... — ದತ್ತ

ಸಂಪಾದಕರ — ಮಂಗಳವೇಢೆ ರಾಜಾರಾಮರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ... ೧೯೪೭. | ಸಂಚಿಕೆ ೧೯

ಸಂಪಾದಕರ ಧ್ವನಿ.

ನನ್ನ ಮನಸಿನ ಮೇಣದಿಂದಲಿ ಕಟ್ಟುವೆನೊಸ್ಟು ।
ನಿನ್ನ ಚೆಲುವಿನ ಪಾದಪಂಕ ಪುಷ್ಕಳವೆಂದು
ಚಿನ್ನವಾದರು ಚೆನ್ನ ಮೇಣಪಕ್ಷಿಯ ಗೂಡು
ಚಿನ್ಮಯಾಕಾಶದಲ್ಲಿ ॥
ನನ್ನ ದೇಹವು ನಿನ್ನ ಪೀಠಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಹೀರ್ದುದ
ಗಂಧವಾಹನದು ಕೇಳಿರಿ ।

—ಅಂಬಿಕಾತನಯ ದತ್ತ

ಹೇಳಿಕೆ ಪದ್ಯವು:- ಇದೊಂದು 'ಕನ್ನಡಿಗ'ನ ಎದೆಗೆ ಸವಿಯಾದ ಹಾಡು. 'ಎನ್ನಕ್ಕರದ ಚಿಕ್ಕೆಯು, ಮೋಹದ ಮುತ್ತೆ, ಚಿನ್ನದರಗಿಳಿಯೆ' ಎಂದು ಮುಗ್ಧಸ್ನಿಗ್ಧ ಭಾವದಿಂದ ಮುದ್ದಾಡಿ ತಕ್ಕೈಕರ್ಸೈದು ಮಮತೆಯಮೊಲೆಯ ಮಧುವ ಕೊಟ್ಟು, ಸಾಕಿ ಸಲಹಿ, ಧರ್ಮಾಮೃತವನುಣಿಸಿ ಬೆಳೆಯಿಸಿ ತನ್ನ ಸರ್ವಾಂಗೀಣ ವಿಕಾಸಕ್ಕಾಗಿ ಕೊರಗಿದ ಸ್ವರ್ಗಸ್ವರೂಪವಾದ ತಾಯ್ನಾಡಿನ ಅಡಿಗೆರಗಿದ ಭಕ್ತಿಪ್ರವಣನಾದ 'ಕನ್ನಡಿಗ'ನ ಕವನೀಯ ಕುಸುಮವು. ಇಲ್ಲಿ ಒಲವು ಮೈದುಂಬಿ ಬಂದದೆ. ಪ್ರೀತಿರಸವು ಪುಟಪುಟಿದು ಪ್ರವಾಹವಾಗಿ ಹರಿಯುತಿದೆ. ತಾಯಿಯ ಅಡಿಯಲ್ಲಿಯ ಅವನ ಜ್ವಲನ್ನಿಷ್ಠೆಯು ಒಡಮೂಡಿ, ಕಡೆಗೆದ್ದು ಕಂಗೊಳಿಸುತ್ತಿದೆ. ಅವಳು ಅವನ ಭಾವಸಿಂಹಾಸನದಲ್ಲಿ ಉಜ್ವಲವಾಗಿಯೂ ಸ್ಫುಟವಾಗಿಯೂ ನೆಲಸಿದ್ದಾಳೆ. ಅವಳಡಿಯ ಅಣತಿ (ಆಜ್ಞೆ) ಯನ್ನು ಮುಡಿಯಲೆತ್ತಿಹಿಡಿದು, ಅವಳ ಶಿಲ್ಪ, ಸಾಹಿತ್ಯ ಸಂಸ್ಕೃತಿ ಮೊದಲಾದವುಗಳ ಮೇಲ್ಮೆಯನ್ನೂ ಬೆಳಕನ್ನೂ ಜಗತ್ತಿನ ನಿದರ್ಶನಕ್ಕೆ ತಂದು ಕೊಟ್ಟು, ಅವಳ ಹೆಸರನ್ನು ಆಚಂದ್ರಾರ್ಕವಾಗಿ ಅಚ್ಚಳಿಯದೆ ನಿಚ್ಚಳವಾಗಿ ಉಳಿಯುವಂತೆ ಮಾಡಿದ ಮುದ್ದುಮಕ್ಕಳಿಗಾಗಿ ತನ್ನ ಮನಸಿನ ಮೇಣದಿಂದ ಚಿನ್ಮಯಾಕಾಶದಲ್ಲಿ ಚಿನ್ನ (ಚಿಕ್ಕ) ವಾದರೂ ಚೆನ್ನ (ಸುಂದರ) ವಾದ ಮೇಣ ಪಕ್ಷಿಯ ಗೂಂದು (ಅವರ ಮಾತೃಸೇವೆಯ ಕುರುಹೆಂದು) ಕಟ್ಟಲು ಕನ್ನಡಿಗನುದ್ಯುಕ್ತನಾಗಿರುವನು. ಇಲ್ಲಿ ಚಿನ್ನವೆಂಬ ಶಬ್ದಕ್ಕೆ ಔಚಿತ್ಯವುಂಟು; ಅರ್ಥಪೋಷಕತೆಯುಂಟು. ಕನ್ನಡಿಗನ ಕೆಲಸವು ಅದ್ಭುತವಾಗಿರಲಿಕ್ಕಿಲ್ಲ ಮನಕ್ಕೆ ಹಿಡಿಯುವಂತಹದಿರಲಿಕ್ಕಿಲ್ಲ. ಅವನ ಕೆಲಸವು ಅತ್ಯಲ್ಪವಾಗಿರಬಹುದು. 'ಕುಸು'ವಾಗಿದ್ದರೂ 'ಕೆಸ'ವಾಗಿರಬಾರದು, ಚೊಕ್ಕಟವಾಗಿರುವುದು; ಅಚ್ಚುಕಟ್ಟಾಗಿರುವುದು. ಚೊಕ್ಕಾಗಿರುವುದು; ಮಾಟವಾಗಿರುವುದು ಎಂಬುದನ್ನೇ ಈ ಮಾತು ಸೂಚಿಸುತ್ತದೆ.

ಮನವು ತನ್ನ ಮುಕ್ತಿ ಸಾಧನೆಗಾಗಿ ತನಗೆ ಕೊಡಲ್ಪಟ್ಟಿದ್ದರೂ, ಅದನ್ನು 'ಕನ್ನಡಿಗ'ನು ತಾಯಿಯ ನಲ್ಲುವರ (ಹಿಂದಣ ಶಿಲ್ಪಿಗರ, ಸಾಹಿತ್ಯ ಸೇವಕರ, ಅಧ್ಯಾತ್ಮದ ದೀವಟಿಗೆ ಹಿಡಿದವರ) ಅಡಿಗೆ ಮುಡುಪನ್ನಾಗಿ ಇಟ್ಟಿದ್ದಾನೆ. ಅವನಿಗೆ ಭುಕ್ತಿಮುಕ್ತಿಗಳ ಹಂಬಲವಿಲ್ಲ - ತನವ ಬೇಡಿದಡೀವೆ, ಮನವ ಬೇಡಿದಡೀವೆ, ಧನವ ಬೇಡಿದಡೀವೆ. ಕಣ್ಣು ಬೇಡಿದಡೀವೆ, ತಲೆಯ ಬೇಡಿದೊಡೀವೆ, ತಾಯಿಯೆ ನಿನಗಿತ್ತು ಸಿದ್ಧನಾಗಿಪ್ಪೆ' ಎಂಬುದರಲ್ಲಿಯೇ ಅವನ ಹಿರಿಯ ನಂಬುಗೆ. ತಾಯಿಗಾಗಿ ಸರ್ವಸ್ವವನ್ನರ್ಪಿಸುವುದೇ ಅವನ ಆರಸುಗುರಿಯು. "He looks for an establish-ment of a monuement that hath foundation in a spiritnal ideal !; " ಅವನ ಜ್ಯೋತಿರ್ಮಯವಾದ ದೇಹವು (ಜ್ಯೋತಿಯಿಲ್ಲದೆ ದೇಹವಿರಬಾರದು.) ಅವಳ ಪೀಠಶಾಸನಕಾಗಿ ಜಡವಾದ ಕಲ್ಲಾಗಿ (ಇದಕ್ಕಿಂತಲೂ ಹೆಚ್ಚಿನ ತ್ಯಾಗವಾವುದು ?) ನಿಲ್ಲಲು ಸಿದ್ಧವಿದೆ. ಅವನ ಉಸುರು ತಾಯಿಯ ಕೀರ್ತಿ ಕುಸುಮದ ಪರಿಮಳವನ್ನು ಪಸರಿಸುವ ಗಂಧವಹ (ಗಾಳಿ) ವಾಗಿದೆ/ಎಂದರೆ ಅವನು ಬದುಕಿ ಉಸುರಾಡಿಸುವುದು ಅವಳ ಸಾಂದ್ರಕೀರ್ತಿ ಚಂದ್ರಿಕೆಯನ್ನು ಪಸರಿಸಿ ಬೆಳಗುವದಕ್ಕಾಗಿಯೇ. ಒಟ್ಟಿನಲ್ಲಿ ಹೇಳಬೇಕಾದರೆ, ಕರಿನಾಡ ವೈಭವವನ್ನು ಉಳಿಯಿಸಿ, ಬೆಳೆಯಿಸಲಿಕ್ಕೂ, ಬೆಳೆಯಿಸಿ ಗಳಿಯಿಸಲಿಕ್ಕೂ ಕನ್ನಡಿಗನು ತನುಮನ ಪ್ರಾಣಗಳನ್ನು ಅರ್ಪಿಸಿ ಹಗಲಿರುಳು ದಣಿಗುತಲಿದ್ದಾನೆ. —ರಾಮದಾಸ

"ಕನ್ನಡಿಗನ" **ಪೋಷಕರಾಗಿ** "ಕನ್ನಡಿಗ"ನಿಗೆ ಕೆಳಗೆ ಕಾಣಿಸಿದ ಸದ್ಗೃಹಸ್ಥರು ಸಹಾಯ ಮಾಡಿದ್ದಾರೆ:—

(೧) ಕರ್ನಾಟಕ ಭೂಷಣ ಶ್ರೀನಿವಾಸರಾವ ಕೌಜಲಗಿ
(೨) ಶ್ರೀ. ವಿಶ್ವನಾಥರಾವ ಜೋಗ ಎಮ್.ಎಲ್.ಸಿ. ಧಾರವಾಡ
(೩) ಶ್ರೀ. ವಿಶ್ವನಾಥರಾವ ಜೋಶಿ ವಕೀಲ ಹುಬ್ಬಳ್ಳಿ
(೪) ಶ್ರೀ. ಅಶ್ವತ್ಥರಾವ ಮಹಿಷಿ ವಕೀಲ ಶಿರಹಟ್ಟಿ
(೫) ಶ್ರೀ. ಸಿ. ಎಸ್. ವೆಂಕಪ್ಪಯ್ಯಾ ಎಮ್. ಎಲ್. ಮಡಿಕೇರಿ.
(೬) ಶ್ರೀ. ಎಸ್. ಆರ್. ಸುಬ್ಬಣ್ಣಯ್ಯಾ ಎಮ್ ಎಲ್. ಸಿ.ಸಿ ...

ವರ್ಷಕ್ಕೆ ೫ ರೂ. ವಂದಾ ಕೊಡತಕ್ಕವರು ಪೋಷಕರು ಕನ್ನಡನಾಡಿನಲ್ಲಿಯ ಕಳವಳದ ಕೊಡಗೈ ದೊರೆಗಳು 'ಕನ್ನಡಿಗ'ನಿಗೆ ಹೀಗೆಯೇ ಕೈಕೊಟ್ಟರೆ ಕನ್ನಡಿಗನ ಕನವರಿಕೆಗಳೆಲ್ಲ ಕೊನೆಗಾಣುವದರಲ್ಲಿ ಕಷ್ಟವಿಲ್ಲ.

ಮೂರು ಪದವಿಗಳನ್ನು ಸಂಘದವರು ಅವರಿಗೆ ಅರ್ಪಿಸಿದರು. ಪೇಟೆಯುಲ್ಲಿ ಪಲ್ಲೆ ಕಾಯಿ ಮಾರುವವರು ಜಿನಸು ಮಾರಾಟವಾಗದಿದ್ದರೆ ಬೆಲೆ ಇಳಿಸುವಂತೆ ಈ ಸಂಘದವರು ಪದವಿಯ ಬೆಲೆಯನ್ನು ೭೦ ರೂ. ದಿಂದ ೫೦ ರೂ. ಗೆ ಇಳಿಸಿದರು ಮಾರಾಟವಾಗಲಿಲ್ಲ. ಆ ಮೇಲೆ ೨೫ ರೂ. ಪುನಃ ಇಳಿಸಿ ಗೆ ಆಕಾರ್‍ಯ ವಿಕಾರ್‍ಯ ಸ್ವರೂಪವನ್ನು ತೆಗೆದುಕೊಂಡು ಮೂರು ಪದವಿಗಳನ್ನು ಕೊಟ್ಟರು!! ಇದರಿಂದ ಸಂಘದ ಸ್ವರೂಪವು ತಾನೇ ಹೊರಬೀಳುತ್ತದೆ.

ಈ ಸಂಘದ ಕಾರ್ಯದರ್ಶಿಗಳು ಪತ್ರ ಬರೆಯುವಾಗ್ಗೆ ಕೈಗೆ ಸಿಕ್ಕಂಥ ಕಾಗದಗಳನ್ನು ಉಪಯೋಗಿಸಿ, ಸಂಘಕ್ಕೆ ಶಿಸ್ತು ಸಹ ಗೊತ್ತಿಲ್ಲವೆಂಬುದನ್ನು ತೋರಿಸಿದ್ದಾರೆ. ಇವರ ಇಂಗ್ಲೀಷ ಭಾಷೆಯು ಜ್ಞಾನವಂತೂ ದಿವ್ಯವಿದೆ. ಒಂದೇ ಪತ್ರದಲ್ಲಿ ತಪ್ಪುಗಳು ತುಂಬಿವೆ. ಇಂಗ್ಲೀಷ ಬಲ್ಲಂಥ 'ಕನ್ನಡಿಗನ' ವಾಚಕರು ಆ ಪತ್ರಗಳಲ್ಲಿಯ ಸ್ವಾದವನ್ನು ಸೇವಿಸಬಹುದು:— (ಪತ್ರಗಳನ್ನು ಇದ್ದಕ್ಕಿದ್ದಂತೆ ಮುದ್ರಿಸಿದೆ. Italics are shewn by the writer of the article.)

ಪತ್ರ ಸಂಖೆ ೧:—

"I am glad to receive your registered letter (?) application forms and some question papers are sent here with. Please show *this questions* to the Pandits ....who have shown their eagerness to appear *in the* examination. The answer of the questions can be Sanskrit or in *the own* vernacular.............. please send the fee...... ..*in* my present address"

ಪತ್ರ ಸಂಖೆ ೨—

"I came to learn all (?) receive your letter...... it has been settled that the Honourary title "Vidyavachaspati" *will be* conferred upon you. Therefore please send Rs 70/: by I. M. O you will send your Sanskrit works by registerd cover.........on *gratist* many editors. . . .publish the notice of our Sangha in their papers & there-by *patronase* it, under *this circumstances* we are *unable un ible* to advertise in your paper with cost."

ಪತ್ರ ಸಂಖೆ ೩.—

"Knowing you to (?) a patron of the Sangha, the Hony titles *has* been conferred upon you for the partial help to fulfil the aim & object of it. The diplomas *has* accordingly been sent by V. P. but we are sorry to inform you that not accepting it you have made the Sangha in the true sence of the term loser. Now we are sending it again the diplomas charging only real cost by V. P. for Rs 50/ only, so we hope you will through kindness accept it without any hasitation. Please remember the co-operation of yours is essentially required so it is not at all desirable that your Sangha in spite of help will bear a loss by *an* well educated man like you & at the same to write any thing with regards to its we think it nothing but superflous."

ಪತ್ರ ಸಂಖೆ ೪.—

"You have refused the **V. P.** repeatedly and there-by your Shangha received pecuniary loss greatly. However, inspite of great loss, your *diplomas* are again going to be sent Charging Rs. 25 only (The titles That have been conferred upon you are mentioned below:—

(1 K S. Ratna, 2 V. Vachaspati, 3 K. V. Mahagaja.)

We Therefore hope you will accept the V. P. by thes time If you egain refuse the V P we shall Then understand that your intention is to make the Shangha sustain pecuniary loss."

(**ಟಿಪ್ಪಣಿ** ಈ ಪತ್ರಗಳಲ್ಲಿ ಮುದ್ರಣದೋಷಗಳೇನೂ ಇರುವದಿಲ್ಲ. ನಾವು ಪ್ರೂಫುಗಳನ್ನು ಮೂರ್ನಾಲ್ಕು ಬಾಗರೂಕತೆಯಿಂದ ನೋಡಿರುವೆವು.)

ನೋಡಿ. ಪತ್ರಗಳಲ್ಲಿ ಎಂಥಹ ಮುತ್ತುಗಳಿವೆ! ಇಂಥಹ ಪತ್ರಬರೆಯುತಕ್ಕವರು ಪಂಡಿತರನ್ನು ಪರೀಕ್ಷಿಸ ಬಲ್ಲರು; ಮತ್ತು ಬೇಕಾದಷ್ಟು ಪದವಿಗಳನ್ನೂ ಕೊಡಬಲ್ಲರು. "ಉದರ ನಿಮಿತ್ತಂ ಬಹುಕೃತ ವೇಷಂ!

ಪ್ರಾಕ್ತನ ವಿಚಕ್ಷಣ ವಿಮರ್ಶರಾದ ಶ್ರೀ. ನರಸಿಂಹಾಚಾರ್ಯ, ಡಿ. ಕೆ. ಭಾರದ್ವಾಜ, ಆರ್. ಬಿ. ಕುಲಕರ್ಣಿ, ಬೆಳಗೇರಿ, ಪುಣೇಕರ ಇವರೇ ಮೊದಲಾದವರು ಸಹ ಇನ್ನು ಮುಂದೆ ಇಂಥ ಸಂಘದವರಿಂದ ದೊರೆತ ಈ ಪದವಿಗಳನ್ನು ತಮ್ಮ ಹೆಸರಿನ ಮುಂದೆ ಹಚ್ಚಬಾರದಾಗಿ ವಿನಂತಿಯದೆ. ಕನ್ನಡಿಗರೆಲ್ಲ ಎಚ್ಚತ್ತು ಇನ್ನು ಮೇಲಾದರೂ ಇಂಥ ಪದವಿಗಳಿಗೆ ಮರುಳಾಗಿ ಇಲ್ಲದ ವ್ಯಾಸಕ್ಕೆ ಬೀಳಬಾರದಾಗಿ ಈ ಮೂಲಕ ಎಚ್ಚರ ಕೊಡುವೆವು.

ಈ ಸಂಘದ ಬಗ್ಗೆ ಸರಕಾರದವರು ಯೋಗ್ಯ ವಿಚಾರ ಮಾಡಿ, ಅದು ಬಡಪಂಡಿತರ ವಂಚನೆಯಿಂದ ಕೂಡಿದ ಸಂಘವೋ ಅಥವಾ ಸಜ್ಜನರಿರುವದೋ, ಸಜ್ಜನರಿದ್ದರೆ ಅನರ್ಥಗಳೇಕೆನ್ನುವದನ್ನಲ್ಲ ಕೂಡಲೇ ಪ್ರಸಿದ್ಧ ಮಾಡಬೇಕು. ನಾವು ಈ ವಿಷಯದಲ್ಲಿ ಬಂಗಾಲ ಸರಕಾರಕ್ಕೂ ಬರೆದಿರುವೆವು. ಉತ್ತರವು ಬಂದದ್ದಾದರೆ "ಕನ್ನಡಿಗ" ನಲ್ಲಿ ಪ್ರಸಿದ್ಧಿಸುವೆವು. —ಶ್ರೀರಾಮ

ಯಕ್ಷಗಾನ.

ಯಕ್ಷಗಾನ ಆಟಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹು ಕಾಲದಿಂದ ಪ್ರಚಾರದಲ್ಲಿವೆ. ವಿದ್ಯಾವಂತರು ಇವರ ಮೇಲೆ ಅಭಿಮಾನವನ್ನು ತೋರದೆ ಅಸಡ್ಡೆಯನ್ನೇ ತೋರುತ್ತಲಿದ್ದುದರಿಂದ ಈ ಕಲೆಯು ಇಂದು ಅಷ್ಟು ಉನ್ನತಾವಸ್ಥೆಯಲ್ಲಿಲ್ಲವೆಂಬುದು ಶೋಚನೀಯ ವಿಚಾರ. ನೈತಿಕ ದೃಷ್ಟಿಯಿಂದಲೂ ಈ ದಶಾವತಾರ ಆಟಗಳನ್ನು ಸುಧಾರಿಸಿ ಉಚಿತಾವಸ್ಥೆಗೆ ತರುವುದರಿಂದ ಬಹಳ ಉಪಕಾರವಿದೆ. ಇನ್ನೂ ಸ್ವಲ್ಪ ಸಮಯ ಇದೇ ರೀತಿಯಿದ್ದರೆ ಮತ್ತೆ ಈ ಕೆಲಸವು ಇನ್ನಷ್ಟು ಕಠಿಣವಾಗಬಹುದು. ಈ ಅಭಿಪ್ರಾಯಗಳನ್ನು ಮನಸ್ಸಿಗೆ ತಗೆದುಕೊಂಡು ಮಂಗಳೂರ ಸದ್ಗೃಹಸ್ಥರು ಕೆಲವರು ಸೇರಿ ಈ ಕಲೆಯನ್ನು ಉನ್ನತಾವಸ್ಥೆಗೆ ತರುವ ಉದ್ದೇಶದಿಂದ ಇದಕ್ಕಾಗಿ ಒಂದು ಸಂಘವನ್ನೇರ್ಪಡಿಸಿರುವರೆಂಬುದು ಆನಂದನೀಯ ವಿಚಾರ. ವಿದ್ಯಾವಂತ ವರ್ಗದವರು ಇಂಥ ವಿಷಯಗಳಲ್ಲಿ ಅಭಿರುಚಿಯನ್ನು ತೋರಲಾರಂಭಿಸಿದುದು ಶುಭ ಚಿಹ್ನೆಯಾಗಿದೆ. ಈ ಸಂಘಕ್ಕೆ ಟ್ರೈನಿಂಗ್ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಯುತ ಉಳ್ಳಾಲ ಮಂಗೇಶ ರಾಯರು ಅಧ್ಯಕ್ಷರಿರುವರು. ಸಂಘದವರು ಟ್ರೈನಿಂಗ್ ಶಾಲೆಯಲ್ಲಿ ಒಂದು ಕ್ಲಾಸನ್ನು ತೆರೆಯುವರು. ಅಲ್ಲಿ ತಾಳ ಮದ್ದಳೆಗಳನ್ನು ಬಾರಿಸುವುದು, ಹಾಡುವುದು, ನರ್ತನ ಮತ್ತು ಅರ್ಥಜ್ಞಾನ ಇವುಗಳ ಅಭ್ಯಾಸ ಮಾಡಿಸುವರು. ವಿದ್ಯಾರ್ಥಿಗಳಲ್ಲದೆ ಹೊರಗಿನವರು ಈ ಕ್ಲಾಸಿಗೆ ಸೇರಬೇಕಾದರೆ ತಿಂಗಳೊಂದರ ರೂ. ೨-೦-೦ ಸಂಬಳ ತೆರಬೇಕಾಗುವುದು. ಸದ್ಯಕ್ಕೆ ಕೃಷ್ಣಸಂಧಾನ ಮತ್ತು ಪಂಚವಟಿ ವಾಲಿ ಸುಗ್ರೀವರ ಕಾಳಗ ಈ ಎರಡು ಪ್ರಸಂಗಗಳು ಕಲಿಸಲ್ಪಡುವವು. ಈ ಸಂಘಕ್ಕೆ ಜಿಲ್ಲೆಯವರು ಉತ್ತೇಜನಕೊಡುವುದು ಯೋಗ್ಯವಾಗಿದೆ. ಸಂಘದವರು ನಿರ್ಣಯಿಸಿದ ವರ್ಗಣಿ ಕೊಟ್ಟು ಇಷ್ಟವಿದ್ದವರು ಸಂಘದ ಸದಸ್ಯರಾಗಿ ಸೇರಬಹುದು. ಸಂಘದವರು ಕೈಕೊಂಡ ಶ್ಲಾಘನೀಯವಾದ ಈ ಕಾರ್ಯಕ್ಕೆ ಯೋಗ್ಯ ಪ್ರೋತ್ಸಾಹವು ದೊರೆತು ಈ ಕಾರ್ಯಕ್ಕೆ ಜಯವಾಗಲೆಂದು ನಾನಾದರೂ ಬಯಸುತ್ತೇನೆ.

'ಸತ್ಯಪ್ರಿಯ'.

ವರ್ತಮಾನ ಸಾರ.

ಇಹವೃತ್ತ.

ಈ ಜಿಲ್ಲೆಯಲ್ಲಿ ಕೆಲವು ತಾಲೂಕುಗಳಲ್ಲಿ ಮಳೆ ಚನ್ನಾಗಿ ಆಗಿದ್ದರೂ ಬಾಗಲಕೋಟೆ, ಹುನಗುಂದ ತಾಲೂಕುಗಳಿಗೆ ಮಳೆಯಿಲ್ಲ. ಆಕಾಶದಲ್ಲಿ ಮೋಡಗಳು ಆಳಿದಾಡುತ್ತವೆ.

ಶ್ರೀ ಮಂಜಪ್ಪ ಹರ್ಡೀಕರರು ಈ ಜಿಲ್ಲೆಯ ಉತ್ತರ ಭಾಗಕ್ಕೆ ಹೋಗಿದ್ದು ೪।೫ ದಿವಸಗಳಲ್ಲಿ ಅಲ್ಲಿಯ ಸಂಚಾರ ತೀರಿಸಿಕೊಂಡು ಮರಳಿ ಇಲ್ಲಿಗೆ ಬರುವರು

ಈ ಸಾರೆ ಮೋಹರಮ್ಮ ಹಬ್ಬದಲ್ಲಿ ಹಿಂದೂ ಜನರು ವಿಶೇಷವಾಗಿ ಭಾಗ ತೆಗೆದುಕೊಳ್ಳಲಿಲ್ಲ ಈ ಕಾರಣದಿಂದ ಮೋಹರಮ್ಮದಲ್ಲಿ, ಸೋಗುಗಳ ಗದ್ದಲವೂ ಕಂಡು ಬರಲಿಲ್ಲ.

ಹಿಂದೂ ಮುಸಲ್ಮಾನರ ಬಡಿದಾಟದಲ್ಲಿ ಶಿಕ್ಷೆಹೊಂದಿದ್ದ ಲಿಂಗಾಯತ ಕೈದಿಗಳನ್ನು ಜಾಮೀನ ಮೇಲೆ ಬಿಟ್ಟಿದ್ದು, ಅವರ ಬಗ್ಗೆ ಪುನಃ ವಿಚಾರಣೆಯಾಗುವದಿದೆ

ಇಲ್ಲಿಯ ಮೊದಲನೇ ವರ್ಗದ ಆನರರೀ ಮ್ಯಾಜಿಸ್ಟ್ರೇಟರಾದ ಶ್ರೀ ಮಂಗಳವೇಢೇಕರ ರಾಜೇಶ್ವರಾಯರಿಗೆ “ಸಮಂಸ ಪಾವರ” ಕೊಡಲ್ಪಟ್ಟಿದೆ.

ಕರ್ನಾಟಕ

ಮುಂಬೈ ಕರ್ನಾಟಕ

ಹುಬ್ಬಳ್ಳಿಯಿಂದ ಶಿರ್ಶಿಗೆ ರೇಲ್ವೇ ಮಾಡಿದರೆ, ನೂರಕ್ಕೆ ೧ ರೂ. ದಂತೆ ಮಾತ್ರ ಲಾಭವಾಗುವದರಿಂದ, ಸರಕಾರದವರು ಈ ವಿಚಾರವನ್ನು ಕೈಬಿಟ್ಟಿರುವರು

ಘಟಪ್ರಭಾ ನದಿಗೆ ವಡ್ಡಿಯಲ್ಲಿ ಆಣೆ ಕಟ್ಟಿದ್ದಾರೆ, ರೈತರಿಗೆ ಸಾಗುವಳಿಗಾಗಿ ನೀರನ್ನು ಪೂರೈಸುವ ವಿಚಾರವು ನಡೆದಿರುವದು. ಸರಕಾರದವರು ಬೇಗನೇ ನಿರ್ಣಯವನ್ನು ಹೊರಗೆಡುವರು.

ಮದ್ರಾಸ ಕರ್ನಾಟಕ

ಬಳ್ಳಾರಿ ಜಿಲ್ಲೆಯು ಶುದ್ಧ ಕನ್ನಡನಾಡು ಕನ್ನಡದೇವಿಯ ರಕ್ತವು, ಬಳ್ಳಾರಿ ಜಿಲ್ಲಾ ನಿವಾಸಿಗಳ ಪ್ರತಿಯೊಂದು ನಾಳದಲ್ಲಿಯೂ ಹರಿಯುತ್ತದೆ. ಪವಿತ್ರ ಕರ್ನಾಟಕ ಸಂಸ್ಕೃತಿಯು, ಅನೇಕ ವಿಘ್ನ ಪರಂಪರೆಗಳು ಪ್ರಾಪ್ತವಾದರೂ, ಬಳ್ಳಾರಿ ಜಿಲ್ಲಾ ನಿವಾಸಿಗಳ ಹೃದಯಗಳಲ್ಲಿ ಅವಿಚ್ಛಿನ್ನವಾಗಿ ಪ್ರವಹಿಸುತ್ತ, ಕರ್ನಾಟಕತ್ವವನ್ನು ಸಂರಕ್ಷಿಸುತ್ತದೆ. ಬಳ್ಳಾರಿ ಜಿಲ್ಲೆಯ ಈ ನಿಜಸ್ಥಾನದ ಸ್ಥಿತಿಯನ್ನು ಅರಿಯದೇ, ಬಳ್ಳಾರಿ ನಗರದ ಕೆಲವು ಆಂಧ್ರರು, ಆಂಧ್ರಭಾಷಾ ಸೇವೆ ಮಾಡಬೇಕೆಂಬುವ ಭ್ರಮೆಯಿಂದ, ಬಳ್ಳಾರಿಯಲ್ಲಿ ಆಂಧ್ರ ವಿಶ್ವವಿದ್ಯಾಲಯದ ಪೀಠವೊಂದನ್ನು ಸ್ಥಾಪಿಸಬೇಕೆಂದು ಪ್ರಯತ್ನಿಸುತ್ತಿದ್ದಾರೆ. ಸ್ವಚ್ಛ ಕನ್ನಡ ಜಿಲ್ಲೆಯಾದ ಬಳ್ಳಾರಿಯನ್ನು, ಆಂಧ್ರ ಸಂಸ್ಕೃತಿ ಜಾಲಬದ್ಧವಾಗುವ ಹಾಗೆ ಪ್ರಯತ್ನಿಸುತ್ತಿರುವದು, ಆಂಧ್ರಭಾಷೆಗೆ ಸೇವೆಯಾಗ ಬಹುದಾದರೂ, ಕನ್ನಡ ನುಡಿಗೆ ದ್ರೋಹವಾಗುತ್ತದೆ. ಈ ಆಂಧ್ರರ ಪ್ರಯತ್ನವು, ಬಳ್ಳಾರಿ ಜಿಲ್ಲೆಯ ಕನ್ನಡಿಗರನ್ನು ಬಡಿದು ಎಬ್ಬಿಸಿದಂತಾಗಿದೆ. ಎಲ್ಲಿ ನೋಡಿದರೂ ನೂತನೋತ್ಸಾಹವು ಕಂಗೊಳಿಸುತ್ತಿದೆ.— ವಿವಸಸ್ವ್ಯದು ಪತ್ರಿಕೆ.

ಮೈಸೂರ ಕರ್ನಾಟಕ

ಕರ್ನಾಟಕ ಆಯುರ್ವೇದ ಸಮ್ಮೇಳನದ ಎರಡನೇ ಅಧಿವೇಶನವು ಬೆಂಗಳೂರಲ್ಲಿ ನಡೆಯುವದು. ಸ್ವಾಗತ ಕಮೀಟಿಯು ಸ್ಥಾಪನೆಯಾಗಿದೆ. ಡಾ. ಸಿ. ಬಿ. ರಾಮರಾಯರು ಈ ಬಗ್ಗೆ ಶ್ರಮಿಸುತ್ತಿರುವರು.

ಫೋರ್ಡರವರು ಭದ್ರಾವತಿ ಕಾರಖಾನೆಯನ್ನು ಪಾಲುಗಾರರಿಂದ ತೆಗೆದುಕೊಳ್ಳುವ ಸುದ್ದಿಯು ಸುಳ್ಳೆಂಬುದನ್ನು ಮೈಸೂರ ಸರಕಾರದವರು ಪ್ರಕಟಿಸಿದ್ದಾರೆ.

ಕೊಡಗು ಕರ್ನಾಟಕ

“ಲೋಕ ಪಾವನ” ಪತ್ರಿಕೆಯು ಹೊಸದಾಗಿದ್ದರೂ, ಕೆಲವು ಜನರ ಸ್ತುತಿಗೆ ಪಾತ್ರವಾಗಿದೆಯೆಂದೂ, ಕೆಲವು ಜನರ ಕೋಪಕ್ಕೆ ಗುರಿಯಾಗಿದೆಯೆಂದೂ, ತಿಳಿಯುತ್ತಿದೆ.

ಕೊಡಗಿನಲ್ಲಿ ಮಹಾತ್ಮರ ಹೆಸರಿನಿಂದ ಖಾದಿಯ ಬೆಲೆಯನ್ನು ನೂರಕ್ಕೆ ೨೫—೩೦ ರಂತೆ ಏರಿಸಿ ಹಣ ಸುಲಿಯುತ್ತಿರುವರೆಂದು “ಲೋಕ ಪಾವನ” ದಿಂದ ತಿಳಿಯುತ್ತಿದೆ. ನಿಜವಿದ್ದರೆ ಇದು ಸರ್ವಥಾ ನಾಚಿಕೆಗೇಡಿನದು. ಅಲ್ಲಿಯ ಖದ್ದರದ ಅಧಿಕಾರಿಗಳು ಈ ಬಗ್ಗೆ ಸತ್ಯಾಂಶವನ್ನು ಪ್ರಕಟಿಸಬೇಕಾಗಿ ಸೂಚನೆ.

ನಿಜಾಮ ಕರ್ನಾಟಕ

ಹುಮನಾಬಾದಿನಲ್ಲಿ ದಂಗೆಯು ನಡೆದ ಮರುದಿನ ೫೦ ಜನ ಪೋಲೀಸರು ಗುಲಬುರ್ಗಿಯಿಂದ ಅಲ್ಲಿಗೆ ಹೋಗಿ ಶಾಂತತೆಯನ್ನುಂಟುಮಾಡಿದರು. ಅಂಗಡಿಗಳೂ ತೆರೆಯಲ್ಪಟ್ಟವು.

ರಾಯಚೂರಲ್ಲಿ “ವಿದ್ಯಾದಾಯಿನೀ” ಎಂಬ ಕನ್ನಡ ಮಾಸ ಪತ್ರಿಕೆಯು ಪ್ರಕಟವಾಗತಕ್ಕದ್ದಿದೆ.

ಹರಳೆಯ ಬ್ರಾಹ್ಮಣ-ವೀರಶೈವವಾದದ ಬಗ್ಗೆ ವಿಚಾರವು ನಡೆದಿದೆ. ನಿರ್ಣಯವು ಬೇಗನೇ ಆಗುವದು.

ಹಿಂದುಸ್ಥಾನ

ಮುಂಬೈ ಗಿರಣಿಗಳಲ್ಲಿ ಕೂಲಿಕಾರರು ಸಂಬಳದ ಸಲುವಾಗಿ ಹಟ್ಟ ಮಾಡಿದ್ದಾರೆ.

ಮಂಗಳೂರ, ಗೋವೆ ಮತ್ತು ಮುಂಬೈಗಳಲ್ಲಿಯ ಕ್ರಿಶ್ಚನ್ನರು ಮುಂಬೈಯಲ್ಲಿ ಬ್ಯಾಪ್ಟಿಸ್ಟರವರಿಗೆ ತಾಂಬೂಲ ಸಮಾರಂಭ ಮಾಡಿದರು ಆಗ್ಗೆ ಅಧ್ಯಕ್ಷರಾದ ಡಾ. ಪರೇರಿಯಾರವರು ಅಂದದ್ದು “ನಾವು ನಮ್ಮ ಹಿಂದಣ ಸಂಸ್ಕೃತಿಗೆ ಮರಳಿ ಹೋಗಬೇಕು, ಸ್ತ್ರೀಯರು ಘಾಗರ ಬದಲಿಗೆ ಸೀರೆಯನ್ನುಡಬೇಕು, ನಾವೆಲ್ಲ ಪಳ್ಳಿಗೆ ಹೋಗಬೇಕು; ದಾಟಿಗಳನ್ನು ತಿರುವಬೇಕು” ಕ್ರಿಶ್ಚನ್ನರಲ್ಲಿಯೂ ಈ ವಿಚಾರಗಳು ತಲೆದೋರಿದ್ದನ್ನು ಸಂತೋಷದ ಮಾತು.

ಮದ್ರಾಸ ಹಾಯಕೋರ್ಟಿನಲ್ಲಿ ಹಿಂದೂ ಮಠ ಸಂಬಂಧ ಬಿಲ್ಲಿನ ಕಾಯದೇಯು ಕಾನೂನಿಗೆ ಸರಿಯಾಗಿರುವುದಿಲ್ಲವೆಂದು ಉಡಪಿಯ ಮಠಗಳ ಮತ್ತು ತಿರುಪತಿಯ ಮಹಂತರ ಪರವಾಗಿ ವಾದಿಸುವರೆಂದೂ, ಶ್ರೀ ಮಾನ್ ಎಸ್. ಶ್ರೀನಿವಾಸಯ್ಯಂಗಾರರು ಸುತಾಫ ಜನಗಳ ಪಕ್ಷದಿಂದ ವಕೀಲರಾಗಿರುವರೆಂದೂ ತಿಳಿದು ಬರುತ್ತದೆ.

೧೦೦೦೦ ಅಕಾಲೀ ಕೈದಿಗಳನ್ನು ಬಂಧ ಮುಕ್ತ ಮಾಡಿದರು

ಮುಂಬೈಯಲ್ಲಿ ಮತ್ತೆ ಎರಡು ಗಿರಣಿಗಳು ಬಂದಾಗುವವೆಂಬದಾಗಿ ತಿಳಿಯುತ್ತದೆ.

ಮದ್ರಾಸ ಸರಕಾರದವರು ಈಗ್ಗೆ ಮೇಟೂರೆಂಬಲ್ಲಿ ಕಾವೇರಿ ನದಿಗೆ ಒಂದು ದೊಡ್ಡ ಆಣೆ ಕಟ್ಟನ್ನು ಹಾಕಲು ಪ್ರಾರಂಭಿಸಿದ್ದಾರೆ ಇದಕ್ಕೆ ೬೩೫ ಲಕ್ಷ ರೂಪಾಯಿಗಳುಬೇಕು. ಇದರಿಂದ ೪ ಲಕ್ಷ ಎಕರೆ ಭೂಮಿಯನ್ನು ಸಾಗುವಳಿ ಮಾಡುವರು ವರ್ಷಕ್ಕೆ ೭॥ ಕೋಟಿ ರೂಪಾಯಿ ಉತ್ಪನ್ನವಾಗುವದು. ಇದರಿಂದ ಸರಕಾರಕ್ಕೆ ೪೬॥ ಲಕ್ಷ ರೂ॥ ವರಮಾನವು ಬರುವದು.

ಪರದೇಶ.

ವಿಲಾಯತಿಯಲ್ಲಿ ಗ್ರಂಥಕಾರರಿಗೆ ವಕೀಲರಕಿಂತ ಹೆಚ್ಚು ಉತ್ಪನ್ನವಿದೆ ಸರ್ ಹಾಲ ಕೇನರವರಿಗೆ ಕಾದಂಬರಿಗಳನ್ನು ಬರೆಯುವದರಿಂದ ಪ್ರತಿ ವರ್ಷ ೩೦ಸಾವಿರ ಪೌಂಡು ಉತ್ಪನ್ನವಿದೆ. ಕರ್ನಾಟಕದಲ್ಲಿ? ದೊಡ್ಡ!!

ಲಂಡನದಲ್ಲಿ ಶೆಟ್ಟಿಗಳೀರ್ವರಲ್ಲಿ ಒಂದು ಲೆಕ್ಕದ ಬಗ್ಗೆ ಜಗಳವಾಯಿತು. ಯಾರ ವಿಚಾರವು ಯೋಗ್ಯವಿದೆಂಬದನ್ನು ಗೊತ್ತು ಮಾಡಬೇಕೆಂದರೆ, ಅವರ ವಕೀಲರು ಸಾವುತ್ಯಾಂಪ್ಟನ್ನ ಪಟ್ಟಣಕ್ಕೆ ಹೋಗಿದ್ದರು. ಆದ್ದರಿಂದ ಅವರೀರ್ವರೂ “ಟೆಲಿಫೋನ” ನಿಂದ ತಮ್ಮ ತಮ್ಮ ಪಕ್ಷವನ್ನು ವಕೀಲರಿಗೆ ತಿಳಿಸಿ, ಅವರನ್ನೇ ಪಂಚರನ್ನಾಗಿ ನೇಮಿಸಿದರು ೨೦ ಮಿನಿಟುಗಳ ವರೆಗೆ ‘ಟೆಲಿಫೋನ’ ನಲ್ಲಿ ಮಾತನಾಡಿ ವಕೀಲರು ಆ ವ್ಯಾಜ್ಯವನ್ನು ತೀರಿಸಿದರು ‘ಟೆಲಿಫೋನ’ ನಿಂದ ತೀರಿಸಲ್ಪಟ್ಟ ತೀರ್ಮಾನವು ಜಗತ್ತಿನಲ್ಲಿ ಇದೇ ಮೊದಲನೇಯದಾದ್ದರಿಂದ ಶೆಟ್ಟಿಗಳೀರ್ವರೂ ಕೂಡಿ ಭೋಜನ ಮಾಡಿ ಆ ಸಮಾರಂಭವನ್ನು ಚಿರಸ್ಮರಣೀಯ ಮಾಡಿದರು.

ಓಂ

ಹಿಂದುಸ್ಥಾನವು

ಇಂಗ್ಲೀಷರಿಗೆ ಯಾಕೆ ಹೋಯಿತು?

(ಶ್ರೀ. ಅರವಿಂದ ಘೋಷರವರು ಹಿಂದೊಮ್ಮೆ ಬಂಗಾಲಿಯಲ್ಲಿ ಬರೆದ ಬರಹ)

"ಕನ್ನಡಿಗ" "ತುಂಬಿ"

(ಕಳೆದ ವಾರದಿಂದ ಮುಂದರಿದದ್ದು.)

ನಮ್ಮ ದೇಶವು ಶ್ರೇಷ್ಠ; ನಮ್ಮ (ಆರ್ಯ) ಜಾತಿಯ ಆಚಾರ, ವಿಚಾರ, ಧರ್ಮ, ಶಾಸ್ತ್ರ, ನೀತಿ, ಶಿಲ್ಪ, ವಿದ್ಯೆ, ಬುದ್ಧಿ, ಮತ, ಕರ್ಮ ಮುಂತಾದವು ಉತ್ಕೃಷ್ಟವಲ್ಲವೆ ಅತುಲ್ಯ ಹಾಗೂ ಅನ್ಯ ಜಾತಿಗೆ ದುರ್ಲಭ; ಎಂಬ **ಅಭಿಮಾನವೂ**—ನಮ್ಮ ದೇಶದ ಹಿತದಲ್ಲಿಯೇ ನಮ್ಮ ಹಿತ, ನಮ್ಮ ದೇಶದ ಗೌರವದಲ್ಲಿಯೇ ನಮ್ಮ ಗೌರವ, ನಮ್ಮ ದೇಶಬಂಧುಗಳ ಅಭಿವೃದ್ಧಿಯಲ್ಲಿಯೇ ನಮ್ಮ ಉಜ್ವಲ, ಎಂಬ **ವಿಶ್ವಾಸವೂ**—ಬರೀ ನಮ್ಮ ಸ್ವಾರ್ಥ ಸಾಧನೆಯನ್ನೇ ಮಾಡಿಕೊಳ್ಳದೆ ಅದರೊಡನೆ ದೇಶದ ಸ್ವಾರ್ಥವನ್ನು ಸಾಧಿಸುವುದು; ದೇಶದ ಮಾನ, ಗೌರವ, ವೃದ್ಧಿಗಳಿಗಾಗಿ ಕಾದಾಡುವುದು. ಒಮ್ಮೊಮ್ಮೆ ದೇಶವಾಸಿಗಳ ಕರ್ತವ್ಯ: ಅಗತ್ಯವುಂಟಾದರೆ ಆ ಯುದ್ಧದಲ್ಲಿ ಅಂಜಿಕೆಯಿಲ್ಲದೆ ಪ್ರಾಣತ್ಯಾಗಕ್ಕೂ ಕೂಡ ಅಣಿಯಾಗಿ ನಿಲ್ಲುವುದೂ ವೀರನ ಧರ್ಮ; ಎಂಬ **ಕರ್ತವ್ಯ ಬುದ್ಧಿಯೂ ಜಾತೀಯ ಭಾವದ ಪ್ರಧಾನ ಲಕ್ಷಣ. ಜಾತೀಯತೆಯು ರಾಜಸಿಕಭಾವ; ಸ್ವದೇಶ ಪ್ರೀತಿಯು** ಸಾತ್ವಿಕ. ಸ್ವತಃದ 'ಅಹಮ್ಮ'ನ್ನು ದೇಶದ 'ಅಹಮ್ಮ'ನಲ್ಲಿ ವಿಲೀನಗೊಳಿಸ ಬಲ್ಲವನು ಆದರ್ಶ ದೇಶಪ್ರೇಮಿ; ಆದರೆ ಸ್ವತಃದ 'ಅಹಮ್ಮ'ನ್ನು ಸಂಪೂರ್ಣ ಸ್ವತಂತ್ರವಾಗಿಟ್ಟು ಅದರ ಮೂಲಕ ದೇಶದ 'ಅಹಮ್ಮ'ನ್ನು ಬೆಳೆಸುವವನು ಆದರ್ಶ ಜಾತೀಯತಾಯುಕ್ತನು.

ಆ ಕಾಲದ ಭಾರತೀಯರು ಜಾತೀಯ ಭಾವಶೂನ್ಯರು. ಅವರು ಎಂದೂ ಜಾತಿಹಿತವನ್ನು ಲೆಕ್ಕಿಸಲಿಲ್ಲವೆಂದು ನಮ್ಮ ಅಭಿಪ್ರಾಯವಲ್ಲ; ಆದರೆ ಜಾತಿಹಿತಕ್ಕೂ ಆತ್ಮಹಿತಕ್ಕೂ ಎಳ್ಳಷ್ಟೇ ವಿರೋಧವಾದರೂ ಕೂಡ ಜಾತಿ ಹಿತವನ್ನು ಬದಿಗೊತ್ತಿ ಸ್ವಹಿತವನ್ನು ಸಾಧಿಸುತ್ತಿದ್ದರು. **ಐಕ್ಯದ ಅಭಾವಕ್ಕಿಂತಲೂ ಈ ಜಾತೀಯತೆಯ ಅಭಾವವೇ ನಮ್ಮ ಅಭಿಪ್ರಾಯದಲ್ಲಿ ಮಹತ್ವಾತ್ಮಕ ದೋಷವು.** ಜಾತೀಯಭಾವವು ದೇಶದಲ್ಲಿ ಪೂರ್ಣವಾಗಿ ವ್ಯಾಪಿಸಿದರೆ ಈ [illegible] ಭಿನ್ನ ಭೇದಗಳಿಗಾಗರವಾದ ದೇಶದಲ್ಲಿಯೂ ಕೂಡ ಐಕ್ಯದ ಉದಯವಾಗುವದು. ಬರೀ 'ಐಕ್ಯ [illegible]' ದು ಕೂಗಿಕೊಂಡ ಮಾತ್ರಕ್ಕೆ ಐಕ್ಯದ ಸಂಭವವಿಲ್ಲ. ಇದುವೆ ಇಂಗ್ಲಿಷರ ಭಾರತ ವಿಜಯದ ಪ್ರಧಾನ ಕಾರಣವು.

ಅಸುರ ಅಸುರರಲ್ಲಿಯೇ ತಿಕ್ಕಾಟವೇನೋ ಆಯಿತು; ಆದರೆ ಜಾತೀಯತೆಯುಳ್ಳ ಐಕ್ಯಪ್ರಾಪ್ತರಾದ ಅಸುರರು, ಜಾತೀಯ ಭಾವಶೂನ್ಯರೂ ಐಕ್ಯಹೀನರೂ ಇದ್ದ ಸಮಾನ ಗುಣ ವಿಶಿಷ್ಟ ದೈತ್ಯರನ್ನು ಸೋಲಿಸಿದರು. ಸೃಷ್ಟಿಕರ್ತನ ನಿಯಮವೇನೆಂದರೆ,— ಯಾವನು ಶಕ್ತಿವಂತನೂ ದಕ್ಷನೂ ಅವನೇ ಮಲ್ಲಗಾಳಗದಲ್ಲಿ ಜಯಶಾಲಿ; ಯಾವನು ವೇಗಶಾಲಿಯೂ ಸಹಿಷ್ಣುವೂ ಅವನೇ ಓಟದ ಸ್ಪರ್ಧೆಯಲ್ಲಿ ಮೊದಲು 'ಪಣ್ಕರಿಗೆ' ಯನ್ನು ಮುಟ್ಟತಕ್ಕವನು. ಸಚ್ಚರಿತ್ರನೇ ಆಗಲಿ ಪುಣ್ಯವಂತನೇ ಆಗಲಿ ಯಾವುದೇ ಜ್ಞಾನವಿಲ್ಲದೆ 'ಕುಸ್ತಿ'ಯಲ್ಲಿ ಗೆಲ್ಲಲಾರರು; ಉಪಯುಕ್ತ ಶಕ್ತಿಯು ಅಗತ್ಯ ಹಾಗೆಯೇ— [illegible] ಆವ ಜಾತಿ [illegible] [illegible]

[illegible] ಆವ ಜಾತಿ [illegible] !!!

ರಾಜನೀತಿಯ ದೃಷ್ಟಿಯಿಂದ ನೋಡಿದರೆ ಇದುವೆ ಭಾರತ—ವಿಜಯದ ಶ್ರೇಷ್ಠ ವಿವರಣೆ; ಆದರ ಬದಲಿಗೆ ಇನ್ನೊಂದು ಆಳವಾದ ಸತ್ಯವು ಕೂಡಿಕೊಂಡಿದೆ. ತಾಮಸಿಕ ಅಜ್ಞಾನವು, ರಾಜಸಿಕ ಪ್ರವೃತ್ತಿಯೂ ಭರತ ಖಂಡದಲ್ಲಿ ಬಹಳವಾಗಿ ಪ್ರಬಲಿಸಿದ್ದವೆಂದು ಹೇಳಲಾಗಿದೆಯಷ್ಟೆ. ಈ ಅವಸ್ಥೆಯು ಪತನಕ್ಕೆ ಅಗ್ರಗಾಮಿಯಾದ ಅವಸ್ಥೆ. ರಜೋಗುಣ— ಸತ್ವದಿಂದ ರಾಜಸಿಕ ಶಕ್ತಿಯು ವಿಕಾಸ; ಆದರೆ ಅನಿಯಂತ್ರಿತವಾದ ರಜಸು ಶೀಘ್ರ ತಮೋಮಯವಾಗುವದು. ಉದ್ಧತವಾದ ಸಂಯಮವಿಹೀನ ರಾಜಸಿಕ ಚೇಷ್ಟೆಯು ಬಹು ಬೇಗನೆ ತಗ್ಗಿ, ದಣಿದು ಅಪ್ರವೃತ್ತಿ, ಶಕ್ತಿಹೀನತೆ, ವಿಷಾದ ಹಾಗೂ ನಿಶ್ಚೇಷ್ಟತೆಯಲ್ಲಿ ಕೊನೆಗಾಣುವದು. ಸತ್ವಮಯವಾದರೇನೇ ರಜಃಶಕ್ತಿಯು ಸ್ಥಿರ. ಸಾತ್ವಿಕ ಭಾವವು ಒಂದು ಜಾತಿಗೆ ಇಲ್ಲವಿದ್ದರೂ ಸಾತ್ವಿಕ ಆದರ್ಶವು ಅಗತ್ಯ. ಆ ಗುರಿಯಿಂದಲೇ ರಜಃಶಕ್ತಿಗೂ ಸಂಯಮಿತವೂ ಸ್ಥಾಯೀಬಲವೂ ಪ್ರಾಪ್ತವೂ ಆಗುತ್ತದೆ. ಆ ಕಾಲವು ಇಂಗ್ಲಿಷರ ಸಾತ್ವಿಕ ಆದರ್ಶ ಸ್ವರೂಪವಾಗಿ ಸ್ವಾಧೀನತೆಯೂ ಸುಶೃಂಖಲತೆಯೂ ಇದ್ದುದರಿಂದಲೇ ಅವರು ಅವುಗಳ ಬಲದಿಂದ ಜಗದಲ್ಲಿ ಪ್ರಮುಖರು ಹಾಗೂ ವಿಜಯಿಗಳು. [illegible] ಶತಮಾನದಲ್ಲಿ ಪರೋಪಕಾರ ಪ್ರೀತಿಯೂ ಜಾತಿಯಲ್ಲಿ ಜಾಗ್ರತವಾಗಿತ್ತು. ಅದರ ಬಲದಿಂದ ಇಂಗ್ಲೆಂಡವು ಜಾತೀಯ ಮಹತ್ವದ ಚರಮಾವಸ್ಥೆಯನ್ನು ಮುಟ್ಟಿದ್ದಿತು. ಬಳಿಕ ಯುರೋಪದಲ್ಲಿ ಯಾವ ಜ್ಞಾನಕ್ಕೆ ಹಸಿದು [illegible] ಅದರ ಪ್ರಬಲವಾದ ಪ್ರೇರಣೆಯಿಂದ ಪಾಶ್ಚಾತ್ಯ ಜಾತಿಯು ನೂರು ಗಟ್ಟಲೆ ವೈಜ್ಞಾನಿಕ ಸಂಶೋಧನೆಗಳನ್ನು ಮಾಡುತಿರೆ, ಎಷ್ಟೋ ಜ್ಞಾನ ಲಾಭಕ್ಕಾಗಿಯೂ ನೂರು ಗಟ್ಟಲೆ ಜನರು ಪ್ರಾಣತ್ಯಾಗಕ್ಕೂ ಕೂಡ ಸಿದ್ಧರಾಗುವಂತಾಯಿತೋ, ಆ ಬಲಶಾಲಿಯಾದ ಸಾತ್ವಿಕ ಜ್ಞಾನ ತೃಷ್ಣೆಯು ಇಂಗ್ಲ ಜಾತಿಯಲ್ಲಿ ವಿಕಸಿತವಾಗಿದ್ದಿತು. ಈ ಸಾತ್ವಿಕ ಶಕ್ತಿಯಿಂದ ಇಂಗ್ಲಿಷರು ಬಲವಾನರಾಗಿದ್ದರು. ಈ ಸಾತ್ವಿಕ ಶಕ್ತಿ ಈಗ ಕವೆಯುತ್ತ ನಡೆದಿದೆಯೆಂದೇ ಇಂಗ್ಲಿಷರ ಪ್ರಾಧಾನ್ಯವೂ, ತೇಜವೂ ಶೌರ್ಯವೂ ಕ್ಷೀಣವಾಗಿ, ಭಯ ವಿಷಾದಗಳೂ ಸ್ವಶಕ್ತಿಯ ಮೇಲೆ ಅವಿಶ್ವಾಸ ವೃದ್ಧಿಯೂ ಆಗುತ್ತನಡೆದಿದೆ. ಸಾತ್ವಿಕ ಆದರ್ಶ ಭ್ರಷ್ಟವಾದ ರಜಃಶಕ್ತಿಯು ತಮೋಮುಖವಾಗುತ್ತದೆ. ಆದರೆ ಇದಕ್ಕೆ ಪ್ರತಿಯಾಗಿ ಭಾರತೀಯರು 'ಮಹಾನ ಸಾತ್ವಿಕ ಜಾತಿ'ಯೆನಿಸಿದ್ದರು; ಆ ಸಾತ್ವಿಕವಾದ ಬಲ ಮತ್ತು ಜ್ಞಾನದ [illegible], ಶೌರ್ಯ ಹಾಗೂ ತೇಜಸ್ಸಿನಲ್ಲಿಯೂ, ಅವರು ಹೋಲಿಕೆಯಿಲ್ಲದವರಾಗಿದ್ದರು; ಮತ್ತು ಐಕ್ಯಹೀನರಾಗಿಯೂ ಸಾವಿರಾರು ವರುಷಗಳಿಂದ ವಿದೇಶೀಯ ಆಕ್ರಮಣವನ್ನು ತಡೆಯುವಷ್ಟು ಸಮರ್ಥರಾಗಿದ್ದರು. ಕೊನೆಗೆ ರಜೋವೃದ್ಧಿಯಾಗಿ ಸತ್ವ ಲೋಪವಾಗ ಹತ್ತಿತು. ಮುಸಲ್ಮಾನರ ಬರವಿನ ಕಾಲದಲ್ಲಿ ಜ್ಞಾನದ ವಿಸ್ತಾರವು ಕಮ್ಮಿಯಾಗ ಹತ್ತಿತು, ಆಗ ರಜಃಪ್ರಧಾನವಾದ ರಜಪೂತ ಜಾತಿಯು ಭಾರತ ಸಿಂಹಾಸನದ ಮೇಲಿತ್ತು; ಉತ್ತರ ಹಿಂದುಸ್ಥಾನದಲ್ಲಿ ಆತ್ಮಕಲಹ ಪ್ರಾಧಾನ್ಯವಾದ ಯುದ್ಧ ವಿಗ್ರಹಗಳ ಸಂದಣಿ; ಬಂಗಾಲದಲ್ಲಿ ಬೌದ್ಧ ಧರ್ಮವು ಅವನತಿ ಹೊಂದಿದ್ದರಿಂದ ತಾಮಸಿಕ ಭಾವದ ಪ್ರಾಬಲ್ಯ. ಆಗ ಅಧ್ಯಾತ್ಮ ಜ್ಞಾನವು ದಕ್ಷಿಣ ಹಿಂದುಸ್ಥಾನದಲ್ಲಿ ಆಶ್ರಯ ಹೊಂದಿತು. ಆ ಸತ್ವ ಬಲದಿಂದ ಎಷ್ಟೋ ದಿನ ಸ್ವಾಧೀನತೆಯನ್ನು ಕಾಯ್ದುಕೊಳ್ಳಲಿಕ್ಕೆ ದಕ್ಷಿಣ ಭಾರತವು ಸಮರ್ಥವಾಗಿದ್ದಿತು. ಜ್ಞಾನ ತೃಷ್ಣೆಯು ಹಾಗೂ ಜ್ಞಾನದ ವೇಳ್ಮೆಗೆ ತಡೆಯಾಗ ಹತ್ತಿತು. ಅವಕ್ಕೆ ಬದಲು ಪಾಂಡಿತ್ಯಕ್ಕೆ ಮಾನ ಮನ್ನಣೆಗಳಾಗಹತ್ತಿದವು. ಅಧ್ಯಾತ್ಮಿಕ ಜ್ಞಾನ, ಯೋಗ ಶಕ್ತಿ ವಿಕಾಸ ಹಾಗು ಅಭ್ಯಂತರ ಅನುಭವ ಇವುಗಳ

ಸ್ಥಳದಲ್ಲಿ ತಾಮಸಿಕ ಪೂಜೆಯೂ, ಸಕಾಮ ರಾಜಸಿಕ ವ್ರತೋದ್ಯಾಪನೆಗಳೂ ಬಹಳವಾಗಿ ಬೆಳೆದವು. ಸಶಾಸ್ತ್ರವು ಧರ್ಮಗಳು ಬಲ್ಲವಾಗಲು ಜನರು ಬಾಹ್ಯಿಕ ಆಚಾರ ಮತ್ತು ಕ್ರಿಯಾ ಕರ್ಮಗಳನ್ನು ಪೆಟ್ಟು ಕೊಡಹತ್ತಿದರು. ಈ ಬಗೆಯ ಜಾತಿಧರ್ಮ ಲೋಪದಿಂದಲೇ ಗ್ರೀಕ, ರೋಮ, ಮಿಸರ (ಇಜಿಪ್ತ), ಅಸಿರಿಯಾ ಮೊದಲಾದವುಗಳು ಮೃತವಾದವು; ಆದರೆ ಸನಾತನ ಧರ್ಮಾವಲಂಬಿಯಾದ ಆರ್ಯ ಜಾತಿಯಲ್ಲಿ ಆ ಸನಾತನ ಧರ್ಮದ ನಡುನಡುವೆ ಸಂಜೀವನೀ ಸುಧಾಧಾರೆಗಳು ಬೀಳುತ್ತಿರುವ ಕಾರಣ ರಕ್ಷಿಸಲ್ಪಡುತ್ತಿದ್ದು ಮಧ್ವಾಚಾರ್ಯ, ಶಂಕರ, ರಾಮಾನುಜ, ಚೈತನ್ಯ, ನಾನಕ, ರಾಮದಾಸ, ತುಕಾರಾಮ ಮೊದಲಾದವರು ಆ ಅಮೃತವನ್ನೇ ಸುರಿಸಿ ಸನಾತನ ಭಾರತ ದೇಶವನ್ನು ಕಾಪಾಡಿಕೊಂಡರು. ಒಟ್ಟಿಗೂ ರಜಸ್ಸಿನ ಪ್ರವಾಹವು ಬಹಳ ವೇಗದಿಂದ ಹರಿಯುತ್ತಿತ್ತು. ಆ ವೇಗದಲ್ಲಿ ಉತ್ತಮರೂ ಅಧಮರಾದರು; ಸಾಧಾರಣ ಜನರಲ್ಲಿ ಶಂಕರರ ಜ್ಞಾನದಿಂದ ತಾಮಸಿಕ ಭಾವದ ಸಮರ್ಥನೆಯಾಯಿತು; ಚೈತನ್ಯ (ಗೌರಾಂಗದೇವ) ರ ಪ್ರೇಮ ಧರ್ಮವು ಘೋರ ತಾಮಸಿಕ ನಿಷ್ಕ್ರಿಯತೆಯಲ್ಲಿ ಪರಿಣಮಿಸಿತು; ರಾಮದಾಸರ ಶಿಕ್ಷಣವನ್ನು ಪಡೆದ ಮಹಾರಾಷ್ಟ್ರೀಯರು ಮಹಾರಾಷ್ಟ್ರ ಧರ್ಮವನ್ನು ಮರೆತು ಸ್ವಾರ್ಥ ಸಾಧನೆಯಲ್ಲಿಯೂ, ಒಳ ಜಗಳಗಳಲ್ಲಿಯೂ ಶಕ್ತಿಯನ್ನು ಕ್ಷಯ ಮಾಡಿ ಬಳಸಿ ಶಿವಾಜಿ ಮತ್ತು ಬಾಜೀರಾಯನಿಂದ ಗಳಿಸಿಗೊಂಡ ಸಾಮ್ರಾಜ್ಯವನ್ನು ಹಾಳು ಮಾಡಿದರು. ಹದಿನೆಂಟನೇ ಶತಮಾನದಲ್ಲಿ ಈ (ರಜಸ್ಸಿನ) ಪ್ರವಾಹವು ಪೂರ್ಣ ವೇಗದಿಂದ ಹರಿಯಿತು. ಸಮಾಜವೂ ಧರ್ಮವೂ ಆಗ ಕೆಲವು ಜನ ಆಧಿಭೌತಿಕ ವಿಧ್ವಂಸ ಕಾರ್ಯದ ಕೈಗೆ ಸಿಕ್ಕಿಕೊಂಡವು; ತೋರಿಕೆಯ ಕ್ರಿಯಾ ಕರ್ಮಗಳ ಆಡಂಬರವೇ ಧರ್ಮವೆಂದು ಹೆಸರಾಯಿತು; ಆರ್ಯ ಜ್ಞಾನವು ಲೋಪವಾಗಿ ಆರ್ಯ ಚರಿತ್ರವು ವಿನಷ್ಟವಾಯಿತು. ಸನಾತನ ಧರ್ಮವು ಸಮಾಜವನ್ನು ತ್ಯಾಗ ಮಾಡಿ ಸನ್ಯಾಸಿಗಳೊಡನೆ ಕಾಡು ಸೇರಿತು; ಭಕ್ತರ ಹೃದಯದಲ್ಲಿ ಅಡಗಿ ಕೊಂಡಿತು !!!

ಆಗ ಭಾರತ ದೇಶವು ಘೋರ ತಾಮಸಿಕ ಅಂಧಃಕಾರದಲ್ಲಿ ಮುಚ್ಚಿ ಮರೆಯಾಗಿದ್ದಿತು; ರಾಜಸಿಕ ಪ್ರವೃತ್ತಿಯು ಬಾಹ್ಯಿಕ ಧರ್ಮದ ಮರೆಯಲ್ಲಿದ್ದು ಸ್ವಾರ್ಥ, ಪಾಪ, ದೇಶದ ಅಕಲ್ಯಾಣ, ಪರ ಪರ ಹಾನಿ ಮೊದಲಾದವುಗಳನ್ನು ಬಹು ವೇಗದಿಂದ ಸಾಗಿಸುತ್ತಿದ್ದಿತು. ದೇಶದಲ್ಲಿ ಶಕ್ತಿಯ ಅಭಾವವೇನೂ ಇರಲಿಲ್ಲ; ಆದರೆ ಆರ್ಯಧರ್ಮ ಲೋಪದಿಂದ ಆ ಶಕ್ತಿಯು ಆತ್ಮರಕ್ಷಣೆಗೆ ಅಸಮರ್ಥವಾಗಿ ಆತ್ಮ ವಿನಾಶಕ್ಕೆ ಅನುಕೂಲವಾಯಿತು. ಕೊನೆಗೆ ಇಂಗ್ಲಿಷರ ಆಸುರಿಕ ಶಕ್ತಿಯು ಇದಿರಿಗೆ ಸೋತು ಭಾರತದ ಆಸುರಿಕ ಶಕ್ತಿಯು ಕ್ಷಣಬಾಳು ಬದ್ಧವಾಗಿ ಮೃತಪ್ರಾಯವಾಯಿತು. ಭಾರತ ಖಂಡವು ಸಂಪೂರ್ಣವಾಗಿ ತಮೋಭಾವದ ಹೊಡೆಯ ಮೇಲೆ ನಿದ್ರಿಸುತ್ತ ಬಿದ್ದುಕೊಂಡಿತು. ಅಪ್ರಕಾಶವೂ, ಅಪ್ರವೃತ್ತಿಯೂ, ಅಜ್ಞಾನವೂ, ನಿರಾಶೆಯತನವೂ, ಆತ್ಮವಿಶ್ವಾಸದ ಅಭಾವವೂ (ತನ್ನಲ್ಲಿ ಕನಿಷ್ಠ ನಂಬುಗೆಯಿಲ್ಲದಿರುವುದು), ಪರಾವಲಂಬಿತನವೂ, ದಾಸ್ಯ ಪ್ರೀತಿಯೂ, ಪರಧರ್ಮ ಸೇವೆಯೂ, ಇತರರನ್ನು ಅನುಕರಿಸುವುದೂ (ಹಾಗುಕರಣವೂ), ಇನ್ನೊಬ್ಬರ ಮುಟ್ಟಿಯಲ್ಲಿ ತನ್ನ ಮುಕ್ತಿಯನ್ನು ಹುಡುಕುವುದು, ವಿಷಾದವೂ, ಸ್ವನಿಂದೆಯೂ, ಕ್ಷುದ್ರ ವಾಸನೆ, ಆಲಸ್ಯವೂ ತಮೋಭಾವವನ್ನು ವ್ಯಕ್ತಗೊಳಿಸುವ ಗುಣಗಳು. ಹದಿನೆಂಟನೆಯ ಶತಮಾನದಲ್ಲಿ ಇವುಗಳಲ್ಲಿ ಯಾವದು ಕೊರತೆಯಿತ್ತು ??? ಆ ಶತಮಾನದ ಎಲ್ಲ ಚಲನವಲನಗಳೂ ಈ ಗುಣಗಳ ಪ್ರಾಬಲ್ಯದ ಮೂಲಕ ತಮೋಬಲದ ಚಿಹ್ನೆಗಳಿಂದ ಎಲ್ಲೆಲ್ಲಿಯೂ ಮುದ್ರಿತವಾಗಿದ್ದವು !!!

ಕನ್ನಡಿಗರೇ, ಎಚ್ಚರಿಕೆ !

ಪದವಿಗಳ ಹುಚ್ಚಿಗೆ ಬೀಳಬೇಡಿ. ನಿಖಿಲ ಭಾರತ ಸಾಹಿತ್ಯ ಸಂಘದ ಬಗ್ಗೆ ಸಂಶಯ.

ಇತ್ತೀಚೆಗಾಗಿ ಕರ್ನಾಟಕದಲ್ಲಿ ಪದವಿಗಳು ಬಹು ಅಗ್ಗವಾಗ ಹತ್ತಿವೆ. ಕಲಕತ್ತೆಯ ನಿಖಿಲ ಭಾರತ ಸಾಹಿತ್ಯ ಸಂಘದವರು ದುಡ್ಡು ಗಳಿಸಲಿಕ್ಕೆ ಒಂದು ಯುಕ್ತಿಯನ್ನು ತೆಗೆದಂತೆ ಕಾಣುತ್ತದೆ. ಈ ಸಂಘದ ಬಗ್ಗೆ ಯಾವತ್ತೂ ನಿಜವಾದ ಸಂಗತಿಗಳು ತಿಳಿಯದ ಹೊರತಾಗಿ ಅವರಿಂದ ಪದವಿಗಳನ್ನು ಸ್ವೀಕರಿಸುವ ಹವ್ಯಾಸಕ್ಕೆ ಯಾರೂ ಹೋಗಬಾರದಾಗಿ ಎಚ್ಚರಿಕೆ ಕೊಡುತ್ತೇವೆ. ಈ ಸಂಘದ ವಿಷಯಕ್ಕೆ ನಮಗೆ ಸಂಶಯ ಬಂದಿದೆ. ಅದರ ಕಾರಣವು ಹೀಗಿದೆ:— ಬಾಗಲಕೋಟೆಯಲ್ಲಿ “ಶ್ರೀ ಕೃಷ್ಣಸಂದೇಶ” ವೆಂಬ ಮಾಸ ಪತ್ರಿಕೆಯನ್ನು ಹಿಂದಕ್ಕೆ ತೆಗೆಯುತ್ತಿದ್ದ ವೇ॥ ಶ್ರೀನಿವಾಸಾಚಾರ್ಯ ಬುರ್ಲಿಯವರು ಈ ಸಂಘದವರಿಗೆ ಅವರ ಉದ್ದೇಶ ಪತ್ರಿಕೆ ಮೊದಲಾದವುಗಳನ್ನು ಕಳಿಸಲಿಕ್ಕೆ ಒಂದು ಪತ್ರ ಹಾಕಿದರು. ಈ ವಿಳಾಸದವರಾರೂ ಅಲ್ಲಿ ಇಲ್ಲವೆಂದು ಅದು ಮೃತಪತ್ರಗಳ ಕಾರ್ಯಾಲಯದವರಿಂದ ಮರಳಿ ಬಂದಿತು. ಕೆಲವು ಕಾಲದ ಮೇಲೆ ಅವರಿಗೆ “೨೭ ನೇ ಬಹುಬಾರ ಬೀದಿ” ಎಂಬ ವಿಳಾಸವು ದೊರೆತದ್ದರಿಂದ ಪುನಃ ಶ್ರೀ. ಬುರ್ಲಿಯವರು ಅಲ್ಲಿಗೆ ಪತ್ರ ಬರೆದು, ತಾವು “ಶ್ರೀ ಕೃಷ್ಣಸಂದೇಶದ” ಸಂಪಾದಕರಿರುವೆನೆಂದೂ, ಸಂಸ್ಕೃತದಲ್ಲಿ ಕೆಲವು ಲೇಖಗಳನ್ನು ಬರೆದಿರುವೆನೆಂದೂ, ತಿಳಿಸಿ, ಈ ಸಂಘದ ಉದ್ದೇಶ, ಪಂಕ್ತಿಯ ನಿಯಮ, ಪದವಿಗಳನ್ನು ಕೊಡುವ ಪದ್ಧತಿ, ಮೊದಲಾದವುಗಳನ್ನು ತಿಳಿಸಲು ಕೇಳಿಕೊಂಡರು. ಕೂಡಲೇ “ವಿದ್ಯಾವಾಚಸ್ಪತಿ” ಎಂಬ ಪದವಿಯು ಕೊಡಲ್ಪಟ್ಟಿತು. ಶ್ರೀ. ಬುರ್ಲಿಯವರ ಗ್ರಂಥಗಳನ್ನೇನು ಈ ಸಂಘದವರು ನೋಡಿರಲಿಲ್ಲ. ಆದರೂ “ವಿದ್ಯಾವಾಚಸ್ಪತಿ” ಎಂಬ ಬಿರುದನ್ನು ಕೊಟ್ಟೇ ಬಿಟ್ಟರು !!! ಮೊದಲು ತಾವಿನಿಂದ ೭೦ ರೂ. ಶ್ರೀ. ಬುರ್ಲಿಯವರು ಕಳಿಸಿದರೆ, ಈ ಪದವಿಯು ಕಳಿಸಲ್ಪಡುವದೆಂದು ಆ ಪತ್ರದಲ್ಲಿ ಬರೆದಿದ್ದಾರೆ! ಶ್ರೀ. ಬುರ್ಲಿಯವರು ರುಪಾಯಿಗಳನ್ನು ತಂತಿಯಿಂದ ಮೊದಲು, ಕಳಿಸಿ, ಹಿಂದುಗಡೆ ತಮ್ಮ ಗ್ರಂಥಗಳನ್ನು ಪೋಸ್ಟಿನಿಂದ ಕಳುಹಿಸಿದರೆ ಸಲ್ಲುವದಂತೆ !!! ರುಪಾಯಿಗಳನ್ನು ಕಿಸೆಯಲ್ಲಿ ಹಾಕಿಕೊಂಡು, ಪದವಿಯನ್ನು ಕೊಟ್ಟು, ಅನಂತರ ಅವರ ಪಾಂಡಿತ್ಯ ಪರೀಕ್ಷೆಗಾಗಿ ಗ್ರಂಥಗಳನ್ನು ಈ ಸಂಘದವರು ಅವಲೋಕಿಸುವರು ! ಹೇಗಿದೆ ತಮಾಷೆ ? ಶ್ರೀ. ಬುರ್ಲಿಯವರು ಇದಕ್ಕೆ ಕೂಡಲೇ ಸಮ್ಮತಿಸಲಿಲ್ಲ. ಆ ಮೇಲೆ ಸಂಘದವರು ಮತ್ತೊಂದು ಪತ್ರವನ್ನು ಅವರಿಗೆ ಬರೆದು, ಕಡಿಮೆಯಾದರೆ ೩೦ ರೂ. ತಂತಿಯಿಂದ ಕಳಿಸಲು ಬೇಡಿಕೊಂಡರು. ತಂತಿಮನಿಯಾರ್ಡರ ನಮೂನೆಯನ್ನು ಸಹ ಬರೆದು ಪತ್ರದ ಸಂಗಡ ಕಳುಹಿಸಿದರು. ಇದಕ್ಕೆ ಶ್ರೀ. ಬುರ್ಲಿಯವರು ಉತ್ತರ ಕೊಡಲಿಲ್ಲ. ಆ ಮೇಲೆ ೭೦ ರೂ. ಬೆಲೆಯು ೫೦ ರೂಪಾಯಿಗೆ ಇಳಿಯಿತು. ತಂತಿಯ ಮನಿಯಾರ್ಡರ ಬಾರದ್ದರಿಂದ ಸಂಘದವರೇ ವಿ. ಪಿ. ಕಳಿಸಿದರು. ಅದು ನಿರಾಕರಿಸಲ್ಪಟ್ಟಿತು. ಸಂಘಕ್ಕೆ ಬಹು ನಿರಾಶೆಯಾಗಿ ಕಡೆಗೆ ಪದವಿಯ ಬೆಲೆ ಮತ್ತೆ ಇಳಿದು ೩೫ ರೂ. ಗೆ ವಿ. ಪಿ. ಬಂದಿತು. ಆದರೆ ಇದು ನೋಡಿ ! ಮೊದಲು ೭೦ ರೂ. ಗೆ ಒಂದೇ ಪದವಿ ಇದ್ದರೆ, ಈಗ್ಗೆ ೩೫ ರೂ. ಗಳಿಗೆ ಮೂರು ಪದವಿಗಳು !!! (೧) “ಕರ್ನಾಟಕ ಸಾಹಿತ್ಯ ರತ್ನ !” (೨) “ವಿದ್ಯಾವಾಚಸ್ಪತಿ” (೩) “ಕರ್ನಾಟಕ ವಾಙ್ಮಯ ಮಹೋದಧಿ !!!” ಆಚಾರ್ಯರು ವಿ. ಪಿ. ಪುನಃ ನಿರಾಕರಿಸಿದರು.

ಸಂಘದವರು ಆಚಾರ್ಯರ ಗ್ರಂಥಗಳನ್ನು ನೋಡಿಲ್ಲ; ಅವರ ಪರಿಚಯವಿಲ್ಲ; ಮೋರೆಯನ್ನು ಸಹ ನೋಡಿಲ್ಲ. ಆದರೂ ತಾವೆ

ಕನ್ನಡಿಗನ ಪ್ರಚಾರಕ್ಕಾಗಿ ಕರ್ನಾಟಕದಲ್ಲೆಲ್ಲ ಸಂಚಾರಕ್ಕೊಂದು ಧಾರವಾಡದ ಗೆಳೆಯರಗುಂಪಿನ ಗೆಳೆಯರಾದ ಶ್ರೀ ಸಂಗಮ ನಾರಾಯಣರಾಯರು ಹೊರಟಿದ್ದಾರೆ. ಅವರು ಈಗ್ಗೆ ನಿಧಾನ ಕರ್ನಾಟಕದಲ್ಲಿ ಸಂಚರಿಸುತ್ತಿರುವರು. ಅವರು ಹೋದ ಹೋದಲ್ಲೆಲ್ಲ ಕರ್ನಾಟಕದ ಅಭಿಮಾನಶಾಲಿಗಳು ಅವರಿಗೆ ಸಹಾಯ ಮಾಡದೇ ಮಾಡುವರೆಂಬುದಾಗಿ ನಮಗೆ ವಿಶ್ವಾಸವಿದೆ. ಅವರು "ಕನ್ನಡಿಗ"ನ ಪ್ರಚಾರಕ್ಕಾಗಿಯೇ ಹೊರಟಿದ್ದರಿಂದ ಚಂದಾ ಹಣವನ್ನು ಅವರಿಗೆ ಅವಶ್ಯವಾಗಿ ಸಲ್ಲಿಸಬೇಕು. ಇತ್ತ ಧಾರವಾಡದ ಗೆಳೆಯರೂ, ಅತ್ತ ಬೆಂಗಳೂರಿನ ತುಂಟರೂ ಮಹಾರಾಷ್ಟ್ರದಲ್ಲಿದ್ದ ಕನ್ನಡಿಗರೂ, ಮಂಗಳೂರಿನ ಕನ್ನಡಿಗರೂ, 'ಕನ್ನಡಿಗ'ನಿಗೆ ಒಂದಿಲ್ಲ ಒಂದು ರೀತಿಯಿಂದ ಸಹಾಯ ಮಾಡ ಹತ್ತಿದ್ದನ್ನು ಕಂಡು 'ಕನ್ನಡಿಗ'ನಿಗೆ ಆನಂದವಾಗಿದ್ದು ಸ್ವಭಾವಿಕ. ಈ ಆನಂದದ ಭರದಲ್ಲಿ ಇನ್ನೊಂದು ಸಂಗತಿಯನ್ನು ವಾಚಕರಿಗೆ ಅರುಹಬೇಕಾಗಿದೆ. ದಕ್ಷಿಣಆಫ್ರಿಕೆಯಲ್ಲಿರುವ ಕರ್ನಾಟಕದ ಸಹಾಸಿಕಸೋದರನು 'ಕನ್ನಡಿಗ'ನು ಜನ್ಮವೆತ್ತಿದ್ದನ್ನು ಕೇಳಿ ತಾನಾಗಿಯೇ ವಾರ್ಷಿಕ ಚಂದಾ ಸಲ್ಲಿಸಿ 'ಕನ್ನಡಿಗ'ನನ್ನು ಬರಮಾಡಿಕೊಂಡಿರುವನು. ಕರ್ನಾಟಕವನ್ನು ಬಿಟ್ಟು ದೂರ ಹೋಗಿ ಪರದೇಶದಲ್ಲಿದ್ದರೂ, ಕನ್ನಡನುಡಿಯನ್ನು ಮರೆಯದೇ ಮಮತೆಯಿಂದ ಮನೆಯಲ್ಲಿಯ ಕನ್ನಡ ಪತ್ರಿಕೆಯೊಂದನ್ನು ತರಿಸಿಕೊಂಡದ್ದು ಕನ್ನಡಿಗರ ಹೊಸ ಚೈತನ್ಯದ ಲಕ್ಷಣವಲ್ಲವೇ? ಪರದೇಶಕ್ಕೆ—ಅದೇಕೆ? ಪರಪ್ರಾಂತಕ್ಕೆ ಹೋದ ಕೂಡಲೆ ದೇಶಭಾಷೆಯನ್ನು ತಿರಸ್ಕರಿಸುವಂಥ ನಮ್ಮಲ್ಲಿಯ ಜನರು ಈ ಸಾಹಸಿಕನ ಮೇಲ್ಪಂಕ್ತಿಯನ್ನು ತೀಡಲಿ!

ಶ್ರೀ. ಸಾರೋದ್ಧಾರ ಪ್ರಕಾಶಕ ಮಂಡಳಿ ನೆಂಬ ದೊಂದು ಸಂಸ್ಥೆಯು ಕೆಲವು ವರ್ಷಗಳ ಹಿಂದೆ ಬಾಗಲಕೋಟೆಯಲ್ಲಿ ಸ್ಥಾಪಿಸಲ್ಪಟ್ಟಿದ್ದು, ಅದರ ಮುಖಾಂತರ 'ಸಾರೋದ್ಧಾರ' ಗ್ರಂಥವು ಪ್ರಕಟಿಸಲ್ಪಟ್ಟಿದೆ. ಈ ಊರಲ್ಲಿಯ ಪ್ರತಿಷ್ಠಿತ ಜನರು ಆ ಮಂಡಲದ ಘಟನೆಯಲ್ಲಿರುವವರಾಗಿ ಪ್ರಸಿದ್ಧ ಪತ್ರಿಕೆಯಿಂದ ತಿಳಿಯುತ್ತದೆ. ಈ ಮಂಡಲದವರು ಬಾಗಲಕೋಟ ಬ್ಯಾಂಕದಿಂದ ಸಾಲವನ್ನು ತೆಗೆದು ಆ ಗ್ರಂಥವನ್ನು ಪ್ರಕಟಿಸಿದರು. ಈಗ್ಗೆ ಸಾಲವನ್ನು ತೆಗೆದು ೭-೮ ವರ್ಷಗಳಾದರೂ, ಅದು ತೀರಿಸಲ್ಪಟ್ಟಿಲ್ಲ. ಬಡ್ಡಿಯನ್ನು ಕೊಡಲಿಕ್ಕೂ ಯಾರೂ ಜವಾಬದಾರಿಯನ್ನು ಹೊತ್ತಿಲ್ಲ. ಆದ್ದರಿಂದ ಬ್ಯಾಂಕಿನವರು ಕೋರ್ಟಿನಲ್ಲಿ ಆ ಮಂಡಲದ ವಿರುದ್ಧ ದಾವೇ ತಂದಿರುವರು. ಇದೇನೋ ಸ್ವಭಾವಿಕ. ಇನ್ನೂ ಕೋರ್ಟಿನ ತೀರ್ಮಾನವಾಗುವವರೆಗೆ ನಾವು ಈ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಶಕ್ಯವಿಲ್ಲ. ಆದ್ದರಿಂದ ಸಧ್ಯದಲ್ಲಿ ಸಾರೋದ್ಧಾರ ಗ್ರಂಥದ ಬಗ್ಗೆ ಅಭಿಮಾನವಿದ್ದ ಮಹಾಜನಗಳೆಲ್ಲ ಕೂಡಲೇ ಕಾರ್ಯದರ್ಶಿ ಶ್ರೀ. ಕೇಶವರಾವ ದೇಶಪಾಂಡೆಯವರಿಗೆ ಪತ್ರ ಬರೆದು ಗ್ರಂಥವನ್ನು ತ್ವರೆಯಿಂದ ಕೊಂಡು ಈ ಮಂಡಲದವರ ಭಾರವನ್ನು ಇಳಿಸಬೇಕಾಗಿ ಆಗ್ರಹಪೂರ್ವಕವಾಗಿ ಸೂಚಿಸುತ್ತೇವೆ. ಇದರ ಬೆಲೆ ೩ ರೂ. ಬ್ಯಾಂಕಿಗೆ ಕೊಡತಕ್ಕ ಸಾಲ ೧೩೦೦ ರೂ.

ಕರ್ಮವೀರ ಶ್ರೀ. ದಿವಾಕರರು ಬಂಧಮುಕ್ತರಾಗಿದ್ದಾರೆ. "ಕನ್ನಡಿಗ" ನಿಗೆ ಆನಂದವು. ಕರ್ನಾಟಕದ ತರುಣರು ಅನೇಕ ದಿನಗಳಿಂದ ಶ್ರೀ. ದಿವಾಕರರ ದಾರಿಯನ್ನು ನೋಡುತ್ತಲಿರುವರು. ಈಗ್ಗೆ ಕರ್ನಾಟಕದಲ್ಲಿ 'ಅಂಥ ಕೆಲಸ ಮಾಡಬೇಕೆಂದರೆ, ದಿವಾಕರರು ಬರಲಿ; ಇಂಥ ಕೆಲಸ ಮಾಡಬೇಕೆಂದರೆ, ಶ್ರೀ. ದಿವಾಕರರು ಬರಲಿ' ಎಂಬುದಾಗಿ ತರುಣರು ಕರ್ನಾಟಕದ ಸಮಸ್ಯೆಗಳನ್ನು ಹಾಗೆಯೇ ಇಟ್ಟಿರುವರು. ಇದರಿಂದ ಶ್ರೀ. ದಿವಾಕರರಲ್ಲಿ ತರುಣರ ವಿಶ್ವಾಸವು ಎಷ್ಟಿದೆಂಬುದೂ ಗೊತ್ತಾಗುವದು. ಹೊರಗೆ ಬಂದಕೂಡಲೇ ಶ್ರೀ. ದಿವಾಕರರ ಕೈಗೆ ಈಗ್ಗೆ ಶರೀರಸ್ವಾಸ್ಥ್ಯವು ಕಾಣುತ್ತಿರಬಹುದು. ಅವರು ಆರಂಭಕ್ಕೆ ಹೋಗುವಾಗಿದ್ದ ಉತ್ಸಾಹವು ಜನರಲ್ಲಿಲ್ಲ. ಈಗಿನ ಕಾರ್ಯಕ್ರಮಗಳೇ ಇಲ್ಲ. ಕರ್ನಾಟಕದ ಸ್ಥಿತಿಯಂತೂ ಬಹು ವಿಚಿತ್ರವಾಗಿದೆ. ಪ್ರಾಂತಿಕ ಕಾಂಗ್ರೆಸ ಕಮಿಟಿಯಲ್ಲಿ ಒಳ ಜಗಳವು ಹುಟ್ಟಿಗಿದೆ. ಮುಖಂಡರಲ್ಲಿ ತಾಳವಿಲ್ಲ. ಅಧಿಕಾರಾರೂಢರಾಗಿದ್ದ ಅನುಯಾಯಿಗಳಲ್ಲಿ ಅನೇಕರು ಬರಿ ಹೆಮ್ಮೆಯ ಮತ್ತು ಬಣ್ಣದ ಮಾತುಗಳಲ್ಲಿಯೂ ಹರಟೆಗಳಲ್ಲಿಯೂ ತಮ್ಮ ಪೌರುಷವನ್ನು ತೋರಿಸುತ್ತಿರುವರು. ಕರ್ನಾಟಕದ ಅಭಿಮಾನವು ಹೆಸರಿಗೆ ಮಾತ್ರ ಆದವಲ್ಲದೆ ಕರ್ನಾಟಕದಲ್ಲಿ ಕಾಂಗ್ರೆಸ್ಸಾಯಿತು. ಆದರೆ ಮುಂದೆ? ಈ ೬-೭ ತಿಂಗಳುಗಳಲ್ಲಿ ಯಾವ ಯಾವ ಮುಖಂಡರು ಎಲ್ಲೆಲ್ಲಿ ಸಂಚಾರ ಮಾಡಿದ್ದಾರೆ? ಯಾವ ಯಾವ ಮಹಾ ಕಾರ್ಯಗಳನ್ನು ಪೂರ್ತಿಗೊಳಿಸಿದ್ದಾರೆ? ಏನೂ ಮಾಡುವರಿದ್ದರೆ ಯಾಕೆ ಮಾಡಿಲ್ಲ? ಇವೇ ಮೊದಲಾದ ಸಂಗತಿಗಳನ್ನರಿತುಕೊಂಡು ಆಮೇಲೆ ಕರ್ನಾಟಕದ ಈಗಿನ ಪರಿಸ್ಥಿತಿಯನ್ನೆಲ್ಲ ಸೂಕ್ಷ್ಮರೀತಿಯಿಂದ ನಿರೀಕ್ಷಿಸಿ, ಸಂಯುಕ್ತ ಕರ್ನಾಟಕದ ನಾಡಿ ಜ್ಞಾನವಾಗದ ವಿನಹ ಶ್ರೀ. ದಿವಾಕರರು ಯಾವ ಕಾರ್ಯಕ್ಕೂ ಕೈಹಾಕಬಾರದಾಗಿ ಸೂಚಿಸುತ್ತೇವೆ.

ಮಹಾತ್ಮಾ ಗಾಂಧೀಯವರು ಈಗಿನ ರಾಜಕೀಯ ಪರಿಸ್ಥಿತಿಯ ಬಗ್ಗೆ ಆಳವಾದ ವಿಚಾರ ಮಾಡುತ್ತಿರುವರು. ಸತ್ಯಾಗ್ರಹವನ್ನು ಪ್ರಾರಂಭಿಸಬೇಕೆಂದು ಅವರ ಮತ. ಆದರೆ ಸತ್ಯಾಗ್ರಹವನ್ನು ಯಾವ ಪದ್ಧತಿಯಿಂದ ಪ್ರಾರಂಭಿಸಬೇಕು? ಎಲ್ಲಿ ಪ್ರಾರಂಭಿಸಬೇಕೆಂಬುದು ಗೊತ್ತಾಗಿಲ್ಲ. ಹಿಂದಕ್ಕೆ ರಾಷ್ಟ್ರದಲ್ಲಿ ಅಸಹಕಾರದ ಬಿರುಗಾಳಿಯು ಬೀಸುತ್ತಿರುವಾಗ್ಗೆ, ಮಹಾತ್ಮಾ ಗಾಂಧೀಯವರ ಹೆಸರು-ಅನುಯಾಯಿಗಳು ಬಹು ಸಂಖ್ಯಾಕರಾಗಿದ್ದು, ಅವರು ಅಸಹಕಾರ ತತ್ವದ ತಿರುಳನ್ನು ತಿಳಿಯದೇ ಬರೀ ಉತ್ಸಾಹಗೊಂಡು, ಮಹಾತ್ಮರಿಗೆ ಅನುಕೂಲವಾಗುವಂತೆ ಕೆಲವು ದಿನ ಮಾತುಗಳನ್ನಾಡುತ್ತ "ರಾಷ್ಟ್ರವೆಲ್ಲ ನಿಮ್ಮನ್ನೇ ಹಿಂಬಾಲಿಸುತ್ತಿದೆ, ಅಹಿಂಸಾ ವ್ರತವು ಸರಿಯಾಗಿದೆ; ನಮ್ಮೆಲ್ಲರ ಚಿತ್ತ ಎಚ್ಚರವು, ಚೆನ್ನಾಗಿ ಆಗಿದ್ದು, .. ಚಳವಳಿಯನ್ನು ಚೊಕ್ಕಟವಾಗಿ ನಡಿಸಬಲ್ಲೆವೆಂಬುದಾಗಿ ಬಾಯಿಬಡಕರಂತೆ ನಟಿಸಿದರು. ಅತ್ತ ಮಹಾತ್ಮರು ತುರಂಗವಾಸಿಯಾದಕೂಡಲೇ, ವಕೀಲರು ವಕೀಲಿಗೆ ಹೋದರು; ವಿದ್ಯಾರ್ಥಿಗಳು ಶಾಲೆಗೆ ಹೋದರು; ಹೀಗಾಗಿ ಜನರಲ್ಲಿಯ ವಿಶ್ವಾಸವು ಕಡಿಮೆಯಾಯಿತು. ಆದರೆ ಈಗಿನ ಪರಿಸ್ಥಿತಿಯು ಬೇರೆಯಿದೆ. ಉಪಯೋಗವಿಲ್ಲದ ತನ್ನ ಪರಿಯನ್ನು ಹಾವು ಹಿಂದಕ್ಕೆಸೆದು, ಹಗುರಾದ ಹೊಸ ಮೈಯಿಂದ ಮುಂದರಿಯುವಂತೆ, ಮಹಾತ್ಮರು ಹೋಸಹೋಗುವಂತೆ ಮಾತನಾಡಿದ ಮಂದ ಅನುಯಾಯಿಗಳೆಲ್ಲ ಹಿಂದಕ್ಕೆ ನಿಂತುದರಿಂದ, ಮಹಾತ್ಮರ ಸಲುವಾಗಿ ಜೀವವನ್ನೂ ಸಹ ಕೊಡಲು ಸಿದ್ಧರಾದ ಕೆಲವು ಜನ ನಿಜವಾದ ಶಿಷ್ಯರು ಮಾತ್ರ ಅವರ ಸುತ್ತಲಿರುವರು. ಈಗಿದ್ದ ಮಹಾತ್ಮರ ಅನುಯಾಯಿಗಳೆಂದರೆ ಆರಿಸಿ ತೆಗೆದ ಮುತ್ತುಗಳು. ಜಗತ್ತು ಬದಲಾಗಿದೆಯೆಂದು, ವಿಶ್ವತ್ವವನ್ನು ಬಿಕತಕ್ಕ ಶಿಷ್ಯರಿವರಲ್ಲ. ಆದುದರಿಂದ ಸ್ವಲ್ಪೇ ಜನರಿದ್ದರೂ, ಸತ್ಯಾಗ್ರಹವನ್ನು ಮಹಾತ್ಮರು ಪ್ರಾರಂಭಿಸಿದರೆ, ಅದಕ್ಕೆ ಕಡೆವರೆಗೆ ಜಯವು ಬರುವದು. ಬೆರಳಷ್ಟು ವೀರರು ಸಹಸ್ರಾವಧಿ ವೈರಿಗಳನ್ನು ಮುರಿಬಡಿದ ಉದಾಹರಣೆಗಳು ಇತಿಹಾಸದಲ್ಲಿವೆ. ಅಲ್ಲದೆ ಮಹಾತ್ಮರು ಒಂಟಿಗರಾಗಿ ಜನರಲ್ಲಿ ಉತ್ಸಾಹವಿಲ್ಲದ ಸಮಯದಲ್ಲಿ ಸಹ ಚಂಪಾರಣ್ಯ, ಖೇಡಗಳಲ್ಲಿ ಜಯಶೀಲರಾದದ್ದು ಯಾರಿಗೆ ಗೊತ್ತಿಲ್ಲ? ಆದುದರಿಂದ ಈಗಿನ ಪರಿಸ್ಥಿತಿಗೆ ಅನುಕೂಲವಾಗುವಂತೆ ಸತ್ಯಾಗ್ರಹದ ಕಾರ್ಯಕ್ರಮವು ಕಲ್ಪಿಸಲ್ಪಟ್ಟರೆ, ಕಳೆವಳದ ಅನುಯಾಯಿಗಳಿಂದ ಆ ಚಳವಳಕ್ಕೆ ಕಳೆಯೇರಿ, ಜಯದ ಕಳಸವು ಕೈಸೇರುವದನ್ನು ಕಾಣಬಹುದು.

ಚೀನದಲ್ಲಿಯು ಪರಿಸ್ಥಿತಿಯು ಸೂಕ್ಷ್ಮವಾಗಿದ್ದರೂ ಚೀನ ವು ಸ್ವತಂತ್ರ ವಿದ್ದರೂ ಸಾಮ್ರಾಜ್ಯ ರಾಷ್ಟ್ರಗಳ ಎದುರು ನಿಲ್ಲುವಷ್ಟು ಶಕ್ತಿಯು ಅವರಲ್ಲಿಲ್ಲ. ಬ್ರಿಟಿಶ ಮುತ್ಸದ್ದಿಗಳು ಒಂದೊಂದೇ ತಪ್ಪನ್ನು ಚೀನರ ಮೇಲೆ ಹೊರಿಸ ಹತ್ತಿದ ಜಂಜಿಕೆಯಿಂದ ಹೊಳೆಯುವದೇನೆಂದರೆ: ಜೊತ್ತು ಸಾಧಿಸಿ. ಚೀನರ ತಪ್ಪುಗಳನ್ನು ಚೀನರ ಉಡಿಯಲ್ಲಿಯೇ ಹಾಕಿ, ಅವರ ಮೇಲೆ ಯುದ್ಧ ಸಾರುವ ಪ್ರಸಂಗವನ್ನು ತರುವರು. ಹೀಗಾದ ಪಕ್ಷದಲ್ಲಿ ಬಂದರುಗಳೆಲ್ಲ ಬ್ರಿಟಿಶರವಶದಲ್ಲಿದ್ದುದರಿಂದಲೂ, ಇವರ ನೌಕಾಸೈನ್ಯವು ಸೊಗಸಾಗಿದ್ದದರಿಂದಲೂ ಚೀನರು ಅಷ್ಟೊಂದು, ಬಲಶಾಲಿಗಳಲ್ಲದ್ದರಿಂದಲೂ, ಚೀನದಲ್ಲಿ ಸಹ ಬ್ರಿಟೀಶರು ಕಾಲು ಚಾಚಲಿಕ್ಕೆ ಅನುಕೂಲವಾಗುವದು. ಎರಡನೇಯವರ ರಾಜ್ಯಗಳನ್ನು ವಶಮಾಡಿ ಕೊಳ್ಳುವದರಲ್ಲಿ [illegible] ಬ್ರಿಟಿಶರು ಈ ಸುಪ್ರಸಂಗವನ್ನು ಸುಮ್ಮನೇ ಹೋಗಗೊಡುವರೇ ?

ಯಕ್ಷಗಾನಗಳ ವಿಷಯವಾಗಿ ಇದೇ ಸಂಚಿಕೆಯಲ್ಲಿ ಬೇರೆ ಕಡೆಗೆ ಬರೆದ ಪತ್ರ್ಯವನ್ನು ಓದುಗರು [illegible] ಕನ್ನಡ ನಾಡಿನಲ್ಲಿ ಈ ಕಲೆಯು [illegible] ಸಿನಿಮಾಗಳಿಗೆ ಹೆದರಿ, ನಮ್ಮ ಹಳೆಯ ಕಲೆಗಳನ್ನು ದುರ್ಲಕ್ಷಿಸುವದು ಹಿತವಲ್ಲ. ಇದನ್ನು ಕಂಡು ಹಿಡಿದೆ ನಮ್ಮ ಮಂಗಳೂರಿನ ಮಿತ್ರರು ಯಕ್ಷಗಾನಗಳನ್ನು ಸುಶಿಕ್ಷಿತರು ನೋಡಿ ಲಕ್ಷಿಸುವಂತೆ ಪ್ರಯತ್ನಿಸುತ್ತಿರುವದು, ಪ್ರತಿಯೊಬ್ಬ ಕನ್ನಡಿಗನಲ್ಲಿ ಪರಮಾನಂದವನ್ನುಂಟು ಮಾಡುತ್ತಿರುವದು. ಈಗ್ಗೆ ಈ ಸಮಾಜದಲ್ಲಿ ಸಜ್ಜುಗೊಳಿಸುತ್ತಿರುವ ಆಟಗಳು ಸರಿಯಾಗಿ ಕೂಡಿದಮೇಲೆ ಯಕ್ಷಗಾನಗಳ ರುಚಿಯನ್ನು ಪುನಃ ಕರ್ನಾಟಕಸ್ಥರಿಗೆ ಹಚ್ಚುವದಕ್ಕಾಗಿ ಈ ಸಮಾಜದವರು "ಅಮೆರಿಕ ಟೂರ" ದಂತೆ ಕನ್ನಡನಾಡಿನಲ್ಲೆಲ್ಲ ಸಂಚಾರ ಮಾಡಬೇಕೆಂದು ಶ್ರೀ. ಉಳ್ಳಾಲ ನರಸಿಂಗರಾಯರಿಗೆ ಸೂಚಿಸುತ್ತೇನೆ.

ಗೊಂಬೆಯ ಆಟಗಳ ವಿಷಯವಾಗಿ ಇದೇ ಸಮಯದಲ್ಲಿ ಬರೆಯಬೇಕಾಗಿದೆ. ಉತ್ತರ ಕರ್ನಾಟಕದಲ್ಲಿ ೧೫–೨೦ ವರ್ಷಗಳ ಪೂರ್ವದಲ್ಲಿ ಈ ಆಟಗಳು ಆಗಾಗ್ಗೆ ನಡೆಯುತ್ತಿದ್ದವು. ರಾಣೇಬೆನ್ನೂರು ಹಾನಗಲ್ಲ ಪ್ರಾಂತದ ಈ ಆಟಗಳಿಗೆ ಮುಖ್ಯ ಕೂಟ. ಆದರೆ ಇತ್ತಿತ್ತಲಾಗಿ ಇವು ನಶ್ಶಂತೆ ಕಾಣುತ್ತಿದೆ. ಈ ಆಟಗಳನ್ನು ಉದ್ಧರಿಸುವದು ಅತ್ಯಾವಶ್ಯಕ. ಈಗಲಾದರೂ ಈ ಕಲೆಯಲ್ಲಿ ಪ್ರವೀಣರಾದ ಹಲಕೆಲವು ಹಳೇ ಜನರು ಜೀವಂತರಿದ್ದಾರೆ. ಮುದುಕರು ಮರೆಯಾಗುವದರೊಳಗಾಗಿ ಕನ್ನಡನಾಡಿನ ಅಭಿಮಾನವೂ ಈ ಕಲೆಯ ಬಗ್ಗೆ ಕಳಕಳಿಯೂ ಉಳ್ಳ ಜನರು, ಮುಂದೆ ಬಂದು, ನಮ್ಮ ಮಂಗಳೂರಿನ ಮಿತ್ರರು ಯಕ್ಷಗಾನವನ್ನು ಉದ್ಧರಿಸುವದಕ್ಕಾಗಿ ಸಮಾಜವನ್ನೇರ್ಪಡಿಸಿದಂತೆ, ರಾಣೇಬೆನ್ನೂರ ಹಾನಗಲ್ಲಿನ ಜನರೂ ತಮ್ಮಲ್ಲಿ ಈ ಗೊಂಬೆಯ ಆಟಗಳ ಕೂಟಗಳನ್ನೇರ್ಪಡಿಸಿ, ಈ ಹಳೆಯ ಕಲೆಯು ಉದ್ಧಾರವಾಗುವಂತೆ ಪ್ರಯತ್ನಿಸಬೇಕು. ಈ ಆಟಗಳನ್ನು ನಾಟಕ ಶಾಲೆಯಲ್ಲಿ ಊರೂರಿಗೆ ಹೋಗಿ ಆಡಿದರೆ ಈ ಕಲೆಯು ಪ್ರಸಾರವಾಗುವದಲ್ಲದೇ ಅನೇಕರ ಹೊಟ್ಟೆಯೂ ತುಂಬುವದು. ನೌಕರಿಯಿಲ್ಲ, ಹೊಟ್ಟೆಗಿಲ್ಲ. ಎಂದು ಬಾಯಿಬಡಿಯುವ ಜನರು ಇಂಥ ಉದ್ಯೋಗಗಳಿಗೆ ಕೈ ಹಾಕಿ ಉಪಜೀವನ ಸಾಧನಗಳನ್ನೇಕೆ ಸಾಧಿಸಬಾರದು ?

ಕರ್ನಾಟಕ ಏಕೀಕರಣ ಸಭೆ.

ಬಳ್ಳಾರಿಯಲ್ಲಿ ಜಿಲ್ಲಾ ಶಾಖೆ.

ಕಳೆದ ೨೨-೭-೩೫ ರಲ್ಲಿ ಬಳ್ಳಾರಿಯ ಪ್ರಮುಖರ ಸಭೆಯೊಂದು ಇಲ್ಲಿಯ ಗಣೇಶನ ಗುಡಿ ಹತ್ತರ ನೆರೆದಿತ್ತು. ಮ. ರಾ. ಪಿ. ಎಚ್. ರಂಗರಾವ ವಕೀಲ ಇವರು ಅಧ್ಯಕ್ಷರಾಗಿದ್ದು ಮ. ರಾ. ಕೆ. ಗುರುರಾಜರಾಯರು ಬಿ. ಎ. ಬಿ. ಎಲ್. ಹೈಕೋರ್ಟ ವಕೀಲ ಇವರು ಕರ್ನಾಟಕದ ಸದ್ಯದ ಪರಿಸ್ಥಿತಿಯನ್ನು ಕುರಿತು ಸುಮಾರು ಒಂದು ತಾಸಿನವರೆಗೂ ಬಹಳ ಕಳಕಳಿಯುಳ್ಳವರಾಗಿ ಭಾಷಣ ಮಾಡಿದರು. ಅನಂತರ ಮ. ಟಿ. ಎಚ್. ಎಂ. ಚಂದ್ರಶೇಖರ ಶಾಸ್ತ್ರಿ ಬಿ. ಎ. ಬಿ. ಎಲ್. ಇವರು ಕರ್ನಾಟಕದ ಸದ್ಯಸ್ಥಿತಿಯ ಮೇಲೆ ಭಾಷಣ ಮಾಡಿ. ಕರ್ನಾಟಕ ಏಕೀಕರಣದ ಅವಶ್ಯಕತೆಯನ್ನು ಜನರಿಗೆ ತಿಳಿಸಿ ಕೊಟ್ಟರು. ಅನಂತರ ಈ ಕೆಳಕಂಡ ಠರಾವು ಸರ್ವಾನುಮತದಿಂದ ಮಂಜೂರು ಮಾಡಲ್ಪಟ್ಟಿತು.

(೧) ಭಾಷಾವಾರ ಪ್ರಾಂತರಚನೆಯು ಅತ್ಯಾವಶ್ಯಕವಾದ್ದರಿಂದ, ಕರ್ನಾಟಕದ ಪ್ರತ್ಯೇಕ ಪ್ರಾಂತ ಇರುವದತ್ಯಾವಶ್ಯಕವೆಂದು, ಚಳವಳಿ ಮಾಡುವ ಉದ್ದೇಶ್ಯದಿಂದ ಈ ಬಳ್ಳಾರಿಯಲ್ಲಿ ಕರ್ನಾಟಕ ಏಕೀಕರಣದ ಉಪಸಂಘವನ್ನು ಸ್ಥಾಪಿಸುವದಾಗಿ ಈ ಸಭೆಯು ನಿರ್ಧರಿಸುತ್ತದೆ.

ಈ ಕೆಳಕಂಡ ಸದ್ಗೃಹಸ್ಥರು ಸದರಿ ಸಂಘದ ಕಾರ್ಯನಿರ್ವಾಹಕರಾಗಿರಬೇಕೆಂದು ನಿರ್ಧರಿಸಿರುತ್ತದೆ.

ಮ. ರಾ.	ಬಳೆ ಕನ್ನಬಸಪ್ಪನವರು.	ಅಧ್ಯಕ್ಷರು.
,, ,,	ದಾರದ ಕಲ್ಲಪ್ಪನವರು	ಉಪಾಧ್ಯಕ್ಷರು.
,, ,,	ಕೆ. ಗುರುರಾಜರಾಯರು ಬಿ. ಎ. ಬಿ. ಎಲ್.	
,, ,,	ಟಿ. ಎಚ್. ಎಂ. ಚಂದ್ರಶೇಖರಶಾಸ್ತ್ರಿ ,,	ಕಾರ್ಯದರ್ಶಿಗಳು.
,, ,,	ಕೆ. ಟಿ. ಶ್ರೀನಿವಾಸಾಚಾರ್ಯರು. ,,	

ಮ. ರಾ. ಶಿಂದಿ ಶಿದ್ದಪ್ಪನವರು. ಗೋನಿ ಗುಣಶಾಲಪ್ಪನವರು. ನವ್ರಿ ಹೆಣ್ಣುಬಸ್ಸನವರು. ಪಿ. ಎಚ್. ರಂಗರಾಯರು. ಪಿ. ಭೀಮರಾಯರು, ಹೈಕೋರ್ಟ ವಕೀಲರು, ಎಸ್. ಸಂಜೀವಾಚಾರ್ಯ ಬಿ. ಎ. ನಾಗೇಶಶಾಸ್ತ್ರಿಗಳು. ಸತ್ತೂರ ಗುರುಲಿಂಗಯ್ಯನವರು, ಅಣ್ಣಿ ದೊಡ್ಡಪ್ಪನವರು, ಶಿವಾ ಚನ್ನಬಸಪ್ಪನವರು. ಇವರುಗಳು ಕಾರ್ಯನಿರ್ವಾಹಕ ಸಂಘದ ಸದಸ್ಯರಾಗಿರತಕ್ಕದ್ದು.

ಇಲ್ಲಿಯ ಪುರಪಾಲಿಕ ಸಂಘದ ಸಭೆಯು (ಮುನಿಸಿಪಾಲಿಟಿ) ಮೊನ್ನೆ ೩೧-೭-೩೫ ರಲ್ಲಿ ನೆರೆದಿತ್ತು. ಅದರಲ್ಲಿ ಮ. ರಾ. ಗುಡದೂರು ತಿಮ್ಮಪ್ಪರವರ ಸೂಚನೆ ಹೊಂದಿದ ಠರಾವು ಅಂದರೆ "ಬಳ್ಳಾರಿಯಲ್ಲಿ ಅತ್ಯಾವಶ್ಯಕವಾಗಿರುವ ಕಾಲೇಜನ್ನು ಸರಕಾರದವರು ಆದಷ್ಟು ಜಾಗ್ರತೆಯಲ್ಲಿ ಸ್ಥಾಪಿಸಬೇಕೆಂತಲೂ, ಸದರಿ ಕಾಲೇಜನ್ನು ಸದ್ಯಕ್ಕೆ ಮದ್ರಾಸ್ ವಿಶ್ವವಿದ್ಯಾಲಯಕ್ಕೆ ಸೇರಿಸತಕ್ಕದ್ದೆಂದೂ ಸರ್ವಾನುಮತದಿಂದ ಮಂಜೂರು ಮಾಡಲ್ಪಟ್ಟಿತೆಂದು ತಿಳಿಸಲು ಸಂತೋಷವಾಗುತ್ತದೆ.

ಇದೇ ವಿಷಯ ೩೧—೭—೩೫ ರಲ್ಲಿ ಜರಗಿದ ಇಲ್ಲಿ ಡಿಸ್ಟ್ರಿಕ್ಟ ಬೋರ್ಡಿನ ಮೀಟಿಂಗಿನಲ್ಲಿ ಬಂದಿತ್ತು. ಆದರೆ ಚರ್ಚೆ ನಡೆದದ್ದರಿಂದ ಇದು ಮುಂದಿನ ತಿಂಗಳ ಮೀಟಿಂಗಿನ ಮುದ್ದತ್ತಿಗೆ ಹಾಕಲ್ಪಟ್ಟಿತು.

ಇಷ್ಟರಲ್ಲಿಯೇ ಕರ್ನಾಟಕ ಏಕೀಕರಣದ ಚಳವಳಿ ವಿಷಯವಾಗಿ ಇಲ್ಲಿಯ ಜನರಲ್ಲಿ ಜಾಗ್ರತೆಯನ್ನುಂಟುಮಾಡಲು ರಾವ್‌ಸಾಹೇಬ ಹಳಕಟ್ಟಿಯವರು, ಮ. ರಾ. ಕೌಜಲಗಿಯವರು, ಮ. ರಾ. ಕಡಪಾ ವಕೀಲರು, ಮ. ರಾ. ಬಸವನಾಳ ಪ್ರಿನ್ಸಿಪಾಲರು. ಮತ್ತು ಇತರ ಪ್ರಮುಖ ಜನರು ಇಲ್ಲಿಗೆ ಬರುವವರಾಗಿದ್ದಾರೆ.

ಇಲ್ಲಿಯ ಕೋರ್ಟು ಕಚೇರಿಗಳಲ್ಲಿ ಕನ್ನಡ ಭಾಷೆಯನ್ನು ನಡವಳಿಕೆಯಲ್ಲಿ ತರಲು ಸರಕಾರದವರನ್ನು ಪ್ರಾರ್ಥಿಸಲಿಕ್ಕೆ ಮಹಾಜನರ ಮಹಜೂರು ಒಂದು ಸಿದ್ಧವಾಗುತ್ತಲಿದೆ.

ಟಿ. ಎಚ್. ಎಂ. ಚಂದ್ರಶೇಖರ ಶಾಸ್ತ್ರಿ

ವಕೀಲ ಮತ್ತು ಕಾರ್ಯದರ್ಶಿ ಕರ್ನಾಟಕ ಏಕೀಕರಣ ಸಭೆ, ಬಳ್ಳಾರಿ

ಬಿನ್ನಹ.

ಈಗ್ಗೆ ನಾಲ್ಕು ತಿಂಗಳುಗಳಿಂದ “ಕನ್ನಡಿಗ”ನ ಸಂಚಿಕೆಗಳನ್ನು ಸ್ವೀಕರಿಸುತ್ತಿರುವ ಮಹನೀಯರೆಲ್ಲ, ನಮ್ಮಿಂದ ವಿ. ಪಿ. ಬರುವ ದಾರಿಯನ್ನು ನೋಡದೆ, ದಯವಿಟ್ಟು ಕೂಡಲೇ ಮನಿಯಾರ್ಡರದಿಂದ ಚಂದಾಹಣ ನಮಗೆ ಕಳುಹಿಸಬೇಕಾಗಿ ಸವಿನಯ ಪ್ರಾರ್ಥನೆಯಿದೆ. ಬಾಗಲಕೋಟೆಯು ಸಣ್ಣ ತಾಲೂಕಿನ ಸ್ಥಳವಾದ್ದರಿಂದ ದಿನಾಲು ೨೦ ರಕಿಂತ ಹೆಚ್ಚಾಗಿ ವಿ. ಪಿ. ಗಳನ್ನು ಅಂಚೆಖಾತೆಯವರು ಹಿಡಿಯುವದಿಲ್ಲ. ದಿನಕ್ಕೆ ೨೦ ರಂತೆ ೪ ಸಾವಿರ ಜನರಿಗೆ ವಿ. ಪಿ. ಕಳುಹಬೇಕಾದರೆ ೮-೧೦ ತಿಂಗಳುಗಳು ಬೇಕು. ಮೇಲಾಗಿ ವಿ. ಪಿ. ಯಿಂದ ಚಂದಾದಾರರಿಗೆ ೩ ಆಣೆ ಹೆಚ್ಚು ವೆಚ್ಚ ಬರುವದು. ಇದನ್ನು ಲಕ್ಷ್ಯದಲ್ಲಿ ತಂದು ಇನ್ನೂ ಚಂದಾಹಣ ಸಲ್ಲಿಸದೆಯಿದ್ದ ಚಂದಾದಾರರೆಲ್ಲ ಕೂಡಲೇ ಮನಿಯಾರ್ಡರದಿಂದ ೧-೧೩-೦ ಕಳುಹಬೇಕಾಗಿ ಬಿನ್ನಹ. ಈಗ್ಗೆ ಸಂಚಿಕೆಗಳನ್ನು ೩ ತಿಂಗಳವರೆಗೆ ಸ್ವೀಕಾರಮಾಡಿ ವಿ. ಪಿ. ಬಂದಾಗ್ಗೆ ಮಾತ್ರ ನಿರಾಕರಿಸಬಾರದಾಗಿ ವಿನಂತಿಯಿದೆ.

ವ್ಯವಸ್ಥಾಪಕ “ಕನ್ನಡಿಗ”

ಧಾತೂಪಧಾತು ರಸಮಹಾರಸಾದಿಖನಿಜದ್ರವ್ಯಾನಿಭಸ್ಮಾಃ

ಅಪೂರ್ವಸಂಧಿ) ವನಸ್ಪತಿ ರಸಾಗ್ನಿ ಯೋಗಸಂಪನ್ನಃ (ಸುಲಭದರ!!

ಔಷಧಿಗಳು.	ತೊಲೆ	ರೂ	ಔಷಧಿಗಳು.	ತೊಲೆ	ರೂ
ಅಭ್ರಕಭಸ್ಮ ೧೦೦೦ ಪುಟಿ	೧	೪೦	ತ್ರಿವಂಗಭಸ್ಮ-ಪೀತವರ್ಣ	೩	೩
,, ೫೦೦ ,,	೧	೨೦	ಸುವರ್ಣ ಮಾಕ್ಷಿಕಭಸ್ಮ	೫	೪
,, ೧೦೦ ,,	೧	೫	ನಾಗಭಸ್ಮ-ಶ್ವೇತ, ಪೀತ,	೩	೩
,, ನಿಶ್ಚಂದ್ರ	೨।	೪	ಮೃಗಶೃಂಗಭಸ್ಮ-ಶ್ವೇತ	೫	೩
ಲೋಹಭಸ್ಮ-ರಕ್ತವರ್ಣ	೩	೫	ಸುವರ್ಣರಾಜವಂಗೇಶ್ವರ	೩	೭
ಮಂಡೂರಭಸ್ಮ-ರಕ್ತವರ್ಣ	೩	೨	ಸಿದ್ಧಮಕರಧ್ವಜ-ಅನುಪಾನಮಿಶ್ರ ಗುಳಿಗೆಗಳು-೫೦	—	೫
ವಂಗಭಸ್ಮ-ಶ್ವೇತವರ್ಣ	೩	೩	ಪ್ರಾಚೀನ ಹೇಮಗರ್ಭ-ಮಾತ್ರಾ	೧	೧೦೦

ಔಷಧಿಗಳು ಪರೀಕ್ಷಾಂತ್ಯದಲ್ಲಿ ಸದೋಷವೆಂದು ಕಂಡುಬಂದಲ್ಲಿ ವಾಪಸು ಮಾಡಬಹುದು. ಎಲ್ಲಪ್ರಕಾರದ ಆಯುರ್ವೇದೀಯ ಔಷಧಿಗಳೂ, ಔಷಧೋಪಯೋಗಿ ದ್ರವ್ಯಗಳೂ ಸುಲಭ ಬೆಲೆಗೆ ದೊರಕುವವು.

ವೈದ್ಯ— ವಾದಿರಾಜ ಜಹಾಗೀರದಾರ ಇಲಕಲ್ಲ. ಜಿ. ವಿಜಾಪೂರ.

ಪ್ರಕಟಣೆ.

ಯಾವತ್ತು ಕನ್ನಡಿಗರಿಗೆ ವಿಜ್ಞಾಪನೆ ಮಾಡುವದೇನಂದರೆ:— ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿ ನೆರೆದ ೮ ನೇಯ ಶ್ರೀಮದ್ವೀರಶೈವ ತರುಣರ ಸಮ್ಮೇಲನದಲ್ಲಿ ನಿರ್ಧರಿಸಿದಂತೆ ಉಭಯ ಕವಿತಾವಿಶಾರದರಾದ ಶ್ರೀ ಷಡಕ್ಷರ ದೇವರ ಸಂಬಂಧವಾದ ಒಂದು ಕೈಪಿಡಿಯನ್ನು ಸಿದ್ಧಪಡಿಸತಕ್ಕದ್ದಿದೆ. ಈ ವಿಷಯದಲ್ಲಿ ಒಂದು ಕಮೀಟಿಯು ಈ ಮೊದಲೇ ಏರ್ಪಾಟಾಗಿದೆ. ಆದ್ದರಿಂದ ಈ ಷಡಕ್ಷರನ ಸಂಬಂಧವಾಗಿಯೂ, ಆತನ ಕೃತಿಗಳ ಸಂಬಂಧವಾಗಿಯೂ ಏನಾದರೂ ಗೊತ್ತಿದ್ದ ಮಹನೀಯರುಗಳು ಲೇಖದ ಮೂಲಕ ನಮಗೆ ಸಪ್ಟೆಂಬರ ತಿಂಗಳ ಅಂತ್ಯದೊಳಗಾಗಿ ಬರೆದು ತಿಳಿಸಬೇಕಾಗಿ ಪ್ರಾರ್ಥಿಸುತ್ತೇವೆ. ಇದು ಕರ್ನಾಟಕ ವಾಙ್ಮಯ ಸೇವಾರೂಪವಾದ ಕಾರ್ಯವಾದುದರಿಂದ ಈ ಕಾರ್ಯಕ್ಕೆ ಕರ್ನಾಟಕ ಸಾಹಿತ್ಯ ಪಕ್ಷಪಾತಿಗಳಾದ ಯಾವತ್ತು ಅಭಿಮಾನಶಾಲಿಗಳಾದ ಕನ್ನಡಿಗರು ತಮಗೆ ಗೊತ್ತಿದ್ದ ಯಾವತ್ತೂ ವಿಶೇಷ ಸಂಗತಿಗಳನ್ನು ತಪ್ಪದೆ ಬರೆದು ಕಳಿಸುವರೆಂದು ನೆರೆನಂಬಿದ್ದೇವೆ.

ಸೂಚನೆ— ಶ್ರೀ ಷಡಕ್ಷರ ಜೀವನ ಚರಿತ್ರೆಯ ಸಂಬಂಧವಾಗಿ ವಿಶೇಷ ಸಂಗತಿಗಳನ್ನು ತಿಳಿಸಿದವರನ್ನು ವೀರಶೈವ ತರುಣರ ಸಂಘದವರು ಚನ್ನಾಗಿ ಗೌರವಿಸುವದರಲ್ಲಿ ಬರುವದು.

ವಿ. ತ. ಸಂಘದ ಮುಖ್ಯವರ್ತಿ ಆಫೀಸ ಧಾರವಾಡ. } ಕನ್ನಡಿಗರ ಪಕ್ಷದ ಪರ,
ಎಸ್. ಎಸ್. ಬಸವನಾಳ
ಬಿ. ಎಸ್. ಪಿ. ಬಿ.

ಈ ಪತ್ರಿಕೆಯು ಮಂಗಳವೇಢೆ ರಾಜೇರಾವ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರತ್ನ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ, ಬಿ. ೧೯೪೭ — ವಾ. ಚಂದಾ ೧—೧೨—೦ ಪಣತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವೇಶವಾಗಿದೆ)
ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ ॥ — ಮನು
ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ಶ್ರಾವಣ ವದ್ಯ ೧೦ ಶಕ ೧೮೪೭. ತಾ॥ ೧೪-೮-೧೯೨೫. | ಸಂಚಿಕೆ ೨೦

ಸಂಪಾದಕರ ಭೂಮಿ.

ನನ್ನ ಮನಸಿನ ಮೇಣವಮಾಡಿ ಕಟ್ಟುವೆನಾನು ।
ನಿನ್ನ ಬೆಳಕವ ಮಾಡಿದಂಥ ಮಕ್ಕಳ ಜೊಪ್ಪ ।
ಚಿನ್ನದಾದಲು ಚೆನ್ನ ಮೇಣಬತ್ತಿಯ ನೊಂದು ॥
ಚಿನ್ಮಯಾಕಾಶದಲ್ಲಿ ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನನ್ನ ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಕೀರಬದ ।
ಗಂಧವಹವೆಂದು ತಿಳಿಯೆ ॥

—ಅಂಬಿಕಾತನಯ ದತ್ತ.

ಸುರೇಂದ್ರನಾಥ ಬ್ಯಾನರ್ಜಿ

ಕಳೆದ ಶತಮಾನದಲ್ಲಿ ಭಾರತೀಯರ ಭವಣೆಗಳನ್ನು ಒಡಿದು ಹಾಕಿ, ಭಾವೀರಾಷ್ಟ್ರವನ್ನು ಸಿದ್ಧಗೊಳಿಸಲು ಸನ್ನದ್ಧರಾದ ವೀರರಲ್ಲಿ ಸುರೇಂದ್ರಬಾಬುಗಳು ಅಗ್ರಗಣ್ಯರು. ಹಿಂದುಸ್ಥಾನದೊಳಗೆ ಆ ಸಮಯದಲ್ಲಿ ಹೋರಾಡುತ್ತಿದ್ದ ರಾಷ್ಟ್ರವೀರರಲ್ಲಿ ಇವರು ಕಡೆಯವರೆನ್ನಬಹುದು. ಸುರೇಂದ್ರ ಬಾಬುಗಳು ಜನ್ಮವೆತ್ತಿದ್ದಕ್ಕೆ ಸಾರ್ಥಕ ಮಾಡಿಕೊಂಡರು. ಇವರು ೭೭ ವರ್ಷಗಳ ವರೆಗೆ ರಾಷ್ಟ್ರದ ಸೇವೆಯಲ್ಲಿಯೇ ನಿರತರಾಗಿದ್ದರು. ಮುಪ್ಪಿನ ಮುದುಕರಾಗಿ, ಮರಣ ಸಮಯದಲ್ಲಿ ಸಹ ಸಾರ್ವಜನಿಕ ಕೆಲಸಗಳಲ್ಲಿ ತೊಡಗಿಕೊಂಡಿದ್ದರು. ಒಂದೆರಡು ವರ್ಷಗಳ ವರೆಗೆ ಏನಾದರೊಂದು ಸಾರ್ವಜನಿಕ ಕೆಲಸಮಾಡಿ, ಅಹಾ! ದಣಿದೆನೆಂದು ಉಸುರ್ಗರೆದು ನಿರಾಶೆ ಹೊಂದುವ ನಮ್ಮ ಕರ್ನಾಟಕದ ಕುವರರು ಕಳವಳದ ಕಾರ್ಯ ಮಾಡಬೇಕಾದರೆ ಸುರೇಂದ್ರ ಬಾಬುಗಳಂಥ ಹಿರಿಯರು ಹಾಕಿ ಕೊಟ್ಟ ಹಾದಿಯನ್ನು ಹಿಡಿಯಬೇಕು. ಮತ್ತು ಅವರಂತೆ ರಾಷ್ಟ್ರದ ಉನ್ನತಿಗಾಗಿ ಪ್ರಯತ್ನಮಾಡಬೇಕು. ಅಂದರೆ ಬಾಬುಗಳ ಕೀರ್ತಿಯು ಕರ್ನಾಟಕದಲ್ಲಿ ಉಳಿಯುವದಲ್ಲದೇ ಅವರ ಆತ್ಮವೂ ಶಾಂತಿಯನ್ನು ಹೊಂದುವದು. ವಂಗಭಂಗದಿಂದ ಬಂಗಾಲದ ಆಕಾಂಕ್ಷೆಗಳಿಗೆ ತಡೆಯುಂಟಾಗಲು ಸುರೇಂದ್ರರರ ಮನಸ್ಸು ತಲ್ಲಣಗೊಂಡಿದ್ದರಿಂದ ಅವರು ಬಂಗಾಲದಲ್ಲಿ ಅದ್ಭುತವಾದ ಚಳವಳಿಯನ್ನು ಹೂಡಿದರು. ಇದರ ಗುಟ್ಟನ್ನು ಹುಟ್ಟುಗನ್ನಡಿಗರೂ, ಹೆಸರು-ಕನ್ನಡಿಗರೂ ತಿಳಿದು ನೋಡಬೇಕು. ಈ ಗುಟ್ಟನ್ನು ಮನದಟ್ಟಾಗಿ ಮಾಡಿಕೊಂಡು, ಭಂಗವಾದ ಕರ್ನಾಟಕವು ವಂಗದಂತೆ ಒಂದಾಗುವಹಾಗೆ, ಪ್ರಯತ್ನಿಸಿದರೆ ಭರತಖಂಡದ ಒಂದು ಅಂಗವು ಸದೃಢವಾಗುವದು. ಒಂದೊಂದೇ ಪ್ರಾಂತವು ಸದೃಢವಾದರೆ, ಭರತಖಂಡವು ಒಟ್ಟಾಗಿ ಬಲವಡುವದು. ಇದರಲ್ಲಿ ಸಂದೇಹವಿಲ್ಲ. ಸುರೇಂದ್ರಬಾಬುಗಳಿಗೆ ಬೇಕಾದುದು ಇದೇ ಇದನ್ನೇ ಕನ್ನಡಿಗರು ಕೈಕೊಂಡರೆ, ಸುರೇಂದ್ರಬಾಬುಗಳ ಆತ್ಮವು ಶಾಂತಿಹೊಂದದೇ ಬಿಡದು.

ಓಂ ಶಾಂತಿಃ ಶಾಂತಿಃ

ವೆಂಕಣ್ಣಾ ಹೊಸಬ ನಾಯಿಕ ಇವರು ಅಚ್ಚಗನ್ನಡಿಗರು ಕರ್ನಾಟಕದ ಉಜ್ವಲ ಅಭಿಮಾನಿಗಳು. ಇವರು ಈಗ್ಗೆ ನಮ್ಮ ಜಿಲ್ಲೆಯ ಕಲೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ. ವಿದ್ಯಾಖಾತೆಯಂಥಲ್ಲಿ ಸಹ ಕನ್ನಡವನ್ನರಿಯದ ಅಧಿಕಾರಿಗಳನ್ನು ವಿಚಾರವಿಲ್ಲದೇ ನೇಮಿಸುವಂಥ ಸರಕಾರವು ಕಲೆಕ್ಟರರ ಸ್ಥಳಕ್ಕೆ ಅಚ್ಚಗನ್ನಡಿಗನನ್ನು ನೇಮಿಸಿದ್ದು ನಮಗೆ ಆನಂದದಲ್ಲಿ ಆಶ್ಚರ್ಯವನ್ನು ಉಂಟುಮಾಡಿದೆ, ಇರಲಿ. ಶ್ರೀ. ನಾಯಕರವರು ತಮ್ಮ ಬುದ್ಧಿ ಮತ್ತೆಯಿಂದ ಈ ಬಗೆಯ ಉಚ್ಚಸ್ಥಾನಕ್ಕೇರಿದ್ದು ಸರ್ವಥಾ ಯೋಗ್ಯವು. ಇವರು ವಿಜಾಪುರ ಜಿಲ್ಲೆಗೆ ಒಂದುದರಿಂದ ಈ ಜಿಲ್ಲೆಯಲ್ಲಿ ಕನ್ನಡನುಡಿಗೆ ಮೇಲಿಂದ ಮೇಲೆ ಬರುತ್ತಲಿರುವ ಎಡರುಗಳನ್ನು ದೂರ ಮಾಡುವ ಹಾಗೆ ಪ್ರಯತ್ನಿಸಬೇಕಾಗಿ ಆಗ್ರಹ ಬಡುತ್ತೇವೆ. ವಿಜಾಪೂರ ಮುನಸೀ ಪಾಲಿಟಿಯಲ್ಲಿ — ಕನ್ನಡನಾಡಿನ ಮುನಸೀ ಪಾಲಿಟಿಯಲ್ಲಿ— ಕನ್ನಡಕ್ಕೆ ಆದರವಿಲ್ಲ. ಬರೆಯುವದು; ನೋಟೀಸ ತೆಗೆಯುವದು; ಬೋರ್ಡ ಹಚ್ಚುವದು, ಮಾತನಾಡುವದು ಸಹ ಮರಾಟಿಯಲ್ಲಿ. ಈ ಜಿಲ್ಲೆಯ ಉತ್ತರ ಭಾಗದ ಹಳ್ಳಿಗಳಲ್ಲಿ ಕನ್ನಡಿಗರಿದ್ದರೂ ಮರಾಟಿ ಶಾಲೆಗಳು! ಇಂಥ ವಿಷಯಗಳಲ್ಲಿ ಮನಸ್ಸು ಹಾಕಿ ಶ್ರೀ. ನಾಯಕರವರು ಈ ಮರಾಟೀ ಪಿಡುಗು ಈ ಜಿಲ್ಲೆಯಿಂದ ಓಡಿ ಹೋಗುವಂತೆ ಪ್ರಯತ್ನಿಸಿದರೆ, ಕನ್ನಡನುಡಿಯ ಬಗ್ಗೆ ಈ ಜಿಲ್ಲೆಯಲ್ಲಿ ದೊಡ್ಡದೊಂದು ಕಾರ್ಯ ಮಾಡಿದಂತಾಗುವದು. ಈ ಕಾರ್ಯಮಾಡಲಿಕ್ಕೆ ಅವರು ತಮ್ಮ ಅಧಿಕಾರ ಬಲವನ್ನು ಉಪಯೋಗಿಸಬೇಕೆಂದು ನಾವು ಸೂಚಿಸುವದಿಲ್ಲ. ಮರಾಟೀ ಮಾತನಾಡುವದೆಂದರೆ ಅದೊಂದು ಗೌರವ, ಕನ್ನಡವೇನೋ ಮನೆಯಲ್ಲಿರ ತಕ್ಕದ್ದು. ಹೊರಗೆಲ್ಲ ಮರಾಟಿಯೇ ಭೂಷಣವೆಂಬ ಕಲ್ಪನೆಗಳು ಜನರಲ್ಲಿ ತುಂಬಿವೆ. ಆದರೆ ಶ್ರೀ. ನಾಯಕರಂಥವರು ಯಾವಾಗಲೂ ಕನ್ನಡದಲ್ಲಿ ಮಾತನಾಡುತ್ತ ಕನ್ನಡಿಗರಿಗೆ ಕನ್ನಡದ ಅಭಿಮಾನವನ್ನು ಹಿಡಿಯುವ ಅವಶ್ಯಕತೆಯನ್ನು ಹೇಳುತ್ತ ಮತ್ತು ಕನ್ನಡದ ಮಹಾತ್ಮೆಯನ್ನು ಅವರಿಗೆ ತಿಳಿಸುತ್ತ ಹೋದರೆ, ಅವರ ಸ್ಥಾನ ಮಹಾತ್ಮೆಯಿಂದ ಅವರ ಇಂಥ ಮಾತುಗಳನ್ನು ಜನರು ನಂಬುವರು. ಇದರಿಂದ ಎಷ್ಟೋ ಕಾರ್ಯವಾಗುವದು.

ಸಂಸ್ಕೃತಿಯ ದೃಷ್ಟಿಯಿಂದ ಕನ್ನಡನುಡಿಗೆ ಯಾವ ಬಗೆಯ ಮಹತ್ವವಿದೆಯೆಂಬುದು ಇತ್ತಿತ್ತಲಾಗಿ ಕನ್ನಡನಾಡಿನ ಮುಖಂಡರಿಗೆ ಚೆನ್ನಾಗಿ ಗೊತ್ತಾಗಿದೆ. ಅಂತೆಯೇ ಕರ್ನಾಟಕ ಭೂಷಣ ಕೌಜಲಗಿ ಶ್ರೀನಿವಾಸರಾಯರೂ, ಬೆಳವೀ ದತ್ತಾತ್ರೇಯರಾಯರೂ ಅನೇಕ ವರ್ಷಗಳಿಂದ ಮಹಾರಾಷ್ಟ್ರದಲ್ಲಿ ಮಾತನಾಡುತ್ತ ಬರೆಯುತ್ತಲಿದ್ದರೂ, ಇತ್ತಲಾಗಿ ಕನ್ನಡನುಡಿಯಲ್ಲಿಯೇ ಮಾತನಾಡುವದಕ್ಕೂ, ಕನ್ನಡನುಡಿಗೆ ತಕ್ಕುದಾದ ಮನ್ನಣೆಯನ್ನು ಕೊಡಲಿಕ್ಕೂ ಪ್ರಾರಂಭಿಸಿದ್ದಾರೆ ಇವರು ಈಗ್ಗೆ ತಮ್ಮ ಪತ್ರವ್ಯವಹಾರವನ್ನು ಸಹ ಕನ್ನಡದಲ್ಲಿಯೇ ಮಾಡಹತ್ತಿದ್ದು 'ಕನ್ನಡಿಗ' ನಿಗೆ ಹೆಚ್ಚಿನ ಆನಂದಕ್ಕೆ ಕಾರಣ. ಮರಾಠಿ, ಇಂಗ್ಲೀಷ ಭಾಷೆಗಳಲ್ಲಿ ಪತ್ರವ್ಯವಹಾರವನ್ನು ಮಾಡತಕ್ಕವರು ನಮ್ಮಲ್ಲಿ ಅನೇಕರಿದ್ದಾರೆ. ಅವರು ತಮ್ಮ ಈ ಅಸ್ವಭಾವಿಕವಾದ ಪದ್ಧತಿಯನ್ನು ಬಿಟ್ಟು ಮೇಲಿನ ಮುಂದಾಳುಗಳು ಮೇಲ್ಪಂಕ್ತಿಯನ್ನು ಹಾಕಿಕೊಟ್ಟಂತೆ, ಕನ್ನಡದಲ್ಲಿಯೇ ಓಲೆಗಳನ್ನು ಬರೆಯಲಿಕ್ಕೆ ಪ್ರಾರಂಭಿಸಬೇಕು. ವಿದ್ಯಾರ್ಥಿಗಳು ಈ ಮಾತಿನ ಕಡೆಗೆ ವಿಶೇಷವಾಗಿ ಲಕ್ಷ್ಯ ಕೊಡತಕ್ಕದ್ದು. ಯಾಕಂದರೆ ಇವರಲ್ಲಿ 'ಫ್ಯಾಶನ್' ಒಂದಿದೆ. ಅದರ ಮಬ್ಬಿನಿಂದ ಕನ್ನಡವನ್ನು ಮರೆತು, ಇಂಗ್ಲೀಷಿನಲ್ಲಿಯೇ ಹೆಚ್ಚಾಗಿ ಬರೆಯುವದುಂಟು.

ದೀಪಾವಳಿ ಹಬ್ಬವು ಸಮೀಪಿಸ ಹತ್ತಿತು. ವ್ಯಾಪಾರಸ್ಥರು ತಮ್ಮ ಲೆಕ್ಕ ಪತ್ರಗಳನ್ನು ಮರಾಠಿಯಲ್ಲಿಡುವದನ್ನು ಸಾಲಿನ ದೀಪಾವಳಿಯಿಂದ ಬದಲು ಮಾಡುವಂತೆ ಪ್ರಯತ್ನಿಸಲು ಇದೀಗ ಯೋಗ್ಯ ಸಮಯವು. ಆದುದರಿಂದ ಸಾಹಿತ್ಯ ಸಮ್ಮೇಲನದಲ್ಲಿ ಗೊತ್ತು ಮಾಡಿದಂತೆ, ಈ ಬಗ್ಗೆ ನಿಯಮಿತವಾದ ಕಮಿಟಿಯು ಬೇಗನೇ ತನ್ನ ಕಾರ್ಯವನ್ನು ಪ್ರಾರಂಭಿಸಬೇಕೆಂದು "ಕರ್ನಾಟಕ ಟಾಯಿಮ್ಸದ" ಸೂಚನೆ. ಇದು ಯೋಗ್ಯವಿದೆ. ಸಕಾಲದ್ದಿದೆ. ಈ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ ಸಾಬರೇಯವರು ಜಾಗ್ರತವಾಗಿ ಈ ಕಾರ್ಯವನ್ನು ಕೈಕೊಳ್ಳಬೇಕಾಗಿ ಆಗ್ರಹ ಪಡುತ್ತೇವೆ.

ವಿಶ್ವಕರ್ನಾಟಕ ವೆಂಬ ಅರ್ಥಗರ್ಭಿತವಾದ ಹೆಸರು, ಸಂಡಂಗವಾಗಿ, ಕನ್ನಡ ಸೊಲ್ಲನ್ನು ಕೊಲೆಮಾಡಿ, ಅದರ ಮಾನವನ್ನು ತೆಗೆದುಕೊಳ್ಳುತ್ತಿದ್ದ "ಮೈಸೂರ ಕ್ರಾನಿಕಲ್" ಎಂಬ ವಾರ ಪತ್ರಿಕೆಗೆ ಬಂದಿದೆ. ಒಂದು ಆನಂದದ ಸಂಗತಿ. ಇನ್ನು "ಕರ್ನಾಟಕ ಟಾಯಿಮ್ಸ" "ಮೈಸೂರ ಸ್ಟಾರ" ದವರೂ ಈ ಅಪದ್ಧವಾದ ಮತ್ತು ಕನ್ನಡನುಡಿಯಲ್ಲಿ ಉಚ್ಚರಿಸ ಹೋದರೆ ಬಾಯಿಗೆ ಮುಳ್ಳು ಬರುವಂಥಹ ಇಂಗ್ಲೀಷ ಹೆಸರುಗಳನ್ನು ತೆಗೆದು ಹಾಕಿ, ತಮ್ಮಲ್ಲಿದ್ದ ಕನ್ನಡದ ಅಭಿಮಾನವನ್ನು ತೋರ್ಪಡಿಸಬೇಕೆಂದು ಬಲವತ್ತರಾಗಿ ಸೂಚಿಸುತ್ತೇವೆ. "ವಿಶ್ವಕರ್ನಾಟಕ" ದ ಈಗಿನ ಸಂಪಾದಕರು ಶ್ರೀ ತಿರುಮಲೆ ತಾತಾಚಾರ್ಯ ಶರ್ಮರವರು. "ಮೈಸೂರು ಮೈಸೂರಿನವರಿಗೆ ಮಾತ್ರ" ಎಂಬ ಮಂತ್ರವು ಅನೇಕ ವರ್ಷಗಳಿಂದ ಮೈಸೂರಿನಲ್ಲಿ ನೆಲೆಗೊಂಡಿತ್ತು. ಆದರೆ ಈಗ್ಗೆ ಮೈಸೂರು ಕರ್ನಾಟಕಕ್ಕೆ; ತನ್ಮುಖಾಂತರವಾಗಿ ಭರತಖಂಡಕ್ಕೆ; ವಿಶ್ವಕ್ಕೆ; ಎಂಬ ವಿಶಾಲವಾದ ವಿಚಾರವು ರೂಢಿಯಲ್ಲಿ ಬರಹತ್ತಿದೆ. "ವಿಶ್ವಕರ್ನಾಟಕ" ದ ದೃಷ್ಟಿಯು ಇದೇ ಎಂಬುದು ಅದರ ಹೆಸರಿನಿಂದಲೇ ಸ್ಪಷ್ಟವಿದೆ. ಬೆಂಗಳೂರೆಂದರೆ ಕರ್ನಾಟಕದಲ್ಲಿ ಮೊದಲನೇ ಪಟ್ಟಣವು. ಇಲ್ಲಿ ಹುಟ್ಟಿದ "ವಿಶ್ವಕರ್ನಾಟಕವು" ಅಖಂಡ ಕರ್ನಾಟಕದ ಸೇವೆಯಲ್ಲಿ ನಿರತವಾಗಿ, ಮೈಸೂರಿನ ಕರ್ನಾಟಕಸ್ಥರಲ್ಲಿ ಕರ್ನಾಟಕತ್ವವನ್ನು ಚನ್ನಾಗಿ ಬೆಳೆಸುತ್ತ ಚಿರಾಯುವಾಗಲಿ!

ಮೈಸೂರ ವಿಶ್ವವಿದ್ಯಾಲಯದಲ್ಲಿ ಸುಧಾರಣೆಯಾಗತಕ್ಕದ್ದಿದೆ. ಆದ್ದರಿಂದ ಈ ವಿಷಯದಲ್ಲಿ ಮೈಸೂರಿನವರೂ ಮೈಸೂರಿನ ಹೊರಗಿನ ಕರ್ನಾಟಕಸ್ಥರೂ ಹೆಚ್ಚಾಗಿ ಮನಸ್ಸನ್ನು ಹಾಕಿ, ಮೈಸೂರ ವಿಶ್ವವಿದ್ಯಾಲಯವೇ ಕರ್ನಾಟಕ ವಿಶ್ವವಿದ್ಯಾಲಯವಾಗುವಹಾಗೆ ಪ್ರಯತ್ನಿಸಲು ಇದು ಯೋಗ್ಯ ಸಮಯವು. ಆಂಧ್ರರಿಗೆ ಸ್ವತಂತ್ರ ವಿಶ್ವವಿದ್ಯಾಲಯವು ದೊರೆಯಿತು. ಕೇರಳದವರಿಗೆ ಬೇಗನೇ ದೊರೆಯುವದು; ತಮಿಳರಿಗೆ ಎಂದಿಗೂ ದೊರೆತಿದೆ. ಗುರ್ಜರ ಮರಾಠೀಗರಿಗೂ ಸ್ವಲ್ಪೇ ಕಾಲದಲ್ಲಿ ದೊರೆಯುವದು. ಆದರೆ ಕರ್ನಾಟಕಸ್ಥರಿಗೆ? ಎಲ್ಲ ಭಾಷೆಯವರೂ ತಮ್ಮ ತಮ್ಮ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿಗೊಂಡರೆಂದರೆ, ಕರ್ನಾಟಕಸ್ಥರ ಗತಿಯು ತ್ರಿಶಂಕುವಿನಂತಾಗದೇ ಇರದು. ಇತ್ತ ಮರಾಠರಿಗೆ ಸ್ವತಂತ್ರವಾದ ವಿಶ್ವವಿದ್ಯಾಲಯವು ಪುಣೆಯಲ್ಲಿ ಸ್ಥಾಪಿತವಾಗುವ ದಿನಗಳು ತೀರ ಸಮೀಪಿಸಿವೆ. ಹಾಗಾಯಿತೆಂದರೆ ಮುಂಬೈ ಕರ್ನಾಟಕಸ್ಥರು ಮಹಾರಾಷ್ಟ್ರ ವಿಶ್ವ ವಿದ್ಯಾಲಯಕ್ಕೆ ಸೇರಿ ಕೊಂಡು, ಕರ್ನಾಟಕ ಸಂಸ್ಕೃತಿಯನ್ನು ಮೂಲೆಗೊತ್ತಿ ಮರಾಠೀ ಭಾಷೆಯ ಬೆನ್ನು ಹತ್ತಬೇಕಾಗುವದು. ಮುಂಬೈ ವಿಶ್ವವಿದ್ಯಾಲಯವು "ರೆಸಿಡೆನ್ಸಿಯಲ್ ಯುನಿವರ್ಸಿಟಿ" (ವಸತಿಗೃಹವುಳ್ಳ ವಿಶ್ವವಿದ್ಯಾಲಯ) ವಾಗುವದರಿಂದ ಕರ್ನಾಟಕಸ್ಥರಿಗೆ ಮುಂಬೈ ವಿಶ್ವವಿದ್ಯಾಲಯದಲ್ಲಿಯೇ ನಿಲ್ಲಲು ಬರುವದೋ ಇಲ್ಲವೋ ಸಂಶಯವಿದೆ. ಹೀಗಾಗಿ ಮುಂಬೈ ಕರ್ನಾಟಕಸ್ಥರು ಬಳಲಬೇಕಾಗುವದು. ಅದೇ ಪ್ರಕಾರವಾಗಿ, ಅತ್ತ ಆಂಧ್ರರಿಗೂ, ಕೇರಳರಿಗೂ ಸ್ವತಂತ್ರ ವಿಶ್ವವಿದ್ಯಾಲಯಗಳಾದವೆಂದರೆ ಮದ್ರಾಸ ವಿಶ್ವವಿದ್ಯಾಲಯವು ತಮಿಳರದಾಗಿ, ಮಂಗಳೂರ, ಬಳ್ಳಾರಿ, ಸೇಲಂ, ಕೊಯಿಮತ್ತೂರ, ಅನಂತಪೂರ ಮೊದಲಾದ ಮದ್ರಾಸ ಕರ್ನಾಟಕಸ್ಥರೂ ಕೊಡಗಿನವರೂ ತೊಂದರೆಯಲ್ಲಿ ತೊಡಕಿಕೊಳ್ಳುವರು. ಅರ್ಥಾತ್ ತ್ರಿಶಂಕುವಿನಂತೆ ನಡುವೆ ಬ್ರಿಟಿಶ್ ಕರ್ನಾಟಕವು ಜೋತಾಡಬೇಕಾಗುವದು. ಬ್ರಿಟಿಶ್ ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವು ದೊರೆಯುವ ವರೆಗೆ ಹೀಗೆಯೇ ಬ್ರಿಟಿಶ್ ಕರ್ನಾಟಕವು ತೊಳಲಾಡುವದನ್ನು ಕನ್ನಡಿಗರು ಸಹಿಸುವರೇ? ಸ್ವತಂತ್ರಪ್ರಾಂತದಪ್ರಶ್ನೆಯನ್ನು ಬಿಡಿಸುವದಕ್ಕೆ ಕಾಲವು ಬೇಕು. ಆದುದರಿಂದ ಅಲ್ಲಿಯವರೆಗೆ ನಾವು ದಾರೀ ನೋಡುತ್ತ ಕುಳಿತುಕೊಳ್ಳದಲೇ, ಮೈಸೂರ ವಿಶ್ವವಿದ್ಯಾಲಯವೇ ಕರ್ನಾಟಕ ವಿಶ್ವವಿದ್ಯಾಲಯವಾಗುವಂತೆ ಪ್ರಯತ್ನಿಸಿದರೆ, ವಿದ್ಯಾವಿಷಯಕ ಸಂಗತಿಗಳಿಂದ ಅಖಂಡ ಕರ್ನಾಟಕವು ಒಂದೆಡೆ ಸೇರಿದಂತಾಗಿ, ಅಖಂಡ ಕರ್ನಾಟಕ ಭಾವನೆಯು ಹೆಚ್ಚಾಗುತ್ತ ಹೋಗುವದು. ತರುಣ ವಿದ್ಯಾರ್ಥಿಗಳಲ್ಲಿ ಈ ಭಾವನೆಯು ನೆಲೆಗೊಳ್ಳುವದರಿಂದ ಕರ್ನಾಟಕ ರಾಷ್ಟ್ರದ ನಾಡಿಯು ಸತೇಜವಾಗುವದು. ಸಂಸ್ಕೃತಿಯ ದೃಷ್ಟಿಯಿಂದ ಕರ್ನಾಟಕವು ಒಂದಾಗಲಿಕ್ಕೆ ಹೆಚ್ಚು ಅವಕಾಶವಾಗುವದು ಸಂಸ್ಕೃತಿ ದೃಷ್ಟಿಯಿಂದ ಕರ್ನಾಟಕವು ಒಂದಾಯಿತೆಂದರೆ ಮುಂದೆ ಕರ್ನಾಟಕದ ಭಾಗ್ಯೋದಯವಾಗುವದು ನಿಶ್ಚಯ. ಇವೆಲ್ಲ ಸರಿ ಆದರೆ ಮೈಸೂರ ವಿಶ್ವವಿದ್ಯಾಲಯದವರು ಉಳಿದ ಕರ್ನಾಟಕದ ಭಾಗಗಳಲ್ಲಿಯ ಜನರನ್ನು ತಮ್ಮ 'ಸಿನೇಟ್' ದಲ್ಲಿ ಪ್ರವೇಶಿಸಿಕೊಳ್ಳಲು ಅವಕಾಶ ಕೊಡಬಹುದೋ? ಸಾಹಿತ್ಯ ಪರಿಷತ್ತಿನಂತೆ ಅದು ಸಹ ಮೈಸೂರಿನವರ ಸೊತ್ತೇಯಾದರೆ ಹೇಗೆ? ಎಂಬದಾಗಿ ಕೆಲವರು ಆಕ್ಷೇಪಿಸಬಹುದು. ಆದರೆ ಅಖಂಡ ಕರ್ನಾಟಕದವರು ಈ ಬಗೆಯಿಂದ ಪ್ರಯತ್ನಿಸಿದರೆ ಇದು ಕಷ್ಟವಾಗುವದೆಂದು ನಮಗೆ ತೋರುವದಿಲ್ಲ. ಒಂದು ವೇಳೆ ಮೈಸೂರಿನವರು ಬ್ರಿಟಿಶ್ ಕರ್ನಾಟಕದವರಿಗೆ ಹಾಗೆ ಪ್ರವೇಶಿಸಲು ಅವಕಾಶ ಕೊಡುವದಿಲ್ಲವೆಂಬದು ಹಿಂದುಗಡೆ ಕಂಡು ಬಂದರೂ ಆತಂಕವಿಲ್ಲ. ನಾ

ವು ಈ ಬಗ್ಗೆ ಪ್ರಯತ್ನ ಮಾಡುತ್ತ ಹೋದರೆ, ಬ್ರಿಟಿಶ್ ಕರ್ನಾಟಕದವರಲ್ಲಿಯಾದರೂ ಏಕ ಕರ್ನಾಟಕ ಭಾವನೆಯು ನೆಲೆಗೊಳ್ಳುವದು. ರಾಷ್ಟ್ರದ ಏಳಿಗೆಗೆ ಇದರಿಂದ ಅನುಕೂಲವಾಗುವದೇ ಹೊರ್ತಾಗಿ ಪ್ರತಿಕೂಲವೆಂದೂ ಆಗದು. ಇನ್ನು ಮೈಸೂರ ಮಹಾರಾಜರ ಸರ್ಕಾರವು ಒಂದು ವೇಳೆ ಕರ್ನಾಟಕಾಧಿಪಾಸದ ಪಕ್ಷಪಾತದಿಂದ ಬ್ರಿಟಿಶ್ ಕರ್ನಾಟಕದವರನ್ನು ಸೇರಿಸಿಕೊಳ್ಳಲು ಅನುಮತಿ ಕೊಟ್ಟರೂ, ಬ್ರಿಟಿಶ್ ಸರಕಾರವು ತನ್ನ ಸಮ್ಮತಿಯನ್ನೀಯದೇ ಇರದೇ ಎಂಬದಾಗಿ ಕೆಲವರು ಸಂಶಯ ಪಡಬಹುದು. ಬ್ರಿಟಿಶ್ ಸರಕಾರವು ಇಂಥ ಪ್ರಶ್ನೆಗಳನ್ನು ಯಾವಾಗಲೂ ಜನರ ಅಭಿಪ್ರಾಯದ ದೃಷ್ಟಿಯ ಮೇಲಿಂದ ನಿರ್ಣಯಿಸುವದು ಅನುಭವಸಿದ್ಧವಾಗಿದೆ. ಹಿಂದೆ ಬ್ರಿಟಿಶ್ ಕರ್ನಾಟಕವು ತಮ್ಮ ಪ್ರಾಂತ ಸರಕಾರದವರು ದಕ್ಕೆ ವಿರೋಧಿಸಲಿಕ್ಕಿಲ್ಲ. ಇದಲ್ಲದೆ, ತಿರುವಾಂಕೂರಿನಲ್ಲಿ ಸ್ಥಾಪಿತವಾಗಲಿಕ್ಕಿರುವ ಕೇರಳ ವಿಶ್ವವಿದ್ಯಾಲಯಕ್ಕೆ ಮಲಬಾರ ಜಿಲ್ಲೆಯನ್ನು ಸೇರಿಸಲು, ಮದ್ರಾಸ ಸರಕಾರವು ತನ್ನ ಅನುಮತಿ ಕೊಟ್ಟಿಲ್ಲವೇ? ಹೀಗೆ ದೇಶೀಯ ಸಂಸ್ಥಾನದ ವಿಶ್ವವಿದ್ಯಾಲಯಗಳಿಗೆ ಬ್ರಿಟಿಶ್ ಪ್ರಾಂತದ ಜಿಲ್ಲೆಗಳನ್ನು ಸೇರಿಸಲಿಕ್ಕೆ ಸರಕಾರದ ಧೋರಣವು ವಿರುದ್ಧವಾಗಿಲ್ಲವೆಂಬುದು ಇದರ ಮೇಲಿಂದ ಒಡೆದು ಕಾಣುತ್ತದೆ. ಮೈಸೂರ ಮತ್ತು ಬ್ರಿಟಿಶ್ ಸರಕಾರಗಳ ಅನುಮತಿ ಈ ವಿಚಾರಕ್ಕೆ ದೊರೆತದ್ದಾದರೆ, ಉಳಿದ ಅಡಚಣೆಗಳೇನೂ ಇಲ್ಲ ದಿರುವದರಿಂದ ಕರ್ನಾಟಕದ ಕಾರ್ಯವು ಸುಲಭವಾಗುವದು. ಯಾಕೆಂದರೆ ಹೊಸದೊಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವದು ಕಠಿಣ ಕೆಲಸ. ಆದರೆ ಮೈಸೂರ ವಿಶ್ವವಿದ್ಯಾಲಯವು ಪ್ರತ್ಯಕ್ಷ ಸೃಷ್ಟಿಯಲ್ಲಿಯೇ ಇರುವದಾಗಿರುವದರಿಂದ, ಅದರಲ್ಲಿ ಹಲವು ಅದಲು ಬದಲು ಮಾತ್ರ ಮಾಡುವದ, ಹೊಸ ವಿದ್ಯಾಪೀಠವನ್ನು ಸ್ಥಾಪಿಸುವಷ್ಟು ಕಠಿಣವಲ್ಲ. ಇವೆಲ್ಲ ಲಕ್ಷ್ಯದಲ್ಲಿ ತಂದು, ಕರ್ನಾಟಕಸ್ಥರು, ಮೈಸೂರ ವಿಶ್ವವಿದ್ಯಾಲಯವನ್ನೇ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡಲು ಕೂಡಲೇ ಪ್ರಯತ್ನಿಸಬೇಕಾಗಿ ಅಂತಃಕರಣಪೂರ್ವಕವಾಗಿ ಎಲ್ಲ ಕನ್ನಡಿಗರಲ್ಲಿಯೂ ಮೊರೆಯಿಡುತ್ತೇವೆ.

ಬೆಳಗಾವಿಯಲ್ಲಿ ಮರಾಠರು ಹಲವು ಕನ್ನಡದಮೇಲೆ ಹೇಗೆ ನಡೆದಿರುವದೆಂಬುದು ಬೆಳಗಾವಿ ಕಡೆಗೆ ಮುದ್ರಿತವಾದ "ಕನ್ನಡನಾಡಿನ ಅಪಿಗಾಲು" ಎಂಬ ಲೇಖದಿಂದ ಸ್ಪಷ್ಟವಾಗುತ್ತದೆ. ಅದರಲ್ಲಿ ಬರೆದ ಸಂಗತಿಗಳು ನಿಜವಿದ್ದ ಪಕ್ಷದಲ್ಲಿ ಪ್ರತಿಯೊಬ್ಬ ಕನ್ನಡಿಗನೂ ಇಂಥ ಕೃತಿಗಳನ್ನು ನಿಷೇಧಿಸದೆ ಇರಲಾರನು. ವಂಶಪರಂಪರೆಯಿಂದ ಕರ್ನಾಟಕದಲ್ಲಿದ್ದು, ಇಲ್ಲಿಯೇ ಹುಟ್ಟಿ, ಇಲ್ಲಿಯೇ, ಬೆಳೆದರೂ ಸಹ ಕರ್ನಾಟಕದ ಭಾಷೆಯನ್ನು ತಿರಸ್ಕರಿಸುವಂತಹ ಹುಚ್ಚು ಮರಾಠರು ಇನ್ನೂ ಕರ್ನಾಟಕದಲ್ಲಿರುವರು. ಯಾವ ಜನಾಂಗದಲ್ಲಿ ತಾವು ಬೆಳೆಯುವರೋ ಆ ಜನಾಂಗದವರ ವಿರೋಧವನ್ನು ಕಟ್ಟಿಕೊಂಡು ಇವರು ಮಾಡುವದಾದರೂ ಏನೋ ತಿಳಿಯದು. ಮರಾಟಿಗರಿಗೆ ತಮ್ಮ ಮಾತೃಭಾಷೆಯಬಗ್ಗೆ ಅಭಿಮಾನವಿದ್ದಂತೆ, ಕನ್ನಡಿಗರಿಗೂ ಕನ್ನಡದ ಅಭಿಮಾನ ವಿದ್ದರೆ, ಅದನ್ನು ಕಂಡು, ಪ್ರತಿಯೊಬ್ಬ ದೇಶಾಭಿಮಾನಿಯಾದ ಭಾರತೀಯನು ಆನಂದ ಹೊಂದತಕ್ಕದ್ದು. ಆದರೆ ನಮ್ಮ ಮರಾಟೀ ಬಾಂಧವರಿಗೆ ಕನ್ನಡದ ಅಭಿಮಾನಿಗಳನ್ನು ಕಂಡರೆ ಸಂತಾಪವಾಗುತ್ತದೆ. ಅದರಲ್ಲಿಯೂ ಕನ್ನಡನಾಡಿನ ಉಪ್ಪನ್ನುಂಡು, ಕನ್ನಡಿಗರ ಮೇಲೆಯೇ ಹರಿಹಾಯುವ ಕರ್ನಾಟಕದ ಬಂಡುಕೋರ ಮರಾಟಿಗರನ್ನು ಕಂಡರೆ, ನಮಗೆ ನಗೆಬರುತ್ತದೆ. ಇರಲಿ. "ತಿರುಗಲಿ"ನು ತನ್ನ ಲೇಖದಲ್ಲಿ ಧ್ವನಿತಮಾಡಿದಂತೆ ಮರಾಟೀ ಮಾತನಾಡುವ, 'ಹೆಡ್ ಮಾಸ್ತರ' ಮತ್ತು 'ಡೆಪ್ಯುಟೀ' ಜನರು ಓರ್ವ ಕನ್ನಡ ಶಿಕ್ಷಕನ ಮೇಲೆ ಪ್ರಯೋಗಿಸಿದ ಅಸ್ತ್ರವನ್ನು ಬಿಟ್ಟದ್ದು ನಿಜವೋ ಹೇಗೆ? ಎಂಬುದನ್ನು ಸರಕಾರದವರು ಪ್ರಕಟಿಸಬೇಕು!

ಕಾಸರಗೋಡು ಮಂಗಳೂರ ಜಿಲ್ಲೆಯಲ್ಲಿರುವ ದಕ್ಷಿಣದ ತಾಲೂಕು. ಇಲ್ಲಿ ಮಲೆಯಾಳ ಭಾಷೆಯನ್ನಾಡುವವರೇ ಹೆಚ್ಚಾಗಿದ್ದುದರಿಂದ ಆ ತಾಲೂಕನ್ನು ಮಲಬಾರ ಜಿಲ್ಲೆಗೆ ಸೇರಿಸಬೇಕೆಂಬುದಾಗಿ ಕೆಲವರ ವಿಚಾರವಿದೆಯಂತೆ. ಈ ತಾಲೂಕಿನಲ್ಲಿ ಬಹುಸಂಖ್ಯೆಯ ಜನರು ಮಲೆಯಾಳ ಮಾತನಾಡುವದು ನಿಜವಿದ್ದರೆ, ಅದರ ದಕ್ಷಿಣದ ಭಾಗವನ್ನು ಮಲಬಾರಕ್ಕೆ ಸೇರಿಸಬಹುದು. ಆದರೆ ಉತ್ತರ ಭಾಗದಲ್ಲಿ ಕನ್ನಡಿಗರು ಹೆಚ್ಚಾಗಿದ್ದರೆ, ಅದನ್ನು ಮಂಗಳೂರ ಜಿಲ್ಲೆಗೆ ಸೇರಿಸತಕ್ಕದ್ದು. ಅದೇ ಪ್ರಕಾರವಾಗಿ ಮಲಬಾರದಲ್ಲಿದ್ದ ಕರ್ನಾಟಕದ ಭಾಗವನ್ನು ಮಂಗಳೂರಿಗಾಗಲಿ, ನೀಲಗಿರಿಗಾಗಲೀ ಸೇರಿಸಬೇಕಾಗುವದು. ದಕ್ಷಿಣ ಕನ್ನಡ ಜಿಲ್ಲೆಯ ಭಾಷಾಪ್ರಶ್ನೆಯು ನಿಜವಾಗಿಯೂ ಜಟಿಲವಾದದ್ದು. ಭಾಷಾ ಶಾಸ್ತ್ರಜ್ಞರಿಗೆ ಈ ಜಿಲ್ಲೆಯಲ್ಲಿ ವಿಚಾರವು ಚನ್ನಾಗಿ ಲಭಿಸಬಹುದು. ಯಾಕೆಂದರೆ ಈ ಜಿಲ್ಲೆಯಲ್ಲಿ ಅನೇಕ ಭಾಷೆಗಳು ನಡೆಯುತ್ತವೆ. ಕನ್ನಡ ಜಿಲ್ಲೆಯೆಂಬ ಹೆಸರಿದ್ದರೂ ಕನ್ನಡದಕಿಂತ ಮಲೆಯಾಳ ಹೆಚ್ಚು; ಮಲೆಯಾಳಗಿಂತ ತುಳುವ ಹೆಚ್ಚು; ಕೊಂಕಣಿಮಾತನಾಡುವವರೂ ಅನೇಕರಿದ್ದಾರೆ. ಹೀಗಾಗಿದ್ದರೂ ಕನ್ನಡಕ್ಕೆ ಪ್ರಾಧಾನ್ಯವು ದೊರೆಯಲು, ತುಳುವು ಕನ್ನಡದ ಉಪಭಾಷೆಯಾದದ್ದು ಕಾರಣವೆಂಬುದು ಸ್ಪಷ್ಟವಿದೆ. ವಾಚಕರ ಅವಲೋಕನಕ್ಕಾಗಿ ಈ ಜಿಲ್ಲೆಯ ಭಾಷಾ ವಿವರವನ್ನು ಕೆಳಗೆ ಕೊಟ್ಟಿದೆ:—

ಒಟ್ಟು ಜನಸಂಖ್ಯೆ	ಕೊಂಕಣಿ	ಕನ್ನಡ	ಮಲೆಯಾಳ	ತುಳು
೧೩,೯೭,೩೬೮	೧,೭೫,೫೨೩	೩,೨೧,೬೯೦	೩,೩೪,೨೪೦	೫,೩೭,೮೨೨

ಜಪಾನರು ಚೀನರ ಯುದ್ಧದ ಪ್ರಸಕ್ತಿಯಲ್ಲಿ ಇನ್ನೂ ಮೌನವ್ರತವನ್ನು ತಳೆದಿದ್ದಾರೆ. ಯಾವಬಗೆಯ ಪ್ರಕಟನೆಯೂ ಹೊರಟಿಲ್ಲ. ಇದರ ಇಂಗಿತವೇನು? ಚೀನದಂಥ ನೆರೆಹೊರೆಯ ರಾಷ್ಟ್ರವು ಪರರಾಷ್ಟ್ರದ ಕೈಯಲ್ಲಿ ಸಿಕ್ಕು ಒದ್ದಾಡುವಂಥ ಪ್ರಸಂಗದಲ್ಲಿ, ಅದರಲ್ಲಿಯೂ ಚೀನವು ಜಗತ್ತಿನ ರಾಷ್ಟ್ರಗಳಿಗೆಲ್ಲ ತನ್ನ ದೈನ್ಯಾವಸ್ಥೆಯ ಬಗ್ಗೆ ಮೊರೆಯಿಟ್ಟಿರುವ ಪ್ರಸಂಗದಲ್ಲಿ ಸಹ ಜಪಾನದಂಥ ಬಲಿಷ್ಠರಾಷ್ಟ್ರವು ಮೂಕವೃತ್ತಿಯಲ್ಲಿ ಕುಳಿತಿದ್ದನ್ನು ನೋಡಿದರೆ ಎಲ್ಲರಿಗೂ ಸಂಶಯ ಬರುತ್ತಲಿದೆ. ಈ ಕಾರಣಕ್ಕಾಗಿ ಅನೇಕ ರಾಷ್ಟ್ರಗಳಲ್ಲಿಯ ವೃತ್ತಪತ್ರಿಕಾಕಾರರು, ತಮ್ಮ ತಮ್ಮ ಜಪಾನದ ಪ್ರತಿನಿಧಿಗಳಿಗೆ, ಸುದ್ದಿಗಾಗಿ ಎಷ್ಟೋ ಒತ್ತಾಯ ಪಡಿಸುತ್ತಿದ್ದರೂ, ಆ ಪ್ರತಿನಿಧಿಗಳು ತಮಗೆ ಸುದ್ದಿಯೇ ದೊರೆಯದೆಂಬದಾಗಿ ಬರೆಯುತ್ತಿರುವರು. ಜಪಾನದಲ್ಲಿ ಈಗ್ಗೆ ಈ ಯುದ್ಧದಬಗ್ಗೆ ಎಲ್ಲ ವಿಚಾರಗಳು ಗೌಪ್ಯವಾಗಿ—ಬಹು ಗೌಪ್ಯವಾಗಿ ನಡೆದಿವೆ ದೊಡ್ಡ ದೊಡ್ಡ ವ್ಯಾಪಾರದ ಮತ್ತು ಸರಕಾರದ ಸಹಾಯದಿಂದ ಸಾಗಿದ ಸಂಸ್ಥೆಗಳು ತಮ್ಮ ತಮ್ಮೊಳಗೆ ಸಹ ಗುಪ್ತಾಲೋಚನೆ ನಡೆಸಿದ್ದಾರೆ. ಈ ಎಲ್ಲ ಪ್ರಕಾರವನ್ನು ನೋಡಿದರೆ, ಜಪಾನವು ಯಾವದೋ ಒಂದು ದೀರ್ಘ ಆಲೋಚನೆಯಲ್ಲಿದೆಂಬದು ಸ್ಪಷ್ಟವಾಗುತ್ತದೆ. ಇಲಿಯು ತನ್ನ ಪಂಜರದ ಹಾರಿಕೆಯ ಹಿಡಿತದೊಳಗೆ ಹಾಯುವವರೆಗೆ, ಬೆಕ್ಕು, ಹೊಂಚುಹಾಕಿ ಕುಳಿತುಕೊಳ್ಳುವಂತೆಯೇ ಜಪಾನರ ಹಂಚಿಕೆಗಳೇನಾದರೂ ಇರಬಹುದೇ? ಹಾಗಿದ್ದ ಪಕ್ಷದಲ್ಲಿ ಏಸಿಯಾಖಂಡದಲ್ಲಿ ಮಹಾಯುದ್ಧವು ಪ್ರಾರಂಭವಾಗುವದಾಗಿ ಹೇಳಬಹುದು.

ಸುರೇಂದ್ರ ಬಾಬುಗಳ ಸಂಕ್ಷಿಪ್ತ ಚರಿತ್ರೆಯು

ಬಾಬುಗಳು ಹುಟ್ಟಿದ್ದು ೧೮೪೮ ರಲ್ಲಿ. ಇವರು ಶಾಲೆ ಕಾಲೇಜಗಳಲ್ಲಿ ಎಲ್ಲ ವಿದ್ಯಾರ್ಥಿಗಳಿಗಿಂತಲೂ ಮುಂದಾಗಿರುತ್ತಿದ್ದರು. ಇದನ್ನು ಕಂಡು ಅವರ ಗುರುಗಳು ಬಾಬುಗಳನ್ನು ಆಯ್. ಸಿ. ಯಸ್. ಪರೀಕ್ಷೆಗೆ ವಿಲಾಯತಿಗೆ ಕಳಿಸಬೇಕೆಂದು ಅವರ ತಂದೆಯವರಿಗೆ ತಿಳಿಸಲು, ಅವರಾದರೂ ೧೮೬೮ ರಲ್ಲಿ ವಿಲಾಯತಿಗೆ ಬಾಬುಗಳನ್ನು ಕಳುಹಿಸಿಯೇ ಬಿಟ್ಟರು. ಪರೀಕ್ಷೆಯಾಗಿ ಬಂದೊಡನೆ ಶಿಲ್ಹಾಟದಲ್ಲಿ ಅಸಿಸ್ಟೆಂಟ ಮ್ಯಾಜಿಸ್ಟ್ರೇಟರಾದರು ಎರಡು ವರ್ಷ ಕೆಲಸ ಮಾಡುವಷ್ಟರಲ್ಲಿ ಅವರಿಂದ ಒಂದು ಕಟ್ಲೆಯ ವಿಷಯವಾಗಿ ಯೋಗ್ಯ ವಿಚಾರಣೆಯಾಗಲಿಲ್ಲವೆಂಬ ಆರೋಪದಿಂದ, ಅವರನ್ನು ಕೆಲಸದಿಂದ ತಳ್ಳಿ, ಸರಕಾರದವರು ಒಂದು 'ಕಮೀಶನ್' ಮುಖಾಂತರ ಚೌಕಶೀ ನಡಿಸಿದರು. ಅನೇಕ ಕೋರ್ಟದ ಪತ್ರಗಳನ್ನು ಸಹಿಮಾಡುವಾಗ್ಗೆ ಈ ಕಟ್ಲೆಯ ಕಾಗದಕ್ಕೆ ರುಜು ಹಾಕಿದೆನೆಂದೂ ಆ ಬಗ್ಗೆ ತಾವು ನಿರಪರಾಧಿಗಳೆಂದೂ ಕಾರಣ ತೋರಿಸಿ, ಶ್ರೀ. ಬಾಬುಗಳು ಆ ಕಟ್ಲೆಯ ಚೌಕಸಿಯು ಯೋಗ್ಯ ರೀತಿಯಿಂದ ಬಹಿರಂಗವಾಗಿ ಕಲಕತ್ತೆಯ ಹಾಯಕೋರ್ಟಿನಲ್ಲಿ ನಡೆಯಬೇಕಾಗಿ ಬೇಡಿದರು. ಆದರೆ ಅದಕ್ಕೆ ಸರಕಾರದವರು ಸಮ್ಮತಿಸಲಿಲ್ಲ. ಬಾಬುಗಳು ಅಪರಾಧಿಗಳೆಂದು ಕಮೀಶನ್‌ದಿಂದ ನಿರ್ಧರಿಸಲ್ಪಟ್ಟ ಕೂಡಲೆ ಸರಕಾರದವರು ಅವರನ್ನು ಕೆಲಸದಿಂದ ತೆಗೆದು ವರ್ಷಕ್ಕೆ ೬೦೦ ರೂ. ಪೆನಶನ್ ಮಾತ್ರ ಕೊಟ್ಟರು. ಇವರು ಆಯ್. ಸಿ. ಎಸ್ ಪರೀಕ್ಷೆಯಲ್ಲಿ ಮೊದಲು ತೇರ್ಗಡೆಹೊಂದಿದ ಗುಂಪಿನವರಾದ್ದರಿಂದ, ಇವರಿಂದ ದೊಡ್ಡ ಕಾರ್ಯಗಳಾಗಬಹುದೆಂದು ಇಲ್ಲಿಯ ಜನರು ಎಣಿಸಿದ್ದರು. ಆದರೆ ಅವರ ಮೇಲೆ ಈ ಬಗೆಯ ಆರೋಪ ಹೊರಿಸಲ್ಪಟ್ಟಿದ್ದರಿಂದ ಹಿಂದುಸ್ಥಾನದಲ್ಲಿ ಹಾಹಾಕಾರವೆದ್ದಿತು. ಸರಕಾರಕ್ಕೆ ಅನೇಕರು ದೂಷಿಸುತ್ತಿದ್ದರು. ಆದರೂ ಅವರ ಮುಂದಿನ ಮಹಾ ಕಾರ್ಯದ ಚಿತ್ರವನ್ನು ನೆನೆದರೆ, ಹೀಗಾಗಿದ್ದೇ ಕ್ಷೇಮವಾಯಿತೆಂದು ನುಡಿಯಬಹುದು.

ಈ ಕೆಲಸದಿಂದ ಮುಕ್ತರಾದ ಕೂಡಲೆ, ಕಲಕತ್ತೆಯಲ್ಲಿ ಸಿಟೀ ಕಾಲೇಜಿನಲ್ಲಿ ಇಂಗ್ಲೀಷ 'ಪ್ರೊಫೆಸರ' ರಾದರು. ಕೆಲವು ದಿನಗಳ ಮೇಲೆ ರಿಪನ್ ಕಾಲೇಜನ್ನು ಸ್ಥಾಪಿಸಿದರು. ಇಂಗ್ಲೀಷ ಸಾಹಿತ್ಯದ ಮೇಲೆ ಇವರ ಪ್ರಭುತ್ವವಿದ್ದದರಿಂದ ತಮ್ಮ ಪಾಂಡಿತ್ಯದಿಂದ ವಿದ್ಯಾರ್ಥಿಗಳನ್ನೆಲ್ಲ ಇವರು ಮೋಹಿಸಿ ಬಿಡುತ್ತಿದ್ದರು. ಇವರು ತಮ್ಮ ಕಾಲೇಜಕ್ಕೆ ಸರಕಾರದ ಸಹಾಯವನ್ನು ನಿರಾಕರಿಸಿದರು ಕಾಲೇಜವು ಊರ್ಜಿತಾವಸ್ಥೆಗೆ ಬಂದ ಕೂಡಲೇ ಅದನ್ನು ಒಂದು ಪಂಚಮಂಡಲಕ್ಕೆ ಒಪ್ಪಿಸಿ ಸಾರ್ವಜನಿಕ ಕಾರ್ಯಗಳಲ್ಲಿ ಮನಸ್ಸು ಹಾಕಿದರು.

೧೮೭೬ ರಲ್ಲಿ "ಭಾರತೀಯರ ಸಂಘ" (Indian Association) ವನ್ನು ಸ್ಥಾಪಿಸಿದರು. ಆಯ್. ಸಿ. ಎಸ್. ನೌಕರಿಯಲ್ಲಿ ಪರದೇಶದವರೇ ತುಂಬಿದ್ದರಿಂದ, ಅದು ಹೋಗಿ, ನಮ್ಮ ದೇಶದವರೇ ನಮ್ಮ ದೇಶದ ರಾಜ್ಯಭಾರವನ್ನು ನಡಿಸತಕ್ಕದೆಂಬುದಾಗಿ ಪ್ರಯತ್ನಿಸಿದ್ದು, ಆ ಸಂಘದ ಮೊದಲನೇ ಕಾರ್ಯವು. ಶ್ರೀ. ಸುರೇಂದ್ರ ನಾಥರು ಇದರ ಕಾರ್ಯದರ್ಶಿಗಳಾಗಿದ್ದರು. ಆಗ್ಗೆ ಆಯ್. ಸಿ. ಎಸ್. ಪರೀಕ್ಷೆಗಾಗಿ ವಿದ್ಯಾರ್ಥಿಗಳಿಗೆ ೨೧ ವಯಸ್ಸಿದ್ದದನ್ನು ಸರಕಾರವು ೧೯ ಮಾಡಿದ್ದರಿಂದ, ಭಾರತೀಯ ವಿದ್ಯಾರ್ಥಿಗಳು ಎಳೆ ವಯಸ್ಸಿನಲ್ಲಿಯೇ ಆ ಪರೀಕ್ಷೆಯಲ್ಲಿ ತೇರ್ಗಡೆಹೊಂದುವರ ಬೇಕಾಗಿ ಬಂದಿತು. ಇದು ಕಠಿಣವಾದ್ದರಿಂದ ಆ ಬಗ್ಗೆ ಅಖಂಡ ಭರತಖಂಡದ ತುಂಬೆಲ್ಲ ಪ್ರಚಂಡವಾದ ಅಲ್ಲೋಲ ಕಲ್ಲೋಲವೆದ್ದಿತು. ಬಾಬುಗಳು ಈ ಕಾರ್ಯದಲ್ಲಿ ಅಗ್ರೇಸರತ್ವವನ್ನು ಸ್ವೀಕಾರ ಮಾಡಿ ಉತ್ತರ, ಪಶ್ಚಿಮ ಹಿಂದುಸ್ಥಾನದಲ್ಲಿ ವ್ಯಾಖ್ಯಾನಕ್ಕಾಗಿ ಹೊರಟರು. ಇವರ ವಕ್ತೃತ್ವ ಶೈಲಿಯು ಮಿಗಿಲಾದದ್ದು. ಇವರ ವ್ಯಾಖ್ಯಾನಗಳನ್ನು ಕೇಳಲಿಕ್ಕೆಂದು ಜನರು ಬಹುದೂರದಿಂದ ಬರುತ್ತಲಿದ್ದರು. ಅದೇ ಸಮಯದಲ್ಲಿಯೇ ರಾಷ್ಟ್ರೀಯ ಕಾಂಗ್ರೆಸ್ಸಿನ ವಿಚಾರವು ಅಲ್ಲಲ್ಲಿ ಹೊರಟಿತು. ಈ ಆಯ್. ಸಿ. ಎಸ್. ಪರೀಕ್ಷೆಯ ಚಳವಳವನ್ನು ಕೊನೆಗಾಣಿಸುವ ಉದ್ದೇಶದಿಂದ ಶ್ರೀ. ಲಾಲಮೋಹನ ಘೋಸರನ್ನೂ ಆ ಸಂಘದ ವತಿಯಿಂದ ವಿಲಾಯತಿಗೆ ಕಳುಹಿದರು, ಅವರ ವ್ಯಾಖ್ಯಾನವು ವಿಲಾಯತಿಯಲ್ಲಿ ಒಳ್ಳೇ ಪರಿಣಾಮಕಾರಕವಾಗಿ ೨೪ ತಾಸುಗಳಲ್ಲಿಯೇ ಈ ವಿಚಾರವು 'ಕಾಮನ್ಸ' ಸಭೆಯಲ್ಲಿ ಹೊರಟಿತು.

ಮುಂದೆ ಲಾರ್ಡ ಲಿಟನ್ ವಾಯಿಸರಾಯರ ಕಾಲದಲ್ಲಿ ವೃತ್ತಪತ್ರ ಮತ್ತು ಶಸ್ತ್ರಗಳ ಕಾನೂನುಗಳೂ, ಅಫಗಾಣ ಯುದ್ಧವೂ ಹಿಂದೀ ರಾಷ್ಟ್ರದಲ್ಲಿ ರಾಜಕೀಯ ಜಾಗ್ರತಿಗೆ ಕಾರಣವಾಗಿ, ದೇಶದಲ್ಲಿ ಮತ್ತೆ ಚಳವಳಿ ಎದ್ದಿತು. ಈ ಚಳವಳದ ಪರಿಣಾಮದಿಂದ ಲಾರ್ಡಲಿಟನ್ ಸಾಹೇಬರು ರಾಜೀನಾಮೆ ಕೊಡಬೇಕಾಯಿತು. ಲಾರ್ಡ ಗ್ಲ್ಯಾಡಸ್ಟನ್‌ರು ಸಹ ಈ 'ಭಾರತೀಯರ ಸಂಘದ' ಬಗ್ಗೆ ಇದ್ದ ತಮ್ಮ ವೈರತ್ವವನ್ನು ಬಿಟ್ಟು ಅವರ ಸಂಗಡ ಗೆಳೆತನವನ್ನು ಮಾಡಿದರು. "ಪ್ರೆಸ್ ಆ್ಯಕ್ಟ" ಮುಂದೆ ರದ್ದಾಯಿತು. ಅಫಗಾಣಯುದ್ಧದ ವೆಚ್ಚದ ಭಾರವೂ ಭಾರತೀಯ ಬೊಕ್ಕಸದಲ್ಲಿ ಕಡಿಮೆಯಾಯಿತು. ಇವೆಲ್ಲ ಕಾರ್ಯಗಳಿಂದ ಆ "ಸಂಘ" ಕ್ಕೆ ಬಹು ಮಾನವು ದೊರೆಯಹತ್ತಿತು.

ತಮ್ಮ ಸಾರ್ವಜನಿಕ ಕಾರ್ಯದಲ್ಲಿ ಅತ್ಯವಶ್ಯಕವೆಂದು, ೧೮೭೯ ರಲ್ಲಿ ಇವರು "ಬಂಗಾಲೀ" ವೆಂಬ ಇಂಗ್ಲೀಷ ದೈನಿಕ ಪತ್ರವನ್ನು ಕೈಯಲ್ಲಿ ತೆಗೆದುಕೊಂಡು, ಅದರ ಮುಖಾಂತರವಾಗಿ ಜನರಲ್ಲಿ ಒಳ್ಳೇ ಜಾಗ್ರತಿಯನ್ನುಂಟು ಮಾಡಿದರು. ಈ ವೃತ್ತಪತ್ರದಿಂದು ಅವರ ವರ್ಚಸ್ಸು ಬಂಗಾಲದಲ್ಲಿ ಅತಿಶಯವಾಗಿ ಬೆಳೆಯಿತು. ಅದನ್ನು ಕೈಯಲ್ಲಿ ತೆಗೆದು ಕೊಂಡಂದಿನಿಂದ ತಮ್ಮ ಬುದ್ಧಿಸಾಮರ್ಥ್ಯವನ್ನೆಲ್ಲ ಅದಕ್ಕೆ ನೀಡಿದರು.

೧೮೮೩ ರಲ್ಲಿ ಲಾಲಮೋಹನ ಘೋಸರ ಮಾನಹಾನಿಯ ಚಳವಳದಿಂದ ಸುರೇಂದ್ರ ಬಾಬುಗಳ ಸಾರ್ವಜನಿಕ ಚರಿತ್ರೆಯು ಬಹು ಘನತೆಗೇರಿತು. ಮುಂದೆ ಕಲಕತ್ತೆಯಲ್ಲಿ ಅಖಿಲ ಭಾರತೀಯರ ರಾಷ್ಟ್ರೀಯ ಪರಿಷತ್ತು ಕೂಡಿಸಲ್ಪಟ್ಟಿತು. ಎಲ್ಲ ಭಾಗದ ಭಾರತೀಯರು ಒಂದೆಡೆಗೆ ಕಲೆತದ್ದೆಂದರೆ ಇದೇ ಮೊದಲು.
ಮುಂದೆ ರಾಷ್ಟ್ರೀಯ ಮಹಾಸಭೆಯು ಸ್ಥಾಪನೆಯಾಯಿತು. ಅದರಲ್ಲಿಯಂತೂ ಸುರೇಂದ್ರ ಬಾಬುಗಳ ಕಾರ್ಯವೆಂದರೆ ಅದ್ವಿತೀಯವಾಗಿದ್ದಿತು. ಲಾರ್ಡ ಕರ್ಝನ್ನರ ಆಡಳಿತದಲ್ಲಿ ಸುರೇಂದ್ರ ಬಾಬುರವರು ತೋರಿಸಿದ ರಾಷ್ಟ್ರೀಯ ಪ್ರೇಮ, ಅಭಿಮಾನ, ಧೈರ್ಯ, ಕಾರ್ಯದಕ್ಷತೆಗಳಿಂದ ಅವರಿಗೆ ಬಂಗಾಲದ "ಅನಭಿಷಿಕ್ತರಾಜ" ನೆಂಬ ಪದವಿಯು ಬಂದಿತು.

ಮಾಂಟೆಗೂ-ಚೆಮ್ಸಫರ್ಡರವರ ಸುಧಾರಣೆಯ ವರೆಗೆ ಅವರು ಕಾಂಗ್ರೆಸ್ಸಿನಲ್ಲಿಯೇ ಇದ್ದರು. ಆದರೆ ಆ ಸುಧಾರಣೆಯ ವಿಚಾರದಲ್ಲಿ ಅವರು ಭಿನ್ನ ಮತದರಾದದರು ಕಾಂಗ್ರೆಸದ ಪ್ರೀತಿಯ ಬಂಧನಗಳಿಂದ ಮುಕ್ತರಾಗಿ, ಮುಂದೆ ಮಂದ ಪಕ್ಷಕ್ಕೆ ಸೇರಿ ಅಲ್ಲಿಯ ಮುಂದಾಳುಗಳಾದರು. ಅತ್ತಿಂದ ಈ ವರೆಗೆ ಅವರ ಚರಿತ್ರದ ಸಂಗತಿಗಳನ್ನಂತೂ ಎಲರೂ ಬಲ್ಲರು.

ಕನ್ನಡನಾಡಿನ ತಿರುಗಾಟ

ಮೊದಲನೇ ಅನುಭವ

ತಾಯ್ನುಡಿಯನ್ನು ಪ್ರೀತಿಸುವವರನ್ನೂ, ಆದರಿಸುವವರನ್ನೂ, ಅಭಿಮಾನದಿಂದ ಮೈಮರೆಯುವವರನ್ನೂ, ಶಿಕ್ಷಿಸಿದ್ದನ್ನು ಕೇಳಿದ್ದಿಲ್ಲ. ಆದರೆ ಇಂದು ಕಂಡದ್ದಾಯ್ತು. ಭತಗುಣಕಿಯು ಇಂಡಿ ತಾಲೂಕಿನಲ್ಲಿ ಒಂದು ಹಳ್ಳಿಯಾಗಿದ್ದರೂ ಅದು ಜಹಾಗೀರಿನ ಊರು. ಈಗಿನ ಜಹಗೀರದಾರರಿಗೆ ಅದು ಹೇಗೆ ಹೇಗೆ ಬಂತೆಂದು ಬಣ್ಣಿಸಿ ಬರೆದರೆ ಅದೊಂದು ಇತಿಹಾಸವೇ ಆಗುವದಾಗಿದೆ. ಆದರೆ ಅದೇನು ಇಲ್ಲಿ ಬೇಡ. ಈಗಿನ ಮೋಜನ್ನು ಮಾತ್ರ ನೋಡುವಾ. ಭತಗುಣಕಿಯಲ್ಲಿ ೫೦೦ ರಷ್ಟು ಮನೆಗಳಿದ್ದು ೩೦೦೦ ದಷ್ಟು ಜನಸಂಖ್ಯೆಯಿದ್ದು, ೨೯೦೦ ರಷ್ಟು ಅಚ್ಚಗನ್ನಡಿಗರೇ ಇದ್ದು, ೧೦೦ ರಷ್ಟು ಜನರು ಮಾತ್ರ ಮರಾಠೀ ಜನರಿರುವರು. ಅಲ್ಲಿಯ ಜಹಗೀರದಾರರು ಕೊಂಕಣಸ್ಥರು. ಅಲ್ಲಿಯ ಕನ್ನಡ ಶಾಲೆಯನ್ನು ತೆಗೆದು ಹಾಕಿ ಮರಾಠೀ ಶಾಲೆಯನ್ನೇ ಸ್ಥಾಪಿಸಬೇಕೆಂದು ಇವರ ದುರಾಗ್ರಹ. ಇದಕ್ಕೆ ಅವರ ಅಧಿಕಾರದ ಬೆಂಬಲ. ಇವರ ಈ ಅನ್ಯಾಯದ ಪ್ರಯತ್ನವನ್ನು ನಡೆಯಗೊಡಬಾರದೆಂದು ಊರವರೆಲ್ಲರ ಹೋರಾಟ. “ಪುಣೆ ಮುಂಬೈಗಳಲ್ಲಿ ಸಾವಿರಾರು ಜನ ಕನ್ನಡಿಗರಿದ್ದಾರೆ ಅಲ್ಲಿ ಕನ್ನಡ ಶಾಲೆ ಇಲ್ಲ. ಪುಣೆ ಮುಂಬೈಯಲ್ಲಿ ಕನ್ನಡ ಶಾಲೆ ಪ್ರಾರಂಭವಾದ ಮರುದಿನವೇ ಇಲ್ಲಿಯೂ ೧೦—೧೨ ಹುಡುಗರಿಗಾಗಿ ಮರಾಠೀ ಶಾಲೆ ಪ್ರಾರಂಭವಾಗಲಿ. ಸಂತೋಷ” ಹೀಗೆಂದು ಊರ ಜನರ ಹೇಳಿಕೆ. ಹೀಗಾಗಿ “ಗಂಡಹೆಂಡರ ನಡುವೆ ಕೂಸು ಗಾಸಿಯಾಯಿತೆ” ಎಂಬಂತೆ ಪಾಪ! ಓರ್ವ ಮೂರನೇ ವರ್ಷದ ಮಾಸ್ತರರು ಗಾಸಿಯಾಗಬೇಕಾಗಿದೆ. ಮಾಸ್ತರರಿಗೆ ಕನ್ನಡ ಅಭಿಮಾನ ಬಹಳ. ಎಂದೂ ಪ್ರತ್ಯಕ್ಷವಾಗಿ ಬಡಿದಾಡ ನಿಂತವರಲ್ಲ. ಹೆಚ್ಚಾಗಿ ಕನ್ನಡವನ್ನೇ ಓದುವದು. ಹೀಗೆ ತಮ್ಮಷ್ಟಕ್ಕೆ ತಾವಿದ್ದು ಕೊಂಡವರು. ಆದರೂ ಅವರೇ ಹಣ್ಣಾಗ ಬೇಕಾಗಿದೆ! ಯಾಕೆಂದಿರೋ? ಕೇಳಿ. ಈ ಶಿಕ್ಷಕರೇ ಊರ ಜನರಿಗೆ ಒಳಗಿಂದೊಳಗೆ ಕಲಿಸಿಕೊಡುವವರೆಂದು ಇವರ ಮೇಲೆ ಆರೋಪ. ಸಾಲದ್ದಕ್ಕೆ ಜಹಗೀರದಾರರೂ ಕೊಂಕಣಸ್ಥರು; ಹೆಡ್ಡಮಾಸ್ತರರೂ ಕೊಂಕಣಸ್ಥರು, ಮೇಲಿನ ಡೆಪ್ಯೂಟಿ ಸಾಹೇಬರೂ ಕೊಂಕಣಸ್ಥರು. ಹೀಗಾಗಿ ಅವರಿಗೆ ಗೋಳು ಬಂದಿದೆ.

ಮೊಟ್ಟಮೊದಲು ಈ ಶಿಕ್ಷಕರೇ ಅಲ್ಲಿಯ ಹೆಡ್ಡ ಮಾಸ್ತರರಾಗಿದ್ದರು. ಮರಾಠಿ ಕನ್ನಡದ ಗದ್ದಲವೆಂದಲೋ ಏನೋ ಅವರನ್ನು ಅಸಿಸ್ಟಂಟರ ಸ್ಥಳಕ್ಕೆ ಅಟ್ಟಿದರು. ಈಗಲಾದರೂ ಮತ್ತಾವ ಕಾರಣದಿಂದಲೋ ಅವರಿಗೆ ಒಂದು ತಿಂಗಳದ ಇಡೀ ಪಗಾರ ಕೊಡದೇ ಈಗಿದ್ದ ಪಗಾರದಲ್ಲಿ ೨ ರೂ. ಕಡಿಮೆಮಾಡಿ ಎರಡನೇ ಕಡೆಗೆ ವರ್ಗ ಮಾಡಿ ಬಿಟ್ಟಿದ್ದಾರೆ! ಮುಂದು ಬಿದ್ದು ಕೆಲಸ ಮಾಡದೆ ಕೇವಲ ಅಭಿಮಾನದಿಂದ ಕನ್ನಡವನ್ನು ಪ್ರೀತಿಸಿದ್ದಕ್ಕೇ ೭೦ ರೂ. ದಂಡವೋ! ಹೇಗೋ! ಏನೋ! ಇದೊಂದು ಹೊಸ ಬಗೆಯ ರಾಜದ್ರೋಹವೇ ಆಯಿತೋ ಏನೋ!

ಶ್ರೀ| ಕಂಬಳಿ ಬಿ. ಎಸ್. ಪಾಟೀಲ, ಹುಲಕೋಟಿ, ಆಲೂರ, ಕಡಪಾ ಇವರೇ ಮೊದಲಾದ ಬ್ರಾಹ್ಮಣ ಬ್ರಾಹ್ಮಣೇತರರು “ಕರ್ನಾಟಕ ಏಕೀಕರಣ” ಕನ್ನಡ ನುಡಿಯ ಏಳಿಗೆಗಾಗಿ ದುಡಿದು ದಣಿಯುತ್ತಿರುವರು! ಅವರಿಗೆ ಇನ್ನಾವ ಶಿಕ್ಷೆವಿಧಿಸಬೇಕು? ಅವರ ಆಸ್ತಿ ಉತ್ಪನ್ನವನ್ನೇ ದಂಡ ಮಾಡಿ ಆ ಜನ್ಮ ಕರ್ನಾಟಕದಿಂದೇ ವರ್ಗಮಾಡಿ ಬಿಡಬೇಕಾಗುವದಲ್ಲವೆ?

ಹೇಗಿದೆ ನೋಡಿ! ಅಧಿಕಾರದ ಬಲ! ಹೇಗಿದೆ ನೋಡಿ ಸರಕಾರದ ಛಲ!!

“ತಿರುಗಲ”

“ನಾಟಕ ವೆಂದರೇನು”

‘ನಾಟಕವೆಂದರೇನು ಮಗುವೆ’ ಎಂದು ತಮ್ಮಯ್ಯನಿಗೆ ಒಮ್ಮೆ ಕೇಳಿದೆನು.

‘ಅಲ್ಲಿ- ದೊಡ್ಡ ಮನೆಯಲ್ಲಿ ಮಾಡುವರು- ಅದಲ್ಲವೆ?’ ಎಂದು ಉತ್ತರ ಬಂದಿತು.

‘ಅಹುದು; ನಾಟಕವೆಂದೇಕೆ ಅದನ್ನು ಕರೆವರು? ಊರಲ್ಲಿ ಬೇರೆ ದೊಡ್ಡ ಮನೆಗಳಿಲ್ಲವೆ?’ ಎಂದು ಕೇಳಲು ತಮ್ಮಯ್ಯನು ಮುನ್ನಾ ದಿನವೆ ನೋಡಿದ ನಾಟಕವನ್ನು ನೆನಿಸಿ, “ಅಲ್ಲೋ! ಅಲ್ಲಿ ಆಡುವವರು ಎಷ್ಟು ಚಲುವೆಯರೂ- ಕೆಂಪಾಗಿಯೂ ಇರುವರು ನೋಡು! ಅವರ ಅಂಗಿ- ಅರಿವೆಗಳೆಲ್ಲ ರಾಜರಂತೆ ನೋಡವಾ! ಅಲ್ಲಿದ್ದ ಹೆಂಗಸು- ಮೊನ್ನಿನ ರಾಧೆಯು- ನಮ್ಮ ತಂಗಿಯಕಿಂತ ಬಲು ಸೊಬಗ- ಬಲು ಸೊಗಸು? ಮತ್ತೆ ಆ ಕೃಷ್ಣನ ಕೊಳಲ ದನಿಯೂ ರಾಧೆಯ ಮಧುರಗಾನವೂ ಬಹು ಇಂಪಲ್ಲವೆ ಕಿವಿಗೆ?” ನಾನೆಂದೆನು- “ಹುಚ್ಚಾ, ಇದೆಲ್ಲವನ್ನೂ ಇಲ್ಲಿಯೇ ತೋರಿದರೆ ನಾಟಕಕ್ಕೆ ಹೋಗುವದಿಲ್ಲವೆ? ಮೇಲಿಂದ ಮೇಲೆ ಹಬ್ಬಗಳು ಬರುವವು. ಅದೇ ಮೊನ್ನೆ ಗೌರಿಯ ಹೂವಿಳ್ಯವಾಯಿತು! ಕಂಡಿಯಾ ಹೆಣ್ಣು ಮಕ್ಕಳು ಎಷ್ಟು ಸಿಂಗಾರವಾಗಿ ಜರಸೀರೆಗಳನ್ನುಟ್ಟು ಬಂದಿದ್ದರು. ಅವ್ವನಾದರೂ ಎಷ್ಟು ಸರಸಾಗಿ ಹಾಡಿದಳು. ಇನ್ನೊಂದು. ನಾಟಕದೊಳಗೆ ಬಣ್ಣ ಬಡಕೊಂಡು ಅಷ್ಟೊಂದು ಸುಂದರ ಕಾಣುವರು! ತಿಳಿಯಿತೆ! ನಿಜವಾದ ಸ್ತ್ರೀಯರಲ್ಲ, ಅವರು; ಅಂದಮೇಲೆ ನಿದ್ದೆ ಕಡೆದು ನಾಟಕವನ್ನು ನೋಡಲು ಎಡತಾಕುವದು ಯಾಕೆ?”

ಆಗ ತಮ್ಮಯ್ಯನು ತಲೆತುರಿಸಿ, ತನ್ನದೇ ಹಿಡಿಯುತ್ತ ಒಳೆ ಮನಸ್ಸಿನಿಂದ ನುಡಿದನು.

“ಅಣ್ಣಾ ನೀನು ಏನೇ ಅನ್ನು! ನಾಟಕವನ್ನು ನೋಡಬೇಕು. ಇಕೋ ಅಲ್ಲಿಯವರು ನಮ್ಮಂತೆಯೇ ಎಲ್ಲ ಮಾಡುವರು. ನಮ್ಮಕ್ಕನು ಅಕ್ಕೀಕಾಳು ಆರಿಸುವಾಗ ನಾಚಿ ತಲೆಬಾಗಿಸಿದಂತೆಯೇ ಆ ರಾಧೆ ಕೃಷ್ಣನೆಡೆಯಲ್ಲಿ ಮಾಡಿದಳು ನೋಡು! ಅಪ್ಪನು ಬಂದ ಕೂಡಲೆ, ಅವ್ವನು ಹೇಗೆ ಕೈಯಲ್ಲಿದ್ದ ಕೆಲಸವನ್ನು ಬಿಟ್ಟು ಒಳಗೆ ಹೋಗುವಳು? ಹಾಗೆಯೇ ರಾಧೆಯಾದರೂ ಕಿಟ್ಟ ಮೂರ್ತಿಯು ಬಂದೊಡನೆ ದೂರ ದೂರ ಸರಿಯುವಳು. ಆ ನಗೆಮೋರೆಯನ್ನು- ಒಮ್ಮೆ ಅಳು ಮೋರೆಯನ್ನು ನಹ- ತರುವದು ಬಹಳ ಹೆಚ್ಚಿನ ಕೆಲಸವಪ್ಪಾ! ಮತ್ತೊಂದು! ನಾನು ಹಟಮಾಡಿ ಅವ್ವನನ್ನು ಕೆರಳಿಸಿಡುವಂತೆ ಕಿಟ್ಟನು ಯಶೋದೆಯ ಜೀವವನ್ನೇ ತಿಂದು ಬಿಡುವನು! ಅವನ ತುಂಟಿಯಾದರೂ ಎಷ್ಟವಾ! ನಾನೇ ಹಿರಿತುಂಟನೆಂದು ಮಾಡಿದ್ದೆ! ನನ್ನ ಕೆಲ-ಕೆಲ ಮತ್ತೂ ಹೆಚ್ಚು ಕಲಿತಂತಾಯಿತು! ಇದಲ್ಲದೆ ಅಲ್ಲಿ ಒಮ್ಮೊಮ್ಮೆ ನಗಿಸುವರು- ಒಮ್ಮೊಮ್ಮೆ ಅಳಿಸುವರು! ಆ ವಿಜಯನ ಮಾತಿಗೆ ನಾನು ಬಲು ನಕ್ಕೆನಪ್ಪಾ! ಇತ್ತ ನನಗಂತೂ ಹೀಗಾಗಿತ್ತು! ಇವರೇ ನಿಜವಾಗಿ ರಾಧಾ ಕೃಷ್ಣರೇನೋ! ಕಡೆಕಡೆಗೆ ರಾಧೆಯು ತನ್ನ ಕಿಟ್ಟರಾಯನನ್ನು ಕೂಡಿ, ಆನಂದದಿಂದ ಹಾಡುತ್ತ ನಿಂತಿರಲು ನಾನಂತೂ ಅವರಿಗೆ ನಮಸ್ಕಾರ ಮಾಡಿದೆನು. ನಿನ್ನೆಯಿಂದ ನನ್ನಲ್ಲಿ ದೇವರೆಂಬ ವಿನಯಬುದ್ಧಿ ಹುಟ್ಟಿದೆ. ಗುಡಿಯಲ್ಲಿ ದೇವರನ್ನು ಕಂಡ ಕೂಡಲೆ, ಆ ನಾಟಕದೊಳಗಿನ ಭಕ್ತಿಯು ನನಪಾಗಿ ಕಣ್ಣಮುಂದೆ ಬರುವದು. ನಾಟಕದಿಂದ ಒಳ್ಳೆ ಕಲಿತೆನಪ್ಪಾ! ಇನ್ನೊಂದಾದರೂ ತೋರಿಸಬಾರದೆ.”

“ರಂಗಣಿ ರಂಗ”

ವಾಙ್ಮಯ ವಿಚಾರ

(ಓರ್ವ ತುಲನೀಯ)

: ಲೀಲೆ

ಕಟ್ಟುಗಾರ:— ಪುಂಡೂರ ಲಕ್ಷ್ಮೀನಾರಾಯಣ

ಪುಣಿಂಚಿತ್ತಾಯ ಮಂಗಳೂರ

‘ ಅಪಾರವುಹಿಮನಾದ ಆ ಮಾಯಾವಿಯ ವಿವಿಧ ವಿಲಾಸವನ್ನು ಕೊಂಡಾಡುವುದೇ ’ ಈ ಕಾವ್ಯದ ಉದ್ದೇಶವು. ಇದರಲ್ಲಿ ಮಾಯಾಲೀಲೆ,ಭವಲೀಲೆ,ದಾನಲೀಲ ಎಂಬ ಮೂರು ಹಾಡುಗಳಿವೆ, ಈ ಹಾಡುಗಳಲ್ಲಿ ಕನಕ ಪುರಂದರ ದಾಸರ ಛಾಯೆಯೇ ಹೆಚ್ಚಾಗಿರುತ್ತದೆ. ಛಾಯೆಯಲ್ಲಿ ಕೂಡ ಸೊಬಗಿಲ್ಲ. ಕಿಗ್ಗಳತನವು ಅಗ್ಗವಾಗಿದೆ. ಓದುವಾಗ, ಹಳೇ ಹಾಡುಗಳನ್ನು ಓದಿದಂತಾಗುತ್ತದೆ. ಉದಾ:—

ನರಕೇಸರಿಯೆ | ನಿನ್ನಯ ಮಾಯಾ |
ಜರಿತೆಯ ನಾನರಿಯೆ || ಪ || (ಲೀಲೆ)

ನಿನ್ನ ಮಾಯಾ ತಿಳಿಯದಯ್ಯಾ | ಶ್ರೀಹರಿಯೇ |
ನಿನ್ನ ಮಾಯಾ ತಿಳಿಯುವಯ್ಯ || (ಪುರಂದರ)

ಮಾಯೆ ನಿನ್ನೊಳಗಂತೆ | ನೀ ಮಾಯೆಯೊಳಗಂತೆ |

ಇನ್ನೇ ಮೊದಲಾದ ಭಾವಗಳು ದಾಸರವೆಂಬುದೇನೋ ನಿಜ. ಆದರೂ ಇವು ಕವಿಗಿದ್ದ ಪರಮಾತ್ಮನ ವಿಷಯದಲ್ಲಿಯ ಹಂಬಲವನ್ನು ವ್ಯಕ್ತಪಡಿಸುತ್ತವೆ.

ರಾಷ್ಟ್ರಗೀತಾ ರತ್ನಾಕರ

ಸಂ. ಪುಣಿಂಚಿತ್ತಾಯರವರು

ಅಸಹಯೋಗದ ಚಳುವಳಿಯು ಪ್ರಾರಂಭವಾಗಲು, ಹುರುಪುಗೊಂಡು ಕವಿಗಳು ಈ ಗೀತೆಗಳನ್ನು ಬರೆದರು. ಇದೊಂದು ಪದ್ಯರೂಪದಲ್ಲಿದ್ದ ಘಟನೆಗಳ ಆವಳಿ (Catalogue of events) ಯೆಂದು ಹೇಳಬಹುದು. ಕೆಲವೆಡೆಯಲ್ಲಿ ಕಾವ್ಯವು ಪ್ರಾಸಾದಿಕವಾಗಿ ಒಪ್ಪುತ್ತದೆ. ಉದಾ:

ಕತ್ತಿಯಿಂ ಕಡಿಕಡಿದು, ಸಿಗಿದು, ಕಣ್ಣಿಣದಂತೆ |
ಗಿತ್ತರೂ, ಸಿಹಿನೀರನಿವುದಲ್ಲದೆಯೆ |
ಸುತ್ತಿ ಬೆಂಕಿಯ ಬಾಯ್ಗೆ ತುತ್ತಾದರೂ-ಬೆಲ್ಲ |
ಮಿತ್ತು ಮೇಲಿಪಾ ಕಬ್ಬಿನಂತೆ ಗುಣವಿರುವ || ಗಾಂಧಿ ||

ಇವರು ವೃತ್ತ ಬದ್ಧವಾದ ಪದ್ಯಗಳನ್ನು ಬರೆಯುವದಕ್ಕೆ ಕಲಿತಿದ್ದಾರೆ.

ನೀತಿವಲ್ಲರಿ

ಸ:— ಸುರತಕಲ್ ಸುಬ್ಬರಾವ ಕರ್ನಾಟಕ ಪಂಡಿತ ಬೋರ್ಡ್ ಹೈಸ್ಕೂಲ್ ಕಾಸರಗೋಡು.

ಮುನ್ನಂ ಸಕ್ಕದ ಕಬ್ಬಿಗ
ರೆನ್ನಿಸಿತೋ ನೀತಿ ಪೇಳ್ದರದರೊಳ್ ಕೆಲವಂ ||
ಕನ್ನಡನುಡಿಯಿಂ ಪೂರೆದಂ |
ಕನ್ನಡಿಗರ್ ಕಲಿಸುಳಿದು ಪೋದುಗೆ ಮುದದಿಂ |

ಎಂದು ಸಂಪಾದಕರು ಇದಕ್ಕೆ ಕಾವ್ಯವೆಂದು ಹೇಳಿಕೊಂಡಿದ್ದಾರೆ. ರಸಭಾವಗಳ ಸಂಚಾರವಿಲ್ಲದ್ದು, ಕಾವ್ಯವಲ್ಲವೆಂದು ನಮ್ಮ ತಿಳುವಳಿಕೆ. ಇರಲಿ. ಇದರಲ್ಲಿ ವಿದ್ಯೆ ಪೂರ್ವ ಪದ್ಧತಿ, ಧರ್ಮ ದೈವ, ಉದ್ಯಮ ಇವೇ ಮೊದಲಾದ ೧೭ ವಿಷಯಗಳ ಬಗ್ಗೆ ಕವಿತೆಗಳಿವೆ. ಈ ಪದ್ಯಗಳಲ್ಲಿ ಬಹಳ ಭಾಗವು ಸಂಸ್ಕೃತದ ಅನುವಾದವಿರುವದು. ಮೂಲದ ಸೌಂದರ್ಯವು ಚನ್ನಾಗಿ ಮೂಡಿರುವದಿಲ್ಲ.

ತರ ತರದಾಭರಣಂಗಳಿ |
ಪರಿಮಳ ನೀರ್ನಿವು ಲೆಪ್ಪಮುಂ ಪೂ ಮೊದಲಾ ||
ಗಿರುವಾ ಸೊಬಗುಂ ಸೊಬಗ |
ಲ್ಲಾರಯುಲ್ ನುಡಿ ಸೊಬಗೆ ಸೊಬಗು ಮಾನವಗೆಂದುಂ ||

ಇದು ‘ಕೇಯೂರಾ’ ನ ವಿಭೂಷಯಂತಿ ಪುರುಷಂ ’ ಎಂಬ ಸಂಸ್ಕೃತ ಶ್ಲೋಕದ ಅನುವಾದವಿರುತ್ತದೆ. ಮೂಲವನ್ನೂ ಅನುವಾದವನ್ನೂ ಬಲ್ಲವರು ಹೋಲಿಸಿ ನೋಡಬಹುದು. ಕೆಲವೆಡೆಯಲ್ಲಿ ಹಳೆಗನ್ನಡದ ಪದಗಳನ್ನು ಪಯೋಗಿಸಿದ್ದರಿಂದ, ಶಬ್ದಸೌಷ್ಟವಕ್ಕೆ ಕುಂದುಂಟಾಗಿದೆ.

೩೦ ನೇಯ ಪದ್ಯದ ಮೂರನೇಯ ನಾಲ್ಕನೇಯ ಚರಣಗಳಲ್ಲಿಯೂ ೭೯ ನೇಯ ಪದ್ಯದ ಕಡೆಯ ಚರಣದಲ್ಲಿಯೂ ಇರುವ ವೃತ್ತ ದೋಷಗಳು ಅಕ್ಷಮ್ಯವಾಗಿವೆ.

‘ ನೈತಿಕ ಕಾವ್ಯ ’ ಈ ದೃಷ್ಟಿಯಿಂದ ಪದ್ಯಗಳು ಓದಲರ್ಹವಾಗಿವೆ.

ಬಾಲ್ಯ ನಾಟ್ಯ ಮಾಲಿಕೆ.

ಸಂಪಾದಕ:— ಸುಬ್ಬಣಾಚಾರ್ಯ ಅಣಬುದ್ದಿ ಧಾರವಾಡ.

ಬಾಲ್ಯ ನಾಟ್ಯ ಮಾಲಿಕೆಯ ‘ ಶಿಬಿಚಕ್ರವರ್ತಿ ’ ‘ ಘೋಷಯಾತ್ರೆ ’ ‘ ಸ್ಯಮಂತಕ ಮಣಿ ’ ಎಂಬ ಮೂರು ಪುಸ್ತಗಳು ತಲ್ಪಿವೆ. ಇವು ಪ್ರಾಥಮಿಕ ಶಾಲೆಗಳ ಉಪಯೋಗಕ್ಕಾಗಿ ಬರೆದ ಚಿಕ್ಕ ನಾಟಕಗಳು ‘ ಎಳೆಯ ಪಾತ್ರಗಳನ್ನು ಸಂಭಾಷಣೆಯ ರೂಪವಾಗಿ ಅಂದರೆ ನಾಟಕದಂತೆ ರಚಿಸಿದಲ್ಲಿ ಚಿಕ್ಕವರು ಅಕ್ಕರತೆಯಿಂದ ಓದಿ ಅದರಲ್ಲಿಯ ನೀತಿಯನ್ನು ಗ್ರಹಿಸುವರೆ ’ ಎಂಬದರ ಮೇಲಿಂದ ಈ ನಾಟ್ಯ ಮಾಲೆಯ ಉದ್ದೇಶವು ಸ್ಪಷ್ಟವಾಗುತ್ತಿದೆ. ಈ ಚಿಕ್ಕ ನಾಟಕಗಳ ಕಥಾಸಂವಿಧಾನಗಳು ಪುರಾಣದಿಂದ ಉದ್ಧೃತವಾದವುಗಳು. ಭಾಷೆಯು ಸರಳವಾಗಿದೆ, ಚಿಕ್ಕಮಕ್ಕಳಿಗೆ ಸಲ್ಲತಕ್ಕಂತಹದಿರುತ್ತದೆ. ಘೋಷ ಯಾತ್ರೆಯಲ್ಲಿಯ ಗವಳಿಗನು ಈಗಿನ ಕಾಲದವನಾಗಿ ತೋರುತ್ತಾನೆ. ‘ ಸ್ಯಮಂತಕ ’ ದಲ್ಲಿರುವ ಜೋಯಿಸರು ‘ ವಕ್ರತುಂಡ ’ ವೆಂಬ ವಾಕ್ಯಕ್ಕೆ ಮಾಡಿದ ವಿವರಣವು ವಸ್ತುಸ್ಥಿತಿಯನ್ನು ಚಿತ್ರಿಸುತ್ತದೆ. ಇರಲಿ, ಮುದ್ರಣ ದೋಷಗಳು ಅಲ್ಲಲ್ಲಿಗೆ ಒಡೆದು ಕಾಣುತ್ತಿವೆ. ಕಾಗದಗಳು ಚೆನ್ನಾಗಿಲ್ಲ. ಕಟ್ಟಿನ ಕತೆಯನ್ನು ಕೇಳುವರಾರು? ಬಾಲಕಂಗಾಗಿ ಅಂದವಾದ ಹೊತ್ತಿಗೆಗಳನ್ನು ಮುದ್ರಿಸುವದು ಒಳ್ಳೆಯದು.

ತಾರಿನಿಂದ ಬಂದದ್ದು.

ವೀರಶೈವ ಪರಿಷತ್ತು ನೆಲಮಂಗಲದಲ್ಲಿ ಮೊನ್ನೆ ಸೇರಿದ್ದಿತು. ಅದರ ಅಧ್ಯಕ್ಷರಾದ ಶ್ರೀ ಚಂದ್ರಶೇಖರಯ್ಯನವರು ಕೆಳಗಿನ ತಂತಿಯನ್ನು ಮೈಸೂರ ಮಹಾರಾಜರಿಗೆ ಕಳಿಸಿದ್ದಾರೆ:— ನೆಲಮಂಗಲ ತಾಲೂಕ ವೀರಶೈವರ ಸಭೆಯಲ್ಲಿ ಈ ಬಗೆಯ ಠರಾವು ಸ್ವೀಕಾರವಾಗಿದೆ:— “ ಯಾರೂ ಕಟುಕರಿಗೆ ದನಗಳನ್ನು ಮಾರಕೂಡದು ದುರ್ಬಲ ಪ್ರಾಣಿಗಳನ್ನು ರಕ್ಷಿಸಬೇಕು. ಸುತ್ತು ಶ್ರೀಮನ್ ಮಹಾರಾಜರು, ಇನ್ನು ಮೇಲೆ ಮೈಸೂರ ಸಂಸ್ಥಾನದಲ್ಲಿ ಆಕಳಗಳನ್ನು ಕೊಲ್ಲಬಾರದಾಗಿ ಕೂಡಲೇ ಅಪ್ಪಣೆಕೊಡಬೇಕೆಂದು ವಿನಯಪೂರ್ವಕವಾಗಿ ಮಹಾರಾಜರಿಗೆ ಪ್ರಾರ್ಥಿಸುತ್ತೇವೆ. ” ವೀರಶೈವರಿಗೂ ಕರ್ನಾಟಕಕ್ಕೂ ಈ ಬಗೆಯ ಪ್ರಯತ್ನಗಳು ಭೂಷಣ.

ವರ್ತಮಾನ ಸಾರ.

ಇಹವೃತ್ತ

ಸುತ್ತಲಿನ ಹಳ್ಳಿಗಳಿಗೆ ಕೆಲವು ಕಡೆ ಮಳೆಯಾಗಿದೆ. ಬಾಗಲಕೋಟೆಗೆ ಮಾತ್ರ ಮಳೆಯಿಲ್ಲ. ಶಹರದಲ್ಲಿ ಜ್ವರವು ಹೆಚ್ಚಾದ್ದರ ಫಲವಿರಬಹುದೇ?

ತಪ್ಪು ತಿದ್ದುವಿಕೆ:—ಕಳೆದವಾರದಲ್ಲಿ ಹಿಂದೂ ಮುಸಲ್ಮಾನರ ದಂಗೆಯಲ್ಲಿ "ಲಿಂಗಾಯತ" ಕೈದಿಗಳು ಎಂಬದಾಗಿ ತಪ್ಪಿಬಿದ್ದಿದೆ. ಅದು "ಹಿಂದೂ" ಕೈದಿಗಳೆಂದು ಇರಬೇಕಿತ್ತು. ಯಾಕಂದರೆ ವೈಶ್ಯ, ಮರಾಟಾ, ಗೊಂದಲಿಗರೂ ಅವರಲ್ಲಿರುವರು. ಈ ವಿಷಯವನ್ನು ನಮ್ಮ ಮಿತ್ರರಾದ ಶ್ರೀ. ಸಕ್ರೋಜಿ ನಿಂಗಪ್ಪನವರು ನಮ್ಮ ಲಕ್ಷ್ಯಕ್ಕೆ ತಂದುಕೊಟ್ಟದ್ದಕ್ಕಾಗಿ ನಾವು ಅವರಿಗೆ ಆಭಾರಿಯಾಗಿದ್ದೇವೆ

ಹೊಂಬಳ ನಾಟಕ ಮಂಡಲದವರು ವಿಜಾಪುರಕ್ಕೆ ಹೋಗಿದ್ದಾರೆ ಕೊಣ್ಣೂರ ತರುಣ ಸಂಗೀತ ನಾಟಕ ಮಂಡಲದವರ ಪ್ರಯೋಗಗಳು ನಿಡಗುಂದಿಯವರ ನಾಟಕಶಾಲೆಯಲ್ಲಿ ನಡೆದಿವೆ. ವಾಮನರಾವ ಮಾಸ್ತರರ ವಿಶ್ವಗುಣಾದರ್ಶ ನಾಟಕ ಮಂಡಲಿಯವರ ಪ್ರಯೋಗಗಳು ರಾಜನಾಟಕಶಾಲೆಯಲ್ಲಿ ಶುಕ್ರವಾರದಿಂದ ನಡೆಯುವವು ನಾಳಿನ ಪ್ರಯೋಗವು ಪುಂಡಲೀಕ.

ಇಲ್ಲಿಯ ತರುಣ ವಕೀಲರಾದ ಶ್ರೀ. ಪಾಟೀಲ ಶಂಕರಗೌಡರು ಈ ಸಾರೆಯ ಲೋಕಲ್ ಬೋರ್ಡ ಚುನಾವಣೆಯಲ್ಲಿ, ಜಿಲ್ಲಾ ಮತ್ತು ತಾಲೂಕ ಬೋರ್ಡುಗಳೆರಡಕ್ಕೂ ನಿಲ್ಲುವೆವೆಂದೂ, ತಾವು ಆರಿಸಿ ಬಂದಲ್ಲಿ ಕಳಗೆ ಕಾಣಿಸಿದ ವಿಷಯಗಳಿಗೆ ಮೊದಲು ಗಮನಕೊಡುವೆವೆಂದೂ ಬರೆದು ತಿಳಿಸುತ್ತಾರೆ:— (೧) ಒತ್ತಾಯದ ಪ್ರಾಥಮಿಕ ಶಿಕ್ಷಣ (೨) ಹೊಸ ಕರಗಳನ್ನೆಲ್ಲ ವಿರೋಧಿಸುವದು (೩) ನೀರಿಲ್ಲದ ಸ್ಥಳಗಳಿಗೆ ನೀರಿನ ವ್ಯವಸ್ಥೆ ಮಾಡಿಕೊಡುವದು. (೪) ಬಡಜನರಿಗೆ ವೈದ್ಯಕೀಯ ಉಪಚಾರ ದೊರೆಯುವದು (೫) ಅನಾವಶ್ಯಕವಾದ ವೆಚ್ಚವನ್ನೆಲ್ಲ ನಿಲ್ಲಿಸುವದು (೬) ಶಾಲಾಧ್ಯಾಪಕರ ಪಗಾರವು ಕಾಲಕಾಲಕ್ಕೆ ದೊರೆಯುವಂತೆ ಏರ್ಪಾಡ ಮಾಡುವದು.

ಮುಂಬೈ ಕರ್ನಾಟಕ

ಅಮೇರಿಕೆಯಿಂದ ಮರಳಿ ಬಂದ ಡಾ ಕೊಕಟನೂರ ಇವರು ಬೆಳಗಾವಿಯಲ್ಲಿ ಆಧುನಿಕ ಪದ್ಧತಿಯ ಮೇಲೆ ಒಂದು ಚಿಕಿತ್ಸಾಲಯವನ್ನು ತೆಗೆದಿದ್ದಾರೆ ಶಸ್ತ್ರಕ್ರಿಯೆಯಲ್ಲಿ ಇವರು ನಿಷ್ಣಾತರು ಈ ಬಗ್ಗೆ ಆಧುನಿಕ ಶಾಸ್ತ್ರಜ್ಞರು ಶೋಧಿಸಿದ ಅನೇಕ ಬಗೆಯ ಕೌಶಲ್ಯವಾದ ಶಸ್ತ್ರಗಳನ್ನೆಲ್ಲ ಇವರು ಸಂಗ್ರಹಿಸಿದ್ದು ಆಸ್ಪತ್ರೆಯ ಕೋಣೆಯು ನೋಡುವಹಾಗಿದೆ. ಬಡಜನರಿಗೆ ಇಲ್ಲಿ ಪುಕ್ಕಟೆಯಾಗಿ ಚಿಕಿತ್ಸೆ ದೊರೆಯುವದು

ಶ್ರೀ. ಕರ್ವೇಯವರು ಹಿಂದೀ ಸ್ತ್ರೀ ವಿಶ್ವವಿದ್ಯಾಲಯದ ಸಹಾಯಕ್ಕಾಗಿ ಕಾರವಾರ ಜಿಲ್ಲೆಯನ್ನು ಸಂಚರಿಸಿದರು. ಕರ್ನಾಟಕದಲ್ಲಿಯ ಹಣದಿಂದ ಮಹಾರಾಷ್ಟ್ರದ ಸಂಸ್ಥೆಗಳು ನಡೆಯಬೇಕು! ಶ್ರೀ. ಕರ್ವೇಯವರಿಗೆ ಹಣಬೇಕಾದಾಗ್ಗೆ ಕರ್ನಾಟಕವು ನೆನಪಾಗುತ್ತದೆ. ಆದರೆ, ಆ ಸ್ತ್ರೀ ವಿದ್ಯಾಲಯದಲ್ಲಿ ಕನ್ನಡ ನುಡಿಗೆ ಆಸ್ಪದಕೊಡಲಿಕ್ಕೆ ಅಥವಾ ಕರ್ನಾಟಕಸ್ಥರ ಸಲುವಾಗಿ ಒಂದು ಸ್ವತಂತ್ರ ಶಾಖೆಯನ್ನು ಕನ್ನಡನಾಡಿನಲ್ಲಿ ತೆಗೆಯುವದಕ್ಕೆ ನೆನಪಾಗುವದಿಲ್ಲ' ಗುಜರಾಥಿ, ಮರಾಠಿ, ಬಂಗಾಲಿ, ಹಿಂದೀ, ಉರ್ದು ಭಾಷೆಗಳಲ್ಲಿ ಪ್ರವೇಶ ಪರೀಕ್ಷೆಯು ನಡೆಯುತ್ತದೆ. ಆದರೆ ಕನ್ನಡದಲ್ಲಿಲ್ಲ! ಶ್ರೀ. ಕರ್ವೇಯವರು, ಕರ್ನಾಟಕದಿಂದ ಹೇರಳವಾದ ಸಹಾಯವು, ಕರ್ನಾಟಕಕ್ಕೆ ತೋರಿಸುತ್ತಿರುವ ಪ್ರೇಮವಿದು! ಮಬ್ಬುಗನ್ನಡಿಗರಿಗೆ ಬುದ್ಧಿ ಎಂದು ಬರುವದೋ?

ದತ್ತಾತ್ರೇಯ ನಾಟಕಮಂಡಲದವರು, ತಮ್ಮ ಪ್ರಯೋಗದ ನಾಟಕದ ತಿಕೀಟಿನಿಂದ ಮಾರಾಟವಾದ ಹಣದಲ್ಲಿ ಅರ್ಧಭಾಗವನ್ನು ಗೋರಕ್ಷಣ ಸಂಸ್ಥೆಗೆ ಕೊಡತಕ್ಕದ್ದೆಂದು ನಿರ್ಧರಿಸಿದ್ದಾರೆ

ಮಿರಜ ಮತ್ತು ಬೆಳಗಾಂವಿ ಸ್ಟೇಶನಗಳ ನಡುವಿನ ಎಲ್ಲ ಸ್ಟೇಶನಗಳ ಹೆಸರುಗಳನ್ನು ಕನ್ನಡದಲ್ಲಿ ಬರೆಸುವ ನಿರ್ಧಾರವು ಮಾಡಲ್ಪಟ್ಟಿದೆಂದು ಶ್ರೀ. ಕಂಬಳೀಯವರ ಪ್ರಶ್ನೆಗೆ ಸರಕಾರದವರು ಉತ್ತರ ಕೊಟ್ಟಿದ್ದಾರೆ.

ಅದೇ ಪ್ರಕಾರವಾಗಿ ಕೊಲ್ಹಾಪೂರ ಮತ್ತು ಸಾತಾರೆ ಜಿಲ್ಲೆಗಳಲ್ಲಿಯ ಕನ್ನಡಿಗರು ತಮಗೆ ಕನ್ನಡ ಶಾಲೆಗಳು ಬೇಕೆಂದು ಕೇಳಿಕೊಂಡಿಲ್ಲವಾದ್ದರಿಂದ ಸರಕಾರದವರು ಆ ಬಗ್ಗೆ ವ್ಯವಸ್ಥೆ ಮಾಡಿಲ್ಲವೆಂದು ಶ್ರೀ ರಕ್ಕಸಗೀ ದೇಸಾಯರ ಪ್ರಶ್ನೆಗೆ ಉತ್ತರ ಕೊಟ್ಟು, ಆ ಪ್ರದೇಶಗಳಲ್ಲಿ ನೋಟೀಸು, ಹುಕುಮು, ಕೋರ್ಟು ಭಾಷೆಗಳಲ್ಲಿ ಕನ್ನಡವು ಯಾಕೆ ಸಮಾವೇಶವಾಗಿಲ್ಲೆಂಬದನ್ನು ಮನೆ ಮಂತ್ರಿಗಳಿಂದ ಕೇಳಿಕೊಳ್ಳಬೇಕಾಗಿ ಶಿಕ್ಷಣ ಮಂತ್ರಿಗಳು ಹೇಳಿದರು.

ಧಾರವಾಡದ ಪ್ರೊ ಗೋಡಬೋಲೇ ನರಸಿಂಗರಾಯರು, ತಮ್ಮ ರಸಾಯನ ಶಾಸ್ತ್ರದ ಅಭ್ಯಾಸವನ್ನು ತೀರಿಸಿಕೊಂಡು ಜರ್ಮನಿಯಿಂದ ಮರಳಿ ಬಂದಿದ್ದಾರೆ. ಇವರ ಅಗಾಧವಾದ ಪಾಂಡಿತ್ಯವನ್ನು ನೋಡಿ, ಜರ್ಮನ ವಿಶ್ವವಿದ್ಯಾಲಯದವರು ಇವರಿಗೆ ಪಿ. ಎಚ್. ಡಿ. ಪದವಿಯನ್ನರ್ಪಿಸಿದ್ದಾರೆ. ರಸಾಯನ ಶಾಸ್ತ್ರಜ್ಞರ ಒಂದು ಕೂಟವು ಇತಲಿಯಲ್ಲಿ ಬೇಗನೇ ಸೇರತಕ್ಕದ್ದಿದೆ. ಶ್ರೀ. ಗೋಡಬೋಲೇಯವರು, ಆ ಕೂಟಕ್ಕೆ ಹಿಂದುಸ್ಥಾನದ ಪ್ರತಿನಿಧಿಗಳಾಗಿ ಹೋಗುವರು.

ಮದ್ರಾಸ ಕರ್ನಾಟಕ

ನೀಲಗಿರಿ ಜಿಲ್ಲೆಯನ್ನು ಕೊಯಮುತ್ತೂರಿಗೆ ಜೋಡಿಸಬೇಕಾಗಿ ಮದ್ರಾಸ ಕಾಯದೇ ಮಂಡಲದಲ್ಲಿ ಠರಾವು ಬರತಕ್ಕದ್ದಿದೆ ನೀಲಗಿರಿ ಜಿಲ್ಲೆಯು ಸಣ್ಣದಾಗಿದ್ದರಿಂದ ಕಲೆಕ್ಟರರ ಪಗಾರ ಇತ್ಯಾದಿ ಅನವಶ್ಯಕವೆಂಬದಾಗಿ ಈ ಠರಾವು ಮುಂದೆ ಬಂದಿದೆ.

ಮಂಗಳೂರ ಜಿಲ್ಲೆಯ ಲೋಕಲ್ ಬೋರ್ಡಿನ ಕಾಗದ ಪತ್ರಗಳೆಲ್ಲ ಕನ್ನಡದಲ್ಲಿಯೇ ಇರಬೇಕೆಂಬುದು ನಿಶ್ಚಯವಾಗಿದೆ. ಇದರ ಈ ಮೇಲ್ಪಂಕ್ತಿಯನ್ನು ಉಳಿದ ಲೋಕಲ್ ಬೋರ್ಡುಗಳು ಅನುಕರಿಸಬೇಕು ಮಂಗಳೂರಿನಿಂದ ಮೈಸೂರ ಹಾಸನಕ್ಕೂ ರೇಲ್ವೇ ಇರಬೇಕೆಂಬದಾಗಿ ಸಹ ತೀರ್ಮಾನವಾಗಿದೆ

ಬಳ್ಳಾರಿಯಲ್ಲಿ ಒಂದು ಕನ್ನಡ ವಾರಪತ್ರಿಕೆಯನ್ನು ತೆಗೆಯುವ ವಿಚಾರ ನಡೆದಿದೆ. ಈ ವಿಚಾರವು ಬೇಗನೇ ಕೈಗೂಡಲಿ!

ಮಂಗಳೂರ ಬಂದರವನ್ನು ಸುಧಾರಿಸುವ ಕೆಲಸವು ಮುಂದರಿದಿದೆ ಶ್ರೀ ಸಾಲ್ಡಾನ್ಹಾರವರು ಇದರಲ್ಲಿ ಹೆಚ್ಚಾಗಿ ಮನಸ್ಸು ಹಾಕಿದ್ದಾರೆ.

ಮಂಗಳೂರಲ್ಲಿದ್ದ ಸರ್ವೇ ಆಫೀಸನ್ನು ಕಾನಾನೂರಿಗೆ ಒಯ್ದುದರಿಂದ, ಆ ಜಿಲ್ಲೆಯಲ್ಲಿ ಸಂತಾಪ ಉಂಟಾಗಿದೆ.

ಮಂಗಳೂರಲ್ಲಿ ಜೈನ ಮತೀಯರಲ್ಲಿರುವ ಅಳಿಯ ಸಂತಾನದ ವಾರಸದಾರ ಪದ್ಧತಿಯನ್ನು ತೆಗೆದು ಹಾಕಬೇಕಾಗಿ ಮದ್ರಾಸ ಕೌನ್ಸಿಲದಲ್ಲಿ ಶ್ರೀ. ಧರ್ಮಸ್ಥಳ ಮಂಜಯ್ಯಾ ಹೆಗಡೆ ಇವರು ಒಂದು ಠರಾವು ತರತಕ್ಕವರಿದ್ದಾರೆ.

ಕೊಯಮುತ್ತೂರ ಮುನಸಿಪಾಲ್ಟೀ ಚುನಾವಣೆಯಲ್ಲಿ ಕಾಂಗ್ರೆಸ ಪಕ್ಷದಿಂದ ಉಮೇದವಾರರು ನಿಲ್ಲುವರು.

ಕೊಯಮುತ್ತೂರ ಜಿಲ್ಲೆಯ ಎರನಾಡಿನಲ್ಲಿ ಮಳೆ ಇಲ್ಲದೇ, ಕುಡಿಯಲಿಕ್ಕೆ ನೀರಿನ ಕಷ್ಟವಿದೆ. ದುಡ್ಡು ಕೊಟ್ಟರೂ ನೀರು ಸಿಕ್ಕುವಂತಿಲ್ಲ. ಕಾಡು ಮರದ ಎಲೆಗಳನ್ನು ದನಗಳಿಗೆ ಹಾಕುತ್ತಿರುವರು. ಈಗ್ಗೆ ಅವೂ ಒಣಗಹತ್ತಿವೆ

ನಿಜಾಮ ಕರ್ನಾಟಕ

ಕೊಪ್ಪನೂರ (ಕೊಪ್ಪಳ) ದಲ್ಲಿ ಕರ್ನಾಟಕ ಸೇವಕ ಶಾಲೆಯ ವಾರ್ಷಿಕ ಸಮಾರಂಭವು ರಾಯಚೂರಿನ ಪ್ರಸಿದ್ಧ ವಕೀಲರಾದ ಶ್ರೀ. ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಜರುಗಿತು.

ಕೊಡಗು ಕರ್ನಾಟಕ

ಮಡಿಕೇರಿಯಲ್ಲಿ ಸಿಡುಬಿನ ಬೇನೆ ಪ್ರಾರಂಭವಾಗಿದೆ.

ಕೊಡಗಿನಲ್ಲಿ ಈ ಸಲ ಮಳೆಯು ವಿಚಿತ್ರವಾಗಿದೆ ಒಮ್ಮೆ ಮಳೆ ಬರಲಾಗುವದು; ಇನ್ನೊಮ್ಮೆ ಬಿಸಿಲು ಕಾಯುವದು. ಹೀಗಾಗಿ ತೊಂದರೆಯಾಗಿದೆ.

ಬಿನ್ನಹವು.

ಈಗ್ಗೆ ನಾಲ್ಕು ತಿಂಗಳುಗಳಿಂದ "ಕನ್ನಡಿಗ"ನ ಸಂಚಿಕೆಗಳನ್ನು ಸ್ವೀಕರಿಸುತ್ತಿರುವ ಮಹನೀಯರೆಲ್ಲ, ನಮ್ಮಿಂದ ವಿ. ಪಿ. ಬರುವ ದಾರಿಯನ್ನು ನೋಡದೇ ದಯವಿಟ್ಟು ಕೂಡಲೇ ಮನಿಯಾರ್ಡರದಿಂದ ಚಂದಾಹಣ ನಮಗೆ ಕಳುಹಿಸಬೇಕಾಗಿ ಸವಿನಯ ಪ್ರಾರ್ಥನೆಯಿದೆ. ಬಾಗಲಕೋಟೆಯು ಸಣ್ಣ ತಾಲೂಕಿನ ಸ್ಥಳವಾದ್ದರಿಂದ ದಿನಾಲು ೨೦ ರಕಿಂತ ಹೆಚ್ಚಾಗಿ ವಿ. ಪಿ. ಗಳನ್ನು ಅಂಚೆಖಾತೆಯವರು ಹಿಡಿಯುವದಿಲ್ಲ. ದಿನಕ್ಕೆ ೨೦ ರಂತೆ ೪ ಸಾವಿರ ಜನರಿಗೆ ವಿ. ಪಿ. ಕಳುಹಬೇಕಾದರೆ ೮-೧೦ ತಿಂಗಳುಗಳು ಬೇಕು. ಮೇಲಾಗಿ ವಿ. ಪಿ. ಯಿಂದ ಚಂದಾದಾರರಿಗೆ ೪ ಆಣೆ ಹೆಚ್ಚು ವೆಚ್ಚ ಬರುವದು. ಇದನ್ನು ಲಕ್ಷ್ಯದಲ್ಲಿ ತಂದು ಇನ್ನೂ ಚಂದಾಹಣ ಸಲ್ಲಿಸದೇಯಿದ್ದ ಚಂದಾದಾರರೆಲ್ಲ ಕೂಡಲೇ ಮನಿಯಾರ್ಡರದಿಂದ ೧—೧೩—೦ ಕಳುಹ ಬೇಕಾಗಿ ಬಿನ್ನಹ. ಈಗ್ಗೆ ಸಂಚಿಕೆಗಳನ್ನು ೩ ತಿಂಗಳವರೆಗೆ ಸ್ವೀಕಾರಮಾಡಿ ವಿ. ಪಿ. ಬಂದಾಗ್ಗೆ ಮಾತ್ರ ನಿರಾಕರಿಸಬಾರದಾಗಿ ವಿನಂತಿಯದೆ.

"ವ್ಯವಸ್ಥಾಪಕ" ಕನ್ನಡಿಗದ

ಧಾತೂಪಧಾತು ರಸಮಹಾರಸಾದಿಖನಿಜದ್ರವ್ಯಾನಿಭಸ್ಮಾಃ

ಅಪೂರ್ವಸಂಧಿ) ವನಸ್ಪತಿ ರಸಾಗ್ನಿ ಯೋಗಸಂಪನ್ನಃ (ಸುಲಭದರ!!

ಔಷಧಿಗಳು.	ತೊಲೆ	ಕಿಂಮತ್ತು	ಔಷಧಿಗಳು.	ತೊಲೆ	ಕಿಂಮತ್ತು
ಅಭ್ರಕಭಸ್ಮ ೧೦೦೦ ಪುಟಿ	೧	೪೦	ತ್ರಿವಂಗಭಸ್ಮ-ಪೀತವರ್ಣ	೩	೩
,, ೫೦೦ ,,	೧	೨೦	ಸುವರ್ಣ ಮಾಕ್ಷಿಕಭಸ್ಮ	೫	೪
,, ೧೦೦ ,,	೧	೫	ನಾಗಭಸ್ಮ-ಶ್ವೇತ, ಪೀತ,	೩	೩
,, ನಿಶ್ಚಂದ್ರ	೨॥	೪	ಮೃಗಶೃಂಗಭಸ್ಮ-ಶ್ವೇತ	೫	೩
ಲೋಹಭಸ್ಮ-ರಕ್ತವರ್ಣ	೩	೫	ಸುವರ್ಣರಾಜವಂಗೇಶ್ವರ	೩	೭
ಮಂಡೂರಭಸ್ಮ-ರಕ್ತವರ್ಣ	೩	೨	ಸಿದ್ಧಮಕರಧ್ವಜ-ಅನುಪಾನಮಿಶ್ರ ಗುಳಿಗೆಗಳು-೫೦	–	೫
ವಂಗಭಸ್ಮ-ಶ್ವೇತವರ್ಣ	೩	೩	ಪ್ರಾಚೀನ ಹೇಮಗರ್ಭ-ಮಾತ್ರಾ	೧	೧೦೦

ಔಷಧಿಗಳು ಪರೀಕ್ಷಾಂತ್ಯದಲ್ಲಿ ಸದೋಷವೆಂದು ಕಂಡುಬಂದಲ್ಲಿ ವಾಪಸು ಮಾಡಬಹುದು. ಎಲ್ಲಪ್ರಕಾರದ ಆಯುರ್ವೇದೀಯ ಔಷಧಿಗಳೂ, ಔಷಧೋಪಯೋಗಿ ದ್ರವ್ಯಗಳೂ ಸುಲಭ ಬೆಲೆಗೆ ದೊರಕುವವು.

ವೈದ್ಯ— ವಾದಿರಾಜ ಜಹಾಗೀರದಾರ ಇಲಕಲ್ಲ. ಜಿ. ವಿಜಾಪೂರ.

ಪ್ರಕಟನೆ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೫ ನೇ ಇಸ್ವಿಯ ಜುಲೈ ೩೧ ನೇ ತಾ|| ದಿನ ಸಾಯಂಕಾಲದ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟೀ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ ಬಸವಾರಾಧ್ಯ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ೧೦೦೦ ರೂ. ಸಾಲವು ದೊರೆಯ ಬೇಕೆಂದು ನಿರ್ಣಯವಾಯಿತು—

(೧) ಬಾಂಡ ನಂ. ೧೧೬೦೨ ಶ್ರೀ. ಆರ್. ಜಿ. ಮುಕ್ಕೇರಿ ಬುಕ್ಕಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೫೪೪೫ ಶ್ರೀ ದೀರಜರಾಮ ನಾರಭಿರಾಮ ನಾಯಿಕ ಕಂಪಾವುಂಡರ, ಜನಾನಾ ದವಾಖಾನೆ ವಾಯ, ಸಯಾನ. ಬಿಬಿ. ಸಿ. ಆಯ ರೇಲ್ವೇ. ಸುರತ. (ಬರೋಡಾ ಏಜನ್ಸಿ)

(೩) ಬಾಂಡ ನಂ. ೧೫೫೬ ಶ್ರೀ. ಶ್ರೀರಾಮ ಮೂರ್ತಿ ಆರಾಧ್ಯಲು ರಾಮಚಂದ್ರರಾಪ ಗುರು ಪೀರ ಪುರ ಗೋದಾವರಿ ಜಿಲ್ಹಾ.

(೪) ಬಾಂಡ ನಂ. ೧೬೬ ಶ್ರೀ. ನಂದಗಿರಿ ವೆಂಕಟರಾಮ ದಾಸ ಪ್ರೊಪ್ರಾಯಿಟರ ಮುಕುಂದ ಪುರ. ಕಾಕಿನಾಡು

(೫) ಬಾಂಡ ನಂ. ೪೩೮ ಶ್ರೀ. ಜಿದ್ ವೆಂಕಟಯ್ಯಾ ಗುರು ಇನಾಮದಾರ ಭೋಪಯ್ಯಾ ಅಗ್ರಹಾರ. ಅಮಳ ಪುರಮ್.

೧-೮-೨೫ { **ಬಿ. ಎಸ್. ಆರಾಧ್ಯ**
ಚೀಫ ಏಜಂಟ ಹುಬ್ಬಳ್ಳಿ

ಈ ಪತ್ರಿಕೆಯು ಮಂಗಳವೇಢೆ ರಾಘವೇಂದ್ರರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ವಾ. ಚಂದಾ ೧—೧೪—೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಂಜೀವನವಾಗಿದೆ)

[illegible] — [illegible]

ಸಂಪಾದಕರು— ಮಂಗಳವೇಢೇ ಶ್ರೀನಿವಾಸರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ಭಾದ್ರಪದ ಶುದ್ಧ ೨ ಶಕ ೧೮೪೭. ತಾ॥ ೨೧-೮-೧೯೨೫. | ಸಂಚಿಕೆ ೨೧

ಸಂಪಾದಕರ ಭೂಮಿ.

ನನ್ನ ಮನಸಿನ ಮೋಹನವಾಡಿ ಕಟ್ಟಿದೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ನೋವು ।
ಚಿನ್ನದಾದರು ಚಿನ್ನ ಮೋಹಬಟ್ಟೆಯು ನೊಂದು ॥
ಚಿನ್ಮಯಾಕಾಶದಲ್ಲಿ ॥
ನನ್ನ ದೇಹವು ನಿನ್ನ ಪೀಠಶಾಸನವಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಹೀರಬಹ ।
ಗಂಧವಹನೆಂದು ತಿಳಿಯಿ ॥

—ಅಂಬಿಕಾತನಯ ದತ್ತ.

ಬ್ರಾಹ್ಮಣ- ಬ್ರಾಹ್ಮಣೇತರ ಪ್ರಶ್ನೆಯೊಂದು ಬಹಳ ಒಂದು ಗೂಢ ಪ್ರಶ್ನೆಯೆಂಬುದೇನೋ ನಿಜ. ಏಕಕಾಲಕ್ಕೆ ಇದರ ಗಂಟನ್ನು ಬಿಚ್ಚಿಸುವದು ಕಠಿಣ. ಆದರೆ ಪ್ರಸಂಗಗಳುದ್ಭವಿಸಿದಂತೆ ಈ ಪ್ರಶ್ನೆಯ ತೊಡಕು ಕರ್ನಾಟಕದಲ್ಲಿ ತಾನೇ ಬಿಡುತ್ತಿರುವದು. ಈಗ್ಗೆ ನಾವು ನಮ್ಮ ಕಣ್ಣೆದುರಿಗಿದ್ದ ಮೂರು ಚಿತ್ರಗಳನ್ನು ಪರೀಕ್ಷಿಸಿದರೆ ಕರ್ನಾಟಕದ ಈ ವೈಶಿಷ್ಟ್ಯದ ಇಂಗಿತವು ತಾನೇ ತಿಳಿಯುವದು. ಕಳೆದವರ್ಷ ಗಣಪತಿ ಮಹೋತ್ಸವದಲ್ಲಿ, ಪುಣೆಯೊಳಗೆ ಬ್ರಾಹ್ಮಣ- ಬ್ರಾಹ್ಮಣೇತರರು "ಗಾಯಕವಾಡರವರ ವಾಡೇ" ದಲ್ಲಿ ಲಾವಣಿಗಳನ್ನು ಹೇಳುವ ಕ್ಷುಲ್ಲಕ ವಿಷಯದಲ್ಲಿ ಯಾವ ಬಗೆಯಿಂದ ಬಡಿದಾಡಿದರೆಂಬುದು ಮೊದಲನೇ ಚಿತ್ರ. ಮೊನ್ನೆ ಮೊನ್ನೆ ಮದ್ರಾಸದ ಮುನಸಿಪಾಲ್ಟಿಯ ಚುನಾವಣೆಯ ಕಾಲಕ್ಕೆ, ಬ್ರಾಹ್ಮಣ- ಬ್ರಾಹ್ಮಣೇತರರು ಮತಗಳ ವಿಷಯದಲ್ಲಿ ಯಾವ ಬಗೆಯಿಂದ ಜಗಳಾಡಿದರೆಂಬುದು ಎರಡನೇ ಚಿತ್ರ. ಮೊದಲನೇದ್ದು ಮಹಾರಾಷ್ಟ್ರದ ಚಿತ್ರ. ಎರಡನೇದ್ದು ಆಂಧ್ರ-ತಮಿಳರ ಚಿತ್ರ. ಮೂರನೇದ್ದೆಂದರೆ ಕರ್ನಾಟಕದ ಚಿತ್ರವು. ಕರ್ನಾಟಕದಲ್ಲಿಯೂ ಬ್ರಾಹ್ಮಣ ಬ್ರಾಹ್ಮಣೇತರ ಪಕ್ಷಗಳಿವೆ. ಅವರಲ್ಲಿ ರಾಜಕೀಯ ಸಂಗತಿಗಳ ಬಗ್ಗೆ ಮತಭೇದವೂ ಇದೆ. ಆದರೆ ಮಹಾರಾಷ್ಟ್ರ- ಆಂಧ್ರ- ತಮಿಳ ಸುಶಿಕ್ಷಿತರು ತಮ್ಮ ತಮ್ಮೊಳಗೆ ಒಬ್ಬರಿಗೊಬ್ಬರು ಬಡಿಗೆಗಳಿಂದಲೂ ಕಲ್ಲೆಸೆಯುವದರಿಂದಲೂ ಈಗ್ಗೆಯೂ ಬಡಿದಾಡುವ ಚಿತ್ರವು ಕರ್ನಾಟಕದ ಸುಶಿಕ್ಷಿತರಲ್ಲಿ ಕಂಡು ಬರುವದಿಲ್ಲ. ಹಿಂದಕ್ಕೆ ವ್ಯಾಸಂಕೋಳಿನಂಥ ಪ್ರಕರಣಗಳಲ್ಲಿ ಬಡಿದಾಟಗಳುಂಟಾಗುತ್ತಿದ್ದೇನೋ ನಿಜ. ಆದರೆ ಆಗಿನ ಕಾಲದಲ್ಲಿ ಎರಡೂ ಪಕ್ಷಗಳಲ್ಲಿ ಸುಶಿಕ್ಷಿತರಿರುತ್ತಿರಲಿಲ್ಲ. ಈಗ್ಗೆ ಬ್ರಾಹ್ಮಣ- ಬ್ರಾಹ್ಮಣೇತರ ಮುಖಂಡರಲ್ಲಿ ಅನೇಕ ಜನ ಸುಶಿಕ್ಷಿತರಿದ್ದು ಅವರಲ್ಲಿ ರಾಜಕೀಯ ದೃಷ್ಟಿಯಿಂದ ಎಂತಹ ಮತಭೇದಗಳಿದ್ದರೂ, ಬಡಿಗೆ ಕಲ್ಲುಗಳಿಂದ ಬಡಿದಾಡುವ ಪ್ರಸಂಗಗಳಿಲ್ಲ. ಅಲ್ಲದೇ ಕರ್ನಾಟಕ ಏಕೀಕರಣ, ಕನ್ನಡ ವಸತಿ, ಸಾರ್ವಜನಿಕ ಉತ್ಸವ ಮುಂತಾದ ಸಾರ್ವಜನಿಕ ಚಳವಳಿಗಳಲ್ಲಿ ಒಬ್ಬರಿನ್ನೊಬ್ಬರ ಸಂಗಡ ಹೆಗಲಿಗೆ ಹೆಗಲು ಹಚ್ಚಿ ಪ್ರೇಮದಿಂದಲೇ ಕೆಲಸವನ್ನಾಡುತ್ತಿರುವ ಚಿತ್ರವನ್ನು ನಾವು ಕರ್ನಾಟಕದಲ್ಲಿ ಪ್ರತ್ಯಕ್ಷವಾಗಿ ಕಾಣುತ್ತಿರುವೆವು. ಯಾಕೆ? ಈ ಮೂರು ಚಿತ್ರಗಳಲ್ಲಿ ಇಷ್ಟೊಂದು ಅಭ್ಯಂತರವೇಕೆ? ವಿಚಾರಮಾಡಿದರೆ, ಕರ್ನಾಟಕದ ರಕ್ತವೇ ಅಷ್ಟೊಂದು ಶುದ್ಧವಾಗಿದೆಂಬುದು ಒಡೆದು ಕಾಣುತ್ತದೆ. ಇದೇ ಕರ್ನಾಟಕದ ವೈಶಿಷ್ಟ್ಯವು. ಕರ್ನಾಟಕದ ಹೃದಯವು ಕೋಮಲವಾದುದು, ಪವಿತ್ರವಾದುದು. ವೈರಿಗಳಲ್ಲಿ ಸಹ ಕರ್ನಾಟಕವು ದಯೆಯನ್ನು ತಳೆದಿರುತ್ತದೆಂಬುದು, ಪುಲಕೇಶಿ ಕಾಲದಲ್ಲಿಯೇ ಸುಪ್ರಸಿದ್ಧವಾಗಿದೆ. ಕರ್ನಾಟಕದ ಯುವಕರೂ ಕರ್ನಾಟಕದ ಮುಂದಾಳುಗಳೂ ಇದನ್ನೆಂದಿಗೂ ಮರೆಯರು. ಕರ್ನಾಟಕಸ್ಥರು ಪರಂಪರೆಯಿಂದ ನಡೆದು ಬಂದ ಈ ಪವಿತ್ರಭಾವನೆಗೆ ಅನುರೂಪವಾಗುವಂತೆ ನಡೆಯುತ್ತಿರುವದು ಸ್ವಾಭಾವಿಕವೇ ಸರಿ.

ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಪಂಡಿತರ ಸ್ಥಳಕ್ಕೆ ಈ ವರೆಗೆ ಯಾರನ್ನೂ ನೇಮಿಸಿಲ್ಲ. ಅರ್ಧವರ್ಷವು ಮುಗಿಯುತ್ತ ಬಂದಿದೆ. ಆದರೂ ಕನ್ನಡದ ವಿದ್ಯಾರ್ಥಿಗಳು ಕನ್ನಡದ 'ತಾಸಿ' ನಲ್ಲಿ ಶಿಕ್ಷಣವಿಲ್ಲದೇ ಹೋಗಬೇಕು. ನೂರಾರು ರೂಪಾಯಿ ವೆಚ್ಚಮಾಡಿ ಹೀಗೆ ಶಿಕ್ಷಣವಿಲ್ಲದೇ ಆ 'ತಾಸಿ' ನಲ್ಲಿ ಸುಮ್ಮನೇ ಕಾಲ ಹರಣ ಮಾಡಲು ಆ ವಿದ್ಯಾರ್ಥಿಗಳು ಕರ್ನಾಟಕ ಕಾಲೇಜನ್ನು ಸೇರಲಿಲ್ಲವೆಂಬುದು ನಮ್ಮ ಶಿಕ್ಷಣ ಮಂತ್ರಿಗಳ ನಿದರ್ಶನಕ್ಕೆ ಬಂದಂತೆ ಕಾಣುವದಿಲ್ಲ. ಹಣದ ಕೊರತೆಯೆಂದೆನ್ನಬೇಕೆ? ಹಣವು ಸರಕಾರದ ಬೊಕ್ಕಸದಲ್ಲಿ ತುಂಬಿದೆ. ಪಂಡಿತರಾರೂ ಕನ್ನಡ ನಾಡಿನಲ್ಲಿ ದೊರೆಯರೆಂದೆನ್ನಬೇಕೆ? ಒಂದೇ ಪಂಡಿತ ಸ್ಥಳಕ್ಕೆ ೧೫-೨೦ ಅರ್ಜಿಗಳು ಹೋಗಿವೆಯಂತೆ? ಹಾಗಾದರೆ ಈಗ್ಗೆ ಸರಕಾರಕ್ಕೆ ಆತಂಕವೇನಿರಬಹುದು ? ಆಲಸ್ಯ ಇರಬೇಕೆಂದು ಯೋಚಿಸಬಹುದು. ಆದರೆ ಶಿಕ್ಷಣ ಕೆಲಸಕ್ಕೆಂದೇ ನೂರಾರು ರೂಪಾಯಿ ಸಂಬಳ ಪಡೆಯುತ್ತಲಿರುವವರಿಗೆ ಆಲಸ್ಯವೇಕೆ? ಸರಕಾರವು ಇತ್ತ ಲಕ್ಷ್ಯ ಪೂರೈಸುವದೋ ?

ಕರ್ನಲ್ ವೆಜ್ಜ್ ವುಡ್ಡ ರೆಂದರೆ ಹಿಂದುಸ್ಥಾನದ ಹಿತಚಿಂತಕರಲ್ಲಿ ಹಿರಿಯರು. ಆದರೆ ಇವರು ಈಗ್ಗೆ ಸ್ವರಾಜ್ಯಪಕ್ಷೀಯರ ಮೇಲೆಯೂ, ಅಸಹಕಾರಿಗಳ ಮೇಲೆಯೂ ಹರಿಹಾಯುತ್ತಿರುವರು. ಅಸಹಕಾರದಿಂದಲಾಗಲೀ ಸ್ವರಾಜ್ಯ ಪಕ್ಷೀಯರ ಕೃತಿಗಳಿಂದಾಗಲೀ ಸ್ವರಾಜ್ಯದ ದಾರಿಯು ಮತ್ತಿಷ್ಟು ಕಠಿಣವಾ

ಗಿದೆಯೆಂದೂ, ಇವರು ತಮ್ಮ ತಮ್ಮ ಕಾರ್ಯಕ್ರಮಗಳಲ್ಲಿ ಬದಲು ಮಾಡದಿದ್ದರೆ ಸ್ವರಾಜ್ಯದ ಆಶೆಯನ್ನು ಸಹ ಮುಂದಕ್ಕೆ ಹಾಕಬೇಕೆಂದೂ, ವೆಜ್ವುಡ್ಡ ಸಾಹೇಬರು ಭಾರತೀಯರಿಗೆ ಉಪದೇಶ ಮಾಡಲು ಪ್ರಾರಂಭಿಸಿದ್ದಾರೆ. " ಇಂಗ್ಲಂಡಿನಲ್ಲಿ ವೆಜ್ವುಡ್ಡರಂಥ ಮಿತ್ರರಿರುವರೆಂದ ಮೇಲೆ ನಮಗೆ ಭಯವಿಲ್ಲ. ಅವರು ನಮಗೆ ಸ್ವರಾಜ್ಯ ಪ್ರಾಪ್ತಿಯಲ್ಲಿ ಸಹಾಯ ಮಾಡೇ ಮಾಡುವರು. 'ಕೂಲಿಕಾರ ಪಕ್ಷದವರಿಂದ' ಹಿಂದುಸ್ಥಾನಕ್ಕೆ ಸ್ವರಾಜ್ಯ ದೊರೆತೇ ದೊರೆಯುವದೆಂ"ಬದಾಗಿ ಭಾರತೀಯರಲ್ಲನೇಕರು ಇಂಗ್ಲೀಷ ಮಿತ್ರರಲ್ಲಿ ಹೆಚ್ಚಿನ ವಿಶ್ವಾಸವನ್ನಿಟ್ಟಿದ್ದಾರೆ. ಈಗ್ಗೆ ವೆಜ್ವುಡ್ಡರ ಉಪದೇಶದಿಂದ ಅಂತಹ ಭ್ರಾಮಿಕ ಕಲ್ಪನೆಗಳೆಲ್ಲ ಹೊರಟದ್ದು ಹೋಗಲಿ. ಭಾರತೀಯರು ತಮ್ಮ ಶಕ್ತಿಯಿಂದಲೇ ತಾವು ನಿಲ್ಲಬೇಕೆ ಹೊರ್ತಾಗಿ ಅನ್ಯರು— ವಿಶೇಷತಃ ಇಂಗ್ಲೀಷರು— ನಮಗೆ ಈ ಸ್ವರಾಜ್ಯ ಸಂಪಾದನೆಯಲ್ಲಿ ಸಹಾಯಕರಾಗುವರೆಂಬುದು ಭ್ರಾಮಿಕ ಕಲ್ಪನೆ. ಇದು ಈ ಉಪದೇಶದಿಂದ ಸ್ಪಷ್ಟವಾಗುವದು.

ಆಂಧ್ರ ವಿಶ್ವವಿದ್ಯಾಲಯದ ಮಸೂದೆಯು ಪ್ರಸಿದ್ಧಪಡಿಸಲ್ಪಟ್ಟಿದೆ. ಅದರಲ್ಲಿ ಕಾಣಿಸಿದ ವಿಷಯಗಳನ್ನು ವಿಶ್ವವಿದ್ಯಾಲಯದ ದೃಷ್ಟಿಯಿಂದ ನೋಡಿದರೆ ಬಹು ಮಹತ್ವದವು. ಆಂಧ್ರ ಜನಾಂಗದ ಉತ್ಕರ್ಷಕ್ಕೆ ಇದು ಒಳ್ಳೇ ಸಹಾಯಕಾರಿ. ಈ ವಿದ್ಯಾಲಯದಲ್ಲಿ ಎಲ್ಲ ವಿಷಯಗಳೂ ತೆಲುಗಿನಲ್ಲಿಯೇ ಕಲಿಸಲ್ಪಡುವವು. ಇದು ಆಂಧ್ರ ವಿಶ್ವವಿದ್ಯಾಲಯದ ವೈಶಿಷ್ಟ್ಯವು. ಹಿಂದುಸ್ಥಾನದಲ್ಲಿಯ ಯಾವ ವಿಶ್ವವಿದ್ಯಾಲಯದಲ್ಲಿಯೂ ಮಾತೃಭಾಷೆಗೆ ಮನ್ನಣೆಯನ್ನೂ ಮಹತ್ವವನ್ನೂ ಈ ಮಾರ್ಗದಿಂದ ಕೊಟ್ಟಿರುವದಿಲ್ಲ. ಅದೇ ಪ್ರಕಾರವಾಗಿ ಲಲಿತಕಲೆಗೂ ಪ್ರಾಮುಖ್ಯವು ದೊರೆತಿದ್ದು ಎರಡನೇ ವೈಶಿಷ್ಟ್ಯವು. ಪದವೀಧರರು ಉದ್ಯೋಗವಿಲ್ಲದೇ ಬೀದಿಬೀದಿಗಳಲ್ಲಿ ತಿರುಗಿ ಕಾಲಹರಣ ಮಾಡುವ ಸಂಗತಿಯನ್ನೂ ಈ ವಿಶ್ವವಿದ್ಯಾಲಯದವರು ಕಂಡು ಹಿಡಿದು, ಆ ಬಗ್ಗೆ ಒಂದು ಮಂಡಲದ ಯೋಜನೆಯನ್ನೂ ಮಾಡಿದ್ದಾರೆ. ಶ್ರೀ· ಪಟ್ಟೋಯವರಂತಹ ಆಂಧ್ರದ ಅಭಿಮಾನಿಗಳು ಶಿಕ್ಷಣ ಮಂತ್ರಿಗಳಿದ್ದದ್ದು ಈ ವೈಶಿಷ್ಟ್ಯದ ಕಾರಣವು. ಆಂಧ್ರರಾಷ್ಟ್ರದ ಈ ಉತ್ಕರ್ಷದ ಮಾರ್ಗವನ್ನು ಕಂಡು ಪ್ರತಿಯೊಬ್ಬ ಭಾರತೀಯನು ಸಂತೋಷ ಹೊಂದುವನು.

ಆದರೆ ಕರ್ನಾಟಕಕ್ಕೆ ಈ ಬಗೆಯ ಉತ್ಕರ್ಷದ ಮಾರ್ಗವು ಎಂದು ದೊರೆಯುವದೋ ಹೇಳಲಾಗದು. ಕರ್ನಾಟಕಕ್ಕೆ ಸ್ವತಂತ್ರ ವಿಶ್ವವಿದ್ಯಾಲಯವು ಬೇಕೆಂಬುದಕ್ಕೆ ಎಲ್ಲರ ಒಪ್ಪಿಗೆಯಿದೆ. ಆದರೆ ಆ ಬಗ್ಗೆ ಪ್ರಯತ್ನಿಸಲು ಟೊಂಕ ಕಟ್ಟಿ ನಿಲ್ಲುವರಾರು? ಕರ್ನಾಟಕದಲ್ಲಿಯ ಚಳವಳಗಳು ಜಯವನ್ನು ಸಂಪಾದಿಸಬೇಕಾದರೆ ಒಬ್ಬೊಬ್ಬನು ಒಂದೊಂದೇ ವಿಷಯವನ್ನು ಕೈಯಲ್ಲಿ ತೆಗೆದುಕೊಂಡು ಹೆಣಗಾಡುವದು ಅವಶ್ಯಕವಾದುದು. ಈ ಬಗ್ಗೆ ನಾವು ನಮ್ಮ ನೆರೆಹೊರೆಯವರಾದ ಮರಾಟಿಗರ ಪಂಕ್ತಿಯನ್ನು ತಿದ್ದಬೇಕು. ಸ್ತ್ರೀ ಶಿಕ್ಷಣದ ಹೊರ್ತಾಗಿ ಶ್ರೀ. ಕರ್ವೆಯವರು ಕಣ್ಣಿಗೆ ಏನೂ ಕಾಣುವದಿಲ್ಲ. ಕೆಲಸ ಮಾಡಲು ಇತಿಹಾಸದ ಹೊರ್ತಾಗಿ ಶ್ರೀ. ರಾಜವಾಡೆಯವರಿಗೆ ರಾಜಮಾರ್ಗವಾವದೂ ರುಚಿಸುವದಿಲ್ಲ. ಶ್ರೀ· ರಾನಡೇಯವರಿಗಂತೂ " ವೈಸಾಘಂಡ ರಾನಡೇ " ಎಂಬ ಹೆಸರು ಬಿದ್ದಿದೆ. ಇದನ್ನು ಎಲ್ಲರೂ ಬಲ್ಲರು. ಆದರೆ ಈ ಮಂತ್ರವನ್ನು ಮತ್ತಿಷ್ಟು ಮನದಟ್ಟಾಗಿ ಮಾಡಿಕೊಂಡು, ಕರ್ನಾಟಕಸ್ಥರು ಅದನ್ನು ಕಲ್ಪನೆಯಲ್ಲಿ ಮಾತ್ರ ಕಟ್ಟದೇ, ಕೃತಿಯಲ್ಲಿ ತಂದರೆ ಕನ್ನಡ ನಾಡಿನ ಕಾರ್ಯಗಳು ರಭಸದಿಂದ ಸಾಗುವವು. ಈಗ್ಗೆ ಕರ್ನಾಟಕ ವಿಶ್ವವಿದ್ಯಾಲಯದ ಪ್ರಶ್ನೆಯು ತಲೆದೋರಿದೆ. ಇದು ಕರ್ನಾಟಕದ ಏಳಿಗೆಗೆ ಅತ್ಯವಶ್ಯವಾದುದು. ಆದುದರಿಂದ ಕರ್ನಾಟಕದಲ್ಲಿಯ ಶಿಕ್ಷಣಾಭಿಮಾನಿಗಳಲ್ಲಿ ಆರಾದರೊಬ್ಬರು ಇದೇ ವಿಷಯಕ್ಕೆ ಟೊಂಕ ಕಟ್ಟಿ ನಿಂತರೆ ಒಂದು ದೊಡ್ಡ ಕಾರ್ಯವಾಗುವದು. ನಾವು " ಕನ್ನಡಿಗ " ನ ಕಳೆದವಾರದ ಸಂಚಿಕೆಯಲ್ಲಿ ಸೂಚಿಸಿದಂತೆ ಮೈಸೂರ ವಿಶ್ವವಿದ್ಯಾಲಯವನ್ನೇ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡಿದರೆ ಈ ಕಾರ್ಯವು ಬೇಗನೇ ಕೈಗೂಡ ಬಹುದು. ಮೈಸೂರ ವಿಶ್ವವಿದ್ಯಾಲಯದ ಸುಧಾರಣೆಯ ಉಪಮಂಡಲದಲ್ಲಿದ್ದ ಕರ್ನಾಟಕಾಭಿಮಾನಿಗಳು, ಈ ವಿಷಯವನ್ನು ಎತ್ತಿ ಹಿಡಿದು, ಮದ್ರಾಸ, ಮುಂಬೈ ಸರಕಾರಗಳಿಗೂ, ಮೈಸೂರ ಒಳಗಿನ ಮತ್ತು ಹೊರಗಿನ ಕರ್ನಾಟಕಸ್ಥರಿಗೂ, ಈ ವಿಷಯವಾಗಿ ಬರೆದು, ಅವರ ಲಕ್ಷ್ಯವು ಇತ್ತಕಡೆಗೆ ಹೋಗುವ ಹಾಗೆ ಪ್ರಯತ್ನಪಟ್ಟರೆ, ಈ ವಿಷಯದಲ್ಲಿ ಒಂದು ಮಹತ್ವದ ಕಾರ್ಯವನ್ನು ಮಾಡಿದ ಶ್ರೇಯಸ್ಸಿಗೆ ಅವರು ಪಾತ್ರರಾಗುವದರಲ್ಲಿ ಸಂಶಯವಿಲ್ಲ. ಆದರೆ ಮೈಸೂರಿನಲ್ಲಿ ಈ ಬಗೆಯ ಉಜ್ವಲ ಕರ್ನಾಟಕಾಭಿಮಾನವು ದೊರೆಯುವದೇ?

ಇನ್ನು ಬಳ್ಳಾರಿಯ ಗತಿಯೇನು? ಕರ್ನಾಟಕಕ್ಕೆ ಸ್ವತಂತ್ರ ವಿಶ್ವವಿದ್ಯಾಲಯವು ದೊರೆಯುವವರೆಗೆ ಬಳ್ಳಾರಿಯ ಮತ್ತು ಅನಂತಪೂರದ ಕನ್ನಡ ತಾಲೂಕಗಳ ಭಾವೀ ಸಂಸ್ಥಿತಿಯ ಕಡೆಗೆ ಎಲ್ಲರೂ ಮೊದಲು ಲಕ್ಷ್ಯಕೊಡಬೇಕು. ಆಂಧ್ರ ವಿಶ್ವವಿದ್ಯಾಲಯದವರು ಬಳ್ಳಾರಿಯಲ್ಲಿ ಆಂಧ್ರ ಕಾಲೇಜನ್ನು ಸ್ಥಾಪಿಸುವದಿಲ್ಲವೆಂಬುದು ಸಿದ್ಧವಾಯಿತು. ಕನ್ನಡಿಗರಿಗೆ ತಮ್ಮ ಚಳವಳಕ್ಕೆ ಜಯ ಬಂದಿತೆಂದು ಆನಂದವಾದರೆ, ಅದು ಭ್ರಾಮಿಕ ಆನಂದವೆನ್ನುವದನ್ನು ಮರೆಯಕೂಡದು. ಯಾಕೆಂದರೆ ಆಂಧ್ರ ವಿಶ್ವವಿದ್ಯಾಲಯವು ಆಂಧ್ರರ ಏಳ್ಗೆಗೆ ಅನುಕೂಲವಾಗಿದ್ದರೂ, ಕರ್ನಾಟಕದ ವಿಷಯದಲ್ಲಿ ಗೋಮುಖವ್ಯಾಘ್ರದಂತಿರುವದು. ಈಗ್ಗೆ ಪ್ರಸಿದ್ಧವಾದ ಮಸೂದೆಯಲ್ಲಿ ಬಳ್ಳಾರಿ ಮತ್ತು ಅನಂತಪೂರ ಜಿಲ್ಹೆಗಳು ಆಂಧ್ರ ವಿಶ್ವವಿದ್ಯಾಲಯದ ಆಡಳಿತದಲ್ಲಿರಬೇಕೆಂದು ಕಾಣಿಸಿದೆ. ಆಂಧ್ರ ವಿಶ್ವವಿದ್ಯಾಲಯದ ಶಿಕ್ಷಣವೆಲ್ಲ ತೆಲುಗಿನಲ್ಲಿಯೇ ನಡೆಯಬೇಕಾಗಿದ್ದರಿಂದ, 'ಹೈಸ್ಕೂಲ' ಗಳಲ್ಲಿಯ ಈಗಿನ ಶಿಕ್ಷಣ ಕ್ರಮವನ್ನು ಬದಲು ಮಾಡಲಿಕ್ಕೂ, ಈ ಶಿಕ್ಷಣದಲ್ಲಿ ಸಹ ತೆಲುಗೇ ಶಿಕ್ಷಣದ ಭಾಷೆಯಿರುವದಕ್ಕೆ ಅವಶ್ಯವಾದ ತೆಲುಗು ಪುಸ್ತಕಗಳನ್ನು ಬರೆಯುವದಕ್ಕೂ, ಒಂದು ಮಂಡಲವು ಸಿದ್ಧವಾಗತಕ್ಕದ್ದಿದೆ. ಇದರಿಂದ ಅರ್ಥಾತ್, ಬಳ್ಳಾರಿ ಮತ್ತು ಅನಂತಪೂರ ಜಿಲ್ಹೆಗಳ ಕನ್ನಡ ಭಾಗದ 'ಹೈಸ್ಕೂಲ' ಗಳಲ್ಲಿ ಸಹ ತೆಲುಗೇ ಪ್ರಾಮುಖ್ಯವಾದ ಭಾಷೆಯಾಗುವದೆಂಬುದು ಸ್ಪಷ್ಟವಿದೆ. ಮುಂದೆ ಪ್ರಾಥಮಿಕ ಶಾಲೆಗಳಲ್ಲಿ ಸಹ ತೆಲುಗೇ ಸೇರಿಕೊಳ್ಳುವದು. ಆದುದರಿಂದ ಕನ್ನಡಿಗರ ಮೇಲೆ ಇದೊಂದು ಆಘಾತವಾದಂತಾಗಿ, ಕನ್ನಡ ಸಂಸ್ಕೃತಿಯು ಅಲ್ಲಿ ಲಯವಾಗುವದು. ಇದಾಗಬಾರದೆಂದೇ ಬಳ್ಳಾರಿಯಲ್ಲಿ ಆಂಧ್ರ ಕಾಲೇಜಿರಕೂಡದೆಂದು ಕನ್ನಡಿಗರು ಪ್ರಯತ್ನಿಸಿದ್ದು. ಆದರೆ ಕಾಲೇಜು ಬಳ್ಳಾರಿಯಲ್ಲಾಗದೇ ಇದ್ದರೂ, ಈ ವಿಶ್ವವಿದ್ಯಾಲಯದಿಂದ ಕನ್ನಡಿಗರಿಗೆ ಆಗುವ ಕಷ್ಟಗಳೇನೂ ದೂರಾಗಲಿಲ್ಲ. ಅಂತೆಯೇ ಕರ್ನಾಟಕಕ್ಕೆ ಇದು " ಗೋಮುಖವ್ಯಾಘ್ರ " ವೆಂದು ನಾವು ಮೇಲೆ ಬರೆದದ್ದು. ಬಳ್ಳಾರೀ ಅನಂತಪೂರ ಜಿಲ್ಹೆಗಳ ಲೋಕಲ್ ಬೋರ್ಡುಗಳು ಪ್ರತಿ ಮೂರು ವರ್ಷಕ್ಕೆ ಕನಿಷ್ಟ ೭,೫೦೦ ರೂಪಾಯಿಗಳನ್ನು ಈ ಆಂಧ್ರ ವಿಶ್ವವಿದ್ಯಾಲಯಕ್ಕೆ ಕೊಟ್ಟು, ಈ ವಿದ್ಯಾಲಯವನ್ನು ಪೋಷಿಸಬೇಕು. ಅದೇ ಪ್ರಕಾರವಾಗಿ ಈ ಎರಡೂ ಜಿಲ್ಹೆಗಳಲ್ಲಿಯ ಮುನಸೀಪಾಲಿಟಿಗಳು ಸಹ ಪ್ರತಿವರ್ಷ ೧೫೦೦ ರೂ. ಗಳಿಗೆ ಕಡಿಮೆ ಇಲ್ಲದಷ್ಟು ಹಣವನ್ನು ಆಂಧ್ರ ವಿಶ್ವವಿದ್ಯಾಲಯಕ್ಕೆ ತೆತ್ತಲೇಬೇಕು. ಈ ತೆತ್ತಿಗೆಯು ಏತಕ್ಕೆ? ಕನ್ನಡ ವಾಙ್ಮಯವು ಆ ಜಿಲ್ಹೆಗಳಲ್ಲಿ ತಲೆಯೆತ್ತಬಾರದೆಂಬುದಕ್ಕೆ! ಕನ್ನಡ ಸಂಸ್ಕೃತಿಯು ಅಲ್ಲಿಯ ಕನ್ನಡಿಗರಲ್ಲಿ ಲಯಹೊಂದಬೇಕೆಂಬುದಕ್ಕೆ!! ಹೀಗಾಗಿ ಆ ಜಿಲ್ಹೆಗಳಲ್ಲಿ ಕನ್ನಡಿ-

ಗರ ಕನ್ನಡತನವು ದಹನವಾಗಿ ಹೋಯಿತೆಂದರೆ, ಆಂಧ್ರ ಸಂಸ್ಕೃತಿಯ ಬೀಜವು ಆ ಭೂಮಿಯಲ್ಲಿ ಮೊಳಕೆಯೊಡೆದು, ಚಿಗಿಯಲಿಕ್ಕೆ ಅನುಕೂಲವಾಗುವದಲ್ಲವೆ ? ಇದನ್ನೆಲ್ಲ ಸೂಕ್ಷ್ಮವಾಗಿ ವಿಚಾರಿಸಿ, ರಾಷ್ಟ್ರಘಾತುಕವಾದ ಭಾವೀ ಪರಿಸ್ಥಿತಿಯನ್ನು ನೆನೆದು, ಬಳ್ಳಾರೀ ಅನಂತಪೂರ ಜಿಲ್ಹೆಗಳಲ್ಲಿಯ ಕನ್ನಡಿಗರು, ಕೂಡಲೇ ಎಚ್ಚರಗೊಳ್ಳಬೇಕು. ಬಳ್ಳಾರಿಯಲ್ಲಿ ಈಗ್ಗೆ ಸಾಗಿದ ಚಳವಳಿಯು ಮತ್ತಿಷ್ಟು ಪುಟಾರಿಸಬೇಕು. ಅನಂತಪೂರ ಜಿಲ್ಹೆಯ ಕನ್ನಡ ಭಾಗದಲ್ಲಿಯೂ ಇದರ ಪ್ರತಿಧ್ವನಿಯಾಗುವಂತೆ ವಿಶ್ವಪ್ರಯತ್ನ ಮಾಡಬೇಕು. ಈ ಎರಡೂ ಜಿಲ್ಹೆಗಳ ಕನ್ನಡ ಭಾಗದ ಲೋಕಲ್ ಬೋರ್ಡ ಮುನಸೀಪಾಲಿಟಿಗಳು ಕನ್ನಡ ತಾಲೂಕುಗಳನ್ನು ಆಂಧ್ರ ವಿಶ್ವವಿದ್ಯಾಲಯದ ಆಡಳಿತಕ್ಕೆ ಸೇರಿಸುವ ಸೂಚನೆಯನ್ನು ಬಲವಾಗಿ ವಿರೋಧಿಸಿ, ಕನ್ನಡ ಭಾಗವು ಸದ್ಯಕ್ಕೆ ಮದ್ರಾಸ ಅಧಿಪತ್ಯದಲ್ಲಿ ಉಳಿವಂತೆಯಾಗಲೀ ಮೈಸೂರವಿಶ್ವವಿದ್ಯಾಲಯಕ್ಕೆ ಒಳಪಡುವಂತೆಯಾಗಲಿ, ಪ್ರಯತ್ನಪಡಬೇಕು ಅದೇ ಪ್ರಕಾರವಾಗಿ ಆಂಧ್ರ ವಿಶ್ವವಿದ್ಯಾಲಯಕ್ಕೆ ತೆತ್ತಬೇಕಾದ ತೆಂಗಿಯನ್ನು ಕೊಡಲು ಸಂಪೂರ್ಣವಾಗಿ ನಿರಾಕರಿಸಬೇಕು. ಇದು ಬಳ್ಳಾರಿ ಮತ್ತು ಅನಂತಪೂರ ಜಿಲ್ಹೆಗಳ ಕನ್ನಡಿಗರು ಮಾಡತಕ್ಕ ಕೆಲಸವಾಯಿತು. ಕರ್ನಾಟಕದ ಉಳಿದ ಭಾಗದವರೂ ಈ ಬಗ್ಗೆ ತಮ್ಮ ನಿಷೇಧವನ್ನು ವ್ಯಕ್ತಗೊಳಿಸಬೇಕು. ಮದ್ರಾಸದಲ್ಲಿಯ ದೈನಿಕಗಳಿಗೆ ಈ ಬಗ್ಗೆ ಲೇಖಗಳ ಸುರಿಮಳೆಯನ್ನು ಕರೆಯಬೇಕು. ಬಳ್ಳಾರಿಯವರಿಗೂ ಅನಂತಪೂರದವರಿಗೂ ಉತ್ಸಾಹವನ್ನೂ ಬೆಂಬಲವನ್ನೂ ಶೀಘ್ರವಾಗಿ ಕೊಡಬೇಕು.

ರೇಲ್ವೇಬೋರ್ಡಿಗೆ “ಕನ್ನಡಿಗ” ನು ಕಳಿಸಬೇಕೆಂದಿದ್ದ ಅರ್ಜಿಯ ವಿಷಯದಲ್ಲಿ ನವಲಗುಂದದವರು ಒಳ್ಳೇ ಉತ್ಸಾಹವನ್ನೂ ಆತುರತೆಯನ್ನೂ ತೋರ್ಪಡಿಸುತ್ತಿರುವರು. ಮೊದಲು ಅನೇಕ ಜನರ ಸಹಿಯಿಂದ ಅರ್ಜಿಯನ್ನು ಕಳುಹಿಸಿದರು. ಅವರು ಅಷ್ಟಕ್ಕೆ ತಮ್ಮ ಕೆಲಸ ತೀರಿತೆಂದು ತಿಳಿಯದೇ, ಈಗ್ಗೆ ತಮ್ಮ ಮುನಸೀಪಾಲಿಟಿಯಲ್ಲಿ ಈ ಬಗ್ಗೆ ಒಂದು ಠರಾವನ್ನು ಸಹ ತಂದು ಅದನ್ನು ಯೋಗ್ಯ ರೀತಿಯಿಂದ ನಿರ್ಣಯಿಸಿ, ಸಿವ್ಹಾನ ರೆಲ್ವೇ ಬೋರ್ಡಿನವರಿಗೆ ಅರ್ಪಿಸಲು ಅದನ್ನು ನಮ್ಮ ಕಡೆಗೆ ಕಳಿಸಿದ್ದಾರೆ. ಕರ್ನಾಟಕದಲ್ಲಿ ಯಮನೂರ ಮತ್ತು ಸವದತ್ತಿಗಳು ಸುಪ್ರಸಿದ್ಧವಾದ ಕ್ಷೇತ್ರಗಳಾದ್ದರಿಂದ ಬೆಳಗಾವಿ-ಸವದತ್ತಿ-ಹುಬ್ಬಳ್ಳಿಯ ರೇಲ್ವೆ ಮಾರ್ಗವನ್ನು ಮೊದಲು ಪ್ರಾರಂಭಿಸಬೇಕೆಂದು ಅವರು ಒತ್ತಾಯ ಪಡಿಸಿದ್ದಾರೆ. ಕರ್ನಾಟಕದಲ್ಲಿಯ ಇತರ ಮುನಸೀಪಾಲಿಟಿಗಳೂ ಲೋಕಲ್ ಬೋರ್ಡುಗಳೂ ಈ ರೆಲ್ವೇ ವಿಷಯನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ನವಲಗುಂದದವರ ಮೇಲು ಪಂಕ್ತಿಯನ್ನು ಹಿಡಿದರೆ, ಲೋಕಾನುರಾಗಕ್ಕೆ ಪಾತ್ರರಾಗದೇ ಇರರು. ನವಲಗುಂದದವರು ಇದೊಂದು ಹೊಸ ಮಾರ್ಗವನ್ನು ಎಲ್ಲ ಸಾರ್ವಜನಿಕ ಸಂಸ್ಥೆಗಳಿಗೆ ತೋರಿಸಿಕೊಟ್ಟದ್ದಾಗಿ ನಾವು ಅವರನ್ನು ಅಭಿನಂದಿಸದೇ ಇರಲಾರೆವು.

ಮತದಾರರಿಗೆ ಎಚ್ಚರಿಕೆ

ವಿಜಾಪುರಜಿಲ್ಹೆಯ ಲೋಕಲ್‌ಬೋರ್ಡ ಚುನಾವಣೆಯು ಸಮೀಪಿಸುತ್ತಿದೆ. ಪ್ರತಿಯೊಂದು ಸ್ಥಳಕ್ಕೂ ಉಮೇದವಾರರು ಹೆಚ್ಚಾಗಿಯೇ ಇರುವರು. ಹಳ್ಳಿಹಳ್ಳಿಗೆ ಉಮೇದವಾರರು ತಿರುಗುತ್ತಿರುವರು. ಜನರು ಯಾರಿಗೆ ಮತ ಕೊಡಬೇಕು? ಮತದ ಮಹತ್ವವೇನು ? ಇವೇ ಮೊದಲಾದ ಸಂಗತಿಗಳನ್ನು ಮತದಾರರಿಗೆ ತಿಳಿಸಿಕೊಡಬೇಕಾಗಿ ‘ಕನ್ನಡಿಗ’ನ ಇಚ್ಛೆಯಿದೆ. ಈ ಚುನಾವಣೆಯ ಬಗ್ಗೆ ಈ ಜಿಲ್ಹೆಯ ವಿಶೇಷ ಸಂಗತಿಗಳನ್ನಾದರೂ ಕೊಡಬೇಕಾಗಿ ಅನೇಕರ ಸೂಚನೆಯಿದೆ. ಆದರೆ “ಕನ್ನಡಿಗ” ನ ಆಕಾರ ಸಣ್ಣದಾದ್ದರಿಂದ ಈ ಸಂಗತಿಗಳನ್ನೆಲ್ಲ ಬಹಳವಾಗಿ ಸೇರಿಸಲಿಕ್ಕೆ ಅವಕಾಶವಿಲ್ಲ. ಅದ್ದರಿಂದ ಈ ಚುನಾವಣೆಗೆ ನಿಂತ ಉಮೇದವಾರರೆಲ್ಲ, ಒಂದು ಚಿಕ್ಕ ನಿಧಿಯನ್ನೇರ್ಪಡಿಸಿ, “ಕನ್ನಡಿಗ” ನಿಗೆ ಕೊಟ್ಟರೆ, ಕೇವಲ ಚುನಾವಣೆಗೆಂದು ಕೆಲವು ಪುಟಗಳನ್ನು ಪ್ರತ್ಯೇಕವಾಗಿ ಮೇಲ್ಲಂಚಿಕೆಯೊಂದು ಪ್ರಕಟಿಸಬೇಕಾಗಿ ವಿಚಾರವಿದೆ. ಆದ್ದರಿಂದ ಈ ಯೋಜನೆಯು ಎಲ್ಲರಿಗೂ ಸಮ್ಮತವಿದ್ದರೆ ಅವರು ಹಾಗೆ ನಮಗೆ ತಿಳಿಸ ಬಹುದು. ಈ ಚುನಾವಣೆ ವಿಷಯದಲ್ಲಿ “ಕನ್ನಡಿಗ” ನ ಧೋರಣವು ಹೇಗಿದೆಂಬದನ್ನು ವಾಚಕರು ಬಲ್ಲರು.

ಗಣಪತಿ-

[ಭಾವಿ ನಿ]

ಬಳಲಿ ತೊಳಲಿದ ಧರಣಿಯೇಳಲು |
ಮಳೆಯ ಕರೆಯಲು ಮೇಘಗಡಣವು |
ಹೊಳೆಗಳೇರಲು ನಗರು ಹರುಷಿಸೆ |
|| ಪರಿಯ ತಿಳಿಯದಲೆ ||

ಎಳೆಯ ಸುಳಿಗಳು ಹೂಗಳರಳಲು |
ಇಳೆಯ ಕೇತಕೆ ಬೀರೆ ಸುರಭಿಯ |
ಸುಳಿದು ಸುಯ್ಯನೆ ಗಾಳಿಯುಸುರಿತು |
|| ಗಣಪ ಬರುತಿಹನು ||

ಬರಹಗಾರರ ಗುರುವು ನೀನೈ |
ವರನಸುತ ಚಿರವಟುವು ನೀನೈ |
ಹಿರಿದು ಸೇವೆಯ ಮಾಡಲೆಮಗಂ |
|| ವಿತ್ತು ಸಲಹುತಿರು ||

ಇರವನಿಡು ಶಿವಸುಖದ ಬೆಳಕಲಿ |
ಇರಿದು ಅಂಕುಶದಲ್ಲಿ ಜಂಕೆಯ |
ಧರೆಯ ಸುಖದಲಿ ಕರಿವೆ ಭಕುತಿಯ |
|| ನೀವೆ ಮೋದಕವ ||

ನಡುವ ಬಿಗಿಯುವೆ ಪಾಶಬಂಧದಿ |
ಹಿಡಿವೆನಂಕುಶ ಕೊಲಲು ಶಂಕೆಯ |
ಒಡಲ ಕಟ್ಟುವೆ ಪರರ ಸೇವೆಗೆ ,
|| ಪೊರೆವೆ ನಾರ್ತರನು ||

ಹಿಡಿವೆ ಲೇಖನಿ ಬರಿವೆ ಭಾರತ |
ದೊಡಲ ಬೇಗೆಯ ಭವ್ಯಚರಿತೆಯ |
ಒಡೆಯ ! ಗಣಪನ ಮಾಡಲೆನ್ನನು |
|| ಘಳಿಗೆ ಯೊಲವಿನಲಿ ||

—ಶ್ರೀ[illegible]

ಬಳ್ಳಾರಿಯ ಸಂಗತಿ

ಬಳ್ಳಾರಿಯಲ್ಲಿ ಆಂಧ್ರ ವಿಶ್ವ ವಿದ್ಯಾಲಯದ ಚಾವುಟವು ಏರ ಬೇಕೆಂಬ ಗಾಳಿಬೀಸಿದ ಮೇಲೆ ಬಳ್ಳಾರಿಯ ಸುದ್ದಿ ಬಹಳ ರಗಳೆ ಯಾಗಿದೆ. ಗಳಿಗೆಗೊಂದು ಸಾರಿ ಪಕ್ಕದಲ್ಲಿರುವವನ ಮೈ ಚುವುಟು ವ ತುಂಟ ಹುಡುಗನಂತೆ ಪ್ರಸಂಗ ಬಂದಾಗ ಗೊಂದಲ ಹಾಕುವ ಆಂಧ್ರವೀರಮಣಿಗಳು ತಮ್ಮ ಕೆಲಸವನ್ನು ತಾವು ಮಾಡಿದ್ದಾರೆ. ಅದರಿಂದೇನು ನಷ್ಟವಿಲ್ಲ. ಚುವುಟಿದರೆ ಯಾರದೂ ಪ್ರಾಣ ಹೋಗುವದಿಲ್ಲ.

ಬಳ್ಳಾರಿಯಲ್ಲಿ ಕೆಲವುಕಾಲ ನಾನು ಇದ್ದು ಅಲ್ಲಿನ ಸಂಗತಿಗ ಳನ್ನು ನೋಡಿ ಬಲ್ಲೆ. ಸರಕಾರದಲ್ಲಿ ಆಂಧ್ರಮಣಿಗಳ ವರ್ಚಸ್ಸು ಇರಬಹುದೇನೋ ಬಗೆಲಿ. ಬಳ್ಳಾರಿಯವರ ಬಾಳೆಲ್ಲಾ ಕನ್ನಡ ಬಾಳು. ಒಳಕೆಯಲ್ಲಿ ಕನ್ನಡವೇ ಮುಖ್ಯ. ಎಲ್ಲರಿಗೂ ಬೇಕಾಗಿ ಜನ ಗಳಲ್ಲಿ ವ್ಯಾಪ್ತಿಯುಳ್ಳವರಾಗಿದ್ದ ಒಬ್ಬ ಕನ್ನಡಿಗರಾದ ವೈದ್ಯರೊ ಡನೆ ಎಷ್ಟೋ ಬಾರೆ ನಾನು ಬಳ್ಳಾರಿಗೆ ಹೋಗಿದ್ದೆ. ಅವರ ಔಷಧ ಗಳು ಪುಸ್ಕವೆ ದೊರೆಯುತ್ತಿದ್ದವು. ಎಲ್ಲ ತರದ ಜನರೂ ಅವರ ಬಳಿಗೆ ಬರುತ್ತಿದ್ದರು. ಅವರಲ್ಲಿ ತೆಲುಗರಿದ್ದದ್ದೇ ಅಪರೂಪ. ತೆಲುಗು ಮಾತಾಡಲಿಕ್ಕೆಮಾತ್ರ ಎಲ್ಲರಿಗೂ ಬರುತ್ತದೆ.

ಬಳ್ಳಾರಿಯ ಕೀರ್ತಿಶೇಷ ಕೃಷ್ಣಮಾಚಾರ್ಯರು ಬರೆದ ಮೊ ದಲನೆ ನಾಟಕಗಳೆರಡೂ ಕನ್ನಡದಲ್ಲೇ. ಅವರ ಮನೆಯಲ್ಲಿ ಹಸ್ತ ಪ್ರತಿಗಳು ಈಗಲೂ ಇವೆ. ಅವರು ಬಳ್ಳಾರಿಯವರಲ್ಲ. ಅನಂತಪು ರ ಜಿಲ್ಹೆಯ ತೆಲುಗು ಭಾಗದವರು. ಅವರ ಪ್ರತಿಭೆಯು ಮಾತೃ ಭಾಷೆಯಲ್ಲೇ ಹೊರಬೀಳಬೇಕಾಯಿತು. ಅವರ ವರ್ಚಸ್ಸಿನ ನೆಳೆ ಲದಿಂದ ಬಳ್ಳಾರಿಯ ನಾಟ್ಯರಂಗವು ಆಂಧ್ರ ವಾಯಿತು. ಅವ ರೊಡನೆ ರಂಗಸ್ಥಳದಲ್ಲಿ ಮೆರೆದವರಲ್ಲಿ ಬಹಳ ಮಂದಿ ಕನ್ನಡದವರೇ ಇದ್ದಾರೆ. ಇಂದಿಗೂ ಬಳ್ಳಾರಿಯ ರಂಗಸ್ಥಳದಲ್ಲಿ ಕನ್ನಡದವರೇ ಬಹಳ. ರಂಗಸ್ಥಳವು ಕೃಷ್ಣಮಾಚಾರ್ಯರ ಆಂಧ್ರನಾಟಕಗಳ ಪಾಲಾದುದರಿಂದಲೂ ಪ್ರಮುಖ ನಟರಾದ ಶ್ರೀ ರಾಘವಾಚಾ ರ್ಯರು ತೆಲುಗರಾದ್ದರಿಂದಲೂ ಕನ್ನಡ ನಾಟಕಗಳೇ ಆದರೂ ಒಂ ದೆರಡು ಸಾರೆ ಕನ್ನಡದಲ್ಲಿ ನಾಟಕಗಳಾದುದನ್ನು ನಾನು ಬಲ್ಲೆ. ಕಲೆಯು ಆಂಧ್ರ ಭಾಷೆಯಲ್ಲೇ ತನ್ನ ಹೂವುಗಳನ್ನು ಹರಡುತ್ತಿ ದೆ. ಆದರೆ ನೀರು ಹಾಕಿ ಬೆಳೆಸುವರು ಮಾತ್ರ ಕನ್ನಡಿಗರು.

ಇನ್ನು ಬಳ್ಳಾರಿಯ ಸಾರ್ವಜನಿಕ ಕಾರ್ಯಗಳಲ್ಲಿ ಮಹಾ ತ್ಮಾ ಗಾಂಧಿಯವರೊಮ್ಮೆ ಬಳ್ಳಾರಿಗೆ ಬಂದಾಗ ಸ್ವಾಗತವನ್ನು ಮಾ ಡುವದು ಶ್ರೀ ತಾರಾನಾಥರಾಯರಂಥ ಕನ್ನಡಿಗರ ಪಾಲಿನದಿತ್ತು. ಬಳ್ಳಾರಿಜಿಲ್ಹೆಯಲ್ಲಿರುವ ಎರಡು ವಾರಪತ್ರಿಕೆಗಳೂ ಕನ್ನಡದವೇ. ತೆಲುಗಿನಲ್ಲಿ ಯಾವುದೂ ಇಲ್ಲ. ಬಳ್ಳಾರಿ ಜಿಲ್ಹೆಯಲ್ಲಿ ಕನ್ನಡಿಗರಾದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠವಿದೆ. ಕನ್ನಡಿಗರಲ್ಲಿ ಎಷ್ಟೋ ಜನಕ್ಕೆ ಹಂಪೆಯ ವಿರುಪಾಕ್ಷದೇವರು ಮನೆ ದೇವರು. ತೆಲುಗರ ಯಾವ ಲಕ್ಷ್ಮೀನಾರಾಯಣ ಸ್ವಾಮಿಯೂ ಯಾವ ವ್ಯಾಸರಾಯರೂ ಇಲ್ಲಿಲ್ಲ.

ಬಳ್ಳಾರಿಯವರ ಉಡಿಗೆ ತೊಡಿಗೆಗಳು ಆಂಧ್ರರೀತಿಯವಲ್ಲ. ಕ ನ್ನಡವನ್ನು ಹೇಳುತ್ತವೆ. ಲೆಕ್ಕಾಚಾರ ವ್ಯವಹಾರಗಳೆಲ್ಲ ಕನ್ನಡ ದಲ್ಲೇ. ಬಳ್ಳಾರಿಯ ತೆಲುಗರು ಮಾತಾಡುವಾಗಲೂ ಅದರಲ್ಲಿ ಕನ್ನ ಡದ ಕಂಠವಿದ್ದೇ ಇರುತ್ತದೆ. ಇಂಥ ಜಗಳದ ಹೊತ್ತಿನಲ್ಲಿ ಅಲ್ಲ ದಿದ್ದರೆ ಆಂಧ್ರರು ಬಳ್ಳಾರಿಯ ತೆಲುಗರ ಮೇಲೆ ತೋರಿಸುವ ವಿಶ್ವಾಸವೂ ಏನು ಅಷ್ಟುಹೆಚ್ಚಿನದಿಲ್ಲ. ಬಳ್ಳಾರಿಯಲ್ಲಿ ತೆಲುಗರಿ ದ್ದಾರೆ. ಆದರೆ ಬಳ್ಳಾರಿ ತೆಲುಗು ಸೀಮೆಯಲ್ಲ. ತೆಲುಗು ಸೀಮೆ ಯೆ ಆಗಿದ್ದರೆ- ಎಲ್ಲಿ? ಯಾವ ತೆಲುಗು ಪತ್ರಿಕೆಯಿದೆ? ಯಾವ ತೆಲುಗು ದೇವರಿದ್ದಾರೆ! ಯಾವ ತೆಲುಗರು ರಾಷ್ಟ್ರಭಕ್ತರಾಗಿ ಬಳ್ಳಾರಿಯಲ್ಲಿ ಕೆಲಸ ಮಾಡಿದ್ದಾರೆ? ಕೃಷ್ಣಮಾಚಾರ್ಯರ ನಂತರ ತೆಲುಗರ ಯಾವ ಎದ್ದದೆಗ್ಗಳಿಕ್ಕೆ ನೆರೆಯಿತು. ಬಳ್ಳಾರಿಯಲ್ಲಿ (ಎರ ಡನೇಯ ಸಾರಿ ಕನ್ನಡ ಸಾಹಿತ್ಯ ಸಮ್ಮೇಲನವು ಅಲ್ಲಿ ನಡೆಯಲಿದೆ. ಕನ್ನಡ ಪ್ರಾಂತಿಕ ಕಾಂಗ್ರೆಸ ಸಭೆಯು ಅಲ್ಲಿ ನೆರೆಯುವ ಪ್ರಯತ್ನ ನಡೆದಿದೆ.) ಯಾವ ತೆಲುಗರ ಊರು ಬಳ್ಳಾರಿಯ ನಾಟ್ಯ ಕಲಾ ವಿಶಾರದ ರಾಘವಾಚಾರ್ಯರಿಗೆ ಆಶ್ರಯ ಕೊಟ್ಟು ಪುಣ್ಯ ಪಡೆದಿ ದೆ.? ಕೃಷ್ಣಮಾಚಾರ್ಯರ ನಾಟಕಗಳನ್ನು ಬಿಟ್ಟರೆ ಬಳ್ಳಾರಿಯು ಆಂಧ್ರರ ಕೀರ್ತಿಪತಾಕೆಗೆ ನೆಲವೆಲ್ಲಿ? —ಎಲ್ಲಕ್ಕೂ ಒಂದೇ ಉತ್ತರ 'ಇಲ್ಲ.' ಹೀಗಿದ್ದು ಆಂಧ್ರರಿಗೆ ಈ ಚಿವುಟುವ ಚಪಲವೇಕೆ?

ಕರ್ನಾಟಕವು ಜಾಗ್ರತವಾಗುತ್ತಲಿದೆ. ಬಳ್ಳಾರಿಯವರು ತೆಲುಗು ನಾಟಕದ ಮೋಹವನ್ನು ಬಿಟ್ಟು ತಾವು ಕನ್ನಡಿಗರೆಂಬುದ ನ್ನು ತಿಳಿಯುತ್ತಿದ್ದಾರೆ. ಉಳಿದ ಕನ್ನಡಿಗರೂ ಅವರ ಬಂಧುಗಳೆಂ ಬುದನ್ನು ಅವರಿಗೆ ತಿಳಿಸಬೇಕು. ಒಂದುಸಾರಿ ಆ ಭಾವನೆಯು ಬೇರೂರಿತೆಂದರೆ ತೆಲುಗರ ಸಾಹಸವೆಲ್ಲ ನಗೆಗೀಡಾಗುವದು. ಬಳ್ಳಾ ರಿಯಲ್ಲಿ ಕನ್ನಡ ಕಾಂಗ್ರೆಸ್ ಕಮಿಟಿಯಿದೆ. ಈ ಜಿಲ್ಹೆಯಲ್ಲಿ ಸಾಹಿ ತ್ಯ ಸಮ್ಮೇಳನವಾಗಿದೆ, ಕನ್ನಡ ಪತ್ರಿಕೆಗಳಿವೆ. ಕನ್ನಡಿಗರೆಂಬ ಅಭಿಮಾನ ಮಾತ್ರ ಇನ್ನೂ ಪೂರ್ಣ ಜಾಗ್ರತವಾಗಿಲ್ಲ, ಆ ಭಾವನೆಯೊಂದು ಅಂಕುರಿಸಿತೆಂದರೆ ! ——

ಸಾಲದ ಪತ್ರ ತೀರಿದ ಮೇಲೂ ಅದಕ್ಕೆ ಜಮೆ ತೋರಿಸದೆ ಹಾಗೇ ಸಾಲಕೊಟ್ಟವರ ಬಳಿ ಬಿಡುವದುಂಟು ಆಂಧವರು ಪಟಿಂಗ ರಾದರೆ 'ಲಿಮಿಟೇಶನ್' ತೀರದಷ್ಟು ದಿನ ಆಗಾಗ ದಾವೆ ಮಾಡುವೆ ವೆಂದು ಹೆದರಿಸುತ್ತಾರೆ. ಈ ಬಳ್ಳಾರಿಯ ತೆಲುಗರಿಗೂ ಅದೇ ತರ ದ ಚಪಲ! 'ಲಿಮಿಟೇಷನ್' ಮುಗಿಯಬೇಕು ! ಕನ್ನಡಿಗರು ತಮ್ಮ ಸಂಸ್ಕೃತಿಯ ಬಗ್ಗೆ ಅಭಿಮಾನ ತಾಳಬೇಕು. ಆಗ್ಗೆ ಈ ಅಂಜಿಕೆಗೆ ಅವಕಾಶವಿರುವದಿಲ್ಲ. ಆಂಧ್ರರಿಗೂ ಈ ಆತ್ಮವಂಚನೆಗೆ ಅಗತ್ಯ ವಿರುವುದಿಲ್ಲ.

—ತುಂಟರ ಕಿವಿ.

ಸುಶಿಕ್ಷಿತರೂ ಕರ್ನಾಟಕ ರಂಗಭೂಮಿಯೂ.

ಕರ್ನಾಟಕದ ಏಕೀಕರಣಕ್ಕಾಗಿಯೂ, ಕನ್ನಡ ಸಾಹಿತ್ಯೋ ದ್ಧಾರಕ್ಕಾಗಿಯೂ ಕನ್ನಡಿಗರು ಟೊಂಕಕಟ್ಟಿ ಹೋರಾಡುವದೇನೋ ದಿಟವಾಗಿದೆ. ಕಥೆ ಕಾದಂಬರಿಗಳು, ಕವನಕೀರ್ತನೆಗಳು ಮೆಲ್ಲ ಮೆಲ್ಲನೆ ತಲೆಯೆತ್ತ ಹತ್ತಿವೆ. ನವನಾಟಕಗಳಾದರೋ ಒಂದೆರಡು ಎಣಿಕೆ ನೋಡುತ್ತಲಿವೆ. ಅವುಗಳಾದರೋ ಸ್ವಂತ ಕೃತಿಗಳಾಗಿ ರದೆ ಪರಭಾಷೆಯಿಂದ ಪರಿವರ್ತನೆಗಳಾಗಿವೆ. ಕನ್ನಡದಲ್ಲಿನ್ನೂ ಉಚ್ಚತರವಾದ ನಾಟಕಗಳೂ ಪ್ರಚುರವಾಗಿಲ್ಲ. ಎಲ್ಲಿಯೋ ಒಂ ದೆರಡು ಅಸ್ತಿತ್ವದಲ್ಲಿದ್ದರೂ ಅವುಗಳನ್ನು ಅಂದವಾಗಿ, ಚಂದದಿಂದ ಅಭಿನಯಿಸಲು ಬಲ್ಲ ಕಂಪನಿಗಳಿಲ್ಲ. ಇದಕ್ಕೆಲ್ಲ ಮುಖ್ಯ ಕಾರಣ ವೆಂದರೆ ಕನ್ನಡ ರಂಗಭೂಮಿಯ ಅಧೋಗತಿಯೇ.

ನಾಟಕವೆಂದರೆ ಮಾನವೀ ಸಂಸಾರದ ಭಾವ ಚಿತ್ರವಲ್ಲದೇ ಮತ್ತೇನು? ಆದ್ದರಿಂದ ನಾಟಕಗಳಿಂದ ವಿಶೇಷವಾಗಿ ಸಮಾಜೋ ನ್ನತಿಯಾಗಿ, ಕನ್ನಡಿಗರ ನಡೆ ನುಡಿಗಳು ತಿದ್ದುಪಾಡು ಹೊಂದಿ, ಕುಂದಿ ಹೋದ ಕನ್ನಡ ತಾಯಿಯು ಕಳೆ ಹೊಂದುವಲ್ಲಿಷ್ಟರಿಮೇನು! ಆದ್ದರಿಂದವರೇ, ಕನ್ನಡಾಭಿಮಾನಿಗಳು ಕನ್ನಡ ನಾಟಕಗಳಲ್ಲಿಯೂ,

SUPPLEMENT TO THIS ISSUE.

ಈ ಜಾಹೀರಾತನ್ನು ಸಂಪೂರ್ಣವಾಗಿ ಓದಿ ತಮ್ಮ ಆಪ್ತ ಮಿತ್ರರಿಗೆಲ್ಲಾ ತೋರಿ

ಸಮಸ್ತರ ಪ್ರತಿ ಮಾಸದ ಫಲ, ಮತ್ತು ಅನೇಕ ಉಪಯುಕ್ತ ವಿಷಯಗಳಿಂದ್ಯುಕ್ತವಾದ

ಬಿಕರಿಗೆ ಸಿದ್ಧವಾಗಿದೆ ! ಹರಪುರಿ ಸುಪ್ರಸಿದ್ಧ ತೆಗ್ಗಿನಮಠದ ಬಿಕರಿಗೆ ಸಿದ್ಧವಾಗಿದೆ

ಕ್ಷಯ ಸಂ|| ರದ ಸಿದ್ಧಾಂತ ಫಲ ಪಂಚಾಂಗ.

ಕ್ರಯ ಪ್ರತಿ ೧ಕ್ಕೆ ರೂ.೦-೩-೦ **ಕ್ರಯ ಪ್ರತಿ ೧ಕ್ಕೆ ರೂ.**

ದಪ್ಪವಾದ ಕಾಗದ | ಹರಪುರದೋಳ್ ಸೆರೆ ಶೋಭಿಪ ! ಪರತೆಗ್ಗಿನ ಮಠದ ಜನನೀರಾಥಿ ವಿಬುಧರ್ || ದಪ್ಪವಾದ ಕಾಗ

ಅಂದವಾದ ಮುದ್ರಣ.) ವಿರಚಿಸಿಪ ಪಂಚಾಂಗವಿದು | ಧರೆಯೊಳು ತಾಂ ಮೆರೆಯುತಿಹುದು ಬಹುವತ್ಸರದಿಂ ||೧|| (ಅಂದವಾದ ಮು

ಈ ಪಂಚಾಂಗವನ್ನು ತರಿಸಿ ಓದಿನೋಡಿ ಚೆನ್ನಾಗಿಲ್ಲದಿದ್ದರೆ ವಾಪಸು ಮಾಡಿರಿ.

ಈ ಪಂಚಾಂಗದಲ್ಲಿ ತಿಥಿ,ವಾರ,ನಕ್ಷತ್ರ, ಯೋಗ,ಕರಣ, ಗ್ರಹಚಾರಾದಿ ಘಟಿಕಾದಿಗಳು, ಅಮೃತ ಸಿದ್ಧಾದಿಯೋಗಗಳು, ಇಂಗ್ಲೀಷು, ಹಿಂದುಸ್ಥಾನಿ ತೇದಿಗಳು, ಸರ್ವ ಮತದವರ ಜಯಂತಿಗಳು, ವ್ರತಗಳು, ಹಬ್ಬಗಳು, ಉತ್ಸವಗಳು, ಏಕಾದಶಿ ನಿರ್ಣಯ, ರಾಜಾದಿ ನವನಾಯಕರ ಫಲ, ಮೇಷ ಸಂಕ್ರಾಂತಿ, ರವ್ಯಾರ್ದ್ರಾಪ್ರವೇಶ, ಚೈತ್ರಶುದ್ಧಪಂಚಮಿ, ವೈಶಾಖ ಶುದ್ಧಾಷ್ಟಮಿ, ಜಗಲ್ಲಗ್ನ ಕುಂಡಲಿ, ಉಪನಾಯಕರು ಮುಂತಾದವುಗಳನ್ನು ಪರಿಶೋಧಿಸಿ ಪ್ರತಿ ದೇಶದಲ್ಲಿವುಂಟಾಗುವ ಮಳೆ, ಬೆಳೆ, ರೋಗ, ನಿರೋಗ, ಸುಭಿಕ್ಷ, ದುರ್ಭಿಕ್ಷ ವಿಚಾರವನ್ನು, ಯಾವ ಯಾವ ದೇಶಕ್ಕೆ ಸುಖ, ಅರಿಷ್ಟವೆಂಬುವ ವಿಚಾರವನ್ನು, ನೆಲ್ಲು,ಕಬ್ಬು, ಹತ್ತಿ, ಜೋಳ, ನವಣೆ, ಕಡಲೆ ಮುಂತಾದ ಹಿಂಗಾರು ಮುಂಗಾರು ಫಸಲು ಎಷ್ಟು ಆನೆಭಾಗ ಫಲಿಸುತ್ತವೆಂಬುವನ್ನು, ಗುರುಶನಿಗಳ ರಾಶಿ ಮತ್ತು ನಕ್ಷತ್ರ ಸಂಚಾರಫಲ, ಮಕರ ಸಂಕ್ರಾಂತಿ ಫಲ, ವರ್ಷ ಧಾನ್ಯಾದಿಗಳ ವಿಚಾರ, ಗುರು ಶುಕ್ರರ ಅಸ್ತ ಕಾಲ ನಿರ್ಣಯ, ಗ್ರಹಣವಿಚಾರ, ಈ ಸಂವತ್ಸರ ದ್ವಾದಶರಾಶಿಯವರ ಆದಾಯ ವ್ಯಯ ವಿಚಾರ, ಅಶ್ವಿನ್ಯಾದಿ ೨೭ ನಕ್ಷತ್ರದವರ ಕಂದಾಯ ಫಲ, ವಿವಾಹ, ಉಪನಯನ, ನೂತನ ಗೃಹ ಪ್ರವೇಶ, ನೂತನ ಗೃಹನಿರ್ಮಾಣಾದಿ ಮುಹೂರ್ತಗಳು, ಈ ಸಂವತ್ಸರ ಪ್ರತಿ ಒಬ್ಬರ ಗುರು ಶನಿಯವರ ಗೋಚಾರ ಫಲ, ಪ್ರತಿಯೊಂದು ಮಳೆ ಪ್ರವೇಶ ಲಗ್ನ, ವಾಹನ, ಸ್ತ್ರೀಪುರುಷನಕ್ಷತ್ರ, ಚಂದ್ರ ಸೂರ್ಯನಕ್ಷತ್ರ, ಮಳೆ ಪತನ, ಗ್ರಹಗಳ ನಾಡಿ ಸಂಚಾರ,ಗ್ರಹಯೋಗಾದಿಗಳನ್ನು ಹಾಕಿ, ಪ್ರತಿಯೊಂದು ಮಳೆಯು ಸುವೃಷ್ಟಿ, ಖಂಡವೃಷ್ಟಿ, ಅಲ್ಪವೃಷ್ಟಿ, ಅನಾವೃಷ್ಟಿ, ಮಧ್ಯವೃಷ್ಟಿ ಎಂಬ ವಿಷಯವನ್ನು ಈ ಸಂವತ್ಸರ ಹತ್ತಿ, ಅರಳೆ, ಜೋಳ, ಬೆಲ್ಲ, ಗೋದಿ, ಮೆಣಸಿನಕಾಯಿ, ತಂಬಾಕು, ಅಡಿಕೆ, ಎಳ್ಳು, ಔಡ್ಲ ಮುಂತಾದ ರಸ ನೀರಸಪದಾರ್ಥಗಳು ತೇಜಿ ಅಥವಾ ಮಂದಿಯಾಗುತ್ತವೆಂಬುವದನ್ನು, ಚೈತ್ರಾದಿ ಪ್ರತಿ ಮಾಸದಲ್ಲಿ ಪ್ರತಿ ದೇಶದೊಳು ಸುಖ ದುಃಖ, ರೋಗ ನಿರೋಗಾದಿ ವಿಚಾರವನ್ನು, ಪ್ರತಿ ಶುಕ್ಲಪಕ್ಷ ಕೃಷ್ಣಗಳಲ್ಲಿ ಪ್ರತಿ ಜೀನಸುಗಳು ತೇಜಿ ಅಥವಾ ಮಂದಿಯಾಗಿರುತ್ತವೆಂಬುದನ್ನು ಪ್ರತಿ ಮಾಸದಲ್ಲಿ ಪ್ರತಿಯೊಬ್ಬರ ಸುಖ, ದುಃಖ, ಲಾಭ, ನಷ್ಟ, ದೇಹಪೀಡೆ, ತೊಂದರೆ, ಅರಿಷ್ಟಾದಿಗಳನ್ನು ಸೂಚಿಸುವ ಪ್ರತಿಯೊಬ್ಬರ ಪ್ರತಿಮಾಸದ ಫಲವನ್ನು ಇವೇ ಮೊದಲಾದ ಉಪಯುಕ್ತ ವಿಷಯಗಳನ್ನು ಚಿಕ್ಕ ಚಿಕ್ಕ ಬಾಲಕರಿಗೂ ಸಹ ತಿಳಿಯುವಂತೆ ವಿಶದವಾಗಿ ಬರೆದಿರುತ್ತೆ. ಅಲ್ಲದೆ ಪ್ರತಿ ಮಾಸದಲ್ಲಿ ವಾಸ್ತುಪುರುಷನು ಮಾಡತಕ್ಕ ರಾಜಯೋಗಾದಿಗಳ ವಿಷಯ, ರಾಜಯೋಗವಿದ್ದಾಗ ಯಾವ ಯಾವ ದಿಕ್ಕಿಗೆ ಮುಖಮಾಡಿ ನೂತನ ಗೃಹ ಪ್ರವೇಶ ನೂತನ ಗೃಹಾರಂಭ ಕಾರ್ಯಗಳನ್ನು ಮಾಡಬೇಕೆಂಬುವದನ್ನು, ಪ್ರತಿಯೊಂದು ಗ್ರಹಗಳು ಪ್ರತಿಯೊಬ್ಬರಿಗುಂಟುಮಾಡುವ ಕಷ್ಟ ಸುಖಾದಿಗಳನ್ನು ಸೂಚಿಸುವ ನವಗ್ರಹಗೋಚಾರ ಫಲಗಳನ್ನು, ನವಗ್ರಹಗಳು ಕಾಡುವ ಕಾಲದಲ್ಲಿ ಜಪಿಸಬೇಕಾದ ನವ ಗ್ರಹ ಸ್ತೋತ್ರವನ್ನು, ಜನನ, ಮರಣ, ಋತು ಅರಿಷ್ಟಾದಿಗಳ ವಿಚಾರಗಳನ್ನು, ಅವುಗಳ ಶಾಂತಿ ಕ್ರಮಗಳನ್ನು, ಅಶ್ವಿನ್ಯಾದಿ ೨೭ ನಕ್ಷತ್ರಗಳಲ್ಲಿ ರೋಗಪ್ರಾಪ್ತಿ ಆದರೆ ಎಲ್ಲಿಯವರಿಗೆ ಕಾಡುತ್ತೆ, ಗುಣವಾಗುತ್ತೋ ಇಲ್ಲೋ ಎಂಬುವ ವಿಚಾರವನ್ನು, ಶೀಘ್ರ ಮರಣ ಯೋಗ ವಿಚಾರವನ್ನು, ರೋಗ ಪ್ರಶ್ನಕ್ಕೆ ಚಂದ್ರ ಗರ್ಭ ಚಕ್ರವನ್ನು ನೋಡುವ ಕ್ರಮವನ್ನು, ಯಾವುದಾದರೊಂದು ವಸ್ತು ನಷ್ಟವಾದರೆ ಅದು ಎಲ್ಲಿರುತ್ತೆ. ಸಿಗುತ್ತದೋ ಇಲ್ಲೋ ಎಂಬುವದನ್ನು ತಿಳಿಯುವದಕ್ಕೆ ನಷ್ಟ ಪ್ರಶ್ನ ವಿಚಾರವನ್ನು, ತಾಂಬೂಲ ಪ್ರಶ್ನವನ್ನು ಹೇಳುವ ಕ್ರಮಗಳನ್ನು, ಪ್ರತಿ ಒಂದು ಪ್ರಶ್ನ ಫಲಿತಾಂಶಗಳನ್ನು ತಿಳಿದುಕೊಳ್ಳುವದಕ್ಕೆ ಷೋಡಶಾಕ್ಷರಿ ಪ್ರಶ್ನ ಚಕ್ರ, ಅದನ್ನು ನೋಡುವ ಕ್ರಮ, ಹಲ್ಲಿಯು ಅಷ್ಟದಿಕ್ಕುಗಳಲ್ಲಿ ನುಡಿದ ಶುಭಾಶುಭ ಫಲ, ಕೃಷಿಕರಿಗೆ ಅನುಕೂಲವಾದ ಫಣಿ ಚಕ್ರದಿಂದ ಬೀಜೋತ್ಪತ್ತಿಯನ್ನು ತಿಳಿಯುವ ಕ್ರಮಗಳನ್ನು, ಪ್ರತಿಯೊಬ್ಬರ ಘಾತ, ತಿಥಿ, ನಕ್ಷತ್ರವಾರಾದಿಗಳ ವಿಷಯವನ್ನು, ರಾಹುಕಾಲ, ಗುಳಿಕ ಕಾಲಗಳನ್ನು, ಪ್ರಯಾಣ, ವ್ಯಾಪಾರ, ವ್ಯವಹಾರ ಮೊದಲಾದ ಪ್ರತಿಯೊಂದು ಕಾರ್ಯಕ್ಕು ಅವಶ್ಯವಾಗಿ ನೋಡತಕ್ಕ ಅಮೃತ, ಚಕ್ರ, ಶೂನ್ಯ, ಮಹೇಂದ್ರಕಾಲಗಳುಳ್ಳ ಶಿವಲಿಖಿತ ಚಕ್ರ ಇತ್ಯಾದ್ಯುಪಯುಕ್ತವಾದ ವಿಷಯಗಳನ್ನು ಬರೆದಿರುತ್ತೇವೆ. ಈ ಪಂಚಾಂಗ ಹತ್ತರವಿದ್ದ ಬಳಿಕ ಇತರ ಯಾವ ಪಂಚಾಗಗಳ ಅವಶ್ಯವಿಲ್ಲ. ನಮ್ಮ ಪಂಚಾಂಗದ ಫಲಗಳು ನಿವರ್ತನಕ್ಕೆ ಬರುತ್ತವೆಂಬುವ ವಿಚಾರವು ತರಿಸಿ ಅನುಭವ ನೋಡಿದ ಮಹನೀಯರಿಗೆ ತಿಳಿದೇ ಇರುತ್ತೆ.

ಕರ್ನಾಟಕಾಭಿಮಾನಿಗಳು ಪ್ರತಿಯೊಬ್ಬರು ಈ ಪಂಚಾಂಗಗಳನ್ನು ತರಿಸಿಕೊಂಡು ನಮ್ಮ ಧರ್ಮಾರ್ಥ ಜ್ಯೋತಿಷ್ಯ ಪಾಠಶಾಲೆಗೆ ಸಹಾಯ ಮಾಡಬೇಕೆಂದು ಪ್ರಾರ್ಥನೆ.

ಕ್ರಯ ಪ್ರತಿ ೧ಕ್ಕೆ ರೂ. ೦-೩-೦.

ಈ ಪಂಚಾಂಗಗಳಿಗಿಂತಲೂ ಕಡಿಮೆ ಕಳಿಸುವದಿಲ್ಲವೆಂಬುವ ವಿಷಯವನ್ನು ವಾಚಕ ಜ್ಞಾಪಕದಲ್ಲಿಡಬೇಕಾಗಿ ವಿನಂತಿ.

ಯೋಗ್ಯತಾ ಪತ್ರಿಕೆ.

ಕ್ರೋಧನ ಸಂ|| ರದ ನಿಮ್ಮ ಹರಪುರಿ ತೆಗ್ಗಿನ ಮಠದ ಸಿದ್ಧಾಂತ ಪಂಚಾಂಗದಲ್ಲಿ ಶಾಸ್ತ್ರಶೋಧನೆಯಿಂದ ಬರೆದಿರುವ ಮಳೆಗಳು, ಪ್ರತಿಯೊಬ್ಬರ ಮಾಸ ಫಲಾದಿ ಫಲಗಳು ಬಹಳ ಅನುಭವಕ್ಕೆ ಬರುತ್ತಿರುವವು. ಆದ್ದರಿಂದ ಈ ಸಂವತ್ಸರದ ಪಂಚಾಂಗಗಳು ತಯಾರಾಗಿದ್ದಲ್ಲಿ ೧೦೦ ಪ್ರತಿಗಳನ್ನು ರವಾನಿಸಬೇಕೆಂದು ಪ್ರಾರ್ಥನೆ.

ಸಂಪಿಹಳ್ಳಿ ಮಠದ **ಶರಣಯ್ಯನವರು,** ಗುಮನೂರು, ತಾ|| ದಾವಣಗೆರೆ ಇವರಂತೆ ಅನೇಕ ಮಹನೀಯರು ತಾವಾಗಿ ಯೋಗ್ಯತಾ ಪತ್ರಿಕೆಗಳನ್ನು ಕಳಿಸಿರುವರು. ಸ್ಥಳಸಂಕೋಚದಿಂದ ಬಿಟ್ಟಿರುತ್ತೆ.

ಪಂಚಾಂಗದ ಬಹುಮಾನಗಳು.

೬ ಪಂಚಾಂಗಗಳನ್ನು ತರಿಸಿಕೊಂಡವರಿಗೆ ಬಾಲಗ್ರಹ, ಭಯ, ದೃಷ್ಟಿ ದೋಷ ... ವ್ಯಾಪಾರದಲ್ಲಿ ಸುಖ, ಸರ್ವಕಾರ್ಯಸಿದ್ಧಿ, ಮಾಟ ಮರುವು ನಿವಾರಣೆ, ಕುಸ್ತಿ, ... ವ್ಯವಹಾರದಲ್ಲಿ ಜಯವನ್ನು ಕೊಡುವ ಸರ್ವಕಾರ್ಯ ಸಿದ್ಧಿಕರ ಶ್ರೀಸೂರ್ಯೋದ್ಧರಣೆಯನ್ನು ... ಪಂಚಾಂಗಗಳನ್ನು ತರಿಸಿ ಕೊಂಡವರಿಗೆ ದರ ೩|| ಆಣೆ ಪ್ರಕಾರ ಕಳುಹಿಸುವದಲ್ಲದೆ, ... ಕಾಲ ಅನುಭವದಿಂದ ಪ್ರತಿಯೊಂದು ಜೀನಸು ಪ್ರತಿತಿಂಗಳೊಳು ಯಾವ ತಿಥಿಯಿಂದ ... ತಿಥಿವರಿಗೆ ತೇಜಿ ಅಥವಾ ಮಂದಿಯಾಗಿರುತ್ತವೆಂಬುದನ್ನು ನಿರ್ಣಯಿಸಿ ಬರೆದಿರುವ ... ವತ್ಸರದ ೧೨ಮಾಸಗಳ ತೇಜಿ ಮಂದಿ ನಿರ್ಣಯವೆಂಬ ವ್ಯಾಪಾರ ಮರ್ಮಗನ್ನಡಿಯ ... ೧ ಸೂರ್ಯೋದ್ಧರಣೆಯನ್ನು, ೨೫ ಪಂಚಾಂಗಗಳನ್ನು ತರಿಸಿಕೊಂಡವರಿಗೆ ದರ ೩|| ... ಪ್ರಕಾರ ಮೇಲಿನ ಬಹುಮಾನಗಳನ್ನು ಸಹ ಕಳ್ಳುವದಲ್ಲದೆ ಮೆಸ್ಮೆರಿಜಂ, ರಸಾಯನ ... ಮತ್ತು ಕಲಾ ಕೌಸಲ್ಯವಿದ್ಯೆಗಳ ಗುಪ್ತವಾದ ವಿಷಯಗಳನ್ನೊಳಗೊಂಡು ಬಡವರಿಗೂ ... ರಿಗೂ ನಿಧಿಯೋಪಾದಿಯಲ್ಲಿರುವ ಮರ್ಮಕಲಾ ಬೋಧಿನಿ ಗ್ರಂಥವನ್ನು ಉಚಿತವಾಗಿ ... ಸುತ್ತೇವೆ. ೫೦-೧೦೦, ೨೦೦, ಪಂಚಾಂಗಗಳನ್ನು ತರಿಸಿಕೊಂಡವರಿಗೆ ಶೇಕಡಾ ... ಪಾಯಿ ಪ್ರಕಾರ ಕಳ್ಳುತ್ತೇವೆ. ಒಂದೇ ಸಾರಿ ಸಾವಿರ ಪಂಚಾಂಗಗಳನ್ನು ತರಿಸಿ... ಸಾವಿರಕ್ಕೆ ೮೦ ರೂಪಾಯಿಗಳ ಪ್ರಕಾರ ಕೊಡುತ್ತೇವೆ.

ಪಂಚಾಂಗ ದೊರೆಯುವ ಪತ್ತೆ.

ಮೇನೇಜರ್, ಭಾರತ ಜ್ಯೋತಿಷ್ಯವೈದ್ಯಾಲಯ, ಹರಪನಹಳ್ಳಿ (ಜಿಲ್ಲಾ ಬಳ್ಳಾರಿ)

ದೇಶಾಭಿಮಾನಿಗಳಲ್ಲಿ ವಿನಂತಿ.

ನಾವು ಧರ್ಮಾರ್ಥ ಭಾರತ ಜ್ಯೋತಿಷ್ಯ ವೈದ್ಯಾಲಯದಲ್ಲಿ ಜ್ಯೋತಿಷ್ಯ ಶಾಸ್ತ್ರವನ್ನು ವ್ಯಾಸಂಗ ಮಾಡಿದೆವು. ನಾವು ಹೋದ ೨, ೩ ತಿಂಗಳುಗಳಲ್ಲಿಯೇ ಜ್ಯೋತಿಷ್ಯ ಶಾಸ್ತ್ರದ ಮರ್ಮಗಳನ್ನು ಬಿಚ್ಚಿ ಹೇಳಿ ನಮಗೆ ತೇರ್ಗಡೆ ಪಡಿಸಿದರಿಂದ ಬಹಳ ಕೃತಜ್ಞರಾಗಿರುತ್ತೇವೆ. ಸದರಿ ಮೇನೇಜರವರು ಗುಟ್ಟನ್ನಿಡದೆ ವಿದ್ಯಾರ್ಥಿಗಳಿಗೆ ಅಲ್ಪದಿನಗಳಲ್ಲೇ ಸುಬೋಧವಾಗುವಂತೆ ಧರ್ಮಾರ್ಥವಾಗಿ ಜ್ಯೋತಿಷ್ಯ ಶಾಸ್ತ್ರವನ್ನು ಹೇಳುತ್ತಿರುವರು. ಕಾರಣ ಕರ್ನಾಟಕಾಭಿಮಾನಿಗಳು ಇವರ ಆಫೀಸಿನಿಂದ ಹೋಗುವ ಪಂಚಾಂಗಗಳನ್ನು ಪುಸ್ತಕಗಳನ್ನು, ಇವರಿಂದ ಕಳು ರಿಸಲ್ಪಡುವ ಆಯುರ್ವೇದ, ಯುನಾನಿ ಔಷಧಗಳನ್ನು ತರಿಸಿಕೊಂಡು ಇವರಿಗೆ ಸಹಾಯಮಾಡಿ ಉತ್ತೇಜನವನ್ನುಂಟುಮಾಡಬೇಕೆಂದು ಪ್ರಾರ್ಥಿಸುತ್ತೇವೆ.

ತೀರ್ಥಹಳ್ಳಿ ತಾಲ್ಲೂಕು ಕೊಗ್ರಿಮಠದ **ಸಿದ್ಧಪ್ಪಯ್ಯ ಶಾಸ್ತ್ರಿ**

ಹುಮಚದ ಅರಪ್ರಿ ಮಠದ **ರುದ್ರಪ್ಪಯ್ಯ ಶಾಸ್ತ್ರಿ**

ಪಂಚಾಂಗ ದೊರೆಯುವ ಪತ್ತೆ:—ಮೇನೇಜರ್, ಭಾರತ ಜ್ಯೋತಿಷ್ಯ ವೈದ್ಯಾಲಯ, ಹರಪನಹಳ್ಳಿ (ಜಿಲ್ಲಾ ಬಳ್ಳಾರಿ)

The Power Printing Works, Bangalore City.

ಬಹುಜನ ಪಂಡಿತರಿಂದ ಶ್ಲಾಘಿಸಲ್ಪಟ್ಟ ಈ ಗ್ರಂಥವನ್ನು ತಪ್ಪಿ ಓದಿನೋಡಿ ಚನ್ನಾಗಿಲ್ಲವಿದ್ದರೆ ವಾಪ್ಸುಮಾಡಿರಿ.
ಚಿಕ್ಕ ಚಿಕ್ಕ ಬಾಲಕರಿಗೂ ಸಹ ತಿಳಿಯುವಂತೆ ಬರೆಯಲ್ಪಟ್ಟ
ಷೋಡಶ (೧೬) ಶಾಸ್ತ್ರಗಳ ಮರ್ಮಗಳನ್ನು ಚಿಕ್ಕ ಚಿಕ್ಕ ಬಾಲಕರಿಗೂ ಸಹ ತಿಳಿಯುವಂತೆ ಬರೆಯಲ್ಪಟ್ಟ

ಟುಂಬಸಂಜೀವಿನಿ ಕಲ್ಪ!! ರಹಸ್ಯಬೋಧಾಮೃತವೆಂಬ ಲೋಕೋಪಕಾರ ಕಲ್ಪತರು!!!

ಕ್ರಯ ರೂ. ೨-೦-೦.

ಯ. ಬಿಡಬೇಡಿ !

ವಿದ್ಯಾಗುರು.

ಎಚ್ಚರಿಕೆ ಮೋಸಹೋಗಬೇಡಿರಿ.—ನಾವು ಈ ವಿದ್ಯಾಗುರು ಗ್ರಂಥವನ್ನು ರಚಿಸಿ ಪ್ರಚಾರ ಪಡಿಸಿದ ನಂತರ, ಜ್ಯೋತಿಷ್ಯ ಸಿದ್ಧಾಂತ, ವೈದ್ಯ ಆದಿ ಕೆಲ ಳ ವಾಸನೆಯಿಲ್ಲದೆ-ಶಾಸ್ತ್ರಿಗಳೆಂತಲೂ, ಸಿದ್ಧಾಂತಿಗಳೆಂತಲೂ, ವೈದ್ಯರೆಂತಲೂ ತಮ್ಮ ಸ್ವಕ್ಕೆ ತಾವೇ ಹೊಗಳಿಕೊಳ್ಳುವ ವಿದ್ಯಾಗಂಧವನ್ನರಿಯದ ಕೆಲ ಸ್ವಾರ್ಥ ಶಾಸ್ತ್ರಗಳು ನಮಗೆ ಲುಕ್ಸಾನ ಪಡಿಸಬೇಕೆಂಬ ದುರುದ್ದೇಶದಿಂದ ಗ್ರಂಥವನ್ನು ರಚಿಸುತ್ತೇವೆಂದು ಬಹು ಜನ ಪಂಡಿತರಿಂದ ಶ್ಲಾಘಿಸಲ್ಪಟ್ಟ ವಿದ್ಯಾಗುರು ಗ್ರಂಥದಲ್ಲಿ ಹೇಳಿದ ಅನುಭವ ಮತ್ತು ಶಾಸ್ತ್ರ ಸಂಮತವಾದ ವಿಷಯಗಳನ್ನೇ ತಮ್ಮ ಜಾಹಿರಾತುಗಳಲ್ಲಿ ಬರೆದುಕೊಂಡು ಪ್ರಚಾರಪಡಿಸು ರು. ದೇಶಾಭಿಮಾನಿಗಳು ಇಂಥಾ ದುರುದ್ದೇಶಿಗಳ ನೋಟೀಸುಗಳಿಗೆ ಮರುಳಾಗಿ ಮೋಸಹೋಗ ಬಾರದೆಂದು ನಮ್ಮ ಪ್ರಾರ್ಥನೆ.

ಸೂಚನೆ:—ಈ ಗ್ರಂಥದಲ್ಲಿ ಅನೇಕ ರಹಸ್ಯ ವಿಷಯಗಳಿದ್ದಾಗ್ಯೂ ಸ್ಥಲಸಂಕೋಚದಿಂದ ಈ ನೋಟೀಸಿನಲ್ಲಿ ಕೆಲವು ವಿಷಯಗಳನ್ನು ಮಾತ್ರ ಸೂಚಿಸಿರುತ್ತೇ. ದು ಶಾಸ್ತ್ರದ ಮರ್ಮಗಳನ್ನು ಮರೆಮಾಚದೆ ಬೋಧಿಸುವ ಈ ಗ್ರಂಥವು ಪ್ರತಿಕುಟುಂಬದಲ್ಲಿಯೂ ಅತ್ಯಾವಶ್ಯಕವಾಗಿರತಕ್ಕದ್ದೆಂತಲೂ, ಬಡವರೇ ಮೊದ ಲಾದವರು ತರಿಸಿಕೊಳ್ಳುವಂತೆ ಬೆಲೆಯನ್ನು ಸ್ವಲ್ಪ ಕಡಿಮೆಮಾಡಬೇಕೆಂತಲೂ ಸೂಚಿಸಿದ ದೇಶಾಭಿಮಾನಿಗಳ ಅಭಿಪ್ರಾಯದಂತೆ ರೂ. ೨-೮-೦ ಇದ್ದ ಈ ಗ್ರಂಥದ ಬೆಲೆಯನ್ನು ರೂ. ೨-೦-೦ ಇಟ್ಟಿರುತ್ತೇವೆ. ಪ್ರತಿಗಳು ಸ್ವಲ್ಪವುಳಿದಿವೆ ಬೇಗನೆ ತರಿಸಿಕೊಳ್ಳಿರಿ. **ಕ್ರಯ ಪ್ರತಿ ೧ಕ್ಕೆ ರೂ. ೨-೦-೦. ಟ ಕ. ಪ್ರತ್ಯೇಕ.**

ಈ ಗ್ರಂಥದ ಕೌತುಕರಹಸ್ಯದಲ್ಲಿ ರುದ್ರಯಾಮಳ, ನಾಗಾರ್ಜುನಾದಿ ತಂತ್ರಗಳಲ್ಲಿ ವ ಅದೃಶ್ಯ, ಜಲಸ್ತಂಭನ, ಅಗ್ನಿಸ್ತಂಭನ, ದೃಷ್ಟಿ ಬಂಧನ, ವಶೀಕರಣ, ಮೃತವತ್ಸ ವಂಧ್ಯ ಪುತ್ರ ವಶೀಕರಣ, ಬಾಲಾಂಜನ, ಸರ್ವಾಂಜನ, ನಿಧಿಕಾವಲಿರುವ ಭೂತ ಪ್ರೇತ ಳು ಪಲಾಯನ ವಾಗುವಿಕೆ, ಪಾದುಕಾಸಾಧನಾದಿ ಅನೇಕಾನೇಕ ಪ್ರಯೋಗಗಳನ್ನು, ಪಾಮರರಿಗೂ ಆನಂದವನ್ನುಂಟುಮಾಡು ನಾನಾಬಗೆ ಇಂದ್ರಜಾಲವಿದ್ಯೆಗಳು, ಅಮೆರಿಕ್ ಗಾರಡಿ ವಿದ್ಯೆಗಳು, ಈ ಸ್ಟೇಜ್ ತಮಾಷೆಗಳು, ವಸ್ತುಲಾಘವ, ಕರ್ಣಲುಘವ, ನಾದಿ ಅನೇಕಾನೇಕ ಚಮತ್ಕಾರಗಳನ್ನು ಬರೆದಿರುತ್ತೆ. ಮಹದ್ವಿದ್ಯಾರಹಸ್ಯದಲ್ಲಿ ವಿದ್ಯಾವಿಹೀನನಾದರು ಕಲಿಯುವಂತೆ ಭೂತ ಭವಿಷ್ಯದ್ವರ್ತಮಾನಗಳನ್ನು ಹೇಳುವದನ್ನು ನೇಕ ಚಮತ್ಕಾರಗಳನ್ನು ಮಾಡುವದನ್ನು ಪಶುವಶ್ಯಾದಿ ಸರ್ವಪ್ರಯೋಗಗಳನ್ನು ಏವಮಾ ಳ್ಳುವದನ್ನು, ಎಂಥಾ ಘನರೋಗವಿದ್ದರೂ ಔಷಧವಿಲ್ಲದ ಗುಣಪಡಿಸುವದನ್ನು ವಿವರವ ಅನಂಗರಂಗವೆಂಬ ಸ್ತ್ರೀಮರ್ಮ ಶಾಸ್ತ್ರದಲ್ಲಿ ೧೬ ಜಾತಿ ಸ್ತ್ರೀ ಪುರುಷ, ಸಂಭೋಗ ಸುಖದ ಗಳನ್ನು ಪ್ರತಿ ಒಂದು ಜಾತಿ ಸ್ತ್ರೀಪುರುಷರ ಕಲಾಸ್ಥಾನಗಳನ್ನು, ಗರ್ಭಿಣಿ ಸ್ತ್ರೀನೀತಿಗಳನ್ನು ಇತ್ಯಾದಿ ನಾನಾ ಮರ್ಮಗಳನ್ನು, ಗರ್ಭಪಿಂಡ ವಿಚಾರವನ್ನು, ರಹಸ್ಯದಲ್ಲಿ ಪ್ರತಿಯೊಂದು ಜಾತಿ ಫಲ ವೃಕ್ಷ ನ್ನು ಬರೆದಿರುತ್ತೆ. ವೃಕ್ಷಶಾಸ್ತ್ರ ರಹಸ್ಯದಲ್ಲಿ ಪ್ರತಿಯೊಂದು ಜಾತಿ ಫಲ ವೃಕ್ಷ ಷವಾಗಿಯೂ ಒಳ್ಳೇ ರುಚಿಕರವಾಗಿಯೂ, ದೊಡ್ಡ ದೊಡ್ಡದಾಗಿಯೂ ಹಣ್ಣುಗಳನ್ನು ಕೆಯೂ, ಹುವ್ವು ಕಾಯಿಗಳು ಉದುರದಂತೆಯೂ, ನಾನಾ ಜಾತಿ ಪುಷ್ಪ ಗಿಡಬಳ್ಳಿಗಳು ಗಿಯೂ, ತಮಗೆ ಬೇಕಾದ ವರ್ಣದ ಪುಷ್ಪಗಳನ್ನು ಬಿಡುವಂತೆಯೂ ಬೀಜಗಳನ್ನು ನಾಟ ವಿಧಾನಗಳನ್ನು, ನಾನಾವಿಧ ವೃಕ್ಷ ಚಿಕಿತ್ಸಾ ಕ್ರಮಗಳನ್ನು ಬಹು ಚನ್ನಾಗಿ ಬರೆದಿರು ಕ್ಷಿಣಿ ರಹಸ್ಯದಲ್ಲಿ ತಮಗೆ ಬೇಕಾದುದನ್ನು ಕೊಡುವದಕ್ಕೆ ಸಿದ್ಧವಾಗಿರುವ ನಾನಾ ದೇವತೆಗಳನ್ನು ಒಲಿಸಿಕೊಳ್ಳುವ ಸುಲಭ ಸಾಧ್ಯರಹಸ್ಯಗಳನ್ನು ಬರೆದಿರುತ್ತೆ. ಮತೆ ಯಂತ್ರ ಮತ್ತು ಮಂತ್ರರಹಸ್ಯದಲ್ಲಿ ಪ್ರತ್ಯಕ್ಷವಾಗಿ ಫಲವನ್ನು ಕೊಡುವ ಪ್ರತಿ ವಿಷಯಕ್ಕೂ ಬೇಕಾದ, ಶ್ರೀ ಆಂಜನೇಯ, ಪಾರ್ವತಿ ಪರಮೇಶ್ವರ, ಗರುಡ ಸೂರ್ಯ , ಶ್ರೀ ವೀರಭದ್ರಾದಿ ಮಂತ್ರಗಳನ್ನು, ಯಂತ್ರಗಳನ್ನು, ಅವುಗಳ ರಹಸ್ಯಗಳನ್ನು, ದೃಷ್ಟಿ ದೋಷ, ಗೃಹದಿಗ್ಬಂಧನ, ಮಾಟ ಮರುವು, ಗ್ರಹಸೋಂಕು, ಭಯಮುಂತಾದ ನಿವಾರಿಸುವ ಕ್ರಮಗಳನ್ನು ವಿಶದವಾಗಿ ಬರೆದಿರುತ್ತೆ. ಶಕುನ ಶಾಸ್ತ್ರ ರಹಸ್ಯ ಗಿ, ಹಿಂಗಳ ಪಕ್ಷ್ಯಾದಿ ಪಕ್ಷಿಗಳ ಸ್ವರ ಭೇದದಿಂದ ಶುಭಾಶುಭ ಶಕುನಗಳ ಫಲಗ ನರಿನಾಯಿ ಆದಿ ಅನೇಕಾನೇಕ ಜಂತುಗಳ ಶಕುನಗಳನ್ನು, ಅಂಗ ಚಲನೆ, ಹಲ್ಲಿ ಶಕುನ, ಶಕುನಾದಿ ಯಾವತ್ತು ಶಕುನಗಳನ್ನು ವಿಶದ ಪಡಿಸಿರುತ್ತೆ. ಸ್ವಪ್ನ ಫಲ ಶಾಸ್ತ್ರದಲ್ಲಿ ನೇಕ ಸ್ವಪ್ನಗಳ ಫಲಿತಾಂಶಗಳನ್ನು, ತತ್ ಫಲಗಳುಂಟಾಗುವ ಕಾಲಮಾನವನ್ನು ಬಹು ಬರೆದಿರುತ್ತೆ. ಜ್ಯೋತಿಷ್ಯ ಶಾಸ್ತ್ರದಲ್ಲಿ ವಿವಾಹ, ಉಪನಯನ, ಗೃಹ ಪ್ರವೇಶ, ನಿರ್ಮಾಣ, ಪ್ರಯಾಣ ಮುಂತಾದ ಯಾವತ್ತು ವಿಷಯಗಳಿಗೆ ಮುಹೂರ್ತಗಳನ್ನು ನಿರ್ಣ ಯಿಸುವ ರಹಸ್ಯಗಳನ್ನು, ನವಗ್ರಹಗಳ ಗೋಚಾರ ಫಲಗಳನ್ನು, ಪ್ರತಿ ವರುಷ, ಪ್ರತಿದಿನ ಪ್ರತಿ ದಲ್ಲಿ ಉಂಟಾಗುವ ಪ್ರತಿಯೊಬ್ಬರ ಸುಖದುಃಖಾದಿಗಳನ್ನು ತಿಳಿಸುವ ಭವಿಷತ್ಫಲ ರಹಸ್ಯ ಜಾತಕ ಗಣಿತ ಮರ್ಮಗಳು, ಅಂದರೆ ಲಗ್ನ, ನವಾಂಶ, ದ್ರೇಕ್ಕಾಣ, ಚಂದ್ರಲಗ್ನ, ಭಾವ ದಶಾಭಾವ ಕುಂಡಲಿ, ಷಷ್ಠಾಂಶ, ತ್ರಯೋದಶ ವರ್ಗ, ತ್ರಯೋದಶ ವರ್ಗದ ಕುಂಡಲಿ ಅವಸ್ಥಾ ಸಮಯಾ, ಗ್ರಹಸ್ಫುಟ, ಲಗ್ನ ಸ್ಫುಟ, ಅಂಶಾಯುರ್ದಾಯ, ಅಷ್ಟಕವರ್ಗಾದಿ ಒಂದು ಗಣಿತಗಳನ್ನು ಮಾಡಿಕೊಳ್ಳುವದನ್ನು ಉದಾಹರಣೆಗಳೊಂದಿಗೆ ಚಿಕ್ಕ ಚಿಕ್ಕ ಬಾಲ ರೂ ಸಹ ಸುಬೋಧವಾಗುವಂತೆ ಬರೆದಿರುವದಲ್ಲದೆ ದಶಾನಿರ್ಣಯ, ಅಂತರಾಂತರ, ಸೂಕ್ಷ್ಮ ಭುಕ್ತಿಗಳ ಗಣಿತ ರಹಸ್ಯಗಳನ್ನು, ಮತ್ತು ಪ್ರತಿ ಒಂದು ದಶಾಭುಕ್ತಿ, ಅಂತರಾಂತರಗ ಳನ್ನು ಹಾಕಿರುತ್ತೆ. ಅಲ್ಲದೆ ಪ್ರತಿಯೊಬ್ಬರು ತಮ್ಮ ತಮ್ಮ ಜಾತಕಗಳನ್ನು ತಾವೇ ಕೊಳ್ಳುವಂತೆ ತನ್ವಾದಿ ದ್ವಾದಶ ಭಾವ ಫಲಗಳನ್ನು, ದಶಾ, ಭುಕ್ತಿ ಅಂತರಾಂತರ ಸೂ ಕ್ಷ್ಮ ಭುಕ್ತಿ ಫಲಿತಾಂಶವನ್ನು ತಿಳಿದುಕೊಳ್ಳುವ ರಹಸ್ಯವನ್ನು, ಸ್ತ್ರೀಜಾತಕ ರಹಸ್ಯ ವನ್ನು, ಇಂಥಾ ಪ್ರಶ್ನವೆಂದು ನಿರ್ಣಯಿಸುವ ರಹಸ್ಯಗಳನ್ನು, ಪ್ರತಿಯೊಂದು ಪ್ರಶ್ನ ಫಲಗಳನ್ನು ಹೇಳುವ ಮರ್ಮಗಳನ್ನು ಬರೆದಿರುತ್ತೆ. ರಮಲಶಾಸ್ತ್ರರಹಸ್ಯದಲ್ಲಿ ಗಣಿತ ರಹಸ್ಯಗಳನ್ನು, ಪ್ರಶ್ನೆ ಕನಮನೋಗತವನ್ನು ತಿಳಿಯುವ ರಹಸ್ಯಗಳನ್ನು, ಯಾವತ್ತು ಪ್ರಶ್ನೆಗಳನ್ನು ಹೇಳುವ ಮರ್ಮಗಳನ್ನು ಬಹುಚನ್ನಾಗಿ ಬರೆದಿರುತ್ತೆ. ಅಲ್ಲದೆ ಪ್ರಖ್ಯಾತಿಹೊಂದಿದ ಫ್ರಾನ್ಸುದೇಶದ ನೆಪೋ ಲಿಯನ್ ಬೋನಪಾರ್ಟರವರು ಅನುಮೋದಿಸಿದ ಷೋಡಶ ಪ್ರಶ್ನ ಶಾಸ್ತ್ರವನ್ನು ವಿಶದ ವಾಗಿ ಬರೆದಿರುತ್ತೆ. ಸ್ವರಶಾಸ್ತ್ರ ರಹಸ್ಯದಲ್ಲಿ ಸಕಲ ವಿಧ ಮುಹೂರ್ತಗಳನ್ನು ನಿರ್ಣಯಿ ಸುವ ರಹಸ್ಯಗಳನ್ನು, ಪ್ರತಿಯೊಂದು ಪ್ರಶ್ನೆಗಳನ್ನು ಹೇಳುವ ಕ್ರಮಗಳನ್ನು ಚನ್ನಾಗಿ ವಿಶದಪಡಿ ಸಿರುತ್ತೆ. ಉದ್ದೃಷ್ಟ ರೇಖಾಶಾಸ್ತ್ರದಲ್ಲಿ ಪ್ರತಿಯೊಬ್ಬ ಸ್ತ್ರೀಪುರುಷರ ನಡತೆ, ಭಾಗ್ಯ, ದರಿದ್ರ, ಸ್ತ್ರೀ ಪುತ್ರ, ಭ್ರಾತೃ, ಪಿತೃ, ಮಾತೃ, ಆಯುಷ್ಯ, ಅಕಾಲಮರಣ ಜೀವನ ಪ್ರತಿವರುಷ ಸುಖದುಃಖಾದಿಗಳನ್ನು ತಿಳಿಸುವ ಪ್ರತಿಯೊಂದು ಅಂಗಲಕ್ಷಣಗಳನ್ನು, ರೇಖಾಲಕ್ಷಣಗಳನ್ನು, ತಿಲಲಕ್ಷಣಗಳನ್ನು, ಹಸ್ತದಲ್ಲಿರುವ ರವ್ಯಾದಿಗ್ರಹಗಳ ಸ್ಥಾನ ಲಕ್ಷಣಗಳನ್ನು ಸುಬೋಧವಾಗು ವಂತೆ ವಿಶದಪಡಿಸಿರುತ್ತೆ. ವೈದ್ಯರಹಸ್ಯದಲ್ಲಿ ಎಲ್ಲಾ ಕಡೆಗೂ ದೊರೆಯುವ ಗಿಡಮೂಲಿಕೆಗಳ ಗುಣರಹಸ್ಯಗಳನ್ನು, ನಾಡಿ, ಮೂತ್ರಲಕ್ಷಣಗಳನ್ನು, ಸಕಲವಿಧ ಮೂಲಿಕೆ, ಧಾತು, ದ್ರವ್ಯಾದಿಗಳ ಶುದ್ಧಿ ಕ್ರಮಗಳನ್ನು, ಗಂಧಕಾದಿದ್ರವ್ಯಗಳ ಹೊಗೆ ಕಟ್ಟುವ ವಿಧಗಳು, ಜಯ ನೀರು ಕ್ರಮಗಳು, ಗಿಡಮೂಲಿಕೆಗಳಿಂದ ಸುಲಭವಾಗಿ ರಸ, ಗಂಧಕಾದಿ ದ್ರವ್ಯಗಳ, ಮತ್ತು ಲವಣಗಳ, ತಾಮ್ರಾದಿ ಧಾತುಗಳ ಭಸ್ಮ, ಸಿಂಧೂರ ಸುಣ್ಣಗಳ ಕ್ರಮಗಳು, ಅವುಗಳ ಮಹತ್ತರವಾದ ಗುಣೋಪಯೋ ಗಗಳು, ರೋಗಗಳಿಗೆ ಉಪಯೋಗಿಸುವ ವಿಧಗಳು, ಸರ್ವರೋಗಗಳಿಗೂ ನಾನಾ ಬಗೆ ಕಷಾಯ ಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ತೈಲಗಳು, ದ್ರಾವಕಗಳು, ಸರ್ವವಿಧ ವ್ರಣ ಫಳಿಸ್ತ್ರಗಳು, ವಿಷಜಂತುಗಳ ಮೂಲಿಕಾದಿ ಚಿಕಿತ್ಸಾ ಕ್ರಮಗಳನ್ನು ಚನ್ನಾಗಿ ಬರೆದಿರುತ್ತೆ. ವಾದರಹಸ್ಯದಲ್ಲಿ ಎಂಥಾ ಘನರೋಗವಿದ್ದರೂ ತೀವ್ರದಲ್ಲಿ ಗುಣಪಡಿಸುವ, ತಾಮ್ರಾದಿ ಧಾತು ಗಳನ್ನು ಸುವರ್ಣಮಾಡುವ ನಾನಾವಿಧ ರಸ, ಗಂಧಕಾದಿ ದ್ರವ್ಯಗಳ ಭಸ್ಮಗಳು, ಸಿಂಧೂರ ಗಳು, ಮೇಣಗಳು, ತೈಲಗಳ ಕ್ರಮಗಳನ್ನು ವಿಶದ ಪಡಿಸಿರುತ್ತೆ. ಕೈಗಾರಿಕೆ ರಹಸ್ಯದಲ್ಲಿ ನಾನಾವಿಧ ಕೆಮಿಕಲ್ ಭಂಗಾರ, ೫ ನಿಮಿಷದಲ್ಲಿ ಸಣ್ಲೈಟುಸೋಪು, ಬಾರ್‌ಸೋಪು, ಟಾಯಲೆಟ್ ಸೋಪನ್ನು ಮಾಡುವ ಕ್ರಮಗಳನ್ನು, ನಾನಾ ವಿಧ ಪೌಡಿನ ಕಡ್ಡಿ, ಅರಗಜಾದಿ ಸುಗಂಧಿತ ದ್ರವ್ಯಗಳು, ಮಸಿಗಳು, ನಾನಾ ಬಣ್ಣದ ಮಸಿ, ವಾರ್ನಿಷ್‌ಗಳು. ಸಿಮೆಂಟುಗಳು, ಸೋಡಾವಾಟರ್, ಮಂಜಿನಗಡ್ಡೆ ಜೆಲ್ಲಿ, ಭಂಗಾರ ಗಿಲ್ಟು. ಬಟ್ಟೆ, ರೇಷ್ಮೆ ಮುಂತಾದವುಗಳಿಗೆ ಬಣ್ಣಕೊಡುವ ವಿಧಗಳು ಇತ್ಯಾದಿ ನಾನಾವಿಧ ಪ್ರತಿಯೊಂದು ಕೈಗಾರಿಕೆಗಳನ್ನು ಬರೆದಿರುತ್ತೆ.

ಈ ಗ್ರಂಥದ ವಿಷಯವಾಗಿ ಯೋಗ್ಯತಾ ಪತ್ರಿಕೆಗಳನ್ನು ಕೊಟ್ಟ ಪಂಡಿತರು ಮತ್ತು ಇತರ ಸಭ್ಯರು.

ಶ್ರೀ ಜಗದ್ಗುರು ಕೇಮರ ಸಂಸ್ಥಾನದ ಸರ್ವಾಧಿಕಾರಿಗಳಾದ ಸಿದ್ಧರಾಮಸ್ವಾಮಿಗಳು, ಆದವಾನಿ ಬಿ. ಸುಂದರ ಶಾಸ್ತ್ರಿಗಳು, ಬ್ಯಾಡಗಿ ಹಿರೇಮಠದ ಸಿದ್ಧಾಂತಿ ಅನ್ನದಾನಶಾಸ್ತ್ರಿಗಳು, ಬೆಂಗಳೂರು ಗೌರ್ನಮೆಂಟು ಕೊಲಿಜಿಯೇಟ್ ಹೈಸ್ಕೂಲು ಪಂಡಿತರು. ಯಂ. ಕೃಷ್ಣಪ್ಪನವರು, ಅನೇಕ ಗ್ರಂಥಗಳನ್ನು ಬರೆದಿರುವ ಯಂ. ವಿ. ರಂಗರಾಯರು, ಜಿ. ಶೀತಾರಾಮಯ್ಯ ಬಿ. ಎ. ಯವರು, ಬೆಂಗಳೂರು ಹಯಗ್ರೀವ ...ಶಾಲೆಯದ ಅಧ್ಯಾಪಕರಾದ ಬಿ ಯಸ್. ರಂಗಸ್ವಾಮಿಯ್ಯಂಗಾರ್‌ರವರು, ಹರಿಹರದ ಆಯುರ್ವೇದ ವಿದ್ವಾನ್ ಕಡಬಗೆರೆ ಶಾಂತವೀರಶಾಸ್ತ್ರಿಗಳು, ಬೈಲಹೊಂಗಲದ ಚನ್ನಪ್ಪ, ಮಲ್ಲಪ್ಪ. ಚಿಕ್ಕೋಡಿಯವರು, ಯಡತೊರೆ ಸ್ಪೆಷಲ್ ಸಿರಸ್ತೆದಾರ್ ಡಿ. ವಿ. ಕೃಷ್ಣರಾಯರು, ನಗರಕಟ್ಟೆ ಸ್ಟೇಷನ್‌ಮಾಸ್ಟರು. ಕಿ. ಕೃಷ್ಣಮಾಚಾರ್ಯರು. ಕಲಕತ್ತಾ 2/5 ಮಾಲಂಗಲೇನ್, ಬಾಬಜಾರದಲ್ಲಿರುವ ಮಾಕಂ ತಿಮ್ಮಯ್ಯ ಶೆಟ್ರು ಮುಂತಾದನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿರುವರು. ಸ್ಥಲಸಂಕೋಚದಿಂದ ಅನೇಕರ ಹೆಸರುಗಳನ್ನು ಬಿಟ್ಟಿರುತ್ತೆ.

ಗ್ರಂಥ ದೊರೆಯುವ ಪತ್ತೆ.

ಮೇನೇಜರ್, ಭಾರತಜ್ಯೋತಿಷ್ಯವೈದ್ಯಾಲಯ, ಹರಪನಹಳ್ಳಿ (ಜಿಲ್ಲಾ ಬಳ್ಳಾರಿ).

ಜಾಹೀರ ಲಿಲಾವು

ಯಾವತ್ತೂ ಜನರಿಗೆ ತಿಳಿಸುವದರಲ್ಲಿ ಬರುತ್ತದಲ್ಲಾ—

ಡಿ| ಕೋರ್ಟಿನ ಜಿ|| ನ| ೩/೧೯೨೫ ನೇದ್ದರಲ್ಲಿ ಬಾಗಲಕೋಟಿ ೨ ನೇ ವರ್ಗ ಸ ಜ| ಕೋರ್ಟಿನ ನಾಝರರಿಗೆ ರಿಸೀಹ್ವರ ನೇಮಿಸಿದ್ದು ಸದರ ನಂಬರದಲ್ಲಿ ಅರ್ಜದಾರ ಶ್ರೀಶೈಲಪ್ಪಾ ಜೋಳದ ಇತಾ ತನ್ನ ಧನಕೋಜನರ ಪೈಕಿ ಕೆಲವು ಜನರಿಗೆ (ಕ್ರೆಡಿಟರರಿಗೆ) ಬರಕೊಟ್ಟ ಖರೀದಿಗಳು ರದ್ದ ಅಂತಾ ಠರಾಯ್ಸಿ ಲಿಲಾವು ಮಾಡಲಿಕ್ಕೆ ಡಿ' ಕೋರ್ಟಿನಿಂದ ಹುಕುಂ ಬಂದ ಪ್ರಕಾರ ಕೆಳಗೆ ಬರದ ಮಿಳಖತ್ತುಗಳು ತಾ|| ೩೦-೮-೨೫ ನೇ ದಿವ್ಸ ವ ೬-೯-೨೫ ನೇ ಇಸ್ವಿ ದಿವ್ಸ ಆಯಾ ಗ್ರಾಮಗಳಲ್ಲಿ ಆಯಾ ತಾರೀಖಿಗೆ ಲಿಲಾವು ಮಾಡುವದರಲ್ಲಿ ಬರುತ್ತವೆ. ಬೇಡಲಿಚ್ಛಿಸುವವರು ಸದ್ರಿ ಮಿಳಖತ್ತುಗಳು ಇದ್ದ ಠಿಕಾಣೆ ಅಂದ್ರೆ ಇಲ್ಯಾಳ ತಾ|| ಬಾಗಲಕೋಟ ವ ಬಾಗಲಕೋಟ ಗ್ರಾಮಗಳಲ್ಲಿ ಆಯಾ ತಾರೀಖಿನ ದಿವಸ ಹನ್ನೆರಡು ಘಂಟೆಗೆ ಹಜರ ಆಗಿ ಬೇಡತಕ್ಕದ್ದು. ತಾ|೩೦-೮-೨೫ ದಿವ್ಸ ಆಗೋ ಲಿಲಾವು ಇಲ್ಯಾಳ ಗ್ರಾಮದ ಚಾವಡಿಯಲ್ಲಿ ಮಾಡಲ್ಪಡುವದು. ತಾ|| ೬-೯-೧೯೨೫ ದಿವ್ಸ ಆಗೋ ಲಿಲಾವು ಬಾಗಲಕೋಟ ಕೋರ್ಟಿನ ಕಂಪಾವುಂಡದಲ್ಲಿ ಮಾಡಲ್ಪಡುವದು ಲಿಲಾವಿನ ಶರ್ತುಗಳು ಲಿಲಾವಿನ ಕಾಲಕ್ಕೆ ಓದಿ ಹೇಳುವದರಲ್ಲಿ ಬರುವದು.

ತಾ|| ೩೦|೮|೨೫ ದಿವ್ಸ ಲಿಲಾವು ಆಗತಕ್ಕ ಮಿಳಖತ್ತ ವಿವರ:—

ಲಾಟ (೧):— ಇಲ್ಯಾಳಗ್ರಾಮದಲ್ಲಿ ಇರೋ ಮನಿ ಚಕಬಂದಿ ಪೂ| ಕ್ಕೆ ಗಂಗಪ್ಪಾ ಪತ್ತಾರ ಇತನ ಮನಿ, ಪ ಕ್ಕೆ ಮಲಕಾಜಪ್ಪಾ ವೀರಪ್ಪಾ ಜೋಳದ ಇತನ ಮನಿ, ದ| ಕ್ಕೆ ಸರಕಾರಿರಸ್ತೆ, ಉ| ಕ್ಕೆ ಸರಕಾರಿ ರಸ್ತೆ. ಈ ಪ್ರಕಾರ ಚಕಬಂದಿ ನಡುವೆ ಇರೋ ಮನಿ ಈಗ ರಿಸೀವ್ಹರ ಕಡಿಂದಾ ಗವಶಿದ್ದಪ್ಪಾ ತಂದಿ ಶಿವಪ್ಪಾ ಜೋಳದ ಅಂಬೋವವಾ ಬಾಡಗಿಲೆ ಹಿಡದಿರೋದು.

ಲಾಟ (೨):- ಇಲ್ಯಾಳ ತಾ|| ಬಾಗಲಕೊಟ ಗ್ರಾಮದಲ್ಲಿ ಇರೋ ೨ ನೇ ಮನಿ ಚಕಬಂದಿ ಪೂ' ಕ್ಕೆ ಬಸಪ್ಪಾ ಕೋಟಿ ಈತನ ಮನಿ, ಪ ಕ್ಕೆ ಸರಕಾರಿ ರಸ್ತೆ, ದ| ಕ್ಕೆ ಬಸಗ್ಗಾ ಗಣಿ ಇತನ ಮನಿ, ಉ| ಕ್ಕೆ ಸರಕಾರಿ ರಸ್ತೆ. ಈ ಪ್ರ|| ಚಕಬಂದಿ ಮಧ್ಯದಲ್ಲಿ ಇರುವ ಮನಿ. ಭೀಮಪ್ಪಾ ತಂದಿ ಬಸಪ್ಪಾ ಸಾಳಗುಂದಿ ಎಂಬೋವವಾ ರಿಸೀವ್ಹರ ಕಡಿಂದಾ ಬಾಡಗಿಲೇ ಹಿಡಿದಿರೋ ಮನಿ.

ಲಾಟ (೩):— ತಳಗಿಹಾಳ ಗ್ರಾಮದ

ರಿ| ಸರ್ವೆನಂಬರ	ಯಕರೆ	ಆಕಾರ
೩೯	೧೩೮೩೪	೧೬೮೬

ಶ್ರೀಶೈಲಪ್ಪಾ ಜೋಳದ ಈತನ ಜಮೀನು ಖರೀದಿ ರದ್ದ ಆಗಿ ರಿಸೀವ್ಹರ ತಾಬೆಕ್ಕೆ ಬಂದು ಗಿರಮಲ್ಲಯ್ಯಾ ತಂದಿ ಮುದ್ದಯ್ಯಾ ಈತಾ ಲಾವಣಿಲೇ ಹಿಡಿದಿರೋದು

ಲಾಟ (೪):— ಬಾಗಲಕೊಟ ತಾ. ಪೈಕಿ ತಳಗಿಹಾಳ ಗ್ರಾಮದ ರಿ| ಸರ್ವೆ ನಂಬರು ೬|೩ ಸದರ ಪ್ರಕಾರಾ ರಿಸೀವ್ಹರ ತಾಬೆಕ್ಕೆ ಬಂದು ಗವಿಶಿದ್ದಪ್ಪಾ ತಂದಿ ಶಿವಪ್ಪಾ ಈತನು ರಿಸೀವ್ಹರ ಕಡಿಂದಾ ಲಾವಣಿಲೇ ಹಿಡಿದಿರೋದು.

ಲಾಟ (೫):— ಬಾಗಲಕೋಟಿ ತಾ. ಪೈಕಿ ಇಲ್ಯಾಳ ಗ್ರಾಮದಲ್ಲಿ ಇರೋ ಜಮೀನುಗಳು.

ರಿ| ಸರ್ವೆನಂಬರು	ಯಕರೆ	ಆಕಾರ
೨೦೮ ಅ.	೪೮೨೦	೫೮೧೦
	ಖರಾಬ ೮೧	
೨೦೮ ಬ.	೨೮೨೯	೩೮೭
	ಖರಾಬ ೮೨	

ಈ ಪ್ರಕಾರ ಇರೋ ಜಮೀನು ರಿಸೀವ್ಹರ ಕಡಿಂದಾ ಗಿರಮಲ್ಲಯ್ಯಾ ತಂದಿ ಮುದ್ದಯ್ಯಾ ಈತಾ ಲಾವಣಿಲೇ ಹಿಡಿದಿರೋದು.

ಲಾಟ (೬):- ಬಾಗಲಕೋಟ ತಾ. ಪೈಕಿ ಚಿಕ್ಕ ಮೂರಮಟ್ಟಿ ಗ್ರಾಮದಲ್ಲಿ ಇರೋ ಜಮೀನು ರಿ|| ಸರ್ವೆ ನಂಬರು ೨೯/೧ ಯಕರೆ ೫ ೮೫ ಆಕಾರ ೫೮೭೮೩ ಈ ಪ್ರಕಾರ ಜಮೀನು ನಮ್ಮ ತಾಬೇಕ್ಕೆ ಬಂದು ಬ್ಯಾಳಯ್ಯಾ ತಂದಿ ಬೊಮ್ಮಯ್ಯಾ ಈತಾ ಲಾವಣಿಲೇ ಹಿಡದಿರೋದು.

ತಾ. ೬|೯|೧೯೨೫ ಇಸವಿ ದಿವಸ ಲಿಲಾವು ಆಗೋ ಮಿಳಖತ್ತಿನ ವಿವರಾ:—

ಲಾಟ (೧):— ಬಾಗಲಕೋಟ ತಾ. ಪೈಕಿ ಬಾಗಲಕೋಟ ಗ್ರಾಮದಲ್ಲಿ ಇರೋ ತೋಟದ ಜಮೀನು ರಿ|| ಸರ್ವೆ ನಂಬರು ೪೦೭ ಯಕರೆ ೫೮೧೩ ಆಕಾರ ೧೦೫೮೦ ವ ಸರ್ವೆ ನಂಬರು ೪೦೮/೨ ಯಕ್ರೆ ೩೮೨ ಆಕಾರ ೫೮೧೨೮೦ ಇವರ ಪೈಕಿ ½ ಹಿಸೇದ ಪಟ್ಟಿ ಇದರ ಚಕಬಂದಿ ಪೂರ್ವಕ್ಕೆ ರಸ್ತಾ; ಪಶ್ಚಮಕ್ಕೆ ಮುತಾಲೀಕರ ಹೊಲಾ, ಉತ್ತರಕ್ಕೆ ಈ ಪಟ್ಟಿ ಪೈಕಿ ಮಲ್ಲಪ್ಪಾ ಮುಷ್ಟಿ ಈತನ ಹಿಸೇದಪಟ್ಟಿ ದಕ್ಷಿಣಕ್ಕೆ ಸರ್ವೆ ನಂಬರ ೪೦೭ ಈ ಪ್ರಕಾರ ಚಕಬಂದಿ ಮಧ್ಯದಲ್ಲಿ ಇರೋ ಜಮೀನು ನಮ್ಮ ತಾಬೇಕ್ಕೆ ಬಂದು ಸೈದುಸಾ ಬಾಗವಾನ ಈತಾ ಲಾವಣಿಲೇ ಹಿಡದಿರೋದು.

ಲಾಟ(೨):- ಬಾಗಲಕೋಟಿ ಗ್ರಾಮದಲ್ಲಿ ಹಳಪ್ಯಾಟಿಯಲ್ಲಿ ೩ ನೇ ವಾರ್ಡಿನಲ್ಲಿ ಇರೋ ಮನಿ ಸಿಟಿಸರ್ವೆನಂಬರು ೩೪೨/೩ ಇದಕ್ಕೆ ಚಕಬಂದಿ ಪೂರ್ವಕ್ಕೆ ರಸ್ತಾ, ಪಶ್ಚಿಮಕ್ಕೆ ಈರಪ್ಪಾ ಗಾಣಿಗೇರ ಈತನ ಮನಿ, ಉತ್ತರಕ್ಕೆ ನೀಲಕಂಠಪ್ಪಾ ಹಂಡಿ ಈತನ ಮನಿ, ದಕ್ಷಿಣಕ್ಕೆ ರಸ್ತಾ. ಈ ಪ್ರಕಾರ ಚಕಬಂದಿ ಮಧ್ಯದಲ್ಲಿ ಇರೋ ಮನಿ, ವಿರುಪಾಕ್ಷಪ್ಪಾ ಶಿವಸಂಗಪ್ಪಾ ಯಾಳಗಿ ಈತಾ ಬಾಡಗಿಲೆ ಹಿಡದಿರೋದು.

ಲಾಟ(೩):- ಬಾಗಲಕೋಟ ತಾ. ಪೈಕಿ ಬಾಗಲಕೋಟ ಗ್ರಾಮದಲ್ಲಿ ಹಳೇ ಪ್ಯಾಟಿಯಲ್ಲಿ ೩ ನೇ ವಾರ್ಡಿನಲ್ಲಿ ಇರೋ ಮನಿ ಸಿಟಿ ಸರ್ವೆ ನಂಬರು ೨೫೨/೩ ಚಕಬಂದಿ ಪೂರ್ವಕ್ಕೆ ಮಲಕಾಜಪ್ಪಾ ಜೋಳದ ಇವರ ಮನೆಗೆ ಹೋಗುವ ರಸ್ತೆ, ಪಶ್ಚಿಮಕ್ಕೆ ಚನ್ನಪ್ಪಾ ಗಿರಮಲ್ಲಪ್ಪಾ ಜೋಳದ ಇವರ ಮನಿ, ಉತ್ತರಕ್ಕೆ, ರಸ್ತೆ, ದಕ್ಷಿಣಕ್ಕೆ ಮಲಕಾಜಪ್ಪಾ ಈರಪ್ಪಾ ಜೋಳದ ಇವರ ಮನಿ. ಈ ಪ್ರಕಾರ ಚಕಬಂದಿ ಮಧ್ಯದಲ್ಲಿ ಇರೋ ಮನಿ.

ಲಾಟ(೪):- ಬಾಗಲಕೋಟ ಗ್ರಾಮದಲ್ಲಿ ಹಳೆಪ್ಯಾಟಿಯಲ್ಲಿ ೩ನೇ ವಾರ್ಡಿನಲ್ಲಿ ಇರುವ ಅಂಗಡಿ ಸಿಟಿಸರ್ವೆ ನಂಬರು ೨೬೫/೩ ಇದಕ್ಕೆ ಚಕಬಂದಿ ಪೂರ್ವಕ್ಕೆ ಸೈದುಸಾ ಬಾಗವಾನ ಇವನ ಮನಿ ಪಶ್ಚಿಮಕ್ಕೆ ಈರಪ್ಪಾ ಚನಮಲ್ಲಪ್ಪಾ ಜೋಳದ ಇವರ ಅಂಗಡಿ ಉತ್ತರಕ್ಕೆ ಸೈದುಸಾ ಬಾಗವಾನ ಇವನ ಮನಿ, ದಕ್ಷಿಣಕ್ಕೆ ರಸ್ತೆ. ಈ ಚಕಬಂದಿ ಮಧ್ಯದಲ್ಲಿರುವ ಅಂಗಡಿ.

ಲಾಟ(೫):- ಹಣಮಂತ ಭೀಮಾಜಿ ದೇಸಾಯಿ ಇವರ ಹೆಸರಲೆ ಇದ್ದ ಸರ್ವೆ ನಂಬರ ೬೧ ನೇದ್ದರಲ್ಲಿಯ ಪ್ಲಾಟ ನಂಬರ ೧೩.

ಈ ಪ್ರಕಾರ ಮಿಳಖತ್ತುಗಳು ಲಿಲಾವು ಆಗುವವು.

ಬಾಗಲಕೋಟ
ತಾ. ೨೧-೮-೨೫.

V. A. Katageri
Nazir & Receiver.

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟಿ

ಕನ್ನಡ ರಂಗಭೂಮಿಯಲ್ಲಿಯೂ ವಿಶೇಷವಾಗಿ ಮನಸ್ಸು ಹಾಕಿ, ಮಿಕ್ಕ ಎಲ್ಲ ರಂಗಭೂಮಿಗಳಿಂತಲೂ, ಬಹು ಹಿಂದುಳಿದ, ಪ್ರಾಚೀನವಾದ ಕನ್ನಡ ರಂಗಭೂಮಿಯನ್ನು ಬೆಳೆಸಲು ಬಹು ಮನಸ್ಸಿನಿಂದ ಪ್ರಯತ್ನಿಸಬೇಕೆಂದು ಈ ನಮ್ಮ ಬರೆಯುವದರ ತಾತ್ಪರ್ಯ.

ನಾಟಕಕಾರನು ಮಾನವರ ಬಗೆಯನ್ನು ಒಳಗಣ್ಣಿನಿಂದ ನೋಡಿ ಒಳ್ಳೇ ಸ್ಫೂರ್ತಿಯಿಂದ ಕೂಡಿ ನಾಟಕವೊಂದನ್ನು ಬರೆದನಾದರೂ, ನಾಟ್ಯ ಕಲೆಯ ಗಂಧವಿಲ್ಲದ ನಾಲ್ಕು ಜನ ಪಾತ್ರರಾದ ಕಂಪನಿಗಳವರು ರಂಗಭೂಮಿಯಲ್ಲಿ ಧಕ್ಕೆ ಕೊಟ್ಟು ಕುಣಿದರೆ, ಅದರಿಂದ ಯಾವ ತರದ ಲಾಭವಾಗುವಂತಿಲ್ಲ; ನಡೆ ಮುರಿದ ನುಡಿಯು ಒಳ್ಳೆ ಪರಿಣಾಮ ಹೊಂದುವಂತಿಲ್ಲ; ಸಮಾಜ ಸುಧಾರಣೆಯಾಗುವಂತಿಲ್ಲ. ಕೇವಲ ಲಾಭಕ್ಕಾಗಿ ನಾಟಕ ಕಂಪನಿಗಳು ಹೊಟ್ಟೆಗೆ ಬೆಲ್ಲಕಟ್ಟಿಕೊಳ್ಳುವಂತಿಲ್ಲ. ನಾಟಕಕಾರನಿಗೆ ನಟಜನರ ಸಹಾಯ ಸಂಪೂರ್ಣ ಅನವರತ ಅವಶ್ಯ. ಅಂತೇ ಎಷ್ಟೋ ಪ್ರಬಂಧಗಳು ಶ್ರೇಷ್ಠವಾಗಿರುವದರೂ, ಅವುಗಳನ್ನಭಿನಯಿಸುವವರು ಯೋಗ್ಯರಿಗದ್ದರೆ ಪ್ರೇಕ್ಷಕರಲ್ಲಿ ಅಭಿರುಚಿ ಹುಟ್ಟದಂತಾದು. ಮುಖ್ಯವಾಗಿ ನಟರು ತಮ್ಮ ತಮ್ಮ ಭೂಮಿಕೆಗಳಲ್ಲಿ ತಲ್ಲೀನರಾಗಿ ಏಕಚಿತ್ತದಿಂದ ಪ್ರಯೋಗಗಳನ್ನಭಿನಯಿಸಿ ಮಾಡಿದ ನಾಟಕಕ್ಕೆ ವಿಶೇಷವಾಗಿ ಕಳೆ ಏರುವದಲ್ಲದೆ ಪ್ರೇಕ್ಷಕರಲ್ಲಿ ನಾಟಕಾಭಿರುಚಿ ಹೆಚ್ಚಿ ಕಲೆಯು ವಿಶೇಷವಾಗಿ ಬೆಳೆಯಲು ಅನುಕೂಲವಾಗುವಲ್ಲಿ ಸಂದೇಹವಿಲ್ಲ. ಇನ್ನು ಸುಶಿಕ್ಷಿತರಾದ ನಟ ಸಮ್ರಾಟರು ಸೇರಿ, ಮೇಲ್ತರದ ಪ್ರಬಂಧಗಳನ್ನು ಪ್ರಯೋಗಿಸಲು ಏನು ! ಸೇವೆಗೆ ಹುಮ್ಮಸ್ಸಿಟ್ಟಂತಲ್ಲವೇ !!

ಆದುದರಿಂದ ಕಿರು ವೇಳೆಯಲ್ಲಿ ಕುಸಿದಿದ್ದ ಕನ್ನಡ ರಂಗಭೂಮಿಯುದ್ಧರಣವು ತಾವೊಬ್ಬರಿಂದಲೇ ಆಗುವ ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಲ್ಲವೇ ? ರಂಗಭೂಮಿಗಳಲ್ಲಿ ನಾಟಕಗಳನ್ನಭಿನಯಿಸುವದು ಕೀಳು ಕೆಲಸ ವೆಂಬ ಕುತ್ಸಿತ ಕಲ್ಪನೆಯನ್ನು ಕನ್ನಡಿಗರು —ಸುಶಿಕ್ಷಿತ ಕನ್ನಡಿಗರು— ದೂಡಿ ಹಾಕಲಿಕ್ಕೆ ಬೇಕು. ನಾಟಕಗಳನ್ನಭಿನಯಿಸುವದು ಕೀಳಾಗಿರದೆ, ಮೇಲ್ತರದ್ದೆಂದು ಹೇಳಲು ಇಂಗ್ಲಂಡಿನ ಗ್ಯಾರಿಕ್ಕನೂ, ಶಾಹೂನಗರ ವಾಸಿಯ ಗಣಪತರಾಯರೂ, ಜೋಗಳೇಕರವರೂ ಎಂಬವರೇ ಮೊದಲಾದ ನಟ ಸಮ್ರಾಟರ ಉದಾಹರಣೆಗಳು ಸಾಕು. ಸಮಾಜಸುಧಾರಣೆಗಾಗಿಯೂ, ತಾಯ್ನುಡಿಯೋತ್ಕರ್ಷಕ್ಕಾಗಿಯೂ, ಕನ್ನಡಿಗರ ಹೆಚ್ಚಳಕ್ಕಾಗಿಯೂ, ನಾಟಕಗಳನ್ನಭಿನಯಿಸಿ, ಅಕ್ಕರದಿಂದ ಕನ್ನಡ ನಾಡಿನ ಸೇವೆಗೈಯುವದೆಂತು ಕೀಳೋ ನಾನೇನು ಅರಿಯೆ. ನೆರಹೊರೆಯವರಾದ ಆಂಧ್ರರನ್ನೂ, ಮರಾಟಿಗರನ್ನೂ ನೋಡಿದರೆ ನಾವು ಈ ವಿಷಯದಲ್ಲಿ ತಲೆ ತಗ್ಗಿಸಬೇಕಾಗುವದು. ಆದ್ದರಿಂದ ನೆರೆಹೊರೆಯ ರಾಷ್ಟ್ರಗಳನ್ನು ನೋಡಿ, ಸುಶಿಕ್ಷಿತರಾದ ಕೆಚ್ಚೆದೆಯ ಕನ್ನಡ ಯುವಕರು ನಿಚ್ಚಳವಾಗಿ ಎಚ್ಚತ್ತು ಕನ್ನಡ ರಂಗಭೂಮಿಯ ಉದ್ಧಾರಕ್ಕಾಗಿ ಟೊಂಕ ಕಟ್ಟಲು ಸಿದ್ಧರಾಗುವರೋ ?

ವೃಲಿಂಗಡನ್ ಕಾಲೇಜ ಸಾಂಗಲಿ	ಬಿ ಎ. ಕಾರಕೂನ ಜೂನಿಯರ ಬೀ. ಎ. ಕ್ಲಾಸ.

ಉತ್ತರ ಕರ್ನಾಟಕದ ಪೋಸ್ಟಾಫೀಸುಗಳಲ್ಲಿ

ಕನ್ನಡಕ್ಕಿಲ್ಲ ಅನಾದರ !

ಬ್ರ್ಯಾಂಚ ಪೋಸ್ಟಗಳ ಕೆಲಸ ಕೈಕೊಂಡಿದ್ದ ಕನ್ನಡಾಭಿಮಾನಿ ಮಾಸ್ತರರ ಆವಶ್ಯ ಕರ್ತವ್ಯ !

[ಬರೆದು ಬಂದದ್ದು.]

ಸದ್ಯಕ್ಕೆ ಉತ್ತರ ಕರ್ನಾಟಕದಲ್ಲಿರುವ ಪೋಸ್ಟಾಫೀಸಗಳ ಕೆಲಸವೆಲ್ಲ ಬಹುತರ ಮರಾಠೀ ಅಥವಾ ಇಂಗ್ಲೀಷ ಭಾಷೆಯಲ್ಲಿಯೇ ನಡೆಯುತ್ತದೆಂದು ಹೇಳಬಹುದು. ಪಶೆ ಪೋ. ಬ. ಗಳಲ್ಲಿಯ ನಿತ್ಯದ ಲೆಕ್ಕ ಪತ್ರಗಳು, ಪುಸ್ತಕಗಳು, ನಮೂನೆಗಳು (ಜನರ ಸಲುವಾಗಿರುವ ಮನಿ ಆ. ಫಾರ್ಮ, ಪಾವತಿ ಇತ್ಯಾದಿ) ಕಾಲಕಾಲಕ್ಕೆ ದೊರೆಯುವ ಸರಕ್ಯುಲರಗಳು ನಿಯಮದ ಬುಕ್ಕುಗಳು, ರಪೋಸರಿಯ ಇನಸ್ಪೆಕ್ಟರರಿಂದ ಕೊಡುವ ಸೂಚನೆಗಳು, ಅಲ್ಲದೆ ಅಕೌಂಟಾಫೀಸಿನ ಪತ್ರ ವ್ಯವಹಾರಗಳು, ಮರಾಠೀ ಭಾಷೆಯಲ್ಲಿಯೇ ನಡೆಯುತ್ತಲಿವೆ. ಖಾತೆಯ ನಿಯಮವು ಮಾತ್ರ ಇಂಗ್ಲೀಷು ಬಾರದಿದ್ದ ಪೋಸ್ಟುಗಳಲ್ಲಿ ಆಯಾ ದೇಶ ಭಾಷೆಯಿಂದಲೇ ಮೇಲಿನ ವ್ಯವಹಾರಗಳೆಲ್ಲ ನಡೆಯ ಬೇಕೆಂದಿರುವದು. ಆದರೆ ಉತ್ತರ ಕರ್ನಾಟಕದ ಬ್ರ್ಯಾಂಚ ಪೋಸ್ಟ ಮಾಸ್ತರರು ಕನ್ನಡದ ಅಭಿಮಾನ ಶೂನ್ಯತೆಯಿಂದಲೋ ಅಜ್ಞಾನದಿಂದಲೋ ಇಲ್ಲಿಯ ಪೋಸ್ಟಗಳಲ್ಲಿಯ ಲೆಕ್ಕ ಪತ್ರಾದಿ ವ್ಯವಹಾರಗಳನ್ನು ಕನ್ನಡದಲ್ಲಿ ಜರುಗಿಸುವದಿಲ್ಲ. ಇದರಿಂದ ಮರಾಠೀ ಅರಿಯದ ಎಷ್ಟೋ ಬ್ರ್ಯಾಂಚ ಪೋಸ್ಟ ಮಾಸ್ತರರ ತೊಂದರೆಯೂ ತಪ್ಪಿಲ್ಲ; ನಿಮಿತ್ತಾಂತ ಮರಾಠೀ ಅಭಿಮಾನದಿಂದ ತುಂಬಿ ತುಳುಕುತ್ತಿದ್ದ ಕರ್ನಾಟಕದಲ್ಲಿಯ ಮೇಲಿನ ಪೋ. ಅಧಿಕಾರಿಗಳಿಂದ ಆಗುತ್ತಿರುವ ಕನ್ನಡದ ಕೊಲೆಯನ್ನೂ ಕನ್ನಡಿಗರ ಅನಾದರಣೆಯನ್ನೂ ಕಂಡು ಅಸಹ್ಯ ವೆನಿಸುತ್ತದೆ. ಹಾಗು ಹಳ್ಳಿಹಳ್ಳಿಯಲ್ಲಿರುವ ಅಜ್ಞ ಕನ್ನಡಿಗರು ಮರಾಠೀ-ಇಂಗ್ಲೀಷಮಯವಿದ್ದ ಮನಿಯಾರ್ಡರ ಫಾರ್ಮಗಳನ್ನು ತೆಗೆದುಕೊಂಡು ಬೆಪ್ಪಾಗಿ ಆ ಭಾಷೆ ಬಲ್ಲವರೆಡೆಗೆ ಬಾಯಿ ತೆರೆಯುವದನ್ನು ಕಂಡು ವಿಷಾದವೆನಿಸುತ್ತದೆ.

ಆದುದರಿಂದ ಬ್ರ್ಯಾಂಚ ಪೋಸ್ಟಗಳಲ್ಲಿಯ ಮಾಸ್ತರರೆ, ನಿಮ್ಮೆದೆಯನ್ನಿಷ್ಟು ವಿಸ್ತೃತ ಮಾಡಿಕೊಳ್ಳಲಾಗುವದು. ಪೋಸ್ಟ ಖಾತೆಯಲ್ಲಿಯ ಈ ಅವಸ್ಥೆಯು ಕನ್ನಡದ ದುರವಸ್ಥೆಯೆಂದು ನಿಮಗೆ ಕಂಡು ಬಂದಲ್ಲಿ ಇದನ್ನು ಹೋಗಲಾಡಿಸಲಿಕ್ಕೆ ಪ್ರಯತ್ನಿಸಿರಿ; ಪೋಸ್ಟ ಖಾತೆಯ ಮೇಲಿನ ಅಧಿಕಾರಿಗಳ ನಿದರ್ಶನಕ್ಕೆ ಈ ವಿಷಯವನ್ನು ತಂದು ಕೊಡಿರಿ. ನಿಮ್ಮ ಸಂಘದಲ್ಲಿ ಈ ಬಗ್ಗೆ ತೀವ್ರ ಚಳವಳಿಯನ್ನೆಬ್ಬಿಸಿ ನಿಮ್ಮ ಪೋಸ್ಟ ಕೆಲಸಕ್ಕೆ ಬೇಕಾಗುವ ಕಾಗದ ಪತ್ರಗಳನ್ನೆಲ್ಲ ಕನ್ನಡದಲ್ಲಿಯೇ ಅಚ್ಚಾದಂಥವು ಬರಲಿಕ್ಕೆ ಆಗ್ರಹ ಪಡಿರಿ

ಇನ್ನು ಪೋಸ್ಟ ಖಾತೆಯ ಕೆಲ ಮೇಲಧಿಕಾರಿಗಳು ಮಹಾರಾಷ್ಟ್ರ ಪ್ರಾಂತದಿಂದ ಬಂದವರಾಗಿದ್ದರೆ ಮಾತ್ರ ಅವರಿಗೆ ಈ ನಿಮ್ಮ ಪ್ರಯತ್ನವೂ, ಇಷ್ಟೆಯೂ, ಸರಿದೋರಲಿಕ್ಕಿಲ್ಲ. ಆದರೆ ಪರರನ್ನೊಲಿಸುವುದಕ್ಕಿದ್ದ ಅವರ ಅನುಕೂಲತೆಗಾಗಿ ಕರ್ನಾಟಕ ಬ್ರ್ಯಾಂಚ ಪೋಸ್ಟ ಮಾಸ್ತರರು ಸ್ವಭಾಷಾಭಿಮಾನ ಶೂನ್ಯರಾಗಿ ಅನ್ಯಾಯದ ಬಲುಹಿಗೆ ಒಳಗಾಗುವದು ದುರ್ಬಲತೆಯ ದ್ಯೋತಕವಾಗುವದಿಲ್ಲವೇ ? ಹಾಗು ಈ ನಿಮ್ಮ ಪ್ರಯತ್ನವು ಫಲದ್ರೂಪವಾದರೆ, ಆ ಭಾಷಾ ಸಂಪರ್ಕವಿಲ್ಲದ ನಮ್ಮ ಕನ್ನಡಿಗರ ಕೆಲಸವೆಲ್ಲ ನಿರಾಯಾಸವಾಗಿ ನಡೆದು ಬ್ರ್ಯಾಂಚ ಪೋಸ್ಟಗಳಿಗೂ ಹಿತಾವಹವಾಗುವದಿಲ್ಲವೇ ? ಆದುದರಿಂದ ಬ್ರ್ಯಾಂಚ ಪೋಸ್ಟಗಳಲ್ಲಿಯ ಕೆಲಸ ಮಾಡುತ್ತಿದ್ದ ಮಾಸ್ತರರ ಸಮುದಾಯವೇ ಈ ಮೊತ್ತಿಂದಲೇ ಈ ಕೆಲಸಕ್ಕೆ ಪ್ರಯತ್ನಿಸಿರಿ ! ನಿಮ್ಮ ಸಂಘದಲ್ಲಿ ಈ ಪ್ರಶ್ನೆಯನ್ನು ತನ್ನಿರಿ. ಬ್ರ್ಯಾಂಚ ಪೋ. ಗಳನ್ನು ಕನ್ನಡ ಮಯವಾಗ ಮಾಡಿರಿ! ಸದ್ಯಕ್ಕೆ ಕನ್ನಡ ಅಚ್ಚಿನ ಪತ್ರಿಕೆನಮೂನೆಗಳನ್ನು ಒದಗಿಸಿ ಕೊಡಲಿಕ್ಕೆ ಸರಕಾರಿಕ್ಕೆ ವಿಳಂಬವಾಗುತ್ತಿದ್ದರೆ, ಮದ್ರಾಸ ಇಲಾಖೆಗೆ ಸೇರಿದ ಕನ್ನಡ ಬ್ರ್ಯಾಂಚ ಪೋಸ್ಟಗಳಲ್ಲಿ ಪ್ರಚಾರದಲ್ಲಿದ್ದ ನಮೂನೆಗಳನ್ನಾದರೂ ಕೊಡಲು ಆಗ್ರಹಪಡಿರಿ. ಅಂದರೆ ಜಾಗ್ರತವಾಗಬೇಕಾಗಿದ್ದ ಕನ್ನಡ ನಾಡಿನಲ್ಲಿ ಪ್ರಸ್ತುತಕ್ಕೆ ಒಂದು ಮಹತ್ವದ ಕಾರ್ಯ ಮಾಡಿದ ಕೀರ್ತಿಯು ನಿಮ್ಮ ಪಾಲಿಗೆ ಬರುವದು.

ಸೂಚನೆ:— ಈ ಲೇಖದಲ್ಲಿಯ ವಿಷಯವು ಮಹತ್ವದ್ದು ಅದರ ಭಾಷೆಯು ಶುದ್ಧವಾಗಿದ್ದರೆ "ಕನ್ನಡಿಗ" ನಿಗೆ ಹೆಚ್ಚು ಒಪ್ಪುತ್ತಿತ್ತು. ಸಂ. ಕ.

ಶ್ರೀಮದ್ಭಗವದ್ಗೀತೆಯು

ಅರ್ಥಾತ್

ಹಿಂದೂ ಧರ್ಮ ಪ್ರಮಾಣ ಗ್ರಂಥವು.

[**ಲೇಖಕ:-** ರಾಮಭಕ್ತ]

ಕನ್ನಡಿಗರೇ, ಕಳೆದವಾರ ಕೃಷ್ಣ ಜಯಂತಿಯನ್ನು ಕೌತುಕದಿಂದ **ಕೊನೆಗಾಣಿಸಿದರಷ್ಟೇ?** ಆ ಕೃಷ್ಣನು ಕರೆವ ಕ್ಷೀರವನ್ನು **ನೀವು** ಕುತೂಹಲದಿಂದ ಕುಡಿದು ಕುಣಿಯುತ್ತಿರಬಹುದಲ್ಲವೆ! ಅಂತಹ ಭಗವದ್ಗೀತೆಯು ಭಾಗ್ಯಹೀನಳಾದ ಭಾರತಾಂಬೆಯ ದುರ್ದ**ಶೆಯನ್ನು** ದೂರಮಾಡಲು ಆದರ್ಶಭೂತವಾಗಿರುವದೆಂಬುದನ್ನು ವಿಚಾರಿಸುವ.

ಅದೇಕೆ! ಶ್ರುತಿ ಸ್ಮೃತಿಗಳು ಅಸಮರ್ಥವೋ? ವೇದಗಳಿಗೆ **ಅನೇಕ** ಸ್ಮೃತಿಕಾರರು ಅನೇಕರೀತಿಯಿಂದ ಎಳೆದೆಳೆದು ಅರ್ಥ ಮಾಡಿರುವದರಿಂದಲೂ, ಸ್ತ್ರೀಶೂದ್ರ ಬ್ರಹ್ಮ ಬಂಧುಗಳಿಗೆ ವೇದದ ಅನಧಿಕಾರತ್ವವನ್ನು ಹೇಳಿದ್ದರಿಂದಲೂ, ಸಾಮಾನ್ಯ ಜನರಿಗೆ ವೇದಾರ್ಥವು ಸುಲಭ ಸಾಧ್ಯವಲ್ಲದ್ದರಿಂದಲೂ, ಅವು ಸಕಲ ಹಿಂದೂಗಳಿಗೂ ಅವಗಮ್ಯವಾಗಲಾರವು. ಅರ್ಥಾತ್ ಅವರು ಪ್ರಮಾಣಗಳೆಂದು ಉದಹರಿಸಲಾರರು. ಪುರಾಣಗಳು ಪರೋಕ್ಷದಂತೆ **ಕಥೆಗಳೆಂಬ** ಭಾವನೆ. ಸ್ಮೃತಿಗಳಂತೂ ಅನೇಕ ವಿಧವಾಗಿರುವವು. ಅದೇ ಭಗವದ್ಗೀತೆಯಲ್ಲಿ ಸಕಲೋಪನಿಷತ್ಸಾರವು ಸಂಗ್ರಹೀತವಾಗಿದೆ. ಮೇಲಾಗಿ ಅದನ್ನಭ್ಯಾಸಿಸಲು ಯಾರಿಗೂ ಪ್ರತಿಬಂಧವಿಲ್ಲ. ಹೀಗಿದ್ದದರಿಂದಲೇ ಭಗವದ್ಗೀತೆಯು ಹಿಂದೂ ಪ್ರಮಾಣ ಗ್ರಂಥವೆಂದು ನಾವು ಹೇಳಿರುವೆವು.

ಕ್ರಿಸ್ತೀ, ಮಹಮ್ಮದೀಯ ಧರ್ಮಗಳ ಪ್ರಚಾರವು ನಡೆದದೆ. ಪಾಶ್ಚಾತ್ಯರ ಭೌತಿಕ ಸಂಸ್ಕೃತಿಯು ಹಿಂದುಗಳ ಮನಸ್ಸಿನಲ್ಲಿ ಬಿಂಬಿಸ ಹತ್ತಿದೆ. ಪರಧರ್ಮ ಪರಭಾಷೆಗಳಿಗೆ ಮರುಳಾಗಿದ್ದರಿಂದ ಸ್ವಧರ್ಮವು ಸದೋಷವಾಗಿ ಕಾಣಹತ್ತಿದೆ. ಹಿಂದೂ ಧರ್ಮದ ಬಗ್ಗೆ ನಿರಭಿಮಾನತೆ, ಅವಿಶ್ವಾಸ, ಪಾಶ್ಚಾತ್ಯ ಅನುಕರಣವೇ ಹಿಂದುಗಳಿಗೆ ಪ್ರಿಯಕರವು; ಅಭಿಮಾನಾಸ್ಪದವು. ಅತ್ತಲಾಗಿ ವೃದ್ಧರಾದ ಶುದ್ಧ ಆಚಾರ ಶೀಲರು ತಮ್ಮ ಪೂರ್ವಾತ್ಯಧಾರ್ಮಿಕ ವೈಭವವನ್ನು ನೆನೆ ನೆನೆದು, ಸದ್ಯಕ್ಕೆ ಒದಗಿದ ಆಪತ್ತಿಗಾಗಿ ಬಹಳ ಹಳಹಳಿಸುತ್ತಿರುವರು. ಇಂಥ ದ್ವಿವಿಧ ದುರ್ಧರ ಪರಿಸ್ಥಿತಿಯ ಮೂಲಕ ಹಿಂದುಸ್ಥಾನವು ಧಾರ್ಮಿಕವಿಷಯದಲ್ಲಿ ನಿಜವಾಗಿಯೂ ಸಂಕ್ರಮಣಾವಸ್ಥೆಯಲ್ಲಿದೆ. ಪಾಶ್ಚಾತ್ಯ ಯಂತ್ರಗಳು ಸ್ವಲ್ಪಾವಧಿಯಲ್ಲಿ ಮಾನವ ಜಾತಿಯ ಕೊರತೆಗಳನ್ನು ತುಸು ವೆಚ್ಚದಲ್ಲಿಯೇ ಪೂರೈಸಿಕೊಡುತ್ತವೆ. ಪೂರ್ವಕಾಲೀನ ಸಾಧನಗಳು ಲಾಭಕರವಾಗಿ ಕಾಣುವದಿಲ್ಲ. ಒಮ್ಮೊಮ್ಮೆ ಹಿಂದೀ ಉದ್ಯೋಗ ಹೋರೆಗಳೇ ಲಾಭಕರವಾಗಿ ಕಾಣುವವು. ಸರಕಾರದೊಡನೆ ಸಹಕಾರಮಾಡಿ ಸ್ವಾತಂತ್ರ್ಯ ಸಂಪಾದಿಸುವದು ಶಕ್ಯವೆಂದು ಹಲವರು ಭಾವಿಸಿದರೆ, ಬೇರೆ ಕೆಲವರು ಅಸಹಕಾರವೇ ಯೋಗ್ಯ ಶಸ್ತ್ರವೆಂದು ನಂಬುವರು. ಇದನ್ನೆಲ್ಲವಲೋಕಿಸಿದರೆ ಹಿಂದುಸ್ಥಾನವು ಸಮರೀತಿಯಿಂದಲೂ ಸಂಕ್ರಮಣಾವಸ್ಥೆಯಲ್ಲಿದೆಂದು ಹೇಳಲು ಅಡ್ಡಿ ತೋರುವದಿಲ್ಲ.

ಇನ್ನು ಇತರ ಧರ್ಮೀಯರ ಗ್ರಂಥಗಳಿಗಿಂತಲೂ, ಭಗವದ್ಗೀತೆಗೆ ಹೆಚ್ಚು ಪ್ರಾಶಸ್ತ್ಯವು ಶಿಕ್ಕುವದು. 'ಬಾಯಿಬಲ' ದಲ್ಲಿಯ ತತ್ವವನ್ನುಪದೇಶಿಸಿದ ಕ್ರಿಸ್ತನು, 'ಕುರಾಣ' ಬರೆದ ಪೈಗಂಬರನು **ದೇವಾಂಶ** ರಾಗದೆ **ದೇವದೂತ (ಮಕ್ಕಳು)** ರಾಗಿರುವರು. ಆದರೆ ಗೀತಾಮೃತಪಾನ ಮಾಡಿಸಿದವನು ಸ್ವತಃ ಪರಮಾತ್ಮನೇ ಅಲ್ಲವೆ? ಯಹುದೀಯರು ಅನ್ಯರಿಗೆ '**ಹೀದನ**' (Heathen) ರೆಂದೂ, ಮಹಮದೀಯರು '**ಕಾಫರ**' ರೆಂದೂ ನಿಂದಿಸಿ ಪರಧರ್ಮ ಸಹಿಷ್ಣುತೆಯನ್ನು ಕಳೆದು ಕೊಂಡಿರುವರು. ಆದೇ ಶ್ರೀಕೃಷ್ಣನು ತನ್ನನ್ನು ಅನನ್ಯ ಭಾವದಿಂದ ಸ್ಮರಿಸುವವರೆಲ್ಲರೂ ಸದ್ಗತಿಯೊಂದುವರೆಂದು, ಪ್ರತಿಪಾದಿಸಿರುವನು. ಬಾಯಿಬಲದಲ್ಲಿ ಅಥವಾ ಕುರಾಣದಲ್ಲಿ, ಜೀವನ ಯೋಗ್ಯತೆ ಹಾಗೂ **ಜೀವೇಶ್ವರ ಸಂಬಂಧ** ಮುಂತಾದ ಉದಾತ್ತವೇದಾಂತ ವಿಚಾರಗಳು ಕಂಡು ಬರುವದಿಲ್ಲ. ಆದರೆ ಭಗವದ್ಗೀತೆಯು ಇದರ ಬಗ್ಗೆ ಚನ್ನಾಗಿ ವಿಚಾರಮಾಡಿರುವದು. ಮಾನವ ಜಾತಿಯಲ್ಲಿ ಹಲವರು **ಆಸುರೀಭಾವವುಳ್ಳವರೂ,** ಬೇರೆ ಕೆಲವರು **ಸದ್ದೈವೀಸಂಪತ್ತಿ**ಯುಳ್ಳವರೂ ಇರುವರು. ಹಾಗೆಯೇ ಕೆಲವರು **ಸಾತ್ವಿಕರು,** ಬೇರೆ ಹಲವರು **ರಾಜಸರು,** ಇನ್ನು ಕೆಲವರು **ತಾಮಸಿಗಳು,** ಎಂದು ಭಗವದ್ಗೀತೆಯ ಸ್ಪಷ್ಟಾಭಿಪ್ರಾಯವು **ಪರಮಾತ್ಮನು ಅಂಶಿಯು. ಜೀವಿಗಳು ಅಂಶರು.** ಇವಾದರೂ ಭಗವದ್ಗೀತೆಯಿಂದಲೇ ಗೊತ್ತಾಗುತ್ತದೆ.

स्वधर्मे निधनं श्रेयः परधर्मो भयावहः ।

ಎಂಬೀವಾಕ್ಯವನ್ನು ಆಕ್ಷರಶಃ ಕೃತಿಯಲ್ಲಿ ಭಾಷಾಂತರಿಸುವದೇ ಧಾರ್ಮಿಕ ಸಂಕ್ರಾಂತಿಯನ್ನು ಹೋಗಲಾಡಿಸುವ ತರಣೋಪಾಯವು. ಹಿಂದೂಸಮಾಜದ ಸುಸಂಘಟಿತವಾದ ಶ್ರಮವಿಭಾಗದ ತತ್ವದಂತೆ ಸಕಲರು ತಮ್ಮ ತಮ್ಮ ಉದ್ಯೋಗ ಹೋರೆಗಳನ್ನು ಕಾಯ್ದುಕೊಂಡು, ಊರ್ಜಿತಾವಸ್ಥೆಗೆ ತಂದು, ಹಿಂದುಸ್ಥಾನದ ಔದ್ಯೋಗಿಕ ಹಾಗೂ ಆರ್ಥಿಕ ಸಂಪತ್ತಿಯನ್ನು ಬೆಳೆಸಬೇಕು. ಆಳರಸರು ಪ್ರಜಾರಂಜನ ಪರಾಯಣರಾಗಿದ್ದರೆ ಮಾತ್ರ ಅವರಸಂಗಡ ಸಹಕಾರ ಮಾಡಬೇಕು. ಆದರೆ ಅವರು ಹೀನಬುದ್ಧಿಯವರಾಗಿ ಹಿಂದೀಯರನ್ನು ಹಿಂಸಿಸುವದರಲ್ಲಿಯೇ ತಮ್ಮ ಹಿತವೆಂದು ಭಾವಿಸಿದಲ್ಲಿ ಪ್ರಜೆರೆಲ್ಲರು ಒಮ್ಮನಸ್ಸಿನಿಂದ ಒತ್ತಟ್ಟಾಗಿ ಅವರನ್ನು ಬಲವತ್ತರವಾಗಿ ವಿರೋಧಿಸಬೇಕು. ಹೀಗೆಯೇ ವಿಚಾರಮಾಡುತ್ತ ಹೋದಲ್ಲಿ ಭಗವದ್ಗೀತೆಯ ಮಹಿಮೆಯು ಅನಂತ ವಿರುವದೆಂಬುದು ತಾನೇ ತಿಳಿಯುವದು.

ಯಾವನು ದುಷ್ಟದೈತ್ಯರನ್ನು ಧ್ವಂಸಮಾಡಿ, ಸಕಲ ಸಜ್ಜನರನ್ನು ಸತ್ಕಾರ್ಯಕ್ಕಾಗಿ ಸನ್ನದ್ಧಗೊಳಿಸುವನೋ, ಯಾವನು ಸಕಲ ಸತ್ವಗಳ ಹೃದಯಸ್ಥನಾಗಿ ಹೃದ್ಯದ ಲೀಲಾಲೋಲುಪನಾಗಿರುವನೋ, ದುರ್ಯೋಧನನ ತುಂಬಿದ ಸಭೆಯಲ್ಲಿ ದುಃಶಾಸನನು ಕುರುಬೆಳೆದ ಸಾಧ್ವೀ ಶಿರೋಮಣಿಯ ಸೀರೆ ಸೆಳೆವಾಗ, ಆ ದ್ರೌಪದಿಯ ದೀನಸ್ವರವನ್ನಾಲಿಸಿ ತತಕ್ಷಣಕ್ಕೆ ಯಾವನು ಅಕ್ಷಯವಿತ್ತು, ಪರಿಪರಿ ಪಾಲಿಸಿದನೋ ಅಂತಹ ಶ್ರೀ ಕೃಷ್ಣನು, ಹಿಂದುಮಾತೆಯ ಸಕಲಸಂಕಟಗಳನ್ನು ಸದೆದು ಆಕೆಯ ಯೋಗಕ್ಷೇಮವನ್ನು ವಹಿಸಬೇಕಾದರೆ, ಹಿಂದುಗಳೆಲ್ಲರೂ ಆ ವಿಚಿತ್ರ ಚರಿತ್ರನ ಚಿತ್ರವನ್ನು ಚಿತ್ತದಲ್ಲಿ ಚಿಂತಿಸಿ, ನಿತ್ಯದಲ್ಲಿಯೂ ಗೀತಾಮೃತವನ್ನು ಯಥಾಶಕ್ತಿ ಪಾನಮಾಡಿ, ಆನಂದಪಡೆಯುವಂತೆ ಆ ಜ್ಞಾನಾನಂದಶರೀರನು ಎಲ್ಲರನ್ನು ಪ್ರೇರಿಸಲಿ. !

ಪತ್ರವ್ಯವಹಾರವು.

ನರಸಿಂಹಸುತ. (ಪ್ರಸಿದ್ಧಿಸುವದಕ್ಕಾಗಿ ಅಲ್ಲದಿದ್ದರೂ) ನಿಮ್ಮ ಹೆಸರನ್ನು ನಮಗೆ ತಿಳಿಸಿಲ್ಲವಾದ್ದರಿಂದ ನಿಮ್ಮ ಲೇಖವನ್ನು ಪ್ರಸಿದ್ಧಿಸಿಲ್ಲ.

ಬಾಪೂರಿ ವಕೀಲ. ವೀರಶೈವರು ತಮ್ಮ ಹೆಸರನ್ನು ಮರಾಟಿ ಸೊಲ್ಲಿಗೆ ಅನುಕೂಲವಾಗುವಂತೆ ಬರಿಯಬಾರದೆಂಬದಾಗಿ "ಕನ್ನಡಿಗ" ನು ಎಚ್ಚರಕೊಟ್ಟದ್ದಕ್ಕೆ ಶ್ರೀ. ಬಾಪೂರಿ ವಕೀಲರಿಂದ ಒಂದು ಲೇಖವು ಬಂದಿದೆ. ಅದು ಬಹಳೇ ಉದ್ದವಾಗಿದ್ದದರಿಂದಲೂ, 'ಕನ್ನಡಿಗನ' ಆಕಾರವು ಸಣ್ಣದಿದ್ದದರಿಂದಲೂ, ಅದನ್ನು ಸಂಪೂರ್ಣವಾಗಿ ಪ್ರಸಿದ್ಧಿಸುವದು ಶಕ್ಯವಿಲ್ಲ. ಮುಂದಿನ ಸಂಚಿಕೆಯಲ್ಲಿ ಸಂಕ್ಷಿಪ್ತವಾಗಿ ಕೊಡುವೆವು. ಉತ್ತರವೂ ಅದರೊಂದಿದ ಬರುವದು. — ಸಂ. ಕ.

ವರ್ತಮಾನ ಸಾರ.

ಇಹವೃತ್ತ

ನಗರ ರಚನೆಯಲ್ಲಿ ಆದಂಥ ಬಿಟಿಲಾದ ಸಂಗತಿಗಳ ತಕರಾರುಗಳನ್ನು ವಿಚಾರಿಸಲಿಕ್ಕೆ ಕಳಿಸಿದವರಲ್ಲಿ ಶ್ರೀ ಮಿರ್ಜ್ಯಾಪ್ಪ, ಈ ಜಿಲ್ಲೆಯ ಜಡ್ಜ ಮತ್ತು ಮಂಗಳವೇಢೇಕರ ರಾಜೇರಾಯರಿಂದ ಕೂಡಿದ ಮಂಡಲು ತಮ್ಮ ಕೆಲಸವನ್ನು ಮುಗಿಸಿದರು

ಲೋಕಲ್ ಬೋರ್ಡ ಚುನಾವಣೆಯ ಗೊಂದಲವು ಎಲ್ಲೆಲ್ಲಿಯೂ ಎದ್ದಿದೆ.

ಈ ಸಂಚಿಕೆಯ ಜೊತೆಗೆ ಮರವಸಹಳ್ಳಿಯ ಭಾರತ ಜ್ಯೋತಿಷ್ಯ ವಿದ್ಯಾಲಯದ ಹಸ್ತಪತ್ರಿಕೆಗಳು ಹಂಚಲ್ಪಟ್ಟಿವೆ.

ಕರ್ಮವೀರ ದಿವಾಕರರು ಕಳೆದ ವಾರದಲ್ಲಿ ಇಲ್ಲಿಗೆ ಬಂದು ಎರಡು ದಿನ ವಿಶ್ರಾಂತಿ ತೆಗೆದುಕೊಂಡು ಬೆಳ್ಳಟ್ಟಿ ಗ್ರಾಮಕ್ಕೆ ತೆರಳಿದರು. ಅಲ್ಲಿ ಕೆಲಕಾಲ ವಿಶ್ರಾಂತಿಗೊಂಡು ವಿಜಾಪುರಕ್ಕೆ ಹೋಗಿ ಪುನಃ ಇಲ್ಲಿಗೆ ಬಂದು ಕರ್ನಾಟಕ ಏಕೀಕರಣದ ಬಗ್ಗೆ ವ್ಯಾಖ್ಯಾನ ಕೊಡತಕ್ಕವರಿದ್ದಾರೆ.

ನೊಸಗೇರಿಯಲ್ಲಿ ಓರ್ವ ಸ್ತ್ರೀಯ ರವಸ್ತು ಮೋರಿತಿದೆ ಖೂನಿಯಾದಂತೆ ಕಾಣುತ್ತೆ- ಚೌಕಸಿ ನಡದಿದೆ

ಮುಂಬಯಿ ಕರ್ನಾಟಕ

ಗೋವರ್ಧನ ಮಹಾಬಲೇಶ್ವರನ ಚರಿತ್ರೆಯು ಮುಂಬೈಯಲ್ಲಿ ಚಿತ್ರಪಟಗಳಲ್ಲಿ ತೋರಿಸಲ್ಪಡುತ್ತಲಿದೆ

ಕಿರ್ಲೋಸ್ಕರ ನಾಟಕ ಮಂಡಳಿಯವರು ಹುಬ್ಬಳ್ಳಿಗೆ ಈ ತಿಂಗಳ ೧೫ನೇ ತಾ॥ ಬರತಕ್ಕವರಿದ್ದಾರೆ. ಆದರೆ ಕನ್ನಡ ನಾಟಕದ ದತ್ತಾತ್ರಯ ನಾಟಕ ಮಂಡಳಿ ಅಲ್ಲಿ ಇರುವದರಿಂದ ಮರಾಠಿ ನಾಟಕಗಳ ಹೋರಾಟವು ಚನ್ನಾಗಿ ಆಗಲಿಕ್ಕಿಲ್ಲೆಂದು ಲಕ್ಷಣ ಇನ್ನು ಹುಬ್ಬಳ್ಳಿಗೆ ಬಂದಿರುವದಿಲ್ಲವಾಗಿ ತಿಳಿಯುತ್ತದೆ

ಮದ್ರಾಸ ಕರ್ನಾಟಕ

ಮಂಗಳೂರಿನ ಸುಪ್ರಸಿದ್ಧ ವಕೀಲರಾದ ಪಿ. ಸಂಜೀವ ಎಂ. ಎ. ಬಿ. ಎಲ್. ಎಲ್. ಬಿ. ಯವರು ಪರಲೋಕಗತರಾದರೆಂದೂ ಶವಸಂಸ್ಕಾರದ ಕಾಲದಲ್ಲಿ ಅನೇಕರು ಅಲ್ಲಿ ನೆರೆದಿದ್ದರೆಂದೂ ಮದ್ರಾಸದ ಹಿಂದೂ ಪತ್ರಿಕೆಯಲ್ಲಿ ಪ್ರಕಟವಾಗಿದ್ದುದು ಅನೇಕರಲ್ಲಿ ಖೇದ ಆಶ್ಚರ್ಯಗಳನ್ನುಂಟು ಮಾಡಿತ್ತು. ಶ್ರೀ ಸಂಜೀವರಾಯರು ಜೀವಂತರಾಗಿದ್ದಾರೆ, ಆರೋಗ್ಯವಂತರಾಗಿದ್ದಾರೆ. ಮಡಿದವರು ಅವರ ತಾಯಿಯವರೆಂಬುದು ಹಿಂದುಗಳಿಗೆ ಗೊತ್ತಾಯಿತು. ಅಂತೂ ಶ್ರೀ ಸಂಜೀವರಾಯರಿಗೆ ತಮ್ಮ ನಿಧನದವನ್ನು ತಾವೇ ಓದುವದೊಂದು ಪ್ರಸಂಗವು ಒದಗಿತು.

'ಬಳ್ಳಾರಿ ಜನ ಹಿತ ಸಂಘ' ವೆಂಬ ಹೊಸ ಸಂಸ್ಥೆಯು ಬಳ್ಳಾರಿಯಲ್ಲಿ ಸ್ಥಾಪಿಸಲ್ಪಟ್ಟಿದೆ.

ಮೈಸೂರ ಕರ್ನಾಟಕ

ಮೈಸೂರಿನ ಗುಬ್ಬೀ ನಾಟಕ ಸಭೆಯವರು (ಈ ಕಂಪನಿಯು ಈಗ ಗದಗಿನಲ್ಲಿದೆ) ಮಾಡುತ್ತಿರುವ ಕಬೀರದಾಸ ನಾಟಕವು ಸಿನೇಮಾದಲ್ಲಿ ಮದ್ರಾಸಿನ ವೆಲಿಂಗಟನ್ ಕಂಪನಿಯಿಂದ ತೋರಿಸಲ್ಪಡುತ್ತಿದೆ. ಇದರಲ್ಲಿ ಅಭಿನಯವು ಮನೋಹರವಾಗಿದೆ. ಆದರೆ ಇಂಗ್ಲಿಷ ತೆಲುಗು ತಮಿಳ ಭಾಷೆಗಳಲ್ಲಿ ಆ ಕಥಾನಕವು ಹೇಳಲ್ಪಟ್ಟದ್ದು, ಕನ್ನಡಕ್ಕೆ ಅರ್ಧಚಂದ್ರಾಕಾರವು ದೊರೆತಿದೆ. ಕನ್ನಡದ ಹಣೇಬರಹ!

ಕೊಡಗು ಕರ್ನಾಟಕ

ವೀರರಾಜಪೇಟೆಯ ಮುನಸಿಪಾಲಿಟಿಯಲ್ಲಿ ಸ್ತ್ರೀಯರಿಗೆ ಮತಕೊಡುವ ಅಧಿಕಾರ ದೊರೆತಿದೆ. ಕರ್ನಾಟಕದಲ್ಲಿ ಸ್ತ್ರೀಯರ ಮತ ಅಧಿಕಾರವನ್ನು ಒಪ್ಪಿದ್ದು ಇದೇ ಮೊದಲನೇಯ ಮುನಸಿಪಾಲಿಟಿಯು

೧೬೦೦೦ರೂ ಕೊಟ್ಟು ನಿಶ್ಚಯದ ಸುಬ್ಬಣ್ಣಯ್ಯನವರು ಒಂದು ಕಟ್ಟಡವನ್ನು ಸ್ವಂತವೆಚ್ಚದಿಂದ ಕೊಂಡು ಅದನ್ನು ಕೊಡಗು ಜಮೀನುದಾರ ಸಂಘಕ್ಕೆ ದಾನವಾಗಿ ಕೊಟ್ಟರು. ಇವರು ಇದೇ ಬಗೆಯಾಗಿ ಕರ್ನಾಟಕದ ಸೇವೆಮಾಡಲು ಪರಮಾತ್ಮನು ಇವರಿಗೆ ಆಯುರಾರೋಗ್ಯವನ್ನೀಯಲಿ!

ವೀರರಾಜಪೇಟೆಯಲ್ಲಿ ವೈದ್ಯಕೀಯ ಶಿಕ್ಷಣವು ಬೇಗನೆ ಪ್ರಾರಂಭವಾಗುವದು ಅಲ್ಲಿ ಮರಗೆಲಸದ ಶಿಕ್ಷಣ ಶಾಲೆ ಮೊದಲು ಪ್ರಾರಂಭವಾಗುವದು. ಈ ಬಗೆಯ ಶಾಲೆಯು ಕರ್ನಾಟಕದಲ್ಲಿ ಇದೇ ಮೊದಲನೇಯದು. ಈ ಬಗ್ಗೆ ಶಿಕ್ಷಣಹೊಂದಿ ಹೊಟ್ಟೆತುಂಬಿಕೊಳ್ಳಲಿಚ್ಛಿಸುವ ಕರ್ನಾಟಕದ ವಿದ್ಯಾರ್ಥಿಗಳು ಅಲ್ಲಿಗೆ ಹೋಗಬಹುದು.

ನಿಜಾಮ ಕರ್ನಾಟಕ

ಗದ್ವಾಲ ಸಂಸ್ಥಾನದ ಗಾದಿಯನ್ನು ಪುನಃ ಆ ಸಂಸ್ಥಾನದ ರಾಣಿಯವರಿಗೆ ಕೊಡಬೇಕೆಂದು ಮದ್ರಾಸದ ವಿದ್ವನ್ಮಂಡಳಿಯವರೆಲ್ಲ ನಿಜಾಮರವರಿಗೆ ಒಂದು ವಿನಂತಿಪತ್ರಿಕೆಯನ್ನು ಕಳುಹಿಸಿರುವರು.

ಈ ವರ್ಷ ಗುಲಬರ್ಗೆಯಲ್ಲಿ ಶ್ರೀ ಶರಣಬಸಪ್ಪನವರ ಶ್ರಾವಣ ಮಾಸದ ಕಲ್ಲೋತ್ಸವವು ನಿರಾತಂಕವಾಗಿ ನಡೆಯಿತು.

ಹೈದರಾಬಾದಿನಲ್ಲಿ ಜಯರಾಮಾಚಾರ್ಯರ ಕನ್ನಡ ಕೀರ್ತನೆಗಳು ನಡೆದಿವೆ.

ಗುಲಬರ್ಗೆಯ ನೂತನವಿದ್ಯಾಲಯದಲ್ಲಿ ಗೆಳೆಯರ ಗುಂಪಿನವರಾದ ಶ್ರೀರಂಗರು ನಾರಾಯಣರಾಯರ ಉಪನ್ಯಾಸವಾಯಿತು. ಗೀತಾಂಜಲಿಯೇ ಉಪನ್ಯಾಸದ ವಿಷಯ.

ಹಿಂದುಸ್ಥಾನ

ವಿಲಾಯತಿಯಿಂದ ಲಾರ್ಡ ಇರ್ವಿಂಗರು ಮರಳಿ ಬಂದ ದಿನವೇ ಕಮಾಂಡರ ಇನ್ ಚೀಫರೂ ಹಿಂದುಸ್ಥಾನಕ್ಕೆ ಬಂದರು. ಆದರೆ ಮುಂಬೈಯಿಂದಲೇ ಸಿಮ್ಲಾಕ್ಕೆ ಇಬ್ಬರೂ ಒಂದೇ ದಿನ ಹೊರಟಿದ್ದರೂ ಅವರಿಗೊಂದು ಸ್ಪೆಶಲ್ ಟ್ರೇನ ಬೇರೆ ಇವರಿಗೊಂದು ಬೇರೆ. ಹೋಗಿನಿಂದ ಮರೊದಿಗೆ ನೆಚ್ಚವೆಂದಮೇಲೆ ಅಷ್ಟು ಏನು?

ಮಹಾರಾಷ್ಟ್ರ ರಂಗಭೂಮಿಯ ಬಗ್ಗೆ ಮಾತನಾಡುವಾಗ್ಗೆ ಶ್ರೀ ದೇವ ಶಂಕರರಾಯರು ಪುಣೆಯಲ್ಲಿ ನುಡಿದದ್ದು:—"ಸ್ವರಾಜ್ಯಯುಗದಲ್ಲಿ ನನಗೆ ಅಧಿಕಾರವು ದೊರೆತರೆ, ಹಲಕೆಲವು ನಾಟಕಕಾರರಿಗೆ ನಾನು ಗಲ್ಲಿನ ಶಿಕ್ಷೆ ವಿಧಿಸುವದು ನಿಶ್ಚಯವು. ಅನೇಕ ನಾಟಕಕರ್ತೃಗಳ ಹೆಸರನ್ನು ಉಚ್ಚರಿಸಲು ಸಹ ನಾನು ಸಿದ್ಧನಿಲ್ಲ. ಯಾಕಂದರೆ ಹಾಗೆ ಮಾಡಿದಲ್ಲಿ ನಿಜವಾಗಿಯೂ ಸ್ನಾನಮಾಡಬೇಕಾಗುವದು............ ಈಗಿನ ಮರಾಠಿ ನಾಟಕಕಾರರುಗಳಲ್ಲಿ ೧೦೦ ಕ್ಕೆ ೯೫ ರಷ್ಟು ನಿರುಪಯೋಗಿಗಳಾಗಿರುವರು; ಅವರನ್ನು ಕೂಡಲೆ ಸ್ಮಶಾನಗಳಲ್ಲಿ ಒಯ್ಯತಕ್ಕದ್ದು" ಮಹಾರಾಷ್ಟ್ರದಲ್ಲಿಯ ಸುಶಿಕ್ಷಿತರು ತಮ್ಮ ನಾಟಕಗಳ ಬಗ್ಗೆ ಎಚ್ಚರಿಯ ಹತ್ತಿದ್ದು ಆನಂದದ ವಿಷಯ! ಮರಾಠಿ ನಾಟಕಗಳ ಬಗ್ಗೆ, ಅಂಧಶ್ರದ್ಧೆಯಿಂದ ಒಳ್ಳೆ ಆದರಬಡುವ ನಮ್ಮ ಉತ್ತರ ಕರ್ನಾಟಕಸ್ಥರು ಬುದ್ಧಿಗಲಿಯಲಿ! ಕಣ್ತೆರೆಯಲಿ!!

ಲಾಹೋರಿನಲ್ಲಿ ಪಠಾಣರು ಸಣ್ಣಮಕ್ಕಳನ್ನು ಹಿಡಿದೊಯ್ದು, ಅವರನ್ನು ಕೊಂದು ಕಡಿದು, ತಿನ್ನುತಿದ್ದರು. ಅವರು ಹೀಗೆ ೪೦ ಮಕ್ಕಳನ್ನು ತಿಂದಿರುವರಂತೆ! ಈ ಬಗ್ಗೆ ಆ ಪಠಾಣರ ಗುಂಪಿನಲ್ಲಿಯ ಓರ್ವನು ಹಿಡಿಯಲ್ಪಟ್ಟಿದ್ದಾನೆ. ಎಂತಹ ಕ್ರೂರ ಮನುಷ್ಯರಿವರು!

"ಕರ್ನಾಟಕ ಏಕೀಕರಣ" ವೆಂಬ ವಿಷಯದ ಮೇಲೆ ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ಶ್ರೀ ಕಂಬಳಿಯವರ ವ್ಯಾಖ್ಯಾನವಾಯಿತು

ಪುಣೆಯಲ್ಲಿ ಬೇಲೂರ ಕೇಶವದಾಸರ ಕನ್ನಡ ಕೀರ್ತನೆಗಳು ನಡೆದಿವೆ. ಜನಸಂದಣಿಯು ಪ್ರತಿಯೊಂದೂ ಕೀರ್ತನಕ್ಕೆ ಹೆಚ್ಚಾಗಿರುತ್ತದೆ.

ಮಹಾತ್ಮಾಗಾಂಧಿಯವರು ಬಂಗಾಲದ ಪ್ರವಾಸವನ್ನು ತೀರಿಸಿಕೊಂಡು ಬಿಹಾರ ಪ್ರಾಂತಕ್ಕೆ ಹೋಗಿದ್ದಾರೆ. ತದನಂತರದಲ್ಲಿ ಆಂಧ್ರದೇಶಕ್ಕೆ ಹೋಗುವರಂತೆ.

ಮುಂಬಯಿಯ ಕರ್ನಾಟಕ ಸಭೆಯು ೨೬ ನೇ ತಾ॥ ದಿನ ನಾಶಸ್ವದ ಕಟ್ಟಡದಲ್ಲಿ ಕೂಡುವದು.

ಕಲಕತ್ತೆಯ ಹಿಂದೂ ಮುಸಲ್ಮಾನರ ದಂಗೆಯು ಇನ್ನೂ ಶಾಂತವಾಗಿಲ್ಲ. ಹಿಂದೂಜನರು ಅಂಗಡಿಗಳನ್ನು ತೆರೆದಿರುವದಿಲ್ಲ.

ಪರದೇಶ.

ಶ್ರೀ ಸತ್ಯಮೂರ್ತಿಯವರು ಲಂಡನದಲ್ಲಿ ಅನೇಕ ವ್ಯಾಖ್ಯಾನಗಳನ್ನು ಕೊಟ್ಟರು. ಅಲ್ಲಿ ಅನೇಕ ರೀತಿಯಿಂದ ಫಲಕಾರಿಯಾಗಿ ಮುಂದೆ ಮರಳಿ ಮುಂಬೈಗೆ ೨೫ನೇ ಸಪ್ಟಂಬರಕ್ಕೆ ಬರುವರು. ಮ್ಯಾಕ್ಡೊನಲ್ಡ ಸಾಹೇಬರಿಗೆ ಸಹ ಅವರು ಭೆಟ್ಟಿಯಾದರು.

ಚೀನದಲ್ಲಿ ಬ್ರಿಟಿಶರಿಗೆ ವಿರುದ್ಧವಾದ ಭಾವನೆಯು ಹೆಚ್ಚುತ್ತಲಿದೆ. ಘಟಿಕೇಶಿಕ್ಷೆ, ಗುಂಡುಹಾರಿಸುವದು ಇವೇ ಕಾರಣಗಳು ಆ ಭಾವನೆಗೆ ಮತ್ತಿಷ್ಟು ಪುಷ್ಟಿಯನ್ನೀಯುವವು

ಶ್ರೀಮಂತರ ಮಕ್ಕಳು ಸಾರ್ವಜನಿಕ ಶಾಲೆಗಳಿಗೆ ನವಂಬರ ೧೫ನೇ ತಾ॥ ವರೆಗೆ ರಜೆ ತೆಗೆದುಕೊಂಡಿವೆ.

ಬಿನ್ನಹವು.

ಈಗ್ಗೆ ನಾಲ್ಕು ತಿಂಗಳುಗಳಿಂದ "ಕನ್ನಡಿಗ"ನ ಸಂಚಿಕೆಗಳನ್ನು ಸ್ವೀಕರಿಸುತ್ತಿರುವ ಮಹನೀಯರುಗಳು ತಮ್ಮ ಹೆಸರನ್ನು ತೆಗೆದುಹಾಕಬೇಕೆಂದು ಬರೆದಿರುವುದಿಲ್ಲ, ನಮ್ಮಿಂದ ವಿ. ಪಿ. ಬರುವ ದಾರಿಯನ್ನು ನೋಡದೇ ದಯವಿಟ್ಟು ಆದಷ್ಟು ಬೇಗ ಮನಿಯಾರ್ಡರದಿಂದ ಚಂದಾಹಣ ನಮಗೆ ಕಳುಹಿಸಬೇಕಾಗಿ ಸವಿನಯ ಪ್ರಾರ್ಥನೆಯಿದೆ. ಬಾಗಲಕೋಟೆಯು ಸಣ್ಣ ತಾಲೂಕಿನ ಸ್ಥಳವಾದ್ದರಿಂದ ದಿನಾಲು ೨೦ ರಕಿಂತ ಹೆಚ್ಚಾಗಿ ವಿ. ಪಿ. ಗಳನ್ನು ಅಂಚೆಖಾತೆಯವರು ಹಿಡಿಯುವದಿಲ್ಲ. ದಿನಕ್ಕೆ ೨೦ ರಂತೆ ೪ ಸಾವಿರ ಜನರಿಗೆ ವಿ. ಪಿ. ಕಳುಹಬೇಕಾದರೆ ೮-೧೦ ತಿಂಗಳುಗಳು ಬೇಕು. ಮೇಲಾಗಿ ವಿ. ಪಿ. ಯಿಂದ ಚಂದಾದಾರರಿಗೆ ೪ ಆಣೆ ಹೆಚ್ಚು ವೆಚ್ಚ ಬರುವದು. ಇದನ್ನು ಲಕ್ಷದಲ್ಲಿ ತಂದು ಇನ್ನೂ ಚಂದಾಹಣ ಸಲ್ಲಿಸದೇಯಿದ್ದ ಚಂದಾದಾರರೆಲ್ಲ ಕೂಡಲೇ ಮನಿಯಾರ್ಡರದಿಂದ ೧—೧೩—೦ ಕಳುಹ ಬೇಕಾಗಿ ಬಿನ್ನಹ. ಈಗ್ಗೆ ಸಂಚಿಕೆಗಳನ್ನು ೩ ತಿಂಗಳವರೆಗೆ ಸ್ವೀಕಾರಮಾಡಿ ವಿ. ಪಿ. ಬಂದಾಗ್ಗೆ ಮಾತ್ರ ನಿರಾಕರಿಸಬಾರದಾಗಿ ವಿನಂತಿಯಿದೆ.

"ವ್ಯವಸ್ಥಾಪಕ" ಕನ್ನಡಿಗ

ಧಾತೂಪಧಾತು ರಸಮಹಾರಸಾದಿ ಖನಿಜದ್ರವ್ಯ ಸಿದ್ಧ ಸಾರ

ಅಪೂರ್ವಸಂಧಿ) ವನಸ್ಪತಿ ರಸಾಗ್ನಿ ಯೋಗಸಂಪನ್ನ: (ಬಹುಫಲದ!

ಔಷಧಿಗಳು.	[illegible]	[illegible]	ಔಷಧಿಗಳು.	[illegible]	[illegible]
ಅಭ್ರಕಭಸ್ಮ ೧೦೦೦ ಪುಟಿ	೧	೪೦	ತ್ರಿವಂಗಭಸ್ಮ-ಪೀತವರ್ಣ	೩	೭
,, ೫೦೦ ,,	೧	೨೦	ಸುವರ್ಣ ಮಾಕ್ಷಿಕಭಸ್ಮ	೫	೨
,, ೧೦೦ ,,	೧	೬	ನಾಗಭಸ್ಮ-ಶ್ವೇತ, ಪೀತ,	೩	೩
,, ನಿಶ್ಚಂದ್ರ	೨	೪	ಮೃಗಶೃಂಗಭಸ್ಮ-ಶ್ವೇತ	೬	೩
ಲೋಹಭಸ್ಮ-ರಕ್ತವರ್ಣ	೩	೮	ಸುವರ್ಣರಾಜವಂಗೇಶ್ವರ	೩	೭
ಮಂಡೂರಭಸ್ಮ-ರಕ್ತವರ್ಣ	೩	೨	ಸಿದ್ಧಮಕರಧ್ವಜ-ಅನುಪಾನಸಹಿತ ನೂರು ಗುಳಿಗೆಗಳು-೫೦	–	೬
ವಂಗಭಸ್ಮ-ಶ್ವೇತವರ್ಣ	೩	೩	ಪ್ರಾಚೀನ ಹೇಮಗರ್ಭ ಮಾತ್ರಾ	೧	೧೦೦

ಔಷಧಿಗಳು ಪರೀಕ್ಷಾಂತ್ಯದಲ್ಲಿ ಸದೋಷವೆಂದು ಕಂಡುಬಂದಲ್ಲಿ ವಾಪಸು ಪಡೆಯುವೆವು. ಪ್ರಖ್ಯಾತವಾದ ಆಯುರ್ವೇದೀಯ ಔಷಧಿಗಳೂ, ಔಷಧೋಪಯೋಗಿ ದ್ರವ್ಯಗಳೂ ಸುಲಭ ಬೆಲೆಗೆ ದೊರಕುವವು.

ವೈದ್ಯ— ವಾದಿರಾಜ ಜಹಾಗೀರದಾರ ಇಲಕಲ್ಲ. ಜಿ. ವಿಜಾಪೂರ.

ಪ್ರಕಟನೆ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ

ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೫ ನೇ ಇಸ್ವಿಯ ಜುಲೈ ೩೧ ನೇ ತಾ॥ ದಿನ ಸಾಯಂಕಾಲದ ೪-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟೀ ಮ್ಯಾಜಿಸ್ಟ್ರೇಟರಾದ ಶ್ರೀ. ಜಿ. ಬಸವಾರಾಧ್ಯ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ೧೦೦೦ ರೂ. ಪಾಲವು ದೊರೆಯ ಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೧೧೬೦೨ ಶ್ರೀ. ಆರ್. ಜಿ. ಮುಕ್ಕೇರಿ. ಬುಕ್ಕ ಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೫೬೩ ಶ್ರೀ. ದ್ವಿಜರಾಮ ಸಾರಥಿರಾಮ ನಾಯಿಕ ಕಂಪಾವುಂಡರ, ಬಲವಾಡ ದವಾಖಾನೆ ವಾಯ, ಸಯಾನ ಬಿ. ಸಿ. ಆಯ. ರೇಲ್ವೇ. ಸುರತ. (ಬರೋಡಾ ಪ್ರಜನ್ಸಿ)

(೩) ಬಾಂಡ ನಂ. ೧೧೫೭೬ ಶ್ರೀ. ಶ್ರೀರಾಮ ಮೂರ್ತಿ ಆರಾಧ್ಯುಲು ರಾಮಚಂದ್ರರಾವ ಗುರು ಪೇಟ ಪುರ ಗೋದಾವರಿ ಜಿಲ್ಹಾ.

(೪) ಬಾಂಡ ನಂ. ೧೭೬ ಶ್ರೀ. ನಂದಗಿರಿ ವೆಂಕಟರಾಮ ದಾಸ ಪ್ರೋಪ್ರಾಯಿಟರ ಮುಕುಂದ ಪ್ರೆ. ಕಾಕಿನಾಡು

(೫) ಬಾಂಡ ನಂ. ೪೨೭ ಶ್ರೀ. ಆರ್. ವೆಂಕಟಯ್ಯಾ ಗುರು ಇನಾಮದಾರ ಘೋ. ಪಯ್ಯಾ ಅಗ್ರಹಾರ. ಅಮಳ ಪುರಮ್.

೧-೮-೩೫ { ಬಿ. ಎಸ್. ಆರಾಧ್ಯ, ಚೀಫ ಏಜಂಟ ಮುಳ್ಳಿ

ಈ ಪತ್ರಿಕೆಯು ಮಂಗಳವೇಢೆ ವೆಂಕಟರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ — ವಾ. ಚಂದಾ ೧—೮—೦ ಮಾತ್ರ

ಕನ್ನಡಿಗ

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು [illegible])

ಇಯತ್ [illegible] — [illegible]

ಸಂಪಾದಕರು.— ಮಂಗಳವೇಢೇ [illegible]

ವರ್ಷ ೧ | [illegible] | ಸಂಚಿಕೆ ೨೨

ಸಂಪಾದಕರ ಟಿಪ್ಪಣಿ.

ನನ್ನ ಮನಸಿನ ಮೋಹವಾದಿ ಕಟ್ಟಿಕೊಂಡೆನು
ನಿನ್ನ ಜೀವನದ ಮಾಧುರ್ಯ [illegible]
ಚಿನ್ನದಾದರು ಚಿನ್ನ [illegible]
[illegible]
ನನ್ನ ಜೀವವು ನಿನ್ನ [illegible]
ತನ್ನನ್ನು ಕಲ್ಲಾಗಿ ನಿಲ್ಲಿಸಲು ನಿನ್ನ [illegible]
ನನ್ನ ಪ್ರಾಣವು ನಿನ್ನ ಗಂಧವನು [illegible]
ಗಂಧವಹನೆಂದು [illegible]

—[illegible]

ಶ್ರೀ ಬಾಪೂರಿ ಯವರು ನಮಗೆ ಕಳಿಸಿದ ವಾದವು ಬರೆದ ಪತ್ರವು “ಕರ್ನಾಟಕ ಟಾಯಿಮ್ಸ್” ದ ೩೦ ನೇ ಸಂಚಿಕೆಯಲ್ಲಿ ಪ್ರಸಿದ್ಧವಾಗಿದೆ. ಅದನ್ನು ಸವಿಸ್ತರವಾಗಿ ಓದಲಿಚ್ಛಿಸುವವರು “ಕರ್ನಾಟಕ ಟಾಯಿಮ್ಸ್” ದ ಆ ಸಂಚಿಕೆಯನ್ನು ನೋಡಬಹುದು. ನಾವು ಆ ಪತ್ರದ ಸಾರಾಂಶವನ್ನು ಉತ್ತರದೊಡನೆ ಸಂಕ್ಷಿಪ್ತವಾಗಿ ಕೊಡಬೇಕೆಂದಿದ್ದೆವು; ಆದರೆ ಅದು ಆಗ್ನಿ ಪ್ರದ್ಧವಾಗಿದ್ದರಿಂದ, ಸವಿಸ್ತರವಾಗಿ ಉತ್ತರ ಬರೆಯಬೇಕಾಗಿದೆ.

ಆ ಲೇಖವನ್ನು ಶ್ರೀ. ಬಾಪೂರಿಯವರು ವಿಚಾರಪೂರ್ವಕವಾಗಿ ಬರೆದಿರುವರೆಂಬ ಮಾತು ಅದನ್ನೋದಿದವರಿಗೆ ಗೊತ್ತಾಗುವಂತಿದೆ. ಸಮಾಜಹಿತದೃಷ್ಟಿಯಿಂದ ಸಾತ್ವಿಕಭಾವಪ್ರೇರಿತರಾಗಿ ಟೀಕಾಕಾರರು ಟೀಕೆಗಳನ್ನು ಬರೆಯತಕ್ಕದ್ದು. ಇಲ್ಲವಾದರೆ ಸಮಾಜಕ್ಕೆ ಹಾನಿ ತಟ್ಟುವ ಸಂಭವವೇ ಹೆಚ್ಚಿರುತ್ತದೆ. ಈಬಗ್ಗೆ ಟೀಕಾಕಾರರು ಎಚ್ಚರಿಯಲಿ. ನಮ್ಮ ಟೀಕೆಗಳು ಸಲಿಗೆಯವು, ಪ್ರೇಮಪೂರ್ವಕವಾದವುಗಳೂ ಇರುತ್ತವೆ. ಇರಲಿ. ನಾವು ‘ಕನ್ನಡಿಗ’ ನ ಪುಟಗಳನ್ನು ನಿದ್ರೆಯ ಅಮಲಿನಲ್ಲಿ ಬರೆಯುತ್ತಿರುವೆವೋ ಇಲ್ಲವೋ ಎಂಬುದನ್ನು ವಾಚಕರೇ ಬಲ್ಲವರಾದ್ದರಿಂದ ನಾವೇನು ಆ ವಿಷಯವಾಗಿ ಹೆಚ್ಚಾಗಿ ಬರೆಯುವದೇ ಶ್ರೀ. ಬಾಪೂರಿಯವರ ಲೇಖವನ್ನು ಸಂಕ್ಷಿಪ್ತವಾಗಿ ವಿವರಿಸಿ ಅವುಗಳಿಗೆ ಉತ್ತರ ಬರೆಯುವೆವು. ಅವರ ಮುಖ್ಯ ವಿಷಯಗಳು ನಾಲ್ಕು:-(೧) **ಒಂದನೇದ್ದು.** ಶ್ರೀ. ಬಾಪೂರಿಯವರ ಸ್ವಂತ ಸಹಿಗೆಯು ಶುದ್ಧವಾಗಿ ಕನ್ನಡದಲ್ಲಿದ್ದುದು. ಕನ್ನಡ ಭಾಷೆಯಲ್ಲಿ ಬರೆದದ್ದು “ಸಿದ್ದಪ್ಪಾ ರೇವಣಪ್ಪಾ ಬಾಪೂರಿ” ಎಂಬದಾಗಿ ಅಚ್ಚಗನ್ನಡದಲ್ಲಿದೆ. ಇದು ಸಹಜ. ಆ ಬಗ್ಗೆ ನಾವೇನೂ ಅನ್ನುವದಿಲ್ಲ. ಆದರೆ ಮರಾಟಿಯಲ್ಲಿ “ಸಿದ್ದಾಪಾ ರೆವಣಾಪಾ ಬಾಪೂರಿ” ಎಂಬುದಾಗಿದ್ದುದೇಕೆಂದೇ ನಾವು ಕೇಳಿದ್ದು. ಮರಾಟಿಯಲ್ಲಿ ಬರೆಯುವಾಗ್ಗೆ ಸಹ “ಸಿದ್ದಪ್ಪಾ ರೇವಣಪ್ಪಾ ಬಾಪೂರಿ” ಎಂಬದಾಗಿದ್ದರೆ ಕನ್ನಡ ಸೊಲ್ಲಿಗೆ ಅನುಕೂಲವಾಗಿರುವದೆಂಬದಾಗಿ ಮಾತ್ರ ನಾವು ಸೂಚಿಸಿರುವೆವು. ಈಗ್ಗೆ “ಕಾಲಾಪಾ ಬಾರಮಾಪಾ” ಎಂಬದಾಗಿ ಕನ್ನಡದಲ್ಲಿ ಬರೆದದ್ದನ್ನು ನಾವೆಲ್ಲಿಯೂ ನೋಡಿಲ್ಲ. ಆದರೆ ಮರಾಟೀ ಲಿಪಿಯಲ್ಲಿ ಬರೆಯುವಾಗ್ಗೆ ಮಾತ್ರ “ಕಾಲಾಪಾ ಧರಮಾಪಾ” ಎಂಬದಾಗಿ ಇತ್ತಿತ್ತ ಅನೇಕರು ಬರೆಯುತ್ತಿರುವರು. ಇದು ಕನ್ನಡಕ್ಕೆ ಅಪಮಾನಕರವಾದ ಸಂಗತಿಯೆಂಬುದಾಗಿ ನಾವು ಹೇಳಿರುವೆವು. ಲಿಂಗಾಯತ ಸಮಾಜದ ಮೇಲೆ ಹರಿಹಾಯುವ ಹವ್ಯಾಸದಿಂದ ನಾವೇನು ಇದನ್ನು ಬರೆದಿರುವದಿಲ್ಲ. ಬ್ರಾಹ್ಮಣರು ಮರಾಟಿಯ ಮೋಹಕ್ಕೆ ಒಳಪಟ್ಟುದದನ್ನು ಕಂಡು, ನಾವು ಬಹು ಚಿಂತಾಕ್ರಾಂತರಾಗಿರುವದನ್ನು ‘ಕನ್ನಡಿಗ’ ನಲ್ಲಿ ಮೊದಲಿಂದ ಮೇಲೆ ಉಲ್ಲೇಖಿಸಿ, ಆ ಬಗ್ಗೆ ಅವರಕ್ತಿಗಳನ್ನು ಸೆಳೆಯುತ್ತಿರುವೆವು. ಈ ಮರಾಟಿ ಮೋಹದಿಂದಾಗಿಯು ಬ್ರಾಹ್ಮಣರನ್ನು ದಕ್ಷಿಣ ಮಹಾರಾಷ್ಟ್ರದವರೆಂದೆನಿಸಿಕೊಂಡಿರುವಾಗಲೂ, ಕರ್ನಾಟಕದಲ್ಲಿಯ ವೀರಶೈವರು ಮರಾಟಿಗೆ ಮೋಹಿಸದೇ, ಭಾಷೆಯ ವಿಷಯದಲ್ಲಿ ಶುದ್ಧವಾದ ಅಭಿಮಾನವುಳ್ಳವರೆಂದೂ ನಮ್ಮ ಭಾವನೆಯಿದ್ದಿತು. ಕರ್ನಾಟಕ ಸಮಾಜದ ಮುಖ್ಯ ಅಂಗವಾದ ವೀರಶೈವ ಸಮಾಜದವರಾದರೂ ಶುದ್ಧರಾಗಿರುವರೆಂಬುದಾಗಿ ನಮಗೆ ಸಮಾಧಾನ ಆಗಿದ್ದಿತು. ಶ್ರೀ ಬಸವೇಶ್ವರರ ವಚನಗಳಲ್ಲಿಯ ಕನ್ನಡದ ಸೊಗಸಿದ ಸೊಬಗನ್ನು ಸೇವಿಸಿದ ವೀರಶೈವರು, ಕನ್ನಡ ನುಡಿಯ ಅಭಿಮಾನದ ಬಗ್ಗೆ ಕರ್ನಾಟಕದ ಉಳಿದ ಮತೀಯರಿಗೆ ಬುದ್ಧಿ ಕಲಿಸುತ್ತಿರುವರೆಂದೂ ತಿಳಿದಿದ್ದೆವು. ಆದರೆ “ಕಾಲಾಪಾ ಭಾರಮಾಪಾ” ಮುಂತಾದವುಗಳು ಇತ್ತಿತ್ತ ಹೆಚ್ಚಾಗಿ ವಾಡಿಕೆಯಾಗಹತ್ತಿದ್ದನ್ನು ಕಂಡು, ಇದು ಈಗೀಗ ಪ್ರಾರಂಭವಾಗಹತ್ತಿರುವದರಿಂದ, ಜನರ ನಿದರ್ಶನಕ್ಕೆ ಅದನ್ನು ತಂದು ಕೊಟ್ಟರೆ, ಅವರು ಈ ಬಗ್ಗೆ ಜಾಗೃತರಾಗಿ ಬ್ರಾಹ್ಮಣರನ್ನು ಈ ವಿಷಯದಲ್ಲಿ ಹಿಂದೆ ಹಾಕುವರೆಂದೂ ನಂಬಿ ನಾವು ಈ ವಿಷಯವನ್ನು ಎತ್ತಿ ಹಿಡಿದಿರುವೆವು. ಆದರೆ ಶ್ರೀ. ಬಾಪೂರಿಯವರು ಚಿಮಣಿಯ ದೀವಿಗೆಯ ದೃಷ್ಟಾಂತವನ್ನು ಕೊಟ್ಟು, ಬ್ರಾಹ್ಮಣರಲ್ಲಿ ಅನೇಕ ಬಗೆಯ ದೋಷಗಳಿರಲು, ವೀರಶೈವರಿಗೆ ನಾವು ಉಪದೇಶಿಸುವದೇಕೆಂಬುದಾಗಿ ಪ್ರಶ್ನೆ ಮಾಡಿ, ನಮ್ಮಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ ಭೇದಭಾವವಿರುವದೆಂಬದಾಗಿ ಧ್ವನಿತವಾಡಿರುವರು. ಆದರೆ ನಮ್ಮಲ್ಲಿ ಈ ಭಾವನೆಯು ಎಳ್ಳಷ್ಟಾದರೂ ಇರುವದಿಲ್ಲವೆಂಬದಾಗಿ ಸಾರಿ ಸಾರಿ ಹೇಳದಿರಲಾರೆವು. (೨) **ಎರಡನೇದ್ದು.** ಬ್ರಾಹ್ಮಣರು ತಮ್ಮ ಹೆಸರಿನ ಮುಂದೆ ಉಪಯೋಗಿಸುವ ‘ರಾವ’ ‘ಪಂತ’ ‘ಕರ’ ಮೊದಲಾದವುಗಳ ಬಗ್ಗೆ. ‘ರಾವ’ ಶಬ್ದವು ಮರಾಟಿಯ ಸೊತ್ತಿನದಲ್ಲ. ಅದನ್ನು ಮರಾಟರೂ, ಕನ

ಡಿಗರೂ, ತಮಿಳರೂ, ತೆಲಗರೂ, ಮಲಯಾಳದವರೂ, ಉಪಯೋಗಿಸುತ್ತಿರುವರು. ಬಂಗಾಲದಲ್ಲಿ ಸಹ 'ರಾಯ' ಎಂಬ ಹೆಸರು ವಾಡಿಕೆಯಲ್ಲಿದೆ. 'ರಾಜ' ಈ ಶಬ್ದದ ತದ್ಭವವೇ 'ರಾವ.' ಆದುದರಿಂದಲೇ ನಾವು 'ರಾವ' ಶಬ್ದವನ್ನು 'ಕನ್ನಡಿಗ'ನಲ್ಲಿ ಉಪಯೋಗಿಸಿದ[illegible]ರ ಆಳಿಕೆಯಲ್ಲಿಯೇ ಈ ಶಬ್ದವನ್ನು ಮರಾಟರಿಂದ ಕ[illegible]ಹೆಚ್ಚಾಗಿ ತೆಗೆದುಕೊಂಡರೆಂಬುದು ನಿರಾಧಾರವಾದುದು. ಇನ್ನು 'ಪಂತ' ಶಬ್ದವನ್ನು ಈಗ್ಗೆ ಕನ್ನಡಿಗರು ಉಪಯೋಗಿಸುವದು ತೀರ ವಿರಳ. ಹಾಗೆ ಉಪಯೋಗಿಸಿದರೆ, ಅದೂ, ಹಾಗೆಯೇ 'ಕರ' ಪ್ರತ್ಯಯವೂ ಕನ್ನಡಕ್ಕೆ ಎಂದಿಗೂ ಒಪ್ಪಲಾರವು. ಈ ಅಶುದ್ಧ ಪದ್ಧತಿಯನ್ನು ನಾವು ಎತ್ತಿ ಹಿಡಿದಿರುವದಿಲ್ಲವೆಂಬುದು 'ಹೊಂಬಳಕರ' ಈ ಬಗ್ಗೆ ಟೀಕೆ ಸಿದ್ಧೇ ಸಾಕ್ಷಿ. ಹೊಂಬಳನಾಟಕ ಮಂಡಳಿಯು ಬ್ರಾಹ್ಮಣರದಿದ್ದರೂ, ನಾವು ಆ ಬಗ್ಗೆ ಟೀಕೆ ಬರೆದಿರುವೆವೆಂದಮೇಲೆ, ದೋಷಗಳನ್ನು ಟೀಕಿಸುವಾಗ್ಗೆ ನಮ್ಮಲ್ಲಿ ಬ್ರಾಹ್ಮಣ ಪಕ್ಷಪಾತವಿದೆಯೋ ಇಲ್ಲವೋ ಎಂಬುದು ತಾನೇ ಸಿದ್ಧವಾಗುತ್ತದೆ. ಇರಲಿ. ಕನ್ನಡದ ಅಭಿಮಾನವಿದ್ದ ಬ್ರಾಹ್ಮಣರೆಲ್ಲ ಈ ಚಟವನ್ನು ತಟ್ಟನೇ ಅಟ್ಟಬೇಕು. ಇಲ್ಲವಾದರೆ ತಮಗೆ ಕನ್ನಡದ ಅಭಿಮಾನವಿಲ್ಲವೆಂದು ಒಂದಾವರ್ತಿ ಸಾರಿ ಬಿಡಬೇಕು. (೩) ಮೂರನೇದು: ಇನ್ನು ಶ್ರೀ. ಬಾಪೂರಿಯವರ ಮೂರನೇ ವಿಷಯವೆಂದರೆ ನಮ್ಮ ಸ್ವಂತ ಮನೆತನದ್ದು. 'ಕರ' ಪ್ರತ್ಯಯವನ್ನು ನಮ್ಮ ಮನೆತನದಲ್ಲಿ ಉಪಯೋಗಿಸಿ 'ಮಂಗಳವೇಢೆ ಕರ' ಎಂಬದಾಗಿ ಬರೆಯುತ್ತಿರಲು, "ಮಂಗಳವೇಢೇಕರ" ಇವರ ಚಿನ್ನದ ಅಂಗಡಿಯಲ್ಲಿ ಮರಾಟಿಯಲ್ಲಿ ಲೆಕ್ಕ ಪತ್ರವಿರುತ್ತಿರಲು, "ಮಂಗಳವೇಢೆ ಕರ" ಇವರ ಜವಳೀ ಅಂಗಡಿಯ ಹಲಿಗೆಯ ಮೇಲೆ "ಮಂಗಳವೇಢೇಕರ ಸನ್ಸ್ ಕ್ಲಾತ—ಶಾಪ" ಎಂಬದಾಗಿ ಇಂಗ್ಲೀಷಿನಲ್ಲಿ ಹೆಸರು ಇರುತ್ತಿರಲು (ಹಲಿಗೆಯಮೇಲೆ ಕನ್ನಡದ ಹೆಸರೂ ಇದೆ,) 'ವಿದ್ಯಾರಣ್ಯ ಮುದ್ರಾ ಮಂದಿರಕಾ ಕಾರ್ಯಾಲಯ' ವೆಂಬದಾಗಿ ಹಿಂದೀ ಭಾಷೆಯ ಹಲಿಗೆಯನ್ನು ಹಿಂದೀ ಭಾಷೆಗೆ ಮೋಹಿಸಿ, ನಮ್ಮ ಮುದ್ರಾ ಮಂದಿರದ ಮುಂದೆ ನಾವಿನ್ನೂ ತೂಗಬಿಟ್ಟಿರಲು, ಇವನ್ನೆಲ್ಲ ತಿದ್ದಿಕೊಳ್ಳದೇ, ನಾವು ಶ್ರೀ. ಬಾಪೂರಿಯವರಿಗೂ ಅನ್ಯರಿಗೂ ಉಪದೇಶಿಸುವದೇಕೆಂಬುದಾಗಿ ಕೇಳಬ್ಬಾರೆ. ನಾವು ಸ್ವತಃ ನಮ್ಮ ಹೆಸರನ್ನು "ಮಂಗಳವೇಢೆ" ಎಂಬದಾಗಿಯೇ ಬರೆಯುತ್ತಿರುವೆವು. ಸ್ವತಃ ನಾವು ನಮ್ಮ ಹೆಸರಿನಿಂದ 'ಕರ'ವನ್ನು ತೆಗೆಸಿ ಬಹು ದಿನಗಳಾದವು. ಇದನ್ನು ನಾವು ಮೊದಲು ಕೃತಿಯಲ್ಲಿ ತಂದಿರುವೆವೆಂದೇ, ಅನ್ಯರಿಗೆ ಉಪದೇಶಿಸಲು ಧೈರ್ಯಗೊಂಡಿರುವೆವು. ನಮ್ಮ ಮುದ್ರಾ ಮಂದಿರ ಮತ್ತು 'ಕನ್ನಡಿಗನ' ಕಾರ್ಯಾಲಯಗಳಲ್ಲಿ ಎಲ್ಲವೂ ಕನ್ನಡದಲ್ಲಿದೆಂಬುದನ್ನು ಬೇರೆ ಹೇಳಲಿಕ್ಕೆ ಬೇಡ. ಆದರೆ ನಾವು ಕನ್ನಡಕ್ಕೆ ಪ್ರಾಧಾನ್ಯವನ್ನು ಕೊಟ್ಟು, ಹಿಂದೀ ಭಾಷೆಯಲ್ಲಿಯೂ "ವಿದ್ಯಾರಣ್ಯ ಮುದ್ರಾಮಂದಿರಕಾ ಕಾರ್ಯಾಲಯ" ವೆಂಬುದಾಗಿ ಬರೆದಿರುವೆವೆಂದು ಅಭಿಮಾನಪೂರ್ವಕವಾಗಿ ಹೇಳುತ್ತೇವೆ. ಹಿಂದೀ ಭಾಷೆಯು ರಾಷ್ಟ್ರೀಯ ಭಾಷೆಯಾದ್ದರಿಂದ, ಅದರಲ್ಲಿ ಹಲಿಗೆಗಳನ್ನು ಬರೆಯುವದು ಸರ್ವಥಾ ಯೋಗ್ಯವು. ನಾವು ಕನ್ನಡದ ಬಗ್ಗೆ ಅತಿರೇಕದ ಅಭಿಮಾನವುಳ್ಳವರಿದ್ದರೂ, ಹಿಂದೀ ಭಾಷೆಗೆ 'ಮೋಹಿತ' ರಾಗಿರುವೆವೆಂದು ಎದೆತಟ್ಟಿ ಹೇಳುತ್ತೇವೆ. ಇನ್ನು, ನಮ್ಮ ಮನೆತನದ ಜನರೆಲ್ಲ ತಮ್ಮ ಹೆಸರಿನ ಮುಂದ "ಮಂಗಳವೇಢೇಕರ" ಎಂಬದಾಗಿ 'ಕರ' ಪ್ರತ್ಯಯವನ್ನು ಹಚ್ಚುವದನ್ನು ಬಿಡಬೇಕೆಂದೂ, ಚಿನ್ನದ ಅಂಗಡಿಯಲ್ಲಿ ಮರಾಟೀ ಲೆಕ್ಕವಿಡುವದನ್ನು ತ್ಯಜಿಸಬೇಕೆಂದೂ ನಾವು ಪ್ರಯತ್ನ ಮಾಡಿರುವೆವು. ಇಲ್ಲಿ ನಮ್ಮ ಕಾರ್ಯವನ್ನು ನಾವು ಸಂಪೂರ್ಣವಾಗಿ ಮಾಡಿರುವೆವು. ಅದು ಫಲಕಾರಿಯಾಗದಿದ್ದರೆ ನಾವೇನು ಅದಕ್ಕೆ ಹೊಣೆಗಾರರಲ್ಲ. ಎಲ್ಲರಿಗೂ ಇದ್ದ ಸಂಗತಿಗಳನ್ನು ತಿಳಿಸುವದು ಮಾತ್ರ ನಮ್ಮ ಕರ್ತವ್ಯವು. ನಾವದನ್ನು ಮನೆಯವರಿಗೂ ಸಾರ್ವಜನಿಕ ರೀತಿಯಿಂದ ಅನ್ಯರಿಗೂ ಹೇಳುತ್ತಿರುವೆವು. ಅದನ್ನು ಕೃತಿಯಲ್ಲಿ ತರುವದು ಅವರವರ ಇಷ್ಟ. ಈ ವಿಷಯದಲ್ಲಿ ನಮ್ಮ ಮನೋದೇವತೆಯು ನಾವು ನಮ್ಮ ಕರ್ತವ್ಯವನ್ನು ಮಾಡಿರುವೆವೆಂದು ನುಡಿಯುತ್ತಿರುವದು. ಆದ್ದರಿಂದ ಈ ಬಗ್ಗೆ ನಾವೆಂದೂ ಟೀಕಕ್ಕೆ ಗುರಿಯಾಗಲಾರೆವು. ತಂದೆ ಮಕ್ಕಳಾದ ನಮ್ಮ ನಡುವೆ ಮರಾಟಿ ಎಲ್ಲಿ ಪತ್ರವ್ಯವಹಾರ ನಡೆಯುವದು ತೀರ ಸುಳ್ಳು. ಇನ್ನು, ಲಗ್ನಪತ್ರಗಳೇಕೆ ಮರಾಟಿಯಲ್ಲೆಂಬುದಕ್ಕೆ. ಕನ್ನಡಿಗರ ಸಲುವಾಗಿ ಕನ್ನಡ ಪತ್ರಿಕೆಯ ೬೦೦ ಪ್ರತಿಗಳನ್ನೂ, ಮಹಾರಾಷ್ಟ್ರದಲ್ಲಿನ್ನ ಮಿತ್ರ ಮಂಡಳಿಯ ಸಲುವಾಗಿ ೩೦೦ ಮರಾಟಿ ಪ್ರತಿಗಳನ್ನೂ ಬೇರೆ ಬೇರೆ ತೆಗೆದದ್ದು ಸಯುಕ್ತಿಕವಾಗಿದೆಯಾದ್ದರಿಂದ ಈ ವಿಷಯವಾಗಿ ಹೆಚ್ಚಾಗಿ ಬರೆಯುವದು ಅನಾವಶ್ಯಕ. ಕಾರಕೂನರ ತಪ್ಪಿನಿಂದ ಕನ್ನಡಿಗರಿಗೂ ಮರಾಟಿ ಪತ್ರಿಕೆಗಳು ಅಲ್ಲಲ್ಲಿ ಹೋಗಿದ್ದರೆ, ಅದೇನು ಮಹತ್ವದ್ದಲ್ಲ. ಸಾರ್ವಜನಿಕ ರೀತಿಯಿಂದ ಈ ಬಗ್ಗೆ ಇಲ್ಲದ ಸಲ್ಲದ ಸಂಗತಿಗಳನ್ನು ಶ್ರೀ. ಬಾಪೂರಿಯವರು ಉಲ್ಲೇಖಿಸುವದರ ಮೊದಲು ಈ ಕಾರಣವನ್ನು ಕುರಿತು ವಿಚಾರಿಸಿ ಬರೆದಿದ್ದರೆ ಚನ್ನಾಗಿತ್ತು. (೪) ನಾಲ್ಕನೇದು: ಈಗ್ಗೆ ಶ್ರೀ. ಬಾಪೂರಿಯವರ ಕಡೆಯ ವಿಷಯ. 'ಕನ್ನಡಿಗ'ನ ಸಂಚಿಕೆಯಲ್ಲಿ 'ಸಮುರೀ ಪಾವರ್' ಎಂಬುದಾಗಿಯೂ 'ಮಂಗಳವೇಢೇಕರ' ವಾಚ್‌ಮೇಕರೆಂಬುದಾಗಿಯೂ ಏಕೆ ಬರೆಯಲಾಗಿದೆಯೆಂದದ್ದು. ಸಾಗಂಡಿಕರ, ಮಂಗಳವೇಢೇಕರ, ಧಾರವಾಡಕರ, ವಗೈರೆ ತೆರದ ಜನರ ಬಗ್ಗೆ ನಾವು ಬರೆವಾಗ, ತಮ್ಮ ಹೆಸರಿನ ಮುಂದೆ 'ಕರ' ಶಬ್ದವನ್ನು ತೆಗೆಯಲು ಅವರು ಸಮ್ಮತಿಸದಿದ್ದರೂ, ನಾವದನ್ನು ತೆಗೆದು ಹಾಕುವದು ಒಂದು ಬಗೆಯ ಹಿಂಸೆಯು. ಅವರಿಗೆಲ್ಲ ಈ ಬಗ್ಗೆ ಮೇಲಿಂದ ಮೇಲೆ ಹೇಳುವದು ನಮ್ಮ ಕರ್ತವ್ಯವಾಗಿದ್ದರೂ, ಅವರು ಸಮ್ಮತಿಸದಿದ್ದರೂ ನಾವು ಬಲಾತ್ಕಾರದಿಂದ ಅವರ ಹೆಸರನ್ನು ಬದಲಿಸುವದು ಶಿಷ್ಟಸಾಂಪ್ರದಾಯವಲ್ಲವಾದ್ದರಿಂದ ನಾವು ಈ ಜನರ ಹೆಸರನ್ನು ಬರೆಯುವಾಗಲ್ಲ, ಇಷ್ಟಕ್ಕಿಷ್ಟ ಹಾಗೆ ಅವರ ಹೆಸರನ್ನು ಬರೆಯುತ್ತಿರುವೆವು. ಇನ್ನು 'ಸಮುರೀ ಪಾವರ್' ದ ಬಗ್ಗೆ. ಇದನ್ನು ನಾವು ಅವತರಣ ಚಿನ್ಹದಲ್ಲಿ ಬರೆದದ್ದನ್ನು ಶ್ರೀ. ಬಾಪೂರಿಯವರು ಲಕ್ಷ್ಯದಲ್ಲಿ ತಂದಂತೆ ಕಾಣುವದಿಲ್ಲ. ನಮಗೆ ಅದು ಸಮ್ಮತವಿಲ್ಲದಿದ್ದರೂ, ಅವಶ್ಯಕವಾದ್ದರಿಂದ ಉಪಯೋಗಿಸಿರುವೆವೆಂಬುದು ಆ ಚಿನ್ಹ ಹಾಕಿದ್ದರಿಂದ ತಾನೇ ಸಿದ್ಧವಾಗುತ್ತದೆ. ಸ್ಟೇಶನ್, ತಿಕಿಟ, ಕಪಸ್ಸಿ ಮೊದಲಾದ ಪಾರಿಭಾಷಿಕ ಶಬ್ದಗಳು ನಮ್ಮಲ್ಲಿ ರೂಢವಾಗಿವೆ. ಅಂಥವುಗಳನ್ನು ಬದಲಿಸುವದೇನು ಇಷ್ಟವಲ್ಲ. ಆದರೆ 'ಸಮುರೀ ಪಾವರ್' ಥಂಥ ಶಬ್ದಗಳು ಇನ್ನೊಂದು ರೂಢವಾಗಿಲ್ಲ. ಆದ್ದರಿಂದ ಪತ್ರಗಳಿಗೆ ಕನ್ನಡದ ಶಬ್ದಗಳನ್ನು ಕಲ್ಪಿಸುವದು ಆವಶ್ಯಕ. ಆದರೆ ಇವುಗಳನ್ನು ಬೇರೆ ಬೇರೆ ಜನರು ತಮ್ಮ ಮನಸ್ಸಿಗೆ ತೋಚಿದಂತೆ ಭಾಷಾಂತರಿಸುವದು ಉಚಿತವಲ್ಲ. ಹಾಗೆ ಮಾಡಿದರೆ ಜನರಿಗೆ ಅರ್ಥವೂ ತಿಳಿಯುವದಿಲ್ಲ. ಸಾಹಿತ್ಯ ಪರಿಷತ್ತಿನಂಥ ಸಾರ್ವಜನಿಕ ಸಂಸ್ಥೆಗಳಾಗಲೀ, ಸಂಪಾದಕರೆಲ್ಲ ಒಟ್ಟಾಗಿ ಸೇರಿಯಾಗಲೀ ನಿರ್ಣಯಿಸುವದು ಯೋಗ್ಯ. ಆದುದರಿಂದ ಈ ಬಗ್ಗೆ, ಏನು ಒಂದು ನಿಶ್ಚಿತ ಸ್ವರೂಪವು ಬರುವವರೆಗೆ 'ಸಮುರೀ ಪಾವರ್' ದಂಥವ ಶಬ್ದಗಳನ್ನು ಅವತರಣ ಚಿನ್ಹದಿಂದ ತೋರಿಸುವದನ್ನು ಅನೇಕರು ಅನುಕರಿಸುತ್ತಿರುವರು, ಈ ಪದ್ಧತಿಯು ಸರ್ವ ಸಮ್ಮತವಾದುದೂ ಶ್ರೀ. ಬಾಪೂರಿಯವರಿಗೆ

ಗೊತ್ತಿಲ್ಲವೆಂಬುದು ಸ್ಪಷ್ಟವಿದೆ. ಇನ್ನು ಕೊನೆಯ ಕೋರಿಕೆ. ಇಂತಹ ಸಂಗತಿಗಳನ್ನು ಸಾರ್ವಜನಿಕರಲ್ಲಿ ಸಾರುವದರಿಂದ ಸಮಾಜದ ಸುಧಾರಣೆಗೆ ಸಹಾಯವಾಗುವದರಲ್ಲಿ ಸಂಶಯವಿಲ್ಲ. ಆದರೆ ಈ ಬಗೆಯ ಸಾರ್ವಜನಿಕ ವಿಷಯ ವಿವೇಚನೆಯಲ್ಲಿ ಜಾತಿಮತ್ಸರ, ಕುನಸು, ಮನಸ್ಸಿಗೆ ಹತ್ತುವ ಶಬ್ದ, ಮುಂತಾದ ತಾಮಸಿಕ ವಿಚಾರಗಳಿಗೆ ಯಾರೂ ಇಂಬುಗೊಡದಂತೆ ನೋಡಲು ಜಾಗೃತರಾಗಿರಬೇಕು.

ಇತ್ತ ಮಹಾರಾಷ್ಟ್ರದವರಿಗೂ ವಿಶ್ವವಿದ್ಯಾಲಯವು ದೊರೆಯುವದಕ್ಕಾಗಿ ಮುಂಬೈ ವಿಶ್ವವಿದ್ಯಾಲಯದಿಂದ ನೇಮಿಸಲ್ಪಟ್ಟ ಮಂಡಲದವರು ನಿರ್ಣಯಿಸಿ, ಸಂಪೂರ್ಣವಾಗಿ ಕರ್ನಾಟಕದ ಭಾಗಗಳಾದ, ಜಮಖಂಡಿ, ಮುಧೋಳ, ಮತ್ತು ಅಕ್ಕಲಕೋಟೆ ಸಂಸ್ಥಾನಗಳೂ, ಅರ್ಧಕ್ಕಿಂತ ಹೆಚ್ಚು ಕರ್ನಾಟಕದ ಭಾಗಗಳನ್ನೊಳಕೊಂಡ, ಸಾಂಗಲಿ, ಮಿರಜಿ ಸಂಸ್ಥಾನಗಳೂ, ಕೊಲ್ಲಾಪೂರದ ಕರ್ನಾಟಕದ ಭಾಗವು ಸಹ ಈ ಮಹಾರಾಷ್ಟ್ರ ವಿಶ್ವವಿದ್ಯಾಲಯದಲ್ಲಿ ಸೇರಿರಬೇಕಾಗಿ ಸೂಚಿಸಿದ್ದಾರೆ. ಅತ್ತ ಆಂಧ್ರರು ಕರ್ನಾಟಕದ ಪೂರ್ವದ ಭಾಗವನ್ನು ನುಂಗಬೇಕಾಗಿ ನಡೆಸಿದ ಪ್ರಯತ್ನಗಳನ್ನು ಕನ್ನಡಿಗರೆಲ್ಲ ಬಲ್ಲರು. ದಕ್ಷಿಣದಲ್ಲಿ, ತಮಿಳರು ಕೋಯಮತ್ತೂರ, ಸೇಲಂ, ನೀಲಗಿರಿಗಳನ್ನು ತಮ್ಮ ಹಿಡಿತದಲ್ಲಿ ಹಿಡಿದಿದ್ದಾರೆ. ಮಲಿಯಾಳಿಯವರು ಕಾಸರಕೋಡ ತಾಲೂಕನ್ನು ಆಕ್ರಮಿಸಬೇಕಾಗಿ ಹೊಂಚು ಹಾಕಿದ್ದಾರೆ. ಕರ್ನಾಟಕದ ಉತ್ತರ, ಪೂರ್ವ, ದಕ್ಷಿಣ ಭಾಗಗಳೆಲ್ಲ ಈ ಪ್ರಕಾರವಾಗಿ ಅನ್ಯರ ತುತ್ತಿಗೀಡಾಗಿವೆ. ಪಶ್ಚಿಮ ಭಾಗದಲ್ಲಿ ನಮ್ಮ ದುರ್ದೈವದಿಂದ (?) ಪರಭಾಷೆಯ ಗಡಿಯು ಬರಲಿಲ್ಲ ಆದುದರಿಂದ ಅಲ್ಲಿರುವ ಕೆಪಲುರಾಜನು ಕರ್ನಾಟಕದ ಮೇಲೆ ಕನಿಕರ ಇಟ್ಟು ತನ್ನ ಕಪಲ್ಕಿಚ್ಚಿನಿಂದ ಕನ್ನಡನಾಡಿನ ಪಶ್ಚಿಮ ಗಡಿಯನ್ನು ಒಡಲೊಳಗೆ ದೂಡಿಕೊಳ್ಳುವರೆ ಕನ್ನಡಿಗರು ನಾಲ್ಕೂ ದಿಕ್ಕಿನಲ್ಲಿ ನಾಲ್ಕು ಜನ ರಾಕ್ಷಸರನ್ನಿಟ್ಟಂತಾಗುವದು. ಹೀಗಾದರೂ ಸಹ ಕನ್ನಡಿಗರ ಕಣ್ಣು ಕತ್ತರಿಸದು. ಕರ್ನಾಟಕನ್ನರ ಹೃದಯವು ಅಷ್ಟೊಂದು ಗಟ್ಟಿಯಾಗಿರುವದು. ಆಗಲಿ ಇದಕ್ಕೂ ಹೆಚ್ಚಾಗಿ ಗಟ್ಟಿಯಾಗಲಿ.

ಬಳ್ಳಾರಿಯ ಕನ್ನಡಿಗರು ಸಕಾಲದಲ್ಲಿ ಚೇತರಿಸಿಕೊಂಡದ್ದರಿಂದ ಅಲ್ಲಿ ಸ್ವಲ್ಪವಾದರೂ ಕರ್ನಾಟಕದ ಗಾಳಿಯು ಬೀಸಹತ್ತಿದೆ. ಆದರೆ ಅನಂತಪೂರದ ಕನ್ನಡಿಗರು ಇನ್ನೂ ಗಾಢ ನಿದ್ರೆಯಲ್ಲಿದ್ದಾರೆ. ಆಂಧ್ರ ವಿಶ್ವವಿದ್ಯಾಲಯದಿಂದ ತಮಗೆ ತಗಲುವ ಹಾನಿಯನ್ನು ಅವರು ತಿಳಿದು ಕೊಂಡಿಲ್ಲ. ಆದುದರಿಂದ ನೆರೆಜಿಲ್ಲೆಯವರಾದ ಬಳ್ಳಾರಿಯವರು ಈ ಸಮಯದಲ್ಲಿ ತಮ್ಮ ಸಹ ದುಃಖಿಗಳಾದ ಅನಂತಪೂರದ ಕನ್ನಡಿಗರಿಗೆ ಎಚ್ಚರಿಸಬೇಕಾಗಿ ಸೂಚಿಸುತ್ತೇವೆ. ಮದ್ರಾಸದ ಕಾಯದೇಮಂಡಲದಲ್ಲಿ ಕರ್ನಾಟಕದ ಪ್ರತಿನಿಧಿಗಳೆಲ್ಲ, ಬಳ್ಳಾರಿಯನ್ನು ಆಂಧ್ರ ವಿಶ್ವವಿದ್ಯಾಲಯದಲ್ಲಿ ಸೇರಿಸಬಾರದಾಗಿ ಸರಕಾರಕ್ಕೆ ಒತ್ತಿಹೇಳಿದ್ದು ಆನಂದದ ಸಂಗತಿ. ಶಿಕ್ಷಣ ಮಂತ್ರಿಗಳಾದರೂ ಬಳ್ಳಾರಿಯ ಕನ್ನಡ ಭಾಗವನ್ನು ಈ ಆಂಧ್ರ ವಿಶ್ವವಿದ್ಯಾಲಯಕ್ಕೆ ಸೇರಿಸದ ಹಾಗೆ ಜಾಗರೂಕರಾಗಿರುವೆವೆಂದು ವಚನವನ್ನಿತ್ತಿದ್ದು ಸರಿಯಾಯಿತು. ಆದರೆ ಬಳ್ಳಾರಿಯ ಕನ್ನಡ ಭಾಗವನ್ನಿಷ್ಟೇ ಅಲ್ಲದೇ ಅನಂತಪೂರ ಜಿಲ್ಲೆಯಲ್ಲಿಯ ಕನ್ನಡ ಭಾಗವನ್ನು ಸಹ ಆಂಧ್ರವಿಶ್ವವಿದ್ಯಾಲಯದ ಆಡಳಿತದ ಹೊರಗಿಡತಕ್ಕದ್ದು. ಅನಂತಪುರದಲ್ಲಿ ಕನ್ನಡ ಭಾಗವಿದೆಂಬುದು ಶಿಕ್ಷಣ ಮಂತ್ರಿಗಳ ಲಕ್ಷ್ಯದಲ್ಲಿದ್ದಂತೆ ಕಾಣುವದಿಲ್ಲ. ಆದ್ದರಿಂದ ಕಾಯದೇ ಮಂಡಲದಲ್ಲಿಯ ಕರ್ನಾಟಕದ ಪ್ರತಿನಿಧಿಗಳು ಈ ವಿಷಯವನ್ನು ಶ್ರೀ ಪಟ್ರೋಯವರ ನಿದರ್ಶನಕ್ಕೆ ತಡವಿಲ್ಲದೆ ತಂದು ಕೊಡಬೇಕು. ಮತ್ತು ಆಂಧ್ರವಿಶ್ವವಿದ್ಯಾಲಯದ ಉಪಮಂಡಲದಲ್ಲಿ ಸೇರಿದ ಶ್ರೀ. ಪಿ. ಶಿವರಾಯರೂ ಈ ಸಂಗತಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಉಪ ಮಂಡಲದಲ್ಲಿ ಕನ್ನಡಿಗರ ಈ ಆಕಾಂಕ್ಷೆಗೆ ಪಕ್ಷಪುಷ್ಟಿಯು ದೊರೆಯುವ ಹಾಗೆ ಪ್ರಯತ್ನಿಸಬೇಕು.

ಇನ್ನು ಉತ್ತರ ಕರ್ನಾಟಕದ ಸಂಸ್ಥಾನಗಳಲ್ಲಿರುವ ಕರ್ನಾಟಕಾಭಿಮಾನಿಗಳು ಕೂಡಲೇ ಎಚ್ಚತ್ತು ತಮ್ಮ ಮೇಲೆ ಬಂದಿರುವ ಪರಾಟರ ದಾಳಿಯನ್ನು ಎದುರಿಸಬೇಕು. ಬಳ್ಳಾರಿಯ ಕನ್ನಡಿಗರು ಸಕಾಲದಲ್ಲಿ ಜಾಗೃತರಾಗಿ ಜಯ ಸಂಪಾದಿಸಿದಂತೆ, ನಮ್ಮ ಉತ್ತರ ಕರ್ನಾಟಕದ ಸಂಸ್ಥಾನದಲ್ಲಿಯ ನಿಸ್ಸೀಮ ಕನ್ನಡದ ಭಕ್ತರಾದ ಶ್ರೀ. ಚಿಕ್ಕೋಡಿ ತಮ್ಮಣ್ಣಾಪ್ಪನವರೂ, ಮಹಿಷಿ ಅಪ್ಪತ್ತರಾಯರೂ, ಮಂಗಸೂಳಿ ರಾಮರಾಯರೂ ಇವರೇ ಮೊದಲಾದವರು ಚಳವಳ ಮಾಡಿ, ಸಂಸ್ಥಾನಗಳಲ್ಲಿ ಕನ್ನಡದ ಭಾಗವನ್ನು ಮಹಾರಾಷ್ಟ್ರ ವಿಶ್ವವಿದ್ಯಾಲಯಕ್ಕೆ ಸೇರಿಸದೇ, ಸದ್ಯಕ್ಕೆ ಮುಂಬಯಿ ವಿಶ್ವವಿದ್ಯಾಲಯದ ಆಡಳಿತದಲ್ಲಿರುವಂತೆ ಪ್ರಯತ್ನಿಸಬೇಕಾಗಿ ಆಗ್ರಹಪೂರ್ವಕವಾಗಿ ಪ್ರಾರ್ಥಿಸುತ್ತೇವೆ. ತಮ್ಮ ಸಂಸ್ಥಾನಗಳ ಪ್ರಜಾಪತಿಷತ್ತಿನವರಿಗೂ ಈ ಬಗ್ಗೆ ನಿಷೇಧಿಸಲು ಅವರು ಬರೆಯಬೇಕು. ಮಹಾರಾಷ್ಟ್ರ ವಿಶ್ವವಿದ್ಯಾಲಯಕ್ಕೆ, ಮೇಲಿನ ಸಂಸ್ಥಾನಗಳನ್ನೆಲ್ಲ ಸೇರಿಸಿದ್ದು, ಔಂದ, ರಾಮದುರ್ಗ, ಸವಣೂರು, ಜತ್ತಗಳನ್ನೇಕೆ ಸೇರಿಸಿಲ್ಲವೋ ತಿಳಿಯದು. ಕರ್ನಾಟಕದ ಪ್ರತಿನಿಧಿಗಳಾಗಿ, ಈ ವರದಿಗೆ ರುಜು ಹಾಕಿದ ಶ್ರೀ ಲಕ್ಕೇಯವರು ಇದರ ಕಾರಣವನ್ನೂ, ಸಂಸ್ಥಾನಗಳ ಕನ್ನಡ ಭಾಗವನ್ನು ಈ ವಿದ್ಯಾಲಯಕ್ಕೆ ಸೇರಿಸಲು ತಾವು ಹೇಗೆ ಸಮ್ಮತಿ ಕೊಟ್ಟರೆಂಬುದನ್ನೂ ಪ್ರಸಿದ್ಧಿಸುವರೋ?

ರಂಗಭೂಮಿ

ಈ ಮಾಸಪತ್ರಿಕೆಯು ಜನಕನ ಹಬ್ಬದ ಸಮಹೂರ್ತದಲ್ಲಿ ಹುಟ್ಟಿದೆ. ಗದಗಿನ ದತ್ತಾತ್ರೇಯ ನಾಟಕ ಮಂಡಳದ ಆಶ್ರಯದಿಂದ ಸಾಗತಕ್ಕದ್ದು. ವಿಮರ್ಶೆಯನ್ನು ಮುಂದಿನ ಸಂಚಿಕೆಯಲ್ಲಿ ಕೊಡುವೆವು. ಇದರ ಕಾರ್ಯಾಲಯವು ಬೆಂಗಳೂರ ಬಸವನಗುಡಿ ಬೀದಿಯಲ್ಲಿದೆ.

(೬ ನೇ ಪಾನಿನಿಂದ ಬಂದಿದ್ದು.)

ಇತರ ಗಡಿನಾಡಿನವರು ಆಂಧ್ರಪ್ರಾಂತದ ಮೇಲೆ ಇಷ್ಟು ಅಭಿಮಾನವನ್ನು ತಾಳಿರುವದು. ಅಚ್ಚ ಕನ್ನಡ ಸೀಮೆಯಾದ ಬಳ್ಳಾರಿಯಲ್ಲಿ ಈ ರೀತಿಯಾಗಿ ಕೆಲವರು ಆಂಧ್ರದೇಶಕ್ಕೆ ಸೇರಬೇಕೆಂದಿರುವದು— ಕರ್ನಾಟಕವನ್ನು ಮರೆಯುವದು– ಇತರ ಕರ್ನಾಟರು "ಅಯ್ಯೋ ನೀವು ನಮ್ಮವರಯ್ಯಾ ಆಂಧ್ರರಲ್ಲ" ಎಂಬೀ ಸುಲಭ ಪಾಠವನ್ನು ಪತ್ರಿಕೆಗಳಲ್ಲೆಲ್ಲಿಯೂ ಒತ್ತಿಒತ್ತಿ ಹೇಳುವದು. ನೋಡಿದರೆ ನಗೆಯೆಂಬದು ಹೋಗಿ ಅಳುವು ಬರುವದು. ಇದು ಕರ್ನಾಟಕಕ್ಕೆ ಶ್ರೇಯಸ್ಕರವಲ್ಲ. ಕರ್ನಾಟಕದ ಮುಖಂಡರು ಬೇರೆನೂ ಮಾಡದಿದ್ದರೂ, ತಮ್ಮ ಪ್ರಾಂತದ ಎಲ್ಲ ಭಾಗಗಳಲ್ಲೂ ಪ್ರವಾಸಮಾಡಿ ಕರ್ನಾಟಕದ ವ್ಯಾಪ್ತಿಯನ್ನೂ ಭೂವಿವರಣೆಯನ್ನೂ ಗೊತ್ತು ಮಾಡಿಕೊಳ್ಳಬೇಕಾದ ಅವಶ್ಯವಿದೆ. ಅನಂತರ ಎಲ್ಲ ಭಾಗಗಳ ವಿಶೇಷ ವಿಚಾರಗಳನ್ನೂ ಸುಖದುಃಖಗಳನ್ನೂ ತಿಳಿದುಕೊಳ್ಳಬೇಕು. ಹೀಗಾಗದಿದ್ದರೆ ಇಂದು ಬಳ್ಳಾರಿಯು ನಾಳೆ ಮತ್ತೊಂದು ಸ್ಥಳವು ಅನ್ಯರ ವಶವಾಗಿ ಆದರಿಂದ ಕರ್ನಾಟಕ ಮಾತೆಯು ಭೂಷಣ ರಹಿತಳಾಗಿ ಕುರೂಪಿಯಾಗುವಳು. ಆಮೇಲೆ ಈ ಬಡ ಮಾತೆಯನ್ನು ಕಂಡು ಎಲ್ಲರೂ ಅಸಡ್ಡೆಯನ್ನು ತೋರುವರು. ಜೋಕೆ. !!

—ಕುಂಟರ ಚಳ್ಳಿ

ದಕ್ಷಿಣ ಕನ್ನಡ ಜಿಲ್ಲೆಯೂ ಕರ್ನಾಟಕ ಏಕೀಕರಣವೂ

(ಲೇ ;— ರಂಗರಾವ. ರಾ. ಕಾಂಬೀರಕರ)
ದಕ್ಕನ್ ಕಾಲೇಜ ಪುಣೆ

'ಕನ್ನಡಿಗ' ನ ಶ್ರಾ. ಶು. ೧೧ ನೇಯ ಸಂಚಿಕೆಯಲ್ಲಿ 'ದಕ್ಷಿಣ ಕನ್ನಡದ ಮನಸ್ಸು' ಎಂಬುದನ್ನು ಬರೆದ ಶ್ರೀ. ಮುಕುಂದರಾಯರು ಕರ್ನಾಟಕ ಏಕೀಕರಣಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರೋತ್ಸಾಹವು ಸಿಗಲಾರದೆಂದೂ, ಮಾತ್ರವಲ್ಲ ಬಹು ಮತವು ಅದಕ್ಕೆ ವಿರೋಧವಿರುವುದೆಂದೂ ತಮ್ಮ ಅಭಿಪ್ರಾಯವನ್ನು ಸೂಚಿಸುತ್ತಾರೆ. ಶ್ರೀ. ಮುಕುಂದರಾಯರು ಇದ್ದಂತೆ ಇದ್ದ ಸ್ಥಿತಿಯನ್ನು ಕಣ್ಣಿನ ಮುಂದೆ ಇಟ್ಟು ಫಲವಿಲ್ಲ. ಆದರೆ ಕೈಕೊಂಡ ಕೆಲಸಕ್ಕೆ ಅಡ್ಡ ಬರುವ ವಿಘ್ನಗಳನ್ನು ಬಿಟ್ಟು ಬಿಡುವದು ಮನುಷ್ಯ ಲಕ್ಷಣವಲ್ಲವೆಂಬುದನ್ನು ಮಾತ್ರ ಮುಕುಂದರಾಯರು ಮರೆತಂತೆ ಕಾಣುತ್ತದೆ.

ಮುಕುಂದರಾಯರು ದಕ್ಷಿಣ ಕನ್ನಡದಲ್ಲಿ ಕರ್ನಾಟಕಾಭಿಮಾನವು ತಿಲಮಾತ್ರವೂ ಇಲ್ಲವೆಂದು ಹೇಳುತ್ತಾರೆ. ಆದರೆ, ಅವರು ಇಷ್ಟರಲ್ಲಿಯೇ ತೃಪ್ತರಾಗಿದ್ದಾರೆಯೇ ಹೊರತು ಇದರ ಕಾರಣವೇನೆಂಬುದನ್ನು ವಿಚಾರಿಸಲು ಏನೂ ಪ್ರಯತ್ನ ಪಟ್ಟಂತೆ ತೋರುವದಿಲ್ಲ. ಶ್ರೀ. ಮುಕುಂದರಾಯರು ಕರ್ನಾಟಕದ ರಾಜಕೀಯ ವಿಚಾರಗಳಲ್ಲಿ ನೊಕ್ಕ ಕಾಲಿಟ್ಟಂತೆ ಕಾಣುತ್ತದೆ. ನಾಲ್ಕೈದು ವರ್ಷಗಳ ಪೂರ್ವದಲ್ಲಿ ಕರ್ನಾಟಕ ಏಕೀಕರಣದ ಬಗ್ಗೆ ವಿಶೇಷವಾದ ಚಳವಳವು ಈಗ ಈ ವಿಷಯದಲ್ಲಿ ಮುಂದಾಳುಗಳಿಂದ ಧಾರವಾಡ ವಿಜಾಪುರ ಜಿಲ್ಲೆಗಳಲ್ಲಿ ಕೂಡ ಇದ್ದಿಲ್ಲವೆಂಬುದು ಮುಕುಂದರಾಯರಿಗೆ ಗೊತ್ತಿಲ್ಲದ ಸಂಗತಿಯಾಗಿದೆ. ಕರ್ನಾಟಕದ ಇತರ ಭಾಗಗಳಿಂದ ಬೇರ್ಪಡಿಸಲ್ಪಟ್ಟು, ಕರ್ನಾಟಕದ ಇತರ ಭಾಗಗಳೊಡನೆ ಯಾವ ತರದ ಸಂಬಂಧವೂ ಇಲ್ಲದೆ, ತನ್ನ ಹಿರಿಮೆಯನ್ನು ಅಗಲಿದ ಕುರಿಯಂತಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಅಖಿಲ ಕರ್ನಾಟಕದ ಕಲ್ಪನೆಯು ಇಲ್ಲದಿರುವುದು ಆಶ್ಚರ್ಯವಲ್ಲ. ಕೊಡಗು, ಬಳ್ಳಾರಿ ಜಿಲ್ಲೆಗಳೂ ಮೇಲೆ ಹೇಳಿದ ಕಾರಣಗಳಿಂದ ಇದೇ ಸ್ಥಿತಿಯಲ್ಲಿವೆ

ಇಷ್ಟರ ಮೇಲೂ ಮುಕುಂದರಾಯರು ಧೈರ್ಯಗುಂದಲು ಕಾರಣವೇನೂ ತಿಳಿಯದಾಗಿದೆ. ದಕ್ಷಿಣ ಕನ್ನಡದವರಿಗೆ ಮದರಾಸ ಸಂಸ್ಥಾನವು ಉಳಿದ ತಮಿಳು ಇತರ ಜಿಲ್ಲೆಗಳಿಗೆ ಕೊಡುವಷ್ಟು ಗಮನವನ್ನು ಮದರಾಸ ಸರಕಾರವು ದಕ್ಷಿಣ ಕನ್ನಡಕ್ಕೆ ಕೊಡದಿರುವದು ಜಿಲ್ಲೆಯಲ್ಲಿ ಎಲ್ಲರಿಗೂ ಗೊತ್ತಿದ್ದ ಸಂಗತಿಯು. ತಮಿಳು, ಮಳೆಯಾಳಿ, ಮುಂತಾದ ಅನ್ಯಜನರೊಡನೆ ಸಿಲುಕಿ ದಕ್ಷಿಣ ಕನ್ನಡಕ್ಕೆ ಮದರಾಸ ಸಂಸ್ಥಾನದಲ್ಲಿ ಅಸ್ತಿತ್ವವೇ ಇಲ್ಲದಂತಾಗಿದೆ. ಅಂದ ಬಳಿಕ ದಕ್ಷಿಣ ಕನ್ನಡವು ಮದರಾಸದಿಂದ ಹೊರಕ್ಕೆ ಹೋಗಲು ಯಾಕೆ ಸಮ್ಮತಿಸಲೊಲ್ಲದು? ತಳಿನಾಡು ಮದ್ರಾಸಿನಲ್ಲಿ ಸೆರೆಯಾದ ದಕ್ಷಿಣ ಕನ್ನಡದ ವಕೀಲರು ಸ್ವೈಕೊಳ್ಳದ ಹೀರೆಯವಾಗುವ ವಿಷಯದಲ್ಲಿ ಮೂಗು ಮುರಿಯಲಿಕ್ಕೆ ಸಾಕು ಎಂದು ಮುಕುಂದರಾಯರು ಅನ್ನುತ್ತಾರೆ. ಆದರೆ ಮದರಾಸ ದಕ್ಷಿಣ ಕನ್ನಡದ ವಕೀಲವರ್ಗವನ್ನು ಇದೇ ಜಿಲ್ಲೆಯ ಮತವೋ? ದಕ್ಷಿಣ ಕನ್ನಡದ ಜನರೆಲ್ಲ ಮದರಾಸದಲ್ಲಿ ಸೆರೆಯಾದ ತಮ್ಮ ವಕೀಲರಿಂದ ನಡೆಸಲ್ಪಡುವ ಯಂತ್ರಗಳೇನು?

ತಾವು ಹೇಳುವ ಆಕ್ಷೇಪಣೆಗಳು ಪ್ರಬಲವಾಗಿಲ್ಲವೆಂದು ಮುಕುಂದರಾಯರು ತಾವೇ ಅನ್ನುತ್ತಾರೆ. ಹಾಗಿದ್ದರೆ ಇವುಗಳಿಂದ ಧೈರ್ಯಗುಂದುವುದು ಉಚಿತವೋ? ಕರ್ನಾಟಕಾಭಿಮಾನವು ಇಲ್ಲದಿದ್ದರೂ ದಕ್ಷಿಣ ಕನ್ನಡ ಜಿಲ್ಲೆಯು ಸ್ವಭಾಷೆಯನ್ನು ತೊರೆದಿಲ್ಲ. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರೂ ಈ ವರ್ಷದ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ, ಯಾವ ಜಿಲ್ಲೆಗೆ ಸೇರಿರುವರೋ ಆ ಜಿಲ್ಲೆಯು ಕರ್ನಾಟಕದ ಇತರ ಭಾಗಗಳೊಡನೆ ಒಟ್ಟು ಸೇರಲು ಸಮ್ಮತಿಸುವದಿಲ್ಲವೆಂದರೆ ನಂಬಲಾರದ ಮಾತೇ ಸರಿ. ಕನ್ನಡ ನಾಟಕಗಳಿಗೆ ದಕ್ಷಿಣ ಕನ್ನಡದಲ್ಲಿ ಸಿಗುವಷ್ಟು ಪ್ರೋತ್ಸಾಹವು ಇನ್ನೆಲ್ಲಿಯೂ ಸಿಗುವದಿಲ್ಲವೆಂದು ಕರ್ನಾಟಕ ನಾಟಕಾಲಂಕಾರ ಗರುಡ ಸದಾಶಿವರಾಯರೇ ಅಭಿಪ್ರಾಯ ಪಟ್ಟಿದ್ದಾರೆ. ಬಳ್ಳಾರಿಯ ಮೇಲೆ ಸರಕಾರವು ತೆಲುಗನ್ನು ಹೊರಿಸಿದ ಮೇಲೆ ಮದರಾಸ ಸಂಸ್ಥಾನದಲ್ಲಿ ಕನ್ನಡ ಭಾಷೆಯ ಹೆಸರನ್ನು ಉಳಿಸಿದುದು ದಕ್ಷಿಣ ಕನ್ನಡವೊಂದೇ.

ಈ ಕಡೆಯ ಕರ್ನಾಟಕ ಏಕೀಕರಣ ಸಭೆಯು ಮುಂದಾಳುಗಳಿಗೆ ಒಂದು ವಿಜ್ಞಾಪನೆ. ಬಗಲಿ ದಾರಿಗಗನ ನಂತೆ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತವನ್ನು ಬೇಡಿಕಿಸಲು ಪ್ರಯತ್ನಿಸುವ ಹೊರತು ಮದರಾಸ, ಮುಂಬಯಿ, ಕೊಡಗು ಈ ಮೂರು ಪ್ರಾಂತಗಳಿಗೆ ಒಳಪಟ್ಟ ಕನ್ನಡ ಭಾಗಗಳೆಲ್ಲ ಒಂದೇ ಪ್ರಾಂತಕ್ಕೆ ಸೇರುವಂತೆ ಚಳವಳಿಯನ್ನು ನಡಿಸಬೇಕು. ಬ್ರಿಟಿಶ ಕರ್ನಾಟಕವು ಒಟ್ಟು ಆರೇಳು ಜಿಲ್ಲೆಗಳ ವಿಸ್ತೀರ್ಣ ಮಾತ್ರವಿರುವದರಿಂದ ಪ್ರತ್ಯೇಕ ಪ್ರಾಂತದ ಬಯಕೆಯು ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಅಸಾಧ್ಯವೆಂದರೆ ಅತಿಶಯೋಕ್ತಿಯಾಗದು. ಆದುದರಿಂದ ಸದ್ಯಸ್ಥಿತಿಯಲ್ಲಿ ಭಿನ್ನವಾದ ಬ್ರಿಟಿಷ ಕರ್ನಾಟಕವನ್ನು ಮುಂಬಯಿ ಪ್ರಾಂತದಲ್ಲಿ ಏಕೀಕರಿಸುವುದು ಯೋಗ್ಯವಾಗಿದೆ. ಆರೇಳು ಕನ್ನಡ ಜಿಲ್ಲೆಗಳು ಒಂದು ಪ್ರಾಂತದಲ್ಲಿ ಇವೆಯೆಂದರೆ ಕನ್ನಡಿಗರನ್ನು ಈಗ ಮದರಾಸ ಸಂಸ್ಥಾನವು ಕಾಣುವಂತೆ ಮಲತಾಯಿಯ ಪಾರ್ಶ್ವದಲ್ಲಿ ಕಾಣಲು ಸಾಧ್ಯವಿಲ್ಲ. ಕರ್ನಾಟಕ ಮುಖಂಡರು ಈ ಕೆಲಸವನ್ನು ಶೀಘ್ರದಲ್ಲಿಯೇ ಕೈಕೊಳ್ಳಬೇಕಾಗಿ ಪ್ರಾರ್ಥನೆ. ಮತ್ತೊಂದು ಸಂಗತಿಯೇನೆಂದರೆ ಬಳ್ಳಾರಿಯ ವಿಷಯದಲ್ಲಿ ಕನ್ನಡಿಗರು ಇಷ್ಟು ಕಳಕಳಿಯನ್ನು ತೋರಿಸುವಾಗ ನೆರೆ ಜಿಲ್ಲೆಯಾದ ಅನಂತಪುರದ ಕೆಲಭಾಗವು ಶುದ್ಧ ಕನ್ನಡವೆಂಬುವದನ್ನು ಮರೆತಿರುತ್ತಾರೆ. ಬಳ್ಳಾರಿ ಜಿಲ್ಲೆಯನ್ನು ಆಂಧ್ರರಿಗೆ ಕೊಡತಾಗದಂತೆ ಯತ್ನಿಸುವಾಗ ನಮ್ಮ ಕೈ ತಪ್ಪಿ ಹೋಗಿರುವ ಅನಂತಪುರ ಜಿಲ್ಲೆಯ ಹಿಂದುಪುರ, ಪೆನುಕೊಂಡ, ಮಡಕಶಿರ ಈ ತಾಲೂಕುಗಳು ಪುನಃ ಕರ್ನಾಟಕಕ್ಕೆ ಬರುವಂತೆ ಮಾಡುವದು ಕನ್ನಡಿಗರ ಮುಖ್ಯ ಕರ್ತವ್ಯವಾಗಿದೆ. ಇಷ್ಟರ ವರೆಗೆ ನಾಲ್ಕು ಕಡೆಯಿಂದ ಕರ್ನಾಟಕವು ಸಂಕೋಚವಾಗುತ್ತ ಬಂದಿದೆ. ನವಜಾಗ್ರತಿಯು ಉಂಟಾದ ಮೇಲೆಯೂ ತೆಲುಗರ ಬಾಯಿಗೆ ತುತ್ತಾದ ಈ ಮೂರು ಕನ್ನಡ ತಾಲೂಕುಗಳ ಕಡೆಗೆ ಯಾರೂ ಲಕ್ಷ್ಯಕೊಡದಿರುವದು ಶೋಚನೀಯವಾಗಿದೆ. ಕನ್ನಡ ಮಾತೆಯು ಮುದ್ದು ಮಕ್ಕಳಾದ ಮುದವೀಡು ಕೃಷ್ಣರಾಯರು ಮತ್ತು ಮುಗಳವೇಡೆ ಶ್ರೀನಿವಾಸರಾಯರು ಮೊದಲಾದವರು ಈ ಕಡೆಗಳಲ್ಲಿ ಹೋಗಿ, ಅನ್ಯ ಸಂಸ್ಕೃತಿಯಿಂದ ಸುತ್ತುಗಟ್ಟಿ ತಾವು ಕನ್ನಡಿಗರೆಂಬುದನ್ನು ಕೂಡ ಮರೆತಿರುವ ಈ ಜನರಿಗೆ ಕರ್ನಾಟಕದ ಅರಿವನ್ನು ಕೊಟ್ಟು, ತಾವು ಯಾರು ತಮ್ಮ ಹೆಸರೇನು ಎಂಬುದನ್ನು ವಿವರದ ಮಾಡಿಸಿದರೆ, ಆಂಧ್ರರ ಈಗಿನ ಚಟಗಳಿಕ್ಕೆ ತಕ್ಕ ಪ್ರತ್ಯುತ್ತರವನ್ನು ಕೊಟ್ಟಂತೆ ಆಗುವದು. ಈ ಸೂಚನೆ ಕರ್ನಾಟಕ ನಾಟಕಾಲಂಕಾರ ಗರುಡ ಸದಾಶಿವರಾಯರಿಗೆ

ಒಂದು ವಿಜ್ಞಾಪನೆ. ದೇಶ ಸೇವೆಗಾಗಿ ಬದ್ಧ ಕಂಕಣರಾದ ಇವರು ತಮ್ಮ ನಾಟಕಗಳನ್ನು ಆಂಧ್ರ ಉಪಟಳಕ್ಕೆ ಸಿಕ್ಕಿದ ಬಳ್ಳಾರಿ ಜಿಲ್ಲೆಯಲ್ಲಿಯೂ ಅನಂತಪುರದ ಈ ಮೂರು ತಾಲೂಕುಗಳಲ್ಲಿಯೂ ಆಡಿ ತೋರಿಸಿದರೆ ಕನ್ನಡ ನಾಡಿಗೆ ಬಹಳೇ ಸೇವೆ ಮಾಡಿದಂತಾಗುವದು. ಇಂತಹ ನಾಟಕಗಳನ್ನು ನೋಡಿದರೆಂದರೆ ಜನರಿಗೆ ಕನ್ನಡ ಭಾಷೆಯ ಸವಿಯು ತಿಳಿಯುವದು, ಭಾಷಾಪ್ರೇಮವು ಹುಟ್ಟುವದು; ಮತ್ತು ಏಕೀಕರಣದ ಇಚ್ಛೆಯು ಸ್ವತೀವ ಉದ್ಭವಿಸುವದು. ಇಂತಹ ಕರ್ನಾಟಕಕ್ಕೆ ಒದಗಿದ ಆಪತ್ಕಾಲದಲ್ಲಿ ಶ್ರೀ. ಗರುಡ ಸದಾಶಿವರಾಯರು ತಮ್ಮಿಂದ ಆಗುವಷ್ಟು ಜನಸೇವೆಯನ್ನು ಮಾಡದೆ ಇರರು ಎಂದು ದೃಢವಾಗಿ ನಂಬುತ್ತೇವೆ.

ಸುರುಮಾಡಿದ ಸಂಗತಿಯಿಂದ ಬಹಳ ದೂರ ನಡೆದೆವು. ಕರ್ನಾಟಕದ ಮುಂದಾಳುಗಳಿಗೆ ನಮ್ಮ ಬುದ್ಧಿಗೆ ಯೋಗ್ಯವೆಂದು ತೋರಿದ ಕೆಲವು ಸೂಚನೆಗಳನ್ನು ಕೊಟ್ಟೆವು. ಯೋಗ್ಯವೆಂದು ಕಂಡರೆ ಅವರು ಅವನ್ನು ಸ್ವೀಕರಿಸಲಿ. ಇಲ್ಲವಾದರೆ ಬಿಡಲಿ. ಮೊಟ್ಟ ಮೊದಲು ಬ್ರಿಟಿಷ ಕರ್ನಾಟಕವನ್ನೆಲ್ಲ ಮುಂಬೈಪ್ರಾಂತಕ್ಕೆ ಕೂಡಿಸುವಂತೆ ಪ್ರಯತ್ನಿಸಬೇಕೆಂದು ನಾವು ಮೇಲೆ ಸೂಚಿಸಿದ್ದೇವೆ. ಇದಕ್ಕೆ ದಕ್ಷಿಣ ಕನ್ನಡ ಜಿಲ್ಲೆಯು ವಿರೋಧಿಸದೆಂದು ನಮಗೆ ನಿಶ್ಚಯವಿದೆ. ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧವು ಮದರಾಸಿಗಿಂತ ಹೆಚ್ಚು ಮುಂಬಯಿಯ ಕೂಡ ಇದೆ. ಮುಂಬಯಿಯಲ್ಲಿ ಕಡಿಮೆಯೆಂದರೆ ಐದು ಆರು ಸಾವಿರ ದಕ್ಷಿಣ ಕನ್ನಡಿಗರು ಇರುವರು. ಮುಂಬಯಿಯಲ್ಲಿ 'ಕರ್ನಾಟಕ ಎಸೋಸಿಯೇಶನ್', 'ಕರ್ನಾಟಕ ಪ್ರಾದಿ ಸಮಿತಿ' ಇತ್ಯಾದಿ ಸಂಘಗಳು ಬಹುತರ ದಕ್ಷಿಣ ಕನ್ನಡದವರಿಂದಲೇ ಸ್ಥಾಪಿತವಾದುವು. ಮದರಾಸದಲ್ಲಿ ವಕೀಲರ ಮತ್ತು ಪತ್ರಿಂಟು ಸರಕಾರೀ ನೌಕರರ ಹೊರತು ದಕ್ಷಿಣ ಕನ್ನಡದವರು ಇನ್ನಾರೂ ಇಲ್ಲ. ಪ್ರತಿ ಹಳ್ಳಿಯಲ್ಲಿಯೂ ಮುಂಬಯಿಯ ವಿಷಯ ಗೊತ್ತಿದ್ದಷ್ಟು ಮದರಾಸಿನ ವಿಷಯ ಗೊತ್ತಿಲ್ಲ. ಹೀಗಿರುವಾಗ ದಕ್ಷಿಣ ಕನ್ನಡವು ಏಕೀಕರಣಕ್ಕೆ ಎಂದೂ ವಿಮುಖವಾಗಲಿಕ್ಕಿಲ್ಲ. ಅದಲ್ಲದೆ ಕನ್ನಡ ಜಿಲ್ಲೆಯ ಉತ್ತರ ಭಾಗವು ಈಗ ಮುಂಬಯಿ ಪ್ರಾಂತಕ್ಕಧೀನವಾಗಿದೆ. ಈ ಎರಡು ಜಿಲ್ಲೆಗಳು ಪುನಃ ಒಂದಾಗಬೇಕಾದರೆ ಇದರ ಹೊರತು ಬೇರೆ ದಾರಿಯಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಜನರು ಈ ವರೆಗೆ ಗಾಢ ನಿದ್ರೆಯಲ್ಲಿರುವರೇ ಹೊರತು ವಿಮುಖರಾಗಿಲ್ಲ. ಕಾಂಗ್ರೆಸ್ಸಿನವರು ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತವನ್ನು ಕೊಟ್ಟ ಮೇಲೆ ಜಾಗ್ರತಿಯು ಇಲ್ಲೂ ಉಂಟಾಗಿದೆ. ಧಾರವಾಡದಲ್ಲಿ ಕೆಲವು ವರ್ಷಗಳ ಮುಂಚೆ ಕರ್ನಾಟಕ ಪರಿಷತ್ತನ್ನು ಕೂಡಿಸಿದಾಗ, ಎರಡನೇಯ ಪರಿಷತ್ತಿಗೆ ಮಂಗಳೂರವರು ಆಮಂತ್ರಣವನ್ನು ಕೊಟ್ಟಿದ್ದರೂ ಕಾಂಗ್ರೆಸ್ಸಿಗಧೀನವಾದ ಪ್ರಥಮ ಕರ್ನಾಟಕ ಪರಿಷತ್ತು ಮಂಗಳೂರಲ್ಲೇ ಜರಗಿತ್ತು. ವಿದ್ಯಾರ್ಥಿಗಳಿಗೆ ಈ ವಿಷಯದಲ್ಲಿ ಏನೂ ಆತುರವಿಲ್ಲವೆಂದು ಶ್ರೀ. ಮುಕುಂದರಾಯರು ಬರೆಯುತ್ತಾರೆ. ನಾವು ನಮ್ಮ ಜಿಲ್ಲೆಯನ್ನು ಬಿಡುವ ತನಕ ಸ್ಥಿತಿಯು ಮುಕುಂದರಾಯರು ಬರೆದಂತೆ ಇತ್ತು. ಆದರೆ ಈಗ ಅದು ಬದಲಾಗಿದೆ ಎಂದು ತಿಳಿಯಬೇಕಾಗಿದೆ. ವಯೋವೃದ್ಧರಾದ ಶ್ರೀ ಮುಕುಂದರಾಯರು ಕರ್ನಾಟಕದ ವಿಷಯ ಇಷ್ಟು ಅಭಿಮಾನವನ್ನು ತಾಳಿರುವದು, ಮನೆ ಬಿಟ್ಟು ದೂರ ಹೋದ ನಮ್ಮಂತಹ ದಕ್ಷಿಣ ಕನ್ನಡಿಗರಿಗೆ ಬಹಳ ಸಂತೋಷದ ಸಂಗತಿಯು. ಕರ್ನಾಟಕದ ಸುಪುತ್ರರಾದ ಶ್ರೀ. ಮುಕುಂದರಾಯರು ಹಾಡಿಸುತ್ತಿರುವ ಕಲ್ಲು ಮುಳ್ಳುಗಳಿಂದ ವ್ಯಾಪ್ತವಾಗಿರುವ ಈ ತರದ ಸ್ಥಿತಿಯಾದ್ಯಂತವಾದ ಅಭಿಮಾನವು ಒರೆಯು ವದಕಿಂತ ದಕ್ಷಿಣ ಕನ್ನಡದ ಶಿಕ್ಷಿತರಲ್ಲಿ ಜಾಗ್ರತಿಯುಂಟಾಗಲು ಪ್ರಯತ್ನಿಸಿ, ಕನ್ನಡ ಮಾತೆಯ ಸೇವೆಯಲ್ಲಿ ದಕ್ಷಿಣ ಕನ್ನಡವು ತನ್ನ ಭಾಗವನ್ನು ಉತ್ತಮ ರೀತಿಯಿಂದ ಕೈಕೊಳ್ಳುವಂತೆ ಮಾಡಲು ಬದ್ಧಕಂಕಣರಾದರೆ, ಅವರೂ ಧನ್ಯ; ಅವರಿಗೆ ಜನ್ಮ ಕೊಟ್ಟ ದಕ್ಷಿಣ ಕನ್ನಡ ಜಿಲ್ಲೆಯೂ ಧನ್ಯ.

ಟಿಪ್ಪಣಿ:— ಕರ್ನಾಟಕದ ಏಕೀಕರಣದ ವಿಷಯದಲ್ಲಿ ನಿಷ್ಠೆಯುಳ್ಳವರು ಹೆಚ್ಚಾಗಿ ದಕ್ಷಿಣಕನ್ನಡದಲ್ಲಿಯ ಪರಿಸ್ಥಿತಿಯ ಬಗ್ಗೆ ಬರೆದರು. 'ಕನ್ನಡಿಗ'ನು ಆ ಲೇಖಗಳಿಗೆ ಮೊದಲು ಇಂಬುಗೊಡುವನು. ಶ್ರೀಯುತರಾದ ಮುಕುಂದರಾಯರೂ ರಂಗರಾಯರೂ ನಿಸ್ಸೀಮ ಕರ್ನಾಟಕಾಭಿಮಾನಿಗಳು. ಆದರೆ ಅವರಲಿದ್ದ ಸಾತ್ವಿಕ ಮತಭೇದದ ಚರ್ಚೆಯಾಗುವದು ಏಕೀಕರಣಕ್ಕೆ ಅವಶ್ಯವಾದುದು. ಆದುದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯ ವಿಚಾರ ಶೀಲರು ಈ ಬಗ್ಗೆ ತಮ್ಮ ತಮ್ಮ ಮತಗಳನ್ನು ಮಂಡಿಸಬೇಕಾಗಿ ಬಿನ್ನಹ. ಇನ್ನು ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತವನ್ನು ದೊರಕಿಸುವ ಪ್ರಯತ್ನವು ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಅಸಾಧ್ಯವೆಂಬದಾಗಿ ಶ್ರೀ ರಂಗರಾಯರು ಬರೆದು, ಮದ್ರಾಸ ಅಧಿಸತ್ತೆಯಲ್ಲಿಯ ಕನ್ನಡ ಭಾಗವನ್ನು ಮುಂಬಯಿ ಪ್ರಾಂತಕ್ಕೆ ಸೇರಿಸಬೇಕಾಗಿ ಸೂಚಿಸಿದ್ದಾರೆ. ಆದರೆ ಇದು ಸರಿಯಲ್ಲ. ಯಾಕಂದರೆ:— (೧) ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವು ದೊರೆತರೆ ಮಾತ್ರ ನಮ್ಮ ಸಂಸ್ಕೃತಿಗೆ ವಿಕಾಸ ದೊರೆಯಲು ಅನುವಾಗುವದು. ಮುಂಬೈ ಪ್ರಾಂತಕ್ಕೆ ಕರ್ನಾಟಕದ ಎಲ್ಲ ಭಾಗವನ್ನು ಸೇರಿಸಿದರೆ, ಕರ್ನಾಟಕಕ್ಕೆ ಸ್ವತಂತ್ರ ಬಂದರವಾಗಲಿ, ಸ್ವತಂತ್ರ ರೀತಿಯಿಂದ ರಾಜ್ಯವಾದಳಿತೆಯಲ್ಲಿ ಭಾಗತೆಗೆದುಕೊಳ್ಳುವದಾಗಲಿ, ಸ್ವತಂತ್ರ ವಿಶ್ವವಿದ್ಯಾಲಯವಾಗಲಿ, ಹಾಯಕೋರ್ಟಾಗಲಿ, ರಾಜಧಾನಿಯಾಗಲಿ ದೊರೆಯವು. (೨) ಪ್ರತಿಕ್ಷಣದಲ್ಲಿಯೂ ಕರ್ನಾಟಕಸ್ಥರು, ಅದರಲ್ಲಿಯೂ ಕರ್ನಾಟಕದ ತೀರ ದಕ್ಷಿಣದ ಬ್ರಿಟಿಶ್ ಕರ್ನಾಟಕದ ಭಾಗಗಳಾದ ಕೊಯಿಮುತ್ತೂರು, ಸೇಲಂ, ನೀಲಗಿರಿ, ಕೊಡಗು ಮೊದಲಾದ ಭಾಗದವರು, ಬಹು ದೂರದ ಮತ್ತು ಅನ್ಯ ಭಾಷೆಗೆ ಎಡೆಗೊಟ್ಟ ರಾಜಧಾನಿಯಾದ ಮುಂಬೈ ಕಡೆಗೆ ನಿರಾಶೆಯಿಂದ ನೋಡಬೇಕಾಗುವದು (೩) ಮುಂಬೈ ಪ್ರಾಂತಕ್ಕೆ ಕರ್ನಾಟಕದ ಎಲ್ಲಭಾಗಗಳನ್ನು ಸೇರಿಸಬೇಕಾದರೆ ಮೊದಲು ಕರ್ನಾಟಕಸ್ಥರಲ್ಲಿಯೇ ಆ ಬಗ್ಗೆ ಜಾಜ್ವಲ್ಯವಾದ ಜಾಗೃತಿಬೇಕಷ್ಟೇ? ಈ ಬಗೆಯ ಜಾಗೃತಿಯು ಜನಿತವಾದ ಮೇಲೆ, ಮುಂಬೈ, ಮದ್ರಾಸ, ಕೊಡಗು ಕಾಯದೆಮಂಡಲಗಳಲ್ಲಿ ಈ ಬಗ್ಗೆ ಗೊತ್ತುವಳಿಗಳನ್ನು ತರಬೇಕಾಗುವದು. ಹೀಗೆ ಜಾಗ್ರತವಾದಾಗ್ಗೆ ಮುಂಬೈ ಪ್ರಾಂತಕ್ಕೆ ಕರ್ನಾಟಕದ ಭಾಗವನ್ನು ಸೇರಿಸಬೇಕಾಗಿ ಪ್ರಯತ್ನ ಪಡುವದೆಂದರೆ, ಮುಂದಿಗೆಯು ದೊರೆಯುವಾಗ ಅದನ್ನು ಬಿಟ್ಟು ಹೋಳಿಗೆಯನ್ನು ಬಯಸಿದಂತೆ. ಮಾಂಟೇಗೂ ಚೆಮ್ಸಫರ್ಡರವರ ಸುಧಾರಣೆಯ ವರದಿಗೆ ಪ್ರತಿಯೊಂದು ಭಾಷೆಯವರಿಗೆ ಆ ಆ ಭಾಷೆಯವರು ಬೇಡಿದರೆ, ಸ್ವತಂತ್ರ ಪ್ರಾಂತವನ್ನು ಕೊಡಬೇಕಾಗಿ ಕಾನೂನುಗಳಲ್ಲಿ ಕಾಣಿಸಿದ್ದಾರೆ. ಆದುದರಿಂದ ಕರ್ನಾಟಕಸ್ಥರು ಕರ್ನಾಟಕದ ಏಕೀಕರಣದ ಬಗ್ಗೆ ಎಚ್ಚತ್ತದ್ದಾದರೆ ಸ್ವತಂತ್ರ ಪ್ರಾಂತವನ್ನೇ ಬೇಡಿ, ಆ ಸುಧಾರಣೆ ಕಾನೂನಿನ ಲಾಭಹೊಂದ ಬೇಕೆ ಹೊರ್ತಾಗಿ, ಅನ್ಯ ಭಾಷೆಯ ಸೊತ್ತಿನಲ್ಲಿದ್ದ ಬೇರೊಂದು ಪ್ರಾಂತದಲ್ಲಿ ಸೇರಿಕೊಳ್ಳುವದು ಸರಿಯಲ್ಲ. (೪) ಕರ್ನಾಟಕಕ್ಕೆ ಏಳೇ ಜಿಲ್ಲೆಗಳಾಗುವವೆಂದೂ ಆ ಕಾರಣಕ್ಕಾಗಿ ಸಣ್ಣ ಪ್ರಾಂತವಾಗುವದರಿಂದ ಪ್ರತ್ಯೇಕ ಪ್ರಾಂತವು ದೊರೆಯದೆಂದೂ ಶ್ರೀ. ರಂಗರಾಯರ ಭಾವನೆಯಿದೆ. ಆದರೆ ಬ್ರಿಟಿಶ ಕರ್ನಾಟಕದಲ್ಲಿ ೯ ಜಿಲ್ಲೆಗಳಿವೆ. (೧) ಧಾರವಾಡ (೨) ವಿಜಾಪೂರ (೩) ಬೆಳಗಾವಿ (೪) ಕಾರವಾರ (೫) ಮಂಗಳೂರ (೬) ಕೊಡಗು (೭) ನೀಲಗಿರಿ (೮) ಕೊಯಿಮುತ್ತೂರ ಮತ್ತು ಸೇಲಂಗಳಲ್ಲಿಯ ಕನ್ನಡ ಭಾಗ (೯) ಬಳ್ಳಾರಿ ಮತ್ತು ಅನಂತಪೂರಗಳಲ್ಲಿಯ ಕನ್ನಡ ಭಾಗ. ಈ ಜಿಲ್ಲೆಗಳಲ್ಲಿಯ ಒಟ್ಟು ಜನಸಂಖ್ಯೆಯು ಅಜಮಾಸ ೭೦ ಲಕ್ಷವಿರುವದು. ಅಂದರೆ ಬಿಹಾರ್ ರಾಷ್ಟ್ರದಕಿಂತ ಬ್ರಿಟಿಶ್ ಕರ್ನಾಟಕವು ೩ ಪಟ್ಟು ದೊಡ್ಡದಾಗುವದು. ಈಗಿದ್ದ ಆಸಾಮ ಪ್ರಾಂತದಷ್ಟಾಗುವದು. ಬ್ರಹ್ಮದೇಶ ಮತ್ತು ಮಧ್ಯ ಪ್ರಾಂತಗಳಿಗೆ ಸ್ವಲ್ಪ ಮಾತ್ರ ಕಿರಿದಾಗುವದು. ಬೆಲ್ಜಿಯಮ ದೇಶವನ್ನು ಬಿಟ್ಟು ...ಯುರೋಪದ ... ಸ್ವತಂತ್ರ ...ತಗ

ಆಗ ಸ್ವತಂತ್ರ ಪ್ರಾಂತವಿರುವದು ಶಕ್ಯವಿದೆಂದಮೇಲೆ ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವು ದೊರೆಯುವದೇಕೆ ಅಸಾಧ್ಯವು? (೫) ಕರ್ನಾಟಕಕ್ಕೆ ಪ್ರಾಕೃತಿಕ ಸ್ವರೂಪವೂ ನೈಸರ್ಗಿಕ ಸೌಕರ್ಯಗಳೂ ಆಸಾಮು ಮಧ್ಯಪ್ರಾಂತಗಳಕ್ಕಿಂತ ಶ್ರೇಷ್ಠತರವಾಗಿವೆ. ಇದರಿಂದ ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವು ದೊರೆತದ್ದಾದರೆ, ಕಾರವಾರ, ಬೆಳಗಾವಿ, ಮಂಗಳೂರ, ಕೊಡಗುಗಳಲ್ಲಿಯ ಕಾನನಗಳಿಂದಲೂ ನೀಲಗಿರಿ, ಕೊಡಗುಗಳಲ್ಲಿಯ ಕಾಫೀತೋಟಗಳಿಂದಲೂ, ಸ್ವತಂತ್ರ ಪ್ರಾಂತದ ಅಡಳಿತದಲ್ಲಿ ನೀರಿನ ಕಾಲುವೆಗಳನ್ನು ಪೂರೈಸಿಕೊಂಡು, ಉತ್ತರ ಕರ್ನಾಟಕದಲ್ಲಿಯ ಫಲದಾಯಕವಾದ ಭೂಮಿಗಳನ್ನೆಲ್ಲ ಸಾಗುವಳಿಮಾಡಿಕೊಳ್ಳುವದರಿಂದಲೂ, ಅನೇಕ ಬಗೆಯ ಹೊಸ ಹೊಸ ಸೋಶಿಗಳನ್ನು ಹುರಿದುಂಬಿದ ಕನ್ನಡಿಗರು ಹುಡುಕಿತೆಗೆದು ಔದ್ಯೋಗಿಕ ವಿಷಯದಲ್ಲಿ ಮುಂದಾಗಿ ಕರ್ನಾಟಕದ ಸಂಪದಭಿವೃದ್ಧಿಗೆ ತುಂಬಾ ಸಹಾಯವಾಗದಿರದು. ಅದೇ ಪ್ರಕಾರವಾಗಿ ಸ್ವತಂತ್ರ ಬಂದರವು ಸ್ಥಾಪನೆಯಾಗಲು ಕರ್ನಾಟಕದಲ್ಲಿ ತುಂಬಾ ಅನುಕೂಲವಿದೆ. ಇದರಿಂದಲೂ ಕರ್ನಾಟಕದ ಸಿರಿಯು ಹೆಚ್ಚಾಗುವದು. ಕರ್ನಾಟಕವು ಸಣ್ಣ ಪ್ರಾಂತವಾಗುವದರಿಂದ ತನ್ನ ವೆಚ್ಚವನ್ನು ತಾನೇ ಸಾಗಿಸಿಕೊಂಡು ಹೋಗುವದಿಲ್ಲವೆಂಬ ಭಯವು ಬಯಲಾಗುವದು. ಕರ್ನಾಟಕವು ತನ್ನ ಪ್ರಾಂತದ ವೆಚ್ಚವನ್ನು ತಾನು ನೀಗಿಸಿಕೊಳ್ಳುವದಲ್ಲದೇ ಅನ್ಯ ಪ್ರಾಂತಕ್ಕೆ ಸಹ ನೆರವಾಗುವಷ್ಟು ಸಂಪತ್ತನ್ನು ಸಂಪಾದಿಸಲು ಅವಕಾಶವಿದೆ. —ಸಂ. ಕ

ಬಾರು ಕೋಲು

ಬಳ್ಳಾರಿಯಲ್ಲಿ ವಾಸ ಮಾಡುವ ಕೆಲವು ಆಂಧ್ರರಿಗೆ ಕರ್ನಾಟಕವು ಕೃತಜ್ಞತೆಯನ್ನುಳ್ಳದ್ದಾಗಿದೆ. ಕೆಲವು ವರ್ಷಗಳ ಹಿಂದೆ ಬೆಳಗಾವಿನ ಮರಾಠಿಗಳಾಗಲಿ, ಬಳ್ಳಾರಿಯ ಆಂಧ್ರರಾಗಲಿ, ಮೈಸೂರಿನ ದ್ರಾವಿಡರಾಗಲಿ ಕರ್ನಾಟಕಕ್ಕೆ ಅಗೌರವವನ್ನು ತರುವಂತಹ ಕೆಲಸವನ್ನು ಮಾಡುತ್ತಿರಲಿದ್ದರೆ, ಇಂತಹ ಜಳವಳಿಯಾಗುತ್ತಿರಲಿಲ್ಲ. "ಕನ್ನಡಿಗ" ರೇ ನಿಮಗೆ ಅಭಿನಂದನವು. ಕರ್ನಾಟಕವು ಎಚ್ಚರಗೊಳ್ಳುತ್ತಲಿದೆ ಕನ್ನಡಿಗನ ಮೇಲೆ ಬಾರುಕೋಲನ್ನು ಬಾರಿ ಬಾರಿಗೂ ಬೀಸುತ್ತಿರುವ ನಮ್ಮ ಮಹಾರಾಷ್ಟ್ರ, ಆಂಧ್ರ ಮತ್ತು ದ್ರಾವಿಡ ಬಂಧುಗಳಿಗೆ ನಾವು ಅತ್ಯಂತ ಋಣಿಗಳು. ನಮ್ಮಲ್ಲಿ ಎಚ್ಚರವಿಲ್ಲದಿರುವದರಿಂದ ಈ ವರೆಗೆ ನಮ್ಮ ಮೇಲೆ ತಮ್ಮ ಬಾರುಕೋಲನ್ನು ಬೀಸುವುದು ಮಾತ್ರವಲ್ಲದೇ ತಮ್ಮ ಧ್ವಜವನ್ನು ನಮ್ಮ ಸೀಮೆಗಳ ಮೇಲೆ ಹಾರಿಸಿರುವರು. ಕರ್ನಾಟಕಾಂಧ್ರ ರಾಜ್ಯವಾದ ವಿಜಯ ನಗರವನ್ನೂ ಆಂಧ್ರರು ತಮಗೆ ಮಾತ್ರ ಸೇರಿದುದೆಂದು ಸಾರುತ್ತಿಲ್ಲವೇನು? ನಿಮ್ಮ ವಾಚಕರಿಗೆ ಆಂಧ್ರ ಪ್ರಾಕ್ತನಸಂಶೋಧಕರು ಮಾಡಿದ, ಮಾಡುತ್ತಿರುವ ವಿಶೇಷಗಳು ಗೊತ್ತಿಲ್ಲದಿರಬಹುದು. ಆ ಸಂಶೋಧನೆಗಳನ್ನು ನೋಡಿದರೆ ಕೇವಲ ಪಶುಪ್ರಾಯರಾದ ಸಾಧುಜೀವಿಗಳಾದ ಕರ್ನಾಟಕರಿಗೆ ಕಿವಿ ನೆಟ್ಟಗಾಗದಿರದು. ಪುರಾಣ ಇತಿಹಾಸಗಳ ಕಾಲದಿಂದ ಆಂಧ್ರರೇ ಈ ಪ್ರಾಂತಗಳಲ್ಲೆಲ್ಲ ರಾಜ್ಯ ಭಾರವನ್ನು ನಡೆಸುತ್ತಿದ್ದರಂತೆ! ನಮ್ಮ ಭಾಷೆ, ಲಿಪಿ, ಸುಕಲೆಗಳು ಮುಂತಾದವುಗಳೆಲ್ಲವು ಆಂಧ್ರರಿಂದ ದತ್ತವಾಗಿ ಬಂದವಂತೆ. ಭಳೀ ಆಂಧ್ರಬಂಧುಗಳೇ! ನಿಮ್ಮ ಸಾಹಸವನ್ನು ನಾನು ಮೆಚ್ಚಿದೆ. ನಿಮ್ಮ ಹೆಮ್ಮೆಯನ್ನು ನೋಡಿ ಕರ್ನಾಟಕದ ಪರವಾಗಿ ನಾನು ತಲೆಯನ್ನು ಬಾಗುತ್ತೇನೆ. ಇಷ್ಟು ಜೋರಿನಿಂದ ನಿಮ್ಮ ಸಿದ್ಧಾಂತಗಳು ಹಾರುವುದರಿಂದಲೇ ಕೆಲವು ದಿನಗಳಿಂದ ಮೇಲಾದರು ನಮ್ಮ ಕರ್ನಾಟಕರಲ್ಲೂ ಸ್ವಲ್ಪ ಸ್ವಾವಲಂಬನವೂ ಆತ್ಮಗೌರವವೂ ಹೆಚ್ಚಾಗುವದೆಂದು ನನ್ನ ಧಾರಣೆ.

ಈಗ ಕರ್ನಾಟಕರಿಗೆ ತಮ್ಮ ನಾಡೊಂದು ಧೈರ್ಯವಾಗಿ ಹೇಳಿಕೊಂಡು ಓಡಾಡುವ ಪ್ರಸಂಗವೇ ಇಲ್ಲ. ಮದರಾಸ ಪ್ರಾಂತದಲ್ಲೂ, ದಕ್ಷಿಣದೇಶಗಳಲ್ಲೂ "ಕರ್ನಾಟಕ" ವೆಂದರೆ ಶುದ್ಧ ಹಳೆಯ ಕಾಲದ ಮನುಷ್ಯನೆಂದು ಪಾರಿಭಾಷಿಕ ಅರ್ಥ. ಮದರಾಸ ಪಟ್ಟಣದಲ್ಲಿ ಸಹ ಕನ್ನಡಿಗರಿಗೆ ಸ್ವಂತವಾದ ಲಿಪಿಯೂ, ವಾಙ್ಮಯವೂ ಇರುವುದೋ ಇಲ್ಲವೋ ಎಂಬ ಶಂಕೆಯು ಬಹು ಜನಗಳಲ್ಲುಂಟು. ಉತ್ತರ ದೇಶದಲ್ಲಿ "ಕಾನಡಿ" ಯೆಂದು ಹೇಳುತ್ತ ನಮ್ಮ ಮಹಾರಾಷ್ಟ್ರ ಬಂಧುಗಳು ತಮ್ಮ ಮುಖಾರವಿಂದವನ್ನು ಸೊಟ್ಟ ಮಾಡುವದಂತೂ ನಿಮಗೆ ತಿಳಿದೇ ಇದೆ. ಇದು ಗಡಿ ಪ್ರಾಂತಗಳಲ್ಲಿಯೂ ಹೊರಗಿನ ಪ್ರದೇಶಗಳಲ್ಲಿಯೂ ಅಲ್ಪಜ್ಞಾನದಿಂದ ನಡೆಯುವ ವಿಪರೀತವೆಂದು ನೀವು ಉಪೇಕ್ಷಿಸಬೇಡಿ. ಗಡಿಪ್ರಾಂತಗಳ ಮೇಲೆ ಮಾತ್ರ ನಿಮ್ಮ ದೃಷ್ಟಿ ಬೀಳುವದರಿಂದ ಕರ್ನಾಟಕಕ್ಕೆ ಏಕದೇಹ ಪ್ರಾಣವು ಊರ್ಜಿತವಾಗುವುದೆಂಬ ಅಪಸ್ಮಾರ ವಿರಬಾರದು. ಯಾಕೆಂದರೆ ಈಗ್ಗೆ ಕರ್ನಾಟಕ ವೆಂದು ನಾವು ಹೇಳುವ ನಾಡೆಲ್ಲವೂ ಗಡಿ ಪ್ರಾಂತವೇ. ಮಧ್ಯ ರಾಷ್ಟ್ರವು ಯಾವುದೆಂದು ಸ್ವಲ್ಪ ಹೇಳಿ ನೋಡುವ. ಹೊಸಪೇಟೆಯೋ- ಅಲ್ಲ- ಬೆಳಗಾಂವಿಯೋ- ಅಲ್ಲವೇ ಅಲ್ಲ. ವಿಜಾಪುರವಾಗಲಿ ಧಾರವಾಡವಾಗಲಿ ಅಲ್ಲಿ ಮೂಲೆಯಲ್ಲಿರುವ ಮಂಗಳೂರೂ ಅಲ್ಲ- ಕೊನೆಗೆ ಮೈಸೂರೆನ್ನುವಿರೆ—ಸ್ವಲ್ಪ ತಡೆಯಿರಿ. ದಿವಂಗತರಾದ ಶ್ರೀ. ದಿವಾನ್ ರಂಗಾಚಾರ್ಲು ಕಾಲದಿಂದ ಮೈಸೂರು ಸೀಮೆಯ ಮೇಲೆ ದ್ರಾವಿಡರ ಸಂಸ್ಕೃತಿಯೂ ದ್ರಾವಿಡರ ಸಂಪ್ರದಾಯವೂ (ಈ ಶಬ್ದಕ್ಕೆ ಶಾಸ್ತ್ರಾರ್ಥವನ್ನು ಸಮರ್ಪಕ ಬರೆಯಲು ನಿಮ್ಮ ಸಣ್ಣ ಪತ್ರಿಕೆಯಲ್ಲಿ ಸ್ಥಳವಿಲ್ಲ.) ಸಂಪೂರ್ಣವಾಗಿ ಬಿದ್ದಿರಬಹುದು. ಮೈಸೂರು ಸೀಮೆಯ ರಾಜಕೀಯ ವ್ಯವಸ್ಥೆಯನ್ನು ನಡೆಸುವವರು ದ್ರಾವಿಡರು.

ಮೈಸೂರು ವಾಣಿಜ್ಯವನ್ನು ನಡೆಸುವವರು ಗುಜರಾತರು ಮತ್ತು ಮಾರ್ವಾಡಿಗಳು. ಮೈಸೂರು ಸೀಮೆಯಲ್ಲಿ ಕನ್ನಡ ವಾಙ್ಮಯಕ್ಕಾಗಿ ದುಡಿಯುವವರಲ್ಲನೇಕರು ಆಂಧ್ರರು. ಮೈಸೂರು ದಿವಾನರು ಮತ್ತು ಶಿಕ್ಷಣಸಚಿವರು ವಿಶ್ವವಿದ್ಯಾಲಯದ ಅಧಿಕಾರಿಗಳೂ ಬಂಗಾಳಿಗಳು. ಕೊನೆಗೆ ನಿಮ್ಮ ಕರ್ನಾಟಕರಿಗೆ ತವರು ಮನೆಯು ಎಲ್ಲಿ ಉಳಿದಿರುವದು? ಎಲ್ಲೆಲ್ಲಿಯೂ ಆತ್ರೇಯ ಬಂಧುಗಳೇ !!!

ಮೈಸೂರಿನ ಮಾತು ನಾನು ಒತ್ತಿ ಹೇಳಿದ್ದಕ್ಕೆ ಕಾರಣವೇನಂದರೆ ಈ ಬಳ್ಳಾರಿಯವರ ಗದ್ದಲದಿಂದ ಕರ್ನಾಟಕವನ್ನು ತಪ್ಪಿಸುವ ಪ್ರಯತ್ನದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮೇಲೆ ಬಹುಶಃ ಕರ್ನಾಟಕರ ಅಭಿಮಾನದೃಷ್ಟಿಯು ಹೋಗಬಹುದು. ಮೈಸೂರು ವಿಶ್ವವಿದ್ಯಾನಿಲಯವನ್ನೇ ಅಖಂಡ ಕರ್ನಾಟಕಕ್ಕೆ ಉಪಯೋಗಯಾಗುವಂತೆ ಮೈಸೂರಿನ ಮೇಲೆ ಅಭಿಮಾನವುಳ್ಳವರಿಗೆ ತೋರಬಹುದು. (ಮೈಸೂರು ಮಹಾರಾಜರನ್ನೇ ಕರ್ನಾಟಕಕ್ಕೆಲ್ಲ ಅಧಿಪತಿಗಳಾಗಿ ನೇಮಿಸಬೇಕೆಂಬ ಸಲಹೆ ಕೂಡ ಆಗಿರುವಾಗ ಈ ವಿಶ್ವವಿದ್ಯಾನಿಲಯದ ಮಾತು ನಿರಾಯಾಸವಾದುದೆಂದು ತೋರಬಹುದು.) ಆದರೆ ಮೈಸೂರು ಕರ್ನಾಟಕಕ್ಕೆ ಸೇರಿದ್ದೇ ಎಂಬ ಪ್ರಶ್ನೆಯೊಂದಿರುವದೆಂದರೂ ಮಾತ್ರ ಕರ್ನಾಟಕದ ಮುಖಂಡರು ಮರೆಯ ತಕ್ಕದ್ದಲ್ಲ.

೧೦-೧೫ ವರ್ಷಗಳಾಗಿ ಆಂಧ್ರರು ತಮಗೆ ಅಖಂಡವಾದ ಸ್ವತಂತ್ರ ಆಂಧ್ರಪ್ರಾಂತ ಬೇಕೆಂದು ಮಾಡುತ್ತಿರುವ ಪ್ರಯತ್ನಕ್ಕೆ ಈಗ್ಗೆ ಈ ಆಂಧ್ರ ವಿಶ್ವ ವಿದ್ಯಾನಿಲಯದ ನಿರ್ಮಾಣವು ಮೊದಲನೇಯ ಫಲ. ಈ ಬೆಳೆವಣಿಗೆಯ ಮಹಾತ್ಮ್ಯದಿಂದಲೇ ಬಳ್ಳಾರಿಮತ್ತು

(೩ ನೇ ಪುಟ ನೋಡಿರಿ)

ವರ್ತಮಾನ ಸಾರ.

ಇಹವೃತ್ತ

ಮಳೆಯಿನ್ನೂ ಇಲ್ಲ. ಮುಂದೆ ……… … ..?

ಇಲ್ಲಿ ವಿದ್ಯುಲ್ಲತೆಯ ದೀಪಗಳನ್ನು ಪೂರೈಸಲು ಒಂದು 'ಜಾಯಿಂಟ ಸ್ಟಾಕ ಕಂಪನಿ'ಯನ್ನು ತೆಗೆಯಬೇಕೆಂದು ಶ್ರೀ ಪರ್ವತಿಕರ ಮತ್ತು ಜೋರಾಪುರ ಕಂಪನಿಯವರು ಪ್ರಯತ್ನ ನಡಿಸಿದ್ದಾರೆ ಒಂದು ಪಾಲಿನ ಬೆಲೆ ೨೫ ರೂ. ಕಣಕೂಡ ದಕ್ಷಿದೆ ವಿಜಾಪೂರದ ರಾವಬಹದ್ದೂರ ರಾಘವೇಂದ್ರರಾವ ಕಂಭಾವಿಯವರು ಇದಕ್ಕೆ ತಮ್ಮ ಬೆಂಬಲವನ್ನು ಕೊಟ್ಟಿದ್ದಾರೆ.

ಈ ದಿನ ವಿಜಾಪೂರದಿಂದ ಶ್ರೀ ಕೌಜಲಗೀ ಶ್ರೀನಿವಾಸರಾಯರೂ ದಿವಾಕರ ರಂಗನಾಥರಾಯರೂ ಇಲ್ಲಿಗೆ ಸಾಯಂಕಾಲದ ೬ ಗಂಟೆಯಗಾಡಿಗೆ ಬರುವರು ಕೂಡಲೇ ೬॥ ಗಂಟೆಗೆ ತಾಜನಾಟಕಶಾಲೆಯಲ್ಲಿ ಕರ್ನಾಟಕ ಏಕೀಕರಣದ ಬಗ್ಗೆ ಅವರ ವ್ಯಾಖ್ಯಾನಗಳಾಗುವವು.

ಶಿರಗುಂಪಿಯವರ ನಾಟಕಶಾಲೆಯಲ್ಲಿ ಶ್ರೀ ನಿಂಗಪ್ಪಾ ಮುರಡೀ ಮೋದಲಾದವರು ಕೂಡಿ ಲಕ್ಷ್ಮೀಸಿನೇಮಾ ಪ್ರಾರಂಭಿಸತಕ್ಕವರಿದ್ದಾರೆ.

ಕರ್ನಾಟಕ

ಮುಂಬೈ ಕರ್ನಾಟಕ

ವಿಜಾಪೂರ ಮುನಸಿಪಾಲ್ಟಿಯ ಚುನಾವಣೆಯು ಪರಿಣಾಮಗೊಂಡಿದೆ, ಅಸಹಕಾರಿಗಳು ಸಪ ಕೊಂಗ್ರೆಸ ಕಾಣಬೇಕಾದುದು

ವಿಜಾಪೂರದಲ್ಲಿ ಮಳೆ ಚನ್ನಾಗಿ ಆಗಿದೆ. ಹೂಂಬಳ ನಾಟಕ ಮಂಡಲದವರ ನಾಟಕಗಳು ನಡೆದಿದ್ದು, ವಿಜಾಪೂರಸ್ಥರ ಆಶ್ರಯವು ಅವರಿಗೆ ಚನ್ನಾಗಿ ದೊರೆಯುತ್ತಿದೆ

ಕರ್ನಾಟಕದ ಮೊದಲನೇ ಗದ್ಯ ನಾಟಕ ಮಂಡಳಿಯವರಾದ ಭಾರತ ಸೇವಕ ನಾಟಕ ಮಂಡಲದವರು "ಆತ್ಮಶುದ್ಧಿ" ಎಂಬ ಹೊಸ ಸಾಮಾಜಿಕ ನಾಟಕವನ್ನು ವಿಜಾಪೂರದಲ್ಲಿ ೨೨ ನೇ ತಾ॥ ರಂಗಭೂಮಿಯ ಮೇಲೆ ತರುವರು.

ಮುಂಬೈ ಗವ್ಹರ್ನರರು ಸೊಲ್ಲಾಪೂರಕ್ಕೆ ಬಂದು ಹೋದರು.

ಅಬಕಾರೀ ಮತ್ತು ಅರಣ್ಯ ಖಾತೆಯ ಮಂತ್ರಿಗಳಾದ ಶ್ರೀ ದಳವೀಯವರು ಇದೇ ತಿಂಗಳ ೩೧ ನೇ ತಾ॥ ಸೊಲ್ಲಾಪೂರ ವಿಜಾಪೂರಗಳನ್ನು ಸಂದರ್ಶಿಸುವರು.

ಧಾರವಾಡದ ಗಣಪತ್ಯುತ್ಸವಕ್ಕೆ ಆಮಂತ್ರಣ ಕೊಟ್ಟರೂ ಸಹ ಕನ್ನಡ ಪಂಡಿತರು ವ್ಯಾಖ್ಯಾನಗಳನ್ನು ಕೊಡಲಿಕ್ಕೆ ನಿರಾಕರಿಸಿರುವರಂತೆ! ನಿಜವಿದ್ದರೆ, ಇದು ವಿಚಾರಿಸತಕ್ಕ ಸಂಗತಿ

ಕೇಲವೇ ಕೈಪಿಡಿಗಳನ್ನು ಕನ್ನಡ ಮರಾಠಿಗಳಲ್ಲಿ ಪ್ರಸಿದ್ಧಿಸಬೇಕೆಂದು ಬೆಳಗಾವಿಯ ಮುನಸೀಪಾಲಿಟಿಯವರು ನಿರ್ಣಯಿಸಿದ್ದಾರೆ. ಬೆಳಗಾವಿಯ ಲೋಕಲ್ ಬೋರ್ಡಿನ ಮಂಡಲಕ್ಕೆ ಕೌಜಲಗಿಯ ಶ್ರೀ ದೇಸಾಯಿ ಸಾಹೇಬರು ೮೦ ರೂ. ಗಳನ್ನೂ, ಶಹಪೂರ ಮುನಸಿಪಾಲಿಟಿಯವರು ೨೦ ರೂ ಗಳನ್ನು ಕೊಟ್ಟಿದ್ದಾರೆ.

ಮದ್ರಾಸ ಕರ್ನಾಟ

ವೀರಶೈವ ಪದವೀಧರರಿಗೆ ತಾಂಬೂಲಸಮಾರಂಭವನ್ನು ಮಾಡುವದಕ್ಕಾಗಿ ಮದ್ರಾಸ ವೀರಶೈವರ ಸಭೆಯು ೨೨ನೇ ತಾರೀಖಿನಲ್ಲಿ ಮದ್ರಾಸಿನಲ್ಲಿ ನೆರೆದಿತ್ತು.

ಬಳ್ಳಾರಿಜಿಲ್ಲೆಯಿಂದ ೨,೧೪೦ಜನರೂ ಅನಂತಪೂರ ಜಿಲ್ಲೆಯಿಂದ ೧,೬೬೯ಜನರೂ, ಈ ವರ್ಷದಲ್ಲಿ ಅಸಾಮಕ್ಕೆ ಕೂಲಿಗಾಗಿ ಹೋಗಿದ್ದಾರೆ.

ಮಂಗಳೂರಿನಿಂದ ಕೊಲ್ಲಾಪುರಕ್ಕೆ ಹೋಗಿರುವ ನಾವದ ಕೇಗೋಅವರಿಗೆ 'ಡಾಕ್ಟರ ಆಫ್ ಡಿವಿನಿಟಿ' ಎಂಬ ಪದವಿಯು ದೊರೆತಿದೆ.

ಮಂಗಳೂರ ಮುನಸೀಪಾಲಿಟಿ ಸ್ವತಂತ್ರ ಸ್ವರಾಜ್ಯ ಕಣ್ಣದವರು ಬಹುಮತದಿಂದ ನಿಂತಿದೆ

ಮೈಸೂರ ಕರ್ನಾಟಕ

ಬೆಂಗಳೂರ ಅರಮನೆಯಲ್ಲಿ ಶ್ರೀಮನ್ಮಹಾರಾಜರು ಹರೀಂದ್ರನಾಥ ಛಟ್ಟೋಪಾಧ್ಯರಿಗೆ ಭೆಟ್ಟಿಯನ್ನು ಕೊಟ್ಟರು

ಶ್ರೀ ಸಿ. ಆರ್. ರೆಡ್ಡಿಯವರು ಮೈಸೂರ ವಿಶ್ವವಿದ್ಯಾಲಯದಲ್ಲಿ ಕನ್ನಡದಿಂದಲೇ ಎಲ್ಲ ಶಿಕ್ಷಣವು ನಡೆಯಬೇಕಾಗಿ ಸೂಚಿಸಿದ್ದಾರೆ ಆದರೆ ಇಂಗ್ಲಿಷಿಗೆ ಮೋಹಿಸಿದ ಮೈಸೂರಿನವರಿಗೆ ಇದು ರುಚಿಸುವದೋ?

ಬೆಂಗಳೂರ ಮುನಸಿಪಾಲಿಟಿಯವರು ನೀರಿನ ಪೂರೈಕೆಗಾಗಿ ತೆರಿಗೆಯನ್ನು ಹೆಚ್ಚಿಸುವ ವಿಚಾರದಲ್ಲಿದ್ದಾರೆ. ಜನರಲ್ಲಿ ಇದರಿಂದ ಅಸಂತೋಷವಾಗಿದೆ

ಭದ್ರಾವತಿಯ ಕಬ್ಬಿಣ ಕಾರ್ಖಾನೆಗೆ ಈಗಾಗಲೇ ೩ ಕೋಟಿ ರೂಪಾಯಿ ವೆಚ್ಚವಾಗಿದ್ದರಿಂದಲೂ, ಕಬ್ಬಿಣವನ್ನು ತಯಾರ ಮಾಡುವ ವೆಚ್ಚವು ತಯಾರಾದ ಕಬ್ಬಿಣದ ಬೆಲೆಗಿಂತ ಹೆಚ್ಚಾಗಿದ್ದರಿಂದಲೂ, ಈ ಕೈಗಾರಿಕೆಯನ್ನು ಒಂದಿಲ್ಲೊಂದು ದಿನ ಮುಚ್ಚಲೇ ಬೇಕಾಗುವದೆಂದು ಚಾವರ್‌ಟನ್ ಸಾಹೇಬರ ಮತವಿದೆ

ಈ ತಿಂಗಳ ೧೦ ನೇ ತಾ॥ ದಿನ ಶ್ರೀ ಚಾಮರಾಜೇಂದ್ರ ಒಡೆಯರವರ ಕಾಲದಲ್ಲಿ ಪಟ್ಟಾಭಿಷಿಕ್ತನಾದ ಶ್ರೀಮನ್ಮಹಾರಾಜರವರ ವರ್ಧಂತಿಯು ವ್ಯತಿಪಟ್ಟಿತು. ಶಾಸ್ತ್ರೀಯವಾಗಿ ಉತ್ತರ ಕ್ರಿಯಾದಿಗಳು ನಡೆದವು ರಾಜವೈಭವದ ಗೌರವಗಳೆಲ್ಲ ಆಗ್ಗ ಕೊಡಲ್ಪಟ್ಟವು- ಅವರ ಸ್ಥಾನಕ್ಕೆ ಶ್ರೀ ಪ್ರದಕ್ಷ ಬೇರೆ-ಂದು ಆನೆಯು ಚುನಾಯಿಸಲ್ಪಡುವದು,

೧೨ ನೇ ತಾ। ದಿನ ಮೈಸೂರರಾಯರು ಶ್ರೀ ವಿಶ್ವೇಶ್ವರಯ್ಯನವರಿಗೆ ಭೆಟ್ಟಿ ಕೊಟ್ಟು, ಅವರ ಸಂಗಡ ಅನೇಕ ರಾಜಕೀಯ ವಿಷಯಗಳನ್ನು ಚರ್ಚಿಸಿದರು

ಕೊಡಗು ಕರ್ನಾಟಕ

ಕೊಡಗಿಗೆ ಶಾಸನಸಭೆ ಮಂಡಲವು ದೊರೆತ ಕೂಡಲೇ, ಅದರಿಂದ ಕೊಡಗು ಜನಾಂಗಕ್ಕೆ ದೊಡ್ಡದೊಂದು ಲಾಭವಾಗುವದೆಂದೂ ತಮ್ಮ ತೊಂದರೆಗಳೆಲ್ಲ,ತುತೂರಿಯಿಂತಾಗುವ ಭಾಷಣಗಳಿಂದ ಹಾರಿ ಹೋಗುವವೆಂದೂ, ಕೊಡಗಿನ ನಮ್ಮ ಕರ್ನಾಟಕ ಬಾಂಧವರು ಭಾವಿಸಿದ್ದರು. ಆದರೆ, ಆ ಕಲ್ಪನೆಗಳೆಲ್ಲ ಕನಸಿನವೆಂಬುದನ್ನು ಕೊಡಗಿನವರು ಕಾಣಹತ್ತಿರುವರು

ಕೊಡಗಿನ ಕಾನನಗಳ ವರದಿಯು ಅಲ್ಲಿಯವರಿಗೆ ದೊರೆಯದಿದ್ದರೂ, 'ಮದ್ರಾಸ ಮೇಲ್'ಗೆ ದೊರೆತಿದೆ. ಬ್ರಿಟಿಶರ ಮಹಿಮೆಯೋ ಇಂತಹದು!

ನಿಜಾಮ ಕರ್ನಾಟಕ

ಮರಾಠಿಯು ಎಲ್ಲೆಲ್ಲಿಯೂ ಹರಡುತ್ತಲಿದೆ. ಹೈದರಾಬಾದಿನಲ್ಲಿ "ಸ್ವಯಂನಿರ್ಣಯವೆಂಬ" ಒಂದು ದೈನಿಕವು ಹೊರಡುವದು. ಕನ್ನಡ ಪತ್ರಿಕೆಗಳು ಮಾತ್ರ ತಲೆ ಎತ್ತಲೊಲ್ಲವು ನಿಜಾಂ ಕರ್ನಾಟಕಸ್ಥರೇ, ನೀವಿನ್ನೂ ಎಚ್ಚರಿಯುವದು ಎಂದು?

ಹಿಂದುಸ್ಥಾನ

ಮುಂಬೈ ವಿಶ್ವವಿದ್ಯಾಲಯದ ಸುಧಾರಣೆಯ ಬಗ್ಗೆ ನಿಯಮಿತನಾದ ಮಂಡಳದ ವರದಿಯು ಪ್ರಸಿದ್ಧವಾಗಿದೆ. ಕೆಳಗೆ ಕಾಣಿಸಿದ ಮಹತ್ವದ ಸೂಚನೆಗಳಿದ್ದವೆ— (೧) ಈಗಿದ್ದ ಕಟ್ಟಡದ ಸುತ್ತಲಿನ ಸ್ಥಳವನ್ನು ಕೊಂಡು ಅಲ್ಲಿಯೇ ಎಲ್ಲ ಕಾಲೇಜ ಮತ್ತು ವಸತಿ ಗೃಹಗಳು ಸ್ಥಾಪಿತವಾಗಬೇಕು. (೨) ಈ ವಿಶ್ವವಿದ್ಯಾಲಯದಲ್ಲಿ ಎಲ್ಲ ಸ್ನಾತಕ ವಿದ್ಯಾರ್ಥಿಗಳು ಲಷ್ಕರೀ ಶಿಕ್ಷಣವನ್ನು ಹೊಂದಲೇ ಬೇಕು. (೩) ಮಹಾರಾಷ್ಟ್ರ ವಿಶ್ವವಿದ್ಯಾಲಯವನ್ನು ಕೂಡಲೇ ಪುಣೆಯಲ್ಲಿ ಸ್ಥಾಪಿಸಬೇಕು ಕೊಲ್ಹಾಪುರ, ಜಮಖಂಡಿ ಸಾಂಗಲಿ, ಮಿರಜ ಅಕ್ಕಲಕೋಟಿ ಮುಧೋಳ ಸಂಸ್ಥಾನಗಳು ಈ ವಿದ್ಯಾಲಯಕ್ಕೊಳಪಟ್ಟಿರಬೇಕು ಎಲ್ಲ ಶಿಕ್ಷಣವು ಇಂಗ್ಲೀಷಿನಲ್ಲಿರಬೇಕು. (೪) ಕರ್ನಾಟಕ ಗುಜರಾತ ಸಿಂಧದವರು ವಿಶ್ವವಿದ್ಯಾಲಯವು ತಮಗೂ ಬೇಕೆಂದು ಅಪ್ಪಣೆ ಪಟ್ಟರೆ ಕೊಡಬೇಕು (೫) ಲಲಿತ ಕಲೆಗಳಿಗೂ ಪದವಿಗಳನ್ನು ಕೊಡಬೇಕು (೬) ಹಿಂದೀ ಮತ್ತು ಯುರೋಪದ ಗಾಯನ ಪದ್ಧತಿಗಳೆರಡನ್ನು ಹಾಯಸ್ಕೂಲ ಕಾಲೇಜಗಳ ಶಿಕ್ಷಣ ಕ್ರಮದಲ್ಲಿಡಬೇಕು.

ಸರ ರಾಮಕೃಷ್ಣ ಭಾಂಡಾರಕರರು ೨೪ ತಾ। ದಿನ ಪುಣೆಯಲ್ಲಿ ದೈವಾಧೀನರಾದರು

"ಕನ್ನಡಿಗ"ನ ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫ ರೂ. ಉಪಕಾರಕರ್ತೃಗಳಿಗೆ ವಾ ೧೦ ರೂ. ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ.	೧ ರೂ. ಇಲ್ಲವೇ, ೧॥ ನಂಬರಿಗೆ ಕಡಿಮೆ ಯಾಗದಂಥ ೬೦೦೦ ಯಾರ್ಡ ಕೈನೂಲು
ಪರಸ್ಥಳದ	ಮನಿಯಾರ್ಡರದಿಂದ ೧-೧೩-೦ ವಿ. ಪಿ. ಯಿಂದ ೨-೧-೦ ಇಲ್ಲವೇ ೧॥ ನಂಬರಿಗೆ ಕಡಿಮೆಯಾಗದ ೧೬೦೦೦ಯಾರ್ಡ ಕೈನೂಲು.
ವಾಚನಾಲಯ ಸಭೆ, ಸಮ್ಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ-	ಸ್ಥಳದವರಿಗೆ ೨-೮-೦ ಪರಸ್ಥಳಕ್ಕೆ ಮನಿಯಾರ್ಡರದಿಂದ೨-೧೩-೦ ,, ವಿ. ಪಿ. ಯಿಂದ ೩-೧-೦
ಸರಕಾರ, ಮುನಸೀಪಾಲಿಟಿ ಲೋಕಲ್‌ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦ ವಿ. ಪಿ.ಯಿಂದ ೫-೧-೦

ಬಿಡಿ ಸಂಚಿಕೆಗೆ ೯ ಪೈ. ಹಿಂದಿನಸಂಚಿಕೆಯೊಂದಕ್ಕೆ ೨ ಆಣೆ. ಧರ್ಮಾರ್ಥವಾಗಿಯಾಗಲೀ ವರ್ಷದ ಕಡಿಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ.

ವ್ಯವಸ್ಥಾಪಕ

ಲೋಕಮತ.

ಕರ್ನಾಟಕದಲ್ಲಿ ನವ ಚೈತನ್ಯವನ್ನು ಹುಟ್ಟಿಸಿ ಅಹಿಂಸೆ, ಖಾದಿ, ಸತ್ಯಾಗ್ರಹ ಇವೇ ಮೊದಲಾದ ವಿಷಯಗಳನ್ನು ಪ್ರತಿಪಾದಿಸಿ ಲೋಕಮತವನ್ನು ಜಾಗ್ರತ ಪಡಿಸುವದೇ ಈ ವಾರಪತ್ರಿಕೆಯ ಉದ್ದೇಶ ವಾ. ಚ. ರೂ. ೩—೫—೦

ವ್ಯವಸ್ಥಾಪಕ ಲೋಕಮತ ಹುಬ್ಬಳ್ಳಿ.

ಕರ್ನಾಟಕವೃತ್ತ ಧಾರವಾಡ

೩೦ ವರ್ಷಗಳಿಂದ ಕನ್ನಡನಾಡಿನ ಸೇವೆ ಮಾಡುತ್ತ ಬಂದಿರುವ ಈ ವಾರ ಪತ್ರಿಕೆಯಲ್ಲಿ, ಕರ್ನಾಟಕದ ವೈಶಿಷ್ಟ್ಯವನ್ನು ಪ್ರತಿವಾರದಲ್ಲಿಯೂ, ಕಾಣಬಹುದು. ವಾ. ಚ. ರೂ.೩—೫—೦

ಪ್ರಕಟನೆ

ದಿ ಎಶಿಯಾಟಿಕ್ ಗೌರ್ನಮೆಂಟ

ಸಿಕ್ಯೂರಿಟಿ

ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚಿಟಿ ಎತ್ತುವ ಕ್ರಮವು ೧೯೨೫ ನೇ ಇಸ್ವಿಯ ಜುಲೈ ೩೧ ನೇ ತಾ|| ದಿನ ಸಾಯಂಕಾಲದ ೫-೩೦ ಗಂಟೆಗ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟೀ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ. ಬಸವಾರಾಧ್ಯ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ೧೦೦೦ ರೂ. ಸಾಲವು ದೊರೆಯ ಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೧೧೬೨ ಶ್ರೀ. ಆರ್. ಜಿ. ಹುಕ್ಕೇರಿ. ಬುಕ್ಕಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೧೫೫ ಶ್ರೀ. ದೀಕಜರಾಮ ನಾರಥಿರಾಮ ನಾಯಿಕ ,ಕಂಪಾವುಂಡರ, ಜಲವಾಣ ದವಾಖಾನೆ ನಾಯು, ಸಯಾನ. ಬಿ.ಬಿ. ಸಿ. ಆಯ ರೇಲ್ವೇ. ಸುರತ. (ಒಡೋದಾ ಏಜನ್ಸಿ)

(೩) ಬಾಂಡ ನಂ. ೧೯೨೬೭ ಶ್ರೀ. ಶ್ರೀರಾಮ ಮೂರ್ತಿ ಆರಾಧ್ಯಲು ರಾಮಚಂದ್ರರಾವ ಗುರು ಪಿಠ ಪುರ ಗೋದಾವರಿ ಜಿಲ್ಹಾ.

(೪) ಬಾಂಡ ನಂ. ೧೭೬ ಶ್ರೀ. ನಂದಗಿರಿ ವೆಂಕಟರಾಮು ದಾಸ ಪ್ರೊಪ್ರಾಯಿಟರ ಮುಕುಂದ ಪುರ. ಕಾಕಿನಾಡು

(೫) ಬಾಂಡ ನಂ. ೪೫೩ ಶ್ರೀ. ಆರ್. ವೆಂಕಟಯ್ಯಾ ಗುರು ಇನಾಮದಾರ ಭೋಸಯ್ಯಾ ಅಗ್ರಹಾರ. ಅಮಳ ಪುರಮ್.

೧-೮-೨೫

ಬಿ. ಎನ್. ಆರಾಧ್ಯ
ಜೀಫ ಏಜಂಟ ಹುಬ್ಬಳ್ಳಿ

ಧಾತೂಪಧಾತು ರಸಮಹಾರಸಾದಿ ಖನಿಜದ್ರವ್ಯಾನಿ ಭಸ್ಮಾನಿ

ಅಪೂರ್ವಸಂಧಿ) ವನಸ್ಪತಿ ರಸಾಗ್ನಿ ಯೋಗಸಂಪನ್ನ: (ಖಾಲಿಭವರ!!

ಔಷಧಿಗಳು.	ತೊಲೆ	ರೂ.	ಔಷಧಿಗಳು.	ತೊಲೆ	ರೂ.
ಅಭ್ರಕಭಸ್ಮ ೧೦೦೦ ಪುಟ	೧	೪೦	ತ್ರಿವಂಗಭಸ್ಮ-ಪೀತವರ್ಣ	೩	೩
,, ೫೦೦ ,,	೧	೨೦	ಸುವರ್ಣ ಮಾಕ್ಷಿಕಭಸ್ಮ	೫	೪
,, ೧೦೦ ,,	೧	೫	ನಾಗಭಸ್ಮ-ಶ್ವೇತ, ಪೀತ,	೩	೩
,, ನಿಶ್ಚಂದ್ರ	೨॥	೪	ಮೃಗಶೃಂಗಭಸ್ಮ-ಶ್ವೇತ	೫	೩
ಲೋಹಭಸ್ಮ-ರಕ್ತವರ್ಣ	೩	೫	ಸುವರ್ಣರಾಜವಂಗೇಶ್ವರ	೩	೭
ಮಂಡೂರಭಸ್ಮ-ರಕ್ತವರ್ಣ	೩	೨	ಸಿದ್ಧಮಕರಧ್ವಜ-ಅನುಪಾನಮಿಶ್ರ ಗುಳಿಗೆಗಳು-೫೦	–	೫
ವಂಗಭಸ್ಮ-ಶ್ವೇತವರ್ಣ	೩	೩	ಪ್ರಾಚೀನ ಹೇಮಗರ್ಭಮಾತ್ರಾ	೧	೧೦೦

ಔಷಧಿಗಳು ಪರೀಕ್ಷಾಂತ್ಯದಲ್ಲಿ ಸದೋಷವೆಂದು ಕಂಡುಬಂದಲ್ಲಿ ವಾಪಸು ಮಾಡಬಹುದು. ಎಲ್ಲಪ್ರಕಾರದ ಆಯುರ್ವೇದೀಯ ಔಷಧಿಗಳೂ, ಔಷಧೋಪಯೋಗಿ ದ್ರವ್ಯಗಳೂ ಸುಲಭ ಬೆಲೆಗೆ ದೊರಕುವವು.

ವೈದ್ಯ— ಮಾಧವರಾಜ ಜಹಾಗೀರದಾರ ಇಳಕಲ್ಲ. ಜಿ. ವಿಜಾಪೂರ.

ಈ ಪತ್ರಿಕೆಯು ಮಂಗಳವೇಢೆ ರಾಜಾರಾಮರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ... ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

ರ. ನಂ. ಬಿ. ೧೯೪೭.

ವಾ. ವರ್ಗಣಿ ೧—೮—೦ ಮಾತ್ರ.

to the Editor Bagalkote P.O.

ಕನ್ನಡಿಗ

188L 9/9/25

ಜಯ ಕರ್ನಾಟಕ

(ಇದರಲ್ಲಿ ಕನ್ನಡ ಸಮಾಚಾರವು ಸಮಾವಿಷ್ಟವಾಗಿದೆ)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು — ಮಂಗಳವೇಢೇ ರಾಚೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಪತ್ರುವಾರ ಮಿತಿ ಭಾದ್ರಪದ ಬದ್ಧ ೪ ಶಕ ೧೮೪೭. ತಾ|| ೨-೯-೧೯೨೫. | ಸಂಚಿಕೆ ೨೭.

ಸಂಪಾದಕರ ಭೂಮಿ.

ನನ್ನ ಮನಸಿನ ಮೇಣವಾಡಿ ಕಟ್ಟುವೆನಾಸು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮೆ ।
ಚಿನ್ನದಾದರು ಚಿನ್ನ ಮೇಣಬತ್ತಿಯು ನೊಂದು ॥
ಚಿನ್ಮಯಾಕಾಶದಲ್ಲಿ ॥
ನನ್ನ ದೇಹವು ನಿನ್ನ ಬೀದರಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ [illegible] ನಿನ್ನ ಗಂಧನ್ನು [illegible] ದೀರಬಹ ।
ಗಂಧವಹನೆಂದು ತಿಳಿಯಿ ॥

— ಅಂಜಲಿಕಾತನಯ ಪತ್ರ.

ಶ್ರೀಮನ್ಮಧ್ವಾಚಾರ್ಯರ ಗ್ರಂಥಗಳನ್ನೆಲ್ಲ ಸಾದ್ಯಂತವಾಗಿ ಪ್ರಕಟಿಸಲಿಕ್ಕೂ, ಅವರ ಎಲ್ಲ ಗ್ರಂಥಗಳನ್ನು ಕನ್ನಡದಲ್ಲಿ ಭಾಷಾಂತರಿಸಲಿಕ್ಕೂ ಉಡುಪಿಯಲ್ಲಿ ಒಂದು 'ಜಾಯಿಂಟ ಸ್ಟಾಕ ಕಂಪನಿ'ಯನ್ನು ಸ್ಥಾಪಿಸಬೇಕಾಗಿ ಅನೇಕರ ವಿಚಾರವದೆ. ೧೦ ರೂಪಾಯಿ ಒಂದು ಪಾಲಿನಂತೆ, ೨೦ ಸಾವಿರ ರೂಪಾಯಿ ಭಂಡವಲವು ಇರಬೇಕಾಗಿ ಯೋಜನೆಯಿದೆ. ಮುಂದೆ ಭಾಗವತದಂಥ ಗ್ರಂಥಗಳನ್ನೂ ಸಹ ಭಾಷಾಂತರಿಸುವ ಕಲ್ಪನೆಯಿದೆ. ಸ್ತುತ್ಯ ಉದ್ಯೋಗವು. ಆದರೆ ಇಂಥ ಮಹಾಕಾರ್ಯಗಳಿಗೆ ಒಬ್ಬಿಬ್ಬರಾದರೂ ಟೊಂಕಕಟ್ಟಿ ನಿಲ್ಲದ ಹೊರ್ತು ಕೇವಲವಾಗದು. 'ಕಂಪನಿ' ಗಳೆಂದರೆ ಎಷ್ಟೋ ಜನರಿಗೆ ಅವಿಶ್ವಾಸ, ಆದುದರಿಂದ ಇಂಥ ಕಾರ್ಯದಲ್ಲಿ ಎಲ್ಲರೂ ಬಹು ಜಾಗರೂಕರಾಗಿರಬೇಕು. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿರುವ ಮಧ್ವ ಮುಖಂಡರ ಮನ್ನಣೆಯನ್ನು ಹೊಂದಿ ಅವರನ್ನು ಈ ಮಂಡಳದಲ್ಲಿ ಸೇರಿಸಿಕೊಳ್ಳುವದು ಅವಶ್ಯಕ.

ಹಿಂದುಸ್ಥಾನೀ ಸೇವಾದಲದವರು ಸಪ್ಟಂಬರ ೨೨ ನೇ ತಾ. ಗೆ ಸೀತೀಮನಿಯಲ್ಲಿ ಸ್ವಯಂಸೇವಕರದೊಂದು ಶಾಖೆಯನ್ನು ತೆಗೆಯುವರು. ಅದು ಮೂರು ವಾರ ನಡೆದು ಅಕ್ಟೋಬರ ೧೩ ಕ್ಕೆ ಮುಗಿಯುವದು. ಇದು ಅಖಿಲ ಭರತಖಂಡದ ಸಲುವಾಗಿದ್ದು, ಪ್ರತಿಯೊಂದು ಪ್ರಾಂತದಿಂದ ೩ ಜನರು ಬರುವರು. ಕರ್ನಾಟಕವು ಮಾತ್ರ ೫ ಜನರನ್ನು ಕಳುಹಿಸಲು ಅವಕಾಶವಿದೆ. ಸಪ್ಟಂಬರ ೧೦ ನೇ ತಾ. ನೊಳಗಾಗಿ ಅರ್ಜಿಗಳನ್ನು ಕಳುಹಿಸತಕ್ಕದ್ದು. ಕರ್ನಾಟಕದಲ್ಲಿ ಶ್ರೀ. ಹರ್ಡೀಕರ ನಾರಾಯಣರಾಯರೇ ಈ ಸೇವಾದಲದ ಮುಖ್ಯ ಆಧಾರ ಸ್ತಂಭರು. ಈ ಸಂಸ್ಥೆಯು ಭರತಖಂಡಕ್ಕೆಲ್ಲ ಆದರ್ಶಪ್ರಾಯವಾಗಹತ್ತಿದ್ದು ಕರ್ನಾಟಕಕ್ಕೆ ಅಭಿಮಾನದ ಸಂಗತಿಯು.

ರೇಲ್ವೇ ಬೋರ್ಡಿಗೆ ಅರ್ಜಿಯನ್ನು ಕಳುಹಿಸುವದರ ಬಗ್ಗೆ 'ಕನ್ನಡಿಗ' ನು ಅನೇಕ ಸಲ ಬರೆದಿದ್ದಾನೆ. ಇನ್ನು ಒಂದು ತಿಂಗಳು ಹಾದೀ ನೋಡಿ, ನಾವು ಅಕ್ಟೋಬರ ತಿಂಗಳ ೨ ನೇ ವಾರದಲ್ಲಿ, ಅರ್ಜಿಗಳನ್ನು ಸಿಮ್ಲಾಕ್ಕೆ ಕಳುಹಿಸುವೆವು. ಆದುದರಿಂದ ವಾಚಕರೆಲ್ಲ ಇನ್ನು ತಡವಿಲ್ಲದೇ ಈ ಬಗ್ಗೆ ತಾವು ಕಳಿಸತಕ್ಕ ಅರ್ಜಿಗಳನ್ನು ಕಳುಹಿಸಬೇಕು. ಎಲ್ಲರಿಗೆಲ್ಲ ಗೊತ್ತಾಗ ಬೇಕೆಂದು ಪುನಃ ಅರ್ಜಿಯ ನಮೂನೆಯನ್ನು ಈ ಸಾರೆಯ 'ಕನ್ನಡಿಗನ' ಸಂಚಿಕೆಯಲ್ಲಿ ಮುದ್ರಿಸಿದೆ. ಬೆಳಗಾವಿಯ ರೇಲ್ವೇ ಮಂಡಳದವರು ಈ ವಿಷಯದಲ್ಲಿ ಶ್ರಂಬಾಸಹಾಯಮಾಡಲು ಒಪ್ಪಿದ್ದಾರೆ. ಈ ಮಂಡಳದ ಕಾರ್ಯವು ಎಷ್ಟು ಚೊಕ್ಕಟವಾಗಿರುವದೆಂಬದನ್ನು ಎಲ್ಲರೂ ಬಲ್ಲರು. ಆದುದರಿಂದ ಕರ್ನಾಟಕದಲ್ಲಿ ರೇಲ್ವೇಗಳನ್ನು ಪ್ರಾರಂಭಿಸುವ ಚಳವಳವನ್ನು ಮಾಡಲು ಇದು ಒಳ್ಳೇ ಸಮಯ. ಇದನ್ನರಿತು 'ಕನ್ನಡಿಗ'ನ ವಾಚಕರು ಕೊಂಚ ಚಾಪಲ್ಯವನ್ನು ತೋರಿದು, ಪ್ರತಿಯೊಬ್ಬನು ಕನಿಷ್ಟ ೫೦ ಸಹಿಗಳನ್ನಾದರೂ ಕೂಡಿಸಿ ಕಳುಹಿಸಬೇಕಾಗಿ ಆಗ್ರಹದ ವಿನ್ನಪ.

ತಮಿಳರದೊಂದು ವಿಶ್ವವಿದ್ಯಾಲಯವು ಪ್ರತ್ಯೇಕವಾಗಿರಬಹುದೆಂದು ಇದೇ ೧೭ ನೇ ತಾ|| ದಲ್ಲಿ ತ್ರಿಚನಾಪಳ್ಳಿಯಲ್ಲಿ ತಮಿಳ ಪ್ರಮುಖರೆಲ್ಲ ಕೂಡಿಕೊಂಡು ನಿರ್ಧರಿಸಿದ್ದಾರೆ. ಇದರಲ್ಲಿ ರಾವ ಬಹದ್ದೂರ, ದಿವಾಣಬಹದ್ದೂರ, ಸರದಾರ, ಮೊದಲಾದವರು ಸಹ ಬಹು ಉತ್ಸಾಹದಿಂದ ಭಾಗ ತೆಗೆದು ಕೊಂಡಿದ್ದಾರೆ. ಆಂಧ್ರರಿಗೂ ಕೇರಳರಿಗೂ ಸ್ವತಂತ್ರವಿಶ್ವವಿದ್ಯಾಲಯವು ದೊರೆಯಿತೆಂದರೆ ಈಗಿನ ಮದ್ರಾಸ ವಿಶ್ವವಿದ್ಯಾಲಯವೇ ತಮಿಳ ವಿಶ್ವವಿದ್ಯಾಲಯವಾಗುವದೆಂದು ಅನೇಕರು ಆ ಸಭೆಯಲ್ಲಿ ಮಾತನಾಡಿದರು. ಕರ್ನಾಟಕರೆಂಬ ಜನಾಂಗದವರು ಮದ್ರಾಸ ಇಲಾಖೆಯಲ್ಲಿರುವರೆಂಬ ಅರಿವೇ ಈ ಮಹನೀಯರಿಗಿಲ್ಲವೆಂಬುದು ಸ್ಪಷ್ಟವಿದೆ. ಕರ್ನಾಟಕಸ್ಥರು ನೂರಾರು ವರ್ಷಗಳ ವರೆಗೆ ಮದ್ರಾಸ ಪ್ರಾಂತದಲ್ಲಿದ್ದರೂ, ಅವರು ಅಲ್ಲಿದ್ದರೂ ಗೊತ್ತಾಗದಂಥ ಮೂಲ ಕರ್ನಾಟಕಸ್ಥರು ಹೀಗೆಯೇ ಗಾಢನಿದ್ರೆಯಲ್ಲಿರುವದುಚಿತವೋ ಹೇಗೆಂಬದನ್ನು ವಿಚಾರಿಸಬೇಕು.

ಕರ್ನಾಟಕ ರಂಗಭೂಮಿ:— ಕರ್ನಾಟಕ ರಂಗಭೂಮಿಯ ಸದ್ಯದ ಸ್ಥಿತಿಯು ತೃಪ್ತಿಕರವಾದುದಿಲ್ಲವೆಂದು ಧಾರಾಳವಾಗಿ ಹೇಳ ಬಹುದು. ರಂಗಭೂಮಿಯು ಲೋಕ ಶಿಕ್ಷಣದ ಸಾಧನಗಳಲ್ಲಿ ಒಂದಾಗಿದೆ. ಇದು ಒಳ್ಳೆಯ ಪರಿಣಾಮಕಾರಿಯಾದ ಸಾಧನವು ಕಹಿಯಾದ ಔಷಧವನ್ನು ಕೂಸುಗಳು ಕುಡಿಯಲೊಪ್ಪದಿದ್ದರೆ ಮೊದಲು ಜೇನು ತುಪ್ಪದ ಬೊಟ್ಟು ಚೀಪಿಸಿ ಔಷಧವನ್ನು ಕುಡಿ

ಸುವಳು. ಅದರಂತೆಯೇ ಪರಮ ದುರ್ಲಭವಾದ ಪರಮಾರ್ಥದ **[illegible]** ಜನರ ಮನಸ್ಸನ್ನು ಪ್ರೇರಿಸಲಿಕ್ಕೆ ಇದೊಂದು [illegible] ತುಸ್ಸದ ಜೊಟ್ಟು ಭಿನ್ನ ರುಚಿಯುಳ್ಳ ಜನತೆಗೆಲ್ಲ ಸಂತೋಷದೊಳಗೆ ದಾರಿಗೆ ತರುವ ಪಂಚಿಕೆಯೆಂದರೆ ಇದೊಂದೇ ಆದುದರಿಂದ ಇಂತಹ ರಂಗಭೂಮಿಯ ಕಡೆಗೆ ದುರ್ಲಕ್ಷ್ಯಮಾಡುವದೆಂದರೆ, ಸಮಾಜ ಘಾತದ ಮತ್ತು ಆತ್ಮ ಘಾತದ ಮಾರ್ಗವೇ ಸರಿ.

ಇತ್ತೀಚಿಗೆ ತರುಣರ ಮನಸ್ಸು ನಾಟಕಗಳ ಕಡೆಗೂ, ರಂಗಭೂಮಿಯ ಕಡೆಗೂ ಎಳೆದಿದೆ. ' ನಾಟಕವೆಂದರೆ ಲೋಕವ್ಯವಹಾರದ ಚಿತ್ರವು ದೇಶದ ಇತಿಹಾಸ, ನಡೆ ನುಡಿ, ಮನೋಭಾವನೆಯ ಉತ್ಕ್ರಾಂತಿ, ಜೀವನ ಕ್ರಮದಲ್ಲಿಯ ಮಹತ್ವದ ಪ್ರಸಂಗವು ಇವುಗಳು ನಾಟ್ಯದಲ್ಲಿಯಾಗಲಿ ಕಾಲ್ಪನಿಕ ವಾಙ್ಮಯದಲ್ಲಿಯಾಗಲಿ ಕಾಣಬೇಕೇ ಹೊರ್ತು ಉಳಿದೆಡೆಯಲ್ಲಿ ಕಾಣಬಾರದು ಎಂದು ಅವರು ಆಗಾಗ್ಯೆ ನುಡಿಯುತ್ತಲಿದ್ದಾರೆ. ಈಗ ನಡೆಯುತ್ತಲಿದ್ದ ನಾಟಕಗಳಮೇಲೆ ಕಡುತರವಾದ ಟೀಕೆಗಳನ್ನು ಮಾಡುತಲಿದ್ದಾರೆ. ಇವೆಲ್ಲ ಶುಭಚಿಹ್ನಗಳು.

ಇವೆಲ್ಲವುಗಳಿಗಿಂತ ಹೆಚ್ಚಿನ ಸಂಗತಿಯೆಂದರೆ ರಂಗಭೂಮಿ ತಿಂಗತಿಂಗಳಿಗೆ ಹೊರಡುವ ಹೊತ್ತಿಗೆಯು ವಿಚಾರ ಹಣ್ಣಿನೊಳಗಣ ಗುಣವು ಹೀಚಿನೊಳಗಿರುವದೆಂಬದಕ್ಕೆ ಈ ಮಾಸಪತ್ರಿಕೆಯು ನಿದರ್ಶನವಾಗಿರುವುದು ಶ್ರೀ ನಿ ವಾ ಸ ಅಯ್ಯಂಗಾರ ವೇದನರಸಿಂಹ ಶಾಸ್ತ್ರಿ ಮೊದಲಾದವರ ಬೆಂಬಲವು ಈ ಪತ್ರಿಕೆಗೆ ಸಿಕ್ಕಿದೆ ಕರ್ನಾಟಕನಾಟಕಭೂಷಣರೂ ನಾಟ್ಯಕಲಾವಿಶಾರದರೂ ಆದ ಶ್ರೀ ಸದಾಶಿವರಾವ ಗುರುವರ ಆಶ್ರಯವು ಇದಕ್ಕಿದೆ ಇಂಥ ಸರ್ವಾಂಗ ಸುಂದರವಾದ ಪತ್ರಿಕೆಯನ್ನು ಹೊರಡಿಸಿದುದಕ್ಕೆ ನಾವು ದತ್ತಾತ್ರೆಯ ನಾಟಕ ಮಂಡಳಿಯವರನ್ನು ಅಂತಃಕರಣ ಪೂರ್ವಕವಾಗಿ ಅಭಿನಂದಿಸುವೆವು.

ಬಳ್ಳಾರಿಗೆ ಆಂಧ್ರರ ಕಾಟವು ತಪ್ಪಿಲ್ಲ. ಮದ್ರಾಸ ಕಾನೂನ ಮಂಡಳದಲ್ಲಿ ಮೊನ್ನೆ ' ಸಿಲೆಕ್ಟ ಕಮೀಟಿ ' ಗೆ ಹಾಕಲ್ಪಟ್ಟ ಆಂಧ್ರವಿಶ್ವವಿದ್ಯಾಲಯದ ಬಿಲ್ಲಿನಿಂದ ಕೆಲವರಿಗೆ ಆನಿಸಿರಲಿಕ್ಕೆ ಸಾಕು. ಆದರೆ ವಸ್ತುಸ್ಥಿತಿಯು ಹಾಗಿರುವದಿಲ್ಲ. 'ಸಿಲೆಕ್ಟಕಮಿಟಿ' ಯಲ್ಲಿ ಆಂಧ್ರರ ಬಹು ಮತವೇ ಇರುತ್ತದೆ. ಬಳ್ಳಾರಿಯ ಆಂಧ್ರ ಮುಖಂಡರ ಪ್ರಯತ್ನವು ಬಳ್ಳಾರಿಯನ್ನು ಕೇಂದ್ರವನ್ನಾಗಿ ಮಾಡಬೇಕೆಂಬುದಾಗಿ ಅವ್ಯಾಹತವಾಗಿ ನಡೆದೇ ಇದೆ. ಆದ್ದರಿಂದ ಕರ್ನಾಟಕದ ಎಲ್ಲ ಭಾಗಗಳಲ್ಲಿ ವಿಶೇಷತಃ ಬಳ್ಳಾರಿಯಲ್ಲಿ ಇದಕ್ಕೂ ಹೆಚ್ಚು ಜೋರಿನಿಂದ ಸಾಗಿಸಲಿಕ್ಕೆ ಬೇಕು. ಮೇಲಾಗಿ ಆಂಧ್ರ ವಿಶ್ವವಿದ್ಯಾಲಯದ ಕೇಂದ್ರವನ್ನು ಬಳ್ಳಾರಿಯಲ್ಲಿ ಮಾಡದಿದ್ದರೂ ಬಳ್ಳಾರಿ ಜಿಲ್ಲೆಯನ್ನು ಆಂಧ್ರ ವಿಶ್ವವಿದ್ಯಾಲಯದ ಆಡಳಿತೆಗೆ ಕೊಡುವದು ಸಹ ಕರ್ನಾಟಕ ಏಕೀಕರಣಕ್ಕೆ ಭಯಂಕರ ಹಾನಿಕರವಾಗುವದು. ಒಮ್ಮೆ ಆಂಧ್ರರ ಕಾಲು ಪ್ರವೇಶವು ಆಯಿತೆಂದರೆ ಅದರಿಂದ ಮುಕ್ತರಾಗುವದು ಕನ್ನಡಿಗರಿಗೆ ಬಹಳ ಕಠಿಣವಾಗುವದು. ನಿಜವಾಗಿ ನೋಡಿದರೆ ಅನಂತಪುರದಲ್ಲಿ ಕೇಂದ್ರವನ್ನು ಮಾಡುವದು ಕೂಡ ಅಯೋಗ್ಯವಾದದ್ದು. ಅನಂತಪುರ ಪಟ್ಟಣದಲ್ಲಿ ಸಹ ಕನ್ನಡಿಗರ ಬಹುಮತ ವಿರುವದೆಂದು ಕಂಡು ಬರುವದು. ಅಲ್ಲಿಯ ಕನ್ನಡಿಗರಲ್ಲಿ ಬಳ್ಳಾರಿಯ ಕನ್ನಡಿಗರಷ್ಟು ಜಾಗೃತಿಯು ಕಂಡು ಬರಲಿಲ್ಲವಾದ್ದರಿಂದಲೂ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮೀಟಿಯ ಅಧೀನದಲ್ಲಿ ಅನಂತಪುರವನ್ನು ರಾಷ್ಟ್ರೀಯ ಮಹಾಸಭೆಯವರು ಸೇರಿಸಿಲ್ಲವಾದ್ದರಿಂದಲೂ, ಕನ್ನಡಿಗರು ಅಲ್ಲಿ ಅಷ್ಟು ಚಳವಳಿಯನ್ನು ನಡಿಸಿಲ್ಲವೆಂದು ತೋರುತ್ತದೆ. ಹೀಗಿರಲು ಬಳ್ಳಾರಿಯನ್ನು ಸಹ ಆಂಧ್ರ ಕರ್ನಾಟಕದಿಂದ ಸೆಳೆದು ಕೊಳ್ಳಬೇಕೆಂದು ಮಾಡುತ್ತಿರುವರು. ಇಂಥ ಕಾಲದಲ್ಲಿ ಕನ್ನಡಿಗರು ಬೇಗನೆ ಎಚ್ಚತ್ತು ಬಲವಾದ ಚಳವಳಿಯನ್ನು ನಡಿಸಬೇಕೆಂದು ಆಗ್ರಹದ ವಿನಂತಿಯಿದೆ. ಬಳ್ಳಾರಿಯ ವಕೀಲರಾದ ಶ್ರೀ. ಕೆ. ಗುರು ರಾಜರವರು ಕರ್ನಾಟಕದ ಮುಖಂಡರಾದ ದೇ. ಭ. ಗಂಗಾಧರರಾವ ದೇಶಪಾಂಡೆ, ಶ್ರೀನಿವಾಸರಾವ ಕೌಜಲಗಿ, ಕಂಬಳೀ ವಕೀಲ, ಹಾವಟೀ ವಕೀಲ, ದತ್ತೋಪಂತ ಬೆಳವಿ ವಕೀಲ, ಹಲಕಟ್ಟಿ ವಕೀಲ, ಮುಂತಾದವರು, ಬಳ್ಳಾರಿಗೆ ಬಂದು ಅಲ್ಲಿಯ ಕನ್ನಡಿಗರಿಗೆ ಬೆಂಬಲ ಕೊಡಬೇಕೆಂದು ಪ್ರಾರ್ಥಿಸಿರುವರು. ಆಕ್ಟೋಬರ ತಿಂಗಳಲ್ಲಿ ಮದ್ರಾಸ ಕಾನೂನು ಮಂಡಳದಲ್ಲಿ ಆ ಬಿಲ್ಲು ಬರತಕ್ಕದ್ದಿರುವದು. ಅಷ್ಟರಲ್ಲಿ ಈ 'ಸಿಲೆಕ್ಟಕಮೀಟಿ'ಯವರು ತಮ್ಮ ವರದಿಯನ್ನು ಸಾದರಪಡಿಸುವರು. ಆದ್ದರಿಂದ ಮೇಲ್ಕಂಡ ಮುಂದಾಳುಗಳು ಬೇಗನೆ ಕಾರ್ಯ ಪ್ರವೃತ್ತರಾಗಿ ಕರ್ನಾಟಕ ಮಾತೆಯ ಪ್ರೀತಿಗೆ ಪಾತ್ರರಾಗಬೇಕೆಂದು ಆಗ್ರಹದ ಸೂಚನೆಯಿದೆ.

ಈ ಜಿಲ್ಲೆಯ ಲೋಕಲ ಬೋರ್ಡುಗಳ ಚುನಾವಣೆಯು ಸಮೀಪಿಸ ಹತ್ತಿದೆ. ಎಲ್ಲ ಕಡೆಯಲ್ಲಿ ಅನೇಕ ಉಮೇದವಾರರು ನಿಂತಿರುವರು. ಚುನಾವಣೆಯ ಸಲುವಾಗಿ ಉಮೇದವಾರರು ಬಹಳ ಜೋರಿನಿಂದ ಪ್ರಯತ್ನವನ್ನು ನಡಿಸಿರುವರು. ಮತದಾರರ ಮೇಲೆ ನಾನಾತರದ ಆಗ್ರಹಗಳನ್ನು ಹಾಕಹತ್ತಿರುವರು. ಈ ತರದ ಚುನಾವಣೆಯ ಪದ್ಧತಿಯಿಂದ ನಿಜವಾಗಿ ಯೋಗ್ಯ ಉಮೇದವಾರರು ಆರಿಸಿ ಬರುವದಿಲ್ಲೆಂಬದು ಗೊತ್ತಿದ್ದರೂ ಶಕ್ಯವಿದ್ದಷ್ಟು ಪ್ರಯತ್ನ ಮಾಡಿ ಯೋಗ್ಯ ಉಮೇದವಾರರು ಆರಿಸಿ ಬರುವಂತೆ ಎಲ್ಲ ಮತದಾರರು ಯತ್ನಿಸಬೇಕು. ಚುನಾವಣೆಯಲ್ಲಿ ಉಮೇದವಾರರ ಜಾತಿ ಪಂಗಡಗಳನ್ನು ನೋಡದೆ ಅವರು ಸಾರ್ವಜನಿಕ ಕೆಲಸಗಳನ್ನು ಎಷ್ಟು ದಕ್ಷತೆಯಿಂದ ಮಾಡುವರು. ಅವರಿಗೆ ತಮ್ಮ ಸ್ವತಂತ್ರ ಉದ್ಯೋಗಗಳನ್ನೆಲ್ಲ ತೀರಿಸಿ ಕೊಂಡು ಸಾರ್ವಜನಿಕ ಕಾರ್ಯವನ್ನು ಮಾಡಲಿಕ್ಕೆ ಎಷ್ಟು ವೇಳೆಯು ದೊರೆಯುವದು, ಅವರಲ್ಲಿ ಉತ್ಸಾಹವೆಷ್ಟಿರುವದು ಅವರು ಜಾತಿ ಪಂಗಡಗಳ ಒಳಗೆ ಬೀಳದೆ ಕೇವಲ ಸಾರ್ವಜನಿಕ ಕಲ್ಯಾಣಕ್ಕಾಗಿಯೇ ಹೆಣಗಾಡುವವರಿರುವರೋ ಹೇಗೆ? ಅವರಲ್ಲಿ ರಾಷ್ಟ್ರಾಭಿಮಾನವು, ಭಾಷಾಭಿಮಾನವು ಎಷ್ಟಿರುವದು. ಮುಂತಾದವುಗಳಲ್ಲಿ ಯೋಗ್ಯ ರೀತಿಯಿಂದ ವಿಚಾರಮಾಡಿ ಮತದಾರರು ತಮ್ಮ ಮತಗಳನ್ನು ಕೊಡಬೇಕಲ್ಲದೆ ತಮ್ಮ ಮತಗಳ ದುರುಪಯೋಗವನ್ನು ಮಾತ್ರ ಮಾಡಕೂಡದೆಂಬುದಾಗಿ ನಮ್ಮ ವಿನಂತಿ ಇದೆ. ಅದರಂತೆಯೇ ಉಮೇದವಾರರು [illegible] ಒಮ್ಮೆ ಅರ್ಜಿಯನ್ನು ಯಾವದಾದರೊಂದು [illegible] ಕೊಟ್ಟಮೇಲೆ, ಈಗ ಸುಮ್ಮನೆ ಏಕೆ ತಿರುಗಿ ತೆಗೆದುಕೊಳ್ಳಬೇಕು. [illegible] ಪ್ರಯತ್ನ ಮಾಡೋಣ ಎಂಬದಾಗಿ ವಿಚಾರ ಮಾಡದೆ ತಾವು ಆರಿಸಿ ಬಂದಲ್ಲಿ ತಮ್ಮಿಂದ ಯಾವ ಯಾವ ಕಾರ್ಯಗಳಾಗ ಬಹುದು, ತಮ್ಮ ಯೋಗ್ಯತೆಯು ಎಷ್ಟಿರುವದು. ಎಂಬದನ್ನು ಸಂಪೂರ್ಣವಾಗಿ ವಿಚಾರಮಾಡಬೇಕು ತಮ್ಮ ಕಡೆಯಿಂದ ಕಾರ್ಯವಾಗುವಂತಿಲ್ಲದಿದ್ದರೆ ಅರ್ಜಿಯನ್ನು ತಿರುಗಿ ತೆಗೆದು ಕೊಂಡು ಬೇರೆ ಯೋಗ್ಯ ಉಮೇದವಾರರು ಆರಿಸಿ ಬರುವಂತೆ ಪ್ರಯತ್ನಿಸಬೇಕು. ಇದೂ ಅಲ್ಲದೆ ಒಬ್ಬರನ್ನೊಬ್ಬರು ನಿಷ್ಕಾರಣವಾಗಿ ದೂಷಿಸಬಾರದು. ಪರಸ್ಪರ ದ್ವೇಷಾಸೂಯೆಗಳನ್ನು ತಾಳಬಾರದು. ಮತದಾರರ ಎದುರಿಗೆ ತಮ್ಮ ಗುಣಗಳನ್ನಷ್ಟೇ ಇಟ್ಟು ಅವರ ಮತಗಳನ್ನು ಸಂಪಾದಿಸಿಕೊಳ್ಳಬೇಕಲ್ಲದೆ ಎದುರಿನ ಉಮೇದವಾರನ ದೋಷಗಳನ್ನೇ ಹೇಳಿ ಅವರ ಮನಸ್ಸಿನಲ್ಲಿ ಕಿಲ್ಮಿಷವನ್ನುಂಟು ಮಾಡಬಾರದು. ಮನೆ ಮನೆಗೆ [illegible] ಹರಿಯುವ ಹಾಗೆ ತಿರುಗಿ ಮತದಾರರ ಮರ್ಜಿಯನ್ನು ಸಂಪಾದಿಸುವದಕ್ಕಿಂತ ಸಾರ್ವಜನಿಕ ರೀತಿಯಿಂದ ತಾವು ಆರಿಸಿ ಬಂದರೆ ಮಾಡತಕ್ಕ ಕಾರ್ಯಗಳನ್ನು ವೃತ್ತ ಪತ್ರಗಳಲ್ಲಿಯಾಗಲಿ, ಕೇವಲ ಜಾಹೀರ ಪತ್ರಿಕೆಗಳ ಮುಖಾಂತರವಾಗಿಯಾಗಲಿ ಪ್ರಕಟಿಸಿ ಮತಗಳನ್ನು ಸಂಪಾದಿಸಬೇಕು. ಸಾರ್ವಜನಿಕ ಸಭೆಗಳನ್ನು ಕೂಡಿಸಿ ಅಲ್ಲಿ ತಮ್ಮ ಮತಗಳನ್ನು ಪ್ರಸಿದ್ಧಪಡಿಸಿದರೂ ಚಿಂತೆ ಯಿಲ್ಲ. ಹೀಗೆ ಮಾಡುವದೇ ನಿಜವಾದ ಚುನಾವಣೆಯ ಮಾರ್ಗವಿರುವದು. ಆದ್ದರಿಂದ ಈ ಬಗ್ಗೆ ಉಮೇದವಾರರೂ, ಮತದಾರರೂ ಎಚ್ಚರವಾಗಬೇಕು.

ವಾಙ್ಮಯ ವಿಚಾರ.

(ಓರ್ವ ತುಂಟನಿಂದ)

ಒಂದು ಗಳಿಗೆ ಮೋಜು ೨ ಧರ್ಮ

ಲೇ. ಜಯರಾವ ಕೂಳಿಕೇರಿ. ತಾ. ಬದಾಮಿ

ಇದರಲ್ಲಿ ಲಕ್ಷ್ಮೀರಮಣಯ್ಯನವರು ತಮ್ಮ ಹೆಂಡತಿಯಾದ ತಿರುಮಲಕ್ಕನ ಮೇಲೆ ದಾಂಪತ್ಯ ದಂಡ ನೀತಿಯ ೨ನೇ ಕಲಮಿನ ಕೆಳಗೆ ನಡೆಯಿಸಿದ ಮೊಕದ್ದಮೆಯು ವರ್ಣಿತವಾಗಿದೆ. ಮೊದಲಿನಿಂದ ಕೊನೆಯ ವರೆಗೆ ವಿನೋದವು ಚನ್ನಾಗಿ ಹಿಡಿದಿದೆ. ದಾಂಪತ್ಯದಂಡ ನೀತಿಯ ಕಲಮುಗಳಾದರೂ ಓದಲರ್ಹವಾಗಿವೆ.

ಉದಾ:— ಕಲಮು ೨೩ ಯಾವ ಪತಿಯು ಶಬ್ದಗಳಿಂದಾಗಲೀ, ಸಂಜ್ಞೆಗಳಿಂದಾಗಲೀ, ಮುಂತಾದ್ದು ತನ್ನ ಪತ್ನಿಗೆ ಅವಿಧೇಯತೆಯನ್ನು ತೋರಿಸುವನೋ ಅವನು ಒಂದು ವಾರದವರೆಗೆ ತನ್ನ ಪತ್ನಿ ವಿಯೋಗದ ಶಿಕ್ಷೆಗೆ ಗುರಿಯಾಗುವದಲ್ಲದೆ, ಶಿಕ್ಷೆಯ ಅವಧಿಯನ್ನೆಲ್ಲ ಪತ್ನಿಯು ತೋರಿಸಿ ಕೊಟ್ಟ ಸ್ಥಳದಲ್ಲಿ ಕಳೆಯಲು ಪಾತ್ರನಾಗುವನು "ಸ್ತ್ರೀಯರ" ಅಧಿಕಾರವು ಹೆಚ್ಚುತ್ತ ನಡೆದಿರುವದು. ಅವರ ಹಕ್ಕುಗಳ ಪ್ರಸ್ಥವು ಬೆಳೆಯುವುದು. ಇದು ಶುಭಚಿನ್ಹವೋ; ಎಂಬುದನ್ನು ವಿಚಾರಿಸಲು ಲೇಖಕರು ಸೂಚಿಸಿ ಒಂದುಗಳಿಗೆ ಮೋಜನ್ನು ನೋಡುತ್ತ ನಿಂತಿರುವಂತೆ ಕಾಣುತ್ತದೆ. ಲೇಖಕರ ಉದ್ದೇಶವೇನೋ ಸಫಲವಾಗಿದೆ.

ಧರ್ಮ.

ವೇದ. ಉಪನಿಷತ್ತು ಸ್ಮೃತಿ. ಮೊದಲಾದವುಗಳಿಂದ ಕೆಲವು ಆಧಾರಗಳನ್ನು ತೆಗೆದುಕೊಂಡು, ಲೇಖಕರು ಧರ್ಮದ ವಿಷಯದಲ್ಲಿ ಬರೆದ ಚಿಕ್ಕದಾದ ನಿಬಂಧವಿದು. ಇದರಲ್ಲಿ ಶಬ್ದದೋಷಗಳು, ವಾಕ್ಯ ದೋಷಗಳು ಬಹಳ ಇರುತ್ತವೆ. ಭಾಷಾಶೈಲಿಯು ನಿರ್ದುಷ್ಟವಾಗಿಲ್ಲ, ಅಲ್ಲಲ್ಲಿ ಕನ್ನಡಕ್ಕೆ ಸಲ್ಲದ ವಾಕ್ಯಗಳಾದರೂ ಇವೆ ಉದಾ:— ಭಾಗ್ಯವಾನ, ಧನವಾನ.

"ಕಾಯದ ಮೊಗಲರದು ಶಿಕ್ಷಾ ಇಂಗ್ಲಿಷರದು ಮನುಷ್ಯನ ಶ್ರೀಧಾ ಆಗುವುದು 'ಜಾಹೀರಾತು ಕೊಟ್ಟು ಬಿಟ್ಟಿರುವನು? ಕಡೆಗೆ 'ತಾದೃಶ ಲಕ್ಷ್ಯಗೊಡುವದಿಲ್ಲ' ಮುದ್ರಣ ದೋಷಗಳು ಹೇರಳವಾಗಿವೆ. ಮತ್ತು ಕೆಲವೆಡೆಯಲ್ಲಿ ಅಕ್ಷಮ್ಯವಾಗಿವೆ. 'ಆಚಾಂರಾಗದ' 'ಔಚಂಮಿಂದ್ರಿಯ'

ಭಕ್ಷ್ಯರ ಬಂಡಾಯ

ಲೇಖಕ— ವಿಜಯ.

ಇದೊಂದು ಕೃಷ್ಣಾತಟಾಕಿನಲ್ಲಿ ವಾಸ ಮಾಡುತ್ತಿರುವ ನಿರುದ್ಯೋಗಿಗಳಾದ ಆಚಾರ್ಯರ ಭಕ್ಷ್ಯಂ ಕೇಳುತನವನ್ನೂ, ಹೊಲಸು ಗೆಲಸಗಳನ್ನೂ, ಮನೆಮುರಿಯುವಿಕೆಯನ್ನೂ, ಹಣಕ್ಕಾಗಿ ಎರಡನೆಯವರ ಉಡಗಿಯರನ್ನು ಮುದಿ ಹೆಣದ ಕೊರಳಿಗೆ ಕಟ್ಟುವಿಕೆಯನ್ನು, ಮತ್ತೊಬ್ಬರ ಮಳುಕುಗಳನ್ನು ಹುಡುಕಿ ಹರಟುವಿಕೆಯನ್ನೂ ಚಿತ್ರಿಸುವ ಸಣ್ಣಕತೆಯು. ಆಚಾರ್ಯರ ಚಿತ್ರಗಳು ಇಲ್ಲಿ ಚನ್ನಾಗಿ ಮೂಡಿಸಿ ಹಯವದನಾಚಾರ್ಯರು. ಇವರೆಲ್ಲರಿಗೂ ಹಿರಿಯರು. ಇಷ್ಟು ಹೇಳಿದರೆ ಸಾಕು ಆದರೆ ಕಥಾ ರಚನೆಯಲ್ಲಿ ಕೌಶಲ್ಯವಿಲ್ಲ. ಸಮಾಜಕ್ಕೆ ಎಚ್ಚರ ಕೊಡಬೇಕಾದರೆ ತಕ್ಕ ರೀತಿಯಲ್ಲೇ ಕೊಡಬೇಕು. ಅತಿರೇಕವು ಭೀ ಭತ್ಸವನ್ನುಂಟು ಮಾಡುತ್ತದೆ. ಮರ್ಯಾದೆಗೆ ಜನರು ಮೆಚ್ಚುವರೆಂಬುದನ್ನು ಮರೆಯ ಕೂಡದು.

ರಂಗಭೂಮಿ

(ಆನಂದಾಶ್ರಮ ಬಸವನಗುಡಿ ಬೆಂಗಳೂರ)

ಇದೊಂದು ಗದಗಿನ ದತ್ತಾತ್ರೇಯ ನಾಟಕ ಮಂಡಲದ ಆಶ್ರಯದಲ್ಲಿ ಹೊರಟ ಸಚಿತ್ರ ಮಾಸ ಪತ್ರಿಕೆಯು ಲೋಕಹಿತವೇ ನಾಟ್ಯದ ಮೂಲೋದ್ದೇಶ್ಯವೆಂದೂ, ತನ್ನ ಮೂಲಕ ಲೋಕ ಶಿಕ್ಷಣವನ್ನೂ ಕೊಟ್ಟು ಜನರು ಧರ್ಮಮಾರ್ಗರತರಾಗುವಂತೆ ಮಾಡುವುದೇ ಮೊದಲಿನ ಪಂಡಿತರಾದ ನಾಟಕ ಕಾರರ ಪರಮೋದ್ದೇಶವಾಗಿತ್ತೆಂದೂ, ಕಾಲ ಧರ್ಮಗತಿಯಿಂದ ಧನಾರ್ಜನೆಯೇ ಧ್ಯೇಯವಾಗಿಟ್ಟುಕೊಂಡು, ಕೇವಲ ಜನಮನೋರಂಜನೆಯಲ್ಲಿಯೇ ಮಗ್ನರಾದ ಕೆಲವು ಸ್ವಾರ್ಥಪರದಿಂದ ನನಗೀ ದುಸ್ಥಿತಿಯೊದಗಿತೆಂದು, ಪಂಡಿತರು ತನ್ನನ್ನು ದುರ್ಲಕ್ಷಿಸಿದ್ದರಿಂದ ಪಾಮರರು ತನ್ನನ್ನು ಮನೋರಂಜಕ ವಸ್ತುವೆಂದು ಭಾವಿಸಿದರೆಂದೂ ಹೇಳಿ. ರಂಗದೇವತೆಯು ಹೀಗೆ ಆತ್ಮನಿವೇದನೆಯನ್ನು ಮಾಡಿಕೊಂಡಿದ್ದಾಳೆ:—

ವಾಚಕ ಮಹಾಶಯ, ನಾನು ತಿಂಗಳಿಗೊಂದು ಬಾರಿ ನಿಮ್ಮ ಭೇಟಿಗಾಗಿ ಬರಲು ನಿಶ್ಚಯಿಸಿರುವೆನು. ಬಂದಾಗ ನನಗೊದಗಿರುವ; ದುಸ್ಥಿತಿಯ ನಿವಾರಣೆಯ ಉಪಾಯಗಳನ್ನು ಸೂಚಿಸುವೆನು, ಅಲ್ಲದೆ ಹಲವು ಧಾರ್ಮಿಕ, ನೈತಿಕ, ಐತಿಹಾಸಿಕ ಮತ್ತು ಮನೋರಂಜಕ, ಕೃತಿಗಳಿಂದ ನಿಮ್ಮ ಮನೋರಂಜನೆಯನ್ನು ಮಾಡುವೆನು. ಪ್ರತಿ ತಿಂಗಳಲ್ಲಿಯೂ ನನ್ನ ಉಪಾಸಕರ ಭಾವ ಚಿತ್ರಗಳನ್ನೂ ನಿಮ್ಮೆದುರಿನಲ್ಲಿಡುವೆನು. ನನ್ನ ಕೃತಿಗಳಲ್ಲಿನ ನುಡಿಗಳಿಂದ ನಿಮ್ಮ ಅಂತಃಕರಣವನ್ನು ಜಾಗೃತಗೊಳಿಸುವೆನು. ಯಾವ ಯಾವ ದೇಶದವರು ನನ್ನನ್ನು ಹೇಗೆ ಹೇಗೆ ಪೂಜಿಸುತ್ತಿರುವರೆಂಬ ನನ್ನ ದೀರ್ಘ ಚರಿತ್ರೆಯನ್ನು ನಿಮಗೆ ಹೇಳುವೆನು. ಹಲವು ಕವಿಗಳ ಹೃದಯವನ್ನು ನಿಮ್ಮೆದುರಿಗೆ ಬಿಚ್ಚಿಡುವೆನು. ಅನೇಕಾನೇಕ ಭೂತ ಭವಿಷ್ಯ ವಿಷಯಗಳು ನಿಮ್ಮ ಕಣ್ಣೆದುರಿನಲ್ಲಿ ಸುಳಿದಾಡುವಂತೆ ಮಾಡುವೆನು.

ರಂಗಭೂಮಿಯ ಉದ್ದೇಶವು ಉಚ್ಚವಾಗಿರುವದಲ್ಲದೆ ಉದಾರವಾದುದೂ, ವಿಶಾಲವಾದುದೂ ಇರುತ್ತದೆ. (೧) 'ಭಾರತೀಯ ನಾಟಕಗಳು' (೨) ನಾಟಕವೂ ಸಮಾಜವೂ, 'ರಂಗಸ್ಥಳಗಳೂ ನಾಟಕಾಭಿನಯಗಳೂ' ಮೈಸೂರು ರಂಗಭೂಮಿಯ ಇತಿಹಾಸ, ನಟ ವಿದ್ಯೆಯ ಅಭ್ಯಾಸ ಕ್ರಮ ತಾಳಿಕೋಟೆ (ಶ್ರೀ ಮಾಸ್ತಿ ವೆಂಕಟೇಶಯ್ಯಂಗರಾವರಿಂದ ಬರೆಯಲ್ಪಟ್ಟ ನಾಟಕ ಅಪೂರ್ಣ) ರಂಗಭೂಮಿ ಎಂದರೇನು ಎಂಬ ವಿಷಯಗಳು ಈ ಸಂಚಿಕೆಯಲ್ಲಿ ಪ್ರಕಟವಾಗಿರುವವು. ಬಹುಶಃ ಎಲ್ಲ ವಿಷಯಗಳು ಹೃದಯಂಗಮವಾಗಿರ ಬರೆಯಲ್ಪಟ್ಟಿರುವವು. ಮಾದರಿಗಾಗಿ ಮುಂದಿನ 'ಕನ್ನಡಿಗನಲ್ಲಿ ನಾಟಕವೂ ಸಮಾಜವೂ' ಎಂಬ ಲೇಖವನ್ನು ಪ್ರಕಟಿಸುವೆವು. ಇಂತಹ ಉಪಯುಕ್ತವಾದ ಪತ್ರಿಕೆಗೆ ಕನ್ನಡದ ಅಭಿಮಾನಿಗಳೆಲ್ಲರೂ ಚಂದಾದಾರರಾಗಿ ಶ್ರೇಯೋವಂತರಾಗಬೇಕೆಂದು ನಾವು ಆಗ್ರಹದಿಂದ ಸೂಚಿಸುತ್ತೇವೆ.

[ಇದರಲ್ಲಿ ಚಾಮರಾಜ ಒಡೆಯರ, ಶ್ರೀ.ಶಿವಮೂರ್ತಿಸ್ವಾಮಿ ಕಣಬರಗಿ ಮಠ, ಶ್ರೀ. ಬೆನಗಲ್ ರಾಮರಾವ ಗುಬ್ಬಿ ಕಾಪನಿಯ ಶ್ರೀ. ಎಚ್ ವೀರಣ್ಣನವರ ಮೈಸೂರ ರತ್ನಾವಳಿ ನಾಟಕಮಂಡಲದ ಮಾಲಿಕರಾದ ವರದಾಚಾರ್ಯ ಇವರ ಚಿತ್ರಗಳು ಅಡಕವಾಗಿರುವವು.]

ಚಿತ್ರರಂಜನ ಅಂಕ.

'ವಸಂತ' ದ ಚಿತ್ರರಂಜನ ಅಂಕವು ನಮ್ಮ ಕೈ ಸೇರಿದೆ. ಇದರಲ್ಲಿ ದಾಸರ ಚರಿತ್ರದಲ್ಲಿಯ ಮುಖ್ಯ ಮುಖ್ಯ ಅಂಶಗಳು ಬರೆಯಲ್ಪಟ್ಟವೆ. ಬರಹದಲ್ಲಿ ಕಿಡಿಯು ಇಲ್ಲ. ದಾಸರ 'ಅಂತರ್ಯಾಮಿ' ಎಂಬ ಭಾವಗೀತೆಯ ಅನುವಾದರೂ ಪ್ರಕಟಿತವಾಗಿದೆ. ಬೇರೆ ಬೇರೆ ಅವಸ್ಥೆಗಳಲ್ಲಿ ತೆಗೆದ ಚಿತ್ರರಂಜನರ ಚಿತ್ರಗಳು, ಅವರ ಸಮಗ್ರ ಕುಟುಂಬದ ಚಿತ್ರವೂ ಮನೋಹರವಾಗಿವೆ ದಾಸರ ಚರಿತ್ರವನ್ನೆಲ್ಲ ತಿಳಿಯಲು ಈ ಅಂಕವು ಸಾಕು.

ವಿಷಮ—ವಿವಾಹ

(ಟೀಕೆ ೧)

ವಿಮರ್ಶೆಗೂ ನಮಗೂ 'ವಿಷಮವಿವಾಹ' ವಾಗಬಾರದೆಂದು ಎಚ್ಚರಿಕೆಯಲ್ಲಿದ್ದರೆಯು ಹುರುಪನ್ನು ತುಂಬಿದ್ದೇನೆ. ಸಮರಸವಾಗುವಂತೆ ಮಾಡುವೆವು. ಯಾಕೆಂದರೆ, ಸ್ವಪ್ನದೊಡನೆ ವಿವಾಹವಾಗಿ ಶರಾವತಿಯು ಪಶ್ಚಾತ್ತಾಪ ಪಟ್ಟಂತೆ, ನಮಗಾದರೂ ಆಗಬಾರದೆಂದು ಈ ಮೊದಲೇ ಎಚ್ಚರಿಕೆ! ಇದೇ ನಾವು ಆ ನಾಟಕದಿಂದ ಕಲಿತ ವಿಷಯ. ಇಲ್ಲದ ಯೌವನವನ್ನು ಮಾತ್ರ ತಂದುಕೊಂಡು, ಈ ಮೇಲೆ ವಿಮರ್ಶೆ ರಾಣಿಯನ್ನು ವರಿಸುವದುಚಿತವಲ್ಲ ಅಂದೂ ಈ ನಾಟಕದ ನಡುನಡವೆಂದರೆ, ಅಶೋಕನೆಂಬ ಮುಪ್ಪಿನ ರಾಜನು ಹೋದ ತನ್ನ ಹಗಲನ್ನು ಹಿಡಿದು ತಂದು, ತಂಬಾಪರಿಯ ಹಿರ್ಯ ಯುವತಿಯನ್ನು ಮದುವೆಯಾಗುತ್ತಾನೆ. ಅವಳಾದರೂ ಮೇಲೆ ಸಮ್ಮತಿಸಿದಳೆಂದರೆ,— ಮುಪ್ಪಿನ ಮೋಹವೆನ್ನಬಹುದು?

ಇದೇನು ತಪ್ಪಿಲ್ಲ! ರಾಜನ ವಂಚನಾ ವೃತ್ತಿಯು. ಮಗನಿಗೆ ನಿಶ್ಚಯ ಮಾಡಿ, ಮನೆಗೆ ಒರಲು ತಾನೇ ಅಂಗೀಕರಿಸಿ ಸುಖಿಯಾಗಲುದವಾಗಿ ಬಿಡುವದು. ಇದೆಲ್ಲಿಯ ನ್ಯಾಯವೆಂದು ಆಸ್ತ್ರೀಯು ಮನೆಯವರಾದರೂ ಅಥವಾ ಅವಳೇ ಸ್ಪಷ್ಟವಾಗಿ ಯಾಕೆ ಕೇಳಲಿಲ್ಲ ವೆನ್ನಬಹುದು. ಆದರೆ, ನಾಟಕವು ಮುಂದ ಬೆಳೆಯುವದೆಂತು? ಹೇಳಬಹುದು! ರಾಜನ ತಾಮಸ ಅಧಿಕಾರಯುಕ್ತ ವಾಣಿಗೆ ಎಲ್ಲ ಹೇಳಕೇಳುವವರ ನಾಲಿಗೆ ನಿಂತಿರುವದು! ಇರಲಿ! ಆ ಶರಾವತಿಗೆ ಇದೊಂದು ಅನುಭವ ಸಂಜೀವನಿಯನ್ನು ಕುಡಿಯ ಬೇಕೆಂದಿರಲು ನಾವೇಕೆ ಬೇಡೆನ್ನುವದು?

ಇಲ್ಲಿ ನಾಟಕವನ್ನು ನೋಡಿದಂತೆ ಮತ್ತು ಓದಿದಂತೆ ಹೀಗೆ ಎರಡು ವಿಭಾಗಗಳನ್ನು ರಚಿಸಿ, ಮುಂದೆ ಸಾಗಬಹುದು. ನೋಡಿದಂತೆ ಎಂದರೆ ರಂಗಭೂಮಿಯ ಮೇಲೆ ಬಂದ ದೃಶ್ಯವು! ನಾಟಕವೆಂದ ಮೇಲೆ ನೋಡುವದರಲ್ಲಿಯೇ ಹೆಚ್ಚು ಸ್ವಾರಸ್ಯ. ಯಾವದ ರಸಿಕನನ್ನು ಕೇಳಿದರೂ, 'ಚನ್ನಾಗಿ ಮಾಡುವರು' ಎಂದೇ ಅನ್ನುವನು. ಬರಹದ ವಿಷಯಕ ವಿಚಾರಗಳು ಅಮೇಲೆ. ಇನ್ನು ನೋಡಿದವರು ನೋಡುತ್ತಲೆ ಎಂಥ ಲಲಿತ ಕಲೆಯ ಸಂಸ್ಕಾರಗಳಾದವೆಂಬುದು ಬಹಳ ದಿನಗಳಾದರೂ ಉಚ್ಚ ಹೇಳುತ್ತೇವೆ.

ನಮಗೆ ಮೊದಲು ತಿಳಿಯಲು ತಟ್ಟಿಸಿದ ವಿಷಯವೆಂದರೆ- 'ಅಶೋಕನ ರಾಜ್ಯವೆಂದರೆ ಯಾವಕಾಲದ ಇತಿಹಾಸವೆಂಬುದು' ನಾಯಕರಲ್, ಸಂಕೇತಗಳು. ಟಾಯಿಮಪೀಸ ಇಂಗ್ಲೀಷ ಭಾಷೆ ಇವೇ ಮೊದಲಾದ ಆಧುನಿಕ ಸಾಧನಗಳು ಯುಗವನ್ನು ಬದಲಿಸೆ, ಪ್ರಜಾತ್ಮಕ ರಾಜ್ಯಪದ್ಧತಿಯಲ್ಲಿ! ಬಜ್ಜಿಮಾದ ಕ್ಷಣವೇ, ಕವಿಕರು ಕಮಲಾಕರನ ಕೂಲೆ ಮಾಡಿತಕ್ಕದ್ದು! ಆದರ ಈಗಿನ ಕಾಲವೆಂದ ಹೊರತು ಗತಿಯಲ್ಲ! ಕಮಲಾಕರನ ವಾಚನಾಲಯದಲ್ಲಿ ಮೊನ್ನೆ ಮೊನ್ನೆ ಹೊರಟ 'ಕನ್ನಡಿಗ' ನು. ಅಂತೂ ಸದ್ಯಸ್ಥಿತಿಯಲ್ಲಿಯ ಮೈಸೂರಂತಹ ಒಂದು ಸಂಸ್ಥಾನವೆಂದು ಕಲ್ಪಿಸಿಕೊಂಡು ಮುಂದೆ ನಡೆಯುವಾ. ಹೀಗೆಯೇ ಕೆದರುತ್ತ ಹೋದರೆ ಎಷ್ಟೋ ಅನ್ಯಾಯಗಳು ಕಾಣುವವು. ಆದರೆ, ನಾಟಕ ಕರ್ತರು ಪ್ರೇಕ್ಷಕರ ಮುಗ್ಧತನವನ್ನು ಬಯಲಿಗೆ ತಂದು ಒಂದು ರೀತಿಯಿಂದ ನಗಿಸಬೇಕೆಂದು ಸದುದ್ದೇಶ್ಯವನೆ.

ಇನ್ನು ನಾನು ಮರೆತೆ. ನಾಯಿಕಾದ ಮೇಲೆ, ವೈದ್ಯರ ಮೊದಲು ಬಂದರು. ಅವರ ಉದ್ದ ಭಾಷಣವು ಅರುಚಿಕ್ಕೆ ಮುದ್ದು ರೂಪ ನಿಪುಣಂತರವಲ್ಲ. ಬನಾಗ [illegible] ಪಾತ್ರಗಳ ಬಾಯಿಯಲ್ಲಿ ಉದ್ದುದ್ದ ಭಾಷಣಗಳಿರಕೂಡದೆಂದು ನಮ್ಮ ಮತವು. ಯಾಕೆಂದರೆ! ನಾಯಕ ನಾಯಿಕೆಯರ ಸ್ಥಿತಿಗತಿಗಳು ನೋಡುವವರ ಕಣ್ಮನಗಳನ್ನು ಸೆಳೆದಿರುತ್ತವೆ. ಅವರಲ್ಲಿ ನಟ್ಟ ಮನಸ್ಸನ್ನು ಕಿತ್ತಿ ತೆಗೆದು ನವ ನವೀನ ಈ ಮಹೋಪಕಾರಕವಾದ ಲೆಕ್ಚರುಗಳನ್ನು ಕೇಳುವರೆಂದರೆ ಬೇಸರ. ಹೀಗೆಯೇ ರಜನಿ ಚಂದ್ರಿಕೆಯರ 'Address' ಮುಂದೆ ಇವೆ. ಬೇಕಿಲ್ಲ. ಇದೊಂದು ನೂತನ. ಮಾತು ಕಥೆಗಳಿರಬೇಕು. ಅಂತೆಯೇ ಆದಿಯಿಂದ ರಜನಿ ನೈಗ್ಯರೂ ಕೂಡಿ ಪರಸ್ಪರ ವಿನೋದವಾದುತ್ತಿದ್ದರೆ, ರಂಜಕವಾಗುತಿದ್ದಿತು. ಇರಲಿ ಮುಂದಿನ ಕೆಲವು ದೃಶ್ಯಗಳಲ್ಲಿ ವಿಶೇಷ ತಾತ್ಪರ್ಯವು ವ್ಯಕ್ತವಾಗಿದೆಯೆನ್ನಲಿಕ್ಕೆ ಅಡ್ಡಿಯಿಲ್ಲ. ಮದಿಗಂಧನ. ತನ್ನ ನಾಲಿಗೆ ಒಂದಸೆಂದು ಶರಾವತಿಯು ತೊದಲುವ ನ ಚಾತುರ್ಯದ ಬುದ್ಧಿಯು ಬಲಿಯುತ್ತ ಹೋಗಿ, ಹೇಗೆ ನೂತನ ವಸಂತ ಲತಾ ಕುಂಜವೂ ನವ ಹೃದಯಕ್ಕೆ ಕೀಸರಾಗುತ್ತದ ಕೋಕಿಲೆಯ ನಿನಾದರವು ಕಿವಿಯನ್ನು ಕೊಲ್ಲುತಿದೆ, ಇವೆಲ್ಲವುಗಳು ವೃದ್ಧ ಪ್ರೇಕ್ಷಕರಲ್ಲಿಯೂ ಯುವತಿಯರಲ್ಲಿಯೂ ಕೊರೆಯುತ್ತ ಬರಬಹುದಾದವು. ಮಧ್ಯದಲ್ಲಿ ವಿನೋದನ ಕುಚೇಷ್ಟೆಯು ಸಮ್ಮಂತ್ರಣವನ್ನು ಬಲಿಸುತ್ತದೆ. ಇನ್ನು ಮುಂದೆ ಯಾವದೂ ಉತ್ಸುಕತೆಯನ್ನು ಕಾಯ್ದುಕೊಳ್ಳುವದೆ ಎಂಬ ದೊಡ್ಡ ಕಲೆಯು ಕೇವಲ ಆತುರಪಡುತ್ತ ನಿರೀಕ್ಷಿಸುವರು. ಯಾಕೆಂದರೆ ಇದರಲ್ಲಿ ಅಂಕಗಳೇ ಬಹಳಿಲ್ಲ? ಇದ್ದರೂ ಎದ್ದು ಹೋಗುವದಕ್ಕೆ ಮನಸ್ಸಿಲ್ಲ. ಶರಾವತಿಗೆ ವಿನಾಯಿತೋ(? ಎಲ್ಲಿ ಜೀವಕ್ಕೆ ಅಪಾಯವಾದಿ ಕೊಳ್ಳುವಳೋ ಎಂಬ ಕಸಿವಿಸಿಯಿಂದ ನಾವುಗಳಂತೆ ನೋಡುವೆವು. ಇಲ್ಲಿ ಹೇಳಬಹುದು. ವಸ್ತು ರಚನೆಯು ಸಹಜವಾಗಿದ್ದರೂ, ಅಂದರೆ ವಸ್ತುವಿನಲ್ಲಿಲ್ಲದ ಕಲ್ಪಿತ ಯಾವದೂ ಆಗದಿದ್ದರೂ. ತಿರುಗುತ್ತ ಮೆಲ್ಲನೆ ಬರುವ ಶೈಲಿಯು ಕರ್ತೃವಿಗೆ ಚನ್ನಾಗಿ ಸಾಧಿಸಿಯದೆ. ನಾಟಕ ಕಲೆಯಲ್ಲಿ ಇನ್ನೊಂದು ಮುಖ್ಯ ವಿಷಯವೆಂದರೆ, ಯಾವದನ್ನು ಮುಂಚಿತವಾಗಿಯೇ ಪ್ರೇಕ್ಷಕನು ಮನದಲ್ಲಿ ಗ್ರಹಿಸುವನೋ ಆಕಸ್ಮಿಕವಾಗಿ ಅದರಿಂದ ಬೇರೆಯಾದ ವಸ್ತುಸ್ಥಿತಿ ಕಾಣಿಯಿತೆಂದರೆ, ಕುತೂಹಲವು ಮತ್ತಿಷ್ಟು ಬೆಳೆಯುತ್ತದೆ. ಶರಾವತಿಯು 'ಪಾಲಿಗೆ ಬಂದದ್ದು ಪಂಚಾಮೃತವು' ಎಂದು ತಿಳಿಯುತ್ತ ಇರುವಳೆಂದು ಗ್ರಹಿಕೆ. ಅಷ್ಟರಲ್ಲಿ ಸತ್ಯ ಪ್ರೀತಿಯುಳ್ಳವನಾದ ಕಮಲಾಕರನ ಮೇಲೆ ಅವಳ ಮನಸ್ಸು ಹೋಗುತ್ತದೆ. ಹೀಗೆಯೇ ಅವಳ ವಿಚಾರಗಳು ಹೊಯ್ದಾಡಿ ದಶಾಂತರಗಳನ್ನು ಹೊಂದುವ ಸಮಯೋಚಿತ ಸುಲಕ್ಷಣಗಳು ನಾಟಕದಲ್ಲಿ ಬಂದಿವೆ. ಆದುದರಿಂದ ಕೆಲಸೋಟಗಳು ಮನಸ್ಸಿಗೆ ತಾಕಿ ಅಳಕುವಂತಿವೆ. ರಾಜನು ಬೇಟೆಗೆ ಹೋಗುವಾಗಿನ ಮತ್ತು ಹೋದ ಮೇಲಿನ, ದಾವ ಭಾವಗಳು. ಶರಾವತಿ ಕಮಲಾಕರರ ಏಕಾಂತದಲ್ಲಿಯ ಮಾತು ಮಾಡಿಕೆಗಳು. ಇವೆಲ್ಲ ನಾಟಕಕ್ಕೆ ತಕ್ಕ ರಸ ಪೋಷಕವಾಗಿವೆ. ಆದರೆ ಕಡೆಯ ಭಾಗದಲ್ಲಿ ಸತ್ಯತಃ ಪಶ್ಚಾತ್ತಾಪವೆಂದು ನಾವು ಹೇಳಲಾರೆವು. ಕಮಲಾಕರನನ್ನು ತಾನೇ ಕೊಲ್ಲಿಸಿದವಳು, ಮುದುಗಿ ಆಮೇಲೆ ಅವನ ಚಿತ್ರವನ್ನು ನೆನೆಯುತ್ತಿರುವ ಶರಾವತಿಯು ಪ್ರಸಂಗವಶಾತ್ ಅರಸನಿಗೆ ತನ್ನ ಗುಟ್ಟನ್ನರುಹುವಳು. ಅರಸು ಮುಜ್ಜುಮುಜ್ಜನಂತೆ ಮಾಡಲು ಯಾವ ನಿಶ್ಚಯವಿಲ್ಲದೆ ಮಾಯವಾಗುವಳು. ಮುಂದೆ ಕೂಡಲೆ ಕೈಯಲ್ಲಿ ತಂಬೂರಿಯನ್ನು ತಕೊಂಡು ಸನ್ಯಾಸಿಯ ವೇಷವೇ! ಇದು ಸ್ವಲ್ಪ ಗಡಿಬಿಡಿ ಇನ್ನು ಇದೇ ನಾಟಕದಲ್ಲಿ ಸ್ವಭಾವ ನಿರೀಕ್ಷಣೆಯನ್ನು ಮಾಡಿದರೆ, ರಾಜನ ಮೊದಲನೇ ಹೆಂಡತಿಯೂ, ಮಂತ್ರಿ ಸುತನಾದ ಸುವಿಚಾರಿಯೂ ಸತ್ಯ ಪಕ್ಷಿಗಳೆನ್ನಬಹುದು. ನಾಯಿಕೆಯಂತೂ ಗರತಿ ಹೋಗಿ ಗಯ್ಯಾಳಿಯಾಗುವಳು; ಅತೀವ

ಚಂಚಲ ಚಿತ್ತಳು. ವಿಕಾರವಶಳು ಪ್ರೇಮವೆಂದರೆ, ಶುದ್ಧ ಸಾತ್ವಿಕವಲ್ಲ! ಈ ಜಗತ್ತಿಗೆ ಅಂಟಿಕೊಳ್ಳುವದೇ ಆದರೂ ಅಂತ್ಯದಲ್ಲಿ 'ನರಜನ್ಮವಿದು ವ್ಯರ್ಥವು' ಎಂಬ ವಿರಕ್ತ ಭಾವನೆಯು ಅವಳಿಗೆ ಹಿತವೇ ಆಯಿತು. ನಾಯಕನು ಯಾರೆಂಬುದು ಸಂಶಯವಾದರೂ ಆನಂತರವನು ಆದರೆ ಕಮಲಾಕರನು ಅತಿ ವಿರಳ. ಯಾಕೆಂದರೆ ಯುವತಿಯು ಪ್ರಾಣವನ್ನು ತೊರೆಯುತ್ತಿರಲು ದುರುಳನಿದ್ದರೆ ಒಪ್ಪಿಬಿಡುವನು. ಇಲ್ಲವೆ ಸತ್ಯ ಪ್ರೇಮದ ಮಹಿಮೆಯನ್ನರಿತವನಿದ್ದರೆ, ಮದುವೆ ಯಾಗದಿದ್ದರೂ, ಅವಳ ಸಲುವಾಗಿ ತನ್ನ ಜೀವಕ್ಕೆ ಸುಖವನ್ನು ಪಡೆಯಲು ಇಚ್ಛಿಸುತ್ತಿದ್ದಿಲ್ಲ. ಏನಾದರೂ ಹಾದಿಯನ್ನು ತೋರಬಹುದಾಗಿತ್ತು. ಅಂತೂ ಕಮಲಾಕರನು ವಿದ್ಯಾರ್ಥಿಯು ಬ್ರಹ್ಮಚಾರಿಯು ಎಳೆಯ ನಿರಪರಾಧಿಯು! ಹೀಗೆ ಒಬ್ಬ ಅಶೋಕರಾಜನ ಮುದಿತನದ ಮಬ್ಬಿನಿಂದ ಎಲ್ಲಮನೆತನವು ಶೋಕಮಯವಾಗುತ್ತದೆ. ಒಂದು ಜೀವವು ಕಷ್ಟ ನೋಯುತ್ತದೆ. ಕೊನೆಯಲ್ಲಿ ಅಲ್ಲಲ್ಲಿ ತಿರುಗಿ ನೀರಸವೆಂದು ಬೇಸತ್ತ ತೆರೆಯಂತೆ ಪರಮಾತ್ಮನ ಪಾದ ಕಮಲಗಳಿಗೆ ಸತ್ಯ ಪ್ರಣಯದ ಹಣಿಯನ್ನು ತಿರುವಿ ಲೀನವಾಗುತ್ತದೆ.

ನಿಜವಾದ ಸತ್ಯಾತತ್ತ್ವವು! ಆಗಂದ ಹಾಡು ಎಲ್ಲರ ಹೃದಯವನ್ನು ಕರೆಯುತ್ತದೆ. ಹೀಗೆ ನಾಟಕನೋಡಿದ ಯಾವ ಮದುಮಗಳೂ 'ಯೋಗಿಣಿಯಾದರೂ ಚಿಂತೆಯಿಲ್ಲ. ಮುದುಕನಿಗೆ ಮಾಲೆ ಹಾಕೆನೆಂದು' ಶಪಥಮಾಡುವಷ್ಟು ಶಿಕ್ಷಾಶಕ್ತಿಯು ಪಾತ್ರ ಪರಿಣಾಮವಿದೆ. ಆದರೆ ಸಾಧಾರಣ ಜನರಂತೆ ಸಹಜವಾದ ಅನುತಾಪ ಹೊಂದುವ ಅಶೋಕನವಸ್ಥೆಯು ಅಷ್ಟು ಹೃದಯ ದ್ರಾವಕವಿಲ್ಲ. ನಾಟಕದ ಕೃತಿಯು ಮುದುಕರಿಗೆ ಹುಚ್ಚು ಹಿಡಿಯುವದಿಲ್ಲ. ಇದೊಂದು ಆಗಿದ್ದರೆ, ನಾಟಕವು ಸಮಾಜ ಶಿಕ್ಷಕ ದೃಷ್ಟಿಯಲ್ಲಿಯೂ, ಲಲಿತ ಕಲೆಯ ಸೌಷ್ಟವದಲ್ಲಿಯೂ ಕನ್ನಡ ಭೂಮಿಕೆಯ ಮೇಲೆ ಹೆಸರಾದುದೆನ್ನಲಿಕ್ಕೆ ವ್ಯತ್ಯಯವಿಲ್ಲ. ಇನ್ನು ಮೇಲೆ ಸಾಹಿತ್ಯಸಂಗ್ರಹವೆಂಬ ದೃಷ್ಟಿಯಿಂದ ಓದಿ ಈ ನಾಟಕದ ಬಗ್ಗೆ ಬರೆವೆವು.

ಕೆ.ಕೆ ಕೆ.ಗ

ಶ್ಯಾಮಲಾದೇವಿಯ ಪತ್ರವು

ಶ್ರೀ. ರಾ. ಕನ್ನಡಿಗಣ್ಣನಿಗೆ—

ತಂಗಿಯಾದ ಶ್ಯಾಮಲಾದೇವಿಯ ನಮಸ್ಕಾರಗಳು. ಕನ್ನಡಿಗಣ್ಣಾ ನನ್ನನ್ನು ನಾಗರಪಂಚಮಿಗೆ ತವರುಮನೆಗೆ ಯಾಕೆ ಕರೆದುಕೊಂಡು ಹೋಗಲಿಲ್ಲ? "ಹಬ್ಬವಂಗನೆಯರು ಕರೆಸುವಂತವ ತಾಯಿಮನೆಯುಳ್ಳವಳಿನಾವಳು" ಎಂಬ ಕಾವ್ಯಾನಂದನ ಕವಿತೆ ಅನ್ನುತ್ತಿನ್ನುತ್ತ ಮನಸಿನಲ್ಲಿಯೇ ನಾನು ತಂಬಿಟ್ಟು ಗುಂಗಂಡಿಗಳನ್ನು ತಿಂದೆನು. ಅಣ್ಣಾ, ಗಂಡಸರೇನು ಬಲ್ಲರು? ಹೆಣ್ಣು ಮಕ್ಕಳ ಹಂಬಲವು ಹೆಣ್ಣುಮಕ್ಕಳಿಗೇ ಗೊತ್ತು. ನಿನ್ನೆ ಗೀರ್ವಾಣೆಮ್ಮನ ಮನೆಗೆ ಹೋಗಿದ್ದೆ. ನನ್ನ ಕಿಚ್ಚು ತೋರಿಕೊಳ್ಳಬೇಕೆಂದು ನಾನು ಹೋದರೆ, ಆಕೆಯು ತನ್ನದೇ ತಾನು ಅತ್ತು ಕರೆಯುತ್ತಿದ್ದಳು. ಪಾಪ ಮುಪ್ಪಿನವಳನ್ನು ಮಕ್ಕಳು ಸೊಸೆಯಂದಿರೆಲ್ಲರೂ ಕೂಡಿ ಹೊರಗೆ ಹಾಕಿದಂತೆ 'ತವರ ಮನೆಗೆ ಹೋಗುವೆನೆಂದು' ಅನ್ನುತ್ತಿದ್ದಳು. ಅಣ್ಣಾ ನೋಡು ಎಂಥ ವಿಪರೀತ ದಿವಸಗಳು! ನಮ್ಮಂಥ ಸಣ್ಣ ಹುಡುಗಿಯರು ಹುಚ್ಚಿಕ್ಕರೂ ಹಬ್ಬಕ್ಕೆ ತವರ ಮನೆಗೆ ಹೋಗಬೇಕೆಂದರೆ, ಆಗದು. ಗೀರ್ವಾಣೆಮ್ಮನಂಥ ಮುಪ್ಪಿನ ಮುದುಕಿಯನ್ನು ಕೂಡದು ತವರಮನೆಗೆ ಅಟ್ಟುವರು. ಅಣ್ಣಾ ಎಷ್ಟು ಬೇಸರಾಗಿರುವಳೆಂದೀ ಆ ಮುದುಕಿ! ಎಂದೋ ದ್ವಾಪರ ಯುಗದಲ್ಲಿ ಅವಳ ಹರೆಯಂತೆ. ಅಂದ ಮೇಲೆ, ಪಾಪ ಮುದಿಕಿ ಏನು ಮಾಡಬೇಕು! ಮೊನ್ನೆ ಮೊನ್ನಿನ ವರೆಗೆ ಆಕೆಗೆ, ಮುದಿಕೆಯೆಂದು ಬಹುಮಂದಿ ಮರ್ಯಾದೆ ಮಾಡುತ್ತಿದ್ದರು. ಮುಂಬಯಿ ವಿಶ್ವವಿದ್ಯಾಲಯದವರಂತೂ ಹೊಸ್ತಿಲವು ಕೆಂಪಾದಸಾರಿಗೊಮ್ಮೆ ಮುಪ್ಪಿನ ಮುತ್ತೈದೆಯೆಂದು, ಗೀರ್ವಾಣೆಮ್ಮನನ್ನೇ ಊಟಕ್ಕೆ ಕರೆಯುತ್ತಿದ್ದರು. ಈಗ ಅವರಿಗೆ ಏನಾಗಿತ್ತು ಅವಳನ್ನು ಇಷ್ಟು ಅಲಕ್ಷ್ಯ ಮಾಡಲಿಕ್ಕೆ? ಮರಾಠೀ, ಹಿಂದಿ, ಮುಂತಾದ ಮಕ್ಕಳೂ ಕರ್ನಾಟಕವನ್ನು ಮೊದಲ್ಗೊಂಡು ಎಲ್ಲ ಸೊಸೆಯರೂ ಕೂಡಿ ಗೀರ್ವಾಣೆಮ್ಮನನ್ನು ಇಷ್ಟು ಯಾಕೆ ತೊಂದರೆಗೆ ಈಡು ಮಾಡಿದ್ದಾರು? ಅತ್ತಿಗೊಂದು ಕಾಲ ಸೊಸೆಗೆ ಒಂದು ಕಾಲ! ಕನ್ನಡಿಗಣ್ಣಾ, ಆ ಬಹುಪ್ರಾಣಿ ಮಾಡುತ್ತಿದ್ದಳಾದರೂ ಏನು? ಸ್ವರಾಜ್ಯದ (ಬಂಗಾಲದ ನಮ್ಮ ಭಾಷೆಯಲ್ಲಿ 'ಅಡಿಗೆಯ' ಎಂಬ ಅರ್ಥ) ಕೆಲಸವನ್ನೆಲ್ಲ ಸೊಸೆಯರು ಮಕ್ಕಳುಗಳಿಗೆ ಒಪ್ಪಿಸಿ, ಶಾಲೆಗೆ ಹೋಗುವ ಸಣ್ಣ ಹುಡುಗರನ್ನು ಆಡಿಸುತ್ತ ಕೂಡ್ರುತ್ತಿದ್ದಳು. ಅಣ್ಣಾ, ಆ ಹುಡುಗರಂತೂ ಈ ಮುದಕಿಯ ಮೇಲೆ ಎಷ್ಟು ಪ್ರೀತಿ ಮಾಡುತ್ತಿದ್ದರೆಂದೀ! ತಮ್ಮ ಇಂಗ್ಲೀಷ, ಗಣಿತ, ಇತಿಹಾಸ, ಭೂಗೋಲ, ಸಾಯನ್ಸ ಮುಂತಾದ ಎಲ್ಲ ಪುಸ್ತಕಗಳನ್ನು ಮೂಲೆಗೊಗೆದು, ಅಮ್ಮನನ್ನು ಕಂಡರೆ 'ಅವ್ವ' ಸುತ್ತಿದ್ದವು. ಅವೇ ಹುಡುಗರು ಈಗ ಆ ಮುದಕಿಯನ್ನು ಜಾಡಿಗೆ ಒಂದ ಹಾಗೆ ಬೈಯ್ಯುವವು. ಕನ್ನಡಿಗಣ್ಣಾ, ಅವೇನು ಮಾಡ್ಯಾವು? ತಲೆಯ ಮೇಲಿನ ಮಾಂಸ ಹಾರದ ಸಣ್ಣ ಹುಡುಗರು? ಕಲಿಸಿದ ಹಾಗೆ ಅನ್ನುವವು. ಕನ್ನಡಿಗಣ್ಣಾ ನಿನ್ನೆ ನಾನು ಇಲ್ಲಿಯ.... .... ಹಾಯಸ್ಕೂಲಿಗೆ ಹೋಗಿದ್ದೆ. ಹುಡುಗರೆಲ್ಲರೂ ಸಭೆ ಮಾಡಿ, ಗೀರ್ವಾಣೆಮ್ಮನು ಹೇಳುವ ಶ್ಲೋಕಗಳೂ ಕಥೆಗಳೂ ಅನ್ನಲಿಕ್ಕೆ ಬಾರದಷ್ಟು ಕಠಿಣ ಇರುತ್ತವೆ. ಅದ್ದರಿಂದ ಅವಳ ಗೊಡವೆಗೆ ನಾವೆಲ್ಲರೂ ಹೋಗೋಣ ಬೇಡ.' ಎಂದು ತಮ್ಮ ತಮ್ಮೊಳಗೆ ಮಾತಾಡುತ್ತಿದ್ದರು. ಕನ್ನಡಿಗಣ್ಣಾ, ಈ ಹುಡುಗರೆಲ್ಲರೂ ದಿನಾಲು, ತಪ್ಪದೆ ರಾಮಯ್ಯನ ಅಂಗಡಿಯಲ್ಲಿ ಸಿದ್ಧವಿರುತ್ತಾರೆ; ಅಲ್ಲಿಯ ಚಕ್ಕುಲಿಯ ಮುಳ್ಳುಗಳು ಇವರಿಗೆ ಹ್ಯಾಗೆ ನಡುವದಿಲ್ಲ! ಅದು ಕಠಿಣವಲ್ಲವೆ? ಗೀರ್ವಾಣೆಮ್ಮನ ಶ್ಲೋಕಗಳು ಇದಕ್ಕೂ ಕಠಿಣ ವಿದ್ದಾವೇನು? ಇಷ್ಟಾಗಿ ಕರ್ನಾಟಕಿಯ ಜಾಣತನಕ್ಕೆ ಗೀರ್ವಾಣೆಮ್ಮನ ಹೊರತು ಗತಿಯುಂಟೆ? 'ಆಗ ಶ್ರೀಮತಿ ತಮಾಲ ಕವಳಕ ನಿಕರಗಳಿಂದಲೂ ಎರಳ್ಚಿಬಧಿ ಜಲಕಲ್ಲೋಲ ಶೀಕರಗಳಿಂದಲೂ, ಹೀಗಿರುವ ಸ್ಥಿತಿಯಲ್ಲಿ ತುದಿಗೆ ಶಿಶಿರೋ, ಶೋಭಿತೋ ಎಂದು ಇಟ್ಟರೆ ಗೀರ್ವಾಣೆಮ್ಮನ ರೀತಿಯೇ ಆಗಲಿಲ್ಲವೇ? ಈ ಹುಡುಗರ ಸಂಗತಿಯನ್ನೇನು ಹೇಳಲಿ! ಹುಚ್ಚು ಕುದೀ ಮರಿಯ ಕಥೆಯಾಗಿರುವದು.

ಆಯಿತು. ಹುಡುಗರು ಗೀರ್ವಾಣೆಮ್ಮನನ್ನು ಮರೆತು ಬಿಟ್ಟರು. ಬಲ್ಲದವಲ್ಲದ ಜನರು ಸಹಿತ ಗೀರ್ವಾಣೆಮ್ಮನ ಮಾನ್ಯವನ್ನು ಇಂದಿಗೂ ಉಳ್ಳುವರು. ಅವಳ ನೆನಹು ಮಾತ್ರ ಇಲ್ಲ. 'ಜನಂವಾಪ್ರಮ ಆನಂದಭವನ ಶ್ರೀ ಕೃಷ್ಣಮಂದಿರ' ಇಂಥ ಚಂದಚಂದದ ಹೆಸರುಗಳನ್ನು ಉಪಹಾರದ ಅಂಗಡಿಗಳಿಗೂ ಊಟದ ಮನೆಗಳಿಗೂ ಯಾರು ಕೊಟ್ಟರು? ಗೀರ್ವಾಣೆಮ್ಮನಲ್ಲವೇ? ಕರ್ನಾಟಕ್ರಮದಂತೆ ಕರ್ಮಾದೇ ಇಲ್ಲ. ವನಿತಾ ವಿದ್ಯಾಲಯವಂತೆ! ಮಹಿಳೆಯೇ ಇಲ್ಲ. ಇವೆಲ್ಲವೂ ಗೀರ್ವಾಣೆಮ್ಮನನ್ನು 'ಹಳೀ ಮಾಡಲಿಕ್ಕೆ ಇಟ್ಟುಕೊಂಡ ಹೆಸರುಗಳು. ಕನ್ನಡಿಗಣ್ಣಾ, ಗೀರ್ವಾಣೆಮ್ಮನು ಒಂದು ಮಾತು ವರ್ಷ ಹೇಳಿ ಕಳಿ

ತುಂಬಾ ನೀರು ತಂದು ಬಿಕ್ಕಿ ಬಿಕ್ಕಿ ಅಳಹತ್ತಿದಳು ನೋಡು. ಶಾಕುಂತಲೆಯಂಥ ನಾಟಕವು ಎಲ್ಲಿಯೋ ಉಳಿಯಿತು! ನೈಷಧಂಥ ಕಾವ್ಯವು ಹೇಳ ಹೆಸರಿಲ್ಲದೆ ಹಾಳಾಯಿತು! ಅಯ್ಯೋ ನನ್ನ ಸ್ಮರಣೆಯು ' ನಪುಂಸಕತ್ವಾವಿಷ್ಕೃತ, ರತಿ-ಮನ್ಮಥ ಮಂಜರೀ, ಸುಖಾದಂಡ ಮರ್ಮಪ್ರೇಶಿಕಾ, ' ಮುಂತಾದ ಬೀಭತ್ಸವಾದ ಜಾಹೀರಾತುಗಳಲ್ಲಿ ಮಾತ್ರ ಉಳಿಯ ಬೇಕೇ? ಎಂದು ಗೋಳಿಟ್ಟು ಅಳಹತ್ತಿದಳು! ಕನ್ನಡಿಗಣ್ಣಾ ಮುಪ್ಪಿನ ಮುದುಕಿಯನ್ನು ನೋಯಿಸುವ ಇಂಥ ಜಾಹೀರಾತುಗಾರರಿಗೆ ಪಾಪವು ಬರಲಿಕ್ಕಿಲ್ಲವೇ? ಇತಿ ' ಕನ್ನಡಿಗ'ನ ಮಮತೆಯ ತಂಗಿ.

ಧಾರವಾಡ } ಸೌ|| ಶ್ಯಾಮಲಾದೇವಿ.

ಬಿರುದುಗಳು.

ಇತ್ತೀಚೆ ಕರ್ನಾಟಕದಲ್ಲಿ ಒಂದೇ ಸಮನೆ ಒರುತ್ತಿದ್ದ ಬಿರುದಾವಳಿಗಳ ರಾಶಿಯ ವಿಷಯವಾಗಿ ನನಗೆ ಹಲವು ಸಮಯದಿಂದ ಏನೋ ಅನ್ನಿಸುತ್ತಿದ್ದಿತು. ಈ ವಿಚಾರವಾಗಿ ತಮ್ಮ ಕಳೆದ ಸಂಚಿಕೆಯಲ್ಲಿನ ಲೇಖವನ್ನು ನೋಡಿ ತಾವು ಕೊಟ್ಟ ಜಾಗ್ರತೆಯು ಕೇವಲ ಸಾಮಯಿಕ ವಿದೆಯೆಂದು ತಿಳಿದು ಕೊಂಡೆನು.

ಬಂಗಾಲವು ಸಮಗ್ರ ಹಿಂದೂದೇಶದ ಅತೀ ಉತ್ತಮವಾದ ವಿಷಯಗಳಿಗೆ ಹಲವು ವಿಷಯಗಳ ಮಟ್ಟಿಗೆ ತವರು ಮನೆಯಾಗಿದೆ ಯಾದರೂ ಮೋಸದ ಮಟ್ಟಿಗೂ ತನ್ನ ಅಪಿಷ್ಟಸ್ಥಾನವನ್ನು ಬಿಡಲೊಪ್ಪದಂತೆ ತೋರುತ್ತಿದೆ. ಏಕೆಂದರ ಅನೇಕ ರೀತಿಯಲ್ಲಿ ಬಂಗಾಳದಿಂದಲೇ ದೊಡ್ಡ ದೊಡ್ಡ ಮೋಸಗಳು ಹುಟ್ಟಿ ಪ್ರಚಾರಕ್ಕೆ ಹೋಗುತ್ತಿವೆ. ಹೇಗೆ ರವೀಂದ್ರ ನಂತಹ ಒಬ್ಬ ಕವಿವರ್ಯ ಜೊಸನಂತಹ ಒಬ್ಬ ವೈಜ್ಞಾನಿಕ ಮೊದಲಾಗಿ ಒಬ್ಬೊಬ್ಬರಿಂದ ಹೇಗೆ ಬಂಗಾಲವು ಹಿಗ್ಗಳಿಸಿಕೊಳ್ಳುತ್ತದೂ ಈ ಮೋಸ ಕೃತ್ಯಗಳ ಮಟ್ಟಿಗೆ ಜವಾಬ್ದಾರಿಯನ್ನು ಬಂಗಾಳೀ ಹೊತ್ತು ತಗ್ಗಿ ಕೊಳ್ಳಬೇಕು.

ಅದು ಅಂತಿರಲಿ ಪ್ರಕೃತ ಕರ್ನಾಟಕ ಲೇಖಕರಿಗೆ ಈ ಪೋಸ್ಟ ಪಾರ್ಸಲ್ ಬಿರುದುಗಳ ಮರುಳು ಹಿಡಿದುದೇ ನಮಗೆ ಆಶ್ಚರ್ಯವೆನಿಸುತ್ತಿದೆ. ' ಕಾವ್ಯರತ್ನ ' ವೆಂದ ಕೂಡಲೆ ಜನತೆಯು ಅವರ ಕಾವ್ಯವನ್ನು ಓದುವರೆಂದೂ ಸಾಹಿತ್ಯ ಭೂಷಣವೆಂದ ಕೂಡಲೆ ಸಮಗ್ರ ಕರ್ನಾಟಕವು ಎದ್ದು ಕೊಂಡಾಡುವುದೆಂದೊ?

ಈಗಿನ ಕರ್ನಾಟಕದ ವಾಙ್ಮಯದ ವಾತಾವರಣವು ಬಹುವಾಗಿ ಕೆಟ್ಟಿದೆ. ಬರೆಯುವವರು ಕಡಿಮೆ ಬರೆದರೆ ಓದುವವರು ಕಡಿಮೆ ಮಹೋದಧಿ ಬಿಟ್ಟು ಹಿಮಾಚಲವೆಂಬ ಬಿರುದಿದ್ದರೂ ಯಾರಿವರೆಂದು ಕೇಳುವವರೇ ಇಲ್ಲ ಇಂತಹ ಪರಿಸ್ಥಿತಿಯಲ್ಲಿ ಕರ್ನಾಟಕ ಲೇಖಕರಿಗೆ ಡಂಭಾಚಾರವು ಅವಶ್ಯಕವೂ ಅಲ್ಲ. ಪ್ರಯೋಜನಕರವೂ ಅಲ್ಲವೆಂದು ನಮ್ಮ ಭಾವನೆಯಿದ್ದಿತು.

ಕರ್ನಾಟಕ ಲೇಖಕರು ಸ್ವೇಚ್ಛೆಯಂತೆ ಬರೆದು ಉದ್ದ ಉದ್ದ ವುತತುಂಬಾ ಬಿರುದುಗಳ ಬಾಲವನ್ನು ಹೆಸರಿಗೆ ಹಚ್ಚಿ ಕೃಯಿಂದ ನಷ್ಟಹಾಕಿ ಸಂಪಾದಕತ್ವವನ್ನೂ ಗ್ರಂಥಕರ್ತೃವನ್ನೂ ಪಡೆದರೆ ಕರ್ನಾಟಕ ವಾಙ್ಮಯಕ್ಕೆ ಏನು ಪ್ರಯೋಜನವಾಗುವುದೊ ನಮಗೆ ತಿಳಿಯದು ವಸ್ತುತಃ ಕರ್ನಾಟಕ ಲೇಖಕರ ಚಿತ್ರವು ಆತ್ಮತ್ಯಾಗಿಗಳ ಚಿತ್ರವಾಗದೆಯಲ್ಲದೆ ಸುಖಜೀವನದ ಚಿತ್ರವಾಗಿಲ್ಲ ಅಂತಿರುವಾಗ ಕರ್ನಾಟಕ ಲೇಖಕರು ಈ ಡಂಭಾಚಾರವನ್ನು ಒದೆದು ಈ ಆತ್ಮತ್ಯಾಗವನ್ನು ಪರಿಣಾಮಕಾರಿಯಾಗಿ ಮಾಡುವುದು ಅವಶ್ಯ.

ನಮಗೆ ಆಶ್ಚರ್ಯವೆನಿಸುವದೆ ಕೆಲವು ಉತ್ತಮ ಲೇಖಕರು ಕೂಡ ಈ ಕಲ್ಕತ್ತಾ ಕಾರಖಾನೆಯ ಬಿರುದುಗಳಿಂದ ವಿಭೂಷಿತರಾಗಿದ್ದಾರೆ. ನಿಜವಾಗಿ ತಿಳಿಯುವುದಾದರೆ ಈ ಬಿರುದುಗಳಿಂದ ಅವರ ಪಿತೃದತ್ತ ಹೆಸರುಗಳಿಗೆ ಕಲಂಕ ವಿಟ್ಟಂತಾಗಿದೆಯಲ್ಲದೆ ಅವರಿಗೆ ಬೇರೆ ಗೌರವ ಬಂದಿಲ್ಲ

ಅನಪಕ್ಷಾರ ಜಳವಳದ ಸಂತರವೂ ಊಹಿಸುದುಗಳ ಹುಚ್ಚು ಬೆಳೆದದ್ದು ಮತ್ತಷ್ಟು ಆಶ್ಚರ್ಯಕರ. ಅಧಿಕಾರ ಸಂಪನ್ನರಾದ ಸರಕಾರವು ಕೊಟ್ಟ ಬಿರುದುಗಳಿಗೇನು ತಿರಸ್ಕಾರಭಾವವು ತೋರಲ್ಪಟ್ಟಾಗ ಯಾರೋ ಎಲ್ಲಿಯೋ ಬಂದು ಕರೆಯಲ್ಲಿದ್ದು ಇಂಗ್ಲಿಷ ಕೂಡ ಬರೆಯಲು ತಿಳಿಯದೆ ತಯಾರಾದ ಹೊಸ ಹೊಸ ಬಿರುದುಗಳನ್ನು ವ್ಹಿ. ಪಿ ಮೂಲಕ ಕಳುಹಿಸುವುದನ್ನು ಸ್ವೀಕರಿಸಿ ಗೌರವಿತನಾದನೆಂದು ತನಗೆ ತಾನೇ ಹೇಳಿಕೊಂಡು ಮೋಸ ಮಾಡಿಕೊಳ್ಳುವುದು ಕರ್ನಾಟಕ ಲೇಖಕರ ಮಾನಸಿಕತೆಯ ವೈಚಿತ್ರ್ಯದ ಪರಮಾವಧಿಯಾಗಿದೆ.

ಕರ್ನಾಟಕ ಲೇಖಕರು ಇಂತಹ ಮಕ್ಕಳಾಟಿಕೆಯ ಗೌರವದಿಂದ ಎಚ್ಚರವಾಗಬೇಕು. ಈ ಮಾನಸಿಕತೆಯೇ ಇಂದು ವಾಙ್ಮಯ ಲೇಖಕರಲ್ಲಿ ಬಹುವಾಗಿ ತೋರಿಬರುತ್ತಿದೆ. ಈ ಕಾರಣದಿಂದಲೇ ಕರ್ನಾಟಕಕ್ಕೆ ಸ್ವತಂತ್ರವಾದ ಒಂದು ವಾಙ್ಮಯವು ಹೊರವಲು ಸಾಧ್ಯವಿಲ್ಲವಾಗಿದೆ.

ಈ ಸುಳ್ಳುಗೌರವಕ್ಕೆ ಬಲಿಬಿದ್ದು ಕರ್ನಾಟಕ ಲೇಖಕರು ತಮ್ಮನ್ನು ತಾವು ತಿದ್ದಿಕೊಳ್ಳುವುದಿಲ್ಲ. ಬಂಗಾಳಿ ವಾಙ್ಮಯ ಕಲಿತರೆ ಆ ವಾಙ್ಮಯದ ವಿಶೇಷವೇನು ಆ ವೈಶಿಷ್ಟ್ಯವನ್ನು ಕರ್ನಾಟಕದಲ್ಲಿ ಹೇಗೆ ಪ್ರೇರಿಸಬಹುದು ವಾಙ್ಮಯದ ಅಭಿವೃದ್ಧಿ ಹೇಗೆ ಆಗಬೇಕು, ಇತ್ಯಾದಿ ಸ್ವತಂತ್ರ ಭಾವನೆಗಳಿಗೆ ಎಡೆ ಕೊಡದೆ ಕರ್ನಾಟಕ ಲೇಖಕರು ಕೂಡಲೆ ಲಬಾಡಿಯಿಕ್ಕುತ್ತಿ ಭಾಷಾಂತರವನ್ನು ಆರಂಭಿಸುವರು ಅನೇಕಬಾರಿ ಮೂಲ ಲೇಖಕರ ಹೆಸರೇ ಇಲ್ಲದೆ ಭಾಷಾಂತರಗಳಂದೂ ಕರೆಸದೆ ಅವುಗಳು ಸ್ವಕೀಯವಾದವುಗಳೆಂದೇ ಪ್ರಕಟಿಸಲ್ಪಡುತ್ತಿವೆ. ಇಂತಹ ಮಾನಸಿಕತೆಯು ಲೇಖಕರಿಗೆ ಸಲ್ಲದು, ಕನ್ನಡ ವಾಙ್ಮಯವನ್ನು ಓದುವವರ ಪರಿಸ್ಥಿತಿಯು ಹೀಗೆಯೆ ಮತ್ತು ಬೆಲೆಗೆ ಕೊಳ್ಳುವವರ ಸ್ಥಿತಿಯು ಹೀಗೆಯೇ ಅಂತು ನಮಗೆ ಆಗಾಗ ಸಿಕ್ಕಬಹುದಾದ ಅಲ್ಪ ಸಂಖ್ಯಾಕ ಗ್ರಂಥಗಳಲ್ಲಿ ಭಾಷಾಂತರಗಳೇ ಮುಕ್ಕಾಲು ಮೂರುವೀಸ ಪಾಲು ಬರುವವು.

ಕಳೆದ ಲೇಖದ ಲೇಖಕರೊಡನೆ ನಾನಾದರೂ ಸೂಚಿಸುವುದೇನಂದರೆ ಕರ್ನಾಟಕದ ಲೇಖಕರೆಲ್ಲರೂ ಈ ಬಿರುದಾವಳಿಗಳನ್ನು ಬಿಟ್ಟು ಬಿಡಬೇಕು ಅವುಗಳಿಗೆ ಸಂಪೂರ್ಣಬಹಿಷ್ಕಾರ ಹಾಕಬೇಕು. ನಾವು ಲೇಖಕರ ಲೇಖಗಳಿಂದ ಅವರನ್ನು ಗೌರವಿಸುವೆವಲ್ಲದೆ. ಲೇಖಕರ ಹೆಸರಿನ ಮೇಲೆ ಸಪ್ತಸಮುದ್ರಗಳ ಹೆಸರಿದ್ದರೂ ರತ್ನರಾಶಿಗಳಿದ್ದರೂ ನಾವೇನೂ ಲಕ್ಷಿಸುವಂತಿಲ್ಲ ಕರ್ನಾಟಕಕ್ಕೇನೇ ಈ ಕಲ್ಕತ್ತಾ ಬಿರುದಾವಳಿಗಳು ಒಂದು ಕಲಂಕ. ಕರ್ನಾಟಕ ಸುಪುತ್ರರು ಈ ಕಲಂಕವನ್ನು ತೊಳೆದು ತೆಗೆಯಬೇಕು. ಇದರಲ್ಲಿ ದುಃಖಕ್ಕೂ ದಾಕ್ಷಿಣ್ಯಕ್ಕೂ ಎಡೆಯಿಲ್ಲ.

ಮೂಲ್ಕಿ ವಾಮನ ಕುಡುವ.

ಕನ್ನಡಿಗನ ಉಪಕಾರ ಕರ್ತೃಗಳಾಗಿ ಕೆಳಗೆ ಕಾಣಿಸಿದ ಸದ್ಗೃಹಸ್ಥರು ಹತ್ತು ರೂಪಾಯಿಗಳನ್ನು ಕಳಿಸಿರುವರು. ಈ ಮಹನೀಯರಿಗೆ ಕನ್ನಡಿಗನು ಋಣಿಯಾಗಿದ್ದಾನೆ.

(೧) ದೇಶಭಕ್ತ ಗಂಗಾಧರರಾವ ದೇಶಪಾಂಡೆ ಬೆಳಗಾಂವ

(೨) ರ್‍ಯಾಂಗ್ಲರ ಪಿ. ಸೀ. ಚಟ್ಟಿ ಎಮ್. ಎ. ಪ್ರಿನ್ಸಿಪಾಲ ಎಲ್ ಫಿನಸ್ಟನ ಕಾಲೇಜ. ಮುಂಬಯಿ

ವರ್ತಮಾನ ಸಾರ.

ಜಾಪವೃತ್ತ

ಮಳೆಯು ಏನೂ ಇಲ್ಲ ಗಾಳಿಯು ಬೀಸುತ್ತಿದೆ ಬರಗಾಲದ ಲಕ್ಷಣಗಳು ಸ್ಪಷ್ಟವಾಗಿ ಕಾಣುತ್ತಿರುವವು

ಇಲ್ಲಿಯ ಮ್ಯುನಿಸಿಪಲ್ ಇಂಗ್ಲೀಷ ಶಾಲೆಯಲ್ಲಿಯ ೬ ನೇ ಇಯತ್ತೆಯು ೧ ನೇ ತಾರೀಖಿನಿಂದ ಒಂದು ಮಾಡಲ್ಪಟ್ಟಿರುವದು- ವಿದ್ಯಾರ್ಥಿಗಳಲ್ಲಿ ಚಳವಳಿಯು ನಡೆದಿದೆ.

ಕರ್ನಾಟಕ ಏಕೀಕರಣ ಸಭೆಯ ಪಕ್ಷದಿಂದ ಕಳೆದ ಶುಕ್ರವಾರ ಮತ್ತು ಶನಿವಾರ ದಿವಸ ಇಲ್ಲಿ ಎರಡು ಬಾಹೀರ ಸಭೆಗಳು ನೇರಿದವು ಮೊದಲನೇ ಸಭೆಯಲ್ಲಿ ಈ ಊರಲ್ಲಿ ಕರ್ನಾಟಕ ಏಕೀಕರಣ ಸಭೆಯ ಶಾಖೆಯೊಂದು ಸ್ಥಾಪಿತವಾಯಿತು ಅದರ ಕಾರ್ಯಕಾರೀ ಮಂಡಲದಲ್ಲಿ ಕೆಳಗಿನ ಸದ್ಗೃಹಸ್ಥರಿರುವರು.

(೧) ಶ್ರೀ ಶಂಕರಪ್ಪ ಸಶ್ರಿ (ಅಧ್ಯಕ್ಷ)
(೨) ,, ಚೋಳ ಜನಪ್ಪ ಗುಂಗರಾವ (ಉಪಾಧ್ಯಕ್ಷ)
(೩) ಶ್ರೀ ಚಂದುರಾವ ನರಗುಂದ } ಕಾರ್ಯದರ್ಶಿಗಳು.
(೪) ,, ದೇವೂರ ಪಾಸ್ಕರ }
(೫) ,, ಮುರುಗಯ್ಯಾ ಸ್ವಾಮಿ ಜಂಗೀನ
(೬) ,, ಡಾ. ಬಸಪ್ಪ ಪಾಟೀಲ
(೭) ಶ್ರೀ ಎಸ್ ಟಿ. ಪಾಟೀಲ ವಕೀಲ
(೮) ,, ಸ್ವಾಮಿರಾವಾಚಾರ್ಯ ಕಿರಸೂರ ವಕೀಲ
(೯) ,, ಯಲವರ್ತಿರಾವ ಧಾರವಾಡಕರ ವಕೀಲ
(೧೦) ,, ಡಾ. ಬಿ.ದ ಂಡಿ

ಎರಡನೇ ದಿವಸದ ಸಭೆಯಲ್ಲಿ ಮುಂಬಯಿ ಯುವಿವರ್ಸಿಟಿ ವಿಶ್ವವಿದ್ಯಾಲಯದ ಬಿಲ್ಲು ಮೊದಲ ಕನ್ನಡ ಸಂಸ್ಥಾನಗಳನ್ನು ಮಹಾರಾಷ್ಟ್ರ ವಿಶ್ವವಿದ್ಯಾಲಯಕ್ಕೆ ಜೋಡಿಸಬೇಕೆಂಬದಾಗಿ ಮಾಡಿದ ಸೂಚನೆಯನ್ನು ನಿಷೇಧಿಸಿ ಆಯಾ ಸಂಸ್ಥಾನದಲ್ಲಿಯ ಕನ್ನಡಿಗರು ಬೇಗನೆ ಜಾಗರೂಕರಾಗಿ ಆ ಬಗ್ಗೆ ನಿವೇದನವನ್ನು ವ್ಯಕ್ತಮಾಡಬೇಕೆಂದು ನಿರ್ಣಯವಾಯಿತು. ದೇಶಭಕ್ತ ಶ್ರೀನಿವಾಸರಾವ ಕೌಜಲಗಿ ರಂಗರಾವ ದಿವಾಕರ ಹಣಮಂತರಾವ ಕೌಜಲಗಿ ಮುಂತಾದವರ ಭಾಷಣಗಳಾದವು

ರವಿವಾರ ದಿವಸ ತಾಜ ನಾಟಕಗೃಹದಲ್ಲಿ ಇಲ್ಲಿಯ ಮುನಸೀಪಾಲಿಟಿಯವರು ಸರ್ವಾನುಮತದಿಂದ ದೇಶ ಭಕ್ತ ಶ್ರೀನಿವಾಸರಾವ ಕೌಜಲಗಿ ಮತ್ತು ರಂಗರಾವ ದಿವಾಕರ ಇವರಿಗೆ ಮಾನ ಪತ್ರಗಳನ್ನು ಅರ್ಪಿಸಿದರು. ಸಮಯೋಚಿತ ಭಾಷಣಗಳಾದವು

ಮುಂಬೈ ಕರ್ನಾಟಕ

ಧಾರವಾಡ ರಸ್ತೆ ಸರದಾರ ಇಂಟರದ ಬಾಗಲಕೋಟೆ ಶಾಖೆಯ ಸಾಧಾರಣ ಸಭೆಯು ರವಿವಾರ ತಾ|| ೩೦ ನೇ ದಿನ ಶಾಗಲಕೋಂಬದಲ್ಲಿ ಜರುಗಿತು ಸಾರ್ವಜನಿಕ ಸಭೆಯಾಯಿತು, ಹೊರಗಿನ ಪ್ರಸಿದ್ಧ ಮುಂದಾಳುಗಳಾದ ಶ್ರೀ ಪಾಟೀಲ, ಜಂಟರ ಮೊದಲಾದವರೂ ಅಲ್ಲಿಗೆ ದಯಮಾಡಿಸಿದ್ದರು.

ಒಕ್ಕಲತನದ ಮುಂಬೈ ಸರಕಾರದವರು ಬೇಗನೇ ತೆಗೆದು ಹಾಕ್ವರು ಇವರ ಒಕ್ಕಲಿಗರಿಗೆ ಬೇಕಾದ ವಿಷಯಗಳನ್ನು ಕಲಿ ಬಗ್ಗೆ ಸರ್ಕಾರ ಜನರಿಗೆ ಜ್ಞಾನವನ್ನು ವಿದ್ಯಾರ್ಥಿಗಳಿಗೆ ಮಾಡಿ ಕೊಡ. ಈ ವಿದ್ಯಾರ್ಥಿಗಳು ಇದರಲ್ಲಿ ಹೇಗಾದ ಹೊಂದಿದರೆ, (ಸರಕಾರ ದವರು ಬೇಗನೆ ಸ್ಥಾಪಿಸಲ್ಪಡುವ) ಒಕ್ಕಲತನದ ಟ್ರೇನಿಂಗ ಕಾಲೇಜಿಗೆ ಪ್ರವೇಶ ದೊರೆಯುವದು ಹೆಚ್ಚಿಗೆ ಸಂಗತಿಗಳಿಗಾಗಿ ದೇವಿಹೊಸೂರ ಒಕ್ಕಲತನದ ಟ್ರೇನಿಂಗ ಮಾಸ್ತರರಿಗೆ ಬರೆಯಬಹುದು

ಮದ್ರಾಸ ಕರ್ನಾಟಕ

ತಮಿಳ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಬಗ್ಗೆ ಪ್ರಯತ್ನಿಸಬೇಕಾಗಿ ದಿವಾಣ ಬಹದ್ದೂರ ಶಿವಜ್ಞಾನಂ ಪಿಳ್ಳೆಯವರು ಪ್ರಯತ್ನಿಸುತ್ತಿದ್ದಾರೆ. ಒಂದು ಮಂಡಲವೂ ಸ್ಥಾಪಿತವಾಗಿದೆ. ಕರ್ನಾಟಕದ ದಿವಾಣ ಬಹಾದ್ದೂರ ರಾವ ಬಹದ್ದೂರರು ಇದನ್ನು ಕಲಿತುಕೊಳ್ಳಲಿ!

ಕನ್ನಡಿಗರಿಗೆಲ್ಲ ಪರಮ ಪ್ರಿಯವಾಗಿದ್ದ "ಸುವಾಸಿನಿ" ಯು ಪುನಃ ಪ್ರಾರಂಭವಾಗುವದು. ಶ್ರೀ. ಎನ್ ರಾಜಗೋಪಾಲ ಕೃಷ್ಣರಾಯರು ಸಂಪಾದಕರಾಗುವರು ನವರಾತ್ರಿಯಿಂದ ಮಂಗಳೂರಿನಲ್ಲಿ ಪ್ರಾರಂಭವಾಗುವದು.

ಕಳೆದ ೨೯ ನೇ ತಾ|| ದಿನ ಮಂಗಳೂರಿನ ಯಕ್ಷಗಾನೋಜ್ಜೀವಿನೀ ಸಭೆಯವರು ಒಂದು ಯಕ್ಷಗಾನವನ್ನು ಹಾಡಿಸಿ, ಅರ್ಥ ಹೇಳಿಸಿ "ರಾಳ ಮದ್ದಳೆ" ಯನ್ನು ಜರುಗಿಸಿದರು ಮಂಗಳೂರಿನ ಕೆಲ ಭಾಗಗಳಲ್ಲಿ ಇಲಿ ಬೀಳುತ್ತಿವೆ.

ಮುಂಬೈ—ಮಂಗಳೂರ ಗಳ ನಡುವೆ, 'ನಾವಿಗೇಶನ್' ಕಂಪನಿಯ 'ಸ್ಟೀಮರು' ಗಳು ೧೧ ನೇ ತಾ|| ನಿಂದ ಪ್ರಾರಂಭವಾಗುವವು

ಈ ವರೆಗೂ ಉಡುಪಿಯಲ್ಲಿ ಮುನಸಿಪಾಲಿಟಿಯು ಇರಲಿಲ್ಲ. ಈ ಸಂಸ್ಥೆಯಿಂದ ಜನರಲ್ಲಿ ಉತ್ಪನ್ನವಾಗುವ ಭೇದ ಭಾವಗಳೂ ಆರ್ಥಾರ್ ಯಿರಲಿಲ್ಲ ಇನ್ನು ಮೇಲೆ ಸರಕಾರದವರು ಅಲ್ಲಿ ಒಂದು ಮುನಸೀಪಾಲ್ಟಿಯನ್ನು ಸ್ಥಾಪಿಸಬೇಕಾಗಿ ಯೋಚಿಸಿದ್ದಾರೆ.

ಮೈಸೂರ ಕರ್ನಾಟಕ

ಬೆಳಗಾವಿಯ ಕಾಂಗ್ರೆಸ್ಸಿನಲ್ಲಿ ತನ್ನ ಪಾಂಡಿತ್ಯದಿಂದ ಸುಪ್ರಸಿದ್ಧಿಯನ್ನು ಪಡೆದ ಮಾಸನೋಹನಚಂದ್ರನೆಂಬ ಗಾಯನಪಟುವಾದ ೯ ವರ್ಷದ ಬಾಲಕನು ತನ್ನ ವಿದ್ಯೆಯನ್ನು ಅರಮನೆಯ ನಾಟಕ ಸಭೆಯಲ್ಲಿ ತೋರ್ಪಡಿಸಿದನು. ಕನ್ನಡನಾಡಿನ ಯುವಕರೂ, ಬಾಲಕರೂ, ಹೀಗೆ ದಿನದಿನಕ್ಕೆ ಮುನ್ನಡೆಯನ್ನು ಪಡೆಯಲಿ!

ಕುಣಿಗಲ್ಲ ತಾ|| ವೀರಶೈವರ ಸಭೆಯು ಕಳೆದ ತಿಂಗಳಲ್ಲಿ ಜರುಗಿತು.

ಕೊಡಗು ಕರ್ನಾಟಕ

ಜನಗಳೆಲ್ಲ ಅಪ್ರಹಪಟ್ಟಂತೆ ಮಡಿಕೇರಿಯ ಸರಕಾರೀ ಸೆಂಟ್ರಲ್ ಹೈಸ್ಕೂಲಿನಲ್ಲಿ ಸಂಸ್ಕೃತ ಕಲಿಸುವ ಏರ್ಪಾಡಾಗಿದೆ. ಕನ್ನಡ ಸಂಸ್ಕೃತ ಪರಿಚಿತ ಇದ್ದಂಥವರು ಈ ಪಂಡಿತ ಸ್ಥಳಕ್ಕೆ ಅರ್ಜಿಗಳನ್ನು ಸರಿಕೆಲ್ಸ ಸಹ 'ಹೆಡ್ಡಮಾಸ್ತರ' ರ ಕಡೆಗೆ ಕಳಿಸಬೇಕು ಸಂಬಳ ರೂ—೬೦—೨-೭೦

ರಾಂಪ್ರೇಮಿಪ್ರಚಾರ

ನವಲಗುಂದ ಶ್ರೀ ದೇವಗಾಂವಕರವರು ಪುನಃ ೩೬ ಜನರ ಸಭೆಯನ್ನು ಕಳಿಸಿದ್ದಾರೆ. ಇವರ ಸಾರ್ವಜನಿಕ ಉತ್ಸಾಹವು ಸತ್ತ್ಯವಾಗಿದೆ.

ಹಿಂದುಸ್ಥಾನ

ಮುಂಬಯಿಯಲ್ಲಿ ಧೀರಸ್ವರರು ಇತ್ತೀಚೆಗೆ, ತಮ್ಮ ಅಪ್ರೀಷ್ಟರ ಮಾರವಾಡಿಗಳ, ಮೇಲೆಯೂ ಮೇಣವನ್ನು ರಂಬಿಟ್ಟು ಪಟಪಡ ಸರಾಗಿ ಮುಂದು ನೀರಿಯಲ್ಲಿ ಹಾಯುವನೆಲ್ಲ ದ್ರವ್ಯ ನನಾಯನ್ನು ಕೇಳುತ್ತಿರುವರು. ಇದ ಲೆ ಬೀದಿಯಲ್ಲಿ ತಿರುಗಾಡುವದೇ ಪಕೆ ಕಠಿಣವಾಗಿದೆಯಂತೆ, ಪೋಲೀಸರು ಈ ಬಗ್ಗೆ ಯೋಗ್ಯವಿಚಾರಮಾಡದೇ ಹಾಳುಗೆಲ್ಲವೆಂದೂ ವದ್ರಾಸದ ಪೈಪರಗಳಲ್ಲಿ ಪತ್ರಗಳು ಪ್ರಸಿದ್ಧವಾಗಿವೆ

ಪ್ಯಾರೀಸದಲ್ಲಿ ಕೂಡುವ ಪದಲೋಕ ವಿದ್ಯಾ ಪರಿಷತ್ತಿಗೆ ಶ್ರೀ. ಪಾಟೀಲರವರು ಹಿಂದುಸ್ಥಾನದ ಪ್ರತಿನಿಧಿಯಾಗಿ ಹೋಗುವರು

ಸೂಚನೆ:— ಈ ಸಾರೆ ಮುದ್ರಕರ ದೋಷದಿಂದ ೧—೪—೫—೮ ಪುಟಗಳ ಮೇಲಿನ ಭಾಗದಲ್ಲಿ ಭಾದ್ರಪದ ಪದ್ಯ ೨ ಎಂದು ಇರುವಲ್ಲಿ ತಪ್ಪಿ ಭಾದ್ರಪದ ಶುದ್ಧ ೪ ಎಂದು ಬಿದ್ದಿರುವದು. ವಾಚಕರು ಕ್ಷಮಿಸಬೇಕು.

ರೇಲ್ವೇ ಬೋರ್ಡ ಸಿಪ್ಪಾ ಇವರಿಗೆ

ಮಹಾಶಯರೇ

ಕೆಳಗೆ ಸಹಿ ಮಾಡಿದಂಥ ಕರ್ನಾಟಕದೊಳಗಿನ ಬೇರೆ ಬೇರೆ ಭಾಗಗಳ ನಿವಾಸಿಗಳಾದ ನಾವುಗಳೆಲ್ಲ ತಮಗೆ ಅರಿಕೆ ಮಾಡಿಕೊಳ್ಳುವದೇನಂದರೆ, ಸಂಯುಕ್ತ ಕರ್ನಾಟಕ ಪ್ರಾಂತದಲ್ಲಿರುವ ನಮಗೆ ನಮ್ಮ ಕರ್ನಾಟಕನಾಡಿನಲ್ಲಿ ರೇಲ್ವೆ ಸೌಕರ್ಯಗಳು ಸಮಾಧಾನಕರ ವಾಗಿರುವದಿಲ್ಲ. ಸಾವಿರಾರು ಊರುಗಳಲ್ಲಿ ರೇಲ್ವೆಗಳಿರುವದಿಲ್ಲ. ಇದರಿಂದ ನಮ್ಮ ಪ್ರಾಂತದ ಜನರ ಪ್ರವಾಸಗಳೆಲ್ಲ ಬಹು ಕಷ್ಟವಾಗಿವೆ. ನಮಲ್ಲಿಯ ವ್ಯಾಪಾರ ಉದ್ದಿಮೆಗಳಿಗೆ ಇದರಿಂದ ಬಹು ಆತಂಕವಾಗಿದೆ. ಇಷ್ಟು ದಿನಗಳ ವರೆಗೆ ಇವೆಲ್ಲ ಕಷ್ಟಗಳನ್ನು ನಾವು ಸೋಸುತ್ತಿದ್ದರೂ ಸಹ ನಮಗೆ ಸುಖಕರವಾಗುವಂಥ ಹೊಸ ರೇಲ್ವೇಗಳು ಈವರಿಗೂ ಆಗಲೊಲ್ಲವು. ಆದುದರಿಂದ ಈಗ್ಗೆ ರೇಲ್ವೆ ಬೋರ್ಡಿನವರು ಅನುಮತಿಯನ್ನು ಕೊಟ್ಟಂಥ ಕೆಳಗಿನ ರೇಲ್ವೇಗಳನ್ನು ಬೇಗನೆ ಪ್ರಾರಂಭಿಸುವಂತೆ ಏರ್ಪಾಟ ಮಾಡಬೇಕಾಗಿ ಆಗ್ರಹ ಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

(೧) ನಿಪ್ಪಾಣಿ ಹುನಗುಂದ .... (ಸದರ್ನ ಮರಾಠಾ ರೇಲ್ವೆ.).
(೨) ಬೆಳಗಾವಿ ಹುಬ್ಬಳ್ಳಿ (ಸವದತ್ತಿ ಮಾರ್ಗವಾಗಿ) ... . ”
(೩) ಹಾವೇರಿ ಹಾವನೂರ .... ”
(೪) ಹರಿಹರ- ಕೊಟ್ಟೂರ .... ”
(೫) ಗದಗ-ವಾಡಿ-ರಾಯಚೂರ.... .... (ನಿಝಾಂ ರೇಲ್ವೆ)
(೬) ನಂಜನಗೂಡ್ಲ ಮೆಟ್ಟುಪಾಲಿಯಮ್ .... (ಮೈಸೂರ ರೇಲ್ವೆ)

ಈ ಆರು ಹಳೇ ಯೋಜನೆಗಳ ಹೊರತಾಗಿ

(೧) ಹುಬ್ಬಳ್ಳಿ- ಕಾರವಾರ- ಮಂಗಳೂರಿಗೂ ....
(೨) ಮೈಸೂರ ಮಡಿಕೇರಿಗೂ. ....

ಹೊಸದಾಗಿ ರೇಲ್ವೆ ಲಾಯಿನಗಳನ್ನು ಹಾಕಬೇಕಾಗಿ ನಮ್ಮೆಲ್ಲರ ಅತಿಶಯ ಕಳಕಳಿಯ ಮತ್ತು ಆತುರದ ಪ್ರಾರ್ಥನೆ ಇದೆ. ಪೂರ್ವ ಸಮುದ್ರದ ದಂಡೆಯ ಗುಂಟ ರೇಲ್ವೆ ಕಂಪನಿಯವರು ರೇಲ್ವೆ ಲಾಯಿನಗಳನ್ನು ಹಾಕಿ ಅನೇಕ ವರ್ಷಗಳಾದವು ಆದಕಾರಣ ಪಶ್ಚಿಮ ಸಮುದ್ರದ ದಂಡೆಯ ಕಡೆಗೆ ಸಹ ತಾವು ಹೊಸ ಲಾಯಿನ್ನಗಳನ್ನು ಹಾಕಿದರೆ, ಇತ್ತ ಕಡೆಯ ಜನರಿಗೂ ಪ್ರವಾಸಕ್ಕಾಗಿ ಬಹು ಅನುಕೂಲವಾಗುವದಲ್ಲದೆ. ಕಾರವಾರ, ಮಂಗಳೂರ ಜಿಲ್ಹೆಗಳ ಕಾನನ ಉಪವನಗಳ ಲಾಭವನ್ನೂ ಇಲ್ಲಿಯ ಜನರೆಲ್ಲ ತೆಗೆದು ಕೊಂಡು, ಕಾಗದ, ಕಟ್ಟಿಗೆ ಮೊದಲಾದ ಹೊಸಗಿರಣಿಗಳನ್ನೂ ಬೇರೆ ವ್ಯವಸಾಯಗಳನ್ನು ಪ್ರಾರಂಭಿಸಲು ಅನುಕೂಲವಾಗುವದು. ಮುಂದೆ ಪಶ್ಚಿಮ ದಂಡೆಯಲ್ಲಿ ಒಂದು ಬಂದರವನ್ನು ತೆಗೆಯಲು ಅನುಕೂಲವಾಗಿ ಅದರಿಂದ ನಮ್ಮ ಕರ್ನಾಟಕ ಪ್ರಾಂತದ ಸಂಪದಭಿವೃದ್ಧಿಯು ತಾನೇ ಆಗುವದು’

ಭಾಷಾನ್ವಯ ಪ್ರಾಂತ ರಚನೆಯನ್ನು ಮಾಡುವದಕ್ಕೆ ಸರಕಾರದ ಒಪ್ಪಿಗೆಯದೆ. ಅದು ಕೃತಿಯಲ್ಲಿಯೂ ಕ್ರಮೇಣ ಬರಹತ್ತಿದೆ. ಕರ್ನಾಟಕಕ್ಕಾದರೂ ಸ್ವತಂತ್ರ ಪ್ರಾಂತವುದೊರೆಯುವದು. ನಾವು ಈಗ್ಗೆ ಸೂಚಿಸಿದ ರೇಲ್ವೆ ಗಳಾದರೆ ನಮ್ಮ ಕರ್ನಾಟಕ ಪ್ರಾಂತರಚನೆಯ ಕಾರ್ಯಕ್ಕೆ ಬಹು ಅನುಕೂಲವಾಗುವದು.

ಆದುದರಿಂದ ತಾವು ಇದನ್ನೆಲ್ಲ ಲಕ್ಷ್ಯದಲ್ಲಿ ತಂದು, ನಮ್ಮ ಪ್ರಾರ್ಥನೆಯನ್ನು ಬೇಗನೆ ಮನ್ನಿಸಬೇಕಾಗಿ ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇವೆ.

ಇತಿ. ತಮ್ಮ ವಿಧೇಯರಾದ

ಸಂಖೆ	ಪೂರ್ಣ ಹೆಸರು ಮತ್ತು ವಿಳಾಸ.	ಉದ್ಯೋಗ.	ಸಹಿ.
೧			
೨			
೩			
೪			
೫			
೬			
೭			
೮			
೯			

ಈ ಪತ್ರಿಕೆಯನ್ನು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಲಯದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರಿ.ನಂ. ಬಿ. ೧೫೪೭ ವಾ. ಚಂದಾ ೧-೯-೦ ಮಾತ್ರ

ಕನ್ನಡಿಗ.

ಜಯ ಚಾಮರಾಜೇಂದ್ರ

(ಇದರಲ್ಲಿ ಕನ್ನಡ ಶಬ್ದಗಳನ್ನು ಉಪಯೋಗಿಸುವರು)

ಯಥಾ ಪರಾಕ್ರಮೇ ...

ಸಂಪಾದಕರು.— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ಭಾದ್ರಪದ ವದ್ಯ ೯ ಶಕೆ ೧೮೬೦. ತಾ. ೧೧-೯-೧೯೩೮. | ಸಂಚಿಕೆ ೨೪

ಸಂಪಾದಕರ ಭೂಮಿ.

ನನ್ನ ಮನಸಿನ ವೀಣೆಯಾಗಿ ಕಟ್ಟುವೆನಾನು ।
ನಿನ್ನ ಬೆಳಕಿನ ಮಾಡಿದಂಥ ಮಕ್ಕಳ ದೀಪ್ತಿ।
ಚಿನ್ನದಾದರು ಚಿನ್ನ ವೀಣೆಬಿಟ್ಟಿಯು ನೋಡು ॥
ಚಿನ್ಮಯಾಕಾಶದಲ್ಲಿ ।
ನನ್ನ ದೇಹವು ನಿನ್ನ ಸಿಂಹಾಸನವಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ಬೀರುವ ।
ಗಂಧವಹನೆಂದು ತಿಳಿಯೆ ॥

—ಅಂಬಿಕಾತನಯದತ್ತ

ಇಲ್ಲಿಯ ಮ್ಯುನಿಸಿಪಾಲಿಟಿಯವರು ಇಂಗ್ಲೀಷ ಶಾಲೆಯಲ್ಲಿಯ ಆರನೇ ಇಯತ್ತೆಯನ್ನು ಒಂದು ಮಾಡಿದ ಸುದ್ದಿಯು ಹೊರನಾಡಿನ ಕನ್ನಡಿಗನಲ್ಲಿ ಪ್ರಸಿದ್ಧವಾಗಿದೆಯಷ್ಟೇ. ಆದರೆ ಮ್ಯುನಿಸಿಪಾಲಿಟಿಯವರಿಗೆ ಹೀಗೆ ಮಾಡಲು ಸಂಭವಿಸಿದ ಔತ್ಸುಕ್ಯವೇ ಮುಖ್ಯ ಕಾರಣವು: ಈಗ ಆ ಶಾಲೆಯಲ್ಲಿ ಆರನೇ ಇಯತ್ತೆಯು ಹತ್ತು ಹದಿನೈದು ವರ್ಷಗಳಿಂದವು. ಆದರೆ ಆ ಶಾಲೆಯನ್ನು ಹೈಸ್ಕೂಲ ಮಾಡಬೇಕೆಂದು ಈ ಹಿಂದಿನ ವರ್ಷಗಳಿಂದ ಪ್ರಯತ್ನವನ್ನಾದರೂ ಮಾಡಿದರು. ಈ ತರದ ಪ್ರಯತ್ನವು ಸಾಧ್ಯವಾಗುವದರ ಬದಲು ಆರನೇ ಇಯತ್ತೆಯನ್ನು ಒಂದು ಮಾಡುವ ಪ್ರಸಂಗವು ಒದಗಿತು. ಹೀಗಾಗಲಿಕ್ಕೆ ಆಂತರಿಕ ಕಾರಣಗಳೇನಿರುವವೋ ತಿಳಿಯದು. ಸಾರ್ವಜನಿಕ ರೀತಿಯಿಂದ ಮುಂದೆ ಬಂದ ಕಾರಣಗಳೆಂದರೆ ಮುಖ್ಯವಾಗಿ ಎರಡು ಎಂದು ಹೇಳಬಹುದು. ಮೊದಲನೇಯದು ಬಾಗಲಕೋಟೆಗೆ ಮಾತ್ರ ಹತ್ತು ಸಾವಿರದ ಎರಡನೇಯದು ಸಾರ್ವತ್ರಿಕವಾಗಿದ್ದುದು, ಈ ಊರಲ್ಲಿ ಬೇರೊಂದು, ಸ್ವತಂತ್ರ ಹಾಯಸ್ಕೂಲಿದ್ದು ಅದಕ್ಕೆ ಈ ಮ್ಯುನಿಸಿಪಾಲಿಟಿಯ ಶಾಲೆಯು ವಿರೋಧಕರವಾಗುವದೆಂಬುದು ಮೊದಲನೇಯ ಕಾರಣವು. ಮಾಧ್ಯಮಿಕ ಶಿಕ್ಷಣದ ವೆಚ್ಚವನ್ನು ಮ್ಯುನಿಸಿಪಾಲಿಟಿಯವರು ಮಾಡುವ ಕಾರಣವಿಲ್ಲ. ಸ್ವತಂತ್ರ ಶಾಲೆಗಳಿಗೆ ಹೋಗುವದೇ ಯೋಗ್ಯವಾಗಿರುವದೆಂಬುದು ಎರಡನೆಯ ಕಾರಣವು. ಇಲ್ಲಿ ಲಿಂಗಾಯತ ಶಿಕ್ಷಣ ಸಂಘದವರಿಂದ ನಡೆದ ಬಸವೇಶ್ವರ ಹಾಯಸ್ಕೂಲು ಇರುವದು ನಿಜ. ಆದರೆ ಆ ಶಾಲೆಗೆ ಮ್ಯುನಿಸಿಪಾಲಿಟಿಯ ಶಾಲೆಯಿಂದ ಯಾವ ತರದ ಆತಂಕವೂ ಆಗುವದಿಲ್ಲವೆಂದು ನಮ್ಮ ಖಂಡಿತ ಅಭಿಪ್ರಾಯವು. ಎರಡೂ ಶಾಲೆಗಳು ಉತ್ತಮ ರೀತಿಯಿಂದ ನಡೆಯುವವು. ಸಾಕಷ್ಟು ವಿದ್ಯಾರ್ಥಿಗಳು ದೊರೆಯುವರು. ಬಾಗಲಕೋಟೆಯಂಥ ದೊಡ್ಡ ಪಟ್ಟಣಕ್ಕೆ ಎರಡು ಹಾಯಸ್ಕೂಲುಗಳೇನು ಹೆಚ್ಚಾಗುವದಿಲ್ಲ. ಹೀಗಿದ್ದು ಶಿಕ್ಷಣ ಖಾತೆಯ ಅಧಿಕಾರಿಗಳು ಮ್ಯುನಿಸಿಪಾಲಿಟಿಯವರಿಗೆ ಆರನೇ ಇಯತ್ತೆಯನ್ನು ಏಕೆ ಬಂದು ಮಾಡಲು ಹಚ್ಚಿದರೋ ತಿಳಿಯದು. ಹೊಸದಾಗಿ ತೆಗೆಯಲ್ಪಟ್ಟ ಎರಡು ವರ್ಗಗಳಂತೂ ನಾನಾ ಕಾರಣಗಳಿಂದ ಬೇಗ ಹೆಸರಿಲ್ಲದೆ ಬಂದಾಗಿ ಹೋದವು. ಹೀಗಾಗಿ ಈಗ ಇದೇ ಊರಿಗೆ ಒಂದೇ ಹಾಯಸ್ಕೂಲವಾಗಿದೆ. ಇನ್ನು ಎರಡನೇಯ ಕಾರಣವನ್ನು ವಿಚಾರ ಮಾಡಿದರೆ ಅದರಲ್ಲಿ ಒಂದು ಗೂಢವಾದ ಕಾರಣ ಇರುವದೆಂದು ತೋರುತ್ತದೆ. ಇತ್ತೀಚೆಗೆ ಸರಕಾರದವರು ತಮ್ಮ ಬೊಕ್ಕಸದೊಳಗಿಂದ ಶಿಕ್ಷಣದ ಸಲುವಾಗಿ ಖರ್ಚು ಮಾಡುವದನ್ನು ಕಡಿಮೆ ಮಾಡುತ್ತಿರುವದು ಸುಪ್ರಸಿದ್ಧವಿದೆ. ಪೋಲೀಸ ಮೊದಲಾದ ಖಾತೆಗಳಿಗೆ ಖರ್ಚು ಮಾಡಿದ ಮೇಲೆ ಸರಕಾರಕ್ಕೆ ಲೋಕೋಪಯೋಗಿ ಖಾತೆಗಳಿಗೆ ಹಣವು ಉಳಿಯುವದೇ ಇಲ್ಲ! ಅದರಂತೆಯೇ ಸರಕಾರದವರು ಲೋಕಲ ಬೋರ್ಡ, ಮ್ಯುನಿಸಿಪಾಲಿಟಿಯಂಥ ಸಂಸ್ಥೆಗಳ ಬೊಕ್ಕಸದೊಳಗಿಂದಾದರೂ ಶಿಕ್ಷಣದ ಸಲುವಾಗಿ ವಿಶೇಷ ಖರ್ಚು ಮಾಡಕೂಡದೆಂಬುದೇ ಸರಕಾರದ ಧೋರಣವಾಗಿರುವದು. ಮ್ಯುನಿಸಿಪಾಲಿಟಿ ಲೋಕಲ ಬೋರ್ಡುಗಳೂ ಆದಷ್ಟು ಹೆಚ್ಚು ಪ್ರಾಥಮಿಕ ಶಿಕ್ಷಣದ ಕಡೆಗೆ ಲಕ್ಷ್ಯಕೊಡಬೇಕಂತೆ. ಉಚ್ಚ ಶಿಕ್ಷಣವು ಆದಷ್ಟು ಸ್ವತಂತ್ರ ಸಂಸ್ಥೆಗಳಿಂದ ನಡೆಸಲ್ಪಡಬೇಕಂತೆ. ತಮ್ಮ ಕಿಸೆಯೊಳಗಿನ ರೊಕ್ಕ ಹೋಗದಿದ್ದರಾಯಿತು! ಹೀಗಾಗಿ ಇಲ್ಲಿಯ ಮ್ಯುನಿಸಿಪಾಲಿಟಿಯ ಇಂಗ್ಲೀಷ ಆರನೇ ಇಯತ್ತೆ ಶಾಲೆಯು ಹೋಯಿತು. ಹಿಂದೆ ಹೋದ ಮೇಲೆ ಚಿಂತಿಸಿ ಫಲವೇನು!

ಅಜ್ಞಾತ ರತ್ನವು— Full many a gem of purest ray Serene the dark un-fathomed caves of ocean bear

(ಕಡಲಿನ ಒಡಲಲ್ಲಿಯ ಉತ್ತಮವಾದ ಮುತ್ತುಗಳಂತೆಯೂ, ಮನುಷ್ಯನ ಸುಳುವಿಲ್ಲದ ಹಳುವುಗಳಲ್ಲಿಯ ಹೂವುಗಳಂತೆಯೂ, ಬೆಳಕಿನ ಕಿರಣನ್ನೊಳಕೊಂಡ ಎಷ್ಟೋ ಸತ್ಪುರುಷರು ಜಗದ ಕಣ್ಣಿಗೆ ... ಬೀಳಿಯುತ್ತಾರೆ)

ಇದರಂತೆ ತಾಳಿಕೋಟೆಯಲ್ಲಿ ಬಳಿಂಗಿ ಎಂಬವನೊಬ್ಬ ಸಣ್ಣಾಪುರಿಯಿರುವುದು. ಅಲ್ಲಿ ಬಾಬಲನಾಮಕನೊಬ್ಬ ಮುಸಲ್ಮಾನನು ಮೊನ್ನೆ ಮೊನ್ನೆ ತನ್ನ ಜೀವನದ ಯಾತ್ರೆಯನ್ನು ಮುಗಿಸಿದನು. ಆತನು ಅನೇಕ ಸಂಕಷ್ಟಗಳನ್ನುಂಡಿದ್ದನು. ಅವನು ಪರಮಾತ್ಮನ ಪರಮಭಕ್ತನಾಗಿದ್ದನಲ್ಲದೆ, ಮೇಲಾದ ಕವಿಯಾದರೂ ಆಗಿದ್ದನು ಅವನು ಹೊಸದಲ್ಲಿಯೇ ಹಾಡಿ ಹಾಡಿ ಮಾಯ ಹಾದನು, ಮುನೀಶ್ವರ ಪದವನ್ನು ಹೊಂದಿದನು. ಮುತ್ತು ಮೂಲೆಯಲ್ಲಿಯೇ ಹುದುಗಿ ಹೋಗಿ ಅದಗಿತೆಂದೂ, ಹೂವು ತನ್ನ ಮುಗಿದ ಕುಟಿಗಳನ್ನು ಬಿಚ್ಚಿ ಗಂಧವನ್ನು ಗುಳಿಸಲಿಲ್ಲವೆಂದೂ, ನಮಗೆ ಬಹಳ ವಿಷಾದವಾಗಿದೆ. ಕನ್ನಡಿಗರಿಗೆ ಅವನ ಅಮೃತವನ್ನು ಸವಿಯುವ ಭಾಗ್ಯವಿಲ್ಲವಲ್ಲ! ಆದರೂ ಅವನ ಕೆಲವು ಮುತ್ತುಗಳನ್ನು ದೊರಕಿಸಿ ಅವುಗಳ ಸೊಬಗಿನ ಮಾಲೆಯನ್ನು ಮಾಡಿ, ಕನ್ನಡಿಗರ ಕೊರಳಿಗೆ ನೀಡುವೆವು. ದೇವರೇ ಅವನಾತ್ಮಕ್ಕೆ ಶಾಂತಿಯನ್ನು ನೀಡಯ್ಯಾ

ಅತ್ತ ಬಳ್ಳಾರಿಯ ಕಡೆಗೆ ಆಂಧ್ರರು ಕರ್ನಾಟಕದಲ್ಲಿ ಒಳನುಗ್ಗುತ್ತಿರುವಾಗ ಇತ್ತ ಮಹಾರಾಷ್ಟ್ರೀಯರು ಕರ್ನಾಟಕದ ಮೇಲೆ ದಾಳಿಯನ್ನು ತಂದಿರುವರು. ಮೊನ್ನೆ ಮುಂಬಯಿ ವಿಶ್ವವಿದ್ಯಾಲಯದ ವಿಚಾರಣಾಕಮೀಟಿಯವರು ಮಹಾರಾಷ್ಟ್ರಕ್ಕೆ ಬೇರೊಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂದೂ ಅದರ ಕೇಂದ್ರವನ್ನು ಪುಣೆಯನ್ನಾಗಿ ಮಾಡಬೇಕೆಂದೂ ಸೂಚಿಸಿರುವರು. ಇಷ್ಟೇ ಆಗಿದ್ದರೆ ನಮಗೇನೂ ಒದರುವ ಪ್ರಸಂಗವು ಇರಲಿಲ್ಲ. ಆದರೆ ಆ ವಿಶ್ವವಿದ್ಯಾಲಯದ ಆಡಳಿತೆಗೆ ಜಮಖಂಡಿ, ರಾಮದುರ್ಗ, ಮುಧೋಳ, ಮಿರ್ಜಿ, ಕೊಲ್ಹಾಪುರ, ಮೊದಲಾದ ಕನ್ನಡ ಸಂಸ್ಥಾನಗಳನ್ನು ಸೇರಿಸಿದ್ದರಿಂದ ಆ ಬಗ್ಗೆ ನಾವು ಅತ್ಯಂತ ತೀವ್ರವಾಗಿ ನಿಷೇಧಿಸಬೇಕಾಗಿರುವದು. ಈ ಸಂಸ್ಥಾನಗಳಲ್ಲಿಯ ಜನರು ಕನ್ನಡಿಗರೇ ಅವರ ಮಾತೃಭಾಷೆಯೂ ಕನ್ನಡವೇ. ಆದರೆ ದೈವದುರ್ವಿಪಾಕದಿಂದ ಈ ಸಂಸ್ಥಾನಗಳು ಮರಾಠ ರಾಜರ ವಶದಲ್ಲಿರುವದರಿಂದ ಸ್ವಾಭಾವಿಕವಾಗಿ ಅಲ್ಲಿಯ ಅಧಿಕಾರಸ್ಥರೂ ಮೊದಲಾದವರು ಮರಾಠಿಗರೇ ಆಗಿರುವರು. ಸರಕಾರೀಭಾಷೆಯೂ ಮರಾಠಿಯೇ, ಜಮಖಂಡಿ ಸಂಸ್ಥಾನವನ್ನೊಂದು ಹೊರ್ತು ಪಡಿಸಿ ಉಳಿದ ಸಂಸ್ಥಾನಗಳಲ್ಲಿ ಮರಾಠಿಯಲ್ಲಿಯೇ ಪ್ರಾಥಮಿಕ ಶಿಕ್ಷಣವು ದೊರೆಯುವದು. ಆದರೆ ಅಲ್ಲಿಯ ಶಾಲೆಗಳಲ್ಲಿಯ ಮಡುಗರನ್ನು ಮರಾಠಿಯಲ್ಲಿ ಮಾತಾಡಿಸಿದರೆ ಅವರಿಗೇನೂ ತಿಳಿಯುವದಿಲ್ಲ. ಅವರಿಗೆ ಮರಾಠಿಯನ್ನು ಮಾತಾಡಲಿಕ್ಕೂ ಬರುವದಿಲ್ಲ. ಈ ಸಂಸ್ಥಾನಗಳಲ್ಲಿ ಕನ್ನಡ ಶಾಲೆಗಳನ್ನೇ ಸ್ಥಾಪಿಸಬೇಕೆಂದು ಪ್ರತಿವರ್ಷ ಜರಗುವ ಕರ್ನಾಟಕ ಸಾಹಿತ್ಯ ಸಮ್ಮೇಲನದಲ್ಲಿ ಒಂದೇ ಸಮನೆ ನಿರ್ಣಯಗಳನ್ನು ಮಾಡಿ ಆಯಾ ಸಂಸ್ಥಾನಿಕರ ಕಡೆಗೆ ಕಳಿಸಿದರೂ ಕೇಳುವವರಾರು!) ಹೀಗೆ ಅನ್ಯಾಯವು ನಡೆದಿರಲು ಈಗ ಮಹಾರಾಷ್ಟ್ರ ವಿಶ್ವವಿದ್ಯಾಲಕ್ಕೆ ಅವುಗಳನ್ನು ಸೇರಿಸಿದರೆ ಕನ್ನಡಭಾಷೆಗೆ ಬಂದು ಹಿಡಿದು ದಬ್ಬಿಕೊಟ್ಟಂತೆಯೇ ಆಗುವದು ಜನರಲ್ಲಿಯ ಕನ್ನಡಭಾಷೆಯೇನೂ ಹೋಗುವದಿಲ್ಲ. ಆದರೆ ಕನ್ನಡ ಸಂಸ್ಕೃತಿಯು ಪುಷ್ಟಿ ಹೊಂದಲು ಸಾಧ್ಯವಾಗುವದಿಲ್ಲ. ಕನ್ನಡಕ್ಕೆ ಪ್ರಾಧಾನ್ಯವಿಲ್ಲದ್ದರಿಂದ ಆ ಬಗ್ಗೆ ಅಭಿಮಾನವು ಜನರಲ್ಲಿ ಜಾಗ್ರತವಾಗುವದಿಲ್ಲ ಇತ್ತ ಮರಾಠಿಯೂ ಅಲ್ಲಿ ಬೆಳೆಯುವದೇ? ಅದೂ ಇಲ್ಲ. ಅಲ್ಲಿಯ ಜನರ ಅವಸ್ಥೆಯು ತ್ರಿಶಂಕುವಿನಂತೆ ಆಗುವದು. ಆದ್ದರಿಂದ ಈಗಿನಿಂದಲೇ ಮಹಾರಾಷ್ಟ್ರ ವಿಶ್ವವಿದ್ಯಾಲಯದ ಆಡಳಿತದಲ್ಲಿ ಈ ಸಂಸ್ಥಾನಗಳನ್ನು ಸೇರಿಸಬೇಕೆಂಬ ಸೂಚನೆಯನ್ನು ಅಲ್ಲಿಯ ಪ್ರಜೆಗಳು ಬಲವಾಗಿ ವಿರೋಧಿಸಿ ಪ್ರಚಂಡ ಚಳವಳಿಯನ್ನು ಪ್ರಾರಂಭಿಸಬೇಕು. ಮುಂಬಯಿ ವಿಶ್ವವಿದ್ಯಾಲಯದಲ್ಲಿ ಮರಾಠಿಗರ ಪ್ರಾಬಲ್ಯ ವಿರುವದು, ಹೀಗಿದ್ದರೂ ಅಲ್ಲಿ ಕರ್ನಾಟಕದ ಪ್ರತಿನಿಧಿಗಳೂ ಕೆಲವರಿರುವರು. ಅವರು ಈ ಸೂಚನೆಯನ್ನು ಸಂಪೂರ್ಣವಾಗಿ ವಿರೋಧಿಸಿ ಕರ್ನಾಟಕಕ್ಕೆ ಬೇರೊಂದು ವಿಶ್ವವಿದ್ಯಾಲಯವು ದೊರೆಯುವಂತೆ ಪ್ರಯತ್ನ ಮಾಡಬೇಕು. ಈಗ ನಾವು ಸ್ವಲ್ಪ ಸಡಿಲು ಬಿಟ್ಟರೆ ಮುಂದೆ ಬಹಳ ಕಠಿಣವಾಗುವದು. [illegible] ಹೋಗುವದಕ್ಕೆ ಕೊಡಲಿಯನ್ನು ಉಪಯೋಗಿಸುವ ಪ್ರಸಂಗವು ಬರಬಹುದು. ಆ ಪ್ರಸಂಗವು ಬರದಂತೆ ಕರ್ನಾಟಕಸ್ಥರು ಜಾಗೃತರಾಗಿ ತಮ್ಮ ಮಾತೃಭಾಷಾಭಿಮಾನವನ್ನು ತೋರಿಸಬೇಕೆಂದು ನಮ್ಮ ಆಗ್ರಹದ ವಿನಂತಿಯಿದೆ. ಈ ನಮ್ಮ ವಿನಂತಿಯನ್ನು ಕರ್ನಾಟಕಸ್ಥರು ಮನ್ನಿಸುವರೇ ?

ಇದೇ ಸಮಯದಲ್ಲಿ ಕರ್ನಾಟಕಕ್ಕೆ ಬೇರೊಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಚಳವಳಿಯನ್ನು ಪ್ರಾರಂಭಿಸಬೇಕೆಂದು ಕೆಲವರು ಸೂಚಿಸಿರುವರು. ಇದಾದರೂ ಯೋಗ್ಯವೇ. ಕರ್ನಾಟಕಕ್ಕೊಂದು ವಿಶ್ವವಿದ್ಯಾಲಯವು ಬೇಕೆಂಬುದೇನೋ ನಿಜ. ಆದರೆ ಈ ಮುಂದಣ ಕರ್ನಾಟಕಕ್ಕೆ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸುವದು ಬಹು ಬಿಕ್ಕಟ್ಟಿನದಾಗಿರುವದೆಂದು ಕೆಲವರ ಮತ. ಕರ್ನಾಟಕ ಪ್ರದೇಶವೆಂದರೆ ಮುಂಬಯಿ ಇಲಾಖೆಯಲ್ಲಿಯ ವಿಜಾಪುರ, ಬೆಳಗಾಂವ, ಧಾರವಾಡ, ಕಾರವಾರ ಜಿಲ್ಲೆಗಳೂ ಮದ್ರಾಸ ಆಧಿಪತ್ಯಕ್ಕೆ ಸೇರಿದ ಮಂಗಳೂರ, ಬಳ್ಳಾರಿ, ನೀಲಗಿರಿ, ಕೂರ್ಗ ಜಿಲ್ಲೆಗಳೂ ಅನಂತಪುರ, ಸೇಲಂ, ಕೊಯಿಮುತ್ತೂರ ಜಿಲ್ಲೆಗಳಲ್ಲಿಯ ಭಾಗಗಳೂ ಮೈಸೂರು ಸಂಸ್ಥಾನವೂ, ಜಮಖಂಡಿ ಮೊದಲಾದ ದಕ್ಷಿಣ ಮರಾಠಾ ಸಂಸ್ಥಾನಗಳೂ, ನಿಜಾಮ ಇಲಾಖೆಯಲ್ಲಿಯ ಗುಲಬುರ್ಗಾ ರಾಯಚೂರ, ಕೊಪ್ಪಳ, ಬೀದರ ಮೊದಲಾದ ಜಿಲ್ಲೆಗಳೂ ಇದ್ದು, ಇಂಥ "ಕಿಚಡಿ"ಯಂಥ ಕರ್ನಾಟಕಕ್ಕೆ ಒಂದು ವಿಶ್ವವಿದ್ಯಾಲಯವನ್ನು ಹೇಗೆ ನಿರ್ಮಿಸಬೇಕೆಂದು ಅವರ ಮಾತು. ಈ ಪ್ರಶ್ನೆಯು ಸ್ವಲ್ಪ ಬಿಕ್ಕಟ್ಟಿನದಿರುವದೇನೋ ನಿಜ. ಆದರೆ ಬಿಡಿಸಲು ಅಷ್ಟು ಕಠಿಣವಿರುವದೆಂದು ನಮಗೇನೂ ತೋರುವದಿಲ್ಲ. ಸದ್ಯಕ್ಕೆ ಮೈಸೂರಿನಲ್ಲಿ ಒಂದು ವಿಶ್ವವಿದ್ಯಾಲಯ ವಿರುವದು. ಆ ವಿಶ್ವವಿದ್ಯಾಲಯದಲ್ಲಿಯೇ ಉಳಿದ ಭಾಗಗಳ ಪ್ರತಿನಿಧಿಗಳನ್ನು ಆರಿಸಿ ಕೂಡುವದಕ್ಕೆ ಅನುಕೂಲವಾಗುವಂತೆ ಸ್ವಲ್ಪ ತಿದ್ದುಪಾಟುಗಳನ್ನು ಮಾಡಿ ಇಡೀ ಕರ್ನಾಟಕಕ್ಕೆ ಅದೇ ವಿಶ್ವ ವಿದ್ಯಾಲಯವಾಗುವಂತೆ ಪ್ರಯತ್ನಿಸಬೇಕೆಂದು ಒಂದು ಸೂಚನೆ ಯಿದ್ದು ಅದು ಅತ್ಯಂತ ಯೋಗ್ಯವಾಗಿರುವದೆಂದು ನಮ್ಮ ಅಭಿಪ್ರಾಯವಿದೆ. ಇದರಿಂದ ಕರ್ನಾಟಕಸ್ಥರಲ್ಲಿ ಏಕೀಕೃತ ಕರ್ನಾಟಕದ ಭಾವನೆಯು ಬಲವಾಗುವದು. ಕರ್ನಾಟಕಸ್ಥರಲ್ಲಿ ಒಂದು ತರದ ಒಕ್ಕಟ್ಟು ಹುಟ್ಟುವದು. ಈ ಸೂಚನೆಗೆ ಬ್ರಿಟಿಶ ಕರ್ನಾಟಕದಲ್ಲಿಯ ಕನ್ನಡಿಗರಾಗಲಿ, ಸಂಸ್ಥಾನ ಕರ್ನಾಟಕದಲ್ಲಿಯ ಕನ್ನಡಿಗರಾಗಲಿ ವಿರೋಧಿಸುವ ಕಾರಣವಿಲ್ಲ. ಅವರವರ ರಾಜಕೀಯ ಪರಿಸ್ಥಿತಿಯು ಭಿನ್ನವಿದ್ದರೂ ಶಿಕ್ಷಣದಂಥ ವಿಷಯದಲ್ಲಿ ಮತಭೇದಗಳುಂಟಾಗಲು ಅವಶ್ಯವಿಲ್ಲ. ಮೈಸೂರಿನವರಂತೂ ಈ ಸೂಚನೆಯನ್ನು ಒಮ್ಮನಸ್ಸಿನಿಂದ ಒಪ್ಪುವರೆಂದು ನಮಗೆ ಅನಿಸುತ್ತದೆ. ಆದ್ದರಿಂದ ಈ ವಿಷಯದಲ್ಲಿ ನಮ್ಮ ಮುಂದಾಳುಗಳು ಬೇಗನೇ ವಿಚಾರಮಾಡಿ ಈ ವಿಚಾರಕ್ಕೆ ಮೂರ್ತಸ್ವರೂಪವನ್ನು ಕೊಡಲಿಕ್ಕೆ ಪ್ರಯತ್ನ ಮಾಡಬೇಕೆಂದು ನಮ್ಮ ಅಭಿಲಾಷೆಯಿದೆ. ಈ ಸಂಬಂಧವಾಗಿ ನಮ್ಮಲ್ಲಿ ಮತಭೇದಗಳೇ ಬರುವದೆಂದು ತೋರಿದರೆ ಅವುಗಳನ್ನು ಸರಿಪಡಿಸಿಕೊಳ್ಳುವದಕ್ಕಾಗಲಿ, ಏನಾದರೂ ಸಂಶಯಗಳಿದ್ದರೆ ಅವುಗಳನ್ನು ನಿರಾಕರಿಸಿಕೊಳ್ಳುವದಕ್ಕಾಗಲಿ ಸಣ್ಣದೊಂದು ಸಭೆಯನ್ನು ಕರೆದರೂ ಅಡ್ಡಿಯಿಲ್ಲ. ಆ ಸಭೆಗೆ ಎಲ್ಲ ಕಡೆಯಿಂದ ಪ್ರತಿನಿಧಿಗಳು ಬರುವ ಏರ್ಪಾಡು ಮಾಡಬೇಕು. ಏನಾದರೂ ಪ್ರಯತ್ನ ಮಾಡಿ ಕರ್ನಾಟಕಕ್ಕೊಂದು ವಿಶ್ವವಿದ್ಯಾಲಯವಾಗುವಂತೆ ಕರ್ನಾಟಕಸ್ಥರು ಹೆಣಗಾಡಬೇಕೆಂಬುದಷ್ಟೇ ನಮ್ಮ ಅಪೇಕ್ಷೆ.

ನಿಜಾಮ ಹೈದರಾಬಾದ ಕರ್ನಾಟಕ ನಿಯಮಾವಳಿಯು ನಮ್ಮ ಕಡೆಗೆ ಬಂದಿರುತ್ತದೆ. ಕನ್ನಡ ಸಹೋದರರಲ್ಲಿ ಕನ್ನಡ ಭಾಷೆಯನ್ನು ಅಭಿವೃದ್ಧಿಗೊಳಿಸುವದೂ, ನಿಜಾಮ ಇಲಾಖೆಯ ಬೇರೆ ಬೇರೆ ಪ್ರಾಂತಗಳಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಸಂಸ್ಥೆಗಳನ್ನು ಏರ್ಪಡಿಸಿ, ಕನ್ನಡದ ಬೆಳ್ಗೆಯನ್ನುಂಟು ಮಾಡುವದೂ ಈ ಸಂಸ್ಥೆಯ ಗುರಿಯಾಗಿದೆ. ಇವರು ತಮ್ಮ ಗುರಿಯನ್ನು ಕೈಗೂಡಿಸಲಿಕ್ಕಾಗಿ ಒಂದು ಕನ್ನಡ ವಾರಪತ್ರಿಕೆಯನ್ನು ನಡೆಸಲುದ್ಯುಕ್ತರಾಗಿದ್ದಾರೆ. ಈ ಸಂಘಕ್ಕೆ ಈಗ ಶ್ರೀ. ಪಂಡಿತ ಗಿರಿರಾವಜಿ ಸಾಹೇಬ ಹೈಕೋರ್ಟವಕೀಲ ಇವರು ಅಧ್ಯಕ್ಷರಿರುವರು ಇದನ್ನು ಸ್ಥಾಪಿಸಿದ ಶ್ರೇಯವು ಕೀರ್ತನ ಕೇಸರಿಗಳಿಗೆ ಸಲ್ಲುವುದು. ಇವರ ನಿಯಮಾವಲಿಯ ಭಾಷೆಯು ಹೆಚ್ಚು ಶುದ್ಧವಾದುದಾಗಿದ್ದರೆ ಚನ್ನಾಗುತ್ತಿತ್ತು. ಈ ಕರ್ನಾಟಕ ಸಂಘವನ್ನು ಸ್ಥಾಪಿಸಿದುದಕ್ಕಾಗಿ ನಾವು ಹೈದರಾಬಾದದ ಕನ್ನಡಿಗರನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ. ಮತ್ತು ಈ ಸಂಘವು ದಿನದಿನಕ್ಕೆ ಏಳ್ಗೆಯನ್ನು ಹೊಂದಿ ಕನ್ನಡನುಡಿಯ ಕಂಪನ್ನು ಸುತ್ತೆಲ್ಲ ಸೂಸಲೆಂದು ಹಾರೈಸುವೆವು.

ವಿಧವೆಯರು.

[ಲೇಖಕ:- ಮ. ಗಾಂಧಿಯವರು.]

ವೈಧವ್ಯವು ಹಿಂದೂ ಧರ್ಮದ ಅಲಂಕಾರವಾಗಿರುವದು. ಅಖಂಡಿತ ಪಾತಿವ್ರತ್ಯದ ಅರ್ಥವೇನೆಂದರೆ, ಒಬ್ಬಳು ಯಾವನು ಜ್ಞಾನಪೂರ್ವಕವಾಗಿ ಪತಿಯೆಂದು ಸ್ವೀಕರಿಸಲ್ಪಟ್ಟವನೋ, ಅವನ ದೇಹಪಾತವಾದ ಮೇಲೆಯೂ ಅವನ ಸ್ಮರಣವನ್ನು ನಿರಂತರವಾಗಿ ಅಂತಃಕರಣದಲ್ಲಿಟ್ಟು ಸಂತೋಷದಿಂದ ಇರಬೇಕು. ಇಷ್ಟೇ ಅಲ್ಲ, ಆ ಸ್ಮರಣದಲ್ಲಿ ಆನಂದವನ್ನು ಹೊಂದಬೇಕು. ಇದೇ ರೀತಿಯಿಂದ ಹಿಂದುಸ್ಥಾನದಲ್ಲಿ ಸಾವಿರಾರು ವಿಧವೆಯರು ಆಜನ್ಮ ಪ್ರಾತಃಸ್ಮರಣೀಯರಾಗಿರುವರು.

ಆದರೆ ಪತ್ನೀವ್ರತರಾದ ಪುರುಷರು ಎಲ್ಲಿರುವರು? ಪತಿವ್ರತೆಯನ್ನು ಪೂಜಿಸಿ ಪುರುಷರು ಸಂತೋಷಯುಕ್ತರಾಗತಕ್ಕದ್ದೋ ಅಥವಾ ತಾವೂ ಕೂಡ ಪತ್ನೀವ್ರತವನ್ನು ದೃಢತಾಪೂರ್ವಕವಾಗಿ ಪಾಲಿಸಿ ಪತಿವ್ರತೆಯರ ಪೂಜೆಯನ್ನು ಮಾಡತಕ್ಕದ್ದೋ? ಅನುಕರಣೆಯಂಥ ಬೇರೊಂದು ಯಾವದಾದರೂ ಪೂಜೆಯಿರುವದೋ? ಎಲ್ಲಿ ಅನುಕರಣದ ಮಾತೇ ಇಲ್ಲ, ಅಲ್ಲಿ ಶಾಬ್ದಿಕ ಪೂಜೆಯ ಬೆಲೆ—ಏನು? ೧೯೧೫ ರಿಂದ ನಾನು ಹಿಂದುಸ್ಥಾನದಲ್ಲಿ ವಾಸಿಸುತ್ತಿದ್ದು ಹಿಂದುಸ್ಥಾನದ ಜೀವನದ ಪ್ರತಿಯೊಂದು ಕ್ಷೇತ್ರದ ಅನುಭವವು ನನಗೆ ಚನ್ನಾಗಿ ಆಗುತ್ತಿರುವದು. ಸಾಮಾನ್ಯತಃ ಚಾರಿತ್ರ್ಯವಂತರೆಂದೆಣಿಸಲ್ಪಡುವ ಹಾಗು ತಮ್ಮ ಪತ್ನಿಯನ್ನು ಅತ್ಯಂತವಾಗಿ ಪ್ರೀತಿಸುವ ತರುಣರು ದುರ್ದೈವದಿಂದ ಪತ್ನಿಯು ಮೃತಳಾದರೆ ಕೂಡಲೆ ಎರಡನೇ ಪತ್ನಿಯನ್ನು ಹುಡುಕಿಕೊಂಡು ಲಗ್ನವಾಗುವದನ್ನು ನಾನು ನೋಡಿ ಅತ್ಯಂತ ಖೇದಗೊಂಡಿದ್ದೇನೆ. ನಾವು ರೂಢಿಯ ದಾಸರಾಗಿರುವೆವು. ಹಾಗಿರದಿದ್ದರೆ ಹೆಂಡತಿಯನ್ನು ಕಳೆದುಕೊಂಡ ಗಂಡನು ಸ್ಮಶಾನದಿಂದ ತಿರುಗಿ ಮನೆಗೆ ಬರುವದರೊಳಗೇ ಪುನಃ ಲಗ್ನ ಮಾಡಿಕೊಳ್ಳುವ ವಿಚಾರದಲ್ಲಿರುವದನ್ನು ನೋಡಿ ನಮ್ಮ ಮನಸ್ಸು ಹೇಸುತ್ತಿತ್ತು. ಹೀಗಾಗುವದರ ಬದಲು ತಾಯಿಯು ತನ್ನ ಮಗನಿಗೆ ಕೂಡಲೇ ಎರಡನೇ ಮದುವೆಯಾಗುವ ಹಾದಿಯನ್ನು ನೋಡುತ್ತ ಕೂಡುವಳು, ಅತ್ತೆಯೂ ಕೂಡ ತನ್ನ ಅಳಿಯನಿಗೆ ಮದುವೆಯಾಗಲಿಕ್ಕೆ ಉತ್ತೇಜನವನ್ನೀಯುವಳು ಮತ್ತು ಅಳಿಯನಾದರೂ ಆ ಉಪದೇಶವನ್ನು ಸ್ವೀಕರಿಸಲು ಸ್ವಲ್ಪ ಕೂಡ ನಾಚುವದಿಲ್ಲ! ಮೃತ ಪತ್ನಿಯ ಬಗ್ಗೆ ಇಂಥ ಪುರುಷರ ಅಳುವಿಕೆಯಲ್ಲೇನಾದರೂ ಅರ್ಥವುಂಟೋ? ಇಂಥ ಪುರುಷರು ತಮ್ಮ ಮೃತ ಪತ್ನಿಯ ಸ್ಮರಣವನ್ನು ನಿರಂತರವಾಗಿಡಲಿಕ್ಕೆ ಅನೇಕ ಉಪಾಯಗಳನ್ನು ಯೋಚಿಸಿದರೆ ಬಂದದ್ದೇನು? ಅಥವಾ ಅವರು ತಮ್ಮ ನೂತನ ಪತ್ನಿಯೊಡನೆ ಮಾಡುತ್ತಿರುವ ವಿನೋದಗಳ ಬೆಲೆಯು ಅಂಗೀಕರಿಸುವದು? ಈ ವೃತ್ತಿಯು ವಿಚಾರ ಪೂರ್ಣವಾದುದೆಂದು ಹೇಳಲಾಗುವದೋ? ನನಗಂತೂ ಇವರಲ್ಲಿ ಅಧರ್ಮವೇ ಕಂಡು ಬರುತ್ತದೆ. ಮತ್ತು ಎಲ್ಲಿಯವರೆಗೆ ಪುರುಷರು ಈ ಬಗೆಯ ಉದ್ಧತತನವನ್ನು ಆಚರಿಸಲು ಸಿದ್ಧರಾಗಿರುವರೋ? ಅಲ್ಲಿಯವರೆಗೆ ವೈಧವ್ಯವನ್ನು ಹೊಗಳುವದೂ ಕೂಡ ನನಗೆ ದಂಭದಂತೆ ತೋರುತ್ತದೆ ಹಾಗೂ ಇದರಿಂದ ಪುರುಷವರ್ಗದ ಸ್ವಾರ್ಥದ ಪರಮಾವಧಿಯು ವ್ಯಕ್ತವಾಗುತ್ತದೆ.

ಯಾವಸ್ತ್ರೀಯಳೊಂದಿಗೆ ಪುರುಷನು ಅನೇಕ ವರ್ಷಗಳಿಂದ ಮಿತ್ರತ್ವದಿಂದಿರುವನೋ, ಯಾವಳ ದುಃಖದಿಂದ ಅವನು ದುಃಖಿತನಾಗುವನೋ, ಯಾವಳ ಸುಖದಿಂದ ಅವನಿಗೆ ಸುಖವಾಗುವದೋ, ಯಾವಳೊಡನೆ ಭೋಗವಿಲಾಸಗಳನ್ನು ಉಪಭೋಗಿಸಿರುವನೋ, ಯಾವಳೊಂದಿಗೆ ಇಪ್ಪತ್ನಾಲ್ಕು ತಾಸು ಕಳೆಯುತ್ತಿದ್ದನೋ, ಆ ಸ್ತ್ರೀಯಳ ದೇಹಪಾತವಾಗಲು ಅವನು ತನ್ನ ಸಾಮಾನ್ಯ ಮಿತ್ರರ ವಿಯೋಗದ ಬಗ್ಗೆ ಎಷ್ಟು ಶೋಕ ಪಡೆಯುವನೋ, ಅಷ್ಟು ಕೂಡ ಶೋಕವನ್ನು ತನ್ನ ಮೃತ ಪತ್ನಿಯ ಬಗ್ಗೆ ತಳೆಯ ಕೂಡದೋ? ಇಂಗ್ಲಂಡದಲ್ಲಿ ಸ್ತ್ರೀಯರಿಗೆ ಪುನರ್ವಿವಾಹ ಮಾಡಿಕೊಳ್ಳಲು ಆತಂಕವಿರುವದಿಲ್ಲ. ಆದಾಗ್ಯೂ ಅಲ್ಲಿಯ ಪ್ರತಿಷ್ಠಿತ ಸ್ತ್ರೀಯಳು ಶೋಕ ಉಡುಗೆಯವರಾಗಿ ಗಂಡನು ತೀರಿದ ಮೇಲೆ ಒಂದು ವರ್ಷದವರೆಗಾದರೂ ಮತ್ತೊಬ್ಬನನ್ನು ಲಗ್ನವಾಗಲು ಧೈರ್ಯ ಮಾಡುವದಿಲ್ಲ. ಆದರೆ ಹಿಂದುಸ್ಥಾನದ ಗಂಡಸರ ಪ್ರತಿಷ್ಠಿತತನವು ಸ್ಮಶಾನ ಭೂಮಿಯನ್ನು ದಾಟುವದರೊಳಗಾಗಿ ಹೇಗೆ ಕರಗಿಹೋಗಿರುವದು! ಒಮ್ಮೊಮ್ಮೆಯಂತೂ ಅತ್ತ ಚಿತೆಯಲ್ಲಿ ತನ್ನ ಪವಿತ್ರ ಸ್ತ್ರೀಯಳ ದೇಹವು ಸುಡುತ್ತಿರುವದು ಇತ್ತ ಸ್ಮಶಾನದ ಭೂಮಿಯಲ್ಲಿಯೇ ಆತನ ಒಳಗಡೆಯವರು ಆತನೊಡನೆ ಲಗ್ನದ ಮದುವೆಯ ಮಾತುಗಳನ್ನಾಡಲು ಹಿಂಜರಿಯುವದಿಲ್ಲ. ಹಾಗು ಅವನು ಅವುಗಳನ್ನು ಕೇಳಿಕೊಳ್ಳಲು ನಾಚುವದಿಲ್ಲ! ಈ ಕರುಣಾ ಜನಕ ಸ್ಥಿತಿಯೊಳಗಿಂದ ಹಿಂದುಸ್ಥಾನವು ಪಾರಾಗಲಿಕ್ಕೆ ಬೇಕು. ವಿಧವಾ ವಿವಾಹದ ಚಳವಳಿಯಲ್ಲಿಯೂ ನನಗೆ ಪುರುಷರ ಸ್ವಾರ್ಥ ವೃತ್ತಿಯು ಕಾಣುವದು. ವಿಧವೆಯರಿಗೆ ಪುನಃ ಲಗ್ನ ಮಾಡಿಕೊಳ್ಳಲು ಅವಕಾಶವನ್ನುಂಟು ಮಾಡಿ ಪುರುಷರು ತಮ್ಮ ನಾಚಿಕೆಯನ್ನು ಮರೆಮುಚ್ಚುವರು. ವಿಧವೆಯರ ವೈಧವ್ಯದುಃಖದ ಅರಿವು ಪುರುಷರಿಗೆ ಇರುತ್ತಿದ್ದರೆ ಅವರು ಸ್ವತಃ ಅಖಂಡ ಪತ್ನೀವ್ರತವನ್ನು ಪಾಲಿಸಿ ಆ ದುಃಖವನ್ನು ಒರೆಸಬಲ್ಲರು. ಈ ವಿಷಯದ ಬಗ್ಗೆ ಲೋಕಮತವು ಅತಿಶಯ ದುರ್ಬಲವಾಗಿರುವದು. ಸುಶಿಕ್ಷಿತ ಹಾಗು ಪ್ರತಿಷ್ಠಿತವೆಂದೆನಿಸುವ ಕುಟುಂಬಗಳಲ್ಲಿ ಕೂಡ ವಿಷಮವಿವಾಹಗಳಾಗುತ್ತಿರುವದನ್ನು ಮತ್ತು ಪುರುಷರು ಒಬ್ಬ ಹೆಂಡತಿಯು ತೀರಿಹೋದರೆ ಕೂಡಲೇ ಮತ್ತೊಬ್ಬಳನ್ನು ಮದುವೆಯಾಗಲು ಸ್ವಲ್ಪು ಕೂಡ ನಾಚದೆ ಇರುವದನ್ನು ನಾನು ಹಿಂದುಸ್ಥಾನದಲ್ಲಿ ನಾಲ್ಕು ಕಡೆಗೆ ನೋಡಿರುವೆನು.

ಆದರೆ ಪುರುಷರು ತಮ್ಮ ಕರ್ತವ್ಯವನ್ನು ಮಾಡಲಿ ಮಾಡದಿರಲಿ, ಸ್ತ್ರೀಯರು ತಮ್ಮ ಅಧಿಕಾರಗಳನ್ನು ಸಿದ್ಧ ಮಾಡಬಾರದೇಕೆ? ಸ್ತ್ರೀಯರಿಗೆ ಮತಾಧಿಕಾರವು ಅವಶ್ಯವಾಗಿ ದೊರೆಯಲಿಕ್ಕೆ ಬೇಕು. ಆದರೆ ಯಾವಸ್ತ್ರೀಯಳು ತನ್ನ ಸಾಮಾನ್ಯ ಅಧಿಕಾರಗಳಾವವೆಂಬದನ್ನು ಅರಿತಿಲ್ಲ. ಹಾಗೂ ಅರಿತಿದ್ದರೂ ಅವುಗಳನ್ನು ಪಡೆಯಲು ಯಾವಳಿಗೆ ಸಾಮರ್ಥ್ಯವಿಲ್ಲ ಅಂಥವಳು ಮತಾಧಿಕಾರವನ್ನು ತೆಗೆದು ಕೊಂಡು ಮಾಡಬೇಕೇನು? ಸ್ತ್ರೀಯರು ಮತಾಧಿಕಾರವನ್ನು ದೊರಕಿಸಬಹುದು. ಕಾಯ್ದೆ ಕೌನ್ಸಿಲುಗಳಲ್ಲಿ ಹೋಗಬಹುದು. ಆದರೆ ಪುರುಷರಿಂದ ತಿಳಿದಾಗಲಿ ತಿಳಿಯದಾಗಲಿ ಆಗುವ ಅನ್ಯಾಯಗಳಿಂದ ತಮ್ಮನ್ನು ಸಂರಕ್ಷಿಸಿಕೊಂಡು ಹಿಂದುಸ್ಥಾನವನ್ನು ಶೋಭಿಸಗೊಳಿಸಿ ಅದನ್ನು ವೀರ್ಯಯುಕ್ತವನ್ನಾಗಿ ಮಾಡುವದು ಸ್ತ್ರೀಯರ ಆದ್ಯ ಕರ್ತವ್ಯವು. ಅಜ್ಞಾನಿಗಳಾದ ತಾಯಂದಿರು ಅಷ್ಟೇ ಅಜ್ಞಾನಿಗಳಾದ ತಮ್ಮ ಹೆಣ್ಣು ಮಕ್ಕಳನ್ನು ಅದೇ ಹೆಂಡತಿ ಸತ್ತಂಥ ಗಂಡಸಿನ ವಿಷಯಾಗ್ನಿಯಲ್ಲಿ ಹೋಮಮಾಡಲು ಸಿದ್ಧರಿರುತ್ತಾರೆಂತಲೇ ಗಂಡಸರು ಇನ್ನೂ ವಿಯೋಗದ ದುಃಖಾಶ್ರುಗಳು ಒಣಗಿರುವದಿಲ್ಲಾಗಲೇ ಪುನಃ ಲಗ್ನವಾಗುವ ವಿಚಾರವನ್ನು ಮಾಡಬಲ್ಲರು. ಈ ಬಗೆಯ ಸುಧಾರಣೆಯನ್ನು ಮಾಡುವದು ಸ್ತ್ರೀಯರ ಅಧಿಕಾರ (ಹಕ್ಕು) ವಾಗಿರುವದು, ಇಷ್ಟೇ ಅಲ್ಲ ಸ್ತ್ರೀಯರ ಕರ್ತವ್ಯವಾಗಿರುವದು. ಅವರು ತಮ್ಮ ವಿಷಯದಲ್ಲಿ ಪುರುಷರ ವಿಷಯದಲ್ಲಿ ಮತ್ತು ಹಿಂದುಸ್ಥಾನದ ವಿಷಯದಲ್ಲಿ ಮಾಡತಕ್ಕ ಕರ್ತವ್ಯವಾಗಿರುವದು.

' ವಿಷಮ ವಿವಾಹ '

(ಲೇಖಾಂಕ ೨)

ಓದಿದಂತೆ ಅಂದರೆ ಚಿರಕಾಲ ನಾಟಕವು ಬಾಳುವದೆಂದರೆ ಓದು ಬರಹವಾಗಿಯೇ ಇಂದು ದೃಶ್ಯವಾದರೆ, ಅದು ಕೇವಲ ಅನುಕೂಲ ವಿರುವತನಕ ! ಮತ್ತು ಲೋಕ ರಮ್ಯವಾಗುವ ತನಕ ಆದರೆ ದಿನಸವಿದಂತೆ ಅದೃಶ್ಯವಾಗಿ, ಲಮಿಲತನದಲ್ಲಿಯೇ ಅದರ ಅಳಿಕೆ. ಇದಕ್ಕಾದರೂ ಒಪ್ಪು ಮುರಿಯುವಂತಿಲ್ಲ. ಕಾಳಿದಾಸನ ಶಾಕುಂತಲಾದಿ ನಾಟ್ಯಗಳು ಕೂಡ ಕೈಬಂಹವಾಗಿ ಉಳಿದು ಬಂದಿವೆ. ಅಂದಮೇಲೆ ಓದಿಯೂ ಕೂಡ ಯಾವದರಲ್ಲಿ ಅಭಿರುಚಿಯು ಹುಟ್ಟುವದೋ, ಅಂಥ ನಾಟಕವು ಸರ್ವ ರಮ್ಯವು ಅದರಲ್ಲಿ ಸತ್ವವಿದೆ. ಅಭಿವೃದ್ಧಿಗೆ ಸಾಹಿತ್ಯವಿದೆ. ಈ ದೃಷ್ಟಿಯಿಂದ ಓದುಗನಲ್ಲಿ ಅನುಪಬಲವುಗಳು ಇಲ್ಲಿ ಹೇಳತಕ್ಕವಿವೆ. ಇವೊಂದು ಗುಣ! ಯಾವನಾದರೂ ಮೊದಲು ಓದಿದನೆಂದರೆ, ನೋಡಲಿಕ್ಕೆ ಮನಸ್ಸು ಎಳೆಯುತ್ತದೆ. ಅಥವಾ ನೋಡಿ ಓದಿದರೆ, ಭಾವನೆಯೂ ದೃಢವಾಗುತ್ತದೆ. ಹೀಗಾಗಿ ನಾಟಕವು ಆಕರ್ಷಕವಾಗಬೇಕಾದರೆ, ಲಿಖಿತದಲ್ಲಿಯೂ ಮೋಹಕತೆ ಬೇಕು. ಇಂತು ' ವಿಷಮ ವಿವಾಹ 'ವನ್ನು ತೊಳೆದು ನೋಡುವಾ. ಇದರಲ್ಲಿ ರಚನೆಯು ರಸಮಯವಿದೆ ಅಂದರೆ ಓದುತ್ತ ಹೋದಂತೆ, ಆತುರತೆಯು ಕೊನೆಯ ವರೆಗೆ ಕರೆಯುತ್ತ ಹೋಗಿ, ' ಪಶ್ಚಾತ್ತಾಪ 'ಕ್ಕೆ ಬಂದು ನಿಲ್ಲುತ್ತದೆ. ಆಗಿನ ಮನಸ್ಥಿತಿಯು ಮರಗುವಂತಿರುತ್ತದೆ. ಸುಖದುಃಖಗಳ ಸಂಮಿಶ್ರಣವಾಗಿ, ನಾಯಕನಾಯಕಿಯರ ಭಾವಗಳು ನಮ್ಮನ್ನೊಡಗೊಂಡು, ಅವರು ನಮ್ಮ ಮನೆಯವರಾಗುತ್ತಾರೆ. ಮತ್ತು ಪ್ರಧಾನ ವಿಷಯವು ಸಾರ್ವತ್ರಿಕವಾದ ಮುಪ್ಪಿನ ಹರೆಯ ಮೇಲಿರುವದರಿಂದ ವಸ್ತು ಬಲವು ಆವಕಾಲಕ್ಕಾದರೂ ಹಳಸುವಂತಿಲ್ಲ. ಆದರೆ ಈ ಸುಧಾರಣೆಯ ಯುಗವು ಎಂದಾದರೂ ಹೋಯಿತೆಂದರೆ ಮಾತ್ರ ರಜನಿಯ ಪಾದ ಶಕಟವು, ವಿನೋದನ ಟಾಯಿಮ-ಪೀಸ-ಇವೆಲ್ಲ ಏನಾಗುವವೋ ದೇವರೆ ಬಲ್ಲ !

ಇನ್ನು ಓದುವಾಗ, ನಡು ನಡುವೆ ಚಲುವಿಕೆಯ ಮಾತು ಕಥೆಗಳೆಂದರೆ ಅಂತಃಪುರದಲ್ಲಿ ನಡೆದ ಶರಾವತಿ ಕಮಲಾಕರರ ಸಂಲಾಪವು. ಇಲ್ಲಿ ತರ್ಕ ದಿಂದೇರುತ್ತ ಹೋಗಿ ಭಾವನಾಮಯವಾದ ಅವಸ್ಥೆಗೆ ಶರಾವತಿಯು ಬಂದದು! ತನ್ನನ್ನು ತನ್ನ ಯೋಗ್ಯ ಯೌವನ ಬಂಧವನ್ನ– ತಾಯಿಯೆಂದು ತಿಳಕೊಂಡ ಕಮಲಾಕರನಿಗೆ ಅನ್ಯೋಕ್ತಿಗಳಿಂದ ಗುರುತುಹಚ್ಚಿಕೊಡುವ ಶೈಲಿಯೂ ಓದಿನಲ್ಲಿಯೂ ಸ್ವಾರಸ್ಯವಾಗಿದೆ. ಇಲ್ಲಿ ಕರ್ತೃವಿನ ಲಲಿತ ಕಲೆಯ ಸಾರವಿದೆಯೆಂದು ಹೇಳಬಹುದು. ಇಲ್ಲಿಯ ಪ್ರಶ್ನೋತ್ತರ ಮಾಲಿಕೆಯು ಬೆಳೆದಂತೆ, ಶರಾವತಿಯು ಎಷ್ಟು ಅಸಂಬದ್ಧವೆಂದು ಮೊದಲೆಣಿಸಿದರೂ, ಅದರ ಬೇವವು ತಾನೆ ತೆರೆಯುತ್ತದೆ. ಮುಂದೆ ನಮ್ಮ ಪರ ಅಂತಃಕರಣಗಳು ಬೆರೆಯುತ್ತ ಹೋಗುತ್ತವೆ. ಅಂದರೆ ಅವಳ ಸ್ನೇಹಾರ್ತ ಸ್ವರವು ನಮ್ಮ ಕರುಣೆಗೆ ಪಾತ್ರವಾಗುತ್ತದೆ.

ಮುಂದೆ ಸೌಂದರ್ಯಕ್ಕೂ ಕ್ರೂರತನಕ್ಕೂ ಇರತಕ್ಕ ಸಂಬಂಧವನ್ನು ತಂದ ಸಂದರ್ಭವು, ಮತ್ತು ಉಪಮೆಗಳೂ ಯುಕ್ತವಾಗಿವೆ. ಇದಲ್ಲದೆ, ನಡುವೆ ಬರುತ್ತಿರುವ ತನ್ನೊಡೆಯನನ್ನು ಸುವಿಚಾರಿಯು ಹಿಂದಿರುಗಿಸಲು ಯತ್ನಿಸುವಾಗ, ಆ ಶರಾವತಿಯ ಸಾತ್ವಿಕ ಕೋಪವು ಒಳ್ಳೆಯದು. ಓದುಗನ ಕಲ್ಪನೆಯು ಇಲ್ಲಿ ಹರಿಯುತ್ತದೆ. ಇದರಂತೆ ಸ್ವರ್ಗದ ಬಾಗಿಲ ತೆರೆಯಿಸಿ ಮಗನನ್ನು ನೋಡಲೆಳಸುವ ಆಲೋಕನ ಕಲ್ಪಕತೆಯಾದರೂ ನಮ್ಮನ್ನಾವರಿಸುತದೆ. ಅಂತೂ ನಾಟಕದಲ್ಲಿ ಈ ಮಟ್ಟಿಗೆ ಸಾಹಿತ್ಯವಿದೆ ಸ್ವಭಾವ ನಿರೀಕ್ಷೆಯಿದೆ. ಕಾಳುವಂಥ ಕಳೆ ಹದಿಮಿದೆ. ಇನ್ನು ಸಣ್ಣ ಸಣ್ಣ ಸೂಚಕವಾದ ಸಮಾಜ ಟೀಕೆಗಳೂ ' ಸುಪ್ತ ಪೆಟ್ಟುಗಳೂ ' ಇಲ್ಲಿ ಇಳಿದಿವೆ. ಆ ಚಂದ್ರಿಕೆಯ ನಡೆ ನುಡಿಯ ಧರ್ತಿಗೆ ಎಲ್ಲರೂ ಕೂಡ ಅವಳ ಮೇಲೆ ಯಿದುರಿನಲ್ಲಿ ಧಡದಡ ಬಯ್ಯುವದು ಇದೆಲ್ಲ. ಈಗಿನ ಸಂಸ್ಕೃತಿಯ ವಿನೋದನಂಥ ಜಾರ ಜನರ ಆಚರಣೆಯಾದರೂ ಈಗಿದ್ದಂತೆ ಯಥಾಸ್ಥಿತವೆ! ' ಒಂದು ಜವಾರಿ ಒಂದು ತಂಬಾವರಿ ' ಎನ್ನುತ್ತ ವಿದೂಷಕತೆಯನ್ನು ತೋರಿಸುವ ಪರಿಲ್ಲತಾನೇ ವಿದೂಷಿತನಾಗುತ್ತಾನೆ. ಹೀಗೆ ಈ ನಾಟಕವನ್ನು ಓದಿ ಮನನ ಮಾಡುವದರಿಂದ ದೋಷಾರ್ಹವಾದೊಂದು ಸಂಶಯವು ಚಿಗಿಯುತ್ತದೆ ಅದೆಂದರೆ ಕಲಿತವನಿಗೆ ಸುಶೀಲನಿಗೆ ಸರಿಬರದಂಥ ಅಧಮ ಪ್ರೇಮ, ಗಡುಬಾದ ಹಳ್ಳಿಮಾತು ಇವೆಲ್ಲ ಸ್ವಭಾವವಿದ್ದರೂ ವಿ..ಸಾಗಿ ಕೆಲಕಾಲ ವಿನ್ಹೇ ಬೇರೆ ರಂಗಕ್ಕೆ ರಂಜಕವಾಗಬಲ್ಲವು. ಆದುದರಿಂದ ನಾಸ್ಯವಾಗುವಂತೆ ಕರ್ತೃಗಳು ಇನ್ನಿಷ್ಟು ಒಲಿಸಬೇಕಾದುದು

ಇನ್ನು ಭಾಷೆಯು, ಹೇಳಲಿಕ್ಕೆ ಹರ್ಷವಾಗುವಂತಿದೆ. ಕನ್ನಡವು ಸಂದಿಗೊಂದು ತರದ ನುಡಿಯಾಗಿದ್ದರೂ, ಈ ನುಡಿಯಲ್ಲಿ ಸುಣುಪಿದೆ. ' ಅಯ್ಯಾ ! ಬಿಡಿ ' ಮೊದಲಾದ ವ್ಯಸನ ಸೊಲ್ಲುಗಳು ಬಾಯಿಯಲ್ಲಿ ಹೂವಾಗುತ್ತವೆ. ಆದರೂ, ಸಂಸ್ಕೃತದ ಮರ್ಯಾದೆ ಕೆಲಕಡೆ ವಿಧಿರಿತುವದರಿಂದ, ನಟರಿಗೆ ನಾಲಿಗೆ ಹೊರಗೆಳೆದಂಥ ವಾಕ್ಯ ರಚನೆಗಳಾಗಿವೆ. ಪಾಪ! ಆ ಪಾತ್ರಗಳಿಗೆ ಚಂದ್ರಿಕೆಯರಂಥ ನಮ್ಮ ಬೆಳವಲದ ಬಾಲೆಯರಿಗೆ ಉಸುಉಸಾಲವಾಗುತ್ತದೆ ಮತ್ತೊಂದು ರಸ ನೋಡಿ ರಾಗ ಹಾಕಬೇಕಲ್ಲವೆ? ' ಸದ್ವಿದ್ಯಾ ಮಂಡಿತ ಮತಿಯೆ ಅದ್ವಿತೀಯ ಸಕಿಯೇ ಮದ್ವಿನಯೋಕ್ತಿಗಳ ವಧಾನಿಸೆ! ' ಮೊದಲಾದ ಹಾಡು ಸ್ವಲ್ಪು ದಗದಯ್ಯನಾಟಿನ ಜೋಕು ಇಳಿಸಿದಂತಾಗುತ್ತದೆ. ಜಸ್ಟಿಸಬೇಕು. ಇರಲಿ! ಹಾಡಿನಲ್ಲಿ ಅರ್ಥವಿದೆ ಅನುರೂಪವಾದರಾಗವಿದೆ ಆದರೆ ಕವಿತ್ವವಿಲ್ಲ. ಅಂದರೆ ನೋಡುವಾಗ ಈ ವಿಷಮವು ಅಷ್ಟು ಅವಶ್ಯವಿಲ್ಲವಿದ್ದರೂ– ಇದಲ್ಲದೆ, ನಾಟಕ ನಡೆವಾಗ ಅರಿಯು ತಿಳಿಯುವದಿಲ್ಲ ಆ ಮಾತು ಬೇರೆ— ಓದುವಾಗ ಕವಿತ್ವ ಬೇಕು. ಅಂದರೆ ಕೇವಲ ಪದ ರಚನೆಯ ಪ್ರಯೋಗವಿಲ್ಲ; ' ಹಾಡಬೇಕು ' ಎಂಬ ಚುಲುಮೆಯಿಂದ ಗದ್ಯದಲ್ಲಿಯನ್ನುವ ರಂಗಿತವೇ ಸಂಗಿತವಾದರೆ, ಇದ್ದ ಸಮತೆಯನ್ನು ಕೂಡ ಕೆಡಿಸುತ್ತದೆ.

ಒಟ್ಟಿನ ಮೇಲೆ ನಾಟ್ಯ-ಶಿಕ್ಷೆಯು ಇದರಲ್ಲಿ ಒಪ್ಪುವಂತೆ ಬಂದಿದೆ. ಅಂತೆಯೆ ನಾಟಕಾಲಂಕಾರವೆಂಬ ಪದವಿಯು ಮಾನ್ಯವಿದೆ. ಆದರೆ ಕವಿಯಾಗಿ ಇನ್ನಿಷ್ಟು ಭಾವಿಸಿ ಪ್ರತಿಭೆಯನ್ನು ಸುರಿವಷ್ಟು ಪ್ರತಿಮೆಯು ಮಾತ್ರ ನಮಗೆ ಕಂಡು ಬರಲಿಲ್ಲ. ಒಳ್ಳೇದು, ಚಿತ್ರಗಳು ಈಗಿನ ಎದ್ದರೂ, ಇನ್ನೂ ಕೆಲವು ಬೇಕೆಂಬದೆ ನಮ್ಮ ಸೂಚನೆ ' ಹೋಯಿತು ಪೀಡೆಯು ' ಅಥವಾ ಮತ್ತೆ ಕೆಲವು ವಿಶೇಷ ನಟನ ಕೃತಿಗಳನ್ನು ನೋಡಿ ಸಂಯೋಜಿಸಬೇಕು. ಹೀಗೆ ಕರ್ತೃಗಳು ಯತ್ನದಿಂದ ಈ ನಾಟಕವನ್ನು ಎತ್ತಿ ಹಿಡಿದರೆ, ಕನ್ನಡ ವಾಙ್ಮಯದಲ್ಲಿ ಅವರ ಹೆಸರು ಚಿರಸ್ಥಾಯಿಯಾಗುವದೆಂಬದರಲ್ಲಿ ಸಂಶಯವಿಲ್ಲ.

' ರಸಿಕರಂಗ '

ಬರಹಗಾರರಿಗೆ ಒಂದಿಷ್ಟು ನೆರವು..

(ಶ್ರೀ. ಶಂಕರರಾವ ಜೋಶಿಯವರಿಂದ ಬರೆದು ಬಂದದ್ದು)

ಅಚ್ಚ ಮೆಚ್ಚಿನ ಮಾತುಗಳನ್ನು ಅಚ್ಚಗನ್ನಡದಲ್ಲಿ ಜೋಕ್ಕಾಗಿ ಬರೆದು ಕನ್ನಡದ ಚೆಂದಗನ್ನು ಹೆಚ್ಚಿಸಬೇಕೆಂದು ಹಲವರು ಹವಣಿಸುತ್ತಿರುವರು; ಕೆಲವರು ಹಂಬಲಿಸುತ್ತಿರುವರು ಆರೆಂಬರು ಹಲಬುತ್ತಿರುವರು.

ಕನ್ನಡ ನುಡಿಯೊಳಗೆ ಹುಟ್ಟಬೇಕಾದಷ್ಟು ಹಿಗ್ಗುವದಕ್ಕೆ ಇಂಬು ಇದ್ದರೂ, ಅದಕ್ಕೆ ಹೊತ್ತು ಹೊತ್ತಿಗೆ ತಕ್ಕ ಮಾರ್ಪಾಟುಗಳೇನೂ ಆಗಿಲ್ಲ ನುಡಿಯುಬೆಡಗನ್ನು ಹೆಚ್ಚಿಸುವ ದೃಷ್ಟಿಯಿಂದಲೇ ಅದರಗೆಯ್ಮೆಗಳು ಬಹಳ ಕಡಿಮೆ, ಇಲ್ಲವೆಂದರೂ ಸಲ್ಲೀತು. ಆದರಿಂದ ವಯಸ್ಸಾಗಿದ್ದರೂ ಬೆಳೆಯದ ಬಾಲೆಯಂತಾಗಿದೆ ಕನ್ನಡ ನುಡಿಯ ಹಾಡು ಭಾವಕನಿಗೆ ತನ್ನ ಭಾವದ ಅಲಂಪುಗಳನ್ನೂ ವೀರನಿಗೆ ತನ್ನ ಮನಗಂಡ ಮಾತುಗಳನ್ನೂ ಒರೆಯುವಾಗಾಗಲಿ ಹೇಳುವಾಗಾಗಲಿ, ಎಡೆಬಿಡೆಕಿಸುವುದು.

ಇದಕ್ಕೆ ಕನ್ನಡ ನುಡಿಯು ನೆರೆಯದಿದ್ದದೊಂದು ಕಾರಣವಿರುವಂತೆ ಇದ್ದ ನುಡಿಯ ಗುತರ್ಗ ಪೂರಾ ಇಲ್ಲದವರೇ ಹೆಚ್ಚು. ಕನ್ನಡದಲ್ಲಿ ಹೊಸ ಮಾತುಗಳನ್ನು ಮಾಡಿಕೊಳ್ಳಲಿಕ್ಕೆಂದು ಮೊದಲಿಗರು ಹೇಳಿರುವ ಹಾಗೂ ಬಳಸಿರುವ ಬಗೆಗಳು ನಮಗೆ ಗೊತ್ತಿಲ್ಲ. ಅದರಿಂದ ಹೊಸ ಶಬ್ದಗಳನ್ನು ಹುಟ್ಟಿಸುವುದಕ್ಕೆ ಕೈಲಾಗದಕ್ಕೆ ಪರಭಾಷೆಯ ಮಾತುಗಳನ್ನೇ ಎಗ್ಗಿಲ್ಲದ ಬಳಸುವೆವು. ಹೀಗಾದರೆ ಭಾಷೆ ಬೆಳೆಯುವ ಬಗೆ ಯಾವದು ?

ಬರಹಗಾರರಿಗೆ ಒಂದಿಷ್ಟು ನೆರವಾದೀತೆಂದು ಇಲ್ಲಿ ಕೆಲವು ತದ್ಧಿತ ಪ್ರತ್ಯಯಗಳನ್ನು 'ಶಬ್ದಮಣಿದರ್ಪಣ' ಮೊದಲಾದ ಕಡೆಯಿಂದ ಆಯ್ದು ನೀಡುವೆನೀಗ, ಅವನ್ನು ದಿನದ ಮಾತು, ಬರಹಗಳ ಅಡಿಗೆಯಲ್ಲಿ ಬಳಸಬೇಕೆಂದು ಬೇಡಿಕೊಂಬೆನು.

ಕೆಳಗಿನ ಅರ್ಥವನ್ನು, ಭಾವವನ್ನು ಹೇಳಲಿಕ್ಕೆ ಬಳಸಬೇಕಾದ ಮಾತುಗಳನ್ನೆಲ್ಲ ಆಯಾ ಪ್ರತ್ಯಯಗಳನ್ನು ಹಚ್ಚಿಯೇ ಮಾಡಿದರೆ ಕನ್ನಡದ ಕಂಪು ಹೆಚ್ಚಾಗುವುದೆಂಬುದಕ್ಕೆ ಸಂಶಯವಿಲ್ಲ.

ತದ್ಧಿತ ಪ್ರತ್ಯಯಗಳು.

ಧಾತುಗಳಿಲ್ಲದ ಶಬ್ದಗಳಿಗೆ ಈ ಪ್ರತ್ಯಯಗಳನ್ನು ಹಚ್ಚಿ ಅವುಗಳ ಮುಂದೆ ಹೇಳಿರುವ ಅರ್ಥದ ಹೊಸಮಾತುಗಳನ್ನು ಮಾಡಬಹುದು

೧ ಶೀಲ, ಗುಣ, ಸ್ವಭಾವಗಳನ್ನು ಹೇಳುವಲ್ಲಿಯೂ ಉಳ್ಳವನೆಂಬ ಭಾವ ತೋರಿಸುವಲ್ಲಿಯೂ—

ಇಗ, ಕಾರ, ಕುಳಿ, ಅಳಿ, ಗುಳಿ, ಅಟಿಗ, ತನ, ಇಕೆ, ಇಷ್ಟ, ಅ, ಇ, ಕ, ಲ, ಪು, ಮೆ.

ಉದಾಹರಣೆಗಳು

- ಇಗ— ಸುಳ್ಳಿಗ, ಕುಲಗೇಡಿಗ, ದೇಗುಲಿಗ.
- ಕಾರ— ಸಹೆವಳಿಕಾರ, ಇಚ್ಛೆಕಾರ, ಮಾತುಕಾರ.
- ಕುಳಿ— ಇರುಕುಳಿ, ಓಡುಕುಳಿ.
- ಗುಳಿ— ಹಾಡಗುಳಿ' ಸಾಲಗುಳಿ, ಆಟಗುಳಿ, ಲಂಚಗುಳಿ.
- ಅಳಿ— ಓವಾಳಿ, ಸಿಗ್ಗಾಳಿ.
- ಅಟಿಗ— ಕೊಲ್ಲಟಿಗ,
- ತನ— ಜಾಣತನ, ಆಳತನ, ಅರಸುತನ, ಮರುಳುತನ, ಹೆಣ್ತನ, ಗಂಡತನ, ತಾಯ್ತನ
- ಇಕೆ— ಹೆಸರಿಕೆ, ಸೋದರಿಕೆ; ಗೌಡಿಕೆ,
- ಇಷ್ಟ— ರೋಗಿಷ್ಟ, ಗರ್ವಿಷ್ಟ
- ಅ— ಜಾಣ, ಚದುರ, ಬಂಟ, (ಬಂಡು = ಕಾಳಗ)
- ಇ— ರೋಗಿ, ಗರ್ವಿ, ಕೆಲಸಿ, ಹಠಿ, ಸಂಚಿ, (ಚಂಚಿ)
- ಕ— ಬಡಕ, ಕೊಳಕ, ಕುಡಕ, ಒಂಟುಕ, ಚುಚ್ಚಕ, ಭಾವಕ
- ಲ— ಅದಕಲ, ಕುರುಚಲ, ಬಟ್ಟಲ, ಗಂಟಲ, ಬಚ್ಚಲ(?) ಕೆಚ್ಚಲ.
- ಪು— ಇಂಪು' ಕಂಪು, ತಂಪು, ಪೆಂಪು, ಬಣ್ಣ.
- ಮೆ— ಜಾಣ್ಮೆ, ನನ್ಮೆ

೨ ಇದರಲ್ಲಿ ಇರುವದು ಸ್ವಭಾವವೆಂದು ಹೇಳುವಲ್ಲಿ

ಉಗ, ಇಲ, (ಕೆಲವೆಡೆ) ಕಾರ ಮತ್ತು ಉಳಿಗ.

- ಉಗ— ಮಡುಗ (ಮಡಿಯಲ್ಲಿರುವ ಸ್ವಭಾವವೆಂಬರ್ಥ) ಅಣುಗ (ಅಣ್ = ಚಿಕ್ಕ) ಮಾತುಗ, ಓದುಗ, ಹೆಣ್ಣುಗ, ಮಣ್ಣಿಗ, ಹೊನ್ನಗ.
- ಇಲ— ಗಾವಿಲ, ಪಡೆಯಿಲ,
- ಕಾರ— ಮಾತುಕಾರ, ಮಾಲೆಕಾರ
- ಉಳಿಗ— ಮಣ್ಣುಳಿಗ, ಮಾತುಳಿಗ

೩ ' ಹಿಡಿದು ವರ್ತಿಸನೆಂಬಲ್ಲಿ ' ಅಂದರೆ ಅತ್ಯಂತಾಸಕ್ತಿಯನ್ನು ಹೇಳುವಲ್ಲಿ

ಕುಟಿಗ, ಗ, ಇಗ

- ಕಟ್ಟಿಗ— ನೀರುಕುಟಿಗ, ಮರಕುಟಿಗ, ಮಾತುಕುಟಿಗ, ಮೋಟಾರಕುಟಿಗ, ಓದುಕುಟಿಗ.
- ಗ— ಮಾತುಗ, ಕತೆಗ, ತಿಂಡಿಗ, ಕೇಡಿಗ
- ಇಗ— ಊಟಿಗ, ಅಂಬಿಗ

೪ ಇದರಲ್ಲಿ ಹುಟ್ಟಿದ ನೆಂಬಲ್ಲಿ—

ಇಜ— ಅಲರಿಜ, ಪೊಳಲಿಜ, ಕಾಲೂರಿಜ, ಪೂವಿಜ,

[ಈ ಪ್ರತ್ಯಯವು ಕನ್ನಡದಲ್ಲಿ ಬಹುತರ ಪೂರಾ ಕಣ್ಮರೆಯಾಗಿದ್ದು, ಮರಾಠಿಯಲ್ಲಿ ಬೆಮ್ಮಗಳ್ಲ ಮಾತ್ರ ಉಳಿದಿದೆ! ಉದಾ: ಗಾಢ ವಿಚಾಮುಂ]

೫ ಇದರಿಂದಲೇ ಜೀವಿಸುವನೆಂಬಲ್ಲಿ

ಉಳಿಗ, ವಣಿಗ, ಉಣಿ,

- ಉಳಿಗ— ದೇವ್ರಳಿಗ. (ಗುಡಿಯಿಂದಲೇ ಬದುಕುವನೆಂಬರ್ಥ) ಕೈವುಳಿಗ, ಮಾತುಳಿಗ
- ವಣಿಗ— ಲಂಚವಣಿಗ, ಕೊಳವಣಿಗ, ಸಾಲವಣಿಗ, ಬರೆವಣಿಗ
- ಉಣಿ— ಕಳ್ಳುಣಿ (ಕಳ್ = ಹೆಂಡ) ಮಾತುಣಿ ತುಡುಗುಣಿ, ಆಮದುಣಿ

೬ ಇಂಥ ದುಡಿಮೆಯಿಂದ ಬಾಳುವರೆಂಬಲ್ಲಿ

ಇಗ, ಆಯ್ತ, ವಳ, ಗಾರ, ವಡಿಗ, ಅಡಿಗ, ಅಟಿಗ, (ಕೆಲವೆಡೆ) ಕಾರ

- ಇಗ— ಬಾಣಸಿಗ, ತೋಟಿಗ, ಬಣಜಿಗ, ಚಿಪ್ಪಿಗ, ತಂಬುಲಿಗ, ಅಂಬಿಗ, ಗಂದಿಗ,
- ಆಯ್ತ— ಝಳಂಬಾಯ್ತರು, ಕಲ್ಲಾಯ್ತರು,
- ವಳ— ನುಡಿವಳ, ಗೋವಳ, ಸೇವಳ, ಸೆಟ್ಟಿವಳ, ಪೂವಳ
- ಗಾರ— ಮಾಲೆಗಾರ, ಕಂಚುಗಾರ ಕುಂಬಾರ, ಕಂಬಾರ, ಹೂಗಾರ
- ವಡಿಗ— ಕುಲ್ಲವಡಿಗ, ಕುಂಬವಡಿಗ
- ಅಡಿಗ— ಹಾವಡಿಗ, ದೇವಡಿಗ
- ಅಟಿಗ— ದೀವಟಿಗ, ಮಾವಟಿಗ
- ಕಾರ— ಅಂಗಡಿಕಾರ, ಕೂಲಿಕಾರ

ದರ್ಪಣದಲ್ಲಿ ' ಕಾರ ' ಮತ್ತು ' ಗಾರ ' ಪ್ರತ್ಯಯಗಳಲ್ಲಿ ಭೇದವನ್ನು ಕಲ್ಪಿಸಿದ್ದಾರೆ, ಕಾರ ಪ್ರತ್ಯಯವು ಶೀಲವನ್ನೂ ' ಗಾರ ' ಪ್ರತ್ಯಯವು ಉದ್ಯೋಗ- ನಿಯೋಗವನ್ನೂ ಹೇಳುತ್ತದೆ. ಈ ಭೇದವನ್ನು ನೆನಪಿನಲ್ಲಿಟ್ಟು ಮುಂದಿನ ಬರಹಗಾರರು ಅವನ್ನು ಉಪಯೋಗಿಸಿ ಅರ್ಥದ ಸೂಕ್ಷ್ಮತೆಯನ್ನೂ ಭಾಷೆಯ ಗಾಂಭೀರ್ಯವನ್ನೂ ಹೆಚ್ಚಿಸಿದಂತೆ ಕಾಣುವದಿಲ್ಲ. ಇನ್ನು ಮುಂದೆ ನಾವಾದರೂ ಇತ್ತ ಗಮನ ಕೊಟ್ಟರೆ ಲೇಸಲ್ಲವೇ ? ಉದ್ಯೋಗ ಹೇಳುವಲ್ಲಿ ಕೆಲವೆಡೆ ಕಾರ ಪ್ರತ್ಯಯವು ಈ ಮೊದಲೇ ನಿಂದ್ದರೂ ಹೊಸ ಶಬ್ದ

ಗಳನ್ನು ಇನ್ನು ಮುಂದೆ ಮಾಡುವಾಗ ಗಾಂ ಪ್ರತ್ಯಯವನ್ನೇ ಉಪಯೋಗಿಸುವದು ಒಳ್ಳೇದು.]

೭-ಇದ್ದವ, ಉಳ್ಳವ ನೆಂಬಲ್ಲಿ

ಉಳ್ಳ, ಒಡೆಯ, ವಂತ, ಇಗ, ಸ್ಥ, ಸ್ಥ

ಗುಣವುಳ್ಳ, ಜಗದೊಡೆಯ, ಗುಣವಂತ, ನಂಬಿಗಸ್ಥ, ವ್ಯಾ

ಪಾರಸ್ಥ, ಗಟ್ಟಿಗ, ಚಟ್ಟಿಗ

೮ ಸ್ತ್ರೀ ಪ್ರತ್ಯಯಗಳು.

ಅ, ಇತಿ, ಗಿತ್ತಿ, ತಿ, ಎ, ಆಳಿ, ಕಕ್ಕ, ಬೇಗಿತಿ, ಮಾರೆಗಾತಿ, ಕಳಸಗಿತ್ತಿ, ಮಡಿವಳತಿ, ಮೋಲತಿ, ಬ್ರಾಹ್ಮಣತಿ, ಜಾಣೆ, ಚದುರೆ,

ಸೆರಗೊಡ್ಡಿ ಬೇಡಿಕೆ— ನನ್ನ ನಾಡಿನ ಬರವಣಿಗಾರರೇ, ಬರಹಗಾರರೇ, ಮಾತುಕಾರರೇ, ಮಾತುಗಾರರೇ ನಮ್ಮಲ್ಲಿ ಇಷ್ಟು ವಿವಿಧ ಪ್ರತ್ಯಯಗಳಿದ್ದು ಅವನ್ನು ಬಳಸದೆ ಕೆಡಿಸಿ ಬಿಡುವುದು ಖತಿನಡಿಸಿರುವುದು ನಮ್ಮ ಹಾನಿಯು ಹಾಗೂ ಹೀನತನದ ಮಾತಲ್ಲವೇ? ಕಾರಣ ಇದರ ಅಭ್ಯಸದ ದುಡಿಮೆ ಸ್ವಲ್ಪ ಕಷ್ಟವು ಆದರೂ ಚಿಂತೆಇಲ್ಲ. ಆದರೆ ಅನ್ಯ ಬರುವ ಪರದೇಶೀ ಶಬ್ದಗಳಿಗೆ ಆಶ್ರಯಗೊಟ್ಟು ತಾಯಿನುಡಿಯ ಅಂದಗೇಡು ಮಾಡಲಾಗದು. [ಇದು ಬೇಗನೆ ಪ್ರಕಟವಾಗಲಿಕ್ಕಿರುವ "ಕನ್ನಡನಾಡನುಡಿ" ಎಂಬ ಪುಸ್ತಕದ ಒಂದಂಶವು.]

ನನ್ನ ಕನ್ನಡ ನಾಡಿನ ತಿರುಗಾಟ

'ಕನ್ನಡಿಗ'ನ ಓದುಗರೆಲ್ಲ ನನ್ನ ಮೊದಲನೆಯ ಅನುಭವವನ್ನು ಅನುಭವಿಸಿರುವರಷ್ಟೇ. ಕನ್ನಡನಾಡಿನ ಹೃದಯವನ್ನೇ ಹೊಕ್ಕು ಹೊರಬರಲು ಹೊರ ಹೊರಟ ನಾನು ಕಂಡದ್ದನ್ನೆಲ್ಲ ಕಾಣಿಸಬೇಕೆನ್ನುವೆನು ನಿಮಗೂ. ಉಂಡದ್ದನ್ನೆಲ್ಲ ಉಣಿಸಬೇಕೆನ್ನುವೆ ನಿಮಗೂ.

ನಾವೇನೋ ನಮ್ಮ 'ಕನ್ನಡನಾಡು' ನಮ್ಮ 'ತಾಯ್ನಾಡು' ನಮ್ಮ 'ಕನ್ನಡನುಡಿ' ನಮ್ಮ 'ತಾಯ್ನುಡಿ' ನಮ್ಮ ನಾಡು ಸೊಬಗ — ಸೊಗಸುಗಳ ಬೀಡು!! ಎಂದೆಂದುಕೊಂಡು ಎತ್ತಿ ಎದೆಗವಚಿ ತಲೆಯಲ್ಲಿಟ್ಟು ಕುಣಿದಾಡಿ ಮೈಮರೆಯುವೆವು ! ನಮಗೇನೋ ಕರ್ನಾಟಕದ ಸಮಷ್ಟಿದರ್ಶನವು ಅಭಿಮಾನ ಗರ್ಭಿತವಾಗಿದ್ದರೂ, ವ್ಯಷ್ಟಿದರ್ಶನವು ಅಷ್ಟೊಂದು ಅರ್ಥಗರ್ಭಿತವಾಗಿಲ್ಲ!! ಅಂದರೆ- ಅಚ್ಚಗನ್ನಡದಲ್ಲಿ **ಕನ್ನಡಿಸಿ** ಹೇಳಬೇಕಾದರೆ **ಸಂಗಡಿಸಿ** ನೋಡಿದಾಗಿದ್ದ ಅಂದ-ಚಂದವು **ವಿಂಗಡಿಸಿ** ನೋಡಿದಾಗ ಇಲ್ಲವೇ ಇಲ್ಲ. ಹೀಗೆ ಹೇಳುವಾಗ ಕಡಕೆನಿಸುವದೇನೋ ನಿಜ. ಆದರೆ ಮಾಡಬೇಕೇನು ? ಇದ್ದುದನ್ನು ಇದ್ದಹಾಗೆ ಕನ್ನಡಿಸಿ ತೋರಿಸುವದು ಕನ್ನಡಿಯ ಗುಣ ಮುಚ್ಚುಮರೆಯನ್ನರಿಯದ '**ಕನ್ನಡಿಗ**'ನೂ ಇಲ್ಲಿ ಇದ್ದುದನ್ನು ಇದ್ದಹಾಗೆಯೇ ಕನ್ನಡಿಸಿ ತೋರುವನಿಷ್ಟೇ.

ಕನ್ನಡಿಗರು ಉದಾರರಲ್ಲ ವೆಂದಲ್ಲ ಆದರೆ ಅವರ ಔದಾರ್ಯವು ಹೊರ ಬೀಳುವ ಹೊತ್ತು-ಗೊತ್ತುಗಳೇ ಬೇರೆ!! ನಾಟಕರಂಗದಲ್ಲಿ ಹೆಣ್ಣು ಸೊಗು ಸೋಗಿನಂಥ ನಾಚುರಂಗು ಮಾಡುವಾಗೂ ಕೈತಿರುವಿ ಕಣ್ಣೆರೆವಿ ಒನಪು ಒಯ್ಯಾರದಿಂದ ಕುಣಿಯುವಾಗೂ ಸುರಿಯುವಷ್ಟು ರೊಕ್ಕದ ಮಳೆಯು-ಔದಾರ್ಯದ ಹೊಳೆಯು ಇನ್ನಾವ ರಾಷ್ಟ್ರಕಾರ್ಯದಲ್ಲಿಯೂ ಕಂಡುಬರುವದಿಲ್ಲ ಇವರ ಔದಾರ್ಯವು ಹೊರಬೀಳುವ ಹೊತ್ತು-ಗೊತ್ತುಗಳನ್ನು ಒಂದೊಂದಾಗಿ ತೋರಿಸುತ್ತ ಹೋದರೆ ಆರಪಾರವೇ ಹತ್ತಲಿಕ್ಕಿಲ್ಲ. ಮಾದರಿಗೆಂದು ಒಂದು ಮೇಳವಂದದಿಯುವಾ.

ಕರ್ನಾಟಕದಲ್ಲಿ ಎಷ್ಟೋ ಸಾವಿರಗಟ್ಲೆ ಪಟ್ಟಣಗಳುಂಟು. ಎಷ್ಟೋ ಸಾವಿರಗಟ್ಲೆ ಹಳ್ಳಿಗಳುಂಟು ! ಒಂದು ಊರಿಗೆ ಒಂದೇ ಒಂದು ವರ್ತಮಾನಪತ್ರದಂತೆ ಎಲ್ಲ ವರ್ತಮಾನ ಪತ್ರಗಳೂ ಹೋಗಹತ್ತಿದರೆ ಬರೀ-ಅಸ್ತವ್ಯಸ್ತರವೇ ಏಕೆಒಂದೊಂದು ಪತ್ರಕ್ಕೆ ಎಷ್ಟೋ ಸಾವಿರಗಟ್ಲೆ ಚಂದಾದಾರರು ಸಿಗುವವಾಗಿದೆ !! ಆದರೆ ಆ ಬಗೆಯ ಸಂಘಟನ ಶಕ್ತಿಯು ಕರ್ನಾಟಕದಲ್ಲಿ ಹುಟ್ಟಬೇಕಾದರೆ ಇನ್ನು ಎಷ್ಟು ಸಾವಿರವರ್ಷಗಳು ಕಳೆಯ ಬೇಕೋ ಈ ಬಗೆಯಾಗಿ ಸಂಘಟನ ಶಕ್ತಿಯು ಜಾಗ್ರತಿ ಗೊಂಡರೆ, ಕರ್ನಾಟಕದಲ್ಲಿಯ ನೂರಾರು ಪತ್ರಿಕೆಗಳು ಜೀವಂತವಾಗಿ ಜೀವಿಸ ಬಹುದು! ಹೀಗಾದರೆ ಯಾರಿಗೂ ಭಾರವಾಗುವಂತೆಯೂ ಇಲ್ಲ.

ಹೀಗಾದರೆಪತ್ರಕಾರರು ಮನೆಮಾರು ಹಾಳುಮಾಡಿಕೊಂಡು ಗೋಳಾಡುವ ಕಾರಣವೂ ಇಲ್ಲ! ಹೀಗಾದರೆ ಪ್ರಚಾರಕರು ಕರುಳುಂಡುತಿರುಗಬೇಕಾದ ಗಂಡಾಂತರವೂ ಒದಗದಲ್ಲ! ಹೀಗಾದರೆ, ಪ್ರಚಾರಕರಿಗೆ ಅಗ ಬಾ ಈಗ ಬಾ ಹೋಗಿ ಬಾ ಎಂದೆನ್ನುತ್ತ ನಿರರ್ಥಕವಾಗಿ ತಿರುಗಿಸಿ ತಿರುಗಿಸಿ ತೊಂದರೆಕೊಡುವ ಪಾಪವೂ ಜನಗಳಿಗೆ ಒದಿಯುವದಿಲ್ಲ!! ಹೀಗಾದರೆ ಪ್ರಚಾರಕರ ತಾಪತ್ರಾಪಗಳೂ ಜನಗಳಿಗೆ ತಟ್ಟುವದಿಲ್ಲ!! ಹೀಗೆ ಹೀಗಾದರೆ ಕನ್ನಡಿಗರ ಔದಾರ್ಯಕ್ಕೂ ನಷ್ಟ ಬಡಲಾದೀತು. ಹೀಗೆ ಹೀಗೆ ಮಾಡಿ ಕನ್ನಡಿಗರು ತಮ್ಮ ಔದಾರ್ಯಕೋನವನ್ನು ಬದಲಿಸಬೇಕು. ಇಲ್ಲವಾದರೆ ಉಳಿದ ಜನಾಂಗಗಳೊಡನೆ ತಲೆ ಎತ್ತಿ ಆಡ್ಯಾಡುವದಾದರು ಹೇಗೆ? ನಾವು ಹೀಗೆ ಎಚ್ಚರಿಯದಿದ್ದರೆ ನಮ್ಮ ಗತಿಹೀನವಾಗಬೇಕು ಬೇರೆ ಜನಾಂಗಗಳಲ್ಲಿ? ನಿಸ್ವಾರ್ಥಯೋಜಕವಾಗಿ ಹಾಳುಮಾಡುವಾಗ ಏನಾದರೂ ಸೇವ ತೋರಿಸಿ ಹಾಯಿಮಾಡುವದನ್ನು ನಿಲ್ಲಿಸದ ನಾವು, ಪತ್ರಪ್ರಚಾರಕರು, ಶಿಕ್ಷಣಪ್ರಚಾರಕರು, ವಾಙ್ಮಯ ಪ್ರಚಾರಕರು, ಖಾದೀಪ್ರಚಾರಕರು ನಮ್ಮ ಕಡೆಗೆ ಸಹಾಯಕ್ಕೆಂದು ಬಂದಾಗ ಮಾತ್ರ ಏನಾದರೂ ನೆವತೋರಿಸಿ ತಪ್ಪಿಸಿಕೊಳ್ಳಲು ಹವಣಿಸುತ್ತೇವೆ. ದುಂದುಗಾರಿಕೆಯಿಂದ ಹಣಗಾರಿ ವೆಚ್ಚಮಾಡುವಾಗ ಜನಗಳಿಗೆ ದಿವಸ—ಕಾಲಗಳು ಕಠಿಣವಾಗಿರುವದಿಲ್ಲ! ಸತ್ಕಾರ್ಯಕ್ಕೆ ಸಹಾಯ ಮಾಡುವಾಗ ಮಾತ್ರ ಜನಗಳಿಗೆ ದಿವಸ—ಕಾಲಗಳು ಬಹು ಕಠಿಣವಾಗಿ ಬಿಡುವವು!! ನಾಟಕದೊಳಗಿನ ಟ್ರ್ಯಾನ್ಸ್‌ಫರ ಸೀನುಗಳೂ ಕೂಡ ಇಷ್ಟು ಬೇಗ ಬದಲಾಗಲಿಕ್ಕಿಲ್ಲ ಅಷ್ಟು ಬೇಗ ಇವರ ದಿವಸ—ಕಾಲಗಳು ಒಮ್ಮೆಂದೊಮ್ಮೆ ಕಠಿಣವಾಗಿ ಬಿಡುವವು! ಇದೆಂಥ ವಿಚಿತ್ರ ಬದಲಾವಣೆಯೋ ತಿಳಿಯದಾಗಿದೆ! ದುಂದಗಾರಿಕೆಗಾಗಿ ಸಾಲಮೂಲಗಳಾದರೂ ಸರಿಯೇ ದುಂದುಗಾರಿಕೆಯೇ ಬೇಕು ! ಸತ್ಕಾರ್ಯಕ್ಕಾಗಿ ನಾಲ್ವಾದರೂ ಸರಿ ಎಂದು ಮುಂದು ಬಂದ ನಾಶಿಗಳೇ ಇಲ್ಲ! 'ನಾಲಿ ಮುಳಗಿಹೋದರೆ ಹೇಗೆ' 'ಪತ್ರ ನಿಂತುಹೋದರೆ ಹೇಗೆ' ಎಂದು ಸ್ಥಿತಿಲಯಗಳನ್ನೇ ಕುರಿಯಮೋಗುವರು ! ಕನ್ನಡನಾಡಿನ ಕೀರ್ತಿ-ಕೇತುವಿಗೆ ಎಲ್ಲರೂ ಕೈಗೊಟ್ಟು ಎತ್ತಿಹಿಡಿದರೇ ಅದು ಹಾರಾಡುತ್ತ ಅಭಿಮಾನದಿಂದ ಮೆರೆದೀತು ! ಇಲ್ಲವಾದರೆ ಬೀಳುವದೂ ಸಹಜ. ಮುಳುಗುವದೂ ಸಹಜ ! ಇದಕ್ಕೇನು ತಿಳಿಸಿ ಹೇಳಬೇಕೆ? ಕೈಬಿಟ್ಟರೆ ಕೆಳಗೆ ಬೀಳುವದೆಂಬ ಸಿದ್ಧಾಂತವು ಸಣ್ಣ ಮಕ್ಕಳಿಗೂ ತಿಳಿಯುವದು.

"ತಿರುಗಣ"

ವರ್ತಮಾನ ಸಾರ.

ಋತುವೃತ್ತ

ಮಳೆಇಲ್ಲ. ತಂಪಾದ ಗಾಳಿಯು ಮಾತ್ರ ಬೀಸುತ್ತದೆ,

ಕರ್ನಾಟಕ

ಮುಂಬೈ ಕರ್ನಾಟಕ

ಧಾರವಾಡ ಕಾಲೇಜದಲ್ಲಿ ಕಡಸಾ ರಾಘವೇಂದ್ರರಾಯರು ಕನ್ನಡ ಏಕೀಕರಣದ ಮೇಲೆ ವ್ಯಾಖ್ಯಾನಮಾಡಿದರು ಪ್ರಿನ್ಸಿಪಾಲರು,

ಪುಣೆ ಫರ್ಗ್ಯುಸನ್ ಕಾಲೇಜದಲ್ಲಿ ಕರ್ನಾಟಕ ಏಕೀಕರಣದ ವಿಷಯಕ್ಕೆ ಶ್ರೀಯುತ ಕಂಬಳಿ ವಕೀಲರವರು ವ್ಯಾಖ್ಯಾನಕೊಟ್ಟರು

ನವಲಗುಂದದ ಬಡಿಗರಾದ ಶ್ರೀ ವೀರಭದ್ರಪ್ಪ ಅಲಮಪ್ಪ ಪತ್ತಾರ ಎಂಬವರು ಕೈಯಿಂದ ಹತ್ತಿ ಅರಿಯುವಂಥ ರಾಟಿಯನ್ನು ಮಾಡಿದ್ದಾರೆ ಇದರಿಂದ ದಿನಾಲು ನಾಲ್ಕು ಮಣ ಹತ್ತಿಯನ್ನು ಅರಿಯಬಹುದು. ರಾಟಿಯಲ್ಲಿ ಕಾಳು ಒಡೆಯುವದಿಲ್ಲ. ಗುಂಜು ಉಳಿಯುದಿಲ್ಲ ಹಸನಾದ ಅರಳೆಯು ಹೊರಡುವದು ಇದಲ್ಲದೆ ಗಾಳಿಯ ಮಗ್ಗವನ್ನು ಮಾಡಹತ್ತಿದ್ದಾರೆ. ಗಾಳಿಯು ಕಡಿಮೆಯಾದೊಡನೆ ಎಳೆಯು ತನ್ನಾಗಿಯೇ ಒಡೆಯುವದಲ್ಲದೆ ಮರಿಗೆ ಬರೆಕೊಳ್ಳುವದು ಮುಗ್ಗಿದೊಡನೆ ಬೇಕಾದ ನಂಬರಿನ ನೂಲು ತೆಗೆಯುವ ರಾಟಿಯನ್ನು ಮಾಡುವ ಪ್ರಯತ್ನದಲ್ಲಿದ್ದಾರೆ.

ಕರ್ನಾಟಕ ಏಕೀಕರಣ ಸಭೆಯ ಕಾರ್ಯಕಾರೀ ಮಂಡಳದ ಸಭೆಯು ಹುಬ್ಬಳ್ಳಿಯಲ್ಲಿ ಇದೇ ತಿಂಗಳ ೧೨ ನೇ ತಾರೀಖಿಗೆ ಕೂಡುವದಿದ್ದು ಎಲ್ಲ ಸಭಾಸದರು ದಯಮಾಡಿ ಸಭೆಗೆ ಬರಬೇಕೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಕಾನಪೂರ ರಾಷ್ಟ್ರೀಯ ಸಭೆಗೆ ಅಧ್ಯಕ್ಷರನ್ನು ಆರಿಸುವ ಕಾರಣ ಗದಗಿನಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮೀಟಿಯ ವಿಶೇಷ ಸಭೆಯು ೧೩ ನೇ ತಾರೀಖಿನ ದಿವಸ ಕೂಡತಕ್ಕದ್ದಿದೆ.

ಮೈಸೂರ ಕರ್ನಾಟಕ

ನೆಲ್ಲಮಂಗಲ ತಾಲೂಕ ವೀರಶೈವ ಸಭೆಯ ಅಧ್ಯಕ್ಷರಾದ ಚಂದ್ರಶೇಖರಯ್ಯನವರು ಗೋರಕ್ಷಣದ ಬಗ್ಗೆ ಕಳಕಳಿಯ ಭಾಷಣ ಮಾಡಿ ಗೋವುಗಳನ್ನು ಕಟುಕರಿಗೆ ಮಾರಕೂಡದೆಂದು ಕಠಿಣ ಶಾಸನಮಾಡಿಸಲ್ಲದೆ ಮೈಸೂರ ಸರಕಾರದವರು ತಮ್ಮ ಸಂಸ್ಥಾನದಲ್ಲಿ ಹತ್ಯ ಮಾಡಲಾರದಂಥ ಕಾಯಿದೆ ಮಾಡಿಸಲು ವಿಜ್ಞಾಪಿಸಿಕೊಂಡಿರುವರು,

ಕೊಡಗು ಕರ್ನಾಟಕ

ವಿದ್ಯಾ ಇಲಾಖೆಯ ಮಿ। ಬಿದ್ದಂಡ ಸುಬ್ಬಯ್ಯ ಬಿ ಎ ಇವರು ತಮ್ಮ ಶಿಕ್ಷಣವನ್ನು ಮುಗಿಸಿ ಮೇಲ್ಗತಿಯಲ್ಲಿ ತೇರ್ಗಡೆ ಹೊಂದಿ ಇಂಗ್ಲಂಡದಿಂದ ಕೊಡಗಿಗೆ ತಿರುಗಿ ಬಂದಿರುವರು

ನಿಜಾಮ ಕರ್ನಾಟಕ

ಹೈದರಾಬಾದದಲ್ಲಿ ಕೀರ್ತನಕೇಸರಿ ಜಯರಾಮಾಚಾರ್ಯರು ಕನ್ನಡದ ಜಾಗ್ರತಿಗಾಗಿ ಎಡೆಬಿಡದೆ ತಮ್ಮ ಕೀರ್ತನೆಯಿಂದ ಪ್ರಯತ್ನಿಸಹತ್ತಿದ್ದಾರೆ ಅವರ ಕೀರ್ತನದ ಪರಿಣಾಮವು ಎಲ್ಲರ ಮೇಲೂ ಚನ್ನಾಗಿ ಆಗಿಬಿಟ್ಟದೆ! ಕರ್ನಾಟಕದ ಅಭಿಮಾನದಿಂದ ತೆಲಗರೂ ಕೂಡ ಸಾಹಸಬಟ್ಟು ಕೆಲಸ ಮಾಡಹತ್ತಿದ್ದಾರೆ ಹೈದರಾಬಾದದಲ್ಲಿಯೇ "ಕರ್ನಾಟಕಸಂಘ" ಎಂಬವೊಂದು ಸಂಸ್ಥೆಯನ್ನು ಸ್ಥಾಪಿಸಿ ಅದರ ಮುಖಾಂತರವಾಗಿ ಮೊದಲು ನಿಜಾಂ ಕರ್ನಾಟಕದ ಏಕೀಕರಣವನ್ನೂ ಆಮೇಲೆ ಅಖಿಲ ಕರ್ನಾಟಕ ಏಕೀಕರಣವನ್ನೂ ಮಾಡಬೇಕೆಂದು ಧ್ಯೇಯವನ್ನಿಟ್ಟುಕೊಂಡು ಬಹು ಉತ್ಸಾಹದಿಂದ ಕೆಲಸ ಸಾಗಿಸಹತ್ತಿದ್ದಾರೆ. ಹೈದ್ರಾಬಾದದಲ್ಲಿ ಮತ್ತು ಗುಲಬರ್ಗಾದಲ್ಲಿ ಇನ್ನೂ ತನಕ ಕನ್ನಡ ಶಾಲೆಗಳೇ ಇಲ್ಲ. ಆದಕಾರಣ ಕರ್ನಾಟಕ ಸಂಘದವರು ಕನ್ನಡ ಶಾಲೆಗಳನ್ನು ಸ್ಥಾಪಿಸಲು ಯತ್ನಿಸುತ್ತಿದ್ದಾರೆ. ಸ್ತುತ್ಯ.

ಗುಲಬರ್ಗಾದಲ್ಲಿ ಗಜಾನನ ಉತ್ಸವವು ಹೋದವರ್ಷ ಮುಗ್ಗಿತ್ತು ಮತ್ತೆ ಈವರ್ಷ ಜನಾರ್ದನರಾವ ಖಂಡೇರಾವ ಮತ್ತು ಕೆಲವು ಮುಖ್ಯ ಗೃಹಸ್ಥರು ಪ್ರಯತ್ನಪಟ್ಟು ಬಹು ವಿಜೃಂಭಣೆಯಿಂದ ಪುನಃ ಈವರ್ಷ ಸಾಗಿಸಹತ್ತಿದ್ದಾರೆ ಈಗೆರಡು ದಿನಗಳಿಂದ ಕೀರ್ತನ ಕೇಸರಿಗಳ ಕೀರ್ತನೆಗಳಾಗಹತ್ತಿವೆ ನಿಜಾಂ ಕರ್ನಾಟಕದ ಜಾಗ್ರತಿಗಾಗಿ ಮಾಡುವ ಕೀರ್ತನಕೇಸರಿಗಳ ಕಾರ್ಯವು ಸ್ತುತ್ಯವಾಗಿದೆ.

ಹಿಂದುಸ್ಥಾನ

ಲೇಜಿಸ್ಲೇಟಿವ್ಹ ಅಸೆಂಬ್ಲಿಯಲ್ಲಿ ಸಮ್ಮತಿಯ ವಯಸ್ಸಿನ ಬಿಲ್ಲು ಮಧ್ಯಪಾನ ಪ್ರತಿಬಂಧಕ ಸಂಬಂಧದ ಬಿಲ್ಲು ಪಾಸಾದವು. ಮೊದಲನೆಯ ಕಾಯದೆಯಿಂದ ಗಂಡನು ತನ್ನ ಹೆಂಡತಿಯ ಸಂಗಡ ಅವಳು ೧೩ ವರ್ಷದವಳಾಗುವ ವರೆಗೆ ಸಂಬಂಧವನ್ನು ಮಾಡಕೂಡದೆಂದೂ ಉಳಿದಪ್ರಸಂಗಗಳಲ್ಲಿ ಆವಯೋಮರ್ಯಾದೆಯು ೧೫ ಇರಬೇಕೆಂದೂ ನಿರ್ಣಯವಾಗಿರುವದು. ಎರಡನೇಯದರಿಂದ ಮದ್ಯಪಾನವನ್ನು ಬಂದು ಮಾಡುವದು ಧ್ಯೇಯವಿದ್ದು ಸದ್ಯಕ್ಕೆ ಯಾವಯಾವ ಸ್ಥಳಗಳಲ್ಲಿ ಎಷ್ಟೆಷ್ಟು ಗಡಂಗಗಳಿರಬೇಕೆಂಬದನ್ನು ನಿರ್ಣಯಿಸುವ ಅಧಿಕಾರವು ಆ ಸಂಸ್ಥಾನಿಕ ಸಂಘಗಳಿಗೆ ಒಪ್ಪಿಸುವದರಲ್ಲಿ ಬಂದದೆ ಇದನ್ನು ಸರಕಾರದವರು ಅಮಲಿನಲ್ಲಿ ತರುವರೋ ಇಲ್ಲವೆ ಹಣದಾಶೆಗೆ ಬಿದ್ದು ಮೂಲೆಯಲ್ಲಿ ಬೀಸಾಡುವರೋ ನೋಡಬೇಕು.

ಮುಂಬೈಯಲ್ಲಿ ಕೇಶವದಾಸರ ಕನ್ನಡ ಕೀರ್ತನೆಗಳೂ, ತಮಿಳ ನಾಡಿನಲ್ಲಿ ಶೇಷಣ್ಣನವರ ವೀಣಾವಾದ್ಯವೂ ನಡೆದಿರುವವು ಕರ್ನಾಟಕ ಸ್ವರ ಕೀರ್ತಿಯು ಹೀಗೆಯೇ ಹಬ್ಬಲಿ!

ಅಗ್ರಾದ ಸಾಧುಸಭೆಯ ಅಧ್ಯಕ್ಷರಾದ ಶ್ರೀ ಕೃಪಾಲಿದಾಸರವರಿಗೆ ಅಮೇರಿಕೆಯ ವಿವಿಧರಾಷ್ಟ್ರಗಳ ಭಾಷಣ ಸಮಿತಿಯವರು ತಮ್ಮಲ್ಲಿ ಬಂದು ಹಿಂದೂಧರ್ಮದ ಮಹತ್ವದ ಕುರಿತು ೭೦ ಭಾಷಣಗಳನ್ನು ಮಾಡಲು ಆಮಂತ್ರಣ ಕಳುಹಿಸಿರುವರು. ಪ್ರತಿಯೊಂದು ಭಾಷಣಕ್ಕೆ ೧೨೦೦ ಡಾಲರು ಕೊಡಲು ಒಪ್ಪಿದ್ದಾರೆ ಹೀಗೆ ಬಂದ ಹಣವನ್ನು ಪ್ರಪಂಚದ ಎಲ್ಲ ಮತದವರೊಂದು ಯುನಿವರ್ಸಿಟಿಯನ್ನು ಸ್ಥಾಪಿಸುವದರಲ್ಲಿ ವಿನಿಯೋಗಿಸಲ್ಪಡುವದು,

ಪರದೇಶ

ಫ್ರಾನ್ಸದಲ್ಲಿ ಝಿರೋ ಎಂಬವನಿಗೆ ೧೫೧ ವರ್ಷಗಳಿವೆ. ಇತರ ಅಮೇರಿಕೆಯವರು ತಮ್ಮ ರಾಷ್ಟ್ರಗಳಿಗೆ ಬರಲು ಆಮಂತ್ರಣವನ್ನಿತ್ತಿರುವರು ಈಗಲಾದರೂ ಸಶಕ್ತನಿದ್ದಾನೆ ಅವನಿಗೆ ೩೬ ಜನ ಹೆಂಡಂದಿರಾಗಿದ್ದಾರೆ ಅವನ [illegible] ೯೧ ಚಹ, ಚುಟ್ಟಿ ಮೊದಲಾದ ಯಾವ ವ್ಯಸನಗಳು ಇಲ್ಲದ್ದರಿಂದ ನಾನು ಹೀಗೆ ಈಗ್ಗೆಯೂ ಸಶಕ್ತನಾಗಿರುವೆನೆಂದು ಅವನು ಹೇಳುತ್ತಿರುವನು

ಧರ್ಮಗಳ ಮತಭೇದಕ್ಕಾಗಿ ಗ್ಲಾಸ್ಗೋ ಪಟ್ಟಣದ ನಿವಾಸಿಗಳಲ್ಲಿ ಜಗಳವಾಯಿತು ಕಡೆಗೆ ೪ ಸಾವಿರ ಜನರು ಅದರಲ್ಲಿ ಭಾಗತೆಗೆದುಕೊಂಡರು. ದೊಡ್ಡದೊಂದು ದಂಗೆಯೆದ್ದಿತು ಒಬ್ಬರನ್ನೊಬ್ಬರು ಹೊಡೆಯಹತ್ತಿ ಕಲ್ಲು, ಬಡಿಗೆ, ಕನ್ನಡಿ, ಬಾಟ್ಲಿ ಮೊದಲಾದ ಕೈಗೆದೊರೆತದ್ದನ್ನು ಹಿಡಿದು ಪ್ರತಿಪಕ್ಷಿಗಳನ್ನು ಹಣೆಯಹತ್ತಿದರು. ಅನೇಕರ ತಲೆಒಡೆದವು, ಭಯಂಕರವಾದ ಅಪಾಯಗಳಾದವು! ಅಲ್ಲಿ ಪೋಲೀಸರು ಅನೇಕರಿದ್ದರೂ ಶಾಂತತನದಿಂದ ದಂಗೆಯನ್ನು ನಿಲ್ಲಿಸುವ ಪ್ರಯತ್ನ ಮಾಡಿದರೇ ಹೊರತಾಗಿ ಯಾರ ಮೇಲೆ ಗುಂಡು ಹಾರಿಲ್ಲ ಆದರೆ ಇದೇ ದಂಗೆಯು ಹಿಂದುಸ್ಥಾನದಲ್ಲಿ ಆಗಿದ್ದರೆ .... ಇಂಗ್ಲಂಡದಲ್ಲಿಯೇ ಈ ಬಗೆಯ ದಂಗೆಗಳು ಆಗುತ್ತಿದ್ದರೂ ಅವರು ಸ್ವರಾಜ್ಯಕ್ಕೆ ಪಾತ್ರರು. ಆದರೆ ಹಿಂದುಸ್ಥಾನದಲ್ಲಿ ಯಾದರೆ ಆಳರಸರು ಕೂಗಾಡುತ್ತ "ಓ ಹೋ! ನೀವು ಧರ್ಮದ ವಿಷಯಗಳಲ್ಲಿ ಜಗಳಾಡುವಿರಿ, ನೀವು ಸ್ವರಾಜ್ಯಕ್ಕೆ ಅಪಾತ್ರರೆಂಬದಾಗಿ ಕೇಳಲು [illegible] ನಮ್ಮ ಕಣ್ಣಲಿಗೆ ಸುಣ್ಣವನ್ನು ಹಚ್ಚಲು ಪ್ರಾರಂಭಿಸುವರು! ಆದರೆ ತಮ್ಮ ನಾಡಿನಲ್ಲಿಯೇ ಒದಗಿದ ಗ್ಲಾಸ್ಗೋದ ಈ ದಂಗೆಗೆ ಏನೆಂದು ಉತ್ತರ ಕೊಡುವರು?

ಏಶಿಯಾದ ತುರ್ಕಸ್ಥಾನದೊಳಗಿನ ಮೋಸಲದ ದೆಶೆಯಿಂದ ತುರ್ಕ ಹಾಗೂ ಇಂಗ್ಲೀಷರಲ್ಲಿ ಪ್ರಸಂಗವಿದ್ದು ಯುದ್ಧಕ್ಕೆ ಮುಂದಾಗುವ ಹಾಗೆ ತೋರುತ್ತದೆ,

"ಕನ್ನಡಿಗ"ನ ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ ೫ ರೂ ಉಪಕಾರಕರ್ತೃಗಳಿಗೆ ವಾ ೧೦ ರೂ ಒಮ್ಮೆಲೇ ೫೦ ರೂ ಕೊಡುವವರು ಆಶ್ರಯದಾತರು

ಸ್ಥಳದ ಚಂದಾದಾರರಿಗೆ.	೧ ರೂ ಇಲ್ಲವೇ, ೧೫ ನಂಬರಿಗೆ ಕಡಿಮೆ ಯಾಗದಂಥ ೧೦೦೦ ಯಾರ್ಡ ಕೈ ನೂಲು
ಪರಸ್ಥಳದ ,,	ಮನಿಯಾರ್ಡರದಿಂದ ೧-೧೩-೦ ವಿ. ಪಿ ಯಿಂದ ೨-೧-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೫೦೦ಯಾರ್ಡ ಕೈನೂಲು
ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ-	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ೨-೧೩-೦ ,, ವಿ ಪಿ. ಯಿಂದ ೩-೧-೦
ಸರಕಾರ, ಮುನಸೀಪಾಲಿಟಿ ಲೋಕಲ್‌ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦ ವಿ ಪಿ ಯಿಂದ ೫-೧-೦

ಬಿಡಿ ಸಂಚಿಕೆಗೆ ೯ ಪೈ ಓಂದಿನಸಂಚಿಕೆಯೊಂದಕ್ಕೆ ೨ ಆಣೆ. ಧರ್ಮಾರ್ಥವಾಗಿಯಾಗಲೀ ವರ್ಷದ ಕಡಿಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ.

ವ್ಯವಸ್ಥಾಪಕ

ಲೋಕಮತ.

ಕರ್ನಾಟಕದಲ್ಲಿ ನವ [illegible]ವನ್ನು ಹುಟ್ಟಿಸಿ ಅಹಿಂಸೆ, ಖಾದಿ, ಸತ್ಯಾಗ್ರಹ ಇವೇ ಮೊದಲಾದ ವಿಷಯಗಳನ್ನು ಪ್ರತಿಪಾದಿಸಿ ಲೋಕಮತವನ್ನು ಜಾಗ್ರತ ಪಡಿಸುವದೇ ಈ ವಾರಪತ್ರಿಕೆಯ ಉದ್ದೇಶ ವಾ [illegible] ರೂ ೩—೫—೦

ವ್ಯವಸ್ಥಾಪಕ ಲೋಕಮತ ಹುಬ್ಬಳ್ಳಿ.

ಕರ್ನಾಟಕವೃತ್ತ ಧಾರವಾಡ.

೫೦ ವರ್ಷಗಳಿಂದ ಕನ್ನಡನಾಡಿನ ಸೇವೆ ಮಾಡುತ್ತ ಬಂದಿರುವ ಈ ವಾರಪತ್ರಿಕೆಯಲ್ಲಿ, ಕರ್ನಾಟಕದ ವೈಶಿಷ್ಟ್ಯವನ್ನು ಪ್ರತಿವಾರದಲ್ಲಿಯೂ, [illegible] ರೂ ೨—೫—೦

ಪ್ರಕಟಣೆ

ದಿ [illegible] ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು [illegible]ಗಳ ಚೀಟಿ ಎತ್ತುವ ಕ್ರಮವು ೧೯-೫ ನೇ [illegible] ದಿನ ಸಾಯಂ ಕಾಲದ ೫-೩೦ ಗಂಟೆಗೆ ಈ ಕಂಪನಿಯ [illegible] ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿವೀ[illegible] ಶ್ರೀ ಬಿ. ಬಸವಾರಾಧ್ಯ ಬಿ. ಎ. ಬಿ ಎಲ್ [illegible] ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ೧೦೦೦ ರೂ [illegible] ದೊರೆಯಬೇಕೆಂದು ನಿರ್ಣಯವಾಯಿತು—

(೧) ಬಾಂಡ ನಂ. ೧೧-೦೨ ಶ್ರೀ. [illegible] ಮುಕ್ಕೇರಿ. ಬುಕ್ಕಸೇಲರ ವಿದ್ಯಾರ್ಥಿಗಳ [illegible] ಧಾರವಾಡ

(೨) ಬಾಂಡ ನಂ [illegible] ಶ್ರೀ [illegible] ನಾಯಿಕ, ಕಂಪಾವುಂಡರ, [illegible] ನ [illegible] ([illegible])

(೩) ಬಾಂಡ ನಂ [illegible] ಶ್ರೀ [illegible] ಲು [illegible]

(೪) ಬಾಂಡ ನಂ [illegible] ಶ್ರೀ [illegible]

(೫) ಬಾಂಡ ನಂ [illegible] ಗುರು [illegible] ಪದಾರ [illegible]

೧-೮-[illegible] { [illegible]

ಧಾತುಪಧಾತು ರಸಮ[illegible]

ಅಷ್ಟ[illegible]ಸಂಧಿ) [illegible] ([illegible])

ಔಷಧಿಗಳು	ತೊಲೆ	ಬೆಲೆ	ಔಷಧಿಗಳು	ತೊಲೆ	ಬೆಲೆ
ಅಭ್ರಕಭಸ್ಮ ೧೦೦೦ ಪುಟ	೧	೪೦	ತ್ರಿವಂಗಭಸ್ಮ-ಪೀತವರ್ಣ	೩	೩
,, ೫೦೦ ,,	೧	೨೦	ಸುವರ್ಣ ಮಾಕ್ಷಿಕಭಸ್ಮ	೫	೪
,, ೧೦೦ ,,	೧	೫	ನಾಗಭಸ್ಮ-[illegible]	೩	೩
,, ನಿಶ್ಚಂದ್ರ	೨|	೪	ಮೃಗಶೃಂಗಭಸ್ಮ-ಶ್ವೇತ	೫	೩
[illegible]ಭಸ್ಮ ರಕ್ತವರ್ಣ	೩	೫	ಸುವರ್ಣರಾಜವಂಗೇಶ್ವರ	೩	೬
ಮಂಡೂರಭಸ್ಮ-ರಕ್ತವರ್ಣ	೩	೨	ಸಿದ್ಧಮಕರಧ್ವಜ-ಅನುಪಾನಮಿಶ್ರ ಗುಳಿಗೆಗಳು-೫೦	—	೫
ವಂಗಭಸ್ಮ-ಶ್ವೇತವರ್ಣ	೩	೩	ಪ್ರಾಚೀನ ಹೇಮಗರ್ಭಮಾತ್ರಾ	೧	೧೦೦

ಔಷಧಿಗಳು ಪರೀಕ್ಷಾಂತ್ಯದಲ್ಲಿ ಸದೋಷವೆಂದು ಕಂಡುಬಂದಲ್ಲಿ ವಾಪಸು ಮಾಡಲಾಗುವದು ಎಲ್ಲಪ್ರಕಾರದ ಆಯು[illegible] ಔಷಧಿಗಳೂ, ಔಷಧೋಪಯೋಗಿ ದ್ರವ್ಯಗಳೂ ಸುಲಭ ಬೆಲೆಗೆ ದೊರಕುವವು.

ವೈದ್ಯ— [illegible] ಜಹಾಗೀರದಾರ [illegible]. ಜಿ. ವಿಜಾಪುರ.

[illegible] ವಿದ್ಯಾವರ್ಧಕ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಪ್ರಕಟಿಸಲ್ಪಟ್ಟಿತು.

ವಾ. ಚಂದಾ ೧—೧೩—೦ ಮಾತ್ರ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

यद्यत् - परवशं दुःखं । यद्यदात्मवशं सुखं ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ಭಾದ್ರಪದ ವದ್ಯ ೩೦ ಶಕೆ ೧೮೪೭. ತಾ|| ೧೮ ೯-೧೯೨೫. | ಸಂಚಿಕೆ ೨೫

ಸಂಪಾದಕರ ಭೂಮಿಕೆ.

ನನ್ನ ಮನಸಿನ ಪೀಠವಮಾಡಿ ಕಟ್ಟುವೆನಾಸು
ನಿನ್ನ ಬೆಸನವ ಮಾಡಿದಂಥ ಮಕ್ಕಳ ಮೊದ್ಲು
ಚಿನ್ನದಾದರು ಚಿನ್ನ ಮೇಣಬತ್ತಿಯ ನೊಂದು
ಚಿನ್ಮಯಾಕಾಶದಲ್ಲಿ ।

ನನ್ನ ದೇಹವು ನಿನ್ನ ವೀರಶಾಸನಕಾಗಿ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ।
ಗಂಧವಹವೆಂದು ತಿಳಿಯೆ॥

—ಅಂಬಿಕಾತನಯ ದತ್ತ

೧೯೧೯ ನೇ ಇಸವಿಯ ಸುಧಾರಣೆಯ ಕಾಯದೆಯನ್ನು ಅಮಲಿನಲ್ಲಿ ತರುವಾಗ ಕಂಡು ಬಂದ ತೊಡಕುಗಳನ್ನು ಬಿಡಿಸುವದಕ್ಕಾಗಿ ಒಂದು ಕಮೀಟಿಯು ನಿಯಮಿಸಲ್ಪಟ್ಟು ಅದರ ವರದಿಯು ಪ್ರಸಿದ್ಧವಾಗಿ ಬಹಳ ದಿವಸಗಳಾದವು. ಆ ಬಗ್ಗೆ ಇಂಗ್ಲಂಡದಲ್ಲಿಯ ಮುಖ್ಯ ಮುತ್ಸದ್ದಿಗಳ ಸಂಗಡ ವಿಚಾರ ಮಾಡುವ ಕುರಿತು ಲಾರ್ಡ ರೀಡಿಂಗ ಸಾಹೇಬರು ಹಿಂದುಸ್ಥಾನದ ಬೊಕ್ಕಸದೊಳಗಿನ ಹಣವನ್ನು ವೆಚ್ಚಮಾಡಿ ಇಂಗ್ಲಂಡಕ್ಕೆ ಹೋಗಿ ಬರುವದಾಯಿತು. ಹಿಂದುಸ್ಥಾನದ ಸ್ಟೇಟ ಸೆಕ್ರೆಟರಿಗಳಾದ ಲಾರ್ಡ ಬರ್ಕನ್ ಹೆಡ್ಡರ ಹಾಗು ಗವ್ಹರ್ನರ ಜನರಲ್ ಲಾರ್ಡ ರೀಡಿಂಗರ ಜೊಳ್ಳು ಭಾಷಣಗಳಾದವು. ಈಗ ಮೊನ್ನೆ ಕೂಡಿದ ಲೆಜಿಸ್ಲೇಟಿವ್ಹ ಅಸೆಂಬ್ಲಿಯಲ್ಲಿ ಮಡಿಮನ್ ಕಮೀಟಿಯ ವರದಿಯಲ್ಲಿ ಬಹು ಮತದ ವರದಿಯಲ್ಲಿ ನಿರ್ದಿಷ್ಟವಾದ ತತ್ವಗಳನ್ನು ಮನ್ನಿಸಬೇಕೆಂಬ ಸೂಚನೆಯನ್ನು ಮಡಿಮನ್ ಸಾಹೇಬರು ಮಂಡಿಸಿದರು ಪಂಡಿತ ಮೋತೀಲಾಲರು ಅದಕ್ಕೆ ತಮ್ಮದೊಂದು ಉಪಸೂಚನೆಯನ್ನು ತಂದರು. "ಹಿಂದುಸ್ಥಾನ ಸರಕಾರದಲ್ಲಿಯ ಸೈನ್ಯ, ಪರರಾಷ್ಟ್ರಗಳ ಸಂಗತ ವ್ಯವಹಾರ, ಹಿಂದುಸ್ಥಾನ ಸರಕಾರದವರು ಇಲ್ಲಿಯವರೆಗೆ ಲೋಕ ಕಲ್ಯಾಣಕ್ಕಾಗಿ ಮಾಡಿದ ಸಾಲವನ್ನು ತೀರಿಸುವದು, ಇಷ್ಟು ಸಂಗತಿಗಳನ್ನು ಹೊರ್ತುಪಡಿಸಿ ಉಳಿದ ಎಲ್ಲ ಕಾರ್ಯಗಳನ್ನು ಪ್ರಜಾಪ್ರತಿನಿಧಿಗಳ ವಶಕ್ಕೆ ಕೊಡಬೇಕು; ಹಿಂದುಸ್ಥಾನದ ಸ್ಟೇಟ ಸೆಕ್ರೆಟರಿಯವರ ಕೌನ್ಸಿಲ ತೆಗೆದು ಹಾಕಿ ಆ ಕಾರ್ಯವನ್ನು ಕಾನಡಾ ಮುಂತಾದ ಸ್ವತಂತ್ರ ರಾಷ್ಟ್ರಗಳ ಕಾರ್ಯವನ್ನು ನೋಡುತ್ತಿರುವ ಸ್ಟೇಟ ಸೆಕ್ರೆಟರಿಯವರ ಕಡೆಗೆ ಕೊಡಬೇಕು; ಹಿಂದುಸ್ಥಾನದ ಸೈನ್ಯವು ನಿಯಮಿತ ಕಾಲಾವಧಿಯಲ್ಲಿ ಸಂಪೂರ್ಣ ಹಿಂದೀಯರದೇ ಆಗಬೇಕು; ಪ್ರಾಂತಿಕ ಹಾಗೂ ಹಿಂದುಸ್ಥಾನದ ಕಾನೂನು ಮಂಡಲಗಳಲ್ಲಿ ಪ್ರಜೆಗಳಿಂದ ಆರಿಸಲ್ಪಟ್ಟ ಸಭಾಸದರೇ ಇರತಕ್ಕದ್ದು; ಪ್ರಾಂತಿಕ ಸರಕಾರಗಳಲ್ಲಿಯ ಈಗಿನ ದ್ವಿದಲ ಪದ್ಧತಿಯನ್ನು ತೆಗೆದು ಹಾಕಿ ಎಲ್ಲ ಕಾರ್ಯವನ್ನು ಪ್ರಜಾಪ್ರತಿನಿಧಿಗಳ ಕಡೆಗೆ ಒಪ್ಪಿಸಬೇಕು. ಮತ್ತು ನಿಯಮಿತ ಕಾಲಾವಧಿಯ ನಂತರ ಹಿಂದುಸ್ಥಾನದ ಸರಕಾರದಲ್ಲಿಯ ಎಲ್ಲ ಕಾರ್ಯಗಳು ಪ್ರಜಾಪ್ರತಿನಿಧಿಗಳಿಂದಲೇ ಜರಗಿಸಲ್ಪಡಬೇಕು;" ಇವೇ ಆ ಉಪಸೂಚನೆಯಲ್ಲಿ ನಿರ್ದಿಷ್ಟವಾದ ಸಂಗತಿಗಳು. ಪಂಡಿತ ಮೋತೀಲಾಲರ ಉಪಸೂಚನೆಗೆ ಲಿಬರಲ್, ಸ್ವತಂತ್ರ ಪಕ್ಷಗಳ ಸಭಾಸದರೂ ತಮ್ಮ ಬೆಂಬಲವನ್ನು ಕೊಟ್ಟರು. ಆ ಉಪಸೂಚನೆಯನ್ನು ಸರಕಾರದವರು ಅತ್ಯಂತ ತೀವ್ರವಾಗಿ ವಿರೋಧಿಸಿದರೂ ಕಡೆಗೆ ೭೨ ಮತಗಳು ಅನುಕೂಲ ಮತ್ತು ೪೫ ಮತಗಳು ವಿರುದ್ಧ ಬಿದ್ದು ಉಪಸೂಚನೆಯಂತು ಮಂಜೂರಾಯಿತು. ಉದ್ದುದ್ದ ಭಾಷಣಗಳಾದವು. ಸರಕಾರದವರು ಉಪಸೂಚನೆಯನ್ನು ಮನ್ನಿಸದಿದ್ದರೆ ಮುಂದೆ ಸರಕಾರಕ್ಕೆ ವಿರೋಧವು ಬಹಳವಾಗುವದೆಂಬದಾಗಿ ಬೆದರಿಕೆಯನ್ನು ಹಾಕುವದೂ ಆಯಿತು. ಆದರೆ ಸರಕಾರದವರೇನೂ ಆ ಬೆದರಿಕೆಗೆ ಸೊಪ್ಪು ಹಾಕಲಿಲ್ಲ. ಈಗ ಬಹುಮತದಿಂದ ಪಾಸಾದ ಉಪಸೂಚನೆಯಂತೆ ಸರಕಾರದವರು ವರ್ತಿಸಲಿಕ್ಕೆ ಒಪ್ಪುವದಿಲ್ಲವೆಂಬದು ಸ್ಪಷ್ಟವಾದ ಮಾತು. ಹೀಗಿರಲು ನಾವು ಮುಂದೆ ಮಾಡಬೇಕಾದ ಕರ್ತವ್ಯವೇನು? ಸರಕಾರದವರು ನಮ್ಮ ವಿರೋಧವನ್ನು ಲೆಕ್ಕಿಸದಿರುವದಕ್ಕೆ ಕಾರಣವೇನೆಂಬದನ್ನು ಕಂಡು ಹಿಡಿದು ಆ ಕಾರಣವನ್ನು ದೂರ ಪಡಿಸುವದೇ ನಮ್ಮ ಆದ್ಯ ಕರ್ತವ್ಯವು. ನಮ್ಮ ಮುಂದಾಳುಗಳು ಮಾಡಿದ ನಿರ್ಣಯಕ್ಕೆ ನಮ್ಮ ಸಕ್ರಿಯ ಸಹಾನುಭೂತಿಯು ಬೇಕಾಗುವದು. ಕೇವಲ ಭಾಷಣಗಳಿಂದಾಗಲಿ ಸಹಾನುಭೂತಿಯನ್ನು ವ್ಯಕ್ತಪಡಿಸುವ ಸಭೆಗಳಿಂದಾಗಲಿ ವೃತ್ತಪತ್ರಗಳಲ್ಲಿಯ ಟೀಕೆಗಳಿಂದಾಗಲಿ ಸರಕಾರವು ಬೆದರುವದಿಲ್ಲ. ನಾವು ಮಾಡಿದ ನಿರ್ಣಯವನ್ನು ಸರಕಾರದವರು ಮನ್ನಿಸದಿದ್ದರೆ ಮುಂದೆ ನಾವು ಜೀವದ ಹಂಗು ದೊರೆದು ಯಾವ ಗಂಡಾಂತರಗಳಿಗೂ ಹೆದರದೆ, ಕಾರ್ಯಪ್ರವೃತ್ತರಾಗ ಬೇಕಾಗುವದು. ಸ್ವಾವಲಂಬಿಗಳಾಗಲು ಬೇಕು. ನಮ್ಮ ಸಾಂಘಟಿಕ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲುಬೇಕು. ಪ್ರಸಂಗ ಬಂದಲ್ಲಿ ಸತ್ಯಾಗ್ರಹಕ್ಕೆ ಸಹ ಸಿದ್ಧರಾಗಲು ಬೇಕು. ಈ ತರದ ಸಾಮರ್ಥ್ಯವು ನಮ್ಮಲ್ಲಿಲ್ಲದ ಹೊರತು ನಮ್ಮ ಮಾತುಗಳಿಗೆ ಬೆಲೆಯು ಬರಲಾರದು. ಈ ಸಂಗತಿಯ ಕಡೆಗೆ ಇನ್ನು ಮುಂದಾದರೂ ನಮ್ಮ ಎಲ್ಲ ಮುಂದಾಳುಗಳು ಒಮ್ಮತದಿಂದ ಪ್ರವೃತ್ತರಾಗಬೇಕೆಂದು ನಮ್ಮ ನಮ್ರ ಸೂಚನೆಯಿದೆ.

ಕರ್ನಾಟಕ ಏಕೀಕರಣ ಚಳವಳಿಯನ್ನು ನೋಡಿ ಕೆಲವರು ಉಪಹಾಸ ಮಾಡುತ್ತಿರುವದನ್ನು ನಾವು ಕೇಳಿದ್ದೇವೆ. ಕಳೆದ ವಾರದಲ್ಲಿಯ ಜನ್ಮಭೂಮಿಯಲ್ಲಿ ಶ್ರೀ. ಪಟ್ಟಾಭಿಸೀತಾ ರಾಮ

ಯ್ಯನವರು ಆಂಧ್ರ ಚಳವಳಿಯ ಬಗ್ಗೆ ಬರೆದ ಲೇಖನವನ್ನು ಓದಬೇಕೆಂದು ನಾವು ಅವರಿಗೆ ಪ್ರಾರ್ಥಿಸುತ್ತೇವೆ. ಆಂಧ್ರರ ಚಳವಳಿಯು ೧೯೧೩ ನೇ ಇಸವಿಯಲ್ಲಿ ತಲೆಯೆತ್ತಿತೆಂದು ಹೇಳುವುದು. ಅಲ್ಲಿಯವರೆಗೆ ಆಂಧ್ರರ ಹೆಸರನ್ನು ಸಹ ಯಾರೂ ಕೇಳುತ್ತಿರಲಿಲ್ಲ. ದಕ್ಷಿಣ ದೇಶದಿಂದ ಬಂದ ಜನರೆಲ್ಲ ಅವರು ಆಂಧ್ರರೇ ಇರಲಿ, ತಮಿಳರೇ ಇರಲಿ, ಮದ್ರಾಸಿಗಳೆಂದೇ ಕರೆಯುತ್ತಿದ್ದರು. ಆದರೆ ಅವರಲ್ಲಿ ಒಮ್ಮೆ ಐಕ್ಯವು ಉತ್ಪನ್ನವಾಗಿ ನಾವು ಆಂಧ್ರರು ನಮ್ಮ ಸಂಸ್ಕೃತಿಯು ಒಂದು ವಿಶಿಷ್ಟ ತರದ್ದು ಎಂಬ ಭಾವನೆಯು ಉದಯವಾಗಲು ಅವರಲ್ಲಿ ಒಂದು ಅಪೂರ್ವ ಉತ್ಸಾಹವು ನೆಲೆಗೊಂಡಿತು. ಅವರ ಭಾಷೆಗೆ ಕಳೆಯೇರ ಹತ್ತಿತು. ಈ ಒಂದು ತಪದಲ್ಲಿ (ಅಂದರೆ ಹನ್ನೆರಡು ವರ್ಷಗಳಲ್ಲಿ) ಆಂಧ್ರರಿಗೆ ಬೇರೊಂದು ವಿಶ್ವವಿದ್ಯಾಲಯವು ದೊರೆಯುವಷ್ಟು ಆಂಧ್ರರ ಚಳವಳಿಯು ಬಲವು ಬೆಳೆದಿರುವದು. ಮೊದಲು ಮೊದಲು ಆಂಧ್ರ ಚಳವಳಿಯು ರಾಷ್ಟ್ರ ಪ್ರಗತಿಗೆ ವಿಘಾತಕವಾಗಿರುವದೆಂಬ ಭ್ರಾಮಕ ಕಲ್ಪನೆಯು ಎಷ್ಟೋ ಜನರಲ್ಲಿ ರೂಢವಾಗಿತ್ತು. ಆದರೆ ಈ ಸಂಶಯವು ಈಗ ದೂರಾಗಿ ಭಾಷೆಗಳ ಮೇಲಿಂದಲೇ ಪ್ರಾಂತಗಳನ್ನು ಮಾಡಬೇಕೆಂದು ರಾಷ್ಟ್ರೀಯಸಭೆಯು ಸಾರಿಹೇಳುತ್ತಿರುವದು. ಆಂಧ್ರರ ಮೇಲೆ ಆಗ್ಗೆ ತಮಿಳರ ವರ್ಚಸ್ಸೇ ಇದ್ದು ಆಂಧ್ರರ ಆಟವು ಏನೂ ಸಾಗುತ್ತಿರಲಿಲ್ಲ. ಅವರ ಕಲಾಕೌಶಲ್ಯಗಳನ್ನು ನೋಡುವವರು ಯಾರೂ ಇರಲಿಲ್ಲ. ಈ ಪರಿಸ್ಥಿತಿಯು ಈಗ ತೀರ ಬದಲಾಗಿ ತಮಿಳರ ವರ್ಚಸ್ಸಿನಿಂದ ಪಾರಾಗಿ ಆಂಧ್ರರು ತಮ್ಮ ಉನ್ನತಿಯನ್ನು ಮಾಡಿಕೊಂಡಿರುವರು. ಆಂಧ್ರರಂತೆಯೇ ಕರ್ನಾಟಕದವರ ಸ್ಥಿತಿಯು. ಆಂಧ್ರರ ಮೇಲೆ ತಮಿಳರ ವರ್ಚಸ್ಸಿದ್ದಂತೆ ಕನ್ನಡಿಗರ ಮೇಲೆ ಆಂಧ್ರರ, ತಮಿಳರ, ಮರಾಠಿಗರ ವರ್ಚಸ್ಸಿರುವದು. ಆಂಧ್ರರು ತಮಿಳರೊಬ್ಬರ ಕೈಯಲ್ಲಿಯೇ ಸಿಲುಕಿದ್ದರು. ಕನ್ನಡಿಗರು ಮೂವರ ಕೈಯೊಳಗೆ ಸಿಕ್ಕು ಒದ್ದಾಡುತ್ತಿರುವರು. ಇಂಥ ಸಮಯದಲ್ಲಿ ಕನ್ನಡಿಗರು ತಮ್ಮ ಏಕೀಕರಣವನ್ನು ಉಪೇಕ್ಷಿಸಿದರೆ ಅದು ಅವರ ಯಾವ ತರದ ಅಪರಾಧವಾಗದು? ಅವರು ತಮ್ಮ ಕರ್ತವ್ಯವನ್ನು ಮಾತ್ರ ಮಾಡದಂತಾಗುವದು. ಆದ್ದರಿಂದ ಈ ಬಗ್ಗೆ ಯಾವುದೂ ಉಪಹಾಸ ಮಾಡದೆ ಈ ಚಳವಳಿಯು ಯಶಸ್ವಿಯಾಗಲು ಎಲ್ಲರೂ ನೆರವಾಗಬೇಕು.

ಮೈಸೂರ ವಿಶ್ವ ವಿದ್ಯಾಲಯವನ್ನೇ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡಬೇಕೆಂಬ ವಿಚಾರವು ಉತ್ತರ ಕರ್ನಾಟಕದಲ್ಲಿ ಸಾಧಾರಣವಾಗಿ ಸರ್ವಸಮ್ಮತವಾಗಿದೆ. ಆದರೆ ಮಂಗಳೂರ ಪತ್ರಿಕೆಗಳು ಈ ವಿಷಯದಲ್ಲಿ ಮೌನವ್ರತವನ್ನು ಧರಿಸಿದ್ದರಿಂದ ಅಲ್ಲಿಯ ಜನರ ಅಭಿಪ್ರಾಯವು ತಿಳಿಯದು. ಅದೇ ಪ್ರಕಾರವಾಗಿ ಮೈಸೂರ ಪತ್ರಿಕೆಗಳಲ್ಲಿ ಸಹ ಈ ವಿಷಯಕ್ಕೆ ಅಷ್ಟೊಂದು ಚರ್ಚೆ ನಡೆಯಲೊಲ್ಲದು. ಈ ವಿಷಯವನ್ನು ಕರ್ನಾಟಕದಲ್ಲಿ ನೆಲೆಗೊಂಡ ಶಿಕ್ಷಣ ಸಂಸ್ಥೆಗಳು ತಮ್ಮ ಸಭೆಗಳಲ್ಲಿ ತೆಗೆದು ಚರ್ಚೆಗಾಗಿ ಸೂಚಿಸುತ್ತೇವೆ. ಸಾರ್ವಜನಿಕ ಸಂಸ್ಥೆಗಳಲ್ಲಿ ಮುಖ್ಯವಾದ, ಬೆಳಗಾವಿಯ ಗಿಲಗಂಚಿ ಅರಟಾಳ ಹೈಸ್ಕೂಲಿನವರೂ, ಧಾರವಾಡದ ಲಿಂಗಾಯತ ಶಿಕ್ಷಣ ಸಮಿತಿಯವರೂ, ಕರ್ನಾಟಕ ಹಾಯಸ್ಕೂಲ, ನ್ಯೂ ಇಂಗ್ಲೀಷ ಸ್ಕೂಲ, ಹಾಗೆಯೇ ಹುಬ್ಬಳ್ಳಿ ಬಾಗಲಕೋಟ, ವಿಜಾಪೂರಗಳಲ್ಲಿಯ ಸಾರ್ವಜನಿಕ ಶಿಕ್ಷಣ ಸಂಸ್ಥೆಯವರೂ, ಬೆಂಗಳೂರಿನ ರಾಷ್ಟ್ರೀಯ ಶಾಲೆಯವರೂ ಈ ವಿಷಯದಲ್ಲಿ ಅಗ್ರಗಣ್ಯತ್ವವನ್ನು ವಹಿಸಿ ಈ ಮಹತ್ವದ ಪ್ರಶ್ನೆಯನ್ನು ಬಿಡಿಸಲು ಪ್ರಯತ್ನಿಸಬೇಕು. ಕರ್ನಾಟಕ ವಿಶ್ವವಿದ್ಯಾಲಯದಂಥ ಮಹತ್ವದ ಸಂಗತಿಯ ಬಗ್ಗೆ ಈ ಶಿಕ್ಷಣ ಸಂಸ್ಥೆಗಳು ಇಷ್ಟೊಂದು ಅಕ್ಷಮ್ಯ ಉದಾಸೀನತೆಯನ್ನು ತೋರಿಸಿದ್ದರೆ, ಅವು "ಭುವಿ ಭಾರಭೂತಾಃ" ಎಂಬ ಅಪವಾದಕ್ಕೆ ಪಾತ್ರವಾಗದೇ ಇರವು. ಎಚ್ಚರಿಕೆ!

ಕರ್ನಾಟಕ ಏಕೀಕರಣ ಸಭೆ.

ಮೊದಲೇ ಪ್ರಕಟಿಸಿದಂತೆ ಶನಿವಾರ ೧೨ ನೇ ತಾ|| ದಿನ ಮಧ್ಯಾಹ್ನದ ೩ ಗಂಟೆಗೆ ಹುಬ್ಬಳ್ಳಿಯ ಮುನಸಿಪಾಲಿಟಿಯಲ್ಲಿ ಕರ್ನಾಟಕ ಏಕೀಕರಣ ಸಭೆಯ ಕಾರ್ಯಕಾರಿ ಮಂಡಲದ ಸಭೆಯು ನೆರೆಯಬೇಕಾಗಿತ್ತು. ಆದರೆ ಅನೇಕ ಸಭಿಕರಿಗೆ ಆ ಕಾಲಕ್ಕೆ ಹುಬ್ಬಳ್ಳಿಗೆ ಬರುವದಾಗದ್ದರಿಂದ, ಅದೇ ದಿನ ರಾತ್ರಿ ಅಧ್ಯಕ್ಷರಾದ ಶ್ರೀ ಕಂಬಳಿಯವರ ಮನೆಯಲ್ಲಿ ಸಭೆ ನೆರೆಯಿತು. ಕೆಳಗೆ ಕಾಣಿಸಿದ ವಿಷಯಗಳ ಬಗ್ಗೆ ಠರಾವುಗಳಾದವು (೧) ಆಂಧ್ರ ವಿಶ್ವವಿದ್ಯಾಲಯದ ವಿಚಾರಣೆಯ ಬಗ್ಗೆ ೨೮ ನೇ ತಾರೀಖಿಗೆ ಮದ್ರಾಸದಲ್ಲಿ ಕೂಡುವ ಉಪಮಂಡಲದವರನ್ನು ಕಾಣುವದಕ್ಕಾಗಿ ಏಕೀಕರಣ ಸಭೆಯ ವತಿಯಿಂದ ಒಂದು ನಿಷ್ಟ ಮಂಡಲವು ಹೋಗತಕ್ಕದ್ದು. ಶ್ರೀ. ಕಂಬಳಿ, ಕೌಜಲಗಿ, ಚಿಕ್ಕೋಡಿ, ಕಡಪಾ, ಮುದವೇಡಕರ, ನಲವಡಿ, ಹಿರೇಮಠ, ಮಂಗಳವೇಡೇ, ಮೊದಲಾದವರು ಹೋಗತಕ್ಕದ್ದು. ಅವಶ್ಯವಿದ್ದರೆ ಹೆಚ್ಚಾಗಿ ಜನರನ್ನು ಆರಿಸುವ ಅಧಿಕಾರವಿದೆ (೨) ಮದ್ರಾಸದಿಂದ ಈ ನಿಷ್ಟ ಮಂಡಲದವರು ಮೈಸೂರಿಗೆ ಹೋಗಿ ಅಲ್ಲಿಯ ಪ್ರಜಾಪ್ರತಿನಿಧಿಯ ಸಭಾಸದರನ್ನು ಕಂಡು ಮೈಸೂರ ವಿಶ್ವವಿದ್ಯಾಲಯವನ್ನೇ ಕರ್ನಾಟಕ ವಿಶ್ವವಿದ್ಯಾಲಯವನ್ನು ಮಾಡಬೇಕೆಂಬ ವಿಚಾರಕ್ಕೆ, ಕರ್ನಾಟಕ ಏಕೀಕರಣ ಸಭೆಗೂ, ಅವರ ಸಹಾನುಭೂತಿಯನ್ನು ದೊರಕಿಸುವದು (೩) ಕನಿಷ್ಠ ೧ ಸಾವಿರ ರೂಪಾಯಿಗಳನ್ನು ಆದಷ್ಟು ತೀವ್ರ ಕೂಡಿಸುವದು (೪) ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯವರು ಈ ಸಭೆಯ ಹಿಂದಿನ ವಿನಂತಿಯನ್ನು (ಅಂದರೆ ೧ ಸಾವಿರ ರೂ. ಸಹಾಯವನ್ನು) ಬೇಗನೆ ಮನ್ನಿಸುವಂತೆ ಅತ್ಯಂತ ಪೂರ್ವಕವಾಗಿ ಪ್ರಾರ್ಥಿಸುವದು.

ಹುಬ್ಬಳ್ಳಿ ಸಾರ್ವಜನಿಕ ಸಭೆ.

ಶನಿವಾರ ದಿನ ಕರ್ನಾಟಕ ಪ್ರೆಸ್ಸಿನಲ್ಲಿ ಶ್ರೀ. ಬೆಳ್ಳಂಗಡಿಯವರ ಅಧ್ಯಕ್ಷತೆಯ ಕೆಳಗೆ ಹುಬ್ಬಳ್ಳಿ ನಾಗರಿಕರ ಸಾರ್ವಜನಿಕ ಸಭೆಯಾಗಿ ಕರ್ನಾಟಕ ಏಕೀಕರಣದ ವಿಷಯವಾಗಿ ಶ್ರೀ ಕೌಜಲಗಿ, ಮುದವೇಡಕರ, ದಿವಾಕರ ಮೊದಲಾದವರ ಭಾಷಣಗಳಾದವು. ಅನಂತರ ಹುಬ್ಬಳ್ಳಿ ಪಟ್ಟಣಕ್ಕಾಗಿ ಕರ್ನಾಟಕ ಏಕೀಕರಣ ಸಭೆಯ ಶಾಖೆಯು ಸ್ಥಾಪಿಸಲ್ಪಟ್ಟಿತು. ಕೆಳಗಿನ ಜನರದೊಂದು ವ್ಯವಸ್ಥಾಪಕ ಮಂಡಳವು ನಿಯಾಮಿಸಲ್ಪಟ್ಟಿದೆ. ಅಧ್ಯಕ್ಷರು — ರಾವಸಾಹೇಬ ಬಸವನಪ್ಪಾ ಶಿರಹಟ್ಟಿ. ಕಾರ್ಯದರ್ಶಿಗಳು: ಪಾಳವೇಕರ ಗುರುರಾವ ಮತ್ತು ಕೆಂಪಣ್ಣಾನವರ ಡ.ಪಿ. ಸಭಾಸದರು — (೧) ವೀರಪ್ಪಾ ಬೆಳ್ಳಿಅಂಗಡಿ (೨) ಅನಂತರಾವ ದೇಸಾಯಿ (೩) ನ್ಯಾ ಪಾಟೀಲ (೪) ಮಿರ್ಜಿ ಜಿ ಎಮ್ (೫) ಎಚ್. ಬಿ. ಹುಬ್ಬಳ್ಳಿಕೊಪ್ಪ. (೬) ಜಿ. ಯಸ್. ಕುಸನೂರ (೭) ವೆಂಕಟರಾವ ಪಿಸೂರ. (೮) ಡಾ. ಕಾಮತ

ಅನಂತರ ಆಂಧ್ರ ವಿಶ್ವ ವಿದ್ಯಾಲಯಕ್ಕೆ ಬಳ್ಳಾರಿ ಅನಂತಪೂರ ಜಿಲ್ಲೆಗಳ ಕನ್ನಡ ಭಾಗಗಳನ್ನು ಸೇರಿಸಬಾರದೆಂದೂ, ಮುಂಬಯಿ ವಿಶ್ವವಿದ್ಯಾಲಯಕ್ಕೆ ಉತ್ತರ ಕರ್ನಾಟಕದ ಸಂಸ್ಥಾನಗಳನ್ನು ಸೇರಿಸಬಾರದೆಂದೂ ಠರಾವುಗಳು ನಿರ್ಣಯಿಸಲ್ಪಟ್ಟವು.

ಗದಗಿನಲ್ಲಿ ಕರ್ನಾಟಕದ ಏಕೀಕರಣವು.

ರವಿವಾರ ಸಾಯಂಕಾಲದಲ್ಲಿ ಪಂಚರ ಹೊಂಡದ ಬೈಲಿನಲ್ಲಿ ಕರ್ನಾಟಕ ಏಕೀಕರಣದ ಮೇಲೆ ಶ್ರೀ ಕೌಜಲಗಿ, ಮುದವೇಡಕರ, ದಿವಾಕರ ಮೊದಲಾದವರ ವ್ಯಾಖ್ಯಾನಗಳಾದವು. ಗದಗಿನಲ್ಲಿಯೂ ಕರ್ನಾಟಕ ಏಕೀಕರಣ ಸಭೆಯ ಶಾಖೆಯು ತೀವ್ರದಲ್ಲಿ ಸ್ಥಾಪಿಸಲ್ಪಡುವದೆಂದು ಶ್ರೀ. ಪಾಲಿಂಬಳಕರವರು ವಚನವ

ಕನ್ನಡಿಗನ ಉಪಕಾರಕರ್ತೃಗಳಾಗಿ ಶ್ರೀ. ಶರಣಬಸಪ್ಪನವರು ಸಾಧು ಸಂಸ್ಥಾನ ಕ್ಷೇತ್ರ ಬ್ರಹ್ಮಪೂರ ಗುಲಬುಗಾ೯ ಇವರು ಹತ್ತು ರೂಪಾಯಿಗಳನ್ನು ಕಳಿಸಿರುವರು ಮತ್ತು ಕೆಳಗೆ ಕಾಣಿಸಿದ ಸದ್ಗೃಹಸ್ಥರು ೫ ರೂಪಾಯಿಗಳನ್ನು ಕಳಿಸಿ ಕನ್ನಡಿಗನ ಪೋಷಕರಾಗಿರುವರು. ಈ ಮಹನೀಯರಿಗೆ ಕನ್ನಡಿಗನು ಋಣಿಯಾಗಿದ್ದಾನೆ.

(೧) ಪಿ. ಅಂಬಾದಾಸರಾವ ವಕೀಲ ಜಾಂಬಾಗ ಹೈದರಾಬಾದ.
(೨) ಗಿರಿರಾವ ವಕೀಲ ಹೈದರಾಬಾದ.
(೩) ಪಿ ಗಣಪಯ್ಯ ಎಮ್. ಎಲ್. ಸಿ. ಪೊನ್ನಮಪೇಟ.
(೪) ಶಂಕರರಾವ ಮನಸಬದಾರ ಗುಲಬುಗಾ೯.

ಇವರ ಅನುಕರಣವನ್ನು ಉಳಿದ ಮಹಾಜನರುಗಳು ಮಾಡುವರೆಂದು ಕನ್ನಡಿಗನ **ಕೋರಿಕೆ.**

[೬ ನೇ ಪಾನಿನಿಂದ ಬಂದದ್ದು.]

ತ್ಪರದಿ ಹೆಜ್ಜೆಗಳಿಕ್ಕು, ಬಲು ಹಸಿ- |
ದಿರುವೆ. ಬಡವರ ಪ್ರೇಮದನ್ನದೊ- |
ಳಿರುವದನುಪಮ ಸವಿಯು ! ಧನ್ಯರು ಸವಿಯುವವರದನು! ||೩||

ಭೋಗದಾಶೆಗೆ ಸೋತು ಬ್ರಾಹ್ಮಣ- |
ರೀಗ, ಹರಹರ ! ದುಡ್ಡಿನಾಳುಗ- |
ಳಾಗಿ ನಿಂತಿಹರೆಲ್ಲರೆದುರಿಗೆ ನಗೆಗೆ ಗುರಿಯಾಗಿ! ||
ತ್ಯಾಗವೃತ್ತಿಯೆ ದಿವ್ಯಸಂಪ- |
ತ್ತಾಗ ವಿಪ್ರರದಿತ್ತು. ಸತ್ಯದಿ|
ತ್ಯಾಗಿಗಳೆ ನಿಜವಂತರವರೇ ಲೋಕಬಂಧುಗಳು. || ೪ ||
ಭೂತದಯೆಯುಳ್ಳವರು ಜಗದೊಳು |
ಭೂತನಾಥನ ಪ್ರೇಮಪಾತ್ರರು. |
ಭೂತದಯವನು ಬಿಟ್ಟ ಪಾಪಿಗಳೆಂಥ ಬ್ರಾಹ್ಮಣರು ? ||
ಭೂತದಯದರಿವಿರದ ಭೋಗಕೆ |
ಸೋತ ಹೇಡಿಗೆ, ವೀರವೃತ್ತಿಯ |
ಮಾತು ನಿಷ್ಪ್ರಾಣರಿಗೆ ರುಚಿಸುವದಲ್ಲ ಲೋಕದೊಳು ! ||೫||
ಇಂತು ನುಡಿಯುವ ಯತಿಯ ಮುಖದೊಳು |
ಶಾಂತಿಯುಕ್ಕುತಲಿತ್ತು. ನಾ ನಿ- |
ಶ್ಚಿಂತನಾದೆನು, ಮನೆಗೆ ಬಂದೆನು, ಕಾರ್ಯಮುಗಿಸಿದೆನು.||
ಶಾಂತ ಚಿತ್ತದಿ ಶೇಷವನ್ನೇ- |
ಕಾಂತದೊಳು ಭುಂಜಿಸಲು ಕುಳಿತೆನು. |
ಭ್ರಾಂತನಾದೆನು ಕಂಡು ಪಾತ್ರೆಯು ಪೂರ್ಣವಿರುವದನು!||೬||

೮ ಪ್ರಾರ್ಥನೆ.

ಪಸುಳೆಯಂಜುತ ತಾಯ ಸೆರಗಿನ |
ಮುಸುಗಿನೊಳಗಿಡುತಿರಲು ಮೊಗವನು, |
ಒಸೆದು ಪಗಿದಪ್ಪುತಲಿ ತಾಯಿಯು, "ಹೆದರಬೇಡೆಂದು" ||
ಪಸುಳೆಗಭಯವ ನೀಯುವಂದದಿ, |
ಅಸುರಜನಸಂಹಾರಿ ! ರಕ್ಷಿಸು. ||
ಮಸಿಗೆ ನಾನತಿ ಹೆದರಿ ಬಂದಿಹೆ, ತಂದೆ ! ನಿನ್ನೆಡೆಗೆ. || ೧ ||
ಜನನಿಯಿರೆ ನೆರೆಯೊಳಗೆ ಶಿಶು ಕಾ- |
ನನದೊಳಿದ್ದರು ತಳೆಯದಂಜಿಕೆ- |
ಯಿನಿತು, ಬಹುವಿಧದಾಟಗಳನಾಡುತಲಿ ನಲಿಯುವದು. ||
ಕನಿಯು ಸಂಕಟಗಳನು ಸುತ್ತಿಡ- |
ಲೆನಗೆ ಹೆದರಿಕೆ ಏಕೆ ? ಎನ್ನಯ |
ನೆನುಪಿನೊಳು ನೀನಿರಲು ಸುಖಸಾಮ್ರಾಜ್ಯದೊಳಗಿರುವೆ. ||೨||

ತನ್ನ ಮಗುವಂಗಳದೊಳಾಡುವ- |
ದನ್ನು ತಾಯಿಯು ಕಂಡು ಹಿಗ್ಗುತ |
ಚಿನ್ನ ಮುತ್ತೆಂದವನ ತೆಕ್ಕೈಸುವಳು ಮುದ್ದಿಸುತ. ||
ಸನ್ನುತನೆ ! ವೇಳೆನಗೆ ಮಗುವದು |
ತನ್ನ ತಾಯಿಗೆ ಮಾಡಿಸುವದೇ- |
ನನ್ನು ? ಕರೆ ಮುಂದೆನ್ನನೈ ! ನಾ ನಿನ್ನ ಮಗುವಲ್ಲೇ ? ||೩||
ಇರಿಸಿಯಾತ್ಮ ಜನಂಕದೊಳು ಮುಂ- |
ಗುರುಳ ತೀಡುತ ಪರಮ ಪ್ರೇಮದಿ |
ಸೆರಗಿನಿಂ ಮೊಗವೊರಸಿ ತಿಲಕವನಿಟ್ಟು ಕೈಮುಗಿದು, ||
ಪರಮ ಪುರುಷನೆ ! ನಿನ್ನದೀ ಶಿಶು, |
ಚರಣತಲಕರ್ಪಿಸುವೆನಿವನನು. |
ಪೊರೆಯುವನನೆಂದೆನ್ನ ಜನನಿಯು ನಿನಗೆ **ಬೇಡಿಹಳೋ** ! ||೪||

---

೯. ಮತ್ತೇನು ಬೇಡೆನು !

ಆವಿನದು ನೊರೆಹಾಲನೊಲ್ಲೆನು, |
ದೇವಲೋಕದ ಸುಧೆಯನೊಲ್ಲೆನು, |
ದೇವಿ ! ನಿನ್ನಯ ನಾಮದದ್ಭುತ ರುಚಿಯನರಿತಿಹೆನು. ||
ಪಾವನಳೆ ! ನಿನ್ನಂಘ್ರಿಕಮಲವ |
ಸೇವಿಸಲು ದೊರೆತಿಹುದು, ತಾಯೇ ! |
ಶ್ರೀವರನ ದಯದಿಂದೆ. ಮತ್ತಿನ್ನೇನು ಬೇಡೆನಗೆ. ||೧||
ಬರಲಿ ಬ್ರಾಹ್ಮಣರಲ್ಲಿ ಜನ್ಮವು, |
ಬರಲಿ ಮಾದಿಗರಲ್ಲಿ ಇಲ್ಲವೆ, |
ಇರದು ಚಿಂತೆಯು. ತಾಯೆ ! ನಿನ್ನುದರದಲಿ ಜನಿಸುವದೇ ||
ಪರಮ ಭಾಗ್ಯವುಯೆಂಬುದರಿಯೆನೆ ? |
ಮರೆಯದಲೆ ಪ್ರತಿಜನ್ಮದಲಿ ಶ್ರೀ- |
ಧರನು ನಿನ್ನುದರದಲಿ ಹುಟ್ಟಿಸಲೆನ್ನನನುನಯದಿ ! ||೨||
ಇರಲೆನಗೆ ಕರಕನ್ನ ಉಣ್ಣಲು, |
ಬರಿಯ ನೆಲವಿರಲೆನಗೆ ಮಲಗಲು, |
ಹರುಕು ಬಟ್ಟೆಗಳೆನ್ನ ಮೈಯನು ಮುಚ್ಚಲಿರಲೆನಗೆ, ||
ಮುರುಕು ಗುಡಿಸಲವಿರಲಿ ವಸತಿಗೆ. |
ಸಿರಿಯರಸ ! ಮತ್ತೇನು ಬೇಡೆನು ! |
ಭರತಭೂಮಿಯೊಳಿರುವದೇ ಎನಗೊಂದು ಸುಖವಿಹುದು!||೩||
ಧನವ ಬೇಡೆನು ನಾನು, ದೇವಾ ! |
ನಿನಗೆ, ಸನ್ಮಾನವನು ವಿದ್ವ- |
ಜ್ಜನರ ಸಭೆಯೊಳು ಬೇಡೆನೈ ! ನಾ ಬೇಡೆ **ಕೀರ್ತಿಯನು** ! ||
ಕನಸು ಮನಸಿನಲಿರಲಿ, ಕರುಣಾ- |
ಘನನೆ ! ಧ್ಯಾನವು ಜನ್ಮಭೂಮಿಯ, |
ತನುವು ನೆವೆಯುತಲಿರಲಿ ಹಗಲಿರುಳವಳ ಸೇವೆಯಲಿ ! ||೪||

ಸಮರ್ಪಣೆ.

ಸಂದಿಗೊಂದಿಯ ಹುಡಿಕಿ ಹುಡಿಕಿದೆ, |
ಒಂದು ಕಾಸನು ಕಾಣಲಿಲ್ಲವು! |
ತಂದೆ! ನಿನಗರ್ಪಿಸಲು ಹೂಗಳನೆಂತು ತರಲಿನ್ನು ! ||
ಮಂದಭಾಗ್ಯನು ನಾನು! ನಿನ್ನನು|
ಇಂದು, ಕರುಣಾಂಬುಧಿಯೆ, ಪೂಜಿಸ- |
ಲೆಂದು ಚಿಗುರೆಲೆಗಳನು ತಂದಿಹೆ, ಒಲಿದು ಸ್ವೀಕರಿಸು! ||

ರಾಮಚಂದ್ರ ಸುಬ್ಬರಾವ ಶಾಂ.

ಮಹಾರಾಷ್ಟ್ರದೊಳಗಿನ ಕನ್ನಡಿಗರು

(ಲೇಖಕ: — " ಬೆಳಗಿನ ಕನ್ನಡಿಗ ")

ಉತ್ತರ ಕರ್ನಾಟಕಕ್ಕೆ ಮಹಾರಾಷ್ಟ್ರವು ಹೊಂದಿ ಇರುವದರಿಂದ ಮಹಾರಾಷ್ಟ್ರದಲ್ಲಿ ಕನ್ನಡಿಗರು ಅನೇಕರಿದ್ದಾರೆ. ಅವರು ವ್ಯಾಪಾರಕ್ಕಾಗಿ ಹೋದವರಿರುತ್ತಾರೆ, ವಿದ್ಯಾ ಸಂಪಾದನಕ್ಕಾಗಿ ಹೋದವರಿರುತ್ತಾರೆ, ಸೇವೆಗಾಗಿ ಹೋದವರಿರುತ್ತಾರೆ. ಈ ಮೂರೂ ಬಗೆಯ ಕನ್ನಡಿಗರು ಕಾಣಲಿಕ್ಕೆ ಒಂದು ವೇಳೆ ಮರಾಟರಂತೆ ಕಂಡರೂ ಕನ್ನಡ ಸಂಸ್ಕೃತಿಯನ್ನು ಮರೆತಿರುವದಿಲ್ಲ. ಔದಾರ್ಯವೂ ಅತಿಥಿಸತ್ಕಾರಪ್ರಿಯತೆಯೂ ಅವರ ಹುಟ್ಟು ಗುಣಗಳಾಗಿವೆ. ಇದ್ದ ಮಾತು ಇದ್ದ ಹಾಗೆ ಅನುವದು ಅವರ ಸ್ವಭಾವವಾಗಿದೆ. ಅವರು ಊಟ ಉಡಿಗೆಗಳಲ್ಲಿ " ಸಾದಾ " ಅಂದರೆ ವಿಶೇಷ ತೋರಿಕೆಯಿಲ್ಲದವರಿರುತ್ತಾರೆ. ತಾವು ವಿಶ್ವಾಸಕ್ಕೆ ಪಾತ್ರರಿದ್ದು ಇನ್ನೊಬ್ಬರಲ್ಲಿಯೂ ವಿಶ್ವಾಸವನ್ನಿಡುತ್ತಿರುತ್ತಾರೆ.

" ನಿಮ್ಮ ಭಾಷೆಯು ಗಡಿಗೆಯೊಳಗೆ ಕಲ್ಲು ಹಾಕಿ ಅಗಳಾಡಿಸಿದಂತೆ, ನಮ್ಮ ಭಾಷೆಯ ನ್ನಾಡುವದೆಂದರೆ ಕಡಲೆಯನ್ನು ಮುಕ್ಕಿದಂತೆ " ಹೀಗೆ ಮರಾಟರು ಕನ್ನಡಿಗರನ್ನು ಹಿಯಾಳಿಸಿದರೂ ಕನ್ನಡಿಗರು ಕ್ರೋಧಯುಕ್ತ ಉತ್ತರ ಕೊಡದೆ, ಅವರ ಭಾಷೆಯನ್ನು ನಿಂದಿಸದೆ, " ನಮ್ಮ ಭಾಷೆಯ ಸವಿಯನ್ನು ನೀವೇನು ಬಲ್ಲಿರಿ " ಎಂದು ಸೌಮ್ಯವಾದ ಉತ್ತರವನ್ನು ಕೊಡುತ್ತಾರೆ. ಮರಾಟರು ಕನ್ನಡದ ವಿಷಯಕ್ಕೆ ಅನಾದರವನ್ನು ತೋರಿಸುವಂತೆ ಕನ್ನಡಿಗರು ಮರಾಠಿಯ ವಿಷಯಕ್ಕೆ ತೋರಿಸುವದಿಲ್ಲ. ಇಷ್ಟೆ ಅಲ್ಲ. ಮಾತಿನೊಳಗೆ ಮರಾಠೀ ವಾಕ್ಯಗಳನ್ನು ಉಪಯೋಗಿಸುವದು ಭೂಷಣವೆಂದು ತಿಳಿಯುತ್ತಾರೆ. ಇದು ಸಹ್ಯತನದ ಲಕ್ಷಣವಲ್ಲವೇ ? ಈ ಸದ್ಗುಣವೇ ದಿನದಿನಕ್ಕೆ ದುರ್ಗುಣವಾಗಹತ್ತಿದೆ. ಮರಾಠಿಯ ಮೇಲಿನ ಆದರದಿಂದ ಕನ್ನಡಿಗರು ತಾವಾಡುವ ಮಾತಿನಲ್ಲಿ ಮರಾಠೀ ಶಬ್ದಗಳನ್ನು ಅತಿಶಯವಾಗಿ ಬೆರಸಹತ್ತಿದ್ದಾರೆ ಅದರಿಂದ ಅವರ ಮಾತು ಶುದ್ಧ ಕನ್ನಡಿಗನಿಗೆ " ಗೋಡೆ " ಯಾಗುತ್ತಿದೆ. ಇದು ಇಷ್ಟವಲ್ಲ. ಮರಾಠಿಯ ವಿಷಯಕ್ಕೆ ಆದರವಿರಲಿ, ಆದರೆ ಅದರ ಶಬ್ದಗಳನ್ನು ಕೂಡಿಸಿ ಕನ್ನಡವನ್ನು ಕೆಡಿಸತಕ್ಕದ್ದಲ್ಲ.

ಬೇರೆ ಬೇರೆಯಾಗಿ ತಿಂದರೆ ಹಣ್ಣೂ ರುಚಿ ಹತ್ತುತ್ತದೆ. ಮೊಸರು ರುಚಿ ಹತ್ತುತ್ತದೆ. ಆದರೆ ಅವೆರಡನ್ನೂ ಕೂಡಿಸಿ " ಶಿಕರಣ " ವನ್ನು ಮಾಡಿ ತಿನ್ನುವದು ಮರಾಟರಿಗೆ ಸೇರಿದರೂ ಕನ್ನಡಿಗರಿಗೆ ಸೇರದು. ಮರಾಟರಿಗೆ ಸೇರದೇನು ಮಾಡೀತು ? ಅವರ ಭಾಷೆಯೇ ಹಾಗಿದೆ. ಈಗ ಪ್ರಚಾರದಲ್ಲಿದ್ದ ಮರಾಠಿ ಭಾಷೆಯೊಳಗಿಂದ ಪರಭಾಷೆಯ ಶಬ್ದಗಳನ್ನೆಲ್ಲ ತೆಗೆದು ಹಾಕಿದರೆ ಸಾವಿರದೊಳಗಿಂದ ಸಾವಿರವನ್ನು ವಜಾ ತೆಗೆದಂತೆಯೇ ಆಗುತ್ತದೆ. ಸುದೈವದಿಂದ ಕನ್ನಡದ ಸ್ಥಿತಿಯು ಹೀಗಿಲ್ಲ. ಇದೇ ಸ್ಥಿತಿಯು ಕಡೆಗೂ ಉಳಿಯುವಂತೆ ಕನ್ನಡವನ್ನು ಕಾಪಾಡುವದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವು.

ಕನ್ನಡಿಗರಿಗೆ ಹರಟೆ ಬೇಕು. ಅವರು ಹರಟೆಯಲ್ಲಿ ಮೈಮರೆತು ತಮ್ಮ ಮನಸ್ಸಿನಲ್ಲಿದ್ದದ್ದನ್ನೆಲ್ಲ ಒದೆದು ಬಿಡುತ್ತಾರೆ. ಈ ಗುಣವು ಮಹಾರಾಷ್ಟ್ರದೊಳಗಿನ ಕನ್ನಡಿಗರಲ್ಲಿಯೂ ಉಂಟು. ಗಂಡಸರು ತಮ್ಮ ಉದ್ಯೋಗಗಳಲ್ಲಿ ತೊಡಗಿರುವದರಿಂದ ಅವರ ವೇಳೆಯು ತಡವಿಲ್ಲದೆ (!) ಹೋಗುತ್ತದೆ. ಹೆಂಗಸರಿಗೆ ಮನೆಗೆಲಸದ ಹೊರತು ಬೇರೆ ಕೆಲಸವಿರುವದಿಲ್ಲವಾದ್ದರಿಂದ ಅವರು ಮನೆಗೆಲಸವು ಮುಗಿದ ಕೂಡಲೆ ಹೆಂಗಸರು ಕೂಡಿದಲ್ಲಿ ಹೋಗಿ ಕೂಡ್ರುತ್ತಿರುತ್ತಾರೆ. ಅವರ ಹರಟೆಗಳಿಂದ ಮರಾಠೀ ಹೆಂಗಸರು ಕನ್ನಡಿಗರ ನಡಾವಳಿಗಳನ್ನು ಗೃಹವ್ಯವಸ್ಥೆಯನ್ನೂ ಕೇಳಿಕೊಂಡು ಅವರ " ಸಾದಾ " ತನವನ್ನು ಹೊಗಳುವದಕ್ಕೆ ಬದಲು ತಮ್ಮ ಹೊಸ ಜ್ಞಾನದ ಉಪಯೋಗವನ್ನು ಕನ್ನಡಿಗರನ್ನು ತುಚ್ಛೀಕರಿಸುವದಕ್ಕೆ ಮಾಡಿಕೊಳ್ಳುತ್ತಾರೆ. ಅವರ ನಗೆ ಹರಟೆಗಳ ವಿಷಯವೆಂದರೆ ಕನ್ನಡಿಗರು ಅವರ ಒಳಿಯಲ್ಲಿ ಕನ್ನಡದಂತೆ ಕಾಣುವ ಕೃತ್ರಿಮ ವಾಕ್ಯಗಳೂ ಅನೇಕ.

ಇಡೀ ಹಿಂದುಸ್ಥಾನವೇ ತಮ್ಮ ಮನೆಯೆಂದು ಭಾವಿಸಿದ್ದ ಲೋಕಮಾನ್ಯರ ಜನ್ಮ ಭೂಮಿಯಿದು ! ದೂರಿನ ಗುಡ್ಡ ಕಣ್ಣಿಗೆ ನುಣ್ಣಗೆ:

ಇದರಿಂದ ಬೋಧವನ್ನು ತೆಗೆದುಕೊಂಡು ಕನ್ನಡಿಗರೂ ತಮ್ಮ ಪ್ರಾಂತದಲ್ಲಿದ್ದ ಪರಪ್ರಾಂತೀಯರ ಕೂಡ ' ಪರಂ ಪ್ರತಿ ಸತ್ಯಂ ' ಎಂಬಂತೆ ವರ್ತಿಸ ತಕ್ಕದ್ದು. ಪರ ಪ್ರಾಂತೀಯರೊಡನೆ ಕೂಡಿ ನಡೆಯುವದು ಐಕ್ಯದ ಲಕ್ಷಣವು. ಈ ಐಕ್ಯವೇ ಸ್ವರಾಜ್ಯದ ಮೆಟ್ಟಿಲು. ಇದನ್ನು ಮರಾಟರು ಅರಿಯದಿದ್ದರೂ ಕನ್ನಡಿಗರು ಅರಿತಿರಲಿ.

ಮಹಾರಾಷ್ಟ್ರದೊಳಗಿನ ಕನ್ನಡಿಗರ ಅನುಭವಕ್ಕೆ ಬರುವ ಮತ್ತೊಂದು ಸಂಗತಿಯೆಂದರೆ ಕನ್ನಡಿಗರ ಮನೆಯೊಳಗಿನ ಪ್ರತಿಯೊಂದು ಸುದ್ದಿಯು ನೆರೆಹೊರೆಯ ಮರಾಟರಿಗೆ ತಿಳಿದಿರುತ್ತದೆ. ಆದರೆ ಅವರ (ಮರಾಟರ) ಮನೆಯೊಳಗಿನ ಸುದ್ದಿಯು ಲೇಶವೂ ಕನ್ನಡಿಗರಿಗೆ ತಿಳಿದಿರುವದಲ್ಲ. ಕನ್ನಡಿಗರ ಗುಟ್ಟು ಬೇಗ ಒಡೆಯುತ್ತದೆ. ಮರಾಟರದು ಇಲ್ಲ! ೪-೫ ವರ್ಷದ ಕೂಸು ಸಹ ಮನೆಯಲ್ಲಿ ಒಣರೊಟ್ಟಿ ತಿಂದು ಕೇಳದವರಿಗೆ ಚಪಾತಿ ತುಪ್ಪವನ್ನು ತಿಂದೆನೆಂದು ಹೇಳುತ್ತದೆ. " ಜೈಸಾ ದೇಶ ವೈಸಾ ವೇಷ (ಷ) " ಎಂಬುದನ್ನು ಕನ್ನಡಿಗರಾದರೂ ಮರೆಯತಕ್ಕದ್ದಲ್ಲ.

ಕರ್ನಾಟಕದಲ್ಲಿ ಹೆಂಗಸರು ಮನೆಯೊಳಗಿನ ಕೆಲಸ ತೀರಿದ ಬಳಿಕ ನೆರೆಮನೆಯಲ್ಲಿ ಹೋಗಿ ಕೂಡ್ರುವದುಂಟು. ಹಾಗೆ ಹೋದರೆ ಅವರಿಗೆ ಆದರ ಪೂರ್ವಕ ಸ್ವಾಗತವೂ ಆಗುತ್ತದೆ ಆದರೆ ಅವರೇ ಮಹಾರಾಷ್ಟ್ರದಲ್ಲಿ ಹೋದರೆ ಅವರಿಗೆ ಕಡಿಮೆತನವಂತೆ ! ಕರೆಯದೆ ಊಟಕ್ಕೆ ಹೋಗಬಾರದು, ಬೇಸರ ಬಂದಾಗ ಕೂಡ್ರಲಿಕ್ಕೂ ಹೋಗ ಬಾರದೇ ?

ಮಹಾರಾಷ್ಟ್ರದೊಳಗಿನ ಕನ್ನಡಿಗರಿಗೆ ಬರುವ ಮತ್ತೊಂದು ಕಟುತರವಾದ ಅನುಭವವೆಂದರೆ ಬಹುವ್ಯಯ. ಮಿತದಿಂದ ವೆಚ್ಚ ಮಾಡುವದು, ವ್ಯವಸ್ಥಿತವಾದ ಉಡಿಗೆ ತೊಡಿಗೆಗಳನ್ನು ಧರಿಸುವದು, ಮನೆಗೆ ಮಂದಿ ಬಂದಾಗ ಸುಗ್ರಾಸ ಭೋಜನ ಮಾಡುವದು, ಹೊಟ್ಟೆಗೆ ಕಡಿಮೆ ಮಾಡಿಕೊಂಡು ಸಹ ವಸ್ತ್ರ ಒಡವೆಗಳನ್ನು ಮಾಡಿಸುವದು, ಇವೆಲ್ಲ ಮರಾಟರ ಮೈಗುಂಡಿರುತ್ತವೆ. ಅವರ ಮಿಡಿತವು ಕನ್ನಡಿಗರಿಗೆ ಬರುವದಿಲ್ಲ. ದೊಡ್ಡಸ್ತಿಕೆಕ್ಕೆ ಬಿದ್ದು ಅವರಂತೆಯೇ ಸದಾಸರ್ವಕಾಲವೂ ಒಳಗೂ ಹೊರಗೂ ವರ್ತಿಸುವದರಿಂದ ಕನ್ನಡಿಗರು ಸಾಂಪತ್ತಿಕ ಕಷ್ಟಗಳನ್ನನುಭವಿಸಬೇಕಾಗುತ್ತದೆ.

ಕನ್ನಡಭಾಷೆಯ ಏಕೀಕರಣ

[ಲೇಖಕರು— ರಾ. ಸ. ಪುನೇಕರ ದೌಂಡ]

ಸಂಪಾದಕ ಮಹಾಶಯರೆ,

ನೀವು ಕರ್ನಾಟಕ ಏಕೀಕರಣದಂಥ ಮಹತ್ವದ ಕೆಲಸವನ್ನು ಕೈಕೊಂಡಿರುವಿರಷ್ಟೇ ೩-೪ ಕಡೆಗೆ ಹಂದು ಹಂಚಲ್ಪಟ್ಟ ಕರ್ನಾಟಕದ ತುಣುಕುಗಳನ್ನು ಒತ್ತಟ್ಟಿಗೆ ಜೋಡಿಸುವದು ಎಲ್ಲ ಕನ್ನಡಿಗರಿಗೆ ಇಷ್ಟವಾದ ಮಾತೇ. ಈ ವಿಷಯಕ್ಕೆ ಭಿನ್ನ ಮತಗಳಿಲ್ಲ. ನಿ

ಮ್ಮ ಕಾರ್ಯಕ್ಕೆ ಪೋಷಕವಾದ ಇನ್ನೊಂದು ವಿಧದ ಏಕೀಕರಣವು ಮಾತ್ರ ನೆನಪಿನಲ್ಲಿರಲಿ. ಅದಾವದೆಂದರೆ ಕನ್ನಡ ಭಾಷೆಯ ಏಕೀಕರಣವು

ನಾಲ್ಕು ಪ್ರಾಂತಗಳಾಗಿ ವಿಭಾಗಿಸಲ್ಪಟ್ಟ ಕರ್ನಾಟಕ ಭೂಮಿಯ ಏಕೀಕರಣವು ಸತ್ತೆಯ ಅಭಾವದಲ್ಲಿ ಸ್ವಲ್ಪ ಕಠಿಣವೆನಿಸಿದರೂ ಎಲ್ಲ ಕನ್ನಡಿಗರ ಸಂಯುಕ್ತ ಪ್ರಯತ್ನದಿಂದ ಸಾಧ್ಯವಾಗಬಲ್ಲದು. ಆದರೆ ಭಾಷೆಯ ಏಕೀಕರಣಕ್ಕೆ ಸತ್ತೆಯು ಬೇಕಾಗಿಲ್ಲ.

ಈಗಿರುವ ಕರ್ನಾಟಕದ ಒಂದೊಂದು ವಿಭಾಗದ ಭಾಷೆ ಒಂದೊಂದು ವಿಧವು. ಉತ್ತರ ಕರ್ನಾಟಕದಲ್ಲಿಯೇ ನೋಡಿರಿ, ಒಂದು ಜಿಲ್ಹೆಯ ಭಾಷೆಯು ಇನ್ನೊಂದನ್ನು ಹೋಲದು. ತಾಲೂಕು ತಾಲೂಕುಗಳಲ್ಲಿಯೂ ಇದೇ ಪಾಡು. ಮಾತಾಡುವ ಭಾಷೆಯಲ್ಲಿ ತೋರುವಷ್ಟು ಭಿನ್ನತೆಯು ಬರೆಯುವ ಭಾಷೆಯಲ್ಲಿ ತೋರುವದಿಲ್ಲ. ಬರೆಯುವ ಭಾಷೆಯ ಸಂಪೂರ್ಣ ಏಕೀಕರಣವು ಶಕ್ಯವಿದೆ. ಮಾತಾಡುವ ಭಾಷೆಯ ಏಕೀಕರಣದ ಕಾರ್ಯದಲ್ಲಿ ಸುಶಿಕ್ಷಿತ ಹಾಗೂ ಅಶಿಕ್ಷಿತ ಎರಡೂ ತರದ ಜನರ ಮನಸ್ಸನ್ನು ಒಲಿಸಬೇಕಾಗುತ್ತದೆ. ಬರೆಯುವ ಭಾಷೆಯ ಏಕೀಕರಣದ ಕೆಲಸದಲ್ಲಿ ಸುಶಿಕ್ಷಿತರ ಮನಸ್ಸನ್ನು ಒಲಿಸಿದರೆ ಸಾಕು. ಸುಶಿಕ್ಷಿತರ ಮನಸ್ಸು ಒಲಿಯುವದಕ್ಕೆ ಸಿದ್ಧವೇ ಇರುವದರಿಂದ ಈ ಕೆಲಸವು ಸುಲಭ ಸಾಧ್ಯ ಕಾಣುತ್ತದೆ.

ಬರೆಯುವ ಭಾಷೆಯ ಪರಿಣಾಮವು ಕಾಲಾಂತರದಿಂದ ಮಾತಾಡುವ ಭಾಷೆಯ ಮೇಲೆ ಆಗುವದರಿಂದ ಮೇಲಿನ ಯೋಜನೆಯು ಇಷ್ಟವಾಗಿ ತೋರುತ್ತದೆ.

ಹಿಂದಕ್ಕೆ ಆರ್ಯ ಜನರು ಹಿಂದುಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ವಾಸಮಾಡಿದ್ದರಿಂದ ಬೇರೆ ಬೇರೆ ಪ್ರಾಕೃತ ಭಾಷೆಗಳಾದವು. ಹಾಗಿರುವದು ಆಗಿನ ಸುಶಿಕ್ಷಿತರಿಗೆ ಇಷ್ಟ ತೋರದ್ದರಿಂದ ಅವರೆಲ್ಲರೂ ಕೂಡಿ ಒಂದೇ ಮನಸ್ಸಿನಿಂದ ಎಲ್ಲರಿಗೂ ಸಾಮಾನ್ಯವಾದ ಸಂಸ್ಕೃತ ಭಾಷೆಯನ್ನು ನಿರ್ಮಾಣ ಮಾಡಿದರು. ಅದರಂತೆ ನಾವೂ ಪ್ರಯತ್ನ ಮಾಡಬೇಕಾಗಿದೆ. ಮೊದಲು ಒಂದು ಭಾಷೆಯಾದ ಬಳಿಕ ಇದ್ದ ಭಾಷೆಯನ್ನು ಶುದ್ಧ ಪಡಿಸುವದಕ್ಕೆ ಕೆಲವು ನಿರ್ಬಂಧಗಳನ್ನು ಕಲ್ಪಿಸಬೇಕು. ಆಮೇಲೆ ಭಾಷೆಯ ಅಭಿವೃದ್ಧಿಗೆ ಕೈ ಹಾಕಿದಲ್ಲಿ ಅದೂ ಸಾಧ್ಯವಾಗುತ್ತದೆ.

ಚಿಗುರೆಲೆಗಳು

೧ ಕಡಲ ಪಯಣ

ಕೋರಿದೆನು ನಾ ನಿನ್ನ ನೌಕೆಯ |
ನೇರಿ ಕಡಲನು ಪೊಕ್ಕು ಸೃಷ್ಟಿಯ |
ಸ್ವೈರವೃತ್ತಿಗಳಂದವನು ನೆರೆ ಸವಿಯಬೇಕೆಂದು ||
ತೀರದಲಿ ನೀ ನಿರಿಸಿ ನೌಕೆಯ |
ನೇರು ಬಾ ಯೆಂದೆನ್ನ ಕರೆಯಲು, |
ಆರದಾಶ್ಚರ್ಯ ದಾರಿ ಹೋದಲಿ ? ಬಂದೆ ನೀ ಕ್ಷಣದಿ ||೧||
ನೌಕೆಯೊಳು ನಾನೀಗ ಕುಳಿತೆನು ! |
ಯಾಕೆ ಚಿಂತಿಸಲಿನ್ನು ಸುಮ್ಮನೆ ? |
ಲೋಕಪಿತ ! ನೀನದರ ಚುಕ್ಕಾಣಿಯನು ಪಿಡಿದಿರುವಿ ||
ಭವದಿ ಬಿರುಗಾಳಿಗಳು ನೂಕಲಿ, |
ಬರಲಿ ಚೀರುತ್ತೊರೆ ತೆರೆಗಳು |
ಇರವೆ ಮುಗಿಲಾಗಸದಿ ಸಿಡಿಲಿ ! ನಗುವೆ ನಾನಿದಕೆ ||೨||
ಮಿರ ಮಿರಲ್ ಮಿರುಗಿಂದು ಮಿಂಚಲಿ |
ಸಿಡಿಲುಗಳು ಅಬ್ಬರದಿ ಸಿಡಿಯಲಿ |
ವಡವಗ್ನಿ ಜ್ವಾಲೆಯನು ನುಂಗಲು ಕಾಯ್ದುಕೊಂಡಿರಲಿ |
ಒಡಲು ಬಗೆಯುತ್ತಿಂದು ಮೊಸಳೆಗ |
ಕರಿ ನೌಕೆಯ ಸುತ್ತು ಮುಸುಕಲಿ !
ಒಡೆಯ ! ನಿನಗೊಪ್ಪಿಸಿದೆ ನಿನ್ನನು ಹೆದರ ಲೇಕಿನ್ನು ? ||೩||

೨. ವಿಕೃತ ವೃತ್ತಿ.

ತಿನ್ನುವರು, ತಿಂದುಷ್ಟ ತಿಪ್ಪೆಯ |
ಮಣ್ಣಿನೊಳು ಚೆಲ್ಲುವರು, ಬಡವರ |
ಬನ್ನವೀ ಸಿರಿವಂತ ಜನರಿಗೆ ತಿಳಿಯದಿಹುದೆಂತು? ||
ಕನ್ನದನ್ನಕೆ ಬದುಕುವವ ಸಂ — |
ಪನ್ನತನವನ್ನೆಂತು ಬಲ್ಲನು ? |
ಉನ್ನತರು ಪರರನ್ನ ಪಹರಿಸಿ ಜೀವಿಸರು. ||೧||
ಹೆರವರುಗಳ ಹಿಂಡಿ ಹೀರುತ |
ಸಿರಿಯ ರಾಶಿಗಳನ್ನು ಕೂಡಿಡು –
ತೆರದು ಕಾಸುಗಳನ್ನು ತಿರುಕರ ಮೋರೆಗೆಸೆಯುತಲಿ ||
ಮೆರೆಯುವರು ಜಗದೊಳಗೆ ನಾಚಿಕೆ |
ತೊರೆದು ಸಾರುತಲಿಲ್ಲರೆದುರಿಗೆ |
ಪರರಿಗುಪಕಾರವನು ಮಾಡುವ ಜನರು ನಾವೆಂದು ! ||೨||
ಕಾಡಿ ಪರಿಪರಿಯಿಂದ ಜನರನು |
ಮಾಡಿ ದುಡ್ಡನು, ಗುಡಿಯ ಕಟ್ಟಿಸಿ |
ನೀಡಿಯನ್ನವ ಜನಕೆ, ಚಿನ್ನದ ಮೂರ್ತಿಯನು ನಿಲಿಸಿ |
ಪಾಡಿ ಹಾಡುಗಳೆರಡು, ಪದಗಳ |
ಬೇಡುವರು! ನೀನಿಂಥ ಜನರಿಂ – |
ದೋಡಿ ಹೋಗುವಿ ವಿಕೃತವೃತ್ತಿಯ ನೋಡಿ,
ಎನ್ನೊಡೆಯಾ ! ||೩||

---

೩. ನಿಷ್ಪಾಪಜೀವನ

“ ಒಡೆಯನಾಂ, ಸೋಮಾರಿಯಲ್ಲವು, |
ದುಡಿತದಲಿ ಕಾಲವನು ಕಳೆಯುವೆ, |
ಕೆಡುಕುತನದಲಿ ಕಳೆಯುವವನಲ್ಲೊಂದು ನಿಮಿಷವನು.
ಒಡಲಿಗನ್ನವು ದೊರೆಯದೆನ್ನಯ |
ಹುಡುಗರಕಟಾ ! ಒಳಲುತಲಿ ಬಾಯ್–|
ಬಿಡುವರೈ ! ಮಿತಿಮಿಕ್ಕಿ ಕೆಲೆ ಈ ಯೆನ್ನ ಬಡತನವು! ||೧
ಒಡಲಿನನ್ನಕೆ ಮೈಯ ಬಟ್ಟೆಗೆ |
ದುಡಿದು ದಣಿಯುವೆ, ಮತ್ತೆ ದುಡಿಯುವೆ. |
ಕೊಡಲು ಕಾಸೊಂದಿಲ್ಲ ಒಳಿಯಲಿ ಪುಣ್ಯಸಾಧನಕೆ ! ||
ಒಡನೆ ದೈವವು ಎನ್ನದೆ ”ಸ್ವತ, |
ಬಡವ ! ಮಿಡುಕಲಿ ಬೇಡ ! ನಿನ್ನೀ |
ದುಡಿತವನೆ ಸಾಧನವು ಪುಣ್ಯದ ನಿಜದಲಿಯುತಿಹುದು. ||೨||
ಪರರ ಮನವಳುಕಿಸದಲೆಂದಿಗು, |
ಪರರ ಧನವಾಶಿಸದೆ, ಸತತದಿ|
ಪರಮ ಪಾವನ ಸತ್ಯವನ್ನು ಚರಿಸುತನ್ಯರೊಳು, ||
ಪರರ ದಾಸ್ಯದೊಳಿರಲು ಬಯಸದೆ, |
ದೊರಕಿಸುವವನ್ನವನು ದುಡಿತದಿ; |
ಇರದೆ ಪುಣ್ಯದ ಮಾರ್ಗವೀ ನಿಷ್ಪಾಪ ಜೀವನವು ? ||೩||
ವಿಮಲ ಹೃದಯವೆ ಮಂಗಲಾತ್ಮನು |
ರಮಿಸಲಿಹುದತಿ ರಮ್ಯ ಸದನವು, |
ರಮೆಯು, ಗೌರಿಯು, ಶಾರದೆಯು ಕ್ರೀಡಿಸುವ ಮಂದಿರವು; ||
ಸುಮನಸರು ಬಂದಿಲ್ಲಿ ಬಯಸುವ– |
ಭ್ರಮರದಿ ನೆರೆಮಿನಿದಾಗಿ ಪಾಡುತ |
ಅಮಿತ ಮಹಿಮನ ಮಹಿಮೆಯನು ಕೊಂಡಾಡಿ ನಲಿಯು
ವರು. ||೪||

೪. ಪ್ರವಾಸಿ.

ನಡೆದು ಪೋಗುತಲಿದ್ದೆ ನಾನೊಂ- |
ದಡವಿಯೊಳಗಿಂದಾಗ ಕಂಡೆನು |
ಪಡುವಣದ ಕಡಲೊಳಗೆ ನೇಸರನಿಳಿಯುತಿರುವದನು. ||
ಅಡರಿದವು ಕಾರ್ಮೋಡಗಳು ಸಂ- |
ಗಡಲೆ ಮುಗಿಲೊಳು, ಮಿಂಚು ಮಿಂಚಿತು, |
ಗುಡುಗಹತ್ತಿತು, ಮಳೆಯ ಹನಿಗಳು ಬೀಳತೊಡಗಿದವು.
|| ೧ ||

ಮಳೆಯು ಪೆಚ್ಚಿತು, ಬಟ್ಟೆ ತೊಯ್ದಿತು, |
ಹಳುವಿನೊಳಗಿನ ಹಳ್ಳತೊಳೆಗಳು |
ಗಳಿಗೆಯೊಳಗೆಲ್ಲೆಲ್ಲಿ ನೋಡಲು ತುಂಬಿ ಸೂಸಿದವು. ||
ಚಳಿಯು ಮೈಯೊಳು ಕಟ್ಟಿ ನೊಂದೆನು, |
ತುಳಿದು ದಣಿದೆನು ಮುಳ್ಳು ಕಲ್ಲನು; |
ಕಳೆಯಲಿರುಳನ್ನನುವ ಹುಡುಕುತ ನಡೆದೆ ನಡುಗುತಲೆ. ||೨||
ಎಡವುತೆಡವುತ ಕೊಂಚ ದಾರಿಯ |
ನಡೆದು ಪೋದೆನು, ಮುಂದೆ ಕಂಡೆನು |
ಸೊಡರ ಬೆಳಕನ್ನೊಂದು ಗುಡಿಸಲಿನಿಂದ ಬರುವದನು. ||
ಅಡಿಗಳೊತ್ತರದಿಂದಲಿಕ್ಕಿದೆ- |
ನೊಡನೆ ಗುಡಿಸಲಡೆಡೆಗೆ ನಿಂತೆನು, |
ಗಡನೆಯೆಳೆನಗೆ ನಗುತಲೊಬ್ಬನು ಬಂದನೊಳಗಿಂದ. || ೩ ||
" ಒಳಗೆ ಬಾರೈ, ತಮ್ಮ! ಒದ್ದೆಯ |
ಕಳೆದು ಈಪೊಣ ಒಟ್ಟೆಗಳನುಡು, |
ಕುಳಿತು ಬೆಂಕಿಯ ಬಳಿಗೆ ನೀ ತುಸು ಕಾಸಿಕೊಳ್ಳೆ " ನುತ ||
ತಳಿಗೆಯೊಳು ಬಿಸಿಯಂಬಲಿಯ ತಂ- |
ದಿಳಿಪಿ " ಮಳೆಯಿದು, ತಮ್ಮ! ನಿನ್ನನು |
ಬಳಲಿಸಿತು ಬಲು, ಇಸ್ಸು ತಿನ್ನಿದನೆಂ"ದು ಹೇಳಿದನು. ||೪||
ಒಂದು ಮಾತನ್ನಾಡದಲೆ ನಾ |
ತಂದ ಬಿಸಿಯಂಬಲಿಯ ತಿಂದೆನು; |
ಚಂದದಿಂದವನೊಂದು ದೇವರ ಹಾಡು ಹಾಡಿದನು. ||
ಅಂದು ತಿಳಿದೆನು ಸಾಧು ಸಜ್ಜನ- |
ರೆಂದರೇನೆಂಬುದನು, ಪರರಿಗೆ |
ಬಂದ ಪೀಡೆಯನಳಿಸಿ ತಳೆಯರು ಮನದಿ ಹೆಮ್ಮೆಯನು. ||೫||

---

೫ ತಿರುಕ.

ತಿರುಗಿ ತಿರಿತಿರಿ ಊರನೆಲ್ಲವ |
ತಿರಿಸು ಹಿಡಿ ಕರಕನ್ನವನು ತಂ- |
ದಿರಿಸಿ ಪರಿಪಾಣದೊಳು, ತಿನ್ನಲು ಕುಳಿತೆನನಿತರೊಳು ||
ಹರುಕು ಬಟ್ಟೆಯನುಟ್ಟು ಕಂಬನಿ |
ಸುರಿಸುತೊಬ್ಬನು ತನ್ನ ಹೊಟ್ಟೆಯ |
ಬಿರಿಸಿಂ ತೋರಿಸಿದ! ಅನ್ನವನಿತ್ತೆ; ಹರಿಸಿದನು! || ೧ ||
ಇರಲಿ ನಾನೆಂತನ್ನವಿಲ್ಲದೆ ?
ತಿರುಗಿ ನೀಡುವರಾರು ಊರೊಳು? |
ಪೊರೆಯುವವರಿನ್ನಾರು ಎನ್ನನು? ಬಂದೆ ನಿನ್ನಡಿಗೆ! ||
ಅರಿಯೆ ನಾ-ನಿಂಜರವಿ ಹಾಡಲು, |
ಅರಿಯೆನಳೆಯುತ ಮಾತನಾಡಲು, |
ಹರಹರಾ! ನಾನಿನ್ನ ಮನವನ್ನೊಲಿಸಲಿನ್ನೆಂತು ? || ೨ ||
ತಿರುಕನೈ ನಾ! ಭಿಕ್ಷೆಯಿಲ್ಲದೆ |
ತಿರುಗಿ ಪೋಗುವದಾಯ್ತೆ? ಶಿವಶಿವ! |
ಹರಕು ದನಿಯಿಂದೊದರೆ ನಾ, ಗಡಿಪಿಡಿಸಿ ನೀ ಬಂದು ||
ಕರೆದು ಪ್ರೇಮದಿ ತೃಪ್ತಿಯನ್ನವ- ||
ನಿರಿಸಿ ಬಾಯೊಳು ಮೇಲೆ ಹರಿಸಿದಿ! |
ಪರಮ ಕರುಣಾಂಬುಧಿಯು ನೀನೆಂಬುದನು ತೋರಿಸಿದಿ!||೩||

---

೬. ಕುರುಡ.

ಕುರುಡನೊಬ್ಬನು ಕೋಲನೂರುತ |
ಬರುತಲಿರೆ ದಾರಿಯಲಿ, ಮೆಲ್ಲನೆ |
ದುರುಳನೊಬ್ಬನು ಕಾಲಿನಿಂದಾ ಕೋಲು ಚಿಮ್ಮುತಲೆ ||
ಹರಿ! ಹರೀ! ಯೆಂದೆನುತ ನೆಲಕವ- |
ನುರುಳಿದನು. ನೆರೆದವರು ನಕ್ಕರು! |
ಸುರಿಸಿದನು ಕಣ್ಣೀರು ಮನದೊಳು ನೊಂದು ಶ್ರೀ ಹರಿಯು!
|| ೧ ||
ಹರಳು ನಟ್ಟಿತು ಹಣೆಗೆ, ಬಲು ನೆ- |
ತ್ತರವು ಹರಿಯಿತು, ಅರಿವು ತಪ್ಪಿತು! |
ಅರರೆ! ಕಣ್ತೆರೆದಾರು ನೋಡರು, ಆರು ಕರುಣಿಸರು! ||
ಪೊರೆವವರು ಪರದೇಶಿಯನ್ನೀ |
ಧರೆಯೊಳಗೆ ಯಾರಿಲ್ಲವೇ? ತಡೆ! |
ಭರದಿ ಬರುವವನಾರಿವನು ಮಾತಿಲ್ಲದಾರೊಡನೆ? || ೨ ||
ಕುಳಿತುಕೊಂಡನು, ತನ್ನ ತೊಡೆಯೊಳು |
ಬಳಿಕವನ ತಲೆಯಿಟ್ಟು ಮೆಲ್ಲನೆ |
ತೊಳೆದನಾ ಗಾಯವನು ಕಟ್ಟಿದನರಿವೆಯದಕೊಂದು. ||
ಭಳಿರೆ ! ಕಂಗಳನೆದ್ದು ಬೇಗನೆ |
ಕುಳಿತು ಕಣ್ಗಳ ತೆರೆದು ನಿಂತನು ! |
ಬೆಳಕು ಕಂಡನು ! ಮುಗಿಲಿನಿಂದಲಿ ಹೂಗಳುದುರಿದವು !!
|| ೩ ||

---

೭. ಮಾತೃ ಶ್ರಾದ್ಧ

ಅಂದು ತಾಯಿಯ ಶ್ರಾದ್ಧದಿನವೆ- |
ನ್ತೆಂದು ಅಡವಿಗೆ ಪೋಗಿ ಕಟ್ಟಿಗೆ |
ತಂದು ಮನೆಮನೆ ತಿರುಗಿ ಮಾರಿದೆನೆಂಟು ಕಾಸುಗಳು ||
ಬಂದವವುಗಳನಿತ್ತು ಗೋದಿಯ |
ತಂದು ಬ್ರಾಹ್ಮಣರನ್ನು ಕರೆತರ- |
ಲೆಂದು ಪೋಗಲು, ಪೇಳಿದರು ಗಡ, ಬಡವ! ಬರೆವೆಂದು !
|| ೧ ||
ಮನದೊಳಗೆ ಮರುಗಿದೆನು ನಾ ಬಲು, |
ಮನೆಯ ಹಾದಿಯ ಹಿಡಿದು ನಡೆದೆನು; |
ಅನಿತರೊಳು ಯತಿಯೊಬ್ಬನೆದುರಿಗೆ ಬರುವದನು ಕಂಡು ||
ವಿನಯದಿಂದವನಡಿಗೆ ಬಾಗಿದೆ. |
ಅನುನಯದಿ, " ಕಣ್ಣೀರಿದೇಕೆಂ- |
ದೆ"ನಲು ಪೇಳಿದೆ ಮನದ ದುಗುಡವ ಯತಿಗೆ ತಲೆಬಾಗಿ. |
|| ೨ ||
" ಬರುವೆ ನಾ ನಡಿ, ಮಾಡು ಶ್ರಾದ್ಧವ, |
ಮರುಗಬೇಡೈ ! ಮರೆಯುತಿಹುದೇ |
ಹರಿಯು ಮೆಚ್ಚಿಸಿದಾ ಕುಚೇಲನು ಬಡವನೆಂಬುದನು ? ||

[೩ ನೇ ಪಾನು ನೋಡಿರಿ.]

ವರ್ತಮಾನ ಸಾರ.

ಇಹವೃತ್ತ

ನಿನ್ನೆ ರಾತ್ರಿ ಮಳೆಯು ಸಾಧಾರಣ ಸಾಕಷ್ಟು ಆಗಿದೆ.

ಲಕ್ಷ್ಮೀ ಸಿನೆಮಾ 'ಸುರು ಹೋಣಾರ' ಎಂಬದಾಗಿ ಮರಾಠಿಯಲ್ಲಿ ಗೋಡೆಗಳ ಮೇಲೆ ಜಾಹಿರಾತುಗಳು ಹಚ್ಚಲ್ಪಟ್ಟಿವೆ. ಬಾಗಲಕೋಟೆಯು ಮಹಾರಾಷ್ಟ್ರದ ಭಾಗವಲ್ಲವೆಂಬದನ್ನು ಈ ಸಿನೆಮಾ ವ್ಯವಸ್ಥಾಪಕರು ಅರಿಯರೋ?

ನೀರಿನ ತಜ್ಞರಾದ ಹಾಗನ ಸಾಹೇಬರು ಈ ಜಿಲ್ಲೆಯಲ್ಲಿ ತಮ್ಮ ಶೋಧನವನ್ನು ತೋರಿಸತಕ್ಕವರಿದ್ದಾರೆಂಬ ವಾರ್ತೆ. ೩೦೦೦ ರೂ. ತೆಗೆದುಕೊಂಡರೂ ಅಡ್ಡಿಯಿಲ್ಲ ಬಿಜಾಪುರದ ಬರಗಾಲದ ಭವಣೆಯು ತಪ್ಪಲಿ! ಬಡವರು ಬದುಕುವ ಹಾಂಗೆ ಪ್ರಯತ್ನವಾಗಲಿ!

ಮುಂಬಯಿ ಕರ್ನಾಟಕ

ಶ್ರೀ ಲಠ್ಠೆಯವರು ಕೊಲ್ಹಾಪೂರ ಸಂಸ್ಥಾನದ ದಿವಾಣರಾಗುವರೆಂಬ ವಾರ್ತೆಯಿದೆ. ಇವರು ಆಗದ ಪಕ್ಷದಲ್ಲಿ ಶ್ರೀ ನಾಯಿಕ (ವಿಜಾಪುರದ ಈಗಿನ ಕಲೆಕ್ಟರರು) ರವರು ನೇಮಿಸಲ್ಪಡುವ ಚಿಹ್ನವಿದೆಯಂತೆ.

ಮುರಗೋಡ ಗ್ರಾಮ ಪಂಚಾಯತ ಕಮೀಟಿಯ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷದವರು ಆರಿಸಲ್ಪಟ್ಟರು. ಸಂತೋಷ! ಲೋಕಲ್ ಬೋರ್ಡ ಚುನಾವಣೆಯಲ್ಲಿಯೂ ರಾಷ್ಟ್ರೀಯ ಪಕ್ಷದವರಿಗೆ ಜಯ ದೊರೆಯುವದಾಗಿ ಭರವಸೆಯಿದೆ.

೩ ನೇ ವರ್ಗದ ರೇಲ್ವೆ ದರಗಳನ್ನು ಕಡಿಮೆ ಮಾಡುವದಾಗಿ ಬೆಳಗಾವಿ ರೇಲ್ವೆ ಮಂಡಳದ ಪ್ರಯತ್ನ ನಡೆದಿದೆ. ಈ ವಿಷಯವನ್ನು ಎತ್ತಿ ಉತ್ಸಾಹದಿಂದ ದಿಲ್ಲಿಯ ಕಾಯದೇ ಮಂಡಳದಲ್ಲಿ ಹೋರಾಡಲು ಶ್ರೀ ಬೆಳವೀ ಮೊದಲಾದವರು ಆಶ್ವಾಸನ [illegible]

ತಾ॥ ೭-೯-೨೫ ನೇ ಸೋಮವಾರ ದಿವಸ ಹೊಂಬಳ ಸಂಗೀತ ನಾಟಕ ಮಂಡಳಿಯವರು ವಿಜಾಪೂರ ಕರ್ನಾಟಕ ಏಕೀಕರಣ ಸಂಸ್ಥೆಗೆ ತಮ್ಮ ಲೋಕಪ್ರಿಯವಾದ ಶ್ರೀ ಕೃಷ್ಣಲೀಲಾ ನಾಟಕವನ್ನು ಕೊಟ್ಟು ಇದರ ಉತ್ಪನ್ನ ಅಜಮಾಸು ೨೫೦ ರೂಪಾಯಿ ಈ ಸಂಸ್ಥೆಗೆ ಅರ್ಪಿಸಿದರು. ಆ ನಾಟಕವು ದೇಶಭಕ್ತ ಶ್ರೀನಿವಾಸರಾವ ಕೌಜಲಗಿಯವರ ಅಧ್ಯಕ್ಷತೆಯ ಕೆಳಗೆ ನೆರವೇರಿತು. ಶ್ರೀಯುತ ಅಂಗಡಿ ವಕೀಲರು ಗೌರವಪರ ಭಾಷಣ ಮಾಡಿ ಶ್ರೀಕೃಷ್ಣನ ಭೂಮಿಕೆಯನ್ನು ಮಾಡುವ ಕುಮಾರಿ ರತ್ನಾ ಇವಳಿಗೆ ಸುವರ್ಣ ಪದಕವನ್ನು ಅರ್ಪಣ ಮಾಡಿದರು.

ಭಾರತಸೇವಾ ನಾಟಕ ಮಂಡಲದವರು ವಿಜಾಪುರದಲ್ಲಿ ಅಭಿನಯಿಸಿದ "ಆತ್ಮಶುದ್ಧಿ" ನಾಟಕವು ಅತಿಶಯ ಯಶಸ್ವಿಯಾಯಿತೆಂದೂ ನಟರಿಗೆ ಪದಕಗಳೂ ದೊರೆತಿವೆಯೆಂದೂ ತಿಳಿಯುತ್ತದೆ. ಕನ್ನಡ ಕಂಪನಿಗಳು ಮುಂದೆ ಬರಲಿ!

ತಾ॥ ೧೩ ನೇದಿನ ಗದಗಿನಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯು ನೆರೆಯಿತು. ಶ್ರೀ ಸರೋಜಿನೀದೇವಿಯವರು ಕಾನಪೂರ ಕಾಂಗ್ರೆಸ ಅಧ್ಯಕ್ಷರಾಗಬೇಕು. ಏಕೀಕರಣದ ಕಾರ್ಯವನ್ನು ಸಾಗಿಸುವದಕ್ಕಾಗಿ ಒಂದು ಮಂಡಲವಿರಬೇಕು, ಮತ್ತು ಅದರ ವೆಚ್ಚಕ್ಕಾಗಿ ೧ ಸಾವಿರ ರೂಪಾಯಿ ಕೊಡಬೇಕು. ಕೌಜಲಗಿ ಶ್ರೀನಿವಾಸರಾವ ಮುದವೀಡಕರ ಕರ್ನಾಡ ಸದಾಶಿವರಾವ ಮಂಜಲಿ, ಗದಗಕರ, ಇವರು ಸಭಾಸದರು, ಶ್ರೀ ದಿವಾಕರರು ಕಾರ್ಯದರ್ಶಿಗಳು. ಇನ್ನು ಮೇಲೆ ವರ್ಷಕ್ಕೆ ಒಬ್ಬೊಬ್ಬರು ೨೦೦೦ ಯಾರ್ಡ ನೂಲ ಕೊಡುವರು ಕಾಂಗ್ರೆಸ ಸಭಾಸದರಾಗಬೇಕು, ಇವೇ ಮೊದಲಾದ ಠರಾವುಗಳು ನಿರ್ಣಯವಾದವು.

ಮದ್ರಾಸ ಕರ್ನಾಟಕ

ಮಂಗಳೂರಿನ ಸೆಂಟ ಅಲೋಸಿಯಸ್ ಕಾಲೇಜಿನಲ್ಲಿ ದೇಶಬಂಧು ದಾಸರ ಚಿತ್ರದ ಅನಾವರಣ ಸಮಾರಂಭವು ಬಹು ಉತ್ಸಾಹದಿಂದ ನಡೆಯಿತು.

ಶ್ರೀ ಕೃಷ್ಣ ಜಯಂತಿಯ ಗೌರವಾರ್ಥವಾಗಿ ಶಾಲಾ ಬಾಲಕರ ಒಂದು [illegible] ಪ್ರದರ್ಶನವೂ, [illegible] ಅಭಿನಯಿಸಲ್ಪಡುವ ಒಂದೆರಡು ನಾಟಕಗಳೂ ಮಂಗಳೂರಲ್ಲಿ ಆದವು.

ಮಂಗಳೂರ "ಲೇಡೀಸ್ ಕ್ಲಬ್" ನಲ್ಲಿ [illegible] ಕಾಣುವದು ಇದು ೨೦ ನೇ ಶತಮಾನದ ಸುಧಾರಣ!

ಮೈಸೂರ ಕರ್ನಾಟಕ

ಮೈಸೂರ ಸರಕಾರದವರು ಉತ್ತೇಜನಕೊಡುತ್ತಲಿರುವ ಕೆಲವು ಕೈಗಾರಿಕೆಗಳ ಕಾರಖಾನೆಗಳನ್ನು ತೆಗೆದುಕೊಳ್ಳಲು, ಒಂದು ಮುಂಬಯಿಯ ಮಂಡಲವನ್ನು ಸ್ಥಾಪನೆ ಮಾಡುವದಕ್ಕಾಗಿ ಬೆಂಗಳೂರಿನ ಕೆಲವು ಜನ ವರ್ತಕರು ಪ್ರಸಿದ್ಧ ಕೈಗಾರಿಕೆಯ ಪಟುಗಳಾದ ಮಿ॥ ಏ ಬಿ ಗಾಡ್‌ಬೆಜ್‌ರವರನ್ನು ಬೆಂಗಳೂರಿಗೆ ಕರೆಸಿಕೊಳ್ಳುವದಾಗಿ ವರ್ತಮಾನವಿದೆ.

ಈ ಸೆಪ್ಟಂಬರ ತಾ॥ ೨ ರ ಸಂಪದಭ್ಯುದಯ ಪತ್ರಿಕೆಯಲ್ಲಿ "ಟೀಪು ಸುಲ್ತಾನರ ಹಾವಳಿ" ಎಂಬ ಶಿರೋಲೇಖನದಿಂದ ಪ್ರಕಟವಾಗಿರುವ ಲೇಖವು ತಮಗೆ ಬಹಳ ಮನೋವೇಧಕವೂ ಅಪಮಾನಕರವೂ ಆಗಿರುವುದರಿಂದ ಇಂಡಿಯನ್ ಪಿನಲ್‌ಕೋಡು ೫೦೦ ನೆಯ ಕಲಮಿನ ಪ್ರಕಾರ ವಿಚಾರಣೆಯನ್ನು ನಡೆಯಿಸಿ ಅಪರಾಧಿಗಳಿಗೆ ಶಿಕ್ಷೆಯನ್ನು ವಿಧಿಸಬೇಕೆಂದು ಮೈಸೂರು ಮ್ಯುನಿಸಿಪಲ್ ಕೌನ್ಸಿಲಿನ ವೈಸ ಪ್ರೆಸಿಡೆಂಟರೂ, ಆನರರಿ ಮ್ಯಾಜಿಸ್ಟ್ರೇಟರೂ ಆದ ಮಿ॥ ಟಿ. ಎಸ್. ಅಲ್ಲೀಖಾನರವರು, ಸಂಪದಭ್ಯುದಯ ಪತ್ರಿಕೆಯ ಎಡಿಟರರೂ, ಮುದ್ರಕರೂ ಪ್ರಕಾಶಕರೂ ಆದ ಮಿ॥ ಎಂ. ಎಸ. ಲಕ್ಷ್ಮೀನಾರಾಯಣರವರ ಮೇಲೂ, ಇದೇ ಪತ್ರಿಕೆಯ ಪ್ರೊಪ್ರೈಟರರೂ ಮ್ಯಾನೇಜರರೂ ಆದ ಮಿ॥ ಎಂ. ವೆಂಕಟಕೃಷ್ಣಯ್ಯನವರ ಮೇಲೂ ಈ ತಾ॥ ೧೦ ರಲ್ಲಿ ಸಿಟಿ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಫಿರ್ಯಾದೆಯನ್ನು ಮಾಡಿರುವರು. ಇದರ ಪ್ರಥಮ ವಿಚಾರಣೆಯು ಈ ತಾ॥ ೨೨ ರಲ್ಲಿ ನಡೆಯಲು ಗೊತ್ತಾಗಿರುತ್ತದೆ.

ತಮಿಳು ಪಂಚಮರನ್ನು ಆದಿದ್ರಾವಿಡರೆಂದು, ಕನ್ನಡ ಪಂಚಮರನ್ನು ಆದಿ ಕರ್ನಾಟಕರೆಂದು ಇನ್ನು ಮುಂದೆ ಕರೆಯಬೇಕೆಂದೂ, ಹೊಲೆಯ ಮಾದಿಗ ಪಂಚಮ ಎಂಬ ಹೆಸರುಗಳನ್ನು ಇನ್ನು ಮುಂದೆ ಸರಕಾರಿ ದಾಖಲೆಗಳಿಂದ ತೆಗೆದುಹಾಕಬೇಕೆಂದೂ ಮಿ॥ ಸಿ. ಮುರುಗೇಶಪಿಳ್ಳೆಯವರು ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ತಂದ ಒಂದು ಠರಾವು ಸರ್ವಾನುಮತದಿಂದ ಪಾಸಾಗಿರುತ್ತದೆ.

ನಿಜಾಮ ಕರ್ನಾಟಕ

ಕೀರ್ತನ ಕೇಸರಿಯವರು ಗುಲಬುರ್ಗಾದಲ್ಲಿ ಮಾತ್ರ ೧೫ ಕೀರ್ತನಗಳನ್ನು ಮಾಡಿ ವಿಲಕ್ಷಣ ಜನರ ಜಾಗೃತಿಯನ್ನು ಮಾಡಿಬಿಟ್ಟಿದ್ದಾರೆ! ಈ ಪರಿಣಾಮವು ಅಲ್ಲಿಯ ಮರಾಠೀ ಜನರ ಮೇಲೆ ಕೂಡ ಆಗಿದೆ! ಅವರೂ ಸಹ ಕನ್ನಡ ಕಲಿಯಲು ಸಾಹಸ ಬಡುವ ಪ್ರವೃತ್ತಿಯವರಾಗಿದ್ದಾರೆ!! ಮುದುಕರಿಗೂ ಸಹ ಕನ್ನಡ ಕಲಿಯಬೇಕೆಂಬ ಕುತೂಹಲ! ಹೈದರಾಬಾದ 'ಕರ್ನಾಟಕ ಸಂಘ'ದ ಶಾಖೆಯೊಂದನ್ನು ಗುಲಬುರ್ಗಾದಲ್ಲಿ ಸ್ಥಾಪಿಸುವದಲ್ಲದೇ ಕನ್ನಡ ಶಾಲೆಯನ್ನು ಬೇಗ ಸ್ಥಾಪಿಸುವವರಿದ್ದಾರೆ. ಧಂಡಿನ ಸಹಾಯ ಮಾಡುವೆವೆಂದು ಎಲ್ಲ ವ್ಯಾಪಾರಸ್ಥರೂ ಮಾತು ಕೊಟ್ಟಿದ್ದಾರೆ! ಆಗಲೇ ನೆಲವನ್ನು ಹರಗಿ ಹಸನಾಗಿ ಮಾಡಿದ್ದಾರೆ! ಇನ್ನು ಬಿತ್ತಿ ಬೆಳಕೊಳ್ಳುವದೊಂದೇ ಉಳಿದದೆ! ನೋಡಿ! ಉಳಿದ ಕರ್ನಾಟಕದವರೂ ನಾ ಮುಂದೆ ನೀ ಮುಂದೆ ಎಂದು ಪೋಟಿ ಮಾಡುವ ಹೊತ್ತಿದು!

ಕೊಡಗು ಕರ್ನಾಟಕ

ವಿರಾಜಪೇಟೆಯಲ್ಲಿ ಗಣಪತಿ ವಾಚನಾಲಯ ಮತ್ತು ಪುಸ್ತಕ ಭಾಂಡಾರವು ಸ್ಥಾಪಿಸಲ್ಪಟ್ಟಿದೆ.

[illegible] ಔದ್ಯೋಗಿಕ ಶಾಲೆಯಲ್ಲಿ [illegible] ಹೊಸ ಕಸಬುಗಳ, [illegible] ಕಲಿಸಲ್ಪಡುವವು.

ಹಿಂದುಸ್ಥಾನ

ಯಾವ ಪ್ರಾಂತದಲ್ಲಿ ಸ್ತ್ರೀಯರಿಗೆ ಮತಾಧಿಕಾರವು ಈಗ ಸಿಕ್ಕಿದೆಯೋ, ಆ ಪ್ರಾಂತದಲ್ಲಿ ಸ್ತ್ರೀಯರೂ ಸಹ "ಕೌನ್ಸಿಲ್ ಆಫ್ ಸ್ಟೇಟ" ದ ಮತದಾರರಾಗಬಹುದೆಂಬದಾಗಿ ನಿರ್ಣಯವಾಗಿದೆ!

[illegible] ಕಟ್ಟಿಸುವ ಕಾರ್ಯ [illegible] ರೂಪಾಯಿ [illegible]

ಹಿಂದುಸ್ಥಾನ [illegible]

"ಕನ್ನಡಿಗ"ನ ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫ ರೂ. ಉಪಕಾರಕರ್ತೃಗಳಿಗೆ ವಾ ೧೦ ರೂ. ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ.	೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆಯಾಗದಂಥ ೯೦೦೦ ಯಾರ್ಡ ಕೈ ನೂಲು
ಪರಸ್ಥಳದ ,,	ಮನಿಯಾರ್ಡರದಿಂದ ೧-೧೩-೦ ವಿ. ಪಿ. ಯಿಂದ ೨-೧-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦೦ಯಾರ್ಡ ಕೈನೂಲು.
ವಾಚನಾಲಯ ಸಭೆ, ಸಮ್ಮತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ-	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ೨-೧೩-೦ ,, ವಿ. ಪಿ. ಯಿಂದ ೩-೧-೦
ಸರಕಾರ, ಮುನಸೀಪಾಲಿಟಿ ಲೋಕಲ್‌ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦ ವಿ. ಪಿ.ಯಿಂದ ೫-೧-೦

ಬಿಡಿ ಸಂಚಿಕೆಗೆ ೯ ಪೈ. ಹಿಂದಿನಸಂಚಿಕೆಯೊಂದಕ್ಕೆ ೨ ಆಣೆ. ಧರ್ಮಾರ್ಥವಾಗಿಯಾಗಲೀ ವರ್ಷದ ಕಡಿಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ.

ವ್ಯವಸ್ಥಾಪಕ

ಲೋಕಮತ.

ಕರ್ನಾಟಕದಲ್ಲಿ ನವ ಚೈತನ್ಯವನ್ನು ಹುಟ್ಟಿಸಿ ಅಹಿಂಸೆ, ಖಾದಿ, ಸತ್ಯಾಗ್ರಹ ಇವೇ ಮೊದಲಾದ ವಿಷಯಗಳನ್ನು ಪ್ರತಿಪಾದಿಸಿ ಲೋಕಮತವನ್ನು ಜಾಗ್ರತ ಪಡಿಸುವದೇ ಈ ವಾರಪತ್ರಿಕೆಯ ಉದ್ದೇಶ ವಾ. ಚ. ರೂ. ೩—೫—೦

ವ್ಯವಸ್ಥಾಪಕ ಲೋಕಮತ ಹುಬ್ಬಳ್ಳಿ.

ಕರ್ನಾಟಕವೃತ್ತ ಧಾರವಾಡ.

೩೦ ವರ್ಷಗಳಿಂದ ಕನ್ನಡನಾಡಿನ ಸೇವೆ ಮಾಡುತ್ತ ಬಂದಿರುವ ಈ ವಾರ ಪತ್ರಿಕೆಯಲ್ಲಿ, ಕರ್ನಾಟಕದ ವೈಶಿಷ್ಟ್ಯವನ್ನು ಪ್ರತಿ ವಾರದಲ್ಲಿಯೂ, ಕಾಣಬಹುದು. ವಾ. ಚ. ರೂ.೩—೫—೦

ಪ್ರಕಟನೆ

ದಿ ಇಕ್ವಿಟೇಬಲ್ ಗ್ಯಾರಂಟಿ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೫ ನೇ ಇಸ್ವಿಯ ಜುಲೈ ೩೧ ನೇ ತಾ॥ ದಿನ ಸಾಯಂಕಾಲದ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟೀ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ. ಬಸವಾರಾಧ್ಯ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ೧೦೦೦ ರೂ. ನಾಲವು ದೊರೆಯ ಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೧೧೬೦೨ ಶ್ರೀ. ಆರ್. ಡಿ. ಮುಕ್ಕೇರಿ. ಬುಕ್ಕಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೫೪೫ ಶ್ರೀ. ವೀರಜರಾಮ ನಾರಭಿರಾಮ ನಾಯಿಕ ಕಂಪಾವುಂಡರ, ಜಲಪಾದ ದವಾಖಾನೆ ವಾಯ, ಸಯಾನ. ಬಿಬಿ. ಸಿ. ಆಯ ರೇಲ್ವೇ. ಸುರತ. (ಬಡೋದಾ ಏಜನ್ಸಿ)

(೩) ಬಾಂಡ ನಂ. ೧೯೬೬ ಶ್ರೀ. ಶ್ರೀರಾಮ ಮೂರ್ತಿ ಆರಾಧ್ಯಲು ರಾಮಚಂದ್ರರಾವ ಗುರು ಪಿಠ ಪುರ ಗೋದಾವರಿ ಜಿಲ್ಲಾ.

(೪) ಬಾಂಡ ನಂ. ೯೬೬ ಶ್ರೀ. ನಂದಗಿರಿ ವೆಂಕಟರಾಮ ದಾಸ ಪ್ರೊಪ್ರಾಯಿಟರ ಮುಕುಂದ ಪುರ. ಕಾಕಿನಾಡು

(೫) ಬಾಂಡ ನಂ. ೪೩೭ ಶ್ರೀ. ಆರ್. ವೆಂಕಟಯ್ಯಾ ಗುರು ಇನಾಮದಾರ ಭೋಪಯ್ಯಾ ಅಗ್ರಹಾರ. ಆಮಳ ಪುರಮ್.

೧-೮-೨೫ { ಬಿ. ಎನ್. ಅರಾಧ್ಯ
ಚೀಫ ಏಜಂಟ ಹುಬ್ಬಳ್ಳಿ

ಧಾತೂಪಧಾತು ರಸಮಹಾರಸಾದಿಖನಿಜದ್ರವ್ಯಾನಿಭಸ್ಮಾಃ

ಅಪೂರ್ವಸಂಧಿ) ವನಸ್ಪತಿ ರಸಾಗ್ನಿ ಯೋಗಸಂಪನ್ನಃ (ಸುಲಭದರ!!

ಔಷಧಿಗಳು.	ತೊಲೆ	ರೂ.	ಔಷಧಿಗಳು.	ತೊಲೆ	ರೂ.
ಅಭ್ರಕಭಸ್ಮ ೧೦೦೦ ಪುಟಿ	೧	೪೦	ತ್ರಿವಂಗಭಸ್ಮ-ಪೀತವರ್ಣ	೩	೩
,, ೫೦೦ ,,	೧	೨೦	ಸುವರ್ಣ ಮಾಕ್ಷಿಕಭಸ್ಮ	೫	೪
,, ೧೦೦ ,,	೧	೫	ನಾಗಭಸ್ಮ-ಶ್ವೇತ, ಪೀತ,	೩	೩
,, ನಿಶ್ಚಂದ್ರ	೨॥	೪	ಮೃಗಶೃಂಗಭಸ್ಮ-ಶ್ವೇತ	೫	೩
ಲೋಹಭಸ್ಮ-ರಕ್ತವರ್ಣ	೩	೫	ಸುವರ್ಣರಾಜವಂಗೇಶ್ವರ	೩	೬
ಮಂಡೂರಭಸ್ಮ-ರಕ್ತವರ್ಣ	೩	೨	ಸಿದ್ಧಮಕರಧ್ವಜ-ಅನುಪಾನಮಿಶ್ರ, ಗುಳಿಗೆಗಳು-೨೦	–	೫
ವಂಗಭಸ್ಮ-ಶ್ವೇತವರ್ಣ	೩	೩	ಪ್ರಾಚೀನ ಹೇಮಗರ್ಭಮಾತ್ರಾ	೧	೧೦೦

ಔಷಧಿಗಳು ಪರೀಕ್ಷಾಂತ್ಯದಲ್ಲಿ ಸದೋಷವೆಂದು ಕಂಡುಬಂದಲ್ಲಿ ವಾಪಸು ಮಾಡಬಹುದು. ಎಲ್ಲಪ್ರಕಾರದ ಆಯುರ್ವೇದೀಯ ಔಷಧಿಗಳೂ, ಔಷಧೋಪಯೋಗಿ ದ್ರವ್ಯಗಳೂ ಸುಲಭ ಬೆಲೆಗೆ ದೊರಕುವವು.

ವೈದ್ಯ— ವಾದಿರಾಜ ಜಹಾಗೀರದಾರ ಇಲಕಲ್ಲ. ಜಿ. ವಿಜಾಪೂರ.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ, ಬಿ. ೧೯೪೭ ವಾ. ಚಂದಾ ೧—೧೨—೦ ಮಾತ್ರ

ಕನ್ನಡಿಗ.



(ಇದರಲ್ಲಿ ಕನ್ನಡ ಸಮಾಚಾರವು ಸಮಾವಿಷ್ಟವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇಶ್ವರರಾಯರ ಮುಕ್ತಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಬುಧವಾರ ಮಿತಿ ಆಶ್ವೀನ ಶುದ್ಧ ೮ ಶಕೆ ೧೮೪೭. ತಾ॥ ೨೪-೯-೧೯೨೫. | ಸಂಚಿಕೆ ೨೬

ಸಂಪಾದಕರ ಭೂಮಿ.

(*)

ನನ್ನ ಮನಸಿನ ಮೇಣವಮಾಡಿ ಕಟ್ಟುವೆನಾನು ।
ನಿನ್ನ ಚೆಸವವ ಪೂಡಿದಂಥ ಮುಕ್ಕಳ ದೊಮ್ಮ ।
ಚಿನ್ನದಾದರು ಚಿನ್ನ ಮೇಣಬಸ್ತಿಯು ನೋಂದು ॥
ಚಿನ್ಮಯಪ್ರಕಾಶವಲ್ಲ ॥

ನನ್ನ ದೇಹವು ನಿನ್ನ ವೀರಶಾಸನವಾಗ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ।
ಗಂಧವಹನೆಂದು ತಿಳಿಯೆ ॥

—ಅಂಬಿಕಾತನಯ ದತ್ತ

ಕರ್ನಾಟಕದಲ್ಲಿ ರೇಲ್ವೇಗಳ ಅನುಕೂಲತೆಗಳು ಹೆಚ್ಚಸ ಬೇಕೆಂಬುದಾಗಿ ಕನ್ನಡಿಗರು ಪ್ರಯತ್ನಿಸುತ್ತಿರುವದು ಎಲ್ಲರಿಗೂ ಗೊತ್ತಿದೆ. ಈ ಬಗ್ಗೆ ಹೆಚ್ಚಾಗಿ ಸಹಿಗಳು ನಮಗೆ ಬೇಕಾಗಿವೆ. ಆದುದರಿಂದ ಈ ವಾರದ ಸಂಚಿಕೆಯು ಸಂಗಡ ರೇಲ್ವೇ ಬೋರ್ಡಿಗೆ ಕಳಿಸ ತಕ್ಕ ಅರ್ಜಿಯ ನಮೂನೆಗಳನ್ನು ಹಂಚಿದೆ. ವಾಚಕರೆಲ್ಲರು ದಯಿಟ್ಟು ಆ ನಮೂನೆಗಳ ಮೇಲೆ ತಮ್ಮ ಇಷ್ಟ ಮಿತ್ರರ ಸಹಿಗಳನ್ನು ದೊರಕಿಸಿ ಕೂಡಲೇ ಅವನ್ನು ನಮಗೆ ಕಳುಹಿಸಬೇಕಾಗಿ ವಿನಂತಿ. ಪ್ರತಿಯೊಬ್ಬನು ಎಷ್ಟು ಹೆಚ್ಚು ಸಹಿಗಳು ದೊರೆಯುವವೋ ಅಷ್ಟು ಹೆಚ್ಚಾಗಿಯೇ ಅವನ್ನು ದೊರಕಿಸಬೇಕು. ಅಂದರೆ ಈ ಕಾರ್ಯವು ಕೈಗೂಡುವದು.

ಮಂಗಳೂರಲ್ಲಿ ಅಮ್ಮೆಂಬಳ ಸುಬ್ಬರಾಯಪೈ ಎಂಬವರ ಸ್ಮಾರಕಕ್ಕಾಗಿ ಕೃತಕಸ್ಫಟಿಕ ಶಿಲೆಯ ಪುತ್ತಳಿಯೊಂದನ್ನು ಕೆತ್ತಿ "ಯಾವುದೊಂದು ಸಾರ್ವಜನಿಕ ಸ್ಥಳದಲ್ಲಿ ಪ್ರತಿಷ್ಠೆಗೊಳಿಸಬೇಕಾಗಿ ನಿಶ್ಚಯಿಸಲಾಗಿದೆ" ಎಂದು ಬರೆದು ಸುಮಾರು ೬೦೦೦ ರೂ. ದ ಧನ ಸಹಾಯಕ್ಕೆಂದು ಮಂಗಳೂರ ಜಿಲ್ಲೆಯ ಜನಗಳಿಗೆ ಬುದ್ಧಿಯೂ ಡ್ಡಿದ್ದಾರೆ. ಇಂಥ ಮಹನೀಯರ ನೆನಪಿಗಾಗಿ ಮಾಡತಕ್ಕ ಈ ಕೆಲಸವೇನೋ ಹೊಗಳುವಂಥದೇ. ಆದರೆ ೬೦೦೦ ದಷ್ಟು ವೆಚ್ಚಮಾಡಿ ಕೇವಲ ಕಲ್ಲಿನ ಗೊಂಬೆಯೊಂದನ್ನು ನಿಲ್ಲಿಸುವದರಲ್ಲಿಯೇ ಸಮಾಜದ ಯಾವ ಅಭ್ಯುದಯವೂ ಸಾಧಿಸುವದಿಲ್ಲ! ಯಾವ ಸಾರ್ವಜನಿಕ ಸಂಸ್ಥೆಗಳೂ ಉಂಡು ಬೆಳೆದಂತಾಗುವದಿಲ್ಲ! ಅವರ ಪ್ರಕಟಣೆಯಲ್ಲಿ ನೋಡಲಾಗಿ "ಅವರು ಸ್ಥಾಪಿಸಿದ್ದ ಸಾರ್ವಜನಿಕ ಸಂಸ್ಥೆಗಳು, ಇತರರು ಸ್ಥಾಪಿಸುವ ಅಂಥ ಸಂಸ್ಥೆಗಳಿಗೆ ಮಾದರಿಗಳಾಗಿವೆ" ಎಂದು ಗೌರವಾಭಿಪ್ರಾಯವು ಒಡೆದು ಕಾಣುವದು. ಇವರು ಅದೇ ಅಭಿಪ್ರಾಯವನ್ನು ಪೋಷಿಸಿದ್ದರೆ, ಇನ್ನು ಮೇಲಾದರೂ ಪೋಷಿಸುತ್ತಿದ್ದರೆ, ಆ ಮಹಾನುಭಾವರ ಚಿರಸ್ಥಿರ ಸ್ಮಾರಕವಾಗುವದು! ಕಲ್ಲು-ಮಣ್ಣುಗಳಿಂದ ಕಟ್ಟಿಸಿ ನಿಲ್ಲಿಸಿದ ನೆನಪು ಎಷ್ಟು ದಿನ ನಿಂತೀತು? ಆದ್ದರಿಂದ ಮಹನೀಯರ ಸ್ಮಾರಕವು ಆವುದಾದರೊಂದು ಮಹತ್ಕಾರ್ಯಗರ್ಭಿತವಾಗಿದ್ದರೆ ಸಮಾಜದ ಅಭ್ಯುದಯಕ್ಕೂ ಸಹಕಾರಿಯಾದೀತು! ಮತ್ತು ಸಮಾಜೋನ್ನತಿಗೆಂದೇ ದುಡಿದು ಮಡಿದವರ ಆತ್ಮ ಶಾಂತಿಯೂ ಆದೀತು!! ನಮ್ಮ ಆರ್ಯ ಸಂಸ್ಕೃತಿಯು, ಸತ್ಪುರುಷರ ಗುಣಾನುಗಾಮಿಯಾಗ ಬಯಸುವದಲ್ಲದೆ, ಅಂಥವರ ಹೆಜ್ಜೆಯಲ್ಲಿ ಹೆಜ್ಜೆಯನ್ನು ಇಡ್ಲ ಬಯಸುವದಲ್ಲದೆ, ಅಂಥ ಪುರುಷರ ಪೌರುಷವನ್ನೇ ಆದರಿಸಿ ಆರಾಧಿಸುವದಲ್ಲದೆ, ಕಲ್ಲು-ಮಣ್ಣುಗಳಲ್ಲಿ ತಿದ್ದಿ ಮಾಡಿದ ಗೊಂಬೆಗಳಿಗೆ ಬಹುಬೆಲೆಕೊಡುವದಿಲ್ಲ. ಇರಲಿ; "ಪ್ರತಿಮೆಯ ಪ್ರತಿಷ್ಠೆಗೆ ಬೇಕಾಗುವದಕ್ಕಿಂತ ಹೆಚ್ಚಿಗೆ ಹಣ ವಸೂಲಾದಲ್ಲಿ ಅದರಿಂದ ಜಾತಿಭೇದ ಅಥವಾ ಮತಭೇದವೆಣಿಸದೆ ಈ ಜಿಲ್ಲೆಯ ಬಡವಿದ್ಯಾರ್ಥಿಗಳಿಗೆ ವೇತನ ಕೊಡಲು ವಿನಿಯೋಗಿಸಲಾಗುವದು." ಎಂಬುದಾಗಿಯೂ ಪ್ರಕಟನೆಯಲ್ಲಿ ಬರೆದಿದ್ದಾರೆ. ಸ್ತುತ್ಯವೇ. ಪುತ್ತಳಿಗೆಂದ. ವೆಚ್ಚಮಾಡಬೇಕಾದ ಮೊತ್ತವನ್ನೂ ಇದೇ ಬಗೆಯಾಗಿ ಸಾರ್ವಜನಿಕ ಕಾರ್ಯದಲ್ಲಿ ಯಾಗಲೀ ಸಂಸ್ಥೆಗಾಗಿಯಾಗಲೀ "ಅಮ್ಮೆಂಬಳ ಸುಬ್ಬರಾಯಪೈ" ಯವರ ಹೆಸರಿನಿಂದ ಉಪಯೋಗಿಸಿದರೆ ಅವರ ಸ್ಮಾರಕವೂ ಆಗುವದು. ಒಂದು ಸಾರ್ವಜನಿಕ ಉಪಕಾರದ ಕಾರ್ಯವೂ ಆಗುವದು. ಈ ನಮ್ಮ ಸೂಚನೆಯು ಎಲ್ಲೊಂದು ದೃಷ್ಟಿಯಿಂದ ಉಪಯುಕ್ತವಾಗಿದೆ. ಆದ್ದರಿಂದ ಸ್ಮಾರಕದ ವ್ಯವಸ್ಥಾಪಕ ಮಂಡಲದವರು ಯೋಗ್ಯವಿಚಾರ ಮಾಡಬೇಕಾಗಿ ವಿನಂತಿ.

"ಕರ್ನಾಟಕ ರಂಗಭೂಮಿ"ಯ ವಿಷಯವಾಗಿ ಹಿಂದೆ ಒಂದೆರಡು ಮಾತುಗಳನ್ನು ಹೇಳಿರುವೆವಾದರೂ ರಂಗಭೂಮಿಯ ಮಹತ್ವವು ಇನ್ನೂ ಎಷ್ಟಿದೆಯೆಂಬುದರ ಕಲ್ಪನೆಯು ಚಿತ್ರವು ಮನಕಾಗಿಸಾದರೂ ಮೂಡಲೆಂದು ಒಂದೆರಡು ರೂಪರೇಷೆಗಳ ಹೊಳವನ್ನು ಹಾಕಿ ತೋರಿಸಬೇಕೆನ್ನುವೆವು. ರಂಗಭೂಮಿಯು ಹೊಟ್ಟೆ ತುಂಬಿಕೊಳ್ಳುವ ಒಂದು ಅನ್ನಛತ್ರ ವಾಗದೆ ಆತ್ಮಾನುಭವದ ಆನಂದಕ್ಕೆ ಅನುಕೂಲವಾಗಿರುವ ಜ್ಞಾನಸತ್ರ ವಾಗಿರಬೇಕು! ರಂಗಭೂಮಿಯು ಕೀಳರ ಕಣ್ಮನಂಗಳನ್ನು ತಣಿಸುತ್ತ ಅವರವರ ಕೀಳತನವನ್ನು ಹೆಚ್ಚಿಸುತ್ತ ಹೋಗುವ ಸಂಕುಚಿತಗವಾಗಿರದೆ, ಲಲಿತ ಕಲೆಗಳನ್ನು ಬೆಳೆಸಿಕೊಂಡು ಜನಮನಗಳನ್ನು ಸೆಳೆಕೊಂಡು, ದೇವರಾಟದ ನೋಟವನ್ನೇ ತೋರಿಸುತ್ತ ಸಾಗುವ ಚಿರವಿದ್ಯಾಲಯ ವಾಗಬೇಕು! ಮೊದಲೇ ಲಲಿತಕಲೆಗಳು ಸರ್ವಾಂಗ ಸುಂದರವಾದವು. ರಂಗಭೂಮಿ

ಯಂತೂ ಇಂಥ ಎಲ್ಲ ಲಲಿತಕಲಾಸಮಷ್ಟಿಯು! ಎಂದ ಮೇಲೆ ಸಾಕ್ಷಾತ್ ಸೌಂದರ್ಯಕ್ಕೆ ಸೌಂದರ್ಯದ ಕಳೆ ಮುಂಬಿದಂತಾಗಿ ಬಿಡುವದ! ರಂಗಭೂಮಿಯ ಹೊಟ್ಟೆಯಲ್ಲಿ ಬಾರದ ಕಲೆಗಳೇ ಇಲ್ಲ. ರಂಗಭೂಮಿಯ ಹೊಟ್ಟೆಯಲ್ಲಿ ಬಾರದ ಶಾಸ್ತ್ರಗಳೇ ಇಲ್ಲ! ಚಿತ್ರಕಲೆಯುಂಟು! ಗಾಯನ ಕಲೆಯುಂಟು! ವಾದನ ಕಲೆಯುಂಟು! ನರ್ತನ ಕಲೆಯುಂಟು! ಅಭಿನಯ ಕಲೆಯುಂಟು! ಈ ಎಲ್ಲ ಕಲೆಗಳ ಮುಖಾಂತರವಾಗಿಯೂ ಹೊರಹೊಮ್ಮುತ್ತಿರುವ ಆನಂದತತ್ವವುಂಟು! ಪ್ರೀತಿ ತತ್ವವುಂಟು! ಧರ್ಮತತ್ವವುಂಟು! ನಯವುಂಟು ನೀತಿಯುಂಟು! ಇಷ್ಟೊಂದು ಯೋಗ್ಯತೆ ಪಡೆದ ನಾಟಕರಂಗವನ್ನು ಕ್ಷುದ್ರರು-ಸಾಮಾನ್ಯರು ಹೊಟ್ಟೆ ಹೊರಕೊಳ್ಳುವ ಉದ್ಯೋಗವನ್ನಾಗಿ ಮಾಡಿಕೊಂಡು ಬಿಟ್ಟದ್ದರಿಂದ ಅದರ ಬೆಲೆಯೇ ಇಲ್ಲವಾಗಿದೆ! ಅದ್ದರಿಂದ ಯೋಗ್ಯ ಯೋಗ್ಯ ನಾಟಕಗಳನ್ನು ಮಾತ್ರ ಅಭಿನಯಿಸಿ ತೋರಿಸಿ ಸಮಾಜಕ್ಕೊಂದು ಹೊಸಹಾದಿಯನ್ನು ಹುಡುಕಿ ಕೊಡಬೇಕು! ಹೀಗಾಗ ಬೇಕಾದರೆ ಸು-ಶಿಕ್ಷಿತ, ಸುಶೀಲರೇ ಈ ಕೆಲಸವನ್ನು ಕೈಕೊಳ್ಳಬೇಕು. ಈಗಿನ ನಾಟಕ ಮಂಡಲಿಗಳೆಂದರೆ ಅನಾಚಾರ ಅತ್ಯಾಚಾರ ಅನೀತಿ ಅಧರ್ಮಗಳ ಭೂತ—ಪಿಶಾಚಿಗಳ ತಾಂಡವ ಸ್ಥಳಗಳಾಗಿವೆ! ಹೀಗೆಂದೇ ಜನಗಳಲ್ಲಿ ನಾಟಕ ಮಂಡಲಿಗಳೆಂದರೆ ಹೇಸಿಕೆಯಾಗುವದು. ಸಹಜವೇ ಇದು! ಇವೆಲ್ಲ ಬಾಧಕಗಳನ್ನು ಅಳಿಸಿ ಬಿಡುವಂತೆ ಯತ್ನಿಸಿ ನಾಟ್ಯಕಲೆಯ ಉದ್ಧಾರಮಾಡಿ ಪ್ರಸಾರಗೊಳಿಸುವ ಕೆಲಸಕ್ಕೆಂದು ನಾವು ಸು-ಶಿಕ್ಷಿತರನ್ನೂ, ಸು-ಶೀಲರನ್ನೂ ಸಾಧು-ಸಜ್ಜನರನ್ನೂ ಕೂಡ ಕೂಗುತ್ತೇವೆ! ಕರ್ನಾಟಕದ ಉನ್ನತಿಯು ಕಲ್ಪನೆಯು ಬಹು ವಿಶಾಲವಾಗಿದೆ. ಯೊಂದು ಎಲ್ಲರಿಗೂ ಗೊತ್ತಿದ್ದುದು! ಕರ್ನಾಟಕದ ಉನ್ನತಿಯಾಗಬೇಕಾದರೆ ಕರ್ನಾಟಕದಲ್ಲಿ ಮಹಾಪುರುಷರಂಥ ಪಾತ್ರಗಳು ಬೇಕು! ಕಾವ್ಯ ಕಥೆ ಕಾದಂಬರಿಗಳು ಬೇಕು! ನಟರು ಬೇಕು! ನರ್ತಕೀಯರು ಬೇಕು! ಅಭಿನಯ ಕುಶಲರು ಬೇಕು! ಶಿಲ್ಪಿಗಳು ಬೇಕು! ಚಿತ್ರಕಾರರು ಬೇಕು! ಹಾಡುಗಾರರು ಬೇಕು! ಊದುವವರು ಬೇಕು! ಬಾರಿಸುವವರು ಬೇಕು; ಕವಿಗಾರರು ಬೇಕು! ಕುಂಬಾರರು ಬೇಕು! ನೇಕಾರರು ಬೇಕು! ಬಡಿಗರು ಬೇಕು!! ಮತ್ತೇನು? ಕರ್ನಾಟಕದ ಸರ್ವಾಂಗೀಣ ಉನ್ನತಿಗಾಗಿ ಉತ್ತಮ ಕಲೆಗಳೂ ಸಹ ಬೇಕು! ಎಂದಮೇಲೆ ನಾಟ್ಯರಂಗವೆಂದರೆ ಕೀಳ್ಗೆಲಸವೆಂದಂತೂ ಯಾರಿಗೆ ಸರಿ ತೋರುವಂತೆಯೇ ಇಲ್ಲ. ಅದ್ದರಿಂದ ಈಗ ಹೊಸ್ಸೇ ಸುಸಂಸ್ಕೃತರಾದ ಮತ್ತು ಸುಶೀಲರಾದ ತರುಣರು ಕೆಲಸ ದೊರೆಯದಿಲ್ಲದೆ ತಿರುಗುತ್ತಲಿದ್ದಾರೆ. ಅಂಥವರು ಇದಕ್ಕೆ ಮನಸ್ಸು ಮಾಡಿದರೆ ಹೊಟ್ಟೆಗೆ ಹಿಟ್ಟು ದೊರೆತಂತೂ ಆಗುವದು. ಮತ್ತು ರಂಗಭೂಮಿಯ ಉದ್ಧಾರವೂ ಆಗುವದು!

ಉತ್ತರ ಕರ್ನಾಟಕದ ಪೋಸ್ಟ ಆಫೀಸುಗಳಲ್ಲೆಲ್ಲ ಮನಿಆರ್ಡರ ನಮೂನೆಗಳು; ಪ್ರಕಟನೆಯ ಹಲಗೆ ಮುಂತಾದವುಗಳೆಲ್ಲವೂ ಮರಾಠಿಯಲ್ಲಿ, ಇಂಗ್ಲೀಷಿನಲ್ಲಿ ಇರುತ್ತವೆ. ಇವೆರಡೂ ಭಾಷೆ ಅರಿಯದ ಕನ್ನಡಿಗರಿಗೆ ಬಹಳ ತೊಂದರೆಯಾಗುತ್ತಿದೆ. ಉಳಿದ ಕರ್ನಾಟಕದ ಭಾಗದಲ್ಲಿ ಅಂದರೆ ಮೈಸೂರ, ಮಂಗಳೂರ, ಮದ್ರಾಸ, ಕರ್ನಾಟಕಗಳಲ್ಲೆಲ್ಲ ಪೋಸ್ಟಿನ ವ್ಯವಹಾರದಲ್ಲಿ ನಮೂನೆ, ಹಲಗೆ, ಇತ್ಯಾದಿಗಳು ಕನ್ನಡದಲ್ಲಿಯೇ ಇರುತ್ತವೆ. ಇಲ್ಲಿಯ ಕನ್ನಡಿಗರಿಗೂ ಆ ಸೌಕರ್ಯಗಳು ಸಿಗುವದಕ್ಕೆ ಪ್ರಯತ್ನಿಸಬೇಕು. ಕನ್ನಡಿಗರಿಗೆ ಇದ್ದುದರಕಿಂತ ಇಲ್ಲದವುಗಳೇ ಬಹಳವಾದುದರಿಂದ ಬೇಗ ಬೇಗ ದೊರಕಿಸಿ ಕೊಳ್ಳಲು ಹೆಣಗಾಡಬೇಕು. ಇನ್ನು ಮುಂದೆ ಸುಮ್ಮನೆ ಕುಳಿತರೆ ನಡೆಗದು. ಯಾಕೆಂದರೆ- ಈ ವಿಷಯವಾಗಿ ಈಗಷ್ಟೋ ಸಲ ವರ್ತಮಾನ ಪತ್ರಗಳಲ್ಲಿ ಪ್ರಸಿದ್ಧಿಸುತ್ತಲಿದ್ದರೂ, ಇನ್ನೂ ಸರಕಾರದ ಕಿವಿಯವರೆಗೂ ಮುಟ್ಟಿದಂತೆ ತೋರಲಿಲ್ಲ. "ಗೊಳ್ಳೋ ಎಂದೊದರಿಕೊಂಡು ಕೈಬಾಯಿ ಒಂದಾಗುವ ವರೆಗೂ ಸಾಮಾನ್ಯವಾಗಿ ಸರಕಾರದ ಕಿವಿಗೆ ಹೋಗುವದಿಲ್ಲ. ಕೇವಲ ಕನ್ನಡ ಒಂದನ್ನೇ ಬಲ್ಲ ಜನರಿಗೆ ಪೋಸ್ಟಿನ ವ್ಯವಹಾರದಲ್ಲಿ ಆಗುತ್ತಿರುವ ತೊಂದರೆಯನ್ನು ಸರಕಾರದವರು ಬೇಗ ದೂರಮಾಡಬೇಕು.

ಹಾರ್ಡಿಂಜ ಇನ್‌ಸ್ಟಿಟ್ಯೂಟ ಎಂಬ ತಲೆಬೇಸರ ಬರುವಂಥ ಇಂಗ್ಲೀಷ ಹೆಸರಿನ ಸಾರ್ವಜನಿಕ ವಾಚನಾಲಯವೊಂದು ಬಾಗಲಕೋಟೆಯಲ್ಲಿದೆ. ಈ ಸಂಸ್ಥೆಗೆ ಹೆಚ್ಚಾಗಿ ಪುಸ್ತಕಗಳನ್ನು ತರಿಸಬೇಕಾಗಿ ೨೧ ನೇ ತಾ, ದಿನ ವಾಮನರಾವ ಮಾಸ್ತರ ಇವರ ವಿಶ್ವಗುಣಾದರ್ಶ ನಾಟಕ ಮಂಡಲಿಯವರಿಂದ ಒಂದು ಧರ್ಮಾರ್ಥ ನಾಟಕವನ್ನು ಆಡಿಸಿದರು. ೬೦೦ ರೂ. ದಷ್ಟು ಹಣ ಜಮೆಯಾಗಿದೆ. ಬಾಗಲಕೋಟೆಯು ಉತ್ತರ ಕರ್ನಾಟಕದಲ್ಲಿದ್ದುದರಿಂದ ಮರಾಠಿಗರ ಪಿಡುಗು ಇಲ್ಲಿಯೂ ಇದೆ. ಅದುದರಿಂದ ಈ ಹಣದೊಳಗಿಂದ ಕನ್ನಡ ಪುಸ್ತಕಗಳನ್ನೇ ಹೆಚ್ಚಾಗಿ ತರಿಸಬೇಕೆಂದು ನಾಟಕದ ದಿನ ಶ್ರೀ. ಮುರಿಗಯ್ಯಾಸ್ವಾಮಿ ಬಂಗಿನರವರು ಲಾಯಬ್ರರಿಯವರಿಗೆ ಒಂದು ಸೂಚನೆಮಾಡಿ ಹಣ ಕೊಟ್ಟವರಿಗೂ ಎಚ್ಚರ ಪಡಿಸಿದರು. ಆ ಸೂಚನೆಯನ್ನು ಶ್ರೀ. ಮಂಗಳವೇಢೆ ಶ್ರೀನಿವಾಸರಾಯರು ಅನುಮೋದಿಸಲು, ಪ್ರೇಕ್ಷಕರೆಲ್ಲ ಆನಂದದಿಂದ ಚಪ್ಪಾಳೆಯನ್ನಿಕ್ಕಿ ಅದಕ್ಕೆ ತಮ್ಮ ಸಂಪೂರ್ಣ ಒಪ್ಪಿಗೆಯನ್ನಿತ್ತರು. ಇದರಿಗೆ ಒಬ್ಬರಾದರೂ ವಿರೋಧಿಸಲಿಲ್ಲ. ಈ ಇಚ್ಛೆಯನ್ನು ಹಾರ್ಡಿಂಜ ಸಂಸ್ಥೆಯಲ್ಲಿಯ ಅಧಿಕಾರಾರೂಢರಾಗಿದ್ದ ಸನ್ಮಾನ್ಯರು ಚನ್ನಾಗಿ ಲಕ್ಷ್ಯದಲ್ಲಿಟ್ಟು ಈ ಸಂಸ್ಥೆಯಿಂದ ಕನ್ನಡ ಗ್ರಂಥಗಳಿಗೆ ಹೆಚ್ಚಾಗಿ ಪ್ರೋತ್ಸಾಹನವು ದೊರೆಯುವದಾಗಿ ನಿರ್ಣಯಿಸಲು 'ಜಾಗ್ರತರಾಗಿರಲಿ. ಇಲ್ಲವಾದರೆ, ಕನ್ನಡ- ಮರಾಠೀಯ ಬಗ್ಗೆ ಬಾಗಲಕೋಟೆಯಲ್ಲಿಯೂ ವಿನಾಕಾರಣವಾಗಿ ಜನರಲ್ಲಿ ಕ್ಷೋಭವುಂಟಾಗುವದು ನಿಶ್ಚಿತ. ನಾಟಕದ ದಿನ ಕಾರ್ಯದರ್ಶಿಗಳು ಆಭಾರ ಮನ್ನಿಸುವಾಗ್ಗೆ ಹಲವು ವರ್ಷಗಳ ಹಿಂದೆ ಸಭೂದೇವಿಯಂತೆಯೇ ಈ ಸಂಸ್ಥೆಯ ಸ್ಥಿತಿಯು ಕನಿಕರವಾಗಿತ್ತೆಂದು ನುಡಿದುದು ಸಯುಕ್ತಿಕವಾಗಿಲ್ಲ. ಸಭೂದೇವಿಗೆ ಮನೆಯವರಿಂದ ಅಂದರೆ ಪತ್ಯಯಿಂದ ತೊಂದರೆಯಾಗಿತ್ತು. ಲಾಯಬ್ರರಿಗೆ ಮನೆ ಹೊರಗಿನವರಿಂದ ಅಂದರೆ ಸರಕಾರದವರಿಂದ ತೊಂದರೆಯಾಗಿತ್ತು. ಅಧಿಕಾರಸ್ಥರ ಪ್ರೀತಿ ಸಂಪಾದಿಸುವದಿಷ್ಟೆ ಬೇರೆ ಮಾರ್ಗಗಳಿವೆ. ಇದರ ಸ್ವಜನದನ್ನು ಈ ಬಗೆಯಾಗಿ ಇಲ್ಲದ ಸಲ್ಲದ ಉಪಮೆಯಿಂದ ನಿಂದಿಸುವದು ಉಚಿತವಲ್ಲ. ಕಾರ್ಯದರ್ಶಿಗಳು ಇದನ್ನು ಲಕ್ಷ್ಯದಲ್ಲಿಡಲಿ.

ಕೇಸರಿ ಪತ್ರಕಾರರು ಇತ್ತಲಿಯ ವನಕ ಕರ್ನಾಟಕದ ಬಗ್ಗೆಯೂ ಕನ್ನಡ ನುಡಿಯ ಬಗ್ಗೆಯೂ ಬಹು ಉಷ್ಟ-ಕಾರ-ಹುಳಿ ತಮಿಷಾದ ಅಭಿಪ್ರಾಯವನ್ನೇ ಹೊರಪಡಿಸುತ್ತಿದ್ದರು. ಕರ್ನಾಟಕದ ಏಕೀಕರಣದ ಆರೋಗ್ಯಕ್ಕೆ ಅವರ ಆ ಅಭಿಪ್ರಾಯವು ಪಥ್ಯಕರವಾಗಿರುತ್ತಿದ್ದಿಲ್ಲ. ಅವರೂ ೭ನೇ ಸಪ್ಟೆಂಬರದ ಸಂಚಿಕೆಯಲ್ಲಿ ಕರ್ನಾಟಕದ ವಿಶ್ವವಿದ್ಯಾಲಯದ ಬಗ್ಗೆ ಬರೆವಾಗ, ಕರ್ನಾಟಕದ ಪ್ರಕೃತಿಗೆ ಆರೋಗ್ಯಕರವಾಗಿರದಿದ್ದರೂ, ಸನ್ನಿಪಾತದಲ್ಲಿ ಮದ್ದಿಗೆ ಕುಡಿಸಿದಂತಾಗಿಲ್ಲ. ಇರಲಿ. ಮುಧೋಳ, ರಾಮದುರ್ಗ, ಜಮಖಂಡಿ, ಸಾಂಗಲಿ, ಇತ್ಯಾದಿ ಸಂಸ್ಥಾನಗಳ ದೊರೆಗಳು ಮರಾಠಿಗರೆಂದು ಮಾತ್ರ ಅಲ್ಲಿ ಮರಾಠಿಯ ಸಂಚಾರವೇ ಹೊರತು, ಅಲ್ಲಿ ಕನ್ನಡಿಗರೇ ಬಹು ಸಂಖ್ಯಾಕರು. ಅದ್ದರಿಂದ ಮಹಾರಾಷ್ಟ್ರ ವಿಶ್ವವಿದ್ಯಾಲಯದ ಸಂಬಂಧವು ಈ ಸಂಸ್ಥಾನಗಳಲ್ಲಿಯ ಮರಾಠಿಗರಿಗೇ ಇರಬೇಕೆಂಬುವದಕ್ಕೆ ಎಳ್ಳಷ್ಟು ಆಸ್ಪದವಿಲ್ಲ. ಔಚಿತ್ಯವೂ ಇಲ್ಲ.

॥ ಶ್ರೀ ದತ್ತರಾಜ ಸಮರ್ಥ ॥

ವಿಷಮ ವಿವಾಹ.

ಭಾದ್ರಪದ ಶುದ್ಧ ೫ದಿಗೆ ಕನ್ನಡಿಗನ ಸಂಚಿಕೆಯಲ್ಲಿ ಶ್ರೀಕರ ನಂಬ ಬಂಧುವು ವಿಷಮ ವಿವಾಹ ನಾಟಕದ ವಿಮರ್ಶೆಯನ್ನು ಮಾಡಿದ್ದನ್ನು ನೋಡಿ, ನನ್ನ ವಿಚಾರಗಳನ್ನು ತಿಳುಪಬೇಕೆಂದಪೇಕ್ಷೆಯುಂಟಾದದ್ದಕ್ಕೆ ತಿಳುಹಿಸಿದ್ದೇನೆ ಗ್ರಾಹ್ಯವಾಗಿದ್ದರೆ ಲೇಖಕನು ಸ್ವೀಕರಿಸಬಹುದು.

೧ ಪಶ್ಚಾತ್ತಾಪವು ವಿಶೇಷವಾಗಿ ಯುವರಾಜನಿಗೆ ಅನ್ವಯಿಸುವದು.

೨ ಶರಾವತಿಯು ಅಶೋಕನನ್ನು ವರಿಸಿದ್ದು ಹಣದಾಶೆಯಿಂದಲ್ಲ. ಎರಡನೇ ಅಂಕಿನ ವಿಷ್ಕಂಭಕದಲ್ಲಿರುವ ಶಾಸ್ತ್ರಿದೀಕ್ಷಿತರ ಮೋಸಗಾರಿಕೆಯ ತಂತ್ರದಿಂದ ಆ ಸಂಗತಿಯು ಅಲ್ಲಿಯೇ ಪರಿಷ್ಕಾರವಾಗಿದೆ.

೩ ಆ ಪೂರ್ವದ ಅಶೋಕ ಸಮ್ರಾಟನಲ್ಲ. ಕಲ್ಪನಾ ಸೃಷ್ಟಿಯೊಳಗಿನ ಈಗಿನ ಸಮ್ರಾಟನು

೪ ನಾಟಕಾರಂಭದ ಪ್ರಥಮ ಪ್ರವೇಶದಲ್ಲಿ ಪ್ರವೇಶಿಸಿದ ವೈದ್ಯನ ಭಾಷಣವು ಐದಾರು ವಳಿಗಳಲ್ಲಿದೆ. ಅದು ದೀರ್ಘವಾಗಿಲ್ಲ. ಅಲ್ಲದೆ ಎಂತಹ ಪರಿಣಾಮಕಾರಕವಾದ ಭಾಷಣವಿದ್ದರೂ ನಾಟಕಾರಂಭದ ಕಾಲಕ್ಕೆ ನಾಟ್ಯಮಂದಿರದಲ್ಲಿರುವ ಗಲಭೆಯ ಪರಿಸ್ಥಿತಿಯ ಮೂಲಕ ಅದು ಪರಿಣಾಮವನ್ನು ಮಾಡಲಾರದೆಂಬ ಸಂಗತಿಯು ಅನುಭವಕ್ಕೆ ಬಂದದ್ದು.

೫ ಕಾಲ್ಪನಿಕ ರಾಜ್ಯಕ್ಕೆ ಅನುಕೂಲವಾದ ಕಾಲವನ್ನು ನಿರ್ಣಯಿಸಿಕೊಳ್ಳಬಹುದು. ಅದರ ಆಡಳಿತಕ್ರಮದೊಳಗಿನ ನೂತನ ಭಾಗಗಳು ಶರಾವತಿಗೆ ಸಂಬಂಧಿಸಿದವು. ಪುರಾತನ ಭಾಗಗಳು ಅಶೋಕನಿಗೆ, ಹೀಗಿರಲು ವಾಚನಾಲಯದಲ್ಲಿ ಕೃಷ್ಣ ಸೂಕ್ತಿಯಿದ್ದರೇನು ? ಕನ್ನಡಿಗನಿದ್ದರೇನು? ಅಥವಾ ವಿದ್ಯಾಭೂಷಣರ ಅಭಿನವ ರಂಗಭೂಮಿಯಿದ್ದರೇನು?

೬ ರಾಜ್ಯದ ಕಾಲವನ್ನೂ ಪರಿಸ್ಥಿತಿಯನ್ನೂ ಒರೆಗೆ ಹಚ್ಚುವದರಿಂದ ಪ್ರಯೋಜನವೇನು? ನಾಟಕದ ಗುರಿಯು ಬೇರೆಯಾಗಿದೆ.

೭ ರಜನಿ ಚಂದ್ರಿಕೆಯರ ಉಪನ್ಯಾಸವು ತಾಸು ಎರಡು ತಾಸಿನದಿಲ್ಲ. ರಂಗಭೂಮಿಗೆ ಒಪ್ಪುವ ಒಂದರ್ಧ ಮಿನೀಟಿನದಾಗಿದೆ. ಅಷ್ಟನ್ನು ಸಹ ಪರಿಣಾಮಕಾರಕವಾಗುವಂತೆ ಹೇಳದಿರುವದು ರಜನಿ ಚಂದ್ರಿಕೆಯರ ಭೂಮಿಕೆಯನ್ನು ವಹಿಸುವ ನಟರ ದೋಷವು

೮ ಉದ್ಬುದ್ಧ ಭಾಷಣಗಳಿಂದ ನೋಟಕರಿಗೆ ತೊಂದರೆಯಾಗುವದನ್ನು ಪೂರ್ಣ ಬಲ್ಲೆನು ಅಂತೇ ಮಾಯಾ ವಿಷಯಕವಾದ ವಿಚಾರಗಳನ್ನು ಆರೇಳು ಸಾಲುಗಳಲ್ಲಿ ಮುಗಿಸಿರುವೆನು.

೯ ದೊಡ್ಡ ಮಾತುಗಳು ಅಭಿನಯ ಕಲಾಪಟುವಿಗೇನೇ ಸಲ್ಲುವವು.

೧೦ ಶರಾವತಿಯು ಅಶೋಕನಮನೆಯಿಂದ ಹೊರಬೀಳುವಾಗ್ಗೆ "ಇನ್ನು ಇಲ್ಲಿರುವಲ್ಲಿ ಸ್ವಾರಸ್ಯವಿಲ್ಲ" ವೆಂದು ಹೇಳಿ ಥಕ್ಕನೆ ಹೋಗುವಳು. ಅದೊಂದು ಚಂಚಲವಾದ ಮನೋವಿಕಾರದ ಲಕ್ಷಣವನ್ನನುಸರಿಸಿದೆ. ಮಾಯವಾಗಿ, ವನವನ್ನು ಸೇರಿದ ಮೇಲೆ ಮಾಡಿದ ನಿರ್ಧಾರ ಚಿಕ್ಕದೇ ವಿವಾಗಿಣೆಯದೇನವು.

೧೧ ಬಂಧುವು "ಸ್ವಲ್ಪುಗಡಿಬಿಡಿ" ಯಂದಿದ್ದಾನೆ. ಗಡಿಬಿಡಿಯಿಂದ ಓಡಿ ಹೋಗದಿದ್ದರೆ ಪೈಶಾಚಿಕವೃತ್ತಿಯಲ್ಲಿ ಬರುವ ರಾಜನಿಂದ ಆವಳದೇನು ವಿಟಂಬನೆಯಾಗುತ್ತಿತ್ತೋ ಏನೋ. ಪ್ರಯುಕ್ತ ಗಡಿಬಿಡಿಯು ಅಪ್ರಾಸಂಗಿಕವಲ್ಲವೆಂದು ತಾಣುತ್ತೆ.

೧೨ ಗದ್ಯಾಳಿಯಿಂದ. ನಾಯಿಕಿಯರನ್ನು ಓಲಾಡಿಸುವದಕ್ಕಿಂತಲೂ ವಂಚಿಸಲ್ಪಟ್ಟ ಭಗಿನಿಯನ್ನು ನೋಡಿ ಕನಿಕರ ಪಡುವದೇ ಉತ್ತಮವಾದೀತು. ಕಮಲಾಕರನನ್ನು ಕೊಲ್ಲಿಸಿದಾಗಿನಿಂದ ಅಶೋಕನನ್ನು ನಿಷ್ಕಾರಣವಾಗಿ ಬೋರವು ಆವರಿಸಿತು ಅದು ಮರಣಾನುಬಂಧ ಅಶ್ವನವು. ಪಶ್ಚಾತ್ತಾಪವು ಅಲ್ಲಿಂದಲೇ ಪ್ರಾರಂಭವಾಗುವದು. ಅದು ರಾಜ್ಯಸ್ವರ್ಗದಲ್ಲಿರುವ ಕುಮಾರನು ಕಾನನ ವಾಸಿಗಳವಸ್ಥೆಯಲ್ಲಿರುವದನ್ನು ನೋಡಿ ಬೆಳೆಯಿತು. ಕೊನೆಗೆ ಪರಿವಾರ ಸಮೇತನಾಗಿ ರಾಜನು ನಗರಕ್ಕೆ ಒರುವಾಗ್ಗೆ ಕಾಡಿನಲ್ಲಿ ತನ್ನ ದೇಹದ ಪರಿವೆಯಿಲ್ಲದೇ ಉಪವಾಸದಿಂದ ಕಂಗಾಲಳಾಗಿ ತಿರುಗಾಡುವ ಶರಾವತಿಯನ್ನು ನೋಡಿ ಮತ್ತೂ ಹೆಚ್ಚಿತು. ಅವಳನ್ನು ಪುನಃ ನಗರಕ್ಕೆ ಕರೆದೊಯ್ಯುವ ಪ್ರಯತ್ನಕ್ಕೆ ಯಶವು ಬಾರದಿರಲು ಅದು ಪರಮಾವಧಿಗೆ ಮುಟ್ಟಿತು.

ಕಮಲಾಕರನನ್ನು ನಿಜವಾಗಿ ಕೊಲ್ಲಿಸಿ ಶರಾವತಿಯು ಕೌಟಿಲ್ಯವು ಪ್ರಕಾಶಕ್ಕೆ ಬಂದೊಡನೆಯೇ ಅವಳನ್ನು ಕೊಲ್ಲಬೇಕು. ಆ ಮೇಲೆ ಸಮ್ರಾಟನು ಆತ್ಮಹತ್ಯೆಯನ್ನು ಮಾಡಿಕೊಳ್ಳಬೇಕು. ಸುಮತಿಯಾದರೂ ಅದೇ ಮಾರ್ಗವನ್ನನುಸರಿಸಿದ್ದರೆ ನಾಟಕವು ಈಗಿದ್ದಕಿಂತಲೂ ಪರಿಣಾಮಕಾರಿ ಯಾಗಬಹುದೆಂದನಿಸಿತ್ತು. ಆದರೆ ಅಂತಹ ದಾರುಣವಾದ ಕೊಲೆಯ ಚಿತ್ರವನ್ನು ತೆಗೆಯಲಿಕ್ಕೆ ನನ್ನ ಮನವು ಹೇಸಿತು. ಅದು ನನ್ನ ಮನೋದೌರ್ಬಲ್ಯವೆಂದು ಸಹ ಹೇಳಬಹುದು.

ವಿಧೇಯ

ಗರೂಡ ಸದಾಶಿವರಾಯ.

ವ್ಯೆಯೊಳಗಿನ ಎಡ್ಡು

(ಲೇಖಕ:— ಬಯಾವ ನಾಶಿಕರ)

ನಾಟಕ ನೋಡುವದಕ್ಕೆಂದು ಬಂದು, ಸ್ತ್ರೀವರ್ಗದ ಎದುರಿನಲ್ಲಿರುವ ಆಸನವನ್ನೇ ಹುಡುಕಿ, ಅತ್ತಲೇ ದೃಷ್ಟಿಯನ್ನಿಟ್ಟು ಕುಳಿತು ಕೊಳ್ಳುವದು ನೀತಿಯೋ— ಪ್ರೀತಿಯೋ? ನೀತಿಯೂ ಅಲ್ಲ, ಪ್ರೀತಿಯೂ ಅಲ್ಲ, **ವ್ಯೆಯೊಳಗಿನ ಎಡ್ಡು!**

ಉಗಿಬಂಡಿಯಲ್ಲಿ ಪ್ರವಾಸಮಾಡುವಾಗ ನಾಲ್ಕು ಜನರು ಕೂಡತಕ್ಕ ಸ್ಥಾನವನ್ನು ಒಬ್ಬನೇ ವ್ಯಾಪಿಸಿ ಕೊಂಡು "ತುಸು ಸ್ಥಳ ಕೊಡಯ್ಯಾ" ಎಂದು ವಿನಯದಿಂದ ಕೇಳಿಕೊಳ್ಳುವ ಬಡ ಪ್ರಯಾಣಿಕನ ಮೈಮೇಲೆ ಬಿಸಕ್ಕನೇ ಹೋಗುವದು ಅಹಂಕಾರವೋ? ಅಧಿಕಾರವೋ? ಅಹಂಕಾರವೂ ಅಲ್ಲ. ಅಧಿಕಾರವೂ ಅಲ್ಲ. **ವ್ಯೆಯೊಳಗಿನ ಎಡ್ಡು !**

ದಾರಿಯಲ್ಲಿ ಬರುತ್ತಿರುವ ರಾಯರನ್ನು ಕಂಡು, ಹಳ್ಳಿಯೂರ ಕೆಂಚನು ನಮ್ರತನದಿಂದ ತಲೆಬಾಗಿಸಿ ಶರಣುಮಾಡಲು, ಆ ರಾಯರು ಕೆಂಚನನ್ನು ನೋಡಿಯೂ ನೋಡದವನಂತೆ ನಟಿಸುತ್ತ ಮುಖ ತಿರುವಿ ನಡೆಯುವದು ಉಬ್ಬೋ, ಕೊಬ್ಬೋ? ಉಬ್ಬೂ ಅಲ್ಲ! **ಕೊಬ್ಬೂ ಅಲ್ಲ, ವ್ಯೆಯೊಳಗಿನ ಎಡ್ಡು !**

"ರಾಯರೇ, ವ್ಯಾಜಕ್ಕೆ ದುಡ್ಡು ಕೊಟ್ಟು ಕೊಟ್ಟು ಸಾಕಾಯಿತು. ತುಸು ಹಾನಿಯಾದರೆ ಆಗ ಲೊಲ್ಲದೇಕೆ 'ರಾಜೀ' ಮಾಡಿ ಕೊಳ್ಳುತ್ತೇನೆ," ಎನ್ನುವ ಪಕ್ಷಕಾರನನ್ನು ಕುರಿತು ವಕೀಲರಾಯರು "ಛೀ ನಿನ್ನ ಮನೆ ಹಾಳಾಗ! ನೀನೆಂಥ ಗಂಡಸು! ನೀನು "ರಾಜಿ" ಮಾಡಿ ಕೊಳ್ಳುವಂಥ ಹೇಡಿಯೆಂಬದನ್ನು ನಾನು ಮೊದಲೇ ಅರಿತವನಾಗಿದ್ದರೆ, ನಿನ್ನ ವಕೀಲಿಯನ್ನೇ ಹಿಡಿಯುತ್ತಿದ್ದಿಲ್ಲ. ಎಂದು ಹಳಿಯುವದು ಅಭಿಮಾನವೋ? ಅಪಮಾನವೋ? ಅಭಿಮಾನವೂ ಅಲ್ಲ! ಅಪಮಾನವೂ ಅಲ್ಲ, **ವ್ಯೆಯೊಳಗಿನ ಎಡ್ಡು!**

ಹೆಣದ ಪೂಜೆ ಸಾಕು.

“ಆ*ತನ ಪೂಜಿಸಿರಿ.

([illegible])

तस्मात् सर्वेषु (आत्मन्) भूतिकामः ।
आत्मा वा अरे द्रष्टव्यः श्रोतव्यो मन्तव्यो निदिध्यासितव्यः ॥

— ಉಪನಿಷತ್ತು.

'ಪೆಟ್ಟಿಗೆ ಬದಲಾಯಿತು' ಎಂಬ ಹಿಂದಿನ ಬರಹದಲ್ಲಿ ಜೀವ ಬಿಟ್ಟ ದೇಹವನ್ನು, ದೇವರ ಬಿಟ್ಟ ದೇಗುಲವನ್ನು ಪೂಜಿಸುವದು ಮರುಳತನವೆಂದು ಹೇಳಿತು. ಧರ್ಮಕ್ಕೂ ಜೀವ ದೇಹಗಳುಂಟು. ಜೀವ ತೊರೆದ ದೇಹ ಪೂಜಿಸುವುದು ಮೇಲಣವರ್ಗದ ಮೂರ್ಖತನವೇ. ತಿರುಳಿಲ್ಲದ ಬೊಳ್ಳು-ಜೊಳ್ಳು 'ಆಚಾರ'ಗಳು ಧರ್ಮದ ದೇಹ. ಆ 'ಆಚಾರ'ಗಳು ಯಾವ ಭಾವವನ್ನು ಅಥವಾ ಯಾವ ಶಕ್ತಿಯನ್ನುಂಟುಮಾಡುವದಕ್ಕೆ ಅಥವಾ ಬೆಳೆಸುವುದಕ್ಕಾಗಿ ಹುಟ್ಟಿರುವವೋ ಅದು ಧರ್ಮದ ಜೀವ. ಈಗಿನ ಬಹುತರ ಆಚಾರಗಳಲ್ಲಿ ಜೀವವುಳಿದಿಲ್ಲ. ಆದುದರಿಂದಲೇ ಮುಂಚಿನವರಿಗೆ ಯಾವ ವ್ರತನಿಯಮಗಳನ್ನು ಪಾಲಿಸುವುದರಿಂದ ಅಗಾಧ, ಅದ್ಭುತ ಫಲ ದೊರೆಯುತ್ತಿತ್ತೋ ಆ ಫಲವು ಅದರ ಶತಾಂಶವು ಸಹ ನಮ್ಮ ಈಗಿನ ಆಚಾರಗಳಿಗೆ ದೂರವಾಗಿದೆ. ಇದೊಂದೇ ಮಾತು ನಮ್ಮನ್ನು ಎಚ್ಚರಿಸಿ ವಿಚಾರಕ್ಕೆ ಹಚ್ಚಲು ಸಾಕಷ್ಟಿದೆ.

ಆದರೆ ದೇಹದ ಮೋಹವು ಬಲವಾದದ್ದು. ಅದಕಾರಣ ನಮ್ಮ ಎಷ್ಟೋ ಆಚಾರಗಳನ್ನು ಈಗಿನ ಕಾಲ ಪರಿಸ್ಥಿತಿಗೆ ಅನುಸರಿಸಿ ಬದಲಿಸುವದು ಅತ್ಯವಶ್ಯವೆಂದು ಅನುಭವಕ್ಕೆ ಬಂದರೂ ಅದರಲ್ಲಿ ಹೆಚ್ಚು ಕಡಿಮೆ ಮಾಡಲು ಸಮಾಜವು ಸಂತೋಷದಿಂದ ಸಿದ್ಧವಾಗಲೊಲ್ಲದು! ಪಾಂಚಭೌತಿಕ ದೇಹಗಳ ಮಾತ್ರ ಭೋಜನಕ್ಕೆ ಶಾಸ್ತ್ರದಲ್ಲಿ ಆಧಾರ ಸಿಕ್ಕದಿದ್ದರೂ [illegible] ಎಂದು ಹೇಳಿ ಅಪದ್ಧತಿಯು ನಡೆಯುತ್ತ ಬಂದಿದೆ. [illegible] ತನ್ನ ಮಗನ ಮುಂಜಿವೆಯನ್ನು ಮಾಡಬೇಕಾದರೆ ಈ ಮಾತ್ರ [illegible] ದ ಮದುವೆಯಲ್ಲ [illegible] ತಿ ಎಂಬುದು ದೂರಬೇಡ. ನಮ್ಮ ಹಬ್ಬ ಹುಣ್ಣಿವೆಗಳು ಜೀವವನ್ನು ಅರೆದು ಹಿಂಡಿ ಹೋಳಿಗೆ ಮಾಡಿಸಿಕೊಳ್ಳುತ್ತಿವೆ. [illegible] ಮುಗಿಯ ಶ್ರಾವಣ [illegible] ಹತ್ತುತ್ತಿವೆ. ಭಾದ್ರಪದದಲ್ಲಿ [illegible] ಬರಾಳಿ [illegible]. ತಾನು ಆರ್ಥಿಕ ದೃಷ್ಟಿಯಿಂದ [illegible] ಬ್ಬಕ್ಕೆ ಹೋಳಿಗೆ ಬೇಕೇ ಬೇಕು.

ಈ ಬಗೆಯ [illegible] ವುಸ್ತಕಕ್ಕೂ ಪಾತ್ರ ಪಾವ್ರ ವಿಚಾರಿಸದ ಬ್ರಾಹ್ಮಣ ಭೋಜನಕ್ಕೂ, ತಿಳಿಯದೆ, ತಿಳಿಯದಿರಲಿ, ಮಾಡಲ್ಪಡುವ ಯಾಂತ್ರಿಕ ಸ್ವರೂಪದ ಮಂತ್ರ ತಂತ್ರಗಳಿಗೂ ಅಳತೆ ಯಿಲ್ಲದ ಮಹತ್ವವು ಬಂದು ಬಿಟ್ಟಿದೆ. ಇವುಗಳನ್ನು ಕಣ್ಣು ಮುಚ್ಚಿ ಕಿವಿಯಲ್ಲಿ ತುಳಸೀ ಪತ್ರ ಹಾಕಿಕೊಂಡು ಮಾಡಲೇ ಬೇಕು. [illegible] ಅಧಾರ್ಮಿಕನೆಂದು [illegible] ಇಲ್ಲ.

ಜೀವಂತವಾದ ನಿಜವಾದ ಧಾರ್ಮಿಕ ಆಚಾರಗಳಿಗೆ ಮಹತ್ವವು ಈವಿಲ್ಲ. ಅವು [illegible] ಗಿವೆ. ಜೀವನ ಬಿಟ್ಟ ದೇಗುಲ ಪೂಜೆ ನಡೆದಿದೆ. ಪೆಟ್ಟಿಗೆ ಬದಲಾಗಿದೆ. ನಿಜವಾದ ಧಾರ್ಮಿಕ ಜೀವನಕ್ಕೆ ಬೆಲೆಯಿಲ್ಲವಾಗಿದೆ.

ಒಂದಗುಳಿಯಾಗಿ ತನ್ನ ದೇಶ ಬಾಂಧವರನ್ನು ಸುಲಿದು, ತನ್ನ ದೇಶಕ್ಕೆ ಎರಡು ಬಗೆದು ಬುದ್ಧಿಯನ್ನು ಹಾದರಗಿತ್ತಿಯಾಗಿಸಿ ಅಥವಾ ಇಂಥ ಬೇರೆ ಯಾವ ಬಗೆಗಳಿಂದ ಧನ ಸಂಗ್ರಹಮಾಡಿ ಸತ್ಯನಾರಾಯಣ, ವ್ರತನಿಯಮಗಳನ್ನು ಮಾಡುವ ಕೀಳಾಳು ಸಮಾಜದಲ್ಲಿ ಹಿರಿಯಾಳೆನಿಸಿ ಕೊಳ್ಳುತ್ತದೆ! ಸತ್ಯ ಸಾಕ್ಷಾತ್ಕಾರಕ್ಕಾಗಿ ಅಸಿಧಾರಾವ್ರತವನ್ನು ಕೈಕೊಂಡವರು ಸಮಾಜದ ಪ್ರಸ್ತುತ ವಿಕೃತ ಆಚಾರಗಳು ತಮಗೆ ಬಂಧನಕಾರಕವೆಂದು ಎಂದಿಗೂ ತಿಳಿಯಲಾಗದು. ಧರ್ಮದ ಜೀವವನ್ನು—ತತ್ವವನ್ನು ಅರಿತು ಅದನ್ನು ಕಂಡು ಉಂಡು [illegible]. ಬಾಹ್ಯದೇಹಕ್ಕೆ ತಕ್ಕೆ ಬೀಳಲಾಗದು.

ಹೊಸದಾದುದನ್ನು ತಿಳಿಯುವ, ತಿಳಿಯಲು ಬಯಸುವ ಪ್ರತಿಯೊಬ್ಬನು ಈ ಮಾತಿನ ವಿಚಾರಮಾಡಿ ಸತ್ಯತೆಯನ್ನು ಮನಗಾಣಬೇಕೆಂದು ಬೇಡಿಕೆ.

ಈ ಮಾತಿನ ವಿಚಾರಮಾಡದೆ ಇದ್ದುದರಿಂದಲೇ ಹಲವರು ಹೊಸ ಹುರುಪಿನಲ್ಲಿ ಥಟ್ಟನೆ ಬೆಳಗಿದ ಒಳವೆಳಕಿಗೆ ಮೆಚ್ಚಿ ಮುಂದ ನಿಂತುಬಿಟ್ಟರೂ ಅದನ್ನು ನೆಟ್ಟಗೆ ಕೊನೆಯವರೆಗೆ ಹಿಂಬಾಲಿಸಲು ಸಮರ್ಥರಾಗಲಿಲ್ಲ. ಅವರು [illegible] ಮೇಲೆ ಮೊದಲಿನ ಕೀಳತೆ [illegible] ದುಷ್ಟ ದೊರಕಿಸುವುದನ್ನು ಬಿಡಬೇಕಾಯಿತು. ಅದರೆ [illegible] ಯೊಳಗಿನ ದುಂದುಗಾರಿಕೆ ಕಡಿಮೆಯಾಗಲಿಲ್ಲ. ಎಷ್ಟೋ ನಿರ್ಜೀವ ನಿರರ್ಥಕ ನಿಯಮಗಳಿಗ ಅತಿ [illegible] ಎಡೆ ಸಲಲಿಲ್ಲ. [illegible] ಗೆಯಿಂದ ದುಷ್ಟ ತಂದು [illegible] ಕ್ಕೆ [illegible] ವುದೆ, ಮಾಡಿಸಿ ತಂದೆ ತಾಯಿಗಳನ್ನು ತಣಿಸುವುದೆ [illegible] ಕರ್ತವ್ಯವೆಂಬ ಕಲ್ಪನೆಯನ್ನು ಕಿತ್ತೊಗೆಯುವುದಾಗಲಿಲ್ಲ.

ಹೊಸದಾದುದನ್ನು ಹಿಡಿಯಬೇಕೆಂದು ಬಯಕೆ ಇದ್ದರೂ ಹಳಬರನ್ನು ಹಿಂಬಾಲಿಸುವದನ್ನು ಬಿಟ್ಟು ತನ್ನ ದಾರಿ ಬೇಗೆ ಬೇರೆ ಇದೆಯೆಂಬುದನ್ನು ಅರಿತು ಅದನ್ನ ಅನುಸರಿಸಿ ನಡೆಯುತ್ತಿದ್ದವರಿನ ದುಃಖಕ್ಕೆ ಸಿಗ್ಗಾಗಿ ಎಗ್ಗಿಲ್ಲದೆ ಬಹು ಜನರು ಮೊದಲಿನ ಮನೆಗೆ ಬಂದರು.

ಈ ಬದಲಾಗಬಾರದೆಂಬ ಅಪೇಕ್ಷೆಯುಳ್ಳವರು ಹೊಸ ಹಾದಿಯ ಗುಟ್ಟು ಮೆಟ್ಟುಗಳನ್ನು ಅರಿಯುವುದು ಅತ್ಯವಶ್ಯ. ಯಾವ [illegible] ವನ್ನು ತೆರೆದು ಬಿಟ್ಟಿದರೆ ಹೊಸ [illegible] ಇದನ್ನು [illegible].

ದೇಹವು ಬದಲಾಗುವದು, ಕಾಲಮಾನದಂತೆ ಬದಲಾಗುವದಲ್ಲದೇ ಅದರ ಸುದೀರ್ಘವಿದ ದಾರಿ ಬದಲಾಗದೆ ಉಳಿದರೆ ಅದು ಅತ್ಯಂತಾವಶ್ಯಕ [illegible]. ಬದಲಾಗುವದರಲ್ಲಿ ಬದಲಾಗದಿರುವುದನ್ನು [illegible], 'ಅವರಲ್ಲಿ' 'ಆ'—ತನ ಕಾಣಬೇಕು, ಇವರಲ್ಲಿ ಆ–ತನವನ್ನು ಕಾಣಬೇಕು. ತನವು ಬದಲಾಗಿ [illegible] ಕೊಡುವದು. 'ತನ' ತೆಗೆದು 'ಆ' [illegible] ಗುರಿ, ಇದೇ ಹಿರಿಗುರಿ. [illegible] ಗುರಿ. ಆ–ತನವನ್ನು ಅರಿತು, ಆ [illegible] ಆದರಯೋಗ್ಯತೆಗಿಂತ ಹೆಚ್ಚು ಬೆಲೆ ಬೇಡ. ಪೆಟ್ಟಿಗೆ [illegible] ನಾಡಿನ [illegible].

ಕಾರಣ ನಾಡಿನ [illegible] ಬಯಸುವವರು 'ಆ'–'ತನ'ನನ್ನು ಅರಿತು ಅರ್ಜಿಸುವುದು ಆದ್ಯ ಕರ್ತವ್ಯವು.

ಓಂ ಶಾಂತಿಃ, ಶಾಂತಿಃ, ಶಾಂತಿಃ

* ೯, ೯ (೩, [illegible] ನೋಡು [illegible] ಸಾಗಿದ್ದು.

ನನ್ನ ಪ್ರವಾಸ

ಮೊನ್ನೆ ನೊನ್ನೆ ಅನಂತಪುರದ ಜಿಲ್ಲೆಗೆ ಸೇರಿದ ಉರವಕೊಂಡೆ ಎಂಬ ಊರಿಗೆ ಹೋಗಬೇಕಾದ ಪ್ರಸಂಗ ಬಂದಿತು. ಉರವಕೊಂಡೆ, ಬಳ್ಳಾರಿ, ಅನಂತಪುರ ಜಿಲ್ಲೆಗಳ ಗಡಿನಾಡು. ಈ ಭಾಗಕ್ಕೆ ಇದೇ ಕನ್ನಡಗಡಿಯೆನ್ನ ಬಹುದು. ಮುಂದೆ ಎರಡೂ ಕಡೆಗಳಲ್ಲೂ ತೆಲುಗದೇಶ. ಹೀಗೆ ಗಡಿನಾಡಾದುದರಿಂದ ಬೆಳಗಾಂವಿಯು ಕನ್ನಡಿಗರಿಗೆ ಮರಾಠಿಯುಂಟಿದಿರು ಬಿದ್ದಂತೆ ಇಲ್ಲಿ ತೆಲುಗಿನ ಪ್ರಾಬಲ್ಯವಿದೆ. ಸಾಲದ್ದಕ್ಕೆ ಸರಕಾರದ ಎಲ್ಲ ಕಚೇರಿಗಳಲ್ಲ ತೆಲುಗು. ಒಂದು ಆಸೆಯ ಸಂಗತಿ ನಮಗೆ. ಬೆಳಗಾವಿಯು ಕನ್ನಡಿಗರಿಗೆ ಮರಾಠಿಯ ಮೇಲಿದ್ದ ಮೋಹ ಇಲ್ಲಿನವರಿಗೆ ತೆಲುಗಿನ ಮೇಲಿಲ್ಲ. ಇಲ್ಲಿನ ವರ್ತಕರ ಕ್ಯಾಲೆಂಡರುಗಳು ಕನ್ನಡದಲ್ಲೇ ಇವೆ.

ಬೇಸಾಯ. ಇಲ್ಲಿನ ನೆಲ ಕತ್ತಿಗ ಸಂಯಾದ ಕರಿಯ ಎರೆನೆಲ. ಅಲ್ಲಲ್ಲಿ ಕೆಂಪು ನೆಲವಿದ್ದರೂ ಅದೂ ನಮ್ಮ ಕಡೆಯ ಕೆಂಗಲು ನೆಲಕ್ಕಿಂತ ಫಲವಂತನೆ. ಇಲ್ಲಿಯ ನೆಲಕ್ಕೆ ದಪ್ಪ ಫಲವನ್ನು ಕೊಡಬಲ್ಲ ಶಕ್ತಿಯುಂಟು. ಜನಗಳು ಅದಕ್ಕೆಯನ್ನು ಉಪಯೋಗಿಸಿಕೊಳ್ಳುವುದರಲ್ಲಿ ನಮ್ಮ ಪ್ರಯತ್ನಪರರು ಅಷ್ಟಾಗಿಯೇನೂ ಇಲ್ಲ. ಇಲ್ಲಿ ಹತ್ತಿಯೇ ಮುಖ್ಯ ಬೆಳೆ. ಎಳ್ಳು ಮೊದಲಾದ ಎಣ್ಣೆ ಬೀಜಗಳೂ ಅಲ್ಲಲ್ಲಿ ಬೆಳೆಸುವುದುಂಟು.

ದನಕರುಗಳು ಚೆನ್ನಾಗಿಯೇ ಇರುತ್ತವೆ. ಆದರೂ ಕೆಲಸಬಹಳ. ಮೈಸೂರ ಕಡೆಯಿಂದ ದೊಡ್ಡ ಹೋರಿಗಳನ್ನು ತರುವರೂ ಇಲ್ಲ ಬಹಳ. ಅಲ್ಲಲ್ಲಿ ನ್ಯಾಯದಾಗಿಲಗಳಾದವು. ಒಬ್ಬೊಬ್ಬನಿಗೆ ಬರಿಯ ಬೇಸಾಯಕ್ಕೆ ಉಪಯೋಗಿಸಿದರೆ ಎತ್ತುಗಳೇನೂ ಕೆಡುವುದಿಲ್ಲ. ಈ ಸಮಯಕ್ಕೆ ಬೇಸಾಯ. ಹೊಟ್ಟೆಗಿಲ್ಲದ ಸಂಕಟಕ್ಕೆ ಎರಡು ಕಾಸು ಬರಲೆಂದು ... ಯಿಂದ ಅಪಕ್ಕೆ ಕ್ರಮವಾಗಿ ಎತ್ತು ಬಡಕಲಾಗುತ್ತವೆ. ಹತ್ತಿಸುಗ್ಗಿ ಕಾಲದ ಸುಗ್ಗಿಗಳಲ್ಲ ಬಂಡಿಗಳನ್ನು ಹೊಡೆಯುವಾಗ ಎತ್ತುಗಳನ್ನು ನೋಡಬೇಕು. ಆ ಪಾಪ ಬ್ರಹ್ಮನಿಗೂ ಬೇಡ. ಬಂಡಿಗೆ ಹೂಡಿದ ಎತ್ತು ಮೂರು ತಿಂಗಳಿಂದ ಮೇಲೆ ನಡೆಯುತ್ತದೆ. ಆ ಮೇಲೆ ಕೈವಶಿಗೆ ಹೊರೆಯೇ ವಿನಾ ಆಸರೆಇಲ್ಲ. ಸಾಲದ್ದಕ್ಕೆ ಎಳೆತನದಲ್ಲೇ, ಇನ್ನು ಚೆನ್ನಾಗಿ ಬೆಳೆಯದಿರುವಾಗಲೇ, ಕೆಲಸಕ್ಕೆ ಕರುಗಳನ್ನು ಹೂಡುವುದರಿಂದ ಎತ್ತುಗಳ ಬೆಳವಣಿಗೆ ಕಡಿಮೆಯಾಗುತ್ತ ಬಂದಿದೆ. ದೊಡ್ಡವಾದ ಆಕಾರವೇ ಅಪರೂಪ. ಎಲ್ಲ ಗಿಡ್ಡಗಳು. ಬರಿಯ ಬೇಸಾಯವೇ ಎತ್ತಿನ ಕೆಲಸವಾಗಿ ಈ ಹಟ್ಟಿ ಹೋದ ವ್ಯಾಪಾರಕ್ಕೆ ಮತ್ತೆ ಬೇರೆ ಸಾಧನಗಳನ್ನು ಕಂಡುಹಿಡಿಯುವ ವರೆಗೆ ಎತ್ತುಗಳೇ ನಾಡುಗಾಗುವದಿಲ್ಲ. ... ಅಗುವದಿಲ್ಲ. ಇವು ನು ಯಂತ್ರಗಳು. ಅಗತ್ಯಾಗ್ನಿ ಹಿತ ನಿಯಮಗಳಿವೆ. ಗೋರಕ್ಷಣೆಯ ಅಭಿಮಾನಿಗಳು ಈ ಸಲಹೆಗೆ ಗಮನ ಕೊಟ್ಟರೆ ಸಿಟ್ಟಿಗಾದೀತು.

ಕೈಗಾರಿಕೆ ವ್ಯಾಪಾರ. ಇಲ್ಲಿ ಹತ್ತಿಯೇ ಮುಖ್ಯಬೆಳೆಯಾದ್ದರಿಂದ ನೇಯ್ಗೆಯು ಇಲ್ಲಿನವರ ಮುಖ್ಯ ಕಸಬು. ರೇಶಿಮೆ ನೆಯ್ಗೆಯೂ ಉಂಟು. ಉರವಕೊಂಡೆ ಬಂದರದಲ್ಲಿಯೇ ಸುಮಾರು ೩೦೦೦ ದ ಮೇಲೆ ಕೈಮಗ್ಗಗಳಿರಬಹುದು. ಎಲ್ಲಾ ಜಾತಿಯವರೂ ನೇಯುತ್ತಾರೆ ವೈಶ್ಯರೂ ಮಗ್ಗಗಳನ್ನು ಇಟ್ಟು ಕೊಂಡಿದ್ದಾರೆ. ಕೂಲಿ ಮಾಡುವವನಿಗೆ ದಿನವೂ ಕೆಲಸವಿದೆ. ಬೇಸಾಯ ಕಾಲದಲ್ಲಿ ಬೇಸಾಯ. ಉಳಿದ ಕಾಲದಲ್ಲಿ ನೇಯ್ಗೆ, ಕೂಲಿಸಿಗದವನಿಲ್ಲವೇ ಇಲ್ಲ. ಹೀಗಾಗಿ ಈ ಪ್ರಾಂತದಲ್ಲಿ ಬಡತನದ ಬಾಧೆ ಅಷ್ಟು ತೀವ್ರವಾಗಿಲ್ಲ. ಕೆಲ್ಕ ಧನಾಢ್ಯರಾದವರೂ ಇದ್ದಾರೆ. ನೇಕಾರಿಕೆಯೂ ಉತ್ತಮವೇ ಆಗಿರುತ್ತದೆ. ಬೆಂಗಳೂರಿನಂತಹ ದೊಡ್ಡ ಪೇಟೆಯೇ ಇದಕ್ಕೆ ಮುಖ್ಯ ಗಿರಾಕಿಯಾದುದರಿಂದ ನೇಕಾರಿಕೆಯು ಉತ್ತಮವಾಗಿದೆ ಎಂದು ಹೆದರಿಕೆ ಇಲ್ಲದೆ ಹೇಳಬಹುದು. ಮೊದಲು ಇಲ್ಲಿ ನೇಯದವರು ಇರಲಿಲ್ಲವಂತೆ. ನಾಗರಿಕತೆಯ ಗಾಳಿ ಬೀಸಿ ಉತ್ತಮ ಸ್ಥಿತಿಯುಳ್ಳವರು ಎಂದರೆ ಸಿರುದ್ಯೋಗಿಗಳಾಗಿರ ಬಲ್ಲಷ್ಟು ಪುಣ್ಯ ಪಡೆದವರು, ನೇಯುವದನ್ನು ಬಿಟ್ಟು ಕೊಟ್ಟಿದ್ದಾರೆ. ನೂಲುವುದು ಇಲ್ಲೇ ಇಲ್ಲ. ಎರಡೋ ಮೂರೋ ಮಗ್ಗಗಳಲ್ಲಿ ಖಾದಿ ತಯಾರಾಗುತ್ತದೆ. ಉಳಿದವರೆಲ್ಲ ಪರದೇಶೀ ನೂಲನ್ನೇ ಉಪಯೋಗಿಸುತ್ತಾರೆ.

ಮೊದಲಿಗೆ ಉರವ ಕೊಂಡೆ ವ್ಯಾಪಾರದ ಕೇಂದ್ರಸ್ಥಾನವಾಗಿತ್ತು. ಈಗಲೂ ಬೊಂಬಾಯಿಗೆ ಇಲ್ಲಿಂದ ಒಂದು ರಸ್ತೆಯಿದೆ. ದಲ್ಲಾಳಿಗಳ ದರೋಡೆ ಯಿರಲಿಲ್ಲ. ಈಗ ಇಲ್ಲೇ ನಾಲ್ಕೆಂಟನ್ನಾಗಿವೆ. ಆ ತಗಡಿಗಳು ನಮ್ಮ ರಕ್ತ ಹೀರಿ ಗುಂತಕಲ ಕಳಿಸಬೇಕು ಬೊಂಬಾಯಿಗೆ. ಅಲ್ಲಿಂದ ಮತ್ತಾಗಾಗಿ ಮಾಡುವದಕ್ಕೆ ಕೆಲಸವಿಲ್ಲದೆ ಇಲ್ಲಿಂದ ಎಲ್ಲ ಸೂರು, ಹುಬ್ಬಳ್ಳಿ, ಬಳ್ಳಾರಿ ಪ್ರಾಂತಗಳಿಗೆ ... ಹೊರಟು ಹೋದರಂತೆ. ನೂಲುವದು ಹೋದರೂ ... ರಿಂದಲೇ ದೇಶವಿನ್ನೂ ಹಾಳು ಬಿದ್ದಿಲ್ಲ.

ಸಂಚಿಕೆ ೨೭

ವಿದ್ಯಾಭ್ಯಾಸ. ಈ ಪ್ರಾಂತದಲ್ಲಿ ಶಾಲೆಗಳು ಸ್ವಲ್ಪ ಕಡಿಮೆಯಿಲ್ಲೂ ಇವೆ. ಸ್ಕೂಲುಗಳೂ ಇವೆ. ಶಿಕ್ಷಣವೆಲ್ಲ ತೆಲುಗು. ೭ ಇಲ್ಲ ಕನ್ನಡ. ಹೀಗಾಗಿ ಕನ್ನಡಕ್ಕೆ ಬಗ್ಗೆ ತಪ್ಪುತ್ತ ಬಂದಿದೆ. ಇತ್ತೀಚೆ ದೇಶದಲ್ಲಿ ಬಳಕೆ ಮಾಡಿದ ಲಿಂಗಾಯತರು ಪತ್ರ ಬರೆಯ ಬೇಕಾದರೆ ಪರಸ್ಥಳದಿಂದ ಬಂದ ಕನ್ನಡದವರಿಂದ ಬರೆಸಬೇಕು. ಇಲ್ಲಿ ನವರು ಕನ್ನಡ ಸ್ವಲ್ಪ ಓದ ಬಲ್ಲರು. ಬರೆಯಲಿಕ್ಕೆ ಬಾರದು ಅನ್ಯ ಭಾಷೆಗಳ ಹೊಳೆಯಿಂದ ದಣಿಯುತ್ತಿರುವವರಿಗೆ ಇಂಥ ವಿಷಮಸ್ಥಿತಿಯ ಫಲಗೊತ್ತಿದೆ — ಚೆನ್ನಾಗಿಯೂ ಗೊತ್ತಿದೆ. ಮುಖ್ಯ ... ರುಗಳಲ್ಲಿ ಸ್ವಲ್ಪ ಇಂಗ್ಲಿಷ ಇದೆ.

ಸಂಸ್ಕೃತಿ. ಇಷ್ಟಿದ್ದರೂ ಇಲ್ಲಿನವರ ಸಂಸ್ಕೃತಿಯು ಹೀನವಾಗಿದೆ. ಬೊಗಳೆತನ, ಜಾಣತನ, ಕುಡುಕತನಗಳಿಗೆ ಇದು ತವರುಮನೆ. ತಿಂಗಳಿಗೊಂದಾದರೂ ಕೊಲೆಯ ಕೇಸು ಕೋರ್ಟಿಗೆ ಹತ್ತದೆ ಇಲ್ಲ. ಬರಿಯ ಸಿಟ್ಟು, ದೊಡ್ಡ ಮಾತಿನ ಜಗಳ ಇಷ್ಟೇನಾ ಕು ಕಾರಣ ಅವರಿಗೆ.

ಕೊಲೆಯಲ್ಲೂ ಶಾಸ್ತ್ರರೀತಿಯಿಂದ ಕೊಲೆ ಇವರಲ್ಲಿ. ಮೊನ್ನೆ ಅನಂತಪುರದ ಕಚೇರಿಯಲ್ಲಿ ಒಂದು ಕೊಲೆಯ ವಿಚಾರಣೆ. ಒಬ್ಬ ಬೆಸ್ತನು ಒಬ್ಬ ಬ್ರಾಹ್ಮಣ ಸ್ತ್ರೀಯನ್ನು ಕೆಣಕಿದನಂತೆ ದುರಾಚಾರಕ್ಕಾಗಿ. ನವರ ಜಾತಿಗೆ ಕೆಲಸ ಅನುಕೂಲಿಸದಿರಲು ಸಿಟ್ಟಿನಿಂದ ಆಕೆಯ ಮೂಗು ಕಿವಿಗಳನ್ನು ಕೊಯ್ದು ಅತ್ಯಾಚಾರ ಮಾಡಿದನಂತೆ. ಇದೇ ಅಪರಾಧ. ತುಂಡಾದ ಕಿವಿ ಮೂಗು ಕಚೇರಿಯಲ್ಲಿ ಇದ್ದವು. ಇದು ಹಿರಿಯರಿಂದ ಬಂದ ಸಂಪ್ರದಾಯ ಏರ ಬಹುದು! ಕೊಂಡು ... ಕಡಿಯುವವರು. ತಲೆಯನ್ನು ಅಷ್ಟು ಬಿಗಿದು ನಗಳನ್ನು ಕಿತ್ತು ಹಾಕುವದು ಮುಂತಾದ ರಸಿಕತನದ ಹಾದಿಗಳಲ್ಲೇ ಇವರ ಓಡಾಟ.

ಇಂತಹ ಅಧಮ ಸಂಸ್ಕೃತಿಗೆ ಇವರ ಕುಡುಕತನವೇ ಕಾರಣ ಬ್ರಾಹ್ಮಣವರ್ಗದವರೂ ಕುಡಿಯದೆ ಇರುವಂತಹ ಪಾಪಕ್ಕೆ ಗುರಿಯಾಗಿಲ್ಲ. ಅಂದಮೇಲೆ ಕುಡುಕತನ (ಸರಾಯಿಕುಡಿತ) ವು ಎಷ್ಟು ದೂರವ್ಯಾಪಿಸಿ, ಎಷ್ಟು ಆಳವಾಗಿ ಬೇರು ಬಿಟ್ಟಿದೆ ಯೆಂಬುದು ತಿಳಿಯಲಿಕ್ಕೆ ಸಾಕು. ಉರವಕೊಂಡೆಯ 'ಶಿರಸ್ತ' ಕ್ಕೆ ತಿಂಗಳಿಗೆ ಸುಮಾರು ೮-೯ ಸಾವಿರ ರೂಪಾಯಿ ಹೆಂಡದ ಹರಾಜಿನಿಂದ ಬರುವ ಹಣ. ಉರವಕೊಂಡೆಯೊಂದಕ್ಕ ಹೆಂಡದ ಗುತ್ತಿಗೆಯು ತಿಂಗಳಿಗೆ ... ರೂಪಾಯಿ. ನಮ್ಮ ಸೀಮೆಯಂತೆ ವರ್ಷಕ್ಕಲ್ಲ ಇಲ್ಲಿ ಹರಾಜು. ತಿಂಗಳಿಗೆ ... ಗುತ್ತಿ ... ಇನ್ನು ಜನಗಳಲ್ಲಿ

ಅದೆಷ್ಟು ಪ್ರಬಲವಾಗಿರಬೇಡ! ಸೇಕಡಾ ಲೆಕ್ಕಕ್ಕೆ ತೆಗೆದರೆ ೫೦ ಕ್ಕೆ ಕಡಿಮೆಯಿಲ್ಲದೆ ಕುಡುಕರಿದ್ದಾರೆಂಬುದು ತಿಳಿಯ ಬಹುದು. ಹೆಂಗಸರೂ ಕುಡಿಯುತ್ತಾರೆಂಬುದು ನೆನಪಿಡಬೇಕು.

ಮೆಥಾಯಬೋ ಯಾರೋ ಅಸೆಂಬ್ಲಿಯಲ್ಲಿ ಹೇಳಿದರು. 'ಜನಗಳು ಬಡವರು. ಆದ್ದರಿಂದ ಸೆರೆ ಸುಂಕ ತೆಗೆಯಬೇಕು, ಕೆಲವರು ಹೇಳುವಂತೆ ಅದರಿಂದ ಬಾಧಕವೇನೂ ಆಗಿಲ್ಲ. ಆದರೆ ಬಡತನ ನೋಡಿ ದಯೆ ಇಡಬೇಕು.' ಇಲ್ಲಿ ಬಂದು ನೋಡಬಾರದೆ ಜನರಲ್ಲಿ ರ್ಥೆತು. ಆಗ ತಿಳಿದೀತು ಕುಡುಕತನದಿಂದ ಆಗುವ ಬಾಧಕ ಕುಡುಕರು ದಯೆ, ಪ್ರೀತಿ, ಅಂತರಾತ್ಮ ಎಲ್ಲವನ್ನೂ ಅರೆದು ಕುಡಿದು ಜೀವ ಬಿಡುತ್ತಾರೆ ಹೆಂಡದೊಂದಿಗೆ, ಕುಡುಕತನಕ್ಕೂ ಕೆಟ್ಟ ನೈತಿಕಸಂಬಂಧವಿದೆಯೆಂಬುದನ್ನು ತಿಳಿಯ ಬಾರದೆ. ದು ಕುಡುಕತನವೇ ಇವರ ಅಧಮ ಸಂಸ್ಕೃತಿಗೆ ಮೂಲ ಕಾರಣವಾಗಿದೆ. ಹಗಲು ಧನಮತ್ತ. ಇರುಳು ಮದಿರಾಮತ್ತ. ಹೀಗಾಗಿ ಮನುಷ್ಯನು ಅಧೋಗತಿಗಿಳಿದಿದ್ದಾನೆ. ಪಶುವಾಗಿದ್ದಾನೆ ತಿಳಿದೂ ತಿಳಿದೂ ಸರಕಾರವೂ ಸಮಾಜವೂ ಇಂತಹ ಹುಳಕ್ಕೆ ಅವಕಾಶ ಕೊಡಬೇಕೆ? ಮಾನವ ಜಾತಿಯನ್ನು ನೀಚತನಕ್ಕೆ ನಡೆಯಿಸಬೇಕೇತಕ್ಕೆ ?

ಕಡೆಯಮಾತು:— ವ್ಯಾಪಾರ ಕ್ಷೇತ್ರದಲ್ಲಿ, ಸಂಸ್ಕೃತಿಕ್ಷೇತ್ರದಲ್ಲಿ, ನಮ್ಮ ಸುಶಿಕ್ಷಿತರಿಗೆ ಎಷ್ಟು ಕೆಲಸ ಕಾದಿದೆ! ಪರಾವರ್ತನವಾಗಬೇಕಾದರೆ ನಾವೆಷ್ಟು ಪವಿತ್ರರಾಗ ಬೇಕು! ಮಹಾತ್ಮರಂಥ, ಅಂಡ್ರೂಜರಂಥ ತಪಸ್ವಿಗಳು ಎಷ್ಟು ಬಗ್ಗಬೇಕು! ಇವರ ಸಾಹಿತ್ಯ, ನಮ್ಮ ಅಪೂರ್ಣ ಶಿಕ್ಷಣ, ಜ್ಞಾನ! ಸರಕಾರದವರು ಅಂಧತ್ವ- ಎಲ್ಲಾ ಭೀಮಭವಾರ್ಣವ!

'ಕುಟಿರ ಗುರು'

ನಿಜಾಮ ಕರ್ನಾಟಕದ

ಚಳವಳಿ

ನಿಜಾಮಕರ್ನಾಟಕವು ನನ್ನ ಜನ್ಮ ಭೂಮಿಯೆಂದೆಣಿಸಿ, ಎರಡನೇ ಭಾಗದ ಕರ್ನಾಟಕವನ್ನು ಎಚ್ಚರಿಸುವ ಮುಂಚೆ ನಮ್ಮವರನ್ನೇ ಎಚ್ಚರಿಸೋಣವೆಂದು ನಿಶ್ಚಯಮಾಡಿಕೊಂಡು ಹೈದ್ರಾಬಾದಿಗೆ ಹೋದೆ. ಅಲ್ಲಿ ೧೦ ಸಾವಿರ ಜನರು ಕನ್ನಡಿಗರಿದ್ದಾರೆ! ಸಿಕಂದ್ರಾಬಾದ, ಬೋಲಾರಾಮುಗಳಲ್ಲಿ ಮೈಸೂರ ಜನಗಳ ವಸತಿ ಇದೆ. ಆದರೆ ಅವರೂ ಸಹ ಮರಾಠೀ, ತೆಲುಗು, ಓದು ಬರಹ ಬಲ್ಲವರೇ. ಮನೆಯಲ್ಲಿ ಆಡುವುದು ಕನ್ನಡ. ತಾಯ್ನುಡಿ ಕನ್ನಡ. ಹೀಗಿದ್ದೂ ಸಭೆಗಳಲ್ಲಿ ಮಾತಾಡುವದು ಮರಾಠಿ. ಜಾಹೀರ ಪತ್ರಿಕೆ ಮರಾಠಿ! ಪ್ರಾಥಮಿಕ ಮಾಧ್ಯಮಿಕ ಶಿಕ್ಷಣವು ಮರಾಠಿ! ಅಂಗಡಿಕಾರರ ಬೋರ್ಡು ಹಲಗೆಗಳಲ್ಲಿ ಮರಾಠಿ. ಈ ದುರ್ದೆಶೆಯಲ್ಲಿ ಸಿಕ್ಕ ಹೈದ್ರಾಬಾದವನ್ನು ನೋಡಿ ೭ ಕೀರ್ತನಗಳನ್ನು ಮಾಡಿ ಕನ್ನಡದ ಜಾಗ್ರತಿಯನ್ನ ಮಾಡಿದ್ದಾಗಿದೆ. ಅಲ್ಲದೆ "ಕರ್ನಾಟಕಸಂಘ" ಎಂಬ ಸಂಸ್ಥೆಯೊಂದನ್ನು ಸ್ಥಾಪನ ಮಾಡಲಾಗಿದೆ. ಇನ್ನು ಸ್ವಲ್ಪ ದಿನಗಳಲ್ಲಿಯೇ ಹೈದ್ರಾಬಾದಿನಲ್ಲಿ ಕನ್ನಡ ಪ್ರಾಥಮಿಕ ಮಾಧ್ಯಮಿಕ ಶಿಕ್ಷಣದ ವ್ಯವಸ್ಥೆಯಾಗುವದಿದೆ. ಈಗಾಗಲೇ ೭೦೦ ರೂ. ಫಂಡು ಕಲೆಸಿ 'ಕರ್ನಾಟಕ ಸಂಘ'ದ ಸ್ವಾಧೀನ ಪಡಿಸಿದೆ. ಹೈದ್ರಾಬಾದಕ್ಕೆ ೫೦ ಸಾವಿರದ ಮೇಲೆ ಫಂಡು ವಸೂಲಾಗಬಹುದು. ಹೈದ್ರಾಬಾದಿನಲ್ಲಿಯ ಕನ್ನಡ ಸ್ತ್ರೀವರ್ಗವು ಸಹ ಜಾಗ್ರತರಾಗಿದ್ದಾರೆ. ಅವರೂ ಫಂಡಿಗಾಗಿ ಸಹಾಯ ಮಾಡುತ್ತಲಿದ್ದಾರೆ ಶ್ರೀಮತಿ ಕಾಶೀಬಾಯಿಕಲ್ಲೋಳ್ಕರ, ಮತ್ತು ಮಿಸೆಸ್. ಡಾ. ಭೋಪರ್ಡೀಕರ, ಶ್ರೀಮತಿ ಭೋಗೇಶಬಾಯಿ ಮೊದಲಾದ ಹೆಂಗಳೆಯರು, ಕನ್ನಡನಾಡಿಗೆ ಸೇವೆ ಸಲ್ಲಿಸಲು ಸಿದ್ಧರಾಗಿದ್ದಾರೆ! ಶ್ರೀ. ಗಿರಿರಾಯರು ಅಧ್ಯಕ್ಷರಾಗಿದ್ದು ಅವರಾದರೂ ಮನಸ್ಸು ಕೊಟ್ಟು ಕಾರ್ಯ ಮಾಡಬಹುದೆಂದು ಸಂಪೂರ್ಣ ವಿಶ್ವಾಸವಿದೆ. ಈಗ ಗುಲಬುರ್ಗಾದಲ್ಲಿ ಕೀರ್ತನೆಗಳನ್ನು ಮಾಡಿ ಅಲ್ಲಿಯೂ ಕರ್ನಾಟಕ ಸಂಘದ ಶಾಖೆಯನ್ನು ಸ್ಥಾಪಿಸಿ ಪ್ರಾಥಮಿಕ- ಮಾಧ್ಯಮಿಕ ಶಿಕ್ಷಣದ ವ್ಯವಸ್ಥೆಮಾಡಬೇಕಾಗಿದೆ. ಅಲ್ಲಿಯೂ ಕನ್ನಡ ಶಾಲೆಯಿಲ್ಲ. ಗುಲಬುರ್ಗಾದ ಜನರೂ ಅಚ್ಚಗನ್ನಡಿಗರೇ. ಅವರೂ ಮರಾಠಿಯ ಕೈಯ್ಯಲ್ಲಿ ಸಿಕ್ಕು ಒದ್ದಾಡುತ್ತಾರೆ. ಮಾತುಕಥೆ ಕನ್ನಡ ಲೆಕ್ಕ ಪತ್ರದ ವ್ಯವಹಾರ ಮರಾಠಿ. ಈಗ ನಾನು ಹೋದಮೇಲೆ ಕರ್ನಾಟಕ ಅಭಿಮಾನವು ಬೆಳೆಯುಣತ್ತಿದೆ. ಕೀರ್ತನಕ್ಕೆ ೩-೪ ಸಾವಿರಕ್ಕೆ ಮೀರಿ ಜನರು ಕೂಡುತ್ತಾರೆ. ಇಲ್ಲಿಯ ಕಾರ್ಯ ಮುಗಿಸಿಕೊಂಡು ರಾಯಚೂರ, ಕೊಪ್ಪಳ ಬೀದರ ಜಿಲ್ಲೆಗಳಲ್ಲಿ ಕರ್ನಾಟಕ ಸಂಘದ ಶಾಖೆಗಳನ್ನು ಊರುತ್ತ ಹೋಗಬೇಕೆಂದಿದ್ದೇನೆ. ಆಮೇಲೆ ಒಂದು ಕಾನ್ಫರನ್ಸ ಮಾಡಿ, ಅಲ್ಲಿಂದ ಸೆಂಟ್ರಲ್ ಕಮಿಟಿಗಳಿಂದ ೨-೩ ವರ್ಷಗಳಲ್ಲಿ ನಿಜಾಮಕರ್ನಾಟಕದ ಜಾಗ್ರತಿ ಮಾಡಿ, ಸಾಹಿತ್ಯ ಪರಿಷತ್ತನ್ನು ಒಮ್ಮೆ ಕರೆಸಿಬಿಟ್ಟು, ಬಿಟ್ಟು ಹೋದ ಕರ್ನಾಟಕ ಭಾಗವನ್ನು ಏಕೀಕರಣಮಾಡಬೇಕೆಂದು ನನ್ನ ಉದ್ದೇಶವಿದೆ. ಇದಕ್ಕೆ ಕನ್ನಡ ಭೂಮಾತೆಯು ಆಶೀರ್ವಾದಮಾಡಬೇಕು.

ಎರಡನೇ ಭಾಗದ ಕರ್ನಾಟಕದ ಮುಖಂಡರು ಇಲ್ಲಿಗೆ ಆಗಿಂದಾಗ್ಗೆ ಬಂದು ಎಚ್ಚರಿಸುತ್ತಿರಬೇಕು. ಒಟ್ಟಿಗೆ ೩೦ ಸ್ಥಳದಲ್ಲಿ ಕರ್ನಾಟಕ ಸಂಘದ ಶಾಖೆಯನ್ನು ಸ್ಥಾಪಿಸಿದ ಮೇಲೆ ನಿಜಾಮಕರ್ನಾಟಕದ ಪತಿಯಿಂದ ಒಂದು ಸಾಪ್ತಾಹಿಕ ಪತ್ರವನ್ನು ನಡಿಸಬೇಕಾಗಿದೆ. ಈ ಎಲ್ಲ ಉದ್ದೇಶಗಳನ್ನೂ ಕನ್ನಡ ತಾಯಿಯು ಈಡೇರಿಸಲೆಂದು ಇನ್ನೊಮ್ಮೆ ಆಕೆಯ ಹರಕೆಯನ್ನು ಕೇಳಿ ಮುಗಿಸುವೆನು.

[illegible]

ಕೃತ್ರಿಮ ಮಳೆ

ಹ್ಯಾಟಫೀಲ್ಡ ಎಂಬವರು ಈಗ ೨೪ ವರ್ಷಗಳಿಂದಲೂ ಬೇಕಾದಾಗ ಬೇಕಾದಲ್ಲಿ ಬೇಕಾದಷ್ಟು ಮಳೆಗರೆಸುವ ಗುತ್ತಿಗೆಯನ್ನೇ ಹೊತ್ತಿದ್ದರು. ಆದರೆ ಈಗ ವಿಲಿಯಮ್ ಕೋಟಿ ಎಂಬ ಇನ್ನೊಬ್ಬರು ಅವರೊಡನೆ ಸ್ಪರ್ಧೆ ಮಾಡುತ್ತಿರುವರು. ಇವರು ೬೦೦ ಪೌಂಡಿಗೆ ಒಂದು ಇಂಚಿನಂತೆ ಮಳೆ ತರಿಸುತ್ತಾರೆ (ಇಂತಿಷ್ಟು ಸ್ಥಳದಲ್ಲಿ ಎಂದು ಸ್ಥಲಪ್ರಮಾಣವನ್ನೇ ಹೇಳಿಲ್ಲ.) ಮಳೆ ಇಲ್ಲದೆ ಬರ ಬಿದ್ದಾಗೆಲ್ಲ ಒಕ್ಕಲಿಗರು ದುಡ್ಡು ಕೊಟ್ಟು ತಮ್ಮ ತಮ್ಮ ಹೊಲಗಳ ಮೇಲೆ ಮಳೆಗರೆಸಿಕೊಳ್ಳುವರು.

British United Press.

[Times of India]

ನಿಖಿಲ ಭಾರತ ಸಾಹಿತ್ಯ ಸಂಘ.

ಕಲಕತ್ತೆಯ ಈ ಸಂಘದ ಪದವಿಗಳ ವಿಷಯವಾಗಿ ನಾವು 'ಕನ್ನಡಿಗ'ನಲ್ಲಿ ಪ್ರಸಿದ್ಧಿಸಿದಂತೆ ಬಂಗಾಲ ಸರಕಾರಕ್ಕೂ ಮುಂಬೈ ಸರಕಾರಕ್ಕೂ ಯೋಗ್ಯ ವಿಚಾರ ಮಾಡಲಿಕ್ಕೆಂದು ಪತ್ರ ಬರೆದು ಕೇಳಿದ್ದೆವು. ಆ ಪ್ರಕಾರ ಮುಂಬೈ ಸರಕಾರದಿಂದ ಉತ್ತರ ಬಂದಿದೆ ಅದರಲ್ಲಿ ಅವರು "ಪೋಲೀಸಿನವರಿಂದ" ಅದನ್ನು ತಪಾಸಿಸಬೇಕೆಂದು ಯೋಗ್ಯ ಸ್ಥಾನದಲ್ಲಿ ಬರುವದೆಂದು ಬರೆದಿದ್ದಾರೆ. —ಶ್ರೀರಾಮ

ಕರ್ಮವೀರ.

ಕನ್ನಡಿಗನಿಗೆ

ಮುಂದಿನ ವಾರದಲ್ಲಿ "ಕನ್ನಡಿಗ" ನಿಗ
ದ ಮುಂದಿನ ಸಂಚಿಕೆಯು ಆಶ್ವಿನ ಶುದ್ಧ ೧೫ ಕ್ಕೆ

(ವನವು ಸಮಾಪ್ತವಾಗಿದೆ.)

ದ್ಧಾತ್ಮವಶಂ ಸುಖಮ್ ॥ — ಮನು

ಯರ ಮುಕ್ಕಳಾದ ಶ್ರೀನಿವಾಸರಾಯರು.

ಆಶ್ವೀನ ವದ್ಯ ೭ ಶಕೆ ೧೮೪೭. ೧೦-೧೯೨೫. { ಸಂಚಿಕೆ ೨೭

ವರ್ತಮಾನ ಸಾರ.

ಇಹವೃತ್ತ

ಕಳೆದವಾರದಲ್ಲಿ ಮಳೆಯು ಚನ್ನಾಗಿ ಆಗಿದೆ. ಬಿತ್ತಿಗೆ ಕೆಲಸ ನಡೆದಿದೆ. ಈ ಜಿಲ್ಲೆಯ ಅನೇಕ ಭಾಗಗಳಲ್ಲಿಯೂ ಮಳೆಯಾಗಿದೆ ಅಂತೂ ವಿಜಾಪೂರ ಜಿಲ್ಲೆಯು ಮೇಘರಾಜನಿಗೆ ನೆನವಾಯಿತು.

ಪ್ರತಿವರ್ಷದಂತೆ ಶ್ರೀಮಾನ್ ಮುಧ್ವಜಯಂತ್ಯುತ್ಸವವು ಈ ಬಾರಿ ನಡೆದು ವಿಜಯದಶಮಿಯಿಂದ ತ್ರಯೋದಶಿಯವರೆಗೆ ಕಿಲ್ಲೆಯ ಶ್ರೀವೆಂಕಟೇಶ ದೇವಸ್ಥಾನದಲ್ಲಿ ನಡೆಯುವದು.

ಶ್ರೀ. ಬೆನಗಲ್ಲ ರಾಮರಾಯರ (ಅಧ್ಯಕ್ಷರ) ಭಾಷಣದ ಇಂಗ್ಲೀಷ ಪ್ರತಿಯು ನಮ್ಮ ಕೈಸೇರಿದೆ.

ಈ ಜಿಲ್ಲೆಯಲ್ಲಿ ಕುಡಿಯುವ ನೀರಿನ ಮತ್ತು [illegible] ಕೊರತೆಯನ್ನು ದೂರಮಾಡುವದಕ್ಕಾಗಿ ಮುಂಬೈ ಸರಕಾರದ [illegible] ಸ್ವತಂತ್ರವಾದದ್ದೊಂದು [illegible].

ಇಲ್ಲಿಯ ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ ಪುರೋಹಿತರು ಧಾರವಾಡಕ್ಕೆ ಹೋಗಿ, ಖಾದೀ ಸೀರೆ, ಖಣಗಳನ್ನು ಪ್ರಸಾರಮಾಡಿ ಬಂದರು ಒಟ್ಟಾಗಿ ೩೦೦ ಬೆಲೆಯ ಜವಳಿಯನ್ನು ಕೊಂಡು ಖಾದಿಯಬಗ್ಗೆ ಉತ್ತೇಜನ ಕೊಟ್ಟದ್ದಕ್ಕಾಗಿ ಧಾರವಾಡಿಗರಿಗೆ ವಂದನೆ

ಮುಂಬೈ ಕರ್ನಾಟಕ

ಆಂಧ್ರ ವಿಶ್ವವಿದ್ಯಾಲಯದ ರಚನೆಯ ಉಪಮಂಡಳವನ್ನು ಕಾಣಲಿಕ್ಕೆ ಶ್ರೀ ರಡ್ಡಿ, ಸುಬ್ರಹ್ಮಣ್ಯ, [illegible] ಮುಂತಾದವರು ಮದ್ರಾಸಕ್ಕೆ ಹೋಗುವರು.

ಮಹಾರಾಷ್ಟ್ರದಲ್ಲಿ ಬಹು ಖ್ಯಾತಿಯನ್ನು ಹೊಂದಿದ ನಮ್ಮ [illegible] ಗಂಧರ್ವ [illegible] ಕರ್ನಾಟಕ ರಂಗಭೂಮಿಯ [illegible] ಕರ್ನಾಟಕ ನಾಟಕ ಮಂಡಳದ ಮುಖಾಂತರವಾಗಿ ಕರ್ನಾಟಕ ರಂಗದೇವತೆಯನ್ನು ಪ್ರಸನ್ನಗೊಳಿಸುವರು. ಕರ್ನಾಟಕದಿಂದ ಬಹು ದಿವಸದ ಅನೇಕ [illegible] ಇದೊಂದು [illegible] ಕರ್ನಾಟಕಕ್ಕೆ ದೊರೆತಂತಾಯಿತು. ಆನಂದ!

ಕರ್ನಾಟಕಕ್ಕೆ ವಿಶ್ವವಿದ್ಯಾಲಯವು ಬೇಕೆಂಬ [illegible] ಮಾತ್ರ! ಶಿಕ್ಷಣಾಭಿಮಾನಿಗಳಾದ ಕನ್ನಡಿಗರು ಎಚ್ಚರಿಯಿರಿ! ಕರ್ನಾಟಕದ ಕೇಂದ್ರವೆಂದು [illegible] ಧಾರವಾಡವು [illegible] ಅಕ್ಷಯ ಶಿಕ್ಷಣ [illegible] ಈ [illegible] ಬೇಕಾಗಿದೆಯೇ?

ಮದ್ರಾಸ ಕರ್ನಾಟಕ

[illegible] ಜಿಲ್ಲೆಗೆ ಸೇರಿದ [illegible] ಊರ [illegible] ವಿದ್ಯಾರ್ಥಿ [illegible].

[illegible] ಶ್ರೀಕೃಷ್ಣರಲ್ಲಿ [illegible] ಅದರಿಂದ ಅನೇಕ [illegible] ಬೇಗನೇ [illegible]!

ಡಾ. [illegible] ಬೆಂಗಳೂರಿನ [illegible].

ಕಾಗಿ ಹೋಗುತ್ತಿರುವ ಹಣವನ್ನು ಜಾಣತನದಿಂದ ಒಳ್ಳೆಯ ಹಾದಿಗೆ ಹಚ್ಚಬೇಕಾಗಿದೆ. ಹಾಗಾದರೆ ಮಾತ್ರ ಗೋ-ಹತ್ಯೆಯು ನಿಲ್ಲಬಹುದಾಗಿದೆ." ಎಂಬುದಾಗಿ ಮಹಾತ್ಮಾ ಗಾಂಧಿಯವರು ಈ ವಾರದ "ಯಂಗ್ ಇಂಡಿಯಾ" ದಲ್ಲಿ ಬರೆದಿದ್ದಾರೆ. [illegible] ಕೇವಲ ಸರಕಾರದವರು [illegible] ಉಪ್ಪಿನದರಿಂದ ಹಂಚಿದರಂತೆ.

ಕೊಡಗು ಕರ್ನಾಟಕ

ಕೊಡಗಿನ ಕಾಫಿಗೆ ಈ ವರ್ಷ ಒಳ್ಳೇ ಬೆಲೆಯು ದೊರೆಯುವದಾಗಿದೆ.

ಬೆಂಗಳೂರಿನಲ್ಲಿರುವ ಕೊಡಗಿನವರು. ೧೩ ನೇ ತಾರೀಖಿನ ದಿನ ಕೊಡಗರ [illegible] ಜರುಗಿಸಿದರು.

ಕೊಡಗು ಕಾಯದೇ ಮಂಡಳವು ಆಕ್ಟೋಬರ ೨ ನೇ ತಾರೀಖು ನೇಮಿಸುವದು.

ರೇಲ್ವೇ ಬೋರ್ಡಿನ ಸುದ್ದಿ

[illegible] ಶ್ರೀ ಜೂದಸ್ವಾಮಿಯವರು, ೨/೦ [illegible] ಇಂಗಳೀಷರ ಶ್ರೀ [illegible] ೩೦ ನೆ [illegible] ಕನ್ನಡಿಗರೂ ತ್ವರೆ ಮಾಡಬೇಕು.

ಹಿಂದುಸ್ಥಾನ

[illegible] ಕರ್ನಾಟಕ ಸಭೆಯ [illegible] ಕನ್ನಡ ನಾಟಕ [illegible].

[illegible] ಕಲ್ಕತ [illegible].

[illegible] ಶ್ರೀ [illegible] ಆರ್. [illegible] ನೇಮಿಸಲ್ಪಟ್ಟರು.

[illegible] ಅಗ್ನಿ [illegible] ಜಾಗಿ [illegible] ಸ್ಥವಾಗಿದೆ.

ಪರದೇಶ

[illegible] ಶ್ರೀ ಕೆ. [illegible] ರಾಜ್ಯದಿಂದ ಬಂದ ೫೦೦ ಪ್ರಾಣಿಗಳು [illegible] ಬಗ್ಗೆ [illegible]ದರು.

ಅದೆಷ್ಟು ಪ್ರಬಲವಾಗಿರಬೇಡ! ಸೇಕಡಾ ಲೆಖ್ಖಕ್ಕೆ ತೆಗೆದರೆ ೫೦ ಕ್ಕೆ ಕಡಿಮೆಯಿಲ್ಲದೆ ಕುಡುಕರಿದ್ದಾರೆಂಬುದು ತಿಳಿಯ ಬಹುದು. ಹೆಂಗಸರೂ ಕುಡಿಯುತ್ತಾರೆಂಬುದು ನೆನಪಿಡಬೇಕು.

ಮೊಥಾಯಬೋ ಯಾರೋ ಅಸೆಂಬ್ಲಿಯಲ್ಲಿ ಹೇಳಿದರು. 'ಜನಗಳು ಬಡವರು. ಆದ್ದರಿಂದ ಸೆರೆ ಸುಂಕ ತೆಗೆಯಬೇಕು, ಕೆಲವರು ಹೇಳುವಂತೆ ಅದರಿಂದ ಬಾಧಕವೇನೂ ಆಗಿಲ್ಲ. ಆದರೆ ಬಡತನ ನೋಡಿ ದಯೆ ಇಡಬೇಕು.' ಇಲ್ಲಿ ಬಂದು ನೋಡಬಾರದೆ ಜನರಲ್ಲಿ ...ರೆತು. ಆಗ ತಿಳಿದೀತು ಕುಡುಕತನದಿಂದ ಆಗುವ ಬಾಧಕ ಕುಡು... ...ಯು, ಪ್ರೀತಿ, ಅಂತರಾತ್ಮ ಎಲ್ಲವನ್ನು ಅರೆದು ಕುಡಿದು ಬೇ... ...ಡು ಬಿಡುತ್ತಾರೆ ಹೆಂಡದೊಂದಿಗೆ. ಕುಡುಕತನಕ್ಕೂ ಕೆಡ... ...ಟ್ಟ ...ಕಟಸಂಬಂಧವಿದೆಯೆಂಬುದನ್ನು ತಿಳಿಯ ಬಾರದೆ. ...ಡು ...ಕತನವೇ ಇವರ ಅಧಮ ಸಂಸ್ಕೃತಿಗೆ ಮೂಲ ಕಾ... ...ಳುಂಟು... ...ದ. ಹಗಲು ಧನಮತ್ತ. ಇರಳು ಮದಿರಾಮತ್ತ. ಹೀಗಾಗಿ ಮನುಷ್ಯನು ಅಧೋಗತಿಗಿಳಿದಿದ್ದಾನೆ. ಪಶುವಾಗಿದ್ದಾನೆ ತಿಳಿದೂ ತಿಳಿದೂ ಸರಕಾರವೂ ಸಮಾಜವೂ ಇಂತಹ ಹುಳಕ್ಕೆ ಅವಕಾಶ ಕೊಡಬೇಕೆ? ಮಾನವ ಜಾತಿಯನ್ನು ನೀಚತನಕ್ಕೆ ನಡೆ...

ಲೋಕಮತ.

ಕರ್ನಾಟಕದಲ್ಲಿ ನವ ಚೈತನ್ಯವನ್ನು ಹುಟ್ಟಿಸಿ ಅಹಿಂಸೆ, ಖಾದಿ, ಸತ್ಯಾಗ್ರಹ ಇವೇ ಮೊದಲಾದ ವಿಷಯಗಳನ್ನು ಪ್ರತಿಪಾದಿಸಿ ಲೋಕಮತವನ್ನು ಜಾಗ್ರತ ಪಡಿಸುವದೇ ಈ ವಾರಪತ್ರಿಕೆಯ ಉದ್ದೇಶ ವಾ. ಚ. ರೂ. ೩—೫—೦

ವ್ಯವಸ್ಥಾಪಕ ಲೋಕಮತ ಹುಬ್ಬಳ್ಳಿ.

ಕರ್ನಾಟಕವೃತ್ತ ಧಾರವಾಡ

೩೦ ವರ್ಷಗಳಿಂದ ಕನ್ನಡನಾಡಿನ ಸೇವೆ ಮಾಡುತ್ತ ಬಂದಿರುವ ಈ ವಾರ ಪತ್ರಿಕೆಯಲ್ಲಿ, ಕರ್ನಾಟಕದ ವೈಶಿಷ್ಟ್ಯವನ್ನು ಪ್ರತಿ ವಾರದಲ್ಲಿಯೂ, ಕಾಣಬಹುದು. ವಾ. ಚ. ರೂ.೩—೫—೦

ಪ್ರಕಟನೆ

ದಿ ಬಿಂಬೆ(?) ಮ್ಯಾಚ್ಯುರ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೫ ನೇ ಇಸ್ವಿಯ ಜುಲೈ ೩೧ ನೇ ತಾ|| ದಿನ ಸಾಯಂ ಕಾಲದ ೫—೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟೀ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ. ಬಸವಾರಾಧ್ಯ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೧೧೭೨ ಶ್ರೀ. ಆರ್. ಜಿ. ಹುಕ್ಕೇರಿ. ಬುಕ್ಕ ಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೫೫೫ ಶ್ರೀ. ವೀರಭದ್ರರಾಮ ಸಾರಥಿರಾಮ ನಾಯಿಕ ಕಂಪಾಪುಂಡರ, ಅಲಪಾತ ದವಾಖಾನೆ ನಾಯು, ಸಯಾನ. ಬಿ. ಸಿ. ಆಯ ರೇಲ್ವೇ ಸುರತ. (ಬರೋಡಾ ಏಜನ್ಸಿ)

(೩) ಬಾಂಡ ನಂ. ೧೫೩೬ ಶ್ರೀ. ಶ್ರೀರಾಮಮೂರ್ತಿ ಆರಾಧ್ಯಲು ರಾಮಚಂದ್ರರಾವ ಗುರು ಪೀರ ಪುರ ಗೋದಾವರಿ ಜಿಲ್ಹಾ.

(೪) ಬಾಂಡ ನಂ. ೧೭೬ ಶ್ರೀ. ನಂದಗಿರಿ ವೆಂಕಟರಾಮ ದಾಸ ಪ್ರೊಪ್ರಾಯಿಟರ ಮುಕುಂದ ಪುರ. ಕಾಕಿನಾಡು

(೫) ಬಾಂಡ ನಂ. ೫೨೮ ಶ್ರೀ. ಆರ್ ವೆಂಕಟಯ್ಯಾ ಗುರು ಇನಾಮದಾರ ಭೋವಯ್ಯಾ ಅಗ್ರಹಾರ. ಅಮಳ ಪುರಮ್.

೧—೮—೩೫ { ಬಿ. ಎಸ್. ಆರಾಧ್ಯ ಚೀಫ ಏಜಂಟ ಹುಬ್ಬಳ್ಳಿ

ಧಾತೂಪಧಾತು ರಸಮಹಾರಸಾದ್ಯಖನಿಜದ್ರವ್ಯಾನಿಭಸ್ಮಾಃ

(ಅಪೂರ್ವಸಂಧಿ!) ವನಸ್ಪತಿ ರಸಾಗ್ನಿ ಯೋಗಸಂಪನ್ನ: (ಸುಲಭದರ!!

ಔಷಧಿಗಳು.	ತೊಲೆ	ಬೆಲೆ	ಔಷಧಿಗಳು.	ತೊಲೆ	ಬೆಲೆ
ಅಭ್ರಕಭಸ್ಮ ೧೦೦೦ ಪುಟ	೧	೪೦	ತ್ರಿವಂಗಭಸ್ಮ-ಶ್ವೇತವರ್ಣ	೩	೩
,, ೫೦೦ ,,	೧	೨೦	ಸುವರ್ಣ ಮಾಕ್ಷಿಕಭಸ್ಮ	೫	೪
,, ೧೦೦ ,,	೧	೫	ನಾಗಭಸ್ಮ-ಶ್ವೇತ, ಪೀತ,	೩	೩
,, ಸಿಂಧೂರ	೨|	೪	ಮೃಗಶೃಂಗಭಸ್ಮ-ಶ್ವೇತ	೫	೩
ಲೋಹ ಭಸ್ಮ-ರಕ್ತವರ್ಣ	೩	೫	ಸುವರ್ಣರಾಜವಂಗೇಶ್ವರ	೩	೭
ಮಂಡೂರ ಭಸ್ಮ-ರಕ್ತವರ್ಣ	೩	೨	ಸಿದ್ಧಮಕರಧ್ವಜ-ಅನುಪಾನಮಿಶ್ರ ಗುಳಿಗೆಗಳು-೫೦	–	೫
ವಂಗಭಸ್ಮ-ಶ್ವೇತವರ್ಣ	೩	೩	ಪ್ರಾಚೀನ ಹೇಮಗರ್ಭಮಾತ್ರಾ	೧	೧೦೦

ಔಷಧಿಗಳು ಪರೀಕ್ಷಾಂತ್ಯದಲ್ಲಿ ಸದೋಷವೆಂದು ಕಂಡುಬಂದಲ್ಲಿ ವಾಪಸು ಮಾಡಬಹುದು. ಎಲ್ಲಪ್ರಕಾರದ ಬೇರೆ ಬೇರೆ ಔಷಧಿಗಳೂ, ಔಷಧೋಪಯೋಗಿ ದ್ರವ್ಯಗಳೂ ಸುಲಭ ಬೆಲೆಗೆ ದೊರಕುವವು.

ವೈದ್ಯ— ವಾಮದರಾವ ಜಹಾಗೀರದಾರ ಇಲಕಲ್ಲ. ಜಿ. ವಿಜಾಪೂರ.

ಈ ಪತ್ರಿಕೆಯು ಮಂಗಳವೇಢ ರಾಜೇಂದ್ರರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ವಾ. ಚಂದಾ ೧-೧೪-೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ನವಾವಿಷ್ಟವಾಗಿದೆ.)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು:- ಬಾಗಲಕೋಟೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ಬಾಗಲಕೋಟೆ ಶುಕ್ರವಾರ ಮಿತಿ ಆಶ್ವೀನ ವದ್ಯ ೭ ಶಕ ೧೮೪೭. ತಾ|| ೯-೧೦-೧೯೨೫. { ಸಂಚಿಕೆ ೨೭

MYSORE 16 OCT 2 2 15 P.

ಸಂಪಾದಕರ ಭೂಮಿ.

ನನ್ನ ಮನಸಿನ ವೀಣವಮಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮ।
ಚಿನ್ನದಾಸದು ಚಿನ್ನ ವೀಣಬಸ್ತಿಯ ನೊಂದು ॥
ಚಿನ್ಮಯಾಕಾಶದಲ್ಲಿ ॥

ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬವ ।
ಗಂಧವಹನೆಂದು ತಿಳಿಯೆ ॥

—ಅಂಬಿಕಾತನಯ ದತ್ತ

ಕರ್ನಾಟಕ ಟಾಯಿಮ್ಸದಲ್ಲಿ 'ಕನ್ನಡಿಗ'ನಲ್ಲಿ ಪ್ರಸಿದ್ಧವಾದ 'ಪ್ಯೆಯೊಳಗಿನ ಎಮ್ಮೆ' ಎಂಬ ಲೇಖವು ಮುದ್ರಿತವಾಗಿದೆ. ಆದರೆ ವೃತ್ತಪತ್ರಿಕಾ ಕರ್ತೃಗಳ ಸೌಜನ್ಯಕ್ಕೆ ಸರಿಯಾಗಿ, ಅದು 'ಕನ್ನಡಿಗ'ನಿಂದ ಎತ್ತಿ ಬರೆಯಲ್ಪಟ್ಟದ್ದೆಂಬದನ್ನು ಸಂಪಾದಕರು ತೋರಿಸಿಲ್ಲ. ಹೀಗೆಯೇ ಹಿಂದಕ್ಕೊಮ್ಮೆ 'ಸತ್ಯಾಗ್ರಹಿ'ಯೂ 'ಭಕ್ತಿಯ ಅಂಜಲಿ' ಎಂಬ ಲೇಖವನ್ನು 'ಕನ್ನಡಿಗ'ನದೆಂಬದನ್ನು ಒಪ್ಪಿಕೊಳ್ಳದೇ, ಪ್ರಸಿದ್ಧಿಸಿತ್ತು. ಸುದ್ದಿಗಳನ್ನು ಬೇರೆ ಪತ್ರಿಕೆಗಳಿಂದ, ಪತ್ರಿಕೆಗಳ ಹೆಸರನ್ನು ಹಾಕದೇ ತೆಗೆದುಕೊಳ್ಳಬಹುದಾದರೂ, ಲೇಖಗಳನ್ನು ಹೀಗೆ ಹಿಡಿಯುವದು ಉಚಿತವಲ್ಲ. ಒಮ್ಮೊಮ್ಮೆ ಮನಸ್ಸಿನಲ್ಲಿರದಿದ್ದರೂ, ಅಲಕ್ಷ್ಯದಿಂದಲೂ ಹೀಗಾಗುವ ಸಂಭವವಿದೆ. ಇನ್ನು ಮೇಲಾದರೂ ವೃತ್ತಪತ್ರಿಕೆಗಳು ಜಾಗೃತವಾಗಿರಲಿ.

ಜೀವದಯಾ ಸಂಸ್ಥೆಗಳು ಈಗ್ಗೆ ಅನೇಕ ಕಡೆಯಲ್ಲಿ ಚಟುವಟಿಕೆಯಿಂದ ಕೆಲಸಮಾಡುತ್ತಿರುವವು. ಸರಿಯಾಗಿದೆ. ಆದರೆ ಈ ಸಂಸ್ಥೆಗಳು ಮುದ್ರಣಕ್ಕಾಗಿ ಹೆಚ್ಚಾಗಿ, ಹಣ ವೆಚ್ಚಮಾಡುತ್ತಲಿವೆ. ಮಾಂಸಭಕ್ಷಕರಾದ ಸುಶಿಕ್ಷಿತರು ಈ ವಿನಂತಿಗಳನ್ನು ಕಂಡು ನಗುವರು. ಮಾಂಸ ತಿನ್ನದ ಸುಶಿಕ್ಷಿತರು ಈ ವಿಷಯವು ತಮಗೆ ಗೊತ್ತೇ ಇರುವದೆಂದು ಅವನ್ನು ಓದರು. ಇನ್ನು ಅಶಿಕ್ಷಿತರಂತೂ ಈ ಉದಾತ್ತ ವಿಷಯಗಳ ಗೊಡವೆಗೆ ಹೋಗರು. ಹೀಗಾಗಿ, ಈ 'ವಿನಂತಿಗಳು' ಫಲಕಾರಿಯಾಗಿಲ್ಲ. ಹಣವೇನೋ ವ್ಯಯವಾಗುವದು ನಿಜ. "ಮುಸಲ್ಮಾನ, ಕ್ರಿಶ್ಚನ್ ಅಥವಾ ಇನ್ನಿತರ ಭಾವನಾತ್ಮಕರಾದ ಬೋರೆಗಳಿಂದ ದನಗಳ ಕೊಲ್ಲುವಿಕೆಯನ್ನು ನಿಲ್ಲಿಸರು. ಪ್ರಾಣಿಗಳಲ್ಲಿಯ ಪ್ರೀತಿಯಿಂದ ಪ್ರೇರಿತರಾದ ಪವಿತ್ರ ಶೈವ ಮಹಿಳೆಯರಿಗೆ ದನಗಳನ್ನು ರಕ್ಷಿಸುವ ದಾರಿಯು ಗೊತ್ತಿಲ್ಲ. ಹೀಗೆಂದೇ ಪಶುಗಳ ಚರ್ಮದಿಂದ ಈ ಹೊತ್ತಿನಲ್ಲಿ ಹಿಂದುಸ್ಥಾನದಲ್ಲೆಲ್ಲ ಹಾಳಾಗಿ ಹೋಗುತ್ತಿರುವ ಹಣವನ್ನು ಜಾಣತನದಿಂದ ಒಳ್ಳೆಯ ಹಾದಿಗೆ ಹಚ್ಚಬೇಕಾಗಿದೆ. ಹಾಗಾದರೆ ಮಾತ್ರ ಗೋ-ಹತ್ಯೆಯು ನಿಲ್ಲಬಹುದಾಗಿದೆ." ಎಂಬದಾಗಿ ಮಹಾತ್ಮಾ ಗಾಂಧಿಯವರು ಈ ವಾರದ 'ಯಂಗ ಇಂಡಿಯಾ' ದಲ್ಲಿ ಬರೆದದ್ದನ್ನು ಗೋ-ಭಕ್ತರು ಮನನ ಮಾಡಿಕೊಳ್ಳಲಿ!

'ಕಂಠೀರವ'ನು ಕರ್ನಾಟಕ ವಿಶ್ವವಿದ್ಯಾಲಯದ ಬಗ್ಗೆ, ತನ್ನ ಸಿಂಹನಾದಕ್ಕೆ ಒಪ್ಪುವಂತೆ ಒಂದು ಸಲ ಗರ್ಜಿಸಿಬಿಟ್ಟನು. ಈ ವಿಶ್ವವಿದ್ಯಾಲಯದ ವಿಷಯದಲ್ಲಿ ತೊಡಕುಗಳಿವೆಯೆಂಬದನ್ನು ಎಲ್ಲರೂ ಬಲ್ಲರು. ಆ ತೊಡಕುಗಳನ್ನು ಮತ್ತಿಷ್ಟು ಬಿಗಿಯಾಗಿ ಮಾಡುವವರು ಈಗ್ಗೆ ಬೇಕಾಗಿಲ್ಲ. ಆದರೆ ಅವನ್ನು ಬಿಡಿಸುವವರು ಬೇಕು. ಅಖಂಡ ಕರ್ನಾಟಕವು ಒಮ್ಮನಸ್ಸಿನಿಂದ ಒಂದೇ ವಿಷಯದ ಬಗ್ಗೆ ಪ್ರಯತ್ನಿಸುವದು ನಮಗೆ ಬೇಕಾಗಿದೆ. ಇದರಿಂದ ಏಕ ಕರ್ನಾಟಕ ಭಾವನೆಯು ಬೇಗನೇ ಕನ್ನಡಿಗರಲ್ಲಿ ನೆಲೆಗೊಳ್ಳುವದು. ಹಂಚಿಹೋದ ಕರ್ನಾಟಕದಲ್ಲಿ ಏಕ ಕರ್ನಾಟಕ ಭಾವನೆಯೊಂದು ತಳವೂರಿದರೆ ಕರ್ನಾಟಕದ ಉದ್ಧಾರದ ದಿನಗಳು ಸಮೀಪಿಸಿದವೆಂದು ತಿಳಿಯಬಹುದು. ಮೈಸೂರ ವಿಶ್ವವಿದ್ಯಾಲಯವು ಕರ್ನಾಟಕದ ವಿಶ್ವವಿದ್ಯಾಲಯವಾಗುವಹಾಗೆ ಪ್ರಯತ್ನ ನಡೆಯಬೇಕು. ಈ ಉದ್ದೇಶಕಾರ್ಯವು ಕೈಗೂಡಲಿಕ್ಕೆ ಇದೊಂದು ಮಾರ್ಗ. ಮೈಸೂರವರು ಇದಕ್ಕೆ ಒಪ್ಪಲಿಕ್ಕಿಲ್ಲ. 'ಸಿನೇಟ'ದಲ್ಲಿ ಬ್ರಿಟಿಶ ಕರ್ನಾಟಕದವರಿಗೆ ತೊಂದರೆಯಾಗಬಹುದು. ಬ್ರಿಟಿಶ ಸರಕಾರದವರು ಈ ವಿಚಾರವನ್ನು ವಿರೋಧಿಸಬಹುದು. ಇನ್ನೂ ಅಪ್ರತ್ಯಕ್ಷವಾದ ಆತಂಕಗಳೂ ಉದ್ಭವಿಸಬಹುದು. ಆದರೆ ಅವುಗಳ ಕಲ್ಪನೆಯಿಂದ ಬೆದರಿದರೆ ಹೇಗೆ? ಆ ಎಡರುಗಳು ಹಾರಿಹೋಗುವ ಹಾಗೆ ಪ್ರಯತ್ನಗಳಾಗಬೇಕು. ಒಂದು ವೇಳೆ ಈ ಪ್ರಯತ್ನದಲ್ಲಿ ಯಶವು ದೊರೆಯದಿದ್ದರೂ ಸರಿ. ಮೈಸೂರು, ಮಂಗಳೂರು, ಬಳ್ಳಾರಿ, ಉತ್ತರ ಕರ್ನಾಟಕ, ಕೊಡಗು, ನಿಜಾಂ ಮೊದಲಾದ ಕರ್ನಾಟಕದ ಭಾಗದವರೆಲ್ಲರೂ, ಜಾತಿ ಮತ್ತು ರಾಜಕೀಯ ಮತಗಳ ಭೇದಭಾವವಿಲ್ಲದೇ ಈ ವಿಷಯದಲ್ಲಿ ಕೆಲಸಮಾಡಲು ಅವಕಾಶವಿದೆ. ಈ ವಿಶ್ವವಿದ್ಯಾಲಯದ ಪ್ರಶ್ನೆಯೂ ಸರಕಾರಕ್ಕೆ ಮುಂದೆ ಬಂದಿದೆ. ಆದ್ದರಿಂದ ಈ ಸುಪ್ರಸಂಗವನ್ನು ಹೋಗಗೊಡುವದೇಕೆ? ಕರ್ನಾಟಕದ ಎಲ್ಲ ಭಾಗದವರೂ, ಒಂದೇ ವಿಷಯದ ಬಗ್ಗೆ ಹೋರಾಡುವ ಕಣವು ಸಿದ್ಧವಾಗಲಿ. ಅಖಂಡ ಕರ್ನಾಟಕವು ಒಂದೆಡೆಗೂ, ಸರಕಾರಗಳು ಇನ್ನೊಂದೆಡೆಗೂ ಆ ಕಣದಲ್ಲಿ ಕುಸ್ತಿಯಾಡಲು ಶಿದ್ಧರಾಗಬೇಡ ನಿಲ್ಲಲಿ. ಮುಂದೆ ಪರಿಣಾಮವು ತಾನೇ ಗೊತ್ತಾಗುವದು.

ಕಾನಡಾ ಧುರೀಣನು ಏಕೀಕರಣದ ವಿಷಯವನ್ನು ಮೇಲಿಂದಮೇಲೆ ಪ್ರತಿಪಾದಿಸುತ್ತಿರುವನು. ಇವನು ಏಕೀಕರಣದ

ವಿಷಯದಲ್ಲಿ ಇಷ್ಟೊಂದು ಆತುರತೆ, ದಕ್ಷತೆಯನ್ನು ತೋರಿಸುತ್ತಿರುವದು ಪ್ರಶಂಸನೀಯವಾಗಿದೆ. ಇದರಿಂದ "ಕನ್ನಡಿಗ"ನಿಗೆ ಆನಂದವಾಗಿದೆ. ಕರ್ನಾಟಕ ಪತ್ರಿಕೆಗಳೆಲ್ಲ ಇದೇ ಪ್ರಕಾರವಾಗಿ ಏಕೀಕರಣದ ವಿಷಯದಲ್ಲಿ ವಿಶೇಷವಾಗಿ ಮನಸ್ಸುಹಾಕಿ ಜನರಲ್ಲಿ ಜಾಗೃತಿಯನ್ನುಂಟುಮಾಡಿದರೆ ಅದೊಂದು ಕಾರ್ಯವಾಗುವದು. ಈ ಏಕೀಕರಣ ಸಭೆಯು ಹೊರಟು ೧೦ ತಿಂಗಳುಗಳಾದವು. ಈ ಹಸುಗೂಸು ಈ ಅವಧಿಯಲ್ಲಿ ತನ್ನ ಕೈಯಿಂದಾದಷ್ಟು ಕೆಲಸ ಮಾಡಿದೆ; ಮಾಡುತ್ತಲಿದೆ. ಪ್ರಾರಂಭದಲ್ಲಿ ಎಡರುಗಳು ಎಣಿಕೆಯಿಲ್ಲದೆ ಬರುತ್ತಿರುವದು ಸಾರ್ವಜನಿಕ ಸಂಸ್ಥೆಗಳಿಗೆ ಸ್ವಾಭಾವಿಕ. ಇರಲಿ! ಅಲ್ಲಲ್ಲಿ ಏಕೀಕರಣ ಸಭೆಯ ಶಾಖೆಗಳು ಸ್ಥಾಪಿಸಲ್ಪಟ್ಟಿವೆ. ಆದರೆ ಇವುಗಳ ಕರ್ತವ್ಯವೇನೆಂದು 'ಧುರೀಣ'ನು ಪ್ರಶ್ನೆ ಮಾಡಿದ್ದಾನೆ. ಇವುಗಳ ಕರ್ತವ್ಯವೆಂದರೆ ಆ ಸ್ಥಳಗಳಲ್ಲಿ ಸಭಾಸದರನ್ನು ದೊರಕಿಸುವದು, ಜನರಲ್ಲಿ ಏಕೀಕರಣದ ಬಗ್ಗೆ ಅನೇಕ ಬಗೆಯಿಂದ ಜಾಗೃತಿಯನ್ನುಂಟುಮಾಡುವದು, ಹಣ ಕೂಡಿಸುವದು, ಮತ್ತು ಮಧ್ಯವರ್ತಿ ಏಕೀಕರಣ ಸಭೆಯ ಉದ್ದೇಶವು ಸಫಲವಾಗುವಂತೆ ಪ್ರಯತ್ನಿಸುವದು. ಇನ್ನೂ ಈ ಮಧ್ಯವರ್ತಿ ಸಭೆಯು ಮಾಡತಕ್ಕ ಕೆಲಸಗಳನೇಕವಾಗಿರುವವೆಂಬದರಲ್ಲಿ ಸಂಶಯವಿಲ್ಲ, ಆದರೆ ಮಧ್ಯದಲ್ಲಿ ಆತಂಕಗಳೂ ಅನೇಕ ವಿಧವಾಗಿವೆ ಅವನ್ನು ದೂರಮಾಡುವ ಕಾಲವು ಬೇಗನೆ ಸಮೀಪಿಸಲಿಕ್ಕುವದಾಗಿ ಆಶಿಸುತ್ತೇವೆ.

ವಿಜಾಪೂರ ಜಿಲ್ಲೆಯ ಬರಗಾಲದ ಬಗ್ಗೆ ಸರಕಾರವು ಕೊಂಡ ಎಚ್ಚರಿಕೆಯಂತೆ ಕಾಣುತ್ತದೆ. ಈ ಸಂಚಿಕೆಯಲ್ಲಿ ಬೇರೆ ಕಡೆಗೆ ಮುದ್ರಿತವಾದ ಕಲೆಕ್ಟರರ ಜಾಹೀರನಾಮೆಯನ್ನು ವಾಚಕರು ಓದಬೇಕು. ವಿಶೇಷತಃ ಈ ಜಿಲ್ಲೆಯಲ್ಲಿಯ ಜನರು ಅದನ್ನು ಚನ್ನಾಗಿ ಓದಬೇಕು. ಅದರಲ್ಲಿ ಸೂಚಿತವಾದಂತೆ, ಎಲ್ಲೆಲ್ಲಿ ಕಾಲುವೆಗಳನ್ನಾಗಲೀ, ಬಾವಿಗಳನ್ನಾಗಲೀ ನಿರ್ಮಿಸುವದು ಶಕ್ಯವಿದೆಯೆಂಬದನ್ನು ಅಭ್ಯಾಸಿಸಬೇಕು. ಪ್ರತಿಯೊಂದು ಹಳ್ಳಿಯ ಜನರು ತಮ್ಮ ತಮ್ಮ ಅನುಕೂಲತೆಗಳ ಪ್ರಕಾರ ವಿಚಾರಮಾಡಿ ಆಬಗ್ಗೆ ತಮ್ಮತಮ್ಮೊಳಗೆ ನಿರ್ಣಯಗಳನ್ನು ಮಾಡಿಕೊಂಡು ಆಬಗ್ಗೆ ಕಲೆಕ್ಟರರಿಗೂ "ಕನ್ನಡಿಗ"ನಿಗೂ ಅವಶ್ಯವಾಗಿ ಬರೆಯಬೇಕು. ಓದು ಬರಹ ಬಲ್ಲವರು ಬಹುಸಂತಹ, ಮತ್ತು ಸಾರ್ವಜನಿಕ ಸಂಗತಿಗಳಲ್ಲಿ ಮನಸ್ಸು ಹಾಕುವಂಥ ಜನರು ಈ ವಿಷಯದಲ್ಲಿ ಹೆಚ್ಚು ಲಕ್ಷ್ಯಕೊಡತಕ್ಕದ್ದು. ಯಾಕೆಂದರೆ ಸರಕಾರದ ಲಕ್ಷ್ಯವು ಬರಗಾಲದಂಥವ ಮತ್ತು ವಿಶೇಷ ಹಣ ವೆಚ್ಚವಾಗುವಂತಹ ವಿಷಯಗಳ ಕಡೆಗೆ— ವಿಶೇಷತಃ ಈಗಿನ 'ರಿಟ್ರೆಂಚಮೆಂಟಿನ' ದಿನಗಳಲ್ಲಿ ಹತ್ತುವದು ಬಹಳ ಕಠಿಣ. ಆದರೆ ಕಪಿಲಪಷ್ಟಿಯೋಗದಂತೆ ಅವರ ನಿರ್ಣಯವೇನೋ ಈಗ್ಗೆ ಹೊರಕ್ಕೆ ಬಂದಿದೆ. ಇವೇನು ಬಣ್ಣದ ಮಾತುಗಳೋ ಅಥವಾ ನಿಜವಾಗಿಯೂ ಬಡವರ ಬವಣೆಯನ್ನು ಪತ್ರಿಕೆಗಳನ್ನು ಕಳವಳದಿಂದ ಕೊನೆಗಾಣಿಸುವ ನಿರ್ಧಾರವೋ, ಎಂಬುದನ್ನು ಒರೆಗೆ ಹಚ್ಚಿಯಾದರೂ ನೋಡುವಾ. ಆದುದರಿಂದ ಈ ಜಿಲ್ಲೆಯ ಸುಶಿಕ್ಷಿತ ಜನರೆಲ್ಲ, ಈ ನಿರ್ಧಾರವನ್ನು ತಮ್ಮ ತಮ್ಮ ಹಳ್ಳಿಗಳಲ್ಲಿ ಡಂಗುರ ಹೊಡಿಸಿ, ಅಲ್ಲಲ್ಲಿ ಬೇಕಾಗಿರುವ ಸೌಕರ್ಯಗಳ ಬಗ್ಗೆ ಸರಕಾರಕ್ಕೆ ಕೂಡಲೇ ತಿಳುಹಿಸಿ, ವೃತ್ತ ಪತ್ರಿಕೆಗಳಲ್ಲಿಯೂ ಆಬಗ್ಗೆ ಲೇಖಗಳನ್ನು ಬರೆದು ಚಳವಳವನ್ನು ಮಾಡಬೇಕು. 'ಕನ್ನಡಿಗ'ನಂತೂ ಅಂಥಹ ಸೇವೆಗಾಗಿ ಟೊಂಕಕಟ್ಟಿ ನಿಂತಿರುವನೆಂಬದನ್ನು ಎಲ್ಲರೂ ಬಲ್ಲರಷ್ಟೇ?

ರೇಲ್ವೆ ಬೋರ್ಡಿನ ಅರ್ಜಿಗೆ ಈ ತಿಂಗಳಲ್ಲಿ ನಮ್ಮ ಕಡೆಗೆ ಹೆಚ್ಚಾಗಿ ಸಹಿಗಳು ಬಂದದ್ದು ಶುಭ ಚಿನ್ಹವು. ಇನ್ನೂ ಹೆಚ್ಚಾಗಿ ಸಹಿಗಳು ಬೇಕಾಗಿದ್ದರಿಂದ ಈ ವಾರದ ಸಂಚಿಕೆಯ ಸಂಗಡ, ಕಳೆದ ಸಂಚಿಕೆಯಲ್ಲಿ ಕಳಿಸಬೇಕಾಗಿದ್ದ, ರೇಲ್ವೆ ಬೋರ್ಡಿನ ಅರ್ಜಿಯ ನಮೂನೆಯನ್ನು ಹಂಚಿದೆ. ಪ್ರತಿಯೊಬ್ಬ ವಾಚಕನೂ ಕೂಡಲೇ ಆದಷ್ಟು ಹೆಚ್ಚಾಗಿ ಸಹಿಗಳನ್ನು ಕೂಡಿಸಿ ಕಳುಹಿಸಬೇಕಾಗಿ ಪ್ರಾರ್ಥನೆಯಿದೆ. ನಾವು ನವಂಬರ ಅಂತ್ಯದ ವರೆಗೆ ದಾರೀ ನೋಡಿ ಆಮೇಲೆ ಈ ಅರ್ಜಿಗಳನ್ನು ರೇಲ್ವೆ ಬೋರ್ಡಿಗೆ ಕಳುಹಿಸುವೆವು. ಆದ್ದರಿಂದ ಅರ್ಜಿಗಳನ್ನು ಕಳುಹಿಸಲು ಇನ್ನೂ ಅವಧಿಯಿದೆ. ಬೆಳಗಾವಿಯ ರೇಲ್ವೆ ಮಂಡಲದವರೂ ಈಬಗ್ಗೆ ಆತುರರಾಗಿದ್ದು ಶ್ರೀ. ಬೆಳವಿಯವರ ಕಡೆಯಿಂದ ದಿಲ್ಲಿಯ ಕಾಯದೇ ಮಂಡಲದಲ್ಲಿ ಈ ಪ್ರಶ್ನೆಯನ್ನು ತರಿಸುವ ವ್ಯವಸ್ಥೆ ಮಾಡಿದ್ದಾರೆ. ಜನರೂ ಈ ವಿಷಯದ ಬಗ್ಗೆ ಕನ್ನಡ ಇಂಗ್ಲೀಷ ಮರಾಠೀ ಪತ್ರಿಕೆಗಳಲ್ಲೆಲ್ಲ ಲೇಖಗಳನ್ನು ಬರೆದು ಚಳವಳವನ್ನು ಎಬ್ಬಿಸುವದು ಅಗತ್ಯವಿದೆ. ನವಲಗುಂದದ ಶ್ರೀ. ದೇಶಪಾಂಡೆಯವರು ಈಬಗ್ಗೆ ಹೆಣಗಾಡಲು ಸಿದ್ಧರಾಗಿದ್ದಾರೆ. ಉಳಿದ ಕಡೆಯ ಅಭಿಮಾನಿಗಳೂ ಜಾಗೃತರಾಗಿರಲಿ!

ಬೆಳಗಾವಿಯ ರೇಲವೇ ಮಂಡಲದ ಕಾರ್ಯದರ್ಶಿಗಳಾದ ಶ್ರೀ ಮರಾಠೆಯವರು ಅವಿಶ್ರಾಂತವಾಗಿ ರೇಲವೇ ಸೌಕರ್ಯಕ್ಕಾಗಿ ಪ್ರಯತ್ನಿಸುತ್ತಿರುವದು ಉತ್ತರ ಕರ್ನಾಟಕಸ್ಥರಿಗೆ ಗೊತ್ತೇ ಇದೆ. ಶ್ರೀ. ಮರಾಠೆಯವರ ಪರಿಚಯವು ದಕ್ಷಿಣ ಕರ್ನಾಟಕಸ್ಥರಿಗಾಗಿಲ್ಲ ಅವರು ಅತ್ತ ಕಡೆಗೂ ಲಕ್ಷ್ಯಪೂರೈಸಬೇಕಾಗಿ ಸೂಚಿಸುತ್ತೇವೆ ಬೊಂಬಾಯಿ, ಪುಣೆ, ಕಲ್ಯಾಣ, ಮುಂಬಯಿ ನಾಸಿಕಗಳನ್ನು ಸುತ್ತುರಿಸಿ ಬಂದಂತೆ, ಬಳ್ಳಾರಿ, ಬೆಂಗಳೂರ, ಮೈಸೂರ, ಕೋಯಿಮತ್ತೂರ, ಮಂಗಳೂರಗಳನ್ನೂ ಸುತ್ತುರಿಸಿ ಅಲ್ಲಿಯ ರೇಲವೇ ಅನಾನುಕೂಲತೆಗಳನ್ನೂ ಹೊರಗೆಡುವದು ಕರ್ನಾಟಕದಲ್ಲಿದ್ದ ಬೆಳಗಾವ ರೇಲವೇ ಮಂಡಲಕ್ಕೆ ಭೂಷಣವಾದುದು ಈ ಸೂಚನೆಗೆ ಈ ಮಂಡಲದವರು ಒಪ್ಪುವರಾಗಿ ನಮ್ಮ ನಂಬಿಗೆಯಿದೆ. ಇರಲಿ 'ನಾತಾಳ' ಸೂಟಿಯಲ್ಲಿ ಮೊದಲನೇ ಎರಡನೇ ವರ್ಗಗಳಲ್ಲಿ ಜಿಕಿರಿ ಕಡಿಮೆ ಮಾಡುವಂತೆ 'ಇಂಟರ' ಮತ್ತು ಮೂರನೇ ವರ್ಗದ ದರಗಳನ್ನು ಕಡಿಮೆ ಮಾಡಬೇಕೆಂದು ಇಕ್ಕಟ್ಟಿನ ಈಗಿನ 'ಇಂಟರ' ಡಬ್ಬಿಗಳನ್ನು ತೆಗೆದು ಹಾಕಿ ಹೊಸ ನಮೂನೆಯ ವಿಶಾಲವಾದ 'ಇಂಟರ' ಡಬ್ಬಿಗಳನ್ನು ಸಿದ್ಧಪಡಿಸಬೇಕೆಂಬದಾಗಿಯೂ ರೇಲವೇ ಗಾಯಿದೆಗಳನ್ನೂ ಇಂಗ್ಲೀಷಿನಂತೆ ಕನ್ನಡ ಮರಾಠೀಗಳಲ್ಲಿಯೂ ಮುದ್ರಿಸಬೇಕಾಗಿಯೂ, ಒಳ್ಳೇ ಬಿಗುಟಿನಿಂದ ಪ್ರಯತ್ನ ನಡಿಸಿದ್ದಾರೆ. ಇದು ಈ ಮಂಡಲಕ್ಕೆ ಯೋಗ್ಯವಾದುದೇ. ಆದರೆ ಈ ಪ್ರಯತ್ನಕ್ಕೆ ಕನ್ನಡ ವೃತ್ತಪತ್ರಕಾರರು ಲೇಖಗಳನ್ನು ಬರೆಯುತ್ತಲೂ ಕರ್ನಾಟಕದೊಳಗಿನ ಶ್ರೀಮಂತರು ಕೊಡತಕ್ಕ ದೊರೆಯುಂತೆ ಧನವನ್ನು ಸಹಾಯ ಮಾಡುತ್ತಲೂ, ಮುಖ್ಯ ಕನ್ನಡ ಅಲ್ಲಲ್ಲಿ ಈ ರೇಲ್ವೇ ಮಂಡಲದ ಶಾಖೆಗಳನ್ನೂ ಸ್ಥಾಪಿಸುತ್ತಲೂ ಸಹಾಯ ಮಾಡಬೇಕಾಗಿ ಅಗ್ರಹ ಪಡುತ್ತೇವೆ.

ಹಾಟಿನಾಬಳ್ಳಿ ಕರ್ನಾಟದ ಅಖಿಲ ಭಾರತ ರಾಷ್ಟ್ರೀಯ ಮಂಡಲವು ಅತ್ಯಂತ ಮಹತ್ವಪೂರ್ಣದ್ದಾಗಿತ್ತೆಂಬದನ್ನು ಹೇಳುವ ಕಾರಣವಿಲ್ಲ ರಾಷ್ಟ್ರೀಯ ಸಭೆಯ ಘಟನೆಯಲ್ಲಿ ಅದರ ಕಾರ್ಯವನ್ನು ನಡೆಸುವದಕ್ಕಾಗಿ ನಿರ್ಮಿಸಲ್ಪಟ್ಟ ಚಿಕ್ಕ ಮಂಡಲವು ಮಹತ್ವದ ಠರಾವುಗಳನ್ನು ಮಾಡುವದೆಂದರೆ ಸಾಧಾರಣವಾಗಿ ತೀರ ಅಸಂಭವನೀಯ. ಹೇಳುವದಕ್ಕೇನೂ ಆತಂಕವಿಲ್ಲ ಆದರೆ ಬರಾ ವರಿಗಳನ್ನು ಮಾಡದೆ ಇರುವದರಿಂದ ರಾಷ್ಟ್ರೀಯ ಸಭೆಯ ಅಸ್ತಿತ್ವಕ್ಕೆ ಭಯಂಕರವಾದ ಬಾಧೆಯುಂಟಾದ ಸಂಪ್ರದಾಯವನ್ನು ಬರೀ ಮಾಡದೂ ಘಟನೆಯಲ್ಲಿ ತಿದ್ದುವದನ್ನು ಮಾಡುವ ಸಮರ್ಥ ಪ್ರಯತ್ನವಾದದ್ದು ಯಾವುದೇ ಎಂದು ನಿಶ್ಚಯವಾಗಿ ಹೇಳುವದು. ಅಂಥ ಪರಿಸ್ಥಿತಿಯು ಈಗ ರಾಷ್ಟ್ರದಲ್ಲಿ ಉಂಟಾಗಿ ಪ್ರಮುಖವಾಗಿ ಅಖಿಲ ಭಾರತೀಯ ರಾಷ್ಟ್ರೀಯ ಮಂಡಲಕ್ಕೆ ಬಂದಿದ್ದ ಮುಂದಾಳುಗಳೆಲ್ಲ ಒಬ್ಬೊಬ್ಬರನ್ನೇ ತೊರೆದು ಕಡಿಮೆ ಕಡಿಮೆಯಾಗಿ ದೇಶದ ಬಹುಭಾಗವನ್ನು ಕೊಟ್ಟಿರುವ ಮಹಾತ್ಮಾ ಗಾಂಧಿ ಬರಲಾ

ವಣಿಗಳನ್ನು ಮಾಡುವದಕ್ಕೆ ಮಹಾತ್ಮಾಜಿಯವರು ಸಮ್ಮತಿಸಿದರು. ಮಹಾತ್ಮಾಜಿಯವರಿಗೆ ಬದಲಾವಣೆಗಳು ಅತ್ಯವಶ್ಯವೆಂದು ತೋರಿದಾಗ್ಯೂ ತಮ್ಮ-ಮತವನ್ನು ಸಭಾಸದರ ಮೇಲೆ ಒತ್ತಾಯ ಪಡಿಸಲಿಲ್ಲ. ಇರಲಿ. ಈಗ ಬಹುಮತದಿಂದ ನಿರ್ಧರಿಸಲ್ಪಟ್ಟ ನಿರ್ಣಯಗಳೆಂದರೆ ಇನ್ನು ಮೇಲೆ ರಾಷ್ಟ್ರೀಯ ಸಭೆಯ ಸಭಾಸದರಾಗಬೇಕಾದರೆ ಕೇವಲ! ನೂಲನ್ನೇ ಕೊಡಬೇಕೆಂಬ ನಿರ್ಬಂಧವಿರದೆ ಸ್ವತಃ ಕೈಯಿಂದ ತೆಗೆದ ಎರಡು ಸಾವಿರ ಗಜ ನೂಲನ್ನಾಗಲಿ ಇಲ್ಲವೆ ನಾಲ್ಕು ಆಣೆಗಳನ್ನಾಗಲಿ ವರ್ಷಕ್ಕೊಮ್ಮೆ ಕೊಟ್ಟು ರಾಷ್ಟ್ರೀಯ ಸಭೆಯ ಧ್ಯೇಯಕ್ಕೆ ಒಪ್ಪಿಗೆಯನ್ನು ಕೊಡಬೇಕಾಗುವದು. ಬೆಳಗಾಂವಿಯಲ್ಲಿಯ ರಾಷ್ಟ್ರೀಯ ಸಭೆಯಲ್ಲಿ ನಿರ್ಣಯವಾದಂತೆ ೨೦,೦೦ ಗಜ ನೂಲನ್ನು ಕೊಟ್ಟರೆ ಮಾತ್ರ ರಾಷ್ಟ್ರೀಯ ಸಭೆಯ ಸಭಾಸದನಾಗಲಿಕ್ಕೆ ಬರುತ್ತಿತ್ತು. ಅದನ್ನು ರದ್ದು ಪಡಿಸಿದ್ದರಿಂದ ಈಗ ಸಭಾಸದರಾಗಲಿಕ್ಕೆ ಹಗುರಾಗಿರುವದು. ರಾಷ್ಟ್ರೀಯ ಸಭೆಯ ಸಭೆಗಳಿಗಾಗಲಿ ಇತರ ರಾಜಕೀಯ ಸಭೆಗಳಿಗಾಗಲಿ ಬರುವಾಗ ಖಾದಿಯನ್ನು ಹಾಕಿಕೊಂಡೇ ಬರಬೇಕೆಂಬ ನಿರ್ಬಂಧವು ಬೆಳಗಾವಿಯಲ್ಲಿ ಇದ್ದದ್ದು ಇನ್ನೂ ಹಾಗೆಯೇ ಉಳಿದದೆ. ಇದಕ್ಕೂ ಹೆಚ್ಚಿನದೆಂದರೆ ಉಳಿದ ವೇಳೆಗಳಲ್ಲಿ ಸಹ ಸಭಾಸದರು ಖಾದಿಯನ್ನು ಧರಿಸಬೇಕೆಂದೂ ವಿದೇಶಿ ಬಟ್ಟೆಯನ್ನಂತೂ ಸರ್ವಥಾ ಧರಿಸಕೂಡದೆಂದೂ, ರಾಷ್ಟ್ರೀಯ ಸಭೆಯ ಸಭಾಸದರಿಗೆ ಪಾಟಣಾದಲ್ಲಿಯ ಸಭೆಯು ಬಿನ್ನವಿಸಿಕೊಂ. ಅವರಂತೆ ಬೆಳಗಾವಿಯಲ್ಲಿ ಸ್ವರಾಜ್ಯ ಪಕ್ಷವು ಕಾನೂನು ಮಂಡಳಗಳಲ್ಲಿ ಕೆಲಸಮಾಡುವದಕ್ಕಾಗಿ ರಾಷ್ಟ್ರೀಯ ಸಭೆಯ ಪ್ರತಿನಿಧಿಯಾಗಿ ನಿಯಮಿಸಲ್ಪಟ್ಟಿತ್ತು. ಈಗ ರಾಷ್ಟ್ರೀಯ ಸಭೆಯವರೇ ಆಕಾರ್ಯವನ್ನು ಕೈಕೊಳ್ಳಬೇಕೆಂದು ಪಾಟಣಾದಲ್ಲಿ ನಿರ್ಣಯಿಸಲ್ಪಟ್ಟಿದೆ. ಇದರ ಹೊರತಾಗಿ ಅಖಿಲ ಭಾರತ ನೂಲುವವರ ಸಂಘ ಎಂಬ ಸಂಸ್ಥೆಯು ಖಾದಿಯ ಹಾಗು ಕೈನೂಲಿನ ಪ್ರಸಾರ ಮಾಡುವದಕ್ಕಾಗಿ ಸ್ಥಾಪಿಸಲ್ಪಟ್ಟಿದೆ.

ಅಖಿಲಭಾರತ ನೂಲುವವರ ಸಂಘ

ಈ ಸಂಸ್ಥೆಯು ರಾಷ್ಟ್ರೀಯಸಭೆಗೆ ಕೈನೂಲನ್ನು ಕೊಟ್ಟು ಸಭಾಸದರಾಗುವವರ ನೂಲನ್ನು ಪರೀಕ್ಷಿಸಿ ಮುಟ್ಟಿದ್ದಕ್ಕೆ ಪಾವತಿಯನ್ನು ಕೊಡಬೇಕು. ಈ ಸಂಸ್ಥೆಯ ಕೌನ್ಸಿಲದಲ್ಲಿ ಒಂಬತ್ತು ಜನ ಸಭಾಸದರು ಆರಿಸಲ್ಪಟ್ಟಿದ್ದು ಅವರಿಗೆ ಐದುವರ್ಷಗಳವರೆಗೆ ಸಂಪೂರ್ಣ ಸ್ವಾತಂತ್ರ್ಯವು ಕೊಡಲ್ಪಟ್ಟಿದೆ. ಮಹಾತ್ಮಾಗಾಂಧಿ, ಮೌಲಾನಾ ಶೌಕತಲ್ಲಿ, ಬಾಬೂ ರಾಜೇಂದ್ರಪ್ರಸಾದ, ಮೊದಲಾದವರು ಈ ಕೌನ್ಸಿಲದಲ್ಲಿರುವರು ಜಮುನಾಲಾಲ ಬಜಾಜರು ಕೋಶಾಧ್ಯಕ್ಷರ . ಕುರೇಶಿ, ಬ್ಯಾಂಕರ, ಜವಾಹಿರಲಾಲನೆಹರು, ಇವರು ಕಾರ್ಯದರ್ಶಿಗಳು. ಯಾವಾಗಲೂ ಖಾದಿಯನ್ನೇ ಧರಿಸಿ ತಿಂಗಳಿಗೆ ಒಂದು ಸಾವಿರ ಗಜ ಸ್ವತಃ ತಗೆದ ನೂಲನ್ನು ಕೊಟ್ಟರೆ, ಈ ಸಂಸ್ಥೆಯ 'ಅ' ವರ್ಗದ ಸಭಾಸದರಾಗಬಹುದು. ವರ್ಷಕ್ಕೆ ಎರಡು ಸಾವಿರಗಜ ಸ್ವತಃ ತೆಗೆದ ನೂಲನ್ನು ಕೊಟ್ಟರೆ, 'ಬ' ವರ್ಗದ ಸಭಾಸದರಾಗಬಹುದು. ವರ್ಷಕ್ಕೆ ಹನ್ನೆರಡು ರೂಪಾಯಿಗಳನ್ನು ಕೊಟ್ಟವರು "ಅಸೋಸಿಯೇಟ್ಸ್" ರಾಗಬಹುದು. ಒಮ್ಮೆಲೇ ಐದುನೂರುರೂಪಾಯಿಗಳನ್ನು ಕೊಟ್ಟರೆ, 'ಅಜೀವ ಸಹಕಾರಿಗಳಾಗಬಹುದು. ಎಲ್ಲರೂ ಯಾವಾಗಲೂ ಖಾದಿಯನ್ನೇ ಧರಿಸುವವರಿರತಕ್ಕದ್ದು. ಇದಕ್ಕೆ ಸಭಾಸದರಾಗಬೇಕಾದರೆ, ರಾಷ್ಟ್ರೀಯ ಸಭೆಯ ಸಭಾಸದರಾಗಬೇಕೆಂಬ ನಿರ್ಬಂಧವಿಲ್ಲ. ಇದು ಕೇವಲ ಹಿಂದುಸ್ಥಾನದ ದಾರಿದ್ರ್ಯವನ್ನು ಹಿಂಗಿಸುವ ಆರ್ಥಿಕ ಸಂಸ್ಥೆಯಾಗಿರುವದು. ಹೀಗೆ ರಾಷ್ಟ್ರೀಯ ಸಭೆಯಲ್ಲಿ ಪುನಃ ರಾಜಕಾರಣದ ಪ್ರತಿಷ್ಠೆಯನ್ನು ಮಾಡಿ, ಇವೊಂದು ಬೇರೆ ಆರ್ಥಿಕ ಸಂಘವು ಸ್ಥಾಪಿಸಲ್ಪಟ್ಟಿದೆ. ಈ ಸಂಘದ ಕಾರ್ಯವು ಮುಂದೆ ಹೇಗೆ ಸಾಗುವದೆಂಬವನ್ನು ನೋಡಬೇಕು.

ಬಳ್ಳಾರಿ ಸಮಾಚಾರವು

ಈ ಪತ್ರಿಕೆಯದ್ವಾರ ಈ ಮುಂಚೆಯೇ ತಿಳಿಸಿದ ಪ್ರಕಾರ ಮೊನ್ನೆ ಸೋಮವಾರ ದಿವಸ ನಡೆದ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗನಲ್ಲಿ ಆಂಧ್ರ ಯೂನಿವರ್ಸಿಟಿಗೆ ಸಹಾನುಭೂತಿ ಒಗ್ಗೆ ಒಂದು ಠರಾವು ತರಲ್ಪಡುವದರಲ್ಲಿತ್ತು. ಆದಿನ ಬೆಳಿಗ್ಗೆ ವೇ॥ ಟಿ. ಹೆಚ್. ಎಂ. ಚಂದ್ರಶೇಖರ ಶಾಸ್ತ್ರಿ ಬಿ. ಸಿ. ಬಿ. ಎಲ್. ವಕೀಲ ಮತ್ತು ಕಾರ್ಯದರ್ಶಿ 'ಕರ್ನಾಟಕ ಏಕೀಕರಣ ಸಂಘ' ಇವರು ಪ್ರತಿಒಬ್ಬ ಬೋರ್ಡಿನ ಮೆಂಬರ ಬಳಿಗೆ ಹೋಗಿ ಬಳ್ಳಾರಿ ಜಿಲ್ಲೆಗಳನ್ನು ಆಂಧ್ರ ಯುನಿವರ್ಸಿಟಿಗೆ ಸೇರಿಸಿದ್ದಾದರೆ, ಅದರಿಂದ ಉಂಟಾಗುವ ಕಷ್ಟನಷ್ಟಗಳನ್ನು ಕುರಿತು ಬಹಳ ಕಳಕಳಿಯಿಂದ ಹೇಳಿದ್ದರಿಂದಲೂ, ಮತ್ತು ಸದರಿ ಸಭ್ಯರೆಲ್ಲರೂ ಠರಾವಿನಕ್ಕೆ ವ್ಯತಿರಿಕ್ತ ಮತವನ್ನು ಕೊಡುತ್ತೇವೆಂದು ಹೇಳಿ ಬಹಳ ಹುರುಪಿನಿಂದ ಇದ್ದದ್ದರಿಂದಲೂ, ಸದರಿ ಸಭೆಯ ಅಧ್ಯಕ್ಷರಾದ ಮ. ರಾ, ಗೋಪಾಲ ಸ್ವಾಮಿ ಮೊದಲಿಯಾರವರು ತಮ್ಮಿಂದ ನಿರ್ಮಾಣವಾದ ಸಭ್ಯರು ತಮಗೇ ತಿರುಗಿಬೀಳುವ ಪ್ರಸಂಗವನ್ನು ನೋಡಿ, ಮತ್ತು ಹಾಗೆ ತಿರುಗಿಬಿದ್ದರೆ ತಮ್ಮ ಧ್ಯೇಯಕ್ಕೆ ಕುಂದು ಬರುವದೆಂದು ತಿಳಿದು, ಆದಿನ ಸದರಿ ಠರಾವಿನನ್ನು ತಾರದೆ ಯಾವ ತಾರೀಕೆಂದು ಹೇಳದೆ ಹಾಗೆ, ಅದಕ್ಕೆ ಮುದ್ದತ್ತು ಹಾಕಿದರು. ತಮಗೆ ಅನುಕೂಲರಾದ ಸ್ವಲ್ಪ ಮಂದಿ ಸಭ್ಯರು ಹಾಜರಿದ್ದ ಸಭೆಯಲ್ಲಿ ಸದರಿ ಠರಾವನ್ನು ಮುಂಜಾರು ಮಾಡಿಸಿ ಬಳ್ಳಾರಿ ಜಿಲ್ಲೆಯು ಆಂಧ್ರ ಯುನಿವರ್ಸಿಟಿಗೆ ಒಪ್ಪಿರುತ್ತದೆಂದು ಪ್ರಕಟಿಸ ಹವಣಿಸಿರುವಂತೆ ಕಾಣುತ್ತದೆ.

ಈ ವಾರದಲ್ಲಿ ಈ ಪಟ್ಟಣಕ್ಕೆ ವ್ಯವಸಾಯ ಕೈಗಾರಿಕೆ ಮಂತ್ರಿವರ್ಯರು ಮತ್ತು "ಡೈರೆಕ್ಟರ ಆಫ ಪಬ್ಲಿಕ್ ಇನ್‌ಸ್ಟ್ರಕ್ಷನ್" ಇವರು ಬಂದಿದ್ದರು. ಆಂಧ್ರ ಪ್ರಮುಖರಾದ ಗೋಪಾಲಸ್ವಾಮಿಯವರು ಇವರೀರ್ವರಿಗೂ ಚಹ ತಾಂಬೂಲ ಸಮಾರಂಭವನ್ನು ನಡೆಸಿದ್ದರು. ಆ ಸಮಾರಂಭಗಳಲ್ಲಿ, ಬಳ್ಳಾರಿ ಜಿಲ್ಲೆಯನ್ನು ಆಂಧ್ರ ಯುನಿವರ್ಸಿಟಿಗೆ ಸೇರಿಸೇತೀರಬೇಕೆಂದು ಒತ್ತಿ ಒತ್ತಿ ಕೇಳಿಕೊಂಡರು. ಮತ್ತು ಸದರಿ ಮಂತ್ರಿ ವರ್ಯರ ಆಶ್ರಯದಕೆಳಗೆ ಜರಗಿದ ಸಹಕಾರಕ ಸಭೆಯಲ್ಲಿಯೂ ಸಹಿತ ಸ್ವಾಗತ ಸಂಘಾಧ್ಯಕ್ಷರಾದ ಸದರಿ ಗೋಪಾಲ ಸ್ವಾಮಿಯವರು ಆ ಸಮಯಕ್ಕೆ ಅಸಂದರ್ಭವಾಗಿದ್ದರೂ, ಅದನ್ನು ಗಮನಕ್ಕೆ ತಾರದೆ ಆಂಧ್ರ ಯೂನಿವರ್ಸಿಟಿಯ ಮೇಲೆ ಭಾಷಣ ಮಾಡುತ್ತಾ ಕರ್ನಾಟಕ ಏಕೀಕರಣ ಪ್ರಯತ್ನವು ತಿರುಕನ ಕನಸೆಂದು ("wild dream") ಬಹಿರಂಗ ಸಭೆಯಲ್ಲಿ ಉಚ್ಚರಿಸಿದರು. ಆ ಸಭೆಯ ಸಭ್ಯರೆಲ್ಲರೂ ಕರ್ನಾಟಕಸ್ಥರೆ ಆಗಿದ್ದರಿಂದಲೂ, ಅಧ್ಯಕ್ಷರ ಭಾಷಣವು ಇಂಗ್ಲಿಷು ಮತ್ತು ಕನ್ನಡದಲ್ಲಿಯೇ ಆಗಿದ್ದರಿಂದಲೂ, ಮೊದಲಿಯಾರವರ ಸದರಿ ಉಚ್ಚಾರವು ಸಭ್ಯರೆಲ್ಲರನ್ನು ಬಹಳ ಅಸಂತುಷ್ಟರನ್ನಾಗಿ ಮಾಡಿತು. ಸದರಿ ಉಚ್ಚಾರಣವಾಗುವಸಮಯದಲ್ಲಿ " No. No. Certainly not " ಎಂಬ ಶಬ್ದೋಚ್ಚಾರಗಳು ಸಭ್ಯರ ಬಾಯಿಂದಲೇ ಹೊರಡಲ್ಪಟ್ಟವು.

ತಾರೀಖು ೨೩-೯-೨೫ ಬುಧವಾರದ ದಿವಸ ಕರ್ನಾಟಕ ಏಕೀಕರಣ ಸಂಘದ ವತಿಯಿಂದ ಉಪಾಧ್ಯಕ್ಷರಾದ ಮ॥ ರಾ. ಕೆ. ಗುರುರಾಜರಾವು ಬಿ. ಎ. ಬಿ. ಎಲ್. ಕಾರ್ಯದರ್ಶಿಗಳಾದ ವೇ॥ ಟಿ. ಹೆಚ್. ಎಂ. ಚಂದ್ರಶೇಖರ ಶಾಸ್ತ್ರಿ ಬಿ. ಎ. ಬಿ. ಎಲ್ ಮ॥ ಕೆ. ಟಿ. ಶ್ರೀನಿವಾಸಾಚಾರ್ಯರು, ಸಭ್ಯರಾದ ವೆಂಕೋಬಾಚಾರ್ಯರು ಎಂ. ಎ. ಎಲ್. ಎಲ್. ಬಿ. ಡಿ. ಶ್ರೀಪತಿರಾಯರು. ಬಿ. ಎ. ಡಿ. ಎಸ್ ಹಣಮಂತರಾಯರು ಬಿ. ಎ. ಇವರು "ಡೈರೆಕ್ಟರ್. ಆಫ್. ಪಬ್ಲಿಕ್ ಇನ್‌ಸ್ಟ್ರಕ್ಷನ್ " ಆದ ಮಿ॥ ಶ್ರವ ಧೋಂಗಳಬಳಿಗೆ ಡೆಪ್ಯುಟೇಷನ್ ಒಯ್ದಿದ್ದರು. ಮಿ॥ ಶ್ರವಸಾಹೇಬರು ಇವರು ಹೇಳಿದ್ದ ನ್ನೆಲ್ಲಾ ಚೆನ್ನಾಗಿ ಲಾಲಿಸಿ, ತಮ್ಮ ಸಹಾನುಭೂತಿಯನ್ನು ತೋರಿಸಿ, ಬಳ್ಳಾರಿಯಲ್ಲಿ ಕರ್ನಾಟಕಶಾಲೆಗಳನ್ನು ಏರ್ಪಾಟು ಮಾಡುವ ವಿಷಯದಲ್ಲಿ ಪ್ರಯತ್ನ ಮಾಡುತ್ತೇವೆಂದು ಹೇಳಿದರು.

ಚಕ್ರಬಂಧ ಒಗಟು



ಬಿಡಿಸುವರೀತಿ:— ಯಾವ ಮನೆಯಲ್ಲಿ ಅಂಕೆಯಿರುವದೊ ಅಲ್ಲಿಂದ ಶಬ್ದವು ಸುರುವಾಗಿ ಕರೇಮನಿಗೆ ಬಂದು ನಿಲ್ಲತಕ್ಕದ್ದು. ಅಂದರೆ ೧ರಿಂದ ಹೊರಟ ಶಬ್ದವು ಮೂರು ಅಕ್ಷರಗಳುಳ್ಳದ್ದು. ೬ ರಿಂದ ಹೊರಟಶಬ್ದವು ೫ ಅಕ್ಷರಗಳುಳ್ಳದ್ದು. ಹೀಗೆ ಲಂಬವಾಗಿ ತೆಳಗೆ ಬರತಕ್ಕದ್ದು. ಅಡ್ಡ ಬರಬೇಕಾದರೆ, ೨ರಿಂದ ಮೂರು ಅಕ್ಷರಗಳುಳ್ಳ ಶಬ್ದವು, ೪ ರಿಂದ ೫ ಅಕ್ಷರಗಳುಳ್ಳ ಶಬ್ದವು ಹೀಗೆ ಕೂಡಿಸಬೇಕು. ಕರಿಮನಿಯಲ್ಲಿನ ಯಾವಮನೆಯೂ 'ನಿರಕ್ಷರ'ವಾಗುವದಿಲ್ಲ. ಶಬ್ದಗಳ ಚುಟುಕಿಗಳನ್ನು ಕೊಟ್ಟಿರುತ್ತದೆ. ಅದಲು ಬದಲು- ಎಂದರೆ- 'ಚುಟಿಕಿ'ಯಂತೆ ಯೋಗ್ಯ ಶಬ್ದ ಗೊತ್ತಾದ ಮೇಲೆ, ಅದರಕ್ಷರಗಳನ್ನು ಅದಲು ಬದಲು ಮಾಡಿ ಜೋಡಿಸತಕ್ಕದ್ದು. ಉದಾಹರಣೆ: 'ನಿಷ್ಕಪಟಿ" ಯೆಂಬದಕ್ಕೆ 'ಸರಲ' ವೆಂದು ಅರ್ಥವಾದರೆ, 'ಲರಸ' 'ರಸಲ' ವೆಂದು ಅಲ್ಲಿ ಕೂಡುವಂತೆ ನೋಡಿ ಬರೆಯಬೇಕು, ತಿರುವಿ ಮುರವಿ- ಅಂದರೆ ಶಬ್ದ ತಿಳಿದ ಮೇಲೆ, ತಿರಿವಿಸಿ ಬರೆಯ ಬೇಕು 'ನಿರ್ಧನ' ಎಂಬದಕ್ಕೆ 'ಬಡವ' ಎಂದು ಬಂದಿತೆಂದರೆ 'ವಡಬ' ಎಂಬ ಬರೆಯಬೇಕು.

ಶಬ್ದಗಳು ನಿತ್ಯವಾಗಿ ಸಂಸ್ಕೃತ ಅಥವಾ ಕನ್ನಡವಿಲ್ಲ.

'ಚುಟಿಕಿ'

ಉದ್ದ

೧ ಓರ್ವ ಸಂಸ್ಕೃತ ಕವಿ

೨ ವೇದಿಯಂಥ ಎತ್ತರ ವಾದನೆಲ

೩. ಒಂದು ಗಡ್ಡೆ (ಷಷ್ಠಿ ಅದಲು-ಬದಲು)

೪ ನಮಸ್ಕಾರ

೫ ವ್ಯಸನ

೭. ಚಾಲುಕ್ಯರಾಜನೊಬ್ಬನ ಬಿರುದು

೮ 'ಪತಿಪರಾಯಣಳ' (ಹಳೆಗನ್ನಡ)

೯ ಕರೆವಂತೆ ಮನುಷ್ಯನ ಹಸರೊಂದು (ತಿರುವಿ) ಮುರವಿ

೧೦ ತಿಳಿನೀರಿಗೆ ಉಪಮೆ ಯಾವದು?

೧೨ ಒಂದು ಬಣ್ಣ

ಅಡ್ಡ

೨ 'ಮನುಷ್ಯನಿಂದ ಹುಟ್ಟಿದ' (ತಿರುಗುಮುರುಗು)

೪ ಒಂದು ಕನ್ನಡ ದನ-ಡಿಸಿದ ಕಾದಂಬರಿ

೬ ವಾದ್ಯ-ವಿಶೇಷ [ಅದ್ಯಕ್ಷರಕ್ಕೆ ಬದಲು ಆ ವರ್ಗದ ಅದ್ಯಕ್ಷರ]

೭ ನ್ಯಾಯ (ಹಳ್ಳಿಜನರರ್ಥ)

೯ ನಾಲಿಗೆ. [ಮೊದಲನೇ ಎರಡು ಅದಲು ಬದಲು]

೧೧ ನಾಸ್ತಿಕ [ಮೊದಲನೇ ಯಕ್ಕ ರ ಲೋಪ]

೧೩ ಒಂದು ವೃತ್ತ.

೧೪ ಒಬ್ಬ ಕವಯಿತ್ರಿ

೧೬ ಗರ್ಭ (ದಾಸರ ಪದದಲ್ಲಿಯ ಅದಲು- ಬದಲು ಶಬ್ದ)

೧೮ ಕಮಲ

೨೦ ದೋಷ

೨೧ ಬೆಳಗು (ಸಂಸ್ಕೃತ ಧಾತು)

೨೨ ಕೋಟ್ಯೊಂದು ಕಾಲ ಮಿತಿ]

೧೫ ಧರ್ಮೋದ್ದೀಪಕ ಕನ್ನೋರ್ವ.

೧೬ ಅಳಿದು ಹೋಗುವ

೧೮ 'ದೇವರು', [ದೀರ್ಘವಿಲ್ಲದೆ ಅದಲು ಬದಲು]

೧೯ ಸವಿಗಾರ

೨೧ ಕಲಿತವನಿಗವಶ್ಯವಾದ ಭೂಷಣವು

೨೩ ಒಂದು ವೃತ್ತ ಪದ್ಯ

೨೪ 'ಕೌರವ'

ಬಳ್ಳಾರಿಯಿಂದ ಬಂದ ಪತ್ರವು

ಇದೇ ೨೬-೯-೨೫ರಲ್ಲಿ ಮಾ॥ ರಾ॥ ಶ್ರೀನಿವಾಸರಾವ ಕೌಜಲಗಿ, ರಾಘವೇಂದ್ರರಾವ ಕವಪಾ, ಜೇನೋಣ ಭೀಮರಾಯ, ಟಿ. ಹೆಚ್. ಎಂ. ಚಂದ್ರಶೇಖರಶಾಸ್ತ್ರಿ ಇವರು ಮದ್ರಾಸದಲ್ಲಿ ಜರಗಿದ ಆಂಧ್ರ ಸರ್ವ ಕಳಾಶಾಲೆ ಸಂಬಂಧ ಆಲೋಚನೆ ಬಗ್ಗೆ ನೇಮಿಸಲ್ಪಟ್ಟ ನ್ಯಾಯನಿರ್ಣಾಣ ಸಭೆಯ ಸಭ್ಯರನ್ನು ಸಂದರ್ಶಿಸಿ, ಬಳ್ಳಾರಿ ಜಿಲ್ಲೆಯನ್ನು ಆಂಧ್ರ ಸರ್ವ ಕಳಾ ಶಾಲೆಗೆ ಸೇರಿಸಕೂಡದೆಂದು ಅರ್ಜಿಸಲಿಸುಗ ಹೋಗಿದ್ದರು. ಸದರಿ ಸಭೆಯ ಅಧ್ಯಕ್ಷರಾದ ನಾಮದಾರ ಪಾತ್ರೋಮಂತ್ರಿ ಇವರನ್ನು ಬರಮಾಡಿಕೊಂಡು ಇವರು ಹೇಳುವದನ್ನು ಚನ್ನಾಗಿ ಲಾಲಿಸಿದರು. ಬಿ ಭೀಮರಾಯರು ಮುದ್ರಿತವಾದ ಹಸ್ತಪತ್ರಿಕೆಗಳನ್ನು ಸರ್ವ ಸಭ್ಯರಿಗೂ ಕೊಟ್ಟು ಸುಮಾರು ಅರ್ಧಗಂಟೆಯವರಿಗೂ, ಬಳ್ಳಾರಿ ಜಿಲ್ಲೆಯು, ಕನ್ನಡ ಜಿಲ್ಲೆಯೆಂತಲೂ, ಬಾಣೇಸುಮಾರ ಆಪ್ತದ ಮೇಲೂ, ಬಳ್ಳಾರಿಗೆಸ್ಥಿಟಿಯರು, ಕೆಕ್ಕಿರ ತಿರ್ಮಾನಗಳ ಆಧಾರಗಳಮೇಲಿಂದಲೂ, ಸಭ್ಯರಿಗೆ ಚನ್ನಾಗಿ ಮನಸಸಾಗುವಂತೆ ಹೇಳಿ ನಂತರ ಸಭ್ಯರು ಕೇಳಿದ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರ ಕೊಟ್ಟರು. ಬಳ್ಳಾರಿಗೆ ಒಂದು ಸರ್ವ ಕಳಾಶಾಲೆಯ ಸ್ಥಾನವನ್ನು ಕೊಟ್ಟರು. ತಮಗೆ ಆಂಧ್ರರ ಕೂಡ ಸೇರುವಿಕೆಯು ಬೇಡವೆಂತಲೂ, ಬಳ್ಳಾರಿ ಜಿಲ್ಲೆಯ ಲೋಕಮತವು ಇದಕ್ಕೆ ವಿರೋಧವಾಗಿದೆಯೆಂತಲೂ, ಬಳ್ಳಾರಿಜಿಲ್ಲೆಯ ಸಾರ್ವಜನಿಕ ಸಂಘಗಳು (ಲೋಕಲ್ ಬೋರ್ಡುಗಳು ಮತ್ತು ಮುನಿಸಿಪಾಲಿಟಿಗಳು) ಪ್ರತಿಷ್ಠೀಕರಿಸಿ ಅಂಗೀಕರಿಸಿದ ತೀರ್ಮಾನಗಳನ್ನು ಓದಿ ಹೇಳಿದರು. ಅನಂತರ ಈ ಕರ್ನಾಟಕ ಸಭ್ಯರ ಅಭಿಪ್ರಾಯವನ್ನು ವಿರೋಧಿಸಲಿಕ್ಕೆ ಬಂದಿದ್ದ ಮ॥ ರಾ॥ ಗೋಪಾಲಸ್ವಾಮಿ ಮೊದಲಿಯಾರವರು, ಹಂಪಿಯಲ್ಲಿ ಕೃಷ್ಣದೇವರಾಯರು ಆಳಿದ್ದರೆಂತಲೂ ಅವರ ಆಸ್ಥಾನದಲ್ಲಿ ಅನೇಕ ಮಂದಿ ಆಂಧ್ರ ಕವಿಗಳಿದ್ದರೆಂತಲೂ, ಮೊನ್ನೆ ಮೊನ್ನೆ ಲೋಕಪ್ರಸಿದ್ಧವಾದ ಆಂಧ್ರ ನಾಟಕ ಗ್ರಂಥಗಳು ಬಳ್ಳಾರಿ ಪಟ್ಟಣದಲ್ಲಿಯೇ ಬರೆಯಲ್ಪಟ್ಟಿರುತ್ತವೆಂತಲೂ, ಕಾರಣ ಬಳ್ಳಾರಿ ಜಿಲ್ಲೆಗೆ ಆಂಧ್ರ ಕಳಾಶಾಲೆಯ ಒಂದು ಶಾಖೆಯನ್ನು ಕೊಟ್ಟು ಈ ಜಿಲ್ಲೆಯನ್ನೂ ಸೇರಿಸಕೊಳ್ಳಬೇಕೆಂದು ಪ್ರತಿಪಾದಿಸಿ ಮತ್ತು ಅದವಾನಿ ಬಳ್ಳಾರಿ ತಾಲೂಕ ಬೋರ್ಡುಗಳು ಈ ಜಿಲ್ಲೆಯನ್ನು ಆಂಧ್ರಕ್ಕೆ ಸೇರಿಸಲು ಸಮ್ಮತಿಸಿರುತ್ತವೆಂತಲೂ ಹೇಳಿದರು. (ಆದರೆ ಈ ಪತ್ರಗಾರನು ನಂಬಿ ತಿಳಿದಮಟ್ಟಿಗೆ, ಇದು ತೀರಾ ಸುಳ್ಳಾಗಿರುತ್ತದೆ. ಈ ತಾಲೂಕು ಬೋರ್ಡುಗಳು ಹಾಗ ತಿರ್ಮಾನಗಳನ್ನು ಅಂಗೀಕರಿಸಿರುವದಿಲ್ಲ.) ಬಳ್ಳಾರಿ ಡಿಸ್ಟ್ರಿಕ್ಟ ಬೋರ್ಡು ಈ ಸಂಸ್ಥಾನ

ಜಾಹಿರಾತು

ಪ್ರಾಥಮಿಕ ಶಿಕ್ಷಣದ ಕಾಯಿದೆ ಕೆಳಗೆ ಸರಕಾರದವರು ಮಾಡಿದ ವ ಲೋಕಲಬೋರ್ಡ ಕಾಯದೆ ಅನ್ವಯಾ ವಿಜಾಪೂರ ಜಿಲ್ಲಾದ ಈಗಿನ ಯಾವತ್ತೂ ಪ್ರಾಥಮಿಕ ಶಿಕ್ಷಣದ ಶಾಲೆಗಳು ವ ಆದರಂತೆ ಗುಳೇದಗುಡ್ಡ ವ ಇಲಕಲ್ ಮುನಸಿಪಾಲಿಟಿವಳಗೆ ಪ್ರಾಥಮಿಕ ಶಿಕ್ಷಣದ ಶಾಲೆಗಳು ಬರುವ ಡಿಸೆಂಬರ ೧೯೩೫ ದಿಂದ ಡಿ|| ಲೋ|| ಬೋರ್ಡಿನ ತಾಬೆಕ್ಕೆ ಬರುವವು.

೨ ಪ್ರಾಥಮಿಕ ಶಿಕ್ಷಣದ ಆಕ್ಟ ಕಲ್ಮ ೩ ನೇ ಪ್ರಕಾರ ಕೆಳಗೆ ಬರದಂತೆ ೧೨ ಮೆಂಬರ ಜನರದು ಒಂದು ಸ್ಕೂಲಬೋರ್ಡ ಮಾಡತಕ್ಕದ್ದು ಅದೆ:—

ಶ್ರೇಣನಂಬರು	ಯಾರು ಮೆಂಬರ ಆಗಬಹುದು.	ಸಂಖ್ಯಾ.
೧	ಶಿಕ್ಷಣದಲ್ಲಿ ಅನುಭವ ಇದ್ದವರು. ಟೀಪ್ಪು:- ಇದರ ರೂಲ್ಸದಲ್ಲಿ ಬರೆದ ಪ್ರಕಾರ	೧
೨	ಹೆಂಗಸರು	೧
೩	ಮುಸಲಮಾನ	೧
೪	ಹಿಂದುಳಿದ ವರ್ಗ	೨
೫	ಅಸ್ಪೃಶ್ಯರವರ್ಗ	೧
೬	ಮುನಸಿಪಾಲಿಟಿಗಳು	೨
೭	ಜನರ (ಇತರರ್)	೪
		೧೨

ಹಿಂದುಳಿದ ವರ್ಗ ಮತ್ತು ಅಸ್ಪೃಶ್ಯರ ವರ್ಗ ಸದ್ರಿ ರೂಲ್ಸ ದಲ್ಲಿ ಶೆಡ್ಯೂಲಗಿದಲ್ಲಿ ಬರುವರು.

೩ ಸದ್ರಿ ಇಲೆಕೆಶನ್ ಬಾಬತು ಪ್ರೋಗ್ರಾಮ ಕೆಳಗೆ ಬರೆದ ಪ್ರಕಾರ ಇರತ್ತದೆ. ಮತ್ತು ಈ ಸಂಬಂಧಿ ನಿಯಮಗಳು ಶೆಡ್ಯೂಲ ದಲ್ಲಿ ಬರದಿರುತ್ತವೆ. ಅವುಗಳನ್ನು ನೋಡಬೇಕು.

ಇಲೆಕಶನ ಪ್ರೋಗ್ರಾಮ

೧ ಮೆಂಬರ ಆಗಲಿಕ್ಕೆ ಇಚ್ಛಿಸುವವರು ಅರ್ಜಿಯನ್ನು ಕಳಿಸುವದಕಿಂದಾ ನೋಟಿಸು ಕೊಡುವ ತಾರಿಖು ೮-೧೦-೧೯೩೫

೨ ಮೇಲೆ ಪ್ಯಾರಾ ೨ ನೇದರಲ್ಲಿ ತೋರಿಶಿದ ಶ್ರೇಣನಂಬರ ೧ ರಿಂದಾ ೬ ವರಿಗೆ ಇರುವ ವರ್ಗಕ್ಕೆ ಉಮೇದ್ವಾರರಾಗಿ ನಿಂದರಲಿಕ್ಕೆ ಇಚ್ಛಿಸುವವರು ಯಾವ ತಾರಿಖಿನವರಿಗೆ ಅರ್ಜಿ ಮಾಡತಕ್ಕದ್ದು ಆ ತಾರಿಖು ೨೬-೧೦-೧೯೩೫

೩ ಇಲೆಕೆಶನ ತಾರಿಖು ವಿವ್ಸವೇಳೆ ವಗೈರೆ ಡಿ|| ಲೊ| ಬೋರ್ಡ ಮೆಂಬರರಿಗೆ ತಿಳಿಸುವ ತಾರಿಖು. ೨-೧೧-೧೯೩೫

೪ ಪ್ರೆಶಿಡೆಂಟ ಡಿ|| ಲೋ|| ಬೋರ್ಡ ಇವರಿಗೆ ಡಿ|| ಲೊ| ಬೊ ಆಫೀಸದಲ್ಲಿ ನಾಮಿನೆಶನ್ ಪೇಪರ ಹಜರ ಮಾಡತಕ್ಕ ತಾರೀಖು ೧೬-೧೧-೧೯೩೫ (೧ ಘಂಟೆಕ್ಕೆ)

೫ ನಾಮಿನೇಶನ್ ಕಾಗದಗಳು ತಪಾಸ ಮಾಡತಕ್ಕ ತಾರೀಖು ೧೭-೧೧-೧೯೩೫ ಒಂದು ಘಂಟೆಗೆ ಸುರು ಆಗುವದು.

೬ ಇಲೆಕೆಶನ ಆಗುವ ತಾರೀಖು ೨೩-೧೧-೧೯೩೫ ಒಂದು ಘಂಟೆಕ್ಕೆ

Sd/ P. L. Kalkeri. Chief officer D. L. B. Bijapur.	Sd / Raghwendrarao Kembhavi. President D.L. Board.

ಈ ದಿನ ಮುಂಜಾನೆ ಬಾಗಲಕೋಟಿಯ ಸ್ಟೇಶನ್ನದಲ್ಲಿ ಗಾಡಿಯ ಹಳಿಯ ಮೇಲೆ ಒಬ್ಬ ಹುಡುಗನು ಮಲಗಿಕೊಂಡಿದಾಗ್ಗೆ ಗಾಡಿಯು ಅವನಮೇಲೆ ಹಾಯ್ದುಹೋಯಿತು ರುಂಡ ದೇಹಗಳು ಬೇರೆ ಬೇರೆ ಆಗಿವೆ ಹುಡುಗನು ಅಲ್ಲಿ ಯೇಕೆ ಮಲಗಿದ್ದನೋ ತಿಳಿಯದು. ಚೌಕಶಿ ನಡೆದಿದೆ.

ಚಕ್ರಬಂಧ ಒಗಟು ೨



ಬಿಡಿಸುವರೀತಿ:— ಯಾವ ಮನೆಯಲ್ಲಿ ಅಂ ಕ್ಲಿಂದ ಶಬ್ದವು ಸುರುವಾಗಿ ಕಡೇಮನಿಗೆ ಒಂದು ದರೆ ೧ರಿಂದ ಹೊರಟ ಶಬ್ದವು ಮೂರು ಅಕ್ಷರಗ ದ ಹೊರಟಶಬ್ದವು ೫ ಅಕ್ಷರಗಳುಳ್ಳದ್ದು ಹೀ ಗೆ ಬರತಕ್ಕದ್ದು. ಅದ್ದರಿಂದ ಬೇಕಾದರೆ, ೭ರಿಂದ ಗಳುಳ್ಳ ಶಬ್ದವು, ೪ ರಿಂದ ೫ ಅಕ್ಷರಗಳುಳ್ಳ ಡಿಸಬೇಕು. ಕಡೆಮನೆಯಲ್ಲಿದೆ ಯಾವಮನೆಯೂ ವಂತಿಲ್ಲ. ಶಬ್ದಗಳ ಸೂಚಕಿಗಳನ್ನು ಕೊಟ್ಟಿರು ಲೆ– ಎಂದರೆ– ' ಚುಟಕಿ ' ಯಂತೆ ಯೋಗ್ಯ [illegible] ಲೆ, ಅದರಕ್ಷರಗಳನ್ನು ಅದಲು ಬದಲು ಮಾಡಿ ಉದಾಹರಣೆ: ' [illegible] ' [illegible] ವಾದರೆ, 'ಅರಸ' 'ರಸಅ'ಎಂದು ಅಲ್ಲಿ ಕೂಡಿಸ ಬೇಕು, ತಿರುವಿ ಮುರವಿ– ಅಂದರೆ ಶಬ್ದ ತಿರು ಬರೆಯ ಬೇಕು ' ನಿರ್ಧನ ' ಎಂಬುದಕ್ಕೆ ' [illegible] ಕೆಂದರೆ ' ವನಮ ' ಎಂಬ ಬರೆಯಬೇಕು.

ಶಬ್ದಗಳು ನಿಶ್ಚವಾಗಿ ಸಂಸ್ಕೃತ ಅಥವಾ

' ಚುಟಕಿ '

ಅಡ್ಡ

೧ ಒರ್ವ ಸಂಸ್ಕೃತ ಕವಿ
೨ ವೇದಿಯಂಥ ಎತ್ತರ ವಾದನೆಲ
೩ ಒಂದು ಗಡ್ಡೆ (ಹಿಸ್ಸಿ ಅದಲು–ಬದಲು)
೪ ನಮಸ್ಕಾರ
೫ ವ್ಯಸನ
೬ ಚಾಲುಕ್ಯರಾಜನೊಬ್ಬನ ಬಿರುದು
೮ ' ಪತಿಪರಾಯಣಳ ' (ಹಳೆಗನ್ನಡ)
೯ ಕರೆವಂತೆ ಮನುಸ್ಯನ ಹೆಸರೊಂದು (ತಿರುವಿ) ಮುರವಿ
೧೦ ತಿಳಿಸೀರಿಗೆ ಉಪಮೆ ಯಾವುದು?
೧೨ ಒಂದು ಬಣ್ಣ

೨ ' ಮನುಷ್ಯನಿಂದ ಹುಟ್ಟಿದೆ ' (ತಿರುಗು–ಮುರುಗು)
೪ ಒಂದು ಕನ್ನಡಕವಿಯ ಕಾವ್ಯ
೬ ನಾಟ್ಯ–ವಿಶೇಷ [ಅವ್ಯಕ್ತಕ್ಕೆ ಬದಲು ೫ ವರ್ಗದ ಅಕ್ಷರ]
೭ ನ್ಯಾಯ (ಹಳ್ಳಿಜನರರ್ಥ)
೯ ನಾಲಿಗೆ. [ಮೊದಲನೇ ಎರಡು ಅದಲು ಬದಲು]
೧೧ ನಾಸ್ತಿಕ [ಮೊದಲನೇ ಮತ್ತ ದ ಲೋಪ]
೧೩ ಒಂದು ವೃಕ್ಷ.
೧೪ ಒಬ್ಬ ಶಿವಭಕ್ತ

[illegible] ಗಿದೆಯಂತಲೂ, [illegible] ಸಂಘಗಳು (ಲೋಕಲ್ ಬೋರ್ಡುಗಳು ಮತ್ತು ಮುನಿಸಿಪಾಲಿಟಿಗಳು) [illegible] ಅಂಗೀಕರಿಸಿದ [illegible] ನಗಳನ್ನು ಓದಿ ಹೇಳಿದರು. [illegible] ತರ [illegible] ಸಭ್ಯರ ಅಭಿಪ್ರಾಯವನ್ನು ವಿರೋಧಿಸಲಿಕ್ಕೆ [illegible] ಗೋಪಾಲಸ್ವಾಮಿ ಮೊದಲಿಯಾರವರು. [illegible] ಕೃಷ್ಣದೇವರಾಯನು [illegible] ಅವರ [illegible] ದಲ್ಲಿ [illegible] ಆಂಧ್ರ [illegible] ಲೋಕಪ್ರಸಿದ್ಧವಾದ ಆಂಧ್ರ [illegible] ಗ್ರಂಥಗಳು [illegible] ಕಾರಣ [illegible] ಗೆ ಆಂಧ್ರ [illegible] ಒಂದು [illegible] ಪ್ರತಿಪಾದಿಸಿ ಮತ್ತು [illegible] ಈ ಜಿಲ್ಲೆಯನ್ನು [illegible] ಹೇಳಿದರು. ([illegible] ಅಂಗೀಕರಿಸಿಲ್ಲ) [illegible]

ಸಂಖ್ಯೆ	ಪೂರ್ಣ ಹೆಸರು ಮತ್ತು ವಿಳಾಸ	ಉದ್ಯೋಗ	ಸಹಿ

ರೇಲ್ವೇ ಬೋರ್ಡ ಸಿಮ್ಲಾ ಇವರಿಗೆ

ಮಹಾಶಯರೇ

ಕೆಳಗೆ ಸಹಿ ಮಾಡಿದಂಥ ಕರ್ನಾಟಕದೊಳಗಿನ ಬೇರೆ ಬೇರೆ ಭಾಗಗಳ ನಿವಾಸಿಗಳಾದ ನಾವುಗಳೆಲ್ಲ ತಮಗೆ ಅರಿಕೆ ಮಾಡಿಕೊಳ್ಳುವದೇನಂದರೆ, ಸಂಯುಕ್ತ ಕರ್ನಾಟಕ ಪ್ರಾಂತದಲ್ಲಿರುವ ನಮಗೆ ನಮ್ಮ ಕರ್ನಾಟಕನಾಡಿನಲ್ಲಿ ರೇಲ್ವೆ ಸೌಕರ್ಯ ಗಳು ಸಮಾಧಾನಕರ ವಾಗಿರುವದಿಲ್ಲ. ಸಾವಿರಾರು ಊರುಗಳಲ್ಲಿ ರೇಲ್ವೆಗಳಿರುವದಿಲ್ಲ. ಇದರಿಂದ ನಮ್ಮ ಪ್ರಾಂತದ ಜನರ ಪ್ರವಾಸಗಳೆಲ್ಲ ಬಹು ಕಷ್ಟವಾಗಿವೆ. ನಮಲ್ಲಿಯ ವ್ಯಾಪಾರ ಉದ್ದಿಮೆಗಳಿಗೆ ಇದರಿಂದ ಬಹು ಆತಂಕವಾಗಿದೆ. ಇಷ್ಟು ದಿನಗಳ ವರೆಗೆ ಇವೆಲ್ಲ ಕಷ್ಟಗಳನ್ನು ನಾವು ಸೋಸುತ್ತಿದ್ದರೂ ಸಹ ನಮಗೆ ಸುಖಕರವಾಗುವಂಥ ಹೊಸ ರೇಲ್ವೇಗಳು ಈವರಿಗೂ ಆಗ ಲೊಲ್ಲವು. ಆದುದರಿಂದ ಈಗ್ಗೆ ರೇಲ್ವೆ ಬೋರ್ಡಿನವರು ಅನುಮತಿಯನ್ನು ಕೊಟ್ಟಂಥ ಕೆಳಗಿನ ರೇಲ್ವೇಗಳನ್ನು ಬೇಗನೆ ಪ್ರಾರಂ ಭಿಸುವಂತೆ ಏರ್ಪಾಟ ಮಾಡಬೇಕಾಗಿ ಆಗ್ರಹ ಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

(೧) ಸಿಪ್ಪಾಣಿ ಹುನಗುಂದ .... (ಸದರ್ನ ಮರಾಠಾ ರೇಲ್ವೆ.)
(೨) ಬೆಳಗಾವಿ ಹುಬ್ಬಳ್ಳಿ (ಸವದತ್ತಿಮಾರ್ಗವಾಗಿ) ... . ,,
(೩) ಹಾವೇರಿ ಹಾವನೂರ .... ,,
(೪) ಹರಿಹರ- ಕೊಟ್ಟೂರ .... ,,
(೫) ಗದಗ-ವಾಡಿ-ರಾಯಚೂರ.. . ... (ನಿಜಾಮ ರೇಲ್ವೆ)
(೬) ನಂಜನಗುಡ್ಡ ಮೆಟ್ಟೂಪಾಲಿಯಮ್ .... (ಮೈಸೂರ ರೇಲ್ವೆ)

ಈ ಆರು ಹಳೇ ಯೋಜನೆಗಳ ಹೊರ್ತಾಗಿ

(೧) ಹುಬ್ಬಳ್ಳಿ- ಕಾರವಾರ- ಮಂಗಳೂರಿಗೂ ... .
(೨) ಮೈಸೂರ ಮಡಿಕೇರಿಗೂ. ....

ಹೊಸದಾಗಿ ರೇಲ್ವೆ ಲಾಯಿನಗಳನ್ನು ಹಾಕಬೇಕಾಗಿ ನಮ್ಮೆಲ್ಲರ ಅತಿಶಯ ಕಳಕಳಿಯ ಮತ್ತು ಆತುರದ ಪ್ರಾರ್ಥನೆ ಯಿದೆ. ಪೂರ್ವ ಸಮುದ್ರದ ದಂಡೆಯು ಗುಂಟ ರೇಲ್ವೆ ಕಂಪನಿಯವರು ರೇಲ್ವೆ ಲಾಯಿನಗಳನ್ನು ಹಾಕಿ ಅನೇಕ ವರ್ಷಗಳಾದವು ಆದರೆ ಪಶ್ಚಿಮ ಸಮುದ್ರದ ದಂಡೆಯ ಕಡೆಗೆ ಸಹ ತಾವು ಹೊಸ ಲಾಯಿನ್ಸಗಳನ್ನು ಹಾಕಿದರೆ, ಇತ್ತ ಕಡೆಯ ಜನರಿಗೂ ಪ್ರವಾ ಸಕ್ಕಾಗಿ ಬಹು ಅನುಕೂಲವಾಗುವದಲ್ಲದೆ. ಕಾರವಾರ, ಮಂಗಳೂರ ಜಿಲ್ಹೆಗಳ ಕಾನನ ಉಪವನಗಳ ಲಾಭವನ್ನೂ ಇಲ್ಲಿಯ ಜನರೆಲ್ಲ ತೆಗೆದು ಕೊಂಡು, ಕಾಗದ, ಕಟ್ಟಿಗೆ ಮೊದಲಾದ ಹೊಸಗಿರಣಿಗಳನ್ನೂ ಬೇರೆ ವ್ಯವಸಾಯಗಳನ್ನು ಪ್ರಾರಂಭಿಸಲು ಅನು ಕೂಲವಾಗುವದು. ಮುಂದೆ ಪಶ್ಚಿಮ ದಂಡೆಯಲ್ಲಿ ಒಂದು ಬಂದರವನ್ನು ತೆಗೆಯಲು ಅನುಕೂಲವಾಗಿ ಅದರಿಂದ ನಮ್ಮ ಕರ್ನಾಟಕ ಪ್ರಾಂತದ ಸಂಪದಭಿವೃದ್ಧಿಯು ತಾನೇ ಆಗುವದು'

ಭಾಷಾನ್ವಯ ಪ್ರಾಂತ ರಚನೆಯನ್ನು ಮಾಡುವದಕ್ಕೆ ಸರಕಾರದ ಒಪ್ಪಿಗೆಯದೆ. ಅದು ಕೃತಿಯಲ್ಲಿಯೂ ಕ್ರಮೇಣ ಬರಹತ್ತಿದೆ. ಕರ್ನಾಟಕಕ್ಕಾದರೂ ಸ್ವತಂತ್ರ ಪ್ರಾಂತವುದೊರೆಯುವದು. ನಾವು ಈಗ್ಗೆ ಸೂಚಿಸಿದ ರೇಲ್ವೆ ಗಳಾದರೆ ನಮ್ಮ ಕರ್ನಾಟಕ ಪ್ರಾಂತರಚನೆಯ ಕಾರ್ಯಕ್ಕೆ ಬಹು ಅನುಕೂಲವಾಗುವದು.

ಆದುದರಿಂದ ತಾವು ಇದನ್ನೆಲ್ಲ ಲಕ್ಷ್ಯದಲ್ಲಿ ತಂದು, ನಮ್ಮ ಪ್ರಾರ್ಥನೆಯನ್ನು ಬೇಗನೆ ಮನ್ನಿಸಬೇಕಾಗಿ ವಿನಯಪೂರ್ವ ಕವಾಗಿ ಬೇಡಿಕೊಳ್ಳುತ್ತೇವೆ.

ಇತಿ. ತಮ್ಮ ವಿಧೇಯರಾದ

ಸಂಖ್ಯೆ	ಪೂರ್ಣ ಹೆಸರು ಮತ್ತು ವಿಳಾಸ.	ಉದ್ಯೋಗ.	ಸಹಿ.

ಥ ಸಮ್ಮತಿಸುವ ಠರಾವನ್ನು ಅಂಗೀಕರಿಸಿರುತ್ತದೆಯೋ ಹೇಗೆ ಯೆಂದು ಒಬ್ಬ ಸಭ್ಯರು ಕೇಳಿದಾಗ್ಗೆ ಸದರಿ ಮೊದಲಿಯಾರವರು ನಿರುತ್ತರರಾದರು. ತದನಂತರು ಸದರಿ ಸಭ್ಯರು ಈ ಕರ್ನಾಟಕ ಮುಖಂಡರನ್ನು ಬಿಟ್ಟುಕೊಟ್ಟು ತಮ್ಮ ಆಲೋಚನೆ ಸಭೆಯನ್ನು ಆರಂಭಿಸಿದರು. ಕರ್ನಾಟಕ ಸಭ್ಯರು ಮದ್ರಾಸಿನ ಸರ್ವ ಪತ್ರಿಕೆಗಳ ಸಂಪಾದಕರನ್ನು ಮತ್ತು ಆಂಧ್ರೇತರ ನ್ಯಾಯನಿರ್ಮಾಣ ಸಭ್ಯರನ್ನು ಕಂಡು ಮಾತಾಡಿ ಕರ್ನಾಟಕ ಅಭ್ಯುದಯಕ್ಕೆ ಸಹಾಯ ಮಾಡುವ ಹಾಗೆ ಅವರಿಗೆ ಹೇಳಿ ಮರುದಿನ ಮದ್ರಾಸಿನಿಂದ ಹಿಂತಿರುಗಿದರು.

ಸದರಿ ನ್ಯಾಯದ ನಿರ್ಮಾಣ ಸಭ್ಯರ ಆಲೋಚನೆ ಸಭೆಯಲ್ಲಿ ಅನಂತಪುರಕ್ಕೆ ಆಂಧ್ರ ಸರ್ವ ಕಲಾಶಾಲೆಯ ಒಂದು ಶಾಖೆಯನ್ನು ಕೊಡುವದಕ್ಕೆ ಒಪ್ಪಿರುತ್ತಾರೆಂತಲೂ, ಬಳ್ಳಾರಿಗೆ ಕೊಡಲು ನಿರಾಕರಿಸಿರುತ್ತಾರೆಂತಲೂ ಇಲ್ಲಿಗೆ ಸುದ್ದಿ ಬಂದಿರುತ್ತದೆ. ಅಂದ ಮೇಲೆ ಬಳ್ಳಾರಿಗೆ ಒಂದು ಶಾಖೆಯನ್ನು ಕೊಟ್ಟರೇನೇ ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಲು ತಾವು ಇಷ್ಟಕೊಡುತ್ತೇವೆಂದು ಹೇಳುವ ಗೋಪಾಲಸ್ವಾಮಿ ಮೊದಲಿಯಾರವರು ಮತ್ತು ಅವರ ಅನುಯಾಯಿಗಳು ಇತ್ತ ಕಡೆಗೆ ಲಕ್ಷ್ಯಕೊಡಲಿ. ಸದರಿ ಸಭ್ಯರು ಮಾತಾಡಿದ ಬಗೆಯನ್ನು ನೋಡಿದರೆ ಅವರು ಬಳ್ಳಾರಿ ಜಿಲ್ಲೆಯನ್ನು ಆಂಧ್ರಕ್ಕೆ ಸೇರಿಸುತ್ತಾರೆಂದು ತಿಳಿಯ ಬರುತ್ತದೆ. ಕಾರಣ ಕರ್ನಾಟಕ ಜನರೆಲ್ಲರೂ ಬೇಗ ಎಚ್ಚೆತ್ತು ಇನ್ನೂ ಜಾಸ್ತಿ ಚಳವಳಿಯನ್ನು ಮಾಡಿ ಮದ್ರಾಸ ಸರಕಾರಕ್ಕೆ ಬೇಗ ವಿನಂತಿಗಳನ್ನು ಕಳಿಸಬೇಕಾಗಿ ಕೋರಿಕೆ, ಇಲ್ಲದೆ ಹೋದರೆ ಕರ್ನಾಟಕಕ್ಕೆ ಬಳ್ಳಾರಿಯು ಗತಿಸಿ ಹೋಗುವದು ಈ ಬಗ್ಗೆ ನಿರೋಧಿಸಲಿಕ್ಕೆ ಇಲ್ಲಿಯ ವೀರಶೈವ ವಿದ್ಯಾವರ್ಧಕ ಸಂಘದ ಸಭೆಯೊಂದು ನಾಳಿನ ವಾರದಲ್ಲಿ ಸೇರುವದಾಗಿ ಸುದ್ದಿ ಇದೆ. ಇದೇ ಪ್ರಕಾರ ಇತರ ಕರ್ನಾಟಕ ಭಾಗಗಳಲ್ಲಿ ಮುಖ್ಯವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ಮಹಾ ಜನಗಳನ್ನು ಮದ್ರಾಸ ಸರಕಾರಕ್ಕೆ ಕಳಿಸಿ ಕೊಡಬೇಕಾಗಿ ವಿನಂತಿ.

ಬಳ್ಳಾರಿಯ ಒಬ್ಬ ವರದಿಗಾರ

ಮಹತ್ವದ ಸಾರ್ವಜನಿಕ ಮಾಹಿತಿ

ಈ ಜಿಲ್ಲೆಯೊಳಗಿದ್ದ ಹಳ್ಳಿಗಳಿಗೆ ಒಳ್ಳೆಯಾತಿ ಹೊಲಗಳಿಗೆ ನೀರು ಪೂರೈಸುವ ಬಗ್ಗೆ ಕೆರೆಗಳನ್ನು ಕಟ್ಟುವ ಬಗ್ಗೆ ಯೋಗ್ಯ ತಪಾಸಣೆ ಮಾಡುವದಕ್ಕಾಗಿ ಸರಕಾರದವರು ಮೆ|| ತಾಂತ್ರಿ ಸುಪರಿಂಟೆಂಡಿಂಗ ಇಂಜನೀಯರ ಸಾಹೇಬರನ್ನು ನೇಮಿಸಿರುವರು. ಸದ್ರಿ ಇಂಜನೀಯರ ಸಾಹೇಬರು ಈ ಜಿಲ್ಲೆಯೊಳಗಿನ ಹಳ್ಳಿಗಳೆಲ್ಲ ತಪಾಸಿಸುವರು. ಇದಲ್ಲದೆ ಬೇಸಾಯಕ್ಕೆ ನೀರು ಪೂರೈಸುವ ಬಗ್ಗೆ ಈಗ ಇದ್ದ ಹಳೇ ಕೆರೆಗಳನ್ನು ಕೂಡ ದುರಸ್ತಿ ಮಾಡುವ ಬಗ್ಗೆ ಸಹ ತಪಾಸಿಸುವರು. ಈ ವಿಷಯಗಳ ಬಗ್ಗೆ ಯಾರಿಗಾದರೂ ಏನೇ ಸೂಚನೆಗಳನ್ನು ಮಾಡುವದಿದ್ದರೆ ಅವರು ಮೆ|| ಕಲೆಕ್ಟರ ಸಾಹೇಬ ಬಹಾದ್ದೂರ ವಿಜಾಪೂರ ಇವರ ಕಡೆಗೆ ಬರೆಯಬೇಕು.

ಇದಲ್ಲದೆ ಕುಡಿಯುವ ನೀರಿನ ಕೊರತೆಯಿಂದ ತ್ರಾಸ ಪಡುತ್ತಿರುವ ಹಳ್ಳಿಗಳಲ್ಲಿ ನೀರಿನ ಝರಿಗಳನ್ನು ಶೋಧಿಸುವ ಬಗ್ಗೆ ಸರಕಾರದವರು ಮೇಜರ ವಾಗ್ನರ' ಎಂಬ ತಜ್ಞ ಸಾಹೇಬರನ್ನು ಬೇಗ ನೇಮಿಸುವವರಿದ್ದಾರೆ. ಅವರು ಯಾವದೇ ಊರಲ್ಲಿಯಾದರೂ ನೀರಿನ ಝರಿಗಳನ್ನು ಹುಡುಕಿ ತೆಗೆದರೆ ಅಲ್ಲಿಯ ಜನರು ಕೂಡಲೇ ಅವರು ತೋರಿಸುವ ಜಾಗೆಯಲ್ಲಿ ಭಾವಿಗಳನ್ನು ತೆಗೆಯಲಿಕ್ಕೆ ತಯಾರ ಇರಬೇಕು. ಈ ವಿಷಯದ ಬಗ್ಗೆ ಯಾರಿಗಾದರೂ ಏನಾದರೂ ಸೂಚಿಸುವದಿದ್ದರೆ ಅವರು ಮೆ|| ಕಲೆಕ್ಟರ ಸಾಹೇಬ ಬಹಾದ್ದೂರ ವಿಜಾಪುರ ಇವರ ಕಡೆಗೆ ತಿಳಿಸಬೇಕು.

Bijapur
22--9--1925.

V. H. Naik.
Collector of
Bijapur.

ಜಗತ್ತಿನ ತಂದೆ *

(ಲೇಖಾಂಕ ೩)

[ಲೇಖಕ ಮಹಾತ್ಮಾ ಗಾಂಧಿ.]

ಹಳ್ಳಿಗಳಲ್ಲಿ ಸುವ್ಯವಸ್ಥೆಯನ್ನಿಡುವ ಕುರಿತು ನಾನು ನನ್ನ ಕೆಲವು ಅನುಭವಗಳನ್ನು ಕೊಡುವೆನೆಂದು ಈ ಮೊದಲೇ ಹೇಳಿದ್ದೇನೆ. ಡಾಕ್ಟರ ಹರಿಪ್ರಸಾದರವರು ಸ್ವ. ವಾ. ನಿವೇದಿತಾಭಗಿನಿಯು ಕಲಕತ್ತೆಯ ಒಂದು ಓಣಿಯನ್ನು ಹೇಗೆ ಸುಧಾರಿಸಿದಳೆಂಬದನ್ನು ಹೇಳಿ ಒಬ್ಬ ಪುರುಷನಾಗಲಿ ಒಬ್ಬ ಸ್ತ್ರೀಯಳೇ ಆಗಲಿ, ಮನಸಿಟ್ಟು ಕೆಲಸಮಾಡುತ್ತಿದರೆ ಎಷ್ಟೊಂದು ಕೆಲಸವಾಗಬಲ್ಲದೆಂಬುದನ್ನು ಸೋಪಪತ್ತಿಕವಾಗಿ ತೋರಿಸಿರುವರು. ಹಳ್ಳಿಗಳಲ್ಲಿ ಇಂಥ ಕೆಲಸಗಳನ್ನು ನೆರವೇರಿಸುವದು ಶಹರಗಳ ಓಣಿಗಳನ್ನು ಸುಧಾರಿಸುವ ಕಾರ್ಯದಕಿಂತಲೂ ಹೆಚ್ಚು ಹಗುರಾಗಿರುವದು. ಚಂಪಾರಣ್ಯದಲ್ಲಿ ಸ್ವಾವಲಂಬನವಾದ ಶಾಲೆಯನ್ನು ಸ್ಥಾಪಿಸಬೇಕೆಂದು ನಿಶ್ಚಯ ಮಾಡಿ ನಾನು ಸ್ವಯಂಸೇವಕರಿಗೆ ನನ್ನ ಸಹಾಯಾರ್ಥವಾಗಿ ಬರಲು ಮಿ|| ಕಾಳೆಯವರನ್ನು ಕೇಳಿಕೊಂಡೆನು. ಬಂದಂಥ ಸ್ವಯಂಸೇವಕರಲ್ಲಿ ಸ್ವ. ಡಾ. ದಾ. ದೇವ ಹಾಗೂ ಬೆಳಗಾವಿಯ ಶ್ರೀ. ಸೋಮಣ ವಕೀಲ ಇವರಿಬ್ಬರಿದ್ದರು. ಈ ಸ್ವಯಂಸೇವಕರು ಮೂರು ಕೆಲಸಗಳನ್ನು ಮಾಡತಕ್ಕದ್ದಿತ್ತು (೧) ಹುಡುಗ ಹುಡಿಗೆಯರಿಗೆ ಶಿಕ್ಷಣವನ್ನು ಕೊಡುವದು. (೨) ಸುತ್ತು ಮುತ್ತಲಿನ ಹಳ್ಳಿಗಳಿಗೆ ಆಗಾಗ್ಗೆ ಹೋಗಿ ಅಲ್ಲಿಯ ಜನರಿಗೆ ಓಣಿಗಳನ್ನು ಮನೆಗಳನ್ನು ಹಸನಾಗಿಡಲಿಕ್ಕೆ ತಿಳಿಹೇಳುವದು ಮತ್ತು (೩) ಬೇನೆಯವರು ಯಾರಾದರೂ ಬಂದರೆ ಅವರಿಗೆ ಔಷಧವನ್ನು ಕೊಡುವದು. ಶ್ರೀ. ಸೋಮಣರವರು ಭೀತಿ ಹರವಾ ಎಂಬ ಹಳ್ಳಿಗೆ ಕಳಿಸಲ್ಪಟ್ಟರು. ಡಾ. ದೇವರವರು ಬೇನೆಯಿದ್ದ ಹಳ್ಳಿಯಲ್ಲಿ ಔಷಧೋಪಚಾರ ಮಾಡುತ್ತಿದ್ದರು. ಹೀಗೆ ಇರುತ್ತ ಡಾ. ದೇವರವರು ಭೀತಿಹರವಾದ ಶಾಲೆಯಲ್ಲಿ ಹೆಚ್ಚು ಹೆಚ್ಚಿಗೆ ಇರಹತ್ತಿದರು. ಅಲ್ಲಿಯ ಜನರಲ್ಲಿ ಸುಧಾರಣೆಯಬಗ್ಗೆ ಇಚ್ಛೆಯನ್ನು ಹುಟ್ಟಿಸುವದು ಕಠಿಣವಾದ ಕಾರ್ಯವಾಗಿತ್ತು. ಡಾ. ದೇವರವರು ಹಳ್ಳಿಯವರು ಯಾವ ಯಾವ ಸುಧಾರಣೆಗಳನ್ನು ಮಾಡಿಕೊಳ್ಳತಕ್ಕದ್ದೆಂಬುದನ್ನು ಅವರಿಗೆ ತಿಳಿಹೇಳಿದರು. ಆದರೆ ಹಳ್ಳಿಯ ಜನರು ಡಾಕ್ಟರವರ ಮಾತು ಕೇಳಬೇಕಷ್ಟೇ? ಬೀದಿಗಳನ್ನು ಸ್ವಚ್ಛವಾಗಿಡುವದು ಮತ್ತು ಬಾವಿಯ ಬಳಿಯಲ್ಲಿ ನೀರು ಒಸರಿಯದಂತೆ ಸುತ್ತಲಿನ ನೆಲವನ್ನು ಇಳಿಜಾರಾಗಿ ಮಾಡಿ ಕಸಕಡ್ಡಿಯನ್ನು ತೆಗೆದುಹಾಕುವದು ಇಷ್ಟು ಮಾತನ್ನು ಕೂಡ ಮಾಡಲು ಜನರು ಇಷ್ಟಪಟ್ಟವರಾಗಿರಲಿಲ್ಲ. ಕಡೆಗೆ ಡಾ. ದೇವರವರು ಹಾಗು ಶ್ರೀ. ಸೋಮಣರವರು ಸ್ವತಃ ಕೈಯಲ್ಲಿ ಗುದ್ದಲಿ ಸಲಿಕೆಗಳನ್ನು ತೆಗೆದುಕೊಂಡರು. ಸುತ್ತು ಬಾವಿಯ ಸುತ್ತಲಿನ ನೆಲವನ್ನು ಇಳಿಜಾರಾಗಿ ಮಾಡಲು ಹಾಗು ಬೀದಿಗಳನ್ನು ಹಸನು ಮಾಡಲು ಆರಂಭಿಸಿದರು. ಹಳ್ಳಿಯು ಚಿಕ್ಕದು. ಹಾ ಹಾ ಅನ್ನುವದರಲ್ಲಿ ಈ ಮಾತು

---

* ಈ ಲೇಖನದ ಹಿಂದಿನ ಲೇಖವು ೧೩ ನೇ ಸಂಚಿಕೆಯಲ್ಲಿ ಪ್ರಕಟವಾಗಿದೆ.

ರೇಲ್ವೇ ಬೋರ್ಡ ಸಿಮ್ಲಾ ಇವರಿಗೆ

ಮಹಾಶಯರೇ

ಕೆಳಗೆ ಸಹಿ ಮಾಡಿದಂಥ ಕರ್ನಾಟಕದೊಳಗಿನ ಬೇರೆ ಬೇರೆ ಭಾಗಗಳ ನಿವಾಸಿಗಳಾದ ನಾವುಗಳೆಲ್ಲ ತಮಗೆ ಅರಿಕೆ ಮಾಡಿಕೊಳ್ಳುವದೇನಂದರೆ, ಸಂಯುಕ್ತ ಕರ್ನಾಟಕ ಪ್ರಾಂತದಲ್ಲಿರುವ ನಮಗೆ ನಮ್ಮ ಕರ್ನಾಟಕನಾಡಿನಲ್ಲಿ ರೇಲ್ವೆ ಸೌಕರ್ಯಗಳು ಸಮಾಧಾನಕರವಾಗಿರುವದಿಲ್ಲ. ಸಾವಿರಾರು ಊರುಗಳಲ್ಲಿ ರೇಲ್ವೆಗಳಿರುವದಿಲ್ಲ. ಇದರಿಂದ ನಮ್ಮ ಪ್ರಾಂತದ ಜನರ ಪ್ರವಾಸಗಳೆಲ್ಲ ಬಹು ಕಷ್ಟವಾಗಿವೆ. ನಮ್ಮಲ್ಲಿಯ ವ್ಯಾಪಾರ ಉದ್ದಿಮೆಗಳಿಗೆ ಇದರಿಂದ ಬಹು ಆತಂಕವಾಗಿದೆ. ಇಷ್ಟು ದಿನಗಳವರೆಗೆ ಇವೆಲ್ಲ ಕಷ್ಟಗಳನ್ನು ನಾವು ಸೋಸುತ್ತಿದ್ದರೂ ಸಹ ನಮಗೆ ಸುಖಕರವಾಗುವಂಥ ಹೊಸ ರೇಲ್ವೇಗಳು ಈವರಿಗೂ ಆಗಲೊಲ್ಲವು. ಆದುದರಿಂದ ಈಗ್ಗೆ ರೇಲ್ವೆ ಬೋರ್ಡಿನವರು ಅನುಮತಿಯನ್ನು ಕೊಟ್ಟಂಥ ಕೆಳಗಿನ ರೇಲ್ವೇಗಳನ್ನು ಬೇಗನೆ ಪ್ರಾರಂಭಿಸುವಂತೆ ಏರ್ಪಾಟ ಮಾಡಬೇಕಾಗಿ ಆಗ್ರಹಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

(೧) ನಿಪ್ಪಾಣಿ ಹುನಗುಂದ ... . (ಸದರ್ನ ಮರಾಠಾ ರೇಲ್ವೆ.)
(೨) ಬೆಳಗಾವಿ ಹುಬ್ಬಳ್ಳಿ (ಸವದತ್ತಿಮಾರ್ಗವಾಗಿ) ... . ,,
(೩) ಹಾವೇರಿ ಹಾವನೂರ .... ,,
(೪) ಹರಿಹರ- ಕೊಟ್ಟೂರ .... ,,
(೫) ಗದಗ-ವಾಡಿ-ರಾಯಚೂರ.... .... (ನಿಝಾಂ ರೇಲ್ವೆ)
(೬) ನಂಜನಗುಡ್ಡ ಮೆಟ್ಟುಪಾಲಿಯಮ್ .... (ಮೈಸೂರ ರೇಲ್ವೆ)

ಈ ಆರು ಹಳೇ ಯೋಜನೆಗಳ ಹೊರ್ತಾಗಿ

(೧) ಹುಬ್ಬಳ್ಳಿ- ಕಾರವಾರ- ಮಂಗಳೂರಿಗೂ ... .
(೨) ಮೈಸೂರ ಮಡಿಕೇರಿಗೂ. ....

ಹೊಸದಾಗಿ ರೇಲ್ವೆ ಲಾಯಿನಗಳನ್ನು ಹಾಕಬೇಕಾಗಿ ನಮ್ಮೆಲ್ಲರ ಅತಿಶಯ ಕಳಕಳಿಯ ಮತ್ತು ಆತುರದ ಪ್ರಾರ್ಥನೆಯಿದೆ. ಪೂರ್ವ ಸಮುದ್ರದ ದಂಡೆಯ ಗುಂಟ ರೇಲ್ವೆ ಕಂಪನಿಯವರು ರೇಲ್ವೆ ಲಾಯಿನಗಳನ್ನು ಹಾಕಿ ಅನೇಕ ವರ್ಷಗಳಾದವು ಆದರೆ ಪಶ್ಚಿಮ ಸಮುದ್ರದ ದಂಡೆಯ ಕಡೆಗೆ ಸಹ ತಾವು ಹೊಸ ಲಾಯಿನ್ಸಗಳನ್ನು ಹಾಕಿದರೆ, ಇತ್ತ ಕಡೆಯ ಜನರಿಗೂ ಪ್ರವಾಸಕ್ಕಾಗಿ ಬಹು ಅನುಕೂಲವಾಗುವದಲ್ಲದೆ. ಕಾರವಾರ, ಮಂಗಳೂರ ಜಿಲ್ಲೆಗಳ ಕಾನನ ಉಪವನಗಳ ಲಾಭವನ್ನೂ ಇಲ್ಲಿಯ ಜನರೆಲ್ಲ ತೆಗೆದು ಕೊಂಡು, ಕಾಗದ, ಕಟ್ಟಿಗೆ ಮೊದಲಾದ ಹೊಸಗಿರಣಿಗಳನ್ನೂ ಬೇರೆ ವ್ಯವಸಾಯಗಳನ್ನು ಪ್ರಾರಂಭಿಸಲು ಅನುಕೂಲವಾಗುವದು. ಮುಂದೆ ಪಶ್ಚಿಮ ದಂಡೆಯಲ್ಲಿ ಒಂದು ಬಂದರವನ್ನು ತೆಗೆಯಲು ಅನುಕೂಲವಾಗಿ ಅದರಿಂದ ನಮ್ಮ ಕರ್ನಾಟಕ ಪ್ರಾಂತದ ಸಂಪದಭಿವೃದ್ಧಿಯು ತಾನೇ ಆಗುವದು'

ಭಾಷಾನ್ವಯ ಪ್ರಾಂತ ರಚನೆಯನ್ನು ಮಾಡುವದಕ್ಕೆ ಸರಕಾರದ ಒಪ್ಪಿಗೆಯಿದೆ. ಅದು ಕೃತಿಯಲ್ಲಿಯೂ ಕ್ರಮೇಣ ಬರಹತ್ತಿದೆ. ಕರ್ನಾಟಕಕ್ಕಾದರೂ ಸ್ವತಂತ್ರ ಪ್ರಾಂತವುದೊರೆಯುವದು ನಾವು ಈಗ್ಗೆ ಸೂಚಿಸಿದ ರೇಲ್ವೆ ಗಳಾದರೆ ನಮ್ಮ ಕರ್ನಾಟಕ ಪ್ರಾಂತರಚನೆಯ ಕಾರ್ಯಕ್ಕೆ ಬಹು ಅನುಕೂಲವಾಗುವದು.

ಆದುದರಿಂದ ತಾವು ಇದನ್ನೆಲ್ಲ ಲಕ್ಷ್ಯದಲ್ಲಿ ತಂದು, ನಮ್ಮ ಪ್ರಾರ್ಥನೆಯನ್ನು ಬೇಗನೆ ಮನ್ನಿಸಬೇಕಾಗಿ ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇವೆ.

ಇತಿ. ತಮ್ಮ ವಿಧೇಯರಾದ

ಸಂಖ್ಯೆ	ಪೂರ್ಣ ಹೆಸರು ಮತ್ತು ವಿಳಾಸ.	ಉದ್ಯೋಗ.	ಸಹಿ.

ಥ ಸಮ್ಮತಿಸುವ ತೀರ್ಮಾನವನ್ನು ಅಂಗೀಕರಿಸಿರುತ್ತದೆಯೋ ಹೇಗೆ ಯೆಂದು ಒಬ್ಬ ಸಭ್ಯರು ಕೇಳಿದಾಗ್ಗೆ ಸದರಿ ಮೊದಲಿಯಾರವರು ನಿರುತ್ತರರಾದರು. ತದನಂತರು ಸದರಿ ಸಭ್ಯರು ಈ ಕರ್ನಾಟಕ ಮುಖಂಡರನ್ನು ಬಿಟ್ಟುಬಿಟ್ಟು ತಮ್ಮ ಆಲೋಚನೆ ಸಭೆಯನ್ನು ಆರಂಭಿಸಿದರು. ಕರ್ನಾಟಕ ಸಭ್ಯರು ಮದ್ರಾಸಿನ ಸರ್ವ ಪತ್ರಿಕೆಗಳ ಸಂಪಾದಕರನ್ನು ಮತ್ತು ಆಂಧ್ರೇತರ ನ್ಯಾಯನಿರ್ಮಾಣ ಸಭ್ಯರನ್ನು ಕಂಡು ಮಾತಾಡಿ ಕರ್ನಾಟಕ ಅಭ್ಯುದಯಕ್ಕೆ ಸಹಾಯ ಮಾಡುವ ಹಾಗೆ ಅವರಿಗೆ ಹೇಳಿ ಮರುದಿನ ಮದ್ರಾಸಿನಿಂದ ಹಿಂತಿರುಗಿದರು.

ಸದರಿ ನ್ಯಾಯದ ನಿರ್ಮಾಣ ಸಭ್ಯರ ಆಲೋಚನೆ ಸಭೆಯಲ್ಲಿ ಅನಂತಪುರಕ್ಕೆ ಆಂಧ್ರ ಸರ್ವ ಕಲಾಶಾಲೆಯ ಒಂದು ಶಾಖೆಯನ್ನು ಕೊಡುವದಕ್ಕೆ ಒಪ್ಪಿರುತ್ತಾರೆಂತಲೂ, ಬಳ್ಳಾರಿಗೆ ಕೊಡಲು ನಿರಾಕರಿಸಿರುತ್ತಾರೆಂತಲೂ ಇಲ್ಲಿಗೆ ಸುದ್ದಿ ಬಂದಿರುತ್ತದೆ. ಅಂದ ಮೇಲೆ ಬಳ್ಳಾರಿಗೆ ಒಂದು ಶಾಖೆಯನ್ನು ಕೊಟ್ಟರೇನೇ ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಲು ತಾವು ಇಷ್ಟಕೊಡುತ್ತೇವೆಂದು ಹೇಳು ವ ಗೋಪಾಲಸ್ವಾಮಿ ಮೊದಲಿಯಾರವರು ಮತ್ತು ಅವರ ಅನುಯಾಯಿಗಳು ಇತ್ತ ಕಡೆಗೆ ಲಕ್ಷ್ಯಕೊಡಲಿ. ಸದರಿ ಸಭ್ಯರು ಮಾತಾಡಿದ ಬಗೆಯನ್ನು ನೋಡಿದರೆ ಅವರು ಬಳ್ಳಾರಿ ಜಿಲ್ಲೆಯನ್ನು ಆಂಧ್ರಕ್ಕೆ ಸೇರಿಸುತ್ತಾರೆಂದು ತಿಳಿಯ ಬರುತ್ತದೆ. ಕಾರಣ ಕರ್ನಾಟಕ ಜನರೆಲ್ಲರೂ ಬೇಗ ಎಚ್ಚತ್ತು ಇನ್ನೂ ಜಾಸ್ತಿ ಚಳವಳಿಯನ್ನು ಮಾಡಿ ಮದ್ರಾಸ ಸರಕಾರಕ್ಕೆ ಬೇಗ ವಿನಂತಿಗಳನ್ನು ಕಳಿಸಬೇಕಾಗಿ ಕೋರಿಕೆ, ಇಲ್ಲದೆ ಹೋದರೆ ಕರ್ನಾಟಕಕ್ಕೆ ಬಳ್ಳಾರಿಯು ಗತಿಸಿ ಹೋಗುವದು. ಈ ಬಗ್ಗೆ ನಿರೋಧಿಸಲಿಕ್ಕೆ ಇಲ್ಲಿಯ ವೀರಶೈವ ವಿದ್ಯಾವರ್ಧಕ ಸಂಘದ ಸಭೆಯೊಂದು ನಾಳಿನ ವಾರದಲ್ಲಿ ಸೇರುವದಾಗಿ ಸುದ್ದಿ ಇದೆ. ಇದೇ ಪ್ರಕಾರ ಇತರ ಕರ್ನಾಟಕ ಭಾಗಗಳಲ್ಲಿ ಮುಖ್ಯವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ಮಹಾ ಜನಗಳನ್ನು ಮದ್ರಾಸ ಸರಕಾರಕ್ಕೆ ಕಳಿಸಿ ಕೊಡಬೇಕಾಗಿ ವಿನಂತಿ.

ಬಳ್ಳಾರಿಯ ಪ್ರತಿನಿಧಿ ವಾರ

ಮಹತ್ವದ ಸಾರ್ವಜನಿಕ ಮಾಹಿತಿ

ಈ ಜಿಲ್ಲೆಯೊಳಗಿದ್ದ ಹಳ್ಳಿಗಳಿಗೆ ಒಮ್ಮೆಹಾಕಿ ಹೊಲಗಳಿಗೆ ನೀರು ಪೂರೈಸುವ ಬಗ್ಗೆ ಕೆರೆಗಳನ್ನು ಕಟ್ಟುವ ಬಗ್ಗೆ ಯೋಗ್ಯ ತಪಾಸಣೆ ಮಾಡುವದಕ್ಕಾಗಿ ಸರಕಾರದವರು ಮೆ|| ತಾಂಸ್ಲಿ ಸುಪರಿಂಟೆಂಡಿಂಗ ಇಂಜನೀಯರ ಸಾಹೇಬರನ್ನು ನೇಮಿಸಿರುವರು. ಸದ್ರಿ ಇಂಜನೀಯರ ಸಾಹೇಬರು ಈ ಜಿಲ್ಲೆಯೊಳಗಿನ ಹಳ್ಳಿಗಳಲ್ಲಿ ತಪಾಸಿಸುವರು. ಇದಲ್ಲದೆ ಬೇಸಾಯಕ್ಕೆ ನೀರು ಪೂರೈಸುವ ಬಗ್ಗೆ ಈಗ ಇದ್ದ ಹಳೇ ಕೆರೆಗಳನ್ನು ಕೂಡ ದುರಸ್ತ ಮಾಡುವ ಉದ್ದೇಶದಿಂದ ತಪಾಸಿಸುವರು. ಈ ವಿಷಯಗಳ ಬಗ್ಗೆ ಯಾರಿಗಾದರೂ ಏನಾದರೂ ಸೂಚನೆಗಳನ್ನು ಮಾಡುವದಿದ್ದರೆ ಅವರು ಮೆ|| ಕಲೇಕ್ಟರ ಸಾಹೇಬ ಬಹದ್ದೂರ ವಿಜಾಪೂರ ಇವರ ಕಡೆಗೆ ಬರಿಯಬೇಕು.

ಇದಲ್ಲದೆ ಕುಡಿಯುವ ನೀರಿನ ಕೊರತೆಯಿಂದ ತ್ರಾಸ ಪಡುತ್ತಿರುವ ಹಳ್ಳಿಗಳಲ್ಲಿ ನೀರಿನ ಝರಿಗಳನ್ನು ಶೋಧಿಸುವ ಬಗ್ಗೆ ಸರಕಾರದವರು ಮೇಜರ ಪಾರ್ಸನ್ ಎಂಬ ತಜ್ಞ ಸಾಹೇಬರನ್ನು ಬೇಗ ನೇಮಿಸುವವರಿದ್ದಾರೆ. ಅವರು ಯಾವದೇ ಊರಲ್ಲಿಯಾದರೂ ನೀರಿನ ಝರಿಗಳನ್ನು ಹುಡುಕಿ ತೆಗೆದರೆ ಅಲ್ಲಿಯ ಜನರು ಕೂಡಲೇ ಅವರು ತೋರಿಸುವ ಜಾಗೆಯಲ್ಲಿ ಭಾವಿಗಳನ್ನು ತೆಗೆಯಲಿಕ್ಕೆ ತಯಾರ ಇರಬೇಕು. ಈ ವಿಷಯದ ಬಗ್ಗೆ ಯಾರಿಗಾದರೂ ಏನಾದರೂ ಸೂಚಿಸುವದಿದ್ದರೆ ಅವರು ಮೆ|| ಕಲೇಕ್ಟರ ಸಾಹೇಬ ಬಹದ್ದೂರ ವಿಜಾಪುರ ಇವರ ಕಡೆಗೆ ತಿಳಿಸಬೇಕು.

Bijapur 22—9—1925.	}	V. H. Naik. Collector of Bijapur.

ಜಗತ್ತಿನತಂದೆ *

(ಲೇಖಾಂಕ ೩)

[ಲೇಖಕ ಮಹಾತ್ಮಾ ಗಾಂಧಿ.]

ಹಳ್ಳಿಗಳಲ್ಲಿ ಸುವ್ಯವಸ್ಥೆಯನ್ನಿಡುವ ಕುರಿತು ನಾನು ನನ್ನ ಕೆಲವು ಅನುಭವಗಳನ್ನು ಕೊಡುವೆನೆಂದು ಈ ಮೊದಲೇ ಹೇಳಿದ್ದೇನೆ. ಡಾಕ್ಟರ ಹರಿಪ್ರಸಾದರವರು ಸ್ವ. ವಾ. ನಿವೇದಿತಾಭಗಿನಿಯು ಕಲಕತ್ತೆಯ ಒಂದು ಓಣಿಯನ್ನು ಹೇಗೆ ಸುಧಾರಿಸಿದಳೆಂಬದನ್ನು ಹೇಳಿ ಒಬ್ಬ ಪುರುಷನಾಗಲಿ ಒಬ್ಬ ಸ್ತ್ರೀಯಳೇ ಆಗಲಿ, ಮನಸಿಟ್ಟು ಕೆಲಸಮಾಡಹತ್ತಿದರೆ ಎಷ್ಟೊಂದು ಕೆಲಸವಾಗಬಲ್ಲದೆಂಬುದನ್ನು ನೋಡಹತ್ತಿಕವಾಗಿ ತೋರಿಸಿರುವರು. ಹಳ್ಳಿಗಳಲ್ಲಿ ಇಂಥ ಕೆಲಸಗಳನ್ನು ನೆರವೇರಿಸುವದು ಶಹರಗಳ ಓಣಿಗಳನ್ನು ಸುಧಾರಿಸುವ ಕಾರ್ಯದಕಿಂತಲೂ ಹೆಚ್ಚು ಹಗುರಾಗಿರುವದು. ಚಂಪಾರಣ್ಯದಲ್ಲಿ ಸ್ವಾವಲಂಬನವಾದ ಶಾಲೆಯನ್ನು ಸ್ಥಾಪಿಸಬೇಕೆಂದು ನಿಶ್ಚಯ ಮಾಡಿ ನಾನು ಸ್ವಯಂಸೇವಕರಿಗೆ ನನ್ನ ಸಹಾಯಾರ್ಥವಾಗಿ ಬರಲು ಮಿ|| ಕಾಳೆಯವರನ್ನು ಕೇಳಿಕೊಂಡೆನು. ಬಂದಂಥ ಸ್ವಯಂಸೇವಕರಲ್ಲಿ ಸ್ವ. ವಾ. ಡಾ. ದೇವ ಹಾಗೂ ಬೆಳಗಾವಿಯ ಶ್ರೀ. ಸೋಮಣ ವಕೀಲ ಇವರಿಬ್ಬರಿದ್ದರು. ಈ ಸ್ವಯಂಸೇವಕರು ಮೂರು ಕೆಲಸಗಳನ್ನು ಮಾಡತಕ್ಕದ್ದಿತ್ತು (೧) ಹುಡುಗ ಹುಡಿಗೆಯರಿಗೆ ಶಿಕ್ಷಣವನ್ನು ಕೊಡುವದು. (೨) ಸುತ್ತು ಮುತ್ತಲಿನ ಹಳ್ಳಿಗಳಿಗೆ ಆಗಾಗ್ಗೆ ಹೋಗಿ ಅಲ್ಲಿಯ ಜನರಿಗೆ ಓಣಿಗಳನ್ನು ಮನೆಗಳನ್ನು ಹಸನಾಗಿಡಲಿಕ್ಕೆ ತಿಳಿಹೇಳುವದು ಮತ್ತು (೩) ಬೇನೆಯವರು ಯಾರಾದರೂ ಒಂದರೆ ಅವರಿಗೆ ಔಷಧವನ್ನು ಕೊಡುವದು. ಶ್ರೀ. ಸೋಮಣರವರು ಭೀತಿ ಹರವಾ ಎಂಬ ಹಳ್ಳಿಗೆ ಕಳಿಸಲ್ಪಟ್ಟರು. ಡಾ. ದೇವರವರು ಬೇನೆಯಿದ್ದ ಹಳ್ಳಿಯಲ್ಲಿ ಔಷಧೋಪಚಾರ ಮಾಡುತ್ತಿದ್ದರು ಹೀಗೆ ಇರುತ್ತ ಡಾ. ದೇವರವರು ಭಿತಿಹರವಾದ ಶಾಲೆಯಲ್ಲಿ ಹೆಚ್ಚು ಹೊತ್ತಿಗೆ ಇರಹತ್ತಿದರು. ಅಲ್ಲಿಯ ಜನರಲ್ಲಿ ಸುಧಾರಣೆಯಬಗ್ಗೆ ಇಚ್ಛೆಯನ್ನು ಹುಟ್ಟಿಸುವದು ಕಠಿಣವಾದ ಕಾರ್ಯವಾಗಿತ್ತು. ಡಾ. ದೇವರವರು ಹಳ್ಳಿಯವರು ಯಾವ ಯಾವ ಸುಧಾರಣೆಗಳನ್ನು ಮಾಡಿಕೊಳ್ಳತಕ್ಕದ್ದೆಂಬುದನ್ನು ಅವರಿಗೆ ತಿಳಿಹೇಳಿದರು. ಆದರೆ ಹಳ್ಳಿಯ ಜನರು ಡಾಕ್ಟರವರ ಮಾತು ಕೇಳಬೇಕಷ್ಟೇ? ಬೀದಿಗಳನ್ನು ಸ್ವಚ್ಛವಾಗಿಡುವದು ಮತ್ತು ಬಾವಿಯ ಬಳಿಯಲ್ಲಿ ನೀರು ಉಳಿಯದಂತೆ ಸುತ್ತಲಿನ ನೆಲವನ್ನು ಇಳಿಜಾರಾಗಿ ಮಾಡಿ ಕಸಕಡ್ಡಿಯನ್ನು ತೆಗೆದೊಗೆಯುವದು ಇಷ್ಟು ಮಾತನ್ನೂ ಕೂಡ ಮಾಡಲು ಜನರು ಇಷ್ಟಪಡುವವರಾಗಿರಲಿಲ್ಲ. ಕಡೆಗೆ ಡಾ. ದೇವರವರು ಹಾಗು ಶ್ರೀ. ಸೋಮಣರವರು ಸ್ವತಃ ಕೈಯಲ್ಲಿ ಗುದ್ದಲಿ ಸಲಿಕೆಗಳನ್ನು ತೆಗೆದುಕೊಂಡರು. ಸುತ್ತು ಬಾವಿಯ ಸುತ್ತಲಿನ ನೆಲವನ್ನು ಇಳಿಜಾರಾಗಿ ಮಾಡಲು ಹಾಗು ಬೀದಿಗಳನ್ನು ಹಸನು ಮಾಡಲು ಆರಂಭಿಸಿದರು. ಹಳ್ಳಿಯು ಚಿಕ್ಕದು. ಹಾ ಹಾ ಅನ್ನುವದರಲ್ಲಿ ಈ ಮಾತು

* ಈ ಲೇಖದ ಹಿಂದಿನ ಲೇಖವು ೧೩ ನೇ ಸಂಚಿಕೆಯಲ್ಲಿ ಪ್ರಕಟವಾಗಿದೆ.

ಎಲ್ಲರಿಗೆ ಗೊತ್ತಾಯಿತು. ಹಳ್ಳಿಯವರು ಡಾ. ದೇವರವರ ಮಾತಿನ ಅರ್ಥವನ್ನು ತಿಳಿದರು ಡಾ. ದೇವರವರ ಕಾರ್ಯದಲ್ಲಿದ್ದ ಬಲವು ಅವರ ಸೂಚನೆಗಳಲ್ಲಿದ್ದಿಲ್ಲ. ಹಳ್ಳಿಯ ಜನರೆಲ್ಲರೂ ತಾವೇ ಎಲ್ಲವನ್ನೂ ಹಸನಾಗಿಡಹತ್ತಿದರು. ಮತ್ತು ಸ್ವಲ್ಪ ಕಾಲದಲ್ಲಿ ಭೀತಿಕರವಾದ ಬಾವಿಬೀದಿಗಳೆಲ್ಲವೂ ಸುಂದರವಾಗಿ ಕಾಣಹತ್ತಿದವು. ಕಸದ ಗುಂಪಿಗಳೆಲ್ಲವೂ ಕಾಣದಂತಾದವು. ಇಷ್ಟರಲ್ಲಿ ಶಾಲೆಗಾಗಿ ಕಟ್ಟಿದ ಹುಲ್ಲಿನ ಗುಡಿಸಲು ಯಾವ ದುಷ್ಟರಿಂದಲೋ ಸುಡಲ್ಪಟ್ಟಿತು. ಇನ್ನು ಮುಂದೆ ಮಾಡಬೇಕೆನೆಂಬುದೊಂದು ದೊಡ್ಡ ಪ್ರಶ್ನವೇ ಆಯಿತು. ಪುನಃ ಹುಲ್ಲಿನ ಗುಡಿಸಲನ್ನು ಕಟ್ಟಿದರೆ ಅದು ಸುಡುವ ಭೀತಿಯು! ಶ್ರೀ. ಸೋಮಣ ಹಾಗು ಡಾ. ದೇವ ಇವರು ಇಟ್ಟಂಗಿಯ ಕಟ್ಟಡವನ್ನು ಕಟ್ಟಬೇಕೆಂದು ನಿಶ್ಚೈಸಿದರು. ಇಬ್ಬರೂ ಭಾಷಣವನ್ನು ಮಾಡುವ ಕಲೆಯನ್ನು ಚನ್ನಾಗಿ ಅರಿತಿದ್ದರು. ಬೇಕಾದ ಸಾಮಾನುಗಳನ್ನು ಬೇಡಿ ತಂದರು, ಅವಶ್ಯವಿದ್ದಲ್ಲಿ ಹಣವನ್ನು ಕೊಟ್ಟರು. ಮತ್ತು ಅವರಿಬ್ಬರೂ ಮಜೂರಿಯನ್ನು ಮಾಡಲಾರಂಭಿಸಿದರು. ಶಾಲೆಯ ಇಟ್ಟಂಗಿಯ ಕಟ್ಟಡದ ತಳಹದಿಯನ್ನು ಅವರು ತಮ್ಮ ಸ್ವಂತ ಕೈಗಳಿಂದ ಕಟ್ಟಿದರು. ಕೂಡಲೇ ಹಳ್ಳಿಯ ಜನರೂ ಬಂದರು. ಬಡಿಗ, ಕಮ್ಮಾರರು ಕೈಲಾದ ಮಟ್ಟಿಗೆ ನೆರವಾದರು. ಈ ವತ್ತಿಗೂ ಭೀತಿಕರವಾದ ಶಾಲೆಯು ಒಬ್ಬಿಬ್ಬರು ಮನಸ್ಸು ಮಾಡಿದರೆ ಅವರಿಂದ ಏನಾಗಬಹುದೆಂಬುದರ ಸಾಕ್ಷಿಯಾಗಿದೆ ಈ ಬಗೆಯ ಕಾರ್ಯವು ಇದೊಂದೇ ಹಳ್ಳಿಯಲ್ಲಿ ಆಯಿತೆಂತಲ್ಲ, ಆದರೆ ಎಲ್ಲೆಲ್ಲಿ ಶಾಲೆಗಳು ಸ್ಥಾಪಿಸಲ್ಪಟ್ಟವೋ ಆ ಎಲ್ಲ ಸ್ಥಳಗಳಲ್ಲಿ ಅಲ್ಪ ಸ್ವಲ್ಪ ಪ್ರಮಾಣದಿಂದ ಆಯಿತು. ಮತ್ತು ಶಿಕ್ಷಕರ ಕಾರ್ಯದ ಆಕರ್ಷಣ ಶಕ್ತಿಯ ಪ್ರಮಾಣದಿಂದ ಹಳ್ಳಿಯವನು ಕೆಲಸ ಮಾಡಿದನು. ಈ ಸೇವೆಯನ್ನು ಮಾಡಲು ಅಷ್ಟೊಂದು ತೀಕ್ಷ್ಣ ಬುದ್ಧಿಯ ಅವಶ್ಯಕತೆ ಇರಲಿಲ್ಲ. ಆದರೆ ಕಾರ್ಯತತ್ಪರತೆಯು ಹಾಗು ದೃಢಪ್ರಯತ್ನದ ಅವಶ್ಯಕತೆಯಿತ್ತು.

ಖೇಡಾ ಜಿಲ್ಲೆಯಲ್ಲಿ ಬೆಳೆಯ ಅಣೇವಾರಿಯನ್ನು ಮಾಡುವದಿತ್ತು. ಅದರಲ್ಲಿ ಒಕ್ಕಲಿಗರೆಲ್ಲರೂ ನೆರವಾಗದಿದ್ದರೆ ಈ ಕೆಲಸವನ್ನು ಮಾಡಲು ಬರುವಂತಿದ್ದಿಲ್ಲ. ಹಳ್ಳಿಗೊಬ್ಬನಂತೆ ಸ್ವಯಂಸೇವಕನು ಹೋಗಿ ಅಲ್ಲಿ ಅವನು ತನಗೆ ಶಕ್ಯವಿದ್ದಷ್ಟು ಮಾಹಿತಿಯನ್ನು ದೊರಕಿಸಿದ್ದಲ್ಲದೆ ಒಕ್ಕಲಿಗರ ಮನಸನ್ನೂ ಆಕರ್ಷಿಸಿಕೊಂಡನು. ಬೇರೆ ಬೇರೆ ಸ್ಥಳಗಳಲ್ಲಿಯ ಇಂಥ ಅನೇಕ ಉದಾಹರಣೆಗಳನ್ನು ನಾನು ಕೊಡಬಲ್ಲೆನು

ಹಳ್ಳಿಗಳಲ್ಲಿ ಸುವ್ಯವಸ್ಥೆಯನ್ನುಂಟು ಮಾಡಲಿಚ್ಛಿಸುವವರು ತಮ್ಮ ಕಾರ್ಯವನ್ನು ಹೇಗೆ ಪ್ರಾರಂಭಿಸಬೇಕೆಂಬುದನ್ನು ಇನ್ನು ನಾವು ವಿಚಾರಿಸಬಲ್ಲೆವು ತಾವು ವಾಸಿಸುತ್ತಿರುವ ಊರನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಳ್ಳತಕ್ಕದ್ದು. ಅಲ್ಲಿ ವಾಸಿಸುತ್ತಿರುವ ಎಲ್ಲ ಜನರ ಗುರ್ತು ಮಾಡಿಕೊಳ್ಳಬೇಕು. ಅವರ ದುಃಖದಲ್ಲಿ ಸ್ವಲ್ಪಾದರೂ ಆಡಂಬರ ಮಾಡದೆ ಕಾಮಗಾರರಾಗಬೇಕು. ಓಣಿಗಳನ್ನು ಹಸನಾಗಿಡುವ ಕೆಲಸದಲ್ಲಿ ತಮಗೆ ನೆರವಾಗಲು ಅವರನ್ನು ಬೇಡಿಕೊಳ್ಳಬೇಕು. ನೆರೆಯವರು ನಗಬಹುದು, ಮಾನಭಂಗಮಾಡಬಹುದು, ಇದೆಲ್ಲವನ್ನು ಸೇವಕನಾದವನು ತಾಳಬೇಕು. ಮತ್ತು ಮೊದಲಿನಂತೆ ಅವರ ದುಃಖದಲ್ಲಿ ಪಾಲುಗಾರರಾಗಿದ್ದುಕೊಂಡು ತಾನೊಬ್ಬನೇ ಓಣಿಯನ್ನು ಹಸನಾಗಿಡಲು ಯತ್ನಿಸಬೇಕು. ತನ್ನ ಹೆಂಡತಿ ತಾಯಿ, ಅಕ್ಕ, ತಂಗಿ, ಅಣ್ಣ, ತಮ್ಮ ಮೊದಲಾದವರನ್ನು ಕ್ರಮೇಣ ತಾನು ಮಾಡುತ್ತಿರುವ ಈ ಸೇವಾ ಕಾರ್ಯದಲ್ಲಿ ತೊಡಗಿಸಬೇಕು. ನೆರೆಯವರು, ನೆರವಾಗಲಿ, ನೆರವಾಗದಿರಲಿ, ಓಣಿಯನ್ನು ಹಸನಾಗಿಡುವ ಕೆಲಸವನ್ನು ಹಾಗೇ ಸಾಗಿಸಬೇಕು. ನೆರೆಯವರು ಈ ಸೇವಾಕಾರ್ಯದಲ್ಲಿ ನೆರವಾಗದೆ ಬಹುದಿವಸ ಉಳಿಯರೆಂಬುದು ಅನುಭವದಿಂದ ಕಂಡು ಬರುವದು. ಕಡೆಗೆ ನೆರೆಹೊರೆಯ ಜನರೆಲ್ಲರು ಸ್ವತಃ ಕೆಲಸ ಮಾಡುತ್ತ ಹೋಗುವರು ಮತ್ತು ಒಂದು ಓಣಿಯ ಸುಗಂಧವು ಇಡಿ ಊರೆಲ್ಲ ತುಂಬುವದು.

ಸೇವಕನು ಹೆಚ್ಚು ಉತ್ಸಾಹವುಳ್ಳವನಾಗಿಯೂ ಸುಶಿಕ್ಷಿತನಾಗಿಯೂ ಇದ್ದುದಾಗಿದ್ದರೆ ತನ್ನ ಓಣಿಯೊಳಗಿನ ಹುಡುಗರಿಗೆ ಹಾಗು ನಿರಕ್ಷರರಾದ ವಯಸ್ಕಾದ ಜನರಿಗೆ ಕೂಡ ಅಕ್ಷರಜ್ಞಾನವನ್ನು ಮಾಡಿಕೊಡಲು ಯತ್ನಿಸಬೇಕು. ತನ್ನ ಓಣಿಯಲ್ಲಿ ಯಾರಾದರೂ ಬೇನೆ ಬಿದ್ದಿದ್ದರೆ ಮತ್ತು ವೈದ್ಯರಿಂದ ಔಷಧವನ್ನು ತೆಗೆದುಕೊಳ್ಳಲು ಅಸಮರ್ಥರಾಗಿದ್ದರೆ ಅವರಿಗೆ ಸುಲಭವಾಗಿ ಔಷಧವು ದೊರೆಯುವಂತೆ ಮಾಡಬೇಕು, ಹಾಗೂ ಅವರಿಗೆ ಆರೈಕೆ ಮಾಡಲು ಯಾರೂ ಇರದಿದ್ದರೆ ಆ ಕೆಲಸವನ್ನು ತಾನು ಕೈಕೊಳ್ಳಬೇಕು. ಈ ಬಗೆಯಾಗಿ ಕೆಲಸಮಾಡುತ್ತ ಹೋದರೆ ತಮ್ಮ ನೆರೆಹೊರೆಯವರ ಆರ್ಥಿಕ ಮತ್ತು ನೈತಿಕ ಸ್ಥಿತಿಗಳ ಒಳ್ಳೇ ಜ್ಞಾನವಾಗುವದು. ಈ ಬಗೆಯ ಜ್ಞಾನ ವಾಗುವದರಿಂದ ಆ ಸ್ಥಿತಿಗಳಲ್ಲಿ ಮಾಡತಕ್ಕ ತಿದ್ದುಪಡೆಗಳನ್ನು ಮಾಡಲು ಯೋಜನೆಗಳನ್ನು ಸೇವಕನು ಯೋಜಿಸಬಲ್ಲನು. ಈ ಪ್ರಕಾರ ತಿದ್ದುಪಾಟುಗಳನ್ನು ಮಾಡುತ್ತ ಮಾಡುತ್ತ ಅವನಿಗೆ ತನ್ನ ನೆರೆಹೊರೆಯವರ ಹಾಗು ಅವರ ಮುಖಾಂತರವಾಗಿ ಇಡೀ ಊರಿನ ರಾಜಕೀಯ ಸ್ಥಿತಿಯ ಪರಿಚಯವಾಗುವದು. ಮತ್ತು ಈ ಪರಿಚಯದೊಡನೆ ತನ್ನಲ್ಲಿ ಜನರಿಂದ ಸಂಘಟಿತ ಕಾರ್ಯವನ್ನು ಮಾಡಿಸಿಕೊಳ್ಳುವ ಶಕ್ತಿಯು ಬಂದುದಾದರೆ ಜನರ ರಾಜಕೀಯ ಸ್ಥಿತಿಯನ್ನು ಕೂಡ ಸುಧಾರಿಸಲು ಈ ಸೇವಕರು ಸಮರ್ಥರಾಗಬಲ್ಲರು. ಯಾರನ್ನು ನಾವು ಅಶಿಕ್ಷಿತರೆಂದು ತಿಳಿದಿರುವೆವೊ ಅಂಥವರು ಕೂಡ ತಮ್ಮ ದೃಢನಿಶ್ಚಯದಿಂದಲೂ ಲೋಕಪ್ರೇಮದಿಂದಲೂ ವಿಶೇಷವಾದ ಸೇವೆಯನ್ನು ಮಾಡಲು ಸಮರ್ಥರಾದರೆಂಬುದನ್ನು ಹಾಗು ಜನಸಮಾಜದ ಮೇಲೆ ಒಳ್ಳೇ ಪರಿಣಾಮವನ್ನು ಉಂಟು ಮಾಡಿದರೆಂಬುದನ್ನು ನಾನು ಆಫ್ರಿಕಾ, ಖೇಡಾ, ಚಂಪಾರಣ್ಯ ಮೊದಲಾದ ಸ್ಥಳಗಳಲ್ಲಿ ಕಣ್ಣಾರೆ ಕಂಡಿರುವೆನು. ಯಾವ ಯಾವ ಹಳ್ಳಿಯಲ್ಲಿ ಒಬ್ಬನಾದರೂ ಚೈತನ್ಯವುಳ್ಳ ಪುರುಷ ಇಲ್ಲವೆ ಸ್ತ್ರೀಯಳಿದ್ದುದನ್ನು ನಾನು ಕಂಡಿರುವೆನೊ ಆ ಆ ಹಳ್ಳಿಗಳಲ್ಲಿ ಎಷ್ಟೋ ಸತ್ಕಾರ್ಯಗಳನ್ನು ಜರಗಿಸುತ್ತಿರುವದನ್ನು ನಾನು ನೋಡಿರುವೆನು.

ನಾವಿನ್ನು ಸ್ವಚ್ಛತೆಯ ಬಗ್ಗೆ ಹಾಗು ನೈತಿಕ, ಶಾರೀರಿಕ ಮತ್ತು ಆರ್ಥಿಕ ಆರೋಗ್ಯದ ಬಗ್ಗೆ ಕೆಲವು ನಿಯಮಗಳನ್ನು ಪರ್ಯಾಲೋಚಿಸುವಾ. ಈ ನಿಯಮಗಳು ಯಾರ ಮನಸ್ಸಿಗೆ ಬರುವವೊ ಅಂಥ ಜನರು ಅವುಗಳಿಗನುಸರಿಸಿ ತಮ್ಮ ತಮ್ಮ ಹಳ್ಳಿಗಳಲ್ಲಿ ಕಾರ್ಯವನ್ನು ಮಾಡಲು ಆರಂಭಿಸುವರೆಂದೂ ಹಾಗೆ ಮಾಡುತ್ತ ಹೋದಂತೆ ಅವರು ಸ್ವಲ್ಪಾವಧಿಯಲ್ಲಿಯೇ ಎಷ್ಟೋ ಹಳ್ಳಿಗಳ ಸ್ಥಿತಿಯನ್ನು ಅನೇಕ ವಿಧವಾಗಿ ಸರಿಪಡಿಸುವರೆಂದೂ ನಾನು ಆಶಿಸುತ್ತೇನೆ

ರೇಲವೇ ಬೋರ್ಡಿನ ಸುದ್ದಿ.

ಕೆಳಗೆ ಕಾಣಿಸಿದವರಿಂದ ಈ ವಾರದಲ್ಲಿ ಅರ್ಜಿಗಳು ಬಂದಿವೆ. ಕರ್ನಾಟಕದ ಉಳಿದ ಸ್ಥಳಗಳಲ್ಲಿಯ ಜನರು ಕೂಡಲೇ ಅರ್ಜಿಗಳನ್ನು ಕಳುಹಿಸಬೇಕಾಗಿ ವಿನ್ನಹ. ಶ್ರೀ. ಬಿ ಸೂರಪ್ಪಯ್ಯಾ ಹೆಬ್ಬಾರ ಕಾರ್ಯದರ್ಶಿ ತಾಲೂಕ ಕಾಂಗ್ರೆಸ ಕಮೀಟಿ ಕುಂದಾಪುರ-೩೩ ವಿದ್ವಾನ್ ಶಂಕರ ಶರ್ಮಾ ಶಾಸ್ತ್ರಿ ಮಹಾರಾಜ ಕಾಲೇಜ ಮೈಸೂರ-೭೦ ಶ್ರೀ. ಮಂಜುನಾಥ ಗಣಪ್ಪ ಶೆಟ್ಟಿ ಮುಂದಾಮು-೬೨, ಎಲ್. ಕೃ ದೇಶಪಾಂಡೆ ನವಲಗುಂದ ೧೦೮ ಶ್ರೀ ಘ ಮು. ಬಿರದವಾಡ-೧೬೧, ಶ್ರೀ ಪರವತಗವಡಾ ವೀರನಗವಡಾ ಹಿರೇಹರಳುಣ-೧೫೦; ಶೇಷಗಿರಿರಾವ ಮಾಸ್ತರ ಸರಪಳ್ಳಿ ಕಾಲೇಜ ಹೈದ್ರಾಬಾದ ೫೦ ಶ್ರೀ ಬಸಪ್ಪಾ ಸಿದ್ಲಿಂಗಪ್ಪಾ ಆಳಗವಾಡಿ-೪೩ ಶ್ರೀ ಗುಂಡಾಚಾರ್ಯ ರಾಮಾಚಾರ್ಯ ಮಠದ ಮನೋಳಿ-೩೨ ನಾಗಪ್ಪಾ ತಿಮ್ಮಾ ಹೊಸೂರ ತಾ॥ ಸಿದ್ದಾಪುರ ೭೮, ಶ್ರೀ ರ ಗು ಕುಲಕರ್ಣಿ ಮಂಟೂರ ೫೧೭೬ ಒಟ್ಟು ಸಹಿ-೯೫೪ ಶ್ರೀ. ಬಿ. ಸೂರಪ್ಪಯ್ಯ ಹೆಬ್ಬಾರರವರು ಮಂಗಳೂರ ಜಿಲ್ಲಾ ಬೋರ್ಡಿನ ಸಭಾಸದರಿದ್ದು, ಆ ಜಿಲ್ಲಾ ಬೋರ್ಡಿನಲ್ಲಿಯೂ ಸಹ ಈ ಬಗ್ಗೆ ಠರಾವು ಸ್ವೀಕರಿಸಿದ್ದಾರೆ ಈ ಉದಾಹರಣೆಯನ್ನು ಕರ್ನಾಟಕದಲ್ಲಿಯ ಇತರ ಬೋರ್ಡುಗಳೂ ಮುನಸಿಪಾಲಿಟಿಗಳೂ ಅನುಸರಿಸಿದರೆ ಹಿತವಾಗಿಯೂ ಕಲ್ಯಾಣಕರವಾಗುವದು.

ವರ್ತಮಾನಸಾರ

ಇಹವೃತ್ತ

ಮಳೆಯು ಚನ್ನಾಗಿ ಆಗಿದೆ. ಆದರೆ ಒಣಗಿ ಹೋಗಿದ್ದ ಬೆಳೆಯು ಈಗೀಗ ಬೆಳೆಯ ಹತ್ತಿದ್ದರಿಂದ ಮಳೆಯು ಇನ್ನೂ ಬೇಕಾಗಿದೆ.

ದಕ್ಷಿಣ ಆಫ್ರಿಕೆಯಲ್ಲಿ ಹಿಂದೀ ಜನರನ್ನು ಅನ್ಯಾಯದಿಂದ ನಡೆಸಿಕೊಳ್ಳುವದನ್ನು ನಿಷೇಧಿಸುವದಕ್ಕಾಗಿ ೧೧ ನೇ ತಾ॥ ದಿನ ಸಾರ್ವಜನಿಕ ಸಭೆಯು ನೆರೆಯುವದು.

ಶ್ರೀ ಮನ್ಮಹಾತ್ಮಜಯಂತಿಯು ದೆಸರೆಯಿಂದ ನಾಲ್ಕು ದಿನ ಜರುಗಿತು. ಪರೀಕ್ಷೆಯಲ್ಲಿ ಉತ್ತೀರ್ಣರಾದ ಬಾಲಕರಿಗೆ ಪಾರಿತೋಷಕಗಳು ದೊರೆತವು.

ಪುಣೆಯ ನೂತನ ವಿದ್ಯಾಲಯದ ಶ್ರೀಮತಿ ಹಿರಾಬಾಯಿಯವರ ಗಾಯನದ ಜಲಸೆಯು ಕಳೆದವಾರದಲ್ಲಿ ಜರುಗಿತು.

ಲಕ್ಷ್ಮೀ ಸಿನೇಮಾ ಪ್ರಾರಂಭವಾಗಿದೆ ಆದರೆ, ಜಾಹಿರಾತಿನ ಹಲಿಗೆ, ಗೋಡೆಯ ಪ್ರಕಟನೆ, ನಾಟಕಗೃಹದಲ್ಲಿಯ ಸೂಚನೆಗಳೆಲ್ಲವೂ ಮರಾಟಿಯಲ್ಲಿ! ಕರ್ನಾಟಕಸ್ಥರೇ ಕನ್ನಡಕ್ಕೆ ಮೊದಲು ಮಾನಕೊಡದಿರುವದು ಸೋಜಿಗವು!!

ಮುಂಬೈ ಕರ್ನಾಟಕ

ಸ್ಥಾಂಗಲಿಯಲ್ಲಿ ಸದ್ಯದ ಸ್ಥಿತಿಯ ಮೇಲೆ ಶ್ರೀ. ಜಮನಾದಾಸ ಮೆಹತಾ ಇವರ ವ್ಯಾಖ್ಯಾನ ವಾಯಿತು.

ಬಳ್ಳಾರಿಯು ಕರ್ನಾಟಕದ ಭಾಗವೇ ಆಗಿದ್ದುದರಿಂದ, ಅಲ್ಲಿ ಆಂಧ್ರ ವಿಶ್ವವಿದ್ಯಾಲಯದ ಕಾಲೇಜ ಇರಕೂಡದೆಂದು, ಕನ್ನಡಿಗರು ಈ ಚಳವಳವನ್ನು ಜೋರಿನಿಂದ ಸಾಗಿಸಬೇಕೆಂದೂ, ಬೆಳಗಾವಿಯ ಶ್ರೀ ಬೆಳವೀಯವರು, ಮುಂಬೈ ಕ್ರಾನಿಕಲ್‍ದಲ್ಲಿ ಪತ್ರ ಬರೆದಿರುವರು.

ಧಾರವಾಡದ ಶಾಂತೇಶವಾಚನಾಲಯದವರು ಈ ಸಾರೆಯ ನವರಾತ್ರಿಯ ಹಬ್ಬವನ್ನು ಹೊಸ ಮಾದರಿಯಿಂದ ನೆರವೇರಿಸಿದರು. ಹಬ್ಬವೆಂದರೆ ಕಡಬುಗಳನ್ನು ಹೊಡೆಯುವದು, ಉಡಿಗೆ ತೊಡುವದಿಷ್ಟೇ ಆಗಿರದೆ, ಆ ಆ ದಿನವು ಆ ಆ ಶಕ್ತಿಯ ಯಥಾ ಯೋಗ್ಯವಾದ ಉಪಾಸನೆಗಾಗಿ ಕಟ್ಟಿದ ದಿನವಾಗಿದ್ದರಿಂದ ಆ ದೃಷ್ಟಿಯಿಂದಲೇ ಹಬ್ಬವನ್ನು ಜರುಗಿಸಿದರು. ಕರ್ನಾಟಕದ ಸ್ವತಂತ್ರ ಇತಿಹಾಸ, ಕರ್ನಾಟಕದ ವೈಶಿಷ್ಟ್ಯದ, ಕರ್ನಾಟಕದ ಸಂಸ್ಕೃತಿಯ ಜೀವಂತ ಕಳೆಯ ಚಿನ್ಹವೇ ಇದು

ಶ್ರೀ ಗುಡಿಗುಂಟಿಯವರ ಸಂಪಾದಕತ್ವದಲ್ಲಿ 'ಹಿತಚಿಂತಕ' ವೆಂಬ ವಾರ ಪತ್ರಿಕೆಯೂ, ರಾವಸಾಹೇಬ ಮಳಕಟ್ಟಿಯವರ ಸಂಪಾದಕತ್ವದಲ್ಲಿ 'ಶಿವಾನುಭವ' ವೆಂಬ ಮಾಸಿಕ ಪತ್ರವೂ ದೀಪಾವಳಿಯಿಂದ ವಿಜಾಪೂರದಲ್ಲಿ ಹೊರಡುವವು.

ಮದ್ರಾಸಕರ್ನಾಟಕ

ಉಡುಪಿಯ "ಸತ್ಯಾಗ್ರಹಿ"ಯು ಜಯಂತಿ ಸಂಚಿಕೆಯಲ್ಲಿ ಶ್ರೀ. ಶಾಲೀಲಕರ, ಗಂಗಾಧರರಾವ ದೇಶಪಾಂಡೆ, ರಾಜಾ ರಾವ ಆಲೂರ ರಾಜನಾಥ, ದಿವಾಕರ ಮೊದಲಾದವರ ಲೇಖನಗಳು ಪ್ರಸಿದ್ಧವಾಗಿವೆ. ಈ ಸಂಚಿಕೆಯನ್ನು ಕನ್ನಡಿಗರೆಲ್ಲರೂ ಓದಬೇಕಾದುದು

"ಸುವಾಸಿನಿ"ಯು (ಮಂಗಳೂರ) ಹೊಸದಾಗಿ ಜೀವತಳೆದು ಹೊರಟಿದೆ. ಈ ವರ್ಷದ ವಿದ್ಯಾಭ್ಯಾಸದ ಕಷ್ಟಗಳನ್ನು ಉಪಭೋಗಿಸಿ ಪ್ರಸಿದ್ಧವಾಗಿದೆ. 'ಸ್ವದೇಶ'ವು ಅಭ್ಯಾಸದಿಂದ ಸ್ವೀಕರಿಸುತ್ತಾನೆ. ಸಿದ್ಧರ ಮಂದಿಯ ಸಲ

ಸೈನ್ಯ ವಿದ್ಯಾರ್ಥಿ ಸಂಘದ ವತಿಯಿಂದ ಸಮರ್ಪಣೆಯ ಮಂಗಳೂರಿನಲ್ಲಿ ವಿಜೃಂಭಣೆಯಿಂದ ಜರುಗಿತು

ನೀಲಗಿರಿ ಜಿಲ್ಲೆಯಲ್ಲಿ ೩೦೦ ಜನವಸತಿಯುಳ್ಳಂಥ ಪ್ರತಿಯೊಂದು ಹಳ್ಳಿಗೂ ಒಂದು ಪ್ರಾಥಮಿಕ ಶಾಲೆಯು ಪ್ರಾರಂಭವಾಗುವದು. ಅದರ ಆ ಶಾಲೆಯಲ್ಲಿ ಕನ್ನಡ ಕಲಿಸುವ ಏರ್ಪಾಡು ಆಗಬೇಕು!!!

ಮೈಸೂರ ಕರ್ನಾಟಕ

ಪರದೇಶಕ್ಕೆ ಹೋಗಿ 'ಫಾರೆಸ್ಟ ಎಂಜಿನಿಯರಿಂಗ' ಮತ್ತು 'ಅನಿಮಲ್ ಹಜಬಂಡರೀ' ವಿಷಯಗಳಲ್ಲಿ ಪ್ರಾವೀಣ್ಯವನ್ನು ಹೊಂದಿ ಬರುವದಕ್ಕಾಗಿ ಮೈಸೂರ ಸರಕಾರದಿಂದ ಮೈಸೂರ ವಿದ್ಯಾರ್ಥಿಗಳಿಗೆ ವರ್ಷಕ್ಕೆ ೨೫೦ ಪೌಂಡಿನಂತೆ ವೇತನ ದೊರೆಯುವದು.

ಶ್ರೀ ಬ್ಯಾನರ್ಜಿ ಯವರು ಮೈಸೂರ ದಿವಾಣರ ಸ್ಥಳದಿಂದ ಹೊರಟುಹೋಗುವರೆಂದೂ, ಸದ್ಯದಲ್ಲಿ ಶ್ರೀ. ಶ್ರೀನಿವಾಸಯ್ಯಂಗಾರರು ತಾತ್ಪೂರ್ತಿಕ ದಿವಾಣರಾಗುವರೆಂದೂ ತಿಳಿಯುತ್ತದೆ.

ರಾವಬಹದೂರ ಎಚ್. ಕೃಷ್ಣಶಾಸ್ತ್ರಿಗಳು ಕಳೆದ ತಿಂಗಳ ೧೬ ನೇ ತಾ॥ ದಿನ ಪೆನ್‍ಶನ್ ತೆಗೆದುಕೊಂಡರು. ಪಂಜಾಬದ ಹೀರಾನಂದ ಶಾಸ್ತ್ರಿಗಳು ಅವರ ಸ್ಥಳಕ್ಕೆ ಬಂದಿದ್ದಾರೆ.

ಕನ್ನಡ — ಇಂಗ್ಲೀಷ ನಿಘಂಟುಗಳನ್ನೂ, ಕನ್ನಡ ವಿಶ್ವಕೋಶವನ್ನೂ ಬರೆಯಬೇಕಾಗಿ, ಸಾಹಿತ್ಯಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀ ಬೆಳ್ಳಾವೆ ವೆಂಕಟನಾರಾಯಣಪ್ಪನವರು ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಒಂದು ಠರಾವನ್ನು ತಂದಿರುವರು.

ಭಿನ್ನ ಭಿನ್ನಪ್ರಾಂತಗಳ ಸರಕಾರದ ಆಡಳಿತಕ್ಕೆ ಒಳಪಟ್ಟು ಬಹು ಬಾಧೆ ಪಡುತ್ತಿರುವ ಕರ್ನಾಟಕವನ್ನು ಒಂದುಗೂಡಿಸಬೇಕೆಂಬ ಪ್ರಬಲೋದ್ದೇಶವು ಪ್ರತಿಯೊಬ್ಬ ಕನ್ನಡಿಗನ ಹೃದಯದಲ್ಲೂ ಮೂಡುತ್ತಿದೆ. ಈ ಮುಂಬೆಳಗಿನ ದಿನದಲ್ಲಿ ಸಾಧ್ಯವಾಗಿರುವ ಸಾಂಸ್ಕೃತಿಕ ಏಕೀಕರಣದ ಸಂಘಟನೆಗಾಗಿ ಯತ್ನಿಸುತ್ತಿರುವ ಕರ್ನಾಟಕ ಏಕೀಕರಣ ಸಂಘದ ಪರವಾಗಿ ಶ್ರೀ ಮುದವೀಡಕರರವರು ಶ್ರೀ ಕೌಜಲಗಿಯವರು ಶ್ರೀ ಆಲೂರರವರು ಸದಾ ಮೈಸೂರಿಗೆ ಬಂದಿರುತ್ತಾರೆ. ಮೈಸೂರ ವಿಶ್ವವಿದ್ಯಾಲಯವನ್ನು ಅಖಿಲ ಕರ್ನಾಟಕ ವಿಶ್ವವಿದ್ಯಾನಿಲಯವನ್ನಾಗಿ ಮಾಡುವುದು ಸಾಧ್ಯವೇ ಎಂಬ ಪ್ರಶ್ನೆಯನ್ನು ಸ್ಥಾನಪತಿಗಳನ್ನೂ ಸದಸ್ಯರನ್ನೂ ಕಂಡು ವಿಚಾರಿಸಬೇಕೆಂಬುದೇ ಇವರ ಆಗಮನದ ಉದ್ದೇಶವು. ನಮ್ಮ ಹಿರಿಯ ವಿದ್ವಾಂಸರು ಈ ಮಹತ್ವದ ಪ್ರಶ್ನೆಯನ್ನು ಕನ್ನಡಿಗರಾಗಿ ಸಹೃದಯದಿಂದ ಸಾವಧಾನದಿಂದ ವಿಚಾರಿಸುವರೆಂದು ನಂಬುತ್ತೇವೆ.

ಹಿಂದುಸ್ಥಾನ

"ಕೌನ್ಸಿಲ್ ಆಫ್ ಸ್ಟೇಟ್" ಗೆ ಸ್ವರಾಜ್ಯ ಪಕ್ಷದ ಪರಿಯಿಂದ ಶ್ರೀ. ಚಿತಳೇಯವರು ಉಮೇದವಾರರಾಗಿದ್ದಾರೆ.

"ಗುರುದ್ವಾರ ಕಾಯದೇಯ ಬಗ್ಗೆ ಮುಂದೇನು ಮಾಡಬೇಕೆಂಬದನ್ನು ವಿಚಾರಿಸುವದಕ್ಕಾಗಿ, ಅಮೃತಸರದಲ್ಲಿ ಗುರುದ್ವಾರ ಪ್ರಬಂಧಕ ಕಮಿಟಿಯು ಕೂಡಿದೆ.

ಮುಂಬೈ ಗಿರಣಿಗಳಲ್ಲಿಯ ಕೂಲಿಕಾರರ ಕಟ್ಟು ಇನ್ನೂ ನಡೆದಿದೆ.

ಪರದೇಶ

ಜಿಬೂಟಿಗಳು ಮೊಬಾಸನ್ನು ನಾಶಮಾಡಿದವು, ಒಂದು ಚಿಕ್ಕ ವಿಷದ ಹೊಗೆಯಿಂದ ತುಂಬಿದ ವಿಮಾನವನ್ನು ಆ ಪ್ರದೇಶದಲ್ಲಿ ಸಂಚರಿಸಿ, ಅದನ್ನು ಕೊಲ್ಲುವ ಹಂಚಿಕೆಯು ಅಬೀಸೀನಿಯಾದಲ್ಲಿ ನಡೆದಿತ್ತು. ಅದರಿಂದ ಇದೇ ಪ್ರಕಾರವಾಗಿ ಸೈನ್ಯಗಳನ್ನು ನಾಶಮಾಡಿ, ಮುಂದೆ ಯುದ್ಧ ಪ್ರಸಂಗವನ್ನು ನಿಲ್ಲಿಸುವ ಪ್ರಯತ್ನದ ಬಗ್ಗೆ ವಿಚಾರ ನಡೆದಿದೆ.

ನಿಪ್ಪುಣರದಿದ್ದರೆ ಅಷ್ಟು ಮಿಶ್ರಿತ ಔಷಧಿಯನ್ನು ಕೊಡುವ ಬಗ್ಗೆ ಒಂದು ಯಂತ್ರವು ಸಿದ್ಧವಾಗಿದೆ. ಇದನ್ನು ರೋಗಿಯ ದೇಹದ ಮೇಲೆ ಬಳಸುವದರಿಂದ, ಆ ಯಂತ್ರಕ್ಕೆ ಜೋಡಿಸಿದ, ಸಣ್ಣಸಣ್ಣ ನಳಿಕೆಗಳನ್ನು ಒತ್ತಿ ಹತ್ತಿ ಆದರಿಂದ, ಪ್ರತಿಕ್ಷಣದಲ್ಲಿಯೂ ಬೇರೆ ಬೇರೆ ದಿಕ್ಕುಗಳಿಂದ ಔಷಧಗಳ ಪ್ರಸಾರವು ಬಹುಬೇಗನೆ ಆಗುತ್ತದೆ. ಕಣ್ಣುಗಳ ಮೇಲೆ ಇದನ್ನು ಹಚ್ಚಿದ ೧೦ ಮಿನಿಟುಗಳಲ್ಲಿ ನಿದ್ರೆ ಹತ್ತುವಂಥ ಎಂತಹ ದೃಷ್ಟಿ ಮನುಷ್ಯನಿಗೂ ನಿದ್ರೆ ಹೋಗುವದು.

ಜಾಹೀರನಾಮೆ

ಮುಂಬೈ ಡಿಸ್ಟ್ರಿಕ್ಟ ಮುನಸಿಪಾಲ್ಟಿ ಆಕ್ಟ ೧೯೦೧ನೇ ೮ ನೇ ಕಲಮಿನ ಪ್ರಾವ್ಹಿಜನ್ನದ ಪ್ರಕಾರ ಮುಂಬೈ ಸರಕಾರದವರು ಬಾಗಲಕೋಟ ಸಿಟಿಮುನಸಿಪಾಲ್ಟಿ ಹದ್ದಿಯಲ್ಲಿ ಕೆಳಗೆ ಬರೆದ ಪ್ರಕಾರ ಹೆಚ್ಚು ಕಡ್ಮಿ ಮಾಡತಕ್ಕವರಿದ್ದಾರೆ. ಈ ಬಗ್ಗೆ ಗವ್ಹರ್ನಮೆಂಟ ನೊಟಿಫಿಕೆಶನ್ನ ನಂಬರ ೨೭೧೮ ತಾ॥ ೨೨-೭-೧೯೨೫ ನೇ ದರಲ್ಲಿ ನಮೂದ ಆದೆ.

ಉತ್ತರಕ್ಕೆ

ಸ. ನ. ೩೬೭, ೩೬೮, ೩೬೯, ೩೭೧, ೩೭೨, ೩೭೬, ೩೭೭, ೩೭೮, ೩೭೯, ೩೮೦, ೩೮೪, ೩೮೬, ಮತ್ತು ೩೮೭, ಈ ಸರ್ವೆ ನಂಬರಗಳ ದಕ್ಷಿಣ ಮೇರೆಯ ಸಾಲು

ಪೂರ್ವಕ್ಕೆ

ಸ ನ. ೩೯೩, ೩೯೪, ೩೯೫, ೪೨೫, ೪೨೬, ೪೨೮, ೪೩೪, ೪೩೫, ೧ ಮತ್ತು ೪ ಈ ರಿವ್ಹಿಜನ್ನ ಸ. ನಂಬರಗಳ ಪಶ್ಚಿಮ ಮೇರೆಯಸಾಲು.

ದಕ್ಷಿಣಕ್ಕೆ

ಸ. ನ. ೩೨, ೩೩, ೩೪, ೩೫, ೩೬, ೩೭, ೩೮, ೩೯, ೪೧, ೪೯, ೫೫, ೫೭, ೭೦, ೯೦ ೮೪, ಮತ್ತು ೭೫, ಈ ಸರ್ವೆ ನಂಬರಗಳ ಉತ್ತರ ಮೇರೆಯ ಸಾಲು

ಪಶ್ಚಿಮಕ್ಕೆ

ಸ. ನ. ೬೭, ೬೮. ೨೪೪, ೩೪೬, ಮತ್ತು ೩೪೭, ಈ ಸರ್ವೆ ನಂಬರಗಳ ಪೂರ್ವ ಮೇರೆಯ ಸಾಲು

'ಇನ್ನು ಮುಂದೆ ಹೆಚ್ಚು ಕಡ್ಮಿ ಮಾಡಬೇಕಂತಾ ಮಾಡಿದ ಹದ್ದಿಯು

ಉತ್ತರಕ್ಕೆ ಘಟಪ್ರಭಾನದಿಯು

ಪೂರ್ವಕ್ಕೆ

ಸ. ನ. ೪೦೧, ೩೯೯, ಇವುಗಳ ಪೂರ್ವ ಮೇರೆಯ ಮತ್ತು ಸ ನ. ೪೧೯, ೪೨೧, ೪೭೩, ೪೩೦, ಇವುಗಳ ನಡುವೆ ಹಾಯುವ ಹೂಗುಣ ತಾಸದಯು, [illegible] ಧೋತ್ರೆ ಅಡಿಯಿನದ ಪೂರ್ವ ಮೇರೆಯು ಮತ್ತು ಸ. ನ ೯೧, ೪೯, ೫೭, ೫೫, ಮತ್ತು ೭೦, ಇವುಗಳ ಪೂರ್ವ ಮೇರೆಯು

ದಕ್ಷಿಣಕ್ಕೆ

ಸ ಸ. ೯೦. ೮೪, ೭೫, ೮೦, ೯೯, ೨೩೬, ೧೧೦, ೨೨೪, ೨೧೬, ೨೨೫, ೨೭೭, ಮತ್ತು ೧೯೩, ಮತ್ತು

ಪಶ್ಚಿಮಕ್ಕೆ

ಸ ನ. ೧೩೪, ೪೩೫, ೨೬೬, ೨೬೪, ೨೬೦, ೨೫೭, ೧೫೮, ಮತ್ತು ೧೨೭.

ಈ ಜಾಹೀರ ನಾಮೆಯು ಪ್ರಸಿದ್ಧವಾದ ೧೯೨೫ ತಿಂಗಳಲ್ಲಿ ತೆಗೆದ ಜಾಹೀರ ನಾಮೆ ರದ್ದು ಪಡಿಸುತ್ತದ. ಈ ನಮ್ಮ ಹೆಚ್ಚು ಕಡ್ಮಿ ಮಾಡುವಕ್ಕೆ ಪ್ರಸ್ಥೆತಕ್ಕೆ ಯಾರದಾದರೂ ತಕರಾರ ಇದ್ದರೆ ಈ ಜಾಹೀರನಾಮೆ ಪ್ರಸಿದ್ಧವಾದಂದಿನಿಂದಾ ೨ ತಿಂಗಳಲ್ಲಿ ಕಾರಣ ಸಹಿತಾ ಜೆ। ಕಲೆಕ್ಟರ ಸಾ॥ ಬಾ। ಜಿಲ್ಹಾ ವಿಜಾಪೂರ ಇವರ ಕಡಿಗೆ [illegible] ಮಾಡತಕ್ಕದ್ದು ತಿಳಿಯುವದು

[illegible] } S/. R. G. Gorden.
[illegible] { ಕಲೆಕ್ಟರ

ಪ್ರಕಟನೆ

ದಿ ವಿಕ್ಟೋರಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ

ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೫ ನೇ ಇಸ್ವಿಯ ಜುಲೈ ೩೧ ನೇ ತಾ॥ ದಿನ ಸಾಯಂಕಾಲದ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟೀ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ. ಬಸವಾರಾಧ್ಯ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ೧,೦೦೦ ರೂ. ಸಾಲವು ದೊರೆಯ ಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೧೧೭೦೨ ಶ್ರೀ. ಆರ್. ಜಿ. ಹುಕ್ಕೇರಿ. ಬುಕ್ಕಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೫೪೫ ಶ್ರೀ. ದೀರಜರಾಮ ನಾರಭಿರಾಮ ನಾಯಿಕ ಕಂಪಾವುಂಡರ, ಅಲಹಾಬಾದ ಪವಾಮಾನಿ ವಾಯು, ನಯೂ ನ. ಬಿಬಿ. ಸಿ. ಆಯ ರೇತ್ರೀ. ಸುರತ. (ಬಮೋದಾ ಏಜನ್ಸಿ)

(೩) ಬಾಂಡ ನಂ. ೧೦೫೭೬ ಶ್ರೀ. ಶ್ರೀರಾಮ ಮೂರ್ತಿ ಆರಾಧ್ಯಲು ರಾಮಚಂದ್ರರಾವ ಗುರು ಪಿ.ರ ಪುರ ಗೋದಾವರಿ ಜಿಲ್ಹಾ.

(೪) ಬಾಂಡ ನಂ. ೧೭೬ ಶ್ರೀ. ಸಂದಗಿರಿ ವೆಂಕಟರಾಮ ದಾಸ ಪ್ರೊಪ್ರಾಯಿಟರ ಮುಕುಂದ ಪುರ. ಕಾಶಿನಾಡು

(೫) ಬಾಂಡ ನಂ. ೪೧೮ ಶ್ರೀ. ಆರ್ ವೆಂಕಟಯ್ಯಾ ಗುರು ಇನಾಮದಾರ ಭೋವಯ್ಯಾ ಅಗ್ರಹಾರ. ಉಮಳ ಪುರಮ್.

೧-೮-೨೫ { ಬಿ. ಎಸ್. ಆರಾಧ್ಯ
ಜೆನರಲ ಏಜಂಟ ಹುಬ್ಬಳ್ಳಿ

"ಕನ್ನಡಿಗ"ನ ಜಾಹಿರಾತ ಬೆಲೆಯ ನಿರ್ಣಯ.

ಪೋಷಕರಿಗೆ [illegible] ರೂ. ಉಪಕಾರಕರ್ತರಿಗೆ ೧೦ ರೂ. ಒಮ್ಮೆಲೆ ೧೦ ರ [illegible] ಕೊಡುವವರು ಆಶ್ರಯದಾತರು.

ಸ್ಥಳದ ಜಾಹಿರಾತ ರಿಗೆ.	೧ ಇಂ. [illegible], ೧೫ ಪಂಕ್ತಿಗೆ ಕಡಿಮೆ ಇರಾಗದಂತೆ [illegible] ಸಾಲು
ಪರಸ್ಥಳದ ,,	ಮುನಿಸಿಪಾಲ ದರಿಂದ ೧-೧೩-೦ [illegible] ೭-೧-೦ [illegible] ೧೫ [illegible] ಕಡಿಮೆಯಾಗದ ೧[illegible] ಸಾಲು.
ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ-	ಸ್ಥಳದವರಿಗೆ ೨ ೦ ೦ ಪರಸ್ಥಳಕ್ಕೆ [illegible] ೨-೧೩-೦ ,, [illegible] ೩ ೧-೦
ಸರಕಾರ, ಮುನಸಿಪಾಲಿಟಿ ಲೋಕಲ್‌ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪ ೦ ೦ [illegible] ನಲ್ಲಿ [illegible] ೪ ೧೩ [illegible] ೧-೦

ಒಟಿ ಸಂಚಿಕೆಗೆ [illegible] ಹಿಂದಿನ ಸಂಚಿಕೆಯೊಂದಕ್ಕೆ ೨ ಆಣೆ. ಧರ್ಮಾರ್ಥವಾಗಿಯೂ [illegible] ಕಲಿಕೆಯು ಮುದ್ರಿತವಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ.

ವ್ಯವಸ್ಥಾಪಕ

ಈ ಪತ್ರಿಕೆಯು [illegible] ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾವೃದ್ಧಿ ಮುದ್ರಾಲಯದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿದೆ.

ರ. ನಂ. ಬಿ. ೧೯೪೭ | ವಾ. ಚಂದಾ ೧-೧೪-೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ನವಾವಿಷ್ಟವಾಗಿದೆ)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ಆಶ್ವೀನ ವದ್ಯ ೧೪ ಶಕೆ ೧೮೪೭. ತಾ. ೧೬-೧೦-೧೯೨೫. | ಸಂಚಿಕೆ ೨೮

ಸಂಪಾದಕರ ಭೂಮಿ.

(೧)

ನನ್ನ ಮನಸಿನ ಮೇಣವಮಾಡಿ ಕಟ್ಟುವೆನಾನು ।
ನಿನ್ನ ಬೆಸವ ಮಾಡಿದಂಥ ಮಕ್ಕಳ ದೊಸ್ತು।
ಚಿನ್ನದಾದರು ಚೆನ್ನ ಮೇಣಬತ್ತಿಯು ನೊಂದು ॥
ಚಿನ್ಮಯಾಕಾಶದಲ್ಲಿ ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ।
ಗಂಧವಹವೆಂದು ತಿಳಿಯೆ ॥

—ಅಂಬಿಕಾತನಯ ದತ್ತ

ಮೈಸೂರ ಪ್ರಜಾಪ್ರತಿನಿಧಿ ಸಭೆಯು ಕನ್ನಡಿಗರೆಲ್ಲ ಅಭಿಮಾನ ಪಡತಕ್ಕಂಥ ಒಂದು ಮಹತ್ವದ ಗೊತ್ತುವಳಿಕೆಗೆ ತನ್ನ ಒಪ್ಪಿಗೆಯನ್ನು ಕೊಟ್ಟಿದೆ. ಕನ್ನಡ, ಇಂಗ್ಲೀಷ ಶಬ್ದಕೋಶವನ್ನು ಸಿದ್ಧಪಡಿಸಲಿಕ್ಕೆ ಒಂದು ಲಕ್ಷ ರೂಪಾಯಿಯನ್ನು ಕೊಡಬೇಕೆಂಬದಾಗಿ ಕರ್ನಾಟಕ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀ ಬಿ ವೆಂಕಟನಾರಾಯಣಪ್ಪನವರು ತಂದ ಸೂಚನೆಯನ್ನು ಎಲ್ಲರೂ ಸ್ವೀಕಾರಮಾಡಿದರು. ವಿರೋಧವಾಗಿ ಯಾವನೂ ಮಾತನಾಡಲಿಲ್ಲ. ಮತಕೊಡಲಿಲ್ಲ. ಆದುದರಿಂದ ಪ್ರಜಾಪ್ರತಿನಿಧಿ ಸಭೆಗೂ, ಅದರ ಸಭಾಸದರಿಗೂ ವಿಶೇಷತಃ ಶ್ರೀ ವೆಂಕಟನಾರಾಯಣಪ್ಪನವರಿಗೂ, ಕನ್ನಡಿಗರೆಲ್ಲ ಋಣಿಯಾಗಿರಬೇಕು. ಶ್ರೀ ಮನ್ಮಹಾರಾಜರವರ ಸರಕಾರದವರೂ ಈ ಠರಾವನ್ನು ತಡವಿಲ್ಲದೇ ತಮ್ಮ ಕೃತಿಯಲ್ಲಿ ತಂದು, ಅಖಂಡ ಕರ್ನಾಟಕ ಜನತೆಯ ಪ್ರೀತಿಗೆ ಪಾತ್ರರಾಗುವರೆಂಬುದರಲ್ಲಿ ಸಂಶಯವಿಲ್ಲ. ಈ ಜ್ಞಾನಕೋಶವನ್ನು ಕನ್ನಡಿಗರು ಇನ್ನೂ ೧೦೦ ವರ್ಷಗಳ ವರೆಗೆ ಕಾಣರೆಂದೂ, ಆದುದರಿಂದ ಮರಾಟೀ ಜ್ಞಾನಕೋಶವನ್ನೇ ಕನ್ನಡಕ್ಕೆ ಪರಿವರ್ತಿಸಬೇಕೆಂದೂ ಒಂದು ವಿಚಾರವು ಇತ್ತೀಚೆ ಬಲವಾಗ ಹತ್ತಿತ್ತು. ಆದರೆ ಕನ್ನಡಿಗರ ತವರುಮನೆಯಾದ ಮೈಸೂರು ಸಂಸ್ಥಾನದಲ್ಲಿ ಮುಂದೊಂದು ಒಂದು ಕರ್ನಾಟಕದ ಸ್ವತಂತ್ರ ರೀತಿಯಿಂದಲೇ ತನ್ನ ಜ್ಞಾನಕೋಶವನ್ನು ಸಿದ್ಧ ಪಡಿಸಿಕೊಳ್ಳುವ ಸುಪ್ರಸಂಗವನ್ನು ಒದಗಿಸಿ ಕೊಟ್ಟದ್ದು ವಿಶೇಷವಾಗಿ ಆನಂದ ಪಡತಕ್ಕ ಸಂಗತಿಯು. ಈ ಕೋಶವನ್ನು ಸಿದ್ಧಪಡಿಸುವ ಮಂಡಲದಲ್ಲಿ ಎಲ್ಲ ಭಾಗಗಳಲ್ಲಿಯ ಪಂಡಿತರನ್ನೂ ಸೇರಿಸಕೊಳ್ಳಬೇಕಾಗಿ ನಮ್ಮ ಸೂಚನೆಯಿದೆ. ಹೀಗೆ ಮಾಡುವದರಿಂದ ಮೈಸೂರಿನಲ್ಲಿಯ ಮತ್ತು ಮೈಸೂರ ಹೊರಗಿನಲ್ಲಿಯ ಕನ್ನಡಿಗರು ಒಟ್ಟಾಗಿ ಸೇರಲಿಕ್ಕೆ ಇವರೀರ್ವರಲ್ಲಿಯ ಪ್ರೀತಿ ಹೆಚ್ಚಾಗುವದಕ್ಕೂ, ಆಸ್ಪದ ದೊರೆತು, ಪಾಂಡಿತ್ಯದ ಈ ಪವಿತ್ರ ಸ್ಥಾನದ ಧುರಿಯು "ಜ್ಞಾನಕೋಶದ" ಜ್ಞಾನರೂಪೀ ಪ್ರವಾಹದಲ್ಲಿ ಬೆರೆತು ಅದು ಪವಿತ್ರತಮವಾಗುವದರಲ್ಲಿ ಸಂದೇಹವಿಲ್ಲ.

ಮೈಸೂರ ವಿಶ್ವವಿದ್ಯಾಲಯವನ್ನೇ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡಬೇಕೆಂಬ ವಿಚಾರವನ್ನು ಬಲಪಡಿಸುವದಕ್ಕಾಗಿ ಉತ್ತರ ಕರ್ನಾಟಕದಿಂದ ಮೈಸೂರಿಗೆ ಹೋದ ಶಿಷ್ಟಮಂಡಲದ ಕಾರ್ಯವು ಫಲಕಾರಿಯಾಗುತ್ತಿರುವದೆಂಬದಾಗಿ ವರ್ತಮಾನವಿದೆ. ಕನ್ನಡಿಗರೆಲ್ಲರೂ ಆನಂದ ಪಡತಕ್ಕ ಸುದ್ದಿಯಿದು. ಈ ವಿಷಯವಾಗಿ ಅನೇಕ ದಿನಗಳಿಂದ ವೃತ್ತಪತ್ರಿಕೆಗಳು ತಮ್ಮ ತಮ್ಮ ಅಭಿಪ್ರಾಯವನ್ನು ಪ್ರಸಿದ್ಧಿಸಿದ್ದರೂ ಕರ್ನಾಟಕದಲ್ಲಿಯ ಮುಖಂಡರೂ, ಶಿಕ್ಷಣಾಭಿಮಾನಿಗಳೂ ಈ ವಿಷಯದಲ್ಲಿ ಯಾವ ಅಭಿಪ್ರಾಯವನ್ನೂ ವ್ಯಕ್ತಪಡಿಸಿಲ್ಲ. ಅನೇಕರು ಇದಕ್ಕೆ ವಿರುದ್ಧರಾಗಿರುವರೆಂಬದಾಗಿ ನಮ್ಮ ಕೇಳಿಕೆಯಲ್ಲಿದೆ. ಆದರೆ ಇವರೆಲ್ಲ ಬಹಿರಂಗವಾಗಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದರೆ, ಸಾರ್ವಜನಿಕರೀತಿಯಿಂದ ಅದರ ಊಹಾಪೋಹವಾಗಿ, ಒಂದು ನಿಶ್ಚಿತವಾದ ಧೋರಣವು ತಾನೇ ಸ್ವರೂಪ ಹೊಂದುವದು. ಆದುದರಿಂದ ಕರ್ನಾಟಕದಲ್ಲಿಯ ವಿಚಾರವಂತರೆಲ್ಲರೂ ಈ ವಿಷಯವಾಗಿ ತಮ್ಮ ಮತವನ್ನು ಬರೆದು ಕಳಿಸಿದರೆ "ಕನ್ನಡಿಗ"ನು ಅವಶ್ಯವಿದ್ದಲ್ಲಿ ಅವಶ್ಯವಾಗಿ ಅವಕಾಶ ಕೊಡುವನೆಂದು ಅಭಿವಚನವನ್ನೀಯುತ್ತೇವೆ.

ಬಾಗಲಕೋಟೆಯ ಸ್ಟೇಶನ್ದಲ್ಲಿ ರೇಲವೇ ಗಾಡಿಗಳು ಬರುವವರೆಗೆ ಅನೇಕ ಸಲ 'ಗೇಟಿ' ನ ಬಾಗಿಲವನ್ನೇ ತೆಗೆಯುವದಿಲ್ಲವೆಂದೂ, ಗಾಡಿಗಳು ಬಂದಾಕ್ಷಣವೇ ತಿಕೀಟ ಕಾರಕೂನರು ತಿಕೀಟ ಕೊಡುವದನ್ನೂ ನಿಲ್ಲಿಸಿ, ಪಾರ್ಸಲ ಕಡೆಗೆ ಹೋಗುವದರಿಂದ ತಡಮಾಡಿಬಂದ ಪ್ರವಾಸಿಕರಿಗೆ ಬಹು ತೊಂದರೆ ಯಾಗುವದೆಂದೂ, ನಮ್ಮ ಕಡೆಗೆ ಪ್ರಸಿದ್ಧಿಗಾಗಿ ಒಂದು ಲೇಖವು ಬಂದಿದೆ. ಇದು ನಿಜವಿದ್ದ ಪಕ್ಷದಲ್ಲಿ ಪ್ರವಾಸಿಕರಿಗೆ ಕಷ್ಟವಾಗುವದು ಖಂಡಿತ. 'ಗೇಟಿನ' ಬಾಗಿಲುಗಳನ್ನು ಗಾಡಿಯು ಬರುವ ಪೂರ್ವದಲ್ಲಿಯೇ ತೆಗೆದಿದ್ದರೆ ತಮ್ಮ ತಮ್ಮ ಸಾಮಾನುಗಳನ್ನೆಲ್ಲ ಪ್ರವಾಸಿಕರು ಒಳಕ್ಕೆ ತೆಗೆದುಕೊಂಡು ಹೋಗಿ ನಿಲ್ಲಲು ಅನುಕೂಲವಾಗುವದು. ಹಾಗೆಯೇ ತಡಮಾಡಿ ಬಂದಾಗ್ಗೆ ತಿಕೀಟ ಕಚೇರಿಯು ಮುಚ್ಚಲ್ಪಟ್ಟಿದ್ದರೆ, ಪ್ರಯಾಣಿಕರಿಗೆ ಬಹಳೇ ಕಷ್ಟವಾಗುತ್ತದೆ. ಆದರಲ್ಲಿಯೂ ಅಶಿಕ್ಷಿತರಿದ್ದರಂತೂ ಆಗಿಯೇ ಹೋಯಿತು ಅವರ ಗೋಳನ್ನು ಇಷ್ಟೆಂಬದನ್ನು ಬರೆಯುವದೇ ಕಠಿಣ. ಪ್ರವಾಸಿಕರ ಅನುಕೂಲತೆಗಳ ಕಡೆಗೆ ಲಕ್ಷ್ಯಕೊಟ್ಟು ಇನ್ನು ಮೇಲಾದರೂ, ಬಾಗಲಕೋಟೆಯ ಸ್ಟೇಶನ್ದಲ್ಲಿ ಈ ಬಗೆಯ ತೊಂದರೆಯಾಗದಂತೆ ರೇಲವೇ ಅಧಿಕಾರಿಗಳು ಜಾಗರೂಕರಾಗಿರಬೇಕಾಗಿ ಸೂಚಿಸುತ್ತೇವೆ.

ಜಾಹೀರನಾಮೆ

ಮುಂಬೈ ಡಿಸ್ಟ್ರಿಕ್ಟ ಮುನಸಿಪಾಲ್ಟಿ ಆಕ್ಟ ೧೯೦೧ನೇ ೮ ನೇ ಶಕ್ಷನ್ನದ ಪ್ರಾವ್ಹಿಜನ್ನದ ಪ್ರಕಾರ ಮುಂಬೈ ಸರಕಾರದವರು ಬಾಗಲಕೋಟ ಶಿಟಿಮುನಸಿಪಾಲ್ಟಿ ಹದ್ದಿಯಲ್ಲಿ ಕೆಳಗೆ ಬರೆದ ಪ್ರಕಾರ ಹೆಚ್ಚು ಕಡ್ಮಿ ಮಾಡತಕ್ಕವರಿದ್ದಾರೆ. ಈ ಬಗ್ಗೆ ಗವ್ಹರ್ನಮೆಂಟ ನೊಟಿಫಿಕೆಶನ್ನ ನಂಬರ ೨೭೧೮ ತಾ|| ೨೨-೭-೧೯೩೫ ನೇ ದರಲ್ಲಿ ನಮೂದ ಆದೆ.

ಉತ್ತರಕ್ಕೆ

ಸ. ನ. ೩೬೭, ೩೬೮, ೩೬೯, ೩೭೧, ೩೭೨, ೩೭೬, ೩೭೭, ೩೭೮, ೩೭೯, ೩೮೦, ೩೮೪, ೩೮೬, ಮತ್ತು ೩೮೭, ಈ ಸರ್ವೆ ನಂಬರಗಳ ದಕ್ಷಿಣ ಮೇರೆಯು ಸಾಲು

ಪೂರ್ವಕ್ಕೆ

ಸ. ನ. ೩೯೩, ೩೯೪, ೩೯೫, ೪೨೫, ೪೨೬, ೪೨೮, ೪೩೪. ೪೩೫, ೧ ಮತ್ತು ೪ ಈ ರಿವ್ಹಿಜನ್ನ ಸ. ನಂಬರಗಳ ಪಶ್ಚಿಮ ಮೇರೆಯುಸಾಲು.

ದಕ್ಷಿಣಕ್ಕೆ

ಸ. ನ. ೩೨, ೩೩, ೩೪, ೩೫, ೩೬, ೩೭, ೩೮, ೩೯, ೪೧, ೪೯, ೫೫, ೫೭, ೭೦, ೭೦ ಅ, ಮತ್ತು ೭೫, ಈ ಸರ್ವೆ ನಂಬರಗಳ ಉತ್ತರ ಮೇರೆಯು ಸಾಲು

ಪಶ್ಚಿಮಕ್ಕೆ

ಸ. ನ. ೬೭, ೬೮. ೨೪೪, ೩೪೬, ಮತ್ತು ೩೪೭, ಈ ಸರ್ವೆ ನಂಬರಗಳ ಪೂರ್ವ ಮೇರೆಯು ಸಾಲು

ಇನ್ನು ಮುಂದೆ ಹೆಚ್ಚು ಕಡ್ಮಿ ಮಾಡಬೇಕಂತಾ ಮಾಡಿದ ಹದ್ದಿಯು

ಉತ್ತರಕ್ಕೆ ಘಟಪ್ರಭಾನದಿಯು

ಪೂರ್ವಕ್ಕೆ

ಸ. ನ. ೪೦೧, ೩೯೯, ಇವುಗಳ ಪೂರ್ವ ಮೇರೆಯು ಮತ್ತು ಸ. ನ. ೪೧೯, ೪೨೧, ೪೨೩, ೪೩೦, ಇವುಗಳ ನಡುವೆ ಹಾಯ್ದು ಹೋಗುವ ಳಾಪಕೆಯು. ಗದಗ ಹುಟಗಿ ರೇಲ್ವೆ ಲಾಯಿನದ ಪೂರ್ವ ಮೇರೆಯು ಮತ್ತು ಸ. ನ. ೬೧, ೬೯, ೫೭, ೫೫, ಮತ್ತು ೭೦, ಇವುಗಳ ಪೂರ್ವ ಮೇರೆಯು

ದಕ್ಷಿಣಕ್ಕೆ

ಸ ನ. ೯೦, ೮೪, ೭೫, ೮೦, ೧೦೯, ೨೩೬, ೧೧೦, ೭೩೪, ೨೧೬. ೨೩೫, ೭೨೬, ಮತ್ತು ೧೯೪, ಮತ್ತು

ಪಶ್ಚಿಮಕ್ಕೆ

ಸ. ನ. ೩೪೦, ೪೦೪, ೨೭೭, ೨೬೪, ೨೭೦, ೭೫೭, ೧೮೮, ಮತ್ತು ೧೪೭.

ಈ ಜಾಹೀರ ನಾಮೆಯು ಪ್ರಸಿದ್ಧವಾದ ೧೯೨೫ ತಿಂಗಳಲ್ಲಿ ತಗೆದ ಜಾಹೀರ ನಾಮೆ. ರದ್ದು ಪಡಿಸುತ್ತದೆ. ಈ ನಮ್ಮ ಹೆಚ್ಚು ಕಡ್ಮಿ ಮಾಡತಕ್ಕ ಪ್ರಸ್ತೇಶಕ್ಕೆ ಯಾರದಾದರೂ ತಕ್ರಾರ ಇದ್ದರೆ ಈ ಜಾಹೀರನಾಮೆ. ತಾರೀಖಿನಿಂದಾ ೨ ತಿಂಗಳಲ್ಲಿ ಕಾರಣ ಸಹಿತಾ ಮೆ|| ಕಲೆಕ್ಟರ ಸಾ|| ಜಾ|| ಜಿಲ್ಹಾ ವಿಜಾಪೂರ ಇವರ ಕಡಿಗೆ ಲೇಖಿ ಅರ್ಜಿ ಮಾಡತಕ್ಕದ್ದು ತಿಳಿಸುತ್ತೇವೆ.

ವಿಜಾಪೂರ	Sd/- R. G. Gorden.
[illegible]	ಕಲೆಕ್ಟರ

ಪ್ರಕಟನೆ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ

ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೫ ನೇ ಇಸ್ವಿಯ ಜುಲೈ ೩೧ ನೇ ತಾ|| ದಿನ ಸಾಯಂಕಾಲದ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟೀ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ. ಬಸವಾರಾಧ್ಯ ಜಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ೧೦೦೦ ರೂ. ಸಾಲವು ದೊರೆಯ ಬೇಕೆಂದು ನಿರ್ಣಯವಾಯಿತು—

(೧) ಬಾಂಡ ನಂ. ೧೧೬೦೨ ಶ್ರೀ. ಆರ್. ಜಿ. ಮುಕ್ಕೇರಿ. ಬುಕ್ಕ ಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೪೫ ಶ್ರೀ. ದೀರಜರಾಮ ನಾರಭಿರಾಮ ನಾಯಿಕ ಕಂಪಾವುಂಡರ, ಜಬನಾಥ ದವಾಖಾನೆ ವಾಯು, ನಯಾನ. ಜಿಜಿ. ಸಿ. ಆಯ ರೇಲ್ವೆ. ಸುರತ. (ಬಡೋದಾ ಏಜನ್ಸಿ)

(೩) ಬಾಂಡ ನಂ. ೧೧೭೬ ಶ್ರೀ. ಶ್ರೀರಾಮ ಮೂರ್ತಿ ಆರಾಧ್ಯಲು ರಾಮಚಂದ್ರರಾವ ಗುರು ವೀರ ಪುರ ಗೋದಾವರಿ ಜಿಲ್ಹಾ.

(೪) ಬಾಂಡ ನಂ. ೯೭೭ ಶ್ರೀ. ನಂದಗಿರಿ ವೆಂಕಟರಾಮ ದಾಸ ಪ್ರೊಪ್ರಾಯಿಟರ ಮುಕುಂದ ಪ್ರಿಂ. ಕಾಶಿವಾಸ

(೫) ಬಾಂಡ ನಂ. ೪೫೭ ಶ್ರೀ. ಆರ್. ವೆಂಕಟಯ್ಯಾ ಗುರು ಇನಾಮದಾರ ಭೋವಯ್ಯಾ ಅಗ್ರಹಾರ. ಅಮಳ ಪುರಮ್.

೧-೮-೩೫	ಬಿ. ಎಸ್. ಆರಾಧ್ಯ ಚೀಫ ಏಜಂಟ ಹುಬ್ಬಳ್ಳಿ

"ಕನ್ನಡಿಗ"ನ ವಾರ್ಷಿಕ ವರ್ಗಣಿ ನಿರ್ಣಯ.

ಪೋಷಕರಿಗೆ ವಾ ೫ ರೂ. ಉಪಕಾರಕರ್ತರುಗಳಿಗೆ ವಾ ೧೦ ರೂ. ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಜಾಹಿರಾತ ರಿಗೆ.	೧ ಇಂ. ಇದ್ದರೆ, ೧೫ ಸಾಲಿಗೆ ಕಡಿಮೆ ಇರಾಗದಂತೆ ೧೦೦ ವರ್ಷಕ್ಕೆ ಸಾಲು
ಪರಸ್ಥಳದ ,,	ಮನಿಯಾರ್ಡರದಿಂದ ೧-೧೩-೦ ವಿ. ಪಿ. ದಿಂದ ೨-೧-೦ ಇದ್ದರೆ ೧೫ ಸಾಲಿಗೆ ಕಡಿಮೆಯಾಗದ ೧೫೦ವರ್ಷಕ್ಕೆ ಸಾಲು.
ವಾಚನಾಲಯ ಪಶ್ವಿ ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ-	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೩-೦ ,, ವಿ. ಪಿ. ದಿಂದ ೩-೧-೦
ಸರಕಾರ, ಮುನಸಿಪಾಲಿಟಿ ಲೋಕಲ್‌ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦ ವಿ. ಪಿ. ದಿಂದ ೫-೧-೦

ಬಿಡಿ ಸಂಚಿಕೆಗೆ ೮ ಪೈ. ಹಿಂದಿನಸಂಚಿಕೆಯಾದರೆ ೨ ಆಣೆ. ಧನಾರ್ಹರಾಗಿರುವ ಗಿರಾಕಿಯರು ವರ್ಗಣಿ ಸುದ್ಧಿ ತಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ.

ವ್ಯವಸ್ಥಾಪಕ

ಈ ಪತ್ರವನ್ನು ಮಾಲಕರಾದ ಬಾಗಲಕೋಟ ಮುಕ್ಕೆರಾದ ಶ್ರೀನಿವಾಸರಾವ ದಿಂದ ಬಾಗಲಕೋಟೆಯಲ್ಲಿಯ ವಿದ್ಯಾ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧ ಪಡಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ವಾ. ಚಂದಾ ೧-೮-೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ನವರೂಪಿಸ್ಸವಾಗಿದೆ)

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ ॥ — ಮನು

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ಆಶ್ವೀನ ವದ್ಯ ೧೪ ಶಕೆ ೧೮೫೭. ತಾ॥ ೨೫-೧೦-೧೯೩೫. | ಸಂಚಿಕೆ ೨೮

ಸಂಪಾದಕರ ಭೂಮಿಕೆ.

ನನ್ನ ಮನಸಿನ ಮೋಜಮಾಡಿ ಕಟ್ಟುವೆನಾನು ।
ನಿನ್ನ ಹೆಸರವ ಮಾಡಿದಂಥ ಮಕ್ಕಳ ದೊಮ್ಮೆ!
ಚಿನ್ನದಾದರು ಚಿನ್ನ ಮೋಜಬಸ್ತಿಯ ನೊಂದು ॥
ಚಿನ್ಮಯಾಕಾಶದಲ್ಲಿ ॥
ನನ್ನ ದೇಹವು ನಿನ್ನ ವೀರಶಾಸನವಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಹೀರಬಹ ।
ಗಂಧವಹವೆಂದು ತಿಳಿಯೆ ॥

—ಅಂಬಿಕಾತನಯ ದತ್ತ

ಮೈಸೂರ ಪ್ರಜಾಪ್ರತಿನಿಧಿ ಸಭೆಯು ಕನ್ನಡಿಗರೆಲ್ಲ ಅಭಿಮಾನ ಪಡತಕ್ಕಂಥ ಒಂದು ಮಹತ್ವದ ಗೊತ್ತುವಳಿಗೆ ತನ್ನ ಒಪ್ಪಿಗೆಯನ್ನು ಕೊಟ್ಟಿದೆ. ಕನ್ನಡ, ಇಂಗ್ಲೀಷ ಶಬ್ದಕೋಶವನ್ನು ಸಿದ್ಧಪಡಿಸಲಿಕ್ಕೆ ಒಂದು ಲಕ್ಷ ರೂಪಾಯಿಯನ್ನು ಕೊಡಬೇಕೆಂಬದಾಗಿ ಕರ್ನಾಟಕ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀ ಬಿ ವೆಂಕಟನಾರಾಯಣಪ್ಪನವರ ಸೂಚನೆಯನ್ನು ಎಲ್ಲರೂ ಸ್ವೀಕಾರಮಾಡಿದರು. ವಿರೋಧವಾಗಿ ಯಾವನೂ ಮಾತನಾಡಲಿಲ್ಲ. ಮತಕೊಡಲಿಲ್ಲ ಆದುದರಿಂದ ಪ್ರಜಾಪ್ರತಿನಿಧಿ ಸಭೆಗೂ, ಅದರ ಸಭಾಸದರಿಗೂ ವಿಶೇಷತಃ ಶ್ರೀ ವೆಂಕಟನಾರಾಯಣಪ್ಪನವರಿಗೂ, ಕನ್ನಡಿಗರೆಲ್ಲ ಋಣಿಯಾಗಿರಬೇಕು. ಶ್ರೀ ಮನ್ಮಹಾರಾಜರವರ ಸರಕಾರದವರೂ ಈ ಠರಾವನ್ನು ತಡವಿಲ್ಲದೇ ತಮ್ಮ ಕೃತಿಯಲ್ಲಿ ತಂದು, ಅಖಂಡ ಕರ್ನಾಟಕ ಜನತೆಯ ಪ್ರೀತಿಗೆ ಪಾತ್ರರಾಗುವರೆಂಬದರಲ್ಲಿ ಸಂಶಯವಿಲ್ಲ. ಈ ಜ್ಞಾನಕೋಶವನ್ನು ಕನ್ನಡಿಗರು ಇನ್ನೂ ೧೦೦ ವರ್ಷಗಳ ವರೆಗೆ ಕಾಣರೆಂದೂ, ಇದುವರಿಂದ ಮರಾಟೀ ಜ್ಞಾನಕೋಶವನ್ನೇ ಕನ್ನಡಕ್ಕೆ ಪರಿವರ್ತಿಸಬೇಕೆಂದೂ ಒಂದು ವಿಚಾರವು ಇತ್ತೀಚೆಗೆ ಬಲವಾಗ ಹತ್ತಿತ್ತು. ಆದರೆ ಕನ್ನಡಿಗರ ತವರುಮನೆಯಾದ ಮೈಸೂರು ಸಕಾಲದಲ್ಲಿ ಮುಂದೊರೆದು ಬಂದು ಕರ್ನಾಟಕವು ಸ್ವತಂತ್ರ ರೀತಿಯಿಂದಲೇ ತನ್ನ ಜ್ಞಾನಕೋಶವನ್ನು ಸಿದ್ಧಪಡಿಸಿಕೊಳ್ಳುವ ಸುಪ್ರಸಂಗವನ್ನು ಒದಗಿಸಿ ಕೊಟ್ಟದ್ದು ವಿಶೇಷವಾಗಿ ಆನಂದ ಪಡತಕ್ಕ ಸಂಗತಿಯು. ಈ ಕೋಶವನ್ನು ಸಿದ್ಧಪಡಿಸುವ ಮಂಡಲದಲ್ಲಿ ಎಲ್ಲ ಭಾಗಗಳಲ್ಲಿಯ ಪಂಡಿತರನ್ನೂ ಸೇರಿಸಕೊಳ್ಳಬೇಕಾಗಿ ನಮ್ಮ ಸೂಚನೆಯಿದೆ. ಹೀಗೆ ಮಾಡುವದರಿಂದ ಮೈಸೂರಿನಲ್ಲಿಯ ಮತ್ತು ಮೈಸೂರ ಹೊರಗಿನಲ್ಲಿಯ ಕನ್ನಡಿಗರು ಒಟ್ಟಾಗಿ ಸೇರಿದಂತಾಗಿ ಅವರೀರ್ವರಲ್ಲಿಯ ಪ್ರೀತಿ ಹೆಚ್ಚಾಗುವದಕ್ಕೂ, ಅದರ ಹೊರತು, ಸಾಂಘಿಕ್ಯದ ಈ ಸವಿಪ್ರೇಮದ ಝರಿಯು "ಜ್ಞಾನಕೋಶದ" ಜ್ಞಾನರೂಪೀ ಪ್ರವಾಹದಲ್ಲಿ ಬೆರೆತು ಅದು ಪವಿತ್ರಮಯವಾಗುವದರಲ್ಲಿ ಸಂದೇಹವಿಲ್ಲ.

ಮೈಸೂರ ವಿಶ್ವವಿದ್ಯಾಲಯವನ್ನೇ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡಬೇಕೆಂಬ ವಿಚಾರವನ್ನು ಬಲಪಡಿಸುವದಕ್ಕಾಗಿ ಉತ್ತರ ಕರ್ನಾಟಕದಿಂದ ಮೈಸೂರಿಗೆ ಹೋದ ಶಿಷ್ಟಮಂಡಲದ ಕಾರ್ಯವು ಫಲಕಾರಿಯಾಗುತ್ತಿರುವದೆಂಬದಾಗಿ ವರ್ತಮಾನವಿದೆ. ಕನ್ನಡಿಗರೆಲ್ಲರೂ ಆನಂದ ಪಡತಕ್ಕ ಸುದ್ದಿಯಿದು. ಈ ವಿಷಯವಾಗಿ ಅನೇಕ ದಿನಗಳಿಂದ ವೃತ್ತಪತ್ರಿಕೆಗಳು ತಮ್ಮ ತಮ್ಮ ಅಭಿಪ್ರಾಯವನ್ನು ಪ್ರಸಿದ್ಧಿಸಿದ್ದರೂ ಕರ್ನಾಟಕದಲ್ಲಿಯ ಮುಖಂಡರೂ, ಶಿಕ್ಷಣಾಭಿಮಾನಿಗಳೂ ಈ ವಿಷಯದಲ್ಲಿ ಯಾವ ಅಭಿಪ್ರಾಯವನ್ನೂ ವ್ಯಕ್ತಪಡಿಸಿಲ್ಲ. ಅನೇಕರು ಇದಕ್ಕೆ ವಿರುದ್ಧರಾಗಿರುವರೆಂಬದಾಗಿ ನಮ್ಮ ಕೇಳಿಕೆಯಲ್ಲಿದೆ. ಆದರೆ ಇವರೆಲ್ಲ ಬಹಿರಂಗವಾಗಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದರೆ, ಸಾರ್ವಜನಿಕರೀತಿಯಿಂದ ಅದರ ಊಹಾಪೋಹವಾಗಿ, ಒಂದು ನಿಶ್ಚಿತವಾದ ಧೋರಣವು ತಾನೇ ಸ್ವರೂಪ ಹೊಂದುವದು. ಆದುದರಿಂದ ಕರ್ನಾಟಕದಲ್ಲಿಯ ವಿಚಾರವಂತರೆಲ್ಲರೂ ಈ ವಿಷಯವಾಗಿ ತಮ್ಮ ಮತವನ್ನು ಬರೆದು ಕಳಿಸಿದರೆ "ಕನ್ನಡಿಗ"ನು ಅವಕ್ಕೆಲ್ಲ ಅವಶ್ಯವಾಗಿ ಅವಕಾಶ ಕೊಡುವನೆಂದು ಅಭಿವಚನವನ್ನೀಯುತ್ತೇವೆ.

ಬಾಗಲಕೋಟೆಯ ಸ್ಟೇಶನ್‌ದಲ್ಲಿ ರೇಲ್ವೇ ಗಾಡಿಗಳು ಬರುವವರೆಗೆ ಅನೇಕ ಸಲ 'ಗೇಟ' ನ ಬಾಗಿಲವನ್ನೇ ತೆಗೆದಿರುವದಿಲ್ಲವೆಂದೂ, ಗಾಡಿಗಳು ಬಂದಾಕ್ಷಣವೇ ತಿಕೀಟ ಕಾರಕೂನರು ತಿಕೀಟ ಕೊಡುವದನ್ನೂ ನಿಲ್ಲಿಸಿ, ಪಾರ್ಸಲ ಕಡೆಗೆ ಹೋಗುವದರಿಂದ ತಡಮಾಡಿಬಂದ ಪ್ರವಾಸಿಕರಿಗೆ ಬಹು ತೊಂದರೆ ಯಾಗುವದೆಂದೂ, ನಮ್ಮ ಕಡೆಗೆ ಪ್ರಸಿದ್ಧಿಗಾಗಿ ಒಂದು ಲೇಖವು ಬಂದಿದೆ. ಇದು ನಿಜವಿದ್ದ ಪಕ್ಷದಲ್ಲಿ ಪ್ರವಾಸಿಕರಿಗೆ ಕಷ್ಟವಾಗುವದು ಖಂಡಿತ. 'ಗೇಟಿನ' ಬಾಗಿಲುಗಳನ್ನು ಗಾಡಿಯು ಬರುವ ಪೂರ್ವದಲ್ಲಿಯೇ ತೆಗೆದಿದ್ದರೆ ತಮ್ಮ ತಮ್ಮ ಸಾಮಾನುಗಳನ್ನೆಲ್ಲ ಪ್ರವಾಸಿಕರು ಒಳಕ್ಕೆ ತೆಗೆದುಕೊಂಡು ಹೋಗಿ ನಿಲ್ಲಲು ಅನುಕೂಲವಾಗುವದು. ಹಾಗೆಯೇ ತಡಮಾಡಿ ಬಂದಾಗ್ಗೆ ತಿಕೀಟ ಕಚೇರಿಯು ಮುಚ್ಚಲ್ಪಟ್ಟಿದ್ದರೆ, ಪ್ರಯಾಣಿಕರಿಗೆ ಬಹಳೇ ಕಷ್ಟವಾಗುತ್ತದೆ. ಅದರಲ್ಲಿಯೂ ಅಶಿಕ್ಷಿತರಿದ್ದರಂತೂ ಲಗಿಯೇ ಹೋಯಿತು. ಅವರ ಗೋಳಿ ಇಷ್ಟಿಷ್ಟೆಂಬದನ್ನು ಬರೆಯುವದೇ ಕಠಿಣ. ಪ್ರವಾಸಿಕರ ಅನುಕೂಲತೆಗಳ ಕಡೆಗೆ ಲಕ್ಷಕೊಟ್ಟು ಇನ್ನು ಮೇಲಾದರೂ, ಬಾಗಲಕೋಟೆಯ ಸ್ಟೇಶನ್‌ದಲ್ಲಿ ಈ ಬಗೆಯ ತೊಂದರೆಯಾಗದಂತೆ ರೇಲ್ವೇ ಅಧಿಕಾರಿಗಳು ಜಾಗರೂಕರಾಗಿರಬೇಕಾಗಿ ಸೂಚಿಸುತ್ತೇವೆ.

ಕಾರವಾರ ಜಿಲ್ಹೆಯಲ್ಲಿ ಪ್ರಯಾಣಿಕರ ಕಷ್ಟಗಳನೇಕವಾಗಿವೆಂಬದರಲ್ಲಿ ಸಂದೇಹವಿಲ್ಲ. ಈ ಜಿಲ್ಹೆಯ ಸರಹದ್ದಿನಲ್ಲಿ ರೇಲವೇ ಇರುವದೇಯಿಲ್ಲ. ಆದ್ದರಿಂದಲೇ ಶ್ರೀ ಕಂಬಳೀ ಮತ್ತು ಜೋಗಳವರು ಕಾರವಾರ-ಹುಬ್ಬಳ್ಳಿಗಳನ್ನು ರೇಲವೇದಿಂದ ಜೋಡಿಸಬೇಕಾಗಿ ಮುಂಬೈ ಕೌನ್ಸಿಲ್ಲದಲ್ಲಿ ಠರಾವುಗಳನ್ನು ತಂದಿರುವರು. ಆದರೆ ಇದಕ್ಕೆ ಶ್ರೀ ಕರ್ಕೀಯವರು ವಿರುದ್ಧರಾಗಿರುವರಾಗಿ ಕೇಳುತ್ತೇವೆ. 'ಕಾನಡಾ, ಧುರೀಣ'ನೂ ತನ್ನ ಒಪ್ಪಿಗೆಯನ್ನಿತ್ತಿಲ್ಲ. ಆದ್ದರಿಂದ ಈ ಜಿಲ್ಹೆಯು ಸಂಪೂರ್ಣವಾಗಿ ಈ ಬಗ್ಗೆ ವಿರೋಧವಾಗಿರುವದೆಂದೇ ನಮ್ಮ ಭಾವನೆಯಿದ್ದಿತು. ಆದರೆ ಈ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ ದೇವರವರ ಪತ್ರವನ್ನು ಓದುವದರಿಂದ ಈ ಜಿಲ್ಹೆಯ ಮತವು ಈ ರೇಲ್ವೇ ಯೋಜನೆಗೆ ವಿರುದ್ಧವಾಗಿಲ್ಲವೆಂಬುದು ಸಿದ್ಧವಾಗುತ್ತದೆ. ಕಾರವಾರವು ಬಹು ಮಹತ್ವದ ಬಂದರವಾಗುವಂತಹ ಸ್ವಾಭಾವಿಕವಾದ ಸೌಕರ್ಯಗಳು ಅಲ್ಲಿವೆ. ಅದಕ್ಕಾಗಿ ಕರ್ನಾಟಕದ ಭಾವೀ ವ್ಯವಹಾರಿಕ ಮತ್ತು ಔದ್ಯೋಗಿಕ ಉನ್ನತೆಯದೃಷ್ಟಿಯಿಂದ ಹುಬ್ಬಳ್ಳಿಯಿಂದ ಕಾರವಾರದ ವರೆಗೆ ರೇಲ್ವೇ ಹಾಕುವದು ಅಂತ್ಯತ ಮಹತ್ವದ ವಿಷಯವು. ಆದುದರಿಂದ ಕಾರವಾರ ಜಿಲ್ಹೆಯ ಜನತೆಯ ಮತವು ಇದಕ್ಕೆ ಅನುಕೂಲವಾಗಿರುವದು ಅತ್ಯಾವಶ್ಯಕ. ಇದನ್ನು ಅರಿತುಕೊಳ್ಳಲಿಕ್ಕೆ 'ಕನ್ನಡಿಗ'ನು ಆತುರನಾಗಿದ್ದಾನೆ. ಅದಕ್ಕಾಗಿ ಕಾರವಾರ ಜಿಲ್ಹೆಯ ವಿಚಾರಶೀಲರಾದ ಜನರು ಈ ವಿಷಯದಲ್ಲಿ ಹೆಚ್ಚಾಗಿ ಸಾರ್ವಜನಿಕ ರೀತಿಯಿಂದ ಚರ್ಚಿಸಬೇಕಾಗಿ ಬಿನ್ನಹವಿದೆ. "ಕನ್ನಡಿಗ" ನು ಈ ವಿಚಾರಗಳಿಗೆ ಅವಶ್ಯವಾಗಿ ಸ್ಥಳಕೊಡುವನು. "ಧುರೀಣ" "ವೃತ್ತ" ಗಳಾದರೂ ಈ ವಿಷಯದ ಲೇಖಗಳಿಗೆ ಅವಕಾಶ ಕೊಡುವರಾಗಿ ನಮ್ಮ ನಂಬುಗೆಯಿದೆ. ಆದ್ದರಿಂದ ಇದರ ಲಾಭವನ್ನು ಕರ್ನಾಟಕದ ಅಭಿಮಾನಿಗಳೆಲ್ಲರೂ ತೆಗೆದುಕೊಳ್ಳಬೇಕು.

ಕರ್ನಾಟಕದ ಭಾವೀ ಗಂಡಾಂತರಗಳು ಎಂಬದಾಗಿ "ಕರ್ಮವೀರ"ದಲ್ಲಿ ಒಂದು ಸಂಪಾದಕರ ಸ್ಫುಟವಿದೆ. ಮದ್ರಾಸದ ಕನ್ನಡ ಭಾಗವನ್ನೆಲ್ಲ ಅತ್ತಿತ್ತ ಬೇರೆ ಭಾಷೆಗಳಲ್ಲಿ ಹಂಚಿಬಿಡಬೇಕೆಂದು ಈಗಿನ ಶಿಕ್ಷಣಮಂತ್ರಿಗಳ ವಿಚಾರವಿದೆಯಂತೆ. ಈಗ್ಗೆ ವಿಶ್ವವಿದ್ಯಾಲಯದ ವಿಷಯವು ದೀರ್ಘಕ್ಕೆ ಹೋದಂತಾಗಿದೆ. ಈ ಬಗ್ಗೆ ಅಖಂಡ ಕರ್ನಾಟಕವು ಒಟ್ಟಾಗಿ ಸೇರುವದು ಅಗತ್ಯವಾದುದು. ಅಂದರೆ ಇದರಿಂದ ಯಾವದೊಂದು ನಿಶ್ಚಿತ ಮಾರ್ಗವನ್ನನುಸರಿಸಲು ಅನುಕೂಲವಾಗುವದು. ಆದ್ದರಿಂದ ಕರ್ನಾಟಕದ ಎಲ್ಲ ಭಾಗಗಳ ಅಭಿಮಾನಿಗಳ ಸಭೆಯನ್ನು ಬೇಗನೇ ಕೂಡಿಸುವ ಪ್ರಯತ್ನ ಮಾಡಬೇಕಾಗಿ ಧಾರವಾಡದಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯದ ಉಪಮಂಡಲಿಯವರಿಗೆ ಸೂಚಿಸುತ್ತೇವೆ.

ಪತ್ರಿಕಾ ಕರ್ತರ ಮಂಡಲಿಯೊಂದು ಕರ್ನಾಟಕಕ್ಕೆ ಅವಶ್ಯವಾಗಿದ್ದಿತು. ಹಿಂದಕ್ಕೆ ಅನೇಕ ಸಲ ಈ ಸಂಘವನ್ನು ಸ್ಥಾಪಿಸುವ ಕುರಿತು ಪ್ರಯತ್ನಗಳಾಗಿವೆ. ಆದರೆ ಪ್ರತ್ಯಕ್ಷವಾಗಿ ಅದನ್ನು ಸ್ಥಾಪಿಸುವ ಸುಪ್ರಸಂಗವು ಬಂದಿರಲಿಲ್ಲ. ಈಗ್ಗೆ ಇದೇ ತಿಂಗಳ ೨ ನೇ ತಾ॥ ದಿನ ಮೈಸೂರಿನಲ್ಲಿ ಈ ಸಂಸ್ಥೆಯು ಪ್ರಾಣಪ್ರತಿಷ್ಠಾಪನೆಯಾಯಿತು. ಕರ್ನಾಟಕದ ಹೊರತಾಗಿ ಈ ಸಂಸ್ಥೆಗಳು ಎಲ್ಲ ಕಡೆಯಲ್ಲೂ ಇವೆ. ಕರ್ನಾಟಕಕ್ಕೆ ಎಲ್ಲ ಪ್ರಾಂತಗಳಗಿಂತ ಪತ್ರಿಕಾಕರ್ತರ ಮಂಡಲವು ಮೊದಲು ಬೇಕಾಗಿದ್ದರೂ, ಕರ್ನಾಟಕವೇ ಈ ವಿಷಯದಲ್ಲಿ ಹಿಂದುಳಿದಿದೆ. ಅತ್ತಿತ್ತ ಸಿಡಿದು ಹೋದ ಕರ್ನಾಟಕದಲ್ಲಿ ಏಕ ಭಾವನೆಯನ್ನೂ, ವಿಧವಿಧದ ಸ್ವರೂಪವನ್ನು ಹೊಂದಿದ ಕನ್ನಡ ಭಾಷೆಯಲ್ಲಿ ಒಂದೇ ಸ್ವರೂಪವನ್ನೂ, ಉಡುವು ತಿನಸುಗಳಿಂದ ಪ್ರಾರಂಭಮಾಡಿಕೊಂಡು ಕರ್ನಾಟಕ ಸಮಾಜದ ಪ್ರತಿಯೊಂದು ವಿಷಯದಲ್ಲಿಯೂ ಉಂಟಾಗಿದ್ದ ಭೇದ ಭಾವವನ್ನು ಹೋಗಲಾಡಿಸಿ, ಅಖಂಡ ಕರ್ನಾಟಕದಲ್ಲಿ ಒಂದೇ ಪದ್ಧತಿಯ ಸಾಮಾಜಿಕ ರೂಢಿಯನ್ನು ಉಂಟು ಮಾಡಲಿಕ್ಕೆ ವೃತ್ತಪತ್ರಿಕೆಗಳು ಪ್ರಚಂಡವಾದ ಸಾಧನಗಳು. ಕರ್ನಾಟಕದಲ್ಲಿ ೩೦ ವರ್ಷಗಳಿಂದ ಪತ್ರಿಕೆಗಳು ಜೀವಿಸುತ್ತಲಿದ್ದರೂ, ಈ ಸಾಧನಗಳ ಲಾಭವು ವೈಯ್ಯಕ್ತವಾಗಿ ದೊರೆತಿದ್ದರೂ, ಸಾಂಘಿಕ ಶಕ್ತಿಯಿಂದ ದೊರೆತಿರುವದಿಲ್ಲ. ಈಗೀಗ ಆ ಶಕ್ತಿಯು ನಮ್ಮಲ್ಲಿ ಉತ್ಪನ್ನವಾಗುವ ಲಕ್ಷಣಗಳು ತಲೆದೋರಹತ್ತಿವೆ. ಈಗ್ಗೆ ಮೈಸೂರಿನಲ್ಲಿ ಕೂಡಿದ ಸಭೆಗೆ ಅಖಂಡ ಕರ್ನಾಟಕದ ಪ್ರಾತಿನಿಧ್ಯಕ ಸ್ವರೂಪವಿರಲಿಲ್ಲ. ಏನೇ ಆಗಲಿ; ಸಂಸ್ಥೆಯೊಂದು ಹುಟ್ಟಿದೆ. ಇದೇ ಸಂಸ್ಥೆಯು ತಡಮಾಡದೇ ನಿಖಿಲ ಕರ್ನಾಟಕದ ಪತ್ರಿಕಾಕರ್ತರ ಸಭೆಯನ್ನು ಯಾವದಾದರೊಂದು ಸುಪ್ರಸಂಗದಲ್ಲಿ ಕರೆದು, ಈ ಸಭೆಯ ಸಂಘಟನೆಯನ್ನು ಸುವ್ಯವಸ್ಥಿತವಾಗಿ ಮಾಡಬೇಕಾಗಿ, ಈ ಮಂಡಲದ ಚಾಲಕರಲ್ಲಿ ಪ್ರಾರ್ಥಿಸುತ್ತೇವೆ. ಸಧ್ಯದಲ್ಲಿ ಇದರ ಮುಖ್ಯ ಕಾರ್ಯಾಲಯವಾವುದು, ಸಭಾಸದರಾರು, ಸಭೆಯಲ್ಲಿ ಸ್ವೀಕರಿಸಲ್ಪಟ್ಟ ತೀರ್ಮಾನಗಳಾವು, ಇವೇ ಮೊದಲಾದ ಸಂಗತಿಗಳು ಪ್ರಕಟವಾಗಿಲ್ಲ. ಚಾಲಕರು ಅವನ್ನು ಆದಷ್ಟು ಬೇಗನೆ ಅರುಹಬೇಕು.

ಕರ್ನಾಟಕದ ಮುದ್ರಕರ ಸಂಸ್ಥೆಯೊಂದು ಅಗತ್ಯವಿದೆಂಬದನ್ನು ಇದೇ ಸಂದರ್ಭದಲ್ಲಿ ಹೇಳಬೇಕಾಗಿದೆ. ಕನ್ನಡ ಅಕ್ಷರಗಳಲ್ಲಿ (type) ಅದಲು ಬದಲು ಮಾಡುವದು ಅವಶ್ಯವಾಗಿದೆ. ಈಗಿದ್ದ ಅಕ್ಷರಗಳಲ್ಲಿ ಅನೇಕವುಗಳನ್ನು ಕಡಿಮೆ ಮಾಡಿ, ಮೊಳೆಜೋಡಿಸುವ ಕಾರ್ಯದಲ್ಲಿ ಹೆಚ್ಚಾಗಿ ಸೌಕರ್ಯಗಳನ್ನುಂಟುಮಾಡಲು ಬರುವಂತಿದೆ. ಕನ್ನಡ ಮೊಳೆಗಳನ್ನು ಹಾಕುವ ಮನೆಯಲ್ಲಿ ಈಗ್ಗೆ ಅನೇಕಬಗೆಯ ಭೇದಗಳಿವೆ. ಧಾರವಾಡದ ಮನೆ (Case) ಬೇರೆ, ಮಂಗಳೂರಿನವರದು ಬೇರೆ, ಬೆಂಗಳೂರಿನವರದು ಬೇರೆ, ನಿರ್ಣಯಸಾಗರದವರದು ಬೇರೆ. ಅದೇ ಪ್ರಕಾರವಾಗಿ ಅಕ್ಷರಗಳಿಗೆ "ಸ್ಟಾಂಡರ್ಡ ಪಾಯಿಂಟ ಸಿಸ್ಟೀಮ" ಇರುವದಿಲ್ಲ. ಇದರಿಂದ ಒಂದು ತರದ ಎರಕದಮನೆ (Foundry) ಯಲ್ಲಿಯ ಪದ್ಧತಿಯು ಇನ್ನೊಂದರಲ್ಲಿರುವದಿಲ್ಲ. ಇಂಗ್ಲೀಷ, ಮರಾಟಿ, ಗುಜರಾತಿಗಳಲ್ಲಿ ಬೇರೆ ಬೇರೆ ಹೊಸ ಹೊಸ ನಮೂನೆಯ ಟಾಯಿಪುಗಳು ಉದ್ಭವಿಸಿದಂತೆ ಕನ್ನಡಿನಲ್ಲಿಲ್ಲ. ಇಂತಹ ಅನಾನುಕೂಲತೆಗಳಿನ್ನೂ ಇವೆ. ಇವನ್ನೆಲ್ಲ ಸರಿಪಡಿಸಿಕೊಳ್ಳುವದಕ್ಕಾಗಿ ಅಖಿಲ ಕನ್ನಡನಾಡಿನ ಮುದ್ರಕರ ಸಂಘವೊಂದೂ ಅತ್ಯವಶ್ಯವಾದುದು. ಕನ್ನಡನಾಡಿನ ಮುದ್ರಣ ಕಲೆಯಲ್ಲಿ ನುರಿತವರಾದ ಮಂಗಳೂರಿನವರು ಈ ವಿಷಯದಲ್ಲಿ ಮನಸ್ಸು ಹಾಕಿ ಸಭೆಕರೆದು ಕರ್ನಾಟಕಕ್ಕೆಲ್ಲ ದಾರೀ ತೋರಿಸಬೇಕಾಗಿ ನಮ್ಮ ಸೂಚನೆಯಿದೆ.

ಅಖಿಲಭಾರತ ನೂಲುವ ಸಂಘಕ್ಕೆ (ಸಾಬರಮತಿ) ಕರ್ನಾಟಕದಿಂದ ಯಾವ ಯಾವ ಜನರು ನೂಲನ್ನು ಕಳಿಸಿರುವರೋ ಅವರು ತಮ್ಮ ಹೆಸರುಗಳನ್ನು ಬೇಗನೇ ಕರ್ನಾಟಕ ಪ್ರಾಂತಿಕ ಖಾದೀ ಮಂಡಲ ಗದಗ ಇವರಿಗೆ ತಿಳಿಸಬೇಕು. ಈ ತಿಂಗಳ ಕೊನೆಯ ಭಾಗದಲ್ಲಿ ಕರ್ನಾಟಕ ನೂಲುವ ಸಭಾಸದರ ಸಭೆಯನ್ನು ಗದಿಗಿನಲ್ಲಿ ಶ್ರೀ ಕೌಜಲಗಿಯವರು ಕರೆಯ ಬೇಕೆಂದಿದ್ದಾರೆ. ಆದ್ದರಿಂದ ಸಭಾಸದರು ತ್ವರೆಮಾಡಿ, ಕಾರ್ಯದರ್ಶಿ ಪ್ರಾಂತಿಕ ಖಾದೀ ಮಂಡಲ ಗದಗ ಇವರಿಗೆ ಪತ್ರ ಬರೆಯಬೇಕು.

"ಕನ್ನಡಿಗ"ನ ಪೋಷಕರಾಗಿ ಕೆಳಗೆ ಕಾಣಿಸಿದ ಮಹನೀಯರು ಸಹಾಯಮಾಡಿದ್ದಾರೆ.–(೧) ಶ್ರೀ. ಎಸ್. ಬಿ. ಹಿರೇಮಠ ಬಿ. ಎ. ಎಲ್. ಎಲ್. ಬಿ. ವಕೀಲ ಹಾವೇರಿ (೨) ಶ್ರೀ. ನಾಗಾಭಟ್ಟ ಭಾವೀಕಟ್ಟೆ ತೀರ್ಥಹಳ್ಳಿ ಇದೇ ಪ್ರಕಾರವಾಗಿ ಎಲ್ಲರೂ ಸಹಾಯ ಮಾಡಬೇಕಾಗಿ ಬಿನ್ನಹ.

ಮತ್ತೆ ವಿಷಮವಿವಾಹ.

॥ ಶ್ರೀ ಗಜಾನನ ಪ್ರಸನ್ನ ॥

ಈಗ್ಗೆ ಎರಡು ಸಾರೆ 'ಕನ್ನಡಿಗ'ನು ವಿಷಮವಿವಾಹದ ವಿಷಯಕ್ಕೆ ತನ್ನಲ್ಲಿ ಸ್ಥಳಕೊಟ್ಟಿದ್ದನ್ನು ನೋಡಿ ಬಹಳ ಆನಂದವಾಯಿತು. ನಾನೇ ಆ ವಿಷಯಕ್ಕೆ ಲೇಖವನ್ನು ಬರೆದು ಯಾವದಾದರೊಂದು ವೃತ್ತ ಪತ್ರಕ್ಕೆ ಕೊಡಬೇಕೆಂದು ಮಾಡಿದ್ದೆನು. ಮತ್ತು ಅದರಂತೆ ಲೇಖವನ್ನು ತಯಾರಿಸಿದ್ದೆನು. ಆದರೆ 'ಕನ್ನಡಿಗ'ನು ಆ ವಿಷಯಕ್ಕೆ ವಿಮರ್ಶಾತ್ಮಕ ಲೇಖವನ್ನು ತನ್ನಲ್ಲಿ ಕೊಟ್ಟಿದ್ದಕ್ಕೆ ನಾನು ನನ್ನ ವಿಚಾರವನ್ನು ಬಿಡಬೇಕಾಯಿತು. ಇರಲಿ. ಆ ಯಾವತ್ತೂ ಲೇಖವನ್ನು ಓದಿನೋಡಿದೆನು. ಆದರಲ್ಲಿ ನನ್ನ ವಿಚಾರಗಳೆಲ್ಲವೂ ಬಂದು ಹೋಗಿವೆ. ಆದರೆ ಒಂದು ಸಂಗತಿಯು ಮಾತ್ರ ಬಂದಿಲ್ಲ. ಅದನ್ನು ಕುರಿತು ಬರೆಯುವದೇ ಈ ಲೇಖದ ಉದ್ದೇಶವಾಗಿರುವದು.

ಈಗ ಮುಖ್ಯವಾಗಿ ನಾಟಕನೋಡಲಿಕ್ಕೆ ತರುಣರಾದ ಸ್ತ್ರೀಪುರುಷರೇ ಹೋಗುತ್ತಾರೆ. ಆದರಲ್ಲಿಯೂ ಆಧುನಿಕ ಸುಧಾರಣೆಯನ್ನು ಇಚ್ಛಿಸುವವರು ಅಂದರೆ ಕಾಲೇಜ, ಹಾಯಸ್ಕೂಲಗಳಲ್ಲಿ ಕಲಿಯುವ ವಿದ್ಯಾರ್ಥಿಗಳೇ ಬಹಳ. ಮರ್ಕಟ ಬುದ್ಧಿಯ ಯುವಕರ ಎದುರಿಗೆ ಶರಾವತಿಯ ಶೃಂಗಾರಪೂರ್ಣ ಅಭಿನಯ, ಭಾಷಣ, ಪದ್ಯ, ಇವುಗಳನ್ನು ಇಟ್ಟರೆ ಹೇಗಾಗುವದೆಂಬದು, ತರುಣ ವಿದ್ಯಾರ್ಥಿಗಳು ಕನಕಪಿಸುವದು, ಉಮಾರ್ಗಿಗಳಾಗುವದು, ಇವೆಲ್ಲವನ್ನು ನೋಡಿದ ನನಗೆ ಗೊತ್ತೇ ಹೊರತು 'ನಾಟಕಾಲಂಕಾರ'ರೆಂದೆನಿಸುವ ಶ್ರೀಯುತ ಗರೂಡರವರಿಗೆ ಗೊತ್ತಿರಲು ಶಕ್ಯವಿಲ್ಲ. ನಾಟಕದ ಅಂತ್ಯ, ಮಧ್ಯ ಭಾಗಗಳಲ್ಲಿ, ಸದ್ಬೋಧವಾಗುತ್ತಿದ್ದರೂ, ಆ ಬೋಧವು ಶೃಂಗಾರ ಪೂರ್ಣವಾದ ಅಭಿನಯ ಭಾಷಣಗಳಲ್ಲಿ ತೋರುವ ಕೌಶಲ್ಯದಲ್ಲಿ ಮುಚ್ಚಿ ಹೋಗುತ್ತದೆಂದು ವಿಷಾದದಿಂದ ತಿಳಿಸಬೇಕಾಗುವದು. ಈ ನಾಟಕವು ಎಷ್ಟು ಜನ ಪ್ರಿಯವಾದರೂ ಈಗಿನ ಕಾಲದ ದುರ್ಮಾರ್ಗಿಗಳಾದ ಜನರನ್ನು ಮತ್ತಿಷ್ಟು ದುರ್ಮಾರ್ಗಕ್ಕೆ ತರಲಿಕ್ಕೆ ಪ್ರಯತ್ನ ಮಾಡುವದೆಂದು ನನ್ನ ಅಲ್ಪ ಮತಿಗಂತೂ ತೋರುವದು. ಆದ್ದರಿಂದ ನಾಟಕಮಾರ್ಗದಿಂದ ಜನರನ್ನು ಸನ್ಮಾರ್ಗಕ್ಕೆ ತರುವ ಪಂಥಿಗಳಾದ ಶ್ರೀಯುತ 'ನಾಟಕಾಲಂಕಾರ' ಅಭಿನಯ ಕೇಸರಿ ಗರೂಡರವರಿಗೆ ವಿನಂತಿಮಾಡಿಕೊಳ್ಳುವದೇನಂದರೆ- ನಾಟಕಗಳಲ್ಲಿ ಅಲ್ಪಮತಿಗಳಿಗೆ ಕೂಡ ಕಂಡುಬರುವ ದೋಷಗಳನ್ನು ತಿದ್ದಿ ಬುಧಮಾನ್ಯವಾಗುವಂತೆ ಮಾಡುವರೆಂದು ನಂಬಿದ್ದೇನೆ. ಇಂತು ಕನ್ನಡಿಗನ ಮುಖಾಂತರ ನಾಟಕ ಕರ್ತರಿಗೆ ವಿನಂತಿ

ವರಸುರವಾಸಿ (ಧಾರವಾಡ)

(೬ ನೇ ಪಾನಿನಿಂದ ಬಂದದ್ದು.)

ಚಿಂದಿಯಿಂದ ಒರಿಸುತ್ತಿದ್ದಳು. ಇದರಿಂದ ಆ ಮೇಜು ಏನಾದರೂ ಸ್ವಚ್ಛ ವಾಗಲೊಲ್ಲದು. ಆ ಮುದಿಕೆಯು ಸಬಕಾರವನ್ನು ಬದಲು ಮಾಡಿದಳು. ಆ ಚಿಂದೆಯನ್ನು ಒಗೆದು ಮತ್ತೊಂದು ಚಿಂದಿಯನ್ನು ಉಪಯೋಗಿಸಿದಳು ಆದರೇನು? ಮೇಜೇನೂ ಸ್ವಚ್ಛವಾಗಲೊಲ್ಲದು. ಆಗ್ಗೆ ಯಾರೋ ಬಂದು "ಆವ್ವಾ ಈ ಹೊಲಸು ಚಿಂದಿಯನ್ನು ಬಿಟ್ಟು ಕೊಟ್ಟು ಹಸನವಾದ ಬಟ್ಟೆಯಿಂದ ಒರಿಸು ಈಗಲೇ ಮೇಜು ಸ್ವಚ್ಛವಾಗುದು," ಎಂದು ಹೇಳಿದರು. ಮುದಿಕೆಗೆ ತನ್ನ ತಪ್ಪು ಲಕ್ಷಕ್ಕೆ ಬಂದಿತು. ಇದೇಬಗೆಯಾಗಿ ಹೊಲಸು ಅರಿವೆಯಲ್ಲಿ ನಾವು ನೀರನ್ನು ಸೋಸುವದಕ್ಕಿಂತ ಸೋಸದೆ ಕುಡಿಯುವದೇ ಲೇಸೆಂಬದು ವ್ಯಕ್ತವಾಗುತ್ತದೆ

ಓಣಿಗಳಲ್ಲಿ ಕಸವನ್ನು ಚಲ್ಲಕೂಡದೆಂಬುದನ್ನು ತಿಳಿಸುವ ಕಾರಣವಿಲ್ಲ. ಕಸದ್ದೂ ಕೂಡ ಶಾಸ್ತ್ರವಿರುವದು. ಬಾಬು ಕಪ್ಪಿಣ ಮೊದಲಾದ ವಿರುಸು ಪದಾರ್ಥಗಳನ್ನು ಆಳವಾಗಿ ಹುಗಿಯಬೇಕು. ಸಣ್ಣ ಸಣ್ಣ ಕಟ್ಟಿಗೆಯ ತುಣುಕುಗಳನ್ನು ಉರುವಲಕ್ಕಾಗಿ ಉಪಯೋಗಿಸಬೇಕು. ಹಲ್ಲುಕಡ್ಡಿಗಳನ್ನು (ಹಲ್ಲು ತಿಕ್ಕಿಕೊಳ್ಳಲಿಕ್ಕೆಂದು ಉಪಯೋಗಿಸುವ ಬೇವಿನ ಇಲ್ಲವೆ ಜಾಲಿ ಮೊದಲಾದ ಗಿಡಗಳ ಎಳೆಟೊಂಗೆಗಳನ್ನು) ತೊಳೆದು ಒಣಗಿಸಿ ಅವುಗಳನ್ನು ಉರುವಲಕ್ಕೆ ಉಪಯೋಗಿಸಬೇಕು ಅರಿವೆಯ ಚಿಂದಿಗಳನ್ನು ಮಾರಬೇಕು. ಎಂಜಲ ಎಲೆ, ಮುಸುರಿ, ಕಾಯಿಪಲ್ಲೆಗಳ ಅನುಪಯುಕ್ತವಾದಭಾಗ ಮೊದಲಾದವುಗಳನ್ನು ತಿಪ್ಪಿಗೆ ಕಾಣಿಸಿ ಗೊಬ್ಬರ ಮಾಡಬೇಕು. ಈ ಬಗೆಯಾಗಿ ಮಾಡಿದ ಗೊಬ್ಬರವು ರಾಶಿಗಟ್ಟಲೆಯಾಗಿರುವದನ್ನು ನಾನು ಕಂಡಿದ್ದೇನೆ. ಅರಿವೆಯ ಚಿಂದಿಗಳಿಂದ ಕಾಗದವಾಗುತ್ತದೆ. ಹಳ್ಳಿಗಳಲ್ಲಿ ಕಸವನ್ನು ತೆಗೆಯಲಿಕ್ಕೆಂದು ಸಂಬಳ ಕೊಟ್ಟು ಜನರನ್ನು ನೇಮಿಸುವದು ಸರ್ವಥಾ ಅವಶ್ಯವಿಲ್ಲ. ಯಾಕಂದರೆ ಕಸವು ಬಹು ಸ್ವಲ್ಪ ಇರುವದು ಮತ್ತು ಅದೂಕೂಡ ಮುಖ್ಯವಾಗಿ ಗೊಬ್ಬರ ಮಾಡಲು ಯೋಗ್ಯವಾಗಿರುವದು.

೫ ಊರು ಇಲ್ಲವೆ ಮನೆಗಳ ಸುತ್ತಲು ನೀರು ನಿಲ್ಲುವಂಥ ತಗ್ಗುಗಳಿರಕೂಡದು. ನೀರು ತುಂಬಿಕೊಂಡಿರದ ಸ್ಥಳಗಳಲ್ಲಿ ಗುಂಗಾಡುಗಳ ಉತ್ಪತ್ತಿಯಾಗದು ಮತ್ತು ಗುಂಗಾಡುಗಳಿರದ ಸ್ಥಳಗಳಲ್ಲಿ ಮಲೇರಿಯಾ ಬೇನೆಯು (ಚಳಿಜ್ವರವು) ತಲೆದೋರದು. ದಿಲ್ಲಿಯ ಸುತ್ತು ಮುತ್ತಲು ನೀರು ನಿಲ್ಲುತ್ತಿದ್ದ ತಗ್ಗುಗಳನ್ನು ಈಗ ಮುಚ್ಚಿರುವದರಿಂದ ಆ ಪ್ರಮಾಣದಿಂದ ಗುಂಗಾಡುಗಳು ಕಡಿಮೆ ಯಾಗಿರುವವು. ಮತ್ತು ಮಲೇರಿಯಾ ಬೇನೆಯಾದರೂ ತಕ್ಕಮಟ್ಟಿಗೆ ಕಡಿಮೆಯಾಗಿದೆ.

ಮೇಲಿನ ನಿಯಮಗಳನ್ನೋದಿ, "ಇದೇನು ಅಷ್ಟೊಂದು ಮಹತ್ವದ ಲೇಖವಪ್ಪಾ!" ಎಂದು ಯಾರೂ ಅನ್ನಲಿಕ್ಕಿಲ್ಲೆಂದು ನಾನು ಆಶಿಸುತ್ತೇನೆ. ಈ ನಿಯಮಗಳ ಪಾಲನದ ಮೇಲೆ ಇಪ್ಪತ್ತೊಂದು ಕೋಟಿ ಹಳ್ಳಿಗಾರರ ಸ್ವಾಸ್ಥ್ಯವು ಅವಲಂಬಿಸಿರುವದು.

ಯಾವ ಸ್ವಯಂಸೇವಕರು ತಮ್ಮ ಹಳ್ಳಿಗಳಲ್ಲಿ ಈ ನಿಯಮಗಳ ಶಿಕ್ಷಣವನ್ನು ಒಕ್ಕಲಿಗರಿಗೆ ಮಾಡಿಕೊಡುವರೋ ಅವರು ತಮ್ಮ ಹಳ್ಳಿಗಳಲ್ಲಿ ವಾಸಿಸುವ ಜನರ ಆಯುಷ್ಯವನ್ನು ವೃದ್ಧಿಗೊಳಿಸಿ ರೋಗಗಳನ್ನು ತಡೆಯುವ ಮಹತ್ವದ ಉಪಾಯವನ್ನು ಯೋಜಿಸಿದಂತಾಗುವದು. ಎಲ್ಲಕ್ಕೂ ಕಠಿಣವಾದ ಕೆಲಸವಿದು, ಯಾಕಂದರೆ ಈ ಕೆಲಸದಬಗ್ಗೆ ಆಸಕ್ತಿಯುಳ್ಳವರು ತೀರಕಡಿಮೆ ಆದರೇನು? ಇಂದಿಲ್ಲ ನಾಳೆಯಾದರೂ ಅದನ್ನು ಮಾಡುವ ಹೊರ್ತು ಬೇರೆ ಗತಿಯಿಲ್ಲ. ಈ ಧರ್ಮದ ಪಾಲನೆಯಲ್ಲಿ ತಪ್ಪುಗಳಿಗೆ ಅವಕಾಶವಿಲ್ಲ. ಪಾಲಿಸಿದ ಮಟ್ಟಿಗೆ ಫಲವು ಲಭಿಸುವದು. ಯಾರಿಗೆ ಪ್ರಾರಂಭಿಸುವದಿದೆಯೋ ಅವರು ಈಗಲೇ ಪ್ರಾರಂಭಿಸಿದರೆ ಅವರು ಒಂದುವರ್ಷದಲ್ಲಿ ತಮ್ಮ ಸ್ಥಿತಿಯಲ್ಲಿ ಸುಧಾರಣೆಯನ್ನು ಮಾಡಬಲ್ಲರು.

ಸುಸಮಯವು! ಸುಸಮಯವು

ಮೈಸೂರು ಸುಗಂಧ ದ್ರವ್ಯಗಳು.

—(*)—

೧ ೩೨ ನೇ ಅಂಬರು ಊದಬತ್ತಿಗಳು ೨೪ ತೊಲೆಯ ಸೇರು ೧ ಕ್ಕೆ ೨-೦-೦

೨ ಮೈಸೂರ ಧೂಪ— ಸೇರು ೧ ಕ್ಕೆ ೧-೮-೦

೩ ಅಭ್ಯಂಜನಪುಡಿ ಡಜನ ಪ್ಯಾಕೆಟ್ಟು ೦-೧೨-೦

೪ ತುಮಕೂರು ಬಾಚಣಿಕೆಗಳು ಡಜನ ೧ ಕ್ಕೆ ೧-೨-೦

೫ ಅತ್ತರಗಳು ತೊಲೆ ೧ ಕ್ಕೆ ೪-೦-೦

೬ ಹೊಸನಮೂನೆಯ ಷರ್ಟಗಳು— ಷರ, ಟೆಂಗ್- ೧ ೧೫-೦, ಲಾಂಗ್ ಕ್ಲಾತ್ ೨-೦-೦, ಟ್ವಿಲ್ ೧-೧೪-೦ ಪಸನ್ ೩-೦-೦, ಖಾಕಿ ೬-೫-೦, ಷರ್ಟಗಳಿಗೆ ಆರ್ಡರು ಕೊಡತಕ್ಕವರ, ಕೊರಳಿನ ಸರಿಯಾದ ಅಳತೆಯನ್ನು ಕಳಿಸತಕ್ಕದ್ದು.

ಇತರ ವಿಷಯಗಳನ್ನು ಪತ್ರಮೂಲಕ ತಿಳಿಯತಕ್ಕದ್ದು.

ಟಿ. ಪಿ. ಪದ್ಮನಾಭ ಜೈನ್,

ತುಮಕೂರು. (ಮೈಸೂರು)

ಕಾರವಾರಜಿಲ್ಲೆಯೂ ರೇಲ್ವೆಗಳೂ.

“ಕಾನಡಾಧುರೀಣ”ದ ೪-೮-೧೯೨೫ ನೇ ಸಂಚಿಕೆಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ರೈಲ್ವೆಯುಬಂದರೆ ಬೇಸಾಯವು ಹಾಳಾಗುವದೆಂದು ಸಂಪಾದಕರು ತಮ್ಮ ಟಿಪ್ಪಣಿಯಲ್ಲಿ ಅಭಿಪ್ರಾಯ ಕೊಟ್ಟಿರುವರು. ಇದು ಈ ಜಿಲ್ಲೆಯ ಜನ ಸಮುದಾಯದ ಅಭಿಪ್ರಾಯವಲ್ಲ. ಆದರೆ ಸಂಪಾದಕರ ಸ್ವಂತಅಭಿಪ್ರಾಯ ವಾಗಿರುತ್ತದೆ. ಈ ವಿಷಯದಲ್ಲಿ ನನ್ನ ಕಿಂತ ಹೆಚ್ಚು ಯೋಗ್ಯರಾದರು. ಸಂಪಾದಕರ ಅಭಿಪ್ರಾಯವನ್ನು ಖಂಡಿಸಿಮಾಡಿ ಜನ ಸಮುದಾಯದ ನಿಜವಾದ ಅಭಿಪ್ರಾಯವನ್ನು ಪ್ರಸಿದ್ಧಮಾಡಿಯಾರೆಂದು ಇಷ್ಟು ದಿವಸಗಳ ವರೆಗೆ ದಾರೀ ನೋಡಿದೆನು. ಆದರೆ ಇಲ್ಲಿಯ ವರೆಗೆ ಈ ಬಗ್ಗೆ ಯಾರೂ ಮುಂದೆ ಬಾರದೆ ಇದ್ದದ್ದರಿಂದ ಮತ್ತು ಈ ವಿಷಯವಾಗಿ ಹೆಚ್ಚು ಚರ್ಚೆಯಾಗುವದು ಅವಶ್ಯ ವಿರುವದರಿಂದ ಈ ಪತ್ರವನ್ನು ಪ್ರಸಿದ್ಧಿಯ ಬಗ್ಗೆ ಕಳಿಸಿರುವೆನು.

ಸಂಪಾದಕರ ಅಭಿಪ್ರಾಯದಂತೆ ರೇಲ್ವೆಯುಂಟಾಗ ಬಹುದಾದ ಹಾನಿಗೆ ಮುಖ್ಯವಾದ ಮೊದಲನೇಕಾರಣವು ಕೂಲಿಯಿಂದಾಗುವ ಬೇಸಾಯದ ನಾಶ. ಈ ಕಾರಣವು ತೋರಿಕೆಗೆ ನಿಜವಾಗಿ ತೋರಬಹುದಾದರೂ ಸೂಕ್ಷ್ಮ ವಿಚಾರ ಮಾಡಿದರೆ ಈ ಹೆದರಿಕೆಯು ನಿರಾಧಾರವಾದದ್ದೆಂದು ಸ್ಪಷ್ಟವಾಗುವದು. ದೊಡ್ಡ ಪ್ರಮಾಣದಲ್ಲಿ ಯಾವಾಗಲೂ ಬೇಕಾದಷ್ಟು ಕೆಲಸ ಸಿಗದಿರುವದರಿಂದ ಇಲ್ಲಿ ಲೋಕಲ ಬೋರ್ಡವಗೈರೆ ಕೆಲಸಕ್ಕೆ ಕೂಲಿಗಳು ಸಿಗುವದಿಲ್ಲ. ದೊಡ್ಡಸೇತುವೆ ವಗೈರೆ ಕೆಲಸಗಳಿಗೆ ಹೊರಗಿನ ಕೂಲಿಜನರ ಪೂರೈಕೆಯು ಬೇಕಾದಷ್ಟು ಆಗುವದು. ರೇಲ್ವೆಯ ಸಂಗಡಲೇ ದೂರದೂರದ ಕೂಲಿಜನರು ಸಹಬೇಕಾದಷ್ಟು ಬರುವರು. ಹೊಲ ತೋಟಗಳಲ್ಲಿ ಕೆಲಸ ಮಾಡುವವರು ರೇಲ್ವೇ ಕೆಲಸವನ್ನು ಹೆಚ್ಚು ಪ್ರೀತಿಸುವದಿಲ್ಲ. ಕೂಲಿಕಾರರಬೇಸಬೆಸರಿಕೆಗಳ ಬಗ್ಗೆ ಬೇಸಾಯಗಾರರು ಸಹಾನು ಭೂತಿಯನ್ನು ತೋರಿಸಿ, ಅವರಿಗೆ ಬೇಕಾಗುವ ಸೌಕರ್ಯಗಳನ್ನು ಮಾಡಿಕೊಟ್ಟರೆ, ಕೂಲಿಕಾರರು ರೇಲ್ವೆಯವರಿಗಿಂತ ಇವರನ್ನೇ ಹೆಚ್ಚು ಪ್ರೀತಿಸುವರು. ಮುಂಬಯಿ, ಹುಬ್ಬಳ್ಳಿಯಂಥದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕೆಲಸ ಮಾಡುವವರು ಅಲ್ಲಿಯೇ ಹುಟ್ಟಿದವರೆ? ರತ್ನಾಗಿರಿ ಮದ್ರಾಸ ಗಳಂಥ ಬಹುದೂರದ ಸ್ಥಳಗಳಿಂದ ಅಲ್ಲಿಗೆ ಕೂಲಿಗಾಗಿ ಜನರು ಹೋಗುವದಿಲ್ಲವೇ?

ಹಿಂದುಸ್ಥಾನದಲ್ಲಿ ಕೂಲಿಯು ಸಿಗದೆ ಪರದೇಶಿಗಳಿಗೆ ಹೋಗಿ ಗುಲಾಮರಂತೆ ದುಡಿಯುತ್ತಿರುವದು ಯಾರಿಗೆ ಗೊತ್ತಿಲ್ಲ? ದಕ್ಷಿಣ ಆಫ್ರೀಕ ಮುಂತಾದ ದೇಶದಲ್ಲಿ ದುಡಿಯುವದಕ್ಕಿಂತ ಹಿಂದುಸ್ಥಾನದಲ್ಲಿಯೇ ಅವರಿಗೆ ಉದ್ಯೋಗಗಳನ್ನು ಕಲ್ಪಿಸಿಕೊಡುವದು ನಮ್ಮ ಕರ್ತವ್ಯವಲ್ಲವೇ?

ರೇಲ್ವೆಯು ಬಂದರೆ ಇಲ್ಲಿಯ ಧಾನ್ಯದ ವಸ್ತುಗಳಿಗೆ, ಫಲ ಮೂಲಾದಿಗಳಿಗೆ ಬೆಲೆಯು ಹೆಚ್ಚು ಬಂದು ಬೇಸಾಯವನ್ನು ವೃದ್ಧಿ ಮಾಡಲಿಕ್ಕೆ ಮತ್ತಿಷ್ಟು ಉತ್ತೇಜನ ಬರುವದು. ಘಟ್ಟದ ಮೇಲಿನ ತಾಲೂಕುಗಳಲ್ಲಿ ಕಿತ್ತಳೆ ಹಲಸು ವಗೈರೆ ಹಣ್ಣು ಹಂಪಲಗಳನ್ನು ಬೆಳೆಸಲು ಬೇಕಾದ ಅನುಕೂಲತೆ ಇರುವದು. ಆದರೆ ಎಷ್ಟೋ ಸರ್ತಿ ರೈತರು ಬೆಳೆಸಿದ ಹಣ್ಣು ಹಂಪಲುಗಳನ್ನು ಪೇಟೆಗೆ ತಂದರೆ ಅದರ ಕೂಲಿಯು ಸಹ ಸಿಗದೆ ಇಂಥ ವಿಷಯಗಳಲ್ಲಿ ಉದಾಸೀನರಾಗಿರುವರು.

ರೇಲ್ವೆಯು ಬಂದರೆ ಉದ್ಯೋಗ ವ್ಯಾಪಾರಗಳು ಬೆಳೆದು ಈ ಜಿಲ್ಲೆಯ ಜನರ ಸಂಪತ್ತು ಬೆಳೆಯುವದು. ಇಲ್ಲಿ ವಿಪುಲವಾಗಿ ಅಡಿಕೆ, ಮೆಣಸು ಬೆಳೆದರೂ ಅದರ ಪ್ರತಿಫಲವು ಸಂಪೂರ್ಣ ರೈತರಿಗೆ ದೊರೆಯುವದಿಲ್ಲ. ಅಚ್ಚೆ ನೂತದ್ದೆಲ್ಲ ಮೊಮ್ಮಗನ ಉಡದಾರಕ್ಕೆಂಬಂತೆ ನಮಗೆ ದೊರೆಯಬಹುದಾದ ಲಾಭವನ್ನೆಲ್ಲ ಬ್ಯಾಡಗಿ (ಇಲ್ಲಿಂದ ಬ್ಯಾಡಗಿ ರೇಲ್ವೇ ಸ್ಟೇಶನಕ್ಕೆ ೪೫ ಮೈಲುದೂರ) ಯಲ್ಲಿಯ ದಲಾಲರೇ ತಿಂದು ಬಿಡುವರು. ಬೆಳೆಯುವವರು ರೈತರಾದರೂ ಪ್ರತಿಫಲವು ಸಿಗುವಾಗ ಬಹು ಜನರಮೇಲೆ ಅವಲಂಬಿಸಬೇಕಾಗುವದು. ಅಲ್ಲಿಯವರು ಶ್ರೀಮಂತರಾಗುತ್ತಿರುವರು. ಇಲ್ಲಿಯವರು ಬಡವರಾಗುವರು. ಶಿರ್ಸಿಯಂಥ ಮುಖ್ಯ ಪಟ್ಟಣದಲ್ಲಿ ರೇಲ್ವೆಸ್ಟೇಶನಾದರೆ ರೈತರೇ ಗಿರಾಕಿಗಳ ಸಂಗಡ ಪ್ರತ್ಯಕ್ಷ ವ್ಯವಹಾರ ನಡಿಸಬಹುದು. ಈಗಿನಂತೆ ಗಿರಾಕಿಗಳಿದ್ದಲ್ಲಿ ರೈತರು ಹೋಗದೆ ರೈತರಿದ್ದಲ್ಲಿ ಗಿರಾಕಿಗಳು ಬರುವರು. ರೈತರು ತಮ್ಮ ಸಂಘಗಳ ಸ್ಥಾಪಿಸಿಕೊಂಡು, ವ್ಯಾಪಾರವನ್ನು ತಮ್ಮ ಕೈಯಲ್ಲಿಟ್ಟುಕೊಳ್ಳಬಹುದು ಈಗ ಸಿದ್ದಾಪುರದ ರೈತರು ಬ್ಯಾಡಗಿಯಲ್ಲಿ ತಮ್ಮ ಸಂಘವನ್ನು ಮಾಡಿ ಕೊಳ್ಳುವದು ಸಾಧ್ಯವಿಲ್ಲ.

ರಾಜಕೀಯ ವಿಚಾರದಲ್ಲಿ ನೋಡಿದರೆ ಈ ಜಿಲ್ಲೆಯವರು ಅರ್ಧಶತಮಾನಹಿಂದಿರುವರು. ಈ ಅವರ ಕೂಪ ಮಂಡೂಕ ವೃತ್ತಿಗೆ ಅವರಿಗೆ ಹೊರಗಿನ (ತಮ್ಮ ಹೊರಗಿನ) ಜಗತ್ತಿನ ಸಂಪರ್ಕವಿಲ್ಲದಿರುವದೇ ಕಾರಣ. ಹಿಂದುಸ್ಥಾನದಲ್ಲಿ ಏಕರಾಷ್ಟ್ರೀಯ ಭಾವನೆಗೆ ರೇಲ್ವೆಗಳೂ ಬಹ್ವಂಶದಿಂದ ಕಾರಣವಾಗಿವೆ. ಕರ್ನಾಟಕದಲ್ಲಂತೂ ಒಂದೊಂದು ಜಿಲ್ಲೆ ಅಥವಾ ತಾಲೂಕ ಬೇರೊಂದು ದೇಶವಾಗಿರುವದು. ಈ ಬಗ್ಗೆ ಉತ್ತರ ಕನ್ನಡಜಿಲ್ಲೆಯವರಿಗೆ ಒದಗುವ ಸಂಕಟಗಳನ್ನು ದೇವರೇ ಬಲ್ಲ. ಮಂಗಳೂರವರಿಗೆ ತಮ್ಮಂತೆ ತಮ್ಮ ನೆರೆಯಲ್ಲಿ ತಮ್ಮ ಭಾಷೆಯನ್ನಾಡುವ ಜನರಿಗಿಂತ ಮದ್ರಾಸವೇ ಸಮೀಪವಾಗಿರುವದು. ಕರ್ನಾಟಕವು ತುಂಡು ತುಂಡಾಗಿ ಒಂದು ಜಿಲ್ಲೆಯವರಿಗೂ ಮತ್ತೊಂದು ಜಿಲ್ಲೆಯವರಿಗೂ (ಮುಖ್ಯವಾಗಿ ರೇಲ್ವೆಗಳ ಅಭಾವವಿದ್ದಲ್ಲಿ) ಸಂಪರ್ಕವೇ ಇಲ್ಲದಂತಾಗಿದೆ. **ಕರ್ನಾಟಕ** ಏಕೀಕರಣಕ್ಕೆ ಎಲ್ಲಭಾಗಗಳಲ್ಲಿ ರೇಲ್ವೆಗಳಿಲ್ಲದಿರುವದೇ ದೊಡ್ಡ ತೊಂದರೆಯಾಗಿದೆ. ಈಗಿನ ಪರಿಸ್ಥಿತಿಯನ್ನು ವಿಚಾರ ಮಾಡಿದರಂತೂ, ಎಲ್ಲ ಭಾಗಗಳಲ್ಲಿ ರೈಲ್ವೆಗಳಾಗದ ಹೊರತು ಕರ್ನಾಟಕದ ಏಕೀಕರಣವಾಗುವದೇ ಕಠಿಣವಾಗಿ ತೋರುತ್ತದೆ.

ಧಾರವಾಡ, ಬೆಳಗಾವ ಜಿಲ್ಲೆಯಲ್ಲಿ ಧಾನ್ಯಗಳಿದ್ದಂತೆ ಈ ಜಿಲ್ಲೆಗೆ ಅಡವಿಯೇ ಮುಖ್ಯವಾಗಿದೆ. ಬಹಳ ಬೆಲೆಯುಳ್ಳ ಅಡಿವೆಗಳಿದ್ದರೂ ಅಡವಿಯ ಉತ್ಪನ್ನವೆಲ್ಲ ಕೊಳೆಯುತ್ತ ಬಿದ್ದಿದೆ. ರೇಲ್ವೆಯು ಬಂದರೆ ಇದರ ಯೋಗ್ಯ ಉಪಯೋಗವು ಶಕ್ಯವಾಗುವದು. ಗೇರ್ಸೊಪ್ಪೆಯಂಥ ಧಬಧಬೆಯಿಂದ ವಿದ್ಯುಚ್ಛಕ್ತಿಯನ್ನು ಹುಟ್ಟಿಸಿ ಬೇಕಾದ ಉದ್ಯೋಗಗಳನ್ನು ವೃದ್ಧಿಪಡಿಸಬಹುದು.

ಶಿರ್ಸಿಯಲ್ಲಿ ಮೊದಲು ಮೋಟರ ಇಡುವಾಗ ಪ್ರಯಾಣಿಕರು ಸಿಗುವರೋ ಎಂಬ ಸಂಶಯವಿತ್ತು, ಆದರೆ ಈಗ ೪-೬ ಕಂಪನಿಗಳಾದರೂ ಹೊತ್ತಿಗೆ ಮೋಟರ ಸಿಗುವದಿಲ್ಲ. ಪ್ರಯಾಣಿಕರಿಗೆ ಪ್ರಯಾಣದ ಸುಲಭವಾದ ಅನುಕೂಲತೆಯಾದಂತೆ ಜನರೊಳಗಿನ ವ್ಯವಹಾರವೂ ಹೆಚ್ಚು ಬೆಳೆಯುವದು. ಆದರೆ ನಮ್ಮ ಸಂಪಾದಕರಿಗೆ ಪ್ರಯಾಣಿಕರ ಕೊರತೆಯಿಂದ ರೇಲ್ವೆಯು ಬಂದಾಗುವ ಹೆದರಿಕೆಯೇ ಬಹಳ. ಈಗ ಮೋಟರಿಗೆ ಜನರು ಸಿಗುವಲ್ಲರಂತೆ. ಮೋಟಾರ ಪ್ರಯಾಣಕ್ಕೂ ರೇಲ್ವೆಪ್ರಯಾಣಕ್ಕೂ ಇರುವ ಭೇದವೇ ನಮ್ಮ ಸಂಪಾದಕರಿಗೆ ತಿಳಿಯದಿರುವದು ಆಶ್ಚರ್ಯ.

ನಮ್ಮ ಸಂಪಾದಕರಿಗೆ ಮತ್ತೊಂದು ದೊಡ್ಡ ಹೆದರಿಕೆ ಏನಂದರೆ ರೇಲ್ವೆಕಂಪನಿಯವರಿಗೆ ಒತ್ತಿಯು ಸಿಗುತ್ತದೋ ಇಲ್ಲೋ ಎಂಬದೊಂದು. ರೇಲ್ವೆಯ ಇತಿಹಾಸವನ್ನು ನೋಡಿದರೆ

ಕರ್ನಾಟಕದ ಏಕೀಕರಣ

—ಪತ್ರ ವ್ಯವಹಾರ—

(ನಮ್ಮ ಮೈಸೂರಿನ ಪತ್ರದ)

ಕರ್ನಾಟಕದ ಏಕೀಕರಣ ಚಳವಳಿಯು ದಿನೇ ದಿನೇ ಪ್ರಬಲಿಸುತ್ತಲಿದೆ. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಈ ಉದ್ಯಮದಲ್ಲಿ ಹೆಚ್ಚು ಆಸಕ್ತಿಯನ್ನು ತೆಗೆದು ಕೊಳ್ಳುತ್ತಿರುವದು ಒಂದು ಆನಂದದ ಸುದ್ದಿ. ಹೋದ ತಿಂಗಳು ೧೩ ನೇಯ ತಾರೀಖು ಗದಗಿನಲ್ಲಿ ಸೇರಿದ ಪ್ರಾಂತಿಕ ಸಭೆಯಲ್ಲಿ ಏಕೀಕರಣದ ಸಲುವಾಗಿ ಪ್ರಚಾರವಮಾಡಲೋಸುಗ ಒಂದು ಉಪಸಭೆಯು ಏರ್ಪಡಿಸಲ್ಪಡಬೇಕೆಂದೂ, ಮತ್ತು ಖರ್ಚಿಗೋಸ್ಕರ ೧೦೦೦ ರೂಪಾಯಿಗಳು ಕೊಡಲ್ಪಡಬೇಕೆಂದೂ, ತಿಳಿದು, ನಾನು ಆನಂದದಿಂದ ಪರವಶನಾದೆನು. ಇದುವರೆಗೂ, ಸುಖವಾಗಿ ಮಲಗಿ ನಿದ್ರಿಸುತ್ತಿದ್ದ ಕಾಂಗ್ರೆಸ್ ಸಭೆಯು ಈಗ ಎಚ್ಚತ್ತು, ಸಕಾಲದಲ್ಲಿ, ಬೆಳಗಾಂವಿಯಲ್ಲಿ ಸ್ಥಾಪಿಸಲ್ಪಟ್ಟ ಕರ್ನಾಟಕದ ಏಕೀಕರಣ ಸಭೆಗೆ ಬೆಂಬಲವನ್ನು ಕೊಡಲಿಕ್ಕೆ ಪ್ರಯತ್ನಿಸಿರುವ ಯತ್ನವು ಎಂದೂ ನಿಷ್ಫಲವಾಗಲಾರದೆಂದು ನನ್ನ ನಂಬಿಕೆ ಆದರೆ ಈ ಮಧ್ಯೆ ಕರ್ನಾಟಕ ಸಾಹಿತ್ಯ ಪರಿಷತ್ತನ್ನು ಮಾತ್ರ ಮರೆಯಲಾರೆನು. ಕರ್ನಾಟಕ ಸಾಹಿತ್ಯ ಪರಿಷತ್ತು ಮೈಸೂರಿನವರಿಗೆ ಮಾತ್ರ ಅಲ್ಲ. ಬ್ರಿಟಿಷ್ ಕರ್ನಾಟಕದವರಿಗೂ, ಸ್ವಲ್ಪ ಬಾಧ್ಯ ಉಂಟೆಂಬ ಸಂಗತಿಯನ್ನು ಸಭೆಯ ಚಾಲಕರು ಮರೆತಿರಲಾರರು. ಕರ್ನಾಟಕದ ಈಗಿನ ಹೊಸ ಚಳವಳಿಯಲ್ಲಿ ಸಾಹಿತ್ಯ ಪರಿಷತ್ತು ಹೆಚ್ಚು ಕಾರ್ಯಭಾಗವನ್ನು ತೆಗೆದುಕೊಂಡು, ಚಳವಳಿಯನ್ನು ಕರ್ನಾಟಕದ ಮೂಲೆ ಮೂಲೆಗೂ ಹಬ್ಬಿಸಿ, ತನ್ನ ಗೌರವವನ್ನು ಉಳಿಸಿಕೊಳ್ಳಲಿಕ್ಕೆ ಕೈ ಹಚ್ಚುವುದೋ ಇಲ್ಲವೋ ಎಂಬ ವಿಷಯವನ್ನು ಅತ್ಯಂತ ಆತುರದಿಂದ ನೋಡುತ್ತಿರುವೆನು.

ಮೇಲ್ಕಂಡ ಉಪ ಸಭೆಯ ಸದಸ್ಯರುಗಳಾದ, ಮು. ದವೇಡಕರ ಕೃಷ್ಣರಾಯರೂ, ಶ್ರೀನಿವಾಸರಾವ ಕೌಜಲಗಿಯವರೂ, ಆಲೂರ ವೆಂಕಟರಾಯರೂ, ಮೈಸೂರಿಗೆ ಹೋದ ಮಾಹೆ ೩೦ ನೇ ತಾರೀಖಿನಲ್ಲಿ ದಯಮಾಡಿಸಿದರು. ಈ ಮಾಹೆ ೩ ನೇಯ, ತಾರೀಖಿನಲ್ಲಿ ಒಂದು ದೊಡ್ಡ ಬಹಿರಂಗ ಸಭೆಯು ಏರ್ಪಡಿಸಲ್ಪಟ್ಟಿತ್ತು. ಮೈಸೂರಿನ ಪಿತಾಮಹರಾದ ಮ|| ರಾ|| ವೆಂಕಟಕೃಷ್ಣಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಸಭೆಗೆ ಅನೇಕ ಮಂದಿ ಸರ್ಕಾರಿ ಉದ್ಯೋಗಸ್ಥರು ಹಾಜರಿದ್ದರು. ಮೊಟ್ಟ ಮೊದಲು ಶ್ರೀಯುತ, ತಾತಾಚಾರ್ಯ ಶರ್ಮರವರು. ಕರ್ನಾಟಕದ ಗತವೈಭವವನ್ನು ವರ್ಣಿಸಿ ಕರ್ನಾಟಕಕ್ಕೆ ಸಧ್ಯದಲ್ಲಿ ಒದಗಿರುವ ದುರ್ದಶೆಯನ್ನು ಪಾರಗಾಣಿಸಬೇಕಾದರೆ, ಛಿದ್ರ ಛಿದ್ರವಾಗಿರುವ ಭಾಗವನ್ನೆಲ್ಲಾ ಒಟ್ಟುಗೂಡಿಸಿ ಒಂದು ಸ್ವತಂತ್ರ ಪ್ರಾಂತ್ಯವನ್ನಾಗಿ ಮಾಡಿಕೊಂಡು ಕರ್ನಾಟಕವು, ಹಿಂದೆ ಯಾವಸ್ಥಿತಿಯಲ್ಲಿತ್ತೆಂಬುವುದನ್ನು ನೆನಸಿಕೊಂಡು, ಪ್ರತಿಯೊಬ್ಬ ಕರ್ನಾಟಕಸ್ಥನೂ, ಉದ್ಯುಕ್ತನಾಗಬೇಕೆಂದು ಸಾರಿ ಸಾರಿ ಹೇಳಿದರು.

ನಂತರ ಶ್ರೀಯುತ ಮುದವೇಡಕರ ಕೃಷ್ಣರಾಯರು, ಕರ್ನಾಟಕದ ಒಂದು ಭಾಗವಾದ ಬಳ್ಳಾರಿಯ ತೆಲುಗರ ವರ್ತನವನ್ನು ಖಂಡಿಸಿ, ಪ್ರಾಪ್ತವಾಗಿರುವ ದುಸ್ಥಿತಿಯನ್ನು ಸಭಿಕರ ಹೃದಯವನ್ನು ಛೇದಿಸುವಂತೆ ಭಾಷಣಮಾಡಿದರು.

ಶ್ರೀಯುತ ಕೌಜಲಗಿ ಶ್ರೀನಿವಾಸರಾಯರು, ಮದ್ರಾಸಿಗೆ ಸಿಲೆಕ್ಟ್ ಕಮಿಟಿಯೆದುರಿಗೆ ಹೋಗಿನಿಂತ, ಕನ್ನಡಿಗರ ಶಿಷ್ಟಮಂಡಲದ ವಿಚಾರವಾಗಿ ಸ್ಪಷ್ಟ ಮಾಡಿದರು. ಕರ್ನಾಟಕದ ವಿಶ್ವವಿದ್ಯಾನಿಲಯದ ವಿಷಯವನ್ನು ಕುರಿತು, ನಮ್ಮ ಶ್ರೀಮನ್ ಮಹಾರಾಜರು, ಮೈಸೂರಿನಲ್ಲಿ ಒಂದು ವಿಶ್ವ ವಿದ್ಯಾನಿಲಯವನ್ನು ಸ್ಥಾಪಿಸಿರುವರು. ಅದೇ ವಿಶ್ವ ವಿದ್ಯಾನಿಲಯವನ್ನು ಅಖಿಲ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡಬೇಕೆಂದು, ನಾವೂ ಅಂದರೆ ಬ್ರಿಟಿಷ್ ಪ್ರಾಂತ್ಯದ ಕನ್ನಡಿಗರೂ ಮೈಸೂರಿನವರೂ, ಒಟ್ಟುಗೂಡಿ, ಮಹಾರಾಜರಲ್ಲಿ ಶರಣು ಹೋಗಬೇಕು. ಹಾಗೆಮಾಡಿದಲ್ಲಿ ಅವರೆಂದಿಗೂ ನಮ್ಮ ಪ್ರಾರ್ಥನೆಯನ್ನು ಕಳೆಯಲಾರರು. ಆದುದರಿಂದ ಪ್ರತಿಯೊಬ್ಬ ಕನ್ನಡಿಗನೂ ಈ ಉದ್ಯಮದಲ್ಲಿ ಭಾಗಿಯಾಗಿ ಶ್ರೇಯಸ್ಸನ್ನು ಹೊಂದಬೇಕು ಎಂಬುವಾಗಿ ಉತ್ತಮ ರೀತಿಯಲ್ಲಿ ಭಾಷಣ ಮಾಡಿದರು.

ಇವರ ನಂತರ, ಶ್ರೀಯುತ. ಪಾ. ರಾ. ರಾಮಯ್ಯನವರು, ಶ್ರೀಮನ್ ಮಹಾರಾಜರಲ್ಲಿ ಹೋಗಿ ಮೈಸೂರಿನ ವಿಶ್ವವಿದ್ಯಾಲಯವನ್ನು ಅಖಿಲ ಕರ್ನಾಟಕದ ವಿಶ್ವವಿದ್ಯಾಲಯವನ್ನಾಗಿ ಮಾಡಬೇಕೆಂದು ಪ್ರಾರ್ಥಿಸಬೇಕು. ಎಂಬ ಠರಾವನ್ನು ತಂದರು. ಅದನ್ನು ಮ|| ರಾ|| ಎಸ್. ಕೃಷ್ಣಸ್ವಾಮಿರಾಯರು, ಅನುಮೋದಿಸಿದರು. ವೇ|| ಬ್ರ|| ಶ್ರೀ|| ಸಾಲಿಗ್ರಾಮದ ನಾರಾಯಣ ಶಾಸ್ತ್ರಿಗಳು ಸಮರ್ಥಿಸಿದರು. ಸರ್ವ ಮತದಿಂದ ಪಾಸಾಯಿತು.

ಅಧ್ಯಕ್ಷರು ಯುಕ್ತಿಯುಕ್ತವಾದ ಭಾಷಣವನ್ನು ಮಾಡಿ, ಸಭೆಯನ್ನು ಮುಗಿಸಿದರು.

ಆಂಧ್ರರು ಇವತ್ತಿನವರೆಗೂ, ಒಂದೇ ತೆರನಾಗಿ ಹೊಡೆದಾಡಿ, ಒಂದು ವಿಶ್ವವಿದ್ಯಾಲಯವನ್ನು ಹೊಂದಲಿಕ್ಕಿರುವರು. ಇವರ ಮೇಲು ಪಂಕ್ತಿಯನ್ನು ಮಾದರಿಯಾಗಿಟ್ಟುಕೊಂಡು ತಮಿಳರು ನಾವು, ಕೇರಳ ಪ್ರಾಂತ್ಯದವರು ತಮಗೂ ಸಹ ಭಾಷಾವಾರು ವಿಶ್ವವಿದ್ಯಾಲಯಗಳನ್ನು ಬೇಕೆಂದು ಹೋರ ಹೊರಟಿರುವರು. ಇಂಥಾ ಪ್ರಸಂಗದಲ್ಲಿ ಕನ್ನಡಿಗರಾದರೂ, ಸುಮ್ಮನೆ ಕುಳಿತು ಬಿಟ್ಟರೆ, ಇವರಿಗೆ ಸದ್ಗತಿ ಎಂದಿಗೆ? ಕನ್ನಡಿಗರು ಉತ್ಸಾಹ ಶೂನ್ಯರಾಗಬಾರದು ಧೈರ್ಯವನ್ನು ಹೊಂದಬೇಕು ಎಲ್ಲಾ ಪ್ರಾಂತದವರಲ್ಲಿಯೂ, ಒಂದು ವಿಧವಾದ ನವಚೈತನ್ಯವು ಪಸರಿಸಿರಲು, ನಮ್ಮ ಕರ್ನಾಟಕರಲ್ಲಿ, ಅದು ಉಂಟಾಗದೆ ಇರುವ ಸಂಗತಿಯು ಎಂಥಾ ಶೋಚನೀಯ ವಾದುದು !

ಕನ್ನಡಿಗರೇ ಸ್ವಲ್ಪಯೋಚಿಸಿನೋಡಿ ಎಂಥಾ ಪವಿತ್ರಭೂಮಿಯದು! ಕರ್ನಾಟಕ ಮಾತೆಯನ್ನು ಮರೆಯುವುದೇ! ನಮ್ಮ ಪ್ರಿಯ ಕರ್ನಾಟಕ ತಾಯಿಯೇ! ದೈವಾನುಗ್ರಹವಾಗಿ, ದೊರೆತಿರುವ ಇಂಥಾ ಸುಸಂಧಿಯನ್ನು ವ್ಯರ್ಥಮಾಡಿಕೊಳ್ಳದೆ, ಮುಂದಿನ ಜನಾಂಗದವರ ದೂಷಣೆಗೆ ಒಳಗಾಗದೆ, ಕರ್ನಾಟಕ ಮಾತೆಯ ಸೇವೆಯನ್ನು ಮಾಡಿ ಜನ್ಮಸಾಫಲ್ಯವನ್ನು ಹೊಂದುವುದಕ್ಕೋಸ್ಕರ ಕಂಕಣ ಬದ್ಧರಾಗಿ ನಿಲ್ಲುವ. ಬನ್ನಿರಿ. ನಮ್ಮ ಇಷ್ಟವು ಅತಿ ಶೀಘ್ರದಲ್ಲಿಯೇ ಪೂರ್ತಿಯಾಗುವುದು.

ಬೆಳಗಾವಿ ಕಾಂಗ್ರೆಸಿನ ವರದಿ

ಜಿಲೆ ೧೦೦ ಪ್ರತಿನಿಧಿಗಳಾಗಿದ್ದವರಿಗೆ ೦-೮-೦ ಬೇಕಾದವರು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಗೆ ಬರೆಯಬೇಕು.

ಕನ್ನಡ ಲಿಪಿಯು ಅಭಿಮಾನವು.

ಕರ್ನಾಟಕದ ಸಣ್ಣ ದೊಡ್ಡ ಊರುಗಳಲ್ಲಿಯ ವ್ಯಾಪಾರಸ್ಥರು ತಮ್ಮ ಅಡ್ರೆಸ್ ಕಾರ್ಡು, ಕವರು, ಪತ್ರ ಮುಂತಾದವುಗಳನ್ನು ಇಂಗ್ಲೀಷ ಅಥವಾ ಇಂಗ್ಲೀಷ ಮರಾಠಿ ಲಿಪಿಯಲ್ಲಿ ಮುದ್ರಿಸಿ ತಮ್ಮ ಮಾತೃಭಾಷಾ ಲಿಪಿಯನ್ನು ಬಿಡುವ ಚಟವು ಹೆಚ್ಚಾಗಲಿಕ್ಕೆ ಹತ್ತಿರುವದು. ಇದು ನಮಗೆ ಸ್ವಂತ ಅನುಭವಕ್ಕೆ ಬರಲಿಕ್ಕೆ ಹತ್ತಿರುವದು. ಅದರಲ್ಲಿ ಅಚ್ಚ ಕನ್ನಡಿಗರೆಂದು ಮೆರೆಯುವ ಲಿಂಗಾಯತರೇ ಈ ರೀತಿ ಅಚ್ಚುದಾರಿಯನ್ನು ಹಿಡಿದಿರುವರು. ಎಷ್ಟೋ ಜನರಿಗೆ ನಾವು ಹೀಗೇಕೆ ಮಾಡುವಿರೆಂದು ಕೇಳಿದರೆ, ನಮ್ಮ ವ್ಯಾಪಾರವು ಮಹಾರಾಷ್ಟ್ರ, ಗುಜರಾತ್ ಕಡೆಗೆ ಇರುವದರಿಂದ ಹೀಗೆ ಮಾಡಬೇಕಾಗುತ್ತದೆಂದು ಹೇಳುವರು. ಒಂದು ವೇಳೆ ನಿಜವಿದ್ದರೂ ರಾಜಭಾಷೆಯಾದ ಇಂಗ್ಲೀಷನ್ನೂ ಮಾತೃಭಾಷೆಯಾದ ಕನ್ನಡವನ್ನೂ ಹಾಕಿದರೆ ಇವರ ಕಾರ್ಯವು ನೆರವೇರುವಂತಿದೆ. ಇಂಗ್ಲೀಷು ಎಲ್ಲ ಕಡೆ ಪ್ರಚಾರದಲ್ಲಿದೆ. ಈಗ ಕಾರ್ತಿಕ ಹಬ್ಬವು ಸಮೀಪಿಸಿರುವದರಿಂದ ತಮ್ಮ ಪೂಜಾಪತ್ರಗಳನ್ನು ತಮ್ಮ ಮಾತೃಭಾಷೆಯಲ್ಲಿ ಮುದ್ರಿಸಿ ತಮ್ಮ ಹೆಸರು ಗೋತ್ತಾಗಬೇಕಾದರೆ ಹೆಸರಿನ ಪಟ್ಟಿಗೆ ಹೊರಪ್ರಾಂತಕ್ಕೆ ಹೋಗುವ ಕಾರ್ಡಿನ ಮೇಲೇ ಇಂಗ್ಲಿಷ ಪ್ರಿಂಟ ಮಾಡಿಸಿದರೆ ಎಷ್ಟು ಉತ್ತಮವಾಗುತ್ತದೆ! ಮತ್ತು ಎಷ್ಟೋ ಜನರು ಧಾರವಾಡಕರ, ಬಾಪಟವಾಡಕರ, ಮುಂತಾದ ಮರಾಠಿ ಪ್ರತ್ಯಯವನ್ನು ಹಚ್ಚುವದೂ ಏರಮ್ಮ ಪಾರ್ವತವ್ವ, ಮುಂತಾದ ಕನ್ನಡ ಲಕ್ಷಣಗಳನ್ನು ಬಿಟ್ಟು ವೀರೂಬಾಯಿ, ಪಾರ್ವತಿಬಾಯಿ ಮುಂತಾದ ಮರಾಠಿ ಲಕ್ಷಣಕ್ಕೆ ಹತ್ತಿರುವರು. ಇದರಂತೆ ಎಷ್ಟೋ ಪದವೀಧರರ ಲಗ್ನ ಪತ್ರಗಳು ಪ್ರಿಂಟಾಗಿ ಹೋಗಿರುವವು. ಯಾವ ಮರಾಠಿಗನೂ ಹೀಗೆ ಕನ್ನಡ ಶಬ್ದಗಳನ್ನು ಉಪಯೋಗಿಸಲಾರನು ಕನ್ನಡಿಗರೇ, ಇನ್ನಾದರೂ ಎಚ್ಚತ್ತು ನಿಮ್ಮ ದೇಶ, ನಿಮ್ಮ ಭಾಷೆ, ನಿಮ್ಮ ಲಿಪಿ, ನಿಮ್ಮ ಸಂಸ್ಕೃತಿಗಳ ಅಭಿಮಾನ ತಾಳಿರಿ. ನಿಮ್ಮ ಪತ್ರವ್ಯಾಪಾರ ಉದ್ದಿಮೆಗಳಲ್ಲಿ ಕನ್ನಡ ಅಭಿಮಾನವು ಜಾಗ್ರತವಾಗಲಿ, ಆಗರೆ ನೀವು ಮನುಷ್ಯರೆಂಬ ಬಿರುದಿಗೆ ಪಾತ್ರರಾಗುವಿರಿ.

—ಬಸವರಾಜ

SUB-AGENTS
URGENTLY REQUIRED.

ಕೆಳಗೆ ನಮೂದಿಸಿದ ಜಿಲ್ಲೆಗಳಿಗೆ
ಸಬ್- ಏಜಂಟರು ಬೇಕಾಗಿದೆ

ಧಾರವಾಡ, ಬೆಳಗಾವ, ವಿಜಾಪೂರ, ಕಾರವಾರ, ಈ ಜಿಲ್ಲೆಗಳಿಗೆ (ಅಮೇರಿಕನ್) ಚಿಮಣಿ ಎಣ್ಣೆ, ವ ಪೆಟ್ರೋಲ, ವ ಮೊಬಿಲಾಯಿಲ್, (ಲುಬ್ರಿಕೇಟಿಂಗ ಆಯಿಲ್ಸ.) ವಗೈರೆ ಮಾರುವದಕ್ಕೆ ಏಜಂಟರಾಗಲಿಚ್ಛಿಸುವವರು ಕೆಳಗಿನ ಪತ್ತೆಗೆ ಸಮಕ್ಷಮ ಭೆಟ್ಟಿಯಾದಲ್ಲಿ ವಿವರವಾದ ಏಜನ್ಸಿಯ ಮಜಕೂರು ತಿಳಿಯುವದು.

S. Korvi & Co., Hubli.

ಮದ್ರಾಸ ಕರ್ನಾಟಕ

ನೀಲಗಿರಿಯಲ್ಲಿಯ ತೋಡ ಜನರ ಸಂಖ್ಯೆಯು ದಿನೇ ದಿನೇ ಕಡಿಮೆಯಾಗಹತ್ತಿದೆ. ಇದನ್ನು ನಿಲ್ಲಿಸಿ ಅವರ ಸಂಖ್ಯೆಯು ಹೆಚ್ಚುವಂತೆ ಯಾವ ಉಪಾಯಗಳನ್ನು ಕೈಕೊಳ್ಳಬೇಕೆಂಬದನ್ನು ವಿಚಾರಿಸುವದಕ್ಕೆ ಇದೇ ತಿಂಗಳ ೧೯ ನೇ ತಾ॥ ದಿನ ಉದಕಮಂಡಲದಲ್ಲಿ ಕಸ್ಟ್ರಿಫಟನ ಸಾಹೆಬರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರುವದು. ಕುಮಾರಿ ಲಿಂಗರವರ ಭಾಷಣವು ಆಗುವದು

ನೀಲಗಿರಿ ಬೆಟ್ಟದಲ್ಲಿ ಮದ್ರಾಸ ಸರ್ಕಾರದವರು ಪ್ರತಿವರ್ಷ ಬೇಸಿಗೆಯನ್ನು ಕಳೆಯುವದಲ್ಲದೇ ಜುಲೈ ಆಗಸ್ಟ ತಿಂಗಳುಗಳನ್ನು ಸಹ ಅಲ್ಲಿಯೇ ಕಳೆಯಬೇಕೆಂದು ಯೋಚಿಸಿದ್ದಾರೆ. ಇದಕ್ಕೆ ಮಂತ್ರಿಗಳ ಒಪ್ಪಿಗೆಯೂ ಇದೆಯಂತೆ!!

ಬೆಳಗಾವಿ ರೇಲ್ವೇ ಮಂಡಲದ ಪತ್ರವು.

ರಾ. ರಾ. ಸಂಪಾದಕ ಕನ್ನಡಿಗ ಇವರಿಗೆ—

ಕೃತಾನೇಕ ಸಾ. ನಮಸ್ಕಾರ ವಿ. ವಿ. ಇವತ್ತಿನ ದಿವಸ ತಮ್ಮ ವೃತ್ತ ಪತ್ರ ಓದಿನೋಡಿದೆವು. ಅದರಲ್ಲಿ ರೇಲವೇ ಮಂಡಳ ಬಾಬತ ಬರೆದ ಮಜಕೂರ ನೋಡಿದೆವು. ನಾನು ಈ ಪೂರ್ವದಲ್ಲಿಯೇ ಮದ್ರಾಸ ಯಾತಗೇರಿ ಕಡಿಗೆ ಹೋಗಿಬಂದಿದ್ದೇನೆ. ಪ್ರವಾಸಮಾಡುವದಕ್ಕೆ ದುಡ್ಡಿನ ಅನಕೂಲತೆಯು ಎಷ್ಟು ಬೇಕೋ? ಅಷ್ಟು ಇಲ್ಲ- ಮತ್ತು ಇನ್ನೂ ರೇಲವೆ ಮಂಡಳದ ಆರ್ಥಿಕ ಸ್ಥಿತಿಯು ಯಥಾ ಯಥಾ ಪ್ರಕಾರದ್ದಿದೆ. ಒಬ್ಬನಿಗೇ ಎಲ್ಲ ಕಡೆಗೆ ಹೋಗುವದು ಶಕ್ಯವಿಲ್ಲ. ಆದರೂ ತಮ್ಮ ಸೂಚನೆಯ ಪ್ರಕಾರ ಬಳ್ಳಾರಿ, ಬೆಳಗಾಂವ, ಮೈಸೂರ ಕಡಿಗೆ ಹೋಗಿಬರುತ್ತೇನೆ.

ಇವತ್ತಿನ ದಿನ ತಮಗೆ ನಮ್ಮ ರೇಲವೇ ಮಂಡಳ ಮಾರ್ಫತ ೨೫ ರೂಪಾಯಿ ಕಳಿಸಿ ಕೊಟ್ಟಿದೆ. ತಾವು ಕರ್ನಾಟಕದಲ್ಲಿ ರೇಲವೇ ಆಗುವ ಕುರಿತು ಅನೇಕ ರೀತಿಯಿಂದಲೂ ಸುವ್ಯವಸ್ಥೆಯಿಂದಲೂ ಪ್ರಯತ್ನ ಮಾಡುತ್ತಿರುವಿರಿ. ತಮ್ಮ ಪ್ರಯತ್ನವು ನಮ್ಮ ರೇಲವೇ ಮಂಡಳ ಪೈಕೀದೇ ಕೆಲಸ. ಆದ್ದರಿಂದ, ಅದಕ್ಕೆ ಟಪಾಲ ಖರ್ಚು ಕಾಗದ ಖರ್ಚು ಸಾಹಜೀಕವೇ ಬರುವದು, ಇದು ನಮ್ಮ ಸಂಸ್ಥೆಯ ಕಡೆಯಿಂದಾಗುವ ಅಲ್ಪಸಹಾಯವು. ಅದನ್ನು ತಾವು ಸ್ವೀಕರಿಸಬೇಕಾಗಿ ವಿನಂತಿಯಿದೆ. ತಾವು ವೃತ್ತ ಪತ್ರದಿಂದಲೂ ರೇಲವೇ ಸಮ್ಮಂಧಿ ಕರ್ನಾಟಕದ ಸೇವೆ ನಡಿಸಿದ್ದು ಬಹಳ ಭೂಷಣದ ಮತ್ತೂ ಅಭಿಮಾನದ ಸಂಗತಿಯೇ ಸರಿ.

ನಾ. ಬೆಳವಿ ಸಾಹೇಬರ ಕಡಿಯಿಂದ ತಮ್ಮ ರೇಲವೇ ಲಾಯಿನ ದಸಿಯಿಂದ ಖಟಪಟಿಮಾಡುತ್ತೇನೆ.

ಇವತ್ತು ಇಲ್ಲಿಯ ವಜನದಾರ ವಕೀಲ ವ್ಯಾಪಾರ ಇಂಜಿನೀಯರ ಕಾರಕೂನ ವಗೈರೆ ಜನರ ಸಹಿ ಮಾಡಿಸಿ, ತಮ್ಮ ರೇಲ್ವೇ ಬೋರ್ಡಿಗೆ ತಿಳಿಸಿರುತ್ತೇನೆ. ನನಗೆ ಕೆಲಸ ಬಹಳ ಇರುತ್ತದೆ. ಇನ್ನೂ ನಮ್ಮ ಸಂಸ್ಥೆಯು ಬಾಲ್ಯಾವಸ್ಥೆಯಲ್ಲಿ ಅದೆ. ನಾನು ತಮ್ಮ ಕೆಲಸಕ್ಕೆ ಶಕ್ತ್ಯಾನುಸಾರ ಸಹಾಯ ಮಾಡುತ್ತೇನೆ. ಇಷ್ಟು ಅಭಿವಚನ ಕೊಟ್ಟು, ತಮ್ಮ ರಜಾ ತಗೆದುಕೊಳ್ಳುತ್ತೇನೆ.

ನಾಗೇಶರಾವ ಮರಾಠೆ.
ಕಾರ್ಯದರ್ಶಿ.
ರೇಲವೇ ಮಂಡಳ ಬೆಳಗಾವ.

ಟಿಪ್ಪಣಿ:— ಬೆಳಗಾವಿಯ ರೇಲವೇ ಮಂಡಲದವರು ರೇಲವೇ ಸೌಕರ್ಯಗಳ ವಿಷಯವಾಗಿ ಎಷ್ಟು ಕಳವಳ ಪಡುತ್ತಿರುವರೆಂಬದು ಈ ಪತ್ರದಿಂದ ಸಿದ್ಧವಾಗುತ್ತದೆ. "ಕನ್ನಡಿಗ" ನು ಮಾಡುತ್ತಿರುವ ಕೆಲಸವೆಂದರೆ ತಮ್ಮದೇ ಎಂಬದಾಗಿ ತಿಳಿದು ■ ರೂ. ಕಳಿಸಿದ್ದು ಅವರ ಕರ್ತವ್ಯ ತತ್ಪರತೆಯ ಸಾಕ್ಷಿಯು. "ಕನ್ನಡಿಗ" ನ ರೇಲವೇ ಬೋರ್ಡಿನ ಅರ್ಜಿಗೆ ಇವರಿಂದ ಈ ಬಗೆಯ ಬೆಂಬಲ ದೊರೆತದ್ದರಿಂದ, ಈ ಕಾರ್ಯವು ಫಲಕಾರಿಯಾಗುವದರಲ್ಲಿ ಸಂಶಯವಿಲ್ಲ, ಇದೇ ಸ್ವೀಕಾರವಾಗಿ ದಿನೇ ದಿನೇ ಕನ್ನಡಿಗರ ಪ್ರೇಮಕ್ಕೆ ಪಾತ್ರವಾಗುವಹಾಗೆ ಪ್ರಯತ್ನಿಸಲು, ಪರಮಾತ್ಮನು ಈ ಸಂಸ್ಥೆಗೆ ಆಶೀರ್ವಾದಮಾಡಲಿ! — ಸಂ. ಕ.)

“ಕನ್ನಡಿಗನಿಗೆ” ರಜೆ.

ದೀಪಾವಳಿಯ ಬಗ್ಗೆ ಮುಂದಿನ ವಾರದಲ್ಲಿ “ಕನ್ನಡಿಗ”ನಿಗೆ ರಜೆಯಿದೆ.

—ವ್ಯವಸ್ಥಾಪಕ

ಮೊದಲೇ ಬಡ್ಡಿಯ ದೊಡ್ಡ ಆಶೆಯನ್ನು ಹಿಡಿದಿದ್ದರೆ ಹಿಂದುಸ್ಥಾನದಲ್ಲಿ ರೇಲ್ವೆಗಳೇ ಆಗುತ್ತಿದ್ದಿಲ್ಲ. ಬಿನ್ ಬಡ್ಡಿಯಿಂದ, ಸರಕಾರದವರು ರೇಲ್ವೆ ಕಂಪನಿಗಳಿಗೆ ಕೋಟಿಗಟ್ಲೆ ರೂಪಾಯಿಗಳನ್ನು ಸುರಿದ ಸಂಗತಿಯು ನಮ್ಮ ಸಂಪಾದಕರಿಗೆ ಗೊತ್ತಿಲ್ಲವೇ? ಹಾಗಿದ್ದರೆ ಉತ್ತರ ಕನ್ನಡ ಜಿಲ್ಲೆಯವರು ಮಾಡಿದ ಮಹತ್ಪಾಪವೇನು? ರೇಲ್ವೆಯಿಂದ ಈ ಜಿಲ್ಲೆಯು ಉನ್ನತಿಯಾಗುತ್ತಿದ್ದರೆ ಅದಕ್ಕೆ ಬಡ್ಡಿಯು ಅಡ್ಡ ಬರಬೇಕೆ?]

ಈ ಜಿಲ್ಲೆಗೆ ರೇಲ್ವೆಯು ಬರದೆ ಇದ್ದರೆ ಬೇಸಾಯವು ತಾನಾಗಿಯೇ ಹೇಗೆ ವೃದ್ಧಿಯಾಗುವದೆಂಬದನ್ನು ಸಂಪಾದಕರು ತೋರಿಸುವರೇ? ಬೇಸಾಯದವರಿಗೆ ಅಗ್ಗದ ಕೂಲಿಯು ಸಿಗುವಂತೆ ಮಾಡಬೇಕಾದರೆ ರೇಲ್ವೆಯನ್ನು ಮಾಡದಿರುವದಕ್ಕಿಂತ ಬಾಕಿ ಎಲ್ಲ ಉದ್ಯೋಗಗಳನ್ನು ನಾಶಮಾಡಿ ಕಡಿಮೆ ಕೂಲಿಯ ಮೇಲೆ ಕೂಲೀ ಮಾಡಬೇಕಾಗಿ ಕಾಯದೆ ಮಾಡುವದೇ ಒಳ್ಳೇಯದು.

ಬರವಣಿಗೆಯು ಉದ್ದವಾದ್ದರಿಂದ ಸದ್ಯಕ್ಕೆ ಇಷ್ಟಕ್ಕೇ ಮುಗಿಸುವೆನು.

ಶಿದ್ದಾಪುರ
ಅಶ್ವೀನ ಶು. ೧೦ { ಗೋಪಾಲ ರಾಮಚಂದ್ರ ದೇವ

ಶ್ಯಾಮಲಾದೇವಿಯ ಪತ್ರವು.

ಆರೇಮಾತಿನ ಬ್ರಹ್ಮಕಪಾಲವು.

ಕನ್ನಡಿಗಣ್ಣಾ, ಈ ಆರೇ ಮಾತಿನ ಬ್ರಹ್ಮ ಕಪಾಲವು ಎಂದು ಬಿಟ್ಟೀತು! ಕರ್ನಾಟಕದ ಏಕೀಕರಣದಿಂದಲೇ, ಅಥವಾ ಕರ್ನಾಟಕ ವಿಶ್ವವಿದ್ಯಾಲಯವಾಗುವದರಿಂದಲೋ, ಇಲ್ಲವೇ ಕನಿಷ್ಠ ಪಕ್ಷಕ್ಕೆ 'ಕನ್ನಡಿಗ'ನಂಥವರ, ಸಂಚಾರವು ಮನೆ ಮನೆಗೆ ಆಗುವದರಿಂದಲೋ, ಏನು ಮಾಡುವದರಿಂದ ಈ ದೆವ್ವ ಬಿಟ್ಟೀತು! ಅಣ್ಣಾ, ನಮ್ಮಂಥ ಅತ್ತೀಮನೆಯ ಸೊಸಿಯರನ್ನಂತೂ ಬಹಳ ಕಾಡುತ್ತದೆ. ನೋಡು, ಮಂದಿ ಮನೆಯವರು ಏನು ಮಾಡ್ತಾರು! ಪಾಪ! ಹೆಂಗಸರ ಕೆಲಸದಲ್ಲಿ ಅವರು ಯಾಕೆ ಕೈ ಹಾಕ್ತಾರು? ಅವರು ಈ ದೆವ್ವದ ವಿಷಯವಾಗಿ ಉಪೇಕ್ಷೆ ಮಾಡಿದ್ದಕ್ಕೆ, ಅದು ಸಣ್ಣವರಲ್ಲಿಯೂ, ದೊಡ್ಡವರಲ್ಲಿಯೂ ಅತ್ತಿಯವರಲ್ಲಿಯೂ ಸೊಸೆಯಂದಿರಲ್ಲಿಯೂ, ಮನೆಮಾಡಿಕೊಂಡಿರುವದು. ಅಣ್ಣಾ ಯಾವದಾದರೊಂದು ಶುಭಕಾರ್ಯದಲ್ಲಿ, ಮನೆಯವರ ಹೆಸರುಹೇಳಬೇಕಾದರೆ, ಆರೇವಗಟಗಳನ್ನೇ ಹಾಕಬೇಕಂತೆ ಊಟಣೀಮಾಡಲಿಕ್ಕೆ ನಿಂತರೆ, 'ಶಾಮಲಾ, ಚಂದಾದ ಮರಾಠಿ ವಗಟಗಳನ್ನು ಹಾಕಿ ಗಂಡನ ಹೆಸರು ಹೇಳು' ಎಂದು ಕೇಳಿದವರೆಲ್ಲ, ಒಂದೇ ಸವನೆ ಕೂಗುವರು. ಮುಂದೆ 'ತಾಯೀ ನನಗೆ ಮರಾಠಿ ವಗಟಗಳು ಬರುವದಿಲ್ಲ' ಎಂದು ಸುಮ್ಮನೆ ನಿಂತರೆ, ರಂಗೂಬಾಯಿ ಗಂಗೂಬಾಯಿಯರೆಲ್ಲರೂ ಹತ್ತರ ಬಂದು ತಿರುಗಿ ಮುರುಗಿ 'ಸವೇರಾಚಾ ಕೋನಾಡಾ ಸಪೋರಾಚಾ ಕೋನಾಡಾ' ಎಂದು ಕಿವಿಗಳನ್ನು ಗಡಚಿಕ್ಕಿಸುವರು. ಕನ್ನಡಿಗಣ್ಣಾ, ಇದು ಬಗಟಗಳ ಶಿಕ್ಷಣ ಕ್ರಮವು. ಇವರ ತಾಯಂದಿರೆಲ್ಲ [illegible] ಗಳನ್ನು ಹಾಡಿ ಬೆಳಸಿದರೇನು?

ಇದಾಯಿತು. ನಮ್ಮ ಅತ್ತೆಯವರಿಗಂತೂ, ನಮ್ಮ ಗೊಂಬೀ ಆಡುವ ಸುಬ್ಬಿಗೆ ನಾದುನಿಯೆಂದು ಕರೆದರೆ ಕೋಪ! ರರ ಈಕ ಕಲಿಯುವ ರಂಗಣ್ಣನಿಗೆ ಮೈದುನನೆಂದು ಕರೆದರಂತೂ ಸಂತಾಪ. ಸುಬ್ಬಿಗೆ 'ವೈನ್ಸ' ಎಂದು ಕರೆಯಬೇಕಂತೆ. ರಂಗಣ್ಣನಿಗೆ 'ಭಾವೂಜಿ' ಎಂದು ಅನ್ನಬೇಕಂತೆ; ಮತ್ತು ಅವರಿಬ್ಬರೂ ನನಗೆ 'ವೈನೀ' ಎಂದೆನ್ನಬೇಕಂತೆ. ನನಗೆ ಅತ್ತಿಗೆಯೆಂದು ಕರೆದರೆ ಅತ್ತೆಯವರ ಕುತ್ತಿಗೆಯು ಒತ್ತಿಕ್ಕಿದಂತಾಗುವದೋ ಏನೋ! ಅದರೊಳಗಂತೂ ನಮ್ಮ ಸುಬ್ಬಿಗೆ ಈ ಹೊಸ ಹೆಸರುಗಳು ಹೊಸ ಆಟವೇ ಆಗಿರುವವು. 'ವೈನೀ, ವೈನ್ಸ, ವೈನೀ, ವೈನ್ಸ, ವೈನ್ಸ' ಎನ್ನುತ್ತ ಥೈ ಥೈ ಥೈ ಥೈ ಕುಣಿದಾಡುವಳು. ಅವಳಿಗೆ ಒಮ್ಮೊಮ್ಮೆ ಹುಡುಗಾಟಿಗೆಯಲ್ಲಿ, ಅರವು ಮರುವಾಗಿ, ಅತ್ತಿಗೆಗೆ ವೈನ್ಸ ಅನ್ನುವರೋ, ವೈನೀ ಅನ್ನುವರೋ ಗೊತ್ತೇ ಆಗುವದಿಲ್ಲ. ಹೀಗಾಗಿ ನನಗೆ ವೈನೀ ಎಂದೂ ಕರೆಯುವಳು, ವೈನ್ಸ ಎಂದೂ ಕರೆಯುವಳು. ಕನ್ನಡಿಗಣ್ಣಾ, ತಪ್ಪು ತಪ್ಪು ಉಚ್ಚರಿಸುತ್ತ, ಅರ್ಥವು ತಿಳಿಯದೆ, ಪರಕೀಯ ಭಾಷೆಯ ಶಬ್ದಗಳನ್ನು ಉಪಯೋಗಿಸುವದರಲ್ಲಿ ಏನು ಸಡಗರ ಇದ್ದೀತು? ಅಣ್ಣಾ, ಅತ್ತಿಗೆ, ನಾದಿನೆ, ಮೈದುನ, ಮುಂತಾದ ಸುಂದರವಾದ ಶಬ್ದಗಳು ಕನ್ನಡದಲ್ಲಿ ಇಲ್ಲವೇ? ಅವುಗಳ ಉಪಯೋಗವನ್ನು ಯಾಕೆ ಮಾಡಬಾರದು? ಇದೂ ಬಿಡಲಿ. ನಮ್ಮ ವೀರಶೈವ ಭಗಿನಿಯರಂತೆ, ಇದೇ ಅರ್ಥದಲ್ಲಿ 'ಅಕ್ಕ, ತಂಗಿ, ಅಣ್ಣಾ, ತಮ್ಮ' ಶಬ್ದಗಳನ್ನು ಉಪಯೋಗಿಸಬಾರದೇ ಕನ್ನಡಿಗಣ್ಣಾ, ಇಂಗ್ಲೀಷರು, ಹೀಗೆ ಮಾಡುವರು. ('Pride and Prejudice' ಓದಿರಿ, ಅಂದರೆ ತಿಳಿದೀತು.) ಇದು ಆಶ್ಚರ್ಯವಲ್ಲವೇ 'sister in-law brother in-law' ಶಬ್ದಗಳಲ್ಲಿ 'in-law' ಶಬ್ದವನ್ನು ಉಚ್ಚರಿಸುವದೇ ಇಲ್ಲ. ಮನುಷ್ಯಸ್ವಭಾವದ ಏಕತ್ವದ ಅನೇಕ ಉದಾಹರಣೆಗಳಲ್ಲಿ ಇದೊಂದಾಗಿರುವದು.

ಆಯಿತು. ಈ ಆರೇ ಮಾತಿನ ದೆವ್ವವು, ಬಳಗದಲ್ಲಿ ನಮ್ಮ ಹಿಂದುಳಿದ (?) ಭಗಿನಿಯರಿಗೂ ಕೂಡ ಬಡಿದು ಕೊಳ್ಳಲಿಕ್ಕೆ ಹತ್ತಿರುವದು. 'ರುದ್ರಪ್ಪ, ಎಲ್ಲಪ್ಪ, ಮಲ್ಲಪ್ಪ' ಎಂಬ ಹೆಸರುಗಳು ಅವರಿಗೆ ಸೇರಲಾರವು. ವೇಣೂ ಅಂತೆ ಸಖೂ ಅಂತೆ ತಮ್ಮ ಮಕ್ಕಳಿಗೆ ಹೊಸಹೆಸರುಗಳನ್ನು ಇಡಹತ್ತಿರುವರು. ಅಣ್ಣಾ ನಮ್ಮ ಕನ್ನಡ ಹೆಸರುಗಳ ಅರ್ಥವೇ ಪಾಪ, ಅವರಿಗೆ ಗೊತ್ತಿಲ್ಲ. 'शिवभवानी रुद्राणी शर्वाणी सर्वमंगला' ಎಂದು ಅಮರ ಕೋಶದಲ್ಲಿರುವದು. ರುದ್ರಪ್ಪನು ರುದ್ರಾಣಿಯ ತದ್ಭವವು ಪಾರ್ವತಿಯೆಂಬ ಅರ್ಥ. ಎಲ್ಲಪ್ಪನೆಂದರೆ ಎಲ್ಲರ ಅಪ್ಪನ, ಮಲ (ಪರ್ವತ) + ಅಪ್ಪ = ಮಲ್ಲಪ್ಪ ಇದರ ಅರ್ಥವಾದರೂ ಪಾರ್ವತಿಯೆಂದೇ ಆಗುವದು. ಕನ್ನಡಿಗಣ್ಣಾ ನಮ್ಮ ಭಾಷೆಯಲ್ಲಿ, ದುರ್ಗಾ ಪಾರ್ವತೀ, ಸರ್ವಮಾತಾ, ಮುಂತಾದ ಗಂಭೀರವಾದ ಅರ್ಥಗಳುಳ್ಳ ಹೆಸರುಗಳಿರಲು, ವೇಣೂ, ಸಖೂ, ಬಗೀ, ಛಬೀ, ಥಾರೀ, ಕಂಬಳೀ (ಕಮಲೀ ಅಂತೆ) ರಕ್ಕೀ, ಚಿಮಣೀ, ಎಂಬ ಜೊಳ್ಳು ಜೊಟ್ಟಿಯಾಗಿರುವ, ಆರೇ ಮಾತಿನ ಹೆಸರುಗಳಿಂದ, ನಮ್ಮ ಕನ್ನಡ ಮಕ್ಕಳನ್ನು ಕರೆಯುವ ತಾಯಂದಿರಿಗೆ ಧಿಕ್ಕಾರ ಇರಲಿ!

ಧಾರವಾಡ } ನಿನ್ನ ಮಮತೆಯ ತಂಗಿ
ಶಾಮಲಾದೇವಿ

ಜಗತ್ತಿನ ತಂದೆ

(ಲೇಖಾಂಕ ೪)

[ಲೇಖಕ ಮ. ಗಾಂಧಿ]

ಒಕ್ಕಲಿಗರ ಸ್ಥಿತಿಯ ಬಗ್ಗೆ ನಾವು ವಿಚಾರಿಸಿದ್ದಾಯಿತು. ಹಳ್ಳಿಗಳಲ್ಲಿ ಸ್ವಚ್ಛತೆಯ ನಿಯಮಗಳು ಪಾಲಿಸಲ್ಪಡುವದಿಲ್ಲೆಂಬದನ್ನು ನಾವು ನೋಡಿದೆವು. 'ಸ್ವಚ್ಛತೆಯು ಸೌಖ್ಯದ ಮೊದಲನೆಯ ಮೆಟ್ಟಲು' ಎಂಬ ನಾಣ್ಣುಡಿಯಲ್ಲಿ ಬಹುಮಟ್ಟಿಗೆ ಸತ್ಯವಿರುವದು. ಅತ್ಯುಚ್ಚಸ್ಥಿತಿಯಲ್ಲಿದ್ದ ಸ್ತ್ರೀಪುರುಷರೂ ರೋಗಗ್ರಸ್ತರಾಗಬಹುದು, ಆದರೆ ತಮ್ಮ ರೋಗವನ್ನು ಅವರು ಹಗುರಾಗಿ ಕಳಕೊಳ್ಳ ಬಲ್ಲರು. ಆದರೆ ಇದೇ ಕೆಳಗಿನಿಂದ ಮೇಲಕ್ಕೇರಲು ಪಕ್ರಮಿಸಿರುವ ನಾವು ರೋಗವಶರಾದರೆ ಮಧ್ಯದಲ್ಲಿಯೇ ಉಸುರಾಡಿಸಲು ಕೂಡ ಸಾಮರ್ಥ್ಯವಿಲ್ಲದವರಾಗುವೆವು.

'ಬರಿಗಾಲಿನಿಂದ ಸ್ವರ್ಗವನ್ನೇರಲಾಗದು' ಎಂಬದೊಂದು ಇಂಗ್ಲಿಷ ಭಾಷೆಯಲ್ಲಿ ಗಾದೆಯಿದೆ. ಇಂಗ್ಲಂಡಿನಂಥ ಚಳಿನಾಡಿನಲ್ಲಿ ಬರಿಗಾಲಿನಿಂದ ಅಡ್ಡಾಡಿದರೆ ಜೀವವು ಬಹು ಗಾಸಿಗೊಳ್ಳುವದು. ಪರಮೇಶ್ವರನನ್ನು ಸ್ಮರಿಸಬೇಕೆಂಬುದು ಸೂಚಿಸಿರುವದಿಲ್ಲ. ಸ್ವಚ್ಛತೆಯು ಪ್ರಾಯಃ ದೈವೀಸ್ಥಿತಿಯಂತಿರುವದು. ಮಲಿನರಾಗಿರಲು ಇಲ್ಲವೆ ಮಲಿನವಾದ ವಾತಾವರಣದಲ್ಲಿರಲು ನನಗೇನೂ ಕಾರಣವಿಲ್ಲ. ಮಲಿನತೆಯಲ್ಲಿ ಪವಿತ್ರತೆಯು ಇರದು. ಮಲಿನತೆಯು ಅಜ್ಞಾನದ ಮತ್ತು ಆಲಸ್ಯದ ಕುರುಹು. ಈ ಮಲಿನತೆಯಿಂದ ಹಳ್ಳಿಗಾರರು ಹೊರಬೀಳುವದೆಂತು? ನಾವು ಸ್ವಚ್ಛತೆಯ ನಿಯಮಗಳನ್ನು ಪರ್ಯಾಲೋಚಿಸುವಾ :—

೧ ನಮ್ಮ ಅನೇಕ ರೋಗಗಳ ಉತ್ಪತ್ತಿಯು ನಮ್ಮ ಶೌಚಕೂಪದಲ್ಲಿ ಅಥವಾ ನಮ್ಮ ಬೈಲು ಕಡೆಗೆ ಹೋಗುವ ಪದ್ಧತಿಯಲ್ಲಿ ಇರುವದು. ಪ್ರತಿಯೊಂದು ಮನೆಯಲ್ಲಿ ಪಾಯಖಾನೆಯ ಅವಶ್ಯಕತೆಯಿರುವದು. ನಿರೋಗಿ ಮತ್ತು ಹಿರಿಯರಾದ ಜನರಷ್ಟೇ 'ಬೈಲು' ಕಡೆಗೆ ಹೋಗಬಲ್ಲರು. ಉಳಿದವರಿಗೋಸ್ಕರ ಪಾಯಖಾನೆಗಳಿರದಿದ್ದರೆ ಅವರು ಓಣಿಗಳನ್ನು ಬೀದಿಗಳನ್ನು ಇಲ್ಲವೆ ಮನೆಗಳನ್ನು ಕೂಡ ಪಾಯಖಾನೆಗಳನ್ನಾಗಿ ಮಾಡಿ ನೆಲವನ್ನು ಕೆಡಿಸಿ ಹವೆಯನ್ನು ವಿಷಮಯವಾಗಿ ಮಾಡುವರು. ಇದರಿಂದ ನಾವು ಎರಡು ನಿಯಮಗಳನ್ನು ಕಲ್ಪಿಸಬಲ್ಲೆವು. ಬೈಲು ಕಡೆಗೆ ಹೋಗುವದಾದರೆ ಊರಿನಿಂದ ಒಂದು ಮೈಲಿನಾಚೆಗೆ ಹೋಗಬೇಕು. ಅಲ್ಲಿ ಜನವಸ್ತಿ ಇರಕೂಡದು, ಮನುಷ್ಯರ ಹೆಜ್ಜೆಗಳು ಬಿದ್ದಿರಲಾಗದು. ಕೂಡುವ ಮೊದಲು ಸಣ್ಣದೊಂದು ತಗ್ಗು ತೆಗೆಯಬೇಕು, ಎದ್ದ ಮೇಲೆ ಮತ್ತಿಷ್ಟು ಮಣ್ಣು ಹಾಕಿ ಮುಚ್ಚಿ ಬರಬೇಕು. ಎಷ್ಟು ಮಣ್ಣು ನಾವು ತೋಡಿ ತೆಗೆಯುತ್ತೇವೊ ಅಷ್ಟು ಮಣ್ಣು ತಿರಿಗಿ ಮೇಲೆ ಹಾಕಿದರೆ ಮೈಲು ಎಲ್ಲವೂ ಮುಚ್ಚುವದು. ಇಷ್ಟು ಮಾತ್ರ ಅತ್ಯಲ್ಪ ತೊಂದರೆಯನ್ನು ನಾವು ತೆಗೆದುಕೊಂಡರೆ ಸ್ವಚ್ಛತೆಯ ದೊಡ್ಡದೊಂದು ನಿಯಮವನ್ನು ನಾವು ಪಾಲಿಸಿದಂತಾಗುವದು. ತಿಳುವಳಿಕೆಯುಳ್ಳ ಒಕ್ಕಲಿಗರು ತಮ್ಮ ತಮ್ಮ ಹೊಲಗಳಲ್ಲಿಯೇ ಬೈಲುಕಡೆಗೆ ಹೋದರೆ ವೆಚ್ಚವಿಲ್ಲದೆ ಹೊಲಗಳಿಗೆ ಗೊಬ್ಬರವನ್ನುಣಿಸಿದಂತಾಗುವದು. ಇದೊಂದು ನಿಯಮವು.

೨ ಹೇಗೆ ಬೈಲು ಕಡೆಗೆ ಹೋಗುತ್ತಿದ್ದರೂ ಪ್ರತಿಯೊಂದು ಮನೆಗೆ ಪಾಯಖಾನೆಯೊಂದಿರುವದು ಅವಶ್ಯವು. ಪಾಯಖಾನೆಗೋಸ್ಕರ ಡಬ್ಬಿಯನ್ನು ಉಪಯೋಗಿಸಬೇಕು. ಅಲ್ಲಿಯೂ ಕೂಡ ಪ್ರತಿಯೊಬ್ಬರು ತಿರಿಗಿ ಬರುವ ಮುಂದೆ ಮತ್ತಿಷ್ಟು ಮಣ್ಣು ಒಗೆದು ಬರಬೇಕು. ಇದರಿಂದ ದುರ್ಗಂಧವು ಒದಗದು, ನೊಣಗಳು ಮುಕರವು, ಹುಳಗಳು ಹುಟ್ಟವು. ಈ ಡಬ್ಬಿಗಳು ಆಗಾಗ್ಗೆ ಸ್ವಚ್ಛಮಾಡಲ್ಪಡಬೇಕು. ನೆಲದಿಂದ ಕೆಳಗೆ ಗುದ್ದುಮೊಳದವರೆಗೆ ಇರುವ ಥರವು ಜಂತುಗಳಿಂದ ತುಂಬಿರುವದು. ಅಷ್ಟು ಮಾತ್ರ ತಗ್ಗನ್ನು ತೆಗೆದು ಅದರಲ್ಲಿ ಶೌಚವನ್ನು ಒಗೆದರೆ ಅದು ಅಲ್ಪಾವಧಿಯಲ್ಲಿ ಗೊಬ್ಬರವಾಗುವದು. ಬಹು ಆಳವಾದ ತಗ್ಗಿನಲ್ಲಿಯ ಮಣ್ಣಿನಲ್ಲಿ ಶೌಚವನ್ನು ಗೊಬ್ಬರವನ್ನಾಗಿ ಮಾಡಲು ಸಾಕಷ್ಟು ಜಂತುಗಳು ಇರುವದಿಲ್ಲ. ಆದ್ದರಿಂದ ಆಳವಾದ ತಗ್ಗಿನಲ್ಲಿ ಬಿದ್ದ ಶೌಚದಿಂದ ಮಲಿನವಾದ ವಾಯುವು (ಮಫ್) ಹೊರಹೊರಟು ಹವೆಯು ವಿಷಮಯವಾಗುವದು. ಡಬ್ಬಿಗಳು ಕಬ್ಬಿಣದವು ಇಲ್ಲವೆ ಮಣ್ಣಿನಿಂದ ಮಾಡಿ ಮೇಲೆ ರೋಗಗರಿದು (Varnish) ಹಚ್ಚಿದವುಗಳಾಗಲಿ ಇರಬೇಕು. ಇದರಲ್ಲಿ ಹಣದ ವೆಚ್ಚವು ಬಹಳಿಲ್ಲ, ಆದರೆ ಉದ್ಯಮದ ಅವಶ್ಯಕತೆಯು ಇರುವದು. ಮೂತ್ರವನ್ನಾದರೂ ಬೇಕಾದಲ್ಲಿ ಮಾಡಲಾಗದು. ಬೀದಿಗಳಲ್ಲಿ ಮೂತ್ರಕ್ಕೋಸ್ಕರ ಸಣ್ಣ ಸಣ್ಣ ತಗ್ಗುಗಳಿರಬೇಕು, ಅವುಗಳಲ್ಲಿ ಮಣ್ಣು ಹಾಕುತ್ತ ಹೋದರೆ ಸ್ವಲ್ಪಾದರೂ ದುರ್ಗಂಧವು ಉಂಟಾಗದು, ಕೆಳಗಿನ ಮೂತ್ರವು ಮೇಲೆ ಸಿಡಿಯದು, ಹಾಗು ಈ ಮಣ್ಣಿನಿಂದ ಕೂಡ ಗೊಬ್ಬರವೂ ಆಗುವದು. ಇದು ಎರಡನೇ ನಿಯಮವು. ಪ್ರತಿಯೊಬ್ಬ ಹಳ್ಳಿಗಾರನು ಈ ನಿಯಮಗಳನ್ನು ಪಾಲಿಸಿದರೆ ಅವನ ಆರೋಗ್ಯದಲ್ಲಿ ವೃದ್ಧಿಯಾಗುವದು, ಮತ್ತು ಮೇಲೆ ಆರ್ಥಿಕ ಲಾಭವಾಗುವದು; ಯಾಕೆಂದರೆ ಅವನಿಗೆ ಬಂಗಾರದಂಥ ಗೊಬ್ಬರವು ಅನಾಯಾಸವಾಗಿ ದೊರೆಯುವದು.

೨ ಓಣಿಗಳ ನಡುವೆ ಉಗುಳ ಕೂಡದು. ಸುಂಬಳವನ್ನು ಕಳೆಯಬಾರದು. ಕೆಲವರ ಉಗಳಂತೂ ಬಹು ವಿಷಮಯವಾಗಿರುವದು; ಆ ಉಗುಳಿನಲ್ಲಿಯ ಜಂತುಗಳು ಯಾರಾದರ ಮೈಗೆ ಅಡರಿದರೆ ಕ್ಷಯರೋಗವು ಪ್ರಾದುರ್ಭವಿಸುವದು. ಊರೊಳಗಿನ ಹಾದಿಗಳ ಮೇಲೆ ಉಗುಳುವದು ಕೆಲವೆಡೆಗಳಲ್ಲಿ ಅಪರಾಧವೆಂದು ತಿಳಿಯಲ್ಪಟ್ಟು ಉಗುಳುವವರಿಗೆ ದಂಡನೆಯಾಗುವದು. ಎಲೆ ತಂಬಾಕ ತಿಂದು ಉಗುಳುವ ಜನರು ಹೆರವರ ಮನಸ್ಸನ್ನು ಎಷ್ಟೊಂದು ನೋಯಿಸುವರೆಂಬುದನ್ನು ತಿಳಿಯರು. ಉಗುಳ ಸುಂಬಳಗಳ ಮೇಲೆಯೂ ಮಣ್ಣು ಒಗೆಯುವದುಚಿತವು.

೩ ನೀರಿನ ಬಗ್ಗೆ ಹಳ್ಳಿಗಾರರು ಬಹು ನಿಷ್ಕಾಳಜಿಯುಳ್ಳವರಾಗಿರುವರು. ಯಾವ ಬಾವಿ ಕೆರೆಗಳಿಂದ ನಾವು ಕುಡಿಯುವದಕ್ಕಾಗಲಿ ಅಡಿಗೆಗಾಗಲಿ ನೀರು ತೆಗೆದು ಕೊಳ್ಳುವೆವೊ ಆ ಬಾವಿ ಕೆರೆಗಳು ನಿರ್ಮಲವಾಗಿರಲಿಕ್ಕೆ ಬೇಕ ಅವುಗಳಲ್ಲಿ ಕಡ್ಡಿ ಎಲೆ ಮೊದಲಾದ ಕಸವು ಇರಕೂಡದು. ಅವುಗಳಲ್ಲಿ ಸ್ನಾನಮಾಡಕೂಡದು. ಅವುಗಳಲ್ಲಿ ದನಗಳ ಮೈ ತೊಳೆಯಕೂಡದು. ಇಲ್ಲವೆ ಅವುಗಳಲ್ಲಿ ಬಟ್ಟೆಗಳನ್ನು ಒಗೆಯಕೂಡದು. ಇದರಲ್ಲಿ ಯಾದರೂ ಬಹು ಶ್ರಮವಿರುವದಿಲ್ಲ. ಬಾವಿಗಳನ್ನು ಹಸನಾಗಿಡುವದು ಬಹು ಸುಲಭವಾದ ಮಾತು. ಕೆರೆಗಳನ್ನು ಹಸನಾಗಿಡುವದು ಸ್ವಲ್ಪ ಮಾತ್ರ ಕಠಿಣವಾಗಿರುವದು. ಆದರೆ ಜನರು ಆರೋಗ್ಯದ ನಿಯಮಗಳನ್ನು ತಿಳಿದವರಾದರೆ ಎಲ್ಲವೂ ಹಗುರಾಗುವದು. ಕೆಟ್ಟ, ಹೊಲಸು ನೀರನ್ನು ಕುಡಿಯುವಾಗ ಹೇಸಿಕೆಯು ಬರಹತ್ತಿದರೆ ನಾವು ನೀರಿನ ಬಗ್ಗೆ ಸ್ವಚ್ಛತೆಯ ನಿಯಮಗಳನ್ನು ಪಾಲಿಸಹತ್ತುವೆವು. ನೀರನ್ನು ಕುಡಿಯುವ ಮೊದಲು ದಪ್ಪಾದ ಸ್ವಚ್ಛ ಅರಿವೆಯಲ್ಲಿ ಸೋಸಿಕೊಳ್ಳಲಿಕ್ಕೆಬೇಕು. ಒಬ್ಬ ಮುದುಕೆಯು ಒಂದು ಮೇಜನ್ನು ಸ್ವಚ್ಛಮಾಡಹೋಗುವಾಗ ಅದನ್ನು ಸಬಕಾರದಿಂದ ತೊಳೆದು, ಒಂದು ಹೊಲಸು ಅರಿವೆಯ

(೩ ನೇ ಪಾನಿನಲ್ಲಿ ನೋಡಿರಿ)

ವರ್ತಮಾನಸಾರ

ಇಹವೃತ್ತ

ಮಳೆಯು ಈ ವಾರದಲ್ಲಿಯೂ ಆಗಿದೆ.

೧೪ ನೇ ತಾ॥ ದಿನ ಡಾಕ್ಟರ ಹರ್ಡೀಕರರು ಸೀತೀ ಮನೆಯಲ್ಲಿ ಶಿಕ್ಷಣಹೊಂದಿದ ಸ್ವಯಂ ಸೇವಕರೊಂದಿಗೆ ಇಲ್ಲಿಗೆ ಬಂದರು. ಪ್ರಾತಃಕಾಲದಲ್ಲಿ ಸ್ವಯಂಸೇವಕರು ರಾಷ್ಟ್ರಗೀತೆಗಳನ್ನು ಅನ್ನುತ್ತ ಊರಲ್ಲೆಲ್ಲ ತಿರುಗಾಡಿದರು. ಸಾಯಂಕಾಲದಲ್ಲಿ ೫॥ ಗಂಟೆಗೆ ಜಾಹೀರ ಸಭೆಯು ನೆರೆಯಿತು. ಅಲ್ಲಿ ನಡೆದ ಸ್ವಯಂ ಸೇವಕರ ಕವಾಯಿತು ಬಹು ಪ್ರೇಕ್ಷಣೀಯವಾಗಿತ್ತು. ಶ್ರೀ ಕಬ್ಬೂರವರ ಭಾಷಣವೂ ಆಯಿತು. ಶ್ರೀ. ಧಾರವಾಡಕರರು ಅಧ್ಯಕ್ಷರಿದ್ದರು.

ದಕ್ಷಿಣ ಆಫ್ರಿಕೆಯಲ್ಲಿ ವಸತಿಯನ್ನು ಮಾಡಿಕೊಂಡಿರುವ ಹಿಂದೀ ಜನರನ್ನು ಅಲ್ಲಿಯ ಸರಕಾರದವರು ಅತ್ಯಂತ ಅನ್ಯಾಯದಿಂದ ನಡೆಯಿಸಿಕೊಳ್ಳುತ್ತಿರುವದನ್ನು ಕುರಿತು, ಕಳೆದರವಿವಾರ ಸಂಜೆಯ ಏಳು ಘಂಟೆಗೆ ತಾಜಥಿಯೇಟರದಲ್ಲಿ ಬಾಗಲಕೋಟೆಯ ನಗರವಾಸಿಗಳ ಜಾಹೀರ ಸಭೆಯು ಕೂಡಿತ್ತು. ಶ್ರೀ. ಯಲಗುರ್ದಾಚಾರ್ಯ ಧಾರವಾಡ ಇವರು ಅಧ್ಯಕ್ಷರಿದ್ದರು. ಶ್ರೀ. ರಾಮರಾವ ದಾತಾರ ಇವರು ಸಭೆಯ ಮುಂದೆ ನಿಷೇಧಪರ ನಿರ್ಣಯವನ್ನು ಇಡುವಾಗ ದಕ್ಷಿಣ ಆಫ್ರಿಕೆಯ ಇತಿಹಾಸವನ್ನು ಸಭಿಕರ ಮೇಲೆ ಬಿಂಬಿಸುವಂತೆ ಸ್ವಲ್ಪದರಲ್ಲಿ ಹೇಳಿದರು. ಆ ಮೇಲೆ ಶ್ರೀ. ಶಂಕರಗೌಡಾ ಪಾಟೀಲ ಇವರು ದಕ್ಷಿಣ ಆಫ್ರಿಕೆಯಲ್ಲಿಯ ಪ್ರಶ್ನೆಯು ಹಗುರಾಗಿರದೆ ಬಹಳ ಬಿಕ್ಕಟ್ಟಿನದಿದ್ದು ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವು ದೊರೆಯದ ಹೊರತು ಅದನ್ನು ಬಿಡಿಸುವದು ಕಷ್ಟಸಾಧ್ಯವೆಂದೂ ಈ ಪ್ರಶ್ನೆಯಲ್ಲಿ ಬಿಳೀ ಮುಖದ ಹಾಗೂ ಕರೀ ಮುಖದ ಜನರ ನಡುವಿನ ಜಗಳವು ಅಡಕವಾಗಿರುವದೆಂದೂ ಆ ಬಗ್ಗೆ ಎಲ್ಲ ಏಸಿಯಾ ಖಂಡದ ಜನರು ಒಮ್ಮನಸ್ಸಿನಿಂದ ಪ್ರಯತ್ನ ಮಾಡಬೇಕೆಂದೂ ಬಳೀ ಸುಶ್ರಾವ್ಯವಾಗಿ ಹೇಳಿ, ನಿರ್ಣಯವಾದ ಮೇಲೆ ಸಭೆಯು ವಿಸರ್ಜನೆಯಾಯಿತು.

ವಿಶ್ವಗುಣಾದರ್ಶ ನಾಟಕ ಮಂಡಲಿಯವರು ವಿಜಾಪುರಕ್ಕೆ ಹೋದರು.

ಕಿರ್ಲೋಸ್ಕರ ನಾಟಕದವರು ಬಂದಿದ್ದಾರೆ. ಪ್ರಯೋಗಗಳು ಪ್ರಾರಂಭವಾಗಿವೆ.

ಇಲಾಖೆಯ ಸಾಹೇಬರಾದ ಶ್ರೀ. ನಾಯಕರವರ ಮುಕ್ಕಾಂ ಇಲ್ಲಿ ಇನ್ನೂ ಕೆಲ ದಿನ ಇರುವದು.

ಬಾಗಲಕೋಟೆ ಕರ್ನಾಟಕ ಏಕೀಕರಣ ಶಾಖೆಯ ಅಧ್ಯಕ್ಷರಾಗಿದ್ದ ಶ್ರೀ. ಶಂಕರಪ್ಪ ಸಕ್ಕರಿ ಇವರಿಗೆ ದೇವಾಂಗ ಸಮಾಜದಿಂದ "ದೇವಾಂಗ ಕುಲ ಭೂಷಣ" ಎಂಬ ಪದವಿಯು ಕೊಡಲ್ಪಟ್ಟಿದೆ.

ಮುಂಬೈ ಕರ್ನಾಟಕ

ಸೀತೀಮನೆಯಲ್ಲಿ ನಡೆದ ಹಿಂದುಸ್ಥಾನೀ ಸೇವಾದಳದ ಸ್ವಯಂ ಸೇವಕರ ಶಿಬಿರವು ತಾ॥ ೧೧ ನೇ ದಿವಸ ವಿಜಾಪುರಕ್ಕೆ ಹೋಗಿ ಅಲ್ಲಿಯ ನಾಗರಿಕರಿದುರಿಗೆ, ತಮ್ಮ ಕವಾಯತುಗಳನ್ನೂ ಉಳಿದ ಕಾರ್ಯಕ್ರಮಗಳನ್ನೂ ಮಾಡಿ ತೋರಿಸಿದರು. ಶ್ರೀ. ಪಾಂಡುರಂಗರಾವ ದೇಸಾಯರು ಅಧ್ಯಕ್ಷರಾಗಿದ್ದರು. ಜನರ ಸಂಚಟ್ಟಣೆಯೂ ಚನ್ನಾಗಿದ್ದಿತು. ದಕ್ಷಿಣ ಆಫ್ರಿಕೆಯಲ್ಲಿ ಹಿಂದೀಯರಿಗೆ ಅಲ್ಲಿಯ ಸರಕಾರದವರು ಕೊಡುತ್ತಿರುವ ತೊಂದರೆಗಳನ್ನು ನಿಷೇಧಿಸುವ ಸಭೆಯು ಅದೇ ಕಾಲಕ್ಕೆ ಭಕ್ರೀಯವರ ನಾಟಕಗೃಹದಲ್ಲಿ ಆಯಿತು.

ಸೀತೀಮನೆಯಲ್ಲಿ ಸೇರಿದ ಸೇವಾದಲದ ಕಾರ್ಯಕ್ರಮವು ೧೩ ನೇ ತಾ॥ ದಿನ ಮುಗಿಯಿತು.

ಹೊನ್ನಾವರ ತಾಲೂಕ ಕಡತೋಕೆಯಲ್ಲಿಯ ವಿದ್ಯಾರಣ್ಯ ವಾಚನಾಲಯದ ಪ್ರಥಮ ವಾರ್ಷಿಕ ವರದಿಯು ನಮ್ಮ ಕೈಸೇರಿದೆ. ಇದು ತರುಣರಿಂದಲೇ ನಡಿಸಲ್ಪಟ್ಟಿದೆ. ಹಳ್ಳಿಯಲ್ಲಿ ಜ್ಞಾನಪ್ರಸಾರ ಮಾಡುವದೇ ಇದರ ಉದ್ದೇಶವು. ೩೦೦ ಗ್ರಂಥಗಳು ಇಲ್ಲಿವೆ. ವಿದ್ಯಾಲಯವು ಬಡಸ್ಥಿತಿಯಲ್ಲಿದ್ದುದರಿಂದ ಕರ್ನಾಟಕದೊಳಗಿನ ವೃತ್ತಪತ್ರಿಕಾ ಕರ್ತರುಗಳೆಲ್ಲ ತಮ್ಮ ಪತ್ರಿಕೆಗಳನ್ನು ಅಲ್ಲಿಗೆ ಕಳುಹಿಸಿ, ಅದನ್ನು ಪ್ರೋತ್ಸಾಹಿಸಬೇಕಾಗಿ ಚಾಲಕರ ವಿನಂತಿಯದೆ. ಇದರ ಉತ್ಪಾದಕರು ಶ್ರೀ ಸೂರ್ಯನಾರಾಯಣರಾವ ಹೆಗಡೆಯವರು.

ತಮ್ಮನ್ನು ಜಿಲ್ಹಾ ಲೋಕಲ್ ಬೋರ್ಡಿಗೆ ಆರಿಸಿ ಕೊಟ್ಟಿದ್ದಕ್ಕಾಗಿ, ಧಾರವಾಡದ ಶ್ರೀ. ಡಿ. ಎಲ್. ಪಾಟೀಲರವರು ನವಲಗುಂದ, ನರಗುಂದಭಾಗಗಳಲ್ಲಿಯ ಮತದಾರರ ಆಭಾರ ಮನ್ನಿಸಿ, ಇನ್ನು ತಾವು ಮಾಡತಕ್ಕ ಕರ್ತವ್ಯವನ್ನೂ ಅರಿತಿರುವೆವೆಂದು ತಿಳಿಸುತ್ತಾರೆ.

ಶ್ರೀ ದೇವಾಂಗ ವಿದ್ಯಾರ್ಥಿ ಮಂಡಲವು ಬೆಟಗೇರಿಯಲ್ಲಿ ಸ್ಥಾಪಿಸಲ್ಪಟ್ಟಿದೆ. ಇದರ ಮುಖ್ಯೋದ್ದೇಶವು, ದೇವಾಂಗ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿ, ಪರಸ್ಪರರ ವಿಚಾರಗಳಿಂದ ಸಂಘಶಕ್ತಿಯನ್ನು ಬೆಳೆಯಿಸುವದಕ್ಕಾಗಿಯೂ, ವಿದ್ಯಾರ್ಥಿಗಳಲ್ಲಿ ಧಾರ್ಮಿಕ ನೈತಿಕ ಆಚಾರ ವಿಚಾರ ಬ್ರಹ್ಮಚರ್ಯ ವ್ರತಪಾಲನೆ, ಇವೇ ಮೊದಲಾದ ಸಮಾಜಾಭಿವೃದ್ಧಿಯ ತಳಹದಿಗಳು ಬೀಳುವಂತೆಯೂ, ಉತ್ತಮ ಲೇಖಕರಾಗುವಂತೆಯೂ, ಉಪನ್ಯಾಸಕರಾಗುವಂತೆಯೂ, ಪ್ರಯತ್ನಿಸತಕ್ಕದ್ದದೆ ಈಗ ಈ ಮಂಡಲದಿಂದ ಕೀರ್ತನೆ ತಯಾರ ಮಾಡುವದೂ ವಾದವಿವಾದೋತ್ತೇಜನ ಮುಖಾಂತರ ರಾಷ್ಟ್ರಕಾರ್ಯಕ್ಕೆ ನೆರವಾಗುವಂತೆ ಜನರನ್ನು ತಯಾರಿಸುವದೂ ಇವ್ವೇ ಮುಖ್ಯ ಉದ್ದೇಶಗಳು ಅವೆ. ಈ ಮಂಡಲಕ್ಕೆ ಶ್ರೀ. ಬರದವಾಡರು ಅಧ್ಯಕ್ಷರು.

ತಾರೀಖು ೧೦-೧೦-೧೯೩೫ ನೇ ದಿವಸ ವಿಜಾಪೂರ ಮ್ಯುನಸಿಪಾಲ್ಟಿಯ ಅಧ್ಯಕ್ಷರ ಚುನಾವಣೆ ಆಗಿ ಅದರಲ್ಲಿ ಶ್ರೀಯುತ, ಅಂದಾನೆಪ್ಪಾ ಅಂಗಡಿ ವಕೀಲ ಇವರು ಆರಿಸಲ್ಪಟ್ಟರು. ಇವರೇ ಲಿಂಗಾಯತರಲ್ಲಿ ಮೊದಲನೇ ಅಧ್ಯಕ್ಷರು. ಇವರನ್ನು 'ಕನ್ನಡಿಗ'ನು ಅಭಿನಂದಿಸುತ್ತಾನೆ.

ಮದ್ರಾಸ ಕರ್ನಾಟಕ

ಕಳೆದ ೪—೧೦—೩೫ ರಲ್ಲಿ ಬಳ್ಳಾರಿಯಲ್ಲಿ ನಡೆದ ಮದ್ರಾಸ ವೀರಶೈವ ವಿದ್ಯಾವರ್ಧಕ ಸಂಘದ ಕಾರ್ಯನಿರ್ವಾಹಕ ಮಂಡಳಿಯ ಸಭೆಯಲ್ಲಿ ಈ ಕೆಳಗಿನ ಠರಾವು ಮಂಜೂರ ಮಾಡಲ್ಪಟ್ಟಿದೆ. ಬಳ್ಳಾರಿಜಿಲ್ಲೆಯನ್ನು ಆಂಧ್ರ ಸರ್ವಕಳಾ ಶಾಲೆಯ "ಬಿಲ್ಲಿ" ನಲ್ಲಿ ಸೇರಿಸುವದನ್ನು ನಿಷೇಧಿಸಿ, ಬಳ್ಳಾರಿ ಜಿಲ್ಲೆಯು ಪೂರ್ಣ ಕನ್ನಡ ಜಿಲ್ಲೆಯಾದ್ದರಿಂದ ಅದನ್ನು ಹಾಗೆ ಸೇರಿಸಬಾರದೆಂಬದಾಗಿ ಈ ಸಭೆಯು ಮದ್ರಾಸ ಸರಕಾರದವರನ್ನು ಪ್ರಾರ್ಥಿಸಿಕೊಳ್ಳುತ್ತದೆ.

ಮಂಗಳೂರಿನ ಶ್ರೀ. ಅಮ್ಮೆಂಬಳ ವಿಟ್ಠಲಪೈಯವರು ಆಯ್. ಸಿ. ಎಸ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಾರೆ.

ಮಂಗಳೂರಿನ ಸ್ವಯಂಸೇವಕರು ಗಾಂಧೀ ಜಯಂತಿಯ ದಿನ ಮನೆ ಮನೆಗೆ ಹೋಗಿ ಖಾದೀ ಬಟ್ಟೆಗಳನ್ನು ಮಾರಿದರು.

ಕರ್ನಾಟಕ ತಿಲಕ ವಿದ್ಯಾಲಯದ ಸಹಾಯಾರ್ಥವಾಗಿ ಮಂಗಳೂರಿನಲ್ಲಿ ಮುಷ್ಟಿ ಫಂಡನ್ನು ಕೂಡಿಸಹತ್ತಿದ್ದಾರೆ.

ಜಿಲ್ಹೆಯ ಸಹಕಾರಿ ಸಭೆಯು ೧೦ ತಾ॥ ದಿನ ಮಂಗಳೂರಿನಲ್ಲಿ ನಡೆಯಿತು. ಅಗ್ಗೆ ಯಕ್ಷಗಾನ ಸಭೆಯವರು "ಪಂಚವಟಿ" ಎಂಬ ಯಕ್ಷಗಾನವನ್ನು ತಾಳಮದ್ದಳೆಯಾಗಿ ಆಡಿದರು.

ಮೈಸೂರ ಕರ್ನಾಟಕ

ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರಾರಂಭದ ದಿನ ಶ್ರೀ. ರಾಮಯ್ಯನವರು ವರದಿಯನ್ನು ಕನ್ನಡದಲ್ಲಿ ಓದಿದರು.

ಕೊಡಗು ಕರ್ನಾಟಕ

ಕೊಡಗಿನ ಶ್ರೀ. ಕುಟ್ಟಪ್ಪನವರು ಡೆಹರಾಡನ್ನಿನ ಹಿಂದುಸ್ಥಾನದ ಸರ್ವೆ ಇಲಾಖೆಯಲ್ಲಿದ್ದರು. ಈಗ್ಗೆ ಕರಾಚಿಗೆ ವರ್ಗವಾಗಿ ಬಂದಿದ್ದಾರೆ.

ರೇಲವೇ ಬೋರ್ಡಿನ ಸುದ್ದಿ.

ಬೆಳಗಾವಿ ರೇಲವೇ ಮಂಡಲದವರಿಂದ ೬೬ ಜನರ ಸಹಿಗಳೂ, ಹುಬ್ಬಳ್ಳಿಯಿಂದ ೧೯ ಜನರ ಸಹಿಗಳೂ, ಈ ವಾರದಲ್ಲಿ ಬಂದಿವೆ.

ಜಾಹಿರಾತು

ಪ್ರಾಥಮಿಕ ಶಿಕ್ಷಣದ ಕಾಯಿದೆ ಕೆಳಗೆ ಸರಕಾರದವರು ಮಾಡಿದ ವ ಲೋಕಲಬೋರ್ಡ ಕಾಯದೆ ಅನ್ವಯಾ ವಿಜಾಪೂರ ಜಿಲ್ಹಾದ ಈಗಿನ ಯಾವತ್ತೂ ಪ್ರಾಥಮಿಕ ಶಿಕ್ಷಣದ ಶಾಲೆಗಳು ವ ಅದರಂತೆ ಗುಳೇದಗುಡ್ಡ ವ ಇಲಕಲ್ ಮುನಸಿಪಾಲಟಿವಳಗೆ ಪ್ರಾಥಮಿಕ ಶಿಕ್ಷಣದ ಶಾಲೆಗಳು ಬರುವ ಡಿಸೆಂಬರ ೧೯೩೫ ದಿಂದ ಡಿ|| ಲೋ|| ಬೋರ್ಡಿನ ತಾಬೆಕ್ಕೆ ಬರುವವು.

೨ ಪ್ರಾಥಮಿಕ ಶಿಕ್ಷಣದ ಏಕ್ಟ ಕಲ್ಮ ೩ ನೇ ಪ್ರಕಾರ ಕೆಳಗೆ ಬರದಂತೆ ೧೨ ಮೆಂಬರ ಜನರದು ಒಂದು ಸ್ಕೂಲಬೋರ್ಡ ಮಾಡತಕ್ಕದ್ದು ಅದೆ:—

ಶೇಜನಂಬರು	ಯಾರು ಮೆಂಬರ ಆಗಬಹುದು.	ಸಂಖ್ಯಾ.
೧	ಶಿಕ್ಷಣದಲ್ಲಿ ಅನುಭವ ಇದ್ದವರು.	೧
	ಟೀಪು:- ಇದರ ರೂಲ್ಸದಲ್ಲಿ ಬರೆದ ಪ್ರಕಾರ	
೨	ಹೆಂಗಸರು	೧
೩	ಮುಸಲಮಾನ	೧
೪	ಹಿಂದುಳಿದ ವರ್ಗ	೨
೫	ಅಸ್ಪೃಶ್ಯರವರ್ಗ	೧
೬	ಮುನಸಿಪಾಲಿಟಿಗಳು	೨
೭	ಜನರ (ಇತರರ್)	೪
		೧೨

ಹಿಂದುಳಿದ ವರ್ಗ ಮತ್ತು ಅಸ್ಪೃಶ್ಯರ ವರ್ಗ ಸದ್ರಿ ರೂಲ್ಸದಲ್ಲಿ ಶೆಡ್ಯುಲಗಿದಲ್ಲಿ ಬರುವರು.

೩ ಸದ್ರಿ ಇಲೆಕ್ಶನ್ ಬಾಬತು ಪ್ರೊಗ್ರಾಮ ಕೆಳಗೆ ಬರೆದ ಪ್ರಕಾರ ಇರುತ್ತದೆ. ಮತ್ತು ಈ ಸಂಬಂಧಿ ನಿಯಮಗಳು ಶೆಡ್ಯುಲದಲ್ಲಿ ಬಂದಿರುತ್ತವೆ. ಅವುಗಳನ್ನು ನೋಡಬೇಕು.

ಇಲೆಕಶನ ಪ್ರೊಗ್ರಾಮ

೧ ಮೆಂಬರ ಆಗಲಿಕ್ಕೆ ಇಚ್ಛಿಸುವವರು ಅರ್ಜಿಯನ್ನು ಕಳಿಸುವದಕ್ಕಿಂತಾ ನೋಟಿಸು ಕೊಡುವ ತಾರೀಖು ೮-೧೦-೧೯೩೫

೨ ಮೇಲೆ ಪ್ಯಾರಾ ೨ ನೇದರಲ್ಲಿ ತೋರಿಸಿದ ಶೇಜನಂಬರ ೧ ರಿಂದಾ ೬ ವರೆಗೆ ಇರುವ ವರ್ಗಕ್ಕೆ ಉಮೇದ್ವಾರರಾಗಿ ನಿಂದರಲಿಕ್ಕೆ ಇಚ್ಛಿಸುವವರು ಯಾವ ತಾರೀಖಿನವರೆಗೆ ಅರ್ಜಿ ಮಾಡತಕ್ಕದ್ದು ಆ ತಾರೀಖು ೨೬-೧೦-೧೯೩೫

೩ ಇಲೆಕ್ಶನ ತಾರೀಖು ಚಿನ್ನವೆಳೆ ವಸ್ತಿರೆ ಡಿ|| ಲೋ|| ಬೋರ್ಡ ಮೆಂಬರರಿಗೆ ತಿಳಿಸುವ ತಾರೀಖು. ೨-೧೧-೧೯೩೫

೪ ಪ್ರೆಸಿಡೆಂಟ ಡಿ|| ಲೋ|| ಬೋರ್ಡ ಇವರಿಗೆ ಡಿ|| ಲೋ|| ಬೋರ್ಡ ಆಫಿಸದಲ್ಲಿ ನಾಮಿನೇಶನ್ ಪೇಪರ ಹಜರ ಮಾಡತಕ್ಕ ತಾರೀಖು. ೧೫-೧೧-೧೯೩೫ (೧ ಘಂಟೆಕ್ಕೆ)

೫ ನಾಮಿನೇಶನ್ ಕಾಗದಗಳು ತಪಾಸ ಮಾಡತಕ್ಕ ತಾರೀಖು ೧೬-೧೧-೧೯೩೫ ಒಂದು ಘಂಟೆಗೆ ಸುರು ಆಗುವದು.

೬ ಇಲೆಕ್ಶನ ಆಗುವ ತಾರೀಖು ೨೩-೧೧-೧೯೩೫ ಒಂದು ಘಂಟೆಕ್ಕೆ

Sd/ P. L. Kalkeri. Chief officer D. L. B. Bijapur.	Sd / Raghwendrarao Kembhavi. President D.L. Board.

ಪ್ರಕಟನೆ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೫ ನೇ ಇಸ್ವಿಯ ಜುಲೈ ೩೧ ನೇ ತಾ|| ದಿನ ಸಾಯಂಕಾಲದ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟೀ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ. ಬಸವಾರಾಧ್ಯ ಬಿ. ಏ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗ್ರಹಸ್ತರಿಗೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಬ್ಲಾಂಡ ನಂ. ೧೧೬೦೨ ಶ್ರೀ. ಆರ್. ಜಿ. ಹುಕ್ಕೇರಿ. ಬುಕ್ಕಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೫೪೫ ಶ್ರೀ. ದೀರಜರಾಮ ನಾರಭಿರಾಮ ನಾಯಿಕ ಕಂಪಾವುಂಡರ, ಆಲಪಾಡ ದವಾಖಾನೆ ವಾಯ, ಸಯಾನ. ಜಿಬಿ. ಸಿ. ಆಯ ರೇಲ್ವೇ. ಸುರತ. (ಬಡೋದಾ ಏಜನ್ಸಿ)

(೩) ಬಾಂಡ ನಂ. ೧೫೬೬ ಶ್ರೀ. ಶ್ರೀರಾಮ ಮೂರ್ತಿ ಆರಾಧ್ಯುಲು ರಾಮಚಂದ್ರರಾವ ಗುರು ಪೀಠ ಪುರ ಗೋದಾವರಿ ಜಿಲ್ಹಾ.

(೪) ಬಾಂಡ ನಂ. ೧೭೬ ಶ್ರೀ. ಸಂದಗಿರಿ ವೆಂಕಟರಾಮ ದಾಸ ಪ್ರೊಪ್ರಾಯಿಟರ ಮುಕುಂದ ಪುರ. ಕಾಕಿನಾಡು

(೫) ಬಾಂಡ ನಂ. ೪೩೮ ಶ್ರೀ. ಆರ್. ವೆಂಕಟಯ್ಯಾ ಗುರು ಇನಾಮದಾರ ಘೋಷಯ್ಯಾ ಅಗ್ರಹಾರ. ಅಮಳ ಪುರಮ್.

೧-೮-೩೫ { ಬಿ. ಎಸ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ

ಶ್ರೀ. ನಾರಾಯಣರಾವ ಕೃ. ಹುಯಿಲಗೋಳ
ಬಿ. ಎ. ಎಲ್. ಎಲ್. ಬಿ. ಗದಗ ಇವರಿಂದ
ರಚಿತವಾದ ಸಚಿತ್ರ ಸಂಗೀತ ನಾಟಕಗಳು
ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ
ಬಹುಮಾನ ಪಡೆದ

ಸ್ತ್ರೀಧರ್ಮರಹಸ್ಯ ಬೆಲೆ ೧ ರೂ
ಶಿಕ್ಷಣಸಂಭ್ರಮ ೧ ರೂ
ಅಂಚೆವೆಚ್ಚ ಬೇರೆ

ವಿಳಾಸ:— ನಾರಾಯಣರಾವ, ಕೃಷ್ಣರಾವ, ಹುಯಿಲಗೋಳ ಬಿ. ಎ. ಎಲ್. ಎಲ್. ಬಿ ಪ್ಲೀ. ತಾ ಗದಗ

ಕರ್ನಾಟಕವೃತ್ತ ಧಾರವಾಡ.

೬೦ ವರ್ಷಗಳಿಂದ ಕನ್ನಡನಾಡಿನ ಸೇವೆ ಮಾಡುತ್ತ ಬಂದಿರುವ ಈ ವಾರ ಪತ್ರಿಕೆಯಲ್ಲಿ, ಕರ್ನಾಟಕದ ವೈಶಿಷ್ಟ್ಯವನ್ನು ಪ್ರತಿಪಾದಿಸುವದನ್ನು, ಕಾಣಬಹುದು. ವಾ. ವ. ರೂ. ೩—೫—೦

ಈ ಪತ್ರಿಕೆಯು ಮಂಗಳವೇಢೆ ರಾಘವೇಂದ್ರರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವೀರರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ವಾ. ಚಂದಾ ೧—೧೪—೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

ಯದ್ಯತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಮ್ — ಮನು

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು, ಬಿ.ಎ.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ಕಾರ್ತಿಕ ವದ್ಯ ೧೪ ಶಕೆ ೧೮೪೭. ತಾ|| ೩೦ ೧೦-೧೨-೨೫. | ಸಂಚಿಕೆ ೨೯

ಸಂಪಾದಕರ ಭೂಮಿ.

(೫)

ನನ್ನ ಮನಸಿನ ಮೇಣವಮಾಡಿ ಕಟ್ಟುವೆನಾನು ।
ನಿನ್ನ ಬೆಸವನ ಮಾಡುವಂಥ ಮಕ್ಕಳ ದೊಮ್ಮೆ!
ಚಿನ್ನದಾದರು ನಿನ್ನ ಮೇಣಬತ್ತಿಯು ನೊಂದು ॥
ಚಿನ್ಮಯಾಕಾರವಪ್ಪ ॥
ನನ್ನ ದೇಹವು ನಿನ್ನ ಪೀಠಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಜೀವವು ನಿನ್ನ ಗಂಧವನು ಬೀರಬಹ ।
ಗರ್ಭವಹವೆಂದು ತಿಳಿಯೊ ॥

— ಆಂಜಿನೇಯತನಯ ದತ್ತ

ಪಲ್ಲೇದ ಶಿವಪ್ಪನವರು ಶಿವೈಕ್ಯರಾದರು ಇವರು ಬಾಗಲಕೋಟೆಯ ಸುಪ್ರಸಿದ್ಧ ವ್ಯಾಪಾರಸ್ಥರು ಇವರು ಶಕೆ ೧೭೭೬ ಕಾರ್ತಿಕಶುದ್ಧ ೧೫ನೇ ದಿನ ಹುಟ್ಟಿದರು. ಇವರ ತಂದೆಯವರಾದ ಪರಪ್ಪನವರು ದಕ್ಷಿಣಿಲಿಂಗದಿಯನ್ನು ಶೇಟವೆಂಕಟದಾಸ ತುಕಾರಾಮದಾಸ ಇವರ ಕೂಡ ಮಾಡಿಕೊಂಡು ಸುಖವಾಗಿ ಕಾಲಕಳೆದರು ಪರಪ್ಪನವರಿಗೆ ೩ ಗಂಡುಮಕ್ಕಳಿದ್ದರು. ಇವರಲ್ಲಿ ಹಿರಿಯರಾದ ಇವರು ಕೆಲವು ವರ್ಷಗಳ ಹಿಂದೆ ತೀರಿಕೊಂಡರು. ಇವರ ತಂದೆಯವರಂತೂ ಮೊದಲೇ ತೀರಿದ್ದರು. ಎಲ್ಲಸಂಸಾರದಭಾರವೂ ವ್ಯವಹಾರದಭಾರವೂ ಶಿವಪ್ಪನವರ ಮೇಲೆ ಬಿದ್ದರೂ, ಇವರು ಶಾಂತ ಮನಸ್ಸಿನಿಂದಲೂ ಧೈರ್ಯದಿಂದಲೂ ಅದನ್ನು ವಹಿಸಿದ್ದರು. ಮನೆಯಲ್ಲಿ ಅಣ್ಣನ ಮಕ್ಕಳು, ತಮ್ಮನ ಮಕ್ಕಳು, ಅಕ್ಕತಂಗಿಯರಮಕ್ಕಳು ತಮ್ಮ ಮಕ್ಕಳು, ಗುಮಾಸ್ತರರು ನೌಕರರು ಇತ್ಯಾದಿ ಎಲ್ಲರನ್ನೂ ಇವರು ಭೇದ ಭಾವವಿಲ್ಲದೆ ಒಂದೇ ದೃಷ್ಟಿಯಿಂದ ನೋಡುತ್ತಿದ್ದರು. ಆದ್ದರಿಂದ ಇವರ ಸಂಸಾರವು ಬಹು ಆನಂದದಾಯಕವಾಗಿತ್ತು. ಇವರು ಪ್ರಾಮಾಣಿಕತನದಿಂದಲೂ ಧೈರ್ಯದಿಂದಲೂ ದೊಡ್ಡ ದೊಡ್ಡ ವ್ಯವಹಾರಮಾಡುತ್ತಿದ್ದರು. ವ್ಯಾಪಾರದಲ್ಲಿ ಅನೇಕ ಜನರಿಗೆ ಸಹಾಯಕರಾಗಿದ್ದರು, ಇವರು ತಮ್ಮ ತಂದೆಯವರಂತೆ ಶೇಟ ಬಾಳಕೃಷ್ಣದಾಸ ವೆಂಕಟದಾಸ ಇವರ ಸಂಗಡ ವ್ಯಾಪಾರವನ್ನು ಬಹು ಜೋರಿನಿಂದಲೂ ದೊಡ್ಡ ಪ್ರಮಾಣದ ಮೇಲೆಯೂ ನಡೆಸುತ್ತಿದ್ದರು. ಇವರು ಶ್ರೀಬಸವೇಶ್ವರ ಧರ್ಮ ಸ್ಥಾಪಿತ ಸ್ಥಾನಕ್ಕೆ ಮೂಲ ಪುರುಷರು. ತಮ್ಮ ಧರ್ಮದ ಅನೇಕ ಕೆಲಸಗಳಲ್ಲಿ ಧೈರ್ಯ ಮತ್ತು ಶಾಂತತನದಿಂದ ಕೆಲಸಮಾಡುತ್ತಿದ್ದರು. ಹಿಂದು ಧರ್ಮಕ್ಕೆ ಕಳಂಕಬರದಂತೆ ಸಾರ್ವಜನಿಕ ಕೆಲಸದಲ್ಲಿ ಪ್ರಯತ್ನ ಮಾಡುವ ನಾಗರೀಕರು. ಶೇಟವೆಂಕಟದಾಸತುಕಾರಾಮದಾಸ ತೀರಿಕೊಳ್ಳುವಾಗ್ಗೆ ತಮ್ಮ ಪುತ್ರರಾದ ಶೇಟಬಾಳಕೃಷ್ಣದಾಸರವರು ಸಣ್ಣವರಿರುವದರಿಂದ ತಮ್ಮ ಅತ್ಯಂತ ಪ್ರೀತಿಗೆ ಪಾತ್ರರಾದ ಶಿವಪ್ಪನವರ ಕೈಯಲ್ಲಿ ತಮ್ಮ ಮಗನನ್ನೂ ತಮ್ಮ ಲೆಕ್ಕ ಪತ್ರವನ್ನೂ ಒಪ್ಪಿಸಿದರು. ಶಿವಪ್ಪನವರು ತಮ್ಮ ಮನೆತನಕ್ಕಿಂತಲೂ ಹೆಚ್ಚು ದಕ್ಷತೆಯಿಂದ ಚಿಕ್ಕ ಬಾಳಕೃಷ್ಣನವರನ್ನೂ ಅವರ ಮನೆತನವನ್ನೂ ಚನ್ನಾಗಿ ಸಂರಕ್ಷಣೆ ಮಾಡಿದರು. ಈಗ ಶಿವಪ್ಪನವರು ಒಮ್ಮಿಂದೊಮ್ಮೆ ಕೈಬಿಟ್ಟಿದ್ದರಿಂದ ಶೇಟರಿಗೂ ಬಹಳೇ ದುಃಖವಾಗಿದೆ. ಆದರೂ ಯಾವತ್ತು ಪ್ರಮುಖರು ಕೂಡಿದಾಗ್ಯೆ, ಶಿವಪ್ಪನವರ ಮಕ್ಕಳನ್ನೂ ಲೆಕ್ಕಪತ್ರಗಳನ್ನೂ ಶೇಟಬಾಳಕೃಷ್ಣದಾಸ ಇವರು ಶಿವಪ್ಪನವರು ಇದ್ದಾಗಿನಂತೆ ಮುಂದಾದರೂ ನಾನು ನಡೆಸಿಕೊಂಡು ಹೋಗುವೆನೆಂದು ಹೇಳಿದ್ದನ್ನು ಕೇಳಿದ ಕೂಡಲೆ ಸರ್ವರಿಗೂ ಸಮಾಧಾನವಾಯಿತು. ಇಂಥ ಸಾಧು ಸಂಪನ್ನರಾದ ಶಿವಪ್ಪನವರು ವೀರಶೈವರಲ್ಲಿಯೂ ವ್ಯಾಪಾರಸ್ಥರಲ್ಲಿಯೂ ಮುಖ್ಯ ದೊಡ್ಡ ಮನುಷ್ಯರಾಗಿದ್ದರು. ಅಕಾಲದಲ್ಲಿ ಒಮ್ಮಿಂದೊಮ್ಮೆ ತಮ್ಮ ಇಹಲೋಕಯಾತ್ರೆಯನ್ನು ತೀರಿಸಿಕೊಂಡು ಕಳೆದ ಆಶ್ವಿನ ಬಹುಳ ಅಮಾವಾಸ್ಯೆ ಶನಿವಾರ ದಿನ ಶಿವಪ್ಪನವರು ಶಿವನಲ್ಲೀ ಐಕ್ಯರಾದರು. ಇದರಿಂದ ಸಮಾಜಕ್ಕೆ ದೊಡ್ಡ ಹಾನಿಯಾಯಿತು. ಪರಮಾತ್ಮನು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ.

ಶ್ರೀ ಗುಳವಾಡಿ ವಿಠ್ಠಲರಾಯರು ವೈಕುಂಠವಾಸಿಗಳಾದರೆಂದು ತಿಳಿಸುವದಕ್ಕೆ ನಮಗೆ ಅತ್ಯಂತವಿಷಾದವೆನಿಸುತ್ತದೆ. ಇವರು ಸನ್ ೧೮೭೬ ರಲ್ಲಿ ಮಂಗಳೂರ ಜಿಲ್ಹೆಯಲ್ಲಿಯ ಗುಳವಾಡಿಯಲ್ಲಿ ಜನ್ಮ ತಾಳಿದರು. ಇವರು ಕುಂದಾಪುರದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದು ಮಾಧ್ಯಮಿಕಶಿಕ್ಷಣಕ್ಕೆ ಮಂಗಳೂರಿಗೆಹೋಗಿ, ಮಾಟ್ರಿಕುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ, ೧೮೯೬ ರಲ್ಲಿ ಮುಂಬಯಿಯಲ್ಲಿ ಉಚ್ಚಶಿಕ್ಷಣವನ್ನು ಪಡೆಯುವದಕ್ಕೆ ಹೋದರು ಅಲ್ಲಿ ಇವರು ವಕೀಲಿಯ ಅಭ್ಯಾಸವನ್ನು ಮಾಡಿ ಆ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ್ದರಿಂದ ವಕೀಲಿಯನ್ನು ಮಾಡುವದಕ್ಕೆ ಕಾರವಾರಕ್ಕೆ ಹೋದರು. ಅಲ್ಲಿ ೨-೩ ವರ್ಷಗಳ ವರೆಗೆ ವಕೀಲಿಯನ್ನು ಮಾಡಿ ಅಲ್ಲಿಂದ ೧೯೦೩ ರಲ್ಲಿ ಬಾಗಲಕೋಟೆಗೆ ವಕೀಲಿಗಾಗಿ ಬಂದರು. ಈ ಇಪ್ಪತ್ತೆರಡು ವರ್ಷ ಇಲ್ಲಿ ಅವರು ಪ್ರಾಮಾಣಿಕತೆಯಿಂದ ವಕೀಲಿಯನ್ನು ಮಾಡುವದಲ್ಲದೆ ಸಾರ್ವಜನಿಕ ಕಾರ್ಯಗಳಲ್ಲಿ ಸಹ ಭಾಗವಹಿಸಿಕೊಳ್ಳುತ್ತಿದ್ದರು.

ಇಲ್ಲಿಯ ಮುನಸಿಪಾಲಿಟಿಯಲ್ಲಿ ಆಸು ಒಂಬತ್ತು ವರ್ಷಗಳವರೆಗೆ ಸಭಾಸದರಿದ್ದರು. ಇವರು ಕೆಲವುದಿವಸ ಸ್ಕೂಲ ಕಮಿಟಿಯ 'ಚೇರಮನ್ನ'ರೂ ಮುನಸಿಪಾಲಿಟಿಯ ಉಪಾಧ್ಯಕ್ಷರೂ ಇದ್ದರು. ಸಹಕಾರೀ ಸಂಘಗಳಲ್ಲಿ ಇವರ ಅಂಗವಿದ್ದಿತ್ತು. 'ಕೊ ಆಪರೆಟಿವ್ಹ ಕಾಟನ್ ಸೇಲ ಸೊಸಾಯಟಿ'ಯಲ್ಲಿ ಇವರು ಅಧ್ಯಕ್ಷರಿದ್ದರು. ಇಷ್ಟೇ ಅಲ್ಲದೆ ಇವರು 'ಪಾಯೋನಿಯರ ಸ್ಟೋರ್ಸ' 'ಕಮರ್ಷಿಯಲ್ ಬ್ಯಾಂಕ್' ಎಂಬ ಎರಡು ಸಂಸ್ಥೆಗಳನ್ನು ತೆಗೆದು ವ್ಯಾಪಾರದಲ್ಲಿ ಮನಸ್ಸು ಹಾಕಹತ್ತಿದ್ದರು. ಇವರ ಸ್ವಭಾವವು ಬಹಳ ಶಾಂತವಿದ್ದಿತ್ತು. ಇವರು ಯಾವಾಗಲೂ ನಗೆಮುಖದಿಂದಲೇ ಮಾತನಾಡುತ್ತಿದ್ದರು. ಇಂಥವರು ಒಂದೆರಡು ದಿವಸಗಳಲ್ಲಿ ಫಾಸೀ (Paralyses) ಬೇನೆಯಿಂದ, ಮುಂಬೈಯಿಂದ ಮರಳಿಬರುವಾಗ, ಹುಬ್ಬಳ್ಳಿಯಲ್ಲಿ ತಮ್ಮ ಬೀಗರ ಮನೆಯಲ್ಲಿ ಮೃತರಾದರು. ದೊಡ್ಡ ಸಂಸಾರವನ್ನು ಒಮ್ಮೆಲೇ ಬಿಟ್ಟು ಹೋದ್ದರಿಂದ ವಿಶೇಷವಾಗಿ ಇವರ ಮಕ್ಕಳಿಗೂ ಹೆಂಡತಿಗೂ ಅತ್ಯಂತ ವ್ಯಸನವಾಗಿರುವದು ಸ್ವಾಭಾವಿಕವು. ಈಶ್ವರಿಲೀಲೆಯೇ ಅಗಾಧವಾದದ್ದು! ಪರಮಾತ್ಮನು ಶ್ರೀ. ವಿಠ್ಠಲರಾಯರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಅವನನ್ನು ಪ್ರಾರ್ಥಿಸುತ್ತೇವೆ.

ಕಣಿಯರು ಸತ್ಯಾಗ್ರಹವನ್ನು ಪ್ರಾರಂಭಿಸಬೇಕೆಂದಿದ್ದಾರೆ. ಎಲ್ಲ ಜಾತಿಯವರಂತೆ ಇವರಿಗೂ ದೇವಸ್ಥಾನ, ತೀರ್ಥ, ಕ್ಷೇತ್ರಗಳಿಗೆ ಹೋಗಲು ಅವಕಾಶವಿರಬೇಕಾಗಿ, ಇವರು ಕಳೆದ ತಿಂಗಳಲ್ಲಿ ನೆರೆದ ಪರಿಷತ್ತಿನ ಮಹಾಸಭೆಯಲ್ಲಿ ಗೊತ್ತುಪಡಿಸಿಕೊಂಡಿದ್ದರು. ಆದರೆ ಉಳಿದ ಜಾತಿಯವರಿಂದ ಅದಕ್ಕೆ ಸಮ್ಮತಿದೊರೆತಿಲ್ಲವಾದ್ದರಿಂದ ಇವರು ಈಗ್ಗೆ ಸತ್ಯಾಗ್ರಹವನ್ನು ಪ್ರಾರಂಭಿಸುವರು. ಕರ್ನಾಟಕದಲ್ಲಿ ಈ ನವ ಜಾಗೃತಿಯು— ಅದರಲ್ಲಿಯೂ ಮೈಸೂರಿನಲ್ಲಿ— ಉಂಟಾಗಿದ್ದು ಆಶ್ಚರ್ಯವೂ ಆನಂದದಾಯಕವೂ ಆಗಿದೆ. ಆದರೆ ಸತ್ಯಾಗ್ರಹಸಂಥ ಕಠಿಣ ವ್ರತವನ್ನು ಆಚರಿಸುವ ಶಕ್ತಿಯು ಇವರಲ್ಲಿ ಎಷ್ಟರಮಟ್ಟಿಗೆ ಇದೆಯೋ ತಿಳಿಯದು; ಮತ್ತು ಈ ವ್ರತದ ಮಾರ್ಗದರ್ಶಿಗಳು ಯಾರು? ಅವರಿಗೆ ಈ ಬಗ್ಗೆ ಅನುಭವವೇನಿದೆ? ಅದೂ ತಿಳಿಯದು. ಆದಕಾರಣ ಈ ಮಹತ್ವದ ವಿಷಯದಬಗ್ಗೆ ಕಣಿಯರು ಒಂದು ಪ್ರಕಟಣೆಯನ್ನು ತೆಗೆಯಬೇಕು. ಪ್ರಾಂತಿಕಕಾಂಗ್ರೆಸ ಕಮಿಟಿಯವರನ್ನೂ, ಸತ್ಯಾಗ್ರಹದ ವಿಚಾರವನ್ನು ಸಂಪೂರ್ಣವಾಗಿ ಅಭ್ಯಾಸಿಸಿದವರಾದ ಶ್ರೀ ಮಂಜಪ್ಪ ಹರ್ಡೇಕರರನ್ನೂ, ಕಾಕಾಸಾಹೇಬ ಕಾಲೇಲಕರರನ್ನೂ ಈ ಕಣಿಯರ ಮುಖ್ಯಸ್ಥರು ವಿಚಾರಿಸುವದು ಒಳ್ಳೆಯದು. ಕಣಿಯರ ಬಗ್ಗೆ ಮುಂದಿನ ವಾರದಲ್ಲಿ ಎಲ್ಲ ಸಂಗತಿಗಳನ್ನು ಉತ್ತರ ಕರ್ನಾಟಕದವರಿಗೆ "ಕನ್ನಡಿಗ"ನು ಪರಿಚಯಿಸುವನು.

ಕಂಠೀರವನು ಈಗ್ಗೆ ಕರ್ನಾಟಕದ ವಿಶ್ವವಿದ್ಯಾಲಯದ ಬಗ್ಗೆ ಬರೆದದ್ದು ಸಯುಕ್ತಿಕವಿದೆ. ತೊಡಕುಗಳನ್ನು ಹೇಳಲೇಬೇಕು. ಮುಚ್ಚಿಡುವದು ಯೋಗ್ಯವಲ್ಲ. ಇದು ಸರಿಯೇ. ಆದರೆ ತೊಡಕುಗಳೊಂದಿಗೆ, ತೊಡಕುಗಳನ್ನು ಬಿಡಿಸುವ ರೀತಿಯನ್ನೂ 'ಕಂಠೀರವ'ನು—ಆತನು ಘನವಿಚಾರಶೀಲನೂ, ರಾಜಕಾರಣದಲ್ಲಿ ಪಟುವೂ, ಕರ್ನಾಟಕದ ಭಿಮಾನಿಯೂ ಆದ 'ಕಂಠೀರವ'ನು—ಕರ್ನಾಟಕಸ್ಥರೆದುರಿಗೆ ಇಡಲು ಯೋಗ್ಯತಾಸಂಪನ್ನನು. ಅದ್ದರಿಂದ ಅವನು ಇದನ್ನು ಮಾಡಬೇಕಾಗಿತ್ತೆಂದು "ಕನ್ನಡಿಗ"ನ ಅಭಿಪ್ರಾಯ. ಇರಲಿ. ತೊಡಕುಗಳನ್ನು ಬಿಡಿಸುವ ವಿಷಯವಾಗಿ ವಿಶದವಾಗಿ 'ಕನ್ನಡಿಗ'ನು ಮುಂದೆ ಬರೆಯುವನು.

ಕರ್ನಾಟಕ ಟಾಯಿಮ್ಸಕ್ಕೂ ಕನ್ನಡಿಗನಿಗೂ ಸಂಬಂಧವು ದಿನಾಲು ಹೆಚ್ಚುತ್ತಲಿದೆ. ಆಗಲಿ. ಈಗ್ಗೆ "ಕನ್ನಡಿಗ"ನ ಬಗ್ಗೆ ಪುನಃ ವೀರ ಬಂಟನು ಅದರಲ್ಲಿ ಏನೇನೋ ಬರೆದಿದ್ದಾನೆ. ಕನ್ನಡಿಗರು ಕನ್ನಡವನ್ನು ಅಂದರೆ ತಮ್ಮ ತಾಯಿಯನ್ನು ಮುದ್ದಿಟ್ಟರೆ, ಕನ್ನಡನಾಡಿನಲ್ಲಿಯೇ ಎಲ್ಲ ವ್ಯವಹಾರಗಳೂ ನಡೆಯಬೇಕೆಂದರೆ, ಅದು ಮರಾಠಿಗರನ್ನು ದ್ವೇಷಿಸಿದಂತೆ ಆಗುವದೆಂದು ಈ ವೀರ ಬಂಟನು ವಿಚಿತ್ರವಾಗಿ ವಿಧಾನಿಸುತ್ತಾನೆ! ಮುಂದೆ ನೋಡಿರಿ! ಮುನಸೀಪಾಲಿಟಿ ಲೋಕಲ್ ಬೋರ್ಡುಗಳ ವಿಷಯವನ್ನೇ ಮಾತ್ರ ನಾವು ಚರ್ಚಿಸಬೇಕಂತೆ! ಕನ್ನಡಗಿನ್ನುಳಿದ ಬಿಟ್ಟುಕೊಡಬೇಕಂತೆ! 'ಕನ್ನಡಿಗ'ನ ಎಲ್ಲ ಸಂಚಿಕೆಗಳನ್ನು ಓದಿದರೂ ಪಾಪವಾಯ್ತು! "ಕನ್ನಡಿಗ"ನ ಉದ್ದೇಶವೇ ಈ ವೀರ ಭಟನಿಗೆ ತಿಳಿಯದು. ಕನ್ನಡನಾಡೆಲ್ಲಾ ಕನ್ನಡಮಯವಾಗುವದು, 'ಕನ್ನಡಿಗ'ನಿಗೆ ಬೇಕಾದುದು. ಈಗಲಾದರೂ ಇದು ಇವನಿಗೆ ತಿಳಿಯಲಿ. ಇಗೋ ಪುನಃ ನೋಡಿರಿ! ಕಟ್ಟೆಯ ಮೇಲೆ ಕುಳಿತಿದ್ದ ಸ್ತ್ರೀಯರನ್ನು ನಾವು ಕಣ್ಣೆತ್ತಿ ನೋಡುವದಿಲ್ಲವಂತೆ! ಇದೂ ನಮ್ಮ ಮಹಾಪರಾಧವೆಂದು ನುಡಿಯುವ ಟೀಕಾಚಾರ್ಯರಿಗೆ ದೂರಿನಿಂದ ನಮಸ್ಕರಿಸುವದೇ ನಮಗೆ ಉತ್ತಮವಾಗಿ ತೋರುತ್ತದೆ.

ಕರ್ನಾಟಕ ಭೂಷಣ ಕೌಜಲಗಿ ಶ್ರೀನಿವಾಸರಾಯರು ಗುಣಹೊಂದಹತ್ತಿರುವರು. ಕರ್ನಾಟಕದ ಮೇಲೆ ಬಂದಿದ್ದ ಒಂದು ಸಂಕಟವು ಈಗ್ಗೆ ದೂರಾದಂತಾಯಿತು! ಇದಕ್ಕಾಗಿ ನಾವು ಪರಮಾತ್ಮನಿಗೂ ಕರ್ನಾಟಕ ಮಾತೆಗೂ ಅತ್ಯಂತ ಭಕ್ತಿ ಭಾವದಿಂದ ನಮ್ಮ ಅಂತಃಕರಣಪೂರ್ವಕವಾದ ವಂದನೆಗಳನ್ನರ್ಪಿಸುತ್ತೇವೆ. ಮತ್ತು ಕರ್ನಾಟಕದ ಸೇವೆಯಲ್ಲಿಯೇ ನಿರತರಾಗಿಲು ಕರ್ನಾಟಕ ಭೂಷಣರಿಗೆ ಆಯುರಾರೋಗ್ಯವನ್ನು ದಯಪಾಲಿಸಬೇಕಾಗಿ ಕನ್ನಡ ಮಾತೆಯಲ್ಲಿ ಪ್ರಾರ್ಥಿಸುತ್ತೇವೆ. ಇವರ ಬಗ್ಗೆ ಹೆಚ್ಚಿನ ಸಂಗತಿಗಳನ್ನು ಇದೇ ಸಂಚಿಕೆಯ ವರ್ತಮಾನಸಾರದಿಂದ ವಾಚಕರು ತಿಳಿದು ಕೊಳ್ಳಬಹುದು.

ಭಾಷಾನ್ವಯ ಪ್ರಾಂತ ರಚನೆಯ ತತ್ವವು ಸರಕಾರಕ್ಕೆ ಮಾನ್ಯವಿರುವದಕ್ಕೆ ಮತ್ತೊಂದು ಉದಾಹರಣೆ. ಉತ್ಕಲದವರಿಗೆ ಸ್ವತಂತ್ರ ಪ್ರಾಂತವು ದೊರೆಯಬೇಕೆಂಬುದು ಈಗ್ಗೆ ನಿಶ್ಚಯವಾಯಿತು. ಈ ಬಗ್ಗೆ ನಿಯಮಿತವಾದ ಕಮೀಟಿಯ ವರದಿಯು ಸರಕಾರಕ್ಕೆ ಮಾನ್ಯವಾಗಿದೆ. ಸರ ಜ್ಯೋಗ ಮ್ಯಾಕ್‌ಫರ್ಸನ್ನರು ಈ ಪ್ರಾಂತದ ಮೊದಲನೇ ಡೆಪ್ಯುಟೀ ಗವರ್ನರರಾಗುವರೆಂದು ವರ್ತಮಾನಬಂದಿದೆ. ಈ ಬಗ್ಗೆ ನಿಶ್ಚಿತವಾದ ಸರಕಾರದ ಧೋರಣವನ್ನು ವಾಯಿಸರಾಯರು ಪಾಟ್ನಾದಲ್ಲಿ ನವಂಬರ ತಿಂಗಳಲ್ಲಿ ಪ್ರಕಟಿಸುವರಾಗಿ ತಿಳಿಯುತ್ತದೆ. ಭಾಷಾವಾರ ಪ್ರಾಂತರಚನೆಯು, ಯಾರು, ಸರಕಾರದ ಮುಂದೆ ಹಿಡಿದು ಕೇಳುವರೋ, ಅವರಿಗೆ ಮಾತ್ರ ಕೊಡಲ್ಪಡುವದು. ಇದೇ ಪ್ರಕಾರವಾಗಿ ಬಂಗಾಲದವರಿಗೂ ಬಿಹಾರದವರಿಗೂ ದೊರೆತಿದೆ. ಉತ್ಕಲದವರಿಗೂ ದೊರೆತಂತಾಗಿದೆ. ಇದನ್ನು ಲಕ್ಷ್ಯದಲ್ಲಿಟ್ಟು ಕನ್ನಡಿಗರೆಲ್ಲ ಉತ್ಸಾಹ ಗೊಂಡು ಕರ್ನಾಟಕ ಏಕೀಕರಣದ ರಥವು ಮುಂದೆ ಮುಂದೆ ರಭಸದಿಂದ ಸಾಗುವಂತೆ ಪ್ರಯತ್ನಿಸಬೇಕು.

ರೇಲವೇ ಬೋರ್ಡಿನ ಸುದ್ದಿ

ಈ ವಾರದಲ್ಲಿ ಸಹಿಗಳು ಹೆಚ್ಚಾಗಿ ಬಂದಿವೆ. ನಾವು ಕಳೆದವಾರದಲ್ಲಿ ಹಂಚಿದ ಮುದ್ರಣವಾದ ಅರ್ಜಿಯ ನಮೂನೆಗಳಮೇಲೆ ಬೇಗನೇ ಸಹಿ ಮಾಡಿಸಿ ಕಳಿಸಬೇಕಾಗಿ ವಾಚಕರಿಗೆ ಪ್ರಾರ್ಥಿಸುತ್ತೇವೆ. ಇಳಕಲ್ಲಿನಿಂದ ವೆಂಕಟಪ್ಪ ವಾಸಪ್ಪಾ ಸಕ್ರಿಯವರು = ೫೬; ವೀರಶೈವ ತರುಣರ ಸಂಘ ನವಗ್ರ = ೫೫; ದಾ ಮುಲ್ಲಾಳಕರ ಜಮಖಂಡಿ = ೩೫; ದತ್ತಾತ್ರಯ ಶಿವರಾವ ಕುಲಕರ್ಣಿ ಸಾ॥ ತೋಟಿಲುರುಚಗಿ = ೬೮; ಚ. ಸಿ. ಕಂಪ್ಲೀಸರ = ೨೦; ಸದಾಶಿವರಾವ ಗರುಡ = ೪೨; ರಾಚಪ್ಪ ದುಡಗಿ ಮುನಗುಂದ = ೪೩; ಅಪ್ಪಣ್ಣಾ ಬಾಗಿವಾರ = ೬೫; ಶಾಮಸುಂದರ ನರಸಿಂಹಾಚಾರ್ಯ ಪ್ರತಿಕರ ಘೋಡ = ೪; ವ. ದಾಗರ ೭೫ ಒಟ್ಟು ೪೬೮

ವಾಙ್ಮಯ ವಿಚಾರವು

ಮಹಾರಾಣಾ ಪ್ರತಾಪಸಿಂಹ(ವಿದ್ಯಾರಣ್ಯ ಗ್ರಂಥಮಾಲೆ. ೯ ನೇ ಪುಷ್ಪ.)

ಲೇಖಕರು:— ಗೋವಿಂದ ಹಣಮಂತ ಹೊಸೂರ
ಕರ್ನಾಟಕ ವಿದ್ಯಾವಿನೋದಿ ಅಗಡಿ

ಮಹಾರಾಣಾಪ್ರತಾಪಸಿಂಹನು ಮಾತೃಭೂಮಿಯ ಉದ್ಧಾರಕ್ಕಾಗಿ ಹೆಣಗಿ ಹೋರಾಡಿ ಮಡಿದುದೇ ಈ ಚಿಕ್ಕ ಕಾದಂಬರಿಯ ಕಥಾವಸ್ತುವು. ಲೇಖಕರಿಗೆ ಕನ್ನಡನುಡಿಯ ಜೀವಾಳವು ಹರಿಯೂ ಸಿಕ್ಕಂತೆ ಕಾಣುವದಿಲ್ಲ ಕನ್ನಡದ ವಾಙ್ಮಯವನ್ನು ಚೆನ್ನಾಗಿ ಪರಿಶೀಲಿಸಿ. ಅದರಲ್ಲಿ ನುರಿತು, ಕನ್ನಡ ನುಡಿಯ ಜೀವಾಳ ಮತ್ತು ಕಟ್ಟು ಇವುಗಳಿಗನುಗುಣವಾಗಿ ಬರೆಯುವದು ಬರಹಗಾರರಿಗೆ ಶ್ರೇಯಸ್ಕರವಲ್ಲವೇ? ಕರ್ನಾಟಕ ಸರಸ್ವತಿಯ ಸೇವೆಯ ಮಾಡಬೇಕೆಂದು ಬಯಸುವವರು ಮನಮುಟ್ಟಿ ಭಕ್ತಿಭಾವದಿಂದ ಅದನ್ನು ಮಾಡಬೇಕು. ವಿನಾದರೊಂದು ಗೀಚಿದರೆ ಕಾರ್ಯವಾಗುವದಿಲ್ಲ ಮತ್ತು ಆ ವರ ಗುರಿಯಾದರೂ ಈಡೇರುವದಿಲ್ಲ ಈ ಇಪ್ಪತ್ತೈದು ಪುಟದ ಚಿಕ್ಕ ಹೊತ್ತಿಗೆಯಲ್ಲಿ ಎಷ್ಟೋ ಅಕ್ಷಮ್ಯವಾದ ದೋಷಗಳಿರುವವು ಕೆಳಗಣ ಅವತರಣಿಕೆಗಳಿಂದ ನಮ್ಮ ಮತವು ಸ್ಪಷ್ಟವಾಗುತ್ತಿದೆ.

"ರಾಷ್ಟ್ರದಲ್ಲಿ ನವಜೀವನವು ಪ್ರಾದುರ್ಭವಿಸ ಬೇಕಾಗಿದ್ದ ಕ್ರಾಂತಿಕರ ಈ ಪ್ರಸಂಗದಲ್ಲಿ ಮಾನವೀ ಅಂತಃಕರಣದಲ್ಲಿ ವೀರ ಪ್ರವೃತ್ತಿಯನ್ನು ಪ್ರಾದುರ್ಭವಿಸಿ, ಸ್ವದೇಶ ಸ್ವಾತಂತ್ರ್ಯ ಪ್ರೀತಿಗಳಂಥ ಉಜ್ವಲ ಮನೋವೃತ್ತಿಗಳನ್ನು ಜಾಗೃತಿಗೊಳಿಸುವದಕ್ಕಾಗಿ ಈ ಸ್ವರಾಜ್ಯ ಕ್ಷೇತ್ರದ ಮಹತ್ವವು ರಾಮಬಾಣದಂತಿರುವುದು" ಈ ವಾಕ್ಯದ ರಚನೆಯು ಎಷ್ಟು ಅಸಡ್ಡಾಳಾಗಿರುವುದು ನೋಡಿ? 'ಪ್ರಾದುರ್ಭವಿಸು' ಎಂಬ ಶಬ್ದದ ಕತೆಯನ್ನಿಷ್ಟು ಕೇಳಿ

'ಪನ್ನಾದಾಯಿಯಂಥ ಹೊಟ್ಟೆಯ ಮಗನನ್ನು ಮಾತೃಭೂಮಿಗಾಗಿ ಆಹುತಿ ಕೊಟ್ಟ ಪುಣ್ಯಾಂಬೆಯರು' ಇಲ್ಲಿದೂರಾನ್ವಯದಿಂದ ಪನ್ನಾದಾಯಿಯು ಗಂಡಸಾದಳಲ್ಲವೇ?

ಗುಡಿಯನ್ನು ನೋಡಿದುದಾಯಿತು ಇನ್ನು ಶಿಖರವನ್ನಿಷ್ಟು ನೋಡುವಾ. "ಅರ್ಥಾತ್ ಮೋಗಲರಿಂದ ದೇವಾಲಯಗಳೂ ಮಂದಿರದ ಕಳಸಗಳೂ ವಿಧ್ವಂಸಿಸಲ್ಪಟ್ಟವು, ಅವನಿಂದ ಚಿತ್ತೂರಿನ ಮಹಾರಾಣಾನ ಪ್ರತಾಪವನ್ನು ಗಾನಮಾಡುತ್ತಿದ್ದ ಹಾಗೂ ನೂರಾರು ವಂದಾಂಗಗಳ ಮೇಲೆ ಇದರ ಪ್ರತಿಧ್ವನಿಯು ಪಸರಿಸಿದ, ಇದರಿಂದ ಶತ್ರುಗಳ ಹೃದಯವನ್ನು ಸಹ ಅಲ್ಲೋಲ ಕಲ್ಲೋಲವಾಗಿ ಮಾಡಪ್ಪುತ್ತಿದ್ದ ನೌಬತ್ತಿನ ಚಿತ್ತೂರ ನಿವಾಸಿನೀ ದೇವಿಯ ಮಂದಿರವನ್ನು ತನ್ನ ತೆ ಜದಿಂದ ಪ್ರಕಾಶಗೊಳಿಸುತ್ತಿದ್ದ ಪ್ರಚಂಡ ದೀಪಸ್ತಂಭದ ಚಿತ್ತೂರ ರಾಜಪ್ರಸಾದದ ಸರ್ವೋತ್ಕೃಷ್ಟ ಸಿಂಹದ್ವಾರದ ನಾಶವಾಗಲ್ಪಟ್ಟು ಅಕಬರಾಬಾದವೆಂದು ನೂತನ ನಗರವು ಕಟ್ಟಲ್ಪಟ್ಟಿತು" ಇದೇನು ತಿರುಗಣಿಯ ಮಡುವೋ, ಕರ್ಮಣಿಯ ಸರಪೋ? ಕನ್ನಡದಲ್ಲಿ ಕರ್ಮಣಿಯನ್ನು ಎಚ್ಚರದಿಂದ ಉಪಯೋಗ ಮಾಡಬೇಕಾಗುವುದು. ಬೇಕಾದಲ್ಲಿಯೂ ಬೇಡಾದಲ್ಲಿಯೂ ನಮ್ಮ ಲೇಖಕರು ಕರ್ಮಣಿಪ್ರಯೋಗವನ್ನು ಪಯೋಗಿಸಿದ್ದಾರೆ ಈ ಕಾದಂಬರಿಯಲ್ಲಿ ಸೊಬಗಿನ ಶೈಲಿಯಿಲ್ಲ; ಬೆಡಗಿನ ಬಣ್ಣವಿಲ್ಲ. ಜೀವದ ಜ್ಯೋತಿಯಿಲ್ಲ. 'ಕನ್ಯೆ ಹಾಗು ಸ್ನುಷಾ.' ಸೊಸೆ ಎಂದಿದ್ದರೇನಾಗುತ್ತಿತ್ತು? 'ಶೋಣಿತಗುರುಸ್ವರೂಪದ' ವೀರರತ್ನಗಳು. ಎಂಬುದರ ಅರ್ಥವೇನು? 'ನಿರುಪಮ ಜಾಸ್ತವ' ಇದೆಲ್ಲಿಯ ತಿರುಳ್ಗನ್ನಡವು? ಇನ್ನೂ ಎಷ್ಟೋ ವ್ಯಾಕರಣ ದೋಷಗಳೂ ಇವೆ. ಅವೆಲ್ಲವುಗಳನ್ನೂ ಇಲ್ಲಿ ಕೊಡಲವಕಾಶವಿಲ್ಲ. ನಾವು ಹೇಳುವದಿಷ್ಟೇ:- ಕನ್ನಡದಲ್ಲಿ ಇಂತಹ ಪುಸ್ತಕಗಳ ಸಂಗ್ರಹವೇ ಹೆಚ್ಚುತ್ತ ಹೋದರೆ, ಅದಕ್ಕೆ ರಮ್ಯವಾದ ಭವ್ಯವಿಲ್ಲವೆಂತೇ ಹೇಳಬೇಕು.

ಶ್ರೀ ಗುರುಭ್ಯೋನಮಃ

ಅಖಿಲಕನ್ನಡಿಗರಿಗೊಂದು ವಿಜ್ಞಾಪನೆ.

ಮಹಾಶಯ! ಹೀನಾವಸ್ಥೆಯಲ್ಲಿರುವ ಕನ್ನಡ ನುಡಿಯ ಜೀರ್ಣೋದ್ಧಾರಕ್ಕಾಗಿ ಅನೇಕ ಭಾಷಾಭಿಮಾನಿಗಳಿಂದ ನೂತನವಾಗಿ ಎಷ್ಟೋ ಗ್ರಂಥಗಳು ಬರೆಯಲ್ಪಟ್ಟಿವೆಯಷ್ಟೇ? ಇಂಥ ಮಹಾಪುರುಷರಲ್ಲೊಬ್ಬರೂ, ಕಲ್ಲನಾಥೇಶ್ವರ ಶತಕ, ಕಾಲಕಾಲೇಶ್ವರ ಶತಕ, ಹಾಲಕೆರೆಯ ಶ್ರೀ ಮದನ್ನದಾನೀಶ ಮಹಾಪುರಾಣ, ಇಲಕಲ್ಲ ಶ್ರೀಮಹಾಂತೇಶ ಪುರಾಣ ಇತ್ಯಾದಿ ಪದ್ಯಗ್ರಂಥಗಳ ಕರ್ತರೂ, 'ಮಂತ್ರರಹಸ್ಯವೆಂ'ಬ ಗದ್ಯ ಗ್ರಂಥದ ಉತ್ಪಾದಕರೂ ಆದ ಕವಿತಾವಿಶಾರದರೆಂದು ಕೀರ್ತಿ ಹೊಂದಿದ ವೇ. ದ್ಯಾಂಪುರದ ಚನ್ನಪ್ಪಯ್ಯಶಾಸ್ತ್ರಿಗಳವರು ಈಗ ಮಹಾ ಸಾಧ್ವಿ 'ಶ್ರೀಹೇಮರಡ್ಡಿ ಮಲ್ಲಮ್ಮ'ನ ಪುರಾಣವನ್ನು ರಚಿಸುತ್ತಿರುವರು. ಈ ಮೊದಲು ಸಾಂಗತ್ಯ ರೂಪದಲ್ಲಿ ಅಶುದ್ಧವಾಗಿಯೂ, ಛಂದಶ್ಶಾಸ್ತ್ರಕ್ಕೆ ವಿರೋಧವಾಗಿಯೂ ಇದ್ದು ನುಶಿಹತ್ತಿ ಹೋಗಿರುವ ಒಂದು ಹಳೇ ಗ್ರಂಥದ ಆಧಾರದ ಮೇಲೆ ಈಗ ೨೪ ಅಧ್ಯಾಯಗಳು ಮುಗಿದಿರುವವು ಈ ಮಹಾತ್ಮಳ ವಿಷಯವಾಗಿಯೂ, ರಡ್ಡಿ ಕುಲೋತ್ಪತ್ತಿಯ ವಿಷಯವಾಗಿಯೂ ಹಳೇ ಗ್ರಂಥಗಳು ತಮ್ಮಲ್ಲಿದ್ದರೆ, ಇಲ್ಲವೆ ಯಾರಲ್ಲಾದರೂ ಸಿಕ್ಕರೆ ಕೆಳಗಿನ ವಿಳಾಸಕ್ಕೆ ಕಳಿಸಿಕೊಡಬೇಕೆಂದು ಪ್ರಾರ್ಥನೆ. ಅಥವಾ ಗ್ರಂಥ ದೊರೆಯುವ ಸ್ಥಳವನ್ನಾದರೂ ತಿಳಿಸತಕ್ಕದು. ಇಲ್ಲವೆ ಕರ್ಣೋಪಕರಣವಾಗಿ ಕೇಳುತ್ತಬಂದ ಚರಿತ್ರೆಗಳೇನಾದರೂ ಇದ್ದರೆ ಸಹ ಬರೆದು ತಿಳಿಸತಕ್ಕದ್ದು. ಕಳಿಸಿದ ಗ್ರಂಥಗಳನ್ನು ಕಾರ್ಯಾನಂತರ ಪುನಃ ಕಳಿಸುವದಲ್ಲದೆ ಯೋಗ್ಯಪಾರಿತೋಷಕವನ್ನು ಕೂಡಾ ಕೊಡುವೆವು. ಇಷ್ಟೇ ಅಲ್ಲ ಈ ಬಗ್ಗೆ ಗ್ರಂಥದಲ್ಲಿ ಅವರ ಉಪಕಾರ ಸ್ಮರಿಸುವದರಲ್ಲಿ ಬರುವದು. ಈ ಪವಿತ್ರ ಕಾರ್ಯಕ್ಕೆ ಕನ್ನಡಿಗರೆಲ್ಲರೂ. ಅದರೊಳಗೂ ವೀರಶೈವರು ಅದರೊಳಗೂ ಪ್ರಾಮುಖ್ಯವಾಗಿ ನಮ್ಮ ರಡ್ಡಿ ಬಾಂಧವರು (ಲಿಂಗಾಯತರಾಗಲಿ- ಲಿಂಗವಿಲ್ಲದವರಾಗಲಿ) ವಿಶ್ವ ಪ್ರಯತ್ನ ಮಾಡಿ ಮೇಲ್ಕಂಡ ಯಾವ ವಿಧದಿಂದಲಾದರೂ ಸಹಾಯ ಮಾಡಿ ಹುಳಹತ್ತಿ ನಾಶವಾಗುತ್ತಿರುವ ಗ್ರಂಥಗಳನ್ನು ಪುನರುದ್ಧಾರಮಾಡಿದ ಶ್ರೇಯಸ್ಸಿಗೂ, ಬಾಯಿ ಮಾತಿನಲ್ಲಿಯೇ ಉಳಿದು ಮರೆತು ಹೋಗಲಿಕ್ಕೆ ಹತ್ತಿರುವ ಆ ಮಹಾತ್ಮಳ ಪವಾಡಗಳನ್ನು ಬರೆದು ತಿಳಿಸಿ ಗ್ರಂಥಸ್ಥ ಮಾಡಿದ ಫಲಕ್ಕೂ ಪಾತ್ರರಾಗಬೇಕೆಂದು ನಮ್ಮ ಬೇಡಿಕೆಯುಂಟು. ಪವಿತ್ರ ಕನ್ನಡನಾಡಿನಲ್ಲಿ ಅವತರಿಸಿ, ಅಖಂಡ ಕೀರ್ತಿಯನ್ನು ಸಂಪಾದಿಸಿ, ಅನೇಕ ಮಹಿಮೆಗಳನ್ನು ತೋರಿಸಿದ ಪುನೀತಳೂ, ಕಡೆಗೆ ಕನ್ನಡಿಗರಾದ ನಮ್ಮ ದುರ್ದೈವದಿಂದಲೋ ಅಭಿಮಾನ ಶೂನ್ಯತೆಯಿಂದಲೋ ನಮ್ಮ ಸ್ಮೃತಿ ಪಥದಿಂದ ಅಳಿಸಿ ಹೋಗಲಿಕ್ಕೆ ಹತ್ತಿರುವ ಮಹಾತ್ಮಳೂ, ಉತ್ಸಾಹಶೂನ್ಯರಾದ ಕನ್ನಡಿಗರನ್ನು ಬಡಿದೆಬ್ಬಿಸಿ ಅವರ ಶರೀರದ ರೋಮ ರೋಮಗಳಲ್ಲಿ ನವ ಚೈತನ್ಯವನುಂಟು ಮಾಡುವಂಥ ಪವಿತ್ರಾತ್ಮಳೂ ಆದ ಶ್ರೀ ಹೇಮರಡ್ಡಿ ಮಲ್ಲಮ್ಮನ ನಾಮ ಸಂಕೀರ್ತನೆಯು ಹತಭಾಗ್ಯ ಕನ್ನಡಿಗರ ಹೃದಯ ಮಂದಿರದಲ್ಲಿ ಯಾವಾಗಲೂ ನಡೆಯುವಂತೆ ಮಾಡಿದ ಮಹತ್ಪುಣ್ಯದಲ್ಲಿ ಸಕಲರೂ ಭಾಗಿಗಳಾಗಬೇಕೆಂದು ನಾವು ಹಾರೈಸುತ್ತೇವೆ.

ಕನ್ನಡಭಾಷಾಭಿಮಾನಿ
ಶಿವಪ್ಪಯ್ಯ ಗಣಾಚಾರ್ಯ ಸಾ॥ ಬೆಳಗಾವಿ
ಜಿಲ್ಲಾ ಧಾರವಾಡ

ವಾಚಕರೇ, ರೇಲವೇಬೋರ್ಡಿಗೆ ಕಳುಹಿಸತಕ್ಕ ಅರ್ಜಿಗೆ ಬೇಗನೇ ಸಹಿಮಾಡಿ ಕಳಿಸಿರಿ! ತಡಮಾಡಬೆಡಿರಿ!!

ಕನ್ನಡವಾಚನಾಭಿರುಚಿಯು ಬೆಳವಣಿಗೆಗೆ ತಕ್ಕ ಉಪಾಯಗಳು.

ಕನ್ನಡ ಸಾಹಿತ್ಯವು ಅತ್ಯಂತ ಶೋಚನೀಯ ಸ್ಥಿತಿಯಲ್ಲಿದ್ದುದು ಸರ್ವರಿಗೂ ಗೊತ್ತು. ಆದರೆ ಈ ದುರ್ದಶೆ ನಿವಾರಣೆಗೋಸುಗ ಕನ್ನಡ ವಾಙ್ಮಯ ಸೇವೆಯನ್ನು ಕೈಕೊಂಡ ಹಲಕೆಲವು ಮಾಸ ಪತ್ರಿಕೆಗಳೂ, ವಾರಪತ್ರಿಕೆಗಳೂ, ಒಂದೆರಡು ವರ್ಷಗಳಲ್ಲಿಯೇ ನೆಲಹಿಡಿಯುತ್ತವೆ. ಇನ್ನುಳಿದ ಪತ್ರಿಕೆಗಳ ಸ್ಥಿತಿಯಾದರೂ ಕಡು ಶೋಚನೀಯ, ಇವು ಅತಿ ಪ್ರಯಾಸದಿಂದ ಜೀವನಯಾತ್ರೆಯನ್ನು ಸಾಧಿಸುತ್ತವೆ. ಸಂಪಾದಕರು ತಮ್ಮ ಲೇಖನದ ಶಕ್ತಿಯನ್ನೆಲ್ಲ ಪ್ರಯೋಗಿಸಿದರೂ- ತಮ್ಮ ಕೈಲಿ ಬುದ್ಧಿಯ ಪ್ರಕಾಶವನ್ನು ಲೇಖನಗಳಲ್ಲಿ ಹರಿಸಿದರೂ, ಕೊನೆಗೆ ಅವರ ಸಾಹಸಗಳು ನಿರರ್ಥಕ. ಇದಕ್ಕೆ ಕಾರಣವೇನು? ಕರ್ನಾಟಕಸ್ಥರಿಗೆ ಕನ್ನಡ ನುಡಿಯಲ್ಲಿರುವ ಅಭಿಮಾನಶೂನ್ಯತೆಯೆ? ಆದರೆ ಕನ್ನಡಿಗರು ನಿದ್ರಾವಸ್ಥೆಯಿಂದ ಜಾಗೃತರಾಗಿರುವರೆಂದು ನಮ್ಮ ತಿಳುವಳಿಕೆ. ಅಥವಾ ಒಮ್ಮೆ ಇನ್ನೂ ನಿದ್ರೆಯಲ್ಲಿದ್ದರೂ, ಅಭಿಮಾನ ಪ್ರೀತಿಗಳ ಬದಲು ಅಭಿಮಾನಶೂನ್ಯತೆ- ಅನಾದರತೆಗಳು ಕನ್ನಡಿಗರನ್ನು ಹಿಡಿಯುವುದಕ್ಕೆ ಕಾರಣವಾದರೂ ಯಾವದು? ಉತ್ತರವು ಕೂಡಲೆ ಹೊರಡುತ್ತದೆ, " ನುಲಿದ ಬಾಳೆಯ............... ಎಂಬ " ಕನ್ನಡನುಡಿಯ ರಸಾಮೃತವನ್ನು ಪಾನಮಾಡದಿರುವದರಿಂದ-- ಭಕ್ತಿರಸಸಂಪನ್ನ ಕಾವ್ಯಾಮೃತವನ್ನು ಸವಿಯದಿರುವದರಿಂದ,- ಕನ್ನಡ ಗಂಭೀರಾಭಿಮಾನೋತ್ತೇಜಕ ಗ್ರಂಥವನ್ನು ಓದದಿರುವದರಿಂದ ಕರ್ನಾಟಕ ಜನತೆಯಲ್ಲಿ ಕನ್ನಡ ನುಡಿಯ ವಾಚನಾಭಿರುಚಿಯು ಇಲ್ಲದಿರುವದರಿಂದಲೇ ಕನ್ನಡಭಾಷೆಯಲ್ಲಿ ಅಭಿಮಾನವೂ ಇಲ್ಲವೆಂಬುದು ಒಡೆದು ತೋರುತ್ತದೆ.

ವಾಚನಾಭಿರುಚಿಯು ಹಳ್ಳಿಯ ನಿವಾಸಿಗಳಲ್ಲಿಯೂ, ಸುಶಿಕ್ಷಿತರಲ್ಲಿಯೂ ಇಲ್ಲ. ಯಾಕೆಂಬುದನ್ನು ಕೊಂಚ ಆಲೋಚಿಸುವಾ.

ಹಳ್ಳಿಗಳಲ್ಲಿರುವ ಕನ್ನಡಿಗರ ಸಂಖ್ಯೆಯೇ ಹೆಚ್ಚು. ಇವರ ಸ್ಥಿತಿಯಾದರೂ ಬಹು ಕನಿಕರ. ಇವರಿಗೆ ಶಿಕ್ಷಣಕ್ಕೆ ತಕ್ಕ ಏರ್ಪಾಟುಗಳೇ ಇಲ್ಲ. ಆದುದರಿಂದ ಓದಬರಹವನ್ನರಿತವರು ತೀರ ಕಡಿಮೆ. ಇನ್ನು ಓದು ಬರಹ ತಿಳುವಳಿಕೆಯುಳ್ಳ ಕನ್ನಡಿಗರಲ್ಲಿ ವಾಚನಾಭಿರುಚಿಯುಳ್ಳವರು ನೂರರೊಳಗೆ ಏಳು ಎಂಟು ಮಂದಿ ಸಿಗುವದು ಸಹ ದುರ್ಲಭ. ಇನ್ನು ಕೊಂಚ ಅಭಿರುಚಿಯಿದ್ದವರಿಗೆ ಕನ್ನಡವನ್ನೋದಲಿಕ್ಕೆ ವೇಳೆಯೇ ಸಿಗಲೊಲ್ಲದು. ಅವರಿಗೆ ಕೆಲಸಗಳೇ ಬಹಳ. ತೊಂದರೆಗಳ ಗೊಂದಲವೇ ಗೊಂದಲ. ಮಹತ್ವವಿಲ್ಲದ ಕೆಲಸಕ್ಕೆ ಹೆಚ್ಚು ಮಹತ್ವ! ಪಾಪ, ಅವರಾದರೂ, ಏನು ಮಾಡಿಯಾರು?

ಆದುದರಿಂದ ತಕ್ಕ ಏರ್ಪಾಟುಗಳಿಲ್ಲದ ಹಳ್ಳಿಗಳಲ್ಲಿ ಶಿಕ್ಷಣಕ್ಕೆ ತಕ್ಕ ಸೌಕರ್ಯಗಳನ್ನೊದಗಿಸಲು (ಅಥವಾ ಶಾಲೆಗಳು) ಖಾಸಗಿಯಿಂದಾಗಲೀ- ಸರಕಾರದಿಂದಾಗಲೀ, ಹಳ್ಳಿಗಳ ಶ್ರೀಮಂತರೂ, ಸುಶಿಕ್ಷಿತರೂ, (ಹಳ್ಳಿಯ) ಪರಸ್ಪರ ಎಡೆಬಿಡದೆ ಪ್ರಯತ್ನ ಮಾಡತಕ್ಕದ್ದು. ಅಲ್ಲಲ್ಲಿ ಸುಲಭ ಕನ್ನಡ ಪುಸ್ತಕಗಳನ್ನೊಳಗೊಂಡ ವಾಚನಾಲಯಗಳನ್ನು ಸ್ಥಾಪಿಸ ತಕ್ಕದ್ದು. ಕನ್ನಡವಾರ-- ಮಾಸ ಪತ್ರಿಕೆಗಳ ಪ್ರಚಾರ ಮಾಡತಕ್ಕದ್ದು. ಕನ್ನಡ ನುಡಿಯ ಮಹಿಮೆಯನ್ನು ಸಾರತಕ್ಕದು.

ಇತ್ತೀಚೆಗೆ ಕೆಲವು ಹಳ್ಳಿಯ ನಿವಾಸಿಗಳಿಗೆ ವಾಚನಾಭಿರುಚಿಯು ಬಹಳಷ್ಟು ಕೊಂಚ ಉತ್ಪನ್ನವಾಗಿರುತ್ತದೆ. ಕೆಲಕೆಲವು ವಾರಪತ್ರಿಕೆಗಳು ಹಳ್ಳಿಗಳಿಗೆ ಹೋಗುವದರಿಂದ, ವಾಚನಾಭಿರುಚಿಯು ಹುಟ್ಟಿರುತ್ತದೆ. ಇಷ್ಟೇ ಅಲ್ಲ. ಗಳಗನಾಥರವರ ಕಾದಂಬರಿಗಳಿಂದಲೂ, ಆಗಿಂದಾಗ ಆನಂದವನದಲ್ಲಿ ಆಗಾಗ್ಗೆ ಪ್ರಕಟವಾಗುವ ಹಲಕೆಲವು ಚಿಕ್ಕ ಕಾದಂಬರಿಗಳಿಂದಲೂ, ವಾಚನಾಭಿರುಚಿಗೆ ಹುಟ್ಟುವಿಕೆಗೆ ಸಹಾಯವಾಗಿರುತ್ತದೆ. ಈ ಕಾದಂಬರಿಗಳ ಶೈಲಿಯು ಬಹಳ ಸುಲಭ ಕಥೆಯು ಮನೋಹರ ಮತ್ತು ಮನಸ್ಸಿಗೆ ಆನಂದ ದಾಯಕ. ಆದುದರಿಂದ ಹಳ್ಳಿಯ ನಿವಾಸಿಗಳು ಅತ್ಯಾನಂದದಿಂದ ಇವುಗಳನ್ನು ಓದುತ್ತಾರೆ ಆದುದರಿಂದ ಚಿಕ್ಕ ಪುಟ್ಟ ಕಾದಂಬರಿಗಳ ರಚನೆಯಿಂದಲೇ ಇವರಲ್ಲಿರುವ ವಾಚನಾಭಿರುಚಿಯನ್ನು ಬೆಳಸಬಹುದೆಂದು ನಮ್ಮ ಕಲ್ಪನೆ. ಯಾಕಂದರೆ ನೈತಿಕ ಮಾನಸಿಕ ವಿಷಯಗಳನ್ನು ಸೂಕ್ಷ್ಮಾವಲೋಕನೆ ಮಾಡುವಷ್ಟು ಇವರ ಬುದ್ಧಿಯು ಬೆಳೆದಿರುವದಿಲ್ಲ. ಇದರ ಮೇಲೆ, ಇಂಥ ವಿಷಯಗಳಲ್ಲಿ ಅವರ ಮನಸ್ಸು ಹರಿಯಲೊಲ್ಲದು. ಮೊದಲು ವಾಚನಾಭಿರುಚಿಯು ಹುಟ್ಟಿತೆಂದರೆ ಇಂಥ ವಿಷಯಗಳಲ್ಲಿ ಅವರ ಮನಸ್ಸು ತಾನಾಗಿ ಹರಿಯುತ್ತದೆ.

ಆದುದರಿಂದ ಚಿಕ್ಕ ಪುಟ್ಟ ಕಾದಂಬರಿಗಳ ಸ್ವಂತ ರಚನೆಯು ಅತ್ಯಾವಶ್ಯಕ. ಇವುಗಳಲ್ಲಿ ಅಭಿರುಚಿ ಹುಟ್ಟಬೇಕಾದರೆ ಹಳ್ಳಿಯ ರೀತಿ ಪದ್ಧತಿಗಳನ್ನೇ ಹೃದಯಂಗಮವಾಗಿ ಚಿತ್ರಿಸಬೇಕು. ಹಳ್ಳಿಯ ನಿವಾಸಿಗಳ ದೋಷಗಳನ್ನೂ ಅಲ್ಲಲ್ಲಿ ಮಾಡಿಸತಕ್ಕದು. ಕರ್ನಾಟಕ ಪ್ರಾಕೃತಿಕ ಸೌಂದರ್ಯದ ವರ್ಣನೆಯು ತುಂಬ ಬರಬೇಕು. ಕರ್ನಾಟಕದ ಗತವೈಭವವನ್ನು ಕೊಂಡಕೊಂಡ ಹಣಿ ಸತಕ್ಕದ್ದು. ಅಪ್ರತಿಮ ವೀರರಾದ ಅರಸರನ್ನೂ, ಕರ್ನಾಟಕ ಜನನಿಯ ದೆಸೆಯಿಂದ ತನು-ಮನ-ಧನಗಳನ್ನ ಸೂಸಿದ ಪುರುಷರನ್ನೂ ಪಾತ್ರಗಳನ್ನಾಗಿ ಇಟ್ಟುಕೊಂಡು ಕಾದಂಬರಿಗಳನ್ನು ಬರೆಯ ತಕ್ಕದ್ದು. ವಂದನೀಯರಾದ ಸಾಧು ಪುರುಷರ ಚರಿತ್ರೆಗಳನ್ನು ಬರೆಯತಕ್ಕದ್ದು.

ಈ ಉಪಾಯಗಳನ್ನು ಕೈಕೊಂಡರೆ ಕರ್ನಾಟಕ ಮಾತೆಯಲ್ಲಿರುವ ಹಳ್ಳಿಯ ನಿವಾಸಿಗಳ ಅಭಿಮಾನವು ಉಜ್ವಲವಾಗುತ್ತದೆ ನೀತಿಯು ಬೆಳೆದು, ಅವರು ಸನ್ಮಾರ್ಗಿಗಳಾಗುವರು. ಇಂಥ ಹಳ್ಳಿಯ ನಿವಾಸಿಗಳಲ್ಲಿ ವಾಚನಾಭಿರುಚಿಯು ಬೆಳೆಯುವದು. ಗ್ರಂಥಕರ್ತರಿಗೆ ತಕ್ಕ ಉತ್ತೇಜನವು ದೊರೆಯುವದು, ಕನ್ನಡ ಸಾಹಿತ್ಯವು ಅಲ್ಪಾವಧಿಯಲ್ಲಿಯೇ ವೃದ್ಧಿ ಹೊಂದುವದು.

ಹಳ್ಳಿಯ ನಿವಾಸಿಗಳ ಮಾತಾಯಿತು. ಇನ್ನು ಕೆಲ ಸುಶಿಕ್ಷಿತರಿಗೂ ಕನ್ನಡ ನುಡಿಯಲ್ಲಿರುವ ಅನಾದರತೆಯ ಕಾರಣವನ್ನು ಅವಲೋಕಿಸುವಾ. ಕನ್ನಡ ಸಾಹಿತ್ಯದಲ್ಲಿ ಕಾದಂಬರಿಗಳ ಸಂಖ್ಯೆಯು ತೀರ ಕಡಿಮೆ. ನಾಟಕಗಳಾದರೂ ಹಾಗೆಯೇ ಸರಿ. ಪ್ರಾಚೀನ ಕಾವ್ಯಗಳು ಹೇರಳ. ಇವುಗಳಲ್ಲಿ ಕೆಲವು ಗೆದ್ದಲಿಯ ಪಾಲಾಗಿರುವವು. ಉಳಿದವುಗಳಲ್ಲಿ ಅಭಿರುಚಿಯೇ ಇಲ್ಲ. ನೂತನ ಕಾವ್ಯಗಳು ಕವಿತೆಗಳು ಕಡಿಮೆ. ಆದರೆ ಈಗೀಗ ಕೆಲಕೆಲವು ಕವಿಗಳು ಉದಯವಾಗುತ್ತಿರುವದು ಸುದೈವವೇ ಸರಿ.

ಇತ್ತೀಚಗೆ ಕೆಲಕೆಲವು ಕಾದಂಬರಿಗಳು ಪ್ರಕಟವಾಗುತ್ತಿರುತ್ತವೆ. ಆದರೆ ಇವುಗಳಲ್ಲಿ ಪೌರಾಣಿಕ ಕಾದಂಬರಿಗಳ ತಂಡವೇ ಹೆಚ್ಚು. ರಸಭರಿತ ಕಾದಂಬರಿಗಳು ಕಣ್ಣಿಗೆ ಬೀಳುವದು ಬಹಳ ಅಪರೂಪ. ಪೌರಾಣಿಕ ಕಾದಂಬರಿಗಳು ನೀತಿ ಬೋಧಕವಾದರೂ, ಹೇಳಿ ಕೇಳಿದ ವಿಷಯಗಳನ್ನೊಳಗೊಂಡಿರುವದರಿಂದ ರಸಿಕರಾದ, ಸುಶಿಕ್ಷಿತರ ಮನಸು ಬೇಸರ ಪಡುವದೆ ನಿಶ್ಚಯ

ಯಲ್ಲ. ಪೌರಾಣಿಕ ವೀರಪುರುಷರ ಆಕಾರ ಗುಣಗಳ ವರ್ಣನೆಯೇ ವರ್ಣನೆ. ಕೆಲವೆಡೆಗಳಲ್ಲಿ ಇವಾದರೂ ಗ್ರಂಥಕರ್ತನದಲ್ಲ. ಆದರೆ ಪುರಾಣದಲ್ಲಿಯ ಪರಿವರ್ತನ. ಆಧುನಿಕ ಕರ್ನಾಟಕ ಸಮಾಜಗಳ ವರ್ತನ. ಸಾಂಪ್ರದಾಯಗಳ ಮಾತೇಇಲ್ಲ. ಕೇವಲ ಓದಿದ ಸಂಗತಿ. ಕೇಳಿದಸಂಗತಿ. ತಿಳಿದಸಂಗತಿ. ರಂಗಭೂಮಿಯಲ್ಲಿ ಅಭಿನಯಿಸುವ ನಾಟಕಗಳಲ್ಲಿ ಪೌರಾಣಿಕ ನಾಟಕಗಳೇ ಹೆಚ್ಚು. ಇವುಗಳಿಂದ ಸುಶಿಕ್ಷಿತರಾದ ಪಟ್ಟಣಿಗರ ಮನಸ್ಸು ರಮಿಸುವದಿಲ್ಲ. ಇವುಗಳ ಹಾಡಾದರೂ ಹಾಗೆಯೇ ಸರಿ.

ಆದುದರಿಂದ ಸುಶಿಕ್ಷಿತರಲ್ಲಿ ಕನ್ನಡನುಡಿಯ ವಾಚನಾಭಿರುಚಿಯು ಅಭಿವೃದ್ಧಿಯಾಗ ಬೇಕಾದರೆ ರಸಭರಿತವಾದ ಕಾದಂಬರಿಗಳು ಅತ್ಯಗತ್ಯ. ಶೈಲಿಯು ಸರಳವಾಗಿಯೂ, ಅರ್ಥಗರ್ಭಿತವಾಗಿಯೂ ಇರತಕ್ಕದು. ಮಾನವನ ಹೃದಯದಲ್ಲುದ್ಭವಿಸುವ ಭಾವನಾತರಂಗಗಳ ವ್ಯಾಪಾರಗಳನ್ನು ತದ್ವತ್ ವರ್ಣಿಸಬೇಕು. ವರ್ಣನೆಯೂ ಅತ್ಯವಶ್ಯ. ಕರ್ನಾಟಕದ ಪಟ್ಟಣಗಳ ಸೊಬಗನ್ನು ವರ್ಣಿಸತಕ್ಕದು. ಕರ್ನಾಟಕ ನದಿ ಪರ್ವತಗಳ ವರ್ಣನೆಯೂ ಅತ್ಯವಶ್ಯ. ಕರ್ನಾಟಕದ ಗತ ವೈಭವವನ್ನು ಸವಿಸ್ತಾರವಾಗಿ ವರ್ಣಿಸತಕ್ಕದು. ಕರ್ನಾಟಕದ ಆಚಾರ ವಿಚಾರ ದೋಷಗಳನ್ನು ಬಿಂಬಿಸುವ (ಅಥವಾ) ಹೊರಗೆಡಹುವ ನಾಟಕಗಳ ರಚನೆಯು ಪ್ರಾಮುಖ್ಯವಾದುದು. ಮಧುರವೂ ಸುಲಭವೂ ಆದ ಕವಿತೆಗಳನ್ನು ಬರೆಯುವದು ಅತ್ಯವಶ್ಯಕವಾದ ಕೆಲಸ. ಹೀಗೆ ಮಾಡಿದರೆ ಕನ್ನಡ ಸಾಹಿತ್ಯವು ಅತ್ಯಂತ ಅಭಿವೃದ್ಧಿ ಹೊಂದುವದು. ಸುಶಿಕ್ಷಿತರಲ್ಲಿ ವಾಚನಾಭಿರುಚಿಯು ಹೆಚ್ಚುವದು. ಗ್ರಂಥ ಕರ್ತರಿಗೂ ಒಳ್ಳೆ ಪ್ರೋತ್ಸಾಹನವು ದೊರೆತು ಹೆಚ್ಚು ಗ್ರಂಥಗಳನ್ನು ಬರೆಯಲು ಉತ್ಸಾಹವು ಬರುವದು.

—ಶ್ರೀನಿವಾಸರಾವ ಅನಂತ ಕೆ.

ನಾಟಕಕ್ಕೆ ಹೋಗುವ ಹುಚ್ಚರು!

ಯಾವದನ್ನೂ ಹೇಳಬೇಡಿರಿ, ಈಗ ಬೇಕಾದ ಸಂಜೀವಿನಿಯೆಂದರೆ ಸಂಗೀತವು. ಇಂಥ ಸಂಗೀತವುಳ್ಳ ಪ್ರಬಂಧವೆಂದರೆ ಈಗಿನ ಪೂರ್ತಿಗಾಗಿ ನಾಟಕವು. ಈ ನಾಟಕದಂತೆ ಸೋಸಿ, ಮನಸ್ಸಿನಲ್ಲಿ ಇಳಿದು, ಬೇಗಿಯಾಗಿ ಅಂಟಿಕೊಳ್ಳುವ ಬೇರೊಂದು ಸಾಹಿತ್ಯವೇ ಇಲ್ಲ. ಅಂತೆಯೆ ಕನ್ನಡಿಗನ ಕೈ ಹಿಡಿಯಬೇಕಾದರೆ, ಸಂಗೀತಶಾಲೆಯಿಂದ ಸುರಕ್ಷಿತವಾಗಿ ಆಗಬಹುದೆಂದು ನನ್ನ ಮತವು. ಏನೇ ತಲೆಯಲ್ಲಿ ತುಂಬುವದಿರಲಿ, ನಾಟಕಮಾಡಿ, ಹಾಡಿರಿ! ನಾಟಕವಿಲ್ಲದೆ ಹಾಡಿದರೆ ಮಾತ್ರ ಜನತೆಗೆ ಏನೇನೂ ಆಗಿಬಿಡುವದು. ನಾಟಕವಿದ್ದರೆ ಸಾಕು! ಗೊವಳನ ಕೊಳಲಿಗೆ ಆಕಳಗಳಂತೆ, ಜನರು ಆಕಳಿಸುತ್ತಲಾದರೂ ನಿದ್ದೆಗೆಟ್ಟು ನೆರೆಯುವರು. ವಾಙ್ಮಯವೆಲ್ಲ ಸಂಗೀತ ಮಯವಾದ ದೃಶ್ಯಕ್ಕೆ ಎಡುವದು. ಹಾಡಿಗೆ ಬಲಿಬಿದ್ದು—ಮೋಸದ ಬಲಿಯಲ್ಲ.- ಮೋಹದ ಬಲಿಯಲ್ಲ- ಜನಜಾತ್ರೆಯು ಅದಕ್ಕೆ ಮನಸೋತು, ಅಭಿನಯಕ್ಕೆನ್ನಿರಿ, ಇಲ್ಲವೆ ಅಂತರ್ಹಿತವಾದ ತತ್ವಕ್ಕೆನ್ನಿರಿ ತಾನೇ ಲಕ್ಷ್ಯವನ್ನೀಯುವದು ಮಾನವ ಜಾತಿಗೆ ಸಹಜವಾದ ಧರ್ಮವಿದು. ದೇವನಾದರೂ ಈ ಬಗೆಯಲ್ಲಿಯೇ ಪಂಜರದಲ್ಲಿ ಹಾಕಿ ತಾನು ಅಂದಂತೆ ಅನ್ನುವ ಗಿಣಿಯಂತೆ ನಮ್ಮನ್ನು ಮಾಡಿದ್ದಾನೆ.

ಇರಲಿ! ಇಷ್ಟು ವೀರ ವಿಚಾರಿಯಾಗಬೇಕಾದರೆ, ನಿಮಗೆಲ್ಲಿಯ ಹುಚ್ಚು ಹಿಡಿಯಿತು! ಎಂದು ಕೇಳುವಿರಲ್ಲ! [illegible] ಅಮೃತ ಪುಷ್ಯವಾದ ಪೇಯವನ್ನು ಮಾಡಿ ಕುಡಿಸಿ [illegible]ನೆ ನಾಟಕ ನೋಡಿ, ಇವರಾದರೂ ಆ ಕೋಟೆಯವರೇ ಎನ್ನಬಹುದು. ಆದರೆ, ಎಲ್ಲಿಯ ಕೋಟೆ! ನಾಟಕಕ್ಕೊಂದು ಪೈ ಸಹ ಕೈಯೆತ್ತಿ ಕೊಟ್ಟವನಲ್ಲ ನಾನು! ಆದರೆ, ನಮ್ಮ ಸ್ನೇಹಿತರು ಸ್ವಾಮಿಗಳ ಮುದ್ರೆಗಿಂತ ಬಲವಾದ ಧಾರಣೆಯನ್ನು ಇದೇ ನಾಟಕದಿಂದ ಮನಸ್ಸಿನಲ್ಲಿ ಸವರಿಕೊಂಡು ಬಂದುದರಿಂದ, ಅದನ್ನು ಕಂಡು ನನಗೆ ಈ ಹುಚ್ಚು ಹತ್ತಿದಂತಿದೆ. ಯಾಕಂದರೆ, ಮೊನ್ನೆ ಓರ್ವನ ಕಡೆಗೆ ಮುಂಜಾವಿನಲ್ಲಿ ಹವೆಯನ್ನು ತಿನ್ನಲಿಕ್ಕೆ ಕರೆಯಲೆಂದು ಹೋದೆನು. ಇನ್ನೂ ಅವನು 'ನಿಶೆ' ಯಲ್ಲಿಯೆ ಇದ್ದನು. ಬೆಳಕಾದರೂ, ಶೋಧಿಸಬೇಕೆಂದು ಮುಸುಕು ಎಳೆದೆನು. ಸಣ್ಣವರು ತಿನ್ನುವಾಗ ಚಪ ಚಪ ಬಾಯಿ ಬಡಿಯುವಂತೆ, ಏನೋ ಅವನಿಗೆ 'ನುಳ್ಳಿ' ಬಂದಿತ್ತು. ಸ್ವಲ್ಪ ಹತ್ತರ ಹೋಗಿ ಕೇಳಿದೆ;- 'ಮಾನವ ಜನ್ಮ ವ್ಯರ್ಥವಿದು' ಎಂದು ಗುಣುಗುಟ್ಟುತ್ತಿರುವನು. ಅಯ್ಯೋ ಪರಿಣಾಮವೆ, ಕನಸು ಕನವರಿಕೆಗಳಲ್ಲಿ ಸಹ ಉಲಿಯುವ ಈ ನಾಟಕಾಂತರ್ಗತವಾದ ಸಂಗೀತ ರಮಣಿಯೆ ಧನ್ಯಳು! ಎಂಥ ಹುಚ್ಚಿದು! ಸೂರ್ಯನ ಜೊಡತಕ್ಕೆ ವೀರಲು ನಾನೇ ಬಡಿದು ಎಬ್ಬಿಸಿದೆನು. ನಾನಂದೆ 'ರಾಯರೇ ನಿದ್ದೆಯು ಚನ್ನಾಯಿತೋ ನಾಟಕವು ಚನ್ನಾಯಿತೋ?' ನನಗೆ ಹೇಳಕೂಡದೆಂದು ಅವರ ಸಂಕಟ, ಉಪಾಯವಿಲ್ಲ. ಹೊರಬಿತ್ತು. ಅವರ ಹೃದಯ ರಂಗದಲ್ಲಿ ನಡೆದಿರುವ ನಾಟಕವನ್ನು ಭಾವಿಸಿ, ನಾನು ಬೆವತ್ತೆನು. ಆಗನಿಸಿತು. ಈ ಹುಚ್ಚು ತನವು ಬೇಕು. ಇಂಥ ಪ್ರತಿಬಿಂಬಗಳು ಅವಶ್ಯವಾಗಿ ನಮಗೀಗ ಬೇಕು. ಕಂಡ ಕಥೆಯನ್ನು ಸುರಿಸಿ ಉಣ್ಣುವವರು ಬೇಕು. ಆದರೆ, ಈ ಹುಚ್ಚು ಬೀದಿಯಲ್ಲಿ ತಿರುಗುವ ಜೊಲ್ಲು ಸುರಿಸುವ ಅಡ್ಡಾದಡ್ಡ ಬಾಯಿ ಬಿಡುವ ತಿರುಕರಂತೆ ಬೇಡ. ಅವರೂ ಸ್ವತಂತ್ರರು, ಸಾಮಾನ್ಯಕ್ಕೆ ಸಲಿಗೆಯನ್ನು ಕೊಡದವರು, ಮನಸ್ಸಿನಲ್ಲಿ ಮಾಡಿದ ಮೂರ್ತಿಯನ್ನು ನಂಬುವವರು. ಆದರೆ, ಆ ರೀತಿಗೆ ನಿಶ್ಚಿತ ಬಿಂಬವೇ ಇಲ್ಲ. ಅಂದ ಮೇಲೆ ಸ್ವಲ್ಪು ಸಾವಧಾನದಿಂದ ನಾವಂಥ ಹುಚ್ಚುತನವನ್ನು ಹೊಳ್ಳಿಸಿ, ಸಾಧು ಜನರು ಯಾವ ತೆರನಾಗಿ ದೇವರ ಬೆನ್ನು ಹತ್ತಿ ಹುಚ್ಚರೆನಿಸಿಕೊಳ್ಳುವರೋ ಹಾಗೆಯೆ ನಾವಾದರೂ ದೇವರಂಥ ದೊಡ್ಡ ವಿಷಯವನ್ನು ಆತುಕೊಂಡು ಎಲ್ಲರ ಬಾಯಲ್ಲಿ 'ಹುಚ್ಚ' ರಾಗೋಣ! ಅಂದರೆ ನಮ್ಮ ಗತಿಯು ಬಳಿತು. ನಾಟಕವನ್ನು ನೋಡಿ ನಮ್ಮಲ್ಲಿ ಸಹಜವಾದ ಕೆಲವು ಹಾಡಿನ ತುಣುಕುಗಳು.- ನಾವೆಂಥ ಸಂಗೀತ ಶತ್ರುಗಳೇ ಇರಲಿ.- ರಹಸ್ಯದಲ್ಲಿ ನಾಲಿಗೆಯ ಮೇಲೆ ನಲಿಯುವವು. ಅದರಂತೆ ಕೆಲವು ಸ್ವಾರಸ್ಯ ಪಾತ್ರಗಳಾದರೂ ಕಣ್ಣಿನಲ್ಲಿ ಕಟ್ಟುವವು. ಇಷ್ಟೇ ಅಲ್ಲವೆಲ್ಲ, ಗುಂಯಿ ಎಂದು ನಮ್ಮ ಮನಸ್ಸನ್ನು ಮುಸುಕಿ ಹತ್ತಿಕೊಂಡ ಅದರ ಬೆಗಟು ಎಷ್ಟೋ ದಿನ ಆರುವದಿಲ್ಲ. ಕೆಲಸಾರೆ ನಮಗೆ ನಾಟಕಚಿಂತನೆಯು ಹಳವಂಡಾಗಿ ಉಳಿದು ಉಳಿದ ವಿಷಯಗಳಿಗೆ ಗಮನಿಸುವದಾಗುವದಿಲ್ಲ. ಎಲ್ಲಕ್ಕೂ ಅಸಹ್ಯವೆಂದರೆ, ಸ್ತ್ರೀಪಾತ್ರಗಳು ಸುಮ್ಮನೆ ಮನಸ್ಸು ಕಳೆಯುತ್ತವೆ. ಆಗುವತಥ್ಯವೇನೂ ಇಲ್ಲ. ಅದುದರಿಂದ ಈ ನಾಟಕದ ಹುಚ್ಚು ಹೊಸದಾಗಿ ಬೇರೆಯಾಗಿ ಹೊರಬೀಳಲೆಂಬುದೆ ನಮ್ಮ ಬಯಕೆ. ಅಂದರೆ ಸತ್ಯನಾಟಕವೆಂದರೆನು? ಕನ್ನಡಿಗರಿಗೆ ಬೇಕಾದ ನಾಟಕವಾವುದು. ಅದನ್ನು ಯಾವ ಬಗೆಯಲ್ಲಿ ಮುಂದೆ ತರುವ ಸಿದ್ಧತೆಯು ನನ್ನಲ್ಲಿ ಬೇಕು. ಇವೇ ಮುಂತಾದ ಮಾತುಗಳ ಹುಚ್ಚು ದೆವ್ವವು ಎಡಬಿಡದೆ ನಮ್ಮನ್ನು ಕಾಡಬೇಕು. ದೆವ್ವವೆಂದು ಅಂಜುವ ಸವವಿಲ್ಲ. ದೈವವು ದೆವ್ವದ ಕಾಟಕ್ಕೆಯೆ ತೆರೆಯುವದು. ಇದರಿಂದ ಗಾಳಿ-ಗೋಪುರ ವೆನಿಸುವ ನಮ್ಮ ಕರ್ನಾಟಕ ನಾಟ್ಯ ಮಂದಿರವು ಹುಚ್ಚು ಜನರ ಬಲಮೇಲೆ ... ಗಟ್ಟಿ-ಗೋಪುರವಾಗಿ ನಿಲ್ಲಬಲ್ಲದು.

ಅಂತೆ, 'ನಾವು ಬಯಸಿದ ಹುಚ್ಚರನ್ನೆ ಪಡೆಯುವ'
ಎಂದು ಕನ್ನಡ ತಾಯಿಗೆ ಬೇಡುವ

[illegible]

ಇದಕ್ಕೆ ಅಳಬೇಕೋ ನಗಬೇಕೋ

ಮುಂಜಾವಿನ ಅಯ್ದು ಗಂಟೆ, ದೇವದರ್ಶನಕ್ಕೆಂದು ಹೋಗಿದ್ದೆ. ಜನರ ಗದ್ದಲ ಕಡಿಮೆ, ಪ್ರಶಾಂತವಾದ ಕಾಲವು. ನಕ್ಷತ್ರಗಳಂತೆ ವಿರಳ ವಿರಳ ಜನರು ಬರುತ್ತಿದ್ದರು. ದತ್ತಮಂದಿರದ ಕಟ್ಟೆಯಮೇಲೆ ಓರ್ವ ಪ್ರಬುದ್ಧ ಮಾನಿನಿಯೂ ನಿಂತಿದ್ದಳು. ವರ್ಣವು ಸಾದಗಪ್ಪು, ಅಲೌಕಿಕವಾದ ಕಳೆಯಿದ್ದಿತು. ಖಾದಿಯ ಬಿಳೀ ಸೀರೆಯನ್ನುಟ್ಟಿದ್ದಳು; ಒಳಗೇನೋ ನಯವಾದ ಕುಪ್ಪಸವು ಕಾಣುತ್ತಿತ್ತು. ಒಂದೆರಡೇ ಮುತ್ತಿನ ಎಳೆಗಳು ಕೊರಳಲ್ಲಿ ಹೊಳೆಯುತ್ತಿದ್ದವು. ಮೃದುವಾದ ನೀಲವರ್ಣದ ಗುಂಗುರುಗೂದಲುಗಳಲ್ಲಿ ಬೈತಲೆಯು ಒಂದು ಕಿವಿಯಕಡೆಗೆ ಒಲೆದಂತೆ ಕಾಣುತ್ತಿತ್ತು. ಹಣೆಯಲ್ಲಿ ಪ್ರಶಸ್ತವಾದ ಕುಂಕುಮದ ಬೊಟ್ಟು; ಕಂಕಣದ ಕೈಯಲ್ಲಿ ಸಂಪಿಗೆ ಹೂಗೊಂಚಲು, ಪಾದಗಳಲ್ಲಿ ಪಾದರಕ್ಷೆಗಳು; ಇಂಥ ಸುಂದರಮೂರ್ತಿಯಿದ್ದರೂ ರೇವೆ ಮೋಡ ಬರಲು ಚಂದ್ರನು ಕಾಣುವಂತೆ ಒಮ್ಮೊಮ್ಮೆ ಮುಖಚ್ಛಾಯೆಯು ಬದಲಾಗುತ್ತಿದ್ದಿತು. ಕಟ್ಟೆಯಕೆಳಗೆ ಒಬ್ಬಿಬ್ಬ ಪರಿಚಾರಿಕೆಯರು ಇದೇನು? ಇವರಾರಿರಬಹುದೆಂಬ ಜಿಜ್ಞಾಸೆಯಿಂದ ಒಬ್ಬ ಪರಿಚಾರಿಕೆಯನ್ನು ವಿಚಾರಿಸಿದಳು, ಈಕೆಯ ಪರಿಚಯವಿಲ್ಲವೇ! ಈ ಮಹಾನುಭಾವಳು ಧಾರವಾಡನಗರದೇವತೆ!

ಈ ಮಾತುಕೇಳಿದಕ್ಷಣ ಮೈಯ್ಯಲ್ಲಿ ನಡಗುಬಂದಿತು. ಆನಂದವಾಯಿತು. ನನ್ನ ಯೋಗ್ಯತೆಯಬಗ್ಗೆ ಅಭಿಮಾನವು ಹುಟ್ಟಿತು. ಅತ್ಯಂತ ಭಕ್ತಿಯಿಂದ ಆನಂದಾಶ್ರುಗಳು ಬಂದವು. ಧೈರ್ಯದಿಂದ ಹತ್ತಿರ ಹೋಗಿ ವಂದಿಸಿದೆನು. ದೇವತೆಗಳೂ ಇಂಥ ವೇಷವನ್ನು ಧರಿಸಬಹುದೆ? ಬಾರದೇಕೆ? ಅವರುತ್ತರದೇವತೆ. ಎಲ್ಲಿ ಅವತರಿಸುವರೋ ಅಲ್ಲಿಯವರಂತೆ ಇರಲು ಅವರಿಗೆ ಸಾಧ್ಯವು. ಸೀಮಂತಿನಿಯರ ಸೀಮಂತವು ಹೆಳಲಿನ ಗುಂಗುರು ಕೂದಲುಗಳನ್ನು ಸರಿಯಾಗಿ ಇಬ್ಭಾಗ ಮಾಡುವದು ಪೂರ್ವರೀತಿ. ಈಗ ಅದು ಒತ್ತಟ್ಟಿಗೆ ಒಲೆಯುವ ಕಾರಣವೇನಿರಬಹುದು? ಹಾ ತಿಳಿಯಿತು! ಹೊದಲಿನವರ ಮಸ್ತಕದಲ್ಲಿ ಸರಿಯಾಗಿ ವಿಭಾಗಿಸಿ ನ್ಯಾಯ ಕೊಡುವ ಶಕ್ತಿ ಇದ್ದಿತು. ಈಗಾದರೋ ಪಕ್ಷಪಾತ. ಜನನ್ನು-ಈ ಕಲಿಕಾಲದ ನ್ಯಾಯವನ್ನು ತೋರಿಸುವದಕ್ಕೇ ಬೈತಲೆ ಒತ್ತಟ್ಟಿಗೇ ಒಲೆದಿರಬಹುದು. ಇರಲಿ, ದೊಡ್ಡವರು ಹಿಡಿದದಾರಿಯೇ ಸರಿಯೂ ಇದ್ದೀತು, ಎಂದು ಮೊದಲಾದ ವಿಚಾರದಲ್ಲಿ ಮಗ್ನನಾಗಿರಲು, ಕೆಲವರು ಬಂಗಾರದ ಕಟ್ಟಿನ ಕನ್ನಡಕಗಳನ್ನು ಮೂಗಿನಮೇಲಿಟ್ಟು, ಅಷಂಡಿರದ ವೇಷದಿಂದ ಹತ್ತಿರವೇ ಬಂದರು. ಕೆಲವರು ಸಾಬಾ ಉಡುಗೆ ತೊಡಗೆಯಿಂದ ಹಣೆಯಮೇಲೆ ಗಂಧವನ್ನು ಒರೆದು, ಕೀಲೀಕೈಸರವನ್ನು ಹಿಡಿದುಕೊಂಡು ಬಂದರು; ಕೆಲವರು ನನ್ನಂತೆ ಧೋತರ ಹೊದ್ದವರು ಬಂದರು.

ದೇವಿಯು ತನ್ನಿಂದ ತಾನೇ ಮಾತಾಡಹತ್ತಿದಳು. ಈ ಜನರು ಕ್ಷಣಕ್ಷಣಕ್ಕೆ ಬರುವದು ಅವಳಿಗೇನು? ಹುಡುಗರು ಅತ್ತಿತ್ತ ಓಡಾಡುವಾಗಲೂ ವೃದ್ಧಳಾದ ತಾಯಿಯು ತನ್ನ ಸುಖದುಃಖದ ಮಾತುಗಳನ್ನು ತನ್ನಷ್ಟಕ್ಕೆ ಆಡುತ್ತಿರುತ್ತಾಳೆ. ಆಕೆಗೆ ಬಾಲಕರ ಪರಿವೆಯೇ? ಅಹಾ ಎಷ್ಟು ಸೋಜಿಗ! ಎಲ್ಲರೂ ಬೇರೆಯವರನ್ನು ಅನುಸರಿಸತೊಡಗಿದ್ದಾರೆ. ಅನುಕರಣವೇ ಈಗಿನ ಶಿಕ್ಷಣವಾಗಿದೆ? ಡಾಕ್ಟರರು ಮಂದಿಯ ಹೊಟ್ಟೆಯೊಳಗಿನ ಜಾಡ್ಯವನ್ನು, ಮೈಯ್ಯೊಳಗಿನ ಕಾಹಿಲೆಯನ್ನು, ಕಳೆಯಲೋಸುಗ ಮನೆಗೆ ಹೋಗಿ ಭೆಟ್ಟಿಯಾದರೆ ೨ ರೂಪಾಯಿ ಫೀಯನ್ನು ತೆಗೆದು ಕೊಳ್ಳುತ್ತಾರೆ; ಇದು ಒಂದೆ ಬಾರಿಗೆ- ಇದನ್ನು ನೋಡಿ ಬಂಧು-ವೃತ್ತ ವಿಜಯ -ಹಂಸ -ವೀರ -ಟಾಯಿಮ್ಸ್, ಮೊದಲಾದ ನನ್ನ ಮಕ್ಕಳೂ ಮನೆಮನೆಗೆ ಊರೂರಿಗೆ ಹೋಗಿ ೫೨ ಸಾರೆ ತಿರುಗಾಡಿ ೨ ರೂ. ಫೀಯನ್ನು ವರ್ಷದ ಆಯುವೆಂದು ಕೇಳುತ್ತಾರೆ! ನೀವು ನನ್ನ ತಲೆಶೂಲ್ಯವನ್ನು ಕಳೆಯಲೇ ಇಲ್ಲ. ನೋಡುವಾ ಮುಂದೆ ನಿಮ್ಮ ಬಿಲ್ಲು ಕೊಡಲಿಕ್ಕೆಬರುತ್ತೆಂದು ಜನರು ಉದಾಸೀನ ಮಾಡುತ್ತಾರೆ! ಅವರದಾದರೂ ಏನು ತಪ್ಪು? ನನ್ನ ವರಾದರೂ ದಕ್ಷರೆನ್ನಬೇಕೇ? ಒಬ್ಬನು ಅಲ್ಪಸಂತೋಷಿಯು ಕೊತಲ್ಲೇ ಕೂಡುವನು; ಮತ್ತೊಬ್ಬನು ಒಂದಕ್ಕೆ ಹತ್ತಿದರೆ ಅದೇ ಔಷಧವನ್ನು ೪|೬ ಬಾಟ್ಲಿ ಕುಡಿಯಲಿಕ್ಕೆ ಹೇಳುವನು; ಒಬ್ಬನು ಅಷ್ಟಕಷ್ಟೇ ಮಾತಾಡಿ ಹೋಗುತ್ತಾನೆ, ಇನ್ನೊಬ್ಬನು ಬಂದಷ್ಟು ಜನರು ಬರಲಿ ಎನ್ನುತ್ತಾನೆ; ಒಬ್ಬಿಬ್ಬರು ಪಟಪಟಿಕೆಯಿಂದ ಅತ್ತಿತ್ತ ಓಡಾಡುತ್ತಾರೆ. ಎಲ್ಲರೂ ತಂತಮ್ಮ ಸದಸದ್ವಿವೇಕ ಬುದ್ಧಿಯಂತೆ ಔಷಧವನ್ನು ತಯಾರಿಸುತ್ತಾರೆ. ಆದರೆ ಜನಗಳ ದೃಷ್ಟಿಯಿಂದ ಕೀಲಿಯೊಂದಾದರೆ ಕೀಲೀಕೈ ಹತ್ತೊಂದು. ಹೀಗಾಗಿ ನನ್ನ ಮುಂದೆ ಬರಲೊಲ್ಲರೆಂದು ಕೆಲವರು ಅಡಕೊಳ್ಳುತ್ತಾರೆ. ಹುಬ್ಬಿರಿಸಿ ದೇವಿಯು ಮಾತ್ರ ಅಂದಳು. ಇನ್ನೊಂದು ಮಾತು, ಇದು ಸ್ವತಂತ್ರ ಯುಗವಂತೆ! ಎಲ್ಲರೂ ಕೂಡಿರ ಕೂಡದು. ಬೇಕಾದವರು ಬೇಕಾದಲ್ಲಿ ಮನೆಮಾಡಿಕೊಂಡು ಮನಬಂದಂತೆ ವ್ಯವಹಾರವನ್ನು ಮಾಡಬೇಕಂತೆ. ಸ್ವಾತಂತ್ರ್ಯ ಬಾಷ್ಪದಿಂದ ಜಡವಾದ ಜನಗಳಿಗೆ "ಬಿಚ್ಚರೊಬ್ಬರು ಬಿಡದೆ ಬಿಡಿರಿ, ಬೇಕಾದ ಜಾತಿಯವನಾಗಲಿ ಕವಗ ಹೋಲಿಯನಾಗಲಿ, ನಿಮ್ಮ ಬಂಧುವು; ಎಲ್ಲರೂ ಕೂಡಿ ನಡೆಯಿರಿ. ದ್ವೇಷಾಸೂಯೆಗಳನ್ನು ಬಿಟ್ಟು ಬಿಡಿರಿ, ಸ್ಪೃಶ್ಯಾಸ್ಪೃಶ್ಯದ ಹುಚ್ಚನ್ನು ದೂರ ಮಾಡಿರಿ. ಒಂದೇ ಹಾದಿಯಾಗಿ ಹುರುಪಿನಿಂದಿರ್ರಿ." ಎಂದು ಗಿರಾಕಿಗಳಿಗೆ ಬೋಧಿಸುತ್ತಾರೆ!! ತಾವಾದರೂ ಒಟ್ಟುಗೂಡಿ ನಮ್ಮ ಕೆಲಸವೇನು? ನಮ್ಮ ಉದ್ಯೋಗವು ಹೇಗೆ ಬೆಳೆದೀತು? ಇಡೀ ಕರ್ನಾಟಕದ ಗಿರಾಕಿಗಳು ನಮ್ಮ ಕಡೆಗೆ ಹೇಗೆ ಬಂದಾರು? ಇಂಥ ವಿಚಾರವನ್ನೇ ಮಾಡುವದಿಲ್ಲ. ಇದಕ್ಕೇನು ಅಳಬೇಕೋ ನಗಬೇಕೋ ತಿಳಿಯದಾಗಿದೆ, ಎಂದು ಸುಗರೆದು ನಿಂತಳು.

ನನ್ನ ಮುಂದೆ ನಿಂತ ದೊಡ್ಡ ದೊಡ್ಡ ಶಾಲೆಯ ಬುಕ್ಕುಗಳನ್ನು ಹಿಡಿದ ಚಿನ್ನದ ಕನ್ನಡಕದವರು-"ಮೊದಲು ಅವಳಿಗೆ ಕಲಿಸೋಣ ಹಿಂಗಿನಿಂದ ಅಳೋಣ, ಇದು ಹೆಣ್ಣು ಮಕ್ಕಳ ರೀತಿಯೇ. ಮೂರು ವರ್ಷದ ಬುದ್ಧಿ ನೂರು ವರ್ಷದ ತನಕ, ಮಾಡಿದ್ದುಣ್ಣೋ ಮಹಾರಾಯಾ; ನಡಿಯಿರಿ ಪಕ್ಷಕಾರರು ಬಂದಿದ್ದಾರು." ಎಂದು ಮುಂದೆ ಸಾಗಿದರು. ಕೆಲವರು ಕೀಲೀ ಕೈಯ್ಯೊಳಗಿನ ಹೊರಬಾಗಿಲದ ದೊಡ್ಡ ಕಿರ್ರನ್ನುಲಿಸಿ ಹಿಡಿದುಕೊಂಡು ನಡೆದರು. ಇದು ನಮಗೇನು ತಿಳಿಯದು; ಮುಂದೇ ನೋಡುವ ನಮಗೇನು? ಹೊತ್ತೇರಿತು ನಡಿಯಿರಿ; ಎಂದು ಹೊರಟರು. ನಮ್ಮ ಹಿಂದಿನವರು "ಇದರಲ್ಲಿ ಪಕ್ಷದ ಮಾಸಿಕದ ಹೆಸರೇನಾದರೂ ಬಂದಿತ್ತೇ ಕಾಣುವದಿಲ್ಲ. ನಡೆಯಿರಿ ಈಗೇನೂ ಹೆಂಗಸರೂ ಪಂಡಿತರಾಗಿ ಚಹಾಟಿಗೆ ಬಂದು ವ್ಯಾಖ್ಯಾನ ಕೊಡುತ್ತಾರೆ. ಮುನ್ನಘನಲ್ಲಿ ವೃಥಾ ವಾದಂಬರ ಹೆಚ್ಚಿಯಾಯಿತು" ಎಂದು ಬಿರಬಿರನೆ ನಡೆದರು. ಜಗ್ಗನೇ ಪ್ರಕಾಶವಾಯಿತು. ದೇವಿಯು ಕಾಣಲೇ ಇಲ್ಲ. ಬರೀ ಕಟ್ಟೆ. ಅಂಳೇ ಮರದ ಎಲೆಗಳು ಚಪ್ಪಾಳೆಯನ್ನಿಕ್ಕಿದಂತೆ ಪಟಪಟಿಸ ಹತ್ತಿದವು. ದೇವರಿಗೆ ಕೈಮುಗಿದು ಗಾ[illegible]ಗಾಗಿ ಎಂದು ಮನೆಗೆ ಬಂದೆನು. ನೋಡಿದ್ದನ್ನೂ ಕೇಳಿದ್ದನ್ನೂ ಹೇಳದೆ ಮನಸ್ಸಿನಲ್ಲಿ ಸಮಾಧಾನವಾಗುತ್ತದೆ. ನಿನ್ನ ಮುಂದೆ ಹೇಳಿದೆನು.

—ಆಗಂತುಕ

ಮಹಾತ್ಮಾ ಗಾಂಧಿಯವರು ಭೋಜಕ್ಕೆ ಹೋದಾಗ್ಗೆ ಅಲ್ಲಿಯ ಮಹಾಜನರು ಅವರಿಗೆ ಒಂದು ಬೆಳ್ಳಿಯ ರಾಟೆಯನ್ನು ಕಾಣಿಕೆಯಾಗಿ ಕೊಟ್ಟರು. ಮಾನಪತ್ರವನ್ನು ಬೆಳ್ಳಿಯ ಕರಂಡಕದಲ್ಲಿ ಹಾಕಿಕೊಟ್ಟರು. ಜನರಇಚ್ಛೆಯಂತೆ ಮಹಾತ್ಮರು ಅಸ್ಪೃಶ್ಯರ ಮಧ್ಯದಲ್ಲಿಯೇ ನಿಂತು ಮಾತನಾಡಿದರು, ಸ್ಪೃಶ್ಯರ ಹತ್ತರ ಅಸ್ಪೃಶ್ಯರು ಬರಕೂಡದೆಂದು ಸ್ಪಷ್ಟವಾಗಿಯೂ, ಧೈರ್ಯದಿಂದಲೂ ಹೇಳಿದ್ದರ ಪರಿಣಾಮವಿದು.

ವರ್ತಮಾನಸಾರ

ಇಹವೃತ್ತ

ಮಳೆಯು ಅವಶ್ಯಕವಾಗಿ ಬೇಕಾಗಿದೆ.

ಸ್ವಲ್ಪಕಾಲ ವಿಜಾಪುರ ಜಿಲ್ಲೆಯ ಕಲೆಕ್ಟರರಾಗಿದ್ದ, ಅಚ್ಚಗನ್ನಡಿಗ ರಾವ, ಶ್ರೀ ವೆಂಕಣ್ಣ ಹೊಸಬ ನಾಯಿಕ ಇವರು ರತ್ನಾಗಿರಿ ಜಿಲ್ಲೆಯ ಕಾಯಂ ಕಲೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆಂಬುದಾಗಿ ಕೇಳುತ್ತೇವೆ.

“ಕೊಲ್ಹಾಪುರ ಬ್ರದರ್ಸ ಬ್ಯಾಂಕು” ಎಂಬುದೊಂದು ಹೊಸ ಬ್ಯಾಂಕು ಇಲ್ಲಿ ದೀಪಾವಳಿಯಲ್ಲಿ ಸ್ಥಾಪಿಸಲ್ಪಟ್ಟಿದೆ. ಶ್ರೀ. ಕೊಲ್ಹಾಪಟ್ಟಿ ರಾಮಣ್ಣನಾಯಿಕರು ಇದರ ಮುಖ್ಯ ಕಾರ್ಯಪಾಲಕರು.

ಶ್ರೀ. ಮಂಜಪ್ಪ ಹರ್ಡೇಕರರು ಇಲ್ಲಿಗೆ ಬಂದು ಹುನಗುಂದ ತಾಲೂಕಿನಲ್ಲಿ ಖಾದಿ, ಅಫೀಮು ಮೊದಲಾದ ವಿಷಯಗಳ ಬಗ್ಗೆ ಜನ ಜಾಗ್ರತೆ ಮಾಡಲು, ಹೋಗಿದ್ದಾರೆ ೧೦-೧೫ ದಿನಗಳ ವರೆಗೆ ಅಲ್ಲಿ ಸಂಚಾರ ಮಾಡುವರು

ಉತ್ತರಕರ್ನಾಟಕದಲ್ಲಿ ಪ್ರಸಿದ್ಧಿಯನ್ನು ಹೊಂದಿದ್ದ ಶಂಕರ ಕಣ್ಣೂರಿಯವರು ಜೀವಿಗಿರುವದಿಲ್ಲವೂ, ಹಿಂದುಸ್ಥಾನೀ ಸೇವಾದಲದ ಸ್ವಯಂಸೇವಕರೂ ಡಾ. ಹರ್ಡೀಕರರ ಪ್ರಿಯರೂ ಆಗಿದ್ದ ಶ್ರೀ ಜೋಶಿ ಧೀರೇಂದ್ರ ಇವರು ಮಂಗಳೂರಿನಲ್ಲಿಯೂ ಮೃತರಾದರೆಂದು ತಿಳಿಸಲು ನಮಗೆ ಅತ್ಯಂತ ವಿಷಾದವಾಗುತ್ತದೆ ಪರಮೇಶ್ವರನು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ!

ಮುಂಬೈ ಕರ್ನಾಟಕ

ಕರ್ನಾಟಕ ಭೂಷಣ ಕೌಜಲಗೀ ಶ್ರೀನಿವಾಸರಾಯರು ವೃತ್ತಪ್ಪ ಬೇನಕೆಯ ಬಾಯೊಳಗಿಂದ ಪಾರಾಗಿ ಬಂದಿದ್ದಾರೆ. ಈಗ್ಗೆ ಅವರಿಗೆ ಗುಣವಾಗಹತ್ತಿದೆಂದು ತಿಳಿಸಲು ನಮಗೆ ಅತ್ಯಂತ ಆನಂದವಾಗುತ್ತದೆ ಇವರು ಚಿರಾಯುಗಳಾಗಿರಬೇಕೆಂದು ಕರ್ನಾಟಕ ಮಾತೆಯ ಆಶೀರ್ವಾದವಿದೆಂಬದು ಈಗ್ಗೆ ಸಿದ್ಧವಾಯಿತು. ವಿಜಾಪೂರದಲ್ಲಿ ಇವರ ಸ್ಥಿತಿಗತಿಯನ್ನು ಅಲ್ಲಿಯ ಜನರಿಗೆ ತಿಳಿಸಲು ದಿನಾಲು ಅನೇಕ ಸಲ ಮನೆಯ ಹೊರಕ್ಕೆ ಹಲಗಿಯ ಮೇಲೆ ಬರೆದು ತಿಳಿಸುತ್ತಿದ್ದರು ಜಿಲ್ಲೆಯೊಳಗಿನ ಪ್ರಮುಖ ಸ್ಥಳಗಳಿಗೆ ದಿನಾಲು ತಂತಿಗಳಿಂದ ಕ್ಷೇಮ-ಸಮಾಚಾರವು ತಿಳಿಯುತ್ತಿದ್ದಿತು. ದೀಪಾವಳಿಯ ಹಬ್ಬದಲ್ಲಿ ಇವರ ಮನೆಯ ಸುತ್ತಲಿರುವ ಅಂಗಡಿಕಾರರೆಲ್ಲ ಪ್ರತಿವರ್ಷದಂತೆ ಸಿಡಿಮದ್ದು ಗೊಂದಲಮಾಡದೇ, ಬಾಣ ಮದ್ದುಗಳನ್ನು ಹಾರಿಸುವದನ್ನೂ ನಿಷೇಧಿಸಿದ್ದರು. ಮೋಟಾರ ಮುಂತಾದ ಇತರ ವಾಹನಗಳು, ಅವರ ಮನೆಯ ಮುಂದಿನ ಬೀದಿಗಳಲ್ಲಿ ಹಾಯದಂತೆ ಸಹ ವ್ಯವಸ್ಥೆಯಾಗಿದ್ದಿತು. ಪೋಲೀಸರು ಸಹ ಈ ಕಾರ್ಯದಲ್ಲಿ ಸಹಾಯಕರಾಗಿ ಜನರ ಪ್ರಶಂಸೆಗೆ ಪಾತ್ರರಾದರು ಇವೆಲ್ಲ ಸಂಗತಿಗಳಿಂದ ಕರ್ನಾಟಕ ಭೂಷಣರಲ್ಲಿ ಜನತೆಯ ಪ್ರೀತಿವಿಶ್ವಾಸ ಹೆಚ್ಚಿನದೆಂಬುದು ಸಿದ್ಧವಾಗುತ್ತದೆ. ದೇಶಭಕ್ತ, ಗಂಗಾಧರರಾಯರು ಮದಿಹಾಳ ಯಾಳಗಿ, ದಾತಾರ, ಪೋತದಾರ ಮುದನೂರಕರ ಮೊದಲಾದ ಮುಖಂಡರೆಲ್ಲರೂ ವಿಜಾಪೂರಕ್ಕೆ ಬಂದು, ಶ್ರೀನಿವಾಸರಾಯರ ಕ್ಷೇಮ ಸಮಾಚಾರವನ್ನು ತಿಳಿದು ಕೊಂಡು ಹೋದರು ಡಾ ಹರ್ಡೀಕರರಂತೂ ತಮ್ಮ ಸ್ವಯಂಸೇವಕರೊಂದಿಗೆ ವಿಜಾಪೂರದಲ್ಲಿಯೇ ಇದ್ದು, ಅವರ ಶುಶ್ರೂಷೆಯನ್ನು ಬಹು ದಕ್ಷತೆಯಿಂದ ಮಾಡಿದರು ಅಮೇರಿಕೆಯಿಂದ ಮರಳಿ ಬಂದಿದ್ದ ಡಾ. ಕೊಟಿಕನೂರ ಡಾ. ದೇಶಪಾಂಡೇ ಮೊದಲಾದವರು ಸೇವಾವೃತ್ತಿಯಿಂದ ಬಂದು ಚಿಕಿತ್ಸೆಗಾಗಿ ಯಾವಾಗಲೂ ಸಿದ್ಧರಾಗಿಯೇ ಇದ್ದರು ಈ ಎಲ್ಲ ಮಹನೀಯರಿಗೂ ನಾವು ನಮ್ಮ ವಂದನೆಗಳನ್ನರ್ಪಿಸುತ್ತೇವೆ

ಶ್ರೀ. ಬೆಳವೀ- ಕಡಪಾ, ಸಾವುಕಾರ ಡಾ ಸಿ. ಬಿ. ರಾಮರಾವ ಪ ಪಸುಕಾಲಪ್ಪಾ ಗುರುರಾಜರಾವ ಮೊದಲಾದ ಮಹನೀಯರು ಮುದ್ರಾಸಕ್ಕೆ ಹೋಗಿದ್ದಾರೆ. ಆಂಧ್ರ ವಿಶ್ವವಿದ್ಯಾಲಯಕ್ಕೆ ಬಳ್ಳಾರಿಯು ಸೇರಕೂಡದೆಂದು ಇವರು ಅಲ್ಲಿ ಎಲ್ಲ ರೀತಿಯಿಂದಲೂ ಪ್ರಯತ್ನಿಸುವರು.

ಮದ್ರಾಸ ಕರ್ನಾಟಕ

ನಾಯಕ್ [illegible] ಯ ಪಕ್ಷದ ಪರಿಷತ್ತಿನಲ್ಲಿ ರಾಟಿಯ ಮಹತ್ವ [illegible] ಕುರಿತು [illegible] ಭಾಷಣ ಮಾಡಿದರು

ಕೋಯಿಮತ್ತೂರ ಜಿಲ್ಲೆಯಲ್ಲಿಯು ಬೆಳೆಗಳು ಬಾಡುತ್ತಲಿವೆ. ಅದರೂ ಅಮಲದಾರರು ಬಡರೈತರಿಗೆ ಕಾಲುವೆಗಳಲ್ಲಿಯ ನೀರನ್ನು ಸಕಾಲಕ್ಕೆ ಪೂರೈಸುವದಿಲ್ಲವೆಂದೂ ‘ಫಾರ್ಮರ’ಕ್ಕೆ ಮಾತ್ರ ಹೆಚ್ಚಾಗಿ ಕೊಟ್ಟು ಭೇದಭಾವವನ್ನು ತೋರಿಸುತ್ತಿರುವರೆಂದೂ, ಅಲ್ಲಿಯ ರೈತರು ತಕರಾರು ಮಾಡಿದ್ದಾರೆ.

ಮೈಸೂರ ಕರ್ನಾಟಕ

ಮೈಸೂರಿನ ಸಂಸ್ಕೃತ ಕಾಲೇಜಿನಲ್ಲಿ ‘ಪ್ರೊಫೆಸರ’ರಾಗಿದ್ದ ಶ್ರೀ. ರಂಗಾಚಾರ್ಯರು ರಾಜೀನಾಮೆಕೊಟ್ಟು ಸನ್ಯಾಸ ಆಶ್ರಮವನ್ನು ತೆಗೆದುಕೊಂಡರು. ಶ್ರೀ ಮನ್ ಮಹಾರಾಜರವರು ಅವರನ್ನೇ ಈಗ್ಗೆ ರಾಜಗುರುಗಳನ್ನಾಗಿ ಆರಿಸಿದ್ದಾರೆ.

ದೊಡ್ಡ ಬಳ್ಳಾಪೂರದಲ್ಲಿ ೨೪-೨೫ ತಾ॥ ಗಳಲ್ಲಿ ೯ ನೇ ಕರ್ನಾಟಕ ‘ಥಿಯೊಸೊಫಿಕಲ್’ ಪರಿಷತ್ತು ನೆರೆಯಿತು. ಅದ್ಯಾರದ ಸೀತಾರಾಮಯ್ಯನವರು ಅಧ್ಯಕ್ಷರಿದ್ದರು. ಕನ್ನಡ ತೆಲುಗುಗಳಲ್ಲಿ ಭಾಷಣಗಳಾದವು.

ಹಿಂದುಸ್ಥಾನ

ಸರಕಾರಿ ನೋಟುಗಳನ್ನು ಕತ್ತರಿಸಿ ಅವನ್ನು ಹಿಂದುಗಡೆಗೆ ಅಂಟಿಸುವ ಪದ್ಧತಿಯನ್ನು ಸರಕಾರದವರು ತೆಗೆದು ಹಾಕಬೇಕೆಂದು ಯೋಚಿಸುತ್ತಿದ್ದಾರೆ. ಈ ಯೋಜನೆಯು ಎಲ್ಲರಿಗೂ ಗೊತ್ತಾಗಬೇಕಾದ್ದರಿಂದ ೧೯೨೬ನೇ ಇಸ್ವಿ ಏಪ್ರಿಲ ತಿಂಗಳ ವರೆಗೆ ಅದು ಅಮಲಿನಲ್ಲಿ ಬರುವದಿಲ್ಲ.

ಅಸಹಕಾರದಲ್ಲಿ ಭಾಗ ತೆಗೆದುಕೊಂಡ ವಿದ್ಯಾರ್ಥಿಗಳಿಗೆ ಹಲಕೆಲವು ಸೌಕರ್ಯಗಳನ್ನುಂಟು ಮಾಡಿಕೊಡಬೇಕೆಂದು ಅಸಹಕಾರಿ ವಿದ್ಯಾರ್ಥಿಗಳ ಸಂಘದವರು, ಮುದ್ರಾಸ ವಿಶ್ವವಿದ್ಯಾಲಯದವರಿಗೆ ಪ್ರಾರ್ಥಿಸಿದ್ದಾರೆ. ಎಂತಹ ಹಡೇಬರವು!!

ನಿಝಾಮರ್ ಸಾಹೇಬರ ಕುಮಾರಿಯು ೧೯ ನೇ ತಾ॥ ದಿನ ಮುದ್ದದ್ದರಿಂದ, ಹೈದರಾಬಾದಿನಲ್ಲಿ ಸರಕಾರಿ ಕಚೇರಿಯೂ ಸಾರ್ವಜನಿಕ ಉತ್ಸವಗಳೂ ಬಂದು ಇಡಲ್ಪಟ್ಟವು.

ಈಗ್ಗೆ ತಾನೇ ಕೆಲಸದಿಂದ ನಿವೃತ್ತಿ ಹೊಂದಿದ ರಾವ ಬಹದ್ದೂರ ಏಚ್. ಕೃಷ್ಣ ಶಾಸ್ತ್ರಿಗಳಿಗೆ ಮುದ್ರಾಸದಲ್ಲಿ ಪ್ರಾಂತದ ಸ್ತ್ರೀಯರು ತಾಂಬೂಲ ಸಮಾರಂಭವನ್ನು ಮಾಡಿದರು.

ಪರದೇಶ

ಪರ್ಶಿಯಾ ಸಮುದ್ರದಲ್ಲಿ ದೊಡ್ಡದೊಂದು ಬಿರುಗಾಳಿಯು ಬೀಸಿತು. ೭೦೦೦ ಜನರು ಸತ್ತರೆಂದು ವರ್ತಮಾನ. ನೋಕೆ, ಹಡಗ ಇವೇ ಮೊದಲಾದ ೪೦ ಜಲಯಾನಗಳು ಮುಳುಗಿವೆ ಮುಮಕರಿಗೆ ಸಹ ಇಂಥ ಭಯಂಕರವಾದ ಬಿರುಗಾಳಿಯ ಹೇಳಿಕೆಯ ಕಥೆಯು ಗೊತ್ತಿಲ್ಲವಂತೆ

ನೂಲಿನ ಜೊತೆಯಲ್ಲಿ ಕೃತ್ರಿಮ ರೇಶಿಮೆಯನ್ನು ಸೇರಿಸಿ, ಹೊಸ ಹೊಸನಮೂನೆಯ ಅರಿವೆಗಳನ್ನು ಮಾಂಚೆಸ್ಟರದಲ್ಲಿ ಸಿದ್ಧ ಪಡಿಸುತ್ತಿರುವರು ಇದರಿಂದ ಆ ಬಟ್ಟೆಗಳು ಬಹು ಅಂದವಾಗಿ ತೋರುವವೆಂದೂ ಅಗ್ಗವಾಗುವವೆಂದೂ, ಆದ್ದರಿಂದ ಹಿಂದುಸ್ಥಾನದಲ್ಲಿ ಮ್ಯಾಂಚೆಸ್ಟರದ ಬಟ್ಟೆಗಳು, ಪುನಃ ಹೆಚ್ಚಾಗಿ ಖರ್ಚಾಗುವವೆಂದೂ, ವಿಲಾಯತಿಲ್ಲಿ ಕೇಳುವರ ಮತವಿದೆ

ನೋಟೀಸು

ಈ ನೋಟಿಸಿನಿಂದ ಎಲ್ಲ ಜನರಿಗೂ ತಿಳಿಸುವದೇನಂದರೆ:—

ಹುನಗುಂದ ತಾಲೂಕ ಮೈಕ ಕಮತಗಿ ಊರಿನ ಹತ್ತಿರ ಮಲಪ್ರಭಾನದಿಯ ಮೇಲೆ ಆಡುವ ನಾವು ಚಾಲೂವರ್ಷದಿಂದ ಬಂದು ಮಾಡಿರುತ್ತದೆ.

Bijapur1
26 th Oct. 1925.

Sd/ S. B. Rego
Executive Engineer
Bijapur Division.

ಜಾಹಿರಾತು

ಪ್ರಾಥಮಿಕ ಶಿಕ್ಷಣದ ಕಾಯಿದೆ ಕೆಳಗೆ ಸರಕಾರದವರು ಮಾಡಿದ ವ ಲೋಕಲಬೋರ್ಡ ಕಾಯದೆ ಅನ್ವಯಾ ವಿಜಾಪೂರ ಜಿಲ್ಹಾದ ಈಗಿನ ಯಾವತ್ತೂ ಪ್ರಾಥಮಿಕ ಶಿಕ್ಷಣದ ಶಾಲೆಗಳು ವ ಅದರಂತೆ ಗುಳೇದಗುಡ್ಡ ವ ಇಲಕಲ್ ಮುನಸಿಪಾಲಟಿವಳಗೆ ಪ್ರಾಥಮಿಕ ಶಿಕ್ಷಣದ ಶಾಲೆಗಳು ಬರುವ ಡಿಸೆಂಬರ ೧೯೩೫ ದಿಂದ ಡಿ|| ಲೋ|| ಬೋರ್ಡಿನ ತಾಬೆಕ್ಕೆ ಬರುವವು.

೨ ಪ್ರಾಥಮಿಕ ಶಿಕ್ಷಣದ ಅಕ್ಟ ಕಲ್ಮ ೩ ನೇ ಪ್ರಕಾರ ಕೆಳಗೆ ಬರೆದಂತೆ ೧೨ ಮೆಂಬರ ಜನರದು ಒಂದು ಸ್ಕೂಲಬೋರ್ಡ ಮಾಡತಕ್ಕದ್ದು ಅದೆ:—

ಶೇಜನಂಬರು	ಯಾರು ಮೆಂಬರ ಆಗಬಹುದು.	ಸಂಖ್ಯಾ.
೧	ಶಿಕ್ಷಣದಲ್ಲಿ ಅನುಭವ ಇದ್ದವರು.	೧
	ಟೀಪು:- ಇದರ ರೂಲ್ಸದಲ್ಲಿ ಬರೆದ ಪ್ರಕಾರ	
೨	ಹೆಂಗಸರು	೧
೩	ಮುಸಲಮಾನ	೧
೪	ಹಿಂದುಳಿದ ವರ್ಗ	೨
೫	ಅಸ್ಪೃಶ್ಯರವರ್ಗ	೧
೬	ಮುನಸಿಪಾಲಿಟಿಗಳು	೨
೭	ಜನರ (ಇತರಲ್)	೪
		೧೨

ಹಿಂದುಳಿದ ವರ್ಗ ಮತ್ತು ಅಸ್ಪೃಶ್ಯರ ವರ್ಗ ಸದ್ರಿ ರೂಲ್ಸ ದಲ್ಲಿ ಶೆಡ್ಯುಲಗಿದಲ್ಲಿ ಬರುವರು.

೩ ಸದ್ರಿ ಇಲೆಕ್ಶನ್ ಬಾಬತು ಪ್ರೋಗ್ರಾಮ ಕೆಳಗೆ ಬರೆದ ಪ್ರಕಾರ ಇರತ್ತದೆ. ಮತ್ತು ಈ ಸಂಬಂಧಿ ನಿಯಮಗಳು ಶೆಡ್ಯುಲ ದಲ್ಲಿ ಬರೆದಿವೆ. ಅವುಗಳನ್ನು ನೋಡಬೇಕು.

ಇಲೆಕಶನ ಪ್ರೋಗ್ರಾಮ

೧ ಮೆಂಬರ ಆಗಲಿಕ್ಕೆ ಇಚ್ಛಿಸುವವರು ಅರ್ಜಿಯನ್ನು ಕಳಿಸುವದಸಿಂದಾ ನೋಟಿಸು ಕೊಡುವ ತಾರಿಖು ೮-೧೦-೧೯೩೫

೨ ಮೇಲೆ ಪ್ಯಾರಾ ೨ ನೇದರಲ್ಲಿ ತೋರಿಸಿದ ಶೇಜನಂಬರ ೧ ರಿಂದಾ ೬ ವರಿಗೆ ಇರುವ ವರ್ಗಕ್ಕೆ ಉಮೇದ್ವಾರರಾಗಿ ನಿಂದರಲಿಕ್ಕೆ ಇಚ್ಛಿಸುವವರು ಯಾವ ತಾರಿಖಿನವರಿಗೆ ಅರ್ಜಿಮಾಡತಕ್ಕದ್ದು ಆ ತಾರಿಖು ೨೭-೧೦-೧೯೩೫

೩ ಇಲೆಕ್ಶನ ತಾರಿಖು ದಿವ್ಸವೇಳೆ ವಗೈರೆ ಡಿ|| ಲೋ|| ಬೋರ್ಡ ಮೆಂಬರರಿಗೆ ತಿಳಿಸುವ ತಾರಿಖು. ೨-೧೧-೧೯೩೫

೪ ಪ್ರೆಶಿಡೆಂಟ ಡಿ|| ಲೋ|| ಬೋರ್ಡ ಇವರಿಗೆ ಡಿ|| ಲೋ|| ಬೋರ್ಡ ಆಫಿಸದಲ್ಲಿ ನಾಮಿನೆಶನ್ ಪೇಪರ ಹಜರ ಮಾಡತಕ್ಕ ತಾರೀಖು ೧೫-೧೧-೧೯೩೫ (೧ ಘಂಟೆಕ್ಕೆ)

೫ ನಾಮಿನೇಶನ್ ಕಾಗದಗಳು ತಪಾಸ ಮಾಡತಕ್ಕ ತಾರೀಖು ೧೬-೧೧-೧೯೩೫ ಒಂದು ಘಂಟೆಗೆ ಸುರು ಆಗುವದು.

೬ ಇಲೆಕ್ಶನ ಆಗುವ ತಾರೀಖು ೨೩-೧೧-೧೯೩೫ ಒಂದು ಘಂಟೆಕ್ಕೆ

Sd/ P. L. Kalkeri.
Chief officer
D. L. B. Bijapur.

Sd / Raghwendrarao
Kembhavi.
President D. L. Board

ಪ್ರಕಟನೆ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೫ ನೇ ಇಸ್ವಿಯ ಜುಲೈ ೩೧ ನೇ ತಾ|| ದಿನ ಸಾಯಂಕಾಲದ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟೀ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ. ಬಸವಾರಾಧ್ಯ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ತರಿಗೆ ೧೦೦೦ ರೂ. ಸಾಲವು ದೊರೆಯ ಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೧೧೬೦೨ ಶ್ರೀ. ಆರ್. ಜಿ. ಹುಕ್ಕೇರಿ. ಬುಕ್ಕಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೪೪೫ ಶ್ರೀ. ದೀರಜರಾಮ ನಾರಭಿರಾಮ ನಾಯಿಕ ಕಂಪಾವುಂಡರ, ಜಲಪಾಡ ದವಾಖಾನೆ ವಾಯು, ಸಯಾನ. ಬಿಬಿ. ಸಿ. ಆಯ ರೇಲ್ವೇ. ಸುರತ. (ಬಡೋದಾ ಏಜನ್ಸಿ)

(೩) ಬಾಂಡ ನಂ. ೧೧೫೩೬ ಶ್ರೀ. ಶ್ರೀರಾಮ ಮೂರ್ತಿ ಆರಾಧ್ಯಲು ರಾಮಚಂದ್ರರಾವ ಗುರು ಪೀಠ ಪುರ ಗೋದಾವರಿ ಜಿಲ್ಹಾ.

(೪) ಬಾಂಡ ನಂ. ೧೩೬ ಶ್ರೀ. ನಂದಗಿರಿ ವೆಂಕಟರಾಮ ದಾಸ ಪ್ರೊಪ್ರಾಯಿಟರ ಮುಕುಂದ ಪ್ರೆಸ. ಕಾಕಿನಾಡು

(೫) ಬಾಂಡ ನಂ. ೪೩೮ ಶ್ರೀ. ಆರ್. ವೆಂಕಟಯ್ಯಾ ಗುರು ಇನಾಮದಾರ ಭೋ ಪಯ್ಯಾ ಅಗ್ರಹಾರ. ಅಮಳ ಪುರಮ್.

೧-೮-೩೫

ಬಿ. ಎನ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ

"ಲೋಕರಹಸ್ಯ"

ಕೃಷಿಯ ಅತ್ಯುತ್ತಮ ರೀತಿಗಳು, ವ್ಯಾಪಾರದ ವಿಷಯಗಳು ಹೊರಿಗೆ, ಮಕ್ಕಳನ್ನು ಸಾಕುವ ವಿಷಯಗಳನ್ನು ಬಡವರಿಗೆ ಬೇಕಾದ ಧನಸಂಪಾದನೆಯ ವಿಷಯಗಳು, ರಸಿಕರಿಗೆ ವಿನೋದ ವಿಚಾರ, ರಾಜಕೀಯ ವಿಷಯಗಳು, ಆಯುರ್ವೇದ ಯುನಾನಿ ವೈದ್ಯ ಸಂಗ್ರಹ. ಪ್ರತಿಯೊಬ್ಬನೂ ತಿಳಿಯಬೇಕಾದ 'ಲಾ' ವಿಚಾರ, ಎದ್ಯೆ ವಿಷಯ, ವೇದಾಂತ ವಿಚಾರಗಳಿಂದಲೂ, ತುಂಬಿ ತುಳುಕುತ್ತಿರುವ ಈ ಮಾಸ ಪತ್ರಿಕೆಗೆ ವರ್ಷಕ್ಕೆ ಚಂದಾ ರೂ. ೩-೮-೦ ಮಾದರಿ ಸಂಚಿಕೆಗೆ ೦-೫-೦.

ಪ್ರತಿ ತಿಂಗಳಲ್ಲೂ ೬೦ ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ.

"ಲೋಕರಹಸ್ಯ" ಆಫೀಸು,
ವಿರಾಜೇಂದ್ರಪೇಟೆ (ಕೊಡಗು)

SUB-AGENTS URGENTLY REQUIRED.

ಕೆಳಗೆ ನಮೂದಿಸಿದ ಜಿಲ್ಹೆಗಳಿಗೆ ಸಬ್- ಏಜಂಟರು ಬೇಕಾಗಿವೆ

ಧಾರವಾಡ, ಬೆಳಗಾವ, ವಿಜಾಪೂರ, ಕಾರವಾರ, ಈ ಜಿಲ್ಹೆಗಳಿಗೆ (ಅಮೇರಿಕನ್) ಚಿಮಣಿ ಎಣ್ಣೆ, ವ ಪೆಟ್ರೋಲ, ವ ಮೊಬಿಲಾಯಿಲ್, (ಲ್ಯುಬ್ರಿಕೇಟಿಂಗ ಆಯಿಲ್ಸ) ವಗೈರೆ ಮಾರುವದಕ್ಕೆ ಏಜಂಟರಾಗಲಿಚ್ಛಿಸುವವರು ಕೆಳಗಿನ ಪತ್ತೆಗೆ ಸಮಕ್ಷಮ ಭೆಟ್ಟಿಯಾದಲ್ಲಿ ಯಾವತ್ತೂ ಏಜನ್ಸಿಯ ಮಜಕೂರು ತಿಳಿಯುವದು.

S. Korvi & Co., Hubli.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

ರಿ. ನಂ. ಬಿ. ೧೯೪೭ ಬಿಡಿ ಪ್ರತಿಗೆ ೧—೧೭—೦ ಮಾತ್ರ

ಕನ್ನಡಿಗ.

(ಇದು ಶ್ರೀ ಕನ್ನಡ ಸಂಜೀವನದ ಸಮಾಪಿಸ್ಥವಾಗಿದೆ)

ಸಂಪಾದಕರು — ಮಂಗಳವಾಡೇ ರಾಜೇರಾಯರ ... ಶ್ರೀನಿವಾಸರಾಯರು.

ವರ್ಷ ೧ | ಬೆಂಗಳೂರು ... ಕಾರ್ತಿಕ ವದ್ಯ ೬ ಶಕೆ ೧೮೪೭. ತಾ|| ೬ ೧೧-೧೯೨೫. | ಸಂಚಿಕೆ ೩೦

ಸಂಪಾದಕರ ಟಿಪ್ಪಣಿ.

ನನ್ನ ಹಂಬಲಿನ ಮೋಹನವಾದಿ ಕಟ್ಟುವೆನಾನು ।
ನಿನ್ನ ಜೀವನವ ಮಾಡಿವಂಥ ಮಕ್ಕಳ ದೊಮ್ಮ।
ಚಿನ್ನವಾದರು ಚಿನ್ನ ಮೋಹಬಸ್ತಿಯ ನೋಡು ॥
ಚಿನ್ಮಯಾಕಾಶವಕ್ಷಿ ॥

ನನ್ನ ದೇವರು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ನಿಲ್ಲವಿದೆ ।
ನನ್ನ ಬಿತ್ತರವು ನಿನ್ನ ಗಂಧವನು ಬೀರಬದ ।
ಗಂಧವಹನೆಂಬು ತಿಳಿಯೆ ।

—ಅಂಬಿಕಾತನಯ ದತ್ತ

ಕರ್ನಾಟಕ ವಿಶ್ವವಿದ್ಯಾಲಯದ ಬಗ್ಗೆ ಇದೇ ಸಂಚಿಕೆಯಲ್ಲಿ ಒಂದು ಪ್ರಶ್ನಮಾಲಿಕೆಯು ಪ್ರಸಿದ್ಧಿಸಲ್ಪಟ್ಟಿದೆ. ಈ ವಿಷಯದಲ್ಲಿ ಕಳವಳವಿದ್ದವರೆಲ್ಲರೂ, ಆ ಪ್ರಶ್ನೆಗಳಿಗೆ ಆದಷ್ಟು ಬೇಗನೆ ಉತ್ತರ ಕಳುಹಿಸಬೇಕಾಗಿ "ಕನ್ನಡಿಗ"ನ ಪ್ರಾರ್ಥನೆಯಿದೆ. ಈ ವಿಶ್ವವಿದ್ಯಾಲಯದ ಪ್ರಶ್ನೆಗೆ ಈಗ್ಗೆ ಬಹಳ ಮಹತ್ವಬಂದಿದೆ. ಸ್ವತಂತ್ರವಾದ ವಿಶ್ವವಿದ್ಯಾಲಯವು ಇಲ್ಲದೇ ಹೋದರೆ ಕನ್ನಡಿಗರ ಅಸ್ತಿತ್ವವು ಸಹ ಉಳಿಯಲಾರದೆಂಬುದು ಪ್ರತ್ಯಕ್ಷವಾಗಿ ಅನುಭವಕ್ಕೆ ಬರುತ್ತಿದೆ. ಇತ್ತ ಮಹಾರಾಷ್ಟ್ರರು ಉತ್ತರ ಕರ್ನಾಟಕದ ಭಾಗವು ತಮ್ಮದೆಂದು ಸಾಧಿಸುತ್ತಲಿದ್ದಾರೆ. ಅತ್ತ ಆಂಧ್ರರಂತೂ ಬಳ್ಳಾರಿಯನ್ನು ಎತ್ತಿ ಒಯ್ಯಬೇಕೆಂಬುವದನ್ನು ನಿಶ್ಚಯಿಸಿ ಬಿಟ್ಟಿದ್ದಾರೆ. ಈ ಲೇಖವನ್ನು ಬರೆಯುವ ಕಾಲದ (ತಾ|| ೩-೧೧-೨೫) ಪರಿಸ್ಥಿತಿಯ ಮೇಲಿಂದ ನೋಡಿದರೆ ಬಳ್ಳಾರಿಯನ್ನು ಆಂಧ್ರ ವಿಶ್ವವಿದ್ಯಾಲಯಕ್ಕೆ ಸೇರಿಸಿಯೇ ಬಿಡುವರಾಗಿ ತೋರುತ್ತದೆ. ಮದ್ರಾಸಕ್ಕೆ ಹೋಗಿದ್ದ ಶ್ರೀ ಬೇಳವಿ, ಕರಪಾ, ನಾಯಿಕ ಮೊದಲಾದವರು "ಹಿಂದೂ" ಪತ್ರಿಕೆಯಲ್ಲಿ ಒಂದು ಲೇಖವನ್ನು ಪ್ರಸಿದ್ಧಮಾಡಿದ್ದಾರೆ. "ಆಂಧ್ರರೆಲ್ಲರೂ ಬಳ್ಳಾರಿಯನ್ನು ತಮ್ಮ ವಿಶ್ವವಿದ್ಯಾಲಯದಲ್ಲಿ ಸೇರಿಸಿ ಕೊಳ್ಳಬೇಕೆಂದು ನಿಶ್ಚಯಿಸಿದ್ದಾರೆ. ಭಾಷಾನ್ವಯ ಪ್ರಾಂತರಚನೆಯ ತತ್ವಕ್ಕೆ ಮುಖಂಡರೆನ್ನಿಸಿಕೊಳ್ಳುವವರೂ, ವೃತ್ತಪತ್ರಿಕಾಕಾರರೂ, ಕರ್ನಾಟಕದವರ ಪ್ರಾರ್ಥನೆಗಳನ್ನು ಬಹು ತಿರಸ್ಕಾರದಿಂದ ನಿರಾಕರಿಸುತ್ತಲಿದ್ದಾರೆ" ಎಂಬದಾಗಿ ಸಾರ್ವಜನಿಕ ರೀತಿಯಿಂದ ತಿಳಿಸಿದ್ದಾರೆ. ಕನ್ನಡಿಗರು ವಿಶ್ವವಿದ್ಯಾಲಯದ ಪ್ರಶ್ನೆಯ ವಿಚಾರವನ್ನು ಮುಂದಕ್ಕೆ ಹಾಕದೆ, ಈ ಗಳಿಗೆ ಕಳವಳದಿಂದ ಪ್ರಯತ್ನಿಸಿ, ಅಖಂಡ ಕರ್ನಾಟಕಕ್ಕೆಲ್ಲ ಒಂದೇ ವಿಶ್ವವಿದ್ಯಾಲಯವನ್ನು ದೊರಕಿಸಿ ಕೊಳ್ಳಬೇಕೆಂಬುದು ಹೇಳದ ಸಂಗತಿಯಿಂದ ಸಿದ್ಧವಾಗುತ್ತದೆ. ಆದುದರಿಂದ ಮೊದಲು ಈ ಪ್ರಶ್ನಮಾಲಿಕೆಗಳಿಗೆ ಕನ್ನಡಿಗರೆಲ್ಲರೂ ಉತ್ತರಕೊಟ್ಟು ತಮ್ಮ ತಮ್ಮ ಮತವನ್ನು ಬೇಗನೆ ಪ್ರಕಟಿಸಬೇಕಾಗಿ ವಿನಂತಿಯಿದೆ.

ಪುಣೆಯ ಕರ್ನಾಟಕ 'ಸೋಶಲ್ ಕ್ಲಬ್ಬಿ'ನವರು ತಾವು ಕೈಕೊಂಡ ಕಾರ್ಯವನ್ನು ದಕ್ಷತೆಯಿಂದ ಮಾಡುತ್ತಿರುವದು ಸಂತೋಷದ ಮಾತು. ಇದರಿಂದ ಹೊರಗಿನ ಕರ್ನಾಟಕಸ್ಥರಿಗೆ ಪುಣೆಯಲ್ಲಿ ಒಂದು ಮೆಟ್ಟು ದೊರೆತಂತಾಗಿದೆ. ಅಪರಿಚಿತರಾದ ಕನ್ನಡಿಗರು ಪುಣೆಗೆ ಹೋಗುವ ಪ್ರಸಂಗವಿದ್ದರೆ ಈ ಸಂಘದವರು ಅವರಿಗೆ ಎಲ್ಲ ಬಗೆಯ ಸಹಾಯವನ್ನು ಮಾಡುವರು. ಮೇಲಾಗಿ ಪುಣೆಯಲ್ಲಿರುವ ಕನ್ನಡಿಗರು ಸಹ ತಮ್ಮ 'ಸ್ವತ್ವ'ವನ್ನು ಕಾಯ್ದುಕೊಳ್ಳಲು ಅನುಕೂಲವಾಗುವದು. ಈ ಸಂಸ್ಥೆಗೆ ಸ್ವತಂತ್ರವಾದ ಕಟ್ಟಡವೊಂದು ಬೇಕಾಗಿದೆ. ಅದಕ್ಕೆ ಇವರು ಪ್ರಯತ್ನಿಸುತ್ತಲಿದ್ದಾರೆ. ಕರ್ನಾಟಕದ ಎಲ್ಲ ಭಾಗದ ಶ್ರೀಮಂತರು ಧನಸಹಾಯ ಮಾಡಿ ಈ ಸಂಸ್ಥೆಯು ಪುಣೆಯಲ್ಲಿ ಶಾಶ್ವತವಾಗಿ ಉಳಿಯುವ ಶ್ರೇಯಸ್ಸಿಗೆ ಪಾತ್ರರಾಗಬೇಕಾಗಿ "ಕನ್ನಡಿಗ"ನ ಬಿನ್ನಹವಿದೆ. ಪುಣೆಯಲ್ಲಿರುವ ಕನ್ನಡ ಬಾಲಕರಿಗಾಗಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಬೇಕೆಂದು ಈ ಸಂಸ್ಥೆಯವರು ಬೇಗನೆ ಅಲ್ಲಿಯ ಮುನಸಿಪಾಲ್ಟಿಗೆ ಒತ್ತಾಯ ಪಡಿಸಬೇಕು. ಕರ್ನಾಟಕದ ಅನೇಕ ಸ್ಥಳಗಳಲ್ಲಿ ಮರಾಠೀ ಬಾಲಕರ ಕೊರತೆಯನ್ನು—ಕರ್ನಾಟಕವು ತನ್ನ ಉದಾರ ಸ್ವಭಾವಕ್ಕೆ ಅನುಸರಿಸಿ—ದೂರಮಾಡಿದೆ. ಮಹಾರಾಷ್ಟ್ರವು ಗುಣಗ್ರಾಹಿಯಾಗಿದ್ದರೆ ಪುಣೆಯ ಕನ್ನಡಿಗರ ಈ ಕೊರತೆಯನ್ನೂ ದೂರಮಾಡಿ, ಪರಸ್ಪರರಲ್ಲಿ ಪ್ರೇಮವು ಹೆಚ್ಚಾಗುವಂತೆ ಪ್ರಯತ್ನಿಸತಕ್ಕದ್ದು. ಆದರೆ ಈ ಸಂಗತಿಯನ್ನು ಈ 'ಸೋಶಲ್ ಕ್ಲಬ್ಬ'ನವರು ಮುನಸಿಪಾಲ್ಟಿಯ ಲಕ್ಷ್ಯಕ್ಕೆ ತಂದು ಕೊಟ್ಟು ಆ ಬಗ್ಗೆ ಒಂದೇ ಸಮನೆ ಚಳವಳ ಮಾಡತಕ್ಕದ್ದು. ಬಳವಂತ ಮುಖ್ಯಸ್ಥನವಾದ ಪುಣೆಯಲ್ಲಿದ್ದ ಕನ್ನಡಿಗರ ಈ ಸಂಸ್ಥೆಯು ಈ ಬಗ್ಗೆ ಟೊಂಕ ಕಟ್ಟುವದೋ? ಟೊಂಕ ಕಟ್ಟಿದ್ದೇ ಆದರೆ ಉತ್ತರ ಕರ್ನಾಟಕದಲ್ಲಿಯ ಎಲ್ಲ ಮುನಸಿಪಾಲಿಟಿಗಳು ಅವರ ಬೆಂಬಲವಾಗಿ ಸಹಾಯ ಮಾಡುವದರಲ್ಲಿ ಸಂಶಯವಿಲ್ಲ.

ಕನ್ನಡಿಗನಿಗೆ ಕೆಳಗಿನ ಮಹನೀಯರು ಉಪಕಾರಕರ್ತೃಗಳಾಗಿ (ರೂ. ೫. ೦. ೧೦) ಸಹಾಯಮಾಡಿದ್ದಾರೆ (೧) ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರು. ಬೆಂಗಳೂರು (೨) ರಾಜ ಶ್ರೀನಿವಾಸರಾವ ಕೋರವಾಳಕರ. ಪೋ. ಮ. ಸ್ಟೇಶನ್ ರೋಡ ಹೈದರಾಬಾದ. ಮತ್ತು ಹುಬ್ಬಳ್ಳಿಯ ಶ್ರೀ, ಎಫ್. ಬಿ. ಉಂಡೆಳ್ಳಿಯವರು ಪೋಷಕರಾಗಿದ್ದಾರೆ. (ರೂ. ೫. ೦. ೫) ಕರ್ನಾಟಕಾಭಿಮಾನಿಗಳು 'ಕನ್ನಡಿಗ'ನಿಗೆ ಹೀಗೆಯೇ ಸಹಾಯ ಮಾಡಬೇಕಾಗಿ ವಿನಂತಿಯಿದೆ.

ಜಯಕರ್ನಾಟಕ ಮಾಸಪತ್ರಿಕೆಯು ಹೊರಟು ಈಗ್ಗೆ ೧ ವರ್ಷಗಳಾದವು. ಈ ಅವಧಿಯಲ್ಲಿ ಈ ಮಾಸಪತ್ರಿಕೆಯು ಚನ್ನಾಗಿ ಕನ್ನಡ ನಾಡು-ನುಡಿಗಳ ಸೇವೆ ಮಾಡಿದ್ದು ಎಲ್ಲರಿಗೂ ಗೊತ್ತಿದೆ. ಶ್ರೀ ಆಲೂರ ವೆಂಕಟರಾಯರಂಥವರು ಇದರ ಭಾರವನ್ನು ಹೊತ್ತಿದ್ದು ಯೋಗ್ಯವೇ. ಅಖಂಡ ಕರ್ನಾಟಕಕ್ಕೆ ಉಚ್ಚತರದ ಮಾಸಪತ್ರಿಕೆಯೆಂದರೆ ಜಯಕರ್ನಾಟಕವೊಂದೇಯಾಗಿದೆ. ರಾಜಕೀಯ, ಸಾಮಾಜಿಕ, ವಾಙ್ಮಯಾತ್ಮಕ ಮುಂತಾದ ಎಲ್ಲ ವಿಷಯಗಳನ್ನೂ ಅಖಂಡ ಕರ್ನಾಟಕದ ದೃಷ್ಟಿಯಿಂದ ವಿವೇಚಿಸುತ್ತಿರುವ ಮಾಸಪತ್ರಿಕೆಯೆಂದರೆ ಇದೊಂದೇ. ಇಂತಹ ಮಾಸಪತ್ರಿಕೆಯ ಕೊರತೆಯು ಕನ್ನಡ ನಾಡಿನಲ್ಲಿ ಬಹುದಿನದಿಂದ ಇತ್ತು. ಅದು ಈಗ್ಗೆ ದೂರಾಗಿದೆ. ಆದರೆ 'ಜಯಕರ್ನಾಟಕ'ದ ಆರ್ಥಿಕ ಕೊರತೆಯನ್ನು ಮಾತ್ರ ಕನ್ನಡಿಗರು ದೂರ ಮಾಡಿರುವುದಿಲ್ಲ. ಇದು ನಿಜವಾಗಿಯೂ ವಿಷಾದಕರವಾದುದು. 'ಜಯಕರ್ನಾಟಕ'ದಂಥ ಮಾಸಪತ್ರಿಕೆಗೆ [illegible] ಸಾವಿರ ಜನ ಚಂದಾದಾರರಾದರೆಂದರೆ ಕನ್ನಡ ನಾಡಿನ ದುರ್ದೈವವೇ ಸರಿ. ಈಗಲಾದರೂ ಭಾಷಾಭಿಮಾನಿಗಳು ಲಕ್ಷ್ಯಕೊಟ್ಟು ಜಯಕರ್ನಾಟಕಕ್ಕೆ ಸಹಾಯ ಮಾಡಬೇಕು.

ನೆಲ್ಲೂರದಲ್ಲಿ ಹಿಂದೂ - ಮುಸಲ್ಮಾನರಲ್ಲಿ ಕಲಹವಾಗಿದೆ. ಕರ್ನಾಟಕದಲ್ಲಿ ಸಹ ಈ ಕಲಹವು ದಿನೇ ದಿನೇ ಬೆಳೆಯತೊಡಗಿದೆ. ಬಾಗಲಕೋಟೆ, ಗುಲ್ಬರ್ಗಾ, ರಾಣೀಬೆನ್ನೂರು ಗಳಲ್ಲಿ ಜನನ್ನು ಹೊಡೆದ ಕಲಹಗಳನ್ನು ಜನರು ಮರೆತಿಲ್ಲ. ಅಷ್ಟರಲ್ಲಿಯೇ ಈಗ್ಗೆ ಪುನಃ ಸೊಲ್ಲಾಪೂರದಲ್ಲಿ ಈ ಘೋರವು ದೃಗ್ಗೋಚರವಾಗಿದೆ. ಉತ್ತರ ಹಿಂದುಸ್ಥಾನದ ಮುಸಲ್ಮಾನರು ಸೊಲ್ಲಾಪೂರಕ್ಕೆ ಹಿಂದಿನ ದಿನಗಳ ವರೆಗೆ ಮಸೀದಿಯಲ್ಲಿ ಗುಂಪುಗೂಡುವ ಸಾಧ್ಯತೆಯ ಕುರಿತು ವಿಷಯವೂ, ಮೊದಲಿನಿಂದಲೇ ಎಲ್ಲ ಸಿದ್ಧತೆಯನ್ನು ಮಾಡಿ ಮಸೀದಿಯಲ್ಲಿ ಬಡಿದಾಡುವ ಸಾಮಗ್ರಿಯನ್ನು ಸಂಗ್ರಹ ಮಾಡಿದ್ದೂ ಸರಕಾರಕ್ಕೆ ಹೇಗೆ ತಿಳಿಯಲಿಲ್ಲ? ರಾಜಕೀಯವಿಷಯಗಳ ವ್ಯಾಖ್ಯಾನವಾಗಲೀ, ಕೀರ್ತನವಾಗಲೀ, ಗುಡಿಗಳಲ್ಲಿ ನಡೆದದ್ದರೂ ಸಹ ಅದರ ಸುದ್ದಿಯು ಸರಕಾರಕ್ಕೆ ಕೂಡಲೇ ಹತ್ತುವದು. ಮತ್ತೂ ಇಂತಹ ಪ್ರಸಂಗಗಳಲ್ಲಿ ಸಾರ್ವಜನಿಕ ಶಾಂತತೆಯು ಭಂಗವಾಗುವದೆಂದು ೧೪೪ ನೇ ಕಲಮು ಸಿದ್ಧವಾಗಿರುತ್ತದೆ! ಆದರೆ ಈ ಪ್ರಸಂಗಗಳಲ್ಲಿ ಸರಕಾರಕ್ಕೆ ಯಾವದೂ ತಿಳಿಯುವದಿಲ್ಲ. ತಿಳಿದರೂ ಯೋಗ್ಯ ವ್ಯವಸ್ಥೆ ಮಾಡಲಿಕ್ಕೆ ಮನಸ್ಸು ಸಿದ್ಧವಾಗುವದಿಲ್ಲ! ಹಿಂದೂ- ಮುಸಲ್ಮಾನರು ತಮ್ಮ ತಮ್ಮೊಳಗೆ ಬಡಿದಾಡಿದರೆ ಸರಕಾರದ ರಾಜ್ಯಸೂತ್ರಗಳು ದೃಢವಾಗುವವು; ಅಂದಮೇಲೆ ಅವರು ಜಾಣತನವನ್ನು ಇಂತಹ ಪ್ರಸಂಗದಲ್ಲಿ ತೋರಿಸದೇ ಇರುವರೇ? ಸರಕಾರದವರು ಈಗಲಾದರೂ ಈ ಕಲಹದಲ್ಲಿ ತಪ್ಪುಗಾರರು ಯಾರೆಂಬದನ್ನು ಕೂಡಲೇ ಶೋಧಿಸಿ ಪ್ರಸಿದ್ಧಿಸಬೇಕಾಗಿ ಆಗ್ರಹ ಪಡುತ್ತೇವೆ.

ನೇಕ ನಾಮದಾರ ವೃದ್ಧ ರವರು ಹಿಂದುಸ್ಥಾನದ ವಾಯಿಸರಾಯರಾಗುವರು. ಹೊಸ ವಾಯಿಸರಾಯರ ಹೆಸರು ಪ್ರಸಿದ್ಧವಾದೊಡನೆ ವೃತ್ತ ಪತ್ರಿಕಾ ಕರ್ತರು ಏನಾದರೂ ಬರೆಯಬೇಕೆಂಬದೊಂದು ಶಿಷ್ಟಾಚಾರವಿದೆ. ಈ ಶಿಷ್ಟಾಚಾರದಲ್ಲಿ ಹಿಂದಕ್ಕೆ ಸ್ವಲ್ಪ ತಥ್ಯಾಂಶವೂ ಇದ್ದಿತು. ಆದರೆ ಈಗ್ಗೆ ಮಾತ್ರ ಏನೂ ಇರುವದಿಲ್ಲ. ಹಿಂದುಸ್ಥಾನದ ಈಗಿನ ರಾಜಕೀಯ ಪರಿಸ್ಥಿತಿಯನ್ನು ವಿಚಾರಿಸಿದರೆ, ವಾಯಿಸರಾಯರು ಯಾರು ಬಂದರೂ ಸರಿಯೇ; ಯಾರು ಹೋದರೂ ಸರಿಯೇ; ವೈಯಕ್ತಿಕವಾಗಿ ವಾಯಿಸರಾಯರೊಬ್ಬರು ಒಳ್ಳೇ ಮನುಷ್ಯರಿರಲಿ; ಇರದಿರಲಿ, ಅದು ಏನೂ ಉಪಯೋಗವಾಗದು. ಲಾರ್ಡ ರೀಡಿಂಗರು ವೈಯಕ್ತಿಕ ದೃಷ್ಟಿಯಿಂದ ನೋಡಿದರ ಒಳ್ಳೆ ಮನುಷ್ಯರೇ; ಮೇಲಾಗಿ 'ಮಾಜೀ ಚೀಫಜಜ್ಜ" ರು. ಆದರೂ ಅವರಿಂದ ಹಿಂದುಸ್ಥಾನಕ್ಕೆ ಯಾವ ಮಹಾ ಲಾಭವೂ ನ್ಯಾಯವೂ ಆಗಿಲ್ಲೆಂಬುದು ಎಲ್ಲರಿಗೂ ತಿಳಿದವಿಷಯವಾಗಿದೆ. ಭಾರತೀಯರು ತಮ್ಮ ಅಂತರ್ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕೇ ಹೊರತಾಗಿ ವಾಯಿಸರಾಯರು, ಅಂಥವರು; ಇಂಥವರು ಎಂಬುದು ವ್ಯರ್ಥವಾಗಿ ಕಾಲಹರಣದ ಮಾತು.

ಆಂಧ್ರ ವಿಶ್ವವಿದ್ಯಾಲಯದಲ್ಲಿ ಬಳ್ಳಾರಿಯು ಸೇರಬೇಕೆಂಬದಾಗಿ ಮದ್ರಾಸ ರಾಜ್ಯದ ಮಂಡಲದಲ್ಲಿ ನಿರ್ಣಯವಾಯಿತು. ಕನ್ನಡಿಗರ ಪ್ರಯತ್ನಗಳೆಲ್ಲ ನಿಷ್ಫಲವಾದವು. ಆಗಲಿ; ಈಗ ಆಂಧ್ರರ ಜಾತೀಯ ಸ್ವಭಾವವು ಮಾತ್ರ ಜಗಜ್ಜಾಹೀರವಾಯಿತು. ಆಂಧ್ರರ ರಾಷ್ಟ್ರೀಯ ಸ್ವಭಾವವು ಉದಾತವಾಗಿಲ್ಲವೆಂಬುದೂ, ವಿಚಾರದೃಷ್ಟಿಯು ಹೀನವಾಗಿರುವದೆಂಬುದೂ, ಸ್ವಾರ್ಥ ಪರತೆಯು ತುಂಬಿತುಳುಕುತ್ತಿರುವದೆಂಬುದೂ, ಸಿದ್ಧವಾಯಿತು. ಯಾವ ಆಂಧ್ರರು ಭಾಷಾನ್ವಯ ಪ್ರಾಂತರಚನೆಯು ತಮ್ಮದ ಸಲುವಾಗಿ ಬಡಿದಾಡುತ್ತಿರುವರೋ, ಅವರೇ, ಅನ್ಯರಿಗೆ ಅದೇ ತತ್ವದ ಸಲುವಾಗಿ ಅನ್ಯಾಯ ಮಾಡುತ್ತಿರುವರೆಂದ ಮೇಲೆ ಇವಕ್ಕೂ ಹೆಚ್ಚಾಗಿ ಅವರ ಜಾತೀಯ ತಾಮಸಿಕ ಸ್ವರೂಪವು ಹೊರಬೀಳುವದು ಹೇಗೆ? ರಾಜಕೀಯ ರಣಾಂಗಣದಲ್ಲಿ ನಾವು ನೋಡುವ ಆಂಧ್ರರು ಇವರಲ್ಲ. ಅಥವಾ ಅವರೇ ಆಗಿದ್ದರೆ, ನಾಟಕದ ವೇಷಧಾರಿಗಳಂತೆ, ಅವರು ಅನ್ಯವೇಷವನ್ನು ಧರಿಸಿ ಕಾಂಗ್ರೆಸ ಬೂಟಿನಲ್ಲಿ ನಟಿಸುತ್ತಿರಬಹುದು. ಇರಲಿ, ಅವರು ಹೇಗಾದರೂ ಇರಲಿ ಕನ್ನಡಿಗರು ಮಾತ್ರ ಇನ್ನು ಏನೂ ನಿಲ್ಲಬಾರದು, ಕರ್ನಾಟಕ ವಿಶ್ವವಿದ್ಯಾಲಯ, ಕರ್ನಾಟಕ ಏಕೀಕರಣಗಳ ವಿಷಯವಾಗಿ ಬಲು ಕಳವಳದಿಂದ ಪ್ರಯತ್ನಿಸಬೇಕು.

ಮೈಸೂರು ದಿವಾಣರಸ್ಥಾನಕ್ಕೆ ಉತ್ತರ ಕರ್ನಾಟಕಸ್ಥರಿಗೆ ಚಿರಪರಿಚಿತರಾದ ಶ್ರೀ ಪರಾಂಜಪೆಯವರು ಪ್ರಯತ್ನಿಸುತ್ತಿರುವರಂತೆ! ಫರ್ಗ್ಯೂಸನ್ ಕಾಲೇಜಿಯ ಆಡಳಿತವೂ ಮೈಸೂರಿನಂತಹ ದೊಡ್ಡ ಸಂಸ್ಥಾನದ ಆಡಳಿತವೂ ತೀರಭಿನ್ನವಾದವುಗಳು. ಆ ಅನುಭವವು ಇದಕ್ಕೆ ಸಲ್ಲದು. ಶಿಕ್ಷಣ ಮಂತ್ರಿಯ ಕಾರ್ಯದ ಸ್ವರೂಪವು ಬೇರೆ, ಮತ್ತು ದಿವಾಣರ ಕಾರ್ಯದ ಸ್ವರೂಪವು ಬೇರೆ. ಮೇಲಾಗಿ ಪರಾಂಜಪೆಯವರಿಗೆ ಕನ್ನಡ, ಕರ್ನಾಟಕದ ಅಭಿಮಾನಗಳೂ ಇಲ್ಲವೆನ್ನುವದಷ್ಟೇ ಅಲ್ಲದೇ, ಆ ಬಗ್ಗೆ ಸಮಂಜಸವೂ, ಕನ್ನಡಿಗರಿಗೆ ವಿಶ್ವಸನೀಯವೂ ಆದ ವಿಚಾರ ಸರಣಿಯೂ ಅವರಲ್ಲಿಲ್ಲ. ಮುಪ್ಪಿನ ಕಾಲದಲ್ಲಿ ದೊಡ್ಡ ಪದವಿಗೇರುವ ಆಸೆಯಿಂದ ಕನ್ನಡವನ್ನು ಕಲಿತರೆ, ಕನ್ನಡಿಗರ ಸ್ವಭಾವ, ಕನ್ನಡಿಗರ ಗತವೈಭವ, ಈಗಿನ ಅವರ ಕಳವಳದ ರಾಷ್ಟ್ರೀಯ ಆಕಾಂಕ್ಷೆ, ಅವರ ಸಂಸ್ಕೃತಿಯ ಪಿರಾಳು ಇವೆಲ್ಲ ತಿಳಿಯುವು. ಆದುದರಿಂದ ಶ್ರೀ. ಪರಾಂಜಪೆಯವರನ್ನು ಶ್ರೀಮನ್ ಮಹಾರಾಜರವರು ದಿವಾಣಗಿರಿ"ಗೆ ಏರಿಸದೇ ಅಚ್ಚಗನ್ನಡಿಗರೂ ಕನ್ನಡ, ನಾಡು-ನುಡಿ-ಸಂಸ್ಕೃತಿಗಳಲ್ಲಿ ಅಭಿಮಾನವಿದ್ದವರೂ ಆದ ಮಹಾನುಭಾವರನ್ನೇ ಆ ಸ್ಥಾನಕ್ಕೆ ನಿಯೋಜಿಸುವದು ಯೋಗ್ಯವು.

ಸತ್ಯಾಗ್ರಹಿಯ ಉತ್ತರ

'ಕನ್ನಡಿಗ'ನ ಸಂಚಿಕೆಯು ಸಕಾಲಕ್ಕೆ ತಮ್ಮಲ್ಲಿಗೆ ಬಾರದ್ದರಿಂದಲೂ, 'ಮೈಸೂರ ಕ್ರಾನಿಕಲ್'ದಲ್ಲಿ 'ಕನ್ನಡಿಗ'ನ ಹೆಸರಿಲ್ಲದೆ "ಭಕ್ತಿಯ ಅಂಜಲಿ" ಯು ಪ್ರಸಿದ್ಧವಾಗಿದ್ದರಿಂದಲೂ ತಾವು, ಆ ಲೇಖನವನ್ನು 'ಕನ್ನಡಿಗ'ನ ಹೆಸರಿಲ್ಲದೇ ಪ್ರಸಿದ್ಧಿಸಿದ್ದೆವೆಂದು 'ಸತ್ಯಾಗ್ರಹಿ'ಯ ಸಂಪಾದಕರು ತಿಳಿಸುತ್ತಾರೆ. 'ಕನ್ನಡಿಗ'ನ ಸಂಶಯವು ದೂರಾಯಿತು. ಸಂತೋಷವೂ ಆಯಿತು!

ವ್ಯಾಪಾರಸ್ಥರ ಅಭಿಮಾನ ಶೂನ್ಯತೆ.

ದೀಪಾವಳಿ ಹಬ್ಬದಲ್ಲಿ ಪೂಜಾಪತ್ರಿಕೆಗಳನ್ನು ಮುದ್ರಿಸುವ ಹೊಂದು ರೀತಿ ಅಭಿಮಾನಶೂನ್ಯತೆಯೆಂದಲೋ ಅಜ್ಞಾನವೆಂದಲೋ? ನಮ್ಮ ವ್ಯಾಪಾರಸ್ಥ ಬಂಧುಗಳು ಮಾಡುವ ದೇಶಭಾಷಾವಮಾನವನ್ನು ಅವರ ಲಕ್ಷ್ಯಕ್ಕೆ ತಂದುಕೊಡಬೇಕಾಗಿದೆ.

ಎಲ್ಲಿಯವರೆಗೆ ಕರ್ನಾಟಕದಲ್ಲಿರುವರೋ ಅಲ್ಲಿಯವರೆಗೆ ಯಾವ ಮಾತೃಭಾಷೆಯವರಿದ್ದರೂ ಕನ್ನಡವನ್ನೇ ವ್ಯವಹಾರದಲ್ಲಿ ಬರಹ, ಓದು, ನುಡಿಗಳಲ್ಲಿ ಬಳಸಬೇಕು. ಇದು ಅವರ ನಿತ್ಯ ಕರ್ತವ್ಯ. ಕರ್ತವ್ಯಕ್ಕೆ ಕಣ್ಮುಚ್ಚಿದರಂತೆ ನರಕವೆ ಗತಿ. ನಿಮ್ಮ ತಾಯಿಗೆಷ್ಟು ಉಪಕೃತರಾಗಿರುವಿರೋ ಅಷ್ಟೇ ಕನ್ನಡ ನುಡಿಗೂ ಆಗಬೇಕು.

ಉತ್ತರ ಕರ್ನಾಟಕದಲ್ಲಿ ಸುಮಾರು ಅರ್ಧಕ್ಕಿಂತ ಹೆಚ್ಚು ಜನರು ಮರಾಠಿಯಲ್ಲಿಯೇ ಪೂಜಾಪತ್ರಗಳನ್ನು ಮುದ್ರಿಸುವ ಪದ್ಧತಿಗೆ ಬಿದ್ದಿದ್ದಾರೆ. ಯಾವ ಅನ್ಯವಿಚಾರವೂ ಈ ವೇಳೆಗೆ ಅವರ ತಲೆಗೆ ಹೋಗುವಂತೆ ತೋರುವದಿಲ್ಲ. ತಮ್ಮ ಭಾಷೆಯಾವದು, ತಮ್ಮ ಕರ್ತವ್ಯ ಯಾವುದು, ತಪ್ಪಿದರೆ ಆಗುವ ಹಾನಿ ಏನು ಎಂಬಾವುದನ್ನೂ ಲಕ್ಷ್ಯಕ್ಕೆ ತಾರರು. ಇದ್ದವರೆಲ್ಲ ಕುರಿಮಂದಿಗಳು. ಒಂದನ್ನು ಕಂಡು ಮತ್ತೊಂದು "ಬ್ಯಾ". ಅಭಿಮಾನವೆಂಬುದು ಏನೆಂದು ಕೇಳುವ ಹಟುಗಳಿವರು. ನಮ್ಮ ವಿಜಾಪುರದಲ್ಲಿ ಎಲ್ಲರೂ ಮರಾಠಿಯಲ್ಲಿಯೇ ಪೂಜಾ ಪತ್ರಗಳನ್ನು ಮುದ್ರಿಸಿದ್ದರೆಂದರೆ ಅತಿಶಯೋಕ್ತಿಯಾಗದು. ಹುಟ್ಟಿದ್ದು ಕನ್ನಡ ನಾಡು [illegible] ಬೆಳೆದು ಓದುತ್ತಿದ್ದೂ ಕನ್ನಡನಾಡಿನ ಅನ್ನ ತಿಂದು, ಉಪಕಾರ ಮಾಡಿದವರಿಗೆ ಅಪಕಾರವನ್ನು ಮಾಡುವ ಕೃತಘ್ನ ಕನ್ನಡಿಗರೇ, ನಾಚಿಕೆ ಎನಿಸದೇ ಮರಾಠಿಯನ್ನು ಉಪಯೋಗಿಸಲಿಕ್ಕೆ. ಕನ್ನಡ ನುಡಿಯು ಇಲ್ಲವೆಂದು ತಿಳಿದಿರೋ? ಅಥವಾ ಕಲಿಯದೆ ಇದ್ದು ತಿಳಿದಿರುವಿರೋ? [illegible] ಮುಂದಾದರೂ ತಿದ್ದಿಕೊಳ್ಳಿರಿ. [illegible] ಬಾಗಲಕೋಟೆಯಲ್ಲಿ ಸಾಧಾರಣವಾಗಿ ಎಲ್ಲರೂ ಶುದ್ಧ ಕನ್ನಡಿಗರು. ಅದರ ಯಾವ ದುಷ್ಟಗ್ರಹ ಮರಳುವಂತೆ ಮಾಡುವದೋ ದೇವರೇ ಬಲ್ಲ. ತಾವು ಮುದ್ರಿಸಿದ ಮರಾಠಿಯನ್ನು ತಾವೇ ಓದಿ ತಿಳಿದುಕೊಳ್ಳಲಾರದ ಮಂದಿಯೂ ಇದ್ದಾರೆ. ಆದರೆ ಮರಾಠಿಯ ಮೋಹ! ಕೇವಲ ಮೋಹ. ಕುರಿಗಳಗುಂಪು!! ಮಾತ್ರ!! ಗದಗು, ಹುಬ್ಬಳ್ಳಿ, ಧಾರವಾಡಗಳು ಸ್ವಲ್ಪ ಬೇಕು. ಆದರೆ ಕುಲಗೇಡಿಗಳೆನಿಸುವವರು ಕೆಲವರು ಇತ್ತಿಂದ ಅತ್ತ ಹೋಗಿ ಮರಾಠಿಯನ್ನು [illegible]. ತಾವು ಕನ್ನಡಿಗರಿದ್ದೂ ಮರಾಠಿಯಲ್ಲಿ ಬರೆಯುವ ಹಟ. ಅದೂ ಕನ್ನಡನಾಡಿನ ನಡುಮನೆಯಲ್ಲಿ! ಕನ್ನಡಾಭಿಮಾನಿಗಳು ಇಂಥ ಕುಲಕಲಂಕಿಗಳನ್ನು ಚೆನ್ನಾಗಿ ತಿದ್ದಬೇಕು. ಬೆಳಗಾವಿಯವರಿಗೆ ಬುದ್ಧಿ ಬರಬೇಕಾದರೆ ಇನ್ನೂ ಎಷ್ಟು ದಿವಸಗಳು ಬೇಕೋ ತಿಳಿಯದು. ಕೊಪ್ಪಳ [illegible] ಕೊಪ್ಪಳಗಳಲ್ಲಿಯೂ ಇತ್ತಿಂದ ಹೋದವರ ಹಾವಳಿಯೇ ಹಾವಳಿ. ಶೋಲಾಪುರದಲ್ಲಿ ಸಂಪೂರ್ಣ ಮರಾಠಿ. [illegible] ಉತ್ತರ ಕರ್ನಾಟಕದ ವ್ಯಾಪಾರಸ್ಥರಲ್ಲಿ ಕನ್ನಡ ನುಡಿಯ ಅಭಿಮಾನವು ಬಹಳೇ ಕಡಿಮೆ. ವ್ಯಾಪಾರಸ್ಥರೇ ನಿಮ್ಮ ಉದ್ಯೋಗದ ವಿನಾ ಇನ್ನಾವದಕ್ಕೂ ನೀವು ಲಕ್ಷ್ಯ ಕೊಡುವದಿಲ್ಲವೆಂದು ತಿಳಿದಿರುವಿರೋ? ಎಚ್ಚರಿಕೆ! ಹಳೆಯದ್ದುಗಳೇ!! ಇನ್ನುಮುಂದೆ ಮುಂದಿನ ವರುಷವಾದರೂ ತಪ್ಪದೇ ಕನ್ನಡವನ್ನೇ ಉಪಯೋಗಿಸುವೆನೆಂದು ಟಕೆ ಇಟ್ಟುಕೊಳ್ಳಿರಿ! ನೋಡೋಣ.!!

ಚಿತ್ರಮರಾಠಿಯಾದರೂ ಶುದ್ಧವೇ? ಅದೂ ಅಶುದ್ಧ. [illegible] ಮುದ್ರಿಸಿದ ಗಣಕ ವಾಕ್ಯಗಳೂ ಮರಾಠಿ ಭಾಷೆಗೆ ಕುಂದು ತರುವಂತೆ [illegible] ವ್ಯಾಕರಣದ [illegible] ಅವರೇನು ಮಾಡಿಯಾರು. ಇನ್ನೇ ಇವರ ಪಾಪವು ಪ್ರಾಯಶ್ಚಿತ್ತದಿಂದ ಶುದ್ಧವಾಗುವದು. ಕೊಟ್ಟುಕೊಳ್ಳಬೇಡಿ. ಇತಿ. ತಮ್ಮ

—[illegible]

ಸಾಹಿತ್ಯ ವಿಚಾರ

ಒಪ್ಪಿಗೆ.

(೧) **ಮಹೋತ್ಸವ** ಕೆಕ್ಕೂರಿನ ಶ್ರೀ [illegible] ದೇವಸ್ಥಾನದ ವರದಿಯು.

(೨) **ಶರೀರ ವ್ಯಾಯಾಮ** ಬೆಂಗಳೂರ.

(೩) **ಸಾವಾಸಿನಿ.** ಮಂಗಳೂರ

(೪) **ಮಹಾ ಪ್ರಸ್ಥಾನಪರ್ವ.** [illegible] ಮು ಪ್ರಕಾಶಕರು:- ಶೀನಾಚಾರ್ಯ ಹೊಂಬಾಳೆ ಗದಗ.

(೫) Annual Report Karnatak. Social club Poona.

(೬) **ಸುಬೋಧ** ಮಾಸಪಟಿ

(೭) The Founder of Bangalore —K. R. Narasinhaya Bangalore City.

(೮) **ಮಹಾರಾಣಾ ಪ್ರತಾಪಸಿಂಹ ಮತ್ತು ಸಿಂಧ್ಯಾಚಲ** ವಿದ್ಯಾರಣ್ಯ ಗ್ರಂಥಮಾಲೆ ಆಗಸಿ.

(೯) **ಸರ್ವಮಾನ್ಯ ಶತಕವು.** [illegible] ಸೋಮನಾಥ ರಾಯ ಮದರಾಸು.

(೧೦) **ಶ್ರೀ ವೈಕುಂಠ ನಿರೂಪಣವು.** [illegible]

(೧೦) (ಅ) **ಲಕ್ಷ್ಮೀ ಬಾಯಿಸಾಹೇಬ**
(ಆ) **ಮಯೂರಧ್ವಜ ಮಹಾರಾಜ**
ಸುಬೋಧ ಕುಸುಮಾಂಜಲಿ ಗ್ರಂಥಮಾಲೆ ಬೆಂಗಳೂರ ಸಿಟಿ.

(೧೧) **ತುಳಸೀದಾಸ.** ರಾಮಾಯಣ [illegible] ಬೆಂಗಳೂರ ಸಿಟಿ

(೧೨) **ಪ್ರಬುದ್ಧ ಕರ್ನಾಟಕ** [illegible] ಸಂಚಿಕೆ.

(೧೩) ಪಗೋಡೆ [illegible]

(೧೪) ಉತ್ತರ ಭಾರತ ಶ್ರೀ ರಾಮತೀರ್ಥ [illegible]

(೧೫) Pelgaum Congress 1925.

ಈ ಗ್ರಂಥಗಳ ವಿಮರ್ಶೆಯು ಯಥಾವಕಾಶವಾಗಿ ಪ್ರಸಿದ್ಧವಾಗುವದು —ಸಂ. ಕ.

ಸುಬೋಧ.

(ಸಚಿತ್ರಮಾಸಪತ್ರಿಕೆ.)

([illegible])

ಈ ಮಾಸಪತ್ರಿಕೆಯ ಉದ್ದೇಶವನ್ನು ಸಂಪಾದಕರು ತಮ್ಮ 'ಸ್ವವಿಷಯ'ದಲ್ಲಿ ಹೀಗೆ ಹೇಳಿದ್ದಾರೆ. 'ಭಗವದ್ಗೀತಾ ಕಥಾಸಾರವು, ಸ್ವಾಮಿ ವಿವೇಕಾನಂದ ರಾಮತೀರ್ಥ ಮುಂತಾದ ಮಹನೀಯರು ದೇಶೋದ್ಧಾರಕ್ಕಾಗಿ ಸ್ವದೇಶ ವಿದೇಶಗಳಲ್ಲಿ ಕೊಟ್ಟಿರುವ ಉಪನ್ಯಾಸ ಸಾರಾಂಶವು. ಮಹಾಪುರುಷರ ಸಂಕ್ಷಿಪ್ತ ಜೀವನ ಚಿತ್ರಗಳು ಆರೋಗ್ಯಮಾರ್ಗದರ್ಶಕಗಳಾದ ವಿಚಾರಗಳು, ಸ್ತ್ರೀಯರಿಗೂ, ವಿದ್ಯಾರ್ಥಿಯರಿಗೂ, ಉಪಯುಕ್ತವಾದ ವಿಷಯಗಳೂ, ಪದ್ಯಗಳೂ, ತಿಳಿಗನ್ನಡದ ಲಲಿತ್ಯಲಿಯಲ್ಲಿ ಬರೆಯಲ್ಪಟ್ಟು ಪ್ರಕಟವಾಗುವವು.' [illegible] ಸಂಚಿಕೆಯಲ್ಲಿ ಇಂಥವೇ ವಿಷಯಗಳು ಬಂದಿರುವವು. [illegible] ಆದರೆ ಪದ್ಯಗಳಲ್ಲಿ ಜೀವ ವಿದ್ದಂತೆ ತೋರುವದಿಲ್ಲ. ಎಲ್ಲ ಕನ್ನಡಿಗರೂ ಪತ್ರಿಕೆಗೆ ಸಹಾಯ ಮಾಡುವರೆಂದು ನಾವು ಹಾರೈಸುತ್ತೇವೆ.

ಕಣಿಯರು

ಕಣಿಯರ ಪಂಗಡದವರು ಮೈಸೂರ ಸಂಸ್ಥಾನದಲ್ಲಿ ಸುಮಾರು ೧೦,೦೦೦ ಮಂದಿ ಇರುತ್ತಾರೆ. ಅವರೆಲ್ಲರೂ ಮುಖ್ಯವಾಗಿ ಬೆಂಗಳೂರು, ಮೈಸೂರ ನಗರಗಳಲ್ಲೂ, ಚಾಮರಾಜನಗರ, ಯಳಂದೂರು, ತಿರುಮಕೂಡಲು ನರಸೀಪುರ, ಕೊಳ್ಳೇಗಾಲ, ಚನ್ನಪಟ್ಟಣ, ನಂಜನಗೂಡು, ಮಳವಳ್ಳಿ, ಮೈಸೂರು, ನಾಗಮಂಗಲದ ತಾಲೂಕಿನ ಅನೇಕ ಗ್ರಾಮಗಳಲ್ಲಿಯೂ ವಾಸವಾಗಿರುತ್ತಾರೆ. ಈ ಜನರು ವ್ಯವಸಾಯದಲ್ಲಿ ನಿರತರಾಗಿದ್ದರೂ ಕೈಗಾರಿಕೆಯ ಕೆಲಸಗಳಲ್ಲಿ ಕುಶಲರು. ಇವರಲ್ಲನೇಕರು ಜ್ಯೋತಿಷ್ಯ, ವೈದ್ಯ, ಮಂತ್ರ, ತಂತ್ರ ಮುಂತಾದ ವೃತ್ತಿಗಳನ್ನೂ ಅನುಸರಿಸುತ್ತಾರೆ. ಇವರೆಲ್ಲ ಶ್ರೀ ವೈಷ್ಣವಾಚಾರ್ಯರಾದ ಶ್ರೀರಾಮಾನುಜಾಚಾರ್ಯರ ಶಿಷ್ಯರು. ಆ ಹಾರವ್ಯವಹಾರ, ಶುಚಿ ರುಚಿ, ನಡೆ ನುಡಿ ಮಡಿ ಮಜ್ಜನ, ಭಜನ ಅರ್ಚನ, ಮುಂತಾದವುಗಳಲ್ಲಿ ಬಹು ನಿಷ್ಠರು ಇವರ ಮನೆಮಠಗಳು ನಿರ್ಮಲವಾಗಿರುತ್ತವೆ.

ಆದರೆ ಹಿಂದೂ ಸಮಾಜವು ಇವರನ್ನು ತಿರಸ್ಕರಿಸಿ, ಇವರನ್ನು 'ಅಂತ್ಯಜ' ರೆಂದೆಣಿಸಿ ಇವರಿಗೆ ಕಿರುಕುಳವನ್ನು ತಂದಿಟ್ಟು ಅಭಿವೃದ್ಧಿಗೆ ಆತಂಕವನ್ನುಂಟು ಮಾಡುತ್ತಿರುವುದೊಂದು ಶೋಚನೀಯವಾದ ಸಂಗತಿ.

ಬೆಂಗಳೂರಿನಲ್ಲಿ ಒಂದು ವ್ಯಾಜ್ಯ

ಬೆಂಗಳೂರು ಮಿಲ್ಲಿನ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಕಣಿಯನಿಗೂ (ಕಸ್ತೂರಯ್ಯ) ಇತರ ವರ್ಣದ ಮಲವರಿಗೂ ದೊಡ್ಡ ಜಗಳವಾಯಿತು. ಕಸ್ತೂರಯ್ಯನು ಅಂತ್ಯಜನೆಂದೂ, ಅವನು ಉತ್ತಮ ಪಂಗಡದವರಿಗೆ ಕುಡಿಯುವದಕ್ಕೆ ನೀರು ಕೊಟ್ಟನೆಂದೂ, ಇದೇ ವ್ಯಾಜ್ಯ ಕಾರಣವೆಂದೂ ಗೊತ್ತಾಯಿತು. ಈ ಜಗಳ ಬೆಳೆದು, ವಾದಿಪ್ರತಿವಾದಿಗಳಾಗಿ, ಕಡೆಗೆ ಕೋರ್ಟಿಗೆ ಹೋಯಿತು. ಅಷ್ಟರಲ್ಲೇ ಕಣಿಯ ಮುಖಂಡರೂ ತಗಡೂರು ಗ್ರಾಮ ಠಕ್ಕನ ಸಭೆಯ ಶ್ರೀ|| ರಾಮಚಂದ್ರ ರಾಯರಿಗೆ ಈ ವಿಚಾರ ತಿಳಿಸಿದರು. ಅವರು ಬಂದು, ಬೆಂಗಳೂರಲ್ಲಿ ಸಾರ್ವಜನಿಕ ಸಭೆ ಮಾಡಿ, ಎರಡೂ ಪಕ್ಷದವರಿಗೂ ಪಂಚಾಯಿತಿಯ ತೀರ್ಪನ್ನು ಕೊಟ್ಟು, ಒಪ್ಪಿಸಿದರು. ಆಗಲೇ ಕಣಿಯರು ಯಾವ ಸಂಗಡಕ್ಕೆ ಸೇರಿದವರೆಂಬುದು ನಿಶ್ಚಯಿಸ ಬೇಕೆಂಬ ನಿರ್ಧಾರವಾಯಿತು.

ಶ್ರೀರಾಮಚಂದ್ರರಾಯರ ದೇಶಾಟನ

ಕೂಡಲೇ ರಾಮಚಂದ್ರರಾಯರು, ಕಣಿಯರ ಪರವಾಗಿ ಮ|| ಇರಸವಾಡಿ ನಂಜಿಯರ್‌ದಾಸ್ ಬೆಂಗಳೂರು ಭದ್ರಯ್ಯ ಮತ್ತು ಮಲ್ಲಯ್ಯ ಮುಂತಾದವರು ದಕ್ಷಿಣದೇಶದ ತೀರ್ಥಕ್ಷೇತ್ರಗಳಿಗೆ ಹೋಗಿ, ಮಠಾಧಿಪತಿಗಳನ್ನು ದರ್ಶನಮಾಡಿಕೊಂಡು "ಕಣಿಯರು ಯಾವ ವರ್ಣಕ್ಕೆ ಸೇರಿದವರು? ಹಿಂದೂ ಸಮಾಜದಲ್ಲಿ ಅವರಿಗೆ ಯಾವಸ್ಥಾನವುಂಟು? ಅವರು ನಾಲ್ಕನೆಯ ವರ್ಣಕ್ಕೆ ಸೇರಿದವರೆ ಅಥವಾ ಐದನೆಯ ವರ್ಣಕ್ಕೆ ಸೇರಿದವರೆ" ಇತ್ಯಾದಿ ಪ್ರಶ್ನೆಗಳಿಗೆ ತಕ್ಕ ಉತ್ತರಗಳನ್ನು ಪಡೆದು ಬಂದು ಆ ವರ್ಣವ್ಯವಸ್ಥೆಯ ವಿಚಾರವಾಗಿ ಶ್ರೀ|| ರಾಮಚಂದ್ರರಾಯರು ಒಂದು ವರದಿಯನ್ನು ಪ್ರಕಟಿಸಿದರು.

ಕಣಿಯರ ಮಹಾಸಭೆ

ಕಣಿಯರ ಪಂಗಡದವರೆಲ್ಲರೂ ತಮ್ಮ ಸಮಾಜದ ಸ್ಥಾನಮಾನಗಳನ್ನು ಉಳಿಸಿ ಕೊಳ್ಳುವುದರ ಸಲುವಾಗಿ, ಆ ಸಮಾಜದ ವಿದ್ಯಾಭಿವೃದ್ಧಿ, ಮತ್ತು ಇತರ ವಿಚಾರಗಳ ಬಗ್ಗೆ ಸಮಾಜವು ಒಂದಾಗಿ, ಒಗ್ಗಟ್ಟಿನಿಂದ, ಕೆಲಸ ನಡೆಸಬೇಕೆಂಬ ಸದುದ್ದೇಶದಿಂದ ಸಂಸ್ಥಾನದ ಕಣಿಯ ಜನರೆಲ್ಲರೂ ಒಂದು ಮಹಾಸಭೆಯನ್ನು ನೆರಿಸಲು ನಿಶ್ಚಯಿಸಿದರು. ಆ ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀ. ವೆಂಕಟಕೃಷ್ಣಯ್ಯನವರೇ ಅಂಗೀಕರಿಸಿದರು.

ತಿರುಮಕೂಡಲು ನರಸೀಪುರ

ಕಪಿಲಾ ಕಾವೇರೀ ಸ್ಫಟಿಕ ಸರೋವರ ಸಂಗಮ ಕ್ಷೇತ್ರವೂ ಪ್ರಕೃತಿ ಸೌಭಾಗ್ಯಸ್ಥಾನವೂ ಆದ ತಿರುಮಕೂಡಲು ನರಸೀಪುರದಲ್ಲೇ ಸೆಪ್ಟೆಂಬರು ೨೯ ನೇ ತಾರೀಖು ಮಹಾಸಭೆಯು ನಡೆಯಿತು.

ಈ ಪಂಗಡದವರು ಮಹಾ ಸಭೆ ನಡೆಸಿ ಅಲ್ಲಿ "ನಮ್ಮನ್ನು ಎಲ್ಲ ಪಂಗಡದವರಂತೆ ಗುಡಿ, ದೇವಸ್ಥಾನ, ತೀರ್ಥ ಕ್ಷೇತ್ರಗಳಿಗೆ ಹೋಗಲು ನಮಗೆ ಅವಕಾಶ ಕೊಡಿ" ಎಂಬದಾಗಿ ಉತ್ತಮ ಪಂಗಡದವರನ್ನು ಬೇಡಿದರು.

ಈಗ ತಮ್ಮ ಹಕ್ಕನ್ನು ಪಡೆಯಲು ಹೋರಾಡಲು ಮಾಡಿರುವರು. ತಿರುಮಕೂಡಲು ನರಸೀಪುರದ ನರಸಿಂಹಸ್ವಾಮಿ ದೇವಾಲಯಕ್ಕೆ ಈ ಪಂಗಡದವರು ಹೋಗಲೆತ್ತಿಸಲು ಅಧಿಕಾರಿಗಳೂ, ಇತರ ಮರ್ಯಾದೆಯರೂ ಅವರನ್ನು ಅಡ್ಡಿ ಪಡಿಸಿದರು. ಆಗ ಕಣಿಯರು

"ನಾವು ಶ್ರೀ ವೈಷ್ಣವಸ್ಥಾಯೀ ದೇವಸ್ಥಾನಗಳಿಗೆ ಹೋಗತಕ್ಕ ಹಕ್ಕನ್ನು ಧರ್ಮಗಳ ಒಪ್ಪಿಗೆಯಿಂದಲೂ ಮೆಚ್ಚಿಗೆಯಿಂದಲೂ ಸಹಾನುಭೂತಿಯಿಂದಲೂ ಪಡೆಯಬೇಕೆಂದು ದೃಢ ಸಂಕಲ್ಪ ಮಾಡಿರುತ್ತೇವೆ. ಈ ನಮ್ಮ ನಿರಪಾಯಕರವಾದ ಪ್ರಾರ್ಥನೆಯನ್ನು ತಾವುಗಳು ಮನಃಪೂರ್ವಕವಾಗಿಯೂ ಪ್ರೀತಿಪೂರ್ವಕವಾಗಿಯೂ ನೆರವೇರಿಸುವಂತೆ ಭಗವಂತನು ತಮ್ಮಗಳಿಗೆ ಪ್ರೇರಣೆಯನ್ನು ಮಾಡಲೆಂದು ಪ್ರಾರ್ಥಿಸುವುದಕ್ಕಾಗಿ ನಾವುಗಳು ಸತ್ಯಾಗ್ರಹ ವ್ರತವನ್ನು ಕೈಕೊಳ್ಳಬೇಕೆಂದು ನಿಶ್ಚಯಿಸಿರುತ್ತೇವೆ"

ಎಂಬದಾಗಿ ಏಕ ಕಂಠದಿಂದ ಹೇಳಿರುವರು. ಅಸ್ಪೃಶ್ಯತೆ, ಅಂತ್ಯಜರು ಈ ವಿಚಾರವಾಗಿ ಚರ್ಚೆಯು ತೀಕ್ಷ್ಣವಾಗಿ ನಡೆಯುತ್ತಿದೆ. ಈ ಘೋರಕಳಂಕದಿಂದ ಹಿಂದೂ ಧರ್ಮವನ್ನು ಉದ್ಧರಿಸಬೇಕೆಂದು ಅನೇಕರು ಸಂಕಲ್ಪಮಾಡಿರುವರು. ಸಾಂಘಿಕ ಘೋರ ನರಕ ಯಾತನೆಯಿಂದ ನರಳುತ್ತಿರುವ ಸೋದರ ಸೋದರಿಯರನ್ನು ಪಾರುಮಾಡುವ ಕರ್ತವ್ಯವು ಅರಿತವರೆಲ್ಲರಿಗೂ ಸೇರಿದುವದು. ಈಗಾಗಲೆ ಯಾತನೆಯನ್ನು ಅನುಭವಿಸುತ್ತಿರುವವರು ತಮ್ಮ ಸ್ವಾತಂತ್ರ್ಯವನ್ನು ಸ್ಥಾಪಿಸುತ್ತಿರುವರು. (ತಿರುವಾಂಕೂರು) ವೈಕೊಂನಲ್ಲಿ ಪಂಚಮರಿಗುಂಟಾದ ವಿಜಯವನ್ನು ಎಲ್ಲರೂ ಬಲ್ಲರು. ಕುರುಡು ಮತಾಭಿಮಾನಿಗಳೂ ಅಂಧ ಶ್ರದ್ಧೆಯುಳ್ಳವರೂ ಗೊಡ್ಡು ವೈದಿಕ ಚಿತ್ತವೃತ್ತಿ ಯುಳ್ಳವರೂ ಅಸ್ಪೃಶ್ಯತಾನಿವಾರಣೆಯ ಸುಧಾರಣೆಯನ್ನು ವಿರೋಧಿಸುತ್ತಿರುವರು. ಆದರೆ ಈ ವಿರೋಧವು ನ್ಯಾಯನಹಿತವಾದುದು. ಧರ್ಮರಹಿತವಾದುದು. ಈಶ್ವರ ರಹಿತವಾದುದು ಈ ಸಂದರ್ಭದಲ್ಲಿ ನಿಜವಾದ ಚಂಡಾಲರು ಯಾರೆಂಬುದನ್ನು ತಿಳಿಸುವ ಎರಡು ಶ್ಲೋಕಗಳು ನೆನಪಿಗೆ ಬರುತ್ತವೆ.

> ಸತ್ಯಂನಾಸ್ತಿ ತಪೋನಾಸ್ತಿ ನಾಸ್ತಿ ಚೇಂದ್ರಿಯ ನಿಗ್ರಹಃ।
> ಸರ್ವಭೂತ ದಯಾನಾಸ್ತಿ ಏತಿ ಚಂಡಾಲ ಲಕ್ಷಣಂ॥
> ಅನೃತಂ ಪಕ್ಷಪಾತಂಚ ನಿರ್ಮಲಾತ್ಮಂಚ ವಂಚಕಃ।
> ಜ್ಞಾನದ್ರೋಹಿ ಶ್ರುತಿದ್ರೋಹಿ ಏತಿ ಚಂಡಾಲ ಲಕ್ಷಣಂ॥

[ಸುಳ್ಳು ಹೇಳುವದು, ಭಗವಧ್ಯಾನ ಮಾಡದಿರುವುದು; ಇಂದ್ರಿಯ ನಿಗ್ರಹವಿಲ್ಲದಿರುವದು; ಪ್ರಾಣಿದಯೆ ಯಿಲ್ಲದಿರುವದು; ಅನೃತ ಪಕ್ಷಪಾತ; ಅರಿಯದವರನ್ನು ವಂಚಿಸುವದು; ಜ್ಞಾನಿಗಳಿಗೆ ದ್ರೋಹಮಾಡುವುದು; ವೇದಕ್ಕೆ ವಿರೋಧವಾಗಿ ಆಚರಿಸುವದು; ಇವೆಲ್ಲವೂ ಚಂಡಾಲರ ಲಕ್ಷಣಗಳು.]

ಕಣಿಯರು ಸತ್ಯಾಗ್ರಹವನ್ನು ಸ್ವೀಕರಿಸಿ ದೇಸ್ಥಾನದ ಮುಂಭಾಗದಲ್ಲಿ ಇಷ್ಟಾರ್ಥಸಿದ್ಧಿಯಾಗುವ ವರೆಗೂ ಭಗವಂತನನ್ನು ಪ್ರಾರ್ಥಿಸಲು ನಿಶ್ಚಯಿಸಿರುವರು. ಈ ಸಂದರ್ಭದಲ್ಲಿ ಅವರು ಹೇಳುವ ಮತ್ತೊಂದು ಮಾತನ್ನು ನಾವು ವಾಚಕರ ಗಮನಕ್ಕೆ ತರಲೆಳಸುತ್ತೇವೆ.

“ಈ ಪ್ರಯತ್ನವು ವಿರೋಧಿಗಳಾದವರಿಗೆ ಅಧರ್ಮವಾಗಿಯೂ ಅನ್ಯಾಯವಾಗಿಯೂ ಕಂಡು ಬರಬಹುದು. ನಾವು ಅಕೃತ್ಯವನ್ನು ಮಾಡುತ್ತಿರುವೆವೆಂಬ ಭಾವನೆಯಿಂದ ಅವರು ಚಿತ್ರವಿಚಿತ್ರವಾದ ಹಿಂಸೆಯನ್ನೂ ಮಾಡಬಹುದು. ಕೆಲವು ಸಂದರ್ಭಗಳಲ್ಲಿ ಪ್ರಾಣ, ಮಾನ, ಧನಗಳ ಹಾನಿಯೂ ಆಗಬಹುದು. ಆದರೂ ಸತ್ಯಾಗ್ರಹಿಗಳು ಪ್ರತಿಯಾಗಿ ಯಾವ ಹಿಂಸೆಯನ್ನೂ ಕೊಡದೆ ಎಲ್ಲಾ ಕಷ್ಟ ನಷ್ಟಗಳನ್ನೂ ಶಾಂತಿಯಿಂದ ಅನುಭವಿಸಿಕೊಂಡು ತಮ್ಮ ಕೆಲಸದಲ್ಲಿ ನಿರತರಾಗಿರುವರು”

ಈ ಧರ್ಮ ಸಂಗ್ರಾಮದಲ್ಲಿ ಒಂದು ಪಕ್ಷದವರೇನೋ ಶಸ್ತ್ರಾಸ್ತ್ರಗಳನ್ನು ನಿರಾಕರಿಸಿ ಅಹಿಂಸಾವ್ರತವನ್ನು ಹಿಡಿದರು. ಮತ್ತೆ ಪ್ರತಿಪಕ್ಷದವರು ಯಾವ ಶಸ್ತ್ರವನ್ನು ಧರಿಸುವರೋ ನೋಡಬೇಕು. ಉಭಯ ಪಕ್ಷದವರ ಸುಖಶಾಂತಿಗಳ ರಕ್ಷಕರಾದ ಸರ್ಕಾರದವರು ಯಾವ ವೃತ್ತಿಯನ್ನು ಅನುಸರಿಸುವರೋ ನೋಡಬೇಕು.

—ವಿಶ್ವ ಕರ್ನಾಟಕ

ಧಾರವಾಡದ ಹೆಸರು

ಲೇಖಕರು—ಶ್ರೀ. ಸ. ಸುಗೇಕರ ದಾಸ

ನಾನು ದೌಂಡದಲ್ಲಿ ಒಂದು ದಿನ ಅಕ್ಕಸಾಲಿಗನ ಅಂಗಡಿಗೆ ಹೋಗಿದ್ದೆನು. ಅಲ್ಲಿ ಮಾಡಿಸಲಿಕ್ಕೆ ಕೊಟ್ಟ ಒಡವೆಯನ್ನು ತೂಗುವಾಗ ಅಕ್ಕಸಾಲಿಗನು, ಇದು (ತಕ್ಕಡಿಯು) “ಧಾರವಾಡ” ಅದೆ. ಇದರಲ್ಲಿ ತೂಕ ತಪ್ಪುವ ಸಂಭವವಿಲ್ಲ, ಅಂದನು. ಅದನ್ನು ಕೇಳಿ ನನಗೆ ಆಶ್ಚರ್ಯವಾಯಿತು, ಆನಂದವಾಯಿತು. ಸಮಾಧಾನವಾಯಿತು, ಅಭಿಮಾನವೆನಿಸಿತು. ಯಾಕೆ? ವಾಚಕರು ಊಹಿಸಬಲ್ಲರು.

ಹಿಂದೆ ಈ ಪ್ರಾಂತದಲ್ಲಿ ವ್ಯಾಪಾರಕ್ಕೆ ಬಂದ ಧಾರವಾಡದ —ಕನ್ನಡದೇಶದ— ವರ್ತಕರು ಅತ್ಯಂತ ಪ್ರಾಮಾಣಿಕರಿರುತ್ತಿದ್ದರು ಅವರು ತಾವು ಕೀರ್ತಿಯನ್ನು ಪಡೆದರಲ್ಲದೆ ತಾವಿದ್ದ ದೇಶದ ಮುಖವಾದ ಧಾರವಾಡದ ಹೆಸರನ್ನು ಮುಂದೆ ತಂದರು. ಆಗಿನಿಂದ ಧಾರವಾಡದ ತಕ್ಕಡಿಯೆಂದರೆ ಪ್ರಾಮಾಣಿಕ ತಕ್ಕಡಿಯೆಂದು ಪ್ರಸಿದ್ಧಿಗೆ ಬಂತು

ಈಗ ೮-೧೦ ವರ್ಷಗಳಿಂದ ಮಹಾರಾಷ್ಟ್ರದಲ್ಲಿ ಓಣಿ ಓಣಿಗೆ ಖಣ ಮಾರುವವರು “ಧಾರವಾಡೀ ಖಣ” ಎಂದು ಕೂಗುತ್ತಿದ್ದಾರೆ. ಆ ಖಣಗಳು ಧಾರವಾಡದವಿರುವದೇ ಇಲ್ಲ. ಶಹಾಪುರ, ಗದಗ, ಗುಳೇದಗುಡ್ಡ ಮುಂತಾದ ಊರುಗಳಲ್ಲಿ ಮಾಡಿದವಿರುತ್ತವೆ. ಆದರೆ ಅವರಿಗೆ ಧಾರವಾಡದ ಹೆಸರನ್ನೆತ್ತದೆ ನಿರ್ವಾಹವಿಲ್ಲ. ತಮ್ಮ ಖಣಗಳ ಮಾರಾಟವಾಗಬೇಕಾದರೆ ಅವರಿಗೆ ಹೀಗೆ ಮಾಡಲಿಕ್ಕೇ ಬೇಕಾಗುತ್ತದೆ.

ಧಾರವಾಡವೆಂದರೆ ಧಾರವಾಡ ಪಟ್ಟಣವು, ಧಾರವಾಡವೆಂದರೆ ಕರ್ನಾಟಕವು. ಮಹಾರಾಷ್ಟ್ರಕ್ಕೆ ಬಂದ ಕನ್ನಡ ಮಹಿಳೆಯರು ಚಂದವಾದ ಸೀರೆ ಕುಪ್ಪಸಗಳನ್ನು ಧರಿಸುತ್ತಿರುವದನ್ನು ಎಲ್ಲರೂ ನೋಡುತ್ತಾರೆ. ಆದ್ದರಿಂದ ಧಾರವಾಡೀ ಖಣವೆಂದರೆ ಉತ್ಕೃಷ್ಟತರದ ಖಣವೆಂದು ಜನರ ಮನವರಿಕೆಯಾಗಿದೆ.

ಧಾರವಾಡಕ್ಕೆ ಸಂಬಂಧಿಸಿದ್ದೆಲ್ಲ ಚಲೋದು, ಧಾರವಾಡಕ್ಕೆ ಸಂಬಂಧಿಸಿದ್ದೆಲ್ಲ ಪ್ರಾಮಾಣಿಕವು ಹೀಗೆ ಇತ್ತಲಿನ ಸಾಮಾನ್ಯ ಜನತೆಯ ಭಾವನೆಯಾಗಿದೆ. (ಬ್ರಹ್ಮನಿಗೂ ರಂಜಿಸಲಿಕ್ಕೆ ಅಸಾಧ್ಯರಾದ ಕೆಲವು ಅಲ್ಪ ಸಂಖ್ಯಾಕರು ಧಾರವಾಡವನ್ನೂ ಕರ್ನಾಟಕವನ್ನೂ ನಿಂದಿಸವೊಲ್ಲರೇಕೆ?) ಇದೇ ಭಾವನೆಯನ್ನು ಪರಪ್ರಾಂತಿಯರಲ್ಲಿ ಸ್ಥಿರಪಡಿಸುವಂಥ ಧಾರವಾಡತ್ವವು ಈಗಿನ ಧಾರವಾಡದಲ್ಲಿ ಅದೆಯೋ ಇಲ್ಲವೋ? ಇಲ್ಲದಿದ್ದರೆ ಅದನ್ನು ಪುನಃ ಬರಮಾಡುವದಕ್ಕೆ ತನು ಮನ ಧನಗಳಿಂದ ಪ್ರಯತ್ನ ಮಾಡುವದು ಎಲ್ಲ ಧಾರವಾಡಿಗರ ಆದ್ಯ ಕರ್ತವ್ಯವಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯದ ವಿಷಯದಲ್ಲಿ ಪ್ರಶ್ನಮಾಲಿಕೆ.

(೧) ಬೇರೆ ಬೇರೆ ಭಾಷೆಗಳನ್ನಾಡುವ ಜನಾಂಗದವರೆಲ್ಲ ತಮ್ಮ ತಮ್ಮ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿ ಕೊಳ್ಳ ಹತ್ತಿದ್ದನ್ನು ತಾವು ಬಲ್ಲಿರಿ. ಅಖಂಡ ಕರ್ನಾಟಕಕ್ಕೆ ಸಹ ಬೇರೊಂದು ವಿಶ್ವವಿದ್ಯಾಲಯವಿರಬೇಕೆಂಬುದಕ್ಕೆ ತಾವು ಒಪ್ಪುವಿರೋ?

(೨) ಕರ್ನಾಟಕದಲ್ಲಿ ಮೈಸೂರ ವಿಶ್ವವಿದ್ಯಾಲಯವಿದೆಯಷ್ಟೇ? ಅದನ್ನು ಅಖಂಡ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡುವ ವಿಚಾರವು ಪ್ರಚಾರವಾಗಹತ್ತಿದೆ. ಇದಕ್ಕೆ ತಮ್ಮ ಒಪ್ಪಿಗೆ ಇರುವದೋ? (ಈ ಕಾರಣವನ್ನು ಸ್ಪಷ್ಟವಾಗಿ ಬರೆಯಬೇಕಾಗಿ ವಿನಂತಿಯದೆ.)

(೩) ಅಖಂಡ ಕರ್ನಾಟಕಕ್ಕೆಲ್ಲ ಒಂದೇ ವಿಶ್ವವಿದ್ಯಾಲಯವಿರಬೇಕೆಂಬುವದಕ್ಕೆ ಕೆಳಗಿನ ಕಾರಣಗಳಿವೆ. ಅವಕ್ಕೆ ತಮ್ಮ ಒಪ್ಪಿಗೆಇದ್ದ ಬಗ್ಗೆ ತಾವು ತಿಳಿಸಬೇಕಾಗಿ ಪ್ರಾರ್ಥನೆ.

(ಅ) ಕರ್ನಾಟಕದಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗವು ಸಂಸ್ಥಾನಗಳಲ್ಲಿದೆ. ಸಂಸ್ಥಾನಗಳಲ್ಲಿಯ ಕರ್ನಾಟಕಸ್ಥರಿಗೂ ಬ್ರಿಟಿಶ್ ಕರ್ನಾಟಕಸ್ಥರಿಗೂ ಸಂಬಂಧವಿಲ್ಲದಾಗಿದೆ. ಇವರೀರ್ವರಲ್ಲಿಯೂ ಏಕೀಭಾವವು ಬೆಳೆದು ಅಖಂಡ ಕರ್ನಾಟಕದ ಕಲ್ಪನೆಯು ಕಳೆ ಏರಬೇಕಾದರೆ, ಇವರೆಲ್ಲ ಭಾಗತೆಗೆದುಕೊಳ್ಳುವಂತಹ ಮತ್ತು ಯಾವಾಗಲೂ ಇವರು ಒಬ್ಬರೊಬ್ಬರು ಕೂಡಿಯೇ ಕೆಲಸಮಾಡುವಂತಹ ಪ್ರಸಂಗಗಳು ಬೇಕಲ್ಲವೇ? ಅಖಂಡ ಕರ್ನಾಟಕಕ್ಕೆ ಒಂದೇ ವಿಶ್ವವಿದ್ಯಾಲಯವನ್ನು ಮಾಡುವದರಿಂದ ಇದು ಸಾಧ್ಯವಾಗುವದಿಲ್ಲವೇ?

(ಬ) ಪ್ರಾಥಮಿಕ ಶಾಲೆಯಿಂದ ಮೊದಲು ಮಾಡಿಕೊಂಡು ಉಚ್ಚ ಶಿಕ್ಷಣವು ಮುಗಿಯುವ ವರೆಗೆ ಕ್ರಮಿಕ ಪುಸ್ತಕಗಳೂ, ಶಾಲೆ, ಕಾಲೇಜುಗಳಲ್ಲಿ ಓದುವ ಪುಸ್ತಕಗಳೂ, ಪದ್ಧತಿಗಳೂ, ಶಿಕ್ಷಣ ಮತ್ತು ಶಿಸ್ತುಗಳ ಕ್ರಮವೂ, ಒಂದೇ [illegible]ರುವದರಿಂದ, ಮೈಸೂರ ಮದ್ರಾಸ, ಮುಂಬೈ ಮೊದಲಾದ ಕರ್ನಾಟಕ ಭಾಗಗಳಲ್ಲಿ ವಿದ್ಯಾರ್ಥಿಗಳಲ್ಲಿರುವ ಭೇದ ಭಾವವು ಅಳಿದು ಹೋಗಲು ಒಳ್ಳೇ ಆಸ್ಪದ ದೊರೆಯುವದಿಲ್ಲವೇ?

(ಕ) ಈಗ್ಗೆ ಮೈಸೂರ, ಮದ್ರಾಸ ಮತ್ತು ಮುಂಬೈ ಕರ್ನಾಟಕದ ಭಾಗಗಳಲ್ಲಿ ಬೇರೆ ಬೇರೆ ಕ್ರಮಿಕ ಪುಸ್ತಕಗಳಿವೆ. ಆದ್ದರಿಂದ [illegible] ಕಡೆಗಳಲ್ಲಿದ್ದ ಭಿನ್ನ ಭಿನ್ನ ಭಾಷಾ ಶೈಲಿಯು, ಆಯಾ ಭಾಗದ ವಿದ್ಯಾರ್ಥಿಗಳಲ್ಲಿ, ಅವರು ಬಾಲಕರಿರುವಾಗಲೇ, ದೃಢವಾಗಿ ನೆಲೆಗೊಳ್ಳುವದು. [illegible]

ಯಲ್ಲಿ. ವಿವಿಧತೆಯುಂಟಾಗಿ, ಒಂದು ಭಾಗದ ಶೈಲಿಯು **ಇನ್ನೊಂದು** ಭಾಗದವರಿಗೆ ಕಠಿಣವಾಗಿ ತೋರುತ್ತದೆ. ಆದ್ದರಿಂದಲೇ ಕನ್ನಡದಲ್ಲಿ ಗ್ರಂಥಗಳು ಸಹ ಜೆಟ್ಟಾಗಿ ಪ್ರಸಾರವಾಗುವದಿಲ್ಲ. ಕನ್ನಡ ವಾಙ್ಮಯ ವಿಕಾಸಗೊಳ್ಳಲೊಲ್ಲದು. ಈ ದೋಷವು ಹೊರಟು ಹೋಗಲಿಕ್ಕೆ ಅಖಂಡ **ಕರ್ನಾಟಕಕ್ಕೆ ಒಂದೇ ಒಂದಾದ** ವಿಶ್ವವಿದ್ಯಾಲಯವು ಇರುವದು ಅವಶ್ಯವಲ್ಲವೋ?

(ಈ) ವಿಶ್ವವಿದ್ಯಾಲಯದ 'ಸಿನೇಟ' 'ಸಿಂಡಿಕೇಟ'ಗಳಲ್ಲಿ ಸಹ ಕರ್ನಾಟಕದ ಎಲ್ಲ ಭಾಗಗಳ ಪಂಡಿತರು ಕಲೆತು ಕೆಲಸ ಮಾಡುವದರಿಂದ ಅಖಂಡ ಕರ್ನಾಟಕದ ಈ ಪಾಂಡಿತ್ಯ ಸಮ್ಮಿಶ್ರಣದ ಪ್ರವಾಹವು ಪರಿಶುದ್ಧವಾಗಿ ಹರಿಯಲು ಮಾರ್ಗವಾಗುವದಿಲ್ಲವೇ?

(ಉ) ಮೈಸೂರಿನವರನ್ನು ಬಿಟ್ಟು, ಬ್ರಿಟಿಶ್ ಕರ್ನಾಟಕದವರೇ ಮಾತ್ರ ತಮಗಾಗಿ, ಸ್ವತಂತ್ರವಾದ ವಿಶ್ವವಿದ್ಯಾಲಯವನ್ನು ಸ್ಥಾಪಿಸಿಕೊಂಡರೆ, ಮೇಲೆ ಬರೆದ ಕೊರತೆಗಳನ್ನು ದೂರ ಮಾಡುವದಕ್ಕೆ ಆತಂಕಬರುವದಿಲ್ಲವೇ? ಆತಂಕವು ಬರುತ್ತಿದ್ದರೆ, ಮೈಸೂರ ವಿಶ್ವವಿದ್ಯಾಲಯದ ಹೊರತಾಗಿ ಬ್ರಿಟಿಶ್ ಕರ್ನಾಟಕಕ್ಕೆ ಸ್ವತಂತ್ರ ವಿಶ್ವವಿದ್ಯಾಲಯವು ಏಕೆ ಬೇಕು.?

(ಊ) ಮೇಲಿನ ಕಾರಣಗಳಿಗೆಲ್ಲ ತಮ್ಮ ಸಮ್ಮತಿಯಿದ್ದರೂ, ಪರ, ಸಂಸ್ಥಾನಗಳ ಸಂಗಡ ಗುದುಮುರಿಗೆ ಹಾಕುವದು ನಮಗೆ ಬೇಡವೆಂದು ನಿಮ್ಮ ಅಭಿಪ್ರಾಯವಿದೆಯೋ? ಹಾಗಿದ್ದರೆ ನಿಮ್ಮ ದೃಷ್ಟಿಯಿಂದ ಬ್ರಿಟಿಶ ಕರ್ನಾಟಕಕ್ಕಾಗಲೀ, ಮೈಸೂರದವರಿಗಾಗಲೀ, ಅಖಂಡ ಕರ್ನಾಟಕ ವಿಶ್ವವಿದ್ಯಾಲಯದಿಂದ ಸಂಭವಿಸುವ ಹಾನಿಗಳಾವವೆಂಬದನ್ನು ದಯವಿಟ್ಟು ವಿಶದವಾಗಿ ಬರೆದು ತಿಳಿಸಬೇಕಾಗಿ ಪ್ರಾರ್ಥನೆ.

(೬) ಮೈಸೂರ ವಿಶ್ವವಿದ್ಯಾಲಯವನ್ನೇ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡಿದ್ದೇ ಆದರೆ, ಸದ್ಯದ ಮೈಸೂರ ವಿಶ್ವವಿದ್ಯಾಲಯದ ಸ್ಥಿತಿಯಲ್ಲಿ, ಅಖಂಡಕರ್ನಾಟಕದ ಭಾಗಗಳಿಗೆ ಅನುಕೂಲವಾಗುವಂತೆ, ಅನೇಕ ಬಗೆಯಿಂದ ಹೆಚ್ಚು ಕಡಿಮೆ ಮಾಡಬೇಕಾಗುವದು. ಈ ಹೆಚ್ಚು ಕಡಿಮೆಗಳಾದ ಮೇಲೆ "ಸಂಸ್ಥಾನದವರ ಸಂಗಡ ಗುದ್ದಾಡುವ" ವಿಧಾನವು ದೂರಾಗುವದಿಲ್ಲವೆ? ಉದಾಹರಣಾರ್ಥ:— ಮೈಸೂರ ವಿಶ್ವವಿದ್ಯಾಲಯವೆಂಬುದಕ್ಕೆ ಕರ್ನಾಟಕ ವಿಶ್ವವಿದ್ಯಾಲಯವೆಂಬ ಹೆಸರು ಬರುವದು; ಮೈಸೂರಿನವರೂ, ಮೈಸೂರ ಹೊರಗಿನವರೂ, ಕೂಡಿಯೇ 'ಸಿನೇಟ' 'ಸಿಂಡಿಕೇಟ'ಗಳಲ್ಲಿ ಇದ್ದು ಕೆಲಸ ಮಾಡುವರು. ಹಣದ ಭಾರವು ಮೈಸೂರಿನವರ ಮೇಲೆಯೂ, ಮೈಸೂರ ಹೊರಗಿನವರ ಮೇಲೆಯೂ ಕೂಡಿಯೇ ಬರುವದು. ಅಂದಮೇಲೆ, ಮೈಸೂರ ವಿಶ್ವವಿದ್ಯಾಲಯವೆಂದರೆ ಅದು ಸಂಸ್ಥಾನದ ವಿಶ್ವವಿದ್ಯಾಲಯವೆಂದು, ಹೆದರಿ ಹೇಳುವದೇಕೆ?

(೭) "ಇದೆಲ್ಲ ಸರಿಯಿದೆ. ಆದರೆ ಈ ಬಗೆಯ ಬದಲಾವಣೆಗೆ ಮೈಸೂರ ಸರಕಾರವೇ ಆಗಲಿ; ಬ್ರಿಟಿಶ್ ಸರಕಾರವೇ ಆಗಲಿ ಒಪ್ಪುವದೋ? ಅದು ಗೊತ್ತಿಲ್ಲದೇ ಸುಮ್ಮನೇ ಬರಿ ಕೈಯಿಂದ ಸೊಕೆಹಾಕುವದೇಕೆ?" ಎಂಬದಾಗಿ ಕೆಲವರು ಕೇಳಬಹುದಲ್ಲವೆ? ಆದರೆ ಈ ವಿಚಾರವು ಸರಿಯಾಗಿದ್ದರೆ, ನಾವು ಈ ಸರಕಾರಗಳಿಂದ ಅನುಮತಿಯನ್ನು ಪಡೆಯುವ ಕೆಲಸವನ್ನು ಪ್ರಾರಂಭಿಸಬಹುದು. ಅಖಂಡ ಕರ್ನಾಟಕದ ಜನತೆಗೆ ಈ ವಿಚಾರವು ಸರಿದೋರಿದ್ದೇ ಆದರೆ ಸರಕಾರಗಳ ಸಮ್ಮತಿಯನ್ನು ದೊರಕಿಸುವದು, ಕಷ್ಟಸಾಧ್ಯವಾದರೂ, ಅಶಕ್ಯಕೋಟಿಯದಲ್ಲ. ಇದಕ್ಕೆ ತಮ್ಮ ಒಪ್ಪಿಗೆಯಿದೆ?

(೮) "ಅಖಂಡ ಕರ್ನಾಟಕಕ್ಕೆಲ್ಲ ಒಂದೇ ಒಂದು ವಿಶ್ವವಿದ್ಯಾಲಯವಿರಬೇಕು; ಸರಿ. ಆದರೆ ಮೈಸೂರ ವಿಶ್ವವಿದ್ಯಾಲಯವನ್ನೇ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡುವ ಕಾರಣವೇನು? ಮೈಸೂರ ವಿಶ್ವವಿದ್ಯಾಲಯವನ್ನು ಒಂದು ಪಾರ್ಶ್ವಿ ಸ್ವತಂತ್ರವಾದ ಸಂಯುಕ್ತ ಕರ್ನಾಟಕ ವಿಶ್ವವಿದ್ಯಾಲಯವನ್ನು ಹೊಸದಾಗಿ ಹೊರಡಿಸಿ ಅದನ್ನು ಬ್ರಿಟಿಶ್ ಕರ್ನಾಟಕದ ಒಂದು ಮಧ್ಯವರ್ತಿ ನಗರದಲ್ಲಿ ಸ್ಥಾಪಿಸುವದು ಉಚಿತ"ವೆಂದು ಕೆಲವರು ಕೇಳಬಹುದಲ್ಲವೇ? ಆದರೆ ಹೀಗೆ ಮಾಡದೆ ಮೈಸೂರ ವಿಶ್ವವಿದ್ಯಾಲಯವನ್ನೇ ಕರ್ನಾಟಕ ವಿಶ್ವವಿದ್ಯಾಲಯವನ್ನು ಮಾಡುವದಕ್ಕೆ ಕಾರಣಗಳು ಹೀಗಿವೆ—

(ಅ) ಕನ್ನಡನಾಡಿನ ದೊಡ್ಡ ಭಾಗವು ಮೈಸೂರಿನಲ್ಲಿದೆ. ಮೈಸೂರೆಂದರೆ ಕರ್ನಾಟಕಸ್ಥರಿಗೆಲ್ಲ ಅಭಿಮಾನಾಸ್ಪದವಾದ ಸಂಸ್ಥಾನವು ಅಲ್ಲಿ ಗನ್ನಡಿಗರಾದ ಮಹಾರಾಜರಲ್ಲಿ, ಕನ್ನಡನಾಡಿನವರ ಪ್ರೀತಿ ವಿಶ್ವಾಸಗಳಿವೆ. ಮಹಾರಾಜರು ಕನ್ನಡನಾಡಿನ ವೈಭವ ಮಂದಿರದ ಮುಖ್ಯ ಆಧಾರ ಸ್ತಂಭದಂತಿದ್ದಾರೆ. ಹೀಗಿದ್ದರೂ ಸಹ ಮಹಾರಾಜರಿಗೂ, ಮೈಸೂರ ಹೊರಗಿನ ಕನ್ನಡಿಗರಿಗೂ ಸಂಬಂಧವಿಲ್ಲ; ಸಂಬಂಧವನ್ನು ಬೆಳಿಸಲು ಮಾರ್ಗವೂ ಇಲ್ಲ. ಆದರೆ ಈಗಿದ್ದ ಮೈಸೂರ ವಿಶ್ವವಿದ್ಯಾಲಯವನ್ನೇ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡಿದರೆ ಎಲ್ಲರೂ ಮಹಾರಾಜರ ವೈಭವದ ಆಶ್ರಯದಲ್ಲಿರಲು ಅವಕಾಶವುಂಟಾಗುವದು. ಮತ್ತೂ ತಮ್ಮ ಪ್ರಜೆಗಳ ಕಲ್ಯಾಣಕ್ಕಾಗಿ ಬಹು ಶ್ರಮಪಟ್ಟು ಏರ್ಪಡಿಸಿದ ವಿಶ್ವವಿದ್ಯಾಲಯವನ್ನು "ನೀವೇ ನಿಮ್ಮ ಕೈಯಿಂದ ಕೊಡುವಿರಿ" ಎಂಬದಾಗಿ ಮಹಾರಾಜರಿಗೆ ಹೇಳುವದೆಂದರೆ ಕರ್ನಾಟಕಸ್ಥರಿಗೆಲ್ಲ ಒಪ್ಪುವ ವಿಷಯವಲ್ಲ. ನಾವು ಸ್ಥಾಪಿಸಿ, ಸಲುಹಿದ ವಿಶ್ವವಿದ್ಯಾಲಯವು ವಿಕಾಸಹೊಂದಿ, ಅಖಂಡ ಕನ್ನಡನಾಡಿನವರಿಗೆಲ್ಲ ಮಾನ್ಯವಾಗುವದೆಂದರೆ, ಮಹಾರಾಜರಿಗೆ ಹಿರಿ ಹಿರಿ ಹಿಗ್ಗುವಂತೆ ಆಗುವದು.

(ಆ) ಹೊಸದಾಗಿ ಯಾವದೊಂದು ಸಂಸ್ಥೆಯನ್ನು ಸ್ಥಾಪಿಸಬೇಕೆಂದರೆ ಎಷ್ಟು ಕಷ್ಟ ಬೀಳಬೇಕಾಗುವದೆಂಬದನ್ನು ತಿಳಿದವರು ಅನುಭವದಿಂದ ಹೇಳಬಲ್ಲರು. ಆದರೆ ಇದ್ದ ಸಂಸ್ಥೆಯಲ್ಲಿಯೇ ಸ್ವಲ್ಪ ಅದಲು ಬದಲು ಮಾಡುವದು ಹೆಚ್ಚಾಗಿ ಸುಲಭವು.

(ಇ) ಬಹುಜನರು ವಿಶ್ವವಿದ್ಯಾಲಯದ ಕೇಂದ್ರ ಸ್ಥಾನಗಳಿಗಾಗಿ ಜಗಳಾಡುತ್ತಿರುವದನ್ನು ಎಲ್ಲರೂ ಬಲ್ಲರು. ಮೈಸೂರ ವಿಶ್ವವಿದ್ಯಾಲಯವು ಕರ್ನಾಟಕ ವಿಶ್ವವಿದ್ಯಾಲಯವಾಗುವದರಿಂದ ಹಾಗೆ ಬಡಿದಾಡಲು ಮಾರ್ಗವೇ ಇಲ್ಲ.

(ಈ) ಮೈಸೂರ ವಿಶ್ವವಿದ್ಯಾಲಯದಲ್ಲಿ ಕಟ್ಟಡ ಲೈಬ್ರರಿ ಮೊದಲಾದ ಮಹಾ ವೆಚ್ಚದ ಸಾಮಗ್ರಿಗಳು ಸಿದ್ಧವಾಗಿ ಸಿದ್ಧವಾದ ಪಕ್ವಾನ್ನವು ಯಾರಿಗೆ ಬೇಡ? ಆದರೆ ಹೊಸ ವಿಶ್ವವಿದ್ಯಾಲಯವನ್ನು ಬ್ರಿಟಿಶ್ ಕರ್ನಾಟಕದಲ್ಲಿ ಸ್ಥಾಪಿಸುವ ಗೊಂದಲದಲ್ಲಿ ಬಿದ್ದು ಈ ಸೌಕರ್ಯಗಳನ್ನು ಹಾಳು ಬಿಟ್ಟು ಬಿಡುವದೇಕೆ!

ಇವೆಲ್ಲ ಸರಿಯಾಗಿವೆಯಷ್ಟೆ?

(೯) ಅಖಂಡ ಕರ್ನಾಟಕಕ್ಕೆ **ಒಂದೇ ಒಂದು** ವಿಶ್ವವಿದ್ಯಾಲಯವಿರಬೇಕೆಂಬುದು ಸರಿಯಾಗಿದೆ, ಆದರೆ ಇದಕ್ಕೆ ಕೆಲವು ತೊಡಕುಗಳಿವೆ. ತಾವು ಅವನ್ನು ಹೇಗೆ ಬಿಡಿಸುವಿರಿ—

(ಅ) ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯಕ್ಕೆ ನಿಜಾಮರ ಕರ್ನಾಟಕವು ಸೇರಿದ ಭಾಗವನ್ನು ಉಸ್ಮಾನಿಯಾ ವಿಶ್ವವಿದ್ಯಾಲಯದ ಅಧಿಕಾರದಿಂದ ಬಿಡುಗಡೆ ಮಾಡಿ, ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಜೋಡಿಸುವದು ಶಕ್ಯವಿದೆಯೆ? ಇದ್ದರೆ ಅದು ಹೇಗೆ?

(೯) ಉತ್ತರ ಕರ್ನಾಟಕ— ಸಂಸ್ಥಾನಗಳಲ್ಲಿ ಶುದ್ಧ ವಾಗಿಯೂ ಕನ್ನಡವಾಗಿರುವ. ಸವಣೂರ, ಮುಧೋಳ, ಜಮಖಂಡಿ, ರಾಮದುರ್ಗ, ಅಕ್ಕಲಕೋಟಿ ಇವೇ ಮೊದಲಾದ ಸಂಸ್ಥಾನಗಳು ಕರ್ನಾಟಕ ವಿಶ್ವವಿದ್ಯಾಲಯಕ್ಕೆ— ಮೊದಲು ಕಷ್ಟವಾದರೂ ಕಡೆಗೆ- ಸೇರೇ ಸೇರುವವು. ಆದರೆ, ಕೊಲ್ಹಾಪೂರ ಸಾಂಗಲಿ, ಮಿರಜಿ, ಔಂಧ, ಮೊದಲಾದ ದ್ವಿಭಾಷೆಯುಳ್ಳ ಸಂಸ್ಥಾನಗಳ ವಿಷಯವು ಸ್ವಲ್ಪ ಕಠಿಣವಾಗಿದೆ. ಇಲ್ಲಿ ಕನ್ನಡ ಭಾಗವನ್ನೂ, ಮರಾಟೀ ಭಾಗವನ್ನೂ ಬೇರೆ ಬೇರೆ ಮಾಡಿ, ಆ ಆ ಪ್ರಕಾರ ಕನ್ನಡ ಭಾಗವನ್ನು ಕರ್ನಾಟಕಕ್ಕೆ, ಮಹಾರಾಷ್ಟ್ರ ಭಾಗವನ್ನು ಮಹಾರಾಷ್ಟ್ರಕ್ಕೆ ಸೇರಿಸುವದೊಂದೇ ಆ ತೊಡಕನ್ನು ಬಿಡಿಸುವ ಮಾರ್ಗವಲ್ಲವೇ? ಇದರ ಹೊರತಾಗಿ ಅನ್ಯ ಮಾರ್ಗವಿದೆಯೋ?

(೧೦) ಈ ವಿಶ್ವವಿದ್ಯಾಲಯದ ವಿಷಯಕ್ಕೂ— ಈ ವಿಷಯಕ್ಕೂ ಕರ್ನಾಟಕ ಏಕೀಕರಣದ ಪ್ರಶ್ನೆಗೂ ಅತಿಶಯ ನಿಕಟವಾದ ಸಂಬಂಧವಿದ್ದುದರಿಂದ - — ಕರ್ನಾಟಕ ಏಕೀಕರಣದ ವಿಷಯಕ್ಕೂ ವಿಚಾರಮಾಡಿ, ಯಾವದಾದರೊಂದು ನಿಶ್ಚಿತ ಮಾರ್ಗವನ್ನನುಸರಿಸಲಿಕ್ಕೆ ಅಖಂಡ ಕರ್ನಾಟಕದ ಒಂದು ಪರಿಷತ್ತನ್ನು ಕೂಡಿಸುವದು ಈಗ್ಗೆ ಅವಶ್ಯವಲ್ಲವೇ? ಅವಶ್ಯವಾಗಿದ್ದರೆ ಯಾವಾಗ್ಗೆ ಈ ಪರಿಷತ್ತನ್ನು ಕರೆಯಬಹುದು?

ಸೊಲ್ಲಾಪುರದಲ್ಲಿಯ ವಾದ

ಹಿಂದೂ ಮುಸಲ್ಮಾನರ ಕಲಹವು.

೬೧ ಜನರು ಗಾಯ ಹೊಂದಿದರು! ಇಬ್ಬರು ಸತ್ತರು!!

ಬುಧವಾರ ತಾ॥ ೨೦ನೇ ದಿವಸ ಸೊಲ್ಲಾಪೂರದಲ್ಲಿ ಮಸೀದೆಯ ಮುಂದೆ ವಾದ್ಯಬಾರಿಸುವ ವಿಷಯದಲ್ಲಿ ಹಿಂದೂ ಮುಸಲ್ಮಾನರ ನಡುವೆ ಕಲಹವಾಯಿತು. ಇದರ ಸಾದ್ಯಂತ ವೃತ್ತಾಂತವು ಹೀಗಿದೆ—ಮೊನ್ನಿನ ಶ್ರೀ ಗಣೇಶೋತ್ಸವ ಸಮಯದಲ್ಲಿ ಗಣಪತಿಗಳ ಮೆರವಣಿಗೆಯ ಸಂಬಂಧವಾಗಿ ಸೊಲ್ಲಾಪೂರದ ಜಿಲ್ಹಾ ಪೋಲೀಸ ಸುಪರಿಂಟೆಂಡ ಸಾಹೇಬರು ಕೆಲವು ಕಠಿಣ ನಿಯಮಗಳನ್ನು ವಾದ್ಯಗಳ ಬಗ್ಗೆ ಹಿಂದೂಜನರಿಗೆ ಅಗೌರವವಾಗಿ ಕಾಣುವಂತಹ ಕರಾರಗಳನ್ನು ಹಾಕಿದ್ದರಿಂದ, ಸೊಲ್ಲಾಪೂರದ ಹಿಂದೂ ಜನರು ಗಣಪತಿಯ ಮೆರವಣಿಗೆಯನ್ನು ತಾವಾಗಿಯೇ ನಿಲ್ಲಿಸಿದರು ಮುಂದೆ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ, ಗವರ್ನರ ಇವರಕಡೆಗೆ ಅರ್ಜಿ ಮಾಡಿದರು. ಆದರೆ ಅವರಿಗೆ ಯಶವು ದೊರೆಯಲಿಲ್ಲ. ಆ ಮೇಲೆ ಹಿಂದೂ ಮುಖಂಡರು ದಿವಾಣೀ ಕೋರ್ಟಿನಲ್ಲಿ ದಾವೇ ಮಾಡಿದ್ದರು. ಈ ಮೊಕದ್ದಮೆಯು ಹಿಂದೂ ಜನರ ಬೇಡಿಕೆಗಳಿಗೆಲ್ಲ ಅನುಕೂಲ ಮತವು ದೊರೆಯಲಿಲ್ಲ ಅದರೂ, ಡಿಸ್ಟ್ರಿಕ್ಟ ಪೋಲೀಸ ಸುಪರಿಂಟೆಂಡೆಂಟರು ನಿರ್ಬಂಧ ಸಡಿಲಾದ ಮುಂದಿನ ೩ ನೇ ನಿಯಮವು ಅಂದರೆ ಜನರ ಹಕ್ಕುಗಳಿಗೆ ತಡೆಹಾಕಿದ ನಿಯಮವು ಬೇಕಾಯದೇಶೀರವಾದದ್ದೆಂದು ನಿರ್ಣಯಿಸಿ ಡಿಸ್ಟ್ರಿಕ್ಟ ಜಡ್ಜ ಸಾಹೇಬರು, ಆ ಹುಕುಮವನ್ನು ರದ್ದುಪಡಿಸಿದರು. ಕೂಡಲೇ ಉತ್ತರ ಹಿಂದುಸ್ಥಾನದಿಂದ ಓರ್ವ ಮೌಲ್ವೀಸಾಹೇಬರು ಸೊಲ್ಲಾಪೂರಕ್ಕೆ ಬಂದು, ಈ ಕಲಹದ ಪೂರ್ವದಲ್ಲಿ ೮ ದಿವಸಗಳಿಂದಲೂ, ಮಶೀದಿಯಲ್ಲಿ ವ್ಯಾಖ್ಯಾನಗಳನ್ನು ಕೊಡಹತ್ತಿದರು. ಇವರಿಂದ ಪ್ರೇರಿತರಾಗಿ ಮುಸಲ್ಮಾನರು ಕಲಹದ ಬಗ್ಗೆ ಸಿದ್ಧತೆಯನ್ನು ಮಾಡಬೇಕಾಗಿ ತೋರುತ್ತದೆ.

ಹಿಂದೂ ಜನರ ಮೆರವಣಿಗೆಯು ಸಂಗಡ ತಾ॥ ೨೦ ನೇ ದಿನ ಪೋಲೀಸರೂ, ಆಫೀಸರರೂ ಇದ್ದರು. ಪಂಚಾಬ ತಾಲೀಮ ಮಶೀದೆಯಲ್ಲಿ ನಿಮಾಜನಡೆದದ್ದರಿಂದ, ಆ ಮೆರವಣಿಗೆಯು ಡಿ ಎಸ್ ಪಿ. ಯ ಹುಕುಮತಂತೆ ನಿಂತಿರುವರಿಗೆ, ಮಶೀದೆಯ ಮುಂದಿನ 'ಬ್ಯಾಂಡು' ಗಳ ಅಂತರದಲ್ಲಿ ತಡೆಯಲ್ಪಟ್ಟಿತ್ತು. ಹಿಂದೂ ಜನರು ಈ ಹುಕುಮವನ್ನು ಮಾನ್ಯಮಾಡಿ, ಆ ಅವಧಿಯವರೆಗೆ, ಅಗಿಸರಿಗೆ ಸುಕಲದ ನೆರೆದ

ಮೆರವಣಿಗೆಯನ್ನು ಮುಂದಕ್ಕೆ ಸಾಗಿಸಿದರು. ಅದು ಮಶೀದಿಗೆ ಬಂದೊಡನೆಯೇ, ಮುಸಲ್ಮಾನರು, ತೀಕ್ಷ್ಣ ಹತ್ಯಾರ, ಕಲ್ಲು ಸೋಡಾ ಬಾಟಲಿ ಬಡಿಗೆ, ಮೊದಲಾದವುಗಳ ಸಹಾಯದಿಂದ ಮೆರವಣಿಗೆಯ ಮೇಲೆ ಸುಗ್ಗಿದರು. ಅನೇಕ ಜನ ಹಿಂದೂ ಸಭ್ಯಗೃಹಸ್ಥರನ್ನು ಸಹ ಬಡಿದರು. ಅನೇಕರು ಗಾಯ ಹೊಂದಿದ್ದಾರೆ ಕೆಲವರಂತೂ ಬದಕುವಹಾಗಿಲ್ಲ. ಪೋಲೀಸರು ಎಷ್ಟು ಹರಿ ಪ್ರಯತ್ನಿಸಿದರೂ ಮುಸಲ್ಮಾನರು ಅವರ ಮಾತನ್ನು ಕೇಳಲಿಲ್ಲ ಕಡೆಗೆ ಪೋಲೀಸರಿಂದ ಗುಂಡು ಹಾರಿಸಲ್ಪಟ್ಟವು. ಇಬ್ಬರು ಮುಸಲ್ಮಾನರು ಮಡಿದರು. ಮೆರವಣಿಗೆಯು ಅವಸ್ಥೆಯು ಹೀಗಾಗಿರಲು, ಊರಲ್ಲಿ ಬೇರೆ ಬೇರೆ ಭಾಗಗಳಲ್ಲಿ ಮುಸಲ್ಮಾನರು ಹಿಂದೂ ಜನರ ಮನೆ ಹೊಕ್ಕು, ಸ್ತ್ರೀಯರಿಗೂ, ಹುಡುಗರಿಗೂ ಚನ್ನಾಗಿ ಹೊಡೆದಿದ್ದಾರೆ ಆಭರಣಗಳನ್ನು ಲೂಟಿ ಮಾಡಿದ್ದಾರೆ. ಮನೆಯಲ್ಲಿಯ ಸಾಮಾನುಗಳನ್ನು ಎತ್ತಿದ್ದಾರೆ; ಕೆಡಿಸಿದ್ದಾರೆ; ಅಂಗಡಿಗಳನ್ನು ಸಹ ಲೂಟಿಮಾಡಿರುವರು. ಊರಲ್ಲಿ ಇನ್ನೂ ಭಯಂಕರವಾದ ಸ್ವರೂಪವು ಕಾಣಬರುತ್ತದೆ. ಚಿಂತಾಜನಕವಾದ ಸ್ಥಿತಿಯು ಇನ್ನೂ ದೂರಾಗಿಲ್ಲ. ಧಾರ್ಮಿಕ ಮೆರವಣಿಗೆಯನ್ನು ಯಾರೂ ಜೊತೆಯಿಸ ಕೂಡದೆಂದೂ, ಬಡಿಗೆ, ಕಲ್ಲು, ಸೋಡಾ ಬಾಟ್ಲೀ ಇತ್ಯಾದಿ ತೀಕ್ಷ್ಣ ಹತ್ಯಾರಗಳನ್ನು ಯಾರೂ ಹಿಡಿಯ ಕೂಡದೆಂದೂ, ಡಿ. ಪೋ. ನಿಯಮ ೧೪೪ ರ ಪ್ರಕಾರ ಡಿ. ಮ್ಯಾಜಿಸ್ಟ್ರೇಟರ ಹುಕುಮವು ಆಗಿರುವದು. (ತಾ॥ ೪-೧೧-೨೬)

ಪತ್ರಿಕಾ ಸಾರ

ಇಹವೃತ್ತ

ಮಳೆಯು ಇದು ಇಲ್ಲ ೪-೬ ದಿನಗಳಲ್ಲಿ ಆಗದಿದ್ದರೆ ಬರಗಾಲವು ಬೀಳ್ವ ಅಪೇಕ್ಷಿತವಲ್ಲ.

ತಾಲೂಕ ಲೋಕಲ್ ಬೋರ್ಡಿಗೆ, ಶ್ರೀ ಕಲಬುರ್ಗಿ ಬಾಳಕೃಷ್ಣರಾವ, ಬೀಳೂರ ದೇಸಾಯರು ಮತ್ತು ಮಾಮಲೇದಾರರು ಸರಕಾರದಿಂದ ನಿಯೋಜಿಸಲ್ಪಟ್ಟಿದ್ದಾರೆ.

ಶ್ರೀ ಕೌಜಲಗೀ ಶ್ರೀನಿವಾಸರಾಯರ ಪ್ರಕೃತಿಯು ಹೆಚ್ಚಾಗಿ ಸುಧಾರಿಸಿದ ವಾರ್ತೆ ಬಂದಿದೆ.

ಮುಂಬೈ ಕರ್ನಾಟಕ

ಬೆಳಗಾವಿ ನಾಟಕ ಮಂಡಲಿಯು ಜಮಖಂಡಿಗೆ ಹೋಗಿದೆ. ಅದರ ಆಟಗಳು ಕಾರ್ಯಕ್ರಮವು ಬಹು ಸುಶಿಕ್ಷಿತವಾಯಿತೆಂದೂ ಕಮಲಾ ರತ್ನಾ ಮೊದಲಾದವರ ಅಭಿನಯಕ್ಕೆ ಜನರೆಲ್ಲ ಮೆಚ್ಚಿದರೆಂದೂ ಜಮಖಂಡಿ ನಗರವಾಸಿಯೊಬ್ಬರು ತಿಳಿಸುತ್ತಾರೆ.

ಕರ್ನಾಟಕದ ಪ್ರಸಿದ್ಧ ನಾಟಕ ಕಂಪನಿಯವರಾದ ಗುಬ್ಬಿಯವರು ಮೊನ್ನೆ ಮಹಾರಾಷ್ಟ್ರದ ಪ್ರಸಿದ್ಧ ಕಂಪನಿಯಾದ ಗಂಧರ್ವ ನಾಟಕದವರನ್ನು ಬೆಂಗಳೂರಿಗೆ ಕರೆಸಿಕೊಂಡು ಅವರಿಗೆ ಆದರಾತಿಥ್ಯವನ್ನು ಮಾಡಿದರು. ಗಂಧರ್ವ ಕಂಪನಿಯವರು ಗುಬ್ಬಿ ಕಂಪನಿಯವರನ್ನು ಸಹ ತಮ್ಮಲ್ಲಿಗೆ ಬರಮಾಡಿಕೊಂಡು ಅದೇ ಪ್ರಕಾರವಾಗಿ ಆದರ ಆತಿಥ್ಯ ಮಾಡಿದರು. ಇದರ ಮೂಲಕವಾಗಿ ಕರ್ನಾಟಕ-ಮಹಾರಾಷ್ಟ್ರದ ಸಂಬಂಧವು ಹೆಚ್ಚಾಗಲಿ.

ಹಿಂದುಸ್ಥಾನ

ನಾಟ್ಯಕಲೆಯನ್ನು ಉದ್ಧಾರ ಮಾಡುವದಕ್ಕೋಸ್ಕರ, ಅನೇಕ ಜನ ಪದವೀಧರರು ಕೂಡಿಕೊಂಡು ಗುಜರಾತ "ಅಮೆಚೂರ" ಸಭೆಯನ್ನು ಬರೋಡೆಯಲ್ಲಿ ಸ್ಥಾಪಿಸಿದ್ದಾರೆ. ಆದರೆ ಕನ್ನಡಿಗರು?

ಜೀಸಸ್ ಕ್ರಿಸ್ತನ ದೇಶಭಾಷೆಯು ತಮಿಳೇ ಆಗಿದ್ದಿತೆಂದೂ, ಆ ಭಾಷೆಯು ಆತನಿಗೆ ಚನ್ನಾಗಿ ಬರುತ್ತಿತ್ತೆಂದೂ, ರಾಯಲ್ ಏಶಿಯಾಟಿಕ್ ಸೊಸಾಯಟಿಯ ಸಭಾಸದರಾದ ಶ್ರೀ ಎಮ್. ಎಸ್. ರಾಮಸ್ವಾಮೀ ಅಯ್ಯರ ಬೀ. ಎ. ಇವರ ಮತವಿದೆ.

ಪರದೇಶ

ಕುಮಾರಿ ಮೆಡಾಲಿಯನ್ ಸ್ಲೇಡ ಎಂಬ ಫ್ರೆಂಚ ಸ್ತ್ರೀಯಳಿಗೆ ಗಾಂಧೀಮತವು ಶ್ರೇಷ್ಠವಾದದ್ದೆಂದು ಮನವರಿಕೆಯಾದ್ದರಿಂದ, ಆಕೆಯು ಹಿಂದುಸ್ಥಾನಕ್ಕೆ ಸ್ವಲ್ಪದಿವಸದಲ್ಲಿ ಬಂದು, ಗಾಂಧಿಯವರ ಸೇವೆಯಲ್ಲಿಯೇ ತನ್ನ ಆಯುಷ್ಯವನ್ನೂ, ಎಲ್ಲ ಸಂಪಾದನೆಯನ್ನೂ ಸವೆಸಬೇಕೆಂದು ನಿಶ್ಚಯಿಸಿದ್ದಾಳೆ.

ನೋಟೀಸು

ಈ ನೋಟೀಸಿನಿಂದ ಎಲ್ಲ ಜನರಿಗೂ ತಿಳಿಸುವದೇನಂದರೆ—

೧. ಹುನಗುಂದ ತಾಲೂಕಸ್ಟೈಕಿ ಕಮತಗಿ ಊರಿನ ಹತ್ತರ ಮಲಪ್ರಭಾನದಿಯ ಮೇಲೆ ಆಡುವ ನಾವು ಚಾಲೂ ವರ್ಷದಿಂದ ಬಂದ ಮಾಡಿರುತ್ತದೆ.

Bijapur. 26 th Oct-1925 } Sd./ S. R. Rege, Executive Engineer, Bijapur Division.

ಸರಸ್ವತಿ.

ಕನ್ನಡನಾಡಿನಲ್ಲೆಲ್ಲಾ ಸಂಚರಿಸುವ

ಉತ್ತಮವರ್ಗದ ಶ್ರೇಷ್ಠವಾದ ಕನ್ನಡ ಮಾಸಪತ್ರಿಕೆ

ಈ ಪತ್ರಿಕೆಯಲ್ಲಿ ಸಾಮಾಜಿಕ- ನೈತಿಕ- ಮತ್ತು ಐತಿಹಾಸಿಕ ವಿಷಯಗಳಿಗೆ ಸಂಬಂಧಪಟ್ಟ ಅತ್ಯುತ್ತಮವಾದ ಲೇಖನಗಳೂ ಸ್ವಾರಸ್ಯ ಮತ್ತು ಮನೋರಂಜಕವಾದ ನಾಟಕ ಮತ್ತು ಕಾದಂಬರಿಗಳೂ ಬಾಲಕ- ಬಾಲಿಕೆಯರಿಗೂ, ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಉತ್ತಮ ಶೈಲಿಯಲ್ಲಿ ಪ್ರಸಿದ್ಧರಾದ ಸ್ತ್ರೀಪುರುಷರಿಂದ ಬರೆಯಲ್ಪಟ್ಟ ಲೇಖನಗಳೂ, ಪ್ರಕಟಿಸಲ್ಪಡುವವು. ಚಂದಾದಾರರಿಗೆ ಪ್ರತಿಯೊಂದು ವರ್ಷ ಒಂದು ಕಾದಂಬರಿಯು ಕಾಣಿಕೆಯಾಗಿ ಕೊಡಲ್ಪಡುವದು. ಹಾಗು ಶಾರದಾಗ್ರಂಥಮಾಲೆಯಲ್ಲಿ ಪ್ರಕಟಿಸಲ್ಪಡುವ ಗ್ರಂಥಗಳು ಕಡಿಮೆ ದರದಿಂದ ದೊರೆಯುವವು.

ಸಂಪಾದಕಿ- ಸರಸ್ವತಿ. ಚಾಮರಾಜಪೇಟೆ ಬೆಂಗಳೂರ ಸಿಟಿ.

ಧಾರವಾಡ ಕರ್ನಾಟಕ ಮಹಾ ವಿದ್ಯಾಲಯದಿಂದ ಹೊರಡುವ

ತಿಳಿಗನ್ನಡದ ಸ್ವಧರ್ಮ ಮಾಸಪತ್ರಿಕೆ.

ಸಂಪಾದಕ- ಸುರೇಂದ್ರ ಶಿವರಾವ ದೇಸಾಯಿ ಎಮ್.ಎ.

ಪ್ರಾಪಂಚಿಕ ಸಂಪತ್ತೂ, ಪಾರಮಾರ್ಥಿಕ ಸಂಪತ್ತೂ ಕೂಡಿ ಬೆಳೆಯುವಹಾಗೆ ಸ್ವಸಂಸ್ಕೃತಿಪ್ರೇಮ, ಸ್ವದೇಶಪ್ರೀತಿ, ಸ್ವಭಾಷಾಭಿಮಾನ, ಸ್ವಧರ್ಮಾನುರಾಗ, ಸ್ವಾರ್ಥತ್ಯಾಗ ಮುಂತಾದ ಗುಣಗಳನ್ನು ಉಜ್ವಲಗೊಳಿಸುವಂಥ ಕೀರ್ತನ, ಪುರಾಣ, ಪ್ರವಚನ, ನಿಬಂಧ, ಜೀವನ ಚರಿತ್ರೆ, ಇತಿಹಾಸ, ನಾಟಕ, ಕಥೆ ಮತ್ತು ಕಾದಂಬರಿ ಮುಂತಾದ ರೂಪಗಳಲ್ಲಿ ಜನಮಂಡಲಿಯ ಉನ್ನತಿಗೆ ಅಗತ್ಯವಾದ ಸರ್ವ ವ್ಯವಹಾರಗಳನ್ನೂ ಸ್ವಧರ್ಮ ದೃಷ್ಟಿಯಿಂದ ವಿಚಾರವಾಗಿ ವಿವರಿಸುವದು.

ಚಂದಾ ವರ್ಷಕ್ಕೆ ೩ ರೂ.

SUB-AGENTS URGENTLY REQUIRED.

ಕೆಳಗೆ ನಮೂದಿಸಿದ ಜಿಲ್ಲೆಗಳಿಗೆ ಸಬ್- ಏಜಂಟರು ಬೇಕಾಗಿವೆ

ಧಾರವಾಡ, ಬೆಳಗಾವ, ವಿಜಾಪೂರ, ಕಾರವಾರ, ಈ ಜಿಲ್ಲೆಗಳಿಗೆ (ಅಮೇರಿಕನ್) ಚಿಮಣಿ ಎಣ್ಣೆ, ವ ಪೆಟ್ರೋಲ, ವ ಮೊಬಿಲಾಯಿಲ್, (ಲುಬ್ರಿಕೇಟಿಂಗ ಆಯಿಲ್ಸ) ವಗೈರೆ ಮಾರುವದಕ್ಕೆ ಏಜಂಟರಾಗಲಿಚ್ಛಿಸುವವರು ಕೆಳಗಿನ ಪತ್ತೆಗೆ ಸಮಕ್ಷಮ ಭೆಟ್ಟಿಯಾದಲ್ಲಿ ಯವತ್ತೂ ಏಜನ್ಸಿಯ ಮಜಕೂರು ತಿಳಿಯುವದು.

S. Korvi & Co., Hubli

ಪ್ರಕಟನೆ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಪೋಲೀಸುಗಳ ಚೀಟಿ ಎತ್ತುವ ಕ್ರಮವು ೧೯೨೫ ನೇ ಇಸ್ವಿಯ ಜುಲೈ ೩೧ ನೇ ತಾ|| ದಿನ ಸಾಯಂಕಾಲದ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟಿ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ. ಬಸವಾರಾಧ್ಯ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ೧೦೦೦ ರೂ. ಸಾಲವು ದೊರೆಯ ಬೇಕೆಂದು ನಿರ್ಣಯವಾಯಿತು—

(೧) ಬಾಂಡ ನಂ. ೧೧೬೦೨ ಶ್ರೀ. ಆರ್. ಜಿ. ಮುಕ್ಕೇರಿ. ಟುಕ್ಕಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೫೪೯ ಶ್ರೀ. ದೀರಜರಾಮ ನಾರಭಿರಾಮ ನಾಯಿಕ ಕಂಪಾವುಂಡರ, ಆಲಪಾಡ ದವಾಖಾನೆ ಮಾರ್ಗ, ಸಯಾನ. ಬಿಬಿ. ಸಿ. ಆಯ ರೇಲ್ವೇ. ಸುರತ. (ಬಡೋದಾ ಏಜನ್ಸಿ)

(೩) ಬಾಂಡ ನಂ. ೧೨೯೬೬ ಶ್ರೀ. ಶ್ರೀರಾಮ ಮೂರ್ತಿ ಆರಾಧ್ಯ ಬಿ ರಾಮಚಂದ್ರರಾವ ಗುರು ಪಿರ ಪುರ ಗೋದಾವರಿ ಜಿಲ್ಲಾ.

(೪) ಬಾಂಡ ನಂ. ೧೭೬ ಶ್ರೀ. ನಂದಗಿರಿ ವೆಂಕಟರಾಮ ದಾಸ ಪ್ರೊಪ್ರಾಯಿಟರ ಮುಕುಂದ ಪುರ. ಕಾಕಿನಾಡು

(೫) ಬಾಂಡ ನಂ. ೪೩೮ ಶ್ರೀ. ಆರ್. ವೆಂಕಟಯ್ಯಾ ಗುರು ಇನಾಮದಾರ ಭೋಪಯ್ಯಾ ಅಗ್ರಹಾರ. ಅಮಳ ಪುರಮ್.

೧-೮-೨೫ { ಬಿ. ಎನ್. ಆರಾಧ್ಯ, ಚೀಫ ಏಜಂಟ ಹುಬ್ಬಳ್ಳಿ

"ಲೋಕರಹಸ್ಯ"

ಕೃಷಿಯ ಅತ್ಯುತ್ತಮ ರೀತಿಗಳು, ವ್ಯಾಪಾರದ ವಿಷಯಗಳು ಹೊರತಿಗೆ, ಮಕ್ಕಳನ್ನು ಸಾಕುವ ವಿಷಯಗಳನ್ನು ಬಡವರಿಗೆ ಬೇಕಾದ ಹಣಸಂಪಾದನೆಯ ವಿಷಯಗಳು, ರಸಿಕರಿಗೆ ವಿನೋದ ವಿಚಾರ, ರಾಜಕೀಯ ವಿಷಯಗಳು, ಆಯುರ್ವೇದ ಯುನಾನಿ ವೈದ್ಯ ಸಂಗ್ರಹ. ಪ್ರತಿಯೊಬ್ಬನೂ ತಿಳಿಯಬೇಕಾದ 'ಲಾ' ವಿಚಾರ, ವಿದ್ಯಾವಿಷಯ, ವೇದಾಂತ ವಿಚಾರಗಳಿಂದಲೂ, ತುಂಬಿ ತುಳುಕುತ್ತಿರುವ ಈ ಮಾಸ ಪತ್ರಿಕೆಗೆ ವರ್ಷ ಚಂದಾ ರೂ. ೩-೮-೦ ಮಾದರಿ ಸಂಚಿಕೆಗೆ ೦-೫-೦.

ಪ್ರತಿ ತಿಂಗಳಲ್ಲೂ ೬೦ ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ.

"ಲೋಕರಹಸ್ಯ" ಆಫೀಸು, ವಿರಾಜಪೇಟೆ (ಕೊಡಗು)

ಈ ಪತ್ರಿಕೆಯು ಮಂಗಳವೇಢೆ ರಂಗರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಯಂತ್ರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧವಾಯಿತು.

ರ. ನಂ. ೬. ೧೯೪೭ | ವಾ. ಚಂದಾ ೧—೧೪—೦ ಮಾತ್ರ

([illegible])

[illegible]

ಸಂಪಾದಕರು— [illegible]

ವರ್ಷ ೧ | ಬಾಗಲಕೋಟೆ ಪತ್ರ್ರಿಕ [illegible] ತಾ. ೧೪-೧೧ [illegible] | [illegible]

ಸಂಪಾದಕೀಯ ಟಿಪ್ಪಣಿ.

(೧)

ನವ ಜನನದ ಮೋಗಾವಾಡಿ ಕಟ್ಟುವೆನಾನು ।
ನಿನ್ನ ಬೆಸವದ ಮಾಡಿದಂಥ ಪುಕ್ಕಳ ದೊಮೆ ।
ಚಿನ್ನದಾಪದ ಚಿನ್ನ ಪಾಣದ ಸೊಂದು ॥
ಚಿನ್ನ ಜಾಕಾ ಪದ್ಮ ॥

ನನ್ನ ದೇವತ್ತ [illegible] ಪೀಠಬಂಗನನಾಗಿ ।
ತನ್ನ [illegible] ಕನ್ನಿಗೆ ಸಿಕ್ಕಿಕಲು ಸಿಪ್ಪಿವಿದೆ ।
ನನ್ನ [illegible] ನಿನ್ನ ಗಂಧವನು ಕೇರಬಿಡು ।
ಗಂಧವನಸಂದು ತಿಳಿಯು ।

—ಅಂಬಿಕಾತನಯ ದತ್ತ

ಉತ್ತರ ಮತ್ತು ದಕ್ಷಿಣ ಕರ್ನಾಟಕದವರು ಒಬ್ಬರೊಬ್ಬರ ಸಂಗಡ ಕೂಡಿ ಕೆಲಸ ಮಾಡುವ ಪ್ರಸಂಗವು ಕಾಂಗ್ರೆಸ ಕಾರ್ಯಗಳಲ್ಲಿ ಅಥವಾ ಕಾಂಗ್ರೆಸದಲ್ಲಿ ಭಾಗ ತೆಗೆದುಕೊಳ್ಳುವ ಜನರ [illegible] ಪರಸ್ಪರರ ಪರಿಚಯವಾಗಿದೆ. ಕಾಂಗ್ರೆಸದಲ್ಲಿ ಭಾಗತೆಗೆವ. ಕೂಳ್ಳದ ಮಹಾಜನರಲ್ಲಿ ಪರಸ್ಪರರ ಪರಿಚಯ ಮಾಡಿಕೊಳ್ಳುವ ಪ್ರಸಂಗಗಳಿಲ್ಲ. ಆದುದರಿಂದ ಒಂದು ಕರ್ನಾಟಕ ದೃಷ್ಟಿಯಿಂದ [illegible] ಉತ್ತಮ ಪ್ರಸಂಗಗಳು ಮುಂದಿಂದ ಮೇಲೆ [illegible] ಆಗಿ [illegible] ಆವಶ್ಯಕ ಕರ್ನಾಟಕದ [illegible] ಪತ್ರಿಕೆ. ಪತ್ರಗಳ ಪತ್ರಮುದ್ರಕರ ಸಂಘಗಳಾಗಿದ [illegible] "ಕನ್ನಡಿಗ" ನು ಸೂಚಿಸಿದ್ದಾನೆ, ಇದಕ್ಕಾಗಿ [illegible] ಕರ್ನಾಟಕದ ವ್ಯಾಪಾರಸ್ಥರಲ್ಲಿ ಪರಸ್ಪರ ಪರಿಚಯವಾದರೆ ದೊಡ್ಡ [illegible] ಲಾಭವಾಗುವದು ಆದರೆ ಕರ್ನಾಟಕಕ್ಕೆ ಸ್ವತಂತ್ರ [illegible] ವರೆಗೆ ಹೀಗಾಗುವದು ಶಕ್ಯವೇ [illegible] ಉತ್ತರ ಕರ್ನಾಟಕದ ವ್ಯಾಪಾರಸ್ಥರು ಈಗ್ಗೆ [illegible] ಮಾತ್ರ ಲಾಭ, ಅದೇ ಪ್ರಕಾರವಾಗಿ ದಕ್ಷಿಣ ಕರ್ನಾಟಕದ ವ್ಯಾಪಾರಸ್ಥರಿಗೆ ಮದ್ರಾಸಿಗೆ ಹೋಗುವದೇ [illegible]. ಆದುದರಿಂದ ಸದ್ಯದಲ್ಲಿ ವ್ಯಾಪಾರಸ್ಥರಲ್ಲಿ ಪರಸ್ಪರರ ಪರಿಚಯವು [illegible]. ಆದರೆ ವಿದ್ಯಾರ್ಥಿಗಳಲ್ಲಿ ಹೀಗೆ [illegible] ಅನುಕೂಲವಿದೆ 'ಹಾಯಸ್ಕೂಲ, ಕಾಲೇಜ'ಗಳಲ್ಲಿಯ' ವಿದ್ಯಾರ್ಥಿಗಳು ಪರಸ್ಪರರ ಸಂಗಡ, "ಕ್ರಿಕೆಟ [illegible]" ಮೊದಲಾದ ಪಂದ್ಯಾಟಗಳನ್ನು [illegible] ಕಾಲೇಜ [illegible] ಏರ್ಪಡಿಸುವದುಂಟು. ಆದರೆ ಈಗ್ಗೆ ಇಷ್ಟು ಉತ್ತರ ಮತ್ತು ದಕ್ಷಿಣ ಕರ್ನಾಟಕದ ವಿದ್ಯಾರ್ಥಿಗಳ ನಡುವೆ ನಡೆಯುವದಿಲ್ಲ [illegible], ಸಾಂಗಲಿ ಕೋಲ್ಹಾಪುರ [illegible] ಧಾರವಾಡ ಮೈಸೂರ. ಮೈಸೂರ-ವಿಜಾಪೂರ, ವಿಜಾಪೂರ-ಮಂಗಳೂರ, ಮಂಗಳೂರ-ಬಳ್ಳಾರಿ, ಬಳ್ಳಾರಿ [illegible], ಕಾರವಾರ ಅನಂತಪೂರ, ಅನಂತಪೂರ-ಬೆಳಗಾವಿ, ಬೆಳಗಾವಿ-[illegible] ಹೀಗೆ ಪರಸ್ಪರ 'ಹಾಯಸ್ಕೂಲ ಕಾಲೇಜ'ಗಳ ವಿದ್ಯಾರ್ಥಿಗಳು ತಮ್ಮತಮ್ಮಲ್ಲಿ [illegible] ಬೆಳೆಯುವಂತೆ ಪ್ರಯತ್ನಿಸಬೇಕು. ವಿದ್ಯಾರ್ಥಿಗಳಿಗೆ [illegible] ದಿನಗಳು ದೊರೆಯುವವು. ಪ್ರವಾಸವು ಕೊಂಚ ದೂರವಾದರೆ ಆ ಆ ಸಂಸ್ಥೆಯಲ್ಲಿಯ "ಸ್ಪೋರ್ಟ್ಸ ಕ್ಲಬ್ಬ"ಗಳೂ [illegible] ದ್ರವ್ಯಸಹಾಯ ಮಾಡಬೇಕು. ವಿದ್ಯಾರ್ಥಿಗಳಿಗೆ ಬೇರೆ ಬೇರೆ ಕರ್ನಾಟಕದ ಭಾಗಗಳನ್ನು ನೋಡಲಿಕ್ಕೆ ಅನುಕೂಲವಾಗುವದು ಪ್ರವಾಸದ ಲಾಭಗಳೂ ಇವರಿಗೆ ದೊರೆಯುವವು ಹೀಗಾಗಿ ವಿದ್ಯಾರ್ಥಿಗಳಿಗೆ ಅನೇಕ ರೀತಿಯಿಂದ ಲಾಭವಾಗುವದು ಕರ್ನಾಟಕದ ತರುಣ ವಿದ್ಯಾರ್ಥಿಗಳಲ್ಲಿಯೇ ಅಖಂಡ ಕರ್ನಾಟಕದ [illegible] ಬೆಳೆದರೆ ಕರ್ನಾಟಕದ, [illegible] ದಿನಗಳೂ ಸಮೀಪಿಸುವವು ಆದರೆ ವಿದ್ಯಾರ್ಥಿಗಳೂ, 'ಹಾಯಸ್ಕೂಲ, ಕಾಲೇಜ'ಗಳಲ್ಲಿಯ ಅಧ್ಯಾಪಕವರ್ಗವೂ ಇತ್ತ ಕಡೆಗೆ ಲಕ್ಷ್ಯಕೊಡುವರೋ?

ಕೊಲ್ಲಾಪುರದಲ್ಲಿ ಬರಗಾಲದ ಕಷ್ಟಗಳು ಬಹು ಭೀಕರವಾಗಿವೆ ಆದುದರಿಂದ ಆ ಕಷ್ಟ ನಿವಾರಣೆಗೋಸುಗ ಸರಕಾರದವರು ಕೂಡಲೆ ಉಪಾಯಗಳನ್ನು ಯೋಜಿಸಬೇಕೆಂದು ಮುಂಬಯಿ ಕಾಯದೆ ಮಂಡಲದಲ್ಲಿ ಪ್ರಶ್ನೆ ಹೊರಟಿತು. ಆದಕ್ಕೆ ಸರಕಾರದ ಉತ್ತರವನ್ನು ಕೊಡದೇ ಕೊಲ್ಹಾಪುರ ಕಲೆಕ್ಟರರ ಕಡೆಯಿಂದ ಬಂದ ಸೂಚನೆಗಳಿಗೆ ಮಾತ್ರ ತಾವು ಮನ್ನಣೆಕೊಡುವೆವೆಂದೂ ತಾವೇ ಸ್ವತಂತ್ರರೀತಿಯಿಂದ ಸಹಾಯ ಮಾಡಲಾಗದೆಂದೂ, ಸರಕಾರದ ಉತ್ತರವು ದೊರೆಕಿತು. [illegible] ಲದಲ್ಲಿ ಸಭಾಸದರು ಹೇಳಿದ್ದು ಸರಕಾರಕ್ಕೆ ಮಾನ್ಯವಿಲ್ಲ. ಆದರೆ ಕಲೆಕ್ಟರರು ಮಾತ್ರ ಸರ್ವಾಧಿಕಾರಿಗಳು. ಅವರು ಹೇಳಿದ್ದೆ ಪ್ರಾಧಾನ್ಯವಂತೆ! ಬರಗಾಲದಂತಹ ಕಠಿಣ ಪ್ರಸಂಗದಲ್ಲಿ ನಮ್ಮ ಸರಕಾರದ ಗೌರವದ ಪ್ರಶ್ನೆಯು ಮುಂದೆ ಬರುತ್ತದೆ. ಬಡ ಪ್ರಜೆಗಳ ಕಷ್ಟಗಳು, ಪ್ರಜೆಗಳು ಹೊಟ್ಟೆಗಿಲ್ಲದೆ ಸಾಯುವದು, ಯಾವುದೂ ಸರಕಾರದ ಅಂತಃಕರಣಕ್ಕೆ ತಗಲುವದಿಲ್ಲ. ಇದೆಂತಹ [illegible]!

ಛತ್ರಗುಣಿಕೇರಿಯ ಮರಾಠಿಗರು ಕನ್ನಡದ ಮೇಲೆ ಯಾವ ಬಗೆಯ ಗದೆಯನ್ನು ಎತ್ತಿರುವರೆಂಬುದು ''ಕನ್ನಡಿಗ''ನಲ್ಲಿ ಹಿಂದಕ್ಕೆ ಒಂದು ಸಲ ಪ್ರಸಿದ್ಧವಾಗಿದೆ. ಆದರೆ ಸರಕಾರದ ಲಕ್ಷ್ಯವು ಇನ್ನೂ ಈ ಅನ್ಯಾಯದ ಕಡೆಗೆ ಹೋದಂತಿಲ್ಲ. ಈಗ್ಗೆ ಪುನಃ ಮತ್ತೊಂದು ಪತ್ರವು ನಮ್ಮ ಕಡೆಗೆ ಬಂದಿದೆ. ಈಗಲಾದರೂ ಸರಕಾರವು ಈ ಕಡೆಗೆ ಲಕ್ಷ್ಯ ಕೊಡಬೇಕು. ಆ ಪತ್ರವು ಹೀಗಿದೆ:—

''ಸತ್ಕಾರ್ಯ ನಡೆಯುವವರಿಗೆ ವಿಘ್ನಗಳು ಬಾರದಿಲ್ಲವಷ್ಟೆ. ಅಂತೇ ಮೊದಲು ವಿಘ್ನೇಶ್ವರನನ್ನು ಸ್ತುತಿಸಿ ಆ ಮೇಲೆ ಸತ್ಕಾರ್ಯದಲ್ಲಿ ಕೈ ಹಾಕುವರು. ಅವರೂ ಕೂಡ ಎಷ್ಟೋ ವಿಘ್ನಗಳೊದಗುವವು. ಆಗ ಆ ಕಾರ್ಯಕರ್ತರುಗಳು ನಿರ್ಮೋಹಿಗಳಿದ್ದರೂ ಅವರು ಕೆಲವು ಜನರ ನಿಂದೆಗೂ ಅಪಕೀರ್ತಿಗೂ ಕೆಲವು ಜನರ ಅಪ್ರೀತಿಗೂ ಪಾತ್ರರಾಗುವರು. ಇದಕ್ಕೆ ಎಷ್ಟೋ ಉದಾಹರಣೆಗಳಾಗಿವೆ. ಅವುಗಳಲ್ಲಿ ಒಂದನ್ನು ಬರೆಯುವೆನು.

''ವಿಜಾಪೂರ ಜಿಲ್ಹೆಯ ಇಂಡೀ ತಾಲೂಕಿನಲ್ಲಿ ಛತ್ರಗುಣಕಿ ಎಂಬದೊಂದು ಊರು ಇದೆ. ಇಲ್ಲಿಯ ಜನಸಂಖ್ಯೆ ಸುಮಾರು ೩-೪ ಸಾವಿರ ಇದ್ದು ಇದರಲ್ಲಿ ೧೦೦ಕ್ಕೆ ೯೫ರಂತೆ ಅಚ್ಚ ಕನ್ನಡ ಮಾತಾಡುವವರಿದ್ದಾರೆ. ಇಂಥಲ್ಲಿ ಊರ ಇನಾಮುದಾರರೊಬ್ಬರ ಮರ್ಜಿಯ ಮೇಲಿಂದಲೇ ಮರಾಠಿ ಸಾಲೆಯನ್ನು ಸ್ಥಾಪಿಸಿರುವರು. ಆಗ ಊರ ಜನರು ನಾವು ಕನ್ನಡಿಗರು ನಮಗೆ ಕನ್ನಡ ಸಾಲೆಯೇ ಹೆಚ್ಚಾಗಿ ಬೆಳೆಯಿಸುವ ಅವಶ್ಯವಿದೆ ಕಾರಣ ಮರಾಠಿ ಸಾಲೆಯೇ ಬೇಡೆಂದು ಹೇಳಿಕೊಂಡರೂ ತಮ್ಮ ದುರಾಗ್ರಹದಿಂದ ಮರಾಠಿ ಸಾಲೆಯನ್ನು ಸ್ಥಾಪಿಸಿದರು. ಆದರೆ ಇದಕ್ಕೆ ಕಾರಣರು ನಮ್ಮ ಊರ ಇನಾಮುದಾರರೂ ಜಿಲ್ಹೆಯ 'ಡೆಪೂಟಿ'ಯವರೂ ಶಾಲೆಯ ಹೆಡ್ ಮಾಸ್ತರರೂ ಇರುವರು.

'ಈ ಮರಾಠಿ ಸಾಲೆಯನ್ನು ಸ್ಥಾಪಿಸಲಿಕ್ಕೆ ಕೊಂಡರೆ ಯಾಗಿರುವದೆಂದರೋ ಏನೋ ಚೆನ್ನಾಗಿ ಕೆಲಸ ಮಾಡದ್ದಕ್ಕೋ, ಇಲ್ಲಿಯ ಸಿದ್ದೋಜಿ ಗಳೆಂಬ ಅಭ್ಯಾಸ್ತರನ್ನು ಒಂದನೇ ಗ್ರೇಡ ಬಡತಿ ಕಡಿಮೆ ಮಾಡಿ ಶಿಕ್ಷಾ ಕಠಿಣ ವರ್ಗ ಮಾಡಿದರು. ಇವರಿಗೆ ಸಸ್ಪೆನ್ಶನ್ ೧ ತಿಂಗಳದ ಪಗಾರ ಮುಳುಗಿಸಿದರು. ಇದು ಅನ್ಯಾಯಕ್ಕೆ ಕಾರಣವಾದ ಸಂಗತಿಯು! ಭಾಷಾಭಿಮಾನಕ್ಕಾಗಿ ಶಿಕ್ಷಿಸಿದ್ದನ್ನೂ ಹಾನಿಯಾದದ್ದನ್ನೂ ಈವರೆಗೂ ಕಂಡಿದ್ದಿಲ್ಲ; ಕೇಳಿದ್ದಿಲ್ಲ, ಈಗ ಕೇಳುವಂತಾಯಿತು. ಕಂಡಂತಾಯಿತು. ಕಾರಣ ಕನ್ನಡಿಗರೇ? ನಾನು ಕಂಡದ್ದನ್ನೂ ಕೇಳಿದ್ದನ್ನೂ ತಮಗೂ ಕಾಣಿಸಬೇಕೆಂದೂ ಕೇಳಿಸಬೇಕೆಂದೂ ಇವರಡಿಯಲ್ಲಿ ಬರೆದಿರುವೆನು."

ಈ ಊರ ಇನಾಮದಾರರು ಅನೇಕ ವರ್ಷಗಳಿಂದ ಕರ್ನಾಟಕದಲ್ಲಿದ್ದವರು. ಉಪ್ಪು ಉಣ್ಣುವದು ಕರ್ನಾಟಕದ್ದು; ಜಾಹಗೀರಿಯು ಕರ್ನಾಟಕದ್ದು; ಇವರು, ಇವರ ತಂದೆಯವರ, ಅಜ್ಜಂದಿರು ಕರ್ನಾಟಕದಲ್ಲಿ ಹುಟ್ಟಿ ಬೆಳೆದವರು. ಇವರ ಸುತ್ತಲಿನವರೂ, ಕರ್ನಾಟಕಸ್ಥರು; ಹೀಗಿದ್ದರೂ ಸಹ ಈ ಮಹನೀಯರಿಗೆ ಕರ್ನಾಟಕದ ಅಭಿಮಾನವಿಲ್ಲ. ಇಷ್ಟೇ ಅಲ್ಲ! ಕನ್ನಡಿಗರನ್ನು ದ್ವೇಷಿಸುತ್ತಾರೆ. ಈ ಬಗೆಯಿಂದ ಮರಾಟರು ಕರ್ನಾಟಕದಲ್ಲಿ ತಮ್ಮ ಅಹಂಭಾವತೆಯನ್ನು ನಡಿಸಿದರೂ, ಕನ್ನಡಿಗರು ಅವರಿಗೆ ಏನೂ ಅನ್ನಕೂಡದು. ''ಇದು ಅನ್ಯಾಯವಾದದ್ದು ಹೀಗೆ ಮಾಡಬೇಡಿ'' ಎಂಬದಾಗಿ ಮರಾಟರಿಗೆ ಕನ್ನಡಿಗರು ಹೇಳಿದರೆ, ''ಓಹೋ! ನೀವು ಮರಾಟಿಯನ್ನು ದ್ವೇಷಿಸುವದೇಕೆ?'' ಎಂಬದಾಗಿ ಮರಾಟಿಗರು ಕನ್ನಡಿಗರ ಮೇಲೆ ಕಾಟಿಯನ್ನಪ್ಪಳಿಸುವರು. ಈ ಇವರ ಆರ್ಭಟವು ಹಿಂದೆ ಬಹಳ ಕಾಲಕ್ಕೇ ನಡೆಯುತ್ತಿದ್ದಿತು. ಆದರೆ ಈಗ್ಗೆ ಸಹ ಅದನ್ನು ಹಟದಿಂದ ಸಾಗಿಸಬೇಕೆಂದು ದುರಾಗ್ರಹ ಹಿಡಿಯುವದು ಮರಾಟರಿಗೆ ಯುಕ್ತವಾದದ್ದಲ್ಲ. ಕರ್ನಾಟಕದಲ್ಲಿ ಜಾಗ್ರತಿಯುಂಟಾಗಿದೆ. ಕನ್ನಡ-ನಾಡು-ನುಡಿಗಳ ಅಭಿಮಾನದ ಗಾಳಿಯು ಎಲ್ಲ ಕಡೆಗೆ ಬೀಸುತ್ತಲಿದೆ. ಇಂತಹ ಪ್ರಸಂಗದಲ್ಲಿ ಸಹ ತಮ್ಮ ದುರಾಗ್ರಹವನ್ನೇ ಸಾಧಿಸಬೇಕೆಂದರೆ ಅದು ಮೂರ್ಖತನದ ಮಾತಾಗುವದೆಂಬದನ್ನು, ಕರ್ನಾಟಕದಲ್ಲಿದ್ದು, ಕರ್ನಾಟಕದವರ ವಿರುದ್ಧವಾಗಿ ನಡೆಯುವಂತಹ ಮರಾಟಿಗರೆಲ್ಲ ಚನ್ನಾಗಿ, ಕಣ್ದೆರೆದು ನೋಡಿ ತಿಳಿದು ಕೊಳ್ಳಲಿ.

ಕರ್ನಾಟಕದ ಸದ್ಯದ ರಾಜಕೀಯ ಪರಿಸ್ಥಿತಿಯು ಬಹು ಚಿಂತಾಜನಕವಾಗಿದೆ. ಪ್ರಾಂತಿಕ ಕಾಂಗ್ರೆಸದ ಕೆಲಸವು ತ್ವರೆಯಿಂದ ಸಾಗಲೊಲ್ಲದು; ಏಕೀಕರಣದ ಕೆಲಸವೂ ಅಷ್ಟಕ್ಕೇ ನಿಂತಿದೆ. ಇತ್ತ ಅನ್ಯಪ್ರಾಂತದವರಂತೂ ಕರ್ನಾಟಕದ ಮೇಲೆ ದಾಳಿಯ ಮೇಲೆ ದಾಳಿ ಇಡುತ್ತಿರುವರು. ಆಂಧ್ರರು ಬಳ್ಳಾರಿ ಅನಂತಪೂರಗಳನ್ನು ನುಂಗಿದರು. ತಮಿಳರು ತಮ್ಮ ಸ್ವತಂತ್ರ ವಿಶ್ವವಿದ್ಯಾಲಯದ ಏರ್ಪಾಟು ಮಾಡಿದ್ದು, ೮-೬ ತಿಂಗಳುಗಳಲ್ಲಿ ಅದನ್ನು ಸಾಧಿಸಿಕೊಳ್ಳುವರು. ಆಗ್ಗೆ ಕೊಯಿಮುತ್ತೂರ, ಸೇಲಂ, ನೀಲಗಿರಿಗಳ ಕನ್ನಡ ಭಾಗಗಳು ತಮಿಳ ವಿಶ್ವವಿದ್ಯಾಲಯಕ್ಕೆ ಸೇರುವವು. ಕೇರಳದವರು ಮಂಗಳೂರನ್ನು ಎತ್ತಿ ಬಡಿಯುವರು. ಮಹಾರಾಷ್ಟ್ರರು ಉತ್ತರ ಕರ್ನಾಟಕದ ಸಂಸ್ಥಾನಗಳನ್ನು ತಮ್ಮ ಪ್ರಾಂತಕ್ಕೆ ಸೆಳೆದುಕೊಳ್ಳಬೇಕೆಂದು ನಿಶ್ಚಯಿಸಿ ಬಿಟ್ಟಿದ್ದಾರೆ. ಹೀಗೆ ಕರ್ನಾಟಕದ ಭಾಗಗಳೆಲ್ಲ ಅತ್ತಿತ್ತ ಹಂಚಿಹೋದವೆಂದರೆ, ಸ್ವತಂತ್ರವಾದ ವಿಶ್ವವಿದ್ಯಾಲಯವು ಕರ್ನಾಟಕಕ್ಕೆ ದೊರೆಯುವದೇ ಅಸಾಧ್ಯವಾಗುವದು. ಆ ಮೇಲೆ ಕನ್ನಡಿಗರಿಗೆ ಸ್ವತಂತ್ರ ವಿಶ್ವವಿದ್ಯಾಲಯವು ದೊರೆಯದೆಂದೂ, ತಾವು ಸುಮ್ಮನೇ ಕರ್ನಾಟಕದ ಬೆನ್ನು ಹತ್ತಲಾರೆವೆಂದೂ ನುಡಿದು, ಕರ್ನಾಟಕಸ್ಥರ ದೋಷವನ್ನು ಕರ್ನಾಟಕಸ್ಥರ ಮೇಲೆ ಹೊರಿಸಿ, ಬೆಳಗಾವಿಯು ಮಹಾರಾಷ್ಟ್ರಕ್ಕೆ ಸೇರಿಕೊಳ್ಳುವದು. ವಿಜಾಪೂರ, ಕಾರವಾರಗಳಲ್ಲಿಯ ಕರ್ನಾಟಕಸ್ಥ ಮರಾಟರು ಸಹ 'ಓಡಿಯಕ್ಕನ ಜಾಳಿ ಮನೆಯವರಿಗೆಲ್ಲ' ಎನ್ನುವಂತೆ ತಾವೂ ಮಹಾರಾಷ್ಟ್ರ ವಿಶ್ವವಿದ್ಯಾಲಯಕ್ಕೆ ಸೇರಿಕೊಳ್ಳುವೆವೆಂದು ಕೂಗಾಟ ಎಬ್ಬಿಸುವರು. ಹೀಗಾಗಿ ಕರ್ನಾಟಕವು ಮತ್ತೆ ತನ್ನ ಹೆಜ್ಜೆಯನ್ನು ಹಿಂದಕ್ಕೆ ಸರಿಸಬೇಕಾಗುವದು. ಈ ಭಾವೀ ಚಿಂತಾಜನಕವಾದ ಪರಿಸ್ಥಿತಿಯನ್ನು ಕಣ್ಣಿನಿಂದ ನೋಡಿದರೂ ಸಹ ಕರ್ನಾಟಕಸ್ಥರ ಅಂತಃಕರಣವು ಕರಗುವದಿಲ್ಲವೇ? ಅವರ ಗಾಢನಿದ್ರೆಯ ಅಮಲು ದೂರಾಗುವದಿಲ್ಲವೇ? ಶಿಕ್ಷಣ ವಿಷಯದಲ್ಲಿ ಆಯುಷ್ಯವನ್ನು ಕಳೆದವರು ಮುಂದೆ ಬಂದು ಈ ಕೆಲಸಕ್ಕಾಗಿ ಇನ್ನಾದರೂ ಟೊಂಕ ಕಟ್ಟುವದಿಲ್ಲವೋ? ಈ ವಿಶ್ವವಿದ್ಯಾಲಯದ ವಿಷಯವು ಶಿಕ್ಷಣವಿಷಯದ್ದಾಗಿದ್ದರೂ, ಕರ್ನಾಟಕದ ರಾಜಕೀಯ ಆಕಾಂಕ್ಷೆಗಳಿಗೆ ನಿಕಟಸಂಬಂಧಪಟ್ಟದ್ದು. ಆದುದರಿಂದ ಅಖಿಲ ಕನ್ನಡಿಗರ ಪರಿಷತ್ತೊಂದು ಈಗ್ಗೆ ಅತ್ಯವಶ್ಯವಾದುದು. ಈ ಪರಿಷತ್ತನ್ನು ಆದಷ್ಟು ಬೇಗನೆ ಕೂಡಿಸುವ ಪ್ರಯತ್ನವನ್ನು ಬಳ್ಳಾರಿಯವರು ಪ್ರಾರಂಭಿಸಬೇಕಾಗಿ ಸೂಚನೆಯಿದೆ. ಯಾಕೆಂದರೆ ಇದೇ ತಿಂಗಳ ೨೨ ನೇ ತಾ|| ನಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಸಾಧಾರಣ ಸಭೆಯು ಬಳ್ಳಾರಿಯಲ್ಲಿ ಸೇರುವದು. ಅದೇ ಪ್ರಸಂಗದಲ್ಲಿ ಅಖಂಡ ಕರ್ನಾಟಕದ ಮುಖಂಡರನ್ನು ಬಳ್ಳಾರಿಗೆ ಕರೆದು, ಮುಂದಿನ ಕಾರ್ಯವನ್ನು ಗೊತ್ತುಪಡಿಸುವದೊಳ್ಳೇದು.

ರೇಲ್ವೇಬೋರ್ಡಿನ ಸುದ್ದಿ

ಡಿಸೆಂಬರ ಮೊದಲನೇ ವಾರದಲ್ಲಿ ಎಲ್ಲ ಅರ್ಜಿಗಳೂ ನಿರ್ಣಾಯಕವಾಗಿ ಕೇಳಲ್ಪಡುವವು. ಆದ್ದರಿಂದ ವಾದಿಗಳೆಲ್ಲರೂ ತ್ವರೆಯಿಂದ ಹೆಚ್ಚಾಗಿ ಸಹಿಗಳನ್ನು ಕಳಿಸಬೇಕಾಗಿ ವಿನಂತಿಯಿದೆ. ಈ ವಾರದಲ್ಲಿ ಬಂದ ಸಹಿಗಳು:—

ಮುಚ್ಚಕಪ್ಪ ಮಾಳಬಾಳ ಸಾ|| ಕಲಾದಗಿ= ೩೦; ಬಸಲಿಂಗಪ್ಪ ಕೊಟ್ಟೂರಶೆಟ್ಟಿ ಗದ್ದೀಗ ಕಲಾದಗಿ=೩೨; ಡಾ. ಜೋಶಿ ಗುಲಬುರ್ಗಾ=೩೨; ಭೀಮಾಶಂಕರ ಕಾರಕೂನ ಕುರಹಟ್ಟಿ ಹೊಳೆಮಂಡಿಗೆ ಸಾ|| ರೋಣ= ೫೮; ರಾಮರಾಯ ಯಲ್ಲಪ್ಪ ಅಂಬಕೇಕರ ಕಾಕೆ ಮುಕಾಮ ನರಗುಂದ= ೨೪; ಮಂಜುನಾಥ ಗಣೇಶಯ್ಯಾ ಶೆಟ್ಟಿ ಕುಮಟಾ ಜಿಲ್ಹಾ ಕಾರವಾರ= ೬೪; ಹರಹರ ಬಾಬೂರಾವ ಯಾದವಾಡ ಸಾ|| ಲೋಕಾಪುರ= ೨೦; ಒಟ್ಟು =೩೧೦

ಕನ್ನಡಿಗರು ಕನ್ನಡದಲ್ಲಿಯೇ

ಹೆಸರು ಬರೆಯಬೇಕು.

(ಲೇಖಕ- ಶ್ರೀ. ಹನುಮಂತ ಗೋವಿಂದ ಶೆಟ್ಟೀ)

ಅಖಿಲ ಕರ್ನಾಟಕಕ್ಕೆ ಒಂದೇ ವಿಧವಾದ ರಾಜಕೀಯ ಆಧಿಪತ್ಯವು ತಪ್ಪಿದಾಗಿನಿಂದಲೂ, ಪ್ರತಿಯೊಂದು ವಿಷಯದಲ್ಲಿಯೂ ನಮ್ಮಗಳ ಅವನತಿಯಾಗ ಹತ್ತಿದೆ ಯೆಂಬ್ಬೇ ಅಲ್ಲ. ಇದು ಅವನತಿಯೆಂದು ನಮ ನಮಗೆ ತಿಳಿಯದಾಗಿದೆ. ಈಗಿನ ಕಾಲದಲ್ಲಿ ಪಲವು ಕನ್ನಡಿಗರು ಕನ್ನಡದಲ್ಲಿ ಹೆಸರು ಬರೆಯುತ್ತಿರುವದಿಲ್ಲ. ಹೀಗೇಕೆ? ಎಂದು ಕೇಳಿದರೆ ಅವರು ಹೇಳುವ ಕಾರಣಗಳು— ಆರೆ ಅರಸು, ಕನ್ನಡ ಬಿರುಸು, ಮುಸಲ್ಮಾನಿ ಸರಸ; ಇದೊಂದು ಅನೇಕ ಭಾಷಾ ಪಾಂಡಿತ್ಯದ ಲಕ್ಷಣ; ಬಹು ಜನರಿಗೆ ತಿಳಿಯುವದು; ಇಂಗ್ಲಿಷದಲ್ಲಿ ಬರೆದರೆ ರಾಜಭಕ್ತಿಯನ್ನು ತೋರಿಸಿದಂತಾಗುವದು, ಯಾವ ಭಾಷೆಯಲ್ಲಿ ಬರೆದರೂ ಸರಿಯೇ, ಪರಭಾಷೆಯಲ್ಲಿ ಬರೆದರೆ ಎದ್ದು ಕಾಣುವದು; ನಮ್ಮ ನಮ್ಮ ವ್ಯವಹಾರವೆಲ್ಲವೂ ಪರಭಾಷೆಯಲ್ಲಿ ನಡೆಯುತ್ತಲಿದೆ ನಮಗೆ ಇದು ರೂಢಿಯೇ ಬಿದ್ದದೆ; ಗೀರ್ವಾಣ ಲಿಪಿಯನ್ನು ಬಿಟ್ಟು ದ್ರಾವಿಡ ಲಿಪಿಯನ್ನುಪಯೋಗಿಸಿದರೆ ನಮಗೆ ಬ್ರಾಹ್ಮಣರೆನ್ನುವರೇ; ಕನ್ನಡ ಪಂಡಿತರೇ ಹೀಗೆ ಮಾಡುತ್ತಿರುವರಲ್ಲ!

ಇವರಿಗೆ, ತಾವು ಯಾರೆಂಬುದೇ ಗೊತ್ತಿಲ್ಲ, ವೈಶಿಷ್ಟ್ಯಗಳ, ಪೂರ್ವಜರ, ಸ್ವಾಭಿಮಾನದ ಪರಿವೆಯೇ ಇಲ್ಲ. ಪರಭಾಷೆಯ ಹೊರತು ಗತ್ಯಂತರವೇ ಕಾಣುವದಿಲ್ಲ. ಕನ್ನಡ ಶಿಕ್ಷಕರಲ್ಲಿಯೇ ಹಲವರಿಗೆ ಹೆಸರು ಬರೆಯುವದರಿಂದ ಲೇಸೇ ತಿಳಿಯುವದಿಲ್ಲ. ರುಜು ಸಹಿ 'ಸಿಗ್ನೇಚರ' ಎಂದು ಮೊದಲಾಗಿ ಹೇಳ ಬೇಕಾಗುತ್ತದೆ. ಅವರಿಗೆ ಬಹುತ್ರಾಂತ ಬಹಳ, ಟೀಂಡನ್ ಮೊದಲಾದ ವಾಗ್ಮಿಗಳಿಗಿಂತಲೂ ಹೆಚ್ಚಾಗಿ "ಭಾಷೆಯ ಉನ್ನತಿ" ಯ ಬಗ್ಗೆ ಭಾಷಣ ಮಾಡಲು ಬರುತ್ತದೆ. ಶೃಂಗವನ್ನು ಅಪ್ಪಳಿಸಲಿಕ್ಕೆ ಬರುತ್ತಿದೆ. ಆದರೆ ಕೇವಲ ಭಾಷಾಭಿಮಾನದ ಅಂಕುರವೂ, ಸ್ವಾಭಿಮಾನದ ತಳಹದಿಯೂ, ದೇಶಾಭಿಮಾನಮಂದಿರದ ಸೋಪಾನದ ಪ್ರಥಮ ಮೆಟ್ಟಲೂ ಆದ ಕನ್ನಡದಲ್ಲಿಯೇ ಹೆಸರು ಬರೆಯುವ ವಿಷಯವು ಸ್ವಪ್ನದಲ್ಲಿ ಸಹ ಕಾಣಿಸಬರಲಿಲ್ಲ. ಕನ್ನಡ ಭಾಷಾಪ್ರೇಮಿ ಎಂದು ಬಿರುದು ಪಡೆದು ಕೊಂಡಂಥ ಅನೇಕರಿಗೆ, ಕನ್ನಡದಲ್ಲಿಯೇ ತಮ್ಮ ಹೆಸರು ಬರೆಯುತ್ತಿರಲಿಕ್ಕೆ ಇನ್ನೂ ನೆನಪಾಗುತ್ತಿಲ್ಲ. ಭಾಷಾಭಕ್ತರಿಗೂ ಸಾಹಿತ್ಯ ಪರಿಷತ್ತಿನವರಿಗೂ, ಪ್ರತಿಯೊಬ್ಬರು ಕನ್ನಡದಲ್ಲಿಯೇ ಹೆಸರು ಬರೆಯುವ ಬಗ್ಗೆ ಪ್ರತಿಜ್ಞೆಯೊಂದಿರಬೇಕೆಂಬ ಎಚ್ಚರವಿಲ್ಲ. ಪತ್ರಿಕಾ ಕರ್ತರಿಗೆ ಈ ವಿಷಯದ ನೆನಪೇ ಇಲ್ಲ. ಪ್ರಂಕ್ಷಣವೂ ಉದಾರ ವಿಚಾರ ವಿವರಣೆಗಳಲ್ಲಿ ಪರಮಾರ್ಥ ಹಿಡಿದು ಕಡಿವೆ. ಮಾಡುತ್ತಿದ್ದರೂ, ಕನ್ನಡದಲ್ಲಿ ಹೆಸರು ಬರೆಯುವದೆಂದ ಮಾತ್ರವೇ ರೀತಿಯ ನವವನ್ನು ಹೇಳಲಿಕ್ಕೆ ಜನಲಜ್ಜೆಯಿಲ್ಲ ನಿಷ್ಠೆಯೂ ಇಲ್ಲ, ಮನ ಲಜ್ಜೆಯಾದರೂ ಕೂಡ ಇಲ್ಲ. ಸರಕಾರದ ಹಾಗೂ ಸಾರ್ವಜನಿಕ ನೌಕರರೆಲ್ಲರೂ ಬಹುತರ ಇಂಗ್ಲೀಷದಲ್ಲಿ ಅಥವಾ ಪರಭಾಷೆಯಲ್ಲಿ ಹೆಸರು ಬರೆಯಲಿಕ್ಕೆ ನೀಳ್ವವನ್ನೇ ಎತ್ತಿದಂತೆ ಕಾಣುತ್ತದೆ. ಪರಭಾಷೆಯಲ್ಲಿ ಪತ್ರವ್ಯವಹಾರವೆಲ್ಲವನ್ನೂ ಮಾಡುವದರಿಂದ ಆಗುವ ಭವಣೆಯೂ, ಅಯಾಚಿತ ಭಾಷೆಯ ದುರವಸ್ಥೆ ಇಂಥದೆಂಬ ತಮ್ಮ ನಿರ್ಲಕ್ಷ್ಯದ ತಿಳಿವು ಮಾಡುವದಕ್ಕಿರುವುದೂ ಇನ್ನೂ ನಿಮಗಿಲ್ಲ. ಮನ ಒಂದಕ್ಷರವೂ ಸಾಕ ಗಿಲ್ಲ. ಇವರಲ್ಲಿಯೂ ಮುಖ್ಯರ ವರಲ್ಲವೇ ಹುಟ್ಟಿದಸು

ಆದುದು ಆಗಿ ಹೋಯಿತು. ಇನ್ನು ಮುಂದಾದರೂ; ನಾವು ಅಷ್ಟ ಕನ್ನಡಿಗರಿದ್ದೇವೆಂದೂ ನಮ್ಮ ನಾಡು ಸರ್ವೋತ್ಕೃಷ್ಟವೂ, ಕಾವೇರಿಯಿಂದ ಗೋದಾವರಿಯ ವರೆಗೂ, ಎಂದು ಸಾರಿಸಾರಿ ಹೇಳತಕ್ಕವರಿದ್ದರೆ, ಪರಭಾಷಿಗರ ದಾಸಳಿಕೆಯನ್ನು ಕಡಿದು ಸ್ವಬಲವ ಬೇಕಾಗಿದ್ದರೆ, ಸ್ವಾಭಿಮಾನವಿದ್ದರೆ, ಸದಸದ್ವಿವೇಕ ಬುದ್ಧಿಯಿದ್ದರೆ ನಿಜವಾಗಿಯೂ ಮಾನವರೇ ಆಗಿದ್ದರೆ, ಇಂದಿನಿಂದ ಪ್ರಾರಂಭಿಸಿಯಾದರೂ, ಕನ್ನಡದಲ್ಲಿಯೇ ಹೆಸರು ಬರೆಯುವದು ಕರ್ತವ್ಯವಲ್ಲವೇ?'

ಇದು ವರೆಗೆ ಜನರಲ್ಲಿ ಈ ವಿಷಯ ಚರ್ಚೆಯೇ ಸಾಕಷ್ಟು ಆಗಿಲ್ಲವಾದ್ದರಿಂದಲೇ, ಉದಾಸೀನತೆ, ಹಾಗೂ ದುರ್ಗುಣಗಳ ಪ್ರಸ್ತಾವ ಇಷ್ಟೊಂದು ಬೆಳೆದಿದೆ. ಈಗ ಎಲ್ಲ ತರದ ಸಾಧನಗಳಿಂದ ಎಲ್ಲ ಸಜ್ಜನರು ಒಳ್ಳೇ ಪ್ರಯತ್ನದಿಂದ ಚರ್ಚಿಸದೇನೇ ಹೆಚ್ಚಾಗಿ ಕೆಲಸವಾಗುವಂತಿದೆ. ತಮ್ಮ ಕಾಯಕವನ್ನು ಬಿಡದ ಪಟವಾರಿಗಳನ್ನು, ಚತುರರಾದ ಮಾಸ್ತರರು ಅಧಿಕಾರಿಗಳು ಅಭಿಮಾನಪೂರಿತ ಪಾರಭಾಷಿಗರ ಬಳಿಗೆ ಆಗಾಗ್ಗೆ ಕರೆದೊಯ್ದು— ಅಯ್ಯೋ ಮಹಾಮತಿಗಳೇ? ನಮ್ಮನ್ನು ನೋಡಿರಿ, ಉದಾಸೀನ ವೃತ್ತಿಯಿಂದ, ಸ್ವಾಭಿಮಾನ ಶೂನ್ಯರಾಗಿ, ಬಾಷಾದ್ರೋಹಿಗಳಾಗಿ, ಹೇಗೆ ಪರಕೀಯ ಭಾಷೆಗಳಲ್ಲಿ ನಮ್ಮ ನಮ್ಮ ಹೆಸರು ಬರೆಯುತ್ತಿರುವೆವೋ ಹಾಗೆ ನೀವು ಒಮ್ಮೆಯಾದರೂ ಮಾಡಬಾರದೇ ಎಂದು ದೀನವಾಣಿಯಿಂದ ಕೇಳಿ ಕೊಂಡರೆ, ಅವರು ಕೊಡುವ ಉತ್ತರಗಳು ಇಂಥ ಮಂದರನ್ನು ತಿದ್ದಲಿಕ್ಕೆ ಸಾಕಾಗುವವು.

ಈಗ ಕನ್ನಡದಲ್ಲಿ ಹೆಸರು ಬರೆಯುವವರಲ್ಲಿಯಾದರೂ ಸೂತ್ರಬದ್ಧವಾದ ಒಂದೇ ಕ್ರಮವಿಲ್ಲ. ಮನಬಂದಂತೆ ಬರೆಯುವ ೫೦-೬೦ ತರಗಳು ಕಾಣಬರುತ್ತವೆ. ಇವುಗಳಿಂದ ನಿಜವಾದ ಹೆಸರು ಬೇಗನೆ ತಿಳಿಯುವದಿಲ್ಲ. ಆದ್ದರಿಂದ ನಮ್ಮ ಪೂರ್ವಿಕರ ಪದ್ಧತಿಯಂತೆ "ಶೆಟ್ಟೀ ಮಹಾಲಿಂಗಪ್ಪನವರ ಮಕ್ಕಳಾದ ವಲ್ಲಭರಾಯರು" ಎಂದಾಗಲೀ ಇಲ್ಲವೇ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿದ್ದಂತೆ "ವಲ್ಲಭ ಮಹಾಲಿಂಗ ಶೆಟ್ಟೀ" ಎಂದಾಗಲೀ ಬರೆಯುವದು ಯೋಗ್ಯವಾಗಿರುತ್ತದೆ. ಈ ಎರಡೂ ತರಗಳು ಬಳಕೆಯಲ್ಲಿರಲು ಪ್ರತ್ಯವಾಯ ವಿರಬೇಕಾಗಿದ್ದಿಲ್ಲ. ಆದರೆ ಸಂಕ್ಷಿಪ್ತ ಹೆಸರು ಬರೆದಾಗ ನಿಜತ್ವ ತಿಳಿಯಲು ಗೊಂದಲ ವಾಗುವದರಿಂದ ಯಾವದಾದರೂ ಒಂದೇ ಪದ್ಧತಿಯನ್ನು ಸಾಹಿತ್ಯಪರಿಷತ್ತಿನವರು ಕನ್ನಡಿಗರೆಲ್ಲರಿಗೆ ಸಮ್ಮತವಾಗುವಂತೆ ಬೇಗನೆ ನಿರ್ಣಯಿಸಿ ಕೊಟ್ಟಲ್ಲಿ ಹಿತಕರವಾಗುವದು, ಒಟ್ಟಿಗೆ ಹೇಳಬೇಕೆಂದರೆ—

(ಚರಣಾರಂಭದ ಅಕ್ಷರಕ್ಕೆ ತಾಳವಾಕಬೇಕು ವಿಶೇಷವಾಗಿಲ್ಲ. ಕಡೆಯ ಸ್ವರವೆಳೆದು ಪಲ್ಲವಕ್ಕೆ ಜೋಡಿಸಬೇಕು)

ಕನ್ನಡಿಗನೆ ನೀಂ| ಕನ್ನಡ ಸ್ವನ್ನದು| ಅನ್ನೂ|
ಕನ್ನಡದೊಳಗೇ| ಬರೆ ಹೆಸರನ್ನು |ಪಲ್ಲ|

ಶ್ರೀರಮೆಯೊಡಲಿದು| ಧೀರರ ಜಗವಿದು| ಮಾರನ ವನವಿದು|
ದಾರಿಯ ಗುರುವಿದು| ಧರ್ಮದ ಖಣಿಯಿದು| ಪಾರ್ವರನಧ
ವಿದು ಮಾರುತಿಯ ಮನೆಯಿದು, ಗೌರಿಯ ನೆಲವಿದು' ಭೂರ
ಮೆ ಮುಖವಿದು| ಭಾರತಿ ತಲೆಯಿದು| ಮೀರಿದ ಸುಖ ಇದು.
ತೋರಿಸಿ ಕೊಡುವದು|

ಉನ್ನತ ಕನ್ನಡ ನಾಡಿದು' ನನ್ನಿಯು ಅನ್ನೂ|
ಕನ್ನಡದೊಳಗೇ ಬರೆ ಹೆಸರನ್ನು ||ಕನ್ನಡಿ ......||

ಈ ಸಂಚಿಕೆಯ ೧ ನೇ ಪುಟದ ೧ ನೇ ಪಟ್ಟಿಯಲ್ಲಿ "ಹರಿಹಯರು ಹೆಚ್ಚಾಗದು" ಎಂಬುದರ ಬದಲು "ಹೆಚ್ಚುಗುವದು" ಎಂಬದಾಗಿ ತಪ್ಪಾಗಿ ಮುದ್ರಣವಾಗಿದೆ ವಾಚಕರು ತಿದ್ದಿಕೊಳ್ಳಬೇಕು,

ಸಂ ಕ.

ಶಿಕ್ಷಕರೂ ಕನ್ನಡವೂ

ಕನ್ನಡ ಶಾಲೆಗಳ ಪರೀಕ್ಷೆಗಳೆಂದ ಅಧಿಕಾರಿಗಳು ಕನ್ನಡ ಭಾಷೆಯಲ್ಲೇ ವರದಿ ಬರೆಯಬೇಕೆಂದು ಶಿಕ್ಷಕರ ಪಂಚಾಯತಿನಲ್ಲಿ ನಿರ್ಣಯವಾದ ಕನ್ನಡವೇ ಬಾರದವರು ಇಂಗ್ಲಿಷಿನಿಂದ ವರದಿ ಬರೆಯಲು ಆಕ್ಷೇಪವಿರುವದಿಲ್ಲ. ಆದರೆ ಎಷ್ಟೋ ಅಧಿಕಾರಿಗಳು ಶಾಲೆಯ ಪರೀಕ್ಷಣಾಗೆ ಬಂದಾಗ ಕನ್ನಡವು ಬರುತ್ತಿದ್ದರೂ ಇಂಗ್ಲಿಷಿನಲ್ಲಿ ವರದಿ ಬರೆದು ಹೋಗುತ್ತಿರುವರು. ಇನ್ಸ್ಪೆಕ್ಟರ್ ರಿಪೋರ್ಟಿನಂತಹ ಶಿಕ್ಷಕರಿಗೆ ಮಹತ್ವದ ವಿಷಯವನ್ನು ಇಂಗ್ಲಿಷಿನಲ್ಲಿ ಬರೆದ. ಶಿಕ್ಷಕರಿಗೆ ಹಕ್ಕಿ ಹತ್ತುವಂತೆ ಮಾಡುವದು ಶಿಕ್ಷಣಾಧಿಕಾರಿಗಳ ಘನ ಪಾಂಡಿತ್ಯದ ಲಕ್ಷಣ. ಕೆಲವರು ಸರಿಯಾಗಿ ಇಂಗ್ಲಿಷು ಬಾರದಿದ್ದರೂ ಗೌರವವೆಂದು ತಮ್ಮ ವರದಿ ಮುರುಕು ಇಂಗ್ಲಿಷಿನಲ್ಲಿ ಅರ್ಥಕ್ಕೆ ಅನರ್ಥವಾಗಿ ಬರೆದು ತಮಗೆ ಸರಿಯಾಗಿ ಬರುತ್ತಿದ್ದ ಕನ್ನಡದಲ್ಲಿ ಬರೆಯಲು ನಾಚಿಕೆ ತೋರಿಸುವದು ನಮ್ಮ ಅನುಭವವಲ್ಲದ. ಬಹಳ ಶಿಕ್ಷಕರಿಗೆ ಇಂಗ್ಲಿಷು ಬಾರದು. ಹಳ್ಳಿಯಲ್ಲಿರುವ ಶಿಕ್ಷಕರ ಪ್ರಮಾಣವೇ ದೊಡ್ಡದು ಅಲ್ಲಿ ಇಂಗ್ಲಿಷ ಬಲ್ಲವರೂ ಸಿಕ್ಕುವದಿಲ್ಲ. ಇಂಥ ಸ್ಥಿತಿಯಲ್ಲಿ ವರದಿ ಪುಸ್ತಕದ ಮೇಲೆ ಸುನಬುದಕೆ ಬರೆದು ವ್ಯಕ್ತಿದ್ವೇಷವನ್ನು ತೀರಿಸುವವರಿದ್ದರೂ ಇರಬಹುದು. ಇಂಗ್ಲಿಷಿನಿಂದ ಬರೆದರೆ ಶಿಕ್ಷಕರಿಗೇನು ತಿಳಿಯಬೇಕು? ವರದಿ ಯಾರ ಬಗ್ಗೆ? ಕನ್ನಡ ಬರುತ್ತಿದ್ದ ಡೆಪ್ಯುಟಿಗಳು ಸಹ ಇಂಗ್ಲಿಷಿನಿಂದ ಬರೆಯುವದೇಕೆ? ಶಿಕ್ಷಕರ ನಿರ್ಣಯವು ಯುಕ್ತವಾಗಿದೆ. ಕನ್ನಡದಿಂದ ವರದಿ ಬರೆಯಲಪೇಕ್ಷಿಸದವರ ಕೈಯಲ್ಲಿ ಪುಸ್ತಕವನ್ನೇ ಕೊಡದಂತೆ ಶಿಕ್ಷಕರು ನಿರ್ಧರಿಸಿದರೆ ತಪ್ಪೇನು? ಸರಕಾರ ದಾರಿಗೆ ಬಾರದೆ ಇರಲಿಕ್ಕಿಲ್ಲ.

—ಕಾನಡಾ ಘರಿಣ

ದಕ್ಷಿಣ ಕನ್ನಡದಲ್ಲಿ ಬೇಸಾಯ

(ಶ್ರೀ– ಮುಕುಂದರಾವ. ಬಿ. ಎ.)

ದಕ್ಷಿಣ ಕನ್ನಡವು ಫಲವತ್ತಾದ ಭೂಭಾಗವೆಂದು ಹಿಂದಿನಿಂದಲೂ ಪ್ರಖ್ಯಾತಿ ಹೊಂದಿದೆ. ಹೈದರಾ, ಟಿಪ್ಪು, ಇವರ ದಂಡು ಆಕ್ರಮಿಸಿ ಜಿಲ್ಲೆಯಲ್ಲಿ ಅರಾಜಕತ್ವವು ಬೆಳೆದಾಗ ಮಾತ್ರ ಇಲ್ಲಿಯ ಜನರು ಅತಿ ನಿಕೃಷ್ಟ ಸ್ಥಿತಿಯನ್ನು ಮುಟ್ಟಿದ್ದರೆಂದು ಮನ್ರೋ ಸಾಹೇಬರು ಬರೆದಿದ್ದರು. ಈಗಲಾದರೂ ಈ ಜಿಲ್ಲೆಯಿಂದ ಬೇರೆ ಬಂದರುಗಳಿಗೆ ಅಕ್ಕಿ, ಬೆಲ್ಲ ಕೊಬ್ಬರಿ, ಅಡಕೆ, ಮೆಣಸು, ಮತ್ತು ಕಾಡು ಉತ್ಪತ್ತಿಯು ಬಹಳವಾಗಿ 'ರಫ್ತು' ಆಗುತ್ತದೆ. ಆದರೂ ಇಲ್ಲಿನ ಜನರು ಬಹಳ ಐಶ್ವರ್ಯವಂತರಲ್ಲ. ಒಂದು ಕಾಲ ಮಳೆಯು ಕಡಮೆಯಾದರೂ ಹೆದರದೆ ಹೆಚ್ಚು ಕ್ರಯ ಕೊಟ್ಟು ದವಸಧಾನ್ಯಗಳನ್ನು ಕೊಂಡುಕೊಳ್ಳುವಷ್ಟು ಕೂಡಿಟ್ಟ ಶಕ್ತಿಯು ನಮ್ಮ ಜಿಲ್ಲೆಯಲ್ಲಿಲ್ಲ. ಅಲ್ಲಲ್ಲಿ ಕೆಲವು ಲಕ್ಷಾಧೀಶರು ಇದ್ದಾರೆ ಆದರೆ ಅವರು ಬಡತನದ ಅನಂತ ಸಮುದ್ರದಲ್ಲಿ ತೇಲುವ ಕೆಲವು ದೋಣಿಗಳಂತೆ

ಇದಕ್ಕೆ ಕಾರಣವು ಒಂದನೇದಾಗಿ ಈ ಜಿಲ್ಲೆಯಲ್ಲಿ ಕೈಗಾರಿಕೆಗಳ ಮಹತ್ವವಿಲ್ಲ. ಮತ್ತು ಈ ಭೂಮಿಯಿಂದ ಪಡೆಯಬೇಕಾದಷ್ಟು ಫಲವನ್ನು ನಾವು ಹೊಂದುವುದಿಲ್ಲ. ಈ ದಿವಸ ಬೇಸಾಯದ ಪ್ರಶ್ನೆಯನ್ನೇ ಚರ್ಚಿಸ ಬೇಕಾಗಿದೆ.

ಇಲ್ಲಿನ ಬೇಸಾಯಕ್ಕೆ ಆತಂಕಗಳು ನಾಲ್ಕು ವಿಧವಾಗಿವೆ ಮಳೆಗಾಲದಲ್ಲಿ ಜಲಪ್ರಳಯದಂತೆ ನೆರೆ ನೀರು ಹೊಂದರೂ ಬೇಸಗೆಯಲ್ಲಿ ನೀರಿನ ಅಭಾವ ಮತ್ತು ಸಕಾಲದಲ್ಲಿ ಮಳೆಬಾರದಿರುವದು ಮೊದಲನೆಯದು ಪುಷ್ಟಿಯಾದ ದನಕರುಗಳು ಇಲ್ಲದೇ ಬೇಸಾಯಕ್ಕೆ ಬೇಕಾಗುವ ಗೊಬ್ಬರವು ಎರಡನೇಯದು. ಮನಸ್ಸು ಕೊಟ್ಟು ಕೃಷಿಮಾಡುವವನಿಗೆ ತನ್ನ ಶ್ರಮದ ಪೂರ್ಣಫಲ ಸಿಕ್ಕುವದಿಲ್ಲ ನಂಬಿಕೆ ಇರುವದು ಮೂರನೇಯದು. ಕೃಷಿಶಾಸ್ತ್ರದ ಜ್ಞಾನವು ಮತ್ತು ಸಹಕಾರವು ಜನರಲ್ಲಿ ಬೆಳೆದಿದ್ದದ್ದು ನಾಲ್ಕನೇಯದು.

ನೇತ್ರಾವತಿ ಮುಂತಾದ ನಮ್ಮ ಜಿಲ್ಲೆಯ ನದಿಗಳ ನೆರೆನೀರನ್ನು ಕೆಂಪು ಇರುವ, ಇಲ್ಲವೆ ಪಶ್ಚಿಮ ಘಟ್ಟಗಳಲ್ಲಿ ಜನು ಕಣಿವೆಗಳನ್ನು ಕಟ್ಟಿ ಮಳೆಗಾಲದಲ್ಲಿ ಹರಿದು ಬರುವ ನೀರನ್ನು ಕಟ್ಟಿ ಇಡುವ ಉಪಾಯಗಳನ್ನು ಕಂಡು ಹಿಡಿದರೆ ನಮ್ಮ ಜಿಲ್ಲೆಗೆ ಕಾಮಧೇನು ಬಂದಂತಾಗುವದು. ಈಗಿನ ದಿವಸಗಳಲ್ಲಿ ವರ್ಷಕ್ಕೆ ಎಂಟು ತಿಂಗಳು ಬರಿದಾಗಿರುವ ಗದ್ದೆಗಳಲ್ಲಿ ಎರಡು ಮೂರು ಬೆಳೆಗಳನ್ನು ಬೆಳೆಸಬಹುದು. ಕೂಡಿಸಿಟ್ಟ ನೀರಿನಿಂದ ಕೃತ್ರಿಮ ಜಲಗಳನ್ನು ಉಂಟುಮಾಡಿ ವಿದ್ಯುಚ್ಛಕ್ತಿಯನ್ನು ಸಹ ಹೊಂದುವ ಅನುಕೂಲವಾಗುತ್ತದೆ. ಹೀಗಾದರೆ ಕಲ್ಲಿದ್ದಲು ಪೆಟ್ರೋಲಿಯಮ್ ಮುಂತಾದ ಶಕ್ತಿ ಜನಕಗಳು ಇಲ್ಲದಿದ್ದರೂ ನಮ್ಮ ಜಿಲ್ಲೆಯಲ್ಲಿ ಅನೇಕ ಕೈಗಾರಿಕೆಗಳನ್ನು ಸ್ಥಾಪಿಸಬಹುದು.

ಹಳ್ಳಿಗಳನ್ನು ಸಂದರ್ಶಿಸಿದವರಿಗೆ ಇಲ್ಲಿನ ದನಕರುಗಳ ಹೀನಸ್ಥಿತಿಯು ಕಂಡು ಬಾರದಿರದು. ಬಲವತ್ತಾದ ಒಳ್ಳೇ ಜಾತಿಯ ಎಡೆ ನಷ್ಟ ತ್ರಾಣವಿಲ್ಲದ ಅನೇಕ ದನಗಳನ್ನು ಹಳ್ಳಿಗಳ ಹಿಂಡಿನಲ್ಲಿ ಕಾಣಬಹುದು ನಮ್ಮ ಊರಿನ ಎತ್ತುಗಳಿಂದ ಮೊದಲನೇ ಸಲ ನೆಲವನ್ನು ಉಳಲಿಕ್ಕೆ ಸಾಧ್ಯವಿಲ್ಲದ ಕಾರಣ ಪ್ರತಿವರ್ಷವೂ ಗಟ್ಟಗಳಿಂದ ಕೋಣಗಳನ್ನು ಕೊಂಡು ಕೊಳ್ಳಬೇಕಾಗುತ್ತದೆ. ಹಳ್ಳಿಗಳಲ್ಲಿ ಸಹ ಹಾಲಿನ ಕ್ರಯವು ದಾರು ನೀರಿನ ಕ್ರಯವೆಂದರೆ ಯೋಗ್ಯವಾದೀತು– ಬಡವರ ಕೈಮೀರಿ ಹೋಗಿದ್ದುದರಿಂದ ಲಕ್ಷಾವಧಿ ಜನರು, ಎಳೆಯ ಕೂಸುಗಳು ಕೂಡ, ಹಾಲು ತುಪ್ಪವಿಲ್ಲದೆ ಕಾಲ ಹರಣ ಮಾಡುತ್ತಾರೆ ಈ ಜಿಲ್ಲೆಯ ಆರ್ಥಿಕ ಪ್ರಶ್ನೆ ಜನತ್ಯಾಗಿ ಪ್ರತಿಯೊಂದು ಹಳ್ಳಿಯಲ್ಲಿ ಹುಲ್ಲುಗಾವಲುಗಳೂ ಒಳ್ಳೇ ಜಾತಿಯ ದನಗಳೂ ಇರುವಂತೆ ಮಾಡುವದು ಅತೀ ಅಗತ್ಯ

ಜಿ ರೆ ಯಾವ ತರಹದ ಇಲ್ಲಿಯ ಉತ್ಪತ್ತಿಯು. ಹೆಚ್ಚುವಂತೆ ಮಾಡಿದರೂ ಈ ಸಂಪತ್ತಿನಲ್ಲಿ ನೇಗಿಲಿಗನಿಗೆ ನ್ಯಾಯವಾದ ಭಾಗವು ಸಿಕ್ಕದ ಸುಭವವಿಲ್ಲವೆನ್ನದರೆ ನಮ್ಮ ಶ್ರಮವೆಲ್ಲ ನಿಷ್ಫಲವಾಗುವದು. ಈಗ ವಾಡಿಕೆಯಲ್ಲಿದ್ದ ಶಾಸ್ತ್ರಗೇಣಿಯ ಪ್ರಕಾರ ಬೇಸಾಯಗಾರನು ಆಯಾ ವರ್ಷಕ್ಕೆ ಗದ್ದೆಯನ್ನು ಕಡವು, ಸೇಂದಿಗುತ್ತೆಗಳಂತೆ 'ಕಂಟ್ರಾಕ್ಟಿಗೆ' ತೆಗೆದು ಕೊಳ್ಳುವವನಾಗಿದ್ದಾನೆ. ಈ ವರ್ಷ ನಾನು ಕೆಲವು ಗದ್ದೆಗಳನ್ನು ವಹಿಸಿ ಕೊಂಡರೆ ಹದಿನೆರಡು ತಿಂಗಳೊಳಗೆ ಆದಷ್ಟು ಕಮ್ಮಿ ಖರ್ಚಿನಿಂದ, ಅತ್ಯಲ್ಪ ಕಾಲದಿಂದ ಸಾಧ್ಯವಾದ ಬೆಳೆಯನ್ನು ಹೊಂದುವುದೇ ನನ್ನ ಉದ್ದೇಶ್ಯವಾಗುತ್ತದೆ. ಹೊರತು ಹೆಚ್ಚು ವರ್ಷಗಳ ವರೆಗೆ ಬಾಳುವಂಥ ಸುಧಾರಣೆ ನನ್ನ "ನನ್ನ" ಸ್ಥಳದಲ್ಲಿ ಮಾಡಲಿಕ್ಕೆ ನನಗೆ ಪ್ರೇರಣೆಯಿಲ್ಲ; ನಾನು ಮಾಡಿದ ಸ್ಥಳವು ಈಗಿನ ಕ್ರಮದ ಪ್ರಕಾರ "ನನ್ನದಲ್ಲ" ನಾಳೆಯು ಬೇರೆ ಒಕ್ಕಲಿಗನಿಗೆ ವಹಿಸಿ ಕೊಡಬಹುದು ಹೀಗೆ ಧನಿಯು ಭೂಮಿಯಿಂದ ಆದಷ್ಟು ಸುಲಿದುಕೊಳ್ಳುವುದೇ ಒಕ್ಕಲಿಗನ ಗೋಚರ, ಒಕ್ಕಲಿಗನಿಂದ ಸಾಧ್ಯವಾದಷ್ಟು ಸೆಳೆದು ಕೊಳ್ಳುವದೇ ಧನಿಯ ಆಲೋಚನೆಯಾದರೆ ಭೂಮಿಯು ಒಳ್ಳಿತಾಗುವುದು ಹೇಗೆ? ಇಂಥ ಹಾನಿಕಾರಕವಾದ ಈಗಿನ ಪದ್ಧತಿಯನ್ನು ತೆಗೆದು ಧನಿ ಒಕ್ಕಲುಮಕ್ಕಳಿವರ ಇಬ್ಬರಿಗೂ ನ್ಯಾಯವಾಗುವಂತೆ ಮಾಡಿ ನೇಗಿಲಿಗನಿಗೆ ಕೊಡುವ ಹಿತವು ಬೇಕು

...ಗೆ ಸ್ವಾಯತ್ತಸ್ವಾತಂತ್ರ್ಯವಾಗಿ ಬರಲು ಸಹ್ಯವಿರದಿರೂ ಹೆಚ್ಚು ಹೆಚ್ಚು ಜೀವನ್ನು ಸಹಿಸುತ್ತಿರುವದು ಅದೆ ದುಷ್ಟವಾಗ ಅವರಿಗೆ ಕೃಷಿ

ಸರ ಪ್ರತಾಪದಿಂದ ಸ್ವರಾಜ್ಯದ ಅವಶ್ಯಕತೆಯು ವಿಶೇಷವಾಗಿ ತೋರಹತ್ತಿದೆ. ವ್ಯಕ್ತಿ ಮಾತ್ರಕ್ಕೆ ಯಾಜನಾಂಗಕ್ಕೆ ... ಹೇಳ್ವಾದಂತೆ ಅವುಗಳ ನಿವಾರಕ ಉಪಾಯವವು. ಕಂಟಕಗಳ ಅನುರೋಧದಿಂದ ಅವುಗಳಿಗೆ ...ರದ ಉಪಾಯಗಳನ್ನು ಯೋಜಿಸುವದೇ ಮುಖಂಡರ ...ದಲ್ಲಿ ತಪ್ಪುವದೇ ಅಧಃಪಾತ ವ್ಯಕ್ತಿಗೆ ಅಧವಾರಾಷ್ಟ್ರ ...ಕೂಲ ಪ್ರಾಪ್ತವಾಗಿರಲು, ಸ್ವಾರ್ಥಪೂರ್ವಕ ಆಪತ್ತಿ ...ಗಿ ಪ್ರಯತ್ನಿಸುವದು ಗೃಹಸ್ಥನ ಲಕ್ಷಣ ಕೇವಲ ...ಗ ಪೂರ್ವಕ ದೇಶಹಿತಕ್ಕಾಗಿ ಪ್ರಯತ್ನಿಸುವದು, ...ಲಕ್ಷಣ ಈಗೀಗ ಸ್ವಾರ್ಥತ್ಯಾಗದ ಪ್ರಸ್ಥವು ಬೆಳೆ...ದ, ಅನೇಕರು ಸ್ವಾರ್ಥತ್ಯಾಗ ಮಾಡಿದ್ದರೂ ಅದರಲ್ಲಿ ...ಯು ಸ್ವಾರ್ಥವಿದೆ. ಕೆಲವರು ಪ್ರಾಮಾಣಿಕ ತನ...ರ್ಥತ್ಯಾಗ ಮಾಡಿದವರೂ, ಕೆಲವರು ಕಪಟತನದಿಂದ ...ಗದ ಸೋಗು ಹಾಕಿದವರೂ ಉಂಟು ಪ್ರಪಂಚಕನಿ...ರ್ಥತ್ಯಾಗವನ್ನು ನಿರಂತರ ಮಾಡುವದು ಅಶಕ್ಯವು ...ವರಿಗೂ ಮಾಡಬೇಕಾದ ಮಹತ್ಕಾರ್ಯದಲ್ಲಿ ಶಕ್ಯಾ...ವಿಚಾರವನ್ನು ಅವಶ್ಯವಾಗಿ ಮಾಡ ಬೇಕಾದುದು. ಈ ...ಪೂರ್ಣ ವಿಚಾರ ಮಾಡದೇ ಒಮ್ಮೆಲೇ ಕಾರ್ಯಪ್ರವೃ...ಕೊಡಬೇ ಸರಾಸರಾಗುವ ಗುಣಪ್ರಧಾನದಿಂದಲೇ ...ರಿಗೆ ಅಂಥ ಹೂರರೆಂದು ಬಿರಿದು ಪ್ರಾಪ್ತವಾದದ್ದು! ...ಕ್ಕಾಗಿ ಮಾಡಬೇಕಾದ ಕಾರ್ಯವು ಸುಲಭವಾಗಿದ್ದು ...ರ್ಯ ಪ್ರವೃತ್ತನಾದವನಿಗೆ ಅನೇಕ ಕಷ್ಟಗಳು ಒದಗು...ಮಾ ಪ್ರಯತ್ನ ಪೂರ್ವಕವಾಗಿ ಅವನಿಗೆ ಕಷ್ಟಗಳು ಒದ...ವವು ತನ್ನ ಕಾರ್ಯದಲ್ಲಿ ವಿಘ್ನವನ್ನು ಉಂಟು ಮಾ... ಪಕ್ಷಿಯ ಮರ್ಮವನ್ನರಿತು ತತ್ಪ್ರತಿಕಾರ ಪೂರ್ವ...ದಿಂದ ಕರ್ತವ್ಯ ಮಾಡುವವನೇ ನಿಜವಾದ ರಾಷ್ಟ್ರಮಿ... ಪ್ರತಿಪಕ್ಷಿಯು ಶಸ್ತ್ರಧಾರಿಯಾಗಿ ರಣಕ್ಕೆ ಸಿದ್ಧನಾಗಿ...ನು ನಿಃಶಸ್ತ್ರ ನಾಗಿ ಪ್ರತಿಕಾರ ಮಾಡುವದು ಅಸಂಭವನೀ...ನನು ಕಪಟವನ್ನಾಚರಿಸಲು ತಾನೂ ಅದೇ ಪ್ರಕಾರ ...ದಲೇ ಪ್ರತಿಕಾರ ಮಾಡುವದು ಯೋಗ್ಯವು ಇದು ಅಧ...ಲಾರದು. ಭಾರತೀಯಯುದ್ಧವೇ ಇದರ ಉತ್ಕೃಷ್ಟ ಉ...ಯು ನಮ್ಮ ಸ್ವಾತಂತ್ರ್ಯದ ಹ್ರಾಸವೇ ನಮ್ಮ ದುರ್ದಶೆ...ಣವಾಗಿದೆ. ಇದನ್ನು ಸಕಲರೂ ಅರಿತಿದ್ದರೂ, ವಿಚಾರ, ಬುದ್ಧಿ ಸಾಮರ್ಥ್ಯ, ಅನುಕೂಲ ಸಾಧನಾದಿಗಳು ಇದ್ದರೂ, ಕಾರ್ಯಪ್ರವೃತ್ತರಾಗರು ಇದಕ್ಕೆ ಅಧೈರ್ಯವೇ ಮುಖ್ಯ ಕಾರಣವೆಂದು ಹೇಳಬಹುದು. ಈ ಅಧೈರ್ಯವು ನಮ್ಮ ಭಾರತೀಯರಿಗೆ ಹುಟ್ಟುಗುಣವಲ್ಲ. ಪ್ರಯತ್ನಪೂರ್ವಕವಾಗಿ ಹುಟ್ಟಿಸಲ್ಪಟ್ಟದ್ದು. ಹಾಗಾದರೆ ಇದಕ್ಕೆ ಪ್ರತಿಕಾರೋಪಾಯಗಳು ಇಲ್ಲವೇ! ಇವೆ. ಮೋಕ್ಷವಿದೆ. ಸ್ವಾತಂತ್ರ್ಯವಿದೆ! ಸ್ವಾತಂತ್ರ್ಯವೆಂಬದು ಈ ಜಗತ್ತಿನಲ್ಲಿಯೇ ಇಲ್ಲದಿದ್ದರೆ ಅದರ ಅಸ್ತಿತ್ವವೇ ಇಲ್ಲದಿರಲು ನಮಗೂ ಇಲ್ಲ. ಹಾಗಾದರೆ ನಾವು ಯೋಚಿಸುವ ಕಾರಣ ಉಳಿಯದು ಒಂದಾನೊಂದು ಕಾಲ ನಾವು ಸ್ವಾತಂತ್ರ್ಯವನ್ನು ಅನುಭವಿಸಿದ್ದೇವೆ. ಮೋಕ್ಷವೆಂಬ ಅಗ್ರಸ್ಥಾನಕ್ಕೆ ನಾವು ಹೋಗಿದ್ದೇವೆ. ಆದರೆ ಕಾಲವಶದಿಂದ ಈಗಿನ ಪರತಂತ್ರವು ಪ್ರಾಪ್ತವಾಗಿರಲು ಹೇಡಿಯಂತೆ ತಲೆ ತಗ್ಗಿಸುವದೇಕೆ? ಮರಳಿ ನಮಗೆ ನಮ್ಮ ಸ್ವಾತಂತ್ರ್ಯವು ದೊರಕದೇ ದೊರಕದೇನು? ಅವಶ್ಯವಾಗಿ ದೊರಕುವದು. ಆದರೆ ಪೂರ್ವಾಪರಕ್ರಮವನ್ನು ಮಾಡಿ ಕಾರ್ಯ ಮಾಡುವದು ಅತ್ಯವಶ್ಯವು. ಹಾಗಾದರೆ ಅದೆಂತಹ ಕಾರ್ಯ? ಹೇಗೆ ಮಾಡುವದು? ಎಂಬವನ್ನು ಕ್ರಮಶಃ ವಿಚಾರಿಸುವಾ

ಪುರವಣಿ ಬಾಗಲಕೋಟೆ-ಕನ್ನಡಿಗ ಕಾರ್ತಿಕ ವದ್ಯ ೧೨ ಶಕೆ ೧೮೪೭

ಜಾಹೀರ ನೋಟೀಸು

ನಾನು ಅಣ್ಣಂಣಾ ಮೇಲಪ್ಪಾ ಯಳ್ಳಿಗುತ್ತಿ ಸಾ। ಕಂದಗಲ್ಲ ಹಲ್ಲಿ ಮುಕ್ಕಾಂ ಬಾಗಲಕೋಟ ಈ ನೋಟೀಸಿನಿಂದಾ ಸಮಸ್ತ ಜನರಿಗೆ ತಿಳಿಸುವದೇನಂದರೆ—

ಬಾಗಲಕೋಟ ಶಹರದಲ್ಲಿ ಪಾಯೋನಿಯರ ಷ್ಟೋರ ಅಂತಾ ಹೆಸರಿನ ಸ್ಟೇಶನರಿ ವ ಅವಷಧ ವಗೈರೆ ಜೀನಸು ಮಾರುವ ಅಂಗಡಿ ಇದ್ದು ಅದರಲ್ಲಿ ನನ್ನದು ೮ ಆಣೆ ವ ವಿಠಲರಾವ ರಾಮಚಂದ್ರ ಗುಳವಾಡಿ ಇವರದು ೮ ಆಣೆ ಹಿಸಾ ಇದ್ದು, ಸದ್ರಿ ಅಂಗಡಿಯಲ್ಲಿ ನನ್ನ ಹಿಸಾ ಸದರ ಮೃತ ವಿಠ್ಠಲರಾವ ಗುಳವಾಡಿ ಇವರ ಹಿರೇಮಗನಾದ ಮಿ॥ ರಮೇಶರಾವ ಗುಳವಾಡಿ ಇವರಿಗೆ ೨೧।೧೧।೧೯೨೫ ಅಕ್ಟೋಬರದಲ್ಲಿ ಎರಡು ಸಾವಿರ ನಂದು ನೂರಾ ಮೂವತ್ತೊಂದು ರೂಪಾಯಿ ಏಳು ಆಣೆ ಎರಡು ಪೈ ಸಿಂಧಿನ ದಿವ್ಸ ಮಹಿಸಿ ಕೊಟ್ಟಿರುವ ಮೂಲಕಾ ಸದ್ರಿ ಷ್ಟೋರಿಗೆ ಮಿ॥ ರಮೇಶರಾವ ಗುಳವಾಡಿ ಇವರೇ ಪೂರ್ಣ ಮಾಲಕ ಇರುತ್ತಾರೆ. ಮತ್ತು ಸದ್ರಿ ಅಂಗಡಿಯ ಲೇಣೆ ದೇಣೇಕ್ಕೆ ಅವರೇ ಜವಾಬದಾರರಿರುತ್ತಾರೆ. ನಾನು ಯಾವ ತರದಿಂದಲೂ ಜವಾಬದಾರನಾಗುವದಿಲ್ಲಾ. ತಿಳಿಯುವದು

ತಾ॥ ೯-೧೧-೧೯೨೫

ಅಣ್ಣಣ್ಣಾ ಮೇಲಪ್ಪಾ ಯಳ್ಳಿಗುತ್ತಿ

ತಿಳಿಯಲಿ. ...

ಪರಾಙ್ಮುಖರಾಗುವದೆ ವಿಚಿತ್ರ, ಹೀಗೆ ಅನೇಕರ ಅಭಿಪ್ರಾಯ. ಇಂಥ ಅನೇಕರಿಂದ ಕೂಡಿದ ಈ ದೇಶದ ಹಿತಕ್ಕಾಗಿ ಬಿಡಿಬಿಡಿ ವ್ಯಕ್ತಿಗಳು ತಮ್ಮ ಆಯುಷ್ಯವನ್ನು ಸವಿಸಲು ಆಗುವದೇನು? ನಿಜವಾಗಿ ನೋಡಿದರೆ ಇಂಥ ಬಿಡಿಬಿಡಿ ಪ್ರಾಣಿಗಳಿಂದಲೇ ಕಾರ್ಯವಾಗಬೇಕಾದದ್ದು. ಆದರೆ ಅವರಿಗೆ ಅನೇಕ ಜನರು ಸಹಾಯಕರಾಗಿರುವದು ಅವಶ್ಯವು. ಸ್ವತಸ್ಸಿದ್ಧ್ಯವಾದ ಸಾಧನಗಳಲ್ಲಿ [illegible] ಸಾಧ್ಯದಲ್ಲಿ ಮತಭೇದವಿರದು ತಮ್ಮ ತಮ್ಮ ಮತದ ಪ್ರಕಾರ ಸಾಧ್ಯವನ್ನು ಸಾಧಿಸಲು ಅನೇಕ ಪ್ರಯತ್ನಿತ್ಯ ದಲ್ಲಿ ಅಸಂಭವನೀಯವಾಗಿ ತೋರಲು, ಮತವೈಚಿತ್ರ್ಯದಿಂದ ವರ್ತನೆ ತಮ್ಮ ಪಥವನ್ನು ಬಿಡರು. ತಮ್ಮ ಮತವು ಅಧಿಕಶ್ರೇಷ್ಠವಾದದ್ದೆಂದು ಅತ್ಯ ವಿಶ್ವಾಸವಿದ್ದ ಪಕ್ಷದಲ್ಲಿ ತಾವು ಕಾರ್ಯವನ್ನು ಫಲಿತ ಮಾಡಿ ತೋರಿಸಿದಲ್ಲಿ ಭಿನ್ನಾಭಿಪ್ರಾಯಗಳು ಅಡಗುವವು. ಆದರೆ ಕಾರ್ಯ ಮಾಡುವ ಸಾಮರ್ಥ್ಯದ ಅಭಾವದ ಮೂಲಕ ಕೇವಲ ತರ್ಕ ವಿತರ್ಕದಿಂದಲೇ ಉತ್ತರ ಕುಮಾರನ ಸೋಗು ಹಾಕಿಕೊಳ್ಳಲು ಸಹಾಯಕ್ಕೆ ಅರ್ಜುನನೆಲ್ಲಿದ್ದಾನೆ? ಹಾಗಿರುತಿಯು ಕರಿಣಾವಿರುವದೇನೋ ... ಆದರೆ ಕರ್ತವ್ಯ ಮಾಡುವದಕ್ಕೆ ಯಾವ ಆತಂಕ ಪ್ರಾಪ್ತವಾಗುವದು ... . ನಮ್ಮ ...

ಶಿಕ್ಷಕರೂ ಕನ್ನಡವೂ

ಕನ್ನಡ ಪ್ರಾಥಮಿಕ ಶಾಲೆಗಳಿಗೆ ಬಂದ ಅಧಿಕಾರಿಗಳು ಕನ್ನಡ ಭಾಷೆಯಲ್ಲೇ ಶರಾ ಬರೆಯಬೇಕೆಂದು ಶಿಕ್ಷಕರ ಪಂಕ್ತಿ ನಲ್ಲಿ ನಿರ್ಣಯವಾಗಿದೆ. ಕನ್ನಡ ಬಾರದವರು ಇಂಗ್ಲಿಷಿನಿಂದ ಶರಾ ಬರೆಯಲು ನಮ್ಮ ಆಕ್ಷೇಪವಿಲ್ಲ. ಆದರೆ ಎಷ್ಟೋ ಅಧಿಕಾರಿಗಳು ಶಾಲೆಯ ತಪಾಸಣೆಗೆ ಬಂದಾಗ ಕನ್ನಡವು ಬರುತ್ತಿದ್ದರೂ ಇಂಗ್ಲಿಷಿನಲ್ಲಿ ಶರಾ ಬರೆದು ಹೋಗುತ್ತಿರುವರು. ಇನ್‌ಸ್ಪೆಕ್ಟರ್ ರಿಪೋರ್ಟಿನಂತಹ ಶಿಕ್ಷಕರಿಗೆ ಮಹತ್ವವಾದ ವಿಷಯವನ್ನು ಇಂಗ್ಲಿಷಿನಲ್ಲಿ ಬರೆದು ಶಿಕ್ಷಕರಿಗೆ ಪತ್ರ ಹತ್ತಿಸುತ್ತೆ ಮಾಡುವದು ಶಿಕ್ಷಣಾಧಿಕಾರಿಗಳ ಘನ ಪಾಂಡಿತ್ಯವಲ್ಲವೆ! ಕೆಲವರು ಸರಿಯಾಗಿ ಇಂಗ್ಲಿಷು ಬಾರದಿದ್ದರೂ ಗೌರವಕ್ಕೆಂದು ತಪ್ಪು ಪದಗಳು ಮುರುಕು ಇಂಗ್ಲಿಷಿನಲ್ಲಿ ಅರ್ಥಕ್ಕೆ ಅನರ್ಥವಾಗಿ ಶರಾಬರೆದು ತಮಗೆ ಸರಿಯಾಗಿ ಬರುತ್ತಿದ್ದ ಕನ್ನಡದಲ್ಲಿ ಬರೆಯದೆ ಪಾಂಡಿತ್ಯ ತೋರಿಸುವದು ನಮ್ಮ ಅನುಭವದಲ್ಲಿದೆ. ಪ್ರಾ. ಶಿಕ್ಷಕರಿಗೆ ಇಂಗ್ಲಿಷು ಬಾರದು. ಹಳ್ಳಿಯಲ್ಲಿರ ವ ಶಿಕ್ಷಕರ ಪ್ರಮಾಣವೇ ದೊಡ್ಡದು ಅಲ್ಲಿ ಇಂಗ್ಲಿಷ ಬಲ್ಲವರೂ ಸಿಕ್ಕುವದಿಲ್ಲ ಇಂಥ ಸ್ಥಿತಿಯಲ್ಲಿ ಶರಾ ಪುಸ್ತಕದ ಮೇಲೆ ಗುಪಚುಪಕೆ ಬರೆದು ವ್ಯಕ್ತಿದ್ವೇಷವನ್ನು ತೀರಿಸುವವರಿದ್ದರೂ ಇರಬಹುದು. ಇಂಗ್ಲಿಷಿನಿಂದ ಬರೆದರೆ ಶಿಕ್ಷಕರಿಗೇನು ತಿಳಿಯಬೇಕು? ಶರಾವು ಯಾರಿಗಾಗಿ? ಕನ್ನಡ ಬರುತ್ತಿದ್ದ ಡೆಪ್ಯುಟಿಗಳು ಸಹ ಇಂಗ್ಲಿಷಿನಿಂದ ಬರೆಯುವದೇಕೆ? ಶಿಕ್ಷಕರ ನಿರ್ಣಯವು ಯುಕ್ತವಾಗಿದೆ. ಕನ್ನಡದಿಂದ ಶರಾ ಬರೆಯಬೇಕೆನ್ನುವದವರ ಕೈಯಲ್ಲಿ ಪುಸ್ತಕವನ್ನೇ ಕೊಡದಂತೆ ಶಿಕ್ಷಕರು ನಿರ್ಧರಿಸಿದರೆ ತಪಾಸಕರು ದಾರಿಗೆ ಬಾರದೆ ಇರಲಿಕ್ಕಿಲ್ಲ.

—ಕಾವಲಾ ಧುರೀಣ

ದಕ್ಷಿಣ ಕನ್ನಡದಲ್ಲಿ ಬೇಸಾಯ

(ಲೇ— ಮುಕುಂದರಾವ. ಬಿ. ಎ.)

ದಕ್ಷಿಣ ಕನ್ನಡವು ಫಲವತ್ತಾದ ಭೂಭಾಗವೆಂದು ಹಿಂದಿನಿಂದಲೂ ಪ್ರಖ್ಯಾತಿ ಹೊಂದಿದೆ. ಹೈದರ, ಟಿಪ್ಪು, ಇವರ ದಂಡು ಆಕ್ರಮಿಸಿ ಜಿಲ್ಲೆಯಲ್ಲಿ ಅರಾಜಕತ್ವವು ಬೆಳೆದಾಗ ಮಾತ್ರ ಇಲ್ಲಿಯ ಜನರು ಅತಿ ನಿಕೃಷ್ಟ ಸ್ಥಿತಿಯನ್ನು ಹೊಂದಿದ್ದರೆಂದು ಮನ್ರೋ ಸಾಹೇಬರು ಬರೆದಿದ್ದಾರೆ. ಈಗಲಾದರೂ ಈ ಜಿಲ್ಲೆಯಿಂದ ಬೇರೆ ಜಿಲ್ಲೆಗಳಿಗೆ ಅಕ್ಕಿ, ಬೆಲ್ಲ, ಕೊಬ್ಬರಿ, ಅಡಕೆ, ಮೆಣಸು, ಮತ್ತು ಕಾಳು ಉತ್ಪತ್ತಿಯು ಬಹಳವಾಗಿ 'ಹುಟ್ಟು' ಆಗುತ್ತದೆ. ಆದರೂ ಇಲ್ಲಿನ ಜನರು ಬಹಳ ಐಶ್ವರ್ಯವಂತರಲ್ಲ. ಒಂದು ಕಾಲ ಮಳೆಯು ಕಡಿಮೆಯಾದರೂ ಹೆದರದೆ ಹೆಚ್ಚು ಕ್ರಯ ಕೊಟ್ಟು ದವಸಧಾನ್ಯಗಳನ್ನು ಕೊಂಡುಕೊಳ್ಳುವಷ್ಟು ಕೂಡಿಟ್ಟ ಶಕ್ತಿಯು ನಮ್ಮ ಜಿಲ್ಲೆಯಲ್ಲಿ ಇಲ್ಲ. ಅಲ್ಲಲ್ಲಿ ಕೆಲವು ಲಕ್ಷಾಧೀಶರು ಇದ್ದಾರೆ ಆದರೆ ಅವರು ಬಡತನದ ಅನಂತ ಸಮುದ್ರದಲ್ಲಿ ತೇಲುವ ಕೆಲವು ದೋಣಿಗಳಂತೆ.

ಇದಕ್ಕೆ ಕಾರಣವು ಒಂದನೇದಾಗಿ ಈ ಜಿಲ್ಲೆಯಲ್ಲಿ ಕೈಗಾರಿಕೆಗಳ ಮಹತ್ವವಿಲ್ಲ. ಮತ್ತು ಈ ಭೂಮಿಯಿಂದ ಪಡೆಯಬೇಕಾದಷ್ಟು ಫಲವನ್ನು ನಾವು ಹೊಂದುವದಿಲ್ಲ. ಈ ದಿವಸ ಬರೇ ಬೇಸಾಯದ ಪ್ರಶ್ನೆಯನ್ನೇ ಚರ್ಚಿಸಬೇಕಾಗಿದೆ.

ಇಲ್ಲಿನ ಬೇಸಾಯಕ್ಕೆ ಆತಂಕಗಳು ನಾಲ್ಕು ವಿಧವಾಗಿವೆ ಮಳೆಗಾಲದಲ್ಲಿ ಜಪ್ಪರಿಯುವದರಿಂದ ಹರಿನೀರು ಹಾಳಾದರೂ ಬೇಸಗೆಯಲ್ಲಿ ನೀರಿನ ಅಭಾವ ಮತ್ತು ಸಕಾಲದಲ್ಲಿ ಮಳೆಬಾರದಿರುವದು ಮೊದಲನೇಯದು. ಪುಷ್ಟಿಯಾದ ದನಕರುಗಳು ಇಲ್ಲದೇ ಬೇಸಾಯಕ್ಕೆ ಆಗುವ ಅಡ್ಡಿಯು ಎರಡನೇಯದು. ಮನಸ್ಸು ಕೊಟ್ಟು ಕೃಷಿಮಾಡುವವನಿಗೆ ತನ್ನ ಶ್ರಮದ ಪೂರ್ಣಫಲ ಸಿಕ್ಕುವದರಲ್ಲಿ ಸಂಶಯವಿರುವದು ಮೂರನೇಯದು. ಕೃಷಿಶಾಸ್ತ್ರದ ಜ್ಞಾನವು ಮತ್ತು ಸಹಕಾರತ್ವ ಜನರಲ್ಲಿ ಹಬ್ಬಿರದಿದ್ದದ್ದು ನಾಲ್ಕನೇಯದು.

ನೇತ್ರಾವತಿ ಮುಂತಾದ ನಮ್ಮ ಜಿಲ್ಲೆಯ ನದಿಗಳ ನೆರೆ ನೀರನ್ನು ಹಿಡಿದಿಡುವ, ಇಲ್ಲವೆ ಪಶ್ಚಿಮ ಘಟ್ಟಗಳಲ್ಲಿ ಅನುಕೂಲಸ್ಥಳಗಳನ್ನು ಕಂಡು ಹಿಡಿದು ಮಳೆಗಾಲದಲ್ಲಿ ಹರಿದು ಬರುವ ನೀರನ್ನು ಕಟ್ಟಿ ಇಡುವ ಉಪಾಯಗಳನ್ನು ಕಂಡು ಹಿಡಿದರೆ ನಮ್ಮ ಜಿಲ್ಲೆಗೆ ಕಾಮಧೇನು ಬಂದಂತಾಗುವದು. ಈಗಿನ ದಿವಸಗಳಲ್ಲಿ ವರ್ಷಕ್ಕೆ ಎಂಟು ತಿಂಗಳು ಬರಿದಾಗಿರುವ ಗದ್ದೆಗಳಲ್ಲಿ ಎರಡು ಮೂರು ಬೆಳೆಗಳನ್ನು ಬೆಳೆಸಬಹುದು. ಶೇಖರಿಸಿಟ್ಟ ನೀರಿನಿಂದ ಕೃತ್ರಿಮ ಜಲಪಾತಗಳನ್ನು ಉಂಟುಮಾಡಿ ವಿದ್ಯುಚ್ಛಕ್ತಿಯನ್ನು ಸಹ ಹೊಂದುವ ಅನುಕೂಲವಾಗುತ್ತದೆ. ಹೀಗಾದರೆ ಕಲ್ಲಿದ್ದಲು ಪೆಟ್ರೋಲಿಯಮ್ ಮುಂತಾದ ಶಕ್ತಿ ಜನಕಗಳು ಇಲ್ಲದಿದ್ದರೂ ನಮ್ಮ ಜಿಲ್ಲೆಯಲ್ಲಿ ಅನೇಕ ಕೈಗಾರಿಕೆಗಳನ್ನು ಸ್ಥಾಪಿಸಬಹುದು.

ಹಳ್ಳಿಗಳನ್ನು ಸಂದರ್ಶಿಸಿದವರಿಗೆ ಇಲ್ಲಿನ ದನಕರುಗಳ ಹೀನಸ್ಥಿತಿಯು ಕಂಡು ಬಾರದಿರದು. ಬಲಿಷ್ಠವಾದ ಒಳ್ಳೇ ಜಾತಿಯ ಅಥವಾ ಪುಷ್ಟಿಯುಳ್ಳ ದನಗಳು ಕಾಣುವದಿಲ್ಲ. ನಷ್ಟ ತ್ರಾಣವಿಲ್ಲದ ಅನೇಕ ದನಗಳನ್ನು ಹಳ್ಳಿಗಳ ಹಿಂಡಿನಲ್ಲಿ ಕಾಣಬಹುದು. ನಮ್ಮ ಊರಿನ ಎತ್ತುಗಳಿಂದ ಮೊದಲನೇ ಸಲ ನೆಲವನ್ನು ಉಳಲಿಕ್ಕೆ ಸಾಧ್ಯವಿಲ್ಲದ ಕಾರಣ ಪ್ರತಿವರ್ಷವೂ ಘಟ್ಟಗಳಿಂದ ಕೋಣಗಳನ್ನು ಕೊಂಡು ಕೊಳ್ಳಬೇಕಾಗುತ್ತದೆ. ಹಳ್ಳಿಗಳಲ್ಲಿ ಹಸಿ ಹಾಲಿನ ಕ್ರಯವು ದಾಸರ ನೀರಿನ ಕ್ರಯವೆಂದರೆ ಯೋಗ್ಯವಾದೀತು. ಬಡವರ ಕೈ ಮೀರಿ ಹೋಗಿದ್ದದರಿಂದ ಲಕ್ಷಾವಧಿ ಜನರು, ಎಳೆಯ ಕೂಸುಗಳು ಕೂಡ, ಹಾಲು ತುಪ್ಪವಿಲ್ಲದೆ ಕಾಲ ಹರಣ ಮಾಡುತ್ತಾರೆ. ಈ ಜಿಲ್ಲೆಯ ಆರ್ಥಿಕ ಪ್ರಶ್ನೆ ಜನರಿಗಾಗಿ ಪ್ರತಿಯೊಂದು ಹಳ್ಳಿಯಲ್ಲಿ ಹುಲ್ಲುಗಾವಲುಗಳೂ ಒಳ್ಳೇ ಜಾತಿಯ ಹಸುಗಳೂ ಇರುವಂತೆ ಮಾಡುವದು ಅತೀ ಅಗತ್ಯ.

ಬೇರೆ ಯಾವ ಕಾರಣದಿಂದ ಇಲ್ಲಿನ ಉತ್ಪತ್ತಿಯು ಹೆಚ್ಚುವಂತೆ ಮಾಡಿದರೂ ಆ ಸಂಪತ್ತಿನಲ್ಲಿ ಬೇಸಾಯಗಾರರಿಗೆ ನ್ಯಾಯವಾದ ಭಾಗವು ಸಿಕ್ಕುವ ಸಂಭವವಿಲ್ಲವಾದರೆ ನಮ್ಮ ಶ್ರಮವೆಲ್ಲ ನಿಷ್ಫಲವಾಗುವದು. ಈಗ ವಾಡಿಕೆಯಲ್ಲಿದ್ದ ಚಾಲ್ತಿಗೇಣಿಯ ಪ್ರಕಾರ ಬೇಸಾಯಗಾರರು ಆಯಾವರ್ಷಕ್ಕೆ ಗದ್ದೆಯನ್ನು ಕಡವು, ಸೇಂದಿಗುತ್ತಿಗಳಂತೆ 'ಕುಟ್ರುಕ್ಕಿಗೆ' ತೆಗೆದುಕೊಳ್ಳುವವನಾಗಿದ್ದಾನೆ. ಈ ವರ್ಷ ನಾನು ಕೆಲವು ಗದ್ದೆಗಳನ್ನು ವಹಿಸಿಕೊಂಡರೆ ಹದಿನೆರಡು ತಿಂಗಳೊಳಗೆ ಆದಷ್ಟು ಕಮ್ಮಿ ಖರ್ಚಿನಿಂದ, ಅತ್ಯಲ್ಪ ಶ್ರಮದಿಂದ ಸಾಧ್ಯವಾದ ಬೆಳೆಯನ್ನು ಹೊಂದುವುದೇ ನನ್ನ ಉದ್ದಿಶ್ಯವಾಗುವುದೇ ಹೊರತು ಹತ್ತು ವರ್ಷಗಳ ವರೆಗೆ ಬಾಳುವಂಥ ಸುಧಾರಣೆಗಳನ್ನು "ನನ್ನ" ಸ್ಥಳದಲ್ಲಿ ಮಾಡಲಿಕ್ಕೆ ನನಗೆ ಧೈರ್ಯವಿಲ್ಲ; ಮಾಡಿದರೆ ಸ್ವಲ್ಪ ಈಗಿನ ಕ್ರಮದ ಪ್ರಕಾರ "ನನ್ನದಲ್ಲ" ದನಿಯು ಬೇರೆ ಒಕ್ಕಲಿಗನಿಗೆ ವಹಿಸಿ ಕೊಡಬಹುದು ಹೀಗೆ ಧನಿಯು ಭೂಮಿಯಿಂದ ಆದಷ್ಟು ಸುಲಿದುಕೊಳ್ಳುವುದೇ ಒಕ್ಕಲಿಗನ ಯೋಚನೆ, ಒಕ್ಕಲಿಗನಿಂದ ಸಾಧ್ಯವಾದಷ್ಟು ಸೆಳೆದು ಕೊಳ್ಳುವುದೇ ಧನಿಯ ಆಶೆ ಹೀಗಾದರೆ ಭೂಮಿಯು ಒಳ್ಳಿತಾಗುವುದು ಹೇಗೆ? ಇಂಥ ಹಾನಿಕಾರಕವಾದ ಈಗಿನ ಪದ್ಧತಿಯನ್ನು ತೆಗೆದು ಧನಿ ಒಕ್ಕಲಿಗ ಇಬ್ಬರಿಗೂ ನ್ಯಾಯ ಸಿಗುವಂಥ ಕಾಯಿದೆಯನ್ನು ಸರಕಾರ ಮಾಡಬೇಕು.

...ಗೆ ಸ್ವ...ನವಾಗಿ ...ಡು ಪಕ್ಷ ದ...ಗೂ ...ಷ್ಟು ...ವನ್ನು ... ಎಂದು ಅರಿ ಮುಟ್ಟಿದಾಗ ಅವರಿಗೆ ಕೃಷಿ

ಪುರವಣಿ ಬಾಗಲಕೋಟೆ-ಕನ್ನಡಿಗ ಕಾರ್ತಿಕ ವದ್ಯ ೧೨ ಶಕೆ ೧೮೪೭

ಜಾಹೀರ ನೋಟೀಸು

ನಾನು ಅಪ್ಪಂಣಾ ಮೇಲಪ್ಪಾ ಯಳ್ಳಿಗುತ್ತಿ ಸಾ। ಕೆಂದಗಲ್ಲ ಪಲ್ಲಿ ಮುಕ್ಕಾಂ ಬಾಗಲಕೋಟ ಈ ನೋಟೀಸಿನಿಂದಾ ಸಮಸ್ತ ಜನರಿಗೆ ತಿಳಿಸುವದೇನಂದರೆ—

ಬಾಗಲಕೋಟ ಶಹರದಲ್ಲಿ ಪಾಯೋನಿಯರಾ ಷ್ಟೋರ ಅಂತಾ ಹಸರಿನ ಸ್ಟೇಶನರಿ ವ ಅವಷಧ ವಗೈರೆ ಜಿನಸು ಮಾರುವ ಅಂಗಡಿ ಇದ್ದು ಅದರಲ್ಲಿ ನನ್ನದು ೮ ಆಣೆ ವ ವಿಠಲರಾವ ರಾಮಚಂದ್ರ ಗುಳವಾಡಿ ಇವರದು ೮ ಆಣೆ ಹಿಸ್ಸಾ ಇದ್ದು, ಸದ್ರಿ ಅಂಗಡಿಯಲ್ಲಿ ನನ್ನ ಹಿಸ್ಸಾ ಸದರ ಮೃತ ವಿಠ್ಠಲರಾವ ಗುಳವಾಡಿ ಇವರ ಹಿರೇಮಗನಾದ ಮಿ॥ ರಮೇಶರಾವ ಗುಳವಾಡಿ ಇವರಿಗೆ ೨೧-೧೦-೨೫ ಅಕ್ಷರದಲ್ಲಿ ಎರಡು ಸಾವಿರ ಒಂದು ನೂರಾ ಮೂವತ್ತೊಂದು ರೂಪಾಯಿ ಏಳು ಆಣೆ ಎರಡು ಪೈ ಕಿಂಮತಿನ ದಿಸ್ಸ ಮಾಡಿ ಕೊಟ್ಟಿರುವ ಮೂಲಕಾ ಸದ್ರಿ ಷ್ಟೋರಿಗೆ ಮಿ॥ ರಮೇಶರಾವ ಗುಳವಾಡಿ ಇವರೇ ಪೂರ್ಣ ಮಾಲಕ ಇರುತ್ತಾರೆ. ಮತ್ತು ಸದ್ರಿ ಅಂಗಡಿಯ ಲೇಣೆ ದೇಣೇಕ್ಕೆ ಅವರೇ ಜವಾಬದಾರರಿರುತ್ತಾರೆ. ನಾನು ಯಾವ ತರದಿಂದಲೂ ಜವಾಬದಾರನಾಗುವದಿಲ್ಲ. ತಿಳಿಯುವದು

ತಾ॥ ೯-೧೧-೧೯೨೫

ಅಪ್ಪಣ್ಣಾ ಮೇಲಪ್ಪಾ ಯಳ್ಳಿಗುತ್ತಿ

ತಿಳಿಯಲಿಲ್ಲ. ...

ಪರಾಬ್ಧ ಬರಾಗುವದೆ ವಿಹಿತ, ಹೀಗೆ ಅನೇಕರ ಅಭಿಪ್ರಾಯ. ಇಂಥ ಅನೇಕರಿಂದ ಕೂಡಿದ ಈ ದೇಶದ ಹಿತಕ್ಕಾಗಿ ಬಿಡಿಬಿಡಿ ವ್ಯಕ್ತಿಗಳು ತಮ್ಮ ಆಯುಷ್ಯವನ್ನು ಸವಿಸಲು ಆಗುವದೇನು? ನಿಜವಾಗಿ ನೋಡಿದರೆ ಇಂಥ ಒಂದೆರಡು ಪ್ರಾಣಿಗಳಿಂದಲೇ ಕಾರ್ಯವಾಗಬೇಕಾದದ್ದು. ಆದರೆ ಅವರಿಗೆ ಅನೇಕ ಜನರು ಸಹಾಯಕರಾಗಿರಬೇಕು. ಅವಶ್ಯವು ಮತವೈಚಿತ್ರ್ಯವಾದ ಸಾಧನಗಳಲ್ಲಿ ಮತಭೇದವಿದ್ದರೂ ಸಾಧ್ಯದಲ್ಲಿ ಮತಭೇದವಿರದು. ತಮ್ಮ ತಮ್ಮ ಮತದ ಪ್ರಕಾರ ಸಾಧ್ಯವನ್ನು ಸಾಧಿಸಲು ಅವರು ಪ್ರಯತ್ನಿಸುತ್ತ ದಲ್ಲಿ ಅಸಂಭವನೀಯವಾಗಿ ತೋರಲು, ಮತವೈಚಿತ್ರ್ಯದ ನಿಮಿತ್ತ ತಮ್ಮ ಪಟವನ್ನು ಬಿಡರು. ತಮ್ಮ ಮತವು ಅಧಿಕಶ್ರೇಷ್ಠವಾದದ್ದೆಂದು ಆತ್ಮವಿಶ್ವಾಸವಿದ್ದ ಪಕ್ಷದಲ್ಲಿ ತಾವು ಕಾರ್ಯವನ್ನು ಸಫಲತೆ ಮಾಡಿ ತೋರಿಸಿದಲ್ಲಿ ಭಿನ್ನಾಭಿಪ್ರಾಯಗಳು ಅಡಗುವವು. ಆದರೆ ಕಾರ್ಯ ಮಾಡುವ ಸಾಮರ್ಥ್ಯದ ಅಭಾವದ ಮೂಲಕ ಕೇವಲ ತರ್ಕ ವಿತರ್ಕದಿಂದಲೇ ಉತ್ತರ ಕೊಡುವಾಗ ಸೋಗು ಹಾಕಿಕೊಳ್ಳಲು ಸಮಯಕ್ಕೆ ಆರ್ಯರಲ್ಲಿಲ್ಲವೇ? ಸಂಸ್ಕೃತಿಯು ಕಲಿಣಾವಿರುವದೇನೋ ... ಕರ್ತವ್ಯ ಮಾಡುವದಕ್ಕೆ ... ಸ್ಥೆ ... ... ನಮ್ಮ ...

ಸರ ಪ್ರತಾಪದಿಂದ ಸ್ವರಾಜ್ಯದ ಅವಶ್ಯಕತೆಯು ವಿಶೇಷವಾಗಿ ತೋರಹತ್ತಿದೆ. ವ್ಯಕ್ತಿ ಮಾತ್ರಕ್ಕೆ ಯೋಜನಾಂಗಕ್ಕೆ ... ಹೇಳ್ದಾದಂತೆ ಅವುಗಳ ನಿವಾರಕ ಉಪಾಯವು. ಕಂಟಕಗಳ ಅನುರೋಧದಿಂದ ಅವುಗಳಿಗೆ ಕಾದವ ಉಪಾಯಗಳನ್ನು ಯೋಜಿಸುವದೇ ಮುಖಂಡರದಲ್ಲಿ ತಪ್ಪುವದೇ ಅಧಃಪಾತ ವ್ಯಕ್ತಿಗೆ ಅಥವಾ ರಾಷ್ಟ್ರಕ್ಕೆ ಪ್ರಾಪ್ತವಾಗಿರಲು, ಸ್ವಾರ್ಥಪೂರ್ವಕ ಆಪತ್ತಿ ... ಪ್ರಯತ್ನಿಸುವದು ಗೃಹಸ್ಥನ ಲಕ್ಷಣ ಕೇವಲ ...ಗ ಪೂರ್ವಕ ದೇಶಹಿತಕ್ಕಾಗಿ ಪ್ರಯತ್ನಿಸುವದು, ಲಕ್ಷಣ ... ಸ್ವಾರ್ಥತ್ಯಾಗದ ಪ್ರಶ್ನವು ... ... ಸ್ವಾರ್ಥತ್ಯಾಗ ಮಾಡಿದ್ದರೂ ಅದರಲ್ಲಿ ... ಸ್ವಾರ್ಥವಿದೆ. ಕೆಲವರು ಪ್ರಾಮಾಣಿಕ ತನ ...ರ್ಥತ್ಯಾಗ ಮಾಡಿದವರೂ, ಕೆಲವರು ಕಪಟತನದಿಂದ ...ಗದ ಸೋಗು ಹಾಕಿದವರೂ ಉಂಟು. ಪ್ರಪಂಚಕಸ್ವಾರ್ಥತ್ಯಾಗವನ್ನು ನಿರಂತರ ಮಾಡುವದು ಅಶಕ್ಯವು ...ವರಿಗೂ ಮಾಡಬೇಕಾದ ಮಹತ್ಕಾರ್ಯದಲ್ಲಿ ಶಕ್ಯಾವಿಷಯವನ್ನು ಅವಶ್ಯವಾಗಿ ಮಾಡಬೇಕಾದುದು. ಈವಿ... ವಿಚಾರ ಮಾಡದೇ ಒಮ್ಮೆಲೇ ಕಾರ್ಯಪ್ರವೃತ್ತರೇ ... ಗುಣಪ್ರಧಾನ ... ...ಗೆ ... ಬರಿದು ಪ್ರಾಪ್ತವಾದಷ್ಟು! ...ಗಿ ಮಾಡಬೇಕಾದ ಕಾರ್ಯವು ಸುಲಭವಾಗಿರದು ...ರ್ಯಪ್ರವೃತ್ತನಾದವನಿಗೆ ಅನೇಕ ಕಷ್ಟಗಳು ಒದಗು...ವು ಪ್ರಯತ್ನ ಪೂರ್ವಕವಾಗಿ ಅವನಿಗೆ ಕಷ್ಟಗಳು ಒದಗುವವು. ತನ್ನ ಕಾರ್ಯದಲ್ಲಿ ವಿಘ್ನವನ್ನು ಉಂಟುಮಾಡುವ ಪಕ್ಷಿಯ ಮರ್ಮವನ್ನರಿತು ತತ್ಪ್ರತಿಕಾರ ಪೂರ್ವಕ ... ಕರ್ತವ್ಯ ಮಾಡುವವನೇ ನಿಜವಾದ ರಾಷ್ಟ್ರಹಿತ... ಪ್ರತಿಪಕ್ಷಿಯು ಶಸ್ತ್ರಧಾರಿಯಾಗಿ ರಣಕ್ಕೆ ಸಿದ್ಧನಾಗಿ ...ಶಸ್ತ್ರ ನಾನಿಪ್ರತಿಕಾರ ಮಾಡುವದು ಅಸಂಭವನೀ... ಕಪಟವನ್ನು ಬಳಸಲು ತಾನೂ ಅದೇ ಪ್ರಕಾರದಲ್ಲಿ ಪ್ರತಿಕಾರ ಮಾಡುವದು ಯೋಗ್ಯವು ಇದು ಅಥ...ರದು. ಭಾರತೀಯಯುದ್ಧವೇ ಇದರ ಉತ್ಕೃಷ್ಟ ಉದಾಹರಣೆಯು ನಮ್ಮ ಸ್ವಾತಂತ್ರ್ಯದ ಹ್ರಾಸವೇ ನಮ್ಮ ದುರ್ದಶೆಗೆ ಕಾರಣವಾಗಿದೆ. ಇದನ್ನು ಸಕಲರೂ ಅರಿತಿದ್ದರೂ, ವಿಚಾರ, ಬುದ್ಧಿ ಸಾಮರ್ಥ್ಯ, ಅನುಕೂಲ ಸಾಧನಾದಿಗಳು ಇದ್ದರೂ, ಕಾರ್ಯಪ್ರವೃತ್ತರಾಗರು. ಇದಕ್ಕೆ ಅಧೈರ್ಯವೇ ಮುಖ್ಯ ಕಾರಣವೆಂದು ಹೇಳಬಹುದು. ಈ ಅಧೈರ್ಯವು ನಮ್ಮ ಭಾರತೀಯರಿಗೆ ಹುಟ್ಟುಗುಣವಲ್ಲ. ಪ್ರಯತ್ನಪೂರ್ವಕವಾಗಿ ಹುಟ್ಟಿಸಲ್ಪಟ್ಟಿದ್ದು. ಹಾಗಾದರೆ ಇದಕ್ಕೆ ಪ್ರತಿಕಾರೋಪಾಯಗಳು ಇಲ್ಲವೇ! ಇವೆ. ಪ್ರತ್ಯೊಬ್ಬರಿಗೆ ಸ್ವಾತಂತ್ರ್ಯವಿದೆ! ಸ್ವಾತಂತ್ರ್ಯವೆಂಬದು ಈ ಜಗತ್ತಿನಲ್ಲಿಯೇ ಇಲ್ಲದಿದ್ದರೆ ಅದರ ಅಸ್ತಿತ್ವವೇ ಇಲ್ಲದಿರಲು ನಮಗೂ ಇಲ್ಲ. ಹಾಗಾದರೆ ನಾವು ಯೋಚಿಸುವ ಕಾರಣ ಉಳಿಯದು. ಒಂದಾನೊಂದು ಕಾಲ ನಾವು ಸ್ವಾತಂತ್ರ್ಯವನ್ನು ಅನುಭವಿಸಿದ್ದೇವೆ. ಮೋಕ್ಷವೆಂಬ ಅಗ್ರಸ್ಥಾನಕ್ಕೆ ನಾವು ಹೋಗಿದ್ದೇವೆ. ಆದರೆ ಕಾಲವಶದಿಂದ ಈಗಿನ ಪರತಂತ್ರವು ಪ್ರಾಪ್ತವಾಗಿರಲು ಹೇಡಿಯಂತೆ ತಲೆ ತಗ್ಗಿಸುವದೇಕೆ? ಮರಳಿ ನಮಗೆ ನಮ್ಮ ಸ್ವಾತಂತ್ರ್ಯವು ದೊರಕದೇ ಹೋಗದೇನು? ಅವಶ್ಯವಾಗಿ ದೊರಕುವದು. ಆದರೆ ಮರ್ಮವರಿತು ಪ್ರಯತ್ನ ಮಾಡಿ ಕಾರ್ಯಮಾಡುವದು ಅತ್ಯವಶ್ಯವು. ಹಾಗಾದರೆ ಅದೆಂತಹ ಕಾರ್ಯ? ಹೇಗೆ ಮಾಡುವದು? ಎಂಬದನ್ನು ಕ್ರಮದಿಂದ ವಿಚಾರಿಸುವಾ

... ಗ ಸ್ವಯಂಸ್ಫೂರ್ತಿಯಿಂದಾಗಿ ಎರಡು ಪಕ್ಷದವರೂ ಮೆಚ್ಚುವಂತಹ ... ಬೇಕು ... ಕಾರ್ಯದಲ್ಲಿ ಹೊಸ ಹೊಸ ಯುಕ್ತಿಗಳನ್ನು ಜೋಡಿಸಬೇಕು ಮತ್ತು ಹೊಸ ಸುಧಾರಣೆಗಳಿಗೆ ... ಇಲ್ಲಿರಲ್ಲಿ ಸಹಕಾರವನ್ನು ... ಗುವದು ... ಈಗಿನ ... [illegible] ... ಸಹಕಾರ ... [illegible]

ನಮ್ಮ ಜಿಲ್ಲೆಯ ... ಅಗತ್ಯವಾದ ಕಾರ್ಯಗಳಲ್ಲಿ ಮುಖ್ಯವಾದ ಕೆಲವು ಅಂಶಗಳನ್ನು ಹೇಳಿದ್ದಾಯಿತು. ಈಗ ಈ ಕೆಲಸಕ್ಕೆ ಕೈಹಾಕುವವರು ಯಾರೆಂದು ನೋಡಬೇಕಾಗಿದೆ. ಇಲ್ಲಿಯ ಹೊಳೆಗಳನ್ನು ಸಂಪೂರ್ಣವಾಗಿ ಸಂದರ್ಶಿಸಿ, ನೀರಾವರಿಯ ಹೊಸ ಜನಗಳಿಗೆ ತಕ್ಕ ಉಪಾಯಗಳನ್ನು ಸೂಚಿಸುವ ತಜ್ಞರೇ ಕೆಲಸ ಹಿಡಿಯಬೇಕಾಗಿದೆ; ಪಕ್ಷ್ಯಾದ್ಯಗಳಿಗಾಗಿ ಬೇಕಾದ ಸ್ಥಳಗಳು ಯಾವವು, ಅವನ್ನು ಹೇಗೆ ತಯಾರಿಸಬಹುದು ಎಂಬ ವಿಷಯಗಳನ್ನು ಕೂಲಂಕುಷವಾಗಿ ಶೋಧಿಸಬೇಕು; ಧನಿ ಮತ್ತು ಒಕ್ಕಲಿಗರ ವಿಷಯ ಯಾವತರದ ಕಾಯಿದೆಗಳನ್ನು ತರಬೇಕೆಂದು ಆಲೋಚಿಸಬೇಕಾಗಿದೆ. ಇವೆಲ್ಲ ಉಪಯುಕ್ತ ಕಾರ್ಯಗಳು ಒಬ್ಬನ ಕೈಯಿಂದ ಸಾಧ್ಯವಿಲ್ಲ. ಸಾಂಘಿಕ ಶಕ್ತಿಯಿಂದ ಮಾಡಬೇಕಾದ ಕಾರ್ಯಗಳಿವು. ನಮ್ಮ ಜಿಲ್ಲೆಯ "ಎಮ್ಯಾನ್ಸಿಪೇಶನ್ ಎಸೋಸಿಯೇಶನಿನ" ಗೃಹಸ್ಥರು ನಮ್ಮ ಸೂಚನೆಗಳನ್ನು ಕೇಳ್ವರೆ?

ಕರ್ತವ್ಯ

(ಲೇಖಕ— ಮೃತ್ಯುಂಜಯ ... ಇಂಕ್ಲ ಜಿ. ವಿಜಾಪುರ)

ರಾಷ್ಟ್ರಕಾರ್ಯ ದೃಷ್ಟಿಯಿಂದ ಕರ್ನಾಟಕಸ್ಥರು ಮಾಡಬೇಕಾದ ಕಾರ್ಯಗಳು ಅನೇಕ ಉಂಟು. ಆದರೆ ಭಿನ್ನಪ್ರಕೃತಿ ಭಿನ್ನಮತ, ಇತ್ಯಾದಿಗಳ ಪ್ರಾಬಲ್ಯವು ಅನ್ಯಕ್ಷೇತ್ರದಲ್ಲಿಯೂ ಕಂಡು ಬರುವಂತೆ ಇಲ್ಲಿಯಾದರೂ ಕಡಿಮೆ ಇಲ್ಲ. ಭಿನ್ನಮತ ಭಿನ್ನಾಭಿಪ್ರಾಯಗಳಿಂದ ಐಕ್ಯವು ಮುರಿದು ಅಶಾಂತಿಯು ಪ್ರಾಪ್ತವಾಗುವದೆಂದು ತಿಳುವಳಿಕೆ. ಈ ತಿಳುವಳಿಕೆಯನ್ನು ದೃಢಪಡಿಸಲು ತಾವು ಕರ್ತವ್ಯಪರಾಙ್ಮುಖರಾಗುವದ ಉಚಿತ, ಹೀಗೆ ಅನೇಕರ ಅಭಿಪ್ರಾಯ. ಇಂಥ ಅನೇಕರಿಂದ ಕೂಡಿದ ಈ ದೇಶದ ಹಿತಕ್ಕಾಗಿ ಹಂಬಲಿಸುವ ವ್ಯಕ್ತಿಗಳು ತಮ್ಮ ಆಯುಷ್ಯವನ್ನು ಸವೆಸಲು ಆಗುವದೇನು? ನಿಜವಾಗಿ ನೋಡಿದರೆ ಇಂಥ ಒಂದೆರಡು ಪ್ರಾಣಿಗಳಿಂದಲೇ ಕಾರ್ಯವಾಗಬೇಕಾದದ್ದು. ಆದರೆ ಅವರಿಗೆ ಅನೇಕ ಜನರು ಸಹಾಯಕರಾಗಿರುವದು ಅವಶ್ಯವು. ಮತೈಕ್ಯದಿಂದ ಸಾಧನಗಳಲ್ಲಿ ಮತಭೇದವಿದ್ದರೂ ಸಾಧ್ಯದಲ್ಲಿ ಮತಭೇದವಿರದು. ತಮ್ಮ ತಮ್ಮ ಮತದ ಪ್ರಕಾರ ಸಾಧ್ಯವನ್ನು ಸಾಧಿಸಲು ಆದರೆ ಪ್ರಯತ್ನ ಮಾತ್ರದಲ್ಲಿ ಅಸಂಭವನೀಯವಾಗಿ ತೋರಲು, ಮತೈಕ್ಯದ ನೆವದಿಂದ ತಮ್ಮ ಹಟವನ್ನು ಬಿಡರು. ತಮ್ಮ ಮತವು ಅಧಿಕಶ್ರೇಷ್ಠವಾದದ್ದೆಂದು ... ಪಕ್ಷದಲ್ಲಿ ತಾವು ಕಾರ್ಯವನ್ನು ಫಲತಃ ಮಾಡಿ ತೋರಿಸಿದಲ್ಲಿ ಭಿನ್ನಾಭಿಪ್ರಾಯಗಳು ಅಡಗುವವು. ಆದರೆ ಕಾರ್ಯ ಮಾಡುವ ಸಾಮರ್ಥ್ಯದ ಅಭಾವದ ಮೂಲಕ ಕೇವಲ ತರ್ಕ ವಿತರ್ಕದಿಂದಲೇ ಉತ್ತರ ಪ್ರತ್ಯುತ್ತರದ ಸೋಗು ಹಾಕಿಕೊಳ್ಳಲು ಸಮಯಕ್ಕೆ ಅರ್ಜುನನಲ್ಲಿದ್ದ ಸ್ಥಿತಿಯು ಕರಿಣಾವಿರುವದೇನೋ ... ಆದರೆ ಕರ್ತವ್ಯ ಮಾಡುವದಕ್ಕೆ ... ಕ್ಷಿತಿ ... [illegible] ... ನಮ್ಮ ...

ಪರ ಪ್ರತಾಪದಿಂದ ಸ್ವರಾಜ್ಯದ ಅವಶ್ಯಕತೆಯು ವಿಶೇಷವಾಗಿ ತೋರುತ್ತಿದೆ. ವ್ಯಕ್ತಿ ಮಾತ್ರಕ್ಕೆ ಯಾಜನಾಂಗಕ್ಕೆ ಕಂಟಕಗಳು ಬಂದಂತೆ ಅವುಗಳ ನಿವಾರಕ ಉಪಾಯಗಳೂ ಹುಟ್ಟುವವು. ಕಂಟಕಗಳ ಅನುರೋಧದಿಂದ ಅವುಗಳಿಗೆ ತಕ್ಕ ಪ್ರತಿಕಾರದ ಉಪಾಯಗಳನ್ನು ಯೋಜಿಸುವದೇ ಮುಖಂಡರ ಲಕ್ಷಣ ಇದರಲ್ಲಿ ತಪ್ಪುವದೇ ಅಧಃಪಾತ ವ್ಯಕ್ತಿಗೆ ಅಥವಾ ರಾಷ್ಟ್ರಕ್ಕೆ ಆಪತ್ಕಾಲ ಪ್ರಾಪ್ತವಾಗಿರಲು, ಸ್ವಾರ್ಥಪೂರ್ವಕ ಆಪತ್ತಿನ ನಿವೃತ್ತಿಗಾಗಿ ಪ್ರಯತ್ನಿಸುವದು ಗೃಹಸ್ಥನ ಲಕ್ಷಣ ಕೇವಲ ಸ್ವಾರ್ಥತ್ಯಾಗಪೂರ್ವಕ ದೇಶಹಿತಕ್ಕಾಗಿ ಪ್ರಯತ್ನಿಸುವದು, ಸನ್ಯಾಸಿಯ ಲಕ್ಷಣ ಈಗೀಗ ಸ್ವಾರ್ಥತ್ಯಾಗದ ಪ್ರಸ್ತಾವವು ಹೆಳಿದುವದರಿಂದ ಅನೇಕರು ಸ್ವಾರ್ಥತ್ಯಾಗ ಮಾಡಿದ್ದರೂ ಅದರಲ್ಲಿ ಅನೇಕ ಬಗೆಯ ಸ್ವಾರ್ಥವಿದೆ. ಕೆಲವರು ಪ್ರಾಮಾಣಿಕ ತನದಿಂದ ಸ್ವಾರ್ಥತ್ಯಾಗ ಮಾಡಿದವರೂ, ಕೆಲವರು ಕಪಟತನದಿಂದ ಸ್ವಾರ್ಥತ್ಯಾಗದ ಸೋಗು ಹಾಕಿದವರೂ ಉಂಟು. ಪ್ರಪಂಚಕನಿಗೆ ಒದ್ದ ಸ್ವಾರ್ಥತ್ಯಾಗವನ್ನು ನಿರಂತರ ಮಾಡುವದು ಅಶಕ್ಯವು ಚಿರಕಾಲದವರೆಗೂ ಮಾಡಬೇಕಾದ ಮಹತ್ಕಾರ್ಯದಲ್ಲಿ ಶಕ್ಯಾಶಕ್ಯತೆಯ ವಿಚಾರವನ್ನು ಅವಶ್ಯವಾಗಿ ಮಾಡಬೇಕಾದುದು. ಈ ವಿಷಯದಲ್ಲಿ ಸಂಪೂರ್ಣ ವಿಚಾರ ಮಾಡದೇ ಒಮ್ಮೆಲೇ ಕಾರ್ಯಪ್ರವೃತ್ತರಾಗಿ ಕೂಡಲೇ ನಿರಾಶರಾಗುವ ಗುಣಪ್ರಧಾನರಿಂದಲೇ ಕರ್ನಾಟಕಸ್ಥರಿಗೆ ಅಂಥ ಹೊರರೆಂಬ ಬಿರಿದು ಪ್ರಾಪ್ತವಾದದ್ದು! ದೇಶದ ಹಿತಕ್ಕಾಗಿ ಮಾಡಬೇಕಾದ ಕಾರ್ಯವು ಬಲಭದ್ರವಾಗಿರದು ತೆತ್ ಕಾರ್ಯ ಪ್ರವೃತ್ತನಾದವನಿಗೆ ಅನೇಕ ಕಷ್ಟಗಳು ಒದಗುವವು. ಅಥವಾ ಪ್ರಯತ್ನಪೂರ್ವಕವಾಗಿ ಅವನಿಗೆ ಕಷ್ಟಗಳು ಒದಗಿಸಲ್ಪಡುವವು ತನ್ನ ಕಾರ್ಯದಲ್ಲಿ ವಿಘ್ನವನ್ನು ಉಂಟು ಮಾಡುವ ಪ್ರತಿಪಕ್ಷಿಯ ಪರ್ವವನ್ನರಿತು ತತ್ಪ್ರತಿಕಾರ ಪೂರ್ವಕ ಧೈರ್ಯದಿಂದ ಕರ್ತವ್ಯ ಮಾಡುವವನೇ ನಿಜವಾದ ರಾಷ್ಟ್ರಹಿತಕರ್ತನು ಪ್ರತಿಪಕ್ಷಿಯು ಶಸ್ತ್ರಧಾರಿಯಾಗಿ ರಣಕ್ಕೆ ಸಿದ್ಧನಾಗಿರಲು ತಾನು ನಿಃಶಸ್ತ್ರ ನಾಗಿ ಪ್ರತಿಕಾರ ಮಾಡುವದು ಅಸಂಭವನೀಯವು. ಅವನು ಕಪಟವನ್ನಾಚರಿಸಲು ತಾನೂ ಅದೇ ಪ್ರಕಾರ ಕಪಟದಿಂದ ಪ್ರತಿಕಾರ ಮಾಡುವದು ಯೋಗ್ಯವು ಇದು ಅಧರ್ಮವೆನಿಸಲಾರದು. ಭಾರತೀಯಯುದ್ಧವೇ ಇದರ ಉತ್ಕೃಷ್ಟ ಉದಾಹರಣೆಯು ನಮ್ಮ ಸ್ವಾತಂತ್ರ್ಯದ ಹ್ರಾಸವೇ ನಮ್ಮ ದುರ್ದಶೆಗೆ ಕಾರಣವಾಗಿದೆ. ಇದನ್ನು ಸಕಲರೂ ಅರಿತಿದ್ದರೂ, ವಿಚಾರ, ಬುದ್ಧಿ ಸಾಮರ್ಥ್ಯ, ಅನುಕೂಲ ಸಾಧನಾದಿಗಳು ಇದ್ದರೂ, ಕಾರ್ಯಪ್ರವೃತ್ತರಾಗಲು ಇದಕ್ಕೆ ಅಧೈರ್ಯವೇ ಮುಖ್ಯ ಕಾರಣವೆಂದು ಹೇಳಬಹುದು. ಈ ಅಧೈರ್ಯವು ನಮ್ಮ ಭಾರತೀಯರಿಗೆ ಹುಟ್ಟುಗುಣವಲ್ಲ ಪ್ರಯತ್ನಪೂರ್ವಕವಾಗಿ ಹುಟ್ಟಿಸಲ್ಪಟ್ಟದ್ದು ಹಾಗಾದರೆ ಇದಕ್ಕೆ ಪ್ರತಿಕಾರೋಪಾಯಗಳು ಇಲ್ಲವೇ! ಇವೆ. ಮೋಕ್ಷವಿದೆ. ಸ್ವಾತಂತ್ರ್ಯವಿದೆ! ಸ್ವಾತಂತ್ರ್ಯವೆಂಬದು ಈ ಜಗತ್ತಿನಲ್ಲಿಯೇ ಇಲ್ಲದಿದ್ದರೆ ಅದರ ಅಸ್ತಿತ್ವವೇ ಇಲ್ಲದಿರಲು ನಮಗೂ ಇಲ್ಲ. ಹಾಗಾದರೆ ನಾವು ಯೋಚಿಸುವ ಕಾರಣ ಉಳಿಯದು ಒಂದಾನೊಂದು ಕಾಲ ನಾವು ಸ್ವಾತಂತ್ರ್ಯವನ್ನು ಅನುಭವಿಸಿದ್ದೇವೆ. ಮೋಕ್ಷವೆಂಬ ಅಗ್ರಸ್ಥಾನಕ್ಕೆ ನಾವು ಹೋಗಿದ್ದೇವೆ, ಆದರೆ ಕಾಲವಶದಿಂದ ಈಗಿನ ಪರತಂತ್ರವು ಪ್ರಾಪ್ತವಾಗಿರಲು ಹೇಡಿಯಂತೆ ತಲೆ ತಲೆ ತಿರುಗಿಸುವದೇಕೆ? ಮರಳಿ ನಮಗೆ ನಮ್ಮ ಸ್ವಾತಂತ್ರ್ಯವು ದೊರಕದೇ ಹೋಕದೇನು? ಅವಶ್ಯವಾಗಿ ದೊರಕುವದು ಆದರೆ ಪೂರ್ವಪರಿತು ಶ್ರಮಪಟ್ಟನ ಮಾಡಿ ಕಾರ್ಯಮಾಡುವದು ಅತ್ಯವಶ್ಯವು. ಹಾಗಾದರೆ ಅನಂತರ ಕಾರ್ಯ ಹೇಗೆ ಮಾಡುವದು? ಎಂಬದನ್ನು ಕ್ರಮಶಃ ವಿಚಾರಿಸುವಾ

ಕನ್ನಡ ಕವಿತೆಯ ಲಾಲಿತ್ಯಲಹರಿ-

ಭಾವ್ಯವಾಗಿಯೂ ಶ್ರಾವ್ಯವಾಗಿಯೂ ಇರುವದೇ ಕಾವ್ಯವು. ಇಂತಹ ಸತ್ಕಾವ್ಯವೇ ಸಜ್ಜನಸೇವ್ಯವು ಇದುವೇ ವರಕಾವ್ಯವು. ಇದುವೇ ಮರಕಾವ್ಯವು. ಈ ಕಾವ್ಯಲಕ್ಷಣಕ್ಕನುಸಾರವಾದ ರೀತಿಯು ಆಂಗ್ಲ ಭಾಷೆಯಲ್ಲಿಯೂ ಕಂಡು ಬರುತ್ತಿದೆ. A Poerty must have both rhyme and reason. If that iso, it is true Poetry. If that is not so, it is no Poerty but only a Poet-tree. ಇದೀಗ ಉಭಯ ಭಾಷೆಯ ಕಾವ್ಯ ಲಕ್ಷಣವು, ಸಾಮಾನ್ಯವಾಗಿ ಪ್ರಪಂಚದ ಭಾಷಾಸಂಕುಲಕ್ಕೇ ಮಾತೃಪ್ರಾಯವಾದ ಸಂಸ್ಕೃತದಲ್ಲಂತೂ ಇಂತಹ ಸಲ್ಲಕ್ಷಣಗಳು ಸಂಪೂರ್ಣವಾಗಿವೆ. ಭಾವ್ಯವಿಷಯವೂ ಶ್ರಾವ್ಯಶೈಲಿಯೂ ಕಾವ್ಯಾಂಗನೆಗೆ ವಸ್ತ್ರಾಭರಣಗಳಂತೆ ಒಪ್ಪುತ್ತಿರುವುವು.

ಹೀಗಿದ್ದರೂ ಪ್ರಾಸದಿಂದ ಪ್ರಯೋಜನವಿಲ್ಲ. ಶ್ರಾವ್ಯಕ್ಕೆ ಗಮನಕೊಟ್ಟರೆ ಕಾವ್ಯ ಕೆಡುತ್ತೆ, ಅರ್ಥ ಗಾಂಭೀರ್ಯವೇ ಪ್ರಾಮುಖ್ಯ ಎಂಬಿತ್ಯಾದಿ ರೀತಿಯಿಂದ ಅನೇಕರು ಕಾವ್ಯ ಲಕ್ಷಣಕ್ಕೆ ಲಕ್ಷ್ಯಕೊಡದೆ ಸ್ವೇಚ್ಛೆಯಾಗಿ ಕವಿತೆಯನ್ನು ಕಲ್ಪಿಸುತ್ತಿರುವರು. ವಸ್ತುತಃ ಕವಿತಾ ಶಕ್ತಿಯಲ್ಲಿಪೂರ್ವ ಜನ್ಮದ ಸಂಸ್ಕಾರ ಬಲವಿಲ್ಲದೆಯೋ ಹಿಸುಕಿ ಹಿಂಡಿ ಮಾಡಿದ ಕವಿತ್ವವು ಕರ್ಕಶವಾಗಿ ಕಾಣುವುದರಿಂದಲೋ, ಇವರು ಈ ರೀತಿಯಲ್ಲಿ ಹೋರಾಡುವರೆಂದು ತೋರಿಬರುತ್ತಿದೆ. ಅಂತಹ ಮಹಾನಿಗಳ ಮಾತಂತಿರಲಿ. ಏವಂಚ ಭಾವ್ಯವಾಗಿಯೂ ಶ್ರಾವ್ಯವಾಗಿಯೂ ಇರುವಂತೆ ದಿವ್ಯಕಾವ್ಯವನ್ನು ವಿರಚಿಸುವುದೇ ವರಕವಿಯ ಯೋಗ್ಯತಾವಿಶೇಷವು.

ಇಷ್ಟರ ಮಟ್ಟಿಗೆ ಸತ್ಕವಿತೆಯ ಸಲ್ಲಕ್ಷಣವನ್ನು ಉಲ್ಲೇಖಿಸಿದಂತಾಯಿತು. ಹೀಗೆ ಸಾಮಾನ್ಯ ಬರವಣಿಗೆಯಲ್ಲಿಯೂ ವೃತ್ಯನುಪ್ರಾಸಪೂರ್ವಕವಾದ ಲಾಲಿತ್ಯವನ್ನು ತರುವದು ಸನ್ನ ಪ್ರಯತ್ನವಲ್ಲ. ತನ್ನಂತೆಯೇ ಬರುವದಕ್ಕೆ ನಾನೇನೂ ತಡೆಗಟ್ಟಲಾರೆನು. ಬರೆಯುವ ಪರಿಯು ನಾನಾತೆರನಾಗಿರುವುದು. ಇದರಲ್ಲಿ ಇದೂ ಒಂದು ವಿಧವೆಂದು ಅರಿಯಬೇಕಲ್ಲದೆ ಬೇರೊಂದಿಲ್ಲ. ಪ್ರಕೃತ ಮೇಲಿನ ವಿಷಯದ ಉತ್ತರಾರ್ಧದಲ್ಲಿರುವ ಲಾಲಿತ್ಯಲಹರಿಯನ್ನು ವಾಚಕರಿಗೆ ಪ್ರತ್ಯಕ್ಷವಾಗುವಂತೆ ಉತ್ತಮ ಗ್ರಂಥಗಳಿಂದ ಉದಹರಿಸಿ ತೋರುವುದೇ ಸಾರ್ಥಕ್ಯವೆಂದು ಸಮಾಲೋಚಿಸಲಾಯಿತು.

ನಮ್ಮ ಮನೆಯ ಮಾತಾದ (Home Langued) ಕನ್ನಡಭಾಷೆಯಲ್ಲಿ "ವಾರ್ಧಕಷಟ್ಪದಿ" ಪದ್ಯವೇ ಬಹಳ ಉದ್ದವಾದದ್ದು. ಅದರಲ್ಲಿ ವೃತ್ಯನುಪ್ರಾಸವನ್ನು ಆದಿಯಲ್ಲಿಯೂ ಅಂತ್ಯದಲ್ಲಿಯೂ ಒತ್ತೊತ್ತಾಗಿ ತರುವುದು ಅತಿ ದುಸ್ತರವು. ಹೀಗಿದ್ದರೂ ಯಥಾಕ್ರಮವಾಗಿ ಎಷ್ಟರಮಟ್ಟಿಗೆ ಒಂದಕ್ಕಿಂತಲೂ ಇನ್ನೊಂದರಲ್ಲಿ ಲಾಲಿತ್ಯವು ಏರುತ್ತಾ ಹೋಗುತ್ತಿದೆಯೆಂಬುದು ಈ ಮೂರು ಪದ್ಯಗಳಿಂದ ವೇದ್ಯವಾಗುವುದು.

(೧) ಇದು "ಕಬ್ಬಿಗರ-ಕೈಪಿಡಿ"ಯ ನಾಂದಿ ಶ್ಲೋಕವು:-

ಶ್ರೀ ರಮಣ ವಿಬುಧಪತಿ| ವಾರಿಜಭವಾದಿ ಬೃಂ|
ದಾರಕಪ್ರಜ ಮುಕುಟ| ಹೀರ ಮಣಿಕೃಪ್ತ|
ಭಾರಾಜಿತಾಂಘ್ರಿಯುಗ| ಮಾರಘನದರ್ಪಾಂಧ| ಕಾರ
ಸಂಹಾರ ಸೂರ್ಯ||
ಗೌರೀಮುಖೇಂದುಕರ| ಸಾರಸುಸ್ವಾದಿತ ಚ|
ಕೋರ ಪಂಪಾಪರಾ| ಗಾರವಾಲಿಪುದೆಮಗೆ|
ಚಾರುಮತಿಯಂ ಮುಮೂ| ದಾರಸತ್ಕೀರ್ತಿವಿ| ಸ್ತಾರ
ಗಂಭೀರ ವೀರಾ||

ಪದ್ಯಲಕ್ಷಣ ಪದ್ಧತಿಯಂತೆ ವಾರ್ಧಕ ಷಟ್ಪದಿಯಲ್ಲಿ ೬ ಆದಿಪ್ರಾಸಗಳಿರಲಿಕ್ಕೇ ಬೇಕು. ಇದಲ್ಲದೆ ಸಮಚರಣಗಳು ೪ ರಲ್ಲಿ ಎರಡೆರಡೂ, ವಿಷಮ ಚರಣಗಳು ೨ ರಲ್ಲಿ ಮೂರು ಮೂರೂ ಹೀಗೆ ಒಟ್ಟು ೧೪ ಪ್ರಾಸಗಳು. ಮೇಲಿನ ಪದ್ಯದಲ್ಲಿ ಕಂಗೊಳಿಸುವುವು. ಹೊರತು ಅಂತ್ಯ ಪ್ರಾಸಗಳಿಲ್ಲ. ಪರಂತು ೩ ನೇ ೬ನೇ ಚರಣಾಂತ್ಯದಲ್ಲಿ "ಕಾರ ಸಂಹಾರ ಸೂರ್ಯಾ," "ಸ್ತಾರಗಂಭೀರ ವೀರಾ" ಎಂಬೀ ಪಾದಾಂತ್ಯ ಭಾಗವು ಬಹು ಲಲಿತವಾದ ಪ್ರಾಸಬದ್ಧವಾಗಿದೆ. ಇದರಿಂದ ಪದ್ಯರೀತಿಯನ್ನೇ ವ್ಯಕ್ತಪಡಿಸುವ "ಪಾಂಚಾಲ ಶೈಲಿ" ಯಲ್ಲಿ ಓದುವಾಗ ಈ ಪದ್ಯವು ಅತ್ಯಂತ ಶ್ರಾವ್ಯವಾದ ಆನಂದವನ್ನುಂಟುಮಾಡುವುದು. ಅರ್ಥಗಾಂಭೀರ್ಯವೂ ಶಬ್ದಮಾಧುರ್ಯವೂ ಏಕತ್ರ ಒಪ್ಪುತ್ತಿರುವ ಈ ಕಾವ್ಯವು ಉತ್ತಮ ರೀತಿಯದೆನ್ನಬಹುದು.

"ಇದು ಪ್ರಭಾವತಿಸ್ವಯಂವರ" ವೆಂಬ ಯಕ್ಷಗಾನ ಪ್ರಸಂಗದಲ್ಲಿ ಪರಾಜಿತನೆಂಬ ಯಾದವನು ರಂಭೆಯ ಭೂಮಿಕೆಯನ್ನು ತಾಳಿಬಂದ ವರ್ಣನೆಯು:—

ವರಹಂಸಗತಿಯಿಂದ| ಲಾಸನ ದ್ಯುತಿಯಿಂದ
ಅರಿಕೋಟಿಗೊಲವಿಂದ| ಅಮಿಸುವದ ಚೆಲುವಿಂದ| ಮೆರೆವ ಯೌವನದಿಂದ| ಅಧಿಕಮೋಹನದಿಂದ| ಮಿನುಗುವಾ
ಭರಣದಿಂದ||
ಸುರುಚಿರಾಂಬರದಿಂದ| ತಾಂಬೂಲಕರದಿಂದ|
ಪರಿಮಳಿಸ ಸುಮದಿಂದ| ನಾವಿಕೇಹನದಿಂದ|
ಸರಸ ಕುರುಳುಗಳಿಂದ| ಓಲೈಸುವ ಸಖಿಯಿಂದಳವಿಕ
ನರ್ತನಗಳಿಂದ||

ಇದರಲ್ಲಿ, ೬ ಆದಿಪ್ರಾಸವಮಾತ್ರವಿದೆ. ಆದರೆ ಸಮವಿಷಮ ಚರಣಗಳಿಂದ ಒಟ್ಟು ೧೪ ಅಂತ್ಯ ಪ್ರಾಸಗಳಿಂದ ಅತ್ಯಂತ ಮನೋಹರವಾಗಿದೆ. ಹರಿಹರ ಪುರದ ಪರಮೇಶ್ವರ ಭಟ್ಟನೆಂಬ ಹಳ್ಳಿಗಾಡಿನ ಹೆಸ್ಗಡು ವಿರಚಿಸಿದ ಈ ಪದ್ಯದ ಲಾಲಿತ್ಯವು ಆಶ್ಚರ್ಯಕರವಾಗಿದೆ. ಕಾರಣ ಹಳ್ಳಿಯ ಜನರನ್ನೂ ಯಕ್ಷಗಾನದ ಪ್ರಸಂಗವನ್ನೂ ದಶಾವತಾರದ ಆಟವನ್ನೂ ಅಲ್ಲಗಳೆಯದೆ ತಕ್ಕಷ್ಟು ಮೇಲಿನ ಪದ್ಯವನ್ನು ಉತ್ತಮವೆನ್ನುತ್ತೇನೆ; ಇಲ್ಲಿ ಸಂಶಯವಿಲ್ಲ.

(೩) ಇದು ಪುರಂದರ ದಾಸ ವಿರಚಿತ "ದ್ರೌಪದಿಯ ಉದಯರಾಗ" ವೆಂಬ ಕಾವ್ಯದ ತತ್ವಸಾರವನ್ನು ಸಂಕ್ಷೇಪ ರೀತಿಯಿಂದ ವ್ಯಕ್ತಪಡಿಸುವ ವಾರ್ಧಕವು. ಇದರ ಕವಿಯಾರೆಂಬುದು ಪ್ರಕೃತೋಚಿತವಲ್ಲ. ಗುಣಕ್ಕೆ ಮಾತ್ಸರ್ಯವಿಲ್ಲದಿದ್ದರೆ ಆದೇವಿಷ್ಟು ಬಹುಮಾನವು.

ಶ್ರೀಪತಿಯ ಅನುರಾಗ| ಭೂಪಭರ್ತೃವಿಯೋಗ
ಪಾಪಿಕೌರವಭೋಗ| ಕಾಪುರುಷರುಪಯೋಗ|
ತಾಪಸಿಗಳ ವಿರಾಗ| ಕೋಪಿಗಳ ಬಾಯ್ಬೀಗ, ಭೂಪ
ರಿಗೆ ಮಾನಭೋಗ
ಶಾಪ ಫಲ ಸಂಯೋಗ| ಕೋಪದಸ್ತ್ರ ಪ್ರಯೋಗ
ತಾಪತೊಲಗುವ ಜಾಗ| ಪಾಪಹರ ಭಾಗ|
ಈ ಪರಿಯ ಉಪಭೋಗ| ವಿರುತ್ತಿರಲು ದ್ರೌಪದಿಯ
ಉದಯರಾಗ||

ಈ ಪದ್ಯದಲ್ಲಿ ೧೪ ಆದಿಪ್ರಾಸವೂ ೧೪ ಅಂತ್ಯಪ್ರಾಸವೂ ಅತ್ಯಂತ ಮನೋಹರವಾಗಿ ಒಪ್ಪುತ್ತಿರುವುದು. ವಾಚಕರಿಗೆ

ಕ್ಲಿಷ್ಟವೆಂಬ ವಿಷಯವೇ ಕಂಡು ಬರುವದಿಲ್ಲ. ಅರ್ಥಗಾಂಭೀರ್ಯ ಶಬ್ದ ಮಾಧುರ್ಯಗಳಿಂದ ಮನ ಮೋಹಕವಾಗಿರುವುದು ಮಾತ್ರವಲ್ಲದೆ ಶೈಲಿಯ ಲಾಲಿತ್ಯವು ಕೇವಲ ಹೃದಯಂಗಮವಾಗಿದೆ. ಇಂತಹ ಸತ್ಕಾವ್ಯವನ್ನು ಉತ್ತಮೋತ್ತಮ ರೀತಿಯದೆನ್ನುವಲ್ಲಿ ಮತ್ತಿಂಚಿತ್ತಾದರೂ ಸಂದೇಹವಿಲ್ಲ.

ಇಷ್ಟರ ಮಟ್ಟಿನ ಅಪ್ರಾಪ್ಯಾದ್ಭುತ ಸಲ್ಲಕ್ಷಣಗಳಿಂದ ಶೋಭಿಸುತ್ತಿರುವ ನಮ್ಮ ಕನ್ನಡ ಭಾಷೆಯಲ್ಲಿಯೇ ಅಭಿಮಾನವಿಲ್ಲದ ಕನ್ನಡಿಗರನ್ನು ಕುರಿತು ಎಷ್ಟು ಪಶ್ಚಾತ್ತಾಪ ಪಟ್ಟರೂ ತೀರದು. ಕಾರಣ ಕನ್ನಡಿಗರೆಲ್ಲರೂ ಭಾಷಾಭಿಮಾನವನ್ನು ದೇಶಾಭಿಮಾನವನ್ನು ಕೈಕೊಂಡು ಕನ್ನಡನಾಡಿಗೆ ಅಲಂಕಾರ ಪ್ರಾಯರಾಗಬೇಕೆಂದು ನನ್ನ ಅಣ್ಣತಮ್ಮಂದಿರನ್ನು ಅಕ್ಕತಂಗಿಯರನ್ನು ಅಂಗಲಾಚಿ ಬೇಡಿಕೊಳ್ಳುತ್ತಿರುವ,

ಸದಾನಂದ ಶ್ರೀಮಂತ ಕೆರೋಡಿ
ಸುಬ್ಬರಾವ್ ಬಿ. ಎ.

ವರ್ತಮಾನಸಾರ

ಇಹವೃತ್ತ

ಮಳೆಯಿಲ್ಲ ಮೋಡಗಳು ಮಾತ್ರ ಆಡಿದಾಡುತ್ತಲಿವೆ.

ಮುಂಬೈಕರ್ನಾಟಕ

ವಿಜಾಪೂರದಲ್ಲಿ ಇಲಿಗಳು ಬೀಳುತ್ತಿರುವವೆಂದು ತಿಳಿಯುತ್ತದೆ.

ಬೆಳಗಾವಿ, ಹುಬ್ಬಳ್ಳಿ, ಧಾರವಾಡ, ಹಾವೇರಿ, ಹಾನಗಲ್ಲಗಳಲ್ಲಿ ಪ್ಲೇಗಿನ ಸಂಚಾರವಾಗಿದೆ.

ಮದ್ರಾಸ ಕರ್ನಾಟಕ

ಗುಬ್ಬಿ ನಾಟಕ ಸಭೆಯವರು ಬಳ್ಳಾರಿಯಿಂದ ಅನಂತಪೂರಕ್ಕೆ ಹೋಗಿ ಆ ಮೇಲೆ ಬಾಗಲಕೋಟೆಗೆ ಬರುವರು

ಹರಪನಹಳ್ಳಿಯ ತಾಲೂಕಿನಲ್ಲಿ ಪ್ಲೇಗು ಹೆಚ್ಚಾಗುತ್ತಲಿದೆ

ಸಾಹಿತ್ಯ ಪರಿಷತ್ತಿನ ಅಸಾಧಾರಣ-ಸಭೆಯು ಕರ್ನಾಟಕ ವಿಶ್ವವಿದ್ಯಾಲಯದ ಬಗ್ಗೆ ವಿಚಾರಿಸಲು ತಾ|| ೨೨ ನೇ ದಿನ ಬಳ್ಳಾರಿಯಲ್ಲಿ ಸೇರುವದು

ಮೈಸೂರು ಕರ್ನಾಟಕ

ದತ್ತಾತ್ರೇಯ ನಾಟಕ ಮಂಡಳಿಯವರು ಶಿವಮೊಗ್ಗೆಗೆ ಹೋಗಿದ್ದಾರೆ.

ನಮ್ಮ ಮೈಸೂರಿನ ಪತ್ರ

ನಮ್ಮ ಸಧ್ಯದ ದಿವಾನರಾದ ಸರ್ ಬ್ಯಾನರ್ಜಿಯವರು ಮುಂದಿನ ಮಾರ್ಚಿನಲ್ಲಿ ತಮ್ಮ ಪದವಿಯಿಂದ ನಿವೃತ್ತರಾಗುವರು.

ಸರ್ ಬ್ಯಾನರ್ಜಿಯವರು ಸಂಸ್ಥಾನದಲ್ಲಿ ಕಾಲಿಟ್ಟು ೧೦ ವರುಷಗಳಾದವು. ಇವರು ಮೊದಲು ಪ್ರಜೆಗಳಲ್ಲಿ ಎಷ್ಟರಮಟ್ಟಿಗೆ ಪ್ರೀತಿ ಗೌರವಗಳನ್ನು ಸಂಪಾದಿಸಿದ್ದರೋ, ಅವಕ್ಕೆ ಇಮ್ಮಡಿಯಾಗಿ ಕಳೆದುಕೊಳ್ಳುತ್ತಿರುವರು. ಕಾರಣಗಳನೇಕವುಂಟು

ಭಾವೀ ದಿವಾನರ ಬಗ್ಗೆ, ಹಲವು ಜನಗಳು, ಹಲವು ರೀತಿಯಲ್ಲಿ ಹೇಳಲು ಯತ್ನಿಸಿರುವರು

ಕೆಲವರು ಈಗ ಹಾಲಿ ಪ್ರಥಮ ಕೌನ್ಸಿಲರಾಗಿರುವ, ಶ್ರೀಮಾನ್, ಕೆ. ಆರ್ ಶ್ರೀನಿವಾಸಯ್ಯಂಗಾರ್ಯರು, ದಿವಾನ ಪದವಿಗೆ ಅರ್ಹರು ಎಂದು ಹೇಳಿರುವರು. ಇತರ ವಿಷಯದಲ್ಲಿ ಒಂದೆರಡು ಮಾತು. ಇವರು ತಮಿಳರಾದಾಗ್ಯೂ ಸಂಸ್ಥಾನದಲ್ಲಿ ಬಹಳ ದಿವಸಗಳಿಂದಲೂ ಕೆಲಸ ಮಾಡಿರುವ ಕಾರಣ ಇವರು ಸಂಸ್ಥಾನದ ಸ್ಥಿತಿಗತಿಗಳನ್ನು ಚೆನ್ನಾಗಿ ಬಲ್ಲವರಾಗಿದ್ದು ಅನುಭವಶಾಲಿಗಳಾಗಿರುವರು. ಅದು ಕಾರಣ ಇವರಿಗೆ ದಿವಾನ ಪದವಿಯು ದೊರೆತಲ್ಲಿ, ಸಂಸ್ಥಾನಕ್ಕೆ ಯಾರಿಗೂ, ಅನ್ಯಾಯವಾಗಲಾರದೆಂದು ಅಭಿಪ್ರಾಯವಿದೆ.

ಮತ್ತೆ ಕೆಲವರು, ಈಗ ವಿಶ್ವವಿದ್ಯಾನಿಲಯದ ವೈಸ್ ಚಾನಸಲರಾದ ಬ್ರಜೇಂದ್ರನಾಥ ಶೀಲರ ಹೆಸರನ್ನು ಸೂಚಿಸಿರುವರು. ಶ್ರೀಮಾನ್ ಶೀಲರು ಕಲಕತ್ತಾ ವಿಶ್ವವಿದ್ಯಾನಿಲಯದಲ್ಲಿ ಹೆಚ್ಚು ಕಾಲ ಕೆಲಸಮಾಡಿ, ವಿದ್ಯಾಭ್ಯಾಸದ ವಿಷಯದಲ್ಲಿ ಹೆಚ್ಚು ನುರಿಯಾಗಿರುವರು. ರಾಜ್ಯಾಡಳಿತದಲ್ಲಿ ಹೆಚ್ಚು ಪರಿಶ್ರಮವಿಲ್ಲದಿರುವ ಕಾರಣ ದಿವಾನ್ ಪದವಿಯು ದೊರೆಯಲಾರದೆಂದು ನಮ್ಮ ಭಾವನೆಯಿದೆ.

ಅಲ್ಲದೆ, ಮತ್ತೆ ಬೇರೆ ಕೆಲವರು, ಹೊರಗಿನಿಂದ ಯಾರಾದರನ್ನು ಕರೆದು ತರಬೇಕೆಂದು ಬಯಸುತ್ತಿರುವರು. ಹೆಚ್ಚು ಹೇಳಬೇಕಾದುದು ಅಗತ್ಯವಿಲ್ಲವು, ಕರ್ನಾಟಕದ ವಿಶ್ವವಿದ್ಯಾಲಯದ ಬಗ್ಗೆ ಅಭೀಷ್ಟವು ಪೂರ್ಣವಾಗಬೇಕಾಗಿದ್ದಲ್ಲಿ, ಮುಂದೆ ದಿವಾನರಾಗುವವರ ಸಂಪೂರ್ಣ ಸಹಾನುಭೂತಿಯೂ ಆವಶ್ಯಕವು, ಅತ್ಯಾವಶ್ಯಕ ದಿವಾನ್ ಪದವಿಗೆ, ನಿಯಮಿಸುವ ಅಧಿಕಾರವು ನಮ್ಮ ಮಹಾರಾಜರಲ್ಲಿರುವುದರಿಂದ, ಆ ಪದವಿಗೆ ಯಾರನ್ನು ನೇಮಕ ಮಾಡುತ್ತಾರೆಂಬ ಬಗ್ಗೆ ಸಂಸ್ಥಾನದ ಪ್ರಜೆಗಳೂ, ಇಡೀ ಕರ್ನಾಟಕದವರೆಲ್ಲರೂ, ಆತುರದಿಂದ ನೋಡುತ್ತಿರುವರು.

ನಮ್ಮ ಶ್ರೀಮಾನ್ ಮಹಾರಾಜರು, ಸಕಲ ವಿದ್ಯಾಪಾರಂಗತರು, ಭೇದಭಾವವಿಲ್ಲದವರು. ರಾಜಋಷಿಯಂತಿರುವರು. ಸಾಹಿತ್ಯಾಭಿವೃದ್ಧಿಯಲ್ಲಿ, ಬೇಕಾದಷ್ಟು ಸಹಾಯ ಮಾಡಿರುವರು. ಸಂಗೀತದಲ್ಲಂತೂ ಅವರಿಗೆ ಬಹಳ ಆಶೆ, ಮೊನ್ನೆ ಬೆಳಗಾವಿಯಲ್ಲಿ ಆದ ರಾಷ್ಟ್ರೀಯ ಮಹಾಸಭೆಯ ಜೊತೆಗೆ ನಡೆದ ಸಂಗೀತ ಸಮ್ಮೇಳನಕ್ಕೆ ಅರಮನೆಯಿಂದ ಸ್ವಂತ ಖರ್ಚಿನಿಂದಲೇ ಅನೇಕ ಸಂಗೀತ ವಿದ್ವಾಂಸರನ್ನು ಕಳುಹಿಸಿದ್ದು, ಕರ್ನಾಟಕದವರೆಲ್ಲರಿಗೂ ಗೊತ್ತಾದ ವಿಷಯವೇ ಆಗಿದೆ. ಸಂಗೀತ ಮಾತ್ರವಲ್ಲದೆ, ನಾಟಕ ಕಲೆಯಲ್ಲಿಯೂ ಅವರಿಗೆ ಅಭಿರುಚಿ ಹೆಚ್ಚು. ಇದಕ್ಕೆ ನಿದರ್ಶನವಾಗಿ, ಮೊನ್ನೆ ದಸರೆಯ ಹಬ್ಬಕ್ಕೆ ಬಂದಿದ್ದ, ಮಧುರಾ ಮೀನಾಂಬಿಕಾ ನಾಟಕ ಸಭೆಯವರಿಂದಲೂ, ಮೈಸೂರು ಸಾಹಿತ್ಯಾಭಿವೃದ್ಧಿ ನಾಟಕ ಸಂಘದಿಂದಲೂ ಜಗನ್ಮೋಹನ ಬಂಗಲೆಯಲ್ಲಿ ನಾಟಕಗಳನ್ನಾಡಿಸಿ, ತಕ್ಕ ಸನ್ಮಾನವನ್ನು ಮಾಡಿದರು.

ಹರಿ ಕಥಾ ಪ್ರಸಂಗದಲ್ಲಿ, ಇನ್ನೂ ಹೆಚ್ಚು ಅಭಿರುಚಿಯನ್ನು ತೋರಿಸುವರು. ದೃಷ್ಟಾಂತವೇನೆಂದರೆ, ಮದರಾಸಿನಿಂದ ಬಂದಿದ್ದ ಶ್ರೀಮತಿ ಸರಸ್ವತಿದೇವಿಯವರಿಂದ ಹರಿಕಥೆಯನ್ನು ಮಾಡಿಸಿ, ೧೦೦೦ ರೂಪಾಯಿ ಬಹುಮಾನವನ್ನೂ, ಕೈಗೆ ಬಂಗಾರದ ತೋಡೆಗಳನ್ನೂ, ಬೆಲೆ ಬಾಳುವ ಒಂದು ಸೀರೆಯನ್ನೂ ದಯಪಾಲಿಸಿರುವರು. ಇದು ಕರ್ನಾಟಕಸ್ಥರೆಲ್ಲರಿಗೂ ಆನಂದದ ಸುದ್ದಿಯೆಂದು ಭಾವಿಸುವೆನು

ಹಿಂದುಸ್ಥಾನ

ಈಗಿನ “ಕೌನ್ಸಿಲ್ ಆಫ್ ಸ್ಟೇಟ್” ಅವಧಿಯು ಮುಗಿಯಿತು. ಮುಂದೆ ಸಭಾಸದರನ್ನು ಆರಿಸುವ ಕೆಲಸವು ಬೇಗನೆ ಪ್ರಾರಂಭವಾಗುವದು ೨೬ ನೇ ನವಂಬರ ದೊಳಗಾಗಿ ಪಂಜಾಬ ಇಲಾಖೆಯವರು ಈ ಆರಿಸುವ ಕೆಲಸವನ್ನು ಮುಗಿಸಬೇಕು.

ಪೌರ್ವಾತ್ಯ ವಸ್ತು ಸಂಶೋಧನಕ್ಕಾಗಿ ಮದ್ರಾಸ ವಿಶ್ವವಿದ್ಯಾಲಯದವರು ಪ್ರತಿವರ್ಷ ೪೦ ಸಾವಿರ ರೂಪಾಯಿ ವೆಚ್ಚಮಾಡಬೇಕೆಂದು ನಿರ್ಧರಿಸಿದ್ದಾರೆ. ಸಂಸ್ಕೃತ, ದ್ರಾವಿಡ ಭಾಷೆಗಳು ಮತ್ತು ಮುಸಲ್ಮಾನ ಧರ್ಮ ಇವೇ ಮೊದಲಿಗೆ ಪರಿಶೋಧನೆಯ ವಿಷಯಗಳಾಗಿವೆ.

ಅಂದಮಾನ ನಡುಗಡ್ಡೆಯು ‘ಆಂಗ್ಲೋ-ಇಂಡಿಯನ್ನ’ರಿಗೆ ವಸಾಹತು ಮಾಡಲಿಕ್ಕೆ ಯೋಗ್ಯವಾಗಿದೆಯಂತೆ. ಆದ್ದರಿಂದ ಇನ್ನು ಅಲ್ಲಿಗೆ ಅವರು ತಂಡತಂಡವಾಗಿ ತೆರಳುವರು. ಕರೇಸೀರಿನ ಶಿಕ್ಷೆಯಾದವರು ಇನ್ನು ಅಂದಮಾನಕ್ಕೆ ಕಳುಹಿಸಲ್ಪಡರು.

ಎಸ್, ಐ, ಆರ್. ರೇಲ್ವೇದವರು ‘ಇಂಟರ’ ಮತ್ತು ೩ ನೇ ವರ್ಗದ ದರಗಳನ್ನು ಜನವರಿಯಿಂದ ಕಡಿಮೆ ಮಾಡುವರು. ಸದರ್ನ ಮರಾಠದವರು ಇವರನ್ನು ಅನುಸರಿಸುವರೋ?

ತಮಿಳರಿಗಾಗಿ ಒಂದು ಸ್ವತಂತ್ರ ವಿಶ್ವವಿದ್ಯಾಲಯವಿರಬೇಕಾಗಿ ಮದ್ರಾಸ ವಿಶ್ವವಿದ್ಯಾಲಯದವರು ನಿಶ್ಚಯಿಸಿದ್ದಾರೆ

ಪರದೇಶ

ಜಾವಾದಿಂದ ವಾಯಂಗ ನಾಟಕ ಮಂಡಳಿಯವರು ದಿಸೆಂಬರ ೩೦ ಗಳಲ್ಲಿ ಮದ್ರಾಸಕ್ಕೆ ಬಂದು ಆ ಮೇಲೆ ಹಿಂದುಸ್ಥಾನದಲ್ಲೆಲ್ಲ ತಿರುಗಾಡುವರು. ಈ ನಾಟಕ ಕಂಪನಿಯು ಜಾವಾದಲ್ಲಿ ಬಹು ಪ್ರಸಿದ್ಧವಾಗಿದೆಯಂತೆ

ಪ್ರಕಟನೆ

ದಿ ಏಶಿಯಾಟಿಕ್ ಗವರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಪೋಲ್ಸಿಗಳ ಚಿಟ್ಟಿ ಎತ್ತುವ ಕ್ರಮವು ೧೯೨೫ ನೇ ಇಸ್ವಿಯ ಜುಲೈ ೩೧ ನೇ ತಾರೀಖಿನ ಸಾಯಂಕಾಲದ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟಿ ಮ್ಯಾಜಿಸ್ಟ್ರೇಟರಾದ ಶ್ರೀ ಬಿ ಬಸವಾರಾಧ್ಯ ಬಿ ಎ ಬಿ ಎಲ್ ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ೧೦೦೦ ರೂ. ಸಾಲ ದೊರೆಯ ಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೧೧೬೦೭ ಶ್ರೀ. ಆರ್ ಜಿ ಮುಕ್ಕೇರಿ ಬುಕ್ಕಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ ೧೧೮೪೫ ಶ್ರೀ ದೀವಜರಾಮ ನಾಭಿರಾಮ ನಾಯಿಕ ಕಂಪಾವುಂಡರ, ಜಂ ನಾಶ ದವಾಖಾನೆ ವಾಯ, ಸಯಾ ನ ಬಾ ಸಿ ಆಯ ರೇಲ್ವೇ ಸರತ (ಬ ರೋಡಾ ಪ್ರ)

(೩) ಬಾಂಡ ನಂ ೧೧೫೬೭ ಶ್ರೀ ಶ್ರೀ ರಾಮ ಮೂರ್ತಿ ಆರಾಧ್ಯಲು ರಾಮಚಂದ್ರರಾವ ಗುರು ಪಿ ರ ನ್ಯಗ ? ದಿವಾಸ ಚಿತ್ತೂ

(೪) ಬಾಂಡ ನಂ ೧೨೭೭ ಶ್ರೀ ನಂದಗಿರಿ ವೆಂಕಟರಾಮ ದಾಸ ಪ್ರೊಪ್ರಾಯಿಟರ ಮುಕುಂದ ನ್ ತಿ ವಾಸ

(೫) ಬಾಂಡ ನಂ [illegible]

೧-೮ ೨೫ { ಬಿ. ಎಸ್ ಲಾಡ, ಜೀಫ ಏಜಂಟ ಹುಬ್ಬಳ್ಳಿ

"ಲೋಕರಹಸ್ಯ"

ಕೃಷಿಯ ಅತ್ಯುತ್ತಮ ರೀತಿಗಳು, ವ್ಯಾಪಾರದ ವಿಷಯಗಳು ಹೊಲಿಗೆ, ಮಕ್ಕಳನ್ನು ಸಾಕುವ ವಿಷಯಗಳನ್ನು ಒಡವರಿಗೆ ಬೇಕಾದ ಹಣಸಂಪಾದನೆಯ ವಿಷಯಗಳು, ರಸಿಕರಿಗೆ ವಿನೋದ ವಿಚಾರ, ರಾಜಕೀಯ ವಿಷಯಗಳು, ಆಯುರ್ವೇದ ಯುನಾನಿ ವೈದ್ಯ ಸಂಗ್ರಹ. ಪ್ರತಿಯೊಬ್ಬನೂ ತಿಳಿಯಬೇಕಾದ ಲಾ' ವಿಚಾರ, ವಿದ್ಯಾ ವಿಷಯ, ವೇದಾಂತ ವಿಚಾರಗಳಿಂದಲೂ, ತುಂಬಿ ತುಳುಕುತ್ತಿರುವ ಈ ಮಾಸ ಪತ್ರಿಕೆಗೆ ವರ್ಷ ಚಂದಾ ರೂ. ೩-೮ ೦ ಮಾದರಿ ಸಂಚಿಕೆಗೆ ೦ ೫ ೦

ಪ್ರತಿ ತಿಂಗಳಲ್ಲೂ ೬೦ ಪುಟಗಳಿಗೆ ಕಡಿಮೆಯಿಲ್ಲದ ವಿಷಯಗಳಿರುತ್ತವೆ

" ಲೋಕರಹಸ್ಯ " ಆಫೀಸು, ವಿರಾಜಪೇಟೆ (ಕೊಡಗು)

ಪುನರ್ವಿವಾಹ ವಾಗ ತಕ್ಕದ್ದವ.

ಬ್ರಾಹ್ಮಣ ವರನು ೩೦ ವರ್ಷ ಕುಲೀನ ಸ್ಥಿತಿಗತಿಯುಳ್ಳವನು ಕುಲೀನ ವಿಧವೆಯು ಸ್ವತಂತ್ರ ಪತ್ರ ವ್ಯವಹಾರ ಮಾಡಬೇಕು

ಕಮಲಾಕಾಂತ
ಕನ್ನಡಿಗ ಬಾಗಲಕೋಟೆ

ಧಾರವಾಡ ಕರ್ನಾಟಕ [illegible] ಹೊರಡುವ

ತಿಳಿಗನ್ನಡದ ಸ್ವಧರ್ಮ ಮಾಸಪತ್ರಿಕ

ಸಂಪಾದಕ— [illegible] ಎಮ್.ಎ.

ಪ್ರಾಪಂಚಿಕ ಸಂಪತ್ತೂ ಪಾರಮಾರ್ಥಿಕ ಸಂಪತ್ತೂ ಕೂಡಿ ಬೆಳೆಯುವಂತೆ ಸ್ವಸಂಸ್ಕೃತಿಪ್ರೇಮ, ಸದೇಶಪ್ರೀತಿ ಸ್ವಭಾಷಾಭಿಮಾನ, ಸ್ವಧರ್ಮಾನುರಾಗ ಸ್ವಾರ್ಥತ್ಯಾಗ ಮುಂತಾದ ಗುಣಗಳನ್ನು ಉಜ್ವಲಗೊಳಿಸುವ ಕೀರ್ತನ, ಪುರಾಣ, ಪ್ರವಚನ, ನಿಬಂಧ ಜೀವನ ಚರಿತ್ರ, ಇತಿಹಾಸ ಸಾಂತ ಕಥೆ ಮತ್ತು ಕಾದಂಬರಿ ಮುಂತಾದ ರೂಪದಲ್ಲಿ ಜನಮಂಡಲಿಯ ಉನ್ನತಿಗೆ ಅಗತ್ಯವಾದ ಸರ್ವ ವಿಷಯಗಳನ್ನೂ ಸ್ವಧರ್ಮ ಪತ್ರಿಕೆಯಿಂದ ಪ್ರಚಾರಮಾಡಿ [illegible]

ವರ್ಷಕ್ಕೆ ೨ ರೂ

SUB-AGENTS
URGENTLY REQUIRED

ಕಳಗ ನಮೂದಿಸಿದ ಜಿಲ್ಹೆಗಳಿಗೆ
ಸಬ್ - ಏಜಂಟರು ಬೇಕಾಗಿದೆ

ಧಾರವಾಡ, ಬೆಳಗಾವ, ವಿಜಾಪುರ, ಕಾರವಾರ, ಈ ಜಿಲ್ಹೆಗಳಿಗೆ (ಆಯಾಯ) ಜಿವ ಣಿ ವಿಮೆ ಪಟ್ಟೀಲ, ವ ಮೂಲೆಡಾಯಿಲ್, (ಆ್ಯಫ್ರಿಕನ್ ಎಂ) ವ್ಯಾಪಾರ ಮಾಡುವದಕ್ಕೆ ಏಜಂಟರುಗಳು ಬೇಕಾಗಿರುವರು ಕೆಳ ಸ ಪತ್ತೆಗೆ ಸಮಕ್ಷಮ ಭೆಟ್ಟಿಯಾದಲ್ಲಿ ಯಾವತ್ತೂ ಏಜನ್ಸಿಯ ಸುಜಕೂರು ತಿಳಿಯುವದು.

S Korvi & Co , Hubli

FOR SAFETY AND GOOD SERVICE

IN

LIFE ASSURANCE

GO TO

THE ORIENTAL

IN AGE SIZE AND STRENGTH

THE

GREATEST INDIAN

LIFE ASSURANCE COMPANY

Apply for full particulars to—

N. K. Kulkarni.
Agent Bagalkot

ಸಾಣೆಕಲ್ಲುಗಳು

ಸಣ್ಣ ದೊಡ್ಡ ಸಾಣೆ ಕಲ್ಲುಗಳು ನಮ್ಮ ಕಡೆಗೆ ದೊರೆಯುತ್ತವೆ ಅಂಗಡಿ ಮಾಲಿಕರು ಈ ದರಗಳ ಕಡೆಗೆ ಲಕ್ಷ್ಯ ಕೊಡಲಾಗುವದಲ್ಲ ವಿಶೇಷ ಹಕೀಕತ ಕೆಳಗಿನ ವಿಳಾಸಕ್ಕೆ ಬರೆದು ಕೇಳಿ.

ನೃಸಿಂಹ ಏಜನ್ಸಿ
ಬಾಗಲಕೋಟೆ
(Dist. Bijapur)

ಈ ಪತ್ರಿಕೆಯು ಮಂಗಳವೇಢೆ ರಾಜಿ ರಾಯರ ಮಕ್ಕಳಾದ ಶ್ರೀನಿವಾಸರಾವ ಇವರು ಪ್ರಕಟಿಸಿದರು

ವಿದ್ಯಾರ್ಥಿ ಮುದ್ರಣಾಲಯದಲ್ಲಿ ಮುದ್ರಿಸಿ ಬಾಗಲಕೋಟೆಯಲ್ಲಿ ಪ್ರಸಿದ್ಧಪಡಿಸಿತು.

ರ. ನಂ. ಬ. ೧೯೪೭

ವಾ. ವಂದಾ ೧—೪—೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ ॥ — ಮನು

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ } ಬಾಗಲಕೋಟೆ ಶುಕ್ರವಾರ ಮಿತಿ ಮಾರ್ಗಶಿರ ಶುದ್ಧ ೫ ಶಕೆ ೧೮೫೭. ತಾ. ೨೦-೧೧-೧೯೩೫. { ಸಂಚಿಕೆ ೩೨

ಸಂಪಾದಕ ಟಿಪ್ಪಣಿ.

(*)

ನನ್ನ ಮನಸಿನ ಮೋಹವಾದಿ ಕಟ್ಟುವೆನಾನು ।
ನಿನ್ನ ಬೆಳಕನು ಮಾಡಿದಂಥ ಮುಕ್ಕಳ ಮೊನ್ನು ।
ಚಿನ್ನದಾಗರು ಚಿನ್ನ ಮೋಹಬನ್ನಿಯು ನೊಂದು ॥
ಚಿನ್ನ ಯಾಕೆ ಅದನ್ನು ॥

ನನ್ನ ದೇಹವು ನಿನ್ನ ವೀಣಾಸನಕಾಗಿ ।
ಕನ್ನನನ್ನ ಕಲ್ಲಾಗಿ ನಿನ್ನನಿಟ್ಟಿದೆ ।
ನನ್ನ ಚಿತ್ತವು ನಿನ್ನ ಗಂಧವನು ಬೇಡುತ ।
ಗಂಧವಾಸವಂದು ತಿಳಿಯೆ ॥

— ಅಂಬಿಕಾತನಯ ದತ್ತ

ಶ್ರೀ ಭಾಟೀಯವರು ಕರ್ನಾಟಕ ಕಾಲೇಜಿಗೆ ಬಂದಾಗ್ಗೆ ಅವರಿಗೆ ಅಲ್ಲಿಯ ವಿದ್ಯಾರ್ಥಿಗಳೆಲ್ಲ ಅಪಮಾನ ಮಾಡಿದರೆಂದು ಯಾವುದೋ ಒಂದು, ಕಾಗೆಯು ಎಲ್ಲಿಯೋ ಕೂಗಿತಂತೆ! ಕೂಡಲೇ 'ಕೇಸರಿ'ಯು ಕನ್ನಡಿಗರ ಮೇಲೆ ಗದೆಯೆತ್ತಿತು. ಶ್ರೀ ಭಾಟೀಯವರೇ ಪತ್ರ ಬರೆದು, ತಮಗೆ ಅಪಮಾನ ಮಾಡಿದ ಸಂಗತಿಯು ಸುಳ್ಳೆಂದು 'ಕೇಸರಿ'ಗೆ ತಿಳಿಸಿದರು. ಆಗ್ಗೆ 'ಕೇಸರಿ'ಯು ಕಣ್ಣು ತೆರೆಯಿತು. ಸತ್ಯವಾದ ವಿಷಯಗಳನ್ನೇ ಪ್ರಸಿದ್ಧಿಸುವ ಪಣ ತೊಟ್ಟ 'ಕೇಸರಿ'ಯಲ್ಲಿ ಇಂತಹ ವಿಷಯಗಳಿಗೆ ಸ್ಥಳವೂ ದೊರೆತದ್ದು ಆಶ್ಚರ್ಯವು! ಆದರೆ ಕರ್ನಾಟಕ, ಕನ್ನಡಿಗರ ವಿಷಯವಾಗಿ ಬರೆಯಬೇಕಾದರೆ ತಥ್ಯಾಂಶದ ಕಡೆಗೆ ಲಕ್ಷ್ಯ ಕೊಡುವ ಅವಶ್ಯಕತೆಯು, ಇಲ್ಲವೆಂದು 'ಕೇಸರಿ'ಯ ಮತವೋ? ಕನ್ನಡ-ನುಡಿ ನಾಡುಗಳ ಬಗ್ಗೆ ಮೊದಲು ಏನಾದರೂ ಬರೆದು, ಪುನಃ ಕ್ಷಮೆ ಬೇಡುವ ಪ್ರಸಂಗವು 'ಕೇಸರಿ'ಗೆ ಬಂದದ್ದು ಇದು ಎರಡನೇ ಸಲ. ಪುನಃ ಹೀಗಾಗದ ಹಾಗೆ ಇನ್ನಾದರೂ ಅದು ಜಾಗೃತವಾಗಿರಲಿ! ಇತ್ತ 'ಕೇಸರಿ'ಯಲ್ಲಿ ಬಂದುದೆಲ್ಲ ಪ್ರಮಾಣವಾಕ್ಯವೆಂದು ತಿಳಿಯುವ "ಕಾಸವಾವೃತ್ತ"ವು ಕೇಸರಿಯಲ್ಲಿನ ವರ್ತಮಾನವನ್ನು ನೋಡಿದ ಕೂಡಲೆ, ವಿಕಾರವಶವಾಗಿ ಕನ್ನಡಿಗರಮೇಲೆ ಹರಿಹಾಯ್ದು ಬಿದ್ದಿದೆ. ಕನ್ನಡನಾಡಿನ ಸಂಗತಿಗಳನ್ನ ಸಹ 'ಕೇಸರಿ'ಯಿಂದ ತಿಳಿದು ಕೊಳ್ಳುವ ಸಿದ್ಧತೆಯು ಈ "ವೃತ್ತ"ಕ್ಕಿದೆ! ನಿಜವಾಗಿ "ವೃತ್ತ"ಕ್ಕೆ ಕನ್ನಡನಾಡಿನ ಸಮಾಚಾರದ ಬಗ್ಗೆ ಹೆಚ್ಚಾಗಿ ಗೊತ್ತಿರಬೇಕು. ಮತ್ತು 'ಕೇಸರಿ'ಯಂತಹ ಪತ್ರದಲ್ಲಿ ವಿನಾದಾಖಲೆ ಸುಳ್ಳು ಬಂದರೆ ಅದನ್ನು ತಿದ್ದಬೇಕು. ಅದನ್ನು ಬಿಟ್ಟು ತಾನೇ 'ಕೇಸರಿ'ಯ ಬೆನ್ನು ಹತ್ತಿ, ತನ್ನ ತಾಯ್ನಾಡಿನ ಬಗ್ಗೆ, ತಾನೇ ಅಜ್ಞಾನವನ್ನು ತೋರಿಸಿದ್ದು ಸೋಜಿಗವಾದುದು.

ನಿಖಿಲ ಭಾರತ ಸಾಹಿತ್ಯಸಂಘದ ಬಗ್ಗೆ 'ಕನ್ನಡಿಗ'ನಲ್ಲಿ ಮೊದಲನೇ ಲೇಖವು ಪ್ರಸಿದ್ಧವಾದ ಕೂಡಲೆ, ಈ ಸಂಘದಲ್ಲಿ ವಿಶೇಷವಾದ ಅಭಿಮಾನವಿದ್ದವರು, "ಕನ್ನಡಿಗ"ದಲ್ಲಿ ಪ್ರಕಟವಾದುದು ಸುಳ್ಳು, ನೀವು ಕಲಕತ್ತೆಗೆ ಹೋಗಿ ನೋಡಿದ್ದು, ನಿಮ್ಮ ಸಂಶಯ ನಿವಾರಣವನ್ನೇಕೆ ಮಾಡಿಕೊಳ್ಳಲಿಲ್ಲ ವೆಂದೂ, "ನಿರಾಧಾರವಾಗಿ 'ಕನ್ನಡಿಗ'ನಲ್ಲಿ ಪ್ರಸಿದ್ಧವಾದ ಲೇಖವು ನಮಗೆ ಮಾನ್ಯವಲ್ಲ" ವೆಂದೂ, ಅನೇಕ ಬಗೆಯಾಗಿ ಕೆಲ ಜನರು ನಮ್ಮ ಮೇಲೆ ಕೋಪಾವಿಷ್ಟರಾದರು. ಈಗ್ಗೆ ಮುಂಬೈ ಇಲಾಖೆಯ, "ಸಿ. ಆಯ್. ಡಿ. ಡೆಪ್ಯುಟಿ 'ಇನ್‌ಸ್ಪೆಕ್ಟರ ಜನರಲ' ಆಫ್ ಪೋಲೀಸ" ಇವರಿಂದ ನಮಗೆ ಬಂದ ಪತ್ರವನ್ನು ಎಲ್ಲರೂ ಓದಿದರೆ, ತಥ್ಯಾಂತವು ತಾನೇ ಗೊತ್ತಾಗುವದು— "ನಿಮ್ಮ ತಾ|| ೩-೧೦-೩೫ ನೇ ದಿನ ಮುಂಬೈ ಸರಕಾರದ ಕಾರ್ಯದರ್ಶಿಗಳಿಗೆ ಬರೆದ ಪತ್ರವು ವಿಚಾರಕ್ಕಾಗಿ ನಮ್ಮ ಕಡೆಗೆ ಬಂದಿತ್ತು. ವಿಚಾರವಾಗಿದೆ. ಕಲಕತ್ತೆಯ ಸಾಹಿತ್ಯ ಸಂಘವು ಖಂಡಿತವಾಗಿಯೂ ತಸ್ಕರ ಸಂಸ್ಥೆಯು. ಸೂರಾ ಬಝಾರದ ೭೭ ನೇ ನಂಬರಿನಲ್ಲಿ ಅವರ ಕಾರ್ಯಾಲಯವಿದ್ದಿತು. ಆದರೆ ಈಗ್ಗೆ ಅವರು, ಬಾಡಿಗೆಯನ್ನು ಸಹ ಕೊಡದೇ ಅಲ್ಲಿಂದ ಓಡಿಹೋಗಿದ್ದಾರೆ'! ಇದರ ಮೇಲಿಂದಲಾದರೂ ಈ ಸಂಸ್ಥೆಯು ಎಂತಹದೆಂಬುದು ಅಖಿಲ ಕರ್ನಾಟಕಕ್ಕೆ ಗೊತ್ತಾಗಲಿ. ಪದವಿಯ ಮೋಹವು ಯಾರಿಗಾದರೂ ಇದ್ದರೆ ಅವರು ಕಣ್ತೆರೆಯಲಿ. ಜನರು ಈ ಸಂಘದ ಪದವಿಗಳನ್ನು ಹೆಸರಿನ ಮುಂದೆ ಹಚ್ಚುವದನ್ನು ಈಗಲಾದರೂ ಬಿಡಲಿ! ಇನ್ನು, ಸರಕಾರದವರು ಇದು ತಸ್ಕರ ಸಂಸ್ಥೆಯೆಂದು ಇಷ್ಟಕ್ಕೇ ಸುಮ್ಮನೇ ಕುಳ್ಳಿರದೇ, ಸಂಘದವರು ಅನೇಕ ಕಾಲದಿಂದ ತಮ್ಮ ತಸ್ಕರತನದಿಂದ ಜನರನ್ನು ಮೋಸಗೊಳಿಸಿದ್ದಕ್ಕಾಗಿ, ಅವರನ್ನು ಮತ್ತು ಅವರ ಹಸ್ತಕರನ್ನು, ಶೋಧಿಸಿ, ಅವರಿಗೆಲ್ಲ ಯೋಗ್ಯ ಶಿಕ್ಷೆಯನ್ನು ಮಾಡಬೇಕಾಗಿ ಆಗ್ರಹ ಪಡುತ್ತೇವೆ. ಈ ಬಗ್ಗೆ "ಕನ್ನಡಿಗ"ನು ಸರಕಾರಿ ಅಧಿಕಾರಿಗಳ ಸಂಗಡ ಪತ್ರವ್ಯವಹಾರ ನಡಿಸಿಯೇ ಇದ್ದಾನೆ. ಹೆಚ್ಚಾದ ಸಂಗತಿಗಳು ಪುನಃ ಗೊತ್ತಾಗುವವು.

ಕನ್ನಡಿಗನ ಉಪಕಾರಕರ್ತೃಗಳಾಗಿ ಹುಬ್ಬಳ್ಳಿಯ ಸರದಾರ ಮಹಾಬೂಬ ಅಲ್ಲಿಖಾನ ಸಾಹೇಬ ಬಹಾದರ ಸವಾಬರವರು ೧೦ ರೂ. ಕಳಿಸಿದ್ದಾರೆ. ಮತ್ತು ಕೆಳಗೆ ಕಾಣಿಸಿದ ಮಹನೀಯರು ಪ್ರೋತ್ಸಾಹಕರಾಗಿ ಹಣ ಕಳಿಸಿರುವರು: —

(೧) ಆರ್. ಎ. ಜಹಗೀರದಾರ ಮುಂಬಯಿ.

(೨) ಪುರುಷೋತ್ತಮಾಚಾರ್ಯ ರಾಯಚೂರ ವಕೀಲ ಹಾವೇರಿ

(೩) ಪ. ಪ. ಪಾಟೀಲ ಬಿ. ಎಲ್. ಬಿ. ವಕೀಲ ಹುಬ್ಬಳ್ಳಿ
(೪) ಬಿ. ಬಿ. ದೇಶಪಾಂಡೆ, ಧಾರವಾಡ.
(೫) ವಿರುಪಾಕ್ಷ ಲಿಂಗೋ ಕುಲಕರ್ಣಿ ಗದಗೇರಿ
(೬) ರಾವ ಬಹಾದ್ದೂರ ರಾಯಚೂರ ಹಾವೇರಿ ಇವರಿಗೆಲ್ಲ "ಕನ್ನಡಿಗ"ನು ಋಣಿಯಾಗಿದ್ದಾನೆ.

ಕರ್ನಾಟಕ ಸಾಹಿತ್ಯ ಪರಿಷತ್ತಿನ ಸಭಾಸದರ ವಿಶೇಷ ಅಧಿವೇಶನವು ಬಳ್ಳಾರಿಯಲ್ಲಿ ೨೨ ನೇ ತಾ|| ದಿನ ನೆರೆಯುವದು. ಸಾಹಿತ್ಯ ಪರಿಷತ್ತು ಮಲಗಿಕೊಂಡಿದೆ, ಕೆಲಸ ಮಾಡಲೊಲ್ಲದು. ಕರ್ನಾಟಕವು ತುಂಡುತುಂಡಾಗಿ ಹೋದರೂ, ಅದು ಪರಿಷತ್ತಿಗೆ ಗೊತ್ತಾಗದು; ಕರ್ನಾಟಕವನ್ನು ಅನ್ಯರು ಆಕ್ರಾಂತ ಮಾಡಲಿ, ವಿಶ್ವವಿದ್ಯಾಲಯವು ಹೊರಡಲಿ ಹೊರಡದಿರಲಿ; ಕರ್ನಾಟಕಕ್ಕೆ ಏನಾದರೂ ಆಗಲಿ, ಆದರೆ ಸಾಹಿತ್ಯ ಪರಿಷತ್ತಿಗೆ ಮಾತ್ರ ಆ ಬಗ್ಗೆ ಏನೂ ತಿಳಿಯುವದಿಲ್ಲ; ಎಂಬಿದಾಗಿ ಎತ್ತ ನೋಡಿದರೂ ಟೀಕೆಗಳು ಪರಿಷತ್ತಿನ ಮೇಲೆ ಸುರಿಯುತ್ತಲಿವೆ. ಈಗ್ಗೆ ಏನೇ ಆಗಲಿ; ಪರಿಷತ್ತು ಒಂದು ವಿಶಿಷ್ಟ ಉದ್ದೇಶದಿಂದ ಬಳ್ಳಾರಿಯಲ್ಲಿ ಕೂಡುವದು. ಈಗ್ಗೆ ವಿಶ್ವವಿದ್ಯಾಲಯದ ವಿಷಯಕ್ಕೆ ಬಹು ಮಹತ್ವ ಬಂದಿದೆ. ಆದುದರಿಂದ, ಬಳ್ಳಾರಿಯಲ್ಲಿ ಕೂಡಿದ್ದಾಗ್ಗೆ ಈ ಪರಿಷತ್ತಿನವರು ಕರ್ನಾಟಕ ವಿಶ್ವ ವಿದ್ಯಾಲಯದ ವಿಷಯಕ್ಕೆ ನಿಶ್ಚಿತವಾದ ಮಾರ್ಗವನ್ನೊಂದು ಗೊತ್ತುಪಡಿಸಿ, ಆ ಬಗ್ಗೆ ಅವ್ಯಾಹತವಾಗಿ ಕೆಲಸಮಾಡಲು ಹಣವನ್ನು ಕಾಯ್ದಿಟ್ಟು? ಅವಶ್ಯವಿದ್ದರೆ ಕೆಲವು ಕಾಲದವರೆಗೆ ಒಬ್ಬಿಬ್ಬರಿಗೆ ವೇತನಕೊಟ್ಟು, ಈ ಕಾರ್ಯವು ಬೇಗನೇ ಕೈಗೂಡುವಂತೆ ಪ್ರಯತ್ನಿಸಬೇಕು. ಬಳ್ಳಾರಿಗೆ ಬರುವ ಸಭಾಸದರು ರೇಲವೇ ವೆಚ್ಚವನ್ನು ಪರಿಷತ್ತಿನವರೇ ವಹಿಸಬೇಕೆಂದು ಗೊತ್ತುಪಡಿಸಿದ್ದು ನಮಗೆ ವಿಚಿತ್ರವೆನಿಸುತ್ತದೆ. ಸಾರ್ವಜನಿಕ ಸಂಸ್ಥೆಗಳ ಹಣವು ಈ ಬಗೆಯಿಂದ ವೆಚ್ಚವಾಗುವದು ನಮಗೆ ಉಚಿತವಾಗಿ ಕಾಣದು. ಅದರಲ್ಲಿಯೂ ಮಹತ್ವದ ಸಾರ್ವಜನಿಕ ಕೆಲಸಗಳನ್ನು ಮಾಡುವದಕ್ಕೆ ಹಣವಿಲ್ಲವೆಂದು ಸಾಹಿತ್ಯ ಪರಿಷತ್ತಿನವರು ಇತ್ತ ಹೇಳುವದೂ ಅತ್ತ ಸಭಾಸದರ ರೇಲವೇ ವೆಚ್ಚವನ್ನು ವಹಿಸುವದೂ ಸಯುಕ್ತಿಕವಲ್ಲವೆಂಬುವದನ್ನು ಯಾರಾದರೂ ಹೇಳಬಹುದು. ಹೀಗಿದ್ದರೂ ಸಹ ಪರಿಷತ್ತಿನವರು ಈ ಹಣವನ್ನು ವೆಚ್ಚಮಾಡಲು ಸಿದ್ಧರಾಗಿರಲು ಅಂತಹ ಕಾರಣಗಳಾವು ಇದ್ದವೆಂಬುದನ್ನು ಕಾರ್ಯದರ್ಶಿಗಳು ತಿಳಿಸುವರೋ?

ಕರ್ನಾಟಕ ವಿಶ್ವ ವಿದ್ಯಾಲಯದ ವಿಷಯವಾಗಿ "ಕನ್ನಡಿಗ"ನು ಕಳೆದ ವಾರದಲ್ಲಿ ಪ್ರಸಿದ್ಧ ಮಾಡಿದ ಪ್ರಶ್ನೆಮಾಲಿಕೆಗಳಿಗೆ ಒಂದಾದರೂ ಉತ್ತರ ಬಂದಿಲ್ಲ. ಕನ್ನಡಿಗರು ತಮ್ಮ ನಾಡಿನ ವಿಷಯವಾಗಿ ತೋರಿಸುವ ಅಭಿಮಾನವು ಇಂತಹದೇ ಇದ್ದುದರಿಂದಲೇ ಸುತ್ತಲಿನ ಗಡಿನಾಡಿನ ಪ್ರದೇಶಗಳು ಅನ್ಯ ಭಾಷೆಯವರ ವಶದೊಳಗ ಸೇರಹತ್ತಿವೆ. ಕರ್ನಾಟಕದಲ್ಲಿ ಈಗ್ಗೆ ನಾಲ್ಕಾರು ತುಂಡುಗಳಿವೆ. ಆದರೆ ಇಷ್ಟರಿಂದಲೇ ನಮ್ಮ ಕನ್ನಡಿಗರ ಹೃದಯವು ಕತ್ತರಿಸದು. ಇನ್ನೂ ಇಪ್ಪತ್ತು ತುಂಡುಗಳಾಗಬೇಕು. ಕನ್ನಡ ಭಾಷೆಯು ಎಲ್ಲೆಲ್ಲಿಯೂ ತಲೆಎತ್ತದಂತಾಗಬೇಕು. ಕನ್ನಡ ನಾಡಿನಲ್ಲಿ ಯಾವ ಭಾಗದಲ್ಲಿ ತಿರುಗಾಡಿದರೂ ಕನ್ನಡದ ಒಂದು ಶಬ್ದವೂ ಕಿವಿಗೆ ಕೇಳದಂತಾಗಬೇಕು. ಕರ್ನಾಟಕ ಕನ್ನಡ ವೆಂಬ ಹೆಸರುಗಳನ್ನು ಕಿತ್ತಿ ಹಾಕಬೇಕು. ಅಂದರೆ ಮಾತ್ರ ಕನ್ನಡಿಗರಿಗೆ ಆನಂದವಾಗಬಹುದು. ಇದು ನೋಡಿ ವಿಶ್ವವಿದ್ಯಾಲಯದ ವಿಷಯವು ಇಷ್ಟೊಂದು ಪ್ರಾಧಾನ್ಯವನ್ನು ಹೊಂದಿದ್ದರೂ ಸಹ, ಇದರಲ್ಲಿ ಯಾವ ಕನ್ನಡ ಪಂಡಿತನೂ ವಿದ್ಯಾವಿಷಯಗಳಲ್ಲಿ ಲಾಲಸೆಯುಳ್ಳವನೂ, ರಾವಬಹದ್ದೂರ, ದಿವಾನಬಹದ್ದೂರ ಮಂಡಲದ ಪದವಿಧರರೂ ಕಾಯದೇ ಮಂಡಲಗಳ ಸಭಾಸದರೂ, ಯಾರೂ ಈ ಕಡೆಗೆ ಗಮನಕೊಡಲೊಲ್ಲರು. ಕರ್ನಾಟಕ ವಿಶ್ವವಿದ್ಯಾಲಯದ ಆವಶ್ಯಕತೆಯು ಶ್ರೀ ಕೆ. ಆರ್. ರಾಘವೇಂದ್ರರಾಯರಂತಹ ನಾಲ್ಕು ಜನ ಮುತ್ಸದ್ದಿಗೆ ಮಾತ್ರ. ಬಹಳವಾದರೆ ೮-೧೦- ಜನ ವೃತ್ತಪತ್ರಕಾರರಿಗೂ ಇವರ ಆವಶ್ಯಕತೆಯು. ಉಳಿದವರಿಗೆ ಕರ್ನಾಟಕವು ಬೇಡ; ವಿಶ್ವವಿದ್ಯಾಲಯವು ಬೇಡ; ಯಾವುದು ಬೇಡ. ಸುಖವಾದ ವಸತಿ; ಸಮೃದ್ಧವಾದ ತಿಂಡಿ; ಮೋಕ್ಷಸಮಾನವಾದ ನಿದ್ರೆ ಇಷ್ಟಿದ್ದ ಬಳಿಕ ಆ ಸುಡುಗಾಡು ವಿಶ್ವವಿದ್ಯಾಲಯ; ಇಲ್ಲದ ತೊಂದರೆಯಲ್ಲಿ ಕೆಡಹುವ ಕರ್ನಾಟಕ; ಇವುಗಳನ್ನು ತೆಗೆದುಕೊಂಡು ಈ ಮಹನೀಯರೆಲ್ಲಾ ಏನು ಮಾಡಬೇಕು? ಇನ್ನು ಈ ಮಹನೀಯರು ಹಾಗಿರಲಿ ಕರ್ನಾಟಕದಲ್ಲಿ ಅನೇಕ ವಿದ್ಯಾದಾಯಕವಾದ ಸಂಸ್ಥೆಗಳಿವೆ. ಇವರ ಪ್ರಾಣದಂತಿರುವ ಈ ವಿಶ್ವವಿದ್ಯಾಲಯದ ವಿಷಯವು ಇವರ ಅಂತಃಕರಣಕ್ಕೆ ತಗಲದೆಂದಮೇಲೆ ಇವರು ಹೇಗೆ ಶಿಕ್ಷಣ ಸಂಸ್ಥೆಗಳನ್ನು ನಡೆಸುವರೋ; ವಿದ್ಯಾರ್ಥಿಗಳಿಗೆ ಏನು ಕಲಿಸುವರೋ; ಭಾವೀ ಜನಾಂಗವನ್ನು ಸಿದ್ಧಮಾಡುವ ಪವಿತ್ರ ಕಾರ್ಯವನ್ನು ಹೇಗೆ ಕೈಗೊಳ್ಳುವರೋ? ತಿಳಿಯದು. ಇವೆಲ್ಲ ಬಗೆಯ ಅಪವಾದಗಳಿಗೆ ಗುರಿಯಾಗುವದೇ ಹಿತವೆಂದು ಈ ವಿದ್ಯಾದಾಯಕ ಗುರು ಮಹಾ ಗುರುಗಳು ಭಾವಿಸಿದ್ದರೆ ಹಾಗೆಯೇ ಸುಮ್ಮನಿರಲಿ ನಿದ್ರೆ ಮಾಡಲಿ!! ಇಲ್ಲವಾದರೆ ಕೂಡಲೇ ಎಚ್ಚತ್ತು, ಗುಜರಾತ, ಮರಾಠ ತಮಿಳ ಜನರು ತಮಗೆ ಸ್ವತಂತ್ರವಾದ ವಿಶ್ವವಿದ್ಯಾಲಯವು ಬೇಕೆಂದು ಪ್ರಯತ್ನಿಸುವಂತೆ, ಇವರೂ ಪ್ರಯತ್ನಿಸಲಿ. ಕನ್ನಡಿಗರು ಈ ವಿಷಯದಲ್ಲಿ ಮನಸ್ಸು ಹಾಕಿದ್ದರೂ, ಪುನಃ ಪುನಃ ಅವರ ನಿದರ್ಶನಕ್ಕೆ ಇದನ್ನು ತಂದು ಕೊಡುವದು ಅವಶ್ಯವಾಗಿರುವದರಿಂದ ನಾವು ಈ ವಾರದಲ್ಲಿ ಪುನಃ ವಿಶ್ವವಿದ್ಯಾಲಯದ ಪ್ರಶ್ನೆಮಾಲಿಕೆಯನ್ನು ಪ್ರಸಿದ್ಧಮಾಡಿದ್ದೇವೆ ಈ ಸುವಾರದಲ್ಲಿಯೂ ಎಲ್ಲರೂ ಅವನ್ನು ಓದಿ, ವಿಚಾರಮಾಡಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಕೂಡಲೇ ಪ್ರಸಿದ್ಧಿಸಬೇಕಾಗಿ ಪ್ರಾರ್ಥನೆಯಿದೆ.

"ಕರ್ನಾಟಕ"ವೆಂಬ ಇಂಗ್ಲೀಷ ಮಾಸಪತ್ರಿಕೆಯು ಶ್ರೀ. ಗುಂಡಪ್ಪನವರ ಸಂಪಾದಕತ್ವದಲ್ಲಿ ಬೆಂಗಳೂರಿನಲ್ಲಿ ಪ್ರಸಿದ್ಧವಾಗುತ್ತಿರುವದನ್ನು ನಮ್ಮ ವಾಚಕರು ಬಲ್ಲರು. ಹಿಂದಕ್ಕೆ ೧೦ ವರ್ಷಗಳ ಹಿಂದೆ ಹೊರಡುತ್ತಲಿದ್ದ "ಕರ್ನಾಟಕ"ದಲ್ಲಿ ಅಖಂಡ ಕರ್ನಾಟಕದ ವಿಷಯಗಳಿಗೆ ಅಷ್ಟೊಂದು ಅವಕಾಶವಿರದೆ, ಮೈಸೂರ ಪ್ರಾಂತದ ಸಂಗತಿಗಳಿಗೇ ಹೆಚ್ಚು ಪ್ರಾಧಾನ್ಯವಿರುತ್ತಲಿದ್ದಿತು. ಆದರೆ ಈಗಿನ "ಕರ್ನಾಟಕ"ದಲ್ಲಿ ಅಖಂಡ ಕರ್ನಾಟಕ ಭಾವನೆಯು ತುಂಬಿ ತುಳುಕುತ್ತಿರುವದು ಈಗಿನ ಕರ್ನಾಟಕದ ನುಡಿಯ ಸುಲಕ್ಷಣವು. ಶ್ರೀ. ಗುಂಡಪ್ಪನವರಂತಹ ವಿದ್ವನ್ಮಣಿಗಳ ಅಂತಃಕರಣದಲ್ಲಿ ಕರ್ನಾಟಕದ ಅಭಿಮಾನವು ಇಷ್ಟೊಂದು ಜಾಜ್ವಲ್ಯವಾಗಿರುವದನ್ನು ಕಂಡು ಯಾರಿಗೆ ಆನಂದವಾಗಲಿಕ್ಕಿಲ್ಲ? ಮೈಸೂರ ಪ್ರಾಂತದಲ್ಲಿ ಈ ಅಭಿಮಾನವು ದಿನೇ ದಿನೇ ಬೆಳೆಯುವಹಾಗೆ ಶ್ರೀ. ಗುಂಡಪ್ಪನವರೂ ಅವರ ಮಿತ್ರವರ್ಗದವರೂ ಪ್ರಯತ್ನಿಸುವದಾಗಿ ಭರವಸೆ ಇದೆ. "ಕರ್ನಾಟಕ"ದ ನವಂಬರ ಸಂಚಿಕೆಯಲ್ಲಿ, ಆಂಧ್ರ ವಿಶ್ವವಿದ್ಯಾಲಯದವರು ಕರ್ನಾಟಕಕ್ಕೆ ಉಂಟುಮಾಡಿದ ಹಾನಿಯ ವಿಷಯವಾಗಿ ಬರೆದ ಸಂಪಾದಕೀಯ ಸ್ಫುಟಗಳು ವಾಚನೀಯವಾಗಿವೆ. ಕರ್ನಾಟಕದ ದೃಷ್ಟಿಯಿಂದ ಹೋರಾಡುವ ಇಂತಹ ಇಂಗ್ಲೀಷ ಪತ್ರಗಳು ವಿರಳವಾದ ಸಮಯದಲ್ಲಿ "ಕರ್ನಾಟಕ"ವು ಹುಟ್ಟಿದ್ದು ಯೋಗ್ಯವಾಗಿದೆ. ಕರ್ನಾಟಕದೊಳಗಿನ ಇಂಗ್ಲೀಷ, ಕನ್ನಡ ಪತ್ರಿಕೆಗಳೂ ಮುಂಬಯಿಯವರೂ ಈ ಆಂಧ್ರ ವಿಶ್ವವಿದ್ಯಾಲಯದವರು ಕರ್ನಾಟಕಕ್ಕೆ ಮಾಡಿದ ಅನ್ಯಾಯದಬಗ್ಗೆ ಏಕಕಂಠದಿಂದ ಹೇಳುತ್ತಲಿದ್ದಾರೆ.

ಈಗಲಾದರೂ ಮದ್ರಾಸ ಸರಕಾರದವರು ಇದನ್ನು ಕಂಡು ಹಿಡಿದು ಈ ಮಸೂದೆಗೆ ತಮ್ಮ ಒಪ್ಪಿಗೆಯನ್ನು ಕೊಡದಂತೆ ಎಚ್ಚರಾಗಿರಬೇಕಾಗಿ ಆಗ್ರಹ ಪಡುತ್ತೇವೆ.

ಕರ್ನಾಟಕ ವಿಶ್ವವಿದ್ಯಾಲಯದ ವಿಷಯದಲ್ಲಿ

ಪ್ರಶ್ನಮಾಲಿಕೆ.

(೧) ಬೇರೆ ಬೇರೆ ಭಾಷೆಗಳನ್ನಾಡುವ ಜನಾಂಗದವರೆಲ್ಲ ತಮ್ಮ ತಮ್ಮ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿ ಕೊಳ್ಳ ಹತ್ತಿದ್ದನ್ನು ತಾವು ಬಲ್ಲಿರಿ. ಅಖಂಡ ಕರ್ನಾಟಕಕ್ಕೆ ಸಹ ಒಂದೊಂದು ವಿಶ್ವವಿದ್ಯಾಲಯವಿರಬೇಕೆಂಬುದಕ್ಕೆ ತಾವು ಒಪ್ಪುವಿರೋ?

(೨) ಕರ್ನಾಟಕದಲ್ಲಿ ಮೈಸೂರ ವಿಶ್ವವಿದ್ಯಾಲಯವಿದೆಯಷ್ಟೆ? ಅದನ್ನು ಅಖಂಡ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡುವ ವಿಚಾರವು ಪ್ರಸಾರವಾಗಹತ್ತಿದೆ. ಇದಕ್ಕೆ ತಮ್ಮ ಒಪ್ಪಿಗೆಯಿದೆಯೋ? (ಕಾರಣವನ್ನು ಸ್ಪಷ್ಟವಾಗಿ ಬರೆಯಬೇಕಾಗಿ ವಿನಂತಿಯಿದೆ.)

(೩) ಅಖಂಡ ಕರ್ನಾಟಕಕ್ಕೆಲ್ಲ ಒಂದೇ ವಿಶ್ವವಿದ್ಯಾಲಯವಿರಬೇಕೆಂಬುದಕ್ಕೆ ಕೆಳಗಿನ ಕಾರಣಗಳಿವೆ. ಅವಕ್ಕೆ ತಮ್ಮ ಒಪ್ಪಿಗೆಯಿದ್ದ ಬಗ್ಗೆ ತಾವು ತಿಳಿಸಬೇಕಾಗಿ ಪ್ರಾರ್ಥನೆ.

(೪) ಕರ್ನಾಟಕದಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗವು ಸಂಸ್ಥಾನಗಳಲ್ಲಿದೆ. ಸಂಸ್ಥಾನಗಳಲ್ಲಿಯ ಕರ್ನಾಟಕಸ್ಥರಿಗೂ ಬ್ರಿಟಿಶ್ ಕರ್ನಾಟಕಸ್ಥರಿಗೂ ಸಂಬಂಧವಿಲ್ಲದಾಗಿದೆ. ಇವರೀರ್ವರಲ್ಲಿಯೂ ಏಕೀಭಾವವು ಬೆಳೆದು ಅಖಂಡ ಕರ್ನಾಟಕದ ಕಲ್ಪನೆಯು ತಳ ಊರಬೇಕಾದರೆ, ಇವರೆಲ್ಲ ಭಾಗತೆಗೆದು ಕೊಳ್ಳುವಂತಹ ಮತ್ತು ಯಾವಾಗಲೂ ಅವರು ಒಬ್ಬರೊಬ್ಬರು 'ಕೂಡಿಯೇ' ಕೆಲಸಮಾಡುವಂತಹ ಪ್ರಸಂಗಗಳು ಬೇಕಲ್ಲವೇ? ಅಖಂಡ ಕರ್ನಾಟಕಕ್ಕೆ ಒಂದೇ ವಿಶ್ವವಿದ್ಯಾಲಯವನ್ನು ಮಾಡುವದರಿಂದ ಇದು ಸಾಧ್ಯವಾಗುವದಿಲ್ಲವೇ?

(೫) ಪ್ರಾಥಮಿಕ ಶಾಲೆಯಿಂದ ಮೊದಲು ಮಾಡಿಕೊಂಡು ಉಚ್ಚ ಶಿಕ್ಷಣವು ಮುಗಿಯುವ ವರೆಗ ಕ್ರಮಿಕ ಪುಸ್ತಕಗಳೂ, ಶಾಲೆ, ಕಾಲೇಜಗಳಲ್ಲಿ ಓದುವ ಪುಸ್ತಕಗಳೂ, ಪದ್ಧತಿಯೂ, ಶಿಕ್ಷಣ ಮತ್ತು ಶಿಸ್ತುಗಳ ಕ್ರಮವೂ, ಒಂದೇ ಆಗುವದರಿಂದ, ಮೈಸೂರ, ಮದ್ರಾಸ, ಮುಂಬೈ ಮೊದಲಾದ ಕರ್ನಾಟಕ ಭಾಗಗಳಲ್ಲಿ ವಿದ್ಯಾರ್ಥಿಗಳಲ್ಲಿರುವ ಭೇದ ಭಾವವು ಅಳಿದು ಹೋಗಲು ಒಳ್ಳೆ ಆಸ್ಪದ ದೊರೆಯುವದಿಲ್ಲವೆ?

(೬) ಈಗ್ಗೆ ಮೈಸೂರ, ಮದ್ರಾಸ ಮತ್ತು ಮುಂಬೈ ಕರ್ನಾಟಕದ ಭಾಗಗಳಲ್ಲಿ ಬೇರೆ ಬೇರೆ ಕ್ರಮಿಕ ಪುಸ್ತಕಗಳಿವೆ. ಅದರಿಂದ ಮೂರೂ ಕಡೆಗಳಲ್ಲಿದ್ದ ಭಿನ್ನ ಭಿನ್ನ ಭಾಷಾ ಶೈಲಿಯು ಆ ಆ ಭಾಗದ ವಿದ್ಯಾರ್ಥಿಗಳಲ್ಲಿ, ಅವರು ಬಾಲಕರಿರುವಾಗಲೆ, ದೃಢವಾಗಿ ಸೇರಿಕೊಳ್ಳುವದು. ಅಂತೆಯೇ ಈ ಮೂರು ಭಾಗದ ಭಾಷಾಶೈಲಿಯಲ್ಲಿ ವಿವಿಧತೆಯುಂಟಾಗಿ, ಒಂದು ಭಾಗದ ಶೈಲಿಯು ಇನ್ನೊಂದು ಭಾಗದವರಿಗೆ ಕಠಿಣವಾಗಿ ತೋರುತ್ತದೆ. ಅದ್ದರಿಂದಲೇ ಕನ್ನಡದಲ್ಲಿ ಗ್ರಂಥಗಳು ಸಹ ಹೆಚ್ಚಾಗಿ ಪ್ರಸಾರವಾಗುವದಿಲ್ಲ. ಕನ್ನಡ ವಾಙ್ಮಯ ವಿಕಾಸಗೊಳ್ಳಲೊಲ್ಲದು. ಈ ದೋಷವು ಹೊರಟು ಹೋಗಲಿಕ್ಕೆ ಅಖಂಡ ಕರ್ನಾಟಕಕ್ಕೆ ಒಂದೇ ಒಂದಾದ ವಿಶ್ವವಿದ್ಯಾಲಯವು ಇರುವದು ಅವಶ್ಯವಲ್ಲವೋ?

(೭). ವಿಶ್ವವಿದ್ಯಾಲಯದ 'ಸಿನೇಟ' 'ಸಿಂಡಿಕೇಟ' ಗಳಲ್ಲಿ ಸಹ ಕರ್ನಾಟಕದ ಎಲ್ಲ ಭಾಗಗಳ ಪಂಡಿತರು ಕಲೆತು ಕೆಲಸ ಮಾಡುವದರಿಂದ ಅಖಂಡ ಕರ್ನಾಟಕದ ಈ ಪಾಂಡಿತ್ಯ ಸಮ್ಮಿಶ್ರಣದ ಫಲವು ಪರಿಪೂರ್ಣವಾಗಿ ದೊರೆಯಲು ಮಾರ್ಗವಾಗುವದಿಲ್ಲವೆ?

(೮) ಮೈಸೂರಿನವರನ್ನು ಬಿಟ್ಟು, ಬ್ರಿಟಿಶ್ ಕರ್ನಾಟಕದವರೇ ಮಾತ್ರ ತಮಗಾಗಿ, ಸ್ವತಂತ್ರವಾದ ವಿಶ್ವವಿದ್ಯಾಲಯವನ್ನು ಸ್ಥಾಪಿಸಿಕೊಂಡರೆ, ಮೇಲೆ ಬರೆದ ಕೊರತೆಗಳನ್ನು ದೂರ ಮಾಡುವದಕ್ಕೆ ಆತಂಕಬರುವದಿಲ್ಲವೇ? ಆತಂಕವು ಬರುತ್ತಿದ್ದರೆ, ಮೈಸೂರ ವಿಶ್ವವಿದ್ಯಾಲಯದ ಹೊರತಾಗಿ ಬ್ರಿಟಿಶ್ ಕರ್ನಾಟಕಕ್ಕೆ ಸ್ವತಂತ್ರ ವಿಶ್ವವಿದ್ಯಾಲಯವು ಏಕೆ ಬೇಕು?

(೯) ಮೇಲಿನ ಕಾರಣಗಳಿಗೆಲ್ಲ ತಮ್ಮ ಸಮ್ಮತಿಯಿದ್ದರೂ, ಸಹ, ಸಂಸ್ಥಾನಗಳ ಸಂಗಡ ಗುದುಮುರಿಗೆ ಹಾಕುವದು ನಮಗೆ ಬೇಡವೆಂದು ನಿಮ್ಮ ಅಭಿಪ್ರಾಯವಿದೆಯೋ? ಹಾಗಿದ್ದರೆ ನಿಮ್ಮ ದೃಷ್ಟಿಯಿಂದ ಬ್ರಿಟಿಶ್ ಕರ್ನಾಟಕಕ್ಕಾಗಲಿ ಮೈಸೂರವರಿಗಾಗಲಿ, ಅಖಂಡ ಕರ್ನಾಟಕ ವಿಶ್ವವಿದ್ಯಾಲಯದಿಂದ ಸಂಭವಿಸುವ ಹಾನಿಗಳಾವವೆಂಬದನ್ನು ದಯವಿಟ್ಟು ವಿಶದವಾಗಿ ಬರೆದು ತಿಳಿಸಬೇಕಾಗಿ ಪ್ರಾರ್ಥನೆ.

(೧೦) ಮೈಸೂರ ವಿಶ್ವವಿದ್ಯಾಲಯವನ್ನೇ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡಿದ್ದೇ ಆದರೆ, ಸದ್ಯದ ಮೈಸೂರ ವಿಶ್ವವಿದ್ಯಾಲಯದ ಸ್ಥಿತಿಯಲ್ಲಿ, ಅಖಂಡ ಕರ್ನಾಟಕದ ಭಾಗಗಳಿಗೆ ಅನುಕೂಲವಾಗುವಂತೆ, ಅನೇಕ ಬಗೆಯಿಂದ ಹೆಚ್ಚು ಕಡಿಮೆ ಮಾಡಬೇಕಾಗುವದು. ಈ ಹೆಚ್ಚು ಕಡಿಮೆಗಳಾದ ಮೇಲೆ "ಸಂಸ್ಥಾನದವರ ಸಂಗಡ ಗುದ್ದಾಡುವ" ವಿಧಾನವು ದೂರಾಗುವದಿಲ್ಲವೇ? ಉದಾಹರಣಾರ್ಥ:— ಮೈಸೂರ ವಿಶ್ವವಿದ್ಯಾಲಯವೆಂಬದಕ್ಕೆ ಕರ್ನಾಟಕ ವಿಶ್ವವಿದ್ಯಾಲಯವೆಂಬ ಹೆಸರು ಬರುವದು; ಮೈಸೂರಿನವರೂ, ಮೈಸೂರ ಹೊರಗಿನವರೂ ಕೂಡಿಯೇ 'ಸಿನೇಟ' 'ಸಿಂಡಿಕೇಟ'ಗಳಲ್ಲಿ ಇದ್ದು ಕೆಲಸ ಮಾಡುವರು. ಹಣದ ಭಾರವು ಮೈಸೂರಿನವರ ಮೇಲೆಯೂ, ಮೈಸೂರ ಹೊರಗಿನವರ ಮೇಲೆಯೂ ಕೂಡಿಯೇ ಬರುವದು. ಆದ ಮೇಲೆ, ಮೈಸೂರ ವಿಶ್ವವಿದ್ಯಾಲಯವೆಂದರೆ ಅದು ಸಂಸ್ಥಾನದ ವಿಶ್ವವಿದ್ಯಾಲಯವೆಂದು ಬೆದರಬೇಕಾದದ್ದೇಕೆ?

(೧೧) "ಇದೆಲ್ಲ ಸರಿಯಿದೆ. ಆದರೆ ಈ ಬಗೆಯ ಬದಲಾವಣೆಗೆ ಮೈಸೂರ ಸರಕಾರವೇ ಆಗಲಿ; ಬ್ರಿಟಿಶ್ ಸರಕಾರವೇ ಆಗಲಿ ಒಪ್ಪುವದೋ? ಅದು ಗೊತ್ತಿಲ್ಲದೇ ಸುಮ್ಮನೆ ಬರಿ ಕೈಯಿಂದ ಮೊಳಹಾಕುವದೇಕೆ?" ಎಂಬದಾಗಿ ಕೆಲವರು ಕೇಳಬಹುದಲ್ಲವೇ? ಆದರೆ ಈ ವಿಚಾರವು ಸರಿಯಾಗಿದ್ದರೆ, ನಾವು ಈ ಸರಕಾರಗಳಿಂದ ಅನುಮತಿಯನ್ನು ಪಡೆಯುವ ಕೆಲಸವನ್ನು ಪ್ರಾರಂಭಿಸಬಹುದು. ಅಖಂಡ ಕರ್ನಾಟಕದ ಜನತೆಗೆ ಈ ವಿಚಾರವು ಸರಿತೋರಿದ್ದೇ ಆದರೆ ಸರಕಾರಗಳ ಸಮ್ಮತಿಯನ್ನು ದೊರಕಿಸುವದು, ಕಷ್ಟಸಾಧ್ಯವಾದರೂ, ಅಶಕ್ಯ ಕೋಟಿಯದಲ್ಲ ಇದಕ್ಕೆ ತಮ್ಮ ಒಪ್ಪಿಗೆಯಿದೆಯೇ?

(೧೨) "ಅಖಂಡ ಕರ್ನಾಟಕಕ್ಕೆಲ್ಲ ಒಂದೇ ಒಂದು ವಿಶ್ವವಿದ್ಯಾಲಯವಿರಬೇಕು; ಸರಿ. ಆದರೆ ಮೈಸೂರ ವಿಶ್ವವಿದ್ಯಾಲಯವನ್ನೇ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡುವ ಕಾರಣವೇನು? ಮೈಸೂರ ವಿಶ್ವವಿದ್ಯಾಲಯವನ್ನು ಬಿಡು ಮಾಡಿ ಸ್ವತಂತ್ರವಾದ ಸಂಯುಕ್ತ ಕರ್ನಾಟಕ ವಿಶ್ವವಿದ್ಯಾಲಯವನ್ನು ಹೊಸದಾಗಿ ನಿರ್ಮಿಸಿ ಅದನ್ನು ಬ್ರಿಟಿಶ್ ಕರ್ನಾಟಕದ ಒಂದು ಮಧ್ಯವರ್ತಿ ನಗರದಲ್ಲಿ ಸ್ಥಾಪಿಸುವದು ಹಿತ" ವೆಂದು ಕೆಲವರು ಕೇಳಬಹುದಲ್ಲವೇ? ಆದರೆ ಹೀಗೆ ಮಾಡದೇ ಮೈಸೂರ ವಿಶ್ವವಿದ್ಯಾಲಯವನ್ನೇ ಕರ್ನಾಟಕ ವಿಶ್ವವಿದ್ಯಾಲಯವನ್ನು ಮಾಡುವದಕ್ಕೆ ಕಾರಣಗಳು ಹೀಗಿವೆ —

ಸಶೇಷ.

ನಮ್ಮೂರ ಉಂಡಾಡಿಗಳು

(ಒನಪಸೊ ಸಾತಾಡಿ.)

ನಮ್ಮೂರು; ನಮ್ಮದೇ ಊರದು. ವತನದಾರರ ಊರು ಇಲ್ಲಿ ಕೆಲರು ಹಿರಿಯರು ಮಾಡಿದ ವತನದ 'ದಾರರು'. ಕೆಲರು ತಂದೆ ಮಾಡಿದ ಆಸ್ತಿ ಬಂದ ಹಣದ ಹುತ್ತಿನ ವತನದಾರರು; ಕೆಲರು ಆಯುಷ್ಯಕ್ಕೆ ಯಾವ ಉದ್ದೇಶ, ಧ್ಯೇಯಗಳೆಂಬ ಗೊತ್ತು ಗುರಿಗಳ ಮರ್ಯಾದೆಗಳನ್ನು ಹಾಕಿ ಕೊಳ್ಳದೆ ಮರ್ಯಾದೆ ಮೀರಿರುವ ನಾಡಿನ ನಿತ್ಯ ವತನದಾರರು ಹೀಗೆ ಹಲವರುಂಟು ಇಂಥವರೂರು ನಮ್ಮೂರು.

ಇವರ ದಂಧೆಗಳು ಉಂಡಾಟ; ತಿಂದು ತಿರುಗಾಟ ಇದೇ ಇವರ ಹಿರಿಗೆಲಸ. ಇವರ ಲೀಲಾವಿನೋದ ವಿಷಯವೆಂದರೆ ಕಾಲದ ಬೇಟೆಮಾಡುವದು (ಕಾಲನ ಬೇಟೆಯಲ್ಲ. ನೆನಪಿರಲಿ ಏಕೆಂದರೆ ಕಾಲನ ಬೇಟೆಯನ್ನು ಯೋಗಿಯು ಮಾಡಬಲ್ಲ) ಕಾಲದ ಬೇಟೆಯು ಮಹದರ್ಹ ವಾಸನಕ್ಕೆಂದರೆ ನಮ್ಮ ವತನದಾರರಿಗೆ ಕಾಲವು ಸ್ವಾಭಾವಿಕವಾಗಿ ಅವರ ಮನಬಂದಂತೆ ಹರಿದಾಡಗೊಡುವದಿಲ್ಲ.

ಕೆಲ ಹುಚ್ಚರು ತಮಗೆ ಓದುಬರಹ, ಲೋಕ ಕಾರ್ಯಗಳಲ್ಲಿ ಹೊತ್ತು ಸಿಗ ವದಿಲ್ಲೆಂದು ಹೇಳುವರು. ನಮ್ಮೂರ ವತನದಾರರೂ ಹೊತ್ತು ಸಿಗುವದಿಲ್ಲೆಂದು ಹೇಳುವದನ್ನು ಕೇಳಿದ್ದೇನೆ. ಅವರಿಗೆ ಹೊತ್ತು (ಕೈಯಲ್ಲಿ) ಸಿಗದೆ ಅವರನ್ನು (ಹೊತ್ತು) ಮುಕ್ಕುತ್ತಿರುವದರಿಂದ ದಿಕ್ಕೆಟ್ಟು, ಒಳಲಿ, ಕೊನೆಗೆ ಇದನ್ನು ಬೇಟೆ ಯಾಡಿಯಾದರೂ ಕೊನೆಗಾಣಬೇಕೆಂದು ಹಂಚಿಕೆ ತೆಗೆದರು.

ಕಾಲದ ಬೇಟೆ, ಅಂಥಿಂಥ ಮಾತಲ್ಲ 'ಅದು ಕಾಲದ ಬೇಟೆ. ಕಾಲಕ್ಕೂ ಕಾಲನಿಗೂ ಒಳ್ಳೇ ನೆರೆಯ ಹತ್ತುಗಡೆ ಒಬ್ಬರೊಬ್ಬರೊಳಗೆ ಹೊತ್ತುಕೊಳ್ಳುವ ಸಂಬಂಧವದು ಕಾಲಕ್ಕೆ ಕೈ ಹಚ್ಚಿದರೆ ಕಾಲನಿಗೆ ಕೋಪ ಬರಲಿಕ್ಕಿಲ್ಲವೇಕೆ? 'ಬಿಕ್ಕಥಾಯಿಯ ಕೊಸ ಕತ್ತಿಯಲ್ಲಿ ನೀರು ಕಟಿಗನ ಕಣ್ಣೀರಲ್ಲಿ' ಎಂದು ಹಿರಿಯರ ಮನವರಿತ ಮಾತು ಹೀಗೆ ಬೇಟೆಯಾಡುವವನೂ ಬೇಟೆಯಾಡಲ್ಪಡುವನೆಂಬುದು ಸಹಜ ಸಿದ್ಧ ಕಾಲದ ಬೇಟೆ ಇವರದು ಅದರಿಂದ ಕಾಲದ ನೆಂಟನಾದ ಕಾಲನು ಇವರ ಬೇಟೆಯನ್ನೇ ಬೇಗ ಆಡದೆ ಹೇಗೆ ಬಿಟ್ಟಾನು?

ನಮ್ಮ ವತನದಾರರು ಮಹಾ ಮೂರ್ಖತನ ಮಾಡಿದ್ದು ಇದೇ ಕಾಲದ ಬೇಟೆಯಾಡುವಂಥ ಹುಚ್ಚು ಕೆಲಸವನ್ನು ಇವರು ಕೈಕೊಳ್ಳಬಾರದಿತ್ತು. ಕಾಲದ ಮೇಲೆ ಕೈ ಎತ್ತಲು ಕಾಲನು ಕಿಡಿಕಿಡಿಗುಟ್ಟಿ ನಮ್ಮ ವತನದಾರರನ್ನೇ ನುಂಗಲಾರಂಭಿಸಿದನು. ಅಕಟಕಟ! ದೊಡ್ಡ ಮೈಗೆ ಕಣಕಿ ಬರಿದೆ ಬಯಲಾಗುತ್ತಿರುವದಲ್ಲ ನಮ್ಮ ವತನದಾರ?

ಕಾಲದ ಬೇಟೆಯನ್ನು ಒಬ್ಬಿಬ್ಬರೇ ಆಡಲಿಕ್ಕೆ ಹೋಗಿದ್ದರೂ ಎಲ್ಲ ವತನದಾರರ ಮೇಲೆ ಈಗಿನಂತಹ ಕಾಲಬರದೆ ಇರಬಹುದಾಗಿತ್ತು. ಆದರೆ ಕಾಲದ ಬೇಟೆ ಅದು ಹುಡುಗಾಟಿಕೆಯೇ! ಒಬ್ಬಿಬ್ಬರ ಹುತ್ತಲ್ಲ. ಆ ಎ ಕಾಲನ ಮೇಲೆ ಬೇ ಅಲ್ಲ; ಕಾಲದ ಮೇಲೆ ನಡು ಹಗಲಿನಲ್ಲಿ ಹೋಗಲಿ, ನಟ್ಟಿರುಳಿನೊಳಗೆ ಹೊತ್ತು ತಪ್ಪಿಸಿ ಹೋಗಲಿ ಅದು ಒಬ್ಬರ ಮಾತಲ್ಲ ಪುಷ್ಕರ ಇಂಲಿ ಪುಂಡರೇ ಇರಲಿ ನಾಲ್ಕಾರು ಮಂದಿಯಾದರೂ ಬೇಕು. ತಂಡಗಟ್ಟಿಗೊಂಡು ಕಾಲದ ಮೇಲೆ ಹೀಗೆ ದಾಳಿ ಮಾಡಬೇಕೆಂದ ವಿಷಯು, ಸ್ವಾಮೀ ಇದು. ಅವಶ್ಯಕತೆಯು, ಮತ್ತು ಈಗಿನ ಸಾಧಾರಣಾ ಕಾಲದಲ್ಲಿ ಹಳಬರಿಂದ ಬುದ್ಧಿಕಲಿತು **ಕಾಲದ ಕೊಲೆಯ ಕೂಟ**ಗಳು .... ಸಮಾಜ ××× ಕ್ಲಬ್ ×× ಮಂಡಳ ಮುಂತಾದ ಚಿತ್ರ ವಿಚಿತ್ರ ಹೆಸರಿನ ಹೂದಿಕೆಯನ್ನು ಕೊಂಡು ಆಧುನಿಕ ವತನದಾರರು— ವಕೀಲ, ಡಾಕ್ಟರ, ದೊಡ್ಡ ಸಂಬಳದ ಹಿರೇ ಅಳುಗಳು— ಕಾಲದ ಬೇಟೆಯ ಹೊಸ ಮಾದರಿಯ ಏರ್ಪಾಡು ನಡಿಸಿದ್ದಾರೆ.

ಕೊಲೆಯ ಕಲೆಯಲ್ಲಿ ಹೊಸ ಹೊಸ ಸುಧಾರಣೆಗಳು ಬಹಳವಾಗಿ ಆಗುತ್ತಲಿವೆ ಇಂಗ್ಲಂಡ, ಫ್ರಾನ್ಸದಂಥ ಸುಧಾರಣೆ ಹೊಂದಿದ ರಾಷ್ಟ್ರಗಳು ಕೊಲೆಯ ಕಲೆಯಲ್ಲಿ ಹೊಸ ಶೋಧಗಳನ್ನು ಮಾಡಲಿಕ್ಕೆ ಕೋಟ್ಯಾವಧಿ ರೂಪಾಯಿಗಳನ್ನು ತಿಂಗಳಿಗೆ ಕೊಟ್ಟು ಬಲ್ಲವರಿಂದ ಬುದ್ಧೀ ಕೇಳುತ್ತೀವೆ. ಅದೇ ಮೇರೆಗೆ ಕಾಲನ ಕೊಲೆಯ— ಬೇಟೆಯ ಶಾಸ್ತ್ರದಲ್ಲಿ ಸಹ ಮುಂದೆ ಹೆಜ್ಜೆ ಬಿದ್ದಿದ್ದರೆ ಸೋಜಿಗವೇನು?

ಸೋಜಿಗ ವೇನೂ ಇಲ್ಲ; ಆದರೆ ಹೆಜ್ಜೆ ಮುಂದೆ ಬೀಳುವ ಬೀಳಿಸುವ ಗಡಿಬಿಡಿಯಲ್ಲಿ ಆ ಹೆಜ್ಜೆ ಜಾರಿಯದಿದ್ದರಾಯಿತು.

ಕಾಲದ ಬೇಟೆಯ ಹಳೇ ಪದ್ಧತಿಯಲ್ಲಿ ಕವಡಿಗಳಿಂದ ಕಲಹ ಬೆಳಿಸಿಕೊಂಡು ಕಾಲಕಳೆಯುವದೊಂದು ಬಗೆ; ಹೆಣ್ಣು ಹೆಂಡಗಳಲ್ಲಿ ಮೈಮರೆತು ಬೆಂದು ಹೋದದ್ದರ ಪರಿವೆಯಿಲ್ಲದೆ ಅಂದು ಬಿದ್ದರ ಸಿಗ್ಗು—ಎಗ್ಗುಗಳಿಲ್ಲದೆ ಕಲ್ಲು ಬಂಡೆಯಂತೆ ಸಮಾಧಿಯೋಗದಲ್ಲಿ ಮಗ್ನವಾಗುವದು ಮತ್ತೊಂದು ಬಗೆ ಮೊದಲನೇಯ ಬಗೆಯು ಕೊಂಚ ಒದಲಾಗಿರುವದಾದರೂ ಎರಡನೇಯದನ್ನು ಹಲವೆಡೆಗಳಲ್ಲಿ ಇನ್ನೂ ಕಾಣಬಹುದು.

ಮೊದಲನೆಯ ರೀತಿಯಲ್ಲಿ ಸುಧಾರಣೆಯಾಗಿದೆ. ಪಗಡಿ ಕವಡಿಗಳಿಗೆ ಕೊಟ್ಟ ಕಾಸುಗಳು ದೇಶದಲ್ಲಿ ಉಳಿಯುತ್ತಿದ್ದವು. ಆದರೆ ಈಗಣ ಬಿಸ್ಮೀಕ್ ಸೆಟ್ಟ ಕೊಳ್ಳಲಿಕ್ಕೆ ಸೊಂಟದಿಂದ ಝಣ್ಣೆಂದು ಜಿಗಿದ ಹಣವು ಸಟ್ಟಗೆ ನಮ್ಮ ನಾಡಿನ ಗಡಿಗಳನ್ನು ದಾಟಿ ಮುಂದೆ ಸಾಗುವದು. ಕವಡಿ ಹಿಡಿಯುವದು ಹುಂಬತನವಾಗಿದೆ. ಈಗ ಹಗಲಿರುಳೆನ್ನದೆ, ಕತ್ತಲೆ ಮಾಡಿ! (ಯಾಕೆಂದರೆ ರೊಕ್ಕ ಹಚ್ಚಿ ಆಡುವದು ಸಿಕ್ಕರೆ ಪೋಕಳಿ ಪೋಲೀಸರ ಕಾಟ) ಆಡುವರು; ಕತ್ತಲೆ ಬೆಳ್ ಬೆಳಕು ಮಾಡಿ ಹೆಂಡರು ಮನೆಯಲ್ಲಿ ತಮಗಾಗಿ ಊಟಕ್ಕೆ ಕಾದು ಹಸಿವೆಯಾದುದಕ್ಕೆ ಹೊಟ್ಟೆ ಕಾಯ್ದು ಸಂಕಟವಾಗಿ (ಸಿಟ್ಟಾಗಿ, ಅಲ್ಲ! ಏಕೆಂದರೆ ಗಂಡನ ಮೇಲೆ ಆರ್ಯ ಸ್ತ್ರೀಯು ಸಿಟ್ಟಾದರೆ ಅಧರ್ಮವು!) ಕಸಿವಿಸಿಗೊಳ್ಳುತ್ತಿದ್ದರೂ ಮನೆಯ ಎಚ್ಚರವಿಲ್ಲದೆ ಕಾಲಸಂಹಾರ ಕಾರ್ಯ ಧುರಂಧರ ಮಹಾ ಪ್ರತಾಪ ಶಾಲಿ, ರಾಜಮಾನ್ಯ ರಾಜೇಶ್ರೀಗಳವರು ನಿದ್ದೆ ನೀರಡಿಕೆಗಳಿಲ್ಲದೆ (ಬೇಡ) ಆಡೇ ಆಡುತ್ತಾರೆ. ನಾಲ್ಕು ಜನ ದಿಗ್ಬಂಧನ ಮಾಡಿ ಬಗುವಿನಿಂದ ಸಜ್ಜಾಗಿ ಕುಳಿತು ಪೆಟ್ಟಿನ ಮೇಲೆ ಪೆಟ್ಟು ಹಾಕಿ ಹೊಡೆಯ ಹತ್ತಿದರೆಂದ ಪಾಪ! ಆ ಕಾಲದ ಕೊಲೆಗೇನು ತಡ, ಹಾ, ಹಾ! ಅನ್ನುವದರೊಳಗೆ ಹೊತ್ತು ಹಾರಿ ಹೋಗುವದು. ಅಲ್ಲಿ ಹಾಳಾಗಿ ಹೋಗುವದು. ಆಗ ಬೇಟೆಯ ಬಳಲಿಕೆ ಯಾಗಿದ್ದರೂ ಹೊತ್ತನ್ನು ಹಾಳುಮಾಡಿ ಬಿಟ್ಟೆವಲ್ಲ ಎಂಬ ಹಿಗ್ಗಿನಿಂದುಬ್ಬಿ ಹಿರಿಗೇ ಸಮಾದ ತಿರಿತೀರಿಸಿಕೊಳ್ಳಲು ಮೊದಮೊಥವರಾಗುವರು.

ಭಾಪು! ವತನದಾರ, ಭಾಪು! ಮಝು! ಮಹಾರಾಜ ಮಝು! ಎಂದು ಹೊಟ್ಟೆಯೊಳಗಿನ ಕುದಿಎದ್ದು ಯಾರು ಹೇಳಲಿಕ್ಕಿಲ್ಲ?

ನಮ್ಮ ವತನದಾರರ ಕಾರ್ಯ ಭಾಗದ ಇನ್ನೊಂದು ಅಂಗವನ್ನು ಹೇಳುವದುಳಿಯಿತು. ಅದು ಇವರ ತಿರಿ, ತಿಂಡಿಯ

ವಿಷಯವು ಬಹಳ ವ್ಯಾಪಕ. ಅದೆಲ್ಲವನ್ನೂ ಇಲ್ಲಿ ಹೇಳಲೂ ಆಗದು, ಹೇಳಲೂ ಆರೆನು. ಸ್ವಲ್ಪ ಮಾತ್ರ ಉಸುರುವೆನು.

ಕಾಲದ ಬೆಲೆಯೂ ಇವರಿಗೆ, ಹೊತ್ತು ಸಿಗುವದಿಲ್ಲೆಂಬುದು ಸ್ಪಷ್ಟವಿದೆ. ಯಾಕಂದರೆ ಅದು ಸಿಕ್ಕಿದ್ದರೆ ಬೇಟಿಯಾಡ ಬೇಕಾಗುತ್ತಿದ್ದಿಲ್ಲ. ಹೊತ್ತು ಸಿಗುವದಿಲ್ಲೆಂದ ಬಳಿಕ ಒಕ್ಕಲತನ, ವ್ಯಾಪಾರದಂಥ ಹೆಚ್ಚಿನ ದುಡಿತದ ಹೋರೆಗಳ ದಾರಿಯನ್ನು ಮೆಟ್ಟುವದಿಲ್ಲ. ಆದರೆ ತಿಂಡಿಗೆ ದುಡ್ಡು ಬೇಕಲ್ಲ ಅದಕ್ಕಾಗಿ ಒಂದು ಹೊಸ ಹಂಚಿಕೆಯೂ ಹೊರಟಿದೆ.

ಹಿಂದಿನವರು ಆಳಾಗಿ ದುಡಿದು ಅರಸನಾಗಿ ಉಣ್ಣುತ್ತಿದ್ದರು. ಅದರಿಂದ ಅವರ ಮನೆಯಲ್ಲಿ ಪಂಚ ಪಕ್ವಾನ್ನಗಳ ಅಡಿಗೆ ಆಗುತ್ತಿತ್ತು. ಈಗಿನ ಸುಧಾರಿಸಿದ ಕಾಲದಲ್ಲಿ ಆಗಾದೆ ತೆಳವೆಳಗಾಗಿದೆ. ಅರಸನಾಗಿ ಮೆರೆದು ಕೀಳಾಗಿ ಮೆಯ್ಯು ಎಂಬುದು ಹೊಸಬರ ಬಿರುದು. ಹಿಂದಿನವರು ಆಳಾಗಿ ದುಡಿಯುತ್ತಿದ್ದರು! ಒಲ್ಲಿ ದೊತ್ರ ಸಾದಾ ಬಟ್ಟೆ ಹಾಕುತ್ತಿದ್ದರು. ಹಾಲು ತುಪ್ಪದ ಹಬ್ಬದ ಊಟ ಉಣ್ಣುತ್ತಿದ್ದರು. ೭೦-೮೦ ವರ್ಷಕ್ಕೆ ಕಡಿಮೆಯಿಲ್ಲದೆ ಬಾಳುತ್ತಿದ್ದರು. ಹೊಸಬರ ಮಾತೆಲ್ಲ ಹೊಚ್ಚ ಹೊಸದು! ಅರಸರಾಗಿ ಮೆರೆಯುವದು ಮೊದಲ ಮಾತು. ಬೂಟು ಪಾಟಲೂಣು, ೭೮೯ ಕೋಟ ಆಯಿತು. ತಿನ್ನಲು ಹೊಟ್ಟೆಯಲ್ಲಿ ಉರಿಯೇಳುವ ಚಕ್ಕ ಚಹಾ ಬೂದಿ ಬಿಸ್ಕಿಟ ರೋಟಗಳಾಯಿತು. ಕಾಲದ ಬೇಟಿ ಬಡ ಹೋದ ಇವರನ್ನು ಕಾಲನೇ ೩೫-೪೦ ವರ್ಷಕ್ಕೆ ಬೇಟಿಯಾಡುವನು!

ಇಷ್ಟು ಕಷ್ಟಸೋಸಿ ಬಡಬಗ್ಗರಿಗೆ ಹೊಟ್ಟೆತುಂಬ ಬಡಿಸಿದ್ದಕ್ಕೆ ಪ್ರತಿಫಲವೇನು? ಕೆಲವು (ರೂಪಾಯಿಗಳ) ಹಿಂಡಿ. ತಮ್ಮ ಸಂಬಳ ಅಥವಾ ಫೀಗಿಂತ ಸ್ವಲ್ಪು ಹೆಚ್ಚು. ನಡುವೆ ಬಾಡಿಸಿಕೊಳ್ಳಲು ಇದು, 'ಕಾಯಿರಸ!' ಇದಕ್ಕೂ ಹೆಚ್ಚೇನು ಇಲ್ಲ. ಹಲವರು ಹೊತ್ತಿಗೆ 'ಹಿಂಡಿ' 'ಕಾಯಿರಸ'ಗಳು ಸಿಗಬೇಕೆಂದು ಬಡಬಗ್ಗರಿಗೆ ಬಹಳ ದೊಡ್ಡ ಮನಸ್ಸಿನಿಂದ ಕನ್ನಡಿಗರ ಪ್ರೀತಿಯ ಊಟವಾದ ಕಡಬು ಕೊಡಲಿಕ್ಕೂ ಆಸಿಮಿಸಿಗೊಳ್ಳುವದಿಲ್ಲ!

ಇವರು ಸಮ್ಮೂರ ಉಂಡಾಡಿಗಳು, ಹೂಂ! ಎಚ್ಚರಿಕೆ. ಇವರು ಬಹಳ ದೊಡ್ಡವರು. ಇನ್ನು ಮೇಲೆ ತಮ್ಮ ಪಕ್ವಾನ್ನಗಳ ಪ್ರಸಾರಾರ್ಥವಾಗಿ ಬೇಗನೆ "ಕರ್ನಾಟಕ ಪಕ್ವಾನ್ನ ಸಂಶೋಧಕ ಹಾಗೂ ಪ್ರಸಾರಕ ಮಂಡಗಳ" ವೆಂಬ ಸಂಸ್ಥೆಯನ್ನು ಸ್ಥಾಪಿಸುವವರಿದ್ದಾರೆ. ಕರ್ನಾಟಕದ ಕೀರ್ತಿಯನ್ನು ಕಾಯುವವರಿದ್ದಾರೆ. ಇಂಥವರಿಗೆ ಕೆಮ್ಮನೆ ಊಟಕುಟಿಗರು, ಉಂಡಾಡಿಗಳೆಂದು ಹೇಳಲು ನಾಲಿಗೆಯಾದರೂ ಹೇಗೆ ಏಳುವದು!

ಜನಮರುಳೋ ಜಾತ್ರಿಮರುಳೋ?

(ಶ್ಯಾಮಲಾದೇವಿಯ ಪತ್ರ.)

ಅಣ್ಣಾ, ನೋಡು, ಯಾರು ಅನ್ನುತ್ತಾರೆ ಶ್ಯಾಮಲಾದೇವಿಯು ಲಿಂಗಾಯತಳೋ ಬ್ರಾಹ್ಮಣಳೋ ಎಂದು, ಯಾರು ಕೇಳುತ್ತಾರೆ ಶಾಮಲಾದೇವಿಯು ಸುಶಿಕ್ಷಿತಳೋ ಹಳ್ಳಿಗಾಡದಾಕಿ

ರೇಲವೇ ಬೋರ್ಡಿನ ಅರ್ಜಿಗಳನ್ನು ತೀವ್ರವೇ ಕಳಿಸಿರಿ

ಹಿಂದಿನವರು ಸ್ವಾರ್ಥಿಗಳು ಬಹಳ ದಿನ ಬಾಳುತ್ತಿದ್ದರು! ಸ್ವಂತ ಹಬ್ಬದೂಟ ಉಣ್ಣುತ್ತಿದ್ದರು. ಹೊಸಬರು ಸುಧಾರಿಸಿದವರು. ಸ್ವಾರ್ಥತ್ಯಾಗಿಗಳು. ಇವರು ಬಡಜನರಿಗೆ ಬಡಿಸುವರು ಬಡವರಿಗೆ ಬಡಿಸಿದ್ದರಲ್ಲಿ ಒಂದನ್ನೂ ತಾವು ತಿನ್ನಲು ಬಯಸುವದಿಲ್ಲ, ಬಡವರ ತುತ್ತು ಇವರಿಗೆ ಎಂದೂ ಸೇರುವದಿಲ್ಲ. ಹಾಗೂ ಅದನ್ನು ಅಪೇಕ್ಷಿಸುವದೂ ಇಲ್ಲ. ಬಡವರಿಗೆ ದುಡ್ಡು ಸಹ ಕೇಳುವದಿಲ್ಲ. ಆದರೆ ಕೊಸರುವರು ಮಾತ್ರ. ಕೇಳಿ ತಕ್ಕೊಳ್ಳುವುದು ಬಿಕ್ಕಿತಿರಕಿ. ಅದ ಕಾರಣ ಕೇಳುವುದು ಕೀಳತನ, ಇವರಿಗೆ ಒಪ್ಪದು. ಕೊಸರುವದಕ್ಕೆ ಪರಾಕ್ರಮ ಬೇಕು. ಕಾರಣ ಇದು ದೊಡ್ಡತನದ ಲಕ್ಷಣವು. ಸದ್ದಿಲ್ಲದೆ ಕದ್ದೊಯ್ದರೆ ಕಳ್ಳನೆಂದು ಸೆರೆಮನೆಗೆ ಕಳಿಸುವರು. ಆದರೆ ಅರಸರು ಹಗಲು ಹಾಡಿ ಒಂದು ನೆಳೆಯೊಯ್ಯುವದಕೆ ಕವನ ಮಾಡಿ ಕಾವ್ಯ ಬರೆಯುವರು ಇದರಿಂದ ಕೇಳುವದಕ್ಕಿಂತ ಕಸೆಯುವುದು ಹಿರಿದೆಂದು ಸಿದ್ಧವಾಗುವದಿಲ್ಲವೇ?

ಬಡವರಿಂದ ಇವರು ದುಡ್ಡು ಕಸಿಯುವುದೇನೋ ಸರಿ. ಆದರೆ ತಾವು ಸ್ವಂತ ತಿನ್ನದಿದ್ದರೂ ಬಡಬಗ್ಗರಿಗೆ ಪಕ್ವಾನ್ನ ಬಡಿಸುವರಲ್ಲ! ಇದಕ್ಕಾದರೂ ಹೊಗಳಬಾರದೇ?

ರೈತನು ಯಾವದೊಂದು ಬಟ್ಟೆ ಬೊಕ್ಕಳಿ ಯೊಳಗೆ ಸಿಕ್ಕ ಕೂಡಲೆ ಅವನಿಗೆ ಅಷ್ಟಕ್ಕೆ ಬಿಡದೆ ಬಿಸಿಲು ಹಣ್ಣು ಹಂಪಲ ತಿನ್ನಿಸುವರು, ಹಣ್ಣಿನಿಂದ ಹೊಟ್ಟೆ ತುಂಬುವದಿಲ್ಲೆಂದು ಮಾತಿನ ಮಂಡಿಗೆ ಮಾಡಿ ಹಾಕುವರು. ಆ ಮಂಡಿಗೆಯ ರುಚಿಯನ್ನು ಬಗೆಯಲ್ಲಿ ನೆನೆ ನೆನೆದು ತಿನ್ನುತ್ತ ಮತ್ತಿಷ್ಟು ಬೇಡುತ್ತ ಬೆನ್ನು ಹತ್ತಬೇಕೆಂಬುವಂತೆ ಮಾಡುವರು. ಮಂಡಿಗೆಗೆ ಹಾಲುಬೇಕಾಗಿದ್ದರೆ ಮರಾಠಿ ಹಾಲು ಸಿದ್ಧ ವಿರುತ್ತದೆ ಇಷ್ಟಕ್ಕೆ ಹೊಟ್ಟೆ ತುಂಬದಿದ್ದಲ್ಲಿ ಪಾಪಡ ಹೊತ್ತಿ ಊಟ ಮಾಡಿಸಿ ಕಳಿಸುವರು.

ಯೋ? ಎಂದು. ಮತ್ತೆ ಯಾರು ಸಂಶಯ ತೆಗೆಯುತ್ತಾರೆ 'ಶ್ಯಾಮಲಾದೇವಿಯು ಹೆಂಗಸೊ ಗಂಡಸೋ? ಎಂದು. ಅಣ್ಣಾ, ಮಂದಿಯ ಹೆಣ್ಣುಮಕ್ಕಳ ಗೊಡವೆಯು ಯಾಕೆ ಬೇಕಿಷ್ಟು ಇವರಿಗೆ? 'ಸಕಾರ್ಯೋಃ ಪರದಾರ ವ್ಯವಹಾರಾ;' ಜನಾ!

ಅದಿರಲಿ; ಅಣ್ಣಾ ನನ್ನ ಕನ್ನಡ ಬಾಂಧವರು ಹೀಗೆ ಕೇಳಿದ ಅಪರಾಧವನ್ನು ನಾನು ಕ್ಷಮಿಸುತ್ತೇನೆ. ಯಾಕಂದರೆ, ನಾಟಕಗಳಾಗುವಂತೆ ಲೇಖಗಳಾದರೂ ಆಗಬಹುದೆಂದು ಅವರಿಗೆ ಅನಿಸಿರಬಹುದು. ಬಾಲ (ಅಲ್ಲದ) ಗಂಧರ್ವನು ಗಂಡಸು. ಮಾಸ್ತರ ಕೃಷ್ಣಾ (ಹೆಣ್ಣುಹೆಸರಲ್ಲ) ನು ಗಂಡಸು. ಆದರೆ ಅವರ ಪ್ರಸಿದ್ಧಿಯು ಹೆಂಗಸರಂತೆ. ಅದದ್ದರ ಸಲುವಾಗಿ ಅಲ್ಲವೆ? ಅಣ್ಣಾ, ನನ್ನ ತಂಗಿಯು ಹಾಗೇನಿಲ್ಲವಲ್ಲ? ಈ ವೃದ್ಧ ಗಂಧರ್ವನಿಗೆ (ಯಾಕಂದರೆ— ಬಾಲನಲ್ಲ ನಿನ್ನ ಮಗನು! ಮಹಾರಾಷ್ಟ್ರೀಯ! ಬಾಲನಲ್ಲ ಗಂಧರ್ವನು!!) ಮುಪ್ಪಿನಲ್ಲಿಯಲ್ಲ ಬಣಕಲ್ಲಿ ಸಿದ್ಧಪ್ಪನ ಪಾಂಗಾಕ್ಕೆ ವರ್ಗವಾಯಿತೇನು? ಜನಮರುಳೋ ಜಾತ್ರಿಮರುಳೋ! ಏನು ಹೇಳಲಿ ನನ್ನ ಬಂಧು-ಭಗಿನಿಯರ ದುರ್ದೆಸೆಯನ್ನು! ರುದ್ರಮ್ಮ ನಿಂಗವ್ವಾ, ಕೃಷ್ಣಾಬಾಯಿ, ಗಂಗಾಬಾಯಿಯವರೆಲ್ಲರೂ 'ಆಟ ಆರೇ ಅಂತರೆ!' ಎನ್ನುತ್ತ ಹೋಗಿ ಹೋಗಿ ನೋಡಿಬರುವರು. ಕನ್ನಡಿಗಣ್ಣಾ ಹೆಂಗಸರಿಗೇನು ತಿಳಿಯಬೇಕು ಗಂಡಂದಿರ ಅಣ್ಣಾ ಇದೆಲ್ಲ, ಗಂಡಸರು ಬಡ್ಡರಿರುವದು ಆಶ್ಚರ್ಯವೇನು? ಅಣ್ಣಾ ಗಂಧರ್ವಕಂಪನಿಯಲ್ಲಿ ಏನು ನೋಡುವದು? ಏನೊಂದು ರೂಪವನ್ನು ನೋಡಬು ಹೋಗುವರೇ ಅಯ್ಯೋ! ಈ ಮುದಿಹುಡುಗರನ್ನು ನಮ್ಮ ಗರುಡ ಸದಾಶಿವರಾಯರ ಕಂಪನಿಯ ಮೇಲೆ ನಿವಾಳಿಸಿ ಇಲ್ಲಬಾರದೇ! ಏಡಲಿ ಗಾಯನ ವಿದ್ಯೆಗೋಸ್ಕರ ಹೋಗುವರೇ? ಕುಂದಗೋಳ ರಾಮಭಾಯರಿಗೆ ಸವಾಯಿ ಗಂಧರ್ವನೆಂದು ಹೆಸರಿಟ್ಟು ಲಾಲಿಸಿದ

ನಮ್ಮೂರ ಉಂಡಾಡಿಗಳು

(ಅವರವನೊಬ್ಬ ಉಂಡಾಡಿ.)

ನಮ್ಮೂರು; ನಮ್ಮದೇ ಊರದು. ವತನದಾರರ ಊರು ಇಲ್ಲಿ ಕೆಲರು ಹಿರಿಯರು ಮಾಡಿದ ವತನದ 'ದಾರರು'. ಕೆಲರ ತಂದೆ ಮಾಡಿದ ಅಪ್ಪ ಬಂದ ಹಣದ ಮತ್ತಿನ ವತನದಾರರು; ಕೆಲರು ಆಯುಷ್ಯಕ್ಕೆ ಯಾವ ಉದ್ದೇಶ ಧ್ಯೇಯಗಳೆಂಬ ಗೊತ್ತು ಗುರಿಗಳ ಮರ್ಯಾದೆಗಳನ್ನು ಹಾಕಿ ಕೊಳ್ಳದೆ ಮರ್ಯಾದೆ ಮೀರಿದುವ ನಾಡಿನ ನಿತ್ಯ ವತನದಾರರು ಹೀಗೆ ಹಲವರುಂಟು ಇಂಥವರೂರು ನಮ್ಮೂರು.

ಇವರ ದಂಧೆಗಳು ಉಂಡಾಟ; ತಿಂದು ತಿರುಗಾಟ ಇವೇ ಇವರ ಹಿರಿಗೆಲಸ. ಇವರ ಲೀಲಾವಿನೋದ ವಿಷಯವೆಂದರೆ ಕಾಲದ ಬೇಟೆಯಾಡುವದು (ಕಾಲನ ಬೇಟೆಯಲ್ಲ. ನೆನಪಿರಲಿ ಏಕೆಂದರೆ ಕಾಲನ ಬೇಟೆಯನ್ನು ಯಾರೂ ಮಾಡಬಲ್ಲ) ಕಾಲದ ಬೇಟೆಯ ಮಹತ್ವ ಏತಕ್ಕೆಂದರೆ ನಮ್ಮ ವತನದಾರರಿಗೆ ಕಾಲವು ಅಪ್ರೋತ್ಸಾಹಕಾಗಿ ಅವರ ಮನಬಂದಂತೆ ಹರಿದಾಡಗೊಡುವದಿಲ್ಲ.

ಕೆಲ ಹಿರಿಯರು ನಮಗೆ ಓದುವರಷ್ಟು, ಲೋಕ ಕಾರ್ಯಗಳಲ್ಲಿ ಹೊತ್ತು ಸಿಗುವದಿಲ್ಲೆಂದು ಹೇಳುವರು ನಮ್ಮೂರ ವತನದಾರರೂ ಹೊತ್ತು ಸಿಗುವದಿಲ್ಲೆಂದು ಹೇಳುವದನ್ನು ಕೇಳಿದ್ದೇನೆ. ಅವರಿಗೆ ಹೊತ್ತು (ಕೈಯಲ್ಲಿ) ಸಿಗದೆ ಅವರನ್ನು (ಹೊತ್ತು) ಮುತ್ತುತ್ತಿರುವದರಿಂದ ದಿಕ್ಕುಗೆಟ್ಟು, ಒಳಲಿ, ಕೊನೆಗೆ ಇವನ್ನು ಬೇಟೆಯಾಡಿಯಾದರೂ ಕೊನೆಗಾಣಬೇಕೆಂದು ಹಂಚಿಕೆ ತೆಗೆದರು.

ಕಾಲದ ಬೇಟೆ ಅಂಥಿಂಥ ಮಾತಲ್ಲ ಅದು ಕಾಲದ ಬೇಟೆ. ಕಾಲಕಾಲಕ್ಕೆ ಕಾಲನಿಗೂ ಒಳ್ಳೇ ನೆರವು ದೊರೆಯುತ್ತಿರುವಾಗ ಒಬ್ಬರೊಬ್ಬರೊಳಗೆ ಹೊತ್ತುಕೊಂಡು ನೆಟ್ಟಿರುವರು ಕಾಲಕ್ಕೆ ಕೈ ಹಚ್ಚಿದರೆ ಕಾಲನಿಗೆ ಕೋಪ ಬರಲಾರದೇಕೆ? 'ವಿಶ್ವಧಾರಾಯು ಕೊಡೆ ಕತ್ತಿಯಲ್ಲಿ ನೀರು ಕಟಿಗನ ಕಡೆ ನೀರಲ್ಲಿ' ಎಂದು ಹಿರಿಯರ ಮನವರಿತ ಮಾತು ಹಾಗೆ ಬೇಟೆಯಾತ ಮನಸೂ ಬೇಟೆಯಾಡಲ್ಪಡುವನೆಂಬುದು ಸಹಜ ಸಿದ್ಧ ಕಾಲದ ಬೇಟೆ ಇವರದು ಅವರಂತೆ ಕಾಲದ ನೋಟದವ ಕಾಲನು ಇವರ ಬೆಟ್ಟೆಯನ್ನೇ ಬೇಗ ಬಿಡದೆ ಹೇಗೆ ಬಿಟ್ಟಾನು?

ನಮ್ಮ ವತನದಾರರು ಮಹಾ ಪುರುಷಾರ್ಥ ಮಾಡಿದ್ದು ಇದೇ ಕಾಲದ ಬೇಟೆಯಾಡುವಂಥ ಹುಚ್ಚು ಕೆಲಸವನ್ನು ಇವರು ಕೈಕೊಳ್ಳಬಾರದಿತ್ತು ಕಾಲದ ಮೇಲೆ ಕೈ ಎತ್ತಲು ಕಾಲನು ಕಿಡಿಕಿಡಿಗುಟ್ಟಿ ನಮ್ಮ ವತನದಾರರನ್ನೇ ನುಂಗಲಾರಂಭಿಸಿದನು. ಅಕಟಕಟಾ! ಗೊತ್ತಿಲ್ಲದ ಮೈಗೆ ಕಣಕಿ ಬರಿದೆ ಬಯಲಾಗುತ್ತಿರುವರಲ್ಲ ನಮ್ಮ ವತನದಾರರ?

ಕಾಲದ ಬೇಟೆಯನ್ನು ಒಬ್ಬಿಬ್ಬರೇ ಆಡಲಿಕ್ಕೆ ಹೋಗಿದ್ದರೂ ಎಲ್ಲ ವತನದಾರರ ಮೇಲೆ ಈಗಿನಂತಹ ಕಾಲ ಬರದೆ ಇರಬಹುದಾಗಿತ್ತು. ಆದರೆ ಕಾಲದ ಬೇಟೆ ಅದು ಹುಡುಗಾಟಿಕೆಯೇ? ಒಬ್ಬಿಬ್ಬರ ಹತ್ತಲ್ಲ. ಆ ಆ ಕಾಲನ ಮೇಲೆ– ಬೇಡ ಅಲ್ಲ; ಕಾಲದ ಮೇಲೆ ನಡು ಹಗಲಿನಲ್ಲಿ ಹೋಗಲಿ, ನಟ್ಟಿರುಳೊಳಗೆ ಹೊತ್ತು ತಪ್ಪಿಸಿ ಹೋಗಲಿ ಅದು ಒಬ್ಬರ ಮಾತಲ್ಲ ಪುಷ್ಕರ ಇರಲಿ ವೃಂದರೇ ಇರಲಿ ಸಾಂಘಿಕ ಪ್ರಯತ್ನವಾದರೂ ಬೇಕು. ತಂಡಗಟ್ಟಿಗೊಂಡು ಕಾಲದ ಮೇಲೆ ಮುತ್ತಿಗೆ ದಾಳಿ ಮಾಡಬೇಕಾದ ವಿಷಯ, ಸ್ವಾಮೀ ಇದು. ಅದಕ್ಕಾಗಿಯೇ ಮತ್ತೆ ಈಗಿನ ಸುಧಾರಣಾ ಕಾಲದಲ್ಲಿ ಹಳೆಯರಿಂದ ಬುದ್ಧಿ ಕಲಿತು **ಕಾಲದ ಕೊಲೆಯ ಕೂಟಗಳು** .... ಸಮಾಜ ××× ಕ್ಲಬ್ ×× ಮಂಡಳ ಮುಂತಾದ ಚಿತ್ರ ವಿಚಿತ್ರ ಹೆಸರಿನ ಹೊದಿಕೆಯನ್ನು ಕೊಂಡು ಆಧುನಿಕ ವತನದಾರರು— ವಕೀಲ, ಡಾಕ್ಟರ, ದೊಡ್ಡ ಸಂಬಳದ ಹಿರೇ ಆಳುಗಳು— ಕಾಲದ ಬೇಟೆಯ ಹೊಸ ಮಾದರಿಯ ಏರ್ಪಾಡು ನಡಿಸಿದ್ದಾರೆ.

ಕೊಲೆಯ ಕಲೆಯಲ್ಲಿ ಹೊಸ ಹೊಸ ಸುಧಾರಣೆಗಳು ಬಹಳವಾಗಿ ಆಗುತ್ತಲಿವೆ ಇಂಗ್ಲಂಡ, ಫ್ರಾನ್ಸದಂಥ ಸುಧಾರಣೆ ಹೊಂದಿದ ರಾಷ್ಟ್ರಗಳು ಕೊಲೆಯ ಕಲೆಯಲ್ಲಿ ಹೊಸ ಶೋಧಗಳನ್ನು ಮಾಡಲಿಕ್ಕೆ ಕೋಟ್ಯಾವಧಿ ರೂಪಾಯಿಗಳನ್ನು ತಿಂಗಳಿಗೆ ಕೊಟ್ಟು ಬಲ್ಲವರಿಂದ ಬುದ್ಧಿ ಕೇಳುತ್ತೀವೆ. ಅದೇ ಮೇರೆಗೆ ಕಾಲನ ಕೊಲೆಯ — ಬೇಟೆಯ ಶಾಸ್ತ್ರದಲ್ಲಿ ಸಹ ಮುಂದೆ ಹೆಜ್ಜೆ ಬಿದ್ದಿದ್ದರೆ ಸೋಜಿಗವೇನು?

ಸೋಜಿಗವೇನೂ ಇಲ್ಲ, ಆದರೆ ಹೆಜ್ಜೆ ಮುಂದೆ ಬೀಳುವ ಬೀಳಿಸುವ ಗಡಿಬಿಡಿಯಲ್ಲಿ ಆ ಹೆಜ್ಜೆ ಜಾರಿಯದಿದ್ದರಾಯಿತು.

ಕಾಲದ ಬೇಟೆಯ ಹಳೇ ಪದ್ಧತಿಯಲ್ಲಿ ಕವಡಿಗಳಿಂದ ಕಲಹ ಬೆಳಿಸಿಕೊಂಡು ಕಾಲಕಳೆಯುವದೊಂದು ಬಗೆ; ಹೆಣ್ಣು ಹೆಂಡಗಳಲ್ಲಿ ಮೈಮರೆತು ಬೆಂದು ಹೋದದ್ದರ ಪರಿವೆಯಿಲ್ಲದೆ ಅಂದು ಎದ್ದರ ಸಿಗ್ಗು—ಎಗ್ಗುಗಳಿಲ್ಲದೆ ಕಲ್ಲು ಬಂಡೆಯಂತೆ ಸಮಾಧಿಯೋಗದಲ್ಲಿ ಮಗ್ನವಾಗುವದು ಮತ್ತೊಂದು ಬಗೆ ಮೊದಲನೇಯ ಬಗೆಯು ಕೊಂಚ ಒದಲಾಗಿರುವದಾದರೂ ಎರಡನೇಯದನ್ನು ಹಲವೆಡೆಗಳಲ್ಲಿ ಇನ್ನೂ ಕಾಣಬಹುದು.

ಮೊದಲನೆಯ ರೀತಿಯಲ್ಲಿ ಸುಧಾರಣೆಯಾಗಿದೆ. ಪಗಡಿ ಕವಡಿಗಳಿಗೆ ಕೊಟ್ಟ ಕಾಸುಗಳು ದೇಶದಲ್ಲಿ ಉಳಿಯುತ್ತಿದ್ದವು. ಆದರೆ ಈಗಣ ಮಿಸ್ಸಿನೆಟ್ಟ ಕೊಳ್ಳಲಿಕ್ಕೆ ಸೂಟವಿಂದ ಝಣ್ಣೆಂದು ಜಿಲ್ಲಿದ ಹುಣ್ಣವು ಸಪ್ತಗ ನಮ್ಮ ನಾಡಿನ ಗಡಿಗಳನ್ನು ದಾಟಿ ಮುಂದೆ ಸಾಗುವವು. ಕವಡಿ ಹಿಡಿಯುವುದು ಹುಂಬತನವಾಗಿದೆ. ಈಗ ಪಗಲಿರುಳೆನ್ನದೆ, ಕತ್ತಲೆ ಮಾಡಿ! (ಯಾಕೆಂದರೆ ರೊಕ್ಕ ಹಚ್ಚಿ ಆಡುವದು ನಿಕ್ಕರ ಪೋಕರ ಪೋಲೀಸರ ಕಾಟ) ಆಡುವರು; ಕತ್ತಲೆ ಬೆಳ್ಳಾ ಬೆಳಕು ಮಾಡಿ ಹೆಂಡರು ಮನೆಯಲ್ಲಿ ತಮಗಾಗಿ ಊಟಕ್ಕೆ ಕಾದು ಹಸಿವೆಯಾದುದಕ್ಕೆ ಹೊಟ್ಟೆ ಕಾಯ್ದು ಸಂಕಟವಾಗಿ (ಸಿಟ್ಟಾಗಿ, ಅಲ್ಲ! ಏಕೆಂದರೆ ಗಂಡನ ಮೇಲೆ ಆರ್ಯ ಸ್ತ್ರೀಯು ಸಿಟ್ಟಾದರೆ ಅಧರ್ಮವು!) ಕಸಿವಿಸಿಕೊಳ್ಳುತ್ತಿದ್ದರೂ ಮನೆಯ ಎಚ್ಚರವಿಲ್ಲದೆ ಕಾಲಸಂಹಾರ ಕಾರ್ಯ ಧುರಂಧರ ಮಹಾಪ್ರತಾಪಶಾಲಿ, ರಾಜಮಾನ್ಯ ರಾಜೇಶ್ರೀಗಳವರು ನಿದ್ರೆ ನೀರಡಿಕೆಗಳಿಲ್ಲದೆ (ಬೇಟೆ) ಆಡುತ್ತಾರೆ. ನಾಲ್ಕು ಜನ ದಿಗ್ಬಂಧನ ಮಾಡಿ ಬಗುವಿನಿಂದ ಸಜ್ಜಾಗಿ ಕುಳಿತು ಪಟ್ಟಿನ ಮೇಲೆ ಪಟ್ಟು ಹಾಕಿ ಹೊಡೆಯುತ್ತಿರುವದರಿಂದ ಪಾಪ! ಆ ಕಾಲದ ಕೊಲೆಗೇನು ತಡ, ಹಾ. ಹಾ! ಅನ್ನುವದರೊಳಗೆ ಹೊತ್ತು ಹಾರಿ ಹೋಗುವದು. ಅಲ್ಲಿ ಹಾಳಾಗಿ ಹೋಗುವದು. ಆಗ ಬೇಟೆಯ ಬಳಲಿಕೆಯಾಗಿದ್ದರೂ ಹೊತ್ತನ್ನು ಹಾಳುಮಾಡಿ ಬಿಟ್ಟೆವಲ್ಲ ಎಂಬ ಹಿಗ್ಗಿನಿಂದುಬ್ಬಿ ಹಿರಿಗೆ ಸಮಾದ ತಿಂಡಿ ತೀರಿಸಿಕೊಳ್ಳಲು ಹೊರಡುವಂಥವರಾಗುವರು.

ಭಾಪು! ವತನದಾರ, ಭಾಪು! ಮಝು! ಮಹಾರಾಜ ಮಝು! ಎಂದು ಹೊಟ್ಟೆಯೊಳಗಿನ ಕುದಿದ್ದು ಯಾರು ಹೇಳಲಿಕ್ಕಿಲ್ಲ?

ನಮ್ಮ ವತನದಾರರ ಕಾರ್ಯ ಭಾಗದ ಇನ್ನೊಂದು ಅಂಗವನ್ನು ಹೇಳುವದುಳಿಯಿತು. ಅದು ಇವರ ತಿಂಡಿ, ತಿಂಡಿಯ

...ಯವು ಬಹಳ ವ್ಯಾಪಕ. ಅದೆಲ್ಲವನ್ನೂ ಇಲ್ಲಿ ಹೇಳಲೂ ಆಗದು, ಹೇಳ...ಲೂ ಅರೆಸು. ಸ್ವಲ್ಪ ಮಾತ್ರ ಉಸುರುವೆನು.

...ಕಾಲದ ಬೇಟೆಯಾಡುವ ಇವರಿಗೆ, ಹೊತ್ತು ಸಿಗುವದಿಲ್ಲೆಂಬುದು ... ಸ್ಪಷ್ಟವಿದೆ. ಯಾಕೆಂದರೆ ಅದು ಸಿಕ್ಕಿದ್ದರೆ ಬೇಟೆಯಾಡ ಬೇಕಾಗ...ುತ್ತಿದ್ದಿಲ್ಲ. ಹೊತ್ತು ಸಿಗುವದಿಲ್ಲೆಂದ ಬಳಿಕ ಒಕ್ಕಲತನ, ವ್ಯಾಪಾರ...ದಂಥ ಹೆಚ್ಚಿನ ದುಡಿತದ ಹೋರೆಗಳ ಪಾರಿಷುನ್ನು ಮುಟ್ಟುವದಿಲ್ಲ. ...ದರೆ ತಿಂಡಿಗೆ ದುಡ್ಡು ಬೇಕಲ್ಲ ಅದಕ್ಕಾಗಿ ಒಂದು ಹೊಸ ಹಂಚಿಕೆಯೂ ಹೊರಟಿದೆ.

ಹಿಂದಿನವರು ಆಳಾಗಿ ದುಡಿದು ಅರಸನಾಗಿ ಉಣ್ಣುತ್ತಿದ್ದರು. ಅದರಿಂದ ಅವರ ಮನೆಯಲ್ಲಿ ಪಂಚ ಪಕ್ವಾನ್ನಗಳ ಅಡಿಗೆ ಆಗುತ್ತಿತ್ತು. ಈಗಿನ ಸುಧಾರಿಸಿದ ಕಾಲದಲ್ಲಿ ಆಗಾದೆ ತಲೆಕೆಳಗಾಗಿದೆ. ಅರಸನಾಗಿ ಮೆರೆದು ಕೀಳಾಗಿ ಹುಯ್ಯು ಎಂಬುದು ಹೊಸಬರ ಬಿರುದು. ಹಿಂದಿನವರು ಆಳಾಗಿ ದುಡಿಯುತ್ತಿದ್ದರು! ಒಲ್ಲಿ ಮಾತ್ರ ನಾವಡ ಬಟ್ಟೆ ಹಾಕುತ್ತಿದ್ದರು. ಹಾಲು ತುಪ್ಪದ ಹಬ್ಬದ ಊಟ ಉಣ್ಣುತ್ತಿದ್ದರು. ೭೦-೮೦ ವರ್ಷಕ್ಕೆ ಕಡಿಮೆಯಿಲ್ಲದೆ ಬಾಳುತ್ತಿದ್ದರು. ಹೊಸಬರ ಮಾತೆಲ್ಲ ಹೊಚ್ಚ ಹೊಸದು! ಅರಸರಾಗಿ ಮೆರೆಯುವದು ಮೊದಲ ಮಾತು. ಬೂಟು ಪಾಟಲೋಣು, ಟೈ ಕೋಟು ಆಯಿತು. ತಿನ್ನಲು ಹೊಟ್ಟೆಯಲ್ಲಿ ಉರಿಬೀಳುವ ಚಕ್ಕುಲಿ ಚಹಾ ಜೊತೆ ಬಿಸ್ಕೀಟು ರೊಟ್ಟಿಗಳಾಯಿತು. ಕಾಲದ ಬೇಟೆಯಾಡ ಹೋದ ಇವರನ್ನು ಕಾಲನೇ ೩೫-೪೦ ವರ್ಷಕ್ಕೆ ಬೇಟೆಯಾಡುವನು!

ಇಷ್ಟು ಕಷ್ಟಸೋಸಿ ಬಡಬಗ್ಗರಿಗೆ ಹೊಟ್ಟೆತುಂಬ ಬಡಿಸಿದ್ದಕ್ಕೆ ಪ್ರತಿಫಲ ವೇನು? ಕೆಲವು (ರೂಪಾಯಿಗಳ) ಹುಂಡಿ. ತಮ್ಮ ಸಂಬಳ ಅಥವಾ ಫೀಗಿಂತ ಸ್ವಲ್ಪು ಹೆಚ್ಚು. ನಡುವೆ ಬಾಡಿಸಿಕೊಳ್ಳಲು ಇದು, 'ಕಾಯಿರಸ!' ಇದಕ್ಕೂ ಹೆಚ್ಚೇನು ಇಲ್ಲ. ಹಲವರು ಹೊತ್ತಿಗೆ 'ಹುಂಡಿ' 'ಕಾಯಿರಸ'ಗಳು ಸಿಗಬೇಕೆಂದು ಬಡಬಗ್ಗರಿಗೆ ಬಹಳ ದೊಡ್ಡ ಮನಸ್ಸಿನಿಂದ ಕನ್ನಡಿಗರ ಪ್ರೀತಿಯ ಊಟವಾದ ಕಡಬು ಕೊಡಲಿಕ್ಕೂ ಆಸಿಮಿಸಿ ಗೊಳ್ಳುವದಿಲ್ಲ!

...ನಮ್ಮಾಗ ...ಗಳು ...ಇವರು ಬಹಳ ದೊಡ್ಡವರು. ಇನ್ನು ಮೇಲೆ ತಮ್ಮ ಪಕ್ವಾನ್ನಗಳ ಪ್ರಸಾರಾರ್ಥವಾಗಿ ಬೇಗನೆ "ಕರ್ನಾಟಕ ಪಕ್ವಾನ್ನ ಸಂಶೋಧಕ ಹಾಗೂ ಪ್ರಸಾರಕ ಮಂಡಗಳ" ವೆಂಬ ಸಂಸ್ಥೆಯನ್ನು ಸ್ಥಾಪಿಸುವವರಿದ್ದಾರೆ. ಕರ್ನಾಟಕದ ಕೀರ್ತಿಯನ್ನು ಕಾಯುವವರಿದ್ದಾರೆ. ಇಂಥವರಿಗೆ ಕೆಮ್ಮನೆ ಊಟಕುಟಿಗರು, ಉಂಡಾಡಿಗಳೆಂದು ಹೇಳಲು ನಾಲಿಗೆಯಾದರೂ ಹೇಗೆ ಏಳುವದು!

ಜನಮರುಳೋ ಜಾತ್ರಿಮರುಳೋ?

(ಶ್ಯಾಮಲಾದೇವಿಯ ಪತ್ರ.)

ಅಣ್ಣಾ, ನೋಡು, ಯಾರು ಅನ್ನುತ್ತಾರೆ ಶ್ಯಾಮಲಾದೇವಿಯು ಲಿಂಗಾಯತಳೋ ಬ್ರಾಹ್ಮಣಳೋ ಎಂದು, ಯಾರು ಕೇಳುತ್ತಾರೆ ಶಾಮಲಾದೇವಿಯು ಸುಶಿಕ್ಷಿತಳೋ ಹಳ್ಳಿಗಾಡದಾಕಿಯೋ ಎಂದು. ಮತ್ತೆ ಯಾರು ಸಂಶಯ ತೆಗೆಯುತ್ತಾರೆ 'ಶ್ಯಾಮಲಾದೇವಿಯು ಹೆಂಗಸೊ ಗಂಡಸೋ? ಎಂದು. ಅಣ್ಣಾ ಮಂದಿಯ ಹೆಣ್ಣು ಮಕ್ಕಳ ಗೊಡವೆಯು ಯಾಕೆ ಬೇಕಿಷ್ಟು ಇವರಿಗೆ? 'ನಶಾಯಾಃ ಪರದಾರ ವ್ಯವಹಾರಾಃ;' ಚುಪ್!

ಅದಿರಲಿ; ಅಣ್ಣಾ ನನ್ನ ಕನ್ನಡ ಬಾಂಧವರು ಹೀಗೆ ಕೇಳಿದ ಅಪರಾಧವನ್ನು ನಾನು ಕ್ಷಮಿಸುತ್ತೇನೆ. ಯಾಕೆಂದರೆ, ನಾಟಕಗಳಾಗುವಂತೆ ಲೇಖಗಳಾದರೂ ಆಗಬಹುದೆಂದು ಅವರಿಗೆ ಅನಿಸಿರಬಹುದು. ಬಾಲ (ಅಲ್ಲದ) ಗಂಧರ್ವನು ಗಂಡಸು. ಮಾಸ್ಟರ ಕೃಷ್ಣಾ (ಹೆಣ್ಣುಹೆಸರಲ್ಲ) ನು ಗಂಡಸು. ಆದರೆ ಅವರ ಪ್ರಸಿದ್ಧಿಯು ಹೆಂಗಸರಂತೆ ಆದದ್ದು ಸಲುವಾಗಿ ಅಲ್ಲವೆ? ಅಣ್ಣಾ, ನಿನ್ನ ತಂಗಿಯು ಹಾಗೇನಿಲ್ಲವಲ್ಲ? ಈ ವೃದ್ಧ ಗಂಧರ್ವನಿಗೆ (ಯಾಕೆಂದರೆ— ಬಾಲನಲ್ಲ ನಿನ್ನ ಮಗನು! ಮಹಾರಾಷ್ಟ್ರದೇವಿ! ಬಾಲನಲ್ಲ ಗಂಧರ್ವನು!!) ಮುಪ್ಪಳಿಯಲ್ಲ ಋಣಕಲ್ಲ ಸಿದ್ಧಪ್ಪನ ಜಾಗಾಕ್ಕೆ ವರ್ಗವಾಯಿತೇನು? ಜನಮರುಳೋ ಜಾತ್ರಿಮರುಳೋ! ಏನು ಹೇಳಲಿ ನನ್ನ ಬಂಧುಭಗಿನಿಯರ ದುರ್ದಶೆಯನ್ನು! ರುದ್ರವ್ವ ನಿಂಗವ್ವ, ಕೃಷ್ಣಾಬಾಯಿ, ಗಂಗಾಬಾಯಿಯವರೆಲ್ಲರೂ 'ಆಟ ಆರೇ ಅಂತರೆ!'ಎನ್ನುತ್ತ ಹೋಗಿ ಹೋಗಿ ನೋಡಿಬರುವರು. ಕನ್ನಡಿಗಣ್ಣಾ ಹೆಂಗಸರಿಗೇನು ತಿಳಿಯಬೇಕು ಗಂಡಂದಿರ ಅಜ್ಞಾ ಇದೆಲ್ಲ, ಗಂಡಸರು ಓಡ್ಯಾಡುವದು ಆಶ್ಚರ್ಯವೇನು? ಅಣ್ಣಾ ಗಂಧರ್ವಕಂಪನಿಯಲ್ಲಿ ಏನು ನೋಡುವದು? ಏನೊಂದು ರೂಪವನ್ನು ನೋಡಬು ಹೋಗುವರೋ ಅಯ್ಯೋ! ಈ ಮುದುಕುಡುಗರನ್ನು ನಮ್ಮ ಗರುಡ ಸದಾಶಿವರಾಯರ ಶರಾವತಿಯು ಮೇಲೆ ನಿವಾಳಿಸಿ ಚಲ್ಲಬಾರದೇ! ಬಡವಿ ಗಾಯನ ವಿದ್ಯೆಗೋಸ್ಕರ ಹೋಗುವರೆ? ಕುಂದಗೋಳ ರಾಮಭಾಯರಿಗೆ ಸವಾಯಿ ಗಂಧರ್ವನೆಂದು ಹೆಸರಿಟ್ಟು ಲಾಲಿಸಿದ

ರೇಲವೇ ಬೋರ್ಡಿನ ಅರ್ಜಿಗಳನ್ನು ತೀವ್ರವೇ ಕಳಿಸಿರಿ

ಹಿಂದಿನವರು ಸ್ವಾರ್ಥಿಗಳು ಬಹಳ ದಿನ ಬಾಳುತ್ತಿದ್ದರು! ಸ್ವಂತ ಹಬ್ಬದೂಟ ಉಣ್ಣುತ್ತಿದ್ದರು. ಹೊಸಬರು ಸುಧಾರಿಸಿದವರು. ಸ್ವಾರ್ಥತ್ಯಾಗಿಗಳು. ಇವರು ಒಡಜನರಿಗೆ ಬಡಿಸುವರು ಬಡವರಿಗೆ ಒಡಿಸಿದ್ದರಲ್ಲಿ ಒಂದನ್ನೂ ತಾವು ತಿನ್ನಲು ಬಯಸುವದಿಲ್ಲ, ಬಡವರ ತುತ್ತು ಇವರಿಗೆ ಎಂದೂ ಸೇರುವದಿಲ್ಲ. ಹಾಗೂ ಅದನ್ನು ಅಪೇಕ್ಷಿಸುವದೂ ಇಲ್ಲ. ಬಡವರಿಗೆ ದುಡ್ಡು ಸಹ ಕೇಳುವದಿಲ್ಲ. ಆದರೆ ಕೊಸರ ವರು ಮಾತ್ರ. ಈಳಿ ತಕ್ಕೊಳ್ಳುವುದು ಬಿಕ್ಕೆತಿರಕಿ. ಅದ ಕಾರಣ ಕೇಳುವುದು ಕೀಳತನ, ಇವರಿಗೆ ಒಪ್ಪದು. ಕೊಸರುವದಕ್ಕೆ ಪರಾಕ್ರಮ ಬೇಕು. ಕಾರಣ ಇದು ದೊಡ್ಡತನದ ಲಕ್ಷಣವು. ಸದ್ದಿಲ್ಲದೆ ಕದ್ದೊಯ್ದರೆ ಕಳ್ಳನೆಂದು ಸೆರೆಮನೆಗೆ ಕಳಿಸುವರು. ಆದರೆ ಅವರು ಹಗಲು ಹಾಡಿ ಒಂದು ಸೆಳೆದೊಯ್ದರದಕೆ ಕವನ ಮಾಡಿ ಕಾವ್ಯ ಬರೆಯುವರು ಇದರಿಂದ ಕೇಳುವುದಕ್ಕಿಂತ ಕಸೆಯುವುದು ಹಿರಿದೆಂದು ಸಿದ್ಧವಾಗುವದಿಲ್ಲವೇ?

ಬಡವರಿಂದ ಇವರು ದುಡ್ಡು ಕಸಿಯುವುದೇನೋ ಸರಿ. ಆದರೆ ತಾವು ಸ್ವಂತ ತಿನ್ನದಿದ್ದರೂ ಬಡಬಗ್ಗರಿಗೆ ಪಕ್ವಾನ್ನ ಬಡಿಸುವರಲ್ಲ! ಇದಕ್ಕಾದರೂ ಹೊಗಳಬಾರದೇ?

ರೈತನು ಯಾವದೊಂದು ಬಿಟ್ಟಿ ಟೋಕಳೆ ಯೊಳಗೆ ಸಿಕ್ಕ ಕೂಡಲೆ ಅವನಿಗೆ ಅಷ್ಟಕ್ಕೆ ಬಿಡದೆ ಬಿಸಿಲು ಹಣ್ಣು ಹಂಪಲ ತಿನ್ನಿಸುವರು. ಹಣ್ಣಿನಿಂದ ಹೊಟ್ಟೆ ತುಂಬುವದಿಲ್ಲೆಂದು ಮಾತಿನ ಮಂಡಿಗೆ ಮಾಡಿ ಹಾಕುವರು. ಆ ಮಂಡಿಗೆಯ ರುಚಿಯನ್ನು ಬಗೆಯಲ್ಲಿ ನೆನೆ ನೆನೆದು ತಿನ್ನುತ್ತ ಮತ್ತಿಷ್ಟು ಬೇಡುತ್ತ ಬೆನ್ನು ಹತ್ತಬೇಕೆಂಬುವಂತೆ ಮಾಡುವರು. ಮಂಡಿಗೆಗೆ ಹಾಲುಬೇಕಾಗಿದ್ದರೆ ಮರಾಠಿ ಹಾಲು ಸಿದ್ಧ ಇರುತ್ತದೆ ಅಷ್ಟಕ್ಕೆ ಹೊಟ್ಟೆ ತುಂಬದಿದ್ದಲ್ಲಿ ವಾಣಿಯ ಮೋತಿ-ಚೂರ ಮಾಡಿಸಿ ತಿನಿಸುವರು.

ರು ಯಾರು? ಅವರ ಮಲತಾಯಿಯಾದ ಮಹಾರಾಷ್ಟ್ರದೇವಿ ಯಲ್ಲವೆ? ಅಣ್ಣಾ ಈ ವೃದ್ಧ ಗಂಧರ್ವನು ಹಾಡುವದಾದರೂ ನು? 'ಉಗಿಚ ಕಾ- ಆಳಆಳ- ಕಾಷ್ಠಾ ಆಳತಾ' ಅಂತೆ ಇದರ ನ್ನಡಪಾಟಿಯಾದ 'ಹಿಗ್ಗುವಿಯಾಕ್ಕೋ' ಎಂಬ ಪುರಂದರದಾಸರ ರೀತೆಯನ್ನು ಅತಿಮನೋಹರವಾಗಿ ಹಾಡುತ್ತಿರುವ ದೇಶಪಾಂಡೇ ಯವರಾಯರಿಗೇನು 'Rs. five hundred rupees Tickets' ಎಂದು ಬೆಂಗಳೂರ ಬಳ್ಳಾರಿಗಳಿಂದ ತಾರು ಬರಲಿಲ್ಲ! ಗುಣಕ್ಕೆ ಹಣವಿಲ್ಲುಂಟು! ಅದು ಹೋಗಲಿ. ಜೋಳ ಗುಡ್ಡದ ನಾಡಿನಲ್ಲಿ ಹುಟ್ಟಿದ ಈ ಹಕ್ಕಿಯ ಕಳಕಂಠಧ್ವನಿಯ ಧ್ವನಿಗೆಂದು ಆತೊರೆಯುವರೇ? ಅಯ್ಯೋ! ಕೌಜಲಗಿ ನಿಂಗಿ ಯ ಹಸರನ್ನು ಕೇಳದ ಕನ್ನಡಿಗರಾರು? ಕನ್ನಡಿಗರೇ ಹುಡಿಗನ್ನ ಡಿಗರೇ, ನೆನಪುಂಟೇ ಈ ಸ್ತ್ರೀರತ್ನದ ಕಂಠಮಾಧುರ್ಯವು? ಅಯ್ಯೋ ಈ ಕನ್ನಡ ಕೋಕಿಲೆಯ ಹಾಡುಗಳಲ್ಲಿ ಒಂದನ್ನಾದರೂ ಗ್ರಾಮೋ ಫೋನ್ ಪಟ್ಟಿಗಳಲ್ಲಿ ತುಂಬಿಸಲಿಲ್ಲವಲ್ಲ! ವೈದಿಕರಿಗೆ 'ಸ್ತ್ರೀರತ್ನಂ ದುಷ್ಕುಲಾದಪಿ' ಎಂದು ಶಾಸ್ತ್ರಾಧಾರ ಸಹ ಇತ್ತು. ಇದರ ಆದೆಲ್ಲ ಈಗನೀಗ ಹೋಯಿತು. 'ಕಾಲಾಯ ತಸ್ಮೈ ನಮಃ'

ಎಲ್ಲಾ ಬಿಡು. ಕನ್ನಡಿಗಣ್ಣಾ, ಈ ರಸಿಕರೇನು ಗಂಧರ್ವನ ಅಭಿನಯವನ್ನು ನೋಡಲಿಕ್ಕೆಂದು ಇಷ್ಟು ಆತೊರೆಯುವರೇ? ಅಣ್ಣಾ ಶ್ರೀ ರಾಘವಾಚಾರ್ಯರಿಗೆ ಒಮ್ಮೆ ಹುಬ್ಬಳ್ಳಿಗೆ ಬಂದು ತಮ್ಮ ನಾಟಕ ಪ್ರಯೋಗಗಳನ್ನು ತೋರಿಸಿದರೆ ಈ ಬಿಟ್ಟಡಿಗಳ ಭ್ರಮನಿರಸನವು ಚನ್ನಾಗಿ ಆಗುತ್ತದೆ. ಅಣ್ಣಾ ಹಾಗೆ ಮಾತ ಲಿಕ್ಕೆ ರಾಘವಾಚಾರ್ಯರಿಗೆ ಅಗತ್ಯವಾದ ಆಮಂತ್ರಣವನ್ನು ಕಳಿ ಸು. ಅಣ್ಣಾ, ನಮ್ಮ ಕನ್ನಡ ನುಡಿಯ, ಕನ್ನಡ ಕಲೆಗಳ, ಉತ್ಕ ರ್ಷವಾಗಬೇಕಾದರೆ. ಈ ಆಗಂತುಕರ ವಿಷಯವಾಗಿ, ನಾವು ಬಹ ಳ ಎಚ್ಚರಿರಲಿಕ್ಕೆ ಬೇಕು. ಕರ್ನಾಟಕ ಕಾಲೇಜದ ಗ್ಯಾದರಿಂಗದಲ್ಲಿ ಕಂಬಳಿಯವರ ಉಪದೇಶಪರ ಭಾಷಣವಾಗಲಿಲ್ಲವೆ? ಆಸಂಧಿ ಯಲ್ಲಿ ಪ್ರೋ ಭಾಟೇ ಇವರೂ ಬಂದರಂತೆ (ಮೂರನೇ ತಾರೀಖಿ ನ ಕೇಸರಿ ನೋಡು) ನೆರೆದ ವಿದ್ಯಾರ್ಥಿಗಳೆಲ್ಲರೂ ನೋಡಿ ನಕ್ಕರಂತೆ ಕೇಸರಿಯು ಬಲು ಕೆರಳಿರುವದು. ಅಣ್ಣಾ, ಊಟಕ್ಕೆ ಹೇಳದೆ, ಆಯತವಾಗಿ ಬಂದು ಎಲಿಯ ಮೇಲೆ ಕುಳಿತರೆ, ನಗದೆ ಯಾರು ಬಿಟ್ಟಾರು? ಈ ಮರಾಟಿಗರಿಗೆ ಧಾರವಾಡ ಹುಬ್ಬಳ್ಳಿಯೆಂದರೆ ಅನ್ನ ಛತ್ರವಾದ ಹಾಗೆ ಆಗಿರುವದು. ಎಲ್ಲಿ ಯಾದರೂ ಪ್ರಸಂಗಪ್ರ ಯೋಜನ ಅವೆ ಎಂದು ತಿಳಿದರೆ ಸಾಕು. ಬಂದರು! ಎಲ್ಲಾರು ಭಾಟೆ, ಮಾಟೇ, ಬಟಾಟೇ ಕಾಂದೇ! ಕನ್ನಡಿಗಣ್ಣಾ ಸಾಕು, ಈ ಆಗಂತುಕರ ಗೊಡವೆಯು ನಮ್ಮ ನಮ್ಮ ಜಾಗೆಯನ್ನು ನಾವು ಹಿಡಿದು ಕೊಂಡು ಕುಳಿತರೆ ಸಾಕು ಇವರು ಬಂದು ಮಾಡು ವದೇನು?

ಮಮತೆಯ ತಂಗಿ

ಶ್ಯಾಮಲಾ ದೇವಿ

---

೩ ನೇ ಪುಟದಿಂದ ಬಂದದ್ದು

(ಅ) ಕನ್ನಡನಾಡಿನ ದೊಡ್ಡ ಭಾಗವು ಮೈಸೂರಿನಲ್ಲಿದೆ. ಮೈಸೂರೆಂದರೆ ಕರ್ನಾಟಕಸ್ಥರಿಗೆಲ್ಲ ಅಭಿಮಾನಾಸ್ಪದವಾದ ಸಂಸ್ಥಾನವು ಅಪ್ಪಟಗನ್ನಡಿಗರಾದ ಮಹಾರಾಜರಲ್ಲಿ ಕನ್ನಡನಾಡಿನ ಮೇಲ್ಪ್ರೀತಿ ಒಸ್ಸಾನಗಳವೆ ಮಹಾರಾಜರು ಕನ್ನಡನಾಡಿನ ವೈಭವ ವೆಂಬುದರ ವ ಸ್ತ್ರ ಆಧಾರ ಸ್ತಂಭವೆಂತಿದ್ದಾರೆ. ಹೀಗಿದ್ದೂ ಸಹ ಮಹಾರಾಜರಿಗೂ, ಮೈಸೂರ ಹೊರಗಿನ ಕನ್ನಡಿಗರಿಗೂ ಸಂಬಂಧ ಹೆಚ್ಚಿಸಲು ಮಾರ್ಗವೂ ಇಲ್ಲ. ಅವರೆ ಈಗಿದ್ದ ಮೈಸೂರ ವಿಶ್ವವಿದ್ಯಾಲಯವನ್ನೇ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡಿದರೆ ನಾವೆಲ್ಲ ಮಹಾರಾಜರ ವೈಭವದ ಆಶ್ರಯದಲ್ಲಿರಲು ಅವಕಾಶವುಂಟಾಗುವದು. ಮಹಾಸ್ವಾಮಿ ತಮ್ಮ ಪ್ರಜೆಗಳ ಕಲ್ಯಾಣಕ್ಕಾಗಿ ಬಹು ಶ್ರಮವಹಿಸಿ ಏರ್ಪಡಿ ಸಿದ ವಿಶ್ವವಿದ್ಯಾಲಯವನ್ನು "ನೀವೇ ನಿಮ್ಮ ಕೈಯಿಂದ ಕೊಟ್ಟಿದು ಬಿಡಿ" ಎಂಬದಾಗಿ ಮಹಾರಾಜರಿಗೆ ಹೇಳುವದೆಂದರೆ ಕರ್ನಾ ಟಕದ ಹೆಸರಲ್ಲಿ ... ಉಳಿದ ವಿಶ್ವವಿದ್ಯಾಲಯವು ವಿಕಾಸಹೊಂದಿ, ಅಖಂಡ ಕನ್ನಡನಾಡಿನವರಿ ಗೆಲ್ಲ ಮಾನ್ಯವಾಗುವದೆಂದರೆ, ಮಹಾರಾಜರಿಗೆ ಹಿರಿ ಹಿರಿ ಹಿಗ್ಗು ವಂತೆ ಆಗುವದು.

(ಆ) ಹೊಸದಾಗಿ ಯಾವದೊಂದು ಸಂಸ್ಥೆಯನ್ನು ಸ್ಥಾಪಿ ಸಬೇಕೆಂದರೆ ಎಷ್ಟು ಕಷ್ಟ ಮಯವಾದುದೆಂಬುದನ್ನು ತಜ್ಞರು, ಅನು ಭವದಿಂದ ಹೇಳಬಲ್ಲರು. ಆದರೆ ಇದ್ದದ್ದರಲ್ಲಿಯೇ ಸ್ವಲ್ಪ ಅದಲು ಬದಲು ಮಾಡುವದು ಹೆಚ್ಚಾಗಿ ಸುಲಭವು.

(ಇ) ಆಂಧ್ರರು ವಿಶ್ವವಿದ್ಯಾಲಯದ ಕೇಂದ್ರ ಸ್ಥಾನಗಳಿ ಗಾಗಿ ಜಗಳಾಡುತ್ತಿರುವದನ್ನು ಎಲ್ಲರೂ ಬಲ್ಲರು. ಮೈಸೂರ ವಿಶ್ವ ವಿದ್ಯಾಲಯವು ಕರ್ನಾಟಕ ವಿಶ್ವವಿದ್ಯಾಲಯವಾಗುವದರಿಂದ ಹಾಗೆ ಒಡೆದಾಡಲು ಮಾರ್ಗವೇ ಇಲ್ಲ.

(ಈ) ಮೈಸೂರ ವಿಶ್ವವಿದ್ಯಾಲಯದಲ್ಲಿ ಕಟ್ಟಡ 'ಲಾಯ ಬ್ರರಿ' ಮೊದಲಾದ ಮಹಾ ಬೆಲೆಬಾಳುವ ಸಾಮಗ್ರಿಗಳು ಸಿದ್ಧ ವಾಗಿವೆ. ಪಕ್ವಾನ್ನವು ಯಾರಿಗೆ ಬೇಡ? ಆದರೆ ಹೊಸ ವಿಶ್ವ ವಿದ್ಯಾಲಯವನ್ನು ಬ್ರಿಟಿಶ್ ಕರ್ನಾಟಕದಲ್ಲಿ ಸ್ಥಾಪಿಸುವ ಗೊಂದ ಲದಲ್ಲಿ ಬಿದ್ದು, ಈ ಸೌಕರ್ಯಗಳನ್ನು ಸಹ ಬಿಟ್ಟು ಬಿಡುವದೇಕೆ?

ಇವೆಲ್ಲ ಸರಿಯಾಗಿವೆ ಯಷ್ಟೇ?

(ಉ) ಅಖಂಡ ಕರ್ನಾಟಕಕ್ಕೆ ಒಂದೇ ಒಂದು ವಿಶ್ವವಿದ್ಯಾ ಲಯವಿರಬೇಕೆಂಬುದು ಸರಿಯಾಗಿದೆ, ಆದರೆ ಇದಕ್ಕೆ ಈ ಎರಡು ತೊಡಕುಗಳಿವೆ. ತಾವು ಅವನ್ನು ಹೇಗೆ ಬಿಡಿಸುವಿರಿ?:—

(ಅ) ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯಕ್ಕೆ ನಿಝಾಮರ ಕರ್ನಾಟಕವು ಸೇರಿದೆ. ಈ ಭಾಗವನ್ನು ಉಸ್ಮಾನಿಯಾ ವಿಶ್ವವಿದ್ಯಾಲಯದ ಅಧಿಕಾರದಿಂದ ಬಿಡುಗಡೆ ಮಾಡಿ, ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಒಳಪಡಿಸುವದು ಶಕ್ಯವಿದೆಯೋ? ಇದ್ದರೆ ಅದು ಹೇಗೆ?

(ಆ) ಉತ್ತರ ಕರ್ನಾಟಕ— ಸಂಸ್ಥಾನಗಳಲ್ಲಿ ಶುದ್ಧ ವಾಗಿಯೂ ಕನ್ನಡವಾಗಿರುವ, ಸವಣೂರ, ಮುಧೋಳ, ಜಮ ಖಂಡಿ, ರಾಮದುರ್ಗ, ಅಕ್ಕಲಕೋಟೆ ಇವೇ ಮೊದಲಾದ ಸಂಸ್ಥಾನ ಗಳು ಕರ್ನಾಟಕ ವಿಶ್ವವಿದ್ಯಾಲಯಕ್ಕೆ— ಮೊದಲು ಕಷ್ಟವಾದರೂ ಕಡೆಗೆ- ಸೇರೇ ಸೇರುವವು. ಆದರೆ, ಕೊಲ್ಹಾಪೂರ ಸಾಂಗಲಿ ಮಿರಜ, ಔಂಧ, ಮೊದಲಾದ ದ್ವಿಭಾಷೆಯುಳ್ಳ ಸಂಸ್ಥಾನಗಳ ವಿಷಯವು ಸ್ವಲ್ಪ ಕಠಿಣವಾಗಿದೆ. ಇಲ್ಲಿ ಕನ್ನಡ ಭಾಗವನ್ನೂ, ಮರಾಟೀ ಭಾಗವನ್ನೂ ಬೇರೆ ಬೇರೆ ಮಾಡಿ, ಆ ಆ ಪ್ರಕಾರ ಕನ್ನ ಡ ಭಾಗವನ್ನು ಕರ್ನಾಟಕಕ್ಕೆ, ಮಹಾರಾಷ್ಟ್ರ ಭಾಗವನ್ನು ಮಹಾ ರಾಷ್ಟ್ರಕ್ಕೆ ಸೇರಿಸುವದೊಂದೇ ಆ ತೊಡಕನ್ನು ಬಿಡಿಸುವ ಮಾರ್ಗ ವಲ್ಲವೇ? ಇದರ ಹೊರತಾಗಿ ಅನ್ಯ ಮಾರ್ಗವಿದೆಯೋ?

(೧೦) ಈ ವಿಶ್ವವಿದ್ಯಾಲಯದ ಪ್ರಶ್ನೆಗೆ — ಈ ವಿಷ ಯಕ್ಕೂ ಕರ್ನಾಟಕ ಏಕೀಕರಣದ ಪ್ರಶ್ನೆಗೂ ಅತಿ ನಿಕಟವಾದ ಸಂಬಂಧವಿದ್ದದರಿಂದ— ಕರ್ನಾಟಕ ಏಕೀಕರಣದ ವಿಷಯ ಕ್ಕೂ ವಿಚಾರವಾಗಿ, ... ನಿಶ್ಚಿತ ಮಾರ್ಗವನ್ನು ಸರಿಸಲಿಕ್ಕೆ ಅಖಂಡ ಕರ್ನಾಟಕದ ಹಿಂದಿನ ಮಹತ್ವವನ್ನು ಕಾಯ್ದಿ ಸುವದು ಈಗ್ಗೆ ಅವಶ್ಯವಲ್ಲವೇ? ಅವಶ್ಯವಾಗಿದ್ದರೆ ಯಾವಾಗ ಈ ಪರಿಷತ್ತನ್ನು ಕರೆಯಬಹುದು?

ವರ್ತಮಾನಸಾರ

ಇಷವೃತ್ತ

ಇಲ್ಲಿಯ ತರುಣ ವಕೀಲರಾದ ಶ್ರೀ. ಪಾಟೀಲ ಶಂಕರಗೌಡರು ಜಿಲ್ಲಾ ಲೋಕಲಬೋರ್ಡಿನ ಅಧ್ಯಕ್ಷರಾಗಿ ಆರಿಸಲ್ಪಟ್ಟರೆಂದು ತಿಳಿಸಲು ನಮಗೆ ಸಂತೋಷವಾಗುತ್ತದೆ. ಈ ಸಂತೋಷದಲ್ಲಿ ಒಂದು ಮಾತನ್ನು ಶ್ರೀ ಪಾಟೀಲರಿಗೆ ತಿಳಿಸಬೇಕಾಗಿದೆ. ಅಧ್ಯಕ್ಷಪದವಿಯು ಬಹು ಜವಾಬ್ದಾರಿಯದು ಅವರು ಅನನುಭವಿಕರು ಆದ್ದರಿಂದ ತಮ್ಮ ಉತ್ಸಾಹ ಬುದ್ಧಿ ಶಕ್ತಿಗಳಿಗೆ ವ್ಯವಸಾಯದ ತಳಕಟ್ಟಿದಂತೆ ದಕ್ಷರಾಗಿರಬೇಕಾಗಿ ಸೂಚನೆ

ಹಾಳೆಯು ಇಲ್ಲವೇ ಇಲ್ಲ.

ಶ್ರೀ ಮಂಜಪ್ಪಾ ಹರ್ಡೇಕರರ ವ್ಯಾಖ್ಯಾನಗಳು ಹುನಗುಂದ ತಾಲೂಕಿನ ಹಳ್ಳಿಗಳಲ್ಲಿ ಬಹುಪರಿಣಾಮ ಕಾರಕವಾಗಿವೆ. ಅನೇಕರು ವ್ಯಾಖ್ಯಾನವಾದ ಕೂಡಲೇ, ಕಿಸೆಯೊಳಗಿನ ಬೀಡಿ, ತಂಬಾಕು, ಬೆಂಕೀ ಪೆಟ್ಟಿಗೆಗಳನ್ನು ಶ್ರೀ ಮಂಜಪ್ಪನವರ ಮುಂದೆ ತಂದಿಟ್ಟು, ತಾವು ಇನ್ನು ಮೇಲೆ ಆ ಚಟಗಳನ್ನೂ, ಜಕಕುಡಿವದನ್ನೂ ಬಿಟ್ಟುಕೊಡುವೆನಾಗಿ ಆಣೆ ಮಾಡುತ್ತಲಿದ್ದಾರೆ

ತಾಲೂಕ ಲೋಕಲ್ ಬೋರ್ಡಿಗೆ ಡಾ|| ಶಂಕರರಾವ ಜಠಾರ ಇವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆಂದು ತಿಳಿಸಲು ಆನಂದವಾಗುತ್ತದೆ.

ಮುಂಬೈ ಕರ್ನಾಟಕ

ಕುಚಲ ಕಂಜಿಯ ರಾಜರು ಬೆಳಗಾವಿಯ ರೀಲವೇ ಮಂಡಳಕ್ಕೆ ೫೫ ರೂ ಎರಡನೇ ಕಂತನ್ನು ಸಹಾಯಾರ್ಥವಾಗಿ ಕೊಟ್ಟಿದ್ದಾರೆ

ಗದಗಿನ ಶ್ರೀ ಬಸವೇಶ್ವರ ವಾಚನಾಲಯಕ್ಕೆ ದೀಪಾವಳಿಯ ಮಹೋತ್ಸವದಲ್ಲಿ ಎಸ್ಸೆಸ್ಸೀ ಸಭ್ಯಗೃಹಸ್ಥರು ಸಹಾಯ ಮಾಡಿದರೆಂದೂ ಉಳಿದ ಮಹನೀಯರು ಅವರಂತೆ ಉದಾರ ಮಾರ್ಗವನ್ನು ಅನುಸರಿಸಬೇಕೆಂದೂ ವಾಚನಾಲಯದ ಸೆಕ್ರೆಟರಿಗಳು ತಿಳಿಸುತ್ತಾರೆ—

ಮದ್ರಾಸ ಕರ್ನಾಟಕ

ಕುಂದಾಪೂರ ತಾಲೂಕಿನ ಅಲ್ಲೂರ ಹಳ್ಳಿಯ ಪ್ರಾಥಮಿಕ ಶಾಲೆಗೆ ಕಳ್ಳರು ಸಣ್ಣಹಾಕಿ, ಖುರ್ಚಿ ಮೇಜು, ಪುಸ್ತಕ ಮೊದಲಾದವಸ್ತುಗಳನ್ನು ಒಯ್ದಿರುವರು! ಅಂತೂ ಕಳ್ಳರಿಗೂ ಶಾಲೆ ಬೇಕಾಯಿತು.

ಮಂಗಳೂರಿನಲ್ಲಿ ಮುಸಲ್ಮಾನ ವಿದ್ಯಾರ್ಥಿಗಳ ಸಲುವಾಗಿಯೇ ಸ್ವತಂತ್ರವಾದ ಒಂದು ವಸತಿಗೃಹವನ್ನು ನಿರ್ಮಿಸುವ ವಿಚಾರವಿದೆ.

ಮಲಬಾರಿನಿಂದ ಮರಳಿ ಬರುವಾಗ್ಗೆ ಕೋಡೂರುತ್ತೂರನ್ನು ಸಂದರ್ಶಿಸಲು ಸ್ವಾಮೀ ಶ್ರದ್ಧಾನಂದರು ಒಪ್ಪಿದ್ದಾರೆ.

ಕೊಯಮತ್ತೂರಲ್ಲಿ ಆಳಿದವಾರದಲ್ಲಾದ ಮಳೆಯ ಸ್ವರೂಪವು ಬಹು ಭೀಕರವಾಗಿದ್ದಿತು.

ಮೈಸೂರ ಕರ್ನಾಟಕ

ಚಿತ್ರದುರ್ಗ ತಾಲೂಕಿನ ದೊಡ್ಡ ಸಿದ್ದವ್ವನ ಹಳ್ಳಿ ಜಂಗಮರೆಂಬ ಮಾತಂಗವರ್ಗದ ಜನಗಳು ಮಾಂಸಾಹಾರವನ್ನು ಬಿಟ್ಟರು ಸಂತೋಷದ ವಿಷಯ! ಬೇರೆ ಕಡೆಯವರು ಇವರನ್ನು ಅನುಕರಿಸಬೇಕು ಈ ಬಗ್ಗೆ ದಾವಣಗೇರಿಯ ಜೀವದಯಾಸಂಸ್ಥಾಪಕರನ್ನು ನಾವು ಅಭಿನಂದಿಸುತ್ತೇವ

ಕನ್ನಡ ಸಣ್ಣ ಕಥೆಗಳ ಸ್ಪರ್ಧೆ.

ಕಳೆದ ವರ್ಷ ಈ ಊರಿನ ಕರ್ನಾಟಕ ಸಂಘದ ವಾರ್ಷಿಕೋತ್ಸವದಲ್ಲಿ ಅಗ್ರಾಸನವನ್ನಲಂಕರಿಸಿದ್ದ ಶ್ರೀಯುತ, ಬೆನಗಲ್ ರಾಮರಾವ, ಎಂ. ಎ. ಎಲ್‌ಎಲ್. ಬಿ, ಯವರು ಕೈ. ವಾ. ನಂದಳಿಕೆ ಲಕ್ಷ್ಮೀನಾರಣಪ್ಪನವರ ಜ್ಞಾಪಕಾರ್ಥಕಾಗಿ ತಾವು ಒಂದು ಸುವರ್ಣ ಪದಕವನ್ನು ಪ್ರತಿ ವರ್ಷವೂ ಕೊಡುವದಾಗಿಯೂ, ಸಂಘವು ಪ್ರತಿ ವರ್ಷವೂ ಸಣ್ಣ ಕಥೆಗಳ ಸ್ಪರ್ಧೆಯೊಂದನ್ನೇರ್ಪಡಿಸಿ ಅದರಲ್ಲಿ ಅತ್ಯುತ್ತಮವಾದುದನ್ನು ಬರೆದವರಿಗೆ ಸಂಘದ ವಾರ್ಷಿಕೋತ್ಸವ ಕಾಲದಲ್ಲಿ ಅದನ್ನು ಕೊಡಬಹುದೆಂದೂ ಅಪ್ಪಣೆ ಕೊಡಿಸಿದರು ಈ ಸ್ಪರ್ಧೆಯನ್ನೇರ್ಪಡಿಸಲು ಇದೇ ಮೊದಲನೆಯ ವರ್ಷ. ಕರ್ನಾಟಕದ ಎಲ್ಲಾ ಪ್ರಾಂತಗಳ ವಿದ್ಯಾರ್ಥಿಗಳೂ ಈ ಸ್ಪರ್ಧೆಗೆ ಸೇರುವರೆಂದು ನಿರೀಕ್ಷಿಸಲಾಗಿದೆ.

ನಿಯಮಗಳು.

೧ ಮೆಟ್ರಿಕ್. ಅಥವಾ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ವಿಶ್ವವಿದ್ಯಾಲಯದ ಯಾವುದಾದರೂ ಒಂದು ಪರೀಕ್ಷೆಗೆ ಓದುತ್ತಿರುವ ಕರ್ನಾಟಕ ವಿದ್ಯಾರ್ಥಿಗಳಾರಾದರೂ ಈ ಸ್ಪರ್ಧೆಗೆ ಕಥೆಗಳನ್ನು ಕಳುಹಿಸಬಹುದು. ೨. ಈ ಸ್ಪರ್ಧೆಗೆ ಬರುವ ಕಥೆಗಳಲ್ಲಿ ಅತ್ಯುತ್ತಮವಾದುದನ್ನು ಬರೆದವರಿಗೆ "ಮುದ್ದಣ ಸ್ವರ್ಣಪದಕ" ಎಂಬ ಸುವರ್ಣ ಪದಕವೊಂದು ಬಹುಮಾನವಾಗಿ ಕೊಡಲ್ಪಡುವುದು. ೩. ಕಥೆಯು ಸ್ವಕಲ್ಪಿತವಾಗಿರಬೇಕು ೪ ಕಥೆಯನ್ನು ಕಾಗದದ ಒಂದೇ ಪಕ್ಕದಲ್ಲಿ ಸ್ಫುಟವಾದ ಅಕ್ಷರದಲ್ಲಿ ಬರೆದಿರಬೇಕು. ೫ ಬಹುಮಾನವನ್ನು ಪಡೆದ ಕಥೆಯನ್ನು ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟಿಸುವ ಹಕ್ಕು ಸಂಘಕ್ಕೆ ಇರುತ್ತದೆ. ಕಾಪಿರೈಟ್ ಹಕ್ಕು ಲೇಖಕರಿಗೇ ಇರುತ್ತದೆ. ೬ ಲೇಖಕರು ತಮ್ಮ ಹೆಸರು, ವಿಳಾಸ, ಓದುವ ಶಾಲೆ, ತರಗತಿ ಇವುಗಳನ್ನು ಪ್ರತ್ಯೇಕ ಕಾಗದಲ್ಲಿ ಬರೆದು ಕಳುಹಿಸಬೇಕು. ಫಲಿತಾಂಶವು ತಿಳಿದಮೇಲೆ ಬಹುಮಾನ ದೊರೆಯದ ಕಥೆಗಳನ್ನು ಹಿಂದಕ್ಕೆ ಕೊಡುವ ಜವಾಬ್ದಾರಿಯನ್ನು ಸಂಘವು ವಹಿಸುವುದಿಲ್ಲ ೭ ಸ್ಪರ್ಧೆಗೆ ಸೇರುವವರು ತಮ್ಮ ಲೇಖನಗಳನ್ನು ಪ್ರವೇಶಧನವಾದ ಎಂಟು ಆಣೆಗಳೊಡನೆ ಡಿಶಂಬರು ೧೫ನೆಯ ತಾರೀಖಿನೊಳಗೆ ತಲುಪುವಂತೆ ರಿಜಿಸ್ಟರ್ ಪೋಸ್ಟ್ ಮೂಲಕ ಉಪಾಧ್ಯಕ್ಷರ ಹೆಸರಿಗೆ ಕಳುಹಿಸಬೇಕು. ಮುದ್ದಣ ಸ್ವರ್ಣ ಪದಕವು ಬಾರದಿರುವ ಕಥೆಗಳಲ್ಲಿ ಶ್ರೇಷ್ಠವಾದುವೆಂದು ತೋರಿದವುಗಳಿಗೆ ದ್ರವ್ಯರೂಪವಾದ ಅಥವಾ ಪುಸ್ತಕರೂಪವಾದ ಬಹುಮಾನವನ್ನು ಸಂಘವು ಕೊಡಬಹುದು.

(Sd) ಟಿ ಎಸ್ ವೆಂಕಣ್ಣಯ್ಯ, ಉಪಾಧ್ಯಕ್ಷ,
ಕರ್ನಾಟಕ ಸಂಘ ಸೆಂಟ್ರಲ್ ಕಾಲೇಜ್, ಬೆಂಗಳೂರು.

ಕೊಡಗು ಕರ್ನಾಟಕ

ಕೊಡಗಿನ ರಾಮೇಶ್ವರ ಕ್ಷೇತ್ರದ ಹಣವೆಲ್ಲ, ಶಿಕ್ಷಣಕ್ಕಾಗಿಯೂ, ಪಶುಪಾಲಿಕೆಗಾಗಿಯೂ ಉಪಯೋಗಿಸಲ್ಪಡುತ್ತದೆ.

ಭಾಗಮಂಡ್ಲದಿಂದ ಶ್ರೀ ಮನ್ ಮೈಸೂರ ಮಹಾರಾಜರು ಮರಳಿ ಬರುವಾಗ, ಮಡಿಕೇರಿ ಮುನಸಿಪಾಲಿಟಿಯವರು ಅವರಿಗೆ ಆದರ ಸತ್ಕಾರವನ್ನು ಮಾಡಿದರು

ಕೊಡಗು ನಿವಾಸಿಗಳ ಸಭೆ ಬೇಕೆಂದು, ಊರಂಬಲದಲ್ಲಿ ಕೆಲವರು ನಿಶ್ಚಯಿಸಿದ್ದಾರೆ

ಹಿಂದುಸ್ಥಾನ

ಲಾಲಾಲಜಪತರಾಯರು ದಿಲ್ಲಿಯ ಪರಿಷತ್ತಿನಾಯಿದೇ ಕೌಂಸಿಲ ಚುನಾವಣೆಯಲ್ಲಿ ಉಮೇದವಾರರಾಗಿರುವರು.

ಉತ್ಕಳ ಪ್ರಾಂತದಲ್ಲಿ ಬರಗಾಲವು ಬಹು ಭೀಕರವಾಗಿದೆ.

ಕಲಕತ್ತೆಯ ಹತ್ತರ ದಕ್ಷಿಣೇಶ್ವರ ಎಂಬಲ್ಲಿ ಬಾಂಬಕಾರಖಾನೆಯನ್ನು ಪೋಲೀಸರು ಗೊತ್ತು ಹಚ್ಚಿ ಅಲ್ಲಿ ಅನೇಕರನ್ನು ಸೆರೆ ಮಾಡಿದ್ದಾರೆ

ಕೈ. ಸುರೇಂದ್ರನಾಥ ಬ್ಯಾನರ್ಜಿಯವರು, ತಮ್ಮ ೫೦೦೦ ರೂ. ಗಳ ಉತ್ಪನ್ನದಲ್ಲಿ ೫೦೦ ರೂ ಮಾತ್ರ ತಮ್ಮ ಮಗನಿಗೆ ಹೋಗಬೇಕೆಂದೂ. ಉಳಿದ ಹಣವೆಲ್ಲ ಬಂಗಾಲ ಪ್ರಾಂತದ ಆರೋಗ್ಯಕ್ಕಾಗಿ ವೆಚ್ಚವಾಗಬೇಕೆಂದೂ. ಮೃತ್ಯುಪತ್ರವನ್ನು ಮಾಡಿದ್ದಾರೆ

ಪರದೇಶ

ಮನೆಗಳ ದುರಸ್ತಿ, ಅಂಗಡಿಗಳ ಬಾಡಿಗೆ, ಗುತ್ತಿಗೆ ಕೆಲಸ, ಸಾಕುಪ್ರಾಣಿಗಳು, ಇವೆಲ್ಲವುಗಳ ಮೇಲೆ ತೆರಿಗೆಯನ್ನು ಹೇರಬೇಕೆಂದು ತುರ್ಕಸ್ಥಾನದ ಸರಕಾರದ ವಿಚಾರವಿದೆ ಹಾಗೂ ೧೮–೬೦ ವರ್ಷಗಳ ನಡುವಿನ ಎಲ್ಲ ಗಂಡಸರಿಗೂ ತಲೆಪಟ್ಟಿಯನ್ನು ವಸೂಲ ಮಾಡುವ ನಿರ್ಧಾರವಾಗಿದೆ

ಪ್ರಕಟನೆ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೫ ನೇ ಇಸ್ವಿಯ ಜುಲೈ ೩೧ ನೇ ತಾ|| ದಿನ ಸಾಯಂಕಾಲದ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟಿ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ. ಬಸವಾರಾಧ್ಯ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೧೧೬೦೨ ಶ್ರೀ. ಆರ್. ಜಿ. ಮುಕ್ಕೇರಿ. ಬುಕ್ಕಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೩೪೫ ಶ್ರೀ. ದೀರಜರಾಮ ನಾರಭಿರಾಮ ದಾಮಿಕ ಕಂಪಾವುಂಡರ, ಅಲಪಾಡ ದವಾಖಾನೆ ನಾಯ, ಸವಾಸ. ಬಿಬಿ. ಸಿ ಆಯ ರೇಲ್ವೇ ಸುರತ (ಬಡೋದಾ ಏಜನ್ಸಿ)

(೩) ಬಾಂಡ ನಂ. ೧೧೫೬೭ ಶ್ರೀ ಶ್ರೀರಾಮಮೂರ್ತಿ ಆರಾಧ್ಯಲು ರಾಮಚಂದ್ರರಾವ ಗುರು ಪಿ ರ ಪುರು ಗೋದಾವರಿ ಜಿಲ್ಹಾ

(೪) ಬಾಂಡ ನಂ ೧೭೬ ಶ್ರೀ. ಸಂದಗಿ ವೆಂಕಟರಾಮ ದಾಸ ಪ್ರೊಪ್ರಾಯಿಟರ ಮುಕುಂದ ಪುರ ಕಾಕಿನಾಡು

(೫) ಬಾಂಡ ನಂ. ೪೩೮ ಶ್ರೀ. ಆರ್. ವೆಂಕಟಯ್ಯಾ ಗುರು ಇನಾಮದಾರ ಭೀವೇಪಯ್ಯಾ ಅಗ್ರಹಾರ ತಿಮಳ ಪುರಮ್.

೧-೮-೩೫ { ಬಿ. ಎನ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ

"ಲೋಕರಹಸ್ಯ"

ಕೃಷಿಯ ಅತ್ಯುತ್ತಮ ರೀತಿಗಳು, ವ್ಯಾಪಾರದ ವಿಷಯಗಳು ಹೊರತೆ, ಮಕ್ಕಳನ್ನು ಸಾಕುವ ವಿಷಯಗಳನ್ನು ಬಡವರಿಗೆ ಬೇಕಾದ ಧನಸಂಪಾದನೆಯ ವಿಷಯಗಳು, ರಸಿಕರಿಗೆ ವಿನೋದ ವಿಚಾರ, ರಾಜಕೀಯ ವಿಷಯಗಳು, ಆಯುರ್ವೇದ ಯುನಾನಿ ವೈದ್ಯ ಸಂಗ್ರಹ. ಪ್ರತಿಯೊಬ್ಬನೂ ತಿಳಿಯಬೇಕಾದ ಲಾ' ವಿಚಾರ, ವಿದ್ಯಾ ವಿಷಯ, ವೇದಾಂತ ವಿಚಾರಗಳಿಂದಲೂ, ತುಂಬಿ ತುಳುಕುತ್ತಿರುವ ಈ ಮಾಸ ಪತ್ರಿಕೆಗೆ ವಷಕ್ಕ ಚಂದಾ ರೂ. ೩-೮ ೦ ಮಾದರಿ ಸಂಚಿಕೆಗೆ ೦ ೫-೦.

ಪ್ರತಿ ತಿಂಗಳಲ್ಲೂ ೬೦ ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ.

"ಲೋಕರಹಸ್ಯ" ಆಫೀಸು,
ವೀರರಾಜೇಂದ್ರ ಪೇಟೆ (ಕೊಡಗು)

ಪುನರ್ವಿವಾಹ ಆಗ ತಕ್ಕದ್ದದೆ.

ಬ್ರಾಹ್ಮಣ ವರನು. ೩೦ ವರ್ಷ. ಕುಲೀನ ಸ್ಥಿತಿಗತಿಯುಳ್ಳವನು. ಕುಲೀನ ವಿಧವೆಯರು ಮಾತ್ರ ಪತ್ರವ್ಯವಹಾರ ಮಾಡಬೇಕು.

ಕಮಲಾಕಾಂತ
C/O ಕನ್ನಡಿಗ ಬಾಗಲಕೋಟೆ

ಧಾರವಾಡ ಕರ್ನಾಟಕ ಯುವಾ ವಿದ್ಯಾಲಯದಿಂದ ಹೊರಡುವ ತಿಳಿಗನ್ನಡದ

ಸ್ವಧರ್ಮ ಮಾಸಪತ್ರಿಕೆ.

ಸಂಪಾದಕ- ಸುರೇಂದ್ರ ಶಿವರಾವ ದೇಸಾಯಿ ಎಮ್. ಎ.

ಪ್ರಾಪಂಚಿಕ ಸಂಪತ್ತೂ, ಪಾರಮಾರ್ಥಿಕ ಸಂಪತ್ತೂ ಕೂಡಿ ಬೆಳೆಯುವಂತೆ ಸ್ವಸಂಸ್ಕೃತಿಪ್ರೇಮ, ಸ್ವದೇಶಪ್ರೀತಿ, ಸ್ವಭಾಷಾಭಿಮಾನ, ಸ್ವಧರ್ಮಾನುರಾಗ ಸ್ವಾರ್ಥತ್ಯಾಗಮುಂತಾದ ಗುಣಗಳನ್ನು ಉಜ್ವಲಗೊಳಿಸುವಂಥ ಕೀರ್ತನ, ಪುರಾಣ, ಪ್ರವಚನ, ನಿಬಂಧ. ಜೀವನ ಚರಿತ್ರೆ, ಇತಿಹಾಸ, ನಾಟಕ ಕಥೆ ಮತ್ತು ಕಾದಂಬರಿ ಮುಂತಾದ ರೂಪದಲ್ಲಿ ಜನಮಂಡಲಿಯ ಉನ್ನತಿಗೆ ಅಗತ್ಯವಾದ ಸರ್ವ ವ್ಯವಹಾರಗಳನ್ನೂ ಸ್ವಧರ್ಮ ದೃಷ್ಟಿಯಿಂದ ವಿಚಾರಮಾಡಿ ವಿವರಿಸುವದು. ಚಂದಾ ವರ್ಷಕ್ಕೆ ೩ ರೂ.

ಮುಂಬೈ ಪ್ರಾಂತಿಕ ಸಹಕಾರಿ ಪರಿಷತ್ತು ೧೯೩೫

ಪ್ರದರ್ಶನವು.

ಡಿಸೆಂಬರದಲ್ಲಿ ಧಾರವಾಡದೊಳಗೆ ನೆರೆಯುವ ಈ ಪರಿಷತ್ತಿನ ಸಮಯದಲ್ಲಿ, ಔದ್ಯೋಗಿಕ ಮತ್ತು ಒಕ್ಕಲತನದ ಪ್ರದರ್ಶನವೂ ಜರುಗಿಸಲ್ಪಡುವದು. ಸಹಕಾರಿ ಸಂಘಗಳಿಂದ ಮತ್ತು ಅವುಗಳ ಸಭಾಸದರಿಂದ ತಯಾರಮಾಡಲ್ಪಟ್ಟ ವಸ್ತುಗಳಿಗೆ ಪ್ರಾಧಾನ್ಯ ದೊರೆಯುವದು. ಅಧ್ಯಕ್ಷರಾದ ಮದ್ರಾಸಿನ ಸರ ಕೆ. ವಿ. ರಡ್ಡಿಯವರೇ ಈ ಪ್ರದರ್ಶನವನ್ನು ತೆರೆಯುವರು. ಪ್ರದರ್ಶನದಲ್ಲಿ ಒಳ್ಳೇವಸ್ತುಗಳಿಗೆ ಬೆಲೆಬಾಳುವ ಇನಾಮುಗಳೂ, ಸರ್ಟಿಫಿಕೇಟಗಳೂ ದೊರೆಯುವವು ತಮ್ಮ ವಸ್ತುಗಳೆಲ್ಲ ಜನಮನ್ನಣೆಯನ್ನು ಪಡೆಯಬೇಕೆಂಬುವರೆಲ್ಲ ತ್ವರೆಮಾಡಬೇಕು ವಸ್ತುಗಳನ್ನು ಸ್ವೀಕರಿಸುತ್ತಿರುವೆವು. ಎಲ್ಲ ವಸ್ತುಗಳೂ ಧಾರವಾಡದಲ್ಲಿಯ, ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ ಸೊಸಾಯಿಟಿಯ ಸಂಸ್ಥೆಗೆ ಕಳಿಸಲ್ಪಡಬೇಕು.

೧-೧೧-೩೫ { ಎಫ್ ಟಿ. ಸಲವಡಿ.
ಅಧ್ಯಕ್ಷ-
ಕರ್ನಾಟಕ ಸೆ. ಕೋ. ಇ. ಧಾರವಾಡ

FOR SAFETY AND GOOD SERVICE
IN
LIFE ASSURANCE
GO TO
THE ORIENTAL
IN AGE SIZE AND STRENGTH
THE
GREATEST INDIAN
LIFE ASSURANCE COMPANY
Apply for full particulars to
N. K. Kulkarni. Agent Bagalkot

ಈ ಪತ್ರಿಕೆಯು ಮಂಗಳವೇಢೆ ರಾಮರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ ನಂ. ಬಿ. ೧೯೪೭ — ವಾ. ಚಂದಾ ೧—೧೪—೦ ಮಾತ್ರ.

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

ಯತ್ರ ವಿಶ್ವಂ ಭವತ್ಯೇಕನೀಡಮ್ । — ಋಕ್

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ } ಬಾಗಲಕೋಟೆ ಶುಕ್ರವಾರ ಮಿತಿ ಮಾರ್ಗಶಿರ ಶುದ್ಧ ೧೨ ಶಕ ೧೮೪೭. ತಾ. ೨೭-೧೧-೧೯೨೫ { ಸಂಚಿಕೆ ೩೩

ಸಂಪಾದಕ ಗಭೂಮಿ.

(೧)

ನನ್ನ ಮನಸಿನ ಮೇಣಮಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮೆ ।
ಚಿನ್ನದಾದರು ಚನ್ನ ಮೇಣಬತ್ತಿಯು ನೊಂದು ।
ಚಿನ್ನಯಾಕಾಶದಲ್ಲಿ ॥

ನನ್ನ ದೇಹವು ನಿನ್ನ ವೀರಶಾಸನವಾಗಿ ।
ಕನ್ನಸನ್ನಿ ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ದೀರಬಹ ।
ಗಂಧವಹವೆಂಬ ತಿಳಿಯು

—ಅಂಬಿಕಾತನಯ ದತ್ತ

ಕನ್ನಡಕ್ಕೆ ಹೊಸಯುಗವು ಪ್ರಾರಂಭವಾಗಿದೆ. ಇದಕ್ಕೆ ಅರಿವಿನ ಯುಗವೆಂದರೆ ಸಲ್ಲುವದು ಈ ಅರಿವಿನ ಗುರುತುಗಳು ಕನ್ನಡದ ಸಾಹಿತ್ಯದಲ್ಲಿ ಚನ್ನಾಗಿ ಒಡಮೂಡಿವೆ. ಸಾಹಿತ್ಯವು ಜೀವನದ ಪ್ರತಿಬಿಂಬವು. ಮಾನವನ ಜೀವನದ ರಹಸ್ಯಗಳು ಸಾಹಿತ್ಯದಲ್ಲಿ ಅಚ್ಚುಕಟ್ಟಾಗಿ ಮೂಡಿ, ಎದ್ದಾಗಿ ಒಡೆದು ಕಾಣುತ್ತವೆ. ಅಂತಹ ಸಾಹಿತ್ಯವೆಲ್ಲಿಯೆಂದು ಕೇಳುವದು ಸ್ವಾಭಾವಿಕವು. ಸಾಹಿತ್ಯವೇನೋ ಇದೆ. ಅದಿನ್ನೂ ಬೆಳಕನ್ನು ಕಂಡಿಲ್ಲ. ಬಾಣಂತಿಯ ಕೋಣೆಯೊಳಗಿದೆ. ಹೊರಬೀಳುವ ಅವಕಾಶವು ದೊರೆತೊಡನೆ ದೃಷ್ಟಿಗೆ ಬೀಳುವದು.

ಅರಿವಿನ ಯುಗವೆಂದರೇನು? ಕನ್ನಡಿಗನು ಎಚ್ಚತ್ತಿದ್ದಾನೆ. ಅಂತರಂಗನಿರೀಕ್ಷಣದಲ್ಲಿ ತತ್ಪರನಾಗಿದ್ದಾನೆ. ಬಹಿರಂಗಸುಧಾರಣೆಗಾಗಿ ತವಕಪಡುತ್ತಿರುವಂತೆ ಅಂತರಂಗದ ಕಸುವನ್ನು ಬೆಳೆಯಿಸಲು ಹಂಬಲ ತೊಟ್ಟಿದ್ದಾನೆ. ಬಹಿರಂಗದ ಸುಧಾರಣೆಯೆಂದರೆ, ಹರಿದು ಹಂಚಿ ದಿಕ್ಕುಪಾಲಾದ ಕರ್ನಾಟಕವನ್ನು ಒಟ್ಟುಗೂಡಿಸಿ ಬಲಪಡಿಸುವದು. ಅಂತರಂಗದ ಸುಧಾರಣೆಯೆಂದರೆ ನನ್ನಿಯಿಂದ ನಡೆದು, ಪ್ರೇಮದ ಬಿಗುವಿನಿಂದ ಎಲ್ಲರನ್ನು ಅಪ್ಪಿ ಶಿವನೆಡೆಗೆ ಶರಣರಾಗಿ ಸಾಗುವದು.

ಈ ತೆರನಾದ ಕಂಪಾದ ಕನಸುಗಳು ಕನ್ನಡಿಗರಿಗೆ ಬೀಳುತಲಿವೆ ಈಗಿನ ಕನ್ನಡ ಕವಿಗಳು ಇಂತಹ ಸವಿಯಾದ— ಎದೆಯುಗಳನ್ನು ಅರಳಿಸುವ— ಹಾಡುಗಳನ್ನು ಹಾಡುತಲಿದ್ದಾರೆ. ಕನ್ನಡಿಗ-ಕನ್ನಡಿಗರಲ್ಲಿ ನಡೆದ ಕ್ಷೇಮವಾರ್ತೆಗಳಲ್ಲಿ ಇವರ ಕುರುಹುಗಳು ನಿಚ್ಚಳವಾಗಿ ಕಂಗೊಳಿಸುತ್ತಿವೆ. ಕನ್ನಡನಾಡಿನ— ಸೇವೆಮಾಡಲು ಎಷ್ಟೋ ಜನರು ಬಿಡುಡು ಒಳಿಮನ್ನು ತಳೆದಿದ್ದಾರೆ. ಈ ತರಹದ ಹಂಬಲವು ತರುಣರಲ್ಲಿ ಎಚ್ಚರಿಸುಂಬುದಕ್ಕೆ

ಪ್ರೇಮದೆದಯಿಂ ಹುಟಿದ ಸವಿಯ ಸೋಗಸೇ ಮತ್ತು
ಸೊಬಗಾಗಿ ನಿಂತಹಾಗೆ
ಪ್ರೇಮಲೆ! ಸರಸ್ವತಿಯೆ! ಆನಂದನಿಧಿ! ರಮಣಿ!
ನೀನು ನನ್ನಾಕೆಯಾಗೆ!!
ಒಮ್ಮೊಮ್ಮೆ ಮೂಡುತ್ತ, ಮುಳುಗುತ್ತ ಚುಕ್ಕೆಗಳ ಲೀಲೆ
ಯೇಕೆ?!
ನಮ್ಮಮ್ಮ! ಈ ವಿನೋದವುಸಾಕು! ನನ್ನಿದುರು ಹಗ
ಲಿರುಳು ನೀನೆ ಬೇಕು!!

(ಚುಕ್ಕೆಯಂತೆ ಒಮ್ಮೆ ಮಿನುಗಿ, ಮತ್ತೊಮ್ಮೆ ಮಾಯವಾಗಬೇಡ. ನಮ್ಮಮ್ಮ ಹಗಲಿರುಳು ನನ್ನೆದೆಯಲ್ಲಿರು) ಎಂದು ಭಾವಪೂರ್ವಕವಾಗಿ, ಕಂದನಾಗಿ, ಹಸುಗೂಸಾಗಿ ನಲಿಗೆಂಬಂದ ಸರಸತಿಗೆ ಬೇಡಿ ಕೊಳ್ಳುವ ಕವಿಯ ನುಡಿಗಳೇ ಸಾಕ್ಷಿಯಾಗಿವೆ. ಇದು ಕಬ್ಬಿಯ ಹಾಡಿನ ಸುದ್ದಿಯಾಯಿತು. ಕನ್ನಡಿಗ —ಕನ್ನಡಿಗರಲ್ಲಿಯ (ಇವರು ಭಿನ್ನ ಜಾತಿಯವರಿರುವರು) ಓಲೆಗಳನ್ನಿಷ್ಟು ನೋಡುವಾ

“ಗೆಳೆಯಾ, ಏಕವಚನವು ‘ಏಕಮೇವಾದ್ವಿತೀಯಂ’ ಎನಿಸುವ ಅದ್ವೈತ ಪ್ರೇಮದ ಕುರುಹಾದ್ದರಿಂದ, ನಾನಿನ್ನ ಮೇಲೆ ಏಕವಚನವನ್ನೇ ಬಳಸುವೆನು. ಏಕೆಂದರೆ, ಒಂದಾಗುವದರಿಂದಲೇ ಹೃದಯಗಳು ಒಂದುವವು; ಹೊಂದುವವು; ಒಟ್ಟುಗೂಡಿಕೊಳ್ಳುವವು ಒಟ್ಟಾಗಿರುವೆನೆಂದು ಒಟ್ಟೊಟ್ಟಿಕೊಳ್ಳುವವು. ಒಪ್ಪುವಂತೆ ಒಪ್ಪಿ ದಿಂದಿರುವೆನೆಂದು ಒಪ್ಪುವವು. ಒಮ್ಮಾತಿನಿಂದಿರುವೆವೆಂದು ಒಮ್ಮೊವವು. ಅವುದು ಒಂದೇ ರಸೋದಧಿಯಲ್ಲಿ ನನ್ನ-ನಿನ್ನ-ಎಲ್ಲರ ಚಿತ್ತಗಳು ಓಲಾಡ— ಓಲಾಡ ಮತ್ತಿದ ಮೇಲೆ, ಒಲವು-ಒಲುಮೆಗಳೂ. ಒಳವು-ಒಳುಮು ಒಳಿತುಗಳು ಒಡಂಬಟ್ಟು, ಒಡಮೂಡಿ ಓಂಕಾರವನ್ನು-ಒಡನುಡಿಸುತ್ತುವವು. ಒಂದಾಗುವದರಲ್ಲಿ ಹಿಂದು ಮುಂದೆ ನೋಡಬಾರದು; ಏಕೆಂದರೆ ಹಿಂದು-ಇಂದು-ಮುಂದುಗಳನ್ನು ಮೀರಿದಂತಿಹುದೇ ಒಂದು”

ಇವುಗಳ ಮೇಲಿಂದ ಗಾಳಿಯು ಎತ್ತ ಬೀಸುತ್ತಿರುವದೆಂಬದು ಗೊತ್ತಾಗುವದು.

ಈಗಿನ ಶಿಕ್ಷಣಕ್ರಮವು ದೋಷಯುಕ್ತವಾದುದೆಂಬುದ ನ್ನು ಎಲ್ಲರೂ ಬಲ್ಲರು. ‘ಮಕ್ಳ ಕಂಡು ಮಳ್ಳ ರ್‍ಯಾ ರ್‍ಯಾ’ ಎಂಬಂತೆ ಜನರ ಸ್ಥಿತಿಯಾಗಿದೆ. ಮಕ್ಕಳಿಗೆ ತಕ್ಕ ಶಿಕ್ಷಣವು ದೊರೆತು, ಅವರ ಬಾಳುವೆಯು ಬೆಳೆಯು ಮಲಿನಾಗಬೇಕೆಂದು ಎಷ್ಟೋ ಜನರು ತಳಮಳಿಸುತ್ತಿದ್ದಾರೆ. ಈ ತಳಮಳದಲ್ಲಿಯೇ ಮುಂದಿನ ಚೆಲುವಿನ ನೋಳೆಯುತ್ತದೆ. ಈ ತಳಮಳವೇ ಬೆಳಕಿನ ಕಿಂಡಿಯಾಗುತ್ತದೆ.

ಇವರಿಂದಲೇ ಮುಂದಿನ ದಾರಿಯು ತೋರುವದು. ಇಂತಹ ಶಳಮಳಕ್ಕೆ ಒಳಪಟ್ಟವರಾರೆಂದರೆ ವಿಜಾಪುರ ಜಿಲ್ಹೆಯೊಳಗಿನ ಕೆಲವು ಪಾಟೀಲರು. ಇವರಿಗೆ ಗುರುಕುಲದಂಥ ಸೊಗಸಾದ ಸಂಸ್ಥೆಗಳು ಬೇಕಾಗಿವೆ. ಈಗಿನ ಶಿಕ್ಷಣವು ನಿಷ್ಫಲವಿದ್ದಂತೆ ಸಿಹಿಯಲ್ಲದ್ದೂ, ಬೆಂಡಿನಂತೆ ರಸಹೀನವಾದುದೂ ಇರುತ್ತದೆ. ಗುರುಕುಲಗಳಲ್ಲಿ ವಿದ್ಯಾರ್ಥಿಗಳು ನಿಸರ್ಗಸಂದರ್ಶನದ ಸೊಬಗನ್ನುಣ್ಣುವರು. ಪಕ್ಷಿಗಳ ಹಾಡುಗಳನ್ನು ಸವಿಯುವರು, ಹೊಳೆಹಳ್ಳಗಳ ಉಲಿವುಗಳನ್ನು ಕೇಳುವರು. ಚಿಕ್ಕೆ ಚಂದ್ರಮರನ್ನು ಮಾತಾಡಿಸುವರು; ಹಗಲಿರುಳುಗಳ ಕತೆಗಳನ್ನು ಕೇಳುವರು. ಪರ್ವತಗಳನ್ನು ಭೇದಿಸುವರು; ಮುಗಿಲಜೊತೆ ಸಾಟವಾಡುವರು. ಇದಲ್ಲದೆ ಸೃಷ್ಟಿಯನ್ನೇ ಹೊಂಗಿಸಿ ನೋಡುವರು. ಪ್ರೊಢಿಯೊಡೆಯನ ಒಡಲನ್ನರಿಯುವದೇ ಶಿಕ್ಷಣದ ಗುರಿಯು; ಜೀವನ ಶಿವನಿಗೊಲಿಯುತ್ತಿಸುವದೇ ಶಿಕ್ಷಣದ ಗುರಿಯು. ಇಂತಹ ಶಿಕ್ಷಣವು ದೊರೆಯುವ ವ್ಯವಸ್ಥೆಯು ಈಗಲು ಈಗ ಕಾಲವು ಪರಿಪಕ್ವವಾಗಿದೆ. ಆದುದರಿಂದ ಕರ್ನಾಟಕಕ್ಕೆ ಆದರ್ಶವಾದ ಒಂದು ಆಶ್ರಮವನ್ನು ಸ್ಥಾಪಿಸಲು ಪಾಟೀಲರು ಪ್ರಯತ್ನ ಮಾಡುವರೋ? ಇದರಿಂದ ತಮ್ಮ ಮಕ್ಕಳು ಮರಿಗಳ ಕಲ್ಯಾಣವಾಗುವದಲ್ಲದೆ, ದೇಶದ ಕಲ್ಯಾಣವಾದರೂ ಆಗುವದು 'ಉಪದೆ ಮಾಡುವನು ಗೂಢಿಯೊಳಗುತ್ತಮನು, ಆಡಿ ಮಾಡುವನು ಮಧ್ಯಮನು.'

ಇಲ್ಲಿಯ ೬ ನೇ ವಾರ್ಡಿನಲ್ಲಿರುವ ೨೮೦ ನೇ ನಂಬರಿನ ಮನೆಯ ಮುಂದಿನ ನೋಟವು ಅಸಹ್ಯವಾದುದಾಗುತ್ತದೆ. ಅಲ್ಲಿಯ ಅನಾರೋಗ್ಯಕರವಾದ ಸ್ಥಿತಿಯನ್ನು ಬರೆಯಲಾಗುವದಿಲ್ಲ. ತಿಪ್ಪೆ; ಹೊಲಸು; ಕೊಚ್ಚೆ; ಮೊದಲಾದವುಗಳು ಗುಂಪು ಗುಂಪಾಗಿ ಕಣ್ಣಿಗೆಬೀಳುವವು. ಮುನಸಿಪಾಲ್ಟಿಗೆ ಜನರು ಅರ್ಜಿಗಳನ್ನು ಕಳುಹಿಸಿದರೂ ವ್ಯರ್ಥವಾಯಿತು. ನೋರ್ಗಲ್ಲನೋಲೆ ಮಳೆಗರೆದಂತಾಯಿತು. ಈ ಓಣಿಯು ಚಳಿಜ್ವರ ಮೊದಲಾದ ರೋಗಗಳ ಬೀಡಾಗಿರುತ್ತದೆ. ಮುನಸಿಪಾಲ್ಟಿಯ ಸಭಾಸದರೆಂದರೆ ಪಟ್ಟಣದ ತಾಯ್ತಂದೆಗಳು. ಅಧ್ಯಕ್ಷರಿಗೆ 'ಪಟ್ಟಣದ ತಂದೆ' ಎಂಬ ಬಹುಮಾನದ ಬಿರುದು. ಅವರ ಕೈಯಲ್ಲಿಯೇ ಪಟ್ಟಣದ ಹಿತಾಹಿತದ ಕೀಲಿಗಳು. ಆದುದರಿಂದ ಅವರು ಇತ್ತ ಕಡೆಗೆ ದಯಮಾಡಿ ಒಲಿದು ನೋಡುವರೋ? ನೋಡಿ ಯೋಗ್ಯವಾದ ವ್ಯವಸ್ಥೆಯನ್ನು ಮಾಡುವರೋ? ವಸ್ತುತಃ ವಿಚಾರ ಮಾಡಲಾಗಿ ಪಟ್ಟಣಿಗರು ಹೀಗೆ ಬೇಡಿಕೊಳ್ಳುವ ಕಾರಣವಿಲ್ಲ. ಯಾಕೆಂದರೆ ಸಾರ್ವಜನಿಕ ಆರೋಗ್ಯವನ್ನು ಕಾಯುವದು ಮುನಸಿಪಾಲ್ಟಿಯ ಕರ್ತವ್ಯಗಳಲ್ಲೊಂದಾಗಿರುವದು. ಮತ್ತು ಈ ಉದ್ದೇಶದಿಂದ ಆರೋಗ್ಯಖಾತೆಯ ಬಗ್ಗೆ ಒಬ್ಬ ಅಧಿಕಾರಿಯಾದರೂ ಇರುತ್ತಾನೆ. ಅವನಿಗೆ ಕೆಲವು ಸಹಾಯಕರಿರುತ್ತಾರೆ. ಇಷ್ಟಿದ್ದರೂ ಹೊಲಸು ಹೇಸಿತನಕ್ಕೆ ಎಡೆಯನ್ನು ಕೊಡುವದು ಕರ್ತವ್ಯಪರಾಙ್ಮುಖತೆಯನ್ನು ತೋರಿಸುತ್ತದೆ. ಅದ್ದರಿಂದ ತೀವ್ರವಾಗಿ ಇದರ ವಿಚಾರವನ್ನು ಮುನಸಿಪಾಲ್ಟಿಯು ಮಾಡುವದೆಂದು ನಮ್ಮ ನಂಬಿಗೆ.

ಬಳ್ಳಾರಿಯಲ್ಲಿ ಕೂಡಿದ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಸಾಧಾರಣ ಅಧಿವೇಶನವು ಯಶಸ್ವಿಯಾಯಿತೆನ್ನಲು ಆತಂಕವಿಲ್ಲ. ಕರ್ನಾಟಕ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಕುರಿತು ನಿಯೋಜಿತವಾದ ಉಪಸಮಿತಿಯಲ್ಲಿ ಶಿಕ್ಷಣವಿಷಯದ ಪ್ರವೀಣರಿದ್ದಾರೆ. ಅವರ ನೆತ್ತಿಕ್ಕಾಗಿ ಹಣದ ಯೋಜನೆಯೂ ಆಗಿದೆ. ಕಾರ್ಯದರ್ಶಿಗಳಾದ ಬೆಂಗಳೂರಿನ ಶ್ರೀ ಸಂಪದ್ಗಿರಿರಾಯರು ಕಾರ್ಯದಕ್ಷರಿದ್ದಾರೆ. ಇದುದರಿಂದ ಈ ಕೆಲಸವು ಬಹು ಬೇಗನೆ ದಿಂದ ಸಾಗುವದಾಗಿ ನಮ್ಮ ನಂಬಿಗೆಯಿದೆ. ಇದರ ಜೊತೆಗಾಗಿ ಬಳ್ಳಾರಿಯ ಅಧಿವೇಶನದಲ್ಲಿ ಗೊತ್ತಾದ ಉಳಿದ ಠರಾವುಗಳೆಲ್ಲ ಮಹತ್ವದವಾಗಿವೆ. ಆದರೆ ಅವನ್ನೆಲ್ಲ ಕೃತಿಯಲ್ಲಿ ತರುವಂತೆ ಪರಿಷತ್ತಿನ ಕಾರ್ಯದರ್ಶಿಗಳು ಜಾಗ್ರತವಾಗಿ ಪ್ರಯತ್ನಿಸಬೇಕಾಗಿ ಆಗ್ರಹಪೂರ್ವಕವಾಗಿ ಸೂಚಿಸುತ್ತೇವೆ.

ಸುಶಿಕ್ಷಿತ ಕನ್ನಡಿಗರಲ್ಲಿ ಒಂದು ಬೇಡಿಕೆ:— 'ಕನ್ನಡದಲ್ಲಿ ಮೇಲಾದ ಗದ್ಯ ಗ್ರಂಥಗಳಿಲ್ಲ; ಉತ್ಕೃಷ್ಟವಾದ ಕಥೆಕಾದಂಬರಿಗಳಿಲ್ಲ; ನಾಟಕ ಪ್ರಹಸನಗಳಿಲ್ಲ' ಎಂಬುದೊಂದು ಕೂಗು ಎಲ್ಲ ಕಡೆಯಿಂದಲೂ ಕೇಳಬರುತ್ತಿದೆ. ಸುಶಿಕ್ಷಿತ ಕನ್ನಡಿಗರಲ್ಲಿಯೇ ಎಷ್ಟೋ ಜನರು ಈ ಬಗೆಯ ಪ್ರಶ್ನೆಯನ್ನು ಕೇಳುತ್ತಾರೆ; ಮತ್ತು ಮಹಾರಾಷ್ಟ್ರದ ವಾಙ್ಮಯದ ಕಡೆಗೆ ಬೊಟ್ಟುಮಾಡಿ 'ಗಡಕರಿ' ಯಂಥ ನಾಟಕಕಾರನು ಒಬ್ಬನಾದರೂ ಇರುವನೋ? ಕೇಳಕರರಂಥ ಬರಹಗಾರರು ಇರುವರೋ? ಹರಿನಾರಾಯಣರಂಥ ಕಾದಂಬರಿಕಾರರಿರುವನೋ, ಎಂದು ಆಗಾಗ್ಗೆ ನುಡಿಯುತ್ತಾರೆ. ಹೀಗೆ ನುಡಿಯುವಾಗ ಅವರು ಒಂದು ಮಹತ್ವದ ಮಾತನ್ನೇ ಮರೆತು ಬಿಡುತ್ತಾರೆ. ಮಹಾರಾಷ್ಟ್ರದವರು ತಮ್ಮ ಭಾಷೆಯು ಕೀಳಾಗಿರುವದೆಂದು ಅದನ್ನು ಹಳಿಯಲಿಲ್ಲ. ತಮ್ಮ ಭಾಷೆಯು ಉಳಿದ ಭಾಷೆಗಳಂತೆ ದಿವ್ಯನ ಅಂಶವೆಂದು ಭಾವಿಸಿ, ಹಗಲಿರುಳು ಅದರ ಬೆಳವಣಿಗೆಗಾಗಿ, ಸೌಷ್ಟವಕ್ಕಾಗಿ, ಗೌರವಕ್ಕಾಗಿ, ಹೆಣಗಾಡಿದರು. ಚಿಕ್ಕೆಗಳು ಮುಗಿಲಿನಲ್ಲಿ ಸುಮ್ಮನೆ ತಮ್ಮ ಕೆಲಸವನ್ನು ಸಾಗಿಸಹತ್ತಿರುವಂತೆ, ಚಿರಕಾಲದಿಂದ ಅವರು ಅವಿರತವಾಗಿ ಶ್ರಮಬಟ್ಟು ಮನಮುಟ್ಟಿ ಮೆಚ್ಚಿನಿಂದ ಅದನ್ನು ಬೆಳೆಸಿದ್ದಾರೆ. ಅದರ ಫಲವನ್ನು ಈಗವರು ಸೊಗಸಿನಿಂದ ಉಣಲು ತೊಡಗಿದ್ದಾರೆ. ಅವರು ತ್ಯಾಗಬುದ್ಧಿಯಿಂದ ಹೇಗೆ ದುಡಿಯುತ್ತಿರುವರೋ, ಅದರಂತೆಯೇ ನಮ್ಮಲ್ಲಿ ಯಾವನೂ ದುಡಿಯುವ ಜನರು ಬೇಕಾಗಿರುವರು ದುಡಿಮೆಯು ಮೇಲ್ಮೆಯ ಅಡಿಗಲ್ಲು. ನಾಟಕಗಳಿಲ್ಲ, ಕಾದಂಬರಿಗಳಿಲ್ಲ, ಎಂದು ವ್ಯಾಕುಲವಾಗಿ ಕೂಡದೆ, ದಿನಾಲು ಅಲ್ಪ ಸ್ವಲ್ಪ ಬರೆಯಲು ನಮ್ಮ ಸುಶಿಕ್ಷಿತರು ಪ್ರಾರಂಭಿಸಿದರೆ, ಹತ್ತು ವರ್ಷಗಳಲ್ಲಿ ಅಂದದ ಹೊತ್ತಿಗೆಗಳ ಹೊರೆಗಳು ಹೊರಬೀಳುವವು. ಮೊದಲು ಸ್ವತಂತ್ರವಾದ ವಿಚಾರಗಳು ಬರಲಿಕ್ಕಿಲ್ಲ; ಇಂತಹ ಪ್ರಸಂಗದಲ್ಲಿ ಪಾಶ್ಚಿಮಾತ್ಯರ, ಗ್ರಂಥಗಳನ್ನು ಭಾಷಾಂತರಿಸಬೇಕು. ವ್ಹಿಕ್ಟರ ಹ್ಯೂಗೋ, ಜಾರ್ಜ ಮೆರಿಡಿಥ್ ಟಾಮಸ್ ಹಾರ್ಡಿ, ಲಾರ್ಡ ಲಿಟನ್, ಅಲೆಕ್ಝಾಂಡರ ಡ್ಯೂಮಾ, ಮೊದಲಾದವರ ಗ್ರಂಥಗಳ ಆಧಾರದಿಂದ ಪುಸ್ತಕಗಳನ್ನು ರಚಿಸಲು ಪ್ರಾರಂಭಿಸಬೇಕು. ಭಾಷಾಂತರ ಮಾಡಿದರೆ ಭಾಷೆಗೇನೂ ಕುಂದುಂಟಾಗುವದಿಲ್ಲ. ತೊಡವುಂಟಾಗುವುದು. ಪಾಶ್ಚಿಮಾತ್ಯ ರಾಷ್ಟ್ರದ ಭಾಷೆಗಳಾದರೂ ಅನ್ಯ ಭಾಷೆಗಳಿಂದಲೇ ಪೋಷಣೆಯನ್ನು ಹೊಂದಿ ಸಂಪನ್ನವಾದವು. ಇಂಗ್ಲೀಷಭಾಷೆಯು, ಗ್ರೀಕ, ಲ್ಯಾಟಿನ್ ಭಾಷೆಗಳಿಂದ ಬಲಪಟ್ಟಿತು. ಜರ್ಮನಿಯವರು ಸಂಸ್ಕೃತ ಭಾಷೆಯನ್ನು ಚೆನ್ನಾಗಿ ಅಭ್ಯಾಸಮಾಡಿ, ಉಪನಿಷತ್ ಮೊದಲಾದವುಗಳ ಭಾಷಾಂತರವನ್ನು ಮಾಡಿಕೊಂಡು, ತಮ್ಮ ಗ್ರಂಥ ಭಾಂಡಾರದ ಬೆಲೆಯನ್ನು ಹೆಚ್ಚಿಸಿಕೊಂಡರು. ಆದುದರಿಂದ ಭಾಷಾಂತರಗಳನ್ನು ಮಾಡಿಯಾಗಲಿ, ಸ್ವತಂತ್ರವಾಗಿ ಗ್ರಂಥಗಳನ್ನು ಬರೆದಾಗಲಿ, ಕನ್ನಡದ ಸಾಹಿತ್ಯಭಾಂಡಾರವನ್ನು ಹೆಚ್ಚಿಸಲು ಸುಶಿಕ್ಷಿತರು ಕಂಕಣಬದ್ಧರಾಗಬೇಕು. ಸಾಹಸಿಗರಿಗೆ ಸಿರಿಯು ಒಲಿಯುವಳು.

ಧಾರವಾಡದ ಸುಪ್ರಸಿದ್ಧ ವಕೀಲರೂ ಮುಂದಾಳುಗಳೂ ಆದ ಶ್ರೀ. ಫಕ್ಕೀರಪ್ಪಾ ನಲವಡಿಯವರು ಕಳೆದವಾರದಲ್ಲಿ ಆಕಸ್ಮಾತ್ತಾಗಿ ಮೃತಿಹೊಂದಿದ ದುಃಖದಾಯಕವಾದ ವಾರ್ತೆ ಬಂದಿದೆ. ಇವ

ನಾರವಾಡ ಪಟ್ಟಣದ, ಕರ್ನಾಟಕದ, ವಿಶೇಷವಾಗಿ ರಟ್ಟಿ ಜನಾಂಗದ ಪ್ರತಿಯೊಂದು ಸಾರ್ವಜನಿಕ ಕಾರ್ಯದಲ್ಲಿ ಒಳ್ಳೇ ಕಳವಳದಿಂದ ಕೆಲಸಮಾಡುತ್ತಲಿದ್ದರು. ಸಹಕಾರ ಸಂಘಗಳಲ್ಲಿಯಂತೂ ಅವರು ಅಧಿಕಾರ ಪೂರ್ವಕ ವಾಣಿಯಿಂದ ಹೇಳುವಂತಹ ಯೋಗ್ಯತೆಯನ್ನು ಪಡೆದಿದ್ದರು. ಇಂತಹ ಮಹನೀಯರು ಆಕಸ್ಮಾತ್ತಾಗಿ ಮಡಿದದ್ದು ಕರ್ನಾಟಕಕ್ಕೆ ಹಾನಿಯೇ ಸರಿ. ದೇವರು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ!

ಕರ್ನಾಟಕ ಸಾಹಿತ್ಯ ಪರಿಷತ್ತು

ಬಳ್ಳಾರಿಯ ಅಸಾಧಾರಣ ಸಭೆಯು

ಇದೇ ತಿಂಗಳ ೨೨ ನೇ ತಾ|| ದಿನ ಬಳ್ಳಾರಿಯಲ್ಲಿ ಕೂಡಿದ ಈ ಸಭೆಗೆ ಅಜಮಾಸ ೩೦ ಜನರು ಮಾತ್ರ ಬಂದಿದ್ದರು. ಪರಿಷತ್ತಿನವರು 'ಇಂಟರ' ರೈಲ್ವೇ ವೆಚ್ಚವನ್ನು ಕೊಡುವೆವೆಂದು ಸಭಾಸದರಿಗೆ ತಿಳಿಸಿದ್ದರೂ ಸಹ ಅಜಮಾಸ ೩೦೦ ಜನ ಸಭಾಸದರಲ್ಲಿ ೩೦ ಜನರು ಮಾತ್ರ ಬಂದಿದ್ದರು! ಕರ್ನಾಟಕ ವಿಶ್ವವಿದ್ಯಾಲಯದಂತಹ ಮಹತ್ವದ ಪ್ರಶ್ನೆಯ ವಿಚಾರವು ಸಹ ಇವರಿಗೆ ಬೇಸರ! ಇದು ಸಭಾಸದರ ಅಭಿಮಾನ! ಪರಿಷತ್ತಿನ ಮೇಲಿನ ಪ್ರೀತಿ! ಪರಿಷತ್ತು ಕಾರ್ಯವಾದ ಪದ್ಧತಿಯೆಂದು ಟೀಕೆ ಮಾಡಲಿಕ್ಕೆ ಎಲ್ಲರಿಗೂ ಬರುತ್ತದೆ. ಆದರೆ ಪ್ರತ್ಯಕ್ಷವಾದ ಮಹತ್ವದ ಕೆಲಸದಲ್ಲಾಗ ಸಹ ಅನಾನುಕೂಲತೆಗಳನ್ನು ದುರ್ಲಕ್ಷಿಸುವದಾಗುವದಿಲ್ಲ!

ಬಳ್ಳಾರಿಯ ಮಹಾಜನಗಳು ಈ ಅಧಿವೇಶನದ ಬಗ್ಗೆ ಎಲ್ಲ ವ್ಯವಸ್ಥೆಯನ್ನೂ ಚೆನ್ನಾಗಿ ಮಾಡಿದ್ದರು. ನಗರ ಮಂದಿರದಲ್ಲಿ ರವಿವಾರ ದಿನ ಮುಂಜಾನೆ|| ಗಂಟೆಗೆ ಸರಿಯಾಗಿ ಸಭೆ ಪ್ರಾರಂಭವಾಗಿ ಕೆಳಗೆ ಕಾಣಿಸಿದ ತೀರ್ಮಾನಗಳು ಗೊತ್ತಾದವು. ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರು ಸಭಾ ಅಧ್ಯಕ್ಷರಿದ್ದರು.

(೧) ಮೈಸೂರ ವಿಶ್ವವಿದ್ಯಾಲಯದಲ್ಲಿ ಕನ್ನಡಕ್ಕೆ ತಕ್ಕ ಪ್ರಾಧಾನ್ಯವನ್ನು ಕೊಡಬೇಕಾಗಿ ಮಹಾರಾಜರಿಗೆ ಬಿನ್ನಹ.

(೨) ಮೈಸೂರ ವಿಶ್ವವಿದ್ಯಾಲಯದಲ್ಲಿ ಶಿಕ್ಷಣವು ಕನ್ನಡ ಭಾಷೆಯಿಂದಲೇ ನಡೆಯಬೇಕಾಗಿಯೂ, ಕನ್ನಡ ಪಠ್ಯ ಪುಸ್ತಕಗಳನ್ನು ಸಿದ್ಧ ಪಡಿಸಬೇಕಾಗಿಯೂ ಮಹಾರಾಜರಿಗೆ ಬಿನ್ನಹ.

(೩) ಕೊಯಮುತ್ತೂರ, ಸೇಲಂ, ಮತ್ತು ನೀಲಗಿರಿ ಜಿಲ್ಲೆಗಳಲ್ಲಿಯ ಕನ್ನಡಿಗರಲ್ಲಿ ಜಾಗ್ರತಿಯನ್ನುಂಟುಮಾಡಲಿಕ್ಕೆ ಶ್ರೀ. (೧) ಕೃಷ್ಣರಾವ ಮುದವೀಡಕರ, (೨) ಸಂಪದ್ ಗಿರಿರಾವ ಮತ್ತು (೩) ಭಾರದ್ವಾಜ ಇವರು ಆ ಪ್ರದೇಶಗಳನ್ನು ಸಂದರ್ಶಿಸಬೇಕು ಇವರ ವೆಚ್ಚಕ್ಕಾಗಿ ೨೦೦ ರೂ ಪರಿಷತ್ತಿನವರು ಕೊಡಬೇಕು. ಇವರ ವರದಿಯು ಫೆಬ್ರುವರೀ ತಿಂಗಳ ಕೊನೆಯೊಳಗಾಗಿ ಪರಿಷತ್ತಿನ ಕೈಸೇರಬೇಕು.

(೪) ಕರ್ನಾಟಕ ವಿಶ್ವವಿದ್ಯಾಲಯವನ್ನು ಯಾವ ಬಗೆಯಲ್ಲಿ, ಎಲ್ಲಿ ಸ್ಥಾಪಿಸಬೇಕೆಂಬದನ್ನು ವಿಚಾರಿಸಲಿಕ್ಕೆ ಕರ್ನಾಟಕದ ಜನತೆಯನ್ನು ಕಂಡು ಅವರ ಸಲಹೆ ತೆಗೆದುಕೊಂಡು, ಒಂದು ಯೋಜನೆಯನ್ನು ಸಿದ್ಧಪಡಿಸಲಿಕ್ಕೆ ಕೆಳಗಿನ ಉಪಸಭೆಯು ಇರಬೇಕು. ಈ ಸಭೆಯವರ ಪ್ರವಾಸದ ವೆಚ್ಚಕ್ಕಾಗಿ ೧೫೦ ರೂ. ತೆಗೆದಿಡಬೇಕು (೧) ಸಿ. ಬಿ. ರಾಮರಾವ ಬೆಂಗಳೂರ (೨) ರ್‍ಯಾಂಗಲರ ಕಟ್ಟಿ ಮುಂಬೈ (೩) ಸಾಖರೆ ಬೆಳಗಾವಿ (೪) ಎಚ್. ನಾರಾಯಣರಾವ ಮಂಗಳೂರ (೫) ಸಂಪದ್ ಗಿರಿರಾವ ಬೆಂಗಳೂರ (ಕಾರ್ಯದರ್ಶಿಗಳು)

(೫) ಬಳ್ಳಾರಿ ಪಟ್ಟಣ ಮತ್ತು ಜಿಲ್ಲೆಯಲ್ಲಿ ಕನ್ನಡ ಶಾಲೆಗಳನ್ನೇ ಸ್ಥಾಪಿಸಬೇಕಾಗಿ ಮದ್ರಾಸ ಸರಕಾರಕ್ಕೆ ವಿನಂತಿ

(೬) ಬಳ್ಳಾರಿ ಜಿಲ್ಲೆಯ ಕೋರ್ಟು ಕಚೇರಿಗಳಲ್ಲಿ ಕನ್ನಡ ಭಾಷೆಯೇ ಉಪಯೋಗಿಸಲ್ಪಡಬೇಕಾಗಿಯೂ, ಈ ಜಿಲ್ಲೆಯ ಅಧಿಕಾರಿಗಳು ತೆಲಗಿನಲ್ಲಿಯೇ ಎಲ್ಲ ಅರ್ಜಿಗಳು ಇರಬೇಕಾಗಿ ನುಡಿಸುವದಾಗಿಯೂ, ಮದ್ರಾಸ ಸರಕಾರಕ್ಕೆ ವಿನಂತಿ

(೭) ಬಳ್ಳಾರಿ ಜಿಲ್ಲೆಯನ್ನು ಆಂಧ್ರ ವಿಶ್ವವಿದ್ಯಾಲಯಕ್ಕೆ ಸೇರಿಸಲು ಮದ್ರಾಸದ ಗವರ್ನರರು ತಮ್ಮ ಒಪ್ಪಿಗೆಯನ್ನು ಕೊಡಬಾರದಾಗಿಯೂ; ಮದ್ರಾಸ ವಿಶ್ವವಿದ್ಯಾಲಯಕ್ಕೆ ಒಳಪಟ್ಟ ಕಾಲೇಜ ಬಳ್ಳಾರಿಯಲ್ಲಿ ಬೇಕಾಗಿಯೂ ಅವರಿಗೆ ವಿನಂತಿ. ಈ ಬಗ್ಗೆ ವಿಚಾರ ಮಾಡಲು ಒಂದು ಉಪಮಂಡಳವು ನಿಯಮಿತವಾಗಿದೆ.

(೮) ಬಳ್ಳಾರಿಯು ಆಂಧ್ರವಿಶ್ವವಿದ್ಯಾಲಯದಲ್ಲಿ ಸೇರಬಾರದಾಗಿ ಮದ್ರಾಸ ಶಾಸನ ಮಂಡಲದಲ್ಲಿ ಪ್ರಯತ್ನಿಸಿದ ಶ್ರೀ. ಸತ್ಯಮೂರ್ತಿ, ಶಿವರಾವ, ರಾಮಲಿಂಗರಾವ ಮಲ್ಲಪ್ಪ ಸಾಂಬ್ಯನಾಯಡು, ರಾಮರಾವ ಮೊದಲಾದವರ ಅಭಿನಂದನ

ಪರಿಷತ್ತಿನ ಕಾರ್ಯ ಮುಗಿದ ನಂತರ ಬಳ್ಳಾರಿ ಪುರನಿವಾಸಿಗಳ ಸಾರ್ವಜನಿಕ ಸಭೆ ನಗರ ಮಂದಿರದಲ್ಲಿಯೇ ಪ್ರಾರಂಭವಾಯಿತು ಮೊದಲು ಮೈಸೂರಿನ ಶ್ರೀ. ಬೆಂದೂರರಾಯರು ಕುಮಾರವ್ಯಾಸನ ಭಾರತವನ್ನು ಸರಸವಾಗಿ ಹಾಡಿದರು. ಇವರು ತಮ್ಮ ಸ್ಪಷ್ಟವಾದ ವಾಣಿಯಿಂದ ಜನರ ಮನಸ್ಸನ್ನು ಆಕರ್ಷಿಸಿಕೊಂಡರು. ಆ ವೇಳೆ ರಾಮಲಿಂಗಯ್ಯನೆಂಬ ವಿದ್ಯಾರ್ಥಿಯು ರಾಜಶೇಖರ ವಿಳಾಸವನ್ನು ಅಂದವಾಗಿ ಹಾಡಿ ತೋರಿಸಿದನು. ಅಧ್ಯಕ್ಷರಾದ ಕರ್ಪೂರ ಶ್ರೀನಿವಾಸರಾಯರ ಪ್ರಾಸ್ತಾವಿಕ ಭಾಷಣವಾದ ಮೇಲೆ ಶ್ರೀಯುತರುಗಳಾದ, ಮುದವೀಡಕರ, ತಾತಾಚಾರ್ಯ (ಬೆಂಗಳೂರ) ಕವಟೇಕರ (ಗುಲಬರ್ಗಾ), ಶಾಂತ(ಮಂಗಳೂರ) ಗಚ್ಚಿ(ಬೆಳಗಾವಿ) ಮುಳಗುಂದದ ವರದಾಚಾರ್ಯರು ಭಾರದ್ವಾಜ ಇವರೇ ಮೊದಲಾದವರ ಭಾಷಣಗಳಾದವು. ಬಳ್ಳಾರಿ ಹೈಸ್ಕೂಲಿನ ತೆಲುಗು ಪಂಡಿತರು ಬಳ್ಳಾರಿಯು ಕನ್ನಡನಾಡಿಗೇ ಸೇರಿದ್ದೆಂದೂ, ಆಂಧ್ರಕ್ಕೆ ಅದನ್ನು ಎಳೆಯುವದು ಅನ್ಯಾಯವಾದುದೆಂದೂ, ತೆಲುಗ ಗ್ರಂಥಗಳ ಆಧಾರದಿಂದಲೂ, ಅನುಭವದಿಂದಲೂ, ಶಾಲೆಯಲ್ಲಿ ಕನ್ನಡ ವಿದ್ಯಾರ್ಥಿಗಳ ಅಶುದ್ಧವಾದ ತೆಲುಗ ನಿಬಂಧಗಳಿಂದಲೂ, ಸಿದ್ಧಮಾಡಿ ಜನರ ಪ್ರೀತಿಗೆ ಪಾತ್ರರಾದರು.

ಶಾಸಂಬಾದೇವಿಗೆ

ತಂಗೀ, ಕನ್ನಡದ ವಿಷಯದಲ್ಲಿಯ ನಿನ್ನ ಆದರವನ್ನೂ ಪ್ರೇಮವನ್ನೂ ನೋಡಿ ಮನಸಿಗೆ ಮೋದವಾಯಿತು. ನಿನ್ನ ಇನಿನುಡಿಗಳ ಸವಿಯಬೇಕೆಂದು ಕಿವಿಗಳು ಕದುಬಿಗೊಳ್ಳುತ್ತಿವೆ. ಆದರೆ ತಾಯಿ, ನಿನ್ನ ಹೊಸ್ಸಿನ ಬಿರುನುಡಿಗಳನ್ನು ಓದಿ ಬಗೆಗೆ ಬರೆ ಕೊಟ್ಟಂತಾಯಿತು. "ಅಣ್ಣಾ ಊಟಕ್ಕೆ ಹೇಳದೆ ಆಯತವಾಗಿ ಬಂದು ಎಲಿಯ ಮೇಲೆ ಕುಳಿತರೆ, ನಗದೆ ಯಾರು ಬಿಟ್ಟಾರು? ಈ ಮರಾಠಿಗರಿಗೆ ಧಾರವಾಡ ಹುಬ್ಬಳ್ಳಿಯೆಂದರೆ ಅನ್ನ ಛತ್ರವಾದ ಹಾಗೆ ಆಗುವದು ಎಲ್ಲಿಯಾದರೂ ಪ್ರಸಂಗ ಪ್ರಯೋಜನ ಆದ ಎಂದು ತಿಳಿದರೆ ಸಾಕು, ಎಲ್ಲಾದು ಭಾಷೆ, ಮಾಷೆ, ಬಟಾಟೇ ಭಾಜಿ" ಈ ನಿನ್ನ ನುಡಿಗಳು ನನಗೆ ಸರಿಹೋಗಲಿಲ್ಲ. ಕಿವಿಯೊಳಗೆ ಸೀಸ ಕಾಸಿ ಸುರುವಿದಂತಾಯಿತು. ತಂಗೀ, ಹುಡುಗರು ನಕ್ಕರೆ ನಗಲೊಲ್ಲರೇಕೆ! ನೀನು ಉದಾರ ಬುದ್ಧಿಯವಳು, ಉಚ್ಚ ಭಾವವುಳ್ಳವಳು. ನಿನ್ನ ಸೌಜನ್ಯಕ್ಕೂ ನಿನ್ನ ರಾಜನೀತಿಗೂ ಈ ನಡತೆಯು ಸರಿಹೋಗುವುದೇ? ನೀನೇ ತಿಳಿದು ನೋಡು. ಮರಾಠಿಗರು ಕನ್ನಡಿಗರನ್ನು ಹಳಿಯುವರೆಂಬದನ್ನು ಬಲ್ಲೆನು. ಕನ್ನಡ ನುಡಿಯು ರಾಷ್ಟ್ರ ಭಾಷೆಯೆಂದೂ ಒಡಕು ಗಡಿಗೆಯೊಳಗೆ ನೊಣಹೊಕ್ಕರೆ ಹೇಗೋ ಹಾಗೆ ಅದು ಇರುತ್ತದೆಂದೂ ಅನ್ನುವದನ್ನೂ ನಾನು ಕೇಳಿದ್ದೇನೆ. ಭಾವಬಂಧನದಲ್ಲಿಯಾದರೂ ಅದಕ್ಕೆ ಅಮರ್ಯಾದೆಯಾಗಿದೆಂಬುದನ್ನು ನಾನು ಮರೆತಿಲ್ಲ. ತಂಗೀ ಇದನ್ನು ನೋಡಿ 'ರೇವ ಯೇಕೆ' ಇಷ್ಟೇಸಾಕು.

ತಾಯಿ ನಿನ್ನ ಸೌಶೀಲ್ಯಕ್ಕೆ ನಿನ್ನ ಪಾವಿತ್ರ್ಯಕ್ಕೆ ನಿನ್ನ ಸರಲ ಸ್ವಭಾವಕ್ಕೆ ಅನುಗುಣವಾಗಿಯೇ ಬರೆ ನಿನ್ನ ಅಂತಃಕರಣದ ಕಮಳನಂತೆ ನಿನ್ನ ಲೆಕ್ಕಣಿಕೆಯಾದರೂ ಮಿದುವಾಗಿರಲಿ; ಜೇನಿನಂತೆ ಸವಿಯಾಗಿರಲಿ. ಕನ್ನಡಕ್ಕೆ ಅನುಗುಣವಾಗಿರಲಿ.

ನಿನ್ನ ಅಣ್ಣ —ಶಾ.—

ಸೋಶ್ಯಲಿಜಮ್ ಎಂದರೇನು?

[ಲೇ:- ಮುನುನೂರ ಬಿ. ಎ.]

ಸೋಶ್ಯಲಿಜಮ್ ಎಂದರೆ ಏನೆಂದು ನಮ್ಮಲ್ಲಿನ ಇಂಗ್ಲೀಷ್ ಬಲ್ಲವರಿಗೆ ಸಹ ಸರಿಯಾಗಿ ಗೊತ್ತಿಲ್ಲ. ರಶ್ಯದ ಕ್ರಾಂತಿಗೆ ಕಾರಣವಾದ ಬೋಲ್ಶೆವಿಜಮ್ ಇಲ್ಲವೆ ಕಮ್ಯುನಿಜಮ್ ಎಂಬ ತತ್ವದಂತೆಯೋ ಸೋಶ್ಯಲಿಜಮ್ ಎಂದರೆ ಸಮಾಜದ ನಿರ್ಮೂಲಕ್ಕೆ ಹುಟ್ಟಿದ ಒಂದು ಚಳವಳಿಯೆಂದು ಅನೇಕರ ಭಾವನೆ. ಮಾರ್ಕ್ಸ್ ಮುಂತಾದವರು ಸೋಶ್ಯಲಿಜಮ್ ಎಂಬ ಹೆಸರಿನಿಂದ ಕಮ್ಯುನಿಜಮ್ ತತ್ವವನ್ನು ಸಹ ಬೋಧಿಸಿದರೂ, ಅವರನ್ನು ಅನುಸರಿಸುವವರಿಗೆ ಈಗ ಕಮ್ಯುನಿಸ್ಟ್ ಎಂದು ಹೇಳುತ್ತಾರೆ. ಹೀಗಾದರೆ ಸೋಶ್ಯಲಿಜಮ್ ಎಂಬುದು ಬೇರೆಯೆಂದಾಯಿತು ಅದರ ತತ್ವಗಳೇನು ಎಂಬುದನ್ನು ತಿಳಿಯಲು ಅನೇಕರಿಗೆ ಕುತೂಹಲ. ಮೊನ್ನೆ ಮೊನ್ನೆ ಬ್ರಿಟಿಷ್ ಸಾಮ್ರಾಜ್ಯದ ಪ್ರಧಾನ ಮಂತ್ರಿಗಳಾಗಿದ್ದ ಮೆಕ್ಡೊನಾಲ್ಡರೂ ಅವರ ಬೆಂಬಲಕ್ಕಿದ್ದ ಲೇಬರ್ ಪಾರ್ಟಿಯು ಅನೇಕ ಮುಖಂಡರೂ ಸೋಶ್ಯಲಿಜಮ್ ತತ್ವವನ್ನು ನಂಬುವವರಾಗಿದ್ದರಿಂದ, ಈ ತತ್ವವನ್ನು ತಿಳಿಯಬೇಕೆಂದು ಹಿಂದುಸ್ಥಾನದ ಅನೇಕರು ಆಶಿಸುವುದು ಸಹಜ.

ಹೀಗಿರುವಾಗ ಲೇಬರ್ ಪಾರ್ಟಿಯ ಹಿತ ಚಿಂತಕರಾದ ಮತ್ತು ಇಂಗ್ಲಾಂಡಿನ ಈಗಿನ ಗ್ರಂಥಕರ್ತರಲ್ಲಿ ಪ್ರಖ್ಯಾತರೆನ್ನಿಸಿಕೊಂಡ ಎಚ್. ಜಿ. ವೆಲ್ಸರ "ಹೊಸರಾಜ್ಯ" (New worldfor old) ಎಂಬ ಇಂಗ್ಲಿಷ್ ಪುಸ್ತಕವನ್ನು ನಮ್ಮ ವಾಚಕರ ಪರಿಚಯಕ್ಕೆ ತರಲು ನಮಗೆ ಬಹಳ ಸಂತೋಷ. ವಿಷಯ ಮಹತ್ವವನ್ನು ಗಣನೆಗೆ ತಂದರೆ ಗ್ರಂಥವು ಬಹಳ ವಿಸ್ತಾರವಾದದ್ದಲ್ಲ. ಸಮಾಜ ಸಂಘಟನೆಯಲ್ಲಿ ಸುಧಾರಣೆಗಳನ್ನು ತರುವವರಿಗೆ ಈ ಪುಸ್ತಕದ ಪರಿಚಯವು ಅತೀ ಅಗತ್ಯ. ಇದರಲ್ಲಿನ ಹೇಳಿಕೆಗಳೆಲ್ಲ ನ್ಯಾಯವಾದವು ಈ ಗ್ರಂಥಕರ್ತನ ಬೋಧನೆಗಳು "ವೇದವಾಕ್ಯ" ವೆಂದು ನಾವು ಹೇಳುವದಿಲ್ಲ. ಆದರೆ ಸೋಶ್ಯಲಿಜಮ್ ಎಂಬುದು ಮಾನವ ಕುಲವನ್ನೇ ಬದಲಾಯಿಸಲು ಹೊರಟ ಶಕ್ತಿಯಾದ್ದರಿಂದ ಅದರ ಸಾಧಕ ಬಾಧಕಗಳನ್ನು ಮನನ ಮಾಡುವುದು ಲೇಸು

ಇಂಗ್ಲಿಷ್ ಅರಿಯದವರಿಗಾಗಿ ಪುಸ್ತಕದಲ್ಲಿನ ವಿಷಯಸಾರವನ್ನು ಹೇಳಬೇಕಾಗಿದೆ. ವೆಲ್ಸರ ಹೇಳಿಕೆಯ ಪ್ರಕಾರ ಸೋಶ್ಯಲಿಜಮ್ ಎಂಬುದು ಸಮಾಜಕ್ಕೆ ಹೊಸ ರೂಪವನ್ನು ಕೊಡಲಿಕ್ಕೆ ಪ್ರಯತ್ನಿಸುವಂಥ ಒಂದು ತತ್ವ. ಸಮಾಜವನ್ನು ಪರಿವರ್ತಿಸಬೇಕೆಂದು ಹೇಳಿದರೂ ಈಗಿನ ಸಮಾಜದಲ್ಲಿ ಸಹ ಅನೇಕ ಗುಣಗಳಿವೆ ಎಂದು ಅವರು ಒಪ್ಪುತ್ತಾರೆ. ಹಿಂದಿನ ಸಾವಿರಾರು ವರ್ಷದ ಚರಿತ್ರೆಯನ್ನು ಓದಿ ಈಗಿನಕಾಲದ ಮನುಷ್ಯ ಸಮಾಜವು ಬಹಳ ಉತ್ತಮ ಸ್ಥಿತಿಗೆ ಬಂದಿದೆ ಎಂದು ಅವರು ಎಣಿಸುತ್ತಾರೆ. ಯುಗಯುಗದಲ್ಲಿಯೂ ಅನೇಕ ಕಷ್ಟನಷ್ಟಗಳಿಗೆ ಗುರಿಯಾದರೂ ಮಾನವ ಕುಲದಲ್ಲಿ ಅಂತಸ್ಥವಾಗಿರುವ ಸುಗುಣದ(good will) ಮೂಲಕ ಅದು ಮೇಲ್ಮೇಲೆ ಬಂದಿದೆ ಆದರೂ ಈಗಿನ ಸ್ಥಿತಿಯು ಸಂಪೂರ್ಣ ಸಮಾಧಾನದ್ದಲ್ಲ; ಅನೇಕ ಸೌಕರ್ಯಗಳು ಈ ಕಾಲದಲ್ಲಿದ್ದರೂ ಸುಖವು, ಕೆಲವು ಜನರಿಗೆ ಮಾತ್ರ; ಅನೇಕರು ಹೊಟ್ಟೆಗಿಲ್ಲದೆ ನರಳುತ್ತಾರೆ, ಚಿಕ್ಕಮಕ್ಕಳು ಆರೈಕೆಯಿಲ್ಲದೆ ಅಕಾಲಮೃತ್ಯು ಇಲ್ಲವೆ ನಿರಂತರ ದುಃಖಕ್ಕೆ ಒಳಗಾಗುತ್ತಾರೆ, ಸ್ವಲ್ಪ ಮೇಲಿನ ಸ್ಥಿತಿಯವರು (ಮಧ್ಯಮ ತರಗತಿಯವರು) ತಮ್ಮ ಸಂತಾನದ ಸುಖಕ್ಕಾಗಿ ಪಡಬೇಕಾದ ಕಷ್ಟವು ಬಹಳ; ಇವೆಲ್ಲ ಕಷ್ಟಗಳಿಗೆ ಹೆಚ್ಚಾಗಿ ಮೂಲವು ಈಗಿನ ಸಮಾಜ ಪದ್ಧತಿಯ ಬೇರೆಯಿಂದ ಬಂದುದವು.

ಇಂಥ ದುಃಖವನ್ನು ನಿರ್ಮೂಲಮಾಡಿ ಸಂಸಾರದಲ್ಲಿ ಸುಖವನ್ನು ತರುವುದೇ ಸೋಶ್ಯಲಿಸ್ಟರ ಧ್ಯೇಯವೆಂದು ವೆಲ್ಸರು ಹೇಳುತ್ತಾರೆ. ಗರ್ಭಿಣಿ ಹೆಂಗಸಿನ, ಬಾಣಂತಿಯ, ಚಿಕ್ಕಮಕ್ಕಳ ಆರೈಕೆಗಾಗಿ ಸರಕಾರವೇ ಸಲಹೆಗಳನ್ನು ಪರಿಷ್ಕಾರವಾಗಿ ನಿರ್ಮಿಸಬೇಕು; ಎಲ್ಲರಿಗೂ ಆರೋಗ್ಯಕರವಾದ ಮನೆಗಳು, ರುಚಿಕರವಾದ, ಪುಷ್ಟಿಕರವಾದ ಆಹಾರ, ಚೆಲ್ವಿಗೆ ಚೊಕ್ಕವಾದ ಉಡಿಗೆ, ಉಪಯುಕ್ತವಾದ ವಿದ್ಯೆ, ಹೀಗೆ ಮನುಷ್ಯತ್ವಕ್ಕೆ ಅಗತ್ಯವಿರುವ ಎಲ್ಲ ಸಾಮಗ್ರಿಗಳು ಸಿಕ್ಕುವಂತೆ ಮಾಡುವುದು ಸರಕಾರದ ಕೆಲಸವೆಂದು ಸೋಶ್ಯಲಿಸ್ಟರ ಬೋಧನೆ.

ಹೀಗೆ ಎಲ್ಲರಿಗೂ ಸುಖಸಿಗಬೇಕೆಂದು ಎಲ್ಲರೂ ಒಪ್ಪುತ್ತಾರೆ. ಆದರೆ ಇದಕ್ಕೆ ಬೇಕಾದ ಹಣವೆಲ್ಲಿದೆ? ಎಂದು ಹಲವರ ಪ್ರಶ್ನೆ. ಅದಕ್ಕೆ ಸೋಶ್ಯಲಿಸ್ಟರ ಉತ್ತರವೇನಂದರೆ ನಮ್ಮಲ್ಲಿ ಈಗ ಪ್ರಚಾರದಲ್ಲಿರುವ ನಷ್ಟಕರವಾದ ಪದ್ಧತಿಗಳನ್ನು ತೆಗೆದು, ಕೆಲವರಿಗೆ ಅನಾವಶ್ಯಕ ವಿಷಯಭೋಗಗಳ ಸಾಗರವನ್ನು ವಹಿಸಿಕೊಡುವುದನ್ನು ನಿಲ್ಲಿಸಿದರೆ ನಮಗೆ ಬೇಕಷ್ಟು ಸುಖಸಿಕ್ಕುತ್ತದೆ. ಉದಾಹರಣೆಗಾಗಿ ಈಗಿನ ಸಮಯದಲ್ಲಿ ಒಂದು ಕೇರಿಯಲ್ಲಿ ಒಂದನೇ ಮನೆಗೆ ಒಬ್ಬಳು ಹಾಲು ತಂದುಕೊಡುವುದಾದರೆ, ಎರಡನೇ ಮನೆಗೆ ಇನ್ನೊಬ್ಬಳು; ನಮ್ಮ ಅಂಗಡಿಯವನು ಒಬ್ಬನಾದರೆ, ನೆರೆಯವನಿಗೆ ಇನ್ನೊಬ್ಬ. ಹೀಗೆ ಅನೇಕರು ಅನಾವಶ್ಯಕವಾಗಿ ಒಂದೇ ವೃತ್ತಿಯನ್ನು ಅನುಸರಿಸುವುದರಿಂದ ಒಬ್ಬರಿಗಾದರೂ ಬೇಕಷ್ಟು ಸಿಕ್ಕದೆ, ಮೋಸದಿಂದ ಹಣ ಮಾಡಲಿಕ್ಕೆ ಸುರುವಾಗುತ್ತದೆ. ಹಾಲಿನವಳು ನೀರು ಬೆರಸುತ್ತಾಳೆ; ಅಂಗಡಿಯವನು ಹಳೆಯ ಸಾಮಾನು ಬೆರೆಸುವದು, ಕಮ್ಮಿ ಅಳತೆ ಕೊಡುವುದು, ಮಳೆಗಾಲದಲ್ಲಿ ಅನ್ಯಾಯವಾಗಿ ಕ್ರಯ ಏರಿಸುವುದು, ಇಂಥ ಉಪಾಯಗಳನ್ನು ಹುಡುಕುತ್ತಾನೆ. ಇಂಥ ಮೋಸವನ್ನು ನಿಲ್ಲಿಸಲಿಕ್ಕೆ ಸರಕಾರವು ಕಾಯಿದೆಗಳನ್ನು ಮಾಡಿ ಅವುಗಳನ್ನು ಜಾರಿಗೆ ತರಲು ಅನೇಕರಿಗೆ ಸಂಬಳ ಕೊಡಬಹುದೇ ಹೊರತು ನಿಜವಾಗಿ ಈ ಮೋಸವು ನಿಲ್ಲುವದಿಲ್ಲ. ಮಾತ್ರವಲ್ಲ ಕ್ರಯವು ಅನ್ಯಾಯವಾಗಿ ಏರಿದಾಗ ಅನೇಕರು ಹೊಟ್ಟೆಗಿಲ್ಲದೆ ಸಿಕ್ಕಿದ್ದನ್ನು ತಿಂದಾಗಲೀ ಉಪವಾಸವಾಗಲೀ ಜೀವಿಸುವುದರಿಂದ ರೋಗಾದಿಗಳು ಹುಟ್ಟುವುವು. ಹೀಗೆ ರಾಷ್ಟ್ರದ ಹಿತವು ಹಾಳಾಗುವುದು.

ಇದನ್ನೆಲ್ಲ ನಿಲ್ಲಿಸಲಿಕ್ಕೆ ಉಪಾಯವು, ಸೋಶ್ಯಲಿಸ್ಟರ ಹೇಳಿಕೆಯ ಪ್ರಕಾರ ಸರಕಾರವು ಎಲ್ಲ ಯಜಮಾನತೆಯನ್ನು ವಹಿಸುವುದು. ಎಲ್ಲರಿಗೂ ಹಿತವಾಗುವಂತೆ ಸಕಲ ವಸ್ತುಗಳ ವಿಕ್ರಯವು ಸರಿಯಾಗ ಬೇಕಾದರೆ ಸರಕಾರವೇ ಎಲ್ಲ ಆಸ್ತಿಯನ್ನು ಕೈವಶ ಮಾಡಿ ಬೆಳೆಬೆಳೆಸಿ, ಆಹಾರ ಪದಾರ್ಥವನ್ನು ತನ್ನ ಸೇವಕರ ಮೂಲಕವೇ ವಿಕ್ರಯಿಸಬೇಕು; ಎಲ್ಲ ಯಾನಗಳೂ, ಗಿರಣಿಗಳೂ, ಕಾರ್ಖಾನೆಗಳೂ, ಬೆಂಕುಗಳೂ, ಒಟ್ಟಾರೆ ಮೇಲೆ ಮನುಷ್ಯರಿಗೆ ಬೇಕಾದ ಸಾಮುಗ್ರಿಗಳನ್ನು ತಯಾರಿಸುವ, ಅತ್ತಿತ್ತ ಒಯ್ಯುವ, ಮತ್ತು ಹಂಚುವ ಎಲ್ಲ ಸಾಧನಗಳೂ ಸಮಾಜದ ಕೈವಶವಾಗಬೇಕು.

ಹಾಗೆಂದು ಸೋಶ್ಯಲಿಸ್ಟರು ಕುಟುಂಬವನ್ನು ನಾಶಮಾಡಲಿಕ್ಕೆ ಹೊರಟವರಲ್ಲ. ಪ್ರತಿಯೊಂದು ಕುಟುಂಬದ ನಿತ್ಯೋಪಯೋಗಕ್ಕೆ ಬೇಕಾಗುವದೆಲ್ಲ ಅದು ಅನುಭವಿಸ ಬಹುದು. ಮಾತ್ರವಲ್ಲ ಪ್ರತಿಯೊಂದು ಕುಟುಂಬಕ್ಕೆ ಅಗತ್ಯವಿರುವ ಸೌಕರ್ಯವು ಸಿಕ್ಕುವಂತೆ ನೋಡುವುದು ರಾಷ್ಟ್ರದ ಕೆಲಸ. ತಮ್ಮ ಮನೆ, ಹಿತ್ತಲು, ಉಡಿಗೆ ತೊಡಿಗೆ, ಪಾತ್ರೆಗಳು ಇವುಗಳನ್ನು ತನ್ನದೆಂದು ಹೇಳುವುದು ನ್ಯಾಯವೆಂದು ಎಣಿಸುತ್ತಾರೆ; ಹೊರತು ಬೇರೆಯವರು ವಾಸಮಾಡುವ ಮನೆಗಳು, ಅವರ ಗದ್ದೆಗಳು, ಸಾವಿರಾರು ಕಾರ್ಖಾನೆಗಳು ಇವೆಲ್ಲ ತನ್ನದಾಗಿ ಮಾಡುವ ಅಹಂಕಾರದ ಅವಕಾಶವನ್ನು ಮುಗಿಸಬೇಕೆಂದು ಸೋಶ್ಯಲಿಸ್ಟರ ಆಲೋಚನೆ.

ಹೀಗೆ ಈ ಉದ್ದೇಶವನ್ನು ಸಾಧಿಸುವುದೆಂದರೆ—

೧. ವ್ಯಕ್ತಿಗತವಾದ ಸೊತ್ತನ್ನು ರಾಷ್ಟ್ರದ ಸರಕಾರವಾಗಲೀ ಮ್ಯುನಿಸಿಪಾಲಿಟಿಗಳಾಗಲೀ ಕ್ರಯಕೊಟ್ಟಾಗಲೀ ಬೇರೆ ವಿಧದಿಂದಾಗಲೀ ವಶಕೊಂಡು ಸಮಾಜ ಹಿತಕ್ಕಾಗಿ ತಾನೇ ನಡಿಸುವುದು. ಗಣಿಗಳು, ಪ್ರಮಾಣ ಸಾಮುಗ್ರಿಗಳು, ಕಾರ್ಖಾನೆಗಳು, ವಿದ್ಯುಚ್ಛಕ್ತಿ ಜನಕಗಳು, ನೀರಾವರಿ ಕೆಲಸಗಳು ಇವೆಲ್ಲ ಈ ವಿಧದಲ್ಲಿ ಕೈವಶವಾಗಬೇಕು.

೨. ವ್ಯಕ್ತಿಗತವಾದ ಸ್ಥಿರಾಸ್ತಿಯನ್ನು ಸ್ವಲ್ಪಸ್ವಲ್ಪವಾಗಿ ಕೈವಶ ಮಾಡುವುದು.

೩. ಕೈವಶವಾದ ಈ ಅಧಿಕಾರಗಳನ್ನು ನಿರ್ವಹಿಸಲಿಕ್ಕೆ ತಕ್ಕ ಇಲಾಖೆಗಳನ್ನೂ ಕಾನೂನುಗಳನ್ನೂ ನಿರ್ಮಿಸುವುದು.

೪. ವಿದ್ಯೆ, ಚಿಕಿತ್ಸೆ, ಮಕ್ಕಳ ಆರೈಕೆ, ಇವುಗಳು ಚೆನ್ನಾಗಿ ಆಗುವಂತೆ ಬೇಕಾದ ಸಲಹೆಗಳನ್ನು ಉಂಟುಮಾಡುವುದು.

ಇವೇ ಮೊದಲಾದ ವಿಧಗಳಿಂದ ಸೋಶ್ಯಲಿಷ್ಟರು ತಮ್ಮ ಉದ್ದೇಶಸಾಧಿಸಲಿಕ್ಕೆ ಪ್ರಯತ್ನ ಪಡುತ್ತಾರೆ. ಅವರು ಹೇಳುವಂತೆ ಕೆಲವು ವಿಷಯಗಳು ಆಗಬೇಕೆಂದು ಅನೇಕರ ನಂಬಿಗೆ; ಉದಾಹರಣೆಗಾಗಿ ರೈಲ್ವೆಮಾರ್ಗಗಳನ್ನು ಸರಕಾರವು ವಹಿಸಕೊಳ್ಳಬೇಕೆಂದೂ ವಿದ್ಯುಚ್ಛಕ್ತಿ ಮುಂತಾದ್ದನ್ನು ಸರಕಾರವೇ ಕೈಯಲ್ಲಿಕೊಳ್ಳಬೇಕೆಂದೂ ಅನೇಕರು ಅಭಿಪ್ರಾಯ ಪಡುತ್ತಾರೆ. ಆದರೆ ಸೋಶ್ಯಲಿಷ್ಟರ ಎಲ್ಲ ಬೋಧನೆಗಳು ನಡೆಯುವುದು ಕಷ್ಟ. ತತ್ಕಾಲಕ್ಕೆ ಅಸಾಧ್ಯವಾದರೂ ಕ್ರಮೇಣ ಇಡೀ ಜಗತ್ತನ್ನು ತಮ್ಮ ಮತಕ್ಕೆ ತರುವೆವೆಂದು ಅವರ ನಂಬಿಕೆ.

ವಾಚಕರ ನಂಬಿಕೆ ಹೇಗಿದ್ದರೂ ಈ ಪುಸ್ತಕವನ್ನು ಎಲ್ಲರೂ ಓದ ಬೇಕು. ಗ್ರಂಥಕರ್ತರ ಶೈಲಿಯು ಸರಳವಾಗಿಯೂ ಆಕರ್ಷಿಸುವುದಾಗಿಯೂ ಇದೆ. ಇದರ ಕನ್ನಡ ಪರಿವರ್ತನವಾದರೆ ನಮಗೆ ಬಹಳ ಸಂತೋಷವಾದೀತು.

ರಂಗಭೂಮಿ

'ಇತ್ತೀಚಿಗೆ ತರುಣರ ಮನಸ್ಸು ನಾಟಕಗಳ ಕಡೆಗೂ, ರಂಗಭೂಮಿಯ ಕಡೆಗೂ ಎಳೆದಿದೆ' ಎಂಬುದು ತಿಳಿದಾಗಲ್ಲವಿದ್ದರೂ—ನನ್ನ ಗೆಳೆಯರಾದ ಶ್ರೀನಿವಾಸರಾಯರು (ಸಂ. ಕನ್ನಡಿಗ) ಉದ್ಯೋಗ ಕಾಣದೆ ತಿರುಗುತ್ತಲಿರುವ ನನ್ನ ತರುಣ ಮಿತ್ರರಿಗೆ ರಂಗಭೂಮಿಯನ್ನು ಆಶ್ರಯಿಸಿ ಹೊಟ್ಟೆಗೆ ಹಿಟ್ಟು ದೊರಕಿಸಿ ರಂಗಭೂಮಿಯ ಉದ್ಧಾರವನ್ನು ಮಾಡಿರೆಂದು ಬುದ್ಧಿವಾದ ಹೇಳಿದಾಗಲೇ ಈ ಲೇಖನವನ್ನು ಬರೆಯ ಬೇಕಿತ್ತು. ಅನಾನುಕೂಲಗಳಿಂದ ತಡವಾಗಿದೆ; ಅಷ್ಟರಲ್ಲೇ ಸಾಧ್ವಿಯಲ್ಲಿ ನಾಟಕದಿಂದ ಜನಗಳಿಗೆ ಸುಖವಿಲ್ಲ. ಬರೀ ನಷ್ಟವೇ ಆಗುತ್ತದೆ. ಆದ್ದರಿಂದ ನಾಟಕ ಆಡುವವರಿಗೆ ಲೈಸನ್ಸು ಕೊಡಬಾರದು. ಎಂತ ತಲೆಕೆರೆಯುವರೊಬ್ಬರು ಬರೆದದ್ದಕ್ಕೆ ಶ್ರೀ. ಗರೂಡ ಸದಾಶಿವರಾಯರು, ಇಂತಹ ಭಾವನೆಯು ಅಸೂಯಾಜನ್ಯವೆಂದು ಬರೆದದ್ದೂ, 'ವರಪುರವಾಸಿ'ಗಳು 'ಕನ್ನಡಿಗ'ನಲ್ಲಿ ಬರೆದದ್ದೂ ಓದಿದೆ. ಅಂತೇ ಈ ಲೇಖನ ಬರೆಯುವ ಅವಸರ.

ರಂಗಭೂಮಿಯು ಪಿಶಾಚಿಗಳ ತಾಂಡವಸ್ಥಳವಾಗಿದೆ; ಅದನ್ನು ಜ್ಞಾನಸತ್ರವನ್ನಾಗಿಸಬೇಕೆಂದು ಧಾರವಾಡ ಪ್ರಾಂತದ ತರುಣರಲ್ಲಿ ಈ ಚೀಟಿಗೆ ವಿಚಾರವೂಡಿದೆ. ಇದೇ ವಿಚಾರವನ್ನು ತಲೆಗೆ ಹತ್ತಿಸಿಕೊಂಡು, ತಿಕ್ಕಿ ತಿಕ್ಕಿ, ರಂಗಭೂಮಿಯನ್ನು ಸೇರಿ, ಕಲಾಸೇವೆಮಾಡಲು ಮೈಸೂರು ಬಳ್ಳಾರಿಗಳ ಕಡೆಯ ಸುಶಿಕ್ಷಿತರು ಮೊದಲುಮಾಡಿ ಸುಮಾರು ಇಪ್ಪತ್ತೈದು ವರುಷಗಳಾದವು ಆಗಿರಬೇಕು. ಅಂಥವರ ಅನುಭವದ ಎಳೆಗಳನ್ನು ಇತ್ತಲಿನವರು ತಿಳಿದರೆ ಅನುಕೂಲ.

ನಾನೂ ಇಂಥ ಸುಶಿಕ್ಷಿತ (!) ಅಮೇಚ್ಯೂರರಲ್ಲಿ ಒಂದಲ್ಲ ಅನೇಕ ಸಂಘಗಳಲ್ಲಿ ಸಭ್ಯನಾಗಿಯೂ 'ಅಸಭ್ಯ'ನಾಗಿಯೂ, ವಯಸು ಬಂದಮೇಲೆ ಆರುವರ್ಷ ಬಳಕೆ ಮಾಡಿರುವೆನು. ನಾಟಕಸಂಘದ ಎಲ್ಲಶಾಖೆಗಳಲ್ಲೂ ಕುರ್ಚಿ ಹೊರುವ ವ್ಯವಸ್ಥಾ ಶಾಖೆಗಳಿಂದ ಕಮ್ಮಿಟಿಮೆಂಬರನ ಆಡಳಿತದ ಶಾಖೆಯವರೆಗೂ ಕೆಲಸ ಮಾಡಿದ್ದೇನೆ. ನಾಟ್ಯಕಲೆಯು ಕೆಟ್ಟಿದೆಯೆಂದೂ, ಸುಶಿಕ್ಷಿತರು ಉದ್ಧಾರಮಾಡಬೇಕೆಂದೂ (ಹೆಮ್ಮೆಯಿಂದ ನಮ್ಮಂತಹ ಸುಶಿಕ್ಷಿತರೆಂದು ಬೆರೆತವ್ರು ಎಂಬಕತೆಯಲ್ಲಿ ಜಯಕರ್ನಾಟಕದಲ್ಲಿ ಬರದಿದ್ದೆ) ವಿಚಾರ ಮಾಡಿಯೇ ನನ್ನ ಗೆಳೆಯರೊಡನೆ ನಾನು ರಂಗಭೂಮಿಯನ್ನು ಸೇರಿದುದು. ನನಗೆ ಶ್ರೀನಿವಾಸರಾಯರು ತಮ್ಮ ಬಿಡಿನುಡಿಯಲ್ಲಿ ಆಶ್ಚರ್ಯ ಪುಂಡ್ರಗಳನ್ನು ಜೋಡಿಜೋಡಿಯಲ್ಲಿಹಾಕಿದ್ದರೂ ಹುಟ್ಟಲಾರದ ರಸೋದ್ರೇಕವನ್ನು, ನನ್ನ ಉತ್ಸಾಹದ ಎಂಟೇಟು ಆಶ್ಚರ್ಯ ಪುಂಡ್ರಗಳಿಂದ ನನ್ನ ಗೆಳೆಯರಲ್ಲೂ, ಹಿರಿಯರಲ್ಲೂ ಉಂಟುಮಾಡಿದುದು ನನಗೆ ನೆನಪಿದೆ. ನಾಟ್ಯಕಲೆಗಾಗಿ-ಯಲ್ಲದಿದ್ದರೂ ನಾಟಕಸಂಘಕ್ಕಾಗಿ ನನ್ನ ತನುಮನಗಳನ್ನು ಒಂದೆರಡುವರ್ಷ ಸಂಪೂರ್ಣವಾಗಿ ಒಪ್ಪಿಸಿದ್ದೆನೆಂದರೂ ಆಶ್ಚರ್ಯವಿರಲಾರದು. ಅಂತಹ ಉತ್ಸಾಹೀತರುಣನ ಅನುಭವವನ್ನು ಇಲ್ಲಿ ಹೇಳುವುದು ಅಯೋಗ್ಯವಾಗಲಿಕ್ಕಿಲ್ಲ.

ಮೊದಮೊದಲು ಎಲ್ಲಾ ರಸಮಯವಾಗಿತ್ತು. ಬರಬರುತ್ತ ಆಭಾಸವು ಅಂಕುರಿಸಿತು. 'ಸುಶೀಲ'ರೆಂದೇ 'ಸಾಧು'ಗಳೆಂದೇ ನಾವು ರಂಗಭೂಮಿಯನ್ನು ಹತ್ತಿದೆವು. ಬರಬರುತ್ತ ನಮ್ಮ ನಡವಳಿಯು ಹೇಯವಾಗ ತೊಡಗಿತು. ರೂಪತೃಷ್ಣೆಯೂ, ಪ್ರಣಯಭ್ರಮೆಯೂ ನಮ್ಮಲ್ಲಿ ತಲೆ ಹಾಕಿದವು. ಅರ್ಥವಾಗದಂತಹ, ಅರ್ಥವಿಲ್ಲದಂತಹ ಅತಿಯಾದ ಗಾಢಸ್ನೇಹವೊಂದು ನಮ್ಮನಮ್ಮವರಲ್ಲೇ ಮೊದಲಾಯಿತು. ಸ್ನೇಹಕ್ಕಿಂತ ಅದರಲ್ಲಿ ಅರ್ಥವಿಲ್ಲದ 'ಕೃಷ್ಣಲೀಲೆ' (Sentimental nonsence)ಯೇ, ಬಹಳ. ನಮ್ಮಮನೆಯಲ್ಲಿ ನಮ್ಮಜನಗಳಿಗೆ ನಮ್ಮ ವರ್ತನೆಯು ಸಹಿಸದಾಯಿತು. ನಾವು ಸೀರೆಯುಟ್ಟು ತೆಗೆಸಿಕೊಂಡ ಫೋಟೋಗಳನ್ನು ನೋಡಿ ನಮ್ಮ ತಂಗಿಯರು ನಗಹತ್ತಿದರು. ತಂದೆತಾಯಿಗಳಿಗೆ ನಮ್ಮ ನೀತಿಯಬಗ್ಗೆ ಶಂಕೆಯುಂಟಾಯಿತು. ನನ್ನ ತಂಗಿಯ ಗಂಡನೊಮ್ಮೆ ನಾನು ನಾಟಕಸಂಘವನ್ನು ಬಿಡಬೇಕೆಂದು ನನಗೆಹೇಳಿ-ಬಿಡದಿರಲು ಉಪವಾಸಮಾಡಿ ನನ್ನ ಮನಸ್ಸು ತಿರುಗಿಸಲು ಯತ್ನಮಾಡಿದ. ಆದರೆ ನಾನೇನೋ ನಾಟ್ಯಕಲೆಯ'ಭಕ್ತ'ನಾಗಿಯೇ ಇದ್ದೆ, ಉತ್ಸಾಹವು ಕುಗ್ಗಲಿಲ್ಲ ಮನೆಯವರು ನಮ್ಮ ಆಸೆಗಳನ್ನೇಬಿಟ್ಟರು ಆದರೆ ಜನರಲ್ಲಿ ಮಾತ್ರ ನಮಗೆ ನಾಟ್ಯಕಲಾಭಕ್ತರೆಂಬ ಬಹಾದ್ದೂರ ಬಿಲ್ಲೆ! ಪತ್ರಿಗಳಲ್ಲಿ ನಮ್ಮ ಪ್ರಶಂಸೆ! ಸಭೆಗಳಲ್ಲಿ ನಮ್ಮ ಕೀರ್ತಿ! ನಾಟ್ಯದೇವಿಯ ಉಪಾಸಕರು ನಾವು.

ಅಲ್ಲಿಂದ ಮುಂದೆ ಕಥೆಹೇಳುವಷ್ಟು ಯೋಗ್ಯವಾದದ್ದಲ್ಲ. ಕ್ರಮಕ್ರಮವಾಗಿ ನೀತಿ ನಿಯಮಗಳಿಗೆ ಅಪಾಯತಟ್ಟ ಹತ್ತಿತೆಂಬುದನ್ನು ಮನಗಾಣಬೇಕಾಗಿಬಂತು. ದೆವ್ವದಂತೆ ಕಣ್ಣೆದುರಿಗೆನಿಂತಿದ್ದ ಆ ಪಾಪವನ್ನು ಉದಾಸೀನ ಮಾಡಲಿಕ್ಕೆ ಬರುವಂತಿರಲಿಲ್ಲ. ನಾನು ಆಗಾಗ ಮುಗ್ಗರಿಸುತ್ತಿದ್ದೆನಾಗಲಿ ಇನ್ನು ಮುಗ್ಗರಿಸಬಾರದೆಂದು ಸಂಕಲ್ಪಮಾಡಿ ನಾಟ್ಯ ರಂಗಕ್ಕೆ ಕೊನೆಯ ನಮಸ್ಕಾರ ಮಾಡಿದೆನು. ಆ ಶುಭದಿನವು ನನ್ನ ಜೀವಿತದಲ್ಲಿನ ಒಂದು ಮಹತ್ತಿನ ದಿನವೆನ್ನಬೇಕು. ರಂಗಭೂಮಿಯು ಪಾವಿತ್ರ್ಯಕ್ಕೆ ನಿಂತಂತೆ ನಾಟ್ಯದೇವತೆಯು ನನ್ನನ್ನು, ನನ್ನಂತೆ ತಿಳಿಯುವ ನನ್ನ ಗೆಳೆಯರನ್ನೂ ಆಶೀರ್ವದಿಸಲಿ!

ರಂಗಸ್ಥಲದಲ್ಲಿ ರಂಗುರಂಗಾಗಿ ಮೆರೆಯುವುದರಿಂದ ಜೀವಿತ ಬಗ್ಗೆ ದುಷ್ಟಗ್ರಹಿಕೆಯು ಆಗುತ್ತದೆ. ರಸಾಭಾಸಕ್ಕೆ ರಸವೆಂಬ ಹೆಸರನ್ನು ಇಟ್ಟು ಆಕಳ ಸುಖದ ಹುಲಿಗಳಾಗುತ್ತಾರೆ. ನಟರು ರಸವು ಅತಃಕರಣದ ಅಮೃತವೆಂಬುದನ್ನು ಮರೆಯುತ್ತಾರೆ. ಇಂದ್ರಿಯೇಚ್ಛೆಯ ವಿಕಾರವೇ ರಸವೆಂಬ ಭ್ರಾಂತಿಯು ನಾಟ್ಯರಂಗದಲ್ಲಿ ರಸಧರ್ಮಿಗೆ ಮೊದಲು ಹಿಡಿಯುತ್ತದೆ. ಆ ಮೇಲೆ ಅಸೂಯೆಯು ಅವಾಂತರ. ನಾಟ್ಯರಂಗದಲ್ಲಿ ಇಲ್ಲದ ಸಲ್ಲದ ಕಾಮಾದಿಗಳನ್ನು ಭಾವಿಸಿಯಾದರು ಅಭಿನಯಿಸುತ್ತ ಜೀವನರಂಗದಲ್ಲಿ ಜೀವರಾಜನು ತನ್ನ ನಿಜವಾದ 'ಯೋಗಕ್ಷೇಮ'ಚಿಂತನೆವನ್ನು ಮಾಡುವನೆಂದರೆ ನನ್ನ ಅನುಭವಕ್ಕೆ ವಿರುದ್ಧವಾದ ಮಾತು. ಒಮ್ಮೆ ನನ್ನ ಗೆಳೆಯರೊಬ್ಬರಿಗೆ ನಾಟಕದ ಕೊನೆಯಲ್ಲಿ ಪಟ್ಟಾಭಿಷಿಕ್ತನಾಗುವುದಷ್ಟೇ ಕೆಲಸವುಳ್ಳ ರಾಜಕುಮಾರನ ಪಾತ್ರ ಕೊಟ್ಟಿತ್ತು. ಅವರು ಹೀಗೆಹೇಳುತ್ತಿದ್ದರು:— 'ಎನ್ರೀ ಬರಿರಾಜ! ಒಂದು ರಾಣೀನಾದರೂ ಕೊಡಿರಪ್ಪಾ!' ನಮ್ಮ ಕಾಗದಪತ್ರಗಳಾದರೂ ನಾಚಿಕೆಗೇಡಿನಂಥವು ಅರ್ಥವಿಲ್ಲದೆ-'ಜೀವರಾಜ' 'ಜೀವದೇವಿ' ಎಂಬ ಸಂಬೋಧನೆಗಳನ್ನು ಉಪಯೋಗಿಸುತ್ತಿರಲಿಲ್ಲ! ಇದು ಹಿರಿಯರ ಹಣೆಬರೆಹವಷ್ಟೇ ಅಲ್ಲ; ಹಿರಿಯರದೂ ಹೊಟ್ಟೆ ಹೊರಕೊಳ್ಳುವ ಕಿರಿಯರ ಅನುಭವವಲ್ಲ; 'ಯೋಗ್ಯ ಯೋಗ್ಯ' ನಾಟಕಗಳನ್ನೇ ತೋರಿಸಿ' ರಂಗಭೂಮಿಯನ್ನು ಜರವಿದ್ಯಾಲಯ'ವನ್ನಾಗಿ ಮಾಡಬೇಕು ಎಂದು ಸಂಕಲ್ಪ ಮಾಡಿದ 'ಸುಶಿಕ್ಷಿತ ತರುಣ' ರೆನ್ನಿಸಿಕೊಂಡವರ ಹಣೆಬರಹವೂ ಹೀಗೆಯೇ.

ಕಲಾಕುಶಲನು ಆತ್ಮಸಾಕ್ಷಿ[illegible] ಮಾಡುವ ಪ್ರಯತ್ನವೇ ಕಲೆಯು. ತನ್ನ ಆತ್ಮವನ್ನರಿಯಬಹ ಕಲೆಯೇ ಅವನ ಸಾಧನ-ನಿರೋಧಿಸಿದ ಕಾಮೇಚ್ಛೆಯೇ ಬುದ್ಧಿಯು. ಬಾಗಲಿಂದ ರಸಭಾವನಾಗಿ ಹೊರಬೀಳುತ್ತದೆ; ಎಂದು ಹಿರಿಯರ ನುಡಿ. ಈ ಇಪ್ಪತ್ತೈದು ವರ್ಷಗಳಿಂದ ನಮ್ಮವರಲ್ಲಿ ಎಷ್ಟುನಿರೋಧ ಶಕ್ತಿಬಂದಿದೆಯೋ! ನಮ್ಮ ನಾಟ್ಯಕಲಾ ಪಟುಗಳಲ್ಲಿ ಎಷ್ಟು ಜನರಿಗೆ ನಾಟ್ಯದೇವಿ ಆತ್ಮಸಾಕ್ಷಾತ್ಕಾರ ಮಾಡಿ ಕೊಟ್ಟಿದ್ದಾಳೋ! ನಮ್ಮವರೆಲ್ಲರೂ ಬಾಯಿಬಿಡಬಾರದೆ?

ರಾಮರಾಜ್ಯಕ್ಕೂ ಕಾಮರಾಜ್ಯಕ್ಕೂ ನಡುವೆ ಇರುವ ಗೆರೆ ಬಹಳ ಸಣ್ಣದು- ಅದು ಕಾಣುವುದೇ ಇಲ್ಲ ಕಾಣುವವನಾತ್ಮಜ್ಞನೇ ಅಲ್ಲದೆ ವಲ್ಲ. ಸಂಗೀತದಲ್ಲಿ ಶ್ರುತಿಯಿದ್ದಂತೆ ಸ್ವಾಯತ್ತವಾದಗವಿ. ಅದನ್ನು ದಾಟಿ-ತಿಳಿದೋ ತಿಳಿಯದೆಯೋ- ಒಂದು ಹೆಜ್ಜೆ ಇಟ್ಟರೆ ಸಾಕು, ನಾವು ಖಂಡಿತ; ಕಾಮರಾಜ್ಯದ ಕಾಲ್ತೊಡಕುಗಳು ಅಷ್ಟು ಸೂಕ್ಷ್ಮ. ರಂಗಸ್ಥಲದಲ್ಲಿ ಉಂಟಾಗುವ ಅರ್ಥವಿಲ್ಲದ ಭ್ರಾಂತಿಯು ಕಾಮರಾಜ್ಯದಲ್ಲಿ ಇಟ್ಟ ಮೊದಲನೆ ಹೆಜ್ಜೆ.

ನನ್ನ ಹಿರಿಯರಲ್ಲಕೆಲವರು ನನ್ನ ಅನುಭವಕ್ಕೆ ತಮ್ಮ ಅನುಕೂಲ ಮತವನ್ನು ಕೊಟ್ಟಿದ್ದಾರೆ. ಮೈಸೂರಿನಲ್ಲಿ ಏಳೆಂಟು ವರ್ಷಗಳಿಂದ ನಾಟಕ ಸಂಘವೊಂದರ ಕಾರ್ಯದರ್ಶಿಗಳಾಗಿ, ಸಭ್ಯರಾಗಿ ಕೆಲಸಮಾಡುತ್ತಿರುವ ನನ್ನ ಹಿರಿಯರೊಬ್ಬರು ಹೀಗೆ ನನಗೆ ಪತ್ರಬರೆದಿದ್ದರು. 'I fully appreciate your views on the stage. Mr.......... and I had aften discussed the question and come to the same conclusion Gorry to tell you that my weakness in that direction has not been over come yet. you have to excuse me for it. ಅವರ ಅಭಿಪ್ರಾಯದಲ್ಲೂ ರಂಗಸ್ಥಲದ ಮೋಹವು ಒಂದು ದೌರ್ಬಲ್ಯ! ಇನ್ನು ಕೆಲವರು 'ನಾವೆ ಹೋ ಬಿಟ್ಟಿದ್ದೇವೆ; ಅದರ ಕಲೆಯದೇನು ತಪ್ಪು; ಅದು ದೊಡ್ಡದು' ಎಂದರು. ಕಲೆಯ ತಪ್ಪೇನೂ ಇಲ್ಲ; ಕಲೆಯು ಕೈಗೆ ನಮ್ಮ ಮನಸ್ಸನ್ನು ಒಪ್ಪಿಸಿದ್ದು ತಪ್ಪಿರಬಹುದೇನೋ! ಇನ್ನೂ ಕೆಲವರು ನಾನು ಮೊದಲಿದ್ದಂತಹ ಗಡಿಬಿಡಿಯಲ್ಲಿ ಜೀವಹಿಂಡುತ್ತಿದ್ದಾರೆ.

ಅಂದರೆ, ನಾಟ್ಯರಂಗವನ್ನು ಬಹಿಷ್ಕರಿಸಬೇಕೆಂದು ಎಲ್ಲರಿಗೂ ನಾನು ಹೇಳುವುದಿಲ್ಲ. ಆದರೆ, ಸತ್ಯವನ್ನು ಸ್ವೀಕರಿಸುವಾಗ ಅದರ ಜೊತೆಯಲ್ಲಿ ಅಸತ್ಯವನ್ನು ಬೆರೆಸಿಕೊಂಡು ಸ್ವೀಕರಿಸುವುದೂ, ಅಸತ್ಯವನ್ನು ಖಂಡಿಸುವಾಗ ಅದರ ಜೊತೆಯಲ್ಲಿ ಸತ್ಯವನ್ನು ಬೆರೆಸಿ ಕೊಂಡು ಖಂಡಿಸುವುದೂ ನಮ್ಮ ಸ್ವಭಾವ. ಅಂತೇ ಸತ್ಯಾನ್ವೇಷಣೆಯಲ್ಲಿ ಪರಸ್ಪರ ವಿರುದ್ಧಾಭಿಪ್ರಾಯಗಳು ಹಿಂದಿನಿಂದಲೂ ಇವೆ; ಮುಂದೂ ಇರುತ್ತವೆ.-ಎಂಬುದನ್ನು ಗಮನಿಸಿ ಸದಾಶಿವರಾಯರಂತಹ ಸಾಧುಗಳು 'ಅಸೂಯೆ' ಮುಂತಾದ ಅಭಿಪ್ರಾಯಗಳನ್ನು ಹೊರಡಿಸಬಾರದೆಂದು ನನ್ನ ವಿನಂತಿ.

ನಾಟಕ ಸಂಘವೊಂದನ್ನು ಸ್ಥಾಪಿಸಿ ಕಿರಿಯರನ್ನೂ ಹಿರಿಯರನ್ನೂ ತಂದು ನಾಟಕ ಸಂಘಕ್ಕೆ ಸೇರಿಸಿ, ಅವರ ಅವನತಿಯಲ್ಲಿ ಪಾಲುಗಾರನಾಗಿ ಆ ಅಪರಾಧವನ್ನು ಕಳೆದುಕೊಳ್ಳಲು ಹೆಣಗುತ್ತಿರುವ ನನ್ನಂತಹ, ಮತ್ತು ನನ್ನ ಗೆಳೆಯರಂತಹ ಪತಿತರ ಅನುಭವವೂ ಜನರಿಗೆ ನಿವೇದಿತವಾಗಲೆಂದೇ ಇಷ್ಟು ಬರೆಯಬೇಕಾಯಿತು. ನಾಟ್ಯದೇವಿಯು ನಮ್ಮ ಅಪರಾಧವನ್ನು ಕ್ಷಮಿಸಲೆಂದು ಬೇಡುವಾಗಲೇ- ನನ್ನ ಪೂ| ಶ್ರೀನಿವಾಸರಾಯರಲ್ಲೂ ಮತ್ತು ಎಲ್ಲ ಪತ್ರಿಕಾ ಕರ್ತರಲ್ಲೂ ನನ್ನದೊಂದು ಬಿನ್ನಹವಿದೆ ಸುಮ್ಮನೆ ಆಶ್ಚರ್ಯ ಪುಂಜಗಳನ್ನು ಹಾಕಿ, ವೀರವಾಣಿಯಿಂದ ರಂಗಭೂಮಿಯ ಮಹತ್ವವನ್ನು ಹೊಗಳುವುದಕ್ಕಿಂತ ರಂಗಭೂಮಿಯೇ ಜನಗಳಲ್ಲಿ ಅದರ ಮಹತ್ವವನ್ನು ತೋರಿಸಲೆಂದು ಹಾಸ್ಯೋಭಾವವನ್ನು ವಹಿಸಬೇಕೆಂದು, ಅಂಥಾದ್ದರಲ್ಲಿ ನಾಟಕದಿಂದ ಹೊಟ್ಟೆ ಹೊರಕೊಳ್ಳಬೇಕೆಂದು ತರುಣರಿಗೆ ಹೇಳುವುದು ಅತಿ ಸಾಹಸವಮಾತೇ! ಹಾಗೆಯೇ 'ಧರ್ಮ, ಭಕ್ತಿ, ಜ್ಞಾನ ವೈರಾಗ್ಯಗಳ ನಾಟಕಗಳನ್ನಾಡುದುದರಿಂದ'-ಜನಗಳ ಮಾತುಹೇಡ- ರಂಗ ಎಷ್ಟು 'ಪ್ರಯೋಜನ'ವಾಯಿತೆಂಬುದನ್ನು ಅಂತರಾತ್ಮ ಸಾಕ್ಷಿಯಾಗಿ 'ತಿಪಟೂರಿನ' ಒತ್ತೀದಾರರೂ ಬರೆದರೆ ರಂಗಭೂಮಿಯ ಪ್ರಶ್ನೆಗೆ ಅನುಕೂಲವೇ ಆದೀತು. ರಂಗಸ್ಥಲದಿಂದ 'ಧರ್ಮ, ಭಕ್ತಿ, ಜ್ಞಾನ, ವೈರಾಗ್ಯ'ಭಾವಗಳು ಬೇಗ ಅಂಕುರಿಸುವುದನ್ನು ತಿಳಿಸಬಾರದೇಕೆ? ಒಣಿಯ ಸಂಘದ ಹೊಗಳಿಕೆಯು ಲೌಕಿಕ ವಾಯುವೆಂಬುದನ್ನು ಎಲ್ಲರೂ ಬಲ್ಲರು.

ಹರಿ ಕೆರೆ ಜಾತ್ರೆ ದಾಸರೂ, ನಾನೂ, ನನ್ನ ಗೆಳೆಯರೂ ಹಗ್ಗವಷ್ಟೇ ಹಾವೆಂದು ನಂಬಿರುವೆವು; ಸದಾಶಿವರಾಯರೂ, ಶ್ರೀನಿವಾಸರಾಯರೂ ರಂಗಭೂಮಿಯ ಭಕ್ತರು. ಹಾವಷ್ಟೇ ಹಗ್ಗವೆಂದು ಅವನ್ನು ಪಾಡಿ[illegible] ನಂಬುವುದಾದರೂ ಹೇಗೆ?

ಯಾವುದನ್ನೇ ನಂಬಿದರೂ-ನನ್ನ ಜೆ —, — ತೀ —, — ಗಳ ಉಳಿದ ಗೆಳೆಯರ ಜೀವರಾಜನು ರಂಗ ಸಂಸ್ಕಾರದಿಂದ ಹಾಗೆ ತೊಡಗಿದ ಅಪಸ್ಮೃತಿಯು ಕಡೆಗಾಣವುದು ಯಾವಾಗ? ಯಾರಾದರೂ ಅಭಯ ಕೊಡಬಲ್ಲರೇ?

(ಕೊಡಬಲ್ಲರು ಕೊಂಚ ತಡೆಯಿರಿ.) — ಸಂ. ಕ.

Fancy thrust into the Realm of fact you but pay its own forfeit' } ಕನ್ನಡಿಗರಡಿ ಯಾಳು ಕೃಷ್ಣರಮಾಣ

ಸಾಭಾರ ಸ್ವೀಕಾರ.

ಪ್ರಸ್ವಕ್ಕೆ ಧರ ಚೋತಿಸ್ವ ಗ್ರಂಥಕರ್ತ:— ಶ್ರೀನಿವಾಸ ಚಿಕ್ಕೋ ಕ ಕಳ. ಜೆ— ಬೆ— ಯಥಾವಕಾಶಾಗಿ ವಿಮರ್ಶೆ ಮಾಗುವದು.

— ಸಂ ಕ

ವರ್ತಮಾನಸಾರ

ಇಹವೃತ್ತ

ಶ್ರೀ ನಾಯಕರವರಿಗೆ ರತ್ನಾಗಿರಿಯ ಕಲೆಕ್ಟರ ಸ್ಥಾನಕ್ಕೆ ವರ್ಗಾಗಿದ್ದನ್ನು ರದ್ದು ಪಡಿಸಿ, ವಿಜಾಪೂರ ಜಿಲ್ಲೆಯ ಕಲೆಕ್ಟರರನ್ನಾಗಿ ನೇಮಿಸಿದ್ದಾರೆ

ದಕ್ಷಿಣಭಾಗದ ಕಮೀಶನರರು ಇಲ್ಲಿಗೆ ಬಂದಿದ್ದಾರೆ

ಸುಪ್ರಸಿದ್ಧ ಗಾಯಕಿಯಾದ ಗವ್ಹರಜಾನಳು ಇಲ್ಲಿ ನಿನ್ನೆ ಜಲಸಾ ಮಾಡಿದಳು

ವೆಂಕಟಪೇಟೆಯ ಜೋರಾಪೂರದವರ ಗಿರಣಿಯಲ್ಲಿಯ ಬಣವೆಗಳ ಗುಂಪುಗಳಲ್ಲಿ ನಿನ್ನಿನ ದಿನ ಅಗ್ನಿ ಪ್ರವೇಶವಾಗಿ ೫ ಬಣವೆಗಳು ಸಂಪೂರ್ಣವಾಗಿ ಸುಟ್ಟವು ೩ ಅರ್ಧ ಸುಟ್ಟವು. ಇವುಗಳ ಹತ್ತಿರವಿದ್ದ ಕೆಲವು ಬಣವೆಗಳನ್ನು ಕಿತ್ತು ಬೇರೆ ಕಡೆಗೆ ಒಯ್ದುದ್ದರಿಂದ ಗುಂಪುಗಳಿಗೆಲ್ಲ ಬೆಂಕಿಯು ತಗಲಲಿಲ್ಲ. ಬೆಂಕಿ ಹತ್ತಿದ ಕಾರಣ ಗೊತ್ತಾಗಿಲ್ಲ. ಡಾ. ಮುತಾಲಿಕರೂ, ನರಗುಂದ ಜಯರಾಯರೂ, ನಾರೀ ಕಾಕಾ ಇವರು ವಿದ್ಯಾರ್ಥಿಗಳೊಂದಿಗೆಯೂ, ಪುರ ಜನರೂ, ಪೋಲೀಸರೂ, ದಕ್ಷತೆಯಿಂದ ಕೆಲಸಮಾಡಿದರು.

ಮುಂಬೈ ಕರ್ನಾಟಕ

ಚಿಂಚಲಿಯಿಂದ ಬಾಗಲಕೋಟೆಗೆ ರೇಲವೇ ಪ್ರಾರಂಭವಾಗುವದೆಂಬ ಸುದ್ದಿಯು ಅಲ್ಲಲ್ಲಿ ಪ್ರಸಿದ್ಧವಾದೊಡನೆ ನಾವು ಮದ್ರಾಸದ ರೇಲವೇಯವರಿಗೆ ಪತ್ರ ಬರೆದಿದ್ದೆವು. ಈಗ್ಗೆ ಅವರ ಉತ್ತರವು ಬಂದಿದ್ದು ಈ ಸುದ್ದಿಯು ತಮಗೆ ಗೊತ್ತಿಲ್ಲವೆಂದು ತಿಳಿಸಿದ್ದಾರೆ.

ಸದರ್ನ ಮರಾಠಾ ರೇಲವೇಯವರು ನಾತಾಳ ಸೂಟಿಯಲ್ಲಿ ೩ ನೇ ವರ್ಗದ ಪ್ರವಾಸಿಕರಿಗೆ ಸವಲತ್ತಿನ ದರಗಳನ್ನು ಕೊಡುವದಾಗಿ ಪ್ರಸಿದ್ಧ ಮಾಡಿದ್ದಾರೆ

ಹುಬ್ಬಳ್ಳಿಯ ಶ್ರೀಮೂರುಸಾವಿರ ಮಠದ ಶ್ರೀ ಶೂನ್ಯ ಸಿಂಹಾಸನಕ್ಕೆ ಬೆಳಗಾವ ಜಿಲ್ಲಾ ಕೊಣ್ಣೂರ ಮರದೀ ಮಠದ ಪಟ್ಟಾಧ್ಯಕ್ಷರಾದ ಶ್ರೀ ಮನ್ ಘನಲಿಂಗ ಚಕ್ರವರ್ತಿ ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳ ಚರ ಪಟ್ಟಾಭಿಷೇಕ ಮತ್ತು ಶೂನ್ಯಸಿಂಹಾಸನಾರೋಹಣ ಮಹೋತ್ಸವವು ೨೫ ನೇ ಬುಧವಾರ ದಿನ ಬಹು ವಿಜೃಂಭಣೆಯಿಂದ ನೆರವೇರಿತು

ಮದ್ರಾಸ ಕರ್ನಾಟಕ

೨೯ ನೇ ತಾರೀಖಿನ ಹೊಸಪೇಟೆಯ 'ಕ್ಲಬ್ಬಿ' ನಲ್ಲಿ ತಂಜಾವರದ ಗಂಡೇಶರು ತಮ್ಮ ಅಮೇರಿಕಾ ಮತ್ತು ಜರ್ಮನಿಯ ಅನುಭವವನ್ನು ಕುರಿತು ವ್ಯಾಖ್ಯಾನ ಕೊಟ್ಟರು.

ಡಾ. ಯು. ರಾಮರಾಯರು "ಕೌನ್ಸಿಲ್ ಅಫ್ ಸ್ಟೇಟಿಗೆ" ಆರಿಸಲ್ಪಟ್ಟರೆಂಬದಾಗಿ ತಿಳಿಸಲು ಸಂತೋಷ ಬಡುತ್ತೇವೆ.

ಮಲಬಾರಜಿಲ್ಲೆಯಲ್ಲಿ ಉಂಟಾದ ಮಳೆಗಾಳಿಯ ಹೊಡತಕ್ಕೆ ಸಿಕ್ಕು ಸಮುದ್ರದಲ್ಲಿ ತೇಲುತ್ತಿದ್ದ ೫ ಜನರನ್ನು ಕೆಲವು ದಿನಗಳ ಹಿಂದೆ ಕುಂಬಳೆಯ (ಮಂಗಳೂರ ಜಿಲ್ಲೆ) ಮೀನಗಾರರು ತಮ್ಮ ದೋಣಿಯಲ್ಲಿ ಎತ್ತಿ ಹಾಕಿ ದಂಡೆಗೆ ಬಿಟ್ಟರು. ಅವರೆಲ್ಲ ಆನಂದದಿಂದ ಅಂದಿನ ದಿನವೇ ಗಾಡಿಯಲ್ಲಿ ಕುಳಿತು ತಮ್ಮೂರಿಗೆ ಹೊರಟರು.

ಮೈಸೂರಿನ ಪತ್ರ

ಚಿತ್ತರಂಜನ ದಾಸರವರ ಜ್ಞಾಪಕಾರ್ಥವಾಗಿ ಮೈಸೂರಿನಲ್ಲಿ ಒಂದು ಚಂಡಾಟದ ಪಂದ್ಯವನ್ನು ಏರ್ಪಡಿಸಿದ್ದರು. ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿರುವ ಮುಸಲ್ಮಾನ್ ಬಾಂಧವರುಗಳು, ಸೇರಿ ಮಾಡಿಕೊಂಡಿರುವ "ಮಸ್ಲಿಮ್" ಸಂಗಡದವರಿಗೂ, ಹಿಂದೂಗಳಾದ "ಛಾಲೆಂಜ ಯೂನಿಯನ್" ಎಂಬ ಸಂಗಡದವರಿಗೂ, ನಾಲ್ಕೈದು ಬಾರಿ ಆಟವು ನಡೆದು ಇಬ್ಬರೂ ಸರಿಸಮಾನರಾಗಿದ್ದರು. ೬ ನೇಯ ತಾರೀಖು ಶುಕ್ರವಾರದ ದಿವಸ ಪುನಃ ಅವರಿಬ್ಬರ ಆಟವು ಪ್ರಾರಂಭವಾಯಿತು ಸಹಸ್ರಾರು ಜನಗಳು ಎರಡು ಕಡೆಯ ಪರಿಂದಲೂ ನೆರೆದಿದ್ದರು. ೪॥ ಘಂಟೆಯವರೆಗೂ, ಆಟವು ಸುಲಲಿತವಾಗಿ ನಡೆಯಿತು. ಮುಸಲ್ಮಾನ ಬಾಂಧವರು ಸೋಲುವ ವೇಳೆಯು ಬಂದಿತು. ತಕ್ಷಣವೇ ಜಗಳಕ್ಕೆ ಪ್ರಾರಂಭವಾಯಿತು. ಹಿಂದೂಗಳ ಪೈಕಿ ಕೆಲವು ಆಟದವರಿಗೆ ಹೊಡೆತಗಳು ಬಿದ್ದವು. ಪ್ರೇಕ್ಷಕರೂ ಸಹಾ ಫಲವನ್ನು ಹೊಂದಬೇಕಾಯಿತು.

ಶೀಘ್ರದಲ್ಲಿಯೇ ಪೋಲೀಸಿನವರು ಬಂದರು. ಹೆಚ್ಚು ಗಲಭೆಗೆ ಅವಕಾಶ ಕೊಡಲಿಲ್ಲ ಅಂತೂ ಇಂತೂ, ಕೆಲವರಿಗೆ ವಿಶೇಷ ಘಾಯವಾಗಿ ಅವರು ಆಸ್ಪತ್ರೆಗೆ ಒಯ್ಯಲ್ಪಟ್ಟಿದ್ದಾರೆ ಸತ್ತು ಸ್ವರ್ಗದಲ್ಲಿರುವ ದೇಶಬಂಧು ದಾಸರ ಹೆಸರು ಹೇಳಿ ಇಂಥಾ ಹೀನ ಕೃತ್ಯಗಳನ್ನು ನಡೆಸಿರುವದು ಬಹಳ ನಿಂದಾಸ್ಪದವಾದುದು. ಮೈಸೂರ ಸಂಸ್ಥಾನದ ಚಂಡಾಟದ ಸಂಘದವರು ಒಂದು ಸಭೆಯನ್ನು ಸೇರಿಸಿ "ಮುಸ್ಲಿಮ್ ಸಂಗಡದ ೧೨ ಜನ ಆಟಗಾರರು ಇನ್ನು ೫ ವರ್ಷಗಳವರೆಗೆ ಆಡಕೂಡ" ದೆಂದು ತೀರ್ಮಾನಿಸಿರುವರು. ಅಲ್ಲದೆ ಮೊನ್ನೆ ಆದಿದ ಮುಸಲ್ಮಾನ ಬಾಂಧವರ ಮೇಲೆ ಪೋಲೀಸಿನವರು ಕಟ್ಲೆಯನ್ನು ನಡಿಸಲಿಕ್ಕಿರುವರು.

ಶ್ರೀ ರಾಮಕೃಷ್ಣಪರಮ ಹಂಸರ ಶಿಷ್ಯರಾದ ಕೆಲವರು ಮೈಸೂರಿನಲ್ಲಿ ಒಂದು ಆಶ್ರಮವನ್ನು ತೆಗೆದಿರುವರು. ಅಲ್ಲಿನ ಮುಖ್ಯವಾದ ಧರ್ಮ ಪ್ರಕಾಶ ಬಸಮಯ್ಯ ಮೊದಲಾದವರು ಆಶ್ರಮಕ್ಕೆ ವಿಶೇಷ ಸಹಾಯಮಾಡುತ್ತಿರುವರು. ಆಶ್ರಮದಲ್ಲಿ ವೇದಾಭ್ಯಾಸವೂ, ಬಡ ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳೂ ಉಚಿತವಾಗಿ ನಡೆಯುತ್ತಿರುವುವು. ಮೈಸೂರು ವಿಶ್ವವಿದ್ಯಾಲಯದ ವೈಸ್ ಚ್ಯಾನಸಲರಾದ ಡಾ॥ ಬಜೇಂದ್ರನಾಥ ಸೀಲರವರು ಕೆಲವು ದಿವಸಗಳ ಕೆಳಗೆ ತಮ್ಮ ಭೆಟ್ಟಿಯನ್ನು ಆಶ್ರಮಕ್ಕೆ ಕೊಟ್ಟು ಅಲ್ಲಿನ ವಿದ್ಯಮಾನಗಳನ್ನೂ ಪರಿಸ್ಥಿತಿಯನ್ನೂ ನೋಡಿ ಸಂತೋಷ ಪಟ್ಟರು.

ಬೆಂಗಳೂರಿನಲ್ಲಿದ್ದಂತೆ, ಮೈಸೂರಿನಲ್ಲಿಯೂ ಒಕ್ಕಲಿಗರ ಸಂಘವೊಂದುಂಟು. ಅದರ ಮೊದಲನೇಯ ವಾರ್ಷಿಕೋತ್ಸವವು, ಹೋದ ವಾರ, ಮಹಾರಾಜಾ ಕಾಲೇಜಿನ ಮುಖ್ಯೋಪಾಧ್ಯಾಯರಾದ ಶ್ರೀ ಎಸ್. ಎಸ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಆಯಿತು ಸಂಘದ ವಿದ್ಯಾರ್ಥಿಗಳು "ಕಂಠೀರವ ವಿಜಯ" ವೆಂಬ ಒಂದು ನಾಟಕವನ್ನು ಅಭಿನಯಿಸಿದರು. ಸಂಘದ ವರದಿಯನ್ನು ಓದಿದ ತರುವಾಯ ಮೈಸೂರು ಸಂಸ್ಥಾನದ ಪರಸ್ಪರ ಸಹಾಯ ಸಂಘದ ಮೊತ್ತೇಸರರಾದ ಶ್ರೀ ಕೆ. ಎಚ್. ರಾಮಯ್ಯನವರು, ಕನ್ನಡದಲ್ಲಿ, ವಿದ್ಯಾರ್ಥಿಗಳ ಸಲುವಾಗಿ ಬಹಳ ಸ್ವಾರಸ್ಯ ಪೂರ್ವಕವಾದ ಭಾಷಣವನ್ನು ಮಾಡಿದರು.

ಕಲಕಾಡಿನಲ್ಲಿ ಸೇರಲಿಕ್ಕಿರುವ ಜಾತ್ರೆಯ ವೇಳೆಯಲ್ಲಿ, ಜನಗಳ ಸೇವೆಯನ್ನು ಮಾಡಬೇಕೆಂದು, ಯೋಚಿಸಿ, ಹಿಂದುಸ್ಥಾನೀ ಸೇವಾದಳದ ಸ್ವಯಂ ಸೇವಕರು ಹೋಗಬೇಕೆಂದು ಇರುವಷ್ಟರಲ್ಲಿಯೇ, ಕಲಕಾಡಿನಲ್ಲಿ ಪ್ಲೇಗು ಮತ್ತು ಕಾಲರಾ ಉಪದ್ರವ ಹೆಚ್ಚಾಗಿರುವುದೆಂಬ ಸಂಗತಿಯನ್ನು ತಿಳಿದು, ತಮ್ಮ ಯೋಚನೆಯನ್ನು ಕೈಬಿಟ್ಟಿರುತ್ತಾರೆ.

ಪರದೇಶ

ಸಾರ್ವಭೌಮ ಪಂಚಮ ಜಾರ್ಜರವರ ಮಾತೋಶ್ರೀಯವರು ಕಳೆದವಾರದಲ್ಲಿ ಕ್ರಿಸ್ತಾಧೀನರಾದರು. ಪರಮಾತ್ಮನು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ.

ನೋಟೀಸು

ಕೋ ಆಪರೇಟಿವ್ ಅರ್ಬನ್ ಮತ್ತು ಡೇರಿ ಸೋಸಾಯಿಟಿಯ ಯಾವತ್ತು ಮೆಂಬರ ಜನರಿಗೆ ಈ ನೋಟೀಸಿನಿಂದ ತಿಳಿಸುವದೇನಂದರೆ ತಾ॥ ೨೦-೧೨-೧೯೨೫ ಸಾಯಂಕಾಲಕ್ಕೆ ೫॥ ಘಂಟೆಕ್ಕೆ ಆ ಆ ಸಂಘಗಳ ಆಫೀಸಗಳಲ್ಲಿ ವಾರ್ಷಿಕ ಜನರಲ್ ಮಿಟಿಂಗ ಕೂಡುವದು ಗೊತ್ತಾಗಿರುತ್ತದೆ. ಆದ್ದರಿಂದ ಸದರಿ ಸೊಸಾಯಿಟಿಗಳ ಮೆಂಬರರು ತಪ್ಪದೆ ಮೀಟಿಂಗಕ್ಕೆ ಸರಿಯಾದ ವೇಳ್ಯಕ್ಕೆ ಹಾಜರಾಗಬೇಕಾಗಿ ವಿನಂತಿ ಆದೆ.

ಬಾಗಲಕೋಟ } ಶಂಕರರಾವ ಜಠಾರ.
ತಾ. ೨೮-೧೧-೨೫ } ಚೇರಮನ್

ಪ್ರಕಟನೆ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೫ ನೇ ಇಸ್ವಿಯ ಜುಲೈ ೩೧ ನೇ ತಾ|| ದಿನ ಸಾಯಂಕಾಲದ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟೀ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ. ಬಸವಾರಾಧ್ಯ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ೧೦೦೦ ರೂ. ಸಾಲವು ದೊರೆಯ ಬೇಕೆಂದು ನಿರ್ಣಯವಾಯಿತು—

(೧) ಬಾಂಡ ನಂ. ೧೧೭೦೨ ಶ್ರೀ. ಆರ್. ಜಿ. ಹುಕ್ಕೇರಿ. ಬುಕ್ಕ ಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೫೪೫ ಶ್ರೀ. ನೀರಜರಾಮ ನಾರಭಿರಾಮ ದಾಯಿಕ ಕಂಪಾವುಂಡರ, ಖಲವಾಡ ದವಾಖಾನೆ ವಾಯು, ಸಯಾನ. ಬಿಬಿ. ಸಿ, ಆಯ ರೇಲ್ವೇ ಸುರತ (ಬಡೋದಾ ಏಜನ್ಸಿ)

(೩) ಬಾಂಡ ನಂ. ೧೧೬೭೭ ಶ್ರೀ. ಶ್ರೀರಾಮಮೂರ್ತಿ ಆರಾಧ್ಯಲು ರಾಮಚಂದ್ರರಾವ ಗುರು ಪೀಠ ಪುರು ಗೋದಾವರಿ ಜಿಲ್ಹಾ.

(೪) ಬಾಂಡ ನಂ. ೧೭೭ ಶ್ರೀ. ನಂದಗಿರಿ ವೆಂಕಟರಾಮ ದಾಸ ಪ್ರೊಪ್ರಾಯಿಟರ ಮುಕುಂದ ಪ್ರೆ. ಕಾಕಿನಾಡ

(೫) ಬಾಂಡ ನಂ. ೪೩೮ ಶ್ರೀ. ಆರ್. ವೆಂಕಟಯ್ಯಾ ಗುರು ಇನಾಮದಾರ ಭೀಮಯ್ಯಾ ಅಗ್ರಹಾರ ಅಮಳ ಪುರಮ್.

೧-೮-೨೫	ಬಿ. ಎಸ್. ಆರಾಧ್ಯ ಚೀಫ ಏಜಂಟ ಹುಬ್ಬಳ್ಳಿ

"ಲೋಕರಹಸ್ಯ

ಕೃಷಿಯ ಅತ್ಯುತ್ತಮ ರೀತಿಗಳು, ವ್ಯಾಪಾರದ ವಿಷಯಗಳು ಹೂಲಿಗೆ, ಮಕ್ಕಳನ್ನು ಸಾಕುವ ವಿಷಯಗಳನ್ನು ಬಡವರಿಗೆ ಬೇಕಾದ ಧನಸಂಪಾದನೆಯ ವಿಷಯಗಳು, ರಸಿಕರಿಗೆ ವಿನೋದ ವಿಚಾರ, ರಾಜಕೀಯ ವಿಷಯಗಳು, ಆಯುರ್ವೇದ ಯುನಾನಿ ವೈದ್ಯ ಸಂಗ್ರಹ. ಪ್ರತಿಯೊಬ್ಬನೂ ತಿಳಿಯಬೇಕಾದ ಲಾ ವಿಚಾರ, ವಿದ್ಯಾ ವಿಷಯ, ವೇದಾಂತ ವಿಚಾರಗಳಿಂದಲೂ ತುಂಬಿ ತುಳುಕುತ್ತಿರುವ ಈ ಮಾಸ ಪತ್ರಿಕೆಗೆ ವಾರ್ಷಿಕ ಚಂದಾ ರೂ. ೩ ೮ ೦ ಮಾದರಿ ಸಂಚಿಕೆಗೆ ೦-೫-೦.

ಪ್ರತಿ ತಿಂಗಳಲ್ಲೂ ೬೦ ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ.

"ಲೋಕರಹಸ್ಯ" ಆಫೀಸು,
ವೀರರಾಜೇಂದ್ರ ಪೇಟೆ (ಕೊಡಗು)

ಪುನರ್ವಿವಾಹ ಆಗ ತಕ್ಕದ್ದದೆ.

ಬ್ರಾಹ್ಮಣ ವರನು. ೩೦ ವರ್ಷ. ಕುಲೀನ ಸ್ಥಿತಿಗತಿಯುಳ್ಳವನು. ಕುಲೀನ ವಿಧವೆಯರು ಮಾತ್ರ ಪತ್ರವ್ಯವಹಾರ ಮಾಡಬೇಕು.

ಕಮಲಾಕಾಂತ
C/O ಕನ್ನಡಿಗ ಬಾಗಲಕೋಟೆ

ಧಾರವಾಡದ ಕರ್ನಾಟಕ ಮಹಾ ವಿದ್ಯಾಲಯದಿಂದ ಹೊರಡುವ ತಿಳಿಗನ್ನಡದ

ಸ್ವಧರ್ಮ ಮಾಸಪತ್ರಿಕೆ.

ಸಂಪಾದಕ— ಸುರೇಂದ್ರ ಶಿವರಾವ ದೇಸಾಯಿ ಎಮ್ ಎ.

ಪ್ರಾಪಂಚಿಕ ಸಂಪತ್ತೂ, ಪಾರಮಾರ್ಥಿಕ ಸಂಪತ್ತೂ ಕೂಡಿ ಬೆಳೆಯುವಂತೆ ಸ್ವಸಂಸ್ಕೃತಿಪ್ರೇಮ, ಸ್ವದೇಶಪ್ರೀತಿ, ಸ್ವಭಾಷಾಭಿಮಾನ, ಸ್ವಧರ್ಮಾನುರಾಗ ಸ್ವಾರ್ಥತ್ಯಾಗಮುಂತಾದ ಗುಣಗಳನ್ನು ಉಜ್ವಲಗೊಳಿಸುವಂಥ ಕೀರ್ತನ, ಪುರಾಣ, ಪ್ರವಚನ, ನಿಬಂಧ, ಜೀವನ ಚರಿತ್ರೆ, ಇತಿಹಾಸ, ನಾಟಕ ಕಥೆ ಮತ್ತು ಕಾದಂಬರಿ ಮುಂತಾದ ರೂಪದಲ್ಲಿ ಜನಮಂಡಲಿಯ ಉನ್ನತಿಗೆ ಅಗತ್ಯವಾದ ಸರ್ವ ವ್ಯವಹಾರಗಳನ್ನೂ ಸ್ವಧರ್ಮ ದೃಷ್ಟಿಯಿಂದ ವಿಚಾರಮಾಡಿ ವಿವರಿಸುವದು. ಚಂದಾ ವರ್ಷಕ್ಕೆ ೨ ರೂ.

ಮುಂಬೈ ಪ್ರಾಂತಿಕ ಸಹಕಾರಿ ಪರಿಷತ್ತು ೧೯೨೫:

ಪ್ರದರ್ಶನವು.

ದಿಶಂಬರದಲ್ಲಿ ಧಾರವಾಡದೊಳಗೆ ನೆರೆಯುವ ಈ ಪರಿಷತ್ತಿನ ಸಮಯದಲ್ಲಿ, ಔದ್ಯೋಗಿಕ ಮತ್ತು ಒಕ್ಕಲತನದ ಪ್ರದರ್ಶನವೂ ಜರುಗಿಸಲ್ಪಡುವದು. ಸಹಕಾರಿ ಸಂಘಗಳಿಂದ ಮತ್ತು ಅವುಗಳ ಸಭಾಸದರಿಂದ ತಯಾರಮಾಡಲ್ಪಟ್ಟ ವಸ್ತುಗಳಿಗೆ ಪ್ರಾಧಾನ್ಯ ದೊರೆಯುವದು. ಅಧ್ಯಕ್ಷರಾದ ಮದ್ರಾಸಿನ ಸರ ಕೆ. ವಿ. ರಡ್ಡಿಯವರೇ ಈ ಪ್ರದರ್ಶನವನ್ನು ತೆರೆಯುವರು. ಪ್ರದರ್ಶನದಲ್ಲಿ ಒಳ್ಳೇವಸ್ತುಗಳಿಗೆ ಬೆಲೆಬಾಳುವ ಇನಾಮುಗಳೂ, ಸರ್ಟಿಫಿಕೇಟುಗಳೂ ದೊರೆಯುವವು ತಮ್ಮ ವಸ್ತುಗಳಲ್ಲಿ ಜನಮನ್ನಣೆಯನ್ನು ಪಡೆಯಬೇಕೆಂಬುವರೆಲ್ಲ ತ್ವರೆಮಾಡಬೇಕು ವಸ್ತುಗಳನ್ನು ಸ್ವೀಕರಿಸಹತ್ತಿರುವೆವು. ಎಲ್ಲ ವಸ್ತುಗಳೂ ಧಾರವಾಡದಲ್ಲಿಯ, ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ ಸೊಸಾಯಿಟಿಯ ಸಂಸ್ಥೆಗೆ ಕಳಿಸಲ್ಪಡಬೇಕು.

೧-೧೧-೨೫	ಎಫ್ ಟಿ. ನಲವಡಿ. ಅಧ್ಯಕ್ಷ ಕರ್ನಾಟಕ ಸೆ. ಕೋ. ಇ. ಧಾರವಾಡ

FOR SAFETY AND GOOD SERVICE
IN
LIFE ASSURANCE
GO TO
THE ORIENTAL
IN AGE SIZE AND STRENGTH
THE
GREATEST INDIAN
LIFE ASSURANCE COMPANY

Apply for full particulars to—

N. K. Kulkarni. Agent Bagalkot.

ಈ ಪತ್ರಿಕೆಯು [illegible] ಬಾಗಲಕೋಟೆಯಲ್ಲಿಯ [illegible]
[illegible] ಪ್ರಸಿದ್ಧಪಡಿಸಲ್ಪಟ್ಟಿತು.

ರ. ನಂ. ಬ. ೧೯೪೭ ವಾ. ಚಂದಾ ೧—೧೪—೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ಸಮಾಜೀವನವು ಸಮಾವಿಷ್ಟವಾಗಿದೆ)

सर्वं परवशं दुःखं सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ವಿ.ತಿ ಮಾರ್ಗಶಿರ ವದ್ಯ ೪ ಶಕ ೧೮೪೭. ತಾ| ೪-೧೨-೧೯೨೫. | ಸಂಚಿಕೆ ೩೪

ಸಂಪಾದಕರ ಧ್ವನಿ.

(೧)

ನನ್ನ ಮನಸಿನ ಮೋಹವಮಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮುಕ್ಕಳ ಜೊಪ್ಪು ।
ಚಿನ್ನದಾದರು ಚಿನ್ನ ಮೋಹಬಟ್ಟೆಯ ನೋಡು ॥
ಚಿನ್ಮಯಾಕಾಶದಲ್ಲಿ ॥

ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ।
ಗಂಧವಹನೆಂದು ತಿಳಿಯೆ ॥

—ಅಂಬಿಕಾತನಯ ದತ್ತ.

ಬಾಗಲಕೋಟೆಯ 'ರೇಲ್ವೆ ಸ್ಟೇಶನ್'ದಲ್ಲಿ ಗಾಡಿಗಳು ಬಂದಕೂಡಲೇ ತಿಕೀಟ ಕಚೇರಿಯು ಮುಚ್ಚಲ್ಪಡುವದರಿಂದಲೂ, ಗಾಡಿಗಳು ಒರುವವರೆಗೆ ಬಾಗಿಲವನ್ನು ಒಂದಿಡುವದರಿಂದಲೂ ಪ್ರವಾಸಿಕರಿಗೆ ಬಹು ತೊಂದರೆಯಾಗುವ ಬಗ್ಗೆ "ಕನ್ನಡಿಗ" ನ ೧೮ನೇ ಸಂಚಿಕೆಯಲ್ಲಿ ಬರೆದ "ಸ್ಫುಟಲೇಖ"ದ ಬಗ್ಗೆ ವಿಜಾಪೂರ ಜಿಲ್ಹೆಯ ಕಲೆಕ್ಟರರ ಒಂದು ಪತ್ರವು ನಮಗೆ ಬಂದಿದೆ ಆ ತೊಂದರೆಗಳ ಬಗ್ಗೆ ತಾವು ವಿಚಾರಿಸಿದೆವೆಂಬದಾಗಿ ತಿಳಿಸಿ ರೇಲವೇ ಅಧಿಕಾರಿಗಳಿಂದ ಬಂದ ಉತ್ತರವು ಹೀಗಿದೆಯೆಂದು ತಿಳಿಸಿದ್ದಾರೆ:—ಬಾಗಲಕೋಟೆಯು 'ರೋಡಸಾಯಿಡ ಸ್ಟೇಶನ್' ಗಳ ಯಾದಿಯಲ್ಲಿದ್ದುದರಿಂದ, ಈಗಿದ್ದ ವ್ಯವಸ್ಥೆಯು ಯೋಗ್ಯವಾಗಿದೆ. ಕಲೆಕ್ಟರ ಸಾಹೇಬರು ಸಾರ್ವಜನಿಕ ಹಿತದೃಷ್ಟಿಯಿಂದ ಈ ವಿಷಯದಲ್ಲಿ ಯೋಗ್ಯ ವಿಚಾರಮಾಡಿದ್ದಕ್ಕಾಗಿ ನಾವು ಆನಂದ ಪಡುತ್ತೇವೆ ಆದರೆ ಬಾಗಲಕೋಟೆಯು 'ರೋಡಸಾಯಿಡ ಸ್ಟೇಶನ' ಎಂದು ಹೇಳಿ ರೇಲವೇ ಅಧಿಕಾರಿಗಳು ಜನರ ತೊಂದರೆಗಳನ್ನು ದೂರಮಾಡದೇ ಕುಳಿತುಕೊಳ್ಳುವದು ಸಮಂಜಸವಲ್ಲ. ಪ್ರವಾಸಿಕರಿಗೆ ಇಲ್ಲಿ ಈ ಬಗ್ಗೆ ಕಷ್ಟವಾಗುವದು ನಿಜವೆಂದಮೇಲೆ ಯಾವರೀತಿಯಿಂದ ಅದರ ನಿವಾರಣೆಯಾಗುವದೋ ಅದನ್ನು ಮಾಡಬೇಕೇ ಹೊರತಾಗಿ, 'ರೋಡಸಾಯಿಡ ಸ್ಟೇಶನ್' ಎಂಬದಾಗಿ ಉಸುರ್ಗರೆದು ಈ ವಿಷಯವನ್ನು ಉಪೇಕ್ಷಿಸಿ ಬಿಡುವದು ರೇಲವೇಯವರ ಕಾರ್ಯದಕ್ಷತೆಯಲ್ಲ. ಬಾಗಲಕೋಟೆಯ ಪ್ರವಾಸಿಕರಿಂದ ಹೇರಳವಾದ ಹಣವನ್ನು ತೆಗೆದುಕೊಂಡು, ಅವರ ಅನಾನುಕೂಲತೆಗಳ ಕಡೆಗೆ ದುರ್ಲಕ್ಷಿಸುವದು ಅನ್ಯಾಯವಾದುದು. ಬಾಗಲಕೋಟೆಯು ವ್ಯಾಪಾರದ ಪಡಿಮೂಲಿಯು ಇಲ್ಲಿಂದ ರೇಲವೇಯವರಿಗೆ ಹತ್ತಿಯಸುಗ್ಗಿಯಲ್ಲಿ ಪ್ರತಿದಿನವೂ ೫ ಸಾವಿರ ರೂಪಾಯಿಗಳವರೆಗೆ ಉತ್ಪನ್ನವಾಗುತ್ತದೆ. ಪ್ರವಾಸಿಕರ ಗದ್ದಲವಂತೂ ಯಾವಾಗಲೂ ಇರುವದು ಆದುದರಿಂದ 'ರೋಡಸಾಯಿಡ ಸ್ಟೇಶನ್' ದ ಯಾದಿಯೊಳಗಿಂದ ಬಾಗಲಕೋಟೆಯನ್ನು ತೆಗದು ಹಾಕಬೇಕು, ಇಲ್ಲವೇ ಅಪವಾದವೆಂದೆಣಿಸಿ ಪ್ರವಾಸಿಕರ ಅನಾನುಕೂಲತೆಗಳನ್ನು ದೂರಮಾಡಬೇಕು ಸಾರ್ವಜನಿಕ ಸಂಗತಿಗಳಲ್ಲಿ ಕಳಕಳವಿದ್ದ ಈಗಿನ ಕಲೆಕ್ಟರ ಸಾಹೇಬರು ಈ ವಿಷಯದಲ್ಲಿ ಪುನಃ ರೇಲವೇ ಅಧಿಕಾರಿಗಳಿಗೆ ಬರೆದು. ಜನರ ತೊಂದರೆಗಳು ಮಾಯವಾಗುವಹಾಗೆಮಾಡಿ, ಈ ಜಿಲ್ಹೆಯ ಪ್ರವಾಸಿಕರ ಪ್ರೀತಿಗೆ ಪಾತ್ರರಾಗುವರಾಗಿ ನಂಬುತ್ತೇವೆ.

ಕಿರ್ಲೋಸ್ಕರ ವಾರ್ತೆಯ ೭ ನೇ ಸಂಚಿಕೆಯಲ್ಲಿ "ಕರ್ನಾಟಕ ಮತ್ತು ಮಹಾರಾಷ್ಟ್ರ" ವೆಂಬ ಲೇಖವು ಪ್ರಸಿದ್ಧವಾಗಿದೆ ಈ ಎರಡೂ ಪ್ರಾಂತಗಳಲ್ಲಿ ಪರಸ್ಪರ ಪ್ರೇಮವು ಚೆನ್ನಾಗಿದ್ದ ಸಂಗತಿಯನ್ನು ವರ್ಣಿಸಿ, ಶ್ರೀ ಆಪಟೇಯವರು ಹೇಳುವದೇನಂದರೆ:— "ಕರ್ನಾಟಕ- ಮಹಾರಾಷ್ಟ್ರಗಳ ನಿಕಟವಾದ ಸ್ನೇಹದ ಬಗ್ಗೆ ಉಪಮೆಯನ್ನು ಕೊಟ್ಟು ಹೇಳುವದಾದಲ್ಲಿ ನಮ್ಮ ಎರಡು ಕಣ್ಣುಗಳಂತೆ ಇವುಗಳ ಸಮ್ಮಂಧವಿರುತ್ತದೆ ನಮ್ಮ ಈ ಎರಡೂ ಕಣ್ಣುಗಳ ನಡುವೆ ಮೂಗಿನ ಗೋಡೆ ಒಂದಾಗ್ಯೂ ನೋಡುವ ಕಾರ್ಯಕ್ಕೆ ವ್ಯತ್ಯಯವುಂಟಾಗುವದಿಲ್ಲ, ಅಲ್ಲದೆ ಈ ಕಣ್ಣುಗಳಲ್ಲಿಯ ನರಗಳು ಒಂದೇ ಇರುತ್ತವೆ. ಇದರಂತೆ ಕನ್ನಡ ಮರಾಠಿ ಭಾಷೆಯ ಗೋಡೆಯು ನಡುವೆ ಒಂದಿರೂ ಈ ಎರಡೂ ಪ್ರಾಂತಗಳ ಅಂತಃಕರಣವು ಒಂದೇ ಇರುತ್ತದೆ " ಇದೇನೋ ನಮಗೆ ತಿಳಿಯದು. ಅಂತಃಕರಣವು ಒಂದೇ ಆಗಿದ್ದರೆ, ಮಹಾರಾಷ್ಟ್ರದ ನೆರೆಹೊರೆಯವರಾದ ಉತ್ತರ ಕರ್ನಾಟಕಸ್ಥರೆಲ್ಲ ಕನ್ನಡ ಮರಾಟಿ ಭಾಷೆಗಳನ್ನೆರಡೂ ತಿಳಿದು ಕೊಂಡು, ಅಭಿಮಾನದಿಂದ ತಮ್ಮ ಮಾತ್ರ ಭಾಷೆಯ ಹೊರತಾಗಿ ಮರಾಟಿ ಭಾಷೆಗೂ ಉತ್ತೇಜನ ಕೊಡುತ್ತಿರುವದೇಕೆ? ಮರಾಟಿಗರು ಮಾತ್ರ ಕನ್ನಡವನ್ನು ಕಲಿಯದೇ ಇರುವದೇಕೆ? ೨೦-೩೦ ವರ್ಷಗಳಿಂದಲೂ ಕನ್ನಡ ನಾಡಿನಲ್ಲಿದ್ದರೂ, ಕನ್ನಡನಾಡಿನ ಉಪ್ಪನ್ನು ಉಣ್ಣುತ್ತಿದ್ದರೂ ಸಹ ಮರಾಟರು ತಮಗೆ ಕನ್ನಡವು ತಿಳಿಯುವದಿಲ್ಲವೆಂದು ಅರ್ಥಟಿಸಿ ಸಾರ್ವಜನಿಕ ಸಭೆಗಳಲ್ಲಿ ಸಹ ಮರಾಟಿಯೇ ನಡೆಯಬೇಕಾಗಿ ದುರಾಗ್ರಹ ಹಿಡಿಯುವದೇಕೆ? ಕನ್ನಡಿಗರ ಸಂಗಡ ಕನ್ನಡದಲ್ಲಿ ಮಾತನಾಡಲು ಇವರು ಒಲ್ಲರು. ಯಾವನಾದರೂ ಕನ್ನಡಿಗನು ಮರಾಟರ ಸಂಗಡ ಕನ್ನಡದಲ್ಲಿಯೇ ಮಾತನಾಡಿದರೆ, ಅವರು ಉತ್ತರ ಕೊಡುವದು ಮರಾಟಿಯಲ್ಲಿ! ಅದೇಕೆ? ಕನ್ನಡದಲ್ಲಿಯೇ

ಉತ್ತರ ಕೊಟ್ಟರೆ ಇವರ ಅಭಿಮಾನಕ್ಕೆ ಬಾಧೆಬರುವದೇ? ಈ ಮರಾಟೆಯ ಉತ್ತರಕ್ಕೆ ಪ್ರತ್ಯುತ್ತರವು ಪುನಃ ಕನ್ನಡದಲ್ಲಿಯೇ ಬಂದರೆ "ನೀವು ಮರಾಟೆಯನ್ನು ದ್ವೇಷಿಸುವದೇಕೆ" ಎಂಬದಾಗಿ ಕೇಳುವದು ನ್ಯಾಯವಾದುದೊ? ಶ್ರೀ. ಆಪಟೇಯವರ ಸ್ಥಿತಿಯನ್ನು ನೋಡಿರಿ. ಇವರು ಕನ್ನಡಿಗರ ಮಧ್ಯದಲ್ಲಿದ್ದರೂ ಕನ್ನಡವನ್ನು ಕಲಿಯಲಿಕ್ಕೆ ಒಲ್ಲರು. ಅವರು ಒರೆಯುವದೇನಂದರೆ— "ಸ್ವತಃ ಪ್ರಸ್ತುತ ಲೇಖಕನಿಗೆ ಕನ್ನಡ ಭಾಷೆಯು ಬರುವದಿಲ್ಲ. ಆದಾಗ್ಯೂ ಈ ಭಾಷೆಯ ವಿಷಯಕ್ಕೆ ಅವರಿಗೆ ಪ್ರೇಮಾದಂಪೇ ಹೆಚ್ಚು ಇರುತ್ತದೆ. ಕಾರಣವೇನಂದರೆ, ಅವರ ಕುಟುಂಬದಲ್ಲಿಯ ಯಾವತ್ತೂ ಮಂಡಳಿಯು ಕನ್ನಡ ಮಾತನ್ನೇ ಬಹು ಸ್ಪಷ್ಟವಾಗಿ ಆಡುತ್ತಿರುವರು. ಮತ್ತು ಇವರು ಹುಟ್ಟಿದ ಗ್ರಾಮದಲ್ಲಿ ನೂರಕ್ಕೆ ೮೦ ರಂತೆ ಜನರು ಕನ್ನಡ ಭಾಷೆಯನ್ನಾಡುತ್ತಿರುವರು. ಹಿಂದಕ್ಕೊಮ್ಮೆ ಲೇಖಕನ ಕಕ್ಕಂದಿರು ಕುಂದಗೋಳದಲ್ಲಿಯ ಹೆಡ್ ಮಾಸ್ತರರಾಗಿದ್ದರು. ಸಾರಾಂಶ ಕನ್ನಡ ಭಾಷೆಯು ಪ್ರಸ್ತುತ ಲೇಖಕನ ಮಾತೃಭಾಷೆಯ ಸಮಾನವೇ ಆಗಿರುವದರಲ್ಲಿ ಸಂದೇಹವಿಲ್ಲ." ಕನ್ನಡ ಭಾಷೆಯ ವಿಷಯಕ್ಕೆ ಇವರಿಗೆ ಪ್ರೇಮವಾದರವು ಹೆಚ್ಚಿದೆಯಂತೆ. ಆದರೂ ಮನೆಯಲ್ಲಿ ಎಲ್ಲ ಕಡೆಗೆ ಕನ್ನಡ ಇದ್ದರೂ, ಹುಟ್ಟಿದ ಊರಲ್ಲಿ ೧೦೦ ಕ್ಕೆ ೮೦ ಜನರು ಕನ್ನಡಿಗರಿದ್ದರೂ, ಈ ಮಹನೀಯರಿಗೆ ಕನ್ನಡ ಕಲಿಯಬೇಕೆಂಬ ಲಾಲಸೆಯೇ ಹುಟ್ಟಲಿಲ್ಲ! ಪ್ರೇಮವು ಮಾತ್ರವಿದೆ! ಉತ್ತರ ಕರ್ನಾಟಕದಲ್ಲಿರುವ ಕನ್ನಡಿಗರೆಲ್ಲರೂ ನೆರೆಹೊರೆಯ ಭಾಷೆಯಾದ ಮರಾಟೆಯನ್ನು ಕಲಿಯುವದೇ ಲೇಸೆಂದು ಉಪದೇಶಮಾಡಲಿಕ್ಕೆ ಈ ಮರಾಟರಿಗೆ ಬೇಗನೇ ಬರುತ್ತದೆ. ಆದರೆ ಉತ್ತರ ಕರ್ನಾಟಕದ ಗಡಿನಾಡಿನಲ್ಲಿರುವ ಸಾತಾರೆ, ಸೊಲ್ಲಾಪೂರ, ಪುಣೆಗಳಲ್ಲಿ ನಿವಾಸರಾದ ಮರಾಟರಿಗೆ ಮಾತ್ರ ಕನ್ನಡವನ್ನು ಕಲಿಯಲು ಉಪದೇಶಿಸುವ ಆವಶ್ಯಕತೆಯಿಲ್ಲ. ಕರ್ನಾಟಕದ ಮುಖಂಡರು ಕರ್ನಾಟಕದ ಸೇವೆ ಮಾಡುವದಲ್ಲದೇ ಮಹಾರಾಷ್ಟ್ರದ ಸೇವೆಯಲ್ಲಿಯೂ ನಿರತರಾಗಿರುವರೆಂದು ಕನ್ನಡಿಗರಾದ ನಾವು ಅಭಿಮಾನದಿಂದ ಹೇಳ ಬಲ್ಲೆವು. ಆದರೆ ಮಹಾರಾಷ್ಟ್ರದಲ್ಲಿಯ ಒಬ್ಬನಾದರೂ ಮುಖಂಡನಿಗೆ ಹೀಗೆ ಹೇಳುವ ಧೈರ್ಯವಿದೆಯೋ? ಕರ್ನಾಟಕದ ಅಂತಃಕರಣದಲ್ಲಿ ಪರೋಪಕಾರ ಬುದ್ಧಿಯು ತುಂಬಿದೆ. ಆದರೆ ಮಹಾರಾಷ್ಟ್ರದಲ್ಲಿ ಈ ಬುದ್ಧಿಯು ಅಷ್ಟೊಂದಿಲ್ಲ. ಇರಲಿ. ಈಗಲಾದರೂ ಮರಾಟರು ಶ್ರೀ. ಆಪ್ಟೇಯವರಂತೆ ಬಾಯಿಂದ ಒಣ ಪ್ರೇಮಾದರಗಳನ್ನು ತೋರಿಸದೇ ಕರ್ನಾಟಕವು ಎಚ್ಚತ್ತದನ್ನು ಕಂಡು ಹಿಡಿದು, ನಿಜವಾದ ಪ್ರೇಮವನ್ನು ತೋರ್ಪಡಿಸಲಿ!

ನಾಟಕದ ವಿಷಯದಲ್ಲಿ ಹೋದ ಸಾರೆ ಶ್ರೀ ಕೃಷ್ಣ ಶರ್ಮಾ ಇವರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ಅವರು ತಮ್ಮ ಚಿತ್ರಕ್ಕೆ ಕಪ್ಪಿನ ಬೊಟ್ಟನ್ನಿಟ್ಟಿದ್ದಾರೆ. ನಾಟಕವು ಜ್ಞಾನಸತ್ರವಾಗಲರಿಯದು; ಚರವಿದ್ಯಾಲಯವಾಗಲರಿಯದು; ನಾಟಕದಿಂದ ರಾಮರಾಜ್ಯಕ್ಕೆ ತಿಲಾಂಜಲಿ; ಕಾಮಸಾಮ್ರಾಜ್ಯಕ್ಕೆ ಸಂಚಿಕಾರ; ಎಂಬುದೇ ಅವರ ಮಥಿತವು. ತಾವು ಸ್ವಂತ ಅನುಭವದಿಂದ ಹೀಗೆ ಬರೆಯಲು ಪ್ರವೃತ್ತರಾದೆವೆಂದು ಅವರು ಎದೆತಟ್ಟಿ ಹೇಳಿಕೊಂಡಿದ್ದಾರೆ. ಅವರು ಹೀಗೆ ಬರೆಯಲು ಅವರ ಮನೋ ದೌರ್ಬಲ್ಯವೇ ಕಾರಣವೆಂದು ಹೇಳಬಹುದು. ನಮ್ಮ ಪೂರ್ವಜರು 'ನಸಾ ವಿದ್ಯಾ ನ ತತ್ ಶಿಲ್ಪಂ ಯನ್ನಾಟ್ಯೇ ನ ದೃಶ್ಯತೇ' (ವಿದ್ಯೆ ಮತ್ತು ಕಲೆಯ ಪರಿಣತೆಯು-ಪೂರ್ಣತೆಯು-ನಾಟಕದಲ್ಲಿ) ಎಂದು ನುಡಿದುದಕ್ಕೆ ಅರಿದಾಳವೇ ಹತ್ತಬೇಕಾಯಿತು. ಚೆನ್ನಾಗಿ ವಿಚಾರಮಾಡಿ ನೋಡಲಾಗಿ ನಾಟಕದಿಂದ ಎಷ್ಟೋ ಲಾಭಗಳಾಗುವವು. ಆದರೆ ನಟವರ್ಗವು ಸುಶಿಕ್ಷಿತವಾಗಿರಲಿಕ್ಕೆ ಬೇಕು. ಸಮಾಜ ಶಿಕ್ಷಣವೇ ಅವರ ಧ್ಯೇಯವಾಗಿರಲಿಕ್ಕೆ ಬೇಕು. ದೀರ್ಘ ಪ್ರಯತ್ನ ಮಾಡಲಿಕ್ಕೆ ಅವರು ಸಿದ್ಧರಾಗಿರಬೇಕು. ಮೊದಮೊದಲು ನಿರಾಶೆಯ ಮುಸುಕು ಸುತ್ತಲೂ ಮುತ್ತಬಹುದು. ಬೆಳ್ಳಿಯ ಬೆಳಕು ಕಾಣಲಿಕ್ಕಿಲ್ಲ. ಸಾತ್ವಿಕ ಭಾವದಿಂದ ಪ್ರೇರಿತರಾಗಿ ವೇಷದಲ್ಲಿ, ಅಭಿನಯದಲ್ಲಿ, ಮಾತಿನಲ್ಲಿ, ಭಾವದಲ್ಲಿ ಸಟೆ (ಸುಳ್ಳು) ಗೆ ಆಸುವುಗೊಡದೆ ನಟರು ದಿಟವನ್ನು ಎತ್ತಿ ಹಿಡಿದರೆ, ನಾಟಕವು ಏಕೆ ಅನಿಷ್ಟ ಕರವಾಗಬೇಕು.? "ಸ್ವಾಮೀ, ನೀವನ್ನುವದೆಲ್ಲ ಸರಿ ತತ್ವದ ದೃಷ್ಟಿಯಿಂದ ಇದು ನ್ಯಾಯವಾದುದು. ಆದರೆ ಕೃತಿಯು ಹೀಗಾಗುವುದು ಶಕ್ಯವಿಲ್ಲ. ಒಂಜಿಯು ಮಗಸೋವಾದಿಯಲ್ಲಿರುತ್ತದೆಂದು" ಶ್ರೀ. ಶರ್ಮ ಇವರು ಪ್ರತಿಪಾದಿಸಬಹುದು. ಇದಕ್ಕೆ ನಾವು ಮೇಲಾಂಗ ಫಾಂಗ ಲೆಂಬ ಚೀನ ದೇಶದ ನಟರ ಉದಾಹರಣೆಯನ್ನು ಕೊಟ್ಟು ಸಮಾಧಾನ ಮಾಡಲೆಣಿಸುತ್ತೇವೆ. ಚೀನದೇಶದ ಈ ನಟಶ್ರೇಷ್ಠರು ಚಿಕ್ಕಂದಿನಿಂದ, ರಂಗಭೂಮಿಯ ಸುಧಾರಣೆಗಾಗಿ ಹೆಣಗಾಡಿ, ಕೊನೆಗೆ ಅದರ ಉದ್ಧಾರವನ್ನು ಮಾಡಿದರು. ಹಿಂದಣ 'ಮಾಡರ್ನ ರೆವ್ಯೂ'ದ ಸಂಚಿಕೆಗಳನ್ನು ತೆಗೆದು ಶ್ರೀ ಶರ್ಮಾ ಇವರು ನೋಡಬಹುದು. ನಾಟಕವು ಪುರಾತನ ಕಾಲದಿಂದ ಬಂದ ಸಂಸ್ಥೆಯು. ಪರಿಸ್ಥಿತಿಯಲ್ಲಿ ಬದಲು ಆಗಿ ಅದು ಕೆಟ್ಟಿರಬಹುದು. ಆದರೆ ಅದು ಹೇಯವು; ತ್ಯಾಜ್ಯವಾದುದು; ಎಂದು ಹೇಳುವದರಲ್ಲಿ ಮಾತ್ರ ಹುರುಳಿಲ್ಲ. ನಾಟಕವು ಎಷ್ಟೋಸಾರೆ ಮನುಷ್ಯನನ್ನು ಅಂತರ್ಮುಖನಾಗಿ ಮಾಡುತ್ತದೆ. 'ಪಾದುಕಾ ಪಟ್ಟಾಭಿಷೇಕ' ದಲ್ಲಿ ಭರತನಂಥ ತ್ಯಾಗಿಗಳ ಚಿತ್ರವು ಚಿತ್ರಪಟದಲ್ಲಿ ಮೂಡುತ್ತದೆ. ಸೀತೆಯ ಪಾವಿತ್ರ್ಯದ ಜ್ಯೋತಿಯು ಎಷ್ಟೋ ಸ್ತ್ರೀಯರಿಗೆ ದಾರಿ ತೋರಿಸ ಹತ್ತುತ್ತದೆ. ರಾಮನ ಆತ್ಮವು ಒಳಗಿನಿಗೆ ಸವಿಯಾದ್ದ ನುಡಿಗಳನ್ನು ನುಡಿಯುತ್ತದೆ. (ಈಗಿನ ಕೆಡಕು ಪರಿಸ್ಥಿತಿಯಲ್ಲಿಯೂ ಕೂಡ ಇಂಥ ಪರಿಣಾಮವಾಗುತ್ತದೆ. ನಿಜವಾಗಿ ಎಲ್ಲವೂ ಸುಧಾರಿಸಿದಲ್ಲಿ ಹೇಗಾಗ ಬಹುದು?) ಎಲ್ಲರಮೇಲೆಯೂ ಇಂತಹ ಪರಿಣಾಮವಾಗುವದೆಂದು ಹೇಳಲಾರೆವು. ಅದರಲ್ಲಿ ಯಾರ ಮೇಲೆಯೂ ಕೆಡಕು ಪರಿಣಾಮ ವಾಗಲರಿಯದೆಂದು ಮಾತ್ರ ಹೇಳಬಲ್ಲೆವು. ಕೆಲವರ ಅಂತಃಕರಣದಲ್ಲಿ ಜ್ಯೋತಿಯು ಹೊತ್ತಿದರೆ, ನಾಟಕದ ಗುರಿಯು ಈಡೇರಿದಂತಾಯಿತಲ್ಲವೇ? ಆದರೆ ನಟರೂ ನಾಟಕಗಳೂ ಮಾತ್ರ ಉಚ್ಚತರಗತಿಯವಾಗಿರಬೇಕು.

ಕರ್ನಾಟಕ ಪ್ರಾಂತಿಕ ಮಂಡಳದ ಸಭೆಯು ಮೊನ್ನೆ ರವಿವಾರ ೨೯ ನೇ ತಾರೀಖಿನ ದಿನ ಗದುಗಿನಲ್ಲಿ ಸೇರಿತ್ತು. ಅಧ್ಯಕ್ಷರಾದ ಶ್ರೀ. ಕರ್ನಾಡ ಸದಾಶಿವರಾಯರು ಗೃಹ ಕೃತ್ಯದ ಅನಾನುಕೂಲತೆಗಾಗಿ ಬಂದಿರಲಿಲ್ಲವಾದ್ದರಿಂದ ಉಪಾಧ್ಯಕ್ಷರಾಗಿದ್ದ ಶ್ರೀ. ದೇಶಪಾಂಡೆ ಗಂಗಾಧರರಾಯರು ಅಧ್ಯಕ್ಷರಾಗಿದ್ದರು. ಕರ್ನಾಟಕ ಭೂಷಣ ಶ್ರೀ. ಕೌಜಲಗೀ ಶ್ರೀನಿವಾಸರಾಯರು ಸರ್ವಾನುಮತದಿಂದ ಈ ವರ್ಷದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಶ್ರೀ. ಜೋಶೀ. ವಿನಾಯಕರಾಯರು ಹಾಗು ಬಳ್ಳಾರಿಯ ಶ್ರೀ. ಬೆಲ್ದೋಣೆ ಭೀಮರಾಯರು ಉಪಾಧ್ಯಕ್ಷರಾದರು. ಬಳ್ಳಾರಿಯ ಶ್ರೀ. ಡಿ. ಎಸ್. ಹಣಮಂತರಾಯರೂ ಶ್ರೀ. ಕೆಂಭಾವೀ ಮಧ್ವರಾಯರೂ, ಡಾ. ಹುಯಿಲಗೋಳ ವೆಂಕಟರಾಯರೂ ಕಾರ್ಯದರ್ಶಿಗಳಾದರು. ಡಾ ಉಮಚಗಿಯವರು ಕೋಶಾಧ್ಯಕ್ಷರಾಗಿಯೂ, ಪೂಜಾರರವರು ಲೆಕ್ಕ ಪರೀಕ್ಷಕರಾಗಿಯೂ ಆರಿಸಲ್ಪಟ್ಟರು. ಅಖಿಲಭಾರತ ರಾಷ್ಟ್ರೀಯ ಮಂಡಳಕ್ಕೆ ಕರ್ನಾಟಕ ಪ್ರತಿನಿಧಿಗಳು ಆರಿಸಲ್ಪಟ್ಟರು. ಕಳೆದ ವರ್ಷದ ಲೆಕ್ಕವು ಸ್ವೀಕೃತವಾಗಿ ಮುಂದಿನ ವರ್ಷ ವ್ಯಯದ ಅಂದಾಜ ಪತ್ರಿಕೆಯು ನಿರ್ಧರಿಸಲ್ಪಟ್ಟಿತು. ಕರ್ನಾಟ

ಕದ ಏಕೀಕರಣದ ಬಗ್ಗೆ ಪ್ರಯತ್ನ ಮಾಡಲಿಕ್ಕೆ ಈ ಸಲ ಮಂಡಲದವರು ೨ ಸಾವಿರ ರೂಪಾಯಿಗಳನ್ನು ತೆಗೆದಿಟ್ಟದ್ದು ಸಂತೋಷದ ಮಾತು. ಕಾನಪುರದ ಕಾಂಗ್ರೆಸ್ಸಿಗೆ ಹಲವು ಪ್ರತಿನಿಧಿಗಳನ್ನಾರಿಸಿದರು. ಇನ್ನೂ ಹೆಚ್ಚಾಗಿ ಜನರನ್ನು ಆರಿಸುವ ಅಧಿಕಾರವು ತಾಲೂಕ ಕಾಂಗ್ರೆಸ ಕಮೀಟಿಗಳ ಕಾರ್ಯದರ್ಶಿಗಳಿಗೆ ಕೊಡಲ್ಪಟ್ಟಿದೆ.

ಸುಧಾರಣೆ! ಏನು? ಗೊತ್ತೊ?

(ಲೇಖಕ ಬಾಸ್ಕರ ಪುತ)

ಮಾತೃ ಭಾಷೆಯನ್ನು ಕಲಿಯದಿರುವದು ಸುಧಾರಣೆ! ಮಾತೃ ಭಾಷೆಯಲ್ಲಿ ಮಾತಾಡದಿರುವದೊಂದು ಸುಧಾರಣೆ !! ಮಾತೃ ಭಾಷೆಯೆಂದರೆ ಅಸಹ್ಯ ಪಡುವದೊಂದು ಹೆಚ್ಚಿನ ಸುಧಾರಣೆ !!!

ಸ್ವಧರ್ಮವನ್ನು ಅಲಕ್ಷಿಸುವದು ಸುಧಾರಣೆ ! ಸ್ವಧರ್ಮವನ್ನು ನಿಂದಿಸುವದೊಂದು ಸುಧಾರಣೆ !! ಸ್ವಧರ್ಮಾದಿಗಳನ್ನು ತ್ಯಜಿಸಿ ಸ್ವೇಚ್ಛಾವಿಹಾರಿಯಾಗಿರುವದೊಂದು ಹೆಚ್ಚಿನ ಸುಧಾರಣೆ!!!

(ಹೆಂಗಸಿಗೆ) ಒರೆ ಬೈತಲ ತೆಗೆಯುವದು ಸುಧಾರಣೆ ! ಕೈಗೆ ಕೊಡೆಹಾಕಿಕೊಂಡು ತಿರುಗುವದೊಂದು ಸುಧಾರಣೆ !! ಗೇಣುಗೇಣುದ್ದ ಹಿಂಬಡದ ಬೂಟು ಮುಂತಾದ ಪರದೇಶಿಗರ ಉಡುಪುಗಳನ್ನು ಧರಿಸಿ ಪರಹಸ್ತ ಸ್ಪರ್ಶ (Shakehand) ಮಾಡುತ್ತಿರುವದೊಂದು ಹೆಚ್ಚಿನ ಸುಧಾರಣೆ !!!

ಬೀಡಿ ಶಿಗ್ರೇಟ ಮುಂತಾದವುಗಳನ್ನು ಸೇವಿಸುವದು ಸುಧಾರಣೆ ! ಚಹಾ, ಕಾಫಿ, ಕೋಕೋಗಳನ್ನು ಕುಡಿಯುವದೇ ಒಂದು ಸುಧಾರಣೆ !! ಬೂಟ ಹಾಕಿಕೊಂಡು ಕುರ್ಚಿ ಮೇಜುಗಳ ಮೇಲೆ ಡಬ್ಬ ರೊಟ್ಟಿ (Bread) ಮುಂತಾದವುಗಳನ್ನು ಸೇವಿಸುವದೊಂದು ಹೆಚ್ಚಿನ ಸುಧಾರಣೆ !!!

ಹೆಂಗಸು ಗಂಡಸರು ಕೈಹಿಡಿದು ತಿರುಗುವದೇ ಸುಧಾರಣೆ ! 'ಸ್ವೇಚ್ಛಾ'ವಿಹಾರ ಒಂದು ಸುಧಾರಣೆ !! ವಿವಾಹ ನಿಬಂಧವನ್ನು ಕಡಿದು ಹಾಕಿ ಪಶುಗಳಂತೆ ನಿರ್ಬಂಧವಿಲ್ಲದಿರುವದೇ ಒಂದು ಹೆಚ್ಚಿನ ಸುಧಾರಣೆ !!!

ನೆಣದಿಂದ ಮಾಡಿದ ಸಬ್ಬುಕಾರವನ್ನು (Soap) ಉಪಯೋಗಿಸುವದು ಸುಧಾರಣೆ ! ಸುಗಂಧ ದ್ರವ್ಯಗಳಲ್ಲಿ ಪರದೇಶಿ ಶೆರಾಯಿ (Spirit) ಉಳ್ಳವುಗಳನ್ನು ಆಗ್ರಹದಿಂದ ಉಪಯೋಗಿಸುವದು ಸುಧಾರಣೆ !! ಶೆರಾಯಿ ಕೋಳಿತತ್ತಿ ಮುಂತಾದ ಅಶುದ್ಧ ಖಾದ್ಯ ಪದಾರ್ಥಗಳನ್ನು ವಿಶ್ವಾಸ ಪೂರ್ವಕ ಸೇವಿಸುವದೊಂದು ಹೆಚ್ಚಿನ ಸುಧಾರಣೆ !!!

ಊರಲ್ಲಿ ನಾಲ್ಕು ಜನಸಜ್ಜನರು ಹೇಳಿದ್ದನ್ನು ಕೇಳದಿರುವದು ಸುಧಾರಣೆ! ಕೋರ್ಟು ಕಚೇರಿಗಳಿಗೆ ನ್ಯಾಯ ಒಯ್ಯುವದೊಂದು ಸುಧಾರಣೆ!! ಅಲ್ಲಿ ಆಳುಗಳಿಗೂ ಕಡೆಯಾಗಿ ಎಲ್ಲರಿಗೂ ಲಂಚ ಕೊಟ್ಟು ತೋರಿಕೆಯ ದೊಡ್ಡಿಸ್ತನವನ್ನು ಪಡಕೊಳ್ಳುವದೊಂದು ಹೆಚ್ಚಿನ ಸುಧಾರಣೆ!!!

ಧರ್ಮದಲ್ಲಿ ಡಾಂಭಿಕ ಭಕ್ತಿಯನ್ನು ತೋರಿಸುವದು ಸುಧಾರಣೆ ! ಒಣಡಂಭದ ಆಚಾರ ಬಡಿಯುದೊಂದು ಹೆಚ್ಚಿನ ಸುಧಾರಣೆ !! ತಮ್ಮ ಆಚಾರಕ್ಕೆ ಇಲ್ಲಇಲ್ಲದ ಆಧಾರಗಳನ್ನು ತೋರುವದೊಂದು ಹೆಚ್ಚಿನ ಸುಧಾರಣೆ !!!

ವಿದ್ಯೆಯ ನೆವತೆಗೆದು ನಮ್ಮ ದೇಶದ ದುಡ್ಡನ್ನು ಕಳೆದುಕೊಳ್ಳುವದು ಸುಧಾರಣೆ ! ಅಲ್ಲಿ ಪರದೇಶದಲ್ಲಿ ಮನಬಂದಂತೆ ನಡೆದು ನಮ್ಮ ದೇಶವನ್ನು ಮರೆಯುವದೇ ಸುಧಾರಣೆ !! ಅಲ್ಲಿಂದ ಜೋಡಾಗಿಬಂದು ಇದ್ದ ಸತ್ವವೂ ಕೂಡ ಪೋಗುವಂತೆ ಸ್ವದೇಶೀಯರೆನ್ನು ನಿಂದಿಸುವದೊಂದು ಮಹತ್ವದ ಸುಧಾರಣೆ !!!

ರಾತ್ರಿನಿದ್ದೆಗೆಟ್ಟು ಹರಟೆ ಹೊಡೆಯುವದು ಸುಧಾರಣೆ ! ಹಗಲು ಸಂಪುನಿದ್ದೆ ಹೊಡೆಯುವದು ಸುಧಾರಣೆ !! ರಾತ್ರಿನಿದ್ದೆಯನ್ನುತಪ್ಪಿಸಲಿಕ್ಕೆ ಚಹಕುಡಿದು ಇಸ್ಪೇಟ ಆಡುವದೊಂದು ಹೆಚ್ಚಿನ ಸುಧಾರಣೆ !!!

ನಸುಕಿನಲ್ಲಿ ಏಳದಿರುವದು ಸುಧಾರಣೆ ! ಎಚ್ಚರಾದರೂ ಹೇಡಿತನದಿಂದ ಮುಸುಕಿಟ್ಟು ಮಲಗುವದು ಸುಧಾರಣೆ!! ನೈಸರ್ಗಿಕವಾಗಿಯೇ ನಸಕು ಹರಿಯುವದರೊಳಗೆ ಏಳುವ ಎಳೆ ಮಕ್ಕಳನ್ನು ಬಡಿದು ಮಗ್ಗಲಲ್ಲಿಟ್ಟು ಮಲಗುವದೊಂದು ಹೆಚ್ಚಿನ ಸುಧಾರಣೆ !!!

ಮುರಗೋಡ ಮಹಾಲಿನ ಪತ್ರ

ಬೆಳೆಗಳಿಗೆ ಜಿಟ್ಟೆಯ ಉಪದ್ರವದೆ. ಕೆಲಕೆಲವು ಹಳ್ಳಿಗಳಲ್ಲಿ ಜಿಟ್ಟಿಯಿಂದಲೂ ಮಳೆ ಇಲ್ಲದ್ದರಿಂದಲೂ ಬೆಳೆಗಳ ಸ್ಥಿತಿಯು ನೆಟ್ಟಗಿಲ್ಲ. ಇಂಥಸ್ಥಿತಿಯಲ್ಲಿ ಬೆಳೆಯ ಆಣೇವಾರಿಯನ್ನು ೪ ಆಣೆಯ ಕೆಳಗೆ ಯಾವ ಊರಿನದೂ ಮಾಡಿಲ್ಲ. ಇದರಲ್ಲಿ ಶುದ್ಧ ಅನ್ಯಾಯವಾಗಿದೆ. ಅನೇಕ ಹಳ್ಳಿಗಳಲ್ಲಿ, ಬೆಳೆಯು ಒರುವದೂ ಸಹ ಭರವಸೆ ಇಲ್ಲ.

ಭಾಗೋಜಿಕೊಪ್ಪದಲ್ಲಿ ನಿರುಪಾದಿ ಮಠದ ಶ್ರೀ ಫಕೀರ ಸ್ವಾಮಿಗಳು ಶಿವಲೋಕವನ್ನೈದರು. ಆವೇಳ್ಯೆಗೆ ಎಲ್ಲ ಜಾತಿಯ ಜನರು ಹಗಲಿಗೆ ಹಗಲು ಹಚ್ಚಿ ಅವರ ಶವಾಧಿಕಾರ್ಯವನ್ನು ನೆರವೇರಿಸಿದರು. ಮುಂದೆ ಅವರ ಆರಾಧನೆಯಕಾರ್ಯವನ್ನು ಎಲ್ಲ ಜಾತಿಯವರು ಎಲ್ಲ ಪಂಥದ ಹಿಂದು- ಮುಸಲ್ಮಾನ- ಬ್ರಾಹ್ಮಣ ಲಿಂಗಾಯತ- ರಡ್ಡಿ- ಕುರುಬ ವಗೈರೆ ಜನರು ಭಕ್ತಿಯಿಂದಲೂ ಒಮ್ಮನಸ್ಸಿನಿಂದಲೂ ನೆರವೇರಿಸಿದರು. ಈ ಪ್ರಸಂಗದಲ್ಲಿ ಜನರುಗಳಲ್ಲಿದ್ದ ಐಕ್ಯವನ್ನು ನೋಡುವಂಥದಿತ್ತು. ಇದೆಲ್ಲ ಸ್ವಾಮಿಗಳ ಸದ್ಗುಣವನ್ನೂ, ಎಲ್ಲರಲ್ಲಿದ್ದ ಸಮಭಾವವನ್ನೂ ತೋರಿಸುವದು.

ಮಾರ್ಗಶಿರ ಶುದ್ಧ ೭ ಇಲ್ಲಿಗೆ ಮರಾಠಿಯ ದೆ. ಭ. ರಾವ ಕೇಳಕರರು ಬಂದು ೬ ತಾಸಿನವರೆಗೆ ಮುರಗೋಡದಲ್ಲಿ ಇದ್ದರು. ಆ ವೇಳೆಗೆ ಇಲ್ಲಿ ಶ್ರೀಚಿದಂಬರ ದೇವರ ರಥೋತ್ಸವವಿತ್ತು. ರಥೋತ್ಸವಕ್ಕೆ ೬-೭ ಸಾವಿರ ಜನರು ಕೂಡಿದ್ದರು. ಅವರ ಉಪನ್ಯಾಸವು ಅದೇ ವೇಳೆಗೆ ಅಲ್ಲಿಯೇ ನಡೆಯಿತು. ನೂರು ನೂರಾ ಐವತ್ತು ಜನರು ಮಾತ್ರ ಉಪನ್ಯಾಸಕ್ಕೆ ಕುಳಿತರು. ಉಪನ್ಯಾಸದಲ್ಲಿ ಏನು ಹೇಳಿದರೊ ಅದು ಇಲ್ಲಿಯಜನರಿಗೆ ತಿಳಿಯಲಿಲ್ಲ. ರಾಜಕಾರಣವು ಅದರಲ್ಲಿ ಇದ್ದಿಲ್ಲವಂತೆ! ತಾವು ಮರಾಠಿಗಳು ಕನ್ನಡ ಬಾರದ್ದರಿಂದ ಕರ್ನಾಟಕದಲ್ಲಿ ಬಂದಿಲ್ಲವಂತೆ! ಭಾಷೆಯ ಭೇದಕ್ಕೆ ಅಷ್ಟೊಂದು ಮಹತ್ವ ಕೊಡಬಾರದಂತೆ! ಏನೇನೋ ಹೇಳಿದರು. ನಾನೂ ಇದ್ದೆ. ನನಗೆ ಅದರ ಗಂಧವು ಕೂಡ ತಿಳಿಯಲಿಲ್ಲ. ಮುಂದು ಸಂಜೆಗೆ ಬೈಲಹೊಂಗಲಕ್ಕೆ; ಅಲ್ಲಿಂದ ಗೋರ್ಹೊಸೂರಿಗೆ ಹೋಗಿ ಮರುದಿವಸ ಮುರಗೋಡ ಮಾರ್ಗದಿಂದ ಬೆಳಗಾವಿಗೆ ಹೋದರು. ದೇ. ಭ ಕೇಳಕರರಂಥವರು ಕರ್ನಾಟಕದೊಳಗಿನ ಒಂದು ಜಿಲ್ಲೆಯ ತುದಿಯಿಂದ ಮತ್ತೊಂದು ತುದಿಯ ವರೆಗೆ ೨೪ ತಾಸಿನೊಳಗೆ ತಮ್ಮ ಪ್ರವಾಸವನ್ನು ತೀರಿಸಿಕೊಂಡು, ಪುಣ್ಯ ನಗರಕ್ಕೆ ತಿರುಗಿ ಹೋದರು! ಇಂಥ ದೊಡ್ಡ 'ಅಸೆಂಬ್ಲಿಯ ಮೆಂಬರರು' ನಮ್ಮ ಕುಂದು ಕೊರತೆಗಳನ್ನಾದರೂ ಕೇಳಬೇಕಾಗಿತ್ತು! ಏನೂ ಇಲ್ಲದೆ ತಿರುಗಿ ಹೋದರು!

ಧೋಂಡೋ ಯಶ್ವಂತ ಕುಲಕರ್ಣಿ
ಕಾರ್ಯದರ್ಶಿ
ಮುರಗೋಡ ಮಹಾಲ ಕಾಂಗ್ರೆಸ ಕಮಿಟಿ

ಕನ್ನಡದ ಬೇಡಿಗಳನ್ನು ಕಡಿಯಿರಿ.

ಶಿರೋಭಾಗವನ್ನು ಓದಿ 'ಕನ್ನಡಿಗ'ನ ವಾಚಕರು ಚಕಿತರಾಗಬಹುದು. ಸಂಪತ್ತಿಗೆ ತವರು ಮನೆಯಾದ ಕನ್ನಡ ನಾಡಿಗೆ ಬೇಡಿಗಳನ್ನು ಯಾರು ತಗಲಿಸಿದರೆಂದು ಕೆಲವರು ಕುತೂಹಲ ಪೂರ್ವಕವಾಗಿ ಕೇಳಬಹುದು. ನಮ್ಮ ಕಣ್ಣಿಗೆ ಬೇಡಿಗಳು ಕಾಣಿಸುವದಿಲ್ಲವಾದ್ದರಿಂದ, ಬೇಡಿಗಳನ್ನು ಕಡಿದೊಗೆಯಿರಿ ಎಂಬ ನುಡಿಯುವ ಈ ಹುಡುಗನ ಬಡಬಡಿಕೆಯಲ್ಲಿ ಹುರುಳಿಲ್ಲವೆಂದು ಹಲವರು ಹೇಳಬಹುದು. ಆದರೆ ಓದಿದರೆ ಅದರಲ್ಲಿ ತಥ್ಯವಿದೆಂಬುದಾಗಿ ತಿಳಿಯದೇ ಇರದು. ಕುತರ್ಕ ಮಾಡುವರೆಂದು ಕೆಲವರು ಕೆಂಡದಂತೆ ಕೋಪಿಸುವಂತೆ! ಆದರೆ ಕನ್ನಡಿಗರಲ್ಲಿ ನಾಚಿಕೆಯೇ ಇರದ್ದರಿಂದ ಕಂಡ ಕಂಡದ್ದನ್ನು ಮಾಡಿದರೂ ಕೋಪವು ಬರುವದಿಲ್ಲವಲ್ಲ !!

ಕನ್ನಡ ನಾಡಿನ ಕೀರ್ತಿಯನ್ನು ಕಳೆಯಲುದ್ಯುಕ್ತವಾಗಿರುವ ಬೇಡಿಗಳು ಯಾವವೆಂಬುವದನ್ನು ವಿಚಾರಿಸುವಿರೋ? ಈ ಬೇಡಿಗಳು ನಮ್ಮ ಕಣ್ಣುಗಳಿಗೆ ಕಾಣದಿದ್ದರೂ ವಿಚಾರವೆಂಬ ಕಣ್ಣು ಪಟಲುಗಳನ್ನು ಹಾಕಿಕೊಂಡು ನೋಡಿದರೆ ಮಾತ್ರ ಅವು ನಮ್ಮ ಕಣ್ಣಿಗೆ ಬೀಳಬಹುದು. ಈ ಬೇಡಿಗಳು ಕಳ್ಳಕಾಕರಿಗೆಂದು ಉಪಯೋಗಿಸಲ್ಪಡುವ ಕಬ್ಬಿಣದ ಬೇಡಿಗಳಲ್ಲ. ಇವು ಒಳಗಿಂದೊಳಗೆ ಕನ್ನಡ ನಾಡಿನ ಸತ್ವವನ್ನು ಸದೆಬಡೆಯುವ ಪಂಚಾಕ್ಷರಗಳಿಂದ ನಿರ್ಮಿತವಾದ, ಅನುಕರಣವೆಂಬ ಬೇಡಿಗಳು ಈ ಬೇಡಿಗಳು. ಕನ್ನಡ ನಾಡೆಂಬ ತಾಯಿಯ ದೇಹಕ್ಕೆ ಸಹಿಸಲಶಕ್ಯವಾದ, ಎಷ್ಟೋ ನೋವುಗಳನ್ನುಂಟು ಮಾಡಿರುತ್ತವೆ. ಎಲ್ಲ ಕನ್ನಡಿಗರೂ ಈ ಬೇಡಿಗಳನ್ನು ತಗಲಿಸಿಕೊಂಡಿರುತ್ತಾರೆಂದೇ ನನ್ನ ಮತವು. ಕೆಲವರು ನಡೆನುಡಿಗಳನ್ನು ಅನುಕರಣ ಮಾಡಹತ್ತಿದ್ದಾರೆ, ಇನ್ನೂ ಕೆಲವರು ವೇಷಭೂಷೆಗಳಲ್ಲಿ ಪರರನ್ನು ಅನುವರ್ತಿಸ ಹತ್ತಿದ್ದಾರೆ. ಹೀಗೆ ಒಂದಿಲ್ಲೊಂದು ರೀತಿಯಿಂದ ಅನುಕರಣವೆಂಬ ಬೇಡಿಗಳನ್ನುಂಟಿಸಿಕೊಂಡು, ಕನ್ನಡ ನಾಡೆಂಬ ತಾಯಿಗೆ ನೋವನ್ನುಂಟು ಮಾಡ ಹತ್ತಿದ್ದಾರೆ.

ಇನ್ನು ಭಾಷಾನುಕರಣವೆಂಬ ಬೇಡಿಗಳನ್ನುಂಟಿಸಿಕೊಂಡ ಕರ್ನಾಟಕಸ್ಥರ ಬಗ್ಗೆ ವಿಚಾರಿಸುವಾ. ಮೊದಲು ಯುವಕರ ಸಮಾಚಾರವನ್ನು ತೆಗೆದುಕೊಂಡು ಆಮೇಲೆ ವೃದ್ಧರ ಕಡೆಗೆ ತೆರಳುವಾ. ಕೆಲವು ಯುವಕರು, ಸ್ವಭಾಷೆಯನ್ನು ಮರೆತು, ಪರಭಾಷೆಯೆಂಬ ಹೆಣ್ಣಿಗೆ ಮೋಹಿತರಾಗಿ, ಆಕೆಯನ್ನೇ ಅನುಸರಿಸಹತ್ತಿರುತ್ತಾರೆ. ಅಲ್ಲದ ಸಲ್ಲದ ಕೆಲಸಗಳಲ್ಲಿಯೂ, ಸಹ ಪರಭಾಷೆಯನ್ನೇ ಉಪಯೋಗಿಸಹತ್ತಿದ್ದಾರೆ. ಪತ್ರಗಳನ್ನು ಗೀಚುವಾಗಲೂ, ಗೆಳೆಯರ ಕೂಡ ಗೊಡ್ಡು ಹರಟೆ ಹೊಡೆಯುವಾಗಲೂ ಸಹ ಪರಭಾಷೆಯನ್ನು ಉಪಯೋಗಿಸ ಹತ್ತಿದ್ದಾರೆ. ಹೊತ್ತನ್ನು ಹೇಳುವಾಗ ಹನ್ನೆರಡೆಂದು ನುಡಿಯದೆ "ಬಾರಾ" ಎಂಬ ಶಬ್ದವನ್ನೂ "ಎಲೆ ಅಡಿಕೆಗೆ" ಪಾನ ಸುಪಾರೀ ಎಂಬ ಶಬ್ದವನ್ನೂ ಉಪಯೋಗಿಸುವದು, ಕರ್ನಾಟಕಸ್ಥರಿಗೆ ಚಟವೇ ಬಿದ್ದು ಹೋಗಿದೆ. ಈ ರೂಢಿಗಳೇ ಭವಿಷ್ಯತ್ಕಾಲದಲ್ಲಿ ನಮಗೆ ನಾನಾ ವಿಧವಾದ ನೋವುಗಳನ್ನುಂಟು ಮಾಡಬಹುದು. ಕನ್ನಡ ನುಡಿಯು ಕರ್ಕಶವಾದ ನುಡಿಯು ಕನ್ನಡ ನುಡಿಯನ್ನು ಕೇಳಿದರೆ ನಮಗೆ ತಲೆಶೂಲಿಯೇ ಏಳುತ್ತದೆಂದು ವಟವಟಿಸುವ ಯುವಕರನ್ನೂ ನಾನು ನೋಡಿದ್ದೇನೆ. ಈ ಯುವಕರು, ತಲೆಶೂಲೆಯುದ್ದು ಕೂಡಲೆ ಕೈ. ವಾ. ಸಗರರ ಮಂತ್ರವಾದ, "ಎದ್ದರೆ ಕನ್ನಡ ಕುಳಿತರೆ ಕನ್ನಡ" ವೆಂಬ ಮಂತ್ರವನ್ನು ಜಪಿಸಿ ತಲೆಶೂಲೆಯನ್ನು ಹೊಡೆದೋಡಿಸುವರೆಂದು ನನ್ನ ಹಾರೈಕೆ.

ಮಹಾತ್ಮಾ ಗಾಂಧಿಯವರು ತರುಣರೇ ರಾಷ್ಟ್ರದ ಜೀವಾಳಗಳೆಂದು ನುಡಿದಿರುವರು. ಆದರೆ ಕರ್ನಾಟಕದ ತರುಣರು ಮಾತ್ರ ರಾಷ್ಟ್ರದ ಜೀವಾಳಗಳಾಗಿರದ, ನಾಡೆಂಬ ವೃಕ್ಷಕ್ಕೆ ಹತ್ತಿದ ಜಿಗಳಿಗಳಾಗಿರುವರೆಂದು ನುಡಿದರೆ ದೋಷವಾಗದು.

ಇನ್ನು ವೃದ್ಧರೂ, ಅನುಭವಿಕರೂ, ಸುಶಿಕ್ಷಿತರೂ ಆದ ಕರ್ನಾಟಕಸ್ಥರ ನಡೆನುಡಿಗಳನ್ನಿಷ್ಟು ವಿಚಾರಿಸುವಾ. ಇವರಂತೂ ನಾಚಿಕೆಯೆಂಬ ರುಮಾಲವನ್ನೇ ತಲೆಗೆ ಸುತ್ತಿಕೊಂಡಂತೆ ತೋರುತ್ತದೆ. ಯಾಕಂದರೆ ಇವರು ಪರಭಾಷೆಯನ್ನು ಅನುಕರಣ ಮಾಡುವದರಲ್ಲಿ ತರುಣರಕಿಂತಲೂ, ಒಂದು ಅಡಿಯನ್ನು ಮುಂದೆಯೇ ಇಟ್ಟಿದ್ದಾರೆ. ತರುಣರು ಹೊರಗಿನ ವ್ಯವಹಾರದಲ್ಲಿ ಅನ್ಯಭಾಷೆಗಳನ್ನುಪಯೋಗಿಸಹತ್ತಿದ್ದರೆ, ಇವರು ಗೃಹದಲ್ಲಿಯೂ ಸಹ ಪರಭಾಷೆಯನ್ನೇ ನುಡಿಯಹತ್ತಿದ್ದಾರೆ. ಉದಾಹರಣಾರ್ಥವಾಗಿ! ಮಕ್ಕಳಾಡಿಸುವಾಗ ಮಡದಿಯೊ! ಳಕ್ಕರದಿ ನಲಿವಾಡುವಾಗ ! ಲೆಕ್ಕಪತ್ರವನೆಗೀಚುವಾಗ || ನಿಕ್ಕನುಡಿಯನುಪಯೋಗಿಸುವರೋ || ಷಡಕ್ಷರಿ, ಲಿಂಪಯ್ಯ, ಕನಕದಾಸ, ಕುಮಾರವ್ಯಾಸ, ವಾಲ್ಮೀಕಿ ಮೊದಲಾದವರು ಕನ್ನಡ ಮಾತೆಯ ಋಣವನ್ನು ತೀರಿಸುವದಕ್ಕೋಸ್ಕರ, ಕನ್ನಡ ಭಾಷಾ ಸೇವೆಯಲ್ಲಿಯೇ ತಮ್ಮ ದೇಹವನ್ನು ಸವೆಸಿದರು. ಆದರೆ ಅವರು ಈಗಿನವರಂತೆ, ಅನ್ಯಭಾಷೆಗಳ ಅಲ್ಪಜ್ಞತೆಯನ್ನು ಜನರ ನಿದರ್ಶನಕ್ಕೆ ತಂದು ಕೊಡುವಷ್ಟು ಜಾಣರಿದ್ದಿದ್ದಿಲ್ಲ. ಅನ್ಯಭಾಷೆಗಳ ಪ್ರಚುರತೆಯನ್ನು ಕುಗ್ಗಿಸಲು ಪ್ರಯತ್ನ ನಡೆದಿರುವಾಗ, ಮೊನ್ನಿನ ಮುಂಬಯಿಯ ಕೌನ್ಸಿಲದಲ್ಲಿ, ಕರ್ನಾಟಕದ ಓರ್ವ ಸಭಾಸದರು, ಬೆಳಗಾಂವಿಯಲ್ಲಿ ಒಂದು ಇಂಗ್ರಜಿ—ಮರಾಠೀ ಶಾಲೆಯನ್ನು (ಹುಡುಗಿಯರ) ತೆರೆಯಿರೆಂದು ಸರಕಾರಕ್ಕೆ ಕೇಳಿಕೊಂಡರಂತೆ, ಇನ್ನೂ ಇವರು ಮರಾಠಿಯ ಮೋಹವನ್ನು ಬಿಟ್ಟಿಲ್ಲವೆಂಬಂತೆ ತೋರುತ್ತದೆ. ಇಂಗ್ರಜೀ ಭಾಷೆಯು ಸರಕಾರೀ ಭಾಷೆಯಾದುದರಿಂದ, ಆ ಭಾಷೆಯನ್ನು ಬಿಟ್ಟರೆ ನಡೆಯುವಂತಿಲ್ಲ ಆದರೆ ಉಳಿದ ಭಾಷೆಗಳನ್ನು ಅಲ್ಲದ ಸಲ್ಲದ ಕೆಲಸಗಳಲ್ಲಿ ಉಪಯೋಗಿಸಿ ಕನ್ನಡ ನುಡಿಯ ಸೊಬಗನ್ನು ಕೆಡಿಸಬೇಡಿರಿ. ನೀವು ಹಾಕಿ ಕೊಟ್ಟ ಕಿತ್ತಿಯನ್ನೇ ತರುಣರು ತೀಡುವರೆಂಬ ಮಾತನ್ನು ಮನದಲ್ಲಿ ಬಿಂಬಿಸಿಕೊಳ್ಳಿರಿ. ಅನ್ಯಭಾಷೆಗಳನ್ನುಪಯೋಗಿಸುವದರಿಂದ ನಮ್ಮ ಮೇಲೆ ನಾವೇ ಕಲ್ಲು ಕೆಡವಿಕೊಂಡಂತಾಗುವದು ಈಗ ತಾನೇ ಕಂಡು ಬಂದಿರುತ್ತದೆ. ಮಲೆಯಾಳರು, ಕಾಸರಗೋಡ ತಾಲೂಕಿನ ಕೆಲವು ಹಳ್ಳಿಗಳನ್ನು, ಅಲ್ಲಿ ತಮ್ಮ ಭಾಷೆಯೇ ಬಹು ಪ್ರಚಾರವಾಗಿದೆಯೆಂಬ ನೆವ ತೋರಿಸಿ, ಸೆಳೆಯುವ ಹವಣಿಕೆಯಲ್ಲಿದ್ದಾರೆ. ಇತ್ತ ಆಂಧ್ರರು ಬಳ್ಳಾರಿ ಜಿಲ್ಲೆಯನ್ನು ಕೈವಶ ಪಡಿಸಿಕೊಳ್ಳುವ ಹಂಚಿಕೆಯಲ್ಲಿದ್ದಾರೆ. ಇವರನ್ನು ಕಂಡು, ಜಪ್ಪಿಸಿ ಕುಳಿತ ಮಹಾರಾಷ್ಟ್ರೀಯರು, ಮುಂದಕ್ಕೆ ಬರಬಹುದು. ಆದ್ದರಿಂದ ಅನುಕರಣವೆಂಬ ಬೇಡಿಗಳನ್ನುಂಟಿಸಿಕೊಂಡ, ಆಬಾಲ ವೃದ್ಧರೇ, ಇನ್ನಾದರೂ ಆ ಬೇಡಿಗಳನ್ನು ಕಡೆದೊಗೆದು, ಮುಂದೆ ಬರಬಹುದಾದ ಆಪತ್ತುಗಳ ಮೂಲವನ್ನೇ ಕಡೆದೊಗೆಯಿರಿ. ಮತ್ತು ಕನ್ನಡ ನುಡಿಯ ಬೆಡಗನ್ನು ಬೆಳಿಸಲು, ಕಂಕಣ ಕಟ್ಟಿರಿ. ಯಾರಾದರೂ ಬೇಡಿಗಳನ್ನು ತಗಲಿಸಲು ಬಂದರೆ "ಬೇಡಿ" ಎಂಬುತ್ತರವನ್ನು ಅಭಿಮಾನದಿಂದ ಕೊಡಿರಿ. ಸುಮ್ಮನೆ ಕುಳಿತರೆ ಮಾತ್ರ ಕನ್ನಡ ನಾಡಿನ ಬೆಡಗನ್ನು ಕೆಡಿಸಿದರೆಂಬ ಅಪವಾದಕ್ಕೆ ತಲೆಗೊಡ ಬೇಕಾಗುವದೆಂಬುವದನ್ನು ಲಕ್ಷ್ಯದಲ್ಲಿಟ್ಟುಕೊಳ್ಳಿರಿ.

ಇನ್ನು ಹೆಂಗಳೆಯರ ಕುರಿತು ವಿಚಾರಿಸುವಾ. ಇವರೇನು ಪುರುಷರಷ್ಟು ಪರಾಣಾತ್ಮ್ಯದಯುದವರಲ್ಲ ಯಾಕಂದರೆ ಹೆಣ್ಣುಮಕ್ಕಳೇ ತಾಯಿಯನ್ನು ಗಂಡು ಮಕ್ಕಳಿಗಿಂತಲೂ ಅಧಿಕವಾಗಿ

ಪ್ರೀತಿಸುವದುಂಟು. ಆದರೆ ಕೆಲವು ಹೆಂಗಳೆಯರು ಮಾತ್ರ ಪುರುಷರ ಸಂಸರ್ಗದಿಂದ ಅನ್ಯ ಭಾಷೆಗೆ ಮೋಹಿತರಾಗಿ, ಅರ್ಧಾಂಗಿಗಳೆಂಬ ನುಡಿಯನ್ನು ಸಾರ್ಥಕ ಗೊಳಿಸ ಹತ್ತಿದ್ದಾರೆ. ಇವರೇನು ಅನ್ಯಭಾಷೆಗೆ ಪುರುಷರಷ್ಟು ಮೋಹಿತರಾಗಿಲ್ಲ. ಆದರೆ ಇವರಲ್ಲಿಯೂ ೧೦೦ ಕ್ಕೆ ೯೯ ಜನರು ಊಟಣೀ ಸಮಯದಲ್ಲಿ ಅನ್ಯ ಭಾಷೆಯನ್ನೇ ಉಪಯೋಗಿಸುವರು. ಕರ್ನಾಟಕದ ಕಡುಕೊಂಪೆಯಲ್ಲಿದ್ದ ಹುಡುಗೆಯರು ಸಹ ಮರಾಠಿಯಲ್ಲಿಯೇ ಒಗಟುಗಳನ್ನು ಹಾಕಿದ್ದನ್ನು ಕಾಣದೇಯಿದ್ದವರು ಉತ್ತರ ಕರ್ನಾಟಕದಲ್ಲಿ ಪಾಪಿಗಳು. ಗಂಡಸರು ಸಹ ಪ್ರತಿಯಾಗಿ ಇಂಗ್ರೇಜಿಯಲ್ಲಿ ಒಗಟುಗಳನ್ನು ಹಾಕಿದನ್ನು ನಾನು ಕಣ್ಮುಟ್ಟ ನೋಡಿದ್ದೇನೆ. ಇಂಥ ಪ್ರಸಂಗಗಳಲ್ಲಿ ತಲೆತಗ್ಗಿಸಿಕೊಂಡು ಕುಳಿತುಕೊಳ್ಳಬೇಕಾಗುತ್ತದೆ. ನೆರೆದ ಹೆಂಗಳೆಯರಿಗೆ ತಿಳಿಯಬೇಕೆಂದು ಒಗಟುಗಳನ್ನು ಹಾಕುವ ರೂಢಿಯುಂಟು ಆದರೆ ಈಗಿನ ಕಾಲವೇ ಬೇರೆ. ನೆರೆದ ಹೆಂಗಳೆಯರಿಗ್ಗೆ ತಿಳಿಯಲಿ ತಿಳಿಯದಿರಲಿ! ಗಿಳಿಯಂತೆ ಬೆಳತನಕ ಪಾಠಮಾಡಿದ ಒಗಟುಗಳನ್ನು ಹಾಕಿದರೆ ತೀರಿತೆಂದು ಮನದಲ್ಲಿ ನಿಶ್ಚೈಯಿಸಿಕೊಂಡು ಈಗಿನ ಹೆಂಗಳೆಯರು ಕನ್ನಡನುಡಿಯ ಸೊಬಗನ್ನೇ ಕೆಡಿಸುತ್ತಿರುವರು. ಹೇಗಳೆಯರೇ, ಈ ತರದ ವರ್ತನವನ್ನು ಬಿಟ್ಟು, ಅನ್ಯಭಾಷಾನುಕರಣವೆಂಬ ಬೇಡಿಗಳನ್ನಂಟಿಸಿಕೊಂಡು ನರಳುತ್ತಿರುವ ಪುರುಷರನ್ನೂ ಸಹ ಪರಿವರ್ತನ ಗೊಳಿಸಿರೆಂದು, ಅಂಗಲಾಚಿ ಬೇಡಿಕೊಳ್ಳುತ್ತೇನೆ.

ತಮ್ಮ
ಭೀಮಸುತ

ಕಾನಪೂರ ಸಮಾಚಾರವು

ತಾ|| ೨೨-೧೧-೧೯೨೪

ಹುಬ್ಬಳ್ಳಿಯಿಂದ ತಾ|| ೬-೧೧-೧೯೨೪ ನೇ ದಿವ್ಸ ಡಾ. ಹರ್ಡೀಕರರವರ ಸಂಗಡ ಹೊರಟ ನಾವು- ಹನ್ನೊಂದು ಜನ ಸ್ವಯಂಸೇವಕರು ವಿಜಾಪೂರ, ಹುಟಗಿ, ಧೊಂಡ, ಮನಮಾಡ, ಝಾಂಸಿ ಈ ಸ್ಥಳಗಳ ಮೇಲೆ ಹಾಯ್ದು ತಾ|| ೧೦-೧೧-೧೯೨೪ ನೇ ದಿವ್ಸ ಬೆಳಗು ಮುಂಜಾನೆ ೬ ಘಂಟೆಗೆ ಕಾನಪೂರಿಗೆ ಬಂದು ತಲುಪಿದೆವು ಮುಂದೆ ೩-೪ ದಿವ್ಸಗಳಲ್ಲಿ ಇಬ್ಬರ ಹೊರತಾಗಿ ಎಲ್ಲ ಸ್ವಯಂಸೇವಕರು ಇಲ್ಲಿಯ ಸ್ವಯಂಸೇವಕರಿಗೆ ಶಿಕ್ಷಣ ಕೊಡುವದಕ್ಕಾಗಿ ಈ ಪ್ರಾಂತದ ಬೇರೆ ಬೇರೆ ಸ್ಥಳಗಳಿಗೆ ಕಳಿಸಲ್ಪಟ್ಟರು ಮತ್ತು ಡಾ. ಹರ್ಡೀಕರರಾದರೂ ಸ್ವಯಂ ಸೇವಕರನ್ನೂ ಕೂಡಿಸುವದಕ್ಕೋಸ್ಕರ ಈ ಪ್ರಾಂತದಲ್ಲಿ ತಿರುಗಹತ್ತಿದ್ದಾರೆ.

ಈ ಹೊತ್ತಿನ ವರೆಗೆ ಸುಮಾರು ೨೫೦ ಜನ ಸ್ವಯಂಸೇವಕರು ದೊರಕಿರುವರು ಇವರಲ್ಲಿ ಬಹು ಜನರು, ಸ್ವಯಂಸೇವಕರ ಶಿಕ್ಷಣವನ್ನು ಹೊಂದದೇ ಇದ್ದವರಿರುವರು. ಸ್ವಯಂ ಸೇವಕರಿಗೆ ದೊರಕಬೇಕಾದ ಶಿಕ್ಷಣಕ್ಕೆ ಸಾಕಾಗುವಷ್ಟು ವೇಳೆಯು ಉಳಿದಿರುವದಿಲ್ಲವಾದ್ದರಿಂದ ಶಿಕ್ಷಣವು ಅಷ್ಟು ತೃಪ್ತಿಕರವಾಗಿ ನಡೆದಿರುವದಿಲ್ಲ. ಈ ಪ್ರಾಂತದಲ್ಲಿ ಇವತ್ತಿನ ವರೆಗೆ ಇಡೀ ದಿವಸ ಕಾರ್ಯಕ್ರಮವುಳ್ಳ ಕ್ಯಾಂಪುಗಳಂತೂ ಪ್ರಾರಂಭವಾಗಿರುವದೇ ಇಲ್ಲ. ಯಾಕೆಂದರೆ ಇಲ್ಲಿಯ ಜನರು ಅಷ್ಟು ವೇಳೆಯನ್ನು ಇದಕ್ಕೋಸ್ಕರ ವ್ಯಯ ಮಾಡಲು ಸಿದ್ಧರಿರುವದಿಲ್ಲ. ಅಲ್ಲಲ್ಲಿ ಅನೇಕ ವರ್ಗಗಳು ಮಾತ್ರ ನಡೆದಿರುವವು. ಶಿಕ್ಷಿತ ಸ್ವಯಂಸೇವಕರ ಸಂಖ್ಯೆಯು ಅಶಿಕ್ಷಿತ ಸ್ವಯಂಸೇವಕರ ಸಂಖ್ಯೆಗಿಂತ ಸಣ್ಣದಿದ್ದರೂ ನಡೆಯುತ್ತದೆ. ಬೆಳಗಾವಿಯ ರಾಷ್ಟ್ರೀಯಸ್ವಯಂಸೇವಕರ ಸಭೆಯು ಸಲುವಾಗಿ ಕೆಲಸಮಾಡಿದ ಸ್ವಯಂಸೇವಕರಲ್ಲಿ ಬಹು ಜನರು ಶಿಕ್ಷಿತರಿದ್ದರು ಆಗ್ಗೆ ಒಟ್ಟು ಸಂಖ್ಯೆಯು ಸುಮಾರು ೯೦೦ ಇತ್ತು, ಇಲ್ಲಿಯ ಎಲ್ಲ ಸ್ವಯಂಸೇವಕರು ತೃಪ್ತಿಕರವಾದ ಶಿಕ್ಷಣವನ್ನು ಹೊಂದದವರಿರುವವದರಿಂದ ಕನಿಷ್ಠ ಪಕ್ಷಕ್ಕೆ ೧೨೦೦-೧೩೦೦ ಸ್ವಯಂಸೇವಕರಂತೂ ಬೇಕೇ ಬೇಕಾಗುವರು. ಇನ್ನು ಉಳಿದ ಸ್ವಲ್ಪ ದಿವಸಗಳಲ್ಲಿ ಇಷ್ಟು ಜನರನ್ನು ದೊರಕಿಸುವದು ಕಠಿಣ ವಾಗಿರುವದು. ಇದಕ್ಕೆ ಕಾರಣವೇನಂದರೆ:— ಇಲ್ಲಿ ಸ್ವಲ್ಪೇ ಜನರ ಹೊರತಾಗಿ ಉಳಿದವರಲ್ಲಿ ರಾಷ್ಟ್ರೀಯತ್ವವು ಅಷ್ಟು ಉಜ್ವಲವಾಗಿರುವದಿಲ್ಲ. ಆದುದರಿಂದ ಸ್ವಯಂಸೇವಕರಿಗ ಶಿಕ್ಷಣ ಕೊಡಲು ಬೇರೆ ಬೇರೆ ಕಡೆಗೆ ಹೋದ ಕರ್ನಾಟಕದ ಸ್ವಯಂಸೇವಕರ ಕೆಲಸವಾದರೂ ಅಸಮಾಧಾನಕರವಾಗಿರುವದು. ಒಟ್ಟನಮೇಲೆ ಸ್ವಯಂಸೇವಕರನ್ನು ಹೆಚ್ಚಾಗಿ ಮಾಡಿಸುವ ಕೆಲಸವು ಸಾಕಷ್ಟು ಸಮಾಧಾನ ಕರವಾಗಿಲ್ಲ. ಆದರೆ ಆದ ಕೆಲಸವು ಮಾತ್ರ ಚನ್ನಾಗಿ ಸಾಗಿರುವದು.

ರಾಷ್ಟ್ರೀಯ ಸಭೆಯ ಮಂಡಲದ ಕೆಲಸವಾದರೂ ಇಂದಿನ ವರೆಗೆ ಸಾಕಷ್ಟು ಚನ್ನಾಗಿ ಆಗಿರುವದಿಲ್ಲ. ಆದರೆ ಕೆಲಸವು ಮಾತ್ರ ಬಳ್ಳೇ ಗಡಿಬಿಡಿಯಿಂದ ನಡೆದಿರುವದು. ರಾಷ್ಟ್ರೀಯ ಸಭೆಯ ಮೈದಾನಕ್ಕೆ “ ತಿಲಕನಗರ ” ಎಂಬ ಹೆಸರನ್ನಿಟ್ಟಿರುವರು.

ನಾವು ಇಲ್ಲಿಗೆ ಬಂದಾಗ್ಗೆ ಅಷ್ಟು ಚಳಿ ಇದ್ದಿಲ್ಲ. ಆದರೆ ಈಗ್ಗೆ ಚಳಿಯು ದಿನ ದಿನಕ್ಕೆ ಹೆಚ್ಚುತ್ತಿರುವದು. ರಾಷ್ಟ್ರೀಯ ಸಭೆಯ ಅಧಿವೇಶನದ ಸುಮಾರಕ್ಕಂತೂ ತೀರ ಹೆಚ್ಚಾಗುವುದೆಂದು ಇಲ್ಲಿಯವರು ಹೇಳುತ್ತಿರುವರು. ಆದುದರಿಂದ ಕಾನಪೂರ ಕಾಂಗ್ರೆಸಕ್ಕೆ ಬರತಕ್ಕವರು ಥಂಡಿಯ ಬಗ್ಗೆ ಯೋಗ್ಯ ಏರ್ಪಾಡುಮಾಡಿಕೊಂಡೇ ಬರಬೇಕು.

ಕರ್ನಾಟಕದ ಸ್ವಯಂಸೇವಕ

ಶ್ಯಾಮಲಾ ದೇವಿಗೆ

ನನ್ನ ನಾಲ್ಕು ಒಳಿಗಳನ್ನು ನಿಮ್ಮ ವರ್ತಮಾನ ಪತ್ರದಲ್ಲಿ ಛಾಪಿಸಬೇಕು ಅಂತ ಬಿನ್ನಹ ಮಾಡಿಕೊಳ್ಳುತ್ತೇನೆ.

ಕನ್ನಡಿಗಾ; ಕನ್ನಡಿಗಾ ನನ್ನಡಿಗೆ ಬಾರೋ|
ಹನ್ನೆರಡು ತಿಂಗಳು ಹೊಸಸುದ್ದಿ ತೋರೋ||
ಕನ್ನಡ ಹೆಂಗಸರ ಉನ್ನತೀ ಮಾಡೂ|
ನಿನ್ನಂಥವರೆ ನಿನಗ ಸಿಗಲೆಪ್ಪಾ ಜೋಡೂ||

ನಮ್ಮ ಯನಿವಳಗೂ ನಿಮ್ಮ ಪತ್ರ ತರಿಸತಾರೆ. ಕೆಲಸ ಬೊಗಸಿ ತೀರಿದಾಗ ಆಪತ್ರ ನಮ್ಮ ಕೈಗೆ ಸಿಕ್ಕಾಗ ನಾನು ಓದತೇನಿ. ಏನಾರೆ ಬರಿಬೇಕು ಅಂತಾ ಮನಸಿನಾಗ ಬರತಿತ್ತು. ಏನು ಬರೀಲಿ ಹ್ಯಾಂಗ ಬರೀಲಿ ಅಂತಾ ಆಲೋಚನಿ ಆಗಿತ್ತು. ಮನ್ನೆ ಒಂದೆರಡು ಸರ್ತೆ ಶ್ಯಾಮಲಾದೇವಿ ಅಂಬಾಕೆ ಬರದದ್ದು ಓದಿ ಧೈರ್ಯ ಮಾಡಿದೆ.

ಶ್ಯಾಮಲಾ ಬಾಯಿ ಬರದಾಳೆ. ಆಕೀಮಾತು ಒಂದೊಂದು ನಮಗೆ ತಿಳುದಲ್ಲ ಸಹಾ. ಆಕಿ ಇಂಗ್ರೇಜಿ ಕಲ್ತು ಖುರ್ಚಿಮ್ಯಾಲ ತಾ ಕುತು ಗಂಡನ್ನ ಹಿಂದಕ್ಕೆ ನಿಂದರಿಸಿ ತಸವೀರು ತಗಿಸಿಕೊಂಡಿದ್ದಾಳು. ತನ್ನಾಂಗ ಎಲ್ಲಾರು ಸುಖಿ ಅಂತ ತಿಳಕೊಂಡು ಬರದಾಳ ಕಾಣಸತದ. ಈಗ ಎಲ್ಲಾ ಬಿಟ್ಟು ಆರೇಮಾತಿನ ಒಗಟದ್ದೇನು ಬೇಕಾಗಿತ್ತೋ ಹುಡುಗರೇನು ಕಲಿಸಿಧಾಂಗ ಕಲಿತಾವ.

ನಾವು ಕನಡು ಒಗಟಾ ಕಲಿಸಿದರ ಕನಡೇ ಹಾಕತಾವ. ಬಹಳ ದಿವಸ ಆರೇ ಮಾತು ಕೂಡ್ಯಾವ ಒಮ್ಮಿಗಿಲೆ ಹ್ಯಾಂಗ ಹೋದಾವು ಪ್ಯಾಟೆಂದ ವಿಜಪಾಡದ ಅಕ್ಕೀ ತರಸಿರತೇವು ಅದರಾಗಿನ ಹರಳು ಒಮ್ಮಿಗೀಲೆ ಹೋಗುದಲ್ಲ. ಎಷ್ಟೋ ಸರ್ತೆ

ಕನ್ಯಾಗ ಕಣ್ಣಿಟ್ಟು ಆರಸಬೇಕಾಗತದ. ಹೋದಾವ್ರು ರಂಡೇವ್ರು ಆ ಕೇ ಮಾತು ಅವೇನು ಕಡಿತನಕಾ ಇದ್ದಾವ.

ನಮ್ಮ ಹಳ್ಳೀ ಒಳಗ ಇರೋ ಹೆಂಗಸರ ಪಡಿಪಾಟಾ ತಿಳ ಕೊಂಡು ಶಹರದ ಹೆಂಗಸರ ಹಾಂಗ ಇವರೂ ಆಗಲಿ ಅಂತಾ ಶ್ಯಾಮಲಾ ಬಾಯಿ ಬರಿಬೇಕಾಗಿತ್ತು. ಒಂದ ರೀತಿಗೆ .ಆಕೀ ಮಾತಿನ ವರೇ ಬೇಕು. ನಮ್ಮವರು ಬ್ಯಾಡಾ. ನಮ್ಮೂರಿಗೆ ಒಬ್ಬ ಕೊಂಕಣ ಸ್ತ ಲೈನ ಕಾರ್ಕೂನರು ಬಂದಿದ್ದರು. ಆ ಪ್ರಾಣಿ ತಮ್ಮ ಹೆಂಡತಿಗೆ ಹೋಗರಿ ಬರ್‍ರಿ ಅಂತಾ ಎಷ್ಟು ಮಿದವ್ರ ಮಾತಾಡತಿದ್ದರು. ನಮ್ಮಲ್ಲಿ ನೋಡ್ರಿ. ಮಾತಾಡಲಿಕ್ಕೆ ಕಳವು ಓದಿಕೋತ ಕೂತಾ ಳೇನೋ ಅಡಗಿದಾರವಂಪ್ಪ ಮಾಡಬೇಕೇನು ಅಂತಾ ಕಣ್ಣು ತಗೀತಾರೆ. ಕೌರ ಮನೀ ಅವರು ಓದಲಿಕ್ಕೆಕಲಿಸಿದ್ದ ತಪ್ಪಾಗೇದ. ಕಲ್ತದ್ದನ್ನು ಅಳಸಲಿಕ್ಕೆ ಬರತಿದ್ದರೆ ಸಾರಣೀ ಅರಿವೀ ತಿಕ್ಕಿ ಇಷ್ಟೊತ್ತಿಗೆ ಅಳಿಸಿಬಿಡುತಿದ್ದರು. ಇನ್ನೂ ನಮ್ಮವರು ಹತ್ತು ಪಾಲಿಗೆ ಬೇಕು. ನೆರಮನ್ಯಾಗ ಒಬ್ಬ ಆಚಾರಿದ್ದಾರ ಅವರನಕಾ ಆದೇನು ಮಾಡತದೋ ಖೋಡಿ ಎಲ್ಲಿ ಹೋಗಿ ಕೂತ್ಯು? ಹಿಂಗೇ ಹೆಂಡತಿಗೆ ನೊಸಿಗೆ ಅಂತಾರ. ಹೆಂಗಸರು ಮೊದಲು ಸುಸೂತ್ರ ಇರೋ ಹಾಂಗ ಎಲ್ಲಾರು ಮನಸ್ಸಿನಮೇಲೆ ತಗೊಂಡ್ರ ನೆಟ್ಟಗಾಗತದ, ಇಷ್ಟು. ನನ್ನ ಅಂಬೋಣ.

ಹಳ್ಳೀ ಮುಕ್ತ್ಯಮ್ಮ

ರೇಲ್ವೇ ಬಗ್ಗೆ.

ವೀರಮಂಗ್ಲ ಪುತ್ತೂರು.

ಮ. ರಾ. ರಾ. ಸಂಪಾದಕ "ಕನ್ನಡಿಗ" ಇವರಿಗೆ—

ವೆಂಕಟ್ರಮಣ ಹೆಬ್ಬಾರನ ನಮಸ್ಕಾರಗಳು—

ತಾವು ಕಳುಹಿದ ರೈಲ್ವೆ ಬೋರ್ಡಿಗೆ ಕಳುಹಿಸತಕ್ಕ ಅರ್ಜಿಗೆ ೭೨ ಸಹಿಗಳನ್ನು ಮಾಡಿಸಿ ತಮ್ಮೆಡೆಗೆ ರವಾನಿಸಿರುತ್ತೇನೆ.

ರೈಲ್ವೆ ಬೋರ್ಡಿಗೆ ಕಳುಹಿಸ ತಕ್ಕ ಅರ್ಜಿಯಲ್ಲಿ ಸ್ವಲ್ಪು ಬದಲಾವಣೆಯಾಗುವುದು ಅತ್ಯವಶ್ಯವೆಂದು ನಾನು ಕಳುಹಿಸಿರುವ ಅರ್ಜಿಯಲ್ಲಿ ದಸ್ಕತು (ಸಹಿ) ಹಾಕುವವರ ಅಭಿಪ್ರಾಯವಿದೆ. ರೈಲು ಹಾಕಬೇಕಾದ ಹೊಸಯೋಜನೆಯಲ್ಲಿ (೨) ಮೈಸೂರ-ಮಡಿಕೇರಿಗೂ ಎಂದಿದೆ. ಮೈಸೂರ-ಮಡಿಕೇರಿ ಮಂಗಳೂರಿಗೂ ಎಂಬದಾಗಿರುವ ದಿಲ್ಲವಲ್ಲವೆ? ಮಂಗಳೂರಿಗೂ ಎಂದಿರ ಬೇಕಿತ್ತು. ಮಡಿಕೇರಿವರೆಗೆ ಬಂದುದು ಮಂಗಳೂರುವರೆಗೆ ಬಂದರೆ ಹೆಚ್ಚಿನ ಸೌಕರ್ಯಗಳಿವೆ. ಮಡಿಕೇರಿಯ ಕಾಫಿ, ಏಲಕ್ಕಿ, ಕಿತ್ತಳೆಗಳನ್ನು ಎತ್ತು ಗಾಡಿಗಳಲ್ಲಿ ಮಂಗಳೂರಿಗೆ ಪ್ರತಿ ವರ್ಷವೂ ಸಾಗಿಸುತ್ತಾರೆ. ಕೊಡಗು ಸ್ಟೇಟಿನ ತಲೆ ಕಾವೇರಿಗೆ ತುಲಾಮಾಸದಲ್ಲಿ ನಮ್ಮ ಜಿಲ್ಲೆಯಿಂದ ನೂರಾರು ಜನರು ಯಾತ್ರೆಗಾಗಿ ಹೋಗುತ್ತಿರುತ್ತಾರೆ. ಮಂಗಳೂರಿಂದ ಹಂಚು ಇತ್ಯಾದಿ ಸಾಮಾನುಗಳು ಮಡಿಕೇರಿಗೆ ಗಾಡಿಗಳಲ್ಲಿ ಹೋಗುತ್ತಿರುತ್ತವೆ. ಮಂಗಳೂರಿಂದ ಮಡಿಕೇರಿಗೆ ರೈಲ್ವೆಯಾದರೆ ಇವುಗಳಿಗೆಲ್ಲ ಬಹಳ ಅನುಕೂಲವಾಗುವದು. ಪ್ರವಾಸಕ್ಕೂ ಅನುಕೂಲವಾಗುವದು. ಈಗಾಗಲೇ ಪುತ್ತೂರಿಂದ ಮಡಿಕೇರಿಗೆ ಮೋಟಾರುಗಳಾಗಿವೆ. ಪಶ್ಚಿಮ ದಂಡೆಯಲ್ಲಿ ಒಂದು ಪ್ರಾಮುಖ್ಯ ಬಂದರಾಗಬಹುದಾದ ಮಂಗಳೂರಿಗೆ ಹೆಚ್ಚಿನ ಸೌಲಭ್ಯತೆಯುಂಟಾಗುವುದು. ಗಟ್ಟದ ಮೇಲಿನವರಿಗೂ ದಕ್ಷಿಣ ಕನ್ನಡದವರಿಗೂ ಬಳಕೆಯುಂಟಾಗಿ, ತಪ್ಪಾರಕರ್ನಾಟಕದ ಏಕೀಕರಣಕ್ಕೂ ಸಹಾಯವಾಗುವುದು. ಮೂಲೆಯಲ್ಲಿದ್ದ ಕೊಡಗನ್ನೂ ಹೊರತಂದು ಬೆಳಕು ಹಾಯಿಸಿದಂತಾಗುವುದು. ಆದುದರಿಂದ ತಾವು ಈ ವಿಷಯಗಳನ್ನು ಪರ್ಯಾಲೋಚಿಸಿ, ನಮ್ಮ ಜಿಲ್ಲೆಯ ಇತರ ಕನ್ನಡಿಗರೊಡನೆ ವ್ಯವಹಾರ ಬೆಳಸಲು ಅನುವಾಗುವಂತೆ (೨) ಮೈಸೂರು- ಮಡಿಕೇರಿ- ಮಂಗಳೂರಿಗೂ ಎಂದು ಅರ್ಜಿಯಲ್ಲಿ ಬದಲಾವಣೆ ಮಾಡಬೇಕೆಂದು ನನ್ನ ಅಭಿಮತವಿದೆ. ತಾ|| ೨೧-೧೧-೨೫

ವರ್ತಮಾನಸಾರ

ಇಹವೃತ್ತ

ಕಳೆದವಾರದಲ್ಲಿ ಮುನಸೀ ಪಾಲ್ಟಿಯ "ನಗರವನ"ವು ಕಮೀಶನರ ಸಾಹೇಬರಿಂದ ತೆರೆಯಲ್ಪಟ್ಟಿತು. ಅಧ್ಯಕ್ಷರಾದ ಶ್ರೀ ನಾಗರಾಕ್ಷದವರು ಮೊದಲು ತಮ್ಮ ಈ ಮಧ್ಯವರ್ತಿ 'ನಗರ ವನ'ದ ಹೊರ್ತಾಗಿ ಪಟ್ಟಣದ ಬೇರೆ ಬೇರೆ ಭಾಗಗಳಲ್ಲಿ ಕನಿಷ್ಟ ೩-೪ ಚಿಕ್ಕ ವನಗಳನ್ನು ಏರ್ಪಡಿಸುವ ವಿಚಾರವಿದೆಯೆಂದು ಹೇಳಿದರು. ಈ ಮಧ್ಯವರ್ತಿ ನಗರವನದಲ್ಲಿ ಕಾರಂಜಿಯನ್ನು ಬೇಗನೇ ಕಟ್ಟಿಸುವೆವೆಂದೂ, ಈಗ್ಗೆ ೩-೪ ಸಾವಿರ ರೂಪಾಯಿ ಇದಕ್ಕೆ ವೆಚ್ಚವಾಗಿದೆಯೆಂದೂ ಹೇಳಿದರು ಈ ನಗರವನದ ವಿಷಯದಲ್ಲಿ ಉಪಾಧ್ಯಕ್ಷರಾದ ಶ್ರೀ ಧಾರವಾಡ ಯಾಲಗುರ್ದರಾಯರು ಬಹಳೇ ಮನಸ್ಸು ಹಾಕಿರುವರು ಈ ವನದಮಧ್ಯದಲ್ಲಿ ವರ್ತುಲಾಕಾರವಾಗಿ ನೋಪಾನಗಳುಳ್ಳ ೩-೪ ಅಂತಸ್ತಿನ ಕಟ್ಟಡವನ್ನು ಕಟ್ಟಿಸಿ, ಅದರ ತುದಿಯಲ್ಲಿ ಗಡಿಯಾರವನ್ನಿರಿಸಬೇಕೆಂದು ಇವರ ವಿಚಾರವಿದೆ ಈ ಗಡಿಯಾರದ ನಾಲ್ಕೂ ದಿಕ್ಕಿನಲ್ಲಿ ಮುಳ್ಳುಗಳಿರಬೇಕಾಗಿಯೂ, ಊರಲ್ಲಿಯ ಯಾವಭಾಗದಿಂದ ನೋಡಿದರೂ ಅದುಕಾಣಿಸುವಂತೆ ಎತ್ತರವಿರಬೇಕಾಗಿಯೂ ಗಂಟೆಯು ಊರವರಿಗೆ ಕೇಳಿಸುವಂತೆ ದೊಡ್ಡದಾಗಿರಬೇಕಾಯೂ ಇವರ ವಿಚಾರವಿದೆ ಆದರೆ ದುಡ್ಡಿನ ಅನುಕೂಲತೆಯಿದ್ದಂತೆ ಈ ಕಾರ್ಯದಲ್ಲಿ ಸಾವಕಾಶವಾಗಿ ಪ್ರಗತಿಯಾಗುವದು. ಇರಲಿ. ಕಮೀಶನರು ತಮ್ಮ ಭಾಷಣದಲ್ಲಿ ಊರ ಮುಖಂಡರು ತಮ್ಮ ತಮ್ಮೊಳಗೆ ಜಗಳಾಡುವದನ್ನು ಬಿಡಬೇಕಾಕೆ ಹೇಳಿದರು. ಆದರೆ ಈ ಕಡೆಗೆ ಯಾರು ಲಕ್ಷ್ಯ ಕೊಡುವರೋ ನೋಡಬೇಕು.

'ನಗರವನದ' ಕಾರ್ಯ ಮುಗಿದ ಕೂಡಲೇ ಕಮೀಶನರು ಕಲೆಕ್ಟರರೊಂದಿಗೆ ಬಸವೇಶ್ವರ ಹಾಯಸ್ಕೂಲಿಗೆ ತಾಂಬೂಲ ಸಮಾರಂಭಕ್ಕಾಗಿ ತೆರಳಿದರು. ಇಲ್ಲಿ ಜನ ಸಮ್ಮರ್ದನವು ಹೆಚ್ಚಾಗಿದ್ದಿತು ಕಾರ್ಯದರ್ಶಿಗಳಾದ ಶ್ರೀ ಕಲಬುರ್ಗಿಯವರು ಮಾನಪತ್ರವನ್ನೋದಿದರು. ೪೯ ಸಾವಿರ ರೂಪಾಯಿ ಶಿಲ್ಕು ಇದ್ದ ಬಗ್ಗೆ ತಿಳಿಸಿದರು ಇಷ್ಟು ಹಣವು ಇದ್ದ ಮೇಲೆ ಸ್ವತಂತ್ರವಾದ ಕಟ್ಟಡವನ್ನು ಬೇಗನೇ ಕಟ್ಟಿಸಿ, ಶಾಲೆಯ ಎಲ್ಲ ವ್ಯವಸ್ಥೆಯನ್ನು ಚೆನ್ನಾಗಿ ಮಾಡಬೇಕಾಗಿ ಸಾಹೇಬರು ಹೇಳಿದರು

ಮುಂಬೈ ಕರ್ನಾಟಕ

ಚಂದ್ರೋದಯ ಪತ್ರವು ಧಾರವಾಡದಲ್ಲಿ ಶ್ರೀ ಹೊನ್ನಾಪೂರಮಠದ ಗದಿಗೆಯ್ಯನವರ ಸಂಪಾದಕತ್ವದಲ್ಲಿ ಪುನಃ ಪ್ರಾರಂಭವಾಗುವದು

ಬೆಳಗಾವಿಯಲ್ಲಿಯ ಅಭಿನವ ವಿಜಯನಗರದಲ್ಲಿ ಕಾಂಗ್ರೆಸ ಕಾಲಕ್ಕೆಕಟ್ಟಿದ ಪಂಪಾಸರೋವರದಲ್ಲಿ ಅರ್ಧ ಆಣೆ ತೆರಿಗೆಯನ್ನು ಕೊಟ್ಟು ಸ್ನಾನ ಮಾಡಬೇಕಾಗಿ ಅಲ್ಲಿಯ ಮುನಸೀಪಾಲಿಟಿಯವರು ಗೊತ್ತು ಮಾಡಿದ್ದಾರೆ.

ಹುಬ್ಬಳ್ಳಿಯಿಂದ ಸೊಲ್ಲಾಪೂರಕ್ಕೆ ಸದರ್ನ ಮರಾಠಾ ರೇಲವೇ ಹಳಿಗಳನ್ನು ಹಾಕಲು ಅಪ್ಪಣೆ ದೊರೆತಿದೆ. ಇದರಿಂದ ಸೊಲ್ಲಾಪೂರಕ್ಕೆ ಹೋಗುವ ಜನರು ಹುಬ್ಬಳ್ಳಿಯಲ್ಲಿ ಗಾಡೀ ಬದಲು ಮಾಡುವ ಕಾರಣವಿಲ್ಲದಂತಾಗುವದು.

ವಿಜಾಪೂರದ ಛತ್ರೀ ನಾಟಕಗ್ರಹದಲ್ಲಿ ಶ್ರೀ ಗಂಗಾಧರರಾವ ದೇಶಪಾಂಡೇಯವರ ವ್ಯಾಖ್ಯಾನವು ಖಾದಿಯ ಮಹಾತ್ಮ್ಯೆಯ ಮೇಲೆ ಮರಾಠಿಯಲ್ಲಿ ಆಯಿತು. ಕರ್ನಾಟಕದಲ್ಲಿ ಕನ್ನಡದಲ್ಲಿಯೇ ಮಾತನಾಡುವ ಆವಶ್ಯಕತೆಯು ಇವರಿಗೆ ಇನ್ನೂ ಗೊತ್ತಾಗದಿದ್ದುದು ಶೋಚನೀಯವು!

ಮದ್ರಾಸ ಕರ್ನಾಟಕ

ಡಾ. ಯು. ರಾಮರಾಯರು 'ಕೌನ್ಸಿಲ್ ಆಫ್ ಸ್ಟೇಟಿಗೆ" ಆರಿಸಲ್ಪಟ್ಟಿದ್ದರಿಂದ ಮದ್ರಾಸ ಕಾಯದೇ ಮಂಡಲದ ಅವರ ಸ್ಥಳಕ್ಕೆ ದಕ್ಷಿಣ ಕನ್ನಡ ಜಿಲ್ಹೆಯಿಂದ ಶ್ರೀ. ಕೆ. ರಾಮನಾಥ ಶೆಣೈ ಬಿ. ಎ. ಎಲ್. ಎಲ್. ಇವರು ಉಮೇದವಾರರಾಗಿದ್ದಾರೆ.

ಶಿವಸಮುದ್ರದಲ್ಲಿ ಈ ವರ್ಷದ ನೆರೆಯಿಂದ ಹಾಳಾದ ಸೇತುವೆಯನ್ನು ಪುನಃ ಕಟ್ಟಿಸಲು ೨ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಬೇಕಾಗಿ ಕೊಯಿಮತ್ತೂರ ಜಿಲ್ಹಾ ಬೋರ್ಡಿನವರು ಮದ್ರಾಸ ಸರಕಾರದವರಿಗೆ ಪ್ರಾರ್ಥಿಸಿದ್ದಾರೆ.

ಬಳ್ಳಾರಿಯ ನಾಮದಾರ ಸಯ್ಯದ ಮಹಮ್ಮದ ಬಕ್ಷರವರು ಪುನಃ 'ಕೌನ್ಸಿಲ್ ಆಫ್ ಸ್ಟೇಟ'ಗೆ ಆರಿಸಲ್ಪಟ್ಟಿದ್ದಾರೆ.

೧೯೩೬ ನೇ ಇಸ್ವಿ ಎಪ್ರೀಲದಿಂದ ವಿದ್ಯುದ್ದೀಪಗಳ ಬೆಲೆಯನ್ನು ಕಡಿಮೆ ಮಾಡಬೇಕಾಗಿ ಉದಕಮಂಡಲ ಮುನಸಿಪಾಲ್ಟಿಯವರು ನಿಶ್ಚಯಿಸಿದ್ದಾರೆ.

ಪುತ್ತೂರಿನಲ್ಲಿ ಒಂದು ಮನೆಯಲ್ಲಿ ವಿವಾಹವಾದ ನಂತರ ಮೆರವಣಿಗೆಗಾಗಿ ಜನರೆಲ್ಲ ಹೋದಾಗ್ಗೆ ಲಗ್ನ ಮಂಟಪಕ್ಕೆ ಬೆಂಕಿ ತಗಲಿ, ಅದು ಸುಟ್ಟುಬೂದಿಯಾಯಿತು. ಪ್ರಾಣಹಾನಿಮಾತ್ರ ಆಗಿಲ್ಲ.

ಮೈಸೂರ ಕರ್ನಾಟಕ

ಬೆಂಗಳೂರಲ್ಲಿ ಮುಸಲ್ಮಾನ ಗೋಷೆಯ ಸ್ತ್ರೀಯರ ಸಲುವಾಗಿ ಪ್ರತ್ಯೇಕವಾದ ಔಷಧಾಲಯವು ೨೪ ನೇ ತಾ|| ದಿನ ಪ್ರಾರಂಭವಾಯಿತು. ಸರ ಹಾಜೀ ಇಸ್ಮಾಯಿಲ್ಲ ಸೇಠರವರು ೧ ಲಕ್ಷ ರೂಪಾಯಿಗಳನ್ನು ಇದಕ್ಕೆ ದಾನ ಮಾಡಿದ್ದಾರೆ.

ಕೊಡಗು ಕರ್ನಾಟಕ

ಕೊಡಗಿನ ಹರದಾಸ ಅಪ್ಪಚ್ಚ ಕವಿ ಇವರು ೧೯ ನೇ ತಾ| ದಿನ ಶಾಕೋಟೆಪರಂಬುನ ಶಾಲೆಯಲ್ಲಿ ಧ್ರುವಚರಿತ್ರೆಯನ್ನು ಹರಿಕಥೆ ರೂಪದಲ್ಲಿ, ಮನೋರಂಜಕವಾದ ಅತೀ ವಾಕ್ಯರಚನೆಯಿಂದಲೂ ಪದ್ಯರಚನೆಯಿಂದಲೂ ಕೇಳಲು ಅತೀ ಉತ್ಸಾಹ ಹುಟ್ಟುವ ಹಾಗೆ ಹೇಳಿದರು.

ನಿಝಾಮ್ ಕರ್ನಾಟಕ

ನಿಝಾಮ ಕರ್ನಾಟಕ ಸುದ್ದಿಗಳು ಗೊತ್ತಾಗುವದೇ ಇಲ್ಲ ಅನೇಕ ಸಲ ಅಲ್ಲಿಯ ಜನರಿಗೆ ವಿನಂತಿ ಮಾಡಿಕೊಂಡಿದ್ದರೂ ಸಹ, ಸುದ್ದಿಯ ಓಲೆಗಳನ್ನು ಯಾರೂ ಕಳಿಸಲೊಲ್ಲರು. ಓರ್ವನಿಗಾದರೂ ಇಲ್ಲಿ ಕರ್ನಾಟಕದ ಅಭಿಮಾನವಿಲ್ಲವೇ?

ಹಿಂದುಸ್ಥಾನ

ಅಮರಾವತಿಯಲ್ಲಿ ಕೂಡತಕ್ಕ ಬ್ರಾಹ್ಮಣೇತರ ಕಾಂಗ್ರೆಸದ ೨ ನೇ ಅಧಿವೇಶನಕ್ಕೆಮದ್ರಾಸದಿಂದ 'ಸ್ಪೆಶಲ್‌ಟ್ರೇನ' ದಿಸೆಂಬರ ೨೫ ನೇ ತಾ|| ದಿನ ಹೊರಡುವದು.

ಕಾನಪೂರ ಕಾಂಗ್ರೆಸ ಸಮಯದಲ್ಲಿ ಅಖಿಲ ಭಾರತೀಯ ಸಂಸ್ಥಾನ ಪರಿಷತ್ತು ಕೂಡುವದು.

ಮೌಲಾನಾ ಶೌಕತ ಅಲ್ಲೀಯವರು ಬಿಹಾರ ಪ್ರಾಂತದಲ್ಲಿ ಪ್ರವಾಸಮಾಡುತ್ತಲಿದ್ದಾರೆ.

ನ. ೨೫ ನೇ ತಾ| ಆನಿಬಿಸೆಂಟ ಅಮ್ಮನವರು ವಿಲಾಯಯಿಂದ ಮುಂಬೈ ಮದ್ರಾಸಕ್ಕೆ ಬಂದರು.

ಮದ್ರಾಸದಲ್ಲಿ ಒಂದು ಸಂಗೀತ ವಿದ್ಯಾಲಯವನ್ನು ಪ್ರಾರಂಭಿಸಬೇಕೆಂಬದಾಗಿ ಸಂಗೀತ ವಿದ್ವಾನ್ ಸಾಂಬಮೂರ್ತಿ ದೊರೆಸ್ವಾಮಿ ಅಯ್ಯರ, ಶ್ರೀನಿವಾಸ ಅಯ್ಯಂಗಾರ ಇವರು ಪ್ರಯತ್ನಿಸುತ್ತಲಿದ್ದಾರೆ. ಕರ್ನಾಟಕೀ ಹಿಂದುಸ್ಥಾನೀ ಪದ್ಧತಿಗಳೂ, ಪಾಶ್ಚಿಮಾತ್ಯ ಸಂಗೀತವೂ ಶಾಸ್ತ್ರೀಯ ನರ್ತನ, ಹರಿಕೀರ್ತನೆ ಇವೆಲ್ಲ ಇಲ್ಲಿ ಕಲಿಸಲ್ಪಡುವವು.

ದಿಸೆಂಬರ ೨೦ ನೇ ತಾ|| ವರೆಗೆ ಹಿಂದುಸ್ಥಾನ ಸರಕಾರದಲ್ಲಿ ಮಹಾರಾಣಿ ಅಲೇಕ್ಝಾಂಡ್ರಾ ಇವರ ಮರಣದ ಸಲುವಾಗಿ ದುಃಖ ಪ್ರದರ್ಶಕವಾದ ಕರೇ ನಿಶಾನೆಗಳೂ, ಕಾಗದ ಪತ್ರಗಳೂ ಪ್ರಚಾರದಲ್ಲಿ ಇರುವವು

ಹಿಂದುಸ್ಥಾನ ಸರಕಾರದವರು ದಕ್ಷಿಣ ಆಫ್ರಿಕೆಗೆ ಹೋಗಬೇಕೆಂದು ಗೊತ್ತು ಪಡಿಸಿದ ಶಿಷ್ಟ ಮಂಡಲವು ನವಂಬರ ೨೯ ನೇ ತಾ| ದಿನ ಮುಂಬೈಯಿಂದ ಹೊರಟಿತು.

ಅಹಮ್ಮದಾಬಾದ ಸತ್ಯಾಗ್ರಹ ಆಶ್ರಮದಲ್ಲಿ ಕೆಲವು ಅನಿಯಮಿತತನವುಂಟಾಗಿದ್ದರಿಂದ ಮಹಾತ್ಮರು ಒಂದು ವಾರದವರೆಗೆ ಉಪವಾಸ ಮಾಡಿದರು.

ಇಂಗ್ಲೀಷ ೪-೫-೬ ನೇ ವರ್ಗಗಳಲ್ಲಿ ಶಿಕ್ಷಣವನ್ನು ಇಂಗ್ಲೀಷಿನ ಬದಲಾಗಿ ದೇಶ ಭಾಷೆಗಳಲ್ಲಿಯೇ ಕೊಡಬಹುದಾಗಿ ಮದ್ರಾಸ ಸರಕಾರದವರು ಮಾಧ್ಯಮಿಕ ಶಿಕ್ಷಣ ಸಂಸ್ಥೆಗಳಿಗೆ ತಿಳಿಸಿದ್ದಾರೆ

ಮುಂಬೈ ಗಿರಣಿಗಳಲ್ಲಿಯ ಕೂಲಿಕಾರರಿಗೆ ಜಯವು ದೊರೆಯಿತು. ಅವರ ಮೊದಲಿನ ಸಂಬಳವು ಅವರಿಗೆ ದೊರೆಯುವದು ಕಾರಸರದವರು ಹತ್ತಿಯಮೇಲಿನ ತೆರಿಗೆಯನ್ನು ಪಡಿಸಿದ್ದಾರೆ. ಈ ಕೂಲಿ ಜನರಿಗೆ ಹಿಂದುಸ್ಥಾನವು ಋಣಿಯಾಗಿರಬೇಕು. ಯಾಕಂದರೆ ಕೂಲಿಕಾರರು ಶಾಂತರಾಗಿರದಿದ್ದರೆ ಸರಕಾರದ ಅಂತಃಕರಣವು ಕರಗುತ್ತಿರಲಿಲ್ಲ.

ಪರದೇಶ

ಜರ್ಮನ್ ಕೈಸರನಿಗೆ ಈಗಾಗಲೇ ೨೫ ಲಕ್ಷ ಪೌಂಡುಗಳ ಮಶಾಶನವು ದೊರೆಯುತ್ತದೆ. ಆದರೆ ಬೇರೆ ಬೇರೆ ರೂಪದಿಂದ ತನಗೆ ೫ ಕೋಟಿ ಪೌಂಡುಗಳು ದೊರೆಯಬೇಕೆಂದು ಈಗ್ಗೆ ಪ್ರಯತ್ನಿಸುತ್ತಿರುವನು. ಸರಕಾರವು ಇದಕ್ಕೆ ಒಪ್ಪದಿದ್ದರೆ ನ್ಯಾಯ ಕೋರ್ಟಿನ ವರೆಗೆ ಈ ವಿಷಯವು ಹೋಗುವದೆಂದು ಕೈಸರನ ವಕೀಲರು ಗದ್ದರಿಸುತ್ತಲಿದ್ದಾರೆ. (ಗದರಿಸದೇ ಬಿಡುವದೇಕೆ? ವಕೀಲರ ಫೀ ದೊರೆಯುವದು!)

ಗ್ರೀಸದಲ್ಲಿ ೩೦ ಹಳೇ ಗೋರಿಗಳು ದೊರೆತಿವೆ. ಅವುಗಳಲ್ಲಿ ಸುವರ್ಣ ಆಭರಣಗಳೂ ಇತರ ಪ್ರಾಚೀನ ವಸ್ತುಗಳೂ ಇವೆ. ಇವುಗಳಿಂದ ಗ್ರೀಸದ ಇತಿಹಾಸಕ್ಕೆ ಬಹಳೇ ಉಪಯೋಗವಾಗುವದು.

ರೇಲವೇ ಬೋರ್ಡಿನ ಸುದ್ದಿ

ಈ ಸಹಿಗಳೆಲ್ಲ ಈ ತಿಂಗಳಲ್ಲಿಯೇ ಸಿಮ್ಲಾಕ್ಕೆ ಕಳುಹಿಸಲ್ಪಡುವವು. ಆದುದರಿಂದ ಚಂದಾದಾರರು ಇನ್ನು ಏನೂ ವಿಲಂಬ ಮಾಡದೇ ಎಲ್ಲ ಅರ್ಜಿಗಳನ್ನು ಸಹಿಮಾಡಿಸಿ ಕೂಡಲೇ ಕಳಿಸಬೇಕು. ತಡ ಮಾಡಿದರೆ ಉಪಯೋಗವಾಗದು.

ಕೆಳಗೆ ಕಾಣಿಸಿದವರಿಂದ ಅರ್ಜಿಗಳು ಬಂದಿವೆ:— ತುಳಜಪ್ಪಾ ಫಕ್ಕೀರಪ್ಪಾ ಮೋಹರವಾಡೇ ಸಾ|| ರಾಣೇಬಿನ್ನೂರ=೬೭; ಜಯತೀರ್ಥಾಚಾರ್ಯ ಅಗ್ನಿಹೋತ್ರಿ. ಗುಲಬುರ್ಗಾ=೨೯; ಬಿ. ಸೂರಪ್ಪಯ್ಯಾ ಹೆಬ್ಬಾರ. ಡಿ. ಬೋ. ಮೆಂಬರ ಬೈಂದೂರ=೧೮೦; ಎಚ್. ರಂಗರಾವ ಮಂಟೂರ=೧೨೩; ಅಯ ಜಿ. ಮಾದಪ್ಪಾ ಅಮ್ಮಟ್ಟಿ, ಕೊಡಗು=೧೧೮; ಗೋಪಾಳ ಅಪ್ಪರಾವ ದೇಶಪಾಂಡೆ ಸಂಪಾದಕ "ಗೊಸೇವಕ" ಬೆಳಗಾವಿ=೩೨; ಅನಂತರಾವ ಮಾರ್ತಾಂಡರಾವ ಕುಲಕರ್ಣಿ ಸಾ| ಗುಡ್ಡದ ಮಲ್ಲಾಪೂರ=೨೮; ರಾಮಶೆಟ್ಟಿ ಸಾ|| ಭೋಜ=೨೭; ವಿ. ವಿ ಹೆಬ್ಬಾರ ಸಾ|| ಶಾಂತಿಕೊಡು ವೀರಮಂಗಳು ಪೋಷ್ಟ=೭೨; ನಾರಾಯಣ ತಂಕರಶರ್ಮ ಹೆಬ್ಬಾಳಕರ ಮು|| ಸುರಪುರ=೧೭; ಸೂರ್ಯನಾರಾಯಣರಾವ ಹೆಗಡೆ ಕಡಕೋಳಾ=೬೦; ಶ್ರೀನಿವಾಸಾಚಾರ್ಯ ವರಪೇಡಿ ಸಾ|| ಮಿತ್ರಿಕೋಟೆ=೬೪; ರಾಮಚಂದ್ರ ಶೇತೂ ಮಾಧವ ಡಂಬಳ ಗದಗ=೯೩; ಬೆಳಗಾವಿ ತಾಲೂಕ ಪೈಕೀ ಅರಳೀ ಕಟ್ಟೆಊರವರು=೨೦; ಲಕ್ಷ್ಮಣ ಭೀಮರಾವಗುಮಾಸ್ತೆ ಮು|| ಬೇವೂರ=೨೫; ರಂಗನಾಥನಾಯಿಕ ರಾಣೆಬಿನ್ನೂರಸಾ|| ಕರ್ನಾಟಕ ಸಂಘ ಕಾಶೀ ವಿದ್ಯಾಪೀಠ=೬೦. (ಈ ಜನರು ಕಾಶಿಯಲ್ಲಿಯ ಕನ್ನಡಿಗರೇ) ಒಟ್ಟು=೯೨೬

ಜಾಹೀರ ನೋಟೀಸು

ನಾನು ಬಸವನಗೌಡಾ ಸಂಗಣ ಗಿರಿಮಲ್ಲಪ್ಪಾ ಶಿರುರು ಸಾಕಿನ ಬಸನಾಳಕೊಪ್ಪ ಹಾಲೀವಸ್ತಿ ಬಾಗಲಕೊಟೆ. ಈ ನೋಟೀಸಿನ ಮೇಲಿಂದ ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ ನನ್ನ ಅಣ್ಣಾ ಅಯ್ಯಪ್ಪಾ ಸಣ್ಣ ಗಿರಿಮಲ್ಲಪ್ಪಾ ಶಿರುರು ಸಾಕಿನ ಬಸನಾಳಕೊಪ್ಪ ಯಿತನು ನಮ್ಮ ಯೇಕತ್ರಫರಾಣೆಯ ಸ್ಥಾವರ ಜಂಗಮ ಮಿಳಕತ್ತು ನನಗೆ ಲುಕ್ಸಾನುಮಾಡಬೇಕೆಂಬ ಇರಾದೆಯಿಂದ ವಿಲೆವಾಟ ಮಾಡತಕ್ಕವನಿದ್ದಾನೆಂತ ತಿಳಿಯುತ್ತದೆ. ನಾನು ನಮ್ಮ ಯೇಕತ್ರ ಫರಾಣೆಯಲ್ಲಿಯ ನನ್ನ ಹಿಸಾ ವಿಂಗಡಿಸಿ ಕೊಡಬೇಕೆಂತ ಈ ಮೊದ್ಲೆ ವಿಜಾಪುರ ೧ ನೇ ವರ್ಗದ ಸಬಜಡ್ಜ ಕೋರ್ಟಿನಲ್ಲಿ ದಾವಾ ಮಾಡಿರುತ್ತೇನೆ. ಕಾರಣ ಈ ನೋಟೀಸಿನಿಂದ ಯಾವತ್ತು ಜನರಿಗೆ ತಿಳಿಸುತ್ತೇನಲ್ಲಾ, ಯಾರಾದರು ಸದ್ರಿ ಸ್ಥಾವರ ಜಂಗಮ ಮಿಳಕತನ್ನು ವತ್ತೆ ಖರೀದಿ ವಗ್ಯೆರೆ ಯಾವದೇ ರೀತಿಯಿಂದ ಬರಿಸಿಕೊಂಡರೆ ಸದರ್ರಿ ವ್ಯವಹಾರವು ನನ್ನ ಮೇಲೆ ಬದ್ಧವಲ್ಲ ತಿಳಿಯುವದು. ತಾ|| ೧ ನೇ ದಿಸೆಂಬರ ೧೯೩೫ ನೇ ಇಸ್ವಿ

ಬಸನಗೌಡಾ ಸಂಗಣ ಗಿರಮಲ್ಲಪ್ಪಾ ಶಿರೂರ

ಪ್ರಕಟನೆ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೫ ನೇ ಇಸ್ವಿಯ ಜುಲೈ ೩೧ ನೇ ತಾ|| ದಿನ ಸಾಯಂಕಾಲದ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟೀ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ. ಬಸವಾರಾಧ್ಯ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ೧೦೦೦ ರೂ. ಸಾಲವು ದೊರೆಯ ಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೧೧೬೦೨ ಶ್ರೀ. ಆರ್. ಜಿ. ಹುಕ್ಕೇರಿ ಬುಕ್ಕಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೫೪೫ ಶ್ರೀ. ಧೀರಜರಾಮ ಸಾರಭಿರಾಮ ನಾಯಿಕ ಕಂಪಾವುಂಡರ, ಆಲಪಾಡ ದವಾಖಾನೆ ವಾಯು, ಸಯಾನ. ಬಿಬಿ. ಸಿ. ಆಯ ರೇಲ್ವೇ ಸುರತ (ಬಡೋದಾ ಏಜನ್ಸಿ)

(೩) ಬಾಂಡ ನಂ. ೧೧೫೬೬ ಶ್ರೀ. ಶ್ರೀರಾಮಮೂರ್ತಿ ಆರಾಧ್ಯಲು ರಾಮಚಂದ್ರರಾವ ಗುರು ಪೀರ ಪುರು ಗೋದಾವರಿ ಜಿಲ್ಹಾ.

(೪) ಬಾಂಡ ನಂ. ೧೭೬ ಶ್ರೀ. ನಂದಗಿರಿ ವೆಂಕಟರಾಮ ದಾಸ ಪ್ರೊಪ್ರಾಯಿಟರ ಮುಕುಂದ ಪುರ. ಕಾಕಿನಾಡು

(೫) ಬಾಂಡ ನಂ. ೪೩೮ ಶ್ರೀ. ಆರ್. ವೆಂಕಟಯ್ಯಾ ಗುರು ಇನಾಮದಾರ ಭೋಪಯ್ಯಾ ಅಗ್ರಹಾರ ಆಮುಳ ಪ್ರುರಮ್.

೧-೮-೨೫ { ಬಿ. ಎನ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ

"ಲೋಕರಹಸ್ಯ"

ಕೃಷಿಯ ಅತ್ಯುತ್ತಮ ರೀತಿಗಳು, ವ್ಯಾಪಾರದ ವಿಷಯಗಳು ಹೊಲಿಗೆ, ಮಕ್ಕಳನ್ನು ಸಾಕುವ ವಿಷಯಗಳನ್ನು ಬಡವರಿಗೆ ಬೇಕಾದ ಧನಸಂಪಾದನೆಯ ವಿಷಯಗಳು, ರಸಿಕರಿಗೆ ವಿನೋದ ವಿಚಾರ, ರಾಜಕೀಯ ವಿಷಯಗಳು, ಆಯುರ್ವೇದ ಯುನಾನಿ ವೈದ್ಯ ಸಂಗ್ರಹ. ಪ್ರತಿಯೊಬ್ಬನೂ ತಿಳಿಯಬೇಕಾದ ಲಾ ವಿಚಾರ, ವಿದ್ಯಾ ವಿಷಯ, ವೇದಾಂತ ವಿಚಾರಗಳಿಂದಲೂ, ತುಂಬಿ ತುಳುಕುತ್ತಿರುವ ಈ ಮಾಸ ಪತ್ರಿಕೆಗೆ ವರ್ಷಕ್ಕೆ ಚಂದಾ ರೂ. ೩-೮-೦ ಮಾದರಿ ಸಂಚಿಕೆಗೆ ೦-೫-೦.

ಪ್ರತಿ ತಿಂಗಳಲ್ಲೂ ೬೦ ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ.

"ಲೋಕರಹಸ್ಯ" ಆಫೀಸು,
ವೀರರಾಜೇಂದ್ರ ಪೇಟೆ (ಕೊಡಗು)

ಸಾಣೇಕಲ್ಲುಗಳು

ಸಣ್ಣ ದೊಡ್ಡ ಸಾಣೇ ಕಲ್ಲುಗಳು ನಮ್ಮ ಕಡೆಗೆ ದೊರೆಯುತ್ತವೆ ಮುಂಗಡ ಹಣವಿಲ್ಲದಆರ್ಡರುಗಳ ಕಡೆಗೆ ಲಕ್ಷ್ಯಕೊಡಲಾಗುವದಿಲ್ಲ. ವಿಶೇಷಸಂಗತಿಗಾಗಿ ಕೆಳಗಿನ ವಿಳಾಸಕ್ಕೆ ಬರೆದು ಕೇಳಿರಿ.

ಸ್ವಸಿಂಹ ಏಜನ್ಸಿ
ಬಾಗಲಕೋಟೆ (Dist. Bijapur)

ಧಾರವಾಡ ಕರ್ನಾಟಕ ಮಹಾ ವಿದ್ಯಾಲಯದಿಂದ ಹೊರಡುವ ತಿಳಿಗನ್ನಡದ

ಸ್ವಧರ್ಮ ಮಾಸಪತ್ರಿಕೆ.

ಸಂಪಾದಕ- ಸುರೇಂದ್ರ ಶಿವರಾವ ದೇಸಾಯಿ ಎಮ್ ಎ.

ಪ್ರಾಪಂಚಿಕ ಸಂಪತ್ತೂ, ಪಾರಮಾರ್ಥಿಕ ಸಂಪತ್ತೂ ಕೂಡಿ ಬೆಳೆಯುವಂತೆ ಸ್ವಸಂಸ್ಕೃತಿಪ್ರೇಮ, ಸ್ವದೇಶಪ್ರೀತಿ, ಸ್ವಭಾಷಾಭಿಮಾನ, ಸ್ವಧರ್ಮಾನುರಾಗ ಸ್ವಾರ್ಥತ್ಯಾಗಮುಂತಾದ ಗುಣಗಳನ್ನು ಉಜ್ವಲಗೊಳಿಸುವಂಥ ಕೀರ್ತನ, ಪುರಾಣ, ಪ್ರವಚನ, ನಿಬಂಧ, ಜೀವನ ಚರಿತ್ರೆ, ಇತಿಹಾಸ, ನಾಟಕ ಕಥೆ ಮತ್ತು ಕಾದಂಬರಿ ಮುಂತಾದ ರೂಪದಲ್ಲಿ ಜನಮಂಡಲಿಯ ಉನ್ನತಿಗೆ ಅಗತ್ಯವಾದ ಸರ್ವ ವ್ಯವಹಾರಗಳನ್ನೂ 'ಸ್ವಧರ್ಮ' ದೃಷ್ಟಿಯಿಂದ ವಿಚಾರಮಾಡಿ ವಿವರಿಸುವದು.

ಚಂದಾ ವರ್ಷಕ್ಕೆ ೩ ರೂ.

ಆರೋಗ್ಯಚಂದ್ರಿಕೆ.

ಮದ್ರಾಸ ಸಂಪಾದಕರು:- ಡಾಕ್ಟರ ಯು ರಾಮರಾವ, ಎಮ್. ಎಲ್. ಸಿ. ಯವರು

ಆರೋಗ್ಯಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ' ಎಂಬ ಇಂಗ್ಲಿಷ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ವೊಬಲಗು ವರ್ಷಕ್ಕೆ ೧-೮-೦ ಬಿಡಿಪತ್ರಿಕೆ ಒಂದಕ್ಕೆ ೦-೨-೦ ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರ- 'ಆರೋಗ್ಯಚಂದ್ರಿಕೆ'
೩೨, ತಂಬುಚೆಟ್ಟಿಬೀದಿ, ಮದ್ರಾಸ

FOR SAFETY AND GOOD SERVICE

IN

LIFE ASSURANCE

GO TO

THE ORIENTAL

IN AGE SIZE AND STRENGTH

THE

GREATEST INDIAN

LIFE ASSURANCE COMPANY

Apply for full particulars to-

N. K. Kulkarni. **Agent Bagalkot**

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಯಂತ್ರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಪಡಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ವಾ. ಚಂದಾ ೧—೧೪—೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ಮಾರ್ಗಶಿರ ವದ್ಯ ೧೨ ಶಕೆ ೧೮೪೭. ತಾ ೧೧-೧೨-೧೯೨೫. | ಸಂಚಿಕೆ ೩೫

ಸಂಪಾದಕನ ಭೂಮಿ.

(*)

ನನ್ನ ಮನಸಿನ ಮೇಣವಮಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮೆ!
ಚಿನ್ನದಾದರು ಚಿನ್ನ ಮೇಣಬತ್ತಿಯ ನೊಂದು ॥
ಚಿನ್ಮಯಾಕಾಶದಲ್ಲಿ ॥

ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನಷ್ಟ ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ।
ಗಂಧವಹವೆಂದು ತಿಳಿಯು ॥

—ಅಂಬಿಕಾತನಯ ದತ್ತ

ಮೈಸೂರ ಪ್ರಾಂತದಲ್ಲಿದ್ದ ವೃತ್ತ ಪತ್ರಗಳಿಗೆ ಕರ್ನಾಟಕದ ಗಾಳಿಯು ಕಿಂಚಿತ್ತಾದರೂ ತಗಲಿದಂತೆ ಕಾಣುವದಿಲ್ಲ. ಮೈಸೂರದೇಶದ ಹೊರಗೆ ಕನ್ನಡಿಗರನೇಕರಿರುವರೆಂಬ ಕಲ್ಪನೆಯಾದರೂ, ಇವರಿಗಿರುವದೋ ಇಲ್ಲವೋ ತಿಳಿಯದು. "ವಿಶ್ವಕರ್ನಾಟಕ" ವೊಂದನ್ನು ಬಿಟ್ಟರೆ ಉಳಿದ ಯಾವ ಪತ್ರಗಳಲ್ಲಿಯೂ ಕನ್ನಡನಾಡಿನ ಹೊಸ ಚೈತನ್ಯದ ಜ್ಯೋತಿಯು ಕಂಡುಬರುವದಿಲ್ಲ. ಮೈಸೂರ ಹೊರಗಿನ ಕನ್ನಡಿಗರು ಮೈಸೂರ ದೇಶದ ಬಗ್ಗೆಯೂ, ಮಹಾರಾಜರ ಬಗ್ಗೆಯೂ, ಅಲ್ಲಿನ ಕನ್ನಡಿಗರ ಬಗ್ಗೆಯೂ ಪ್ರೇಮಾದರಗಳನ್ನು ಹೆಚ್ಚಾಗಿ ತೋರಿಸುತ್ತಿರುವ ಸಮಯದಲ್ಲಿಯೂ, ಮೈಸೂರಿನವರ ಸಂಗಡ ಉಳಿದ ಕನ್ನಡಿಗರ ಬಳಕೆಯು ಹೆಚ್ಚಾಗುತ್ತಿರುವ ಸಮಯದಲ್ಲಿಯೂ, ಈ ಪತ್ರಿಕೆಗಳು, ತಮ್ಮ ಬಾಂಧವರ ಕಡೆಗೆ ಕಣ್ಣೆತ್ತಿಸಹ ನೋಡದಿರುವದು ಆಶ್ಚರ್ಯವು! ಇಂತಹ ಭಾವನೆಯು ವೃತ್ತ ಪತ್ರಗಳ ಸಂಪಾದಕರಲ್ಲಿ! ಮತ್ತು ಅವರು ಅದರಿಂದ ತಮ್ಮಲ್ಲಿಯ ಜನತೆಯನ್ನು ಎಚ್ಚರಗೊಳಿಸತಕ್ಕವರು! ಮೈಸೂರ ವಿಶ್ವವಿದ್ಯಾಲಯವನ್ನು ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡಬೇಕೆಂಬ ಪ್ರಶ್ನೆಯಲ್ಲಿ ಸಹ ಇವರು ಮನಸ್ಸನ್ನು ಹಾಕರು. ಇದರಿಂದ ಹೊರಗಿನ ಕನ್ನಡಿಗರು ಇವರಿಗೆ ಬೇಡವೇನೋ ಎಂಬ ಸಂಶಯ ಬರುತ್ತದೆ. ಈ ಪತ್ರಿಕೆಗಳೆಲ್ಲ ಹೀಗೆಯೇ ಮೌನವೃತ್ತಿಯನ್ನು ಧರಿಸಿ, ಉಳಿದ ಕನ್ನಡಿಗರನ್ನು ಅನಾದರಿಸುವದು ಉಚಿತವಲ್ಲ. ಆದುದರಿಂದ ಈಗಲಾದರೂ ಇವರೆಲ್ಲ ಎಚ್ಚರಿಯಬೇಕಾಗಿ ಪ್ರಾರ್ಥನೆಯಿದೆ.

ಶ್ರೀ. ಹರಡೀಕರರು ತಮ್ಮ ಸ್ವಯಂಸೇವಕರೊಂದಿಗೆ ಕಾನಪುರಕ್ಕೆ ಹೋಗಿ ಅಲ್ಲಿಯ ಕಾಂಗ್ರೆಸದ ಕೆಲಸವನ್ನು ಮೈಮೇಲೆ ತೆಗೆದುಕೊಂಡು, ಈ ಸಲದ ಅಧಿವೇಶನವು ಯಶಸ್ವಿಯಾಗುವದಕ್ಕೆ ಒಮ್ಮನಸ್ಸಿನಿಂದ ಹೆಣಗಾಡುತ್ತಿರುವದು, ಕನ್ನಡಿಗರಿಗೆಲ್ಲ ಅಭಿಮಾನದ ವಿಷಯ. ಸ್ವಯಂಸೇವಕರ ದಳವು ಹಿಂದುಸ್ಥಾನಕ್ಕೆ ಎಷ್ಟು ಆವಶ್ಯಕವಿದೆಯೆನ್ನುವದು ಇಂತಹ ಪ್ರಸಂಗಗಳಿಂದ ತಾನೇ ಸಿದ್ಧವಾಗುತ್ತದೆ. ಅಖಿಲ ಭರತಖಂಡದಲ್ಲಿ ಈಗ್ಗೆ ಹಿಂದುಸ್ಥಾನೀ ಸೇವಾದಳದ ಉಪಯುಕ್ತತೆಯು ಎಲ್ಲರಿಗೂ ಗೊತ್ತಾಗಿದೆ. ಶ್ರೀ. ಹರಡೀಕರರಿಗೆ ಸಾಕಷ್ಟು ಹಣದ ಸಹಾಯವಿಲ್ಲವಿದ್ದರೂ, ಅಲ್ಪಾವಧಿಯಲ್ಲಿಯೇ, ಕರ್ನಾಟಕದಲ್ಲಿ ಉಗಮಹೊಂದಿದ ಈ ಸಂಸ್ಥೆಯು, ಭರತಖಂಡಕ್ಕೆ ಆದರ್ಶ ಭೂತವಾಗುತ್ತಿರುವದು ಕನ್ನಡಿಗರಿಗೆ ಭೂಷಣವಲ್ಲವೇ? ಇನ್ನೂ, ಸಾಕಷ್ಟು ಧನ ಸಹಾಯವು ದೊರೆತರೆ ಶ್ರೀ ಹರ್ಡೀಕರರ ಕಾರ್ಯವು ೪-೬ ವರ್ಷಗಳಲ್ಲಿ ಎಷ್ಟು ವ್ಯಾಪಕವಾಗಬಹುದೆಂಬದನ್ನು ಎಲ್ಲರೂ —ವಿಶೇಷತಃ ಕನ್ನಡಿಗರು— ತಿಳಿದು ನೋಡಿ, ಅವರಿಗೆ ಎಲ್ಲ ಬಗೆಯಿಂದಲೂ ಸಹಾಯಮಾಡಬೇಕು.

ಮುಂಬೈಯಲ್ಲಿ ಬಹು ದಿನಗಳಿಂದ ನಡೆದ ಕೂಲೀಕಾರರ ಕಟ್ಟು ನಿಂತಹಾಯಿತು. ಈ ಸಲ ಕೂಲೀಕಾರರು ಬಹು ಶಾಂತತೆಯಿಂದ ತಮ್ಮ ವ್ರತವನ್ನಾಚರಿಸಿದ್ದರಿಂದ ಕಠಿಣ ಹೃದಯದ ಸರಕಾರದ ಹೃದಯವು ಸಹ ಕರಗಿ, ಅವರು ಹತ್ತಿಯ ಬಟ್ಟೆಗಳ ಮೇಲಿನ ಕರವನ್ನೇ ತೆಗೆದು ಹಾಕಬೇಕಾಯಿತು. ಮಹಾತ್ಮಾ ಗಾಂಧೀಜಿಯವರ ಶಾಂತತಾಯುಕ್ತವಾದ ಚಳವಳದ ಪರಿಣಾಮವು ಕೂಲೀಕಾರರಮೇಲೆ ಸಹ ಆಗಿದೆಯೆಂಬದು ಸ್ಪಷ್ಟವಿದೆ. ಹಿಂದಕ್ಕೆ ಮುಂಬೈಯಲ್ಲಿ ಅನೇಕ ಸಲ ಕಟ್ಟುಗಳಾಗಿವೆ. ಆದರೆ ಆಗೆಲ್ಲ ಬೀರಾ ಹುವದು, ಹಾಡೆದಾಡುವದು, ಗಿರಣಿಗಳಲ್ಲಿಯ ಕಿಡಿಕೆಗಳನ್ನು ಒಡೆಯುವದು, ಇವೇ ಮೊದಲಾದ ಅತ್ಯಾಚಾರಗಳು ಸಂಭವಿಸುತ್ತಲಿದ್ದವು. ಮುಂದೆ ಕೂಲೀಕಾರರ ಮುಖಂಡರನ್ನು ಪೋಲೀಸರ ವಶಕ್ಕೆ ಕೊಟ್ಟು, ಕಟ್ಟುಗಳನ್ನು ಬಂದುಮಾಡಿ ಗಿರಣಿಗಳ ಒಡೆಯರು ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಲಿದ್ದರು. ಆದರೆ ಈ ಸಲ ಎಲ್ಲಿ ನೋಡಿದರೂ ಶಾಂತತೆಯ ಸಾಮ್ರಾಜ್ಯವೇ ನೆಲೆಗೊಂಡಿತ್ತು. ೪-೫ ತಿಂಗಳುಗಳಾದರೂ, ಕೂಲೀಕಾರರು ಅರಹೊಟ್ಟೆಯಿಂದಿದ್ದರೂ, ಏನೂ ಅತ್ಯಾಚಾರವಾಗಲಿಲ್ಲ. ಇದರಿಂದ ಗಿರಣಿಗಳ ಒಡೆಯರು ವ್ಹಾಯಿಸರಾಯರ ವರೆಗೆ ತಮ್ಮ ಕಷ್ಟಗಳನ್ನು ಹೇಳಬೇಕಾಯಿತು. ಕೂಲೀಕಾರರ ಈ ನಡತೆಯನ್ನು ಲಕ್ಷ್ಯದಲ್ಲಿ ತಂದೇ ಸರಕಾರದವರು ತೆರಿಗೆಯನ್ನು ರದ್ದುಪಡಿಸಿದರು. ಆದುದರಿಂದ ಶ್ರೀಮಂತರೂ, ಶೆಟ್ಟರೂ, ಬಡಕೂಲಿಕಾರರಿಗೆ ಅತ್ಯಂತ ಋಣಿಯಾಗಿರಬೇಕು. ಈಗ್ಗೆ ೩೦ ವರ್ಷಗಳಿಂದ ಈ ತೆರಿಗೆಯನ್ನು ತೆಗೆದು ಹಾಕಬೇಕೆಂದು ಹಿಂದೀ ರಾಷ್ಟ್ರವು ಅಖಂಡವಾಗಿ ಹೇಳುತ್ತ ಬಂದರೂ

ಸರಕಾರವು ಒಪ್ಪಿದ್ದಿಲ್ಲ. ಆದರೆ ಈಗ್ಗೆ ಬತ ಕೂಲೀಕಾರರು ತಮ್ಮ ಶಾಂತವಾದ, ಮತ್ತು ಶುದ್ಧವಾದ ಚಳವಳಿಯಿಂದ ಸರಕಾರವು ಮಣಿಯುವಂತೆ ಮಾಡಿದರು. ಮಹಾತ್ಮರ ಶಾಂತಿಮಯ ಚಳವಳಿಗೆ ಇಲ್ಲದ ಸಲ್ಲದ ಹೆಸರನ್ನಿಡುವ ತಜ್ಞರು ಈಗಲಾದರೂ ಕಣ್ತೆರೆದು, ಸತ್ಯವನ್ನು ಶೋಧಿಸಲಿ! ಸರಕಾರದ ತೆರಿಗೆಯು ಹೋದ್ದರಿಂದ ಇನ್ನು ಗಿರಣಿಯ ಅರಿವೆಗಳು ಬಹು ಅಗ್ಗವಾಗುವವೆಂದೂ, ಹೀಗಾಗುವದರಿಂದ ಖಾದಿಯ ವ್ಯಾಪಾರಕ್ಕೆ ಮತ್ತೆ ಅಳಿಗಾಲವು ಬರುವದೆಂದೂ ಕೆಲವರ ಭಯವಿದೆ. ಆದರೆ ಖಾದಿಯನ್ನು ಧರಿಸತಕ್ಕವರು ಅಗ್ಗ ಪಟ್ಟಿಗಳ ವಿಷಯದ ಕಡೆಗೆ ಎಂದೂ ನೋಡಿರುವದಿಲ್ಲ. ಅವರ ದೇಶಪ್ರೇಮವೇ ಅವರ ಮನಸನ್ನು ಎಳೆದಿದೆ. ಆದುದರಿಂದ ಈ ಭಯಕ್ಕೆ ಆಸ್ಪದವಿಲ್ಲ. ಇನ್ನು ಗಿರಣಿಯ ಅರಿವೆಗಳು ಅಗ್ಗವಾಗುವವೆಂಬ ವಿಧಾನವೂ ಸರಿಯಾದುದಲ್ಲ. ಯಾಕೆಂದರೆ, ಹಿಂದೀಯರು ಪರದೇಶೀ ಅರಿವೆಗಳ ಸಂಗಡ ಗುದ್ದಾಡಬೇಕಾಗಿದೆ. ಮುಖ್ಯವಾಗಿ ಜಪಾನದವರ ಸಂಗಡ ಸ್ಪರ್ಧೆ ಮಾಡುವದು ಅಶಕ್ಯವಾಗಿದೆ. ಪರದೇಶೀ ಅರಿವೆ ಮತ್ತು ನೂಲುಗಳ ಮೇಲೆ ಜಕಾತಿಯನ್ನು ಹೊರಿಸುವ ಹೊರತು, ಹಿಂದೀ ಗಿರಣಿಗಳ ಅರಿವೆಯ ಬೆಲೆಯು ಕಡಿಮೆಯಾಗದು.

ರಡ್ಡೀ ಸಮಾಜದವರೆಲ್ಲ ನವಂಬರ ೧೫ ನೇ ತಾ|| ದಿನ ಧಾರವಾಡದಲ್ಲಿ ಸಭೆ ನೆರೆದು ವಿಜಾಪುರ ಮತ್ತು ಧಾರವಾಡ ಜಿಲ್ಲೆಗಳ ಲೋಕಲ್ ಬೋರ್ಡುಗಳಿಗೆ ಸರಕಾರದವರು, ತಮ್ಮ ಮತಸ್ಥರನ್ನು ಸಭಾಸದರನ್ನಾಗಿ ನಿಯಮಿಸಲಿಲ್ಲವಾದ್ದರಿಂದ ತಮಗೆ ತೀಕ್ಷ್ಣವಾದ ಅಸಮಾಧಾನವಾಗಿದೆಯೆಂದು ನಿರ್ಣಯಿಸಿದರು. ಈಗಲಾದರೂ ಸಾಲೆಯ ಮಂಡಳಿಗಳಲ್ಲಿ ಮಾದರೂ ತಮ್ಮ ಮತೀಯರನ್ನು ನಿಯಮಿಸಬೇಕಾಗಿಯೂ, ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ರಡ್ಡೀ ಸಮಾಜದ ವಿದ್ಯಾರ್ಥಿಗಳಿಗೆ ಪ್ರವೇಶವು ದೊರೆಯಬೇಕಾಗಿಯೂ, ರಡ್ಡೀ ಸಮಾಜದವರಿಗೆ ಸರಕಾರಿ ನೌಕರಿಗಳನ್ನು ಹೆಚ್ಚಾಗಿ ಕೊಡಬೇಕಾಗಿಯೂ ತೀರ್ಮಾನಿಸಿದರು. ಜಾತಿವಾರು ಪ್ರತಿನಿಧಿಯ ಪದ್ಧತಿಯು ಕಾಯಮವಾಗಿ ನಮ್ಮ ರಾಷ್ಟ್ರದಲ್ಲಿರುವದು ಹಾನಿಕಾರಕ. ಆದರೆ ಕೆಲಕೆಲವು ಜಾತಿಯವರು ಹಿಂದುಳಿದದ್ದರಿಂದಲೂ, ಆ ಜಾತೀಯರಿಗೆ ಹಲವು ಅನಾನುಕೂಲತೆಗಳಿದ್ದುದರಿಂದಲೂ, ಸದ್ಯದಲ್ಲಿ ಆ ಆ ಜಾತಿಗಳಿಗೆ ಸರಕಾರದಿಂದ ಕೆಲವು ಸೌಕರ್ಯಗಳು ಬೇಕಾಗಿವೆ. ಅವನ್ನು ಸರಕಾರದವರು ಒದಗಿಸಿ ಕೊಡುವದರಲ್ಲಿ ಅಲಕ್ಷ್ಯ ಮಾಡಕೂಡದು.

ಪುಣೆಯ 'ಫರ್ಗ್ಯುಸನ್ ಕಾಲೇಜ'ದಲ್ಲಿ ವಿದ್ಯಾರ್ಥಿಗಳಿಗೂ, ಶಿಕ್ಷಕ ವರ್ಗದವರಿಗೂ, ವಾರ್ಷಿಕೋತ್ಸವದಲ್ಲಿ ಹೆಚ್ಚಾಗಿ ಭಾಗವನ್ನು ತೆಗೆದುಕೊಳ್ಳಲರ್ಹರಾರೆಂಬ ಬಗ್ಗೆ ಮತಭೇದ ವುಂಟಾಯಿತು. ವಿದ್ಯಾರ್ಥಿಗಳಿಗೆ ಈ ಉತ್ಸವದಲ್ಲಿ ಯಾವ ಅಧಿಕಾರವೂ ಇರಕೂಡದೆಂದು ಶಿಕ್ಷಕ ವರ್ಗದವರು ಹಟ ಹಿಡಿದದ್ದು ಅಯೋಗ್ಯವು. ಇವರ ಈ ಹಟಕ್ಕಾಗಿ ವಿದ್ಯಾರ್ಥಿಗಳು ಆ ದಿನ ಸಮಾರಂಭಕ್ಕೆ ಯಾರೂ ಹೋಗಕೂಡದೆಂಬುದಾಗಿ ನಿರ್ಣಯಿಸಿಕೊಂಡದ್ದು ಯಥಾ ಯೋಗ್ಯವೇ. ಸ್ತ್ರೀವಿದ್ಯಾರ್ಥಿಗಳು ಸಹ ಈ ಅಸಹಕಾರದಲ್ಲಿ ಸೇರಿದ್ದು ಮಹಾರಾಷ್ಟ್ರದಂತಹ ಪ್ರಗತಿಪರವಾದ ರಾಷ್ಟ್ರಕ್ಕೆ ಭೂಷಣವು. ಆದರೆ ಸ್ತ್ರೀವಿದ್ಯಾರ್ಥಿಗಳ ಮುಖಂಡರಾದ ಕುಮಾರಿ ಶಾಕುಂತಲಾ ಪರಾಂಜಪೆ ಮತ್ತು ಕುಮಾರಿ ಕೇತಕರ ಇವರು ಈ ಚಳವಳದಲ್ಲಿ ಭಾಗತೆಗೆದು ಕೊಂಡರೆಂದು ಶಿಕ್ಷಕ ವರ್ಗವು, ಅವರಮೇಲೆ ಮುನಿದು, ಅವರನ್ನು ಸಹ, ಶಿಕ್ಷಿಸಿದ್ದು ಸ್ತ್ರೀ ಶಿಕ್ಷಣದ ಕೈವಾರಿಯಾದ 'ಫರ್ಗ್ಯುಸನ್ ಕಾಲೇಜ'ದಂತಹ ಸಂಸ್ಥೆಗೆ ಕಳಂಕವೇ ಸರಿ. ವಿದ್ಯಾರ್ಥಿಗಳಿಂದ ಸಮಾರಂಭದ ದಿನ ಹೆಚ್ಚಾಗಿ ಗೊಂದಲವಾದುದು ಅಯೋಗ್ಯವಾದುದೇನೋ ನಿಜ. ಆದರೆ ಹೀಗಾಗಲು ಕಾರಣರು ತಾವೇ ಎಂಬುದನ್ನು ಶಿಕ್ಷಕವರ್ಗವು ತಿಳಿದು ಕೊಳ್ಳುವ ಬದಲು ವಿದ್ಯಾರ್ಥಿಗಳನ್ನು ದಂಡಿಸುವದು ಎಲ್ಲಿಯ ನ್ಯಾಯ?

ವೀರಪ್ಪ ಅಣ್ಣಾ ಅವಲೇರಿ ಇವರು ಇಲ್ಲಿಯ ಪ್ರಸಿದ್ಧ ವ್ಯಾಪಾರಸ್ಥರು. ಇವರು ತಾ|| ೮ ನೇ ದಿನ, ಮನೆಯಲ್ಲಿ ಸ್ವಂತ ಮಗಳ ಲಗ್ನ ಸಮಾರಂಭವು ನಡೆದಿರಲು ಅಕಸ್ಮಾತ್ತಾಗಿ ಶಿವೈಕ್ಯರಾದರೆಂದು ತಿಳಿಸಲು ನಮಗೆ ವಿಷಾದವೆನಿಸುತ್ತದೆ. ಇವರು ತಮ್ಮ ಪ್ರಾಮಾಣಿಕತನದಿಂದಲೂ, ಸ್ವಂತ ಬುದ್ಧಿಶಕ್ತಿಯಿಂದಲೂ, ವ್ಯಾಪಾರದಲ್ಲಿ ಘನತೆಗೇರಿದ್ದರು. ಇವರ ಹಿರಿಯರು ಒಕ್ಕಲತನದಲ್ಲಿ ಮಾತ್ರ ಮನಸ್ಸು ಹಾಕಿದ್ದರು. ಆದರೆ ವೀರಪ್ಪನವರು ಒಕ್ಕಲತನ ಮತ್ತು ವ್ಯಾಪಾರಗಳಲ್ಲಿ ಕೂಡಿಯೇ ಮನಸ್ಸು ಹಾಕಿ ಸ್ವತಃ ಇಲ್ಲಿ ದಲಾಲಿಯ ಅಂಗಡಿಯನ್ನು ಸ್ಥಾಪಿಸಿ ಅದನ್ನು ಊರ್ಜಿತಾವಸ್ಥೆಗೆ ತಂದರು. ಇವರ ನಿಧನದಿಂದ ಊರಲ್ಲಿ ಎಲ್ಲರಿಗೂ ದುಃಖವೆನಿಸಿದೆ. ಇವರ ಕುಟುಂಬದವರಿಗೆ ಈ ವಿಷಮ ಕಾಲದಲ್ಲಿ ಧೈರ್ಯಗುಂದದ ಹಾಗೆ ಪರಮೇಶ್ವರನು ಆಶೀರ್ವದಿಸಲಿ, ಮತ್ತು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ!

ಪತ್ರವ್ಯವಹಾರ.

ಮದ್ರಾಸು ನ್ಯಾಯ ಶಾಲೆ (Law College) ಕರ್ನಾಟಕ ಸಭೆ

ಈ ಸಭೆಯ ಪ್ರಾರಂಭ ಮಹೋತ್ಸವವು ಈ ನವೆಂಬರು ೨೩ ನೆಯ ತಾರೀಖು ಭಾನುವಾರ ಮಧ್ಯಾಹ್ನದ "ಲಾ" ಕಾಲೇಜಿನಲ್ಲಿ ಸಾಯಂಕಾಲ ೪| ಘಂಟೆಗೆ ಕರ್ನಾಟಕ ಭಾಷಾಭಿಮಾನಿಗಳಾದ ಶ್ರೀ|| ಆರ್. ಎಸ್. ಅಯ್ಯಂಗಾರರು ಬಾರಿಸ್ಟರ್ ಎಟ್ ಲಾ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾಲೇಜಿನ ಉಪಾಧ್ಯಾಯರೂ ವಿದ್ಯಾರ್ಥಿಗಳೂ ಹಲವು ಮಂದಿ ಭಾಷಾಭಿಮಾನಿಗಳೂ ನೆರೆದಿದ್ದರು. ಪ್ರಾರ್ಥನಾರೂಪವಾದ ಪದ್ಯವನ್ನೂ ಒಂದನ್ನು ಗಾಯನವೂ ಆದ ಬಳಿಕ ಅಧ್ಯಕ್ಷರಾದ ಶ್ರೀ|| ಅಯ್ಯಂಗಾರಯರವರು ಕರ್ನಾಟಕ ಮಹಾಸಭೆಯ ಪ್ರವರ್ತಕರೂ ಈ ವರ್ಷದ ಕರ್ನಾಟಕ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಕರ್ನಾಟಕ ಭಾಷಾಸೇವೆಯಲ್ಲಿ ನಿರತರೂ ಆದ ಶ್ರೀ|| ಜನಗಲ್ ರಾಮರಾಯರು ಎಮ್. ಎ. ಎಲ್. ಎಲ್. ಬಿ ಅವರು "ಕನ್ನಡಿಗರೂ ಕನ್ನಡವೂ" ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಬೇಕೆಂದು ಕೇಳಿಕೊಂಡರು.

ಬಳಿಕ ಉಪನ್ಯಾಸಕರಾದ ಶ್ರೀ|| ರಾಮರಾಯರು ತಮ್ಮ ಉಪನ್ಯಾಸದಲ್ಲಿ ತಾವು ವಿದ್ಯಾರ್ಥಿಗಳಾಗಿದ್ದ ಕಾಲದಲ್ಲಿದ್ದ ಕನ್ನಡದ ಪರಿಸ್ಥಿತಿಯನ್ನೂ ಈಗಿನ ಕಾಲದ ಪರಿಸ್ಥಿತಿಯನ್ನೂ ವ್ಯಕ್ತಗೊಳಿಸಿ, ಪ್ರಾಚೀನಕಾಲದಿಂದಲೂ ಗ್ರಂಥಗಳ ಮೂಲಕ ಸ್ಪಷ್ಟವಾಗಿ ಕಂಡು ಬರುತ್ತಿರುವ ಆಧಾರಗಳೊಂದಿಗೆ ಕರ್ನಾಟಕ ದೇಶದ ಎಲ್ಲೆಗಳನ್ನು ವಿವರಿಸಿ, ಕರ್ನಾಟಕ ರಾಜರ ಪೂರ್ವಚರಿತ್ರೆಯನ್ನು ಮೊನ್ನೆ ಮೊನ್ನೆಯವರೆಗೆ ಎಂದರೆ ಟೀಪೂ ಸುಲ್ತಾನನ ರಾಜ್ಯಭಾರದ ವರೆಗೂ ಕರ್ನಾಟಕವು ಸ್ವತಂತ್ರ ರಾಷ್ಟ್ರವಾಗಿದ್ದುದು ಮಾತ್ರವೇ ಅಲ್ಲದೆ ಇತರ ರಾಷ್ಟ್ರಗಳ ಮೇಲೆಯೂ ತನ್ನ ಅಪ್ರತಿಹತವಾದ ಪ್ರಭುತ್ವವನ್ನು ನಡೆಯಿಸುತ್ತ ಸಾಮ್ರಾಜ್ಯ ಪೀಠವನ್ನು ಅಲಂಕರಿಸಿ ಇರುತ್ತಿದ್ದಿತೆಂಬ ವಿಷಯವನ್ನೂ, ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯರಾದ ಶ್ರೀ|| ವಿದ್ಯಾರಣ್ಯರೂ, ವಿಜಯನಗರದ ಅರಸು ಮನೆತನಗಳೂ, ಕರ್ನಾಟಕ ಸಾಮ್ರಾಜ್ಯದ ರಾಜಧಾನಿಯಾದ ವಿಜಯನಗರವೂ, ಅದರ ರಾಷ್ಟ್ರವೂ ಕೂಡ ಅಷ್ಟು ಕನ್ನಡಿಗರದೇ ಆಗಿದ್ದಿತೆಂಬುದನ್ನು, ಸಾಕಾದಷ್ಟು ನಿದರ್ಶನಗಳಿಂದ ಪುಷ್ಟೀಕರಿಸಿ ಪ್ರಕೃತದಲ್ಲಿ ಕನ್ನಡಭಾಷೆಗೂ ಕನ್ನಡನಾಡಿನ ಜನರಿಗೂ ಸಂಭವಿಸಿರುವ ದೈನ್ಯಾವಸ್ಥೆಯನ್ನು ಹೃದಯ ದ್ರಾವಕವಾದ ವಾಗ್ಝರಿಯಿಂದ ನಿರೂಪಿಸಿ ಜನರ ಚಿತ್ತವೃತ್ತಿಯು ಲೀನವಾಗುವಂತೆ ವಿವರಿಸಿ ಈ ದೈನ್ಯಾವಸ್ಥೆಯು ಇನ್ನು ಬಹಳ ಕಾಲ ಇರಲಾರದೆಂತಲೂ ಕ್ಷಿಪ್ರದಲ್ಲಿಯೇ ಅನುಕೂಲವಾದ ಪರಿಸ್ಥಿತಿ ಬರತಕ್ಕ ಶುಭಸೂಚನೆಗಳು ಅಲ್ಲಲ್ಲಿ ಕಂಡು ಬರುತ್ತಿರುವವು, ಇದಕ್ಕೆ ಸರಿಯಾಗಿ

"ಲಾ ಕಾಲೇಜಿ"ನ ಪದವೀಧರರಾದ (Graduates) ವಿದ್ಯಾರ್ಥಿಗಳು ಕೂಡ ತಮತಮಗೆ ಅನುಕೂಲವೂ ಸಾಧ್ಯವೂ ಇದ್ದ ಮಟ್ಟಿಗೆ ಒತ್ತಾಸೆ ಮಾಡಿ ಕನ್ನಡ ದೇಶದ, ಕನ್ನಡ ಭಾಷೆಯ, ಮತ್ತು ಕನ್ನಡ ಜನರ ಸೇವೆಯನ್ನು ಅನವರತವೂ ಅನನ್ಯಭಾವದಿಂದ ಆಲಸ್ಯವನ್ನು ತೊರೆದು ಕೈಕೊಳ್ಳುವದರ ಮೂಲಕ ಕರ್ನಾಟಕಮಾತೆಯ ಸತ್ಪುತ್ರರೆನಿಸಿಕೊಳ್ಳಬೇಕೆಂಬುದಾಗಿಯೂ ಸರ್ವಶಕ್ತನಾದ ಭಗವಂತನೇ ಕನ್ನಡಿಗರಿಗೂ, ಕನ್ನಡದೇಶಕ್ಕೂ ಕನ್ನಡ ಭಾಷೆಗೂ ಸರ್ವವಿಧದಲ್ಲಿಯೂ ಶ್ರೇಯ ಪರಂಪರೆಯನ್ನು ದಯಪಾಲಿಸಲೆಂದೂ, ಇನ್ನೂ ಹಲವು ವಿಷಯಗಳನ್ನು ಕುರಿತು ಸುಮಾರು ಮುಕ್ಕಾಲು ಘಂಟೆಯವರೆಗೆ ಉಪನ್ಯಾಸ ಮಾಡಿದರು.

ಒಟ್ಟಿನ ಮೇಲೆ ಅಂದಿನ ಭಾಷಣವು ಸದಸ್ಯರ ಚಿತ್ತವೃತ್ತಿಯನ್ನು ಬೆರಗು ಮಾಡಿ ತಮ್ಮ ಆಲಸ್ಯಕ್ಕೆ ತಾವೇ ಮರಗುವಂತೆ ಹೃದಯದ್ರಾವಕವೂ ಭಾಷಾಭಿಮಾನ ದೇಶಾಭಿಮಾನಗಳನ್ನು ಉಕ್ಕಿಸತಕ್ಕದಾಗಿಯೂ ಇದ್ದಿತು.

ಉಪನ್ಯಾಸಕರ ನಂತರದಲ್ಲಿ ಅಧ್ಯಕ್ಷರಿಗೂ ಉಪನ್ಯಾಸಕರಿಗೂ ಪುಷ್ಪಮಾಲೆಗಳನ್ನು ಸಮರ್ಪಿಸಿ, ಕರ್ನಾಟಕ ದೇಶಕ್ಕೂ ಕರ್ನಾಟಕ ಭಾಷೆಗೂ, ಜಯಜಯಕಾರಮಾಡುವ ಸಭೆಯಲ್ಲಿ ನೆರೆದಿದ್ದವರೆಲ್ಲರೂ ಕರ್ನಾಟಕ ವಿಷಯವಾದ ಸಲ್ಲಾಪಗಳಿಂದಲೇ ತೆರಳಿದರು.

ಪಿ. ಗೋಪಾಲರಾವ ಮದ್ರಾಸ.

ಯಮಕನ ಮರಡಿವಾರ್ತಾ ಪತ್ರ

ಕನ್ನಡದ ಪ್ರಸಾರ

ಕನ್ನಡ ಶಾಲಾಗುರುಗಳ ಕರ್ತವ್ಯ

ಕಳೆದ ಮೇ ತಿಂಗಳಲ್ಲಿ ಬೆಳಗಾಂವಿಯಲ್ಲಿ ಜರುಗಿದ ಕರ್ನಾಟಕ ಸಾಹಿತ್ಯ ಸಮ್ಮೇಲನದಿಂದ ಬೆಳಗಾಂವ ಜಿಲ್ಹೆಯ ಕನ್ನಡಿಗರಲ್ಲಿ ಕನ್ನಡ ಭಾಷೆಯ ಹೆಚ್ಚಳಕ್ಕಾಗಿ ಹೆಣಗಾಡುವ ಹವ್ಯಾಸವು ಹುಟ್ಟಿಯಿತ್ತದೆ. ಶ್ರೀಯುತ ಎಮ್. ಆರ್. ಸಾಖರೆ, ಎಮ್. ಎ ಇವರು ದಡ್ಡಿ ಸಿಪ್ಪಾಣಿ ಸಂಕೇಶ್ವರ ಮುಂತಾದ ಊರುಗಳಲ್ಲಿ ಕನ್ನಡಸಾಲೆಗಳು ಸ್ಥಾಪನೆಯಾಗಬೇಕು. ಮತ್ತು ಕರ್ನಾಟಕದ ಎಲ್ಲ ಊರುಗಳಲ್ಲಿ ಲೆಕ್ಕಪತ್ರಗಳು ಕನ್ನಡದಲ್ಲಿರಬೇಕೆಂಬದಾಗಿ ಉಪದೇಶಿಸಿದ ಪ್ರಕಾರ ಯಮಕನ ಮರಡಿಯ ಎಲ್ಲ ಜನರಲ್ಲಿ ಕನ್ನಡ ಭಾಷೆಯ ವಿಷಯಕ್ಕೆ ಹೆಚ್ಚು ಜಾಗ್ರತೆಯು ಹುಟ್ಟಿದೆ. ಅದರಂತೆ ಇಲ್ಲಿಯ ಶಾಲಾಗುರುಗಳು ಕಳೆದ ನಾಗರಪಂಚಮಿಯಲ್ಲಿ ಶಾಲಾ ವಿದ್ಯಾರ್ಥಿಗಳಿಂದ ಶ್ರೀಯುತ ವೆಂಕಟರಾವ್ ಆಲೂರ ಇವರಿಂದ ಬರೆಯಲ್ಪಟ್ಟ "ಕನ್ನಡ ಭ್ರಮನಿರಸನ" ವೆಂಬ ಚಿಕ್ಕ ಪ್ರಹಸನವನ್ನು ಪ್ರಯೋಗಮಾಡಿಸಿ ತೋರಿಸಿದರು. ಈ ನಾಟಕವು ಮೂರು ಸಾರೆ ಆದರೂ ಜನರು ಇದನ್ನು ಹೆಚ್ಚೆಚ್ಚು ಉತ್ಸಾಹದಿಂದ ನೋಡಲಿಕ್ಕೆ ದಿನಂಪ್ರತಿ ಬರುತ್ತಿದ್ದರು. ಹೋದಸಾರೆ ಇಲ್ಲಿಯ ಸಾಲೆಯಲ್ಲಿ ಸ್ಥಾಪಿಸಿದ ವಾಚನಾಲಯಕ್ಕೆ ೪೦ ರೂಪಾಯಿ ಕೂಡಿದ್ದವು. ಆದರೆ ಈ ಸಾರೆ ಈ ನಾಟಕ ಬಲದಿಂದ ೬೫ ರೂಪಾಯಿ ಕೂಡಿದವು! ಆ ಕಾಲಕ್ಕೆ ಇಲ್ಲಿ ಆ| ಡೆ| ಎ| ಇ|| ರಾದ ನಾಯಿಕ ಸಾಹೇಬರವರು ಹಾಜರಿದ್ದರು.

ಇದಲ್ಲದೆ ಇಲ್ಲಿಯ ಶಾಲಾ ಗುರುಗಳು ವ್ಯಾಖ್ಯಾನರೂಪದಿಂದ "ಎಲ್ಲ ವ್ಯಾಪಾರಸ್ಥರು ತಮ್ಮ ಲೆಕ್ಕಪತ್ರಗಳನ್ನು ಕನ್ನಡದಲ್ಲಿಡತಕ್ಕದ್ದು. ಕನ್ನಡಭಾಷೆಗೆ ಹೆಚ್ಚು ಮಹತ್ವವನ್ನು ಕೊಡತಕ್ಕದ್ದು. ಕನ್ನಡವೃತ್ತ ಪತ್ರಗಳನ್ನು ಪ್ರೋತ್ಸಾಹಿಸುವದೇ ಪ್ರತಿಯೊಬ್ಬ ಕರ್ನಾಟಕಾಭಿಮಾನಿಯ ಕರ್ತವ್ಯವು. ಎಂದು ಹೇಳಿ ಕನ್ನಡ ಭಾಷೆಯ ವಿಷಯಕ್ಕೆ ಹೆಚ್ಚು ಆದರ ಬುದ್ಧಿಯನ್ನು ಹುಟ್ಟಿಸಿದರು. ಇಲ್ಲಿಯ ಎಲ್ಲ ವ್ಯಾಪಾರಸ್ಥರು ಕನ್ನಡದಲ್ಲೇ ಲೆಕ್ಕಪತ್ರ ಇಡುವೆವೆಂದು ವಚನ ಕೊಟ್ಟರು.

ಇಷ್ಟೇ ಅಲ್ಲದೆ ಸುತ್ತಲಿನ ಊರುಗಳಲ್ಲಿ ಕೂಡ ಮೇಲೆ ಹೇಳಿದ ನಾಟಕವನ್ನು ಮಾಡಿಸುತ್ತ ಶ್ರೀಯುತ ಸಾಖರೆ ನಾಯಿಕ ಮುಂತಾದವರ ಭಾಷಣಗಳನ್ನು ವಿವರಿಸುತ್ತ ಕನ್ನಡ ಭಾಷೆಯ ಮಹತ್ವವನ್ನು ಅರುಹಬೇಕೆಂದು ವಿಚಾರವಿದೆ ಇದೂ ಕೈಗೂಡಲಿ.

ಸಧ್ಯಕ್ಕೆ ಯಮಕನಮರಡಿಯಲ್ಲಿ ೨೦ ಕ್ಕಿಂತ ಹೆಚ್ಚು ವ್ಯಾಪಾರಸ್ಥರು ಕನ್ನಡದಲ್ಲಿ ಲೆಕ್ಕಪತ್ರವನ್ನಿಟ್ಟಿರುವರು. ಸಂಕೇಶ್ವರದಲ್ಲಿ ಕನ್ನಡ ಸಾಲೆಯು ಪ್ರಾರಂಭವಾಗಿರುವದು. ಇಂತೂ ಶ್ರೀಯುತ ಸಾಖರೆಯವರ ಸೂಚನೆಯು ಸರ್ವಸ್ಥಾನದಲ್ಲಿ ಸಫಲವಾದಂತಾಯಿತು.

ಮತ್ತೊಂದು ಸಂಗತಿಯೇನಂದರೆ— ಇಲ್ಲಿಯ ತರುಣ ವಿದ್ಯಾರ್ಥಿಗಳು ಹೋದ ನೊವ್ಹೆಂಬರ ತಾ| ೭ ನೇ ದಿವಸ ಇಲ್ಲಿಗೆ ಕಳೆದ ೨೦ ವರ್ಷಗಳಿಂದ ಕರ್ನಾಟಕದ ಸೇವೆಗಾಗಿ 'ಕರ್ನಾಟಕವೃತ್ತ' ವನ್ನು ಹೊರಡಿಸುತ್ತ, ಕನ್ನಡಿಗರ ಹಿತಕ್ಕಾಗಿ ವಿಶೇಷ ಪ್ರಯತ್ನ ಮಾಡುತ್ತಿರುವ, ಶ್ರೀಯುತ ಮುದವೇಡಕರ ಕೃಷ್ಣರಾಯರನ್ನೂ ಕಾವ್ಯರತ್ನರಾದ ಶ್ರೀ. ಆರ್. ಬಿ ಕುಲಕರ್ಣಿಯವರನ್ನೂ ಕರಕೊಂಡು ಬಂದು ವ್ಯಾಖ್ಯಾನವನ್ನು ಏರ್ಪಡಿಸಿದರು. (ಕಾವ್ಯರತ್ನರು ಅಧ್ಯಕ್ಷಸ್ಥಾನವನ್ನು ವಹಿಸಿದರು.)

ಶ್ರೀಯುತ ಮುದವೇಡಕರ ಕೃಷ್ಣರಾಯರು "ಕರ್ನಾಟಕ ಸಂಘಟನ" ಈ ವಿಷಯದ ಮೇಲೆ ಒಂದೂ ಕಾಲು ತಾಸಿನ ವರೆಗೆ ತಮ್ಮ ಗಂಭೀರವಾಣಿಯಿಂದ ಕರ್ನಾಟಕದ ಸತ್ ಪುರುಷರನ್ನೂ, ಉತ್ತಮೋತ್ತಮ, ಪವಿತ್ರಸ್ಥಾನಗಳನ್ನೂ ವರ್ಣಿಸಿ, ಜನರಲ್ಲಿ ಕನ್ನಡನಾಡಿನ ವಿಷಯಕ್ಕೆ ಮತ್ತಿಷ್ಟು ಹೆಚ್ಚು ಅಭಿಮಾನವನ್ನು ಹುಟ್ಟಿಸಿದರು.

ಅದರಂತೆ ಶ್ರೀಯುತ ಕುಲಕರ್ಣಿಯವರೂ ಕರ್ನಾಟಕ ಮತ್ತು ಹಿಂದೂ ಸಂಘಟನ ಈ ಎರಡೂ ವಿಷಯಗಳ ಮಹತ್ವವನ್ನು ಅರುಹಿಸಿ ಮತ್ತಿಷ್ಟು ಹೆಚ್ಚು ಆದರ ಬುದ್ಧಿಯನ್ನು ಹುಟ್ಟಿಸಿದರು. (ಮುಂದೆ ಹೂಹಾರ ತಾಂಬೂಲಾದಿಗಳ ಸಮರ್ಪಣೆಯಾದನಂತರ ಸಭೆಯ ಕಾರ್ಯಕ್ರಮವು ಕಡೆಗಂಡಿತು.)

ಇವರೀರ್ವರ ಭಾಷಣಗಳಿಂದ ಎಲ್ಲ ಜನರ ಮೇಲೆ ಅತ್ಯಂತ ಪರಿಣಾಮವಾಗಿ ಇನ್ನುಳಿದ ಕೆಲವು ಯಮಕನಮರಡಿ ಜನರು ಕನ್ನಡದಲ್ಲಿಯೇ ಜಮಾ ಖರ್ಚು ಇಡುತ್ತೇವೆಂದು ಹೇಳಿದರು.

ಅಂತೂ ಯಮಕನಮರಡಿಯ ಸಭ್ಯಗೃಹಸ್ಥರೂ, ಶಾಲಾಗುರುಗಳೂ ವಿದ್ಯಾರ್ಥಿಗಳೂ ಒಂದೇ ಕಾಲಕ್ಕೆ ಕನ್ನಡದೇಶ, ಭಾಷಾಭಿಮಾನವನ್ನು ವ್ಯಕ್ತಪಡಿಸಿದ್ದು ಅತ್ಯಂತ ಅನುಕರಣೀಯವು.

ಯಮಕನಮರಡಿಯವರಂತೆಯೇ ಬೆಳಗಾಂವ, ವಿಜಾಪೂರ ಜಿಲ್ಹೆಯ ಜನರು ಯಾವ ಯಾವ ಊರಲ್ಲಿ ಕನ್ನಡಸಾಲೆಗಳಿಲ್ಲವೋ ಅಲ್ಲಿ ಅಲ್ಲಿ ಕನ್ನಡ ಸಾಲೆಗಳನ್ನು ಸ್ಥಾಪಿಸಿ, ಜಮಾ ಖರ್ಚು ಕನ್ನಡದಲ್ಲಿಡುತ್ತ, ಜಯಕರ್ನಾಟಕ, ಕರ್ನಾಟಕ ಟ್ರಿಬ್ಯೂನ್, ಕರ್ನಾಟಕವೃತ್ತ, ಕರ್ನಾಟಕ ವೈಭವ, ಕನ್ನಡಿಗ, ಮುಂತಾದ ಅನೇಕ ಕನ್ನಡ ವೃತ್ತ ಪತ್ರಗಳನ್ನೇ ಪ್ರೋತ್ಸಾಹಿಸುತ್ತ, ಕರ್ನಾಟಕದ ಸೇವೆಗಾಗಿ ಕಷ್ಟವನ್ನು ಸಹಿಸುವದೇ ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವೆಂದು ತಿಳಿದು ಕೊಳ್ಳಬೇಕು. ಮತ್ತು ಬಹು ಪುರಾತನ ಕಾಲದಿಂದ ಪ್ರಸಿದ್ಧಿಯನ್ನು ಪಡೆದ ಕರ್ನಾಟ ವಾಗ್ ದೇವಿಯ ಕಳೆಗುಂದಿದ ಕಾಂತಿಯನ್ನು ಹೆಚ್ಚಾಗುವಂತೆ ಮಾಡಲು ಕಾರಣೀಭೂತರಾಗುವರೆಂದು ಕೋರುವ.

೧೮-೧೧-೧೯೨೫ { ನಿಜಲಿಂಗಪ್ಪಾ ಬಸಪ್ಪಾ
ಯರಗಟ್ಟಿ

ಇಂಗ್ಲೀಷರೂ, ತುರ್ಕರೂ.

ಇವರುಭಯರ ನಡುವಿನ ಮೋಸಲ್ ತಂಟೆಯ ತಗಾದೆ.

(ಲೇಖಕ:—ಜಯರಾವ ಸೋನಿಕೇರಿ)

ಮಹಾಯುದ್ಧವು ಸಮಾಪ್ತಿಯಾದಂದಿನಿಂದ ಮೋಸಲ ಪ್ರಾಂತದ ಪ್ರಶ್ನೆಯು ಉಪಸ್ಥಿತವಾದದ್ದು ಇನ್ನೂವರೆಗೆ ಬಿಡದೆ ಹಾಗೇ ಉಳಿದು ಹೋಗಿದೆ. 'ಮೋಸಲ್'ದ ಕೊಟ್ಟೆಯ ತುಣಿಕಿಗಾಗಿ ಇಂಗ್ಲೀಷರೂ ತುರ್ಕರೂ ಒಂದೇ ಸಮನೆ ಬೇಸರಿಲ್ಲದೆ ಹೆಣಗಾಡುತ್ತಲಿದ್ದಾರೆ ಈ ವ್ಯಾಜ್ಯದಲ್ಲಿ 'ರಾಷ್ಟ್ರಸಂಘದವರು ನಿರ್ಣಯಿಸಿದಂತೆ ನಡೆದು ಕೊಳ್ಳುವ' ಎಂಬು ಇಂಗ್ಲೀಷರೂ 'ರಾಷ್ಟ್ರಸಂಘದವರಿಗೆ ಈ ಪ್ರಶ್ನೆಯನ್ನತ್ತಿ ನಿರ್ಣಯಿಸಲು ಅಧಿಕಾರವಿಲ್ಲವೆಂದು ತುರ್ಕರೂ ಕೆಲವು ಕಾಲ ವಾದಿಸಿ, ಕೊನೆಗೆ ಹೇಗ ಕೋರ್ಟಿನೆದುರಿಗೆ ಈ ಪ್ರಶ್ನೆಯನ್ನು ಒಯ್ದರು. ಆ ಕೋರ್ಟಿನವರು ರಾಷ್ಟ್ರಸಂಘದವರಿಗೆ ಮೋಸಲ್‌ದ ಪ್ರಶ್ನೆಯ ಬಗ್ಗೆ ನಿರ್ಣಯ ಕೊಡಲು ಅಧಿಕಾರವು ತಟ್ಟುತ್ತದೆಂದು ಅಭಿಪ್ರಾಯ ಕೊಟ್ಟಿದ್ದಾರೆ. ರಾಷ್ಟ್ರಸಂಘದವರು ಮೋಸಲ್ ಪ್ರಾಂತವು ಇಂಗ್ಲೀಷರ ಕಡೆದುಳಿಯಬೇಕೋ? ತುರ್ಕರ ಅಧೀನದಲ್ಲಿರಬೇಕೋ ಎಂಬುದರ ಬಗ್ಗೆ ಕೊನೆಯ ತೀರ್ಮಾನವನ್ನು ಜಿನಿವಾ ಪಟ್ಟಣದಲ್ಲಿ ನಿರ್ಣಯಿಸತಕ್ಕವರಾಗಿದ್ದಾರೆ. ಉಭಯರಾಷ್ಟ್ರದ ಪ್ರತಿನಿಧಿಗಳು ಈ ನಿರ್ಣಯವನ್ನು ಕೇಳುವದಕ್ಕೆ ಜಿನಿವಾಕ್ಕೆ ತಮ್ಮ ಪ್ರಯಾಣವನ್ನು ಬೆಳೆಸತಕ್ಕವರಿರುವರು.

ಮೋಸಲ್ ಪ್ರಾಂತದ ಮೇಲೆ ಇಂಗ್ಲಂಡದ ಕಣ್ಣು ಬಹು ದಿವಸಗಳಿಂದಲೂ ಇದೆ. ಅಲ್ಲಿಯ ಎಣ್ಣೆಯ ಖಣಿಗಳೂ ಹತ್ತಿಯ ಪೈರೂ ಯಾವಾಗಲೂ ತಮ್ಮ ಸ್ವಾಮಿತ್ವದಲ್ಲಿ ಇದ್ದು ಕೊಂಡಿರಬೇಕೆಂಬದಾಗಿ ಎಂದಿನಿಂದಲೂ ಇಂಗ್ಲಂಡದ ಮಹತ್ವಾಕಾಂಕ್ಷೆ! ಇಂಗ್ಲಂಡದ ವೃತ್ತಪತ್ರಗಳು ಒಂದಿಲ್ಲೊಂದು ನೆವ ಮುಂದ ಮಾಡುತ್ತ ಇಂಗ್ಲಂಡದ ಈ ಧೋರಣವನ್ನು ಪುಷ್ಟೀಕರಿಸುತ್ತಲಿವೆ. ಇರಾಕದ ಬಗ್ಗೆ ಇಂಗ್ಲಂಡವು ಹೊತ್ತಿರುವ ಜವಾಬುದಾರಿಯ ಕೆಲಸವು ಸುಲಭವಾಗಿ ಸಾಗುವದಕ್ಕೆ "ಮೋಸಲ್" ಪ್ರಾಂತವು ಇಂಗ್ಲಂಡದ ಪತ್ರದಲ್ಲಿಯೇ ಇರುವದು ಅವಶ್ಯವೆಂದು ಕೆಲವು ಪತ್ರಗಳೂ, ಇರಾಕದಲ್ಲಿ ಕುರ್ದ ಜನರ ಸಂರಕ್ಷಣಾರ್ಥವಾಗಿ ಮೋಸಲ್ ಪ್ರಾಂತವು ಇಂಗ್ಲಂಡಕ್ಕೆ ಅವಶ್ಯಕ ಘಟಕವಾಗಿ ಉಳಿತಿದೆ ಎಂದು ಕೆಲವು ಪತ್ರಗಳೂ ಸಾರುತ್ತಲಿವೆ. ಹೀಗೆ ಮೋಸಲ್ ಪ್ರಶ್ನೆಯ ಬಗ್ಗೆ ಇಡೀ ಇಂಗ್ಲಂಡದಲ್ಲೆಲ್ಲ ಏಕಮತ್ಯ ಉಂಟಾಗಿದೆ.

ಹೀಗೆ, ಇಂಗ್ಲಂಡದ ಯೋಜನೆಯಿರುವಾಗ, ತುರ್ಕರ ಯೋಜನೆಯು ಏನಿರಬೇಕೆಂಬುದರ ಕಡೆಗೆ ಎಲ್ಲರ ಚಿತ್ತ ಹೋಗುವದು ಸ್ವಾಭಾವಿಕವು. ತುರ್ಕೀ ಪರರಾಷ್ಟ್ರೀಯ ಮಂತ್ರಿಯಾದ ರಸೀದ ಬೇ ಎಂಬುವರು ಕಾನ್‌ಸ್ಟಾಂಟಿನೋಪಲ್‌ದ ಒಂದು ಪ್ರಮುಖ *ವೃತ್ತಪತ್ರದ ಪ್ರತಿನಿಧಿಗಳಿಗೆ ತಮ್ಮ ಮುಲಾಖತ(ಭೆಟ್ಟಿ)ಕೊಟ್ಟಿರುತ್ತಾರೆ ಅದರಲ್ಲಿ ಮೋಸಲ್‌ದ ಬಗ್ಗೆ ತುರ್ಕಸ್ಥಾನವು ಯಾವ ಧೋರಣವನ್ನು ಸ್ವೀಕರಿಸುವದೆಂಬುದರ ಧ್ವನಿಯೂ ಹೊರಟಿರುತ್ತದೆ, ರಸೀದ ಬೇ ರವರು ಅನ್ನುವದೇನಂದರೆ:—

"ಮೋಸಲ್ ಪ್ರಾಂತವು ತುರ್ಕಸ್ಥಾನದ ಒಂದು ಭಾಗವಿದು ಅದು ಯಾವಾಗಲೂ ತುರ್ಕರ ಅಧೀನದಲ್ಲಿರುವದೇ ವಿಹಿತವು. ಇಂಗ್ಲೀಷರ ಸೈನ್ಯವು ಮೋಸಲ್ ಪ್ರಾಂತವನ್ನು ಒಳನುಗ್ಗಿ ಬಂದಿದ್ದಾದರೆ, ಅದನ್ನು ಎದುರಿಸಲು ನಾವು ಸಿದ್ಧರಿದ್ದೇವೆ.

"ತುರ್ಕಸ್ಥಾನದಲ್ಲಿ ಸಂಘವು, ದೊಡ್ಡವರು, ಎಲ್ಲರೂ ಪರಚಕ್ರದಿಂದ ಸ್ವದೇಶವನ್ನು ಸಂರಕ್ಷಿಸಿಕೊಳ್ಳುವದಕ್ಕೆ ಯಾವಾಗಲೂ ಸಿದ್ಧರಿರುತ್ತಾರೆ.

'ಮೋಸಲ್‌ದ ಸಂಗ್ರಾಮವು. ತಪ್ಪಿನ ಹಾಗೆ ಮಾಡಿಕೊಳ್ಳಲು ಶಕ್ಯವಿಲ್ಲವೋ, ಎಂಬುದಾಗಿ ನೀವು ಕೇಳುವಿರಿ. ಆದರೆ, ಈ ಮಾತು ಇಂಗ್ಲಂಡದ ಮೇಲೆಯೇ ಬಹಳವಾಗಿ ಅವಲಂಬಿಸಿರುವದು. ಈ ಕದನವು ಉತ್ಪನ್ನವಾದದ್ದು ಇಂಗ್ಲಂಡದಿಂದಲೇ"

ಇಂಗ್ಲಂಡವು ಕುರ್ದ ಜನರ ಕಲ್ಯಾಣದ ನೆವ ಮುಂದೆ ಮಾಡಿ, ಅದರ ಮೇಲೆ ಭಾರ ಕೊಟ್ಟು, ರಾಷ್ಟ್ರಸಂಘದಿಂದ ತಮಗೆ ಅನುಕೂಲವಾದ ನಿರ್ಣಯವನ್ನು ಪಡೆದುಕೊಂಡಲ್ಲಿ, ಮೋಸಲ್‌ದ ಸರಹದ್ದಿನ ಮೇಲೆ ಕುರ್ದರಿಗೂ ತುರ್ಕರಿಗೂ ಕದನವೆಸಗುವ ಸಂಭವವಿದೆ; ಹಾಗೆ ಒಂದು ವೇಳೆ ಸಂಭವಿಸಿದಲ್ಲಿ,ಇಂಗ್ಲಂಡವು ತುರ್ಕಸ್ಥಾನದೊಡನೆ ಯುದ್ಧ ಪ್ರಸಕ್ತಿಯನ್ನು ಬೆಳೆಸಬೇಕಾದೀತೆಂಬದಾಗಿ ರಸೀದ ಬೇ ರವರು ಅಭಿಪ್ರಾಯ ಪಡುತ್ತಿರುವದಾಗಿ ತೋರುತ್ತದೆ

ಪ್ರತ್ಯೇಕ ಕರ್ನಾಟಕ ರಾಷ್ಟ್ರ ನಿರ್ಮಾಣವು

(ಲೇಖಕ:— ಟಾಕಪ್ಪ, ಇಜಾರಿ. ಹರಿಸನಹಳ್ಳಿ)

ಕರ್ನಾಟಕ ದೇಶದ ಈಗ ನಾಲ್ಕೂ ದಿಕ್ಕುಗಳಲ್ಲಿಯ ನೂತನೋಜ್ಜೀವನವು ವ್ಯಾಪಿಸುತ್ತಿದೆ. ಕರ್ನಾಟಕ ಜಾತೀಯಾಭಿಮಾನವು ಅತಿಶಯವಾಗಿ ವೃದ್ಧಿ ಹೊಂದುತ್ತಿದೆ. ಪ್ರತ್ಯೇಕ ಕರ್ನಾಟ ರಾಷ್ಟ್ರ ನಿರ್ಮಾಣಾವಶ್ಯಕತೆಯನ್ನು ಎಲ್ಲರೂ ವಿಚಾರಿಸಬೇಕಾಗಿದೆ. ಭಾಷಾಭಿಮಾನವು ಪ್ರಬಲವಾಗುತ್ತಿದೆ. ದೇಶಾಭಿಮಾನಿಗಳು, ಭಾಷಾಭಿಮಾನಿಗಳು, ದೇಶಭಾಷಾಭಿವೃದ್ಧಿಗಾಗಿ ಬೇಕಾದ ಸಾಧನಗಳನ್ನು ಅನ್ವೇಷಿಸುತ್ತಿದ್ದಾರೆ.

ಪ್ರತ್ಯೇಕ ಕರ್ನಾಟಕ ರಾಷ್ಟ್ರನಿರ್ಮಾಣಾವಶ್ಯಕತೆಯ ಕಲ್ಪನೆಯು ಇನ್ನೂ ಜನರಲ್ಲಿ ಅಷ್ಟು ಬೇರೂರಿಲ್ಲ. ನೂತನಾದರ್ಶಗಳು ತ್ವರಿತವಾಗಿ ಅನುಮೋದಿಸಲ್ಪಡುವುದು ಕಠಿಣವು ಈ ವಿಷಯವಾಗಿ, ಹಳೆಯ ಜನರು ಉದಾಸೀನ ಭಾವನನ್ನೂ, ಯುವಕರು ಉತ್ಸಾಹವನ್ನೂ, ವಹಿಸುತ್ತಾರೆ. ಲೋಕದಲ್ಲಿ ಯಾವ ನಿರ್ಮಾಣಕ್ಕೂ ಸಂಪೂರ್ಣ ಸ್ಥಿತಿಯು ಅಸಂಭವವು. ಇದು ರಾಜ್ಯಾಂಗವಿಷಯದಲ್ಲಿ ಮುಖ್ಯವಾಗಿ ಕಾಣುತ್ತದೆ. ಆಂಗ್ಲೇಯ ರಾಷ್ಟ್ರನಿರ್ಮಾಣವು ಸಂಪೂರ್ಣಸ್ಥಿತಿಯಲ್ಲಿದೆ. ಎಂದು ಕೆಲವರ ಅಭಿಪ್ರಾಯವು. ಆದರೂ ಮಿ|| ಚರ್ಚಿಲ್‌ರವರು ಬ್ರಿಟಿಶ್ ದ್ವೀಪಗಳಲ್ಲಿ ಭಿನ್ನ ರಾಷ್ಟ್ರ ನಿರ್ಮಾಣವು ಆವಶ್ಯಕವೆಂದು, ಹೇಳಿದ್ದಾರೆ. ಮುಂಬಯಿ ರಾಷ್ಟ್ರದಿಂದ ಸಿಂಧ ಪ್ರಾಂತವನ್ನು ಬಿಡಿಸುವದು ಅವಶ್ಯಕವೆಂದು ಸಿಂಧೂ ದೇಶವಾಸಿಗಳು ತಿಳಿಸುತ್ತಾರೆ. ಕಾರಣಾಂತರದಿಂದ ಒಂದು ಕಾಲದಲ್ಲಿ ನಿರ್ಮಿತವಾದ ವ್ಯವಸ್ಥೆಗಳು ಕಾರಣಗಳು. ಕಾಲವು ಬದಲಾದಹಾಗೆ ದೇಗಶಳುವ್ಯತ್ಯಾಸವನ್ನು ಹೊಂದದೇ ಇರಲಾರವು. ಇಲ್ಲಿಯವರೆಗೆ ಕರ್ನಾಟಕ ದೇಶವು ನಾಲ್ಕು ಪ್ರಾಂತಗಳಲ್ಲಿ ಹಂಚಿ ಹೋಗಿದ್ದರೂ, ಈ ಸ್ಥಿತಿಯೇ ಶಾಶ್ವತವಾಗಿ ಇರಬೇಕೆಂಬುದು ಅಸಂಗತ. ಹಿಂದೂ ಸಾಮ್ರಾಜ್ಯದ ರಾಜ್ಯಾಂಗದ ಪರಮಾವಧಿಯನ್ನು ನಿರೂಪಿಸುವದು ಅಸಂಗತವು. ವಿಶಾಲವಾದ ಭರತದೇಶದಲ್ಲಿ ಅನೇಕ ರಾಜ್ಯಗಳು, ಅನೇಕ ಜಾತಿಗಳು, ಭಾಷೆಗಳು, ಮತಗಳು ಇವೆ. ಆದರೂ ಏಕಜಾತಿಯಾದರ್ಶವೂ, ಏಕಸಾಮ್ರಾಜ್ಯ ಭಾವವೂ ಪ್ರವರ್ಧಮಾನವಾಗುತ್ತಿವೆ. ಪ್ರವರ್ಧಮಾನವಾಗಬೇಕಾದರೆ ಪ್ರತ್ಯೇಕವಾದ ಪ್ರಾಂತವು ಕರ್ನಾಟಕಕ್ಕೆ ಅತ್ಯಾವಶ್ಯಕವು.

ಹಿಂದೂ ದೇಶದ ರಾಜ್ಯಗಳು, ದೀರ್ಘ ಯೋಜನೆಗಳಿಂದ ಮಾಡಿಲ್ಪಟ್ಟವಲ್ಲ. ದೇಶವನ್ನು ಜಯಿಸಿ ಪ್ರಭುತ್ವಪಡಿಸಿದವರು ಸ್ವಾಧೀನ

ಲಯವು ಆವಶ್ಯಕವು. ಕರ್ನಾಟಕಸ್ಥರೂ, ಕರ್ನಾಟಕೇತರರೂ ದುರಭಿಮಾನವನ್ನು ಮರೆತು, ಸ್ವಾಭಾವಿಕವು, ಸುಖಾವಹವು, ಸಂಪದಭಿವೃದ್ಧಿಪ್ರದವು, ಆದ ಮಾತೃಭಾಷಾಪೂಜೆಯಲ್ಲಿ ತತ್ಪರರಾಗಿ, ಕರ್ನಾಟಕ ಲೋಕಾಭ್ಯುದಯಕ್ಕೂ, ಭಾರತ ಜಾತೀಯ ನಿರ್ಮಾಣಕ್ಕೂ, ಲೋಕಕಲ್ಯಾಣಕ್ಕೂ ತಮ್ಮ ಜೀವಿತಗಳನ್ನು ವಿನಿಯೋಗಿಸಿ, ಗಮ್ಯಸ್ಥಾನವನ್ನು ಸೇರುವಹಾಗೆ ಭಗವಂತನು ಅನುಗ್ರಹಿಸಲಿ.

ಕಾನಪೂರ ವರ್ತಮಾನವು (೧)

(೧) ಕಾನಪೂರ ಸಂಯುಕ್ತ ಪ್ರಾಂತದೊಳಗಿನ ಎಷ್ಟೋ ಕೆಲಸಗಾರರು, ಮ್ಯುನಸಿಪ್ಯಾಲಿಟಿ, ತಾಲೂಕಾ ಲೋಕಲ್ ಬೋರ್ಡ ವ, ಡಿಸ್ಟ್ರಿಕ್ಟ ಲೋಕಲಬೋರ್ಡ ಮೊದಲಾದ ಚುನಾವಣೆಗಳಲ್ಲಿ ಭಾಗತೆಗೆದು ಕೊಂಡಿರುವರು. ಕಾರಣ ಕಾಂಗ್ರೆಸ ಕೆಲಸಕ್ಕೆ ಜನರಿಲ್ಲದಂತಾಗಿದೆ. ೧೦ ನೇ ಡಿಶಂಬರಕ್ಕೆ ಈ ಗಡಿಬಿಡಿ ಮುಗಿದ ಮೇಲೆ ಇವರು ಕಾಂಗ್ರೆಸ ಕೆಲಸದಲ್ಲಿ ಹೆಚ್ಚಾಗಿ ಮನಸ್ಸು ಹಾಕುವರಾಗಿ ನಂಬಿಗೆಯಿದೆ.

(೨) ಈ ಪ್ರಾಂತದಲ್ಲಿ ಕಾಕೋರಿ ಎಂಬಲ್ಲಿ ದರವಡಿಯಾಗಿದೆ. ಅದರಲ್ಲಿ ಎಷ್ಟೋ ಕಾಂಗ್ರೆಸ ಕೆಲಸಗಾರರು ಭಾಗ ತೆಗೆದು ಕೊಂಡಿರುವರೆಂಬ ಅಪರಾಧ ಹೊರಿಸಿ ಸರಕಾರದವರು ಅವರನ್ನು ಬಂಧಿಸಿರುವದರಿಂದಲೂ, ತಾವು ಕಾಂಗ್ರೆಸ್ಸಿನಲ್ಲಿ ಕೆಲಸಮಾಡಿದರೆ, ತಮ್ಮನ್ನು ಅವರಂತೆ ಎಲ್ಲಿ ಬಂಧಿಸುವರೋ ಎಂಬ ಭಯದಿಂದಲೂ, ಕೆಲ ಜನರು ಇದರಲ್ಲಿ ಭಾಗ ತೆಗೆದು ಕೊಳ್ಳಲು ನಿರಾಕರಿಸುವರು.

(೩) ದೇಶದಲ್ಲಿ ಕಾಂಗ್ರೆಸ್ಸಿನ ಮುಖಂಡರಲ್ಲಿಯೇ ತಮ್ಮ ತಮ್ಮೊಳಗೆ ಮತ ಭೇದ ಹುಟ್ಟಿರುವದರಿಂದಲೂ ಕಾಂಗ್ರೆಸ್ಸಿನಲ್ಲಿ ಏನೂ ಕೆಲಸ ವಾಗಲಾರದು ಅದರಲ್ಲಿ ನಾವು ಕೆಲಸ ಮಾಡಿದರೆ ಅದರಿಂದ ಏನೂ ಉಪಯೋಗ ಬೀಳದು. ಎಂಬ ಕಲ್ಪನೆಯು ಇಲ್ಲಿಯ ಕೆಲಜನರಿಗೆ ಅದರಿಂದ ಈ ಕೆಲಸದಲ್ಲಿ ಭಾಗತೆಗೆದು ಕೊಳ್ಳಲು ಹಿಂಜರಿಯುವರು.

(೪) ಶ್ರೀಮತಿ ಸರೋಜಿನೀದೇವಿಯವರನ್ನು ಈ ಮಹಾಸಭೆಗೆ ಅಧ್ಯಕ್ಷರನ್ನಾಗಿ ಚುನಾಯಿಸಿದ್ದಾರಷ್ಟೇ? ಆದರೆ ಅವರು ದೇ. ಭ. ಲಾಲಾಜಿಯವರಿಗೆ ಬೇಮಾನ ಮೋಸಗಾರ ವಗೈರೆ ಅವಾಚ್ಯಶಬ್ದಗಳನ್ನು ಪ್ರಯೋಗಿಸಿರುವದರಿಂದಲೂ, ಅವರು ಹಿಂದು ಇದ್ದು ಅವರ ಮಗನು ಮುಸಲ್ಮಾನನಾಗಿರುವನೆಂಬ ಸುದ್ದಿ ಇದ್ದುದರಿಂದಲೂ, ಇಲ್ಲಿಯ ಜನರ ಮನಸ್ಸಿಗೆ ಇದೆಲ್ಲ ಸರಿಬಾರದೇ ಅವರ ಮೇಲೆ ಈ ಜನರು ಬಹಳೇ ಕೋಪಗೊಂಡಿರುವರು.

ಇಷ್ಟೇ ಅಲ್ಲ, ಶ್ರೀಮತಿ ಸರೋಜಿನಿ ದೇವಿಯವರು ಆಗಮಿಸುವ ದಿವಸ ಈ ದೇಶದ ಬೇರೆ ಬೇರೆ ಊರುಗಳಲ್ಲಿ, ಪ್ರಿನ್ಸ ಆಫ ವೇಲ್ಸರು ಬಂದಾಗ ಹೇಗೆ ಹರತಾಳವಾಗಿತ್ತೋ, ಅದೇ ರೀತಿ ಹರತಾಳವಾಗುವದೆಂಬ ವರ್ತಮಾನವಿದೆ.

ನಾವು ಬಂದ ಮೇಲೆ ಮಹಾಸಭೆಯ ಕೆಲಸಕ್ಕಾಗಿ ಸ್ವಯಂಸೇವಕರನ್ನು ಕೂಡಿಸುವದಕ್ಕೂ ಮತ್ತು ಅವರಿಗೆ ಶಿಕ್ಷಣವನ್ನು ಕೊಡುವದಕ್ಕೂ ಈ ಪ್ರಾಂತದ ಬೇರೆ ಬೇರೆ ಕಡೆಗೆ ಹೋದ ಕರ್ನಾಟಕ ಸ್ವಯಂಸೇವಕರು ತಾವು ಕಳಿಸಿದ ರಿಪೋರ್ಟಿನಲ್ಲಿ ಸ್ವಯಂಸೇವಕರು ಸಿಗದಿರುವದಕ್ಕೆ ಮೇಲಿನ ಕಾರಣಗಳನ್ನೇ ಬರೆದಿರುವರು. ಸ್ವಯಂಸೇವಕರು ಸಾಕಷ್ಟು ಸಿಗದಿರುವದಕ್ಕೂ, ಸ್ವಾಗತಕಮಿಟಿಗೆ ಬೇಕಾದ ಹಣವು ಸಾಕಷ್ಟು ಕೂಡದಿರುವದಕ್ಕೂ ಮೇಲೆ ಬರೆದ ಕಾರಣಗಳೇ ಮುಖ್ಯವಾಗಿರುವವು.

ಡಾ. ಹರ್ಡಿಕರ ಇವರು ಕರ್ನಾಟಕದಿಂದ ಶ್ರೀ ಮಧ್ವರಾವ ಕೆಂಭಾವಿ, ಶ್ರೀ ಹಣಮಂತರಾವ ಕೌಜಲಗಿ ಇವರನ್ನು ಇಲ್ಲಿ ಕೆಲಸಮಾಡುವದಕ್ಕಾಗಿ ಕರೆದಿರುವರೆಂದು ತಿಳಿಯುತ್ತದೆ. ಮತ್ತು ಡಾ. ಮುರಾರಿ ಲಾಲರಂಧ ಮುದಕರು ತಮ್ಮ 'ಪ್ರಾಕ್ಟೀಸ' ಮಾಡುವದನ್ನು ಬಿಟ್ಟು, ಇಲ್ಲಿ ಸದಾ ದುಡಿಯಬೇಕಾಗಿರುವದು. ಅಂದ ಮೇಲೆ ಇಲ್ಲಿ ಎಷ್ಟು ಮಂದಿ ಕೆಲಸ ಗಾರರಿರುವರು? ಮತ್ತು ಹೇಗೆ ಕೆಲಸ ನಡೆದಿರುವದೆಂಬುದು ತಾನೇ ಕಂಡು ಬರುವದು.

ತಿಲಕ ನಗರವು ಗಂಗಾನದಿಯ ದಡದಲ್ಲಿಯೇ ಇದೆ. ಇದು ಕಾನಪೂರ ಸ್ಟೇಶನದಿಂದ ೪ ಮೈಲು ಮತ್ತು ಬಜಾರದಿಂದ ೩ ಮೈಲು ದೂರ ಇದೆ. ಇದರ ಹತ್ತರದೇ ಒಂದು ಸ್ಟೇಶನ ಮಾಡುವವರಿದ್ದಾರೆಂದು ತಿಳಿಯುತ್ತದೆ. ಮಾಡಿದರೂ ತಿಲಕ ನಗರದಿಂದ ಒಂದು ಮೈಲಿನ ಮೇಲೆ ಮಾಡಬಹುದು. ಜನರು ಇಳಿದುಕೊಳ್ಳುವದಕ್ಕೆ ಈ ಸಾರೆ ತಂಬುಗಳ ವ್ಯವಸ್ಥೆ ಮಾಡುವವರಿದ್ದಾರೆ.

ತಾ|| ೨೬-೧೧-೨೫ } ನಾ. ರಾ. ವೈದ್ಯ
ಕರ್ನಾಟಕ ಸ್ವ. ಸೇವಕರಲ್ಲೊಬ್ಬ

ಕಾನಪೂರ ವರ್ತಮಾನವು (೨)

(೧) ಈ ಸಾರೆ ಮಹಾ ಸಭೆಯ ಅಧಿವೇಶನದ ಕಾಲದಲ್ಲಿ ಪ್ರತಿನಿಧಿಗಳಿಗೆ ಡೇರೆಗಳು ಕೊಡಲ್ಪಡುವವು. ಎಲ್ಲ ಕಡೆಗೂ ವಿದ್ಯುದ್ದೀಪಗಳೂ ಪೂರೈಸಲ್ಪಡುವವು. ಬೆಳಗಾಂವಿಯಲ್ಲಿದ್ದ ಮಹಾಸಭೆಯ ಮಹಾದ್ವಾರಕ್ಕಿಂತ ಇಲ್ಲಿಯ ಮಹಾದ್ವಾರವು ಸಣ್ಣದಾಗಿರುವದು. ತಿಲಕನಗರದೊಳಗಿನ ರಸ್ತೆಗಳಿಗೆ ದೇಶಬಂಧು ಬೀದಿ, ಸರೋಜಿನಿ ಬೀದಿ, ನೇಹರು ಬೀದಿ, ಮಹಮ್ಮದಲ್ಲಿ ಬೀದಿ, ಶೌಕತಲ್ಲಿ ಬೀದಿ, ಮುಂತಾದ ಹೆಸರುಗಳನ್ನು ಇಟ್ಟಿರುವರು— ಝಂಡಾ ಮೈದಾನಕ್ಕೆ ಕೇಳಕರ ಮೈದಾನವೆಂದೂ ಮಂಡಪದ ಇದುರಿಗಿನ ಜಾಗಿಗೆ ಗಾಂಧೀ ಚೌಕವೆಂದೂ ಹೆಸರು ಇಟ್ಟಿರುವರು. ಇದೇ ತಿಂಗಳ ೨೬ ತಾರೀಖಿಗೆ ಮಹಾಸಭೆಯು ಪ್ರಾರಂಭವಾಗುವದು.

(೨) ಹಿಂದುಸ್ಥಾನಿ ಸೇವಾದಳದ ಪರಿಯಿಂದ ಈ ಪ್ರಾಂತದಲ್ಲಿ ಬೇರೆ ಬೇರೆ ಕಡೆಗೆ ಹೋದ ಕರ್ನಾಟಕದ 'ಆರ್ಗನೈಝರ' ಜನರು ತಾರೀಖು ೫ ನೇ ಡಿಶಂಬರಕ್ಕೆ ತಮ್ಮ ಕೆಲಸ ತೀರಿಸಿಕೊಂಡು ಇಲ್ಲಿಗೆ ಬರುವವರಿದ್ದಾರೆ. ಇಲ್ಲಿಯವರಿಗೆ ನಮಗೆ ಒಟ್ಟು ೮೦೦ ಜನ ಸ್ವಯಂಸೇವಕರು ಸಿಕ್ಕಿರುವರು. ಅವರಲ್ಲಿ ೪೦೦ ಜನರು ನಮ್ಮ ಕರ್ನಾಟಕ 'ಆರ್ಗನೈಝರ'ರಿಂದಾ ಶಿಕ್ಷಣ ಹೊಂದಿದವರಿದ್ದಾರೆ. ಎಲ್ಲ ಸ್ವಯಂಸೇವಕರಿಗೆ ಡಿಶಂಬರ ೨೦ ನೇ ತಾರೀಖಿಗೆ ಹಾಜರ ಇರಲಿಕ್ಕೆ ಈ ಪ್ರಾಂತದ ಸೇನಾಧಿಪತಿಗಳಿಂದ ಅಪ್ಪಣೆಯಾಗಿರುತ್ತದೆ. ಇದೇ ತಿಂಗಳ ೨೫ ನೇ ತಾರೀಖಿಗೆ ಅಖಿಲ ಭಾರತ ಸ್ವಯಂಸೇವಕರ ೩ ನೇ ಪರಿಷತ್ತು ಜರಗುವದು. ಆ ಪರಿಷತ್ತಿಗೆ ಬಂಗಾಲದ ಶ್ರೀ ಟಿ. ಸಿ. ಗೋಸ್ವಾಮಿ ಎಮ್. ಎಲ್. ಎ. ಇವರನ್ನು ಅಧ್ಯಕ್ಷರನ್ನಾಗಿ ಆರಿಸಿದೆ.

ತಾ|| ೨-೧೨-೨೫ { ಶ್ರೀ. ವಾ. ಕುಲಕರ್ಣಿ
ಕರ್ನಾಟಕ ಸ್ವಯಂಸೇವಕರಲ್ಲೊಬ್ಬ

ಲಯವು ಆವಶ್ಯಕವು. ಕರ್ನಾಟಕಸ್ಥರೂ, ಕರ್ನಾಟಕೇತರರೂ ದುರಭಿಮಾನವನ್ನು ಮರೆತು, ಸ್ವಾಭಾವಿಕವು, ಸುಖಾವಹವು, ಸಂಪದಭಿವೃದ್ಧಿಪ್ರದವು, ಆದ ಮಾತೃ ಭಾಷಾಪೂಜೆಯಲ್ಲಿ ತತ್ಪರರಾಗಿ, ಕರ್ನಾಟಕ ಲೋಕಾಭ್ಯುದಯಕ್ಕೂ, ಭಾರತ ಜಾತೀಯ ನಿರ್ಮಾಣಕ್ಕೂ, ಲೋಕಕಲ್ಯಾಣಕ್ಕೂ ತಮ್ಮ ಜೀವಿತಗಳನ್ನು ವಿನಿಯೋಗಿಸಿ, ಗಮ್ಯಸ್ಥಾನವನ್ನು ಸೇರುವಹಾಗೆ ಭಗವಂತನು ಅನುಗ್ರಹಿಸಲಿ.

ಕಾನಪೂರ ವರ್ತಮಾನವು (೧)

(೧) ಕಾನಪೂರ ಸಂಯುಕ್ತ ಪ್ರಾಂತದೊಳಗಿನ ಎಷ್ಟೋ ಕೆಲಸಗಾರರು, ಮ್ಯುನಸಿಪ್ಯಾಲಿಟಿ, ತಾಲೂಕಾ ಲೋಕಲ್ ಬೋರ್ಡ ವ, ಡಿಸ್ಟ್ರಿಕ್ಟ ಲೋಕಲಬೋರ್ಡ ಮೊದಲಾದ ಚುನಾವಣೆಗಳಲ್ಲಿ ಭಾಗತೆಗೆದು ಕೊಂಡಿರುವರು ಕಾರಣ ಕಾಂಗ್ರೆಸ ಕೆಲಸಕ್ಕೆ ಜನರಿಲ್ಲದಂತಾಗಿದೆ. ೧೦ ನೇ ಡಿಶಂಬರಕ್ಕೆ ಈ ಗಡಿಬಿಡಿ ಮುಗಿದ ಮೇಲೆ ಇವರು ಕಾಂಗ್ರೆಸ ಕೆಲಸದಲ್ಲಿ ಹೆಚ್ಚಾಗಿ ಮನಸ್ಸು ಹಾಕುವರಾಗಿ ನಂಬಿಗೆಯಿದೆ

(೨) ಈ ಪ್ರಾಂತದಲ್ಲಿ ಕಾಕೋರಿ ಎಂಬಲ್ಲಿ ದರವಡಿಯಾಗಿದೆ ಅದರಲ್ಲಿ ಎಷ್ಟೋ ಕಾಂಗ್ರೆಸ ಕೆಲಸಗಾರರು ಭಾಗ ತೆಗೆದು ಕೊಂಡಿರುವರೆಂಬ ಅಪರಾಧ ಹೊರಿಸಿ ಸರಕಾರದವರು. ಅವರನ್ನು ಬಂಧಿಸಿರುವದರಿಂದಲೂ, ತಾವು ಕಾಂಗ್ರೆಸ್ಸಿನಲ್ಲಿ ಕೆಲಸಮಾಡಿದರೆ, ತಮ್ಮನ್ನು ಅವರಂತೆ ಎಲ್ಲಿ ಬಂಧಿಸುವರೋ ಎಂಬ ಭಯದಿಂದಲೂ, ಕೆಲ ಜನರು ಇದರಲ್ಲಿ ಭಾಗ ತಗೆದು ಕೊಳ್ಳಲು ನಿರಾಕರಿಸುವರು.

(೩) ದೇಶದಲ್ಲಿ ಕಾಂಗ್ರೆಸ್ಸಿನ ಮುಖಂಡರಲ್ಲಿಯೇ ತಮ್ಮ ತಮ್ಮೊಳಗೆ ಮತ ಭೇದ ಹುಟ್ಟಿರುವದರಿಂದಲೂ ಕಾಂಗ್ರೆಸ್ಸಿನಲ್ಲಿ ಏನೂ ಕೆಲಸ ಸಾಗಲಾರದು ಅದರಲ್ಲಿ ನಾವು ಕೆಲಸ ಮಾಡಿದರೆ ಅದರಿಂದ ಏನೂ ಉಪಯೋಗ ಶೇಳದು. ಎಂಬ ಕಲ್ಪನೆಯು ಇಲ್ಲಿಯ ಕೆಲಜನರಿಗೆ ಅದರಿಂದ ಈ ಕೆಲಸದಲ್ಲಿ ಭಾಗತೆಗೆದು ಕೊಳ್ಳಲು ಒಪ್ಪಂಬರು.

(೪) ಶ್ರೀಮತಿ ಸರೋಜಿನೀದೇವಿಯವರನ್ನು ಈ ಮಹಾಸಭೆಗೆ ಅಧ್ಯಕ್ಷರನ್ನಾಗಿ ಚುನಾಯಿಸಿದ್ದಾರಷ್ಟೇ? ಆದರೆ ಅವರು ದೇಶ ಅ...ರಾಜಿಯವರಿಗೆ ಬೇಮಾನ ಪೋಸಗಾರ ವಗೈರೆ ಅವಾಚ್ಯಶಬ್ದಗಳನ್ನು ಪ್ರಯೋಗಿಸಿರುವದರಿಂದಲೂ, ಅವರು ಹಿಂದು ಇದ್ದು ಅವರ ಮಗನು ಮುಸಲ್ಮಾನನಾಗಿರುವನೆಂಬ ಸುದ್ದಿ ಇದ್ದದರಿಂದಲೂ, ಇಲ್ಲಿಯ ಜನರ ಮನಸ್ಸಿಗೆ ಇದೆಲ್ಲ ಸರಿಬಾರದೇ ಅವರ ಮೇಲೆ ಈ ಜನರು ಬಹಳೇ ಕೋಪಗೊಂಡಿರುವರು

'ಇನ್ನೇ ಅಲ್ಲ ಶ್ರೀಮತಿ ಸರೋಜಿನಿ ದೇವಿಯವರು ಆಗಮಿಸುವ ದಿವಸ' ಈ ದೇಶದ ಬೇರೆ ಬೇರೆ ಊರುಗಳಲ್ಲಿ, ಪ್ರಿನ್ಸ ಆಫ ವೇಲ್ಸರು ಬಂದಾಗ ಹೇಗೆ ಹರತಾಳವಾಗಿತ್ತೋ, ಅದೇ ರೀತಿ ಹರತಾಳವಾಗುವದೆಂಬ ವರ್ತಮಾನವಿದೆ

ಸ ... ಒಂದ ಮೇಲೆ ಮಹಾಸಭೆಯ ಕೆಲಸಕ್ಕಾಗಿ ಸ್ವಯಂಸೇವಕರು... ಕೂಡಿಸುವದಕ್ಕೂ ಮತ್ತು ಅವರಿಗೆ ಶಿಕ್ಷಣವನ್ನು ಕೊಡು... ಈ ಪ್ರಾಂತದ ಬೇರೆ ಬೇರೆ ಕಡಿಗೆ ಹೋದ ... ಸ್ವಯಂಸೇವಕರು ತಾವು ಕಳಿಸಿದ ರಿಪೋರ್ಟಿನಲ್ಲಿ ... ದಗದಿರುವದಕ್ಕೆ ಮೇಲಿನ ಕಾರಣಗಳನ್ನೇ ಬರೆದಿರುವರು. ಸ್ವಯಂಸೇವಕರು ಸಾಕಷ್ಟು ಸಿಗದಿರುವದಕ್ಕೂ, ಸ್ವಾಗತಕಮಿಟಿಗೆ ಬೇಕಾದ ಹಣವು ಸಾಕಷ್ಟು ಕೂಡದಿರುವದಕ್ಕೂ ಮೇಲೆ ಬರೆದ ಕಾರಣಗಳೇ ಮುಖ್ಯವಾಗಿರುವವು.

ಡಾ. ಹರ್ಡೀಕರ ಇವರು ಕರ್ನಾಟಕದಿಂದ ಶ್ರೀ ಮಧ್ವರಾವ ಕೆಂಭಾವಿ, ಶ್ರೀ ಹಣಮಂತರಾವ ಕೌಜಲಗಿ ಇವರನ್ನು ಇಲ್ಲಿ ಕೆಲಸಮಾಡುವದಕ್ಕಾಗಿ ಕರೆದಿರುವರೆಂದು ತಿಳಿಯುತ್ತದೆ ಮತ್ತು ಡಾ ಮುರಾರಿ ಲಾಲರಂಥ ಮುದಕರು ತಮ್ಮ 'ಪ್ರಾಕ್ಟೀಸ' ಮಾಡುವದನ್ನು ಬಿಟ್ಟು, ಇಲ್ಲಿ ಸದಾ ದುಡಿಯಬೇಕಾಗಿರುವದು ಅಂದ ಮೇಲೆ ಇಲ್ಲಿ ಎಷ್ಟು ಮಂದಿ ಕೆಲಸ ಗಾರರಿರುವರು? ಮತ್ತು ಹೇಗೆ ಕೆಲಸ ನಡೆದಿರುವದೆಂಬುದು ತಾನೇ ಕಂಡು ಬರುವದು

ತಿಲಕ ನಗರವು ಗಂಗಾನದಿಯ ದಡದಲ್ಲಿಯೇ ಅದೆ ಇದು ಕಾನಪೂರ ಸ್ಟೇಶನದಿಂದ ೪ ಮೈಲೂ ಮತ್ತು ಒ... ದಿಂದ ೩ ಮೈಲೂ ದೂರ ಅದೆ ಇದರ ಹತ್ತರವೇ ಒಂದು ಸ್ಟೇಶನ ಮಾಡುವವರಿದ್ದಾರೆಂದು ತಿಳಿಯುತ್ತದೆ. ಮಾಡಿದರೂ ತಿಲಕ ನಗರದಿಂದ ಒಂದು ಮೈಲಿನ ಮೇಲೆ ಮಾಡಬಹುದು ಜನರು ಇಳಿದು ಕೊಳ್ಳುವದಕ್ಕೆ ಈ ಸಾರೆ ತಂಬುಗಳ ವ್ಯವಸ್ಥೆ ಮಾಡುವವರಿದ್ದಾರೆ

ತಾ|| ೨೬-೧೧-೨೫ — ನಾ. ರಾ. ವೈದ್ಯ, ಕರ್ನಾಟಕ ಸ್ವ. ಸೇವಕರಲ್ಲೊಬ್ಬ

ಕಾನಪೂರ ವರ್ತಮಾನವು (೨)

(೧) ಈ ಸಾರೆ ಮಹಾ ಸಭೆಯ ಅಧಿವೇಶನದ ಕಾಲದಲ್ಲಿ ಪ್ರತಿನಿಧಿಗಳಿಗೆ ಡೇರೆಗಳು ಕೊಡಲ್ಪಡುವವು ಎಲ್ಲ ಕಡಿಗೂ ವಿದ್ಯುದ್ದೀಪಗಳೂ ಪೂರೈಸಲ್ಪಡುವವು ಬೆಳಗಾಂವಿಯಲ್ಲಿದ್ದ ಮಹಾಸಭೆಯ ಮಹಾದ್ವಾರಕ್ಕಿಂತ ಇಲ್ಲಿಯ ಮಹಾದ್ವಾರವು ಸಣ್ಣದಾಗಿರುವದು. ತಿಲಕನಗರದೊಳಗಿನ ರಸ್ತೆಗಳಿಗೆ ದೇಶಬಂಧು ಬೀದಿ, ಸರೋಜಿನಿ ಬೀದಿ, ನೇಹರು ಬೀದಿ, ಮಹಮ್ಮದಲ್ಲಿ, ಬೀದಿ, ಶೌಕತಲ್ಲಿ ಬೀದಿ, ಮುಂತಾದ ಹೆಸರುಗಳನ್ನು ಇಟ್ಟಿರುವರು— ಝೆಂಡಾ ಮೈದಾನಕ್ಕೆ ಕೇಳಕರ ಮೈದಾನನೆಂದೂ ಮಂಡಪದ ಇದುರಿಗಿನ ಜಾಗಿಗೆ ಗಾಂಧೀ ಚೌಕವೆಂದೂ ಹೆಸರು ಇಟ್ಟಿರುವರು. ಇದೇ ತಿಂಗಳ ೨೬ ರಾಗಿಯಿಗ ಮಹಾಸಭೆಯು ಪ್ರಾರಂಭವಾಗುವದು

(೨) ಹಿಂದುಸ್ಥಾನಿ ಸೇವಾದಲದ ಪತಿಯಿಂದ ಈ ಪ್ರಾಂತದಲ್ಲಿ ಬೇರೆ ಬೇರೆ ಕಡಿಗೆ ಹೋದ ಕರ್ನಾಟಕದ 'ಆರ್ಗನೈಝರ' ಜನರು ತಾರೀಖು ೫ ನೇ ಡಿಶಂಬರಕ್ಕೆ ತಮ್ಮ ಕೆಲಸ ತೀರಿಸಿ ಕೊಂಡು ಇಲ್ಲಿಗೆ ಬರುವವರಿದ್ದಾರೆ. ಇಲ್ಲಿಯವರಿಗೆ ನಮಗೆ ಒಟ್ಟು ೮೦೦ ಜನ ಸ್ವಯಂಸೇವಕರು ಸಿಕ್ಕಿರುವರು. ಅವರಲ್ಲಿ ೬೦೦ ಜನರು ನಮ್ಮ ಕರ್ನಾಟಕ 'ಆರ್ಗನೈಝರ' ರಿಂದಾ ಶಿಕ್ಷಣ ಹೊಂದಿದವರಿದ್ದಾರೆ. ಎಲ್ಲ ಸ್ವಯಂಸೇವಕರುಗ ಡಿಶಂಬರ ೨೦ ನೇ ತಾರೀಖಿಗೆ ಹಾಜರ ಇರಲಿಕ್ಕೆ ಈ ಪ್ರಾಂತದ ಸೇನಾಧಿಪತಿಗೆ ಳಿಂದ ಅಪ್ಪಣೆಯಾಗಿರುತ್ತದೆ. ಇದೇ ತಿಂಗಳ ೨೫ ನೇ ತಾರೀಖಿಗೆ ಅಖಿಲ ಭಾರತ ಸ್ವಯಂಸೇವಕರ ೩ ನೇ ಪರಿಷತ್ತು ಜರಗುವದು ಈ ಪರಿಷತ್ತಿಗೆ ಬಂಗಾಲದ ಶ್ರೀ ಟಿ ಸಿ. ಗೋಸಾಯಿ ಎಮ್. ಎಲ್. ಎ. ಇವರನ್ನು ಅಧ್ಯಕ್ಷರನ್ನಾಗಿ ಆರಿಸಿದ

ತಾ|| ೨-೧೨-೨೫ — ಶ್ರೀ. ವಾ ಕುಲಕರ್ಣಿ, ಕರ್ನಾಟಕ ಸ್ವಯಂಸೇವಕರಲ್ಲೊಬ್ಬ

ವರ್ತಮಾನಸಾರ

ಮುಂಬೈ ಕರ್ನಾಟಕ

ಧಾರವಾಡ ಲೈನ ಬಜಾರದಲ್ಲಿ ಹಿಂದೀ ವಾಚನಾಲಯವು ಶ್ರೀ. ಹುಲಕೋಟಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ಉಗರಗೊಳದಲ್ಲಿ ತಾ|| ೨೪—೧೧—೨೫ ನೇ ದಿನ ಡಾ. ಬಸಪ್ಪ ಪ್ರಭಪ್ಪ ಕಡಕೊಳ್ಳ ಎಲ್. ಸಿ. ಪಿ. ಎಸ್ ಇವರ ಅಧ್ಯಕ್ಷತೆಯ ಕೆಳಗೆ ನಾಗರೀಕರ ಸಭೆ ಸೇರಿತ್ತು. ಸಭೆಯಲ್ಲಿ (೧) ಬಳ್ಳಾರಿಯನ್ನು ಆಂಧ್ರರಿಗೆ ಕೊಡಬಾರದೆಂದೂ, ಮದ್ರಾಸ ಸರಕಾರದವರು ಕನ್ನಡಿಗರ ನ್ಯಾಯವಾದ ಹಕ್ಕಿಗೆ ಅರವಾಳ ಹತ್ತದಂತೆ ಇನ್ನಾದರೂ ನೋಡಿಕೊಳ್ಳಬೇಕೆಂದೂ, (೨) ಜಮಖಂಡಿ, ಮುಧೋಳ, ಮುಂತಾದ ಸಂಸ್ಥಾನಗಳನ್ನು ಮುಂಬಯಿ ವಿದ್ಯಾಪೀಠಕ್ಕೆ ಕೊಡಬೇಕೆಂದು ಮುಂಬೈ ಯುನಿವ್ಹರ್ಸಿಟಿ ಕಮಿಟಿಯವರ ಸೂಚನೆಯನ್ನು ನಿಷೇಧಮಾಡಿ ಮುಂಬೈ ಸರಕಾರವು ಈ ಸೂಚನೆಗೆ ಮಾನ್ಯ ಮಾಡಬಾರದೆಂದೂ ಠರಾವುಗಳಾದವು. ಅಧ್ಯಕ್ಷರಿಗೆ ಆ ಠರಾವುಗಳನ್ನು ಯೋಗ್ಯ ಅಧಿಕಾರಿಗಳಿಗೆ ಕಳಿಸುವ ಅಧಿಕಾರ ಕೊಟ್ಟಿತು. ಠರಾವಿನ ಮೇಲೆ, ಕರ್ನಾಟಕ ಏಕೀಕರಣದ ಅವಶ್ಯಕತೆ, ಅಲ್ಲದ್ದರಿಂದಾಗುವ ಕನ್ನಡ ವ್ಯಾಪಾರ ಉದ್ಯೋಗ ವಿದ್ಯೆಯ ಹಾನಿ ಮುಂತಾದವನ್ನು ಕುರಿತು ಶ್ರೀ ಜೋಶಿ ಶಂಕರರಾಯರು ವಿವರಿಸಿ ಹೇಳಿದರು. ಆ ಮೇಲೆ ಶ್ರೀ ಹುಬ್ಬಳ್ಳಿಯ ಈರಪ್ಪನವರು ಮುಂತಾದವರು ಮಾತಾಡಿದರು. ಜನರು ಕರ್ನಾಟಕ ಏಕೀಕರಣದ ವಿಚಾರದಲ್ಲಿ ಬಹಳ ಉತ್ಸುಕತೆಯನ್ನು ತೋರಿಸುತ್ತಿದ್ದಾರೆ.

ಬೆಳಗಾಂವಿ ಜಿಲ್ಹಾ ಲೋಕಲಬೋರ್ಡಿನಲ್ಲಿ ಕನ್ನಡ ಶಾಲೆಗಳಲ್ಲಿ ನೂಲುವ ಪ್ರಸಾರವು ಆಗಬೇಕೆಂಬ ಠರಾವು ಪಾಸಾಯಿತು

ಬಂಕಾಪುರ ತಾಲೂಕ ಗೋನಾಳದಲ್ಲಿ ಸ್ವಲ್ಪದಿವಸಗಳಲ್ಲಿ ಕೂಡುವ ಧಾರವಾಡ ಜಿಲ್ಹಾ ಕುರುಬರ ೧ನೆ ಪರಿಷತ್ತಿನ ಬಗ್ಗೆ ವಿಚಾರ ಮಾಡುವ ಕುರಿತು ಸದರ ಗ್ರಾಮದಲ್ಲಿ ತಾ। ೬—೧೨—೨೫ ನೇ ದಿವಸ ರವಿವಾರ ಸಂಧ್ಯಾಕಾಲದ ೪ ಘಂಟೆಗೆ ಆಲೋಚನಾ ಸಭೆಯು ಸೇರಿದ್ದಿತು (೧) ಸ್ವಾಗತ ಮಂಡಳದ ನಿರ್ಮಾಣ. (೨) ಶ್ರೀ ದೇವನಗೌಡ ಲಿ. ಪಾಟೀಲ ಇವರು ಧಾರವಾಡ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನ ವ್ಹಾಯಿಸ ಪ್ರೆಸಿಡೆಂಟರಾದಬಗ್ಗೆ ಅಭಿನಂದನ (೩) ಕುರುಬರ ಸಮಾಜದ ಲೋಕಲ್ ಬೋರ್ಡ ಮೆಂಬರರ ಅಭಿನಂದನ. ಮುಂತಾದ ವಿಷಯಗಳು ಚರ್ಚಿಸಲ್ಪಡುವವು

ಬಂಕಾಪುರ ತಾಲೂಕ ಲೋಕಲ್ ಬೋರ್ಡಿನ ಮೆಂಬರರ ಮತ್ತು ಬಂಕಾಪುರ ತಾಲೂಕ ಪಕ್ಷದಿಂದ ಧಾರವಾಡ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿಗೆ ಆರಿಸಿ ಬಂದ ಮೆಂಬರರ ಸನ್ಮಾನಾರ್ಥವಾಗಿ ಬಂಕಾಪುರ ತಾಲೂಕ ಗೋನಾಳದಲ್ಲಿ ತಾ|| ೬—೧೨—೧೯೨೫ ನೇ ಇಸವಿ ರವಿವಾರ ಸಂಧ್ಯಾಕಾಲ ೨ ಘಂಟೆಗೆ ತಾಂಬೂಲ ಸಮಾರಂಭವಾಯಿತು. ಸಭೆಯ ಅಧ್ಯಕ್ಷಸ್ಥಾನವನ್ನು ಧಾರವಾಡ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನ ವ್ಹಾಯಿಸ ಪ್ರೆಸಿಡೆಂಟರಾದ ಶ್ರೀ. ದೇವನಗೌಡಾ ಲಿಂ. ಪಾಟೀಲ, ಬಿ ಎ. ಎಲ್ ಎಲ್ ಬಿ. ಹಾಯಕೋರ್ಟ ವಕೀಲ ಧಾರವಾಡ ಇವರು ವಹಿಸಿದ್ದರು.

ಮದ್ರಾಸ ಕರ್ನಾಟಕ

ಕಂದಾಯ ಮಂಡಳದ (Revenue Board) ಹಿರಿ ಸಭಾಸದರಾದ ಮ್ಯಾಕ್‌ಮಿಕೇಲ ಸಾಹೇಬರು ದಕ್ಷಿಣ ಕನ್ನಡ ಜಿಲ್ಹೆಯಲ್ಲಿ ಸಂಚರಿಸುತ್ತಲಿದ್ದಾರೆ.

ಮಂಗಳೂರಿನಿಂದ "ಲೆಜಿಸ್ಲೇಟೀವ ಅಸೆಂಬ್ಲಿಯ"ಕ್ಕಿದ್ದ ಶ್ರೀ. ಮಹಮ್ಮದ ಶಾಮನಾದರವರು ಆಂದಮಾನ ನಡಾವಳಿಯ ವಿಚಾರಣೆಯ ಕಮೀಟಿಯ ಸಭಾಸದರಾಗಿ ನೇಮಿಸಲ್ಪಟ್ಟಿದ್ದಾರೆ.

ಮೈಸೂರು ಕರ್ನಾಟಕ

ಕನ್ನಡವು 'ಇಂಟರ' ಪರೀಕ್ಷೆಯಲ್ಲಿ ಅವಶ್ಯಕವಾದ ವಿಷಯವಾಗಿ [illegible]ವಾಗಿ ಮೈಸೂರ ವಿಶ್ವವಿದ್ಯಾಲಯದವರು ನಿಶ್ಚಯಿಸಿದ್ದಾರೆ

ವಿಶ್ವಕರ್ನಾಟಕದ ಸಂಪಾದಕರಾದ ಶ್ರೀ. ಶರ್ಮರವರು ಕೋಟು ರುಮಾಲುಗಳಿಲ್ಲದೇ ಖಾದಿಯ ಪೈರಣನ್ನು ಮಾತ್ರ ಧರಿಸಿದ್ದರಿಂದ ಅವರನ್ನು ವಿಶ್ವವಿದ್ಯಾಲಯದ ಸಭೆಗೆ ಮೊದಲು ರಜಿಸ್ಟ್ರರ ಸಾಹೇಬರು ಬಿಡಲಿಲ್ಲ. ಸಂಪಾದಕರು ಲೇಖೀ ಹುಕುಮನ್ನು ಬೇಡಿದ್ದರಿಂದ ಕಡೆಗೆ ಪ್ರವೇಶಕ್ಕೆ ಅಪ್ಪಣೆ ದೊರೆಯಿತು!

ಹಿಂದುಸ್ಥಾನ

ನವಸಾರಿಯಲ್ಲಿ (.ಗುಜರಾತ) ರೇಲವೇ ಗೇಟ ತೆರದಿದ್ದರಿಂದ ಬೀದಿಯ ಕಡೆಯಿಂದ ಬರುವ ಮೋಟಾರು ಒಳಗೆ ಪ್ರವೇಶಿಸಿದ ಕೂಡಲೇ ಅತ್ತಿಂದ ರೇಲವೇ ಇಂಜೀನು ಸಹ ಬಂದಿತು. ಮೋಟಾರನ್ನು ಇಂಜೀನು ನೂಗಿಸಿಕೊಂಡು ಹೋದ್ದರಿಂದ ನಾಲ್ವರು ಮಡಿದರು ನಾಲ್ವರಿಗೆ ಘಾಯವಾಗಿದೆ. ಮೋಟಾರು ಮುರಿದು ಹೋಯಿತು. ರೇಲವೇ ಕಾವಲುಗಾರನನ್ನು ಬಂಧಿಸಿದ್ದಾರೆ. ಮಡಿದವರೆಲ್ಲ ನಾಲ್ಕು ಜನ ಬೇರೆ ಬೇರೆ ಶ್ರೀಮಂತ ಮನುಷ್ಯರ ಪುತ್ರರು. ತಂದೆಯ ಆಸ್ತಿಗೆ ಇವರೇ ವಾರಸದಾರರು ಇವರ ಹೊರ್ತಾಗಿ ಆ ನಾಲ್ವರಿಗೂ ಬೇರೆ ಮಕ್ಕಳಿದ್ದಿಲ್ಲ!

ರೇಲವೇ ಬೋರ್ಡಿನ ಸುದ್ದಿ

ನಿಪ್ಪಾಣಿ- ರಾಯಬಾಗ- ಜಮಖಂಡಿ- ಬಾಗಲಕೋಟೆ- ಹುನಗುಂದ ರೇಲವೇ ಬಗ್ಗೆ ವಿಚಾರ ನಡೆದಿರುವದೆಂದು ದಿಲ್ಲಿಯಲ್ಲಿಯ ರೇಲವೇ ಬೋರ್ಡಿನವರು "ಕನ್ನಡಿಗ" ನಿಗೆ ಪತ್ರ ಬರೆದು ತಿಳಿಸಿದ್ದಾರೆ. "ಕನ್ನಡಿಗ" ನ ಪ್ರಯತ್ನವು ವ್ಯರ್ಥವಾಗುವದಿಲ್ಲ. ಕರ್ನಾಟಕದಲ್ಲಿ ಎಲ್ಲ ಕಡೆಗೂ ಇದೇ ಪ್ರಕಾರವಾಗಿ ರೇಲವೇಗಳು ಪ್ರಾರಂಭವಾಗುವದಕ್ಕಾಗಿ ಜನರಿಂದ ಅರ್ಜಿಗಳು ಮಾತ್ರ ಹೆಚ್ಚಾಗಿ ಬೇಗನೇ ಬೇಕು. ಕೆಳಗೆ ಕಾಣಿಸಿದವರಿಂದ ಅರ್ಜಿಗಳು ಈ ವಾರದಲ್ಲಿ ಬಂದಿವೆ:— ಕೃಷ್ಣರಾಯ ಕೊಡಗಿ, ಕುಂದಾಪೂರ= ೧೧೨; (ಇವರು ದಕ್ಷಿಣ ಕನ್ನಡದ ಜಿಲ್ಹಾ ಬೋರ್ಡಿನ ಸಭಾಸದರು ತಮ್ಮ ಬೋರ್ಡಿನಲ್ಲಿ ಈ ವಿಷಯವಾಗಿ ಒಂದು ಠರಾವನ್ನು ಸಹಿತ ಮಾಡಿಸುವೆವಾಗಿ ಬರೆದಿದ್ದಾರೆ ಇದೇ ಪ್ರಕಾರವಾಗಿ ಎಲ್ಲ ಬೋರ್ಡುಗಳೂ ಠೀವರ್ಮಾನಿಸಿದರೆ ಒಳಿತು.) ವೀರಪ್ಪ ಸಿದ್ದಲಿಂಗಪ್ಪ ವಿರುಪಾಕ್ಷಿ ಬೆಳಗಾಂವ=೨೪; ಧೋ. ರಾ. ಕಾಳೆ ಸೀನಿಯರ ಇನ್‌ಸ್ಪೆಕ್ಟರ ಮುಂಬೈ ಪ್ರಾಂತಿಕ ಕೋ ಆಪರೇಟಿವ ಬ್ಯಾಂಕ, ಧುಳೆ=೧೯; (ಈ ಮಹನೀಯರು ಕರ್ನಾಟಕದ ಹೊರಗೆ ಹೋಗಿದ್ದರೂ, ಕರ್ನಾಟಕಾಭಿಮಾನದಿಂದ ಧುಳೇದಲ್ಲಿಯ ಕರ್ನಾಟಕಸ್ಥರ ಮತ್ತು ಇತರ ಸಹಾನುಭೂತಿಯುಳ್ಳವರ ಸಹಿಗಳನ್ನು ದೊರಕಿಸಿದ್ದಾರೆ) ರಾಮಜಿ ಬಾಲಪ್ಪ ಸೇನೆ.ಕಾಲ ಮೂಡಲಗಿ=೩೦; ಪಿ. ನೆ. ತಲವಾಯಿ ಪೆಟ್ಲಳಿ=೯೦;

ಕರ್ನಾಟಕ ವಿಶ್ವ ವಿದ್ಯಾಲಯದ ಸುದ್ದಿ.

"ಕನ್ನಡಿಗ" ನಲ್ಲಿ ಪ್ರಸಿದ್ಧವಾದ ಪ್ರಶ್ನಮಾಲಿಕೆಯು, ಕಂಠೀರವ, ಸ್ವದೇಶಾಭಿಮಾನಿ, ಕರ್ನಾಟಕ ಟಾಯಮ್ಸ, ಸತ್ಯಾಗ್ರಹಿ, ವಿಜಯ ಈ ಪತ್ರಿಕೆಗಳಲ್ಲಿ ಪುನಃ ಪ್ರಕಟವಾಗಿದ್ದರೂ, ಪ್ರಶ್ನೆ ಮಾಲಿಕೆಗೆ ಉತ್ತರ ದೊರೆಯುವ 'ತೊಂದರೆ' ಯನ್ನು ನಾವೇಕೆ ತೆಗೆದುಕೊಳ್ಳಬೇಕೆಂದು ಕನ್ನಡನಾಡಿನ ಮುಖಂಡರೂ 'ಮುಖಂಡೇತರರೂ' ವಿಚಾರಿಸಿದಂತೆ ಕಾಣುತ್ತಿದೆ. ಕರ್ನಾಟಕವು ಉಳಿದರೇನು? ಅಳಿದರೇನು? ವಿಶ್ವವಿದ್ಯಾಲಯವು ಆದರೇನು? ಹೋದರೇನು? ಸುಖವಾಗಿ ನಿತ್ಯ ದೊರೆತರೆ ಈ ಮಹನೀಯರಿಗೆಲ್ಲ ಸಾಕಾದೆಯೆಂಬಂತೆ ಕಾಣುತ್ತದೆ.

ಈಗ್ಗೆ ಮೂಡಲಗಿಯಿಂದ ಶ್ರೀ. ರಾಮಜೆಪ್ಪ ಬಾಲಪ್ಪ ದಂಡಪ್ಪನವರ ಇವರು ಮಾತ್ರ ಉತ್ತರ ಬರೆದಿರುವರು. ಆದರೆ ಕಾಗದದ ಎರಡೂ ಮಗ್ಗಲಿನಲ್ಲಿ ಅಸ್ಪಷ್ಟವಾಗಿ ಬರೆದಿದ್ದರಿಂದಲೂ, ಪ್ರಶ್ನೆಗಳಿಗೆಲ್ಲ ಸಂಪೂರ್ಣವಾದ [illegible], ಎಂದು ಬರೆದಿದ್ದರಿಂದಲೂ, ಅದನ್ನು ಪ್ರಸಿದ್ಧಪಡಿಸಿಲ್ಲ. "ಹೈದರಾಬಾದ ಉಸ್ಮಾನಿಯಾ ವಿಶ್ವವಿದ್ಯಾಲಕ್ಕೆ ಸೇರಿದ [illegible] ಕರ್ನಾಟಕವನ್ನು, ನಮ್ಮ ಮೈಸೂರ ವಿಶ್ವವಿದ್ಯಾಲಯದಲ್ಲಿಯೇ, ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡಿದ ಮೇಲೆ, ಇದಕ್ಕೆ ಸೇರಿಸುವದು ಅವಶ್ಯವಲ್ಲ" ವೆಂದೂ, ಕನ್ನಡಿಗರೆಲ್ಲರೂ ಒಟ್ಟು ಸೇರಿ ಚಳವಳ ಮಾಡಿದರೆ, ನಿಜಾಮರು ಇದಕ್ಕೆ ಒಪ್ಪುವರೆಂದೂ ಅಭಿಪ್ರಾಯ ಪಟ್ಟಿದ್ದಾರೆ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ

ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೫ ನೇ ಇಸ್ವಿಯ ಜುಲೈ ೩೧ ನೇ ತಾ|| ದಿನ ಸಾಯಂಕಾಲದ ೫–೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟೀ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ ಬಸವಾರಾಧ್ಯ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತುಃ—

(೧) ಬಾಂಡ ನಂ. ೧೧೬೦೨ ಶ್ರೀ. ಆರ್. ಜಿ. ಹುಕ್ಕೇರಿ. ಬುಕ್ಕಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೫೪೫ ಶ್ರೀ. ದೀರಜರಾಮ ನಾರಭಿರಾಮ ನಾಯಿಕ ಕಂಪಾವುಂಡರ, ಆಲಪಾಡ ದವಾಖಾನೆ ವಾಯು, ಸಯಾನ. ಬಿಬಿ. ಸಿ. ಆಯ ರೇಲ್ವೇ ಸುರತ (ಬಡೋದಾ ಏಜನ್ಸಿ)

(೩) ಬಾಂಡ ನಂ. ೧೧೫೬೭ ಶ್ರೀ. ಶ್ರೀರಾಮಮೂರ್ತಿ ಆರಾಧ್ಯಲು ರಾಮಚಂದ್ರರಾವ ಗುರು ಪೀಠ ಪುರು ಗೋದಾವರಿ ಜಿಲ್ಹಾ.

(೪) ಬಾಂಡ ನಂ. ೧೬೭ ಶ್ರೀ. ನಂದಗಿರಿ ವೆಂಕಟರಾಮ ದಾಸ ಪ್ರೊಪ್ರಾಯಿಟರ ಮುಕುಂದ ಪುರ. ಕಾಕಿನಾಡು

(೫) ಬಾಂಡ ನಂ. ೪೩೮ ಶ್ರೀ. ಆರ್. ವೆಂಕಟಯ್ಯಾ ಗುರು ಇನಾಮದಾರ ಭೋಜಯ್ಯಾ ಆಗ್ರಹಾರ ಅಮಳ ಪುರಮ್.

೧–೮–೨೫ { ಬಿ. ಎನ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ

ಲೋಕರಹಸ್ಯ

ಕೃಷಿಯ ಅತ್ಯುತ್ತಮ ರೀತಿಗಳು, ವ್ಯಾಪಾರದ ವಿಷಯಗಳು ಹೊರಗೆ, ಮಕ್ಕಳನ್ನು ಸಾಕುವ ವಿಷಯಗಳನ್ನು ಬಡವರಿಗೆ ಬೇಕಾದ ಹಣಸಂಪಾದನೆಯ ವಿಷಯಗಳು, ರಸಿಕರಿಗೆ ವಿನೋದ ವಿಚಾರ, ರಾಜಕೀಯ ವಿಷಯಗಳು, ಆಯುರ್ವೇದ ಯುನಾನಿ ವೈದ್ಯ ಸಂಗ್ರಹ. ಪ್ರತಿಯೊಬ್ಬನೂ ತಿಳಿಯಬೇಕಾದ ಲಾ' ವಿಚಾರ, ವಿದ್ಯಾ ವಿಷಯ, ವೇದಾಂತ ವಿಚಾರಗಳಿಂದಲೂ, ತುಂಬಿ ತುಳುಕುತ್ತಿರುವ ಈ ಮಾಸ ಪತ್ರಿಕೆಗೆ ವರ್ಷಕ್ಕೆ ಚಂದಾ ರೂ. ೩–೮–೦ ಮಾದರಿ ಸಂಚಿಕೆಗೆ ೦–೫–೦.

ಪ್ರತಿ ತಿಂಗಳಲ್ಲೂ ೬೦ ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ.

" ಲೋಕರಹಸ್ಯ " ಆಫೀಸು,
ವೀರರಾಜೇಂದ್ರ ಪೇಟೆ (ಕೊಡಗು)

FOR SAFETY AND GOOD SERVICE

IN

LIFE ASSURANCE

GO TO

THE ORIENTAL

IN AGE SIZE AND STRENGTH

THE

GREATEST INDIAN

LIFE ASSURANCE COMPANY

Apply for full particulars to-

N. K. Kulkarni. Agent Bagalkot

ಸರಸ್ವತಿ

ಕನ್ನಡನಾಡಿನಲ್ಲೆಲ್ಲಾ ಸಂಚರಿಸುವ

ಉತ್ತಮವರ್ಗದ ಶ್ರೇಷ್ಠವಾದ ಕನ್ನಡ ಮಾಸ ಪತ್ರಿಕೆ

ಈ ಪತ್ರಿಕೆಯಲ್ಲಿ ಸಾಮಾಜಿಕ- ನೈತಿಕ- ಮತ್ತು ಐತಿಹಾಸಿಕ ವಿಷಯಗಳಿಗೆ ಸಂಬಂಧಪಟ್ಟ ಅತ್ಯುತ್ತಮವಾದ ಲೇಖನಗಳೂ ಸ್ವಾರಸ್ಯ ಮತ್ತು ಮನೋರಂಜಕವಾದ ನಾಟಕ ಮತ್ತು ಕಾದಂಬರಿಗಳೂ ಬಾಲಕ- ಬಾಲಿಕೆಯರಿಗೂ, ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಉತ್ತಮ ಶೈಲಿಯಲ್ಲಿ ಪ್ರಸಿದ್ಧರಾದ ಸ್ತ್ರೀಪುರುಷರಿಂದ ಬರೆಯಲ್ಪಟ್ಟ ಲೇಖನಗಳೂ, ಪ್ರಕಟಿಸಲ್ಪಡುವವು. ಚಂದಾದಾರರಿಗೆ ಪ್ರತಿಯೊಂದು ವರ್ಷ ಒಂದು ಕಾದಂಬರಿಯು ಕಾಣಿಕೆಯಾಗಿ ಕೊಡಲ್ಪಡುವದು. ಹಾಗು ಶಾರದಾಗ್ರಂಥ ಮಾಲೆಯಲ್ಲಿ ಪ್ರಕಟಿಸಲ್ಪಡುವ ಗ್ರಂಥಗಳು ಕಡಿಮೆ ದರದಿಂದ ದೊರೆಯುವವು.

ಸಂಪಾದಕ- ಸರಸ್ವತಿ. ಚಾಮರಾಜಪೇಟೆ
ಬೆಂಗಳೂರ ಸಿಟಿ.

ಆರೋಗ್ಯಚಂದ್ರಿಕೆ.

ಮದ್ರಾಸ ಸಂಪಾದಕರು:- ಡಾಕ್ಟರ ಯು ರಾಮರಾವ, ಎಮ್. ಎಲ್ ಸಿ. ಯವರು

ಆರೋಗ್ಯಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ

ಈ ಮಾಸಪತ್ರಿಕೆಯು ' ಹೆಲ್ತ್ ' ಎಂಬ ಇಂಗ್ಲಿಷ ಮಾಸ ಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ೧–೮–೦ ಬಿಡಿಪತ್ರಿಕೆ ಒಂದಕ್ಕೆ ೦–೨–೦ ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರ- ' ಆರೋಗ್ಯಚಂದ್ರಿಕೆ '
೩೨೩, ತಂಬುಚೆಟ್ಟಿಬೀದಿ, ಮದ್ರಾಸ

ಶ್ರೀ. ನಾರಾಯಣರಾವ ಕೃ. ಹುಯಿಲಗೋಳ, ಬಿ. ಎ. ಎಲ್. ಎಲ್. ಬಿ. ಗದಗ ಇವರಿಂದ

ರಚಿತವಾದ ಸಚಿತ್ರ ಸಂಗೀತ ನಾಟಕಗಳು

ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ

ಬಹುಮಾನ ಪಡೆದ

ಸ್ತ್ರೀಧರ್ಮರಹಸ್ಯ ಬೆಲೆ ೧ ರೂ.

ಶಿಕ್ಷಣಸಂಭ್ರಮ ಬೆಲೆ ೧ ರೂ.

ಅಂಚೆವೆಚ್ಚಬೇರೆ

ವಿಳಾಸ:— ನಾರಾಯಣರಾವ, ಕೃಷ್ಣರಾವ, ಹುಯಿಲಗೋಳ ಬಿ. ಎ ಎಲ್ ಎಲ್. ಬಿ. ಪ್ಲೋ. ತಾ|| ಗದಗ

ಈ ಪತ್ರಿಕೆಯು ಮಂಗಳವೇಢೆ ರಾಜೇರಾಮರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಲಯದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಒ. ೧೯೪೭ ವಾ. ಚಂದಾ ೧—೧೩—೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ಪುಷ್ಯ ಶುದ್ಧ ೩ ಶಕೆ ೧೮೪೭. ತಾ. ೧೮-೧೨-೧೯೨೫. | ಸಂಚಿಕೆ ೩೭

ಸಂಪಾದಕರ ಭೂಮಿಕೆ.

(*)

ನನ್ನ ಮನಸಿನ ಮೋಣವಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಷ್ಟು।
ಚಿನ್ನದಾಜರು ಚೆನ್ನ ಮೋಣಬಸ್ತಿಯ ನೊಂದು ॥
ಚಿನ್ಮಯಾಕಾಶದಲ್ಲಿ ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವಹ ಬೀರಬಹ ।
ಗಂಧವಹವೆಂದು ತಿಳಿಯೆ ॥

—ಅಂಬಿಕಾತನಯ ದತ್ತ

ಬಾಗಲಕೋಟೆಯ ಮುನಸೀಪಾಲಿಟಿಯ ೭ನೇ ವಾರ್ಡಿನಲ್ಲಿ ಅಸಹ್ಯವಾದ ಹೊಲಸು ಇರುತ್ತಿರುವ ಬಗ್ಗೆ 'ಕನ್ನಡಿಗ'ನ ೩೩ ನೇ ಸಂಚಿಕೆಯಲ್ಲಿ ಬರೆದುದನ್ನು ಎಲ್ಲರೂ ಬಲ್ಲರು. ಆ ಲೇಖವು ಪ್ರಸಿದ್ಧವಾದ ಮೇಲೆ 'ಸ್ಯಾನಿಟರೀ, ಇನ್‌ಸ್ಪೇಕ್ಟರರೂ ಚೀಫಆಫಿಸರರೂ ವ್ಹಾಯಿಸ ಪ್ರೆಸಿಡೆಂಟರೂ' ಕೂಡಲೇ ಆ ಸ್ಥಳವನ್ನು ಸಂದರ್ಶಿಸಿ, ತಾತ್ಪೂರ್ತಿಕವಾಗಿಯಾದರೂ ತಕ್ಕ ಮಟ್ಟಿಗೆ ಶಕ್ಯವಿದ್ದಷ್ಟು ವ್ಯವಸ್ಥೆ ಮಾಡಿರುವರು. ಮತ್ತು ಆ ಬಗ್ಗೆ ಕಾಯಂವಾಗಿ ಏರ್ಪಾಟು ಮಾಡುವ ಕಾರ್ಯವನ್ನು ಕೈಕೊಂಡಿರುವರು. ಈ ಬಗ್ಗೆ ಸಾರ್ವಜನಿಕ ಹಿತ ದೃಷ್ಟಿಯಿಂದ ಇಷ್ಟೊಂದು ದಕ್ಷತೆಯನ್ನು ತೋರ್ಪಡಿಸಿದ್ದಕ್ಕಾಗಿ ನಾವು ಮೆಲ್ಕಾಣಿಸಿದವರನ್ನು ಅಭಿನಂದಿಸುತ್ತೇವೆ. ಪಟ್ಟಣದ ಸ್ವಚ್ಛತೆಯ ವಿಷಯದಲ್ಲಿ ಮುನಸಿಪಾಲ್ಟಿಯು ಜಾಗರೂಕವಾಗಿರಬೇಕೆಂಬುದರಲ್ಲಿ ಸಂದೇಹವಿಲ್ಲ. ಆದರೆ ವಿಶಿಷ್ಟ ಓಣಿಯಲ್ಲಿಯ ವಿಶಿಷ್ಟಬಗೆಯ ಅಸಹ್ಯವಾದ ಸ್ಥಿತಿಯು ಹಾಗೇ ಉಳಿದರೆ, ಅಲ್ಲಿಯ ಜನರು ಮುನಸೀಪಾಲಿಟಿಗೂ, ತಮ್ಮ 'ವಾರ್ಡಿ'ನ ಸಭಾಸದರಿಗೂ, ಮುನಸಿಪಾಲ್ಟಿಯ ವಿಷಯಕ್ಕೆ ವಿಶೇಷವಾಗಿ ಕಳಕಳಿಯುಳ್ಳ ಇತರ ಸಭಾಸದರಿಗೂ, ಅದನ್ನು ಕೂಡಲೇ ಅರುಹಬೇಕು. ಅಂದರೆ ಯೋಗ್ಯ ಏರ್ಪಾಡು ಮಾಡಲು ಅನುವಾಗುವದು. ಇಂತಹ ವಿಷಯಗಳಲ್ಲಿ ಜನರ ಸೇವೆಯಲ್ಲಿಯೇ ಸದಾ ಆಸಕ್ತನಾದ 'ಕನ್ನಡಿಗ'ನೂ ಜನರಿಗೆ ಸಹಾಯ ಮಾಡಲು ಸಿದ್ಧನಿದ್ದಾನೆ.

ಶ್ರೀ. ಮದ್ ಉತ್ತರಾದಿ ಮಠಾಧೀಶರು, ಮತ್ತು ರಾಘವೇಂದ್ರಮಠಾಧೀಶರು ಏಕಕಾಲಕ್ಕೆ ನಮ್ಮ ಈ ಉತ್ತರ ಕರ್ನಾಟಕದಲ್ಲಿ ಸಂಚಾರ ಮಾಡಹತ್ತಿರುವರು. ಅನೇಕ ದಿನಗಳಿಂದಲೂ ಈ ಮಠಾಧಿಪತಿಗಳ ನಡುವಿದ್ದ ಕಲಹವು ಈಗ್ಗೆ, ಇವರೀರ್ವರೂ ಒಂದೇ ಪ್ರಾಂತಕ್ಕೆ ಆಗಮಿಸಿದ್ದರಿಂದ, ಬೆಜ್ಜಾಗುವ ಲಕ್ಷಣವಿದೆ. ಈ ಬಗ್ಗೆ ಧಾರವಾಡದ ಶ್ರೀ ಆಲೂರ ವೆಂಕಟರಾಯರು 'ಕರ್ನಾಟಕವೃತ್ತ'ದಲ್ಲಿ ಬಹಿರಂಗವಾಗಿ ಉತ್ತರಾದಿ ಮಠಾಧೀಶರಿಗೆ— ಅಂದರೆ ತಮ್ಮ ಗುರುವರ್ಯರಿಗೆ— ಒಂದು ಪತ್ರವನ್ನು ಬರೆದಿರುವರು. ಅವರು ಅದರಲ್ಲಿ ಕಾಣಿಸಿದಂತೆ ಜಿಜ್ಞಾಸುಗಳಿಗೆ ಈ ಕಲಹದ ವಿಷಯವು ಗೊತ್ತಾಗುವದು ಅತ್ಯಾವಶ್ಯಕ. ಸ್ವಾಮಿಗಳೀರ್ವರೂ ಶ್ರೀಮನ್ ಮಧ್ವಾಚಾರ್ಯರ ಶಿಷ್ಯಂದಿರು. ಆದುದರಿಂದ ಮಾಧ್ವರಿಗೆಲ್ಲ ಈರ್ವರೂ ಅಭಿಮಾನಾಸ್ಪದರು, ಈರ್ವರೂ ಪೂಜ್ಯರು. ಆದರೆ ಮಠಾಧೀಶರೇ ಮೊದಲು ತಮ್ಮ ತಮ್ಮಲ್ಲಿ ಜಗಳಾಡಹತ್ತಿ, ಪ್ರತಿಯೊಬ್ಬರು ತಮ್ಮ ತಮ್ಮ ಶಿಷ್ಯರಿಗೆ ಇಷ್ಟೊಂದು ಮರಕೆಬಡರ ಬುದ್ಧಿಯನ್ನು ತೋರ್ಪಡಿಸಬೇಕೆಂದು ಅಪ್ಪಣೆಕೊಟ್ಟರೆ ಸಮಂಜಸವಾಗದು. ಕಲಹ, ಕೋಪ, ಮೊದಲಾದ ವಿಕಾರವಶವಾಗುವ ಭಾವನೆಗಳು ಸನ್ಯಾಸಾಶ್ರಮಕ್ಕೆ ಭೂಷಣವಲ್ಲ ಧರ್ಮ ಭಾವನೆಯು ಜನರಲ್ಲಿ ಸಡಿಲಾಗ ಹತ್ತಿದ ಸಮಯದಲ್ಲಿ, ಮಠಾಧಿಪತಿಗಳು ಇಂತಹ ವಿಕಾರ ಬುದ್ಧಿಗೆ ತಾವೇ ಎಡೆ ಕೊಡಹತ್ತಿದರೆ, ಈಗಿನ ಶಿಷ್ಯವರ್ಗದಲ್ಲಿ ಧರ್ಮ ಭಾವನೆಯು ಮತ್ತಿಷ್ಟು ಸಡಿಲಾಗಿ ಅಳಿದು ಹೋಗಲು ಮಾರ್ಗವಾಗುವದು. ಆದುದರಿಂದ ಈ ಕಲಹವು ಬೇಗನೆ ಪರಿಸಮಾಪ್ತಿಯಾಗುವ ಹಾಗೆ ಮಠಾಧೀಶರೀರ್ವರ ಪ್ರಯತ್ನ ನಡಬೇಕಾಗಿ ನಾವು ಈ ಮಠಾಧಿಪತಿಗಳೀರ್ವರಿಗೂ ಬೇಡಿಕೊಳ್ಳುತ್ತೇವೆ

ಮೈಸೂರ ವಿಶ್ವವಿದ್ಯಾಲಯದ ಸುಧಾರಣೆಯ ಮಂಡಲದಲ್ಲಿ ಕನ್ನಡ ನುಡಿಗೆ ಮಹತ್ವವು ದೊರೆತಿರಲಿಲ್ಲ. ಆದರೆ ಆ ಮಂಡಲದ ವರದಿಯು ವಿಶ್ವವಿದ್ಯಾಲಯದಲ್ಲಿ ಜಾರಿ ಮಾಡುವದಕ್ಕಾಗಿ ಮುಂದೆ ಬರಲು ಈಗ್ಗೆ ಕನ್ನಡಕ್ಕೆ ತಕ್ಕ ಮರ್ಯಾದೆಯು ದೊರೆತಿತು. ಕನ್ನಡ ನುಡಿಗೆ ತನ್ನ ಮನೆಯಲ್ಲಿಯೇ ತನಗೆ ಮನ್ನಣೆಯು ದೊರೆಯ ಬೇಕಾದರೆ ಇಷ್ಟೊಂದು ಅವಧಿಯೂ, ಅನೇಕ ಬಗೆಯ ಪ್ರಯತ್ನಗಳೂ ಬೇಕಾದವು. ಮೈಸೂರ ಮಹಾಜನಗಳಲ್ಲಿ ಕನ್ನಡದ ಬಗ್ಗೆ ಜಾಜ್ವಲ್ಯವಾದ ಅಭಿಮಾನವೂ ಪ್ರೀತಿಯೂ ಉತ್ಪನ್ನವಾಗುವವರೆಗೆ ಈ ಬಗೆಯ ಉದಾಶೀನತೆಯು ತೋರಿ ಬರುವದು. ನಿಶ್ಚಯ. ಮೈಸೂರಿನವರು "ಮೈಸೂರು ಮೈಸೂರಿನವರಿಗೆ" ಎಂಬುದರ ಬದಲಾಗಿ "ಮೈಸೂರ ಕನ್ನಡನಾಡಿನವರಿಗೆ" ಎಂಬ ಭಾವನೆಯನ್ನು ತಳೆದು, ಮೈಸೂರ ಹೊರಗಿನ ಕನ್ನಡಿಗರ ಸಂಗಡ ಬಳಕೆಯನ್ನು ಹೆಚ್ಚಿಸುತ್ತ ಹೋದರೆ, ಈ ಭಾವನೆಯು ವೃದ್ಧಿ ಹೊಂದಲಿಕ್ಕೆ ಆಸ್ಪದ ದೊರೆತು, ಕರ್ನಾಟಕದ ಭಾಗ್ಯೋದಯದ ದಿನಗಳು ಸಮೀಪಿಸುವವು. ಈಗ್ಗೆ ನೋಡಿ. ಅಸಹಕಾರದ ಚಳವಳ

ರಿಂದ ಕರ್ನಾಟಕದಲ್ಲಿ ಉಂಟಾದ ಜಾಗ್ರತಿಯಿಂದಲೂ ಕಾಂಗ್ರೆಸ್ಸ ಕಾರ್ಯದ ಮೂಲಕವಾಗಿಯೂ, ಬೆಳಗಾವಿಯ ಕಾಂಗ್ರೆಸ್ಸಿನಿಂದಲೂ, ಬೆಳಗಾವಿಯ ಸಾಹಿತ್ಯ ಪರಿಷತ್ತಿನಿಂದಲೂ, ಕರ್ನಾಟಕ ಏಕೀಕರಣದ ಚಳವಳಿಯಿಂದಲೂ, ಆಂಧ್ರ ವಿಶ್ವವಿದ್ಯಾಲಯದಿಂದುಂಟಾದ ಬಳ್ಳಾರಿಯ ಪ್ರಶ್ನೆಯಿಂದಲೂ, ಮೈಸೂರಿನವರೂ ನಾವೂ ಮೇಲಿಂದ ಮೇಲೆ ಕೂತು ಕೆಲಸಮಾಡುವ ಪ್ರಸಂಗಗಳು ಬರುತ್ತಲಿವೆ ಈ ಸಂಘಟ್ಟಣದ ಪರಿಣಾಮದಿಂದ ಮೈಸೂರಿನಲ್ಲಿ ಕನ್ನಡ-ನಾಡು-ನುಡಿಗಳ ಬಗ್ಗೆ ಅಭಿಮಾನವು ಅಂಕುರಿಸ ಹತ್ತಿದೆ. ಈ ಸ್ವಲ್ಪಾವಕಾಶದಲ್ಲಿಯೇ, ಈ ಸಂಘಟ್ಟಣದ ಫಲವನ್ನು ನಾವು ಮೈಸೂರ ವಿಶ್ವವಿದ್ಯಾಲಯದಲ್ಲಿ ಕನ್ನಡಕ್ಕುಂಟಾದ ಮನ್ನಣೆಯಿಂದ, ಪ್ರತ್ಯಕ್ಷವಾಗಿ, ಅನುಭವಿಸಲು ಅನುಕೂಲವಾಯಿತು. ಈ ಎರಡೂ ಭಾಗಗಳಲ್ಲಿಯ ಕನ್ನಡಿಗರು ಇದನ್ನರಿತು ಮುಂದಿನ ತಮ್ಮ ಕಾರ್ಯದ ಮಾರ್ಗವನ್ನನುಸರಿಸಬೇಕು.

ಸಾಹಿತ್ಯ ಪರಿಷತ್ತಿನ ಅಸಾಧಾರಣ ಅಧಿವೇಶನದಲ್ಲಿ ಕನ್ನಡದ ಬದಲು ಇಂಗ್ಲೀಷ ನುಡಿಯೇ ಹೇಗೆ ಉಪಯೋಗಿಸಲ್ಪಟ್ಟಿತೆಂಬುದನ್ನೂ, ಅದು ಎಷ್ಟು ಹಾಸ್ಯಾಸ್ಪದವಾಗಿದೆಂಬುದನ್ನೂ 'ವಸಂತ'ದ ಸಂಪಾದಕರಾದ ಶ್ರೀ. ಶಾಂತಕರವರು "ಕನ್ನಡಿಗ"ನಲ್ಲಿ ಒಂದು ಪತ್ರವನ್ನು ಬರೆದು ತೋರಿಸಿದ್ದಾರೆ ಅದು ಇದೇ ಸಂಚಿಕೆಯಲ್ಲಿ ಬೇರೆ ಕಡೆಗೆ ಪ್ರಸಿದ್ಧವಾಗಿದೆ ಪಾಪ! ಶ್ರೀ ಶಾಂತಕರವರಿಗೆ ಇದಕ್ಕೂ ಹೆಚ್ಚಿಗೆ ಏನೂ ಗೊತ್ತಿಲ್ಲ. ಸಾಹಿತ್ಯ ಪರಿಷತ್ತಿನ ಅಧಿಕಾರಿಗಳೆಲ್ಲ ಇಂಗ್ಲೀಷಿನಿಂದಲೇ ತಮ್ಮ ಸಹಿಗಳನ್ನು ಮಾಡುವದು; ಪತ್ರಿಕೆಗಳನ್ನು ಇಂಗ್ಲೀಷಿನಲ್ಲಿ ಕೊಡುವದು; ಅದೇಕೆ? ಪರಿಷತ್ತಿನ ವಾರ್ತೆಗಳನ್ನು ಇಂಗ್ಲೀಷಿನಲ್ಲಿ ಕೂಡ ಮುದ್ರಣವಾಗಿವೆ ಕನ್ನಡ ಪರಿಷತ್ತು ಶುದ್ಧವಾಗಿಯೂ ದೋಷ, ಬೂ ಮಾಂಗಳಲ್ಲಿ ಕೂಡ ಕನ್ನಡದಿಂದಲೇ ತುಂಬಿ ತುಳುಕುತ್ತಿರಬೇಕು ಅದು ಹೋಗಿ ಪರಿಷತ್ ಪತ್ರಿಕೆಯಲ್ಲಿ ಸಹ ಅನಾವಶ್ಯಕವಾದ ಪಾರಿಭಾಷಿಕ ಶಬ್ದಗಳು ಕಂಗೊಳಿಸುತ್ತವೆ! ಮೈಸೂರ ಪ್ರಾಂತದಲ್ಲಿನ ವೃತ್ತ ಪತ್ರಿಕೆಗಳಲ್ಲಂತೂ ಇಂಗ್ಲೀಷ ಶಬ್ದಗಳೂ, ಗ್ರಂಥಗಳಲ್ಲಿ ಸಹ ಇಂಗ್ಲೀಷ ಅಂಕೆಗಳೂ ಹೇರಳವಾಗಿ ಉಪಯೋಗಿಸಲ್ಪಡುತ್ತಿವೆ. ಈ ನಾಡಿನ ಬಲಿಯಲ್ಲಿ! ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಯು ಕೊಡಕಿಕೊಳ್ಳುವದು ಸರಿಯಲ್ಲ.

ಮೋಟಾರ ಪ್ರಯಾಣವು ಎಲ್ಲೆಲ್ಲಿಯೂ ಹೆಚ್ಚಾಗಿದೆ ಇನ್ನೂ ಹೆಚ್ಚಾಗುತ್ತಲಿದೆ. ಆದರೆ ರೇಲವೇದಲ್ಲಿ ಆಗುವಂತೆ ಮೋಟಾರುಗಳಲ್ಲಿಯೂ ಪ್ರಯಾಣಿಕರ ತೊಂದರೆಗಳು ವಿಪುಲವಾಗಿದ್ದು, ಅವುಗಳ ನಿವಾರಣೆಗಾಗಿ ಮೋಟಾರ ಕಂಪನಿಗಳ ಒಡೆಯರು ಪ್ರಯತ್ನಿಸುವದಿಲ್ಲ ಮೋಟಾರುಗಳಲ್ಲಿ ಪ್ರಯಾಣಿಕರನ್ನು ತುಂಬುವದು ಸಕಾಲದಲ್ಲಿ ಮೋಟಾರುಗಳನ್ನು ಹೊರಡಿಸದೇಯಿರುವದು; ದಾರಿಯಲ್ಲಿ ಮೋಟಾರುಗಳು ಕೆಡದ ಹಾಗೆ ಮೊದಲೇ ದಕ್ಷರಾಗಿರದಿರುವದು, ಇವೇ ಮೊದಲಾದ ಅನಾನುಕೂಲತೆಗಳಿವೆ. ಈ ಮೋಟರ ಪ್ರವಾಸದ ತೊಂದರೆಗಳ ಬಗ್ಗೆ ಈಗ್ಗೆ ಪ್ರಸಿದ್ಧಿಗಾಗಿ ನಮ್ಮೆಡೆಗೆ ಒಂದು ಪತ್ರಬಂದಿದ್ದು ಅದು ಹೀಗಿದೆ:—

"ಇತ್ತೀಚೆಗೆ ಮೋಟಾರ ಸರ್ವಿಸ ಹೆಚ್ಚಾಗಹತ್ತಿವೆ ಪ್ರಯಾಣಿಕರಿಗೆ ಸೌಕರ್ಯವಾದದ್ದೇನೋ ನಿಜ. ಆದರೆ ಬಾಗಲಕೋಟೆ ಇಳಕಲ್ಲ ಮಾರ್ಗದ ಮೋಟಾರ ಸರ್ವಿಸದಿಂದ ಪ್ರವಾಸಮಾಡುವ ಪ್ರವಾಸಿಕರಿಗೆ ಸೌಕರ್ಯವಾಗಿದ್ದರೂ ಯಾತನೆಗಳು ಹೆಚ್ಚಾಗಿವೆ. ಮೋಟಾರುಗಳು ಗೊತ್ತು ಪಡಿಸಿದ ವೇಳೆಗೆ ಹೊರುಡುವುದು ಇದ್ದರೂ ವೇಳೆಯನ್ನು ಗೊತ್ತು ಪಡಿಸಿರುವದಿಲ್ಲ. ಮೋಟಾರಗಳ ಒಡೆಯ ಕಂಪನಿಗಳವರೆ ತಮ್ಮ ತಮ್ಮೊಳಗಿನ ಬಡಿದಾಟದಿಂದ ಪ್ರವಾಸಿಕರನ್ನು ಹಂಚಿಕೊಳ್ಳುತ್ತಿರುವದರಿಂದ, ಇಂಥವರು ಇಂಥ ಮೊಟಾರಿನಲ್ಲಿ ಕುಳಿತು ಪ್ರವಾಸ ಮಾಡಬೇಕೆಂಬುವದು ತಿಳಿಯದಂತೇ ಆಗುವದು. ಹೆಂಗಸರು ಚಿಕ್ಕಮಕ್ಕಳುಗಳಿಗೆ ಇದರಿಂದ ಅತ್ಯಧಿಕವಾದ ತೊಂದರೆಯಾಗುತ್ತದೆ. ಒಂದು ಮೋಟಾರಿನಲ್ಲಿ ಕುಳಿತು ಸ್ವಲ್ಪಪ್ರವಾಸ ಮಾಡಿದ ಪ್ರಯಾಣಿಕನು, ಕಂಪನಿಗಳ ತಮ್ಮ ತಮ್ಮೊಳಗಿನ ಬಡಿದಾಟದಿಂದ, ಇನ್ನೊಂದು ಮೋಟಾರಕ್ಕೆ ಹೋಗಿ ಕುಳಿತುಕೊಳ್ಳಲು ಒತ್ತಾಯಮಾಡುವರು ಸಂಗಡ ಹೆಣ್ಣುಮಕ್ಕಳೂ ಹುಡುಗರೂ ಇದ್ದಲ್ಲಿ ಅವರ ಪೀಕಲಾಟ ಹೇಳಲಾಸಲ್ಲ. ಪ್ರಯಾಣಿಕರಲ್ಲಿ ಪರಸ್ಪರ ತಪ್ಪುಗಂಟಾಗಿ ಅನೇಕ ಪ್ರಕಾರದ ಸಂಕಟಗಳು ಒದಗುತ್ತವೆ. ಇದರಿಂದ ಎಷ್ಟೋ ಪ್ರವಾಸಿಗಳು ತಮ್ಮ ಸಾಮಾನುಗಳನ್ನು ಕಳೆದು ಕೊಂಡಿದ್ದಾರೆ ಈ ತರಹದ ಯಾತನೆಗಳನ್ನು ಅನುಭವಿಸುತ್ತಿರುವ ಪ್ರಯಾಣಿಕರ ಹಿತಕ್ಕಾಗಿ ಸರಕಾರದವರು ಇತ್ತಕಡಿಗೆ ಜಲ್ದಾಗಿ ಲಕ್ಷ ಕೊಡಬೇಕೆಂದು ನಮ್ಮ ಆಶೆ.

—"ವಾದಿರಾಜ"

ನಿಜವಾಗಿಯೂ ಮೋಟಾರಗಳ ಒಡೆಯರೇ ಈ ಬಗೆಯ ಅನಾನುಕೂಲತೆಗೆ ಎಡೆ ಕೊಡಬಾರದು ಆದರೆ ಅದು ಅವರಿಂದಾಗದ ಪಕ್ಷದಲ್ಲಿ ಸರಕಾರದವರು ಅವಶ್ಯವಾಗಿ, ತಡವಿಲ್ಲದೆ, ಇತ್ತ ಕಡೆಗೆ ಗಮನಿಸಬೇಕಾಗಿ ಅಗ್ರಹಪಡುತ್ತೇವೆ.

ಶ್ರೀ. ಗಂಗಾಧರರಾಯರ ಪತ್ರವು.

ಅಖಿಲ ಭಾರತೀಯ ಚರಖಾ ಸಂಘದ ಸದಸ್ಯರಿಗೆ
ಖಾದಿಯ ಹಿತಚಿಂತಕರಿಗೆ

ಪ್ರೇಮ ಪುರಸ್ಕಾರ ವಿ. ವಿ. ಕಳೆದ ಸಪ್ಟೆಂಬರ ತಿಂಗಳಲ್ಲಿ ಪಾಟಣಾ ನಗರದಲ್ಲಿ "ಅಖಿಲ ಭಾರತೀಯ ಚರಖಾ ಸಂಘ" ಸ್ಥಾಪಿತವಾಗಿ ಅದರ ಕೈಯಲ್ಲಿ 'ಅಖಿಲ ಭಾರತೀಯ ಖಾದೀ ಬೋರ್ಡು' ಈ ಮೊದಲು ಮಾಡುತ್ತಿದ್ದ ಎಲ್ಲ ಖಾದಿಯ ಕೆಲಸವೂ ಒಪ್ಪಿಸಲ್ಪಟ್ಟ ಸಂಗತಿಯು ತಮಗೆ ಗೊತ್ತಷ್ಟೇ. ಸದರಿ ಖಾದಿ ಕೆಲಸದಲ್ಲಿ ಪ್ರಖ್ಯಾತರಾದ ಚರಖಾಸಂಘದ ಕೌನ್ಸಿಲಿನ ಸದಸ್ಯರು ಸ್ವಲ್ಪ ದಿವಸಗಳ ಹಿಂದೆ ಅಹಮದಾಬಾದ ಮುಕ್ಕಾಮಿನಲ್ಲಿ ಕೂತು ಪ್ರತಿಯೊಂದು ಪ್ರಾಂತದಲ್ಲಿಯ ಖಾದಿಯ ಕೆಲಸವು ಸಂಘದ ಧ್ಯೇಯಕ್ಕೆ ಸರಿಯಾಗಿ ನಡೆಯುವಂತೆ ಸಂಘಟಿತವಾಗಬೇಕೆಂದು ಮತ್ತು ಸುಸೂತ್ರವಾಗಬೇಕೆಂದೂ ನಿರ್ಣಯಿಸಿರುತ್ತಾರೆ. ಸದರಿ ಕೌನ್ಸಿಲಿನ ಅಧ್ಯಕ್ಷರಾದ ಮಹಾತ್ಮಾ ಗಾಂಧಿಯವರು ಈ ಕೆಲಸದ ಸಲುವಾಗಿ ಕರ್ನಾಟಕ ಪ್ರಾಂತದ ಏಜಂಟನಾಗಬೇಕೆಂದು ನನಗೆ ಅಪ್ಪಣೆ ಕೊಟ್ಟಿದ್ದಾರೆ; ಮತ್ತು ತಮ್ಮೆಲ್ಲರ ಕಡಿಂದಾ ಎಲ್ಲ ತರದ ಸಹಾಯವು ದೊರೆಯುವದೆಂಬ ನಂಬಿಕೆಯಿಂದ ನಾನು ಈ ಕೆಲಸವನ್ನು ವಹಿಸಿರುತ್ತೇನೆ

ನಮ್ಮ ಪ್ರಾಂತದಲ್ಲಿ ಖಾದಿಯ ಕೆಲಸವೂ ಸುಸಂಘಟಿತವಾಗಿ ನಡೆಯುದ್ದರಿಂದಾ ಕೆಳಗಿನ ಸಂಗತಿಗಳು ತಿಳಿಯುವದು ಅವಶ್ಯಕರಿಣವಾಗಿದೆ:—

(೧) ಖಾದಿಯ ಸಕ್ಕಿ ಹುಟ್ಟುವಳಿಯು ಮತ್ತು ಮಾರಾಟವು.
(೨) ಯಾವ ತರದ ಖಾದಿ ಹುಟ್ಟುತ್ತದೆ,
(೩) ಖಾದಿಯು ಸುಧಾರಿಸುತ್ತ ಮತ್ತು ಹೆಚ್ಚು ಹೆಚ್ಚು ನಡೆದಿದೆಯೋ ಹ್ಯಾಗೆ,
(೪) ಪರಪ್ರಾಂತದಿಂದಾ ನಮ್ಮ ಪ್ರಾಂತದಲ್ಲಿ ಎಷ್ಟು ಖಾದಿಯು ತರಸಲ್ಪಡುತ್ತದೆ.

(೫) ನಮ್ಮ ಪ್ರಾಂತದಲ್ಲಿ ಯಾವ ತರದ ಖಾದಿಯ ಬಗ್ಗೆ ಮಾಗಣಿ ಅವೆ,

(೬) ಖಾದಿಯ ಮೂಲ ಕಿಂಮತ್ತು ಏನಾಗುತ್ತದೆ.

(೭) ಮೂಲ ಕಿಂಮತ್ತು ಅದಷ್ಟು ಕಡಿಮೆ ಮಾಡುವದು ಶಕ್ಯವಿದೆಯೋ ಇಲ್ಲೋ

ಇವೇ ಮೊದಲಾದ ಪ್ರಶ್ನೆಗಳು ಪೂರ್ಣ ವಿಚಾರ ಆಗದ ಹೊರ್ತು ಖಾದಿಯ ಕೆಲಸವೂ ವ್ಯವಹಾರಕ್ಕೆ ಸರಿಯಾಗಿ ನಡೆಯುವದು ಶಕ್ಯವಿಲ್ಲ.

ಕಾರಣ ಪ್ರತಿನಿತ್ಯ ಖಾದಿ ಧರಿಸುವ ವ್ಯಕ್ತಿಗಳಿಗೆ, ಹಾಗೂ ಖಾದಿ ಉತ್ಪನ್ನ ಮತ್ತು ಮಾರಾಟ ಮಾಡುವವರ ಹಾಗೂ ಖಾದಿಯ ಹಿತವನ್ನು ಚಿಂತಿಸುವ ಎಲ್ಲ ವ್ಯಕ್ತಿ ಮತ್ತು ಸಂಸ್ಥೆಗಳಿಗೆ ಮೇಲೆ ಸೂಚಿಸಿದ ಎಲ್ಲ ಸಂಗತಿಗಳ ಬಗ್ಗೆ ಪೂರ್ಣ ಅಭ್ಯಾಸ ಮಾಡಬೇಕೆಂದು ಮತ್ತು ನಂಮ ಪ್ರಾಂತದಲ್ಲಿ ಖಾದಿಯ ಹುಟ್ಟುವಳಿಕೆ ಮತ್ತು ಮಾರಾಟಕ್ಕೆ ಹೆಚ್ಚಿಸಲಿಕ್ಕೆ ಪೂರ್ಣ ಸಹಾಯ ಮಾಡಬೇಕೆಂದು ನನ್ನ ಪ್ರಾರ್ಥನೆ ಅದೆ.

ನಮ್ಮ ಪ್ರಾಂತದಲ್ಲಿ ಹುಟ್ಟುವ ಹತ್ತಿಯು ಇಡೀ ಮುಂಬಯಿಬಜಾರದಲ್ಲಿ ಉತ್ತಮ ತರಗತಿಯದೆಂದೂ ಮತ್ತು ಅದರಿಂದ ಸಹಜವಾಗಿ ಹೆಚ್ಚಿನ ನಂಬರಿನ ನೂಲನ್ನು ತೆಗೆಯ ಬಹುದೆಂದೂ ತಮ್ಮ ನಜರಿಗೆ ತರಲಿಚ್ಛಿಸುತ್ತೇನೆ. ಈ ನಾಲ್ಕೈದು ವರ್ಷದ ಶ್ರಮದಿಂದ ನಮ್ಮ ಪ್ರಾಂತದಲ್ಲಿ ನೂಲುವ ಕಲೆಯು ಪುಷ್ಕಳಾಂಶದಿಂದ ಸುಧಾರಿಸಿರುವದರಿಂದ ನಮ್ಮಲ್ಲಿಯ ಹತ್ತಿಯಿಂದ ೨೦ ದಿಂದ ೩೦ ನಂಬರದ ವರಿಗೆ ನೂಲನ್ನು ಸಹಜವಾಗಿ ತೆಗೆಯ ಬಹುದು. ನಮ್ಮಲ್ಲಿಯ ಪುಷ್ಕಳ ಹಳ್ಳಿಗಳಲ್ಲಿ ಸಧ್ಯಕ್ಕೆ ಈ ತರದ ಸಣ್ಣ ನೂಲು ಹೊರಡುತ್ತದೆ. ಹತ್ತಿಯನ್ನು ಆರಿಯುವ ಮತ್ತು ಹಂಜಿ ಮಾಡುವ ಕಾಲಕ್ಕೆ ಈಗಿನಕಿಂತ ಹೆಚ್ಚು ಜಾಗೃತಿಯನ್ನು ತಕೊಂಡರೆ ಈ ತರದ ಸಣ್ಣ ನೂಲು ಎಲ್ಲಕಡೆಯಲ್ಲಿಯೂ ಹೊರಡಲಿಕ್ಕೆ ಏನೂ ಅಡ್ಡಿ ಇಲ್ಲ. ಈ ಕೆಲಸವನ್ನು ನಾವು ಪೂರ್ಣ ಮನಃಪೂರ್ವಕವಾಗಿ ಹೆಚ್ಚಿಸಿದರೆ, ಇತರ ಪ್ರಾಂತಗಳಿಗಿಂತ ನಮ್ಮಲ್ಲಿಯ ಖಾದಿಯು ಉತ್ತಮ ತರಗತಿಯದಾಗುವದೆಂದೂ ಮತ್ತು ಹುಟ್ಟುವಳಿಕೆಯಾದರೂ ಹೆಚ್ಚಿಸುವದೆಂದೂ ನನ್ನ ಪೂರ್ಣ ನಂಬಿಗೆ ಯದೆ.

ಕಾರಣ ನಾವೆಲ್ಲರೂ ಅಖಿಲ ಭಾರತೀಯ ಚರಖಾಸಂಘದ ಸೂಚನೆಗಳನ್ನು ಅಮಲಿನಲ್ಲಿ ತರುವವಕ್ಕಾಗಿ ನನಗೆ ಪೂರ್ಣ ಸಹಾಯವನ್ನು ಎಲ್ಲ ತರದಿಂದ ಮಾಡುವಿರೆಂದು ಪುನಃ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ನಾನು ಗದಗಿಗೆ ಪ್ರಾಂತಿಕ ಕಮಿಟಿಯ ಸಭೆಗಾಗಿ ಮೊನ್ನೆ ಹೋದಾಗ್ಯೆ ನಮ್ಮ ಪ್ರಾಂತದಲ್ಲಿಯ ಖಾದಿ ಕೆಲಸ ಮಾಡುವವರು ಭೆಟ್ಟಿಯಾದರು. ಆಗ ನನ್ನ ಸಂಗಡ ಜಬಾಬದಾರಿಯಿಂದ ಕೆಲಸ ಮಾಡಲಿಕ್ಕೆ ಒಪ್ಪಿಕೊಂಡಿದ್ದವರಲ್ಲಿಯ ಕೆಲವು ಜನರ ಹೆಸರುಗಳನ್ನು ಕೆಳಗೆ ಕೊಟ್ಟಿರುತ್ತೇನೆ:—

ಗದಗ	ಧಾರವಾಡ
ಡಾ. ಹುಯಿಲಗೋಳ	ಶ್ರೀ. ವಿಠ್ಠಲರಾವ ಜೋಶೀ
,, ಉಮಚಗಿ	,, ಗೋಪಾಳರಾವ ದೇಶಪಾಂಡೆ
ಶ್ರೀ ಜಾಲಿಹಾಳ ಅನಂತರಾವ	,, ಶ್ರೀನಿವಾಸರಾವಜೋಗ
,, ಸಾವಕಾರ	,, ಬಿಂದುಮಾಧವಾಚಾರ್ಯ
ವಿಜಾಪೂರ	**ಬೆಳಗಾವ**
ಶ್ರೀ. ಹಣಮಂತರಾವ ಕೌಜಲಗಿ	ಶ್ರೀ. ಭೀಮರಾವ ಪೋತದಾರ
,, ಮೋಹರೆ	,, ಕೃಷ್ಣರಾವ ಯಾಳಗಿ

ಗಂಗಾಧರ ಬಾಲಕೃಷ್ಣ ದೇಶಪಾಂಡೆ
ಅಖಿಲಭಾರತ ನೂಲುವ ಸಂಘದ
ಕರ್ನಾಟಕ ಶಾಖೆಯ
ಏಜಂಟರು.

ಮೈಯೊಳಗಿನ ಎಡ್ಡು

(ಲೇಖಕ ಜಯರಾವ ಗೋಳಕೆರಿ)

ಸಾಲಗಾರನು ಸಾಹುಕಾರನ ಹತ್ತರ ಬಂದು “ಸ್ವಾಮಿ, ದಿವಸಗಳು ಕಠಿಣವಾಗಿವೆ, ಹೊಲಗಳು ಬೆಳೆಯದಾಗಿವೆ, ಉದ್ಯೋಗವು ನಿಲ್ಲಬಂದಿದೆ ತಮ್ಮ ಋಣವನ್ನು ಮುಂದಿನ ವರುಷ ಮುಟ್ಟಿಸುವೆನು, ದಯಮಾಡಿ ಕೇಳಬೇಕು,” ಎಂದು ಹೇಳಿಕೊಳ್ಳುವಾಗ ಸಾಹುಕಾರನು ಹುಬ್ಬು ಗಂಟುಹಾಕಿ “ಇಂದಿನ ದಿನ ನನ್ನ ಋಣವನ್ನೆಲ್ಲ ಕೊಟ್ಟೇ ತೀರು, ಇಲ್ಲವಾದರೆ ಇಮ್ಮಡಿ ಹಣಹಾಕಿ ನಿನ್ನ ಮನೆ ಮಾರುಗಳನ್ನು ಬರೆದು ಕೊಡು,” ಎಂದು ಗದ್ದರಿಸುವದು. ವ್ಯಾಪಾರವೋ? ವ್ಯವಹಾರವೋ? ವ್ಯಾಪ್ಯಾರವೂ ಅಲ್ಲ, ವ್ಯವಹಾರವೂ ಅಲ್ಲ! ಮೈಯೊಳಗಿನ ಎಡ್ಡು!

ಸಂಕಟ ಸಮಯದಲ್ಲಿ ಸಾಹುಕಾರನನ್ನು ಸಮೀಪಿಸಿ, ಸಾಲದರೂಪದಿಂದ ಸಹಾಯಮಾಡೆಂದು ಸೆರಗೊಡ್ಡಿ ಬೇಡಿಕೊಂಡು, ಅವನಿಂದ ಸಹಾಯ ಪಡೆದುಕೊಂಡು, ಸಂಕಟ ನೀಗಿದ ಬಳಿಕ, ಸಾಹುಕಾರನು ಕೊಟ್ಟ ಸಾಲದಬಗ್ಗೆ ಮನೆಮುಟ್ಟ ಕೇಳ ಬಂದರೂ, ಸಾಲಗಾರನು ಕಿಂಚಿತ್ತಾದರೂ ದಾಕ್ಷಿಣ್ಯ ವಿಲ್ಲದೆ ತನ್ನ ಆಪದ್ಬಾಂಧವನಿಗೆ “ಕೋರ್ಟಿ”ನ ದಾರಿ ತೋರಿಸುವದು, ಜಾಣತನವೋ ಪ್ರಾಮಾಣಿಕತನವೋ? ಜಾಣತನವೂ ಅಲ್ಲ, ಪ್ರಾಮಾಣಿಕತನವೂ ಅಲ್ಲ ಮೈಯೊಳಗಿನ ಎಡ್ಡು!

ತನ್ನ ಮೇಲಾದ ಅನ್ಯಾಯದ ದೂರನ್ನು ಹೇಳಿಕೊಳ್ಳುವದಕ್ಕೆ ಹತ್ತು ಹರದಾರಿಗಳ ಮೇಲಿಂದ ಬಂದು—ಎರಡು ದಿನ ಉಪವಾಸ ಇದ್ದು— ಅಧಿಕಾರಿಗಳ ದರ್ಶನಕ್ಕೆ ಆತುರವಾಗಿ ನಿಂತಿರುವ ಬಡಪ್ರಾಣಿಯನ್ನು ಯಃಕಶ್ಚಿತ ನಾಯೋರ್ವ ಬಾಗಿಲ ಕಾಯುವವನು ತಡೆದು, ಅವನಿಗೆ ಅರ್ಧಚಂದ್ರ ತೋರಿಸುವದು ನ್ಯಾಯವೋ ಅನ್ಯಾಯವೋ? ನ್ಯಾಯವೂ ಅಲ್ಲ, ಅನ್ಯಾಯವೂ ಅಲ್ಲ, ಮೈಯೊಳಗಿನ ಎಡ್ಡು!

ಕನ್ನಡ ಗಾಳಿಯಲ್ಲಿ ಬೆಳೆದು, ಕನ್ನಡದ ಅನ್ನದಿಂದ ಬದುಕಿಬಾಳಿ, ಅದರ ಉಪಕಾರವನ್ನರಿಯದೆ ಮರಾಠಿಗರು ಕನ್ನಡಿಗರನ್ನು ಕಂಡು “ಕಾನಡೀ ಅಪಾ” ಮೂಗಿನಿಂದ ಮಾತಾಡಿ ಮೂಗು ಮುರಿಯುವದು ಮೇಲ್ಮೆಯೋ, ಜಾಣ್ಮೆಯೋ? ಮೇಲ್ಮೆಯೂ ಅಲ್ಲ, ಜಾಣ್ಮೆಯೂ ಅಲ್ಲ, ಮೈಯೊಳಗಿನ ಎಡ್ಡು!

ಮೊದಲು ವ್ಹಿ. ಪಿ. ಬಂದ ಬಳಿಕ ಅದನ್ನು ಸ್ವೀಕರಿಸದೆ, ವೃತ್ತಪತ್ರಗಾರರನ್ನು ಹಾನಿಗೆ ಗುರಿ ಮಾಡಿ ಅವರ ಕಡೆಯಿಂದ ಅಂಚೆಕಟ್ಟೆಗೆ ಸುಮ್ಮ ಸುಮ್ಮನೆ ದಂಡ ತೆತ್ತಿಸಿ, ಮೋಜು ನೋಡುವುದು ಆಟವೋ ನೋಟವೋ? ಆಟವೂ ಅಲ್ಲ, ನೋಟವೂ, ಅಲ್ಲ, ಮೈಯೊಳಗಿನ ಎಡ್ಡು!

ಧರ್ಮಿಷ್ಠನಾದ ಬ್ರಾಹ್ಮಣನು ತನ್ನ ತಂದೆಯ ಶ್ರಾದ್ಧ ದಿನದಲ್ಲಿ ವೈದಿಕನಿಗೆ ಆಮಂತ್ರಣವಿತ್ತ ಬಂದಾಗ, ಆ ವೈದಿಕನು ಉಂಡೆ ಖೀರುಗಳ ಊಟ ಮಾಡಿಸಿ, ಮೇಲೆ ಎರಡು ರೂಪಾಯಿ ದಕ್ಷಿಣೆ ಕೊಟ್ಟರೇಬರುವೆನೆಂಬದಾಗಿ ಕಟ್ಟು ಮಾಡುವದು ಧರ್ಮವೋ,

೭ ಪುಟದಲ್ಲಿ ನೋಡಿರಿ

ಕರ್ನಾಟಕ ವಿಶ್ವವಿದ್ಯಾಲಯದ ವಿಷಯದಲ್ಲಿಯ ಪ್ರಶ್ನಮಾಲಿಕೆಯ ಉತ್ತರಗಳು.

ಪ್ರಶ್ನೆ	ಉತ್ತರ
೧	ಒಪ್ಪಿಗೆಯಿದೆ
೨	ಒಪ್ಪಿಗೆಯಿದೆ
೩	ಪೂರ್ಣ ಒಪ್ಪಿಗೆಯಿದೆ
೪	ಬೇರೆ ವಿಶ್ವವಿದ್ಯಾಲಯದ ಅವಶ್ಯವಿಲ್ಲ
೫	ಉತ್ತರದ ಅವಶ್ಯವಿಲ್ಲ
೬	ಉತ್ತರದ ಅವಶ್ಯವಿಲ್ಲ.
೭	ಒಪ್ಪಿಗೆಯಿದೆ
೮	ಎಲ್ಲ ಸರಿಯಾಗಿವೆ

೯ ನಿಜಾಮ ಸರಕಾರಕ್ಕೂ ದಕ್ಷಿಣದ ಸಂಸ್ಥಾನಿಕರಿಗೂ ಕನ್ನಡಭಾಗಗಳನ್ನೆಲ್ಲ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳಬೇಕು ಉರ್ದು ಮತ್ತು ಮರಾಠಿ ಭಾಷೆಗಳನ್ನು ವಿಶ್ವವಿದ್ಯಾಲಯದಲ್ಲಿ ೨ ನೇ ಭಾಷೆಗಳನ್ನಾಗಿ ಮಾಡಬೇಕು.

೧೦ ಬರುವ ಸಾಹಿತ್ಯ ಪರಿಷತ್ತಿನ ವೇಳೆಗೆ ಇಂಥ ಪರಿಷತ್ತನ್ನು ಕರೆಯಬೇಕು ತಮ್ಮ

ಹನುಮಂತ ರಾಘವೇಂದ್ರ
ಮೋಹರಿ

ಕರ್ನಾಟಕ ಸಾಹಿತ್ಯ ಪರಿಷತ್ತು

ಇದರ ಅಧಿವೇಶನವು ಕೆಲವು ದಿನಗಳ ಹಿಂದೆ ಬಳ್ಳಾರಿಯಲ್ಲಿ ಜರಗಿತ್ತು. ಅದಕ್ಕೆ ಹೋಗುವ ಅವಕಾಶವು ನನಗೂ ದೊರೆತಿತ್ತು. ಅಲ್ಲಿ ನಾನು ಮನಗಂಡ ಒಂದು ವಿಚಿತ್ರ ಸಂಗತಿಯನ್ನು ಕನ್ನಡಿಗರ ಮುಂದಿಡುವುದು ಅತಿ ಅವಶ್ಯಕವೆಂದು ನನಗೆ ತೋರುವುದು. ಆ ದಿನದ ಸಭಾಕಾರ್ಯದಲ್ಲಿ ಯಾವತ್ತು ಠರಾವುಗಳೂ ಕಾರ್ಯಕ್ರಮಗಳೂ ಇಂಗ್ಲ ಭಾಷೆಯಲ್ಲಿ ನಡಿಯುತ್ತಿದ್ದದನ್ನು ಕಂಡು ನನಗೆ ಆಶ್ಚರ್ಯವೆನಿಸಿತು. ಕಳೆದ ಸಲ ಬೆಳಗಾವಿಯಲ್ಲಿ ರಾಷ್ಟ್ರೀಯ ಸಭೆಯು ನಡೆಯುವ ಪ್ರಸಂಗವು ಬಂದಾಗ, ಅಲ್ಲಿಯವರು ತಮ್ಮ ಲಿಖಿತಪತ್ರಗಳನ್ನು ಅನ್ಯ ಭಾಷೆಯಲ್ಲಿ ನಡೆಯಿಸುತ್ತಿರುವರೆಂದು ನಾವು ಕನ್ನಡಿಗರನೇಕರು ಬೆಳಗಾವಿಯವರನ್ನು ಖಂಡಿಸಿದ್ದೆವು. ಅದು ರಾಷ್ಟ್ರೀಯ ಅಧಿವೇಶನವಾಗಿತ್ತು ಇಂದು ಕರ್ನಾಟಕ ಸಾಹಿತ್ಯವನ್ನೇ

ಚಿತ್ರದ ವಿಮರ್ಶೆಯು

ಚಿತ್ರದ ಗುಣಾವಗುಣ ವಿಮರ್ಶಕರು ಚಿತ್ರವನ್ನು ಬರೆದವನು ಚಿತ್ರಕಲೆಯನ್ನು ಅಭ್ಯಾಸಿಸಿದವನಲ್ಲೆಂಬುದನ್ನು ನೆನಪಿನಲ್ಲಿಡಬೇಕು. ಆಗ ಅವರಿಗೆ ವಿದ್ಯಾರಣ್ಯರ ಮೂರ್ತಿಯಲ್ಲಿ ಎಷ್ಟು ಸೌಮನಸ್ಯವನ್ನೂ ಪ್ರಸಾದವನ್ನೂ ಅಭಿವ್ಯಕ್ತಿಯನ್ನೂ ಚಿತ್ರಕನು ತೋರಿಸಿದ್ದಾನೆಂಬುದು ಮನವರಿಕೆಯಾದೀತು. ಚಿತ್ರಕಾರನಲ್ಲಿ ಇದೀಗ ತೋರಿಬರುವ ಕಲಾನೈಪುಣ್ಯದ ಅಂಕುರವನ್ನು ಆತನು ಬೆಳೆಸಿಕೊಳ್ಳಬೇಕು. ಅದಕ್ಕಾಗಿ ಅವನು ಹೆಚ್ಚಾಗಿ ವಿಜಾಪುರದ ಪದಾರ್ಥ ಸಂಗ್ರಹಾಲಯದಲ್ಲಿದ್ದ ಹಳೆಯ ಚಿತ್ರಗಳನ್ನು ನೋಡಿ ಅವುಗಳ ಸೌಂದರ್ಯದ ರಹಸ್ಯವೆಲ್ಲಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಭಾರತೀಯ ಚಿತ್ರಕಲಾಕೋವಿದರಾದ ಅವನೀಂದ್ರನಾಥ ಠಾಕೂರ, ನಂದಲಾಲ ಬಸು ಮೊದಲಾದವರ ಮೇಲ್ತರಗತಿಯ ಚಿತ್ರಗಳನ್ನು ರಸಿಕ ವಿಮರ್ಶಕ ದೃಷ್ಟಿಯಿಂದ ನೋಡಬೇಕು.

ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯರಾದ



ವಿದ್ಯಾರಣ್ಯರು.

ಚಿತ್ರಗಾರನ ಪರಿಚಯವು.

ವಿದ್ಯಾರಣ್ಯರ ಮೇಲಿನ ಚಿತ್ರವನ್ನು ತೆಗೆದ ಬಾಳಾಜಿ ರಾಮಚಂದ್ರ ಸಾಂಬಣನವರ ಇವನು ಅಕ್ಕಸಾಲಿಗನು. ಕನ್ನಡ ೫ ನೇ ಇಯತ್ತೆಯ ವರೆಗೆ ಶಿಕ್ಷಣವಾಗಿದೆ. ಇರುವ ಊರು ವಡಗೋಡ ಇವನಿಗೆ ಚಿತ್ರಕಲೆಯಲ್ಲಿ ಯಾವ ಬಗೆಯ ಶಿಕ್ಷಣವೂ ದೊರೆಯಲಿಲ್ಲ. ಈತನ ತಂದೆಯು ಕಲಾನಿಪುಣನು. ಅನುವಂಶಿಕವಾಗಿ ಈ ಕಲೆಯು ಇವನಲ್ಲಿ ಬಂದಿದೆ. ಇವನು ಶ್ರಮವಿಲ್ಲದೇ ಚಿತ್ರಗಳನ್ನು ತೆಗೆಯುವನು. ನಾಟಕ ಸಾಮಾನುಗಳನ್ನು ಸಿದ್ಧಪಡಿಸಬಲ್ಲನು. ಮಣ್ಣಿನ ಗೊಂಬೆಗಳನ್ನೂ ಪಾತ್ರೆಗಳನ್ನೂ ತಯಾರ ಮಾಡಬಲ್ಲನು. ಪ್ರಸ್ತುತನಾದ ವಿದ್ಯಾರಣ್ಯರ ಕಾಲ್ಪನಿಕ ಚಿತ್ರವು ಜನಗಳೆದುರಿನಲ್ಲಿದೆ. ಅದುವರೆಂದ ನಾನೇನು ಹೆಚ್ಚಾಗಿ ಬರೆಯುವ ಅವಶ್ಯಕವಿಲ್ಲ. ಕನ್ನಡಿಗರು ಇವನಿಗೆ ತಕ್ಕ ಪ್ರೋತ್ಸಾಹನವನ್ನು ಕೊಟ್ಟು ಅವನನ್ನು ಮುಂದಕ್ಕೆ ತರಬೇಕು ಅವನ ವಯಸ್ಸು ೨೬.

ಹಿಡಿಯುವವರು ಇಂಗ್ಲ ಭಾಷೆಯ ಆಶ್ರಯವನ್ನು ಸೇರಿದ ಬಳಿಕ ಕನ್ನಡದ ಮೇಲಿನ ಶ್ರದ್ಧೆಯನ್ನು ವಿಚಿತ್ರ ರೀತಿಯಿಂದ ಪ್ರಕಟಿಸಿದಂತಾಯಿತು. ಈ ರೀತಿಯ ವ್ಯವಹಾರವು ಠರದಲ್ಲಿ ಸರಾಯಿಯ ಸೀಸೆಯನ್ನು ಹಿಡಿದುಕೊಂಡು 'ಮದ್ಯಪಾನವನ್ನು ಮಾಡಬೇಡಿರಿ' ಎಂದಂತೆ ನನಗೇಕೋ ತೋರುವುದು. ಕರ್ನಾಟಕ ಸಾಹಿತ್ಯ ಸಂಘದವರು ಕನ್ನಡದ ಅಭಿಮಾನವನ್ನು ತೋರಿಸಲು ಇತರರಿಗೆ ಮಾದರಿಯಾಗ ಬೇಡವೇನು?

ಮುಕ್ಕಾಂ ಬಾಗಲಕೋಟೆ ೧೨-೧೨-೨೫	ಕೊ. ಶಿ. ಕಾರಂತ ಸಂ. ವಸಂತ

ಉತ್ತರ ಕರ್ನಾಟಕದ ಆಯುರ್ವೇದ ಸಮ್ಮೇಲನ

ಈ ಸಮ್ಮೇಲನದ ಸಿದ್ಧತೆಗಾಗಿ ಬಾಗಲಕೋಟೆಯ ೧೩-೧೨-೨೫ ನೇ ದಿನ ಇಲ್ಲಿಯ ಡಾಕ್ಟರ ಮತ್ತು ವೈದ್ಯರ ಸಭೆ ಸೇರಿದ್ದಿತು. ವಿದ್ವಾನ್ ಕೇ. ಶೇಷಶಾಸ್ತ್ರಿಗಳು ಅಧ್ಯಕ್ಷರಾಗಿದ್ದರು ಸ್ವಾಗತಕಮಿಟಿಯೊಂದು ಸ್ಥಾಪನೆಯಾಗಿದೆ. ಇದರ ಅಧ್ಯಕ್ಷರು ಡಾ. ಜಠಾರರು. ಮುಖ್ಯ ಕಾರ್ಯದರ್ಶಿಗಳು ಡಾ. ಜಹಗೀರದಾರರು. ಹುಬ್ಬಳ್ಳಿಯ ಡಾ. ಗೋರೇಯವರು ಈ ಸಮ್ಮೇಲನದ ಅಧ್ಯಕ್ಷಪದವನ್ನು ಸ್ವೀಕರಿಸಬೇಕೆಂದು ಅವರನ್ನು ಬೇಡಿಕೊಳ್ಳಬೇಕೆಂದೂ ಸಮ್ಮೇಲನವು ೩-೧-೧೯೨೬ ನೇ ದಿನ ಸೇರಬೇಕೆಂದೂ ತಿರ್ಮಾನಗಳಾದವು.

ಉತ್ತರ ಕರ್ನಾಟಕದಲ್ಲಿದ್ದ ಆಯುರ್ವೇದ ಭಕ್ತರೆಲ್ಲ ಈ ಸಮ್ಮೇಲನಕ್ಕೆ ದಯಮಾಡಿಸಿ, ಅದನ್ನು ಯಶಸ್ವಿಯಾಗಿ ಮಾಡಬೇಕು. ಆಯುರ್ವೇದದ ಉದ್ಧಾರವು ಠರಾವಿಂದ ಪನೆಯ ಬೇಕಾಗಿದ್ದರಿಂದ ಈ ವಿಷಯವನ್ನು ಯಾರೂ ದುರ್ಲಕ್ಷಿಸ ಕೂಡದು. ಸಮ್ಮೇಲನದ ದಿನಗಳು ಸಮೀಪಿಸಿದವು. ಇಲ್ಲಿಯ ಜನರಿಗೆ ಸಿದ್ಧತೆಗಾಗಿ ಸಾಕಷ್ಟು ಅವಧಿಯಿಲ್ಲ. ಆದುದರಿಂದ ಉತ್ತರ ಕರ್ನಾಟಕದಲ್ಲಿರುವ ಆಯುರ್ವೇದ ಭಕ್ತರು, ಸ್ವಾಗತ ಸಭೆಯವರಿಂದ ಆಮಂತ್ರಣ ಪತ್ರಿಕೆಯು ಬರದಿದ್ದರೂ ಸಹ, ಈ ಕಾರ್ಯದ ಮಹತ್ವದ ಕಡೆಗೆ ಗಮನಿಸಿ ಬಾಗಲಕೋಟೆಯ ಸಮ್ಮೇಲನಕ್ಕೆ ಅವಶ್ಯಕವಾಗಿ ಬರಬೇಕಾಗಿ ಕಾರ್ಯವರ್ಗದ ಪ್ರಾರ್ಥನೆಯಿದೆ.

ಪ್ರಬುದ್ಧ ಕರ್ನಾಟಕದ ಮುದ್ದಣ್ಣನ ಸಂಚಿಕೆಯು

“ ಶ್ರೇಷ್ಠನಾದ ಕನ್ನಡ ಕವಿಯೊಬ್ಬನಿಗೆ ಆತನು ಬದುಕಿದ್ದಾಗ ನಾವು ತೋರಿಸಬೇಕಾಗಿದ್ದ ಗೌರವವನ್ನು ಈಗಲಾದರೂ ತೋರಿಸೋಣ ’ವೆಂದು ಹೊರಟ ಸಂಚಿಕೆಯಿದು. “ ಈ ಬಗೆಯ ಗ್ರಂಥನಿರ್ಮಾಣಕ್ಕೆ ಕನ್ನಡದಲ್ಲಿ ಇದೇ ಮೊದಲು. ಇಂಥ ಕವಿಪ್ರಶಂಸಾತ್ಮಕವಾದ ಗ್ರಂಥಗಳು, ಇಂಗ್ಲೀಷಿನಲ್ಲಿ ಅಪರೂಪವಲ್ಲ. ಕವಿಯನ್ನು ಚೆನ್ನಾಗಿ ಬಲ್ಲ ಬಂಧುಮಿತ್ರರು ಆತನ ನಡೆನುಡಿಗಳಲ್ಲಿ ಜನರ ಗಮನಕ್ಕೆ ಬರಲು ಅರ್ಹವಾದುವೆಂದು ತಮಗೆ ತೋರಿದ ಸಂಗತಿಗಳನ್ನು ವರ್ಣಿಸಿಯೂ, ಆತನ ಕಾವ್ಯಗಳನ್ನು ಪರಿಶೀಲಿಸಿದ ವಿದ್ವಾಂಸರು ಅವುಗಳ ಗುಣಾವಗುಣಗಳನ್ನು ವಿಮರ್ಶಿಸಿಯೂ ಪ್ರಬಂಧಗಳನ್ನು ಬರೆದು ಪ್ರಕಟಗೊಳಿಸುವದು ಪಾಶ್ಚಾತ್ಯರಲ್ಲಿ ಸಾಮಾನ್ಯ ಪದ್ಧತಿ. ಇಂಥಹ ಗ್ರಂಥಗಳಿಂದ ಹೆಚ್ಚಾದ ಪ್ರಯೋಜನವುಂಟೆಂಬುದು ಸ್ಪಷ್ಟವಾಗಿಯೇ ಇದೆ. ಅವು ಜನಸಾಮಾನ್ಯಕ್ಕೆ ಕವಿಯ ಪ್ರಥಮ ಪರಿಚಯವನ್ನು ಮಾಡಿಕೊಟ್ಟು, ಆತನ ಕಾವ್ಯಗಳಲ್ಲಿ ಅವರಿಗೆ ಅಭಿರುಚಿಯನ್ನು ಹುಟ್ಟಿಸುತ್ತವೆ. .... ಜನರಿಗೆ ಬೇರೆ ಬೇರೆ ತೊಂದರೆಗಳ ಮೂಲಕ ಪ್ರತಿಯೊಬ್ಬ ಕವಿಯ ಪ್ರತಿಯೊಂದು ಕಾವ್ಯವನ್ನು ಪ್ರತಿಯೊಬ್ಬ ಮನುಷ್ಯನು ಆಮೂಲಾಗ್ರವಾಗಿ ಓದುವದು ಸಾಧ್ಯವಿಲ್ಲ. ಈಗ ವಿದ್ಯೆಯ ಪ್ರಸಾರವಾಗಿದೆ. ಮುದ್ರಣ ಸೌಕರ್ಯವಾದರೂ ಚೆನ್ನಾಗಿದೆ. ಗ್ರಂಥಗಳ ಸಂಖ್ಯೆಯು ಹೆಚ್ಚುತ್ತಿದೆ. ಇಂತಹ ಕಾಲದಲ್ಲಿ ಕಾವ್ಯರಾಶಿಯೊಳಗಿನ ಉತ್ತಮ ಕೃತಿಗಳ ಸ್ವಾರಸ್ಯಾಂಶಗಳನ್ನು ಸಂಗ್ರಹಿಸಿ ಜನರ ಮುಂದಿರಿಸದಿದ್ದರೆ, ಆ ಕೃತಿಗಳ ಕಡೆಗೆ ಸಾಮಾನ್ಯಲೋಕದ ದೃಷ್ಟಿಯು ತಿರುಗುವದೇ ಅಸಂಭವವಾಗಬಹುದು. ಇದೂ ಅಲ್ಲದೆ ಪ್ರೌಢಕಾವ್ಯಗಳನ್ನೋದಿ ತಿಳಿದು ಕೊಳ್ಳುವದಕ್ಕೆ ಅವಶ್ಯಕವಾದ ಪಾಂಡಿತ್ಯವು ಸಾಮಾನ್ಯಜನಕ್ಕಿರುವುದು ಶಕ್ಯವಿಲ್ಲ. ಅಂಥವರಿಗೆ ಈ ಬಗೆಯ ವಿವರಣ ಗ್ರಂಥಗಳು ಅತಿಶಯವಾಗಿ ಉಪಕಾರಕಗಳಾಗುವವು. ಹೀಗೆ ಸಮಯಾನುಕೂಲತೆಯಿಲ್ಲದೆಯಾಗಲಿ ಪ್ರವೃತ್ತಿ ಇಲ್ಲದುದಕ್ಕಾಗಲಿ ಕಾವ್ಯಾಭ್ಯಾಸಂಗವನ್ನು ಬಿಟ್ಟಿರತಕ್ಕ ಜನರಿಗೆ ಇಂತಹ ಪುಸ್ತಕಗಳು ಅಪರಿಮಿತೋಪಯೋಗಿಗಳಾಗುವುವೆಂಬುದಕ್ಕೆ ಸಂದೇಹವಿಲ್ಲ ” ಎಂದು ಇಂತಹ ಪುಸ್ತಕಗಳ ಉದ್ದೇಶವನ್ನೂ ಪ್ರಯೋಜನವನ್ನೂ ಶ್ರೀ ಡಿ. ವಿ. ಗುಂಡಪ್ಪನವರು ತಮ್ಮ ಮುನ್ನುಡಿಯಲ್ಲಿಯೇ ಹೇಳಿ ಬಿಟ್ಟಿದ್ದಾರೆ ಹೀಗಿರಲು, ಇಂತಹ ಪುಸ್ತಕಗಳ ಆವಶ್ಯಕತೆ ಮತ್ತು ಉಪಯುಕ್ತತೆ ಇವುಗಳ ಬಗ್ಗೆ ಹೆಚ್ಚಿಗೆ ಬರೆಯಬೇಕಿಲ್ಲ.

ಮುದ್ದಣ್ಣನು (ನಂದಳಿಕೆ ಲಕ್ಷ್ಮೀನಾರಾಯಣಪ್ಪನವರು) ಮೇಲಾದ ಕವಿಯು. ಪ್ರತಿಭಾಸಂಪನ್ನನು. ಇವನು **ಕುಮಾರ ವಿಜಯ ರತ್ನಾವತೀ ಕಲ್ಯಾಣ** ಎಂಬ ಯಕ್ಷಗಾನಗಳನ್ನೂ, **ಶ್ರೀರಾಮ ಪಟ್ಟಾಭಿಷೇಕ** ಎಂಬ ಕಾವ್ಯವನ್ನೂ, **ಅದ್ಭುತರಾಮಾಯಣ ರಾಮಾಶ್ವಮೇಧ** ಎಂಬ ಗದ್ಯಗ್ರಂಥಗಳನ್ನೂ, ಕನ್ನಡದಲ್ಲಿ ಬರೆದು ಶಾಶ್ವತ ಕೀರ್ತಿಗೆ ಪಾತ್ರನಾಗಿದ್ದಾನೆ. ಇವನ ಗ್ರಂಥಗಳಲ್ಲಿ ಎಲ್ಲಕ್ಕೂ ಶ್ರೇಷ್ಠವಾದ ಗ್ರಂಥವೆಂದರೆ ರಾಮಾಶ್ವಮೇಧವು. ರಾಮಾಶ್ವಮೇಧದ ಕಥಾವಸ್ತುವು ಹಳೆಯದು! ಆದರೆ **ರೀತಿಯು** ಹೊಸದು. ಇವನು ರಸಿಕನು! ಇವನಿಗೆ ಅನುಕೂಲಳಾದ ಸಹಧರ್ಮಚಾರಿಣಿಯು ದೊರೆತಿದ್ದಳು. ಒಂದು ದಿನ ಸಂಜೆಯ ಸಮಯದಲ್ಲಿ, ಓಲಗವನ್ನು ಬಿಟ್ಟು, ಮುದ್ದಣ್ಣನು ಮನೆಗೆ ಬರುತ್ತಿರಲು, ಆತನ ಮಡದಿಯಾದ ಮನೋರಮೆಯು,ಅವನನ್ನೆದುರದಲ್ಲಿ ಕಂಡು, ಇದಿರು ಬಂದು, ಕಾಲಿಗೆ ನೀರನ್ನು ನೀಡಿ, ಕೈಹಿಡಿದು, ಮಣೆಯಮೇಲೆ ಕುಳ್ಳಿರಿಸಿ, ತನಿವಣ್ಣನ್ನು ತಿನಲಿತ್ತು, ಕೆನೆವಾಲಂ ಕುಡಿಯಗೊಟ್ಟು, ಉಪಚಾರಮಾಡಿದಳು. ಆಗ ಅವರಲ್ಲಿ ಸುಖ ಸಲ್ಲಾಪಗಳು ನಡೆದುವು. ಈ ಸಲ್ಲಾಪಗಳ ಫಲವೇ ರಾಮಾಶ್ವಮೇಧವು. ಆಗ ಮನೋರಮೆ— “ಹಗಲುಗಳೆಂತೂ ದೊಡ್ಡವು. ಹಗಲಿರುಳು ಸುರಿವ ಮಳೆಗೆ (ಆಗ ಮಳೆಗಾಲ ವಿದ್ದಿತು.) ನನ್ನ ಬಗೆಯು ಬೇಸತ್ತಿದೆ. ಯಾವದಾದರೊಂದು ಸವಿಯಾದ ಕಥೆಯನ್ನು ಹೇಳಬಾರದೆ?” ಎಂದು ಅವಳು ಕೇಳಿದುದಕ್ಕೆ, ಈ ಸುಂದರವಾದ ಕಥೆಯನ್ನು ಕವಿಯು ಹೇಳಿದ್ದಾನೆ. ಈ ಕಥೆಯನ್ನು ಹೊಟ್ಟೆ ಹೊರಕೊಳ್ಳುವದಕ್ಕಾಗಿ ಬರೆದಿಲ್ಲ. ತನ್ನ ‘ ಮೋಹದ ಮನೋರಮೆಯ ’ ಮೆಚ್ಚಿಗಾಗಿ ಬರೆದಿರುವನು. ಅವನೂ ರಸಿಕನು. ಅವಳೂ ರಸಿಕಳು. ಪರಸ್ಪರರಲ್ಲಿ ಪ್ರೇಮವುಳ್ಳವರು. ‘ ಹೃದಯಂತ್ವೇವ ಜಾನಾತಿ ಪ್ರೀತಿಯೋಗಂ ಪರಸ್ಪರಂ ’ ಎಂಬಂತೆ ಅವರ ವೃತ್ತಿಯಾಗಿದ್ದಿತು. ಈ ಕಥೆಯು ಹೃದಯ ಹೃದಯಗಳ ಒಳಮಾತಿನಂತಿರುತ್ತದೆ. ಇಂತಹ ನಲ್ಮೆತೆಗೆ ಬಿನ್ನಹ, ಸಾವಿತ್ರಿ, ಶಾಂತಾ, ಸಣ್ಣ ಕತೆಗಳು ಮೊದಲಾದ ಉಚ್ಚ ಗ್ರಂಥಗಳನ್ನು ಬರೆದ ಶ್ರೀ. ಮಾಸ್ತಿವೆಂಕಟೇಶಯ್ಯಂಗಾರರು ವಿಮರ್ಶೆಯನ್ನು ಬರೆದಿದ್ದಾರೆ. ಚಿನ್ನಕ್ಕೆ ಪರಿಮಳ ಬೆರೆತಂತಾಗಿದೆ. ಅವರಾದರೂ ರಸಿಕರು, ಸಂಸಾರದ ನಿಜವಾದ ಸ್ವಾರಸ್ಯವನ್ನು ಅರಿತವರು. ರಾಮಾಶ್ವಮೇಧದಿಂದ ಅವರು ಆಯ್ದಿರುವ ಭಾಗಗಳಿಂದ ಅವರ ಮಾರ್ಮಿಕತೆಯು, ಚನ್ನಾಗಿ ವ್ಯಕ್ತವಾಗುತ್ತಿದೆ. ಅವರು ಈ ಕಾವ್ಯದ ವಿಷಯವಾಗಿ ಹೀಗೆ ಬರೆಯುತ್ತಾರೆ. “ ಕಾವ್ಯವು ಸರ್ವಸಮ್ಮತವಾಗುವದಕ್ಕೆ ಒಂದು ಕಾರಣ. ಅದು ಗದ್ಯ ರೂಪದಲ್ಲಿರುವುದು. ಗದ್ಯವಾದರೂ ಸತ್ವವಿಲ್ಲದ ಶೈಲಿಗೆ ಬೀಳದೆ ಭಾವಗರ್ಭಿತವಾದ ಸುಂದರವಾದ ಮಾರ್ಗದಲ್ಲಿ ರಚಿತವಾಗಿರುವದು. ಈ ಕಾರಣದಿಂದ ಪಾಮರರಿಗೆ ರಂಜಕವಾಗಿರುವಂತೆ ಹಳಗನ್ನಡದಲ್ಲಿ ರಚಿತವಾಗಿರುವದರಿಂದ ಪಂಡಿತರಿಗೂ.. ಈ ಕಾವ್ಯವು ಮೆಚ್ಚಾಗಿದೆ ಕಥೆಯನ್ನು ಹೇಳುವದರಲ್ಲಿಯೂ, ಪ್ರಕೃತಿಯ ಸೌಂದರ್ಯವನ್ನು ವರ್ಣಿಸುವದರಲ್ಲಿಯೂ, ಜೀವನದ ತತ್ವವನ್ನು ವಿಮರ್ಶಿಸುವದರಲ್ಲಿಯೂ, ವಾಚಕರ ಹೃದಯದಲ್ಲಿ ವಿವಿಧ ಪರಿಣಾಮಗಳನ್ನುಂಟು ಮಾಡುವದರಲ್ಲಿಯೂ, ಈ ಕವಿಗೆ ಇರುವ ಅಸದೃಶವಾದ ಶಕ್ತಿಯು; ಇಲ್ಲಿ ಪೂರ್ಣಪರಿಪಾಕವನ್ನು ಹೊಂದುವುದು ಇವೆಲ್ಲಕ್ಕಿಂತ ಮುಖ್ಯವಾದ ಕಾರಣ. ” ಈ ಪ್ರಕಾರ ಹೇಳಿ ಮುಂದೆ ಮುದ್ದಣ್ಣನ ಕತೆ ಹೇಳುವ ನೈಪುಣ್ಯವನ್ನು ಬಣ್ಣಿಸಿದ್ದಾರೆ. ಕವಿಗೆ ರಾಮಾಯಣದಲ್ಲಿ ಪಕ್ಷಪಾತ ಬಹಳ. ರಾಮಾಯಣದಲ್ಲಿ ಯಾವ ಭಾಗವನ್ನು ಹೇಳುವುದೆಂದು ಸ್ವಲ್ಪ ಚರ್ಚೆಯಾದ ಮೇಲೆ ಮನೋರಮೆಯು ರಾಮಾಶ್ವಮೇಧದ ಕತೆಯನ್ನು ಕೇಳಬೇಕೆಂದು ಹೇಳುವಳು. ಮುದ್ದಣ್ಣನು “ಆಗಲಿ, ಯಾವಧಾಟಿಯಲ್ಲಿ ಹೇಳಲಿ? ಪದ್ಯದಲ್ಲಿ ಹೇಳಲಿ! ಗದ್ಯದಲ್ಲಿ ಹೇಳಲಿ” ಎನಲು ಮನೋರಮೆಯು “ಪದ್ಯಂ ವದ್ಯಂ; ಗದ್ಯಂ ಹೃದ್ಯಂ ಹೃದ್ಯಮಪ್ಪ (ಸೊಗಸಾದ) ಗದ್ಯದೊಳೆ ಪೇಳ್ವುದು!” ಎಂದು ಉತ್ತರ ಕೊಡುವಳು. ಮುದ್ದಣ್ಣನು ಸರಸಿ. ಇನ್ನೂ ಚಿಕ್ಕ ವಯಸ್ಸೆಂದು ಕಾಣುತ್ತದೆ. ಹೆಂಡತಿಯೊಡನೆ ಇಲ್ಲಿ ಸ್ವಲ್ಪ ಹಾಸ್ಯ ಮಾಡುತ್ತಾನೆ. ಮುದ್ದಣ್ಣಂ :— (ನಸುನಗೆಯಿಂ) “ಆದಂತಿರೆ ಇಂತಪ್ಪ ನಲ್ನುಡಿಯಂ ಬಿತ್ತರಿಸಿದೊಡೆ ಅರಮನೆಯೊಳ್ ರನ್ನಕಡಗಮಂ ಪೊನ್ನ ಕಂಠಿಕೆಯಂ ಮೆಚ್ಚಿ ನೀವರ್ ನೀನೀವುದೇಂ?” (ಅದು ಹಾಗಿರಲಿ ಇಂಥ ಸುಂದರವಾದ ಕಥೆಯನ್ನು ಹೇಳಿದರೆ, ಅರಮನೆಯಲ್ಲಿ ರತ್ನದ ಕಡಗವನ್ನಾಗಲಿ, ಬಂಗಾರದ ಕಂಠಿಯನ್ನಾಗಲಿ ಕೊಡುವರು! ನೀನು ಕೊಡುವದಾದರೂ ಏನು?)

ಮನೋರಮೆ—ಪೆರತೇಂ ಎನ್ನನೇ ನಾನೀವೆಂ (ಬೇರೆ ಏನು? ನನ್ನನ್ನೇ ನಾನು ನಿನಗೆ ಕೊಡುವೆನು.) ಮುದ್ದಣ್ಣನು ಕವಿಯಾದರೂ ಪ್ರಪಂಚ ಜ್ಞಾನವಿಲ್ಲದವನಲ್ಲ, 'ಅರಿಯಾ, ಮುನ್ನಮೆ ನಿನ್ನ ತಾಯ್ತಂದೆವಿರೆನಗಿತ್ತರೆಂಬುದಂ (ಗೊತ್ತಿಲ್ಲವೇ ನಿನಗೆ ಈ ಮೊದಲೇ ನಿನ್ನ ತಾಯ್ತಂದೆಗಳೇ ನಿನ್ನನ್ನು ನನಗೆ ಕೊಟ್ಟು ಬಿಟ್ಟಿದ್ದಾರೆ) ಎನ್ನುವನು ಇಂತಹ ಉದಾತ್ತವಾದ ಹಾಸ್ಯರಸದ ಉದಾಹರಣಗಳನ್ನು ನಮ್ಮ ಸಹೃದಯರಾದ ವಿಮರ್ಶಕರು ನಮಗಾಗಿ ಆಯ್ದಿದ್ದಾರೆ. ಇವೆಲ್ಲವುಗಳನ್ನು ಇಲ್ಲಿ ಕೊಡುವುದು ಶಕ್ಯವಿಲ್ಲ. ಇದರಲ್ಲಿಯ ಉಳಿದ ಲೇಖಗಳಾದರೂ ಮನೋಹರವಾಗಿವೆ. ಮೊದಲು ಪ್ರಾಕ್ತನ ವಿಮರ್ಶಕ ರಾವ್ ಬಹಾದ್ದೂರ್ ಮ|| ಆರ್. ನರಸಿಂಹಾಚಾರ್ಯರವರು ಶ್ರೀಮಾನ್. ನಂದಳಿಕೆ ಲಕ್ಷ್ಮೀನಾರಾಣಯ್ಯ (೧೮೭೦-೧೯೦೧) ನವರ ಜೀವನ ಚರಿತ್ರೆಯನ್ನು ಕೊಟ್ಟಿದ್ದಾರೆ. ಆ ಮೇಲೆ ಪಿ. ಮಂಗೇಶರಾಯರು ವಿಸ್ತಾರವಾಗಿ ಅವರ ಜೀವನದಲ್ಲಿಯ ಸಂಗತಿಗಳ ವಿಷಯದಲ್ಲಿಯೂ, ಅವರ ಗ್ರಂಥಗಳ ವಿಷಯದಲ್ಲಿಯೂ ಬರೆದಿದ್ದಾರೆ. ಹುರುಳಿಯ ಭೀಮರಾಯರ 'ಕವಿಯ ನೆನಪು, ಅದ್ಭುತ ರಾಮಾಯಣದ ಪರೀಕ್ಷಣ (ಯು. ಮಂಗೇಶರಾವ) ಶ್ರೀ ರಾಮ ಪಟ್ಟಾಭಿಷೇಕ ವಿಮರ್ಶೆ (ಪಂಡಿತ ಪೂಜಾರ) ರಾಮಾಶ್ವಮೇಧ (ಮಾಸ್ತಿ ವೆಂಕಟೇಶಯ್ಯಂಗಾರ) ಸುವಾಸಿನೀ ಪತ್ರದ ಮುದ್ರಿತವಾದ ಜೋ ಜೋ ಎಂಬ ಲಕ್ಷ್ಮೀನಾರಾಯಣಪ್ಪನವರ ಅನುಬಂಧ ಎಂಬವುಗಳೇ ಆದರಲ್ಲಿಯ ವಿಷಯಗಳು ಇದು ಕವಿಯ ಮತ್ತು ಲೇಖಕರ ಸುಂದರವಾದ ಚಿತ್ರಗಳಿಂದ ಅಲಂಕೃತವಾಗಿದೆ. ಮುದ್ರಣವಂತೂ ಬಲು ಮೆಚ್ಚು. ಇಂತಹ, ಪುಸ್ತಕವನ್ನು ಮುದ್ರಿಸಿದುದಕ್ಕೆ ನಾವು ಕರ್ನಾಟಕ ಸಂಘವನ್ನು ಮನಮುಟ್ಟಿ ಅಭಿನಂದಿಸಿ, ಈ ಸಂಘವು ಆಚಂದ್ರಾರ್ಕವಾಗಿ ಬಾಳಿ ಬೆಳೆದು ಕರ್ನಾಟಕದ ಸೇವೆಯನ್ನು ಮಾಡಲೆಂದು ಹಾರೈಸುವೆವು.

ಕಾನಪೂರ ವರ್ತಮಾನವು.

೧೧-೧೨-೧೯೨೫

ತಾರೀಖು ೯-೧೨-೧೯೨೫ ನೇ ದಿನ ಈ ಊರಲ್ಲಿ ಮ್ಯುನಿಸಿಪಾಲಿಟಿಯ ಚುನಾವಣೆಯು ನಡೆಯಿತು ಆ ಚುನಾವಣೆಯ ಸಲುವಾಗಿ ಇಲ್ಲಿಯ ರಾಷ್ಟ್ರಿಯ ಪಕ್ಷದವರು ತಮಗೆ ವೋಟುಗಳನ್ನು ಕೊಡಿರಿ ಎಂದು ಹೇಳುತ್ತ ಮತ್ತು ಮೇಳೆಯ ಪದಗಳನ್ನು ಹಾಡುತ್ತ ಊರಲ್ಲಿ ತಿರುಗುತ್ತಿದ್ದರು. ಅದೇ ಪ್ರಕಾರ ಮತ್ತೊಂದು ಪಕ್ಷದವರು ನಡೆಸಿರಲು 'ಕಾವು ಕೋಟೆ' ಎಂಬ ಬೀದಿಯಲ್ಲಿ ಎರಡೂ ಬಣಗಳ ನಡುವೆ ಕಲಹವು ಪ್ರಾರಂಭವಾಯಿತು ಮೊದಲೇ ಎರಡೂ ಬಣಗಳ ನಡುವೆ ವೈಮನಸ್ಸು ಇತ್ತು ಮೊದಲು ಸಂಖ್ಯಾ ಪ್ರಮಾಣದಿಂದ ನಡೆದ ಕಲಹವು ಇಬ್ಬರ ನಡುವೆ ಮಾತಿಗೆ ಮಾತು ನಡೆದದ್ದರಿಂದ ಭಯಂಕರವಾಗಿ ಪರಿಣಮಿಸಿತು. ಒಬ್ಬರಿಗೊಬ್ಬರು ಕಲ್ಲಿನಿಂದಲೂ ಬಡಿಗೆಗಳಿಂದಲೂ ಬಡಿದಾಡಲು ಪ್ರಾರಂಭಿಸಿದರು. ಅದ್ದರಿಂದ ಎರಡೂ ಬಣಗಳಲ್ಲಿ ಅನೇಕರಿಗೆ ಗಾಯವುವಾಗಿರುವವು ಕೊನೆಗೆ ಪೋಲೀಸರು ಬಂದು ಅದನ್ನು ಶಾಂತ ಗೊಳಿಸಿದರು.

ರಾಷ್ಟ್ರೀಯಪಕ್ಷದ ವಿರುದ್ಧ ಪಕ್ಷದವರು ರಾಷ್ಟ್ರೀಯ ಪಕ್ಷದವರ ಮೇಲೆ ಭಯಂಕರ ಕೋಪಗೊಂಡು ಅವರು ಕೈಕೊಂಡ ಮಹಾ ಸಭೆಯ ಕೆಲಸಕ್ಕೆ ವಿಘ್ನವನ್ನುಂಟು ಮಾಡುವ ಬುದ್ಧಿಯಿಂದ ಪೆಂಡಾಲಕ್ಕೂ ಇತರ ಕಟ್ಟು ಮಟ್ಟು ಡೇರೆಗಳಿಗೂ ಬೆಂಕಿ ಹಚ್ಚಬೇಕೆಂದು ಪ್ರಯತ್ನಿಸುತ್ತಿರುವರೆಂಬ ವಾರ್ತೆಯಿದೆ. ಕಾರಣ ತಿಲಕ ನಗರವನ್ನು ಕಾಯುವ ಭಾರವು ಸ್ವಯಂ ಸೇವಕರ ಮೇಲೆ ಬಹಳವಾಗಿ ಬಿದ್ದಿದೆ

ತಾರೀಖು ೯ ನೇ ಡಿಶಂಬರು ದಿವಸ ತಿಲಕ ನಗರದ ಕೆಲಸಗಾರರೆಲ್ಲರೂ, ಹೇಳದೇ ಕೇಳದೇ ಮ್ಯುನಸಿಪಾಲಿಟಿಯ ಚುನಾವಣೆಯಲ್ಲಿ ಭಾಗ ತೆಗೆದುಕೊಂಡದ್ದರಿಂದ ಇಲ್ಲಿ ದುಡಿಯುವ ಕೂಲೀ ಜನರು ಮುಂಜಾನೆ ೧೦ ಘಂಟೆಯ ವರೆಗೆ ಏನೂ ಕೆಲಸ ಮಾಡದೇ ಹಾಗೇ ವೇಳೆಯನ್ನು ಕಳೆಯುತ್ತಿದ್ದರು. ಆಗ ನಮ್ಮ ಕರ್ನಾಟಕದ ಆರ್ಗನೈಝರ್ ಜನರು ತಮ್ಮ ಕೈಯೊಳಗಿನ ಸ್ವಯಂ ಸೇವಕರನ್ನು ಆ ಆ ಕೆಲಸಗಳ ಮೇಲೆ ನೇಮಿಸಿ ಪ್ರತಿಯೊಂದು ಕೆಲಸವನ್ನು ಮಾಡಿಸಬೇಕಾಯಿತು ರಾಷ್ಟ್ರೀಯ ಪಕ್ಷದವತಿಯಿಂದ ಚುನಾವಣೆಯಲ್ಲಿ ನಿಂತ ಶ್ರೀ. ಜೋಗ ಮತ್ತು ಡಾ. ಜವಾಹೀರಲಾಲರು ತಮ್ಮ ಕೆಲಸಕ್ಕೆ ಸಹಾಯ ಮಾಡಲು ವ್ಹಾಲೆಂಟಿಯರ ಬೋರ್ಡಿನ ಆಲ್ ಇಂಡಿಯಾ ಆರ್ಗನೈಝರ್, ರಾದ ಶ್ರೀ. ಶ. ವಿ. ಪಂಡಿತರನ್ನು ಕೇಳಲು ಅವರು ತಮ್ಮ ಸ್ವಯಂಸೇವಕರನ್ನು ಇದಕ್ಕೋಸ್ಕರ ಕಳುಹಿಸಲು ಸಾಧ್ಯವಿಲ್ಲೆಂದು ಹೇಳಿದರೆಂದು ತಿಳಿದಿರುವದು.

(೨) ಶ್ರೀಮತಿ ಸರೋಜಿನಿ ದೇವಿಯವರ ಮೇಲಿನ ಕೋಪವು ಜನರಲ್ಲಿ ದಿನೇ ದಿನೇ ಹೆಚ್ಚುತ್ತಲಿರುವದು ಈ ಊರಲ್ಲಿ ಎಲ್ಲಿ ನೋಡಿದರೂ ಇವರ ಸ್ವಾಗತ ಸಮಾರಂಭಕ್ಕೆ ಅವಮಾನವನ್ನುಂಟು ಮಾಡಬೇಕೆಂದು ಮತ್ತು ಹರತಾಳವನ್ನು ಮಾಡಬೇಕೆಂದು ಬೋಧಿಸುತ್ತಿರುವ ಹಸ್ತ ಪತ್ರಿಕೆಗಳೇ ಕಾಣುತ್ತಿರುವವು. ಶ್ರೀ ಕಾಮೇಶ್ವರರಾವ ಎಂಬ ಒಬ್ಬ ಆಂಧ್ರದ ಗ್ರಹಸ್ಥರು ಇಲ್ಲಿ ಸ್ವಯಂ ಸೇವಕರಿಗೆ ಲಾಠಿಯ ಕವಾಯತವನ್ನು ಕಲಿಸುತ್ತಿದ್ದರು. ಇವರು "ಶ್ರೀಮತಿ ಸರೋಜಿನಿ ದೇವಿಯವರು ಹಿಂದೂ ಧರ್ಮಕ್ಕೆ ಮತ್ತು ದೆ ಭ ಲಾಲಾಜಿಯವರಿಗೆ ಸಿಕ್ಕ ಸಿಕ್ಕ ಹಾಗೆ ಅಂದದ್ದರಿಂದ ಅವರು ಸಮಾಜದ ಕ್ಷಮೆ ಬೇಡುವತ್ತನಕ ಅವರ ಸ್ವಾಗತದಲ್ಲಿ ಭಾಗ ತೆಗೆದು ಕೊಳ್ಳಬಾರದೆಂದು ಒಂದು ಹಸ ಪತ್ರಿಕೆಯನ್ನು ಪ್ರಕಟಿಸಿದ್ದರಿಂದ ಇಲ್ಲಿಯ ಜನರಲ್ ಸೆಕ್ರೆಟರಿಯವರು ಇವರಿಗೆ 'ನೀವು ಸ್ವಯಂ ಸೇವಕ ಶಿಬಿರದಲ್ಲಿರುವತ್ತಿವರಾದ್ದರಿಂದ ಅವರ ನಿಯಮಕ್ಕೆ ಅವಮಾನ ಮಾಡಿದಂತಾಗುವದರಿಂದ. ನೀವು ಇಲ್ಲಿರಲು ಬರುವದಿಲ್ಲ ನಿಮ್ಮ ಮನಸ್ಸಿನಲ್ಲಿ ಇದೇ ಪ್ರಕಾರ ಮಾಡುವದಿದ್ದರೆ, ಶಿಬಿರದಿಂದ ಹೊರಗೆ ಹೋಗಿ ಮಾಡಬಹುದು ಎಂದು ಹೇಳಲು ಕಾಮೇಶ್ವರರಾಯರು ಶಿಬಿರದಿಂದ ಹೊರಗೆ ಹೋಗಿ ಶ್ರೀಮತಿ ಸರೋಜಿನಿಯವರ ಮೇಲೆ ದ್ವೇಷ ಹುಟ್ಟಿಸುವ ಪ್ರಚಾರವನ್ನು ಜೋರಿನಿಂದ ನಡೆಸಿರುವರು

(೩) ಇಲ್ಲಿಯ ಎಷ್ಟೋ ಜನರು ಈ ಮಹಾ ಸಭೆಯ ಕೆಲಸವನು ಮಾಡಗೊಡಲಿಕ್ಕಿಲ್ಲವೆಂದು ಟೊಂಕ ಕಟ್ಟಿರುವರೆಂದು ತಿಳಿಯುತ್ತದೆ. ಇಲ್ಲಿಯ 'ಭವಿಷ್ಯ' ಪತ್ರವು ಈ ಸಾರೆ ಮಹಾಸಭೆಯು ಆಗುವ ಸಂಭವವಿಲ್ಲೆಂದು ಬರೆದಿರುವದು

(೪ ತಾರೀಖು ೨೦ ನೇ ದಿಸೆಂಬರ ದಿವಸ ಮಹಾತ್ಮಾ ಗಾಂಧಿಯವರ ಹಸ್ತದಿಂದ ಮಹಾಪ್ರದರ್ಶನವು ತೆರೆಯಲ್ಪಡುವದು ಅದರ ಸಂಬಂಧದ ಯಾವತ್ತು ತಯಾರಿಯು ಜೋರಿನಿಂದ ನಡೆದದೆ. ಮತ್ತು ತಾರೀಖು ೨೫ ನೇ ದಿಶಂಬರ ಮುಂಜಾನೆ ೮ ಘಂಟೆಗೆ ಅಖಿಲಭಾರತ ಸ್ವಯಂಸೇವಕರ ಮೂರನೇ ಪರಿಷತ್ತು ಶ್ರೀ ತುಲಸೀಚರಣ ಗೋಸ್ವಾಮಿ ಎಮ್. ಎಲ್. ಎ ಬೆಂಗ ಲ ಇವರ ಅಧ್ಯಕ್ಷತೆಯಲ್ಲಿ ಜರಗುವದು ಎಲ್ಲ ಕೆಲಸಗಳು ಒಳ್ಳೆ ಜೋರಿನಿಂದ ನಡೆದವೆ

೩ ನೇ ಪುಟದಿಂದ ಬಂದಿದ್ದು

ಕರ್ಮವೋ? ಧರ್ಮವೂ ಅಲ್ಲ, ಕರ್ಮವೂ, ಅಲ್ಲ, ವ್ಯೆಯೊಳಗಿ ಎಡ್ಡು!

ತಿಳಿಯದೆ ತಪ್ಪು ಮಾಡಿದ ಬಳಿಕ, ತಾನು ಮಾಡಿದ ತಪ್ಪು ಹಿಂದಿನಿಂದ ತನ್ನ ಆತ್ಮಕ್ಕೆ ತಿಳಿದು ಬಂದರೂ, ತನ್ನ ತಪ್ಪು ತಪ್ಪಲ್ಲವೆಂದು ವಾದಿಸುವದು, ವಿದ್ವತ್ತೆಯೋ ಬುದ್ಧಿಮತ್ತೆಯೋ? ವಿದ್ವತ್ತೆಯೂ ಅಲ್ಲ, ಬುದ್ಧಿ ಮತ್ತೆಯೂ ಅಲ್ಲ, ವ್ಯೆಯೊಳಗಿನ ಎಡ್ಡು!

ತಾನು ಶ್ರೀಮಂತನು; ತನಗೆ ತಕ್ಕ ಮಾನವನ್ನು ಪರರು ಯಾವಾಗಲೂ ಕೊಡಬೇಕು. ಎಂಬದಾಗಿ ಇತ್ತ ಅಪೇಕ್ಷಿಸುವದೂ, ಅತ್ತ ಅಂಗಡಿಗಳಲ್ಲಿ ಉದ್ರಿಯಿಂದ ಸಾಮಾನುಗಳನ್ನು ತಂದು, ೧-೨ ರೂಪಾಯಿಗಳ ಸಲುವಾಗಿ ೮-೧೦ ಸಾರೆ ಅಂಗಡಿಕಾರನನ್ನು ಎಡತಾಕಿಸಿ, ಪುನ. ವಸೂಲಿಗೆ ಆ ಒಡಪ್ರಾಣಿಯು ಬಂದರೆ, 'ನಾನೇನು ಓಡಿ ಹೋಗುವೆನೇನು ಹೀಗೇಕೆ ಮನೆಗೆ ಎಡತಾಕುವದು?' ಎಂಬದಾಗಿ ಗದ್ದರಿಸುವದು ಶ್ರೀಮಂತಕೆಯು ಲಕ್ಷಣವೋ? ಅಥವಾ ತನ್ನ ಮಾನ ದೊಡ್ಡಸ್ತಿಕೆಗಳ ಭಕ್ಷಣವೋ? ಎರಡೂ ಅಲ್ಲ, ವ್ಯೆಯೊಳಗಿ ಎಡ್ಡು!

ವರ್ತಮಾನಸಾರ

ಇಹವೃತ್ತ

ಕಳೆದವಾರದಲ್ಲಿ ಸ್ವಲ್ಪ ಮಳೆಯಾಯಿತು. ಇಷ್ಟರಿಂದ ಬೆಳೆಗಳಿಗೆ ಉಪಯೋಗವಾಗದು.

ಇಲ್ಲಿಯ ಪೆನ್‌ಶನ್ ಸಬ್ ರಜಿಸ್ಟರರಾದ ಛಬ್ಬೀ ಸಂಜೀವರಾಯರು ೧೦ ನೇ ತಾ॥ ದಿನ ತಮ್ಮ ೭೫ ನೇ ವಯಸ್ಸಿನಲ್ಲಿ ವೈಕುಂಠವಾಸಿಗಳಾದರು. ಪ್ರಬುದ್ಧನಾದ ಸುಪುತ್ರ, ಮೊಮ್ಮಕ್ಕಳು ಇವರ ಎದುರಿನಲ್ಲಿ ಸಂಸಾರ ಸುಖ ಮತ್ತು ಸಂಪತ್ತಿನ ಸೌಭಾಗ್ಯವನ್ನು ಅನುಭವಿಸಿ, ಮುಪ್ಪಿನ ಕಾಲದಲ್ಲಿ ಇಹಲೋಕಯಾತ್ರೆಯನ್ನು ಮುಗಿಸಿ ಪುಣ್ಯವಂತರಾದರು

ಮುಂಬೈ ಕರ್ನಾಟಕ

ಚಿಕ್ಕೋಡಿಯಲ್ಲಿ ವಿದ್ಯಾರ್ಥಿಗಳ "ಕನ್ನಡಭಾಷಾ ವರ್ಧಕ ಸಂಘ"ವು ತಾ॥ ೧೧ ೧೨ ೩೫ ರಲ್ಲಿ ಸ್ಥಾಪಿಸಲ್ಪಟ್ಟಿತು.

ಹುನಗುಂದ ತಾಲೂಕ ವೀರಶೈವರ ತರುಣರ ಸಂಘದ ೨ ನೇ ಅಧಿವೇಶನವು ಇಳಕಲ್ಲದಲ್ಲಿ ಶ್ರೀ ಪಾಟೀಲ ಶಂಕರಗೌಡರು ಬಿ. ಎ. ಎಲ್. ಎಲ್. ಬಿ. ಇವರ ಅಧ್ಯಕ್ಷತೆಯಲ್ಲಿ ಇದೇ ತಿಂಗಳ ೩-೪ ತಾರೀಖುಗಳಲ್ಲಿ ನಡೆಯಿತು ಶ್ರೀ ಮಂಜಪ್ಪ ಹರ್ಡೇಕರ ಮತ್ತು ದಾವಣಗೇರಿಯ ಶ್ರೀ ನಾಡಗೌಡ ಮಂಟೆಪ್ಪನವರ ಬಿ. ಎ. ಎಲ್ ಬಿ. ಇವರೂ ಸುತ್ತಲಿನ ಗ್ರಾಮಗಳಲ್ಲಿಯ ಜನರೂ ಸಭೆಗೆ ಬಂದಿದ್ದರು ಈ ವರ್ಷದಲ್ಲಿ ಈ ಸಂಘದವರು ೧೯ ಹಳ್ಳಿಗಳನ್ನು ಸಂದರ್ಶಿಸಿ, ವಾಚನಾಲಯ ಭಜನಾಸಂಘಗಳನ್ನು ಸ್ಥಾಪಿಸಿದರೆಂದೂ, ೩೪೬ ಜನರು ಚಹ, ತಂಬಾಕುಗಳನ್ನು ಇನ್ನು ಮೇಲೆ ಉಪಯೋಗಿಸುವದಿಲ್ಲವೆಂದು ಪ್ರತಿಜ್ಞೆ ಮಾಡಿದರೆಂದೂ, ಕಾರ್ಯದರ್ಶಿಗಳಾದ ಶ್ರೀ ಬೆಳಗಟಗಿ ಬಸೆಟ್ಟೆಪ್ಪನವರು ತಿಳಿಸಿದರು. ಸರ್ವರಿಗೂ ಆನಂದವಾಯಿತು ಆಮೇಲೆ ಸಭೆಯು ಕಾರ್ಯವು ಸಾಗಿ, ವಿದ್ಯಾ ಪ್ರಸಾರ ಗೋಸಂರಕ್ಷಣೆ, ಪಂಕ್ತಿಭೇದನಿವಾರಣೆ, ವೀರಶೈವರು ಲಿಂಗವನ್ನಗಲದಂತಿರುವದು ಇವೇ ಮೊದಲಾದ ಠರಾವುಗಳು ನಿರ್ಣಯಿಸಲ್ಪಟ್ಟವು. ಮುಂದಿನ ವರ್ಷದ ಸಮ್ಮೇಲನಕ್ಕೆ ಅಧ್ಯಕ್ಷರಾಗಿ ಶ್ರೀ. ಪಾಟೀಲ ಹನುಮಂತ ಗೌಡರಿಂದ ಆಮಂತ್ರಿಸಲ್ಪಟ್ಟಿತು ಸಭಾವಿಸರ್ಜನೆಯಾದ ಮೇಲೆ, ಮಹಾಂತೇಶ ವಾಚನಾಲಯದಲ್ಲಿ ಶ್ರೀ ಪಾಟೀಲ ಶಂಕರ ಗೌಡರು ಜಿಲ್ಹಾ ಲೋಕಲ್ ಬೋರ್ಡಿನ ಅಧ್ಯಕ್ಷರಾಗಿ ಆರಿಸಲ್ಪಟ್ಟದ್ದಕ್ಕಾಗಿ ಅಭಿನಂದನ ಸಮಾರಂಭ ಸಭೆ ಜರುಗಿತು.

ಕರ್ನಾಟಕ ಏಕೀಕರಣದ ಸಮ್ಮೇಲನದ ೪ ನೇ ಸ್ವಾಗತಸಭೆಯು ವಿಜಾಪೂರದಲ್ಲಿ ೯—೧೨—೩೫ ನೇ ದಿನ ಡಾ. ಮಂಗಳವೇಢೇಕರರವರ ಅಧ್ಯಕ್ಷತೆಯಲ್ಲಿ ಜರುಗಿತು. ಪರಸ್ಥಳದಿಂದ, ವಿದ್ವಾನ್ ಕೇ. ಶೇಷಶಾಸ್ತ್ರಿಯವರುಗಳಾದ ಸವಣೂರ, ಆವಗೀರದಾರ, ಬಂಥಿ, ತ್ರಿಯಂಬಕರಾವ, ಮೊದಲಾದವರು ಬಂದಿದ್ದರು ಡಾ. ಸವಣೂರದವರು ಬೆಂಗಳೂರಿನಲ್ಲಿ ನಡೆಯುವ ದ್ವಿತೀಯ ಸಮ್ಮೇಲನದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಸಭಾಸದರಿಂದ ವಸೂಲಾದ ಹಣದಲ್ಲಿ ಅರ್ಧ ಭಾಗವನ್ನು ಮುಖ್ಯಮಂಡಳಕ್ಕೆ ಕೊಡಬೇಕು; ಉತ್ತರ ಕರ್ನಾಟಕದ ಪ್ರಥಮ ಸಮ್ಮೇಲನವನ್ನು ಬಾಗಲಕೋಟೆಯಲ್ಲಿ ಕೂಡಿಸಬೇಕು, ಇವೇ ಮೊದಲಾದ ನಿರ್ಣಯಗಳಾದವು.

ಮದ್ರಾಸ ಕರ್ನಾಟಕ

ಮಂಗಳೂರಿನಿಂದ ಹಾಸನಕ್ಕೆ ರೇಲ್ವೆ ಮಾರ್ಗವನ್ನು ನಿರ್ಮಿಸುವರೆಂಬುದಾಗಿ ವಾರ್ತೆ. ಈ ಬಗ್ಗೆ ಹಣವನ್ನು ಅಳೆಯುವ ಕಾರ್ಯಾಲಯವು ಮಂಗಳೂರಿನಲ್ಲಿ ಸ್ಥಾಪನೆಯಾಗುವದಂತೆ.

ಕೊಯಿಮತ್ತೂರ ಮುನಸಿಪಾಲ್ಟಿಯು ದೇವಿಗಳಿಗೆಲ್ಲ ವಿದ್ಯುದ್ದೀಪಗಳ ವ್ಯವಸ್ಥೆ ಬೇಗನೇ ಆಗುವದು

ಪ್ರಕೃತ ತತ್ವಜ್ಞಾನದ ವಿಷಯವಾಗಿ ಬಳ್ಳಾರಿಯಲ್ಲಿ ವ್ಯಾಖ್ಯಾನಗಳನ್ನು ಕೊಡಲಿಕ್ಕಂದು ತಿನ್ನೇವಲ್ಲಿಯಿಂದಬಂದ ಶ್ರೀ ಎನ್. ಕೃಷ್ಣರಾಯರು ಅಕಸ್ಮಾತ್ತಾಗಿ ಶ್ರೀ ಬಿ. ಭೀಮರಾಯರ ಮನೆಯಲ್ಲಿ ಮಡಿದರು

ಮೈಸೂರ ಕರ್ನಾಟಕ

ಬೆಂಗಳೂರಿನ ಕುಷ್ಠರೋಗದ ಫಂಡಿಗೆ ಸಹಾಯ ಮಾಡುವದಕ್ಕಾಗಿ, ಬೆಂಗಳೂರಿನ "ಆಪೆರಾ ಹೌಸ್" ನಲ್ಲಿ ಸಂಸ್ಕೃತನಾಟಕದ ಇಂಗ್ಲೀಷ ಭಾಷಾಂತರವು ಅಭಿನಯಿಸಲ್ಪಡುವದು.

ವಿಲಾಯತಿಯಿಂದ ಯುವರಾಜರು ಮರಳಿ ಬಂದು ಇದೇ ತಿಂಗಳ ೧೪ ನೇ ತಾ॥ ದಿನ ಮೈಸೂರಿಗೆ ತಲ್ಪಿದರು.

ತೀರ್ಥ ಹಳ್ಳಿಯಲ್ಲಿ "ಆಯುರ್ವೇದ" ಎಂಬ ಹೆಸರಿನ ಮಾಸಪತ್ರಿಕೆಯು ಬೇಗನೇ ಪ್ರಾರಂಭವಾಗುವದು. ವಾರ್ಷಿಕ ಚಂದಾ ೩॥ ಆಯುರ್ವೇದ ಗ್ರಂಥಗಳನ್ನು ಸಂಸ್ಕೃತ ಮೂಲ ಸಮೇತ ತಿಳಿಗನ್ನಡದಲ್ಲಿ ತಿಂಗಳು ತಿಂಗಳಿಗೂ ಪ್ರಕಟಿಸುವರು. ಹೆಚ್ಚಿನ ಮಾಹಿತಿಯು ಬೇಕಾಗಿದ್ದರೆ ತೀರ್ಥಹಳ್ಳಿಗೆ ಪತ್ರಬರೆದು ವ್ಯವಸ್ಥಾಪಕರಿಂದ ತಿಳಿದುಕೊಳ್ಳಬೇಕು.

ಯುವರಾಜರ ಮತ್ತೂ ೪ ನೇ ಕುವರಿಯರ ಆಸ್ತಿಯ ಮೇಲೆ ಉತ್ಪನ್ನದಕರವನ್ನು (ಇನ್‌ಕಮ್ ಟ್ಯಾಕ್ಸ) ಕೂಡಿಸಬಾರದಾಗಿ ಗೊತ್ತಾಗಿದೆ.

ಮೈಸೂರ ಅರಮನೆಯ ಗಾಯನ ವಾದನ ಪಟುಗಳಾದ ಶ್ರೀಯುತ ನಾರಾಯಣರಾವ, ಪದ್ಮನಾಭರಾವ, ಮತ್ತು ಭಗವತೀಶ್ವರ ಈ ಮೂವರು ಮುಂಬೈಗೆ ಹೋಗಿದ್ದು, ಅಲ್ಲಿಯ ರಸಿಕರಲ್ಲಿ ತಮ್ಮ ಪ್ರಾವಿಣ್ಯವನ್ನು ತೋರಿಸಿ, ಮನ್ನಣೆಯನ್ನು ಹೊಂದುತ್ತಲಿದ್ದಾರೆ.

ಕೊಡಗು ಕರ್ನಾಟಕ

ಬೇಗೂರು ಮಡಿಕೇರಿಗೆ ಸಮೀಪವಾಗಿದ್ದರೂ, ಅಲ್ಲಿ ದನಗಳ ಕಾಯಿಲೆಯು ಅತಿಶಯವಾಗಿದ್ದರೂ, ದನಗಳ ಡಾಕ್ಟರರು ಅಲ್ಲಿಗೆ ಹೋಗಲಿಲ್ಲವಂತೆ, ದನಗಳು ತೀರಿಹೋದ್ದರಿಂದ ಬಾಲಕರಿಗೆ ಸಹ ಹಾಲು ದೊರೆಯದಂತಾಗಿದೆ!

ಯಾಲಕ್ಕಿಯ ಬೆಲೆ ಬಹಳೇ ಕಡಿಮೆ ಯಾಗಿದೆ. ಮಣಕ್ಕೆ ೪೦ ರಿಂದ ೫೦ ರ ಒಳಗೆ ಇದೆ. ಕಾಫಿಯ ಬೆಲೆಯೂ ಇಳಿದಿದೆ. ವ್ಯಾಪಾರಸ್ಥರಿಗೆ ಈ ವರ್ಷ ನಷ್ಟವೇ ಸರಿ.

ಹಿಂದುಸ್ಥಾನ

ಮಹಾತ್ಮಾ ಗಾಂಧಿಯವರಿಗೆ ಗುಜರಾಥ ಪ್ರಾಂತಿಕ ಕಾಂಗ್ರೆಸ ಕಮೀಟಿಯವರು ೩ ಲಕ್ಷ ರೂ. ಗಳನ್ನು ಕಾಣಿಕೆಯಾಗಿ ಕೊಡಬೇಕೆಂದಿದ್ದಾರೆ ಅಹಮದಾಬಾದದ ಮಹಾತ್ಮಾ ಗಾಂಧೀಯವರ ತೂಕವು ೯೮ ಪೌಂಡು ಹೆಚ್ಚಾಗಿದೆ.

ಈ ೯೦ ವರುಷ ಗಿಡಗಳ ಬೆಳೆಯು ಚೆನ್ನಾಗಿಲ್ಲವಾದ್ದರಿಂದ ಸ್ಟೀಲಿನ ಗಳ ಬೆಲೆಯು ವಿಶೇಷವಾಗಿ ಹೆಚ್ಚಾಗ ಬಹುದು- ಚಹ ಕುಡಿಯುವವರು—ಅವರಲ್ಲಿಯೂ ಬಡವರು ಎಚ್ಚರಾಗಿರಲಿ!

ಪರದೇಶ

ಸರಕಾರವನ್ನು ಕಿತ್ತಿ ಹಾಕಲು ಕ್ರಾಂತಿಕಾರಕ ಸಭೆಯೊಂದು ಅವಶ್ಯವಾಗಿದೆಂಬದಾಗಿ ೨೯ ನೇ ನವಂಬರದಲ್ಲಿ ಚೀನದ ವಿದ್ಯಾರ್ಥಿಗಳು ಒಂದೆಡೆಗೆ ಸೇರಿ ವಿಚಾರಮಾಡಿದರು, ತಮ್ಮ ಮತದ ವಿರೋಧಿಯಾಗಿದ್ದ 'ಚೀನಪಾವೊ' ಎಂಬ ವರ್ತಮಾನ ಪತ್ರದ ಕಾರ್ಯಾಲಯಕ್ಕೆ ಬೆಂಕಿಯನ್ನು ತಗಲಿಸಿದರು ಈ ವಿದ್ಯಾರ್ಥಿಗಳನ್ನು ಪೋಲೀಸರು ಬಂಧಿಸಿದ್ದಾರೆ.

ರೇಲವೇ ಬೋರ್ಡಿನ ಸುದ್ದಿ

ಈ ತಿಂಗಳ ಕೊನೆಯೊಳಗಾಗಿ ಅರ್ಜಿಗಳೆಲ್ಲ ನಮ್ಮ ಕೈಸೇರಬೇಕು. ಇಲ್ಲವಾದರೆ ಅವು ಏನೂ ಉಪಯೋಗವಾಗವು. ಈ ವಾರದಲ್ಲಿ ಬಂದ ಅರ್ಜಿಗಳು:— ವಿ. ಗೋವಿಂದ ಸ್ವಾಮಿ ಅಯ್ಯರ ತಗಡೂರ ತಾ॥ ನಂಜನಗೂಡ್ಡ=೪೮; ಗಣೇಶ ಮಹದೇವ ಹೆಗಡೇಕಟ್ಟಿ ಕರ್ನಾಟಕ ಕಾಲೇಜ ಧಾರವಾಡ=೩೦; ಶ್ರೀ. ನ. ತಲವಾಯ ಕನ್ನಡ ಶಾಳಾ ಮಾಸ್ತರ ಶಿವಳ್ಳಿ ತಾ॥ ಧಾರವಾಡ=೪೦; ಸುಬ್ರಾಯ ಕೊಳಾ ಪಟೇಲರು ಕಾರ್ಯದರ್ಶಿ ಶಾಂತಿಗೋಡ ಸಹಕಾರ ಸಂಘ =೬೬ ಪುತ್ತೂರು ೧೯೪

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ
ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೫ ನೇ ಇಸ್ವಿಯ ಜುಲೈ ೩೧ ನೇ ತಾ|| ದಿನ ಸಾಯಂಕಾಲದ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟೀ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ. ಬಸವಾರಾಧ್ಯ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ೧೦೦೦-ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೧೧೬೦೨ ಶ್ರೀ. ಆರ್. ಜಿ. ಹುಕ್ಕೇರಿ. ಬುಕ್ಕಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೫೪೫ ಶ್ರೀ. ಧೀರಜರಾಮ ನಾರಭಿರಾಮ ನಾಯಿಕ ಕಂಪಾವುಂಡರ, ಆಟಪಾಡ ದವಾಖಾನೆ ವಾಯು, ನಯಾಸ. ಬಿಬಿ. ಸಿ. ಆಯ ರೇಲ್ವೇ ಸುರತ (ಬಡೋದಾ ಏಜನ್ಸಿ)

(೩) ಬಾಂಡ ನಂ. ೧೧೨೬೬ ಶ್ರೀ. ಶ್ರೀರಾಮಮೂರ್ತಿ ಆರಾಧ್ಯಲು ರಾಮಚಂದ್ರರಾವ ಗುರು ಪೀಠ ಪುರು ಗೋದಾವರಿ ಜಿಲ್ಲಾ.

(೪) ಬಾಂಡ ನಂ. ೧೬೬ ಶ್ರೀ. ನಂದಗಿರಿ ವೆಂಕಟರಾಮ ದಾಸ ಪ್ರೊಪ್ರಾಯಿಟರ ಮುಕುಂದ ಪುರ. ಕಾಕಿನಾಡು

(೫) ಬಾಂಡ ನಂ. ೪೩೮ ಶ್ರೀ. ಆರ್. ವೆಂಕಟಯ್ಯಾ ಗುರು ಇನಾಮದಾರ ಭೋಪಯ್ಯಾ ಅಗ್ರಹಾರ ಅಮಳ ಪುರಮ್.

೧-೮-೩೫ } **ಬಿ. ಎನ್. ಆರಾಧ್ಯ** ಚೀಫ ಏಜಂಟ ಹುಬ್ಬಳ್ಳಿ

FOR SAFETY AND GOOD SERVICE

IN

LIFE ASSURANCE

GO TO

THE ORIENTAL

IN AGE SIZE AND STRENGTH

THE

GREATEST INDIAN

LIFE ASSURANCE COMPANY

Apply for full particulars to-

N. K. Kulkarni. Agent Bagalkot

ಶ್ರೀ. ನಾರಾಯಣರಾವ ಕೃ. ಹುಯಿಲಗೋಳ

ಬಿ. ಎ. ಎಲ್. ಎಲ್. ಬಿ. ಗದಗ ಇವರಿಂದ

ರಚಿತವಾದ ಸಚಿತ್ರ ಸಂಗೀತ ನಾಟಕಗಳು

ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ

ಬಹುಮಾನ ಪಡೆದ

ಸ್ತ್ರೀಧರ್ಮರಹಸ್ಯ ಬೆಲೆ ೧ ರೂ.

ಶಿಕ್ಷಣಸಂಭ್ರಮ ಬೆಲೆ ೧ ರೂ.

ಅಂಚೆವೆಚ್ಚಬೇರೆ

ವಿಳಾಸ:— ನಾರಾಯಣರಾವ, ಕೃಷ್ಣರಾವ, ಹುಯಿಲಗೋಳ ಬಿ. ಎ. ಎಲ್. ಎಲ್. ಬಿ. ಪ್ಲೀ. ತಾ|| ಗದಗ

ಆರೋಗ್ಯಚಂದ್ರಿಕೆ.

ಮದ್ರಾಸ ಸಂಪಾದಕರು:- ಡಾಕ್ಟರ ಯು ರಾಮರಾವ,

ಎಮ್. ಎಲ್. ಸಿ. ಯವರು

ಆರೋಗ್ಯಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ' ಎಂಬ ಇಂಗ್ಲಿಷ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾವೊಬಲಗು ವರ್ಷಕ್ಕೆ ೧-೮-೦ ಬಿಡಿಪತ್ರಿಕೆ ಒಂದಕ್ಕೆ ೦-೨-೦ ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರ- '**ಆರೋಗ್ಯಚಂದ್ರಿಕೆ**'

೩೨೩, ತಂಬುಶೆಟ್ಟಿಬೀದಿ, ಮದ್ರಾಸ

ಜಾಹೀರ ನಾಮೆ

ಮುಂಬೈಯಿ ಡಿಸ್ಟ್ರಿಕ್ಟ ಮುನಸಿಪಾಲ್ಟಿ ಆಕ್ಟ ೧೯೦೧ ನೇ ೧೮ (೧) ನೇ ಕಲಮ್ನದ ಕ್ಲಾಜ (ಅ) ಮತ್ತು (ಬ) ಗಳ ಪ್ರಾವಿಜನ್ನದ ಪ್ರಕಾರ ಮುಂಬಯಿ ಸರಕಾರದವರು ಜನರಲ್ ಡಿಪಾರ್ಟಮೆಂಟ ನೋಟಿಫಿಕೇಶನ್ನ ನಂಬರ ೧೬೦೧- ತಾ|| ೧-೩-೧೯೧೩ ನೇದ್ದರಿಂದಾ ಸ್ಥಾಪಿಸಲ್ಪಟ್ಟ ಹುನಗುಂದ ನೋಟಿಫಾಯಿಡ ಏರಿಯಾ ಕಮಿಟಿಗೆ ಡಿಸ್ಟ್ರಿಕ್ಟ ಮುನಸಿಪಾಲ್ಟಿ ಆಕ್ಟಿನ ಕಲ್ಮ ೪೧, ೪೨, ೮೨, ೮೩, ೮೪, ೮೫, ೮೬, ೮೮, ೯೨, ೧೦೦, ೧೧೯, ಮತ್ತು ೧೬೦, ಲಾಗು ಮಾಡುನವರಿದ್ದಾರೆ

ಈ ಲಾಗೂ ಮಾಡುವವ್ಯದ್ದೇಶಕ್ಕೆ ಯಾರದಾದರೂ ತಕರಾರ ಇದ್ದರೆ ಈ ಜಾಹೀರ ನಾಮೆ ತಾರೀಖಿನಿಂದಾ ೨ ತಿಂಗಳಲ್ಲಿ ಕಾರಣ ಸಹಿತಾ ಮೆ|| ಕಲೇಕ್ಟರ ಸಾ|| ಬಾ|| ಜಿಲ್ಲಾ ವಿಜಾಪೂರ ಇವರ ಕಡೆಗೆ ಲೇಖಿ ಅರ್ಜಿ ಮಾಡತಕ್ಕದ್ದು. ತಿಳಿಯೋದು.

ವಿಜಾಪೂರ ೭-೧೨-೧೯೩೫ } Sd| V. H. Naik. **ಕಲೇಕ್ಟರ**

FOR SALE.

A new Remington Portable, bought only a month ago, in perfect working order, is for Sale. For terms please consult Typist, C|o Kannadiga. Bagalkot.)

ಸಾಣೇಕಲ್ಲುಗಳು

ಸಣ ದೊಡ್ಡ ಸಾಣೇ ಕಲ್ಲುಗಳು ನಮ್ಮ ಕಡೆಗೆ ದೊರೆಯುತ್ತವೆ ಮುಂಗಡ ಹಣವಿಲ್ಲದಆರ್ಡರುಗಳ ಕಡೆಗೆ ಲಕ್ಷ್ಯಕೊಡಲಾಗುವದಿಲ್ಲ. ವಿಶೇಷಸಂಗತಿಗಾಗಿ ಕೆಳಗಿನ ವಿಳಾಸಕ್ಕೆ ಬರೆದು ಕೇಳಿರಿ.

ನೃಸಿಂಹ ಏಜನ್ಸಿ

ಬಾಗಲಕೋಟೆ (Dist. Bijapur.)

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ, ೬. ೧೯೪೭ ವಾ. ಚಂದಾ ೧—೧೪—೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ನವಾವಿಷ್ಟವಾಗಿದೆ)

ಯದ್ಯತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಮ್ ॥ — ಮನು

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ಪುಷ್ಯ ಶುದ್ಧ ೧೦ ಶಕೆ ೧೮೪೭. ತಾ॥ ೨೫-೧೨-೧೯೨೫. | ಸಂಚಿಕೆ ೩೭

ಸಂಪಾದಕನ ಭೂಮಿ.

(*)

ನನ್ನ ಮನಸಿನ ಮೇಣವಾಗಿ ಕಟ್ಟುವೆನಾನು ।
ನಿನ್ನ ವೆಸನವ ಮಾಡಿದಂಥ ಮಕ್ಕಳ ದೊಮ್ಮ!
ಚಿನ್ನದಾದರು ಚಿನ್ನ ಮೇಣಬತ್ತಿಯು ನೊಂದು ॥
ಚಿನ್ನಯಾಕಾಶದಲ್ಲಿ ॥

ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಕೀರಬಹ ।
ಗಂಧವಹವೆಂದು ತಿಳಿಯೆ ॥

—ಅಂಬಿಕಾತನಯ ದತ್ತ

ಕರ್ನಾಟಕ ಮತ್ತು ಮಹಾರಾಷ್ಟ್ರ ವೆಂಬ ವಿಷಯವು ಕಿರ್ಲೋಸ್ಕರ ವಾರ್ತೆಯಲ್ಲಿ ಈ ಸಲವೂ ಪ್ರಸಿದ್ಧವಾಗಿದೆ. ಇದೇ ಪ್ರಕಾರವಾಗಿ ಮಹಾರಾಷ್ಟ್ರದಲ್ಲಿಯ ಸುಪ್ರಸಿದ್ಧ ಜನರ ಅಭಿಪ್ರಾಯಗಳನ್ನೆಲ್ಲ ಕಿರ್ಲೋಸ್ಕರವಾರ್ತೆಯವರು ಕ್ರಮವಾಗಿ ಪ್ರಕಟಿಸುತ್ತ ಹೋದರೆ ಒಳಿತಾಗುವದು. ಶ್ರೀ. ಆಪಟೇಯವರ ಮತವನ್ನು 'ಕನ್ನಡಿಗ'ನ ವಾಚಕರು ಬಲ್ಲರು. ಈ ಸಲ ಶ್ರೀ ಗಣೇಶ ದಾಮೋದರ ಖರೆ ಎಂಬುವವರ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಡಬೇಕಾಗಿದೆ. ಅವರು ಅನ್ನುವದೇನಂದರೆ:— " ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಅಂತಃಕರಣದಲ್ಲಿ ನಿಜವಾದ ಕೂಡುವಿಕೆಯು ಆಗಲೊಲ್ಲದು. ಇದಕ್ಕೆ ಪರಸ್ಪರರಲ್ಲಿ ಒಬ್ಬರಿಗೊಬ್ಬರ ಬಗ್ಗೆ ವಿಶ್ವಾಸವಿರದಿರೋಣವೇ ಕಾರಣವು. ಉಭಯರು ಒಬ್ಬರನ್ನೊಬ್ಬರು ಸಾಶಂಕ ದೃಷ್ಟಿಯಿಂದಲೇ ನೋಡುವರು. ಈ ಸ್ಥಿತಿಯು ಯೋಗ್ಯವೆಂದು ಯಾರನ್ನುವರು?" ಕರ್ನಾಟಕವು ಮಹಾರಾಷ್ಟ್ರದಲ್ಲಿ ಸಂಪೂರ್ಣವಾದ ವಿಶ್ವಾಸವನ್ನಿಟ್ಟು, ತಾನು ಗುರುವಾಗಿದ್ದರೂ ಮಹಾರಾಷ್ಟ್ರದ ಶಿಷ್ಯತ್ವವನ್ನು ಸಹ ವಹಿಸಿ, ಈಗ್ಗೆ ೨೦-೩೦ ವರ್ಷಗಳಿಂದ, ತನ್ನ ಶಿಂಗಿಗೆ ಆದರ ಬುದ್ಧಿಯನ್ನು ತೋರ್ಪಡಿಸಿತು. ಅಂತೆಯೇ, ಮಹಾರಾಷ್ಟ್ರದ ವಾಙ್ಮಯ, ವಿದ್ಯಾವಿಷಯಕ ಸಂಸ್ಥೆ, ಔದ್ಯೋಗಿಕ ಫಂಡು ರಾಜಕೀಯ ಸಮಿತಿಗಳೆಲ್ಲ ಕರ್ನಾಟಕದ ಹಣದಿಂದಲೂ, ಮಿದುಳಿನಿಂದಲೂ, ರಕ್ತದಿಂದಲೂ, ಪುಷ್ಟಿಹೊಂದಿದವು. ಈ ಉದಾರ ಬುದ್ಧಿಗೆ ತಕ್ಕದ್ದಾದ ಮನ್ನಣೆಯನ್ನೀಯದೇ ಮಹಾರಾಷ್ಟ್ರವು ಕರ್ನಾಟಕದಲ್ಲಿ ತನ್ನ ಪ್ರಸ್ತವನ್ನು ಬೆಳೆಸಿತು. ಕನ್ನಡ ನುಡಿಗೆ ಅಸತ್ಯಕರವಾದ ಹೆಸರನ್ನಿಟ್ಟಿತು. ಕನ್ನಡಿಗರನ್ನು 'ಕಾನಡಿ ಆಪಾ' ಎಂಬದಾಗಿ ಉಪಹಾಸ ಮಾಡಿತು; ಕನ್ನಡ ಶಾಲೆಗಳ ಬದಲಾಗಿ ಮರಾಟೀ ಶಾಲೆಗಳನ್ನೇ ಕರ್ನಾಟಕದಲ್ಲಿ ಹೆಚ್ಚಿಸಿತು, ಈಗಂತೂ ಕನ್ನಡಿಗರು ಕನ್ನಡನಾಡಿನಲ್ಲಿ ಸಹ ಕನ್ನಡದಲ್ಲಿ ಮಾತನಾಡಬಾರದು. ಮರಾಟಿಯಲ್ಲಿಯೇ ಮಾತನಾಡಬೇಕು, ಯಾವನಾದರೊಬ್ಬ ಮರಾಟಿಗನು—ಅವನು ೨೦-೩೦ ವರ್ಷಗಳವರೆಗೂ ಕನ್ನಡನಾಡಿನಲ್ಲಿದ್ದು, ಇಲ್ಲಿಯ ಉಪ್ಪನ್ನುಂಡು, ಅಕ್ಕರತೆಯಿಂದ ಇಲ್ಲಿ ಮೆರೆಯುತ್ತ, ಕನ್ನಡವನ್ನು ಬಲ್ಲವನಾಗಿದ್ದರೂ ಸಹ ಅವನು—— ಭೆಟ್ಟಿಯಾದರೆ, ಕನ್ನಡಿಗರ ಸಂಗಡ ಆ ಮಹಾಶಯನು ಕನ್ನಡದಲ್ಲಿ ಮಾತನಾಡಬಾರದಂತೆ! ಆದರೆ ಕನ್ನಡಿಗರೇ ಅವನ ಸಂಗಡ ಮರಾಟಿಯಲ್ಲಿ ಮಾತನಾಡಬೇಕಂತೆ! ಇಲ್ಲವಾದರೆ ಮರಾಟಿಯ ವೈರಿ ಎಂಬ ಪದವಿಯು ಕನ್ನಡಿಗನಿಗೆ ಸಿದ್ಧ! ಇಂತಹ ಸೊಕ್ಕಿನ ಬಿರುದುಗಳನ್ನು ಈ ವರೆಗೂ ಮರಾಟರು ಬಿಡಲೊಲ್ಲರು! ಅಲ್ಲದೇ ಕನ್ನಡದ ಭಾಗವಾದ ಉತ್ತರ ಕರ್ನಾಟಕ ಸಂಸ್ಥಾನಗಳನ್ನು—— ಇವಕ್ಕೆ ಉತ್ತರ ಕರ್ನಾಟಕ ಸಂಸ್ಥಾನಗಳೆಂದರೆ ಅಪರಾಧವಾಗುವದಂತೆ! ಅಲ್ಲಿ ನೂರಕ್ಕೆ ೯೯ ಜನರು ಕನ್ನಡಿಗರಿದ್ದರೂ, ಅವಕ್ಕೆಲ್ಲ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳೆಂದೆನ್ನಬೇಕಂತೆ! —— ಮಹಾರಾಷ್ಟ್ರ ವಿದ್ಯಾಲಯಕ್ಕೆ ಎಳೆದು ಆ ಭಾಗವನ್ನು ನುಂಗಿ ಬಿಡಬೇಕೆಂಬ ಕಲ್ಪನೆಯೂ ತಳವೂರಿದೆ. ಇಂತಹ ಅನಾದರಣೀಯವಾದ ಬುದ್ಧಿಮತ್ತೆಯುಳ್ಳ ಮಹಾರಾಷ್ಟ್ರದ ಹೃದಯವನ್ನು ಅನುಭವದಿಂದ ತಿಳಿದುಕೊಂಡು, ಕರ್ನಾಟಕವು ಎಚ್ಚತ್ತು, ಮಹಾರಾಷ್ಟ್ರದ ಮೇಲೆ ಅವಲಂಬಿಸದೇ ತನ್ನ ಉನ್ನತಿಯ ಮಾರ್ಗವನ್ನು ತಾನು ಈಗ್ಗೆ ಅನುಸರಿಸ ಹತ್ತಿದರೆ, ಇದು ನೋಡಿ! ಶ್ರೀ. ಖರೇಯವರು ಸಾಶಂಕ ದೃಷ್ಟಿಯ ಆರೋಪವನ್ನು ಕರ್ನಾಟಕಕ್ಕೆ ಕೊಡುವರು. ಇದು ಶುದ್ಧವಾಗಿಯೂ ತಪ್ಪು. ಮಹಾರಾಷ್ಟ್ರವೇ ಕರ್ನಾಟಕದ ಸಾತ್ವಿಕವಾದ ಈ ಕರ್ನಾಟಕತ್ವದ ಚಳವಳವನ್ನು ಕಂಡು ಹಿಡಿಯದೇ ಇದ್ದದ್ದು ಅದರ ಅಪರಾಧವು. ತನ್ನಲ್ಲಿ ತಪ್ಪನ್ನಿಟ್ಟುಕೊಂಡು ಅನ್ಯಥಾ ಎರಡನೇಯವರ ಮೇಲೆ ಹರಿಹಾಯುವದೇಕೆ?

ಬಂಗಾಲ ಮತ್ತು ಮಹಾರಾಷ್ಟ್ರಗಳ ನಡುವೆ ಪರಸ್ಪರರಲ್ಲಿ ಪ್ರೀತಿಯ ಮತ್ತು ಆದರದ ಭಾವನೆಗಳಿವೆಯಂತೆ. ಈ ಎರಡೂ ಪ್ರಾಂತಗಳಲ್ಲಿ ಪರಸ್ಪರರ ವಾಙ್ಮಯವನ್ನು ಪರಿಚಯ ಮಾಡಿಕೊಳ್ಳುವ ಲಾಲಸೆಯು ಹೆಚ್ಚುತ್ತಲಿರುವದೇ ಇದಕ್ಕೆ ಕಾರಣವಂತೆ. ಆದರೆ ಕರ್ನಾಟಕ ಮಹಾರಾಷ್ಟ್ರಗಳು ಪರಸ್ಪರರ ವಾಙ್ಮಯವನ್ನು ಪರಿಚಯ ಮಾಡಿಕೊಳ್ಳದೇ, ಉದಾಸೀನವೃತ್ತಿಯಿಂದ ಒಬ್ಬರು ಇನ್ನೊಬ್ಬರ ವಾಙ್ಮಯವನ್ನು ನೋಡದೇ ಹಳಿಯುವರಂತೆ! ಶ್ರೀ ಖರೇಯವರ ಅಭಿಪ್ರಾಯವಿದು. ಇವರಿಗೆ ವಸ್ತುಸ್ಥಿತಿಯೇ ಗೊತ್ತಿಲ್ಲದನ್ನು ಕಂಡು ನಮಗೆ ಕನಿಕರ ಬರುತ್ತದೆ. ಕೆಲಜನ ಬಂಗಾಲರು ಮಹಾರಾಷ್

ವಾಙ್ಮಯವದ ಪರಿಚಯ ಮಾಡಿಕೊಂಡಿರ ಬಹುದು ಮಾತ್ರ! ಆದರೆ ಕನ್ನಡಿಗರಲ್ಲನೇಕರು ಮಹಾರಾಷ್ಟ್ರದ ವಾಙ್ಮಯ ಸೇವೆಯಲ್ಲಿ ಮೇಲು ಪಂಕ್ತಿಯನ್ನು ಹೊಂದಿರುವರು! ಕನ್ನಡಿಗರು ಮಹಾರಾಷ್ಟ್ರ ವಾಙ್ಮಯಕ್ಕೆ ವಿಪುಲವಾದ ಧನ ಸಹಾಯಮಾಡಿರುವಂತೆ ಬಂಗಾಲರು ಮಾಡಿರುವರೋ? ಮಹಾರಾಷ್ಟ್ರದ ಗ್ರಂಥಾಲಯವು ಉತ್ತರ ಕರ್ನಾಟಕದ ಪ್ರತಿಯೊಂದು ವಾಚನಾಲಯದಲ್ಲಿಯೂ, ಪ್ರತಿಯೊಂದು ಮನೆಯಲ್ಲಿಯೂ ಇದ್ದೇ ಇದೆ. ಆದರೆ ಮಹಾರಾಷ್ಟ್ರವು ಒಂದಾದರೂ ಕನ್ನಡ ಗ್ರಂಥವನ್ನು ತನ್ನ ಪ್ರಾಂತದಲ್ಲಿ ಆದರದಿಂದ ಬರಕೊಂಡಿರುವದೋ? ಕನ್ನಡದ ಪ್ರತಿಯೊಂದು ಪಟ್ಟಣದಲ್ಲಿ ಮರಾಟಿಯ ಶಾಲೆಯನ್ನಿಡುವ ಉದಾರ ಅಂತ:ಕರಣವು ಕರ್ನಾಟಕದಲ್ಲಿದೆ. ಆದರೆ ಮುಂಬೈ ಪುಣೆಗಳಲ್ಲಿ ಅನೇಕ ಜನ ಕನ್ನಡಿಗರಿದ್ದರೂ, ಅವರಿಗಾಗಿ ಮಹಾರಾಷ್ಟ್ರವು ಕನ್ನಡ ಶಾಲೆಗಳನ್ನು ತೆರೆದಿರುವದೋ? ಈ ಸಂಗತಿಯನ್ನು ಕಣ್ಣಾರೆ ಕಂಡರೂ, ಕುರುಡರಂತೆ ಶ್ರೀ ಖರೇಯವರು ನಟಿಸುವದೇಕೆ? ಕರ್ನಾಟಕವು ಅನೇಕ ವರ್ಷಗಳಿಂದ ಮಹಾರಾಷ್ಟ್ರ ವಾಙ್ಮಯದ ವಿಕಾಸಕ್ಕೆ ಕಾರಣೀಭೂತವಾದಾಗ್ಯೂ ಅದು ಮರಾಟರಿಗೆ ಕಾಣುವದಿಲ್ಲ. ಆದರೆ ನಾಲ್ಕು ಜನ ಬಂಗಾಲರು ಈಗೀಗ ಮರಾಟಿಯನ್ನು ಕಲಿತರೆ ಕನ್ನಡಿಗರಿಗಿಂತ ಅವರು ಶ್ರೇಷ್ಠರಾದರು! ಕನ್ನಡಿಗರು ಮರಾಟಿಗರ ವಾಙ್ಮಯ, ದೇಶ, ಕಲೆ ಮೊದಲಾದ ಪ್ರತಿಯೊಂದು ವಿಷಯದಲ್ಲಿಯೂ ಸಂಪೂರ್ಣವಾಗಿ ಸಹಾಯವನ್ನಿತ್ತಿದ್ದರೂ ಕರ್ನಾಟಕಕ್ಕೆ ಸಾಶಂಕ ವೃತ್ತಿಯ ಆರೋಪವು! ಆದರೆ ಮಹಾರಾಷ್ಟ್ರವು ಒಂದೇ ಸಮನೇ ಕನ್ನಡಿಗರ ಉಪಹಾಸವನ್ನೂ, ಕರ್ನಾಟಕಕ್ಕೆ ಬೇಕಂತೇ ಹಾನಿಯನ್ನೂ ಮಾಡುತ್ತಲಿದ್ದರೂ, ಅದಕ್ಕೆ ಏನೂ ಕಾಣುವದಿಲ್ಲ! ಶ್ರೀ ಖರೇಯವರಂತಹ ಮರಾಟರು ಈಗಲಾದರೂ ಕಣ್ತೆರೆಯಲಿ!

ಕನ್ನಡ ಗ್ರಂಥಗಳ ಬೆಳವಣಿಗೆಯು ಎಷ್ಟೆಂಬುದು ಮುಂಬೈ ಸರಕಾರದಿಂದ ಪ್ರಸಿದ್ಧವಾದ ತ್ರೈಮಾಸಿಕ ಗ್ರಂಥಗಳ ಯಾದಿಯಿಂದ ಗೊತ್ತಾಗುವದು. ಈ ತ್ರೈಮಾಸಿಕ ಅವಧಿಯಲ್ಲಿ ಒಟ್ಟಿಗೆ ಎಲ್ಲ ಭಾಷೆಗಳಲ್ಲಿಯೂ ೬೫೧ ಗ್ರಂಥಗಳು ಮುಂಬೈ ಇಲಾಖೆಯಲ್ಲಿ ಪ್ರಸಿದ್ಧವಾಗಿವೆ. ಅವುಗಳಲ್ಲಿ ೧೩ ಗ್ರಂಥಗಳು ಕನ್ನಡದವಿಲ್ಲ! ಈ ಗ್ರಂಥಗಳೆಂದರೆ 'ಲಂಕಾದಹನ' 'ಪದ್ಯಾವಳಿ' ಬೆಲೆ-೨-ಆಣೆ 'ಶಿವಪೂಜಾವಿಧಿ' ಬೆಲೆ-೨-ಆಣೆ: 'ಕರ್ನಾಟಕ ಮೊದಲನೇ ಪೋಹರ' ಬೆಲೆ-೧-ಆಣೆ 'ಭೂಗೋಲ ಸಂಗ್ರಹ' ಬೆಲೆ-೮-ಆಣೆ ಇವೇ ಮೊದಲಾದವುಗಳು. ಕನ್ನಡಿಗರಿಗೆ ಇದು ನಿಜವಾಗಿಯೂ ನಾಚಿಕೆ ತರುವಂತಹದು. ಕನ್ನಡದಲ್ಲಿ ಗ್ರಂಥಕಾರರಿಲ್ಲೆನ್ನುವ ಹಾಗಿಲ್ಲ. ಆದರೆ ಪ್ರಸಿದ್ಧವಾದ ಗ್ರಂಥಗಳೇ ಮೂಲೆಗುಂಪಾಗಿ ಬಿದ್ದಿವೆ ಕಿಂಚಿತ್ತಾದರೂ ಈ ವ್ಯವಸಾಯದಲ್ಲಿ ಜನರಿಂದ ಪ್ರೋತ್ಸಾಹನವಿಲ್ಲ. ಗ್ರಂಥಕಾರನು ಎಂತಹ ಯೋಗ್ಯತೆಯವನಿದ್ದರೂ, ಕನ್ನಡದಲ್ಲಿ ಗ್ರಂಥಗಳನ್ನು ಬರೆಯ ಬೇಕಾದರೆ ಧೈರ್ಯ ಗುಂದುವನು. ಇಲ್ಲಿ ನೋಡಿ!! ವೈಕುಂಠವಾಸೀ ವಾಸುದೇವಾಚಾರ್ಯ ಕೆರೂರರವರನ್ನು ಹೊಗಳದೇ ಇದ್ದ ಕನ್ನಡಿಗನಿಲ್ಲ. ಅವರ ಭಾಷಾಶೈಲಿಯನ್ನೂ, ಸಂವಿಧಾನಕ ರಚನೆಯನ್ನೂ, ಜನರು, ಒಂದು ನಾಲಿಗೆಯು ನೂರಾಗದಂತೆ ಪ್ರಶಂಸಿಸುವದು. ಆದರೆ ಅವರ 'ವಸಂತಯಾಮಿನೀ ಸ್ವಪ್ನ ಚಮತ್ಕಾರ ನಾಟಕವು ಪ್ರಸಿದ್ಧವಾಗಿ ಎಷ್ಟು ದಿನಗಳಾದವು? ಅವುಗಳನ್ನು ಕೊಂಡವರೆಷ್ಟು ಜನ? ನಾಲಿಗೆಯನ್ನು ಸಡಿಲು ಬಿಟ್ಟಂತೆ ದುಡ್ಡಿನ ಕೈಯನ್ನು ಸಡಿಲಿಸಲಿಕ್ಕೆ ಸುಶಿಕ್ಷಿತರೆಂದು ಹೇಳಿಕೊಳ್ಳುವವರು ಸಹ ಒಲ್ಲರು ಪ್ರಸಂಗ ಬಂದಾಗ ಕನ್ನಡದಲ್ಲಿ ಗ್ರಂಥ ಭಾಂಡಾರವಿಲ್ಲ. ಗ್ರಂಥಕಾರರು ಹುಟ್ಟಲೊಲ್ಲರು; ಕನ್ನಡಿಗರಲ್ಲಿ ಅಭಿಮಾನವಿಲ್ಲ; ಮುಂದಾಗಿ ಕುಹಕದ ಮಾತು ಕ.ಳಿತು ಟೀಕಾರಾಯರ ಕೆಲಸವನ್ನು ಮಾಡಲು ಹುರಿದುಂಬುತ್ತಾರೆ. ಆದರೆ ಕೃತಿಯಲ್ಲಿ ಕಾಣಿಸಲು ಒಲ್ಲರು. ಇದು ಈಗಿನ ಕನ್ನಡಿಗರ ಸ್ಥಿತಿ; ಈಗಿನ ಕರ್ನಾಟಕದ ಜಾಗ್ರತಿಯ ಚಿನ್ಹವು!

ಕನ್ನಡ ಮಾಸಿಕ ಪುಸ್ತಕಗಳ ಬಗ್ಗೆ ಮುಂಬೈ ಸರಕಾರದವರು ಆಪೋ ಯಾದಿಯಲ್ಲಿ ಉಲ್ಲೇಖಿಸಿದ್ದನ್ನು ಕಂಡು ನಗೆ ಬರುತ್ತದೆ. ಮುಂಬೈ ಕರ್ನಾಟಕದಲ್ಲಿ ಹೊರಡುವ ಮಾಸ ಪತ್ರಿಕೆಗಳೆಂದರೆ 'ಪ್ರಬೋಧ' ಮತ್ತು 'ಸದ್ಬೋಧ ಚಂದ್ರಿಕೆ' ಇವೆರಡೇ ಎಂದು ಕಾಣಿಸಿದ್ದಾರೆ. 'ಜಯ ಕರ್ನಾಟಕ' 'ವಾಗ್ಭೂಷಣ' ಗಳನ್ನು ಸಹ ಮರೆತದ್ದು ನಗಣೆಯಲ್ಲಿ ಕೋಣನನ್ನು ಮರೆತಂತೆಯೇ ಸರಿ. ಮುಂಬೈ ಕರ್ನಾಟಕದಲ್ಲಿ ಇನ್ನೂ ಅನೇಕ ಮಾಸಿಕಗಳಿವೆ. ಆದರೆ ಅವು ಸರಕಾರಕ್ಕೆ ಕಂಡಿಲ್ಲ. ಪುಣೆಯ 'ಕಾಲೇಜ' ಗಳಲ್ಲಿ ಹೊರಡುವ ತ್ರೈಮಾಸಿಕಗಳೂ ಅಲ್ಲಿಯ ಒಕ್ಕಲತನದ ಸಂಘದಿಂದ ಪ್ರಸಿದ್ಧವಾಗುವ ಮಾಸಿಕವೂ ಸರಕಾರದ ಲಕ್ಷ್ಯದಲ್ಲಿದೆ. ಆದರೆ ಧಾರವಾಡದ ಕಾಲೇಜಗಳಲ್ಲಿಯ ಪತ್ರಿಕೆಗಳೂ ಒಕ್ಕಲಿಗರೂ, ಒಕ್ಕಲತನವೂ, ಸರಕಾರದ ಕಣ್ಣಿಗೆ ಕಾಣಿಸದು. ಇದೆಂತಹ ಒಳಗಿನ ಸುವ್ಯವಸ್ಥೆಯೋ ನಾವು ಕಾಣೆವು!

ಸ್ವೀಕಾರ

ಶ್ರೀ ಶಾ.ಶ್ರಾ ವಿದ್ವಾನ್ ಶೇಷಶಾಸ್ತ್ರಿಗಳ ಸಂಪಾದಕತ್ವದಲ್ಲಿ ಹೊರಡುವ ಸಂಸ್ಕೃತ ಪಾಕ್ಷಿಕ ಪತ್ರವು. ಶ್ರೀ ಶೃಂಗೇರಿ ಮಠಾಧೀಶರು, 'ಧನ್ವಂತರಿ' ಮುಖಾಂತರವಾಗಿ ಕರ್ನಾಟಕಸ್ಥರಿಗೆ ಈ ಮೊದಲೇ ಪರಿಚಿತರಾಗಿರುವರು ಅವರೇ ಈ ಸಂಸ್ಕೃತ ಪತ್ರದ ಆಧಾರ ಸ್ತಂಭರು. ಈ ಪತ್ರಿಕೆಯ ಭಾಷೆಯು ಸುಲಭವಿದೆ. ವಿದ್ಯಾರ್ಥಿಗಳಿಗೆ ಬಹು ಅನುಕೂಲ. ಪರೀಕ್ಷೆಗಳಿಗೆ ಓದುವ ವಿದ್ಯಾರ್ಥಿಗಳು ಇದನ್ನು ಓದಿ ಸಂಸ್ಕೃತಭಾಷೆಯ ಪರಿಚಯವನ್ನು ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ವಾರ್ಷಿಕ ವರ್ಗಣಿ ಅಂಚೆ ವೆಚ್ಚ ಸೇರಿ ೧-೮-೦ ಮಿಕ್ಕವರಿಗೆ ೨-೮-೦ ಸಾಮಾಜಿಕ ರಾಜಕೀಯ ಮತ್ತು ವಿದ್ಯಾವಿಷಯಕ ಸಂಗತಿಗಳಿಗೆ ಕಾಲಕರು ಹೆಚ್ಚಾಗಿ ಸ್ಥಳಕೊಡಬೇಕು.

ಅಹಿಂಸೆಯ ಬಗ್ಗೆಯೂ, ದನಗಳ ರಕ್ಷಣೆಯಬಗ್ಗೆಯೂ ಗೋಕಾಕದ ಶ್ರೀ ರಾವಜಿ ಬಾಲಪ್ಪಸೋನೂಲ ಮೂಡಲಗಿಯವರು ಕಳಿಸಿದ ಪ್ರಕಟಣೆಗಳು ತಪ್ಪಿವೆ. ಸ್ಥಳಾನುಕೂಲತೆಇಲ್ಲದ್ದರಿಂದ 'ಕನ್ನಡಿಗ' ನಲ್ಲಿ ಪ್ರಸಿದ್ಧಿಸುವದು ಶಕ್ಯವಿಲ್ಲ. —ಸಂ ಕ.

ಕರ್ನಾಟಕ ಆಯುರ್ವೇದ ಸಮ್ಮೇಲನ

ಕರ್ನಾಟಕಾಯುರ್ವೇದ ಸಮ್ಮೇಲನ ಮತ್ತು ಪ್ರದರ್ಶನದ ದ್ವಿತೀಯ ವಾರ್ಷಿಕಾಧಿವೇಶನವು ಬೆಂಗಳೂರಿನ ಶಂಕರಯ್ಯ ಹೋಲಿನಲ್ಲಿ ೧೯೨೬ ನೇ ಇಸವಿ ಜನವರಿ ತಾ ೧೬-೧೮-೧೯ ರಲ್ಲಿ ಜರಗುವುದು ಅದೇ ಸಮಯ ಸಮ್ಮೇಲನಕ್ಕೆ ಅನುಬಂಧವಾಗಿ ವಸ್ತುಪ್ರದರ್ಶವೂ ತೆರೆಯಲಾಗುವದು ಪ್ರತಿನಿಧಿಗಳಾಗಿ ಬರುವ ಸ್ತ್ರೀಪುರುಷರು ಜನವರಿ ತಾರೀಖು ೬ ರೊಳಗೆ ತಮ್ಮ ಹೆಸರುಗಳನ್ನು ರೂ. ೧ ಫೀಸುಕೊಟ್ಟು ರಿಜಿಸ್ಟರು ಮಾಡಿಸಬೇಕಾಗಿದೆ ಪ್ರತಿಗಳಿಗೆ ರೂ ೩. ಸ್ವಾಗತ ಕಮೀಟಿಯ ಮೆಂಬರರಿಗೆ ರೂ ೫ ಚಂದಾ ಇದೆ. ವೈದ್ಯ ವಿಷಯಕವಾದ ಭಾಷಣಗಳನ್ನು ಲೇಖನಗಳನ್ನೂ ಒಪ್ಪಿಸಲು ಅವಕಾಶವಿದೆ. ಸಮ್ಮೇಲನದಲ್ಲಿ ಚರ್ಚೆಗೆ ತರುವ ವಿಷಯಗಳನ್ನು ಜನವರಿ ತಾ. ೧೦ ರೊಳಗೂ, ಪ್ರದರ್ಶನಕ್ಕೆ ಕಳುಹುವ ವಸ್ತುಗಳನ್ನು ತಾ. ೧೫ ರೊಳಗೂ ತಿಳಿಸಲು ಹಾಗೂ ಒಪ್ಪಿಸಲು ಬೇಕಾಗಿದೆ. ಪ್ರದರ್ಶನಾಂತ್ಯದಲ್ಲಿ ಬಹುಮಾನದ ಪದಕ, ಪ್ರಶಸ್ತಿಪತ್ರಗಳು ಕೊಡಲಾಗುವವು. ಸ್ವಾಗತಾಧ್ಯಕ್ಷರು ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾವ್ ಇವರು; ರಾ। ಕೇ. ಶೇಷಯ್ಯರ್ ಇವರು ಮತ್ತು ರಾ। ಕೆ. ನಾರಾಯಣರಾವ ಇವರು ಕಾರ್ಯದರ್ಶಿಗಳು. ಎಂಬುದಾಗಿ ಸ್ವಾಗತ ಕಮಿಟಿಯ ಕಾರ್ಯನಿರ್ವಾಹಕ 'ಮಂಡಳಿಯ' ಕಡೆಯಿಂದ ಪ್ರಕಟಿತವಾಗಿದೆ.

ಆಂಗ್ಲೋ ತುರ್ಕಿ ರಾಜಕಾರಣ.

ಮೋಸಲ್ ಅಧ್ಯಾಯ

(ಲೇಖಕ [illegible])

ಜಿನಿವಾ ಪಟ್ಟಣದಲ್ಲಿ ಸಾಂಪ್ರತಕ್ಕೆ ರಾಷ್ಟ್ರ ಸಂಘದ ಕೌನ್ಸಿಲ್ ನೆರೆದಿದ್ದು, ಮೋಸಲ್ ಪ್ರಶ್ನೆಯ ಚರ್ಚೆಯು ಒಳ್ಳೇ ಭರದಲ್ಲಿಒಂದಿದೆ. ರಾಷ್ಟ್ರ ಸಂಘದ ಸಭಾಸದತ್ವದಲ್ಲಿ ತುರ್ಕಸ್ಥಾನವು ಇಲ್ಲದಿರುವದರಿಂದ ತುರ್ಕೀ ಪ್ರತಿನಿಧಿಗಳು ಎಷ್ಟೋ ಸಾರೆ ವಿರೋಧಿಸಿದರೂ, ಸಂಘವು ಅವರ ವಿರೋಧವನ್ನು ಸ್ವೀಕರಿಸದೆ, ಅದಕ್ಕೆ ಪ್ರತಿಯಾಗಿ “ ತುರ್ಕಸ್ಥಾನವು ರಾಷ್ಟ್ರಸಂಘದ ಸಭಾಸದತ್ವದಲ್ಲಿ ಬಾರದಿದ್ದದ್ದು ತುರ್ಕಸ್ಥಾನದ ತಪ್ಪೇ ಅಲ್ಲದೆ, ಸಂಘದ ತಪ್ಪು ಅಲ್ಲ. ”

ಹಾಗೂ

“ ರಾಷ್ಟ್ರ ಸಂಘದೆದುರಿನಲ್ಲಿ ಬಂದ ಎಲ್ಲ ಪ್ರಶ್ನೆಗಳನ್ನು ವಿಚಾರಿಸಿ ತೀರ್ಪು ಕೊಡುವದು ಸಂಘದ ಕರ್ತವ್ಯವಾದದ್ದರಿಂದ, ಐಕ್ಯಮತ್ಯದಿಂದಾದ ತೀರ್ಪಿನಿಂದ ತುರ್ಕಸ್ಥಾನವು ಬದ್ಧವಾಗುವದಲ್ಲದೆ, ಅಂಥ ತೀರ್ಪನ್ನು ಸಂಘದವರು ತುರ್ಕಸ್ಥಾನದ ಕೊರಳಿಗೆ ಬಲಾತ್ಕಾರದಿಂದ ಆದರೂ ಕಟ್ಟೇ ತೀರುವರು. ”

ಎಂಬದಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ.

“ ನಿಮ್ಮ ನಿರ್ಣಯವನ್ನು ನೀವು ಏನಾದರೂ ಮಾಡಿಕೊಳ್ಳಿರಿ, ನಾವು ಮಾತ್ರ ಅದನ್ನು ಎಂದಿಗೂ ಮನ್ನಿಸಲಾರೆವು ”

ಎಂದು ತುರ್ಕಸ್ಥಾನದ ವಕೀಲರು ಸಿಟ್ಟಿಸಿಟ್ಟಿನಿಂದ ಗದ್ದರಿಸಿದರು

“ ನಾವು ಕೊಡುವ ನಿರ್ಣಯವನ್ನು ನೀವು ಕೇಳಲಿಕ್ಕೆ ಬೇಕು. ಕೇಳದೇ ಹೋದದ್ದು, ರಾಷ್ಟ್ರ ಸಂಘದ ವಿರುದ್ಧ ಬಂಡವಾಡಿದ ಪ್ರಾಯಶ್ಚಿತ್ತಕ್ಕೆ ನೀವು ಗುರಿಯಾಗಬೇಕಾದೀತು ” ಎಂಬದಾಗಿ ಸಂಘವು ಕೂಡ

ಅಷ್ಟೇ ಸಿಟ್ಟಿನಿಂದ ಗದ್ದರಿಸಿ ಉತ್ತರ ಕೊಟ್ಟಿತು.

“ ಸಂಪೂರ್ಣ ಮೋಸಲ್ ಜಿಲ್ಲೆಯು ನಮಗೇ ಇರಬೇಕೆಂದು ನಮ್ಮ ಆಗ್ರಹವಿಲ್ಲ. ಅದರಲ್ಲಿ ಮೋಸಲ್ ಪಟ್ಟಣವನ್ನು ಹಿಡಿದುಕೊಂಡು ಉತ್ತರದ ಅರ್ಧಭಾಗವು ನಮಗಿದ್ದರೆಸಾಕು, ನಾವು ಅಷ್ಟರಿಂದ ಸಂತುಷ್ಟರಿದ್ದೇವೆ.”

ಎಂದು ತುರ್ಕೀ ಪ್ರತಿನಿಧಿಗಳ ಬೇಡಿಕೆಯಿದೆ. ಮೋಸಲ್ ಜಿಲ್ಲೆಯ ಎಲ್ಲ ಭಾಗವು ತಮ್ಮ ಕಡೆಗೇ ಉಳಿಯ ಬೇಕೆಂದೂ, ಅವರೊಳಗಿನ ಒಂದಣುವಾದರೂ ತುರ್ಕರಕಡೆಗಿರಕೂಡದೆಂದೂ, ಒಂದು ವೇಳೆ ತುರ್ಕರ ಕಡೆಗೆ ಯಾವದೊಂದು ಅಂಶವನ್ನು ಬಿಟುಕೊಟ್ಟರೆ ಅಲ್ಲಿ ಇಂಗ್ಲಂಡದ ಆಶ್ರಯಾಂಕಿತವಾಗಿದ್ದ ಭಾಗಗಳ ಸಂರಕ್ಷಣೆಗೆ ಒಳ್ಳೇ ಬಾಧೆ ಬರುವದೆಂದೂ, ಇಂಗ್ಲಂಡದ ಅಂಬೋಣವಿದೆ. ಇವರೀರ್ವರ ಈ ಅಂಬೋಣ ಪ್ರತಿ ಅಂಬೋಣಗಳನ್ನು ಕೇಳಿಕೊಂಡು ರಾಷ್ಟ್ರ ಸಂಘವು ಏನು ನಿರ್ಣಯ ಮಾಡುವದೋ ನೋಡಬೇಕು.

ಸಂಘದೆದುರಿನಲ್ಲಿ ಇದ್ದ ಮೊದಲನೇ ದೊಡ್ಡ ಮುದ್ದೆಯ ಪ್ರಶ್ನೆ ಯಂದರೆ. “ Entitled Territory ” ಗೆ ಸಂಬಧಿಸಿದ್ದದ್ದು. ಮಹಾಯುದ್ಧದ ನಂತರ ಇಂಗ್ಲಡವು ಅಲ್ಲಿ ಸಂಪಾದಿಸಿದ ಪ್ರದೇಶಕ್ಕೆ “ಎಂಟಾಯಿಟಲ್ಡ ಟೆರಿಟರಿ” ಎಂಬ ಹೆಸರು ಪ್ರಾಪ್ತವಾಗಿದೆ. ಇರಾಕ್ ಪ್ರಾಂತವು ತುರ್ಕಸ್ಥಾನದಲ್ಲಿ ಸಮಾವೇಶವಾಗುವದೋ, “ Entitled Territoly ”ಯಲ್ಲಿ ಬರುವದೋ, ಎಂಬುವದೇ ಪ್ರಶ್ನೆಯು. ಇದರ ನಿರ್ಣಯದ ಮೇಲೆ ಮುಂದಿನ ಎಲ್ಲ ಸಂಗತಿಗಳು ಅವಲಂಬಿಸಿವೆ. ಒಂದು ವೇಳೆ, ಇರಾಕವು “ಎಂಟಾಯಿಟಲ್ಡ ಟೆರಿಟರಿ ”ಯಲ್ಲಿ ಬರುತ್ತದೆಂದು ಸಂಘವು ನಿರ್ಣಯಿಸಿದರೆ, ತುರ್ಕಸ್ಥಾನವು ಮೋಸಲ್ ಪ್ರಾಂತವನ್ನು ಇಂಗ್ಲಂಡಕ್ಕೆ ಬಿಟ್ಟು ಕೊಡಬೇಕಾಗುವದು. ನೂರರಲ್ಲಿ ತೊಂಭತ್ತುಪಾಲಿಗೆ ಹೀಗೆ ನಿರ್ಣಯವಾಗುವ ಸಂಭವವಿದೆ ಯೆಂಬದಾಗಿ ತಜ್ಞರು ತೂಕ ಕಟ್ಟಿದ್ದಾರೆ.

ಸಂಘದ ಮೂರು ಜನ ನ್ಯಾಯಾಧೀಶರಲ್ಲಿ ಸ್ವೀಡನ್‌ದ ಉಂಡೇನ್ ಎಂಬ ನ್ಯಾಯಾಧೀಶರು, ಮೋಸಲ್ ಪ್ರಾಂತವು ತುರ್ಕರ ಕಡೆಗೇ ಉಳಿಯಬೇಕೆಂಬ ಅಭಿಪ್ರಾಯವುಳ್ಳವರು. ಒಂದು ವೇಳೆ ಇವರು ಕೊನೆಯವರೆಗೆ ಇದೇ ಅಭಿಪ್ರಾಯವುಳ್ಳವರಾದಲ್ಲಿ, ಏಕಮತನಿರ್ಣಯಕ್ಕೆಭಂಗ ಬರುವದೆಂಬ ದೃಷ್ಟಿಯನ್ನಿಟ್ಟು, ಇಂಗ್ಲಂಡದ ರಾಜಕಾರಣಿಗಳು ತುರ್ಕಸ್ಥಾನದ ಬಗ್ಗೆ ಇವರ ಮನಸ್ಸನ್ನು ಕಲುಷಿತ ಮಾಡಲು ಯತ್ನಿಸುತ್ತಿರುವರೆಂಬದಾಗಿ ತುರ್ಕರು ಚೀರಾಡುತ್ತಲಿದ್ದಾರೆ. ಮೋಸಲ್ ಪ್ರಕರಣವು ಸಂಘದೆದುರಿಗೆ ಹೊರಟಾಗ ಇಸ್ಥೋನಿಯಿಂದ ಸೇನಾಪತಿಗಳಾದ ಲೀಡೋನೆಲ್ ಎಂಬುವರು, ಮೋಸಲ್‌ದ ಉತ್ತರ ದಿಕ್ಕಿನಲ್ಲಿರುವ ಕ್ರಿಸ್ತೀಜನಾಂಗದ ಮೇಲೆ ತುರ್ಕರು ಅಮಾನುಷವಾದ ಅತ್ಯಾಚಾರಗಳನ್ನು ಮಾಡಿರುವರೆಂಬದಾಗಿಯೂ, ಕ್ರಿಸ್ತೀಜನರ ಮನೆಮಾರುಗಳನ್ನು ಸುಟ್ಟು ಅವರನ್ನು ಬಗೆದಾದದವರೆಗೆ ಓಡಿಸಿದರೆಂಬದಾಗಿಯೂ, ಮುಂತಾದ ತುರ್ಕರ ವಿರುದ್ಧವಾದ ಅನೇಕ ಅಂಶಗಳ ವರದಿಯನ್ನು ಓದಿ ತೋರಿಸಿದರು. ಈ ಹೃದಯದ್ರಾವಕವಾದ ಸಂಗತಿಯನ್ನು ಕೇಳಿದಾಗಿನಿಂದ, ಉಂಡೇನರವರ ಮನಸ್ಸು ತುರ್ಕರ ವಿರುದ್ಧ ಕಲುಷಿತವಾಗಿದ್ದು, ಇನ್ನು ಅವರಿಂದ ತುರ್ಕಸ್ಥಾನಕ್ಕೆ ಏನೂ ಸಹಾಯ ದೊರೆಯಲಾರದೆಂಬದಾಗಿ ತಜ್ಞರ ತರ್ಕವಿದೆ. ಇದ್ದರೂ, ಉಂಡೇನರವರು ಇವರೀರ್ವರ ನಡುವೆ “ರಾಜಿ” ಪ್ರಸಕ್ತಿಯನ್ನು ಎತ್ತಿ, ಅದರಲ್ಲಿ ತಾವು ಸ್ವತಃ ಭಾಗ ತೆಗೆದುಕೊಂಡು ಓಡಾಡುತ್ತಿರುವದರಿಂದ, ಈ ಮೋಸಲ್‌ದ ಅಧ್ಯಾಯವು ಕೊನೆಗೆ “ರಾಜಿ”ಯಲ್ಲಿ ಮುಗಿಯುವದೋ, ಯುದ್ಧ ಪ್ರಸಕ್ತಿಯಲ್ಲಿ ಪರ್ಯವಸಾನ ಹೊಂದುವದೋ, ಎಂಬುವದು ಈಗಿನ ಮಟ್ಟಿಗೆ ಒಡೆಯದ ಒಗಟವಾಗಿದೆ.

ರಾಯಚೂರಿನ ಪತ್ರ

ರಾಯಚೂರಲ್ಲಿ ಮಿತಿ ಪು.ಶು. ೩ ಶುಕ್ರವಾರ ಸಾಯಂಕಾಲ ಮ| ರಾ| [illegible] ಅವರ ಅಧ್ಯಕ್ಷತೆಯಲ್ಲಿ ಹಮದರ್ದ್ ಶಾಲೆಯ ೫ ನೇ ವಾರ್ಷಿಕ ಮಹಾ ಸಭೆಯು ಕೂಡಿತ್ತು. ಇದರಲ್ಲಿ ಪಂಡಿತ ಟಿ.ಕಿಷನರಾವ ಇವರ ವ್ಯಾಖ್ಯಾನವಾಯಿತು. ಅವರ ವ್ಯಾಖ್ಯಾನದಲ್ಲಿ ಇದೇ ಶಾಲೆಯಲ್ಲಿ ಸ್ತ್ರೀ ವರ್ಗಕ್ಕು ಮತ್ತು ಅಂತ್ಯಜವರ್ಗಕ್ಕು ಶಿಕ್ಷಣ ದೊರೆಯುವ ಏರ್ಪಾಡವಾಗಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು ಅದರಂತೆ ಇಲ್ಲಿಯ ಕೆಲವು ವರ್ತಕಜನರು ಅವರ ಅಭಿಪ್ರಾಯಕ್ಕೆ ಅನುಮತವನ್ನು ಕೊಟ್ಟರು. ಅದರಂತೆ ಮೇಲ್ಕಂಡ ಸಂಘದವರು ಏರ್ಪಡಿಸುವದಾಗಿ ವಚನವನ್ನಿತ್ತಿರುವರು. ಅಂತೂ ಒಂದೊಂದು ಮೆಟ್ಟಾಗಿ ಇಲ್ಲಿಯ ಜನರು ಮುಂದಕ್ಕೆ ಬರುತ್ತಿದ್ದು ನೋಡಿದರೆ ನಿಸ್ಸಂಶಯವಾಗಿ ಕರ್ನಾಟಕ ಮಾತೆಯು ಇವರ ಮೇಲೆ ತುಂಬಾ ಸಂತುಷ್ಟಳಾಗುವಳೆನ್ನಲಿಕ್ಕೆ ಏನೂ ಸಂದೇಹವಿಲ್ಲ.

ಕೊಡಗುಕರ್ನಾಟಕ

ಶನಿವಾರ ಸಂತೆಯಲ್ಲಿ ಭತ್ತದ ಬೆಳೆ ಬಹು ಚನ್ನಾಗಿದ್ದಿತು. ಭತ್ತವನ್ನು ಕೊಯ್ದು ಸಸಿ ಹಾಕಿದ್ದರು. ಇನ್ನು ಮನೆಗೆ ಒಯ್ಯತಕ್ಕವರು. ಅಷ್ಟರಲ್ಲಿ ಕುಂಭ ದ್ರೋಣಮಳೆ ಎನ್ನುವ ಹಾಗೆ ಎರಡು ದಿನ ಬಹು ಭೀಕರವಾಗಿ ಮಳೆ ಸುರಿಯಿತು. ಮುಂದೆ [illegible] ದಿವಸ ಮಳೆ ಮೋಡಗಳಾಗಿ ಹೊರಗೆ ಹೋಗದ ಹಾಗೆ ಮನೆಯಲ್ಲಿ ಕುಳಿತು ಬೆಂಕಿಕಾಸದ ಹೊರತಾಗಿ ಅನ್ಯಗತಿಯಿಲ್ಲದಂತಾಯಿತು. ರೈತರಗೋಳನ್ನು ಹೇಳಲಾಗಸಲ್ಲ. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ; ಬರಗಾಲವು ಕಟ್ಟಿಟ್ಟಂತಾಗಿದೆ.

ವೀರಶೈವರಾದ ನಾವು ಈಗ್ಗೆ ಏನು ಮಾಡುವದು?

ಹಿಂದುಸ್ಥಾನದಲ್ಲಿ ಹಲವು ಪ್ರಾಂತಗಳು ಇರುವವು. ಪ್ರತಿಯೊಂದು ಪ್ರಾಂತದಲ್ಲಿ ವಿಶಿಷ್ಟವಾದ ಒಂದು ಮುಖ್ಯ ಜನಾಂಗವು ಇರುವದು. ಮಹಾರಾಷ್ಟ್ರದಲ್ಲಿ ಮರಾಠಾಸಮಾಜವು ಒಡೆದು ಕಾಣುವದು. ಆಂಧ್ರಪ್ರಾಂತದಲ್ಲಿ ವೈಶ್ಯಸಮಾಜವು ಎದ್ದು ತೋರುವದು. ಗುಜರಾಥ ಪ್ರಾಂತದಲ್ಲಿ ಗುರ್ಜರರ ಹೊರತು ಇನ್ನಿತರ ಸಮಾಜಗಳು ನಮ್ಮ ಮನಸ್ಸಿನ ಮುಂದೆ ನಿಲ್ಲಲಾರವು. ಹೀಗೆ ನಮ್ಮ ಕರ್ನಾಟಕ ಪ್ರಾಂತದಲ್ಲಿ ನಮ್ಮ ಅಂದರೆ ವೀರಶೈವರ ಸಮಾಜವು ಮುಖ್ಯವಾಗಿರುತ್ತದೆ. ಇಷ್ಟೇ ಅಲ್ಲ ನಮ್ಮ ಸಮಾಜದ, ನಮ್ಮ ಧರ್ಮದ, ಜೀವಾಳವು ಕರ್ನಾಟಕತ್ವವೇ ಆಗಿರುವದಿಲ್ಲವೇ? ನಮ್ಮ ಧರ್ಮದ ಎಲ್ಲ ಗ್ರಂಥಗಳು ಬಹುತರವಾಗಿ ಕನ್ನಡ ಭಾಷೆಯಲ್ಲಿಯೇ ಇರುವವು. ಶ್ರೀ ಬಸವ, ಅಲ್ಲಮ ಮೊದಲಾದ ಅತ್ಯಂತ ಪೂಜ್ಯರಾದ ಮಹಾತ್ಮರು ತಮ್ಮ ಹೃದಯರಹಸ್ಯವನ್ನು ಕನ್ನಡ ಭಾಷೆಯಲ್ಲಿಯೇ ಹೊರಗೆಡಹಲಿಲ್ಲವೇ? ಇವರು ತಮ್ಮ ವಚನಗಳಿಂದ ನಮ್ಮ ಭಾಷೆಯಲ್ಲಿ ಒಂದು ತರದ ನವಜೀವನವನ್ನು ಹುಟ್ಟಿಸಿರುತ್ತಾರೆ. ಷಡಕ್ಷರಿ, ರಾಘವಾಂಕ, ಭೀಮಕವಿ, ಸಿದ್ಧರಾಮ ಮೊದಲಾದ ಪ್ರಸಿದ್ಧ ಕವಿಗಳು ಕನ್ನಡಭಾಷೆಯಲ್ಲಿ ತಮ್ಮ ಕವಿತ್ವವನ್ನು ತೋರಿಸಿರುತ್ತಾರೆ. ನಮ್ಮ ಪವಿತ್ರ ತೀರ್ಥಕ್ಷೇತ್ರಗಳು ಕರ್ನಾಟಕದಲ್ಲಿಯೇ ಇವೆ. ಗುರು ಪೀಠಗಳು ಕರ್ನಾಟಕದಲ್ಲಿಯೇ. ಕರ್ನಾಟಕದಲ್ಲಿಯ ಸಾಂಪತ್ತಿಕ ಸ್ಥಿತಿಯನ್ನು ಎಂದಿನಿಂದಲೂ ಕಾಯುತ್ತ ಬಂದವರು ನಾವೇ ಅಲ್ಲವೇ? ಕರ್ನಾಟಕದಲ್ಲಿಯ ಎಲ್ಲ ಉದ್ಯೋಗ ವ್ಯವಸಾಯಗಳಿಗೆ ಈ ಹೊತ್ತಿಗೂ ನಮ್ಮ ಸಮಾಜವು ತವರುಮನೆಯಾಗಿದೆ.

ಶ್ರೀಮನ್ ಹರ್ಡೀಕರರವರು ಬರೆದ ಬಸವ ಚರಿತ್ರೆಯಲ್ಲಿ "ಕರ್ನಾಟಕದ ಹಳ್ಳಿಗಳಿಗೂ ಮಹಾರಾಷ್ಟ್ರ ಮೊದಲಾದ ಅನ್ಯಪ್ರಾಂತದ ಹಳ್ಳಿಗಳಿಗೂ ಹೋಲಿಸಿ ನೋಡಿದರೆ ಬಸವಣ್ಣನವರಿಂದ ಕರ್ನಾಟಕದ ಸಾಮಾಜಿಕ ಸುಧಾರಣೆಯು ಎಷ್ಟರ ಮಟ್ಟಿಗೆ ಆಗಿದೆಯೆಂಬುವದು ಸ್ಪಷ್ಟವಾಗುವದು. ಬೇರೆ ದೇಶದ ಹಳ್ಳಿಗಳಲ್ಲಿ ಮಾಂಸಾಹಾರ ಮದ್ಯಪಾನ ಅಶುಚಿ ಮೊದಲಾದವುಗಳೆಷ್ಟಿರುತ್ತವೆಯೋ ಅಷ್ಟು ಈ ದೇಶದ ಹಳ್ಳಿಗಳಲ್ಲಿರುವವಲ್ಲ" ಹೀಗೆ ಹೇಳಿರುತ್ತಾರೆ. ಇದು ಅನ್ಯಪ್ರಾಂತೀಯರಿಗೆ ಅನುಕರಣೀಯವಾದದ್ದಲ್ಲವೇ?

ಈಗ ನಮ್ಮ ಕರ್ನಾಟಕಕ್ಕೆ ಎಂಥ ಶೋಚನೀಯವಾದ ಸ್ಥಿತಿಯು ಬಂದಿದೆ ನೋಡಿ! ಹಿಂದೆ ಕಾವೇರಿಯಿಂದ ಗೋದಾವರಿಯವರೆಗೆ ದೊಡ್ಡ ರಾಷ್ಟ್ರವಾಗಿತ್ತೆಂದು ನಮ್ಮ ಹಿರಿಯರು ಹೇಳುತ್ತ ಬಂದಿರುತ್ತಾರೆ. ಇದಕ್ಕೆ ಹೆಗ್ಗುರುತುಗಳು ತುಂಬಿ ತುಳುಕುತ್ತವೆ. ಈಗ ಭೀಮಾ ನದಿಯಿಂದ ಕಾವೇರಿಯ ವರೆಗೆ- ಮೊದಲಿನ ಕಾಲು ಪಾಲಿನಷ್ಟು- ಉಳಿದಿದೆ. ಇದೂ ಉಳಿಯುವ ನಂಬಿಗೆ ತೋರಲೊಲ್ಲದು. ಒಂದು ಕಡೆಗೆ ತೆಲಗರು ಮತ್ತೊಂದು ಕಡೆಗೆ ಮಹಾರಾಷ್ಟ್ರರು ಇನ್ನೊಂದು ಕಡೆಗೆ ತಮಿಳರು ಬೇರೊಂದು ಕಡೆಗೆ ಕೇರಳರು ನಮ್ಮ ಪ್ರಾಂತವನ್ನು ನುಂಗಿ ನೀರು ಕುಡಿಯಬೇಕೆಂದು ಹಂಬಲಿಸಹತ್ತಿರುತ್ತಾರೆ. ನಾವು ಈಗಿನಂತೆ ಕುಂಭಕರ್ಣ ನಿದ್ರೆಯಲ್ಲಿ ಉಳಿದರೆ ಅವರ ಬಯಕೆಯು ಪೂರ್ಣವಾಗುವದು. ನಮ್ಮ ನಿದ್ದೆ ಆದರೂ ಎಂತಹದು! ಪ್ರತಿ ಸ್ಪರ್ಧಿಗಳು ವಿರೋತ್ಸಾಹದಿಂದ ವಾಗ್ಬಾಣಗಳ ಮಳೆಯನ್ನು ಸುರಿಸಿ ನಮ್ಮ ಕಳಕಳಿಯ ಬೇಡಿಕೆಯನ್ನು ತಮ್ಮ ನಗಾರಿ ಸೌಬತ್ತು ಮೊದಲಾದ ವಾದ್ಯಗಳ ಧ್ವನಿಯಲ್ಲಿ ಕೇಳಿಸದಂತೆ ಮಾಡಿದರು. ನಿದ್ರೆಯಲ್ಲಿ ಇದ್ದ ನಮ್ಮ ಸಮಾಜದಲ್ಲ ಉಸುರಿನಂತೆ ಶ್ರೀಯುತ ಹರ್ಡೇಕರ, ಹಳಕಟ್ಟಿ, ಕಂಬಳಿ, ಮೊದಲಾದವರು ಕೈಬೆರಳಿನಿಂದ ಎಣಿಸಲಿಕ್ಕೆ ಬರುವಷ್ಟು ಜನರು ಮಾತ್ರ ಕರ್ನಾಟಕದ ಸಲುವಾಗಿ ಶ್ರಮ ಪಡುತ್ತಲಿದ್ದರೆ ಇಷ್ಟು ಜನರಿಂದ ಏನಾಗುವದು? ನಗಾರಿ ಸಪ್ಪಳದಲ್ಲಿ ತುಂತುನಿ ಸಪ್ಪಳವು ಯಾರಿಗೆ ಕೇಳಬೇಕು? ಬಂಧುಗಳೇ ಎಚ್ಚರಾಗಿರಿ. ಕಣ್ಣು ತೆರೆಯಿರಿ. ನಮ್ಮಲ್ಲಿದ್ದ ಆಲಸ್ಯವನ್ನು ಹೊರದೂಡಿರಿ. ಈಗೊದಗಿದ ಪ್ರಸಂಗವು ಎಂಥಾದ್ದಿರುವದೆಂಬದನ್ನು ಮನಸಿನಲ್ಲಿ ತನ್ನಿರಿ. ಎಲ್ಲ ಶಕ್ತಿಗಳನ್ನು ಒಟ್ಟುಗೂಡಿಸಿ ಭಗೀರಥನಂತೆ ಪ್ರಯತ್ನಮಾಡಿ ನಮ್ಮ ಕರ್ನಾಟಕವನ್ನು ಇದ್ದಷ್ಟು ಭಾಗವನ್ನಾದರೂ ಕಾಯ್ದುಕೊಳ್ಳಿರಿ! ಈ ಪ್ರಸಂಗದಲ್ಲಿ ನಮ್ಮ ಸಮಾಜವು ತನುಮನ ಧನಗಳಿಂದ ಸಹಾಯ ಮಾಡಿ ಕರ್ನಾಟಕ ಪ್ರಾಂತವನ್ನು ಜೀವಂತವಾಗಿ ಉಳಿಸುವ ಬುದ್ಧಿಯನ್ನು ಹುಟ್ಟಿಸಲೆಂದು ದೇವರಿಗೆ ಬೇಡಿಕೊಳ್ಳುತ್ತೇನೆ.

ತಾ|| ೨೯-೧೧-೧೯೨೪

ಶ್ರೀ ಸಂಗಮೇಶ್ವರ ವಾಚನಾಲಯದ ವ್ಯವಸ್ಥಾಪಕ
ಬೇವೂರ

ಕರ್ನಾಟಕ ವಿಶ್ವವಿದ್ಯಾಲಯದ ವಿಷಯದಲ್ಲಿ ಪ್ರಶ್ನೆಮಾಲಿಕೆಗೆ ಉತ್ತರ

೧ ಮನುಷ್ಯನು ಜನ್ಮವೆತ್ತಿದ ಮೇಲೆ ಅನ್ಯರ ಕೂಡ ಒಂದಿಲ್ಲೊಂದು ತರದಿಂದ ಸಂಬಂಧಪಟ್ಟವನಾಗುತ್ತಾನೆ. ಅವುಗಳಲ್ಲಿ ರಕ್ತ-ಧರ್ಮ-ಭಾಷಾ ಇವುಗಳೇ ಪ್ರಾಮುಖ್ಯವಾದವುಗಳು. ಇವೆಲ್ಲವುಗಳಲ್ಲಿ ಬುದ್ಧಿವಿಕಾಶ ಜ್ಞಾನ ಸಂಪಾದನೆಯಾಗಬೇಕಾದರೆ ಭಾಷೆಯ ವ್ಯಾಸಂಗವು ಅವನಿಗೆ ಬಹಳ ಅಗತ್ಯವಾದುದರಿಂದ ಮನುಷ್ಯನಿಗೆ ಭಾಷಾಭಿಮಾನವು ತಿಲಕಪ್ರಾಯವಾಗಿದೆ. ಆದುದರಿಂದ ಈ ಅಭಿಮಾನವನ್ನು ಪ್ರಜ್ವಲಿಸಿ ಬುದ್ಧಿಯನ್ನು ವಿಕಾಶಪಡಿಸಿ ಜನಾಂಗದ ಅಭ್ಯುದಯವನ್ನು ನೆಲೆಗೊಳಿಸಬೇಕಾದರೆ ಆಯಾ ಭಾಷೆಯ ವಿಶ್ವವಿದ್ಯಾಲಯಗಳು ಬೇಕೇ ಬೇಕು. ಭರತಖಂಡದಲ್ಲಿ ಕರ್ನಾಟಕವು ಕತ್ತರಿಸಲ್ಪಟ್ಟ ದುರ್ದೈವೀ ದೇಶವಾಗಿದ್ದರೂ ಒಂದು ಪುರಾತನ ಪ್ರಸಿದ್ಧ ಪ್ರಾಂತವಾಗಿ ವಿಸ್ತೀರ್ಣವಾದ ದೇಶವಾಗಿದ್ದುದರಿಂದಲೂ ಬಹು ಸಂಭ್ರಮಕಾರಕ ವಾಙ್ಮಯಾತ್ಮಕವುಳ್ಳದ್ದಿರುವದರಿಂದಲೂ ಒಂದು ಸ್ವತಂತ್ರವಾದ ವಿಶ್ವವಿದ್ಯಾಲಯವು ಅವಶ್ಯವಾಗಿದೆ.

೨ ಆದುದರಿಂದ ಪ್ರತಿಯೊಬ್ಬ ಕನ್ನಡಿಗನು ತನ್ನದೊಂದು (ಅಖಿಲ ಕರ್ನಾಟಕ) ವಿಶ್ವವಿದ್ಯಾಲಯವು ಸ್ಥಾಪಿತವಾಗುವ ವಿಷಯದಲ್ಲಿ ತ್ರಿಕರಣ ಪೂರ್ವಕ ಪ್ರಯತ್ನಿಸುವದು ಆತನ ಪವಿತ್ರ ಕರ್ತವ್ಯವಾಗಿದೆ. ಕೆಲಕೆಲವು ದೃಷ್ಟಿಯಿಂದ ಕನ್ನಡಿಗನು ನಿರ್ಭಾಗ್ಯನಾಗಿರುವನೆಂದು ಹೇಳಬಹುದಾದರೂ ಒಂದು ದೃಷ್ಟಿಯಿಂದ ಮಾತ್ರ, ಆತನು ಇತರ ಪ್ರಾಂತಿಗರಕಿಂತಲೂ ಭಾಗ್ಯವಂತನಾಗಿರುವನು. ಇಡೀ ಭಾರತದೇಶದಲ್ಲಿ ಅನೇಕ ದೇಶೀಯ ಸಂಸ್ಥಾನಾಧಿಪರಿದ್ದು ಅವರಲ್ಲಿ ಅತ್ಯುಜ್ವಲ ಭಾಷಾಕಾಂತಿಯುತರೂ, ಬಲಾಢ್ಯ ದೇಶಾಧಿಪರೂ, ಶಾಂತಮನಸ್ಕರೂ ಆದ ಮಹಿಶೂರಸಂಸ್ಥಾನಾಧಿಪತಿಗಳು ಕನ್ನಡಿಗರ ಮಧ್ಯದಲ್ಲಿ ಶುದ್ಧ ಕನ್ನಡಿಗರಾಗಿ ಪ್ರಕಾಶಿಸುತ್ತಿರುವರು. ಈ ಸುದೈವವು ಕನ್ನಡಿಗರ ಹೊರತಾಗಿ ಮತ್ತಿತರರಿಗೆ ಇಲ್ಲವಾದುದು ನಮಗೆಲ್ಲ ಅಭಿಮಾನಾಸ್ಪದವಾದ ಮಾತಷ್ಟೇ! ಆದಕಾರಣ ಈ ಕರ್ನಾಟಕ ಭೂಪತಿಗಳನ್ನು ಮುಂದಿಟ್ಟುಕೊಂಡು ಕರ್ನಾಟಕ ವಿಶ್ವವಿದ್ಯಾಲಯವನ್ನು ಸಂಸ್ಥಾಪಿಸುವದು ಶ್ರೇಯಸ್ಕರ

ವಾದುದರಿಂದ ಈಗಾಗಲೇ ನಮ್ಮ ಮೈಸೂರ ಮಹಾರಾಜರು (ಇತರ ಕನ್ನಡಿಗರಲ್ಲಿ ಆ ತರಹದ ಆತುರವು ಪ್ರಕಾಶಿಸುವ ಪೂರ್ವದಲ್ಲಿಯೇ) ವಿದ್ಯಾಪೀಠವನ್ನು ಸ್ಥಾಪಿಸಿರುವದರಿಂದ ಅದಕ್ಕಾಧೀನರಾಗಿ ಇತರ ಕನ್ನಡಿಗರು ಭಕ್ತಿಯಿಂದ ನಡೆದು ಕೊಳ್ಳುವದು ಭೂಷಣಾವಹವು.

೩ ಅಖಿಲ ಕರ್ನಾಟಕಕ್ಕೆ ಒಂದೇ ವಿದ್ಯಾಪೀಠವಿರುವದು ಗೌರವವಾದದ್ದೂ ಸಯುಕ್ತಿಕವೂ ಆಗಿದೆ. ಮಹಿಶೂರ ಸಂಸ್ಥಾನವು ಕರ್ನಾಟಕದ ಒಂದು ದೊಡ್ಡ ಭಾಗವಿದ್ದು ಅಲ್ಲಿ ಕರ್ನಾಟಕದ ವೈಶಿಷ್ಟ್ಯವೂ, ಪಾಂಡಿತ್ಯವೂ, ಅಚ್ಚುಕಟ್ಟಾಗಿರುವದು. ಮದ್ರಾಸ ಕರ್ನಾಟಕದಲ್ಲಿ ಉತ್ಕಟ ಭಾಷಾಭಿಮಾನಿಗಳಿದ್ದು ವಿಜಯನಗರ ಸಂಸ್ಥಾನದ ವೀರಶ್ರೀಯ ಅವಶೇಷಗಳು ಇನ್ನೂ ಲಕಲಕಿಸುತ್ತಿರುವವು. ಮುಂಬಯಿ ಕರ್ನಾಟಕವಂತೂ ಅಖಿಲ ಕರ್ನಾಟಕದ ಹೃದಯವಾಗಿದೆ. ನಿಜಾಮ ಕರ್ನಾಟಕಸ್ಥರಲ್ಲಿಯ ಕನ್ನಡಾಭಿಮಾನವು ಉತ್ಕಟವಾಗಿರುವದು. †ಇತರ ಚಿಕ್ಕ ಚಿಕ್ಕ ದೇಶೀಯ ಸಂಸ್ಥಾನಗಳೂ ಕರ್ನಾಟಕದ ಅಭಿಮಾನದಲ್ಲಿ ಹಿಂದಿರುವದಿಲ್ಲ.† ಈ ಕಾರಣದಿಂದ ಮಹಿಶೂರ ಕರ್ನಾಟಕ- ಮದ್ರಾಸಕರ್ನಾಟಕ- ಮುಂಬಯಿ ಕರ್ನಾಟಕ ಇನ್ನುಳಿದ ಕರ್ನಾಟಕವು ಇವೆಲ್ಲ ಭಾಗಗಳು ಒಂದೇ ವಿದ್ಯಾ ಪೀಠಕ್ಕಾಧೀನವಾಗಿ ನಡೆದರೆ ಕರ್ನಾಟಕದ ಯಾವತ್ತು ವೈಶಿಷ್ಟ್ಯಪ್ರಭಾವವು ಬೆಳಗುವದು. ಈಗಿರುವ ವೈಷಮ್ಯಗಳಡಗಿ ಭಾಷಾ ಪ್ರಕಾಶವು ಅಭಿವೃದ್ಧಿಗೊಳ್ಳುವದು ಕರ್ನಾಟಕದ ಒಮ್ಮುರಿಯ ಕಸುವಿನಿಂದ ಕರ್ನಾಟಕದ ಮೇರೆಗುಂಟ ಈಗಾಗುತ್ತಿರುವ ದೌಡುಗಳು ಹಿಂದಾಗುವವು. ಕರ್ನಾಟಕ ವಾಙ್ಮಯವು ವಿಕಾಶಗೊಳ್ಳುವದು. ಕರ್ನಾಟಕದ ಪಾಂಡಿತ್ಯವು ಏಕೀಕರಿಸಿದರೆ ಪ್ರಗತಿಯು ಭರದಿಂದಬೆಳೆಯುವದು.

೪ ಮೈಸೂರ ವಿದ್ಯಾಪೀಠವನ್ನು ಬಿಟ್ಟು ಮತ್ತೊಂದನ್ನು ಸ್ಥಾಪಿಸಿದರೆ ಎರಡೂ ಪೀಠಗಳು ಶುದ್ಧ ಕನ್ನಡವಾಗಿ ಎರಡೂ ಧ್ಯೇಯವು ಒಂದೇ ಆಗುವದರಿಂದ ಎರಡೂ ಪೀಠಗಳ ಐಕ್ಯದಿಂದ ಈಗ ವಾಙ್ಮಯದಲ್ಲಿ ಕಣ್ಣಿಗೆಬೀಳುವ ಬೇಧವು ಅಡಗಲಿಕ್ಕೆ ಮಾರ್ಗವಾಗುವದು ಆದರಿಂದ ಎರಡೂ ಪೀಠಗಳ ಲಾಭ ವಿರುವದೇ ಹೊರ್ತು ಹಾನಿಯು ಇಲ್ಲವೇ ಇಲ್ಲಾ.

೫ ಅಖಿಲ ಕರ್ನಾಟಕದ ವಿಶ್ವವಿದ್ಯಾಲಯಕ್ಕೆ ಕೆಲಕೆಲವು ಸಂಸ್ಥಾನಗಳನ್ನು ಒಳಪಡಿಸುವದು ಧನಸಹಾಯದ ದೃಷ್ಟಿಯಿಂದಲೂ ಪ್ರಾಕೃತಿಕ ದೃಷ್ಟಿಯಿಂದಲೂ ತೊಂದರೆ ಬರಬಹುದು. ಆದರೆ ಈ ಆತಂಕವನ್ನು ಶೀಘ್ರವಾಗಿ ದೂರಮಾಡಿಕೊಳ್ಳಲು ಬರುವಂತಿರುವದರಿಂದಲೂ ಏಕೀಕರಣದಿಂದ ಲಾಭವಾಗುತ್ತಿರುವದರಿಂದಲೂ ಕರ್ನಾಟಕ ವಿದ್ಯಾಪೀಠವು ಒಂದೇ ಯಾಗಿರುವದು ಅತ್ಯವಶ್ಯವು.

೬ ಮೈಸೂರ ವಿದ್ಯಾಪೀಠವನ್ನು ಅಖಿಲ ಕರ್ನಾಟಕದ ಪೀಠವನ್ನಾಗಿ ಮಾಡುವದು ಕಷ್ಟಮಯವೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಅದು ಸಮಂಜಸವಲ್ಲ. ಈಗಾಗಲೇ ಸ್ಥಾಪಿತವಾದ ವಿದ್ಯಾಪೀಠವು ಮೈಸೂರ ಕರ್ನಾಟಕಕ್ಕೆ ಮಾತ್ರ ಸಂಬಂಧಿಸಲ್ಪಟ್ಟಿದ್ದು ಇದ್ದು, ಅದೇ ಅಖಿಲ ಕರ್ನಾಟಕಕ್ಕೂಸಂಬಂಧ ಪಡುವದು ಕೇವಲ ಕನ್ನಡಿಗರ ಇಚ್ಛೆಯ ಮೇಲೆಯೇ ಅವಲಂಬಿಸಿರುವದು. ಸ್ವರೂಪದಲ್ಲಿ ತುಸು ಹೆಚ್ಚುಕಡಿಮೆಗಳನ್ನು ಮಾಡಿಕೊಳ್ಳುವದು ಸಹಜವದೆ. ಇದರಲ್ಲಿ ರಾಜಕಾರಣದ ಸಂಬಂಧವಿಲ್ಲದೆ ಕೇವಲ ವಿದ್ಯಾವಿಷಯಕವಾದುದರಿಂದ ಮೈಸೂರ ಸಂಸ್ಥಾನದವರು ಕೂಡ ಗುದ್ದುಮುರಿಗೆ ಹಾಕುವ ಪ್ರಸಂಗವು ಬರಲಾರದು. ಆದರೆ ಮೈಸೂರ ಕನ್ನಡಿಗರು "ಒರಟು ಜನರ ಕೂಡ ಗುದ್ದಾಡುವದು ಕಷ್ಟ, ಅವರಿಗಾಗಿ ಹಣವನ್ನು ನಾವೇಕೆ ಹೆಚ್ಚು ತೆತ್ತಬೇಕು." ಎಂಬದಾಗಿ ಉದ್ಗಾರವನ್ನು ತೆಗೆಯುವ ಪ್ರಸಂಗವದೆ. ಆದರೆ ಕರ್ನಾಟಕದ ಅಭಿಮಾನವನ್ನೂ ಐಕ್ಯದಿಂದಾಗುವ ಲಾಭವನ್ನೂ ಹಾಗೂ ಮೈಸೂರ ದೇಶಕ್ಕೆ ಬರುವ ಮಹತ್ವವನ್ನೂ ಲಕ್ಷ್ಯಕ್ಕೆ ತಂದರೆ ಮೊದಲನೇಯ ಉದ್ಗಾರವು ನಿಲ್ಲಲಾರದು. ಇನ್ನು ಇತರ ಕರ್ನಾಟಕದ ವಿಷಯವಾಗಿ ಹೆಚ್ಚಾಗುವ ಹಣವನ್ನು ಮೈಸೂರ ಕರ್ನಾಟಕ ವಿದ್ಯಾಪೀಠಕ್ಕೆ ಮಿಕ್ಕವರು ಸಲ್ಲಿಸಿದರೆ ಎರಡನೇ ಉದ್ಗಾರವೂ ನಿಲ್ಲಲಾರದು. ಆದುದರಿಂದ ಮೈಸೂರಸ್ಥರೂ ಹಾಗೂ ಇತರರೂ ಬೆದರುವ ಕಾರಣವಿಲ್ಲ.

೭ ಈ ಮೇಲೆ ವಿವರಿಸಿದ ಕಾರಣಗಳಿಗಾಗಿ ಮೈಸೂರಿನ ವಿದ್ಯಾಪೀಠಕ್ಕೆ ಇತರರೂ ಸಹ ಭಕ್ತಿಪುರಸ್ಸರವಾಗಿ ನಡೆದುಕೊಳ್ಳುವದು ಶ್ರೇಯಸ್ಕರವು. ಮೈಸೂರ ನಗರವು ಅಖಿಲ ಕರ್ನಾಟಕದ ಮಧ್ಯವರ್ತಿಸ್ಥಾನವಲ್ಲವೆಂಬುವ ಅಡ್ಡಿಯು ಅಷ್ಟು ಸಮಂಜಸವಲ್ಲ. ಈಗಿರುವ ಮುಂಬಯಿ ಮದ್ರಾಸ, ಕಲಕತ್ತಾ ನಗರಗಳು ಆಯಾಪ್ರಾಂತಗಳ ಅಥವಾ ದಿಲ್ಲಿಯು ಇಡೀ ಭರತ ಖಂಡದ ಮಧ್ಯವರ್ತಿಸ್ಥಾನಗಳೇ? ಈಗ ಹೊಸದಾಗಿ ಮಹಾರಾಷ್ಟ್ರಕ್ಕೆ ಮಾಡಬೇಕೆಂದಿರುವ ಪುಣೆಯಾದರೂ ಮಧ್ಯವರ್ತಿಸ್ಥಾನವೇ? ಮುಖ್ಯ ಸಭೆಗಳು (ಸಿನೇಟ ಸಿಂಡಿಕೇಟ) ಮೈಸೂರಿನಲ್ಲಿ ನಡೆದು ಉಪ ಸಭೆಗಳೂ ಕಾರ್ಯನಿರ್ವಾಹಕ ಮಂಡಳವೂ ಉತ್ತರ ಕರ್ನಾಟಕದ ಒಂದು ಕೇಂದ್ರಸ್ಥಾನದಲ್ಲಿ ನಡೆಯುವಂತೆ ವಿದ್ಯಾಪೀಠದ ರಚನೆಯಾದರೆ ಅನುಕೂಲವಾಗುವದಿಲ್ಲವೇ?

೮ ಹೈದರಾಬಾದದ ಉಸ್ಮಾನಿಯಾ ವಿದ್ಯಾಪೀಠಕ್ಕೆ ಸೇರಿದ ಕರ್ನಾಟಕ ಭಾಗವಾಗಲೀ, ಕೊಲ್ಹಾಪೂರ ಸಾಂಗಲಿ ಮೊದಲಾದ ದ್ವಿಭಾಷೆಯುಳ್ಳ ಕರ್ನಾಟಕಭಾಗವಾಗಲೀ ಆಯಾ ಭಾಗದಲ್ಲಿರುವ ಕರ್ನಾಟಕಸ್ಥರ ಮನಸ್ಸಿನಲ್ಲಿ ಶುದ್ಧ ಕನ್ನಡ ಭಾಷೆಯ ಸೇವೆಯನ್ನೇ ಮಾಡುವ ಉತ್ಕಟೇಚ್ಛೆಯಾದರೆ, ಆಯಾ ಭಾಗದಲ್ಲಿರುವ ಕನ್ನಡ ದೇಶದ ಮೇರೆಯನ್ನು ಗೊತ್ತು ಪಡಿಸಿ, ಆ ಭಾಗವನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಜೋಡಿಸುವದು ಅಷ್ಟೇನೂ ಕಠಿಣತರವಲ್ಲ ಅಸಾಧ್ಯವಂತೂ ಅಲ್ಲವೇ ಅಲ್ಲ ಈ ಎಲ್ಲ ಕಾರಣಗಳಿಂದ ಮೈಸೂರ ವಿಶ್ವವಿದ್ಯಾನಿಲಯವನ್ನು ಅಖಿಲ ಕರ್ನಾಟಕ ವಿದ್ಯಾಪೀಠವನ್ನು ಮಾಡುವದು ಸಯುಕ್ತಿಕವೂ ಭೂಷಣಾವಹವೂ ಅದೇ ಸುಲಭವಾದುದೂ ಎಂದೂ ನನ್ನ ಅಭಿಪ್ರಾಯವು.

೧೦-೧೨-೧೯೨೫ } **ಶಿವಮೂರ್ತಿ ಸ್ವಾಮಿ ಹಿರೇಮಠ**
ಬಿ. ಎ. ಎಲ್ ಎಲ್. ಬಿ.
ಹಾವೇರಿ

ರಂಗಭೂಮಿ

ರಂಗಭೂಮಿಯೆಂಬ ಶಿರೋನಾಮದಿಂದ "ಕನ್ನಡಿಗ"ನ ೩೩ ನೇ ಸಂಚಿಕೆಯಲ್ಲಿ ಶ್ರೀಯುತ ಕೃಷ್ಣಶರ್ಮರವರು ಒಂದು ಲೇಖನವನ್ನು ಬರೆದಿದ್ದರಷ್ಟೆ? ಅದರವಲೋಕನವನ್ನು ಮಾಡಿದ ಯಾವನಿಗಾದರೂ, ಲೇಖಕರು ವಿಡಂಬನ ದೃಷ್ಟಿಯನ್ನಿಟ್ಟು, ವಿಮರ್ಶಗಾರರಂತೆ ನಿರ್ದಿಷ್ಟ ಭಾವನೆಯನ್ನು ಹೊಂದಿ, ಕೆಟ್ಟದೊಳ್ಳೆಯದೊಳು ಒಮ್ಮೆಲೇ ಹೊಕ್ಕು, ಅವೆರಡನ್ನು ತೂಗಿ ತಮ್ಮ ನಿರ್ಧಾರಗಳನ್ನು ಪಡೆದಿಲ್ಲವೆಂಬುದು ವ್ಯಕ್ತವಾಗುತ್ತದೆ. "ರಂಗಭೂಮಿ" ಎನ್ನುವದರ ಬದಲು "ನೊಂದವನ ನುಡಿ" ಎಂದಿದ್ದರೆ ಚನ್ನಾಗಿರುತ್ತಿತ್ತು. ಅಂತಸ್ಥಾಪದಿಂದ, ಸ್ವಾನುಭವವೊಂದನ್ನೇ ಕಣ್ಣು ಮುಂದಿಟ್ಟು

---

†ಸತ್ಯಾಂಶವು ಹೀಗಿರುವಂತೆ ಕಾಣುವದಿಲ್ಲ. ಸಂ. ಕ.

ಕೊಂಡು ರಂಗಭೂಮಿಯಮೇಲೆ ಕಳಂಕವನ್ನು ತಂದಿರುವುದು ಸರಿಯಲ್ಲ. ಲೇಖಕರು ಭಾಷೆಯಕಡೆಗೆ ಕೊಂಚಗವಾನ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಈಗ ಲೇಖನದ ಒಂದೊಂದು ವಿಷಯವನ್ನು ತೆಗೆದುಕೊಂಡು ಪರೀಕ್ಷಿಸೋಣ.

ಕಾಮಾಲೆ ರೋಗದವನಿಗೆ ಎಲ್ಲವೂ ಹಳದಿ ಯಾಗಿಯೇ ಕಾಣುವುದು. ಆ ಜಾಡ್ಯವಿಲ್ಲದ ಇತರರಷ್ಟು ಕಂಡರೂ, ಅವರೂ, ಕಾಮಾಲೆಯುವರಂತೇ ಅವನಿಗೆ ಗೋಚರರಾಗುವರು ರಸದಲ್ಲಿ ಸಾರವನ್ನೆಳೆಯದೆ ನಿಸ್ಸಾರವನ್ನಾದರದಿಂದಪ್ಪುವರಪಾಡೆಲ್ಲಾ ಇಷ್ಟೇ ಕೊಂಚಮಟ್ಟಿಗೆ ರೂಪತ್ತಷ್ಣೆಯೂ ಸುಖಾಗಮನವಾದದ್ದೇ ರೂಪದ ಚಿದ್ರೂಪದಕಡೆಗೂ, ಪ್ರಣಯದ ಪ್ರೇಮದಕಡೆಗೂ ದೃಷ್ಟಿಯಿಡದೆ ಕಾಮಪೂರಿತವಾದ ಕೂರ್ಪೆಯಕಡೆಗೇಕೆ ನೋಡಬೇಕು. ಸ್ನೇಹವು ತಾನೇತಾನಾಗಿ ಭಾವಿಕ ಕೃಷ್ಣಲೀಲೆ ಯಾಗುವದಿಲ್ಲ. ಸ್ನೇಹವನ್ನು ವೃದ್ಧಿ ಬೆಳಸಿ, ಅದರ ಸೌಜನ್ಯದಕಡೆಗೆ ನೋಡದೇ ಮನ್ಮಥ ವಿಕಾರವನ್ನಾಗಿ ಮಾಡಿಕೊಂಡ, ಪುರುಷ ಪಾತ್ರವನ್ನು ತೆಗೆದುಕೊಂಡಿರುವ ಪತ್ನಿಗೆ ಕಾಮಾಗ್ನಿಗೆ ಪತಂಗದ ಹುಳುಗಳಾಗಲು ಇಚ್ಛಿಪಟ್ಟುದು ಸ್ನೇಹದ ತಪ್ಪೋ? ನಟರತಪ್ಪೋ? ರಂಗಭೂಮಿಯ ತಪ್ಪೋ? ಸ್ತ್ರೀ ಪಾತ್ರವನ್ನು ವಹಿಸಲು ಬಹುಮಂದಿ ಇಷ್ಟಪಡುವುದಿಲ್ಲ ಕೆಲವರಿಗೆ ಪುರುಷ ಪಾತ್ರ ಕೊಡುತ್ತೇನೆಂದರೂ ಬೇಡ. ಅದರ ಫಲಿತಾಂಶವು ಒಳ್ಳಿತಾಗದಿದ್ದಲ್ಲಿ ದೋಷವನ್ನು ರಂಗಭೂಮಿಯಮೇಲೆ ಹಾಕುವುದೋ?

ರಸವು ಅಂತಃಕರಣದ ಅಮೃತವೆಂಬದನ್ನು ಮರೆಯುವವನನ್ನು ನಟ ಅಥವಾ ಅಭಿನಯಗಾರನೆಂದು ಹೇಳಲಿಕ್ಕೇ ಬರುವುದಿಲ್ಲ. ರಂಗಭೂಮಿಯ ಕೇಂದ್ರವೆಲ್ಲಾ ಅಲ್ಲಿ ಸಂಧಿಸುತ್ತದೆ. ರಸವನ್ನು ರಸಾಭಾಸವನ್ನಾಗಿ ಮಾಡುವದು ಸಾಮಾನ್ಯವಾಗಿ ವಿದ್ಯಾವಂತರ ಸಂಘಗಳಲ್ಲ; ಹಾಳು ಹೊಟ್ಟೆಗಾಗಿ ನಾಟ್ಯ ಕಲೆಯನ್ನು ಹಿಡಿದಿರುವ ದೂಷಿತ ಜನರ ಸಂಘಗಳು "ಇಂದ್ರಿಯೇಚ್ಛೆಯ ವಿಕಾರವೇರಸವೆಂಬ ಭ್ರಾಂತಿಯು ನಾಟ್ಯರಂಗದಲ್ಲಿರಸಧರ್ಮಿಗೆ ಮೊದಲು ಹಿಡಿಯುತ್ತದೆ" ಎಂಬುದು ಶುದ್ಧ ಸುಳ್ಳು. ನಾಟ್ಯರಂಗದಲ್ಲಿ ನಟನು (ರಸಧರ್ಮಿಯು) ತಾತ್ಕಾಲಿಕವಾಗಿ, ಅಭಿನಯಕ್ಕನುಕೂಲವಾಗಿ ರಸಪ್ರದರ್ಶನ ಮಾಡುವನಲ್ಲದೆ ಮೇರೆ ಮೀರನು. ರಸಪ್ರದರ್ಶನವೊಂದಲ್ಲದೆ ಬೇರೆ ಕೆಲಸಗಳಾವುವೂ ಇಲ್ಲದಿದ್ದರೆ ಹಾಗೆ ಮಾಡಿದರೂ ಮಾಡಬಹುದಾಗಿತ್ತು. (ಅದೂ ನನಗೆ ಸಂಶಯ) ಆದರೆ ಮಾತು, ಗಾಯನ, ಭಾವನಾ ಪ್ರಕಟನ, ಭೂಮಿಕಾದಿ ಬಹು ವಿಷಯಗಳಿರುವುದರಿಂದ ಅವನಿಗೆ ಪೂರ್ಣ ಅವಕಾಶವೇ ದೊರೆಯುವದಿಲ್ಲ, ಅವಕಾಶವಿಲ್ಲದ ಮೇಲೆ ಮಾರ್ಗವಿಲ್ಲ. ರಂಗದಲ್ಲಿ ಇಂದ್ರಿಯೇಚ್ಛೆ ಹೊಂದಿದವರಾರೂ ನಮಗೆ ತಿಳಿದ ಹಾಗೆ ಇಲ್ಲ. (ಅವರು ನಮ್ಮ ಲೇಖಕರಿಗೆ ಹೇಗೆ ಪರಿಚಯಸ್ಥರಾದರೋ?!?) ಈ ಚೇಚಿಗೆ ಆಹರಣೆಗೆ ಬಂದ (ಬಹುಶಃ ಈ ಚಿನ ಸಂಗ್ರಾಮ ದಿಂದಿರಬಹುದು) ಮಮತಾಹೀನವಾದ ಕೆಟ್ಟ ಸುಖಾಪೇಕ್ಷೆಯು ಲೇಖಕರು ತಿಳಿಯುವಂತೆ ರಂಗಭೂಮಿಯನ್ನೆಲ್ಲಾ **ಎಂದೆಂದಿಗೂ** ಆವರಿಸಿಲ್ಲ. ಕೆಲಮಂದಿ ರೂಪವಂತ ಬಾಲಕರು ಅದಕ್ಕೆ ತುತ್ತಾದರೆಂದರೆ ನಾಟಕಕ್ಕೆ ಸೇರಿಸುವ ಪ್ರತಿಯೊಬ್ಬ ರೂಪವಂತ ತರುಣನೂ ಹಾಗೆಯೇ ಎಂದು ಅವರು ಹೇಳುವುದು, ರಂಗಭೂಮಿಯ ವಿಷಯದಲ್ಲಿ ಅವರಿಗಿರುವ ಸಂಕುಚಿತ ಪರಿಚಯವನ್ನು ತೋರಿಸುತ್ತದೆ."

"ಅಭಿನಯದಲ್ಲಿ ಅನುಭವಿಸುವ ಭಾವನೆಯು ಅಲ್ಲಿಗೇ ತೀರಿ ಅಭಿನಯಗಾರರ ಜೀವನದಲ್ಲಿ ತೊಂದರೆ ತೊಡಕುಗಳನ್ನೊಡ್ಡದಿರುವುದು ನನ್ನ ಅನುಭವಕ್ಕೆ ವಿರೋಧವಾದ ಮಾತೆಂದು ತಿಳಿಸುತ್ತಾರೆ ಲೇಖಕರ ಅಭಿಪ್ರಾಯದಂತೆ ನಾಟ್ಯರಂಗದಲ್ಲಿ ನಟನಿಗೆ ಕೂಡುವ ಕಾಮೇಚ್ಛೆಯು ಜೀವನರಂಗದಲ್ಲಿಯೂ ಬರುವುದಾದರೆ, ನಾಟ್ಯರಂಗದಲ್ಲಿ ಅನುಭವಿಸತಕ್ಕ ಭಕ್ತಿ. ವೈರಾಗ್ಯ ಪ್ರೇಮಾದಿ ಭಾವನೆಗಳೂ ಕೂಡ ಜೀವನರಂಗದಲ್ಲಿ ಬರಬೇಕಷ್ಟೆ "ಇಲ್ಲ" ವೆಂದು ಉತ್ತರ ಬಂದರೆ ಮಾನವನು ಕೇವಲ ಪಾಪದ, ಕೃತ್ರಿಮದ, ಅಪರಾಧದ ಮೂರ್ತಿ ಎಂದ ಹಾಗಾಯಿತು. ಇದು ಹಿಂದೂ ಧರ್ಮದ ಒಂದು ಮೂಲ ಸೂತ್ರಕ್ಕೇ ಕೊಡಲಿಯ ಪೆಟ್ಟಾಗಿದೆ ಗೀತಾನಾಯಕನು ಹೇಳುವಂತೆ "ಮಾನವನ್ನು ಮಾಯೆಯಿಂದ ಕೂಡಿದ ಪರಮಾತ್ಮದ ಒಂದು ಅಣು ಕಾಮೇಚ್ಛೆಯನ್ನವನನುಭವಿಸಿದರೆ ಇತರ ಸದಿಚ್ಛೆಗಳನ್ನೆಲ್ಲಾ ಅವನನುಭವಿಸಲೇಬೇಕು" ಲೇಖಕರೊಬ್ಬರಿಗೆ ಅಥವಾ ಅವರ ಗೆಳೆಯರಿಗೆ ಇದು ಅನುಭವಕ್ಕೆ ವಿರುದ್ಧವಾದ ಮಾತಾಗಿರಬಹುದು, ಆದರೆ ಇತರರಿಗಲ್ಲ.

ರಾಮ, ಕಾಮರಾಜ್ಯಗಳಿಗೆ ಲೇಖಕರು ಅಂತರ್ಯವನ್ನು ಕಲ್ಪಿಸಿಲ್ಲ. ಕಲ್ಪಿಸುವ ಬಗೆ ಅವರಿಗೆ ಗೊತ್ತಿಲ್ಲ" ರಂಗಭೂಮಿಯಲ್ಲಿಟ್ಟ ಪ್ರಥಮ ಹೆಜ್ಜೆಯು ಕಾಮರಾಜ್ಯದಲ್ಲಿಟ್ಟ ಮೊದಲನೆಯ ಹೆಜ್ಜೆಯವರಿಗಾದರೆ ನನಗದು ಪ್ರೇಮ ಸಿಂಹಾಸನ. ಅವರ ದೃಷ್ಟಿಯಲ್ಲಿ ನಟನು ಕಾಮರಾಜ್ಯದರಸಿಯ ದಾಸಾನುದಾಸನಾದರೆ ನನಗವನು ಪ್ರೇಮರಾಜ್ಞಿಯ ಪ್ರಿಯತಮ" ದೃಷ್ಟಿ ಮಾಂದ್ಯವಿಲ್ಲದವರಿಗೆ ಅದರ ನೈಜವಾದ ತಳಪದವು ಕಾಣಬರುತ್ತದೆ.

ವಿದ್ಯುಚ್ಛಕ್ತಿಯನ್ನು ಮಾನವನು ಬಗ್ಗಿಸಿ ತನಗನುಕೂಲವಾಗುವಂತೆ ಮಾಡಿಕೊಳ್ಳದಿದ್ದರೆ ಹೇಗೆ ಅದು ತನ್ನ ಮಹತ್ವವನ್ನು ತೋರಿಸಲಾರದೋ ಹಾಗೆಯೇ ರಂಗಭೂಮಿಯನ್ನು ಮಾನವನು ಪ್ರವೇಶಿಸದೆ, ತನ್ನ ಸಂಸರ್ಗಕ್ಕನುಕೂಲವಾಗುವಂತೆ ಅದನ್ನು ಬಗ್ಗಿಸಿಕೊಳ್ಳಲಾರದಿದ್ದರೆ, ಖಂಡಿತವಾಗಿ ಅದು ತನ್ನ ಮಹತ್ವವನ್ನು ತೋರಲಾರದು. ತನ್ನ ವೈಶಿಷ್ಟ್ಯವನ್ನು ತನ್ನೊಳಗೆ ಅಡಗಿಸಿಕೊಂಡು ಸುಮ್ಮನೆ ಕುಳಿತಿರುತ್ತದೆ.

ಲೇಖಕರೂ, ಮತ್ತು ಲೇಖಕರ ಅಭಿಪ್ರಾಯವುಳ್ಳ ಅವರ ಗೆಳೆಯರೂ, ಹಗ್ಗವನ್ನು ಹಾವೆಂದು ಭ್ರಮಿಸಿ, ಬೆದರಿ ಬೆಂಡಾಗಿರುವರಲ್ಲಿ ಸಂದೇಹವೇ ಇಲ್ಲ. ನಾನೂ, ಶ್ರೀ ಸದಾಶಿವರಾಯರೂ, ಶ್ರೀನಿವಾಸರಾಯರೂ ಹಗ್ಗವನ್ನು ಹಗ್ಗವೆಂದೇ ತಿಳಿದಿರುವೆವು. ಒಂದು ವೇಳೆ ಹಾವು ಬಂದು ಹಗ್ಗದಂತೆ ಇಳಿಬಿದ್ದು, ನಮಗೆ ಮೋಸಪಡಿಸುತ್ತಿದ್ದರೆ ಅದರ ಕ್ರೂರ ದಂತಗಳನ್ನು ಕಳಚಿ ಅದನ್ನೇ ಹಗ್ಗದಂತೆ ಉಪಯೋಗಿಸ ತಕ್ಕವರಿರುವೆವು.

ಅಪಶ್ರುತಿಯು, ನಮ್ಮಂತಹ, ನಿಮ್ಮಂತಹ, ಸದಾಶಿವರಾಯ, ಶ್ರೀನಿವಾಸ ರಾಯರಂತಹ ಕಲಾ ಮಾತೆಯ ಸೇವೆಯನ್ನು ಜ್ಞಾನ ಚಕ್ಷುಸ್ಸುಗಳಿಂದ ಸೇವಿಸಿ ಅಕೆಯ ಸಂದೇಶವನ್ನು ಜನಸಾಮಾನ್ಯಕ್ಕೆ ತಿಳಿಸಲು ಸಿದ್ಧರಾದಾಗ, ಕಡೆಗಾಣುವುದು.

ತರುಣ ಬಂಧುಗಳೇ:— ನಮ್ಮೀ ಸದುದ್ಯಮಕ್ಕೆ ನೀವೂ ನೆರವಾಗಿ, ಜೀರ್ಣವಾಗಿರುವ ಕರ್ನಾಟಕದ ಪ್ರಾಚೀನ ಕಲೆಯಾದ "ನಾಟಕಕಲೆ" ಯನ್ನು ಉದ್ಧಾರಮಾಡಿ ಕಲಾಮಾತೆಯ ಪ್ರೇಮಕ್ಕೆ ಪಾತ್ರರಾಗುವುದಕ್ಕೆ ಸಿದ್ಧರಾಗುವುದಿಲ್ಲವೇ? ನಿರಾಕೃತವಾಗಿರುವ ಈ ಕಲೆಯನ್ನು ಮುಂದೆ ತಂದು ಅದರಲ್ಲಿ ಓಜರಾಗಿ, ಆ ಚಂದ್ರಾರ್ಕವಾದ ಕೀರ್ತಿಗೂ, ಕನ್ನಡಿಗರ ಚಿರ ಕೃತಜ್ಞತೆಗೂ ಪಾತ್ರರಾಗುವುದಿಲ್ಲವೇ?

"Facts thrust into the Realm of Fancy
You retreat.

ಲೇಖಕ:— ಆ. ನ. ಕೃಷ್ಣರಾವ
ಅನ್ನಪೂರ್ಣ ವಿಶ್ವೇಶ್ವರಪುರಂ ಬೆಂಗಳೂರುಸಿಟಿ.

ವರ್ತಮಾನಸಾರ

ಇಹವೃತ್ತ

ಮುಂಡಣಗಾಳಿ ಬೀಸುತ್ತಲಿದೆ

ಇಲ್ಲಿಯ ಬಸವೇಶ್ವರ ಹಾಯಸ್ಕೂಲಿನ ಸ್ಥಿತಿಗತಿಯನ್ನು ತಿಳಿದು ಕೊಳ್ಳುವದಕ್ಕಾಗಿ, ಮುಂಬೈ ವಿಶ್ವವಿದ್ಯಾಲಯದಿಂದ ಫಾದರ ಬ್ಲಾಟರ ಮತ್ತು ಶಹಾ ಇವರು ಮಂಗಳವಾರ ದಿನ ಬಂದು ಆ ಹೊತ್ತೇ ಬೆಳಗಾವಿಗೆ ಹೋದರು

ಮುನಸಿಪಾಲ್ಟಿಯಲ್ಲಿಯ ರೀಫಂಡ ಹಣದ ಗೊಂದಲವು ಇನ್ನೂ ಹಿಡಿದೆ ಆವುದೂ ನಿಶ್ಚಿತವಾಗಿಲ್ಲ.

ಪ್ರಾಥಮಿಕ ಶಾಲೆಯ ಬಗ್ಗೆ ಸರಕಾರದಿಂದ್ದ ಹಕ್ಕುಗಳೆಲ್ಲ ಮುನಸಿಪಾಲ್ಟಿಗೆ ಬಂದದ್ದರಿಂದ ಈ ಸಲ ಈ ಶಾಲೆಗಳ ಮೇಲ್ವಿಚಾರಣೆಗಾಗಿ ಪುಟೀಯವರು ಬರುವದಿಲ್ಲ- ಆದುದರಿಂದ ಮುನಸಿಪಾಲ್ಟಿಯವರು ಊರಲ್ಲಿಯ ಸಭ್ಯಗೃಹಸ್ಥರಿಗೆ ಪ್ರಾರ್ಥಿಸಿ, ಬೇರೆ ಬೇರೆ ಗೃಹಸ್ಥರು ಶಾಲೆಗಳನ್ನು ಸಂದರ್ಶಿಸುವ ಏರ್ಪಾಡು ಮಾಡಿದ್ದಾರೆ.

ಮುಂಬೈ ಕರ್ನಾಟಕ

ಧಾರವಾಡದಲ್ಲಿ ಪ್ರಾಂತಿಕ ಸಹಕಾರ ಪರಿಷತ್ತಿನ ಕಾರ್ಯವು, ಯಶಸ್ವಿಯಾಗಿ ಜರುಗಿತು ಸಹಕಾರೀ ಸಂಘಗಳು ಬಡ ರೈತರ ಸಲುವಾಗಿದ್ದರೂ, ಬಡವರ ಸಾಲದ ಭವಣೆಗಳೇನೂ ತಪ್ಪಲೊಲ್ಲವೆಂದು ಅಧ್ಯಕ್ಷರು ತಿಳಿಸಿಹೇಳಿದರು

ನಗರ 'ಟೀಪಿಂಗೂ' ಸಾವಂತವಾಡಿಯ ಮಹಾರಾಜರ 'ಟೀ ಮಗೂ ಕ್ರಿಕೆಟ್ ಸಂದ್ಯಾಟಗಳು ವಿಜಾಪೂರದಲ್ಲಿ ನಡೆದಿವೆ. ಈ ಬಗ್ಗೆ ಊರಲ್ಲೆಲ್ಲ ಗೊಂದಲವೇ ಎದ್ದಿದೆ! ಸ್ವದೇಶೀ ಆಟಗಳಿಗೆ ಈ ಬಗೆಯ ಕೋಲಾಹಲವು ಹುಟ್ಟುವದಿಲ್ಲ! ಭರತಖಂಡದ ಭಾಗ್ಯವಿದು!!!

ಭಟ್ಕಳ ಬಂದರದ ಯೋಜನೆಯು ಸರಕಾರದ ಎದುರಿನಲ್ಲಿ ಈಗಿಲ್ಲವೆಂಬದಾಗಿ ಶ್ರೀ. ರಕ್ಕಸಗೀ ದೇಸಾಯರ ಪ್ರಶ್ನೆಗೆ ಸರಕಾರದ ಉತ್ತರವು ದೊರೆತಿದೆ.

ಛತ್ರಗುಡೇರಿಯ ಕನ್ನಡಶಾಲೆಯ ಬಡ ಶಿಕ್ಷಕನೋರ್ವನಿಗೆ ಆದ ಶಿಕ್ಷೆಯ ಬಗ್ಗೆ ೧೪-೮-೨೫ ನೇ ತಾ॥ ನ 'ಕನ್ನಡಿಗ' ದಲ್ಲಿ ಬಂದ ವಿಷಯವನ್ನು ವಿಚಾರಿಸುತ್ತಿರುವೆವೆಂದು ಶ್ರೀ. ಸರದೇಸಾಯರ ಪ್ರಶ್ನೆಗೆ ಸರಕಾರದವರು ಉತ್ತರ ಕೊಟ್ಟಿರುವರು

ಮದ್ರಾಸ ಕರ್ನಾಟಕ

'ಸತ್ಯಸ್ವರ' ವೆಂಬ ಕನ್ನಡ ಇಂಗ್ಲೀಷ ಮಾಸಪತ್ರಿಕೆಯು ಕನ್ನಡ ಮಿಶನ್‌ದವರಿಂದ ಮಂಗಳೂರಿನಲ್ಲಿ ಪ್ರಾರಂಭವಾಗಿದೆ. ಈ ಮಿಶನ್‌ದ ಪ್ರೊಟೆಸ್ಟಂಟ ಕ್ರಿಶ್ಚಿಯನ್ನರನ್ನು ಸುಧಾರಿಸುವದೇ ಇದರ ಉದ್ದೇಶವು. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ೧೨ ಆಣೆ ಮಾತ್ರ- ಇದರ ಪ್ರತಿಯೊಂದನ್ನು 'ಕನ್ನಡಿಗ' ನಿಗೆ ಕಳಿಸಿದ್ದಕ್ಕಾಗಿ ಆಭಾರಿಯಾಗಿದ್ದೇವೆ. ಭಾಷೆಯ ಬಗ್ಗೆ ಹೆಚ್ಚಾಗಿ ಗಮನ ಕೊಡಬೇಕಾಗಿ ಚಾಲಕರಿಗೆ 'ಕನ್ನಡಿಗ'ನ ಸೂಚನೆಯಿದೆ. 'ಉಪದೇಶಿಸಿಯಾನು' 'ದೊರಕೀತೆಂದು' 'ಬೆಳಗ್ಗಿನ' ಇವೇ ಮೊದಲಾದ ಪ್ರಯೋಗಗಳನ್ನು ಬಿಡುವದು ಒಳಿತು. ಉತ್ತರ ಕರ್ನಾಟಕಕ್ಕೆ ಸದರ್ನಮರಾಠಾ ಎಂಬದಾಗಿ ಕರೆದದ್ದು ತಪ್ಪು

ತಾಡಪತ್ರಿಯ ಮುನಸಿಪಾಲ್ಟಿಯ ಸಭಾಸದರು ಮತದಾರರ ಇಚ್ಛೆಯ ವಿರುದ್ಧವಾಗಿ ತೆರಿಗೆಯನ್ನು ಹೆಚ್ಚಿಸಿದ್ದರಿಂದ, ಈಗಿನ ಸಭಾಸದರೆಲ್ಲ ಕೂಡಲೇ ರಾಜೀನಾಮೆಯನ್ನು ಕೊಡಬೇಕಾಗಿ ಆಗ್ರಹತೊಟ್ಟಿದ್ದಾರೆ. ರಾಜೀನಾಮೆ ಕೊಡುವವರೆಗೆ ಹರ್ತಾಳವನ್ನು ಪಾಲಿಸುವೆವೆಂದು ವ್ಯಾಪಾರಸ್ಥರು ನಿರ್ಧರಿಸಿದ್ದಾರೆ. ಈಗ್ಗೆ ೪–೫ ದಿನ ಬಾಜಾರವು ಬಂದಾಗಿದೆ.

ಕೋಯಿಮುತ್ತೂರಿನಲ್ಲಿ ಬ್ರಾಹ್ಮಣೇತರ ಸಂಘವು ಸ್ಥಾಪಿಸಲ್ಪಟ್ಟಿದೆ.

ಬಳ್ಳಾರಿಯಲ್ಲಿ ಚುನಾವಣೆಯ ಕಾಲದಲ್ಲಿ ರಾಷ್ಟ್ರೀಯ ನಿಶಾನೆಯನ್ನು 'ಪೋಲಿಂಗ ಸ್ಟೇಶನ್' ದಲ್ಲಿಹಿಡಿಯಬಾರದಾಗಿ ಅಲ್ಲಿಯ ಸಬ್ ಮ್ಯಾಜಿಸ್ಟ್ರೇಟರು ಕೊಟ್ಟ ಹುಕುಮಿನ ಬಗ್ಗೆ ಮದ್ರಾಸ ಕಾಯದೇ ಮಂಡಲದಲ್ಲಿ ಪ್ರಶ್ನೋತ್ತರಗಳಾದವು. ಈ ಮ್ಯಾಜಿಸ್ಟ್ರೇಟರ ಕೃತಿಯು ತಪ್ಪಿನದೆಂದು ಸರಕಾರವು ಒಪ್ಪಿತು. ಆದರೆ ತಪ್ಪುಗಾರನಿಗೆ ತಾವು ಯಾವ ಬಗೆಯ ಶಿಕ್ಷೆಯನ್ನು ಕೊಡುವದಿಲ್ಲವಂತೆ!

ಕನ್ನಡ ಮಹಾಭಾರತವನ್ನು ಸುಲಭರೀತಿಯಿಂದ ಸಂಗೀತರೂಪವಾಗಿ ಓದುವದರಲ್ಲಿ ಪ್ರಸಿದ್ಧರಾಗಿ ಕರ್ನಾಟಕದಲ್ಲಿ ಕೀರ್ತಿಯನ್ನು ಹೊಂದಿದ ಮೈಸೂರಿನ ಶ್ರೀ. ಜಿ. ಎಸ್. ಬಿಂದೂ ರಾಯರವರಿಗೆ ಹರಪನಹಳ್ಳಿಯ ಮಹಾಜನರು, ತಮಗೆ ಕನ್ನಡನುಡಿಯ ಶ್ರೇಷ್ಠತೆಯನ್ನು ತೋರಿಸಿಕೊಟ್ಟಿದ್ದಕ್ಕಾಗಿ, ಆನಂದದಿಂದ ಒಂದು ಬೆಳ್ಳಿಯ ತಟ್ಟೆಯನ್ನು ಕಾಣಿಕೆಯಾಗಿ ಕೊಟ್ಟರು.

ಮೈಸೂರ ಕರ್ನಾಟಕ

ಬೆಂಗಳೂರಿನಲ್ಲಿ ನೂಲುವವರ ಸಂಘವೊಂದು ಸ್ಥಾಪಿಸಲ್ಪಟ್ಟಿದೆ.

ಕಣಿಯರು ತಿರುಮಕೂಡಲು ನರಸೀಪುರದಲ್ಲಿದೇವಾಲಯವನ್ನು ಪ್ರವೇಶಿಸಲು ೨೦ ನೇ ತಾ॥ ದಿನ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದಾರೆ. ಕಣಿಯರು ನರಸೀಪುರದಲ್ಲಿ ಸೇರದಾರದೆಂದು ಅಲ್ಲಲ್ಲಿಗೆ ಮಾಮುಲೇದಾರರು ಈಗಾಗಲೇ ಪೊಲೀಸರನ್ನು ಕಾವಲಿಗಾಗಿ ಇಟ್ಟಿರುವರೆಂದು ಸುದ್ದಿಯಿದೆ

ಶ್ರೀ. ಮನ್ಮಹಾರಾಣೆ ವಾಣೀ ವಿಲಾಸ ಸನ್ನಿಧಾನದವರು ತಮ್ಮ ಷಷ್ಟಿಪೂರ್ತಿ ಶಾಂತಿ ಮಾಡಿಕೊಳ್ಳಲು ಸ್ವಲ್ಪೇ ದಿನಗಳಲ್ಲಿ ಕಾಶಿಗೆ ತೆರಳುವರು.

ಬಾಳೇ ಹೊನ್ನೂರ ಮಠದ ಶ್ರೀ. ಶಿವಾನಂದರಾಜ ದೇಶಿಕೇಂದ್ರ ಸ್ವಾಮಿಗಳು ಮೈಸೂರಿನಲ್ಲಿ ಒಂದು ಸಂಸ್ಕೃತ ಶಾಲೆಯನ್ನು ಸ್ಥಾಪಿಸುವರೆಂದೂ, ಅದರ ವೆಚ್ಚಕ್ಕಾಗಿ ಆಗಲೇ ೧ ಲಕ್ಷ ರೂಪಾಯಿ ವಾಗ್ದಾನವಾಗಿರುವದೆಂದೂ ತಿಳಿಯುತ್ತದೆ

ಹಿಂದುಸ್ಥಾನ

ಬುದ್ಧ ಗಯಾದ ಬಗ್ಗೆ ಕಾಂಗ್ರೆಸ್ ಮತ್ತು ಹಿಂದೂ ಮಹಾಸಭೆಯವರಿಂದ ನೇಮಿಸಲ್ಪಟ್ಟ ಉಪಮಂಡಲದ ವರದಿಯು ಪ್ರಸಿದ್ಧವಾಗಿದೆ. ಬೌದ್ಧರೂ, ಹಿಂದೂ ಜನರೂ, ಈ ಕ್ಷೇತ್ರದ ಬಗ್ಗೆ ಸಮಾನ ಭಕ್ತಿಯುಳ್ಳವರಾಗಿದ್ದರಿಂದ ಇಲ್ಲಿಯ ಪೂಜೆಯನ್ನು ಎರಡೂ ಸಂಘದ ಪಂಚರು ಕೂಡಿಕೊಂಡು ನಡಿಸಬೇಕಾಗಿ ಉಪಮಂಡಲದ ಮತವಿದೆ.

ವಾಡಾಗಂಜೀ ಎಂಬ ಮುಂಬೈಯಿಯ ವಕೀಲರೊಬ್ಬರು ಕೋರ್ಟಿನಲ್ಲಿ ಜಜ್ಜರಿಗೆ ಉದ್ಧಟವಾದವನ್ನು ಮಾಡುತ್ತಿದ್ದರಿಂದ ನಾಲ್ಕು ವರ್ಷಗಳ ವರೆಗೆ ಅವರು ವಕೀಲಿ ನಡಿಸಬಾರದಾಗಿ ಹೈಕೋರ್ಟಿನ ತೀರ್ಮಾನವಾಗಿದೆ

ಕೊಚ್ಚಿಸಂಸ್ಥಾನದ ಎಲ್ಲ ಶಾಲೆಗಳಲ್ಲಿಯೂ ನೂಲುವದನ್ನು ಪ್ರಾರಂಭಿಸಬೇಕಾಗಿ ಅಲ್ಲಿಯ ಕಾಯಿದೇ ಮಂಡಲದಲ್ಲಿ ನಿರ್ಣಯವಾಗಿದೆ. ಶ್ರೀಮತಿ ಮಾಧವೀ ಅಮ್ಮನವರು ಇದಕ್ಕೆ ಸಂಪೂರ್ಣವಾದ ಒಪ್ಪಿಗೆಯನ್ನು ಕೊಟ್ಟು ಕಳಕಳದ ಭಾಷಣಮಾಡಿದರು. ಮೈಸೂರ ಸಂಸ್ಥಾನದ ಕಾಯದೇ ಮಂಡಲದ ಪಂಡಿತರು ಹಿಂದಕ್ಕೆ ತಮ್ಮಲ್ಲಿವಿಚಾರಣೆಗಾಗಿ ಬಂದಾಗ್ಗೆ ಇದೇ ಸೂಚನೆಯನ್ನು ನಿರಾಕರಿಸಿದ್ದಕ್ಕಾಗಿ ಈಗಲಾದರೂ ಬುದ್ಧಿ ಕಲಿಯಲಿ.

ಲಾಲಾ ಲಜಪತರಾಯರು 'ಲೆಜಿಸ್ಲೇಟಿವ ಅಸೆಂಬ್ಲಿ' ಗೆ ಆರಿಸಲ್ಪಟ್ಟಿದ್ದಾರೆ.

ಪರದೇಶ

ಆನೀ ಬಿಸಾಂಟ ಅಮ್ಮನವರ 'ಕಾಮನ್‌ವೆಲ್ಥ ಆಫ ಇಂಡಿಯಾ ಬಿಲ್ಲ' ಪಾರ್ಲಮೆಂಟಿನಲ್ಲಿ ವಿಚಾರಣೆಯಾಗುತ್ತಲಿದೆ. ಕೂಲೀಕಾರ ಪಕ್ಷದವರಿಂದ ಇದಕ್ಕೆ ಬೆಂಬಲವು ದೊರೆತಿದೆ.

ಆಯರ್. ಸಿ. ಎಸ್ ಬಿಲ್ಲು ಜನತೆಯ ಪಾರ್ಲಮೆಂಟಿನಲ್ಲಿ ಸ್ವೀಕರಿಸಲ್ಪಟ್ಟಿದೆ.

ರೇಲವೇ ಬೋರ್ಡಿನ ಸುದ್ದಿ

ರಾಯಚೂರಿನ ಶ್ರೀ. ಬಿ. ಗೋವಿಂದರಾವ ಮಾಲಕ ಸ್ವದೇಶೀ ವಸ್ತ್ರಸಂಗ್ರಹಾಲಯ=೩೪;

ಜಾಹೀರ ನೋಟೀಸು

ಕಳೆದ ತಾಲೂಕಾ ಲೋಕಲ್ ಬೋರ್ಡ ಚುನಾವಣೆಯಲ್ಲಿ ಆರಿಸಿ ಬಂದ ಮೆಂಬರರ ಪೈಕಿ ಬಾಗಲಕೋಟೆ ತಾಲೂಕದ (ಬೇವೂರಗ್ರೂಪ) ಮಿ. ಎಚ್. ಟಿ ಪಾಟೀಲ ಮತ್ತು ಮುದ್ದೆ ಬಿಹಾಳ ತಾಲೂಕದ (ಕಾಳಗಿ ಗ್ರೂಪ) ಟಿ. ವ್ಹಿ. ಕುಲಕರ್ಣಿ ರಾಜೀನಾಮೆ ಕೊಟ್ಟದ್ದರಿಂದ, ಮುಂಬಯಿ ಲೋಕಲ್ ಬೋರ್ಡ ಆಕ್ಟ ಕಲ್ಮ ೩೩ ನೇ ಪ್ರಕಾರ ಈ ಎರಡೂ ಗ್ರೂಪಿನ ಬಗ್ಗೆ ಮತ್ತೆ ಚುನಾವಣೆ ಮಾಡಲ್ಪಡುವದು:—

ಲೋಕಲ್ ಬೋರ್ಡ ಚನಾವಣೆ ನೇಮುಗಳ ಪೈಕಿ ೪ ನೇ ನೇಮಕ್ಕೆ ಅನುಸರಿಸಿ, ಚುನಾವಣೆ ತಾರಿಖ ವೇಳ್ಯೆ ಮತ್ತು ಸ್ಥಳಗಳ ಸಂಬಂಧಿ ಬೇಕಾಗುವ ಯಾವತ್ತೂ ಬೇರೆ ಬೇರೆ ಮಾಹಿತಿಯನ್ನು ಮೆ|| ಕಲೇಕ್ಟರ ಸಾ|| ಬಾ|| ಧವರು ಕೆಳಗೆ ತೋರಿಸಿದ ಪ್ರಕಾರ ಪ್ರಸಿದ್ಧಮಾಡಿರುತ್ತಾರೆ.

ಚುನಾವಣಿ ತಾರೀಖ	೨೦-೨-೧೯೨೬
ಉಮೇದ್ವಾರರ ಅರ್ಜಿಗಳನ್ನು ಸ್ವೀಕರಿಸುವ ಕಡೆಯ ತಾರೀಖ	೫-೧-೨೬ ಸಂಜೆಯ ೫ ಘಂಟೆಯ ವರೆಗೆ
ಉಮೇದ್ವಾರರ ಅರ್ಜಿಗಳ ತಪಾಸಣಿ ಮತಗಳನ್ನು ಕೊಡುವದು	೬-೧-೨೬ ೨ ಘಂಟೆಗೆ
ಚುನಾವಣೆಯ ತಾರೀಖಿನ ದಿವಸ	೨೦-೨-೨೬

ಸ್ಟ್ಯಾಂಡರ್ಡ ಟಾಯಿಮು ಮುಂಜಾನೆ ೭ ಘಂಟೆಯಿಂದ ೧೧|| ಘಂಟೆಯ ವರೆಗೆ ಮತ್ತು ಮಧ್ಯಾಹ್ನದಲ್ಲಿ ೧ ಘಂಟೆಯಿಂದ ಸಂಜೆಯ ೫|| ಘಂಟೆಯ ವರೆಗೆ)

ಮತಗಳನ್ನು ಎಣಿಸುವದು.	೨೨-೨-೨೬

ಉಮೇದ್ವಾರರ ಅರ್ಜಿಗಳನ್ನು ಆ ಆ ತಾಲೂಕದ ಮಾಮಲೇದಾರ ಸಾ|| ರ ಕಡಿಗೆ ಕೊಡತಕ್ಕದ್ದು.

ಚುನಾವಣೆಗಳು ಬೇವೂರ ಮತ್ತು ಕಾಳಗಿ ಚಾವಡಿಯಲ್ಲಿ ಆಗುವವು.

ಮತಗಳನ್ನು ಎಣಿಸುವದು ಮೇಲೆ ತೋರಿಸಿದ ತಾರೀಖಿನ ದಿವಸ ೨ ಘಂಟೆಯಿಂದ ಸಂಜೆಯ ೫ ಘಂಟೆಯ ವರೆಗೆ ಮಾಮಲೇದಾರ ಸಾ|| ರ ಕಚೇರಿಯಲ್ಲಿ ಆಗುವದು

ಮುಂಬಯಿ ಲೋಕಲ್ ಬೋರ್ಡ ದುರಸ್ತಿ ಕಾನೂನ ಪ್ರಕಾರ:— ಪ್ರತಿಯೊಂದು ಗ್ರೂಪಿನ ಬಗ್ಗೆ ಪ್ರಸಿದ್ಧಿಸಿದ ಮತದಾರ ಪತ್ರಿಕೆಯಲ್ಲಿ ನಮೂದಿಸಿದ ಮತದಾರರಿಗಷ್ಟೇ ಆ ಗ್ರೂಪಿನಲ್ಲಿ ಮತ ಕೊಡಲಿಕ್ಕೆ ಬರುವದು. ಒಂದು ಗ್ರೂಪಿನ ಮತದಾರರು ಮತ್ತೊಂದು ಗ್ರೂಪಿನಲ್ಲಿ ಅಥವಾ ಗ್ರೂಪಗಳಲ್ಲಿ ಮತ ಕೊಡಲಿಕ್ಕೆ ಬರುವದಿಲ್ಲ.

BIJAPUR	**V. H. NAIK**
14-12-1925	**COLLECTOR OF BIJAPUR**

ಮಾರತಕ್ಕದಿದೆ.

ಸುಪರ್ ರಾಯಲ್ ಆಕಾರದ ಹ್ಯಾಂಡ ಪ್ರೆಸ್ ಮತ್ತು ಪ್ರೂಫ ಪ್ರೆಸ್ಸಗಳನ್ನು ಮಾರತಕ್ಕವರಿದ್ದೇವೆ. ಇವು ಒಳ್ಳೇ ಸ್ಥಿತಿಯಲ್ಲಿದ್ದು ಚನ್ನಾಗಿ ಕೆಲಸ ಕೊಡುತ್ತವೆ.

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ

ಸಾಣೀಕಲ್ಲುಗಳು

ಸಣ ದೊಡ್ಡ ಸಾಣೇ ಕಲ್ಲುಗಳು ನಮ್ಮ ಕಡೆಗೆ ದೊರೆಯುತ್ತವೆ. ಮುಂಗಡ ಹಣವಿಲ್ಲದಆರ್ಡರುಗಳ ಕಡೆಗೆ ಲಕ್ಷ್ಯಕೊಡಲಾಗುವದಿಲ್ಲ. ವಿಶೇಷಸಂಗತಿಗಾಗಿ ಕೆಳಗಿನ ವಿಳಾಸಕ್ಕೆ ಬರೆದು ಕೇಳಿರಿ.

ನೃಸಿಂಹ ಏಜನ್ಸಿ ಬಾಗಲಕೋಟೆ (Dist. Bijapur.)

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.